UNIVERSAL
LIBRARY
OU_200724
UNIVERSAL
LIBRARY

OSMANIA UNIVERSITY LIBRARY

Call No. K294.11/V46R Accession No. K. 5227

Author వేంకటాచార్య, HP.

Title ఎలక్ట్రీదమ్ కంపెనీ చట్టం - విపులం.

This book should be returned on or before the date last marked below.

1993.



ಋಗ್ವೇದಸಂಹಿತಾ

ಭಾಗ—೨

ಪ್ರಥಮಾಷ್ಟಕ ಪ್ರಥಮಾಧ್ಯಾಯ

ಪ್ರಥಮಮಂಡಲ. ೭-೧೯ ಸೂಕ್ತಗಳು

ಸಾಯಣಭಾಷ್ಯ ಮತ್ತು ಕರ್ನಾಟಕ

ಭಾಷಾರ್ಥಾನುವಾದವಿವರಣೆಸಹಿತ

ಶ್ರೀ ಜಯಚಾಮರಾಜೇಂದ್ರ ವೇದರತ್ನಮಾಲಾ

ಸಂಪ್ಟೆ—೨

RIG-VEDA

ಸಾ ಯ ಣ ಭಾ ಷ್ಯ ಸ ಮೇ ತಾ

ಋಗ್ವೇದ ಸಂಹಿತಾ.

(ಕರ್ನಾಟಕ ಭಾಷಾರ್ಥಾನುವಾದವಿವರಣೆಗಳೊಡನೆ)

ಭಾಗ—೨

ಪ್ರಥಮಾಷ್ಟಕ ಪ್ರಥಮಾಧ್ಯಾಯ

ಪ್ರಥಮ ಮಂಡಲದ ಸೂಕ್ತಗಳು ೩-೧೯

Translated with Exhaustive Critical Notes
by
Asthana Mahavidwan
H. P. VENKATA RAO,
Editor.

Printed at
Sri Chamundeswari Electric Press,
CLOCK TOWER SQUARE,
MYSORE.
1949

Published by the gracious permission of

His Highness

Sri Jayachamarajendra Wadiyar Bahadur,

G.C.B., G.C.S.I., Maharaja of Mysore.



ಯದುವಂಶಪಯಃಪಾರಾಸುಧಾಕರರೂ ಸತ್ಸಂಪ್ರದಾಯೈಕಪರಿಪಾಲಕರೂ ಸೈಸೂರು ದೇಶವನ್ನಾಳುವ
ಧರ್ಮಪ್ರಭುಗಳೂ ಆದ ಶ್ರೀಮನ್ಮಹಾರಾಜ

ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಬಿ., ಜಿ.ಸಿ.ಎಸ್.ಐ. ರವರು,

ವೇದಪ್ರಕಟನಕಾರ್ಯಕ್ಕಾಗಿ ನಿಯಮಿತವಾಗಿರುವ

ವೇದವಿಮರ್ಶನವಿದ್ವನ್ಮಂಡಲಿ

ಅಧ್ಯಕ್ಷರುಃ

ಶ್ರೀ ಜಗದ್ಗುರು ನಾಗಲಿಂಗಸ್ವಾಮಿಪರಿವ್ರಾಜಕಾಚಾರ್ಯ ಪೀಠಾಧ್ಯಕ್ಷರಾದ

ಶಿಲ್ಪಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳವರು.

Translator & Editor :

1. **ಆಸ್ಥಾನ ಮಹಾವಿದ್ವಾನ್ H. P. ವೆಂಕಟರಾವ್,**

ಸಹಾಯಕವಿದ್ವನ್ಮಂಡಲಿ

2. **ಆಸ್ಥಾನವಿದ್ವಾನ್. ಬ್ರ॥ ಶ್ರೀ॥ ಲಕ್ಷ್ಮಣಾಚಾರ್ಯರು,** ವ್ಯಾಕರಣ ವಿದ್ವಾನ್.
3. **ಆಸ್ಥಾನವಿದ್ವಾನ್. ಬ್ರ॥ ಶ್ರೀ॥ H. ಗಂಗಾಧರಶಾಸ್ತ್ರಿಗಳು,** ಜ್ಯಾತಿಷವಿದ್ವಾನ್ ಮತ್ತು ಕರ್ಣಾಟಕಭಾಷಾಪಂಡಿತರು.
4. ಬ್ರ॥ ಶ್ರೀ॥ N. ಶ್ರೀನಿವಾಸಶಾಸ್ತ್ರಿಗಳು, ಋಗ್ವೇದಘನಪಾಠಿಗಳು.
5. ಬ್ರ॥ ಶ್ರೀ॥ ಹಿಟ್ಟವಳ್ಳಿ ಬಿಳಿಗಿರಿ ರಂಗಾಜೋಯಿಸರು, ಶ್ರೌತವಿದ್ವಾನ್
6. ಬ್ರ॥ ಶ್ರೀ॥ ಹಿಟ್ಟವಳ್ಳಿ ದೇವರಭಟ್ಟರು, ಮೀಮಾಂಸಾದರ್ಶನಪಂಡಿತರು.
7. ಬ್ರ॥ ಶ್ರೀ॥ G. N. ಚಕ್ರವರ್ತಿ ಅಯ್ಯಂಗಾರ್, M.A.,
   Professor of Sanskrit, St. Philomina's College, Mysore.
8. ಬ್ರ॥ ಶ್ರೀ॥ M. S. ವೆಂಕಟರಮಣಾಚಾರ್, M.A., B.T. ಸಾಹಿತ್ಯವಿದ್ವಾನ್.
9. ಬ್ರ॥ ಶ್ರೀ॥ ರಂಗನಾಥನ್, ಸಾಹಿತ್ಯವಿದ್ವಾನ್, ಅರಮನೆ ಸರಸ್ವತೀಭಂಡಾರ.
10. ಬ್ರ॥ ಶ್ರೀ॥ ಪುತ್ತೂರು ಕೃಷ್ಣಮಾಚಾರ್, ಸಾಹಿತ್ಯವಿದ್ವಾನ್
    Govt. Oriental Research Institute, Mysore



ಶ್ರೀ ಜಗದ್ಗುರು ನಾಗಲಿಂಗಪರಿವ್ರಾಜಕಾಚಾರ್ಯ ಪೀಠಾಧ್ಯಕ್ಷರಾದ

ಶಿಲ್ಪಸಿದ್ಧಾಂತಿ ಶಿವಯೋಗಿ ಶ್ರೀ ಸಿದ್ಧಲಿಂಗಸ್ವಾಮಿಗಳವರು

ನೇದವಿಮರ್ಶನ ವಿದ್ವನ್ಮಂಡಲಿಯ ಅಧ್ಯಕ್ಷರು

ಪೀಠಿಕೆ

ಸಾಯಣಭಾಷ್ಯಯುತವೂ ಮತ್ತು ಕರ್ನಾಟಕಭಾಷಾನುವಾದಸಹಿತವೂ ಆದ ಋಗ್ವೇದದ ಮೊದಲನೆಯ ಭಾಗವು ಮುಗಿದು ಸುಮಾರು ಎರಡು ವರ್ಷಗಳಾಯಿತು. ಈಗ ಎರಡನೆಯ ಭಾಗವು ಸಿದ್ಧವಾಗಿರುವುದು. ಮುದ್ರಣಸೌಲಭ್ಯವು ಸಾಕಾದಷ್ಟು ದೊರೆಯಲಿಲ್ಲವಾದ್ದರಿಂದಲೂ ಇತರ ಕೆಲವು ಅನಿವಾರ್ಯಗಳಿಂದಲೂ ಇಷ್ಟು ಸಾವಕಾಶವಾಗಲು ಕಾರಣವಾಯಿತು. ಈ ಎರಡು ಭಾಗಗಳಿಂದ ಋಗ್ವೇದಸಂಹಿತೆಯ ೬ಳ ಅಧ್ಯಾಯಗಳಲ್ಲಿ ಕೇವಲ ೧ ಅಧ್ಯಾಯ ಮಾತ್ರ ಮುಗಿದಿರುವುದು. ಉಳಿದ ೬೩ ಅಧ್ಯಾಯಗಳನ್ನು ಆದಷ್ಟು ಜಾಗ್ರತೆ ಮುಗಿಸಬೇಕೆಂಬ ಅಭಿಲಾಷೆ ಇದೆ. ಈತ್ಪರಾನುಗ್ರಹವಿದ್ದಲ್ಲಿ ಇನ್ನು ೩–೪ ವರ್ಷಗಳಲ್ಲಿ ಮುಗಿಯಬಹುದೆಂಬ ನಿರೀಕ್ಷಣೆ ಇದೆ. ಗ್ರಾಹಕರ ಅನುಕೂಲಕ್ಕಾಗಿ ಪ್ರತಿಯೊಂದು ಅಧ್ಯಾಯವನ್ನೂ ಸುಮಾರು ೫೦೦ ಪೇಜಿನ ಒಂದೊಂದು ಭಾಗವನ್ನಾಗಿ ಮುದ್ರಿಸಬೇಕೆಂಬ ಆಲೋಚನೆ ಇರುವುದು. ಇದರಿಂದ ಪ್ರತಿಯೊಂದು ಭಾಗದ ಕ್ರಯವೂ ಸುಮಾರು ಅರ್ಧದಷ್ಟು ಕಮ್ಮಿಯಾಗುವುದಲ್ಲದೆ ಮುಂದಿನ ಭಾಗಗಳೂ ಬೇಗಬೇಗ ವಾಚಕರ ಹಸ್ತಗತವಾಗುವವು.

ನಾವು ಹಿಂದೆಯೇ ತಿಳಿಸಿದಂತೆ ಅರ್ಥಾನುವಾದವು ಸಾಯಣಭಾಷ್ಯವನ್ನನುಸರಿಸಿದ್ದರೂ ಇತರ ಪ್ರಾಚೀನ ಭಾಷ್ಯಕಾರರ ಮತ್ತು ಪಾಶ್ಚಾತ್ಯಪಂಡಿತರ ಅಭಿಪ್ರಾಯವನ್ನೂ ವಿಮರ್ಶೆಯನ್ನೂ ಸಂದರ್ಭಾನುಸಾರವಾಗಿ ಅಲ್ಲಲ್ಲಿ ಸೇರಿಸಿರುವೆವು. ಇಷ್ಟು ವಿಸ್ತಾರವಾಗಿ ಋಗ್ವೇದದ ಅರ್ಥಾನುವಾದ ವಿಮರ್ಶೆಗಳನ್ನು ಬರೆಯಲು ಇದುವರೆಗೆ ಯಾರೂ, ಯಾವ ಭಾಷೆಯಲ್ಲಿಯೂ ಪ್ರಯತ್ನಪಟ್ಟಿಲ್ಲ. ಕೆಲವರು ಸೂಕ್ಷ್ಮವಾಗಿ ಅರ್ಥಾನುವಾದವನ್ನು ಹಿಂದಿ, ಮರಾಠಿ ಮುಂತಾದ ಭಾಷೆಗಳಲ್ಲಿ ಬರೆಯಲುಪಕ್ರಮಿಸಿ ಕಾರಣಾಂತರಗಳಿಂದ ಒಂದು ಅಧ್ಯಾಯವನ್ನೂ ಸಹ ಪೂರ್ತಿಗೊಳಿಸಲು ಸಾಧ್ಯವಾಗದೆ ನಿಂತುಹೋಗಿರುವುದು ಬಹು ವಿಷಾದಕರವು. ಇಂತಹ ಮಹೋದ್ಯಮವನ್ನು ಎಷ್ಟೇ ಕಷ್ಟಬಂದರೂ ಧೈರ್ಯಗೆಡದೆ ಸಮಾಪ್ತಿಗೊಳಿಸಬೇಕೆಂದು ಅನೇಕ ವಿದ್ವಜ್ಜನರೂ, ಹಿತೈಷಿಗಳೂ ಅಭಿನಂದನಪೂರ್ವಕವಾಗಿ ಪತ್ರವನ್ನು ಬರೆದಿರುವುದೂ ಈ ಗ್ರಂಥಪ್ರಕಟನೆಯಲ್ಲಿ ಅನೇಕ ಮಹನೀಯರು ತೋರಿಸುತ್ತಿರುವ ಆದರಾಸಕ್ತಿಗಳೂ ನಮಗೆ ವಿಶೇಷವಾಗಿ ಪ್ರೋತ್ಸಾಹಕರವಾಗಿರುವುದು.

ಈ ಗ್ರಂಥದ ವಿಷಯನಿರೂಪಣೆಯ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುವುದು ಅಪ್ರಕೃತವೆನಿಸಲಾರದು. ಸಾಧಾರಣ ಜನರು ಎಂದರೆ ಸಂಸ್ಕೃತಭಾಷೆಯನ್ನು ತಿಳಿಯದ ಜನರು ಋಕ್ಸಂಗಳ ಭಾವಾರ್ಥವನ್ನು ಮಾತ್ರ ಓದುವುದರಿಂದ ಮುಖ್ಯಾಭಿಪ್ರಾಯವನ್ನು ತಿಳಿದುಕೊಳ್ಳಬಹುದು. ಸ್ವಲ್ಪಮಟ್ಟಿಗೆ ಸಂಸ್ಕೃತ ಜ್ಞಾನವಿರುವವರು ಪ್ರತಿಪದಾರ್ಥವನ್ನೂ ಇಂಗ್ಲಿಷ್ ಭಾಷಾಂತರವನ್ನು ಓದಬಹುದು. ವಿಮರ್ಶಾತ್ಮಕದೃಷ್ಟಿಯಿಂದ ವೇದವನ್ನು ಅಭ್ಯಸಿಸಲಿಚ್ಛಿಸುವವರು, ವಿಶೇಷವಿಷಯಗಳನ್ನೂ, ವ್ಯಾಕರಣ ಭಾಗವನ್ನೂ ಸಹ ಓದಿದಲ್ಲಿ ಸಂಬಂಧಪಟ್ಟ ವಿಷಯವೆಲ್ಲವೂ ಮನದಟ್ಟಾಗುವುದು. ವ್ಯಾಕರಣಭಾಗವು ಹೆಚ್ಚಾಗಿರುವುದೆಂದು ಕೆಲವರ ಅಭಿಪ್ರಾಯವು. ಆದರೆ ಸಾಯಣಭಾಷ್ಯದಲ್ಲಿರುವ ವ್ಯಾಕರಣಭಾಗವನ್ನು ಮಾತ್ರ ಕನ್ನಡದಲ್ಲಿ ಅನುವಾದ ಮಾಡಿರುವೆವು. ವೇದಾರ್ಥವಿಚಾರದಲ್ಲಿ ವ್ಯಾಕರಣವು ಬಹುಮುಖ್ಯವಾದುದರಿಂದ ಪ್ರಾರಂಭದಲ್ಲಿ ಸ್ವಲ್ಪ ವಿಸ್ತಾರವಾಗಿ ಬರೆದಿದ್ದರೂ ಮುಂದಿನ ಭಾಗಗಳಲ್ಲಿ ಕ್ರಮೇಣ ಕಮ್ಮಿಯಾಗುವುದು. ಸಮಯೋಚಿತವಾಗಿ ಅಲ್ಲಲ್ಲಿ ಬರುವ ಉಪಾಖ್ಯಾನಗಳನ್ನೂ, ಪೂರ್ವೇತಿಹಾಸಗಳನ್ನೂ, ಇತರ ವೇದಗಳ ಮತ್ತು ಪುರಾಣಾದಿಗ್ರಂಥಗಳ ಸಹಾಯದಿಂದ ವಿಶದವಾಗಿ ವಿವರಿಸಲಾಗಿರುವುದು

ವೇದಾರ್ಥವಿಮರ್ಶೆಯು ಅತಿಗಹನವಾದುದೆಂಬ ವಿಷಯವನ್ನು ಸಮಸ್ತರೂ ಒಪ್ಪುವರು. ಈ ಕಾರಣದಿಂದಲೇ ಸಾಧಾರಣಜನರೂ, ಸಂಸ್ಕೃತಭಾಷೆಯನ್ನು ಬಲ್ಲ ಪಂಡಿತರೂ ಸಹ ವೇದಾರ್ಥವಿಚಾರವನ್ನು ಚರ್ಚಿಸಲು ಹಿಂಜರಿಯುವರು. ಆದರೂ ಪ್ರಾಚೀನ ಮತ್ತು ಅಧುನಿಕ ಪಂಡಿತರಲ್ಲಿ ಪ್ರಸಿದ್ಧರಾದವರು ವೇದಾರ್ಥವಿಚಾರದಲ್ಲಿ ಪ್ರಯತ್ನವಾಡದೆ ಇಲ್ಲ. ಇದಕ್ಕೆ ಹಲವು ಕಾರಣಗಳುಂಟು. ವೇದಗಳು—ಅದರಲ್ಲಿಯೂ ಋಗ್ವೇದ ಸಂಹಿತೆಯು—ಅತಿ ಪ್ರಾಚೀನವಾದುದರಿಂದ ಅದರಲ್ಲಿ ಉಪಯೋಗಿಸಿರುವ ಶಬ್ದಗಳೂ ಭಾಷಾಶೈಲಿಯೂ, ಕೆಲವು ಸಂದರ್ಭಗಳಲ್ಲಿ ನಿರೂಪಿತವಾದ ವಿಷಯಗಳೂ ಈ ಕಾಲದಲ್ಲಿ ಬಳಕೆಯಲ್ಲಿರುವುದಿಲ್ಲ. ಸುಮಾರು ೩೦೦೦ ಸಾವಿರ ವರ್ಷಗಳ ಹಿಂದೆಯೇ ವೇದದಲ್ಲಿರುವ ಶಬ್ದಗಳು ರೂಢಿಯಲ್ಲಿರಲಿಲ್ಲವಾದುದರಿಂದ ಆ ಶಬ್ದಾರ್ಥಗಳ ವಿವರಣೆಯನ್ನೊಳಗೊಂಡ ನಿರುಕ್ತವೆಂಬ ಮಹಾಗ್ರಂಥವನ್ನು ಯಾಸ್ಕಮಹರ್ಷಿಗಳು ಆ ಕಾಲದಲ್ಲಿಯೇ ರಚಿಸಿದರು. ಅಲ್ಲಿಂದೀಚಿಗೆ ವೇದಭಾಷ್ಯವನ್ನು ಬರೆಯಲುದ್ಯುಕ್ತರಾದ ಅನೇಕ ಪ್ರಾಚೀನ ಪಂಡಿತರು ನಿರುಕ್ತವನ್ನೇ ಆಧಾರವಾಗಿಟ್ಟುಕೊಂಡು ತಮ್ಮ ತಮ್ಮ ಭಾಷ್ಯಗಳನ್ನು ಬರೆದಿರುವರು. ವೇದದ ಶಬ್ದಗಳಲ್ಲಿ ಬಹುಭಾಗವು ಈಗಿನ ಸಂಸ್ಕೃತದಲ್ಲಿ ರೂಢಿಯಲ್ಲಿರುವುದಿಲ್ಲ ಆದುದರಿಂದ ವ್ಯಾಕರಣಾನುಸಾರವಾಗಿ ಶಬ್ದಗಳಿಗೆ ರೂಪನಿಷ್ಪತ್ತಿಯನ್ನು ಮಾಡಿ ಅರ್ಥವನ್ನು ಹೊಂದಿಸಬೇಕಾಗಿರುವುದು. ಆದರೆ ಈ ವಿಧವಾದ (ಎಂದರೆ ರೂಪನಿಷ್ಪತ್ತಿಯಿಂದ ಏರ್ಪಡುವ) ಅರ್ಥವಿವರಣೆಯು ಪೂರ್ವಕಾಲದ ಋಷಿಗಳ ಅಭಿಪ್ರಾಯಕ್ಕನುಸಾರವಾಗಿರುವುದೇ ಎಂಬುದು ಸಂದೇಹಾಸ್ಪದವಾಗಿರುವುದು. ಈ ವಿಷಯದಲ್ಲಿ ಅನೇಕ ವಾದವಿವಾದಗಳೂ, ವಿಮರ್ಶೆಗಳೂ, ಚರ್ಚೆಗಳೂ ನಡೆದರೂ ಇದುವರೆಗೆ ಯಾವುದೂ ಸ್ಥಿರಪಟ್ಟಿಲ್ಲ. ಸ್ಥಿರಪಡುವ ಸಂಭವವೂ ಇಲ್ಲ. ಆದರೆ ವೇದಗಳಿಗೆ ಋಗ್ವೇದವು ತಳಹದಿಯಾಗಿರುವಂತೆ ವೇದಭಾಷ್ಯಗಳಿಗೆ ಯಾಸ್ಕಮಹರ್ಷಿಗಳ ನಿರುಕ್ತವು ಮೂಲವಾಗಿರುವುದೆಂಬ ವಿಷಯದಲ್ಲಿ ಸಂದೇಹಕ್ಕಾಸ್ಪದವಿಲ್ಲ.

ಅತಿ ಪ್ರಾಚೀನವೂ, ಅತಿಗಹನವೂ, ಅತಿವಿಸ್ತಾರವೂ, ಸರ್ವಶಾಸ್ತ್ರಗಳಿಗೂ ಮೂಲಭೂತವೂ ಆದ ಇಂತಹ ಋಗ್ವೇದಸಂಹಿತೆಯನ್ನು ಸರಳವಾದ ಕನ್ನಡಭಾಷೆಯಲ್ಲಿ ವಿಮರ್ಶಾನುವಾದಸಹಿತವಾಗಿ ಪ್ರಕಾಶಪಡಿಸುವುದು ಸುಲಭವಾದ ಕೆಲಸವಲ್ಲ. ಆದರೂ ಇಂತಹ ಮಹತ್ಕಾರ್ಯದಿಂದ ಪಂಡಿತಪಾಮರಾದಿಯಾದ ಸಕಲ ಜನರೂ ಜ್ಞಾನಾಭಿವೃದ್ಧಿಯನ್ನು ಪಡೆದು ಈಶ್ವರಾನುಗ್ರಹಕ್ಕೆ ಪಾತ್ರರಾಗಲೆಂಬ ಘನವಾದ ಉದ್ದೇಶದಿಂದ, ಕರ್ನಾಟಕಸಿಂಹಾಸನಾಧೀಶ್ವರರೂ, ವೇದವಿದ್ಯಾಭಿಮಾನಿಗಳೂ, ಸ್ವಯಂಪಂಡಿತರೂ, ಪ್ರಜಾನುರಾಗಿಗಳೂ, ದೈವಭಕ್ತಿತತ್ಪರರೂ ಆದ ಶ್ರೀಜಯಚಾಮರಾಜೇಂದ್ರ ಒಡೆಯರ್ ಬಹದ್ದೂರು ಜಿ.ಸಿ.ಬಿ., ಜಿ.ಸಿ.ಎಸ್.ಐ. ಮಹಾಪ್ರಭುವರ್ಯರು ಬಹುದ್ರವ್ಯಸಾಧ್ಯವಾದ ಈ ಗ್ರಂಥಪ್ರಕಟನೆಯನ್ನು ತಮ್ಮ ಉದಾರಾಶ್ರಯದಿಂದ ಪ್ರೋತ್ಸಾಹಮಾಡುತ್ತಿರುವುದು ಕರ್ನಾಟಕ ಜನಕೋಟಿಯ ಸುಕೃತವೆಂದೇ ಹೇಳಬೇಕು. ಇಂತಹ ಉದಾರಮತಿಗಳಾದ ನಮ್ಮ ಪ್ರಭುವರ್ಯರಿಗೂ, ಅವರ ಕುಟುಂಬಕ್ಕೂ (ವೇದಮಂತ್ರಗಳಲ್ಲಿ ಅತಿಮುಖ್ಯವೆಂದು ಪರಿಗಣಿಸಲ್ಪಟ್ಟಿರುವ ಗಾಯತ್ರೀ ಎಂಬ ಮಂತ್ರನಾಮಾಂಕಿತರಾದ) ರಾಜಕುಮಾರಿಗೂ, ಸಮಸ್ತ ಪ್ರಜಾಕೋಟಿಗೂ ಸಹ ವೇದಪುರುಷನಾದ ಸರ್ವೇಶ್ವರನು ಐಹಿಕಫಲಗಳಾದ, ಆಯುರಾರೋಗ್ಯೈಶ್ವರ್ಯಾದಿ ಸಕಲ ಸಂಪತ್ತನ್ನೂ ಪಾರಮಾರ್ಥಿಕವಾದ ಅಧ್ಯಾತ್ಮಜ್ಞಾನವನ್ನೂ ಇತೋಭ್ಯತಿಶಯವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಮೈಸೂರು.
ವಿರೋಧಿನಾಮ ಸಂ॥ ಜ್ಯೇಷ್ಠ ಬ॥ ಸಪ್ತಮೀ ಶುಕ್ರವಾರ
17-6-1949

ಅನುವಾದಕ
ಹೆಚ್. ಪಿ. ವೆಂಕಟರಾವ್
ಆಸ್ಥಾನ ಮಹಾವಿದ್ವಾನ್

॥ ಶ್ರೀಃ ॥

ವಿ ಷ ಯಾ ನು ಕ್ರ ಮ ಣಿ ಕೆ

ಪ್ರಥಮಾಷ್ಟಕ ಪ್ರಥಮಾಧ್ಯಾಯ
ಪ್ರಥಮ ಮಂಡಲದ ಸೂಕ್ತಗಳು ೩-೧೯

ಪುಟಸಂಖ್ಯೆ

೩. ಅಶ್ವಿನಾ ಯೆಜ್ವರೀಃ ಎಂಬ ಮೂರನೆಯ ಸೂಕ್ತ—

ಪ್ರಥಮಮಂಡಲದಲ್ಲಿರುವ ಅನುವಾಕಸಂಖ್ಯೆ ಮತ್ತು ವಿವರಣೆ. 2

ವೇದವಿಭಾಗಕ್ರಮದಲ್ಲಿ ಋಷಿಕ್ರಮ, ದೇವತಾಕ್ರಮ, ಛಂದಃಕ್ರಮವೆಂಬ ಮೂರು ವಿಭಾಗಗಳು. 3

ಮಂಡಲಗಳ ವಿಭಾಗಕ್ರಮ. 4

ಪ್ರಾತಸ್ಸವನ, ಮಾಧ್ಯಂದಿನಸವನ, ತೃತೀಯಸವನಗಳ ವಿವರಣೆಯು. 6

ಸೂಕ್ತದ ವಿನಿಯೋಗ 7

ಸೂಕ್ತದ ಋಷಿದೇವತಾಛಂದಸ್ಸುಗಳು 9

ಅಶ್ವಿನೀದೇವತೆಗಳ ಸೂಕ್ಷ್ಮ ಪರಿಚಯ 11

ಇಂದ್ರಶಬ್ದನಿಷ್ಪತ್ತಿ ಮತ್ತು ಅರ್ಥವಿವರಣೆ. 33

ವಿಶ್ವೇದೇವತೆಗಳ ಸೂಕ್ಷ್ಮಪರಿಚಯ. 49

ಅಗ್ನಿಯು ನೀರಿನಲ್ಲಿ ಅಡಗಿಕೊಂಡಿದ್ದನೆಂಬ ಉಪಾಖ್ಯಾನವಿವರಣೆಯು. ಈ ವಿಷಯದಲ್ಲಿ ಋಗ್ವೇದ ಯಜುರ್ವೇದಗಳಲ್ಲಿರುವ ಪೂರ್ವೇತಿಹಾಸ ಕಥನವು. 60

ಸರಸ್ವತೀದೇವಿಯ ಸೂಕ್ಷ್ಮಪರಿಚಯ, ಸರಸ್ವತೀಶಬ್ದದ ನಿಷ್ಪತ್ತಿ, ಅರ್ಥವಿವರಣೆ ಇತ್ಯಾದಿ 68

ಅಪ್ರೀಸೂಕ್ತಗಳ ವಿವರಣೆ. 73

೪. ಸುರೂಪಕೃತ್ನುಂ ಎಂಬ ನಾಲ್ಕನೆಯ ಸೂಕ್ತವು—

ಸೂಕ್ತದ ವಿನಿಯೋಗವು. 86

ಪುಟಸಂಖ್ಯೆ

ಸೂಕ್ತದ ಋಷಿದೇವತಾಛಂದಸ್ಸುಗಳು. 87

ವೃತ್ರಾಸುರನ ವೃತ್ತಾಂತ. 123

೫. ಆ ತ್ವೇತಾ ನಿಷೀದತೆ ಎಂಬ ಐದನೆಯ ಸೂಕ್ತವು—

ಸೂಕ್ತದ ವಿನಿಯೋಗವು. 136

ಸೋಮಯಾಗದ ಸಪ್ತ ಪ್ರಭೇಧಗಳು. 136

ಅಭಿಪ್ಲವಷಡಹ, ಪೃಷ್ಠಷಡಹ ಎಂಬ ಯಾಗಗಳ ವಿವರಣೆ. 137

ಶೃಚ, ಸ್ತೋಮ, ವಿಷ್ಟುತಿ, ಪರ್ಯಾಯ ಇವುಗಳ ಅರ್ಥವಿವರಣೆ. 137

ಒಂಭತ್ತು ವಿಧವಾದ ಸ್ತೋಮಗಳು. 138

ತ್ರಿವೃತ್‌ಸ್ತೋಮದ ವಿವರಣೆ. 140

ಪಂಚದಶಸ್ತೋಮದ ವಿವರಣೆ. 142

ಸಪ್ತದಶಸ್ತೋಮದ ವಿವರಣೆ. 144

ಏಕವಿಂಶಸ್ತೋಮದ ವಿವರಣೆ. 146

ತ್ರಿಣವಸ್ತೋಮದ ವಿವರಣೆ. 146

ತ್ರಯಸ್ತ್ರಿಂಶಸ್ತೋಮದ ವಿವರಣೆ. 147

ಚತುರ್ವಿಂಶಸ್ತೋಮದ ವಿವರಣೆ. 147

ಚತುಶ್ಚತ್ವಾರಿಂಶಸ್ತೋಮದ ವಿವರಣೆ. 148

ಅಷ್ಟಾಚತ್ವಾರಿಂಶಸ್ತೋಮದ ವಿವರಣೆ. 148

ಸ್ತೋಮವೃದ್ಧಿ ಮತ್ತು ಸ್ತೋಮಾವಾಪ. 149

ಮಹಾವ್ರತ ವಿವರಣೆ- 150

ಪ್ರಕೃತಿ ಮತ್ತು ವಿಕೃತಿಯಾಗಗಳ ವಿವರಣೆ. 151

ಸೋಮರಸಕ್ಕೆ ಮಿಶ್ರವಾಡುವ ಆಶಿರದ್ರವ್ಯಗಳ ವಿವರಣೆ 172

ಕೆಲವು ಋಕ್ಕುಗಳಲ್ಲಿ ಕಂಡು ಬರುವ ಪ್ರಾಸಕ್ರಮ ಇತ್ಯಾದಿ. 188

೬. ಯುಂಜಂತಿ ಬ್ರಧ್ನಂ ಎಂಬ ಆರನೆಯ ಸೂಕ್ತವು—

ಸೂಕ್ತದ ವಿನಿಯೋಗಕ್ರಮ. 202

ಪುಟಸಂಖ್ಯೆ

ಸೂಕ್ತದ ಋಷಿದೇವತಾಛಂದಸ್ಸುಗಳು. 203

ಮಂತ್ರಗಳ ಅರ್ಥಾನುಸಾರವಾಗಿ ದೈವತಮಂತ್ರ, ಸ್ತುತಿಮಂತ್ರ, ಆಶೀರ್ಮಂತ್ರ, ಶಪಥ, ಅಭಿಶಾಪ, ಕಶ್ಚಿದ್ಭಾವ, ಪರಿದೇವನಾ, ನಿಂದಾ, ಪ್ರಶಂಸಾ ಇತ್ಯಾದಿ ಮಂತ್ರಗಳ ಪ್ರಭೇದಗಳು- 205

ದೈವತಮಂತ್ರಗಳಲ್ಲಿರುವ ಪರೋಕ್ಷಕೃತ, ಪ್ರತ್ಯಕ್ಷಕೃತ, ಆಧ್ಯಾತ್ಮಿಕ ಎಂಬ ಮೂರು ಪ್ರಭೇದಗಳ ವಿವರಣೆ. 205

ಯುಂಜಂತಿ ಬ್ರಧ್ನಮರುಷಂ ಎಂಬ ಋಕ್ಕಿಗೆ ಸ್ಕಂದಸ್ವಾಮಿಕೃತ ಭಾಷ್ಯ ಮತ್ತು ಅನುವಾದವು. 206

ಪಣಿ ಎಂಬ ರಾಕ್ಷಸನ ಉಪಾಖ್ಯಾನವು. 228

೭. ಇಂದ್ರಮಿದ್ಗಾಥಿನೋ ಬೃಹತ್ ಎಂಬ ಏಳನೆಯ ಸೂಕ್ತವು—

ಸೂಕ್ತದ ವಿನಿಯೋಗವು. 257

ಸೂಕ್ತದ ಋಷಿದೇವತಾಛಂದಸ್ಸುಗಳು. 258

ಋಕ್ಕುಗಳ ಅರ್ಥವಿವರಣೆ ಇತ್ಯಾದಿ. 259

ಪಂಚಕ್ಷಿತಿ, ಪಂಚಜನ,ಇವುಗಳ ವಿವರಣೆ. 296

೮. ಏಂದ್ರ ಸಾನಸಿಂ ರಯಿಂ ಎಂಬ ಎಂಟನೆಯ ಸೂಕ್ತವು—

ಸೂಕ್ತದ ವಿನಿಯೋಗವು. 302

ಸೂಕ್ತದ ಋಷಿದೇವತಾಛಂದಸ್ಸುಗಳು. 303

ಋಕ್ಕುಗಳ ಅರ್ಥವಿವರಣೆ ಇತ್ಯಾದಿ. 304

೯. ಇಂದ್ರೇಹಿ ಮತ್ಸ್ಯಂಧಸಃ ಎಂಬ ಒಂಭತ್ತನೆಯ ಸೂಕ್ತವು—

ಸೂಕ್ತದ ವಿನಿಯೋಗ ಮತ್ತು ಋಷಿದೇವತಾಛಂದಸ್ಸುಗಳು. 342

ಋಕ್ಕುಗಳ ಅರ್ಥವಿವರಣೆ ಇತ್ಯಾದಿ. 343

೧೦. ಗಾಯಂತಿ ತ್ವಾ ಗಾಯತ್ರಿಣಃ ಎಂಬ ಹತ್ತನೆಯ ಸೂಕ್ತವು—

ವಿನಿಯೋಗ, ಋಷಿದೇವತಾಛಂದಸ್ಸುಗಳು. ಋಕ್ಕುಗಳ ಅರ್ಥವಿವರಣೆ ಇತ್ಯಾದಿ. 382

ಪುಟಸಂಖ್ಯೆ

೧೧. ಇಂದ್ರಂ ವಿಶ್ವಾ ಅವೀವೃಧನ್ ಎಂಬ ಹನ್ನೊಂದನೆಯ ಸೂಕ್ತವು—

ವಿನಿಯೋಗ, ಋಷಿದೇವತಾಛಂದಸ್ಸುಗಳು ಋಕ್ಕುಗಳ ಅರ್ಥವಿವರಣೆ ಇತ್ಯಾದಿ. 448

ವಲನೆಂಬ ಅಸುರನ ವೃತ್ತಾಂತ. 465

೧೨. ಅಗ್ನಿಂ ದೂತಂ ವೃಣೀಮಹೇ ಎಂಬ ಹನ್ನೆರಡನೆಯ ಸೂಕ್ತವು—

ವಿನಿಯೋಗ, ಋಷಿದೇವತಾಛಂದಸ್ಸು, ಋಕ್ಕುಗಳ ಅರ್ಥವಿವರಣೆ ಇತ್ಯಾದಿ. 484

೧೩. ಸುಸಮಿದ್ಧೋ ನ ಆ ಗಹಿ ಎಂಬ ಹದಿಮೂರನೆಯ ಸೂಕ್ತವು—

ಸೂಕ್ತದ ವಿನಿಯೋಗ-ಆಪ್ರಿಸೂಕ್ತ 525

ಋಷಿದೇವತಾಛಂದಸ್ಸುಗಳು. 526

ಋಕ್ಕುಗಳ ಅರ್ಥವಿವರಣೆ ಇತ್ಯಾದಿ. 527

ನಕ್ರೋಷಾಸಾ ಶಬ್ದದ ವಿವರಣೆ. 557

ದೈವ್ಯಾ ಹೋತಾರಾ ಶಬ್ದಗಳ ವಿವರಣೆ. 561

ತಿಸ್ರೋ ದೇವೀಃ ಶಬ್ದಗಳ ವಿವರಣೆ. 563

ತ್ವಷ್ಟಾ ಎಂಬ ದೇವತೆಯ ಸೂಕ್ಷ್ಮಪರಿಚಯ. 571

ಸ್ವಾಹಾಕೃತಿ ಶಬ್ದವಿವರಣೆ. 580

೧೪. ಐಭಿರಗ್ನೇ ಎಂಬ ಹದಿನಾಲ್ಕನೆಯ ಸೂಕ್ತವು—

ವಿನಿಯೋಗ, ಋಷಿದೇವತಾಛಂದಸ್ಸುಗಳು, ಋಕ್ಕುಗಳ ಅರ್ಥವಿವರಣೆ ಇತ್ಯಾದಿ. 584

೧೫. ಇಂದ್ರ ಸೋಮಂ ಪಿಬ ಎಂಬ ಹದಿನೈದನೆಯ ಸೂಕ್ತವು—

ವಿನಿಯೋಗ, ಋಷಿದೇವತಾಛಂದಸ್ಸುಗಳು, ಋಕ್ಕುಗಳ ಅರ್ಥವಿವರಣೆ ಇತ್ಯಾದಿ. 626

ದ್ರವಿಣೋದಾಃ ಎಂಬ ದೇವತೆಯ ವಿಷಯ. 652

ಪುಟಸಂಖ್ಯೆ

೧೬. ಆ ತ್ವಾ ವಹಂತು ಎಂಬ ಹದಿನಾರನೆಯ ಸೂಕ್ತವು—

ವಿನಿಯೋಗ, ಋಷಿದೇವತಾಛಂದಸ್ಸುಗಳು, ಋಕ್ಕುಗಳ ಅರ್ಥವಿವರಣೆ ಇತ್ಯಾದಿ. 672

೧೭. ಇಂದ್ರಾವರುಣಯೋರಹಂ ಎಂಬ ಹದಿನೇಳನೆಯ ಸೂಕ್ತವು—

ವಿನಿಯೋಗ, ಋಷಿದೇವತಾಛಂದಸ್ಸುಗಳು, ಋಕ್ಕುಗಳ ಅರ್ಥವಿವರಣೆ ಇತ್ಯಾದಿ. 708

ಸಂಸ್ತುವಿಕಮಂತ್ರಗಳ ಸ್ವರೂಪ ಮತ್ತು ಅವುಗಳ ಉದಾಹರಣೆಗಳು. 710

೧೮. ಸೋಮಾನಂ ಸ್ವರಣಂ ಎಂಬ ಹದಿನೆಂಟನೆಯ ಸೂಕ್ತವು—

ವಿನಿಯೋಗ, ಋಷಿದೇವತಾಛಂದಸ್ಸುಗಳು, ಋಕ್ಕುಗಳ ಅರ್ಥವಿವರಣೆ ಇತ್ಯಾದಿ. 746

ಬ್ರಹ್ಮಣಸ್ಪತಿಯ ಸೂಕ್ಷ್ಮಪರಿಚಯ. 749

ದಕ್ಷಿಣಾ ಎಂಬ ದೇವತೆಯ ವಿಷಯ ಮತ್ತು ದಕ್ಷಿಣಾಶಬ್ದದ ರೂಪನಿಷ್ಪತ್ತಿ. 768

ಸದಸಸ್ಪತಿ ಎಂಬ ದೇವತೆಯ ವಿಷಯ. 771

೧೯. ಪ್ರತಿ ತ್ಯಂ ಚಾರುಮಧ್ವರಂ ಎಂಬ ಹತ್ತೊಂಭತ್ತನೆಯ ಸೂಕ್ತವು—

ವಿನಿಯೋಗ, ಋಷಿದೇವತಾಛಂದಸ್ಸುಗಳು, ಋಕ್ಕುಗಳ ಅರ್ಥವಿವರಣೆ ಇತ್ಯಾದಿ. 783

ಪ್ರಥಮಾಧ್ಯಾಯದ ವಿಷಯಾನುಕ್ರಮಣಿಕೆ ಸಮಾಪ್ತವು.

ಸಂಕೇತಾಕ್ಷರಗಳ ವಿವರಣೆಯು

ಅಥ. ಸಂ.—ಅಥರ್ವವೇದಸಂಹಿತಾ
ಆಪ. ಸೂ.—ಆಪಸ್ತಂಬಶ್ರೌತಸೂತ್ರ
ಆಪ. ಧ. ಸೂ.—ಆಪಸ್ತಂಬಧರ್ಮಸೂತ್ರ
ಆಪ. ಪ. ಸೂ.—ಆಪಸ್ತಂಬಪರಿಭಾಷಾಸೂತ್ರ
ಆ. ಸೂ.—ಆಶ್ವಲಾಯನ ಶ್ರೌತಸೂತ್ರ
ಉ. ಸೂ.—ಉಣಾದಿ ಸೂತ್ರ
ಋ. ಸಂ.—ಋಗ್ವೇದಸಂಹಿತಾ
ಐ. ಆ.—ಐತರೇಯಾರಣ್ಯಕ
ಐ. ಉ.—ಐತರೇಯೋಪನಿಷತ್
ಐ. ಬ್ರಾ.—ಐತರೇಯಬ್ರಾಹ್ಮಣ
ಛಾ. ಉ.—ಛಾಂದೋಗ್ಯೋಪನಿಷತ್
ಜೈ. ಸೂ—ಜೈಮಿನೀಯ ಪೂರ್ವಮೀಮಾಂಸಾಸೂತ್ರ
ಜೈ. ನ್ಯಾ. ವಿ.—ಜೈಮಿನಿಯ ನ್ಯಾಯಮಾಲಾವಿಸ್ತರ
ತಾ. ಬ್ರಾ.—ತಾಂಡ್ಯಮಹಾಬ್ರಾಹ್ಮಣ
ತೈ. ಆ.—ತೈತ್ತಿರೀಯ ಆರಣ್ಯಕ
ತೈ. ಬ್ರಾ.—ತೈತ್ತಿರೀಯಬ್ರಾಹ್ಮಣ
ತೈ. ಸಂ.—ತೈತ್ತಿರೀಯ ಸಂಹಿತಾ
ನಿ.—ನಿರುಕ್ತ, ನಿಘಂಟು
ಪಾ. ಸೂ.—ಪಾಣಿನೀಯ ಸೂತ್ರ
ಪಾ. ಶಿ.—ಪಾಣಿನೀಯ ಶಿಕ್ಷಾ
ಫಿ. ಸೂ.—ಫಿಟ್‌ಸೂತ್ರ
ಬ್ರ. ಸೂ.—ಬ್ರಹ್ಮಸೂತ್ರ
ಮ. ಭಾ.—ಮಹಾಭಾರತ
ಮ ಸ್ಮೃ.—ಮನುಸ್ಮೃತಿ
ಮೈ. ಸಂ.—ಮೈತ್ರಾಯಣೀಯಸಂಹಿತಾ
ಯಾ. ಸ್ಮೃ—ಯಾಜ್ಞವಲ್ಕ್ಯಸ್ಮೃತಿ
ವಾ. ಸಂ.—ವಾಜಸನೇಯಸಂಹಿತಾ
ವಾ. ಪು.—ವಾಯುಪುರಾಣ
ವಿ. ಪು.—ವಿಷ್ಣುಪುರಾಣ
ವೇ. ಸೂ.—ವೇದಾಂತಸೂತ್ರ
ಶ. ಬ್ರಾ.—ಶತಪಥಬ್ರಾಹ್ಮಣ
ಸಾ. ಸಂ.—ಸಾಮವೇದಸಂಹಿತಾ ಇತ್ಯಾದಿ.



॥ ಶ್ರೀ ಮಹಾಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

ಸಾಯಣಭಾಷ್ಯಸಹಿತಾ

ಋಗ್ವೇದ ಸಂಹಿತಾ

ಭಾಗ—೨

ಶ್ರೀ ಪರಮೇಶ್ವರನ ನಿಃಶ್ವಾಸರೂಪವಾದ ನಾಲ್ಕು ವೇದಗಳಲ್ಲಿ ಮೊದಲನೆಯದಾದ ಋಗ್ವೇದವನ್ನು ಸಾಯಣಭಾಷ್ಯಸಹಿತವಾಗಿಯೂ, ಕರ್ನಾಟಕಭಾಷಾನುವಾದವಿವರಣೆಗಳಿಂದಲೂ ಮತ್ತು ಅನೇಕ ಉಪಯುಕ್ತಾಂಶಗಳಿಂದಲೂ ಸಹಿತವಾಗಿ ಬರೆಯಲುಪಕ್ರಮಿಸಿ, ಮೊದಲನೆಯ ಭಾಗದಲ್ಲಿ ಋಗ್ವೇದಪೂರ್ವಪೀಠಿಕೆಯನ್ನೂ, ಸಾಯಣಭಾಷ್ಯಭೂಮಿಕೆಯನ್ನೂ, ಸಂಹಿತಾಭಾಗದ ಪ್ರಥಮಮಂಡಲದಲ್ಲಿ ಅಗ್ನಿಮೀಳೇ ಪುರೋಹಿತಂ ಮತ್ತು ವಾಯವಾಯಾಹಿ ದರ್ಶತ ಎಂಬ ಮೊದಲಿನ ಎರಡು ಸೂಕ್ತಗಳ ಅರ್ಥಾನುವಾದವನ್ನೂ ವಿಸ್ತಾರವಾಗಿ ವಿವರಿಸಿ ಈಗ ಈ ಎರಡನೆಯ ಭಾಗದಲ್ಲಿ ಅಶ್ವಿನಾ ಯಜ್ವರೀರಿಷಃ ಎಂಬ ಮೂರನೆಯ ಸೂಕ್ತದ ಅರ್ಥಾನುವಾದವನ್ನು ಪ್ರಾರಂಭಿಸುವೆವು.

ಋಗ್ವೇದಸಂಹಿತೆಯಲ್ಲಿ ಒಟ್ಟು ೧೦೫೮ ಸೂಕ್ತಗಳಿರುವುವು. ಈ ಸೂಕ್ತಗಳೆಲ್ಲಾ ದ್ರಷ್ಟೃಗಳಾದ (ಸೂಕ್ತಗಳನ್ನು ರಚಿಸಿದ) ಅನೇಕ ಋಷಿಗಳಿರುವರು. ಈ ೧೦೫೮ ಸೂಕ್ತಗಳಿಂದ ಕೂಡಿದ ಋಗ್ವೇದಸಂಹಿತೆಯನ್ನು ಹತ್ತು ಮಂಡಲಗಳನ್ನಾಗಿಯೂ, ಪ್ರತಿಮಂಡಲವನ್ನೂ ಅನೇಕ ಅನುವಾಕಗಳನ್ನಾಗಿಯೂ, ಅನುವಾಕ

ಗಳನ್ನು ಸೂಕ್ತಗಳನ್ನಾಗಿಯೂ ವಿಭಾಗಿಸಿರುವರು. ಪ್ರಥಮಮಂಡಲದಲ್ಲಿ ೧೯೧ ಸೂಕ್ತಗಳಿವೆ. ಇವುಗಳನ್ನು ೨೪ ಅನುವಾಕಗಳನ್ನಾಗಿ ವಿಭಾಗಿಸಿರುವರು. ಅದರ ಕ್ರಮವು ಈ ರೀತಿ ಇರುವುದು—

ಅನುವಾಕ		ಸೂಕ್ತ ಸಂಖ್ಯೆ		ಒಟ್ಟು ಸೂಕ್ತಗಳು	
೧ ನೆಯ ಅನುವಾಕ—		೧— ೩ ಸೂಕ್ತಗಳು.		೩	ಒಟ್ಟು ೩೦ ಋಕ್ಕುಗಳು
೨	,,	೪— ೭	,,	೪	೪೦
೩	,,	೮— ೧೧	,,	೪	೪೦
೪	,,	೧೨— ೧೭	,,	೬	೬೬
೫	,,	೧೮— ೨೩	,,	೬	೭೭
೬	,,	೨೪— ೩೦	,,	೭	೯೭
೭	,,	೩೧— ೩೫	,,	೫	೭೧
೮	,,	೩೬— ೪೩	,,	೮	೮೬
೯	,,	೪೪— ೪೯	,,	೭	೮೨
೧೦	,,	೫೧— ೫೭	,,	೭	೭೨
೧೧	,,	೫೮— ೬೪	,,	೭	೭೪
೧೨	,,	೬೫— ೭೩	,,	೯	೯೧
೧೩	,,	೭೪— ೮೪	,,	೧೧	೯೮
೧೪	,,	೮೫— ೯೩	,,	೯	೧೦೬
೧೫	,,	೯೪—೧೦೫	,,	೧೨	೧೨೫
೧೬	,,	೧೦೬—೧೧೫	,,	೧೦	೧೦೭
೧೭	,,	೧೧೬—೧೨೦	,,	೫	೮೩
೧೮	,,	೧೨೧—೧೨೬	,,	೬	೭೦
೧೯	,,	೧೨೭—೧೩೩	,,	೭	೬೦
೨೦	,,	೧೩೪—೧೩೯	,,	೬	೪೦
೨೧	,,	೧೪೦—೧೪೬	,,	೧೭	೧೧೯
೨೨	,,	೧೪೭—೧೬೪	,,	೮	೧೨೩
೨೩	,,	೧೬೫—೧೭೯	,,	೧೫	೧೨೪
೨೪	,,	೧೮೦—೧೯೧	,,	೧೨	೧೧೫
ಒಟ್ಟು ೨೪		೧೯೧			೨೦೦೬

ಇಪ್ಪು ಸೂಕ್ತಗಳೂ ಒಂದೇ ದೇವತೆಯನ್ನು ಪ್ರತಿಪಾದನೆಮಾಡುವುದಿಲ್ಲ. ಈ ಸೂಕ್ತಗಳು ಅಗ್ನಿ, ಇಂದ್ರ, ವಾಯು ಮುಂತಾದ ಅನೇಕ ದೇವತೆಗಳ ಸ್ತೋತ್ರಗಳನ್ನೊಳಗೊಂಡಿವೆ. ಋಷಿಗಳೂ (ಮಂತ್ರದ್ರಷ್ಟೃ ಅಥವಾ ಮಂತ್ರಗಳನ್ನು ರಚಿಸಿದವರು) ಸಹ ಅನೇಕರಿದಾರೆ. ಇವರಲ್ಲಿ ವಿಶ್ವಾಮಿತ್ರ, ವಸಿಷ್ಠ, ವಾಮದೇವ,

ಗೋತಮ, ಭರದ್ವಾಜ ಮುಂತಾದ ಸಪ್ತರ್ಷಿಗಳೂ, ಅವರ ವಂಶದವರೂ, ಅವರ ಶಿಷ್ಯವರ್ಗಕ್ಕೆ ಸೇರಿದ ಅನೇಕ ಋಷಿಗಳೂ ಇದಾರೆ. ಋಗ್ವೇದದ ಋಷಿಗಳ ಹೆಸರನ್ನೂ ಅವರು ರಚಿಸಿರುವ ಸೂಕ್ತ, ಮಂತ್ರಸಂಖ್ಯೆ, ಮುಂತಾದ ವಿವರಗಳನ್ನು ನಾವು ಹಿಂದೆಯೇ (ಭಾಗ ೧. ಪೇಜು 191–205) ಹೇಳಿದೇವೆ. ಛಂದಸ್ಸುಗಳಲ್ಲಿಯೂ ಗಾಯತ್ರೀ, ತ್ರಿಷ್ಟುಪ್ ಜಗತೀ ಮುಂತಾದ ಅನೇಕ ಭೇದಪ್ರಭೇದಗಳಿವೆ. ಇಷ್ಟು ಭೇದಪ್ರಭೇದಗಳಿಂದ ಕೂಡಿದ ಋಗ್ವೇದದ ೧೦೫೮ ಸೂಕ್ತಗಳನ್ನು ಮೂರುವಿಧವಾಗಿ ವಿಂಗಡಿಸಬಹುದು.—

೧. **ಋಷಿಕ್ರಮ**—ಒಬ್ಬೊಬ್ಬ ಮುಖ್ಯ ಋಷಿಯೂ ಅವನ ವಂಶಸ್ಥರೂ ರಚಿಸಿದ ಸೂಕ್ತಗಳನ್ನು ಒಂದೊಂದು ಭಾಗ ಅಥವಾ ಮಂಡಲವನ್ನಾಗಿ ವಿಂಗಡಿಸುವುದು ಒಂದು ಕ್ರಮ. ಈ ರೀತಿಯಲ್ಲಿಯೇ ಋಗ್ವೇದದ ೨, ೩, ೪, ೫, ೬, ೭, ೯ ನೆಯ ಮಂಡಲಗಳು (ಒಟ್ಟು ೭ ಮಂಡಲಗಳು) ವಿಂಗಡಿಸಲ್ಪಟ್ಟಿವೆ.

೨. **ದೇವತಾಕ್ರಮ**—ಆಯಾ ದೇವತೆಗಳನ್ನು ಸ್ತುತಿಸುವ ಮಂತ್ರಗಳನ್ನು ಅಥವಾ ಸೂಕ್ತಗಳನ್ನು ಒಂದೊಂದು ಗುಂಪನ್ನಾಗಿ ವಿಂಗಡಿಸುವುದು ಮತ್ತೊಂದು ಕ್ರಮ. ಎಂದರೆ ಅಗ್ನಿಸಂಬಂಧವಾದ ಸೂಕ್ತಗಳ ಗುಂಪು ಒಂದು, ಇಂದ್ರಸಂಬಂಧವಾದ ಸೂಕ್ತಗಳ ಗುಂಪು ಮತ್ತೊಂದು ಇತ್ಯಾದಿ. ಈ ಕ್ರಮವು ಋಗ್ವೇದದ ೯ ನೆಯ ಮಂಡಲದಲ್ಲಿ ಅನುಸರಿಸಲ್ಪಟ್ಟಿರುವುದು. ಈ ಮಂಡಲದಲ್ಲಿರುವ ಎಲ್ಲ ಸೂಕ್ತಗಳಿಗೂ **ಪವಮಾನಃ ಸೋಮಃ** ಎಂಬ ಒಂದೇ ದೇವತೆಯು. ಬೇರೆ ದೇವತೆಗಳಿಲ್ಲ. ಋಷಿಗಳೂ ಛಂದಸ್ಸುಗಳೂ ಮಾತ್ರ ಬೇರೆ ಬೇರೆ ಇವೆ. ಇದು ಎರಡನೆಯ ಕ್ರಮವು.

೩. **ಛಂದಃಕ್ರಮ**—ಒಂದೇ ಛಂದಸ್ಸಿನ ಮಂತ್ರಗಳನ್ನು (ಅಥವಾ ಸೂಕ್ತಗಳನ್ನು) ಒಂದೊಂದು ಗುಂಪನ್ನಾಗಿ ವಿಂಗಡಿಸುವುದೇ ಈ ಕ್ರಮವು. ಎಂದರೆ ಗಾಯತ್ರೀಛಂದಸ್ಸಿನ ಮಂತ್ರಗಳನ್ನು ಒಂದು ಗುಂಪನ್ನಾಗಿಯೂ ತ್ರಿಷ್ಟುಪ್‌ಛಂದಸ್ಸಿನ ಮಂತ್ರಗಳನ್ನು ಮತ್ತೊಂದು ಗುಂಪನ್ನಾಗಿಯೂ, ಇದರಂತೆಯೇ ಪ್ರತಿಯೊಂದು ಜಾತಿಯ ಛಂದಸ್ಸಿನ ಮಂತ್ರಗಳನ್ನೆಲ್ಲಾ ಸೇರಿಸಿ ಒಂದೊಂದು ಗುಂಪನ್ನಾಗಿ ವಿಂಗಡಿಸುವುದು ಮೂರನೆಯ ಕ್ರಮ. ಈ ಕ್ರಮವು ಅಷ್ಟು ಸಮರ್ಪಕವಾಗಿ ಕಂಡುಬರುವುದಿಲ್ಲವಾದ್ದರಿಂದ ಈ ಕ್ರಮವನ್ನು ಋಗ್ವೇದದಲ್ಲಿ ಅನುಸರಿಸಿಲ್ಲ.

ಇದಲ್ಲದೆ ಮೇಲೆ ಹೇಳಿದ ಒಂದನೆಯ ಕ್ರಮಕ್ಕೆ ಸೇರದಿರುವ ಅನೇಕ ಸಣ್ಣ ಸಣ್ಣ ಸೂಕ್ತಗಳು ಇರುವುದರಿಂದ ಅವುಗಳನ್ನೆಲ್ಲಾ ಸೇರಿಸಿ ಒಂದು ಮಂಡಲವನ್ನಾಗಿ ವಿಂಗಡಿಸುವುದೂ ಒಂದು ಕ್ರಮ. ಈ ಕ್ರಮವು ೧ ಮತ್ತು ೧೦ ನೆಯ ಮಂಡಲಗಳಲ್ಲಿ ಕಂಡುಬರುವುದು. ೧ ನೆಯ ಮಂಡಲದಲ್ಲಿ ಪ್ರಾಯಶಃ ಒಂದು ನೂರು ಮಂತ್ರಗಳಿಗೆ (ಸ್ವಲ್ಪ ಹೆಚ್ಚುಕಡಿಮೆ ಇರಬಹುದು) ಒಬ್ಬ ಋಷಿಯಂತೆ ಇದಾರೆ. ಉದಾಹರಣೆಗಾಗಿ ಪ್ರಥಮ ಮಂಡಲದಲ್ಲಿ ೧ ನೆಯ ಮಂತ್ರದಿಂದ ೧೦೨ ಮಂತ್ರಗಳವರೆಗೆ **ಮಧುಚ್ಛಂದಾ ವೈಶ್ವಾಮಿತ್ರಃ** ಎಂಬುವರೂ ೧೧೧ ರಿಂದ ೨೫೩ ರವರೆಗೆ **ಮೇಧಾತಿಥಿಃ ಕಾಣ್ವಃ** ಎಂಬುವರೂ ೨೫೪ ರಿಂದ ೨೯೦ ರವರೆಗೆ **ಅಜೀಗರ್ತಿಃ ಶುನಶ್ಶೇಫಃ** ಎಂಬುವರೂ ಋಷಿಗಳು. ಆದ್ದರಿಂದಲೇ ಈ ಪ್ರಥಮಮಂಡಲದ ಋಷಿಗಳಿಗೆ ಶತರ್ಚಿನರೆಂದು (ನೂರು ಋಕ್ಕುಗಳನ್ನು ರಚಿಸಿದ ಋಷಿಗಳೆಂದು) ಹೆಸರು ಬಂದಿರಬಹುದು.

೧೦ ನೆಯ ಮಂಡಲದಲ್ಲಿ ಈ ಕ್ರಮವೂ ಕಂಡುಬರುವುದಿಲ್ಲ. ಈ ಮಂಡಲದಲ್ಲಿ ಅನೇಕ ಸಣ್ಣ ಸಣ್ಣ ಸೂಕ್ತಗಳೂ (ಕ್ಷುದ್ರಸೂಕ್ತಗಳು) ಸಪ್ತರ್ಷಿಕಾಲಕ್ಕೆ ಸೇರಿರುವ ಮತ್ತು ಸೇರದಿರುವ ಅನೇಕ ಋಷಿಗಳೂ, ಕ್ಷುದ್ರ

ದೇವತೆಗಳೂ ಎಂದರೆ ಅಗ್ನಿ, ಇಂದ್ರ ಮುಂತಾದ ಪ್ರಧಾನದೇವತೆಗಳಲ್ಲದೆ ಸಣ್ಣ ಸಣ್ಣ ದೇವತೆಗಳೂ ರಾತ್ರಿ, ಶ್ರದ್ಧಾ ಮುಂತಾದ ಅಚೇತನವಸ್ತುಗಳ ಸ್ತುತಿಯೂ ಸೇರಿರುವುವು. ಇಂತಹ ನಾನಾವಿಧವಾದ ಸೂಕ್ತಗಳು ೧೦ ನೆಯ ಮಂಡಲದಲ್ಲಿರುವವು.

ಒಂದೊಂದು ಸೂಕ್ತದಲ್ಲಿ ಒಂದರಿಂದ ಎಷ್ಟು ಬೇಕಾದರೂ ಋಕ್ಕುಗಳಿರಬಹುದು. ಸಾದಾರಣವಾಗಿ ಒಂದೇ ದೇವತೆಗೆ ಉದ್ದಿಷ್ಟವಾದ ಮಂತ್ರಗಳು ಒಂದು ಸೂಕ್ತವೆಂದು ಗಣನೆ. ವೇದದ ಯಾವ ಮಂತ್ರವನ್ನು ಹೇಳಬೇಕಾದರೂ ಪ್ರಾರಂಭದಲ್ಲಿ ಅದಕ್ಕೆ ಋಷಿ, ದೇವತೆ, ಮತ್ತು ಛಂದಸ್ಸು ಈ ಮೂರನ್ನೂ ಹೇಳಿ ಆಮೇಲೆ ಮಂತ್ರವನ್ನು ಹೇಳಬೇಕು. ಒಂದೇ ಋಕ್ಕಿಗೆ ಒಬ್ಬ ಋಷಿ, ಇರಬಹುದು, ಅಥವಾ ಅನೇಕ ಸೂಕ್ತಗಳಿಗೆ ಒಬ್ಬ ಋಷಿ ಇರಬಹುದು. ೧, ೯, ಮತ್ತು ೧೦ ನೆಯ ಮಂಡಲ ಹೊರತಾಗಿ ಬಾಕಿ ಮಂಡಲಗಳಿಗೆ ಒಂದೇ ಗುಂಪಿನ ಋಷಿಗಳಿರುವರು.

ಸೂಕ್ತಗಳನ್ನು ವಿಂಗಡಿಸಿರುವುದರಲ್ಲಿ ಒಂದು ನಿರ್ದಿಷ್ಟವಾದ ಕ್ರಮವು ಅನುಸರಿಸಲ್ಪಟ್ಟಿದೆ. ಒಂದು ಮಂಡಲದಲ್ಲಿ ಒಬ್ಬ ಋಷಿಗೆ ಸಂಬಂಧಪಟ್ಟ ಸೂಕ್ತಗಳಲ್ಲಿ,ಮೊದಲು ಅಗ್ನಿ ದೇವತೆಗೆ ಸಂಬಂಧಪಟ್ಟ ಸೂಕ್ತಗಳಿರುವುವು. ಆ ಸೂಕ್ತಗಳಲ್ಲಿಯೂ ಮೊದಲು ಗಾಯತ್ರೀಛಂದಸ್ಸಿನ ಸೂಕ್ತಗಳು, ಬಳಿಕ ತ್ರಿಷ್ಟುಪ್ ಜಗತೀ ಮುಂತಾದ ಇತರ ಛಂದಸ್ಸಿನ ಸೂಕ್ತಗಳು ಇರುವವು. ಮತ್ತು ಈ ಸೂಕ್ತಗಳಲ್ಲೆಯೂ ಸಣ್ಣಸಣ್ಣ ಸೂಕ್ತಗಳು ಎಂದರೆ 3, 4, 5, 6, ಋಕ್ಕುಗಳುಳ್ಳ ಸೂಕ್ತಗಳು ಪ್ರಾರಂಭದಲ್ಲಿಯೂ ಬಳಿಕ ಕ್ರಮಕ್ರಮವಾಗಿ ಹೆಚ್ಚು ಋಕ್ಕುಗಳುಳ್ಳ ಸೂಕ್ತಗಳೂ ಇರುವುವು. ಈರೀತಿ ಅಗ್ನಿದೇವತಾಕವಾದ ಸೂಕ್ತಗಳು ಮುಗಿದಮೇಲೆ ಇಂದ್ರದೇವತಾಕವಾದ ಸೂಕ್ತಗಳು ಪ್ರಾರಂಭವಾಗುವುವು. ಅವುಗಳೂ ಮೇಲೆ ಹೇಳಿದ ನಿಯಮಗಳಿಗೊಳಪಟ್ಟಿರುವುವು ಇದಾದಮೇಲೆ ಇತರ ದೇವತೆಗಳು, ಎಂದರೆ ವಿಶ್ವದೇವತೆಗಳು, ಉಷಸ್ಸು ಮುಂತಾದ ದೇವತೆಗಳಿಗೆ ಸಂಬಂಧಪಟ್ಟ ಸೂಕ್ತಗಳು ಬರುವುವು. ಅನೇಕ ಋಷಿಗಳೂ, ಬೇರೆಬೇರೆ ದೇವತೆಗಳೂ, ಬೇರೆಬೇರೆ ಛಂದಸ್ಸುಗಳೂ ಒಂದೇ ಸೂಕ್ತದಲ್ಲಿ ಕಂಡುಬರುವುವು. ಇಂತಹ ಸೂಕ್ತಗಳು ಎಷ್ಟೋ ಕಡೆಗಳಲ್ಲಿರುವುವು. ಇವೆಲ್ಲವೂ ಅದಮೇಲೆ ಆ ಮಂಡಲಕ್ಕೆ ಸಂಬಂಧಪಟ್ಟ ಬೇರೆ ಋಷಿಯ ಸೂಕ್ತಗಳು ಹಿಂದೆ ಹೇಳಿದ ಕ್ರಮದಲ್ಲಿಯೇ ಪ್ರಾರಂಭವಾಗುವುವು. 9 ನೇ ಮಂಡಲದಲ್ಲಿ ಮಾತ್ರ ಎಲ್ಲಾ ಸೂಕ್ತಗಳಿಗೂ ಪವಮಾನಃಸೋಮಃ ಎಂಬ ಒಂದೇ ದೇವತೆಯಾಗಿರುವುದರಿಂದ ಗಾಯತ್ರಿಯೇ ಮೊದಲಾದ ಛಂದಸ್ಸಿನ ಕ್ರಮವೂ, ಸೂಕ್ತಗಳ ಪರಿಮಾಣವೂ ಅನುಸರಿಸಲ್ಪಟ್ಟಿರುವುದು

ಸೂಕ್ತಗಳು ಸಾಧಾರಣವಾಗಿ ಒಬ್ಬ ದೇವತೆಯನ್ನೇ ಉದ್ದೇಶಿಸುತ್ತವೆ. ಆದರೆ ಕೆಲವು ಸಂದರ್ಭಗಳಲ್ಲಿ ಒಂದು ಸೂಕ್ತಕ್ಕೆ ಅನೇಕ ದೇವತೆಗಳಿರಬಹುದು. ಒಂದೊಂದು ಋಕ್ಕಿಗೆ ಒಬ್ಬೊಬ್ಬ ದೇವತೆಯಿರಬಹುದು. ಅಥವಾ ಒಂದೇ ಸೂಕ್ತಕ್ಕೆ, ಒಂದೇ ಮಂತ್ರಕ್ಕೆ ಇಬ್ಬರು ದೇವತೆಗಳಿರಬಹುದು. ಮೊದಲನೆಯ ಮಂಡಲದ 2 ನೆಯ ಸೂಕ್ತದಲ್ಲಿ 9 ಋಕ್ಕುಗಳಿವೆ. ಅದರಲ್ಲಿ ಮೂರುಮೂರು ಮಂತ್ರಕ್ಕೊಬ್ಬರಂತೆ ವಾಯ್ವಿಂದ್ರವಾಯುಗಳು ಮತ್ತು ಮಿತ್ರಾವರುಣರು ಎಂದು ಮೂರು ದೇವತೆಗಳು. ಆದೇ ಮಂಡಲದಲ್ಲಿ 6 ನೆಯ ಸೂಕ್ತಗಳಲ್ಲಿ ಹತ್ತು ಋಕ್ಕುಗಳಿವೆ. ಇದರಲ್ಲಿ ಮೊದಲನೆಯ ಮೂರಕ್ಕೆ ಇಂದ್ರನು ದೇವತೆ. ಬಾಕಿ ಋಕ್ಕುಗಳಲ್ಲಿ ಎಂಟನೆಯ ಮತ್ತು ಒಂಭತ್ತನೆಯದಕ್ಕೆ ಮರುತ್ತುಗಳು, ಉಳಿದ ಋಕ್ಕುಗಳಲ್ಲಿ ಒಂದೊಂದಕ್ಕೆ ಒಬ್ಬೊಬ್ಬರಂತೆ ಮರುತ್ತುಗಳು, ಇಂದ್ರ ಮರುತ್ತುಗಳು, ಮರುತ್ತುಗಳು ಮತ್ತು ಇಂದ್ರ ಮರುತ್ತುಗಳು ಕ್ರಮವಾಗಿ ದೇವತೆಗಳು. ಹದಿನಾಲ್ಕನೆಯ ಸೂಕ್ತದಲ್ಲಿರುವ ಹನ್ನೆರಡು ಮಂತ್ರಗಳಿಗೆ (ಅತ್ರವಿಶೇಷಃ ಅಸ್ಯ ಸೂಕ್ತಸ್ಯ ವಿಷ್ವೀ

ದೇವೈಸ್ಸಹಿತೋ ಅಗ್ನಿರ್ದೇವತಾ) ವಿಶ್ವೇದೇವತೆಗಳಿಂದ ಸಹಿತನಾದ ಅಗ್ನಿಯು ದೇವತೆ. ಹದಿಮೂರನೆಯ ಸೂಕ್ತದ ಒಂಭತ್ತನೆಯ ಮಂತ್ರಕ್ಕೆ ಮೂರು ದೇವತೆಗಳು, ಸರಸ್ವತೀ, ಇಳಾ ಮತ್ತು ಭಾರತಿಯರು. ಇದೇರೀತಿ ಅನೇಕ ಉದಾಹರಣೆಗಳು ಸಿಗುತ್ತವೆ. ಆದರೆ ಪ್ರಾಯಶಃ ಒಂದು ಸೂಕ್ತಕ್ಕೆ ಒಂದೇ ದೇವತೆ.

ಋಗ್ವೇದದಲ್ಲಿ ವಿಶೇಷವಾಗಿ ಬರುವ ದೇವತೆಗಳೆಂದರೆ ಅಗ್ನಿ, ಇಂದ್ರ, ಮರುತ್ತುಗಳು, ವಿಶ್ವೇದೇವತೆಗಳು, ಅಶ್ವಿನೀದೇವತೆಗಳು, ಪವಮಾನಸೋಮ ಇತ್ಯಾದಿ. ಅದರಲ್ಲಿ ಹೆಚ್ಚು ಮಂತ್ರಗಳು ಅಗ್ನಿ ಮತ್ತು ಇಂದು ದೇವತಾಕವಾದವು. ಒಟ್ಟು ಋಗ್ವೇದದಲ್ಲಿ ಕಾಲುಭಾಗವು ಇಂದ್ರನಪರವಾಗಿವೆ. ಇಂದ್ರನಾದಮೇಲೆ ಹೆಚ್ಚು ಮಂತ್ರಗಳು ಅಗ್ನಿ ಪರವಾಗಿವೆ. ಅನಂತರ ಇತರ ದೇವತೆಗಳು.

ಈ ಮಂಡಲಗಳಲ್ಲಿ ಇನ್ನೊಂದು ವಿಶೇಷ ಕಂಡುಬರುತ್ತದೆ. ಎಂಟು ಮತ್ತು ಒಂಭತ್ತನೆಯ ಮಂಡಲಗಳು ಹೊರತು, ಉಳಿದ ಎಂಟು ಮಂಡಲಗಳಲ್ಲಿ ಮೊದಲನೆಯ ಸೂಕ್ತ ಅಗ್ನಿ ಪರವಾಗಿಯೇ ಇದೆ. ಎಂಟನೆಯದರಲ್ಲಿ ಇಂದ್ರಪರವಾದ ಮಂತ್ರದಿಂದ ಪ್ರಾರಂಭಿಸುತ್ತದೆ. ಒಂಭತ್ತನೆಯ ಮಂಡಲವಷ್ಟೂ ಒಂದೇ ದೇವತೆಯನ್ನುದ್ದೇಶಿಸಿದೆ. ಪವಮಾನಸೋಮದೇವತೆಯೇ ಈ ಮಂಡಲದ ದೇವತೆ. ಇತರ ಮಂಡಲಗಳಂತೆ ಋಷಿಗಳು ಒಂದೇ ಗುಂಪಿನವರಲ್ಲ. ಇತರ ಮಂಡಲದ ಋಷಿಗಳೆಲ್ಲರೂ ಈ ಮಂಡಲದಲ್ಲಿ ಬರುತ್ತಾರೆ. ಹತ್ತನೆಯ ಮಂಡಲಕ್ಕೆ ಋಷಿಗಳೂ ನಾನಾಗುಂಪಿನವರು. ದೇವತೆಗಳೂ ಅನೇಕರು.

ಪ್ರಕೃತಸಂದರ್ಭದಲ್ಲಿ—ಮೊದಲನೆಯ ಅನುವಾಕದಲ್ಲಿರುವ ೩ ಸೂಕ್ತಗಳಲ್ಲಿ ೧-೨ ಸೂಕ್ತಗಳನ್ನು ಹಿಂದೆಯೇ (೧ನೆಯ ಭಾಗದಲ್ಲಿ) ವಿವರಿಸಿರುವುದರಿಂದ ಈಗ ಈ ಅನುವಾಕದ ಕೊನೆಯ ಸೂಕ್ತವಾದ **ಅಶ್ವಿನಾ ಯೆಜ್ವರೀರಿಷಃ** ಎಂಬ ಮೂರನೆಯ ಸೂಕ್ತದ ವಿವರಣೆಗಳನ್ನು ಪ್ರಾರಂಭಿಸುವೆವು.

ಅರ್ಧಾನುವಾದಕ್ಕೆ ಪೂರ್ವದಲ್ಲಿ ಈ ಸೂಕ್ತದ ವಿನಿಯೋಗಕ್ರಮವನ್ನು ಹೇಳುವೆವು—

> ಅಶ್ವಿನೇತಿ ದ್ವಾದಶರ್ಚಂ ತೃತೀಯಂ ಸೂಕ್ತಂ । ತತ್ರಾಶ್ವಿನಸ್ತ್ರ್ಯೃಚಃ ಪ್ರಾತರನುವಾಕಸ್ಯಾಶ್ವಿನೇ ಕೃತಾ ವಿನಿಯುಕ್ತಃ । ತಥಾ ಚ ಸೂತ್ರಿತಂ । ಅಥಾಶ್ವಿನ ಏಷೋ ಉಷಾಃ ಪ್ರಾತರ್ಯುಜೇತಿ ಚತಸ್ರೋಶ್ವಿನಾ ಯೆಜ್ವರೀರಿಷಃ ॥ ಆ. ೪-೧೫ । ಇತಿ ॥

ಈ ಸೂಕ್ತದಲ್ಲಿ ೧೨ ಋಕ್ಕುಗಳಿದ್ದುವು. ಅಥವಾ ೪ ತೃಚಗಳಿರುವವು. ತೃಚವೆಂದರೆ ೩ ಋಕ್ಕುಗಳ ಸಮುದಾಯವೆಂದರ್ಥವು. ೧ ನೆಯ ತೃಚಕ್ಕೆ (೧-೩ ಋಕ್ಕುಗಳಿಗೆ) ಅಶ್ವಿನೀದೇವತೆಗಳೂ, ೨ ನೆಯ ತೃಚಕ್ಕೆ (೪-೬ ಋಕ್ಕುಗಳಿಗೆ) ಇಂದ್ರನೂ, ೩ ನೆಯ ತೃಚಕ್ಕೆ (೭-೯ ಋಕ್ಕುಗಳಿಗೆ) ವಿಶ್ವೆದೇವತೆಗಳೂ, ೪ ನೆಯ ತೃಚಕ್ಕೆ (೧೦-೧೨ ಋಕ್ಕುಗಳಿಗೆ,) ಸರಸ್ವತಿಯೂ ದೇವತೆಗಳಾಗಿರುವರು.

ಅಗ್ನಿಷ್ಟೋಮಯಾಗದ ಸಂಕ್ಷೇಪ ವಿವರಣೆಯನ್ನು ನಾವು ಹಿಂದೆಯೇ (ಭಾಗ ೧ ಪೇ. 667-669) ಕೊಟ್ಟಿರುವೆವು. ಅಗ್ನಿಷ್ಟೋಮಯಾಗಗಳಲ್ಲಿ ಸೋಮರಸವನ್ನು ಹಿಂಡಿ ತೆಗೆಯುವ ದಿನಕ್ಕೆ ಸುತ್ಯಾದಿನವೆಂದು ಹೆಸರು. ಸೋಮರಸ ತೆಗೆಯುವ ಕಾಲದಲ್ಲಿ ಸ್ತೋತ್ರ, ಶಸ್ತ್ರಗಳೆಂದು ಹೇಳಲ್ಪಡುವ ಕೆಲವು ಸೂಕ್ತಗಳನ್ನು ಪಠನೆಮಾಡುವುದರಿಂದ ಆ ದಿನಕ್ಕೆ ಸ್ತುತ್ಯಾದಿನವೆಂದೂ ಹೆಸರು. ಆ ದಿನದಲ್ಲಿ ಪ್ರಾತಃಕಾಲದಲ್ಲಿ ಎಂದರೆ,

ಹಿಂದಿನ ದಿನ ಅರ್ಧರಾತ್ರಿ ಕಳೆದಮೇಲೆ ಸೂರ್ಯೋದಯವಾಗುವುದರೊಳಗೆ ಪಕ್ಷಿಗಳ ಕಿಲಕಿಲಧ್ವನಿಯು ಕೇಳಿ ಬರುವುದಕ್ಕಿಂತ ಮುಂಚೆಯೇ ಹೋತೃವು ಪ್ರಾತರನುವಾಕಗಳೆಂಬ ಮಂತ್ರಗಳನ್ನು ಹೇಳಿ ಮುಗಿಸಬೇಕು. ಈ ಪ್ರಾತರನುವಾಕವು **ಆಗ್ನೇಯಕ್ರತು** (ಅಗ್ನಿಸಂಬಂಧವಾದ ಋಕ್ಕುಗಳು) ಉಷಸ್ಯಕ್ರತು, ಆಶ್ವಿನಕ್ರತು ಎಂದು ಮೂರುಭಾಗಗಳನ್ನೊಳಗೊಂಡಿರುವುದು. ಪ್ರತಿಯೊಂದು ಭಾಗದಲ್ಲಿಯೂ ಗಾಯತ್ರೀ, ಅನುಷ್ಟುಪ್, ತ್ರಿಷ್ಟುಪ್, ಬೃಹತೀ, ಉಷ್ಣಿಕ್, ಜಗತೀ, ಪಂಕ್ತಿಃ ಎಂಬ ಏಳುವಿಧವಾದ ಛಂದಸ್ಸುಗಳಿಂದ ಕೂಡಿದ ಅನೇಕ ಮಂತ್ರಗಳಿರಬೇಕು.

ಪ್ರಾತರನುವಾಕಪಠನಾನಂತರ ಪ್ರಾತಸ್ಸವನವೆಂಬ ಕರ್ಮವು ನಡೆಯುವುದು ಸವನವೆಂದರೆ ಸೋಮಲತೆಯನ್ನು ಕಲ್ಲುಗಳಿಂದ (ಗ್ರಾವಾಣ) ಜಜ್ಜಿ ರಸವನ್ನು ಹಿಂಡಿ ತೆಗೆಯುವುದು. ಈ ಕರ್ಮವು ಮೂರು ಕಾಲಗಳಲ್ಲಿಯೂ ನಡೆಯುವುದು. ಪ್ರಾತಃಕಾಲದಲ್ಲಿ ರಸ ತೆಗೆಯುವುದಕ್ಕೆ **ಪ್ರಾತಸ್ಸವನವೆಂದೂ** ಮಧ್ಯಾಹ್ನಕಾಲದಲ್ಲಿ ರಸತೆಗೆಯುವುದಕ್ಕೆ ಮಾಧ್ಯಂದಿನಸವನವೆಂದೂ, ಸಾಯಂಕಾಲದಲ್ಲಿ ರಸತೆಗೆಯುವುದಕ್ಕೆ ತೃತೀಯಸವನವೆಂದೂ ಹೆಸರು.

ಈ ಮೂರು ಸವನಗಳಲ್ಲಿಯೂ ಒಟ್ಟು ಹನ್ನೆರಡು ಸ್ತೋತ್ರಗಳನ್ನೂ ಹನ್ನೆರಡು ಶಸ್ತ್ರ (ಮಂತ್ರ) ಗಳನ್ನೂ ಪಠಿಸಬೇಕು ಇಲ್ಲಿ ಸ್ತೋತ್ರ ಮತ್ತು ಶಸ್ತ್ರಮಂತ್ರಗಳ ವಿವರಣೆಯು ಅವಶ್ಯಕವಾಗಿರುವುದು. ಸ್ತೋತ್ರವೆಂದರೆ ಗಾನಮಾಡುವುದಕ್ಕೆ (ಸಾಮಗಾನ) ಅರ್ಹವಾದ ಋಕ್ಕುಗಳು. ಈ ಸಾಮಗಾನಮಂತ್ರವನ್ನು ಉದ್ಗಾತೃವೆಂಬ ಋತ್ವಿಜನು ಗಾನಮಾಡುವನು. ಅವನು ಒಂದೊಂದು ಸ್ತೋತ್ರವನ್ನು ಗಾನಮಾಡಿದ ಕೂಡಲೇ ಅದಕ್ಕೆ ಪ್ರತಿಯಾಗಿ ಹೋತೃವು ಶಸ್ತ್ರಮಂತ್ರವನ್ನು (ಋಗ್ವೇದದ ಋಕ್ಕುಗಳು) ಪಠಿಸುವನು. ಶಸ್ತ್ರವೆಂದರೆ ಗಾನಮಾಡದೆ ಸುಮ್ಮನೆ ಪಠಿಸುವ ಋಗ್ವೇದಮಂತ್ರವು. ಈ ಶಸ್ತ್ರಮಂತ್ರವನ್ನು ಹೋತೃವೂ ಅವನ ಕಡೆಯವರಾದ ಹೋತೃಕರು ಎಂದರೆ ಮೈತ್ರಾವರುಣ, ಬ್ರಾಹ್ಮಣಾಚ್ಛಂಸಿ, ಅಚ್ಛಾವಾಕ ಎಂಬ ಸಹಾಯಕ ಋತ್ವಿಜರು ಪಠಿಸುವರು. ಈ ಮಂತ್ರಗಳನ್ನು ಅಗ್ನಿಷ್ಟೋಮಯಾಗದ ಪ್ರಾತರನುವಾಕದಲ್ಲಿ ಮೂರು ಸವನಗಳಲ್ಲಿಯೂ ಪಠಿಸುವ ವಿವರವನ್ನು ಕೆಳಗೆ ಕೊಟ್ಟಿದೆ—

೧. ಪ್ರಾತಸ್ಸವನ

ಸ್ತೋತ್ರಮಂತ್ರಗಳು	ಶಸ್ತ್ರಮಂತ್ರಗಳು
೧. ಬಹಿಷ್ಪವಮಾನಸ್ತೋತ್ರ	೧. ಆಜ್ಯಶಸ್ತ್ರ
೨. ಆಜ್ಯಸ್ತೋತ್ರಗಳು	೨. ಪ್ರಉಗಶಸ್ತ್ರ (ಇವುಗಳನ್ನು ಹೋತೃವು ಪಠಿಸುವನು)
೩. ,,	೩. ಆಜ್ಯಶಸ್ತ್ರಗಳು
೪. ,,	೪. ,,
೫. ,,	೫. ,,
(ಈ ಎರಡು ಸ್ತೋತ್ರಗಳನ್ನು ಉದ್ಗಾತೃವು ಗಾನಮಾಡುವನು)	(ಈ ಮೂರು ಶಸ್ತ್ರಗಳನ್ನು ಹೋತೃವಿನ ಸಹಾಯಕರಾದ ಮೈತ್ರಾವರುಣ, ಬ್ರಾಹ್ಮಣಾಚ್ಛಂಸಿ, ಅಚ್ಛಾವಾಕ ಎಂಬ ಋತ್ವಿಜರು ಪಠಿಸುವರು).

೨. ಮಾಧ್ಯಂದಿನಸವನ

ಸ್ತೋತ್ರಮಂತ್ರಗಳು		ಶಸ್ತ್ರಮಂತ್ರಗಳು	
೬.	ಮಾಧ್ಯಂದಿನಪವಮಾನಸ್ತೋತ್ರ	೬.	ಮರುತ್ವತೀಯಶಸ್ತ್ರ
೭.	ಪೃಷ್ಠಸ್ತೋತ್ರ	೭.	ನಿಷ್ಕೇವಲ್ಯಶಸ್ತ್ರ
		(ಈ ಎರಡು ಶಸ್ತ್ರಗಳನ್ನು ಹೋತೃವು ಪಠಿಸುವನು)	
೮.	,,	೮.	ನಿಷ್ಕೇವಲ್ಯಶಸ್ತ್ರ
೯.	,,	೯.	,,
೧೦.	,,	೧೦.	,,
(ಈ ಐದನ್ನೂ ಉದ್ಗಾತೃವು ಗಾನಮಾಡುವನು)		(ಈ ಮೂರನ್ನೂ ಹೋತೃವಿನ ಸಹಾಯಕರಾದ ಮೈತ್ರಾವರುಣಾದಿಗಳು ಪಠಿಸುವರು)	

೩. ತೃತೀಯಸವನ

ಸ್ತೋತ್ರಮಂತ್ರಗಳು		ಶಸ್ತ್ರಮಂತ್ರಗಳು	
೧೧.	ಆರ್ಭವ ಆಥವಾ ತೃತೀಯಪವಮಾನ	೧೧.	ವೈಶ್ವದೇವಶಸ್ತ್ರ
೧೨.	ಅಗ್ನಿಷ್ಟೋಮ ಸಾಮ(ಯಜ್ಞಾಯಜ್ಞಿಯ)	೧೨.	ಆಗ್ನಿಮಾರುತಶಸ್ತ್ರ
(ಈ ಎರಡು ಸ್ತೋತ್ರಗಳನ್ನು ಉದ್ಗಾತೃವು ಗಾನಮಾಡುವನು)		(ಈ ಎರಡು ಶಸ್ತ್ರಗಳನ್ನು ಹೋತೃವು ಪಠಿಸುವನು)	

ಭಾಷ್ಯಕಾರರು ಹೇಳಿರುವ **ಆಜ್ಯೈಃ ಸ್ತುವತೇ**—ಉದ್ಗಾತೃವು ಆಜ್ಯಸ್ತೋತ್ರ ಮಂತ್ರಗಳಿಂದ (ಪ್ರಾತಸ್ಸವನದಲ್ಲಿ) ಗಾನರೂಪವಾಗಿ ಸ್ತೋತ್ರಮಾಡುವನು, **ಪೃಷ್ಠೈಃ ಸ್ತುವತೇ**—ಉದ್ಗಾತೃವು ಪೃಷ್ಠಸ್ತೋತ್ರ ಮಂತ್ರಗಳಿಂದ (ಮಾಧ್ಯಂದಿನಸವನದಲ್ಲಿ) ಗಾನರೂಪವಾಗಿ ಸ್ತೋತ್ರಮಾಡುವನು, **ಪ್ರಉಗಂ ಶಂಸತಿ** ಹೋತೃವು ಪ್ರಉಗಶಸ್ತ್ರಮಂತ್ರಗಳನ್ನು (ಪ್ರಾತಸ್ಸವನದಲ್ಲಿ) ಪಠಿಸುವನು; **ನಿಷ್ಕೇವಲ್ಯಂ ಶಂಸತಿ**—ಹೋತೃವು ನಿಷ್ಕೇವಲ್ಯ ಶಸ್ತ್ರಮಂತ್ರಗಳನ್ನು (ಮಾಧ್ಯಂದಿನಸವನದಲ್ಲಿ) ಪಠಿಸುವನು ಎಂದರ್ಥವು. ಎಂದರೆ ಉದ್ಗಾತೃವು ಪ್ರಾತಸ್ಸವನದಲ್ಲಿ ಆಜ್ಯಸ್ತೋತ್ರಗಳಿಂದ ಗಾನಮಾಡಿದಕೂಡಲೇ ಅದಕ್ಕೆ ಪ್ರತಿಯಾಗಿ ಹೋತೃವು ಪ್ರಉಗಶಸ್ತ್ರ ಮಂತ್ರಗಳನ್ನು ಪಠಿಸುವನು. ಹಾಗೆಯೇ ಉದ್ಗಾತೃವು ಮಾಧ್ಯಂದಿನಸವನದಲ್ಲಿ ಪೃಷ್ಠಸ್ತೋತ್ರಗಳಿಂದ ಗಾನ ಮಾಡಿದಕೂಡಲೇ ಹೋತೃವು ನಿಷ್ಕೇವಲ್ಯಶಸ್ತ್ರಮಂತ್ರಗಳನ್ನು ಪಠಿಸುವನು, ಇತ್ಯಾದಿ.

ಪ್ರಾತರನುವಾಕಮಂತ್ರಪಠನಸಂದರ್ಭದಲ್ಲಿ **ಆಗ್ನಿಮಿಳೇ** ಎಂಬ ಸೂಕ್ತವನ್ನು ಪಠಿಸಬೇಕೆಂದು ಅದರ ವಿನಿಯೋಗವನ್ನೂ ಎರಡನೆಯ ಸೂಕ್ತವಾದ **ವಾಯವಾ ಯಾಹಿ** ಎಂಬ ಒಂಭತ್ತು ಋಕ್ಕಿನ ಸೂಕ್ತವಿನಿಯೋಗವನ್ನೂ ಹಿಂದೆಯೇ ಹೇಳಿರುವುದಷ್ಟೆ. ಈಗ ಮೂರನೆಯದಾದ **ಅಶ್ವಿನಾ ಯಜ್ವರೀರಿಷಃ** ಎಂಬ ಹನ್ನೆರಡು ಋಕ್ಕುಗಳ ಸೂಕ್ತವನ್ನು **ಪ್ರಉಗಶಸ್ತ್ರ**ವೆಂಬ ಶಸ್ತ್ರಮಂತ್ರಪಠನಸಂದರ್ಭದಲ್ಲಿ ಹೋತೃವು ಪಠಿಸಬೇಕು. ಆ ಪ್ರಉಗಶಸ್ತ್ರ ಮಂತ್ರಗಳ ಕ್ರಮವು ಈರೀತಿ ಇದೆ—**ವಾಯವು**, ಇಂದ್ರವಾಯೂ, ಮಿತ್ರಾವರುಣಾ, ಅಶ್ವಿನೌ, ಇಂದ್ರಶ್ಚ, ವಿಶ್ವೇದೇವಾಃ, ಸರಸ್ವತೀ ಎಂಬ ಏಳು ದೇವತೆಗಳನ್ನು ಸ್ತುತಿಸುವ ಮಂತ್ರಗಳು. ಪ್ರತಿಯೊಂದು ದೇವತೆಗೂ ತೃಚವೆಂದು ಹೇಳಲ್ಪಡುವ ಮೂರು ಮೂರು ಋಕ್ಕುಗಳಿವೆ. **ವಾಯವಾ ಯಾಹಿ** ಎಂಬ ಸೂಕ್ತದಲ್ಲಿರುವ

ಒಂಭತ್ತು ಋಕ್ಕುಗಳಲ್ಲಿ ಮೊದಲನೆಯ ಮೂರು ಋಕ್ಕುಗಳು ವಾಯುವನ್ನೂ, ನಾಲ್ಕರಿಂದ ಆರುವರೆಗಿನ ಋಕ್ಕುಗಳು ಇಂದ್ರ ವಾಯುಗಳನ್ನೂ, ಏಳರಿಂದ ಒಂಭತ್ತುವರೆಗಿನ ಋಕ್ಕುಗಳು ಮಿತ್ರಾವರುಣರನ್ನೂ, ಮುಂದಿನ **ಅಶ್ವಿನಾ ಯೇಜ್ವರೀರಿಷಃ** ಎಂಬ ಸೂಕ್ತದಲ್ಲಿ ಒಂದರಿಂದ ಮೂರು ಋಕ್ಕುಗಳು ಅಶ್ವಿನೀದೇವತೆಗಳನ್ನೂ, ನಾಲ್ಕರಿಂದ ಆರರವರೆಗಿನ ಋಕ್ಕುಗಳು ಇಂದ್ರನನ್ನೂ, ಏಳರಿಂದ ಒಂಭತ್ತರವರೆಗಿನ ಋಕ್ಕುಗಳು ವಿಶ್ವೇದೇವರನ್ನೂ ಒಂಭತ್ತರಿಂದ ಹನ್ನೆರಡರವರೆಗಿನ ಋಕ್ಕುಗಳು ಸರಸ್ವತಿಯನ್ನೂ ಪ್ರತಿಪಾದಿಸುವವು. ಆದುದರಿಂದ ಎರಡು ಸೂಕ್ತಗಳಿಂದ ಒಟ್ಟು ಏಳು ತೃಚ (ಇಪ್ಪತ್ತೊಂದು ಋಕ್ಕುಗಳು) ಗಳಿಂದ ಕೂಡಿದ ಏಳು ದೇವತೆಗಳ ಶಸ್ತ್ರಮಂತ್ರಗಳಿರುವವು. ಇವುಗಳನ್ನು ಹೋತೃವು ಪ್ರಾತಸ್ಸವನದಲ್ಲಿ ಎರಡನೆಯದಾದ ಪ್ರಉಗಶಸ್ತ್ರವನ್ನು (ಉದ್ಗಾತೃವು ಆಜ್ಯಸ್ತೋತ್ರಗಳನ್ನು ಗಾನಮಾಡಿದಕೂಡಲೇ) ಪಠಿಸುವಾಗ ಹೇಳಬೇಕು. ಇದೇ ಈ ಎರಡು ಮತ್ತು ಮೂರನೆಯ ಸೂಕ್ತಗಳ ವಿನಿಯೋಗವು.

ಈ ವಿನಿಯೋಗಕ್ರಮವು ಐತರೇಯಬ್ರಾಹ್ಮಣದಲ್ಲಿ **ಗ್ರಹೋಕ್ಥಂ** (ಐ. ಬ್ರಾ. ೩-೧) ಎಂಬ ಖಂಡದಲ್ಲಿ ಹೇಳಿರುವುದು. ಆಶ್ವಲಾಯನರೂ ಸಹ ತಮ್ಮ ಶ್ರೌತಸೂತ್ರದಲ್ಲಿ **ಸ್ತೋತ್ರಮಗ್ರೇ ಶಸ್ತ್ರಾತ್** (ಆಶ್ವ.ಸೂ. ೫-೧೦) ಎಂಬ ಖಂಡಗಳಲ್ಲಿ ಹೇಳಿರುವರು. ಈ ವಿಚಾರದಲ್ಲಿ ಅನುಕ್ರಮಣಿಕೆಯು ಹೀಗೆ ಹೇಳುವುದು—**ವಾಯೋ ವಾಯವ್ಯೈಂದ್ರವಾಯವಮೈತ್ರಾವರುಣಾಸ್ತೃಚಾಃ ಅಶ್ವಿನಾ ದ್ವಾದಶಾಶ್ವಿನೈಂದ್ರವೈಶ್ವದೇವಸಾರಸ್ವತಾಸ್ತೃಚಾಃ ಸಪ್ತೈತಾಃ ಪ್ರಉಗದೇವತಾಃ** ಎಂದರೆ **ವಾಯವಾಯಾಹಿ** ಎಂಬ ಸೂಕ್ತದಲ್ಲಿ ಮೂರು ಮೂರು ಋಕ್ಕುಗಳಿಗೆ ಒಬ್ಬೊಬ್ಬ ದೇವತೆಯಂತೆ **ವಾಯು, ಇಂದ್ರವಾಯೂ, ಮಿತ್ರಾವರುಣಾ** ಎಂಬ ಮೂರು ದೇವತೆಗಳೂ **ಅಶ್ವಿನಾಯೇಜ್ವರೀರಿಷಃ** ಎಂಬ ಸೂಕ್ತದಲ್ಲಿ ಹಿಂದಿನಂತೆಯೇ ಮೂರು ಮೂರು ಋಕ್ಕುಗಳಿಗೆ **ಅಶ್ವಿನಾ, ಇಂದ್ರಃ, ವಿಶ್ವದೇವಾಃ, ಸರಸ್ವತೀ** ಎಂಬ ನಾಲ್ಕು ದೇವತೆಗಳೂ ಸ್ತುತಿಸಲ್ಪಟ್ಟಿರುವರು. ಈ ಏಳು ದೇವತೆಗಳಿಗೂ ಪ್ರಉಗದೇವತೆಗಳೆಂದು ಹೆಸರು. ಇದೇ ಈ ಸೂಕ್ತದ ವಿನಿಯೋಗಕ್ರಮವು.

॥ ಓಂ ॥

ಸೂಕ್ತ—೩

॥ ಮಂಡಲ—೧ ॥ ಅನುವಾಕ—೧ ॥ ಸೂಕ್ತ—೩ ॥

॥ ಅಷ್ಟಕ —೧ ॥ ಅಧ್ಯಾಯ—೧ ॥ ವರ್ಗ— ೫, ೬ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೧–೧೨ ॥

ಋಷಿಃ—ಮಧುಚ್ಛಂದಾ ವೈಶ್ವಾಮಿತ್ರಃ ।

ದೇವತಾ— ೧–೩ ಅಶ್ವಿನೌ । ೪-೬ ಇಂದ್ರಃ ॥೭–೯ ವಿಶ್ವೇದೇವಾಃ ॥
೧೦–೧೨ ಸರಸ್ವತೀ ॥

॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಅಶ್ವಿನಾ ಯಜ್ವರೀರಿಷೋ ದ್ರವತ್ಪಾಣೀ ಶುಭಸ್ಪತೀ ।
ಪುರುಭುಜಾ ಚನಸ್ಯತಂ ॥ ೧ ॥

॥ ಪದಪಾಠಃ ॥

ಅಶ್ವಿನಾ । ಯಜ್ವರೀಃ । ಇಷಃ । ದ್ರವತ್ಪಾಣೀ ಇತಿ ದ್ರವತ್ಪಾಣೀ ।
ಶುಭಃ । ಪತೀ ಇತಿ ।
ಪುರುಭುಜಾ । ಚನಸ್ಯತಂ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನೌ ಯುವಾಮಿಷೋ ಹವಿರ್ಲಕ್ಷಣಾನ್ಯನ್ನಾನಿ ಚನಸ್ಯತಂ । ಇಚ್ಛತಂ । ಭುಂಜಾಥಾಮಿತ್ಯರ್ಥಃ । ಯದ್ಯಪಿ ಚನಃಶಬ್ದೋಽನ್ನವಾಚೀ ತಥಾಪೀಷ ಇತ್ಯನೇನ ಸಹ ನಾಸ್ತಿ ಪುನರುಕ್ತಿದೋಷಃ । ಇಚ್ಛಾಮುಪಲಕ್ಷಯಿತುಂ ಪ್ರಯುಕ್ತತ್ವಾತ್ । ವಕ್ತವ್ಯಮುತಾಚ । ಸಮೂಲಕಾಷಂ ಕಷತೀತ್ಯಾದೌ ಯಥಾ ಪುನರುಕ್ತ್ಯಭಾವಸ್ತದ್ವತ್ । ಕೀದೃಶೀರಿಷಃ । ಯಜ್ವರೀಃ । ಯಾಗನಿಷ್ಪಾದಿಕಾಃ । ಕೀದೃಶಾವಶ್ವಿನೌ । ದ್ರವತ್ಪಾಣೀ । ಪವಿರ್ಗ್ರಹಣಾಯ ದ್ರವದ್ಭ್ಯಾಂ ಧಾವದ್ಭ್ಯಾಂ ಪಾಣಿಭ್ಯಾಮುಪೇತೌ । ಶುಭಸ್ಪತೀ । ಶೋಭನಸ್ಯ ಕರ್ಮಣಃ ಪಾಲಕೌ । ಪುರುಭುಜಾ । ವಿಸ್ತೀರ್ಣಭುಜೌ ಬಹುಭೋಜಿನೌ

ವಾ । ಅಶ್ವಿನಾ । ಆಮಂತ್ರಿತಸ್ಯೇತಿ ಷಾಷ್ಠಿಕಮಾದ್ಯುದಾತ್ತತ್ವಂ । ಯಜ್ಞರೀಃ । ಯಾಗಕರಣಾನಾಮಸ್ಯೇನ್ನಾನಾಮಸಿಶ್ಚಿನತ್ತೀತಿವತ್ ಸ್ವನ್ಯಾಸಾರೇ ಕರ್ತೃತ್ವವಿವಕ್ಷಯಾ ಸುಯಜೋರ್ಙ್ಯನಿಪ್ । ಪಾ. ೩-೨-೧೦೩ । ಇತಿ ಜ್ವಿನಿಪ್ರತ್ಯಯಃ । ವನೋ ರ ಚ । ಪಾ-೪-೧-೭ । ಇತಿ ಙೀಪ್ । ತತ್ಸಂನಿಯೋಗೇನ ರೇಫಾದೇಶಃ । ಪ್ರತ್ಯಯತ್ರಯಸ್ಯಾನುದಾತ್ತಾ ಸುಪ್ತಿಙಾವಿತ್ಯನುದಾತ್ತತ್ವಾದ್ಧಾತುಸ್ವರ ಏವಾವಶಿಷ್ಯತೇ । ಇಷಃಶಬ್ದೋಽಶ್ಯೋನುದಾತ್ತತ್ವಾತ್ಪ್ರಾತಿಪದಿಕಸ್ವರ ಏವ ಶಿಷ್ಯತೇ । ದ್ರವಂತೌ ಧಾವಂತೌ ಸಾಣೇ ಯಯೋಸ್ತಯೋಃ ಸಂಬೋಧನಂ ದ್ರವತ್ಪಾಣೇ ಇತಿ । ತಸ್ಯಾಮಂತ್ರಿತಾದ್ಯುದಾತ್ತತ್ವಂ ನ ಪುನರಾಷ್ಟ್ರಮಿಕೋ ನಿಘಾತೋಽಸಾದಾದಾವಿತಿ ಪ್ರತಿಷೇಧಾತ್ । ಇಷ ಇತಿ ಪೂರ್ವಪದಸ್ಯ ಸುಬಾಮಂತ್ರಿತ ಇತಿ ಪರಾಂಗವದ್ಭಾವೇನ ಮಿತ್ರಾವರುಣಾವೃತಾವೃಧಾ । ಋ. ೧-೨-೪ । ಇತಿವದಸಾದಾದಿತ್ವಮಿತಿ ಚೇನ್ನ । ತತ್ರ ಸಾಮಾನಾಧಿಕರಣ್ಯೇನ ಪರಸ್ಪರಾನ್ವಯಾತ್ । ಇಹ ತ್ವಿಷೋ ದ್ರವತ್ಪಾಣೇ ಇತ್ಯನಯೋಃ ಸರಸ್ವತಿಶಬ್ದಾದ್ರಿಪದವನ್ನಸಾಮರ್ಥ್ಯೇನ ಪ್ರಯುಕ್ತತ್ವಾತ್ । ಶುಭ ಇತಿ ಶುಭ ಶುಂಭ ದೀಪ್ತಾವಿತ್ಯಸ್ಯ ಸಂಪದಾದಿತ್ವಾದ್ಭಾವೇ ಕ್ವಿಬಂತಸ್ಯ ಷಷ್ಠ್ಯೇಕವಚನಂ । ಷಷ್ಠ್ಯಾಃ ಪತಿಪುತ್ರ । ಪಾ. ೮-೩-೫೩ । ಇತಿ ವಿಸರ್ಜನೀಯಸ್ಯ ಸತ್ವಂ । ತಸ್ಯ ಪತೀ ಇತ್ಯಾಮಂತ್ರಿತೇ ಪರತಃ ಪರಾಂಗವದ್ಭಾವಾದಾಮಂತ್ರಿತಾದ್ಯುದಾತ್ತತ್ವಂ । ನ ಪುನರಾಷ್ಟ್ರಮಿಕೋ ನಿಘಾತಃ । ತಸ್ಮಿನ್ಕರ್ತರ್ಯೇ ದ್ರವತ್ಪಾಣೇ ಇತಿ ಪೂರ್ವಸ್ಯಾಮಂತ್ರಿತಸ್ಯಾಮಂತ್ರಿತಂ ಪೂರ್ವಮವಿದ್ಯಮಾನವದಿತ್ಯವಿದ್ಯಮಾನವದ್ಭಾವೇನ ಸಾದಾದಿತ್ವಾದಸಾದಾದಾವಿತಿ ಪ್ರತಿಷೇಧಾತ್ । ನನು ಮಿತ್ರಾವರುಣಾವೃತಾವೃಧಾವಿತಿವನ್ನಾಮಂತ್ರಿತೇ ಸಮಾನಾಧಿಕರಣ ಇತ್ಯವಿದ್ಯಮಾನವತ್ತ್ವಪ್ರತಿಷೇಧೇನ ಭವಿತವ್ಯಮಿತಿ ಚೇನ್ನ । ಮಿತ್ರಾವರುಣಪದಂ ಹಿ ಸಾಮಾನ್ಯವಚನಮಿತಿ ಯುಕ್ತಸ್ತಸ್ಯಾವಿದ್ಯಮಾನವತ್ತ್ವಪ್ರತಿಷೇಧಃ । ದ್ರವತ್ಪಾಣೇಪದಂ ತು ನ ತಥೇತಿ ವೈಷಮ್ಯಾತ್ । ಪುರುಭುಜಾ । ಪುರೂ ವಿಸ್ತೀರ್ಣೌ ಭುಜೌ ಯಯೋಸ್ತೌ । ಆಮಂತ್ರಿತಾದ್ಯುದಾತ್ತತ್ವಂ । ಸುಸಾಂ ಸುಲುಗಿತಿ ಡಾದೇಶಃ । ಪುರು ಬಹು ಭುಂಜಾತೇ ಇತಿ ವಾ । ಚನಸ್ಯತಮಿತ್ಯತ್ರ ಚಾಯತೇರನ್ನೇ ಹ್ರಸ್ವಶ್ಚ । ಉ. ೪-೧೯೯ । ಇತಿ ಚಾಯೃ ಪೂಜಾನಿಶಾಮನಯೋರಿತ್ಯಸ್ಯಾಸುಸ್ರತ್ಯಯ ಆಕಾರಸ್ಯ ಹ್ರಸ್ವೇ ಚಾನುಕೃಷ್ಟೇ ನುಡಾಗಮೇ ಚ । ಉ. ೪-೧೯೬ । ಲೋಪೋ ವ್ಯೋರ್ವಲಿ । ಪಾ. ೬-೧-೬೬ । ಇತಿ ಯಕಾರಲೋಪೇ ಚನಃಶಬ್ದೋಽನ್ನನಾಮಸು ಪಠಿತಃ । ತದಾತ್ಮನ ಇಚ್ಛತೀತಿ ಸುಪ ಆತ್ಮನಃ ಕ್ಯಚ್ । ಪಾ. ೩-೧-೮ । ಸನಾದ್ಯಂತಾಃ । ಪಾ. ೩-೧-೩೨ । ಇತಿ ಧಾತುತ್ವಾಲ್ಲೋಣ್ಮಧ್ಯನುದ್ದಿವಚನಂ । ಕ್ಯಚಃ ಪ್ರತ್ಯಯಸ್ವರೇಣೋದಾತ್ತತ್ವಂ । ಶಪೈಕಾದೇಶೇ ಕೃತ ಏಕಾದೇಶ ಉದಾತ್ತೇನೋದಾತ್ತಃ । ಪಾ ೮-೨-೫ । ಇತ್ಯುದಾತ್ತಃ । ಉಕಶ್ಚಾರ್ಖ್ಯಾತಸ್ಯ ಲಸಾರ್ವಧಾತುಕಾನುದಾತ್ತತ್ವೇ ಸ್ವರಿತತ್ವಂ । ನ ಚೇ ತಿಙ್ತಿಙ ಇತಿ ನಿಘಾತಃ । ಪೂರ್ವಸ್ಯಾಮಂತ್ರಿತಸ್ಯಾವಿದ್ಯಮಾನವದ್ಭಾವೇನ ಪದಾದಪರತ್ವಾತ್ಪದಾದಿತ್ವಾದ್ಯಾ ತದಪ್ರಾಪ್ತೇಃ ॥

॥ ಪ್ರತಿಪದಾರ್ಥ ॥

(ಹೇ) ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ (ನೀವು) । ಶುಭಸ್ಪತೀ—ಒಳ್ಳೆಯ ಕರ್ಮಗಳ (ಯಜ್ಞಯಾಗಾದಿ ಕರ್ಮಗಳ) ಪಾಲಕರು . । ಪುರುಭುಜಾ—ನಿಮ್ಮ ಬಾಹುಗಳು ಉದ್ದವಾಗಿವೆ, ವಿಸ್ತೀರ್ಣವಾಗಿವೆ ಅಥವಾ ನೀವು ಹೆಚ್ಚಾಗಿ ಭೋಜನಮಾಡತಕ್ಕವರು । (ಹವಿರ್ಗ್ರಹಣಕ್ಕಾಗಿ) ಕೈಗಳನ್ನು ಚಾಚಿಕೊಂಡು ಓಡಿ ಬರುವವರು । (ಇಂತಹ ನೀವು) ಯಜ್ಞರೀಃ—ಯಾಗ ಸಂಬಂಧವಾದ । ಇಷಃ—ಹವಿಸ್ಸಿನ ರೂಪವಾದ ಅನ್ನವನ್ನು । ಚನಸ್ಯತಂ—ತಿನ್ನುವುದಕ್ಕೆ ಅಪೇಕ್ಷಿಸಿರುವಿರಿ. (ಭಕ್ಷಿಸಿ)

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವು ಶುಭಕಾರ್ಯಗಳನ್ನು ನಿರ್ವಿಘ್ನವಾಗಿ ನಡೆಯುವಂತೆ ರಕ್ಷಿಸತಕ್ಕವರು. ನೀವು ಆಜಾನುಬಾಹುಗಳು, ನಿಮ್ಮ ಭುಜಗಳು ಬಹುದೊಡ್ಡವಾಗಿವೆ ಅಥವಾ ನೀವು ಬಹುವಾಗಿ ಭೋಜನಮಾಡುವವರು. ಆದುದರಿಂದ ಈಗ ನಾವು ಈ ಯಜ್ಞದಲ್ಲಿ ಸಿದ್ಧಪಡಿಸಿರುವ ಹವಿಸ್ಸನ್ನು (ಅನ್ನವನ್ನು) ಭಕ್ಷಿಸುವುದಕ್ಕಾಗಿ ನಿಮ್ಮ ಕೈಗಳನ್ನು ನೀಡಿಕೊಂಡು ಬೇಗ ಬಂದು ಅನ್ನವನ್ನು ಭಕ್ಷಿಸಿ

English Translation.

O Asvins, you are cherishers of good deeds, your arms are long (or you are great eaters). You desire the sacrificial food with outstretched hands.

॥ ವಿಶೇಷವಿಷಯಗಳು ॥

ಅಶ್ವಿನೀದೇವತೆಗಳು ಇಬ್ಬರು. ಒಬ್ಬನ ಹೆಸರು **ದಸ್ರಾ** ಎಂತಲೂ ಇನ್ನೊಬ್ಬನ ಹೆಸರು **ನಾಸತ್ಯಾ** ಎಂತಲೂ ಹೇಳುವ ರೂಢಿಯಿದೆ. ಆದರೂ ಈ ಶಬ್ದಗಳನ್ನು ಅನೇಕಸಂದರ್ಭಗಳಲ್ಲಿ ಇಬ್ಬರನ್ನೂ ಒಟ್ಟಿಗೆ ಸಂಬೋಧನೆಮಾಡುವುದರಲ್ಲಿ ಉಪಯೋಗಿಸುವುದು ಕಂಡುಬರುವುದು. ಇವರ ಉತ್ಪತ್ತಿವಿಚಾರದಲ್ಲಿ ಪುರಾಣಗಳಲ್ಲಿ ಒಂದು ಉಪಾಖ್ಯಾನವಿದೆ ಸೂರ್ಯನ ಪತ್ನಿಯಾದ ಸಂಜ್ಞಾದೇವಿಯು ಕಾರಣಾಂತರದಿಂದ ಸೂರ್ಯನಲ್ಲಿ ಅಸಮಾಧಾನಗೊಂಡು ಕಾಡಿಗೆ ಹೋಗಿ ಹೆಣ್ಣುಕುದುರೆಯ ರೂಪದಿಂದ ತಪಸ್ಸನ್ನು ಮಾಡುತ್ತಿದ್ದಳೆಂದೂ ಅದನ್ನು ಸೂರ್ಯನು ತಿಳಿದು ತಾನೂ ಗಂಡುಕುದುರೆಯ ರೂಪದಿಂದ ಅವಳಿದ್ದಲ್ಲಿಗೆ ಹೋಗಿ ಕೆಲವುಕಾಲ ಇದ್ದನೆಂದೂ ಆಗ ಅವರಿಗೆ ಈ ಅಶ್ವಿನೀದೇವತೆಗಳು ಪುತ್ರರಾಗಿ ಜನಿಸಿದರೆಂದೂ ಹೇಳಲ್ಪಟ್ಟಿದೆ. ಋಗ್ವೇದದಲ್ಲಿ ಇವರ ವಿಷಯಕವಾದ ಅನೇಕ ಸೂಕ್ತಗಳಿವೆ. ಇವು ಬಹುಗಂಭೀರವಾಗಿಯೂ ಇವರ ಗುಣಗಳನ್ನೂ ಪರಾಕ್ರಮಗಳನ್ನೂ ಹೊಗಳುವುದಾಗಿಯೂ ಇರುವವು. ಯಜುರ್ವೇದದಲ್ಲಿ "**ಅಶ್ವಿನೌ ವೈ ದೇವಾನಾಂ ಭಿಷಜೌ**" ಎಂದರೆ ಈ ಅಶ್ವಿನೀದೇವತೆಗಳು ದೇವತೆಗಳ ವೈದ್ಯರೆಂದು ಹೇಳಿರುವುದು. ಹಿಂದೆ ಋಜ್ರಾಶ್ವನೆಂಬುವನು ತನ್ನ ತಂದೆಯ ಅಪ್ಪಣೆಯ ಪ್ರಕಾರ ವನದಲ್ಲಿ ಮೇಕೆಗಳನ್ನು ಮೇಯಿಸುತ್ತಿರುವಾಗ ಅಶ್ವಿನೀದೇವತೆಗಳು ವೃಕ (ತೋಳ) ರೂಪದಿಂದ ಬರಲು ಅವರಿಗೆ ನೂರು ಮೇಕೆಗಳನ್ನು ಆಹಾರಾರ್ಥವಾಗಿ ಕೊಟ್ಟನೆಂದೂ ಅದನ್ನು ತಿಳಿದು ಇವನ ತಂದೆಯು ಮಹಾಕೋಪದಿಂದ ಮಗನ ಕಣ್ಣುಗಳನ್ನು ಕೀಳಿಸಿ ಕುರುಡನನ್ನಾಗಿ ಮಾಡಿದನೆಂದೂ, ಬಳಿಕ ಋಜ್ರಾಶ್ವನು ಅಶ್ವಿನೀದೇವತೆಗಳನ್ನು ಪ್ರಾರ್ಥಿಸಲು ಅವರು ಇವನ ಸ್ತೋತ್ರಕ್ಕೆ ಸಂತೋಷಪಟ್ಟು ಇವನಿಗೆ ಕಣ್ಣುಗಳನ್ನು ಕೊಟ್ಟು ಅನುಗ್ರಹಿಸಿದರೆಂದೂ ಈ ಮಂಡಲದ ೧೧೬ ನೆಯ ಸೂಕ್ತದಲ್ಲಿ ಹೇಳಿದೆ. ಈ ದೇವತೆಗಳ ಇಂತಹ ಅನೇಕ ಪರಾಕ್ರಮಗಳೂ ಸಾಹಸಗಳೂ ೧೧೬-೧೨೦ ನೆಯ ಸೂಕ್ತಗಳಲ್ಲಿಯೂ ಇತರ ಕಡೆಗಳಲ್ಲಿಯೂ ವರ್ಣಿಸಲ್ಪಟ್ಟಿವೆ

ಋಗ್ವೇದದಲ್ಲಿ ಕೆಲವು ದೇವತೆಗಳನ್ನು ಸ್ತೋತ್ರಮಾಡುವಾಗ ಕೆಲವು ನಿರ್ದಿಷ್ಟವಾದ ಶಬ್ದಗಳು ಪ್ರಯೋಗಿಸಲ್ಪಟ್ಟಿವೆ ಅಗ್ನಿಯನ್ನು ಸ್ತೋತ್ರಮಾಡುವಾಗ **ಕವಿ, ಹೋತೃ, ಗೃಹಪತಿ** ಮೊದಲಾದ ಶಬ್ದಗಳೂ ಇಂದ್ರನ ವಿಷಯವಾಗಿ, **ಶತಕ್ರತು, ವೃತ್ರಘ್ನ, ಪುರುಹೂತ ಚಿತ್ರಭಾನು** ಮುಂತಾದ ಶಬ್ದಗಳೂ, **ಅಶ್ವಿನೀ**

ದೇವತೆಗಳ ವಿಷಯವಾಗಿ **ನಾಸತ್ಯಾ, ಶುಭಸ್ಪತೀ, ನರಾ, ಪುರುಭುಜಾ, ರಥೀ** ಮೊದಲಾದ ಶಬ್ದಗಳೂ ಉಪಯೋಗಿಸಲ್ಪಡುವವು ಇಂಥಹ ಅನೇಕ ಶಬ್ದಗಳನ್ನು ಆಯಾಯ ದೇವತೆಗಳ ವಿಷಯದಲ್ಲಿ ಎಲ್ಲಾ ಋಷಿಗಳೂ ಉಪಯೋಗಿಸಿರುವುದರಿಂದ ಆ ಶಬ್ದಗಳಿಗೆ ಈಗ ನಮಗೆ ತೋರುವ ತಥಾ ರೂಢಿಯುಳ್ಳಿರುವ ಅರ್ಥಗಳಲ್ಲವೆ ಒಂದು ನಿರ್ದಿಷ್ಟವಾದ ಅರ್ಥವಿದ್ದಿರಬೇಕೆಂದು ಸ್ಪಷ್ಟವಾಗುವುದು. ಆ ಶಬ್ದಗಳನ್ನು ಯಾವ ಅರ್ಥದಲ್ಲಿ ಋಷಿಗಳು ಉಪಯೋಗಿಸಿರುವರೆಂದು ಈಗ ಹೇಳುವುದು ಕಷ್ಟವಾಗಿದೆ ವ್ಯಾಕರಣಾನುಸಾರವಾಗಿಯೂ ಅವಯವಾರ್ಥ ನಿಷ್ಪತ್ತಿಯಿಂದಲೂ ನಾವು ಯಾವುದಾದರೂ ಒಂದು ಸಮಂಜಸವಾದ ಅರ್ಥವನ್ನು ಕಲ್ಪಿಸಿದರೂ ಹಿಂದಿನ ಋಷಿಗಳ ಅಭಿಪ್ರಾಯವು ಏರೀತಿಯಾಗಿತ್ತೇ ಎಂಬುವುದು ಅನುಮಾನಾಸ್ಪದವಾಗಿದೆ ಆ ಶಬ್ದಗಳು ಈಗ ರೂಢಿಯುಲ್ಲಿದ್ದರೂ ಅವುಗಳಿಗೆ ಹಿಂದೆ ಬಳಕೆಯಲ್ಲಿದ್ದ ಅರ್ಥವು ಈಗಿರುವುದಿಲ್ಲ. ಆಧುನಿಕಸಂಸ್ಕೃತದಲ್ಲಿ ಅವುಗಳ ಅರ್ಥವು ಬೇರೆಯಾಗಿರುವುದರಿಂದ ನಾವು ವ್ಯಾಖ್ಯಾನವಾಡುವ ಅರ್ಥವು ಹಿಂದಿನ ಋಷಿಗಳ ಅಭಿಪ್ರಾಯಗಳಿಗೆ ಸರಿಯಾಗಿರುವುದೆಂದು ಹೇಳಲು ಸಾಧ್ಯವಿಲ್ಲ.

ಅಶ್ವಿನಾ ಅಥವಾ **ಅಶ್ವಿನೌ**—ಎಂಬ ಶಬ್ದಗಳು ಋಗ್ವೇದದಲ್ಲಿ ಮೂರುವಿಧವಾದ ಸ್ವರಗಳಿಂದ ಎಂದರೆ

ಅಶ್ವಿನಾ, ಅಶ್ವಿನಾ, ಅಶ್ವಿನಾ ; ಅಶ್ವಿನೌ, ಅಶ್ವಿನೌ, ಅಶ್ವಿನೌ

ಎಂದು ಅನೇಕ ಕಡೆಗಳಲ್ಲಿ ಉಪಯೋಗಿಸಲ್ಪಟ್ಟಿವೆ. ಮೊದಲನೆಯ ಶಬ್ದವು ಆದ್ಯುದಾತ್ತವು, ಎರಡನೆಯದು ಸರ್ವಾನುದಾತ್ತ ಈ ಎರಡುವಿಧಶಬ್ದಗಳೂ ಅಶ್ವಿನೀದೇವತೆಗಳನ್ನು ಸಂಬೋಧನೆಮಾಡುವ ಸಂದರ್ಭಗಳಲ್ಲಿಯೂ ಮೂರನೆಯದಾದ ಮಧ್ಯೋದಾತ್ತವು ಅಶ್ವಿನೀದೇವತೆಗಳು ಅಥವಾ ಅಶ್ವಿನೀದೇವತೆಗಳನ್ನು ಎಂಬ ಅರ್ಥವನ್ನು ಹೇಳುವಾಗಲೂ ಉಪಯೋಗಿಸುವುದು ರೂಢಿಯಾಗಿದೆ.

ಅಶ್ವಿನಾ ಎಂಬ ಶಬ್ದವು ನಾಮವಾಚಕ ಎಂದರೆ ನಿರ್ದಿಷ್ಟರಾದ ವ್ಯಕ್ತಿಗಳನ್ನು ತಿಳಿಸುವುದರಿಂದ ಆ ಶಬ್ದಕ್ಕೆ ಅವಯವಾರ್ಥವನ್ನು ಕಲ್ಪಿಸುವುದು ಸಾಧ್ಯವಿಲ್ಲ. ಆದರೂ ವೇದಾರ್ಥಯತ್ನಕಾರರು **ಈ** ಶಬ್ದಕ್ಕೆ—**ಅಶ್ವಃ ಅಸ್ಯಾಸ್ತೀತಿ ಅಶ್ವೀ ತೌ ಅಶ್ವಿನೌ**—ಎಂದರೆ ಕುದುರೆಯುಳ್ಳವರು ಅಥವಾ ಕುದುರೆಯ ಮೇಲೆ ಸವಾರಿಮಾಡುವವರು ಎಂದರ್ಥಮಾಡಿರುವರು. ಈ ವಿಧವಾದ ಅರ್ಥಕ್ಕೆ ಋಗ್ವೇದದಲ್ಲಿ ಅವಕಾಶವಿಲ್ಲ. ಏಕಂದರೆ, ಅನೇಕ ಋಕ್ಕುಗಳಲ್ಲಿ ಅಶ್ವಿನೀದೇವತೆಗಳು ರಥದಮೇಲೆ ಕುಳಿತಿರುವಂತೆ ಸಂಬೋಧನೆಮಾಡಿರುವುದೇ ಹೊರತು ಕುದುರೆಯ ಮೇಲೆ ಕುಳಿತು ಸವಾರೀಮಾಡುತ್ತಿರುವಂತೆ ಎಲ್ಲಿಯೂ ಹೇಳಿಲ್ಲ. ಆದುದರಿಂದ ಅವರ ಅಭಿಪ್ರಾಯವು ಸಮಂಜಸವಾಗಿಲ್ಲ. ಆದರೆ ಅಶ್ವಿನೀದೇವತೆಗಳು ಅಶ್ವರೂಪದಿಂದ (ಕುದುರೆಯ ರೂಪದಿಂದ) ಇದ್ದ ಸೂರ್ಯ ಮತ್ತು ಸೂರ್ಯಪತ್ನಿಯಾದ ಸಂಜ್ಞಾದೇವಿಯರಿಂದ ಉತ್ಪನ್ನರಾದುದರಿಂದ ಇವರಿಗೆ **ಅಶ್ವಿನಾ** ಅಥವಾ **ಅಶ್ವಿನೌ** ಎಂದು ಹೆಸರು ಬಂದಿರಬಹುದೆಂದು ಊಹಿಸುವುದು ಯುಕ್ತವೆಂದು ತೋರುವುದು. **ಅಶ್ವಿನಾ** ಮತ್ತು **ಅಶ್ವಿನೌ** ಎಂಬ ಎರಡುವಿಧವಾದ ರೂಪಗಳೂ ದ್ವಿವಚನಗಳು. ಇವು ಪ್ರಥಮಾ ಮತ್ತು ದ್ವಿತೀಯಾವಿಭಕ್ತಿಗಳಲ್ಲಿ ಸಂದರ್ಭಾನುಸಾರ ಉಪಯೋಗಿಸಲ್ಪಟ್ಟಿರುವವು.

ಯಜ್ವರೀಃ—ಈ ಶಬ್ದವು ಋಗ್ವೇದಸಂಹಿತೆಯಲ್ಲಿ ಎರಡು ಋಕ್ಕುಗಳಲ್ಲಿ ಮಾತ್ರ ಉಪಯೋಗಿಸಲ್ಪಟ್ಟಿರುವುದು. ಈ ಋಕ್ಕಿನಲ್ಲಿಯೂ,

ಪ್ರಾತರ್ಯುಜಂ ನಾಸತ್ಯಾಧಿ ತಿಷ್ಠಥಃ ಪ್ರಾತರ್ಯೋವಾಣಂ ಮಧುವಾಹನಂ ರಥಂ ।
ವಿಶೋ ಯೇನ ಗಚ್ಛಥೋ ಯಜ್ವರೀರ್ನರಾ ಕೀರೇಶ್ಚಿದ್ಯಜ್ಞಂ ಹೋತೃಮಂತಮಶ್ವಿನಾ ॥
(ಋ ಸಂ. ೧೦-೪೧-೨)

ಎಂಬ ಋಕ್ಕಿನಲ್ಲಿಯೂ ಈ ಶಬ್ದಪ್ರಯೋಗವಿದೆ. ಎರಡು ಸ್ಥಳಗಳಲ್ಲಿಯೂ ಈ ಶಬ್ದಕ್ಕೆ ಇವೇ ಅರ್ಥವಿದೆ. ವಿಶೇಷವೇನೂ ಇಲ್ಲ.

ಇಷಃ—ಇಷಶಬ್ದಕ್ಕೆ ಅನ್ನ, ಆಹಾರವೆಂದರ್ಥವು ಈ ಶಬ್ದದ ಸ್ವರವೂ ಕೂಡ ಇಷಃ, ಇಷಃ ಎಂದು ಆದ್ಯುದಾತ್ತವಾಗಿಯೂ ಅಂತ್ಯೋದಾತ್ತವಾಗಿಯೂ ಇರುವುದು.

ದ್ರವತ್ಪಾಣೀ—ಈ ಶಬ್ದವು ಋಗ್ವೇದಸಂಹಿತೆಯ ಈ ಋಕ್ಕಿನಲ್ಲಿ ಮಾತ್ರವೇ ಇರುವುದು. ಈ ಶಬ್ದದ ಚತುರ್ಥೀ ಬಹುವಚನವಾದ ದ್ರವತ್ಪಾಣಿಭಿಃ ಎಂಬ ಶಬ್ದವು—

ಹಿರಣ್ಯಯೇನ ರಥೇನ ದ್ರವತ್ಪಾಣಿಭಿರಶ್ವೈಃ ॥
ಧೀಜವನಾ ನಾಸತ್ಯಾ ॥ (ಋ. ಸಂ. ೮-೫-೩೫)

ಎಂಬ ಋಕ್ಕಿನಲ್ಲಿ ಮಾತ್ರವಿರುವುದು ಬೇರೆ ಎಲ್ಲಿಯೂ ಇದರ ಪ್ರಯೋಗವಿಲ್ಲ. ಇದರ ಅರ್ಥವು ಸಾಯಣ ಭಾಷ್ಯಾನುಸಾರವಾಗಿ—ಕೈಗಳನ್ನು ನೀಡಿಕೊಂಡು ಅಥವಾ ಚಾಚಿಕೊಂಡು ಎಂದಾಗುವುದು. ಈ ಅರ್ಥವು ಈ ಋಕ್ಕುಗಳಲ್ಲಿ ಸರಿಹೋಗುವುದಾದರೂ ಎರಡನೆಯ ಋಕ್ಕಿನ ದ್ರವತ್ಪಾಣಿಭಿರಶ್ವೈಃ ಎಂಬ ಸ್ಥಳದಲ್ಲಿ ದ್ರವತ್ಪಾಣಿಭಿಃ ಎಂಬ ಶಬ್ದವು ಅಶ್ವೈಃ ಎಂಬುದಕ್ಕೆ ವಿಶೇಷಣವಾಗಿರುವುದರಿಂದ ಇಲ್ಲಿ ದ್ರವತ್ಪಾಣಿಭಿಃ ಎಂದರೆ ವೇಗವಾಗಿ ಚಲಿಸುವ ಪಾದಗಳುಳ್ಳ (ಕುದುರೆಗಳಿಂದ) ಎಂದರ್ಥಮಾಡಬೇಕಾಗುವುದು. ಆದುದರಿಂದ ಪಾಣಿಶಬ್ದವನ್ನು ಕೈಗಳು ಮತ್ತು ಕಾಲುಗಳು (ಖುರ) ಎಂಬ ಎರಡು ಅರ್ಥಗಳನ್ನೂ ಸೂಚಿಸುವುದಾಗಿ ತಿಳಿಯಬೇಕು.

ಶುಭಸ್ಪತೀ—ಶುಭಃ ಪತೀ ಎಂಬ ಎರಡುಶಬ್ದಗಳಿಗೂ ಒಟ್ಟಿಗೆ ಅರ್ಥವನ್ನು ಭಾಷ್ಯದಲ್ಲಿ ವಿವರಿಸಲಾಗಿದೆ. ಶುಭಕರ್ಮಗಳನ್ನು ಉಂಟುಮಾಡುವವರು ಎಂದರ್ಥವು. ಸ್ಕಂದಸ್ವಾಮಿ ಮತ್ತು ವೆಂಕಟನಾಧರು ಈ ಶಬ್ದಗಳಿಗೆ "ಉದಕೇಶ್ವರೌ" ಎಂದರೆ ಜಲಾಧಿನಾಥಗಳು, ಉದಕಾಧಿಪತಿಗಳು ಎಂದು ಅರ್ಥಮಾಡಿರುವರು. ಇವರ ಅಭಿಪ್ರಾಯದಲ್ಲಿ ಶುಭಃ ಎಂದರೆ ಉದಕಗಳು ಎಂದು. ವೇದಾರ್ಥಯತ್ನಕಾರರು ಐಶ್ವರ್ಯಾಧಿಪತಿಗಳು (Lords of prosperity) ಎಂದರ್ಥಮಾಡಿರುವರು Grassman, Ludwing, Geldner, Monier Williams, Griffith ಎಂಬ ಪಾಶ್ಚಾತ್ಯಪಂಡಿತರು ಈ ಶಬ್ದಕ್ಕೆ ಶುಭ ಶುಂಭ ದೀಪ್ತೌ ಎಂಬ ಧಾತುಪಾಠದ ಪ್ರಕಾರ Lords of Splendour ಎಂಬ ಅರ್ಥವನ್ನು ಅನುಮೋದಿಸಿರುವರು. ದ್ವಿವಚನಾಂತವಾದ ಈ ಶಬ್ದವು ಋಗ್ವೇದಸಂಹಿತೆಯ ೧-೩-೧, ೧-೩೪-೬; ೧-೪೭-೫, ೧-೧೨೦-೬. ೫-೭೫-೮; ೮-೫-೮೧; ೮-೫೬-೪; ೮-೮೬-೫; ೧೦-೪೦-೪; ೧೦-೪೦-೧೩; ೧೦-೪೦-೧೫; ೧೨-೮೫-೧೫, ೧೨-೧೪೧-೪; ೮-೫೯-೩, ೮-೫೯-೫; ಈ ಋಕ್ಕುಗಳಲ್ಲಿ ಉಪಯೋಗಿಸಲ್ಪಟ್ಟಿದೆ. ಕೊನೆಯ ಎರಡು ಋಕ್ಕುಗಳಲ್ಲಿ ಇಂದ್ರಾವರುಣರ ವಿಷಯದಲ್ಲಿಯೂ ಉಳಿದ ಎಲ್ಲಾ ಋಕ್ಕುಗಳಲ್ಲಿಯೂ ಅಶ್ವಿನೀದೇವತೆಗಳ ವಿಷಯದಲ್ಲಿಯೂ ಈ ಶುಭಸ್ಪತೀ ಎಂಬ ಶಬ್ದಗಳ ಪ್ರಯೋಗವಿದೆ. ಇದರಂತೆ ಶವಸಸ್ಪತೀ ದನುಸ್ಪತೀ ಎಂಬ ಶಬ್ದಗಳು ಬೇರೆ ದೇವತೆಗಳ ವಿಷಯದಲ್ಲಿ ಪ್ರಯೋಗಿಸಲ್ಪಟ್ಟವೆ. ಅಶ್ವಿನೀದೇವತೆಗಳ ವಿಷಯದಲ್ಲಿಲ್ಲ. ಸಾಯಣಾಚಾರ್ಯರು ಶುಭಸ್ಪತೀ ಶಬ್ದಗಳ ವಿಚಾರದಲ್ಲಿ

ಒಂದೊಂದು ಕಡೆ ಒಂದೊಂದು ವಿಧವಾಗಿ ವ್ಯಾಖ್ಯಾನಮಾಡಿರುವರು. ಒಂದೆರಡು ಕಡೆಗಳಲ್ಲಿ ಶುಭ ಎಂದರೆ ಶೋಭ, ಪ್ರಕಾಶ ಎಂದು ಅರ್ಥಮಾಡಿರುವರು. ಆದುದರಿಂದ ಈ ಶಬ್ದದ ನಿರ್ವಿವಾದಾರ್ಥವು ಇನ್ನೂ ಸಂದಿಗ್ಧನಾಗಿಯೇ ಉಳಿದಿದೆ.

ಇದಲ್ಲದೆ ಋಗ್ವೇದದಲ್ಲಿ ಪತೀ ಎಂಬ ಶಬ್ದವು ಕೆಲವು ಸಮಾಸಪದಗಳ ಉತ್ತರಪದವಾಗಿ ಉಪಯೋಗಿಸಲ್ಪಟ್ಟಿದೆ. ಹೇಗೆಂದರೆ—

ಸದಸ್ಪತೀ (ಋ. ಸಂ. ೧–೨೧-೫,)

ಗೋಪತೀ (ಋ. ಸಂ. ೯-೧೯-೨,)

ದಂಪತೀ (ಋ. ಸಂ ೫-೩–೨ : ೮-೩೧-೫ , ೧೦.೧೦-೫ ; ೧೦-೬೮-೨ , ೧೦–೮೫-೩೨ ; ೧೦-೯೫-೧೨ , ೧೦–೧೬೨-೪)

ನೃಪತೀ (ಋ. ಸಂ. ೭-೬೭-೧ ; ೭-೭೧-೪)

ಮದಪತೀ (ಋ ಸಂ ೬-೬೯–೩)

ವನಸ್ಪತೀ (ಋ. ಸಂ. ೧-೨೮-೮)

ಶಚೀಪತೀ (ಋ. ಸಂ. ೭-೬೭-೫)

ಸತ್ಪತೀ (ಋ. ಸಂ. ೫-೬೫-೨ , ೬-೬೦-೬ , ೧೦-೬೫-೨)

ಸಿಂಧುಪತೀ (ಋ ಸಂ. ೭-೬೪-೨)

ಸ್ವಃಪತೀ (ಋ. ಸಂ. ೯-೧೯-೨)

ಪುರುಭುಜಾ—ಇದು ದ್ವಿವಚನಾಂತಶಬ್ದವು. ಈ ಶಬ್ದಪ್ರಯೋಗವು ಋ. ಸ. ೧-೩-೧ ; ೧-೧೧೬-೧೩ ; ೧-೧೧೬-೧೪ , ೫-೪೯-೧ ; ೫-೭೩-೧ , ೬-೬೩-೫ , ೬-೬೩-೪ , ೪-೪೮-೭ , ೪-೧೦-೬ ; ೪-೪೬-೩ ಎಂಬ ಹತ್ತು ಋಕ್ಕುಗಳಲ್ಲಿದೆ. ಈ ಋಕ್ಕಿನಲ್ಲಿ ಈ ಶಬ್ದವು ಆದ್ಯುದಾತ್ತವಾಗಿಯೂ ಉಳಿದ ಋಕ್ಕುಗಳಲ್ಲಿ ಸರ್ವಾನುದಾತ್ತವಾಗಿಯೂ ಇರುವುದು ಸರ್ವಾನುದಾತ್ತವಿರುವ ನಾಮವಾಚಕಶಬ್ದಗಳು ಸಾಧಾರಣವಾಗಿ ಸಂಬೋಧನೆಯನ್ನು ನಿರ್ದೇಶಿಸುವುದರಿಂದ ಆ ಸ್ಥಳಗಳಲ್ಲೆಲ್ಲಾ ಅದೇರೀತಿ ಪ್ರಯೋಗವಿದೆ. ಅರ್ಥವಿಚಾರದಲ್ಲಿ ಈ ಶಬ್ದಕ್ಕೆ ಒಂದೊಂದು ಋಕ್ಕಿನಲ್ಲಿ ಒಂದೊಂದು ವಿಧವಾಗಿ ಅರ್ಥಮಾಡಿರುವರು ಹೇಗೆಂದರೆ—

ಅಜೋಹವೀನ್ನಾಸತ್ಯಾ ಕರಾ ವಾಂ ಮಹೇ ಯಾಮನ್ಪುರುಭುಜಾ ಪುರಂಧಿಃ

(ಋ. ಸಂ. ೧-೧೧೬-೧೩)

ಇಲ್ಲಿ ಪುರುಭುಜಾ ಎಂದರೆ **ಬಹೂನಾಂ ಪಾಲಕೌ**—ಅನೇಕರನ್ನು ರಕ್ಷಿಸುವವರು.

ಉತೋ ಕವಿಂ ಪುರುಭುಜಾ ಯುವಂ ಹ ಕೃಪಮಾಣಮಕೃಣುತಂ ವಿಚಕ್ಷೇ

(ಋ. ಸಂ. ೧-೧೧೬-೧೪)

ಇಲ್ಲಿ ಪುರುಭುಜಾ ಶಬ್ದಕ್ಕೆ **ಮಹಾಬಾಹೌ, ಪ್ರಭೂತಹಸ್ತೌ** ಮಹಾಬಾಹುಗಳುಳ್ಳವರು ಎಂದರ್ಥವು.

ಆ ವಾಂ ನರಾ ಪುರುಭುಜಾ ವವೃತ್ಯಾಂ ದಿನೇ ದಿನೇ ಚಿದಶ್ವಿನಾ ಸಖೀಯೇನ್

(ಋ. ಸಂ. ೫-೪೯-೧)

ಇಲ್ಲಿ **ಪುರು ಭುಂಜಾತಾ** ಎಂದರೆ ಬಹುವಾಗಿ ಭೋಜನಮಾಡುವವರು.

ಯದ್ವಾ ಪುರೂ ಪುರುಭುಜಾ ಯದಂತರಿಕ್ಷ ಆ ಗತಂ ।

(ಋ. ಸಂ. ೫-೭೫-೧)

ಇಲ್ಲಿ **ಬಹುಷು ಯಜ್ಞೇಷು ಭೋಕ್ತಾರೌ** ಎಂದರೆ ಅನೇಕ ಯಜ್ಞಗಳಲ್ಲಿ ಭುಜಿಸುವವರು ಎಂದರ್ಥವು.

ಅಧಿ ಶ್ರಿಯೇ ದುಹಿತಾ ಸೂರ್ಯಸ್ಯ ರಥಂ ತಸ್ಥೌ ಪುರುಭುಜಾ ಶತೋತಿಂ ।

(ಋ. ಸಂ. ೬-೬೩-೫)

ಪುರು ಹಿ ವಾಂ ಪುರುಭುಜಾ ದೇಷ್ಣಂ ಧೇನುಂ ನ ಇಷಂ ಪಿನ್ವತಮಸಕ್ರಾಂ ।

(ಋ. ಸಂ. ೬-೬೩-೮)

ಇಲ್ಲಿಯೂ ಸಹ **ಬಹುಸಾಲಕೌ** ಎಂದರ್ಥಮಾಡಿದಾರೆ.

ಆ ನೋ ಗಂತಂ ರಿಶಾದಸೇಮಂ ಸ್ತೋಮಂ ಪುರುಭುಜಾ । (ಋ. ಸಂ. ೮-೮-೧೭)

ಇಲ್ಲಿ **" ಬಹುಲಸ್ಯ ಹವಿಷೋ ಭೋಕ್ತಾರೌ "** ಹವಿಸ್ಸನ್ನು ಹೆಚ್ಚಾಗಿ ಭಕ್ಷಿಸತಕ್ಕವರು ಎಂದರ್ಥವು.

ಯದಂತರಿಕ್ಷೇ ಪತಥಃ ಪುರುಭುಜಾ ಯದ್ವೇಮೇ ರೋದಸೇ ಅನು ! (ಋ. ಸಂ. ೮-೧೦-೬)

ಇಲ್ಲಿ **" ಬಹೂನಾಂ ಪಾಲಕೌ "** ಎಂದೇ ಅರ್ಥಮಾಡಿದಾರೆ.

ಯುವಂ ಹಿ ಷ್ಮಾ ಪುರುಭುಜೇಮಮೇಧತುಂ ವಿಷ್ಣಾವ್ವೇ ದಧಥುರ್ವಸ್ಯ ಇಷ್ಟಯೇ ।

(ಋ. ಸಂ. ೮-೮೬-೩)

ಇಲ್ಲಿ **" ಬಹೂನಾಂ ಧನಾದಿದಾನೇನ ಭೋಜಯಿತಾರೌ "** ಮತ್ತು **''ಬಹೂನಾಂ ಸ್ತೋತ್ರಾಣಾಂ ಪಾಲಯಿತಾರೌ "** ಎಂದರೆ '' ಅನೇಕರಿಗೆ ಧನಾದಿ ಐಶ್ವರ್ಯವನ್ನು ಕೊಟ್ಟು ಆ ಮೂಲಕ ಅವರು ಕೊಟ್ಟ ಹವಿಸ್ಸನ್ನು ಭಕ್ಷಿಸತಕ್ಕವರು '' ಮತ್ತು " ತಮ್ಮನ್ನು ಸ್ತೋತ್ರಮಾಡುವ ಅನೇಕರನ್ನು ಸಂರಕ್ಷಿಸತಕ್ಕವರು '' ಎಂದು **ಎರಡು** ವಿಧವಾಗಿಯೂ ಅರ್ಥಮಾಡಿರುವರು

ಚೇನಸ್ಯತಂ—ಈ ದ್ವಿವಚನಾಂತವಾದ ಧಾತುವಿನ ಅರ್ಥವು '' ಅನ್ನವನ್ನು ಭಕ್ಷಿಸಿರಿ '' ಎಂದಿರುವುದಾದರೂ, **ಇಷಃ**—ಹವಿಸ್ಸಿನ ರೂಪದಲ್ಲಿರುವ ಅನ್ನವನ್ನು, **ಚೇನ್ಯಸತಂ**—ಭಕ್ಷಿಸಿರಿ ಎಂದು ಹೇಳಿದರೆ **ಅನ್ನ** ಎಂಬ ಅರ್ಥವು ಎರಡು ಶಬ್ದಗಳಲ್ಲಿಯೂ ಬಂದಿರುವುದರಿಂದ ದ್ವಿರುಕ್ತಿದೋಷವುಂಟಾಗುವುದಿಲ್ಲವೇ ಎಂದರೆ, ಅದಕ್ಕೆ ಭಾಷ್ಯಕಾರರು ಆರೀತಿ ದ್ವಿರುಕ್ತಿಪತನವು ಅನೇಕ ಸಂದರ್ಭಗಳಲ್ಲಿ ರೂಢಿಯಾಗಿ ಬಂದಿರುವುದರಿಂದ ಬಾಧಕವೇನೂ ಇಲ್ಲವೆಂದು ಹೇಳಿ **ಈ** ವಿಚಾರದಲ್ಲಿ '' ಸಮೂಲಕಾಷಂ ಕಷತಿ '' ಎಂಬ ಒಂದು ಉದಾಹರಣೆಯನ್ನು ಕೊಟ್ಟಿದಾರೆ. ಇದು ವೇದವಾಕ್ಯವಲ್ಲ ಇಂತಹ ಪುನರುಕ್ತಿಸಂಬಂಧವಾದ ಶಬ್ದಗಳು ವೇದದಲ್ಲಿಯೇ ಅಲ್ಲಲ್ಲಿ ಇರುವುವು. ಉದಾಹರಣೆಗಾಗಿ ಕೆಲವು ಋಕ್ಕುಗಳನ್ನು ನಾವು ಕೊಟ್ಟಿದೇವೆ—

ಯೋ ಅಶ್ವಾನಾಂ ಯೋ ಗವಾಂ ಗೋಪತಿರ್ವಶೀ ಯ ಆರಿತಃ ಕರ್ಮಣಿಕರ್ಮಣಿ ಸ್ಥಿರಃ ।
(ಋ. ಸಂ. ೧-೧೦೧-೪)

ಇಹೇಂದ್ರಾಗ್ನೀ ಉಪಹ್ವಯೇ ತಯೋರಿತ್ಸ್ತೋಮಮುಶ್ಮಸಿ ।
ತಾ ಸೋಮಂ ಸೋಮಪಾತಮಾ ॥ (ಋ. ಸಂ. ೧-೨೧-೪)

ದ್ರವಿಣೋದಾ ದ್ರವಿಣಸಸ್ತುರಸ್ಯ ದ್ರವಿಣೋದಾಃ ಸನರಸ್ಯ ಪ್ರ ಯಂಸತ್ ।
(ಋ. ಸಂ. ೧-೯೬-೪)

ಈ ಋಕ್ಕುಗಳಲ್ಲಿರುವ **" ಗವಾಂ ಗೋಪತಿಃ "** **" ಸೋಮಂ ಸೋಮಪಾತಮಾ "** **" ದ್ರವಿಣೋದಾ ದ್ರವಿಣಸಃ "** ಎಂಬ ಶಬ್ದಗಳು ಪುನರುಕ್ತಿಯನ್ನು ಸಮರ್ಥಿಸುತ್ತವೆ.

॥ ವ್ಯಾಕರಣಪ್ರಕ್ರಿಯಾ ॥

॥ ಅಥ ತೃತೀಯಂ ಸೂಕ್ತಂ ॥

ಅಶ್ವಿನಾ, **ಅಮಂತ್ರಿತಸ್ಯ ಚ,** (ಪಾ. ಸೂ. ೬-೧-೧೯೮) ಎಂಬ ಆರನೇ ಅಧ್ಯಾಯಪರಿತಸೂತ್ರದಿಂದ ಆದ್ಯುದಾತ್ತವಾಗಿ ಬರುವುದು. **ಯೆಜ್ಞರೀ :**—ಯಜ್ವರೀ :—ಯಾಗ ನಿಷ್ಪಾದನ ಕರ್ತೃಗಳಾದ ಇಷಃ =ಅನ್ನಗಳನ್ನು ಚನಸ್ಯತಂ =ಇಚ್ಛಿಸಿರಿ, ಎಂದು ಅರ್ಥವು. ಇಲ್ಲಿ ಅನ್ನವು ಯದ್ಯಪಿ ಯಾಗನಿಷ್ಪಾದನದಲ್ಲಿ ಕರಣವಾಗುವುದೇ ವಿನಾ ಕರ್ತೃವಾಗುವುದಿಲ್ಲ ಆದರೂ, **ಅಸಿಶ್ಚಿನತ್ತಿ** ಕತ್ತಿಯು ಕತ್ತರಿಸುವುದು, ಎಂಬಲ್ಲಿ ಛೇದನಕ್ರಿಯೆಯಲ್ಲಿ ಅಸಿಯು ಕರಣವಾದರೂ, ಕತ್ತಿಯ ವ್ಯಾಪಾರದಲ್ಲಿ ಕತ್ತಿಗೆ ಸ್ವಾತಂತ್ರ್ಯವಿರುವುದರಿಂದ **ಸ್ವತಂತ್ರಃಕರ್ತಾ,** (ಪಾ. ಸೂ ೧-೪-೫೪) ಎಂಬುದರಿಂದ ಹೇಗೆ ಕರ್ತೃತ್ವವಿವಕ್ಷೆಮಾಡುತ್ತೇವೆಯೋ ಅದೇರೀತಿಯಲ್ಲಿ ಇಲ್ಲಿಯೂ ಕರ್ತೃತ್ವವಿವಕ್ಷೆಯನ್ನು ಮಾಡಿಕೊಳ್ಳಬೇಕು. **ಸುಯಜೋರ್ಙಿನಿಸ್** (ಪಾ. ಸೂ ೩-೨-೧೦೩) ಸುಇಞ್ ಅಭಿಷವೇ ಯಜ ದೇವಪೂಜಾದೌ ಎಂಬ ಧಾತುಗಳಿಗೆ ಭೂತಾರ್ಥದಲ್ಲಿ **ಙಿನಿಸ್** ಬರುವುದು ಎಂಬುದರಿಂದ **ಙಿನಿಸ್** ಪ್ರತ್ಯಯವು ಬರುವುದು, ನಂತರ **ವನೋರಚ** (ಪಾ ಸೂ ೪-೧-೭) ಸ್ತ್ರೀತ್ವವಿವಕ್ಷೆ ಮಾಡಿದಾಗ ವನ್ನಂತ ಪ್ರಾತಿಪದಿಕದಮುಂದೆ ಙೀಪ್ ಬರುವುದು. ರೇಫವೂ ಅಂತಾದೇಶವಾಗಿ ಬರುವುದು ಎಂಬುದರಿಂದ **ಯೆಜ್ಞನ್,** ಎಂಬಲ್ಲಿ ಙೀಪ್ ಪ್ರತ್ಯಯವೂ ನಕಾರಕ್ಕೆ ರೇಫಾದೇಶವೂ ಬಂದರೆ **ಯೆಜ್ಞರೀ** ಎಂದಾಗುವುದು. ಇಲ್ಲಿ **ಙಿನಿಸ್ ಙೀಪು** ಗಳೆರಡೂ ಪಿತ್ತಾದ್ದರಿಂದ, **ಅನುದಾತ್ತೌ ಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ಅನುದಾತ್ತ ಬರಲು ಧಾತು ಸ್ವರವೇ ನಿಲ್ಲುವುದು. ಇಷಃ ಎಂಬಲ್ಲಿ ಶಸ್ಸು ಸುಪ್ಪಾದ್ದರಿಂದ ಅನುದಾತ್ತ, ಆದ್ದರಿಂದ ಪ್ರಾತಿಪತಿಕಸ್ವರಮಾತ್ರ ನಿಲ್ಲುವುದು **ದ್ರವತ್ಪಾಣೀ-ದ್ರವಂತೌ** =ಧಾವಂತೌ **ಪಾಣೀ ಯೆಯೋಸ್ತೌ, ತಯೋಸ್ಸಂಬೋಧನಂ,** ಎಂದು ವಿಗ್ರಹ, **ದ್ರವತ್ಪಾಣೀ** ಎಂಬುದು ಎರಡನೇಪಾದದ ಆದಿಯಲ್ಲಿರುವುದು. ಆದ್ದರಿಂದ **ಅಸಾದಾಪೌ** ಎಂದು ನಿಷೇಧ ಬರುವಕಾರಣ ಆಗ್ನ್ಯಮಿಕಸೂತ್ರದಿಂದ ಅನುದಾತ್ತ ಬರುವುದಿಲ್ಲ. ಆದರೆ **ಇಷಃ** ಎಂಬ ಪ್ರಥಮಪದಕ್ಕೆ **ಸುಬಾಮಂತ್ರಿತೇ ಪರಾಂಗವತ್ಸ್ವರೇ** (ಪಾ ಸೂ. ೨ ೧-೪) ಎಂಬುದರಿಂದ ಪರಾಂಗವದ್ಭಾವ ಬರುವುದರಿಂದ **ಮಿತ್ರಾವರುಣಾವೃತಾವೃಧೌ** ಎಂಬುದರಂತೆ ಪಾದಾದಿಗತತ್ವ ಬರುವುದಿಲ್ಲ ಎನ್ನುತ್ತೇವೆಂದರೆ ಅದು ಆಗುವುದಿಲ್ಲ ಏಕೆಂದರೆ **ಸುಬಾಮಂತ್ರಿತೇ** ಎಂಬುದು ಪದವಿಧಿಯಾದ್ದರಿಂದ ಸಾವರ್ಥ್ಯವಿರುವಾಗಲೇ ಬರುವುದು. **ಮಿತ್ರಾವರುಣಾವೃತಾವೃಧೌ** ಎಂಬಲ್ಲಿ ಪದದ್ವಯಗಳಿಗೆ ಪರಸ್ಪರಾನ್ವಯವಿರುವುದರಿಂದ ಸಾಮರ್ಥ್ಯವಿರುವುದು ಇಲ್ಲಿ ಇಷಃದ್ರವತ್ಪಾಣೀ ಪದಗಳಿಗೆ ಪರಸ್ಪರಾನ್ವಯವಿಲ್ಲದಕಾರಣ ಸರಸ್ವತಿ ಶುತುದ್ರಿ ಪದ

ಗಳಂತೆ ಸಾಮರ್ಥ್ಯವಿಲ್ಲ. ಆದ್ದರಿಂದ ಪರಾಂಗವದ್ಭಾವ ಬರುವುದಿಲ್ಲ. ಅಂದಮೇಲೆ ಷಾಷ್ಠಸೂತ್ರದಿಂದ ಉದಾತ್ತನೇ ಬರುವುದು. **ಶುಭ ಶುಂಭ ದೀಪ್ತೌ** ಎಂದು ಪಠಿತವಾದ ಶುಭಧಾತುವು **ಸಂಪದಾದಿ** ಗಣದಲ್ಲಿರುವುದರಿಂದ **ಸಂಪದಾದಿಭ್ಯಃ ಕ್ವಿಪ್** (ಪಾ. ಸೂ. ೩-೩-೧೦೮ ಭಾವಾ. ೯) ಎಂಬುದರಿಂದ ಭಾವೇಕ್ವಿಪ್ ಪ್ರತ್ಯಯಬರುವುದು. ಇದಕ್ಕೆ ಷಷ್ಠ್ಯೇಕವಚನವನ್ನು ಹಚ್ಚಿದರೆ ಶುಭಃ ಎಂದಾಗುವುದು. **ಷಷ್ಠ್ಯಾಃ ಪತಿಪುತ್ರಪೃಷ್ಠಪಾರ ಪದಪಯಸ್ಪೋಷೇಷು** (ಪಾ. ಸೂ. ೮-೩-೫೩) ಪತಿಮೊದಲಾದ ಶಬ್ದಗಳು ಪರವಾಗಿರುವಾಗ ಷಷ್ಠೀವಿಭಕ್ತಿಯ ವಿಸರ್ಗಕ್ಕೆ ಸತ್ವಬರುವುದು ಎಂಬುದರಿಂದ ಸಕಾರಾದೇಶಬಂದರೆ **ಶುಭಸ್ಪತೀ** ಎಂದಾಗುವುದು. ಇದಕ್ಕೆ **ಪತೀ** ಎಂಬ ಆಮಂತ್ರಿತವು ಪರವಾಗಿರುವುದರಿಂದ **ಸುಬಾಮಂತ್ರಿತೇ ಪರಾಂಗವತ್ಸ್ವರೇ** ಎಂಬುದರಿಂದ ಪರಾಂಗವದ್ಭಾವಬಂದು ಆಮಂತ್ರಿತದಂತೆ ಭಾವಿಸಲ್ಪಟ್ಟು **ಆಮಂತ್ರಿತಸ್ಯ ಚ** (ಪಾ.ಸೂ ೬-೧-೧೯೮) ಎಂಬುದರಿಂದ ಆದ್ಯುದಾತ್ತಬರುವುದು. ಆಷ್ಟಮಿಕಾನುದಾತ್ತವು ಬರುವುದಿಲ್ಲ. ಏಕೆಂದರೆ ಆಷ್ಟಮಿಕಾನುದಾತ್ತವನ್ನು ಮಾಡುವಾಗ ಇದಕ್ಕಿಂತಲೂ ಪೂರ್ವದಲ್ಲಿರುವ **ದ್ರವತ್ವಾಣೀ** ಎಂಬ ಆಮಂತ್ರಿತನಾದ ಪೊರ್ವಪದಕ್ಕೆ **ಆಮಂತ್ರಿತಂ ಪೂರ್ವಮವಿದ್ಯಮಾನವತ್** (ಪಾ. ಸೂ. ೮-೧-೭೨) ಎಂಬುದರಿಂದ ಅವಿದ್ಯಮಾನವದ್ಭಾವಬರುವುದರಿಂದ **ಅಸಾದಾದೌ** ಎಂದು ಪ್ರತಿಷೇಧ ಬರುವುದು, ಆದರೆ **ಮಿತ್ಯಾವರುಣಾವೃತಾವೃಧಾ**ಎಂಬಲ್ಲಿ ಹೇಗೆ ಅವಿದ್ಯಮಾನವದ್ಭಾವಕ್ಕೆ ಪ್ರತಿಷೇಧಬರುವುದೋ ಹಾಗೆಯೇ ಇಲ್ಲಿಯೂ **ನಾಮಂತ್ರಿತೇ ಸಮಾನಾಧಿಕರಣೇ ಸಾಮಾನ್ಯವಚನಂ** (ಪಾ. ಸೂ ೮-೧-೭೩) ಎಂಬ ಸೂತ್ರದಿಂದ ಅವಿದ್ಯಮಾನವದ್ಭಾವಕ್ಕೆ ಪ್ರತಿಷೇಧಬರಲಿ ಎಂದರೆ ಸೂತ್ರದಲ್ಲಿ **ಸಾಮಾನ್ಯವಚನೇ** ಎಂದಿರುವುದು ಮಿತ್ಯಾವರುಣಾ ಎಂಬುದು ಸಾಮಾನ್ಯವಚನವಾದ್ದರಿಂದ, ಅಲ್ಲಿ ಅವಿದ್ಯಮಾನವದ್ಭಾವಪ್ರತಿಷೇಧ ಬರುವುದು. ದ್ರವತ್ವಾಣೀ ಎಂಬುದು ವಿಶೇಷಣವಾದ್ದರಿಂದ ವಿಶೇಷವಚನವಾಗುವುದೇ ವಿನಾ ಸಾಮಾನ್ಯವಚನವಾಗುವುದಿಲ್ಲ. ಆದ್ದರಿಂದ ಅವಿದ್ಯಮಾನವದ್ಭಾವಪ್ರತಿಷೇಧ ಬರುವುದಿಲ್ಲ. ಏವಂಚ ಅವಿದಮಾನವದ್ಭಾವಬಂದು **ಅಸಾದಾದೌ** ಎಂದು ನಿಷೇಧಬರುವುದರಿಂದ ಆಷ್ಟಮಿಕಾನುದಾತ್ತ ಬರುವುದಿಲ್ಲ. ಇದ್ದರಿಂದ ಷಾಷ್ಠವಾದ ಆದ್ಯುದಾತ್ತನೇ ಬರುವುದು. **ಪುರು** ವಿಸ್ತೀರ್ಣವಾದ **ಭುಜೌ** ಬಾಹುಗಳು ಯಾರಿಗೆ ಇವೆಯೋ ಅವರು **ಪುರುಭುಜೌ** ಎನ್ನಲ್ಪಡುತ್ತಾರೆ. ಇದು ಸಂಬೋಧನದ್ವಿವಚನಾಂತ, ಇಲ್ಲಿ **ಸುಪಾಂಸುಲುಕ್** (ಪಾ.ಸೂ. ೭-೧-೩೯) ಎಂಬುದರಿಂದ ಔಪ್ರತ್ಯಯಕ್ಕೆ **ಡಾ** ಆದೇಶಬರುವುದು, ಆಮಂತ್ರಿತಸಂಜ್ಞೆ ಇರುವುದರಿಂದ ಷಾಷ್ಠವಾದ ಆದ್ಯುದಾತ್ತಸ್ವರಬರುವುದು. **ಪುರು-ಹೆಚ್ಚಾಗಿ ಭುಂಜತೇ-ತಿನ್ನುತ್ತಾರೆ.** ಆದ್ದರಿಂದ ಪುರುಭುಜೌ ಎಂದಾಗಲೀ **ವ್ಯುತ್ಪತ್ತಿಹೇಳಬಹುದು. ಚನ ಸ್ಯತಂ = ಚಾಯತೇರನ್ಸೇ ಹ್ರಸ್ವಶ್ಚ** (ಉ. ಸೂ. ೪-೬೫೯) ಚಾಯೃ ಪೂಜಾನಿಶಾಮನಯೋಃ ಎಂಬ ಧಾತುವಿಗೆ **ಅನ್ನ** ಎಂಬ ಅರ್ಥವು ಬೋಧಿತವಾಗುವಾಗ **ಅಸುನ್** ಪ್ರತ್ಯಯಬರುವುದು, ಪ್ರತ್ಯಯಕ್ಕೆ **ನುಟ್** ಆಗಮವೂ ಧಾತುವಿಗೆ ಹ್ರಸ್ವವೂ ಸಹ ಬರುವುದು ಎಂಬುದರಿಂದ ಚಾಯೃಧಾತುವಿಗೆ ಅಸುನ್ಪ್ರತ್ಯಯವೂ ಅಸುನ್ನಿನ ಆದಿಗೆ ನುಡಾಗಮವೂ, ಚಾ ಎಂಬುದಕ್ಕೆ ಹ್ರಸ್ವವೂ ಬಂದಮೇಲೆ ಚಯ್ನಸ್ ಎಂದಿರುವಾಗ **ಲೋಪೋವ್ಯೋರ್ವಲಿ** (ಪಾ. ಸೂ. ೬-೧-೬೬) ಅಶ್ ವರ್ಣಪರವಾಗಿರುವಾಗ ಅವರ್ಣದ ಮುಂದಿರುವ ಹದಾಂತಯಕಾರ ವಕಾರಗಳಿಗೆ **ಲೋಪವು** ವಿಕಲ್ಪವಾಗಿ ಬರುವುದು. ಎಂಬುದರಿಂದ ಯಕಾರಕ್ಕೆ ಲೋಪಬಂದರೆ **ಚನಃ** ಎಂದಾಗುವುದು. (ನಿರು. ೬-೧೬) ಇಲ್ಲಿ ಯಾಸ್ಕರು **ಚನಃ** ಶಬ್ದವನ್ನು ಅನ್ನನಾಮಗಳಲ್ಲಿ ಪಠಿಸಿರುವರು. **ಚನಃ ಆತ್ಮನಃ ಇಚ್ಛತಿ-ಅನ್ನವನ್ನು ತನಗೆ ಅಪೇಕ್ಷಿಸುತ್ತಾನೆ** ಎಂದು ವಿಗ್ರಹಮಾಡಿದಾಗ **ಸುಪ ಆತ್ಮನಃಕ್ಯಚ್** (ಪಾ ಸೂ ೩-೧-೮) ಇಷ್ಧಾತುವಿಗೆ ಅನ್ವಯಿಸುವ ಕರ್ಮವಾಚಕವಾಕವಾಗಿಯೂ, ಇಷ್ಧಾತುವಿಗೆ ಅನ್ವಯಿಸುವ ಕರ್ತೃವಿನ ಸಂಬಂಧವನ್ನು ಹೊಂದಿದ್ದಾಗಿಯೂ ಇರುವ ಸುಬಂತದಮುಂದೆ ಇಚ್ಛೆ ಎಂಬ ಅರ್ಥದಲ್ಲಿ **ಕ್ಯಚ್** ಪ್ರತ್ಯಯ ಬರುವುದು. ಎಂಬುದರಿಂದ **ಕ್ಯಚ್** ಪ್ರತ್ಯಯ ಬರಲು, **ಕ್ಯಚ್ಚು** ಸನಾದಿಯಲ್ಲಿರುವುದರಿಂದ, **ಸನಾದ್ಯಂತಾಧಾತವಃ** (ಪಾ.

ಸೂ. ೩-೧-೩೨) ಎಂಬುದರಿಂದ ಧಾತುಸಂಜ್ಞೆ ಬರಲು ಲೋಟ್ ಮಧ್ಯಮಪುರುಷ ದ್ವಿವಚನದಲ್ಲಿ **ಚೆನಸ್ಯತಂ** ಎಂದಾಗುವುದು, ಇಲ್ಲಿ ಕ್ಯಚ್ಚು ಪ್ರತ್ಯಯಸ್ವರದಿಂದ ಉದಾತ್ತ, ಇದರಮುಂದೆ ಬರುವ ವಿಕರಣಪ್ರತ್ಯಯ ಶಪ್ಪು ಪಿತ್ತಾದ್ದರಿಂದ ಅನುದಾತ್ತ, ಕ್ಯಚ್ಚಿನ ಆಕಾರಕ್ಕೂ ಶಪ್ಪಿನ ಆಕಾರಕ್ಕೂ, **ಆತೋಗುಣೇ** ಎಂದು ವಿಹಿತಪರರೂಪದಿಂದ ಆಕಾರವೊಂದೇ ಏಕಾದೇಶಬರುವುದು **ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮-೨೮) ಎಂಬುದರಿಂದ ಏಕಾದೇಶವು ಉದಾತ್ತವಾಗುವುದು. **ತಂ** ಎಂಬುದು ಲ ಸಾರ್ವಧಾತುಕವಾದ್ದರಿಂದ **ತೌಸ್ಯನುದಾತ್ತೇತ್-** (ಪಾ. ಸೂ. ೬-೧-೧೮೬) ಎಂಬುದರಿಂದ ಬಂದ ಅನುದಾತ್ತವು **ಉದಾತ್ತಾದನುದಾತ್ತಸ್ಯ** ಎಂಬುದರಿಂದ ಸ್ವರಿತವಾಗುವುದು. ಇದು ತಿಙಂತವಾದರೂ **ತಿಙ್ಶಿತಿಙಃ** (ಪಾ. ಸೂ. ೮-೧-೨೮) ಎಂಬುದರಿಂದ ಅನುದಾತ್ತಬರುವುದಿಲ್ಲ. **ಪುರಭುಜಾ** ಎಂಬ ಪೂರ್ವಪದವು ಆಮಂತ್ರಿತವಾದ್ದರಿಂದ **ಆಮಂತ್ರಿತಂ ಪೂರ್ವಮವಿದ್ಯಮಾನವತ್** ಎಂಬುದರಿಂದ ಅವಿದ್ಯಮಾನವದ್ಭಾವ ಬರುವುದು ಆದ್ದರಿಂದ ಅತಿಙಂತವಾದ ಪದಕ್ಕೆಂತಲೂ ಪರವಾಗುವುದಿಲ್ಲ, ಅಥವಾಪಾದಿಯಾಗುವುದು ಅನುದಾತ್ತ ಸಾಮಾನ್ಯವೂ **ಅನುದಾತ್ತಂ ಸರ್ವಮಪಾದಾದೌ** ಎಂಬುದರಿಂದ ಅಪಾದಾದಿಯಲ್ಲಿಯೇ ಬರುವುದು, ಆದ್ದರಿಂದ ಅನುದಾತ್ತ ಬರುವುದಿಲ್ಲ.

॥ ಸಂಹಿತಾಪಾಠಃ ॥

ಅಶ್ವಿನಾ ಪುರುದಂಸಸಾ ನರಾ ಶವೀರಯಾ ಧಿಯಾ ॥
ಧಿಷ್ಣ್ಯಾ ವನತಂ ಗಿರಃ ॥ ೨ ॥

॥ ಪದಪಾಠಃ ॥

ಅಶ್ವಿನಾ । ಪುರುದಂಸಸಾ । ನರಾ । ಶವೀರಯಾ । ಧಿಯಾ ॥
ಧಿಷ್ಣ್ಯಾ । ವನತಂ । ಗಿರಃ ॥ ೨ ॥

॥ ಸಾಯಣಭಾಷ್ಯಂ ॥

ಅಶ್ವಿನಾ ಹೇ ಅಶ್ವಿನೌ ಯುವಾಂ ಗಿರೋಽಸ್ಮದೀಯಾಃ ಸ್ತುತೀರ್ಧಿಯಾದರಯುಕ್ತಯಾ ಬುದ್ಧ್ಯಾ ವನತಂ । ಸಂಭಜತಂ । ಸ್ವೀಕುರುತಂ । ಕೀದೃಶಾವಶ್ವಿನೌ । ಪುರುದಂಸಸಾ ಬಹುಕರ್ಮಾಣೌ । ಷಡ್ವಿಂಶತಿಸಂಖ್ಯಾಕೇಷು ಕರ್ಮನಾಮಸು ದಂಸ ಇತಿ ಪಠಿತಂ । ನರಾ ನೇತಾರೌ ಧಿಷ್ಣ್ಯಾ ಧಾರ್ಷ್ಟ್ಯಯುಕ್ತೌ ಬುದ್ಧಿಮಂತೌ ವಾ । ಕೀದೃಶ್ಯಾ ಧಿಯಾ । ಶವೀರಯಾ ಗತಿಯುಕ್ತಯಾ । ಅಸ್ಮತ್ಪ್ರತಿಹತಪ್ರಸರಯೇತ್ಯರ್ಥಃ ॥ ಅಶ್ವಿನೇತ್ಯಾದ್ಯಾಮಂತ್ರಿತಚತುಷ್ಟಯಸ್ಯ ಷಾಷ್ಠಿಕಮಾಮಂತ್ರಿತಾದ್ಯುದಾತ್ತತ್ವಂ । ಪಾದಾದಿತ್ವಾನ್ನಾಷ್ಟಮಿಕೋ ನಿಘಾತಃ । ಪುರುದಂಸಸೇತ್ಯಪಿ ಹಿ ಪಾದಾದಿರೇವಾಮಂತ್ರಿತಂ ಪೂರ್ವಮವಿದ್ಯ-

ಮಾನವದಿತಿ ಪೂರ್ವಸ್ಯಾವಿದ್ಯಮಾನವತ್ತ್ವಾತ್ । ನಾಮಂತ್ರಿತೇ ಸಮಾನಾಧಿಕರಣ ಇತಿ ಪೂರ್ವಸ್ಯ ಸಾಮಾನ್ಯವಚನತ್ವೇನಾಸ್ಯ ವಿಶೇಷವಚನತ್ವೇನ ನಾವಿದ್ಯಮಾನವತ್ತ್ವಮಿತಿ ಚೇನ್ನ । ಅಶ್ವಿಶಬ್ದವತ್ಪುರುದಂಸಸಃ ಶಬ್ದಸ್ಯಾಪ್ಯಶ್ವಿನೋರೇವ ರೂಢ್ಯಾ ಪ್ರಯುಜ್ಯಮಾನತಯಾ ಸಾಮಾನ್ಯಶಬ್ದತ್ವಾತ್ ಸಾಮಾನ್ಯವಚನಂ ನಾವಿದ್ಯಮಾನವದಿತ್ಯುಕ್ತೇಽರ್ಥಾತ್ಪರಸ್ಯ ವಿಶೇಷವಚನತ್ವಾವಗಮಾತ್ । ಉಭಯೋಃ ಸಾಮಾನ್ಯವಚನತ್ವೇ ಪರ್ಯಾಯತ್ವೇನ ಪೌನರುಕ್ತ್ಯಾತ್ಸಹಾಪ್ರಯೋಗ ಇತಿ ಚೇನ್ನ । ಗುಣವಿಶೇಷಸಂಕೀರ್ತನವತ್ಪ್ರಸಿದ್ಧಾನೇಕನಾಮವಿಶೇಷಸಂಬಂಧಸಂಕೀರ್ತನಸ್ಯಾಪಿ ಸ್ತುತ್ಯುಪಯೋಗೇನ ಸಪ್ರಯೋಜನತ್ವಾನ್ನಿಷ್ಪ್ರಯೋಜನಪುನರ್ವಚನಸ್ಯೈವ ಪುನರುಕ್ತತ್ವಾತ್ । ಅಶ್ವಿಪುರುದಂಸಃಶಬ್ದಯೋರೇಕಾರ್ಥವೃತ್ತಿತ್ವೇಽಪಿ ಪರ್ಯಾಯತ್ವಾದೇವ ಪ್ರವೃತ್ತಿನಿಮಿತ್ತಭೇದಾಭಾವೇನಾಸಾಮಾನಾಧಿಕರಣ್ಯಾದಪಿ ನಾವಿದ್ಯಮಾನವತ್ತ್ವಪ್ರತಿಷೇಧಃ । ಭಿನ್ನಪ್ರವೃತ್ತಿನಿಮಿತ್ತಾನಾಮೇವ ಹ್ಯೇಕಸ್ಮಿನ್ನರ್ಥೇ ವೃತ್ತಿಃ ಸಾಮಾನಾಧಿಕರಣ್ಯಂ ॥ ಅಶ್ವಿಶಬ್ದಸ್ಯಾಶ್ವಸಂಬಂಧೋ ನಿಮಿತ್ತಂ ಪುರುದಂಸಃಶಬ್ದಸ್ಯ ತು ಬಹುಕರ್ಮಸಂಬಂಧ ಇತಿ ಪ್ರವೃತ್ತಿನಿಮಿತ್ತಭೇದ ಇತಿ ಚೇನ್ನ । ತದ್ಧಿ ದ್ವಯಂ ವ್ಯುತ್ಪತ್ತಿಮಾತ್ರನಿಮಿತ್ತಂ ನ ಪ್ರವೃತ್ತಿನಿಮಿತ್ತಂ । ವ್ಯುತ್ಪತ್ತಿನಿಮಿತ್ತಭೇದಮಾಶ್ರೇಣಾಪಿ ಸಾಮಾನಾಧಿಕರಣ್ಯಾಭಿಧಾನೇ ವೃಕ್ಷಮಹೀರುಹಶಬ್ದಯೋರಪಿ ತಥಾತ್ವಪ್ರಸಂಗಃ । ಅತ ಏವ ಹೀಡೇ ರಂತೇ೯ದಿತೇ ಸರಸ್ವತಿ ಪ್ರಿಯೇ ಪ್ರೇಯಸಿ ಮಹಿ ವಿಶ್ರುತಿ । ಏತಾನಿ ತೇ ಅಘ್ನ್ಯೇ ನಾಮಾನಿ । ತೈ. ಸಂ. ೭-೧-೬-೮ । ಇತ್ಯತ್ರ ಸಹಸ್ರತಮಾಪ್ರಶಂಸೋಪಯೋಗಿತ್ವೇನೇಡಾದಿಶಬ್ದಾನಾಮೇತಾನಿ ತೇ ಅಘ್ನ್ಯೇ ನಾಮಾನೀತಿ ವಚನೇನ ಪರ್ಯಾಯಾಣಾಮಪ್ಯನೇಕವಿಶಿಷ್ಟನಾಮಸಂಬಂಧನಿಬಂಧನಸ್ತುತ್ಯರ್ಥತ್ವೇನೈವ ಸಹಪ್ರಯೋಗಃ । ಸ್ತುತ್ಯುಪಯೋಗೇನೈವ ವ್ಯುತ್ಪತ್ತಿನಿಮಿತ್ತಭೇದವಿವಕ್ಷಾಯಾಮಪಿ ಪರ್ಯಾಯತ್ವೇನಾಸಾಮಾನಾಧಿಕರಣ್ಯಾದೇವ ನಾಮಂತ್ರಿತ ಇತಿ ನಿಷೇಧಾಭಾವಾದಾಮಂತ್ರಿತಂ ಪೂರ್ವಮವಿದ್ಯಮಾನವದಿತಿ ಪೂರ್ವಪೂರ್ವಸ್ಯಾವಿದ್ಯಮಾನವತ್ತ್ವಾತ್ತ್ವರ್ವೇಷಾಂ ಷಾಷ್ಠಿಕಮಾದ್ಯುದಾತ್ತತ್ವಂ ಶದ್ವತ್ಪ್ರಕೃತೇ೯ಽಪಿ । ಕ್ಯಾ ಶ್ಯಾ ಪ್ಯಾ ಕಟಿಪಟಿ ಶೌಟಿಭ್ಯ ಈರ್ಡ । ಉ. ೪-೩೦ । ಇತ್ಯೇತ ಈರನ್ನಿತ್ಯನುವೃತ್ತೌ ಬಹುಲವಚನಾದನ್ಯತ್ರಾಪೀತ್ಯನೇನ ಶು ಗತಾವಿತಿ ಧಾತೋರೀರನ್ಪ್ರತ್ಯಯೇ ಕೃತೇ ಸತಿ ನಿತ್ತ್ವಾಚ್ಛವೀರಯೋಶಬ್ದ ಆದ್ಯುದಾತ್ತಃ । ಧಿಯೇತ್ಯತ್ರ ಸಾನೇಕಾಚೆ ಇತಿ ವಿಭಕ್ತೇರುದಾತ್ತಾ । ವನತೆಮಿತ್ಯತ್ರ ಶಪಃ ಪಿತ್ತ್ವಾಲ್ಲೋಣ್ಮಧ್ಯಮದ್ವಿವಚನಸ್ಯ ಲಸಾರ್ವಧಾತುಕತ್ವಾಚ್ಚೆ ವನ ಷಣ ಸಂಭಕ್ತ್ಯಾವಿತಿ ಧಾತೂದಾತ್ತತ್ವಮೇವ ಶಿಷ್ಯತೇ । ನ ಚೆ ತಿಙ್ಚತಿಙ ಇತಿ ನಿಘಾತಃ ಪೂರ್ವಾಮಂತ್ರಿತಸ್ಯಾವಿದ್ಯಮಾನವತ್ತ್ವೇನ ಸಾದಾದಿತ್ವಾತ್ । ಗಿರಃ । ಸುಪೋ೯ನುದಾತ್ತತ್ವೇ ಪ್ರಾತಿಪದಿಕಸ್ವರಃ ಶಿಷ್ಯತೇ ॥

॥ ಪ್ರತಿಪದಾರ್ಥಃ ॥

ಪುರುದಂಸಸಾ—ಬಹುಕರ್ಮಯುಕ್ತರಾದ ಎಂದರೆ ಅನೇಕ ಕರ್ಮಗಳನ್ನು ಮಾಡುವ, । ನರಾ—ಜನರಿಗೆ ಮುಖಂಡರಾದ ಅಥವಾ ಮಾರ್ಗದರ್ಶಕರಾದ, । ಧಿಷ್ಣ್ಯಾ—ಬುದ್ಧಿವಂತರಾದ । ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ, (ನೀವು) । ಶವೀರಯಾ—ಅಪ್ರತಿಹತವಾದ, ತಡೆಯಿಲ್ಲದ । ಧಿಯಾ—ಆದರಬುದ್ಧಿಯಿಂದ । ಗಿರಃ—ನಾವು ಮಾಡುವ ಸ್ತೋತ್ರರೂಪವಾದ ವಾಕ್ಯಗಳನ್ನು । ವನತಂ—ಸ್ವೀಕರಿಸಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವು ಅನೇಕ ಕರ್ಮಗಳನ್ನು ಎಂದರೆ ಸಾಹಸಕಾರ್ಯಗಳನ್ನು ಮಾಡುವವರು; ಜನರಿಗೆ ಮಾರ್ಗದರ್ಶಕರು, ಮಹಾಬುದ್ಧಿವಂತರು ಅಥವಾ ಧೈರ್ಯಶಾಲಿಗಳು. ಇಂತಹ ನೀವು ಅಪ್ರತಿಹತವಾದ ನಿಮ್ಮ ಬುದ್ಧಿಯಿಂದ ನಾವು ಮಾಡುವ ಸ್ತೋತ್ರರೂಪವಾದ ವಾಕ್ಯಗಳನ್ನು ಆದರಪೂರ್ವಕವಾಗಿ ಸ್ವೀಕರಿಸಿರಿ.

English Translation.

O Aswins, performers of mighty deeds, leaders of men, endowed with fortitude, accept our praises with unaverted (loving) mind.

॥ ವಿಶೇಷನಿಷಯಗಳು ॥

ಈ ಸೂಕ್ತದಲ್ಲಿರುವ ಅಶ್ವಿನೀದೇವತೆಗಳನ್ನು ಪ್ರತಿಪಾದಿಸುವ ಮೂರು ಋಕ್ಕುಗಳ ಪದಗಳೂ ಬಹಳ ಕ್ಲಿಷ್ಟವಾಗಿವೆ. ಅನೇಕ ಭಾಷ್ಯಕಾರರು ವ್ಯಾಕರಣಾನುಸಾರವಾಗಿ ಶಬ್ದಗಳಿಗೆ ಅವಯವಾರ್ಥವನ್ನು ಕಲ್ಪಿಸಿ ಒಂದುವಿಧವಾದ ಅಭಿಪ್ರಾಯ ಬರುವಂತೆ ವ್ಯಾಖ್ಯಾನಮಾಡಿದಾರೆ. ಆದರೆ ಋಗ್ವೇದದ ಅನೇಕ ಶಬ್ದಗಳಿಗೆ ಅವಯವಾರ್ಥಕಲ್ಪನೆಯಿಂದ ಅರ್ಥವು ಸರಿಹೋಗುವುದಿಲ್ಲ. ಅಲ್ಲದೆ ಈಗಿನ ಸಂಸ್ಕೃತಭಾಷೆಯಲ್ಲಿ ಆ ಶಬ್ದಗಳಿಗೆ ರೂಢಿಯಲ್ಲಿರುವ ಅರ್ಥಗಳು ವೇದಕಾಲದಲ್ಲಿ ಇರಲಿಲ್ಲವೆಂಬುದೂ ಮತ್ತು ಆ ಶಬ್ದಗಳಿಗೆ ಪ್ರತ್ಯೇಕವಾದ ಅರ್ಥವು ಬಳಕೆಯಲ್ಲಿತ್ತೆಂದೂ ಊಹಿಸಲು ಸಾಕಾದಷ್ಟು ಆಧಾರಗಳಿವೆ. ಆ ಕಾಲದಲ್ಲಿ ವ್ಯಾಕರಣವು ರಚಿತವಾಗಿರಲಿಲ್ಲ. ವೇದಶಬ್ದಗಳನ್ನೇ ಮೂಲಾಧಾರವಾಗಿ ಇಟ್ಟುಕೊಂಡು ಪಾಣಿನಿಮಹರ್ಷಿಯು ವ್ಯಾಕರಣವನ್ನು ರಚಿಸಿರುವ ವಿಷಯದಲ್ಲಿ ಸಂಶಯವಿಲ್ಲ. ಇದಲ್ಲದೆ ಪಾಣಿನಿಯ ವ್ಯಾಕರಣವು ಈಗಿನ ಸಂಸ್ಕೃತಭಾಷೆಯಲ್ಲಿ ರೂಢವಾಗಿರುವ ಶಬ್ದಗಳ ನಿಷ್ಪತ್ತಿಮೊದಲಾದವನ್ನು ವಿಶೇಷವಾಗಿ ಸಮರ್ಥಿಸುವುದು. ಅನೇಕ ವೇದಶಬ್ದಗಳು ವ್ಯಾಕರಣನಿಯಮಗಳಿಗೆ ಒಳಪಡುವುದಿಲ್ಲ. ಉದಾಹರಣೆಗಾಗಿ ಒಂದೇ ಶಬ್ದವನ್ನು ಒಂದೇ ಅರ್ಥದಲ್ಲಿ ಬೇರೆಬೇರೆ ರೂಪಗಳಿಂದ ಹೇಳಲಾಗಿದೆ. ಭಾಷೆಯನ್ನನುಸರಿಸಿ ವ್ಯಾಕರಣವನ್ನು ರಚಿಸಿರುವರೇ ಹೊರತು ವ್ಯಾಕರಣನಿಯಮಗಳನ್ನನುಸರಿಸಿ ಭಾಷೆಯು ಹುಟ್ಟಿಲ್ಲ. ಆದುದರಿಂದ ಅವಯವಾರ್ಥಕಲ್ಪನೆಯಿಂದ ನಾವು ವೇದಶಬ್ದಗಳಿಗೆ ಏನೋ ಒಂದು ವಿಧವಾದ ಅರ್ಥವನ್ನು ಹೊಂದಿಸಿದರೂ ಪ್ರಾಚೀನಕಾಲದ ಋಷಿಗಳು ಆ ಶಬ್ದಗಳನ್ನು ಆ ಅರ್ಥದಲ್ಲಿಯೇ (ಅವಯವಾರ್ಥ) ಉಪಯೋಗಿಸುತ್ತಿದ್ದರೆಂದು ಹೇಳುವುದು ಸಾಹಸದಮಾತೇ ಸರಿ.

ಪುರುದಂಸಸಾ—ಈ ಶಬ್ದವು ಋಗ್ವೇದದಲ್ಲಿ ನಾಲ್ಕು ಋಕ್ಕುಗಳಲ್ಲಿ ಪ್ರಯೋಗಿಸಲ್ಪಟ್ಟಿದೆ. ಈ ಋಕ್ಕಿನಲ್ಲಿ ಈ ಶಬ್ದವು ಆದ್ಯುದಾತ್ತವಾಗಿಯೂ ಋ. ಸಂ. ೬-೬೩-೧೦ ಮತ್ತು ೭-೯೫ ಋಕ್ಕುಗಳಲ್ಲಿ ಸರ್ವಾನುದಾತ್ತವಾಗಿಯೂ ಋ. ಸಂ. ೭-೭೩-೧ ರಲ್ಲಿ ಮಧ್ಯೋದಾತ್ತವಾಗಿಯೂ ಇರುವುದು. ಸರ್ವಾನುದಾತ್ತವಾದ ಪ್ರಥಮಾ ವಿಭಕ್ತಿಯ ಪದವು ಸಂಬೋಧನೆಯನ್ನುಮಾಡುವುದಕ್ಕಾಗಿ ಉಪಯೋಗಿಸಲ್ಪಡುವುದೆಂದು ಹಿಂದೆಯೇ ಹೇಳಿದ್ದೇವೆ. ಮೇಲೆ ಹೇಳಿದ ಋಕ್ಕುಗಳಲ್ಲದೆ, ಈ ಪದದ ಬೇರೆ ರೂಪಗಳಾದ **ಪುರುದಂಸಂ** ಮತ್ತು **ಪುರುದಂಸಾ** ಎಂಬ ಶಬ್ದಗಳು ಋ. ಸಂ. ೩-೧-೨೩ ಮತ್ತು ೭-೭೩-೧ ನೆಯ ಋಕ್ಕುಗಳಲ್ಲಿ ಪ್ರಯೋಗಿಸಲ್ಪಟ್ಟಿವೆ. ಈ ಸ್ಥಳಗಳಲ್ಲಲ್ಲದೆ ಬೇರೆ ಎಲ್ಲಿಯೂ ಈ ಶಬ್ದಪ್ರಯೋಗವಿಲ್ಲ,

ಈ ಶಬ್ದವು **ಪುರು, ದಂಸ** ಎಂಬ ಎರಡು ಪ್ರತ್ಯೇಕವಾದ ಶಬ್ದಗಳನ್ನೊಳಗೊಂಡಿದೆ. ಪುರು ಎಂದರೆ ಬಹು, ಬಹಳ ಎಂದರ್ಥವು. ಈ ಶಬ್ದವು ಹಿಂದಿನ ಋಕ್ಕಿನಲ್ಲಿರುವ **ಪುರುಭುಜಾ** ಎಂಬ ಪದದಲ್ಲಿ ಇರುವುದು. ಅದರ ಅರ್ಥವನ್ನು ಹಿಂದೆಯೇ ವಿವರಿಸಿದೇವೆ. ದಂಸಶಬ್ದವು ಕರ್ಮವಾಚಕಗಳಾದ ೨೬ ಶಬ್ದಗಳ ಮಧ್ಯದಲ್ಲಿರುವುದರಿಂದ ಈ ಶಬ್ದಕ್ಕೆ ಕರ್ಮ ಅಥವಾ ಕೆಲಸವೆಂದು ಅರ್ಥವು. ಆದುದರಿಂದ ಭಾಷ್ಯಕಾರರು **ಪುರುದಂಸಸಾ** ಎಂಬ ಶಬ್ದಕ್ಕೆ **ಬಹುಕರ್ಮಾಣೌ** ಎಂದರೆ ಅನೇಕ ಕೆಲಸಗಳನ್ನು ಮಾಡುವ ಶಕ್ತಿಯುಳ್ಳವರೆಂದು ಹೇಳಿರುವರು

ವೆಂಕಟಮಾಧವರು **ಆಶ್ಚರ್ಯಭೂತವಿವಿಧಕರ್ಮಾಣೌ**—ಇವರ ಕೆಲಸಗಳು ಅತ್ಯಾಶ್ಚರ್ಯಕರಗಳಾಗಿರುವವು ಎಂದರ್ಥಮಾಡಿರುವರು. ವಿಲ್ಸನ್ ಪಂಡಿತನು "ಅದ್ಭುತ ಅಥವಾ ಸಾಹಸಕೃತ್ಯಗಳನ್ನೆಸಗುವವರು" ಎಂದೂ Grassman, Ludwing ಮೊದಲಾದ ಪಾಶ್ಚಾತ್ಯಪಂಡಿತರು ವೆಂಕಟಮಾಧವರ ಅಭಿಪ್ರಾಯವನ್ನೇ ಅನುಸರಿಸಿ "ಆಶ್ಚರ್ಯಕರವಾದ ಕೆಲಸಗಳನ್ನು ಮಾಡುವವರು" ಎಂದೂ ಹೇಳಿದಾರೆ. ಋಗ್ವೇದದ ಪ್ರಥಮಮಂಡಲದ ೧೧೩, ೧೧೬, ೧೧೭, ೧೧೮ ನೆಯ ಸೂಕ್ತಗಳಲ್ಲಿ ಈ ದೇವತೆಗಳ ಅನೇಕ ಸಾಹಸಕೃತ್ಯಗಳ ವರ್ಣನೆಯಿರುವುದರಿಂದ ವೆಂಕಟಮಾಧವರ ಅಭಿಪ್ರಾಯವೇ ಸರಿಯೆಂದು ತೋರುವುದು.

ನರಾ--ಸಾಯಣ ಮತ್ತು ವೆಂಕಟಮಾಧವರು ಈ ಶಬ್ದಕ್ಕೆ **ನೇತಾರೌ**--ಮುಖಂಡರು, ಮಾರ್ಗದರ್ಶಕರು ಎಂದೂ, ಸ್ಕಂದಸ್ವಾಮಿಯು ಮನುಷ್ಯಾಕೃತಿಯಿಂದಿರುವನರೆಂದೂ ಅರ್ಥಮಾಡಿರುವರು. Wilson expresses Sayana's meaning by "guides." Whitnery rendes 'narah' with manly and Stevenson with "who assumes the human form" and Geldner in his Der Rigveda, gives several meanings of this word. ಇವುಗಳಲ್ಲೆಲ್ಲಾ ಸಾಯಣರ ಅಭಿಪ್ರಾಯವೇ ಸಾಧುವೆಂದು ಕಾಣುವುದು. ಆದರೂ **ನರಾ** ಎಂಬ ಶಬ್ದವು ಅಶ್ವಿನೀದೇವತೆಗಳನ್ನು ಸ್ತೋತ್ರಮಾಡುವ ಸಂದರ್ಭಗಳಲ್ಲಿ ವಿಶೇಷವಾಗಿ ಉಪಯೋಗಿಸಲ್ಪಡುವುದರಿಂದ ಈ ಶಬ್ದಕ್ಕೆ ಯಾವುದಾದರೂ ಒಂದು ನಿರ್ದಿಷ್ಟವಾದ ಅರ್ಥವು ಆ ಕಾಲದಲ್ಲಿ ಬಳಕೆಯಲ್ಲಿತ್ತೆಂದು ಧಾರಾಳವಾಗಿ ಹೇಳಬಹುದು.

ಶವೀರಯಾ ಈ ಶಬ್ದದ ಪ್ರಯೋಗವು ಋಗ್ವೇದದಲ್ಲಿ ಈ ಋಕ್ಕಿನಲ್ಲಿಯೂ "ಅಶ್ವಿನಾವಶ್ವವತ್ಯೇಷಾ ಯಾತಂ ಶವೀರಯಾ" (ಋ. ಸಂ. ೧-೩೦-೧೭) ಎಂಬ ಋಕ್ಕಿನಲ್ಲಿಯೂ ಮಾತ್ರವಿರುವುದು ಮತ್ತೆಲ್ಲಿಯೂ ಇಲ್ಲ. ಭಾಷ್ಯಕಾರರು ಈ ಶಬ್ದದ ನಿಷ್ಪತ್ತಿಯನ್ನು ಈರೀತಿ ಮಾಡಿರುವರು **ಶು ಗತಾವಿತಿ ಧಾತೋರೀರನ್ಪ್ರತ್ಯಯೇ ಕೃತೇಸತಿ ಗತಿಯುಕ್ತ್ಯಾ, ಅಪ್ರತಿಹತಪ್ರಸರಯೇತ್ಯರ್ಥಃ** ಅಪ್ರತಿಹತವಾದ ಗಮನದಿಂದ ಯುಕ್ತವಾದ ಎಂದರ್ಥವು. ಮತ್ತು ಈ ಶಬ್ದವು **ಶವೀರಾ** ಎಂಬ ಆಕಾರಾಂತಸ್ತ್ರೀಲಿಂಗಶಬ್ದದ ಚತುರ್ಥ್ಯೇಕವಚನವೆಂದು **ಪರಿಗಣಿಸಿ ಧಿಯಾ** ಎಂಬ ಶಬ್ದಕ್ಕೆ ವಿಶೇಷಣವನ್ನಾಗಿ ಭಾವಿಸಿರುವರು. ವೆಂಕಟಮಾಧವರು **ಶು** ಎಂದರೆ ಕ್ಷಿಪ್ರವೆಂದು ಅರ್ಥಮಾಡಿ **ಕ್ಷಿಪ್ರಗತ್ಯಾ** ಎಂದು ಚತುರ್ಥೀವಿಭಕ್ತಿಯನ್ನಾಗಿಯೇ ಹೇಳಿರುವರು. ಆದರೆ ಸ್ಕಂದಸ್ವಾಮಿಯು ಈ ರೀತಿ ಹೇಳಿರುವರು—**ಶು ಇತಿ ಕ್ಷಿಪ್ರನಾಮ । ಈರ ಗತೌ । ಕ್ಷಿಪ್ರಮಿರಣಂ ಗಮನಂ ಶವೀರಂ । ಅಥವಾ ಶವ ಇತಿ ಬಲನಾಮ । ಪರಬಲಸ್ಯ ಪ್ರೇರಣಮಸನೋದೇಃ ಶವೀರಃ । ತೇನ ಯೌ ಯಾತಃ ಗಚ್ಛತಃ ತೌ । ಶೀಘ್ರಗಾಮಿನೌ ಪರಬಲಾಸನೋದಗಾಮಿನಾವಿತ್ಯರ್ಥಃ । ಅಥವಾ ಅನವಗ್ರಹಾತ್ ಪದಸ್ಯ ಯಾಶಬ್ದೋ ವಿಭಕ್ತೇರಾದೇಶೋ, ನ ಯಾತೇ ರೂಪಂ । ಶವೀರಶಬ್ದಸ್ತು ಪೂರ್ವವತ್ಕರ್ತೃಸಾಧನಃ । ಶೀಘ್ರಗಾಮಿನೌ ಪರಬಲಸ್ಯ ಪ್ರೇರಯಿತಾರಾವಿತ್ಯರ್ಥಃ । ಶವತೇರ್ವಾ ಗತ್ಯರ್ಥಸ್ಯ ಶವೀರಶಬ್ದಃ । ಯೇಜ್ಞಾನ್ ಶತ್ರೂನ್ ವಾ ಪ್ರತಿಗಂತಾರಾವಿತ್ಯರ್ಥಃ** ಎಂದರೆ,—**ಶು** ಎಂದರೆ **ಕ್ಷಿಪ್ರ**, ಬೇಗನೆ. ಶು ಎಂಬ ಶಬ್ದವು ಕ್ಷಿಪ್ರಸೂಚಕವಾದ ಇಪ್ಪತ್ತಾರು ಪದಗಳ ಮಧ್ಯದಲ್ಲಿ ಪಠಿತವಾಗಿದೆ (ಯಾಸ್ಕರ ನಿಘಂಟು ೨-೧೫)**ಈರ ಗಮನ**. ಕ್ಷಿಪ್ರವಾದ ಗಮನವುಳ್ಳವರು; ಅಥವಾ **ಶವ** ಎಂದರೆ ಬಲವು. ಶವಸ್ ಶಬ್ದವು ಬಲಸೂಚಕವಾದ ೨೮ ಶಬ್ದಗಳ ಮಧ್ಯದಲ್ಲಿರುವುದು (ನಿಘಂಟು ೨-೯) ಪರಬಲವನ್ನು ಅಥವಾ ಶತ್ರುಬಲವನ್ನು ನಾಶಮಾಡುವುದಕ್ಕಾಗಿ ಬೇಗನೆ ಹೋಗುವವರು ಅಥವಾ ಹವಿರ್ಭಾಗವನ್ನು ಸ್ವೀಕರಿಸುವುದಕ್ಕಾಗಿ ಯಜ್ಞವೇದಿಕೆಗೆ ಹೋಗುವವರು ಎಂದು ಅರ್ಥಮಾಡಿ **ಶವೀರಯಾ** ಎಂಬ ಶಬ್ದವು ಪ್ರಥಮಾವಿಭಕ್ತಿಯ ದ್ವಿವಚನಾಂತ ಶಬ್ದವೆಂದೂ **ಅಶ್ವಿನಾ** ಶಬ್ದಕ್ಕೆ ವಿಶೇಷಣವೆಂದೂ

ಹೇಳಿರುವರು. ವೇದಾರ್ಥಯತ್ನಕಾರರೂ, ಪಾಶ್ಚಾತ್ಯಪಂಡಿತರೂ ಶವೀರಶಬ್ದಕ್ಕೆ Strong, Mighty, Powerful ಬಲವಾದ, ಶಕ್ತಿಯುಕ್ತವಾದ ಎಂದು ಅರ್ಥಮಾಡಿರುವರು.

ಧಿಯಾ—ಸಾಯಣ ಮತ್ತು ಸ್ಕಂದಸ್ವಾಮಿಯು ಇದಕ್ಕೆ **ಆದರಯುಕ್ತಯಾ ಬುದ್ಧ್ಯಾ**, ಆದರ ಪೂರ್ವಕವಾದ ಬುದ್ಧಿಯಿಂದ ಎಂದು ಚತುರ್ಥ್ಯೇಕವಚನದ ಅರ್ಥವನ್ನು ಹೇಳಿರುವರು. ಕೆಲವು ಪಾಶ್ಚಾತ್ಯ ಪಂಡಿತರೂ ಧಿಯಾ ಶಬ್ದಕ್ಕೆ ಮನಸ್ಸು, ಯೋಚನೆ, ಲಕ್ಷ್ಯ ಎಂದು ಅರ್ಥಮಾಡಿ ವನತಂ ಎಂಬ ಕ್ರಿಯಾಪದಕ್ಕೆ ಹೊಂದಿಸಿರುವರು. ಭಾಷ್ಯಕಾರರೂ ಅದೇ ರೀತಿ ಸಮನ್ವಯಮಾಡಿರುವರು. ಆದರೆ ವೆಂಕಟಮಾಧವರು ಧಿಯಾ ಶಬ್ದವನ್ನು ಧಿಷ್ಣ್ಯಶಬ್ದಕ್ಕೆ ವಿಶೇಷಣವೆಂದು ಭಾವಿಸಿರುವರು. ಅನೇಕ ಸಂದರ್ಭಗಳಲ್ಲಿ ಧಿಯಾ ಶಬ್ದವನ್ನು ಪ್ರಥಮಾವಿಭಕ್ತಿಯಲ್ಲಿ ಉಪಯೋಗಿಸಲಾಗಿದೆ. ಇಂತಹ ಸಂದರ್ಭದಲ್ಲಿ ಧಿಯಾ ಎಂದರೆ ಬುದ್ಧಿಯುಳ್ಳ, ಬುದ್ಧಿಯುಳ್ಳವರು ಎಂದರ್ಥವು.

ಧಿಷ್ಣ್ಯಾ—ಭಾಷ್ಯಕಾರರು (ಸಾಯಣರು)ಈ ಶಬ್ದಕ್ಕೆ **ಧಾಷ್ಟ್ರ್ಯಯುಕ್ತಾ** ಧೈರ್ಯಶಾಲಿಗಳು ಅಥವಾ **ಬುದ್ಧಿಮಂತಾ** ಬುದ್ಧಿಶಾಲಿಗಳು ಎಂದರ್ಥಮಾಡಿರುವರು. ಸ್ಕಂದಸ್ವಾಮಿಯು—"ಧಿಷಣೇತಿ ವಾಙ್ನಾಮ । ತಸ್ಯಾಃ ಪುತ್ರಾ ಧಿಷ್ಣ್ಯಾ । ಅಪತ್ಯೇ ಯತ್ಪ್ರತ್ಯಯೋ ದ್ರಷ್ಟವ್ಯಃ । ಅಥವಾ ಧೀರಿತಿಪ್ರಜ್ಞಾನಾಮ । ಷ್ಣಿಞ್ ವೇಷ್ಟನೇ । ಧೀಃ ವೇಷ್ಟಯಿತ್ರೀ ಸರ್ವಾರ್ಥಗ್ರಹಣಸಮರ್ಥಃ ಯಯೋಸ್ತಾ ಧಿಷ್ಣಾಃ । ಧಿಷ್ಣಾವೇವ ಧಿಷ್ಣ್ಯಾಃ ಅತ್ಯಂತಪ್ರಜ್ಞಾವಿತ್ಯರ್ಥಃ ॥" ಧಿಷಣಾ ಎಂದರೆ ವಾಕ್ಕಿನ ಹೆಸರು. ಆದರ ಪುತ್ರರು ಅಥವಾ ಧೀಃ ಎಂದರೆ ಪ್ರಜ್ಞೆಯು ಷ್ಣಿಞ್-ಯುಕ್ತರಾದವರು ಎಂದರೆ ಪ್ರಜ್ಞೆಯಿಂದ ಕೂಡಿದವರು, ಸರ್ವಾರ್ಥ ಗ್ರಹಣಸಮರ್ಥರು, ಅತ್ಯಂತ ಪ್ರಜ್ಞಾಶಾಲಿಗಳು ಎಂದರ್ಥವು. ಸಾಯಣರು ಹೇಳುವ ಧೈರ್ಯಶಾಲಿಗಳು, ಬುದ್ಧಿವಂತರು ಎಂಬ ಅರ್ಥವನ್ನೇ ವಿಲ್ಸನ್ ಪಂಡಿತರು ಅನುಮೋದಿಸುವರು. Grassman renders it "free giving, willingly giving, willingly helping" Geldner renders it "wise"; Ludwig-"praisworthy" ಧಿಷಣಾ ಎಂದರೆ ವಾಕ್ಯವು. ಅಥವಾ ಶಬ್ದಜಾಲವು ಈ ಶಬ್ದವು ಧೀಃ ಎಂಬ ಧಾತುವಿನಿಂದ ಹುಟ್ಟಿರುತ್ತದೆ. ಆದುದರಿಂದ ಧಿಷ್ಣ್ಯಾ ಶಬ್ದಕ್ಕೆ "Those that kindle the thoughts" ಮನಸ್ಸನ್ನು (ಅಥವಾ ವಾಕ್ಯ ಗಳನ್ನು) ಪ್ರೇರಿಸತಕ್ಕವರು ಎಂಬ ಅರ್ಥದಲ್ಲಿ ಇತರ ಭಾಷ್ಯಕಾರರು ಈ ಶಬ್ದಕ್ಕೆ ಅರ್ಥಮಾಡಿರುವರು. ಈ ಶಬ್ದವು ಅದ್ಯುದಾತ್ತವಾಗಿ ಋ. ಸಂ. ೧-೩-೨ ; ೧-೧೪೨-೧ ಮತ್ತು ೨ ; ೨-೪೧-೯ ಈ ಋಕ್ಕುಗಳಲ್ಲಿಯೂ ಸರ್ವಾನುದಾತ್ತವಾಗಿ ಋ. ಸಂ. ೧-೪೯-೪ ; ೧-೧೧೭-೧೯ ; ೧-೧೪೧-೩ ; ೪-೬೩-೬ ; ೭-೫೮-೧೪ ; ೭-೭೬-೧೨ ಈ ಋಕ್ಕುಗಳಲ್ಲಿಯೂ ಪಠಿತವಾಗಿದೆ.

ವನತಂ—ಈ ಶಬ್ದವು ಅದ್ಯುದಾತ್ತವಾಗಿ ಋ. ಸಂ. ೧-೩-೨, ೭-೯೪-೨ ಋಕ್ಕುಗಳಲ್ಲಿಯೂ ಸರ್ವಾ ನುದಾತ್ತವಾಗಿ ಋ. ಸಂ. ೧-೯೩-೯ ಈ ಋಕ್ಕಿನಲ್ಲಿಯೂ ಪಠಿತವಾಗಿದೆ.

ಗಿರಃ—ಈ ಶಬ್ದವು ಋಗ್ವೇದಸಂಹಿತೆಯಲ್ಲಿ ೧೫೦ ಋಕ್ಕುಗಳಲ್ಲಿ ಉಪಯೋಗಿಸಲ್ಪಟ್ಟಿರುವುದು. ಇದಕ್ಕೆ ವಾಕ್ಯಗಳನ್ನು ಅಥವಾ ಸ್ತೋತ್ರಗಳನ್ನು ಎಂದರ್ಥವು. ಪ್ರಥಮಾ ಮತ್ತು ದ್ವಿತೀಯಾ ವಿಭಕ್ತಿಗಳ ಬಹುವಚನದಲ್ಲಿಯೂ ಷಷ್ಠ್ಯೇಕವಚನದಲ್ಲಿಯೂ ಈ ಶಬ್ದದ ಪ್ರಯೋಗವಿರುವುದು. ಇದು ಯಾವಾಗಲೂ ಅದ್ಯುದಾತ್ತಪದವು. ಇದರ ಅರ್ಥವಿಚಾರದಲ್ಲಿ ಹೆಚ್ಚು ವಿವರಣೆ ಅವಶ್ಯಕವಿಲ್ಲ.

॥ ವ್ಯಾಕರಣಪ್ರಕ್ರಿಯಾ ॥

ಅಶ್ವಿನಾ, ಪುರುದಂಸಸಾ, ನರಾ, ಧಿಷ್ಣ್ಯಾ ಎಂಬ ನಾಲ್ಕಕ್ಕೂ ಆಮಂತ್ರಿತಸಂಜ್ಞೆ ಇರುವುದರಿಂದ, ಷಾಷ್ಠವಾದ ಆಮಂತ್ರಿತಾದ್ಯುದಾತ್ತವೇ ಬರುವುದು. ಎಲ್ಲವೂ ಪಾದಾದಿಯಲ್ಲಿರುವುದರಿಂದ ಅಪಾದಾದೌ ಎಂದು ನಿಷೇಧಬರುವುದರಿಂದ ಅಷ್ಟಮಿಕಾನುದಾತ್ತವು ಬರುವುದಿಲ್ಲ. **ಪುರುದಂಸಸಾ** ಎಂಬ ಎರಡನೇ ಆಮಂತ್ರಿತವೂ ಸಹ ಮೊದಲನೆಯ ಅಶ್ವಿನಾ ಎಂಬ ಆಮಂತ್ರಿತವು, **ಆಮಂತ್ರಿತಂ ಪೂರ್ವಮವಿದ್ಯಮಾನವತ್** (ಪಾ. ಸೂ. ೮-೧-೭೨) ಎಂಬುದರಿಂದ ಅವಿದ್ಯಮಾನವದ್ಭಾವವನ್ನು ಹೊಂದುವುದರಿಂದ ಪಾದಾದಿಯಲ್ಲಿರುವುದೇ ಆಗುವುದು. ಆದರೆ ಮೊದಲನೆಯ ಆಮಂತ್ರಿತವು ಸಾಮಾನ್ಯವಚನವಾದ್ದರಿಂದಲೂ, ಎರಡನೆಯದು ವಿಶೇಷವಚನವಾದ್ದರಿಂದಲೂ, **'ನಾಮಂತ್ರಿತೇ ಸಮಾನಾಧಿಕರಣೇ ಸಾಮಾನ್ಯವಚನಂ** ।(ಪಾ.ಸೂ. ೮-೧-೭೩) ಎಂಬುದರಿಂದ ಅವಿದ್ಯಮಾನವದ್ಭಾವಪ್ರತಿಷೇಧ ಬರುವುದು, ತಥಾಚ ಎರಡನೆಯದು ಪಾದಾದಿಯಾಗುವುದಿಲ್ಲ ಎನ್ನುತ್ತೀನೆ ಎಂದರೆ, ಹಾಗೆಹೇಳಲಾಗುವುದಿಲ್ಲ. ಏಕೆಂದರೆ ಪುರುದಂಸಸ್ ಶಬ್ದವೂ ಸಹ ಅಶ್ವಿ ಶಬ್ದದಂತೆ ರೂಢಿಯಾಗಿ ಪ್ರಯೋಗಿಸಲ್ಪಡುವುದು ಆದ್ದರಿಂದ, ಅದೂ ಸಾಮಾನ್ಯವಚನವೇ ಆಗುವುದು. ಅವಿದ್ಯಮಾನವದ್ಭಾವಪ್ರತಿಷೇಧ ಹೇಳುವ ಸೂತ್ರವು, ಸಾಮಾನ್ಯವಚನವು ಅವಿದ್ಯಮಾನವದ್ಭಾವವನ್ನು ಹೊಂದುವುದಿಲ್ಲ ಎಂದು ಹೇಳಿದರೆ ಅರ್ಥಾತ್ ಸಮಾನಾಧಿಕರಣವಾದ ಪರಪದವು ವಿಶೇಷವಚನವಾಗಬೇಕೆಂದು ಸಿದ್ಧವಾಗುವುದು. ಇಲ್ಲಿ ಎರಡೂ ಸಾಮಾನ್ಯವಚನವಾದ್ದರಿಂದ ಅವಿದ್ಯಮಾನವದ್ಭಾವಪ್ರತಿಷೇಧಬರುವುದಿಲ್ಲ, ಆದರೆ ಎರಡೂ ಸಾಮಾನ್ಯವಚನವಾದರೆ ಪರ್ಯಾಯಶಬ್ದವಾಗುವುದರಿಂದ **ಪರ್ಯಾಯೆಶಬ್ದಾನಾಂ ಸಹಪ್ರಯೋಗೋ ನಾಸ್ತಿ** ಅಂದರೆ ಪರ್ಯಾಯ ಶಬ್ದವನ್ನು ಜತೆಯಲ್ಲಿ ಪ್ರಯೋಗಿಸಬಾರದು, ಎಂದು ನಿಷೇಧವಿರುವುದರಿಂದ, ಎರಡನ್ನೂ ಸಾಮಾನ್ಯವಚನವೆಂದು ಒಪ್ಪಲಾಗುವುದಿಲ್ಲ ಎಂದು ಹೇಳಲಾಗುವುದಿಲ್ಲ. ಎಲ್ಲಿ ಪ್ರಯೋಜನ ಸಂಭವಿಸುವುದಿಲ್ಲವೋ (ಘಟಃ, ಕಲಶಃ ಇತ್ಯಾದಿನಿಷ್ಠಳಗಳಲ್ಲ) ಅಲ್ಲಿ ಸಹ ಪ್ರಯೋಗ ನಿಷೇಧಬರುವುದು, ಇಲ್ಲಿ ಗುಣವಿಶೇಷವನ್ನು ಹೇಳುವುದು ಹೇಗೆ ಸ್ತೋತ್ರದಲ್ಲಿ ಉಪಯುಕ್ತವಾಗುವುದೋ ಆದೇರೀತಿಯಲ್ಲಿ ಪ್ರಸಿದ್ಧ ಅನೇಕ ನಾಮಸಂಬಂಧವನ್ನು ಹೇಳುವುದೂ ಸ್ತುತ್ಯುಪಯುಕ್ತವಾದ್ದರಿಂದ ಪ್ರಯೋಜನವತ್ತಾಗಿಯೇ ಇರುವುದು. ಆದ್ದರಿಂದ, **ಪರ್ಯಾಯೆಶಬ್ದಾನಾಂ** ಎಂಬ ನಿಷೇಧಬರುವುದಿಲ್ಲ.

ಅಲ್ಲದೆ, **ನಾಮಂತ್ರಿತೇ** ಎಂಬ ಸೂತ್ರದಲ್ಲಿ ಸಮಾನಾಧಿಕರಣೇ ಎಂದಿರುವುದು. ಸಮಾನಾಧಿಕರಣವೆಂದರೆ, **ಭಿನ್ನಪ್ರವೃತ್ತಿನಿಮಿತ್ತಾನಾಂ ಶಬ್ದಾನಾಮೇಕಸ್ಮಿನ್ನರ್ಥೇ ವೃತ್ತಿಸ್ಸಾಮಾನಾಧಿಕರಣ್ಯಂ** ಬೇರೆಬೇರೆ ಪ್ರವೃತ್ತಿನಿಮಿತ್ತವನ್ನು ಹೊಂದಿರುವ ಶಬ್ದಗಳು ಒಂದೇ ಅರ್ಥವನ್ನು ಬೋಧಿಸುವುದಕ್ಕೆ ಸಾಮಾನಾಧಿಕಣ್ಯ ಎಂದು ಹೆಸರು. ಇಲ್ಲಿ ' ಅಶ್ವಿನಾ, ಪುರಂದಸಸಾ, ಎಂಬ ಎರಡು ಪದಗಳೂ ಒಂದೇ ಅರ್ಥವನ್ನು ಬೋಧಿಸುವುದರಿಂದ ಪರ್ಯಾಯಶಬ್ದಗಳಾಗುವುದರಿಂದ ವೃತ್ತಿನಿಮಿತ್ತಭೇದವಿರುವುದಿಲ್ಲ, ಆದಕಾರಣ ಸಾಮಾನಾಧಿಕರಣ್ಯಲಕ್ಷಣವು ಬರುವುದಿಲ್ಲ. ಆದ್ದರಿಂದ 'ನಾಮಂತ್ರಿತೇ' ಎಂಬ ಸೂತ್ರಪ್ರವೃತ್ತವಾಗುವುದಿಲ್ಲವಾದ್ದರಿಂದ ಅವಿದ್ಯಮಾನವದ್ಭಾವ ಪ್ರತಿಷೇಧಕ್ಕೆ ಪ್ರಾಪ್ತಿಯೇ ಇಲ್ಲ, ಆದರೆ ಅಶ್ವಿಶಬ್ದವು ಅಶ್ವಸಂಬಂಧವನ್ನು ನಿಮಿತ್ತಮಾಡಿಕೊಂಡು ಪ್ರವೃತ್ತವಾಗಿರುವುದು, ಪುರುದಂಸಸ್‌ಶಬ್ದವು ಅನೇಕ ಕರ್ಮಸಂಬಂಧವನ್ನು ನಿಮಿತ್ತಮಾಡಿಕೊಂಡು ಪ್ರವೃತ್ತನಾಗಿರುವುದು ಆದ್ದರಿಂದ ಪ್ರವೃತ್ತಿನಿಮಿತ್ತಭೇದವಿದೆ ಎಂದು ಉಪಪಾದಿಸಲಾಗುವುದಿಲ್ಲ. ಈ ಎರಡೂ ವ್ಯುತ್ಪತ್ತಿಗೆಮಾತ್ರ ನಿಮಿತ್ತವೇ ವಿನಾ ಪ್ರವೃತ್ತಿನಿಮಿತ್ತವಲ್ಲವು ವ್ಯುತ್ಪತ್ತಿನಿಮಿತ್ತಭೇದಮಾತ್ರವನ್ನು ನಿಮಿತ್ತಮಾಡಿಕೊಂಡ ಸಾಮಾನಾಧಿಕರಣ್ಯವನ್ನು ಒಪ್ಪಿಕೊಂಡರೆ ವೃಕ್ಷ, ಮಹೀರುಹಶಬ್ದಗಳಿಗೂ ಸಾಮಾನಾಧಿಕರಣ್ಯವನ್ನು ಹೇಳಬೇಕಾಗಿ

ಬರುವುದು. ಆದ್ದರಿಂದಲೇ ' ಇಡೇರಂತೇ್ವದಿತೇ ಸರಸ್ವತಿ ಪ್ರಿಯೇ ಪ್ರೇಯಸಿ ಮಹಿ ವಿಶ್ರುತ್ಯೇತಾನಿತೇ ಅಘ್ನಿಯೇ ನಾಮಾನಿ ' (ತೈ. ಸಂ. ೭-೧-೬-೮) ಎಂಬಲ್ಲಿ ಸಹಸ್ರತಮಿಪ್ರಶಂಸೆಯಲ್ಲಿ ಉಪಯೋಗವಾಗತಕ್ಕ ' ಇಡೇ, ಮೊದಲಾದ ಶಬ್ದಗಳು ಎತಾನಿ ತೇ ಅಘ್ನಿಯೇ ನಾಮಾನಿ, ಎಂಬುದರಿಂದ ಪರ್ಯಾಯಶಬ್ದಗಳಾದಾಗ್ಯೂ, ಅನೇಕ ನಾಮಸಂಬಂಧವನ್ನು ಬೋಧಿಸಿ ಸ್ತುತಿಯಲ್ಲಿ ಅನ್ವಿತವಾಗಿ ಸಪ್ರಯೋಜನಗಳಾಗಿರುವುದರಿಂದ ಸಹಪ್ರಯುಕ್ತಗಳಾಗಿರುವುವು ಸ್ತುತಿಗೆ ಉಪಯೋಗವಾಗುವಂತೆ ವ್ಯುತ್ಪತ್ತಿಭೇದಮಾತ್ರವನ್ನು ವಿವಕ್ಷೆಮಾಡಿದರೂ ಪರ್ಯಾಯಶಬ್ದವಾದ್ದರಿಂದ ಸಾಮಾನಾಧಿಕರಣ್ಯವಿಲ್ಲದಕಾರಣ ' ನಾಮಂತ್ರಿತೇ ಸಮಾನಾಧಿಕರಣೇ ' ಎಂಬ ನಿಷೇಧವು ಬರುವುದಿಲ್ಲವಾದ್ದರಿಂದ ' ಆಮಂತ್ರಿತಂ ಪೂರ್ವಮವಿದ್ಯಮಾನವತ್ ' ಎಂಬುದರಿಂದ ಪೂರ್ವ ಪೂರ್ವಪದಗಳಿಗೆ ಅವಿದ್ಯಮಾನವದ್ಭಾವಬರುವುದರಿಂದ ಎಲ್ಲಾ ಪದಗಳಿಗೂ ಆರನೇ ಅಧ್ಯಾಯದ ಸೂತ್ರದಿಂದ ಆದ್ಯುದಾತ್ತಬರುವುದು. ಇದರಂತೆಯೇ ಪ್ರಕೃತದಲ್ಲಿಯೂ ತಿಳಿಯಬೇಕು.

'ಬಹುಲವಚನಾದನ್ಯತ್ರಾಪಿ ' ಇಲ್ಲಿ ' ಕ್ಯಚ್ಯಾಪ್ಯಾಕಟಪಟಶೌಟಭ್ಯ ಈರನ್' (ಉ ಸೂ. ೪-೩೦) ಇದರಿಂದ ಈರನ್ ಎಂದು ಸಂಬಂಧಿಸಲು, ಬೇರೆಧಾತುಗಳಮೇಲೂ ಈರನ್ ಪ್ರತ್ಯಯವು ಬಹುಲವಾಗಿಬರುವುದು ಎಂದರ್ಥವಾಗುವುದು. ಇದರಿಂದ ಶುಧಾತು (ಶು.ಗತೌ) ವಿನ ಮೇಲೆ ಈರನ್ ಪ್ರತ್ಯಯವನ್ನು ಇಟ್ಟರೆ, ಶುವು ಈರ ಎಂದಿರುವಾದ ಗುಣಾದೇಶಳಗು ಬಂದು ' ಶವೀರ ' ಎಂದಾಗುವುದು. ಪ್ರತ್ಯಯವು ನಿತ್ತಾದ್ದರಿಂದ ' ಙ್ಣಿತ್ಯಾದಿರ್ನಿತ್ಯಂ ' ಎಂಬುದರಿಂದ ಆದ್ಯುದಾತ್ತ ಶವೀರಯಾ ಶಬ್ದ. ಧಿಯಾ, ಎಂಬಲ್ಲಿ **ಸಾವೇಕಾಚೇಸ್ತೃತೀಯಾದಿರ್ವಿಭಕ್ತಿ** :—(ಪಾ. ಸು. ೬-೧-೧೬೮) ಎಂಬುದರಿಂದ ತೃತೀಯಾವಿಭಕ್ತಿಯು ಉದಾತ್ತವಾಗುವುದು. ' ವನತಂ ' ಎಂಬಲ್ಲಿ ವಿಕರಣವಾದ ಶಪ್ಪು ಪಿತ್ತಾದ್ದರಿಂದ ಅನುದಾತ್ತೌ ಸುಪ್ತಿತೌ, ಎಂಬುದರಿಂದಲೂ, ಲೋಣ್ಮ್ಯಧ್ಯಮಪುರುಷದ್ವಿವಚನವಾದ ' ತಂ ' ಎಂಬುದು ಲಸ್ಥಾನಿಕಸಾರ್ವಧಾತುಕವಾದರಿಂದ ' ತಾಸ್ಯನುತೇರ್ ' ಇತ್ಯಾದಿಸೂತ್ರದಿಂದಲೂ ಅನುದಾತ್ತವನ್ (ವನಸಣಸಂಭಕ್ತೌ) ಎಂಬಲ್ಲಿ, ಧಾತುವಿನಲ್ಲಿ, ಉದಾತ್ತಸ್ವರವೇ ನಿಲ್ಲವುದು. ' ತಿಜ್ಜಿತಿಜಃ ' ಎಂಬುದರಿಂದ ಅನುದಾತ್ತವು ಧಿಷ್ಣ್ಯಾ ಎಂಬ ಪೂರ್ವಪದಕ್ಕೆ ಅವಿದ್ಯಮಾನವದ್ಭಾವ ಬಂದಿರುವುದರಿಂದ ವನತಂ ಎಂಬುದು ಪದಾತ್ಪರವಾಗದೆಯೂ, ಪಾದಾದಿಗತವಾಗಿಯೂ ಆಗುವುದರಿಂದ ಬರುವುದಿಲ್ಲ. ಗಿರಃ ಎಂಬಲ್ಲಿ ಸುಪ್ತಿಗೆ ಅನುದಾತ್ತಬರಲು ಪ್ರಾತಿಪದಕಸ್ವರವೇ ನಿಲ್ಲುವುದು ॥ ೨ ॥

॥ ಸಂಹಿತಾಪಾಠಃ ॥

ದಸ್ರಾ॑ ಯುವಾಕವಃ ಸುತಾ॒ ನಾಸ॑ತ್ಯಾ ವೃಕ್ತ॒ಬರ್ಹಿ॑ಷಃ ।
ಆ ಯಾ॑ತಂ ರುದ್ರವರ್ತನೀ ॥ ೩ ॥

॥ ಪದಪಾಠಃ ॥

ದಸ್ರಾ॑ । ಯುವಾಕವಃ । ಸುತಾಃ । ನಾಸ॑ತ್ಯಾ । ವೃಕ್ತ॒ಬರ್ಹಿ॑ಷಃ ॥
ಆ । ಯಾ॒ತ॒ಂ । ರು॒ದ್ರ॒ವ॒ರ್ತ॒ನೀ॒ ಇತಿ॑ ರುದ್ರವರ್ತನೀ ॥ ೩ ॥

॥ ಸಾಯಣಭಾಷ್ಯಂ ॥

ಅತ್ರಾಶ್ವಿನೇತ್ಯನುವರ್ತತೇ । ಹೇ ಅಶ್ವಿನಾವಾ ಯಾತಂ । ಅಸ್ಮನ್ನರ್ಮಣ್ಯಾಗಚ್ಛತಂ । ಕಿಮರ್ಥಮಿತಿ ತದುಚ್ಯತೇ । ಸುತಾ ಯುಷ್ಮದರ್ಥಂ ಸೋಮಾ ಅಭಿಷುತಾಃ । ತಾನ್ ಸ್ವೀಕರ್ತುಮಿತಿ ಶೇಷಃ । ಕೀದೃಶಾವಶ್ವಿನೌ । ದಸ್ರಾ ದಸ್ರೌ ಶತ್ರೂಣಾಮುಪಕ್ಷಪಯಿತಾರೌ । ಯದ್ವಾ । ದೇವನ್ಯೈದ್ಯತ್ವೇನ ರೋಗಾಣಾಮುಪಕ್ಷಪಯಿತಾರೌ । ಅಶ್ವಿನೌ ವೈ ದೇವಾನಾಂ ಭಿಷಜೌ । ಐ.ಬ್ರಾ. ೧-೧೪ । ಇತಿ ಶ್ರುತೇಃ । ನಾಸತ್ಯಾ । ಅಸತ್ಯಮನೃತಭಾಷಣಂ । ತದ್ರಹಿತೌ । ಅತ್ರ ಯಾಸ್ಕಃ । ಸತ್ಯಾನೇವ ನಾಸತ್ಯಾವಿತ್ಯೌರ್ಣವಾಭಃ । ಸತ್ಯಸ್ಯ ಪ್ರಣೇತಾರಾವಿತ್ಯಾಗ್ರಾಯಣಃ । ನಿ. ೬-೧೩ । ಇತಿ । ರುದ್ರವರ್ತನೀ । ರುದ್ರಶಬ್ದಸ್ಯ ರೋದನಂ ಪ್ರವೃತ್ತಿನಿಮಿತ್ತಂ । ಯದರೋದೀತ್ತದ್ರುದ್ರಸ್ಯ ರುದ್ರತ್ವಮಿತಿ ತೈತ್ತಿರೀಯಾಃ । ತದ್ಯದ್ರೋದಯಂತಿ ತಸ್ಮಾದ್ರುದ್ರಾ ಇತಿ ವಾಜಸನೇಯಿನಃ । ರುದ್ರಾಣಾಂ ಶತ್ರುರೋದನಕಾರಿಣಾಂ ಶೂರಭಟಾನಾಂ ವರ್ತನಿರ್ಮಾರ್ಗೋ ಧಾಟೀರೂಪೋ ಯಯೋಸ್ತೌ ರುದ್ರವರ್ತನೀ । ಯಥಾ ಶೂರಾ ಧಾಟೀಮುಖೇನ ಶತ್ರೂರ್ರೋದಯಂತಿ ತದ್ವದೇತಾವಿತ್ಯರ್ಥಃ । ಯುವಾಕವ ಇತ್ಯಭಿಷುತಸೋಮಾನಾಂ ವಿಶೇಷಣಂ । ವಸತೀವರೀಭಿರೇಕಧನಾಭಿಶ್ಚಾದ್ಧ್ವರ್ಯುಭಿಶ್ಚಿತಾ ಇತ್ಯರ್ಥಃ । ವೃಕ್ತಬರ್ಹಿಷಃ । ವೃಕ್ತಾನಿ ಮೂಲೈರ್ವರ್ಜಿತಾನಿ ಬರ್ಹಿರಂಷ್ಯಾಸ್ತರಣರೂಪಾಣಿ ಯೇಷಾಂ ಸೋಮಾನಾಂ ತೇ ವೃತ್ತಬರ್ಹಿಷಃ । ಯದ್ವಾ । ಭರತಾ ಇತ್ಯಾದಿಷ್ವಪ್ಸ್ವೃತ್ವಿಜ್ಞಾಮಸು ವೃಕ್ತಬರ್ಹಿಷ ಇತಿ । ತದಾನೀಂ ತೃತೀಯಾರ್ಥೇ ಪ್ರಥಮಾ । ಋತ್ವಿಗ್ಭಿರಭಿಷುತಾ ಇತ್ಯನ್ವಯಃ ॥ ದಸ್ರಾ । ಆಮಂತ್ರಿತಸ್ಯೇತ್ಯಾದ್ಯುದಾತ್ತಃ । ಯುವಾಕವಃ । ಯು ಮಿಶ್ರಣೇ । ಯುವಂತಿ ಮಿಶ್ರೀಭವಂತಿ ವಸತೀವರೀಪ್ರಭೃತಿಭಿಃ ಶ್ರಯಣದ್ರವ್ಯೈರಿತಿ ಯುವಾಕವಃ । ಕಟಕುಷ್ಯಾದಿಷ್ವಗಣಿತಸ್ಯಾಪಿ ಯೌತೇರ್ಬಹುಲಗ್ರಹಣಾತ್ । ಉ. ೩-೨೭ । ಕಾಕುಪ್ರತ್ಯಯಃ । ತಸ್ಯ ಕಿತ್ತ್ವೇನ ಗುಣಾಭಾವಾದುವಙಾದೇಶಃ । ಪ್ರತ್ಯಯಸ್ವರೇಣಾಕಾರ ಉದಾತ್ತಃ । ನ ವಿದ್ಯತೇಽಸತ್ಯಮನಯೋರಿತಿ ನಾಸತ್ಯೌ । ನಭ್ರಾಣ್ನಾಸಾನ್ನಾನೇದಾ ನಾಸತ್ಯೇತ್ಯಾದಿನಾ ॥ ಸಾ. ೬-೩-೭೫ । ಪ್ರಕೃತಿವದ್ಭಾವಾನ್ನಞೋ ನಲೋಪಾಭಾವಃ । ಹಾದಾದಿತ್ವೇನಾನಿಘಾತಾದಾಮಂತ್ರಿತಾದ್ಯುದಾತ್ತತ್ವಂ । ವೃಕ್ತಬರ್ಹಿಷಃ । ವೃಕ್ತಂ ಮೂಲೈರ್ವರ್ಜಿತಂ ಬರ್ಹಿರಾಸ್ತೀರ್ಣಂ ಯೇಷಾಂ ಸೋಮಾನಾಂ ತೇ ವೃಕ್ತಬರ್ಹಿಷಃ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರೇಣ ಕ್ತಪ್ರತ್ಯಯಸ್ವರ ಏವ ಶಿಷ್ಯತೇ । ಆ ಇತ್ಯತ್ರೋಪಸರ್ಗಾಶ್ಚಾಭಿವರ್ಜಂ । ಫಿ. ೪-೧೩। ಇತ್ಯುದಾತ್ತಃ । ರುದ್ರವರ್ತನೀ । ಆಮಂತ್ರಿತಸ್ಯ ಚೇತ್ಯಾಮಂತ್ರಿತನಿಘಾತಃ ॥

॥ ಪ್ರತಿಪದಾರ್ಥ ॥

ದಸ್ರಾ—ಶತ್ರುಗಳನ್ನು ಅಥವಾ ರೋಗಗಳನ್ನು ನಾಶಮಾಡುವ । ನಾಸತ್ಯಾ—ಅನೃತಭಾಷಣರಹಿತರಾದ (ಸುಳ್ಳನ್ನಾಡದಿರುವ) । ರುದ್ರವರ್ತನೀ—ಪಂಕ್ತಿಕ್ರಮಶಾಲಿಗಳಾದ ಯೋಧರ ಮಾರ್ಗಾನುವರ್ತಿಗಳಾದ (ಎಲೈ ಅಶ್ವಿನೀದೇವತೆಗಳೇ), । ವೃಕ್ತಬರ್ಹಿಷಃ—ಮೂಲವನ್ನು ಕತ್ತರಿಸಿರುವ ಕುಶವೆಂಬ ದರ್ಭೆಯ ಹುಲ್ಲಿನ ಮೇಲೆ ಇಡಲ್ಪಟ್ಟಿರುವ । ಯುವಾಕವಃ—ಮಿಶ್ರವಸ್ತುಗಳಿಂದ ಕೂಡಿದ ಅಥವಾ ನೀವು ಅಪೇಕ್ಷಿಸುವ । ಸುತಾಃ—ಲತೆಯನ್ನು ಜಜ್ಜಿ ಸಿದ್ಧಪಡಿಸಿರುವ ಸೋಮರಸವನ್ನು (ಸ್ವೀಕರಿಸುವುದಕ್ಕಾಗಿ) । ಆ ಯಾತಂ—(ಇಲ್ಲಿಗೆ ಎಂದರೆ ನಾವು ಯಜ್ಞವಾಡುವ ಸ್ಥಳಕ್ಕೆ) ಬನ್ನಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವು ಶತ್ರುಗಳನ್ನು ನಾಶಮಾಡುವವರು, ಅಥವಾ ನೀವು ದೇವವೈದ್ಯರಾದ್ದರಿಂದ ರೋಗಗಳನ್ನು ನಾಶಮಾಡುವವರು. ಅಸತ್ಯವನ್ನಾಡುವವರಲ್ಲ ; ಯಾವಾಗಲೂ ವೀರರ ಮಾರ್ಗವನ್ನು ಸರಣಿಯನ್ನೇ ಮಾಡುವವರು. ಇಂತಹ ನೀವು ನಿಮಗಾಗಿ ನಾವು ಸಿದ್ಧಪಡಿಸಿ ಬರ್ಹಿಸ್ಸಿನ ಎಂದರೆ ಯಜ್ಞಯೋಗ್ಯವಾದ ದರ್ಭೆಯ ಮೇಲೆ ಇಟ್ಟಿರುವ ಸೋಮರಸವನ್ನು ಪಾನಮಾಡುವುದಕ್ಕಾಗಿ ಈ ನಮ್ಮ ಯಜ್ಞಭೂಮಿಗೆ ಬನ್ನಿ.

English Translation

O Aswins, destroyers of enemies (or of deseases) shorn of untruth. who wander on the path of heroes, come to the mixed libations of Soma juice pressed and placed on lopped Kusa-grass.

॥ ವಿಶೇಷವಿಷಯಗಳು ॥

ದಸ್ರಾ—ಅಶ್ವಿನೀದೇವತೆಗಳಲ್ಲಿ ಒಬ್ಬನಿಗೆ ದಸ್ರಾ ಎಂತಲೂ ಮತ್ತೊಬ್ಬನಿಗೆ ನಾಸತ್ಯಾ ಎಂತಲೂ ಹೆಸರು. ಆದರೂ ಒಂದೇ ಶಬ್ದವು ದ್ವಿವಚನಾಂತವಾಗಿದ್ದರೆ ಇಬ್ಬರನ್ನೂ ನಿರ್ದೇಶಮಾಡುವುದು. ಈ ಋಕ್ಕಿನಲ್ಲಿ ಇಬ್ಬರ ಹೆಸರನ್ನೂ ಪ್ರತ್ಯೇಕವಾಗಿ ಹೇಳಿರುವುದರಿಂದ ಇಬ್ಬರನ್ನೂ ನಿರ್ದೇಶಿಸಿರುವುದು. ಇದಲ್ಲದೆ ಈ ಶಬ್ದಗಳು ಅಂಕಿತನಾಮವನ್ನು ಸೂಚಿಸುವುದೆಂದು ಹೇಳುವುದಾದರೆ ಈ ಶಬ್ದಗಳಿಗೆ ಬೇರೆ ಯಾವ ಅರ್ಥವನ್ನೂ ಮಾಡಬೇಕಾಗಿಲ್ಲ. ಹಾಗಿಲ್ಲದೆ ಈ ಎರಡು ಶಬ್ದಗಳೂ ಅಶ್ವಿನೀದೇವತೆಗಳ ಗುಣಗಳನ್ನು ಹೇಳುವ ವಿಶೇಷಣಗಳೆಂದು ಭಾವಿಸುವುದಾದರೆ ಅವುಗಳಿಗೆ ಅವಯವಾರ್ಥವನ್ನು ಕಲ್ಪಿಸಬೇಕಾಗುವುದು. ಭಾಷ್ಯಕಾರರು ಈ ರೀತಿಯಾಗಿಯೇ ಭಾವಿಸಿ ಅವಯವಾರ್ಥ ನಿಷ್ಪತ್ತಿಯನ್ನು ಮಾಡಿದಾರೆ. ಭಾಷ್ಯಕಾರರು ಈ ಶಬ್ದಕ್ಕೆ–**ಶತ್ರೂಣಾಮುಪಕ್ಷಪಯಿತಾರೌ। ಯದ್ವಾ ದೇವವೈದ್ಯತ್ವೇನ ರೋಗಾಣಾಮುಪಕ್ಷಪಯಿತಾರೌ** ಎಂದರೆ, ಶತ್ರುಗಳನ್ನು ನಾಶಮಾಡುವವರು ಅಥವಾ ಇವರು ದೇವವೈದ್ಯರಾದ್ದರಿಂದ ರೋಗಗಳನ್ನು ನಾಶಮಾಡುವವರು, ಎಂದರ್ಥಮಾಡಿದಾರೆ. ಸ್ಕಂದಸ್ವಾಮಿಯು ಶತ್ರುನಾಶಕರೆಂದೂ, ನೋಡುವುದಕ್ಕೆ ಸುಂದರಾಕಾರವುಳ್ಳವರೆಂದೂ ಹೇಳುವರು. ವೆಂಕಟಮಾಧವರು, ಸುಂದರರೂಪವುಳ್ಳವರೆಂದು ಹೇಳುವರು. ವಾಜಸನೇಯಸಂಹಿತೆಯ (ಶುಕ್ಲಯಜುರ್ವೇದದ) ಭಾಷ್ಯಕಾರರಾದ ಉವ್ವಟ ಮತ್ತು ಮಹೀಧರರೆಂಬುವರು ವಾ. ಸಂ. ೩೩-೫೮ ನೆಯ ಮಂತ್ರದಲ್ಲಿ ಬರುವ ಈ ಪದಕ್ಕೆ ಇದೇ ಅರ್ಥವನ್ನೇ ಪ್ರತಿಪಾದಿಸಿರುವರು. Grassman ಎಂಬುವರು Wonder-workers ಎಂದೂ Ludwig ಎಂಬುವರು Wonderful ಎಂದೂ Monier Williams ಎಂಬುವರು accomplishing wonderful deeds ಎಂದೂ ಅರ್ಥಮಾಡಿದಾರೆ. ಇವರೆಲ್ಲರೂ ಈ ಋಕ್ಕಿನಲ್ಲಿ ಇರುವ ಈ ಶಬ್ದದ ಅರ್ಥವನ್ನು ಈರೀತಿಮಾಡಿದ್ದರೂ ಇತರಕಡೆಗಳಲ್ಲಿ ಬರುವ ಇದೇಶಬ್ದಕ್ಕೆ ಬೇರೆ ಬೇರೆ ಅರ್ಥಮಾಡಿದಾರೆ. ಇದಲ್ಲದೆ Ludwig ಪಂಡಿತರು ಈ ಶಬ್ದಕ್ಕೆ

ಋ. ಸಂ. ೧-೩-೩ , ೧-೧೫೯-೩ , ೬-೯-೭ ಇತ್ಯಾದಿ ಋಕ್ಕುಗಳಲ್ಲಿ wonderful ಆಶ್ಚರ್ಯಕರವಾದ ಎಂದೂ,

ಋ. ಸಂ. ೧-೩೦-೧೭ ; ೪-೫-೨ ; ೪-೫-೧೧ ; ೪-೪-೧ ; ೪-೨೨-೧೭ ಇತ್ಯಾದಿ ಋಕ್ಕುಗಳಲ್ಲಿ wonder-workers ಆಶ್ಚರ್ಯಕರವಾದ ಕೃತ್ಯಗಳನ್ನೆಸಗುವವರು ಎಂದೂ,

ಋ. ಸಂ. ೧-೪೬-೨ ; ೧-೪೭-೩ ; ೧-೪೭-೬ ; ೧-೧೧೨-೨೪ ; ೧-೧೧೬-೧೦ ; ೧-೧೧೭-೫ ; ೧-೧೧೭-೨೧ ; ೧-೧೧೪-೩ ; ಮೊದಲಾದ ಋಕ್ಕುಗಳಲ್ಲಿ beneficent ಉದಾರ ಅಥವಾ ಉಪಕಾರಮಾಡುವವರೆಂದೂ,

ಋ. ಸಂ. ೧-೧೧೬-೧೬ ; ೧-೧೧೭-೨೦ ; ಮೊದಲಾದ ಋಕ್ಕುಗಳಲ್ಲಿ good-looking ನೋಡುವುದಕ್ಕೆ ಸುಂದರವಾಗಿರುವರೆಂದೂ

ಋ. ಸಂ. ೭-೬೯-೩ ; ೪-೪೭-೫ ಮೊದಲಾದ ಋಕ್ಕುಗಳಲ್ಲಿ destroyers ಶತ್ರು ಅಥವಾ ರೋಗ ನಾಶಕರೆಂದೂ ವಿಧವಿಧವಾದ ಅರ್ಥವನ್ನು ಹೇಳಿದಾರೆ. ಇದರಂತೆ Geldner ಪಂಡಿತರು master worker, able, dexterous, possessing Supernatural strength ಎಂದು ಅನೇಕಾರ್ಥಗಳನ್ನು ಹೇಳಿದಾರೆ. Langlois ಮತ್ತು Griffith ಎಂಬುವರೂ ಸಹ ಬೇರೆ ಬೇರೆ ಅರ್ಥಗಳನ್ನು ಕಲ್ಪಿಸಿದಾರೆ. ಆದರೆ **ದಸ್ರಾ** ಎಂಬ ಶಬ್ದವು **ದಸ್ ದರ್ಶನೇ** ಎಂಬ ಧಾತುವಿನಿಂದ ಉಂಟಾಗಿರುವುದರಿಂದ ಈ ಶಬ್ದಕ್ಕೆ ದರ್ಶನೀಯ ಅಥವಾ ಸುಂದರರೂಪವುಳ್ಳ ಎಂಬ ಅರ್ಥವೇ ಸಮಂಜಸವಾಗಿರುವುದೆಂದು ಅನೇಕರ ಅಭಿಪ್ರಾಯವಾಗಿದೆ.

ಯುವಾಕವಃ–ಸಾಯಣಾಚಾರ್ಯರು **ಯು ಮಿಶ್ರಣೇ** ಎಂಬ ಧಾತುವಿನಿಂದ ಈ ಶಬ್ದದ ಉತ್ಪತ್ತಿಯಾಗಿರುವುದೆಂದು ಹೇಳಿ ಇದಕ್ಕೆ ಮಿಶ್ರಿತವೆಂದು ಅರ್ಥಮಾಡಿರುವರು. ಮಿಶ್ರಿತದ್ರವ್ಯವೆಂದರೆ, ಹಸುವಿನ ಹಾಲು, ಮೊಸರು, ಯವ ಮೊದಲಾದ ಆಶಿರದ್ರವ್ಯಗಳು. ಸೋಮರಸದ ವಿಷಯವಾಗಿ ನಾವು ಹಿಂದೆಯೇ (ಭಾಗ ೧. ಪೇಜು ೬೭೪-೬೭೬) ವಿಸ್ತಾರವಾಗಿ ವಿವರಿಸಿದೇವೆ. ಸ್ಕಂದಸ್ವಾಮಿಯು—**ಯುವಾಂ ಕಾಮಯಂತೇ ಇತಿ ಯುವಾಕವಃ | ಯುಷ್ಮತ್ಪಾನಕಾಮಾ ಇತ್ಯರ್ಥಃ ||** ಎಂದರೆ ನೀವು ಪಾನಮಾಡಲು ಅಪೇಕ್ಷೆಪಡುವ ಎಂದರೆ ನಿಮಗೆ ಪ್ರೀತಿಪಾತ್ರವಾದ ಎಂದರ್ಥವು. ವೆಂಕಟಮಾಧವರೂ ಇದೇ ಅರ್ಥವನ್ನೇ ಅನುಮೋದಿಸುವರು. ಉವ್ವಟ ಮತ್ತು ಮಹೀಧರರು ತಮ್ಮ ವಾಜಸನೇಯಸಂಹಿತೆಯ ವಾ. ಸಂ. ೩೩-೫೮ ನೆಯ ಮಂತ್ರದಲ್ಲಿ ಈ ಶಬ್ದಕ್ಕೆ ಸ್ಕಂದ ಸ್ವಾಮಿಯ ಅರ್ಥವನ್ನೇ ವಿಶದವಾಗಿ ಹೇಳಿರುವರು. ಪಾಶ್ಚಾತ್ಯ ಪಂಡಿತರ ಅಭಿಪ್ರಾಯವೂ ಇದರಂತೆಯೇ ಇದೆ. ಸಾಯಣಾಚಾರ್ಯರೂ ಕೂಡ ಬೇರೆ ಋಕ್ಕುಗಳಲ್ಲಿ ಎಂದರೆ ಋ. ಸಂ. ೧-೧೨೦-೩ ; ೧-೧೨೦-೯ ; ೩-೫೮-೯ ; ೩-೬೦-೩ ; ೭-೬೭-೩ ; ೭-೬೭-೪ ; ೭-೬೮-೧ ; ೭-೬೮-೭ ಈ ಋಕ್ಕುಗಳಲ್ಲಿ ಈ ಶಬ್ದಕ್ಕೆ (ಎಂದರೆ ಯುವಾಕುಶಬ್ದಕ್ಕೆ) **ಯುವಾಂ ಕಾಮಯಮಾನ** ಎಂದರೆ ನೀವು ಅಪೇಕ್ಷೆಪಡುವ ಎಂದೇ ಅರ್ಥಮಾಡಿದಾರೆ. **ಯುವಾಕು** ಎಂಬ ಶಬ್ದವು ಋಗ್ವೇದದಲ್ಲಿ ೭ ಸ್ಥಳಗಳಲ್ಲಿ ಉಪಯೋಗಿಸಿದ್ದರೂ **ಯುವಾಕವಃ** ಎಂಬ ಶಬ್ದವು ಮಾತ್ರ ಈ ಋಕ್ಕಿನಲ್ಲಿ ಮಾತ್ರ ಉಪಯೋಗಿಸಲ್ಪಟ್ಟಿದೆ ಮತ್ತೆಲ್ಲಿಯೂ ಇಲ್ಲ. ಯುವಾಶಬ್ದವು ಯುಷ್ಮದರ್ಥದಲ್ಲಿ ಇತರ ಪದಗಳೊಂದಿಗೆ ಸೇರಿರುವ ಕೆಲವು ಉದಾಹರಣೆಗಳನ್ನು ಕೆಳಗೆ ಕೊಟ್ಟಿದೆ—

ಯುವಾನೀತಸ್ಯ (ಋ. ಸಂ. ೪-೨೬-೧೨) ॥ **ಯುವಾದತ್ತಸ್ಯ** (ಋ. ಸಂ. ೪-೨೬-೧೨)
ಯುವಾಯವಃ (ಋ. ಸಂ. ೧-೧೩೫-೬). **ಯುವಾಯುಜಂ** (ಋ. ಸಂ. ೧-೧೧೯-೫)
ಯುವಾವತೇ (ಋ. ಸಂ. ೩-೬೨-೧).

ಮೇಲಿನ ಪಟ್ಟಿಯಲ್ಲಿರುವ ಮೊದಲಿನ ಎರಡುಶಬ್ದಗಳ ಪ್ರಯೋಗವಿಚಾರದಲ್ಲಿ ಅದೇ ಅರ್ಥವಿರುವ **ಯುಷ್ಮಾನೀತಃ**

(ಋ. ಸಂ. ೨-೨೭-೧೧) **ಯುಷ್ಮಾದತ್ತಸ್ಯ** (ಋ. ಸಂ. ೫-೫೪-೧೩ ; ೮-೪೭-೬) ಎಂಬ ಪದಗಳೂ ರೂಢಿಯಲ್ಲಿರುವವು.

ಸುತಾಃ—ಜಜ್ಜಿ ಹಿಂಡಿ ತೆಗೆದ (Pressed out, extracted) ಎಂದು ಈ ಶಬ್ದಾರ್ಥವು. ಸೋಮಲತೆಯನ್ನು ಕಲ್ಲುಗಳಿಂದ (ಗ್ರಾವಾಣ) ಜಜ್ಜಿ ರಸವನ್ನು ಹಿಂಡಿ ತೆಗೆಯುವಾಗ, ಆ ರೀತಿ ತೆಗೆಯುವ ರಸಕ್ಕೆ ಸುತ ಎಂದು ಋಗ್ವೇದದಲ್ಲಿ ಹೇಳುವ ರೂಢಿಯಿದೆ. ಆಧುನಿಕಸಂಸ್ಕೃತದಲ್ಲಿ ಸುತ ಎಂದರೆ ಪುತ್ರನೆಂದರ್ಥವು.

ನಾಸತ್ಯಾ—ಇದು ಅಶ್ವಿನೀದೇವತೆಗಳನ್ನು ಹೇಳುವ ಶಬ್ದವು. ಇದಕ್ಕೆ ಅವಯವಾರ್ಥದ ಅವಶ್ಯಕತೆ ಇಲ್ಲದಿದ್ದರೂ ಭಾಷ್ಯಕಾರರು—ಅಸ್ಯತ್ಯಮನೃತಭಾಷಣಂ ತದ್ರಹಿತೌ ಎಂದು ವಿವರಿಸಿ, ಯಾಸ್ಕರ—**ಸತ್ಯಾವೇವ ನಾಸತ್ಯಾವಿತ್ಯೌರ್ಣವಾಭಃ । ಸತ್ಯಸ್ಯ ಪ್ರಣೇತಾರಾವಿತ್ಯಾಗ್ರಾಯಣಃ** ಎಂಬ ಎರಡು ಪ್ರಮಾಣವಚನಗಳನ್ನು ಉದಹರಿಸಿರುವರು. ಈ ಶಬ್ದದ ರೂಪನಿಷ್ಪತ್ತಿವಿಷಯದಲ್ಲಿ ಬೇರೆ ಬೇರೆ ಕ್ರಮಗಳನ್ನನುಸರಿಸಿದ್ದರೂ ಅರ್ಥವಿಚಾರದಲ್ಲಿ ಮಾತ್ರ ಎಲ್ಲರ ಅಭಿಮತವೂ ಒಂದೇ ಆಗಿರುವುದು.

ವೃಕ್ತಬರ್ಹಿಷಃ—ಈ ಶಬ್ದವು ಮಧ್ಯೋದಾತ್ತವಾಗಿ ಋ. ಸಂ. ೧-೩-೩ ; ೧-೧೪-೫ ಮೊದಲಾದ ೧೯ ಸ್ಥಳಗಳಲ್ಲಿಯೂ, ಸರ್ವಾನುದಾತ್ತವಾಗಿ ಋ. ಸಂ. ೧-೩೮ ೧; ೮-೭-೨೦; ೮-೭-೨೧ ಎಂಬ ಮೂರು ಸ್ಥಳಗಳಲ್ಲಿಯೂ ಉಪಯೋಗಿಸಲ್ಪಟ್ಟಿರುವುದು. ಇದಲ್ಲದೆ ಈ ಶಬ್ದದ ಬೇರೆ ವಿಭಕ್ತಿಯಾದ **ವೃಕ್ತಬರ್ಹಿಷಂ** ಎಂಬ ಶಬ್ದವು ಋ. ಸಂ. ೧-೪೦-೭ ರಲ್ಲಿಯೂ **ವೃಕ್ತಬರ್ಹಿಷೇ** ಎಂಬ ಶಬ್ದವು ಋ. ಸಂ. ೧-೧೩-೩ ; ೩-೫೯-೯ ; ೧೦-೬೧-೧೫ ನೆಯ ಋಕ್ಕುಗಳಲ್ಲಿಯೂ ಇರುವುದು. ಈ ಶಬ್ದಕ್ಕೆ ಸಾಯಣರು ಎರಡು ವಿಧವಾದ ಅರ್ಥವನ್ನು ಹೇಳಿರುವರು -**ವೃಕ್ತಾನಿ ಮೂಲೈರ್ವರ್ಜಿತಾನಿ ಬರ್ಹಿರಂಷ್ಯಾಸ್ತರಣರೂಪಾಣಿ ಯೇಷಾಂ ಸೋಮಾನಾಂ ತೇ ವೃಕ್ತಬರ್ಹಿಷಃ** ಮತ್ತು **ಯದ್ವಾ ಭರತಾ ಇತ್ಯಾದಿಷ್ವಷ್ಟಸ್ವೃತ್ವಿಜ್ಞಾಮಸು ವೃಕ್ತಬರ್ಹಿಷ ಇತಿ । ತದಾನೀಂ ತೃತೀಯೋರ್ಥೇ ಪ್ರಥಮಾ । ಋತ್ವಿಗ್ಭಿರಭಿಷುತಾ ಇತ್ಯನ್ವಯಃ** ಎಂದು. ಎಂದರೆ ಮೂಲವನ್ನು (ಬೇರಿನ ಭಾಗವನ್ನು) ಕತ್ತರಿಸಿದ ದರ್ಭೆಗಳನ್ನು ಹರಡಿ ಅದರ ಮೇಲೆ ಇಡುವ ಸೋಮಪಾತ್ರೆಯೆಂದು ಒಂದು ಅರ್ಥವು. ಎಂಟು ಜನ ಋತ್ವಿಕ್ಕುಗಳ ಹೆಸರುಗಳಲ್ಲಿ ಒಂದಾದ **ವೃಕ್ತಬರ್ಹಿಷಃ** ಎಂಬ ಹೆಸರಿನ ಋತ್ವಿಜನಿಂದ ಹಿಂಡಿ ತೆಗೆದು ಸಿದ್ಧಪಡಿಸಿದ ಸೋಮರಸಗಳು ಎಂದು ಇನ್ನೊಂದರ್ಥವು. ಮೊದಲನೆಯ ಅರ್ಥದಲ್ಲಿ **ವೃಕ್ತಬರ್ಹಿಷಃ** ಶಬ್ದವು ಸೋಮಶಬ್ದಾರ್ಥವನ್ನು ಹೇಳುವ **ಸುತಾಃ** ಎಂಬ ಶಬ್ದಕ್ಕೆ ವಿಶೇಷಣವು. ಎರಡನೆಯ ಅರ್ಥದಲ್ಲಿ ತೃತೀಯಾವಿಭಕ್ತಿಯ ಅರ್ಥದಲ್ಲಿ ಪ್ರಥಮಾವಿಭಕ್ತಿಯ ಪ್ರಯೋಗವಿರುವುದರಿಂದ ಇದು ಋತ್ವಿಕ್ಕುಗಳಿಗೆ ವಿಶೇಷಣವು. ಇದಲ್ಲದೆ ಸಾಯಣರು ಈ ಕುಶಾಸ್ತರಣವನ್ನು ಸೋಮರಸವನ್ನು ಇಡುವುದಕ್ಕಾಗಿ ಇರುವುದೆಂದು ಹೇಳುವರು. ಸ್ಕಂದಸ್ವಾಮಿಯು ಕುಶಾಸ್ತರಣವು ಅಶ್ವಿನೀದೇವತೆಗಳು ಬಂದು ಕೂಡುವುದಕ್ಕಾಗಿರುವುದೆಂದು ಹೇಳುವರು. ಆದರೆ ಯಜ್ಞಪ್ರಯೋಗದಲ್ಲಿ ಬರ್ಹಿರ್ವಿಸರಣವು ಹೋಮದ್ರವ್ಯ ಅಥವಾ ಸೋಮರಸವನ್ನು ಇಡುವುದಕ್ಕಾಗಿ ಅನೇಕಕಡೆಗಳಲ್ಲಿ ಹೇಳಿರುವುದರಿಂದ ಸಾಯಣರ ಅಭಿಪ್ರಾಯವೇ ಸಾಧುವೆಂದು ತೋರುವುದು. ಈ ಋಕ್ಕಿನಲ್ಲಿ ಎರಡುವಿಧವಾದ ಅರ್ಥವನ್ನು ವಿವರಿಸಿದ್ದರೂ ಇತರ ಋಕ್ಕುಗಳಲ್ಲಿರುವ ಈ ಶಬ್ದಕ್ಕೆ ಸಾಯಣರು—**ವೃಕ್ತಬರ್ಹಿಷಃ ಆಸ್ತರಣಾರ್ಥಂ ಛಿನ್ನೈದರ್ಭಾಃ** ಎಂಬ ಒಂದೇ ಅರ್ಥವನ್ನು ಹೇಳಿರುವರು. ಈ ಅರ್ಥವೇ ಸಮಂಜಸವಾಗಿರುವುದು. ಪಾಶ್ಚಾತ್ಯ ವಿದ್ವಾಂಸರಲ್ಲಿ Wilson 'placed on lopped grass' ಎಂದೂ Ludwig ಎಂಬುವರು—' havig the barhis cut ' ಎಂದೂ Geldner ಪಂಡಿತರು—'having the Barhis placed around ' ಎಂದೂ ಅರ್ಥಮಾಡಿರುವರು. ಈ ಅರ್ಥವಿವರಣೆಮಾಡುವಾಗ ಪದಗಳ

ಪ್ರಯೋಗದಲ್ಲಿ ಹೆಚ್ಚುಕಡಿಮೆ ಇದ್ದರೂ ಮುಖ್ಯಾರ್ಥದಲ್ಲಿ ಹೆಚ್ಚು ಬದಲಾವಣೆಯಿಲ್ಲ. Grassman ಎಂಬುವರು—'of one who has spread the Sacrificial grass–Monier Williams ಎಂಬುವರು—'one who has gathered and spread the Sacrificial grass' ಎಂದೂ ಈ ಶಬ್ದಕ್ಕೆ ದರ್ಬೆಯನ್ನು ಹರಡುವ ಪುರುಷ (ಋತ್ವಿಕ್) ಎಂದು ಅರ್ಥವಾಡಿದಾರೆ. ಸಾಯಣಾಚಾರ್ಯರೂ ಸಹ ಈ ಅರ್ಥವನ್ನೇ ಕೆಲವು ಕಡೆ ಎಂದರೆ ಋ. ಸಂ. ೬-೬೮-೧, ೮-೩೬-೧ ಈ ಋಕ್ಕುಗಳಲ್ಲಿ ಸಮರ್ಥಿಸಿ ವೃಕ್ತಬರ್ಹಿಷಃ ಎಂಬ ಶಬ್ದದ ಷಷ್ಠೀವಿಭಕ್ತಿಯ ಅರ್ಥವನ್ನು ವಿಶದೀಕರಿಸಿದಾರೆ.

ರುದ್ರವರ್ತನೀ—ಈ ಶಬ್ದವು ಸರ್ವಾನುದಾತ್ತವಾಗಿ ಋ. ಸಂ. ೧-೩-೩; ೮-೨೨-೧; ೧೦-೩೯-೧೧ ಈ ಋಕ್ಕುಗಳಲ್ಲಿಯೂ, ಮಧ್ಯೋದಾತ್ತವಾಗಿ ಋ ಸಂ. ೮-೨೨-೧೪ನೆಯ ಋಕ್ಕಿನಲ್ಲಿಯೂ ಇರುವುದು—

ಆಯಾತಂ ರುದ್ರವರ್ತನೀ (ಋ. ಸಂ. ೧-೩-೩)

ಯೇಮಶ್ವಿನಾ ಸುಹವಾ ರುದ್ರವರ್ತನೀ ಆ ಸೂರ್ಯಾಯೈ ತಸ್ಥತುಃ । (ಋ. ಸಂ. ೮-೨೨-೧)

ಯೇಮಶ್ವಿನಾ ಸುಹವಾ ರುದ್ರವರ್ತನೀ ಪುರೋರಥಂ ಕೃಣುಥಃ ಪತ್ನ್ಯಾ ಸಹ ।
(ಋ. ಸಂ. ೧೦-೩೯-೧೧)

ತಾವಿದ್ದೋಷಾ ತಾ ಉಷಸಿ ಶುಭಸ್ಪತೀ ತಾ ಯೋಮನ್ರುದ್ರವರ್ತನೀ । (ಋ. ಸಂ. ೮-೨೨-೧೪) ಈ ಶಬ್ದಪ್ರಯೋಗವು ಈ ನಾಲ್ಕು ಋಕ್ಕುಗಳಲ್ಲಲ್ಲದೆ ಮತ್ತೆಲ್ಲಿಯೂ ಇಲ್ಲ. ಈ ನಾಲ್ಕು ಸ್ಥಳಗಳಲ್ಲಿಯೂ ಅಶ್ವಿನೀ ದೇವತೆಗಳಿಗೆ ವಿಶೇಷಣಪದಗಳಾಗಿವೆ. ಬೇರೆ ದೇವತೆಗಳ ವಿಷಯದಲ್ಲಿ ಈ ಶಬ್ದಪ್ರಯೋಗವಿಲ್ಲದಿರುವುದರಿಂದ ಈ ಶಬ್ದಕ್ಕೆ ಒಂದು ನಿರ್ದಿಷ್ಟಾರ್ಥವು ಇರಬೇಕೆಂದೂ ಅದು ಇತರ ದೇವತೆಗಳಿಗೆ ಅನ್ವಯಿಸದೆ ಈ ಅಶ್ವಿನೀದೇವತೆಗಳಿಗೆ ಮಾತ್ರ ಅನ್ವಯಿಸುವುದಾಗಿರುವುದರಿಂದ ಭಾಷ್ಯಕಾರರು ಹೇಳುವ ಅರ್ಥವು ಹೊಂದುವುದೇ ಎಂಬುದು ಅನುಮಾನಾಸ್ಪದವಾಗಿದೆ. ಆದರೆ ಬೇರೆ ವಿಧವಾದ ಅರ್ಥಪ್ರತಿಪಾದನೆಗೆ ತಕ್ಕ ಸಾಮಗ್ರಿಯು ಇಲ್ಲದಿರುವುದರಿಂದ ಅವರ ಅರ್ಥವನ್ನೇ ಅನುಮೋದಿಸಬೇಕಾಗಿದೆ. ಭಾಷ್ಯಕಾರರು ರುದ್ರಶಬ್ದಕ್ಕೆ ಅರ್ಥವನ್ನು ವಿವರಿಸುವಾಗ ಈ ರೀತಿ ರೂಪನಿಷ್ಪತ್ತಿಯನ್ನು ಮಾಡಿರುವರು—**ಸೋಽರೋದೀದ್ಯದರೋದೀತ್ತದ್ರುದ್ರಸ್ಯ ರುದ್ರತ್ವಂ** (ತೈ. ಸಂ. ೧-೫-೧) ಅಳುವುದರಿಂದ ಅಥವಾ ರೋದನವಮಾಡುವುದರಿಂದ ರುದ್ರನೆಂಬ ಹೆಸರು ಬಂದಿತು. ಎಂದರೆ ಶತ್ರುವನ್ನು ಅಳುವಂತೆ ಮಾಡುವ ವೀರನಿಗೆ ರುದ್ರನೆಂದು ಹೇಳಬಹುದು. ರುದ್ರವರ್ತನೀ ಎಂದರೆ ವೀರರ ಮಾರ್ಗದಲ್ಲಿ ನಡೆಯುವವರು ಅಥವಾ ವೀರರ ಮಾರ್ಗಾನುಯಾಯಿಗಳು ಎಂದರ್ಥವು. Grassman ಪಂಡಿತನು **ರುದ್ ಪ್ರಕಾಶನೇ** ಎಂಬ ಧಾತುವಿನ ಅರ್ಥಪ್ರಕಾರ **ರುದ್ರ** ಎಂಬ ಪದಕ್ಕೆ Brilliant ಪ್ರಕಾಶಮಾನವಾದ ಎಂದರ್ಥವಾಡಿರುವನು. ಇದರಂತೆ **ರುದ್ರವರ್ತನೀ** ಎಂದರೆ ಪ್ರಕಾಶಮಾನವಾದ ಎಂದರೆ ಉತ್ತಮವಾದ ಮಾರ್ಗದಲ್ಲಿ ಸಂಚರಿಸುವವರು ಎಂದಾಗುವುದು. ಅಥವಾ ಋಗ್ವೇದದಲ್ಲಿ **ರುದ್ರ** ಎಂಬ ಒಂದು ನಿರ್ದಿಷ್ಟವಾದ ದೇವತೆಯಿರುವುದು. ಆ ದೇವತೆಯ ಸ್ವಭಾವವು ಕೋಪದಿಂದ ಕೂಡಿ ಶತ್ರುಗಳನ್ನು ಕೊಲ್ಲುವುದು ಹಿಂಸೆಮಾಡುವುದು ಎಂದು ಮೊದಲಾಗಿ ರುದ್ರದೇವತಾಕವಾದ ಅನೇಕ ಸೂಕ್ತಗಳಲ್ಲಿ ವರ್ಣನೆ ಇರುವುದು. **ರುದ್ರವರ್ತನೀ** ಎಂದರೆ ಆ ರುದ್ರದೇವನ ಮಾರ್ಗವನ್ನು ಅನುಸರಿಸುವವರು ಎಂದರೆ ಶತ್ರುನಾಶಕರು ಎಂಬ ಅರ್ಥವಿರಬಹುದೇ ಎಂಬ ಸಂದೇಹವು ಸಹಜವಾಗಿ ಉಂಟಾಗುವುದು. ಆದುದರಿಂದ ಈ ಶಬ್ದಕ್ಕೆ ಆ ಕಾಲದಲ್ಲಿ ಯಾವ ಅರ್ಥವು ಬಳಕೆಯಲ್ಲಿತ್ತೆಂದು ಹೇಳುವುದು ಸಾಧ್ಯವಿಲ್ಲ.

।। ವ್ಯಾಕರಣಪ್ರಕ್ರಿಯಾ ।।

ದಸ್ರಾ, ಎಂಬುದು ಸಂಬೋಧನದ್ವಿವಚನಾಂತ, ಔಪ್ರತ್ಯಯಕ್ಕೆ ' ಸುಪಾಂ ಸುಲುಕ್ ' ಇತ್ಯಾದಿಸೂತ್ರದಿಂದ ಡಾ ಆದೇಶ ' ಆಮಂತ್ರಿತಸ್ಯ ಚ (ಪಾ ಸೂ. ೬-೧-೧೯೮) ಎಂಬುದರಿಂದ ಉದಾತ್ತಬರುವುದು. ಯುವಸ್ತಿ-ಮಿಶ್ರೀಭವನ್ತಿ ಇತಿ ಮಿಶ್ರವಾಗುತ್ತವೆ ಎಂದು, ಯುವಾಕವಃ ಎಂಬಲ್ಲಿ ವಿಗ್ರಹವು. ಯು (ಯುಮಿಶ್ರಣೇ) ಧಾತುವಿನ ಮೇಲೆ ಕಟಕುಷ್ಯಾದಿಷು ಕಾಕುಃ (ಉ. ಸೂ. ೩-೩೫೭) ಎಂಬ ಸೂತ್ರದಿಂದ ಈ ಗಣದಲ್ಲಿ ಯುಧಾತುವಿಗೆ ಪಾಠವಿಲ್ಲದೇ ಇದ್ದರೂ ಬಹುಲಗ್ರಹಣದಿಂದ ಕಾಕುಪ್ರತ್ಯಯಬರುವುದು. ಪ್ರತ್ಯಯಾದಿಕಕಾರವು ಇತ್ಸಂಜ್ಞೆಯನ್ನು ಹೊಂದುವುದು. ಯು+ಆಕು ಎಂದಿರುವಾಗ ಪ್ರತ್ಯಯ ಕಿತ್, ಆದ್ದರಿಂದ ' ಕ್ಙಿತಿಚ ' ಎಂದು ಗುಣನಿಷೇಧ. ' ಅಚಿಶ್ನುಧಾತುಭ್ರುವಾಂಯೋರಿಯಙ್ವಙೌ ' ಎಂಬುದರಿಂದ ಉವಙ್ ಆದೇಶಬರುವುದು. ಪ್ರಥಮಾ ಬಹುವಚನದಲ್ಲಿ ಯುವಾಕವಃ ಎಂದಾಗುವುದು. ಆಕಾರವು ಪ್ರತ್ಯಯಸ್ವರದಿಂದ ಉದಾತ್ತವು. ನ ವಿದ್ಯತೇ ಅಸತ್ಯಂ ಅನಯೋಃ (ಇವರಲ್ಲಿ ಅಸತ್ಯ ಎಂದರೆ ಸುಳ್ಳು ಇರುವುದಿಲ್ಲ) ಎಂದು ವಿಗ್ರಹಮಾಡಿದರೆ ನಾಸತ್ಯೌ ಎಂದಾಗುವದು, ನಞ್‌ನ ನಕಾರಕ್ಕೆ ' ನಲೋಪೋ ನಞಃ ' (ಪಾ. ಸೂ. ೬-೩-೭೩) ಉತ್ತರಪದವು ಪರದಲ್ಲಿರುವಾಗ ನಞ್‌ನ ನಕಾರಕ್ಕೆ ಲೋಪ ಬರುವುದು ಎಂಬುದರಿಂದ ಲೋಪಪ್ರಾಪ್ತವಾದರೆ, ' ನಭ್ರಾಣ್ನಪಾನ್ನವೇದಾನಾಸತ್ಯಾ ನಮುಚಿನಕುಲ ನಖ ನಪುಂಸಕ ನಕ್ಷತ್ರ ನಾಕೇಷುಪ್ರಕೃತ್ಯಾ' (ಪಾ. ಸೂ. ೬-೩-೭೫) ಇವುಗಳ ನಕಾರಕ್ಕೆ ಪ್ರಕೃತಿವದ್ಭಾವ ಬರುವುದು ಎಂಬುದರಿಂದ ಪ್ರಕೃತಿವದ್ಭಾವ ಬರುವುದರಿಂದ ನಕಾರಕ್ಕೆ ಲೋಪ ಬರುವುದಿಲ್ಲ. ಇದು ಎರಡನೇ ಪಾದದ ಆದಿಯಲ್ಲಿರುವುದರಿಂದ ಅಪಾದಾದೌ ಎಂದು ಆಷ್ಟಮಿಕಾನುದಾತ್ತಕ್ಕೆ ನಿಷೇಧ ಬರುವಕಾರಣ ಆರನೇ ಅಧ್ಯಾಯದ ಆಮಂತ್ರಿತೋದಾತ್ತವೇ ಬರುವುದು ವೃಕ್ತಂ= ಮೂಲೈರ್ವರ್ಜಿತಂ, ಬರ್ಹಿಃ ಆಸ್ತೀರ್ಣಂ ಯೇಷಾಂ ಸೋಮಾನಾಂ ತೇ ಎಂದರೆ ಯಾವ ಸೋಮಗಳಿಗಾಗಿ ಕತ್ತರಿಸಲ್ಪಟ್ಟ ಬುಡವುಳ್ಳ ದರ್ಭೆಯು ಹರಡಲ್ಪಟ್ಟಿರುವುದೋ, ಆ ಸೋಮನುಗಳಿಗೆ ವೃಕ್ತಬರ್ಹಿಷಃ ಎನ್ನುವರು. ಇದು ಬಹುವ್ರೀಹಿಯಾದ್ದರಿಂದ 'ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ' (ಪಾ ಸೂ. ೬-೨-೧) ಎಂದು ನೃಕ್ತಪದಕ್ಕೆ ಪೂರ್ವಪದಪ್ರಕೃತಿಸ್ವರಬರಲು ಕ್ತ ಪ್ರತ್ಯಯಸ್ವರವೇ ನಿಲ್ಲುವುದು. ಆ ಎಂಬಲ್ಲಿ ' ಉಪಸರ್ಗಾಶ್ಚಾಭಿವರ್ಜಂ ' (ಫಿ. ಸೂ. ೮೧) ಅಭಿ ಎಂಬುದನ್ನು ಳಿದು ಬಾಕಿ ಉಪಸರ್ಗಗಳು ಉದಾತ್ತವಾಗುವುವು ಎಂಬುದರಿಂದ ಉದಾತ್ತವು ಬರುವುದು. ರುದ್ರವರ್ತನೀ ಇಲ್ಲಿ ' ಆಮಂತ್ರಿತಸ್ಯ ಚ ' (ಪಾ. ಸೂ. ೮-೧-೧೯) ಎಂಬುದರಿಂದ ಆಮಂತ್ರಿತಾನುದಾತ್ತಬರುವುದು ॥ ೩ ॥

॥ ಸಂಹಿತಾಪಾಠಃ ॥

ಇಂದ್ರಾ ಯಾಹಿ ಚಿತ್ರಭಾನೋ ಸುತಾ ಇಮೇ ತ್ವಾಯವಃ ।
ಅಣ್ವೀಭಿಸ್ತನಾ ಪೂತಾಸಃ ॥ ೪ ॥

॥ ಪದಪಾಠಃ ॥

ಇಂದ್ರ । ಆ । ಯಾಹಿ । ಚಿತ್ರಭಾನೋ ಇತಿ ಚಿತ್ರಽಭಾನೋ । ಸುತಾಃ ।
ಇಮೇ । ತ್ವಾಽಯವಃ ॥
ಅಣ್ವೀಭಿಃ । ತನಾ । ಪೂತಾಸಃ ॥ ೪ ॥

॥ ಸಾಯಣಭಾಷ್ಯಂ ॥

ಚಿತ್ರಭಾನೋ ಚಿತ್ರದೀಪ್ತೇ ಹೇ ಇಂದ್ರಾಸ್ಮಿನ್ಮರ್ಮಣ್ಯಾ ಯಾಹಿ । ಆಗಚ್ಛ । ಸುತಾ ಅಭಿಷುತಾ ಇಮೇ ಸೋಮಾಸ್ತ್ವಯಿವಸ್ತ್ವಂ ಕಾಮಯಮಾನಾ ವರ್ತಂತೇ । ಅಣ್ವೇಭಿಃ । ಅಗ್ರುವ ಇತ್ಯಾದಿಷು ದ್ವಾವಿಂಶತಿಸಂಖ್ಯಾಕೇಷ್ವಂಗುಲಿನಾಮಸ್ವಣ್ಯ್ವ ಇತಿ ಪಠಿತಂ । ಋತ್ವಿಜಾಮಂಗುಲಿಭಿಃ ಸುತಾ ಇತ್ಯನ್ವಯಃ। ಕಿಂಚ। ಏತೇ ಸೋಮಾಸ್ತನಾ ನಿತ್ಯಂ ಪೂತಾಸಃ ಪೂತಾ ಶುದ್ಧಾ ದಶಾಪವಿತ್ರೇಣ ಬಹುಧಾ ಶೋಧಿತಾಸ್ತ್ವಾತ್ । ಇಂದ್ರಶಬ್ದಂ ಯಾಸ್ಕೋ ಬಹುಧಾ ನಿರ್ವಕ್ತಿ । ಇಂದ್ರ ಇರಾಂ ದೃಣಾತೀತಿ ವೇರಾಂ ಪದಾತೀತಿ ವೇರಾಂ ದಧಾತೀತಿ ವೇರಾಂ ದಾರಯತೀತಿ ವೇರಾಂ ಧಾರಯತೀತಿ ವೇಂದನೇ ದ್ರವತೀತಿ ವೇಂದೌ ರಮತ ಇತಿ ವೇಂದ್ರೇ ಭೂತಾನೀತಿ ವಾ ತದ್ಯದೇನಂ ಪ್ರಾಣೈಃ ಸಮೈಂಧಂಸ್ತದಿಂದ್ರಸ್ಯೇಂದ್ರತ್ವಮಿತಿ ವಿಜ್ಞಾಯತ ಇದಂಕರಣಾದಿತ್ಯಾಗ್ರಾಯಣ ಇದಂ ದರ್ಶನಾದಿತ್ಯೌಪಮನ್ಯವ ಇದಂತೇರ್ವೈಶ್ವರ್ಯಕರ್ಮಣ ಇಳ್ಬಿತಪ್ರಾಣಾಂ ದಾರಯಿತಾ ವಾ ದ್ರಾವಯಿತಾ ವಾದರಯಿತಾ ಚ ಯಜ್ವನಾಂ । ನಿ. ೧೦-೮ । ಇತಿ । ಅಸ್ಯಾಯಮರ್ಥಃ । ದೃ ವಿದಾರಣ ಇತಿ ಧಾತುಃ । ಇರಾಮನ್ನಮುದ್ದಿಶ್ಯ ತನ್ನಿಷ್ಪಾದಕಜಲಸಿದ್ಧ್ಯರ್ಥಂ ದೃಣಾತಿ ಮೇಘಂ ವಿದೀರ್ಣಂ ಕರೋತೀತೀಂದ್ರಃ । ಡುದಾಞ್ ದಾನ ಇತಿ ಧಾತುಃ - ಇರಾಮನ್ನಂ ವೃಷ್ಟಿನಿಷ್ಪಾದನೇನ ದದಾತೀತೀಂದ್ರಃ ಧಾಞ್ ಪೋಷಣಾರ್ಥಃ । ಇರಾಮನ್ನಂ ತೃಪ್ತಿಕಾರಣಂ ಸಸ್ಯಂ ದಧಾತಿ ಜಲಪ್ರದಾನೇನ ಪುಷ್ಣಾತೀತೀಂದ್ರಃ । ಇರಾಮುತ್ಪಾದಯಿತುಂ ಕರ್ಷಕಮುಖೇನ ಭೂಮಿಂ ವಿದಾರಯತೀತೀಂದ್ರಃ । ಪೂರ್ವೋಕ್ತಪೋಷಣಮುಖೇನೇರಾಂ ಧಾರಯತಿ ವಿನಾಶರಾಹಿತ್ಯೇನ ಸ್ಥಾಪಯತೀತೀಂದ್ರಃ । ಇಂದುಃ ಸೋಮೋ ವಲ್ಲೀರಸಃ । ತದರ್ಥಂ ಯಾಗಭೂಮೌ ದ್ರವತಿ ಧಾವತೀತೀಂದ್ರಃ । ಇಂದೌ ಯಥೋಕ್ತೇ ಸೋಮೇ ರಮತೇ ಕ್ರೀಡತೀತೀಂದ್ರಃ ಇಂಇಂಧೀ ದೀಪ್ತಾವಿತಿ ಧಾತುಃ । ಭೂತಾನಿ ಪ್ರಾಣಿದೇಹಾನಿಂದ್ಧೇ ಜೀವಚೈತನ್ಯರೂಪೇಣಾಂತಃ ಪ್ರವಿಶ್ಯ ದೀಪಯತೀತೀಂದ್ರಃ । ಏತದೇವಾಭಿಪ್ರೇತ್ಯ ವಾಜಸನೇಯಿನ ಆಮನಂತಿ । ಇಂಧೋ ಹ ವೈ ನಾಮೈಷ ಯೋಽಯಂ ದಕ್ಷಿಣೇಽಕ್ಷನ್ಪುರುಷಃ । ತಂ ವಾ ಏತಮಿಂಧಂ ಸಂತಮಿಂದ್ರ ಇತ್ಯಾಚಕ್ಷತೇ । ಪರೋಕ್ಷೇಣ ಪರೋಕ್ಷಪ್ರಿಯಾ ಇವ ಹಿ ದೇವಾಃ ಪ್ರತ್ಯಕ್ಷದ್ವಿಷಃ ಶತ. ಬ್ರಾ. ೧೪-೬-೧೦-೨ । ಇತಿ । ತದ್ಯದಿತ್ಯಾದಿಕಂ ಬ್ರಾಹ್ಮಣಾಂತರವಾಕ್ಯಂ । ತತ್ತತ್ರೇಂದ್ರವಿಷಯೇ ನಿರ್ವಚನಮುಚ್ಯತ ಇತಿ ಶೇಷಃ । ಯದ್ಯಸ್ಮಾತ್ಕಾರಣಾದೇನಂ ಪರಮಾತ್ಮರೂಪಮಿಂದ್ರಂ ದೇವಂ ಪ್ರಾಣೈರ್ವಾಕ್ಚಕ್ಷುರಾದೀಂದ್ರಿಯೈಃ ಪ್ರಾಣಾಪಾನಾದಿನಾಯುಭಿಶ್ಚ ಸಹಿತಂ ಸಮೈಂಧನ್ನುಪಾಸಕಾ ಧ್ಯಾನೇನ ಸಮ್ಯಕ್ ಪ್ರಕಾಶಿತವಂತಸ್ತತ್ತಸ್ಮಾತ್ಕಾರಣಾದಿಂದ್ರನಾಮ ಸಂಪನ್ನಂ - ಅಸ್ಮಿನ್ಪಕ್ಷ ಇಧ್ಯತೇ ದೀಪ್ಯತ ಇತಿ ಕರ್ಮಣಿ ವ್ಯುತ್ಪತ್ತಿಃ । ಆಗ್ರಾಯಣನಾಮಕೋ ಮುನಿರಿದಂಕರಣಾದಿಂದ್ರ ಇತಿ ನಿರ್ವಚನಂ ಮನ್ಯತೇ । ಇಂದ್ರೋ ಹಿ ಪರಮಾತ್ಮರೂಪೇಣೇದಂ ಜಗತ್ಕರೋತಿ । ಔಪಸ। ಮನ್ಯವನಾಮಕೋ ಮುನಿರಿದಂದರ್ಶನಾದಿಂದ್ರ ಇತಿ ನಿರ್ವಚನಮಾಹ। ಇದಮಿತ್ಯಾಪರೋಕ್ಷ್ಯಮುಚ್ಯತೇ। ವಿವೇಕೇನ ಹಿ ಪರಮಾತ್ಮಾನಮಾಪರೋಕ್ಷ್ಯೇಣ ಪಶ್ಯತಿ । ಏತದೇವಾಭಿಪ್ರೇತ್ಯಾರಣ್ಯಕಾಂಡೇ ಸಮಾಮ್ನಾಯತೇ ಸ ಏತಮೇವ ಪುರುಷಂ ಬ್ರಹ್ಮ ತತಮಮಪಶ್ಯದಿದಮದರ್ಶಮಿತೀತಿ । ತಸ್ಮಾದಿದಂದ್ರೋ ನಾಮೇದಂದ್ರೋ ಹ ವೈ ನಾಮ ತಮಿದಂದ್ರಂ ಸಂತಮಿಂದ್ರ ಇತ್ಯಾಚಕ್ಷತೇ ಪರೋಕ್ಷೇಣ ಪರೋಕ್ಷಪ್ರಿಯಾ ಇವ ಹಿ ದೇವಾಃ ಐ. ಆ. ೨-೪-೩ । ಇತಿ । ಇದಿ ಪರಮೈಶ್ವರ್ಯ ಇತಿ ಧಾತುಃ । ಸ್ವಮಾಯಯಾ ಜಗದ್ರೂಪತ್ವಂ ಪರಮೈಶ್ವರ್ಯಂ । ತದ್ಯೋಗಾದಿಂದ್ರಃ । ಅನೇನಾಭಿಪ್ರಾಯೇಣ ಶ್ರೂಯತೇ । ಇಂದ್ರೋ

ಮಾಯಾಭಿಃ ಪುರುರೂಪ ಈಯತೇ ಯಗ್ವೀ. ೬-೪೭-೧೮ । ಇತಿ ಇನಶಬ್ದಸ್ಯೇಶ್ವರವಾಚಕಸ್ಯಾಕಾರಲೋಪೇ ಸತಿ ನಕಾರಾಂತಮಿನ್ನಿತಿ ಪದಂ ಭವತಿ । ದ್ಯೌ ಭಯೇ ಇತಿ ಧಾತುಃ । ಸ ಚ ಪರಮೇಶ್ವರಃ ಶತ್ರೂಣಾಂ ದಾರಯಿತಾ ಭೀಷಯಿತೇತೀಂದ್ರಃ । ದ್ರುಗತಾವಿತಿ ಧಾತುಃ । ಶತ್ರೂಣಾಂ ದ್ರಾವಯಿತಾ ಪಲಾಯನಂ ಪ್ರಾಪಯಿತೇತೀಂದ್ರಃ । ಯಜ್ವನಾಂ ಯಾಗಾನುಷ್ಠಾಯಿನಾಮಾದರಯಿತಾ ಭಯೇಷ್ಯ ಪರಿಹರ್ತಾ । ಏವಮೇತಾನಿ ನಿರ್ವಚನಾನಿ ದ್ರಷ್ಟವ್ಯಾನೀತಿ । ಇಂದ್ರೇತ್ಯತ್ರಾಮಂತ್ರಿತಾದ್ಯುದಾತ್ತತ್ವಂ । ಆ ಇತ್ಯತ್ರ ನಿಪಾತತ್ವೇನಾದ್ಯುದಾತ್ತಃ । ಚಿತ್ರಭಾನೋ । ಪದಾತ್ಪರತ್ವಾದಾಮಂತ್ರಿತನಿಘಾತಃ । ತ್ವಾಮಿಚ್ಛಂತೀತ್ಯರ್ಥೇ ಯುಷ್ಮಚ್ಛಬ್ದಾತ್ಸುಪ ಆತ್ಮನಃ ಕ್ಯಚ್ । ಪಾ. ಸೂ. ೩-೧-೮ । ಪ್ರತ್ಯಯೋತ್ತರಪದಯೋಶ್ಚ । ಪಾ. ೭-೪-೯೮। ಇತಿ ಮಪರ್ಯಂತಸ್ಯ ತ್ವಾದೇಶಃ। ಕ್ಯಾಚ್ಛಂದಸಿ। ಪಾ. ೩-೨-೧೭೦ । ಇತಿ ಕ್ಯಜಂತಾದುಪ್ರತ್ಯಯಃ ತ್ವತ್ಯಇತಿ ಪ್ರಾಪ್ತೌ ಯುಷ್ಮದಸ್ಮದೋರನಾದೇಶೇ ಪಾ.೭-೨-೯೬। ಇತ್ಯನಿಭಕ್ತಾವಪಿ ಹಲಾದೌ ವ್ಯತ್ಯಯೇನಾತ್ಮಂ। ಉಕಾರಃ ಪ್ರತ್ಯಯಸ್ವರೇಣಾದ್ಯುದಾತ್ತಃ। ಆಣುಶಬ್ದಃ ಸೌಕ್ಷ್ಮ್ಯವಾಚಕಸ್ತದ್ಯೋಗಾತ್ಸೃಕೃತೇ೪೦-ಗುಲೀಷು ವರ್ತತೇ । ವೋತೋ ಗುಣವಚನಾತ್ । ಪಾ. ೪-೧-೪೪ ॥ ಇತಿ ಜೀಷಿ ಪ್ರಾಪ್ತೇ ವ್ಯತ್ಯಯೇನ ಙೀನ್ । ನಿತ್ಸ್ವಾದ್ಯುದಾತ್ತಃ। ತೆನಾ ಇತ್ಯಯಂ ನಿಪಾತೋ ನಿತ್ಯಮಿತ್ಯರ್ಥೇ ನಿಪಾತತ್ವಾದಾದ್ಯುದಾತ್ತಃ। ಪೂತಾಸಃ । ಆಜ್ಜಸೇರಸುಕ್ । ಪಾ. ೭-೧-೫೦ । ಇತ್ಯಸುಕ್ ॥

॥ ಪ್ರತಿಪದಾರ್ಥ ॥

ಚಿತ್ರಭಾನೋ—ಆಶ್ಚರ್ಯಕರವಾದ ಪ್ರಕಾಶದಿಂದ ಬೆಳಗುವ ಎಲೈ ಇಂದ್ರನೇ । **ಆ ಯಾಹಿ**—(ನಾವು ಮಾಡುತ್ತಿರುವ ಈ ಯಜ್ಞವೇದಿಕೆಗೆ) ಬಾ । **ತ್ವಾಯವಃ**—ನೀನು ಅಪೇಕ್ಷಿಸುವ (ಅಥವಾ ನಿನಗೆ ಇಷ್ಟವಾದ) । **ಇಮೇ ಸುತಾಃ**—(ಸೋಮಲತೆಯನ್ನು ಜಜ್ಜಿ ತೆಗೆದ) ಈ ಸೋಮರಸಗಳು । **ಅಣ್ವೀಭಿಃ**—(ಋತ್ವಿಕ್ಕುಗಳ) ಬೆರಳುಗಳಿಂದ (ಅಥವಾ ದಶಾಪವಿತ್ರವೆಂಬ ಸೋಮರಸವನ್ನು ಶೋಧಿಸುವ ಬಟ್ಟೆಯಿಂದ) **ತೆನಾ**—ಯಾವಾಗಲೂ । **ಪೂತಾಸಃ**—ಶೋಧಿಸಲ್ಪಟ್ಟು ಪಾನಯೋಗ್ಯವಾಗಿವೆ.

॥ ಭಾವಾರ್ಥ ॥

ಎಲೈ ಇಂದ್ರನೇ ನೀನು ವಿಚಿತ್ರವಾದ ಕಾಂತಿಯಿಂದ ಬೆಳಗುವವನು; ನಿನಗೆ ಇಷ್ಟವಾದ (ಅಥವಾ ನಿನಗೋಸ್ಕರವಾಗಿ) ಸೋಮರಸವನ್ನು ಋತ್ವಿಕ್ಕುಗಳು ಬೆರಳುಗಳಿಂದ (ಅಥವಾ ಜಾಲರಿಯಂತಿರುವ ಬಟ್ಟೆಯಿಂದ) ಚೆನ್ನಾಗಿ ಶೋಧಿಸಿ ಪಾನಯೋಗ್ಯವಾಗುವಂತೆ ಸಿದ್ಧಪಡಿಸಿರುವರು. ಆ ಸೋಮರಸವನ್ನು ಪಾನಮಾಡುವುದಕ್ಕಾಗಿ ಈ ನಮ್ಮ ಯಜ್ಞವೇದಿಕೆಗೆ ಬರುವವನಾಗು.

English Translation.

Come hither, O Indra, of wonderful splendour; these libations of soma juice, ever pure, expressed by the fingers of the priests are deserious of you.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಮುಂದಿನ ಎರಡು ಋಕ್ಕುಗಳೂ ಐಂದ್ರಸ್ತೃಚಃ ಎಂದರೆ ಇಂದ್ರನ ಸಂಬಂಧವಾದ ತೃಚವು, ಇಂದ್ರನನ್ನು ಸ್ತೋತ್ರಮಾಡುವ ಮೂರು ಮಂತ್ರಗಳು.

ಇಂದ್ರ—ಭಾಷ್ಯಕಾರರು ಇಂದ್ರಶಬ್ದದ ನಿಷ್ಪತ್ತಿಯನ್ನು ವಿವರಿಸುವಾಗ ಯಾಸ್ಕರು ಹೇಳಿರುವ ನಿರುಕ್ತವನ್ನೇ ಉದಹರಿಸಿದಾರೆ—" ಇಂದ್ರ ಇರಾಂ ದೃಣಾತೀತಿ ವೇರಾಂ ದದಾತೀತಿ ವೇರಾಂ ದಧಾತೀತಿ ವೇರಾಂ ದಾರಯತೀತಿ ವೇರಾಂ ಧಾರಯತೀತಿ ವೇಂದವೇ ದ್ರವತೀತಿ ವೇಂದೌ ರಮತ ಇತಿ ವೇಂಧೇ ಭೂತಾನೀತಿ ವಾ ತದ್ಯದೇನಂ ಪ್ರಾಣೈಃ ಸಮ್ಯೌಂಧಂಸ್ತದಿಂದ್ರಸ್ಯೇಂದ್ರತ್ವಮಿತಿ ವಿಜ್ಞಾಯತ ಇದಂಕರಣಾದಿತ್ಯಾಗ್ರಾಯಣ ಇದಂದರ್ಶನಾದಿತ್ಯೌಪಮನ್ಯವ ಇಂದತೇರ್ಪೈಶ್ವರ್ಯಕರ್ಮಣ ಇಳೃತ್ರಾಣಾಂ ದಾರಯಿತಾ ವಾ ದ್ರಾವಯಿತಾ ವಾದರಯಿತಾ ಚ ಯೇಜ್ಞನಾಂ । ಇತಿ । ನಿ. ೧೦-೪ ॥ " ಇದರ ಅರ್ಥಾನುವಾದವನ್ನು ಅವರೇ ಮಾಡಿದಾರೆ.

(1) ದೃ ವಿದಾರಣ ಇತಿ ಧಾತುಃ । ಇರಾಮನ್ನಮುದ್ದಿಶ್ಯ ತೆನ್ನಿಷ್ಪಾದಕಜಲಸಿಧ್ಯರ್ಥಂ ದೃಣಾತಿ ಮೇಘಂ ವಿದೀರ್ಣಂ ಕರೋತೀತೀಂದ್ರಃ—ದೃ ಎಂಬ ಧಾತುವಿಗೆ ಸೀಳುವುದು, ಕತ್ತರಿಸುವುದು ಎಂದರ್ಥವು. ಇರಾ ಎಂದರೆ ಅನ್ನವು (ಆಹಾರವು) ಓಷಧಿವನಸ್ಪತಿಗಳಿಂದ ಎಂದರೆ ಸಸ್ಯವರ್ಗದಿಂದ ನಮಗೆ ಲಭಿಸುವುದು. ಆ ಸಸ್ಯವರ್ಗವು ಬೆಳೆಯಬೇಕಾದರೆ ಜಲವು ಅವಶ್ಯಕವು. ಆ ಜಲಕ್ಕಾಗಿ ಎಂದರೆ ಮಳೆ ಹುಯ್ಯುವುದಕ್ಕಾಗಿ ಮೇಘವನ್ನು (ವಿದ್ಯುತ್, ವಜ್ರಾಯುಧದಿಂದ) ಕತ್ತರಿಸುವವನಾದ ಕಾರಣ ಇಂದ್ರನೆಂಬ ಹೆಸರಾಯಿತು.

(2) ಡುದಾಞ್ ದಾನ ಇತಿ ಧಾತುಃ । ಇರಾಮನ್ನಂ ವೃಷ್ಟಿನಿಷ್ಪಾದನೇನ ದದಾತೀತೀಂದ್ರಃ ॥ ದಾ ಎಂಬ ಧಾತುವಿಗೆ ಕೊಡುವುದು ಎಂದರ್ಥವು. ಇರಾಂ ಎಂದರೆ ಅನ್ನವನ್ನು ವೃಷ್ಟಿ (ಮಳೆಯ) ಮೂಲಕ ಕೊಡುವವನಾದುದರಿಂದ ಇಂದ್ರನೆಂದು ಹೆಸರು.

(3) ಧಾಞ್ ಪೋಷಣಾರ್ಥಃ । ಇರಾಮನ್ನೈಂ ತೈಸ್ತಿಕಾರಣಂ ಸಸ್ಯಂ ದಧಾತಿ ಜಲಪ್ರದಾನೇನ ಪುಷ್ಣಾತೀತೀಂದ್ರಃ ॥ ಧಾ ಎಂಬ ಧಾತುವಿಗೆ ಪೋಷಣೆಮಾಡುವುದು ಎಂದರ್ಥವು. ಅನ್ನವನ್ನು ಕೊಡುವ ಸಸ್ಯಾದಿಗಳನ್ನು ಜಲಪ್ರದಾನದಿಂದ (ಮಳೆಯಿಂದ) ಪೋಷಿಸುವವನಾದ ಕಾರಣ ಇಂದ್ರನೆಂದು ಹೆಸರು.

(4) ಇರಾಮುತ್ಪಾದಯಿತುಂ ಕರ್ಷಕಮುಖೇನ ಭೂಮಿಂ ವಿದಾರಯತೀತೀಂದ್ರಃ । ಆಹಾರೋತ್ಪಾದನೆಗಾಗಿ ಭೂಮಿಯನ್ನು ಉಳಬೇಕಷ್ಟೆ. ಭೂಮಿಯನ್ನು ಉಳುವಾಗ ಅದನ್ನು ನೇಗಲಿನಿಂದ ಸೀಳುವಂತೆ ಮಾಡಿ ಬೆಳೆಗೆ ಅನುಕೂಲಪಡಿಸುವವನಾದುದರಿಂದ ಇಂದ್ರನೆಂದು ಹೆಸರು.

(5) ಪೂರ್ವೋಕ್ತಪೋಷಣಮುಖೇನೇರಾಂ ಧಾರಯತಿ ವಿನಾಶರಾಹಿತ್ಯೇನ ಸ್ಥಾಪಯತೀತೀಂದ್ರಃ । ಹಿಂದೆ ಹೇಳಿದಂತೆ ಸಸ್ಯಾದಿಗಳನ್ನು ಪೋಷಣೆಮಾಡಿ ಅವುಗಳು ನಾಶವಾಗದಂತೆ ಸಂರಕ್ಷಿಸತಕ್ಕವನಾದುದರಿಂದ ಇಂದ್ರನೆಂದು ಹೆಸರು.

(6) ಇಂದುಃ ಸೋಮೋ ವಲ್ಲೀರಸಃ । ತದರ್ಥಂ ಯಾಗಭೂಮೌ ದ್ರವತಿ ಧಾವತೀತೀಂದ್ರಃ । ಇಂದುವೆಂದರೆ ಸೋಮಲತೆಯಿಂದ ಸಿದ್ಧಪಡಿಸಿದ ಸೋಮರಸವು. ಯಜ್ಞಭೂಮಿ

ಯಲ್ಲಿ ಇಂತಹ ಸೋಮಪಾನಾರ್ಥವಾಗಿ ಧಾವಿಸಿ (ವೇಗನೆ ಓಡಿ) ಬರುವವನಾದುದ ರಿಂದ ಇಂದ್ರನೆಂದು ಹೆಸರು.

(7) ಇಂದೌ ಯಥೋಕ್ತೇ ಸೋಮೇ ರಮತೇ ಕ್ರೀಡತೀತೀಂದ್ರಃ । ಹಿಂದೆ ಹೇಳಿದ ಸೋಮ ರಸದಿಂದ ತೃಪ್ತನಾಗಿ ವಿಹರಿಸುವವನಾದುದರಿಂದ ಇಂದ್ರನೆಂದು ಹೆಸರು.

(8) ಇಂಇಂಧೀ ದೀಪ್ತಾವಿತಿ ಧಾತುಃ । ಭೂತಾನಿ ಪ್ರಾಣಿದೇಹಾನಿಂಧೇ ಜೀವಚೈತನ್ಯ-ರೂಪೇಣಾಂತಃಪ್ರವಿಶ್ಯ ದೀಪಯತೀತೀಂದ್ರಃ ॥ ಇಂಧ್ ಧಾತುವಿಗೆ, ಬೆಳಗುವುದು, ಪ್ರಕಾಶಿಸುವುದು ಎಂದರ್ಥ. ಪ್ರಾಣಿಗಳ ಶರೀರಗಳಲ್ಲಿ ಜೈತನ್ಯರೂಪದಿಂದ ಪ್ರವೇಶಿಸಿ ಅವುಗಳು ತಮ್ಮ ತಮ್ಮ ಕೃತ್ಯಗಳನ್ನು ಮಾಡುವಂತೆ ಪ್ರೇರಿಸುತ್ತಾ ಬೆಳಗುತ್ತಿರುವವ ನಾದುದರಿಂದ ಇಂದ್ರನೆಂದು ಹೆಸರು.

(9) ಯದ್ಯಸ್ಮಾತ್ಕಾರಣಾದೇನಂ ಪರಮಾತ್ಮರೂಪಮಿಂದ್ರಂ ದೇವಂ ಪ್ರಾಣೈರ್ವಾಕ್‌ಚಕ್ಷು-ರಾದೀಂದ್ರಿಯೈಃ ಪ್ರಾಣಾಪಾನಾದಿನಾಯುಭಿಶ್ಚ ಸಹಿತಂ ಸಮೈಂಧನ್ಮೌಪಾಸಕಾ ಧ್ಯಾನೇನ ಸಮ್ಯಕ್ಪ್ರಕಾಶಿತವಂತಸ್ತತ್ಕಸ್ಮಾತ್ಕಾರಣಾದಿಂದ್ರನಾಮ ಸಂಪನ್ನಂ । ಪರ ಮಾತ್ಮರೂಪನಾದ ಈ ದೇವನನ್ನು ಉಪಾಸಕರು ವಾಕ್‌ಚಕ್ಷುರಾದೀಂದ್ರಿಯಗಳಿಂದಲೂ ಪ್ರಾಣಾಪಾನಾದಿ ವಾಯುಗಳಿಂದಲೂ ಸೇರಿಸಿ ಧ್ಯಾನದಿಂದ ಚೆನ್ನಾಗಿ ಪ್ರಕಾಶಿಸುತ್ತಿರು ವಂತೆ ಭಾವಿಸುವುರಾದ್ದರಿಂದ ಇಂದ್ರನೆಂಬ ಹೆಸರಾಯಿತು.

(10) ಅಗ್ರಾಯಣನಾಮಕೋ ಮುನಿರಿದಂಕರಣಾದಿಂದ್ರ ಇತಿ ನಿರ್ವಚನಂ ಮನ್ಯತೇ । ಇಂದ್ರೋ ಹಿ ಪರಮಾತ್ಮರೂಪೇಣೇದಂ ಜಗತ್ಕರೋತಿ—ಇದಂಕರಣ ಎಂದರೆ ಪರ ಮಾತ್ಮರೂಪದಿಂದ ಇಂದ್ರನು ಈ ಜಗತ್ತನ್ನು ನಿರ್ಮಾಣಮಾಡುವುದರಿಂದ (ಸೃಷ್ಟಿಸು ವುದರಿಂದ) ಈ ದೇವನಿಗೆ ಇಂದ್ರನೆಂದು ಹೆಸರು ಬಂದಿತು ಎಂದು ಅಗ್ರಾಯಣನೆಂಬ ಮುನಿಯು ಹೇಳುವನು.

(11) ಔಪಮನ್ಯವನಾಮಕೋ ಮುನಿರಿದಂದರ್ಶನಾದಿಂದ್ರ ಇತಿ ನಿರ್ವಚನಮಾಹ । ಇದೆ-ಮಿತ್ಯಾಪರೋಕ್ಷ್ಯಮುಚ್ಯತೇ । ಔಪಮನ್ಯವನೆಂಬ ಮುನಿಯು, ಇದನ್ನು ಎಂದರೆ ಎಲ್ಲ ವನ್ನೂ ನೋಡುವವನಾದುದರಿಂದ ಇಂದ್ರನೆಂದು ಹೆಸರಾಯಿತು ಎಂದು ಹೇಳುವನು. ಇಲ್ಲಿ ಇದಂ ಎಂದರೆ ಆಪರೋಕ್ಷ್ಯ, ಕಣ್ಣಿಗೆ ಪ್ರತ್ಯಕ್ಷವಾಗಿ ಗೋಚರಿಸದಿರುವುದು. ಆದುದ ರಿಂದಲೇ "ಪರೋಕ್ಷಪ್ರಿಯಾ ಇವ ಹಿ ದೇವಾಃ" ಎಂದು ಶ್ರುತಿಯು ಹೇಳು ತ್ತಿರುವುದು.

(12) ಇದಿ ಪರಮೈಶ್ವರ್ಯ ಇತಿ ಧಾತುಃ । ಸ್ವಮಾಯಯೇದಂ ಜಗದ್ರೂಪಶ್ವಂ ಪರಮೈ-ಶ್ವರ್ಯಂ । ತದ್ಯೋಗಾದಿಂದ್ರಃ । ಇದಿ ಧಾತುವಿಗೆ ಪರಮೈಶ್ವರ್ಯವೆಂಬ ಅರ್ಥವಿರು ವುದು. ಈ ದೇವನಿಗೆ ತನ್ನ ಮಾಯೆಯಿಂದ ಜಗದ್ರೂಪತ್ವವೆಂಬ ಪರಮೈಶ್ವರ್ಯವಿರು

ವುದರಿಂದ ಇಂದ್ರನೆಂಬ ಹೆಸರಾಯಿತು. ಈ ಅಭಿಪ್ರಾಯವನ್ನು "ಇಂದ್ರೋ ಮಾಯಾಭಿಃ ಪುರುರೂಪ ಈಯತೇ" (ಋ. ಸಂ. ೬-೪೭-೧೮) ಎಂಬ ವೇದವಾಕ್ಯವು ಸಮರ್ಥಿಸುವುದು.

(13) ಇನಶಬ್ದಸ್ಯೇಶ್ವರವಾಚಕಸ್ಯಾಕಾರಲೋಪೇ ಸತಿ ನಕಾರಾಂತಮಿನ್ನಿತಿ ಪದಂ ಭವತಿ। ದ್ಯಾ ಭಯಂ ಇತಿ ಧಾತುಃ । ಸ ಚ ಪರಮೇಶ್ವರಃ ಶತ್ರೂಣಾಂ ದಾರಯಿತಾ ಭೀಷಯಿತೇತೀಂದ್ರಃ ॥ ಇನಶಬ್ದವು ಈಶ್ವರವಾಚಕವು. ಈ ಇನ ಶಬ್ದದ ನಕಾರದಮೇಲಿರುವ ಅಕಾರವು ಲೋಪವಾದರೆ ಇನ್ ಎಂಬ ಪದವು ನಿಲ್ಲುವುದು. ದ್ಯಾ ಎಂಬ ಧಾತುವಿಗೆ ಭಯವೆಂದರ್ಥವು. ಪರಮೇಶ್ವರನಾದ ಆ ದೇವನು ಶತ್ರುಗಳಿಗೆ ಭಯವನ್ನುಂಟುಮಾಡುವವನಾದ್ದರಿಂದ ಅವನಿಗೆ ಇಂದ್ರ ನೆಂಬ ಹೆಸರು.

(14) ದ್ರು ಗತಾವಿತಿ ಧಾತುಃ । ಶತ್ರೂಣಾಂ ದ್ರಾವಯಿತಾ ಪಲಾಯನಂ ಪ್ರಾಪಯತೇತೀಂದ್ರಃ ॥ ದ್ರು ಎಂಬ ಧಾತುವಿಗೆ ಗತ್ಯರ್ಥ ಎಂದರೆ ಹೋಗು, ಓಡಿಹೋಗು ಎಂದರ್ಥವು. ಈ ದೇವನು ಶತ್ರುಗಳನ್ನು ಓಡಿಹೋಗುವಂತೆ ಮಾಡುವವನಾದ್ದರಿಂದ ಇವನಿಗೆ ಇಂದ್ರನೆಂದು ಹೆಸರು.

(15) ಯಜ್ವನಾಂ ಯಾಗಾನುಷ್ಠಾಯಿನಾಮಾದರಯಿತಾ ಭಯಸ್ಯ ಪರಿಹರ್ತಾ—ತನ್ನನ್ನು ಯಾಗಾದಿಗಳಿಂದ ಆರಾಧಿಸುವವರನ್ನು ಆದರಿಸಿ ಅವರ ಭಯವನ್ನು ಪರಿಹಾರಮಾಡುವವನಾದುದರಿಂದ ಈ ದೇವನಿಗೆ ಇಂದ್ರನೆಂದು ಹೆಸರು.

ಇದರಂತೆಯೇ ಇಂದ್ರಶಬ್ದಕ್ಕೆ ಅನೇಕ ನಿರ್ವಚನಗಳನ್ನು ಕಲ್ಪಿಸಬಹುದು.

ಚಿತ್ರಭಾನೋ—ಈ ಶಬ್ದಕ್ಕೆ ಭಾಷ್ಯಕಾರರೂ, ಸ್ಕಂದಸ್ವಾಮಿ, ವೆಂಕಟಮಾಧವ ಮತ್ತು ಪಾಶ್ಚಾತ್ಯ ಪಂಡಿತರೂ ಸಹ ವಿಚಿತ್ರವಾದ ಅಥವಾ ಆಶ್ಚರ್ಯಕರವಾದ ಕಾಂತಿಯಿಂದ ಬೆಳಗುವವನು ಎಂದೇ ಅರ್ಥಮಾಡಿದಾರೆ. ಪರಸ್ಪರ ವಿಶೇಷವಾಗಿ ಭಿನ್ನಾಭಿಪ್ರಾಯವಿಲ್ಲ. ಈ ಚಿತ್ರಭಾನುಶಬ್ದವು ಅಗ್ನಿ, ಇಂದ್ರ, ಸವಿತೃ, ಮರುತ್ ದೇವತೆಗಳನ್ನು ಉದ್ದೇಶಿಸಿ ಪ್ರಯೋಗಿಸಲ್ಪಟ್ಟಿದೆ. ಈ ಶಬ್ದವಿರುವ ಋಕ್ಕುಗಳನ್ನು ಕೆಳಗೆ ಕೊಟ್ಟಿದೆ—

ವಿಭಕ್ತಾಸಿ ಚಿತ್ರಭಾನೋ ಸಿಂಧೋರೂರ್ಮಾ ಉ ಪಾಕ ಆ । (ಋ. ಸಂ. ೧-೭೭-೬).

ತಂ ತ್ವಾ ಘೃತಸ್ನವೀಮಹೇ ಚಿತ್ರಭಾನೋ ಸ್ವರ್ದೃಶಂ । (ಋ. ಸಂ. ೫-೭೬-೨)

ತಂ ತ್ವಾ ಯಮೋ ಅಚಿಕೇಚ್ಚಿತ್ರಭಾನೋ ದಶಾಂತರುಷ್ಯಾದತಿರೋಚಮಾನಂ ।
(ಋ. ಸಂ. ೧೦-೫೧-೩)

ಸಮನಂ ಚಿದದಹಚ್ಚಿತ್ರಭಾನೋರವ ವ್ರಾಧಂತಮಭಿನದ್ವೃಥಚ್ಚಿತ್ । (ಋ.ಸಂ. ೧೦-೬೯-೧೧)

ಕ್ರೂರಯಾ ಅಗ್ನಿಶ್ಚಿತ್ರಭಾನುರ್ಹವಂ ಮೇ ವಿಶ್ವಾಭಿರೀಭಿರಮೃತೋ ವಿಚೇತಾಃ ।
(ಋ. ಸಂ. ೨-೧೦-೨)

ಚಿತ್ರಭಾನುರುಷಸಾಂ ಭಾತ್ಯಗ್ರೇಽಪಾಂ ಗರ್ಭಃ ಪ್ರಸ್ಥ ಆ ವಿವೇಶ । (ಋ. ಸಂ. ೭-೯-೩)

ಚಿತ್ರೇಭಾನುಂ ರೋದಸೀ ಅಂತರುರ್ವೀ ಸ್ವಾಹುತಂ ವಿಶ್ವತಃ ಪ್ರತ್ಯಂಚಂ । (ಋ. ಸಂ. ೭-೧೨-೧)

ಮಂದ್ರಂ ಹೋತಾರಮೃತ್ವಿಜಂ ಚಿತ್ರಭಾನುಂ ವಿಭಾವಸುಂ । (ಋ. ಸಂ. ೮-೪೪-೬)

ಈ ಋಕ್ಕುಗಳಲ್ಲಿ ಚಿತ್ರಭಾನುಶಬ್ದವು ಅಗ್ನಿಯನ್ನು ಪ್ರಶಂಸಿಸುವುದು.

ಆಸ್ಥಾದ್ರಥಂ ಸವಿತಾ ಚಿತ್ರಭಾನುಃ ಕೃಷ್ಣಾ ರಜಾಂಸಿ ತವಿಷೀಂ ದಧಾನಃ । (ಋ. ಸಂ. ೧-೩೫-೪)

ಇಲ್ಲಿ ಈ ಶಬ್ದವು ಸವಿತೃದೇವತೆಗೆ ವಿಶೇಷಣವಾಗಿದೆ.

ಮಹಿಷಾಸೋ ಮಾಯಿನಶ್ಚಿತ್ರಭಾನವೋ ಗಿರಯೋ ನ ಸ್ವತವಸೋ ರಘುಷ್ಯದಃ ।
(ಋ. ಸಂ. ೧-೬೪-೭)

ಆ ಗಚ್ಛಂತೀಮವಸಾ ಚಿತ್ರಭಾನವಃ ಕಾಮಂ ವಿಪ್ರಸ್ಯ ತರ್ಪಯಂತ ಧಾಮಭಿಃ ।
(ಋ. ಸಂ. ೧-೪೫-೧೧)

ಇಲ್ಲಿ ಚಿತ್ರಭಾನವಃ ಎಂಬ ಶಬ್ದವು ಮರುದ್ದೇವತೆಗಳ ಪರವಾಗಿದೆ.

ಸುತಾಃ—ಸುತಾಃ ಎಂಬ ಶಬ್ದಕ್ಕೆ ಹಿಂಡಿ ತೆಗೆದ ಎಂದರ್ಥವು. **ಸೋಮಾಃ**—ಸೋಮರಸಗಳು ಎಂಬು ದನ್ನು ಅಧ್ಯಾಹಾರಮಾಡಿಕೊಳ್ಳಬೇಕು.

ತ್ವಾಯವಃ—ಈ ಶಬ್ದವು ಪ್ರಥಮಾವಿಭಕ್ತಿಯ ಬಹುವಚನವು, **ಸುತಾಃ** ಎಂಬ ಶಬ್ದಕ್ಕೆ **ವಿಶೇಷಣವು.** ಇಲ್ಲಿ ತ್ವಾ ಎಂದರೆ ಯುಷ್ಮತ್ ಎಂದರ್ಥವು.

ಅಣ್ವೇಭಿಃ—ಅಣ್ವೇಭಿಃ ಎಂಬ ಚತುರ್ಥೀಬಹುವಚನಾಂತಶಬ್ದವು ಈ ಋಕ್ಕಿನಲ್ಲಿಮಾತ್ರ ಉಪಯೋಗಿಸಲ್ಪಟ್ಟಿರುವುದು. ಅಂಗುಲಿ (ಬೆರಳು) ಎಂಬ ಅರ್ಥವನ್ನು ಸೂಚಿಸುವ ಇಪ್ಪತ್ತೈರಡು ಶಬ್ದಗಳ ಮಧ್ಯದಲ್ಲಿ ಅಣ್ವೀ ಶಬ್ದವು ಪಠಿತವಾಗಿದೆ (ನಿ. ೨-೫) ಭಾಷ್ಯಕಾರರೂ ಇತರರೂ ಸಹ ಈ ಶಬ್ದಕ್ಕೆ ಬೆರಳುಗಳೆಂದೇ ಅರ್ಥ ಮಾಡಿರುವರು ಈ ಶಬ್ದವು **ಅಣು** ಬಹಳ ಸಣ್ಣದು ಎಂಬ ಪದದಿಂದ ವ್ಯುತ್ಪತ್ತಿಯಿರುವುದರಿಂದ ಈ ಶಬ್ದಕ್ಕೆ ಬಹಳ ಸಣ್ಣರಂಧ್ರಗಳುಳ್ಳ ಜಾಲರಿಯು (ವಂದರಿಯು) ಅಥವಾ ಸೋಮವನ್ನು ಸೋಸುವುದಕ್ಕಾಗಿ ಉಪಯೋಗಿಸುವ ಒರಟುಬಟ್ಟೆಯು ಎಂದು ಕೆಲವರು ಅಭಿಪ್ರಾಯಪಡುವರು. ಸೋಮಲತೆಯನ್ನು ಕಲ್ಲುಗಳಿಂದ (ಗ್ರಾವಾಣ) ಜಜ್ಜಿದಮೇಲೆ ಅದನ್ನು ಹಿಂಡುವಾಗ ಬೆರಳುಗಳನ್ನು ಉಪಯೋಗಿಸಬೇಕಷ್ಟೆ. ಅದುದರಿಂದ **ಅಣ್ವೇಭಿಃ ಸುತಾಃ** ಎಂದರೆ ಬೆರಳುಗಳಿಂದ ಹಿಂಡಿ ತೆಗೆದ ರಸವು ಎಂದು ಹೇಳುವುದು ಸರಿಯಾಗಿರುವುದು. ಇದಲ್ಲದೆ **ಪೂತಾಸಃ** ಎಂಬ ಶಬ್ದವು ಶುದ್ಧಗೊಳಿಸಿರುವ ಎಂಬ ಅರ್ಥವನ್ನು ಹೇಳಿರುವುದರಿಂದ **ಅಣ್ವೇಭಿಃ ಪೂತಾಸಃ** ಬೆರಳುಗಳಿಂದ ಶೋಧಿಸಿದ ಎಂದು ಹೇಳುವುದಕ್ಕಿಂತ ಜಾಲರಿಯಂತಿರುವ ಬಟ್ಟೆಯಿಂದ ಶೋಧಿಸಿದ ಎಂದು ಹೇಳುವುದು ಸಮಂಜಸವಾಗಿರುವುದು. ಈ ಕಾರಣದಿಂದಲೇ ಕೆಲವರು ಅಣ್ವೇಭಿಃ ಎಂಬ ಶಬ್ದಕ್ಕೆ ಜಾಲರಿಯಂತಿರುವ ಬಟ್ಟೆಯಿಂದ ಎಂಬ ಅರ್ಥವನ್ನು ಅನುಮೋದಿಸುವರು. ಆದರೆ ಅಣ್ವೀ ಶಬ್ದವು ಅಂಗುಲಿವಾಚಕವೆಂದು ನಿರುಕ್ತದಲ್ಲಿ ಸ್ಪಷ್ಟವಾಗಿ ಹೇಳಿರುವುದರಿಂದ ಈ ಅರ್ಥವೇ ವಿಶೇಷವಾಗಿ ಪರಿಗ್ರಾಹ್ಯವು.

ತೆನಾ—ಈ ಶಬ್ದವನ್ನು ಅವ್ಯಯವೆಂದು ಭಾಷ್ಯಕಾರರು ಹೇಳಿ ಇದಕ್ಕೆ **ಯೇನಾಗಲೂ** ಎಂದರ್ಥ ಮಾಡಿರುವರು. ಈ ಅರ್ಥವನ್ನಲ್ಲದೆ ಬೇರೆಬೇರೆ ಸ್ಥಳಗಳಲ್ಲಿ ಬೇರೆಬೇರೆ ಅರ್ಥವನ್ನು ಹೇಳಿರುವರು. ಸ್ಕಂದ

ಸ್ವಾಮಿಯು ಈ ಪದಕ್ಕೆ ಅರ್ಥಮಾಡುವಾಗ—**ತನಾಶಬ್ದೋ ದಶಾಪವಿತ್ರವಚನಃ । ಅಣ್ವೀಭಿರ್ದಶಾಪವಿತ್ರೇಣ ಚ ಪೂತಾಃ । ಹಸ್ತೇನ ದಶಾಪವಿತ್ರಮಾದಾಯ ಪೂತಾ ಇತ್ಯರ್ಥಃ ॥** ಎಂದರೆ ತನಾಶಬ್ದಕ್ಕೆ ದಶಾಪವಿತ್ರವೆಂದು ಹೆಸರು (ಜಾಲರಿಯಂತಿರುವ ಸೋಸುವ ಬಟ್ಟೆ). ಆದುದರಿಂದ **ಅಣ್ವೀಭಿಸ್ತನಾ ಪೂತಾಸಃ** ಎಂಬ ವಾಕ್ಯಕ್ಕೆ, ಬೆರಳುಗಳಿಂದ ಬಟ್ಟೆಯನ್ನು ತೆಗೆದುಕೊಡು ಶುದ್ಧಮಾಡಿದ ಎಂದರ್ಥವಾಗುವುದು ಎಂದು ಹೇಳಿದಾರೆ. ಈ ಅರ್ಥವೇ ಸಮಂಜಸವಾಗಿರುವುದು. ತನಾ ಶಬ್ದಕ್ಕೆ ಅನೇಕಾರ್ಥಗಳಿದ್ದರೂ ಸೋಮರಸದ ಸಂಬಂಧದಲ್ಲಿ ಉಪಯೋಗಿಸುವಾಗ ಈ ಶಬ್ದಕ್ಕೆ ದಶಾಪವಿತ್ರವೆಂತಲೇ ಅರ್ಥಮಾಡುವುದು ಸಕಾರಣವಾಗಿರುವುದು. ಈ ವಿಷಯವಾಗಿ ೯ ನೆಯ ಮಂಡಲದಲ್ಲಿ ಸೋಮಸಂಬಂಧವಾದ ಪ್ರಯೋಗಗಳಿರುವ ಕೆಲವು ಉದಾಹರಣೆಗಳನ್ನು ಕೊಡುತ್ತೇವೆ.

ವಾರೇಣ ಶಶ್ವತಾ ತನಾ । (ಋ. ಸಂ. ೯-೧೧-೬)

ತ್ವಂ ಸೋಮ ವಿಪಶ್ಚಿತಂ ತನಾ ಪುನಾನ ಆಯುಷು । (ಋ. ಸಂ. ೯-೧೬-೮)

ಪ್ರಸುವಾನೋ ಧಾರಯಾ ತನೇಂದುರ್ಹಿನ್ವಾನೋ ಅರ್ಷತಿ । (ಋ. ಸಂ. ೯-೩೪-೧)

ಸಹಸ್ರಧಾರೋ ಯಾತ್ ತನಾ । (ಋ. ಸಂ. ೯-೫೨-೨)

ಅಯಂಯೋಸ್ತ್ರಿಂಶತಂ ತನಾ ಸಹಸ್ರಾಣಿ ಚ ದದ್ಮಹೇ । (ಋ. ಸಂ. ೯-೫೮-೪)

ತನಾ ಕೃಣ್ವಂತೋ ಅರ್ವತೇ । (ಋ. ಸಂ. ೯-೬೨-೨)

ಜಹಾತಿ ವಪ್ರಿಂ ಪಿತುರೇತಿ ನಿಷ್ಕೃತಮುಪಪ್ರುತಂ ಕೃಣುತೇ ನಿರ್ಣಿಜಂ ತನಾ ।
(ಋ. ಸಂ. ೯-೭೧-೨)

ಪಿಬಂತಿ ಮಿತ್ರೋ ಅರ್ಯಮಾ ತನಾ ಪೂತಸ್ಯ ವರುಣಃ । (ಋ. ಸಂ. ೮-೯೪-೫)

ಈ ಸ್ಥಳಗಳಲ್ಲೆಲ್ಲಾ ತನಾಶಬ್ದಕ್ಕೆ ದಶಾಪವಿತ್ರವೆಂದು (a fringed filtering cloth) ಅರ್ಥಮಾಡುವುದೇ ಸಮಂಜಸವಾಗಿರುವುದು.

ಪೂತಾಸಃ—ಪೂತಾಸಃ ಎಂಬುದು ಪ್ರಥಮಾ ಬಹುವಚನದ ಪ್ರಾಚೀನಪ್ರಯೋಗವು. ಈ ಶಬ್ದ ಪ್ರಯೋಗವು ಈ ಋಕ್ಕಿನಲ್ಲಿ ಮಾತ್ರ ಇದೆ. ಇನ್ನೆಲ್ಲಿಯೂ ಇಲ್ಲ. ಪೂತಾಃ ಎಂಬ ರೂಪಪ್ರಯೋಗವು ಋ. ಸಂ. ೧-೭೯-೧೦ ; ೯-೨೨-೩ , ೯-೧೦೧-೧೨ , ೧೦-೧೪-೨ ಈ ಋಕ್ಕುಗಳಲ್ಲಿರುವುದು. ಅರ್ಥದಲ್ಲಿ ಈ ಎರಡು ಶಬ್ದಗಳಿಗೂ ಏನೂ ವ್ಯತ್ಯಾಸವಿಲ್ಲ.

॥ ವ್ಯಾಕರಣಪ್ರಕ್ರಿಯಾ ॥

ಇಂದ್ರ ಎಂಬಲ್ಲಿ ಆಮಂತ್ರಿತಾದ್ಯುದಾತ್ತಸ್ವರ ಬರುವುದು. ಆ ಎಂಬುದು ನಿಪಾತ. ಆದ್ದರಿಂದ **ನಿಪಾತಾ ಆದ್ಯುದಾತ್ತಾಃ** (ಫಿ. ಸೂ. ೮೦) ಎಂಬುದರಿಂದ ಆದ್ಯುದಾತ್ತ ಬರುವುದು. ಚಿತ್ರಭಾನೋ ಎಂಬ ಆಮಂತ್ರಿತವು ಪದಾತ್ಪರವಾಗಿರುವುದರಿಂದ ಅಸ್ವರಿತ ಆಮಂತ್ರಿತಾನುದಾತ್ತ ಬರುವುದು. **ತ್ವಾಂ ಇಚ್ಛತಿ** (ನಿನ್ನನ್ನು ಅಪೇಕ್ಷಿಸುತ್ತಾನೆ) ಎಂದು ವಿವಕ್ಷೆನಮಾಡಿದಾಗ **ಸುಪ ಆತ್ಮನಃಕ್ಯಚ್** (ಪಾ. ಸೂ. ೩-೧-೮) ಎಂಬುದ

ರಿಂದ ಯುಷ್ಮಚ್ಛಬ್ದಕ್ಕೆ 'ಕ್ಯಚ್' ಪ್ರತ್ಯಯವನ್ನು ಹಚ್ಚಲು **ಪ್ರತ್ಯಯೋತ್ತರಪದಯೋಶ್ಚ** (ಪಾ. ಸೂ. ೭-೨-೦೪) ಪ್ರತ್ಯಯ ಅಥವಾ ಉತ್ತರಪದ ಇವು ಪರದಲ್ಲಿರುವಾಗ ಏಕಾರ್ಥವನ್ನು ಹೇಳುವ ಯುಷ್ಮದಸ್ಮಚ್ಛಬ್ದಗಳ ಮಪರ್ಯಂತಕ್ಕೆ ಅಂದರೆ (ಯುಷ್ಮ್, ಅಸ್ಮ್ ಇವುಗಳಿಗೆ) ಕ್ರಮವಾಗಿ ತ್ವ, ಮ, ಆದೇಶಗಳು ಬರುವುವು ಎಂಬುದರಿಂದ ತ್ವ ಆದೇಶ ಬಂದರೆ ತ್ವ+ಆದ್+ಯ ಎಂದಿರುವಾಗ **ಆತೋಗುಣೇ** ಎಂಬುದರಿಂದ ಪರರೂಪ ಬಂದರೆ 'ತ್ವದ್ಯ' ಎಂದಿರುವಾಗ, 'ಕ್ಯಾಚ್ಛಂದಸಿ' (ಪಾ. ಸೂ. ೩-೨-೧೭೦) ಕ್ಯಪ್ರತ್ಯಯವನ್ನು ಕೊನೆಯಲ್ಲಿ ಹೊಂದಿರುವ ಧಾತುವಿನಮುಂದೆ ವೇದದಲ್ಲಿ 'ಉ' ಪ್ರತ್ಯಯಬರುವುದು ಎಂಬುದರಿಂದ 'ಉ' ಪ್ರತ್ಯಯಬಂದರೆ ಕ್ಯಪ್ರತ್ಯಯದ ಅಕಾರಕ್ಕೆ ಲೋಪಬಂದು ಬಹುವಚನದಲ್ಲಿ ತ್ವದ್ಯವಃ ಎಂದು ಆಗಬೇಕಾಗಿಬಂದರೆ, **ಯುಷ್ಮದಸ್ಮದೋರನಾದೇಶೇ** (ಪಾ.ಸೂ. ೭-೨-೮೬) ಆದೇಶವನ್ನು ಹೊಂದದಿರುವ, ವಿಭಕ್ತಿಯು ಹಲಾದಿ ಪರವಾಗಿರುವಾಗ ಯುಷ್ಮದ್, ಅಸ್ಮದ್ ಶಬ್ದಗಳಿಗೆ 'ಅ' ಆದೇಶಬರುವುದು ಎಂಬುದರಿಂದ ವ್ಯತ್ಯಾಸದಿಂದ ವಿಭಕ್ತಿಯಲ್ಲದ ಹಲಾದಿ ಪ್ರತ್ಯಯಪರವಾಗಿರುವಾಗಲೂ ಅಕಾರಾದೇಶ ಬಂದರೆ ತ್ವ+ಅ+ಯು, ಸವರ್ಣದೀರ್ಘತ್ವಾಯು, ಪ್ರ. ವಿ. ಬಹುವಚನದಲ್ಲಿ ತ್ವಾಯವಃ ಎಂದಾಗುವುದು. ಉಕಾರವು ಪ್ರತ್ಯಯಸ್ವರದಿಂದ ಆದ್ಯುದಾತ್ತವು. ಅಣು ಶಬ್ದವು ಸೂಕ್ಷ್ಮ ಎಂಬ ಅರ್ಥವನ್ನು ಹೇಳುವುದು. ಸೂಕ್ಷ್ಮಾರ್ಥವನ್ನು ಮುನ್ನಿಟ್ಟುಕೊಂಡು ಪ್ರಕೃತದಲ್ಲಿ ಬೆರಳು ಎಂಬ ಅರ್ಥವನ್ನು ಬೋಧಿಸುವುದು, ಅದು ಗುಣವಾಚಕವಾದ್ದರಿಂದ **ವೋತೋಗುಣವಚನಾತ್** (ಪಾ. ಸೂ. ೪-೧-೪೪) ಉಕಾರಾಂತ ಗುಣವಾಚಕದಮುಂದೆ ಸ್ತ್ರೀಲಿಂಗದಲ್ಲಿ ಙೀಷ್ ಪ್ರತ್ಯಯವು ವಿಕಲ್ಪವಾಗಿ ಬರುವುದು ಎಂಬುದರಿಂದ **ಙೀಷ್**ಪ್ರಾಪ್ತವಾದರೆ ವ್ಯತ್ಯಯದಿಂದ ಇಲ್ಲಿ ಙೀನ್ ಪ್ರತ್ಯಯ ಬರುವುದು. ಅದು ನಿತ್ತು. ಆದ್ದರಿಂದ ಆದ್ಯುತ್ತವಾಗುವುದು. **ತನಾ**, ಇದು ನಿತ್ಯ ಎಂಬ ಅರ್ಥದಲ್ಲಿ ನಿಪಾತಿತವಾಗಿರುವುದು, ನಿಪಾತವಾದ್ದರಿಂದ ಆದ್ಯುದಾತ್ತವಾಗುವುದು. **ಪೂತಾಸಃ** ಎಂಬಲ್ಲಿ **ಆಜ್ಜಸೇರಸುಕ್** (ಪಾ. ಸೂ. ೭-೧-೫೩) ಅವರ್ಣಾಂತಶಬ್ದದ ಮುಂದಿರುವ ಜಸ್ ಪ್ರತ್ಯಯಕ್ಕೆ ಅಸುಕ್ ಬರುವುದು ಎಂಬುದರಿಂದ ಅಸುಕ್ ಆಗಮ ಬಂದರೆ ಪೂತಾಸಸ್, ರುತ್ವ ವಿಸರ್ಗಗಳು ಬಂದರೆ ಪೂತಾಸಃ ಎಂದಾಗುವುದು ॥ ೪ ॥

॥ ಸಂಹಿತಾಪಾಠಃ ॥

ಇಂದ್ರಾ ಯಾಹಿ ಧಿಯೇಷಿತೋ ವಿಪ್ರಜೂತಃ ಸುತಾವತಃ ।
ಉಪ ಬ್ರಹ್ಮಾಣಿ ವಾಘತಃ ॥ ೫ ॥

॥ ಪದಪಾಠಃ ॥

ಇಂದ್ರ । ಆ । ಯಾಹಿ । ಧಿಯಾ । ಇಷಿತಃ । ವಿಪ್ರಜೂತಃ ।
ಸುತಾವತಃ ।
ಉಪ । ಬ್ರಹ್ಮಾಣಿ । ವಾಘತಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಮಾ ಯಾಹಿ । ಅಸ್ಮಿನ್ಕರ್ಮಣ್ಯಾಗಚ್ಛ । ಕಿಮರ್ಥಂ । ವಾಘತೆ ಋತ್ವಿಜೋ ಬ್ರಹ್ಮಾಣಿ ವೇದರೂಪಾಣಿ ಸ್ತೋತ್ರಾಣ್ಯುಪೈತುಂ । ಕೀದೃಶಸ್ತ್ವಂ । ಧಿಯಾಸ್ಮದೀಯಯೇಯಾ ಪ್ರಜ್ಞಾಯೇಷಿತಃ ಪ್ರಾಪ್ತಃ । ಅಸ್ಮದ್ಭಕ್ತ್ಯಾ ಪ್ರೇರಿತ ಇತ್ಯರ್ಥಃ । ವಿಪ್ರಜೂತಃ । ಯಥಾ ಯಜಮಾನಭಕ್ತ್ಯಾ ಪ್ರೇರಿತಸ್ತಥಾನ್ಯೈರಪಿ ವಿಪ್ರೈರ್ಮೇಧಾವಿಭಿರ್ಯತ್ವಿಗ್ಭಿಃ ಪ್ರೇರಿತಃ । ಕೀದೃಶಸ್ಯ ವಾಘತಃ । ಸುತಾವತಃ ಅಭಿಷುತಸೋಮಯುಕ್ತಸ್ಯ ॥ ಕೇತ ಇತ್ಯಾದಿಷ್ವೇಕಾದಶಸು ಪ್ರಜ್ಞಾನಾಮಸು ಧೀರಿತಿ ಪಠಿತಂ । ಚತುರ್ವಿಂಶತಿಸಂಖ್ಯಾಕೇಷು ಮೇಧಾವಿನಾಮಸು ವಿಪ್ರೋ ಧೀರ ಇತಿ ಪಠಿತಂ । ಭರತಾ ಇತ್ಯಾದಿಷ್ವಷ್ಟಸ್ವೃತ್ವಿಜ್ಞಾಮಸು ವಾಘತ ಇತಿ ಪಠಿತಂ । ಇಷಿತ ಇತ್ಯತ್ರೈಷ ಗತಾವಿತ್ಯಸ್ಮಾನ್ನಿಷ್ಠಾಯಾಮಿಡಾಗಮಃ । ಆಗಮಾ ಅನುದಾತ್ತಾಃ । ಮ. ೩-೧-೩-೭ । ಇತೀಟ್ಯೋಽನುದಾತ್ತತ್ವಾತ್ ಕ್ತಸ್ವರಃ ಶಿಷ್ಯತೇ । ವಿಪ್ರಜೂತಃ । ಡುವಪ್ ಬೀಜತಂತುಸಂತಾನ ಇತಿ ಧಾತೋರ್ಯಜ್ರೇಂದ್ರಾಗ್ರವಜ್ರವಿಪ್ರೇತ್ಯಾದಿನಾ । ಉ. ೨-೨೮ । ರನ್ವ್ಯತ್ಯಯಾಂತೋ ವಿಪ್ರಶಬ್ದೋ ನಿಪಾತಿತಃ । ನಿಪಾತನಾದುಪಧಾಯಾ ಇಕಾರೋ ಲಘೂಪಧಗುಣಾಭಾವಶ್ಚ । ನಿತ್ಸ್ವಾದ್ಯುದಾತ್ತಃ । ತೈರ್ಜೂತಃ । ಪ್ರಾಪ್ತಃ । ಜೂ ಇತಿ ಸೌತ್ರೋ ಧಾತುರ್ಗತ್ಯರ್ಥಃ । ಶ್ರುಕಃ ಕಿತಿ । ಪಾ. ೬-೧-೧೧ । ಇತೀಟ್ಪ್ರತಿಷೇಧಃ । ತೃತೀಯಾ ಕರ್ಮಣಿ । ಪಾ. ೬-೨-೪೮ । ಇತಿ ಪೂರ್ವಪದಪ್ರಕೃತಿಸ್ವರತ್ವಂ । ಸುತಾವತಃ । ಛಾಂದಸಂ ದೀರ್ಘತ್ವಂ । ಮತುಪೋಽನುದಾತ್ತತ್ವಾತ್ ಕ್ತಪ್ರತ್ಯಯಸ್ವರ ಏವ ಶಿಷ್ಯತೇ ! ಬ್ರಹ್ಮಾಣಿ । ನಭ್ರಾಪಯಸ್ಯಾನಿಸಂತಸ್ಯೇತ್ಯಾದ್ಯುದಾತ್ತಃ । ವಾಘದ್ಬ್ರಹ್ಮ ಋತ್ವಿಜ್ಞಾಮಸು ಪಠಿತಃ ಪ್ರಾತಿಪದಿಕಸ್ವರಃ ॥

॥ ಪ್ರತಿಪದಾರ್ಥ ॥

(ಹೇ) ಇಂದ್ರ—ಎಲೈ ಇಂದ್ರನೇ, (ನೀನು) । ಧಿಯಾ—(ನಮ್ಮ) ಬುದ್ಧಿಯಿಂದ (ಭಕ್ತಿಯಿಂದ) । ಇಷಿತಃ—ಪ್ರೇರಿತನಾಗಿ (ಮತ್ತು) ವಿಪ್ರಜೂತಃ—ಮೇಧಾವಿಗಳಾದ (ಬುದ್ಧಿವಂತರಾದ) ಋತ್ವಿಕ್ಕುಗಳಿಂದಲೂ ಪ್ರೇರಿತನಾಗಿ । ಸುತಾವತಃ—ಸೋಮರಸವನ್ನು ಸಿದ್ಧಪಡಿಸಿ ಇಟ್ಟುಕೊಂಡಿರುವ । ವಾಘತಃ—ಋತ್ವಿಜನ ಬ್ರಹ್ಮಾಣಿ—ವೇದರೂಪವಾದ ಸ್ತೋತ್ರಗಳನ್ನು । ಉಪ—ಹೊಂದುವುದಕ್ಕಾಗಿ । ಆ ಯಾಹಿ—(ನಾವು ಮಾಡುತ್ತಿರುವ ಈ ಯಜ್ಞಸಂಬಂಧವಾದ ಕರ್ಮದಲ್ಲಿ) ಬರುವವನಾಗು.

॥ ಭಾವಾರ್ಥ ॥

ಎಲೈ ಇಂದ್ರನೇ, ನಾವು ಮತ್ತು ಋತ್ವಿಕ್ಕುಗಳೂ ಭಕ್ತಿಯಿಂದ ನಿನ್ನನ್ನು ಸ್ತೋತ್ರಮಾಡುವೆವು. ಮತ್ತು ಋತ್ವಿಜನ:, ಸೋಮರಸವನ್ನು ಸಿದ್ಧಪಡಿಸಿರುವನು. ನಮ್ಮ ಭಕ್ತಿಯಿಂದ ಪ್ರೇರಿತನಾಗಿ ಆದನ್ನು ಪಾನ ಮಾಡುವುದಕ್ಕಾಗಿಯೂ ನಾವು ಮಾಡುವ ವೇದರೂಪವಾದ ಸ್ತೋತ್ರಗಳನ್ನು ಸ್ವೀಕರಿಸುವುದಕ್ಕಾಗಿಯೂ ನಾವು ಮಾಡುತ್ತಿರುವ ಈ ಯಜ್ಞಕರ್ಮಕ್ಕೆ ಬರುವವನಾಗು.

English Translation.

O Indra, you are moved by our devoted prayers and that of learned men. Come hither to receive our prayers and the soma juice pressed and prepared for your sake.

॥ ವಿಶೇಷವಿಷಯಗಳು ॥

ಧಿಯಾ—ಇದು ಧೀಶಬ್ದದ ತೃತೀಯಾವಿಭಕ್ತಿಯ ಏಕವಚನವು. ಈ ಶಬ್ದವು "ಕೇತ" ಮೊದಲಾದ ಪ್ರಜ್ಞಾರ್ಥಸೂಚಕವಾದ ೧೧ ನಾಮಗಳ ಮಧ್ಯದಲ್ಲಿ ಪರಿತವಾಗಿದೆ. ಈ ಶಬ್ದಕ್ಕೆ ಇಲ್ಲಿ ಬುದ್ಧಿಯಿಂದ, ವಿವೇಕದಿಂದ, ಮನಃಪೂರ್ವಕವಾದ ಆಸಕ್ತಿಯಿಂದ ಎಂದರ್ಥವು. ಪೌರ್ವಾತ್ಯ ಮತ್ತು ಪಾಶ್ಚಾತ್ಯಪಂಡಿತರು ಈ ಶಬ್ದಕ್ಕೆ ಸಂದರ್ಭಾನುಸಾರವಾಗಿ ವಿಧವಿಧವಾದ ಅರ್ಥವನ್ನು ಮಾಡಿರುವರು. ಆಯಾ ಸ್ಥಳಗಳಲ್ಲಿ ಆ ಅರ್ಥಗಳನ್ನು ವಿವರಿಸಲಾಗುವುದು.

ಇಷಿತಃ—ಈ ಶಬ್ದವು "ಇಷ ಗತೌ" ಎಂಬ ಧಾತುವಿನಿಂದ ಉತ್ಪನ್ನವಾಗಿದೆ. ಈ ಶಬ್ದಕ್ಕೆ ಇಲ್ಲಿ ಕರೆಯಲ್ಪಟ್ಟ, ಪ್ರೇರಿತವಾದ, ಪ್ರಾರ್ಥಿಸಲ್ಪಟ್ಟ ಎಂದು ಅರ್ಥವು.

ವಿಪ್ರಜೂತಃ—ಇದು ವಿಪ್ರ ಮತ್ತು ಜೂತ ಎಂಬ ಎರಡುಪದಗಳನ್ನೊಳಗೊಂಡ ಸಮಾಸಪದವು. ವಿಪ್ರಶಬ್ದವು ಮೇಧಾವಿನಾಮಸೂಚಕವಾದ ಇಪ್ಪತ್ತುನಾಲ್ಕು ಶಬ್ದಗಳ ಮಧ್ಯದಲ್ಲಿ ಪರಿತವಾಗಿದೆ. ಆದುದರಿಂದ ಈ ಶಬ್ದಕ್ಕೆ, ಮೇಧಾವಿಗಳು, ಬುದ್ಧಿವಂತರು, ವಿವೇಚನಾಶಕ್ತಿಯುಳ್ಳವರು ಎಂದರ್ಥವು. **ಜೂತಃ** ಎಂದರೆ ಪ್ರಾಪ್ತಃ, ಅಭಿಪ್ಸಿತಃ, ಪ್ರೇರಿತಃ—ಹೊಂದಲ್ಪಟ್ಟ, ಸ್ತುತಿಸಲ್ಪಟ್ಟ, ಪ್ರೇರಿಸಲ್ಪಟ್ಟ ಎಂದರ್ಥವು ವಿಪ್ರಶಬ್ದಕ್ಕೆ ಆಧುನಿಕಸಂಸ್ಕೃತದಲ್ಲಿ ಬ್ರಾಹ್ಮಣ ಎಂಬರ್ಥವು ರೂಢಿಯಲ್ಲಿದ್ದರೂ ವೇದಸಾಹಿತ್ಯದಲ್ಲಿ ಅದರಲ್ಲಿಯೂ ಋಗ್ವೇದದಲ್ಲಿ ಈ ಶಬ್ದವನ್ನು ಈ ಅರ್ಥದಲ್ಲಿ ಉಪಯೋಗಿಸಿಲ್ಲ. ವಿಪ್ರಶಬ್ದವು ಋಗ್ವೇದದಲ್ಲಿ ಅನೇಕಮಂತ್ರಗಳಲ್ಲಿ ಪ್ರಯೋಗಿಸಲ್ಪಟ್ಟಿದ್ದರೂ ವಿಪ್ರೆಜೂತಃ ಎಂಬ ಶಬ್ದವು ಈ ಋಕ್ಕಿನಲ್ಲಿ ಮಾತ್ರವಿರುವುದು. ಬೇರೆ ಎಲ್ಲಿಯೂ ಇದರ ಪ್ರಯೋಗವಿಲ್ಲ. ಜೂತಃ ಎಂಬ ಶಬ್ದಕ್ಕೆ ಭಾಷ್ಯಕಾರರು **ಪ್ರಾಪ್ತ**, **ಪ್ರೇರಣ** ಎಂದು ಅನೇಕಕಡೆಗಳಲ್ಲಿ ಅರ್ಥಮಾಡಿರುವರು ಉದಾಹರಣೆಗಾಗಿ.

ಶೋಚಿಷ್ಕೇಶಂ ವೃಷಣಂ ಯಮಿಮಾ ವಿಶಃ ಪ್ರಾವಂತು ಜೂತಯೇ ವಿಶಃ ॥

(ಋ. ಸಂ. ೧-೧೨೭-೨)

ಈ ಋಕ್ಕಿನಲ್ಲಿ ಜೂತಯೇ ಎಂದರೆ **ಪ್ರಾಪ್ತಯೇ** ಎಂದೂ.

ವೀಳುಪತ್ಮೈಭಿರಾಶುಹೇಮಭಿರ್ವಾ ದೇವಾನಾಂ ವಾ ಜೂತಿಭಿಃ ಶಾಶದಾನಾ ॥

(ಋ. ಸಂ. ೧-೧೧೬-೨)

ಈ ಋಕ್ಕಿನಲ್ಲಿ ಜೂತಿಭಿಃ ಎಂದರೆ **ಪ್ರೇರಣೈಶ್ಚ** ಎಂದೂ ಅರ್ಥಮಾಡಿರುವರು ಜೂತ ಎಂಬ ಶಬ್ದವು ಸಮಾಸೋತ್ತರಪದದಲ್ಲಿ ಈ ಅರ್ಥವನ್ನು ಸೂಚಿಸುವ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದೇವೆ—

ಅದ್ರಿಜೂತಃ,—ರಥೋ ಹ ವಾಮ್ಯತಜಾ ಅದ್ರಿಜೂತಃ ಪರಿ ದ್ಯಾವಾಪೃಥಿವೀ ಯಾತಿ ಸದ್ಮಃ ।

(ಋ. ಸಂ. ೩-೫೮-೮)

ಆದಿತ್ಯಜೂತಃ—ದಧಾನೋ ಗೋಮದಶ್ವವತ್ಸುವೀರ್ಯಮಾದಿತ್ಯಜೂತ ಏಧತೇ ।

(ಋ. ಸಂ. ೮-೪೬-೫)

ಇಂದ್ರೆಜೂತಃ—ಯೆದಂಗ ತ್ವಾ ಭರತಾಃ ಸಂತರೇಯುರ್ಗವ್ಯನ್ ಗ್ರಾಮ ಇಷಿತ ಇಂದ್ರೆಜೂತಃ ।

(ಋ. ಸಂ. ೩-೩೩-೧೧)

ದೇವಜೂತಃ—ಮಹಾ ಋಷಿರ್ದೇವಜಾ ದೇವಜೂತೋಽಸ್ತಭ್ನಾತ್ಸಿಂಧುಮರ್ಣವಂ ನೃಚಕ್ಷಾಃ ।
(ಋ. ಸಂ. ೩-೫೩-೯ ಮತ್ತು ೪-೧೧ ೪ , ೭-೪೪-೩ , ೮-೩೧- ೩)

ಬಾಹುಜೂತಃ—ಯುಷ್ಮದೇತಿ ಮುಷ್ಟಿಹಾ ಬಾಹುಜೂತೋ ಯುಷ್ಮತ್ಪದೇಷ್ವೀ ಮರುತಃ ಸುವೀರಃ । (ಋ. ಸಂ ೫-೫೮-೪)

ವಾತಜೂತಃ—ವಿ ವಾತಜೂತೋ ಅತಸೇಷು ತಿಷ್ಠತೇ ವೃಥಾ ಜುಹೂಭಿಃ ಸೃಣ್ಯಾ ತುವಿಷ್ವಣಿಃ ।
(ಋ. ಸಂ. ೧-೫೮-೪ ಮತ್ತು ೧-೬೫-೪ , ೧೦-೧೭೭-೧)

ಶ್ಯೇನಜೂತಃ—ಅಪ್ಸು ದ್ರಪ್ಸೋ ವಾವೃಧೇ ಶ್ಯೇನಜೂತೋ ದುಹ ಈಂ ಪಿತಾ ದುಹ ಈಂ ಪಿತುರ್ಜಾಃ । (ಋ ಸಂ. ೯-೮೯-೨)

Ludwig, Williams, Griffith ಮೊದಲಾದ ಪಾಶ್ಚಾತ್ಯ ಪಂಡಿತರು ವಿಪ್ರಶಬ್ದಕ್ಕೆ ಬೇರೆಬೇರೆ ಋಕ್ಕುಗಳಲ್ಲಿ Sage, wise, skilled in work or rite, skilled in speech, singer, Priest, Worshipper' Sacrificier, Fullfiller, Giver of delight, corageous, Sagacious, Pious, Brahmana ಇವೇ ಮೊದಲಾದ ಅರ್ಥಗಳನ್ನು ಹೇಳಿದ್ದರೂ ಈ ಋಕ್ಕಿನಲ್ಲಿ ಈ ಶಬ್ದಕ್ಕೆ Prudent or intelligent ವಿವೇಕಿ, ಬುದ್ಧಿಶಾಲಿ ಎಂಬ ಅರ್ಥವೇ ಸರಿಯಾಗಿ ಹೊಂದುವುದು ಎಂದು ಹೆಳಿರುವರು.

ಸುತಾವತಃ ಅಥವಾ ಸುತವತಃ—ಸುತ ಎಂಬ ಶಬ್ದವು **ಸು** (ರಸವನ್ನು) ಹಿಂಡು ಆದುಮು ಎಂಬ ಅರ್ಥವುಳ್ಳ ಧಾತುವಿನಿಂದ ಉತ್ಪನ್ನವಾದ ಶಬ್ದವು. **ಸುತಃ ಸೋಮಃ ಅಸ್ಯಾಸ್ತೀತಿ ಸುತಾವಾನ್ ತಸ್ಯ ಸುತಾವತಃ** ಎಂದು ಈ ಶಬ್ದದ ನಿಷ್ಪತ್ತಿಯು. ಈ ಶಬ್ದವು ವಾಘತಃ ಎಂಬ ಶಬ್ದಕ್ಕೆ ವಿಶೇಷಣವಾಗಿರುವುದು. ಈ ಶಬ್ದವು ಸಾಧಾರಣವಾಗಿ ಸೋಮರಸವನ್ನು ಹಿಂಡಿ ತೆಗೆಯುವ ಸಂದರ್ಭದಲ್ಲಿ ಉಪಯೋಸಲ್ಪಡುವುದು.

ಉಪೆ—ಸಮೀಪ, ಹತ್ತಿರ. ಅಥವಾ ಸಮೀಪಕ್ಕೆ ಹೋಗುವುದು, ಸಮೀಪವನ್ನು ಹೊಂದುವುದು ಇತ್ಯಾದಿ.

ಬ್ರಹ್ಮಾಣಿ—ಈ ಶಬ್ದಕ್ಕೆ ಭಾಷ್ಯಕಾರರು ಸ್ತೋತ್ರವೆಂದು ಅರ್ಥಮಾಡಿರುವರು. ಸ್ಕಂದಸ್ವಾಮಿಯು —ನಿಘಂಟುವಿನ ೨-೭ ಸೂತ್ರದಂತೆ ಬ್ರಹ್ಮಶಬ್ದಕ್ಕೆ ಅನ್ನವೆಂದೂ ಸ್ತೋತ್ರವೆಂದೂ ಎರಡು ಅರ್ಥಗಳನ್ನೂ ಹೇಳಿರುವರು. ಪಾಶ್ಚಾತಪಂಡಿತರಲ್ಲಿ Ludwig, Williams, Griffith ಮೊದಲಾದವರು ಈ ಶಬ್ದಕ್ಕೆ Sacred Word, Preyer, Strotra, Homage, honour, song, libation, oblation, Praise, adoration, Devotion, Offering, Sacred rite, Food ಎಂದು ಸಂದರ್ಭಾನುಸಾರವಾಗಿ ವಿಧವಿಧವಾಗಿ ಅರ್ಥಮಾಡಿರುವರು ಇವರು ಬೇರೆ ಬೇರೆ ಪದಗಳನ್ನು ಉಪಯೋಗಿಸಿದ್ದರೂ ಸಾಯಣ ಮತ್ತು ಸ್ಕಂದಸ್ವಾಮಿಯು ಉಪಯೋಗಿಸಿರುವ ಅರ್ಥಗಳಿಗೆ ವಿಶೇಷವ್ಯತ್ಯಾಸವಿಲ್ಲ.

ವಾಘತಃ—ನಿಘಂಟುವಿನಲ್ಲಿಯೇ ಈ ಶಬ್ದಕ್ಕೆ ಋತ್ವಿಕ್ ಎಂದು ಸ್ಪಷ್ಟವಾಗಿ ಹೇಳಿರುವುದರಿಂದ ಭಾಷ್ಯಕಾರರೂ ಸ್ಕಂದಸ್ವಾಮಿ ಮುಂತಾದವರೂ ಈ ಅರ್ಥವನ್ನೇ ಅನುಮೋದಿಸಿದಾರೆ. ಪಾಶ್ಚಾತ್ಯಪಂಡಿತರ ಅಭಿಪ್ರಾಯವೂ ಈ ಅರ್ಥಕ್ಕೆ ವ್ಯತಿರಿಕ್ತವಾಗಿಲ್ಲ. ಉಪಯೋಗಿಸಿರುವ ಶಬ್ದಗಳು ಮಾತ್ರ ಬೇರೆಬೇರೆಯಾಗಿರುವುವು. ಈ ಶಬ್ದವು ಋಗ್ವೇದದಲ್ಲಿ ೧-೩-೫ ; ೧-೫೮-೭ ; ೧-೮೮-೬ ; ೧-೧೧೦-೪ ; ೩-೨-೧ ; ೩-೩೭-೨ ; ೬-೧೬-೧೩ ; ೭-೩೨-೧ ; ೮-೨೮-೪ ; ೧೦-೬೨-೭ ; ೩-೬೦-೪ ಎಂಬ ಈ ಹನ್ನೊಂದು ಋಕ್ಕುಗಳಲ್ಲಿ ಮಾತ್ರ ಉಪಯೋಗಿಸಲ್ಪಟ್ಟಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಇಷಗತೌ ಎಂಬ ಧಾತುವಿನಮೇಲೆ ಕ್ತ ಪ್ರತ್ಯಯವನ್ನಿಟ್ಟರೆ **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ಎಂಬುದರಿಂದ ತ ಎಂಬುದಕ್ಕೆ ಇಟ್ ಆಗಮ ಬಂದರೆ ಇಷಿತಃ ಎಂದಾಗುವುದು. ಇಲ್ಲಿ **ಆಗಮಾ ಅನುದಾತ್ತಾಃ** (ಪಾ. ಸೂ. ೩-೧-೩-ವಾ ೭) ಆಗಮಗಳು ಅನುದಾತ್ತವಾಗುವವು ಎಂಬುದರಿಂದ ಇ ಎಂಬುದು ಅನುದಾತ್ತವಾಗುವುದು. ಆದ್ದರಿಂದ ಕ್ತ ಪ್ರತ್ಯಯ ಸ್ವರವು ನಿಲ್ಲುವುದು. ಡು ವಪ್ ಬೀಜಸಂತಾನೇ ಎಂಬ ಧಾತುವು **ಋಜ್ರೇಂದ್ರಾಗ್ರ ವಜ್ರ ವಿಪ್ರ ಕುಬ್ರ ಚುಬ್ರ ಕ್ಷುರ ಋರಭದ್ರೋಗ್ರ ಭೇರ ಭೇಲ ಶುಕ್ರ ಶಕ್ಲೇ ಗೌರವನ್ರೇರಮಾಲಾಃ** (ಉ. ಸೂ. ೨-೧೪೬) ಈ ೧೯ ಶಬ್ದಗಳು ರ ಪ್ರತ್ಯಯಾಂತವಾಗಿ ನಿಪಾತಿಸಲ್ಪಡುವುವು, ಎಂಬುದರಿಂದ ರನ್ ಪ್ರತ್ಯಯಾಂತವಾಗಿ ನಿಪಾತಿಸಲ್ಪಟ್ಟಿರುವುದು. ನಿಪಾತನವಾದ್ದರಿಂದಲೇ ವಪ್ ಧಾತುವಿನ ಅಕಾರಕ್ಕೆ ಇಕಾರವೂ, ಇಕಾರಕ್ಕೆ ಲಘೂಪಧಗುಣವಿಲ್ಲದೇ ಇರುವಿಕೆಯೂ ಸಿದ್ಧಿಸುವುದು. ಇದು ನಿತ್ತಾದ್ದರಿಂದ, ಆದ್ಯುದಾತ್ತ, ವಿಪ್ರೈಃಜೂತಃ, ವಿಪ್ರಜೂತಃ, ಜೂ ಎಂಬುದು ಸೂತ್ರಪರಿತವಾದ ಧಾತುವು. ಇದಕ್ಕೆ 'ಗತಿ' ಎಂದರ್ಥವು. ಜೂಧಾತುವಿನಮೇಲೆ ಬಂದ ಕ್ತ ಪ್ರತ್ಯಯಕ್ಕೆ **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ಎಂಬುದರಿಂದ ಇಡಾಗಮವಪ್ರಾಪ್ತವಾದರೆ **ಶ್ರ್ಯುಕಃಕಿತಿ** (ಪಾ. ಸೂ. ೭-೨-೧೦) ಶ್ರಿಞ್ ಧಾತು, ಉ, ಋ, ೠ, ವರ್ಣಾಂತವಾದ ಏಕಾಚ್ಕಧಾತು. ಇವುಗಳಮುಂದಿರುವ ಗಿತ್, ಕಿತ್, ಪ್ರತ್ಯಯಗಳಿಗೆ ಇಡಾಗಮ ಬರುವುದಿಲ್ಲ. ಎಂಬುದರಿಂದ ನಿಷೇಧ ಬರುವುದು, ನಂತರ **ತೃತೀಯಾಕರ್ಮಣಿ** (ಪಾ. ಸೂ. ೬-೨-೪೮) ಕರ್ಮಣಿಕ್ತ ಪ್ರತ್ಯಯಾಂತ ಶಬ್ದವು ಪರವಾಗಿರುವಾಗ ತೃತೀಯಾಂತವು ಪ್ರಕೃತಿಸ್ವರವನ್ನು ಹೊಂದುವುದು, ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುವುದು. ಸುಧಾತುವಿನಮೇಲೆ ಕ್ತ ಪ್ರತ್ಯಯಬಂದರೆ ಸುತ ಎಂದಾಗುತ್ತೆ. ಇದರಮೇಲೆ ಮತುಪ್ ಪ್ರತ್ಯಯಬಂದರೆ ಸುತವತಃ ಎಂದಿರುವುದು. ಛಾಂದಸವಾಗಿ ಪೂರ್ವಪದಕ್ಕೆ ದೀರ್ಘಬಂದರೆ ಸುತಾವತಃ ಎಂದಾಗುವುದು. ಮತುಪ್ ಅನುದಾತ್ತವಾದ್ದರಿಂದ ಕ್ತ ಪ್ರತ್ಯಯಸ್ವರ ನಿಲ್ಲವುದು, ಬ್ರಹ್ಮಾಣಿ **ನಬ್ವಿಷಯಸ್ಯಾನಿಸಂತಸ್ಯ** (ಫಿ. ಸೂ. ೨೬) ಎಂಬುದರಿಂದ ಆದ್ಯುದಾತ್ತ, ವಾಫೆತ್ ಎಂಬುದನ್ನು ಋತ್ವಿಬ್ನಾಮು ಧೇಯಮಧ್ಯದಲ್ಲಿ ಯಾಸ್ಕರು ಪಠಿಸಿರುವುದರಿಂದ ಪ್ರಾತಿಪದಿಕವು, ಆದ್ದರಿಂದ ಪ್ರಾತಿಪದಿಕಸ್ವರ ಬರುವುದು ॥ ೫ ॥

॥ ಸಂಹಿತಾಪಾಠಃ ॥

ಇಂದ್ರಾ ಯಾಹಿ ತೂತುಜಾನ ಉಪ ಬ್ರಹ್ಮಾಣಿ ಹರಿವಃ ।
ಸುತೇ ದಧಿಷ್ವ ನಶ್ಚನಃ ॥ ೬ ॥

॥ ಪದಪಾಠಃ ॥

ಇಂದ್ರ । ಆ । ಯಾಹಿ । ತೂತುಜಾನಃ । ಉಪ । ಬ್ರಹ್ಮಾಣಿ । ಹರಿವಃ ।
ಸುತೇ । ದಧಿಷ್ವ । ನಃ । ಚನಃ ॥ ೬ ॥

॥ ಸಾಯಣಭಾಷ್ಯಂ ॥

ಹರಿಶಬ್ದ ಇಂದ್ರಸಂಬಂಧಿನೋರಶ್ವಯೋರ್ನಾಮಧೇಯಂ । ಹರೀ ಇಂದ್ರಸ್ಯ ರೋಹಿತೋರ್ವಾ-ಗ್ನೇರಿತಿ ತದೀಯಾಶ್ವನಾಮತ್ವೇನ ಪಠಿತತ್ವಾತ್ । ಹೇ ಹರಿವಃ ಅಶ್ವಯುಕ್ತೇಂದ್ರ ತ್ವಂ ಬ್ರಹ್ಮಾಣ್ಯಸ್ಮೈ-ತುಮಾ ಯಾಹಿ। ಕೀದೃಶಸ್ತ್ವಂ। ತೂತುಜಾನಃ ತ್ವರಮಾಣಃ। ಆಗತ್ಯ ಚಾಸ್ಮನ್ಸುತೇ ಸೋಮಾಭಿಷವಯು-ಕ್ತೇ ಕರ್ಮಣಿ ನೋರಸ್ಮದೀಯಂ ಚನೋರನ್ನಂ ಹವಿರ್ಲಕ್ಷಣಂ ದಧಿಷ್ವ ಧಾರಯ । ಸ್ವೀಕುರ್ವಿತ್ಯರ್ಥಃ । ತೂತುಜಾನಃ । ತುಜೇರ್ಲಿಟಿ ಲಿಟಃ ಕಾನಜ್ವಾ। ಪಾ. ೩-೨-೧೦೬ । ಇತಿ ಕಾನಜಾದೇಶಃ । ತುಜಾದೀನಾಂ ದೀರ್ಘೋರಭ್ಯಾಸಸ್ಯ। ಪಾ. ೬-೧-೭। ಇತ್ಯಭ್ಯಾಸಸ್ಯ ದೀರ್ಘತ್ವಂ । ಅಭ್ಯಸ್ತಾನಾಮಾದಿಃ ಪಾ. ೬-೧-೧೮೯ । ಇತ್ಯಾದ್ಯುದಾತ್ತತ್ವಂ । ಹರಿವ ಇತ್ಯತ್ರೆ ಹರಯೋಽಸ್ಯ ಸಂತೀತಿ ಮತುಪಿ ಛಂದಸೀರಃ । ಪಾ. ೮-೨-೧೫ । ಇತಿ ಮಕಾರಸ್ಯ ವತ್ವಂ । ಸಂಬುದ್ಧಾವುಗಿದಚಾಂ । ಪಾ. ೭-೧-೭೦ । ಇತಿ ನುಂ । ಸಂಯೋಗಾಂತ-ಲೋಪೇ । ಪಾ. ೮-೨-೨೩ । ನಕಾರಸ್ಯ ಮತುವಸೋ ರುಃ ಸಂಬುದ್ಧೌ ಛಂದಸಿ । ಪಾ. ೮-೩-೧ । ಇತಿ ರುತ್ವಂ । ಆಸ್ಪಬಿಕೋ ನಿಘಾತಃ । ಬ್ರಹ್ಮಾಣೇತ್ಯಸ್ಯ ಹರಿವ ಇತ್ಯನೇನಾಸಾಮರ್ಥ್ಯಾತ್ಸಮರ್ಥಃ ಪದ-ವಿಧಿರಿತಿ ನಿಯಮಾತ್ಸುಬಾಮಂತ್ರಿತಪರಾಂಗವದ್ಭಾವಾಭಾವೇನಾಮಂತ್ರಿತನಿಘಾತಾಭಾವಾದಾದ್ಯುದಾತ್ತತ್ವೇ ಸತ್ಯುಪೇತ್ಯ ಕಾರಸ್ಯ ಸನ್ನತರಃ । ದಧಿಷ್ವೇತ್ಯತ್ರ ದಧಾತೇರ್ಲೋಟಿ ಥಾಸ್ । ಥಾಸಃ ಸೇ । ಪಾ. ೩-೪-೮೦ । ಸವಾಭ್ಯಾಂ ವಾಮೌ । ಪಾ. ೩-೪-೯೧ । ಇತ್ಯೇಕಾರಸ್ಯ ವಾದೇಶಃ । ಛಂದಸ್ಯುಭಯಥಾ । ಪಾ. ೩-೪-೧೧೭ । ಇತಿ ಸಾರ್ವಧಾತುಕಾರ್ಧಧಾತುಕಸಂಜ್ಞಯೋಃ ಸತ್ಯೋಃ ಸಾರ್ವಧಾತುಕತ್ವೇನ ಶಪಿ । ಪಾ. ೩-೧-೬೮ । ತಸ್ಯ ಶ್ಲೌ ಚ ದ್ವಿರ್ಭಾವಃ ಪಾ. ೬-೧-೧೦ । ಅರ್ಧಧಾತುಕತ್ವೇನೇಡಾಗಮಶ್ಚ । ಪಾ. ೭-೨-೩೫ । ಆತೋ ಲೋಪ ಇಟಿ ಚ । ಪಾ. ೬-೪-೬೪ । ಇತ್ಯಾಕಾರಲೋಪಃ । ಚನಃ । ಚಾಯತೇರನ್ನೇ ಹ್ರಸ್ವಶ್ಚ । ಉ. ೪-೧೯೯ । ಇತ್ಯಸುನಂತಃ । ಚಕಾರಾನ್ನುಡಾಗಮೇ ಯಲೋಪಃ ॥

॥ ಪ್ರತಿಪದಾರ್ಥ ॥

ಹರಿವಃ—ಅಶ್ವಗಳಿಂದ ಕೂಡಿದ (ಅಶ್ವಯುಕ್ತವಾದ ರಥದಲ್ಲಿ ಕುಳಿತಿರುವ) । ಇಂದ್ರ—ಎಲೈ ಇಂದ್ರನೇ (ನೀನು) । ತೂತುಜಾನಃ—ವೇಗವುಳ್ಳವನಾಗಿ, ಜಾಗ್ರತೆಯಾಗಿ । ಬ್ರಹ್ಮಾಣಿ—(ನಾವು ಮಾಡುವ) ಸ್ತೋತ್ರಗಳನ್ನು । ಉಪ—ಸ್ವೀಕರಿಸುವುದಕ್ಕಾಗಿ । ಆ ಯಾಹಿ—ಬರುವವನಾಗು । (ಮತ್ತು ಬಂದು) ಸುತೇ—ಸೋಮಾಭಿಷವಯುಕ್ತವಾದ ಈ ಕರ್ಮದಲ್ಲಿ ಎಂದರೆ ನಾವು ಮಾಡುತ್ತಿರುವ ಸೋಮಸಂಬಂಧವಾದ ಯಜ್ಞದಲ್ಲಿ । ನಃ—ನಮ್ಮ । ಚನಃ—ಹವಿಸ್ಸಂಬಂಧವಾದ ಅನ್ನವನ್ನು । ದಧಿಷ್ವ—ಧರಿಸು ಎಂದರೆ ಸ್ವೀಕರಿಸು ।

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಅಶ್ವಗಳನ್ನು ಕಟ್ಟಿದ ರಥದಲ್ಲಿ ಕುಳಿತು ನಾವು ಮಾಡುವ ಸ್ತೋತ್ರಗಳನ್ನೂ, ಮತ್ತು ಈಗ ನಾವು ನಿನಗಾಗಿ ಮಾಡುತ್ತಿರುವ ಸೋಮರಸವನ್ನು ತೆಗೆಯುತ್ತಿರುವ ಈ ಯಜ್ಞಕರ್ಮದಲ್ಲಿ ನಾವು ಅರ್ಪಿಸುವ ಅನ್ನವನ್ನೂ ಸ್ವೀಕರಿಸುವುದಕ್ಕಾಗಿ ಜಾಗ್ರತೆಯಾಗಿ (ಬೇಗನೆ) ಬರುವವನಾಗು.

English Translation.

O Indra, come hither quickly with the tawny horses to our prayers and accept our food in this libation.

॥ ವಿಶೇಷವಿಷಯಗಳು ॥

ತೂತುಜಾನಃ—ಈ ಶಬ್ದಕ್ಕೆ ಭಾಷ್ಯಕಾರರು ತ್ವರಮಾಣಃ ಎಂದೂ ಸ್ಕಂದಸ್ವಾಮಿಯು ಕ್ಷಿಪ್ರಂ (ಬೇಗನೆ, ಶೀಘ್ರವಾಗಿ) ಎಂದೂ ಅರ್ಥಮಾಡಿರುವರು. ಪಾಶ್ಚಾತ್ಯಪಂಡಿತರಲ್ಲಿ Ludwig ಎಂಬುವರು hasty, speedy, exerting ಎಂದೂ Williams ಎಂಬುವರು fleet ಎಂದೂ, Benfey ಎಂಬುವರು exerted ಎಂದೂ Rosen ಎಂಬುವರು hastened ಎಂದೂ ಈ ಶಬ್ದದ ಅರ್ಥವನ್ನು ಈ ಋಕ್ಕಿನ ವಿಷಯದಲ್ಲಿ ಹೇಳಿರುವರು ಇದಲ್ಲದೆ Ludwig ಎಂಬುವರು ಈ ಶಬ್ದಪ್ರಯೋಗವಿರುವ (ಎಂದರೆ ಋ.ಸಂ. ೬-೨೯-೫; ೧೦-೪೪-೧) ಸ್ಥಳಗಳಲ್ಲಿ exerting ಎಂದೂ (ಋ. ಸಂ. ೭-೪೪-೫ ರಲ್ಲಿ) Urging ಎಂದೂ (ಋ. ಸಂ. ೪-೩೨-೨ ರಲ್ಲಿ) Pushing ಎಂದೂ, (ಋ. ಸಂ- ೧೦-೪೪-೧; ೧-೧೪೯-೧ ರಲ್ಲಿ) Prompt ಎಂದೂ (ಋ.ಸಂ. ೪-೩೨-೨; ೧-೬೧-೧೨; ೭-೬೭-೬; ೭-೪೪-೫ ಈ ಋಕ್ಕುಗಳಲ್ಲಿ) Active, strong ಎಂದೂ ಈ ಶಬ್ದಕ್ಕೆ ಅರ್ಥವನ್ನು ಹೇಳಿದಾರೆ.

ಬ್ರಹ್ಮಾಣಿ—ಈ ಶಬ್ದದ ವಿಷಯವನ್ನು ಹಿಂದಿನ ಋಕ್ಕಿನಲ್ಲಿಯೇ ವಿವರಿಸಿದೇವೆ.

ಹರಿವಃ—ಇದಕ್ಕೆ ಭಾಷ್ಯಕಾರರು ಹರಯೋ೭ಸ್ಯ ಸಂತೀತಿ ಎಂದರೆ ಅಶ್ವಗಳುಳ್ಳವನು ಎಂದು ಅರ್ಥಮಾಡಿರುವರು. ಇತರ ಭಾಷ್ಯಕಾರರ ಅರ್ಥವೂ ಇದೇ ರೀತಿ ಇರುವುದು. ಅಶ್ವಗಳುಳ್ಳವನು ಎಂದರೆ ಅಶ್ವಗಳನ್ನು ಕಟ್ಟಿದ ರಥದಲ್ಲಿ ಕುಳಿತಿರುವವನು ಎಂದರ್ಥವು. ಹರೀ ಎಂದರೆ ಇಂದ್ರನ ಅಶ್ವಗಳು. ಈ ಅರ್ಥವನ್ನು

ತಿಷ್ಠಾ ಹರೀ ರಥ ಆಯುಜ್ಯಮಾನಾ ಯಾಹಿ ವಾಯುರ್ನ ನಿಯುತೋ ನೋ ಅಚ್ಛ ।

(ಋ. ಸಂ. ೩-೩೫-೧)

ಎಂಬ ಮಂತ್ರವು ಸಮರ್ಥಿಸುವುದು. ಪಾಶ್ಚಾತ್ಯಪಂಡಿತರಲ್ಲಿ Griffith ಎಂಬುವರು Having a gold colour horse ಎಂದೂ Williams ಎಂಬುವರು provided with the horse named Hari ಎಂದೂ Ludwig, Rosen, Benfey ಎಂಬುವರು Possessed of bey or towny horses ಎಂದೂ ಈ ಶಬ್ದದ ಅರ್ಥವನ್ನು ವಿವರಿಸಿರುವರು.

ದಧಿಷ್ಟ—ಈ ಶಬ್ದವು ಧಾ ಧಾತುವಿನ ಲೋಟ್‌ರೂಪವು. ಈ ಶಬ್ದಕ್ಕೆ ಇಲ್ಲಿ ಸ್ವೀಕರಿಸು ಎಂದರ್ಥ ಮಾಡಬಹುದು.

॥ ವ್ಯಾಕರಣಪ್ರಕ್ರಿಯಾ ॥

ತೂತುಜಾನಃ, ತುಜ ಧಾತುವಿನಮುಂದೆ ಲಿಟ್ ಪ್ರತ್ಯಯವನ್ನಿಟ್ಟರೆ **ಲಿಟಿಧಾತೋರನಭ್ಯಾಸಸ್ಯ** (ಪಾ. ಸೂ. ೬-೧-೮) ಲಿಟ್ಟು ಪರವಾಗಿರುವಾಗ ಅಭ್ಯಾಸವಲ್ಲದುದಾಗಿಯೂ ಒಂದು ಸ್ವರವುಳ್ಳದ್ದಾಗಿಯೂ ಇರುವ ಮೊದಲನೆಯ ಧಾತ್ವವಯವಕ್ಕೆ ದ್ವಿರುಚ್ಚಾರಣೆ ಬರುವುದು. ಧಾತುವು ಆಡಾದಿಯಾಗಿರುವ ಪಕ್ಷದಲ್ಲಿ ಎರಡನೇ

ಏಕಾಚ್ಚಿಗೆ ದ್ವಿರುಚ್ಚಾರಣೆ ಬರುವುದು, ಎಂಬುದರಿಂದ ದ್ವಿರುಚ್ಚಾರಣೆಬಂದರೆ ತುಜ್ ತುಜ್+ಲಿಟ್ ಎಂದಿರುವಾಗ **ಹಲಾದಿಶ್ಶೇಷಃ** (ಪಾ. ಸೂ ೭-೪-೬೦) ಅಭ್ಯಾಸದ ಮೊದಲನೆಯ ವ್ಯಂಜನವು ನಿಲ್ಲುವುದು ಮಿಕ್ಕ ವ್ಯಂಜನಗಳು ಲೋಪವನ್ನು ಹೊಂದುವುವು. (ಅಭ್ಯಾಸವೆಂದರೆ ದ್ವಿರುಚ್ಚರಿತ ಶಬ್ದದ ಪೂರ್ವಭಾಗ) ಎಂಬುದರಿಂದ ಮೊದಲನೆಯ ತುಜ್ ನಜಕಾರಕ್ಕೆ ಲೋಪಬಂದರೆ ತು ತುಜ್+ಲಿಟ್ ಎಂದಿರುವಾಗ **ಲಿಟಃ ಕಾನಜ್ವಾ** (ಪಾ. ಸೂ. ೩-೪-೧೦೬) ಛಂದಸ್ಸಿನಲ್ಲಿ ಲಿಟ್ಟಿಗೆ ಕಾನಜಾದೇಶ ವಿಕಲ್ಪವಾಗಿ ಬರುವುದು ಎಂಬುದರಿಂದ ಕಾನಜಾದೇಶಬರುವುದು, ಕಾನಜ್ ನಲ್ಲಿ 'ಆನ' ಎಂಬದು ನಿಲ್ಲುವುದು ತುತುಜ್+ಆನ ಎಂದಿರುವಾಗ **ತುಜಾದೀನಾಂ ದೀರ್ಘೋಭ್ಯಾಸಸ್ಯ** (ಪಾ. ಸೂ. ೬-೧-೭) ತುಜಾದಿಗಣಪರಿತ ಧಾತುಗಳ ಅಭ್ಯಾಸಕ್ಕೆ ದೀರ್ಘಬರುವುದು ಎಂಬುದರಿಂದ ದೀರ್ಘ ಬಂದರೆ ತೂತುಜಾನಃ ಎಂದಾಗುವುದು. ಇಲ್ಲಿ **ಅಭ್ಯಸ್ತಾನಾಮಾದಿಃ** (ಪಾ ಸೂ. ೬-೧-೧೮೯) ಇಡಾಗಮದಲ್ಲಿರುವ ಸ್ವರವನ್ನು ಆದಿಯಲ್ಲಿ ಹೊಂದಿರುವ ಲಸ್ಥಾನಿಕವಾದ ಸಾರ್ವಧಾತುಕವು ಪರವಾಗಿರುವಾಗ ಅಭ್ಯಸ್ತದ ಆದಿಯು ಉದಾತ್ತವಾಗುವುದು ಎಂಬುದರಿಂದ ಆದ್ಯುದಾತ್ತ್ವ ಬರುವುದು. ಹರಿವಃ ಎಂಬಲ್ಲಿ ಹರಯಃ ಅಸ್ಯ ಸನ್ತೀತಿ (ಕುದುರೆಗಳು ಇವನಲ್ಲಿವೆ ಎಂದು) ಅರ್ಥವಿನಕ್ಷೆಯಾಡಿದಾಗ 'ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್' (ಪಾ. ಸೂ. ೫-೨-೯೪) ಎಂಬುದರಿಂದ ಮತುಪ್ ಪ್ರತ್ಯಯಬಂದರೆ ಇದರ ಮಕಾರಕ್ಕೆ **ಛಂದಸೀರಃ**(ಪ. ಸೂ. ೮-೨-೧೫) ಇಕಾರ ಅಥವಾ ರೇಫವನ್ನು ಕಡೆಯಲ್ಲಿ ಹೊದಿರುವ ಶಬ್ದದಮುಂದಿರುವ ಮತುಪ್ಪಿನ ಮಕಾರಕ್ಕೆ ವಕಾರಬರುವುದು ಎಂಬುದರಿಂದ ವಕಾರಬರುವುದು, ಹರಿವತ್ ಎಂದಿರುವುದು. ಸಂಬೋಧನಾ ಏಕವಚನ ಪ್ರತ್ಯಯವನ್ನಿಟ್ಟರೆ ಮತುಪ್ಪು ಉಗಿತ್, ಆದ್ದರಿಂದ **ಉಗಿದಚಾಂ ಸರ್ವನಾಮಸ್ಥಾನೇ೭ಧಾತೋಃ** (ಪಾ. ಸೂ. ೭-೧-೭೦) **ಸರ್ವನಾಮ**ಸ್ಥಾನವು ಪರವಾಗಿರುವಾಗ ಧಾತುಭಿನ್ನವಾದ ಉಗಿತ್ತಿಗೂ ನಕಾರ ಲೋಪವನ್ನು ಹೊಂದಿರುವ ಅಂಚ್ ಧಾತುವಿಗೂ ನುಮ್ ಆಗಮಬರುವುದು ಎಂಬುದರಿಂದ ನುಮ್ ಆಗಮಬಂದರೆ ಹರಿರ್ವ+ತ್ ಎಂದಿರುವುದು ನಂತರ **ಸಂಯೋಗಾಂತಸ್ಯ**ಲೋಪಃ (ಗಾ. ಸೂ. ೮-೨-೨೩) ಸಂಯೋಗವನ್ನು ಕೊನೆಯಲ್ಲಿ ಹೊಂದಿರುವ ಪದದಕೊನೆಗೆ ಲೋಪ ಬರುವುದು ಎಂಬುದರಿಂದ, **ಹಲ್ಙ್ಯಾಬ್ಭ್ಯಃ** ಇತ್ಯಾದಿ ಸೂತ್ರದಿಂದ ಸಂಬುದ್ಧಿಲೋಪಾನಂತರ ಕೊನೆಯತ್‌ಗೆ ಲೋಪ ಬರುವುದು. ಈಗ **ಮತುವಸೋರು ಸಂಬುದ್ಧೌ ಛಂದಸಿ** (ಪಾ ಸೂ ೮-೩-೧) ಮತುಗ್- ವಸು ಈ ಎರಡು ಪ್ರತ್ಯಯಗಳನ್ನು ಕೊನೆಯಲ್ಲಿ ಉಳ್ಳಶಬ್ದಕ್ಕೆ ಛಂದಸ್ಸಿನಲ್ಲಿ, ರು ಆದೇಶಬರುವುದು ಎಂಬುದರಿಂದ ರು ಆದೇಶ ಬರುವುದು. ರುಆದೇಶವು **ಆಲೋಂತ್ಯಸ್ಯ** (ಪಾ. ಸೂ. ೧-೧-೫೨) ಎಂಬ ಪರಿಭಾಷೆಯಿಂದ ನಕಾರಕ್ಕೆ ಬರುವುದು. ರೇಫಕ್ಕೆ ವಿಸರ್ಗ, ಹರಿವಃ ಎಂದಾಗುವುದು, ಇಲ್ಲಿ ಆಷ್ಟಮಿಕ ಅನುದಾತ್ತಬರುವುದು.

ಸುಬಾಮಂತ್ರಿತೇ ಪರಾಂಗವತ್ಸ್ವರೇ (ಪಾ. ಸೂ. ೨-೧-೨) ಎಂಬುದರಿಂದ ವಿಧಿಸಲ್ಪಡುವ ಪರಾಂಗವದ್ಭಾವವು. ಇದು ಪದವಿಧಿಯಾದಕಾರಣ **ಸಮರ್ಥಃ ಪದವಿಧಿಃ** (ಪಾ.ಸೂ. ೨-೧-೧) ಎಂಬ ಪರಿಭಾಷೆಯನ್ನನುಸರಿಸಿ ಸಾಮರ್ಥ್ಯವಿರುವಾಗಲೇ ಪ್ರವೃತ್ತಿಸುವುದೆಂದು ನಿರೂಪಿತವಾಗಿರುವುದು ಇಲ್ಲಿ ಬ್ರಹ್ಮಾಣಿ ಹರಿವಃ ಎಂಬಿವುಗಳಿಗೆ ಪರಸ್ವಾರಾನ್ವಯವಿಲ್ಲದಕಾರಣ ಸಾಮರ್ಥ್ಯವಿಲ್ಲ ಆದ್ದರಿಂದ ಪರಾಂಗವದ್ಭಾವ ಬರುವುದಿಲ್ಲ. ಆದ್ದರಿಂದ ಬ್ರಹ್ಮಾಣಿ ಎಂಬುದಕ್ಕೆ ಆಷ್ಟಮಿಕಾಮಂತ್ರಿತಾನುದಾತ್ತವು ಬರುವುದಿಲ್ಲ. ಆದ್ಯುದಾತ್ತವಾಗಿಯೇ ಇರುವುದು. ಏವಂಚ ಬ್ರಹ್ಮಾಣಿ ಎಂಬುದರ ಮೊದಲನೆಯ ಉದಾತ್ತದ ಹಿಂದೆ ಇರುವ ಅನುದಾತ್ತವಾದ ಉಪ ಎಂಬುದರ ಅಕಾರವು **ಉದಾತ್ತೆ ಸ್ವರಿತೆಪರಸ್ಯ ಸನ್ನೇತರಃ** (ಪಾ. ಸೂ. ೧-೨-೪೦) ಎಂಬುದರಿಂದ ಅನುದಾತ್ತತರವಾಗುವುದು.

ಧಾಙ್ ಧಾತು (ಡುಧಾಙ್ ಧಾರಣ ಪೋಷಣಯೋಃ) ವಿನ ಮೇಲೆ ಲೋಟ್ ಆತ್ಮನೇಪದದಲ್ಲಿ ಮಧ್ಯಮಪುರುಷ ಏಕವಚನ ಥಾಸ್ ಬಂದರೆ ಧಾ+ಥಾಸ್ ಇದ್ದರೆ **ಥಾಸ್ಸ್ಸೇ** (ಪಾ. ಸೂ. ೩-೪-೮೦) ಟಕಾರೇತ್ಸಂಜ್ಞಕ

ವಾದ ಲಕಾರಸ್ಥಾನದಲ್ಲಿ ಬಂದ ಧಾಸ್‌ಗೆ ಸೇ ಆದೇಶಬರುವುದು ಎಂಬುದರಿಂ ಸೇ ಆದೇಶಬಂದರೆ, **ಸವಾಭ್ಯಾಂ ವಾಮೌ** (ಪಾ ಸೂ. ೩-೪-೯೧), ಸಕಾರ ವಕಾರಗಳಮುಂದಿರುವ ಲೊಟ್ಟಿನ ಏಕಾರಕ್ಕೆ ಕ್ರಮವಾಗಿ ವ- ಅಮ್ ಎಂಬ ಆದೇಶಗಳು ಬರುವುವು ಎಂಬುದರಿಂದ ಏಕಾರಕ್ಕೆ ವ ಆದೇಶಬಂದರೆ ಧಾ+ಸ್ವ ಎಂದಿರುವಾಗ **ಛಂದಸ್ಯುಭಯಥಾ** (ಪಾ. ಸೂ. ೩-೪-೧೧೭) ಧಾತ್ವಧಿಕಾರದಲ್ಲಿ ವಿಹಿತವಾದ ಪ್ರತ್ಯಯಗಳು ಸಾರ್ವಧಾತುಕ ಆರ್ಧಧಾತುಕ ಎಂಬ ಎರಡು ಸಂಜ್ಞೆಯನ್ನೂ ಹೊಂದುವುವು ಎಂಬುದರಿಂದ ಎರಡು ಸಂಜ್ಞೆಯೂ ಬರಲಾಗಿ ಸಾರ್ವಧಾತುಕಸಂಜ್ಞೆಯನ್ನು ಮುನ್ನಿಟ್ಟುಕೊಂಡು **ಕರ್ತರಿಶಪ್** (ಪಾ.ಸೂ. ೩-೧-೬೮) ಕರ್ತೃರ್ಥಕ ಸಾರ್ವಧಾತುಕಪರವಾಗಿರುವಾಗ ಶಪ್ ಬರುವುದು. ಎಂಬುದರಿಂದ ಶಪ್ ವಿಕರಣಬಂದರೆ, **ಈ ಶಪ್‌ಗೆ ಜುಹೋತ್ಯಾದಿಭ್ಯಃ ಶ್ಲುಃ** (ಪಾ. ಸೂ. ೨-೪-೭೫) ಜುಹೋತ್ಯಾದಿಧಾತುಗಳಿಗೆ ಬಂದ ಶಪ್ ವಿಕರಣಕ್ಕೆ ಶ್ಲು (ಲೋಪ) ಬರುವುದು ಎಂಬುದರಿಂದ ಶ್ಲು ಬಂದರೆ **ಶ್ಲೌ** (ಪಾ. ಸೂ. ೬-೧-೧೦) ಶ್ಲು ಬಂದಿರುವಾಗ ಧಾತುವಿಗೆ ದ್ವಿರುಚ್ಚಾರಣೆಬರುವುದು ಎಂಬುದರಿಂದ ದ್ವಿತ್ವ ಬಂದರೆ ಧಾ – ಧಾ+ಸ್ವ**ಹ್ರಸ್ವಃ** (ಪಾ. ಸೂ- ೭-೪-೫೯) ಅಭ್ಯಾಸೇ ಚರ್ಚ (ಪಾ. ಸೂ. ೮-೪-೫೪) ಎಂಬ ಸೂತ್ರಗಳಿಂದ ಹ್ರಸ್ವ ಜಶ್ತ್ವಗಳು ಬಂದರೆ ದ ಧಾ+ಸ್ವ ಎಂದಿರುವಾಗ ಆರ್ಧಧಾತುಕಸಂಜ್ಞೆಯನ್ನು ಮುನ್ನಿಟ್ಟುಕ್ಕೊಂಡು ' ಆರ್ಧಧಾತುಕಸ್ಯೇಡ್ವಲಾದೇಃ ' (ಪಾ. ಸೂ. ೭-೨-೩೫) ಎಂಬುದರಿಂದ ಸ್ವಗೆ ಇಡಾಗಮಮಾಡಿದರೆ ದಧಾ+ಇಸ್ವ ಎಂದಿರುವಾಗ **ಆತೋಲೋಪ ಇಟಿಚ** (ಪಾ. ಸೂ. ೬-೪-೪೪) ಕಿತ್ತುಜಿತ್ತು ಆದ ಅಜಾದ್ಯಾರ್ಧಧಾತುಕ ಆಥವಾ ಇಡಾಗಮ ಇವು ಪರದಲ್ಲಿರುವಾಗ ಆಕಾರಕ್ಕೆ ಲೋಪಬರುವುದು ಎಂಬುದರಿಂದ ಆಕಾರಕ್ಕೆ ಲೋಪಬಂದು ' ಆದೇಶಪ್ರತ್ಯಯಯೋಃ ' (ಪಾ.ಸೂ. ೮-೩-೫೯)ಎಂಬುದರಿಂದ ಸಕಾರಕ್ಕೆ ಷತ್ವಬಂದರೆ ದಧಿಷ್ವ ಎಂದಾಗುವುದು. **ಚಾಯೇತೇರನ್ನೇಹ್ರಸ್ವಶ್ಚ** (ಉ. ಸೂ. ೪-೬-೩೯) ಅನ್ನ ಎಂಬ ಆರ್ಥವನ್ನು ವಿವಕ್ಷೆಮಾಡಿದಾಗ ಚಾಯೃಧಾತುವಿಗೆ ಅಸುನ್ ಪ್ರತ್ಯಯವೂ, ಪ್ರತ್ಯಯಕ್ಕೆ ನುಟ್ ಆಗಮವೂ ಚಾ ಎಂಬುದಕ್ಕೆ ಹ್ರಸ್ವವೂಬರುವುದು. ಎಂಬುದರಿಂದ ಚಾಯೃಧಾತುವಿಗೆ ಅಸುನ್ ನುಟ್ ಹ್ರಸ್ವಗಳು ಬಂದರೆ ಚಯ್‌ನ **ಲೋಪೋವ್ಯೋರ್ವಲಿ** (ಪಾ. ಸೂ. ೬-೧-೬೬) ಎಂಬುದರಿಂದ ಯ ಲೋಪಬಂದರೆ ಚನಃ ಎಂದಾಗುವುದು ॥ ೬ ॥

ಇಲ್ಲಿಗೆ ಐದನೆಯ ವರ್ಗವು ಮುಗಿದುದು

॥ ಸಂಹಿತಾಪಾಠಃ ॥

ಓಮಾಸಶ್ಚರ್ಷಣೀಧೃತೋ ವಿಶ್ವೇ ದೇವಾಸ ಆ ಗತ ।
ದಾಶ್ವಾಂಸೋ ದಾಶುಷಃ ಸುತಂ ॥ ೭ ॥

॥ ಪದಪಾಠಃ ॥

ಓಮಾಸಃ । ಚರ್ಷಣೀಧೃತಃ । ವಿಶ್ವೇ । ದೇವಾಸಃ । ಆ । ಗತ ॥
ದಾಶ್ವಾಂಸಃ । ದಾಶುಷಃ । ಸುತಂ ॥ ೭ ॥

॥ ಸಾಯಣಭಾಷ್ಯಂ ॥

ಹೇ ವಿಶ್ವೇ ದೇವಾಸ ಏತನ್ನಾಮಕಾ ದೇವವಿಶೇಷಾ ದಾಶುಷೋ ಹವಿರ್ದತ್ತವತೋ ಯಜಮಾನಸ್ಯ ಸುತಮಭಿಷುತಂ ಸೋಮಂ ಪ್ರತ್ಯಾ ಗತ । ಆಗಚ್ಛತ । ತೇ ಚ ದೇವಾ ಓಮಾಸೋ ರಕ್ಷಕಾಃ ಚರ್ಷಣೀಧೃತೋ ಮನುಷ್ಯಾಣಾಂ ಧಾರಕಾ ದಾಶ್ವಾಂಸಃ ಫಲಸ್ಯ ದಾತಾರಃ ಮನುಷ್ಯಾ ಇತ್ಯಾದಿಷು ಪಂಚವಿಂಶತಿಸಂಖ್ಯಾಕೇಷು ಮನುಷ್ಯನಾಮಸು ಚರ್ಷಣಿಶಬ್ದಃ ಪಠಿತಃ । ಆಶ್ವಿನಾವಿತ್ಯಾದಿಷ್ವೇಕತ್ರಿಂಶತ್ಸಂಖ್ಯಾಕೇಷು ದೇವವಿಶೇಷನಾಮಸು ವಿಶ್ವೇ ದೇವಾಃ ಸಾಧ್ಯಾ ಇತಿ ಪಠಿತಂ । ಏತಾಮೃಚಂ ಯಾಸ್ಕ ಏವಂ ವ್ಯಾಖ್ಯಾತವಾನ್ । ಆನಿತಾರೋ ವಾವನೀಯಾ ವಾ ಮನುಷ್ಯಧೃತಃ ಸರ್ವೇ ಚ ದೇವಾ ಇಹಾಗಚ್ಛತ ದತ್ತವಂತೋ ದತ್ತವತಃ ಸುತಮಿತಿ ತದೇತದೇಕಮೇವ ವೈಶ್ವದೇವಂ ಗಾಯತ್ರಂ ತೃಚಂ ದಶತಯಿಷು ವಿದ್ಯತೇ ಯತ್ತು ಕಿಂಚಿದ್ಪಹುದೈವತಂ ತದ್ವೈಶ್ವದೇವಾನಾಂ ಸ್ಥಾನೇ ಯುಜ್ಯತೇ ಯದೇವ ವಿಶ್ವಲಿಂಗಮಿತಿ ಶಾಕಪೂಣಿಃ । ನಿ. ೧೨-೪೦ । ಇತಿ । ಅತ್ರ ವಿಶ್ವಶಬ್ದಃ ಸರ್ವಶಬ್ದಪರ್ಯಾಯ ಇತಿ ಯಾಸ್ಕಸ್ಯ ಮತಂ । ದೇವವಿಶೇಷಸ್ಯೈವಾಸಾಧಾರಣಂ ಲಿಂಗಮಿತಿ ಶಾಕಪೂಣೇರ್ಮತಂ । ಆವಂತೀತ್ಯೋಮಾಸೋ ದೇವಾಃ । ಮನ್ನಿತ್ಯನುವೃತ್ತಾವವಿಸಿವಿಸಿಶುಷಿಭ್ಯಃ ಕಿತ್ । ಉ. ೧-೧೪೩ । ಇತಿ ಮನ್ಪ್ರತ್ಯಯಃ । ಜ್ವರತ್ವರಸ್ರಿವ್ಯವಿಮವಾಮುಪಧಾಯಾಶ್ಚ । ಪಾ. ೬-೪-೨೦ । ಇತ್ಯೂಟ್ । ಮನಃ ಕಿತ್ತ್ವೇಽಪಿ ಬಾಹುಲಕತ್ವಾದ್ಗುಣಃ । ಆಜ್ಜಸೇರಸುಕ್ । ಪಾ. ೭-೧-೫೦ । ಇತಿ ಜಸೇರಸುಗಾಗಮಃ । ಅಮಂತ್ರಿತಾದ್ಯುದಾತ್ತತ್ವಂ । ಚರ್ಷಣಯೋ ಮನುಷ್ಯಾಃ । ತಾನ್ಪುಷ್ಟಿದಾನಾದಿನಾ ಧಾರಯಂತೀತಿ ಚರ್ಷಣೀಧೃತೋ ದೇವಾಃ । ಪೂರ್ವಸ್ಯಾಮಂತ್ರಿತಸ್ಯ ಸಾಮಾನ್ಯವಚನಸ್ಯ ವಿಭಾಷಿತಂ ವಿಶೇಷವಚನೇ ಬಹುವಚನಂ । ಪಾ. ೮-೧-೭೪ । ಇತ್ಯವಿದ್ಯಮಾನವತ್ತ್ವಪ್ರತಿಷೇಧಾದಪಾದಾದಿತ್ವೇನ ನಿಘಾತಃ । ನನ್ವತ ಏವ ವಿದ್ಯಮಾನವತ್ತ್ವಾತ್ಪುಬಾಮಂತ್ರಿತ ಇತಿ ಪರಾಂಗವತ್ತ್ವೇನೈಕಪದೀಭಾವಾತ್ಪದಾದಪರತ್ವೇನ ಕಥಂ ನಿಘಾತ ಇತಿ ಚೇನ್ನ । ವತ್ಕರಣಂ ಸ್ವಾಶ್ರಯಮಪಿ ಯಥಾ ಸ್ಯಾತ್ । ಮ. ೮-೧-೭೨ । ಇತಿ ವಚನಾತ್ಪದಭೇದಪ್ರಯುಕ್ತಸ್ಯ ನಿಘಾತಸ್ಯಾಪ್ಯುಪಪತ್ತೇಃ । ಐಕಪದ್ಯೇಽಪ್ಯಾದ್ಯುದಾತ್ತತ್ವೇಽನುದಾತ್ತಂ ಪದಮೇಕವರ್ಜಮಿತಿ ಸುತರಾಮೇವ ನಿಘಾತೋ ಭವಿಷ್ಯತಿ । ಇತ್ಥಮೇವ ತರ್ಹಿ ದೈವತ್ಕಾಣೇ ಶುಭಸ್ಪತೀ ಇತ್ಯತ್ರಾಪಿ ಪರಾಂಗವತ್ತ್ವೇನೈಕಪದ್ಯಾದುತ್ತರಸ್ಯ ಶೇಷನಿಘಾತಪ್ರಸಂಗ ಇತಿ ಚೇನ್ನ । ತತ್ರ ಪರಾಂಗವದ್ಭಾವಸ್ಯ ಪರೇಣಾಮಂತ್ರಿತಂ ಪೂರ್ವಮವಿದ್ಯಮಾನವದಿತ್ಯವಿದ್ಯಮಾನವದ್ಭಾವೇನ ಬಾಧಿತತ್ವಾತ್ । ಇಹ ಪುನರ್ವಿಭಾಷಿತಂ ವಿಶೇಷವಚನೇ ಬಹುವಚನಮಿತ್ಯವಿದ್ಯಮಾನವತ್ತ್ವಸ್ಯ ನೀಷೇಧಾತ್ । ಪೂರ್ವಸ್ಯಾಸ್ಯಾಮಂತ್ರಿತಸ್ಯ ವಿದ್ಯಮಾನವತ್ತ್ವಾತ್ಪರಾಂಗವತ್ತ್ವಂ ಸ್ವೀಕೃತಮಿತಿ ವೈಷಮ್ಯಂ॥ ವಿಶ್ವೇ। ಪಾದಾದಿತ್ವಾದಾದ್ಯುದಾತ್ತಃ । ಗಣದೇವತಾವಚನಶ್ಚಾತ್ರ ವಿಶ್ವಶಬ್ದೋ ನ ಸರ್ವಶಬ್ದಪರ್ಯಾಯ ಇತಿ ವಿಶೇಷ್ಯಪರತಯಾ ಸಾಮಾನ್ಯವಚನತ್ವಾದೋಮಾಸ ಇತ್ಯನೇನ ನ ಸಾಮಾನಾಧಿಕರಣ್ಯಂ । ಸಾಮಾನಾಧಿಕರಣ್ಯೇ ಹಿ ಪೂರ್ವಸ್ಯ ಪಾದಸ್ಯ ಪರಾಂಗವದ್ಭಾವೇ ಸತಿ ಮಿತ್ರಾವರುಣಾವೃತಾವೃಧಾವಿತ್ಯಾದಾವಿವಾತ್ರಾಪ್ಯಾಮಂತ್ರಿತಾದ್ಯುದಾತ್ತತಾ ನ ಸ್ಯಾತ್। ವಿಶ್ವ ಇತ್ಯಸ್ಯ ವಿಶೇಷಣಂ ದೇವಾಸ ಇತಿ । ದೀವ್ಯಂತೀತಿ ದೇವಾಃ ಪ್ರಕಾಶವಂತಃ। ನನ್ವವಯವಪ್ರಸಿದ್ಧೇಃ ಸಮುದಾಯಪ್ರಸಿದ್ಧಿರ್ಬಲೀಯಸೀ। ಪರಿ. ೯೮ । ಇತಿ ರೂಢ ಏವಾರ್ಥೋ ದೇವಶಬ್ದಸ್ಯ ಗ್ರಾಹ್ಯೋ ನ ಯೌಗಿಕಃ । ಯೌಗಿಕತ್ವೇ ಹ್ಯವಯವಾರ್ಥಾನುಸಂಧಾನನ್ಯವಧಾನೇನ ಪ್ರತಿಪತ್ತಿರ್ವಿಕ್ಷಿಪ್ತಾ ಸ್ಯಾತ್ । ಸಮುದಾಯಪ್ರಸಿದ್ಧ್ಯಾ ತು ನ ವಿಕ್ಷೇಪಃ ಇತಿ ಚೇನ್ನ । ಸಮುದಾಯ-

ಪ್ರಸಿದ್ಧೌ ಹಿ ದೇವಶಬ್ದಸ್ಯ ಸಾಮಾನ್ಯಹರತಯಾ ವಿಶೇಷವಚನತ್ವಾಭಾವಾದ್ವಿಭಾಷಿತಂ ವಿಶೇಷವಚನೇ ಬಹುವಚನಮಿತ್ಯನೇನಾನಿಷಿದ್ಧತ್ವಾದ್ವಿಶ್ವೇ ಇತ್ಯಸ್ಯಾವಿದ್ಯಮಾನವತ್ತ್ವೇನ ಶುಭಸ್ಪತೀ ಇತಿ ಪದವದ್ವೇವಾಸ ಇತ್ಯಸ್ಯಾಪ್ಯಾದ್ಯುದಾತ್ತತ್ವೇಂ ಸ್ಯಾತ್ । ಸ್ವರಾನುಸಾರೇಣ ಚ ರೂಢಿತ್ಯಾಗೇನಾಪಿ ದೇವಶಬ್ದಸ್ಯ ಯೋಗ-ಸ್ವೀಕಾರೋ ಯುಕ್ತೆ ಏವ । ಆ ಗತ । ಆಗಚ್ಛತ । ಬಹುಲಂ ಛಂದಸೀತಿ ಶಪ್ಲೋ ಲುಕಿ ಸತ್ಯನುದಾತ್ತೋಪದೇಶೇತ್ಯಾದಿನಾ ಮಕಾರಲೋಪಃ । ಆಜಿಃ ಪದಾತ್ಪರತ್ವಾನ್ನಿಘಾತಃ । ದಾಶ್ವಾಂಸಃ । ದಾಶೃ ದಾನ ಇತ್ಯಸ್ಯ ಕ್ವಸೌ ದಾಶ್ವಾ ಸಾಹ್ವಾನ್ ಮೀಢ್ವಾಂಶ್ಚ । ಪಾ. ೬-೧-೧೨ । ಇತಿ ನಿಪಾತನಾತ್ಕ್ರಾದಿನಿಯಮ-ಪ್ರಾಪ್ತ ಇಡಾಗಮೋ ದ್ವಿರ್ವಚನಂ ಚ ।ಪಾ ೭-೨-೧೩ । ನ ಭವತಿ । ಪ್ರತ್ಯಯಸ್ವರೇಣ ಕ್ವಸೋರುದಾತ್ತತ್ವಂ ದಾಶುಷ ಇತ್ಯತ್ರ ವಸೋಃ ಸಂಪ್ರಸಾರಣಂ । ಪಾ ೬-೪-೧೩೧ । ಇತಿ ಸಂಪ್ರಸಾರಣಂ । ಸಂಪ್ರ-ಸಾರಣಾಚ್ಚ । ಪಾ ೬-೧-೧೦೮ । ಇತಿ ಪೂರ್ವರೂಪತ್ವಂ । ಆದೇಶಪ್ರತ್ಯಯಯೋಃ । ಪಾ. ೮-೩-೫೯ । ಇತಿ ಷತ್ವಂ ॥

॥ ಪ್ರತಿಪದಾರ್ಥಃ ॥

ಓಮಾಸಃ—ರಕ್ಷಕರಾದ । ಚರ್ಷಣೀಧೃತಃ—ಮನುಷ್ಯರನ್ನು ಧಾರಣೆ ಅಥವಾ ಪೋಷಣೆಮಾಡುವ । ದಾಶ್ವಾಂಸಃ—(ಯಜ್ಞ) ಫಲವನ್ನು ಕೊಡುವ (ಹೇ) ವಿಶ್ವೇ ದೇವಾಸಃ—ವಿಶ್ವೇದೇವತೆಗಳೆಂದು ಕರೆಯಲ್ಪಡುವ ನೀವು ! ದಾಶುಷಃ—ಹವಿಸ್ಸನ್ನು ಕೊಡುವ ಯಜಮಾನನ । ಸುತಂ—ಹಿಂಡಿ ಸಿದ್ಧಪಡಿಸಿರುವ ಸೋಮವನ್ನು (ಪಾನಮಾಡುವುದಕ್ಕಾಗಿ) । ಆ ಗತ—ಬನ್ನಿರಿ.

॥ ಭಾವಾರ್ಥ ॥

ಎಲೈ ವಿಶ್ವೇದೇವತೆಗಳೇ, ನೀವು ಮನುಷ್ಯರನ್ನು (ಅಥವಾ ಯಜ್ಞಮಾಡತಕ್ಕವರನ್ನು) ಸಂರಕ್ಷಿಸುವವರು ಮತ್ತು ಯಜ್ಞಕರ್ಮಗಳಿಗೆ ಫಲವನ್ನು ಕೊಟ್ಟು ಮನುಷ್ಯರನ್ನು ಪೋಷಿಸತಕ್ಕವರು. ಇಂತಹ ನೀವು ಯಜಮಾನನು ನಿಮಗಾಗಿ ಸಿದ್ಧಪಡಿಸಿರುವ ಸೋಮವನ್ನು ಪಾನಮಾಡುವುದಕ್ಕಾಗಿ ಇಲ್ಲಿಗೆ ಬನ್ನಿರಿ.

English Translation.

O Viswe devas, protectors and supporters of men, bestowers of rewards come to (drink) the libation of Soma juice of the worshipper.

॥ ವಿಶೇಷವಿಷಯಗಳು ॥

ಇಲ್ಲಿಂದ ಮುಂದಿನ ಮೂರು ಋಕ್ಕುಗಳಿಗೆ ವೈಶ್ವದೇವಸ್ತೃಚವೆಂದು ಹೆಸರು. ಈ ಋಕ್ಕುಗಳನ್ನು ಅಭಿಜಿತ್ಸವನದಲ್ಲಿ ಹೇಳುವರು ಪುತ್ತು ಚಾತುರ್ಮಾಸ್ಯವೆಂಬ ಯಾಗದಲ್ಲಿ ಸೋಮರಸವನ್ನು ತೆಗೆಯುವ ದಿವಸ ಅಧ್ವರ್ಯುವು ಸೋಮವನ್ನು ದ್ರೋಣಕಲಶವೆಂಬ ಒಂದು ದೊಡ್ಡ ಮರದಪಾತ್ರೆಯಿಂದ ಸೋಮವನ್ನು ತೆಗೆಯುವಾಗ ಈ ಮಂತ್ರಗಳನ್ನು ಪಠಿಸುವನು

ಓಮಾಸಃ—ಸಂಭೋಧನಪ್ರಥಮಾಬಹುವಚನವು. ಈ ಶಬ್ದಕ್ಕೆ ರಕ್ಷಕರು, ಸಹಾಯಮಾಡುವವರು ಎಂದರ್ಥವು. ಋಗ್ವೇದದಲ್ಲಿ ಇನ್ನೆಲ್ಲಿಯೂ ಈ ಶಬ್ದದ ಪ್ರಯೋಗವಿಲ್ಲ.

ಚರ್ಷಣೀಧೃತಃ—ಚರ್ಷಣೀಶಬ್ದವು ಮನುಷ್ಯಾರ್ಥಸೂಚಕವಾದ ಇಪ್ಪತ್ತೈದು ಶಬ್ದಗಳ ಮಧ್ಯದಲ್ಲಿ ಪಠಿತವಾಗಿರುವುದು (ನಿ. ೩-೩).

ಯ ಏಕಶ್ಚರ್ಷಣೀನಾಂ ವಸೂನಾಮಿರಜ್ಯಸಿ । (ಋ. ಸಂ. ೧-೭-೯)

ಧರ್ತಾರಾ ಚರ್ಷಣೀನಾಂ । (ಋ. ಸಂ. ೧-೧೭-೩)

ಸೇದು ರಾಜಾಕ್ಷಯತಿ ಚರ್ಷಣೀನಾಮರಾನ್ನ ನೇಮಿಃ ಪರಿ ತಾ ಬಭೂವ ॥

(ಋ. ಸಂ. ೧-೩೨-೧೫)

ಇವೇ ಮೊದಲಾದ ಋಕ್ಕುಗಳಲ್ಲಿ **ಚರ್ಷಣೀನಾಂ** ಎಂಬ ಶಬ್ದಕ್ಕೆ ಭಾಷ್ಯಕಾರರೂ, ಇತರರೂ ಮನುಷ್ಯರೆಂದೇ ಅರ್ಥಮಾಡಿರುವರು. Monier Williams ಎಂಬ ಪಂಡಿತನು **ಚರ್ಷಣೀ** ಶಬ್ದವು **ಕೃಷ್**—ಉಳು, ವ್ಯವಸಾಯಮಾಡು ಎಂಬ ಧಾತುವಿನಿಂದ ಉಂಟಾಗಿರುವುದರಿಂದ ಚರ್ಷಣೀ ಎಂದರೆ ಉಳುವವರು, ವ್ಯವಸಾಯ ಮಾಡುವ ಜನರು ಎಂದರ್ಥಮಾಡಿದಾರೆ. ಈ ಅರ್ಥವೂ ಸಾಧುವಾದುದೆಂದು ತೋರುತ್ತದೆ. ಇತರ ಪಾಶ್ಚಾತ್ಯ ಪಂಡಿತರು ಇದಕ್ಕೆ ಅರ್ಥಮಾಡುವಾಗ Man, people, race, stock, tribe ಎಂಬ ಶಬ್ದಗಳನ್ನು ಉಪಯೋಗಿಸಿದಾರೆ. ಈ ಪದವನ್ನು ವಿಶೇಷಣವಾಗಿ ಉಪಯೋಗಿಸುವ ಸಂದರ್ಭದಲ್ಲಿ, hastening, brisk, active ಎಂಬ ಅರ್ಥವಿರುವುದೆಂದು ಹೇಳುವರು. Griffith ಎಂಬುವರು ಈ ಶಬ್ದವು **ಚರ್** ಸಂಚರಿಸು ಎಂಬ ಧಾತುವಿನಿಂದ ಉಂಟಾಗಿರುವುದರಿಂದ ಈ ಚರ್ಷಣೀಶಬ್ದವು Living beings ಪ್ರಾಣಿಗಳು ಎಂಬ ಅರ್ಥವನ್ನು ಸೂಚಿಸುವುದೆಂದು ಹೇಳುವರು. ಋಗ್ವೇದಕಾಲದಲ್ಲಿ ಆರ್ಯರು ವ್ಯವಸಾಯದಲ್ಲಿ ನಿರತರಾಗಿದ್ದುದರಿಂದ Cultivating people ಎಂಬ ಅರ್ಥವೇ ಸಮಂಜಸವಾಗಿರುವುದೆಂದು ಅನೇಕರ ಅಭಿಮತವು. **ಧೃ** ಎಂಬ ಧಾತುವಿಗೆ ಧಾರಣೆ ಪೋಷಣೆ ಎಂಬರ್ಥವಿರುವುದರಿಂದ ಚರ್ಷಣೀಧೃತಃ ಎಂಬ ಶಬ್ದಕ್ಕೆ ಮನುಷ್ಯರನ್ನು ಪೋಷಿಸ ತಕ್ಕವರು, ರಕ್ಷಿಸತಕ್ಕವರು ಎಂದು ಅರ್ಥಮಾಡುವ ವಿಷಯದಲ್ಲಿ ಸಂಶಯಪಡಬೇಕಾಗಿಲ್ಲ.

ವಿಶ್ವೇ ದೇವಾಸಃ—ಅಶ್ವಿನೌ ಮೊದಲಾದ ದೇವತಾವಿಶೇಷಗಳನ್ನು ಸೂಚಿಸುವ ಮೂವತ್ತ್ಮೊಂದು ನಾಮಗಳ ಮಧ್ಯದಲ್ಲಿ ಈ ದೇವತೆಗಳ ಹೆಸರು ಪಠಿತವಾಗಿರುವುದು. ಇವರು ಪ್ರತ್ಯೇಕವಾದ ವಿಶೇಷದೇವತೆಗಳೆಂದು ಭಾಷ್ಯಕಾರರು ಹೇಳುವರು. ಕೆಲವರು ಎಲ್ಲಾ ದೇವತೆಗಳೆಂದು ಹೇಳುವರು. ಆದರೆ ವಿಶ್ವೇದೇವತೆಗಳೆಂದು ಪ್ರತ್ಯೇಕವಾದ ದೇವತೆಗಳನ್ನು ಋಷಿಗಳು ಆರಾಧಿಸುತ್ತಿದ್ದರೆಂದು ಇತರ ಸೂಕ್ತಗಳಲ್ಲಿರುವ ವಿಷಯಗಳಿಂದ ಸ್ಪಷ್ಟವಾಗಿ ಹೇಳಬಹುದು. ಈ ವಿಚಾರದಲ್ಲಿ ಯಾಸ್ಕರು ಈ ಋಕ್ಕಿಗೆ ವಿವರಣೆಯನ್ನು ಬರೆದಿರುವರು—**ಆವಿಶಾರೋ ವಾವನೀಯೋ ವಾ ಮನುಷ್ಯಧೃತಃ ಸರ್ವೇ ದೇವಾ ಇಹಾಗಚ್ಛೇತ ದೆತ್ತವಂತೋ ದತ್ತವತಃ ಸುತಮಿತಿ, ತದೇತದೇಕಮೇವ ವೈಶ್ವದೇವಂ ಗಾಯತ್ರಂ ತೃಚಂ ದಶತಯಿಷು ವಿದ್ಯತೇ ಯತ್ತು ಕಿಂಚಿದ್ದೈಹುದ್ದೈವತಂ ತದ್ವೈಶ್ವದೇವಾನಾಂ ಸ್ಥಾನೇ ಯುಜ್ಯತೇ ಯದೇವ ವಿಶ್ವಲಿಂಗಮಿತಿ ಶಾಕಪೂಣಿಃ** (ನಿ-೧೨-೪೦) ಈ ಋಕ್ಕಿನ ಅರ್ಥವಿಚಾರದಲ್ಲಿ ನಾವು ಹೇಳಿರುವ ಅರ್ಥಕ್ಕೂ ಯಾಸ್ಕರ ಅರ್ಥಕ್ಕೂ ಏನೂ ವ್ಯತ್ಯಾಸವಿಲ್ಲ. ಆದರೆ ಯಾಸ್ಕರ ಅಭಿಪ್ರಾಯದಂತೆ ವಿಶ್ವೇದೇವಾಃ ಎಂದರೆ ಎಲ್ಲಾ ದೇವತೆಗಳು ಎಂದು. ಮತ್ತು ವಿಶ್ವೇದೇವರೆಂದರೆ ಆ ಹೆಸರಿನಿಂದ ಕರೆಯಲ್ಪಡುವ ವಿಶೇಷದೇವತೆಗಳೆಂದು ಶಾಕಪೂಣಿ ಎಂಬುವರ ಮತವೆಂದು

ಯಾಸ್ಕರೇ ಹೇಳಿರುವರು. ಆದುದರಿಂದ ಅವರ ಕಾಲದಲ್ಲಿಯೇ ಈ ವಿಚಾರದಲ್ಲಿ ಭಿನ್ನಾಭಿಪ್ರಾಯವಿತ್ತೆಂದು ದೃಢವಾಗಿ ಹೇಳಬಹುದು. ಈಗ ಗೃಹ್ಯಾದಿಕರ್ಮಗಳಲ್ಲಿ ರೂಢಿಯಿರುವಂತೆ ಹೇಳುವುದಾದರೆ ಈ ವಿಶ್ವೇದೇವತೆಗಳು ಸಾಧಾರಣದೇವತೆಗಳ ಗುಂಪಿಗೆ ಸೇರಿದವರಲ್ಲವೆಂದೂ ಇವರದೇ ಹದಿಮೂರು ಜನರ ವಿಶೇಷ ಗುಂಪೆಂದೂ ತಿಳಿಯಬರುವುದು. ಅದು ಹೇಗಾದರೂ ಇರಲಿ ಋಗ್ವೇದದಲ್ಲಿ ವರ್ಣಿಸಿರುವ ವಿಶ್ವೇದೇವತೆಗಳು ಪ್ರತ್ಯೇಕವಾದ ದೇವತೆಗಳ ಗುಂಪಿಗೆ ಸೇರಿದವರೆಂದು ಹೇಳುವುದೇ ಯುಕ್ತವಾಗಿ ತೋರುವುದು.

ಆ ಗತೆ—ಮಧ್ಯಮಪುರುಷ ಬಹುವಚನವು. ಈಗಿನ ಸಂಸ್ಕೃತದಲ್ಲಿ ಇದು ಆಗಚ್ಛತ ಎಂದಾಗುವುದು.

ದಾಶ್ವಾಂಸಃ—ದಾಶೃ ದಾನ ಎಂಬ ಧಾತುವಿನಿಂದ ಉಂಟಾದ ಈ ಪದಕ್ಕೆ ಕೊಡುವವರು, ಎಂದರೆ ತಮ್ಮನ್ನು ಸ್ತೋತ್ರಮಾಡುವ ಮನುಷ್ಯರಿಗೆ ಫಲವನ್ನು ಕೊಡುವವರು ಎಂದರ್ಥವು. ಪಾಶ್ಚಾತ್ಯಪಂಡಿತು ಈ ಶಬ್ದವನ್ನು Donors, distributors, bestowers of riches. ಮೊದಲಾದ ಶಬ್ದಗಳಿಂದ ವಿವರಿಸಿರುವರು.

ದಾಶುಷಃ—ಈ ಶಬ್ದವು ಷಷ್ಠ್ಯೈಕವಚನವು, (ದೇವತೆಗಳಿಗೆ ಹವಿಸ್ಸನ್ನು) ಕೊಡುವ ಅಥವಾ ಕೊಡುತ್ತಿರುವ ಎಂದರ್ಥವು. ಇದು ದಾಶ್ವಾಂಸಃ ಎಂಬ ಶಬ್ದದಂತೆಯೇ ಇದೆ. ಇದಕ್ಕೆ ಪಾಶ್ಚಾತ್ಯ ಪಂಡಿತರ ಅರ್ಥವು Of the distributors (Ludwig, Benfey), of tne worshipper (Rosen, Griffith, Williams), of the offerers ಮೊದಲಾದ ಶಬ್ದಗಳಿಂದ ವಿವರಿಸಲ್ಪಟ್ಟಿದೆ.

ವಿಶ್ವೇದೇವತೆಗಳ ವಿಷಯದಲ್ಲಿ ಕೆಲವು ಮುಖ್ಯಾಂಶಗಳನ್ನು ಇಲ್ಲಿ ಹೇಳುವುದು ಅವಶ್ಯಕವಾಗಿರುವುದು. ಋಗ್ವೇದದಲ್ಲಿ ವಿಶ್ವೇದೇವತೆಗಳನ್ನು ಮಾತ್ರ ಸ್ತೋತ್ರಮಾಡಿರುವ ೬೩ ಸೂಕ್ತಗಳಿವೆ. ಇದಲ್ಲದೆ ಋ. ಸಂ. ೧-೧೬೪ ನೆಯ ಸೂಕ್ತದಲ್ಲಿ ಮೊದಲನೆಯ ೪೧ ಋಕ್ಕುಗಳು ವಿಶ್ವೇದೇವತೆಗಳ ಪರವಾಗಿವೆ. ಇವುಗಳಲ್ಲೆಲ್ಲಾ—ಋ. ಸಂ. ೧೦-೧೫೫ ಈ ಸೂಕ್ತವನ್ನು ಬಿಟ್ಟು—ಉಳಿದ ಎಲ್ಲಾ ಸೂಕ್ತಗಳಲ್ಲಿಯೂ ಅನೇಕ ದೇವತೆಗಳನ್ನು ಎಂದರೆ ಇತರ ಸೂಕ್ತಗಳಲ್ಲಿರುವಂತೆ ಅಗ್ನಿ, ಇಂದ್ರ ಮೊದಲಾದ ದೇವತೆಗಳನ್ನು ಸ್ತುತಿಸಿರುವುದಲ್ಲದೆ ವೃಕ್ಷಗಳು, ನದಿಗಳು, ಪರ್ವತಗಳು, ಗೋವುಗಳು, ಅಶ್ವಗಳು ಮೊದಲಾದವುಗಳೂ ಪ್ರತಿಪಾದಿಸಲ್ಪಟ್ಟವೆ. ಇವುಗಳಲ್ಲದೆ ಇತರ ದೇವತಾಕವಾದ ಸೂಕ್ತಗಳಲ್ಲಿ ಅನೇಕ ಕಡೆ ಒಟ್ಟು ೧೭ ಋಕ್ಕುಗಳು ವಿಶ್ವೇದೇವತಾಕವಾಗಿವೆ. ಈ ಸ್ಥಳಗಳಲ್ಲೆಲ್ಲಾ ವಿಶ್ವೇದೇವತೆಗಳೇ ಈ ಋಕ್ಕುಗಳಿಗೆ ದೇವತೆಗಳೆಂದು ಹೇಳಲ್ಪಟ್ಟಿದೆ. ಮತ್ತು ಋ. ಸಂ. ೧೦-೧೩೫-೧ ನೆಯ ಮಂತ್ರದಲ್ಲಿ ವಿಶ್ವೇದೇವತೆಗಳ ಜೊತೆಯಲ್ಲಿ ವಸುರುದ್ರಾದಿತ್ಯರೂ ಸೇರಿದಾರೆ.

ವಾಜಸನೇಯ ಸಂಹಿತೆಯ (ಶುಕ್ಲಯಜುರ್ವೇದ) ೨೨-೨೨ ನೆಯ ಮಂತ್ರದಲ್ಲಿ ಇಂದ್ರನು, ಆದಿತ್ಯರು, ವಸುಗಳು, ಮರುತ್ತು ವಿಶ್ವೇದೇವತೆಗಳೊಡನೆ ಸೇರಬೇಕೆಂದು ಪ್ರಾರ್ಥಿಸಲ್ಪಟ್ಟಿರುವರು. ಅದೇ ಸಂಹಿತೆಯು ೩೩-೪೫ ರಿಂದ ೪೭ ಮಂತ್ರಗಳಲ್ಲಿ ಇಂದ್ರ, ವಾಯು ಮತ್ತು ಇತರ ದೇವತೆಗಳು ವಿಶ್ವೇದೇವತೆಗಳ ಜೊತೆಯಲ್ಲಿ ಸ್ತುತಿಸಲ್ಪಟ್ಟಿದಾರೆ.

ಅಥರ್ವಣವೇದದ ೨೦-೬೨-೬ ನೆಯ ಮಂತ್ರದಲ್ಲಿ ವಿಶ್ವೇದೇವತೆಗಳನ್ನು ಏಕವಚನದಲ್ಲಿ ಸೂಚಿಸಲಾಗಿದೆ ಮತ್ತು ವಿಶ್ವೇದೇವತೆಗಳ ಪರವಾದ ಅನೇಕ ಸೂಕ್ತಗಳು ಅಥರ್ವಣವೇದದಲ್ಲಿವೆ.

ಬ್ರಾಹ್ಮಣಗಳಲ್ಲಿಯೂ ಸಹ ವಿಶ್ವೇದೇವತೆಗಳ ಹೆಸರು ಅಲ್ಲಲ್ಲಿ ಸೂಚಿತವಾಗಿದೆ. ಕೌಶೀತಕೀ ಬ್ರಾಹ್ಮಣದ ೪-೧೪, ಗೋಪಥ ಬ್ರಾಹ್ಮಣದ ೧-೨೦ ನೆಯ ಮಂತ್ರಗಳಲ್ಲಿ ಎಲ್ಲಾ ದೇವತೆಗಳನ್ನು ವಿಶ್ವೇದೇವತೆಗಳೆಂಬ ಹೆಸರಿ

ನಿಂದಲೇ ಸಂಬೋಧನೆಮಾಡಲಾಗಿದೆ. ಶತಪಥ ಬ್ರಾಹ್ಮಣದ ೩-೯-೨-೬ ನೆಯ ಮಂತ್ರದಲ್ಲಿ ವಿಶ್ವೇದೇವತೆಗಳು ಸೂರ್ಯನ ಕಿರಣಗಳೆಂದೂ. ಶ. ಬ್ರಾ. ೧೪-೨-೨-೩೭ ರಲ್ಲಿ ಪ್ರಾಣಾದಿವಾಯುಗಳೆಂದೂ ಶ. ಬ್ರಾ. ೭-೧-೧-೪೨ ರಲ್ಲಿ ಯಜ್ಞಕರ್ಮಗಳೆಂದೂ. ಶ. ಬ್ರಾ. ೨-೪-೪-೧೩ ರಲ್ಲಿ ಇಂದ್ರಾಗ್ನಿಗಳೆಂದೂ ಕರೆಯಲ್ಪಟ್ಟಿದಾರೆ. ತೈತ್ತಿರೀಯ ಆರಣ್ಯಕದಲ್ಲಿ (ತೈ. ಆ. ೫-೧-೬) ವಿಶ್ವೇದೇವತೆಗಳ ಜೊತೆಯಲ್ಲಿ ಇಂದ್ರಾಗ್ನಿಗಳು ಸ್ತುತಿಸಲ್ಪಟ್ಟಿದಾರೆ.

ಪುರಾಣಗಳಲ್ಲಿ ಕೆಲವುಕಡೆ ಈ ವಿಶ್ವೇದೇವತೆಗಳು ದಿಕ್ಕುಗಳಿಗೆ ಅಧಿಪತಿಗಳೆಂದು ಹೇಳಲ್ಪಟ್ಟಿದೆ. ನಿರುಕ್ತದಲ್ಲಿ (ನಿ. ೧೨-೩೯) ವಿಶ್ವೇದೇವತೆಗಳೆಂದರೆ ಎಲ್ಲಾ ದೇವತೆಗಳೂ ಎಂದಿದೆ. ನಿರುಕ್ತದ ಭಾಷ್ಯಕಾರರಾದ ದುರ್ಗಾಚಾರ್ಯರೆಂಬುವರು ವಿಶ್ವೇದೇವತೆಗಳೆಂದರೆ ಸೂರ್ಯನ ಕಿರಣಗಳೆಂದು ಅರ್ಥಮಾಡಿದಾರೆ ನಿರುಕ್ತಕಾರರಾದ ಯಾಸ್ಕರು ವಿಶ್ವೇದೇವತೆಗಳೆಂದರೆ ಸಮಸ್ತ ದೇವತೆಗಳು ಎಂದು ತಮ್ಮ ಅಭಿಪ್ರಾಯವನ್ನು ಹೇಳಿರುವುದಲ್ಲದೆ ಶಾಕಪೂಣಿ ಎಂಬುವರ ಅಭಿಪ್ರಾಯವನ್ನು ಸೂಚಿಸಿರುವರು. ಶೌನಕರು ತಮ್ಮ ಬೃಹದ್ದೇವತಾ ಎಂಬ ಗ್ರಂಥದಲ್ಲಿ (ಬೃ. ದೇ. ೨-೧೩೮ ರಿಂದ ೧೩೪ ಶ್ಲೋಕಗಳು) ವಿಶ್ವೇದೇವತೆಗಳ ವಿಷಯವಾಗಿ ಹೇಳುವಾಗ, ವಿಶ್ವೇದೇವಾಃ ಎಂದರೆ ಸಮಸ್ತದೇವತೆಗಳು ಎಂದು ಯಾಸ್ಕರು ಮತ್ತು ಶಾಂಡಿಲ್ಯರು ಅಭಿಪ್ರಾಯಪಡುವರೆಂದು ಹೇಳಿದಾರೆ ಶೌನಕರ ಮತವೂ ಅದೇರೀತಿ ಇದೆ.

ಸಾಯಣಾಚಾರ್ಯರು ಈ ಋಕ್ಕಿಗೆ ವ್ಯಾಖ್ಯಾನಮಾಡುವಾಗ ವಿಶ್ವೇದೇವರೆಂದರೆ ಅಶ್ವಿನೀದೇವತೆಗಳೇ ಮೊದಲಾದ ಮೂವತ್ತ್ಮೂಂದು ಮಂದಿ ದೇವತೆಗಳು ಸೇರಿ ವಿಶ್ವೇದೇವತೆಗಳೆಂದು ಕರೆಯಲ್ಪಡುವರೆಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದಾರೆ.

ಪಾಶ್ಚಾತ್ಯಸಂಡಿತರಲ್ಲಿ Langlois, Kaegi, Hopkins ಎಂಬುವರು ವಿಶ್ವೇದೇವತೆಗಳೆಂದರೆ ಸಮಸ್ತದೇವತೆಗಳು ಎಂದೂ Wilson, Griffith, Macdonell ಎಂಬುವರು ವಿಶ್ವೇದೇವತೆಗಳೆಂದರೆ ಸಮಸ್ತದೇವತೆಗಳು ಅಥವಾ ವಿಶ್ವೇದೇವತೆಗಳೆಂಬ ಪ್ರತ್ಯೇಕವಾದ ದೇವತೆಗಳ ಸಮೂಹ ಎಂಬ ಎರಡು ವಿಧವಾದ ಅರ್ಥವನ್ನು ಅನುಮೋದಿಸುವರು.

ಮುಖ್ಯಾಭಿಪ್ರಾಯವೇನೆಂದರೆ—ಪೂರ್ವದಲ್ಲಿ ಎಂದರೆ ಬಹುಪ್ರಾಚೀನಕಾಲದಲ್ಲಿ ವಿಶ್ವೇದೇವತೆಗಳೆಂದರೆ ಸಮಸ್ತದೇವತೆಗಳೆಂಬ ಅರ್ಥವೇ ರೂಢಿಯಲ್ಲಿದ್ದು ಕಾಲಕ್ರಮೇಣ ವಿಶ್ವೇದೇವರೆಂದರೆ, ಆ ಹೆಸರಿನ ಪ್ರತ್ಯೇಕ ದೇವತೆಗಳ ಸಮೂಹವೆಂದು ಭಾವಿಸುವುದು ಬಳಕೆಗೆ ಬಂತೆಂದೂ ಹೇಳಬಹುದು. ಅನೇಕ ಬ್ರಾಹ್ಮಣಗಳಲ್ಲಿಯೂ ಪುರಾಣಗಳಲ್ಲಿಯೂ ವಿಶ್ವೇದೇವತೆಗಳೇ ಒಂದು ಪ್ರತ್ಯೇಕವಾದ ದೇವತೆಗಳ ಗುಂಪೆಂದು ಸೂಚಿಸಲ್ಪಟ್ಟಿದೆ. ಅದರೆ ಯಾಸ್ಕರ ಕಾಲದಲ್ಲಿಯೂ ಸಹ ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿತ್ತೆಂದು ಯಾಸ್ಕರ ನಿರುಕ್ತದಿಂದಲೇ ತಿಳಿದುಬರುತ್ತದೆ.

॥ ವ್ಯಾಕರಣಪ್ರಕ್ರಿಯಾ ॥

ಅವಂತಿ ಇತಿ ಓಮಾನಃ ಕಾವಾಡುವುದರಿಂದ ದೇವತೆಗಳಿಗೆ ಓಮಾನಃ ಎಂದು ಹೆಸರು, ಆವಿ ಸಿವಿ ಸಿ ಶುಷಿಭ್ಯಃಕಿತ್ (ಉ.ಸೂ. ೧-೧೪೧) ಅವರಕ್ಷಣಾದ್ದಾ, ಪಿವು ತಂತು ಸಂತಾನೇ, ಷಿಞ್ ಬಂಧನೇ, ಶುಷ ಶೋಷಣೇ ಈ ಧಾತುಗಳಿಗೆ ಮನ್ ಪ್ರತ್ಯಯಬರುವುದು ಅದು ಕಿತ್ತಾಗುವುದು ಎಂಬುದರಿಂದ ಅವ ಧಾತುವಿನ ಮುಂದೆ ಮನ್

ಬರಲು, **ಜ್ವರ ತ್ವರಸೈವ್ಯವಿಮ ವಾಮುಪಧಾಯೋಶ್ಚ** (ಪಾ. ಸೂ. ೬-೪-೨೦) ಸ್ವಿಪ್ರತ್ಯಯ, ಝಲಾದಿಪ್ರತ್ಯಯ, ಅಥವಾ ಅನುನಾಸಿಕಾದಿಪ್ರತ್ಯಯವು ಪರದಲ್ಲಿರುವಾಗ ಜ್ವರಾದಿ ಧಾತುಗಳ ಉಪಾಂತ್ಯವರ್ಣವಕಾರಗಳಿಗೆ ಊರ್, ಬರುವುದು ಎಂಬುದರಿಂದ ಅವ್‌ಗೆ ಊರ್‌ಬರಲು ಊ+ಮ ಎಂದಿರುವಾಗ ಮನ್ನುಕಿತ್ತಾದರೂ ಬಹುಲ ಗ್ರಹಣದಿಂದ **ಕ್ಡಿತಿಚೆ** (ಪಾ. ಸೂ. ೧-೧-೫) ಎಂದು ಗುಣನಿಷೇಧ ಬಾರದಕಾರಣ **ಸಾರ್ವಧಾತುಕಾರ್ಧಧಾತು ಕಯೋಃ** (ಪಾ. ಸೂ. ೭-೧-೪೪) ಎಂಬುದರಿಂದ ಗುಣ ಬರುವುದು. ನಂತರ **ಅಜ್ಜಸೇರಸುಕ್** (ಪಾ. ಸೂ. ೭-೧-೫೦) ಎಂಬುದರಿಂದ ಜಸ್‌ಪ್ರತ್ಯಯಕ್ಕೆ ಅಸುಕ್ ಆಗಮ ಬರಲು ಓಮಾಸಃ ಎಂದಾಗುವುದು. ಇಲ್ಲಿ ಷಾಷ್ಠ ವಾದ ಆಮಂತ್ರಿತಾದ್ಯುದಾತ್ತ ಬರುವುದು. ಚರ್ಷಣಯಃ ಎಂದರೆ ಮನುಷ್ಯರು ಅವರನ್ನು ' ಧಾರಯನ್ತಿ ' (ಮಳೆ ಮೊದಲಾದವುಗಳನ್ನು ಕೊಟ್ಟು ರಕ್ಷಿಸುವರು) ಆದ್ದರಿಂದ ಚರ್ಷಣೀಧೃತಃ ಎಂದರೆ ದೇವತೆಗಳು. ಓಮಾಸಃ ಎಂಬ ಪೂರ್ವದ ಆಮಂತ್ರಿತವು ಸಾಮಾನ್ಯವಚನ, ಆದ್ದರಿಂದ **ವಿಭಾಷಿತಂ ವಿಶೇಷವಚನೇ** (ಬಹು ವಚನಂ), (ಪಾ. ಸೂ. ೮-೧-೭೪) ವಿಶೇಷಣನಾದ ಆಮಂತ್ರಿತವು ಪರವಾಗಿರುವಾಗ ಪೂರ್ವದಲ್ಲಿರುವ ಬಹುವಚನ ವಾದ ಆಮಂತ್ರಿತವು ವಿಕಲ್ಪದಿಂದ ಅವಿದ್ಯಮಾನವದ್ಭಾವವನ್ನು ಹೊಂದುವುದು, ಎಂಬುದರಿಂದ ಅವಿದ್ಯಮಾನವ ದ್ಭಾವವು ಬರದೇ ಇರುವಪಕ್ಷದಲ್ಲಿ ಇದು ಪಾದಾದಿಯಾಗದಕಾರಣ ಆಷ್ಟಮಿಕಾನುದಾತ್ತ ಬರುವುದು. ಹಾಗಾದರೆ ವಿಭಾಷಿತಂ ವಿಶೇಷವಚನೇ ಬಹುವಚನಂ ಎಂಬದು ವೈಕಲ್ಪಿಕವು. ಇದರಿಂದ ಅವಿದ್ಯಮಾನವದ್ಭಾವನಿಷೇಧ ಬಂದರೆ ಪೂರ್ವಪದವು ವಿದ್ಯಮಾನವಾಗುವುದು. ಈಗ **ಸುಡಾಮಂತ್ರಿತೇ ಪರರಾಂಗವತ್ಸ್ವರೇ** (ಪಾ. ಸೂ. ೮-೧-೭) ಇದರಿಂದ ಪರರಾಂಗವದ್ಭಾವಬಂದರೆ ಓಮಾಸಶ್ಚರ್ಷಣೀ ಎಂಬುದು ಒಂದೇಪದವೆಂದು ಭಾವಿಸಬೇಕಾಗುವುದು. ಹೀಗಾದರೆ ಚರ್ಷಣೀಧೃತಃ ಎಂಬುದಕ್ಕೆ ಪದಾತ್ಪರತ್ವಬರುವುದಿಲ್ಲ. ಆದ್ದರಿಂದ ಆಷ್ಟಮಿಕಾನುದಾತ್ತ ಹೇಗೆಬರುವುದು ಎನ್ನಬಹುದು. ಅವಿದ್ಯಮಾನವಾಗುವುದು ಎಂದು ಹೇಳದೆ ಅವಿದ್ಯಮಾನವದ್ಭವತಿ ಎಂದು ವತ್ಕರಣವಿರುವುದ ರಿಂದ (ವತ್ಕರಣಂಸ್ವಾಶ್ರಯಮಪಿಯಥಾಸ್ಯಾತ್ (ಪಾ. ಮ. ೮-೧-೭೩) ಸ್ವಾಶ್ರಯಕಾರ್ಯವೂ ಬರುವುದಕ್ಕಾಗಿ ವತ್ಕರಣವು) ಎಂಬ ವಚನವನ್ನನುಸರಿಸಿ ಸ್ವಾಶ್ರಯಕಾರ್ಯವೂ ಬರುವುದು. ಆದ್ದರಿಂದ ಪದಭೇದವನ್ನು ಮುನ್ನಿಟ್ಟು ಅನುದಾತ್ತವೂ ಬರುವುದು, ಅಥವಾ ಒಂದೇಪದವೆಂದು ಭಾವಿಸಿದರೂ ಆಮಂತ್ರಿತಾದ್ಯುದಾತ್ತಬಂದರೆ **ಅನುದಾತ್ತೆಂ ಪದಮೇಕವರ್ಜಂ** (ಪಾ. ಸೂ. ೬-೧-೧೫೮) ಎಂಬುದರಿಂದ ಮಿಕ್ಕವುಗಳಿಗೆ ಅನುದಾತ್ತವು ಸುಲಭವಾಗಿ ಸಿದ್ಧ ವಾಗುವುದು. ಹೀಗಾದರೆ ಇದೇರೀತಿಯಲ್ಲಿ ' ದ್ರವತ್ಪಾಣೀ ಶುಭಸ್ಪತೀ ' ಎಂಬಲ್ಲಿಯೂ ಪರರಾಂಗವದ್ಭಾವದಿಂದ ಏಕಪದ್ಯ (ಒಂದೇಪದವಾಗುವಿಕೆ) ನೇರ್ಷಡಲು ಉತ್ತರಪದಕ್ಕೆ ಶೇಷಾನುದಾತ್ತ ಬರಬೇಕಾಗುವುದು ಎಂದರೆ ಇಲ್ಲ, ಇಲ್ಲಿ ಆಮಂತ್ರಿತಂ ಪೂರ್ವಮವಿದ್ಯಮಾನವತ್ (ಪಾ. ಸೂ ೮-೧-೭೨) ಎಂಬ ಪರದಲ್ಲಿರುವ ಅವಿದ್ಯಮಾನವದ್ಭಾವ ದಿಂದ ಪರರಾಂಗವದ್ಭಾವವು ಬಾಧಿತವಾಗುವುದು. ಇಲ್ಲಾದರೋ **ವಿಭಾಷಿತಂ ವಿಶೇಷವಚನೇ ಬಹುವಚನಂ** ಎಂಬು ದರಿಂದ ಅವಿದ್ಯಮಾನವದ್ಭಾವಕ್ಕೆ ಪಾಕ್ಷಿಕನಿಷೇಧಮಾತ್ರ ಬರುವುದು, ಆದ್ದರಿಂದ ಪೂರ್ವಪದ ಆಮಂತ್ರಿತವೂ ಇದ್ದೇ ಇರುವುದರಿಂದ ಪರರಾಂಗವದ್ಭಾವವನ್ನು ಒಪ್ಪುತ್ತೇನೆ, ಅಂತು ಇಲ್ಲಿ ಬಾಧಿತದಭಾವಗಳಿಂದ ವೈಷಮ್ಯವಿರು ವಿರುವುದು. ವಿಶ್ವೇ, ಪಾದಾದಿಯಾದ್ದರಿಂದ ಆದ್ಯುದಾತ್ತ, ಈ ವಿಶ್ವ ಶಬ್ದವು ಸರ್ವನಾಮ ಶಬ್ದಗಳ ಮಧ್ಯದಲ್ಲಿ ಪರಿತವಾಗಿರುವ ಸರ್ವಾರ್ಥಕವಾದ (ಎಲ್ಲ ಎಂಬರ್ಥವನ್ನು ಬೋಧಿಸುವ) ಶಬ್ದವಲ್ಲ. ಗಣದೇವತಾವಾಚಕವಾದ ಶಬ್ದವು. ಆದ್ದರಿಂದ ಇದು ವಿಶೇಷ್ಯವಾಗುವುದರಿಂದ ಸಾಮಾನ್ಯವಚನವಾಗುವುದು, ಆದ್ದರಿಂದ ಇದಕ್ಕೆ ಓಮಾಸಃ ಎಂಬುದರೊಂದಿಗೆ ಸಾಮಾನಾಧಿಕರಣ್ಯವು (ಏಕಾರ್ಥಬೋಧಕತ್ವವು) ಇರುವುದಿಲ್ಲ. ಸಾಮಾನಾಧಿಕ ರಣ್ಯವಿದ್ದಪಕ್ಷದಲ್ಲಿ ' ಓಮಾಸಶ್ಚರ್ಷಣೀಧೃತಃ ' ಎಂಬ ಪೂರ್ವಪಾದಕ್ಕೆ ಪರರಾಂಗವದ್ಭಾವ ಬಂದರೆ ' ಮಿತ್ರಾ ವರುಣಾವೃತಾವೃಧೌ ಇತ್ಯಾದಿಸ್ಥಲಗಳಲ್ಲಿ ದ್ವಿತೀಯ ಪಾದಾದಿಯಲ್ಲಿರುವ ಋತಾವೃಧೌ ಎಂಬುದಕ್ಕೆ ಹೇಗೆ ಉದಾತ್ತ

ಬರದೇ ಅನುದಾತ್ತಬಂದಿರುವುದೋ ಆದೇರೀತಿಯಲ್ಲಿ ಇಲ್ಲಿಯೂ ಉದಾತ್ತವುಬರದೇ ಅನುದಾತ್ತವೇ ಬರಬೇಕಾಗುವುದು. ಸಾಮಾನಾಧಿಕರಣ್ಯವಿಲ್ಲದಿದ್ದರೆ **ನಾಮಂತ್ರಿತೇ ಸಮಾನಾಧಿಕರಣೇ ಸಾಮಾನ್ಯವಚನಂ** (ಪಾ. ಸೂ. ೮-೧-೭೩) ಎಂಬುದರಿಂದ ಅವಿದ್ಯಮಾನವದ್ಭಾವಕ್ಕೆ ಪ್ರತಿಷೇಧ ಬರುವುದಿಲ್ಲ, ಆದ್ದರಿಂದ **ಆಮಂತ್ರಿತಂ ಪೂರ್ವಮವಿದ್ಯಮಾನವತ್** (ಪಾ. ಸೂ. ೮-೧-೭೨) ಎಂಬುದರಿಂದ ಅವಿದ್ಯಮಾನವದ್ಭಾವ ಬರುವುದು, **ಸುಜಾಮಂತ್ರಿತೇ ಪರಾಂಗವತ್ಸ್ವರೇ** ಎಂಬುದರಿಂದ ಪರಾಂಗವದ್ಭಾವಬರುವುದಿಲ್ಲ. ಆದ್ದರಿಂದ ಪಾದಾದಿಯಾಗುವ 'ವಿಶ್ವೇ' ಎಂಬುದಕ್ಕೆ ಆಷ್ಟಮಿಕಾನುದಾತ್ತಬರದೇ ಷಾಷ್ಠವಾದ ಉದಾತ್ತವೇ ಬರುವುದು. 'ದೇವಾಸಃ' ಎಂಬುದು 'ವಿಶ್ವೇ' ಎಂಬುದಕ್ಕೆ ವಿಶೇಷಣವು. 'ದೀವ್ಯಂತೀತಿ ದೇವಾಃ' ಎಂಬ ವ್ಯುತ್ಪತ್ತಿಯಿಂದ ದೇವಾಃ ಎಂದಾಗುವುದು. ಆದ್ದರಿಂದ ಪ್ರಕಾಶವುಳ್ಳವರು ಎಂದರ್ಥವೇರ್ಪಡುವುದು. **ಅನಯೈವಶ್ಯಸಿದ್ಧೇಃ ಸಮುದಾಯಶಸ್ಸಿದ್ಧಿರ್ಬಲೀಯಸೀ** (ಪರಿಭಾಷಾ ೮೮) ಅವಯವಶಕ್ತಿಯಿಂದ ಸಿದ್ಧವಾಗುವ ಅರ್ಥಕ್ಕಿಂತಲೂ ಸಮುದಾಯಶಕ್ತಿಸಿದ್ಧವಾದ ಅರ್ಥವು ಬಲವಾದುದು ಎಂಬ ಪರಿಭಾಷೆಯಿಂದ ದೇವಾಃ ಎಂಬಲ್ಲಿ ರೂಢವಾದ (ಸಮುದಾಯಶಕ್ತಿಸಿದ್ಧವಾದ) ಅರ್ಥವನ್ನು (ದೇವತೆಗಳು) ಸ್ವೀಕರಿಸಬೇಕೇ ವಿನಾ, ಯೌಗಿಕವಾದ (ಅವಯವ ಶಕ್ತಿಸಿದ್ಧವಾದ) ಅರ್ಥವನ್ನು (ಪ್ರಕಾಶವುಳ್ಳವರು) ಸ್ವೀಕರಿಸಲಾಗದು, ಈ ಪರಿಭಾಷೆಯು 'ವಿಳಂಬಿತ ಧೀಹೇತೋರೇವ ವಿಳಂಬಿತ ಧೀಹೇತುರ್ಬಲೀಯಾನ್' ಎಂಬ ನ್ಯಾಯದಿಂದ ಸಿದ್ಧವಾದುದು. ಯೌಗಿಕಾರ್ಥಸ್ವೀಕಾರಪಕ್ಷದಲ್ಲಿ, ಅವಯವಾರ್ಥಾನುಸಂಧಾನವು ಆವಶ್ಯಕವಾದ್ದರಿಂದ, ಈ ಪ್ರತೀತಿಯು ವಿಳಂಬಿತವಾಗುವುದು, ರೂಢಿಪಕ್ಷದಲ್ಲಿ ಅವಯವಾರ್ಥವು ಆವಶ್ಯಕವಿಲ್ಲ, ಆದಕಾರಣ ಶೀಘ್ರಪ್ರತೀತಿ ಏರ್ಪಡುವುದು, ಇದೇ ಅರ್ಥವನ್ನೇ **ಯೋಗಾದ್ರೂಢಿರ್ಬಲೀಯಸೀ** ಎಂಬ ವಚನವೂ ಹೇಳುವುದು ಆದ್ದರಿಂದ ರೂಢ್ಯರ್ಥಸ್ವೀಕಾರವೇ ಯುಕ್ತವಾಗಿರುವುದು. ಆದರೂ ಸ್ವರಸಾಮಂಜಸ್ಯಕ್ಕಾಗಿ, ಇಲ್ಲಿ ಪೂರ್ವೋಕ್ತವಚನಗಳನ್ನುಲ್ಲಂಘಿಸಿ ಯೌಗಿಕಾರ್ಥವನ್ನೇ ಸ್ವೀಕರಿಸಬೇಕು. ರೂಢ್ಯರ್ಥವನ್ನು ಸ್ವೀಕರಿಸಿದರೆ ದೇವಶಬ್ದವು ಸಾಮಾನ್ಯವಚನವಾಗುವುದೇವಿನಾ ವಿಶೇಷವಚನವಾಗುವುದಿಲ್ಲ. ಆದ್ದರಿಂದ ವಿಭಾಷಿತಂ ವಿಶೇಷವಚನೇ (ಬಹುವಚನಂ), (ಪಾ. ಸೂ. ೮-೧-೭೪) ಎಂಬುದರಿಂದ ಅವಿದ್ಯಮಾನವದ್ಭಾವಪ್ರತಿಷೇಧ ಬರುವುದಿಲ್ಲ. ಅಂದಮೇಲೆ **ಆಮಂತ್ರಿತಂ ಪೂರ್ವಮವಿದ್ಯಮಾನವತ್** ಎಂಬುದರಿಂದ ವಿಶ್ವೇ ಎಂಬ ಪೂರ್ವಪದಕ್ಕೆ ಅವಿದ್ಯಮಾನವದ್ಭಾವ ಬಂದರೆ ಶುಭಸ್ಪತೀ ಎಂಬ ಪದದಹಾಗೆ ದೇವಾಸಃ ಎಂಬಲ್ಲಿಯೂ ಆದ್ಯುದಾತ್ತವು ಬರಬೇಕಾಗಿಬರುವುದು, ಆದಕಾರಣ ಯೌಗಿಕಾರ್ಥವನ್ನೇ ಇಲ್ಲಿ ಸ್ವೀಕರಿಸಬೇಕು. ದೇವಾಸಃ ಎಂಬಲ್ಲಿ **ಆಜ್ಜಸೇರಸುಕ್** (ಪಾ. ಸೂ- ೭-೧-೫೦) ಎಂಬುದರಿಂದ ಅಸುಗಾಗನು ಬಂದಿರುವುದು. ಆಗತ ಎಂಬುದಕ್ಕೆ ಆಗಚ್ಛತ ಎಂದರ್ಥವು. ಆಜ್ ಉಪಸರ್ಗದಿಂದ ಕೂಡಿರುವ 'ಗಮ್' ಧಾತುವಿಗೆ ಲೋಟ್ ಮಧ್ಯಮಪುರುಷ ಬಹುವಚನ 'ಥ' ಪ್ರತ್ಯಯವನ್ನಿಟ್ಟರೆ ಅದಕ್ಕೆ **ತಸ್ಥಸ್ಥಮಿ ಪಾಂತಾಂತಂತಾಮಃ** (ಪಾ. ಸೂ. ೪-೧-೧) ಎಂಬುದರಿಂದ ತ ಆದೇಶಬರುತ್ತೆ. **ಕರ್ತರಿಶಪ್** (ಪಾ. ಸೂ. ೬-೧-೬೮) ಎಂಬುದರಿಂದ ಪ್ರಾಪ್ತವಾದ ಶಪ್ಪಿಗೆ **ಬಹುಲಂ ಛಂದಸಿ** (ಪಾ. ಸೂ. ೨-೪-೭೩) ಎಂಬುದರಿಂದ ಲುಕ್ ಬರುವುದು. ನಂತರ **ಆನುದಾತ್ತೋಪದೇಶಃ**—(ಪಾ. ಸೂ. ೬-೪-೩೭) ಎಂಬುದರಿಂದ ಮಕಾರಕ್ಕೆ ಲೋಪಬರುತ್ತೆ. ಆಗತ ಎಂದಾಗುವುದು. ಆಜ್ ಎಂಬ ಪದಕ್ಕಿಂತಲೂ ಪರದಲ್ಲಿರುವುದರಿಂದ ಆಷ್ಟಮಿಕಾನುದಾತ್ತ ಬರುವುದು. 'ದಾಶ್ವಾಂಸಃ' ದಾಶೃ ದಾನೇ ಧಾತುವಿನಮೇಲೆ ಲಿಟ್ ಇಟ್ಟರೆ **ಕ್ವಸುಶ್ಚ** (ಪಾ. ಸೂ. ೦-೨-೧೦೭) ಎಂಬುದರಿಂದ ಕ್ವಸುಪ್ರತ್ಯಯ ಬರುವುದು. ವಸ್ ಪ್ರತ್ಯಯವು ವಲಾದಿಯಾದ್ದರಿಂದ **ಅರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ಎಂಬುದರಿಂದ ಇಡಾಗಮಪ್ರಾಪ್ತವಾದರೆ ಅದಕ್ಕೆ **ನೇಡ್ವಶಿಕೃತಿ** (ಪಾ. ಸೂ. ೭-೨-೪) ವಶಾದಿಯಾದಕೃತ್ತಿಗೆ ಇಟ್ ಬರುವುದಿಲ್ಲ ಎಂಬುದರಿಂದ ನಿಷೇಧಪ್ರಾಪ್ತವಾದರೆ **ಕೃ ಸೃ ಭೃ ವೃ ಸ್ತು ದ್ರು ಶ್ರು ವೋ ಲಿಟಿ** (ಪಾ ಸೂ ೭-೨-೧೩) ಪ್ರಕೃತಿ

अथवा प्रत्ययय इवुगळन्नु निमित्तमाडिकोंडु बरुव एल्ला इट् आगमनिषेधगळू लिट्टिनल्लि बरुवपक्षदल्लि ' कृसृ ' इत्यादि अस्वधातुगळ मुंदिरुव लिट्टिगे बरुवुवु. बाकिधातुगळ मुंदिरुव लिट्टिगे यावव इट् आगमनिषेधवू बरुवुदिल्ल, एंब क्रादिनियमदिंद क्रादिस्वरूप भिन्नवाद दाश् धातुविन मुंदिरुव लिट्स्थानदल्लि बंदिरुव वस्प्रत्ययक्के इट् आगमप्राप्तवादरे **दाश्वान् साह्वान् मीढ्वांश्च** (पा. सू. ६-१-१३) एंब सूत्रदल्लि पाणिनि मुनिगळु इट् आगमविल्लदे इरुवुदन्नु निपातिसिरुवुदरिंद इट् बरुवुदिल्ल, इदेसूत्रदल्लि दाश्वान् एंदु द्विर्वचनविल्लदिरुविकेयन्नु निपातिसिरुवुदरिंद **लिटिधातोरनभ्यासस्य** (पा. सू. ६-१-८) एंबुदरिंद द्वित्ववू बरुवुदिल्ल, प्रत्ययस्वरदिंद क्वसुवु उदात्तवागुवुदु, दाशुषे दाश्वस् एंब क्वसुप्रत्ययांतदमेलै चतुर्थ्येविभक्तिय एकवचनद ए प्रत्ययवन्निट्टरे दाश्वस्+ए एंदिरुवाग **वसोस्संप्रसारणं** (पा.सू. ६-४-१३१) वस्संतवागियू भसंज्ञिकवागियू इरुव अंगक्के संप्रसारण बरुवुदु. (भ संज्ञे एंदरे **यचिभं** (पा. सू. १-४-१८) प्र्यागिवात्यकः (पा. सू. ४-३-२०) एंदु विहितवाद क-प्रत्ययवन्नु अवधिमाडि विहितवागिरुव प्रत्ययगळल्लि यकारादि अथवा अजादियाद प्रत्ययगळ हिंदिरुवुदु भ संज्ञेयन्नु पोंदुवुदु. संप्रसारणवेंदरे **इग्यणस्संप्रसारणं** (पा. सू. १-१-४४) य, व, र, ल, गळ स्थानगळल्लि क्रमवागि बरुव इ, उ, ऋ, ऌ गळगे संप्रसारणरवेंदु हेसरु, ई रीति भ संज्ञे संप्रसारणसंज्ञेगळु सूत्रितवागिरुवुवु. इल्लि पूर्वोदाहृतसूत्रदिंद संप्रसारणबंदरे दाश्+उ+अस्+ए एंदिरुवाग **संप्रसारणाच्चे** पा. सू. ६-१-१०८) संप्रसारणद मुंदे स्वरविद्दरे इवेरडर स्थानदल्लि पूर्वरूप बरुवुदु एंबुदरिंद पूर्वरूपबंदरे दाश्+उस्+ए एंदागुवुदु ईग आदेशप्रत्यययोः (पा. सू. ८-३-५९) आदेशवागिबंद सकारक्के अथवा प्रत्ययावयवद सकारक्के इण् कवर्गगळिगिंतलू परदल्लिरुवाग षकार बरुवुदु एंबुदरिंद दाशुस् एंब प्रत्ययावयवद सकारक्के षकार बंदरे दाशुषे एंदागुवुदु ॥ ८ ॥

॥ संहितापाठः ॥

विश्वे देवासो अप्तुरः सुतमा गन्त तूर्णयः ।
उस्रा इव स्वसराणि ॥ ९ ॥

॥ पदपाठः ॥

विश्वे । देवासः । अप्ऽतुरः । सुतं । आ । गन्त । तूर्णयः ॥
उस्राःऽइव । स्वसराणि ॥ ९ ॥

॥ ಸಾಯಣಭಾಷ್ಯಂ ॥

ವಿಶ್ವೇ ದೇವಾಸ ಏತನ್ನಾಮಕೆಗಣರೂಪಾ ದೇವವಿಶೇಷಾಃ ಸುತಂ ಸೋಮಮಾ ಗಂತ । ಆಗಚ್ಛಂತು । ಕೀದೃಶಾಃ । ಅಪ್ತುರಃ । ತತ್ತತ್ಕಾಲೇ ವೃಷ್ಟಿಪ್ರದಾ ಇತ್ಯರ್ಥಃ । ತೂರ್ಣಯಃ ತ್ವರಾ ಯುಕ್ತಾಃ ।ಯೇಜಮಾನಮನುಗ್ರಹೀತುಮಾಲಸ್ಯರಹಿತಾ ಇತ್ಯರ್ಥಃ ವಿಶ್ವೇಷಾಂ ದೇವಾನಾಂ ಸೋಮಂ ಪ್ರತ್ಯಾಗಮನೆ ಉಸ್ರಾ ಇತ್ಯಾದಿರ್ದ್ಯಷ್ಟಾಂತಃ । ಉಸ್ರಾಃ ಸೂರ್ಯರಶ್ಮಯಃ ಸ್ವಸರಾಣ್ಯಹಾನಿ ಪ್ರತ್ಯಾಲಸ್ಯ ರಹಿತಾ ಯಥಾ ಸಮಾಗಚ್ಛಂತಿ ತದ್ವತ್ । ಜೀದಯೆ ಇತ್ಯಾದಿಷು ಪಂಚದಶಸು ರಶ್ಮಿನಾಮಸೂಸ್ರಾ ವಸವ ಇತಿ ಪಠಿತಂ । ವಸ್ತೋರಿತ್ಯಾದಿಷು ದ್ವಾದಶಸ್ವಹರ್ನಾಮಸು ಸ್ವಸರಾಣಿ ಘ್ರಂಸೋ ಘರ್ಮ ಇತಿ ಪಠಿತಂ । ತಚ್ಚ ಪದಂ ಯಾಸ್ಕೇನ ವ್ಯಾಖ್ಯಾತಂ । ಸ್ವಸರಾಣ್ಯಹಾನಿ ಭವಂತಿ ಸ್ವಯಂಸಾರೀಣ್ಯಪಿ ವಾ ಸ್ವರಾದಿತ್ಯೋ ಭವತಿ ಸ ಏತಾನಿ ಸಾರಯತಿ ।ಉಸ್ರಾ ಇವ ಸ್ವಸರಾಣೀತ್ಯಪಿ ನಿಗವೋ ಭವತಿ । ನಿ. ೫-೪ । ಇತಿ ॥ ದೇವಾಸಃ । ಪಚಾದ್ಯಚಂತಶ್ಚಿತ್ತ್ವಾದಂತೋದಾತ್ತಃ । ಪಾ. ೩-೧-೧೩೪ । ಅಪ್ತುರಃ ತುರ ತ್ವರಣೇ ಶ್ನುವಿಕರಣೇ । ತುತುರಿತಿ ತ್ವರಯಂತೀತ್ಯರ್ಥೇ ಕ್ವಿಪ್ಪೂರ್ವೇ ಕ್ವಿಪ್ । ಗತಿಕಾರಕೋಪಪದಾತ್ಕೃದಿತ್ಯುತ್ತರಪದ-ಪ್ರಕೃತಿಸ್ವರತ್ವಂ । ಆ ಗಂತ । ಆಗಚ್ಛಂತ್ಯಸ್ಮಿತ್ಯರ್ಥೇ ವ್ಯತ್ಯಯೇನ ಮಧ್ಯಮಪುರುಷಬಹುವಚನಂ। ಬಹುಲಂ ಛಂದಸೀತಿ ಶಪೋ ಲುಕ್ । ತಸ್ಯ ತಪ್ತನಪ್ತನಥನಾಶ್ಚ । ಪಾ. ೭-೧-೪೫ । ಇತಿ ತಬಾದೇಶೇ ಪಿತ್ । ಪಾ. ೧-೨-೪ । ಇತಿ ಪ್ರತಿಷೇಧಾದಙಿತ್ವಾದನುನಾಸಿಕಲೋಪಾಭಾವಃ । ತಿಙ್ಙತಿಙ ಇತಿ ನಿಘಾತಃ । ಇಂತ್ವರಾ ಸಂಭ್ರಮ ಇತಿ ಧಾತೋಸ್ತ್ವರಂತ ಇತಿ ತೂರ್ಣಯಃ । ನಿರಿತ್ಯನುವರ್ತತ್ತೌ ವಹಿಶ್ರಿಶ್ರುಯು-ದ್ರುಗ್ಲಾಹಾತ್ವರಿಭ್ಯೋ ನಿತ್ । ಉ. ೪-೫೧ । ಇತಿ ನಿಪ್ರತ್ಯಯಃ । ನಿತ್ತ್ವಾದಾದ್ಯುದಾತ್ತಃ । ಉಸ್ರಾ ಇವೇತ್ಯತ್ರೇವೇನ ವಿಭಕ್ತ್ಯಲೋಪಃ ಪೂರ್ವಪದಪ್ರಕೃತಿಸ್ವರತ್ವಂ ಚ । ಪಾ- ೨-೧-೪-೨ । ಇತಿ ಸಮಾಸೇ ಪೂರ್ವಪದಪ್ರಕೃತಿಸ್ವರತ್ವೇ ನಿತ್ಯಂ । ಸರತೀತಿ ಸರಃ ಸೂರ್ಯಃ । ಪಚಾದ್ಯಚ್ । ಸ್ವಃ ಸರೋ ಯೇಷಾಂ ತಾನಿ ಸ್ವಸರಾಣ್ಯಹಾನಿ । ಬಹುನ್ರೀಹೌ ಪ್ರಕೃತ್ಯಾ ಪೂರ್ವಪದಮಿತಿ ಸ್ವಶಬ್ದ ಆದ್ಯುದಾತ್ತಃ ॥

॥ ಪ್ರತಿಪದಾರ್ಥ ॥

ಅಪ್ತುರಃ—ವೃಷ್ಟಿಪ್ರದರಾದ (ಮಳೆಯನ್ನು ಕೊಡುವ) । (ಹೇ) ವಿಶ್ವೇ ದೇವಾಸಃ—ಎಲೈ ವಿಶ್ವೇದೇವತೆಗಳೇ । (ನೀವು) ಉಸ್ರಾಇವ ಸ್ವಸರಾಣಿ—ಸೂರ್ಯರಶ್ಮಿಗಳು ಹಗಲಿನಲ್ಲಿ ಬಂದು ಮುಟ್ಟುವಂತೆ । ಸುತಂ—ಸಿದ್ಧಪಡಿಸಿರುವ ಸೋಮರಸವನ್ನು (ಪಾನಮಾಡುವುದಕ್ಕಾಗಿ) । ತೂರ್ಣಯಃ—ತ್ವರಯುಕ್ತರಾಗಿ. (ವೇಗವಾಗಿ, ಬೇಗನೆ) । ಆಗಂತ—ಬನ್ನಿರಿ ।

॥ ಭಾವಾರ್ಥ ॥

ಎಲೈ ವಿಶ್ವೇದೇವತೆಗಳೇ, ನೀವು ವೃಷ್ಟಿಪ್ರದರು, ಎಂದರೆ ಮಳೆ ಬರುವಂತೆ ಮಾಡುವವರು. ನಿಮಗಾಗಿ ಸೋಮರಸವು ಸಿದ್ಧವಾಗಿರುವುದು ಅದನ್ನು ಪಾನಮಾಡುವುದಕ್ಕಾಗಿ, ಹಗಲಿನಲ್ಲಿ (ಸೂರ್ಯೋದಯವಾದ ಕೂಡಲೆ) ಸೂರ್ಯನ ರಶ್ಮಿಗಳು ನಮ್ಮನ್ನು ಬಂದುಸೇರುವಂತೆ, ಬೇಗನೆ ಬನ್ನಿರಿ.

English Translation.

May Visvedevas, givers of rain, swift in action, come to the libation (of soma juice) as the (sun's) rays (come) to the days.

॥ ವಿಶೇಷವಿಷಯಗಳು ॥

ಅಪ್ತೂರಃ—ಭಾಷ್ಯಕಾರರೂ, ಸ್ವೆಂದಸ್ವಾಮಿಯೂ ಇದಕ್ಕೆ ವೃಷ್ಟಿಪ್ರದಾಃ ಎಂದರೆ ಮಳೆಯನ್ನು ಕೊಡುವವರು ಎಂದರ್ಥಮಾಡಿದಾರೆ. ಪಾಶ್ಚಾತ್ಯರಲ್ಲಿ ಈ ಶಬ್ದಕ್ಕೆ Gloss ಎಂಬುವರು Stepping over an expanse of water, commanding over water, overcoming all difficulty ಎಂದೂ Griffith ಎಂಬುವರು active, pushing, hardworking ಎಂದೂ, Ludwig ಎಂಬುವರು Securer of rains, Active, quick, swift ಎಂದೂ Williams ಎಂಬುವರು shedder of rains ಎಂದೂ Rosen ಎಂಬುವರು rich in rains ಎಂದೂ Benfey ಎಂಬುವರು worthy, active, diligent ಎಂದೂ ವಿಧವಿಧವಾಗಿ ಅರ್ಥಮಾಡಿದಾರೆ. ಈ **ಅಪ್ತೂರಃ** ಎಂಬ ಶಬ್ದವು ವಿಶ್ವೇದೇವತೆಗಳ ಪರವಾಗಿ ಮಾತ್ರವಲ್ಲದೆ ಇತರ ದೇವತೆಗಳ ಎಂದರೆ ಅಶ್ವಿನೀದೇವತೆಗಳು, ಇಂದ್ರ, ಅಗ್ನಿ ಪವಮಾನಃಸೋಮ ಮೊದಲಾದ ದೇವತೆಗಳ ಪರವಾಗಿಯೂ ಉಪಯೋಗಿಸಲ್ಪಟ್ಟಿದೆ—

ಅಶ್ವಿನಿದೇವತೆಗಳ ಪರವಾಗಿ—**ಯೇ ಅಪ್ತೂರೋ ದಿವ್ಯಾಸೋ ನ ಗೃಧ್ರಾ ಅಭಿ ಪ್ರಯೋ ನಾಸತ್ಯಾ ವಹಂತಿ** ॥ (ಋ. ಸಂ. ೧-೧೧೪-೪)

ಇಂದ್ರನ ಪರವಾಗಿ—**ಯಜ್ಞೈನ ಗಾತುಮಪ್ತೂರೋ ವಿವಿದ್ರಿರೇ ಧಿಯೋ ಹಿನ್ವಾನಾ ಉಶಿಜೋ ಮನೀಷಿಣಃ** ॥ (ಋ. ಸಂ. ೨-೨೧-೫ ಮತ್ತು ೩-೫೧-೨)

ಪವಮಾನಃಸೋಮಃ—**ಇಂದ್ರಂ ವರ್ಧಂತೋ ಅಪ್ತೂರಃ ಕೃಣ್ವಂತೋ ವಿಶ್ವಮಾರ್ಯಂ** ॥ (ಋ. ಸಂ. ೯-೬೩-೫ ; ೯-೬೧-೧೩ ; ೯-೬೩-೨೧ ; ೯-೧೦೪-೭)

ಅಗ್ನಿ ಪರವಾಗಿ—**ಅಗ್ನಿಂ ಯೆಂತುರಮಪ್ತೂರಮೃತಸ್ಯ ಯೋಗೇ ವನುಷಃ** ॥ (ಋ. ಸಂ. ೩-೨೭-೧೧) ಇತ್ಯಾದಿ

ಸುತಂ—ಕಲ್ಲುಗಳಿಂದ ಜಜ್ಜಿ ರಸವನ್ನು ಹಿಂಡಿತೆಗೆದು ಸೋಸಿ ಪಾನಯೋಗ್ಯವಾಗುವಂತೆ ಸಿದ್ಧಪಡಿಸಿರುವ ಎಂದರ್ಥವು. ಇದರ ಜೊತೆಯಲ್ಲಿ ಸೋಮಂ ಎಂಬ ಶಬ್ದವು ಉಪಯೋಗಿಸಿರುವುದೂ ಉಂಟು ಇಲ್ಲದಿರುವುದೂ ಉಂಟು. ಎರಡು ಸಂದರ್ಭಗಳಲ್ಲಿಯೂ ಸೋಮರಸವೆಂದೇ ಅರ್ಥವು.

ತೂರ್ಣಯಃ—ತ್ವರಮಾಣಾಃ, ಜಾಗ್ರತೆಯಾಗಿ, ಬೇಗನೆ, ಯಜಮಾನನಿಗೆ ಯಜ್ಞಫಲವನ್ನು ಕೊಡುವುದಕ್ಕಾಗಿ ಆಲಸ್ಯಮಾಡದೆ ಬೇಗನೆ ಬರುವವರು ಎಂದು ಭಾಷ್ಯಕಾರರು ಅರ್ಥಮಾಡಿದಾರೆ. ಪಾಶ್ಚಾತ್ಯಪಂಡಿತರೂ speedy, diligently, hastily, quickly, swift, quick in work, ಎಂದು ಬೇರೆ ಬೇರೆ ಶಬ್ದಗಳಲ್ಲಿ ಭಾಷ್ಯಕಾರರ ಅಭಿಪ್ರಾಯವನ್ನೇ ಅನುಮೋದಿಸಿದಾರೆ.

ಉಸ್ರಾಇವ ಮತ್ತು ಸ್ವಸರಾಣೆ—ಈ ಶಬ್ದವು ರಶ್ಮಿವಾಚಕವಾದ ಹದಿನೈದು ಪದಗಳ ಮಧ್ಯದಲ್ಲಿ ಪಠಿತವಾಗಿದೆ (ನಿ. ೨-೧೫) ಮತ್ತು ಗೋವುಗಳು ಎಂಬ ಅರ್ಥದಲ್ಲಿ ಒಂಭತ್ತು ಪದಗಳ ಮಧ್ಯದಲ್ಲಿ ಪಠಿತವಾಗಿದೆ (ನಿ. ೩-೯) ಮತ್ತು ಸ್ವಸರಾಣೆ ಎಂಬ ಶಬ್ದವು ಅಹಸ್ಸೂಚಕವಾದ ಹನ್ನೆರಡು ಶಬ್ದಗಳ ಮಧ್ಯದಲ್ಲಿಯೂ ಗೃಹ ಎಂಬ ಅರ್ಥಸೂಚಕವಾದ ಇಪ್ಪತ್ತೆರಡು ನಾಮಗಳ ಮಧ್ಯದಲ್ಲಿಯೂ ಪಠಿತವಾಗಿದೆ. ಆದುದರಿಂದ **ಉಸ್ರಾ ಇವ ಸ್ವಸರಾಣೆ** ಎಂಬ ದೃಷ್ಟಾಂತವಾಕ್ಯಕ್ಕೆ ಭಾಷ್ಯಕಾರರು ಹೇಳಿರುವ ಅರ್ಥವಲ್ಲದೆ "ಗೋವುಗಳು ತಮ್ಮ ಮನೆಗೆ ಹೋಗುವಂತೆ" ಎಂದೂ ಅರ್ಥಮಾಡಬಹುದು. ಸ್ಕಂದಸ್ವಾಮಿಯೂ ವೆಂಕಟಮಾಧವರೂ ಈ ಎರಡು ವಿಧವಾದ ಅರ್ಥವನ್ನೂ ಹೇಳಿರುವರು. ಪಾಶ್ಚಾತ್ಯಪಂಡಿತರೂ ಸಹ, ಸ್ವಸೆಂರಾಣೆ ಎಂಬ ಶಬ್ದಕ್ಕೆ day, cowshed, stall, abode, grazing ಮೊದಲಾದ ಶಬ್ದಗಳಿಂದ ಅರ್ಥಮಾಡಿರುವರು. ಸ್ವಸರಾಣೆ ಎಂಬ ಶಬ್ದವು ಋ. ಸಂ. ೧-೩೪-೭; ೨-೧೯-೨; ೨-೩೪-೫; ೩-೬೦-೬ ಈ ಋಕ್ಕುಗಳಲ್ಲಿ ಉಪಯೋಗಿಸಲ್ಪಟ್ಟಿರುವುದು.

॥ ವ್ಯಾಕರಣಪ್ರಕ್ರಿಯಾ ॥

ದೇವಾಸಃ, ನನ್ದಿಗ್ರಹಿ ಪಚಾದಿಭ್ಯೋಲ್ಯುಣಿನ್ಯಚಃ (ಪಾ. ಸೂ. ೩-೧-೧೩೪) ಎಂಬುದರಿಂದ, ಪಚಾದಿಯಾದ ದಿವ್ ಎಂಬುದಕ್ಕೆ ಅಚ್ ಪ್ರತ್ಯಯಬರುವುದು. ಪ್ರಥಮಾ ಬಹುವಚನದಲ್ಲಿ **ಆಜ್ಜಸೇರಸುಕ್** ಎಂಬುದರಿಂದ ಅಸುಕ್ ಆಗಮಬರುವುದು. ಅಚ್ ಪ್ರತ್ಯಯವು ಚಿತ್ತಾದ್ದರಿಂದ ದೇವ ಎಂಬುದು **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತವಾಗುವುದು. ಅಪ್ರುರಃ—ತುರ ತ್ವರಣೇ ಎಂಬ ಧಾತುವು ಶ್ಲು ವಿಕರಣವನ್ನು ಹೊಂದುವ ಜುಹೋತ್ಯಾದಿಯಲ್ಲಿ ಪಠಿತವಾಗಿರುವುದು. ಅಪಃ ತುತುರತಿ = ತ್ವರಯನ್ತಿ (ನೀರನ್ನು ಆಯಾಕಾಲದಲ್ಲಿ ಸುರಿಸುವುವು) ಎಂದು ಅರ್ಥವಿವಕ್ಷೆಮಾಡಿದಾಗ ತುರ ಧಾತುವಿನಮೇಲೆ **ಕ್ವಿಪ್‌ಚ** (ಪಾ. ಸೂ. ೩-೨-೭೬) ಎಂಬುದರಿಂದ ಕ್ವಿಪ್ ಪ್ರತ್ಯಯಬರುವುದು ಕ್ವಿಪ್ಪಿನಲ್ಲಿರುವ ವರ್ಣಗಳೆಲ್ಲವೂ ಲುಪ್ತವಾಗುವುವು. ಪ್ರಥಮಾ ಬಹುವಚನಪ್ರತ್ಯಯ ಜಸ್ಸನ್ನಿಟ್ಟರೆ ಅಪ್ರುರಃ ಎಂದಾಗುವುದು ಇಲ್ಲಿ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರಬರುವುದು. ಆಗಂತ-ಆಗಚ್ಛಂತು ಎಂಬ ಅರ್ಥ ವಿವಕ್ಷೆಮಾಡಿದಾಗ ಪ್ರಥಮ ಪುರುಷ ಬಹುವಚನಕ್ಕೆ ಬದಲಾಗಿ ಮಧ್ಯಮಪುರುಷ ಬಹುವಚನ ಪ್ರತ್ಯಯ ಥ ಬಂದಿರುವುದು, ಆದಕ್ಕೆ **ತಸ್ಥಸ್ಥಮಿಪಾಂತಾಂತೇತಾಮಃ** (ಪಾ. ಸೂ. ೩-೪-೧೦೧) ಎಂಬುದರಿಂದ ತ ಆದೇಶಬರುವುದು. ವಿಕರಣಪ್ರತ್ಯಯ ಶಪ್‌ಗೆ **ಬಹುಲಂ ಛಂದಸಿ** (ಪ. ಸೂ. ೨-೪-೭೩) ಎಂಬುದರಿಂದ ಲೋಪಬರುವುದು. ತಕಾರಕ್ಕೆ **ತಪ್ತನಪ್ತನಥನಾಶ್ಚ** (ಪಾ. ಸೂ. ೭-೧-೪೫) ತಪ್, ತನಪ್ ಧನ ಎಂಬ ಆದೇಶಗಳು ತಕಾರಕ್ಕೆ ಬರುವುವು. ಎಂಬುದರಿಂದ, ತಪ್, ಬರುವುದು. ತಪ್‌ನಲ್ಲಿ ಪಕಾರ ಲುಪ್ತವಾಗುವುದು. **ಸಾರ್ವಧಾತುಕಮಪಿತ್** (ಗಾ. ಸೂ. ೧-೨-೯) ಪಿತ್ತಲ್ಲದ ಸಾರ್ವಧಾತುಕವು ಜಿತ್ತಾಗುವುದು, ಎಂದು ಹೇಳಿರುವುದು ಇಲ್ಲಿ ಪಿತ್ತಾದ್ದರಿಂದ ಸಾರ್ವಧಾತುಕವಾದ ತಕಾರವು ಜಿತ್ತಾಗುವುದಿಲ್ಲ. ಆದ್ದರಿಂದ **ಅನುದಾತ್ತೋಪದೇಶ ವನತಿತನೋತ್ಯಾದೀನಾಮನುನಾಸಿಲೋಪೋಝಲಿಕಿಜಿತಿ** (ಪಾ. ಸೂ. ೬-೪-೩೭) ಎಂಬುದರಿಂದ ಅನುನಾಸಿಕವಾದ ಮಕಾರಕ್ಕೆ ಲೋಪಬರುವುದಿಲ್ಲ, 'ನಶ್ಚಾಪ ದಾಂತಸ್ಯ ಝಲಿ' (ಪಾ. ಸೂ. ೮-೩-೨೪) ಝಲ್ ವರ್ಣಪರದಲ್ಲಿರುವಾಗ ಪದದಕೊನೆಯಲ್ಲಿಲ್ಲದ ನಕಾರ ಮಕಾರಗಳಿಗೆ ಅನುಸ್ವಾರ ಬರುವುದು ಎಂಬುದರಿಂದ ಮಕಾರಕ್ಕೆ **ಅನುಸ್ವಾರಬಂದು ಅನುಸ್ವಾರಕ್ಕೆ, 'ಅನುಸ್ವಾರಸ್ಯಯಯಿಪರ ಸವರ್ಣಃ'** (ಪಾ. ಸೂ. ೮-೪-೫೮) ಯಯ್ ವರ್ಣವು

ಪರವಾಗಿರುವಾಗ ಅನುಸ್ವಾರಕ್ಕೆ ಪರಸವರ್ಣ ಬರುವುದು ಎಂಬುದರಿಂದ ಪರಸವರ್ಣ ನಕಾರಬಂದರೆ ಆಗನ್ತ್ಸ ಎಂದು ಆಗುವುದು; ಇಲ್ಲಿ ತಿಜ್ಜತಿಜಿಃ (ಪಾ. ಸೂ. ೧೪-೧-೨೪) ಎಂಬುದರಿಂದ ಅನುದಾತ್ತಬರುವುದು. ತ್ವರಂತೇ ಇತಿ ತೂರ್ಣಯಃ—**ವಹಿಶ್ರಿಶ್ರು ಯುದ್ರು ಗ್ಲಾಹಾತ್ವರಿಭ್ಯೋ ನಿತ್** (ಉ. ಸೂ. ೪-೪-೯೧) ವಹಪ್ರಾಪಣೇ, ಶ್ರಿ-ಞ್ಸೇವಾಯಾಂ, ಶ್ರುಶ್ರವಣೇ, ಯುಮಿಶ್ರಣೇ, ದ್ರುಗತೌ, ಗ್ಲೈಮ್ಲೈ ಹರ್ಷಕ್ಷಯೇ, ಓಹಾಕ್ ಗತೌ, ಞಾತ್ವ ರಾಸಂಭ್ರಮೇ ಈ ಧಾತುಗಳಮೇಲೆ ನಿಪ್ರತ್ಯಯಬರುವುದು ಅದು ನಿತ್ವಾಗುವುದು ಎಂಬುದರಿಂದ, ಞಿತ್ವರಾ ಸಂಭ್ರಮೇ ಎಂಬ ಧಾತುವಿಗೆ ನಿಪ್ರತ್ಯಯಬಂದರೆ ತ್ವರ್+ನಿ ಎಂದಿರುವಾಗ **ಜ್ವರತ್ವರಸೃವ್ಯವಿಮವಾಮುಪಧಾಯಾಶ್ಚ** (ಪಾ. ಸೂ. ೬-೪-೨೦) ಎಂಬುದರಿಂದ ಊರ್ ಬಂದು ಪ್ರತ್ಯಯ ನಕಾರಕ್ಕೆ **ರಷಾಭ್ಯಾಂ ನೋಣಃ ಸಮಾನಪದೇ** (ಪಾ. ಸೂ. ೮-೪-೧) ಎಂಬುದರಿಂದ ಣಕಾರಬಂದರೆ ತೂರ್ಣಿ ಎಂದಾಗುವುದು. ಪ್ರತ್ಯಯವು ನಿತ್ತಾದ್ದರಿಂದ ನಿತ್ವಸ್ವರಬರುವುದು. ಪ್ರಥಮಾ ಬಹುವಚನದಲ್ಲಿ ತೂರ್ಣಯಃ ಎಂದಾಗುವುದು. ಉಸ್ರಾಇವ ಎಂಬಲ್ಲಿ ಇವೇನ (**ಸಹನಿತ್ಯಸಮಾಸಃ**) ವಿಭಕ್ತ್ಯಲೋಪಃ ಪೂರ್ವಪದಪ್ರಕೃತಿಸ್ವರತ್ವಂ ಚ (ಪಾ. ಸೂ. ೨-೧-೪ ವಾ. ೨) ಎಂಬುದರಿಂದ ನಿತ್ಯವಾಗಿ ಸಮಾಸಬಂದರೆ ಪೂರ್ವಪದದ ಪ್ರಕೃತಿಸ್ವರಬರುವುದು. ಸರತಿ ಗಚ್ಛತಿ (ಹೋಗುತ್ತಾನೆ) ಇತಿ ಸರಃ ಸೂರ್ಯಃ, ಸೃಧಾತುವಿಗೆ ಪಚಾದ್ಯಚ್ ಪ್ರತ್ಯಯಬರುವುದು, ಸ್ವಃ ಸರಃ ಯೇಷಾಂ ತಾನಿ (ಯಾವುಗಳಿಗೆ ಸೂರ್ಯನು ಸ್ವತ್ತೋ ಅವುಗಳಿಗೆ ಸ್ವಸರ ಎಂದು ಹೆಸರು) ಸ್ವಸರಾಣಿ ಅಹಾನಿ, ಇಲ್ಲಿ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** (ಪಾ. ಸೂ. ೬-೨-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರಬರುವುದು. ಆದ್ದರಿಂದ ಸ್ವಶಬ್ದವು ಆದ್ಯುದಾತ್ತವಾಗುವುದು. ॥ ೪ ॥

॥ ಸಂಹಿತಾಪಾಠಃ ॥

ವಿಶ್ವೇ ದೇವಾಸೋ ಅಸ್ರಿಧ್ರ ಏಹಿಮಾಯಾಸೋ ಅದ್ರುಹಃ ।
ಮೇಧಂ ಜುಷಂತ ವಹ್ನಯಃ ॥ ೯ ॥

॥ ಪದಪಾಠಃ ॥

ವಿಶ್ವೇ । ದೇವಾಸಃ । ಅಸ್ರಿಧ್ರಃ । ಏಹಿಮಾಯಾಸಃ । ಅದ್ರುಹಃ ॥
ಮೇಧಂ । ಜುಷಂತ । ವಹ್ನಯಃ ॥ ೯ ॥

॥ ಸಾಯಣಭಾಷ್ಯಂ ॥

ವಿಶ್ವೇದೇವಾಸ ಏತನ್ನಾಮಕಾ ದೇವವಿಶೇಷಾ ಮೇಧಂ ಹವಿರ್ಯಜ್ಞಸಂಬದ್ಧಂ ಜುಷಂತ । ಸೇವಂತಾಂ । ಕೀದೃಶಾಃ । ಅಸ್ರಿಧಃ ಕ್ಷಯರಹಿತಾಃ ಶೋಷರಹಿತಾ ವಾ ಏಹಿಮಾಯಾಸಃ ಸರ್ವತೋ ವ್ಯಾಪ್ತಪ್ರಜ್ಞಾಃ । ಯದ್ವಾ । ಸೌಚೀಕಮಗ್ನಿಮಪ್ಸು ಪ್ರವಿಷ್ಟಮೇಹಿ ವಾ ಯಾಸೀರಿತಿ ಯದವೋಚನ್ ತದನುಕರಣಹೇತುಕೋ ಽಯಂ ವಿಶ್ವೇಷಾಂ ದೇವಾನಾಂ ವ್ಯಪದೇಶ ಏಹಿಮಾಯಾಸ ಇತಿ । ಅದ್ರುಹೋ

ದ್ರೋಹರಹಿತಾಃ ವಹ್ನಯೋ ವೋಢಾರೋ ಧನಾನಾಂ ಪ್ರಾಪಯಿತಾರಃ ॥ ಅಸ್ರಿಧಃ । ಸ್ರಿಧೇಃ ಕ್ಷಯಾರ್ಥಸ್ಯ ಕೋಷಣಾರ್ಥಸ್ಯ ವಾ ಸಂಪದಾದಿಭ್ಯೋ ಭಾವೇ ಕ್ವಿಪಿ । ಪಾ. ೩-೩-೧೦೮-೯ । ನಞಾ ಬಹುವ್ರೀಹಿಃ । ಪೂರ್ವಪದಪ್ರಕೃತಿಸ್ವರಂ ಬಾಧಿತ್ವಾ ನಞ್ಸುಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ಏಹಿಮಾಯಾಸಃ । ಈಹ ಚೇಷ್ಟಾಯಾಂ । ಆ ಸಮಂತಾದೀಹತ ಇತ್ಯೇಹಿಃ । ಇನ್ । ಉ. ೪-೧೧೭ । ಇತಿ ಸರ್ವಧಾತುಸಾಧಾರಣ ಇನ್ಪ್ರತ್ಯಯೋ ನಿತ್ತ್ವಾದಾದ್ಯುದಾತ್ತಃ । ಏಹಿರ್ಮಾಯಾ ಪ್ರಜ್ಞಾ ಯೇಷಾಮಿತಿ ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ ಅಥವಾ । ಆಙ ಉದಾತ್ತಾದುತ್ತರಸ್ಯೇಹೇತಿ ಲೋಣ್ಮಧ್ಯಮೈಕವಚನಸ್ಯ ತಿಙ್ಙತಿಙ ಇತಿ ನಿಘಾತ ಏಕಾದೇಶ ಉದಾತ್ತೇನೋದಾತ್ತ ಇತ್ಯೇಕಾರ ಉದಾತ್ತಃ । ಏಹಿಮಾಯೇತಪದಯುಕ್ತಂ ಮಾ ಯಾಸೀರಿತ್ಯತ್ರ ಮಾಯೇತ್ಯಕ್ಷರದ್ವಯಂ ಯೇಷಾಂ ತ ಏಹಿಮಾಯಾಸಃ । ಪೂರ್ವಪದಪ್ರಕೃತಿಸ್ವರಃ । ಅದ್ರುಹಃ । ದ್ರುಹ ಜಿಘಾಂಸಾಯಾಂ । ಸಂಪದಾದಿತ್ವಾದ್ಭಾವೇ ಕ್ವಿಪಿ ಬಹುವ್ರೀಹೌ ನಞ್ಸುಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ಮೇಧಂ । ಮೇಧೃಸಂಗಮೇ ಚ । ಮೇಧ್ಯತೇ ದೇವೈಃ ಸಂಗಮ್ಯತ ಇತಿ ಮೇಧಂ ಹವಿಃ । ಕರ್ಮಣಿ ಘಞ್ । ಞಿತ್ವಾದಾದ್ಯುದಾತ್ತಃ । ಜುಷಂತ ಸೇವಂತಾಮಿತ್ಯರ್ಥೇ ಛಂದಸಿ । ಲುಙ್ಲಙ್ಲಿಟಃ । ಪಾ. ೩-೪-೬ । ಇತಿ ಧಾತುಸಂಬಂಧೇ ಲಙ್ । ಯತ ಉಕ್ತರೂಪಾ ವಿಶ್ವೇದೇವಾ ಅತೋ ಜುಷಂತೇತಿ ದ್ರುಹಾದಿಧಾತ್ವರ್ಥೈಃ ಸಂಬಂಧಾತ್ । ಬಹುಲಂ ಛಂದಸ್ಯಮಾಙ್ಯೋಗೇಽಪಿ । ಪಾ ೬-೪-೭೫ । ಇತ್ಯಡಾಗಮಾಭಾವಃ । ವಹ್ನಯಃ । ನಿರಿತ್ಯನುವೃತ್ತೌ ವಹಿಶ್ರೀತ್ಯಾದಿನಾ ವಿಹಿತಸ್ಯ ನಿಪ್ರತ್ಯಯಸ್ಯ ನಿತ್ತ್ವಾದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ವಿಶ್ವೇ ದೇವಾಸಃ—ಎಲೈ ವಿಶ್ವೇದೇವತೆಗಳೇ (ನೀವು) । ಅಸ್ರಿಧಃ—ಕ್ಷಯರಹಿತರು, ನಾಶರಹಿತರು । ಏಹಿಮಾಯಾಸಃ—ಸಮಸ್ತದಿಕ್ಕುಗಳಲ್ಲಿಯೂ ಸಮಸ್ತವಿಷಯದಲ್ಲಿಯೂ ಪ್ರಜ್ಞೆ (ತಿಳಿವಳಿಕೆ) ಯುಳ್ಳವರು । ಅದ್ರುಹಃ—ದ್ರೋಹರಹಿತರಾದವರು, । ವಹ್ನಯಃ—(ನಿಮ್ಮನ್ನು ಸ್ತೋತ್ರಮಾಡುವವರಿಗೆ ಧನಾದ್ಯೈಶ್ವರ್ಯವನ್ನು) ವಹಿಸತಕ್ಕವರು, ತಂದುಕೊಡುವವರು । (ಇಂತಹ ನೀವು) ಮೇಧಂ—ಯಜ್ಞಸಂಬಂಧವಾದ ಹವಿಸ್ಸನ್ನು । ಜುಷಂತ—ಸೇವಿಸಿರಿ (ಭಕ್ಷಿಸಿರಿ).

॥ ಭಾವಾರ್ಥ ॥

ಎಲೈ ವಿಶ್ವೇದೇವತೆಗಳೇ, ನೀವು ನಾಶರಹಿತರು, ಎಲ್ಲಾ ವಿಷಯಗಳಲ್ಲಿಯೂ ಪೂರ್ಣವಾದ ಪ್ರಜ್ಞೆಯುಳ್ಳವರು ಎಂದರೆ ಸಮಸ್ತವನ್ನೂ ಬಲ್ಲವರು. ನೀವು ಮತ್ತೊಬ್ಬರಿಗೆ ದ್ರೋಹವೆಣಿಸುವವರಲ್ಲ. ನಿಮ್ಮನ್ನು ಸ್ತೋತ್ರಮಾಡುವವರಿಗೆ ಧನಾದ್ಯೈಶ್ವರ್ಯವನ್ನು ತಂದುಕೊಡತಕ್ಕವರು. ಇಂತಹ ನೀವು ನಾವು ಕೊಡುವ ಯಜ್ಞಸಂಬಂಧವಾದ ಹವಿಸ್ಸನ್ನು ಸೇವಿಸಿರಿ.

English Translation.

May the Visve devas, who are immortal, Omniscient, devoid of malice and bearers (of riches), accept the Sacrificial food.

॥ ವಿಶೇಷವಿಷಯಗಳು ॥

ಅಸ್ರಿಧಃ—ಭಾಷ್ಯಕಾರರು ಇದಕ್ಕೆ ಕ್ಷಯರಹಿತರು ಅಥವಾ ಶೋಷಣೆರಹಿತರು—not causing drought, or dryness, ಎಂದರ್ಥಮಾಡಿರುವರು. ಪಾಶ್ಚಾತ್ಯರು—Unfailing, undecaying, undrying, undaunted, fearless, friendly, harmless, ಇತ್ಯಾದಿ ಶಬ್ದಗಳನ್ನು ಪ್ರಯೋಗಿಸಿರುವರು.

ಏಹಿಮಾಯಾಸಃ—ಈ ಶಬ್ದಪ್ರಯೋಗವು ಋಗ್ವೇದದಲ್ಲಿ ಈ ಋಕ್ಕಿನಲ್ಲಿ ಮಾತ್ರವಿರುವುದು ಬೇರೆ ಎಲ್ಲಿಯೂ ಇಲ್ಲ. ಭಾಷ್ಯಕಾರರು ಈ ಶಬ್ದಕ್ಕೆ ಸರ್ವತೋ ವ್ಯಾಪ್ತಪ್ರಜ್ಞಃ ಎಂದು ವ್ಯಾಖ್ಯಾನಮಾಡಿರುವರು. ಸ್ಕಂದಸ್ವಾಮಿಯು ಆಹೀನಮಾಯಾಃ ಅನ್ಯೂನಪ್ರಜ್ಞಾನಾ ಎಂದು ಹೇಳಿರುವರು. ಇವರಿಬ್ಬರೂ ಮತ್ತು ವೆಂಕಟಮಾಧವರೂ ಈ ಶಬ್ದದ ಉತ್ಪತ್ತಿವಿಚಾರದಲ್ಲಿ ಅಥವಾ ಈ ಶಬ್ದವು ಹೇಗೆ ರೂಢಿಯಲ್ಲಿ ಬಂದಿತೆಂಬ ವಿಚಾರದಲ್ಲಿ ಕೌಷೀತಕೀಬ್ರಾಹ್ಮಣದ ವಾಕ್ಯವನ್ನು ಉದಾಹರಿಸಿದಾರೆ- ಸೌಚೀಕಮಗ್ನಿಮಪ್ಸು ಪ್ರವಿಷ್ಟಮೇಹಿ ಮಾ ಯಾಸೀರಿತಿ ಯದವೋಚನ್ ತದನುಕರಣಹೇತುಕೋಽಯಂ ವಿಶ್ವೇಷಾಂ ದೇವಾನಾಂ ವ್ಯಪದೇಶ ಏಹಿ ಮಾಯಾಸ ಇತಿ—ಸೌಚೀಕನಾಮಕನಾದ ಅಗ್ನಿಯು ನೀರಿನಲ್ಲಿ ಪ್ರವೇಶಿಸುವುದನ್ನು ಕಂಡು ದೇವತೆಗಳು ಏಹಿ ಮಾ ಯಾಸೀಃ ಎಂದರೆ " ಹೋಗಬೇಡ, ಬಾ " ಎಂದು ಏಹಿಮಾಯಾಸೀಃ ಎಂಬ ಶಬ್ದಗಳನ್ನು ಉಪಯೋಗಿಸಿದ್ದರಿಂದ ಅದನ್ನನುಸರಿಸಿ ಈ ಏಹಿಮಾಯಾಸಃ ಎಂಬ ಶಬ್ದವು ರೂಢಿಗೆ ಬಂದಿರಬಹುದೆಂದು ಅಭಿಪ್ರಾಯಪಡುವರು : ಋಗ್ವೇದಸಂಹಿತೆಯ ಹತ್ತನೆಯ ಮಂಡಲದ ೫೧ ನೆಯ ಸೂಕ್ತದಲ್ಲಿ (ಋ. ೧೦-೫೧-೬) ಈ ವಿಷಯವು ವಿಶದವಾಗಿ ವರ್ಣಿಸಲ್ಪಟ್ಟಿದೆ—

ಅಗ್ನೇಃ ಪೂರ್ವೇ ಭ್ರಾತರೋ ಅರ್ಥಮೇತಂ ರಥೀವಾಧ್ವನಮನ್ಯವರೀವುಃ ।
ತಸ್ಮಾದ್ಗಿಯಾ ವರುಣ ದೂರಮಾಯಂ ಗೌರೋ ನ ಕ್ಷೇಪ್ನೋರವಿಜೇ ಜ್ಯಾಯಾಃ ॥
ಕುರ್ಮಸ್ತ ಆಯುರಜರಂ ಯದಗ್ನೇ ಯಥಾ ಯುಕ್ತೋ ಜಾತವೇದೋ ನ ರಿಷ್ಯಾಃ ।
ಅಥಾ ವಹಾಸಿ ಸುಮನಸ್ಯಮಾನೋ ಭಾಗಂ ದೇವೇಭ್ಯೋ ಹವಿಷಃ ಸುಜಾತ ॥
ಪ್ರಯಾಜಾನ್ಮೇ ಅನುಯಾಜಾಂಶ್ಚ ಕೇವಲಾನೂರ್ಜಸ್ವಂತಂ ಹವಿಷೋ ದತ್ತ ಭಾಗಂ ।
ಘೃತಂ ಚಾಸಾಂ ಪುರುಷಂ ಚೌಷಧೀನಾಮಗ್ನೇಶ್ಚ ದೀರ್ಘಮಾಯುರಸ್ತು ದೇವಾಃ ॥
ತವ ಪ್ರಯಾಜಾ ಅನುಯಾಜಾಶ್ಚ ಕೇವಲ ಊರ್ಜಸ್ವಂತೋ ಹವಿಷಃ ಸಂತು ಭಾಗಾಃ ।
ತವಾಗ್ನೇ ಯಜ್ಞೋ ಽಯಮಸ್ತು ಸರ್ವಸ್ತುಭ್ಯಂ ನಮಂತಾಂ ಪ್ರದಿಶಶ್ಚತಸ್ರಃ ॥

(ಋ. ಸಂ. ೧೦-೫೧-೬ ರಿಂದ ೯)

ಈ ಸೂಕ್ತವು ದೇವತೆಗಳಿಗೂ ಅಗ್ನಿಗೂ ನಡೆದ ಸಂಭಾಷಣೆಯು. ಮುಖ್ಯವಿಚಾರವೇನೆಂದರೆ—ಅಗ್ನಿಗೆ ಭೂಪತಿ, ಭುವನಪತಿ, ಭೂತಾನಾಂಪತಿ ಎಂಬ ಹೆಸರಿನ ಮೂವರು ಜ್ಯೇಷ್ಠಸಹೋದರರಿದ್ದರು ಅವರೂ ಅಗ್ನಿಯಂತೆಯೇ ದೇವತೆಗಳಿಗೆ ಯಜ್ಞದಲ್ಲಿ ಹವಿಸ್ಸನ್ನು ವಹಿಸುತ್ತಿದ್ದರು. ಹೀಗಿರುವಲ್ಲಿ ಯಜ್ಞದಲ್ಲಿ ಹೋಮಮಾಡುವಾಗ ವಜ್ರಸದೃಶವಾದ ವಷಟ್ಕಾರ ಶಬ್ದಪೂರ್ವಕವಾದ ಹೋಮಗಳಿಂದ ಈ ಮೂವರು ಸಹೋದರರೂ ಮೃತರಾದರು. ಅದನ್ನು ಕಂಡು ಕಿರಿಯವನಾದ ಅಗ್ನಿಯು ಭೀತನಾಗಿ ನೀರಿನಲ್ಲಿ ಹೋಗಿ ಅವಿತುಕೊಂಡಿದ್ದನು. ದೇವತೆಗಳು ಅಗ್ನಿಯನ್ನು ಹುಡುಕುತ್ತಿರುವಾಗ ನೀರಿನಲ್ಲಿದ್ದ ವಿಾನುಗಳು ಅಗ್ನಿಯು ನೀರಿನಲ್ಲಿ ಇರುವನೆಂದು ದೇವತೆಗಳಿಗೆ

ತಿಳಿಸಿದವು. ಆಗ ದೇವತೆಗಳು ಬಂದು ಅಗ್ನಿಯನ್ನು ಕುರಿತು ಸಂಭಾಷಿಸಿದರು. ಆ ಸಂಭಾಷಣೆಯೇ ಈ ಸೂಕ್ತದಲ್ಲಿ ವಿವರಿಸಲ್ಪಟ್ಟಿದೆ. ದೇವತೆಗಳು ಅಗ್ನಿಯನ್ನು ನೀರಿನಿಂದ ಎದ್ದು ಒರಬೇಕೆಂದೂ ಹಿಂದಿನಂತೆ ತಮಗೆ ಹವಿಸ್ಸನ್ನು ವಹಿಸಬೇಕೆಂದೂ ಪ್ರಾರ್ಥಿಸಲು ಅಗ್ನಿಯು ತನ್ನ ಸಹೋದರರು ಮೃತರಾದುದರಿಂದ ತನಗೂ ಅದೇ ಗತಿ ಪ್ರಾಪ್ತವಾಗುವುದೆಂದೂ ಆಬ್ಬರಿಂದ ತಾನು ಬರುವುದಿಲ್ಲವೆಂದೂ ಹೇಳಿದನು. ಅದಕ್ಕೆ ದೇವತೆಗಳು, ಮರಣ ಕ್ಕಾಗಿ ಹೆದರಬೇಡವೆಂದೂ ನಿನಗೆ ಮರಣದ ಭಯವುಂಟಾಗದಂತೆ ಮಾಡುವುವೆಂದೂ ಹೇಳಲು, ಅಗ್ನಿಯು ಪುನಃ ಇಂತೆಂದನು—ಒಳ್ಳೆದು, ಮರಣಭಯವನ್ನು ನನಗೆ ತಪ್ಪಿಸುವುದಲ್ಲದೆ ಯಾಗಗಳಲ್ಲಿ ಪ್ರಯಾಜಾ, ಅನು ಯಾಜಾ, ಊರ್ಜಸ್ವತ್, ಸ್ವಿಷ್ಟಕೃತ್, ಆಜ್ಯಭಾಗ ಮೊದಲಾದ ಕೆಲವು ವಿಶೇಷ ಆಹುತಿಗಳನ್ನು ನನಗೆ ಕೊಡಬೇಕು ಎಂದನು. ದೇವತೆಗಳು ಹಾಗೆಯೇ ಆಗಲೆಂದೊಪ್ಪಿ ಅವನು ಕೇಳಿದ ಹವಿರ್ಭಾಗಗಳನ್ನು ಕೊಟ್ಟು, ಯಜ್ಞದಲ್ಲಿ ಮುಖ್ಯಪಾತ್ರವನ್ನು ವಹಿಸುವಂತೆಯೂ ಸರ್ವರಿಂದಲೂ ನಮಸ್ಕೃತನಾಗುವಂತೆಯೂ ದೀರ್ಘಾಯುವಾಗು ವಂತೆಯೂ ವರವನ್ನಿತ್ತು ಪೂರ್ವದಂತೆ ಹವಿರ್ವಹನಕಾರ್ಯದಲ್ಲಿ ಅವನನ್ನು ನಿಯಮಿಸಿದರು ಎಂದು ಈ ಸೂಕ್ತದ ಮುಖ್ಯಾಭಿಪ್ರಾಯವು.

ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಈ ವಿಷಯವಾಗಿ ಈ ರೀತಿ ಇರುವುದು—

ಅಗ್ನೇಸ್ತ್ರಯೋ ಜ್ಯಾಯಾಗ್ಂಸೋ ಭ್ರಾತರ ಆಸನ್ತೇ ದೇವೇಭ್ಯೋ ಹವ್ಯಂ ವಹಂತಃ ಪ್ರಾವಿಮಾಯಂತ ಸೋಽಗ್ನಿರಬಿಭೇದಿತ್ಥಂ ನಾವ ಸ್ಯ ಆರ್ತಿಮಾರಿಷ್ಯತೀತಿ ಸ ನಿಲಾಯತ ಸೋಽಪಃ ಪ್ರಾವಿಶತ್ತಂ ದೇವತಾಃ ಪ್ರೈಷಮೈಚ್ಛನ್ತಂ ಮತ್ಸ್ಯಃ ಪ್ರಾಬ್ರುವೀತ್ತ ಮಶಪದ್ಧಿಯೋಧಿಯೋ ತ್ವಾ ವಧ್ಯಾಸುರ್ಯೋ ಮಾ ಪ್ರಾವೋಚ ಇತಿ ತಸ್ಮಾನ್ಮತ್ಸ್ಯಂ ಧಿಯೋಧಿಯಾ ಘ್ನಂತಿ ಶಪ್ತ್ರೋ ಹಿ ತಮನ್ವವಿಂದನ್ತಮಬ್ರುವನ್ನುಪ ನ ಆ ವರ್ತಸ್ವ ಹವ್ಯಂ ನೋ ವಹೇತಿ ಸೋಽಬ್ರವೀದ್ವರಂ ವೃಣೈ ಯದೇವ ಗೃಹೀತಸ್ಯಾಹುತಸ್ಯ ಬಹಿಃ ಪರಿಧಿಸ್ಕಂದಾತ್ತನ್ಮೇ ಭ್ರಾತೃಣಾಂ ಭಾಗಧೇಯಮಸದಿತಿ ತಸ್ಮಾದ್ಯದ್ಗೃಹೀತಸ್ಯಾಹುತಸ್ಯ ಬಹಿಃ ಪರಿಧಿ ಸ್ಕಂದತಿ ತೇಷಾಂ ತದ್ಭಾಗಧೇಯಂ ತಾನೇವ ತೇನ ಪ್ರೀಣಾತಿ ಪರಿಧೀನ್ಪರಿ ದಧಾತಿ ರಕ್ಷಸಾಮಪಹತ್ಯೈ ॥ (ತೈ. ಸಂ. ೨-೬-೬)

ಪೂರ್ವದಲ್ಲಿ ಅಗ್ನಿಗೆ ಮೂರು ಮಂದಿ ಜ್ಯೇಷ್ಠಸಹೋದರರಿದ್ದರು. ಅವರು ದೇವತೆಗಳಿಗೆ ಯಜ್ಞಯಾಗಾದಿಗಳಲ್ಲಿ ಯಜಮಾನನು ಕೊಡುವ ಹವಿಸ್ಸನ್ನು ಒಯ್ಯುತ್ತಿದ್ದರು. ಅವರು ಮೃತರಾಗಲು ಅಗ್ನಿಯು ತನಗೂ ಆ ಗತಿ ಪ್ರಾಪ್ತವಾಗಬಹುದೆಂದು ಹೆದರಿ ಓಡಿಹೋಗಿ ನೀರಿನಲ್ಲಿ ಪ್ರವೇಶಿಸಿ ಯಾರಿಗೂ ಕಾಣದಂತೆ ಅವಿತುಕೊಂಡಿದ್ದನು. ದೇವತೆಗಳು ಅಗ್ನಿಯು ಎಲ್ಲಿಹೋದನೆಂದು ಹುಡುಕುತ್ತಿರುವಾಗ ನೀರಿನಲ್ಲಿದ್ದ ಒಂದು ಮೀನು, ಅಗ್ನಿಯು ನೀರಿನಲ್ಲಿ ಅವಿತುಕೊಂಡಿರುವನೆಂದು ದೇವತೆಗಳಿಗೆ ಹೇಳಿತು. ಮೀನಿನ ಈ ಚಾಡಿಮಾತನ್ನು ಕೇಳಿ ಅಗ್ನಿಗೆ ಕೋಪ ಬಂದು ಇನ್ನುಮೇಲೆ ನೀರಿನಲ್ಲಿರುವ ಮೀನುಗಳನ್ನು ಜನರು ಬಲೆ ಮೊದಲಾದ ಸಾಧನಗಳಿಂದ ಹಿಡಿದು ಕೊಲ್ಲು ವಂತೆ ಶಪಿಸಿದನು. ಅದರಂತೆ ಈಗಲೂ ಜನರು ಮೀನುಗಳನ್ನು ಹಿಡಿದು ಕೊಂದು ತಿನ್ನುತ್ತಿರುವರು. ಬಳಿಕ ದೇವತೆಗಳು ಅಗ್ನಿಯನ್ನು ಕುರಿತು ಎಲೈ ಅಗ್ನಿಯೇ, ನೀನು ಹಿಂತಿರುಗಿ ಬಂದು ನಮಗೆ ಹವಿರ್ವಹನಕಾರ್ಯದಲ್ಲಿ ಉದ್ಯುಕ್ತನಾಗಿರು ಎನ್ನಲು ಅದಕ್ಕೆ ಅಗ್ನಿಯು--ಯಜ್ಞದಲ್ಲಿ ಹೋಮಮಾಡುವಾಗ ಪರಿಧಿಯ. (ರಾಕ್ಷಸರು ಬಂದು ಯಜ್ಞಕ್ಕೆ ವಿಘ್ನಮಾಡದಂತೆ ಅಗ್ನಿಯ ಸುತ್ತಲೂ ನಾಲ್ಕು ದಿಕ್ಕುಗಳಲ್ಲಿ ಇಡುವ ದರ್ಭವಿಶೇಷಗಳು.) ಹೊರಗಡೆ ಎಂದರೆ ಈಚೆ ಬೀಳುವ ಆಜ್ಯವೇ ಮೊದಲಾದ ಆಹುತಿಗಳ ಭಾಗವು ನನ್ನ ಸಹೋದರರಿಗೆ ಹವಿರ್ಭಾಗವಾಗು

ವಂತೆ ವರವನ್ನು ಕೊಟ್ಟರೆ ತಾನು ನೀರಿನಿಂದ ಬಂದು ಪೂರ್ವದಂತೆ ದೇವತೆಗಳಿಗೆ ಹವಿಸ್ಸನ್ನು ಒಯ್ಯುವೆನೆಂದು ಹೇಳಿದನು. ಅದಕ್ಕೆ ದೇವತೆಗಳು ಸಮ್ಮತಿಸಿ ಅವನಿಗೆ ಆರೀತಿ ವರವನ್ನು ಕೊಟ್ಟರು. ಇತ್ಯಾದಿ ಉಪಾಖ್ಯಾನವಿದೆ.

ಆದುದರಿಂದ ಅಗ್ನಿಯು ನೀರನ್ನು ಪ್ರವೇಶಿಸುವ ಸಂದರ್ಭದಲ್ಲಿ ದೇವತೆಗಳು ಅವನನ್ನುದ್ದೇಶಿಸಿ ಹೇಳಿದ—"ಏಹಿ ಮಾ ಯಾಸೀಃ—ಹೋಗಬೇಡ ಬಾ" ಎಂಬ ವಾಕ್ಯದ ಅನುಕರಣೆಯಿಂದ **ಈ ಏಹಿಮಾಯಾಸಃ** ಎಂಬ ಶಬ್ದವು ರೂಢಿಗೆ ಬಂತೆಂದು ಹಲವರ ಅಭಿಪ್ರಾಯವು.

ಕೆಲವರು **ಅಹಿಮಾಯಾ** ಎಂಬ ಶಬ್ದದ ರೂಪಾಂತರವೇ ಏಹಿಮಾಯಾಸಃ ಎಂಬ ಶಬ್ದವಾಗುವುದೆಂದು ಅಭಿಪ್ರಾಯಪಡುವರು. ಈ ಶಬ್ದದ ಬೇರೆ ಬೇರೆ ವಿಭಕ್ತಿರೂಪಗಳಾದ **ಅಹಿಮಾಯೌನ್** (ಋ. ಸಂ. ೧-೧೯೦-೪), **ಅಹಿಮಾಯಾಃ** (ಋ. ಸಂ ೬-೫೨-೧೫ ; ೧೦-೬೩-೪) **ಅಹಿಮಾಯೆಸ್ಯ** (ಋ. ಸಂ. ೬-೨೦-೭) ಎಂಬ ಶಬ್ದಗಳು ಮೇಲೆ ಕೊಟ್ಟಿರುವ ನಾಲ್ಕು ಋಕ್ಕುಗಳಲ್ಲಿ ಮಾತ್ರ ಪ್ರಯೋಗಿಸಲ್ಪಟ್ಟಿವೆ. ಈ ಶಬ್ದಕ್ಕೆ ಪಾಶ್ಚಾತ್ಯಪಂಡಿತರು—

Roth—Of many shapes or agile like a serpent, tricky as a serpent.
Williams—Having unsurpassable wisdom.
Griffith—Having Superhuman Power.
Ludwig—Having the wiles of serpants.

ಎಂದು ನಾನಾವಿಧ ಅರ್ಥಗಳನ್ನು ಹೇಳಿರುವರು. ಮಾಯಾಶಬ್ದಕ್ಕೆ ಋಗ್ವೇದದಲ್ಲಿ ಈ ಕೆಳಗಿನ ಅರ್ಥಗಳನ್ನು ಹೇಳಬಹುದಾಗಿದೆ.

(1) Creative power.
(2) Miraculous power (ಋ. ಸಂ. ೧-೧೬೦-೩ ; ೨-೧೭-೫ &c.)
(3) Power of assuming various shapes (ಋ. ಸಂ. ೩-೫೩-೮ ; ೫-೬೩-೬ ; ೬-೨೨-೬ &c.)
(4) Wiles, tactics, tricks (ಋ. ಸಂ. ೧-೮೦-೭ ; ೬-೧೮-೯ &c.)
(5) Sorcery, witchcraft, magic (ಋ. ಸಂ. ೨-೭೭-೧೬ ; ೮-೨೩-೧೫ ; ೬-೪೫-೯ &c.)
(6) Illusion (ಋ. ಸಂ. ೧೦-೫೪-೨)

ಪೂರ್ವದಲ್ಲಿ ಈ ಶಬ್ದಕ್ಕೆ wisdom, intelligence ಬುದ್ಧಿ ಕುಶಲತೆ ಎಂಬ ಅರ್ಥಗಳಿದ್ದರಬಹುದು. ಕಾಲಕ್ರಮೇಣ ಬೇರೆ ಬೇರೆ ಅರ್ಥಗಳಲ್ಲಿ ಉಪಯೋಗಿಸುವುದು ರೂಢಿಗೆ ಬಂದಂತೆ ತೋರುತ್ತದೆ. ಪುರಾಣಗಳಲ್ಲಿಯೂ ವೇದಾಂತಗಳಲ್ಲಿಯೂ ಮಾಯಾಶಬ್ದಕ್ಕೆ ಪ್ರಕೃತಿ, divine power, creative power, supernatural power ಮೊದಲಾದ ಅರ್ಥಗಳು ರೂಢಿಯಲ್ಲಿವೆ. ಋಗ್ವೇದದಲ್ಲಿ ಈ ಶಬ್ದದ ಬೇರೆ ಬೇರೆ ರೂಪಗಳಾದ **ಮಾಯೊ, ಮಾಯಯಾ, ಮಾಯಾಃ, ಮಾಯಾಭಿಃ, ಮಾಯೊಂ, ಮಾಯಾವಾನ್, ಮಾಯಾವಿನಃ, ಮಾಯಾವಿನಂ, ಮಾಯಿನಃ, ಮಾಯಿನಂ, ಮಾಯಿನಾ, ಮಾಯಿನಾಂ, ಮಾಯಾ,** ಮೊದಲಾದ ಶಬ್ದಗಳು ಅನೇಕ ಋಕ್ಕುಗಳಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಉಪಯೋಗಿಸಲ್ಪಟ್ಟಿವೆ. ಆಯಾ ಸ್ಥಳಗಳಲ್ಲಿ ಅವುಗಳ ಅರ್ಥವನ್ನು ವಿವರಿಸಲಾಗುವುದು.

ಅದ್ರುಹಃ—ದ್ರುಹ ಜಿಘಾಂಸಾಯಾಂ ಎಂಬ ಧಾತುವಿನಿಂದ ಈ ಶಬ್ದದ ಉತ್ಪತ್ತಿಯಾಗಿದೆ. ಈ ಶಬ್ದದ ಅರ್ಥವು—ದ್ರೋಹರಹಿತರು, not injuring, kindly disposed, without evil, without ill-will, without hostility, Guileless, not deceiving, devoid of malignity ಎಂದಾಗುವುದು. ಅರ್ಥವಿವರಣೆಗಾಗಿ ಬೇರೆ ಬೇರೆ ಶಬ್ದಗಳನ್ನೂ ಉಪಯೋಗಿಸಿದರೂ ಮುಖ್ಯಾಭಿಪ್ರಾಯವು ಒಂದೇ ಆಗಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಕ್ಷಯ ಅಥವಾ ಶೋಷಣ ಎಂಬ ಅರ್ಥವನ್ನು ಬೋಧಿಸುವ ಸ್ರಿಧುಧಾತುವಿಗೆ ' ಸಂಪದಾದಿಭ್ಯಃ ಕ್ವಿಪ್ ' (ಪಾ. ಸೂ. ೩-೩-೧೦೮ ವಾ. ೯) ಎಂಬುದರಿಂದ ಭಾವೇಕ್ವಿಪ್ಪ್ರತ್ಯಯವನ್ನು ಮಾಡಿದಾಗ ನಞ್ ನೊಂದಿಗೆ ನ ವಿದ್ಯತೇ ಸ್ರಿತ್ ಯೇಷಾಂ ತೇ ಎಂದು ಬಹುವ್ರೀಹಿ ಸಮಾಸಬರುವುದು, ಇಲ್ಲಿ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** (ಪಾ. ಸೂ. ೬-೨-೧) ಎಂಬ ಪೂರ್ವಪದಪ್ರಕೃತಿಸ್ವರವನ್ನು ಬಾಧಿಸಿ **ನಞ್ ಸುಭ್ಯಾಂ** (ಪಾ. ಸೂ. ೬-೨-೧೭) ಬಹುವ್ರೀಹಿಯಲ್ಲಿ ನಞ್, ಸುಗಳ ಮುಂದಿರುವ ಉತ್ತರಪದವು ಅಂತೋದಾತ್ತವಾಗುವುದು ಎಂಬುದರಿಂದ ಅಸ್ರಿಧ್ ಎಂಬುದು ಅಂತೋದಾತ್ತ ಏಹಿಮಾಯಾಸಃ—ಆ-ಸುತ್ತಲೂ ಈಹತೇ ವ್ಯಾಪಿಸಿರುವನು ಆದ್ದರಿಂದ ಏಹಿಃ, ಆ ಉಪಸರ್ಗದಿಂದಕೂಡಿದ ಈಹಚೇಷ್ಟಾಯಾಂ ಎಂಬ ಧಾತುವಿಗೆ ಇಞ್ (ಉ.ಸೂ. ೨-೫೫೭) ಎಲ್ಲಧಾತುಗಳಿಗೂ ಇಞ್ ಪ್ರತ್ಯಯಬರುವುದು ಎಂಬುದರಿಂದ ಇಞ್ ಪ್ರತ್ಯಯಬಂದರೆ, ಏಹಿ ಎಂದಾಗುವುದು, ಪ್ರತ್ಯಯವು ನಿತ್ತಾದ್ದರಿಂದ ನಿತ್ಸ್ವರ ಬರುವುದು. ಏಹಿಃ ಮಾಯಾ=ಪ್ರಜ್ಞಾ ಯೇಷಾಂ ತೇ ' ಯಾರಪ್ರಜ್ಞೆಯು ಸರ್ವತಃ ವ್ಯಾಪ್ತವಾಗಿರುವುದೋ ಅವರು ಏಹಿಮಾಯಾಸಃ ಎನ್ನಲ್ಪಡುತ್ತಾರೆ ' ಏಹಿಮಾಯಾಸಃ, ಇದು ಬಹುವ್ರೀಹಿ ಸಮಾಸವಾದ್ದರಿಂದ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** (ಪಾ. ಸೂ. ೬-೨-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರಬರುವುದು. ಅಥವಾ, ಆಜ್ಞುನಿಪಾತವಾದ್ದರಿಂದ ಆದ್ಯುದಾತ್ತ ಆದರ ಮುಂದಿರುವ ' ಇಙ್‌ಗತೌ ' ಧಾತುವಿನ ಲೋಟ್ ಮಧ್ಯಮಪುರುಷ ಏಕವಚನವಾದ ' ಇಹಿ ' ಎಂಬುದು **ತಿಙ್ಞತಿಙಃ** (ಪಾ. ಸೂ. ೮-೧-೨೮) ಎಂಬುದರಿಂದ ಅನುದಾತ್ತ. ಆ+ಇಹಿ ಇವುಗಳಿಗೆ ಗುಣಬಂದಮೇಲೆ ಏಕಾದೇಶದಿಂದ ಬಂದ ಏಕಾರವು **ಏಕಾದೇಶ ಉದಾತ್ತೇನೋದಾತ್ತಃ** (ಪಾ.ಸೂ. ೮-೨-೫) ಎಂಬುದರಿಂದ ಉದಾತ್ತವಾಗುವುದು ಏಹೀತಿ ಪದಯುಕ್ತಂ ಮಾಯಾಸೀಃ ' ಇತ್ಯತ್ರ ಮಾಯಾ ಇತ್ಯಕ್ಷರದ್ವಯಂ ಯೇಷಾಂ ತೇ ಏಹಿಮಾಯಾಸಃ) ಏಹಿಪದದಿಂದ ಕೂಡಿರುವ ' ಮಾಯಾಸೀಃ ' ಎಂಬಲ್ಲಿರುವ ಮಾಯಾ ಎಂಬೆರಡು ಅಕ್ಷರಗಳು ಯಾರಲ್ಲಿವೆಯೋ ಅವರು ಏಹಿಮಾಯಾಸಃ, ಬಹುವ್ರೀಹಿಯಾದ್ದರಿಂದ ಪೂರ್ವಪದ ಪ್ರಕೃತಿಸ್ವರಬರುವುದು. ಅದ್ರುಹಃ—ದ್ರುಹ ಜಿಘಾಂಸಾಯಾಂ ಎಂಬ ಧಾತು ಸಂಪದಾದಿಗಣದಲ್ಲಿರುವುದರಿಂದ ಕ್ವಿಪ್ ಪ್ರತ್ಯಯಬರುವುದು ನಞ್ ನೊಂದಿಗೆ ಬಹುವ್ರೀಹಿಯನ್ನು ಮಾಡಿದಮೇಲೆ **ನಞ್ ಸುಭ್ಯಾಂ** (ಪಾ. ಸೂ. ೬-೨-೧೭) ಎಂಬುದರಿಂದ ಉತ್ತರ ಪದವು ಅಂತೋದಾತ್ತವಾಗುವುದು. ಮೇಧಂ- ಮೇಧೃಸಂಗಮೇ ಎಂಬ ಧಾತುವಿನಿಂದ ಆಗಿರುವುದು ಮೇಧ್ಯತೇ ಸಂಗಮ್ಯತೇ ದೇವೈಃ ಇತಿ ಮೇಧಂ, ಹವಿಸ್ಸು ದೇವತೆಗಳೊಂದಿಗೆ ಸೇರುವುದರಿಂದ ಅದಕ್ಕೆ ಮೇಧಂ ಎಂದು ಹೆಸರು ಬಂದಿದೆ. ಕರ್ಮಣಿ ಘಞ್ ಪ್ರತ್ಯಯಬಂದಿರುವುದು. ಪ್ರತ್ಯಯವು ಞಿತ್ತಾದ್ದರಿಂದ ಆದ್ಯುದಾತ್ತಬರುವುದು, ಜುಷನ್ತ—ವಿಶ್ವೇದೇವತೆಗಳಿಗೆ ದ್ರುಹಾದಿ ಧಾತ್ವರ್ಥಸಂಬಂಧವಿರುವುದರಿಂದ **ಛಂದಸಿ ಲುಙ್‌ಲಙ್‌ಲಿಟಃ** (ಪಾ.ಸೂ. ೩-೪-೬) ಎಂಬುದರಿಂದ, ಸೇವತಾಂ, (ಸೇವಿಸಲಿ) ಎಂಬ ಅರ್ಥದಲ್ಲಿ ಲಙ್ ಬರುವುದು **ಬಹುಲಂ ಛಂದಸ್ಯಮಾಙ್ಯೋಗೇಽಪಿ**

(ಉ.ಸೂ. ೬-೪-೭೫) ಮಾಙ್ ಯೋಗವಿಲ್ಲದಿದ್ದರೂ ಮಾಙ್ ಯೋಗವಿದ್ದರೂ ಅಟ್ ಅಟ್ ಆಗಮಗಳು ಬಹುಲವಾಗಿ ಬರುವುವು ಅಂದರೆ ಮಾಙ್ ಯೋಗವಿಲ್ಲದಿದ್ದರೂ ಕೆಲವೆಡೆಗಳಲ್ಲಿ ಬರುವುದಿಲ್ಲ. ಕೆಲವೆಡೆಗಳಲ್ಲಿ ಮಾಙ್ ಯೋಗವಿದ್ದರೂ ಬರುವುವು ಎಂಬುದರಿಂದ ಅಟ್ ಆಗಮಬರುವುದಿಲ್ಲ. ವಷ್ಟಯಃ ಇಲ್ಲಿ ವಹಿಶ್ರಿ (ಉ. ಸೂ. ೪-೪೯೧) ಇತ್ಯಾದಿ ಸೂತ್ರದಿಂದ ನಿಪ್ರತ್ಯಯಬರುವುದು. ಅದು ನಿತ್ತಾದ್ದರಿಂದ ಆದ್ಯುದಾತ್ತಬರುವುದು ॥ ೯ ॥

॥ ಸಂಹಿತಾಪಾಠಃ ॥

ಪ್ರಾವಕಾ ನಃ ಸರಸ್ವತೀ ವಾಜೇಭಿರ್ವಾಜಿನೀವತೀ ।
ಯಜ್ಞಂ ವಷ್ಟು ಧಿಯಾವಸುಃ ॥ ೧೦ ॥

॥ ಪದಪಾಠಃ ॥

ಪ್ರಾವಕಾ । ನಃ । ಸರಸ್ವತೀ । ವಾಜೇಭಿಃ । ವಾಜಿನೀವತೀ ॥
ಯಜ್ಞಂ । ವಷ್ಟು । ಧಿಯಾವಸುಃ ॥ ೧೦ ॥

॥ ಸಾಯಣಭಾಷ್ಯಂ ॥

ಸಾರಸ್ವತೇ ತೃಚೇ ಯಾ ಪ್ರಥಮಾ ಸಾನ್ವಾರಂಭಣೀಯೇಷ್ಟೌ ಸರಸ್ವತ್ಯಾಃ ಪುರೋನುವಾಕ್ಯಾ । ತಥಾ ದರ್ಶಪೂರ್ಣಮಾಸಾವಾರಪ್ಸ್ಯಮಾನ ಇತ್ಯಸ್ಮಿನ್ಖಂಡೇ ಪಾವಕಾ ನಃ ಸರಸ್ವತೀ ಪಾವೀರವೀ ಕನ್ಯಾ ಚಿತ್ರಾಯುಃ । ಆ. ೨-೪ । ಇತಿ ಸೂತ್ರಿತಂ ॥

ಸರಸ್ವತೀ ದೇವೀ ವಾಜೇಭಿರ್ಬವಿರ್ಲಕ್ಷಣೈರನ್ನೈರ್ನಿಮಿತ್ತಭೂತೈಃ । ಯದ್ವಾ । ಯೇಜಮಾನೇಭ್ಯೋ ದಾತವ್ಯೈರನ್ನೈರ್ನಿಮಿತ್ತಭೂತೈಃ । ನೋಽಸ್ಮದೀಯಂ ಯಜ್ಞಂ ವಷ್ಟು। ಕಾಮಯತಾಂ। ಕಾಮಯಿತ್ವಾ ಚ ನಿರ್ವಹತ್ವಿತ್ಯರ್ಥಃ । ತಥಾ ಚಾರಣ್ಯಕಕಾಂಡೇ ಶ್ರುತ್ಯೈವ ವ್ಯಾಖ್ಯಾತಂ । ಯಜ್ಞಂ ವಷ್ಟ್ವಿತಿ ಯದಾಹ ಯಜ್ಞಂ ವಹತ್ವಿತ್ಯೇವ ತದಾಹ। ಐ.ಆ. ೧-೧-೪। ಇತಿ। ಕೀದೃಶೀ ಸರಸ್ವತೀ । ಪಾವಕಾ ಶೋಧಯಿತ್ರೀ ವಾಜಿನೀವತ್ಯನ್ನವತ್ಯಾ ಧಿಯಾವತೀ ಧಿಯಾವಸುಃ ಕರ್ಮಪ್ರಾಪ್ಯಧನನಿಮಿತ್ತಭೂತಾ । ವಾಗ್ದೇವತಾ ಯಾಸ್ತಥಾವಿಧಂ ಧನನಿಮಿತ್ತತ್ವಮಾರಣ್ಯಕಕಾಂಡೇ ಶ್ರುತ್ಯಾ ವ್ಯಾಖ್ಯಾತಂ। ಯಜ್ಞಂ ವಷ್ಟು ಧಿಯಾವಸುರಿತಿ ವಾಗ್ವೈ ಧಿಯಾವಸುಃ। ಐ.ಆ. ೧-೧-೪। ಇತಿ। ಶ್ಯೇನಃ ಸೋಮ ಇತ್ಯಾದಿಷು ಪಂಚಶ್ರಿಂಶತ್ಸಂಖ್ಯಾಕೇಷು ದೇವತಾವಿಶೇಷವಾಚಿಷು ಪದೇಷು ಸರಮಾ ಸರಸ್ವತೀತಿ ಪಠಿತಂ । ಏತಾಮೃಚಂ ಯಾಸ್ಕ ಏವಂ ವ್ಯಾಚಷ್ಟೇ । ಪಾವಕಾ ನಃ ಸರಸ್ವತ್ಯನ್ನೈರನ್ನವತೀ ಯಜ್ಞಂ ವಷ್ಟು ಧಿಯಾವಸುಃ ಕರ್ಮವಸುಃ । ನಿ. ೧೧-

೨೬ । ಇತಿ ॥ ಪವನಂ ಪಾವಃ ಶುದ್ಧಿಃ । ಪಾವಂ ಕಾಯತೀತಿ ಪಾವಕಾ । ಕೈ ಗೈ ರೈ ಶಬ್ದೇ । ಅತೋಽನುಪಸರ್ಗೇ ಕಃ । ಪಾ. ೩-೨-೩ । ಇತಿ ಕಪ್ರತ್ಯಯಃ । ಕೈದುತ್ತರಪದಪ್ರಕೃತಿಸ್ವರತ್ವೇನಾಂತೋದಾತ್ತತ್ವಂ । ಯದ್ವಾ । ಪುನಾತೀತ್ಯರ್ಥೇ ಣ್ವುಲಿ ಪ್ರತ್ಯಯಸ್ಥಾತ್ಕೃತ್ಪೂರ್ವಸ್ಯಾತ ಇದಾಪ್ಯಸುಪಃ । ಪಾ. ೭-೩-೪೪ । ಇತೀತ್ವಸ್ಯಾಭಾವೋಽಂತೋದಾತ್ತತ್ವಂ ಚ ಛಾಂದಸಂ ದ್ರಷ್ಟವ್ಯಂ । ಸರಃಶಬ್ದಃ ಸರ್ತೇರಸುನಂತಶ್ಚಾದಾದ್ಯುದಾತ್ತಃ । ಮಕುಷ್ಕೃಜ್ಞಪೋಃ ಪಿತ್ತ್ವೇನಾನುದಾತ್ತತ್ವಂ । ವಾಜೇಭ್ಯಃ । ವಾಜಶಬ್ದೋ ವೃಷಾದಿತ್ವಾದಾದ್ಯುದಾತ್ತಃ । ಸ ಹ್ಯವೃತ್ಯೃತತ್ವಾದಾಕೃತಿಗಣಃ । ವಾಜೋಽನ್ನಮಾಸ್ಮಿತಿ ವಾಜಿನ್ಯಃ ಕ್ರಿಯಾಃ । ಅತ ಇನಿಠನೌ । ಪಾ. ೫-೨-೧೧೫ । ಇತೀನಿಪ್ರತ್ಯಯಃ । ತಾಃ ಕ್ರಿಯಾ ಯಸ್ಯಾಃ ಸಂತಿ ಸಾ ಸರಸ್ವತೀ ವಾಜಿನೀವತೀ । ಛಂದಸೀರ ಇತಿ ಮಕುಷ್ಕೃಜ್ಞಪೋಃ ವತ್ವಂ । ಮಕುಷ್ಕೃಜ್ಞಪೋಃ ಪಿತ್ತ್ವೇನಾನುದಾತ್ತತ್ವಾದಿನೇಃ ಪ್ರತ್ಯಯಾದ್ಯುದಾತ್ತತ್ವಮೇವ ಶಿಷ್ಯತೇ । ಯಜ್ಞಂ । ಯಜಯಾಚೇತ್ಯಾದಿನಾ । ಪಾ. ೩-೩-೯೦ । ನಜ್ಪ್ರತ್ಯಯಃ । ಪ್ರತ್ಯಯಸ್ವರೇಣಾಂತೋದಾತ್ತಃ । ವಷ್ಟು । ವಶ ಕಾಂತೌ । ಕಾಂತಿರಭಿಲಾಷಃ । ಆದಿಪ್ರಭೃತಿಭ್ಯಃ ಶಪಿ ಇತಿ ಶಪೋ ಲುಕ್ । ನಿಘಾತಃ । ಧಿಯೋವಸುಃ । ಧಿಯಾ ಕರ್ಮಣಾ ವಸು ಯಸ್ಯಾಃ ಸಕಾಶಾದ್ಭವತಿ ಸಾ ಧಿಯಾವಸುಃ । ಸಾವೇಕಾಚ ಇತಿ ವಿಭಕ್ತಿರುದಾತ್ತಾ । ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮಿತಿ ವಿಭಕ್ತಿಸ್ವರ ಏವ ಶಿಷ್ಯತೇ । ಛಾಂದಸಸ್ತೃತೀಯಾಯಾ ಅಲುಕ್ ।

॥ ಪ್ರತಿಪದಾರ್ಥ ॥

ಪಾವಕಾ—(ಜನರನ್ನು) ಪವಿತ್ರಗೊಳಿಸುವ, ಅಥವಾ ಶುದ್ಧಿಗೊಳಿಸುವ । **ವಾಜಿನೀವತೀ**—(ಸ್ತೋತ್ರಗಳನ್ನು ಮಾಡುವ ಜನರಿಗೆ) ಅನ್ನಾದ್ಯಾಹಾರಗಳನ್ನು ಳ್ಳವಳಾದ (ಕೊಡುವವಳಾದ) । **ಧಿಯೋವಸುಃ**—ಯಜ್ಞಾದಿ ಕರ್ಮಗಳಿಗೆ ಫಲಭೂತವಾದ ಧನಾದಿಗಳಿಗೆ ಕಾರಣಭೂತಳಾದ ! **ಸರಸ್ವತೀ**—ಸರಸ್ವತೀದೇವಿಯು (ವಾಗ್ದೇವತೆಯು ಅಥವಾ ಸರಸ್ವತೀ ಎಂಬ ನದಿಯು) । **ನಃ**—ನಮ್ಮ । **ಯಜ್ಞಂ**—ಯಜ್ಞವನ್ನು । **ವಾಜೇಭಿಃ**—ಹವಿರ್ಲಕ್ಷಣರೂಪವಾದ ಅನ್ನಗಳಿಗಾಗಿ । **ವಷ್ಟು**—ಆಪೇಕ್ಷಿಸಲಿ (ಯಜ್ಞವನ್ನು ಸಾಂಗವಾಗಿ ನಡೆಯುವಂತೆ ನಿರ್ವಹಿಸಲಿ) ॥

॥ ಭಾವಾರ್ಥ ॥

ಸರಸ್ವತೀದೇವಿಯು ಜನರನ್ನು ಶುದ್ಧಿಗೊಳಿಸುವವಳು, ಯಜ್ಞಾದಿಗಳಿಂದ ಆರಾಧನೆಮಾಡುವ ಜನರಿಗೆ ಅನ್ನಾದಿಗಳನ್ನು ಕೊಡುವವಳು; ಮತ್ತು ಧನರೂಪವಾದ ಐಶ್ವರ್ಯಪ್ರಾಪ್ತಿಗೂ ಕಾರಣಭೂತಳಾದವಳು. ಇಂತಹ ಸರಸ್ವತಿಯು ನಾವು ಕೊಡುವ ಹವಿರ್ಲಕ್ಷಣರೂಪವಾದ ಅನ್ನಾದಿಗಳಿಂದ ತೃಪ್ತಿಗೊಂಡು ನಮ್ಮ ಯಜ್ಞವನ್ನು ಸಾಂಗವಾಗಿ ನೆರವೇರುವಂತೆ ಮಾಡಲಿ.

English Translation.

May Saraswati, the purifier, the bestower of food, recompenser of worships with wealth, be attracted to our rite by our offer of sacrificial food.

॥ ವಿಶೇಷವಿಷಯಗಳು ॥

ಪಾವಕಾನಃ ಎಂಬ ಈ ಋಕ್ಕು ಮುಂದಿನ ಎರಡು ಋಕ್ಕುಗಳೂ ಸೇರಿ ಸಾರಸ್ವತಸ್ತೃಚಃ ಎಂದರೆ ಸರಸ್ವತೀಸಂಬಂಧವಾದ ಮೂರು ಋಕ್ಕುಗಳು ಎನಿಸುವವು. ಈ ಮೂರು ಋಕ್ಕುಗಳಲ್ಲಿ ಮೊದಲನೆಯದಾದ ಈ ಪಾವಕಾನಃ ಎಂಬ ಋಕ್ಕು ಅನ್ವಾರಂಭಣೀಯೇಷ್ಟಿ ಎಂಬ ಯಜ್ಞವಿಶೇಷದಲ್ಲಿ ಸರಸ್ವತಿಯನ್ನು ಆಹ್ವಾನಮಾಡುವ ಪುರೋನುವಾಕ್ಯಾ ಎಂಬ ಮಂತ್ರವು. ಯಜ್ಞದಲ್ಲಿ ಯಾವ ದೇವತೆಯನ್ನಾಗಲಿ ಉದ್ದೇಶಿಸಿ ಹೋಮಮಾಡುವಾಗ ಎರಡು ಋಕ್ಕುಗಳನ್ನು ಉಪಯೋಗಿಸುವರು. ಆ ಎರಡು ಋಕ್ಕುಗಳೂ ಆ ದೇವತೆಗೆ ಸಂಬಂಧಪಟ್ಟಿದ್ದಾಗಿರಬೇಕು. ಮೊದಲನೆಯ ಋಕ್ಕನ್ನು ಪಠಿಸಿ ದೇವತೆಯನ್ನು ಆಹ್ವಾನಮಾಡುವರು. ಇಂತಹ ಋಕ್ಕಿಗೆ **ಪುರೋನುವಾಕ್ಯಾ** ಎಂದು ಹೆಸರು. ಮತ್ತೊಂದು ಋಕ್ಕಿನಿಂದ ಆ ದೇವತೆಯನ್ನುದ್ದೇಶಿಸಿ ಹೋಮಮಾಡುವರು. ಈ ಮಂತ್ರಕ್ಕೆ **ಯಾಜ್ಯಾ** ಎಂದು ಹೆಸರು. ಅದರಂತೆ ಅನ್ವಾರಂಭಣೀಯೇಷ್ಟಿಯಲ್ಲಿಯೂ ಪುರೋನುವಾಕ್ಯಾ ಮತ್ತು ಯಾಜ್ಯಾ ಎಂಬ ಎರಡು ಋಕ್ಕುಗಳನ್ನು ಉಪಯೋಗಿಸುವರು. ಈ ವಿಷಯವನ್ನು ಆಶ್ವಲಾಯ ಮಹರ್ಷಿಯು ತಮ್ಮ ಶ್ರೌತಸೂತ್ರದಲ್ಲಿ (ಆಶ್ವ. ಶ್ರೌ ಸೂ. ೨-೮) ತಥಾ ದರ್ಶಪೂರ್ಣಮಾಸಾವಾರಭ್ಯಮಾನ ಎಂಬ ಖಂಡದಲ್ಲಿ ಈ ರೀತಿ ಹೇಳಿರುವರು.

ಪಾವಕಾ ನಃ ಸರಸ್ವತೀ ಪಾವೀರವೀ ಕನ್ಯಾ ಚಿತ್ರಾಯುಃ । (ಆಶ್ವ. ೨-೮)

ಈ ಅನ್ವಾರಂಭಣೀಯೇಷ್ಟಿಯನ್ನೂ ದರ್ಶಪೂರ್ಣಮಾಸಯಾಗವನ್ನೂ ಮಾಡುವುದಕ್ಕೆ ಪೂರ್ವದಲ್ಲಿ ಯಜಮಾನನು ಪುಣ್ಯಾಹವಾಚನ, ನಾಂದೀಶ್ರಾದ್ಧ, ಉದಕಶಾಂತ್ಯಾಖ್ಯ ಕರ್ಮಗಳನ್ನು ನೆರವೇರಿಸಿ ಪತ್ನಿಯ ಹಸ್ತದಲ್ಲಿ ಪ್ರತಿಸರವೆಂಬ ಸೂತ್ರವನ್ನು ಕಟ್ಟಿ ಬಳಿಕ ಮಾರನೆಯದಿನ ಸ್ನಾನಾದಿನಿತ್ಯಕರ್ಮಗಳನ್ನು ನೆರವೇರಿಸಿದ ಬಳಿಕ— **ಯಾವಜ್ಜೀವಂ ದರ್ಶಪೂರ್ಣಮಾಸಾಭ್ಯಾಂ ಯಕ್ಷ್ಯೇ** ಎಂದು ಸಂಕಲ್ಪವಮಾಡಬೇಕು. ಅನಂತರ **ಅನ್ವಾರಂಭಣೀಯೆಯೊ** ಯಕ್ಷ್ಯೇ ಎಂದೂ ಸಂಕಲ್ಪವಮಾಡಿ ಅಗ್ನಿವಿಹರಣವೆಂಬ ಗಾರ್ಹಪತ್ಯಾಗ್ನಿಯಿಂದ ಅಗ್ನಿಯನ್ನು ತರುವ ಅಗ್ನ್ಯಾನಯನವೆಂಬ ಕರ್ಮವನ್ನು ನೆರವೇರಿಸಬೇಕು. ಬಳಿಕ ಅನ್ವಾಧಾನವನ್ನು ಹೇಳುವಾಗ **ಅಗ್ನಾವಿಷ್ಣೂ, ಸರಸ್ವತೀ, ಸರಸ್ವಾನ್, ಅಗ್ನಿರ್ಭಗೀ** ಎಂಬ ಪ್ರಧಾನದೇವತೆಗಳನ್ನುದ್ದೇಶಿಸಿ ಪ್ರಧಾನಹೋಮವನ್ನು ಮಾಡಬೇಕು. ಅಗ್ನಾವಿಷ್ಣುಗಳಿಗೆ ಏಕಾದಶಕಪಾಲಃ ಪುರೋಡಾಶವೂ, ಸರಸ್ವತೀದೇವತೆಗೆ ಚರುವೂ, ಸರಸ್ವಾನ್ ಎಂಬ ದೇವತೆಗೆ ದ್ವಾದಶಕಪಾಲಃ ಪುರೋಡಾಶವೂ, ಅಗ್ನಿರ್ಭಗೀ ಎಂಬ ದೇವತೆಗೆ ಅಷ್ಟಾದಶಕಪಾಲಃ ಪುರೋಡಾಶವೂ ಹೋಮದ್ರವ್ಯಗಳು. ಈ ಹೋಮಗಳನ್ನು ಪೂರ್ಣಮಾಸಯಾಗಾನುಸಾರವಾಗಿ ಮಾಡಬೇಕು. ಈ ದೇವತೆಗಳಿಗೆ ಹೋಮಮಾಡುವಾಗ ಉಪಯೋಗಿಸುವ **ಪುರೋನುವಾಕ್ಯಾ** ಮತ್ತು **ಯಾಜ್ಯಾ** ಎಂಬ ಮಂತ್ರಗಳು ಈ ರೀತಿ ಇರುವವು—

ಅಗ್ನಾವಿಷ್ಣೂ— **ಅಗ್ನಾವಿಷ್ಣೂ ಸಜೋಷಸಾ** (ಪುರೋನುವಾಕ್ಯಾ)
ಅಗ್ನಾವಿಷ್ಣೂ ಮಹಿ ಧಾಮ (ಯಾಜ್ಯಾ)

ಸರಸ್ವತೀ — **ಪಾವಕಾನಃ ಸರಸ್ವತೀ** (ಪುರೋನುವಾಕ್ಯಾ) ಋ. ಸಂ. ೧-೩-೧೦
ಪಾವೀರವೀಕನ್ಯಾ (ಯಾಜ್ಯಾ) ಋ. ಸಂ. ೬-೪೯-೭

ಸರಸ್ವಾನ್ — **ಪೀಪಿವಾಂಸಂ ಸರಸ್ವತಃ** (ಪುರೋನುವಾಕ್ಯಾ) ಋ. ಸಂ. ೭-೯೬-೬
ದಿವ್ಯಂ ಸುಪರ್ಣಂ ವಾಯಸಂ (ಯಾಜ್ಯಾ) ಋ. ಸಂ. ೧-೧೫೪-೨

ಅಗ್ನಿರ್ಭಗೀ— ಅಸವಂ ಸವಿತುಃ (ಪುರೋನುವಾಕ್ಯಾ) ಋ. ಸಂ. ೪-೧೦೨-೬

ಸ ನೋ ರಾಧಾಂಸ್ಯಾಭರ (ಯಾಜ್ಯಾ) ಋ. ಸಂ. ೭-೧೫-೧೧

ಎಂದರೆ ಈ ಅನ್ವಾರಂಭಣೀಯೇಷ್ಟಿಯಲ್ಲಿ ಸರಸ್ವತೀದೇವತೆಯನ್ನು ಆಹ್ವಾನಮಾಡುವ ಸಂದರ್ಭದಲ್ಲಿ—

ಪಾವಕಾನಃ ಸರಸ್ವತೀ ವಾಜೇಭಿರ್ವಾಜಿನೀವತೀ ।
ಯಜ್ಞಂ ವಷ್ಟು ಧಿಯಾವಸುಃ (ಋ. ಸಂ. ೧-೩-೧೦)

ಎಂಬ ಋಕ್ಕನ್ನು ಪುರೋನುವಾಕ್ಯದ ಮಂತ್ರವನ್ನಾಗಿಯೂ,

ಪಾವೀರವೀ ಕನ್ಯಾ ಚಿತ್ರಾಯುಃ ಸರಸ್ವತೀ ವೀರಪತ್ನೀ ಧಿಯಂ ಧಾತ್ ।
ಗ್ನಾಭಿರಚ್ಛಿದ್ರಂ ಶರಣಂ ಸಜೋಷಾ ದುರಾಧರ್ಷಂ ಗೃಣತೇ ಶರ್ಮ ಯಂಸತ್ ॥
(ಋ. ಸಂ ೬-೪೯-೭)

ಎಂಬ ಋಕ್ಕನ್ನು ಯಾಜ್ಯಾ ಮಂತ್ರವನ್ನಾಗಿಯೂ ಉಪಯೋಗಿಸಬೇಕೆಂದು ಹೇಳಿರುವರು.

ಪಾವಕಾ—ಈ ಶಬ್ದವು ಪೂಙ್ ಪವಿತ್ರಗೊಳಿಸು ಶುದ್ಧಿಮಾಡು ಎಂಬ ಧಾತುವಿನಿಂದ ಉತ್ಪನ್ನವಾಗಿದೆ. ಭಾಷ್ಯಕಾರರು—ಪೆವನಂ ಪಾವಃ ಶುದ್ಧಿಸ್ತಂ ಕಾಯತೀತಿ ಪಾವಕಾ ಎಂದು ಈ ಶಬ್ದದ ರೂಪನಿಷ್ಪತ್ತಿಯನ್ನು ಮಾಡಿದಾರೆ. ಪವಿತ್ರಗೊಳಿಸುವವಳು, (ಪಾಪಗಳನ್ನು ಪರಿಹರಿಸಿ) ಶುದ್ಧಿಗೊಳಿಸುವವಳು ಎಂದರ್ಥವು. ಪಾವಕಶಬ್ದವು ಅಗ್ನಿ, ಮರುತ್, ಸೋಮ ಮೊದಲಾದ ದೇವತೆಗಳ ವಿಷಯದಲ್ಲಿಯೂ ಅನೇಕ ಕಡೆ ಉಪಯೋಗಿಸಲ್ಪಟ್ಟಿದ್ದರೂ ಅಗ್ನಿಯ ವಿಷಯದಲ್ಲಿಯೇ ವಿಶೇಷವಾಗಿ ಉಪಯೋಗಿಸಲ್ಪಟ್ಟಿರುವುದು. —

ಅಗ್ನಿ—ಅಗ್ನೇ ಪಾವಕ ರೋಚಿಷಾ ಮಂದ್ರಯಾ ದೇವ ಜಿಹ್ವಯಾ । (ಋ. ಸಂ. ೫-೨೬-೧)

ಸ ನಃ ಪಾವಕ ದೀದಿವೋಽಗ್ನೇ ದೇವಾ ಁ ಇಹಾವಹ । (ಋ. ಸಂ. ೧-೧೨-೧೦)

ಅಸ್ಯಾ ಜರಾಸೋ ದಮಾ ಮರಿತ್ರಾ ಅರ್ಚದ್ಧೂಮಾಸೋ ಅಗ್ನಯೇ ಪಾವಕಾಃ ॥
(ಋ. ಸಂ. ೧೦-೪೬-೭)

ಇಂದ್ರ—ಮಿಹಃ ಪಾವಕಾಃ ಪ್ರತಿತಾ ಅಭೂವನ್ ಸ್ವಸ್ತಿ ನಃ ಪಿಪೃಹಿ ಪಾರಮಾಸಾಂ ।
(ಋ. ಸಂ. ೩-೩೧-೨೦)

ಉಷಾಃ—ವ್ಯೂ ವಜ್ರಸ್ಯ ತಮಸೋ ದ್ವಾರೋಚ್ಛಂತೀರವ್ರಂಧುಚಯೇಃ ಪಾವಕಾಃ ॥
(ಋ. ಸಂ. ೪-೫೧-೨)

ಆಪಃ—ಸಮುದ್ರಾರ್ಥಾ ಯೋಃ ಶುಚಯೇಃ ಪಾವಕಾಸ್ತಾ ಆಪೋ ದೇವೀರಿಹ ಮಾಮವಂತು.
(ಋ. ಸಂ- ೭-೪೯-೨)

ಮರುತಃ—ಋತೇನ ಸತ್ಯಮೃತಸಾಪ ಆಯಂಚ್ಛುಚಿಜನ್ಮಾನಃ ಶುಚಯೇಃ ಪಾವಕಾಃ ।
(ಋ. ಸಂ. ೭-೫೬-೧೨)

ಇತ್ಯಾದಿ ಮಂತ್ರಗಳಲ್ಲಿ ಪಾವಕಶಬ್ದವು ಬೇರೆ ಬೇರೆ ದೇವತೆಗಳ ವಿಷಯವಾಗಿ ಉಪಯೋಗಿಸಲ್ಪಟ್ಟಿರುವುದು ಪಾಶ್ಚಾತ್ಯಪಂಡಿತರು ಈ ಶಬ್ದಕ್ಕೆ Purifier, purifying, bright, glittering, pure, sacred, blazing, flaming ಮೊದಲಾದ ಶಬ್ದಗಳಿಂದ ಅರ್ಥವಿವರಣೆಯನ್ನು ಮಾಡಿರುವರು. ಅಗ್ನಿಸಂಬಂಧವಾದ ಅರ್ಥವನ್ನು ಹೇಳುವಾಗ ಶುದ್ಧಿಗೊಳಿಸುವ ಮತ್ತು ಪ್ರಕಾಶಮಾನವಾದ ಎಂಬ ಎರಡು ಅರ್ಥಗಳನ್ನೂ ಹೇಳಬಹುದು.

ಸರಸ್ವತೀ—ಸಾಯಣಾಚಾರ್ಯರು ಋಗ್ವೇದಮಂತ್ರಗಳಲ್ಲಿ ಉಪಯೋಗಿಸಲ್ಪಟ್ಟಿರುವ ಸರಸ್ವತೀ ಶಬ್ದಕ್ಕೆ ಐದುವಿಧವಾದ ಅರ್ಥವಿವರಣೆಯನ್ನು ಕೊಟ್ಟಿದಾರೆ.

(1) **ನದೀ**—ಋ. ಸಂ. ೧–೧೪೨-೯ ; ೧-೧೬೪-೫೨ ; ೨-೩೦-೮.

(2) **ನದಿಯ ಹೆಸರು**—ಋ. ಸಂ. ೧–೩-೧೨ ; ೨-೪೧-೬ ; ೩-೨೩-೪ ; ೬–೪೧ ರಲ್ಲಿ ೪, ೭, ೧೦ ೧೧, ೧೩ ನೆಯ ಋಕ್ಕುಗಳು ; ೬-೫೨-೬ ; ೬-೬೧-೨ ; ೭-೩೬-೬ ; ೭-೯೫-೧ & ೨ ; ೭-೯೬-೧ ; ೮-೨೧-೧೭ & ೧೮ ; ೧೦-೬೪-೯ ; ೧೦-೬೫-೧೩.

(3) **ದೇವತೆಯ ಹೆಸರು**—ಋ. ಸಂ. ೫-೪೩-೧೧ ; ೫-೪೬-೨ ; ೬-೪೯-೭ ; ೫-೫೦-೧೨ ; ೧೦-೧೭-೭ ; ೧೦-೩೦-೧೨.

(4) **ಆಕಾಶಾಭಿಮಾನಿದೇವತೆ**—(ಇಳಾ, ಭಾರತೀ, ಸರಸ್ವತೀ ಎಂಬ ಮೂವರು ದೇವತೆಗಳಲ್ಲಿ ಒಂದು)–ಋ. ಸಂ. ೧–೧೮೮-೮.

(5) **ವಾಗ್ದೇವೀ**—ಋ. ಸಂ. ೨–೧-೧೧ ; ೩-೪-೮ ; ೩-೫೪-೧೩ ; ೫-೪೨-೧೨ ; ೭-೩೯-೫ ; ೭-೪೦-೩ ; ೯-೬೭-೩೨.

ಋಗ್ವೇದದಲ್ಲಿ ಸರಸ್ವತೀ ದೇವಿಯನ್ನು ಸ್ತೋತ್ರವಾಡುವ ಅನೇಕ ಮಂತ್ರಗಳಿವೆ. ಆದರೆ ಈ ಸರಸ್ವತೀ ದೇವಿಯು ಯಾರು ಅವಳ ಸ್ವರೂಪವೇನು ಎಂಬ ವಿಷಯದಲ್ಲಿ ನಿರುಕ್ತಕಾರರು ಏನನ್ನೂ ಹೇಳಿರುವುದಿಲ್ಲ. **ನದೀವದ್ದೇವತಾವಚ್ಚೆ ನಿಗಮಾ ಭವಂತಿ** ಎಂದು ಮಾತ್ರ ಹೇಳಿದಾರೆ. ಎಂದರೆ, ಸರಸ್ವತೀ ದೇವತಾಕವಾದ ಕೆಲವು ಮಂತ್ರಗಳಲ್ಲಿ ಸರಸ್ವತಿಯು ನದಿಯೆಂದೂ ಕೆಲವು ಮಂತ್ರಗಳಲ್ಲಿ ಒಂದು ದೇವತೆಯೆಂದೂ ವರ್ಣನೆ ಇದೆ. ಆದರೆ ಸರಸ್ವತಿಯೆಂಬ ನದಿಯೇ ಓರ್ವ ದೇವತೆಯೆಂದು ಭಾವಿಸಿ ಸ್ತುತಿಸಲ್ಪಟ್ಟಿದೆಯೇ ಅಥವಾ ದೇವತೆಯನ್ನೇ ನದಿಯೆಂದು ಭಾವಿಸಿ ಸ್ತುತಿಸಲ್ಪಟ್ಟಿದೆಯೇ ಎನ್ನುವುದು ವಿಶದವಾಗಿಲ್ಲ. ಆದುದರಿಂದ ಸರಸ್ವತೀ ಎನ್ನುವುದು ನದೀ, ಮತ್ತು ದೇವತೆಗಳೆರಡನ್ನೂ ಸೂಚಿಸುವುದೆಂದು ಹೇಳಬೇಕಾಗಿದೆ. ಸರಸ್ವತಿಯು ಒಂದು ದೇವತೆಯೆಂದು ಹೇಳುವ ಪಕ್ಷದಲ್ಲಿ ಆ ದೇವತೆ ಯಾರು ? ಅದರ ಸ್ವರೂಪವೇನು ? ಆ ದೇವತೆಯ ಸ್ಥಾನಮಾನಗಳಾವುವು ? ಇವೇ ಮೊದಲಾದ ವಿಷಯಗಳಿಗೆ ಸಮಂಜಸವಾದ ಉತ್ತರವನ್ನು ಹೇಳುವುದು ಸುಲಭಸಾಧ್ಯವಲ್ಲ. ಸರಸ್ವತಿಯು ಒಂದು ನದಿಯೆಂದು ಹೇಳುವ ಪಕ್ಷದಲ್ಲಿ ಆ ಹೆಸರಿನ ಪ್ರಸಿದ್ಧವಾದ ಒಂದು ನದಿಯು ಪೂರ್ವದಲ್ಲಿ ಇತ್ತೆಂದೂ (ಈಗಿನ ಸರಸುತಿ the modern Sarsuti) ಅದನ್ನೇ ಋಗ್ವೇದದಲ್ಲಿ ಸ್ತುತಿಸಲ್ಪಟ್ಟಿರುವುದೆಂದೂ ಹೇಳಬಹುದು. ಹೀಗೆ ಹೇಳುವ ಸಂದರ್ಭದಲ್ಲಿ ಕೆಲವು ನಿರ್ದಿಷ್ಟವಾದ ದೇವತೆಗಳನ್ನು ಉದ್ದೇಶಿಸಿ ಮಾಡುವ ಯಜ್ಞಯಾಗಾದಿಗಳಲ್ಲಿ ನದೀ ಮೊದಲಾದ ಅಚೇತನ ವಸ್ತುಗಳ ಪ್ರತಿಪಾದನೆಯು ನಿಷಿದ್ಧವಲ್ಲವೇ ಎಂಬ ಸಂಶಯವು ತಲೆದೋರು

ವುದು. ಈ ವಿಷಯದಲ್ಲಿ ಜೈಮಿನಿಮಹರ್ಷಿಯು ತಮ್ಮ ವಿಾಮಾಂಸಾ ಸೂತ್ರದಲ್ಲಿ **ಅಚೇತನೇ೨ರ್ಥಬಂಧನಾತ್** (ಜೈ. ಸೂ. ೧-೨-೩೫) ಪೂರ್ವಪಕ್ಷವನ್ನು ಮಾಡಿರುವುದಕ್ಕೆ ಭಾಷ್ಯಕಾರರು **ಅಭಿಮಾನಿವ್ಯಪದೇಶಃ** (ವೇ. ಸೂ. ೨-೧-೫) ಎಂಬ ವೇದಾಂತಸೂತ್ರವನ್ನು ಉದಹರಿಸಿ ಸಮಾಧಾನವನ್ನು ಹೇಳಿರುವರು. ಎಂದರೆ ವೇದಮಂತ್ರಗಳಲ್ಲಿ ಅನೇಕ ಕಡೆ ಅಚೇತನವಸ್ತುಗಳನ್ನು ಸಂಬೋಧನೆಮಾಡಿರುವ ಸಂದರ್ಭದಲ್ಲಿ. ಆ ಅಚೇತನವಸ್ತುಗಳ ಅಭಿಮಾನದೇವತೆಗಳನ್ನು ಕುರಿತು ಹೇಳಿರುವುದೆಂದು ತಿಳಿಯಬೇಕೆಂದು ಹೇಳಿರುವರು. (ಭಾಗ ೧ 380-381 ಪೇಜುಗಳನ್ನು ನೋಡಿ). ಆದುದರಿಂದ ನದಿಯೆಂದು ಸ್ತೋತ್ರಮಾಡಿರುವ ಕಡೆಗಳಲ್ಲಿ ಆ ನದ್ಯಭಿಮಾನಿದೇವತೆಯನ್ನು ಸ್ತೋತ್ರಮಾಡಿರುವುದೆಂದು ತಿಳಿಯಬೇಕು. ಈ ಸರಸ್ವತೀದೇವತೆಯ ವಿಷಯದಲ್ಲಿ ಅನೇಕರು ಅನೇಕ ವಿಧವಾಗಿ ಅಭಿಪ್ರಾಯಪಡುವರು—

(1) ಪುರಾಣಾದಿಗಳಲ್ಲಿ ಸರಸ್ವತಿಯೆಂದರೆ **ವಾಗಧಿಷ್ಠಾತ್ರೀ, ಶಾರದಾ, ವಿದ್ಯಾಸ್ವರೂಪಿಣೀ, ಹಂಸವಾಹಿನೀ**—ವಾಗಭಿಮಾನಿದೇವತೆಯೂ, ಶಾರದಾ ಎಂಬ ಹೆಸರಿನಿಂದ ಪ್ರಸಿದ್ಧಳೂ, ವಿದ್ಯಾಸ್ವರೂಪಿಣಿಯೂ ಹಂಸದಮೇಲೆ ಕುಳಿತಿರುವವಳೂ ಆದ ದೇವತಾವಿಶೇಷವೆಂದು ಹೇಳಲ್ಪಟ್ಟಿರುವುದು.

(2) ಅಥವಾ ಈ ಸರಸ್ವತೀದೇವಿಯು ಉಪಾಧಿವಿಶೇಷವಿಶಿಷ್ಟಳಾದ ಆದಿತ್ಯರೂಪಳಾಗಿರುವಳೆಂದೂ ಹೇಳುವರು. ಉಪಾಧಿಯೆಂದರೆ ಸಂಧ್ಯಾಕಾಲವು. ಆದುದರಿಂದ ಸಂಧ್ಯಾಕಾಲಸ್ರಕಾಶಯುಕ್ತನಾದ ಆದಿತ್ಯನೇ ಸರಸ್ವತೀರೂಪದಿಂದ ಇಲ್ಲಿ ಸ್ತುತಿಸಲ್ಪಟ್ಟಿರುವನೆಂದು ಕೆಲವರ ಮತವು.

(3) ಸರಃ ಶಬ್ದವು ಸೃ—**ಸರಿ**, ಸಂಚರಿಸು ಎಂಬ ಧಾತುವಿನಿಂದ ಉತ್ಪನ್ನವಾಗಿದೆ. **ಸರಃ ಅಸ್ಯಾ ಅಸ್ತೀತಿ** ಅಥವಾ **ಸರಃ ತೇಜೋ ಯಸ್ಯಾ ವಿದ್ಯತೇ ಸಾ ಸರಸ್ವತೀತಿ ಭವತಿ** ಎಂದರೆ ತೇಜೋರೂಪಿನಿಂದ ಪ್ರಕಾಶಿಸುವಳಾದುದರಿಂದ ಸರಸ್ವತೀ ಎಂದು ಹೆಸರು.

(4) ಅಥವಾ—**ಪ್ರಾತರ್ವಾಚಾಂ ಪ್ರವರ್ತಿಕಾ, ಪ್ರಾಣಿನಾಂ ಸ್ವಾಪಪರಿತ್ಯಾಗೇನ ಸ್ವೋಚಿತವ್ಯವಹಾರೇಷು ಪ್ರವೃತ್ತೌ ಶಬ್ದಾಯಮಾನತಾಯಾಃ ಪ್ರವೃತ್ತೇಃ, ರಾತ್ರೌ ಚ ವಾಚಾಂ ನಿರೋಧಕಾ ರಾತ್ರೌ ಪ್ರಾಣಿನಾಂ ನಿಲಾಯನಿಲೀನತ್ವೇನ ಸುಷ್ಯಮಾನತಯಾ ಶಬ್ದವಿರಾಮಾತ್ । ಏವಂ ಚ ಶಬ್ದಸ್ಯ ಪ್ರವರ್ತಿಕಾ ನಿವರ್ತಿಕಾ ಏಷೈವ ಲೋಕೇ ಸರಸ್ವತೀತ್ವೇನ ವ್ಯಪದಿಶ್ಯತೇ ನಾನ್ಯಾ ॥** ಎಂದರೆ ಪ್ರಾತಃಕಾಲದಲ್ಲಿ ಪ್ರಾಣಿಗಳು ನಿದ್ರೆಯಿಂದ ಎಚ್ಚರಗೊಂಡು ಮಾತನಾಡುವುದು ಮೊದಲಾದ ತಮ್ಮ ತಮ್ಮ ವ್ಯಾಪಾರವ್ಯವಹಾರಾದಿಗಳಲ್ಲಿ ತೊಡಗಿರುವವು. ರಾತ್ರಿಕಾಲದಲ್ಲಿ ಪ್ರಾಣಿಗಳು ನಿದ್ರೆಯಲ್ಲಿ ಆಸಕ್ತವಾಗಿರುವಾಗ ಮಾತನಾಡುವುದು ಶಬ್ದಮಾಡುವುದು ಮೊದಲಾದ ಕರ್ಮಗಳಿಲ್ಲದೆ ವ್ಯವಹಾರಾದಿಗಳಿಂದ ವಿರಾಮವನ್ನು ಹೊಂದಿರುವವು. ಆದುದರಿಂದ ಮಾತನಾಡುವ ಅಥವಾ ಶಬ್ದಮಾಡುವ ವಿಚಾರದಲ್ಲಿ ಪ್ರವರ್ತನೆನಿವರ್ತನೆಗಳಿಗೆ ಕಾರಣಭೂತಳಾಗಿರುವುದರಿಂದ ಈ ವಾಗ್ದೇವತೆಗೆ ಸರಸ್ವತೀ ಎಂದು ಹೆಸರು.

(5) ಹಿಂದೆ ಹೇಳಿದಂತೆ ವಾಗ್ರೂಪತ್ವಾದಿಗಳು ಈ ದೇವತೆಗೆ ಇರುವುದರಿಂದ ಈ ಸರಸ್ವತೀದೇವಿಯು ಉಷಾರೂಪಿಣಿಯಾಗಿರುವಳು ಆದುದರಿಂದಲೇ ಉಷಾದೇವತೆಯ ಹೆಸರುಗಳಾದ **ಸೂನೃತಾ, ಸೂನೃತಾವತೀ ಸೂನೃತಾವರೀ** ಮೊದಲಾದ ಶಬ್ದಗಳ ಮಧ್ಯದಲ್ಲಿ ಈ ಸರಸ್ವತೀದೇವತೆಯ ಹೆಸರು ಇರುವುದು. ಇಲ್ಲಿ **ಸೂನೃತ** ಶಬ್ದಕ್ಕೆ ಪ್ರಿಯವೂ ಸತ್ಯವೂ ಆದ ಮಾತುಗಳಿಂದರ್ಥವು.

ಇದರಂತೆ ಸರಸ್ವತೀದೇವತಾವಿಚಾರದಲ್ಲಿ ಬೃಹದ್ದೇವತಾಗ್ರಂಥಕರ್ತರಾದ ಶೌನಕರೂ ಇತರ ಗ್ರಂಥಕಾರರೂ ವಿಧ ವಿಧವಾಗಿ ಅರ್ಥಮಾಡಿರುವರು.

ಈಗ ಋಗ್ವೇದದಲ್ಲಿ ಈ ಸರಸ್ವತೀಶಬ್ದವು ಯಾವ ಯಾವ ಅರ್ಥಗಳಲ್ಲಿ ಉಪಯೋಗಿಸಲ್ಪಟ್ಟಿರುವುದೆಂದು ಸ್ವಲ್ಪಮಟ್ಟಿಗೆ ವಿಚಾರಮಾಡೋಣ. ಈ ವಿಷಯದಲ್ಲಿ ಮುಖ್ಯವಾಗಿ ಮೂರು ಅಂಶಗಳನ್ನು ಗಮನಿಸಬೇಕಾಗಿರುವುದು. (1) ಈಗ ನಾವು ವ್ಯಾಖ್ಯಾನಮಾಡುತ್ತಿರುವ ಪ್ರಸಕ್ತವಾದ **ಪಾವಕಾನಃ ಸರಸ್ವತೀ** ಎಂಬ ಋಕ್ಕು (2) ಸರಸ್ವತೀದೇವತಾಕವಾದ ಇತರ ಋಕ್ಕುಗಳು. (3) ಈ ಋಕ್ಕುಗಳನ್ನು ರಚಿಸಿದ ಋಷಿಗಳು ಮತ್ತು ಅವರ ವಂಶಸ್ಥರು. ಈ ಮೂರು ವಿಷಯಗಳನ್ನೂ ವಿಮರ್ಶಿಮಾಡುವೆವು —

ಪ್ರಸಕ್ತವಾದ ಈ ಸೂಕ್ತದಲ್ಲಿ ೧೦, ೧೧, ೧೨ ನೆಯ ಋಕ್ಕುಗಳು ಸರಸ್ವತೀದೇವತಾಕಮಂತ್ರಗಳು. ೧೦, ೧೧ ನೆಯ ಋಕ್ಕುಗಳಲ್ಲಿ ಸರಸ್ವತೀನದಿಯನ್ನೇ ಒಂದು ದೇವತೆಯನ್ನಾಗಿ ಭಾವಿಸಿ ಸ್ತುತಿಸಲ್ಪಟ್ಟಿರುವುದು. ಭಾಷ್ಯಕಾರರಾದ ಸಾಯಣಾಚಾರ್ಯರು ೧೦–೧೧ ನೇಯ ಋಕ್ಕುಗಳಲ್ಲಿ ಸರಸ್ವತಿಯನ್ನು ವಾಗ್ದೇವತೆಯೆಂದೂ, ೧೨ ನೆಯ ಋಕ್ಕಿನಲ್ಲಿ ಸರಸ್ವತೀ ಎಂಬ ನದಿಯ ಅಭಿಮಾನಿದೇವತೆಯೆಂದೂ ವ್ಯಾಖ್ಯಾನಮಾಡಿರುವರು. Griffith ಎಂಬ ಪಂಡಿತರು ಸರಸ್ವತಿಯೆಂದರೆ ವಾಗ್ದೇವತೆಯೆಂದು ಅರ್ಥಮಾಡಿರುವರು ಆದರೆ **ಪಾವಕಾ** ಎಂಬ ಶಬ್ದಕ್ಕೆ " ನೀರಿನಿಂದ ಶುದ್ಧಿಗೊಳಿಸುವ " ಎಂಬ ಅರ್ಥವನ್ನು ಮಾಡುವಾಗಲೂ **ಅರ್ಣ** ಎಂಬ ಶಬ್ದಕ್ಕೆ ನದಿಯೆಂದು ಅರ್ಥಮಾಡುವಾಗಲೂ, ಸರಸ್ವತಿಯೆಂದರೆ ಒಂದು ನದೀ ಅಥವಾ ನದಿಯ ಅಭಿಮಾನದೇವತೆ ಎಂದು ಹೇಳಬೇಕಾಗುವುದು. ಆಧುನಿಕ ಪಂಡಿತರಲ್ಲಿ ಕೆಲವರು ಸರಸ್ವತಿಯೆಂದರೆ ಸಿಂಧೂನದಿಯೆಂದೂ ಅಭಿಪ್ರಾಯಪಡುವರು. ಆದರೆ ಈ ಋಕ್ಕನ್ನು ರಚಿಸಿದ ವಿಶ್ವಾಮಿತ್ರಪುತ್ರನಾದ ಮಧುಚ್ಛಂದಋಷಿಯ ಆಶ್ರಮವು ಕುರುಕ್ಷೇತ್ರದಲ್ಲಿರುವ ಈಗಿನ ಸರಸುತಿ ಎಂಬ ನದಿಯ ಪಶ್ಚಿಮ ದಡದ ಮೇಲೆ ಇತ್ತೆಂದು ಹೇಳಿರುವುದರಿಂದ (ಮಹಾಭಾರತ, ಶಲ್ಯಪರ್ವ, ಅಧ್ಯಾಯ ೪೩) ಈ ಸರಸುತಿ ಎಂಬ ನದಿಯನ್ನೇ ಮಧುಚ್ಛಂದಋಷಿಯು ಸ್ತೋತ್ರಮಾಡಿರುವನೆಂದು ಊಹಿಸಲವಕಾಶವಿದೆ. ಏಕೆಂದರೆ, ಒಂದು ನದಿಯನ್ನು ಸ್ತೋತ್ರಮಾಡುವಾಗ ತಾನು ವಾಸಿಸುವ ಸ್ಥಳದ ಸಮೀಪದಲ್ಲಿರುವ ಪ್ರಸಿದ್ಧವಾದ ನದಿಯನ್ನು ಬಿಟ್ಟು ಎಲ್ಲಿಯೋ ದೂರದಲ್ಲಿರುವ (ಅದೇ ಹೆಸರಿನ) ಬೇರೊಂದು ನದಿಯನ್ನು ಸ್ತೋತ್ರಮಾಡಿರುವನೆಂದು ಹೇಳುವುದು ನ್ಯಾಯವೆಂದು ತೋರುವುದಿಲ್ಲ. ಎರಡನೆಯ ಮಂಡಲದಲ್ಲಿ ಸರಸ್ವತೀದೇವತಾಕವಾದ ಋ. ಸಂ. ೨-೩೦-೪, ೨-೩೨-೪; ೨-೪೧-೧೬ ರಿಂದ ೧೪ ಋಕ್ಕುಗಳನ್ನೆಲ್ಲಾ ಶುನಹೋತ್ರನ ಪುತ್ರನಾದ ಗೃತ್ಸಮದ ಎಂಬ ಋಷಿಯೇ ರಚಿಸಿರುವನು. ಈ ಗೃತ್ಸಮದಋಷಿಯು ಅತ್ರಿಋಷಿಯ ವಂಶದಲ್ಲಿ ಅತ್ರಿಯಿಂದ ಆರನೆಯ ತಲೆಯವನೆಂದು ತಿಳಿದುಬರುವುದು (ಮೈಸೂರು ಗವರ್ನಮೆಂಟು ಓರಿಯಂಟಲ್ ಲೈಬ್ರರಿಯಲ್ಲಿ ಪ್ರಿಂಟಾದ No. 25 ನೇ ಪ್ರವರ ಮತ್ತು ಗೋತ್ರ ಎಂಬ ಗ್ರಂಥದ ಪ್ರಕಾರ). ವಿಶ್ವಾಮಿತ್ರನು ಅತ್ರಿಯಿಂದ ಐದನೇ ತಲೆಯವನು. ಒಟ್ಟು ಎಂಟು ಋಕ್ಕುಗಳಲ್ಲಿ ಈ ಗೃತ್ಸಮದಋಷಿಯು ಸರಸ್ವತಿಯನ್ನು

ಸ್ತೋತ್ರಮಾಡಿದಾನೆ. ಋ. ಸಂ. ೨-೧-೧೧ ಮತ್ತು ೨-೩-೮ ನೆಯ ಋಕ್ಕುಗಳಲ್ಲಿ ಸರಸ್ವತಿಯನ್ನು ಇಡಾ ಮತ್ತು ಭಾರತಿಯರೊಡನೆ ಸ್ತುತಿಸಿದಾನೆ. ಋ. ಸಂ. ೨-೩೫-೫ ರಲ್ಲಿ ಈ ಮೂವರನ್ನು ಎಂದರೆ, ಇಡಾ, ಸರಸ್ವತೀ, ಭಾರತೀ ಎಂಬುವರನ್ನು ಮೂರು ಮಂದಿ ದೇವತೆಯರೆಂದು ಹೇಳಿದಾನೆ. ಋ. ಸಂ. ೨-೩೦-೮ ರಲ್ಲಿ ಸರಸ್ವತಿಯನ್ನು ಇಂದ್ರ ಮತ್ತು ಮರುತ್ತುಗಳೊಡನೆ ಸ್ತೋತ್ರಮಾಡಿದಾನೆ. ಋ. ಸಂ. ೨-೩೨-೮ ರಲ್ಲಿ ಸರಸ್ವತಿಯನ್ನು ಓರ್ವ ದೇವತೆಯನ್ನಾಗಿ ಹೇಳಿದಾನೆ. ಋ. ಸಂ. ೨-೪೧ ನೇಯ ಸೂಕ್ತದ ೧೬ ನೆಯ ಋಕ್ಕಿನಲ್ಲಿ ಸರಸ್ವತಿಯನ್ನು ಬಹುದೊಡ್ಡ ನದಿಯೆಂದೂ ಬಹುದೊಡ್ಡ ದೇವತೆಯೆಂದೂ ೧೮ನೆಯ ಋಕ್ಕಿನಲ್ಲಿ ಋತಾವರೀ ಎಂದರೆ (ಋತ-ನೀರು) ಹೆಚ್ಚಾದ ನೀರುಳ್ಳ ನದಿಯೆಂದೂ ವರ್ಣಿಸಿದಾನೆ. ಇದನ್ನು ನೋಡಿ ಪಾಶ್ಚಾತ್ಯ ಪಂಡಿತರಲ್ಲಿ ಕೆಲವರು ಬಹುದೊಡ್ಡ ನದಿಯೆಂದು ಹೇಳಿರುವುದರಿಂದ ಸಿಂಧುನದಿಯೇ ಇರಬೇಕೆಂದು ಹೇಳುತ್ತಾರೆ. ಆದರೆ ಅದು ಸರಿಯಲ್ಲ. ಏಕೆಂದರೆ ಕವಿಯು ಒಂದು ನದಿಯನ್ನಾಗಲಿ, ದೇವತೆಯನ್ನಾಗಲಿ ಸ್ತೋತ್ರಮಾಡುವಾಗ (ಅದು ಚಿಕ್ಕದು ಅಥವಾ ಸಾಧಾರಣವಾಗಿದ್ದರೂ) ಅದನ್ನು ಬಹುದೊಡ್ಡದೆಂದು ವರ್ಣಿಸುವುದು ಸಾಧಾರಣವಾಗಿದೆ. ಋ. ಸಂ. ೨-೩೦-೮ ನೆಯ ಋಕ್ಕಿನಲ್ಲಿ ಈ ಗೃತ್ಸಮದಋಷಿಯು ಸರಸ್ವತಿಯನ್ನು ಶಿಡಿಲು ಮತ್ತು ಮಿಂಚಿನ ಅಧಿದೇವತೆಯೆಂದು ಭಾವಿಸಿ ಸ್ತೋತ್ರಮಾಡಿರುವನೆಂದು ಕೆಲವರು ಅಭಿಪ್ರಾಯಪಡುವರು. ಆದರೆ ಒಬ್ಬ ಋಷಿಯು ಒಂದೇ ದೇವತೆಯನ್ನು ಬೇರೆ ಬೇರೆ ಅರ್ಥದಲ್ಲಿ ವರ್ಣಿಸಿರುವನೆಂದು ಹೇಳುವುದು ಸಕಾರಣವಾಗಿ ತೋರುವುದಿಲ್ಲ. ಋ. ಸಂ. ೩-೨೩ ನೆಯ ಸೂಕ್ತಕ್ಕೆ ಭರತಪುತ್ರರಾದ ದೇವಶ್ರವಾ ಮತ್ತು ದೇವವಾತರೆಂಬುವರು ಋಷಿಗಳು. ಹಿಂದೆ ಹೇಳಿದ ಗೋತ್ರ ಪ್ರವರವೆಂಬ ಗ್ರಂಥದ ಪ್ರಕಾರ ಈ ಋಷಿಗಳು ವಿಶಾಮಿತ್ರನ ಪುತ್ರರೆಂದು ತಿಳಿದುಬರುವುದು. ಭರತನು ಅತ್ರಿಯಿಂದ ಆರನೆಯ ತಲೆಯವನೆಂದೂ, ವಿಶ್ವಾಮಿತ್ರನು ಏಳನೆಯ ತಲೆಯವನೆಂದೂ, ಇವರಿಬ್ಬರೂ ಅತ್ರಿಯ ಮರಿಮಗನಾದ ಪುರೂರವನ ವಂಶಸ್ಥರೆಂದೂ ಅದೇಗ್ರಂಥದಿಂದ ತಿಳಿದುಬರುವುದು. ಇವರು ಋ. ಸಂ. ೩-೨೩-೪ ನೆಯ ಋಕ್ಕಿನಲ್ಲಿ—

ನಿ ತ್ವಾ ದಧೇ ವರ ಆ ಪೃಥಿವ್ಯಾ ಇಳಾಯಾಸ್ಪದೇ ಸುದಿನತ್ವೇ ಅಹ್ನಾಂ ।
ದೃಷದ್ವತ್ಯಾಂ ಮಾನುಷಾ ಆಪಯಾಯಾಂ ಸರಸ್ವತ್ಯಾಂ ರೇವದಗ್ನೇ ದಿದೀಹಿ ॥

(ಋ. ಸಂ. ೩-೨೩-೪)

ಸರಸ್ವತೀನದಿಯ ಜತೆಯಲ್ಲಿ **ದೃಷದ್ವತೀ** ಮತ್ತು **ಆಪಯಾ** ಎಂಬ ಬೇರೆ ಎರಡು ನದಿಗಳ ಹೆಸರನ್ನು ಹೇಳಿದಾರೆ. ದೃಷದ್ವತಿಯು ಈಗಿನ ಚಿತ್ರಾಂಗವೆಂಬ ನದಿಯು (the modern Chitrang, Chautag, or Chitang) **ಆಪಯಾ** ಎಂಬುವುದು ಈಗಿನ **ಆಪಗಾ** ಎಂಬ ನದಿಯ (the modern Apaga) ಈ ಎರಡು ನದಿಗಳೂ ಸರಸ್ವತಿಯ ನದಿಯ ಸಮಾಪದಲ್ಲಿಯೇ ಇರುವುದರಿಂದ ಸರಸ್ವತಿಯು ಸಿಂಧುನದಿಯಲ್ಲವೆಂದು ಧಾರಾಳವಾಗಿ ಹೇಳಬಹುದು ವಿಶ್ವಾಮಿತ್ರಋಷಿಯ ಆಶ್ರಮವೂ ಸಹ (ಕುರುಕ್ಷೇತ್ರದಲ್ಲಿರುವ) ಈ ಸರಸ್ವತೀನದಿಯ ಪಶ್ಚಿಮ ದಡದಲ್ಲಿಯೇ ಇತ್ತೆಂದು ಈಚಿನ ಪರಿಶೋಧನೆಗಳಿಂದ ವ್ಯಕ್ತವಾಗಿದೆ (see Dey's Geographical Dic.) ಇದುವರೆಗೆ ಹೇಳಿದ ವಿಷಯಗಳೆಲ್ಲವೂ ಅತ್ರಿ ಮತ್ತು ವಿಶ್ವಾಮಿತ್ರಋಷಿಗಳ ವಂಶಸ್ಥರ ಸಂಬಂಧವಾದವು.

ಈಗ ಭರದ್ವಾಜ ಮತ್ತು ಅವರ ವಂಶಸ್ಥರ ವಿಷಯವನ್ನು ವಿಮರ್ಶಿಮಾಡೋಣ. ಋ. ಸಂ.೬-೪೯-೭; ೬-೫೦-೧೨ ; ೬.೫೨-೬ ಈ ಮೂರು ಋಕ್ಕುಗಳಿಗೂ ಭರದ್ವಾಜಪುತ್ರನಾದ **ಋಜಿಶ್ವಾ** ಎಂಬುವನೇ ಋಷಿಯು. ಈ ಮೂರು ಋಕ್ಕುಗಳಲ್ಲಿ ಮೊದಲನೆಯ ಮತ್ತು ಮೂರನೆಯ ಋಕ್ಕುಗಳಲ್ಲಿ ಸರಸ್ವತಿಯು ಒಂದು ನದಿಯೆಂಬ

ವಿಚಾರವು ಸ್ಪಷ್ಟವಾಗಿ ಉಕ್ತವಾಗಿದೆ. ಎರಡನೆಯ ಮಂತ್ರದಲ್ಲಿ ರುದ್ರ, ವಿಷ್ಣು, ವಾಯು, ಪರ್ಜನ್ಯ ಎಂಬ ದೇವತೆಗಳ ಜತೆಯಲ್ಲಿ ಸರಸ್ವತಿಯ ಹೆಸರು ಸೂಚಿಸಲ್ಪಟ್ಟಿದ್ದರೂ ಸರಸ್ವತಿಯು ನದಿಯ ಹೆಸರೆಂದು ಭಾವಿಸಬಹುದಾಗಿದೆ. ಏಕೆಂದರೆ ಆ ಋಷಿಯು ಎರಡು ಋಕ್ಕುಗಳಲ್ಲಿ ಸರಸ್ವತಿಯು ನದಿಯೆಂದು ಹೇಳಿರುವುದರಿಂದ ಮತ್ತೊಂದು ಋಕ್ಕಿನಲ್ಲಿ ಅದೇ ಋಷಿಯು ಸರಸ್ವತಿಯನ್ನು ನದಿಯೆಂದೇ ಭಾವಿಸಿ ಸ್ತೋತ್ರಮಾಡಿರುವುದು ಸಹಜವಾಗಿದೆ ಭರದ್ವಾಜರ ಆಶ್ರಮವು ಪ್ರಯಾಗದಲ್ಲಿ (Allahabad) ಇದ್ದಿತು. ಆದುದರಿಂದ ಭರದ್ವಾಜಪುತ್ರನಾದ **ಋಜಿಶ್ವಾ** ಎಂಬುವನು ತನ್ನ ಆಶ್ರಮಕ್ಕೆ ಸಮೀಪದಲ್ಲಿರುವ ಒಂದು ನದಿಯನ್ನೇ ಸ್ತೋತ್ರಮಾಡಿರಬೇಕು. ಭರದ್ವಾಜಋಷಿಯ ಋ. ಸಂ. ೬-೬೧ ನೆಯ ಸೂಕ್ತವೆಲ್ಲಾ (ಒಟ್ಟು ೧೪ ಋಕ್ಕುಗಳು) ಸರಸ್ವತೀವಿಷಯವಾಗಿಯೇ ಇದೆ. ಈ ಸೂಕ್ತದಲ್ಲಿರುವ ಹಲವು ಶಬ್ದಗಳ ಅರ್ಥವು ಸಿಂಧೂನದಿಗೆ ಅನ್ವಯಿಸುವುದೆಂದು ಕೆಲವು ಪಾಶ್ಚಾತ್ಯ ಪಂಡಿತರ ಅಭಿಪ್ರಾಯವು. ಆದರೆ ಆ ಶಬ್ದಗಳು ಸರಸ್ವತೀನದಿಗೂ ಸಹ ಅನ್ವಯಿಸುವುದರಿಂದ ಸಂಶಯಕ್ಕೆ ಅವಕಾಶವಿಲ್ಲ.

ಏಳನೆಯ ಮಂಡಲದಲ್ಲಿರುವ ಋ. ಸಂ. ೭-೯-೫, ೭-೩೫-೧೧; ೭-೩೬-೬, ೭-೪೨-೩; ೭-೯೫; ೭-೯೬ ಈ ಋಕ್ಕುಗಳಿಗೆಲ್ಲಾ ವಸಿಷ್ಠನೇ ಋಷಿಯು. ವಸಿಷ್ಠಋಷಿಯ ಆಶ್ರಮವು ರಾಜಪುಟಾನಾದಲ್ಲಿರುವ ಅರಾವಳೀಪರ್ವತದ ಅಬು ಎಂಬ ಬೆಟ್ಟದ (Mount Abu) ಸಮೀಪದಲ್ಲಿತ್ತೆಂದು ತಿಳಿದುಬರುವುದು. ಮೊದಲನೆಯ ನಾಲ್ಕುಮಂತ್ರಗಳೂ ಕಡೆಯ ಎರಡು ಸೂಕ್ತಗಳೂ ಸರಸ್ವತಿಯನ್ನು ನದಿಯೆಂದೇ ಹೇಳಿ ಸ್ತುತಿಸಿರುವವು. ಈ ಋಕ್ಕುಗಳಲ್ಲಿರುವ **ಸಿಂಧುಮಾತಾ** ಮತ್ತು **ಆಸಮುದ್ರಾತ್** ಎಂಬ ಶಬ್ದಗಳು ಸಿಂಧುನದಿಗೇ ವಿಶೇಷವಾಗಿ ಅನ್ವಯಿಸುವುದರಿಂದ ಸಿಂಧುನದಿಯೇ ಈ ಮಂತ್ರಗಳಲ್ಲಿ ಸ್ತುತಿಸಲ್ಪಟ್ಟಿರುವುದೆಂದು ಕೆಲವರು ಹೇಳುವರು. ಈ ವಿವಾದವನ್ನು ಸಂಪೂರ್ಣವಾಗಿ ತಳ್ಳಿಹಾಕುವುದಕ್ಕಾಗುವುದಿಲ್ಲ. ಆದರೂ ಒಂದು ನದಿಯ ವಿಷಯವನ್ನು ಹೇಳುವಾಗ ಮತ್ತೊಂದು ನದಿಯನ್ನು ಅದಕ್ಕೆ ಹೋಲಿಸುವುದೂ, ಉತ್ಪ್ರೇಕ್ಷೆಯಿಂದ ಕೂಡಿದ ಪ್ರಶಂಸೆಯನ್ನು ಮಾಡುವುದೂ ಅಸಂಭವವಲ್ಲ.

ಎಂಟನೆಯ ಮಂಡಲದಲ್ಲಿರುವ ಋ. ಸಂ. ೮-೨೧-೧೭ ಮತ್ತು ೧೮ ಋಕ್ಕುಗಳಿಗೆ ಕಣ್ವಋಷಿಯ ಪುತ್ರನಾದ **ಶೋಭರಿ** ಎಂಬುವನು ಋಷಿಯು. ಈ ಋಷಿಯು, ಮೇಲೆ ಹೇಳಿದ ಋಕ್ಕುಗಳಲ್ಲಿ ಚಿತ್ರನೆಂಬ ರಾಜನು ಸರಸ್ವತೀನದಿಯ ತೀರದಲ್ಲಿ ಮಾಡಿದ ಯಜ್ಞವನ್ನೂ ಆ ರಾಜನ ದಾನಪ್ರಶಂಸೆಯನ್ನೂ ವರ್ಣಿಸಿರುವನು. ಶೌನಕರ ಬೃಹದ್ದೇವತಾಗ್ರಂಥದಲ್ಲಿ (೬-೫೮ ರಿಂದ ೬೨) ಈ ಚಿತ್ರರಾಜನು ಕುರುಕ್ಷೇತ್ರದಲ್ಲಿ ಯಜ್ಞ ಮಾಡಿದನೆಂದು ಹೇಳಿರುವುದರಿಂದ ಸರಸ್ವತಿಯು ಸಮೀಪದಲ್ಲಿರುವ ನದಿಯೇ ಆಗಿರಬೇಕು ಮತ್ತು,

ಪೂಷಾ ವಿಷ್ಣುರ್ಹವನಂ ಮೇ ಸರಸ್ವತ್ಯವಂತು ಸಪ್ತ ಸಿಂಧವಃ ।
ಆಪೋ ವಾತಃ ಪರ್ವತಾಸೋ ವನಸ್ಪತಿಃ ಶೃಣೋತು ಪೃಥಿವೀ ಹವಂ ॥ (ಋ. ಸಂ. ೪-೫೪-೯)

ಈ ಋಕ್ಕಿನಲ್ಲಿ **ಪೂಷಾ, ವಿಷ್ಣು, ಸರಸ್ವತೀ, ಸಪ್ತಸಿಂಧವಃ** (ಏಳು ನದಿಗಳು) **ಆಪಃ, ವಾತಃ, ಪರ್ವತಾಸಃ, ವನಸ್ಪತಿಃ ಪೃಥಿವೀ** ಈ ದೇವತೆಗಳ ಮಧ್ಯದಲ್ಲಿ ಸರಸ್ವತಿಯೂ ಸೂಚಿಸಲ್ಪಟ್ಟಿರುವುದು. ಅದರಂತೆಯೇ ಋ. ಸಂ. ೯-೬೭-೩೨ ರಲ್ಲಿ ಆ ಮಂತ್ರದ ಋಷಿಯಾದ **ವಸಿಷ್ಠ** ಅಥವಾ **ಪವಿತ್ರ** ಎಂಬುವರು ಸರಸ್ವತೀ ಶಬ್ದವನ್ನು ಉಹಯೋಗಿಸಿರುವರು. ಇಲ್ಲಿ ಸರಸ್ವತಿಯು ಒಂದು ದೇವತೆ ಅಥವಾ ನದಿ ಎಂಬ ಎರಡು ಅರ್ಥಗಳಲ್ಲಿ ಯಾವುದಾದರೂ ಆಗಬಹುದು. ಋ. ಸಂ. ೧೦-೩೦-೧೨ ರಲ್ಲಿ ಸರಸ್ವತಿಯೆಂದರೆ ಯಾವ ನದಿಯೆಂದು ನಿರ್ದಿಷ್ಟವಾಗಿ

ಹೇಳಿಲ್ಲ. ಋ. ಸಂ. ೧೦-೬೪-೯ ರಲ್ಲಿ ಈ ಮಂತ್ರದ ಋಷಿಯಾದ ಗಯನೆಂಬುವನು (ಅತ್ರಿಋಷಿಯ ವಂಶಸ್ಥ) ಸಿಂಧೂ ಮತ್ತು ಸರಯೂ (Gogra) ನದಿಗಳ ಜತೆಯಲ್ಲಿಯೇ ಸರಸ್ವತಿಯನ್ನು ಹೇಳಿರುವನು. ಮತ್ತು

ಇಮಂ ಮೇ ಗಂಗೇ ಯಮುನೇ ಸರಸ್ವತಿ ಶುತುದ್ರಿ ಸ್ತೋಮಂ ಸಚತಾ ಪರುಷ್ಣ್ಯಾ ।
ಅಸಿಕ್ನ್ಯಾ ಮರುದ್ವೃಧೇ ವಿತಸ್ತಯಾರ್ಜೀಕೀಯೇ ಶೃಣುಹ್ಯಾ ಸುಷೋಮಯಾ ॥
(ಋ. ಸಂ. ೧೦-೭೫-೫)

ಎಂಬ ಋಕ್ಕಿನಲ್ಲಿ ಸರಸ್ವತೀನದಿಯು, ಗಂಗಾ (the Ganges) ಯಮುನಾ (the Jamna) ಶುತುದ್ರಿ (the Sutlej) ಪರುಷ್ಣಿ (the Ravi) ಅಸಿಕ್ನಿ (the Chinab) ವಿತಸ್ತಾ (the Jhelam) ಮರುದ್ವೃಧಾ (the United Stream of the Jhelam and Chenab) ಆರ್ಜೀಕೀಯಾ (the Bias) ಮತ್ತು ಸುಷೋಮಾ(the Indus) ಎಂಬ ನದಿಗಳಜತೆಯಲ್ಲಿ ಹೇಳಲ್ಪಟ್ಟಿರುವುದರಿಂದ ಸರಸ್ವತೀನದಿಯೇ ಒಂದು ಪ್ರತ್ಯೇಕವಾದ ನದಿಯೆಂದೂ ಸಿಂಧುನದಿಯಲ್ಲವೆಂದೂ ಸ್ಪಷ್ಟವಾಗುವುದು. ಮೇಲಿನ ಋಕ್ಕಿರುವ ಸೂಕ್ತವೆಲ್ಲಾ ನದಿಗಳ ಪರವಾಗಿಯೇ ಇದೆ. ಎಂದರೆ ಈ ಸೂಕ್ತದಲ್ಲಿರುವ ೯ ಋಕ್ಕುಗಳಿಗೂ ನದಿಗಳೇ ದೇವತೆಗಳು. ಈ ಸೂಕ್ತಕ್ಕೆ ಪ್ರಿಯಮೇಧಋಷಿಯ ಪುತ್ರನಾದ ಸಿಂಧುಕ್ಷಿತ್ ಎಂಬುವನು ಋಷಿಯು.

ಸರಸ್ವತಿಯು ತಿಸ್ರೋ ದೇವ್ಯಃ ಎಂದು ಹೇಳಲ್ಪಡುವ ಮೂರು ಮಂದಿ ದೇವತೆಯರಲ್ಲಿ ಒಬ್ಬಳೆಂದು ಆಪ್ರೀಸೂಕ್ತಗಳಲ್ಲಿ ಹೇಳಲ್ಪಟ್ಟಿದೆ. ಋಗ್ವೇದಸಂಹಿತೆಯಲ್ಲಿ ಆಪ್ರೀಸೂಕ್ತಗಳೆಂದು ಹೇಳಲ್ಪಡುವ ೧೦ ಸೂಕ್ತಗಳಿವೆ. ಶೌನಕರ ಅನುವಾಕಾನುಕ್ರಮಣಿಯಲ್ಲಿ ಈ ಸೂಕ್ತಗಳ ವಿವರವು ಈರೀತಿ ಇದೆ—

ಶ್ಲೋಕಸ್ಯಾಸ್ಯ ಯೆಥಾಸಂಖ್ಯಂ ಸೂಕ್ತಾನಿ ದಶ ವೈ ವಿದುಃ ।
ನ ಆ ವಹಾಗ್ನ ಆ ವಹಾದ್ಯ ರಾಜಸೀತ್ಯೆಗ್ನಿರ್ನಿ ಚೆ ।
ಸಮಿತ್ಸಮಿಥ್ಸು ಶೋಚಿಷೇ ಜುಷಸ್ವ ವಿಶ್ವತಸ್ಪತಥಾ ।
ಇಮಾಂ ಮೇ ಅದ್ಯ ಮನ್ವಿಮಾ ಯೆಧರ್ಷಿಪಕ್ಷ ಆಪ್ರಿಯಃ ॥
ವಸಿಷ್ಠಶುನಕಾ ವಿನಾ ಸಮಿದ್ಧಸರ್ವಪಕ್ಷತಾ ।
ಜುಷಸ್ವಾದಿದ್ವಿತೀಯೆಯಾ ತನೂನಪಾದ್ವಿರೋಧಿತಾ ।
ಯಜುಃ ಶ್ರುತೌ ತಥಾಶ್ರುತೇಃ ಸಮಿದ್ಧಸೂಕ್ತಮಧ್ಯತಃ ।
ಪ್ರಜಾಪತೇಃ ಪಶೋಃ ಸದಾ ಭವೇಯುರದ್ಯ ಮನ್ವಿಮಾಃ ।
ಇತೀರಿತಂ ಹಿ ಬಹ್ವೃಚೈರ್ಯಥರ್ಷಿ ವೇತಿ ಸೂತ್ರತಃ ॥

ಸಂಖ್ಯೆ.	ಸೂಕ್ತದ ಪ್ರಾರಂಭ.	ಮಂಡಲ ಮತ್ತು ಸೂಕ್ತ.	ಋಕ್ಸಂಖ್ಯೆ.	ಸೂಕ್ತದ ಋಷಿ.
1	ಸುಸಮಿದ್ಧೋನ ಆವಹ	೧— ೧೩	೧೨	ಮೇಧಾತಿಥಿಃ ಕಾಣ್ವಃ
2	ಸಮಿದ್ಧೋ ಅಗ್ನ ಆವಹ	೧—೧೪೨	೧೩	ದೀರ್ಘತಮಾ ಔಚಥ್ಯಃ
3	ಸಮಿದ್ಧೋ ಅದ್ಯ ರಾಜಸಿ	೧—೧೪೪	೧೧	ಅಗಸ್ತ್ಯೋ ಮೈತ್ರಾವರುಣಿಃ
4	ಸಮಿದ್ಧೋ ಅಗ್ನಿರ್ನಿಹಿತಃ	೨—೩	೧೧	ಗೃತ್ಸಮದಃ

5	समिक्षमिन्धुमनसा	३—५	८८	गाधिनोः विश्वामित्रः
6	सुसमिद्धायै शोचिषे	६—६	८८	वसुश्रुत आत्रेयः
7	जुषस्वनः समिधमग्ने	७—७	८८	मैत्रावरुणिर्वसिष्ठः
8	समिद्धो विश्वतस्पतिः	८—६	८८	काश्यपोऽसितो देवलो वा
9	इमाम मे अग्नेसमिधं	८०—८०	८८	सुमित्रो वाध्र्यश्वः
10	समिद्धो अद्यमनुषो	८०—८८०	८८	जमदग्निर्भार्गवः

मेलॆ हेळिद सूक्तगळल्लि ८—७ नेयु सूक्तगळल्लि ८७ मत्तु ८३ ऋक्कुगळिवॆ. मिक्क सूक्तगळल्लॆल्ल ८८ ऋक्कुगळिवॆ. ई ८८ ऋक्कुगळिगॆ देवतॆगळु ईरीति इरुवरु.

८ नेय ऋक्कु—इद्धः समिद्धो३ग्निर्वा
७ ,, तनूनपात्
३ ,, इळः
६ ,, बर्हिः
६ ,, देवीर्द्वारः
८ ,, उषासानक्ता
८ ,, देवॊ होतारौ प्रचेतसौ
६ ,, तिस्रो देव्यः सरस्वतीळाभारत्यः
८ ,, त्वष्टा
८० ,, वनस्पतिः
८८ ,, स्वाहाकृतयः

८७ ऋक्कुगळल्लिरुव मॊदलनेय सूक्तदल्लि नराशंसः ऎंब देवतॆयू ८३ ऋक्कुगळिरुव ऎरडनेय सूक्तदल्लि नराशंसः मत्तु इंद्रः ऎंब देवतॆगळू इरुवुदरिंद इतर सूक्तगळल्लिरुवंतॆ ८८ ऋक्कुगळिगॆ बदलागि ८७ मत्तु ८३ ऋक्कुगळिवॆ. मिक्क विषयगळल्लि एनू व्यत्यासविल्ल. छंदस्सु मत्तु ऋषिगळु मात्र बेरॆ बेरॆ. पशुयागदल्लि अग्नियन्नु (समिद्धो३ग्नि) स्तुतिसुवाग मत्तु ऎकादश प्रयाजहोमगळन्नु माडुवाग ई सूक्तगळन्नु पठिसुवरु. ई सूक्तगळल्लि तिस्रो देव्यः ऎंदरॆ इळा सरस्वतीं भारतीं ऎंब मूरु देवतॆगळ स्तोत्रवॆदॆ. इल्लि मुख्यवागि गमनिसबेकाद विषयवेनेंदरॆ—अग्नियु भूमि, अंतरिक्ष, स्वर्गगळल्लि मूरु रूपगळिंद आराधिसल्पडुवनु. भारतियु सूर्यन किरणगळन्नु सूचिसुवुदरिंद ई देवतॆयु (ऎंदरॆ सूर्यनु) स्वर्ग (दिव) दल्लिरुव अग्निय रूपवु. सरस्वतियु शिडिलुमिंचुगळिगॆ अधि

ಮಾನಿದೇವತೆಯನ್ನಾಗಿ ಅನೇಕ ಕಡೆ ವರ್ಣಿಸಿರುವುದರಿಂದ ಈ ಸರಸ್ವತಿಯು ಅಂತರಿಕ್ಷದಲ್ಲಿರುವ ಅಗ್ನಿಯ ರೂಪವು. ಇಳಾದೇವಿಯು ಭೂಮಿಯ ಮೇಲಿರುವ ಪ್ರಜೆಗಳಿಗೆ (ಜನಗಳಿಗೆ)ಧನಾದಿಗಳನ್ನು ದೀರ್ಘಾಯುವನ್ನೂ ಕೊಡುವವಳಾದುದರಿಂದ ಈ ದೇವತೆಯು ಭೂಮಿಯಲ್ಲಿರುವ ಅಗ್ನಿಯ ರೂಪವು ಎಂದು ಈ ಇಳಾ ಸರಸ್ವತೀ ಭಾರತಿಯರ ಸಂಕೇತವು. ಈ ಮೂವರು ದೇವತೆಗಳೂ ಯಜ್ಞವೇದಿಕೆಗೆ ಬಂದು ಬರ್ಹಿಸ್ತರಣದ (ಹರಡಿರುವ ದರ್ಭೆಗಳ) ಮೇ ಲೆ ಬಂದು ಕುಳಿತುಕೊಳ್ಳಬೇಕೆಂದು ಋಷಿಗಳು ಸ್ತೋತ್ರಮಾಡಿದಾರೆ.

ಸರಸ್ವತಿಯು ನದಿಯಲ್ಲದೆ ಬೇರೆ ದೇವತೆಯೆಂದು ಭಾವಿಸಿ ಋಷಿಗಳು ಸ್ತೋತ್ರನುಮಾಡಿರುವ ಕೆಲವು ಉದಾಹರಣೆಗಳನ್ನು ಕೊಡುತ್ತೇವೆ.

(1) ತಾನ್ಪೂರ್ವಯಾ ನಿವಿದಾ ಹೂಮಹೇ ವಯಂ ಭಗಂ ಮಿತ್ರಮದಿತಿಂ ದಕ್ಷಮಸ್ರಿಧಂ ।
ಆರ್ಯಮಣಂ ವರುಣಂ ಸೋಮಮಶ್ವಿನಾ ಸರಸ್ವತೀ ನಃ ಸುಭಗಾ ಮಯಸ್ಕರತ್ ।

(ಋ. ಸಂ. ೧-೮೯-೩)

ಈ ಋಕ್ಕಿನಲ್ಲಿ ಸರಸ್ವತಿಯು ವಾಗ್ದೇವತೆ ಅಥವಾ ಶಿಡಿಲುಮಿಂಚುಗಳ ಅಭಿಮಾನಿದೇವತೆ.

(2) ಸರಸ್ವತಿ ತ್ವಮಸ್ಮಾಁ ಅವಿಡ್ಧಿ ಮರುತ್ವತೀ ಧೃಷತೀ ಜೇಷಿ ಶತ್ರೂನ್ ।

(ಋ. ಸಂ. ೨-೩೦-೮)

(3) ಸರಸ್ವತೀ ಶೃಣವನ್ ಯೆಜ್ಞಿಯಾಸೋ ಧಾತಾ ರಯಿಂ ಸಹವೀರಂ ತುರಾಸಃ ।

(ಋ. ಸಂ- ೩-೫೪-೧೩)

ಈ ಋಕ್ಕುಗಳಲ್ಲಿ ಸರಸ್ವತಿಯು ನದೀ ಎಂದಾಗಲೀ ಶಿಡಿಲುಮಿಂಚುಗಳ ಅಭಿಮಾನಿದೇವತೆಯೆಂದಾಗಲಿ ಭಾವಿಸಲ್ಪಟ್ಟಿರುವುದು.

(4) ದಮೂನಸೋ ಅಪಸೋ ಯೇ ಸುಹಸ್ತಾ ವೃಷ್ಣಃ ಪತ್ನೀರ್ನದ್ಯೋ ವಿಭ್ವತಷ್ಟಾಃ ।
ಸರಸ್ವತೀ ಬೃಹದ್ದಿವೋತ ರಾಕಾ ದಶಸ್ಯಂತೀರ್ವರಿವಸ್ಯಂತು ಶುಭ್ರಾಃ ।

(ಋ. ಸಂ. ೫-೪೨-೧೨)

(5) ಆ ಸೋ ದಿವೋ ಬೃಹತಃ ಪರ್ವತಾದಾ ಸರಸ್ವತೀ ಯಜತಾ ಗಂತು ಯಜ್ಞಂ ।

(ಋ. ಸಂ. ೫-೪೩-೧೧)

(6) ಉಭಾ ನಾಸತ್ಯಾ ರುದ್ರೋ ಅಧ ಗ್ನಾಃ ಪೂಷಾ ಭಗಃ ಸರಸ್ವತೀ ಜುಷಂತ ।

(ಋ. ಸಂ. ೫-೪೬-೨)

ಈ ಮೂರು ಋಕ್ಕುಗಳಲ್ಲಿಯೂ ಸರಸ್ವತಿಯು ಶಿಡಿಲುಮಿಂಚುಗಳ ಅಭಿಮಾನಿದೇತೆಯು. Griffith ಎಂಬುವರು ಈ ಮೂರು ಋಕ್ಕುಗಳಲ್ಲಿ ಮೊದಲನೆಯದರಲ್ಲಿ ಸರಸ್ವತಿಯನ್ನು ಸಿಂಧು ಅಥವಾ ಸರಸ್ವತಿ ಎಂಬ ಯಾವುದಾದರೂ ಒಂದು ನದಿಯೆಂತಲೂ, ೨-೩ ನೆಯ ಋಕ್ಕುಗಳಲ್ಲಿ ದೇವತೆಯೆಂತಲೂ ವ್ಯಕ್ತವಾಗುವುದೆಂದು ಅಭಿಪ್ರಾಯ ಪಡುವರು. K. C. ಚಟ್ಟೋಪಾಧ್ಯಾಯ ಎಂಬುವರು ೧-೩ ನೆಯ ಋಕ್ಕುಗಳು ಸಿಂಧುನದಿಗೆ ಅನ್ವಯಿಸುವುದೆಂದು ಹೇಳುವರು. ಈ ಮೂರು ಋಕ್ಕುಗಳೂ ಅತ್ರಿಋಷಿಯ ವಂಶಸ್ಥರಿಂದಲೇ ಉಕ್ತವಾಗಿದೆ. ಮೊದಲನೆಯ

ಋಕ್ಕಿಗೆ ಅತ್ರಿ ಅಥವಾ ಅತ್ರಿಯ ಪುತ್ರನಾದ ಭೌಮನೆಂಬುವನೂ, ಎರಡನೆಯ ಋಕ್ಕಿಗೆ ಅತ್ರಿಯೂ. ಮೂರನೆಯ ಋಕ್ಕಿಗೆ ಅತ್ರಿಯ ವಂಶಸ್ಥನಾದ ಪ್ರತಿಕ್ಷತ್ರನೆಂಬುವನೂ ಋಷಿಗಳು. ಎರಡನೆಯ ಋಕ್ಕಿನಲ್ಲಿ ಸರಸ್ವತಿಯನ್ನು ಸ್ವರ್ಗದಿಂದಲೂ (ದಿವಃ) ಮೇಘಮಂಡಲದಿಂದಲೂ (ಪರ್ವತಾದಾ) ಆಹ್ವಾನೆ ಮಾಡಲಾಗಿದೆ. ಮೊದಲನೆಯ ಋಕ್ಕಿನಲ್ಲಿ ಪೆತ್ನೀಃ ಎಂಬ ಶಬ್ದವಿರುವುದರಿಂದ ಸರಸ್ವತಿಯನ್ನೂ, ಇತರ ನದಿಗಳನ್ನೂ ಇಂದ್ರನ ಪತ್ನಿಯರನ್ನಾಗಿ ಭಾಷ್ಯಕಾರರು ಭಾವಿಸಿರುವರು.

(7) **ಅಗ್ನಿರಿಂದ್ರೋ ವರುಣೋ ಮಿತ್ರೋ ಅರ್ಯಮಾ ವಾಯುಃ ಪೂಷಾ ಸರಸ್ವತೀ**
ಸಜೋಷಸಃ । (ಋ. ಸಂ. ೧೦-೬೫-೧)

(8) **ವಿಶ್ವೇ ದೇವಾಸಃ ಶೃಣವನ್ ವಚಾಂಸಿ ಮೇ ಸರಸ್ವತೀ ಸಹ ಧೀಭಿಃ ಪುರಂಧ್ಯಾ** ।
(ಋ. ಸಂ. ೧೦-೬೫-೧೩)

ಈ ಎರಡು ಋಕ್ಕುಗಳಲ್ಲಿಯೂ ಸರಸ್ವತಿಯು ವಾಗ್ದೇವತೆಯು.

(9) **ಯತ್ಸುರಾಮಂ ವ್ಯಪಿಬಃ ಶಚೀಭಿಃ ಸರಸ್ವತೀ ತ್ವಾ ಮಘವನ್ನಭಿಷ್ಟೌ** ।
(ಋ. ಸಂ. ೧೦-೧೩೧-೫)

ಈ ಋಕ್ಕಿನಲ್ಲಿ ಸರಸ್ವತಿಯು ಇಂದ್ರನೊಡನೆ ಇರುವಂತೆ ಹೇಳಿರುವುದರಿಂದ ಸರಸ್ವತಿಯು ಶಿಡಿಲುಮಿಂಚಿಗಳ ಅಭಿಮಾನಿದೇವತೆಯೆಂದಾಗಲಿ, ವಾಗ್ದೇವತೆಯೆಂದಾಗಲಿ ಭಾವಿಸಬಹುದು.

(10) **ಗರ್ಭಂ ಧೇಹಿ ಸಿನೀವಾಲಿ ಗರ್ಭಂ ಧೇಹಿ ಸರಸ್ವತಿ** । (ಋ. ಸಂ. ೧೦-೧೮೪-೩)
ಇಲ್ಲಿ ಸರಸ್ವತಿಯನ್ನು ವಾಗ್ದೇವತೆಯೆಂದೇ ಹೇಳುವುದು ಸಮಂಜಸವಾಗಿರುವುದು.

ಸರಸ್ವತೀನದಿಯು ಆ ಕಾಲದಲ್ಲಿ ಎಲ್ಲೆಲ್ಲಿ ಹರಿಯುತ್ತಿತ್ತೆಂಬ ವಿಚಾರದಲ್ಲಿ ತಿಳಿದಮಟ್ಟಿಗೆ ಸೂಕ್ಷ್ಮವಾಗಿ ವಿವರಿಸುವೆವು. ಈ ವಿವರಣೆಯು (1)R.D.Oldham in Journal of Asiatic Society Bengal 1886 page 322 (2) C.F. Oldham, Journal of Royal Asiatic Society 1893, page 51 (3) Maps of the Cambridge History of India Vol. I Ancient India (4) Maps of Punjab published by the Surveyor-General of India (5) Ancient India as described by Magasthenes and Arrian ಎಂಬ ಭಾಷಣಗಳನ್ನನುಸರಿಸಿ ಬರೆಯಲಟ್ಟಿರುವುದು- ಸರಸ್ವತೀನದಿಯು ಆ ಕಾಲದಲ್ಲಿ ಒಂದು ದೊಡ್ಡನದಿಯಾಗಿದ್ದಿತು. ಹಿಮಾಲಯಪರ್ವತದಲ್ಲಿರುವ ಸಿರ್‌ಮೂರ್ (Sismur) ಪರ್ವತಶ್ರೇಣಿಯಲ್ಲಿ ಉದ್ಭವಿಸಿ ಅಲ್ಲಿಂದ ಪಶ್ಚಿಮಕ್ಕೂ ಸ್ವಲ್ಪದಕ್ಷಿಣಕ್ಕೂ ಹರಿಯುವುದು. ಇದರ ಉದ್ಭವ ಸ್ಥಾನದಲ್ಲಿ ಐದು ಸಣ್ಣ ಸಣ್ಣ ತೊರೆಗಳು (ನೀರು ಹರಿಯುವ ಸಣ್ಣ ಕಳ್ಳಗಳು) ಸೇರಿ ಈ ನದಿಯಾಗಿ ಮುಂದಕ್ಕೆ ಹರಿದಿರಬಹುದು. ಆದುದರಿಂದ ಇದಕ್ಕೆ ಪಂಚಜಾತಾ ಎಂಬ ಹೆಸರು ಬಂದಿರಬೇಕು. ಸ್ವಲ್ಪದೂರ ಹರಿದ ಮೇಲೆ ದೃಷದ್ವತೀ ಎಂಬ ನದಿಯು (the modern Chitrang) ಪೂರ್ವದಿಕ್ಕಿನಿಂದ ಹರಿದು ಬಂದು ಇದಕ್ಕೆ ಸೇರುವುದು. ಆಪಯಾ ಎಂಬುದು ದೃಷದ್ವತಿಗೆ ಉಪನದಿಯು. ಆಕಾಲದ ಸರಸ್ವತಿಯು ಈಗಿನ ಸರಸುತಿನದಿಯು ದಕ್ಷಿಣಕ್ಕೆತ್ತು. (ಮರಳುಭೂಮಿಗಳಲ್ಲಿ ಹರಿಯುವ ನದಿಗಳು ತಮ್ಮ ಪಾತ್ರಗಳನ್ನು ಅನೇಕವೇಳೆ ಬದಲಾಯಿಸುವುವು.) ಈಗಿನ ಸರಸುತಿನದಿಗೆ ವಾರ್ಕಂಡಾ (Markand) ಮತ್ತು ಗಗ್ಗರ್ (Ghaggar) ಎಂಬ ಸಣ್ಣ

ನದಿಗಳು ಸೇರುವುವು. ಬಳಿಕ ಸರಸ್ವತಿಯು ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಪ್ರವಹಿಸಿ ಕಡೆಗೆ ಸಮುದ್ರವನ್ನು ಸೇರುವುದು. ಈಗಿನ ಹಾಕ್ರ (Hakra) ಎಂಬ ಒಣಗಿಹೋಗಿರುವ ನದಿಯ ಪಾತ್ರವೇ ಆಗಿನ ಸರಸ್ವತೀ ನದಿಯ ಪಾತ್ರವಾಗಿರಬೇಕು ಅದು ಈಗಿನ (Sutlej) ಎಂಬ ನದಿಯೊಡನೆ ಸಂಗಮವಾಗಿ ಸಿಂಧೂನದಿಯಲ್ಲಿ ಐಕ್ಯವಾಗಿರಬಹುದು. ಅಥವಾ ನೇರವಾಗಿ ಸಿಂಧೂನದಿಗೇ ಹೋಗಿ ಸೇರಿರಬಹುದು. ಆ ಕಾಲದಲ್ಲಿ ಸಿಂಧೂನದಿಯು ಈಗಿರುವುದಕ್ಕಿಂತ ಬಹುದೂರ ಪೂರ್ವದಿಕ್ಕಿನಲ್ಲಿತ್ತು ಮತ್ತು (Rann of Kach) ಎಂಬ ಕೊಲ್ಲಿಯ ಸವಿಾಪದಲ್ಲಿ ಸಮುದ್ರವನ್ನು ಸೇರುತ್ತಿತ್ತು. ವ್ಯಾಕ್ಸ್ ಮುಲ್ಲರ್ (Max Muller) ಪಂಡಿತನು ಋ. ಸಂ. ೭-೯೫-೨ ನೆಯ ಋಕ್ಕಿನಲ್ಲಿ ಹೇಳಿರುವ **ಆಸಮುದ್ರಾತ್** ಎಂಬ ಶಬ್ದದ ಆಧಾರದಮೇಲೆ ಈ ಸರಸ್ವತೀನದಿಯು ನೇರವಾಗಿ ಸಮುದ್ರಕ್ಕೆ ಹೋಗಿ ಸೇರುತ್ತಿತ್ತೆಂದು ಅಭಿಪ್ರಾಯಪಡುತ್ತಾನೆ. ಈ ನದಿಯು ಸಮುದ್ರಕ್ಕೆ ಸೇರುವ ಮೊದಲು ಮರಳುಕಾಡಿನ ಪ್ರದೇಶದಲ್ಲಿ ಹರಿಯುತ್ತಿದ್ದುದರಿಂದ ನದಿಯು ಸಮುದ್ರಕ್ಕೆ ಸೇರುವ ಮೊದಲೇ ಮರುಭೂಮಿಯಲಿ ಇಂಗಿಹೋಗಿರಬಹುದು (See Muir's Sanskrit Texts Vol. II page 393) ಈರೀತಿ ನದಿಯು ಮರುಭೂಮಿಯಲ್ಲಿ ಇಂಗಿಹೋದ ವಿಚಾರದ ವರ್ಣನೆಯು ಮಹಾಭಾರತದಲ್ಲಿಯೂ (ವನಪರ್ವ ತೀರ್ಥಯಾತ್ರಾ ವರ್ಣನೆ) ಮತ್ತು ಮನುಸಂಹಿತೆಯಲ್ಲಿಯೂ (೧–೨೧) ಹೇಳಲ್ಪಟ್ಟಿದೆ. ಈ ಎಲ್ಲಾ ಕಾರಣಗಳಿಂದ ಈಗಿನ ಸರಸುತಿ ನದಿಯೇ ಹಿಂದಿನ ಸರಸ್ವತೀನದಿಯಾಗಿರಬೇಕೆಂದು ಹೇಳಬಹುದು.

ವಾಜೇಭಿಃ—ಈ ಶಬ್ದವು ಈ ಋಕ್ಕಿನಲ್ಲಿ ಅನ್ನ ಆಹಾರ ಎಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದು. "ಅನ್ನಂ ವೈ ವಾಜಃ" ಎಂದು ತೈತ್ತಿರೀಯಶ್ರುತಿವಾಕ್ಯವಿರುವುದು. ಪಾಶ್ಚಾತ್ಯಪಂಡಿತರು ಈ ಶಬ್ದವು ಅನೇಕ ಋಕ್ಕುಗಳಲ್ಲಿ ಅನೇಕವಿಧವಾದ ಅರ್ಥಗಳಲ್ಲಿ ಉಪಯೋಗಿಸಲ್ಪಟ್ಟಿರುವುದೆಂದು ಹೇಳುವರು. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿರುವೆವು—

(1) Power, strength ಋ.ಸಂ. ೧-೨೭-೮ ; ೧-೧೫೦-೬; ೩-೨೫-೩ ; ೪-೨೨-೩ ; ೫-೧೫-೫ ; ೬-೨೫-೧೧ &c.

(2) Swiftnets (of the steeds) ಋ. ಸಂ. ೫-೮೫-೨, ೧೦-೩೯-೧೦.

(3) Combat ; ಋ. ಸಂ. ೧-೪-೪ ; ೧-೭-೪ , ೨-೨೩-೧೩ &c.

(4) Refreshment, food, nourishment ಋ. ಸಂ. ೧-೯೧-೧೮ ; ೬-೨೪-೩ , ೧೦-೫-೪; ೧೦-೯೬-೯ &c.

(5) Offering, food or drink of offering ಋ.ಸಂ. ೧-೩೬-೨ ; ೩-೧೨-೯ ; ೪-೩-೧೫ ; ೫-೯-೨ ; ೬-೪೫-೨೯ &c.

(6) Horse ಋ. ಸಂ. ೧-೫೨-೧ ; ೨-೧-೧೨ ; ೩-೨-೩ ; ೪-೨೯-೧ &c.

(7) One of the three Rubhus ಋ. ಸಂ. ೧-೧೬೧-೬ , ೪-೩೩-೩ , ೭-೪೮-೨ &c.

(8) All the three Rubhus ಋ. ಸಂ. ೧೦-೨೩-೨ ; ೧೦-೭೪-೧೦ &c.

Grassmann ಎಂಬ ಪಂಡಿತನು ಈ ಶಬ್ದದ ಅನೇಕ ಋಕ್ಕುಗಳಲ್ಲಿರುವ ವಿಧವಿಧವಾದ ಅರ್ಥವಿವರಣೆಗಾಗಿ ಒಂದು ದೊಡ್ಡ ಪಟ್ಟಿಯನ್ನೇ ಕೊಟ್ಟಿರುವನು. ಅದು ಅತಿ ವಿಸ್ತಾರವಾಗಿರುವುದರಿಂದಲೂ ಆಯಾ ಸಂದರ್ಭದಲ್ಲಿ ಆ ಅರ್ಥಗಳನ್ನು ವಿವರಿಸುವುದು ಉಚಿತವಾಗಿರುವುದರಿಂದಲೂ ಅದನ್ನು ಇಲ್ಲಿ ಬರೆಯಬೇಕಾದ ಅವಶ್ಯಕತೆ ಇರುವುದಿಲ್ಲ.

ವಾಜಿನೀವತೀ—ಈ ಶಬ್ದದ ಅರ್ಥವೂ ಹಿಂದೆ ಹೇಳಿದ **ವಾಜೇಭಿಃ** ಎಂಬ ಶಬ್ದದ ಅರ್ಥವನ್ನೇ ಅನುಸರಿಸಿರುವುದು ಇದಕ್ಕೆ ರಾಮನಾಥ್ ಎಂಬುವರು Bestower of food ಎಂದೂ Benfey ಎಂಬುವರು filled up or rich with offerings ಎಂದೂ Geldner ಎಂಬುವರು rich with reward ಎಂದೂ Rosen ಎಂಬುವರು provided with food ಎಂದೂ Ludwig ಎಂಬುವರು rich with steed ಎಂದೂ ವೇದಾರ್ಥಯತ್ನಕಾರರು Mounted on a charger ಎಂದೂ ಅರ್ಥಮಾಡಿರುವರು. ಕೆಲವರು **ವಾಜಿನೀ** ಎಂದರೆ ಆಹಾರವನ್ನು ಉತ್ಪನ್ನಮಾಡುವ ನದೀತೀರದ ಫಲವತ್ತಾದ ಭೂಮಿಯೆಂದೂ **ವಾಜಿನೀವತೀ** ಎಂದರೆ ಅಂತಹ ಫಲವತ್ತಾದ ಭೂಮಿಗೆ ನೀರನ್ನು ಒದಗಿಸುವುದರ ಮೂಲಕ ಜನರಿಗೆ ಅನ್ನಾದ್ಯಾಹಾರಗಳನ್ನು ನೀಡುವ ನದಿಯೆಂದೂ ಹೇಳುವರು.

ಯಜ್ಞಂ—ಯಜ್ಞಶಬ್ದವು ನಿರುಕ್ತದಲ್ಲಿ ಹದಿನೈದು ಶಬ್ದಗಳ ಮಧ್ಯದಲ್ಲಿ ಪಠಿತವಾಗಿರುವುದು (ನಿ. ೩-೧೯) ಈ ಶಬ್ದಕ್ಕೆ ಎರಡುವಿಧವಾಗಿ ಅರ್ಥಮಾಡಬಹುದು. (1) ದೇವತೆಯನ್ನು ಸ್ತೋತ್ರಾದಿಗಳಿಂದ ಆರಾಧಿಸುವುದು (2) ಅಂಗೋಪಾಂಗಕರ್ಮಗಳಿಂದಲೂ, ಮಂತ್ರಪಠನದಿಂದಲೂ, ಪಶುವನ್ನು ಅರ್ಪಿಸುವುದರಿಂದಲೂ ಅನೇಕ ಹೋಮಗಳಿಂದಲೂ ಮಾಡಬೇಕಾದ ಕರ್ಮವಿಶೇಷವು. ಈ ಎರಡನೇ ವಿಧವಾದ ಕರ್ಮವೇ ಸಾಧಾರಣವಾಗಿ ವೇದಗಳಲ್ಲಿ ಯಜ್ಞಶಬ್ದದಿಂದ ವಿವರಿಸಲ್ಪಟ್ಟಿರುವುದು.

ವಷ್ಟು—ಈ ಶಬ್ದವು **ವಶ ಕಾಂತೌ** ಎಂಬ ಧಾತುವಿನ ಲೋಣ್ಮಧ್ಯಮಪುರುಷೈಕವಚನವು. ಭಾಷ್ಯಕಾರರು ಈ ಧಾತುವಿಗೆ ಆಪೇಕ್ಷಿಸು ಎಂದರ್ಥ ಹೇಳಿ **ನಿರ್ವಹಷ್ವಿತ್ಯರ್ಥಃ** ಯಜ್ಞಕರ್ಮವನ್ನು ಸಾಂಗಗೊಳಿಸಲಿ ಎಂದು ಮುಖ್ಯಾರ್ಥವನ್ನು ಹೇಳಿರುವರು. ಇದನ್ನು ಸಮರ್ಥನೆಮಾಡುವುದಕ್ಕಾಗಿ ಐತರೇಯ ಆರಣ್ಯಕದ **ಯೆಜ್ಞಂ ವಷ್ಟ್ವೇತಿ ಯೆದಾಹ ಯೆಜ್ಞಂ ವಹಷ್ಟ್ವಿತ್ಯೇವ ತದಾಹ** (ಐ. ಆ. ೧-೧-೪) ಎಂಬ ವಾಕ್ಯವನ್ನು ಉದಹರಿಸಿರುವರು. Geldner ಮತ್ತು Grassmann ಎಂಬ ಪಂಡಿತರೀರ್ವರೂ desire, wish for, make efforts, carry on to completion ಎಂದು ಅರ್ಥಮಾಡಿರುವರು. ಕಡೆಯ ಅರ್ಥವೇ ಇಲ್ಲಿ ಸರಿಯಾಗಿರುವುದು.

ಧಿಯಾವಸುಃ— ಈ ಶಬ್ದದ ಅರ್ಥವಿವರಣೆಯನ್ನು ಭಾಷ್ಯಕಾರರು ಈ ರೀತಿ ಮಾಡಿರುವರು— **ಧಿಯಾವಸುಃ ಕರ್ಮಪ್ರಾಪ್ಯಧನನಿಮಿತ್ತಭೂತಾ। ವಾಗ್ದೇವತಾಯಾಸ್ತಥಾವಿಧಂ ಧನನಿಮಿತ್ತತ್ವಮಾರಣ್ಯಕೇ-ಕಾಂಡೇ ಶ್ರುತ್ಯಾ ವ್ಯಾಖ್ಯಾತಂ। ಯೆಜ್ಞಂ ವಷ್ಟು ಧಿಯಾವಸುರಿತಿ ವಾಗ್ವೈ ಧಿಯಾವಸುಃ**–(ಐ.ಆ.೧-೧-೪) ಎಂದರೆ ಧಿಯಾವಸು ಶಬ್ದಕ್ಕೆ ಯಜ್ಞಾದಿಕರ್ಮಗಳಿಂದ ಲಭಿಸುವ ಧನಾದ್ಯೈಶ್ವರ್ಯಪ್ರಾಪ್ತಿಗೆ ಕಾರಣಭೂತಳಾದವಳು ಎಂದರ್ಥವು. ವಾಗ್ದೇವತೆಯು ಧನಪ್ರಾಪ್ತಿಗೆ ಕಾರಣಭೂತಳೆಂದು ಹೇಳುವ ಐತರೇಯಾರಣ್ಯಕದ **ಯೆಜ್ಞಂ ವಷ್ಟು** ಇತ್ಯಾದಿವಾಕ್ಯವನ್ನೂ ಉದಾಹರಿಸಿದಾರೆ. ಮತ್ತು ಈ ಶಬ್ದದ ರೂಪನಿಷ್ಪತ್ತಿವಿಚಾರದಲ್ಲಿ— **ಧಿಯಾ ಕರ್ಮಣಾ ವಸು ಯಸ್ಯಾಃ ಸಕಾಶಾದ್ಭವತಿ ಸಾ ಧಿಯಾವಸುಃ** ಎಂದರೆ ಕರ್ಮಗಳಿಗೆ ಫಲರೂಪವಾಗಿ ಹೊಂದಬೇಕಾದ ಐಶ್ವರ್ಯವು ಯಾವ ದೇವತೆಯಿಂದ ಲಭಿಸುವುದೋ ಆ ದೇವತೆಗೆ ಧಿಯಾವಸುಃ ಎಂದು ಹೆಸರು ಎಂದು ಹೇಳಿದಾರೆ. ಪಾಶ್ಚಾತ್ಯಪಂಡಿತರು Supporter of all by wisdom, recompenser of worship or religious ceremonies, bestower of riches, source of wealth, rich in sense or intellect, one rewarding for devotion excellent-minded ಮೊದಲಾದ ಶಬ್ದಗಳಿಂದ ಅರ್ಥವಿವರಣೆಮಾಡಿದಾರೆ. ಈ ಶಬ್ದವು ಋಗ್ವೇದದಲ್ಲಿ ಋ. ಸಂ. ೧-೩-೧೦, ೧-೫೮-೯ ; ೧೦-೬೦-೫ ; ೧-೬೧-೧೬ ; ೧-೬೨-೧೩ , ೧-೬೪-೧೫ ; ೩-೩-೨ ಎಂಬ ಎಂಟು ಋಕ್ಕುಗಳಲ್ಲಿ ಮಾತ್ರ ಪ್ರಯೋಗಿಸಲ್ಪಟ್ಟಿದೆ.

।। ವ್ಯಾಕರಣಪ್ರಕ್ರಿಯಾ ।।

ಪಾವಂ ಕಾಯತೀತಿ ಪಾವಕಾ, ಕೈ ಗೈ ಶಬ್ದೇ ಎಂದು ಪಠಿತವಾದ ಕೈಧಾತುವಿಗೆ, **ಆದೇಚೋ ಉಪದೇಶೇ ೨ಶಿತಿ** (ಪಾ. ಸೂ. ೬-೧-೪೫) ಉಪದೇಶದಲ್ಲಿ ಏ ಓ ಐ ಔ ಗಳನ್ನು ಕೊನೆಯಲ್ಲಿ ಹೊಂದಿರುವ ಧಾತುವಿನ ಕಡೆಯ ವರ್ಣಕ್ಕೆ ಆ ಆದೇಶಬರುವುದು. ಆದರೆ ಶಿತ್ತಾದ ಪ್ರತ್ಯಯಪರದಲ್ಲಿದ್ದರೆ ಬರುವುದಿಲ್ಲ ಎಂಬುದರಿಂದ ಅಕಾರ ಬಂದರೆ ಪಾವಕಾ ಎಂದಿರುವಾಗ **ಅತೋ೨ನುಪಸರ್ಗೇ ಕಃ** (ಪಾ.ಸೂ- ೩-೩-೩) ಉಪಸರ್ಗವಲ್ಲದ ಸುಬಂತವು ಉಪಪದವಾಗಿದ್ದರೆ ಅಕಾರಾಂತಧಾತುವಿನ ಮುಂದೆ ಕಪ್ರತ್ಯಯ ಬರುವುದು ಎಂಬುದರಿಂದ ಕ ಪ್ರತ್ಯಯ ಬರುವುದು, **ಅತೋಲೋಪಃ ಇಟಿ ಚ** (ಪಾ. ಸೂ. ೬-೪-೬೯) ಎಂಬುದರಿಂದ ಅಕಾರಕ್ಕೆ ಲೋಪಬಂದು, **ಅಜಾದ್ಯತಷ್ಟಾಪ್** (ಪಾ. ಸೂ. ೪-೧-೪) ಎಂಬುದರಿಂದ ಟಾಪ್ಪ್ರತ್ಯಯ ಬಂದರೆ ಪಾವಕಾ ಎಂದಾಗುವುದು, ಪಾವಕಾ ಎಂಬುದು ಕೃದಂತವಾದ್ದರಿಂದ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರ ಪದಪ್ರಕೃತಿಸ್ವರ ಬಂದು ಅಂತೋದಾತ್ತವಾಗುವುದು. ಅಥವಾ ಪುನಾತಿ ಪವಿತ್ರಮಾಡುತ್ತದೆ ಎಂಬ ಅರ್ಥವನ್ನು ವಿವಕ್ಷಿಸಿದಾಗ ಪೂಙ್ ಧಾತುವಿನಮೇಲೆ **ಣ್ವುಲ್ತೃಚೌ** ಎಂಬ ಸೂತ್ರದಿಂದ ಣ್ವುಲ್ಪ್ರತ್ಯಯವನ್ನಿಟ್ಟರೆ **ಯುವೋರನಾಕೌ** (ಪಾ. ಸೂ. ೭-೧-೧) ಅನುನಾಸಿಕಗಳಾದ ಯು ವು ಇವುಗಳಿಗೆ ಕ್ರಮವಾಗಿ ಅನ ಅಕ ಆದೇಶಗಳು ಬರುವುವು ಎಂಬುದರಿಂದ ಅಕಾದೇಶ ಬಂದರೆ ಪೂ+ಅಕ ಗುಣ ಮತ್ತು ಅವಾದೇಶಗಳನ್ನು ಮಾಡಿದರೆ ಪಾವಕ , ಸ್ತ್ರೀತ್ವನಿಮಿತ್ತವಾದ ಟಾಪ್ ಪ್ರತ್ಯಯಬಂದರೆ ಪಾವಕಾ ಎಂದಾಗುವುದು, ಆದರೆ ಹೀಗೆ ವ್ಯುತ್ಪತ್ತಿಯನ್ನು ಮಾಡಿದರೆ ಇಲ್ಲಿ **ಪ್ರತ್ಯಸ್ಥಾತ್ಕಾತ್ಪೂರ್ವಸ್ಯಾತ** ಇದಾಪ್ಯೇಸುಪಃ (ಪಾ. ಸೂ. ೭-೩-೪೪) ಸುಪ್ಪಿಗಿಂತಲೂ ಪರವಾಗಿಲ್ಲದ ಟಾಪ್ ಪ್ರತ್ಯಯದ ಹಿಂದಿರುವ ಪ್ರತ್ಯಯಸ್ಥಕಾರಕ್ಕಿಂತಲೂ ಪೂರ್ವದಲ್ಲಿರುವ ಹ್ರಸ್ವಾಕಾರಕ್ಕೆ ಇತ್ವಬರುವುದು ಎಂಬುದರಿಂದ, ಇತ್ವಬರಬೇಕಾಗಿಬಂದರೆ, ಅದು **ಪಾವಕಾದೀನಾಂ ಛಂದಸಿ ಪ್ರತ್ಯೇಯಸ್ಥಾತ್ಕಾದಿತ್ವಂ ನೇತಿ ವಾಚ್ಯಂ ವಾ.** (ಪಾ. ಸೂ. ೭-೩-೪೫-೩) ಎಂಬುದರಿಂದ ಛಾಂದಸವಾಗಿ ಇಲ್ಲಿ ಬರುವುದಿಲ್ಲವೆಂದು ಸಮಾಧಾನ ಹೇಳಬೇಕು. ಅಂತೋದಾತ್ತಸ್ವರವನ್ನೂ ಛಾಂದಸವಾಗಿಯೇ ಒಪ್ಪಬೇಕಾಗುವುದು. **ಸರಸ್ವತೀ**-ಸೃಧಾತುವಿನಮೇಲೆ ಅಸುಗ್ ಪ್ರತ್ಯಯವನ್ನಿಟ್ಟರೆ ಸರಃ ಎಂದಾಗುವುದು, ಪ್ರತ್ಯಯವು ನಿತ್ತಾದ್ದರಿಂದ ನಿತ್ಸ್ವರ ಆದ್ಯುದಾತ್ತ ಬರುವುದು. ಇದರ ಮುಂದೆ ಬಂವಿರುವ ಮತುಪ್ ಙೀಪ್ ಪ್ರತ್ಯಯಗಳು ಪಿತ್ತಾದ್ದರಿಂದ ಅನುದಾತ್ತವಾಗುವುವು.

॥ ಸಂಹಿತಾಪಾಠಃ ॥

ಚೋದಯಿತ್ರೀ ಸೂನೃತಾನಾಂ ಚೇತಂತೀ ಸುಮತೀನಾಂ ।
ಯಜ್ಞಂ ದಧೇ ಸರಸ್ವತೀ ॥ ೧೧ ॥

॥ ಪದಪಾಠಃ ॥

ಚೋದಯಿತ್ರೀ । ಸೂನೃತಾನಾಂ । ಚೇತಂತೀ । ಸುಮತೀನಾಂ ॥
ಯಜ್ಞಂ । ದಧೇ । ಸರಸ್ವತೀ ॥ ೧೧ ॥

॥ ಸಾಯಣಭಾಷ್ಯಂ ॥

ಯಾ ಸರಸ್ವತೀ ಸೇಯಮಿಮಂ ಯಜ್ಞಂ ದಧೇ । ಧಾರಿತವತೀ । ಕೀದೃಶೀ । ಸೂನೃತಾನಾಂ ಪ್ರಿಯಾಣಾಂ ಸತ್ಯವಾಕ್ಯಾನಾಂ ಚೋದಯಿತ್ರೀ ಪ್ರೇರಯಿತ್ರೀ । ಸುಮತೀನಾಂ ಶೋಭನಬುದ್ಧಿಯುಕ್ತಾನಾಮನುಷ್ಠಾತೄಣಾಂ ಚೇತಂತೀ । ತದೀಯಮನುಷ್ಠೇಯಂ ಜ್ಞಾಪಯಂತೀ ॥ ಚೋದಯಿತ್ರೀ । ಚುದ ಪ್ರೇರಣೇ । ಣ್ಯಂತಾತ್ತೃಚ್ । ಚಿತ್ತ್ವಾದಂತೋದಾತ್ತಃ । ಋನ್ನೇಭ್ಯೋ ಙೀಪ್ । ಪಾ ೪-೧-೫ । ಇತಿ ಙೀಪ್ । ತಸ್ಯೋದಾತ್ತಯಣಿನೋ ಹಲ್ಪೂರ್ವಾತ್ । ಪಾ. ೬-೧-೧೭೪ । ಇತ್ಯುದಾತ್ತತ್ವಂ । ಸೂನೃತಾನಾಂ । ಊನ ಪರಿಹಾಣ ಇತ್ಯತಃ ಕ್ವಿಪ್ಚೇತಿ ಕ್ವಿಪಿ ಸುತರಾಮೂನಯತ್ಯಪ್ರಿಯಮಿತಿ ಸೂನಿತಿ ಪ್ರಿಯಮುಚ್ಯತೇ । ತಚ್ಚ ತದೃತಂ ಸತ್ಯಂ ಚೇತಿ ಸೂನೃತಂ । ಪರಾದಿಶ್ಚಂದಸಿ ಬಹುಲಮಿತ್ಯುತ್ತರಪದಾದ್ಯುದಾತ್ತತ್ವಂ । ಚೇತಂತೀ । ಚಿತೀ ಸಂಜ್ಞಾನೇ । ಅತ್ರ ಶಪೋ ಬ್ಲೀಪಶ್ಚ ಪಿತ್ತ್ವಾದನುದಾತ್ತತ್ವಂ ಶತುಶ್ಚಾದುಪದೇಶಾಲ್ಲಸಾರ್ವಧಾತುಕಸ್ವರೇಣಾನುದಾತ್ತತ್ವಂ । ಧಾತ್ವಂತಸ್ವರ ಏವ ಶಿಷ್ಯತೇ । ಸುಮತಿಶಬ್ದಸ್ಯ ಮತುಪಿ ಹ್ರಸ್ವತ್ವಾನ್ನಾಮನ್ಯತರಸ್ಯಾಂ । ಪಾ. ೬-೧-೧೭೭ । ಇತಿ ವಿಭಕ್ತೇರುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಸರಸ್ವತೀ—ಸರಸ್ವತೀದೇವಿಯು । **ಸೂನೃತಾನಾಂ**—ಪ್ರಿಯವೂ ಸತ್ಯವೂ ಆದ ವಾಕ್ಯಗಳನ್ನು ಅಥವಾ ವಾಕ್ಯಗಳನ್ನಾಡುವ ಮನುಷ್ಯರನ್ನು । **ಚೋದಯಿತ್ರೀ**—ಪ್ರೇರಿಸುವವಳು । **ಸುಮತೀನಾಂ**-(ಯಜ್ಞಯಾಗಾದಿಗಳನ್ನು ಮಾಡುವುದರಲ್ಲಿ ಆಸಕ್ತರಾದ ಎಂದರೆ) ಒಳ್ಳೇ ಬುದ್ಧಿಯುಳ್ಳ ಮನುಷ್ಯರ(ನ್ನು) । **ಚೇತಂತೀ**-(ಒಳ್ಳೆಯ ಕರ್ಮಮಾಡುವುದರಲ್ಲಿ) ಜ್ಞಾಪಿಸುವವಳು , (ಇಂತಹ ಸರಸ್ವತೀದೇವಿಯು) **ಯಜ್ಞಂ**—(ನಾವು ಮಾಡುತ್ತಿರುವ) ಯಜ್ಞವನ್ನು । **ದಧೇ**—ಧರಿಸಿರುವಳು (ನೆರವೇರಿಸುವಳು).

॥ ಭಾವಾರ್ಥ ॥

ನಾವು ಸ್ತೋತ್ರಮಾಡುವ ಸರಸ್ವತೀದೇವಿಯು ಮನುಷ್ಯರನ್ನು ಪ್ರಿಯವಾದ ಮತ್ತು ಸತ್ಯವಾದ ಮಾತುಗಳನ್ನಾಡುವಂತೆ ಪ್ರೇರಿಸುವವಳು ಅಥವಾ ಸತ್ಯಭಾಷಿಗಳಾದ ಜನರಿಗೆ ಒಳ್ಳೆಯ ಕೆಲಸಗಳಲ್ಲಿ ಪ್ರವೃತ್ತಿಯುಂಟಾಗುವಂತೆ ಪ್ರೇರಿಸುವವಳು ಮತ್ತು ಸದ್ಬುದ್ಧಿಯುಳ್ಳ ಜನರನ್ನು ಸತ್ಕಾರ್ಯಮಾಡುವುದರಲ್ಲಿ ಜ್ಞಾಪಕಮಾಡಿ ಸಹಾಯ ಮಾಡುವವಳು. ಇಂತಹ ಸರಸ್ವತಿಯು ನಾವು ಮಾಡುವ ಯಜ್ಞವನ್ನು ನಿರ್ವಿಘ್ನವಾಗಿ ನೆರವೇರುವಂತೆ ಮಾಡಲಿ.

English Translation.

Saraswati, the inspirer of those who speak only the truth and instructress of the right-minded has supported the sacrifice.

॥ ವಿಶೇಷವಿಷಯಗಳು ॥

ಈ ಮಂತ್ರವು **ಸೌತ್ರಾಮಣಿ** ಎಂಬ ಯಾಗದಲ್ಲಿಯೂ, **ನೈಶ್ವದೇವ, ಉಖಾಸಂಭರಣ** (which takes place at the new and full moon days) **ಏಕಾಷ್ಟಕ** (the eighth day after full moon) ಇವುಗಳಲ್ಲಿ ಉಪಯೋಗಿಸಲ್ಪಡುವವು. ಮುಖ್ಯವಾಗಿ ನೈಶ್ವದೇವವೆಂಬ ಕರ್ಮದಲ್ಲಿ ಸರಸ್ವತಿಗೆ **ಬಲಿಪ್ರದಾನ**ದಲ್ಲಿ ಈ ಮಂತ್ರದ ಪ್ರಯೋಗವಿರುವುದು.

ಚೋದಯಿತ್ರೀ—ಚುದ ಪ್ರೇರಣೆ ಎಂಬ ಧಾತುವಿನಿಂದ ಉಂಟಾದ ರೂಪವು, ಪ್ರೇರಿಸುವವಳು ಎಂದರ್ಥವು. ಪಶ್ಚಾತ್ಯರು—Inspire, incite, rouse, stimulate, furnish, quickly, hasten, hurry, stir, agitate, encourage ಮೊದಲಾದ ಶಬ್ದಗಳಿಂದ ಅರ್ಥವಿವರಣೆಮಾಡಿರುವರು.

ಸೂನೃತಾನಾಂ--ಸೂನೃತಶಬ್ದವು ಉಷಸ್ಸನ್ನು ಸೂಚಿಸುವ ೧೬ ಪದಗಳ ಮಧ್ಯದಲ್ಲಿಯೂ (ನಿ.೨-೧೯) ಅನ್ನಾರ್ಥಸೂಚಕವಾದ ೨೮ ಪದಗಳ ಮಧ್ಯದಲ್ಲಿಯೂ (ನಿ. ೩-೯) ಪಠಿತವಾಗಿದೆ. ಈ ಪದವು ಋತ ಶಬ್ದದಿಂದ ಉಂಟಾಗಿರುವುದು. ಋತವೆಂದರೆ ನಿಜ, ಸತ್ಯ ಎಂದರ್ಥವು. ಆದುದರಿಂದ ಸೂನೃತಶಬ್ದವು ಋಗ್ವೇದದಲ್ಲಿ ಪಾಶ್ಚಾತ್ಯರಿಂದ One delighting in truth, good word, agreeable speach, truth, praise, song, receiving good qualities, joy-giving, glorious deed ಮೊದಲಾದ ಶಬ್ದಗಳಿಂದ ವಿವರಿಸಲ್ಪಟ್ಟಿದೆ.

ಚೇತಂತೀ--ಈ ಶಬ್ದದ ಅರ್ಥವೂ ಸ್ವಲ್ಪ ಹೆಚ್ಚುಕಡಿಮೆ ಚೋದಯಿತ್ರೀ ಶಬ್ದದ ಅರ್ಥದಂತೆಯೇ ಇರುವುದು. ಈ ಶಬ್ದಕ್ಕೆ Perceive, conceive, understand, inspire ಮೊದಲಾದ ಅರ್ಥವನ್ನು ಹೇಳಬಹುದು.

ಸುಮತೀನಾಂ--ಈ ಶಬ್ದವು ಮನ್ ಧಾತುವಿನಿಂದ ಉಂಟಾಗಿರುವುದು. ಇದಕ್ಕೆ Think, meditate, contemplate, immagine, observe, believe, regard ಮೊದಲಾದ ಅರ್ಥಗಳನ್ನು ಹೇಳಬಹುದು. ಈ ಋಕ್ಕಿನಲ್ಲಿ ಈ ಶಬ್ದಕ್ಕೆ ಒಳ್ಳೆ ಬುದ್ಧಿಯುಳ್ಳವರು, ಸತ್ಕರ್ಮಗಳಲ್ಲಿ ಆಸಕ್ತರು ಅಥವಾ ಅವುಗಳನ್ನು ಮಾಡುವವರು, right-thinking, right-minded ಮೊದಲಾದ ಅರ್ಥವನ್ನು ಹೇಳಬಹುದು.

ಈ ಋಕ್ಕಿನ ಮುಖ್ಯಾಭಿಪ್ರಾಯವೇನೆಂದರೆ--ಸರಸ್ವತೀದೇವಿಯು ಜನರನ್ನು ಸತ್ಯವಾಕ್ಯಗಳನ್ನಾಡುವಂತೆಯೂ ಒಳ್ಳೆಯ ಕೆಲಸಗಳನ್ನು ಮಾಡುವಂತೆಯೂ ಪ್ರೇರಿಸುವವಳು ಮತ್ತು ಮನುಷ್ಯರ ಬುದ್ಧಿಯನ್ನು ಸಹ ಒಳ್ಳೆಯ ವ್ಯಾಪಾರಗಳಲ್ಲಿ ಆಸಕ್ತವಾಗುವಂತೆ ಮಾಡುವವಳು ಆದುದರಿಂದ ಈಗ ನಾವು ಮಾಡುತ್ತಿರುವ ಯಜ್ಞಾದಲ್ಲಿ ನಮಗೆ ಸದ್ಬುದ್ಧಿಯನ್ನು ಕೊಟ್ಟು ಆ ಯಜ್ಞವು ಸಾಂಗವಾಗಿ ನೆರವೇರುವಂತೆ ಮಾಡುವುದಲ್ಲದೆ ಅದರ ಫಲವನ್ನು ಸಹ ನಮಗೆ ದೊರಕುವಂತೆ ಅನುಗ್ರಹಮಾಡುವಳು ಎಂದರ್ಥವು

।। ವ್ಯಾಕರಣಪ್ರಕ್ರಿಯಾ ।।

ಚೋದಯಿತ್ರೀ– ಚುದಪ್ರೇರಣೇ ಎಂಬ ಧಾತುವಿಗೆ ಣಿಚ್ ಪ್ರತ್ಯಯವನ್ನು ಹಚ್ಚಿದರೆ, ಲಘೂಪಧ ಗುಣಬಂದು ಚೋದಿ-ಎಂದಾಗುತ್ತೆ. ಇದರಮೇಲೆ ಣ್ವುಲ್‌ತೃಚೌ (ಪಾ.ಸೂ. ೧-೧-೩೩) ಎಂಬುದರಿಂದ ತೃಚ್ ಪ್ರತ್ಯಯವನ್ನು ಹಚ್ಚಿದರೆ, ಅದಕ್ಕೆ ಆರ್ಧಧಾತುಕಸ್ಯೇಡ್ವಲಾದೇಃ (ಪಾ. ಸೂ- ೭-೨-೩೫) ಎಂಬುದರಿಂದ ಇಟ್ ಆಗಮ, ಚೋದಿ ಎಂಬಲ್ಲಿರುವ ಇಗೆ ಸಾರ್ವಧಾತುಕಾರ್ಧಧಾತುಕಯೋಃ (ಪಾ.ಸೂ. ೭-೩-೮೪) ಗುಣವು ಬಂದು ಏಚೋಯವಾಯಾವಃ (ಪಾ. ಸೂ. ೬-೧-೭೮) ಎಂಬುದರಿಂದ ಏಗೆ ಆಯ್ ಬಂದರೆ ಚೋದಯಿತೃ ಎಂದಿರುವಾಗ 'ಋನ್ನೇಭ್ಯೋಙೀಪ್' (ಪಾ. ಸೂ. ೪-೧-೫) ಸ್ತ್ರೀಲಿಂಗದಲ್ಲಿ ಋಕಾರನಕಾರಗಳನ್ನು ಕಡೆಯಲ್ಲಿ ಹೊಂದಿರುವ ಶಬ್ದಗಳಮುಂದೆ ಙೀಪ್ ಪ್ರತ್ಯಯಬರುವುದು ಎಂಬುದರಿಂದ ಙೀಪ್ ಬಂದರೆ ಯಣಾದೇಶಬಂದು

ಚೋದಯಿತ್ರೀ ಎಂದಾಗುವುದು. ತೃಚ್ ಪ್ರತ್ಯಯವು ಚಿತ್ತಾದ್ದರಿಂದ ಚಿತೇಃ (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತ. ಉದಾತ್ತಯಣೋಹಲ್ಪೂರ್ವಾತ್ (ಪಾ. ಸೂ. ೬-೧-೧೭೪) ಉದಾತ್ತವರ್ಣದಸ್ಥಾನದಲ್ಲಿ ಬಂದ ಯ, ವ, ರ, ಲ, ಗಳು ವ್ಯಂಜನದ ಮುಂದಿರುವಾಗ ಯವರಲಗಳ ಮುಂದಿರುವ ನವೀಸಂಜ್ಞಕ ವರ್ಣವೂ, ಶಸಾದಿಯಾದ ವಿಭಕ್ತಿಯೂ ಸಹ ಉದಾತ್ತವಾಗುವುದು. ಎಂಬುದರಿಂದ ಜೀಪ್ಪು ಉದಾತ್ತ. ಸೂನೃತಾನಾಂ-ಊನಪರಿಹಾಣೇಧಾವಿಗೆ ಕ್ವಿಪ್ಚೆ (ಪಾ. ಸೂ. ೩-೨-೭೬) ಎಂಬುದರಿಂದ ಕ್ವಿಪ್ಪನ್ನು ಮಾಡಿದರೆ ಊನ್ ಎಂದಾಗುತ್ತೆ ಸುತರಾಂ ಊನಯತಿ ಅಪ್ರಿಯಂ (ಅಪ್ರಿಯವನ್ನು ನಿಶ್ಶೇಷವಾಗಿ ಪರಿಹರಿಸುವನು) ಎಂದರ್ಥವಾದಾಗ ಸೂನ್ ಪದವು ಪ್ರಿಯ ಎಂಬ ಅರ್ಥವನ್ನು ಹೇಳುವುದು. ಋತಂ ಎಂದರೆ ಸತ್ಯವೆಂದು ಅರ್ಥ. ಸೂನ್ ಚ ತತ್ ಋತಂ ಚ ಎಂದು ಕರ್ಮಧಾರಯ ಸಮಾಸ ಮಾಡಿದರೆ ಸೂನೃತಂ ಎಂದಾಗುವುದು ಇಲ್ಲಿ ಪರಾದಿಶ್ಚಂದಸಿ ಬಹುಲಂ (ಪಾ. ಸೂ. ೬-೨-೧೯೯) ಛಂದಸಿನಲ್ಲಿ ಪರಪದದ ಆದಿಯು ಬಹುಲವಾಗಿ ಉದಾತ್ತವಾಗುವುದು ಎಂಬುದರಿಂದ ಉತ್ತರಪದದ ಆದಿಯು ಉದಾತ್ತ, ಸೂನ್ ಎಂಬಲ್ಲಿ ಆಯಸ್ಮಯಾದೀನಿ ಛಂದಸಿ (ಪಾ.ಸೂ. ೧-೪-೭೦) ಆಯಸ್ಮಯಾದಿಗಣಪಠಿತಶಬ್ದಗಳು ಛಂದಸ್ಸಿನಲ್ಲಿ ಯಥಾಯೋಗ್ಯವಾದ ಭಸಂಜ್ಞಾ ಪದ ಸಂಜ್ಞೆಗಳನ್ನು ಹೊಂದುವುವು ಎಂಬುದರಿಂದ ಭಸಂಜ್ಞೆ ಬರುವುದು ಆದಕಾರಣ ಪದಸಂಜ್ಞೆ ಇಲ್ಲದೇ ಇರುವುದರಿಂದ ನ ಲೋಪಃ ಪ್ರಾತಿಪದಿಕಾಂತಸ್ಯ (ಪಾ ಸೂ. ೮-೨-೭) ಪ್ರಾತಿಪದಿಕಸಂಜ್ಞಕಪದದ ಕೊನೆಯಲ್ಲಿರುವ ನಕಾರಕ್ಕೆ ಲೋಪಬರುವುದು ಎಂಬುದರಿಂದ ನಕಾರಕ್ಕೆ ಲೋಪಬರುವುದಿಲ್ಲ. ಚೇತಸ್ತ್ರೀ-ಚಿತೀ ಸಂಜ್ಞಾನೇ ಧಾತುವಿಗೆ ಲಟ್-ಆದರಸ್ಥಾನದಲ್ಲಿ ಲಟೆಶ್ಶತೃಶಾನಚೌ (ಪಾ. ಸೂ. ೩-೨-೧೨೪) ಎಂಬುದರಿಂದ ಶತೃ ಪ್ರತ್ಯಯ ಬಂದರೆ ಚಿತ್+ಅತ್ ಎಂದಿರುವಾಗ ಶಪ್ (ಅಕಾರ) ವಿಕರಣಬಂದು ಚಿತ್ ಎಂಬಲ್ಲಿ ಲಘೂಪಧೆಗುಣ, ಚೇತ್+ಅ+ಅತ್- ಅತೋಗುಣೇ (ಪಾ. ಸೂ. ೬-೧-೯೬) ಎರಡು ಅಕಾರಗಳಿಗೂ ಪರರೂಪಬಂದರೆ ಚೇತತ್-ಶತೃವು ಉಗಿತ್ತಾದ್ದರಿಂದ ಉಗಿತಶ್ಚ (ಪಾ. ಸೂ. ೪-೧-೬) ಉ ಋ ಷ ಇತ್ಸಂಜ್ಞಕವಾದ ಪ್ರಾತಿಪದಿಕವಮುಂದೆ ಸ್ತ್ರೀಲಿಂಗದಲ್ಲಿ ಜೀಪ್ ಬರುವುದು ಎಂಬುದರಿಂದ ಜೀಪ್‌ಬರುತ್ತೆ ಚೇತತ್+ಈ ಎಂದಿರುವಾಗ ಆಚ್ಛೀನದ್ಯೋರ್ನುಂ (ಪಾ. ಸೂ. ೭-೧- ೮) ಅವರ್ಣವನ್ನು ಕೊನೆಯಲ್ಲಿ ಹೊಂದಿರುವ ಅಂಗದಮುಂದೆ ಇರುವ ಯಾವಶತೃ ಪ್ರತ್ಯಯಾವಯವವಿದೆಯೋ ಅದನ್ನು ಕೊನೆಯಲ್ಲಿ ಹೊಂದಿರುವ ಅಂಗಕ್ಕೆ ಶೀನದೀಸಂಜ್ಞಕ ವರ್ಣಗಳು ಪರದಲ್ಲಿರುವಾಗ ಜೀಪ್ ವಿಕಲ್ಪವಾಗಿಬರುವುದು ಎಂಬುದರಿಂದ ಚೇತತ್ ಎಂಬಲ್ಲಿ ನುಮ್ ಆಗಮಪ್ರಥನೈಕವಚನ ಸುಪ್ರತ್ಯಯಕ್ಕೆ 'ಹಲ್ಙ್ಯಾಭ್ಯೋದೀರ್ಘಾತ್' (ಪಾ.ಸೂ. ೬-೧-೬೮) ಎಂಬುದರಿಂದ ಲೋಪಬಂದರೆ ಚೇತನ್ತ್ರೀ ಎಂದಾಗುತ್ತೆ, ಶಪ್ ಜೀಪ್ಪು ಎರಡೂ ಪಿತ್ತಾದ್ದರಿಂದ ಅನುದಾತ್ತ, ಶತೃಪ್ರತ್ಯಯವು ಅದುಪದೇಶವಾದ್ದರಿಂದ, ತಾಸ್ಯನುದಾತ್ತೇತ್-, (ಪಾ. ಸೂ. ೬-೧-೧೮೬) ಎಂಬುದರಿಂದ ಲಸ್ಥಾನಿಕಸಾರ್ವಧಾತುಕಸ್ವರ ಬಂದು ಅನುದಾತ್ತ, ಚೇತ್ ಎಂಬಲ್ಲಿ ಧಾತೋಃ, (ಪಾ. ಸೂ. ೬-೧-೧೬೨) ಧಾತುವಿನ ಕಡೆಯವರ್ಣವು ಉದಾತ್ತವಾಗುವುದು ಎಂಬುದರಿಂದ ಏಕಾರವು ಉದಾತ್ತವಾಗುವುದು. ಸುಮತೀನಾಂ= ಶೋಭನಾ ಮತಿಃ ಯೇಷಾಂ ತೇ (ಒಳ್ಳೆಯ ಬುದ್ಧಿಯುಳ್ಳವರು) ಎಂದು ಬಹುವ್ರೀಹಿ ಸಮಾಸವಮಾಡಿದಾಗ ನಞ್‌ಸುಭ್ಯಾಂ (ಪಾ. ಸೂ. ೬-೨-೧೭೨) ಎಂಬುದರಿಂದ ಸುಮತಿಶಬ್ದವು ಅಂತೋದಾತ್ತ ಇದರಮುಂದೆ ಷಷ್ಠೀ ಬಹುವಚನಪ್ರತ್ಯಯವನ್ನಿಟ್ಟಾಗ ನುಡಾಗಮದೀರ್ಘಗಳು ಬಂದು ಸುಮತೀನಾಂ ಎಂದಾಗುತ್ತೆ. ಇಲ್ಲಿ ನಾಮನ್ಯತರಸ್ಯಾಂ (ಪಾ. ಸೂ. ೬-೧-೧೭೭) ಮತುವ್ ಪ್ರತ್ಯಯವನ್ನು ಹಚ್ಚಿದಾಗ ಹ್ರಸ್ವವನ್ನು ಕಡೆಯಲ್ಲಿ ಹೊಂದಿರುವ ಶಬ್ದವು ಅಂತೋದಾತ್ತವಾಗಿದ್ದರೆ ಅದರಮುಂದಿರುವ ನಾಮ್ ಎಂಬ ಷಷ್ಠೀವಿಭಕ್ತಿಯು ಉದಾತ್ತವಾಗುವುದು ಎಂಬುದರಿಂದ ಸುಮತೀನಾಂ ಎಂಬಲ್ಲಿರುವ ನಾಮ್ ಎಂಬುದು ಉದಾತ್ತ ॥ ೧೧ ॥

॥ ಸಂಹಿತಾಪಾಠಃ ॥

ಮಹೋ ಅರ್ಣಃ ಸರಸ್ವತೀ ಪ್ರ ಚೇತಯತಿ ಕೇತುನಾ ।
ಧಿಯೋ ವಿಶ್ವಾ ವಿ ರಾಜತಿ ॥ ೧೨ ॥

॥ ಪದಪಾಠಃ ॥

ಮಹಃ । ಅರ್ಣಃ । ಸರಸ್ವತೀ । ಪ್ರ । ಚೇತಯತಿ । ಕೇತುನಾ ॥
ಧಿಯಃ । ವಿಶ್ವಾಃ । ವಿ । ರಾಜತಿ ॥ ೧೨ ॥

॥ ಸಾಯಣಭಾಷ್ಯಂ ॥

ದ್ವಿವಿಧಾ ಹಿ ಸರಸ್ವತೀ ವಿಗ್ರಹವದ್ದೇವತಾ ನದೀರೂಪಾ ಚ । ತತ್ರ ಪೂರ್ವಾಭ್ಯಾಮೃಗ್ಭ್ಯಾಂ ವಿಗ್ರಹವತೀ ಪ್ರತಿಪಾದಿತಾ । ಅನಯಾ ತು ನದೀರೂಪಾ ಪ್ರತಿಪಾದ್ಯತೇ । ತಾದೃಶೀ ಸರಸ್ವತೀ ಕೇತುನಾ ಕರ್ಮಣಾ ಪ್ರವಾಹರೂಪೇಣ ಮಹೋ ಅರ್ಣಃ ಪ್ರಭೂತಮುದಕಂ ಪ್ರ ಚೇತಯತಿ । ಪ್ರಕರ್ಷೇಣ ಜ್ಞಾಪಯತಿ । ಕಿಂಚ । ಸ್ವಕೀಯೇನ ದೇವತಾರೂಪೇಣ ವಿಶ್ವಾ ಧಿಯಃ ಸರ್ವಾಣ್ಯನುಷ್ಠಾತೃಪ್ರಜ್ಞಾನಾನಿ ವಿರಾಜತಿ । ವಿಶೇಷೇಣ ದೀಪಯತಿ । ಅನುಷ್ಠಾನವಿಷಯಾ ಬುದ್ಧೀಃ ಸರ್ವದೋತ್ಪಾದಯತೀತ್ಯರ್ಥಃ । ಸರಸ್ವತ್ಯಾ ದ್ವಿರೂಪತ್ವಂ ಯಾಸ್ಕೋ ದರ್ಶಯತಿ । ತತ್ರ ಸರಸ್ವತೀತ್ಯೇತಸ್ಯ ನದೀವದ್ದೇವತಾವಚ್ಚ ಖಿಗಮಾ ಭವಂತಿ । ನಿ. ೨-೨೩ । ಇತಿ । ಏಕಶತಸಂಖ್ಯಾಕೇಷೂದಕನಾಮಸ್ವರ್ಣಾಃ ಕ್ಷೋದ ಇತಿ ಪಠಿತಂ । ಏತಾಮೃಚಂ ಯಾಸ್ಕೋ ವ್ಯಾಚಷ್ಟೇ । ಮಹದರ್ಣಃ ಸರಸ್ವತೀ ಪ್ರಚೇತಯತಿ ಪ್ರಜ್ಞಾಪಯತಿ ಕೇತುನಾ ಕರ್ಮಣಾ ಪ್ರಜ್ಞಯಾ ವೇಮಾನಿ ಚ ಸರ್ವಾಣಿ ಪ್ರಜ್ಞಾನಾನ್ಯಭಿವಿರಾಜತಿ । ನಿ. ೧೧-೨೭ । ಇತಿ ॥ ಮಹೋ ಅರ್ಣಃ । ಮಹದಿತಿ ತಕಾರಸ್ಯ ವ್ಯತ್ಯಯೇನ ಸಕಾರಃ । ತಸ್ಯ ರುತ್ವೋತ್ವಗುಣಾಃ । ಪ್ರಾತಿಪದಿಕಸ್ವರೇಣಾಂತೋದಾತ್ತಃ । ಏಙಃ ಪದಾಂತಾದಿತಿ ಪಾ. ೬-೧-೧೦೯ । ಇತಿ ಪೂರ್ವರೂಪೇ ಪ್ರಾಪ್ತೇ ಪ್ರಕೃತ್ಯಾಂತಃಪಾದಮವ್ಯಪರೇ । ಪಾ. ೬-೧-೧೧೫ । ಇತಿ ಪ್ರಕೃತಿಭಾವಃ । ಅರ್ತೇರತ್ಯರ್ಣಃ । ಉದಕೇ ನುಟ್ ಚ । ಉ. ೪-೧೯೬ । ಇತ್ಯಸುನ್ಪ್ರತ್ಯಯೋ ನುಡಾಗಮಶ್ಚ । ಕೇತುನಾ । ಪ್ರಾತಿಪದಿಕಸ್ವರೇಣಾಂತೋದಾತ್ತಃ । ವಿಶ್ವಾಃ । ವಿಶ್ವಶಬ್ದಃ ಕ್ವನ್ಪ್ರತ್ಯಯಾಂತ ಆದ್ಯುದಾತ್ತಃ ॥ ೬ ॥ ॥ ೧ ॥

॥ ಪ್ರತಿಪದಾರ್ಥ ॥

ಸರಸ್ವತೀ—ಸರಸ್ವತೀ ನದಿಯು । ಕೇತುನಾ—ಪ್ರವಾಹರೂಪವಾದ ಕರ್ಮದಿಂದ (ಪ್ರವಹಿಸುವುದರಿಂದ) । ಮಹೋ ಅರ್ಣಃ—ಬಹು ಹೆಚ್ಚಾದ ನೀರನ್ನು । ಪ್ರಚೇತಯತಿ—ವಿಶೇಷವಾಗಿ ಪ್ರದರ್ಶಿಸುವಳು । (ಮತ್ತು) ವಿಶ್ವಾ ಧಿಯಃ—(ಯಜ್ಞಕರ್ಮದಲ್ಲಾಸಕ್ತರಾದ) ಸಮಸ್ತ ಜನರ ಬುದ್ಧಿಯನ್ನು (ಪ್ರಜ್ಞೆಯನ್ನು) । ವಿರಾಜತಿ—ಉದ್ದೀಪನಗೊಳಿಸುವಳು ॥

॥ ಭಾವಾರ್ಥ ॥

ಸರಸ್ವತೀನದಿಯು ಬಹು ಅಗಾಧಪ್ರವಾಹದಿಂದ ಹರಿಯುತ್ತಿರುವುದರಿಂದ ಈ ನದಿಯಲ್ಲಿ ಬಹುಹೆಚ್ಚಾಗಿ ನೀರಿರುವುದು ಮತ್ತು ಈ ದೇವಿಯು ತನ್ನನ್ನು ಸ್ತೋತ್ರಮಾಡುವ ಅಥವಾ ಯಜ್ಞದಿಂದ ಆರಾಧಿಸುವ ಜನರ ಮನಸ್ಸನ್ನು ಪ್ರಕಾಶಗೊಳಿಸುವಳು ಎಂದರೆ ಜನರ ಬುದ್ಧಿಯನ್ನು ಚುರುಕಾಗುವಂತೆ ಪ್ರೇರಿಸುವಳು.

English Translation.

Saraswati (river) mamfests herself by her acts (flowing) as a mighty river and (in her own form) enlightens peoples's minds.

॥ ವಿಶೇಷವಿಷಯಗಳು ॥

ಈ ಮಂತ್ರವು ಸೌತ್ರಾಮಣೀ ಎಂಬ ಯಾಗದಲ್ಲಿ ಸರಸ್ವತಿಯನ್ನು ಸ್ತೋತ್ರಮಾಡುವುದಕ್ಕಾಗಿ ಉಪಯೋಗಿಸಲ್ಪಡುವುದು. ಈ ಋಕ್ಕಿಗೆ ಯಾಸ್ಕರು ನಿರುಕ್ತವನ್ನು ಈರೀತಿ ಹೇಳಿರುವರು—**ಮಹದರ್ಣಃ ಸರಸ್ವತೀ ಪ್ರಚೇತಯತಿ ಪ್ರಜ್ಞಾಪಯತಿ ಕೇತುನಾ ಕರ್ಮಣಾ ಪ್ರಜ್ಞಯಾ ವೇಮಾನಿ ಚ ಸರ್ವಾಣಿ ಪ್ರಜ್ಞಾನಾನ್ಯಭಿವಿರಾಜತಿ** (ನಿ. ೧೧-೨೭). ಸರಸ್ವತಿಯ ನದೀರೂಪವನ್ನೂ, ವಾಗ್ದೇವತೆಯ ರೂಪವನ್ನು ಯಾಸ್ಕರು **ತತ್ರೈ ಸರಸ್ವತೀತ್ಯೇತಸ್ಯ ನದೀವದ್ದೇವತಾವಚ್ಚೇ ನಿಗಮಾ ಭವಂತಿ** (ನಿ. ೨-೨೩) ಎಂಬ ವಚನದಿಂದ ಹೇಳಿರುವರು. ಈ ಋಕ್ಕಿನಲ್ಲಿ ಪೂರ್ವಾರ್ಧದಲ್ಲಿ ಎಂದರೆ ೧-೨ ನೆಯ ಪಾದಗಳಲ್ಲಿ ಸರಸ್ವತಿಯನ್ನು ನದೀರೂಪದಂತೆಯೂ ೩ ನೆಯ ಪಾದದಲ್ಲಿ ದೇವತಾರೂಪದಂತೆಯೂ ಭಾವಿಸಿ ಸ್ತೋತ್ರಮಾಡಲ್ಪಟ್ಟಿರುವುದು.

ಮಹೋ ಅರ್ಣಃ—ಅರ್ಣಶಬ್ದವು ಉದಕಸೂಚಕವಾದ ೧೦೧ ನಾಮಗಳ ಮಧ್ಯದಲ್ಲಿ ಪಠಿತವಾಗಿರುವುದು. ಅರ್ಣವೆಂದರೆ ಉದಕವೆಂದೂ, ನದಿಯೆಂದೂ ಅರ್ಥವು. ಇಲ್ಲಿ ಸರಸ್ವತೀನದಿಯು ಸಿಂಧು ಮೊದಲಾದ ನದಿಗಳಷ್ಟು ದೊಡ್ಡದಾಗಿಲ್ಲದಿದ್ದರೂ **ಮಹೋ ಅರ್ಣಃ** ಎಂದರೆ ಹೆಚ್ಚಾದ ನೀರುಳ್ಳ ದೊಡ್ಡನದಿ ಎಂದು ಸ್ತೋತ್ರಮಾಡಿರುವುದು ಸರಿಯೇ ಎಂದರೆ, ಸ್ತೋತ್ರಮಾಡುವಾಗ ದೇವತೆಗೆ ಇರುವ ಸ್ವಲ್ಪ ಗುಣವನ್ನು ಉತ್ಪ್ರೇಕ್ಷೆಮಾಡಿ ಬಹಳವಾಗಿರುವುದೆಂದು ಪ್ರಶಂಸೆಮಾಡುವುದು ಲೋಕದಲ್ಲಿ ರೂಢಿಯಾಗಿದೆ, ಅದಲ್ಲದೆ ಈ ಋಕ್ಕಿನ ಋಷಿಯಾದ ಮಧುಚ್ಛಂದ ಋಷಿಯು ನೋಡಿರುವ ನದಿಗಳಲ್ಲೆಲ್ಲಾ ಇದೇ ದೊಡ್ಡದಾಗಿರಬಹುದು. ಮತ್ತು ದೂರದಲ್ಲಿರುವ ಸಿಂಧು ಮೊದಲಾದ ದೊಡ್ಡನದಿಗಳನ್ನು ಆ ಋಷಿಯು ನೋಡಿಲ್ಲದಿರಬಹುದು. ಆದುದರಿಂದ ಈ ನದಿಯು ಬಹು ದೊಡ್ಡ ನದಿಯೆಂದೂ ಇದರಲ್ಲಿ ಬಹಳವಾಗಿ ನೀರಿರುವುದೆಂದೂ ಸ್ತೋತ್ರಮಾಡಿರುವುದು ಸಹಜವಾಗಿದೆ.

ಕೇತುನಾ—ಇದಕ್ಕೆ ಭಾಷ್ಯಕಾರರೂ ಯಾಸ್ಕರೂ **ಕರ್ಮಣಾ** ಕೆಲಸದಿಂದ ಎಂದು ಅರ್ಥಮಾಡಿರುವರು. ನದೀಪರವಾಗಿ ಅರ್ಥಹೇಳುವಾಗ **ಕೇತುನಾ** ಎಂದರೆ ಬಹಳ ಅಗಾಧವಾಗಿಯೂ ಗಂಭೀರವಾಗಿಯೂ ಇರುವ ಪ್ರವಾಹ (ರೂಪಕರ್ಮ) ದಿಂದ ಎಂದೂ ದೇವತಾಪರವಾಗಿ ಅರ್ಥಮಾಡುವಾಗ ಜನರ ಮನಸ್ಸನ್ನು ಉದ್ದೀಪನ (ಪ್ರೇರಣೆ)ಗೊಳಿಸುವ ಕರ್ಮದಿಂದ ಎಂದು ಅರ್ಥಮಾಡಬಹುದು. ಸರಸ್ವತೀನದಿಯ ಅಗಾಧಪ್ರವಾಹವು (Saraswati"s mighty, endless and impetuous flood) ಋ. ಸಂ. ೬-೬೧-೨ ಮೊದಲಾದ ಅನೇಕ ಮಂತ್ರಗಳಲ್ಲಿ ವರ್ಣಿಸಲ್ಪಟ್ಟಿರುವುದು. ಈ ಶಬ್ದಕ್ಕೆ ಪಾಶ್ಚಾತ್ಯರು Brightness, banner, flag, activity, wisdom ಎಂದು ಅರ್ಥಮಾಡಿರುವರು. ಸ್ಕಂದಸ್ವಾಮಿಯು **ಕೇತುನಾ** ಎಂದರೆ **ಗರ್ಜನಾಖ್ಯೇನ ಕರ್ಮಣಾ**

ಎಂದೂ ಯಾಸ್ಕರು **ಕರ್ಮಣಾ ಪ್ರಜ್ಞಯಾ ವಾ** ಎಂದೂ ವ್ಯಾಖ್ಯಾನಮಾಡಿರುವರು. ಉವ್ವಟ ಮತ್ತು ಮಹೀಧರರ ಅಭಿಪ್ರಾಯವೂ ಸ್ಕಂದಸ್ವಾಮಿಯ ಅಭಿಪ್ರಾಯದಂತೆಯೇ ಇದೆ. ವೆಂಕಟಮಾಧವರು **ಕೇತುನಾ** ಎಂದರೆ **ಕರ್ಮಣಾ** ಎಂದು ಮಾತ್ರ ಹೇಳಿರುವರು.

ಧಿಯಃ—ಬುದ್ಧಿ, ಆಲೋಚನೆ. ಯಾಸ್ಕರು **ಪ್ರಜ್ಞಾ** ಎಂದೂ ಸ್ಕಂದಸ್ವಾಮಿಯು **ಕರ್ಮಾಣಿ, ಪ್ರಜ್ಞಾ** ಎಂದೂ ವೆಂಕಟಮಾಧವರು **ಪ್ರಜ್ಞಾ** ಎಂದೂ ಉವ್ವಟ ಮತ್ತು ಮಹೀಧರರು **ಬುದ್ಧಿ** ಎಂದೂ ಹೇಳಿರುವರು. **ಪಾಶ್ಚಾತ್ಯರಲ್ಲಿ** Grassman ಎಂಬುವರು act of devotion ಎಂದೂ ಡಾ॥ ಸರೂಪರವರು Devotion, thought ಎಂದು ಅರ್ಥಮಾಡಿರುವರು.

ವಿರಾಜತಿ—ಭಾಷ್ಯಕಾರರು ಇದಕ್ಕೆ **ವಿಶೇಷೇಣ ದೀಪಯತಿ**—ಹೆಚ್ಚಾಗಿ ಪ್ರಕಾಶಗೊಳಿಸುವಳು, ಪ್ರೇರಿಸುವಳು, ಉದ್ದೀಪನಗೊಳಿಸುವಳು ಎಂದು ಹೇಳಿದಾರೆ. ಈ ಶಬ್ದವು ರಾಜ್ ಧಾತುವಿನ ಪ್ರಥಮಪುರುಷೈಕವಚನವು ಇದಕ್ಕೆ shine, preside, govern, brighten ಎಂದು ಅರ್ಥ ಹೇಳಬಹುದು. **ಧಿಯೋ ವಿರಾಜತಿ** ಎಂದರೆ ಮನಸ್ಸನ್ನು ಸತ್ಕಾರ್ಯಗಳಲ್ಲಿ ಪ್ರವರ್ತಿಸುವಂತೆ ಪ್ರೇರಿಸುವಳು. ಅಥವಾ ನಮ್ಮ ಮನಸ್ಸನ್ನು ಸಂತೋಷವಾಗಿರುವಂತೆ ಮಾಡುವವಳು ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಮಹೋ ಅರ್ಣಃ—ಮಹತ್‌ಶಬ್ದದ ತಕಾರಕ್ಕೆ ವ್ಯತ್ಯಾಸದಿಂದ ಸಕಾರಬರುವುದು, ಸಕಾರಕ್ಕೆ **ಸಸಜುಷೋರುಃ** (ಪಾ.ಸೂ. ೮-೨೬೬) ಎಂಬುದರಿಂದ ರು ಆದೇಶ, ರುಗೆ **ಅತೋರೋರಪ್ಲುತಾದಪ್ಲುತೇ** (ಪಾ. ಸೂ. ೬।೧-೧೧೩) ಎಂಬುದರಿಂದ ಉ ಆದೇಶ ಮಹ+ಉ ಈಗ **ಆದ್ಗುಣಃ** (ಪಾ. ಸೂ. ೬-೧-೮೭) ಎಂಬುದರಿಂದ ಗುಣಬಂದರೆ ಮಹೋ ಎಂದಾಗುವುದು. ನಂತರ ಅರ್ಣಃ ಪದವನ್ನು **ಸೇರಿಸಿದಾಗ ವಿಜಿಃಪದಾಂತಾದತಿ** (ಪಾ. ಸೂ. ೭-೧-೧೦೯) ಪದದ ಕೊನೆಯಲ್ಲಿರುವ ಏ ಓ ಗಳಿಗೆ ಹ್ರಸ್ವಾಕಾರ ಪರದಲ್ಲಿದ್ದರೆ ಪೂರ್ವಪರವರ್ಣಗಳ ಸ್ಥಾನದಲ್ಲಿ ಪೂರ್ವರೂಪಬರುವುದು ಎಂಬುದರಿಂದ ಪುರ್ವರೂಪವು ಪ್ರಾಪ್ತವಾದರೆ **ಪ್ರಕೃತ್ಯಾಂತಃ ಪಾದಮವ್ಯಪರೇ,** (ಪಾ. ಸೂ. ೬-೧-೧೧೫) ಋಕ್ಪಾದದ ಮಧ್ಯದಲ್ಲಿರುವ ಏ ಓ ಗಳಿಗೆ ಹ್ರಸ್ವಾಕಾರಪರದಲ್ಲಿದ್ದರೆ ಪ್ರಕೃತಿಭಾವ (ಸಂಧಿಕಾರ್ಯವಿಲ್ಲದಿರುವಿಕೆ) ಬರುವುದು, ವಕಾರಯಕಾರದ ಹಿಂದಿರುವ ಹ್ರಸ್ವಾಕಾರವು ಪರದಲ್ಲಿದ್ದರೆ ಈ ಪ್ರಕೃತಿಭಾವ ಬರುವುದಿಲ್ಲ. ಎಂಬುದರಿಂದ ಪ್ರಕೃತಿಭಾವಬಂದು ' ಮಹೋ ಅರ್ಣಃ' ಎಂದೇ ಇರುವುದು. ಅರ್ಣಶಬ್ದವು ಋ ಗತೌ ಧಾತುವಿನಿಂದ ಬಂದಿರುವುದು (ಅರ್ತಿ ಹರಿಯುತ್ತದೆ, ಹೋಗುತ್ತದೆ) ಇತ್ಯರ್ಣಃ ಎಂದು ವ್ಯುತ್ಪತ್ತಿ, ಋ ಧಾತುವಿಗೆ 'ಉದಕೇ ನುಟ್‌ಚ ' (ಉ. ಸೂ, ೪-೬೩೬) ನೀರು ಎಂಬ ಅರ್ಥವನ್ನು ವಿವಕ್ಷಿಸಿದಾಗ ಋ ಧಾತುವಿನ ಮುಂದೆ ಅಸುನ್ ಪ್ರತ್ಯಯವೂ, ಅದಕ್ಕೆ ನುಡಾಗಮವೂ ಬರುವುದು ಎಂಬುದರಿಂದ, ಅಸುನ್‌ಪ್ರತ್ಯಯವೂ ನುಡಾಗಮವೂ ಬಂದರೆ ಋ+ನಸ್ ಎಂದಿರುವಾಗ ಗುಣದಿಂದ ಋಗೆ ಅರ್ ಬಂದು ಅರ್+ನಸ್ ಎಂದಿರುವಾಗ **ರಷಾಭ್ಯಾಂನೋಣಃ ಸಮಾನಪದೇ** (ಪಾ. ಸೂ. ೮-೪-೧) ಅಖಂಡಪದದಲ್ಲಿ ರೇಫಷಕಾರಗಳ ಮುಂದಿರುವ ನಕಾರಕ್ಕೆ ಣಕಾರಬರುವುದು ಎಂಬುದರಿಂದ ಣತ್ವ ಬಂದು ರುತ್ವ ವಿಸರ್ಗಗಳು ಬಂದರೆ ಅರ್ಣಃ ಎಂದಾಗುವುದು. ಕೇತುನಾ, ಇದು ಪ್ರಾತಿಪದಿಕಸ್ವರದಿಂದ ಅಂತೋದಾತ್ತ. ವಿಶ್ವಾಃ- ವಿಶ್ವಶಬ್ದವು ಕ್ವನ್‌ಪ್ರತ್ಯಯಾಂತ, ಇಲ್ಲಿ ಆದ್ಯುದಾತ್ತಸ್ವರವು ಬರುವುದು ॥ ೧೨ ॥

ಇಲ್ಲಿಗೆ ೩ನೇ ಸೂಕ್ತವು ಸಂಪೂರ್ಣವು.

॥ ಓಂ ॥

ನಾಲ್ಕನೆಯ ಸೂಕ್ತವು



ಸಾಯಣಭಾಷ್ಯಂ

ಪ್ರಥಮೇ ಮಂಡಲೇ ದ್ವಿತೀಯಾನುವಾಕೇ ಚತ್ವಾರಿ ಸೂಕ್ತಾನಿ । ತತ್ರ ಸುರೂಪೇತ್ಯಾದಿಕಂ ದಶರ್ಚಂ ಪ್ರಥಮಂ ಸೂಕ್ತಂ ಸುರೂಪಕೃತ್ನುಂ ದಶೇತ್ಯನುಕ್ರಾಂತತ್ವಾತ್ । ಪೂರ್ವವನ್ಮಧುಚ್ಛಂದಸೋ ಗಾಯತ್ರಸ್ಯ ಚಾನುವೃತ್ತೇಸ್ತೇ ಏವರ್ಷಿಚ್ಛಂದಸೀ। ಇಂದ್ರೋ ಪೃಚ್ಛೇತಿ ಚತುರ್ಥ್ಯಾಮೃಚಿ ಲಿಂಗದರ್ಶನಾದಿಂದ್ರೋ ದೇವತಾ । ಅಭಿಪ್ಲವಷಡಹೇ ಬ್ರಾಹ್ಮಣಾಚ್ಛಂಸಿನಃ ಪ್ರಾತಃಸವನೇ ಸ್ತೋಮವೃದ್ಧಾವಾನಾಪಾರ್ಥಾನಿ ಸುರೂಪಕೃತ್ನುಮೂತಯ ಇತ್ಯಾದೀನಿ ಷಟ್ ಸೂಕ್ತಾನಿ । ಸೂತ್ರಿತಂ ಚಾಭಿಪ್ಲವಪೃಷ್ಠ್ಯಾಹಾನೀತಿ ಖಂಡೇ ಬ್ರಾಹ್ಮಣಾಚ್ಛಂಸಿನಃ ಸುರೂಪಕೃತ್ನುಮೂತಯ ಇತಿ ಷಟ್ಸೂಕ್ತಾನಿ । ಅ. ೭-೫ । ಇತಿ । ಆದ್ಯಾನಿ ತ್ರೀಣಿ ಸೂಕ್ತಾನಿ ಮಹಾವ್ರತೇ ನಿಷ್ಕೇವಲ್ಯ ಔಷ್ಣಿಹತೃಚಾಶೀತೌ ಶಸ್ತ್ರವ್ಯಾನಿ । ಉಕ್ತಂ ಚ ಶೌನಕೇನ । ಸುರೂಪಕೃತ್ನುಮೂತಯ ಇತಿ ತ್ರೀಣ್ಯೇಂದ್ರ ಸಾನಸಿಂ ರಯಿಮಿತಿ ಸೂಕ್ತೇ । ಐ. ಆ. ೫-೨-೫ । ಇತಿ ಚತುರ್ವಿಂಶೇಽಹನಿ ಮಾಧ್ಯಂದಿನೇ ಸವನೇ ಬ್ರಾಹ್ಮಣಾಚ್ಛಂಸಿನಃ ಸುರೂಪಕೃತ್ನುಮೂಕರಯ ಇತಿ ವೈಕಲ್ಪಿಕಃ ಸ್ತೋತ್ರಿಯಸ್ತೃಚಃ। ಹೋತ್ರಕಾಣಾಮಿತಿ ಖಂಡೇ ಮದೇ ಮದೇ ಹಿ ನೋ ದದಿಃ ಸುರೂಪಕೃತ್ನುಮೂತಯೇ। ಆ. ೭-೪ । ಇತಿ ಸೂತ್ರಿತತ್ವಾತ್ ॥ ಅಗ್ನಿಷ್ಟೋಮೇ ವೈಶ್ವದೇವಶಸ್ತ್ರೇ ಸುರೂಪಕೃತ್ನುಮೂತಯ ಇತಿ ಧಾಯ್ಯಾ । ಸುರೂಪಕೃತ್ನುಮೂತಯೇ ತಕ್ಷನ್ನಥಂ । ಆ. ೫-೧೪ । ಇತಿ ಸೂತ್ರಿತತ್ವಾತ್ ॥

॥ ಅನುವಾದವು ॥

ನಾವು ಹಿಂದೆ ಹೇಳಿದಂತೆ (ಋ.ಸಂ. ಭಾಗ II, ಪೀಠಿಕೆ ೨ ನೋಡಿ) ಪ್ರಥಮಮಂಡಲದ ಮೊದಲನೆಯ ಅನುವಾಕದ ಮೂರು ಸೂಕ್ತಗಳೂ ಮುಗಿದುವು. ಇಲ್ಲಿಂದ ಮುಂದೆ ಎರಡನೆಯ ಅನುವಾಕವು ಪ್ರಾರಂಭವಾಗುವುದು. ಈ ಅನುವಾಕದಲ್ಲಿ ೪-೭ ಸೂಕ್ತಗಳು ಎಂದರೆ (1) **ಸುರೂಪಕೃತ್ನುಮೂತಯೇ** (2) **ಆ ತ್ವೇತಾ ನಿಷೀದತ** (3) **ಯುಂಜಂತಿ ಬ್ರಧ್ನಮರುಷಂ** (4) ಇಂದ್ರಮಿದ್ಗಾಥಿನೋ ಬೃಹತ್ ಎಂಬ ನಾಲ್ಕು ಸೂಕ್ತಗಳಿರುವುವು. ಈ ನಾಲ್ಕು ಸೂಕ್ತಗಳಲ್ಲಿ ಪ್ರತಿಯೊಂದರಲ್ಲಿಯೂ ಹತ್ತು ಹತ್ತು ಋಕ್ಕುಗಳಿರುವುವು. ಹಿಂದಿನ ಸೂಕ್ತಗಳ ಋಷಿಯಾದ ಮಧುಚ್ಛಂದಾ ವೈಶ್ವಾಮಿತ್ರನೆಂಬುವನೇ ಈ ನಾಲ್ಕು ಸೂಕ್ತಗಳಿಗೂ ಋಷಿಯು- ಈ ಸೂಕ್ತಕ್ಕೆ ದೇವತೆಯು ಇಂದ್ರನು. ಮೊದಲು ಮೂರು ಋಕ್ಕುಗಳಲ್ಲಿ ಯಾವ ದೇವತೆಯ ಹೆಸರನ್ನೂ ನಿರ್ದಿಷ್ಟವಾಗಿ ಹೇಳಿಲ್ಲ. ನಾಲ್ಕನೆಯ ಋಕ್ಕಿನಲ್ಲಿ ಇಂದ್ರಂ ಪೃಚ್ಛೆ ಎಂದು ಹೇಳಿರುವುದರಿಂದಲೂ ಅಲ್ಲಿಂದ ಮುಂದೆ ೫, ೬, ೯, ೧೦ ನೆಯ ಋಕ್ಕುಗಳಲ್ಲಿಯೂ ಇಂದ್ರಶಬ್ದವು ಪರಿತವಾಗಿರುವುದರಿಂದಲೂ ಈ ಸೂಕ್ತಕ್ಕೆಲ್ಲಾ ಇಂದ್ರನೇ ದೇವತೆಯು. ಒಂದು ಸೂಕ್ತದಲ್ಲಿರುವ ಋಕ್ಕುಗಳಲ್ಲೆಲ್ಲಾ ದೇವತೆಯ ಹೆಸರು ಪರಿತವಾಗಿರಬೇಕೆಂಬ ನಿಯಮವೇನೂ ಇಲ್ಲ. ಕೆಲವು ಋಕ್ಕುಗಳಲ್ಲಿದ್ದು ಉಳಿದ ಋಕ್ಕುಗಳು ಆ ದೇವತೆಯ ವಿಷಯವನ್ನು ಪ್ರತಿಪಾದಿಸುವಂ

ತ್ತಿದ್ದರೆ ಸೂಕ್ತದ ಎಲ್ಲಾ ಋಕ್ಕುಗಳಿಗೂ ಅದೇ ದೇವತೆಯೆಂದು ಹೇಳಬೇಕು. ಈ ಸೂಕ್ತದ ವಿನಿಯೋಗಕ್ರಮ ವೇನೆಂದರೆ—ಅಭಿಪ್ಲವಷಡಹವೆಂಬ ಯಾಗದಲ್ಲಿ ಪ್ರಾತಸ್ಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸೀ ಎಂಬ ಹೋತೃವಿನ ಸಹಾಯಕ ಋತ್ವಿಜನು ಸ್ತೋಮವೃದ್ಧಿಗಾಗಿ **ಸುರೂಪಕೃತ್ನುಮೂತಯೇ** ಎಂಬ ಈ ಸೂಕ್ತವನ್ನು ಮುಂದಿನ ಐದು ಸೂಕ್ತಗಳನ್ನೂ ಪಠಿಸಬೇಕು. ಈ ವಿಷಯದಲ್ಲಿ—**ಸೂತ್ರಿತಂ ಚಾಭಿಪ್ಲವಪೃಷ್ಠ್ಯಾಹಾನೀತಿ ಖಂಡೇ ಬ್ರಾಹ್ಮಣಾಚ್ಛಂಸಿನಃ ಸುರೂಪಕೃತ್ನುಮೂತಯ ಇತಿ ಷಟ್ ಸೂಕ್ತಾನಿ** (ಆ. ಸೂ. ೭-೫). ಈ ಆರು ಸೂಕ್ತಗಳಲ್ಲಿ ಮೊದಲ ಮೂರುಸೂಕ್ತಗಳು ಮಹಾವ್ರತವೆಂಬ ಕರ್ಮದಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳಾಗಿ ಉಪಯೋಗಿಸಲ್ಪಡುವವು ಎಂದು ಅಭಿಪ್ಲವಪೃಷ್ಠ್ಯಾಹಾನಿ ಎಂಬ ಖಂಡದಲ್ಲಿ ಹೇಳಿರುವುದು. ಈ ವಿಚಾರದಲ್ಲಿ ಶೌನಕರು ಐತರೇಯ ಆರಣ್ಯಕದ ವಾಕ್ಯವನ್ನು ಉದಹರಿಸಿರುವರು—**ಸುರೂಪಕೃತ್ನುಮೂತಯ ಇತಿ ತ್ರೀಣ್ಯೇಂದ್ರ ಸಾನಸಿಂ ರಯಿಮಿತಿ ಸೂಕ್ತೇ** (ಐ. ಆ. ೫-೩-೫) ಎಂದರೆ **ಸುರೂಪಕೃತ್ನುಮೂತಯೇ** ಎಂದು ಮೊದಲಾದ ಮೂರು ಸೂಕ್ತಗಳನ್ನೂ, **ಏಂದ್ರ ಸಾನಸಿಂ ರಯಿಂ** ಎಂದು ಮೊದಲಾದ ಎರಡು ಸೂಕ್ತಗಳನ್ನು ಪಠಿಸಬೇಕೆಂದರ್ಥವು. ಮತ್ತು ಮೇಲೆ ಹೇಳಿದ ಯಾಗದಲ್ಲಿ ಇಪ್ಪತ್ತನಾಲ್ಕನೆಯ ದಿನದಲ್ಲಿ ಮಾಧ್ಯಂದಿನಸವನದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು **ಸುರೂಪಕೃತ್ನುಮೂತಯೇ** ಎಂಬ ತೃಚವನ್ನು (ಮೂರು ಋಕ್ಕುಗಳನ್ನು) ವೈಕಲ್ಪಿಕವಾಗಿ ಹೇಳಬಹುದು. ಈ ವಿಷಯದಲ್ಲಿ ಆಶ್ವಲಾಯನಸೂತ್ರವು—**ಹೋತ್ರಕಾಣಾಮಿತಿ ಖಂಡೇ ಮದೇ ಮದೇ ಹಿ ನೋ ದದಿಃ ಸುರೂಪಕೃತ್ನುಮೂತಯೇ ಇತಿ** (ಆ.ಸೂ. ೭-೪) ಎಂದರೆ **ಮದೇ ಮದೇ ಹಿ ನೋ ದದಿಃ** (ಋ. ಸಂ. ೧-೪೧-೭) ಎಂಬ ತೃಚವನ್ನೂ **ಸುರೂಪಕೃತ್ನುಮೂತಯೇ** (೧-೪-೧) ಎಂಬ ತೃಚವನ್ನೂ ಪಠಿಸಬೇಕೆಂದು ಹೇಳಿರುವುದು ಮತ್ತು ಅಗ್ನಿಷ್ಟೋಮಯಾಗದಲ್ಲಿ ವೈಶ್ವದೇವಶಸ್ತ್ರಮಂತ್ರವನ್ನು ಪಠಿಸುವಾಗ—**ಸುರೂಪಕೃತ್ನುಮೂತಯೇ** (ಋ. ಸಂ. ೧-೪-೧) ಮತ್ತು **ತಕ್ಷನ್ರಥಂ ಸುವೃತಂ** (ಋ. ಸಂ. ೧-೧೧೧-೧) ಇತಿ ಸೂತ್ರಿತತ್ವಾತ್ (ಆ. ಸೂ. ೫-೧೪) ಎಂದರೆ, ಈ ಋಕ್ಕುಗಳನ್ನು ವಿಶೇಷಮಂತ್ರಗಳನ್ನಾಗಿ ಪಠಿಸಬಹುದೆಂದು ಆಶ್ವಲಾಯನ ಸೂತ್ರದಲ್ಲಿ ಹೇಳಿರುವುದು.

॥ ಓಂ ॥

ಸೂಕ್ತ—೪

॥ ಮಂಡಲ—೧ ॥ ಅನುವಾಕ—೩ ॥ ಸೂಕ್ತ—೪ ॥
॥ ಅಷ್ಟಕ —೧ ॥ ಅಧ್ಯಾಯ—೧ ॥ ವರ್ಗ— ೭, ೮ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೧-೧೦ ॥

ಋಷಿಃ—ಮಧುಚ್ಛಂದಾ ವೈಶ್ವಾಮಿತ್ರಃ ।
ದೇವತಾ— ಇಂದ್ರಃ ॥
॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಸುರೂಪಕೃತ್ನುಮೂತಯೇ ಸುದುಘಾಮಿವ ಗೋದುಹೇ ॥
ಜುಹೂಮಸಿ ದ್ಯವಿದ್ಯವಿ ॥ ೧ ॥

॥ ಪದಪಾಠಃ ॥

ಸುರೂಪಕೃತ್ನುಂ । ಊತಯೇ । ಸುದುಘಾಂಇವ । ಗೋದುಹೇ ॥
ಜುಹೂಮಸಿ । ದ್ಯವಿದ್ಯವಿ ॥ ೧ ॥

॥ ಸಾಯಣಭಾಷ್ಯಂ ॥

ಸುರೂಪಕೃತ್ನುಂ ಶೋಭನರೂಪೋಪೇತಸ್ಯ ಕರ್ಮಣಃ ಕರ್ತಾರಮಿಂದ್ರಮೂತಯೇಽಸ್ಮದ್ರಕ್ಷಾರ್ಥಂ ದ್ಯವಿ ದ್ಯವಿ ಪ್ರತಿದಿನಂ ಜುಹೂಮಸಿ । ಆಹ್ವಯಾಮಃ । ಆಹ್ವಾನೇ ದೃಷ್ಟಾಂತಃ। ಗೋದುಹೇ ಗೋದುಗರ್ಥಂ ಸುದುಘಾಮಿವ ಸುಷ್ಠು ದೋಗ್ಧ್ರೀಂ ಗಾಮಿವ । ಯಥಾ ಲೋಕೇ ಗೋರ್ಯೋ ದೋಗ್ಧಾ ತದರ್ಥಂ ತಸ್ಯಾಭಿಮುಖೇನ ದೋಹನೀಯಾಂ ಗಾಮಾಹ್ವಯತಿ ತದ್ವತ್ । ವಸ್ತ್ರೋರಿತ್ಯಾದಿಷು ದ್ವಾದಶಸ್ವಹರ್ನಾಮಸು ದ್ಯವಿದ್ಯವೀತಿ ಪಠಿತಂ । ಸುರೂಪಕೃತ್ನುಂ । ಕರೋತೀತಿ ಕೃತ್ನುಃ । ಕೃಹ-ನಿಭ್ಯಾಂ ಕ್ನುಃ । ಉ. ೩-೩೦ । ಕಿತ್ವಾದ್ಗುಣಾಭಾವಃ । ತಕಾರೋಪಜನಶ್ಚಾಂದಸಃ । ಸಮಾಸಾಂತೋದಾತ್ತಃ । ಊತಯೇ । ಅವತೇರ್ಧಾತೋರುದಾತ್ತ ಇತ್ಯನುವೃತ್ತಾವೂತಿಯೂತಿಜೂತಿಸಾತಿಹೇತಿ-ಕೀರ್ತಯಶ್ಚ । ಪಾ. ೩-೩-೯೭ । ಇತಿ ಕ್ತಿನ್ನುದಾತ್ತೋ ನಿಪಾತಿತಃ । ಸುದುಘಾಂ । ಸುಷ್ಠು ದುಗ್ಧ ಇತಿ-ಸುದುಘಾ । ದುಹಃ ಕಬ್ಘಶ್ಚ । ಪಾ. ೩-೨-೭೦। ಇತಿ ಕಪ್ಪ್ರತ್ಯಯೋ ಹಕಾರಸ್ಯ ಚ ಘಕಾರಃ । ಕಿತ್ವಾದ್ಗುಣಾಭಾವಃ । ಕಪಃ ಪಿತ್ವಾದನುದಾತ್ತತ್ವೇ ಧಾತುಸ್ವರೇಣೋಕಾರ ಉದಾತ್ತಃ । ಸುಶಬ್ದೇನ ಗತಿ-ಸಮಾಸೇ ಕೃದುತ್ತರಪದಪ್ರಕೃತಿಸ್ವರತ್ವೇನ ಸ ಏವ ಸ್ವರಃ । ಇನೇನ ವಿಭಕ್ತ್ಯಲೋಪಃ ಪೂರ್ವಪದ-ಪ್ರಕೃತಿಸ್ವರತ್ವಂ ಚೇತೀವಸಮಾಸೇ ಸ ಏವ ಸ್ವರಃ । ಗಾಂ ದೋಗ್ಧೀತಿ ಗೋಧುಕ್ । ಸತ್ಸೂದ್ವಿಷೇತ್ಯಾದಿನಾ । ಪಾ. ೩-೨-೬೧ । ಕ್ವಿಪ್ । ಕೃದುತ್ತರಪದಪ್ರಕೃತಿಸ್ವರತ್ವಂ । ಜುಹೂಮಸಿ । ಹೂಯತೇರ್ಲಡುತ್ತಮಪುರುಷಬಹುವಚನೇ ಬಹುಲಂ ಛಂದಸೀತಿ ಶಪಃ ಶ್ಲುಃ ॥ ಪಾ- ಪಾ. ೨-೪-೭೬ । ಅಭ್ಯಸ್ತಸ್ಯ ಚ । ಪಾ- ೬-೧-೩೩ । ಇತ್ಯಭ್ಯಸ್ತಕಾರಣಸ್ಯ ಹೂಯತೇಃ ಪ್ರಾಗೇವ ದ್ವಿರ್ವಚನಾತ್ಸಂಪ್ರಸಾರಣಂ । ಸಂಪ್ರಸಾರಣಾಚ್ಚ । ಪಾ. ೬-೧-೧೦೮ । ಇತಿ ಪರಪೂರ್ವತ್ವಂ । ಹಲಃ । ಪಾ. ೬-೪-೨ । ಇತಿ ದೀರ್ಘಃ । ತತಃ ಶ್ಲಾವಿತಿ ದ್ವಿರ್ವಚನಂ । ಅಭ್ಯಾಸಸ್ಯ ಹ್ರಸ್ವಃ । ಪಾ. ೭-೪-೫೯ । ಚುತ್ವಜಶ್ತ್ವೇ । ಪಾ. ೭-೪-೬೨ । ೪-೪-೫೩ । ಇದಂತೋ ಮಸಿ । ಪಾ. ೭-೧-೪೬ । ಇತೀಕಾರಾಗಮಃ । ಪ್ರತ್ಯಯಸ್ವರೇಣ ಮಕಾರಸ್ಯೋದಾತ್ತತ್ವಂ । ದ್ಯವಿ ದ್ಯವಿ । ದ್ಯೋಶಬ್ದಃ ಪ್ರಾತಿಪದಿಕಸ್ವರೇಣಾಂತೋದಾತ್ತಃ । ನಿತ್ಯವೀಪ್ಸಯೋಃ । ಪಾ. ೮-೧-೪ । ಇತಿ ದ್ವಿರ್ಭಾವಃ ತಸ್ಯ ಪರಮಾಮ್ರೇಡಿತಂ । ಪಾ. ೮-೧-೨ । ಅನುದಾತ್ತಂ ಚ । ಪಾ. ೮-೧-೩ । ಇತಿ ದ್ವಿತೀಯಸ್ಯಾನುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಗೋದುಹೇ—ಹಾಲನ್ನು ಕರೆಯುವುದಕ್ಕಾಗಿ । ಸುದುಘಾಮಿವ—ಹಾಲುಕರೆಯುವ (ಅಥವಾ ಹಾಲನ್ನು ಕೊಡುವ) ಹಸುವನ್ನು ಕರೆಯುವಂತೆ । ಸುರೂಪಕೃತ್ನುಂ—ಒಳ್ಳೆಯ (ಸುಂದರವಾದ) ಕೆಲಸಗಳನ್ನು

ಮಾಡುವ (ಇಂದ್ರನನ್ನು) । ಊತಯೇ—(ನಮ್ಮ) ರಕ್ಷಣೆಗಾಗಿ । ದ್ಯವಿದ್ಯವಿ—ಪ್ರತಿದಿನವೂ । ಜುಹೂಮಸಿ—ಆಹ್ವಾನಮಾಡುತ್ತೇವೆ (ನಮ್ಮ ಸಮೀಪಕ್ಕೆ ಬರುವಂತೆ ಕರೆಯುತ್ತೇವೆ).

॥ ಭಾವಾರ್ಥ ॥

ಹಾಲನ್ನು ಕೊಡುವ ಹಸುವನ್ನು ನಾವು ಪ್ರೀತಿಯಿಂದ ನಮ್ಮ ಸಮೀಪಕ್ಕೆ ಕರೆಯುವಂತೆ (ಬರಮಾಡಿಕೊಳ್ಳುವಂತೆ) ವಿಚಿತ್ರವಾದ ಕೆಲಸಗಳನ್ನು ಎಂದರೆ ಸಾಹಸಕೃತ್ಯಗಳನ್ನು ಮಾಡಬಲ್ಲ ಇಂದ್ರನನ್ನು ನಮ್ಮ ರಕ್ಷಣೆಗಾಗಿ ನಾವು ಪ್ರತಿದಿನವೂ ಕರೆಯುತ್ತೇವೆ.

English Translation.

We invoke the performer of beautiful actions (Indra) day by day for our protection like a good milch-cow for the purpose of milking.

॥ ವಿಶೇಷವಿಷಯಗಳು ॥

ಸುರೂಪಕೃತ್ನುಂ—ಈ ಶಬ್ದಪ್ರಯೋಗವು ಈ ಋಕ್ಕಿನಲ್ಲಲ್ಲದೆ ಋಗ್ವೇದದಲ್ಲಿ ಮತ್ತೆಲ್ಲಿಯೂ ಇಲ್ಲ. **ಭಾಷ್ಯಕಾರರು ಈ ಪದಕ್ಕೆ-ಶೋಭನರೂಪೋಪೇತಸ್ಯ ಕರ್ಮಣಃ ಕರ್ತಾರಂ**—ಒಳ್ಳೆಯ ರೂಪದಿಂದ ಕೂಡಿದ ಕಾರ್ಯಗಳನ್ನು ಮಾಡುವ ಎಂದು ಅರ್ಥಮಾಡಿರುವರು. ಸ್ಕಂದಸ್ವಾಮಿ ಮತ್ತು ವೆಂಕಟಮಾಧವರ ಅರ್ಥವಿವರಣೆಯೂ ಇದೇ ರೀತಿ ಇದೆ. Griffith ಮತ್ತು Macdonell ಎಂಬುವರು ಸಾಯಣರ ಅರ್ಥವನ್ನೇ ಅನುಸರಿಸಿದಾರೆ. Grassmann ಎಂಬ ಜರ್ಮನ್ ಪಂಡಿತನು—" He who knows to perform beautiful things " —ಸುಂದರಕೃತ್ಯಗಳನ್ನು ಮಾಡಲು ಸಾಮರ್ಥ್ಯವುಳ್ಳ ಎಂದೂ Ludwig ಪಂಡಿತನು-" Creater of beautiful forms "—ಸುಂದರ ಆಕಾರಗಳನ್ನು ನಿರ್ಮಿಸಬಲ್ಲ ಎಂದೂ ಅರ್ಥಮಾಡಿದಾರೆ. ಆದರೆ Geldner ಎಂಬ ಪಂಡಿತನು—" when he assumes his good forms or he who shows himself from his best side "—ತನ್ನ ಉತ್ತಮವಾದ ರೂಪವನ್ನು ತೋರ್ಪಡಿಸುವ ಎಂದು ಹೇಳಿ ಈ ಅಭಿಪ್ರಾಯಸಮರ್ಥನೆಗಾಗಿ—

ರೂಪಂರೂಪಂ ಪ್ರತಿರೂಪೋ ಬಭೂವ ತದಸ್ಯ ರೂಪಂ ಪ್ರತಿಚಕ್ಷಣಾಯ ।
ಇಂದ್ರೋ ಮಾಯಾಭಿಃ ಪುರುರೂಪ ಈಯತೇ ಯುಕ್ತಾ ಹ್ಯಸ್ಯ ಹರಯಃ ಶತಾ ದಶ ॥

(ಋ. ಸಂ. ೬-೪೭-೧೮)

ಎಂಬ ಋಕ್ಕನ್ನು ಉದಾಹರಿಸಿದಾನೆ. ಇದರ ಅರ್ಥವು—" He has become suitable to every form ; this true form of his is to be recognised again and again. Indra assumes many forms by virtue of his mysterious power ; for, ten hundred horses have been yoked for him "—ಇಂದ್ರನು ತನ್ನ ಮಾಯಾಶಕ್ತಿಯಿಂದ ಅನೇಕ ರೂಪಗಳನ್ನು ಧರಿಸಲು ಸಮರ್ಥನು ಎಂದು ಮುಖ್ಯಾಭಿಪ್ರಾಯವು. ಮತ್ತು—

रूपंरूपं मघवा बोभवीति मायाः कृण्वानस्तन्वं१परि स्वाम् ॥

(ऋ. सं. ३-५३-४)

एंब ऋक्कनल्लियूं सह इंद्रनु अनेक रूपगळन्नु धरिसलु समर्थनेंदु हेळिरुवुदु. निरुक्तदल्लियूं सह (नि. ८०-८१) ई ऋक्किगे ई रीति विवरणे इरुवुदु—

> विश्वामित्रस्यार्षम् । यावन्ति कानिचिद्रूपाणि मघवा इन्द्रो भवितुमिच्छति तानि सर्वाण्यप्रतिबन्धेन बोभवीति पुनःपुनर्भवतीति । कथम् ? मायाः कृण्वानः इदं भवामीदं भवामीत्येवं "तन्वं परि स्वाम्" स्वां तनुं तत्तदाकृत्यानेकविधां विकुर्वाणः । तेनासावचिन्त्यप्रभावत्वाच्छक्नोति तत्तद्रूपमेवेष्टुम् ॥ इत्यादि

एंदरे ई ऋक्किनल्लि विश्वामित्रऋषियु ई रीति हेळिरुवनु—

इंद्रनु तन्न मायाशक्तियिंद तन्न शरीरवन्नु अनेकविधवागि परिवर्तनेगॊळिसलु एंदरे कालोचितवागि अनेकविधवाद शरीराकृतिगळन्नु धरिसलु समर्थनु एंदु. शत्रुसंहारद कालदल्लि भयंकरवाद रूपवन्नू भक्तर अथवा स्तोत्रवमाडुव जनर इष्टार्थगळन्नु सल्लिसुवागे सुंदरवाद रूपवन्नु धरिसलु शक्तियुळ्ळनेंदूं इवनिगे ई विधवाद कार्यगळिगे तक्क मायाशक्तियिरुवुदेंदूं अभिप्रायवु. आदुदरिंद प्रसक्तवाद ऋक्किनल्लि **सुरूपकृत्नुं** एंब पदवु नम्म संरक्षणेगागि प्रीतिपुरस्सरवागि इंद्रनन्नु आह्वानिसुवुदरिंद इंद्रनु तन्न मायाशक्तियिंद सुंदरवाद एंदरे सौम्यवाद रूपवन्नु धरिसि नम्मन्नु कापाडुवुदक्कागि इल्लिगे बरलि एंदु सूचिसुवुदक्कागि ऋषियु ई शब्दवन्नु प्रयोगमाडिरबहुदु. **कृत्नु**शब्दवु परदल्लि बरुव **लोककृत्नुं** एंब पदवु—

> तं ते मदं गृणीमसि वृषणं पृश्नेः सुतम् ।
> उ लोककृत्नुमद्रिवो हरिश्रियम् ॥ (ऋ. सं. ६-१७-४)
> तं त्वा मदाय घृष्वय उ लोककृत्नुमीमहे ।
> तव प्रशस्तयो महीः ॥ (ऋ. सं. ९-३-९)

एंब एरडु ऋक्कुगळल्लि मात्रविरुवुदु. ई पदवु एरडु ऋक्कुगळल्लियूं इंद्रन परवागियें इरुवुदु एंदरे इंद्रनिगे अन्वयिसुवुदु.

ऊतयें—रक्षणेगागि, कापाडुवुदक्कागि. ई शब्दवु मत्तु इदर रूपांतरगळाद **ऊतयेः, ऊतिः, ऊतिभिः, ऊतिं ऊतिषु ऊतीः, ऊतीः, ऊत्या** एंब शब्दगळु ऋग्वेददल्लि अनेककडे उपयोगिसल्पट्टिवे. निरुक्तदल्लि (नि. ७-३) **ऊतिः**—अवनं एंदु हेळि,

ಆ ತ್ವಾ ರಥಂ ಯಥೋತಯೇ ಸುಮ್ನಾಯ ವರ್ತಯಾಮಸಿ । (ಋ. ಸಂ. ೬-೫೫-೧)

ಎಂಬ ಈ ದಾಹರಣೆಯಾಗಿ ಕೊಟ್ಟಿರುವ ಋಕ್ಕಿನಲ್ಲಿರುವ ಊತಯೇ ಎಂಬ ಶಬ್ದಕ್ಕೆ ಅವನಾಯ, ರಕ್ಷಣಾಯ ಎಂದು ಅರ್ಥವಿವರಣೆಯನ್ನು ಕೊಟ್ಟಿರುವರು. ಇಂತಹ ಉದಾಹರಣೆಗಳು ಋಗ್ವೇದದಲ್ಲಿ ಬೇಕಾದಷ್ಟಿವೆ. ಶತ್ರುಗಳಿಂದ ಬಾಧೆಯನ್ನು ತಪ್ಪಿಸಿ ಅಭಯವನ್ನುಂಟುಮಾಡಬೇಕೆಂದೂ ತಮ್ಮನ್ನು ರಕ್ಷಿಸಬೇಕೆಂದೂ ಇಂದ್ರನನ್ನು ಪ್ರಾರ್ಥಿಸುವ ಋಕ್ಕುಗಳು ಋಗ್ವೇದದಲ್ಲಿ ಅನೇಕಕಡೆ ಇವೆ.

ತ್ರಾತಾರಮಿಂದ್ರಮವಿತಾರಮಿಂದ್ರಂ ಹವೇಹವೇ ಸುಹವಂ ಶೂರಮಿಂದ್ರಂ ॥
(ಋ. ಸಂ. ೬-೪೭-೧೧)

ಬಾಧತಾಂ ದ್ವೇಷೋ ಅಭಯಂ ಕೃಣೋತು ಸುವೀರ್ಯಸ್ಯ ಪತಯಃ ಸ್ಯಾಮ ॥
(ಋ. ಸಂ. ೬-೪೭-೧೨)

ಇಂದ್ರನ ವಿಷಯವಾಗಿ ಇಂತಹ ಋಕ್ಕುಗಳು ಅನೇಕವಿವೆ.

ಸುದುಘಾಮಿವ ಗೋದುಹೇ— ಹಾಲಿಗಾಗಿ ಹಸುವನ್ನು ಕರೆಯುವಂತೆ–ಈ ಉಪಮಾನವು ಅಥವಾ ಇದೇ ಅರ್ಥವುಳ್ಳ ಉಪಮಾನವು (ಉಪ್ತೋಪಮಾ) ಋಗ್ವೇದದಲ್ಲಿ ಅನೇಕಕಡೆ ಉಪಯೋಗಿಸಿರುವುದರಿಂದ ಆ ಕಾಲದಲ್ಲಿ ಈ ವಾಕ್ಯವನ್ನು ಉದಹರಿಸುವುದು ಬಳಕೆಯಲ್ಲಿತ್ತೆಂದು ತೋರುವುದು.

ತಂ ತ್ವಾ ವಯಂ ಸುದುಘಾಮಿವ ಗೋದುಹೋ ಜುಹೂಮಸಿ ಶ್ರವಸ್ಯವಃ ॥
(ಋ. ಸಂ. ೮-೫೨-೪)

ಇಂದ್ರಂ ಧೇನುಂ ಸುದುಘಾಮನ್ಯಾಮಿಷಮುರುಧಾರಾಮರಂಕೃತಂ । (ಋ. ಸಂ. ೮-೧-೧೦)
ಉಪಹ್ವಯೇ ಸುದುಘಾಂ ಧೇನುಮೇತಾಂ ಸುಹಸ್ತೋ ಗೋಧುಗುತದೋಹದೇನಾಂ ।
(ಋ. ಸಂ. ೧-೧೬೪-೨೬)

ಹಾಲನ್ನು ಕೊಡುವ ಹಸುವು ಎಲ್ಲರಿಗೂ ಪ್ರಿಯವಾಗಿರುವುದಷ್ಟೆ. ಅದರಂತೆ ಶತ್ರುಗಳ ಬಾಧೆಯಿಂದ ಕಾಪಾಡುವ ಇಂದ್ರನು ಎಲ್ಲರಿಗೂ ಬೇಕಾದವನೆಂದಭಿಪ್ರಾಯವು.

ದ್ಯವಿದ್ಯವಿ— ಪ್ರತಿದಿನವೂ. ನಿತ್ಯವೀಪ್ಸಯೋರಿತಿ ದ್ವಿರ್ಭಾವಃ (ಪಾ. ೮-೧-೪) ಒಂದು ಶಬ್ದವು ಎರಡಾವೃತ್ತಿ ಪಠಿತವಾದರೆ ಪ್ರತಿಯೊಂದೂ ಎಂದು ಅಭಿಪ್ರಾಯವು. ಉದಾ.—ದಿನೇದಿನೇ, ಆಹರಹಃ, ವನಾವನಾ ಸಿ, ಯಂಜ್ಯೇಯಂಜ್ಯೇ, ಭರೇಭರೇ ಹವೇಹವೇ, ದಮೇದಮೇ, ಇತ್ಯಾದಿ.

॥ ವ್ಯಾಕರಣಪ್ರಕ್ರಿಯಾ ॥

ಅ ನೆಯ ಸೂತ್ರ

ಸುರೂಪ ಕೃತ್ಮುಂ-ರು ಶಬ್ದೋ-ಧಾತು. ಇದರಮುಂದೆ ಖಿಷ್ಪ ಶಿಲ್ಪ ಶಷ್ಪ ಬಾಷ್ಪ ರೂಪ ಪರ್ಪ ತಲ್ಪಾಃ (ಉ. ಸೂ. ೬-೩೦೮) ಖಿನು ಅವದಾರಣೇ, ಶೀಲಸಮಾಧೌ, ಶಸುಹಿಂಸಾಯಾಂ, ಬಾಧೃ ಲೋಡನೇ ಶುಶಬ್ದೋ, ಪೂಪಾಲನಪೂರಣಯೋಃ, ತಲಪ್ರತಿಷ್ಠಾ ಕರಣೇ, ಈ ಏಳು ಧಾತುಗಳಮುಂದೆ ಪ ಎಂಬ ಪ್ರತ್ಯ

ಯವೂ, ಕೆಲವುಕಾರ್ಯಗಳೂ ನಿಪಾತಿಸಲ್ಪಡುವವು ಎಂಬುದರಿಂದ ಪಪ್ರತ್ಯಯ ಬರುತ್ತದೆ. ರು+ಪ, ಈಗ ನಿಪಾತನದಿಂದಲೇ ದೀರ್ಘ ಬಂದರೆ ರೂಪ ಎಂದಾಗುವುದು , ರೂಪ್ಯತೇ ಇತಿ ರೂಪಂ ಎಂದು ಇಲ್ಲಿ ವಿಗ್ರಹವು. ಅಂದರೆ ಜನರಿಂದ ಸ್ತೋತ್ರವಮಾಡಲ್ಪಡುವುದರಿಂದ ರೂಪ, ಎಂದು ಹೆಸರಾಗಿದೆ ಎಂದು ಅರ್ಥ. ಶೋಭನಂ ರೂಪಂ ಯಸ್ಯ ತತ್ ಎಂದು ಬಹುವ್ರೀಹಿ ಸಮಾಸ—ಸುರೂಪಂ ಎಂದಾಗುವುದು. ಸುರೂಪಸ್ಯ ಕೃತ್ನುಃ ಎಂದು ನಂತರ ಷಷ್ಠೀಸಮಾಸ. ಕರೋತಿ ಇತಿ ಕೃತ್ನುಃ- 'ಕೃಹನಿಭ್ಯಾಂ ಕ್ನುಃ' (ಉ. ಸೂ. ೩-೩೧೦) ಡುಕೃಞ್ ಕರಣೇ-ಹನ ಹಿಂಸಾಗತ್ಯೋಃ ಎಂಬ ಧಾತುಗಳಿಗೆ ಕ್ನು ಪ್ರತ್ಯಯಬರುವುದು- ಕ್ನು ಬಂದರೆ-ಕೃ+ನು ಎಂಬಲ್ಲಿ ಪ್ರತ್ಯಯವು ಕಿತ್ತಾದ್ದರಿಂದ ಗುಣಬರುವುದಿಲ್ಲ, ಛಂದಸ್ಸಾದ್ದರಿಂದ ತಕಾರವು ಹೆಚ್ಚಾಗಿ ಸೇರಿಕೊಳ್ಳುವುದು. ಉಣಾದಿಯಲ್ಲಿ ಕೃಹನಿಭ್ಯಾಂ ಕ್ನುನ್ನುಃ (ಉ. ಸೂ. ೩-೩-೧೦) ಎಂದು ತಕಾರದಿಂದ ಕೂಡಿರುವ ಪ್ರತ್ಯಯವೇ ಯದ್ಯಪಿ ವಿಧಿಸಿದೆ, ಆದುದರಿಂದಲೇ ಹನ್-ಧಾತುವಿನ ಮುಂದೆ ಕ್ತು -ಪ್ರತ್ಯಯಬಂದು ಹತ್ನುಃ ಎಂದಾಗುತ್ತೆ. ಆದರೂ ತಕಾರವಾರ ಇಲ್ಲ ಎಂದು ಇಟ್ಟುಕೊಂಡು ಭಾಷ್ಯದಲ್ಲಿ, ಛಾಂದಸವಾಗಿ ತಕಾರವನ್ನು ಸೇರಿಸಿಕೊಳ್ಳಬೇಕೆಂದು ಹೇಳಲಾಗಿದೆ. ಇಲ್ಲಿ ರೂಪ ಎಂಬೆಡೆ ಧಾತೋಃ (ಪಾ. ಸೂ. ೬-೧-೧೬೨) ಎಂಬುದರಿಂದ ಧಾತುವಿನ ಉಕಾರ ಉದಾತ್ತ-ಪ್ರತ್ಯಯವನ್ನು ಹಚ್ಚಿದ ನಂತರ ಆದ್ಯುದಾತ್ತಶ್ಚ (ಪಾ. ಸೂ. ೩-೧-೩) ಎಂಬುದರಿಂದ ಸತಿಶಿಷ್ಟವಾದ ಪ್ರತ್ಯಯಾದ್ಯುದಾತ್ತ ಬರಲು ಶೇಷಾನುದಾತ್ತಸ್ವರದಿಂದ ಊಕಾರ ಅನುದಾತ್ತ. ಅಂತು ರೂಪ ಎಂಬುದು ಅಂತೋದಾತ್ತ. ಸುಶಬ್ದದೊಂದಿಗೆ ಬಹುವ್ರೀಹಿ ಬಂದರೆ, ಸಮಾಸಸ್ಯ (ಪಾ. ಸೂ. ೬-೧-೨೨೩) ಎಂಬ ಅಂತೋದಾತ್ತವನ್ನು ಬಾಧಿಸಿ ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್, (ಪಾ. ಸೂ- ೬-೩-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಪ್ರಾಪ್ತವಾದರೆ ಇದು ನಞ್‌ಸುಭ್ಯಾಮ್ (ಪಾ. ಸೂ. ೬-೩-೧೭೨) ಬಹುವ್ರೀಹಿ ಸಮಾಸದಲ್ಲಿ ನಞ್‌ಸು-ಇವುಗಳ ಮುಂದೆ ಇರುವ ಉತ್ತರಪದವು ಅಂತೋದಾತ್ತ ವಾಗುವುದು ಎಂಬುದರಿಂದ ಸುರೂಪ ಎಂಬುದು ಅಂತೋದಾತ್ತ. ಮಿಕ್ಕ ಎರಡು ಸ್ವರಗಳೂ ಶೇಷಾನುದಾತ್ತಸ್ವರದಿಂದ ಅನುದಾತ್ತಗಳು- ಕೃತ್ನುಶಬ್ದದಲ್ಲಿ ತ್ನು ಪ್ರತ್ಯಯಸ್ವರಬಂದು ಶೇಷಾನುದಾತ್ತದಿಂದ ಕೃ ಎಂಬುದು ಅನುದಾತ್ತ-ಕೃತ್ನು ಎಂಬುದು ಅಂತೋದಾತ್ತ-ಸುರೂಪಸ್ಯ ಕೃತ್ನುಃ ಎಂದು ಷಷ್ಠೀಸಮಾಸ ಮಾಡಿದಾಗ, ಸುರೂಪಕೃತ್ನು ಎಂಬಲ್ಲಿ ಸಮಾಸಸ್ಯ ಎಂಬುದರಿಂದ ಅಂತೋದಾತ್ತ ಬರುವುದು ಸುರೂಪಕೃತ್ನು- ಎಂಬುದರ ಮುಂದೆ ದ್ವಿತೀಯಾ ಏಕವಚನದ ಅಮ್ ಪ್ರತ್ಯಯ ಹಚ್ಚಬೇಕು. ಅನುದಾತ್ತೌ ಸುಪ್ಪಿತೌ (ಪಾ. ಸೂ. ೩-೧-೪) ಎಂಬುದರಿಂದ ಅಮ್—ಅನುದಾತ್ತ. ಕೃತ್ನು—ಅಮ್ ಎಂಬಲ್ಲಿ ಅಮಿಪೂರ್ವಃ (ಪಾ.ಸೂ. ೬-೧-೧೦೭) ಎಂಬುದರಿಂದ ತ್ನು ಎಂಬಲ್ಲಿಯ ಉದಾತ್ತ ಉಕಾರ-ಅಮ್ ನ ಅನುದಾತ್ತ ಅಕಾರ, ಇವೆರಡಕ್ಕೂ ಪೂರ್ವರೂಪದಿಂದ ಏಕಾದೇಶವಾಗಿ ಉಕಾರ ಬರುವುದು. ಅದು ಏಕಾದೇಶ ಉದಾತ್ತೇನೋದಾತ್ತಃ, (ಪಾ.ಸೂ. ೮-೨-೫) ಎಂಬುದರಿಂದ ಉದಾತ್ತವಾಗುವುದು, ಏನಂಚ ಸುರೂಕೃತ್ನುಮ್ ಎಂಬಲ್ಲಿ ತ್ನು ನ ಉಕಾರ ಉದಾತ್ತ ಮಿಕ್ಕ ಅಚ್ಚುಗಳು ಅನುದಾತ್ತಗಳು ಎಂದು ಏರ್ಪಟ್ಟಿತು. ಊತಯೋ—ಊತಿಯೂತಿಜೂತಿ-ಸಾತಿ ಹೇತಿ ಕೀರ್ತಯಶ್ಚ (ಪಾ. ಸೂ. ೩-೩-೯೭) ಮಂತ್ರೇವೃಷೇಷಪಚಮನವಿದಭೂವೀರಾ ಉದಾತ್ತಃ ಎಂಬ ಪೂರ್ವಸೂತ್ರದಲ್ಲಿರುವ ಉದಾತ್ತಪದವು ಇಲ್ಲಿಗೆ ಅನುವೃತ್ತವಾಗುವುದು. ಊತಿ, ಇತ್ಯಾದಿಕ್ತಿನ್ ಪ್ರತ್ಯಯಾಂತ ಶಬ್ದಗಳು ಕ್ತಿನ್ನಂತವಾಗಿ ನಿಪಾತಿಸಲ್ಪಡುವುವು. ಅವು ಅಂತೋದಾತ್ತಗಳಾಗುವುವು ಎಂಬುದರಿಂದ ಊತಿ ಎಂಬುದು ಅಂತೋದಾತ್ತ, ಅವ ರಕ್ಷಣೆ ಧಾತುವಿಗೆ ಕ್ತಿನ್ ಪ್ರತ್ಯಯವನ್ನಿಟ್ಟರೆ ಜ್ವರತ್ವರಸೃವ್ಯವಿ (ಪಾ. ಸೂ. ೬-೪-೨೦) ಇತ್ಯಾದಿ ಸೂತ್ರದಿಂದ ಉಪಧಾವನಕಾರಗಳಿಗೆ ಊಠ್ ಬಂದರೆ ಊತಿ ಎಂದಾಗುತ್ತೆ. ಇಲ್ಲಿ ಧಾತು ಸ್ವರಕ್ಕೆ ಪ್ರತ್ಯಯಸ್ವರದಿಂದಲೂ, ಅದಕ್ಕೆ ನಿತ್ವಸ್ವರದಿಂದಲೂ ಬಾಧಬರುವುದರಿಂದ ನಿತ್ವಸ್ವರನಿಲ್ಲಬೇಕಾಗಿ ಬಂದರೆ ಅದಕ್ಕೂ ಬಾಧಕವಾಗಿ ನಿಪಾತನದಿಂದ ತಿ ಯ ಇಕಾರ ಉದಾತ್ತ. ಊ-ಎಂಬುದು ಶೇಷಾನುದಾತ್ತದಿಂದ ಅನು

ದಾತ್ತ-ಊತಿಶಬ್ದದ ಮುಂದೆ ಚತುರ್ಥೀವಿಭಕ್ತಿ ಙೇಪ್ರತ್ಯಯ ಹಚ್ಚಿದರೆ-ಊತಿ+ಎ ಈಗ ಘೇರ್ಙಿತಿ (ಪಾ ಸೂ. ೭-೩೧೧) ಸಖಿ ಶಬ್ದವನ್ನು ಬಿಟ್ಟು ನದೀ ಸಂಜ್ಞೆಯನ್ನು ಹೊಂದದೇ ಇರುವ ಹ್ರಸ್ವ ಇಕಾರ-ಹ್ರಸ್ವ ಉಕಾರಗಳನ್ನು ಕೊನೆಯಲ್ಲಿ ಹೊಂದಿರುವ ಶಬ್ದಗಳಿಗೆ ಘಿ-ಎಂದು ಸಂಜ್ಞೆ-ಇಂತಹ ಶಬ್ದಕ್ಕೆ ಙಕಾರೇತ್ಸಂಜ್ಞಕ ಪ್ರತ್ಯಯ ಮುಂದೆ ಇರುವಾಗ ಗುಣಬರುವುದು, ಎಂಬುದರಿಂದ ಗುಣಬಂದರೆ- ಊತೇ+ಏ-ಅಯಾದೇ- ಊತಯೇ ಎಂದಾಗುತ್ತೆ. ಇಲ್ಲಿ ಙೇಪ್ರತ್ಯಯ ಸುಪ್ ಆದ್ದರಿಂದ ಅನುದಾತ್ತ-ಙೇಪ್ರತ್ಯಯವನ್ನು ನಿಮಿತ್ತಮಾಡಿಕೊಂಡು ಬಂದ ಗುಣವು ಉದಾತ್ತವಾದ ತಿ-ಯ ಇಕಾರದ ಸ್ಥಾನದಲ್ಲಿ ಬರುವುದರಿಂದ ಉದಾತ್ತ, ಅದರ ಸ್ಥಾನದಲ್ಲಿ ಬಂದ ಅಯ್ ಆದೇಶವೂ ಸ್ಥಾನಿವದ್ಭಾವದಿಂದ ಉದಾತ್ತ. ಅಂತು ಊತಯೇ ಎಂಬಲ್ಲಿ ಊ ಎಂಬ ಮೊದಲನೆಯ ಅಚ್ಚು ಅನುದಾತ್ತ ಎರಡನೆಯದು ಉದಾತ್ತ, ಮೂರನೆಯದು 'ಉದಾತ್ತಾದನುದಾತ್ತಸ್ಯಸ್ವರಿತಃ' (ಪಾ. ಸೂ. ೮-೪-೬೬) ಉದಾತ್ತದ ಪರದಲ್ಲಿರುವ ಅನುದಾತ್ತವು ಸ್ವರಿತವಾಗುವುದು ಎಂಬುದರಿಂದ ಸ್ವರಿತವು. **ಸುದುಘಾಂಃ**—ಸುಷ್ಠು ದುಗ್ಧೇ (ಚೆನ್ನಾಗಿಕರೆಯುವುದು) ಇತಿ ಸುದುಘಾ. ದುಹ ಪ್ರಪೂರಣೇ ಧಾತುವಿಗೆ **ದೌಹಃಕಿಬ್ಘಶ್ಚ** (ಪಾ. ಸೂ. ೩-೨-೭೦) ಸುಬಂತವು ಉಪಪದವಾಗಿರುವಾಗ ದುಹ ಧಾತುವಿನ ಮುಂದೆ ಕಪ್ ಪ್ರತ್ಯಯ ಬರುವುದು ದುಹ್ ನ ಹಕಾರಕ್ಕೆ ಘ್ ಆದೇಶಬರುವುದು ಎಂಬುದರಿಂದ ಕಪ್ರತ್ಯಯ ಬಂದರೆ ದುಹ್+ಅ-ಇದರಿಂದಲೇ ಹ್‌ಗೆ ಘಾದೇಶ ಬಂದರೆ ದುಘ್+ಅ, ಪ್ರತ್ಯಯವು ಕಿತ್ತಾದ್ದರಿಂದ ಲಘೂಪಧ ಗುಣಬರುವುದಿಲ್ಲ. ಕಪ್ ಪ್ರತ್ಯಯವು ಪಿತ್ತಾದ್ದರಿಂದ 'ಅನುದಾತ್ತಸುಪ್ಪಿತೌ' ಎಂಬುದರಿಂದ ಅನುದಾತ್ತ. ದುಹ್‌ನ ಉಕಾರಕ್ಕೆ **ಧಾತೋಃ** (ಪಾ. ಸೂ ೬-೧-೧೬೨) ಎಂಬುದರಿಂದ ಉದಾತ್ತ ಬರುವುದು. ಸು ಶಬ್ದದೊದಿಗೆ ದುಘ್ ಎಂಬುದಕ್ಕೆ **ಸಮಾಸಮಾಡಿದರೆ ಗತಿಕಾರಕೋಪಪದಾತ್ಪ್ರಾತ್** (ಪಾ. ಸೂ. ೬-೨-೧೩೯) ಎಂಬುದರಿಂದ ಪೂರ್ವದಲ್ಲಿ ಹೇಳಿದ ಸ್ವರವೇ ನಿಲ್ಲವುದು. ಸ್ತ್ರೀಲಿಂಗದಲ್ಲಿ ಟಾಪ್ ಬಂದರೆ ಸುದುಘಾ ಎಂದಾಗುವುದು 'ಸುದುಘಾಮ್' ಎಂಬ ದ್ವಿತೀಯಾ ಏಕವಚನಾಂತಕ್ಕೆ **ಇವೇನ ಸಮಾಸೋ ವಿಧಕ್ತ್ಯಲೋಪಃ ಪೂರ್ವಪದಪ್ರಕೃತಿಸ್ವರತ್ವಂ ಚ** ಎಂಬ ಅನುಶಾಸನಪ್ರಕಾರ ಇವಶಬ್ದದೊಂದಿಗೆ ಸಮಾಸವನ್ನು ಮಾಡಿದರೆ ಆದೇಸ್ವರವೇ ಇರುವುದು. **ಗೋದುಹೇ**:—ಗಾಂ ದೋಗ್ಧಿ (ಹಸುವನ್ನು ಕರೆಯುತ್ತಾನೆ) ಇತಿ ಗೋಧುಕ್. **ಸತ್ಸೌದ್ವಿಷದ್ಗುಹ ದುಹ ಯುಜ ವಿದ ಭಿದ ಚ್ಛಿದ ಜಿನೀರಾಜಾಮುಪಸರ್ಗೇಽಪಿ ಕ್ವಿಪ್** (ಪಾ. ಸೂ ೩-೨-೬೧) ಷದೃ ವಿಶರಣ ಗತ್ಯವಸಾದನೇಷು, ಷೂಙ್ ಪ್ರಾಣಿಗರ್ಭವಿಮೋಚನೇ, ದ್ವಿಷ ಅಪ್ರೀತೌ, ದ್ರುಹ ಜಿಘಾಂಸಾಯಾಂ, ದುಹಪ್ರಪೂರಣೇ ಯುಜಿರ್‌ಯೋಗೇ ಯುಜ ಸಮಾಧೌ, ವಿದ ಜ್ಞಾನೇ ವಿದ ವಿಚಾರಣೇ ವಿದ ಸತ್ತಾಯಾಂ, ಭಿದಿರ್ ವಿದಾರಣೇ, ಛಿದಿರ್ ದ್ವೈಧೀಕರಣೇ, ಜಿ ಜಯೇ, ಣೀಞ್ ಪ್ರಾಪಣೇ, ರಾಜೃದೀಪ್ತೌ, ಈ ಧಾತುಗಳಿಗೆ ಉಪಸರ್ಗವಿದ್ದರೂ ಇಲ್ಲದಿದ್ದರೂ ಸುಬಂತವು ಉಪಪದವಾಗಿರುವಾಗ ಕ್ವಿಪ್ ಬರುವುದು ಎಂಬುದರಿಂದ ದುಹ್ ಧಾತುವಿನಮೇಲೆ ಕ್ವಿಪ್ ಪ್ರತ್ಯಯಬರುವುದು. ಸಮಾಸದಲ್ಲಿ ಕೃದುತ್ತರಪದಪ್ರಕೃತಿಸ್ವರವೇ ಬರುವುದು.

ಜುಹೂಮಸಿ :—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ ಎಂಬ ಧಾತುವು ಭ್ವಾದಿ (೧ನೆ) ಗಣದಲ್ಲಿರುವುದು. ಇದರಮೇಲೆ ಲಟ್ ಉತ್ತಮಪುರುಷ ಬಹುವಚನವನ್ನಿಟ್ಟರೆ ಹ್ವೇ+ಮಸ್ ಎಂದಿರುವಾಗ ಬರುವ ಶಪ್ (ಅ) ವಿಕರಣಕ್ಕೆ **ಬಹುಲಂ ಛಂದಸಿ** (ಪಾ. ಸೂ. ೨-೪-೩೬) ಛಂದಸ್ಸಿನಲ್ಲಿ ಶ್ಲು ವು (ಶ್ಲು ಶಬ್ದವನ್ನು ಚ್ಚುರಿಸಿ ಬರುವ ಲೋಪ) ಬಹುಲವಾಗಿ ಬರುವುದು ಎಂಬುದರಿಂದ ಶ್ಲು (ಲೋಪ) ಬರುವುದು, **ಅಭ್ಯಸ್ತಸ್ಯಚ** (ಪಾ. ಸೂ. ೬-೧-೩೩) ಷಷ್ಠ್ಯಾಧ್ಯಾಯಸೂತ್ರದಿಂದ ದ್ವಿರುಚ್ಚಾರಣೆ ಬಂದಕಡೆಯಲ್ಲಿ ದ್ವಿರುಚ್ಚರಿತ ಶಬ್ದಗಳೆರಡಕ್ಕೂ ಸೇರಿ ಅಭ್ಯಸ್ತ ಎಂದು ಹೆಸರು. ಈ ಅಂಶವನ್ನು 'ಉಭೇ ಅಭ್ಯಸ್ತಂ' ಎಂಬ ಸೂತ್ರದಿಂದ ಸ್ಪಷ್ಟಪಡಿಸಿರುವರು. ಅಭ್ಯಸ್ತ ಸಂಜ್ಞೆಗೆ

ಕಾರಣವಾದ ಷ್ವೇಞ್ ಧಾತುವಿಗೆ ಸಂಪ್ರಸಾರಣ ಬರುವುದು ಎಂಬುದರಿಂದ ಸಂಪ್ರಸಾರಣ ಬಂದರೆ ಹು+ಏ+ ಮಸ್ ಎಂದಿರುವುದು, ಈಗ **ಸಂಪ್ರಸಾರಣಾಚ್ಚ** (ಪಾ. ಸೂ. ೬-೧-೧೦೮) ಸಂಪ್ರಸಾರಣದ ಮುಂದೆ ಅಚ್ ಇದ್ದರೆ ಪೂರ್ವಪರಗಳ ಸ್ಥಾನದಲ್ಲಿ, ಪೂರ್ವರೂಪ ಒಂದೇ ಬರುವುದು ಎಂಬುದರಿಂದ ಪೂರ್ವರೂಪಬಂದರೆ ಹು+ ಮಸ್ ಆಗುವುದು. 'ಹಲಃ' (ಪಾ. ಸೂ. ೬-೪-೨) ಅಂಗಾವಯವವಾದ ವ್ಯಂಜನದ ಮುಂದೆ ಯಾವ ಸಂಪ್ರಸಾರಣವಿದೆಯೋ ಅದನ್ನು ಕೊನೆಯಲ್ಲಿ ಹೊಂದಿರುವ ಅಂಗಕ್ಕೆ ದೀರ್ಘಬರುವುದು, ಎಂಬುದರಿಂದ ಉಕಾರಕ್ಕೆ ದೀರ್ಘ ಬಂದರೆ ಹೂ+ಮಸ್ ಈಗ **ಶ್ನ್ಲು** (ಪಾ. ಸೂ. ೬-೧-೧೦) ಶ್ನು ಬಂದಿರುವಾಗ ಧಾತುವಿಗೆ ದ್ವಿರುಚ್ಚಾರಣೆ ಬರುವುದು. ಎಂಬುದರಿಂದ ದ್ವಿರುಚ್ಚಾರಣೆ ಬಂದರೆ ಹೂ+ಹೂ+ಮಸ್ **ಹ್ರಸ್ವಃ** (ಪಾ. ಸೂ. ೭-೪-೫೯) ಅಭ್ಯಾಸದ ಅಚ್ಚಿಗೆ ಹ್ರಸ್ವ ಬಂದರೆ ಹು+ಹೂ+ಮಸ್ **ಕುಹೋಶ್ಚುಃ** (ಪಾ. ಸೂ. ೭-೪-೬೨) ಅಭ್ಯಾಸದಲ್ಲಿರುವ ಕವರ್ಗ ಹಕಾರಗಳಿಗೆ ಚವರ್ಗವು ಆದೇಶವಾಗಿ ಬರುವುದು. ಎಂಬುದರಿಂದ ಹಕಾರಕ್ಕೆ ಝಕಾರ ಬಂದರೆ **ಆಭ್ಯಾಸೇ ಚರ್ಚ** (ಪಾ. ಸೂ ೮-೪-೫೪) ಅಭ್ಯಾಸದಲ್ಲಿರುವ ಝಶ್ ವರ್ಣಗಳಿಗೆ **ಜಶ್** ವರ್ಣಗಳೂ ಖಯ್ ವರ್ಣಗಳಿಗೆ **ಚರ್** ವರ್ಣಗಳು ಬರುವುವು ಎಂಬುದರಿಂದ ಝಕಾರಕ್ಕೆ ಜಕಾರ ಬಂದರೆ ಜು+ಹೂ+ಮಸ್ **ಇದಂತೋಮಸಿ** (ಪ.ಸೂ. ೬-೧-೪೬) ಮಸ್ ಎಂಬುದು ಇಕ್ ಆಗಮವನ್ನು ಹೊಂದುವುದು ಎಂಬುದರಿಂದ ಇಕಾರಾಗಮ ಬಂದರೆ ' ಜಹೂಮಸಿ ' ಎಂದಾಗುವುದು. ಪ್ರತ್ಯಯಸ್ವರದಿಂದ ಮ ಎಂಬುನು ಉದಾತ್ತ.

ದ್ಯವಿದ್ಯವಿಃ— ದ್ಯುತ-ದೀಪ್ತೌ ಧಾತು-ಇದರಮುಂದೆ **ಉಣಾದಯೋ ಬಹುಲಂ** (ಪಾ.ಸೂ. ೩-೩-೧) ಎಂಬಲ್ಲಿ ಬಹುಲಗ್ರಹಣವಿದ್ದುದರಿಂದ ಡೋಪ್ರತ್ಯಯ ಬರುವುದು. ಭಟ್ಟೋಜೀದೀಕ್ಷಿತರು **ಕೌಮುದಿಯಲ್ಲಿ ಗಮೇಡ್ರ್ಯೋಃ** (ಉ. ಸು. ೨-೨೭೬) ಎಂಬ ಸೂತ್ರದ ವಿವರಣೆಯಲ್ಲಿ ಬಾಹುಲಕಾದ್ಯುತೇರಪಿ ದ್ಯೌಃ ಎಂದು ಹೇಳಿರುವರು. ದ್ಯು ಅಳಿಗಮನೇ ಧಾತುವಿನಮುಂದೆ ಡೋ ಪ್ರತ್ಯಯ ಎಂದು ಭೋಜದೇವನು ಅಭಿಪ್ರಾಯಪಟ್ಟರುವನು. ದ್ಯೋ ಎಂಬುದು ಫಿಷಃ (ಉ.ಸೂ. ೧) ಎಂಬುದರಿಂದ ಅಂತೋದಾತ್ತ. ಸಪ್ತಮ್ಯೇಕವಚನದಲ್ಲಿ ದ್ಯವಿ-**ನಿತ್ಯವೀಪ್ಸಯೋಃ** (ಪಾ. ಸೂ. ೪-೧-೪) ಎಂಬುದರಿಂದ ದ್ವಿತ್ವಬಂದರೆ ದ್ಯವಿದ್ಯವಿ. ಇಲ್ಲಿ **ತಸ್ಯ ಪರಮಾಮ್ರೇಡಿತಂ** (ಪಾ. ಸೂ. ೮-೧-೩) ದ್ವಿರುಚ್ಚಾರಣೆಯನ್ನು ಹೊಂದಿದ ಶಬ್ದದ ಎರಡನೇ ಭಾಗಕ್ಕೆ ಆಮ್ರೇಡಿತವೆಂದು ಹೆಸರು. 'ಅನುದಾತ್ತಂ ಚ ' (ಪಾ. ಸೂ ೮-೧-೩) ಆಮ್ರೇಡಿತಕ್ಕೆ (ದ್ವಿರುಕ್ತ ಶಬ್ದದ ಎರಡನೇ ಭಾಗಕ್ಕೆ) ಅನುದಾತ್ತ ಬರುವುದು. ಎಂಬುದರಿಂದ ಎರಡನೇ ದ್ಯವಿ ಎಂಬುದು ಅನುದಾತ್ತ. ॥ ೧ ॥

॥ ಸಂಹಿತಾಪಾಠಃ ॥

ಉಪ॑ ನ॒ಃ ಸವ॒ನಾ ಗ॑ಹಿ॒ ಸೋಮ॑ಸ್ಯ॒ ಸೋಮಪಾಃ ಪಿಬ ।
ಗೋ॒ದಾ ಇದ್ರೇ॑ವತೋ॒ ಮದ॑ಃ ॥ ೨ ॥

॥ ಪದಪಾಠಃ ॥

ಉಪ॑ । ನ॒ಃ । ಸವ॑ನಾ । ಆ । ಗ॒ಹಿ॒ । ಸೋಮ॑ಸ್ಯ । ಸೋಮ॑ । ಪಾಃ । ಪಿ॒ಬ॒ ॥
ಗೋ॒ । ದಾಃ । ಇತ್ । ರೇ॒ವತಃ॑ । ಮದ॑ಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಸೋಮಪಾಃ ಸೋಮಸ್ಯ ಪಾತರಿಂದ್ರ ಸೋಮಂ ಪಾತುಂ ನೋ೭ಸ್ಮದೀಯಾನಿ ಸವನಾ ತ್ರೀಣಿ ಸವನಾನಿ ಪ್ರತ್ಯುಪ ಸವಿಾಪ ಆಗಹಿ । ಆಗಚ್ಛ । ಆಗತ್ಯ ಚ ಸೋಮಸ್ಯ ಸೋಮಂ ಪಿಬ । ರೇವತೋ ಧನವತಸ್ತವ ಮದೋ ಹರ್ಷೋ ಗೋದಾ ಇದ್ಗೋಪ್ರದ ಏವ । ತ್ವಯಿ ಹ್ಯಸ್ತೀ ಸತ್ಯಸ್ಮಾಭಿರ್ಗಾವೋ ಲಭ್ಯಂತ ಇತ್ಯರ್ಥಃ ॥ ಉಪ । ನಿಪಾತತ್ವಾದಾದ್ಯುದಾತ್ತಃ । ಸವನಾ । ಸೂಯತೇ ಸೋಮ ಏಷ್ವಿತಿ ಸವನಾನಿ । ಅಧಿಕರಣೇ ಲ್ಯುಟ್ । ಪಾ. ೩-೩-೧೧೭ । ಸುಪೋ ಡಾದೇಶಷ್ಟಿಲೋಪಶ್ಚ । ಲಿತೀತಿ ಪ್ರತ್ಯಯಾತ್ಪೂರ್ವಸ್ಯಾಕಾರಸ್ಯೋದಾತ್ತತ್ವಂ । ಗಹಿ । ಗಮೇರ್ಬಹುಲಂ ಛಂದಸೀತಿ ಶಪ್ರೋ ಲುಕ್ । ಹೇರ್ಧಿತ್ವಾದಿನುದಾತ್ತೋ೭ಪದೇಶೇತ್ಯಾದಿನಾ । ಪಾ. ೬-೪-೩೭ । ಮಕಾರಲೋ೭ಪಃ । ಅತೋ ಹೇಃ । ಪಾ. ೬-೪-೧೦೫ । ಇತ್ಯಾಭಾಚ್ಚಾಸ್ತ್ರೀಯೇ ಲುತಿ ಕರ್ತವ್ಯೇ೭ಸಿದ್ಧವದಿತ್ಯಾಭಾತ್ । ಪಾ. ೬-೪-೨೨ । ಇತ್ಯಾಭಾಚ್ಚಾಸ್ತ್ರೀಯೋ ಮಕಾರಲೋಪೋ೭ಸಿದ್ಧವದ್ಭವತಿ । ಸೋಮಪಾಃ । ಆನುಂತ್ರಿತಸ್ಯ ಚೇತಿ ನಿಘಾತಃ । ತಸ್ಯಾವಿದ್ಯಮಾನವತ್ತ್ವೇ೭ಪಿ ಪೂರ್ವಾಪೇಕ್ಷಯೋ ತಿಙ್ಙತಿಙಿ ಇತಿ ಪಿಬೇತ್ಯಸ್ಯ ನಿಘಾತಃ । ನ ಚ ಪೂರ್ವಸ್ಯಾಪಿ ಪರಾಂಗವದ್ಭಾವೇನಾವಿದ್ಯಮಾನವತ್ತ್ವಂ । ಅಸಾನುಬ್ಧೈರ್ಹಿ ತದಭಿಧಾನಾತ್ । ಗಾಂ ಪದಾತೀತಿ ಗೋದಾಃ । ಕ್ವಿಪ್ಚ । ಪಾ. ೩-೨-೭೬ । ಇತಿ ಕ್ವಿಪಂ ಪರತಃ ಸರೂಪಂ ಬಾಧಿತ್ವಾ ಪ್ರತಿಪದವಿಧಿತ್ವಾದಾತೋ ಮನಿನ್ಕ್ವನಿಬ್ವನಿಪಶ್ಚ । ಪಾ. ೩-೨-೭೪ । ಇತಿ ವಿಚ್ । ಕ್ವಿಪಿ ಹಿ ಘುವರ್ಣಸ್ಥೇತ್ಯಾದಿನಾ ಪಾ. ೬-೪-೬೬ । ಧಾತೋರಾಕಾರಸ್ಯೇತ್ವಂ ಸಾರ್ವತ್ರಿಕಂ । ರೇವಾನ್ । ರಯಿರ್ಧನಮಸ್ಯಾಸ್ತೀತಿ ಮತುಪ್ । ಹ್ರಸ್ವನುಡ್ಭ್ಯಾಂ ಮತುಪ್ । ಪಾ. ೬-೧-೧೭೬ । ಇತಿ ಮತುಬುದಾತ್ತಃ । ಛಂದಸೀರಃ । ಪಾ. ೮-೨-೧೫ । ಇತಿ ವತ್ವಂ । ರಯೇರ್ಮತೌ ಬಹುಲಂ ಛಂದಸಿ । ಪಾ. ೬-೧-೩೭-೬ । ಇತಿ ಸಂಪ್ರಸಾರಣಪರಪೂರ್ವತ್ವೇ ಗುಣಶ್ಚ । ಮದಃ । ಮದೋ೭ನುಪಸರ್ಗೇ । ಪಾ ೩-೩-೬೭ । ಇತ್ಯಪ್ । ಪಿತ್ತ್ವಾದನುದಾತ್ತಃ ॥

॥ ಪ್ರತಿಪದಾರ್ಥ ॥

ಸೋಮಪಾಃ—ಸೋಮಪಾನಮಾಡುವ ಎಲೈ ಇಂದ್ರನೇ । ನಃ—ನಮ್ಮ । ಸವನಾ—ಯಜ್ಞದಲ್ಲಿ ನಾವು ಮಾಡುವ ಪ್ರಾತಸ್ಸವನ, ಮಾಧ್ಯಂದಿನಸವನ, ತೃತೀಯಸವನಗಳಿಗೆ ಅಥವಾ ನಾವು ಮಾಡುವ ಯಜ್ಞಕ್ಕೆ । ಉಪಾಗಹಿ—ಬರುವವನಾಗು । (ಅಲ್ಲಿಗೆ ಬಂದು) ಸೋಮಸ್ಯ—ಸೋಮರಸವನ್ನು । ಪಿಬ—ಪಾನಮಾಡು । ರೇವತಃ—ಧನಾದ್ಯೈಶ್ವರ್ಯಯುಕ್ತನಾದ ನಿನ್ನ । (ಸೋಮಪಾನದಿಂದ ಉಂಟಾಗುವ) ಮದಃ—ಸಂತೋಷವು ಗೋದಾಃ—(ನಮ್ಮಗಳಿಗೆ) ಗೋವುಗಳನ್ನು ಕೊಡುವುದು.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಸೋಮಪಾನಮಾಡುವವನಾದುದರಿಂದ ಈಗ ನಾವು ಮಾಡುತ್ತಿರುವ ಯಜ್ಞಾಸಂಬಂಧವಾದ ಪ್ರಾತಸ್ಸವನ, ಮಾಧ್ಯಂದಿನಸವನ ತೃತೀಯಸವನಗಳೆಂಬ ಮೂರು ಸವನಗಳಿಗೂ ಬಂದು ನಾವು ಸಿದ್ಧಪಡಿಸಿರುವ ಸೋಮವನ್ನು ಪಾನಮಾಡು. ಹಾಗೆ ಪಾನಮಾಡುವುದರಿಂದ ನಿನಗೆ ಸಂತೋಷವುಂಟಾಗಿ ಐಶ್ವರ್ಯಯುಕ್ತನಾದ ನೀನು ನಮಗೆ ಗೋವುಗಳನ್ನು (ಗೋಸಂಪತ್ತನ್ನು) ಕೊಡುವವನಾಗುವೆ.

English Translation.

O Soma-drinker, come hither to our Sacrifices and Partake of the Soma; you being rich the satisfaction you get from drinking Soma is verily the cause of the gift of cattle.

॥ विशेषविषयगळु ॥

उप आ गहि—ಉಪ-ಸಮೀಪಕ್ಕೆ ನಾವು ಮಾಡುತ್ತಿರುವ ಯಜ್ಞದ ಸಮೀಪಕ್ಕೆ. ಆ ಗಹಿ—ಬಾ, ಬರುವವನಾಗು.

सवना—सूयतेऽ सोमः एष्विति सवनानि (सवना) ಸೋಮರಸವನ್ನು ಹಿಂಡಿ ತೆಗೆಯುವ ಕರ್ಮಕ್ಕೆ (ಯಜ್ಞಕ್ಕೆ) ಸವನವೆಂದು ಹೆಸರು. ಸವನವೆಂದರೆ ಪ್ರಾತಸ್ಸವನಾದಿ ಸವನತ್ರಯಗಳೆಂದೂ ಅಥವಾ ಸವನಕರ್ಮವಿರುವ ಯಜ್ಞವೆಂದೂ ಅರ್ಥಮಾಡಬಹುದು. ಹೇಗೆ ಮಾಡಿದರೂ ಮುಖ್ಯಾಭಿಪ್ರಾಯವು ಒಂದೇ ಆಗಿರುವುದು.

गोदाः—गां ददातीति गोदाः गोःप्रदः—ಗೋವುಗಳನ್ನು ಅಥವಾ ಪಶುಸಂಪತ್ತನ್ನು ಕೊಡುವವನು. ಇದರಂತೆ **सोमं पिबतीति सोमपाः**—ದಾಃ ಎಂಬ ಪ್ರತ್ಯಯಪರವಾದ ಉದಾಹರಣೆಗಳು ಋಗ್ವೇದದಲ್ಲಿ ೧೭ ಇರುವುವು—

अश्वदाः । अत्यदाः । ओजोदाः । गोदाः । द्रविणोदाः । धनदाः । बलदाः । भूरिदाः । वस्त्रदाः । वाजदाः । वासोदाः । सहोदाः । सहस्रदाः । सुदाः । स्वस्तिदाः । हिरण्यदाः । भूरिदाः ॥

ಇತ್—ಏವ. ಉದಾ-ಇಂದ್ರಃ **गोदाः**—ಇಂದ್ರನು ಗೋವುಗಳನ್ನು ಕೊಡುವವನಾಗಿರುವನು. ಆದರೆ ಇತ್ ಎಂಬ ಶಬ್ದವನ್ನು ಉಪಯೋಗಿಸಿರುವ ಇಂದ್ರಃ **गोदा इत्** ಎಂಬ ವಾಕ್ಯಕ್ಕೆ—ಇಂದ್ರನು ಗೋವುಗಳನ್ನು ಕೊಡುವವನೇ ಆಗಿರುವನು ಎಂದರ್ಥವು. ಇತ್ ಶಬ್ದವು ಅವಧಾರಣಾರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದು.

रेवतः—रयिर्धनमस्यास्तीति रेवान् तस्य रेवतः ಎಂದು ವಿಗ್ರಹವು. ಧನವುಳ್ಳವನ (ಇಂದ್ರನ) ಎಂದರ್ಥವು.

॥ व्याकरणप्रक्रिया ॥

उप.—ಇದು ನಿಪಾತವಾದ್ದರಿಂದ **निपाता आद्युदात्ताः** (ಫಿನೂ. ೪೦) ಎಂಬುದರಿಂದ ಆದ್ಯುದಾತ್ತ. **सवना**—सूयतेऽ सोमः एष्विति सवनानि. (ಯಾವುಗಳಲ್ಲಿ ಸೋಮಲತೆಯು ಪೀಡಿಸಲ್ಪಡುವುದೋ ಅಂತಹ ಯಾಗಗಳಿಗೆ ಸವನ ಎಂದು ಹೆಸರು) ಇಲ್ಲಿ **करणाधिकरणयोश्च** (ಪಾ.ಸೂ. ೩-೩-೧೧೭) ಕರಣ, ಅಧಿಕರಣ ಈ ಅರ್ಥಗಳಲ್ಲಿ, ಲ್ಯುಟ್ ಪ್ರತ್ಯಯಬರುವುದು. ಎಂಬುದರಿಂದ ಷುಞ್ ಧಾತುವಿಗೆ ಲ್ಯುಟ್ ಪ್ರತ್ಯಯ ಬಂದರೆ, ಷು+ಯು. **धात्वादेः षः सः** (ಪಾ. ಸೂ. ೬-೧-೬೪) ಎಂಬುವದಿಂದ ಷಕಾರಕ್ಕೆ ಸಕಾರ.

ಯುವೋರನಾಕಾ (ಪಾ. ಸೂ. ೬-೧-೧) ಎಂಬುದರಿಂದ ಯು ಗೆ ಅನ ಬಂದರೆ ಸು+ಅನ, ಗುಣಾವಾದೇಶಗಳು ಬಂದರೆ ಸವನ ಎಂದಿರುವುದು. ದ್ವಿತೀಯಾ ಬಹುವಚನ ಪ್ರತ್ಯಯಕ್ಕೆ **ಸುಪಾಂಸುಲುಕ್**, (ಪಾ ಸೂ. ೭-೧-೩೯) ಎಂಬುದರಿಂದ ಡಾ ಆದೇಶಬಂದರೆ ಸವನ+ಆ ಎಂಬಲ್ಲಿ ನಕಾರದ ಮುಂದಿರುವ ಅಕಾರಕ್ಕೆ **ಟೇಃ** (ಪಾ. ಸೂ. ೬-೪-೧೪೩) ಎಂಬುದರಿಂದ ಲೋಪಬಂದು ಸವನಾ ಎಂದಾಗುವುದು **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಹಿಂದಿರುವ ಸ ಎಂಬಲ್ಲಿರುವ ಅಕಾರವು ಉದಾತ್ತವಾಗುವುದು. ಗಹಿಃ—ಗಮ್ಲೃ **ಗತೌ** ಧಾತು **ವಿನಮೇಲೆ ಲೋಟ್ ಮಧ್ಯಮ** ಪುರುಷ ಏಕವಚನ ಸಿಪ್ ಪ್ರತ್ಯಯವನ್ನಿಟ್ಟರೆ, ಗಮ್+ಸಿ. **ಕರ್ತರಿ ಶಪ್** (ಪಾ. ಸೂ. ೩-೧-೬೮) ಎಂಬುದರಿಂದ ಬರುವ ಶಪ್ (ಅ) ವಿಕರಣಪ್ರತ್ಯಯಕ್ಕೆ **ಬಹುಲಂ ಛಂದಸಿ** (ಪಾ. ಸೂ ೨-೪-೭೩) ಎಂಬುದರಿಂದ ಲುಕ್ (ಲೋಪ) **ಸೇರ್ಹ್ಯಪಿಚ್ಚ** (ಪಾ. ಸೂ. ೩-೪-೮೭) ಸಿ ಗೆ ಹಿ ಆದೇಶ ಬರುವುದು-ಅದು ಪಿತ್ತಾಗುವುದಿಲ್ಲ ಎಂಬುದರಿಂದ, ಸಿ ಗೆ, ಹಿ, ಬಂದರೆ ಗಮ್+ಹಿ, **ಸಾರ್ವಧಾತುಕಮಪಿತ್** (ಪಾ. ಸೂ. ೧-೨-೪) ಅಪಿತ್ತಾದ ಸಾರ್ವಧಾತುಕಪ್ರತ್ಯಯವು ಙಿತ್ತಾಗುವುದು ಎಂಬುದರಿಂದ ಹಿ ಎಂಬುದು ಙಿತ್ತಾದ್ದರಿಂದ **ಅನುದಾತ್ತೋಪದೇಶ**, (ಪಾ.ಸೂ. ೬-೪-೩೭) ಎಂಬುದರಿಂದ ಅನುನಾಸಿಕವಾದ ಮಕಾರಕ್ಕೆ ಲೋಪ ಬರುವುದು. ಗ+ಹಿ ಎಂದಾಗುವುದು. ಗ ವಿನ ಅಕಾರದ ಮುಂದಿರುವ ಹಿ ಗೆ, **ಅತೋಹೇಃ** (ಪಾ ಸೂ ೬-೪-೧೦೫) ಹ್ರಸ್ವಾಕಾರದ ಮುಂದಿರುವ ಹಿ ಗೆ ಲುಕ್ ಬರುವುದು ಎಂಬುದರಿಂದ ಲುಕ್ ಪ್ರಾಪ್ತವಾಗುವುದು. ಆದರೆ **ಅಸಿದ್ಧವದ ತ್ರಾಭಾತ್** (ಪಾ. ಸೂ. ೬-೪-೨೨) ಈ ಸೂತ್ರದಿಂದ ಆರಂಭಿಸಿ ಈ ಪಾದವು ಮುಗಿಯುವವರಿಗೂ ಇರತಕ್ಕ ಸೂತ್ರಗಳಿಗೆ ಅಭೀಯ ಎಂದು ಹೆಸರು. ಸಮಾನಾಶ್ರಯವಾದ ಅಭೀಯ ಶಾಸ್ತ್ರವನ್ನು ಮಾಡುವಾಗ ಮತ್ತೊಂದು **ಅಭೀಯ ಶಾಸ್ತ್ರವು** ಅಸಿದ್ಧವಾದಂತೆ ಆಗುವುದು ಎಂಬ ಪರಿಭಾಷೆಯಿಂದ, **ಅತೋಹೇಃ** (ಪಾ. ಸೂ. ೬-೪-೧೦೫) ಎಂಬ ಅಭೀಯಶಾಸ್ತ್ರವನ್ನು ಮಾಡುವಾಗ, **ಅನುದಾತ್ತೋಪದೇಶ** (ಪಾ. ಸೂ. ೬-೪-೩೭)ಎ ಎಂಬ ಅಭೀಯ ಶಾಸ್ತ್ರವು ಅಸಿದ್ಧವಾದಂತೆ ಆಗುವುದು ಅಂದರೆ ಅನುನಾಸಿಕ ಮಕಾರವು ಇದ್ದಂತೆ ಆಗುವುದು ಈಗ ಮಕಾರ **ವ್ಯವಧಾನವಿರುವುದರಿಂದ ಹ್ರಸ್ವಾಕಾರಕ್ಕಿಂತಲೂ** ಅವ್ಯವಹಿತ ಪರದಲ್ಲಿ ಹಿ ಎಂಬುದಿಲ್ಲವಾದಕಾರಣ ಹಿ ಗೆ **ಲುಕ್** ಬರುವುದಿಲ್ಲ. **ಸೋಮಪಾಃ**, ಎಂಬಲ್ಲಿ **ಆಮನ್ತ್ರಿತಸ್ಯಚ** (೮-೧-೧೯) ಎಂಬುದರಿಂದ ಸರ್ವಾನುದಾತ್ತ. ಇದಕ್ಕೆ **ಆಮಂತ್ರಿತಂ ಪೂರ್ವಮವಿದ್ಯಮಾನವತ್** (ಪಾ. ಸೂ ೮-೧-೭೨) ಎಂಬುದರಿಂದ ಅವಿದ್ಯಮಾನವದ್ಭಾವ ಬಂದರೂ ಆದಕ್ಕಿಂತಲೂ ಹಿಂದಿರುವ ಪದವನ್ನು ನಿಮಿತ್ತಮಾಡಿಕೊಂಡು **ತಿಙ್ಶಿತಿಜಿಃ** (ಪಾ. ಸೂ. ೮-೧-೨೮) ಎಂಬುದರಿಂದ ಪಿಬ ಎಂಬುದಕ್ಕೆ ಅನುದಾತ್ತಬರುವುದು ಆದರೆ ಪೂರ್ವಪದವಾದ ಸೋಮಸ್ಯ ಎಂಬುದಕ್ಕೂ **ಸುಬಾಮಂತ್ರಿತೇ ಪರಾಂಗವತ್ಸ್ವರೇ** (ಪಾ ಸೂ. ೮-೧-೨) ಎಂಬುದರಿಂದ ಪರಾಂಗವದ್ಭಾವ ಬಂದರೆ ಅವಿದ್ಯಮಾನವದ್ಭಾವವು ಪ್ರಾಪ್ತವಾಗುವುದು ಆದರೂ 'ಸೋಮಸ್ಯ ಸೋಮಪಾಃ' ಎಂಬಿವುಗಳಿಗೆ ಪರಸ್ಪರಾನ್ವಯ ವಿಲ್ಲದಕಾರಣ ಸಾಮರ್ಥ್ಯವಿಲ್ಲ. ಆದ್ದರಿಂದ ಪರಾಂಗವದ್ಭಾವಬರುವುದಿಲ್ಲ. ಆದ್ದರಿಂದ 'ಸೋಮಸ್ಯ' ಎಂಬುದಕ್ಕೆ ಅವಿದ್ಯಮಾನವದ್ಭಾವ ಬರುವುದಿಲ್ಲ **ಗಾಂ, ದದಾತಿ ಇತಿ ಗೋದಾಃ** (ಹಸುವನ್ನು ಕೊಡುವವನು) **ಡುದಾಞ್ದಾನೇ** ಎಂಬ 'ದಾ' ಧಾತುವು ಆಕಾರಾಂತವಾದ್ದರಿಂದ '**ಕ್ವಿಪ್ಚ**' (ಪಾ. ಸೂ. ೩-೨-೭೬) ಎಂಬುದರಿಂದ ಬರುವ ಕ್ವಿಪ್ ಪ್ರತ್ಯಯವು ಪರದಲ್ಲಿದ್ದರೂ ಅದನ್ನು ಬಾಧಿಸಿ ಪ್ರತಿಪದೋಕ್ತವಿಧಿಯಾದ್ದರಿಂದ '**ಆತೋಮನಿನ್ ಕ್ವನಿಪ್ ವನಿಪಶ್ಚ**' (ಪಾ.ಸೂ. ೩-೨-೭೪) ಆಕಾರಾಂತ ಧಾತುವಿನ ಮೇಲೆ ಸುಬಂತ ಅಥವಾ ಉಪಸರ್ಗಗಳು ಉಪಪದವಾಗಿರುವಾಗ ಮನಿನ್ ಕ್ವನಿಪ್, ವನಿಪ್ ಈ ಪ್ರತ್ಯಯಗಳು ಬರುವುವು. ಈ ಸೂತ್ರದಲ್ಲಿರುವ ಚಕಾರದಿಂದ ವಿಚ್ ಪ್ರತ್ಯಯವೂ ಬರುವುದು ಎಂಬುದರಿಂದ ವಿಚ್ ಪ್ರತ್ಯಯ ಬರುವುದು. **ಪದವಿಶೇಷವನ್ನು** ಉಚ್ಚರಿಸಿ ವಿಹಿತವಾಗಿರುವ ವಿಧಿಯು ಪ್ರತಿಪದೋಕ್ತವಿಧಿಯು. ಹೀಗೆ ವಿಚ್ ಪ್ರತ್ಯಯವನ್ನು

ಒಪ್ಪದೇ ಕ್ವಿ ಪ್ರತ್ಯಯವನ್ನು ಒಪ್ಪುವಪಕ್ಷದಲ್ಲಿ ' **ಘ್ಯಮಾಸ್ಥಾಗಾಪಾ ಜಹಾತಿಸಾಂಹಲಿ** ' (ಪಾ. ಸೂ. ೬-೪-೬೬) ದಾಪ್, ದೈಪ್ ಧಾತುಗಳನ್ನು ಳಿದು ದಾ, ಅಥವಾ ಧಾ ರೂಪ ಧಾತುಗಳಿಗೆ ಘುಸಂಜ್ಞೆ ಬರುವುದು. ಈ ಸೂತ್ರ ನಿರ್ದಿಷ್ಟಧಾತುಗಳ ಆಕಾರಕ್ಕೆ ವ್ಯಂಜನಾದಿಯಾಗಿದ್ದು ಕಿತ್ತು ಅಥವಾ ಙಿತ್ತು ಆದ ಅರ್ಧಧಾತುಕಪ್ರತ್ಯಯವು ಪರವಾಗಿರುವಾಗ ' ಈ ' ಆದೇಶ ಬರುವುದು, ಎಂಬುದರಿಂದ ಘುಸಂಜ್ಞಕವಾದ ' ದಾ ' ಎಂಬುದಕ್ಕೆ ಈ ಬರ ಬೇಕಾಗುವುದು. ಆದರೆ ಕ್ವಿಪ್ ಪ್ರತ್ಯಯದಲ್ಲಿ ಎಲ್ಲ ವರ್ಣಗಳಿಗೂ ಲೋಪಬರುವುದರಿಂದ ಇದು ಹಲಾದಿ ಪ್ರತ್ಯಯವಾಗುವುದಿಲ್ಲ. ಆದ್ದರಿಂದ ಕ್ವಿಪ್ ಪ್ರತ್ಯಯಪಕ್ಷದಲ್ಲಿಯೂ ' ಈ ' ಆದೇಶಕ್ಕೆ ಅವಕಾಶವಿರುವುದಿಲ್ಲ. ಈತ್ವವು ಹಲಾದಿಪ್ರತ್ಯಯವನ್ನು ನಿಮಿತ್ತಮಾಡಿಕೊಂಡುಬರುವುದರಿಂದ ಅಲಾಶ್ರಯವಾದ ಕಾರ್ಯ. ಆದ್ದರಿಂದ ' **ಅನಲ್ವಿಧೌ** ' ಎಂದು ನಿಷೇಧ ಬರುವುದರಿಂದ ಸ್ಥಾನಿವದ್ಭಾವದಿಂದ ಹಲಾದಿತ್ವವನ್ನು ತರಲಾಗುವುದಿಲ್ಲ. ' **ಪ್ರತ್ಯಯೆಲೋಪೇಪ್ರತ್ಯಯಲಕ್ಷಣಂ** ' (ಪಾ. ಸೂ. ೧-೧-೬೨) ಇದು ವಿಧಾಯಕವೆಂದೂ ನಿಯಾಮಕವೆಂದೂ ಎರಡು ಪಕ್ಷಗಳಿರುವುವು. ಎಲ್ಲಿ ಪ್ರತ್ಯಯವು ಪ್ರಧಾನವಾಗಿ ಆಶ್ರಯಿಸಲಾಗಿರುವುದೋ ಅಲ್ಲಿ ಅಲ್ವಿಧಿಯಾದಾಗ್ಯೂ ಪ್ರತ್ಯಯನಿಮಿತ್ತಕಕಾರ್ಯವಿಧಾನಕ್ಕಾಗಿ ಈ ಸೂತ್ರವು ಮಾಡಲಾಗಿದೆ. ಆದ್ದರಿಂದಲೇ ' ಅತೃಣೇಟ್ ' ಎಂಬಲ್ಲಿ ' **ತೈಣಹಿಮ್** ' (ಪಾ. ಸೂ. ೭-೩-೯೩) ಎಂಬುದರಿಂದ ಹಲಾದಿಯೂ ಪಿತ್ತೂ ಆದ ಸಾರ್ವಧಾತುಕ ಪ್ರತ್ಯಯಪರದಲ್ಲಿರುವಾಗ ವಿಹಿತವಾದ ಇಮಾಗಮವು, ಲಙ್ ಸ್ಥಾನವಲ್ಲಿ ಬಂದ ತಿಪ್ಪಿಗೆ ಲೋಪ ಬಂದಿದ್ದರೂ ಬರುವುದು. ಯದ್ಯಪಿ ' **ವರ್ಣಾಶ್ರಯೇ ನಾಸ್ತಿ ಪ್ರತ್ಯಯಲಕ್ಷಣಂ** ' ಎಂಬುದರಿಂದ ಹಲಾದಿತ್ವವು ಪ್ರತ್ಯಯಲಕ್ಷಣದಿಂದ ಬರಲಾರದೆಂದು ಶಂಕೆಬರಬಹುದು ಆದರೂ ಎಲ್ಲಿ ವರ್ಣವು ಪ್ರಧಾನವಾಗಿ ಉಪಾತ್ತವಾಗಿರುವುದೋ ಅಲ್ಲಯೇ ' **ವರ್ಣಾಯೇ** ' ಎಂಬ ನಿಷೇಧ ಬರುವುದು. ' **ಗವೇಹಿತಂ** ' ಎಂದು ವಿಗ್ರಹಮಾಡಿದಾಗ ಗೋಶಬ್ದದ ಮುಂದಿರುವ ಏ ಎಂಬ ಚತುರ್ಥೀವಿಭಕ್ತಿಗೆ ಲುಕ್ ಬಂದಿರುವುದು, ' **ಏಚೋಯವಾಯಾವಃ** ' (ಪಾ. ಸೂ. ೬-೧-೭೮) ಎಂಬಲ್ಲಿ ಅಚ್‌ಪರವಾಗಿರುವಾಗ ಏಚ್ಚಿಗೆ ಆಯಾದ್ಯಾದೇಶಗಳು ಬರುವುವು ಎಂದು ಪ್ರಧಾನವಾಗಿ ಅಚ್ ಎಂಬ ವರ್ಣವು ಆಶ್ರಿತವಾಗಿರುವುದು. ಆದ್ದರಿಂದ ಇಲ್ಲಿ ಪ್ರತ್ಯಯಲಕ್ಷಣ ಬರುವುದಿಲ್ಲ. ಆದಕಾರಣ ಲುಪ್ತವಾದ ಏ ಯನ್ನು ನಿಮಿತ್ತಮಾಡಿಕೊಂಡು ಗೋ ಶಬ್ದದ ಓಕಾರಕ್ಕೆ ಅವಾದೇಶಬರುವುದಿಲ್ಲ. ಪ್ರಕೃತದಲ್ಲಿ ' ಹಲಾದೌಪಿತಿ ' ಎಂದು ಅಪ್ರಧಾನವಾಗಿ ವರ್ಣಾಶ್ರಯವಿರುವುದರಿಂದ, ' **ವರ್ಣಾಶ್ರಯೇ** ' ಎಂಬ ನಿಷೇಧ ಬರುವುದಿಲ್ಲ. ಆದ್ದರಿಂದ ತಿಪ್ಪಿಗೆ ಲೋಪಬಂದರೂ ಪ್ರತ್ಯಯಲಕ್ಷಣದಿಂದ ಹಲಾಪಿತ್ಸಾರ್ವಧಾತುಕಪರತ್ವವು ಸಂಭವಿಸುವುದರಿಂದ ಇಮಾಗಮ ಬರಲು ತಡೆಯಿಲ್ಲ. ಈ ಪಕ್ಷದಲ್ಲಿ ಕ್ವಿಪ್‌ಗೆ ಲೋಪಬಂದರೂ, ' **ಘುಮಾಸ್ಥಾ** ' ಎಂಬಲ್ಲಿ ಹಲಾದಿಯೂ ಕಿತ್ತು ಅಥವಾ ಙಿತ್ತು ಆದ ಅರ್ಧಧಾತುಕಪರವಾಗಿರುವಾಗ ಈತ್ವ ಬರುವುದು ಎಂಬಲ್ಲಿ ಅಪ್ರಧಾನವಾಗಿ ವರ್ಣಾಶ್ರಯವಿರುವುದರಿಂದ **ವರ್ಣಾಶ್ರಯೇನಾಸ್ತಿ** ಎಂಬ ನಿಷೇಧ ಬರುವುದಿಲ್ಲ. ಪ್ರತ್ಯಯವು ಪ್ರಧಾನವಾಗಿ ಆಶ್ರಿತವಾಗಿರುವುದರಿಂದ, ಪ್ರತ್ಯಯಲಕ್ಷಣವು ಬರುವುದರಿಂದ ಈತ್ವವು ಪ್ರಾಪ್ತವಾಗುವುದು. ಇನ್ನು ನಿಯಮಪಕ್ಷದಲ್ಲಿ ನೋಡುವ, ಸ್ಥಾನಿವತ್ಸೂತ್ರದಿಂದ ಸಿದ್ಧವಾಗುವಾಗ ಈ ಸೂತ್ರವು ' **ಸಿದ್ಧೇ ಸತ್ಯಾರಭ್ಯಮಾಣೋವಿಧಿರ್ನಿಯಮಾಯಭವತಿ** ' ಎಂಬ ನ್ಯಾಯದಿಂದ ನಿಯಾಮಕವಾಗುವುದು. ಪ್ರತ್ಯಯಕ್ಕೆ ಅಸಾಧಾರಣವಾದ ರೂಪವು ಯಾವ ಕಾರ್ಯದಲ್ಲಿ ಪ್ರಯೋಜಕವೋ ಆದೇ ಕಾರ್ಯವು ಪ್ರತ್ಯಯಕ್ಕೆ ಲೋಪ ಬಂದಿದ್ದರೂ ಬರುವುದು ಪ್ರತ್ಯಯಾಪ್ರತ್ಯಯಸಾಧಾರಣವಾದ ರೂಪವನ್ನು ನಿಮಿತ್ತಮಾಡಿಕೊಂಡುಬರುವ ಕಾರ್ಯವು ಪ್ರತ್ಯಯಲಕ್ಷಣದಿಂದ ಬರುವುದಿಲ್ಲವೆಂದು ನಿಯಮಶರೀರ. ಇದರಿಂದ ಶೋಭನಾಃ ದೃಷದಃ ಯಸ್ಯ ಪ್ರಾಸಾದಸ್ಯ ಸಃ ಸುದೃಷತ್ಪ್ರಾಸಾದಃ ಎಂಬಲ್ಲಿ ಅಸಂತತ್ವವು ಪ್ರತ್ಯಯಾಪ್ರತ್ಯಯಸಾಧಾರಣವಾದ್ದರಿಂದ ಅದನ್ನು ಮುನ್ನಿಟ್ಟುಕೊಂಡು ' **ಸೋರ್ಮನಸೀ ಅಲೋಮೋಷಸೀ** ' (ಪಾ. ಸೂ. ೬-೩-೧೧೭) ಸು ಎಂಬುದರ ಮುಂದೆ

ಇರುವ ಲೋರ್ಮ, ಉಷಸ್ ಎಂಬ ಶಬ್ದಗಳನ್ನುಳಿದ ಮನ್ನಂವು, ಅಸಂತವೂ ಸಹ ಆದ್ಯುದಾತ್ತವಾಗುವುದು ಎಂದು ವಿಹಿತವಾದ ಆದ್ಯುದಾತ್ತವು ಪ್ರತ್ಯಯಲಕ್ಷಣದಿಂದ ಬರುವುದಿಲ್ಲ. ಸು, ದೃಷ್‌ದ್ ಅಸ್ ಎಂಬಲ್ಲಿ ಬಹು ವ್ರೀಹಿ ಬಂದು ಅಸ್ ಎಂಬುದಕ್ಕೆ ಲುಕ್ ಬಂದಿರುವುದು. ಆದ್ದರಿಂದ ಸುದೃಷದ್ ಎಂಬುದು ಸ್ವತಃ ಅಸಂತವಲ್ಲ. ಪ್ರತ್ಯಯ ಲಕ್ಷಣವೂ ಇಲ್ಲಿ ಬರುವುದಿಲ್ಲ. ಪ್ರಕೃತದಲ್ಲಿ ಈ ಪಕ್ಷದಲ್ಲಿ ಹಲಾದಿತ್ವವು ಪ್ರತ್ಯಯಾಪ್ರತ್ಯಯ ಸಾಧಾರಣವಾದ್ದರಿಂದ ಅದನ್ನು ಪ್ರತ್ಯಯ ಲಕ್ಷಣದಿಂದ ತರಲಾಗುವದಿಲ್ಲ ಆದ್ದರಿಂದ ಕ್ವಿಪ್ಪನ್ನು ಮಾಡಿದರೂ, ಈತ್ವವು ಬರುವುದಿಲ್ಲ, ವಸ್ತುತಃ, **ಧ್ಯಾಪ್ಯೋಸ್ಸಂಪ್ರಸಾರಣಂಚ** ಎಂಬ ವಾರ್ತಿಕದಲ್ಲಿ ಮಹಾಭಾಷ್ಯಕಾರರು 'ಧೀರ್ಧ್ಯಾಯತೀರ್ದಧಾತೀರ್ವಾ' ಎಂದು ಹೇಳಿರುವರು. ಈ ಭಾಷ್ಯವನ್ನು ಪರ್ಯಾಲೋಚಿಸಿದರೆ 'ಧಾ' ಧಾತುವಿನ ಮುಂದೆ ಕ್ವಿಪ್ಪನ್ನಿಟ್ಟಾಗ **ಘುಮಾಸ್ಥಾ** ಎಂಬುದರಿಂದ ಈತ್ವ ಅಭ್ಯುಪಗತವಾಗಿರುವುದು, ಆದ್ದರಿಂದ, **ಹಲಿ** ಎಂಬುದಕ್ಕೆ **ಅನಜಿ** ಎಂದು ಅರ್ಥವೇರ್ಪಡುವುದು ಏ ವಂಚ, 'ಘುಮಾಸ್ಥಾ-' ಇತ್ಯಾದಿ ಸೂತ್ರಕ್ಕೆ ಕಿತ್ತು ಅಥವಾ ಜುತ್ತು ಆದ ಅಜಾದಿಯಲ್ಲದ ಅರ್ಧಧಾತುಕವು ಪರದಲ್ಲಿದ್ದರೆ, ಘುಮಾಸ್ಥಾದಿ ಧಾತುಗಳಿಗೆ ಈತ್ವಬರುವುದು ಎಂದು ಅರ್ಥವಾಗುವುದು ಏವಂಚ, ಗೋದಾಃ ಎಂಬಲ್ಲಿ ಕ್ವಿಪ್ ಪ್ರತ್ಯಯವನ್ನು ಮಾಡಿದರೆ, ಅದು ಅಜಾದಿಯಲ್ಲದ ಕಿತ್ತಾದ ಅರ್ಧಧಾತುಕವಾದ್ದರಿಂದ, ಅದನ್ನು ನಿಮಿತ್ತ ಮಾಡಿಕೊಂಡು, ಈತ್ವಬರಬೇಕಾಗುವುದು, ಅದಕ್ಕಾಗಿ ವಿಚ್ ಪ್ರತ್ಯಯವನ್ನೇ ಮಾಡಬೇಕು, ಎಂದು ವರ್ಣಿತವಾಗಿರುವುದು ಯುಕ್ತವಾಗಿರುವುದು, ಹೀಗಾದರೆ, ಶಂಸ್ಥಾ ಎಂಬಲ್ಲಿ **'ಅಂಬಾಬಗೋಭೂ.'**(ಪಾ. ಸೂ-) ಎಂಬ ಸೂತ್ರದಲ್ಲಿರುವ ಸನ್ಯೇಷ್ಠಾ ಎಂಬಲ್ಲಿಯೂ ಕ್ವಿಪ್ಪನ್ನು ಮಾಡಿದರೆ ಈತ್ವ ಬರಬೇಕಾಗುವುದು. ಆದ್ದರಿಂದ ಅಲ್ಲಿಯೂ ವಿಚ್ ಬರುವುದೆಂದೇ ಇಟ್ಟುಕೊಳ್ಳಬೇಕಾಗುವುದು. 'ಧೀರ್ಧ್ಯಾಯತೀರ್ದಧಾತೀರ್ವಾ' ಎಂಬಲ್ಲಿ ಭಾಷ್ಯಕಾರರಿಗೆ ಅಪೂರ್ವವಾದ ಈತ್ವವಿಧಿಯಲ್ಲಿ ತಾತ್ಪರ್ಯವೆಂದು ಇಟ್ಟುಕೊಂಡರೆ ಹಲಿ, ಎಂಬುದಕ್ಕೆ ಅನಜಿ ಎಂದು ಅರ್ಥವಾಗುವುದಿಲ್ಲ. ಆಗ ಕ್ವಿಪ್ಪನ್ನು ಮಾಡಿದರೂ ಈತ್ವ ಬರುವುದಿಲ್ಲ. ಏವಂಚ ಘುಮಾಸ್ಥಾ ಸೂತ್ರದಲ್ಲಿ, **ಈತ್ವೇವಕಾರಪ್ರತಿಷೇಧೋವಕ್ತವ್ಯಃ ಘ್ಯತಂ ಘ್ಯತಪಾವಾನೆ ಇತಿ ದರ್ಶನಾತ್,** ಎಂಬ ವಾರ್ತಿಕಾರಂಭ ಪಕ್ಷದಲ್ಲಿಯೂ, ಕ್ವಿಪ್ಪನ್ನು ಮಾಡಿದಾಗ ಈತ್ವವು ಪ್ರವರ್ತಿಸುವುದಿಲ್ಲ, ಈ ವಾರ್ತಿಕ ಪ್ರತ್ಯಾಖ್ಯಾನ ಪಕ್ಷದಲ್ಲಿ ಆರಂಭ ಪ್ರತ್ಯಾಖ್ಯಾನಗಳಿಗೆ ಫಲೈಕ್ಯಕ್ಕಾಗಿ ಪಾದಿಧಾತುಗಳ ಮುಂದೆ ಕ್ವನಿಪ್ ಬರುವುದಿಲ್ಲವೆಂದು ಇಟ್ಟುಕೊಳ್ಳಬೇಕು, ಹಲಿ ಎಂಬುದಕ್ಕೆ ಅನಜಾದಿ ಎಂದು ಅರ್ಥವಾದರೆ, ಪಾದಿ ಧಾತುಗಳ ಮುಂದೆ, ಕ್ವಿಪ್ಪು ಬರುವುದಿಲ್ಲವೆಂದು ಇಟ್ಟುಕೊಳ್ಳಬೇಕು. ದಧಾತೀರ್ವಾ ಎಂಬಲ್ಲಿ, ಅಪೂರ್ವವಾದ ಈತ್ವವೇ ಭಾಷ್ಯಕಾರಾಭಿಮತವೆಂದು ಒಪ್ಪಿ ಹಲಿ ಎಂಬುದಕ್ಕೆ ಅನಜಾದಿ ಎಂದು ಅರ್ಥವನ್ನು ವರ್ಣಿಸದೇ ಇದ್ದರೆ ಪಾದಿಧಾಗಳ ಮುಂದೆ ಕ್ವಿಪ್‌ಗೆ ಉತ್ಪತ್ತಿಯನ್ನು ಒಪ್ಪಿದರೂ ಬಾಧಕವಿರುವುದಿಲ್ಲ. ರಯಿಃ **ಅಸ್ಯ ಅಸ್ತಿ ಇತಿ ರೇವಾನ್** (ಹಣವು ಇವನಲ್ಲಿ ಇದೆ) **ತದಸ್ಯಾಸ್ತ್ಯಸ್ಮಿನ್ನಿತಿಮತುಪ್** (ಪಾ ಸೂ. ೫-೨-೯೪) ಎಂಬುದರಿಂದ ರಯಿ ಶಬ್ದದ ಮೇಲೆ ಮತುಪ್ ಪ್ರತ್ಯಯವನ್ನು ಹಚ್ಚಿದಾಗ ರಯಿ+ಮತ್-'ಛಂದಸೀರಃ' (ವಾ. ಸೂ. ೮-೨-೧೫) ಇವರ್ಣ ಅಥವಾ ರೇಫದ ಮುಂದಿರುವ ಮತುಪ್ಪಿನ ಮಕಾರಕ್ಕೆ ವಕಾರ ಬರುವುದು ಎಂಬುದರಿಂದ ವಕಾರ ಬಂದರೆ ರಯಿ+ವತ್-**ರಯೇರ್ಮತೌಬಹುಲಂಛಂದಸಿ** (ಪಾ. ೬-೧-ವಾ. ೬) ರಯಿ ಶಬ್ದಕ್ಕೆ ಮತುಪ್ಪನ್ನು ಹಚ್ಚಿದಾಗ ಛಂದಸ್ಸಿನಲ್ಲಿ ಸಂಪ್ರಸಾರಣವು ಬಹುಲವಾಗಿ ಬರುವುದು. ಎಂಬುದರಿಂದ ಯಕಾರಕ್ಕೆ ಇಕಾರ ಬಂದರೆ **'ಸಂಪ್ರಸಾರಣಾಚ್ಚ'** (ಪಾ. ಸೂ. ೬-೧-೧೦೮) ಎಂಬುದರಿಂದ ಪೂರ್ವರೂಪ ಬಂದು **'ಅದ್ಗುಣಃ'** (ವಾ. ಸೂ. ೬-೧-೮೬) ಎಂಬುದರಿಂದ ಗುಣ ಬಂದರು, ರೇವತ್-ಪ್ರಥಮೈಕವಚನದಲ್ಲಿ ರೇವಾನ್=ಇಲ್ಲಿ ರಯಿಮತ್ ಎಂದಿರುವಾಗ **'ಹ್ರಸ್ವಸುಡ್ಭ್ಯಾಂ ಮತುಪ್'** (ಪಾ. ಸೂ. ೬-೧-೧೭೬) ಅಂಶೋದಾತ್ತ ಹ್ರಸ್ವವನ್ನು ಕಡೆಯಲ್ಲಿ ಹೊಂದಿರುವ

ಶಬ್ದ, ನುಟ್ ಇವುಗಳ ಮುಂದಿರುವ ಮತುಪ್ಪು ಉದಾತ್ತವಾಗುವುದು ಎಂಬುದರಿಂದ ಮತುಪ್ಪು ಉದಾತ್ತ.-ಮದಃ-'ಮದೋನುಪಸರ್ಗೇ' (ಪಾ ಸೂ. ೩-೩-೬೭) ಉಪಸರ್ಗಭಿನ್ನವಾದ ಸಂಬಂತವು ಉಪಪದವಾಗಿರುವಾಗ ಮದಧಾತುವಿನ ಮುಂದೆ-'ಅಪ್' ಪ್ರತ್ಯಯ ಬರುವುದು ಎಂಬುದರಿಂದ ಅಪ್ ಬರುವುದು. ಅದು ಪಿತ್ತಾದ್ದರಿಂದ ಅನುದಾತ್ತ ॥ ೨ ॥

॥ ಸಂಹಿತಾಪಾಠಃ ॥

ಅಥಾ ತ್ವೇ ಅಂತಮಾನಾಂ ವಿದ್ಯಾಮ ಸುಮತೀನಾಂ ।
ಮಾ ನೋ ಅತಿ ಖ್ಯ ಆ ಗಹಿ ॥ ೩ ॥

॥ ಪದಪಾಠಃ ॥

ಅಥ । ತ್ವೇ । ಅಂತಮಾನಾಂ । ವಿದ್ಯಾಮ । ಸುಽಮತೀನಾಂ ॥
ಮಾ । ನಃ । ಅತಿ । ಖ್ಯಃ । ಆ । ಗಹಿ ॥ ೩ ॥

॥ ಸಾಯಣಭಾಷ್ಯಂ ॥

ಅಥ ಸೋಮಪಾನಾನಂತರಂ ಹೇ ಇಂದ್ರ ತೇ ತವಾಂತಮಾನಾಮಂತಿಕತಮಾನಾಮತಿಶಯೇನ ಸಮೀಪವರ್ತಿನಾಂ ಸುಮತೀನಾಂ ಶೋಭನನುತಿಯುಕ್ತಾನಾಂ ಶೋಭನಪ್ರಜ್ಞಾನಾಂ ಪುರುಷಾಣಾಂ ಮಧ್ಯೇ ಸ್ಥಿತ್ವಾ ವಿದ್ಯಾಮ । ನಯಂ ತ್ವಾಂ ಜಾನೀಯಾಮ । ಯದ್ವಾ । ಸುಮತೀನಾಂ । ಶೋಭನ-ಬುದ್ಧೀನಾಂ ಕರ್ಮಾನುಷ್ಠಾನವಿಷಯಾಣಾಂ ಲಾಭಾರ್ಥಮಿತ್ಯಧ್ಯಾಹಾರಃ । ಬುದ್ಧಿಲಾಭಾಯ ತ್ವಾಂ ಸ್ಮರೇಮೇತ್ಯರ್ಥಃ । ತ್ವೆಮಪಿ ನೋಽತಿ ಮಾಖ್ಯಃ । ಅಸ್ಮಾನತಿಕ್ರಮ್ಯಾನ್ಯೇಷಾಂ ತ್ವತ್ಸ್ವರೂಪಂ ಮಾ ಪ್ರಕಥಯ । ಕಿಂತ್ವಾ ಗಹ್ಯಸ್ಮಾನೇವಾಗಚ್ಛ । ಅಥೇತಿ ನಿಪಾತ ಆದ್ಯುದಾತ್ತಃ । ನಿಪಾತಸ್ಯ ಚೇತಿ ದೀರ್ಘತ್ವಂ । ಅಂತಮಾನಾಂ । ಅತಿಶಯೇನಾಂತಿಕಾ ಇತ್ಯತಿಶಾಯನೇ ತಮಪ್ । ಪಾ. ೫-೩-೫೫ । ತಮೇ ತಾದೇಶ್ಚ । ಪಾ. ೬-೪-೧೫೯-೯ । ಇತಿ ತಾದಿಲೋಪಃ । ಅಂತೋಽಸ್ಯಾಸ್ತೀತ್ಯಂತಿಕಃ ಸಮೀಪಃ । ಅತ ಇನಿಠನಾವಿತಿ ಠನ್ । ನಿತ್ತ್ವಾದಾದ್ಯುದಾತ್ತಃ । ದೂರೋತ್ಕರ್ಷಸ್ಯ ಹ್ಯವಸಾನಂ ನಾಸ್ತಿ । ಸಾಮೀಪ್ಯೋತ್ಕರ್ಷಸ್ಯ ಪುನರ್ಯೋ ಯಸ್ಯ ಸಮೀಪಃ ಸ ಏವ ತಸ್ಯಾಂತ ಇತ್ಯಂತವತ್ತ್ವಾತ್ತಸ್ಮಿನಪಿ ತಮಂತಿಕ-ಮುಚ್ಯತೇ । ವಿದ್ಯಾಮ । ವೇತ್ತೇರ್ಲಿಙಿ । ಯಾಸುಟ್ ಪರಸ್ಮೈಪದೇಷೂದಾತ್ತೋ ಙಿಚ್ಚ । ಪಾ. ೩-೪-೧೦೩ । ಇತಿ ಯಾಸುಡುದಾತ್ತಃ । ಪಾದಾದಿತ್ತ್ವಾತ್ತಿಙ್ಶಿತಿಙ ಇತಿ ನ ನಿಘಾತಃ । ಸುಮತೀನಾಂ । ಮತಿಶಬ್ದೇ ಕ್ತಿನಂತೇಽಪಿ ಮಂತ್ರೇ ವೃಷೇಷಪಚಮನವಿದಭೂವೀರಾ ಉದಾತ್ತಃ । ಪಾ. ೩-೩-೯೬ ।

ಇತೀಕಾರ ಉದಾತ್ತಃ । ಶೋಭನಾ ಮತಿರ್ಯೇಷಾಂ ತೇ ಸುಮತಯೋ ಇತಿ ಬಹುವ್ರೀಹೌ ಪೂರ್ವಪದ-ಪ್ರಕೃತಿಸ್ವರಾಪವಾದೇನ ನಞ್‌ಸುಭ್ಯಾಮಿತ್ಯುತ್ತರಪದಾಂತೋದಾತ್ತಃ । ಶೋಭನಾ ಮತಯಃ ಸುಮತಯ ಇತಿ ಕರ್ಮಧಾರಯೇಽಪ್ಯವ್ಯಯಪೂರ್ವಪದಪ್ರಕೃತಿಸ್ವರಾಪವಾದಃ । ಕೃದುತ್ತರಪದಪ್ರಕೃತಿಸ್ವರೇಣಾಂತೋದಾತ್ತತೈವ । ಅತೋ ಮತುಪಿ ಪ್ರಸ್ವಾದಂತೋದಾತ್ತಾಚ್ಚ ಸುಮತಿಶಬ್ದಾತ್ಪರಸ್ಯ ನಾಮೋ ನಾಮನ್ಯತರಸ್ಯಾಮಿತ್ಯುದಾತ್ತತ್ವಂ । ಖ್ಯಃ । ಖ್ಯಾ ಪ್ರಕಥನ ಇತ್ಯಸ್ಯ ಲುಙಾ ಸಿಪ್ಯಸ್ಯತಿವಕ್ತಿಖ್ಯಾತಿಭ್ಯೋ ಽಙ್ । ಪಾ. ೩-೧-೫೨ । ಇತಿ ಚ್ಲೇರಙಾದೇಶಃ। ಅತೋ ಲೋಪೇ ಇಟಿ ಚ। ಪಾ.೬-೪-೬೪ । ಇತ್ಯಾಕಾರಲೋಪಃ । ಇತಶ್ಚ । ಪಾ. ೩-೪-೧೦೦ । ಇತೀಕಾರಲೋಪೋ ರುತ್ವವಿಸರ್ಗೌ । ನ ವಾಜ್‌ಯೋಗೇ । ಪಾ ೬-೪-೭೪। ಇತ್ಯಡಭಾವಃ । ಗಹಿ । ಗಮೇರ್ಬಹುಲಂ ಛಂದಸೀತಿ ಶಪೋ ಲುಕಿ ಹೇರ್ಜಾತ್ಯಾದಿನಾದಾತ್ತೋಪದೇಶೇತಿ ಮಕಾರಲೋಪಸ್ಯಾಸಿದ್ಧವದತ್ವಾ ಭಾದಿತ್ಯಸಿದ್ಧತ್ವಾದತೋ ಹೇರಿತಿ ಲುಗ್ನ ಭವತಿ ॥

॥ ಪ್ರತಿಪದಾರ್ಥ ॥

ಅಥ—ಸೋಮಪಾನಾನಂತರ । (ಎಲೈ ಇಂದ್ರನೇ) ವಯಂ—ನಾವು । ತೇ—ನಿನ್ನ । ಅಂತಮಾನಾಂ—ಅತ್ಯಂತ ಸಮೀಪದಲ್ಲಿರುವ । ಸುಮತೀನಾಂ—ಒಳ್ಳೆಯ ಬುದ್ಧಿಯುಳ್ಳ (ವಿವೇಕಿಗಳ ಅಥವಾ ಪ್ರಜ್ಞಾನಂತರ) ಮನುಷ್ಯರ (ಮಧ್ಯದಲ್ಲಿದ್ದುಕೊಂಡು) ॥ ವಿದ್ಮಾನು—ನಿನ್ನನ್ನು ತಿಳಿಯುತ್ತೇವೆ (ನಿನ್ನ ಸ್ಮರಣೆ ಮಾಡುತ್ತೇವೆ ಅಥವಾ ಕರ್ಮಾನುಷ್ಠಾನವಿಷಯ ಪ್ರಾಪ್ತಿಗಾಗಿ ಪ್ರಜ್ಞಾಲಾಭಕ್ಕಾಗಿ ನಿನ್ನ ಸ್ಮರಣೆಮಾಡುತ್ತೇನೆ)। (ನೀನು ಸಹ) ನಃ—ನಮ್ಮನ್ನು ಅತಿ—ಬಿಟ್ಟು (ಇತರರಿಗೆ) । ಮಾ ಖ್ಯಃ—(ನಿನ್ನ ಸ್ವರೂಪವನ್ನು) ಹೇಳಬೇಡ । ಆ ಗಹಿ—(ನಮ್ಮ ಸಮೀಪಕ್ಕೇ) ಬರುವವನಾಗು

॥ ಭಾವಾರ್ಥ ॥

ಎಲೈ ಇಂದ್ರನೇ, ಸೋಮಪಾನಾನಂತರ ನಾವು ನಿನ್ನ ಸಮೀಪದಲ್ಲಿದ್ದುಕೊಂಡು ಸತ್ಕರ್ಮಾನುಷ್ಠಾನ ವಿಷಯದಲ್ಲಿ ಒಳ್ಳೆಯ ಬುದ್ಧಿಗಾಗಿ ಅಥವಾ ಉತ್ತಮವಾದ ಪ್ರಜ್ಞಾ (ತಿಳುವಳಿಕೆ) ಲಾಭಕ್ಕಾಗಿ ನಿನ್ನನ್ನು ಸ್ಮರಣೆ ಮಾಡುತ್ತಿರುವೆವು. ಇಂತಹ ನಮ್ಮ ಸಮೀಪಕ್ಕೆ ನೀನು ಬರಬೇಕು ಇತರರಿಗೆ ನಿನ್ನ ಸ್ವರೂಪವನ್ನು ತಿಳಿಸಬೇಡ ಮತ್ತೂ ಅವರಿಗೆ ಒಳ್ಳೆಯ ಬುದ್ಧಿಯುಂಟಾಗುವಂತೆಯೂ ಮಾಡಬೇಡ.

English Translation.

We recognize you in the midst of the right-minded who are nearest to you, come to us; do not reveal yourself to others.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ವಿಶೇಷಕಠಿನವಾದ ಶಬ್ದಗಳಿಲ್ಲದೆ ಸುಲಭವಾದ ಮತ್ತು ಬಳಕೆಯಲ್ಲಿರುವ ಶಬ್ದಗಳಿಂದಲೇ ಕೂಡಿದ್ದರೂ ಋಷಿಯ ಆಶಯವೇನೆಂಬುದು ಅಷ್ಟು ಸ್ಪಷ್ಟವಾಗಿಲ್ಲ. ಭಾಷ್ಯಕಾರರೂ ಇತರರೂ ಕೆಲವು ಅಧ್ಯಾಹಾರಪದಗಳನ್ನು ಉಪಯೋಗಿಸಿ ಸ್ವಲ್ಪಮಟ್ಟಿಗೆ ಅರ್ಥವಾಗುವಂತೆ ಬರೆದಿದಾರೆ. ಆದರೂ ಅರ್ಥವು ಸಮಂಜಸ

ವಾಗಿ ಹೊಂದುವುದಿಲ್ಲ. ಸಮತೀನಾಂ ವಿದ್ಮಾಮ ಮತ್ತು ಮಾ ನೋ ಅತಿ ಖ್ಯಃ ಎಂಬ ವಾಕ್ಯಗಳ ಅರ್ಥವು ವಿಶದವಾಗಬೇಕಾದರೆ ಇನ್ನೂ ಕೆಲವು ಶಬ್ದಗಳ ಅವಶ್ಯಕತೆ ಇದೆ. ಅಂತಹ ಶಬ್ದಗಳು ಋಕ್ಕಿನಲ್ಲಿಲ್ಲ. ಛಂದಸ್ಸಿಗೆ ಲೋಪಬರುವುದೆಂದೋ ಅಥವಾ ತನ್ನ ಮನಸ್ಸಿನಲ್ಲಿರುವ ಅಭಿಪ್ರಾಯವು ಋಕ್ಕಿನಲ್ಲಿರುವ ಶಬ್ದಗಳಿಂದಲೇ ವ್ಯಕ್ತವಾಗುವುದೆಂದೋ ಋಷಿಯು ಅವಶ್ಯಕವೂ ಮುಖ್ಯವೂ ಆದ ಕೆಲವು ಶಬ್ದಗಳನ್ನು ಬಿಟ್ಟಿರುವಂತೆ ತೋರುವುದು. ಆದುದರಿಂದ ಈ ಋಕ್ಕಿನ ಮತ್ತು ಮುಂದಿನ ಎರಡು ಮೂರು ಋಕ್ಕುಗಳ ಅರ್ಥವು ಅಸ್ಪಷ್ಟವಾಗಿಯೇ ಉಳಿದಿದೆ.

ಆಥ— ಈ ಶಬ್ದದ ಥಕಾರವು ಛಂದಸ್ಸಿನ ಅನುಕೂಲಕ್ಕಾಗಿ ದೀರ್ಘವಾಗಿರುವುದು. ಇಂತಹ ಉದಾಹರಣೆಗಳು ಋಗ್ವೇದದಲ್ಲಿ ಬೇಕಾದಷ್ಟಿವೆ. ಉದಾ–ಸಚಸ್ವ–ಸಚಸ್ವಾ (ಋ. ಸಂ. ೧-೧-೯) ಶ್ರುಧಿ—ಶ್ರುಧೀ (ಋ. ಸಂ. ೧-೨-೧) ಪೃಚ್ಛ—ಪೃಚ್ಛಾ (ಋ. ಸಂ. ೧-೪-೪) ಪಿಬ–ಪಿಬಾ (ಋ. ಸಂ. ೧-೧೪-೧೦) ಇತ್ಯಾದಿ । **ಸುಮತೀನಾಂ**—ಈ ಶಬ್ದದ ವಿವರಣೆಯನ್ನು ಹಿಂದೆಯೇ ಕೊಟ್ಟಿದೇವೆ. (ಪೇ. 81 ನೋಡಿ) **ಮಾ**—ನಿಷೇಧಾರ್ಥಕಶಬ್ದವು. ಬೇಡ ಎಂದರ್ಥವು.ಈ ಶಬ್ದವು ಋಗ್ವೇದದಲ್ಲಿ ವಿಶೇಷವಾಗಿ ಬಳಕೆಯಲ್ಲಿದೆ । **ಅತಿ**—ವಿನಹ, ಬಿಟ್ಟು ಹೊರತು, Beyond, besides &c.

॥ ವ್ಯಾಕರಣಪ್ರಕ್ರಿಯಾ ॥

ಆಥ ಎಂಬುದು ನಿಪಾತ ಆದ್ದರಿಂದ 'ನಿಪಾತಾ ಆದ್ಯುದಾತ್ತಾಃ' (ಪಾ. ಸೂ. ೮೦) ಎಂಬುದರಿಂದ ಆದ್ಯುದಾತ್ತ 'ನಿಪಾತಸ್ಯ ಚ' (ಪಾ.ಸೂ. ೬-೩-೧೩೬) ಮಂತ್ರದಲ್ಲಿರುವ ನಿಪಾತಕ್ಕೆ ದೀರ್ಘ ಬರುವುದು.ಎಂಬುದರಿಂದ ದೀರ್ಘ ಬಂದರೆ ಆಥಾ ಎಂದಾಗುವುದು. ಅಂತಮಾನಾಂ, ಅಂತಃ ಅಸ್ಯ ಅಸ್ತಿ (ಅವಧಿಯು ಇದಕ್ಕೆ ಇದೆ) ಎಂದು ವ್ಯುತ್ಪತ್ತಿ ಮಾಡಿದಾಗ 'ಅತ ಇನಿಠನೌ' (ಪಾ. ಸೂ. ೫-೨-೧೧೫) ಮತ್ವರ್ಥದಲ್ಲಿ ಹ್ರಸ್ವ ಅಕಾರಾಂತ ಪ್ರಾತಿಪದಿಕದ ಮುಂದೆ ಇನಿ, ಠನ್ ಪ್ರತ್ಯಯಗಳು ಬರುವುವು ಎಂಬುದರಿಂದ ಠನ್ ಪ್ರತ್ಯಯವನ್ನು, ಮಾಡಿದರೆ ಆದಕ್ಕೆ 'ಠಸ್ಯೇಕಃ' (ಪಾ. ಸೂ. ೭-೩-೫೦) ಎಂಬುದರಿಂದ ಇಕಾದೇಶ ಬಂದರೆ ಅಂತ+ಇಕ ಎಂದಿರುವಾಗ, ಯಸ್ಯೇತಿಚ (ಪಾ. ಸೂ. ೬-೪ ೧೪೮)ತ್ ಮುಂದಿರುವ 'ಅ'ಗೆ ಲೋಪ ಬಂದರೆ ಅಂತಿಕ ಎಂದು ಆಗುವುದು. ದೂರದ ಉತ್ಕರ್ಷಕ್ಕೆ ಅವಧಿ ಇರುವುದಿಲ್ಲ. ಸಮೀಪದ ಉತ್ಕರ್ಷಕ್ಕಾದರೋ ಯಾವುದು ಯಾವುದಕ್ಕೆ ಸಮೀಪದಲ್ಲಿರುವುದೋ ಅದೇ ಅದಕ್ಕೆ ಅವಧಿಯಾಗುವುದು., ಅಂತ (ಅವಧಿ) ಇರುವುದರಿಂದ ಅನ್ತಿಕ ಶಬ್ದವು ಸಮೀಪ ಎಂಬ ಅರ್ಥವನ್ನು ಹೇಳುವುದು. ಅತಿಶಯೇನ ಅನ್ತಿಕಾಃ ಎಂದು ಅತಿಶಯಾರ್ಥ ವಿವಕ್ಷೆ ಮಾಡಿದಾಗ 'ಅತಿಶಾಯನೇ ತಮಬಿಷ್ಠನೌ' (ಪಾ. ಸೂ. ೫-೩-೫೫) ಅತಿಶಯಾರ್ಥದಲ್ಲಿರುವ ಪ್ರಾತಿಪದಿಕದ ಮುಂದೆ ಸ್ವಾರ್ಥದಲ್ಲಿ ತಮಪ್ ಇಷ್ಠನ್ ಪ್ರತ್ಯಯಗಳು ಬರುವುವು ಎಂಬುದರಿಂದ ತಮಪ್ ಬಂದರೆ ಅನ್ತಿಕ+ತಮ ಎಂದಿರುವಾಗ **ತಿಮೇತಾದೇಶ್ಚ** (ಪಾ. ಸೂ ೬-೪-೧೫೯-ವಾ. ೯) ತಮಪ್ ಪ್ರತ್ಯಯವು ಪರದಲ್ಲಿರುವಾಗ ತಕಾರಾದಿ ವರ್ಣಸಮುದಾಯಕ್ಕೆ ಲೋಪ ಬರುವುದು ಎಂಬುದರಿಂದ ಅನ್ತಿಕ ಎಂಬಲ್ಲಿ ತಿಕ ಎಂಬುದಕ್ಕೆ ಲೋಪ ಬರುವುದು ಅನ್ತಮ ಎಂದಾಗುವುದು. ಷಷ್ಠೀ ಬಹುವಚನದಲ್ಲಿ ಅನ್ತಮಾನಾಂ ವಿದ್ಯಾಮ–ವಿದಜ್ಞಾನೇ ಎಂಬ ಆದಾದಿಕ ಧಾತುವಿನ ಮೇಲೆ ಲಿಜ್ ಲಕಾರವನ್ನಿಟ್ಟಾಗ **ಯಾಸುಟ್ ಪರಸ್ಮೈಪದೇಷೂದಾತ್ತೋ ಞಿಚ್ಚ** (ಪಾ. ಸೂ ೩-೪-೧೦೩) ಲಿಜ್ ಸ್ಥಾನದಲ್ಲಿ ಬಂದ ಪರಸ್ಮೈಪದ ಪ್ರತ್ಯಯಗಳಿಗೆ, ಯಾಸುಟ್, ಆಗಮು ಬರುವುದು ಅದು ಉದಾತ್ತವೂ ಞಿತ್ತೂ ಆಗುವುದು, ಎಂಬುದರಿಂದ ಯಾಸುಟ್ ಉದಾತ್ತ. ಇದು ಪಾದದ ಆದಿಯಲ್ಲಿರುವುದರಿಂದ 'ತಿಙ್ಚತಿಙಃ'

ಎಂಬುದರಿಂದ ಅನುದಾತ್ತ ಬರುವುದಿಲ್ಲ. **ಸುಮತೀನಾಂ**-ಮತಿಶಬ್ದವು ಕ್ತಿನ್ನಂತವಾದರೂ ನಿಷ್ಠ್ವರ (ಅದ್ಯುದಾತ್ತ) ಬರುವುದಿಲ್ಲ **ಮಂತ್ರೇವೃಷೇಷ ಪಚೆ ಪುನ ವಿದೆ ಭೂ ವೀರಾ ಉದಾತ್ತಃ** (ಪಾ. ಸೂ. ೩-೩-೯೬) ವೃಷು ಸೇಚನೇ, ಇಷು ಇಚ್ಛಾಯಾಂ, ಡುಪಚಿಷ್ ಪಾಕೇ, ಮನ ಜ್ಞಾನೇ, ವಿದ ಸತ್ತಾಯಾಂ, ಭೂ ಸತ್ತಾಯಾಂ, ವೀ, ಗತಿವ್ಯಾಪ್ತಿಪ್ರಜನಕಾನ್ತ್ಯಸನಖಾದನೇಷು, ರಾದಾನೇ ಎಂಬೀ ಧಾತುಗಳಿಗೆ ಕ್ತಿನ್ ಪ್ರತ್ಯಯ ಬರುವುದು ಅದು ಉದಾತ್ತವಾಗುವುದು, ಎಂಬುದರಿಂದ ಮನಧಾತುವಿಗೆ ಕ್ತಿನ್ನನ್ನು ಹಚ್ಚಿದಾಗ **ಅನುದಾತ್ತೋಪದೇಶ** (ಪಾ. ಸೂ. ೬-೧-೧೮೬) ಎಂಬುದರಿಂದ ಅನುನಾಸಿಕವಾದ ನಕಾರಕ್ಕೆ ಲೋಪ ಬಂದರೆ **ಮತಿ** ಎಂದಾಗುವುದು- ಕ್ತಿನ್ನಿನ ಇಕಾರವು ಪೂರ್ವಸೂತ್ರದಿಂದ ಉದಾತ್ತ. ಶೋಭನಾ ಮತಿಃ ಯೇಷಾಂ ತೇ (ಒಳ್ಳೆಯ ಬುದ್ಧಿಯು ಯಾರಿಗೆ ಇದೆಯೋ ಅವರು) ಸುಮತಯಃ ಎಂದು ಬಹುವ್ರೀಹಿಸಮಾಸ ಮಾಡಿದಾಗ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** (ಪಾ. ಸೂ. ೬-೩-೧) ಎಂದು ವಿಹಿತವಾದ ಪೂರ್ವಪದಪ್ರಕೃತಿಸ್ವರಕ್ಕೆ ಅಪವಾದವಾದ **ನಞ್ ಸುಭ್ಯಾಂ** (ಪಾ. ಸೂ. ೬-೩-೧೭೨) ಎಂಬುದರಿಂದ ಉತ್ತರಪದವು ಅಂತೋದಾತ್ತವಾಗುವುದು. **ಶೋಭನಾಶ್ಚ ತಾಃ ಮತಯಶ್ಚ**-(ಒಳ್ಳೆಯ ಬುದ್ಧಿಯು) ಎಂದು ಕರ್ಮಧಾರಯ ಸಮಾಸ **ಮಾಡಿದಾಗಲೂ ತೆತ್ಪುರುಷೇತುಲ್ಯಾರ್ಥ**- (ಪಾ. ಸೂ. ೬-೩-೨) ಎಂದು ವಿಹಿತವಾದ ಅವ್ಯಯ ಪೂರ್ವಪದಪ್ರಕೃತಿಸ್ವರಕ್ಕೆ ಅಪವಾದವಾದ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರಬಂದು ಉತ್ತರಪದವು ಅಂತೋದಾತ್ತವಾಗಿಯೇ ಆಗುವುದು. ಆದ್ದರಿಂದ ಮತುಪ್ಪನ್ನು ಮಾಡಿದಾಗ ಹ್ರಸ್ವವನ್ನು ಕೊನೆಯಲ್ಲಿ ಹೊಂದಿರುವುದೂ ಅಂತೋದಾತ್ತವೂ ಆದ ಸುಮತಿ ಶಬ್ದದ ಮುಂದಿರುವ ನಾಮ್ ಎಂಬ ಷಷ್ಠೀಬಹುವಚನ ವಿಭಕ್ತಿಗೆ **ನಾಮನ್ಯತರಸ್ಯಾಂ** (ಪಾ. ಸೂ. ೬-೧-೧೭೭) ಎಂಬುದರಿಂದ ಉದಾತ್ತ ಬರುವುದು. **ಖ್ಯಃ-ಖ್ಯಾಪ್ರಕಥನೇ** ಧಾತುವಿಗೆ ಲುಙ್ ನಲ್ಲಿ ಮಧ್ಯಮ ಪುರುಷ ಏಕವಚನ ಸಿಪ್ ಬರುವುದು ಖ್ಯಾ+ಸಿ **ಚ್ಲೇರ್ಲುಙಿ** (ಪಾ.ಸೂ. ೩-೧-೪೩) ಲುಙ್ನ ನಲ್ಲಿ ಧಾತುವಿನ ಮುಂದೆ ಚ್ಲಿ ಬರುವುದು ಎಂಬುದರಿಂದ ಚ್ಲಿ ಬಂದರೆ ಖ್ಯಾ+ಚ್ಲಿ. ಸಿ-**ಅಸ್ಯತಿವಕ್ತಿಖ್ಯಾತಿಭ್ಯೋಜ್** (ಪಾ. ಸೂ. ೩-೧-೫೨) ಈ ಧಾತುಗಳ ಮುಂದಿರುವ ಚ್ಲಿಗೆ ಅಜ್ ಆದೇಶ ಬರುವುದು ಖ್ಯಾ+ಅ. ಸಿ, **ಆತೋಲೋಪಇಟಿ ಚ** (ಪಾ. ಸೂ. ೬-೪-೬೪) ಕಿತ್ತು (ಅಥವಾ) ಙಿತ್ತು ಆದ ಅಜಾದ್ಯಾರ್ಥಧಾತುಕ, ಅಥವಾ ಇಟ್ ಆಗಮ ಇವುಗಳ ಹಿಂದಿರುವ ಆಕಾರಕ್ಕೆ ಲೋಪ ಬರುವುದು ಎಂಬುದರಿಂದ ಆಕಾರಕ್ಕೆ ಲೋಪ ಖ್ಯ್+ಅ+ಸಿ **ಇತೆಶ್ಚ** (ಪಾ. ಸೂ. ೩-೪-೧೦೦) ಜಕಾರೇತ್ಸಂಜಕವಾದ ಲಕಾರಸ್ಥಾನದಲ್ಲಿ ಬಂದ ಇಕಾರಾಂತವಾದ ಪರಸ್ಮೈಪದ ಪ್ರತ್ಯಯಗಳ ಕೊನೆಯ ವರ್ಣಕ್ಕೆ ಲೋಪ ಬರುವುದು ಎಂಬುದರಿಂದ ಇಕಾರಕ್ಕೆ ಲೋಪ. **ಸಸಜುಷೋರುಃ** (ಪಾ. ಸೂ ೮-೩-೧೩೫) ಎಂಬುದರಿಂದ ವಿಸರ್ಗವೂ ಬರುವುದು. **ನಮಾಜಿಷ್ಕೃಗೇ** (ಪಾ. ಸೂ. ೬-೪-೭೪) ಮಾಜ್ ಎಂಬ ಅವ್ಯಯಯೋಗವಿರುವಾಗ ಆಟ್-ಆಟ್ ಎಂಬ ಆಗಮಗಳು ಬರುವುದಿಲ್ಲ ಎಂಬುದರಿಂದ **ಲುಙ್ ಲಙ್ ಲೃಙ್ಕ್ಷಡುದಾತ್ತೈಃ** (ಪಾ. ಸೂ. ೬-೪-೭೧) ಎಂಬುದರಿಂದ ಪ್ರಾಪ್ತವಾದ ಅಡಾಗಮವು ಬರುವುದಿಲ್ಲ. **ಗಹಿ-ಗಮ್** ಧಾತುವಿಗೆ ಲೋಟ್-ಮಧ್ಯಮಪುರುಷ ಏಕವಚನ ಸಿಪ್ಪನ್ನಿಟ್ಟಾಗ ಶಪ್ಗೆ **ಬಹುಲಂಛಂದಸಿ** (ಪಾ. ಸೂ. ೨-೪-೭೩) ಎಂಬುದರಿಂದ ಲುಕ್ ಬರುವುದು. **ಸೇರ್ಹ್ಯಪಿಚ್ಚೆ** (ಪಾ. ಸೂ. ೩-೪-೮೭) ಎಂಬುದರಿಂದ ಸಿಪ್ಪಿನ ಸ್ಥಾನದಲ್ಲಿ ಬಂದ-ಹಿಯು **ಸಾರ್ವಧಾತುಕಮಪಿತ್** ಎಂಬುದರಿಂದ ಙಿತ್ತಾದ್ದರಿಂದ **ಅನುದಾತ್ತೋಪದೇಶವನತಿತನೋತ್ಯಾದೀನಾಮನುನಾಸಿಕಲೋಪೋಝಲ್ಯಕ್ಡಿತಿ** (ಪಾ. ಸೂ.೬-೪-೩೭) ಎಂಬುದರಿಂದ ಮಕಾರಕ್ಕೆ ಲೋಪ ಬರುವುದು **ಅಸಿದ್ಧವದತ್ರಾಭಾತ್** (ಪಾ. ಸೂ. ೬-೪-೨೨) ಎಂಬುದರಿಂದ ಮಕಾರಲೋಪವು ಅಸಿದ್ಧವಾಗುವುದರಿಂದ **ಅತೋಹೇಃ** (ಪಾ. ಸೂ. ೬-೪-೧೦೫) ಎಂಬುದರಿಂದ 'ಹಿ'ಗೆ ಲುಕ್ ಬರುವುದಿಲ್ಲ. ॥೩॥

॥ ಸಂಹಿತಾಪಾಠಃ ॥

ಪರೇ॑ಹಿ ವಿಗ್ರಮಸ್ಕೃ॒ತಮಿಂ॑ದ್ರಂ ಪೃಚ್ಛಾ ವಿಪ॒ಶ್ಚಿತಂ ।
ಯಸ್ತೇ॑ ಸಖಿ॒ಭ್ಯ ಆ ವರ॑ಂ ॥ ೪ ॥

॥ ಪದಪಾಠಃ ॥

ಪರ॑ । ಇ॒ಹಿ । ವಿಗ್ರಂ । ಅ॒ಸ್ಕೃ॒ತಂ । ಇಂ॒ದ್ರಂ । ಪೃ॒ಚ್ಛ॒ । ವಿ॒ಪ॒ಃ ಽ ಚಿತ॑ಂ ॥
ಯಃ । ತೇ॒ । ಸ॒ಖಿ ಽ ಭ್ಯಃ । ಆ । ವರ॑ಂ ॥ ೪ ॥

॥ ಸಾಯಣಭಾಷ್ಯಂ ॥

ಅತ್ರ ಯಜಮಾನಂ ಪ್ರತಿ ಹೋತಾ ಬ್ರೂತೇ । ಹೇ ಯಜಮಾನ ತ್ವಮಿಂದ್ರಂ ಪರೇಹಿ । ಇಂದ್ರಸ್ಯ ಸಮೀಪೇ ಗಚ್ಛ । ಗತ್ವಾ ಚ ವಿಪಶ್ಚಿತಂ ಮೇಧಾವಿನಂ ಹೋತಾರಂ ಮಾಂ ಪೃಚ್ಛ । ಅಸೌ ಹೋತಾ ಸಮ್ಯಕ್ ಸ್ತುತವಾನ್ನ ಚೇತ್ಯೇವಂ ಪ್ರಶ್ನಂ ಕುರು । ಯ ಇಂದ್ರಸ್ತೇ ತವ ಯಜಮಾನಸ್ಯ ಸಖಿಭ್ಯ ಋತ್ವಿಗ್ಭ್ಯೋ ವರಂ ಶ್ರೇಷ್ಠಂ ಧನಪುತ್ರಾದಿಕಮಾ ಸಮಂತಾತ್ಪ್ರಯಚ್ಛತೀತಿ ಶೇಷಃ । ತಾದೃಶಮಿಂದ್ರಮಿತಿ ಪೂರ್ವತ್ರಾನ್ವಯಃ । ಪುನರಪಿ ಕೀದೃಶಂ । ವಿಗ್ರಂ ಮೇಧಾವಿನಂ ಅಸ್ಕೃತಮಹಿಂಸಿತಂ । ವಿಪ್ರ ಇತ್ಯಾದಿಷು ಚತುರ್ವಿಂಶತಿಸಂಖ್ಯಾಕೇಷು ಮೇಧಾವಿನಾಮಸು ವಿಗ್ರವಿಪಶ್ಚಿಚ್ಛಬ್ದೌ ಪಠಿತೌ ॥ ವಿಗ್ರಂ ಪೃಷಾದಿತ್ವಾದಾದ್ಯುದಾತ್ತಃ । ಅಸ್ಕೃತಂ । ಅವ್ಯಯಪೂರ್ವಪದಪ್ರಕೃತಿಸ್ವರತ್ವಂ । ಇಂದ್ರಶಬ್ದ ಋಜ್ರೇಂದ್ರಾಗ್ರೇತ್ಯಾದಿನಾ ರನ್ । ನಿತ್ತ್ವಾದಾದ್ಯುದಾತ್ತಃ । ಸಖಿಭ್ಯಃ । ಸಮಾನೇ ಖ್ಯುಶ್ಚೋದಾತ್ತಃ । ಉ. ೪-೧೩೬ । ಇತಿ ಸಮಾನ ಉಪಧಪದೇ ಖ್ಯಾತೇರಿನ್ । ಡಿದಿತ್ಯನುವೃತ್ತೇಸ್ತಸ್ಯ ಡಿತ್ತ್ವಾಟ್ಟಿಲೋಪಶ್ಚ ಪಾ. ೬-೪-೧೪೩ । ತತ್ಸನ್ನಿಯೋಗೇನ ಯೆಲೋಪಃ । ಉಪಪದಸ್ಯೋದಾತ್ತತ್ವಂ । ಸಮಾನಸ್ಯ ಛಂದಸ್ಯಮೂರ್ಧಪ್ರಭೃತ್ಯುದರ್ಕೇಷು । ಪಾ ೬ ೩-೮೪। ಇತಿ ಸಭಾವಃ। ಅತಃ ಸಖಿಶಬ್ದ ಆದ್ಯುದಾತ್ತಃ। ವ್ರಿಯತ ಇತಿ ವರಃ । ಗ್ರಹವೃದೃನಿಶ್ಚಿಗಮಶ್ಚ । ಪಾ. ೩-೩-೫೮ । ಇತ್ಯಪ್ । ತಸ್ಯ ಪಿತ್ತ್ವಾದ್ಧಾತುಸ್ವರ ಏವ ॥

॥ ಪ್ರತಿಪದಾರ್ಥ ॥

ಈ ಋಕ್ಕಿನಲ್ಲಿ ಹೋತೃವೆಂಬ ಋತ್ವಿಜನು ಯಜಮಾನನನ್ನುದ್ದೇಶಿಸಿ ಹೇಳುವನು—

(ಎಲೈ ಯಜಮಾನನೇ ನೀನು) ವಿಗ್ರಂ--ಬುದ್ಧಿಶಾಲಿಯಾದ । ಇಂದ್ರಂ ಪರೇಹಿ--ಇಂದ್ರನ ಸಮೀಪಕ್ಕೆ ಹೋಗು । (ಹೋಗಿ) ಅಸ್ಕೃತಂ—ಶತ್ರುಗಳ ಹಿಂಸೆಗೊಳಗಾಗದ (ಇಂದ್ರನನ್ನು ಕುರಿತು) ವಿಪಶ್ಚಿತಂ ಪೃಚ್ಛ--ಈ ಮೇಧಾವಿಯಾದ (ಕೃತ್ಯಪು ನಿನ್ನನ್ನು ಸರಿಯಾಗಿ ಸ್ತೋತ್ರಮಾಡಿದನೇ ಇಲ್ಲವೇ ಎಂಬುದನ್ನು) ಕೇಳು । ಯಃ—(ಯಾವ) ಆ ಇಂದ್ರನು । ತೇ—ನಿನ್ನ । ಸಖಿಭ್ಯಃ—ಸ್ನೇಹಿತರಾದ ಋತ್ವಿಜರಿಗೆ । ವರಂ—ಶ್ರೇಷ್ಠವಾದ ಧನಪುತ್ರಾದಿ ಸಂಪತ್ತನ್ನು । ಆ (ಯಚ್ಛತಿ)—(ಕೊಡುವನು) ।

॥ ಭಾವಾರ್ಥ ॥

ಹೋತೃವು ಯಜ್ಞಮಾಡುವ ಯಜಮಾನನನ್ನು ಕುರಿತು ಈ ರೀತಿ ಹೇಳುವನು—ಎಲೈ ಯಜಮಾನನೇ, ನೀನು ಬುದ್ಧಿಶಾಲಿಯಾದ (ಮೇಧಾವಿಯಾದ) ಇಂದ್ರನ ಸಮೀಪಕ್ಕೆ ಹೋಗಿ-ಈ ಹೋತೃವು ನಿನ್ನನ್ನು ಹೆಸರಿಸಿ ಸ್ತೋತ್ರಮಾಡಿದನೇ ಇಲ್ಲವೇ ಎಂಬುದನ್ನು ಕೇಳು. ಇಂದ್ರನು ಹೋತೃ ಮಾಡಿದ ಸ್ತೋತ್ರಗಳಿಂದ ಸಂತೋಷಪಟ್ಟಿರುವನಾದ್ದರಿಂದ ನಿನ್ನ ಸ್ನೇಹಿತರುಗಳೆನಿಸಿದ ಋತ್ವಿಜರಿಗೂ ನಿನಗೂ ಧನ, ಪುತ್ರಸಂಪತ್ತು ಮೊದಲಾದ ಶ್ರೇಷ್ಠವಾದ ವರಗಳನ್ನನುಗ್ರಹಿಸುವನು.

English Translation

Go (worshipper) to the wise (and) unimpaired Indra and ask him of the (fitness of the) learned (priest who recites his praise.) Indra will bestow the best of blessings to your friends (priests).

॥ ವಿಶೇಷವಿಷಯಗಳು ॥

ವಿಗ್ರಂ, ವಿಪಶ್ಚಿತಂ—ಈ ಶಬ್ದಗಳು ಮೇಧಾವಿ ಎಂಬ ಅರ್ಥವನ್ನು ಸೂಚಿಸುವ ಶಬ್ದಗಳ ಮಧ್ಯದಲ್ಲಿ ಪಠಿತವಾಗಿವೆ (ನಿ ೩-೧೫) ಈ ಶಬ್ದಗಳಿಗೆ ಬುದ್ಧಿವಂತ, ಮೇಧಾವಿ, ವಿವೇಕಿ ಎಂದರ್ಥವು. ವಿಗ್ರಂ ಎಂಬ ಶಬ್ದವು ಋಗ್ವೇದದಲ್ಲಿ ಎರಡು ಕಡೆ ಮಾತ್ರ ಪ್ರಯೋಗಿಸಲ್ಪಟ್ಟಿದೆ. ಪ್ರಸಕ್ತವಾದ ಈ ಋಕ್ಕಿನಲ್ಲಲ್ಲದೆ

ತಾ ವಿಗ್ರಂ ದೈಧೇ ಜಶರಂ ಪೃಣಧ್ಯಾ ಆ ಯತ್ಸದ್ಮ ಸಭೃತಯಃ ಪೃಣಂತಿ ॥ (ಋ. ಸಂ ೬-೬೭-೭)

ಎಂಬ ಋಕ್ಕಿನಲ್ಲಿಯೂ ಈ ಶಬ್ದ ಪ್ರಯೋಗವಿದೆ. ಇನ್ನೆಲ್ಲಿಯೂ ಇಲ್ಲ. ವಿಪಶ್ಚಿತಂ ಎಂಬ ಶಬ್ದವು ಋಗ್ವೇದದಲ್ಲಿ ೨೩ ಕಡೆಗಳಲ್ಲಿ ಉಪಯೋಗಿಸಲ್ಪಟ್ಟಿದೆ

ಅಸ್ಮೃತಂ—ಸ್ಮೃ ಧಾತುವಿನಿಂದ ಉಂಟಾದ ಸ್ಮೃತ ಶಬ್ದದ ನಿಷೇಧಾರ್ಥಕವೂ ನಸ್ಮೃತಂ—ಅಸ್ಮೃತಂ.

ಸಖಿಭ್ಯಃ—ಸ್ನೇಹಿತರಿಗೆ ಎಂದರೆ ಯಜಮಾನನ ಸ್ನೇಹಿತರೆಂದು ಕರೆಯಲ್ಪಡುವ ಋತ್ವಿಜರಿಗೆ ಎಂದರ್ಥವು. ಋತ್ವಿಜರು ಯಜ್ಞಮಾಡುವ ಯಜಮಾನನ ಸ್ನೇಹಿತರೆಂಬ ವಿಷಯದಲ್ಲಿ—

ಅ ಹ್ಯಾಯಯೇ ಸಖೀನ್ತ್ಸನ್ಯಾ ಮೇಧಯೇತ್ಯಾಹರ್ತ್ವಿಜೋ ವಾ ಅಸ್ಯ ಸಖಾಯಸ್ತಾನೇ-
ವಾಪ್ಯಾಯಯತಿ ॥ (ತೈ. ಸಂ ೬-೨-೪)

ಎಂಬ ತೈತ್ತರೀಯ ಶ್ರುತಿಯ ವಾಕ್ಯವಿರುವುದು. ಇಲ್ಲಿ ಋತ್ವಿಜೋ ವಾ ಅಸ್ಯ ಸಖಾಯಃ ಎಂದರೆ ಋತ್ವಿಕ್ಕುಗಳು ಯಜಮಾನನ ಸ್ನೇಹಿತರು ಎಂದು ಸ್ಪಷ್ಟವಾಗಿ ಹೇಳಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಪರಾ—ನಿಪಾತಾ ಆದ್ಯುದಾತ್ತಾಃ (ಫಿ.ಸೂ. ೮೦) ಎಂಬುದರಿಂದ ಆದ್ಯುದಾತ್ತ ಬರಲು ಶೇಷಾನುದಾತ್ತ ಸ್ವರದಿಂದ ಕೊನೆಯ ವರ್ಣ ಅನುದಾತ್ತ. ಆಕಾರಕ್ಕೆ ಸಂಹಿತಾಕಾಲದಲ್ಲಿ ಇಹ ಶಬ್ದದ ಅನುದಾತ್ತ ಇಕಾರ ಪೊಂದಿಗೆ ಗುಣಸಂಧಿಯಿಂದ ಏಕಾರವು ಏಕಾದೇಶವಾಗಿ ಬರುವುದು. ಈ ಏಕಾದೇಶವು ಅನುದಾತ್ತಗಳ ಸ್ಥಾನ

ದಲ್ಲಿ ಬರುವುದರಿಂದ **ಸ್ಥಾನಿವದಾದೇಶೋನಲ್ವಿಧೌ** (ಪಾ. ಸೂ. ೧-೧-೫೬) ಎಂದು ವಿಹಿತವಾದ ಸ್ಥಾನಿವದ್ಭಾವ ದಿಂದ ಆನುದಾತ್ತವೇ ಆಗುವುದು. [illegible] ಅಂತರತಮದ [illegible] ಎಂಬ ನ್ಯಾಯದಿಂದ [illegible] ಆಗುವುದರಿಂದ **ಉದಾತ್ತಾದ್ಧನುದಾತ್ತಸ್ಯ ಸ್ವರಿತಃ** ಎಂಬುದರಿಂದ ಸ್ವರಿತವಾಗುವುದು. [illegible]

[illegible] ಇಹ-ಇಣ್ ಗತೌ-ಧಾತು. ಇದರ ಮುಂದೆ ಲೋಟ್ ಮಧ್ಯಮಪುರುಷ ಏಕವಚನ ಸಿಪ್-ಇ+ಸಿ. **ಸೇರ್ಯ್ಯ** ಪಿಚ್ಚೆ (ಪಾ ಸೂ. ೩-೪-೮೭) ಎಂಬುದರಿಂದ ಸಿಗೆ ಹಿ ಆದೇಶ, **ಶಪ್** ವಿಕರಣ ಅದಕ್ಕೆ **ಆದಿರ್ಞಿಟುಡವಃ** (ಪಾ ಸೂ. ೩-೪-೧೦೨) ಎಂಬುದರಿಂದ ಟಿಗೆ ಹಿ ಆದೇಶ, **ಶಪಃ** (ಪಾ. ಸೂ. ೩-೪-೨೩) ಎಂಬುದರಿಂದ ಲುಕ್, ಹಯು-ಅಪಿತ್ ಆದ್ದರಿಂದ **ಸಾರ್ವಧಾತುಕಮಪಿತ್** (ಪಾ ಸೂ. ೧-೩-೪) ಪಕಾರೇತ್ಸಂಜ್ಞಕವಲ್ಲದ ಸಾರ್ವಧಾತುಕವು ಜ್ಞಾತ್ತಾಗುವುದು ಎಂಬುದರಿಂದ ಜ್ಞಾತ್ವ ಬರುತ್ತದೆ. ಈಗ **ಕ್ವಿತಿ ಚ** (ಪಾ. ಸೂ. ೧-೧-೫) ಎಂದು ಗುಣಕ್ಕೆ ನಿಷೇಧ ಬರುವುದರಿಂದ **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ ೭-೩-೮೪) ಎಂಬುದರಿಂದ ಗುಣ ಬರುವುದಿಲ್ಲ (ಇಹ ಎರಡಾಗುವುದು. ಇದು ಹಂ-ಎಂಬ ತಿಙಂತವಲ್ಲದ ಪದದ ಮುಂದೆ ಇರುವುದರಿಂದ **ತಿಙ್ಶಿತಿಃ** (ಪಾ. ಸೂ ೮-೧-೭೮) ಎಂಬುದರಿಂದ) ಸರ್ವಾನುದಾತ್ತ-ಮೊದಲನೆಯ ಅನುದಾತ್ತವು ಹಿಂದೆ ಹೇಳಿದಂತೆ ಪರಾಶಬ್ದದ ಆಕಾರದೊಂದಿಗೆ ಏಕಾದೇಶವನ್ನು ಹೊಂದಿ ಸ್ವರಿತವಾಗುತ್ತೆ. ಎರಡನೆಯ ವಿಗ್ರಂ ಎಂಬಲ್ಲಿಯ ಉದಾತ್ತ ವಿಯು ಪರದಲ್ಲಿರುವುದರಿಂದ **ಉದಾತ್ತ ಸ್ವರಿತಪರಸ್ಯಸನ್ನತರಃ** (ಪಾ. ಸೂ. ೧-೨-೪೦) ಎಂಬುದರಿಂದ ತೀನುದಾತ್ತತರವಾಗುವುದು.

[illegible] ವಿಗ್ರಮ್-ವಿ ಎಂಬ ಉಪಸರ್ಗಪೂರ್ವಕವಾದ ಗ್ಹ ಶಬ್ದೇ ಎಂಬ ಧಾತುವಿನ ಮುಂದೆ **ಶ್ನೇಷ್ಟಿದೃಶ್ಯತೇ** (ಪಾ. ಸೂ. ೩-೪-೧೦೧) ಇಲ್ಲಿ ದೃಶ್ಯತೇ-ಎಂದು ದೃಶಿಗ್ರಹಣ ಸಾಮರ್ಥ್ಯದಿಂದ ಪ್ರಯೋಗಗಳು ಕಂಡ್ಲು ಬಂದಂತೆ ಸಕಲ ಧಾತುಗಳ ಮುಂದೆಯೂ ಡ ಪ್ರತ್ಯಯ ಬರುವುದು, ಈ ದೃಶಿಗ್ರಹಣದಿಂದಲೇ ಪ್ರತ್ಯಯವು ಡಿತ್ತಾದರೂ ಕೆಲವು ಕಡೆಗಳಲ್ಲಿ ಟಿಗೆ ಲೋಪವೂ ಬರುವುದಿಲ್ಲ ಪ್ರಕೃತ ಗ್ಹ ಧಾತುವಿನ ಮುಂದೆ ಡ ಪ್ರತ್ಯಯ ಬಂದರೆ ವಿ-ಗ್ಹ-ಅ-ಣಾ ದೇಶದಿಂದ ಮೂಡಿ ರೇಫ ಬಂದರೆ ವಿಗ್ರ-ಎಂದಾಗುತ್ತದೆ. ಈ ಪಕ್ಷದಲ್ಲಿ ಡಿತ್ತಾದರೂ ದೃಶಿಗ್ರಹಣದಿಂದ ಟಿ ಲೋಪ ಬರುವುದಿಲ್ಲ ಎಂದು ಕ್ಲಿಷ್ಟ ಕಲ್ಪನೆಯನ್ನು ಮಾಡಬೇಕು. **ಸಾರ್ವಧಾತುಕ**-ಇತ್ಯಾದಿ ಸೂತ್ರದಲ್ಲಿ ಗುಣವು ಬರಲಿ ಎಂದು ಹೇಳಿದರೆ ಅದನ್ನು ನಿವಾರಣೆ ಮಾಡುವುದೂ ಕ್ಲೇಶಸಾಧ್ಯ. ಆದ್ದರಿಂದ ಮೂಲ ವಿಭುಜಾದಿ ಗಣದಲ್ಲಿ ವಿಗ್ರಶಬ್ದವನ್ನು ಪಠಿಸಿ **ಕಪ್ಪಕರಣೇ ಮೂಲವಿಭುಜಾದಿಭ್ಯ ಉಪಸಂಖ್ಯಾನಂ** (ಪಾ. ಸೂ. ೩-೧-೧೯ ವಾರ್ತಿಕ) ಎಂಬುದರಿಂದ ಕ ಪ್ರತ್ಯಯವನ್ನು ಮಾಡುವುದು ಉಚಿತವು ಈಗ ಡಿತ್ತಾದರೂ ಟಿ ಲೋಪಕ್ಕೆ ಅವಕಾಶ ಇಲ್ಲ. ಪ್ರತ್ಯಯವು ಕಿತ್ತಾದ್ದರಿಂದ ಗುಣಕ್ಕೆ ನಿಷೇಧ ಬರುವುದು. ಈ ಎರಡು ಕಲ್ಪದಲ್ಲಿಯೂ ಸಂದೇಹ ಬರುವುದರಿಂದ ಪಥಕಾಲದಲ್ಲಿ ತೀನಗ್ರಹ ಇಲ್ಲ ಎಂದು ತಿಳಿಯಬೇಕು, **ವಿಶೇಷಣಂ ವೈಶಿಷ್ಟ್ಯಕೃತ್** (ವಿಶೇಷವನ್ನು ಹೇಳುವನು) ಇತಿ ವಿಗ್ರಹಃ ಮೇಧಾವಿ ಎಂದು ಅರ್ಥವು- ಈ ಎರಡು ಪಕ್ಷದಲ್ಲಿಯೂ ಧಾತುವಿನ ಅಜ್ಗ್ರಹಣವು ಯಣಾದೇಶದಿಂದ ಅಪಹೃತವಾಗುವುದರಿಂದ ಪ್ರತ್ಯಯವು ಉದಾತ್ತವು ಸಿಲ್ಲುವುದು, ವಿ ಎಂಬ ಉಪಸರ್ಗದೊಂದಿಗೆ ಸಮಾಸ ಮಾಡಿದರೆ 'ಗತಿಕಾರಕೋಪಪದಾತ್ಕೃತ್' ಎಂಬುದರಿಂದ ಪ್ರಕೃತಿಸ್ವರವು ಬಂದು ವಿಗ್ರ ಎಂಬುದಕ್ಕೆ ಅಂತೋದಾತ್ತವು ಪ್ರಾಪ್ತವಾಗುವುದು. ಆದುದರಿಂದ ವಿಗ್ರ ಶಬ್ದವನ್ನು ವೃಷಾದಿಗಣದಲ್ಲಿ ಸೇರಿಸಿಕೊಳ್ಳಬೇಕು ಈಗ **ವೃಷಾದೀನಾಂ ಚ** (ಪಾ ಸೂ. ೬-೧-೨೦೩) ವೃಷಾದಿಗಣಪಠಿತಶಬ್ದಗಳ ಆದಿಯು ಉದಾತ್ತವಾಗುವುದು ಎಂಬುದರಿಂದ ವಿಗ್ರ ಎಂಬುದು ಆದ್ಯುದಾತ್ತ, ಈ ಎರಡು ಕಲ್ಪಗಳಲ್ಲಿಯೂ ಪಥಕಾಲದಲ್ಲಿ ಅವಗ್ರಹವನ್ನು ಮಾಡದೇ ಇರುವುದರಿಂದಲೂ, ವೃಷಾದಿಗಣದಲ್ಲಿ ಪಾಠವನ್ನು ಕಲ್ಪಿಸಬೇಕಾಗಿರುವುದರಿಂದಲೂ ಈ ಕೃಷ್ಣ ಗಳು ಗುರುಭೂತಗಳು ಎಂದರೆ ಬೇರೆ ರೀತಿಯಲ್ಲಿ ವಿಗ್ರಶಬ್ದವನ್ನು ಸಿದ್ಧಪಡಿಸಲು ಸಾಧ್ಯವಾಗುವುದು. ವಿಶೇಷ ಸೃಷ್ಟಿಗಳಲ್ಲಿ

ಧಾತುಃ ಪೂರ್ವಭಾಗಾವಿನಾಶ್ಯರ್ಥಸ್ಯ ಪ್ರದರ್ಶಕೋ ಭವತಿ ಪ್ರತ್ಯಯಾಂತರಮಪಿ ಚಾರ್ಥಾಂತರಾವಯವಾನಾಹ (ಸೋಽಯಂ) ಕೊಂಕಿಡಿರುವುದು ಯಾವಸಕ್ತಿ-ಎಂದರೆ ಯಾವೆಚಿಯಸಕ್ತಿ ಎಂದು ಅರ್ಥವು ವಿವರಿಸಲ್ಪಡುವುದು. ಸಮಿನಕ್ತಿ-ಸದಾರ್ಥಾನಾಂ ವಿಶೇಷಕಾರಿ ಪದೋಕ್ತಿ (ಪದಾರ್ಥಗಳಲ್ಲಿ ವಿಶೇಷನೆಯನ್ನು ಮಾಡುತ್ತಾನೆ) ಇತಿ ವಿಗ್ರಹವಾಕ್ಯವು. ಪದಸ್ಯಹವೃತ್ತಿಯಲ್ಲಿ ಮೋಧಾಶಿನಿ ಎಂದೇ ಅರ್ಥವು. ಈ ಧಾತುವಿನ ಮುಂದೆ ಣ್ಯಾದಿಕವಾದ ರನ್-ಪ್ರತ್ಯಯವನ್ನು ಧಾತುವಿಗೆ ಆಕಾರಕ್ಕೆ ಗಕಾರಾದೇಶವನ್ನೂ ಕಲ್ಪಿಸಬೇಕು. ರನ್ ಪ್ರತ್ಯಯವು ಕಿತ್ತಾಗುವುದೆಂದೂ ಇಟ್ಟುಕೊಳ್ಳಬೇಕು. ಪ್ರತ್ಯಯವು ನಿತ್ತಾದ್ದರಿಂದ ವಿಗ್ರಶಬ್ದ ನಿತ್ಸ್ವರದಿಂದ ಆದ್ಯುದಾತ್ತ. ಕೊನೆಯ ವರ್ಣ ಶೇಷಾನುದಾತ್ತದಿಂದ ಅನುದಾತ್ತ, ಸಂಹಿತಾಕಾಲದಲ್ಲಿ ಕೊನೆಯ ವರ್ಣವು ಉದಾತ್ತಣಕ್ಕೆ ಅಂತಿಕವೂ ಪರದಲ್ಲಿರುವುದರಿಂದ-ಉದಾತ್ತ ಸ್ವರಿತಪರಸ್ಯ ಸನ್ನತರಃ (ಪಾ. ಸೂ. ೧-೨-೪೦) ಎಂಬುದರಿಂದ ಸ್ವರಿತ ಬರುವುದು. ಇಲ್ಲಿ ವಿಗ್ರಶಬ್ದದ ಮುಂದೆ ದ್ವಿತೀಯಾ ಏಕವಚನ ಅಮ್ ವಿಭಕ್ತಿಪ್ರತ್ಯಯ ಅಮ್ ಎಂಬಿದು ನಿತ್ಸ್ವರದಿಂದ ಅನುದಾತ್ತ ಅಮ್ ಪೂರ್ವಃ (ಪಾ. ಸೂ. ೬-೧-೧೦೭) ಎಂಬುದರಿಂದ ಎರಡು ಅನುದಾತ್ತ ಅಕಾರಗಳಿಗೂ ಪೂರ್ವರೂಪವು ಏಕಾದೇಶವಾಗಿ ಬರುವುದು. ಅದು ಸ್ಥಾನಿವದ್ಭಾವದಿಂದ ಅನುದಾತ್ತ. ಇದರಿಂದ ಮೊಳಿದ್ರತ್ತಿನಿಸ್ವರಿತವಾಗುವುದು. ಸಂಹಿತಾಕಾಲದಲ್ಲಿ ಆಸ್ಪೃತಶಬ್ದದ ಆ ಎಂಬ ಉದಾತ್ತ ಪರದಲ್ಲಿರುವುದರಿಂದ, ಉದಾತ್ತ ಸ್ವರಿತಪರಸ್ಯ ಸನ್ನತರಃ-ಎಂಬುದರಿಂದ ಅನುದಾತ್ತತರವು ಬರುವುದು-ಆಸ್ಪೃತಂ ಎಂಬಲ್ಲಿ ತತ್ಪುರುಷೇ ತುಲ್ಯಾರ್ಥ-(ಪಾ ಸೂ. ೬-೩-೩) ಎಂಬುದರಿಂದ ಅವ್ಯಯಪೂರ್ವಪದಪ್ರಕೃತಿಸ್ವರ ಬರುವುದು. ಇಂದ್ರಶಬ್ದಕ್ಕೆ ಋಚಿಜ್ರೇಂದ್ರಾಗ್ರವಜ್ರ ವಿಪ್ರ ಕುಬ್ರ ಚುಬ್ರಕ್ಷುರ ಕ್ಷುರ ಭದ್ರೋಗ್ರ ಭೇರ ಶ್ಲೇಲ ಶುಕ್ರ ಶುಕ್ಲ ಗ್ಲೌರನ್ಯೇರ್ಣವಾಲ್ಲಾಕ್ (ಉ. ಸೂ. ೨-೧೫೬) ಎಂಬುದರಿಂದ-ಡಿನ್ ಪ್ರತ್ಯಯ ಬರುವುದು. -ಪ್ರತ್ಯಯವು ನಿತ್ತಾದ್ದರಿಂದ ನಿತ್ಸ್ವರ ಆದ್ಯುದಾತ್ತ ಬರುವುದು. ಸಮಿಭ್ಯಃ -ಸಮಾನೇಽಯ್ಯಶ್ಚೋದಾತ್ತಃ (ಉಣ್ಣಾ ಸೂ. ೪೬೬) ಸಮಾನಶಬ್ದವು ಉಪಪದವಾಗಿರುವಾಗ, ಅಯ್ ಧಾತುವಿನ ಮುಂದೆ ಇಣ್ ಪ್ರತ್ಯಯ ಬರುವುದು, ಅದುಡಿತ್ (ಡಕಾರೇತ್ಸಂಜ್ಞಕ) ಆಗುವುದು, ಉಪಪದವು ಉದಾತ್ತವಾಗುವುದು. ಎಂಬುದರಿಂದ, ಸಮಾನಶಬ್ದವು ಉಪಪದವಾಗಿರುವಾಗ, ಇಣ್ ಎಂದರೆ ಸಮಾನ ಅಯ್+ಇ-ಪ್ರತ್ಯಯವು ಡಿತ್ತಾದ್ದರಿಂದ ಟೇಃ (ಪಾ. ಸೂ. ೬-೪-೧೫೫) ಡಿತ್ತಾದ ಪ್ರತ್ಯಯ ಪರದಲ್ಲಿರುವಾಗ ಭವತಿಯ್ಯಾದಿಯಲ್ಲಿ ಟಿಗೆ ಲೋಪವಾಗುವುದು, ಪ್ರತ್ಯಯದಲ್ಲಿ ಡಿತ್ತೆಂದು ಹೇಳಿರುವುದೆಂದು ಇಲ್ಲ ಟಿದ್ಧರಣ ಟಿ ಲೋಪವು ಬರುವುದು, ಟಿ ಲೋಪ ಬಂದಾಗ ಯಕಾರಕ್ಕೂ ಲೋಪ ಬರುವುದು; ಉಸಿಪದವು ಪೂರ್ವನಿಪಾತವಾದ ಅಕಾರವಿತ್ತು. ಉಸಿ ಪದಪರವಾದ ಸಮಿಸಿಶಬ್ದಕ್ಕೆ ಸಮಾನಸ್ಯ ಭಾವಸ್ಯ ಮೊರ್ಧಾಜ್ರಭೃತ್ಯುದಯೇಷ್ಟಿ (ಪಾ. ಸೂ. ೫-೪-೧೫೦) ಈ ಸೂತ್ರದಿಂದ ಸಮಾನಶಬ್ದಕ್ಕೆ ಸಮಾದೇಶ ಬರುವುದು. ಇಲ್ಲಿ ಸಮಾನಶಬ್ದಕ್ಕೆ ಸಮಾದೇಶವಾಗಿ ಸಮಿಸಿಶಬ್ದ ನಿತ್ಸ್ವರದಿಂದ ಆದ್ಯುದಾತ್ತ ಬರುವುದು. ಸಮಾನಶಬ್ದಕ್ಕೆ ಸಮಾದೇಶವಾಗಿರುವಾಗ ಸಮಾನಸ್ಯೇತಿ ಸೂತ್ರದಿಂದ ಆದೇಶವಾಗುವುದು ಸಮಿ ಎಂದಾಗುವುದು. ಆದ್ದರಿಂದ ಸಮಿ ಶಬ್ದವು ಆದ್ಯುದಾತ್ತ ಸಮಾನಸ್ಯೇಶ್ಯಂಸ್ವಸ್ಪತಿಷೂದಾತ್ತಃ (ಉಣ್ಣಾ ಸೂ. ೫೩೪-೧೬೬) ಎಂಬ ಉಣಾದಿಸೂತ್ರದಲ್ಲಿ ವಾಸ ಮಾಡುವುದು. ಈ ಸೂತ್ರಕ್ಕೆ ಸಮವಾಯಶಬ್ದವು ಅಂತಿಮಪದವಾಗಿರಬೇಕು ಎಂಬ ಪ್ರತಿಪಾದನೆಗಾಗಿ ಪ್ರತ್ಯಯವಿತ್ತಿರುವುದು ಆಗಲಿ ಡಿತ್ತಾಗಿರುವುದಕ್ಕಾಗಿ ಟೇಃ ಲೋಪವು ಬರುವುದು. ಸಮಾನಶಬ್ದಕ್ಕೆ ಸಮಾದೇಶ ಬಂದಿರುವ ಸೂತ್ರವು ಪದದ ಮೊದಲಿನಲ್ಲಿ ವೃತ್ತವಾಗುವುದರಿಂದ ಯಲೋಪ ಬರುವುದು. ಸಮಾನಶಬ್ದಕ್ಕೆ ಸಮಾದೇಶವಾಗುವುದಕ್ಕೆ ಸಂಬಂಧಪಟ್ಟಂತೆ ವೈಯಾಕರಣರು ಹೀಗೆ ಹೇಳುತ್ತಾರೆ. ಸಾಮಾನ್ಯ ಸಮಾನಶಬ್ದವು ಸಮಾನ ಶಬ್ದವು ಸಮಾನಪದವಾಗಿರುವಾಗ ಇಣ್ ಪ್ರತ್ಯಯವು ಬಂದಾಗ ಯಲೋಪವು ಬರುವುದು; ಆಗ ಸಮಾನಶಬ್ದಕ್ಕೆ ಸಮಾದೇಶವಾಗುವುದು. ಈ ಸೂತ್ರದಿಂದ ಸಮಾನಸ್ಯ ಭಾವದಸ್ಯ ಸ್ವಾಮಿದ್ಧವಚ್ಚ ಎಂಬುದರಿಂದ ಸಭಾವವನ್ನು ಹೇಳುವು ಮಾಧ್ಯಮಾವ್ಯಾಕರಣದಲ್ಲಿ ವೇದಭಾಷೆ

ಮಾತ್ರ ಸಖಿ ಶಬ್ದವು ಸಾಧುವಾಗುವುದು ಪ್ರಿಯತೇ ಇತಿ ವರಃ **ಗ್ರಹವೃದೃನಿಶ್ಚಿಗಮಶ್ಚ** (ಪಾ. ಸೂ. ೩-೩-೫೮) ಗ್ರಹ, ವೃ, ದೃ, ನಿಶ್ಚಿ, ಗಮ್ ಇವುಗಳ ಮುಂದೆ ಅಪ್ ಪ್ರತ್ಯಯ ಬರುವುದು. ಎಂಬುದರಿಂದ ಅಪ್ ಪ್ರತ್ಯಯ ಬಂದರೆ ವೃ+ಅ-**ಸಾರ್ವಧಾತುಕಾರ್ಥಧಾತುಕಯೋಃ** (ಪಾ. ಸೂ ೭-೩-೮೪) ಎಂಬುದರಿಂದ ಗುಣ ಬಂದರೆ ವರಃ ಎಂದಾಗುವುದು, ಪ್ರತ್ಯಯವು ಪಿತ್ತಾದ್ದರಿಂದ ಅನುದಾತ್ತ ವ-ಎಂಬುದು **ಧಾತೋಃ** (ಪಾ. ಸೂ. ೩-೧-೯೧) ಎಂಬುದರಿಂದ ಉದಾತ್ತ ॥ ೪ ॥

॥ ಸಂಹಿತಾಪಾಠಃ ॥

ಉತ ಬ್ರುವಂತು ನೋ ನಿದೋ ನಿರನ್ಯತಶ್ಚಿದಾರತ।
ದಧಾನಾ ಇಂದ್ರ ಇದ್ದುವಃ ॥ ೫ ॥

॥ ಪದಪಾಠಃ ॥

ಉತ । ಬ್ರುವಂತು । ನಃ । ನಿದಃ । ನಿಃ । ಅನ್ಯತಃ । ಚಿತ್ । ಆರತ ॥
ದಧಾನಾಃ । ಇಂದ್ರೇ । ಇತ್ । ದುವಃ ॥ ೫ ॥

॥ ಸಾಯಣಭಾಷ್ಯಂ ॥

ನೋಽಸ್ಮಾಕಂ ಸಂಬಂಧಿನ ಋತ್ವಿಜ ಇತಿ ಶೇಷಃ । ತೇ ಬ್ರುವಂತು । ಇಂದ್ರಂ ಸ್ತುವಂತು । ಉತಮಪಿ ಚ ಹೇ ನಿದೋ ನಿಂದಿತಾರಃ ಪುರುಷಾ ನಿರಾರತ । ಇತೋ ದೇಶಾನ್ನಿರ್ಗಚ್ಛತ । ಅನ್ಯತಶ್ಚಿದನ್ಯಸ್ಮಾದಪಿ ದೇಶಾನ್ನಿರ್ಗಚ್ಛತ । ಕೀದೃಶಾ ಋತ್ವಿಜಃ । ಇಂದ್ರೇ ದುವಃ ಪರಿಚರ್ಯಾಂ ದಧಾನಾಃ ಕುರ್ವಾಣಾಃ । ಇಚ್ಛಬ್ದೋಽವಧಾರಣೇ । ಸರ್ವದಾ ಪರಿಚರ್ಯಾಂ ಕುರ್ವಂತ ಏವ ತಿಷ್ಠಂತ್ಯಿತ್ಯರ್ಥಃ । ನಿಂದಂತೀತಿ ನಿದಃ । ನಿದಿ ಕುತ್ಸಾಯಾಂ । ಕ್ವಿಪಿ ನುಮಭಾವಶ್ಛಾಂದಸಃ । ಸುಪೋಽನುದಾತ್ತತ್ವಾದ್ಧಾತುಸ್ವರಃ । ಆಮಂತ್ರಿತತ್ವೇಽಪಿ ವಾಕ್ಯಾಂತರತ್ವೇನ ಸ್ವವಾಕ್ಯಗತಪದಾದತ್ವರತ್ವಾನ್ನ ನಿಘಾತ ಇತ್ಯಾದ್ಯುದಾತ್ತತ್ವಮೇವ । ಅನ್ಯತಃ ಲಿತೀತಿ ಪ್ರತ್ಯಯಾತ್ಪೂರ್ವಸ್ಯೋದಾತ್ತತ್ವಂ ಚಿದಿತ್ಯಪಿಶಬ್ದಾರ್ಥೇ । ತೇನ ನ ಕೇವಲಮಿತಃ । ಇತೋ ನಿರ್ಗತ್ಯಾನ್ಯತೋಽಪಿ ನಿರ್ಗಚ್ಛತೇತಿ ಗಮ್ಯತೇ । ಸ ಏಷ ಧಾತ್ವರ್ಥಯೋಃ ಸಂಬಂಧ ಆರತೇತಿ ಲುಙಾ ದ್ಯೋತ್ಯತೇ । ಸ ಹಿ ಧಾತುಸಂಬಂಧಾಧಿಕಾರೇ ವಿಧೀಯತೇ । ಆರತ । ಆರ್ತೇಶ್ಛಂದಸಿ ಲುಙ್ಲಙ್ಲಿಟ ಇತಿ ಲೋಡರ್ಥೇ ಲುಙ್ । ಮಧ್ಯಮಬಹುವಚನಸ್ಯ ತಾದೇಶಃ । ಸರ್ತಿಶಾಸ್ತ್ಯರ್ತಿಭ್ಯಶ್ಚ । ಪಾ. ೩-೧-೫೬ । ಇತಿ ಶ್ಲೇರಜಾದೇಶಃ। ಋದೃಶೋಽಞಿ ಗುಣಃ। ಪಾ. ೭-೪-೧೬ । ಇತಿ ಗುಣಃ । ಆಡಾಗಮಃ । ದಧಾನಾಃ । ಶಾನಚಶ್ಚಿತ್ತ್ವಾತ್ತ್ವಪ್ರತ್ಯಯಮಂತೋದಾತ್ತಂ ಬಾಧಿತ್ವಾ ಪರತ್ವಾದಭ್ಯಸ್ತಾನಾಮಾದಿರಿತ್ಯಾದ್ಯುದಾತ್ತತ್ವಂ । ದುವಃ । ನಪ್ತಿಷಯಸ್ಯನಿಸಂತಸ್ಯೇತ್ಯಾದ್ಯುದಾತ್ತಃ ॥ ೬ ॥

॥ ಪ್ರತಿಪದಾರ್ಥ ॥

ಇಂದ್ರೇ ಇತ್—ಇಂದ್ರನಲ್ಲಿಯೇ (ಇಂದ್ರನನ್ನು) । **ದುವಃ**—ಸುಚರ್ಯೆಯನ್ನು (ಸೇವೆಯನ್ನು) । **ಪಧಾನಾಃ**—ಮಾಡುವ । **ನಃ**—ನಮ್ಮ (ಋತ್ವಿಜರು) । **ಬ್ರುವಂತು**—(ಇಂದ್ರನನ್ನು ಸ್ತೋತ್ರನಾಡಲಿ । **ಉತ**—ಮತ್ತು । **ನಿದಃ**—(ಇಂದ್ರನನ್ನು)ನಿಂದೆಮಾಡುವ ಪುರುಷರು । **ಅನ್ಯತಶ್ಚಿತ್**—ಇಲ್ಲಿಂದಲೂ, ಇತರ ಕಡೆಗಳಿಂದಲೂ । **ನಿರಾರತ**—ಹೊರಟುಹೋಗಲಿ.

॥ ಭಾವಾರ್ಥ ॥

ಇಂದ್ರನನ್ನು ಸೇವೆಮಾಡುವುದರಲ್ಲಿಯೇ ಆಸಕ್ತರಾದ ನಮ್ಮ ಋತ್ವಿಜರು (ಮತ್ತು ಪುತ್ರಾದಿ ಬಂಧು ಜನರೂ) ಇಂದ್ರನನ್ನು ಸ್ತೋತ್ರಮಾಡಲಿ, ಮತ್ತು ಇಂದ್ರನನ್ನು ನಿಂದೆಮಾಡುವ ಪುರುಷರು ಇಲ್ಲಿಂದಲೂ ಬೇರೆ ಪ್ರದೇಶದಿಂದಲೂ ಹೊರಟುಹೋಗಲಿ.

English Translation

Let our (priests and relatives) engaged in the service of Indra, sing his praises. O revilers, depart from (here and) every other place.

॥ ವಿಶೇಷವಿಷಯಗಳು ॥

ಈ ಋಕ್ಕಿನ ಅರ್ಥವನ್ನು ಇತರ ಭಾಷ್ಯಕಾರರೂ, ಪಾಶ್ಚಾತ್ಯಪಂಡಿತರೂ ವಿಧವಿಧವಾಗಿ ಅರ್ಥ ಮಾಡಿರುವರು—

(1) Wilson—Let our minsters earnestly performing his worship exclaim,—depart, ye revilers from hence and every other place (where he is adored)

(2) Dr. Sitanath—Let our revilers say--you have estranged yourself from all other (gods) because of your having preference of service only for Indra.

(3) Vedarthayatna—Whether the revilers may say to us that we might indeed be lost to all other gods by serving Indra alone.

ನಃ—ಭಾಷ್ಯಕಾರರು ನಃ ಎಂಬ ಶಬ್ದಕ್ಕೆ ನಮ್ಮ (ನಮಗೆ ಸಂಬಂಧಪಟ್ಟ, ನಮ್ಮ ಯಜ್ಞದಲ್ಲಿ ಭಾಗ ವಹಿಸುತ್ತಿರುವ) ಋತ್ವಿಜರೆಂದು ಅರ್ಥಮಾಡಿರುವರು. ಸ್ಕಂದಸ್ವಾಮಿಯು, ಋತ್ವಿಜರು ಮತ್ತು ಪುತ್ರಾದಿಗಳೂ ಎಂದು ಹೇಳಿರುವರು. ಆದರೆ ಋತ್ವಿಜರು ಅಥವಾ ಪುತ್ರಾದಿಗಳು ಎಂಬ ಶಬ್ದವನ್ನು ಅಧ್ಯಾಹಾರಮಾಡಿಕೊಳ್ಳುವದಕ್ಕಿಂತಲೂ ನಃ ಎಂಬ ಶಬ್ದವನ್ನು ನಿದಃ ಎಂಬ ಶಬ್ದದ ಜತೆಗೆ ಸೇರಿಸಿ ಅರ್ಥಮಾಡುವುದೇ ಸಮಂಜಸವಾ

ಗಿರುವುದು ಎಂದರೆ-ನೋ ನಿದಃ—ಎಂದರೆ ನಮ್ಮ ನಿಂದಕರು, ನಮ್ಮನ್ನು ನಿಂದೆಮಾಡುವವರು ಎಂದರ್ಥವು. ಈ ವಿಧವಾದ ಅರ್ಥಮಾಡುವಾಗ ಬ್ರುವಂತು ಎಂಬ ಕ್ರಿಯಾಪದಕ್ಕೆ ಸ್ತುವಂತು—(ಇಂದ್ರನನ್ನು) ಸ್ತೋತ್ರ ಮಾಡಲಿ ಎಂದು ಅರ್ಥ ಹೇಳಬೇಕಾಗುವುದಿಲ್ಲ. ಆದರೆ ಉತ ಬ್ರುವಂತು ನೋ ನಿದಃ ಎಂಬ ವಾಕ್ಯಕ್ಕೆ ನಮ್ಮನ್ನು ನಿಂದೆಮಾಡುವವರು (ಬೇಕಾದದ್ದನ್ನು) ಹೇಳಲಿ ಎಂಬರ್ಥವು ಹೊಂದುವುದು.

ನಿದಃ—ನಿದಿ ಕುತ್ಸಾಯಾಂ । ನಿಂದಂತೀತಿ ನಿದಃ,

ಹೆಸರು.

ಅನ್ಯತಃ—ಈ ಋಕ್ಕಿನಲ್ಲಿ ಅನ್ಯತಃ ವಿಶೇಷವಿರುವುದು ಎಂಬ ಶಬ್ದಮಾತ್ರವಿರುವುದು. ಆದುದರಿಂದ

ಚಿತ್—ಇದ್ದೆಂದೆ ಎಂಬ ಶಬ್ದವನ್ನು ಇಲ್ಲಿ ಅಧ್ಯಾಹಾರಮಾಡಿಕೊಳ್ಳಬೇಕು.

ಚಿತ್—ಅಪಿ. ಈ ಶಬ್ದಕ್ಕೆ ಕೂಡ ಎಂಬರ್ಥವು.

ಇತ್—ಏವ. ಎಂದರೆ ಇದು ಅವಧಾರಣಾರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದು.

ದುವಃ—ಈ ಶಬ್ದವು ಅನೇಕ ಪೂಜಾಕ್ರಿಯೆಗಳಿಗೆ ಸಂಬಂಧಿಸಿದ ಅರ್ಥಗಳನ್ನು ಸೂಚಿಸುವುದಕ್ಕಾಗಿ ಉಪಯೋಗಿಸಲ್ಪಟ್ಟಿರುವುದು. ಈ ಶಬ್ದಕ್ಕೆ ಪರಿಚರ್ಯಾ, ಸೇವೆ, zeal, favour, preference, homage, zeal for service, gift, present ಮೊದಲಾದ ಅರ್ಥಗಳನ್ನು ಹೇಳಬಹುದು.

॥ ವ್ಯಾಕರಣಪ್ರಕ್ರಿಯಾ ॥

ಸ್ತುವಂತು ಎಂಬಲ್ಲಿ ಷ್ಟುಞ್ ಸ್ತುತೌ (ಪಾ. ಧಾ. ೧೦೭೯) ಎಂಬ ಧಾತ್ವಾದೇಶವಾದ ಸ್ತು ಎಂಬ ಧಾತುವಿಗೆ ಲೋಟ್ ಪ್ರತ್ಯಯ ಬರುವುದು. ನಿದಿ ಧಾತುವು ಇದಿತ್ತು, ಆದರೂ ಇದಿತೋನುಮ್ ಧಾತೋಃ (ಪಾ. ಸೂ. ೭-೧-೫೮) ಇದಿತ್ವಾದ ಧಾತುವಿಗೆ ನುಮ್ ಆಗಮ ಬರುವುದು ಎಂದು ವಿಧಿಸಿರುವ ನುಮಾಗವು ಇದು ಛಂದಸ್ಸಾದ್ದರಿಂದಲೂ ಛಂದಸ್ಸಿನಲ್ಲಿ ವಿಕಲ್ಪ ವಿಧಿಗಳಿಗೂ ವಿಕಲ್ಪವಿರುವುದರಿಂದಲೂ ಇಲ್ಲಿ ಬರುವುದಿಲ್ಲ. ನಿದಃ—ಎಂಬಲ್ಲಿ ಸುಪಾಂ ಸುಲುಗ್ ಇತ್ಯಾದಿ ಸೂತ್ರದಿಂದ ವಿಭಕ್ತಿಯು ಅನುದಾತ್ತ—ಇಕಾರವು ಧಾತುಸ್ವರದಿಂದ ಉದಾತ್ತ. ಬ್ರುವನ್ತು ನಃ (ನಮ್ಮವರಾದ ಋತ್ವಿಕ್ಕುಗಳೇ ಇಂದ್ರನನ್ನು ಸ್ತೋತ್ರಮಾಡಿ ಎಂದು ಒಂದು ವಾಕ್ಯ) 'ನಿದೋ ನಿರನ್ಯತ ಶ್ಚಿದಾತ' (ಉತ=ಅಥವಾ) (ದೂಷಿಸುವ ಮನುಷ್ಯರೇ ಈ ಪ್ರಕಾರ ನಮ್ಮನ್ನು ಬಿಟ್ಟು ನಿಮ್ಮ ಹೊಟ್ಟೆಯನ್ನೂ ಬಿಟ್ಟು ಹೋಗದಿರಿ) ಎಂಬುದು ಋತ್ವಿಗಂದು ವಾಕ್ಯ-ನಿದಃ ಎಂಬುದು ಅಮಂತ್ರಿತವು ಆದರೂ ಇದು ಎರಡನೇ ವಾಕ್ಯದ ಆದಿಯಲ್ಲಿ ಸೇರಿರುವುದು ಆದ್ದರಿಂದ ಸ್ವವಾಕ್ಯಗತವಾದ ಪದಕ್ಕಿಂತಲೂ ಸಂವಾಗುವುದಿಲ್ಲ ಆದಕಾರಣ ಸಮಾನವಾಕ್ಯೇನಿಘಾತಯೆಯುಸ್ಮದಸ್ಮದ್ಭಾವೇಷು ಎಂಬ ಸೂತ್ರದಿಂದ ಅಮಂತ್ರಿತಸ್ಯ ಚ (ಪಾ. ಸೂ. ೮-೧-೭೨) ಎಂಬ ಸೂತ್ರದಿಂದ ಅಮಂತ್ರಿತಸ್ಯ ಚ (ಪಾ. ಸೂ. ೮-೧-೭೨) ಎಂಬುದರ

ಆರತ, ಎಂಬಲ್ಲಿರುವ ಲುಙ್‌ನಿಂದ ತೋರುವುದು!! ಆ್ಲೋಪ್ಯೆ ಧೌತೆಃಸಂಬಂಧೇಪ್ರತ್ಯಯಾಃ (ಪಾ. ಸೂ. ೩-೪-೧) ಸಾಮಾನಾಧಿಕರಣ್ಯವಿಷಯಾಧಿಕಾರಪದಲ್ಲಿ ವಿಹಿತವಾಗಿರುವುದು. ಪ್ರಾಆಶಿತಂಯುಷ್ಮತ್ಪೋಧಾಶಾನಿಷ್ಠಾಖಲರ್ಥೇಷು ಲುಙ್‌ಲಙ್‌ಲಿಟಃ (ಪಾ. ಸೂ. ೩-೩-೧೩) ಧಾತ್ವರ್ಥಕ್ರಿಯೆಗಳಿಗೆ ಸ್ವತಂತ್ರಪದಗಳಿಂದ ತೋರುವಾಗಿನಿರ್ಣಾಲಕ್ಷ್ಯವು (ಭೂತಭವಿಷ್ಯತ್ - ವರ್ತಮಾನವು) ದಲ್ಲಿರುವಾಗ ಈ ಪ್ರತ್ಯಯಗಳು ವಿಕಲ್ಪವಾಗಿ ಬರುವುದು. ಎಂಬುದರಿಂದ ಲೋಟ್ಟುನ್ ಆಶೀರ್ವಾದಲ್ಲಿ ಲುಙ್ ಬರುವುದು ಚ್ಲಿ ಲುಙಾ (ಪಾ. ಸೂ. ೩-೧-೪೩) ತುಂಬುದರಿಂದ ಚ್ಲಿಯು ಧಾತುವಿನ ಮುಂದೆ ಬರುವುದು. ಲುಙ್ಲಙೋರ್ಮಧ್ಯದ ವಿರುವ ಜಹುಸುಚಿನ ಸ್ಯಾಯು ಬರುವುದು ಸಾಂಚ್ಲಿ ಕ್ಷ ಪಾಬಕಕ್ಕೆ ತಸ್ಥಸ್ಥಮಿಧ್ವಾಂತ್ರಾತೆಂಬಾದೇಶವು (ಪಾ. ಸೂ. ೩-೪-೧೦೧) ಎಂಬುದರಿಂದ 'ತಕಿ ಬರುವುದು ಸಿಚ್ ಪ್ರತ್ಯಯಕ್ಕೆ ಪ್ರತ್ಯಯ್ಯಾಮಯ ಧಾತುವಿಗೆ ಸೇರುವಂತಿರುವುದು. ಜ್ಞಿಗೆ ಜಬ್ ಬರುವುದು, ಎಂದು ಅಜ್ಞಿ ಬಂದರೆ ಗುಣ ಆ+ಜ್ಞಿ=ಆಜ್ಞಿಗೆ ಹಲ್ಲಿಗೆ ಗುಣವಾಗುವ (ಪಾ. ಸೂ. ೭-೩-೮೪) ಪ್ರಕಾರ ಆಜ್ಞಿ ಬಂದರೆ ಧಾತುವಿಗೂ ಅಜ್ಞಿಗೂ ಪರದಲ್ಲಿರುವಾಗ ಗುಣ ಬರುವುದು. ಎಂದು ಗುಣ ಬಾಧಿಸಿ ಆಜ್ಞಿ+ಸಿ+ತ. ಆಡಜಾದೀನಾಂ (ಪಾ. ಸೂ. ೬-೪-೭೨) ಎಂದು ಆಡಾಗಮ ಬರುವುದು (ಪಾ. ಸೂ. ೬-೪-೭೧) ಆಡಾಗಮವು ಸ್ವರಪರವಾಗಿರುವಾಗ ಪೂರ್ವಸ್ವರಗಳಿಗೆ ವೃದ್ಧಿಯು. ಸಾಯಣರ ವಾಕ್ಯವು ಚತುರ್ಥಿ ಎಂದು ತೃತೀಯಾ ಜಂಭರೀಯ ಆರ್ತ ಎಂದಾಗುತ್ತೆ.। ಪದಾರ್ಥ:- ಇಲ್ಲಿಂ ಕಾಣಬೇ ಪ್ರತ್ಯಯವು ಚಿತ್ತುಕ್ಕಾಗಿ ಉಪಯೋಗಿಸಿಕೊಳ್ಳುವುದು. ಇಚ್ಛಾರ್ಥಕ್ಕೆ (ಪಾ. ಸೂ. ೩-೧-೭) ಎಂದೂ ಅಂತೋದಾತ್ತವು ಲಭ್ಯಸ್ತಾಸ್ಯವಾಗಿದೆ (ಪಾ. ಸೂ. ೩-೧-೩೪) ಇರಿದು ಚಿದ್ಯುದಾತ್ತವೂ ಪ್ರಾಪ್ತವಾದರೆ ನಿಷ್ಪ್ರತಿಷೇಧೇಪರಂಕಾರ್ಯಂ (ಪಾಸೂ ೧-೪-೨) ಎಂಬುದರಿಂದ ಅಂತೋದಾತ್ತವನ್ನು ಬಾಧಿಸಿ ಪರವಾದ ಅದ್ಯುದಾತ್ತವೇ ಬರುವುದು. ಜುವಃ—ನಜ್ಪಿಚ ಯಸ್ಯಾನಿಸರ್ವತಕಸ್ಯ (ಪಾ. ಸೂ. ೨೬) ಇಸಂತವಲ್ಲದ ನಿತ್ಯ ಸಪುಂಸಕ ಶಬ್ದದ ಆದಿಯು ಉದಾತ್ತವಾಗುವುದು ಎಂಬುದರಿಂದ ದುನಃ ಎಂಬುದು ಅದ್ಯುದಾತ್ತ. ॥ ೫ ॥

ಇಲ್ಲಿಗೆ ಏಳನೆಯ ಸೂಕ್ತವು ಮುಗಿದುದು

॥ ಸಂಹಿತಾಪಾಠಃ ॥

ಊತ ನಃ ಸುಭಗಾ ಅರಿವೋ ವೋಚೇಯುರ್ದಸ್ಮ ಕೃಷ್ಟಯಃ ।
ಸ್ಯಾಮೇದಿಂದ್ರಸ್ಯ ಶರ್ಮಣಿ ॥ ೬ ॥

॥ ಪದಪಾಠಃ ॥

ಊತ । ನಃ । ಸುಭಗಾನ್ । ಅರಿಃ । ವೋಚೇಯುಃ । ದಸ್ಮ । ಕೃಷ್ಟಯಃ ॥
ಸ್ಯಾಮ । ಇತ್ । ಇಂದ್ರಸ್ಯ । ಶರ್ಮಣಿ ॥ ೬ ॥

॥ ಸಾಯಣಭಾಷ್ಯಂ ॥

ಹೇ ದಸ್ಮ ಶತ್ರೂಣಾಮುಪಕ್ಷಪಯಿತರಿಂದ್ರ ತ್ವದನುಗ್ರಹಾದರಿರುತ ಶತ್ರವೋಽಪಿ ನೋಽಸ್ಮಾನ್ ಸುಭಗಾನ್ ಶೋಭನಧನೋಪೇತಾನ್ವೋಚೇಯುಃ । ಉಚ್ಯಾಸುಃ । ಕೃಷ್ಟಯೋ ಮನುಷ್ಯಾ ಅಸ್ಮನ್ಮಿತ್ರ-ಭೂತಾ ವದಂತೀತಿ ಕಿಮು ವಕ್ತವ್ಯಮಿತಿ ಶೇಷಃ । ತತೋ ಧನಸಂಪನ್ನಾ ವಯಮಿಂದ್ರಸ್ಯ ಶರ್ಮ-ಣೀಂದ್ರಪ್ರಸಾದಲಬ್ಧೇ ಸುಖೇ ಸ್ಯಾಮೇತ್ । ಭವೇಮೈವ । ಮಘಮಿತ್ಯಾದಿಷ್ವಷ್ಟಾವಿಂಶತಿಸಂಖ್ಯಾಕೇಷು ಧನನಾಮಸು ರಯಿಃ ಕ್ಷತ್ರಂ ಭಗ ಇತಿ ಪಠಿತಂ । ಮನುಷ್ಯಾ ಇತ್ಯಾದಿಷು ಪಂಚವಿಂಶತಿಸಂಖ್ಯಾಕೇಷು ಮನುಷ್ಯನಾಮಸು ಕೃಷ್ಟಯ ಇತಿ ಪಠಿತಂ ॥ ಉತ ॥ ಏವಮಾದೀನಾಮಂತಃ । ಫಿ. ೪-೧೪ । ಇತ್ಯಂ-ತೋದಾತ್ತಃ । ಸುಭಗಾನ್ । ಭಗಶಬ್ದಸ್ಯ ಕ್ರತ್ವಾದಿಷು ಪಾಠಾನ್ನಞ್ಸುಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ ಬಾಧಿತ್ವಾ ಕ್ರತ್ವಾದಿಯೇಷ್ಟ ॥ ಪಾ. ೬-೨-೧೧೮ । ಇತ್ಯುತ್ತರಪದಾದ್ಯುದಾತ್ತತ್ವಂ । ಸಂಹಿತಾಯಾಂ ದೀರ್ಘಾದಟಿ ಸಮಾನಪಾದೇ । ಪಾ. ೮-೩-೯ । ಇತಿ ನಕಾರಸ್ಯ ರುತ್ವಂ । ಭೋಭಗೋ । ಪಾ. ೮-೩-೧೭ । ಇತಿ ಯೆಶ್ವಂ। ಲೋಪಃ ಶಾಕಲ್ಯಸ್ಯ । ಪಾ. ೮-೩-೧೯ । ಇತಿ ಯೆಲೋಪಃ । ತಸ್ಯಾಸಿದ್ಧವತ್ತ್ವಾನ್ನ ಪುನಃ ಸಂಧಿಕಾರ್ಯಂ । ಆತೋಽಟಿ ನಿತ್ಯಂ । ಪಾ. ೮-೩-೩ । ಇತ್ಯಾಕಾರಸ್ಯ ಸಾನುನಾಸಿಕತಾ । ಅರಿಃ । ವಚನವ್ಯತ್ಯಯಃ । ಅಚ ಇಃ । ಉ. ೪-೧೩೮ । ಇತೀಪ್ರತ್ಯಯಾಂತಃ । ಪ್ರತ್ಯಯಸ್ವರೇಣಾಂತೋದಾತ್ತಃ ವೋಚೇಯುಃ । ಉಚ್ಯಾಸುಃ । ವಚ ಪರಿಭಾಷಣ ಇತ್ಯಸ್ಮಾದಾಶೀರ್ಲಿಙ್ ಝೋರ್ಜುಸಾದೇಶೇ । ಪಾ. ೩-೪-೧೦೮ । ಲಿಙ್ಯಾಶಿಷ್ಯಙ್ । ಪಾ. ೩-೧-೪೬ । ಇತ್ಯಙ್ಪ್ರತ್ಯಯೇ ವಚ ಉಮ್ । ಪಾ. ೭-೪-೨೦ । ಇತ್ಯುಮಾಗಮಃ । ಗುಣಃ । ಕಿದಾಶಿಷಿ । ಪಾ. ೩-೪-೧೦೪ । ಇತಿ ಯಾಸುಟ್ । ಛಂದಸ್ಯುಭಯಥಾ । ಪಾ. ೩ ೪-೧೧೭ । ಇತಿ ಲಿಙಾದೇಶಸ್ಯ ಸಾರ್ವಧಾತುಕತ್ವಾಲ್ಲಿಙಃ ಸಲೋಪೋಽನಂತ್ಯಸ್ಯ । ಪಾ. ೭-೨-೭೯। ಇತಿ ಸಕಾರಲೋಪಃ । ಅತೋ ಯೇಯಃ ಪಾ ೭-೨-೮೦ । ಆದ್ಗುಣಃ । ಪಾ. ೬-೧-೮೭ । ಅಜಿತ್ಯೋಽ-ದುಪದೇಶತ್ವಾಲ್ಲಸಾರ್ವಧಾತುಕಸ್ವರೇಣ ಲಿಜಿತ್ಯೋಽನುದಾತ್ತತ್ವಂ । ಅಙ್ಪ್ರತ್ಯಯಸ್ವರ ಏವ ಶಿಷ್ಯತೇ । ತೇನ ಸಹೇಕಾರಸ್ಯ ಗುಣ ಏಕಾದೇಶ ಉದಾತ್ತೇನೋದಾತ್ತ ಇತ್ಯುದಾತ್ತಃ । ದಸ್ಮ । ದಸು ಉಪಕ್ಷಯೇ ಇತ್ಯಸ್ಮಾದಂತೆರ್ಭಾವಿತಣ್ಯರ್ಥಾದಿಷಿಯುಧೀಂಧಿದಶಿಸ್ಯಾಧೂಸೂಭ್ಯೋ ಮಕ್ ! ಉ. ೧-೧೪೪ । ಪದಾ-ತ್ಪರತ್ವಾದಾಮಂತ್ರಿತನಿಘಾತಃ । ಕೃಷ್ಟಯಃ ! ಕ್ತಿಚ್ಕ್ತೌ ಚ ಸಂಜ್ಞಾಯಾಂ । ಪಾ ೩-೩-೧೭೪ । ಇತಿ ಕ್ತಿಚಿ ಮನುಷ್ಯನಾಮತ್ವಚ್ಛಿತ ಇತ್ಯಂತೋದಾತ್ತಃ । ಸ್ಯಾಮ । ಅಸ ಭುವಿ । ಶ್ನಸೋರಲ್ಲೋಪಃ । ಪಾ. ೬-೪-೧೧೧ । ಯಾಸುಟ ಉದಾತ್ತತ್ವಂ । ಪಾದಾದಿತ್ವಾದನಿಘಾತಃ । ಶರ್ಮಣಿ । ಶೃ ಹಿಂಸಾಯಾಂ। ಹಿನಸ್ತಿ ದುಃಖಮಿತಿ ಶರ್ಮ । ಅನ್ಯೇಭ್ಯೋಽಪಿ ದೃಶ್ಯಂತೇ । ಪಾ. ೩-೨-೭೫ । ಇತಿ ಮನಿನ್ । ನೇಡ್ವಶಿ ಕೃತಿ । ಪಾ. ೭-೨-೮ । ಇತೀಟ್ಪ್ರತಿಷೇಧಃ । ನಿತ್ವಾದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

(ಹೇ)ದಸ್ಮ—ಶತ್ರುನಾಶಕನಾದ ಎಲೈ ಇಂದ್ರನೇ (ನಿನ್ನ ಅನುಗ್ರಹದಿಂದ) । ಅರಿರುತ—ಶತ್ರುಗಳೂ ಕೂಡ । ನಃ—ನಮ್ಮನ್ನು । ಸುಭಗಾನ್—ಧನವಂತರೆಂದು ಅಥವಾ ಐಶ್ವರ್ಯವಂತರೆಂದು । ವೋಚೇಯುಃ-ಹೇಳಲಿ । ಕೃಷ್ಟಯಃ—(ನಮ್ಮ ಶತ್ರುಗಳೇ ನಮ್ಮ ವಿಚಾರದಲ್ಲ ಒಳ್ಳೆಯವಾತನ್ನಾಡುವಾಗ ನಮ್ಮ ಮಿತ್ರರಾದ) ಮನುಷ್ಯರು (ಅರೀತಿ ಹೇಳುವುದೇನಾಶ್ಚರ್ಯವು?) । ಇಂದ್ರಸ್ಯ—ಇಂದ್ರನ (ಅನುಗ್ರಹದಿಂದ ಉಂಟಾದ) । ಶರ್ಮಣಿ—ಸುಖದಲ್ಲಿ । ಸ್ಯಾಮೇತ್—ಇದ್ದೇ ಇರುವೆವು ।

॥ ಭಾವಾರ್ಥ ॥

ಎಲೈ ಶತ್ರುನಾಶಕನಾದ ಇಂದ್ರನೇ, ನಿನ್ನ ಅನುಗ್ರಹದಿಂದ ನಮ್ಮ ಶತ್ರುಗಳೂ ಕೂಡ ನಮ್ಮನ್ನು ಐಶ್ವರ್ಯವಂತರೆಂದು ಹೊಗಳುವರು. ಹೀಗಿರುವಲ್ಲಿ ನಮ್ಮ ಮಿತ್ರರಾದ ಇತರ ಮನುಷ್ಯರು ಆರೀತಿ ಹೇಳುವುದೊಂದಾಶ್ಚರ್ಯವೇ? ಇದಲ್ಲದೆ ನಿನ್ನ (ಇಂದ್ರನ) ಅನುಗ್ರಹದಿಂದ ನಾವು ಸುಖವಾಗಿಯೇ ಇರುವೆವು.

English Translation.

Destroyer of foes, let our enemies say we are prosperous, let men (congratulate us); may we ever live in happiness through your (favour)

॥ ವಿಶೇಷವಿಷಯಗಳು ॥

ಈ ಋಕ್ಕಿನ ಅರ್ಧಕ್ಕೂ ಹಿಂದಿನ ಋಕ್ಕಿನ ಅರ್ಧಕ್ಕೂ ಸ್ವಲ್ಪಮಟ್ಟಿಗೆ ಹೋಲಿಕೆ ಇರುವುದು. ಎಂದರೆ ಎರಡು ಋಕ್ಕಿನ ಮುಖ್ಯಾಭಿಪ್ರಾಯವೂ ಒಂದೇ ಆಗಿರುವುದು.

ಸುಭಗಾನ್—ಮಳೆ ಮೊದಲಾದ ಧನಸೂಚಕವಾದ ಇಪ್ಪತ್ತೈಂಟು ನಾಮಗಳ ಮಧ್ಯದಲ್ಲಿ ಭಗಶಬ್ದವು ಪಠಿತವಾಗಿರುವುದರಿಂದ (ನಿ. ೩-೯) ಭಗಶಬ್ದಕ್ಕೆ ಧನವೆಂದರ್ಥವು. **ಸುಭಗಾನ್** ಎಂದರೆ ಹೆಚ್ಚಾಗಿ ಧನವುಳ್ಳವರೆಂದರ್ಥವು.

ಅರಿಃ—ಇಲ್ಲಿ ಏಕವಚನವು ಬಹುವಚನಾರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದು. ಸಾಮಾನ್ಯವಾಗಿ ನಾವು ಮಾತನಾಡುವಾಗ ಶತ್ರುವು (enemy) ಎಂದರೆ ನಮ್ಮ ಶತ್ರುಪಕ್ಷಕ್ಕೆ ಸೇರಿದ ಜನಗಳು, ನಮಗೆ ಹಿತೈಷಿಗಳಲ್ಲದವರು ಎಂದು ಹೇಳುವುದು ರೂಢಿಯಷ್ಟೆ ಅದರಂತೆ ಇಲ್ಲಿ ಅರಿಃ-ಶತ್ರುವು ಎಂದು ಏಕವಚನ ಪ್ರಯೋಗವಿದ್ದರೂ "ನಮ್ಮ ಶತ್ರುಗಳು, ನಮಗೆ ಆದವರು" ಎಂದು ಬಹುವಚನಾರ್ಥವನ್ನೇ ಹೇಳಬೇಕು.

ದಸ್ಮ—ಈ ಶಬ್ದಕ್ಕೆ ಭಾಷ್ಯಕಾರರು **ಶತ್ರೂಣಾಮುಪಕ್ಷಯಿತಃ** ಶತ್ರುಗಳ ವಿನಾಶಕನೆಂದು ಅರ್ಥಮಾಡಿರುವರು. **ದಸು ಉಪಕ್ಷಯೇ** ಎಂಬ ಧಾತುವಿನಿಂದ ಉಂಟಾದ ರೂಪವು. ಈ ಶಬ್ದಕ್ಕೆ ಸ್ವಂದ ಸ್ವಾಮಿಯು **ದರ್ಶನೀಯ** ಎಂದರೆ ಸುಂದರನಾದ ಎಂದು ಅರ್ಥಮಾಡಿರುವರು. ಭಾಷ್ಯಕಾರರಾದ ಸಾಯಣರೂ ಕೂಡ ಋ. ಸಂ. ೧-೬೨ ನೇ ಸೂಕ್ತದ ೫, ೧೧, ೧೩ನೆಯ ಋಕ್ಕುಗಳಲ್ಲಿ **ದಸ್ಮ** ಶಬ್ದಕ್ಕೆ ದರ್ಶನೀಯವೆಂದೇ ಅರ್ಥಮಾಡಿರುವರು. ಈ ಶಬ್ದವು ಋಗ್ವೇದದಲ್ಲಿ ಮೇಲೆ ಹೇಳಿದ ಋಕ್ಕುಗಳಲ್ಲಲ್ಲದೆ ಋ. ಸಂ. ೧-೧೩೮-೪, ೩-೯-೫; ೪-೧-೩; ೫-೧-೩; ೬-೧೦-೧; ೬-೧೮-೫, ೭-೩-೪; ೭-೩೫-೮, ೧೦-೭-೧; ೧೦-೪೩-೨; ೧೦-೧೪೭-೫ ಈ ಋಕ್ಕುಗಳಲ್ಲಿಯೂ ಪ್ರಯೋಗಿಸಲ್ಪಟ್ಟಿರುವುದು. ಮೇದಂಸ್ ಧಾತುವಿನ ವಿವಿಧರೂಪಗಳಾದ **ದಂಸಃ, ದಂಸನಾ, ದಂಸಭಿಃ, ದಂಸನಾಭಿಃ ದಂಸನ್ಯೈಃ, ದಂಸಯಂತಃ ದಂಸಸಾ ದಂಸಾಂಸಿ** ಎಂಬ ಶಬ್ದಗಳ ಪ್ರಯೋಗವು ಋಗ್ವೇದದಲ್ಲಿ ಅನೇಕಕಡೆಗಳಲ್ಲಿವೆ. Geldner ಮೊದಲಾದ **ಪಂಡಿತರು ಈ ಶಬ್ದಕ್ಕೆ** master ಎಂದು ಅರ್ಥಮಾಡಿರುವರು.

ಕೃಷ್ಟಯಃ--ಈ ಶಬ್ದವು ಮನುಷ್ಯಾರ್ಥವಾಚಕವಾದ ಇಪ್ಪತ್ತೈದು ಪದಗಳ ಮಧ್ಯದಲ್ಲಿ ಪಠಿತವಾಗಿರುವುದು (ನಿ. ೩-೮) ಈ ಶಬ್ದವು **ಕೃಷ್**-ಉಳು, ವ್ಯವಸಾಯಮಾಡು ಎಂಬ ಧಾತುವಿನಿಂದ ಉತ್ಪನ್ನವಾಗಿರುವುದರಿಂದ ಇದಕ್ಕೆ ವ್ಯವಸಾಯಮಾಡುವ ಜನರು, ಉಳುವ ಮನುಷ್ಯರು ಎಂದರ್ಥವು. ಎಂದರೆ ಕೃಷಿಕರು ಮನುಷ್ಯರು ಎಂದು ಸಾಮಾನ್ಯಾರ್ಥವು.

ಶರ್ಮಣಿ--ಶರ್ಮಶಬ್ದವು ಗೃಹನಾಮವಾಚಕಗಳಾದ ಇಪ್ಪತ್ತೆರಡು ಶಬ್ದಗಳ ಮಧ್ಯದಲ್ಲಿ ಪಠಿತವಾಗಿರುವುದರಿಂದ (ನಿ ೩-೮) ಈ ಶಬ್ದಕ್ಕೆ ಸ್ಕಂದಸ್ವಾಮಿಯು ಗೃಹನೆಂದು ಎಂದನೆ, **ಇಂದ್ರಸ್ಯ ಶರ್ಮಣಿ** ಇಂದ್ರನ ಗೃಹದಲ್ಲಿ ಎಂದರೆ ಇಂದ್ರನ ಲೋಕದಲ್ಲಿ ಎಂದರ್ಥವಾಡಿರುವನು. ಇದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ ಇದಲ್ಲದೆ ಶರ್ಮಶಬ್ದವು ಸುಖನಾಮವಾಚಕಗಳಾದ ಇಪ್ಪತ್ತು ಪದಗಳ ಮಧ್ಯದಲ್ಲಿ ಪಠಿತವಾಗಿರುವುದರಿಂದ (ನಿ ೩-೧೧) ಶರ್ಮಶಬ್ದಕ್ಕೆ ಸುಖನೆಂದೇ ಅರ್ಥವಾಡುವುದು ಯುಕ್ತವಾಗಿರುವುದು.

।। ವ್ಯಾಕರಣಪ್ರಕ್ರಿಯಾ ।।

ಉತ, **ಏವಾದೀನಾಮಂತಃ** (ಫಿ. ಸೂ. ೮೨) ಏವಾದಿಗಣಪಠಿತಶಬ್ದಗಳ **ಅಂತವು** ಉದಾತ್ತವಾಗುವುದು ಎಂದು ಉತ ಶಬ್ದವು ಅಂತೋದಾತ್ತವಾಗುವುದು. **ಸುಭಗಾನ್**—ಭಗಶಬ್ದವು **ಕೃತ್ವಾದಿ** ಗಣದಲ್ಲಿ ಪಠಿತವಾಗಿರುವುದು. ಆದ್ದರಿಂದ **ನಷ್ಟುಸುಭ್ಯಾಂ** (ಪಾ. ಸೂ ೬-೩-೧೭೨) ಬಹುವ್ರೀಹಿಯಲ್ಲಿ ನಞ್ ಸುಗಳ ಮುಂದಿರುವ ಉತ್ತರಪದವು ಅಂತೋದಾತ್ತವಾಗುವುದು ಎಂಬುದರಿಂದ ಬರುವ ಅಂತೋದಾತ್ತವನ್ನು **ಬಾಧಿಸಿ ಕೃತ್ಯಾದೆಯೆಶ್ಚ** (ಪಾ. ಸೂ. ೬-೩-೧೧೮) ಸು ಎಂಬುದರ ಮುಂದಿರುವ **ಕೃತ್ವಾದಿಗಣಪಠಿತಶಬ್ದಗಳು ಆದ್ಯುದಾತ್ತಗ**ಳಾಗುವುವು, ಎಂಬುದರಿಂದ ಪ್ರತಿಪದೋಕ್ತವಾದ ಆದ್ಯುದಾತ್ತ ಬರುವುದು ಸುಭಗಾನ್ ಎಂಬುದು ದ್ವಿತೀಯಾ ಬಹುವಚನಾಂತ. ಇದಕ್ಕೆ ಸಂಹಿತಾಕಾಲದಲ್ಲಿ **ದೀರ್ಘಾದಟಿ ಸಮಾನಪಾದೇ** (ಪಾ.ಸೂ. ೮-೩-೯) ನಕಾರ ಅಟ್ ವರ್ಣಗಳು ಒಂದೇ ಪಾದದಲ್ಲಿರುವಾಗ ದೀರ್ಘದ ಮುಂದಿರುವ ನಕಾರಕ್ಕೆ ಅಟ್ ಪರವಾಗಿದ್ದರೆ ರು ಆದೇಶ ಬರುವುದು, ಎಂಬುದರಿಂದ ನಕಾರಕ್ಕೆ ರು ಬರುವುದು, **ಭೋ ಭಗೋ ಅಘೋ ಅಪೂರ್ವಸ್ಯ ಯೋಶಿ** (ಪಾ. ಸೂ. ೮-೩ ೧೭) ಭೋ, ಭಗೋ-ಅಘೋ-ಶಬ್ದಗಳ ಅಥವಾ ಅವರ್ಣದ ಮುಂದಿರುವ ರು ಗೆ ಯ್ ಆದೇಶ ಬರುವುದು ಎಂದು ಯಾದೇಶ ಬಂದರೆ ಸುಭಗಾಯ್-ಅರಿಃ, **ಲೋಪಶಾಕಲ್ಯಸ್ಯ** (ಪಾ ಸೂ ೮-೩-೧೯) ಅವರ್ಣದ ಮುಂದಿರುವ, ಪದದ ಕಡೆಯ ಯಕಾರ ವಕಾರಗಳಿಗೆ ಅಲ್ ಪರವಾಗಿದ್ದರೆ ಲೋಪವು ಶಾಕಲ್ಯರ ಮತದಲ್ಲಿ ಬರುವುದು ಎಂಬುದರಿಂದ ಯ್‌ಗೆ ಲೋಪ ಬಂದರೆ ಸುಭಗಾ+ಅರಿಃ ಈಗ **ಪೂರ್ವತ್ರಾಸಿದ್ಧಂ** (ಪಾ. ಸೂ. ೮-೩-೧) ಎಂಬುದರಿಂದ ಯಲೋಪವು ಅಸಿದ್ಧವಾಗುವುದರಿಂದ **ಅಕಸ್ಸವರ್ಣೇ ದೀರ್ಘಃ** (ಪಾ. ಸೂ ೬-೧-೧೦೧) ಎಂದು ಸವರ್ಣದೀರ್ಘಸಂಧಿ ಬರುವುದಿಲ್ಲ. **ಆತೋಟಿ ನಿತ್ಯಂ** (ಪಾ ಸೂ. ೮-೩-೩) ಅಟ್ ಪರದಲ್ಲಿರುವಾಗ ರುವಿನ ಹಿಂದಿರುವ ಆಕಾರಕ್ಕೆ ಅನುನಾಸಿಕಾಕಾರ ಬರುವುದು, ಸುಭಗಾ ಅರಿಃ ಎಂದಾಗುವುದು ಆರಿಃ-ಇಲ್ಲಿ ಬಹುವಚನಕ್ಕೆ ಬದಲಾಗಿ ಏಕವಚನ ಬಂದಿರುವುದು **ಅಚೆ ಇಃ** (ಉ ಸೂ. ೪-೫೭೮) ಅಜಂತ ಧಾತುವಿನ ಮುಂದೆ ಇ ಪ್ರತ್ಯಯ ಬರುವುದು ಎಂಬುದರಿಂದ ಋ ಧಾತುವಿಗೆ ಇ ಪ್ರತ್ಯಯ ಬಂದರೆ ಋ+ಇ **ಸಾರ್ವಧಾತುಕಾರ್ಧಧಾತು-ಕಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಗುಣ ಬಂದರೆ ಅರಿ ಎಂದಾಗುತ್ತೆ ಇದು ಪ್ರತ್ಯಯಸ್ವರದಿಂದ ಅಂತೋದಾತ್ತ. **ವೋಚೇಯುಃ**-ವಚ ಪರಿಭಾಷಣೇ ಎಂಬ ಧಾತುವಿನ ಮೇಲೆ ಆಶೀರ್ಲಿಙ್ನಿನಲ್ಲಿ ಪ್ರಥಮ ಪುರುಷ ಬಹುವಚನ ಝಿ ಪ್ರತ್ಯಯವನ್ನಿಟ್ಟರೆ ವಚ್+ಝಿ **ಲಿಙಾಶಿಷ್ಯಙ್** (ಪಾ. ಸೂ. ೩-೧-೮೬) ಆಶೀರ್ಲಿಙ್

ಪರವಾಗಿರುವಾಗ ಛಂದಸ್ಸಿನಲ್ಲಿ ಧಾತುವಿನ ಮುಂದೆ ಅಜ್ ಪ್ರತ್ಯಯ ಬರುವುದು ಎಂಬುದರಿಂದ ಅಜ್ ಬಂದರೆ **ವಚ್+ಅ+ಋಗ್ವೇಜುರ್ಸ್** (ಪಾ ಸೂ. ೩-೪-೧೦೮) ಎಂದು ಋಗ್ವೇ ಜುಸ್ ಬರುವುದು, **ಜುಸ್**ನಲ್ಲಿ ಜಕಾರಕ್ಕೆ **ಚುಟೂ** (ಪಾ ಸೂ. ೧-೩-೭) ಪ್ರತ್ಯಯಾದಿಯಾದ ಚವರ್ಗ ಟವರ್ಗಗಳು ಇತ್ಸಂಜ್ಞೆಯನ್ನು ಹೊಂದುವುವು ಎಂದು ಇತ್ಸಂಜ್ಞೆ ಬಂದರೆ, ಆದಕ್ಕೆ **ತಸ್ಯಲೋಪಃ** (ಪಾ. ಸೂ ೧-೩-೯) ಎಂದು ಲೋಪ ಬರುವುದು. **ವಚ್+ಅ+ಉಸ್, ವಚ ಉಮ್** (ಪಾ. ಸೂ ೭-೪-೨೦) ಅಜ್ ಪರದಲ್ಲಿರುವಾಗ ವಚ್ ಧಾತುವಿನ ವ ಎಂಬುದರ ಮುಂದೆ ಉಮ್ ಆಗಮ ಬರುವುದು ವ+ಉ+ಚ್+ಅ+ಉಸ್, **ಆದ್ಗುಣಃ** (ಪಾ ಸೂ. ೬-೧-೮೭)ಅವರ್ಣದ ಮುಂದೆ ಇ-ಉ-ಋಗಳಿದ್ದರೆ ಗುಣ ಬರುವುದು ಎಂಬುದರಿಂದ ಗುಣ ಬಂದರೆ ವೋಚ್+ಅ+ಉಸ್. **ಯೊಸುಟ್ ಪರಸ್ಮೈಪದೇಷೂದಾತ್ತೋಙಿಚ್ಚ** (ಪಾ. ಸೂ. ೩-೪-೧೦೩) ಎಂಬುದರಿಂದ ಉಳ್‌ನ ಹಿಂದೆ ಯಾಸುಟ್ ಆಗಮ ಬರುವುದು, ಯಾಸ್ ಎಂಬುದು **ಕಿದಾಶಿಷಿ** (ಪಾ ಸೂ. ೩-೪-೧೦೪) ಆಶೀರ್ಲಿಙ್ಗಿಗೆ ಬಂದ ಯಾಸುಡಾಗಮವು ಕಿತ್ತಾಗುವುದು ಎಂಬುದರಿಂದ ಕಿತ್ತಾಗುವುದು ಇದು ವೈಯಾಕರಣ ಪ್ರಕ್ರಿಯೆ. ವಾಧೂನಾಚಾರ್ಯರು **ಕಿದಾಶಿಷಿ** (ಪಾ. ಸೂ ೩-೪-೧೦೪) ಆಶೀರ್ಲಿಙ್ ಸ್ಥಾನದಲ್ಲಿ ಬಂದ ಪರಸ್ಮೈಪದಪ್ರತ್ಯಯಕ್ಕೆ ಕಿತ್ತಾದ ಯಾಸುಟ್ ಬರುವುದು ಎಂದು ಅರ್ಧವನ್ನು ನಿರ್ಣಯಿಸಿ ಇದೇ ಸೂತ್ರದಿಂದಲೇ ಯಾಸುಟ್ ಬರುವುದು ಎನ್ನುವರು. ಅಂತು **ವೋಚ್+ಯಾಸ್+ಉಸ್** ಎಂದಿರುವುದು. **ಛಂದಸ್ಯುಭಯಥಾ** (ಪಾ ಸೂ. ೩-೪-೧೧೭) ಛಂದಸ್ಸಿನಲ್ಲಿ ಧಾತ್ವಧಿಕಾರ ವಿಹಿತ ಪ್ರತ್ಯಯವು ಸಾರ್ವಧಾತುಕ ಆರ್ಧಧಾತುಕ ಎಂಬ ಎರಡು ಸಂಜ್ಞೆಗಳನ್ನೂ ಯಥಾಯೋಗ್ಯವಾಗಿ ಹೊಂದುವುದು ಎಂಬುದರಿಂದ 'ಯಾಸ್ ಉಸ್' ಎಂಬುದಕ್ಕೆ ಸಾರ್ವಧಾತುಕ ಸಂಜ್ಞೆ ಬಂದರೆ **ಲಿಙಸ್ಸಲೋಪೋಽನನ್ತ್ಯಸ್ಯ** (ಪಾ. ಸೂ. ೭-೩-೭೯) ಸಾರ್ವಧಾತುಕ ಸಂಜ್ಞೆಯನ್ನು ಹೊಂದಿರುವ ಲಿಙ್ ಸಂಬಂಧಿಯಾದ ಕಡೆಯಲ್ಲಲ್ಲದ ಸಕಾರಕ್ಕೆ ಲೋಪ ಬರುವುದು ಎಂಬುದರಿಂದ ಸಕಾರಕ್ಕೆ ಲೋಪ ಬರುವುದು, **ಅತೋ ಯೇ ಯಃ** (ಪಾ. ಸೂ. ೭-೩-೮೦) ಹ್ರಸ್ವಾಕಾರದ ಮುಂದಿರುವ ಸಾರ್ವಧಾತುಕಾವಯವವಾದ ಯಾ ಎಂಬುದಕ್ಕೆ ಇಯ್ **ಆದೇಶ** ಬರುವುದು ಎಂಬುದರಿಂದ ಯಾ ಗೆ ಇಯ್ ಬಂದರೆ **ವೋಚ+ಇಯ್+ಉ ಸ್-ಆದ್ಗುಣಃ** (ಪಾ. ಸೂ. ೬-೧-೮೭) ಎಂದು ಗುಣಬಂದರೆ ವೋಚೇ+ಯುಃ-ಅಜ್ ಎಂಬುದು ಅದುಪದೇಶವಾದ್ದರಿಂದ **ತಾಸ್ಯನುಡಾತ್ತೇತ್** (ಪಾ. ಸೂ ೬-೧-೧೮೬) ಎಂಬ ಸೂತ್ರದಿಂದ ಲಿಙ್ ಸ್ಥಾನದಲ್ಲಿ ಬಂದ ಸಾರ್ವಧಾತುಕವು ಅನುದಾತ್ತ ಅಜ್-ಪ್ರತ್ಯಯಸ್ವರದಿಂದ ಉದಾತ್ತ. ಇದರೊಂದಿಗೆ ಇಕಾರಕ್ಕೆ ಬಂದ ಗುಣವು **ವಿಕಾದೇಶ ಉದಾತ್ತೇನೋದಾತ್ತಃ** (ಪಾ ಸೂ. ೮-೪-೫) ಎಂಬುದರಿಂದ ಉದಾತ್ತ. **ದಸ್ಮಃ**—**ದಸು ಉಪಕ್ಷಯೇ** ಣಿಚ್ಪ್ರತ್ಯಯಾರ್ಧವನ್ನು ತಂತ್ರಭಾವ ಮಾಡಿಕೊಂಡಾಗ ಈ ಧಾತುವಿನ ಮುಂದೆ **ಇಷಿಯುಧೀನ್ಧಿದಸಿಶ್ಯಾಧೂಸೂಭ್ಯೋಮಕ್** (ಉ. ಸೂ. ೧-೧-೪೨) ಎಂಬುದರಿಂದ ಮಕ್ ಪ್ರತ್ಯಯ ಬರುವುದು. ಇದು ಪದದ ಮುಂದೆ ಇರುವುದರಿಂದ ಆಷ್ಟಮಿಕವಾದ **'ಆಮಂತ್ರಿತಸ್ಯ ಚ'** ಎಂಬುದರಿಂದ ಅನುದಾತ್ತ ಬರುವುದು. **ಕೃಷ್ವಾಯಃ ಕ್ತಿಚ್ ಕ್ತೌಚ ಸಂಜ್ಞಾಯಾಂ** (ಪಾ. ಸೂ. ೩-೩-೧೭೪) ಆಶೀರರ್ಥದಲ್ಲಿ ಕ್ತಿಚ್ ಕ್ತ ಎಂಬ ಪ್ರತ್ಯಯಗಳು ಸಂಜ್ಞೆ ತೋರುವಾಗ ಬರುವುವು ಎಂಬುದರಿಂದ ಮನುಷ್ಯರು ಎಂಬ ಸಂಜ್ಞೆ ತೋರುವಾಗ ಕ್ತಿಚ್ ಬರುತ್ತೆ, **ಚಿತಃ** (ಪಾ. ಸೂ ೬-೧-೧೬೩) ಎಂಬುದರಿಂದ ಅಂತೋದಾತ್ತ ಬರುವುದು. ಸ್ಯಾಮ-ಅಸಭುವಿ, ವಿಧಿ ಲಿಙ್, ಯಾಸುಟ್ ಆಗಮ, ಉತ್ತಮ ಪುರುಷ ಬಹುವಚನ ಮಸ್ ಪ್ರತ್ಯಯ ಆಸ್ ಯಾಪ್ ಮಸ್-**ಲಿಙಸ್ಸಲೋಪೋಽನನ್ತ್ಯಸ್ಯ** (ಪಾ. ಸೂ. ೭-೩-೭೯) ಎಂಬುದರಿಂದ ಲೋಪ, ಕೊನೆಯ ಸಕಾರಕ್ಕೆ **ನಿತ್ಯಂ ಙಿತಃ** (ಪಾ. ಸೂ. ೩-೪-೯೯) ಎಂಬುದರಿಂದ ಲೋಪ, ಧಾತ್ವಕಾರಕ್ಕೆ **ಶ್ನಸೋರಲ್ಲೋಪಃ** (ಪಾ. ಸೂ ೬-೪-೧೧೧) ಶ್ನ-ಅಸ್ ಇವುಗಳ ಅಕಾರಕ್ಕೆ ಕಿತ್ತು ಅಥವಾ ಙಿತ್ತು ಆದ **ಸಾರ್ವಧಾತುಕಪರವಾಗಿರುವಾಗ ಲೋಪ** ಬರುವುದು, ಎಂಬುದರಿಂದ ಲೋಪ ಬರುವುದು, ಸ್ಯಾಮ ಎಂದಾಗು

ವುದು. ಯಾಸುಟ್ಪ್ರ ಉದಾತ್ತ ಸ್ಯಾಮ ಎಂಬುದು ಪಾದಾದಿಯಲ್ಲಿರುವುದರಿಂದ **ತಿಙ್ಚತಿಙಃ** (ಪಾ. ಸೂ. ೮-೧-೭೮) ಎಂದು ನುದಾತ್ತ ಬರುವುದಿಲ್ಲ. **ಶರ್ಮಣಿ—ಶ್ಯಾಹಿಂಸಾಯಾಂ, ಹಿನಸ್ತಿ ದುಃಖಂ(ದುಃಖವನ್ನು ನಾಶಪಡಿಸುವುದು)** ಎಂಬ ಅರ್ಥದಲ್ಲಿ ಶರ್ಮ ಎಂದಾಗುವುದು. **ಅನ್ಯೇಭ್ಯೋಽಪಿ ದೃಶ್ಯಂತೇ** (ಪಾ ಸೂ. ೩-೨-೭೫) ಎಂಬುದರಿಂದ ಮನಿನ್ ಪ್ರತ್ಯಯ ಬಂದು ಶ್ಯಾ ಧಾತುವಿಗೆ ಗುಣಬಂದರೆ **ಶರ್ಮ-ನುರ್ನಿ ನೇಡ್ವಶಿಕೃತಿ** (ಪಾ. ಸೂ ೭-೩-೮) ವಶಾದಿಯಾದ ಕೃತ್ತಿಗೆ ಇಟ್ ಆಗಮ ಬರುವುದಿಲ್ಲ ಎಂಬುದರಿಂದ **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ಎಂದು ಪ್ರಾಪ್ತವಾದ ಇಟ್ಪಗೆ ನಿಷೇಧ ಬರುವುದು ಮನಿನ್ಪ್ರತ್ಯಯವು ನಿತ್ತಾದ್ದರಿಂದ **ಞ್ನಿತ್ಯಾದಿರ್ನಿತ್ಯಂ** (ಪಾ. ಸೂ. ೬-೧-೧೯೭) ಎಂಬುದರಿಂದ ನಿತ್ಸ್ವರ ಆದ್ಯುದಾತ್ತ ಬರುವುದು- ॥ ೬ ॥

॥ ಸಂಹಿತಾಪಾಠಃ ॥

ಏಮಾಶುಮಾಶವೇ ಭರ ಯಜ್ಞಶ್ರಿಯಂ ನೃಮಾದನಂ ।
ಪತಯನ್ಮಂದಯತ್ಸಖಂ ॥ ೭ ॥

॥ ಪದಪಾಠಃ ॥

ಆ । ಈಂ । ಆಶುಂ । ಆಶವೇ । ಭರ । ಯಜ್ಞಽಶ್ರಿಯಂ । ನೃಽಮಾದನಂ ॥
ಪತಯತ್ । ಮಂದಯತ್ಽಸಖಂ ॥ ೭ ॥

॥ ಸಾಯಣಭಾಷ್ಯಂ ॥

ಈಮಿತಿ ನಿಪಾತ ಇದಂಶಬ್ದಾರ್ಥೇ ವರ್ತತೇ । ಹೇ ಯಜಮಾನಾನಾಶವೇ ಕೃತ್ಸ್ನಸೋಮಯಾಗ-
ವ್ಯಾಪ್ತ್ಯಾಯೇಂದ್ರಾಯೇಮಾ ಭರ । ಇಮಂ ಸೋಮಮಾಹರ । ಕೀದೃಶಂ ಸೋಮಂ । ಆಶುಂ ಸವನ-
ತ್ರಯವ್ಯಾಪ್ತಂ ಯಜ್ಞಶ್ರಿಯಂ ಯಜ್ಞಸ್ಯ ಸಂಪದ್ರೂಪಂ ನೃಮಾದನಂ ನೃಣಾಮೃತ್ವಿಗ್ಯಜಮಾನಾನಾಂ
ಹರ್ಷಹೇತುಂ ಪತಯತ್ಪತಯಂತಂ ಕರ್ಮಾಣಿ ಪ್ರಾಪ್ನುವಂತಂ ಮಂದಯತ್ಸಖಂ । ಯ ಇಂದ್ರೋ
ಮಂದಯತಿ ಯಜಮಾನಾನ್ ಹರ್ಷಯತಿ ತಸ್ಮಿನ್ನಿಂದ್ರೇ ಸಖಿಭೂತೋಽಯಂ ಸೋಮಃ । ತತ್ಪ್ರೀತಿ-
ಹೇತುತ್ವಾತ್ತೃಪ್ತಿಹೇತುತ್ವಾದ್ವಾ ॥ ಆಶುಂ । ಕೃವಾಪಾಜಿನಿಸ್ವದಿಸಾಧ್ಯಶೂಭ್ಯ ಉಣ್ । ಉ. ೧-೧ ।
ಇತ್ಯುಣ್ ಪ್ರತ್ಯಯಸ್ವರಃ । ಆಶವೇ । ಪೂರ್ವವತ್ । ಯಜ್ಞಶ್ರಿಯಂ । ಸವನಾನಾಮ್ಯೇತ್ಯಂತೋದಾತ್ತಃ । ನೃ
ಮಾದ್ಯಂತೇಽನೇನೇತಿ ಮಾದನಃ । ಕರಣಾಧಿಕರಣಯೋಶ್ಚ । ಪಾ. ೩-೩-೧೧೭ । ಇತಿ ಲ್ಯುಟ್ । ತಸ್ಯ
ಲಿತ್ತ್ವಾತ್ಪೂರ್ವ ಆಕಾರ ಉದಾತ್ತಃ । ಗತಿಕಾರಕೋಪಪದಾತ್ಕೃದಿತಿ ಸ ಏವ ಶಿಷ್ಯತೇ । ಪತಯತ್ ।
ಪತೇರದಂತಸ್ಯ ಚ್ಯರ್ಥಾದಿಕೋ ಣಿಚ್ । ಪಾ. ೩-೧-೨೫ । ಅತೋ ಲೋಪಃ । ಪಾ. ೬-೪-೪೮ । ತಸ್ಯ

ಸ್ಥಾನಿವತ್ತ್ವಾದುಪಧಾಯಾ ವೃದ್ಧ್ಯಭಾವಃ ! ಪಾ. ೭-೨-೧೧೬ । ೧-೧-೫೬ । ಲಟಃ ಶತ್ರಾದೇಶಃ । ತಸ್ಯ ಛಂದಸ್ಯುಭಯಥೇತ್ಯಾರ್ಧಧಾತುಕತ್ವೇನ ಶಬಭಾವಾದಯಾದೇಶಾತ್ । ಪಾ. ೬-೧-೧೮೬ । ಇತಿ ನಿಘಾತಾಭಾವೇನ ಪ್ರತ್ಯಯಾದ್ಯುದಾತ್ತತ್ವಮೇವ ಭವತಿ । ಅರ್ಧಧಾತುಕತ್ವೇಽಪಿ ಸರ್ವೇ ವಿಧಯಶ್ಛಂದಸಿ ವಿಕಲ್ಪ್ಯಂತೇ । ಪರಿ. ೩೫ । ಇತಿ ಸೇರನಿಟ । ಪಾ. ೬-೪-೫೧ । ಇತಿ ಣಿಲೋಪಾಭಾವಃ । ಸುಪಾಂ ಸುಲುಗಿತ್ಯನೋಲುಕ್ । ನ ಲುಮತಾ । ಪಾ ೧-೧-೬೩ । ಇತಿ ಪ್ರತ್ಯಯಲಕ್ಷಣನಿಷೇಧಾದುಗಿದಚಾಂ । ಪಾ. ೭-೧-೭೦ । ಇತಿ ನ ನುಮ್ । ಏವಂ ಮಂದಯಚ್ಛಬ್ದೋಽಂತೋದಾತ್ತಃ । ಮಂದಯತೀಂದ್ರೇ ಸಖಾ । ಸಪ್ತನಿಘಾತಿ ಯೋಗವಿಭಾಗಾತ್ಸ್ವರಾಸಃ । ತೆತ್ಪುರುಷೇ ತುಲ್ಯಾರ್ಥೈತಿ ಸಪ್ತನಿಘಾಪೂರ್ವಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

(ಎಲೈ ಯಜಮಾನನೇ) **ಯಜ್ಞಶ್ರಿಯಂ**—ಯಜ್ಞಕ್ಕೆ ಸಂಪದ್ರೂಪವಾದ । **ನೃವಾಹನಂ**—ಋತ್ವಿಗ್ಯಜಮಾನನೇ ಮೊದಲಾದ ಜನರಿಗೆ ಹರ್ಷವನ್ನುಂಟುಮಾಡುವ । **ಪಕಯೌತ್**—ಕೆಟ್ಟುಹೋಗುವ ಕರ್ಮಗಳನ್ನು ಸರಿಪಡಿಸುವ ಸಾಮರ್ಥ್ಯವುಳ್ಳ । **ಮಂದಯತ್ಸಖಾ**—ಯಜಮಾನನೇ ಮೊದಲಾದವರನ್ನು ಹರ್ಷಪಡಿಸುವ ಇಂದ್ರನಿಗೆ ಸ್ನೇಹಿತನಂತಿರುವ । **ಈಂ ಆಶುಂ**—ಸವನತ್ರಯಗಳಲ್ಲಿಯೂ ವ್ಯಾಪ್ತವಾದ ಎಂದರೆ ಸಿದ್ಧಪಡಿಸುವ ಈ ಸೋಮರಸವನ್ನು ! **ಆಶವೇ**—ಯಜ್ಞವ್ಯಾಪ್ತನಾದ ಎಂದರೆ ಯಜ್ಞದಲ್ಲಿ ಮುಖ್ಯಪಾತ್ರವನ್ನು ವಹಿಸುವ (ಮುಖ್ಯದೇವನಾದ) ಇಂದ್ರನಿಗೆ । **ಆ ಭರ**—ತೆಗೆದುಕೊಂಡುಬಾ ॥

॥ ಭಾವಾರ್ಥ ॥

ಹೋತೃವು ಯಜಮಾನನನ್ನು ಅಥವಾ ಅಧ್ವರ್ಯುವನ್ನು ಉದ್ದೇಶಿಸಿ ಹೇಳುವ ವಾಕ್ಯವಿದು—ಎಲೈ ಯಜಮಾನನೇ (ಅಥವಾ ಅಧ್ವರ್ಯುವೇ) ಈಗ ಈ ಯಜ್ಞದಲ್ಲಿ ಸಿದ್ಧಪಡಿಸಿರುವ ಸೋಮರಸವು ಯಜ್ಞಕ್ಕೆ ಮುಖ್ಯವಾಗಿ ಸಂಪತ್ತೆನಿಸಿರುವುದು. ಎಂದರೆ ಇದರಿಂದಲೇ ಯಜ್ಞಕ್ಕೆ ಕಳೆಕಟ್ಟಿರುವುದು. ಇಂತಹ ಸೋಮರಸವು ಋತ್ವಿಗ್ಯಜಮಾನಾದಿಯಾದ ಸಮಸ್ತಜನರಿಗೂ ಹರ್ಷವನ್ನುಂಟುಮಾಡುವುದು; ಕರ್ಮಲೋಪವಾಗಿದ್ದಲ್ಲಿ ಅದನ್ನು ಸರಿಪಡಿಸುವ ಶಕ್ತಿಯುಳ್ಳದ್ದು. ಇದಲ್ಲದೆ ಈ ಸೋಮರಸವು ಯಜಮಾನನಿಗೆ ಹರ್ಷವನ್ನುಂಟುಮಾಡುವ ಇಂದ್ರನಿಗೆ ಸ್ನೇಹಿತನಂತೆ ಪ್ರೀತಿಪಾತ್ರವಾದುದು. ಇಂತಹ ಸೋಮರಸವನ್ನು, ಎಲೈ ಯಜಮಾನನೇ ಇಂದ್ರನಿಗಾಗಿ ಬೇಗನೆ ತೆಗೆದುಕೊಂಡುಬಾ.

English Translation.

Offer to Indra, pervader (of the whole Soma Sacrifice) the Soma juice that is present (at the three Savana ceremonies) the wealth of the Sacrifice, the Source of joy to men (including priests and worshipper), the favourite of Indra who gives happiness to the worshippers.

॥ ವಿಶೇಷವಿಷಯಗಳು ॥

ಈ ಋಕ್ಕು ಯಜಮಾನ ಅಥವಾ ಅಧ್ವರ್ಯುವನ್ನು ಉದ್ದೇಶಿಸಿ ಹೇಳಲ್ಪಟ್ಟಿರುವುದು. **ಈಂ**—ಸ್ಕಂದ ಸ್ವಾಮಿಯು **ಈಂ** ಎಂದರೆ **ಏನಂ ಸೋಮಂ** "ಸೋಮರಸವನ್ನು" ಎಂದರ್ಥಮಾಡಿರುವರು **ಆಶುಂ**—ಈ ಶಬ್ದಕ್ಕೆ ಸಾಧಾರಣವಾಗಿ "ಬೇಗನೆ, ಜಾಗ್ರತೆಯಾಗಿ" ಎಂದರ್ಥವು. ಇದು ವಿಶೇಷಣಪದವಾದರೂ ಇಲ್ಲಿ ವಿಶೇಷ್ಯಪದವಾಗಿ ಉಪಯೋಗಿಸಲ್ಪಟ್ಟಿರುವುದು. Geldner ಪಂಡಿತನು ಈ ಶಬ್ದವು ಈ ಋಕ್ಕಿನಲ್ಲಿ ಕ್ರಿಯಾ ವಿಶೇಷಣವಾಗಿ ಪ್ರಯೋಗಿಸಲ್ಪಟ್ಟಿರುವುದೆಂದು ಅಭಿಪ್ರಾಯಪಡುವನು. ಋಗ್ವೇದದಲ್ಲಿ ಈ ಆಶು ಶಬ್ದವು ಅನೇಕ ಕಡೆಗಳಲ್ಲಿ "ವೇಗವಾಗಿ ಹೋಗುವ" ಎಂಬ ಅರ್ಥದಲ್ಲಿ ಕುದುರೆಗಳಿಗೆ ವಿಶೇಷಣವಾಗಿ ಉಪಯೋಗಿಸಲ್ಪಟ್ಟಿರುವುದು. ಈ ಅರ್ಥದರ್ಶನವೇ ಅನೇಕಕಡೆಗಳಲ್ಲಿ ರಥ, ಚಕ್ರ, ಪಕ್ಷಿ, ದೂತ, ವಾಯು, ಇಂದ್ರ, ಸೋಮ ಈ ಶಬ್ದಗಳಿಗೂ ವಿಶೇಷಣಶಬ್ದವಾಗಿರುವುದು.

ನೃಮಾದನಂ-ಮದವನ್ನು ಉಂಟುಮಾಡುವ ಸೋಮರಸವನ್ನು ಪಾನಮಾಡುವುದರಿಂದ ಮನುಷ್ಯರಿಗೆ ಸಂತೋಷವುಂಟಾಗುವುದು ಸಹಜವೇ ಆಗಿದೆ. ಆದುದರಿಂದ ಸೋಮಪಾನವು ಮನುಷ್ಯರಿಗೆ ಸಂತೋಷಪ್ರದವಾಗಿದೆ ಎಂದು ಅನೇಕಕಡೆಗಳಲ್ಲಿ ಹೇಳಿದೆ ಈ ಶಬ್ದದ ಪ್ರಯೋಗವು—

ತ್ವಂ ಸೋಮ ನೃಮಾದನಃ ಪವಸ್ವ ಚರ್ಷಣೀಸಹೇ । (ಋ ಸಂ. ೯-೨೪-೪)

ತ್ವಂ ಸುತೋ ನೃಮಾದನೋ ದಧನ್ವಾನ್ ಮತ್ಸರಿಂತಮಃ । (ಋ. ಸಂ. ೯-೬೭-೨)

ಈ ಋಕ್ಕುಗಳಲ್ಲಿಮಾತ್ರವಿರುವುದು. ಇನ್ನೆಲ್ಲಿಯೂ ಇಲ್ಲ. ಮಾದನ ಶಬ್ದವು ಮದ್-ಸಂತೋಷವನ್ನುಂಟು ಮಾಡು, to rejoice, exhilarate ಎಂಬ ಧಾತುವಿನಿಂದ ಉತ್ಪನ್ನವಾಗಿದೆ.

ಪತಯತ್—ಈ ಶಬ್ದದ ಅರ್ಥವಿಚಾರದಲ್ಲಿ ಅನೇಕ ಪಂಡಿತರು ಬಹುವಾಗಿ ಚರ್ಚೆಮಾಡಿದಾರೆ. **ಪತಯಂತಂ= ಗಂಚ್ಛಂತಂ** ಎಂದು ಸ್ಕಂದಸ್ವಾಮಿಯ ಅಭಿಪ್ರಾಯವು. ವೆಂಕಟಮಾಧವರು **ಪತಯತ್** ಎಂಬ ಶಬ್ದಕ್ಕೆ **ಮನುಷ್ಯಾನ್ ಪಾತಯತಿ ಹಿ ಸೋಮಃ**--ಮನುಷ್ಯರನ್ನು ರಕ್ಷಿಸುವ ಸೋಮವು ಎಂದು ಅರ್ಥ ಮಾಡಿದಾರೆ. ಪಾಶ್ಚಾತ್ಯರು ಈ ಶಬ್ದಕ್ಕೆ accelarating, quickening, inspiring to friends ಎಂದು ಅರ್ಥಮಾಡಿದಾರೆ

॥ ವ್ಯಾಕರಣಪ್ರಕ್ರಿಯಾ ॥

ಆಶುಂ—**ಕೃವಾಪಾಜಿ ಮಿಸ್ವದಿಸಾದ್ಯಶುಭ್ಯ ಉಣ್** (ಉ. ಸೂ. ೧-೧) ಡುಕೃಞ್ ಕರಣೇ, ವಾಗತಿ ಗಂಧನಯೋಃ, ಪಾ ಪಾನೇ-ಜಿ ಅಭಿಭವೇ, ಡು ಮಿಞ್ ಪ್ರಕ್ಷೇಪಣೇ, ಸ್ವದ ಆಸ್ವಾದನೇ, ಸಾಧಸಂಸಿದ್ಧೌ ಅಶೂ ವ್ಯಾಪ್ತೌ, ಈ ಧಾತುಗಳ ಮುಂದೆ ಉಣ್ ಪ್ರತ್ಯಯ ಬರುವುದು ಎಂಬುದರಿಂದ ಅಶ್ ಧಾತುವಿಗೆ ಉಣ್ ಪ್ರತ್ಯಯ ಬಂದರೆ **ಅತ ಉಪಧಾಯಾಃ** (ಪಾ. ಸೂ. ೭-೨-೧೧೬) ಇತ್ತು ಅಥವಾ ಣಿತ್ತು ಆದ ಪ್ರತ್ಯಯಪರದಲ್ಲಿರುವಾಗ ಉಪಾಂತ್ಯದ ಅಕಾರಕ್ಕೆ ವೃದ್ಧಿ ಬರುವುದು ಎಂಬುದರಿಂದ ವೃದ್ಧಿ ಬಂದರೆ ಆಶು ಎಂದಾಗುತ್ತೆ. ಪ್ರತ್ಯಯಸ್ವರ ಆದ್ಯುದಾತ್ತ ಬರುವುದು. ಆಶವೇ ಎಂಬಲ್ಲಿ ಇದರಂತೆ ತಿಳಿಯುವುದು. **ಭರ-ಹೃಞ್ ಹರಣೇ ಧಾತು**-ಇದರ ಮುಂದೆ ಲೋಟ್-ಇದರ ಸ್ಥಾನದಲ್ಲಿ ಪರಸ್ಮೈಪದದಲ್ಲಿ ಮಧ್ಯಮಪುರುಷ ಏಕವಚನ ಸಿಪ್ ಹೃ+ಸಿ. ಸಿಯ ಸ್ಥಾನ

ದಲ್ಲಿ **ಸೇರ್ಹ್ಯಪಿಚ್ಚೆ** (ಪಾ. ಸೂ. ೩-೪-೮೭) ಲೋಟ್ ಸ್ಥಾನದಲ್ಲಿ ಬಂದ ಸಿಗೆ ಹಿ ಆದೇಶ ಬರುವುದು ಮತ್ತು ಅದು ಅಪಿತ್ ಆಗುವುದು ಎಂಬುದರಿಂದ ಹಿ-ಆದೇಶ- ಹೃ+ಹಿ, **ಕರ್ತರಿ ಶಪ್** (ಪಾ ೩-೧-೬೮) ಕರ್ತೃ ಎಂಬ ಅರ್ಥವನ್ನು ಬೋಧಿಸುವ ಸಾರ್ವಧಾತುಕ ಪ್ರತ್ಯಯಪರದಲ್ಲಿರುವಾಗ ಧಾತುವಿನ ಮುಂದೆ ಶಪ್ ಬರುವುದು- ಇದರಿಂದ ಶಪ್ ವಿಕರಣ ಬರುತ್ತೆ. ಹೃ+ಅ+ಹಿ-ಈಗ **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಸಾರ್ವಧಾತುಕ ಅಥವಾ ಆರ್ಧಧಾತುಕ ಪರದಲ್ಲಿರುವಾಗ ಇ-ಉ-ಋ-ಲೃ-ವರ್ಣಾಂತವಾದ ಅಂಗಕ್ಕೆ ಗುಣ ಬರುವುದು ಎಂಬುದರಿಂದ ಗುಣ ಬರುವುದು. ಋ ಕಾರಕ್ಕೆ ಅ-ಎಂಬ ಗುಣ ಬರುವಾಗ ಅದು **ಉರಣ್ರಪರಃ** (ಪಾ. ಸೂ. ೧-೧-೫೧) ಋಕಾರಸ್ಥಾನದಲ್ಲಿ ಬರುವ ಅಣ್ (ಅ-ಇ-ಉ) ವರ್ಣಗಳು ರೇಫಶಿರಸ್ಕವಾಗಿಯೇ ಬರುವುವು ಇದರಿಂದ ರೇಫಶಿರಸ್ಕವಾದ ಅಕಾರ ಎಂದು ಅರ್ ಬಂದರೆ ಹರ್+ಅ+ಹಿ-ಈಗ **ಅತೋಹೇಃ** (ಪಾ.ಸೂ. ೬-೪-೧೦೫) ಹ್ವಸ್ವಾಕಾರದ ಮುಂದೆ ಇರುವ ಹಿಗೆ ಲುಕ್ ಬರುವುದು ಎಂಬುದರಿಂದ ಹಿ-ಗೆ ಲೋಪ-ಹರ್+ಅ=ಹರ, ಈಗ ಹೃಗ್ರಹೋರ್ಭಶ್ಚಂದಸಿ ಎಂಬುದರಿಂದ ಹಕಾರಕ್ಕೆ ಭಕಾರಾದೇಶ ಬಂದು ಭರ ಎಂದಾಗುವುದು. ಇದು ಪದದ ಮುಂದೆ ಇರುವುದರಿಂದಲೂ ಪಾದದ ಆದಿಯಲ್ಲಿಲ್ಲದೇ ಇರುವುದರಿಂದಲೂ **ತಿಙ್ತಿಙಃ** ಎಂಬುದರಿಂದ ಸರ್ವಾನುದಾತ್ತ. ಸಂಹಿತಾಕಾಲದಲ್ಲಿ ಇದು ವೇ-ಎಂಬ ಸ್ವರಿತದ ಮುಂದೆ ಇರುವುದರಿಂದ **ಸ್ವರಿತಾತ್ಸಂಹಿತಾಯಾಮನುದಾತ್ತಾನಾಂ** ಎಂಬುದರಿಂದ ಪ್ರಚಯವಾಗುವುದು. **ಯಜ್ಞಶ್ರಿಯಂ-ಯಜಯಾಚಯಿತಾರಶ್ಚಿಸ್ತುಪ್ರಶ್ಚೈರಕ್ಷೋನಜ್** (ಪಾ. ಸೂ ೩-೩-೯೦) ಈ ಧಾತುಗಳ ಮುಂದೆ ನಜ್ ಪ್ರತ್ಯಯ ಬರುವುದು. ಇದರಿಂದ ಯಜ್ ಧಾತುವಿನ ಮುಂದೆ ನಜ್ ಬಂದರೆ ಯಜ್+ನ ಈಗ **ಸ್ತೋಶ್ಚುನಾಶ್ಚುಃ** (ಪಾ. ಸೂ. ೮-೪-೪೦) ಶಕಾರ ಚವರ್ಗಗಳ ಯೋಗ ಇರುವಾಗ ಕ್ರಮವಾಗಿ ಸಕಾರ ತವರ್ಗಗಳಿಗೆ ಶಕಾರ ಚವರ್ಗಗಳು ಬರುವುವು ಎಂಬುದರಿಂದ ತವರ್ಗದ ಐದನೇ ಅಕ್ಷರವಾದ ನಕಾರದ ಸ್ಥಾನದಲ್ಲಿ ಚವರ್ಗದ ಐದನೇ ಅಕ್ಷರವಾದ ಞ ಬರುವುದು. ಯಜ್-ಞ-**ಜಞೋರ್ಯೋರ್ಲೋಪೇಜ್ಞಃ** ಎಂಬುದರಿಂದ, ಜ್-ಞ ಎರಡೂ ಸೇರಿದರೆ ಯಜ್ಞ ಎಂದಾಗುವುದು **ಶ್ರಿಞ್ಸೇವಾಯಾಂ** ಧಾತುವಿನ ಮುಂದೆ ಕ್ವಿಪ್-**ಕ್ವಿಬ್ವಚಿಪಚ್ಚ್ಯಾಯೋತಸ್ತುಕಟಪುಜಾಶ್ರೀಣಾಂ ದೀರ್ಘೋಽಸಂಪ್ರಸಾರಣಂ ಚ** ಎಂಬ ವಾರ್ತಿಕದಿಂದ ದೀರ್ಘೆ ಬಂದರೆ ಶ್ರೀ ಎಂದಾಗುತ್ತೆ. ಈಗ ಯಜ್ಞಸ್ಯ ಶ್ರೀಃ-ಎಂದು ಷಷ್ಠೀತತ್ಪುರುಷ ಸಮಾಸ. ಯಜ್ಞಶ್ರೀಃ ಇದರ ಮುಂದೆ-ಅಮ್-ಪ್ರತ್ಯಯವನ್ನಿಟ್ಟಾಗ ಯಜ್ಞಶ್ರೀ+ಅಮ್-ಈಗ **ಅಚಿಶ್ನುಧಾತುಭ್ರುವಾಂಯ್ವೋರಿಯಙುವಙೌ** (ಪಾ.ಸೂ ೬-೪-೭೭)ಅಜಾದಿಯಾದ ಪ್ರತ್ಯಯಪರದಲ್ಲಿರುವಾಗ ಶ್ನು ಪ್ರತ್ಯಯಾಂತವಾದ ಅಂಗ, ಇ-ಉ. ವರ್ಣಾಂತವಾದ ಅಂಗ, ಭ್ರೂಶಬ್ದರೂಪವಾದ ಅಂಗ ಇವುಗಳಿಗೆ ಇಯಙ್-ಉ ವಙ್ ಎಂಬ ಆದೇಶಗಳು ಬರುವವು-ಅಂದರೆ, ಇಕಾರಕ್ಕೆ-ಇಯಙ್ ಉಕಾರಕ್ಕೆ-ಉವಙ್ ಎಂದು ತಿಳಿಯಬೇಕು. ಪ್ರಕೃತ ಈ ಸೂತ್ರದಿಂದ ಈಕಾರಕ್ಕೆ ಇಯಙ್ ಬಂದು ಯಜ್ಞಶ್ರಿಯಮ್ ಎಂದಾಗುತ್ತದೆ. ಇಲ್ಲಿ **ಸವಾಸಸ್ಯ** (ಪಾ. ಸೂ. ೬-೧-೨೩)ಎಂಬುದರಿಂದ ಅಂತೋದಾತ್ತ. ಮಾದ್ಯಂತೇ ಅನೇನ (ಈ ಸಾಧನದಿಂದ ಹರ್ಷಿಸುವರು) ಇತಿ ಮಾದನಃ **ಕರಣಾಧಿಕರಣಯೋಶ್ಚ** (ಪಾ. ಸೂ. ೩-೩-೧೧೭) ಎಂಬುದರಿಂದ ಕರಣಾರ್ಥದಲ್ಲಿ ಲ್ಯುಟ್ ಪ್ರತ್ಯಯ ಬರುವುದು. ಪ್ರತ್ಯಯ ಲಿತ್ತಾದ್ದರಿಂದ **ಲಿತಿ** (ಪಾ. ಸೂ, ೬-೧-೧೯೩) ಎಂಬ.ದರಿಂದ ಪ್ರತ್ಯಯಕ್ಕಿಂತಲೂ ಪೂರ್ವದಲ್ಲಿರುವ ಅಕಾರವು ಉದಾತ್ತವಾಗುವುದು. ನೃಮಾದನಃ ಎಂಬ ಸಮಾಸದಲ್ಲಿ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬಂದು ಅಕಾರವು ಉದಾತ್ತವಾಗಿಯೇ ಇರುವುದು. ಪತಯತ್-ಪತಗತೌ ಧಾತುವು ಚುರಾದಿ(೧೦ನೇ ಗಣ)ಯಲ್ಲಿ ಹ್ರಸ್ವಾಕಾರಾಂತವಾಗಿ ಪಠಿತವಾಗಿರುವುದು. ಇದರ ಮುಂದೆ **ಸತ್ಯಾಪ, ಪಾಶ, ರೂಪ, ವೀಣಾ, ತೂಲ, ಶ್ಲೋಕ, ಸೇನಾ, ಲೋಮ, ತ್ವಚ, ವರ್ಮ, ವರ್ಣ, ಚೂರ್ಣ, ಚುರಾದಿಭ್ಯೋಣಿಚ್** (ಪಾ. ಸೂ. ೩-೧-೨೫) ಇವುಗಳ ಮುಂದೆ ಣಿಚ್ ಪ್ರತ್ಯಯ ಬರುವುದು ಎಂಬು

ದರಿಂದ ಣಿಚ್ ಬರುವುದು. **ಅತೋ ಲೋಪಃ** (ಪಾ. ಸೂ. ೬-೪-೪೮) ಆರ್ಧಧಾತುಕ ಪ್ರತ್ಯಯದ ಉಪದೇಶ ಕಾಲದಲ್ಲಿ ಹ್ರಸ್ವಾಕಾರಾಂತಶಬ್ದದ ಅಕಾರಕ್ಕೆ ಆರ್ಧಧಾತುಕ ಪರವಾಗಿರುವಾಗ ಲೋಪ ಬರುವುದು, ಎಂಬುದರಿಂದ ಪತ ಎಂಬುದರ ಕೊನೆಯ ಅಕಾರಕ್ಕೆ ಲೋಪ ಬರುವುದು, ಣಿಚ್ಪ್ರತ್ಯಯದ ಣಕಾರಕ್ಕೆ **ಚುಟೂ** (ಪಾ. ಸೂ. ೧-೩-೭) ಎಂಬುದರಿಂದ ಇತ್ಸಂಜ್ಞೆ **ತಸ್ಯಲೋಪಃ**(ಪಾ ಸೂ. ೧-೩-೯)ಎಂಬುದರಿಂದ ಲೋಪ. **ಅಲೋಂತ್ಯಾತ್ಪೂರ್ವಉಪಧಾ** (ಪಾ. ಸೂ ೧-೬೫) ಕೊನೆಯ ವರ್ಣದ ಪೂರ್ವ ವರ್ಣಕ್ಕೆ ಉಪಧಾ ಎಂದು ಸಂಜ್ಞೆ ಎಂಬುದರಿಂದ, ಪತ್ ಎಂಬ ಲ್ಲಿರುವ ಮಧ್ಯದ ಅಕಾರವು ಉಪಧಾ ಆಗಿರುವುದು. ಆದಕ್ಕೆ **ಅತ ಉಪಧಾಯಾಃ** (ಪಾ. ಸೂ. ೭-೨-೧೧೯) ಞಿತ್ತು ವಾ ಣಿತ್ತು ಆದ ಪ್ರತ್ಯಯಗಳು ಪರವಾಗಿರುವಾಗ ಉಪಧಾಭೂತವಾದ ಹ್ರಸ್ವಾಕಾರಕ್ಕೆ ವೃದ್ಧಿ ಬರುವುದು, ಎಂಬುದರಿಂದ ವೃದ್ಧಿ (ಆಕಾರ) ಪ್ರಾಪ್ತವಾಗುವುದು. ಆದರೆ **ಸ್ಥಾನಿವದಾದೇಶೋನಲ್ವಿಧೌ** (ಪಾ. ಸೂ. ೧-೧-೬೬) ಆದೇಶವು ಸ್ಥಾನಿಯಂತೆ ಆಗುವುದು, ಅಲಾಶ್ರಯ (ವರ್ಣಾಶ್ರಯ) ಕಾರ್ಯವನ್ನು ಮಾಡುವಾಗ ಆದೇಶವು ಸ್ಥಾನಿಯಂತೆ ಆಗುವುದಿಲ್ಲ, ಎಂಬುದರಿಂದ **ಅತೋಲೋಪಃ** (ಪಾ. ಸೂ. ೪-೪೮) ಎಂಬುದರಿಂದ ಬಂದ 'ಅ' ಲೋಪಕ್ಕೆ ಸ್ಥಾನಿವದ್ಭಾವ ಬಂದರೆ, ಅಕಾರವಿದ್ದಂತೆ ಆಗುವುದು. ಆಗ, ತ್ ಎಂಬುದು ಉಪಧೆಯಾಗುವುದೇ ವಿನಾ ಅ ಎಂಬುದು ಉಪಧೆಯಾಗುವುದಿಲ್ಲ ಆದ್ದರಿಂದ ವೃದ್ಧಿ ಬರುವುದಿಲ್ಲ, ಪತಿ ಎಂಬುದರ ಮುಂದೆ ಲಟ್ಟನ್ನಿಟ್ಟರೆ **ಲಟ್ಶತೃಶಾನಚಾವಪ್ರಥಮಾಸಮಾನಾಧಿಕರಣೇ** (ಪಾ. ಸೂ. ೩-೨-೧೨೪) ಎಂಬುದರಿಂದ ಆದಕ್ಕೆ ಶತೃ ಆದೇಶ ಬರುವುದು ಶತೃ ಪ್ರತ್ಯಯವು ಶಿತ್ ಆದರೂ **ಛಂದಸ್ಯುಭಯಥಾ** (ಪಾ. ಸೂ. ೩-೪-೧೧೭) ಎಂಬುದರಿಂದ ಆರ್ಧಧಾತುಕ ಸಂಜ್ಞೆ ಬಂದರೆ **ಕರ್ತರಿಶಪ್** (ಪಾ. ಸೂ. ೩-೧-೬೮) ಎಂಬುದರಿಂದ ಶಪ್ ವಿಕರಣಪ್ರತ್ಯಯ ಬರುವುದಿಲ್ಲ. ಆದ್ದರಿಂದ ಶಃ ಎಂಬ ಲಸ್ಥಾನಿಕ ಸಾರ್ವಧಾತುಕವು ಆದುಪದೇಶಕ್ಕಿಂತಲೂ ಪರವಾಗುವುದಿಲ್ಲ ಆದಕಾರಣ **ತಾಸ್ಯನುಧೇ ದಾತ್ತೇನ್ಣಿದುದುಪದೇಶಾಲ್ಲ ಸಾರ್ವಧಾತುಕಮನುದಾತ್ತನುಹ್ಮ್ವಞೋಃ** (ಪಾ. ಸೂ. ೬-೧-೧೮೬) ಎಂಬುದರಿಂದ ಅನುದಾತ್ತ ಬರುವುದಿಲ್ಲ, ಆದ್ದರಿಂದ ಪ್ರತ್ಯಯಸ್ವರದಿಂದ ಆದ್ಯುದಾತ್ತವೇ ಬರುವುದು. ಈ ರೀತಿಯಲ್ಲಿ ಅನುದಾತ್ತ ಸ್ವರ ನಿವೃತ್ತಿಗಾಗಿ ಶತೃಪ್ರತ್ಯಯವನ್ನು ಆರ್ಧಧಾತುಕನೆಂದೊಪ್ಪಿದರೆ-**ಣೇರನಿಟಿ** (ಪಾ. ಸೂ. ೬-೪-೫೧) ಇಡಾದಿಯಾಗಿಲ್ಲದ ಆರ್ಧಧಾತುಕವು ಪರವಾಗಿದ್ದರೆ ಣಿಚ್‌ಗೆ ಲೋಪ ಬರುವುದು ಎಂಬುದರಿಂದ, ಣಿಚ್ಪ್ರತ್ಯಯಕ್ಕೆ (ಪತಿ ಎಂಬುದರ ಇಕಾರಕ್ಕೆ) ಲೋಪವು ಪ್ರಾಪ್ತವಾಗುವುದು, ಆದರೂ **ಸರ್ವೇವಿಧಯಶ್ಚಂದಸಿವಿಕಲ್ಪ್ಯಂತೇ** (ಪರಿಭಾಷೆ ೩೫) ಎಲ್ಲಾ ವಿಧಿಗಳೂ ವೇದದಲ್ಲಿ ವಿಕಲ್ಪವಾಗಿ ಬರುವುವು ಎಂಬುದರಿಂದ 'ಣೇರನಿಟಿ' (ಪಾ. ಸೂ. ೬-೪-೫೧) ಎಂದು ವಿಹಿತವಾದ ಣಿ ಲೋಪವೂ ವಿಕಲ್ಪವಾದ್ದರಿಂದ ಅದು ಇಲ್ಲಿ ಬರುವುದಿಲ್ಲ-ಪತಿ+ಅತ್-ಗುಣ ಆಯಾ ದೇಶಗಳು ಬಂದರೆ ಪತಯತ್-ಇದರ ಮುಂದೆ ಅಮ್ ವಿಭಕ್ತಿಯನ್ನು ಹಚ್ಚಿದರೆ **ಸುಪಾಂಸು ಲುಕ್** (ಪಾ. ಪೂ. ೭-೧-೩೯) ಇತ್ಯಾದಿ ಸೂತ್ರದಿಂದ, ಆದಕ್ಕೆ ಲುಕ್ ಬರುವುದು, **ಸುಡನಪುಂಸಕಸ್ಯ** (ಪಾ. ಸೂ. ೧-೧-೪೩) ನಪುಂಸಕಲಿಂಗವಲ್ಲದ ಶಬ್ದದ ಮುಂದೆ ಬಂದಿರುವ ಸು-ಔ-ಜಸ್, ಅಮ್-ಔಟ್-ಎಂಬ ಐದು ಪ್ರತ್ಯಯಗಳು ಸರ್ವನಾಮಸ್ಥಾನಸಂಜ್ಞೆಯನ್ನು ಹೊಂದುವುವು ಎಂಬುದರಿಂದ, ಅಮ್‌ಗೆ ಸರ್ವನಾಮಸ್ಥಾನಸಂಜ್ಞೆ ಇರುವುದು. ಅದಕ್ಕೆ ಪೂರ್ವೋಕ್ತರೀತಿಯಲ್ಲಿ ಲೋಪ ಬಂದಿದ್ದರೂ **ಪ್ರತ್ಯಯಲೋಪೇ ಪ್ರತ್ಯಯಲಕ್ಷಣಂ** (ಪಾ ಸೂ. ೧-೧-೬೨) ಪ್ರತ್ಯಯಕ್ಕೆ ಲೋಪ ಬಂದಿದ್ದರೂ ಲುಪ್ತಪ್ರತ್ಯಯನಿಮಿತ್ತಕವಾದ ಕಾರ್ಯವು ಬರುವುದು, ಎಂಬುದರಿಂದ ಪ್ರತ್ಯಲಕ್ಷಣ ಬಂದರೆ **ಉಗಿದಚಾಂ ಸರ್ವನಾಮಸ್ಥಾನೇಽಧಾತೋಃ** (ಪಾ. ಸೂ. ೭-೧-೭೦) ಸರ್ವನಾಮಸ್ಥಾನಪ್ರತ್ಯಯವು ಪರವಾಗಿರುವಾಗಿರುವಾಗ ಧಾತುಸಂಬಂಧಿಯಲ್ಲದ ಉಗಿತ್ತಿಗೂ ನ ಕಾರಲೋಪವನ್ನು ಹೊಂದಿರುವ ಅಂಚು ಧಾತುವಿಗೂ ಕಡೆಯಸ್ವರದ ಮುಂದೆ ನುಮ್ ಬರುವುದು, ಎಂಬುದರಿಂದ ನುಮಾಗಮವು ಪ್ರಾಪ್ತವಾಗುವುದು. ಆದರೂ **ನ ಲುಮತಾಂಗಸ್ಯ** (ಪಾ. ಸೂ. ೧-೧-೬೩) ಲುಕ್-ಶ್ಲು-ಲುಪ್ ಈ ಶಬ್ದಗಳನ್ನು ಉಚ್ಚರಿಸಿ ಎಲ್ಲಿ ಪ್ರತ್ಯ

ಯಕ್ಕೆ ಲೋಪ ಬಂದಿರುವುದೋ ಅಲ್ಲಿ ಲುಪ್ತಪ್ರತ್ಯಯವನ್ನು ನಿಮಿತ್ತಮಾಡಿಕೊಂಡು ಅಂಗಕ್ಕೆ ಕಾರ್ಯ ಬರುವುದಿಲ್ಲ, ಎಂದು ಪ್ರತ್ಯಯ ಲಕ್ಷಣಕ್ಕೆ ನಿಷೇಧವಿರುವುದರಿಂದ ಸರ್ವನಾಮಸ್ಥಾನಪರಕತ್ವವಿಲ್ಲದ ಕಾರಣ ಉಗಿದೆಜಾಂ ಎಂಬುದರಿಂದ ನುವಾಗಮ ಬರುವುದಿಲ್ಲ. ಇದೇ ರೀತಿಯಲ್ಲಿ 'ಮಂದಯತ್' ಶಬ್ದವೂ ಅಂತೋದಾತ್ತವು, ಮಂದಯತಿ ಸಪಾ (ಹರ್ಷವನ್ನುಂಟುಮಾಡುವ ಇಂದ್ರನಲ್ಲಿ ಸ್ನೇಹಿಯಾಗಿರುವುದು) ಸಪ್ತೈವಾ ಶೌಂಡ್ಯೈಃ (ಪಾ. ಸೂ. ೨-೧-೪೦) ಎಂಬ ಸೂತ್ರವನ್ನು, 'ಸಪ್ತೈವಾ' ಎಂದು ವಿಭಾಗವಾಡುವುದು. ಅದಕ್ಕೆ ಸಪ್ತಮ್ಯಂತವಾದ ಸುಬಂತ ಸಮರ್ಥವಾದ ಸುಬಂತದೊಂದಿಗೆ ಸಮಾಸವನ್ನು ಹೊಂದುವುದು ಎಂದು ಅರ್ಥವಾಗುವುದು ಈ ವಿಭಕ್ತವಾದ 'ಸಪ್ತೈವಾ' ಎಂಬ ಸೂತ್ರದಿಂದ ಇಲ್ಲಿ ಸಮಾಸಬಂದಿರುವುದು. ತತ್ಪುರುಷೇತುಲ್ಯಾರ್ಥ ತೃತೀಯಾ ಸಪ್ತೈವಾ-(ಪಾ. ಸೂ. ೬-೨-೨) ಎಂಬುದರಿಂದ ಸಪ್ತಮ್ಯಂತ ಪೂರ್ವಪದಪ್ರಕೃತಿಸ್ವರನೇ ನಿಲ್ಲುವುದು. ರಾಜಾಹಸ್ಸಖಿಭ್ಯಷ್ಟಚ್)ಪಾ. ಸೂ. ೫-೪-೯೧) ಎಂಬುದರಿಂದ ಟಚ್ ಪ್ರತ್ಯಯ ಬಂದಿರುವುದು. ॥ ೬ ॥

॥ ಸಂಹಿತಾಪಾಠಃ ॥

ಅಸ್ಯ ಪೀತ್ವಾ ಶತಕ್ರತೋ ಘನೋ ವೃತ್ರಾಣಾಮಭವಃ ।
ಪ್ರಾವೋ ವಾಜೇಷು ವಾಜಿನಂ ॥ ೮ ॥

॥ ಪದಪಾಠಃ ॥

ಅಸ್ಯ । ಪೀತ್ವಾ । ಶತಕ್ರತೋ ಇತಿ ಶತ ೱ ಕ್ರತೋ । ಘನಃ । ವೃತ್ರಾಣಾಂ ।
ಅಭವಃ ॥
ಪ್ರ । ಆವಃ । ವಾಜೇಷು । ವಾಜಿನಂ ॥ ೮ ॥

॥ ಸಾಯಣಭಾಷ್ಯಂ ॥

ಹೇ ಶತಕ್ರತೋ ಬಹುಕರ್ಮಯುಕ್ತೇಂದ್ರ ತ್ವಮಸ್ಯ ಸೋಮಸ್ಯ ಸಂಬಂಧಿನಮಂಶಂ ಪೀತ್ವಾ ವೃತ್ರಾಣಾಂ ವೃತ್ರನಾಮಕಾಸುರಪ್ರಮುಖಾನಾಂ ಶತ್ರೂಣಾಂ ಘನೋಽಭವಃ ॥ ಹಂತಾಭೂಃ । ತತೋ ವಾಜೇಷು ಸಂಗ್ರಾಮೇಷು ವಾಜಿನಂ ಸಂಗ್ರಾಮವಂತಂ ಸ್ವಭಕ್ತಂ ಪ್ರಾವಃ । ಪ್ರಕರ್ಷೇಣ ರಕ್ಷಿತವಾನಸಿ ॥ ಅಸ್ಯೇತೀದಂಶಬ್ದೇನ ಪ್ರಯೋಗಸಮಯೇ ಪುರೋದೇಶಸ್ಥಃ ಸೋಮೋ ನಿರ್ದಿಶ್ಯತೇ ನ ತು ಪೂರ್ವ-ಪ್ರಕೃತಃ ಸೋಮಃ ಪರಾಮೃಶ್ಯತೇ । ಅತೋಽನನ್ವಾದೇಶತ್ವಾನ್ನಾತ್ರೇದಮೋಽನ್ವಾದೇಶೇಽಶನುದಾತ್ತ-ಸ್ತೃತೀಯಾದಾ । ಪಾ. ೨-೪-೩೨ । ಇತ್ಯಶಾದೇಶಃ । ಅತೋ ನ ಸರ್ವಾನುದಾತ್ತತ್ವಂ ಕಿಂತು ತ್ಯದಾ-

ष्यैत्ये । सा. ३-३-८०३ । हलि लोपः । सा. ३-३-८८३ । अकारः सप्तमीसदिकस्वरेणोदात्तः इत्यंतोदात्तादित्यनुवृत्तावूडिदंपदाद्यप्पुन्नुदात्तः । सा. ६-८-८३८ । इति विभक्तिरुदात्तः । पीत्वा । पिबतेः क्त्वाप्रत्ययेऽपि घुसंज्ञायां दित्वे । प्रत्ययस्वरेणांतोदात्तः असामर्थ्यान्न परामंत्रितांगवद्भावः । घ्नतः । मूर्ध्नो घ्नतः । सा. ३-३-३३ । इति हंतेर्धातोः कार्ष्ण्येऽपि क्यप्प्रत्ययः । तदस्यास्तीत्यर्शआदित्वादजंतः । चित्त्वादंतोदात्तः । वाजेषु । वृषादित्वादाद्युदात्तः । वाजिनं । इनिप्रत्ययस्वरः ॥

॥ प्रतिपदार्थ ॥

(हे) शतक्रतो—ಅನೇಕ ಸಾಹಸಕೃತ್ಯಗಳನ್ನು ಮಾಡುವ ಎಲೈ ಇಂದ್ರನೇ । (ನೀನು) अस्य—ಈ ಸೋಮರಸದ ಸ್ವಲ್ಪಭಾಗವನ್ನು । पीत्वा—ಪಾನಮಾಡಿ । वृत्राणां—ವೃತ್ರರೆಂದು ಕರೆಯಲ್ಪಡುವ (ಶತ್ರುಗಳ) । घ्नतः—ಸಂಹಾರಕನು । अधवः—ಆಗು । (ಮತ್ತು) वाजेषु—(ಶತ್ರುಗಳೊಡನೆ ನಾವು ಮಾಡುವ ಅನೇಕ) ಯುದ್ಧಗಳಲ್ಲಿ । वाजिनं—ಯುದ್ಧಮಾಡುವವನನ್ನು (ನಿನ್ನ ಭಕ್ತನಾದ ನಮ್ಮ ವೀರನನ್ನು) प्रावः—ಮುಖ್ಯವಾಗಿ ರಕ್ಷಿಸು.

॥ भावार्थ ॥

ಎಲೈ ಇಂದ್ರನೇ, ನೀನು ಅನೇಕ ಸಾಹಸಕೃತ್ಯಗಳನ್ನೆಸಗುವವನು. ನಾವು ಸಿದ್ಧಪಡಿಸಿ ನಿನಗಾಗಿ ಇಲ್ಲಿ ಇಟ್ಟಿರುವ ಈ ಸೋಮರಸವನ್ನು ಪಾನಮಾಡಿ ವೃತ್ರರೆಂಬ ಹೆಸರಾದ ನಮ್ಮ ಶತ್ರುಗಳನ್ನು ಸಂಹಾರಮಾಡು ಮತ್ತು ಶತ್ರುಗಳೊಡನೆ ನಾವು ಹೋರಾಡುವ ಯುದ್ಧಗಳಲ್ಲಿ ನಿನ್ನವನಾದ ನನ್ನು, ಯೋಧನನ್ನು ಶತ್ರುಬಾಧೆಯಿಂದ ರಕ್ಷಿಸು.

English Translation

O (Indra) performer of many deeds, having drunk of this (Soma), you have become destroyer of our enemies headed by Vritra and protected our warrior in battles.

॥ विशेषविषयगळु ॥

अस्य—ಈ ಸೋಮರಸದ, ನಿನಗಾಗಿ ಇಲ್ಲಿ ಇಟ್ಟಿರುವ ಈ ಸೋಮರಸದ. ಭಾಷ್ಯಕಾರರು अंशं ಎಂಬ ಶಬ್ದವನ್ನು ಅಧ್ಯಾಹಾರಮಾಡಿ ಈ ಸೋಮರಸದ ಭಾಗವನ್ನು ಎಂದರ್ಥಮಾಡಿರುವರು. ಸ್ಕಂದಸ್ವಾಮಿ ಮತ್ತು ವೆಂಕಟಮಾಧವರು ಷಷ್ಠೀವಿಭಕ್ತಿಯಲ್ಲಿರುವ ಅಸ್ಯಶಬ್ದವು ದ್ವಿತೀಯಾವಿಭಕ್ತಿಯ ಅರ್ಥದಲ್ಲಿ ಉಪಯೋಗಿ

ಸಲ್ಪಟ್ಟರುವುದೆಂದು ಹೇಳಿ ಇದಕ್ಕೆ ಅಮುಂ ಸೋಮಂ ಈ ಸೋಮರಸವನ್ನು ಎಂದರ್ಥಮಾಡಿರುವರು. ಒಂದು ವಿಭಕ್ತ್ಯಯ ಅರ್ಥವನ್ನು ಹೇಳುವ ಸಂದರ್ಭದಲ್ಲಿ ಮತ್ತೊಂದು ವಿಭಕ್ತಿಯನ್ನು ಉಪಯೋಗಿಸಿರುವುದು ಋಗ್ವೇದದಲ್ಲಿ ವಿಶೇಷವಾಗಿ ಕಾಣಬರುವುದು.

ಶತಕ್ರತೋ— ಭಾಷ್ಯಕಾರರು ಈ ಶಬ್ದಕ್ಕೆ **ಬಹುಕರ್ಮಯುಕ್ತ**—ಅನೇಕ ಸಾಹಸಕೃತ್ಯಗಳನ್ನು ಮಾಡುವ ಎಂದರ್ಥಮಾಡಿರುವರು. ವೆಂಕಟಮಾಧವರು ಕ್ರತು ಶಬ್ದಕ್ಕೆ ಪ್ರಜ್ಞೆಯೆಂದು ಅರ್ಥಮಾಡಿರುವರು. ಸ್ಕಂದಸ್ವಾಮಿಯು ಈ ಎರಡು ಅರ್ಥಗಳನ್ನೂ ಹೇಳಿರುವರು. ಇಲ್ಲಿ ಶತಶಬ್ದವು ಅನೇಕ ಎಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದು. ಇಂಗ್ಲಿಷ್ ಭಾಷೆಯಲ್ಲಿಯೂ ಸಹ hundred, thousand ಎಂಬ ಶಬ್ದಗಳನ್ನು ಅನೇಕ ಎಂಬ ಅರ್ಥದಲ್ಲಿ ಉಪಯೋಗಿಸುವುದು ರೂಢಿಯಾಗಿದೆ. ಪುರಾಣಾದಿ ಗ್ರಂಥಗಳಲ್ಲಿ ಶತಕ್ರತು ಎಂಬ ಶಬ್ದಕ್ಕೆ ನೂರು ಅಶ್ವಮೇಧಯಾಗಗಳನ್ನು ಮಾಡಿದವನು ಎಂಬ ಅರ್ಥವಿದೆ. ಮತ್ತು ಇಂದ್ರನು ಇಂದ್ರಪದವಿಯನ್ನು ಪಡೆಯುವುದಕ್ಕೆ ಪೂರ್ವದಲ್ಲಿ ನೂರು ಅಶ್ವಮೇಧಯಜ್ಞಗಳನ್ನು ಮಾಡಿ ಆ ಪದವಿಯನ್ನು ಪಡೆದನೆಂದೂ ಮತ್ತು ನೂರು ಯಜ್ಞಗಳನ್ನು ಮಾಡಿದವರು ಆ ಇಂದ್ರಪದವಿಯನ್ನು ಪಡೆಯುವರೆಂದು ಪ್ರಸಿದ್ಧಿ ಇರುವುದರಿಂದ ಅನೇಕ ಸಂದರ್ಭಗಳಲ್ಲಿ ಇತರರು ನೂರು ಯಜ್ಞಗಳನ್ನು ಮಾಡಿದಂತೆ ಅನೇಕ ವಿಘ್ನಗಳನ್ನುಂಟುಮಾಡಿರುವನೆಂದೂ ಪುರಾಣಾದಿಗಳಲ್ಲಿ ಹೇಳಲ್ಪಟ್ಟಿದೆ. ಆದರೆ ಇಂದ್ರನಿಗೆ ವೇದಗಳಲ್ಲಿ ಇರುವ ಸ್ಥಾನವೇ ಬೇರೆ, ಪುರಾಣಾದಿ ಅಧುನಿಕ ಗ್ರಂಥಗಳಲ್ಲಿ ಹೇಳಿರುವ ಸ್ಥಾನವೇ ಬೇರೆ. ಎಂದರೆ ಇಂದ್ರನು ದೇವತೆಗಳಲ್ಲಿ ಅತ್ಯಂತ ಶ್ರೇಷ್ಠನೆಂದು ಅವನ ಸಾಹಸಕೃತ್ಯಗಳನ್ನು ವರ್ಣಿಸಿ ಸ್ತೋತ್ರಮಾಡಿರುವ ಅನೇಕ ಸೂಕ್ತಗಳಿವೆ. ಅಷ್ಟೇಕೆ ? ಋಗ್ವೇದದಲ್ಲಿ ಇಂದ್ರನ ಪರವಾದ ಸ್ತೋತ್ರಗಳಿರುವಷ್ಟು ಮತ್ತಾವ ದೇವತೆಯ ವಿಷಯದಲ್ಲಿಯೂ ಇರುವುದಿಲ್ಲ. ಪುರಾಣಾದಿ ಗ್ರಂಥಗಳಲ್ಲಿ ಇಂದ್ರನ ಸ್ಥಾನವು ಅಂತಹ ಉಚ್ಚಸ್ಥಾನದಲ್ಲಿರದೆ ಬ್ರಹ್ಮ, ವಿಷ್ಣು, ಶಿವ ಮೊದಲಾದ ದೇವತೆಗಳಿಗೆ ಅಧೀನನೆಂದು ಹೇಳಲ್ಪಟ್ಟಿದೆ. ಋಗ್ವೇದದಲ್ಲಿಯೂ ಇತರ ವೇದಗಳಲ್ಲಿಯೂ ಇಂದ್ರನ ಪದವಾಗಿ ಹೇಳುವಾಗ ಶತಕ್ರತುಶಬ್ದವನ್ನು ಉಪಯೋಗಿಸಿರುವುದು ವಿಶೇಷವಾಗಿ ಕಂಡುಬರುವುದು.

ವೃತ್ರಾಣಾಂ— ವೃತ್ರನೆಂಬುವನು ಪ್ರಸಿದ್ಧನಾದ ಒಬ್ಬ ದೈತ್ಯನು. ಅವನನ್ನು ಇಂದ್ರನು ಸಂಹಾರ ಮಾಡಿದನು. ಈ ವಿಷಯವು ಋಗ್ವೇದದಲ್ಲಿಯೂ ಇತರ ವೇದಗಳಲ್ಲಿಯೂ ಬಹುವಾಗಿ ವರ್ಣಿಸಲ್ಪಟ್ಟಿರುವುದು. ಈ ವೃತ್ರಾಸುರನು ಮಳೆಯನ್ನು ಬಾರದಂತೆ ತಡೆಗಟ್ಟುವನೆಂದೂ, ಆದುದರಿಂದ ಇಂದ್ರನು ಅವನನ್ನು ಸಂಹಾರ ಮಾಡಿ ಮಳೆ ಬರುವಂತೆ ಮಾಡುವನೆಂದೂ ಅಲ್ಲಲ್ಲಿ ಹೇಳಿದೆ. ವೃತ್ರ ಶಬ್ದವು ಮಳೆಯೆಂಬ ಉಪಮಾನಾರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದೆಂದು ನಿರುಕ್ತಕಾರರೂ ಇತರರೂ ಅಭಿಪ್ರಾಯಪಡುವರು. ನಿರುಕ್ತದಲ್ಲಿ ಈರೀತಿ ಇರುವುದು—

> ತತ್ರೋ ವೃತ್ರಃ । ಮೇಘ ಇತಿ ನೈರುಕ್ತಾಃ । ತ್ವಾಷ್ಟ್ರೋಽಸುರ ಇತ್ಯೈತಿಹಾಸಿಕಾಃ । ಅಪಾಂ ಚ ಜ್ಯೋತಿಷಶ್ಚ ಮಿಶ್ರಭಾವಕರ್ಮಣೋ ವರ್ಷಕರ್ಮ ಜಾಯತೇ । ತತ್ರೋಪಮಾರ್ಥೇನ ಯುದ್ಧವರ್ಣಾ ಭವಂತಿ ॥ (ನಿ ೨-೧೬)

ಇದರ ಅಭಿಪ್ರಾಯವು—ವೃತ್ರನೆಂದರೆ ಯಾರು ? ವೃತ್ರಶಬ್ದಕ್ಕೆ ನಿರುಕ್ತಕಾರರು ಮೇಘವೆಂದೂ, ಇತಿಹಾಸಕರ್ತರು ತ್ವಷ್ಟೃವಿನ ಮಗನಾದ ಓರ್ವ ದೈತ್ಯನೆಂದೂ ಹೇಳುವರು. ಜಲವಿದ್ಯುತ್ತುಗಳ (ನೀರು ಮತ್ತು

ಮಿಂಚುಗಳ) ಸಂಯೋಗದಿಂದ ಮಳೆಯು ಬರುವುದು. ಅದುದರಿಂದ ಶಿಡಿಲು ಮಿಂಚು ಇವುಗಳಿಂದ ಕೂಡಿದ ಮಳೆಯನ್ನು ಇಂದ್ರನಿಗೂ ವೃತ್ರಾಸುರನಿಗೂ ನಡೆದ ಯುದ್ಧವೆಂದು ಉಪಮಾನವಾಗಿ ವರ್ಣಿಸುವುದು ರೂಢಿಯಾಗಿದೆ ಎಂದರ್ಥವು.

ಗುಡುಗು, ಶಿಡಿಲು, ಮಿಂಚು ಇವುಗಳ ಆರ್ಭಟದಿಂದಲೂ, ಗಾಳಿಯು ಹೊಡೆತದಿಂದಲೂ, ರಭಸವಾಗಿ ಹುಯ್ಯುವ ನೀರಿನ ಧಾರೆಗಳಿಂದಲೂ, ಉಂಟಾಗುವ ಮಳೆಯು ಕೋಲಾಹಲದಿಂದ ಯುಕ್ತವಾದ ಯುದ್ಧದಂತೆ ಕಾಣುವುದರಿಂದ ಈ ವೃಷ್ಟಿಕರ್ಮವನ್ನು ಯುದ್ಧಕ್ಕೆ ಹೋಲಿಸಿ ವರ್ಣಿಸುವುದು ರೂಢಿಯಾಗಿದ್ದಂತೆ ಕಂಡು ಬರುವುದು. ಈ ರೀತಿ ವರ್ಣಿಸುವ ಯುದ್ಧದಲ್ಲಿ ಕಪ್ಪಗಿರುವ ಮೇಘಗಳೇ ವೃತ್ರನು. ಆಗಾಗ ಥಳಥಳನೆ ಮೇಘಮಧ್ಯದಲ್ಲಿ ಕಾಣಿಸುವ ಮಿಂಚೇ ಇಂದ್ರನ ವಜ್ರಾಯುಧವು ಶಿಡಿಲಿನ ಭಯಂಕರವಾದ ಧ್ವನಿಯೇ ಯುದ್ಧದಲ್ಲಿ ಉಂಟಾಗುವ ಯೋಧರ ಆರ್ಭಟವು. ಈ ಶಿಡಿಲುಮಿಂಚುಗಳ ಅರ್ಭಟವು ಮಳೆ ಬರುವುದಕ್ಕೆ ಪೂರ್ವದಲ್ಲಿಯೂ ಮಳೆಯ ಪ್ರಾರಂಭದೆಸೆಯಲ್ಲಿಯೂ ವಿಶೇಷವಾಗಿರುವುದರಿಂದಲೂ ಸ್ವಲ್ಪಕಾಲಾನಂತರ ಇವುಗಳ ಆರ್ಭಟವು ಕಮ್ಮಿಯಾಗಿ ಮಳೆಯು ಹೆಚ್ಚಾಗಿ ಬೀಳುವುದರಿಂದಲೂ ಇಂದ್ರನು ತನ್ನ ವಜ್ರಾಯುಧನನ್ನು ಮಹಾ ಶಬ್ದದೊಡನೆ ಕಪ್ಪಗಿರುವ ವೃತ್ರಾಸುರನ ಮೇಲೆ ಪ್ರಯೋಗಿಸಿ ಅವನನ್ನು ಕೊಂದಮೇಲೆ ಅವನು ತಡೆಗಟ್ಟಿದ್ದ ಮಳೆಯು ಯಥೇಚ್ಛವಾಗಿ ಹುಯ್ಯುವುದೆಂದು ವೃಷ್ಟಿಕರ್ಮವನ್ನು ಇಂದ್ರ ಮತ್ತು ವೃತ್ರಾಸುರರ ಯುದ್ಧಕ್ಕೆ ಹೋಲಿಸಿ ವರ್ಣನೆಮಾಡಿರುವುದು. ವೃತ್ರಶಬ್ದವು ಮೇಘನಾಮವಾಡಕಗಳಾದ ಮೂನತ್ತು ಶಬ್ದಗಳ ಮಧ್ಯದಲ್ಲಿ ಪಠಿತವಾಗಿರುವುದರಿಂದ (ನಿ. ೨-೨೨) ಈ ವಿಧವಾದ ಅರ್ಥಕ್ಕೆ ಸಮರ್ಥನೆಯುಂಟಾಗುವುದು.

ಭಾಗವತಾದಿ ಪುರಾಣಗಳಲ್ಲಿ ವೃತ್ರನು ತ್ವಷ್ಟೃಪ್ರಜಾಪತಿಯ ಮಗನೆಂದೂ ಅವನನ್ನು ಇಂದ್ರನು ಸಂಹಾರಮಾಡಿದನೆಂದೂ ವಿಸ್ತಾರವಾದ ವರ್ಣನೆ ಇದೆ. ಯಜುರ್ವೇದದ ತೈತ್ತಿರೀಯಸಂಹಿತೆಯಲ್ಲಿಯೂ ತೈತ್ತಿರೀಯಬ್ರಾಹ್ಮಣದಲ್ಲಿಯೂ ಇಂತಹ ವರ್ಣನೆ ಅನೇಕಕಡೆಗಳಲ್ಲಿದೆ. ಈ ವಿಷಯವಾಗಿ ಹೆಚ್ಚು ವಿವರಗಳನ್ನು ಮುಂದೆ ಕೊಡಲಾಗುವುದು.

॥ ವ್ಯಾಕರಣಪ್ರಕ್ರಿಯಾ ॥

ಅಸ್ಯ-ಇದಿ-ಪರಮೈಶ್ವರ್ಯೇ ಧಾತು, ಇಲ್ಲಿ ಇಕಾರಕ್ಕೆ ಇತ್ಸಂಜ್ಞೆ ಇರುವುದರಿಂದ **ಇದಿತೋನುಮ್ ಧಾತೋಃ** ಎಂಬುದರಿಂದ ಸವರ್ಣಾಗನು-ಇನ್ದ್ ಎಂದಾಗುತ್ತೆ-ಈಗ **ಇನ್ದೇಃ ಕಮಿನರ್ನಲೋಪಶ್ಚ** (ಉ ಸೂ.೪-೫೬) ಇನ್ದಿ-ಎಂಬುದರ ಮುಂದೆ ಕಮಿ ಪ್ರತ್ಯಯವೂ-ಪ್ರಕೃತಿಯಲ್ಲಿರುವ ನಕಾರಕ್ಕೆ ಲೋಪವೂ ಬರುವುದು ಎಂಬುದರಿಂದ ಕಮಿಪ್ರತ್ಯಯ ನಕಾರಲೋಪಗಳು ಬರುವುವು. ಪ್ರತ್ಯಯದಲ್ಲಿ ಕ್ ಮತ್ತು ಇ ಎರಡಕ್ಕೂ ಇತ್ಸಂಜ್ಞೆ ಬಂದು ಲೋಪ ಬಂದರೆ ಅಮ್ ಸಿಲ್ಲುವುದು. ಇದ್+ಅಮ್=ಇದಮ್ ಎಂದಾಗುವುದು-ದಶಪಾದೀಕಾರರು **ಇಣೋ-ದಮಕ್** ಎಂದು ಸೂತ್ರವನ್ನಿಟ್ಟುಕೊಂಡು ಇಣ್‌ಗತೌ ಧಾತುವಿನ ಮುಂದೆ ದಮಕ್ ಪ್ರತ್ಯಯ ಬಂದು ಇದಮ್ ಎಂದಾಗುವದು ಎನ್ನುವರು. ಇದಂ ಶಬ್ದದಿಂದ ಪ್ರಯೋಗಕಾಲದಲ್ಲಿ ಮುಂಭಾಗದಲ್ಲಿ ಪ್ರತ್ಯಕ್ಷವಾಗಿ ತೋರುವ ಸೋಮವು ನಿರ್ದಿಷ್ಟವಾಗಿರುವುದು ಪೂರ್ವಮಂತ್ರಗಳಲ್ಲಿ ಪ್ರಸ್ತುತವಾದ ಸೋಮವು ಇಲ್ಲಿ ಪರಾಮರ್ಶಿಸಲ್ಪಡುವುದಿಲ್ಲ. ಆದ್ದರಿಂದ ಇದು ಅನ್ವಾದೇಶವಾಗುವುದಿಲ್ಲ. ಅನ್ವಾದೇಶ ಎಂದರೆ ಪೂರ್ವದಲ್ಲಿ ಯಾವುದಾದರೂ ಕಾರ್ಯವನ್ನು ಹೇಳುವ ಉದ್ದೇಶದಿಂದ ಪ್ರಸ್ತುತವಾದುದಕ್ಕೆ ಪುನಃ ಬೇರೆ ಕಾರ್ಯವನ್ನು ಹೇಳುವುದಕ್ಕಾಗಿ ಪರಾಮರ್ಶವಾಡುವಿಕೆ

(ಕಿಂಚಿತ್ಕಾರ್ಯಂವಿಧಾತುಮುಪಾತ್ತಸ್ಯಕಾರ್ಯಾಂತರಂವಿಧಾತುಂಪುನರುಪಾದಾನಂ ಅನ್ವಾದೇಶಃ), ಇಲ್ಲಿ ಪ್ರತ್ಯಕ್ಷವಾಗಿ ಕಾಣತಕ್ಕ ಸೋಮವು ಅಸ್ಯ ಎಂಬುದರಿಂದ ಬೋಧಿತವಾಗುವುದರಿಂದ ಇದು ಅನ್ವಾದೇಶವಲ್ಲ, ಆದ್ದರಿಂದ **ಇದಸೋಽನ್ವಾದೇಶೇಽಶನುದಾತ್ತಸ್ತೃತೀಯೋದೋ** (ಪಾ. ಸವ. ೨-೪-೩೨) ತೃತೀಯಾದಿ ವಿಭಕ್ತಿಯು ಪರವಾಗಿರುವಾಗ ಅನ್ವಾದೇಶವಿಷಯವಾದ ಇದಂ ಶಬ್ದಕ್ಕೆ ಅನುದಾತ್ತವಾದ ಅಶ್ ಆದೇಶ ಬರುವುದು ಎಂಬುದರಿಂದ ಅಶ್ ಆದೇಶ ಬರುವುದಿಲ್ಲ ಆದ್ದರಿಂದ 'ಅಸ್ಯ' ಸರ್ವಾನುದಾತ್ತವಾಗುವುದಿಲ್ಲ **ತೃದಾದೀನಾಮಃ** (ಪಾ. ಸೂ. ೭-೩-೧೦೩) ತೃದಾದಿಗಣಪರಿತಶಬ್ದಗಳಿಗೆ ವಿಭಕ್ತಿ ಪರವಾಗಿರುವಾಗ ಅಕಾರವು ಅಂತಾದೇಶವಾಗಿ ಬರುವುದು, ಎಂಬುದರಿಂದ ಇದಮ್ ಶಬ್ದಕ್ಕೆ ಷಷ್ಠ್ಯೇಕವಚನ ಬಹ್ ಪ್ರತ್ಯಯ ಪರವಾಗಿರುವಾಗ ಅಕಾರಾದೇಶ ಬಂದರೆ **ಅತೋಗುಣೇ** (ಪಾ. ಸೂ. ೬-೧-೯೭) ಎಂಬುದರಿಂದ ಪರರೂಪ ಬಂದು ಷಷ್ಠಿಗೆ ಸ್ಯ ಆದೇಶ ಬಂದರೆ ಇದ+ಸ್ಯ ಎಂದಿರುವಾಗ **ಹಲಿಲೋಪಃ** (ಪಾ ಸೂ ೬-೪-೧೧೩) ಹಲಾದಿಯಾದ ತೃತೀಯಾದಿ ವಿಭಕ್ತಿ ಪದದಲ್ಲಿರುವಾಗ ಕಕಾರವಿಲ್ಲದ ಇದಂ ಶಬ್ದದ ಇದ್ ಎಂಬುದಕ್ಕೆ ಲೋಪ ಬರುವುದು ಎಂಬುದರಿಂದ ಇದ್‌ಗೆ ಲೋಪ ಬಂದರೆ ಅಸ್ಯ ಎಂದು ನಿಲ್ಲುವುದು. ಇಲ್ಲಿ ಆಕಾರವು ಪ್ರಾತಿಪದಿಕಸ್ವರದಿಂದ ಉದಾತ್ತ, **ಊಡಿದಂಪದಾದ್ಯೆಪ್ಪ್ರೆಙ್ಸು ದುಭ್ಯಃ** (ಪಾ. ಸೂ. ೬-೧-೧೭೧) ಊರ್, ಇದಮ್, **ಪದ್ದನ್ನೋಮಾಸ್** (ಪಾ. ಸೂ. ೬-೧-೬೩) ಎಂದು ವಿಹಿತವಾದ ಅರುಪದಾದಿಗಳು, ಅಪ್, ಪುಮ್-ರೈ-ದಿವ್-ಅಂತೋದಾತ್ತವಾಗಿಯೂ ಏಕಾಚ್ಚವಾಗಿಯೂ ಇರುವ **ಈ** ಶಬ್ದಗಳ ಮುಂದಿರುವ ಅಸರ್ವನಾಮಸ್ಥಾನ ವಿಭಕ್ತಿಯು ಉದಾತ್ತವಾಗುವುದು, ಎಂಬುದರಿಂದ 'ಸ್ಯ' ಎಂಬುದು ಉದಾತ್ತ ನಂತರ **ಅನುದಾತ್ತಂಪದಮೇಕವರ್ಜಂ** (ಪಾ.ಸೂ.೬-೧-೧೫೮) ಎಂಬ ಸೂತ್ರದಿಂದ ಶೇಷಾನುದಾತ್ತ ಬರುವುದರಿಂದ 'ಅ' ಎಂಬುದು ಅನುದಾತ್ತವಾಗುವುದು.

ಪಾ ಪಾನೇ ಧಾತುವಿನ ಮೇಲೆ ಕ್ತ್ವಾ ಪ್ರತ್ಯಯ ಬಂದರೆ **ಘುಮಾಸ್ಥಾ ಗಾಪಾ ಜಹಾತಿ ಸಾಂಹಲಿ** (ಪಾ. ಸೂ ೬-೪-೬೬) ಎಂಬುದರಿಂದ ಪಾ ಧಾತುವಿನ ಆಕಾರಕ್ಕೆ ಈಕಾರ ಬಂದು ಪೀತ್ವಾ ಎಂದಾಗುವುದು. ಇದು ಪ್ರತ್ಯಯಸ್ವರದಿಂದ ಅಂತೋದಾತ್ತವಾಗುವುದು. ಪೀತ್ವಾ ಶತಕ್ರತೋ ಎಂಬವುಗಳಿಗೆ ಪರಸ್ಪರಾನ್ವಯವಿಲ್ಲದೇ ಇರುವುದರಿಂದ ಸಾಮರ್ಥ್ಯವಿಲ್ಲ. ಆದಕಾರಣದಿಂದ ಪೀತ್ವಾ ಎಂಬುದಕ್ಕೆ ಪರಾಂಗವದ್ಭಾವ ಬರುವುದಿಲ್ಲ.

ಶತಕ್ರತೋ-ಪಂಚವಿಂಶತಿತ್ರಿಂಶಚ್ಚತ್ವಾರಿಂಶತ್ಪಂಚಾಶತ್ಷಷ್ಟಿಸಪ್ತತ್ಯಶೀತಿ ನವತಿ ಶತಮ್ (ಪಾ ಸೂ ೫-೧-೫೯) ಈ ರೂಢಿಶಬ್ದಗಳು ನಿಪಾತಿಸಲ್ಪಡುವುವು, ಎಂಬ ಸೂತ್ರದಿಂದ ' ದಶದಶತಃ ಪರಿಮಾಣಮಸ್ಯ ' ಎಂದು ವಿಗ್ರಹ ಮಾಡಿದಾಗ ತ ಪ್ರತ್ಯಯವೂ ಪ್ರಕೃತಿಗೆ ಶ ಆದೇಶವೂ ಬಂದು ಶತ ಎಂದಾಗುತ್ತೆ-ಇದು ಪ್ರತ್ಯಯಸ್ವರದಿಂದ ಅಂತೋದಾತ್ತ-ಉಣಾದಿಗಳು ವ್ಯುತ್ಪನ್ನಗಳು ಎಂಬ ಪಕ್ಷದಲ್ಲಿ. ಅವ್ಯುತ್ಪನ್ನಗಳು ಎಂಬ ಪಕ್ಷದಲ್ಲಿ ಪ್ರಾತಿಪದಿಕಸ್ವರದಿಂದ ಅಂತೋದಾತ್ತ, **ಕೃಞ್ ಧಾತುವಿನ ಮುಂದೆ ಕೃಞಃ ಕತುಃ** (ಉ ಸೂ ೧-೭೭) ಕೃಞ್ ಧಾತುವಿನ ಮುಂದೆ ಕತು ಪ್ರತ್ಯಯಬರುವುದು ಎಂಬುದರಿಂದ ಕತು ಪ್ರತ್ಯಯ ಕೃ+ಅತು-ಯಣಾದೇಶ ಕ್ರತು ಎಂದಾಗುತ್ತೆ ಇದು ಪ್ರತ್ಯಯಸ್ವರದಿಂದ ಅಂತೋದಾತ್ತ. ಇನ್ನೆರಡು ಶಬ್ದಗಳಿಗೂ ಬಹುವ್ರೀಹಿ ಸಮಾಸಸಂಬಂಧ್ಯಿಯಲ್ಲಿ ಶತಕ್ರತೋ ಎಂದಾಗುತ್ತೆ. ಇದು **ಆಮನ್ತ್ರಿತಸ್ಯಚ** ಎಂಬ ಎಂಟನೇ ಅಧ್ಯಾಯದ ಸೂತ್ರದಿಂದ ಸರ್ವಾನುದಾತ್ತ. **ಘನಃ-ಮೂರ್ತೌ ಘನಃ** (ಪಾ.ಸೂ.-೩-೭೭)ಕಾಠಿನ್ಯ ಎಂಬ ಅರ್ಥವು ಪ್ರತಿಪಾದಿತವಾಗುವಾಗ, ಹನ ಧಾತುವಿನ ಮುಂದೆ ಅಪ್ ಪ್ರತ್ಯಯವೂ. ಧಾತುವಿಗೆ ಘನಾದೇಶವೂ ಬರುವುದು. ಘನಃ ಅಸ್ಯ ಅಸ್ತಿ ಎಂದು ವ್ಯುತ್ಪತ್ತಿಮಾಡಿದಾಗ **ಅರ್ಶಆದಿಭ್ಯೋಽಚ್** (ಪಾ. ೫-೨-೧೨೭) ಎಂಬುದರಿಂದ ಅಚ್ ಪ್ರತ್ಯಯ ಬರುವುದು ಅಚ್ ಪ್ರತ್ಯಯವು ಚಿತ್ತಾದ್ದರಿಂದ **ಚಿತಃ** (ಪಾ. ಸೂ.

೬-೧-೧೬೩) ಎಂಬುದರಿಂದ ಅಂತೋದಾತ್ತ. ವಾಜೇಷು-ವೃಷಾದೀನಾಂ ಚೆ (ಪಾ. ಸೂ. ೬-೧-೨೦೩) ವೃಷಾದಿ ಗಣಪಠಿತಶಬ್ದಗಳ ಆದಿಯು ಉದಾತ್ತವಾಗುವುದು ಎಂಬುದರಿಂದ ವೃಷಾದಿಗಣದಲ್ಲಿ ಸೇರಿದ ವಾಜ ಶಬ್ದವು ಆದ್ಯುದಾತ್ತ. ವಾಜನಂ, ವಾಜಃ ಅಸ್ಯ ಅಸ್ತಿ ಎಂಬ ಅರ್ಥದಲ್ಲಿ ಅತಇನಿಠನೌ (ಪಾ. ಸೂ. ೫-೨-೧೧೫) ಎಂಬುದರಿಂದ ಇನಿ ಪ್ರತ್ಯಯ ಬರುವುದು. ಆದ್ದರಿಂದ ಪ್ರತ್ಯಯಸ್ವರ ಬರುವುದು ॥ ೪ ॥

॥ ಸಂಹಿತಾಪಾಠಃ ॥

ತಂ ತ್ವಾ ವಾಜೇಷು ವಾಜಿನಂ ವಾಜಯಾಮಃ ಶತಕ್ರತೋ।
ಧನಾನಾಮಿಂದ್ರ ಸಾತಯೇ ॥ ೪ ॥

॥ ಪದಪಾಠಃ ॥

ತಂ । ತ್ವಾ । ವಾಜೇಷು । ವಾಜಿನಂ । ವಾಜಯಾಮಃ । ಶತಕ್ರತೋ ಇತಿ
ಶತಽಕ್ರತೋ ॥
ಧನಾನಾಂ । ಇಂದ್ರ । ಸಾತಯೇ ॥ ೪ ॥

॥ ಸಾಯಣಭಾಷ್ಯಂ ॥

ಹೇ ಶತಕ್ರತೋ ಬಹುಕರ್ಮಯುಕ್ತ ಯದ್ವಾ ಬಹುಪ್ರಜ್ಞಾನಯುಕ್ತೇಂದ್ರ ಧನಾನಾಂ ಸಾತಯೇ ಸಂಭಜನಾರ್ಥಂ ವಾಜೇಷು ಯುದ್ಧೇಷು ವಾಜಿನಂ ಬಲವಂತಂ ತ್ವಾ ಪೂರ್ವಮಂತ್ರೋಕ್ತ-ಗುಣಯುಕ್ತಂ ತ್ವಾಂ ವಾಜಯಾಮಃ । ಅನ್ನವಂತಂ ಕುರ್ಮಃ । ರಣ ಇತ್ಯಾದಿಷು ಷಟ್ಟತ್ವಾರಿಂಶತ್ಸು ಸಂಗ್ರಾಮನಾಮಸು ಪೌಂಸ್ಯೇ ಮಹಾಧನೇ ವಾಜೇಽಗ್ಮನ್ನಿತಿ ಪಠಿತಂ । ಅಷ್ಟಾವಿಂಶತಿಸಂಖ್ಯಾಕೇಷ್ವನ್ನ-ನಾಮಸ್ವಂಧೋ ವಾಜಃ ಪಾಜ ಇತಿ ಪಠಿತಂ । ಉರು ತುವೀತ್ಯಾದಿಷು ದ್ವಾದಶಸು ಬಹುನಾಮಸು ಶತಂ ಸಹಸ್ರಮಿತಿ ಪಠಿತಂ। ಅಪೋಽಶ್ನ ಇತ್ಯಾದಿಷು ಷಡ್ವಿಂಶತಿಸಂಖ್ಯಾಕೇಷು ಕರ್ಮನಾಮಸು ಶಕ್ಮ ಕ್ರತುರಿತಿ ಪಠಿತಂ । ಕೇತಃ ಕೇತುರಿತ್ಯಾದಿಷ್ವೇಕಾದಶಸು ಪ್ರಜ್ಞಾನಾಮಸು ಕ್ರತುರಸುರಿತಿ ಪಠಿತಂ ॥ ತ್ವಾ । ಅನುದಾತ್ತಂ ಸರ್ವಮಿತ್ಯನುವೃತ್ತೌ ತ್ವಾಮೌ ದ್ವಿತೀಯೌಯಾ ಇತಿ ತ್ವಾದೇಶಃ । ವಾಜೇಷು । ವಜ ವ್ರಜ ಗತೌ । ವಾಜಯತಿ ಗಮಯತಿ ಶರೀರನಿರ್ವಾಹಮನೇನೇತಿ ವಾಜೋ ಬಲಮನ್ನಂ ವಾ । ಣ್ಯಂತಾತ್ಕರಣೇ ಘಞ್ । ತತ್ರ ಞಿತ್ಸ್ವರಸ್ಯಾಪವಾದೇ ಕರ್ಷಾತ್ವತಃ । ಪಾ. ೬-೧-೧೫೯ । ಇತ್ಯಂತೋದಾತ್ತತ್ವೇ ಪ್ರಾಪ್ತೇ ತಸ್ಯಾಪ್ಯಪವಾದತ್ವೇನ ವೃಷಾದೀನಾಂ ಚೆ । ಪಾ. ೬-೧-೨೦೩ । ಇತ್ಯಾದ್ಯುದಾತ್ತತ್ವಂ । ವಾಜಯಾಮಃ । ವಾಜೋಽಸ್ಯಾಸ್ತೀತಿ ವಾಜವಾನ್ । ತಂ ಕುರ್ಮ ಇತ್ಯರ್ಥೇ ತತ್ಕರೋತಿ ತದಾಚಷ್ಟೇ । ಪಾ. ೩-೧-೨೬,

ञ-६ । इति णिच् । इष्मवणौ प्रातिपदिकस्य । पा. ६-४-८४५-८ । इति तस्मिन्परतः इष्मवदाद्यावाद्यिस्मतोऽर्थाक् । पा. ५-३-६५ । इति मतुप्रोः लुक् । टेः । पा. ६-४-८५५ । इत्यकारलोपः । णेश्छिः शात्वादंतोदात्तत्वं शसः पित्त्वेनानुदात्तत्वं लसार्वधातुकस्वरेणाख्यातस्याद्यनुदात्तत्वं । पादादित्वात्तिङ्ङिति इति न निघातः । शतक्रतोः । अमंत्रितनिघातः । धनानाम् । नब्विषयस्यानिसंतस्येत्याद्युदात्तः । सातयेः । उदात्तवृत्त्या वृतियोतिजूतिसातिहेतिकीर्तयेश्चेति क्तिन्नुदात्तः ॥

॥ प्रतिपदार्थ ।

(हे) शतक्रतोः—अनेक साहसकर्मयुक्तनाद अथवा बहुप्रज्ञाशालियाद । इंद्रः—एलै इंद्रनेः । धनानाम्—धनादिद्रव्यगळ । सातयेः—प्राप्तिगागि । वाजेषु—युद्धगळल्लि । वाजिनम्—बलशालियाद । तम्—पूर्वोक्तमंत्रगुणयुक्तनाद । त्वा—निन्नन्नु । वाजयामः—अन्नवंतनन्नागि माडुवेवु (हविस्सन रूपदिंदिरुव अन्नवन्नु निनगे समर्पिसुवेवु)

॥ भावार्थ ।

एलै प्रज्ञाशालियाद इंद्रनेः, पशुपुत्रधनादिसंपत्तन्नु पडेयुवुदक्कागि, युद्धगळल्लि बलशालियाद एंदरे परराश्रयशालियाद निनगे हविस्सन्नु एंदरे अन्नवन्नु अर्पिसुवेवु.

English Translation.

O Indra performer of many sacrifices (or one endowed with great wisdom), we offer sacrificial food to you who are powerful in battles, for the acquisition of riches.

॥ विशेषविषयगळु ॥

वाजशब्दद अर्थवन्नु हिंदेयेय विवरिसिदेवे. **वाजयामः**—ई क्रियापदक्के भाष्यकाररु **अन्नवंतं कुर्मः**—अन्नवंतनन्नागि माडुवेवु एंदू, स्कंदस्वामियु **वाजयंति-रर्चयंतिकर्मा, स्तुमः** स्तोत्रमाडुवेवु एंदू वेंकटमाधवरु **स्तुतिभिर्बलिनं कुर्मः** स्तोत्रगळिंद प्रशंसेमाडि निन्नन्नु बलशालियन्नागि माडुवेवु एंदू अर्थविवरणेमाडिदारे.

भाष्यकाररु ई ऋक्किनल्लिरुव **वाज, शत, क्रतु,** एंब शब्दगळ अर्थविचारदल्लि निरुक्त वाक्यगळन्नु उदाहरिसिदारे—

वाजे—रण मोदलाद नलवत्तारु यद्धवाचक शब्दगळ मध्यदल्लि वाजे एंब शब्दवु परितवागिदे (नि. ३-९-८९)

ವಾಜಃ—ಅಂಧ ಮೊದಲಾದ ಇಪ್ಪತ್ತೈಂಟು ಅನ್ನವಾಚಕಶಬ್ದಗಳ ಮಧ್ಯದಲ್ಲಿ **ವಾಜಃ** ಎಂಬ ಶಬ್ದವು ಪಠಿತವಾಗಿದೆ. (ನಿ. ೩-೯-೪)

ಶತ—ಉರು ಮೊದಲಾದ ಹನ್ನೆರಡು ಬಹುವಾಚಕಶಬ್ದಗಳ ಮಧ್ಯದಲ್ಲಿ ಶತಂ ಎಂಬ ಶಬ್ದವು ಪಠಿತವಾಗಿದೆ. (ನಿ. ೩-೧೩-೧)

ಕ್ರತುಃ—ಅಪಃ ಮೊದಲಾದ ಇಪ್ಪತ್ತಾರು ಕರ್ಮವಾಚಕ ಶಬ್ದಗಳ ಮಧ್ಯದಲ್ಲಿ **ಕ್ರತುಃ** ಎಂಬ ಶಬ್ದವು ಪಠಿತವಾಗಿದೆ. (ನಿ. ೨-೧) ಮತ್ತು—

ಕೇತಃ ಮೊದಲಾದ ಹನ್ನೊಂದು ಪ್ರಜ್ಞಾವಾಚಕಶಬ್ದಗಳ ಮಧ್ಯದಲ್ಲಿ **ಕ್ರತುಃ** ಎಂಬ ಶಬ್ದವು ಪಠಿತವಾಗಿದೆ. (ನಿ. ೩-೧೩-೧೭)

॥ ವ್ಯಾಕರಣಪ್ರಕ್ರಿಯಾ ॥

ತ್ವಾ-ತ್ವಾಮೌ ದ್ವಿತೀಯೋಯೋಃ (ಪಾ. ಸೂ. ೪-೧-೨೩) **ಅನುದಾತ್ತಂ ಸರ್ವಮಪಾದಾದೌ** (ಪಾ. ೪-೧-೧೪) ಎಂಬ ಸೂತ್ರವು ಇಲ್ಲಿ ಅನುವೃತ್ತವಾಗುವುದು. ಪದಕ್ಕಿಂತಲೂ ಪರದಲ್ಲಿರತಕ್ಕವುಗಳಾಗಿಯೂ ಪಾದದ ಆದಿಯಲ್ಲಿಲ್ಲದವುಗಳಾಗಿಯೂ ಇರುವ ದ್ವಿತೀಯೈಕವಚನಾಂತಗಳಾದ ಯುಷ್ಮತ್ ಅಸ್ಮತ್ ಶಬ್ದಗಳಿಗೆ ಕ್ರಮವಾಗಿ ತ್ವಾ, ಮಾ, ಎಂಬ ಆದೇಶಗಳು ಬರುವುವು. ಅವು ಅನುದಾತ್ತಗಳಾಗುವುವು ಎಂಬುದರಿಂದ ತ್ವಾಂ ಎಂಬುದಕ್ಕೆ ತ್ವಾ ಆದೇಶ ಬಂದಿರುವುದು. ಅದು ಅನುದಾತ್ತವು. **ವಾಜೇಷು-ವಜವ್ರಜಗತೌ**-ಧಾತು ವಾಜಯತಿ-ಗಮಯತಿ ಶರೀರನಿರ್ವಾಹಂ ಅನೇನ (ಶರೀರದ ನಿರ್ವಾಹವನ್ನು ಈ ಸಾಧನದಿಂದ ಹೊಂದಿಸುವನು) ಇತಿ ವಾಜಃ ಅಂದರೆ-ಬಲ-ಅಥವಾ ಅನ್ನ ಎಂದು ಅರ್ಥ. ವಜಧಾತುವಿನಮೇಲೆ ಣಿಚ್ಪ್ರತ್ಯಯವನ್ನಿಟ್ಟರೆ-ಕರಣ ಎಂಬ ಅರ್ಥದಲ್ಲಿ ಘಞ್ ಪ್ರತ್ಯಯ ಬರುವುದು. **ಅತ ಉಪಧಾಯಾಃ** (ಪಾ. ಸೂ. ೭-೩-೧೧೬) ಎಂಬುದರಿಂದ ಉಪಧೆಗೆ ವೃದ್ಧಿ ಬರುವುದು, **ಣೇರನಿಟಿ** (ಪಾ. ಸೂ. ೬-೪-೫೧) ಎಂಬುದರಿಂದ ಣಿ ಲೋಪ-ವಾಜ ಎಂದಾಗುವುದು. **ಘ್ನಾತ್ಯಾದಿರ್ನಿತ್ಯಂ** (ಪಾ. ಸೂ. ೬-೧-೧೯೭) ಎಂಬುದಕ್ಕೆ ಅಪವಾದವಾದ **ಕರ್ಷಾತ್ವತೋಘಞಂತಉದಾತ್ತಃ** (ಪಾ.ಸೂ. ೬-೧-೧೫೯) ಕರ್ಷಧಾತು, ಆಕಾರವನ್ನು ಹೊಂದಿರುವ ಧಾತು ಇವೆರಡರ ಮುಂದೆ ಘಞ್ ಪ್ರತ್ಯಯವಿದ್ದರೆ ಆ ಘಞ್ ಪ್ರತ್ಯಯಾಂತಶಬ್ದದ ಅಂತವು ಉದಾತ್ತವಾಗುವುದು ಎಂಬುದರಿಂದ ಅಂತೋದಾತ್ತ ಪ್ರಾಪ್ತವಾದರೆ ಇದಕ್ಕೂ ಅಪವಾದವಾದ **ವೃಷಾದೀನಾಂ ಚ** (ಪಾ. ಸೂ ೬-೧-೨೦೩) ಎಂಬುದರಿಂದ ಆದ್ಯುದಾತ್ತ ಬರುವುದು. **ವಾಜಯೋಮಃ**,-ವಾಜಃ ಅಸ್ಯ ಅಸ್ತಿ (ಅನ್ನವು ಅಥವಾ ಬಲವು ಇವನಿಗೆ ಇದೆ) ಎಂದು ವ್ಯುತ್ಪತ್ತಿಮಾಡಿದಾಗ **ತದಸ್ಯಾಸ್ತ್ಯಸ್ಮಿನ್ನಿತಿಮತುಪ್** (ಪಾ. ಸೂ. ೫-೨-೯೩) ಎಂಬುದರಿಂದ ಮತುಪ್ ಬರುವುದು, **ಮಾದುಪಧಾಯಾಶ್ಚ ಮತೋರ್ವೋಽಯವಾದಿಭ್ಯಃ** (ಪಾ. ಸೂ. ೮-೨-೯) ಮವರ್ಣ ಆವರ್ಣಗಳನ್ನು ಕೊನೆಯಲ್ಲಿ ಹೊಂದಿರುವ ಶಬ್ದಗಳ ಅಥವಾ ಮವರ್ಣ ಅವರ್ಣ ಇವುಗಳು ಉಪಾಂತ್ಯದಲ್ಲಿರುವ ಶಬ್ದಗಳು ಇವುಗಳ ಮುಂದಿರುವ ಮತುಪ್ಪಿನ ಮಕಾರಕ್ಕೆ ವಕಾರ ಬರುವುದು ಎಂಬುದರಿಂದ ವಕಾರ ಬಂದರೆ ವಾಜವತ್. ಸುಪ್ರತ್ಯಯವನ್ನು ಹಚ್ಚಿದಾಗ **ಅತ್ವಸಂತಸ್ಯಚಾಧಾತೋಃ** (ಪಾ. ಸೂ. ೬-೪-೧೪) ಎಂಬುದರಿಂದ ದೀರ್ಘವೂ **ಉಗಿದಚಾಂಸರ್ವನಾಮಸ್ಥಾನೇ ಧಾತೋಃ** ಎಂಬುದರಿಂದ ನುಮಾಗಮವೂ ಬಂದು ವಾಜವಾನ್+ಸು ಎಂದಿರುವಾಗ **ಹಲ್ಙ್ಯಾಭ್ಯೋ ದೀರ್ಘಾತ್ಸುತಿಸ್ಯಪೃಕ್ತಂಹಲ್** (ಪಾ. ಸೂ. ೬-೧-೬೮) ಎಂಬುದರಿಂದ ಸುಲೋಪ **ಸಂಯೋಗಾಂತಸ್ಯಲೋಪಃ**

(ಪಾ. ಸೂ. ೮-೩-೩೩) ಎಂಬುದರಿಂದ ತಲೋಪ, **ಪೂರ್ವತ್ರಾಸಿದ್ಧಂ** (ಪಾ. ಸೂ. ೮-೩.೧) ಎಂಬುದರಿಂದ ತ ಲೋಪವು ಅಸಿದ್ಧವಾಗುವುದರಿಂದ 'ನ ಲೋಪಃ ಪ್ರಾತಿಪದಿಕಾಂತಸ್ಯ' ಎಂಬುದರಿಂದ ನ ಲೋಪ ಬರುವುದಿಲ್ಲ. **ವಾಜವಾ** ಎಂದಾಗುವುದು ವಾಜವಂತಂ ಕುರ್ಮಃ (ಅನ್ನವುಳ್ಳವನನ್ನಾಗಿ ಅಥವಾ ಬಲವುಳ್ಳವನನ್ನಾಗಿ ಮಾಡು ತ್ತೇವೆ) ಎಂದು ವಿವಕ್ಷಿಸಿದಾಗ **ತತ್ಕರೋತಿ ತದಾಚಷ್ಟೇ** (ಪಾ. ಸೂ. ೩-೧-೨೬ ಮ ೫-೬) ದ್ವಿತೀಯಾಂತಪ್ರಾತಿ ಪದಿಕದ ಮುಂದೆ ಕರೋತಿ ಎಂಬ ಅರ್ಥದಲ್ಲಿಯೂ ಆಚಷ್ಟೇ ಎಂಬ ಅರ್ಥದಲ್ಲಿಯೂ ಣಿಚ್ ಪ್ರತ್ಯಯ ಬರು ವುದು, ಎಂಬುದರಿಂದ **ಣಿಚ್ಪ್ರತ್ಯಯ** ಬಂದರೆ **ವಾಜವತ್+ಅಮ್+ಣಿಚ್, ಸೆನಾದ್ಯಂತಾ ಧಾತವಃ** (ಪಾ. ಸೂ. ೩-೧-೩೨) ಧಾತುಸಂಜ್ಞೆ ಬಂದರೆ, **ಸುಪೋಧಾತುಪ್ರಾತಿಪದಿಕಯೋಃ** (ಪಾ. ಸೂ. ೨-೪-೭೧) ಎಂಬುದರಿಂದ **ಅಮ್** ವಿಭಕ್ತಿಗೆ ಲೋಪ ಬರುವುದು. **ಣಾವಿಷ್ಠವತ್ಪ್ರಾತಿಪದಿಕಸ್ಯ** (ಪಾ. ಸೂ ೬-೪-೧೫೫-ಮ-೧) ಇಷ್ಠನ್ ಪ್ರತ್ಯಯವು ಪರವಾಗಿರುವಾಗ ಯಾವ ಯಾವ ಕಾರ್ಯಗಳು ಬರುವುವೋ ಆ ಕಾರ್ಯಗಳು ಣಿಚ್ಪ್ರತ್ಯಯ ಪರದಲ್ಲಿರು ವಾಗಲೂ ಬರುವುವು. ಇಷ್ಠನ್ ಪ್ರತ್ಯಯವು ಪರದಲ್ಲಿರುವಾಗ **ವಿನ್ಮತೋರ್ಲುಕ್** (ಪಾ. ಸೂ. ೫-೩-೬೫) ಇಷ್ಠನ್, ಈಯಸುನ್ ಈ ಎರಡು ಪ್ರತ್ಯಯಗಳು ಪರದಲ್ಲಿರುವಾಗ ವಿನ್-ಮತುಪ್ ಪ್ರತ್ಯಯಗಳಿಗೆ ಲುಕ್ (ಲೋಪ) ಬರುವುದು ಎಂದು ಮತುಪ್ಪಿಗೆ ಲುಕ್ಕುವಿಹಿತವಾಗಿರುವುದು. **ಈ ಲುಕ್ಕು ಣಾವಿಷ್ಠವತ್** ಎಂಬ ಅತಿ ದೇಶದಿಂದ ಣಿಚ್ಪ್ರತ್ಯಯ ಪರದಲ್ಲಿರುವಾಗಲೂ ಬರುವುದು. ಎಂದು ಹೇಳಿರುವುದರಿಂದ ವತ್-ಎಂಬ ಮತುಪ್ಪಿಗೆ ಲುಕ್ ಬರುವುದು. ವಾಜ+ಇ ಎಂದಿರುವುದು, **ಟೇಃ** (ಪಾ. ಸೂ. ೬-೪-೧೫೫) ಇಷ್ಠನ್-ಇಯಸಿಜ್-ಈಯಸ್ಪ್ರ ತ್ಯಯಗಳು ಪರವಾಗಿದ್ದರೆ ಭಸಂಜ್ಞಕಾಂಗಾವಯವವಾದ ಟಿಗೆ ಲೋಪ ಬರುವುದು ಎಂಬುದರಿಂದ ಅಕಾರಕ್ಕೆ **ಲೋಪ** ಬಂದರೆ ವಾಜ್-ಈ ಧಾತುವಿನ ಮುಂದೆ ಲಡುತ್ತಮವುರುಷ ಬಹುವಚನವನ್ನಿಟ್ಟರೆ **ಕರ್ತರಿ ಶಪ್** (ಪಾ. ಸೂ. ೩-೧-೬೮) ಎಂಬುದರಿಂದ ಶಪ್ ಬಂದರೆ ಗುಣ ಆಯಾದೇಶ ವಾಜಯ+ಮಸ್, **ಅತೋದೀರ್ಘೋ ಯಞಿ** (ಪಾ. ಸೂ. ೭-೩-೧೦೧) ಯಞಾದಿಯಾದ ಸಾರ್ವಧಾತುಕಪರವಾಗಿದ್ದರೆ ಹ್ರಸ್ವಾಕಾರಾಂತವಾದ ಅಂಗಕ್ಕೆ ದೀರ್ಘ ಬರುವುದು ಎಂಬುದರಿಂದ ದೀರ್ಘಬಂದರೆ ವಾಜಯಾಮಸ್-ರುತ್ವವಿಸರ್ಗಗಳು ಬಂದರೆ ವಾಜಯಾಮಃ ಶಪ್ಪು ಪಿತ್ತಾದ್ದರಿಂದ **ಅನುದಾತ್ತೌ ಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ಅನುದಾತ್ತ ಮಃ ಎಂಬ ಆಖ್ಯಾತಪ್ರತ್ಯಯವು, **ತಾಸ್ಯನುದಾತ್ತೇತ್**-(ಪಾ. ಸೂ. ೬-೧-೧೮೬) ಎಂಬುದರಿಂದ ಅನುದಾತ್ತ. **ಅನುದಾತ್ತಂ ಸರ್ವಮಪಾದಾದೌ** (ಪಾ. ಸೂ. ೪-೧-೧೪) ಅನುದಾತ್ತ ಸಾಮಾನ್ಯವು ಪಾದಾದಿಯಲ್ಲಿರುವ ಪದಕ್ಕೆ ಬರುವುದಿಲ್ಲ ವೆಂದು ನಿಷೇಧವಿರುವುದರಿಂದ ಎರಡನೇ ಪಾದದ ಆದಿಯಲ್ಲಿರುವ 'ವಾಜಯಾಮಃ' ಎಂಬುದಕ್ಕೆ **ತಿಙ್ಶತಿಙಃ** (ಪಾ. ಸೂ. ೪-೧-೩೪) ಎಂಬುದರಿಂದ ಅನುದಾತ್ತ ಬರುವುದಿಲ್ಲ, ಶತಕ್ರತೋ —**ಆಮಂತ್ರಿತಸ್ಯ ಚ** (ಪಾ. ಸೂ. ೪-೧-೧೯) ಎಂಬುದರಿಂದ ಅನುದಾತ್ತ **ಧನಾನಾಂ-ನಬ್ವಿಷಯಸ್ಯಾನಿಸಂತಸ್ಯ** (ಪಿ. ಸೂ. ೨೬) ಎಂಬುದರಿಂದ **ಅದ್ಯುದಾತ್ತ. ಸಾತಯೇ,** ಉದಾತ್ತಃ ಎಂಬ ಪದವು ಅನುವೃತ್ತಿಯಾಗಿ ಬಂದರೆ **ಊತಿಯೂತಿಜೂತಿಸಾತಿ ಹೇತಿಕೀರ್ತಯಶ್ಚ** (ಪಾ. ಸೂ. ೩-೩-೯೭) ಎಂಬುದರಿಂದ ಕ್ತಿ ಪ್ರತ್ಯಯವು ಉದಾತ್ತ ॥ ೯ ॥

॥ ಸಂಹಿತಾಪಾಠಃ ॥

ಯೋ ರಾಯೋಽವನಿರ್ಮಹಾನ್ಸುಪಾರಃ ಸುನ್ವತಃ ಸಖಾ ।
ತಸ್ಮಾ ಇಂದ್ರಾಯ ಗಾಯತ ॥ ೧೦ ॥

॥ पदपाठः ॥

यः । रायः । अवनिः । महान् । सुऽसारः । सुन्वतः । सखा ॥
तस्मै । इन्द्राय । गायत ॥ ८० ॥

॥ सायणभाष्यं ॥

य इन्द्रो रायो धनस्यावनिर्वा रक्षकः स्वामिवा वा तस्मा इन्द्राय गायत । हे ऋत्विजस्तत्प्रीत्यर्थं स्तुतिं कुरुत । कीदृश इन्द्रः । महान् गुणैरधिकः सुसारः सुष्ठु कर्मणः पूरयिता सुन्वतो यजमानस्य सखा सदृशवत्प्रियः ॥ रायः । ऊडिदंपदाद्यप्पुन्म्युद्भ्य इति विभक्तेरुदात्तत्वं । अवनिः । अव रक्षणगतिप्रीतितृप्त्यवगमप्रवेशश्रवणस्वाम्यर्थयाचनक्रियेच्छादीप्त्यवाप्त्यालिंगनहिंसादहनभावेषु । ऋ. ३-८०३ । इत्यनिः । प्रत्ययोदात्तत्वं । सुसारः । स्फा पालनपूरणयोरित्यस्मान्निजंतात्कर्तरीत्यनुवृत्तौ । पा. ३-८-७९ । पचाद्यच् । पा. ३-८-९३४ । चितः इत्यंतोदात्तः । सुन्वतः । शतुरनुनो नद्यजादीः । पा. ६-८-८२३ । इति विभक्तिरुदात्ता । सखा । समानः ऋश्छन्दोदात्तः । ऋ. ४-८३३ । इतीण्प्रत्ययांतः । तत्सन्नियोगेन यलोपः। सशब्दस्य चोदात्तः । ङित्त्वाट्टिलोपः तस्मै । अदिरित्यनुवृत्तौ त्यजितनियजिभ्यो ङित् । ऋ. ८-८३८ । इति तनोतेरदिप्रत्ययः। ङित्त्वाट्टिलोपे प्रत्ययस्वरेण तच्चब्द उदात्तः । त्यदाद्यत्वं । अकारादेश उदात्तेनोदात्त इत्युदात्तः । सावेकाचित्स्तृतीयादिर्विभक्तिरिति । विभक्तेरुदात्तत्वे प्राप्ते प्रथमैकवचनेऽवर्णांतत्वान्न गोरथस्वावर्ण । पा ६-८-८९३ । इति निषेधः । इन्द्राय । इन्द्रशब्दो रन्त्यायांतोऽनिघातितः । नित्त्वादाद्युदात्तः । कर्मणा यमभिप्रैति स संप्रदानं । पा. ८-४-३१ । इत्यत्र क्रियाग्रहणं कर्तव्यं । पा. ८-४-३१-८ । इति वचनाद्गानक्रियया प्राप्यत्वात्संप्रदानत्वेन चतुर्थी ॥

॥ प्रतिपदार्थ ॥

(हे ऋत्विजः—ಎಲೈ ಋತ್ವಿಕ್ಕುಗಳೇ) यः—ಯಾವ ಇಂದ್ರನು । रायः—ಐಶ್ವರ್ಯದ । अवनिः—ಸಂರಕ್ಷಕನೋ ಅಥವಾ ಸ್ವಾಮಿಯೋ । महान्—ಗುಣಾಧಿಕ್ಯದಿಂದ ಮಹನೀಯನೆಂದು ಕರೆಯಲ್ಪಡುವನೋ । सुसारः—ಯಜ್ಞಾದಿಕರ್ಮಗಳನ್ನು ನಿರ್ವಿಘ್ನವಾಗಿ ಪೂರೈಸುವಂತೆ ಮಾಡುವನೋ । सुन्वतः—(ಇಂದ್ರನಿಗಾಗಿ) ಸೋಮರಸವನ್ನು ಹಿಂಡಿ ಸಿದ್ಧಪಡಿಸಿಟ್ಟುಕೊಂಡಿರುವ (ಯಜಮಾನನಿಗೆ) सखा—ಸ್ನೇಹಿತನಂತೆ ಪ್ರೀತಿಪಾತ್ರನೋ । तस्मै—ಅಂತಹ । इन्द्राय—ಇಂದ್ರನಿಗಾಗಿ (ಇಂದ್ರನನ್ನುದ್ದೇಶಿಸಿ) गायत—ಸ್ತೋತ್ರಗಳಿಂದ ಗಾನಮಾಡಿರಿ.

॥ ಭಾವಾರ್ಥ ॥

ಇಂದ್ರನು ಧನಾದ್ಯೈಶ್ವರ್ಯಗಳ ರಕ್ಷಕನು ಅಥವಾ ಸ್ವಾಮಿಯು; ಮಹಾಗುಣಶಾಲಿಯು, ಯಜ್ಞಾದಿ ಕರ್ಮಗಳನ್ನು ನ್ಯೂನಾತಿರಿಕ್ತಗಳಿಲ್ಲದಂತೆ ಪೂರ್ಣಗೊಳಿಸುವವನು; ಇಂದ್ರನ ಪ್ರೀತ್ಯರ್ಥವಾಗಿ ಸೋಮರಸವನ್ನು ಹಿಂಡಿ ಪಾನಯೋಗ್ಯವಾಗುವಂತೆ ಸಿದ್ಧಪಡಿಸಿರುವ ಯಜಮಾನನಿಗೆ ಸ್ನೇಹಿತನಂತೆ ಅತ್ಯಂತ ಪ್ರೀತಿಪಾತ್ರನು. ಇಂತಹ ಇಂದ್ರನನ್ನು, ಎಲೈ ಋತ್ವಿಕ್ಕುಗಳೇ, ಸ್ತೋತ್ರಗಳಿಂದಲೂ ಸಾಮಗಳಿಂದಲೂ ಗಾನಮಾಡಿರಿ.

English Translation

Sing (to) that Indra who is protector (or lord) of wealth, who is great (with many virtues) the perfector of good deeds, the friend of the worshipper.

॥ ವಿಶೇಷ ವಿಷಯಗಳು ॥

ಇದೇ ಶಬ್ದಗಳನ್ನೊಳಗೊಂಡು ಇದೇ ಅರ್ಥವನ್ನು ಹೇಳುವ ಮತ್ತೊಂದು ಋಕ್ಕು ಎಂಟನೆಯ ಮಂಡಲದ ಮೂವತ್ತೈದನೆಯ ಸೂಕ್ತದ ಹದಿವ್ಮೂರನೆಯ ಋಕ್ಕಿನಲ್ಲಿರುವುದು—

ಯೋ ರಾಯೋ ಽವನಿರ್ಮಹಾನ್ತ್ಸುಪಾರಃ ಸುನ್ವತಃ ಸಖಾ । ತಮಿನ್ದ್ರಮಭಿ ಗಾಯತ

(ಋ. ಸಂ. ೮-೩೫-೧೩)

ಈ ಋಕ್ಕಿಗೆ **ಮೇಧಾತಿಥಿಃ ಕಾಣ್ವಃ** ಎಂಬುವನು ಋಷಿಯು. ಪ್ರಸಕ್ತವಾದ ಮಂತ್ರಕ್ಕೂ ಈ ಮಂತ್ರಕ್ಕೂ ಒಂದೆರಡನೆಯ ಪಾದಗಳಲ್ಲಿ ಏನೂ ವ್ಯತ್ಯಾಸವಿಲ್ಲ. ಮೂರನೆಯ ಪಾದದಲ್ಲಿ ಮಾತ್ರ **ತಸ್ಮಾ ಇನ್ದ್ರಾಯ** ಎಂಬ ಶಬ್ದಗಳಿಗೆ ಬದಲಾಗಿ **ತಮಿನ್ದ್ರಮಭಿ** ಎಂಬ ಶಬ್ದಗಳಿರುವವು–ಅರ್ಥದಲ್ಲೇನೂ ವ್ಯತ್ಯಾಸವಿಲ್ಲ. ಈ ಎರಡು ಋಕ್ಕುಗಳಲ್ಲಿ ಯಾವುದು ಪ್ರಾಚೀನವೆಂದು ಹೇಳುವುದು ಕಷ್ಟವಾಗಿದೆ.

ರಾಯಃ—ಧನದ ಎಂದರ್ಥವು **ಅವನಿಃ**—ಈ ಪದಕ್ಕೆ ಭಾಷ್ಯಕಾರರೂ, ವೆಂಕಟಮಾಧವರೂ ರಕ್ಷಕಃ-ರಕ್ಷಕನು ಅಥವಾ ಸ್ವಾಮಿಯು ಎಂದರ್ಥಮಾಡಿದಾರೆ. ಸ್ಕಂದಸ್ವಾಮಿಯು ಈ ಅರ್ಥದ ಜತೆಗೆ ಬೇರೊಂದು ಅರ್ಥವನ್ನು ಹೇಳಿರುವನು—**"ಅವನಿಃ । ಪೃಥಿವೀನಾಮೈತಿತ್ । ಆಶ್ರಯತ್ಸಾಮಾನ್ಯಾತ್ತು ಇನ್ದ್ರೇ ಪ್ರಯುಜ್ಯತೇ । ಯಥಾ ಪೃಥಿವೀ ಸರ್ವಾರ್ಥಾನಾಮಾಶ್ರಯಸ್ತದ್ವದಾಶ್ರಯ ಇತ್ಯರ್ಥಃ ।"** ಎಂದರೆ ಅವನಿ ಎಂಬ ಶಬ್ದಕ್ಕೆ ಪೃಥಿವಿಯು ಎಂದರ್ಥವು. ಈ ಶಬ್ದವು ಇಂದ್ರನ ಸಂಬಂಧವಾಗಿ ಉಪಯೋಗಿಸಲ್ಪಟ್ಟಿರುವುದು. ಭೂಮಿಯು ಹೇಗೆ ಧನಾದಿ ಸಮಸ್ತ ಪದಾರ್ಥಗಳಿಗೂ ಆಶ್ರಯಭೂತವಾದುದೋ ಅದೇ ರೀತಿ ಇಂದ್ರನೂ ಸಹ ಧನಕ್ಕೆ ಆಶ್ರಯಭೂತನು ಎಂದರೆ ಇಂದ್ರನು ಧನಾದಿಗಳನ್ನು ಕೊಡುವವನು ಎಂದು ಹೇಳಿದಾರೆ. ಈ ವಿಧವಾಗಿ ಅರ್ಥಮಾಡುವುದಕ್ಕಿಂತಲೂ ಸಾಯಣರ ಅರ್ಥವೇ ಸಮಂಜಸವಾಗಿರುವುದು.

ರಾಯಃ ಮತ್ತು **ಅವನಿಃ** ಎಂಬ ಪದಗಳನ್ನು ಸೇರಿಸುವಾಗ ಮಧ್ಯದಲ್ಲಿ ಕಂಪವೆಂಬುವ ತ್ರಿಮಾತ್ರಾ ಕಾಲಸೂಚಕವಾದ ಽ ಎಂಬ ಸಂಖ್ಯೆಯನ್ನು ಸ್ವರಿತಾನುದಾತ್ತ ಚಿಹ್ನೆಗಳೊಡನೆ ಬರೆಯುವುದು ಋಗ್ವೇದ ಸಂಹಿತೆಯಲ್ಲಿ ರೂಢಿಯಾಗಿದೆ. ಇತರ ವೇದಗಳಲ್ಲಿ ಈ ವಿಧವಾದ ಉಚ್ಚಾರಣೆಯು ಇರುವುದಿಲ್ಲ. ಈ ವಿಚಾರದಲ್ಲಿ

ईं रीति प्रवर्तमानविरुवुदु—ऋग्वेदे जात्यस्वरितात्परस्तोदात्ते वा स्वरिते वा परे तस्य स्वरितस्योदात्तत्वानुदात्तत्वे स्पष्टमुच्चारणीये इति बोधयितुं तादृशस्थले तस्य स्वरस्य वृत्त्यादिबोधनायाङ्कान्वितस्य स्वरचिह्नानि लिखन्ते स चेत् कंप इति व्यवहियते तत्रत्य उच्चारणविशेषो वैदिकैः ॥ तस्यास्य कंपस्य अभिप्रायेणविशेषोऽत्र अनंदतीर्थाचार्यैः श्लोकेन संगृह्यते । स इत्थं—कंपोऽशेषग्रहे क्वापि लज्जायां वा पुरातने । सृष्टकर्त्रे धृष्यतायां वा हरिणर्क्षंहिकोदितः " इति । इदर विवरणेयन्नु Macdonellएंब पंडितनु ईं रीति विवरिसिरुवनु—**Rayah 3 Avanih;** a peculiar way of marking the accent; the rule is that when on independent **Svarita** immediately preces an **Udatta it** is accompanied by the sign of the numeral 3 if its vowel is long (and by 1 if it is short e. g. **Apsv 1 Antah:**) the figure being marked with both the **Svarita** and the **Anudatta.**

महान्+सुपारः=महान्त्सपारः इल्लि महान् मत्तु सुपारः एंब शब्दगळन्नु संहितावस्थेयल्लि सेरिसुवाग नकारद मुंदे तकारवन्नु सेरिसि मुंदिन सकारवन्नु उच्चरिसुवुदु रूढियागिदे. एंदरे न्+सु=न्+त्+सु=न्त्स एंदु. ईं विधवाद उच्चारणेयु अभिप्रायभेदवेंदु शौनकरु तम्म ऋग्वेद प्रातिशाख्यदल्लि (ऋ. प्रा. ४-८३) हेळिरुवरु. अक्षरगळन्नु कष्टविल्लदंते स्पष्टवागि उच्चारणेमाडलु अनुकूलवागुवंते ईं रीति प्रयोगविरुवुदु.

सुपारः—तीरवन्नु मुट्टुवुदु, कोनेयन्नु मुट्टुवुदु, कोनेगाणिसुवुदु एंद अर्थवु. भाष्यकाररु " कर्मवन्नु " एंब पदवन्नु अध्याहारमाडि अर्थविवरणे माडिरुवरु. पाश्चात्यपंडितरु ईं शब्दक्के ' Carrying well across (to the other bank) ", leading to Success एंदु अर्थमाडिरुवरु.

तस्मा इंद्राय गायत—ईं मूरनेय पादवु. ऋ. सं. ८-३३-४ मत्तु अथर्वण. २०-६८-२ ईं ऋक्कुगळ मूरनेय पादगळल्लियू पठितवागरुवुदु.

॥ व्याकरणप्रक्रिया ॥

यः-त्यजितनियजिभ्यो डित् (उ. सू. ८-८३) त्यज हानौ, तनु विस्तारे-यज देवपूजादौ ईं मूरुधातुगळ मुंदे बरुव अदिप्रत्ययवु डित्वागुवुदु एंबुदरिंद यज धातुविन मुंदे अदिप्रत्यय प्रत्ययवु डित् आद्दरिंद धातुविन टि भाग अज्‌गे लोप. य्+अद्=यद् एंदागुवुदु. ईं शब्दवु प्रत्ययस्वरदिंद आद्युदात्त. उणादिगळु अव्युत्पन्नगळु एंब पक्षदल्लि प्रातिपदिकस्वरदिंद अंतोदात्त-ईं शब्दमुंदे प्रथमाविभक्तिवचन सुप्रत्यय इदन्नु निमित्तमाडिकोंडु त्यदादीनामः (पा. सू. ७-८-८०३) एंबुदरिंद द् गे अकार देश य+अ+सु. अतोगुणे (पा. सू. ६-८-४२) एंबुदरिंद एरडु अकारगळिगू पररूप

ಬಂದು ಒಂದೇ ಅಕಾರ ಬರುವುದು ಯ+ಸು ಈಗ **ಸಸಜುಷೋರುಃ** (ಪಾ. ಸೂ. ೮-೩-೬೬) ಎಂಬುದರಿಂದ ಸು ಗೆ ರು ಆದೇಶ. ಇದಕ್ಕೆ **ಖರವಸಾನಯೋರ್ವಿಸರ್ಜನೀಯಃ** (ಪಾ. ಸೂ. ೮-೩-೧೫) ಎಂಬುದರಿಂದ ವಿಸರ್ಗ ಯಃ ಎಂದಾಗುವುದು. ಇಲ್ಲಿ ವ್ಯಂಜನವು ಅನುದಾತ್ತವಾದುದರಿಂದ ವ್ಯಂಜನವಾದ ದ್ ಸ್ಥಾನದಲ್ಲಿ ಬಂದ ಅಕಾರವು ಅನುದಾತ್ತ. ಯ ಎಂಬಲ್ಲಿಂ ಉದಾತ್ತ ಅಕಾರ ದ್ ಸ್ಥಾನದ ಅನುದಾತ್ತ ಅಕಾರ ಇವೆರಡರ ಸ್ಥಾನ ದಲ್ಲಿ ಪರರೂಪದಿಂದ ಬಂದ ಅಕಾರವು ಸ್ಥಾನಿವದ್ಭಾವದಿಂದ ಯದ್ಯಪಿ ನ್ಯಾಯವಾತ ಸ್ವರಿತವಾಗಬೇಕು. ಆದರೂ **ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮-೪-೫) ಎಂಬ ವಿಶೇಷವಿಧಿ ಇರುವುದರಿಂದ ಅದು ಉದಾತ್ತ. ಈ ರೀತಿಯಲ್ಲಿ ಯಃ ಎಂಬುದು ಉದಾತ್ತ, ಇನ್ನು ಯಃ ಎಂಬುದಕ್ಕೆ ರಾಯಃ ಶಬ್ದದೊಂದಿಗೆ ಸಂಹಿತೆಯನ್ನು ಮಾಡಿದರೆ **ಪೂರ್ವತ್ರಾಸಿದ್ಧಂ** (ಪಾ. ಸೂ. ೮-೨-೧) ಎಂಬುದರಿಂದ ಸಪಾದಸಪ್ತಾಧ್ಯಾಯದ ಕಾರ್ಯವಾದ ಉತ್ವವನ್ನು ಮಾಡುವಾಗ ತ್ರೈಪಾದಿಕಕಾರ್ಯವಾದ ವಿಸರ್ಗವು ಅಸಿದ್ಧವಾಗುವುದು ಅಂದರೆ ಯರ್+ರಾಯಃ ಎಂದು ಇದ್ದಂತೆ ಆಗುತ್ತದೆ. ಯದ್ಯಪಿ ರುತ್ವವೂ ತ್ರೈಪಾದಿಕವೇ ಆದರೂ ಉತ್ವವನ್ನು ಮಾಡುವಾಗ ಅದು ಅಸಿದ್ಧವಾಗುವುದಿಲ್ಲ. ಏಕೆಂದರೆ ಉತ್ವವಿಧಿಯಲ್ಲಿ ರೋಃ ಉತ್ವ ಭವತಿ ಎಂದು ಈ ರುವನ್ನೇ ಉದ್ದೇಶ್ಯವನ್ನಾಗಿ ಇಟ್ಟುಕೊಂಡು ಉತ್ವವನ್ನು ವಿಧಿಸಿರುವುದರಿಂದ ಇದು ಅಸಿದ್ಧವಾಗುವುದಿಲ್ಲ. ಹಶಿಚ (ಪಾ. ಸೂ. ೬-೧-೧೧೪) ಎಂಬುದರಿಂದ ರುಗೆ ಉತ್ವ ಬಂದರೆ ಯ+ಉ+ರಾಯಃ ಎಂದಾಗುತ್ತೆ. ಅ+ಉ ಎರಡಕ್ಕೂ **ಆದ್ಗುಣಃ** ಎಂಬುದರಿಂದ ಗುಣಬಂದರೆ ಯೋ ಎಂದಾಗುವುದು. ಇಲ್ಲಿ ವ್ಯಂಜನಸ್ಥಾನದಲ್ಲಿ ಬಂದ ಉಕಾರವು ಅನುದಾತ್ತ. ಉದಾತ್ತ ಅನುದಾತ್ತಗಳ ಸ್ಥಾನದಲ್ಲಿ ಗುಣದಿಂದ ಬಂದ ಓಕಾರವು ಮೊದಲಿನಂತೆಯೇ **ಏಕಾದೇಶ ಉದಾತ್ತೇನ** ಎಂಬುದರಿಂದ ಉದಾತ್ತ. ಏವಂ ಚ ಯೋ ಎಂಬುದು ಉದಾತ್ತ ಎಂದು ಏರ್ಪಟ್ಟಿತು

ರಾಯೇಃ—ರಾತೇರ್ಡ್ಯೈಃ (ಉ. ಸೂ. ೨-೨೫) ರಾ ದಾನೇ ಎಂಬ ಧಾತುವಿನಮುಂದೆ ಡೈ ಪ್ರತ್ಯಯ ಬರುವುದು ಎಂಬುದರಿಂದ ರಾ ಧಾತುವಿನ ಮುಂದೆ ಡೈ ಪ್ರತ್ಯಯ-ಪ್ರತ್ಯಯದಲ್ಲಿ **ಚುಟೂ** (ಪಾ.ಸೂ. ೧-೩-೭ ಎಂಬುದರಿಂದ ಡ್‌ಗೆ ಇತ್ಸಂಜ್ಞೆ ಬಂದು ಅದಕ್ಕೆ ಲೋಪಬಂದರೆ ಐ ಮಾತ್ರ ಉಳಿಯುತ್ತೆ. ಪ್ರತ್ಯಯವು ಡಿತ್ ಆದ್ದರಿಂದ ಧಾತುವಿನ ಟಿ ಆದ ಆಕಾರಕ್ಕೆ ಲೋಪ ರ್+ಐ= ರೈ ಎಂದಾಗುತ್ತೆ. ಇದು ಪ್ರತ್ಯಯಸ್ವರದಿಂದ ಅಂತೋದಾತ್ತ. ಇದರ ಮುಂದೆ ಷಷ್ಠೀವಿಭಕ್ತಿ ಏಕವಚನ ಙಸ್ ಪ್ರತ್ಯಯ ರೈ+ಅಸ್ **ಏಚೋಽಯವಾಯಾವಃ** (ಪಾ.ಸೂ. ೬-೧-೭೮) ಎಂಬುದರಿಂದ ಐ ಗೆ ಆಯ್ ಆದೇಶ. ರಾಯಸ್, ಸ್‌ಗೆ ರುತ್ವವಿಸರ್ಗಗಳು ಬಂದರೆ ರಾಯಃ ಎಂದಾಗುವುದು. ಇಲ್ಲಿ **ಅನುದಾತ್ತೌ ಸುಪ್ಪಿತೌ** (ಪಾ.ಸೂ. ೩-೧-೪) ಎಂಬುದರಿಂದ ವಿಭಕ್ತಿಯು ಅನುದಾತ್ತ ವಾಗಿ ರಾ ಶಬ್ದದ ಆಕಾರವು ಪ್ರತ್ಯಯಸ್ವರದಿಂದ ಉದಾತ್ತವಾಗಿರುವುದರಿಂದ ಅದೇ ನಿಲ್ಲಬೇಕಾಗಿ ಬಂತು. ಆದರೆ **ಊಡಿದಂ ಪದಾದ್ಯಪ್ಪುನ್ಮ್ರೈದ್ಯುಭ್ಯಃ** (ಪಾ. ಸೂ. ೬-೧-೧೭೧) ಇವುಗಳ ಮುಂದಿರುವ ಅಸರ್ವನಾಮ ಸ್ಥಾನವಿಭಕ್ತಿಯು ಉದಾತ್ತವಾಗುವುದು, ಎಂಬುದರಿಂದ ರಾಯಃ ಎಂಬಲ್ಲಿರುವ ಷಷ್ಠೀವಿಭಕ್ತಿಯು ಉದಾತ್ತ. ಆದ್ದರಿಂದ ರಾಯಃ ಎಂಬುದು ಅಂತೋದಾತ್ತ. ರಾಯಃ ಎಂಬುದನ್ನು ಅವನಿ ಶಬ್ದದೊಂದಿಗೆ ಸಂಹಿತಾಕಾಲದಲ್ಲಿ ತ್ರೈಪಾದಿಕವಾದ ವಿಸರ್ಗವು ಅಸಿದ್ಧವಾಗುವುದು. ರಾಯಸ್+ಅವನಿ. ಸಸಜುಷೋರುಃ (ಪಾ.ಸೂ ೮-೩-೬೬) ಎಂಬುದರಿಂದ ಸ್ ಗೆ ರು ಆದೇಶ. ಇದು ತ್ರೈಪಾದಿಕವಾದರೂ ಉತ್ವವನ್ನು ಮಾಡುವಾಗ ಅಸಿದ್ಧವಾಗುವುದಿಲ್ಲ. **ಅತೋರೋರಪ್ಲುತಾದಪ್ಲುತೇ** (ಪಾ. ಸೂ. ೬-೧-೧೧೩) ಪ್ಲುತವಲ್ಲದ ಹ್ರಸ್ವಾಕಾರ ಪರದಲ್ಲಿದ್ದರೆ ಪ್ಲುತವಲ್ಲದ ಹ್ರಸ್ವಾಕಾರದ ಮುಂದೆ ಇರುವ ರು ಗೆ ಉ ಆದೇಶ ಬರುವುದು ಎಂಬುದರಿಂದ ಪ್ಲುತವಲ್ಲದ ಹ್ರಸ್ವಾಕಾರ ಗಳೆರಡರ ಮಧ್ಯೆ ಇರುವ ರು ಗೆ ಉ ಆದೇಶ. ರಾಯ+ಉ+ಅವನಿಃ ಈ ಉಕಾರ ವ್ಯಂಜನಸ್ಥಾನದಲ್ಲಿ ಬಂದಿರು

ವುದರಿಂದ ಸ್ಥಾನಿವದ್ಭಾವದಿಂದ ಅನುದಾತ್ತ. ವ್ಯಂಜನಮನುದಾತ್ತಂ ಎಂಬ ಅನುಶಾಸನದಿಂದ ವ್ಯಂಜನಗಳೆಲ್ಲವೂ ಅನುದಾತ್ತಗಳು ಎಂಬುದನ್ನು ಮರೆಯಬಾರದು. ರಾಯ+ಉ ಎರಡಕ್ಕೂ ಗುಣದಿಂದ ಓಕಾರ. ಈ ಓಕಾರವು ಪೂರ್ವದಲ್ಲಿರುವ ಉದಾತ್ತಾಕಾರ, ಪರದಲ್ಲಿರುವ ಅನುದಾತ್ತ ಉಕಾರ' ಇವೆರಡರ ಸ್ಥಾನದಲ್ಲಿ ಬಂದಿದೆ. ಆದ್ದರಿಂದ ಸ್ಥಾನಿವದ್ಭಾವದಿಂದ ಸ್ವರಿತವಾಗಬೇಕು ಆದರೂ ಏಕಾದೇಶ ಉದಾತ್ತೇನ ಎಂಬ ವಿಶೇಷವಿಧಿಯಿಂದ ಉದಾತ್ತ ವಾಗುವುದು. ರಾಯೋ+ಅವನಿ ಎಂದಿರುವಾಗ ಏಙಃ ಪದಾಂತಾದತಿ (ಪಾ.ಸೂ. ೬-೧-೧೦೯) ಪದದ ಕೊನೆ ಯಲ್ಲಿರುವ ಏ ಓ ಗಳ ಮುಂದೆ ಹ್ರಸ್ವಾಕಾರ ಇದ್ದರೆ ಪೂರ್ವಪರವರ್ಣಗಳ ಸ್ಥಾನದಲ್ಲಿ ಪೂರ್ವದ ರೂಪವೇ ಬರುವುದು ಎಂಬುದರಿಂದ ಓ+ಅ ಎರಡರ ಸ್ಥಾನದಲ್ಲಿಯೂ ಓಕಾರ ಒಂದೇ ಬರುವುದು. ಇದು ಉದಾತ್ತಾನು ದಾತ್ತ ಉಭಯಸ್ಥಾನದಲ್ಲಿ ಬಂದಿರುವುದರಿಂದ ಉಭಯಧರ್ಮಕವಾದ ಸ್ವರಿತವು ಸ್ಥಾನಿವದ್ಭಾವದಿಂದ ಪ್ರಾಪ್ತ ವಾಗುವುದು. ಆದರೆ ಏಕಾದೇಶ ಎಂಬ ವಿಶೇಷವಿಧಿಯಿಂದ ಉದಾತ್ತವೇ ಬರಬೇಕಾಯಿತು. ಈಗ ಇದನ್ನು ಬಾಧಿಸಿ ಸ್ವರಿತೋವಾನುದಾತ್ತೇ ಪದಾದೌ (ಪಾ.ಸೂ. ೮-೨-೬) ಪದದ ಆದಿಯಲ್ಲಿರುವ ಅನುದಾತ್ತವು ಪರವಾಗಿ ರುವಾಗ ಉದಾತ್ತದೊಂದಿಗೆ ಅನುದಾತ್ತಕ್ಕೆ ಬರುವ ಏಕಾದೇಶವು ವಿಕಲ್ಪವಾಗಿ ಸ್ವರಿತವಾಗುವುದು ಎಂಬುದರಿಂದ ಸ್ವರಿತ ಬರುವುದು. ಈ ಸ್ವರಿತವು ಜಾತ್ಯಸ್ವರಿತಕ್ಕೆ ಸಮಾನವಾದ್ದರಿಂದ ಇದರ ಮುಂದೆ ಉದಾತ್ತವಿದ್ದರೆ ಸ್ವರಿತಾವಯವಗಳಾದ ಉದಾತ್ತಾನುದಾತ್ತಗಳಿಗೆ ಶ್ರವಣವು ಸ್ಪಷ್ಟವಾಗಿ ಆಗುವುದು ಇಂತಹ ಸ್ಥಳದಲ್ಲಿ ಒಂದೇ ವರ್ಣವನ್ನು ಉಚ್ಚರಿಸಿದರೆ ಒಂದೇ ಪ್ರಯತ್ನದಿಂದ ಉದಾತ್ತ ಅನುದಾತ್ತ ಎರಡನ್ನೂ ತೋರಿಸಲಾಗುವುದಿಲ್ಲ ಆದ್ದರಿಂದ ಈ ವರ್ಣಕ್ಕೆ ಆವೃತ್ತಿಯನ್ನು ಮಾಡಿ ಒಂದು ವರ್ಣದಿಂದ ಉದಾತ್ತವನ್ನೂ ಮತ್ತೊಂದು ಅವೃತ್ತವಾದ ವರ್ಣದಿಂದ ಅನುದಾತ್ತವನ್ನೂ ಪ್ರದರ್ಶನಮಾಡುವುದು ವಾಡಿಕೆಯಲ್ಲಿದೆ. ಇದಕ್ಕಾಗಿ ಇಂತಹ ಸ್ಥಳಗಳಲ್ಲಿ ಆವೃತ್ತಿ ಯನ್ನು ಮಾಡುವ ಅಭಿಪ್ರಾಯವನ್ನು ತಿಳಿಯಪಡಿಸುವುದಕ್ಕಾಗಿ ಆ ಅಕ್ಷರದ ಮುಂದೆ ಅಂಕೆಯನ್ನು ಗುರುತಿಸು ವರು. ಅದನ್ನು ವೈದಿಕರು ಕಂಪ ಎನ್ನುತ್ತಾರೆ. ಇಂತಹ ಕಂಪವು ಇಲ್ಲಿ ವಿವಕ್ಷಿತ ಎಂದು ತೋರಿಸುವುದಕ್ಕಾಗಿ ಇಲ್ಲಿ ೩ ಎಂಬ ಅಂಕೆಯನ್ನು ಯೋಕಾರದ ಮುಂದೆ ಬರೆಯಲಾಗಿದೆ. ಈ ಅಂಕೆಗೆ ಸ್ವರಿತ ಎಂದು ಅರ್ಥ. ಇದರ ವಿವರಣೆಯು ಹಿಂದೆ ಹೇಳಲಾಗಿದೆ.

ಅವನಿಃ- ಅವ- ರಕ್ಷಣ ಗತಿಪ್ರೀತಿ ತೃಪ್ತ್ಯವಗಮಪ್ರವೇಶಶ್ರವಣಸ್ವಾಮ್ಯರ್ಥಯಾಚನಕ್ರಿಯೇಚ್ಛಾ ದೀಪ್ತ್ಯವಾಪ್ತ್ಯಾಲಿಂಗನಹಿಂಸಾದಾನಭಾವವೃದ್ಧಿಷು ಚ ಎಂಬ ಧಾತುವಿನ ಮುಂದೆ ಅರ್ತಿ ಸೃ ದೃ ಧ ಮ್ಯಮ್ಯ ಶ ವಿತ್ಯ ಭ್ಯೋನಿಃ (ಉ. ಸೂ. ೨-೨೬೦) ಋಗತೌ-ಸೃಗತೌ-ಧೃಙ್ ಧಾರಣೇ-ಧಮಿ ಎಂಬುದು ಸೂತ್ರೋಕ್ತ ಧಾತು, ಅಮಗತೌ, ಅಶಭೋಜನೇ ಅವರಕ್ಷಣೇ-ತ್ಯಾಪ್ಲವನತರಣಯೋಃ ಎಂಬೀ ಎಂಟುಧಾತುಗಳ ಮುಂದೆ ಅನಿ ಪ್ರತ್ಯಯ ಬರುವುದು ಎಂಬುದರಿಂದ ಅವಧಾತುವಿಗೆ ಅನಿಪ್ರತ್ಯಯ ಬಂದರೆ ಅವನಿ ಎಂದಾಗುತ್ತದೆ- ಆದ್ಯುದಾತ್ತಶ್ಚ (ಪಾ. ಸೂ. ೩-೧-೩) ಎಂಬ ಪ್ರತ್ಯಯ ಸ್ವರದಿಂದ ಪ್ರತ್ಯಯದ ಆದಿಯು ಉದಾತ್ತ. ಸುಪಾರಃ— ಪೃ ಪಾಲನ ಪೂರಣಯೋಃ ಎಂಬ ಧಾತುವಿನ ಮೇಲೆ ಣಿಚ್ಪ್ರತ್ಯಯ ಬಂದು ಅಚೋಞ್ಣಿತಿ (ಪಾ. ಸೂ. ೭-೨-೧೧೫) ಞಿತ್ತುಣಿತ್ತು ಆದ ಪ್ರತ್ಯಯಗಳು ಪರದಲ್ಲಿದ್ದರೆ ಅಜಂತವಾದ ಅಂಗಕ್ಕೆ ವೃದ್ಧಿ ಬರುವುದು ಎಂಬುದರಿಂದ ವೃದ್ಧಿ ಬಂದು, ಪಾರಿ, ಎಂದಿರುವಾಗ ಅದರ ಮುಂದೆ ನಂದಿಗ್ರಹಿಪಚಾದಿಭ್ಯೋಲ್ಯುಣಿನ್ಯಚಃ (ಪಾ. ಸೂ. ೩-೧-೧೩೪) ಎಂಬುದರಿಂದ ಪಚಾದಿಗಣಪಠಿತವಾದ ಪಾರಿ ಎಂಬುದರ ಮುಂದೆ ಕರ್ತೃರ್ಥದಲ್ಲಿ ಅಚ್ಪ್ರತ್ಯಯ ಬರುವುದು, ಣೇರನಿಟಿ (ಪಾ. ಸೂ. ೬-೪-೫೧) ಎಂಬುದರಿಂದ ಣಿಲೋಪ ಬಂದರೆ ಪಾರ-ಚಿತಃ (ಪಾ. ಸೂ. ೬-೧-೧೬೩) ಎಂಬುದ ರಿಂದ ಅಂತೋದಾತ್ತ. ಸುನ್ವತಃ-ಶತುರನುಮೋನದ್ಯಜಾದೀ (ಪಾ. ಸೂ. ೬-೧-೧೬೩) ನುಮಾಗಮವನ್ನು

ಹೊಂದದ ಶತೃಪ್ರತ್ಯಯವನ್ನು ಕೊನೆಯಲ್ಲಿ ಹೊಂದಿರುವ ಶಬ್ದವು ಅಂತೋದಾತ್ತವಾಗಿದ್ದರೆ ಅದರ ಮುಂದೆ ಬರುವ ನದೀಸಂಜ್ಞಕವರ್ಣವೂ, ಅಜಾದಿಯಾದ ಶಸಾದಿವಿಭಕ್ತಿಯೂ ಉದಾತ್ತವಾಗುವುದು-ಎಂಬುದರಿಂದ ಸುನ್ವತ್ ಎಂಬುದರ ಮುಂದಿರುವ ಷಷ್ಠ್ಯೇಕವಚನಪ್ರತ್ಯಯಕ್ಕೆ ಉದಾತ್ತ ಬರುವುದು. **ಸಖಾ-ಸಮಾನೇಽ್ಯುಶ್ಲೋ ಪಾತ್ತೃಃ** (ಪಾ. ಸೂ. ೬-೧-೧೨೩) ಎಂಬುದರಿಂದ ಸಮಾನಶಬ್ದೋಪಪದಕ ಖ್ಯಾ ಧಾತುವಿನ ಮುಂದೆ ಇಣ್ ಪ್ರತ್ಯಯ-ಪ್ರತ್ಯಯವು ಡಿತ್ತಾದ್ದರಿಂದ ಟಿಲೋಪ-ತತ್ಸನ್ನಿಯೋಗದಿಂದ ಯ ಲೋಪ, ಸಮಾನಶಬ್ದಕ್ಕೆ ಉದಾತ್ತ ಸಾದೇಶ ಇವು ಬರುವುವು-ಇದರ ವಿವರಣೆಯು ೪ನೇ ಮಂತ್ರದಲ್ಲಿ ನಿರೂಪಿತವಾಗಿರುವುದು. **ತಸ್ಮೈ-ತ್ಯಜಿತನಿಯಿ ಜಿಭ್ಯೋಽದಿತ್** (ಉ. ಸೂ. ೧-೧೪೯) ತ್ಯಜ್-ತನ್-ಯಜ್ ಈ ಧಾತುಗಳ ಮುಂದೆ ಅದಿಪ್ರತ್ಯಯ ಬರುವುದು ಅದು ಡಿತ್ತಾಗುವುದು ಎಂಬುದರಿಂದ ತನು ವಿಸ್ತಾರೇ ಎಂಬ ಧಾತುವಿನ ಮುಂದೆ ಅದಿ ಪ್ರತ್ಯಯ ಬಂದರೆ ತನ್+ಅದ್-ಎಂದಿರುವಾಗ ಪ್ರತ್ಯಯವು ಡಿತ್ತಾದ್ದರಿಂದ ಅ ಎಂಬ ಟಿಗೆ ಲೋಪ-ತ್+ಅದ್ =ತದ್ ಶಬ್ದವು ಪ್ರತ್ಯಯ ಸ್ವರಬಂದ ಆದ್ಯುದಾತ್ತ. ಆದರ ಮೇಲೆ-ಚತುರ್ಥೀ ಏಕವಚನ ಪ್ರತ್ಯಯವನ್ನಿಟ್ಟರೆ **ತೈದಾದೀನಾಮಃ** (ಪಾ. ಸೂ. ೭-೧-೧೦೨) ಅಕಾರಾದೇಶ. **ಆತೋಗುಣೇ** (ಪಾ.ಸೂ. ೬-೧-೯೭) ಎಂಬುದರಿಂದ ಪರರೂಪ-ಏಕಾದೇಶದಿಂದ ಬಂದ ಅಕಾರವು ' ಏಕಾದೇಶಉದಾತ್ತೇನೋದಾತ್ತಃ ' (ಪಾ. ಸೂ. ೮-೨-೫) ಎಂಬುದರಿಂದ ಉದಾತ್ತ-ಚತುರ್ಥೀ ಏಕವಚನಪ್ರತ್ಯಯ ಙೀ ಎಂಬುದಕ್ಕೆ **ಸರ್ವನಾಮ್ನಃಸ್ಮೈ** (ಪಾ. ಸೂ. ೭-೧-೧೪) ಹ್ರಸ್ವಾಕಾರಾಂತಸರ್ವನಾಮಶಬ್ದದ ಮುಂದಿರುವ ಙೀಗೆ ಸ್ಮೈ ಬರುವುದು-ತಸ್ಮೈ ಎಂದು ಆಗುವುದು. ಸ್ಮೈ-ಎಂಬ ವಿಭಕ್ತಿಗೆ **ಸಾವೇಕಾಚಸ್ತೃತೀಯಾದಿರ್ವಿಭಕ್ತಿಃ** (ಪಾ. ಸೂ. ೬-೧-೧೬೮) ಸಪ್ತವಿಾಬಹುವಚನ-ಸು-ಪ್ರತ್ಯಯ ಪರವಾಗಿರುವಾಗ ಒಂದೇ ಅಚ್ಚನ್ನು ಹೊಂದಿರುವ ಶಬ್ದದ ಮುಂದಿರುವ ತೃತೀಯಾದಿ ವಿಭಕ್ತಿಯು ಉದಾತ್ತವಾಗುವುದು ಎಂಬುದರಿಂದ ಉದಾತ್ತ ಪ್ರಾಪ್ತವಾದರೆ-ತತ್ ಶಬ್ದವು ಪ್ರಥಮೈಕವಚನ ಸುಪ್ರತ್ಯಯ ಪರದಲ್ಲಿರುವಾಗ ಅವರ್ಣಾಂತವಾಗಿರುವುದರಿಂದ **ನ ಗೋಶ್ವನ್ಯಾವನರ್ಣರಾಡಙ್ಙ್ಯಾ ಙ್ಯ್ಯಭ್ಯಃ** (ಪಾ. ಸೂ. ೬-೧-೧೭೨) ಈ ಶಬ್ದಗಳ ಮುಂದಿರುವ ವಿಭಕ್ತಿ ಮತುಪ್ ಪ್ರತ್ಯಯಗಳಿಗೆ ಉದಾತ್ತ ಬರುವುದಿಲ್ಲ, ಎಂಬುದರಿಂದ ಉದಾತ್ತಸ್ವರಕ್ಕೆ ನಿಷೇಧ ಬರುವುದು. ಇಂದ್ರಾಯ-ಇಂದ್ರಶಬ್ದವು-**ಋಜ್ರೇಂದ್ರಾಗ್ರ ವಜ್ರ ವಿಪ್ರ ಕುಬ್ರ ಜುಬ್ರ ಕ್ಷುರಖುರ ಭದ್ರೋಗ್ರ ಭೇರಭೇಲ ಶುಕ್ರೇಶುಕ್ಲ ಗೌರವನ್ರೇರ ಮಾಲಾಃ** (ಉ ಸೂ. ೧೮೬) ಎಂಬುದರಿಂದ ರನ್ ಪ್ರತ್ಯಯಾಂತವು. ನಿತ್ತಾದ್ದರಿಂದ ಆದ್ಯುದಾತ್ತ-**ಕರ್ಮಣಾ ಯಮಭಿಪ್ರೈತಿ ಸ ಸಂಪ್ರದಾನಂ** (ಪಾ. ಸೂ. ೧-೪-೩೨) ಎಂಬ ಸೂತ್ರದಲ್ಲಿ ಮಹಾಭಾಷ್ಯದಲ್ಲಿ **ಕ್ರಿಯೋಗ್ರಹಣಂ ಕರ್ತವ್ಯಂ** (ಪಾ. ಮ. ೧-೪-೩೨) ಕ್ರಿಯೋದ್ದೇಶ್ಯವಾದ ಅರ್ಥವನ್ನು ಹೇಳುವ ಶಬ್ದವು ಸಂಪ್ರದಾನಸಂಜ್ಞೆಯನ್ನು ಹೊಂದುವುದು ಎಂದು ವಚನವಿರುವುದು-ಆದ್ದರಿಂದ ಗಾನಕ್ರಿಯೆಗೆ ಉದ್ದೇಶ್ಯವಾದ ಅರ್ಥವನ್ನು ಬೋಧಿಸುವ ಇಂದ್ರ ಎಂಬುದಕ್ಕೆ ಸಂಪ್ರದಾನಸಂಜ್ಞೆ ಬಂದರೆ **ಚತುರ್ಥೀಸಂಪ್ರದಾನೇ** (ಪಾ. ಸೂ. ೨-೩-೧೩) ಅನಭಿಹಿತಸಂಪ್ರದಾನಾರ್ಥಕಪ್ರಾತಿಪದಿಕದ ಮುಂದೆ ಚತುರ್ಥೀ ವಿಭಕ್ತಿ ಬರುವುದು ಎಂಬುದರಿಂದ ಚತುರ್ಥೀವಿಭಕ್ತಿ ಬರುವುದು. ॥ ೧೦ ॥

೪ ನೇ ಸೂಕ್ತವು ಸಮಾಪ್ತವು

ಇಲ್ಲಿಗೆ ಪ್ರಥಮ ಮಂಡಲದಲ್ಲಿ ೪ನೆಯ ಸೂಕ್ತವೂ ಪ್ರಥಮಾಷ್ಟಕ
ಪ್ರಥಮಾಧ್ಯಾಯದಲ್ಲಿ ೪ನೆಯ ವರ್ಗವೂ ಮುಗಿದುದು.

॥ ಓಂ ॥

ಐದನೆಯ ಸೂಕ್ತವು.

ಆ ತ್ವಿತಿ ದ್ವಿತೀಯೇಂ ಸೂಕ್ತಂ ದಶರ್ಚಂ । ಸುರೂಪಕೃತ್ನುಂ ದಶೇತ್ಯನುವೃತ್ತಾವಾ ತು ಯುಂಜಂತೀತ್ಯೇವಮನುಕ್ರಾಂತತ್ವಾತ್ । ಋಷಿಚ್ಛಂದೋದೇವತಾವಿನಿಯೋಗಾಃ ಪೂರ್ವವತ್ । ವಿಶೇಷವಿನಿಯೋಗಸ್ತು । ಅತಿರಾತ್ರೇ ತೃತೀಯಪರ್ಯಾಯೇ ಮೈತ್ರಾವರುಣಶಸ್ತ್ರೇ ಸ್ತೋತ್ರಿಯೋಽಯಂ ತೃಚಃ । ಅತಿರಾತ್ರೇ ಪರ್ಯಾಯಾಣಾಮಿತಿ ಖಂಡ ಆ ತ್ವೇತಾ ನಿ ಷೀದತೇತ । ಆ. ೬-೪ । ಇತ್ಯುಕ್ತತ್ವಾತ್॥

ಅನುವಾದವು.

ಆ ತ್ವೇತಾ ನಿಷೀದತೇತ ಎಂಬ ಸೂಕ್ತವು ಪ್ರಥಮಮಂಡಲದ ಎರಡನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಮಂಡಲದ ಪ್ರಾರಂಭದಿಂದ ಪರಿಗಣಿಸುವುದಾದರೆ ಐದನೆಯ ಸೂಕ್ತವು. ಈ ಸೂಕ್ತದಲ್ಲಿ ಹತ್ತು ಋಕ್ಕುಗಳಿರುವುವು. ಹಿಂದೆ ಹೇಳಿದಂತೆ ಈ ಎರಡನೆಯ ಅನುವಾಕದಲ್ಲಿ ನಾಲ್ಕು ಸೂಕ್ತಗಳೂ, ಅವುಗಳಲ್ಲಿ ಪ್ರತಿಯೊಂದರಲ್ಲಿಯೂ ಹತ್ತು ಹತ್ತು ಋಕ್ಕುಗಳೂ ಇರುವುವು. ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ ಇರುವುವು. ಈ ಸೂಕ್ತದ ವಿಶೇಷವಿನಿಯೋಗವು—ಅತಿರಾತ್ರವೆಂಬ ಯಾಗವಿಶೇಷದಲ್ಲಿ ತೃತೀಯ ಪರ್ಯಾಯದಲ್ಲಿ ಮೈತ್ರಾವರುಣನೆಂಬ ಹೋತೃವು ಶಸ್ತ್ರಮಂತ್ರವನ್ನು ಪಠಿಸುವಾಗ **ಆ ತ್ವೇತಾ ನಿಷೀದತ** ಎಂದು ಪ್ರಾರಂಭವಾಗುವ ಮೂರು ಋಕ್ಕುಗಳನ್ನು ಹೇಳಬೇಕಾಗಿರುವುದು.

ಸುರೂಪಕೃತ್ನುಮೂತಯೇ ಎಂಬ ಹಿಂದಿನ ಸೂಕ್ತದ ಪೀಠಿಕಾನುವಾದದಲ್ಲಿ ಅಭಿಪ್ಲವಷಡಹ, ಅಭಿಪ್ಲವಪೃಷ್ಠ್ಯ, ಮಹಾವ್ರತ, ಅತಿರಾತ್ರ ಎಂಬ ಕರ್ಮವಿಶೇಷಗಳ ವಿವರಣೆಯನ್ನೂ, ಈ ಸೂಕ್ತದ ವಿನಿಯೋಗದ ಸಂಬಂಧವಾಗಿ ಹೇಳಬೇಕಾಗಿರುವ, ಸ್ತೋಮ, ವಿಷ್ಟುತಿ, ಪರ್ಯಾಯ ಮೊದಲಾದ ಕೆಲವು ಪಾರಿಭಾಷಿಕಶಬ್ದಗಳ ವಿವರಣೆಯನ್ನೂ ಹೇಳದಿದ್ದರೆ ವಿನಿಯೋಗದ ಅರ್ಥವು ಸ್ಪಷ್ಟವಾಗುವುದಿಲ್ಲ. ಯಜ್ಞಸಂಬಂಧವಾದ ಈ ವಿಶೇಷವಿಷಯಗಳು ಮುಖ್ಯವಾಗಿ ಯಜುರ್ವೇದಕ್ಕೆ ಸಂಬಂಧಪಟ್ಟಿದ್ದರೂ ಅವುಗಳನ್ನು ಇಲ್ಲಿ ಸಂದರ್ಭಾನುಸಾರ ಸೂಕ್ಷ್ಮವಾಗಿ ವಿವರಿಸಬೇಕಾಗಿರುವುದು. ಪ್ರತಿಯೊಂದು ಯಜ್ಞದ ಸ್ವರೂಪವನ್ನೂ, ಅವುಗಳನ್ನು ಮಾಡುವ ಕ್ರಮವನ್ನೂ ನಾವು ಇಪ್ಪರಲ್ಲಿಯೇ ಮುದ್ರಿಸಲಿರುವ ಯಜುರ್ವೇದಸಂಹಿತೆಯ ಪೂರ್ವಪೀಠಿಕೆಯಲ್ಲಿ ವಿಸ್ತಾರವಾಗಿ ವರ್ಣಿಸಲಾಗುವುದು. ಪ್ರಕೃತವಿಷಯಕ್ಕೆ ಸಂಬಂಧಪಟ್ಟ ವಿವರಣೆಯನ್ನು ಮಾತ್ರ ಅತಿಸೂಕ್ಷ್ಮವಾಗಿ (ಸಂಗ್ರಹರೂಪವಾಗಿ) ಇಲ್ಲಿ ಕೊಟ್ಟಿದೆ—

ಸೋಮಯಾಗದಲ್ಲಿ ಅಗ್ನಿಷ್ಟೋಮ, ಅತ್ಯಗ್ನಿಷ್ಟೋಮ, ಉಕ್ಥ್ಯ, ಷೋಡಶೀ, ಅತಿರಾತ್ರ, ಅಪ್ತೋರ್ಯಾಮ, ವಾಜಪೇಯ ಎಂಬ ಏಳು ಮುಖ್ಯ ಪ್ರಭೇದಗಳಿವೆಯೆಂದು ಹಿಂದೆಯೇ (ಭಾಗ. ೧. ಪೀಜು 667) ಹೇಳಿರುವೆವು. ಈ ಏಳು ಸೋಮಯಾಗಗಳಿಗೆ ಅಗ್ನಿಷ್ಟೋಮವೇ ಪ್ರಕೃತಿಯಾಗಿರುವುದು ಎಂದರೆ ಮೂಲಭೂತವಾಗಿರುವುದು. ಉಳಿದ ಆರು ಯಾಗಗಳು ಅಗ್ನಿಷ್ಟೋಮದಂತೆಯೇ ಇದ್ದು ಕೆಲವು ವ್ಯತ್ಯಾಸಗಳನ್ನೊಳಗೊಂಡಿರುವುವು.

ಅಭಿಪ್ಲವಷಡಹ, ಪೃಷ್ಠ್ಯಷಡಹ—ಈ ಯಾಗಗಳು ಆರುದಿನಗಳಲ್ಲಿ ಮಾಡಬೇಕಾಗಿರುವುದರಿಂದ ಷಡಹ (ಆರುದಿನಗಳ) ಎಂಬ ಶಬ್ದದಿಂದ ಸೂಚಿತವಾಗಿವೆ. ಆದುದರಿಂದ ಷಡಹಯಾಗವೆಂದರೆ ಆರುದಿನಗಳಲ್ಲಿ ಮಾಡಬೇಕಾದ ಸೋಮಯಾಗವಿಶೇಷವು. ಷಡಹಸೋಮಯಾಗವು ಅಭಿಪ್ಲವ, ಮತ್ತು ಪೃಷ್ಠ್ಯ ಎಂದು ಎರಡು ವಿಧವಾಗಿರುವುದು. ಇವುಗಳ ಲಕ್ಷಣವನ್ನು ಆಶ್ವಲಾಯನರು—**ಉಭಯತೋ ಜ್ಯೋತಿಃ ಷಡಹಃ, ಅಂತರತೋ ಜ್ಯೋತಿಃ ಷಡಹಃ** ಎಂದು ಹೇಳಿರುವರು ಎಂದರೆ, ಆರುದಿನಗಳ ಈ ಯಾಗದಲ್ಲಿ ಮೊದಲನೆಯ ಮತ್ತು ಕೊನೆಯ ದಿನಗಳ ಕಾರ್ಯಕಲಾಪಗಳನ್ನು ಅಗ್ನಿಷ್ಟೋಮಯಾಗದಂತೆಯೂ ಉಳಿದ ಮೂರು, ನಾಲ್ಕು, ಐದು, ಆರು ಈ ದಿನಗಳ ಕಾರ್ಯಕಲಾಪಗಳನ್ನು ಉಕ್ಥ್ಯವೆಂಬ ಸೋಮಯಾಗದಂತೆಯೂ ಮಾಡುವ ಸೋಮಯಾಗಕ್ಕೆ ಅಭಿಪ್ಲವಷಡಹವೆಂದು ಹೆಸರು. ಈ ಯಾಗದ ಆದ್ಯಂತಗಳಲ್ಲಿ ಅಗ್ನಿಷ್ಟೋಮರೂಪಜ್ಯೋತಿಯಿರುವುದರಿಂದ **ಉಭಯತೋಜ್ಯೋತಿಃ** ಎಂದೂ ಹೇಳುವರು. ಆದರಂತೆಯೇ ಆರು ದಿನಗಳ ಸೋಮಯಾಗದಲ್ಲಿ ಮೊದಲನೆಯ ಮತ್ತು ನಾಲ್ಕನೆಯ ದಿನಗಳಲ್ಲಿ ಅಗ್ನಿಷ್ಟೋಮಯಾಗದ ಕಾರ್ಯಕಲಾಪಗಳಂತೆಯೂ ಉಳಿದ ಎರಡು, ಮೂರು, ಐದು, ಆರನೆಯ ದಿವಸಗಳಲ್ಲಿ ಉಕ್ಥ್ಯಯಾಗದ ಕಾರ್ಯಕಲಾಪಗಳಂತೆಯೂ ಮಾಡುವ ಸೋಮಯಾಗವಿಶೇಷಕ್ಕೆ **ಪೃಷ್ಠ್ಯಷಡಹ** ವೆಂದು ಹೆಸರು ಈ ಯಾಗದ ಮಧ್ಯದ ದಿನವು ಎಂದರೆ ನಾಲ್ಕನೆಯ ದಿನವು ಅಗ್ನಿಷ್ಟೋಮಯಾಗದಂತೆ ಇರುವುದರಿಂದ ಇದನ್ನು **ಅಂತರತೋಜ್ಯೋತಿಃ** ಎಂದೂ ಹೇಳುವರು.

ಅಭಿಪ್ಲವಷಡಹಯಾಗದಲ್ಲಿ ವಿಷಮದಿನಗಳು ಎಂದರೆ, ಪ್ರಥಮ, ತೃತೀಯ, ಪಂಚಮದಿನಗಳಲ್ಲಿ ನಡೆಯುವ ಮಾಧ್ಯಂದಿನಸವನಗಳಲ್ಲಿ (ಮಧ್ಯಾಹ್ನಕಾಲದಲ್ಲಿ ಸೋಮರಸವನ್ನು ಹಿಂಡುವ ಕರ್ಮವಿಶೇಷಕಾಲದಲ್ಲಿ) ಉದ್ಗಾತೃಮೊದಲಾದ ಋತ್ವಿಜರು **ರಥಂತರ**ವೆಂಬ ಸಾಮಗಾನಗಳಿಂದ ಸ್ತೋತ್ರಮಾಡುವುದರಿಂದ ಈ ದಿನಗಳಿಗೆ **ರಥಂತರಪೃಷ್ಠ**ಗಳೆಂದು ಹೆಸರು. ಆದರಂತೆಯೇ ಸಮದಿನಗಳಲ್ಲಿ ಎಂದರೆ ದ್ವಿತೀಯ, ಚತುರ್ಥ, ಷಷ್ಠದಿನಗಳಲ್ಲಿ **ಬೃಹತ್ಸಾಮ**ವೆಂಬ ಸಾಮಗಾನಗಳಿಂದ ಸ್ತೋತ್ರಮಾಡುವುದರಿಂದ ಈ ದಿನಗಳಿಗೆ **ಬೃಹತ್ಪೃಷ್ಠ** ದಿನಗಳೆಂದು ಹೆಸರು. ಮೂರನೆಯ ದಿನದಿಂದ ಪ್ರಾರಂಭಿಸಿ ಪ್ರತಿದಿನವೂ ಪೃಷ್ಠ್ಯಸ್ತೋತ್ರಗಳನ್ನು ಪಠಿಸುವಾಗ ಆದಕ್ಕೆ ಪ್ರತಿಯಾಗಿ ವೈರೂಪ, ವೈರಾಜ, ಶಾಕ್ವರರೈವತಗಳೆಂದು ಹೇಳಲ್ಪಡುವ ವಿಶೇಷಸಾಮಮಂತ್ರಗಳು ಗಾನವಾಡಲ್ಪಡುತ್ತವೆ. ಆ ಕಾಲದಲ್ಲಿ ಸಾಮಗಾನಕ್ಕೆ ಅನುಸಾರವಾಗಿ ಹೋತೃವರ್ಗದ ಋತ್ವಿಜರು **ಸ್ತೋಮ**ವೆಂದು ಹೇಳಲ್ಪಡುವ ಕೆಲವು ಋಕ್ಕುಗಳನ್ನು ಪಠಿಸುವರು. ಸ್ತೋಮದ ವಿವರಣೆಯು ಈ ರೀತಿ ಇರುವುದು—

ಏಕಂ ಸಾಮ ತ್ರಿಚೇ ಕ್ರಿಯತೇ । ತಸ್ಯ ಚ ತ್ರಿಚಸ್ಯ ಆವೃತ್ತ್ಯಾ ಋಚಾಂ ಸಂಖ್ಯಾ ವರ್ಧನೀಯಾ ಭವತಿ ಯಾ ಸ್ತೋಮಶಬ್ದೇನೋಚ್ಯತ ಇತಿ ॥

ತ್ರಿಚವೆಂದರೆ ಮೂರು ಋಕ್ಕುಗಳು. ಈ ಮೂರು ಋಕ್ಕುಗಳೂ ಒಂದೇ ದೇವತೆಯನ್ನು ಪ್ರತಿಪಾದಿಸುವುದಾಗಿ ಇರಬೇಕು. ಇಂತಹ ಋಕ್ಕುಗಳನ್ನು ಸ್ಥಾನಭೇದಗಳಿಂದ ವಿಧವಿಧವಾಗಿಯೂ, ಒಂದೊಂದು ಋಕ್ಕನ್ನು ಒಂದಾವರ್ತಿಗಿಂತ ಹೆಚ್ಚಾಗಿ ಪಠಿಸುವುದರಿಂದಲೂ ತ್ರಿಚವನ್ನು ಅನೇಕ ಋಕ್ಕುಗಳನ್ನಾಗಿ ವೃದ್ಧಿಪಡಿಸಬಹುದು. ಉದಾ.— ಒಂದು ತ್ರಿಚದಲ್ಲಿ ೧, ೨, ೩ ಎಂಬ ಋಕ್ಕುಗಳಿವೆ. ಅವುಗಳನ್ನು,

೧, ೨, ೩ ; ೩, ೨, ೧, ೧, ೩, ೨ ; ೨, ೧, ೩ ; ೨, ೩, ೧ ; ೩, ೧, ೨ ಇತ್ಯಾದಿ ಸ್ಥಾನಭೇದಗಳಿಂದಲೂ-

೧, ೧, ೧, ೨, ೩ ; ೧, ೨, ೨, ೨, ೩ ; ೧, ೨, ೩, ೩, ೩ ಇತ್ಯಾದಿ ಅಧಿಕ ಆವೃತ್ತಿಗಳಿಂದಲೂ,

ಪಠಿಸುವಾಗ ಮೂರು ಋಕ್ಕುಗಳು ಅನೇಕ ಋಕ್ಕುಗಳಾಗುವುವು. ಈ ರೀತಿಯಾಗಿ ತೃಚವೆಂಬ ಮೂರು ಋಕ್ಕುಗಳನ್ನು ಯಾವುದಾದರೂ ಒಂದು ಕ್ರಮದಲ್ಲಿ ಪಠಿಸುವುದಕ್ಕೆ ಎಂದರೆ ೧, ೨, ೩ ಅಥವಾ ೧, ೨, ೩, ೩, ೩ ಎಂದು ಮೊದಲಾಗಿ ಪಠಿಸುವುದಕ್ಕೆ ಪರ್ಯಾಯವೆಂದು ಹೆಸರು. ಇಂತಹ ಪರ್ಯಾಯಗಳು ಮೂರಾದರೆ ಒಂದು **ವಿಷ್ಟುತಿ**ಯಾಗುವುದು. ಪ್ರತಿಯೊಂದು ಸ್ತೋಮಕ್ಕೂ ಇಂತಹ ವಿಷ್ಟುತಿಗಳು ಬೇರೆ ಬೇರೆ ಹೆಸರಿನಿಂದ ಅನೇಕವಿಧಗಳಾಗಿರುವುವು. ಆದುದರಿಂದ ಮೂರು ಋಕ್ಕಿನ ತೃಚವನ್ನು ಮೂರು ಪರ್ಯಾಯಗಳಲ್ಲಿ ವಿಧ ವಿಧವಾದ ಕ್ರಮದಿಂದ ಪಠಿಸುವುದೇ ಸ್ತೋಮವೆನಿಸುವುದು. ಸ್ತೋಮಗಳಲ್ಲಿ **ತ್ರಿವೃತ್**, **ಪಂಚದಶಃ**, **ಸಪ್ತದಶಃ**, **ಏಕವಿಂಶಃ**, **ತ್ರಿಣವಃ**, **ತ್ರಯಸ್ತ್ರಿಂಶಃ**, **ಚತುರ್ವಿಂಶಃ**, **ಚತುಶ್ಚತ್ವಾರಿಂಶಃ**, **ಅಷ್ಟಾಚತ್ವಾರಿಂಶಃ** ಎಂದು ಒಂಭತ್ತು ವಿಧವಾದ ಸ್ತೋಮಗಳಿರುವುವು. ತ್ರಿವೃತ್ ಸ್ತೋಮದಲ್ಲಿ ತೃಚವನ್ನು ಬೇರೆ ಬೇರೆ ಕ್ರಮಗಳಲ್ಲಿ ಮೂರಾವರ್ತಿ ಪಠಿಸುವುದರಿಂದ ಈ ಸ್ತೋಮಕ್ಕೆ ತ್ರಿವೃತ್ತೋಮವೆಂದು ಹೆಸರು. ಆದುದರಿಂದ ತ್ರಿವೃತ್ತೋಮದ ಮೂರು ಪರ್ಯಾಯಗಳ ಒಟ್ಟು ಋಕ್ಕುಗಳ ಸಂಖ್ಯೆ ೯ ಆಗುವುದು. ಪಂಚದಶ ಮೊದಲಾದ ಸ್ತೋಮಗಳಲ್ಲಿ ಮೂರು ಪರ್ಯಾಯಗಳಿಂದ ಹದಿನೈದು ಅಥವಾ ಹೆಚ್ಚಿನ ಸಂಖ್ಯೆಯ ಋಕ್ಕುಗಳು ಆಯಾ ಸ್ತೋಮದ ಹೆಸರಿಗೆ ತಕ್ಕಂತೆ ಇರುವವು. ಎಂದರೆ ಪಂಚದಶಸ್ತೋದುದಲ್ಲಿ ಮೂರು ಪರ್ಯಾಯಗಳಿಂದ ಒಟ್ಟು ೧೫ ಋಕ್ಕುಗಳೂ ಸಪ್ತದಶಸ್ತೋಮದಲ್ಲಿ ಮೂರು ಪರ್ಯಾಯಗಳಿಂದ ಒಟ್ಟು ೧೭ ಋಕ್ಕುಗಳೂ ಇರುವವು, ಇತ್ಯಾದಿ. ಆದುದರಿಂದ ಋಕ್ಸಂಖೆಗಳಿಗೆ ಅನುಸಾರವಾಗಿ ಸ್ತೋಮಗಳಿಗೆ ಆಯಾ ಹೆಸರು ಬಂದಿರುವುದು. ಪ್ರತಿಪರ್ಯಾಯದಲ್ಲಿಯೂ ಒಂದೇ ಸಂಖ್ಯೆಯ ಋಕ್ಕುಗಳಿರಬೇಕೆಂಬ ನಿಯಮವಿಲ್ಲ. ಮೂರು ಪರ್ಯಾಯಗಳಿಂದ **ಕ್ಲೃಪ್ತಸಂಖ್ಯೆಯ** ಋಕ್ಕುಗಳು ಆಯಾ ಸ್ತೋಮಗಳ ವಿಷ್ಟುತಿಗಳಲ್ಲಿರಬೇಕು. ಅವುಗಳ ವಿವರವು ಈ ರೀತಿ ಇದೆ—

(೧)	**ತ್ರಿವೃತ್ತೋಮ**—	ಮೂರು ಪರ್ಯಾಯಗಳಿಂದ ಒಟ್ಟು	೯	ಋಕ್ಕುಗಳು.
(೨)	**ಪಂಚದಶಸ್ತೋಮ**	,,	೧೫	,,
(೩)	**ಸಪ್ತದಶಸ್ತೋಮ**	,,	೧೭	,,
(೪)	**ಏಕವಿಂಶಸ್ತೋಮ**	,,	೨೧	,,
(೫)	**ತ್ರಿಣವಸ್ತೋಮ**	,,	೨೭	,,
(೬)	**ತ್ರಯಸ್ತ್ರಿಂಶಸ್ತೋಮ**	,,	೩೩	,,
(೭)	**ಚತುರ್ವಿಂಶಸ್ತೋಮ**	,,	೨೪	,,
(೮)	**ಚತುಶ್ಚತ್ವಾರಿಂಶಸ್ತೋಮ**	,,	೪೪	,,
(೯)	**ಅಷ್ಟಾಚತ್ವಾರಿಂಶಸ್ತೋಮ**	,,	೪೮	,,

ಈ ರೀತಿ ೯ ಸ್ತೋಮಗಳ ಋಕ್ಸಂಖ್ಯೆಗಳು ಆಯಾ ಸ್ತೋಮದ ಹೆಸರಿಗೆ ತಕ್ಕಂತೆ ಇರುವವು. ಈ ಸಂಖ್ಯೆಯು ಸ್ತೋಮದಲ್ಲಿರುವ ಒಂದೊಂದು ವಿಷ್ಟುತಿಗೆ ಅನ್ವಯಿಸುವುದು ಎಂದು ತಿಳಿಯಬೇಕು. ಎಂದರೆ ತ್ರಿವೃತ್ತೋಮ

ದಲ್ಲಿ ಮೂರು ವಿಷ್ಟುತಿಗಳಿರುವುದರಿಂದ ಒಂದೊಂದು ವಿಷ್ಟುತಿಯ ಮೂರು ಪರ್ಯಾಯಗಳಿಗೂ ೯ ಋಕ್ಕುಗಳಿರುವುವೆಂದು ತಿಳಿಯಬೇಕು. ಒಟ್ಟು ಮೂರು ವಿಷ್ಟುತಿಗಳಿಂದ ಸೇರಿ ೯ ಋಕ್ಕುಗಳಲ್ಲ, ೩೭ ಋಕ್ಕುಗಳಾಗುವವು. ಇತ್ಯಾದಿ.

ಪ್ರತಿಯೊಂದು ಸ್ತೋಮಕ್ಕೂ ಅನೇಕ ವಿಷ್ಟುತಿಗಳಿರುವುವೆಂದು ಹಿಂದೆಯೇ ಹೇಳಿರುವುದಷ್ಟೆ. ಅವುಗಳ ವಿವರವನ್ನು ಕೆಳಗೆ ಕೊಟ್ಟಿದೆ—

I **ತ್ರಿವೃತ್ಸ್ತೋಮಕ್ಕೆ**—

(೧) ಉದ್ಯತೀ (೨) ಪರಿವರ್ತಿನೀ (೩) ಕುಲಾಯಿನೀ ಎಂದು ಮೂರು ವಿಷ್ಟುತಿಗಳು.

II **ಪಂಚದಶಸ್ತೋಮಕ್ಕೆ**—

(೧) ಪಂಚಪಂಚಿನೀ (೨) ಉದ್ಯತೀ ಪ್ರಥಮಾ (೩) ಉದ್ಯತೀ ದ್ವಿತೀಯಾ ಎಂದು ಮೂರು ವಿಷ್ಟುತಿಗಳು.

III **ಸಪ್ತದಶಸ್ತೋಮಕ್ಕೆ**—

(೧) ದಶಸಪ್ತಾ ಪ್ರಥಮಾ (೨) ದಶಸಪ್ತಾ ದ್ವಿತೀಯಾ (೩) ಸಪ್ತಸ್ಥಿತಾ ಪ್ರಥಮಾ (೪) ಸಪ್ತಸ್ಥಿತಾ ದ್ವಿತೀಯಾ (೫) ಅನಾಮಿಕಾ (೬) ಉದ್ಯತೀ (೭) ಭಸ್ತ್ರಾ ಎಂದು ಏಳು ವಿಷ್ಟುತಿಗಳು.

IV **ಏಕವಿಂಶಸ್ತೋಮಕ್ಕೆ**—

(೧) ಸಪ್ತಸಪ್ತಿನೀ (೨) ಉದ್ಯತೀ (೩) ಪ್ರತಿಷ್ಟುತಿಃ (೪) ಸೂರ್ಮಾ ಎಂದು ನಾಲ್ಕು ವಿಷ್ಟುತಿಗಳು.

V **ತ್ರಿಣವಸ್ತೋಮಕ್ಕೆ**—

(೧) ಪ್ರತಿಷ್ಠಿತಾ (೨) ಉದ್ಯತೀ ಎಂದು ಎರಡು ವಿಷ್ಟುತಿಗಳು.

VI **ತ್ರಯಸ್ತ್ರಿಂಶಸ್ತೋಮಕ್ಕೆ**—

(೧) ಸಮತ್ರ್ಯಂಶಾ (೨) ನೇದೀಯಸ್ಸಂಕ್ರಮಾ (೩) ಉದ್ಯತೀ (೪) ಪ್ರತ್ಯವ ರೋಹಿಣೀ (೫) ಅಂತಿಮಾ ಎಂದು ಐದು ವಿಷ್ಟುತಿಗಳು.

VII **ಚತುರ್ವಿಂಶಸ್ತೋಮಕ್ಕೆ**—

ಇದಕ್ಕೆ ಒಂದೇ ವಿಷ್ಟುತಿ ಇರುವುದು.

VIII **ಚತುಶ್ಚತ್ವಾರಿಂಶಸ್ತೋಮಕ್ಕೆ**—

(೧) ಪ್ರಥಮಾ (೨) ನಿರ್ಮಥ್ಯಾ (೩) ತೃತೀಯಾ ಎಂದು ಮೂರು ವಿಷ್ಟುತಿಗಳು.

IX **ಅಷ್ಟಾಚತ್ವಾರಿಂಶಸ್ತೋಮಕ್ಕೆ**—

(೧) ಪ್ರಥಮಾ (೨) ನೇದೀಯಸ್ಸಂಕ್ರಮಾ ಎಂದು ಎರಡು ವಿಷ್ಟುತಿಗಳು.

ಒಟ್ಟು ಒಂಭತ್ತು ಸ್ತೋಮಗಳಿಗೆ ಮೂವತ್ತು ವಿಷ್ಟುತಿಗಳಿರುವವು.

ತ್ರಿವೃತ್ಸ್ತೋಮದ ವಿವರಣೆಯು.

ಈಗ ತ್ರಿವೃತ್ಸ್ತೋಮದ **ಉದ್ಯತೀ ಪರಿವರ್ತಿನೀ ಕುಲಾಯಿನೀ** ಎಂಬ ಮೂರು ವಿಷ್ಟುತಿಗಳ ಮತ್ತು ಪಂಚದಶಸ್ತೋಮದ ಉದ್ಯತೀ ಎಂಬ ವಿಷ್ಟುತಿಯ ಕ್ರಮವನ್ನು ಉದಾಹರಣೆಪೂರ್ವಕವಾಗಿ ವಿವರಿಸಿ ಮುಂದೆ ತ್ರಿವೃದಾದಿ ಒಂಭತ್ತು ಸ್ತೋಮಗಳ ವಿಷ್ಟುತಿಕ್ರಮಗಳೆಲ್ಲವನ್ನೂ ಪರ್ಯಾಯತ್ರಯಗಳಲ್ಲಿಯೂ ತೃಚವ ಋಕ್ಸಂಖ್ಯೆಗಳನ್ನು (ಮಾತ್ರ) ಕೊಟ್ಟು ವಿವರಿಸಲಾಗುವುದು. ತ್ರಿವೃತ್ತ್ಸ್ತೋಮದ ಉದ್ಯತೀ ಎಂಬ ವಿಷ್ಟುತಿಯನ್ನು ಪಠಿಸುವ ಕ್ರಮವು ಸಾಮವೇದದ ತಾಂಡ್ಯಬ್ರಾಹ್ಮಣದಲ್ಲಿ ಈ ರೀತಿ ಹೇಳಲ್ಪಟ್ಟಿದೆ—

ತಿಸೃಭ್ಯೋ ಹಿಂಕರೋತಿ ಸ ಪರಾಚೀಭಿಃ ।
ತಿಸೃಭ್ಯೋ ಹಿಂಕರೋತಿ ಸ ಪರಾಚೀಭಿಃ ।
ತಿಸೃಭ್ಯೋ ಹಿಂಕರೋತಿ ಸ ಪರಾಚೀಭಿರುದ್ಯತೀ ತ್ರಿವೃತೋ ವಿಷ್ಟುತಿರಿತಿ ।

ಇದರ ಅರ್ಥವು—**ತಿಸೃಭ್ಯೋ ಹಿಂಕರೋತಿ** ಎಂದರೆ ಉದ್ಗಾತೃವು ತೃಚದ ಮೂರು ಋಕ್ಕುಗಳನ್ನು ಗಾನ ಮಾಡುವನು ಎಂದು. **ಪರಾಚೀಭಿಃ** ಎಂದರೆ ವೇದದಲ್ಲಿರುವ ಕ್ರಮದಂತೆ ಎಂದು. ಆದುದರಿಂದ **ತಿಸೃಭ್ಯೋ ಹಿಂಕರೋತಿ ಪರಾಚೀಭಿಃ** ಎಂದು ಮೂರಾವರ್ತಿ ಹೇಳಿರುವುದರಿಂದ ಮೂರು ಋಕ್ಕುಗಳನ್ನೂ ವೇದದಲ್ಲಿರುವ ಕ್ರಮದಂತೆ ಮೂರು ಪರ್ಯಾಯಗಳಲ್ಲಿಯೂ ಪಠಿಸಬೇಕೆಂದರ್ಥವು—

ಪ್ರಥಮಪರ್ಯಾಯ ೧, ೨, ೩ ನೆಯ ಋಕ್ಕುಗಳು
ದ್ವಿತೀಯಪರ್ಯಾಯ ೧, ೨, ೩ ,,
ತೃತೀಯಪರ್ಯಾಯ ೧, ೨, ೩ ,,

ಈ ರೀತಿ ಮೂರು ಪರ್ಯಾಯಗಳಲ್ಲಿಯೂ ಮೂರು ಋಕ್ಕುಗಳನ್ನೂ ಪಠಿಸಿದರೆ ಇದು ತ್ರಿವೃತ್ಸ್ತೋಮದ ಉದ್ಯತೀ ಎಂಬ ವಿಷ್ಟುತಿಕ್ರಮವಾಗುವುದು.

ಪ್ರಸಕ್ತವಾದ **ಆತ್ವೇತಾ ನಿಷೀದತೆ** ಎಂಬ ಸೂಕ್ತದಲ್ಲಿ ಮೊದಲನೆಯ ಮೂರು ಋಕ್ಕುಗಳು ಒಂದು ತೃಚವು. ಅದನ್ನು ತ್ರಿವೃತ್ಸ್ತೋಮದ ಉದ್ಯತೀವಿಷ್ಟುತಿಯ ಕ್ರಮದಂತೆ ಪಠಿಸಿದರೆ—

(೧) **ಆತ್ವೇತಾ ನಿಷೀದತೆ**..... ॥ ೧ ॥
(೨) **ಪುರೂತಮಂ ಪುರೂಣಾಂ**..... ॥ ೨ ॥
(೩) **ಸ ಘಾ ನೋ ಯೋಗ ಆಭುವತ್**....॥ ೩ ॥

ಎಂದು ಪ್ರಥಮ ಪರ್ಯಾಯವಾಗುವುದು ದ್ವಿತೀಯ ತೃತೀಯ ಪರ್ಯಾಯಗಳೂ ಇದೇ ರೀತಿಯಲ್ಲಿರುವವು. ಈ ರೀತಿ ಮೂರು ಪರ್ಯಾಯಗಳಲ್ಲಿಯೂ ತೃಚವನ್ನು ಪಠಿಸಿದರೆ ತ್ರಿವೃತ್ಸ್ತೋಮದ ಉದ್ಯತೀ ಎಂಬ ವಿಷ್ಟುತಿಯಾಗುವುದು.

ಇದೇ ಸ್ತೋಮದ ಪರಿವರ್ತಿನೀ ಎಂಬ ವಿಷ್ಟುತಿಕ್ರಮವು—

ದ್ವಿತೀಯಾ ಪರಿವರ್ತಿನೀ ವಿಷ್ಟುತಿಃ । ಅವರ್ತನೀಯೈತೃಚಸ್ಯಾನಾವೃತ್ತರೂಪೇಣ
ಸಕೃತ್ಪಾಠೇ ಪ್ರಥಮಃ ಪರ್ಯಾಯಃ ॥
ತಥೈವ ಪುನಃ ಪಾಠೇ ದ್ವಿತೀಯಃ ॥
ತಥೈವ ಪುನಃ ಪಾಠೇ ತೃತೀಯಃ ಪರ್ಯಾಯಃ ॥ ಇತಿ ॥

ಎಂದರೆ ಈ ಎರಡನೆಯ ಪರಿವರ್ತಿನೀ ಎಂಬ ವಿಷ್ಟುತಿಯಲ್ಲಿ ಕೊನೆಯಿಂದ ಮೊದಲಿನವರೆಗೆ ಪ್ರತಿಲೋಮಕ್ರಮದಿಂದ ಎಂದರೆ ೩, ೨, ೧ ಎಂಬ ಕ್ರಮದಿಂದ ತೃಚದ ಋಕ್ಕುಗಳನ್ನು ಪಠಿಸಬೇಕು—

ಪ್ರಥಮಪರ್ಯಾಯ—೩, ೨, ೧
ದ್ವಿತೀಯಪರ್ಯಾಯ—೩, ೨, ೧
ತೃತೀಯಪರ್ಯಾಯ—೩, ೨, ೧

ಉದಾಹರಣೆ—

(೧) ಸ ಘಾ ನೋ ಯೋಗ ಆಭುವತ್ ... ॥ ೩ನೆಯ ಋಕ್ಕು ॥
(೨) ಪುರೂತಮಂ ಪುರೂಣಾಂ .... ॥ ೨ ,,
(೩) ಆ ತ್ವೇತಾ ನಿಷೀದತ .... ॥ ೧ ,,

ಈ ಪರಿವರ್ತಿನೀ ಉದ್ಯತಿಯಲ್ಲಿಯೂ ಮೂರು ಪರ್ಯಾಯಗಳು ಒಂದೇ ವಿಧವಾಗಿರುವುವು.

ಈಗ ಇದೇ ತ್ರಿವೃತ್‌ಸ್ತೋಮದ ಕುಲಾಯಿನೀ ಎಂಬ ಮೂರನೆಯ ವಿಷ್ಟುತಿಕ್ರಮವನ್ನು ಹೇಳುವೆವು.

ತಿಸೃಭ್ಯೋ ಹಿಂಕರೋತಿ ಸ ಪರಾಚೀಭಿಃ ॥ ತಿಸೃಭ್ಯೋ ಹಿಂಕರೋತಿ
ಯಾ ಮಧ್ಯಮಾ ಸಾ ಪ್ರಥಮಾ, ಯೋತ್ತಮಾ ಸಾ ಮಧ್ಯಮಾ ॥
ತಿಸೃಭ್ಯೋ ಹಿಂಕರೋತಿ ಯೋತ್ತಮಾ ಸಾ ಪ್ರಥಮಾ, ಯಾ ಪ್ರಥ-
ಮಾ ಸಾ ಮಧ್ಯಮಾ, ಯಾ ಮಧ್ಯಮಾ ಸೋತ್ತಮಾ ॥ ಇತಿ ॥

ಇದರ ಅರ್ಥವು—

ಪ್ರಥಮಪರ್ಯಾಯದಲ್ಲಿ—ತಿಸೃಭ್ಯೋ ಹಿಂಕರೋತಿ ಸ ಪರಾಚೀಭಿಃ ॥ ಎಂದರೆ ಮೊದಲನೆಯ ಪರ್ಯಾಯದಲ್ಲಿ ತೃಚದ ಋಕ್ಕುಗಳನ್ನು ವೇದದ ಕ್ರಮದಂತೆಯೇ ಎಂದರೆ ೧, ೨, ೩ ಎಂಬುದಾಗಿ ಹೇಳಬೇಕು. ಉದಾ—

(೧) ಆತ್ವೇತಾ ನಿಷೀದತ..... ..... ॥ ೧ ನೆಯ ಋಕ್ಕು ॥
(೨) ಪುರೂತಮಂ ಪುರೂಣಾಂ..... ॥ ೨ ,,
(೩) ಸ ಘಾ ನೋ ಯೋಗ ಆಭುವತ್....॥ ೩ ,,

ದ್ವಿತೀಯಪರ್ಯಾಯದಲ್ಲಿ—ತಿಸೃಭ್ಯೋ ಹಿಂಕರೋತಿ ಯಾ ಮಧ್ಯಮಾ ಸಾ ಪ್ರಥಮಾ, ಯೋತ್ತಮಾ ಸಾ ಮಧ್ಯಮಾ, ಯಾ ಪ್ರಥಮಾ ಸೋತ್ತಮಾ ॥ ॥ ದ್ವಿತೀಯ ಪರ್ಯಾಯದಲ್ಲಿ ತೃಚದ ಮಧ್ಯದ (೨ನೆಯ) ಋಕ್ಕನ್ನು ಮೊದಲಲ್ಲಿಯೂ, ಕೊನೆಯ (೩ನೆಯ) ಋಕ್ಕನ್ನು

ಮಧ್ಯದಲ್ಲಿಯೂ, ಮೊದಲನೆಯ (೧ನೆಯ)ಋಕ್ಕನ್ನು ಕೊನೆಯಲ್ಲಿಯೂ ಪಠಿಸಬೇಕು ಎಂದರೆ ಇದರ ಕ್ರಮವು ೨, ೩, ೧, ಉದಾ—

(೧) **ಪುರೂತಮಂ ಪುರೂಣಾಂ.....॥ ೨** ನೆಯ ಋಕ್ಕು ॥
(೨) **ಸ ಘಾ ನೋ ಯೋಗ ಆಭುವತ್.॥ ೩** ,,
(೩) **ಆ ತ್ವೇತಾ ನಿಷೀದತ.....॥ ೧** ,,

ತೃತೀಯಪರ್ಯಾಯದಲ್ಲಿ—ತಿಸೃಭ್ಯೋ ಹಿಂಕರೋತಿ ಯೋತ್ತಮಾ ಸಾ ಪ್ರಥಮಾ, ಯಾ ಪ್ರಥಮಾ ಸಾ ಮಧ್ಯಮಾ, ಯಾ ಮಧ್ಯಮಾ ಸೋತ್ತಮಾ॥ ತೃತೀಯಪರ್ಯಾಯದಲ್ಲಿ ಕೊನೆಯ (೩ ನೆಯ) ಋಕ್ಕನ್ನು ಮೊದಲಲ್ಲಿಯೂ, ಮೊದಲ (೧ ನೆಯ) ಋಕ್ಕನ್ನು ಮಧ್ಯದಲ್ಲಿಯೂ, ಮಧ್ಯದ (೨ ನೆಯ) ಋಕ್ಕನ್ನು ಕೊನೆಯಲ್ಲಿಯೂ ಪಠಿಸಬೇಕು, ಇದರ ಕ್ರಮವು ೩, ೧, ೨, ಉದಾ—

(೧) **ಸ ಘಾ ನೋ ಯೋಗ ಆಭುವತ್....॥ ೩** ನೆಯ ಋಕ್ಕು ॥
(೨) **ಆ ತ್ವೇತಾ ನಿಷೀದತ..... ॥ ೧** ,,
(೩) **ಪುರೂತಮಂ ಪುರೂಣಾಂ.....-..... ॥ ೨** ,,

ಇದು ತೃತೀಯಪರ್ಯಾಯವು. ಈ ಮೂರು ಪರ್ಯಾಯಗಳೂ ಸೇರಿ ತ್ರಿವೃತ್ತೊ ನ್ನೀಮದ ಕುಲಾಯಿನೀ ಎಂಬ ವಿಷ್ಟುತಿಯಾಗುವುದು.

ಪಂಚದಶಸ್ತೋಮದ ವಿವರಣೆಯು.

ಈ ಸ್ತೋಮದಲ್ಲಿ ೬ ವಿಷ್ಟುತಿಗಳಿರುವುವು. ಅವುಗಳಲ್ಲಿ ೬ನೆಯ ಉದ್ಯತೀ ಎಂಬ ವಿಷ್ಟುತಿಯನ್ನು ಮಾತ್ರ ಉದಾಹರಣೆಪೂರ್ವಕವಾಗಿ ವಿವರಿಸುತ್ತೇವೆ. ಈ ಸ್ತೋಮದ ಯಾವ ವಿಷ್ಟುತಿಯ ೩ ಪರ್ಯಾಯಗಳ ಋಕ್ಕುಗಳನ್ನು ಸೇರಿಸಿದರೂ ೧೫ ಋಕ್ಕುಗಳಾಗುವುದರಿಂದ ಈ ಸ್ತೋಮಕ್ಕೆ ಪಂಚದಶಸ್ತೋಮವೆಂದು ಹೆಸರು. ಇದರ ಕ್ರಮವು—

ಪ್ರಥಮಪರ್ಯಾಯದಲ್ಲಿ—ಪಂಚಭ್ಯೋ ಹಿಂಕರೋತಿ ಸ ತಿಸೃಭಿಃ ಸ ಏಕಯಾ ಸ ಏಕಯಾ ॥ ಎಂದರೆ ಮೊದಲನೆಯ ಪರ್ಯಾಯದಲ್ಲಿ ತೃಚದ ಮೊದಲನೆಯ ಋಕ್ಕನ್ನು ಮೂರಾವರ್ತಿಯೂ ಎರಡನೆಯ ಮತ್ತು ಮೂರನೆಯ ಋಕ್ಕುಗಳನ್ನು ಒಂದಾವರ್ತಿಯೂ ಪಠಿಸಬೇಕು. ಇದರ ಕ್ರಮವು—೧, ೧, ೧, ೨, ೩, ಉದಾ—

(೧) **ಆ ತ್ವೇತಾ ನಿಷೀದತ ॥ ೧** ನೆಯ ಋಕ್ಕು ॥
(೨) **ಆ ತ್ವೇತಾ ನಿಷೀದತ ॥ ೧** ,,
(೩) **ಆ ತ್ವೇತಾ ನಿಷೀದತ ॥ ೧** ,,
(೪) **ಪುರೂತಮಂ ಪುರೂಣಾಂ ॥ ೨** ,,
(೫) **ಸಘಾ ನೋ ಯೋಗ ಆಭುವತ್ ॥ ೩** ,,

ದ್ವಿತೀಯಪರ್ಯಾಯದಲ್ಲಿ—ಪಂಚಭ್ಯೋ ಹಿಂಕರೋತಿ ಸ ಏಕಯೋ ಸ ಏಕಯೋ॥ ಎರಡನೆಯ ಪರ್ಯಾಯದಲ್ಲಿ ಮೊದಲನೆಯ ಋಕ್ಕನ್ನು ಒಂದಾವರ್ತಿಯೂ, ಎರಡನೆಯ ಋಕ್ಕನ್ನು ಮೂರಾವರ್ತಿಯೂ, ಮೂರನೆಯ ಋಕ್ಕನ್ನು ಒಂದಾವರ್ತಿಯೂ, ಪಠಿಸಬೇಕು. ಇದರ ಕ್ರಮವು. ೧, ೨, ೨, ೨, ೩, ಉದಾ—

(೧) ಆ ತ್ವೇತಾ ನಿಷೀದತ ॥ ೧ ನೆಯ ಋಕ್ಕು ॥
(೨) ಪುರೂತಮಂ ಪುರೂಣಾಂ ॥ ೨ ,,
(೩) ಪುರೂತಮಂ ಪುರೂಣಾಂ ॥ ೨ ,,
(೪) ಪುರೂತಮಂ ಪುರೂಣಾಂ ॥ ೨ ,,
(೫) ಸ ಘಾ ನೋ ಯೋಗ ಆಭುವತ್ ॥ ೩ ,,

ತೃತೀಯಪರ್ಯಾಯದಲ್ಲಿ—ಪಂಚಭ್ಯೋ ಹಿಂಕರೋತಿ ಸ ಏಕಯೋ ಸ ಏಕಯೋ ಸ ತಿಸೃಭಿಃ॥ ಮೂರನೆಯ ಪರ್ಯಾಯದಲ್ಲಿ ಮೊದಲನೆಯ ಋಕ್ಕನ್ನು ಒಂದಾವರ್ತಿಯೂ, ಎರಡನೆಯ ಋಕ್ಕನ್ನು ಒಂದಾವರ್ತಿಯೂ, ಮೂರನೆಯ ಋಕ್ಕನ್ನು ಮೂರಾವರ್ತಿಯೂ, ಪಠಿಸಬೇಕು. ಇದರ ಕ್ರಮವು ೧, ೨, ೩, ೩, ೩, ಉದಾ—

(೧) ಆ ತ್ವೇತಾ ನಿಷೀದತ ॥ ೧ ನೆಯ ಋಕ್ಕು ॥
(೨) ಪುರೂತಮಂ ಪುರೂಣಾಂ ॥ ೨ ,,
(೩) ಸ ಘಾ ನೋ ಯೋಗ ಆಭುವತ್॥ ೩ ,,
(೪) ಸ ಘಾ ನೋ ಯೋಗ ಆಭುವತ್॥ ೩ ,,
(೫) ಸ ಘಾ ನೋ ಯೋಗ ಆಭುವತ್॥ ೩ ,,

ಈ ಮೂರು ಪರ್ಯಾಯಗಳೂ ಸೇರಿ ಪಂಚದಶಸ್ತೋಮದ ಉದ್ಯತೀ ಎಂಬ ವಿಷ್ಟುತಿಯಕ್ರಮವು. ಇದರಂತೆ ಇತರ ಸ್ತೋಮಗಳ ವಿಷ್ಟುತಿಕ್ರಮಗಳನ್ನೂ ತಿಳಿದುಕೊಳ್ಳಬೇಕು. ಈಗ ತ್ರಿವೃದಾದಿ ಅಷ್ಟಾಚತ್ವಾರಿಂಶಸ್ತೋಮಗಳ ಎಂದರೆ ಒಟ್ಟು ಒಂಭತ್ತು ಸ್ತೋಮಗಳ ವಿಷ್ಟುತಿಗಳ ಹೆಸರುಗಳನ್ನೂ ಅವುಗಳ ಪರ್ಯಾಯಕ್ರಮದಲ್ಲಿ ಪಠಿಸುವ ಋಕ್ಸಂಖ್ಯೆಯ ರೀತಿಯನ್ನೂ ವಿವರಿಸುತ್ತೇನೆ. ಅವುಗಳ ಕ್ರಮವು ಈ ರೀತಿ ಇದೆ—

I　ತ್ರಿವೃತ್ಸ್ತೋಮಕ್ಕೆ—

(೧) ಉದ್ಯತೀ (೨) ಪರಿವರ್ತಿನೀ (೩) ಕುಲಾಯಿನೀ ಎಂದು ಮೂರು ವಿಷ್ಟುತಿಗಳಿರುವುವು.

(೧) ಉದ್ಯತೀ ಎಂಬ ವಿಷ್ಟುತಿಯಲ್ಲಿ—

ಪ್ರಥಮಪರ್ಯಾಯ—೧, ೨, ೩ ನೆಯ ಋಕ್ಕುಗಳು
ದ್ವಿತೀಯಪರ್ಯಾಯ—೧, ೨, ೩ ,,
ತೃತೀಯಪರ್ಯಾಯ—೧, ೨, ೩ ,,

(೨) ಪರಿವರ್ತಿನೀ ಎಂಬ ವಿಷ್ಟುತಿಯಲ್ಲಿ ,,

ಪ್ರಥಮಪರ್ಯಾಯ—೩, ೨, ೧ ನೆಯ ಋಕ್ಕುಗಳು
ದ್ವಿತೀಯಪರ್ಯಾಯ—೩, ೨, ೧ ,,
ತೃತೀಯಪರ್ಯಾಯ—೩, ೨, ೧ ,,

ಈ ಎರಡು ವಿಷ್ಟುತಿಗಳಲ್ಲಿ ಮೂರು ಪರ್ಯಾಯಗಳೂ ಒಂದೇ ಸಮನಾಗಿರುವುವು. ವ್ಯತ್ಯಾಸವಿಲ್ಲ.

(೩) ಕುಲಾಯಿನೀ ಎಂಬ ವಿಷ್ಟುತಿಯಲ್ಲಿ
ಪ್ರಥಮಪರ್ಯಾಯ—೧, ೨, ೩ ನೆಯ ಋಕ್ಕುಗಳು
ದ್ವಿತೀಯಪರ್ಯಾಯ—೨, ೩, ೧ ,,
ತೃತೀಯಪರ್ಯಾಯ—೩, ೧, ೨ ,,

II ಪಂಚದಶಸ್ತೋಮ—

(೧) ಪಂಚಪಂಚನೀ (೨) ಉದ್ಯತೀ ಪ್ರಥಮಾ (೩) ಉದ್ಯತೀ ದ್ವಿತೀಯಾ ಎಂದು ಮೂರು ವಿಷ್ಟುತಿಗಳು.

(೧) ಒಂದನೆಯ ಪಂಚಪಂಚನೀ ಎಂಬ ವಿಷ್ಟುತಿಯಲ್ಲಿ—
ಪ್ರಥಮಪರ್ಯಾಯ—೧, ೧, ೧, ೨, ೩ ನೆಯ ಋಕ್ಕುಗಳು
ದ್ವಿತೀಯಪರ್ಯಾಯ—೧, ೨, ೨, ೨, ೩ ,,
ತೃತೀಯಪರ್ಯಾಯ—೧, ೨, ೩, ೩, ೩ ,,

ಇದು ಪಂಚಪಂಚನೀ ಎಂಬ ವಿಷ್ಟುತಿಯ ಪಠನಕ್ರಮವು.

(೨) ಎರಡನೆಯ ಉದ್ಯತೀಪ್ರಥಮಾ ಎಂಬ ವಿಷ್ಟುತಿಯ ಕ್ರಮವು—
ಪ್ರಥಮಪರ್ಯಾಯ—೧, ೧, ೧, ೨, ೩ ,,
ದ್ವಿತೀಯಪರ್ಯಾಯ—೧, ೨, ೩ ,,
ತೃತೀಯಪರ್ಯಾಯ—೧, ೨, ೨, ೨, ೩, ೩, ೩ ,,

(೩) ಮೂರನೆಯ ಉದ್ಯತೀದ್ವಿತೀಯಾ ಎಂಬ ವಿಷ್ಟುತಿಯ ಕ್ರಮವು—
ಪ್ರಥಮಪರ್ಯಾಯ—೧, ೨, ೩ ,,
ದ್ವಿತೀಯಪರ್ಯಾಯ—೧, ೨, ೨, ೨, ೩ ,,
ತೃತೀಯಪರ್ಯಾಯ—೧, ೧, ೧, ೨, ೩, ೩, ೩ ,,

ಇವು ಪಂಚದಶಸ್ತೋಮದ ಮೂರು ವಿಷ್ಟುತಿಗಳ ಕ್ರಮವು.

III ಸಪ್ತದಶಸ್ತೋಮ—

(೧) ದಶಸಪ್ತಾನಾಮಿಕಾ ಪ್ರಥಮಾ (೨) ದಶಸಪ್ತಾನಾಮಿಕಾ ದ್ವಿತೀಯಾ (೩) ಸಪ್ತಾಸ್ಥಿತಾ ಪ್ರಥಮಾ (೪) ಸಪ್ತಾಸ್ಥಿತಾ ದ್ವಿತೀಯಾ (೫) ಅನಾಮಿಕಾ (೬) ಉದ್ಯತೀ (೭) ಭಸ್ತ್ರಾ ಎಂದು ಏಳು ವಿಷ್ಟುತಿಗಳು. ಅವುಗಳ ಕ್ರಮವು—

(೧) ದಶಸಪ್ತಾನಾಮಿಕಾ ಪ್ರಥಮಾ ಎಂಬ ವಿಷ್ಟುತಿಯಲ್ಲಿ,

ಪ್ರಥಮಪರ್ಯಾಯ—೧, ೧, ೧, ೩, ೩	ನೆಯ ಋಕ್ಕುಗಳು
ದ್ವಿತೀಯಪರ್ಯಾಯ—೧, ೩, ೩, ೩, ೩,	,,
ತೃತೀಯಪರ್ಯಾಯ—೧, ೩, ೩, ೩, ೩, ೩, ೩	,,

(೨) ದಶಸಪ್ತಾನಾಮಿಕಾ ದ್ವಿತೀಯಾ ಎಂಬ ವಿಷ್ಟುತಿಯಲ್ಲಿ

ಪ್ರಥಮಪರ್ಯಾಯ—೧, ೧, ೧, ೩, ೩	,,
ದ್ವಿತೀಯಪರ್ಯಾಯ—೧, ೩, ೩, ೩, ೩	,,
ತೃತೀಯಪರ್ಯಾಯ—೧, ೧, ೧, ೩, ೩, ೩, ೩	,,

(೩) ಸಪ್ತಾಸ್ಥಿತಾ ಪ್ರಥಮಾ ಎಂಬ ವಿಷ್ಟುತಿಯಲ್ಲಿ,

ಪ್ರಥಮಪರ್ಯಾಯ—೧, ೧, ೧, ೩, ೩, ೩, ೩	,,
ದ್ವಿತೀಯಪರ್ಯಾಯ—೧, ೩, ೩	,,
ತೃತೀಯಪರ್ಯಾಯ—೧, ೩, ೩, ೩, ೩, ೩, ೩	,,

(೪) ಸಪ್ತಾಸ್ಥಿತಾ ದ್ವಿತೀಯಾ ಎಂಬ ವಿಷ್ಟುತಿಯಲ್ಲಿ,

ಪ್ರಥಮಪರ್ಯಾಯ—೧, ೧, ೧, ೩, ೩, ೩, ೩	,,
ದ್ವಿತೀಯಪರ್ಯಾಯ—೧, ೩, ೩	,,
ತೃತೀಯಪರ್ಯಾಯ—೧, ೧, ೧, ೩, ೩, ೩, ೩	,,

(೫) ಅನಾಮಿಕಾ ಎಂಬ ವಿಷ್ಟುತಿಯಲ್ಲಿ,

ಪ್ರಥಮಪರ್ಯಾಯ—೧, ೧, ೧, ೩, ೩	
ದ್ವಿತೀಯಪರ್ಯಾಯ—೧, ೩, ೩	
ತೃತೀಯಪರ್ಯಾಯ—೧, ೧, ೧, ೩, ೩, ೩, ೩, ೩, ೩	,,

(೬) ಉದ್ಯತೀ ಎಂಬ ವಿಷ್ಟುತಿಯಲ್ಲಿ,

ಪ್ರಥಮಪರ್ಯಾಯ—೧, ೩, ೩,	,,
ದ್ವಿತೀಯಪರ್ಯಾಯ—೧, ೩, ೩, ೩, ೩	,,
ತೃತೀಯಪರ್ಯಾಯ—೧, ೧, ೧, ೩, ೩, ೩, ೩, ೩, ೩	,,

(೭) ಭಸ್ತ್ರಾ ಎಂಬ ವಿಷ್ಟುತಿಯಲ್ಲಿ,

ಪ್ರಥಮಪರ್ಯಾಯ—೧, ೧, ೧, ೩, ೩, ೩, ೩	,,
ದ್ವಿತೀಯಪರ್ಯಾಯ—೧, ೩, ೩, ೩, ೩,	,,
ತೃತೀಯಪರ್ಯಾಯ—೧, ೩, ೩, ೩, ೩,	,,

1V ಏಳವಿಂಶಸ್ತೋತ್ರಮಃ---

(೧) ಸಪ್ತಸಪ್ತಿನೀ (೨) ಉದ್ಯತೀ (೩) ಪ್ರತಿಷ್ಟುತಿಃ (೪) ಸೂರ್ಯಾ ಎಂದು ನಾಲ್ಕು ವಿಷ್ಟುತಿಗಳು

(೧) ಸಪ್ತಸಪ್ತಿನೀ ಎಂಬ ವಿಷ್ಟುತಿಯಲ್ಲಿ

ಪ್ರಥಮಪರ್ಯಾಯ---೧, ೧, ೧, ೨, ೨, ೨, ೩	ನೆಯ ಋಕ್ಕುಗಳು
ದ್ವಿತೀಯಪರ್ಯಾಯ----೧, ೨, ೨, ೨, ೩, ೩, ೩,	,,
ತೃತೀಯಪರ್ಯಾಯ---೧, ೧, ೧, ೨, ೩, ೩, ೩,	,,

(೨) ಉದ್ಯತೀ ಎಂಬ ವಿಷ್ಟುತಿಯಲ್ಲಿ

ಪ್ರಥಮಪರ್ಯಾಯ----೧, ೧, ೧. ೨, ೩,	,,
ದ್ವಿತೀಯಪರ್ಯಾಯ---೧, ೨, ೨, ೨, ೩, ೩, ೩,	,,
ತೃತೀಯಪರ್ಯಾಯ---೧, ೧, ೧, ೨, ೨, ೨, ೩, ೩, ೩,	,,

(೩) ಪರಿಷ್ಟುತಿ ಎಂಬ ವಿಷ್ಟುತಿಯಲ್ಲಿ ,,

ಪ್ರಥಮಪರ್ಯಾಯ ----೧, ೧, ೧, ೨, ೨, ೨, ೩, ೩, ೩,	,,
ದ್ವಿತೀಯಪರ್ಯಾಯ—೧, ೨, ೨, ೨, ೩,	,,
ತೃತೀಯಪರ್ಯಾಯ----೧, ೧, ೧, ೨, ೩, ೩, ೩,	,,

(೪) ಸೂರ್ಯಾ ಎಂಬ ವಿಷ್ಟುತಿಯಲ್ಲಿ

ಪ್ರಥಮಪರ್ಯಾಯ---೧, ೧, ೧, ೨, ೨, ೨, ೩, ೩, ೩,	,,
ದ್ವಿತೀಯಪರ್ಯಾಯ---೧, ೨, ೩,	,,
ತೃತೀಯಪರ್ಯಾಯ----೧, ೧, ೧, ೨, ೨, ೨, ೩, ೩, ೩,	,,

V ತ್ರಿಣವಸ್ತೋತ್ರಮಃ--

(೧) ಪ್ರತಿಷ್ಠಿತಾ (೨) ಉದ್ಯತೀ ಎಂದು ಎರಡು ವಿಷ್ಟುತಿಗಳು

(೧) ಪ್ರತಿಷ್ಠಿತಾ ಎಂಬ ವಿಷ್ಟುತಿಯಲ್ಲಿ

ಪ್ರಥಮಪರ್ಯಾಯ---೧, ೧, ೧, ೨. ೨, ೨, ೨, ೨, ೩,	,,
ದ್ವಿತೀಯಪರ್ಯಾಯ---೧, ೨, ೨, ೨, ೩, ೩, ೩, ೩, ೩,	,,
ತೃತೀಯಪರ್ಯಾಯ----೧, ೧, ೧, ೧, ೧, ೨, ೩, ೩, ೩,	,,

(೨) ಉದ್ಯತೀ ಎಂಬ ವಿಷ್ಟುತಿಯಲ್ಲಿ

ಪ್ರಥಮಪರ್ಯಾಯ---೧, ೧, ೧, ೨, ೨, ೨, ೩,	,,
ದ್ವಿತೀಯಪರ್ಯಾಯ----೧, ೨, ೨, ೨, ೩, ೩, ೩, ೩, ೩,	,,
ತೃತೀಯಪರ್ಯಾಯ---೧, ೧, ೧, ೧, ೧, ೨, ೨, ೨, ೩, ೩, ೩,	,,

VI ತ್ರಯಸ್ತ್ರಿಂಶಸ್ತೋಮಃ---

(೧) ಸಮತ್ರ್ಯಂಶಾ (೨) ನೇದೀಯಸ್ಸಂಕ್ರಮಾ (೩) ಉದ್ಯತೀ (೪) ಪ್ರತ್ಯವರೋಹಿಣೀ (೫) ಅಂತಿಮಾ ಎಂದು ಐದು ವಿಷ್ಟುತಿಗಳು

(೧) ಸಮತ್ರ್ಯಂಶಾ ಎಂಬ ವಿಷ್ಟುತಿಯಲ್ಲಿ

ಪ್ರಥಮಪರ್ಯಾಯ---೧, ೧, ೧, ೩, ೨, ೨, ೨, ೨, ೨, ೨, ೩, ,,
ದ್ವಿತೀಯಪರ್ಯಾಯ---೧, ೩, ೩, ೩, ೩, ೩, ೩, ೩, ೩, ೩, ೩. ,,
ತೃತೀಯಪರ್ಯಾಯ----೧, ೧, ೧, ೧, ೧, ೧, ೧, ೨, ೩, ೩, ೩, ,,

(೨) ನೇದೀಯಸ್ಸಂಕ್ರಮಾ ಎಂಬ ವಿಷ್ಟುತಿಯಲ್ಲಿ

ಪ್ರಥಮಪರ್ಯಾಯ----೧, ೧, ೧, ೨, ೨, ೨, ೨, ೨, ೩, ೩, ೩, ,,
ದ್ವಿತೀಯಪರ್ಯಾಯ—೧, ೧, ೧, ೨, ೨, ೨, ೩, ೩, ೩, ೩, ೩, ,,
ತೃತೀಯಪರ್ಯಾಯ—೧, ೧, ೧, ೧, ೧, ೨! ೨, ೨, ೩, ೩. ೩, ,,

(೩) ಉದ್ಯತೀ ಎಂಬ ವಿಷ್ಟುತಿಯಲ್ಲಿ,

ಪ್ರಥಮ ಪರ್ಯಾಯ—೧, ೧, ೧, ೨- ೨, ೨, ೨, ೨, ೩, ,,
ದ್ವಿತೀಯ ಪರ್ಯಾಯ—೧, ೨, ೨, ೨, ೩, ೩, ೩, ೩, ೩, ೩, ೩ ,,
ತೃತೀಯ ಪರ್ಯಾಯ—೧, ೧, ೧, ೧, ೧, ೧, ೧, ೨, ೨, ೨,
೩, ೩, ೩, ,,

(೪) ಪ್ರತ್ಯವರೋಹಿಣೀ ಎಂಬ ವಿಷ್ಟುತಿಯಲ್ಲಿ,

ಪ್ರಥಮ ಪರ್ಯಾಯ—೧, ೧, ೧, ೨, ೨, ೨, ೨, ೨, ೩, ೩. ೩, ೩ ,,
ದ್ವಿತೀಯಪರ್ಯಾಯ....೧, ೧, ೧, ೧, ೧, ೨, ೨, ೨, ೩, ೩, ೩ ,,
ತೃತೀಯಪರ್ಯಾಯ—೧, ೧, ೧, ೨, ೨, ೨, ೩, ೩, ೩ ,,

(೫) ಅಂತಿಮಾ ಎಂಬ ವಿಷ್ಟುತಿಯಲ್ಲಿ,

ಪ್ರಥಮಪರ್ಯಾಯ---೧, ೧, ೧, ೨, ೨, ೨, ೨, ೨, ೨. ೨, ೩,
೩, ೩, ೩, ೩, ,,
ದ್ವಿತೀಯಪರ್ಯಾಯ---೧, ೧, ೧, ೧, ೧, ೨, ೨, ೨, ೩, ೩, ೩, ,,
ತೃತೀಯಪರ್ಯಾಯ---೧, ೧, ೧, ೨, ೩, ೩, ೩, ,,

VII ಚತುರ್ವಿಂಶಸ್ತೋಮಃ---

ಈ ಸ್ತೋಮದಲ್ಲಿ ಒಂದೇ ವಿಷ್ಟುತಿ ಇರುವುದು
ಪ್ರಥಮಪರ್ಯಾಯ---೧, ೧, ೧, ೨, ೨, ೨, ೨, ೩, ,,
ದ್ವಿತೀಯಪರ್ಯಾಯ---೧, ೨, ೨, ೨, ೩, ೩, ೩, ೩, ,,
ತೃತೀಯಪರ್ಯಾಯ---೧, ೧, ೧, ೧, ೨, ೩, ೩, ೩, ,,

VIII ಚತುಶ್ಚತ್ವಾರಿಂಶಸ್ತೋಮಃ--

(೧) ಪ್ರಥಮಾ (೨) ನಿರ್ಮಧ್ಯಾ (೩) ತೃತೀಯಾ ಎಂದು ಮೂರು ವಿಷ್ಟುತಿಗಳು

(೧) ಪ್ರಥಮಾ ಎಂಬ ವಿಷ್ಟುತಿಯಲ್ಲಿ

ಪ್ರಥಮಪರ್ಯಾಯ---೧, ೧, ೧, ೨, ೨, ೨, ೨, ೨, ೨, ೨, ೨, ೨, ೨, ೩, ,,

ದ್ವಿತೀಯಪರ್ಯಾಯ---೧, ೨, ೨, ೨, ೩,೩,೩,೩,೩,೩,೩,೩,೩,೩, ,,

ತೃತೀಯಪರ್ಯಾಯ----೧, ೧, ೧, ೧, ೧, ೧, ೧, ೧, ೧, ೧, ೧, ೨, ೩, ೩, ,,

(೨) ನಿರ್ಮಧ್ಯಾ ಎಂಬ ವಿಷ್ಟುತಿಯಲ್ಲಿ

ಪ್ರಥಮಪರ್ಯಾಯ----೧, ೧, ೧, ೨, ೨, ೨, ೨, ೨, ೨, ೨, ೨, ೨, ೨, ೩, ,,

ದ್ವಿತೀಯಪರ್ಯಾಯ----೧, ೨, ೨, ೨, ೩, ೩, ೩, ೩, ೩, ೩, ೩, ೩, ೩, ೩, ,,

ತೃತೀಯಪರ್ಯಾಯ---೧, ೧, ೧, ೧, ೧, ೧, ೧, ೧, ೧, ೧, ೧, ೨, ೨, ೩, ೩, ,,

(೩) ತೃತೀಯಾ ಎಂಬ ವಿಷ್ಟುತಿಯಲ್ಲಿ

ಪ್ರಥಮಪರ್ಯಾಯ----೧, ೧, ೧, ೨, ೨, ೨, ೨, ೨, ೨, ೨, ೨, ೨, ೨, ೩, ,,

ದ್ವಿತೀಯಪರ್ಯಾಯ----೧, ೨, ೨, ೨, ೩, ೩, ೩, ೩, ೩, ೩, ೩, ೩, ೩, ೩, ,,

ತೃತೀಯಪರ್ಯಾಯ---೧, ೧, ೧, ೧, ೧, ೧, ೧, ೧, ೧, ೧, ೨, ೨, ೩, ೩, ೩, ,,

IX ಅಷ್ಟಾಚತ್ವಾರಿಂಶಸ್ತೋಮಃ--

(೧) ಪ್ರಥಮಾ (೨) ನೇದೀಯಸ್ಸಂಕ್ರಮಾ ಎಂದು ಎರಡು ವಿಷ್ಟುತಿಗಳು

(೧) ಪ್ರಥಮಾ ಎಂಬ ವಿಷ್ಟುತಿಯಲ್ಲಿ

ಪ್ರಥಮಪರ್ಯಾಯ---೧, ೧, ೧, ೩, ೩, ೩, ೨, ೨, ೨, ೨, ೨, ೨, ೨, ೨, ೨, ೨, ,,

ದ್ವಿತೀಯಪರ್ಯಾಯ----೧, ೧, ೧, ೨, ೨, ೨, ೩, ೩, ೩, ೩, ೩, ೩, ೩, ೩, ೩, ೩-

ತೃತೀಯಪರ್ಯಾಯ----೧, ೧, ೧, ೧, ೧, ೧, ೧, ೧, ೧, ೧, ೨, ೨, ೨, ೩, ೩, ೩.

(೨)　ನೇಡೀಯಸ್ಸಂಕ್ರಮಣ ಎಂಬ ವಿಷ್ಟುತಿಯಲ್ಲಿ

ಪ್ರಥಮಪರ್ಯಾಯ----೧, ೧, ೧, ೩, ೩, ೩, ೩, ೩, ೩, ೩,
೩, ೩, ೨, ೨, ೨, ೩ ,,

ದ್ವಿತೀಯಪರ್ಯಾಯ----೧, ೩, ೩, ೨, ೩, ೩, ೩, ೩, ೩, ೩, ೩,
೩, ೩, ೩, ೩, ೩, ,,

ತೃತೀಯಪರ್ಯಾಯ----೧, ೧, ೧, ೧, ೧, ೧, ೧, ೧, ೧, ೧,
೧, ೧, ೨, ೩, ೩, ೩, ,,

ಸ್ತೋಮಗಳು, ಅವುಗಳ ವಿಷ್ಟುತಿಗಳು, ಅವುಗಳಲ್ಲಿರುವ ಋಕ್ಸಂಖ್ಯೆಯನ್ನು ಪಠಿಸುವ ಕ್ರಮ ಮೊದಲಾದ ವಿಷಯಗಳು ಸಾಮವೇದದ ತಾಂಡ್ಯಬ್ರಾಹ್ಮಣದಲ್ಲಿ ವಿಸ್ತಾರವಾಗಿ ವಿವರಿಸಲ್ಪಟ್ಟಿವೆ.

ಈ ವಿಧವಾದ ಸ್ತೋಮಗಳಲ್ಲಿ ತ್ರಿವೃತ್ಸ್ತೋಮವು ಪ್ರಾತಸ್ಸವನದ ಕಾಲದಲ್ಲಿಯೂ ಪಂಚದಶಸ್ತೋಮವು ಮಾಧ್ಯಂದಿನ ಸವನದಲ್ಲಿಯೂ, ಸಪ್ತದಶಸ್ತೋಮವು ತೃತೀಯಸವನದಲ್ಲಿಯೂ ಪಠಿಸಲ್ಪಡುವವು. ಅಭಿಪ್ಲವ ಷಡಹ ಮೊದಲಾದ ಯಾಗಗಳಲ್ಲಿ ಪ್ರಾತಸ್ಸವನಾದಿ ಕರ್ಮಗಳಲ್ಲಿ ಗಾನಮಾಡಲ್ಪಡಬೇಕಾದ ತ್ರಿವೃದಾದಿಸ್ತೋಮಗಳನ್ನು ಗಾನಮಾಡಿದನಂತರ ಅವುಗಳ ಜತೆಗೆ ಕೆಲವು ಸಂದರ್ಭಗಳಲ್ಲಿ ಉತ್ತರಸ್ತೋಮಗಳೆಂದು ಹೇಳಲ್ಪಡುವ ಇನ್ನೂ ಕೆಲವು ಸ್ತೋಮಗಳನ್ನು ಗಾನಮಾಡುವುದು ಪದ್ಧತಿಯು. ಈ ರೀತಿಯಾಗಿ ಅಧಿಕಸ್ತೋಮಗಳನ್ನು ಗಾನಮಾಡುವುದಕ್ಕೆ ಸ್ತೋಮವೃದ್ಧಿಯೆಂದು ಹೆಸರು. ಈ ಸ್ತೋಮವೃದ್ಧಿಯೆ ಗಾನಗಳನ್ನು ಉದ್ಗಾತೃವೊದಲಾದವರು ಮಾಡಿದಮೇಲೆ ಅದಕ್ಕೆ ಅನುಸಾರವಾಗಿ ಎಂದರೆ ಸ್ತೋಮವೃದ್ಧಿಗೆ ಸಮನಾಗುವಂತೆ ಕೆಲವು ಅಧಿಕ ಸಂಖ್ಯೆಯ ಋಕ್ಕುಗಳನ್ನು ಹೋತೃವರ್ಗದ ವೈತ್ರಾವರುಣ, ಬ್ರಾಹ್ಮಣಾಚ್ಛಂಸಿ, ಅಚ್ಛಾವಾಕ ಎಂಬ ಋತ್ವಿಜರು ಪಠಿಸಬೇಕಾಗಿರುವುದು. ಎಂದರೆ ತ್ರಿವೃದಾದಿಸ್ತೋಮಗಳಲ್ಲಿ ಗಾನಮಾಡಬೇಕಾದ ಕ್ಲೃಪ್ತಸಂಖ್ಯೆಯ ಮಂತ್ರಗಳನ್ನು ಹೇಳಿದ ಮೇಲೆ ಉದ್ಗಾತೃ ಮೊದಲಾದ ಸಾಮುಕರು ಇನ್ನೂ ಕೆಲವು ಹೆಚ್ಚು ಮಂತ್ರಗಳನ್ನು ಗಾನಮಾಡುವ ಸಂದರ್ಭದಲ್ಲಿ ಅದಕ್ಕೆ ಸಮನಾಗಿ ಹೊಂದಿಕೊಳ್ಳುವಂತೆ ಅಷ್ಟೇಸಂಖ್ಯೆಯ ಋಕ್ಕುಗಳನ್ನು ಹೋತೃವರ್ಗದ ವೈತ್ರಾವರುಣಾದಿಗಳು ಪಠಿಸಬೇಕು ಹೀಗೆ ಕ್ಲೃಪ್ತಸಂಖ್ಯೆಗಿಂತ ಹೆಚ್ಚಾಗಿ ಗಾನಮಾಡುವ ಸಾಮುಮಂತ್ರಗಳಿಗೆ ಅಥವಾ ಸ್ತೋಮಗಳಿಗೆ **ಸ್ತೋಮವೃದ್ಧಿ** ಎಂದೂ ಅದರಂತೆ ಕ್ಲೃಪ್ತಸಂಖ್ಯೆಗಿಂತ ಹೆಚ್ಚಾಗಿ ಪಠಿಸುವ ಋಕ್ಕುಗಳಿಗೆ **ಆವಾಪ** ವೆಂದೂ ಹೆಸರು. ಪ್ರಸಕ್ತಸಂದರ್ಭದಲ್ಲಿ ಈ ಆವಾಪಋಕ್ಕುಗಳ ಪಠನೆಗಾಗಿ **ಸುರೂಪಕೃತ್ನು-ಮೂತಯೇ** ಎಂದು ಮೊದಲಾಗುವ ಆರು ಸೂಕ್ತಗಳನ್ನು (ಋ. ಸಂ. ೧-೪ ರಿಂದ ಋ. ಸಂ. ೧-೯ ರವರೆಗಿನ ಸೂಕ್ತಗಳು) ಪಠಿಸುವರು. ಎಂದರೆ ಆವಾಪಕ್ಕಾಗಿ ಆರು ಸೂಕ್ತಗಳನ್ನೂ ಪೂರ್ತಿಯಾಗಿ ಪಠಿಸಬೇಕೆಂದಲ್ಲ. ಉದ್ಗಾತೃ ಮೊದಲಾದ ಸಾಮುಕರು ಎಷ್ಟು ಋಕ್ಕುಗಳನ್ನು ಗಾನಮಾಡುವರೋ ಅಷ್ಟೇ ಋಕ್ಕುಗಳನ್ನು (ಸುರೂಪಕೃತ್ನು ಮೊದಲಾದ ಮೇಲೆ ಹೇಳಿದ ಸೂಕ್ತಗಳಲ್ಲಿರುವ ಅಷ್ಟೇ ಋಕ್ಕುಗಳನ್ನು) ಪಠಿಸಬೇಕೆಂದರ್ಥವು ಈರೀತಿ ಆವಾಪಕ್ರಮದಲ್ಲಿಯೂ ಎಂದರೆ ಅಧಿಕಋಕ್ಕುಗಳನ್ನು ಪಠಿಸುವುದಕ್ಕೂ ಒಂದು ಕ್ರಮವಿರುವುದು. ಅವನ್ನು ಆಶ್ವಲಾಯನರು ತಮ್ಮ ಶ್ರೌತಸೂತ್ರದಲ್ಲಿ ಈರೀತಿ ಹೇಳಿರುವರು—

ನಿತ್ಯಾಧಿಕಂ ಸ್ತೋಮಕರಣಾತ್ಪಂಚ ಸಪ್ತದಶೇ ನವೈಕವಿಂಶೇ ದ್ವಾದಶ ಚತು-
ರ್ವಿಂಶೇ ಪಂಚದಶ ತ್ರಿಣವ ಏಕವಿಂಶತಿಂ ತ್ರಯಸ್ತ್ರಿಂಶೇ ದ್ವಾತ್ರಿಂಶತಂ ಚತು-
ಶ್ಚತ್ವಾರಿಂಶೇ ಷಟ್ತ್ರಿಂಶತಮಷ್ಟಾಚತ್ವಾರಿಂಶೇ ॥ ಇತಿ ॥

ಎಂದರೆ ಸಪ್ತದಶಸ್ತೋಮವನ್ನು ಪಠಿಸುವ ಸಂದರ್ಭದಲ್ಲಿ ಆವಾಪವು ಎಂದರೆ ಅಧಿಕಋಕ್ಕುಗಳ ಪಠನೆಯು ಐದು

ಋಕ್ಕುಗಳಾಗಿರಬೇಕು. ಏಕವಿಂಶಸ್ತೋಮಕ್ಕೆ ಆವಾಪವು ಒಂಭತ್ತು ಋಕ್ಕುಗಳು; ಚತುರ್ವಿಂಶಸ್ತೋಮಕ್ಕೆ ಹನ್ನೆರಡು ಋಕ್ಕುಗಳು; ತ್ರಿಣವಸ್ತೋಮಕ್ಕೆ ಹದಿನೈದು ಋಕ್ಕುಗಳು; ತ್ರಯಸ್ತ್ರಿಂಶಸ್ತೋಮಕ್ಕೆ ಇಪ್ಪತ್ತೊಂದು ಋಕ್ಕುಗಳು; ಚತುಶ್ಚತ್ವಾರಿಂಶಸ್ತೋಮಕ್ಕೆ ಮೂವತ್ತೆರಡು ಋಕ್ಕುಗಳು; ಅಷ್ಟಾಚತ್ವಾರಿಂಶಸ್ತೋಮಕ್ಕೆ ಮೂವತ್ತಾರು ಋಕ್ಕುಗಳು,'' ಎಂದು. ಈ ಕ್ರಮವನ್ನೇ ಭಾಷ್ಯಕಾರರು ಸುರೂಪಕೃತ್ನುಮೂತಯೇ ಎಂಬ ಸೂಕ್ತದ ವಿನಿಯೋಗವನ್ನು ಹೇಳುವಾಗ— '' ಅಭಿಪ್ಲವಷಡಹೇ ಬ್ರಾಹ್ಮಣಾಚ್ಛಂಸಿನಃ ಪ್ರಾತಸ್ಸವನೇ ಸ್ತೋಮ ವೃದ್ಧಾವಾವಾಪಾರ್ಥಾನಿ ಸುರೂಪಕೃತ್ನುಮೂತಯ ಇತ್ಯಾದೀನಿ ಷಟ್ ಸೂಕ್ತಾನಿ'' ಎಂಬ ವಾಕ್ಯದಿಂದ ವಿವರಿಸಿರುವರು.

ಸುರೂಪಕೃತ್ನುಂ, ಆ ತ್ವೇತಾ, ಯುಂಜಂತಿ ಬ್ರಧ್ನಂ ಎಂಬ ಮೂರು ಸೂಕ್ತಗಳು ಮಹಾವ್ರತದಲ್ಲಿ ವಿನಿಯೋಗಿಸಲ್ಪಡುತ್ತವೆ. ಈ ವಿಷಯದಲ್ಲಿ ಆಶ್ವಲಾಯನರು ಈರೀತಿ ಹೇಳಿರುವರು—

> ಏಕಾಹೋಽತಿರಾತ್ರ ಆದೌ ಪ್ರಾಯಣೀಯೇ ವಿಷೋಂತ್ಯ ಉದಯನೀಯೋ ವ್ಯಷ್ಟೋ ಮಧ್ಯೇಽಹೀನೇಷು ವೈಶ್ವಾನರ ಏಷ ಏವ ತಾವಂತರೇಣ ವ್ಯೂಳ್ಹೋ ದಶರಾತ್ರ ಏಷಾ ಪ್ರಕೃತಿಃ ಸತ್ರಾಣಾಂ ತತ್ರಾವಾಪಸ್ಥಾನಮೂರ್ಧ್ವಂ ದಶರಾತ್ರಾದೇಕಾಹಾರ್ಥೇ ಮಹಾವ್ರತಂ ಸ್ಯಾದ್ದಶರಾತ್ರಾದಿತರೇಷಾಮಹ್ನಾಂ ದ್ವ್ಯಹಾರ್ಥೇ ಗೋಆಯುಷೀ ತ್ರ್ಯಹಾರ್ಥೇ ತ್ರಿಕದ್ರುಕಾ ಅಭಿಪ್ಲವತ್ರ್ಯಹಂ ಪೂರ್ವಂ ತ್ರಿಕದ್ರುಕಾ ಇತ್ಯಾಚಕ್ಷತೇ। ಚತುರಹಾರ್ಥೇ ತ್ರಿಕದ್ರುಕಾ ಮಹಾವ್ರತಂ ಚ ಪಂಚಾಹಾರ್ಥೇಽಭಿಪ್ಲವಪಂಚಾಡ ಉತ್ತಮಸ್ಯ ತು ಷಷ್ಠಾತ್ಪೃತೀಯಂ ಸವನಂ ಷಳಹಾರ್ಥೇಽಭಿಪ್ಲವಃ ಷಳಹ ಏವಂನ್ಯಾಯಾ ಆವಾಪಾ ಷಳಹಾಂತಾಃ ಪುನಃ ಪುನಃ ಪೂರ್ಣಾಃ ಪೂರ್ಣಾಶ್ಚ ಷಳಹಸ್ತಂಶ್ರತಾಮೇವ ಗಚ್ಛತೀತಿ ॥

ಇದರ ಅರ್ಥವು—

ಮಹಾವ್ರತವೆಂದರೆ— ಹನ್ನೆರಡು ದಿನಗಳಲ್ಲಿ ಮಾಡಬೇಕಾದ ಸೋಮಯಾಗದಲ್ಲಿ ಒಂದು ದಿನ ಮಹಾವ್ರತವೆಂಬ ಯಾಗವನ್ನು ಮಾಡಿ ಆ ಸೋಮಯಾಗವನ್ನೇ ಹದಿಮೂರು ದಿನಗಳವರೆಗೆ ನಡೆಯುವಂತೆ ಮಾಡುವುದಕ್ಕಾಗಿ ಮಹಾವ್ರತವನ್ನು ಹನ್ನೆರಡು ದಿನಗಳ ಮಧ್ಯದಲ್ಲಿ ಎಂದರೆ ಹತ್ತನೆಯ ದಿನದಿಂದ ಹನ್ನೆರಡನೆಯ ದಿನದ ಮಧ್ಯಭಾಗದಲ್ಲಿ ಇದನ್ನು ಒಂದುದಿವಸ ಮಾಡುವರು. ಪ್ರಕೃತಿರೂಪವಾದ ಎಂದರೆ ಮೂಲಭೂತವಾದ ಸೋಮಯಾಗವು ಹನ್ನೆರಡು ದಿನಗಳ ವರೆಗೆ ಮಾತ್ರ ನಡೆಯುವುದಾಗಿರುವುದು. ಮಹಾವ್ರತವನ್ನು ಮಧ್ಯದಲ್ಲಿ ಒಂದುದಿನ ಮಾಡಿದರೆ ಆ ಯಾಗವು ಹದಿಮೂರುದಿನಗಳ ಯಾಗವಾಗುವುದು. ಹನ್ನೆರಡು ದಿನಗಳವರೆಗೆ ಮಾಡಬೇಕಾದ ಯಾಗಗಳಲ್ಲಿ ಮೊದಲು ಮತ್ತು ಕೊನೆಯ ದಿನಗಳಲ್ಲಿ ಮಾಡುವ ಯಾಗವು, ಅತಿರಾತ್ರಯಾಗವೆಂದಿರುವುದು. ಅತಿರಾತ್ರಯಾಗವೆಂದರೆ—ಸಪ್ತಸೋಮಯಾಗಸಂಸ್ಥೆಗಳಲ್ಲಿ ಒಂದು ಪ್ರಭೇದವು. ಮಧ್ಯದ ಹತ್ತುದಿನಗಳಿಗೆ ವ್ಯೂಳ್ಹವೆಂದು ಹೆಸರು. ಹನ್ನೆರಡು ದಿನಗಳ ಯಾಗವು ಹದಿನಾಲ್ಕು ದಿನಗಳವರೆಗೆ ನಡೆಯಬೇಕಾದ್ದಲ್ಲಿ ಹನ್ನೆರಡು ದಿನಗಳ ಯಾಗಕ್ಕೆ ಗೋಆಯುಷೀ ಎಂಬ ಎರಡು ದಿನಗಳ ಯಾಗವನ್ನು ಸೇರಿಸಿ ಮೊದಲನೆಯ ದಿನವಾದಮೇಲೆ ಹತ್ತನೆಯ ದಿನದೊಳಗಾಗಿ ಮಾಡುವರು. ಆದುದರಿಂದ ಆದು ಹದಿನಾಲ್ಕು ದಿನಗಳ ಯಾಗವಾಗುವುದು. ಇದರಂತೆಯೇ ಹದಿನೈದುದಿನಗಳ ಯಾಗವಾಗುವುದಕ್ಕಾಗಿ ಹನ್ನೆರಡರ ಜತೆಗೆ

ತ್ರಿಕದ್ರುಕವೆಂಬ ಮೂರುದಿನಗಳ ಯಾಗವನ್ನು ಸೇರಿಸುವರು. ತ್ರಿಕದ್ರುಕವೆಂದರೆ ಅಭಿಪ್ಲವಷಡಹವೆಂಬ ಹಿಂದೆ ಹೇಳಿದ ಯಾಗದ ಮೊದಲಮೂರು ದಿನಗಳು. ಹದಿನಾರುದಿನಗಳ ಯಾಗಕ್ಕೆ ತ್ರಿಕದ್ರುಕ ಮತ್ತು ಮಹಾವ್ರತವನ್ನು ಸೇರಿಸುವರು. ಹದಿನೇಳು ದಿನಗಳ ಯಾಗಕ್ಕೆ ಅಭಿಪ್ಲವಷಡಹದ ಮೊದಲ ಐದು ದಿನಗಳನ್ನು ಸೇರಿಸುವರು. ಹದಿನೆಂಟುದಿನಗಳ ಯಾಗಕ್ಕೆ ಅಭಿಪ್ಲವಷಡಹದ ಆರುದಿನಗಳನ್ನು ಸೇರಿಸುವರು. ಇದೆ ಕ್ರಮದಂತೆಯೇ ಮುಂದಕ್ಕೂ ಗಣನೆಮಾಡಬೇಕು. ಕೆಳಗೆ ಕೊಟ್ಟಿರುವ ವಿವರಣೆಯಿಂದ ಇದು ಸ್ಪಷ್ಟವಾಗುವುದು.

ಪ್ರಕೃತಿಯಾಗವು ಮತ್ತು ಅದಕ್ಕೆ ಸೇರಬೇಕಾದ ಭಾಗ (Original Secrifice)		ವಿಕೃತಿಯಾಗವು ಮತ್ತು ದಿನಸಂಖ್ಯೆ (Altered Secrifice)
ಸೋಮಯಾಗ....		ದ್ವಾದಶಾಹಸೋಮಯಾಗ (೧೨-ದಿನಗಳು)
ಸೋಮಯಾಗ+ಮಹಾವ್ರತ	=	ತ್ರಯೋದಶಾಹ (೧೩-ದಿನಗಳು)
ಸೋಮಯಾಗ+ಗೋಆಯುಷೀ	=	ಚತುರ್ದಶಾಹ (೧೪-ದಿನಗಳು)
ಸೋಮಯಾಗ+ತ್ರಿಕದ್ರುಕ (ಅಭಿಪ್ಲವ ಷಡಹದ ಮೊದಲ ಮೂರು ದಿನಗಳು)	=	ಪಂಚದಶಾಹ (೧೫-ದಿನಗಳು)
ಸೋಮಯಾಗ+ತ್ರಿಕದ್ರುಕ+ಮಹಾವ್ರತ	=	ಷೋಡಶಾಹ (ಅಥವಾ ಷೋಡಶೀ ೧೬ ದಿನಗಳು)
ಸೋಮಯಾಗ+ಅಭಿಪ್ಲವಷಡಹದಲ್ಲಿ ಮೊದಲ ಐದು ದಿನಗಳು	=	ಸಪ್ತದಶಾಹ (೧೭-ದಿನಗಳು)
ಸೋಮಯಾಗ+ಅಭಿಪ್ಲವಷಡಹಪೂರ್ತಿ ಎಂದರೆ ಆರು ದಿನಗಳು	=	ಅಷ್ಟಾದಶಾಹ (೧೮-ದಿನಗಳು)

ಇತ್ಯಾದಿ. ಇಲ್ಲಿ ದ್ವಾದಶಾಹ, ತ್ರಯೋದಶಾಹ ಎನ್ನುವುದಕ್ಕೆ ಬದಲಾಗಿ ದ್ವಾದಶರಾತ್ರ, ತ್ರಯೋದಶರಾತ್ರ ಎಂದು ಹೇಳುವುದು ರೂಢಿಯು. ಸೂಕ್ತ ಅಥವಾ ಮಂತ್ರಗಳ ವಿನಿಯೋಗವನ್ನು ಹೇಳುವಾಗ ಭಾಷ್ಯಕಾರರು ಹೇಳಿರುವ ಅಭಿಪ್ಲವಷಡಹ, ಪೃಷ್ಠ್ಯಷಡಹ, ಅತಿರಾತ್ರ, ಮಹಾವ್ರತ ಮೊದಲಾದ ಯಾಗವಿಶೇಷಗಳ ಹೆಸರುಗಳನ್ನೂ, ಯಜ್ಞಗಳಲ್ಲಿ ಉಪಯೋಗಿಸಲ್ಪಡುವ ಸ್ತೋಮ, ವಿಷ್ಟುತಿ, ಪರ್ಯಾಯ ಮೊದಲಾದ ಪಾರಿಭಾಷಿಕ ಶಬ್ದಗಳ ವಿವರಣೆಯನ್ನೂ ವಾಚಕರ ಅವಗಾಹನೆಗಾಗಿ ಇದುವರೆಗೆ ಸೂಕ್ಷ್ಮವಾಗಿ ವಿವರಿಸಿದ್ದಾಯಿತು. ಗ್ರಂಥ ವಿಸ್ತರಭಯದಿಂದ ವಿಸ್ತಾರವಾಗಿ ವಿವರಿಸಲು ಇಲ್ಲಿ ಸಾಧ್ಯವಿಲ್ಲ ಯಜ್ಞಯಾಗಾದಿಗಳಿಗೆ ಸಂಬಂಧಪಟ್ಟ ಸಮಸ್ತ ವಿಷಯಗಳನ್ನು ವಿಸ್ತಾರವಾಗಿ ಯಜುರ್ವೇದಾನುವಾದದಲ್ಲಿ ವಿವರಿಸುವೆವು. ಅವುಗಳನ್ನು ಅಲ್ಲಿ ನೋಡಿ ತಿಳಿದುಕೊಳ್ಳಬಹುದು. ಈಗ ಐದನೆಯ ಸೂಕ್ತದ ಅರ್ಥಾನುವಾದವನ್ನು ಪ್ರಾರಂಭಿಸುವೆವು.

॥ ಓಂ ॥

ಸೂಕ್ತ—೫

॥ ಮಂಡಲ—೧ ॥ ಅನುವಾಕ—೨ ॥ ಸೂಕ್ತ—೫ ॥
॥ ಅಷ್ಟಕ —೧ ॥ ಅಧ್ಯಾಯ—೧ ॥ ವರ್ಗ— ೯, ೧೦ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೧–೧೦ ॥
॥ ಋಷಿಃ—ಮಧುಚ್ಛಂದಾ ವೈಶ್ವಾಮಿತ್ರಃ ॥
॥ ದೇವತಾ— ಇಂದ್ರಃ ॥
॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಆ ತ್ವೇತಾ ನಿ ಷೀ॑ದತೇಂ॒ದ್ರಮ॒ಭಿ ಪ್ರ ಗಾ॑ಯತ ।
ಸಖಾ॑ಯಃ॒ ಸ್ತೋ॑ಮ॒ವಾಹ॑ಸಃ ॥ ೧ ॥

॥ ಪದಪಾಠಃ ॥

ಆ । ತು । ಆ । ಇ॒ತ॒ । ನಿ । ಸೀ॒ದ॒ತ॒ । ಇಂ॒ದ್ರ॑ಂ । ಅ॒ಭಿ । ಪ್ರ । ಗಾ॒ಯ॒ತ॒ ॥
ಸಖಾ॑ಯಃ । ಸ್ತೋ॑ಮ ऽವಾಹಸಃ ॥ ೧ ॥

॥ ಸಾಯಣಭಾಷ್ಯಂ ॥

ತುಶಬ್ದಃ ಕ್ಷಿಪ್ರಾರ್ಥೋ ನಿಪಾತಃ । ದ್ಯಾಭ್ಯಾಮಾಙ್ಭ್ಯಾಮನ್ವೇತುಮಿತೇಶಬ್ದೋ॒ಽಭ್ಯಸನೀಯಃ । ಹೇ ಸಖಾಯ ಋತ್ವಿಜಃ ಕ್ಷಿಪ್ರಮಸ್ಮಿನ್ಕರ್ಮಣ್ಯಾಗಚ್ಛತಾಗಚ್ಛತ । ಆದರಾರ್ಥೋ॒ಽಭ್ಯಾಸಃ । ಆಗತ್ಯ ಚೇನ್ನಿಷೀದತ । ಉಪವಿಶತ । ಉಪವಿಶ್ಯ ಚೇಂದ್ರಮಭಿ ಪ್ರ ಗಾಯತ । ಸರ್ವತಃ ಪ್ರಕರ್ಷೇಣ ಸ್ತುತ । ಕೀದೃಶಾಃ ಸಖಾಯಃ । ಸ್ತೋಮವಾಹಸಃ । ತ್ರಿವೃತ್ಪಂಚದಶಾದಿಸ್ತೋಮಾನಸ್ಮಿನ್ಕರ್ಮಣಿ ವಹಂತಿ ಪ್ರಾಪಯಂತೀತಿ ॥ ಆ ತು ಆ ನಿಷಾತಶ್ಚಾದಾದ್ಯುದಾತ್ತಾಃ । ಇತ । ಇಙ್ ಗತೌ । ದ್ವ್ಯಚೋ॒ತಸ್ತಿಙಃ । ಪಾ. ೬-೩-೧೩೫ । ಇತಿ ಸಂಹಿತಾಯಾಂ ದೀರ್ಘತ್ವಂ । ನಿ । ನಿಷಾತಶ್ಚಾದಾದ್ಯುದಾತ್ತಃ । ಸೀದತ । ಷಾಢ್ಯೋಢ್ಯಾಸ್ಯಾಮ್ಯಾದಾಙ್ದ್ಯಸೀತ್ಯಾದಿನಾ । ಪಾ. ೬-೩-೬೮ । ಸದೇಃ ಸೀದಾದೇಶಃ । ಸದೇರಪ್ರತೇಃ ।

ಪಾ. ೮-೩-೬೬ । ಇತಿ ಸಂಹಿತಾಯಾಂ ಷತ್ವಂ । ಅಭಿ । ಉಪಸರ್ಗಾಶ್ಚಾಭಿವರ್ಜಮಿತಿ ವಚನಾತ್ಪ್ರಾತಿಪದಿಕಾಂತೋದಾತ್ತತ್ವಂ। ಸ್ತೋಮವಾಹಸಃ । ಅರ್ತಿಸ್ತುಸುಹುಸೃಧೃಕ್ಷಿಕ್ಷುಭಾಯಾವಾಸದಿಯಕ್ಷಿಣೇಭ್ಯೋ ಮನ್ । ಉ. ೧-೧೫೯ । ಇತಿ ಸ್ತೌತೇರ್ಮನ್ಪ್ರತ್ಯಯಾಂತಃ ಸ್ತೋಮಶಬ್ದೋ ನಿತ್ತ್ವಾದಾದ್ಯುದಾತ್ತಃ । ಸ್ತೋಮಂ ವಹಂತೀತಿ ಸ್ತೋಮವಾಹಸಃ । ವಹಿಹಾಧಾಭ್ಯೋ ಭ್ಯಶ್ಚಂದಸಿ । ಉ. ೪-೨೨೦ । ಇತ್ಯಸುನ್ಪ್ರತ್ಯಯಃ । ತತ್ರ ಣಿದಿತ್ಯನುವೃತ್ತೇರತ ಉಪಧಾಯಾಃ । ಪಾ. ೭-೨-೧೧೬ । ಇತ್ಯುಪಧಾಯಾ ವೃದ್ಧಿಃ । ಕೃದುತ್ತರಪದಪ್ರಕೃತಿಸ್ವರತ್ವೇ ಪ್ರಾಪ್ತೇ ಗತಿಕಾರಕಯೋರಪಿ ಪೂರ್ವಪದಪ್ರಕೃತಿಸ್ವರತ್ವಂ ಚ । ಉ. ೪-೨೨೬ । ಇತ್ಯಾದಿಕಸೂತ್ರಾತ್ಸಮಾಸ ಆದ್ಯುದಾತ್ತಃ ॥

॥ ಪ್ರತಿಪದಾರ್ಥ ॥

ಸ್ತೋಮವಾಹಸಃ—ಸ್ತೋತ್ರಗಳನ್ನು ವಹಿಸುವ ಎಂದರೆ ಸ್ತೋತ್ರಗಳಿಂದ ಹೊಗಳುವ । (ಹೇ) ಸಖಾಯಃ-ಎಲೈ ಸ್ನೇಹಿತರಾದ (ಋತ್ವಿಜರೇ) । ತು-ಜಾಗ್ರತೆಯಾಗಿ । ಆ ಆ ಇತ-ಬನ್ನಿ ಬನ್ನಿ (ಬಂದು) ನಿ ಸೀದತ-ಕೂತುಕೊಳ್ಳಿರಿ । ಇಂದ್ರಂ-ಇಂದ್ರನನ್ನು । ಅಭಿ ಪ್ರ ಗಾಯತ-ಸೋತ್ರಗಳಿಂದ ಚೆನ್ನಾಗಿ ಗಾನ ಮಾಡಿರಿ ॥

॥ ಭಾವಾರ್ಥ ॥

ಎಲೈ ಸ್ನೇಹಿತರಾದ ಋತ್ವಿಜರೇ, ನೀವು ಇಂದ್ರನನ್ನು ಸ್ತೋತ್ರಾದಿಗಳಿಂದ ಸಂತೋಷಪಡಿಸುವವರಾದುದರಿಂದ ಈ ಯಜ್ಞವನ್ನು ಮಾಡುವ ಸ್ಥಳಕ್ಕೆ ಬೇಗನೆ ಬನ್ನಿ. ಬಂದು ನಿಮ್ಮ ಸ್ಥಳದಲ್ಲಿ ಕುಳಿತುಕೊಂಡು ಇಂದ್ರನನ್ನು ತ್ರಿವೃದಾದಿಸ್ತೋಮ (ಸ್ತೋತ್ರ) ಗಳಿಂದ ಚೆನ್ನಾಗಿ ಗಾನರೂಪವಾಗಿ ಸ್ತೋತ್ರಮಾಡಿರಿ.

English Translation.

O friends, (priests), come hither quickly offering praises, sit down and sing repeatedly the praises of Indra.

॥ ವಿಶೇಷವಿಷಯಗಳು ॥

ಆ-ಆ ಎಂಬ ಶಬ್ದವು ಆದರದಿಂದ ಆಹ್ವಾನಮಾಡುವುದಕ್ಕಾಗಿ ಎರಡಾವರ್ತಿ ಪಠಿತವಾಗಿರುವುದೆಂದು ಭಾಷ್ಯಕಾರರು ಹೇಳಿರುವರು. ಇಂತಹ ಪ್ರಯೋಗಗಳು ಋಗ್ವೇದದಲ್ಲಿ ಅನೇಕಕಡೆ ಇವೆ. ಉದಾಹರಣೆಗಾಗಿ—

ಆಹಾನಿ । ಗೃಧ್ರಾಃ । ಪರಿ । ಆ । ವಃ । ಆ । ಅಗುಃ । ಇಮಾಂ । ಧಿಯಂ । ವಾರ್ಕಾರ್ಯಾಂ । ಚ । ದೇವೀಂ ॥ (ಋ. ಸಂ. ೧-೪೪-೪)

ವಾಯೋ ಇತಿ । ಆ । ಚಂದ್ರೇಣ । ರಥಸಾ । ಆ । ಗತಂ । ಇಂದ್ರಃ । ಚ । ರಾಧಸಾ । ಆ । ಗತಂ ॥ (ಋ. ಸಂ. ೧-೧೩೫-೪)

ಋತಸ್ತವಾನಃ । ಪ್ರತಿಷ್ಟಭ್ಯ । ಅನೃತಾ । ಪುನಃ । ಆ । ಅತಃ । ಆ । ತಸ್ಥುಃ । ಕವಯಃ । ಮಹಃ । ಪಥಃ ॥ (ಋ. ಸಂ. ೨-೨೪-೭)

ಆ । ಯಾಹಿ । ಪೂರ್ವೀಃ । ಅತಿ । ಚರ್ಷಣೀಃ । ಆ । ಅರ್ಯಃ । ಪುಷ್ಟಿಷಃ । ಉಪ । ನಃ । ಹರಿಭ್ಯಾಂ ॥ (ಋ. ಸಂ. ೩-೪೩-೨)

ಆ । ತು । ನಃ । ಇಂದ್ರ । ವೃತ್ರಹನ್ । ಅಸ್ಮಾಕಂ । ಅರ್ಧಂ । ಆ । ಗಹಿ ॥ (ಋ.ಸಂ. ೪-೩೨-೧)

ಆ । ಗ್ರಾವಭಿಃ । ಅಹನ್ಯೇಭಿಃ । ಅಕ್ತುಭಿಃ । ವರಿಷ್ಠಂ । ವಜ್ರಂ । ಆ । ಜಿಘರ್ತಿ । ಮಾಯಿನಿ ॥ (ಋ. ಸಂ. ೫-೪೪-೩)

ಇತ್ಯಾದಿ. ಸ್ಕಂದಸ್ವಾಮಿಯು ಈ ವಿಚಾರದಲ್ಲಿ—" **ಆ ಆ ಇತ್ಯುಪಸರ್ಗಾಭ್ಯಾಸಾತ್ ತತ್ಸಂಬಂಧಿನ ಇತೇತ್ಯೇತಸ್ಯಾಖ್ಯಾತಸ್ಯಾಭ್ಯಾಸಃ। ಆಖ್ಯಾತಾಭ್ಯಾಸೇ ಚ ಲೋಕೇ ಗಮ್ಯತಾಂ ಗಮ್ಯತಾಮಿತ್ಯಾದೌ ಅವಶ್ಯ ಕರ್ತವ್ಯತಾ ಪ್ರತೀಯತೇ। ಏವಮತ್ರಾಪಿ ಕ್ಷಿಪ್ರಮೇತ । ಕ್ಷಿಪ್ರಮವಶ್ಯಮಾಗಚ್ಛೇತೇತ್ಯರ್ಥಃ ॥** " ಎಂದರೆ **ಆ** ಎಂಬ ಉಪಸರ್ಗವನ್ನು ಎರಡಾವರ್ತಿ ಪಠನಮಾಡಿರುವುದರಿಂದ ಅದಕ್ಕೆ ಸಂಬಂಧಪಟ್ಟ **ಇತೆ** ಎಂಬ ಕ್ರಿಯಾಪದವನ್ನು ಎರಡಾವರ್ತಿ ಪಠಿಸಿದಂತಾಯಿತು. ಕ್ರಿಯಾಪದವನ್ನು ಎರಡಾವರ್ತಿ ಪಠಿಸಿದರೆ, ಎಂದರೆ **ಗಮ್ಯತಾಂ ಗಮ್ಯತಾಂ** ಎಂದು ಎರಡಾವರ್ತಿ ಉಚ್ಚರಿಸಿದರೆ ಬೇಗನೆ ಅವಶ್ಯಕವಾಗಿ ಬಂದೇ ಬರಬೇಕೆಂಬ ಅರ್ಥವು ಭಾಸವಾಗುವುದು ಎಂದು ಹೇಳಿರುವರು. ಸಾಧಾರಣವಾಗಿ ಒಂದು ಶಬ್ದದ ಅರ್ಥವನ್ನು ಒತ್ತಿ ಹೇಳಬೇಕಾದರೆ ಅದನ್ನು ಎರಡಾವರ್ತಿ ಹೇಳುವುದು ಲೋಕವ್ಯವಹಾರದಲ್ಲಿ ರೂಢಿಯಿರುವುದು. ಇಲ್ಲಿಯೂ ಅದರಂತೆ ಎಂದು ಭಾವಿಸಬೇಕು.

ತು–ಈ ಶಬ್ದಕ್ಕೆ ಇಲ್ಲಿ, ಖಂಡಿತವಾಗಿ, ಅವಶ್ಯಕವಾಗಿ, ಬೇಗನೆ ಎಂದು ಅರ್ಥಮಾಡಬಹುದು.

ಇಂದ್ರೇಮಭಿ ಪ್ರ ಗಾಯತೆ–ಈ ಪಾದವು ಅನೇಕ ಋಕ್ಕುಗಳಲ್ಲಿ ಪುನಃ ಪಠಿತವಾಗಿರುವುದು.

ಪಾಂತಮಾ ವೋ ಅಂಧಸ ಇಂದ್ರೇಮಭಿ ಪ್ರ ಗಾಯತೆ । (ಋ. ಸಂ. ೮-೯೨-೧)

ಇತ್ಯಾದಿ.

ಸಖಾಯಃ—ಎಂದರೆ ಋತ್ವಿಜರು, ಉದ್ಗಾತೃ ಮುಂತಾದವರು. ಈ ಶಬ್ದದ ವಿವರಣೆಯನ್ನು ನಾವು ಹಿಂದೆಯೇ ಕೊಟ್ಟಿದೇವೆ.

ಸ್ತೋಮವಾಹಸಃ—ಸ್ತೋಮವೆಂದರೆ ಸ್ತೋತ್ರಮಾತ್ರವಲ್ಲ ಅದರ ವಿಸ್ತಾರವಾದ ವಿವರಣೆಯನ್ನು ಈ ಸೂಕ್ತದ ಪೀಠಿಕೆಯಲ್ಲಿ ಕೊಟ್ಟಿದೇವೆ. ಸ್ತೋಮವನ್ನು ಎಂದರೆ ಸ್ತೋತ್ರವನ್ನು ಇಂದ್ರನಿಗೆ ಒಯ್ಯುವವರು ಎಂದರೆ ಇಂದ್ರನಿಗೆ ಗೊತ್ತಾಗುವಂತೆ ಅವನ ಗುಣಗಳನ್ನು ಗಾನಮಾಡುವವರು ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಆ–ತು–ಆ, ಈ ಮೂರೂ ನಿಪಾತವಾದ್ದರಿಂದ **ನಿಪಾತಾ ಆದ್ಯುದಾತ್ತಾಃ** (ಫಾ. ಸೂ. ೮೦) ಎಂಬುದರಿಂದ ಆದ್ಯುದಾತ್ತ. ಇತ-**ಲೋಟ್** ಮಧ್ಯಮಪುರುಷ ಬಹುವಚನ-ಥ-ಪ್ರತ್ಯಯ-**ಲೋಟೋಲಜ್ವತ್** (ಪಾಸೂ ೩-೪-೮೫) ಎಂಬುದರಿಂದಲಜ್ವದ್ಭಾವ **ತಸ್ಥಸ್ಥಮಿ ಪಾಂತಾಂತಂತಾಮಃ** (ಪಾ.ಸೂ. ೩-೪-೧೧) ಇದರಿಂದ **ಥ**ಗೆ

ತ-ಆದೇಶ, ಮಧ್ಯದಲ್ಲಿ ವಿಕರಣ, ಶಪ್-ಅದಕ್ಕೆ ಲುಕ್-ತ-ಎಂಬುದು ಆಪಿತ್ತಾದ ಸಾರ್ವಧಾತುಕ ಆದಕಾರಣ ಸಾರ್ವಧಾತುಕಮಪಿತ್ (ಪಾಸೂ ೧.೨-೪) ಎಂಬುದರಿಂದ ಙಿತ್ತಾಗುವುದು. ಕ್ಷಿತಿಚಿ (ಪಾಸೂ ೧-೧-೫) ಎಂಬುದರಿಂದ ಗುಣಕ್ಕೆ ನಿಷೇಧ. ಇತ ಎಂದು ರೂಪವಾಗುವುದು. ಇಲ್ಲಿ ಧಾತೋಃ (ಪಾಸೂ ೬-೧.೧೬೨) ಎಂಬುದರಿಂದ ಧಾತು ಇಕಾರಕ್ಕೆ ಅಂತೋದಾತ್ತವೂ-ಆದ್ಯುದಾತ್ತಶ್ಚ (ಪಾಸೂ ೩-೧-೩) ಎಂಬುದರಿಂದ ತ-ಪ್ರತ್ಯಯಕ್ಕೆ ಆದ್ಯುದಾತ್ತವೂ ಪ್ರಾಪ್ತವಾದರೆ ಸತಿಶಿಷ್ಟವಾದುದರಿಂದ ಪ್ರತ್ಯಯ ಸ್ವರವು ಪ್ರಬಲವಾದ ಕಾರಣ ಆದೇ ಬಂದು ಅನುದಾತ್ತಂ ಪದಮೇಕವರ್ಜಂ (ಪಾಸೂ ೬-೧-೧೫೦) ಎಂಬ ಶೇಷಾನುದಾತ್ತಸ್ವರದಿಂದ ಇ ಯು ಅನುದಾತ್ತವಾಗಬೇಕಾಯಿತು. ಅವರಿ ಇತ ಎಂಬ ತಿಙಂತಪದವು ಆತಿಙಂತವಾದ ಪದದ ಮುಂದೆ ಇರುವುದರಿಂದ ತಿಙ್ಙತಿಙಃ (ಪಾ. ಸೂ. ೮-೧-೨೮) ಎಂಬುದರಿಂದ ಸರ್ವಾನುದಾತ್ತ ಬರುವುದು. ಸಂಹಿತಾಕಾಲದಲ್ಲಿ ಪೂರ್ವದಲ್ಲಿರುವ ಉದಾತ್ತವಾದ ಆಕಾರಕ್ಕೂ ಅನುದಾತ್ತವಾದ ಇತ ಶಬ್ದದ ಇಕಾರಕ್ಕೂ ಗುಣಸಂಧಿಯಿಂದ ಏ ಎಂಬುದೊಂದೇ ಆದೇಶ ಬರುವುದು. ಅದು ಏಕಾದೇಶ ಉದಾತ್ತೇನೋದಾತ್ತಃ (ಪಾಸೂ ೮-೨-೫) ಎಂಬುದರಿಂದ ಉದಾತ್ತವು. ತ-ಪ್ರತ್ಯಯದ ಆಕಾರಕ್ಕೆ ನಿ-ಎಂಬ ಉದಾತ್ತವು ಪರದಲ್ಲಿರುವುದರಿಂದ ಉದಾತ್ತಸ್ವರಿತಪರಸ್ಯ ಸನ್ನತರಃ (ಪಾಸೂ ೮-೨-೪೦) ಎಂಬುದರಿಂದ ಅನುದಾತ್ತತರವು ಬರುವುದು. ಸಂಹಿತಾಕಾಲದಲ್ಲಿ 'ದ್ವ್ಯಚೋತಸ್ತಿಙಃ' (ಪಾ. ಸೂ. ೬-೩-೧೩೫) ಋಕ್ಕಿನಲ್ಲಿ ಎರಡು ಅಚ್ಚುಗಳುಳ್ಳ ತಿಙಂತದ ಹ್ರಸ್ವಾಕಾರಕ್ಕೆ ದೀರ್ಘ ಬರುವುದು- ಎಂಬುದರಿಂದ ದೀರ್ಘ ಬಂದರೆ ಇತಾ-ಎಂದಾಗುತ್ತೆ. ಈ ಮಂತ್ರದಲ್ಲಿ ಪ್ರಯುಕ್ತವಾಗಿರುವ ಎರಡು ಆಕಾರಗಳೂ ಉಪಸರ್ಗಗಳು. ಉಪಸರ್ಗಗಳಿಗೆ ಕ್ರಿಯಾಪದದೊಂದಿಗೆ ಅನ್ವಯವನ್ನು ಹೇಳಬೇಕು. ಆ ಕ್ರಿಯಾಪದವು ಸಂಭವವಿದ್ದು ಯೋಗ್ಯತೆಯೂ ಇದ್ದರೆ ಸವಿಾಪದಲ್ಲಿರುವುದರಿಂದ ಪ್ರಕೃತ ವಾಕ್ಯದಲ್ಲಿರುವುದೇ ಆಗುವುದು. ಇಲ್ಲಿ-ಇಂತಹುದು ಇತ ಎಂಬುದು. ಇದು ಸಕೃತ್ (ಒಂದಾವರ್ತಿ) ಉಚ್ಚರಿತವಾಗಿದೆ. ಇದ್ದರಿಂದ ಇದಕ್ಕೆ ಒಂದೇ ಆವರ್ತಿ ಅನ್ವಯವು ಬರುವುದು. ಏಕೆಂಗರೆ ಶಬ್ದಗಳಿಗೆ ವಿರಮ್ಯ ವ್ಯಾಪಾರವನ್ನು ಒಪ್ಪುವುದಿಲ್ಲ- ಅಂದರೆ ಒಂದುಶಬ್ದವು ಒಂದು ಕಡೆ ಅನ್ವಯಿಸಿ ವಿರಾಮವನ್ನು ಹೊಂದಿದಮೇಲೆ ಆಕಾಂಕ್ಷೆ ಇಲ್ಲದೇ ಇರುವುದರಿಂದ ಮತೊಂದುಕಡೆ ಅನ್ವಯಿಸಲಾರದು. ಸಕೃದುಚ್ಚರಿತಃ ಶಬ್ದಃಶಬ್ದಃಸಕೃದೇವಾರ್ಥಂ ಗಮಯತಿ ಪ್ರತ್ಯರ್ಥಂಶಬ್ದನಿವೇಶಃ ಎಂಬ ನ್ಯಾಯವೂ ಇದೇ ಅಭಿಪ್ರಾಯವನ್ನು ಹೇಳುವುದು. ಅಂತು ಪ್ರಕೃತ ಒಂದಾವರ್ತಿ ಉಚ್ಚರಿಸಿರುವ ಇತ ಎಂಬುದು ಒಂದು ಆ ಎಂಬ ಉಪಸರ್ಗದೊಡನೆ ಅನ್ವಯಿಸುವುದು. ಒಂದೇ ಕಾಲದಲ್ಲಿ ಎರಡು ಆ ಎಂಬುದರೊಂದಿಗೆ ಅನ್ವಯಿಸಲಾರದು ಆದ್ದರಿಂದ ಒಂದು ಆಕಾರದೊಂದಿಗೆ ಇತ ಎಂಬುದು ಅನ್ವಯಿಸಿದ ಮೇಲೆ ಅದು ನಿರಾಕಾಂಕ್ಷವಾದುದರಿಂದ ಇನ್ನೊಂದರೊಂದಿಗೆ ಅನ್ವಯಬರುವುದಿಲ್ಲ. ಹೀಗಾದರೆ ಇನ್ನೊಂದು ಆ ಎಂಬುದು ಅನ್ವಯಿಸದೇ ಹೋಗುವುದು. ಆದರ ಅನ್ವಯಕ್ಕಾಗಿ ಯೋಗ್ಯವಾದ ಕ್ರಿಯಾಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಅಂದಮೇಲೆ ಸ್ವತಂತ್ರವಾದ ಕ್ರಿಯಾಪದದ ಅಧ್ಯಾಹಾರ ಮಾಡಿಕೊಂಡರೆ ಗೌರವ ಬರುವುದು. ಸವಿಾಪದ ವಾಕ್ಯದಲ್ಲಿರುವುದಕ್ಕೆ ಆವೃತ್ತಿಯನ್ನು ಮಾಡಿ ಸಂಬಂಧವನ್ನು ಹೇಳಿದರೆ ಲಾಘವ ಬರುವುದು- ಆದ್ದರಿಂದ ಪ್ರಕೃತ ವಾಕ್ಯದಲ್ಲಿರುವ ಇತ ಶಬ್ದವನ್ನು ಆವರ್ತಿ ಮಾಡಿ ಎರಡು ಆಕಾರದೊಂದಿಗೆ ಅನ್ವಯಿಸುವುದು ಯುಕ್ತವಾಗಿರುವುದು ; ಆದುದರಿಂದಲೇ ಮಿಾಮಾಂಸಾ ಶಾಸ್ತ್ರದಲ್ಲಿ ಸಂತೇವಾತಃ ಪ್ರಣೇತನಗಚ್ಛತಾಂ-ಸಮಂಗಾನಿಯಜತ್ರೈಃ-ಸಂಯಜ್ಞಾಪತಿರಾಶಿಷಾ ಎಂಬಲ್ಲಿ ಮೂರನೆಯ ವಾಕ್ಯದಲ್ಲಿ ಸಂ ಎಂಬ ಉಪಸರ್ಗದ ಅನ್ವಯಕ್ಕಾಗಿ ಯೋಗ್ಯವಾದ ಕ್ರಿಯಾಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು ಎಂದು ಪೂರ್ವಪಕ್ಷವನ್ನು ಮಾಡಿ ಮೊದಲನೆಯ ವಾಕ್ಯದಲ್ಲಿರುವ ಗಚ್ಛತಾಂ ಎಂಬುದಕ್ಕೆ ಆವೃತ್ತಿಯನ್ನು ಮಾಡಿ ಅದನ್ನೇ ಸಂಬಂಧಿಸಿಕೊಳ್ಳಬೇಕೆಂದು ಸಿದ್ಧಾಂತವನ್ನು ಮಾಡಿರುವರು. ನಿ-ನಿಪಾತವಾದ್ದರಿಂದ ಆದ್ಯುದಾತ್ತ.

' ಸೀದತೆ-ಷದ್ಲೃವಿಶರಣಗತ್ಯವಸಾದನೇಷು' **ಧಾತ್ವಾದೇಃಷಸಃಸಃ** (ಪಾ ಸೂ. ೬-೧-೬೪) ಎಂಬುದರಿಂದ ಷಕಾರಕ್ಕೆ ಸಕಾರ ಬಂದು ಸದ್ ಆಗುವುದು. ಈ ಧಾತುವಿನ ಮುಂದೆ ಲೋಟ್ ಮಧ್ಯಮಪುರುಷ ಬಹುವಚನ ಥ ಪ್ರತ್ಯಯ, ಅದಕ್ಕೆ ತ ಆದೇಶ. ಮಧ್ಯದಲ್ಲಿ ಶಪ್ ಇದು ಪರದಲ್ಲಿರುವಾಗ **ಪಾಘ್ರಾಧ್ಮಾಸ್ಥಾ-ಮ್ನಾದಾಣ್ದೃಶ್ಯರ್ತಿಸರ್ತಿಶದಸದಾಂಪಿಬಜಿಘ್ರಧಮತಿಷ್ಠಮನಯೆಚ್ಛಪಶ್ಯರ್ಚ್ಛಧಾತೀಯೆ** ಸೀದಾಃ (ಪಾ. ಸೂ. ೭-೩-೭೮) ಇತ್ಸಂಜ್ಞಕ ಶಕಾರಾದಿ ಪ್ರತ್ಯಯಪರವಾಗಿರುವಾಗ ಪಾ ಮೊದಲಾದ ಧಾತುಗಳಿಗೆ ಪಿಬ ಮೊದಲಾದ ಆದೇಶಗಳು ಕ್ರಮವಾಗಿ ಬರುವುವು. ಸದ್ (ಷದ್ಲೃ-ವಿಶರಣಗತ್ಯವಸಾದನೇಷು) ಎಂಬ ಧಾತುವಿಗೆ ಸೀದ-ಎಂಬ ಆದೇಶಬರುವುದು. ನಿ ಉಪಸರ್ಗವು ಸೇರಿದಾಗ್ಸಂಹಿತಾಕಾಲದಲ್ಲಿ **ಸದಿರಪ್ರತೇಃ** (ಪಾ. ಸೂ. ೮-೩-೬೬) ಪ್ರತಿಭಿನ್ನವಾದ ಉಪಸರ್ಗದ ಮುಂದಿರುವ ಸದ್ ಧಾತುವಿನ ಸಕಾರಕ್ಕೆ ಷಕಾರಬರುವುದು ಎಂಬುದರಿಂದ ಷಕಾರ ಬಂದರೆ 'ನಿಷೀದತ' ಎಂದಾಗುವುದು.

ಇಲ್ಲಿ ಧಾತುಸ್ವರದಿಂದ ಸೀಯ ಈ ಕಾರಕ್ಕೆ ಉದಾತ್ತ ಬಂದರೆ ಸತಿ ಶಿಷ್ಟವಾದ ತ ಪ್ರತ್ಯಯದ ಸ್ವರವು ಪ್ರಬಲವಾದ್ದರಿಂದ ಆದು ನಿಂತು ಶೇಷಾನುದಾತ್ತದಿಂದ ಸೀಯ ಈಕಾರ ಅನುದಾತ್ತವಾಗಬೇಕಾಗಿ ಬಂತು. ಆದರೆ ಇಲ್ಲಿ ತ ಎಂಬುದು ಶಪ್ ಎಂಬ ಅದುಪದೇಶಕ್ಕಿಂತಲೂ ಪರದಲ್ಲಿದೆ. ಆದ್ದರಿಂದ **ತಾಸ್ಯನುದಾತ್ತ್ಯಿದವದುಪದೇಶಾಲ್ಲಸಾರ್ವಧಾತುಕಮನುದಾತ್ತಮಹ್ನ್ವಬ್ಲೋಃ** (ಪಾ. ಸೂ. ೬-೧.೧೮೬) ಎಂಬುದರಿಂದ ತ ಎಂಬುದು ಅನುದಾತ್ತ. **ಅನುದಾತ್ತೌಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ಶಪ್ ಅನುದಾತ್ತ. ಅಂತು ಧಾತುಸ್ವರವೇ ನಿಲ್ಲಬೇಕಾಗಿ ಬಂತು. ಆದರೂ **ತಿಙ್ಶಿತಿಙಃ** ಎಂಬುದರಿಂದ ಸೀದತ ಎಂಬುದು ಸರ್ವಾನುದಾತ್ತವಾಗುವುದು. ಸಂಹಿತೆಯಲ್ಲಿ ನಿ ಎಂಬ ಉಪಸರ್ಗದ ಉದಾತ್ತವಾದ ಇಕಾರದ ಮುಂದೆ ಇರುವುದರಿಂದ ಸೀಯ ಈ ಕಾರವು **ಉದಾತ್ತಾದನುದಾತ್ತಸ್ಯಸ್ವರಿತಃ** ಎಂಬುದರಿಂದ ಸ್ವರಿತ. ಈ ಸ್ವರಿತದ ಮುಂದೆ ಇರುವ ದ-ತ ಎರಡಕ್ಕೂ 'ಸ್ವರಿತಾತ್ಸಂಹಿತಾಯಾಮನುದಾತ್ತಾನಾಂ, (ಪಾ. ಸೂ. ೧-೨-೩೯) ಸಂಹಿತೆಯಲ್ಲಿ ಸ್ವರಿತದ ಮುಂದೆ ಇರುವ ಅನುದಾತ್ತಗಳಿಗೆ ಏಕಶ್ರುತಿ (ಪ್ರಚಯ) ಬರುವುದು ಎಂಬುದರಿಂದ ಪ್ರಚಯ ಸ್ವರವಾಪ್ತವಾಯಿತು. ಆದರೆ ತ ಎಂಬುದರ ಆಕಾರಕ್ಕೂ ಮುಂದಿರುವ ಇಂದ್ರಶಬ್ದದ ಇಕಾರಕ್ಕೂ ಗುಣತ್ವ ಏಕಾದೇಶವಾಗಿ ಬರುವುದರಿಂದ ಏ ಆಗುವುದು. ಈ ಏ ಎಂಬುದು ಉದಾತ್ತ ಅನುದಾತ್ತಗಳೆರಡರ ಸ್ಥಾನದಲ್ಲಿ ಬಂದಿರುವುದರಿಂದ **ಏಕಾದೇಶ ಉದಾತ್ತೇನೋದಾತ್ತಃ** ಎಂಬುದರಿಂದ ಉದಾತ್ತ. ಈಗ ಉದಾತ್ತವಾದ ಈ ಏಕಾರವು ಪರದಲ್ಲಿರುವುದರಿಂದ ದ ಎಂಬುದರ ಆಕಾರವು **ಉದಾತ್ತಸ್ವರಿತಪರಸ್ಯಸನ್ನೆತರಃ** ಎಂಬುದರಿಂದ ಅನುದಾತ್ತತರ. ಮೂರನೆಯದು ಮೊದಲು ಹೇಳಿದಂತೆ ಉದಾತ್ತ. ಇಂದ್ರೆಂ-'ಇದಿಪರನ್ಯೈಶ್ವರ್ಯೇ' ಧಾತು ಇವರಮುಂದೆ ಔಣಾದಿಕ ರನ್ ಪ್ರತ್ಯಯ. ಧಾತುವು ಇದಿತ್ ಆದ್ದರಿಂದ **ಇದಿತೋನುನ್ಧಾತೋಃ** (ಪಾ.ಸೂ. ೭-೧-೫೮) ಇಕಾರೋತ್ಸಂಜ್ಞೆಯನ್ನುಹೊಂದಿರುವ ಧಾತುವಿನ ಅಂತ್ಯಸ್ವರದ ಮುಂದೆ ನ್ ಆಗಮ ಬರುವುದು ಎಂಬುದರಿಂದ ನ್ ಆಗಮಬಂದರೆ ಇನ್ದ್ರ ಎಂದಾಗುವು. ಪ್ರತ್ಯಯನಿತ್ ಆದ್ದರಿಂದ ನಿತ್ಸ್ವರದಿಂದ ಇನ್ದ್ರಶಬ್ದ ಆದ್ಯುದಾತ್ತ, ಶೇಷಾನುದಾತ್ತಸ್ವರದಿಂದ ಕೊನೆಯ ವರ್ಣವಾದ ಅಕಾರ ಅನುದಾತ್ತ. ಇದು ಉದಾತ್ತಕ್ಕಿಂತಲೂ ಪರದಲ್ಲಿರುವುದರಿಂದ ಸ್ವರಿತವಾಗುವುದು. ಇದರ ಮುಂದೆ ದ್ವಿತೀಯಾ ವಿಭಕ್ತಿ ಏಕವಚನ ಅಮ್ ಇದು ಅನುದಾತ್ತ **ಆಮಿಪೂರ್ವಃ** (ಪಾ. ಸೂ. ೬-೧-೧೦೭) ಎಂಬುದರಿಂದ ಅನುದಾತ್ತಗಳಾದ ಎರಡು ಅಕಾರಗಳ ಸ್ಥಾನದಲ್ಲಿ ಒಂದೇ ಅಕಾರ ಬರುವುದು. ಇದು ಅನುದಾತ್ತಗಳೆರಡರ ಸ್ಥಾನದಲ್ಲಿ ಬಂದಿರುವುದರಿಂದ ಸ್ಥಾನಿವದ್ಭಾವದಿಂದ ಅನುದಾತ್ತ. ಈ ಅನುದಾತ್ತವು ಉದಾತ್ತದ ಮುಂದೆ ಇರುವುದರಿಂದ ಸ್ವರಿತವಾಗುವುದು.

ಅಭಿ-ಉ ಎಂದು ಹೇಳಿರುವುದರಿಂದ ಆದ್ಯುದಾತ್ತ ಬರುವುದಿಲ್ಲ- ಇಲ್ಲಿ **ಆಂತೋದಾತ್ತಸ್ತ್ವಭೀತ್ಯಯಂ** ಎಂಬ ವಚನದಿಂದ **ಲೋಪೇ ಸೋಂತ ಉದಾತ್ತಃ** (ಫಿ ಸು. ೧) ಎಂಬ ಸೂತ್ರದಿಂದ **ಲೋ ಅಭಿ** ಎಂಬುದು ಅಂತೋದಾತ್ತ-

ಪ್ರ-ಇದು ನಿಪಾತ. ಆದ್ದರಿಂದ **ನಿಪಾತಾ ಆದ್ಯುದಾತ್ತಾಃ** (ಫಿ.ಸೂ. ೪೦) ಎಂಬುದರಿಂದ ಆದ್ಯುದಾತ್ತ ಅಥವಾ ಉಪಸರ್ಗವಾದ್ದರಿಂದ **ಉಪಸರ್ಗಾಶ್ಚಾಭಿವರ್ಜಂ**(ಫಿ.ಸೂ. ೮೧) ಎಂಬುದರಿಂದ ಆದ್ಯುದಾತ್ತ **ಗಾಯತ** 'ಗೈ ಶಬ್ದೇ' ಧಾತು. ಇದರ ಮುಂದೆ ಲೋಟ್ ಮಧ್ಯಮಪುರುಷ ಬಹುವಚನ ಥ ಪ್ರತ್ಯಯ, ಆದಕ್ಕೆ ತ ಆದೇಶ, ಶಪ್ ವಿಕರಣ, ಗೈ+ಅ+ತ. ಈಗ **ಏಚೋಯವಾಯಾವಃ** (ಪಾ. ಸೂ. ೬-೧-೭೮) ಎಂಬುದರಿಂದ ಏಗೆ ಆಯ್ ಆ ದೇಶ ಗಾಯತ ಎಂದು ರೂಪವಾಗುವುದು. ಇಲ್ಲಿ ಧಾತು ಸ್ವರದಿಂದ ಧಾತುವಿನ ಕೊನೆಯ ವರ್ಣ ಉದಾತ್ತ ತ ಎಂಬುದು ಪ್ರತ್ಯಯಸ್ವರದಿಂದ ಆದ್ಯುದಾತ್ತ. ಇದು ಸತಿಶಿಷ್ಟವಾದ್ದರಿಂದ ಪ್ರಬಲ. ಆದ್ದರಿಂದ **ಶೇಷಾನುದಾತ್ತ** ದಿಂದ ಧಾತುವಿನಕೊನೆಯ ವರ್ಣವೂ ಅನುದಾತ್ತ ಶಪ್ ಏತ್ತಾದ್ದರಿಂದ ಅನುದಾತ್ತವಾಗಬೇಕಾಗಿ ಬಂತು. ಆದರೆ **ಶಪ್ ಎಂಬ** ಅದುಸದೇಶದ ಮುಂದೆ ತ ಎಂಬ ಲ ಸ್ಥಾನಿಕವಾದ ಸಾರ್ವಧಾತುವಿಕರುವುದರಿಂದ **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಎಂಬುದರಿಂದ ತ ಅನುದಾತ್ತ. ಏವಂಚ ಧಾತುಸ್ವರವೇ ನಿಂತು ಗಾಯತ ಎಂಬುದು ಆದ್ಯುದಾತ್ತವಾಗಬೇಕಾಯಿತು. ಆದರೂ **ತಿಙ್ಶಿತಿಙಃ** ಎಂಬುದರಿಂದ ಇದು ಸರ್ವಾನುದಾತ್ತ. ಸಂಹಿತಾಕಾಲದಲ್ಲಿ ಪ್ರ ಎಂಬ ಉದಾತ್ತದ ಮುಂದೆ ಇರುವುದರಿಂದ ಗಾ ಎಂಬುದು ಸ್ವರಿತ. ಇದರ ಮುಂದಿರುವ **ವರ್ಣಗಳೆರಡೂ ಸ್ವರಿತಾತ್ಸಂಹಿತಾಯಾ** ಎಂಬುದರಿಂದ ಪ್ರಚಯ. **ಸ್ತೋಮಾನಾಹಸಃ-** **ಅರ್ತಿಸ್ತುಸುಹುಸೃಧ್ವಸ್ಪ್ನಸ್ಪಶ್ಕ್ಷು ಭಾ ಯಾವಾಹದಿಯಜ್ಞಿ ನೀಭ್ಯೋಮನ್**(ಉ.ಸೂ. ೧-೧೩೭)ಈ ಧಾತುಗಳ ಮುಂದೆ ಮನ್ ಪ್ರತ್ಯಯಬರುವುದು, ಎಂಬುದರಿಂದ ಸ್ತು (ಷ್ಟುಞ್ ಸ್ತುತೌ) ಧಾತುವಿನ ಮುಂದೆ ರ್ಮ ಪ್ರತ್ಯಯ ಬಂದರೆ- ಸ್ತೋಮಎಂದಾಗುವುದು ಮನ್ ಪ್ರತ್ಯಯವು ನಿತ್ತಾದ್ದರಿಂದ ನಿತ್ಸ್ವರ ಆದ್ಯುದಾತ್ತ ಬರುವುದು. ಸ್ತೋಮಂವಹಸ್ತೀತಿ (ತ್ರಿವೃತ್ ಮೊದಲಾದ ಸ್ತೋಮಗಳನ್ನು ಈ ಕರ್ಮದಲ್ಲಿ ಹೊಂದಿಸುವರು) ಎಂದು ವಿಗ್ರಹವು. **ವಹಿ ಹಾ ಧಾ ಇಜ್ಭ್ಯಶ್ಛಂದಸಿ** (ಉ. ಸೂ. ೪-೬೬೦) ಛಂದಸ್ಸಿನಲ್ಲಿ ಈ ಧಾತುಗಳ ಮುಂದೆ ಅಸುನ್ ಪ್ರತ್ಯಯ ಬರುವುದು ಅದು ಣಿತ್ತಾಗುವುದು ಎಂಬುದರಿಂದ ವಹಧಾತುವಿನ ಮುಂದೆ ಅಸುನ್ ಪ್ರತ್ಯಯ ಬಂದರೆ ಪ್ರತ್ಯಯವು ಣಿತ್ತಾದ್ದರಿಂದ **ಅತ ಉಪಧಾಯಾಃ** (ಪಾ ಸೂ. ೭-೩-೧೧೮) ಎಂಬುದರಿಂದ ಉಪಧಾವೃದ್ಧಿ ಬಂದರೆ ಸ್ತೋಮವಾಹಸಃ ಎಂದಾಗುವುದು. ಇಲ್ಲಿ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨ ೧೩೯) ಕೃದುತ್ತರಪದಪ್ರಕೃತಿಸ್ವರ ಪ್ರಾಪ್ತವಾದರೆ **ಗತಿಕಾರಕಯೋರಪಿ ಪೂರ್ವಪದಸ್ಯ ಪ್ರಕೃತಿಸ್ವರತ್ವಂವಕ್ತೆ** (ಉ ಸೂ ೪-೬೬೬) ಗತಿಕಾರಕಗಳು ಉಪಪದವಾಗಿರುವಾಗ ಪೂರ್ವಪದಪ್ರಕೃತಿಸ್ವರಬರುವುದು ಎಂಬ ಔಣಾದಿಕ ಸೂತ್ರದಿಂದ ಪೂರ್ವಪದಪ್ರಕೃತಿಸ್ವರಬಂದು ಸಮಾಸವು ಆದ್ಯುದಾತ್ತವಾಗುವುದು. ॥ ೧ ॥

॥ ಸಂಹಿತಾಪಾಠಃ ॥

ಪುರೂತಮಂ ಪುರೂಣಾಮೀಶಾನಂ ವಾರ್ಯಾಣಾಂ ।
ಇಂದ್ರಂ ಸೋಮೇ ಸಚಾ ಸುತೇ ॥ ೨ ॥

॥ ಪದಪಾಠಃ ॥

ಪುರು ऽ ತಮಂ । ಪುರೂಣಾಂ । ಈಶಾನಂ । ವಾರ್ಯಾಣಾಂ ॥
ಇಂದ್ರಂ । ಸೋಮೇ । ಸಚಾ । ಸುತೇ ॥ ೨ ॥

॥ ಸಾಯಣಭಾಷ್ಯಂ ॥

ಸಖಾಯೋ೨ಭಿಪ್ರಗಾಯತೇತಿ ಪದದ್ವಯಮುತ್ತರಾನುವರ್ತತೇ । ಹೇ ಸಖಾಯ ಋತ್ವಿಜಃ ಸಚಾ ಯೂಯಂ ಸರ್ವೈಃ ಸಹ । ಯದ್ವಾ । ಸಚಾ ಪರಸ್ಪರಸಮವಾಯೇನ ಸುತೇ೨ಭಿಷುತೇ ಸೋಮೇ ಪ್ರವೃತ್ತೇ ಸತೀಂದ್ರಮಭಿಪ್ರಗಾಯತ । ಕೀದೃಶಮಿಂದ್ರಂ । ಪುರೂತಮಂ । ಪುರೂನ್ಪಹೂಞ್ಛತ್ರೂಂಸ್ತ-ಮಯತಿ ಗ್ಲಾಪಯತೀತಿ ಪುರೂತಮಃ । ಪುರೂಣಾಂ ಬಹೂನಾಂ ವಾರ್ಯಾಣಾಂ ವರಣೀಯಾನಾಂ ಧನಾನಾಮೀಶಾನಂ ಸ್ವಾಮಿನಂ ॥ ಪುರೂತಮಂ । ತಮು ಗ್ಲಾನ ಇತಿ ಧಾತೋರಂತಭಾರ್ವಿತೆಣ್ಯರ್ಥಾತ್ಪ-ಚಾದ್ಯಚಿ ಚಿತತ್ವಾದಂತೋದಾತ್ತೇ೨ಪಿ ಕೃದುತ್ತರಪದಪ್ರಕೃತಿಸ್ವರತ್ವಂ ಬಾಧಿತ್ವಾ ಪರಾದಿಶ್ಚಂದಸಿ ಬಹುಲ-ಮಿತ್ಯುತ್ತರಪದಾದ್ಯುದಾತ್ತತ್ವಂ । ಪುರೂಣಾಂ । ಸ್ಯಾ ಪಾಲನಪೂರಣಯೋರಿತ್ಯಸ್ಮಾತ್ ಕುರಿತ್ಯನುವೃತ್ತೌ ಪ್ಯಾಭಿದಿವ್ಯಧಿಗೃಧಿಧೃಷಿದೃಶಿಭ್ಯಃ । ಉ. ೧-೨೪ । ಇತಿ ಕುಪ್ರತ್ಯಯಃ । ಕಿತ್ತ್ವಾದ್ಗುಣನಿಷೇಧೇ । ಪಾ. ೧-೧-೫ । ಉದೋಷ್ಠ್ಯಪೂರ್ವಸ್ಯ । ಪಾ. ೭-೧-೧೦೨ । ಇತ್ಯುಕಾರಃ । ಉರಣ್ ರಪರಃ । ಪಾ. ೧-೧-೫೧. ಪ್ರತ್ಯಯಸ್ವರೇಣಾಂತೋದಾತ್ತಃ ಪುರುಶಬ್ದಃ । ಅತೋ ಮತುಪಿ ಪ್ರಸ್ವಾದಂತೋದಾತ್ತಾತ್ಪುರುಶಬ್ದಾ-ತ್ಪರಸ್ಯ ನಾಮೋ ನಾಮನ್ಯತರಸ್ಯಾಂ । ಪಾ. ೬-೧-೧೭೭ । ಇತ್ಯಂತೋದಾತ್ತತ್ವಂ । ಈಶಾನಂ । ಈಶ ಐಶ್ವರ್ಯೇ ಇತಿ ಧಾತೋರನುದಾತ್ತೇತ್ತ್ವಾತ್ಪರಸ್ಯ ಶಾನಚೋ ಲಸಾರ್ವಧಾತುಕಾನುದಾತ್ತತ್ವಂ । ವಾ-ರ್ಯಾಣಾಂ । ವೃಙ್ ಸಂಭಕ್ತ್ಯಾವಿತ್ಯಸ್ಮಾದ್ಧಲೋ೨ರ್ಯತ್ । ಪಾ. ೩-೧-೧೨೪ । ಕೃಬ್ವಿಧೌ ಹಿ ವೃಞ ಏವ ಗ್ರಹಣಂ ನ ವೃಙಃ । ಪಾ. ೩-೧-೧೦೯-೧ । ತಿತ್ಸ್ವರಿತಂ । ಪಾ. ೬-೧-೧೮೫ । ಇತಿ ಪ್ರತ್ಯಯಸ್ವರಿತಂ ಬಾಧಿತ್ವಾ ಈಡವಂದವೃಶಂಸದುಹಾಂ ಣ್ಯತಃ । ಪಾ. ೬-೧-೨೧೪ । ಇತಿ ಣ್ಯದಂತಸ್ಯಾದ್ಯುದಾತ್ತತ್ವಂ । ಯತೋ೨ನಾವಃ । ಪಾ. ೬-೧-೨೧೩ । ಇತ್ಯತ್ರ ತು ಣ್ಯತೋ ಗ್ರಹಣಂ ನ ಭವತಿ ತಸ್ಯ ದ್ವ್ಯನುಬಂಧ-ಕತ್ವಾತ್ । ಏಕಾನುಬಂಧಗ್ರಹಣೇ ನ ದ್ವ್ಯನುಬಂಧಕಸ್ಯೇತಿ ನಿಯಮಾತ್ । ಸಚಾ । ಷಚ ಸಮವಾಯೇ ಧಾತ್ವಾದೇಃ ಷಃ ಸಃ । ಪಾ. ೬-೧-೬೪ । ಸಂಪದಾದಿತ್ವಾದ್ಭಾವೇ ಕ್ವಿಪ್ । ಪಾ. ೩-೩-೧೦೪-೯ । ಇತಿ ಕ್ವಿಪ್ । ತೃತೀಯೈಕವಚನಂ । ಧಾತುಸ್ವರೇಣಾದ್ಯುದಾತ್ತಃ । ಸರ್ವೇ ವಿಧಯಶ್ಚಂದಸಿ ನಿಕಲ್ಪ್ಯಂತೇ । ಪರಿ. ೩೫ । ಇತಿ ನ್ಯಾಯೇನ ಸಾವೇಕಾಚೇ ಇತಿ ಸೂತ್ರಂ ನ ಪ್ರವರ್ತತೇ । ಸಚೇತ್ಯಸ್ಯ ನಿಪಾತತ್ವಪಕ್ಷೇ ಸ್ಪಷ್ಟ-ಮಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಸಚಾ—(ಎಲ್ಲರೂ ಎಂದರೆ ಋತ್ವಿಗ್ಯಜಮಾನಾದಿಯಾಗಿ ಎಲ್ಲರೂ) ಸೇರಿ ಅಥವಾ ಪರಸ್ಪರ ಮಿಳಿತ ವಾಗಿ । **ಸೋಮೇ**-ಸೋಮರಸವು । **ಸುತೇ**-ಸಿದ್ಧಪಡಿಸಲಾಗಿ (ಸಿದ್ಧಪಡಿಸಿದ ಮೇಲೆ) । (ಹೇ ಸಖಾಯ;—

ಎಲೈ ಸ್ನೇಹಿತರೇ ಅಥವಾ ಋತ್ವಿಜರೇ) । **ಪುರುತಮಂ**—ಶತ್ರುನಾಶಕನಾದ । **ಪುರೂಣಾಂ**—ಬಹಳವಾದ । **ವಾರ್ಯಾಣಾಂ**—ಧನಾದ್ಯೈಶ್ವರ್ಯಗಳಿಗೆ । **ಈಶಾನಂ**—ಸ್ವಾಮಿಯಾದ । **ಇಂದ್ರಂ**—ಇಂದ್ರನನ್ನು । (**ಅಭಿ ಪ್ರ ಗಾಯತ**—ಚೆನ್ನಾಗಿ ಸ್ತೋತ್ರಮಾಡಿರಿ)

॥ ಭಾವಾರ್ಥ ॥

ಎಲೈ ಋತ್ವಿಗ್ಯಜಮಾನಾದಿ ಸ್ನೇಹಿತರೇ, ನೀವು ಎಲ್ಲರೂ ಸೇರಿ ಈ ಯಜ್ಞದಲ್ಲಿ ಸೋಮರಸವನ್ನು ಸಿದ್ಧ ಪಡಿಸಿದಮೇಲೆ ಶತ್ರುಸಂಹಾರಕನೂ, ಅಪಾರವಾದ ಐಶ್ವರ್ಯಕ್ಕೆ ಒಡೆಯನೂ ಆದ ಇಂದ್ರನನ್ನು ಸ್ತೋತ್ರಮಾಡಿರಿ

English Translation.

O friends (preists), when soma is pressed sing along with others (or in a body) Indra, the subduer of many foes and the lord of many riches.

॥ ವಿಶೇಷ ವಿಷಯಗಳು ॥

ಈ ಋಕ್ಕಿನಲ್ಲಿ ಕರ್ತೃವಾಗಲಿ, ಕ್ರಿಯಾಪದವಾಗಲಿ ಇಲ್ಲದಿರುವುದರಿಂದ ಹಿಂದಿನ ಋಕ್ಕಿನಲ್ಲಿ ಹೇಳಿರುವ **ಸಖಾಯಃ**-ಎಂಬ ಕರ್ತೃಪದವನ್ನೂ **ಅಭಿ ಪ್ರ ಗಾಯತ** ಎಂಬ ಕ್ರಿಯಾಪದವನ್ನೂ ಅಧ್ಯಾಹಾರಮಾಡಿಕೊಳ್ಳಬೇಕೆಂದು ಭಾಷ್ಯಕಾರರು ಹೇಳಿರುವರು. ಆದುದರಿಂದ ಹಿಂದಿನ ಋಕ್ಕಿನ ಅರ್ಧವನ್ನೇ ಈ ಋಕ್ಕಿನಲ್ಲಿ ಮುಂದುವರೆದು ಹೇಳಿರುವುದೆಂದು ಭಾವಿಸಬೇಕು.

ಪುರುತಮಂ—ಈ ಶಬ್ದಕ್ಕೆ ಭಾಷ್ಯಕಾರರು, ಶತ್ರುವನ್ನು ದಮನಮಾಡುವನೆಂದು ಹೇಳಿರುವರು. ಸ್ಕಂದಸ್ವಾಮಿಯು-" **ಪುರುತಮಂ । ಪುರುಶಬ್ದೋ ಬಹುನಾಮ । ತಮು ಅಭಿಕಾಂಕ್ಷಾಯಾಂ । ಬಹುಭಿರ್ಯೋಽಭಿಕಾಂಕ್ಷ್ಯತೇ ಪ್ರಾರ್ಥ್ಯತೇ ಯಾಚ್ಯತೇ ಸ ಪುರುತಮಸ್ತಂ ಪುರುತಮಂ** " ಎಂದರೆ, **ಪುರು** ಎಂಬ ಶಬ್ದಕ್ಕೆ ಬಹು, ಅನೇಕ ಎಂದರ್ಥವು. **ತಮು** ಎಂಬ ಧಾತುವಿಗೆ ಅಪೇಕ್ಷಿಸು, ಯಾಚಿಸು, ಪ್ರಾರ್ಥಿಸು ಎಂದರ್ಥವು. ಆದುದರಿಂದ ಪುರುತಮಂ ಎಂಬ ಶಬ್ದಕ್ಕೆ ಅನೇಕರಿಂದ ಪ್ರಾರ್ಥಿಸಲ್ಪಟ್ಟ, ಅನೇಕರಿಗೆ ಇಷ್ಟನಾದ, ಬೇಕಾದವನಾದ ಎಂದರ್ಥವು. ವೆಂಕಟಮಾಧವರೂ ಸಾಯಣರ ಅರ್ಥವನ್ನೇ ಅನುಮೋದಿಸಿರುವರು.

ಸಚಾ—ಸಹಿತವಾಗಿ, ಒಟ್ಟಾಗಿ, ಕಲೆತು ಇತ್ಯಾದಿ. ಈ ಶಬ್ದದ ಪ್ರಯೋಗವು ಋಗ್ವೇದದಲ್ಲಿ ೧-೫೫-೨ ; ೧-೭-೨ , ೧-೯-೩ , ೧-೧೦-೪ ; ೧-೪೦-೧ , ೧-೫೦-೧೧ ಮೊದಲಾದ ಅಲ್ಲ ಋಕ್ಕುಗಳಲ್ಲಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಪುರೂತಮಂ—ತಮು ಗ್ಲಾನೇ ಎಂಬ ಅಂತರ್ಭಾವಿತ ಣಿಚ್ಪ್ರತ್ಯಯಾರ್ಥಕ ಧಾತುವಿನ ಮುಂದೆ **ನಂದಿಗ್ರಹಿಪಚಾದಿಭ್ಯೋಲ್ಯುಣಿನ್ಯಚಃ** (ಪಾ. ಸೂ. ೩-೧-೧೩೪) ಎಂಬುದರಿಂದ ಇದು ಪಚಾದಿಯಾದ್ದರಿಂದ ಅಚ್ಪ್ರತ್ಯಯ ಬಂದರೆ ಪ್ರತ್ಯಯವು ಚಿತ್ತಾದ್ದರಿಂದ **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತ. ಆದಾಗ್ಯೂ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬ ಕೃದುತ್ತರ ಪದಪ್ರಕೃತಿಸ್ವರ

ವನ್ನು ಬಾಧಿಸಿ **ಪರಾದಿಶ್ಚಂಪಸಿಬಹುಲಂ** (ಪಾ. ಸೂ. ೬-೨-೧೯೯) ಎಂಬುದರಿಂದ ಉತ್ತರಪದದ ಆದಿಯು **ಉದಾತ್ತವಾಗುವುದು. ಪುರೂಣಾಂ ಪ್ಯೃ ಭಿದಿ ವ್ಯಧಿ ಗೃಧಿ ಧೃಷಿಭ್ಯಃ** (ಉ. ಸೂ. ೧-೨೩) ಪ್ಯ್ರವಾಲನ ಪೂರ ಣಯೋಃ, ಭಿದಿರ್ ವಿದಾರಣೇ, ವ್ಯಧ ತಾಡನೇ, ಗೃಧು ಅಭಿಕಾಂಕ್ಷಾಯಾಂ, ಞಾ ಧೃಷಾಪ್ರಾಗಲ್ಭ್ಯೇ ಎಂಬ ಧಾತು ಗಳ ಮುಂದೆ ಕು- ಪ್ರತ್ಯಯ ಬರುವುದು. ಎಂಬುದರಿಂದ ಕುಪ್ರತ್ಯಯ ಬಂದರೆ ಕ್ ಗೆ 'ಲಶಕ್ವತದ್ಧಿತೇ' (ಪಾ. ಸೂ. ೧-೩-೮) ತದ್ಧಿತಭಿನ್ನ ಪ್ರತ್ಯಯಾದಿಯಾದ ಲಕಾರ ಶಕಾರ ಕವರ್ಗಗಳಿಗೆ ಇತ್ಸಂಜ್ಞೆ ಬರುವುದು ಎಂದು **ಇತ್ಸಂಜ್ಞೆ** ಬಂದು ಲೋಪ ಬಂದರೆ ಪ್ಯ್ರ+ಉ-**ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೪೪) ಎಂಬುದರಿಂದ ಗುಣಪ್ರಾಪ್ತವಾದರೆ **ಪ್ರತ್ಯಯವು ಕ್ಕಿತ್ತಾದ್ದರಿಂದ ಕ್ಕಿತಿಚ** (ಪಾ. ಸೂ. ೧-೧-೫) ಎಂಬುದರಿಂದ ಗುಣಕ್ಕೆ ನಿಷೇಧ ಬರುವುದು. **ಉದೋಷ್ಠ್ಯ ಪೂರ್ವಸ್ಯ** (ಪಾ. ಸೂ. ೭-೧-೧೦೨) ಅಂಗಾವಯವವಾದ ಓಷ್ಠ್ಯ ವರ್ಣದ **ಅಂದರೆ ಉಕಾರ ಪವರ್ಗಗಳ** ಮುಂದಿರುವ ಋಕಾರವನ್ನು ಕಡೆಯಲ್ಲಿ ಹೊಂದಿರುವ ಅಂಗಕ್ಕೆ ಉತ್ ಆದೇಶಬರುವುದು. ಉತ್ ನ ತ್‌ಗೆ ಇಂತ್ಸಂಜ್ಞಾಲೋಪಗಳು ಬರುವುವು. **ಉರಣ್ರಪರಃ** (ಪಾ ಸೂ. ೧-೧-೫೧) ಋಕಾರಸ್ಥಾನದಲ್ಲಿ ಬರುವ ಅ ಇ ಉ ವರ್ಣಗಳು ರೇಫಪರಸ್ಕವಾಗಿ ಬರುವುವು ಎಂಬುದರಿಂದ ರೇಫಪರಸ್ಕವಾಗಿ ಉ-ಬಂದರೆ ಪುರು ಎಂದಾಗುವುದು. ಇದು ಪ್ರತ್ಯಯ ಸ್ವರದಿಂದ ಅಂತೋದಾತ್ತ. ಆದ್ದರಿಂದ ಮತುಪ್ ಪ್ರತ್ಯಯ ವನ್ನು ಮಾಡಿದಾಗ ಹ್ರಸ್ವಾಂತವಾಗಿಯೂ ಅಂತೋದಾತ್ತವಾಗಿಯೂ ಇರುವ ಪುರು ಶಬ್ದದ ಮುಂದೆ ಬಂದಿರುವ ಷಷ್ಠೀ ಬಹುವಚನ ನಾಮ್ ಎಂಬುದು **ನಾಮನ್ಯ ತರಸ್ಯಾಂ** (ಪಾ. ಸೂ. ೬-೧-೧೭೭) ಎಂಬುದರಿಂದ ಉದಾತ್ತವಾಗುವುದು. **ಈಶಾನಂ**—ಈಶ ಐಶ್ವರ್ಯೇ ಎಂಬ ಧಾತುವಿನ ಮುಂದೆ ಲಟ್ಪ್ರತ್ಯಯ. ಅದಕ್ಕೆ ಶಾನಚ್ ಆದೇಶ ಬಂದರೆ ದ್ವಿತೀಯಾ ಏಕವಚನದಲ್ಲಿ ಈಶಾನಂ ಎಂದಾಗುವುದು. ಈಶಧಾತುವು ಅನುದಾತ್ತೇತ್ತು- ಅದ್ದರಿಂದ ಅದರ ಮುಂದೆ ಇರುವ ಲಸ್ಥಾನಿಕ ಸಾರ್ವಧಾತುಕವಾದ ಶಾನಚ್ಗೆ **ತಾಸ್ಯನುದಾತ್ತೇತ್**—(ಪಾ. ಸೂ. ೬-೧-೧೯೬) ಎಂಬುದರಿಂದ ಅನುದಾತ್ತ ಬರುವುದು. **ವಾರ್ಯಾಣಾಂ-ವೃಜ್** ಸಂಭಕ್ತ್ಯೌ ಎಂಬಧಾತುವಿನ ಮುಂದೆ **ಋಹಲೋರ್ಣ್ಯತ್** (ಪಾ. ಸೂ. ೩-೧-೧೨೪) ಋಕಾರ ಅಥವಾ ವ್ಯಂಜನಗಳನ್ನು ಕೊನೆಯಲ್ಲಿ ಹೊಂದಿರುವ ಧಾತುವಿನ ಮುಂದೆ ಣ್ಯತ್ ಎಂಬ ಪ್ರತ್ಯಯ ಬರುವುದು ಎಂಬುದರಿಂದ ಣ್ಯತ್ ಪ್ರತ್ಯಯ ಬರುವುದು. **ಆದರೆ ಏತಿಸ್ತು ಶಾಸ್ಭ್ಯೋದೈಜುಷಃಕ್ಯಪ್** (ಪಾ. ಸೂ. ೩-೧-೧೦೯) ಇಣ್-ಷ್ಟ್ರಞ್-ಶಾಸು-ವೃ-ದೃ ಜುಷ್ ಧಾತುಗಳ ಮುಂದೆ ಕ್ಯಪ್ ಬರುವುದು ಎಂಬ ಸೂತ್ರದಲ್ಲಿ ವೃ. ಎಂಬುದರಿಂದ **ಕ್ಯಬ್ವಿಧೌವೃಞ್ಗ್ರಹಣಂ** (ಪಾ ಮ. ೩-೧-೧೦೯) ಎಂಬ ಮಹಾಭಾಷ್ಯದ ಅನುಶಾಸನದಿಂದ ವೃಞ್‌ವರಣೇ ಎಂಬುದನ್ನೇ ತೆಗೆದುಕೊಳ್ಳಬೇಕು. ವೃಜ್ ಸಂಭಕ್ತ್ಯೌ ಎಂಬುದನ್ನು ತೆಗೆದುಕೊಳ್ಳಲಾಗುವುದಿಲ್ಲ. ಆದ್ದರಿಂದ ವೃಜ್ ಧಾತುವಿನ ಮುಂದೆ ಪೂರ್ವೋಕ್ತ ಸೂತ್ರದಿಂದ ಕ್ಯಪ್ ಬರುವುದಿಲ್ಲ. **ತಿತ್ಸ್ವರಿತಮ್** (ಪಾ. ಸೂ. ೬-೧-೧೮೪) ತಕಾರೇತ್ಸಂಜ್ಞಕ ಪ್ರತ್ಯಯವು ಸ್ವರಿತವಾಗುವುದು. ಎಂಬುದರಿಂದ ಬರುವ ಸ್ವರಿತವನ್ನು ಬಾಧಿಸಿ **ಈಡವನ್ದವೃಶಂಸದುಹಾಂಣ್ಯತಃ** (ಪಾ. ಸೂ. ೬-೧-೩೧೪) **ಣ್ಯತ್** ಪ್ರತ್ಯಯಾಂತವಾದ ಈ ಧಾತುಗಳ ಆದಿಯು ಉದಾತ್ತವಾಗುವುದು ಎಂಬುದರಿಂದ ವಾರ್ಯ ಎಂಬಣ್ಯ ದಂತದ ಆದಿಯು ಉದಾತ್ತ ಈಡ ವನ್ದ ಎಂದು ಆತ್ಮನೇ ಪದಧಾತುಗಳ ಸಾಹಚರ್ಯದಿಂದಸೂತ್ರದಲ್ಲಿರುವ ವೃ ಎಂಬು ದರಿಂದ ಆತ್ಮನೇಪದಿಯಾದ ವೃಜ್ ಧಾತುವಿಗೆ ಗ್ರಹಣವು ಈ ಸೂತ್ರದಲ್ಲಿ ಆಗುವುದು ಣ್ಯತ್ ಪ್ರತ್ಯಯದಲ್ಲಿ ಣಕಾರ ತಕಾರಗಳಿಗೆ ಇತ್ಸಂಜ್ಞೆ ಯೆತ್ ಪ್ರತ್ಯಯದ ತಕಾರಕ್ಕೆ ಮಾತ್ರ ಇತ್ಸಂಜ್ಞೆ ಎರಡರಲ್ಲಿಯೂ ಯ ಎಂದೇನಿಲ್ಲುವುದು. **ಇಲ್ಲಿ ಯೆತೋನಾವಃ** (ಪಾ. ಸೂ. ೬-೧-೩೧೩) ನೌ ಎಂಬುದನ್ನುಳಿದು ಯೆತ್ಪ್ರತ್ಯಯಾಂತ ಶಬ್ದವು ಎರಡ ಅಚ್ಚುಗಳನ್ನು ಹೊಂದಿದ್ದರೆ ಆದರ ಆದಿಯು ಉದಾತ್ತವಾಗುವುದು ಎಂಬುದರಿಂದಲೇ ಆದ್ಯುದಾತ್ತವಾಗಲಿ ಎಂದು ಆಕ್ಷೇಪಿಸಬಹುದು. ಆದರೆ ಯೆತ್ ಪ್ರತ್ಯಯವು ಏಕಾನುಬಂಧಕ (ಇತ್ಸಂಜ್ಞಕವಾದ ಒಂದು ವರ್ಣವನ್ನು

ಹೊಂದಿರುವುದು) ಣ್ಯತ್ ಪ್ರತ್ಯಯವು ದ್ವ್ಯನುಬಂಧಕ (ಇತ್ಸಂಜ್ಞಕವಾದ ಎರಡು ವರ್ಣಗಳನ್ನು ಹೊಂದಿರುವುದು.) ಆದ್ದರಿಂದ ವಿಕಾನುಬಂಧಗ್ರಹಣೇ ನ ದ್ವ್ಯನುಬಂಧಕಸ್ಯ-ವಿಕಾನುಬಂಧಕಕ್ಕೆ ಗ್ರಹಣವಿರುವಲ್ಲಿ ದ್ವ್ಯನುಬಂಧಕಕ್ಕೆ ಗ್ರಹಣಬರುವುದಿಲ್ಲ ಎಂಬ ನಿಯಮದಿಂದ ಯೆತ್ ಎಂಬುದರಿಂದ ಣ್ಯತ್ತನ್ನು ಗ್ರಹಿಸಲಾಗುವುದಿಲ್ಲ ಆದ್ದರಿಂದ ಯತೋಽನಾವಃ (ಪಾ. ಸೂ ೬-೧-೨೧೩) ಎಂಬುದು ಇಲ್ಲಿ ಬರುವುದಿಲ್ಲ ಸಚಾ-ಷಚ ಸಮವಾಯೇ ಎಂಬ ಧಾತು. ಧಾತ್ವಾದೇಃ ಷಃ ಸಃ (ಪಾ. ಸೂ. ೬-೧-೬೪) ಧಾತುವಿನ ಆದಿಯಲ್ಲಿರುವಷಕಾರಕ್ಕೆ ಸಕಾರ ಬರುವುದು ಎಂಬುದರಿಂದ ಷಕಾರಕ್ಕೆ ಸಕಾರಬರುವುದು ಸಂಪದಾದಿಭ್ಯಃ ಕ್ವಿಪ್ (ಪಾ. ಸೂ. ೩-೩-೧೦೮) ಎಂಬುದರಿಂದ ಕ್ವಿಪ್ ಬರುವುದು. ಸಚಾಎಂಬುದು ತೃತೀಯಾ ವಿಕವಚನಾಂತ ಧಾತುಸ್ವರದಿಂದ ಆದ್ಯುದಾತ್ತವಾಗುವುದು. ಸರ್ವೇವಿಧಯೆಶ್ಛಂದಸಿ ವಿಕಲ್ಪ್ಯಂತೇ (ಪರಿಭಾ. ೩೫) ಛಂದಸ್ಸಿನಲ್ಲಿ ಎಲ್ಲಾ ಗಳಿಗೂ ವಿಧಿವಿಕಲ್ಪವಿರುವುದು. ಎಂಬುದರಿಂದ 'ಸಾವೇಕಾಚಸ್ತೃತೀಯಾದಿರ್ವಿಭಕ್ತಿಃ' (ಪಾ.ಸೂ. ೬,೧-೧೬೮) ಎಂಬುದರಿಂದ ವಿಭಕ್ತಿಗೆ ಉದಾತ್ತ ಬರುವುದಿಲ್ಲ. ಸಚಾ ಎಂಬುದು ನಿಪಾತ ಎಂಬ ಪಕ್ಷದಲ್ಲಿ ನಿಪಾತಾ ಆದ್ಯುದಾತ್ತಾಃ (ಫಿ. ಸೂ. ೮೦) ಎಂಬುದರಿಂದ ಆದ್ಯುದಾತ್ತವಾಗುವುದು ಎಂಬುದು ಸ್ಪಷ್ಟವಾಗಿರುವುದು ॥೩॥

॥ ಸಂಹಿತಾಪಾಠಃ ॥

ಸ ಘಾ ನೋ ಯೋಗ ಆ ಭುವತ್ಸ ರಾಯೇ ಸ ಪುರಂಧ್ಯಾಂ ।
ಗಮದ್ವಾಜೇಭಿರಾ ಸ ನಃ ॥ ೩ ॥

॥ ಪದಪಾಠಃ ॥

ಸಃ । ಘ । ನಃ । ಯೋಗೇ । ಆ । ಭುವತ್ । ಸಃ । ರಾಯೇ । ಸಃ ।
ಪುರಂ ऽ ಧ್ಯಾಂ ॥
ಗಮತ್ । ವಾಜೇಭಿಃ । ಆ । ಸಃ । ನಃ ॥ ೩ ॥

॥ ಸಾಯಣಭಾಷ್ಯಂ ॥

ಘಶಬ್ದೋ ऽವಧಾರಣಾರ್ಥೋ ನಿಪಾತಃ ಸರ್ವೈಸ್ತಚ್ಛಬ್ದೈಃ ಸಂಬಧ್ಯತೇ । ಸ ಘ ಸ ಏವೇಂದ್ರಃ ಪೂರ್ವಮಂತ್ರೋಕ್ತಗುಣವಿಶಿಷ್ಟೋ ನೋ ऽಸ್ಮಾಕಂ ಯೋಗೇ ಪೂರ್ವಮಪ್ರಾಪ್ತಸ್ಯ ಪುರುಷಾರ್ಥಸ್ಯ ಸಂಬಂಧ ಆ ಭುವತ್ । ಅಭವತು । ಪುರುಷಾರ್ಥಂ ಸಾಧಯತ್ವಿತ್ಯರ್ಥಃ । ಸ ಏವ ರಾಯೇ ಧನಾರ್ಥಮಾ ಭುವತ್ । ಅಭವತು । ಸ ಏವ ಪುರಂಧ್ಯಾಂ ಯೋಷಿತ್ಯಾ ಭುವತ್। ಯದ್ವಾ ಬಹುವಿಧಾಯಾಂ ಬುದ್ಧಾವಾ ಭುವತ್ । ಪುರಂಧಿರ್ಬಹುಧೀಃ । ನಿ. ೬-೧೩ । ಇತಿ ಯಾಸ್ಕಃ । ಸ ಏವ ವಾಜೇಭಿರ್ದೇಯೈರನ್ನೈಃ

ಸಹ ನೋಽಸ್ಮಾನಾ ಗಮತ್ । ಆಗಚ್ಛತು ॥ ಘ । ಚಾದಯೋಽನುದಾತ್ತಾ ಇತ್ಯನುದಾತ್ತಃ । ಸಂಹಿತಾಯಾಮೃಚಿ ತುನುಘಮಕ್ಷುತಂಬ್ರುತೋರುಷ್ಯಾಣಾಂ । ಪಾ. ೬-೩-೧೩೩ । ಇತಿ ದೀರ್ಘಃ । ಯೋಗೇ । ಘಞಾಃ ಞಿತ್ತ್ವಾದಾದ್ಯುದಾತ್ತತ್ವಂ । ಭುವತ್ । ಭೂಯಾತ್। ಭವತೇರಾಶೀರ್ಲಿಙಿ ಪರತೋ ಲಿಙ್ಯಾಶಿಷ್ಯಙ್ಯಜ್ಞ್ಯತ್ಯಯಃ । ತಸ್ಯ ಙಿತ್ತ್ವೇನ ಗುಣಾಭಾವಾದುವಙಾದೇಶಃ । ಕೀದಾಶಿಷೀತಿ ಯಾಸುಣ್ನಿಭವತ್ಯನಿತ್ಯಮಾಗಮಶಾಸನಮಿತಿ ವಚನಾತ್ । ತಿಙ್ಙತಿಙ ಇತಿ ನಿಘಾತಃ । ಊಡಿದಂಪದಾದ್ಯಪ್ಪುನ್ಮ್ರೈದ್ಯುಭ್ಯ ಇತಿ ರಾಯೆ ಇತ್ಯೇತಸ್ಯ ವಿಭಕ್ತೇರುದಾತ್ತತ್ವಂ । ಪುರಂಧ್ಯಾಂ। ಪುರಂಧಿಃ ಪುರುಧೀಃ । ಪೃಷೋದರಾದಿತ್ವಾತ್ ಪಾ. ೬-೩-೧೦೯ । ಉಕಾರಸ್ಯಾಮಾದೇಶ ಈಕಾರಸ್ಯ ಹ್ರಸ್ವಶ್ಚ । ಆದ್ಯುದಾತ್ತಪ್ರಕರಣೇ ದಿವೋದಾಸಾದೀನಾಂ ಛಂದಸ್ಯುಪಸಂಖ್ಯಾನಂ । ಪಾ. ೬-೨-೯೧-೧ । ಇತ್ಯಾದ್ಯುದಾತ್ತತ್ವಂ । ಅಥವಾ ಪುರಂ ಶರೀರಂ ಧೀಯತೇಽಸ್ಯಾಮಿತಿ ಕರ್ಮಣ್ಯಧಿಕರಣೇ ಚ । ಪಾ. ೩-೩-೯೩ । ಇತಿ ಕಿ ಪ್ರತ್ಯಯಃ । ಅಲುಕ್ಛಾಂದಸಃ । ನಬ್ವಿಷಯಸ್ಯಾನಿಸಂತಸ್ಯೇತಿ ಪುರುಶಬ್ದ ಆದ್ಯುದಾತ್ತಃ । ದಾಸೀಭಾರಾದಿತ್ವಾತ್ । ಪಾ. ೬-೨-೪೨ । ಪೂರ್ವಪದಪ್ರಕೃತಿಸ್ವರತ್ವಂ । ಗಮತ್ । ಗಮೇರ್ಲೇಟಸ್ತಿಪ್ । ಇತಶ್ಚ ಲೋಪಃ । ಪರಸ್ಮೈಪದೇಷ್ವಿತೀಕಾರಲೋಪಃ । ಬಹುಲಂ ಛಂದಸೀತಿ ಶಪೋ ಲುಕ್ । ಲೇಟೋಽಡಾಟೌವಿತ್ಯಡಾಗಮಃ । ಆಗಮಾ ಅನುದಾತ್ತಾಃ । ಮ. ೩-೧-೩-೭ । ಇತಿ ತಸ್ಯಾನುದಾತ್ತತ್ವೇ ಧಾತುಸ್ವರ ಏವ ಶಿಷ್ಯತೇ । ವಾಜೇಭಿಃ । ವೃಷಾದಿತ್ವಾದಾದ್ಯುದಾತ್ತಃ ॥

॥ ಪ್ರತಿಪದಾರ್ಥ ॥

ಸ ಘ—ಆ ಇಂದ್ರನೇ । ನಃ—ನಮಗೆ । ಯೋಗೇ—ನಮಗೆ ಇಷ್ಟವಾದ ಪುರುಷಾರ್ಥವನ್ನು ಕೊಡುವ ಸಂಬಂಧದಲ್ಲಿ । ಆ ಭುವತ್—(ಅನುಕೂಲವಾಗಿ) ಇರಲಿ । ಸಃ—ಆ ಇಂದ್ರನು । ರಾಯೇ—ಧನವನ್ನು ಕೊಡುವ ವಿಚಾರದಲ್ಲಿಯೂ । (ಆ ಭುವತ್-ಅನುಕೂಲವಾಗಿರಲಿ) । ಸಃ-ಆ ಇಂದ್ರನು । ಪುರಂಧ್ಯಾಂ—ಯುವತಿಯರನ್ನು ಕೊಡುವ ವಿಚಾರದಲ್ಲಿಯೂ ಅಥವಾ ಸರಿಯಾದ ತಿಳಿವಳಿಕೆಯುನ್ನು ಉಂಟುಮಾಡುವ ವಿಚಾರದಲ್ಲಿಯೂ । (ಆ ಭುವತ್-ಅನುಕೂಲವಾಗಿರಲಿ) । ಸಃ—ಆ ಇಂದ್ರನೇ । ವಾಜೇಭಿಃ—ಅನ್ನಾದ್ಯಾಹಾರಗಳಿಂದ ನಃ—ನನ್ನ ಸವಿಾಪಕ್ಕೆ । ಆ ಗಮತ್—ಬರಲಿ ॥

॥ ಭಾವಾರ್ಥ ॥

ನಮಗೆ ಇಷ್ಟವಾದ ವಸ್ತುಪ್ರಾಪ್ತಿ, ಐಶ್ವರ್ಯ (ಪತ್ನಿಯರಿಗಾಗಿ ಅನುಕೂಲರಾದ) ಯುವತಿಯರು ಅಥವಾ ಕಾಲೋಚಿತವಾದ ತಿಳಿವಳಿಕೆ ಇವುಗಳನ್ನು ನಾವು ಪಡೆದು ಸುಖಿಸಬೇಕಾದರೆ ಆ ಇಂದ್ರನೇ ನಮಗೆ ಅನುಕೂಲನಾಗಿರಬೇಕು. ಎಂದರೆ ಇಂದ್ರನ ಅನುಗ್ರಹದಿಂದಲೇ ಈ ವಿಧವಾದ ಇಷ್ಟಾರ್ಥಗಳನ್ನು ಪಡೆಯಲು ಸಾಧ್ಯವು. ಇದಲ್ಲದೆ ಆ ಇಂದ್ರನೇ ನಮ್ಮ ಸವಿಾಪಕ್ಕೆ ಬಂದು ನನಗೆ ಬೇಕಾದ ಅನ್ನವನ್ನು (ಆಹಾರವನ್ನು) ಕೊಡುವವನಾಗಲಿ.

English Translation

May he be to us for the attainment of our objects; may he be to us for the acquirement of riches; may he be to us for the acquisition of young women or manifold knowledge; may he come to us with food.

॥ ವಿಶೇಷವಿಷಯಗಳು ॥

ಘ—ಏವ, ಅವಧಾರಣಾರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದು- ಈ ಶಬ್ದವು ಅನೇಕ ಕಡೆಗಳಲ್ಲಿ ಸಂಹಿತಾಕಾಲದಲ್ಲಿ ಛಂದಸ್ಸಿನ ಅನುಕೂಲಕ್ಕಾಗಿ ದೀರ್ಘಾಕ್ಷರವಾಗಿ ಉಪಯೋಗಿಸಲ್ಪಟ್ಟಿದ್ದರೂ ಪದಪಾಠದಲ್ಲಿ ಹ್ರಸ್ವಾಕ್ಷರವಾಗಿರುವುದು.

ಯೋಗೇ—ಇಷ್ಟಾರ್ಥವನ್ನು ಹೊಂದುವುದು ಎಂದು ಭಾಷ್ಯಕಾರರು ಅರ್ಥಮಾಡಿರುವರು. ಸ್ಕಂದ ಸ್ವಾಮಿಯು " ಯೋಗಃ ಉದ್ಯೋಗಃ, ಉತ್ಸಾಹಃ ಅಲಬ್ಧಲಾಭೋ ವಾ" ಎಂದರೆ ಉದ್ಯೋಗ, ಉತ್ಸಾಹ, ಇದು ವರೆಗೆ ಪಡೆಯದೇ ಇರುವ ಇಷ್ಟವಸ್ತು ಎಂದರ್ಥಮಾಡಿರುವರು.

ಪುರಂಧ್ಯಾಂ—ಭಾಷ್ಯಕಾರರು ಯುವತಿಯರೆಂದೂ ಪ್ರಜ್ಞೆಯೆಂದೂ ಎರಡು ವಿಧವಾದ ಅರ್ಥವನ್ನು ಹೇಳಿರುವರು. **ಪುರಂಧಿರ್ಯೋಷೇತ್ಯಾಹ** ಎಂದು ಶ್ರುತಿವಾಕ್ಯವಿರುವುದು (ತೈ.ಬ್ರಾ.) ಸ್ಕಂದಸ್ವಾಮಿ ಮತ್ತು ವೆಂಕಟಮಾಧವರು ಬುದ್ಧಿ, ತಿಳಿವಳಿಕೆ, ಪ್ರಜ್ಞೆಯೆಂದೇ ಅರ್ಥನೂಡಿರುವರು. Hillebrandt ಪಂಡಿತನು ಈ ಪುರಂಧಿ ಶಬ್ದಕ್ಕೆ ಅನೇಕ ಅರ್ಥಗಳನ್ನು ಹೇಳಿರುವನು. ಅವುಗಳಲ್ಲಿ Active, Zealous, fertile, munificent, generous ಎಂಬುವು ಕೆಲವು. ಋ.ಸಂ. ೫-೪೨-೫ ; ೬-೪೯-೧೪ ; ೬-೭೧-೯ ; ೭-೩೬-೮ , ೭-೩೯-೪ ; ೧೦-೪೫-೩೬ ಈ ಋಕ್ಕುಗಳಲ್ಲಿ ವಿಪುಲೈಶ್ವರ್ಯ ಅಥವಾ ಅಭಿವೃದ್ಧಿಗೆ ಅಧಿದೇವತೆ Personified as a godess of abundance and liberality ಎಂಬ ಅರ್ಥದಲ್ಲಿ ಈ ಶಬ್ದಪ್ರಯೋಗವಿದೆ. ಪಾಶ್ಚಾತ್ಯ ಪಂಡಿತರು ನಾನಾ ಋಕ್ಕುಗಳಲ್ಲಿ ಇರುವ ಈ ಶಬ್ದಕ್ಕೆ ಸಮಯೋಚಿತವಾಗಿ ವಿಧವಿಧವಾಗಿ ಅರ್ಥಮಾಡಿದಾರೆ. ಭಾಷ್ಯಕಾರರೂ ಸಹ ಬೇರೆ ಬೇರೆ ಅರ್ಥ ಹೇಳಿದಾರೆ. ಆಯಾ ಸಂದರ್ಭದಲ್ಲಿ ಆಯಾ ಅರ್ಥಗಳನ್ನು ವಿಶದವಾಗಿ ವಿವರಿಸಲಾಗುವುದು.

॥ ವ್ಯಾಕರಣಪ್ರಕ್ರಿಯಾ ॥

ಘ—ಇದು ಚಾದಿಗಣದಲ್ಲಿರುವುದರಿಂದ **ಚಾದಯೋಽನುದಾತ್ತಾಃ** (ಫಿ. ಸೂ. ೪೪) ಎಂಬುದರಿಂದ ಅನುದಾತ್ತ. ಸಂಹಿತಾಕಾಲದಲ್ಲಿ **ಋಚಿನುನುಘ ಮುಕ್ಷುತಙ್ ಕುತ್ರೋರುಷ್ಯಾಣಾಂ** (ಪಾ. ಸೂ. ೬-೩-೧೩೩) ಋಗ್ವೇದದಲ್ಲಿ ತು ನು ಘ ಮಕ್ಷು ಥ ಎಂಬುದಕ್ಕೆ ಆ ದೇಶವಾಗಿ ಬಂದ ಜಾತ್ತಾದ ತಕಾರ ತು ತ್ರ ಉರುಷ್ಯ ಇವುಗಳಿಗೆ ದೀರ್ಘ ಬರುವುದು ಎಂಬುದರಿಂದ ದೀರ್ಘ ಬರುವುದು. **ಯೋಗೇ**—ಘಞ್ ಪ್ರತ್ಯಯಾಂತವಾದ ಶಬ್ದ ಪ್ರತ್ಯಯವು ಞಾತ್ತಾದ್ದರಿಂದ ಯೋಗೇ ಎಂಬುದು ಆದ್ಯುದಾತ್ತ. **ಭುವತ್**—ಇದಕ್ಕೆ ಭೂಯಾತ್ ಎಂದು ಅರ್ಥವು. ಭೂಸತ್ತಾಯಾಂ ಎಂಬ ಧಾತುವಿನ ಮುಂದೆ ಆಶೀರ್ಲಿಙ್ ಪರದಲ್ಲಿರುವಾಗ **ಲಿಙ್ಯಾಶಿಷ್ಯಙ್** (ಪಾ. ಸೂ. ೩-೧-೮೬) ಎಂಬುದರಿಂದ ಅಙ್ ಪ್ರತ್ಯಯ ಬರುವುದು- ಪ್ರತ್ಯಯವು ಙಿತ್ತಾದ್ದರಿಂದ **ಕ್ಡಿತಿಚ್** (ಪಾ. ಸೂ. ೧-೧೫) ಎಂಬುದರಿಂದ ಗುಣ ನಿಷೇಧ ಬರುವುದು **ಅಚಿಶ್ನುಧಾತುಭ್ರುವಾಂ ಯ್ವೋರಿಯಙುವಙೌ** (ಪಾ ಸೂ. ೬-೪-೭೭) ಎಂಬುದರಿಂದ ಉವಙಾದೇಶಬರುವುದು. **ಅನಿತ್ಯಮಾಗಮಶಾಸನಂ** (ಪರಿಭಾ ೯೨-೨) ಆಗಮವನ್ನು ವಿಧಿಸುವ ಶಾಸ್ತ್ರಗಳು ಅನಿತ್ಯವಾದುವು ಎಂಬುದರಿಂದ ಮಾಧವಾಚಾರ್ಯರ ಮತದಂತೆ **ಕ್ರಿದಾತಿಙಿ** (ಪಾ.ಸೂ- ೩-೪-೧೦೪) ಎಂಬುದರಿಂದಾಗಲೀ-ನೈಯ್ಯಾಕರಣರ ಪಕ್ಷದಂತೆ **ಯಾಸುಟ್ಪರಸ್ಮೈಪದೇಷೂದಾತ್ತೋಙಿಚ್ಚೆ** (ಪಾ.ಸೂ. ೩-೪-೧೧೩).

ಎಂಬುದರಿಂದಾಗಲೀ ವಿಹಿತವಾದ ಯಾ ಸುಡಾಗಮವು ಬರುವುದಿಲ್ಲ, ಭುನತ್ ಎಂಬಲ್ಲಿ **ತಿಙ್ಶಿತಿಜಿಃ** (ಪಾ. ಸೂ. ೮-೧-೭೮) ಎಂಬುದರಿಂದ ಅನುದಾತ್ತಬರುವುದು. ರಾಯೇ ಇಲ್ಲಿರುವ ವಿಭಕ್ತಿಯು ಶೈಶಬ್ದದ ಮುಂದೆ ಇರುವುದರಿಂದ **ಊಡಿದಂಪದಾದ್ಯಪ್ಪುಂಶೈದ್ಯುಭ್ಯಃ** (ಪಾ. ಸೂ. ೬-೧-೧೭೧) ಎಂಬುದರಿಂದ ಉದಾತ್ತವಾಗುವುದು. ಪುರಂಧೀ ವುರು=ಬಹುವಿಧವಾದ ಧೀಃ ಬುದ್ಧಿ ಎಂದರ್ಥವುಳ್ಳ ಪುರುಧೀಶಬ್ದದಿಂದ ಆಗಿರುವುದು. ಇಲ್ಲಿ **ಪೃಷೋದರಾದೀನಿ ಯಥೋಪದಿಷ್ಟಂ** (ಪಾ. ಸೂ. ೬-೩-೧೦೯) ಪೃಷೋದರ ಎಂಬ ಪದಕ್ಕೆ ಸದೃಶವಾದ ಪದಗಳು ಶಿಷ್ಟೋಚ್ಚರಿತಕ್ರಮವನ್ನನುಸರಿಸಿ ಸಾಧುಗಳಾಗುವುವು. ಇಲ್ಲಿ ಆದಿಶಬ್ದವು ಪ್ರಕಾರವಾಚಿ. ಪ್ರಕಾರ ಎಂದರೆ ಸಾದೃಶ್ಯ. ವ್ಯಾಕರಣ ಶಾಸ್ತ್ರ ಸಿದ್ಧವಾದ ಲೋಪಾಗಮಾದೇಶಾದಿರಹಿತತ್ವೇನ ಸಾದೃಶ್ಯವನ್ನು ವಿವಕ್ಷೆನಮಾಡಬೇಕು. ಪುರುಧೀಶಬ್ದದ ಉಕಾರಕ್ಕೆ ಆಮ್ ಆ ದೇಶವೂ ಈಕಾರಕ್ಕೆ ಹ್ರಸ್ವವೂ ವ್ಯಾಕರಣಶಾಸ್ತ್ರಸಿದ್ಧವಲ್ಲದಿದ್ದರೂ ಶಿಷ್ಟರು ಪುರಂಧಿ ಎಂದು ಉಚ್ಚರಿಸುವುದರಿಂದ ಪೂರೋಕ್ತಸೂತ್ರದಿಂದ ಅವು ಬರುವುವು ಪುರಂಧಿ ಎಂದಾಗುವುದು. **ಆದ್ಯುದಾತ್ತೈಪ್ರಕರಣೇದಿವೋದಾಸಾದೀನಾಂ ಛಂದಸ್ಯುಪಸಂಖ್ಯಾನಂ** (ಪಾ. ಸೂ. ೬-೨-೯೧-೧) ಛಂದಸ್ಸಿನಲ್ಲಿ ಬರುವ ದಿವೋದಾಸಾದಿಗಣಕ್ಕೆ ಸೇರಿದ ಶಬ್ದಗಳನ್ನು ಆದ್ಯುದಾತ್ತಪ್ರಕರಣಲ್ಲಿ ಪಠಿಸಬೇಕು ಎಂದನೇಬೆ ಅವುಗಳಿಗೆ ಆದ್ಯುದಾತ್ತ ಬರುವುದು ಎಂದರ್ಥ ಎಂಬುದರಿಂದ ಆದ್ಯುದಾತ್ತ ಬರುವುದು ಅಥವಾ ಪುರಂ ಶರೀರಂ ಧೀಯತೇ ಅಸ್ಯಾಂ ಎಂದು ವಿಗ್ರಹ ಮಾಡಿದಾಗ **ಕರ್ಮಣ್ಯಧಿಕರಣೇ ಚ** (ಪಾ. ಸೂ. ೩-೩-೯೩) ಕರ್ಮವ್ಯಾಚಕಸದವು ಉಪಪದವಾಗಿರುವಾಗ ಅಧಿಕರಣಾರ್ಥದಲ್ಲಿ ಘುಸಂಜ್ಞಕವಾದ ಧಾತುವಿನ (ದಾ-ಧಾ) ಮುಂದೆ ಕಿ ಪ್ರತ್ಯಯ ಬರುವುದು ಎಂಬುದರಿಂದ ಕಿ ಪ್ರತ್ಯಯ ಬರುವುದು ಪುರಂಧಾ+ಇ ಇಲ್ಲಿರುವ ಆ ಕಾರಕ್ಕೆ **ಆತೋಲೋಪಃ ಇಟಿ ಚ** (ಪಾ. ಸೂ. ೬-೪-೬೪) ಎಂಬುದರಿಂದ ಲೋಪಬರುವುದು. ಅಮ್ ವಿಭಕ್ತಿಗೆ **ಸುಪೋಧಾತುಪ್ರಾತಿಪದಿಕಯೋಃ** (ಪಾ. ಸೂ ೭-೪-೭೧) ಎಂಬದರಿಂದ ವಿಹಿತವಾದ ಲುಕ್ಕು ಇದು ಛಾಂದಸವಾದ್ದರಿಂದ ಬರುವುದಿಲ್ಲ. ನಬ್ವಿಷಯಸ್ಯಾನಿಸಂತಸ್ಯ, (ಫಿ. ಸೂ. ೨೬) ಎಂಬುದರಿಂದ ಪುರ ಶಬ್ದವು ಅದ್ಯುದಾತ್ತ **ಕುರುಗಾರ್ಹಪತ ರಿಕ್ತಗುರ್ವಸೂತಜರತ್ಯಶ್ಲೀಲ ದೃಢರೂಪಾ, ಪಾರೇವಡನಾತ್ಯೈತಿಲಕದ್ರ್ಯಾಃ, ಪದ್ಯಕೆಂಬಲೋದಾಸೀಭಾರಾಣಾಂ ಚ** (ಪಾ. ಸೂ. ೬-೨-೪೨) ಈ ಏಳು ಸಮಾಸಗಳ, ಮತ್ತು ದಾಸೀಭಾರ ಮೊದಲಾದ ಶಬ್ದಗಳ ಪೂರ್ವಪದವು ಪ್ರಕೃತಿಸ್ವರವನ್ನು ಹೊಂದುವುದು ಎಂಬುದರಿಂದ ದಾಸೀಭಾರಾದಿಗೆ ಸೇರಿದ ಪುರಂಧಿ ಶಬ್ದದ ಪೂರ್ವಪದವು ಪ್ರಕೃತಿಸ್ವರವನ್ನು ಹೊಂದುವುದು ಆದ್ದರಿಂದ ಪುರಂಧಿ ಎಂಬ ಸಮಾಸಪದವು ಆದ್ಯುದಾತ್ತವೇ ಆಗುವುದು. **ಗಮೆರ್ಡೋ**—ಗಮ್ಲೃ ಗತೌ ಎಂಬ ಧಾತುವಿನ ಮುಂದೆ ಲೇಟ್ ಪ್ರತ್ಯಯವನ್ನಿಟ್ಟರೆ ಲೇಟ್ಪಗೆ ಪ್ರಥಮಪುರುಷ ಏಕವಚನ ತಿಪ್ ಬರುವುದು, ಶಪ್ ವಿಕರಣಕ್ಕೆ **ಬಹುಲಂಛಂದಸಿ** (ಪಾ. ಸೂ. ೨-೪-೭೩) ಎಂಬುದರಿಂದ ಲುಕ್ ಬರುವುದು ತಿಪ್ ಪ್ರತ್ಯಯದ ಇಕಾರಕ್ಕೆ **ಇತಶ್ಚ ಲೋಪಃಪರಸ್ಮೈಪದೇಷು** (ಪಾ.ಸೂ. ೩-೪-೯೬) ಪರಸ್ಮೈಪದದಲ್ಲಿ ಲೇಟ್ಪಿನ ಸ್ಥಾನದಲ್ಲಿ ಬಂದ ತಿಜ್ಶಾನ ಇಕಾರಕ್ಕೆ ಲೋಪಬರುವುದು ಎಂಬುದರಿಂದ ಲೋಪ **ಲೇಟೋಽಡಾಟೌ** (ಪಾ. ಸೂ. ೩-೪-೯೪) ಟೀಟ್ಪಿಗೆ ಅಟ್ ಆಟ್ ಎಂಬ ಆಗಮಗಳು ಬರುವುವು ಅವು ಪಿತ್ತಾಗುವುವು ಎಂಬುದರಿಂದ ಪ್ರತ್ಯಯಕ್ಕೆ ಅಟ್ ಆಗಮ ಬರುವುದು ಗಮ್+ಅ ತ್ ಎಂದಿರುವುದು. **ಆಗಮಾ ಅನುದಾತ್ತಾಃ** (ಪಾ. ಸೂ ಮ. ೩-೧-೩-೬) ಆಗಮಗಳು ಅನುದಾತ್ತಗಳಾಗುವುವು ಎಂಬುದರಿಂದ ಅತ್ ಎಂಬಲ್ಲಿರುವ ಅಕಾರವು ಅನುದಾತ್ತ. ಗಮ್ ಎಂಬಲ್ಲಿ ಧಾತುಸ್ವರ ಉದಾತ್ತವೇ ಇರುವುದು. **ವಾಜೇಭಿಃ**--ವೃಷಾದಿಯಲ್ಲಿರುವುದರಿಂದ **ವೃಷಾದೀನಾಂ ಚ** (ಪಾ. ಸೂ ೬-೧-೨೦೩) ಎಂಬುದರಿಂದ ಆದ್ಯುದಾತ್ತ ॥೩॥

ಸಂಹಿತಾಪಾಠಃ

ಯಸ್ಯ॒ ಸಂಸ್ಥೇ॒ ನ ವೃ॑ಣ್ವ॒ತೇ॒ ಹರೀ॒ ಸಮ॑ತ್ಸು॒ ಶತ್ರ॑ವಃ ।
ತಸ್ಮಾ॒ ಇಂದ್ರಾ॑ಯ ಗಾಯತ ॥ ೪ ॥

ಪದಪಾಠಃ

ಯಸ್ಯ॑ । ಸಂ॒ಸ್ಥೇ । ನ । ವೃ॒ಣ್ವ॒ತೇ॒ । ಹರೀ॒ ಇತಿ॑ । ಸಮ॑ತ್ಸು । ಶತ್ರ॑ವಃ ॥
ತಸ್ಮೈ॑ । ಇಂದ್ರಾ॑ಯ । ಗಾಯತ ॥ ೪ ॥

ಸಾಯಣಭಾಷ್ಯಂ

ಸಮತ್ಸು ಯುದ್ಧೇಷು ಯಸ್ಯೇಂದ್ರಸ್ಯ ಸಂಸ್ಥೇ ರಥೇ ಯುಕ್ತೌ ಹರೀ ದ್ಯಾವಶ್ವೌ ಶತ್ರವೋ ನ ವೃಣ್ವತೇ ನ ಸಂಭಜಂತೇ । ರಥಮಶ್ವೌ ಚ ದೃಷ್ಟ್ವಾ ಪಲಾಯಂತ ಇತ್ಯರ್ಥಃ । ತಸ್ಮಾ ಇಂದ್ರಾಯ ತತ್ಸಂತೋಷಾರ್ಥಂ ಹೇ ಋತ್ವಿಜೋ ಗಾಯತ । ಸ್ತುತಿಂ ಕುರುತ । ರಣ ಇತ್ಯಾದಿಷು ಷಟ್ಸ್ವಾರಿಂಶತ್ಸು ಸಂಗ್ರಾಮನಾಮಸು ಸಮತ್ಸು ಸಮರಣ ಇತಿ ಪಠಿತಂ ॥ ಸಂಸ್ಥೇ । ಸಮ್ಯಕ್ ತಿಷ್ಠತೀತಿ ಸಂಸ್ಥೋ ರಥಃ । ಅತಶ್ಚೋಪಸರ್ಗೇ । ಪಾ ೩-೧-೧೩೬ । ಇತಿ ಕಪ್ರತ್ಯಯಃ । ಕೃದುತ್ತರಪದಪ್ರಕೃತಿಸ್ವರತ್ವಂ । ವೃಣ್ವತೇ। ಪ್ರತ್ಯಯಸ್ವರೇಣಾಕಾರ ಉದಾತ್ತಃ । ಸತಿ ಶಿಷ್ಟಸ್ವರಬಲೀಯಸ್ತ್ವಮನ್ತ್ರ ವಿಕರಣೇಭ್ಯಃ । ಪಾ. ೬-೧-೧೫೮-೯ । ತಿಙ್ಶಿತಿ ಇತಿ ನಿಘಾತೋ ನ ಭವತಿ ಯದ್ವೃತ್ತಾನ್ನಿತ್ಯಮಿತಿ ಪ್ರತಿಷೇಧಾತ್ । ಪಂಚಮಿನಿರ್ದೇಶೇಽಪಿ । ಪಾ. ೧-೧-೬೭ । ಅತ್ರ ವ್ಯವಹಿತೇಽಪಿ ಕಾರ್ಯಮಿಷ್ಯತೇ । ಪರತೋ ರಥಮಿತಿ ಹರೀ ಅಶ್ವೌ । ಇನ್ನಿತ್ಯನುವೃತ್ತೌ ಹೃಸಿಸಿರುಹಿವೃತಿವಿದಿಚ್ಛಿದಿಕೇರ್ತಿಭ್ಯಶ್ಚ । ಉ. ೪-೧೧೮ । ಇತೀನ್ಪ್ರತ್ಯಯಃ । ನಿತ್ತ್ವಾದಾದ್ಯುದಾತ್ತತ್ವಂ । ಸಮತ್ಸು । ಸಂಪೂರ್ವಾದತ್ತೇಃ ಕ್ವಿಪ್ । ಶತ್ರವಃ ಶತಿಃ ಸೌತ್ರೋ ಧಾತುರ್ಹಿಂಸಾರ್ಥಃ । ರುಶತಿಭ್ಯಾಂ ಕ್ರನ್ । ಉ. ೪-೧೦೩ । ನಿತ್ತ್ವಾದಾದ್ಯುದಾತ್ತತ್ವಂ । ತಸ್ಮೈ । ಸಾನೇಕಾಚ ಇತಿ ವಿಭಕ್ತ್ಯುದಾತ್ತಸ್ಯ ನ ಗೋಶ್ಪನ್ಸನಾವರ್ಣೇತಿ ಪ್ರತಿಷೇಧಾತ್ಪ್ರತಿಪದಿಕಸ್ವರ ಏವ ॥

॥ ಪ್ರತಿಪದಾರ್ಥ ॥

ಸಮತ್ಸು—ಯುದ್ಧಗಳಲ್ಲಿ । **ಶತ್ರವಃ**—ಶತ್ರುಗಳು । **ಯಸ್ಯ**—ಯಾವ (ಇಂದ್ರನ) । **ಸಂಸ್ಥೇ**—ರಥದಲ್ಲಿ (ಹೂಡಿರುವ) । **ಹರೀ**—ಎರಡು ಕುದುರೆಗಳನ್ನು । **ನ ವೃಣ್ವತೇ**—ಹೊಂದಲಾರರೋ । **ತಸ್ಮೈ**—ಅಂತಹ । **ಇಂದ್ರಾಯ**—ಇಂದ್ರನಿಗಾಗಿ । **ಗಾಯತ**—ಸ್ತೋತ್ರಗಳಿಂದ ಗಾನಮಾಡಿರಿ ॥

॥ ಭಾವಾರ್ಥ ॥

ಯುದ್ಧಗಳಲ್ಲಿ ಶತ್ರುಗಳು ಯಾವ ಇಂದ್ರನ ರಥಕ್ಕೆ ಹೂಡಿರುವ ಕುದುರೆಗಳ ಸಮೀಪಕ್ಕೆ ಸಹ ಬರಲಸಮರ್ಥರೋ ಅಂತಹ ಶಕ್ತಿಯುಳ್ಳ ಇಂದ್ರನನ್ನುದ್ದೇಶಿಸಿ ಸ್ತೋತ್ರಾದಿಗಳಿಂದ ಗಾನಮಾಡಿರಿ.

English Translation

Sing in honour of that Indra whose pair of towny horses the enemies do not approach in battles.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಇಂದ್ರನ ಶಕ್ತಿಯನ್ನು ಅಪ್ರತ್ಯಕ್ಷವಾಗಿ (indirectly) ವರ್ಣಿಸಿರುವುದು. ಇಂದ್ರನಿಗೂ ಅವನ ಶತ್ರುಗಳಿಗೂ ಯುದ್ಧ ನಡೆಯುವಾಗ ಆ ಶತ್ರುಗಳು ಇಂದ್ರನ ರಥಕ್ಕೆ ಕಟ್ಟಿದ ಕುದುರೆಗಳ ಸಮೀಪಕ್ಕೆ ಸಹ ಬರಲು ಶಕ್ತಿಯಿಲ್ಲದಿರುವಾಗ ಇಂದ್ರನೊಡನೆ ಸಂಧಿಸಿ ಯುದ್ಧಮಾಡುವುದೆಂತು? ಆದುದರಿಂದ ಇಂದ್ರನ ರಥವನ್ನು ಕಂಡಕೂಡಲೇ ಶತ್ರುಗಳು ಪಲಾಯನಮಾಡುವುರೆಂದು ಎಂದರೆ ಹೆದರಿ ಓಡಿಹೋಗುವರೆಂದು ಅಭಿಪ್ರಾಯವು.

ಸಂಸ್ಥೇ—ಸಮ್ಯಕ್ ತಿಷ್ಠತೀತಿ ಸಂಸ್ಥೋ ರಥಃ । ಯುದ್ಧಾದಿಗಳಲ್ಲಿ ದೃಢವಾಗಿ ನಿಲ್ಲುವುದಾದುದರಿಂದ ಇದಕ್ಕೆ ಸಂಸ್ಥೆ ಎಂದರೆ ರಥವೆಂದರ್ಥವು. ಸ್ಕಂದಸ್ವಾಮಿಯು ಸಂಸ್ಥೇ ಎಂಬ ಶಬ್ದಕ್ಕೆ ಸಂಗ್ರಾಮೆ-ಯುದ್ಧದಲ್ಲಿ ಎಂದರ್ಥಮಾಡಿರುವರು. ಆದರೆ ಈ ಋಕ್ಕಿನಲ್ಲಿ ಯುದ್ಧಶಬ್ದಸೂಚಕವಾದ ಸಮತ್ಸು ಎಂಬ ಪ್ರತ್ಯೇಕಪದವಿರುವುದರಿಂದ ಸಂಸ್ಥೆ ಎಂಬ ಶಬ್ದಕ್ಕೆ ಪುನಃ ಯುದ್ಧವೆಂಬ ಅರ್ಥವನ್ನು ಹೇಳಬೇಕಾದ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಭಾಷ್ಯಕಾರರು ಮಾಡಿರುವ ರಥವೆಂಬ ಅರ್ಥವೇ ಇಲ್ಲಿ ಸರಿಯೆಂದು ಹೇಳಬೇಕಾಗಿರುವುದು.

ಹರೀ—ಹರತೋ ರಥಮಿತಿ ಹರೀ ಆಶ್ವೌ । ರಥವನ್ನು ಒಯ್ಯುವುದರಿಂದ ಇವಕ್ಕೆ ಹರೀ ಎಂದರೆ ಕುದುರೆಗಳು ಎಂದರ್ಥವು. ಹರಿಶಬ್ದವು ಸಾಧಾರಣವಾಗಿ ಕುದುರೆ ಎಂಬ ಅರ್ಥದಲ್ಲಿ ಉಪಯೋಗಿಸಲ್ಪಡುವುದಾಗಿದ್ದರೂ ಈ ಶಬ್ದಕ್ಕೆ tawny or bay horse ಹರಿತವರ್ಣದ ಕುದುರೆಗಳೆಂದು ಹೇಳಬೇಕಾಗುವುದು. ಈ ಶಬ್ದವು ಆಧುನಿಕಸಂಸ್ಕೃತದಲ್ಲಿಯೂ ಬಳಕೆಯಲ್ಲಿದೆ.

ಸಮತ್ಸು—ರಣ ಮೊದಲಾದ ನಲವತ್ತಾರು ಯುದ್ಧವಾಚಕಗಳಾವ ಶಬ್ದಗಳ ಮಧ್ಯದಲ್ಲಿ ಸಮತ್ಸು ಎಂಬ ಶಬ್ದವು ಪಠಿತವಾಗಿದೆ (ನಿ. ೩-೯). ಈ ಶಬ್ದವು ಯಾವಾಗಲೂ ಸಪ್ತಮೀ ಬಹುವಚನದಲ್ಲಯೇ ಉಪಯೋಗಿಸಲ್ಪಡುವುದು. ಈ ಋಕ್ಕಿನಲ್ಲಲ್ಲದೆ ಋ. ಸಂ. ೧-೬೬-೩ ; ೧-೭೦-೬ ; ೧-೧೩೦-೮ ; ೧-೧೭೩-೭ ; ೨-೧೨-೩ ; ೩-೩೦-೨೨ ; ೪-೨೪-೪ , ೪-೩೮-೪ ; ೫-೨೦-೧ ; ೪-೩೮-೪ ; ೬-೧೮-೬ ; ೬-೨೫-೯ ಇತ್ಯಾದಿ ೯೯ ಋಕ್ಕುಗಳಲ್ಲಿ ಈ ಶಬ್ದಪ್ರಯೋಗವಿದೆ. ಸ್ಕಂದಸ್ವಾಮಿಯು ಈ ಶಬ್ದಕ್ಕೆ—**ಅದ ಭಕ್ಷಣೇ । ಸಂಭಕ್ಷಯಂತ್ಸು ಪರಸ್ಪರಂ ಯೋದ್ಧೃಷು ಮಹತಿ ಯುದ್ಧೇ ಪ್ರವೃತ್ತೆ ಇತ್ಯರ್ಥಃ ॥** ಎಂದರೆ **ಅದ** ಎಂಬ ಧಾತುವಿಗೆ ಭಕ್ಷಿಸು ಎಂದರ್ಥವು. ಆದುದರಿಂದ ಸಮತ್ಸು ಎಂಬ ಶಬ್ದಕ್ಕೆ ಯುದ್ಧದಲ್ಲಿ ಭಟರು ಒಬ್ಬರನ್ನೊಬ್ಬರು ಕಡಿದಾಡಿ ಭಕ್ಷಿಸುವರಾದುದರಿಂದ ಸಮತ್ಸು ಎಂದರೆ ಯುದ್ಧಗಳಲ್ಲಿ ಎಂದರ್ಥಮಾಡಿದಾರೆ. ಪಾಶ್ಚಾತ್ಯರು ಈ ಶಬ್ದಕ್ಕೆ fight, battle, contest, especially battle where confused voices of men, and din of weapons are heard ಎಂಬ ಅರ್ಥವೆಂದು ಅಭಿಪ್ರಾಯಪಡುವರು.

ವ್ಯಾಕರಣಪ್ರಕ್ರಿಯಾ

ಸಂಸ್ಥೇ-ಸಮ್ಯಕ್ ತಿಷ್ಠತಿ ಇತಿ (ಜೆನ್ನಾಗಿರುವುದು ಎಂದು) ಸಂಸ್ಥಃ ರಥ ಎಂದರ್ಥ. ಸಂ ಎಂಬ ಉಪಸರ್ಗದ ಮುಂದಿರುವ ಸ್ಥಾ (ಷ್ಠಾ ಗತಿನಿವೃತ್ತೌ)ಎಂಬ ಧಾತುವಿಗೆ **ಆತಶ್ಚೋಪಸರ್ಗೇ** (ಪಾ.ಸೂ. ೩-೧-೧೩೬)ಉಪಸರ್ಗವು ಉಪಪದವಾಗಿರುವಾಗ ಆಕಾರಾಂತ ಧಾತುವಿನ ಮುಂದೆ ಕ, ಪ್ರತ್ಯಯಬರುವುದು. ಎಂಬುದರಿಂದ ಕ ಪ್ರತ್ಯಯ ಬಂದರೆ, **ಆತೋಲೋಪಇಟಿಚ** (ಪಾ. ಸೂ. ೬-೪-೬೪) ಎಂಬುದರಿಂದ ಆಕಾರಕ್ಕೆ ಲೋಪಬರುವುದು. ಕೃದುತ್ತರಪದಪ್ರಕೃತಿಸ್ವರ ಬರುವುದು. ವೃಣ್ವತೇ-ವೃಞ್ ವರಣೇ ಸ್ವಾದಿ, ಲಟ್ ಆತ್ಮನೇಪದ ಪ್ರಥಮ ಪುರುಷ ಬಹುವಚನ **ಸ್ವಾದಿಭ್ಯಃಶ್ನುಃ** (ಸಾ. ಸೂ. ೩-೧-೭೩) ಸ್ವಾದಿಗಣಪಠಿತಧಾತುಗಳಿಗೆ ಶ್ನು ವಿಕರಣ ಬರುವುದು ವೃ+ನುಃ+ರುಃ **ಅತ್ಮನೇಪದೇಷ್ವನತಃ** (ಪ್ರಾ. ಸೂ. ೭-೧-೫) ಅಕಾರವನ್ನುಳಿಸ ವರ್ಣದ ಮುಂದಿರುವ ಆತ್ಮನೇ ಪದದ ರುಃ ಎಂಬುದಕ್ಕೆ ಅತ್ ಆದೇಶ ಬರುವುದು ಎಂಬುದರಿಂದ ರುಃ ಎಂಬುದಕ್ಕೆ ಅತ್ ಆದೇಶ ಬಂದರೆ ವೃ+ನು+ಅತ ಉಕಾರಕ್ಕೆ **ಹುಶ್ನುವೋಸ್ಸಾರ್ವಧಾತುಕೇ** (ಪಾ. ಸೂ ೬-೪-೮೭) ಸಾರ್ವಧಾತುಕಪರದಲ್ಲಿರುವಾಗ ಹುಧಾತುವಿಗೂ, ಶ್ನು ಪ್ರತ್ಯಯಾಂತವಾಗಿಯೂ ಅನೇಕಾಚ್ಕವಾಗಿಯೂ ಇರುವ ಅಂಗದ ಅನಯನವಾದ ಉಕಾರವು ಸಂಯುಕ್ತಾಕ್ಷರದ ಮುಂದೆ ಇಲ್ಲದೆ ಇದ್ದರೆ ಅದಕ್ಕೂ ಯಣ್ ಬರುವುದು ಎಂಬುದರಿಂದ ಯಣಾದೇಶ. **ಟಿತ ಆತ್ಮನೇ ಪದಾನಾಂ ಟೆರೇ** (ಪಾ. ಸೂ. ೩-೪-೭೯) ಟಿತ್ತಾದ ಲಕಾರಸ್ಥಾನದಲ್ಲಿ ಬಂದ ಆತ್ಮನೇಪದ ಪ್ರತ್ಯಯದ ಟಿ-ಗೆ ಏ ಬರುವುದು. ಇದರಿಂದ ತವಿನ ಅಕಾರಕ್ಕೆ ಏಬಂದರೆ **ಋವರ್ಣಾನ್ನೆಸ್ಯೆಣತ್ವಂ ವಾಚ್ಯಂ** (೮-೪-೧ ವಾ ೧) ಎಂಬುದರಿಂದ ಋಕಾರದಮುಂದೆ ಇರುವ ನಕಾರಕ್ಕೆ ಣಕಾರಾದೇಶ ಬಂದುವೃಣ್ವತೇ ಎಂದಾಗುವುದು. ಇಲ್ಲಿ ಮೊದಲು ಧಾತುಸ್ವರವೂ ನಂತರ ರುಃಪ್ರತ್ಯಯಸ್ವರವೂ ನಂತರ ಶ್ನು ಪ್ರತ್ಯಯಸ್ವರವೂ ಬರುವುದು **ಸತಿಶಿಷ್ಟಸ್ವರ ಬಲೀಯಸ್ತ್ವಂ ಅನ್ಯತ್ರವಿಕರಣೇಭ್ಯಃ** (ಪಾ- ಸೂ. ೬-೧-೧೫೫-೭-೧೧) ಕೆಲವು ಸ್ವರಗಳು ಉತ್ಪನ್ನವಾದ ಮೇಲೆ ವಿಹಿತವಾದ ಸ್ವರವು ಬಲವಾದುದು ಎಂಬುದರಿಂದ ಧಾತುಸ್ವರ ಪ್ರತ್ಯಯಸ್ವರಗಳು ಬಂದಮೇಲೆ ಶ್ನು ವಿಕರಣಕ್ಕೆ ಬರುವ ಸ್ವರವು ಬಲವಾದ್ದರಿಂದ ಶ್ನುಗೆ ಉದಾತ್ತನನ್ನು ವಿಧಿಸುವ **ಆದ್ಯುದಾತ್ತಶ್ಚ** ಎಂಬ ಸೂತ್ರದಲ್ಲಿ ಏಕವಾಕ್ಯತಾಪನ್ನವಾದ **ಅನುದಾತ್ತಂ ಪದಮೇಕವರ್ಜಂ** (ಪಾ. ಸೂ ೬-೧-೧೫೮) ಎಂಬುದರಿಂದ ಪ್ರತ್ಯಯದ ಅಕಾರವು ಅನುದಾತ್ತವಾಗಲಿ ಎಂದು ಆಕ್ಷೇಪ ಬರಬಹುದು. ಆದರೆ ಹಿಂದಿನ ವಚನದಲ್ಲಿ 'ಅನ್ಯತ್ರವಿಕರಣೇಭ್ಯಃ, ವಿಕರಣ'ಕ್ಕಿಂತಲೂ ಬೇರೆ ಸ್ಥಳದಲ್ಲಿ ಸತಿ ತಿಸ್ಟಸ್ವರವು ಬಲವಾದುದೇ ವಿನಾ ವಿಕರಣದಲ್ಲಿ ಸತಿ ತಿಸ್ಟಸ್ವರವು ಬಲವಾಗುವುದಿಲ್ಲ ಎಂಬುದರಿಂದ ವಿಕರಣಸ್ವರವು ಪ್ರತ್ಯಯ ಸ್ವರವನ್ನು ಬಾಧಿಸುವುದಿಲ್ಲ ಆದ್ದರಿಂದ ವೃಣ್ವತೇ ಎಂಬಲ್ಲಿ ಅ ಎಂಬುದು ಪ್ರತ್ಯಯ ಸ್ವರದಿಂದ ಉದಾತ್ತವೇ ಆಗುವುದು 'ಸತಿಶಿಷ್ಟಸ್ವರ ಬಲೀಯಸ್ತ್ವಮ ನ್ಯತ್ರವಿಕರಣೇಭ್ಯಃ' ಎಂಬಲ್ಲಿ ಮೊದಲನೆಯ ಅಂಶವು ನ್ಯಾಯಸಿದ್ಧವಾದುದು. ಉದಾತ್ತ ಅಥವಾ ಸ್ವರಿತವನ್ನು ವಿಧಿಸುವ ಶಾಸ್ತ್ರದೊಂದಿಗೆ ಏಕವಾಕ್ಯತೆಯನ್ನು ಹೊಂದಿದ **ಅನುದಾತ್ತಂ ಪದಮೇಕವರ್ಜಂ** (ಪಾ. ಸೂ. ೬-೧-೧೫೮) ಎಂಬ ಪರಿಭಾಷೆಯಿಂದ ಮಿಕ್ಕವುಗಳಿಗೆ ಅನುದಾತ್ತವು ವಿಧಿಸಲ್ಪಡುವುದು. ಅಲ್ಲಿ ಉತ್ಸರ್ಗಶಾಸ್ತ್ರವೇ ಆಗಲಿ ಅಪವಾದವೇ ಆಗಲೀ ಕೊನೆಯಲ್ಲಿ ಯಾವುದು ಪ್ರವೃತ್ತವಾಗುವುದೋ ಅಲ್ಲಿ ಈ ಪರಿಭಾಷೆಯು ಉಪಸ್ಥಿತವಾದರೆ ಪೂರ್ವದಲ್ಲಿ ಪ್ರವೃತ್ತವಾದವುಗಳಿಗೆ ಬಾಧವು ತಾನಾಗಿಯೇ ಏರ್ಪಡುವುದು. ಹೇಗೆಂದರೆ ಔಸರ್ಗವತ್ವಂ ಎಂಬುದನ್ನು ಉದಾಹರಣೆಯಾಗಿ ತೆಗೆದುಕೊಳ್ಳುವ. ಉಸರ್ಗ ಶಬ್ದದ ಮುಂದೆ ಅಣ್ ಪ್ರತ್ಯಯ. ಅದರ ಮುಂದೆ ತ್ವ ಪ್ರತ್ಯಯವು ಇರುವುದು. ಎರಡನೆಯ ಪ್ರತ್ಯಯವಾದತ್ವ ಎಂಬುದಕ್ಕೆ ಆದ್ಯುದಾತ್ತ ವಿಧಾಯಕ. **ಆದ್ಯುದಾತ್ತಶ್ಚ** ಎಂಬ ಸೂತ್ರೈಕವಾಕ್ಯತಾಪನ್ನವಾದ 'ಅನುದಾತ್ತಂ ಪದಮೇಕವರ್ಜಂ' ಎಂಬುದು ಮೊದಲನೆ ಪ್ರತ್ಯಯವಾದ ಅಣ್‌ಗೆ ಆದ್ಯುದಾತ್ತ

ವಿಧಾಯಕ 'ಆದ್ಯುದಾತ್ತಶ್ಚ' ಎಂಬುದನ್ನು ಬಾಧಿಸುವುದು, 'ಅನ್ಯತ್ರವಿಕರಣೇಭ್ಯಃ' ಎಂಬುದು ಜ್ಞಾಪಕಸಿದ್ಧವಾದ ವಚನ. ಹೇಗೆಂದರೆ **ತಾಸ್ಯನುದಾತ್ತೇತ್**—(ಪಾ. ಸೂ. ೬-೧-೧೮೬) ಎಂಬ ಸೂತ್ರದಲ್ಲಿ ತಾಸ್ ಎಂಬ ವಿಕರಣಕ್ಕಿಂತಲೂ ಮುಂದಿರುವ ಲಸ್ಥಾನಿಕಸಾರ್ವಧಾತುಕಕ್ಕೆ ಅನುದಾತ್ತವನ್ನು ವಿಧಿಸಿರುವರು. **ಸ್ಯತಾಸೀಲ್ಲುಲುಟೋಃ** (ಪಾ- ಸೂ. ೩-೧-೩೩) ಎಂಬುದರಿಂದ ಲಾವಸ್ಥೆಯಲ್ಲಿ ತಾಸ್ ಪ್ರತ್ಯಯಕ್ಕೆ ವಿಧಿ ಇದ್ದರೂ ಅಂತರಂಗವಾಗಿಯೂ ಪರವಾಗಿಯೂ ಇರುವ ಲಸ್ಥಾನಿಕ ಆದೇಶಗಳು ಬಂದಮೇಲೆ ತಾಸ್ ವಿಕರಣ ಬರುವುದು. **ಈಗ 'ಸತಿಶಿಷ್ಟ ಸ್ವರೋಬಲೀಯಾನ್'** ಎಂಬುದರಿಂದ ತಾಸ್ ಎಂಬುದಕ್ಕೆ ಬರುವ ಉದಾತ್ತವು ಬಲವಾದ್ದರಿಂದ ತಾಸ್ ಪ್ರತ್ಯಯಕ್ಕೆ ಉದಾತ್ತ ವಿಧಾಯಕ ವಿಧಿವಾಕ್ಯೈಕತಾಪನ್ನವಾದ **ಅನುದಾತ್ತಂ ಪದಮೇಕವರ್ಜಂ** ಎಂಬುದರಿಂದ ಲಸಾರ್ವಧಾತುಕಕ್ಕೆ ಅನುದಾತ್ತವು ಸಿದ್ಧವಾಗುವುದು. ಹೀಗಿರುವುಲ್ಲಿ ಪುನಃ ಅನುದಾತ್ತ ವಿಧಿಯು ವ್ಯರ್ಥವಾಗಿ ' ವ್ಯರ್ಥಂ ಸತ್ ಕಿಂಚಿದರ್ಥಂ ಜ್ಞಾಪಯತಿ' ಎಂಬ ನ್ಯಾಯದಿಂದ **ಸತಿಶಿಷ್ಟಸ್ವರಬಲೀಯಸ್ತ್ವಂ ಅನ್ಯತ್ರ ವಿಕರಣೇಭ್ಯಃ** ಎಂದು ಜ್ಞಾಪಿಸುವುದು. ಈಗ ತಾಸ್ ಎಂಬುದು ವಿಕರಣವಾದ್ದರಿಂದ ತಾಸ್ ಸ್ವರವು ಪ್ರತ್ಯಯಸ್ವರಕ್ಕೆ ಬಾಧಕವಾಗುವುದಿಲ್ಲ. ಆಂದಮೇಲೆ ಲಸಾರ್ವಧಾತುಕಪ್ರತ್ಯಯಕ್ಕೆ ಪ್ರತ್ಯಯಸ್ವರಉದಾತ್ತವೇ ಬರಬೇಕಾಗಿ ಬರುವುದು. ಅನುದಾತ್ತವು ಬರದೇ ಹೋಗುವುದು ಆದ್ದರಿಂದ ಅನುದಾತ್ತವಿಧಿಯು ಸಾರ್ಥಕವಾಗುವುದು. **ಸ್ಯತಾಸೀಲೃಲುಟೋಃ** ಎಂಬಲ್ಲಿ ಆರ್ಧಧಾತುಕೇ ಎಂಬುದನ್ನು ಅನುವೃತ್ತಿಮಾಡಿಕೊಂಡು ಆರ್ಧಧಾತುಕವಾದ ಲೃಲುಟ್ಲುಗಳು ಪರವಾಗಿರುವಾಗ ಸ್ಯತಾಸಿಗಳು ಬರುವುವು ಎಂದು ಅರ್ಥವನ್ನು ಹೇಳಿದರೆ ಲಾವಸ್ಥೆಯಲ್ಲಿ ತಾಸ್ ಬಂದು ನಂತರ ಲಕಾರಸ್ಥಾನದಲ್ಲಿ ಸಾರ್ವಧಾತುಕಬರುವುದು ಈಗ ಸಾರ್ವಧಾತುಕಸ್ವರವೇ ಸತಿಶಿಷ್ಟವಾಗುವಕಾರಣ ಅದಕ್ಕೆ ಅನುದಾತ್ತ ಬರುವುದಿಲ್ಲ. ಆದಕಾರಣ **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಎಂಬ ವಿಧಿಯು ಸಾರ್ಥಕವಾಗುವುದರಿಂದ ಇದಕ್ಕೆ ಪೂರ್ವೋಕ್ತಾರ್ಥಜ್ಞಾಪಕತ್ವ ಬರುವುದಿಲ್ಲ ಎಂದರೆ **ಈ ಪಕ್ಷದಲ್ಲಿ ಅನ್ಯತ್ರವಿಕರಣೇಭ್ಯಃ** ಎಂಬುದು ವಾಚನಿಕ ಎಂದು ಇಟ್ಟುಕೊಳ್ಳಬೇಕು. ವೃಣ್ವತೇ ಎಂಬಲ್ಲಿ **ಯೆಜ್ವೃತ್ತಾನ್ನಿತ್ಯಂ** (ಪಾ.ಸೂ. ೮-೧-೬೬ ಯಾವ ಪದದಲ್ಲಿ ಯಚ್ಛಬ್ದವಿರುವುದೋ ಅಲ್ಲಿ ಯಚ್ಛಬ್ದದ ಮುಂದಿರುವ ತಿಙಂತವು ಅನುದಾತ್ತವಾಗುವುದಿಲ್ಲ. ಆದರೆ ಇಲ್ಲಿ ವೃಣ್ವತೇ ಎಂಬ ತಿಙಂತವು ಯಚ್ಛಬ್ದಕ್ಕೆ ಅವ್ಯವಹಿತಪರದಲ್ಲಿಲ್ಲ ಆದ್ದರಿಂದ **ಯೆಜ್ವೃತ್ತಾನ್ನಿತ್ಯಂ** ಎಂಬ ನಿಷೇಧವು ಹೇಗೆ ಬರುವುದು ಎಂದರೆ **ಪೂಜನಾತ್ಪೂಜಿತಮನುದಾತ್ತಂ** (ಪಾ. ಸೂ. ೮-೧-೬೭) ಈಸೂತ್ರದಲ್ಲಿ ಪೂಜನವು ಪೂಜಿತಸಾಪೇಕ್ಷವಾದ್ದರಿಂದ ಪೂಜನಾತ್ ಇತ್ಯುಕ್ತಿಮಾತ್ರದಿಂದಲೇ ಪೂಜಿತ ಎಂಬ ಅರ್ಥವು ಲಭಿಸುವುದು ಹೀಗಿರುವಾಗ ಪುನಃ ಪೂಜಿತಗ್ರಹಣವು ಪ್ರಶಸ್ತ ಪೂಜಿತ ಎಂಬ ಅರ್ಥ ಬರುವುದಕ್ಕಾಗಿ ಇರುವುದು ಇಲ್ಲಿ ಪ್ರಾಶಸ್ತ್ಯವು ಅನಂತರ್ಯನಿಬಂಧನವಾದುದು ಅನಂತರವಾದ ಅಂದರೆ ಅವ್ಯವಹಿತಪರದಲ್ಲಿರುವ ಪೂಜಿತ ಎಂಬ ಅರ್ಥಕ್ಕಾಗಿ ಪೂಜಿತಗ್ರಹಣ ಎಂದಾಯಿತು. ಪಂಚಮ್ಯಾನಿರ್ದೇಶದಿಂದಲೇ ಅನಂತರ್ಯವು ಸಿದ್ಧವಾಗುವುದರಿಂದ ಪುನಃ ಪೂಜಿತಗ್ರಹಣವು ವ್ಯರ್ಥವಾಗಿ **ಅತ್ರ ಪ್ರಕರಣೇ ಪಂಚಮ್ಯಾನಿರ್ದೇಶೇಪಿ ನಾನಂತರ್ಯಮಿಷ್ಯತೇ** ಎಂದು ಜ್ಞಾಪಿಸುವುದು. ಈಗ ಈ ವಚನದಿಂದ ಪಂಚಮ್ಯಾನಿರ್ದೇಶವಿದ್ದರೂ ಅನಂತರ್ಯ ಎಂಬ ಅರ್ಥವು ಲಭಿಸುವುದಿಲ್ಲ ಆದ್ದರಿಂದ ಅನಂತರ್ಯಾರ್ಥಲಾಭಕ್ಕಾಗಿ ಮಾಡಿರುವ ಪೂಜಿತಗ್ರಹಣವು ಸಾರ್ಥಕವಾಗುವುದು ಪ್ರಕೃತದಲ್ಲಿ ಯಚ್ಛಬ್ದಕ್ಕಿಂತಲೂ ಅವ್ಯವಹಿತಪರದಲ್ಲಿಲ್ಲದೇ ಇದ್ದರೂ **ಯೆಜ್ವೃತ್ತಾನ್ನಿತ್ಯಂ** ಎಂಬ ನಿಷೇಧವು ಬರುವುದರಿಂದ **ತಿಙ್ಶಿತಿಙ** ಎಂಬುದರಿಂದ ವೃಣ್ವತೇ ಎಂಬುದಕ್ಕೆ ಅನುದಾತ್ತ ಬರುವುದಿಲ್ಲ. ಹರತಃ ರಥಂ (ತೇರನ್ನು ಎಳೆಯುವವು) ಇತಿ ಹರೀ, ಎರಡು ಕುದುರೆಗಳು. **ಹೃಷಿಷಿರುಹಿವೃತಿವಿದಿಚಿದಿಕೀರ್ತಿಭ್ಯಶ್ಚ** (ಉ.ಸೂ. ೪-೫-೫೮) ಹೃಞ್ ಪಿಷ್ಲೃಸಂಚೂರ್ಣನೇ ರುಹಬೀಜಜನ್ಮನಿ ಪ್ರಾದುರ್ಭಾವೇ ಚ-ವೃತುವರ್ತನೇ-ವಿದಸತ್ತಾಯಾಂ ಕೃತಸಂಶಬ್ದನೇ

ಈ ಧಾತುಗಳ ಮುಂದೆ ಇಪ್ರತ್ಯಯ ಬರುವುದು ಎಂಬುದರಿಂದ ಹೃ ಧಾತುವಿನಮುಂದೆ ಇನ್ ಬಂದನಂತರ ಗುಣ ಬಂದರೆ ದ್ವಿತೀಯಾ ದ್ವಿವಚನದಲ್ಲಿ ಹರೀ ಎಂದಾಗುವುದು. ಪ್ರತ್ಯಯವು ನಿತ್ತಾದ್ದರಿಂದ ನಿತ್ಸ್ವರ ಆದ್ಯುದಾತ್ತ-ಸಮತ್ಸು-ಸಂಪೂರ್ವಕವಾದ ಅದ ಧಾತುವಿನ ಮುಂದೆ ಕ್ವಿಪ್ ಪ್ರತ್ಯಯ ಬರುವುದು. ಶತ್ರವಃ—ಶತ ಧಾತುವು ಸೌತ್ರವಾದುದು-ಎಂದರೆ ಪ್ರಸಿದ್ಧವಾದ ಧಾತುಪಾಠದಲ್ಲಿ ಇದನ್ನು ಪಾಠನಾಡಿಲ್ಲ. ಸೂತ್ರಗಳಲ್ಲಿ ವ್ಯವಹಾರ ಮಾಡಿರುವುದರಿಂದ ಈ ಧಾತುವನ್ನು ಪ್ರಾಮಾಣಿಕವೆಂದು ಒಪ್ಪಬೇಕು ಎಂದರ್ಥ. ಹಿಂಸೆ ಎಂದು ಇದಕ್ಕೆ ಅರ್ಥ-ರುಶತಿಭ್ಯಾಂಕ್ವುನ್ (ಉ. ಸೂ. ೪-೫೫-೪೩) ಎಂಬುದರಿಂದ ಕ್ವುನ್ ಪ್ರತ್ಯಯ ಬರುವುದು. ಶತ್ರು ಎಂದಾಗುವುದು ಇದರಮುಂದೆ ಪ್ರಥಮಾವಿಭಕ್ತಿಬಹುವಚನ ಜಸ್ ಪ್ರತ್ಯಯವನ್ನು ಹಚ್ಚಬೇಕು. ಜಕಾರ ಸಕಾರಗಳಿಗೆ ಇತ್ಸಂಜ್ಞೆ ಬಂದು ಲೋಪ ಬರುವುದು. ಶತ್ರು+ಅಸ್ ಜಸಿ ಚೆ (ಪಾ. ಸೂ. ೭-೩-೧೦೯) ಜಸ್ ಪ್ರತ್ಯಯ ಪರದಲ್ಲಿರುವಾಗ ಇ ಉ ಋ ವರ್ಣಗಳನ್ನು ಕೊನೆಯಲ್ಲಿ ಹೊಂದಿರುವ ಶಬ್ದಕ್ಕೆ ಗುಣಬರುವುದು ಎಂದು ಅರ್ಥ. ಇದರಿಂದ ಶತ್ರು ಶಬ್ದದ ಉಕಾರಕ್ಕೆ ಓಕಾರ ಶತ್ರೋ+ಅಸ್-ಓಕಾರಕ್ಕೆ ಅವ್ ಆದೇಶ ಸ್‌ಗೆ ರೇಫಾದೇಶಬಂದು ವಿಸರ್ಗಬಂದರೆ ಶತ್ರವಃ ಎಂದಾಗುವುದು. ಇಲ್ಲಿ ಧಾತುಸ್ವರವನ್ನು ಬಾಧಿಸಿ ಪ್ರತ್ಯಯಾದ್ಯುದಾತ್ತವು ಪ್ರಾಪ್ತವಾದರೆ -ಅದನ್ನು ಬಾಧಿಸಿ ಇತ್ನಿತ್ಯಾದಿರ್ನಿತ್ಯಂ ಎಂಬುದರಿಂದ ಶತ್ರು ಎಂಬ ಪ್ರತ್ಯಯಾಂತದ ಆದಿಗೆ ಉದಾತ್ತ ಬರುವುದು. ಕೊನೆಯ ವರ್ಣ ಅನುದಾತ್ತ ಅಸ್ ಸುಪ್ಪಾದ್ದರಿಂದ ಅನುದಾತ್ತ. ಉಕಾರಸ್ಥಾನದಲ್ಲಿ ಬಂದ ಓಕಾರ ಸ್ಥಾನಿವದ್ಭಾವದಿಂದ ಅನುದಾತ್ತ. ಅದರ ಸ್ಥಾನದಲ್ಲಿ ಬಂದ ಅವ್ ಆದೇಶವೂ ಹೀಗೆಯೇ ಅನುದಾತ್ತ. ಆಂತು ಶತ್ರವಃ ಎಂಬಲ್ಲಿ ಮೊದಲನೆಯ ಅಕಾರ ಉದಾತ್ತ. ಎರಡು ಮೂರನೆಯ ವರ್ಣಗಳು ಅನುದಾತ್ತಗಳು.

ತಸ್ಕೃ—ತನುವಿಸ್ತಾರೇ ಧಾತು. ತೃಜಿತನಿಯಜಿಭ್ಯೋಡಿತ್ (ಉ. ಸೂ. ೧-೧೪೯) ಶ್ವಾ ದ್ವ್ಯಾ ಭಸೋಽದಿಃ ಎಂಬ ಹಿಂದಿನ ಸೂತ್ರದಿಂದ ಅದಿಃ ಪದವು ಬರುವುದು ತೃಜ ಹಾನೌ-ತನು ವಿಸ್ತಾರೇ-ಯಜ ದೇವ ಪೂಜಾದೌ ಈ ಮೂರುಧಾತುಗಳ ಮುಂದೆ ಅದಿಪ್ರತ್ಯಯ ಬರುವುದು. ಅದು ಡಿತ್ ಆಗುವುದು ಎಂದು ಸೂತ್ರಕ್ಕೆ ಅರ್ಥ. ಇದರಿಂದ ಅದಿ ಪ್ರತ್ಯಯ ಬಂದರೆ ತನ್+ಅದ್ ಪ್ರತ್ಯಯವು ಡಿತ್ತಾದ್ದರಿಂದ ಅದರ ಹಿಂದೆ ಇರುವ ಅನ್ ಎಂಬ ಟಿ ಗೆ ಲೋಪಬರುವುದು. ತ್+ಅದ್= ತದ್ ಎಂದಾಗುವುದು. ಇವರ ಮುಂದೆ ಚತುರ್ಥೀ ವಿಭಕ್ತಿ ಏಕವಚನವಾದ ಙೇ ಪ್ರತ್ಯಯ. ತೃದಾದೀನಾಮಃ (ಪಾ. ಸೂ. ೭-೩-೧೦೭) ವಿಭಕ್ತಿಯು ಪರದಲ್ಲಿರುವಾಗ ತೃದಾದಿ ಗಣದ ಶಬ್ದಗಳ ಕೊನೆಯ ವರ್ಣಕ್ಕೆ ಅಕಾರಾದೇಶ ಬರುವುದು. ಇವರಿಂದ ದ್ ಗೆ ಅ-ಆದೇಶ. ತ+ಅ+ಏ, ಅತೋಗುಣೇ (ಪಾ. ಸೂ. ೬-೧-೬೭) ಪದದ ಕೊನೆಯಲ್ಲಿ ಇಲ್ಲದ ಹ್ರಸ್ವಾಕಾರವ ಮುಂದೆ ಗುಣ ವರ್ಣ ಆಂದರೆ ಅ-ಏ-ಓ ಗಳು ಪರದಲ್ಲಿದ್ದರೆ ಪೂರ್ವಪರ ವರ್ಣಗಳೆರಡರ ಸ್ಥಾನದಲ್ಲಿಯೂ ಪರದ ವರ್ಣವು ಒಂದೇ ಬರುವುದು. ಇದರಿಂದ ಎರಡು ಅಕಾರಗಳಿಗೂ ಪರರೂಪ ಬಂದರೆ ತ+ಏ ಸರ್ವನಾಮ್ನಃ ಸ್ಮೈ (ಪಾ. ಸೂ. ೭-೧-೧೪)ಹ್ರಸ್ವಾಕಾರಾಂತಸರ್ವನಾಮಶಬ್ದದ ಮುಂದೆ ಇರುವ ಙೇ ಪ್ರತ್ಯಯಕ್ಕೆ ಸ್ಮೈ ಆದೇಶ ಬರುವುದು. ಇದರಿಂದ ಙೇಗೆ ಸ್ಮೈ ಬಂದರೆ ತಸ್ಮೈ ಎಂದಾಗುವುದು. ಇಲ್ಲಿ ವ್ಯತ್ಪತ್ತಿಪಕ್ಷದಲ್ಲಿ ಪ್ರತ್ಯಯ ಸ್ವರದಿಂದಲೂ ಅವ್ಯುತ್ಪತ್ತಿ ಪಕ್ಷದಲ್ಲಿ ಪ್ರಾತಿಪದಿಕ ಸ್ವರದಿಂದಲೂ ತದ್ ಶಬ್ದ ಅಂತೋದಾತ್ತ. ಪ್ರಕೃತಿ ಪ್ರತ್ಯಯ ವಿಭಾಗದಿಂದ ಸಿದ್ಧವಾಗುವುದಕ್ಕೆ ವ್ಯುತ್ಪನ್ನ ಎನ್ನುವರು. ಉಣಾದಿ ಸೂತ್ರಗಳಿಂದ ಸಿದ್ಧವಾಗುವ ಶಬ್ದಗಳನ್ನು ಹಲವರು ವ್ಯುತ್ಪನ್ನಗಳು ಅಂದರೆ ಪ್ರಕೃತಿಪ್ರತ್ಯಯ ವಿಭಾಗದಿಂದ ಸಿದ್ಧವಾದುವು ಎನ್ನುವರು. ಮತ್ತೆ ಕೆಲವರು ಅವ್ಯುತ್ಪನ್ನಗಳು ಎಂದರೆ ಪ್ರಕೃತಿಪ್ರತ್ಯಯ ವಿಭಾಗದಿಂದ ಸಿದ್ಧವಾದುವುಗಳಲ್ಲ ಎನ್ನುವರು. ಈ ಎರಡು ಪಕ್ಷದಲ್ಲಿಯೂ ತದ್ ಶಬ್ದವು ಹಿಂದೆ ಹೇಳಿದಂತ ಅಂತೋದಾತ್ತವೇ ಆಗುವುದು. ಙೇ ಪ್ರತ್ಯಯವು ಸುಪ್ಪಾದ್ದರಿಂದ ಅನು

ದಾತ್ತ. ಇದರ ಸ್ಥಾನದಲ್ಲಿ ಬಂದಿರುವುದರಿಂದ ಸ್ಯೈ ಅನುದಾತ್ತ. ಇಲ್ಲಿ ಯದ್ಯಪಿ 'ಸಾವೇಕಾಚಸ್ತೃತೀಯಾದಿರ್ವಿಭಕ್ತಿಃ' (ಪಾ ಸೂ. ೬-೧-೧೬೮) ಸಪ್ತಮ್ಯಾ ಬಹುವಚನ ಸು ಪ್ರತ್ಯಯಪರವಲ್ಲಿರುವಾಗ ಯಾವ ವಿಕಾರ್ಯವಾದ ರೂಪವಿದೆಯೋ ಅದರ ಮುಂದೆ ಇರುವ ತೃತೀಯಾದಿ ವಿಭಕ್ತಿಯು ಉದಾತ್ತವಾಗುವುದು. ಇದರಿಂದ ತೇಸು ರೂಪದ ಪ್ರಕ್ರಿಯಾಕಾಲದಲ್ಲಿ ತ+ಸು-ಎಂದು ಸು ಎಂಬ ಸಪ್ತಮ್ಯಾಬಹುವಚನ ಪರದಲ್ಲಿರುವಾಗ ವಿಕಾರ್ಯವಾದ ಅಂದರೆ ಒಂದೇ ಸ್ವರವನ್ನು ಹೊಂದಿರುವ ಶಬ್ದದ ಮುಂದೆ ಇರುವ ಸ್ಯೈ ವಿಭಕ್ತಿಗೆ ಉದಾತ್ತವು ಪ್ರಾಪ್ತವಾಗುವುದು. ಆದರೂ ಸಃ ಎಂಬ ಪ್ರಥಮಾವಿಭಕ್ತಿಯ ವಿಕಾರ್ಯವಾ ಕಾಲದಲ್ಲಿಯೂ ತ+ಸು ಎಂದು ಸು ಪ್ರತ್ಯಯ ಪರದಲ್ಲಿರುವಾಗ ಅವರ್ಣಾಂತವಾಗಿದೆ. ಆದರಿಂದ **ನಗೋಶ್ವನ್ ಸಾವನರ್ಣರಾಡಜ್ಝ್ಯ-ಜ್ಝ್ಯೃ ದ್ಭ್ಯಃ** (ಪಾ. ಸೂ. ೬-೧--೧೮೨) ಗೋ ಶಬ್ದ ಶ್ವನ್ ಶಬ್ದ ಪ್ರಥಮೈಕವಚನವಲ್ಲಿ ಅವರ್ಣಾಂತವಾದ ಶಬ್ದ ರಾಟ್ ಅಬ್ ಕ್ರುಚ್ ಕೃತ್ ಇವುಗಳ ಮುಂದಿರುವ ವಿಭಕ್ತಿಗೂ ಮತುಪ್ ಪ್ರತ್ಯಯಕ್ಕೂ ಸಹ ಆರನೇ ಅಧ್ಯಾಯದಲ್ಲಿ ಹೇಳಿರುವ ಸ್ವರವು ಬರುವುದಿಲ್ಲ ಎಂದು ನಿಷೇಧ ಬರುವುದು. ಆದ್ದರಿಂದ ವಿಭಕ್ತಿಗೆ ಉದಾತ್ತ ಬರುವುದಿಲ್ಲ. ದ್ ಸ್ಥಾನದಲ್ಲಿ ಬಂದ ಅಕಾರ ವ್ಯಂಜನ ಸ್ಥಾನದಲ್ಲಿ ಬರುವುದರಿಂದ ಅನುದಾತ್ತ, ಪರರೂಪದಿಂದ ಬಂದ ಅಕಾರವು ಉದಾತ್ತ ಮತ್ತು ಅನುದಾತ್ತಗಳ ಸ್ಥಾನದಲ್ಲಿ ಬರುವುದರಿಂದ ಉದಾತ್ತವಾಗುವುದು. ಹೀಗೆ ತಸ್ಯೈ ಎಂಬಲ್ಲಿ ತ ಉದಾತ್ತ ಸ್ಯೈ ಅನುದಾತ್ತ. ಪದವನ್ನು ಬಿಡಿಸುವಾಗ ಸ್ಯೈ ಎಂಬ ಅನುದಾತ್ತವು ಉದಾತ್ತದ ಮುಂದೆ ಇರುವುದರಿಂದ ಸ್ವರಿತವಾಗುವುದು. ಸಂಹಿತಾಕಾಲದಲ್ಲಿ ಇಂದ್ರಾಯ ಶಬ್ದದ ಇ-ಯು ಪರದಲ್ಲಿರುವುದರಿಂದ' ಐ ಗೆ ಆಯ್ ಆದೇಶ ಬರುತ್ತೆ. ತಸ್ಮಾಯ್+ಇಂದ್ರಾಯ 'ಲೋಪಃಶಾಕಲ್ಯಸ್ಯ' (ಪಾ. ಸೂ. ೮-೩-೧೯) ಅಶ್ ವರ್ಣವು ಪರದಲ್ಲಿರುವಾಗ ಅವರ್ಣದ ಮುಂದೆ ಇರುವ ಪದಾಂತನಾದ ಯಕಾರ ವಕಾರಗಳಿಗೆ ಲೋಪ ಬರುವುದು ಎಂಬುದರಿಂದ ಯ್‌ಗೆ ಲೋಪ. 'ಪೂರ್ವತ್ರಾಸಿದ್ಧಮ್' (ಪಾ. ಸೂ ೮-೨-೧) ಎಂದು ಈ ಲೋಪವು ಅಸಿದ್ಧವಾಗುವುದರಿಂದ ಗುಣಸಂಧಿ ಬರುವುದಿಲ್ಲ. ಐಕಾರದ ಸ್ಥಾನದಲ್ಲಿ ಬಂದ ಆಕಾರವು ಸ್ಥಾನಿವದ್ಭಾವದಿಂದ ಅನುದಾತ್ತ. ಇದರ ಮುಂದೆ ಉದಾತ್ತ ವರ್ಣವು ಇರುವುದರಿಂದ ಇದು ಅನುದಾತ್ತತರವಾಗುವುದು.

ಸಂಹಿತಾಪಾಠಃ

ಸುತ್ತಪಾವ್ನೇ ಸುತಾ ಇಮೇ ಶುಚಯೋ ಯಂತಿ ವೀತಯೇ ।
ಸೋಮಾಸೋ ದಧ್ಯಾಶಿರಃ ॥ ೫ ॥

ಪದಪಾಠಃ

ಸುತ್ತ್ಸ ಪಾವ್ನೇ । ಸುತಾಃ । ಇಮೇ । ಶುಚಯಃ । ಯಂತಿ । ವೀತಯೇ ॥
ಸೋಮಾಸಃ । ದಧ್ಸ ಆಶಿರಃ ॥ ೫ ॥

ಸಾಯಣಭಾಷ್ಯಂ

ಇಮೇ ಸೋಮಾಸೋಽಸ್ಮಿನ್ಕರ್ಮಣಿ ಸಂಪಾದಿತಾಃ ಸೋಮಾಃ ಸುತಪಾವ್ನೇಽಭಿಷುತಸ್ಯ ಸೋಮಸ್ಯ ಪಾನಕರ್ತ್ರೇ । ಪಷ್ಠ್ಯರ್ಥೇ ಚತುರ್ಥೀ । ತಸ್ಯ ಪಾತುರ್ವೀತಯೇ ಭಕ್ಷಣಾರ್ಥಂ ಯಂತಿ । ತಮೇವ ಪ್ರಾಪ್ನುವಂತಿ । ಕೀದೃಶಾಃ ಸೋಮಾಃ । ಸುತಾ ಅಭಿಷುತಾಃ ಶುಚಯೋ ದಶಾಪವಿತ್ರೇಣ ಶೋಧಿತತ್ವಾಚ್ಛುದ್ಧಾ ದಧ್ಯಾಶಿರಃ । ಅವನೀಯಮಾನಂ ದಧ್ಯಾಶೀರ್ದೋಷಘಾತಕಂ ಯೇಷಾಂ ಸೋಮಾನಾಂ ತೇ ದಧ್ಯಾಶಿರಃ ॥ ಸುತಪಾವ್ನೇ । ಸುತಂ ಪಿಬತೀತಿ ಸುತಪಾವಾ । ವನಿಪಃ ಪಿತ್ತ್ವಾದ್ಧಾತುಸ್ವರ ಏವ ಶಿಷ್ಯತೇ । ಸಮಾಸೇ ದ್ವಿತೀಯಾಪೂರ್ವಪದಪ್ರಕೃತಿಸ್ವರಂ ಬಾಧಿತ್ವಾ ಕೃದುತ್ತರಪದಪ್ರಕೃತಿಸ್ವರತ್ವಂ । ಶುಚಯಃ । ಶುಚ ದೀಪ್ತೌ । ಇನ್ನಿತ್ಯನುವೃತ್ತ್ಯಾವಿಗುಪಧಾತ್ಕಿತ್ । ಉ. ೪-೧೧೯ । ಇತೀನ್ । ಕಿತ್ತ್ವಾಲ್ಲಘೂಪಧಗುಣಾಭಾವಃ । ನಿತ್ತ್ವಾದಾದ್ಯುದಾತ್ತತ್ವಂ । ವೀತಯೇ । ವೀ ಗತಿಪ್ರಜನಕಾಂತ್ಯಶನಖಾದನೇಷ್ವಿತ್ಯಸ್ಮಾನ್ಮಂಶ್ಚೇ ವೃಷೇಷಪಚಮನವಿದಭೂವೀರಾ ಉದಾತ್ತಃ ಪಾ. ೩-೩-೯೬ । ಇತಿ ಕ್ತಿನ್ನುದಾತ್ತಃ । ಸೋಮಾಸಃ । ಷುಞ್ ಅಭಿಷವೇ । ಅರ್ತಿಸ್ತುಸುಹುಸೃಧೃಕ್ಷೀತ್ಯಾದಿನಾ । ಉ. ೧-೧೪೯ । ಮನ್ । ನಿತ್ತ್ವಾದಾದ್ಯುದಾತ್ತಃ । ಆಜ್ಜಸೇರಸುಕ್ । ಪಾ. ೭-೧-೫೦ । ಇತ್ಯಸುಗಾಗಮಃ । ದಧ್ಯಾಶಿರಃ । ದಧಾತಿ ಪುಷ್ಣಾತೀತಿ ದಧಿ । ಡುಧಾಞ್ ಧಾರಣಪೋಷಣಯೋಃ । ಆದೃಗಮಹನಜನಃ ಕಿಕಿನೌ ಲಿಟ್ ಚ । ಪಾ. ೩-೨-೧೭೧ । ಇತಿ ಕಿನ್ । ಲಿಡ್ವದ್ಭಾವಾದ್ದ್ವಿರ್ಭಾವಃ । ಕಿತ್ತ್ವಾದಾಕಾರಲೋಪಃ । ನಿತ್ತ್ವಾದಾದ್ಯುದಾತ್ತತ್ವಂ । ಶ್ಯ ಹಿಂಸಾಯಾಂ । ಶೃಣಾತಿ ಹಿನಸ್ತಿ ಸೋಮೇಽವನೀಯಮಾನಂ ಸತ್ಸೋಮಸ್ಯ ಸ್ವಾಭಾವಿಕಂ ರಸಮಯೀಷತ್ಪ್ರಯುಕ್ತಂ ನೀರಸಂ ದೋಷಂ ನೇತ್ಯಾಶೀಃ । ಕ್ವಿಪ್ಯಾತ ಇದ್ಧಾತೋಃ । ಪಾ. ೭-೧-೧೦೦ । ಇತೀತ್ವಂ ರಪರತ್ವಂ ಚ । ದಧ್ಯೇವಾಶೀರ್ಯೇಷಾಂ ಸೋಮಾನಾಂ ತೇ ದಧ್ಯಾಶಿರಃ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ಸುತಾಃ—ಕಲ್ಲುಗಳಿಂದ ಜಜ್ಜಿ, ರಸವನ್ನು ಹಿಂಡಿ ತೆಗೆದಿರುವ । **ಶುಚಯಃ**—ದಶಾಪವಿತ್ರದಿಂದ ಶೋಧಿಸಿ ಶುದ್ಧವಾಗಿರುವ । **ದಧ್ಯಾಶಿರಃ**–ದಧಿ ಎಂದರೆ ಮೊಸರನ್ನು ಮಿಶ್ರಮಾಡಿರುವ । **ಇಮೇ ಸೋಮಾಸಃ**–ಈ ಸೋಮರಸಗಳು । **ಸುತಪಾವ್ನೇ**—ಸೋಮಪಾನವಗಾಡುವ ಇಂದ್ರನನ್ನು । **ವೀತಯೇ**—ಭಕ್ಷಣಾರ್ಥವಾಗಿ ಅಥವಾ ಪಾನಾರ್ಥವಾಗಿ । **ಯಂತಿ**—ಹೋಗಿಸೇರುತ್ತವೆ.

॥ ಭಾವಾರ್ಥ ॥

ಈ ಯಜ್ಞದಲ್ಲಿ ಕಲ್ಲುಗಳಿಂದ ಜಜ್ಜಿ ದಶಾಪವಿತ್ರದಿಂದ ಶೋಧಿಸಿ, ಶುದ್ಧವಾಗಿರುವಂತೆ ಮಾಡಿರುವ ಈ ಸೋಮರಸಕ್ಕೆ ಮೊಸರನ್ನು ಮಿಶ್ರಮಾಡಿ ಪಾನಯೋಗ್ಯವಾಗುವಂತೆ ಸಿದ್ಧಪಡಿಸಿರುವುದು. ಇಂತಹ ಸೋಮರಸಗಳು ಪಾನಾರ್ಥವಾಗಿ ಇಂದ್ರನನ್ನೇ ಹೋಗಿ ಸೇರುವವು ಎಂದರೆ ಇಂದ್ರನಿಗಾಗಿಯೇ ಇಂತಹ ಸೋಮರಸವು ಸಿದ್ಧಪಡಿಸಲ್ಪಟ್ಟಿರುವುದು. ಇದನ್ನು ಇಂದ್ರನು ಬಂದು ಪಾನಮಾಡುವನು.

English Translation

These extracted pure Soma-juices, mixed with (or made harmless by) curds go to Soma drinker (India) for his drink.

॥ ವಿಶೇಷ ವಿಷಯಗಳು ॥

ಇಲ್ಲಿ ಸೋಮರಸಗಳು ಇಂದ್ರನನ್ನು ಹೋಗಿ ಸೇರುವವು ಎಂದರೆ ಇಂದ್ರನಿಗಾಗಿಯೇ ಸಿದ್ಧಪಡಿಸಿರುವುದರಿಂದ ಇಂದ್ರನು ಈ ಸೋಮವನ್ನು ಪಾನಮಾಡಿಯೇ ಮಾಡುವನು ಎಂದರ್ಥವು. ಇಂದ್ರನ ಪ್ರೀತ್ಯರ್ಥವಾಗಿಯೇ ಈ ಸೋಮರಸವು ಸಿದ್ಧಪಡಿಸಲ್ಪಟ್ಟಿರುವುದರಿಂದ ಇದು ಇಂದ್ರನನ್ನು ಸೇರಿ ಅವನಿಗೆ ತೃಪ್ತಿಯನ್ನುಂಟು ಮಾಡುವುದು

ವೀತಯೇ—ಸ್ಕಂದಸ್ವಾಮಿ ಮತ್ತು ವೆಂಕಟಮಾಧವರು ಈ ಶಬ್ದಕ್ಕೆ ಪಾನಾರ್ಥವಾಗಿ ಎಂದರ್ಥ ಮಾಡಿರುವರು. ಸಾಯಣರು ಈ ಋಕ್ಕಿನಲ್ಲಿಯೂ ಮತ್ತು ಋ. ಸಂ. ೯-೯೭-೫೧ರಲ್ಲಿಯೂ ಭಕ್ಷಣಾರ್ಥವಾಗಿ ಎಂದೂ ಋ. ಸಂ ೩-೧೭-೫ರಲ್ಲಿ ಪ್ರೀತ್ಯರ್ಥವಾಗಿ ಎಂದೂ ಋ. ಸಂ. ೬-೧೬-೭ ಮತ್ತು ವಾಜಸನೇಯ ಸಂಹಿತಾ (ಶು. ಯಜುರ್ವೇದ) ೧-೧೫ ಮತ್ತು ೨೨-೧೩ರಲ್ಲಿ ತರ್ಪಣಾರ್ಥವಾಗಿ ಎಂದೂ ಅರ್ಥಮಾಡಿದಾರೆ.

ಸೋಮಾಸಃ—ಸೋಮಾಃ ಎಂಬ ಶಬ್ದದ ಪ್ರಾಚೀನಪ್ರಯೋಗವು. ಈ ಎರಡು ವಿಧವಾದ ಬಹ್ವಚನರೂಪಗಳೂ ಋಗ್ವೇದದಲ್ಲಿ ಬಳಕೆಯಲ್ಲಿವೆ.

ದಧ್ಯಾಶಿರಃ—ಈ ಶಬ್ದಕ್ಕೆ ಭಾಷ್ಯಕಾರರು ಅವನೀಯಮಾನಂ ದಧ್ಯಾಶೀರ್ದೋಷಘಾತಕಂ ಯೇಷಾಂ ಸೋಮಾನಾಂ ತೇ ದಧ್ಯಾಶಿರಃ ಎಂದರೆ ಸೋಮರಸದಲ್ಲಿರುವ ದೋಷಪರಿಹಾರಾರ್ಥವಾಗಿ ಮೊಸರನ್ನು ಇದಕ್ಕೆ ಮಿಶ್ರಮಾಡುವುದರಿಂದ ಇದಕ್ಕೆ ದಧ್ಯಾಶಿರಃ ಎಂದು ಹೆಸರು ಎಂದರ್ಥಮಾಡಿರುವರು. ಸೋಮರಸಕ್ಕೆ ದಧಿಯನ್ನು ಮಾತ್ರವಲ್ಲದೆ ಹಾಲು, ಹಿಟ್ಟು ಮೊದಲಾದ ಇತರ ದ್ರವ್ಯಗಳನ್ನು (ರುಚಿಗಾಗಿ) ಮಿಶ್ರಮಾಡಿ ಉಪಯೋಗಿಸುವುದು ರೂಢಿಯಲ್ಲಿತ್ತು. ಈ ವಿಚಾರವಾಗಿ ನಾವು ಈ ಋಗ್ವೇದಸಂಹಿತೆಯ ಭಾಗ ೧ ಪೇಜು 676 ರಲ್ಲಿ ವಿಸ್ತಾರವಾಗಿ ಬರೆದಿದೇವೆ ದಧ್ಯಾಶಿರಃ ಎಂಬ ಶಬ್ದವು ಈ ಋಕ್ಕಿನಲ್ಲಲ್ಲದೆ ಮುಂದೆ ಕೊಟ್ಟಿರುವ ಇತರ ಋಕ್ಕುಗಳಲ್ಲಿಯೂ ಇರುವುದು—

(೧) ಇಮ ಆಯೌತಮಿಂದವಃ ಸೋಮಾಸೋ ದಧ್ಯಾಶಿರಃ ಸುತಾಸೋ ದಧ್ಯಾಶಿರಃ ।
(ಋ ಸಂ. ೧-೧೫೬-೨)

(೨) ಸುತಾ ಇಂದ್ರಾಯ ವಾಯವೇ ಸೋಮಾಸೋ ದಧ್ಯಾಶಿರಃ ॥
(ಋ. ಸಂ. ೫-೫೧-೭)

(೩) ಇಮ ಇಂದ್ರಾಯ ಸುನ್ವಿರೇ ಸೋಮಾಸೋ ದಧ್ಯಾಶಿರ. ॥
(ಋ ಸಂ. ೭-೨೨-೪)

(೪) ಏತೇ ಪೂತಾ ವಿಪಶ್ಚಿತಃ ಸೋಮಾಸೋ ದಧ್ಯಾಶಿರಃ ॥
(ಋ. ಸಂ. ೯-೨೨-೩)

(೫) **ಸುತಾ ಇಂದ್ರಾಯ ವಜ್ರಿಣೇ ಸೋಮಾಸೋ ದಧ್ಯಾಶಿರಃ ॥**

(ಋ. ಸಂ. ೯-೬೩-೧೫)

(೬) **ಏತೇ ಪೂತಾ ವಿಪಶ್ಚಿತಃ ಸೋಮಾಸೋ ದಧ್ಯಾಶಿರಃ ॥**

(ಋ. ಸಂ. ೯-೧೦೧-೧೫)

ಈ ದಧ್ಯಾಶಿರಶಬ್ದವಲ್ಲದೆ ಗವಾಶಿರ, ಯವಾಶಿರ ಮೊದಲಾದ ಇತರ ದ್ರವ್ಯಮಿಶ್ರಿತವಾದ ಸೋಮರಸಗಳು ಈ ಋಕ್ಕುಗಳಲ್ಲಿ ಪರಿಚಿತವಾಗಿವೆ—

(೧) **ತೀವ್ರಾಃ ಸೋಮಾಸ ಆ ಗಹ್ಯಾಶೀರ್ವಂತಃ ಸುತಾ ಇಮೇ ॥**

(ಋ. ಸಂ. ೧-೩೫-೧)

ಈ ಋಕ್ಕಿನಲ್ಲಿ **ಆಶೀರ್ವಂತಃ ಸೋಮಾಸಃ** ಎಂದು ಇರುವುದರಿಂದ ಸೋಮರಸಕ್ಕೆ ಹಾಲು, ಮೊಸರು ಮೊದಲಾದ ಯಾವ ವಿಧವಾದ ಆಶಿರ ದ್ರವ್ಯಗಳನ್ನಾದರೂ ಬೆರಸಿರುವುದೆಂದು ಸಾಮಾನ್ಯವಾಗಿ ಹೇಳಿದೆ.

(೨) **ಶತಂ ವಾ ಯೇಃ ಶುಚೀನಾಂ ಸಹಸ್ರಂ ವಾ ಸಮಾಶಿರಾಂ ॥**

(ಋ. ಸಂ. ೧-೩೦-೩)

ಇಲ್ಲಿ ಸಮಾಶಿರಾಂ ಎಂದರೆ ಸೋಮರಸಕ್ಕೆ ಆಶಿರದ್ರವ್ಯಗಳನ್ನು ಚೆನ್ನಾಗಿ ಮಿಶ್ರಮಾಡಿರುವುದೆಂದು ಸಾಮಾನ್ಯವಾಗಿ ಹೇಳಿದೆ. ನಿರ್ದಿಷ್ಟವಾಗಿ ಯಾವ ದ್ರವ್ಯವನ್ನೂ ಹೇಳಿಲ್ಲ.

(೩) **ಸುಷುಮಾ ಯಾತಮದ್ರಿಭಿರ್ಗೋಶ್ರೀತಾ ಮತ್ಸರಾ ಇಮೇ ಸೋಮಾಸೋ ಮತ್ಸರಾ ಇಮೇ ।**

ಆ ರಾಜಾನಾ ದಿವಿಸ್ಪೃಶಾಸ್ಮತ್ರಾ ಗಂತಮುಪ ನಃ ॥

ಇಮೇ ವಾಂ ಮಿತ್ರಾವರುಣಾ ಗವಾಶಿರಃ ಸೋಮಾಃ ಶುಕ್ರಾ ಗವಾಶಿರಃ ॥

(ಋ. ಸಂ. ೧-೧೩೭-೧)

ಇಲ್ಲಿ **ಗೋಶ್ರೀತಾಃ** ಎಂದರೆ **ಗವಾಂ ಪಯೋಭಿರ್ಮಿಶ್ರಿತಾಃ** ಹಸುವಿನ ಹಾಲಿನಿಂದ ಮಿಶ್ರಿತವಾದವು ಎಂದರ್ಥವು. ಇದೇ ಋಕ್ಕಿನ ಕೊನೆಯ ಪಾದವಲ್ಲಿರುವ **ಗವಾಶಿರಃ** ಎಂಬ ಪದಕ್ಕೂ ಹಸುವಿನ ಹಾಲಿನಿಂದ ಮಿಶ್ರಿತವಾದ ಸೋಮವೆಂಬುದೇ ಅರ್ಥವು.

(೪) **ಶುಚಿರಸಿ ಪುರುನಿಷ್ಠಾಃ ಕ್ಷೀರೈರ್ಮಧ್ಯತೇ ಆಶೀರ್ತಃ । ದಧ್ನಾ ಮಂದಿಷ್ಠಃ ಶೂರಸ್ಯ ॥**

(ಋ. ಸಂ. ೮-೪-೯)

ಇಲ್ಲಿ ಹಾಲು ಮತ್ತು ಮೊಸರು ಎರಡನ್ನೂ ಮಿಶ್ರಮಾಡಿದ ಬೇರೆ ಬೇರೆ ಎರಡು ರಸಗಳಿವೆಯೆಂದು ಹೇಳದೆ ಎಂದರೆ ಹಾಲನ್ನು ಮಿಶ್ರಮಾಡಿದ ಸೋಮರಸವೂ, ಮೊಸರನ್ನು ಮಿಶ್ರಮಾಡಿದ ಸೋಮರಸವೂ ಎರಡು ವಿಧವೂ ಇರುವುದೆಂದು ತಿಳಿಯಬೇಕು.

(೫) **ಸಂ ಶುಕ್ರಾಸಃ ಶುಚಯೋಃ ಸಂ ಗವಾಶಿರಃ ಸೋಮಾ ಇಂದ್ರಮಮಂದಿಷುಃ ॥**

(ಋ. ಸಂ. ೮-೫೨-೧೦)

ಇಲ್ಲಿ ಗವಾಶಿರ ಎಂದರೆ ಹಾಲುಮಿಶ್ರಿತವಾದ ಸೋಮವೆಂದು ಸ್ಪಷ್ಟವಾಗಿ ಹೇಳಿದೆ.

(೬) **ಅಧಾ ನಿಯುತ್ವ ಉಭಯಸ್ಯ ನಃ ಪಿಬ ಶುಚಿಂ ಸೋಮಂ ಗವಾಶಿರಂ ॥**

(ಋ- ಸಂ. ೮-೧೦೧-೧೦)

ಇಲ್ಲಿಯೂ ಗವಾಶಿರವೆಂಬ ಹಾಲುಮಿಶ್ರಿತವಾದ ಸೋಮವನ್ನೇ ಹೇಳಿದೆ.

(೭) **ಯತ್ತೇ ಸೋಮ ಗವಾಶಿರೋ ಯವಾಶಿರೋ ಭಜಾಮಹೇ ॥**

(ಋ. ಸಂ ೧-೧೮೭-೯)

(೮) **ಇಮಮಿಂದ್ರ ಗವಾಶಿರಂ ಯವಾಶಿರಂ ಚ ನಃ ಪಿಬ ।**

(ಋ. ಸಂ. ೩-೪೨-೭)

ಇಲ್ಲಿ ಗವಾಶಿರ ಮತ್ತು ಯವಾಶಿರ ಎಂಬ ಎರಡು ವಿಧವಾದ ಸೋಮರಸಗಳನ್ನೂ ಹೇಳಿದೆ-

(೯) **ಇಂದೋರಿಂದ್ರೋ ಯವಾಶಿರಃ ।**

(ಋ. ಸಂ. ೮-೯೨-೪)

(೧೦) **ತ್ರಿಕದ್ರುಕೇಷು ಮಹಿಷೋ ಯವಾಶಿರಂ ತುವಿಶುಷ್ಮಸ್ತೃಪತ್ಸೋಮಮಪಿಬದ್ವಿಷ್ಣುನಾ ಸುತಂ ಯಥಾವಶತ್ ॥** (ಋ. ಸಂ. ೩-೨೮-೧)

ಇಲ್ಲಿ ಯವಾಶಿರ ಎಂದರೆ ಹಿಟ್ಟುಮಿಶ್ರವಾದ ಸೋಮರಸವೆಂದು ಹೇಳಿದೆ.

(೧೧) **ಅಶ್ವಮೇಧಸ್ಯ ದಾನಾನಃ ಸೋಮಾ ಇವ ತ್ರ್ಯಃ ಶಿರಃ ॥**

(ಋ. ಸಂ. ೫-೨೭-೫)

ಇಲ್ಲಿ ಸೋಮರಸಕ್ಕೆ ಹಾಲು, ಮೊಸರು, ಯವ ಎಂಬ ಮೂರು ವಿಧ ದ್ರವ್ಯಗಳನ್ನು ಮಿಶ್ರಮಾಡಿರುವುದೆಂದು ಹೇಳಿದೆ.

(೧೨) **ಸಾಧೋಃ ಪಿಬ ಪ್ರತಿಕಾಮಂ ಯಥಾ ತೇ ರಸಾಶಿರಃ ಪ್ರಥಮಂ ಸೋಮಸ್ಯ ।**

(ಋ. ಸಂ. ೩-೪೮-೧)

ಇಲ್ಲಿ ರಸಾಶಿರ ಎಂದು ಹೇಳಿರುವುದರಿಂದ ಹಾಲು ಅಥವಾ ಮೊಸರು ಇವುಗಳಲ್ಲಿ ಯಾವುದನ್ನಾದರೂ ಮಿಶ್ರ ಮಾಡಿದ ಸೋಮವೆಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಸುತಪಾನ್ವೇ—ಸುತಂ ಪಿಬತೀತಿ-ಸುತಪಾವಾ (ಹಿಂಡಿದ ಸೋಮರಸವನ್ನು ಕುಡಿಯುವವನು) '**ಆತೋ ಮನಿನ್‌ಕ್ವನಿಪ್‌ವನಿಪಶ್ಚ**' (ಪಾ. ಸೂ. ೩-೨-೭೪) ಎಂಬುದರಿಂದ ವನಿಪ್ ಪ್ರತ್ಯಯ-ಪಿತ್ತಾದ್ದರಿಂದ ಅನುದಾತ್ತ ಬಂದರೆ ಪಾ ಎಂಬಲ್ಲಿ ಧಾತುಸ್ವರವೇ ಸಿಲ್ಲುವುದು. ಸನಾಶ ಬಂದಾಗ '**ತತ್ಪುರುಷೇತುಲ್ಯಾರ್ಥ**' (ಪಾ. ಸೂ- ೬-೩-೨) ಎಂಬುದರಿಂದ ಬರುವ ದ್ವಿತೀಯಾ ಪೂರ್ವಪದ ಪ್ರಕೃತಿಸ್ವರವನ್ನು ಬಾಧಿಸಿ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುವುದು. ಶುಚಯಃ-ಶುಚ ದೀಪ್ತೌ '**ಇಗುಪಧಾತ್ಕಿತ್**' (ಉ- ಸೂ. ೪-೧೧೯) ಇನ್ ಪ್ರತ್ಯಯವು ಅನುವೃತ್ತವಾಗುವುದರಿಂದ, ಇಗು ಪದವಾದ ಧಾತುವಿಗೆ ಇನ್ ಬರುವುದು, ಅದು ಕಿತ್ತಾಗುವುದು, ಎಂಬುದರಿಂದ ಶುಚ್ ಧಾತುವಿನ ಮುಂದೆ ಇನ್ ಬರುತ್ತೆ.

ಪ್ರತ್ಯಯವು ಕಿತ್ತಾದ್ದರಿಂದ ಲಘೂಪಧ ಗುಣಬರುವುದಿಲ್ಲ. ಪ್ರತ್ಯಯವು ನಿತ್ತಾದ್ದರಿಂದ ಪ್ರತ್ಯಯಾಂತದ ಆದಿಯು ಉದಾತ್ತವಾಗುವುದು. ವೀತಯೇ — ವೀಗತಿವ್ಯಾಪ್ತಿಪ್ರಜನನಕಾನ್ತ್ಯಸನಖಾದನೇಷು ಎಂಬ ಧಾತುವಿನ ಮುಂದೆ **'ಮಂತ್ರೇವೃಷೇಷಪಚಮನವಿದಭೂವೀರಾ ಉದಾತ್ತಃ'** (ಪಾ. ಸೂ. ೩-೩-೯೬) ಎಂಬುದರಿಂದ ಕ್ತಿ ಪ್ರತ್ಯಯವೂ ಆದಕ್ಕೆ ಉದಾತ್ತವೂ ಬರುವುದು. ಸೋಮಾಸಃ-ಸು ಙ್ ಅಭಿಷವೇ **'ಆರ್ತಿಸ್ತುಸಹುಸೃಧೃಷ್ಣಿಶ್ಚಿಸ್ಫುಭಾಯಾವಾಸದಿಯಷ್ಟಿ ನೀಭ್ಯೋ ಮನ್'** (ಉ. ಸೂ. ೧-೧೫೭) ಎಂಬುದರಿಂದ ಮನ್ ಪ್ರತ್ಯಯ ಬರುವುದು. ಪ್ರತ್ಯಯವು ನಿತ್ತಾದ್ದರಿಂದ ಪ್ರತ್ಯಯಾಂತವು ಆದ್ಯುದಾತ್ತವಾಗುವುದು. **ಆಜ್ಞಸೇರಸುಕ್** (ಪಾ. ಸೂ ೬-೧-೫೦) ಎಂಬುದರಿಂದ ಸೋಮಶಬ್ದದ ಮುಂದೆ ಜಸ್ಸನ್ನಿಟ್ಟಾಗ ಅಸುಕ್ ಆಗಮ ಬರುವುದು. ದದ್ಧ್ಯಾಶಿರಃ—ದಧಾತಿ ಪುಷ್ಣಾತಿ ಇತಿ ದಧಿ (ಪುಷ್ಟಿ ಕೊಡುವುದು) **' ಆದೃಗಮಹನ ಜನಃಕಿಕಿನೌಲಿಟ್ಚ'** (ಪಾ. ಸನ. ೩-೨-೧೭೧) ಛಂದಸ್ಸಿನಲ್ಲಿ ಆಕಾರಾಂತ ಋಕಾರಾಂತ ಧಾತುಗಳು, ಗಮಾದಿ ಧಾತುಗಳು ಇವುಗಳಿಗೆ ಕಿ-ಕಿನ್ ಎಂಬ ಪ್ರತ್ಯಯಗಳು ಪರ್ಯಾಯದಿಂದ ಬರುವುವು ಅವು ಲಿಟ್ಪ್ರತ್ಯಯದಂತೆ ಆಗುವುವು. ಎಂಬುದರಿಂದ ಧಾ ಧಾತುವಿನ ಮುಂದೆ ಕಿನ್ ಪ್ರತ್ಯಯ ಬರುವುದು, ಲಿಡ್ವದ್ಭಾವಾತಿದೇಶದಿಂದ **' ಲಿಟಿಧಾತೋರನಭ್ಯಾಸಸ್ಯ'** (ಪಾ. ಸೂ ೬-೧-೮) ಎಂಬುದರಿಂದ ದ್ವಿತ್ವ ಬರುವುದು. ಅಭ್ಯಾಸಕ್ಕೆ ಹ್ರಸ್ವ ಜಶ್ತ್ವಗಳು ಬರುವುವು. ಆಕಾರಕ್ಕೆ **' ಆತೋ ಲೋಪ ಇಟಿಚ'** (ಪಾ. ಸೂ ೬-೪-೬೪) ಎಂಬುದರಿಂದ ಲೋಪ ಬರುವುದು. ಪ್ರತ್ಯಯವು ನಿತ್ತಾದ್ದರಿಂದ ಪ್ರತ್ಯಯಾಂತದ ಆದಿಯು ಉದಾತ್ತ. ಶ್ನಾ ಹಿಂಸಾಯಾಂ-ಧಾತು-ಶೃಣಾತಿ ಹಿನಸ್ತಿ (ಸೋಮಲತೆಯಲ್ಲಿ, ಸುರಿಯಲ್ಪಟ್ಟದ್ದಾಗಿ ಅವರ ಸ್ವಾಭಾವಿಕ ರಸವನ್ನು ಹಿಂಡುವುದು. ಅಥವಾ ನೀರಸತ್ವದೋಷವನ್ನು ಹೋಗಲಾಡಿಸುವುದು.) ಎಂದು ವ್ಯುತ್ಪತ್ತಿಯಾದಾಗ ಆತೀಃ ಎಂದಾಗುವುದು ಕ್ವಿಪ್ ಪ್ರತ್ಯಯವು ಬಂದಿರುವಾಗ **' ಋತ ಇದ್ಧಾತೋಃ'** (ಪಾ. ಸೂ. ೬-೧-೧೨೦) ಋಕಾರಾಂತ ಧಾತುವಿಗೆ ಹ್ರಸ್ವ ಇಕಾರಾ ದೇಶಬರುವುದು ಎಂದು ಇಕಾರಾದೇಶ ಬಂದರೆ **' ಉರಣ್ರಪರಃ'** (ಪಾ. ಸೂ. ೧-೧-೫೧) ಎಂಬುದರಿಂದ ಅದು ರ ಪರವಾಗಿ ಬರುವುದು. ದಧ್ಯೇವ ಆತೀಃ ಯೇಷಾಂ ಸೋಮಾನಾಂ ತೇ ದಧ್ಯಾಶಿರಃ ಎಂದು ಬಹುವ್ರೀಹಿ ಮಾಡಿದಾಗ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** (ಪಾ. ಸೂ. ೬.೨-೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುವುದು- ॥ ೫ ॥

॥ ಸಂಹಿತಾಪಾಠಃ ॥

ತ್ವಂ ಸುತಸ್ಯ ಪೀತಯೇ ಸದ್ಯೋ ವೃದ್ಧೋ ಅಜಾಯಥಾಃ ।
ಇನ್ದ್ರ ಜ್ಯೈಷ್ಠ್ಯಾಯ ಸುಕ್ರತೋ ॥ ೬ ॥

॥ ಪದಪಾಠಃ ॥

ತ್ವಂ । ಸುತಸ್ಯ । ಪೀತಯೇ । ಸದ್ಯಃ । ವೃದ್ಧಃ । ಅಜಾಯಥಾಃ ॥
ಇನ್ದ್ರ । ಜ್ಯೈಷ್ಠ್ಯಾಯ । ಸುಕ್ರತೋ ಇತಿ ಸು ೩ ಕ್ರತೋ ॥ ೬ ॥

॥ ಸಾಯಣಭಾಷ್ಯಂ ॥

ಸುಕ್ರತೋ ಶೋಭನಕರ್ಮನ್ ಶೋಭನಪ್ರಜ್ಞ ವಾ ಹೇ ಇಂದ್ರ ತ್ವಂ ಸುತಸ್ಯಾಭಿಷುತಸ್ಯ ಸೋಮಸ್ಯ ಪೀತಯೇ ಸಾನಾರ್ಥಂ ಜ್ಯೈಷ್ಠ್ಯಾಯ ದೇವೇಷು ಜ್ಯೇಷ್ಠತ್ವಾರ್ಥಂ ಚ ಸದ್ಯಸ್ತಸ್ಮಿನ್ನೇವ ಕ್ಷಣೇ ವೃದ್ಧೋಽಜಾಯಥಾಃ । ಅಭಿವೃದ್ಧ್ಯೋತ್ಸಾಹೇನ ಯುಕ್ತೋಽಭೂಃ ॥ ಪೀತಯೇ । ಪಾ ಪಾನ ಇತ್ಯಸ್ಮಾತ್ಸ್ಥಾಪಾಪಚೋ ಭಾವೇ । ಪಾ. ೩-೩-೯೫ । ಇತಿ ಕ್ತಿನ್ । ಘುಮಾಸ್ಥೇತ್ಯಾದಿನಾ । ಪಾ. ೬-೪-೬೬ । ಈತ್ವಂ । ತಸ್ಯ ನಿತ್ತ್ವೇಽಪಿ ವ್ಯತ್ಯಯೇನ ಪ್ರತ್ಯಯೋದಾತ್ತತ್ವಂ । ಉತ್ತರಸೂತ್ರಗತಮುದಾತ್ತ ಪದಮತ್ರಾಪಿ ವಾ ಯೋಜನೀಯಂ । ಸದ್ಯಃ । ಸದ್ಯಃ ಪರುತ್ಪರಾರೀತಿ ಸೂತ್ರೇಣ । ಪಾ. ೫-೩-೨೨ । ಸಮಾನೇಽಹನೀತ್ಯರ್ಥೇ ಸಮಾನಸ್ಯ ಸಭಾವೋ ದ್ಯಶ್ಚ ಪ್ರತ್ಯಯೋ ನಿಪಾತ್ಯತೇ । ಪ್ರತ್ಯಯಸ್ವರೇಣೋದಾತ್ತಃ । ವೃದ್ಧಃ । ವೃಧು ವೃದ್ಧೌ । ಉದಿತೋ ವಾ । ಪಾ. ೭-೨-೫೬ । ಇತಿ ಕ್ತ್ವಾಪ್ರತ್ಯಯ ಇಟೋ ವಿಕಲ್ಪಿತತ್ವಾದ್ಯಸ್ಯ ವಿಭಾಷಾ । ಪಾ. ೭-೨-೧೫ । ಇತಿ ನಿಷ್ಠಾಯಾಮಿಟ್ಪ್ರತಿಷೇಧಃ । ಪ್ರತ್ಯಯಸ್ವರೇಣೋದಾತ್ತಃ । ಜ್ಯೈಷ್ಠ್ಯಾಯ । ಜ್ಯೇಷ್ಠಸ್ಯ ಭಾವೋ ಜ್ಯೈಷ್ಠ್ಯಂ । ಗುಣವಚನಬ್ರಾಹ್ಮಣಾದಿಭ್ಯಃ ಕರ್ಮಣಿ ಚ । ಪಾ. ೫-೧-೧೨೪ । ಇತಿ ಷ್ಯಞ್ । ಞಿತಶ್ಚಾದ್ಯುದಾತ್ತಃ ॥

॥ ಪ್ರತಿಪದಾರ್ಥ ॥

(ಹೇ) **ಸುಕ್ರತೋ**—ಉತ್ತಮ ಅಥವಾ ಸಾಹಸಕರ್ಮಯುಕ್ತನಾದ, ಅಥವಾ ಉತ್ತಮವಾದ ಜ್ಞಾನವುಳ್ಳ! **ಇಂದ್ರ**—ಎಲೈ ಇಂದ್ರನೇ! **ತ್ವಂ**—ನೀನು! **ಸುತಸ್ಯ**—ಸಿದ್ಧಪಡಿಸಿರುವ **ಸೋಮ**ರಸದ (ರಸವನ್ನು)! **ಪೀತಯೇ**—ಪಾನಮಾಡುವುದಕ್ಕಾಗಿಯೂ! **ಜ್ಯೈಷ್ಠ್ಯಾಯ**—ದೇವತೆಗಳಲ್ಲಿ ಶ್ರೇಷ್ಠತ್ವವನ್ನು ಹೊಂದುವುದಕ್ಕಾಗಿಯೂ! **ಸದ್ಯಃ**—ಈ ಕ್ಷಣದಲ್ಲಿಯೇ! **ವೃದ್ಧಃ**—ಉತ್ಸಾಹದಿಂದ ಅಭಿವೃದ್ಧಿಯುಳ್ಳವನಾಗಿ! **ಅಜಾಯಥಾಃ**—ಆಗಿರುವೆ!

॥ ಭಾವಾರ್ಥ ॥

ಸಾಹಸಕರ್ಮಯುಕ್ತನಾದ ಅಥವಾ ಬಹು ಪ್ರಜ್ಞೆಯುಳ್ಳ ಎಲೈ ಇಂದ್ರನೇ, ಈಗ ನಾವು ಇಲ್ಲಿ ಸಿದ್ಧಪಡಿಸಿ ಇಟ್ಟಿರುವ ಈ ಸೋಮರಸವನ್ನು ಪಾನ ಮಾಡುವುದಕ್ಕಾಗಿ ಅತ್ಯುತ್ಸಾಹಯುಕ್ತನಾಗಿರುವುದಲ್ಲದೆ ಈ ಸೋಮ ಪಾನದಿಂದ ದೇವತೆಗಳಲ್ಲೆಲ್ಲಾ ಶ್ರೇಷ್ಠನಾಗುವೆ

English Translation.

(1) Indra, performer of good deeds or possessor of fine intellect you have grown courageous for the sake of drinking the extracted Soma Juice and (attaining) seniority (among the goods).

॥ ವಿಶೇಷವಿಷಯಗಳು ॥

ವೃದ್ಧಃ—ಈ ಶಬ್ದಕ್ಕೆ ಭಾಷ್ಯಕಾರರು **ಅಭಿವೃದ್ಧೋತ್ಸಾಹೇನ ಯುಕ್ತಃ** ಹೆಚ್ಚುತ್ತಿರುವ ಅಥವಾ ಹೆಚ್ಚಾದ ಉತ್ಸಾಹದಿಂದ ಕೂಡಿದ ಎಂದರ್ಥ ಮಾಡಿರುವರು. ಸ್ಕಂದಸ್ವಾಮಿಯು, **" ಪರಿವೃದ್ಧಃ ಪ್ರತಿಬಂಧಕಾಪನಯನಸಮರ್ಥಃ, ಶರೀರೇಣ ಚ ವೀರ್ಯೇಣ ಚ ಪರಿವೃದ್ಧಃ "** ಎಂದರೆ ಪ್ರತಿಬಂಧಕ ಅಥವಾ ತೊಂದರೆಗಳನ್ನು ಹೋಗಲಾಡಿಸುವುದಕ್ಕಾಗಿ ವೀರ್ಯೋತ್ಸಾಹದಿಂದಲೂ ಶರೀರ ಪ್ರಮಾಣದಿಂದಲೂ ದೊಡ್ಡದಾಗಿ ಬೆಳೆದ ಎಂದೂ, ವೆಂಕಟಮಾಧವರು ಪ್ರವೃದ್ಧಶರೀರಃ—ದೊಡ್ಡ ಶರೀರವುಳ್ಳವನಾಗಿ ಎಂದೂ ಅರ್ಥಮಾಡಿರುವರು ಈ ವಿಚಾರದಲ್ಲಿ ಈ ಋಕ್ಕುಗಳನ್ನು ಇಲ್ಲಿ ಉದಾಹರಣೆಗಾಗಿ ಹೇಳಬಹುದು.

(೧) **ಅಷಾಳ್ಹೇನ ಶವಸಾ ಶೂಶುವಾಂಸಂ ಸದ್ಯಶ್ಚಿದ್ಯೋ ವಾವೃಧೇ ಅಸಾಮಿ ।**

(ಋ. ಸಂ. ೬-೧೯-೨)

(೨) **ಏವಾ ಜಜ್ಞಾನಂ ಸಹಸೇ ಅಸಾಮಿ ವಾವೃಧಾನಂ ರಾಧಸೇ ಚ ಶ್ರುತಾಯೈ ॥**

(ಋ. ೬-೩೮-೫)

ಈ ಎರಡು ಋಕ್ಕುಗಳಲ್ಲಿಯೂ ಇಂದ್ರನು ದೊಡ್ಡ ಆಕಾರವುಳ್ಳವನಾಗಿ ಬೆಳೆದನೆಂದು ಹೇಳಿದೆ. ಇದಲ್ಲದೆ ನಾವು ಹಿಂದೆಯೇ ಋ. ಸಂ. ೧-೮-೧ ನೇಯ ಋಕ್ಕಿನಲ್ಲಿ ಹೇಳಿದಂತೆ ಇಂದ್ರನು ತನ್ನ ಮಾಯಾಶಕ್ತಿಯಿಂದ ಸಮಯೋಚಿತವಾಗಿ ಅನೇಕ ವಿಧವಾದ ರೂಪಗಳನ್ನೂ ಆಕಾರಗಳನ್ನೂ ಧರಿಸಲು ಸಮರ್ಥನೆಂದು ವಿವರಿಸಿರುವುದರಿಂದ (ಋ ಸಂ. ಭಾಗ ೨. ಪೇಜು 89-90) ಇಲ್ಲಿಯೂ ಅದರಂತೆ ಭಾವಿಸಬೇಕು.

ಜ್ಯೈಷ್ಠ್ಯಾಯೈ—ಶ್ರೇಷ್ಠತ್ವ, ಹೆಚ್ಚುಗಾರಿಕೆ, ಉತ್ತಮಸ್ಥಾನ, ಎಂದರೆ ಮನುಷ್ಯರಲ್ಲಿಯೂ ದೇವತೆಗಳಲ್ಲಿಯೂ ಇಂತಹ ಉತ್ತಮಸ್ಥಾನ ಪ್ರಾಪ್ತಿಗಾಗಿ ಎಂದು. ಆದರೆ ಸೋಮಪಾನದಿಂದ ಇಂದ್ರನಿಗೆ ಶ್ರೇಷ್ಠತೆಯುಂಟಾಗುವುದೇ? ಸೋಮಪಾನಕ್ಕೆ ಪೂರ್ವದಲ್ಲಿ ಇಂದ್ರನಿಗೆ ಶ್ರೇಷ್ಠತೆ ಇರಲಿಲ್ಲವೇ ಎಂದರೆ, ಇಂದ್ರನಿಗೆ ದೇವತೆಗಳಲ್ಲಿ ಶ್ರೇಷ್ಠತೆ ಇದ್ದೇ ಇದ್ದಿತು. ಸೋಮಪಾನದಿಂದ ಅದು ಹೆಚ್ಚು ವಿಕಸಿತವಾಯಿತು. ಆ ಕಾಲದಲ್ಲಿ ಸೋಮಪಾನ ಮಾಡುವುದು ಶ್ರೇಷ್ಠತೆಯ ಹೆಗ್ಗುರುತಾಗಿತ್ತು. ಈಗಲೂ ಸಹ ನಾವು ನೂತನ ದಂಪತಿಗಳನ್ನು ಆಶೀರ್ವಾದ ಮಾಡುವಾಗ ವರನ ವಿಷಯವಾಗಿ, '**ಭರ್ತಾ ತೇ ಸೋಮಪಾ ನಿತ್ಯಂ ಭವೇದ್ಧರ್ಮಪರಾಯಣಃ**" ಎಂದು ಹೇಳುವುದು ರೂಢಿಯಾಗಿದೆ. ಕೃಷ್ಣಯಜುರ್ವೇದ ತೈತ್ತಿರೀಯ ಬ್ರಾಹ್ಮಣದಲ್ಲಿ ಇಂದ್ರನ ಶ್ರೇಷ್ಠತೆಯ ವಿಷಯವಾಗಿ ಪ್ರಕಾರಾಂತರವಾಗಿ ಹೀಗೆ ಹೇಳಿದೆ—

ಇಂದ್ರೋ ವಾ ಅಕಾಮಯತ । ಜ್ಯೈಷ್ಠ್ಯಂ ದೇವಾನಾಮಭಿಜಯೇಯಮಿತಿ । ಸ ಏತಮಿಂದ್ರಾಯ ಜ್ಯೈಷ್ಠ್ಯಾಯೈ ಪುರೋಡಾಶಮೇಕಾದಶಕಪಾಲಂ ನಿರವಪನ್ಮಹಾವ್ರೀಹೀಣಾಂ । ತತೋ ವೈ ಸ ಜ್ಯೈಷ್ಠ್ಯಂ ದೇವಾನಾಮಭ್ಯಜಯತ್ (ತೈ. ಬ್ರಾ. ೩-೧-೫).

ಎಂದರೆ ಇಂದ್ರನು ದೇವತೆಗಳಲ್ಲಿ ಶ್ರೇಷ್ಠತೆಯನ್ನು ಪಡೆಯುವುದಕ್ಕಾಗಿ ಜ್ಯೇಷ್ಠಾನಕ್ಷತ್ರವನ್ನು ದೇವತೆಯಿಸಿ ವ್ರೀಹಿಯಿಂದ ಸಿದ್ಧಪಡಿಸಿದ ಏಕಾದಶಕಪಾಲವನ್ನು ಹೋಮಮಾಡಿ ಅದರಿಂದ ದೇವತೆಗಳಲ್ಲಿ ಶ್ರೇಷ್ಠತ್ವವನ್ನು ಪಡೆದನೆಂದು ಹೇಳಿರುವುದು.

॥ ವ್ಯಾಕರಣಪ್ರಕ್ರಿಯಾ ॥

ತ್ವಮ್—ಯುಷ್ ಧಾತುವು ಸೌತ್ರವಾದುದು. ಅಂದರೆ ಸೂತ್ರಗಳಲ್ಲಿ ವ್ಯವಹರಿಸಿರುವುದರಿಂದ ಸಿದ್ಧವಾಗಿದೆ. **ಯುಷ್ಮ್ಯಸಿಭ್ಯಾಂ ಮದಿಕ್** (ಉ. ಸೂ. ೧-೧೩೬) ಯುಷ್ ಎಂಬ ಧಾತು ಅಸುಕ್ಷೇಪಣೇ. ಈ ಎರಡು ಧಾತುಗಳ ಮುಂದೆ **ಮದಿಕ್** ಪ್ರತ್ಯಯ ಬರುವುದು ಎಂದು ಈ ಸೂತ್ರದ ಅರ್ಥ. ಇದರಿಂದ ಯುಷ್ ಧಾತುವಿನ ಮುಂದೆ ಮದಿಕ್ ಪ್ರತ್ಯಯ ಬರುವುದು. ಈ ಪ್ರತ್ಯಯದಲ್ಲಿ ಇ-ಕ್ ಎರಡೂ ಲೋಪವನ್ನು ಹೊಂದಿ ಮದ್ ಮಾತ್ರ ಉಳಿಯುವುದು. ಯುಷ್+ಮದ್= ಯುಷ್ಮದ್ ಆಗುತ್ತದೆ. ಇದರ ಮುಂದೆ ಪ್ರಥಮಾ ಏಕವಚನ ಸು ಪ್ರತ್ಯಯ ಉಕಾರವು ಲೋಪಿಸಿ ಸ್ ಮಾತ್ರ ಉಳಿಯುತ್ತದೆ. ಯುಷ್ಮದ್+ಸ್ **ಜೀ:ಪ್ರಥಮ-ಯೋ:ರಮ್** (ಪಾ. ಸೂ. ೭-೧-೨೮) ಜೀ:-ಪ್ರಥಮಯೋ:-ಅಮ್ ಎಂದು ಇಲ್ಲಿ ಪದವಿಭಾಗ. ಪ್ರಥಮಾಚ ಪ್ರಥಮಾಚ ಪ್ರಥಮೇ ತಯೋ: ಪ್ರಥಮಯೋ: ಎಂದು ವಿಗ್ರಹ. ಇಲ್ಲಿ ಮೊದಲನೆಯ ಪ್ರಥಮಾ ಎಂಬುದರಿಂದ ಪ್ರಥಮಾವಿಭಕ್ತಿಗೂ, ಎರಡನೆಯ ಪ್ರಥಮಾ ಎಂಬುದರಿಂದ ದ್ವಿತೀಯಾವಿಭಕ್ತಿಗೂ ಗ್ರಹಣವು. ದ್ವಿತೀಯಾ ವಿಭಕ್ತಿಗೆ ಪ್ರಥಮಾಪದದಿಂದ ಗ್ರಹಣವು ಯುಕ್ತವೇ? ಎಂದರೆ ಇಲ್ಲಿ ಮೊದಲನೆ ಪ್ರಥಮಾಪದದಿಂದ ಪ್ರಥಮಾ ವಿಭಕ್ತಿಗೆ ಗ್ರಹಣವಾದಮೇಲೆ ದ್ವಿತೀಯಾವಿಭಕ್ತಿ ಮೊದಲುಗೊಂಡು ಆರು ವಿಭಕ್ತಿಗಳು ಉಳಿದಿವೆ. ಅವುಗಳಲ್ಲಿ ಮೊದಲನೆಯದು ದ್ವಿತೀಯಾವಿಭಕ್ತಿಯೇ ಆಗುವುದು. ಆದ್ದರಿಂದ ಎರಡನೆಯ ಪ್ರಥಮಾಪದದಿಂದ ದ್ವಿತೀಯಾ ವಿಭಕ್ತಿಗೆ ಗ್ರಹಣವು ಯುಕ್ತವೇ ಆಗಿದೆ. 'ಯುಷ್ಮದಸ್ಮದ್ಭ್ಯಾಂಙಿಸೋಶ್' (ಪಾ. ಸೂ. ೭-೧-೨೭) ಎಂಬ ಸೂತ್ರದಿಂದ **ಯುಷ್ಮದಸ್ಮದ್ಭ್ಯಾಂ** ಎಂಬ ಪದವು ಅನುವೃತ್ತವಾಗುವುದು. ಜೀ: ಎಂಬುದರಲ್ಲಿ ಷಷ್ಠೀವಿಭಕ್ತಿಗೆ ಲೋಪಬಂದಿದೆ. ಅಂತು ಈ ಸೂತ್ರಕ್ಕೆ (೭-೧-೨೮) ಯುಷ್ಮದ್-ಅಸ್ಮದ್ ಈ ಎರಡು ಶಬ್ದಗಳ ಮುಂದೆ ಬರುವ **ಜೀ:** ಪ್ರತ್ಯಯಕ್ಕೂ, ಪ್ರಥಮಾ ದ್ವಿತೀಯಾ ವಿಭಕ್ತಿಗಳಲ್ಲಿಯ ಆರು ಪ್ರತ್ಯಯಗಳಿಗೂ **ಅಮ್** ಆದೇಶ ಬರುವುದು ಎಂದು ಅರ್ಥವು. ಇದರಿಂದ ಸ್‌ಗೆ ಅಮ್ ಆದೇಶ. ಯುಷ್ಮದ್ ಅಮ್, **ತ್ವಾಹೌಸೌ** (ಪಾ. ಸೂ. ೭-೨-೯೪) ಇಲ್ಲಿ ತ್ವಾಹೌ-ಸೌ ಎಂದು ಪದವಿಭಾಗ **ಮಪರ್ಯನ್ತಸ್ಯ** (ಪಾ. ಸೂ. ೭-೨-೯೧) ಎಂಬುದು ಅಧಿಕಾರದಿಂದ ಬರುವುದು ಯುಷ್ಮದಸ್ಮದೋರನಾದೇಶೇ (ಪಾ. ಸೂ. ೭-೨-೯೬) ಇದರಿಂದ ಯುಷ್ಮದಸ್ಮದೋ: ಎಂಬುದು ಅನುವೃತ್ತವಾಗುವುದು. ಅಂತು ಈ ಸೂತ್ರಕ್ಕೆ ಸು ಪ್ರತ್ಯಯ ಪರದಲ್ಲಿರುವಾಗ ಯುಷ್ಮದ್-ಅಸ್ಮದ್ ಶಬ್ದಗಳ ಮಪರ್ಯಂತಕ್ಕೆ ಎಂದರೆ ಯುಷ್ಕ್ ಅಸ್ಕ್ ಇವುಗಳಿಗೆ ಕ್ರಮವಾಗಿ ತ್ವ-ಅಹ, ಎಂಬ ಆದೇಶಗಳು ಬರುವುವು ಎಂದು ಅರ್ಥ. ಇದರಿಂದ ತ್ವ ಆದೇಶ ಬಂದರೆ ತ್ವ-ಅದ್-ಅಮ್ ಎಂದಾಗುತ್ತದೆ 'ಅತೋಗುಣೇ' (ಪಾ.ಸೂ. ೬-೧-೯೭) ಪದದ ಕೊನೆಯಲ್ಲಿಲ್ಲದ ಅಕಾರದ ಮುಂದೆ ಗುಣವರ್ಣ ಅಂದರೆ ಅ-ಏ-ಓಗಳು ಪರದಲ್ಲಿರುವಾಗ ಪೂರ್ವ ಪರಗಳ ಸ್ಥಾನಗಳಲ್ಲಿ ಪರರೂಪ ಒಂದೇ ಬರುವುದು ಎಂಬುದರಿಂದ ತ್ವ+ಅದ್ ಎಂಬಲ್ಲಿ ಪರರೂಪ ತ್ವದ್+ಅಮ್ **ಶೇಷೇಲೋಪಃ** (ಪಾ. ಸೂ. ೭-೨-೯೦) ಶೇಷೇ-ಲೋಪಃ ಎಂದು ಪದವಿಭಾಗ- 'ಅಪ್ತನ ಆ ವಿಭಕ್ತೌ' (ಪಾ. ಸೂ. ೭-೨-೮೪) ಎಂಬುದರಿಂದ ವಿಭಕ್ತೌ ಪದವು ಅನುವೃತ್ತವಾಗುವುದು. ಇದಕ್ಕೆ ಶೇಷೇ ಎಂಬುದು ವಿಶೇಷಣವು. ಶೇಷ ಎಂದರೆ ಹಿಂದೆ ಹೇಳಿರುವುದಕ್ಕಿಂತಲೂ ಬೇರೆಯಾದುದು ಎಂದರ್ಥ. ಈ ಸೂತ್ರದ ಹಿಂದೆ ಯುಷ್ಮದಸ್ಮದೋರನಾದೇಶೇ (ಪಾ ಸೂ. ೭-೨-೯೬) ದ್ವಿತೀಯಾಯಾಂ ಚ (ಪಾ. ಸೂ. ೭-೨-೯೭) ಪ್ರಥಮಾ ಯಾಶ್ಚದ್ವಿವಚನೇ ಭಾಷಾಯಾಂ (೭-೨-೯೮) ಈ ಮೂರು ಸೂತ್ರಗಳಿಂದ ಆಕಾರಾದೇಶವನ್ನೂ 'ಯೋಚಿ' (ಪಾ. ಸೂ. ೭-೨-೯೯) ಎಂಬುದರಿಂದ ಯಕಾರಾದೇಶವನ್ನೂ ಕೆಲವು ವಿಭಕ್ತಿಗಳಲ್ಲಿ ವಿಧಿಸಿರುವರು. ಆದ್ದರಿಂದ ಶೇಷೇ ವಿಭಕ್ತೌ ಎಂಬುದಕ್ಕೆ ಆಶ್ವ ಯತ್ವಗಳಿಗೆ ನಿಮಿತ್ತವಾಗದೇ ಇರುವ ವಿಭಕ್ತಿ ಎಂದು ಅರ್ಥ. ಏನಂಚ

ಅತ್ಸ ಯತ್ಸಗಳಿಗೆ ನಿಮಿತ್ತವಾಗದೇ ಇರುವ ವಿಭಕ್ತಿಯು ಪರದಲ್ಲಿರುವಾಗ ಯುಷ್ಮದ್ ಅಸ್ಮದ್ ಶಬ್ದಗಳ ಕೊನೆಯ ವರ್ಣಕ್ಕೆ ಲೋಪಬರುವುದು ಎಂದು ಒಂದು ಅರ್ಥ.

ಶೇಷೇ—ಎಂಬಲ್ಲಿ **ವಿವಕ್ಷಾತಃ ಕಾರಕಾಣಿಭವಂತಿ** ಅಂದರೆ ಕಾರಕಗಳು ವಕ್ತೃಗಳ ಇಚ್ಛೆಗೆ ಅನುಸಾರವಾಗಿ ಬರುವುವು ಎಂದು ಹೇಳಿರುವುದರಿಂದ ಷಷ್ಠೀವಿಭಕ್ತಿಯ ಅರ್ಥವಾದ ಸ್ಥಾನ ಎಂಬುದನ್ನು ಸಪ್ತಮೀವಿಭಕ್ತಿಯ ಅರ್ಥವಾದ ಅಧಿಕರಣ ಎಂದು ವಿವಕ್ಷೆಮಾಡಿಕೊಂಡು ಸಪ್ತಮೀವಿಭಕ್ತಿಯು ಬಂದಿದೆ. ಆದ್ದರಿಂದ ಶೇಷೇ ಎಂಬುದಕ್ಕೆ ಶೇಷಸ್ಯ ಎಂದೇ ಅರ್ಥವು. ಏನಂಚ ವಿಭಕ್ತಿಯು ಪರದಲ್ಲಿರುವಾಗ ಯುಷ್ಮದ್-ಅಸ್ಮದ್ ಶಬ್ದಗಳ ಮಪರ್ಯಂತಭಾಗಕ್ಕಿಂತಲೂ ಶೇಷವಾದುದಕ್ಕೆ ಲೋಪಬರುವುದು ಎಂದು ಮತ್ತೊಂದು ಅರ್ಥ. ತ್ವತ್+ಅಮ್ ಎಂಬಲ್ಲಿ ಮೊದಲನೆ ಅರ್ಥದಂತೆ ಕೊನೆಯ ವರ್ಣಕ್ಕೆ ಲೋಪಬಂದರೆ ತ್ವ+ಅಮ್ **ಅಮಿಪೂರ್ವಃ** (ಪಾ. ಸೂ. ೬-೧-೧೦೭) ಎಂಬುದರಿಂದ ಪೂರ್ವರೂಪ ಬಂದರೆ ತ್ವಮ್ ಎಂದಾಗುವುದು. ಎರಡನೇ ಅರ್ಥರೀತ್ಯಾ ತ್ವದ್+ಅಮ್ ಎಂಬಲ್ಲಿ ಅದ್ ಎಂಬುದಕ್ಕೆ ಲೋಪಬಂದು ತ್ವ್ ಅಮ್=ತ್ವಮ್ ಎಂದಾಗುವುದು. ಹೀಗೆ ಎರಡು ಪಕ್ಷದಲ್ಲ ತ್ವಮ್ ಎಂಬ ರೂಪವು ಸಿದ್ಧಿಸುವುದು. ಯುಷ್ಮದ್ ಎಂಬಲ್ಲಿ ವ್ಯುತ್ಪತ್ತಿಪಕ್ಷದಲ್ಲಿ ಪ್ರತ್ಯಯ ಸ್ವರದಿಂದ ಮ ವರ್ಣದ ಆಕಾರ ಉದಾತ್ತ, ಅವ್ಯುತ್ಪತ್ತಿ ಪಕ್ಷದಲ್ಲಿ **ಫಿಷೋಂತಉದಾತ್ತೈಃ** (ಫಿ ಸೂ. ೧-೧) ಎಂಬುದರಿಂದ ಅಕಾರಉದಾತ್ತ, ಎರಡು ಪಕ್ಷದಲ್ಲಿ ಶೇಷನಾದಾತ್ತಸ್ವರದಿಂದ ಯು ವರ್ಣದ ಉಕಾರ ಅನುದಾತ್ತ, ಪ್ರಥಮೈಕವಚನ ಸು ಎಂಬ ಸುಪ್ತಿನಸ್ಥಾನದಲ್ಲಿ ಬಂದ ಅಮ್ ಎಂಬುದು ಸ್ಥಾನಿವದ್ಭಾವದಿಂದ ಅನುದಾತ್ತ **ಅನುದಾತ್ತೌ ಸುಪ್ಪಿತೌ** ಎಂಬ ಸೂತ್ರದಿಂದ ಸು ಅನುದಾತ್ತ. ಯುಷ್ಮ್ ಎಂಬುದಕ್ಕೆ ಬಂದ ತ್ವ ಆದೇಶವು ಸ್ಥಾನಿವದ್ಭಾವದಿಂದ ಅನುದಾತ್ತ, ತ್ವ+ಅದ್‌ಗಳಿಗೆ ಪರರೂಪದಿಂದ ಬಂದ ಅಕಾರವು **ವಿಕಾದೇಶಉದಾತ್ತೇನೋದಾತ್ತಃ** ಎಂಬುದರಿಂದ ಉದಾತ್ತ. **ಶೇಷೇ ಲೋಪಃ** ಎಂಬುದರಿಂದ ದಕಾರಕ್ಕೆ ಲೋಪ ಎಂಬ ಪಕ್ಷದಲ್ಲಿ ತ್ವ ಅಮ್ ಗಳಿಗೆ ಪೂರ್ವರೂಪದಿಂದ ಬರುವ ಏಕಾದೇಶವು ಹಿಂದೆ ಹೇಳಿದಂತೆಯೇ ಉದಾತ್ತ. **ಶೇಷೇ ಲೋಪಃ** ಎಂಬುದರಿಂದ ಅದ್‌ಗೆ ಲೋಪ ಎಂಬ ಪಕ್ಷದಲ್ಲಿ ತ್ವದ್ ಅಮ್ ಎಂಬಲ್ಲಿ ಹಿಂದೆ ಹೇಳಿದಂತೆ ಉದಾತ್ತವಾದ ಅದ್‌ಗೆ ಲೋಪಬಂದಿರುವುದರಿಂದ **ಅನುದಾತ್ತಸ್ಯ ಚೆಯತ್ಕ್ರೋದಾತ್ತಲೋಪಃ** (ಪಾ. ಸೂ. ೬-೧-೧೬೧) ಯಾವ ಅನುದಾತ್ತವನ್ನು ನಿಮಿತ್ತಮಾಡಿಕೊಂಡು ಉದಾತ್ತವರ್ಣಕ್ಕೆ ಲೋಪವು ಬರುವುದೋ ಆ ಅನುದಾತ್ತವು ಉದಾತ್ತವಾಗುವುದು ಎಂಬುದರಿಂದ ಅದ್ ಎಂಬ ಉದಾತ್ತಲೋಪಕ್ಕೆ ನಿಮಿತ್ತವಾದ ಅಮ್ ಎಂಬಲ್ಲಿಯ ಅನುದಾತ್ತವು ಉದಾತ್ತವಾಗುವುದು

ಸುತಸ್ಯ—ಷುಞ್ ಅಭಿಷವೇ ಧಾತು. ಇದರಮುಂದೆ **ನಿಷ್ಠಾ** (ಪಾ. ಸೂ. ೩-೨-೧೦೨) ಭೂತಾರ್ಥದಲ್ಲಿರುವ ಧಾತುವಿನ ಮುಂದೆ ಕ್ತ ಮತ್ತು ಕ್ತವತು ಎಂಬ ಪ್ರತ್ಯಯಗಳು ಪರ್ಯಾಯದಿಂದ ಬರುವುವು ಎಂಬುದರಿಂದ ಕ್ತ ಪ್ರತ್ಯಯ ಬರುತ್ತೆ. ಕ್‌ಗೆ ಇತ್ಸಂಜ್ಞೆಬಂದು ಲೋಪ ಬರುವುದು. **ಧಾತ್ವಾದೇಃಷಃಸಃ** (ಪಾ. ಸೂ. ೬-೧-೬೪ ಎಂಬುದರಿಂದ ಷಕಾರಕ್ಕೆ ಸಕಾರ ಸು+ತ= ಸುತ ಎಂದಾಗುವುದು. ಇದರಮುಂದೆ ಷಷ್ಠೀವಿಭಕ್ತಿ ಏಕವಚನ ಜಸ್ ಪ್ರತ್ಯಯ ಸುತ+ಜಸ್ **ಟಾಙಸಿಙಸಾಮಿನಾತ್ಯಾಃ** (ಪಾ. ಸೂ. ೭-೧-೧೨) ಆಕಾರವನ್ನು ಕೊನೆಯಲ್ಲಿ ಹೊಂದಿರುವ ಶಬ್ದದ (ಅಂಗದ) ಮುಂದೆ ಇರುವ ಟಾ-ಙಸಿ-ಙಸ್ ಇವುಗಳಿಗೆ ಕ್ರಮವಾಗಿ ಇನ್—ಆತ್-ಸ್ಯ ಎಂಬ ಆದೇಶಗಳು ಬರುವುವು ಎಂಬುದರಿಂದ ಜಸ್‌ಗೆ ಸ್ಯ-ಆದೇಶ ಬಂದು ಸುತಸ್ಯ ಎಂದಾಗುವುದು ಪ್ರತ್ಯಯ ಸ್ವರದಿಂದ ಸುತಶಬ್ದವು **ಅಂತೋದಾತ್ತ ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತವಾದ ಜಸ್‌ನ ಸ್ಥಾನ

ದಲ್ಲಿ ಬಂದ ಸ್ಯ ವು ಸ್ಥಾನಿವದ್ಭಾವದಿಂದ ಅನುದಾತ್ತ. ಈ ಕೊನೆಯ ಅನುದಾತ್ತವು ಉದಾತ್ತವಾದ ತ ಎಂಬುದರ ಮುಂದೆ ಇರುವುದರಿಂದ **ಉದಾತ್ತಾದೆನುದಾತ್ತಸ್ಯ ಸ್ವರಿತಃ** ಎಂಬುದರಿಂದ ಸ್ವರಿತವಾಗುವುದು.

ಪೀತಯೇ— ಪಾ ಪಾನೇ ಎಂಬ ಧಾತುವಿನ ಮುಂದೆ **ಸ್ಥಾ ಗಾ ಪಾ ಪಚೋಭಾವೇ** (ಪಾ ಸೂ. ೩-೩-೯೫)ಈ ಧಾತುಗಳ ಮುಂದೆ ಭಾವಾರ್ಥದಲ್ಲಿ ಕ್ತಿನ್ ಪ್ರತ್ಯಯ ಬರುವದು ಎಂಬುದರಿಂದ ಕ್ತಿನ್ ಪ್ರತ್ಯಯ ಬಂದರೆ **ಘುಮಾಸ್ಥಾಗಾಪಾಜಹಾತಿಸಾಂಹಲಿ** (ಪಾ. ಸೂ. ೬-೪-೬೬] ಘುಸಂಜ್ಞೆಯುಳ್ಳ ಧಾತುಗಳು ಎಂದರೆ ದಾ-ಧಾ ಮೊದಲಾದ ಧಾತುಗಳು ಮಾ-ಸ್ಥಾ-ಗಾ-ಪಾ ಜಹಾತಿ ಸಾ-ಎಂಬ ಧಾತುಗಳ ಆಕಾರಕ್ಕೆ ಹಲಾದಿಯಾಗಿದ್ದು ಕಿತ್ ಅಥವಾ ಙಿತ್ ಆದ ಆರ್ಧಧಾತುಕಪ್ರತ್ಯಯ ಪರದಲ್ಲಿದ್ದರೆ ಈಕಾರಾದೇಶ ಬರುವುದು ಎಂಬುದರಿಂದ ಈತ್ವಬಂದು ಪೀತಿ ಎಂದಾಗುವುದು. ಪ್ರತ್ಯಯ ನಿತ್ತಾದರೂ ವ್ಯತ್ಯಯದಿಂದ **ಆದ್ಯುದಾತ್ತಸ್ಯ** (ಪಾ. ಸೂ. ೩-೧-೩) ಎಂಬುದರಿಂದ ಪ್ರತ್ಯಯಕ್ಕೆ ಆದ್ಯುದಾತ್ತವೇ ಬರುವುದು ಅಥವಾ **ಮಂತ್ರೇ ವೃಷೇಷಪಚಮನವಿದಭೂವೀರಾಉದಾತ್ತಃ** (ಪಾ. ಸೂ. ೩-೩-೯೬) ಎಂಬ ಮುಂದಿನ ಸೂತ್ರದಲ್ಲಿರುವ ಉದಾತ್ತಃ ಎಂಬ ಪದವನ್ನು **ಸ್ಥಾಗಾಪಾಪಚೋಭಾವೇ** ಎಂಬ ಸೂತ್ರದಲ್ಲಿ ಅಪಕರ್ಷಮಾಡಿಕೊಂಡು ಈ ಧಾತುಗಳಿಗೆ ಕ್ತಿನ್ ಬರುವುದು. ಅದು ಉದಾತ್ತವೂ ಆಗುವುದು ಎಂದು ಅರ್ಥ ವರ್ಣಿಸಿಯಾದರೂ ಉದಾತ್ತವನ್ನು ಇಲ್ಲಿ ಉಪಪಾದಿಸಬೇಕು. ಇದರಮುಂದೆ **ಚತುರ್ಥೀವಿಭಕ್ತೆ ಏಕವಚನ ಙೀ ಪ್ರತ್ಯಯ ಪೀತಿ+ಙೀ ಶೇಷೋಘ್ಯಸಖಿ** (ಪಾ. ಸೂ. ೧-೪-೭) ನದೀ ಸಂಜ್ಞೆಯನ್ನು ಹೊಂದದೇ ಇರುವ ಹ್ರಸ್ವವಾದ ಇ ಅಥವಾ ಉ ವರ್ಣಗಳನ್ನು ಕೊನೆಯಲ್ಲಿ ಹೊಂದಿರುವ ಶಬ್ದವು ಘಿ ಎಂಬ ಸಂಜ್ಞೆಯನ್ನು ಹೊಂದುವುದು. ಆದರೆ ಸಖಿ ಶಬ್ದಕ್ಕೆ ಈ ಸಂಜ್ಞೆ ಬರುವುದಿಲ್ಲ ಎಂಬುದರಿಂದ ಪೀತಿ ಶಬ್ದಕ್ಕೆ ಘಿ ಸಂಜ್ಞೆ ಇದೆ. ಆದ್ದರಿಂದ **ಘೇರ್ಙಿತಿ** (ಪಾ. ಸೂ ೭-೩-೧೧೧) ಜಕಾರಕ್ಕೆ ಇತ್ಸಂಜ್ಞೆ ಬಂದಿರುವ ಸುಪ್ ಪರದಲ್ಲಿದ್ದರೆ ಘಿ ಸಂಜ್ಞೆಯನ್ನು ಹೊಂದಿರುವ ಶಬ್ದಕ್ಕೆ ಗುಣಬರುವುದು ಎಂಬುದರಿಂದ ಗುಣಬಂದರೆ **ಪೀತೇ+ಙೀ** ಜಕಾರಕ್ಕೆ ಇತ್ಸಂಜ್ಞೆ ಲೋಪ. ಪೀತೇ-ಏ= **ಏಚೋಯವಾಯಾವಃ** (ಪಾ ಸೂ. ೬-೧-೭೮) ಎಂಬುದರಿಂದ ಆಯ್ ಆದೇಶ ಬಂದರೆ ಪೀತಯ್+ಏ= ಪೀತಯೇ ಎಂದಾಗುವುದು. ಇಲ್ಲಿ ಏ ಯು ಸುಪ್ ಆದ್ದರಿಂದ ಅನುದಾತ್ತ. ತಿ ಎಂಬುದು ಉದಾತ್ತ ಎಂದು ಉಪಪಾದಿಸಿದೆ. ಇಕಾರ ಸ್ಥಾನದಲ್ಲಿ ಬಂದ ಏ ಎಂಬುದು ಸ್ಥಾನಿವದ್ಭಾವದಿಂದ ಉದಾತ್ತ. ಅದರ ಸ್ಥಾನದಲ್ಲಿ ಬಂದ ಆಯ್ ಆದೇಶವು ಸ್ಥಾನಿವದ್ಭಾವದಿಂದ ಉದಾತ್ತ. ಇದರ ಮುಂದೆ ಇರುವ ಅನುದಾತ್ತವಾದ ಸುಪ್‌ನ ಏ ಕಾರವು ಸ್ವರಿತವಾಗುವುದು. ಪೀ ಎಂಬಲ್ಲಿ ಈಕಾರವು ಶೇಷಾನುದಾತ್ತಸ್ವರದಿಂದ ಅನುದಾತ್ತ. ಹೀಗೆ ಪೀತಯೇ ಎಂಬಲ್ಲಿ ಮೊದಲನೆಯ ವರ್ಣ ಅನುದಾತ್ತ ಎರಡನೆಯದು ಉದಾತ್ತ ಮೂರನೆಯದು ಸ್ವರಿತ ಎಂದು ವಿಭಜಿಸುವುದು.

ಸದ್ಯಃ— **ಸದ್ಯಃ ಪರುತ್ಪರಾರ್ಯೈಷಮಃ ಪರೇದ್ಯವ್ಯದ್ಯ ಪೂರ್ವೇದ್ಯುರನ್ಯೇದ್ಯುರನ್ಯತರೇದ್ಯುರಿತರೇದ್ಯುರಪರೇದ್ಯುರಧರೇದ್ಯುರುಭಯೇದ್ಯುರುತ್ತರೇದ್ಯುಃ** (ಪೂ. ಸೂ. ೫-೩-೨೨) ಇವುನಿಪಾತಿಸಲ್ಪಡುವುವು. **ಸಮಾನಸ್ಯ ಸಭಾವೋದ್ಯೇಶ್ಯಾಹನಿ** (ಪಾ. ಸೂ. ೫-೩-೨೨) ಅಹರ್ವ್ಯತಿರಿಯಾದ ಸಪ್ತಮ್ಯಂತಸಮಾನ ಶಬ್ದದ ಮುಂದೆ ದ್ಯಸ್ ಪ್ರತ್ಯಯವೂ ಸಮಾನ ಶಬ್ದಕ್ಕೆ ಸ ಆದೇಶವೂ ಬರುವುದು, ಸಮಾನೇ ಅಹನಿ ಎಂಬ ಅರ್ಥದಲ್ಲಿ ಸದ್ಯಃ ಎಂದಾಗುವುದು. ಪ್ರತ್ಯಯಸ್ವರದಿಂದ ಕೊನೆಯ ವರ್ಣವು ಉದಾತ್ತವಾಗುವುದು.

ವೃದ್ಧ :—ವೃಧು ವೃದ್ಧಾ ಧಾತು. **ನಿಷ್ಠಾ** ಎಂಬುದರಿಂದ ಕ್ತ ಪ್ರತ್ಯಯ ವೃಧ್+ತ. **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ವಲಾದಿಯಾದ ಆರ್ಧ ಧಾತುಕಕ್ಕೆ ಇಟ್ ಆಗಮ ಬರುವುದು.

ಎಂಬುದರಿಂದ ಯದ್ಯಪಿ ತ ಎಂಬುದಕ್ಕೆ ಇಡಾಗಮವು ಪ್ರಾಪ್ತವಾಗುವುದು. ಆದರೆ **ಯೆಸ್ಯವಿಭಾಷಾ** (ಪಾ. ಸೂ. ೭-೨-೧೫) ಯಾವ ಧಾತುವಿನ ಮುಂದಿರುವ ಪ್ರತ್ಯಯಕ್ಕೆ ಎಲ್ಲಾದರೂ ಒಂದು ಸ್ಥಳದಲ್ಲಿ ವಿಕಲ್ಪದಿಂದ ಇಟ್ ಆಗಮವು ವಿಹಿತವಾಗಿರುವುದೋ ಆ ಧಾತುವಿನ ಮುಂದೆ ಬರುವ ಕ್ತ ಮತ್ತು ಕ್ತವತು ಪ್ರತ್ಯಯಗಳಿಗೆ ಇಡಾಗಮವು ಬರುವುದಿಲ್ಲ. ಎಂಬುದರಿಂದ ಇಡಾಗಮಕ್ಕೆ ನಿಷೇಧ ಬರುವುದು, ವೃಧು ಧಾತುವು ಉದಿತ್. ಆದ್ದರಿಂದ **ಉದಿತೋವಾ** (ಪಾ. ಸೂ. ೭-೨)೫೬) ಉದಿತ್ತಾದ ಧಾತುವಿನ ಮುಂದೆ ಇರುವ ಕ್ತ್ವಾ ಪ್ರತ್ಯಯಕ್ಕೆ ಇಟ್ ವಿಕಲ್ಪವಾಗಿ ಬರುವುದು ಎಂದು ವೃಧು ಧಾತುವಿನ ಮುಂದೆ ಇರುವ ಪ್ರತ್ಯಯಕ್ಕೆ ವಿಕಲ್ಪವಾಗಿ ಇಟ್ ವಿಹಿತವಾಗಿದೆ. ಆದ್ದರಿಂದ ಹಿಂದೆ ಹೇಳಿದಂತೆ ಕ್ತ ಪ್ರತ್ಯಯಕ್ಕೆ ಇಲ್ಲಿ ಇಟ್ ಆಗಮ ಬರುವುದಿಲ್ಲ ವೃಧ್+ತ ಎಂದಿರುವಾಗ **ಝಷಸ್ತಥೋರ್ಧ್ವೋ೨ಧಃ** (ಪಾ.ಸೂ ೮-೨-೪೦) ಧಾ ಧಾತು ಸಂಬಂಧಿಯಲ್ಲ ಝಷ್ ಪ್ರತ್ಯಾಹಾರದ ವರ್ಣಗಳ ಮುಂದೆ ಇರುವ ತಕಾರ ಥಕಾರಗಳಿಗೆ ಧಕಾರಾದೇಶ ಬರುವುದು. ಎಂಬುದರಿಂದ, ಧ್ ಎಂಬ ಝಷ್ ನ ಮುಂದೆ ಇರುವ ತಕಾರಕ್ಕೆ ಧಕಾರ ಬರುತ್ತೆ. ವೃಧ್+ಧ **ಝಲಾಂ ಜಶ್ ಝಶಿ** (ಪಾ. ಸೂ. ೮-೪-೫೩) ಝಷ್ ವರ್ಣ ಪರದಲ್ಲಿರುವಾಗ ಝಲ್ ಪ್ರತ್ಯಾಹಾರಕ್ಕೆ ಸೇರಿದ ವರ್ಣಗಳಿಗೆ ಜಶ್ ವರ್ಣಗಳು ಬರುವುವು ಎಂಬುದರಿಂದ ಮೊದಲನೆಯ ಧಕಾರಕ್ಕೆ ದಕಾರಾದೇಶ-ವೃದ್+ಧ= ವೃದ್ಧ ಎಂದಾಗುತ್ತೆ. ಧಾತು ಸ್ವರವನ್ನು ಬಾಧಿಸಿ ಪ್ರತ್ಯಯ ಸ್ವರವು ಬರುವುದರಿಂದ ಇದು ಅಂತೋದಾತ್ತ. ಇದರ ಮುಂದೆ ಪ್ರಥಮೈಕ ವಚನ ಸು ಪ್ರತ್ಯಯವನ್ನು ಹಚ್ಚಿದರೆ ಸಂಹಿತಾಕಾಲದಲ್ಲಿ ಆಜಾಯಥಾಃ ಶಬ್ದದ ಆಕಾರವು ಪರದಲ್ಲಿದೆ ಆದ್ದರಿಂದ ವೃದ್ಧ+ಸ್+ಆಜಾಯಥಾಃ ಎಂಬಲ್ಲಿ-**ಸೆಸಜುಷೋರುಃ** (ಪಾ. ಸೂ. ೮-೩-೩೭) ಎಂಬುದರಿಂದ ಸ್ ಗೆ ರು ಆದೇಶ **ಆತೋರೋರಪ್ಲುತಾದಪ್ಲುತೇ** (ಪಾ. ಸೂ. ೬-೧-೪೭) ಎಂಬುದರಿಂದ ರ್‌ಗೆ ಉ ಆದೇಶ, ಅ+ಉ ಗಳಿಗೆ ಓ ಗುಣ ಬಂದುಓ ಆಗುವುದು ವೃದ್ಧೋ+ಆಜಾಯಥಾಃ **ಪ್ರಕೃತ್ಯಾಂತಃಪಾದಮವ್ಯಪರೇ** (ಪಾ.ಸೂ. ೬-೧-೧೧೫) ಹ್ರಸ್ವಾಕಾರ ಪರದಲ್ಲಿರುವಾಗ ಋಕ್ಪಾದದ ಮಧ್ಯದಲ್ಲಿರುವ ಏ ಓಗಳಿಗೆ ಪ್ರಕೃತಿಭಾವ ಬರುವುದು. ಆದರೆ ಹ್ರಸ್ವಾಕಾರವು ಯಕಾರ ಅಥವಾ ವಕಾರದ ಹಿಂದೆ ಇದ್ದರೆ ಈ ಪ್ರಕೃತಿಭಾವ ಬರುವುದಿಲ್ಲ. ಇಲ್ಲಿ ಆಜಾಯಥಾಃ ಎಂಬಲ್ಲಿಯ ಹ್ರಸ್ವಾಕಾರವು ಯಕಾರ ವಕಾರಗಳ ಹಿಂದೆ ಇಲ್ಲ. ಆದ್ದರಿಂದ ಇದು ಪರದಲ್ಲಿರುವಾಗ ಓಕಾರಕ್ಕೆ ಪ್ರಕೃತಿಭಾವ ಬರುವುದು. ಅಂದರೆ ಯಾವ ಸಂಧಿಕಾರ್ಯವೂ ಬರುವುದಿಲ್ಲ. ಆದ್ದರಿಂದ ವೃದ್ಧೋ ಆಜಾಯಥಾಃ ಎಂದಾಗುವುದು. ಇಲ್ಲಿ ರ್ ಸ್ಥಾನದಲ್ಲಿ ಬಂದ ಉಕಾರವು ವ್ಯಂಜನ ಸ್ಥಾನದಲ್ಲಿ ಬರುವುದರಿಂದ ಅನುದಾತ್ತ. ಇದಕ್ಕೆ ವೃದ್ಧ ಶಬ್ದದ ಉದಾತ್ತ ಅಕಾರದೊಂದಿಗೆ ಗುಣಸಂಧಿಯಿಂದ ಬಂದ ಓಕಾರವು **ಏಕಾದೇಶ ಉದಾತ್ತೇನೋದಾತ್ತಃ** ಎಂಬುದರಿಂದ ಉದಾತ್ತ

ಆಜಾಯಥಾಃ—ಜನೀ ಪ್ರಾದುರ್ಭಾವೇ ಧಾತು. ಇದರ ಮುಂದೆ ಲಙ್. ಅದಕ್ಕೆ ಆತ್ಮನೇಪದ ಸಂಜ್ಞಕವಾದ ಮಧ್ಯಮ ಪುರುಷ ದ್ವಿವಚನ ಥಾಸ್‌ಪ್ರತ್ಯಯ. **ದಿವಾದಿಭ್ಯಃಶ್ಯನ್** (ಪಾ.ಸೂ. ೩-೧-೬೯) ದಿವಾದಿ (ಳನೇ) ಗಣ ಪಠಿತ ಧಾತುಗಳ ಮುಂದೆ ಕರ್ತೃ ಎಂಬ ಅರ್ಥವನ್ನು ಬೋಧಿಸುವ ಸಾರ್ವಧಾತುಕವು ಪರದಲ್ಲಿರುವಾಗ ಶ್ಯನ್ ವಿಕರಣ ಬರುವುದು. ಎಂಬುದರಿಂದ ಶ್ಯನ್ ಬರುವುದು. ಇದರಲ್ಲಿ ಯ ಮಾತ್ರ ಉಳಿಯುವುದು ಜನ್+ಯ+ಥಾಸ್ ಜ್ಞಾಜ ನೋರ್ಜಾ, (ಪಾ. ಸೂ. ೭-೦-೭೯) ಶಕಾರೇತ್ಸಂಜ್ಞಕ ಪ್ರತ್ಯಯವು ಪರದಲ್ಲಿರುವಾಗ ಜ್ಞಾ (ಅವಬೋಧನೇ) ಜನೀ (ಪ್ರಾದುರ್ಭಾವೇ) ಧಾತುಗಳಿಗೆ ಜಾ ಆದೇಶಬರುವುದು ಎಂಬುದರಿಂದ ಜನ್‌ಗೆ ಜಾ ಆದೇಶ. ಜಾ+ಯ ಥಾಸ್ **ಲುಙ್ ಲಙ್ಲೃಙ್ಷ್ವಡುದಾತ್ತಃ** (ಪಾ. ಸೂ. ೬-೪-೭೧) ಲುಙ್-ಲಙ್-ಲೃಙ್ ಇವು ಪರದಲ್ಲಿರುವಾಗ ಧಾತುವಿನ ಆದಿಗೆ ಅ ಆಗಮ ಬರುವುದು ಎಂಬುದರಿಂದ ಆ ಆಗಮ ಅ ಜಾ+ಯ+

ಧಾಸ್. ಸ್‌ಗೆ ರುತ್ವ ವಿಸರ್ಗಗಳು ಬಂದರೆ ಅಜಾಯಥಾಃ ಎಂದಾಗುವುದು. ಇದು **ತಿಙ್ಶಿತಿಙಃ** ಎಂಬುದರಿಂದ ಸರ್ವಾನುದಾತ್ತ ಸಂಹಿತಾಕಾಲದಲ್ಲಿ ಓ ಎಂಬ ಉದಾತ್ತದ ಮುಂದೆ ಇರುವುದರಿಂದ ಆ ಸ್ವರಿತ, ಮಿಕ್ಕ ಎರಡು ಆ ಗಳು **ಸ್ವರಿತಾತ್ಸಂಹಿತಾಯಾಂ** ಎಂಬುದರಿಂದ ಸ್ವರಿತ.

ಜ್ಯೈಷ್ಠ್ಯಾಯ— ಜ್ಯೈಷ್ಠ್ಯಸ್ಯ ಭಾವಃ ಜ್ಯೈಷ್ಠ್ಯಂ **ಗುಣವಚನ ಬ್ರಾಹ್ಮಣಾದಿಭ್ಯಃ ಕರ್ಮಣಿ ಚ** (ಪಾ-ಸೂ- ೫-೧-೧೨೪) ಷಷ್ಠ್ಯಂತಗಳಾದ ಗುಣೋಪಸರ್ಜನ ದ್ರವ್ಯವಾಚಗಳ ಮುಂದೂ ಷಷ್ಠ್ಯಂತಗಳಾದ ಬ್ರಾಹ್ಮಣಾದಿ ಗಣಪಠಿತ ಶಬ್ದಗಳ ಮುಂದೂ ಭಾವಾರ್ಥದಲ್ಲಿಯೂ ಕರ್ಮಾರ್ಥದಲ್ಲಿಯೂ ಷ್ಯಞ್ ಪ್ರತ್ಯಯ ಬರುವುದು ಎಂಬು ದರಿಂದ ಷ್ಯಞ್ ಬರುವುದು. ಪ್ರತ್ಯಯವು ಞಿತ್ತಾದ್ದರಿಂದ ಪ್ರತ್ಯಯಾಂತವು ಅವ್ಯುದಾತ್ತವಾಗುವುದು. ॥ ೬ ॥

ಸಂಹಿತಾಪಾಠಃ

ಆ ತ್ವಾ ವಿಶಂತ್ವಾಶವಃ ಸೋಮಾಸ ಇಂದ್ರ ಗಿರ್ವಣಃ ।
ಶಂ ತೇ ಸಂತ್ವಪ್ರಚೇತಸೇ ॥ ೭ ॥

ಪದಪಾಠಃ

ಆ । ತ್ವಾ । ವಿಶಂತು । ಆಶವಃ । ಸೋಮಾಸಃ । ಇಂದ್ರ । ಗಿರ್ವಣಃ ॥
ಶಂ । ತೇ । ಸಂತು । ಪ್ರ ಚೇತಸೇ ॥ ೭ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಾಂ ಸೋಮಾಸಃ ಸೋಮಾ ಆ ವಿಶಂತು । ಆಭಿಮುಖ್ಯೇನ ಪ್ರವಿಶಂತು । ಕೀದೃಶಾಃ ಸೋಮಾಃ । ಆಶವಃ ಸವನತ್ರಯೇ ಪ್ರಕೃತಿವಿಕೃತ್ಯೋರ್ವಾ ವ್ಯಾಪ್ತಿಮಂತಃ । ಕೀದೃಶೇಂದ್ರ। ಗಿರ್ವಣೋ ಗೀರ್ಭಿಃ ಸ್ತುತಿಭಿಃ ಸಂಭಜನೀಯ ದೇವವಿಶೇಷ । ಗಿರ್ವಣಾ ದೇವೋ ಭವತಿ ಗೀರ್ಭಿರೇನಂ ವನಯಂತಿ । ನಿ. ೬-೧೪ । ಇತಿ ಯಾಸ್ಕಃ । ತಥಾವಿಧ ಹೇ ಇಂದ್ರ ತೇ ತವ ಪ್ರಚೇತಸೇ ಪ್ರಕೃಷ್ಟ-ಜ್ಞಾನಾಯ ಶಂ ಸುಖರೂಪಾಃ ಸೋಮಾಃ ಸಂತು ॥ ಗಿರ್ವಣಃ । ಗೃಣಂತೀತಿ ಗಿರಃ ಸ್ತುತಯಃ । ಗ್ಯ ತಶ್ಚೇ । ಕ್ವಿಪ್ಯಾತ ಇದ್ಧಾತೋಃ । ಪಾ. ೭-೧-೧೦೦ । ಇತೀತ್ವಂ ರಪರತ್ವಂ ಚ । ಗೀರ್ಭಿರ್ವನ್ಯತೇ ಸೇವ್ಯತ ಇತಿ ಗಿರ್ವಣಾಃ । ವನ ಷಣ ಸಂಭಕ್ತ್ಯಾ । ಸಂಭಕ್ತಿಃ ಸೇವಾ । ಸರ್ವಧಾತುಭ್ಯೋಽಸುನ್ । ಉ. ೪-೧೮೮ । ಇತ್ಯಸುನ್ಪ್ರತ್ಯಯಃ । ಪ್ರಚೇತಸೇ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ಗಿರ್ವಣಃ—ವಾಕ್ಯಗಳಿಂದ ಸ್ತುತಿಸಲ್ಪಡುವ । **ಇಂದ್ರೇ**-ಎಲೈ ಇಂದ್ರನೇ । **ಆಶವಃ**—(ಪ್ರಕೃತಿವಿಕೃತಿ ರೂಪಗಳಾದ ಯಾಗಗಳ ಸವನತ್ರಯದಲ್ಲಿಯೂ) ಬಳಸಲ್ಪಡುವ । **ಸೋಮಾಸಃ**—ಸೋಮರಸಗಳು । **ತ್ವಾ**—ನಿನ್ನನ್ನು । **ಆ ವಿಶಂತು**—ಪ್ರವೇಶಿಸಲಿ (ನಿನ್ನನ್ನು ಸೇರಲಿ) । (ಮತ್ತು ಆ ಸೋಮರಸಗಳು) **ತೇ**—ನಿನಗೆ । **ಪ್ರಚೇತಸೇ**-ಉತ್ಕೃಷ್ಟಜ್ಞಾನವನ್ನುಂಟುಮಾಡುವುದಕ್ಕಾಗಿ । **ಶಂ**—ಸುಖರೂಪವಾಗಿ । **ಸಂತು**—ಆಗಲಿ ॥

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಯಾವಾಗಲೂ ವಾಕ್ಯಗಳಿಂದ (ಸ್ತೋತ್ರಗಳಿಂದ) ಸ್ತುತಿಸಲ್ಪಡುವವನು ; ನಾವು ಮಾಡುವ ಯಜ್ಞಯಾಗಾದಿಗಳಲ್ಲಿ ಸಿದ್ಧಪಡಿಸುವ ಸೋಮರಸವು ನಿನಗೆ ಸೇರಲಿ ಮತ್ತು ನೀನು ಅದರಿಂದ ತೃಪ್ತಿಗೊಳ್ಳುವುದರಿಂದ ಆ ಸೋಮರಸವು ನಿನಗೆ ಸುಖವನ್ನುಂಟುಮಾಡಲಿ.

English Translation

O Indra, you are the object of our praises; may these pervading soma juices enter you (thereby) making you happy; may the soma juices help you to attain superior intelligence.

॥ ವಿಶೇಷನಿಷಯಗಳು ॥

ಸೋಮರಸಗಳು ನಿನ್ನನ್ನು ಪ್ರವೇಶಿಸಲಿ ಎಂದರೆ ಸೋಮರಸವನ್ನು ನೀನು ಪಾನಮಾಡು ಅದರಿಂದ ನಿನ್ನ ಉದರದಲ್ಲಿ ಸೋಮರಸವು ಪ್ರವೇಶಿಸಿದಂತಾಯಿತು ಎಂದರ್ಥವು. **ಆಶವಃ**—ವ್ಯಾಪ್ತವಾದ, ವಿಶೇಷವಾಗಿ ಉಪಯೋಗಿಸಲ್ಪಡುವ, ಎಂದರೆ ಯಜ್ಞದ ಸವನತ್ರಯಗಳಲ್ಲಿಯೂ ಸೋಮಾಭಿಷವಣವೇ ಮುಖ್ಯಾಂಗಭೂತವಾದುದು. ಈ ಸೋಮರಸವನ್ನು ಪಾನಮಾಡುವುದರಿಂದ ಮನಸ್ಸಿಗೆ ಸಂತೋಷವುಂಟಾಗಿ ಸುಖವಾಗುವುದಲ್ಲದೆ ಸೋಮಪಾನಮಾಡುವ ಇಂದ್ರನಿಗೆ ಬುದ್ಧಿಶಕ್ತಿಯನ್ನೂ ಹೆಚ್ಚಿಸುವುದೆಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಆ—ಇದು ನಿಪಾತ. ಆದ್ದರಿಂದ **ನಿಪಾತಾ ಆದ್ಯುದಾತ್ತಾಃ** ಎಂಬುದರಿಂದ ಅದ್ಯುದಾತ್ತ.

ತ್ವಾ—ಯುಷ್ ಧಾತುವಿನ ಮುಂದೆ **ಯುಷ್ಮಸಿಭ್ಯಾಂಮದಿಕ್** ಎಂಬುದರಿಂದ ಮದಿಕ್ ಪ್ರತ್ಯಯ ಯುಷ್ಮದ್ ಎಂದಾಗುತ್ತೆ. ಇದರ ಮುಂದೆ ದ್ವಿತೀಯಾ ಏಕವಚನ ಅಮ್, **ಜಶೇಷ್ಪ್ರಥಮಯೋರಮ್** ಎಂಬುದರಿಂದ ಅಮ್‌ಗೆ ಪುನಃ ಅಮ್ ಆದೇಶ **ತ್ವಮಾವೇಕವಚನೇ** (ಪಾ. ಸೂ. ೭-೨-೯೩) ಒಂದು ವ್ಯಕ್ತಿಯನ್ನು ಬೋಧಿಸುವ ಯುಷ್ಮದ್-ಅಸ್ಮದ್ ಶಬ್ದಗಳ ಪ್ರಥಮಾವಿಭಕ್ತಿಯಿಂದ ದ್ವಿತೀಯಾವಿಭಕ್ತಿಯವರೆಗೆ ಕ್ರಮವಾಗಿ ತ್ವ-ಮಾ ಆದೇಶಗಳು ಬರುವುವು. ಎಂಬುದರಿಂದ ತ್ವ ಆದೇಶ ಬಂದರೆ ತ್ವ+ಆದ್+ಅಮ್, **ದ್ವಿತೀಯಾಯಾಂ ಚ** (ಪಾ. ಸೂ. ೭-೨-೮೭) ದ್ವಿತೀಯಾ ವಿಭಕ್ತಿಯು ಪರದಲ್ಲಿರುವಾಗ ಯುಷ್ಮದ್- ಅಸ್ಮದ್ ಶಬ್ದಗಳ ದ್‌ಗೆ ಆಕಾರಾದೇಶ ಬರುವುದು.

ಎಂಬುದರಿಂದ ದ್-ಅಕಾರಾದೇಶ ತ್ವ+ಅ+ಅ+ಅಮ್, **ಅತೋಗುಣೇ** ಎಂಬುದರಿಂದ ಪರರೂಪ ತ್ವ+ಅ+ಅವ್ **ಅಕಸ್ಸವರ್ಣೇದೀರ್ಘಃ** ಎಂಬುದರಿಂದ ಸವರ್ಣದೀರ್ಘಾನಂತರ ಪೂರ್ವರೂಪ ತ್ವಾವ್ ಎಂದಾಗುತ್ತೆ **ಅನುದಾತ್ತಂ ಸರ್ವಮಪಾದಾದೌ**(ಪಾ.ಸೂ. ೮-೧-೧೪) ಈ ಅಧಿಕಾರದಲ್ಲಿರುವ **ತ್ವಾಮೌದ್ವಿತೀಯಾಯಾಃ**(ಪಾ-ಸೂ. ೮-೪-೨೩) ಪದದ ಮುಂದೆ ಇರತಕ್ಕವುಗಳೂ, ಪಾದದ ಆದಿಯಲ್ಲಿಲ್ಲದವುಗಳೂ ದ್ವಿತೀಯಾ ವಿಭಕ್ತಿ ಏಕವಚನಾಂತಗಳೂ ಆದ ಯುಷ್ಮದ್-ಅಸ್ಮದ್ ಶಬ್ದಗಳಿಗೆ ಕ್ರಮವಾಗಿ ತ್ವಾ-ಮಾ ಎಂಬ ಆದೇಶಗಳು ಬರುವುವು. ಅವು ಅನುದಾತ್ತಗಳಾಗುವುವು ಎಂಬುದರಿಂದ ತ್ವಾಂ ಎಂಬ ದ್ವಿತೀಯೈಕವಚನಾಂತವಾದ ಯುಷ್ಮಚ್ಛಬ್ದಕ್ಕೆ ಅನುದಾತ್ತವಾದ ತ್ವಾ ಆದೇಶಈ ತ್ವಾ ಎಂಬುದು ಪದಕಾಲದಲ್ಲಿ ಅನುದಾತ್ತವಾಗಿಯೇ ಇರುವುದು. ಸಂಹಿತಾ ಕಾಲದಲ್ಲಿ ಅ ಎಂಬ ಉದಾತ್ತದ ಮುಂದೆ ಇರುವುದರಿಂದ ಸ್ವರಿತವಾಗುವುದು.

ವಿಶನ್ತ್ಯ.—ವಿಶ ಪ್ರವೇಶನೇ ಧಾತು-ಲೋಟ್ ಪರಸ್ಮೈಪದಸಂಜ್ಞಿಕವಾದ ಪ್ರಥಮ ಪುರುಷ ಬಹುವಚನ ರುು ಪ್ರತ್ಯಯ. **ಝೋನ್ತಃ** (ಪಾ.ಸೂ. ೭-೧-೩ ಪ್ರತ್ಯಯಾವಯವವಾದ **ಝ್**ಗೆ **ಅನ್ತ್** ಆದೇಶ ಬರುವುದು. ಎಂಬುದರಿಂದ ಝ್ಗೆ ಅನ್ತ್ ಆದೇಶ, **ತುದಾದಿಭ್ಯಃ ಶಃ**(ಪಾ.ಸೂ. ೩-೧-೭೭) ಎಂಬುದರಿಂದ ಶ (ಅ) ವಿಕರಣ ವಿಶ್+ಅ+ಅನ್ತಿ **ವಿರುಃ** (ಪಾ. ಸೂ. ೩-೪-೮೬) **ಲೋಟ್ಟಿನ** ಇಕಾರಕ್ಕೆ ಉಕಾರಾದೇಶ ಬರುವುದು ಎಂಬುದರಿಂದ ಇಕಾರಕ್ಕೆ ಉಕಾರಾದೇಶ ಇಲ್ಲಿ ಯದ್ಯಪಿ **ಪುಗಂತಲಘೂಪಧಸ್ಯೇಚ**(ಪಾ. ಸೂ. ೭-೩-೮೬) ಎಂಬುದರಿಂದ ವಿಶ್ ಎಂಬಲ್ಲಿರುವ ಇಕಾರಕ್ಕೆ ಗುಣವು ಪಾಪ್ತವಾಗುವುದು. ಆದರೆ ಶ ಎಂಬುದು ಪಿತ್ ಅಲ್ಲದ ಸಾರ್ವಧಾತುಕವಾವ್ದರಿಂದ **ಸಾರ್ವಧಾತುಕಮಪಿತ್** (ಪಾ. ಸೂ. ೧-೨-೪) ಎಂಬುದರಿಂದ ಙಿತ್ವಾಗುವುದು. ಆದಕಾರಣ **ಕ್ಙಿತಿಚ** (ಪಾ. ಸೂ. ೧-೧-೫) ಎಂಬುದರಿಂದ ಗುಣಕ್ಕೆ ನಿಷೇಧ ಬರುವುದು, ಇಲ್ಲಿ **ತಿಜ್ಙಿತಿಜಿಃ** ಎಂಬುದರಿಂದ ಸರ್ವಾನುದಾತ್ತ ಬರುವುದು.

ಆಶವಃ.—ಅಶೂ ವ್ಯಾಪ್ತೌ ಧಾತು. ಇದರ ಮುಂದೆ **ಕೃವಾಪಾಜಿ ಮಿಸ್ವದಿಸಾಧ್ಯಶಿಭ್ಯ ಉಣ್** (ಉ. ಸೂ. ೧-೧) ಡುಕೃಞ್ ಕರಣೇ-ವಾ ಗತಿಗಂಧನಯೋಃ-ಪಾ ಪಾನೇ, ಪಾ ರಕ್ಷಣೇ ಜಿ ಅಭಿಭವೇ ಡುಮಿಞ್ ಪ್ರಕ್ಷೇಪಣೇ ಸ್ವದ ಆಸ್ವಾದನೇ ಸಾಧ ಸಂಸಿದ್ಧೌ ಆಶೂ ವ್ಯಾಪ್ತೌ ಈ ಧಾತುಗಳ ಮುಂದೆ ಉಣ್ ಒರುವುದು. ಎಂಬುದರಿಂದ ಉಣ್ ಪ್ರತ್ಯಯ ಆಶ್+ಉ ಪ್ರತ್ಯಯವು ಣಿತ್ ಆದ್ದರಿಂದ **ಅತ ಉಪಧಾಯಾಃ** (ಪಾ ಸೂ. ೭-೪-೧೧೬) ಎಂಬುದರಿಂದ ಅಕಾರಕ್ಕೆ ವೃದ್ಧಿ ಅಂದರೆ ಆಕಾರ ಬರುತ್ತೆ. ಆಶು ಶಬ್ದದ ಮುಂದೆ ಜಸ್ ಪ್ರತ್ಯಯ. ಗುಣದಿಂದ ಓಕಾರ ಆಶೋ+ಅಸ್ ಓಕಾರಕ್ಕೆ ಅವ್ ಆದೇಶ=ಆಶವಸ್, ರುತ್ವ ವಿಸರ್ಗಗಳು ಆಶವಃ ಎಂದಾಗುವುದು. ಇಲ್ಲಿ **ಸತಿಶಿಷ್ಟಸ್ವರಬಲೀಯಸ್ತ್ವಮನ್ಯತ್ರವಿಕರಣೇಭ್ಯಃ** ಎಂಬುದರಿಂದ ಸತಿಶಿಷ್ಟವಾದ ಉಣ್ ಪ್ರತ್ಯಯ ಸ್ವರವು ಬರುವುದು. ಧಾತುವಿನ ಆಕಾರವು ಶೇಷಾನುದಾತ್ತ ಸ್ವರದಿಂದ ಅನುದಾತ್ತ ಇದರ ಸ್ಥಾನದಲ್ಲಿ ಬರುವ ಆಕಾರವು ಸ್ಥಾನಿವದ್ಭಾವದಿಂದ ಅನುದಾತ್ತ. ಉಣ್ ಪ್ರತ್ಯಯದ ಉಕಾರ ಉದಾತ್ತ ಆದರ ಸ್ಥಾನದಲ್ಲಿ ಗುಣದಿಂದ ಓಕಾರವೂ ಇದರ ಸ್ಥಾನದಲ್ಲಿನ ಆವಾದೇಶವೂ ಸ್ಥಾನಿವದ್ಭಾವದಿಂದ ಉದಾತ್ತ. **ಅಸ್** ಸುಪ್ಪಾದ್ದರಿಂದ ಅನುದಾತ್ತ. ಪದಪಾಠದಲ್ಲಿ ಉದಾತ್ತದ ಮುಂದೆ ಇರುವುದರಿಂದ ಆಶವಃ ಎಂಬಲ್ಲಿ ಕೊನೆಯ ಅಕಾರವು **ಉದಾತ್ತಾದನುದಾತ್ತಸ್ಯ** ಎಂಬುದರಿಂದ ಸ್ವರಿತ. ಸಂಹಿತಾಕಾಲದಲ್ಲಿ ಸೋ ಎಂಬ ಉದಾತ್ತ ಪರದಲ್ಲಿರುವುದರಿಂದ ಅನುದಾತ್ತ ಪರವಾಗತ್ತೆ.

ಗೃಣನ್ತ್ಯೇತಿಗಿರಃ—(ಸ್ತುತಿಗಳು) ಗೃಶಬ್ದೇ ಧಾತುವಿನ ಮುಂದೆ ಕ್ವಿಪ್ ಬಂದರೆ **ಋತ ಇದ್ಧಾತೋಃ** (ಪಾ.ಸೂ. ೭-೧-೧೦೦) ಎಂಬುದರಿಂದ ಇತ್ವ ಉರುಣ್ರಪರಃ ಎಂಬ ಶಾಸ್ತ್ರ **ಪರ್ಯಾಲೋಚನೆಯಿಂದ** ರ ಪರವಾಗಿ

ಬರುವುದು- ಗೀರ್ಭಿರ್ವಾ ವ್ಯತೇ ಸೇವ್ಯತೇ ಇತಿ ಸ್ತೋತ್ರರೂಪವಾದ ಮಾತುಗಳಿಂದ ಸೇವಿಸಲ್ಪಡುತ್ತಾನೆ. ಗಿರ್ವಣಾಃ—ಎಂದು ವಿಗ್ರಹ ವನಷಣಸಂಭಕ್ತೌ. ಸಂಭಕ್ತಿ ಎಂದರೆ ಸೇವೆ. ಗಿರ್ ಶಬ್ದೋಪಪದಕವಾದ ವನ ಧಾತುವಿನ ಮುಂದೆ **ಸರ್ವಧಾತುಭ್ಯೋ ಽಸುನ್** (ಉ. ಸೂ.೧೪-೬೫) ಎಂಬುದರಿಂದ ಅಸುನ್ ಪ್ರತ್ಯಯ.

ಗಿರ್ವನಸ್ ಎಂಬಲ್ಲಿ **ಪೂರ್ವಪದಾತ್ಸಂಜ್ಞಾಯಾಮಗಃ** (ಪಾ. ಸೂ.೮-೪) ಸಂಜ್ಞೆ ತೋರುವಾಗ ಪೂರ್ವಪದದ ರೇಫಷಕಾರಗಳ ಮುಂದೆ (ಅಟ್-ಕವರ್ಗ-ಪವರ್ಗಗಳಿಂದ ವ್ಯವಧಾನವಿದ್ದರೂ ಬಾಧಕವಿಲ್ಲ) ಇರುವ ನಕಾರಕ್ಕೆ ಣಕಾರವು ಬರುವುದು ಎಂಬುದರಿಂದ ನ-ಗೆ ಣಕಾರ-ಸ್‌ಗೆ ರುತ್ವ ವಿಸರ್ಗಗಳು. ಸಂಬುದ್ಧಿಯಲ್ಲಿ ಗಿರ್ವಣಃ ಎಂದಾಗುತ್ತದೆ.

ದೇವರಾಜಯಜ್ವಾ ಎಂಬುವರು ಮತ್ತೊಂದು ವಿಧವಾಗಿ ಈ ಶಬ್ದಕ್ಕೆ ನಿಷ್ಪತ್ತಿ ಮಾಡಿರುವರು. ಘಟಾದಿಯಲ್ಲಿ ವನು ಯಾಚನೇ ಎಂಬ ಧಾತು ಇದೆ. ಗೀಃ ಶಬ್ದೋಪಪಾದಕವಾದ ಈ ಣಿಜಂತ ಧಾತುವಿನ ಮುಂದೆ ಅಸುನ್ ಗೀರ್+ವನ್+ಇ+ಅಸುನ್. ಣಿಚ್ ಪ್ರತ್ಯಯಕ್ಕೆ **ಣೇರನಿಟಿ** (ಪಾ- ಸೂ. ೬-೪-೫೧) ಎಂಬುದರಿಂದ ಲೋಪ ಉಪಧಾವೃದ್ಧಿ ಬಂದರೆ ವಾನ್ ಎಂದು ಯದ್ಯಪಿ ಆಗುತ್ತೆ. ಆದರೂ **ಘಟಾದಯೋಮಿತಃ** (ಗ. ಸೂ.) ಘಟಾದಿ ಧಾತುಗಳು ಮಿತ್ ಆಗುವುವು ಎಂದು ಹೇಳಿರುವುದರಿಂದ **ಮಿತಾಂಹ್ರಸ್ವಃ** (ಪಾ. ಸೂ. ೬-೪-೯೨) ಎಂಬುದರಿಂದ ಹ್ರಸ್ವ ಬರುವುದು. ಗೀರ್ ಶಬ್ದದ ಈಕಾರಕ್ಕೆ ಛಾಂದಸವಾಗಿ ಹ್ರಸ್ವಬರುವುದು. ಗಿರ್ವನಸ್ ಣತ್ವಾದಿ ಕಾರ್ಯಗಳು ಹಿಂದಿನಂತೆಯೇ ಬರುವುವು.

ಯಾಸ್ಕರು ' ಗಿರ್ವಣಾ ದೇವೋ ಗೀರ್ಭಿರೇನಂ ವನಯೆನ್ತಿ ' (ನಿರು ೬-೧೪) ಎಂದು ನಿರ್ವಚನ ಮಾಡಿರುವರು. ಇವರಿಗೂ ಣಿಜಂತವಾದ ವನು ದಾತುವಿನಿಂದಲೇ ಈ ರೂಪಸಿದ್ಧಿಯು ಅಭಿಮತವಾಗಿದೆ.

ಸ್ಕಂದಸ್ವಾಮಿಗಳೂ ಹೀಗೆಯೇ ಹೇಳುವರು.

ಶ್ರೀನಿವಾಸ ಎಂಬುವರು ಸ್ವಾರ್ಥದಲ್ಲಿ ಣಿಚ್ ಬರುವುದು ಎಂದು ಹೇಳಿರುತ್ತಾರೆ. ಇಲ್ಲಿ ಗೀ ಎಂಬುದು ಧಾತು ಸ್ವರದಿಂದ ಅಂತೋದಾತ್ತ. ವನ್ ಧಾತುವಿನಮುಂದೆ ಅಸುನ್ ಎಂಬ ಪಕ್ಷದಲ್ಲಿ ಪ್ರತ್ಯಯವು ನಿತ್ತಾದ್ದರಿಂದ ವನಸ್ ಎಂಬುದು ನಿತ್ಸ್ವರದಿಂದ ಆದ್ಯುದಾತ್ತ. ಗಿರ್ವಣಸ್ ಎಂಬ ಸಮಾಸದಲ್ಲಿ **ಸಮಾಸಸ್ಯ** ಎಂಬ ಅಂತೋದಾತ್ತವನ್ನು ಬಾಧಿಸಿ **ಗತಿಕಾರಕೋಪಪದಾತ್ಕೃತ್** ಎಂದು ಕೃದುತ್ತರಪದ ಪ್ರಕೃತಿಸ್ವರ ಪ್ರಾಪ್ತವಾದರೆ **ಲಘ್ವಾವಂತೇ ದ್ವ್ಯೋಶ್ಚ ಬಹ್ವಚೋಗುರುಃ** (ಫಿ. ಸೂ. ೨-೪೨) ಪದದ ಕೊನೆಯ ವರ್ಣವು ಲಘುವಾಗಿದ್ದರೆ ಎರಡು ಅಚ್ಚುಗಳನ್ನು ಹೊಂದಿರುವ ಶಬ್ದದ ಅಥವಾ ಇನ್ನೂ ಹೆಚ್ಚು ಅಚ್ಚುಗಳನ್ನು ಹೊಂದಿರುವ ಶಬ್ದದ ಗುರು ವರ್ಣವು ಉದಾತ್ತವಾಗುವುದು ಎಂಬುದರಿಂದ ಗುರುವರ್ಣವಾದ ಗಿ ಎಂಬುದರ ಇಕಾರಕ್ಕೆ ಉದಾತ್ತ ಬರುವುದು. ದೀರ್ಘವಾದ ಅಕ್ಷರಗಳಿಗೂ, ಸಂಯೋಕ್ತಾಕ್ಷರದ ಹಿಂದೆ ಇರುವ ಅಕ್ಷರಗಳಿಗೂ ಗುರುವರ್ಣ ಎಂದು ಹೆಸರು. ಣಿ ಜಾತವಾದವನು ಧಾತುವಿನ ಮುಂದೆ ಅಸುನ್ ಪಕ್ಷದಲ್ಲಿಯೂ ಸ್ವರವನ್ನು ಹೀಗೆಯೇ ಹೇಳಬೇಕು. ಅಂತು ಗಿರ್ವಣಃ ಎಂಬಲ್ಲಿ ಆದ್ಯುದಾತ್ತವು ಪ್ರಾಪ್ತವಾಯಿತು. ಆದರೆ ಪ್ರಕೃತ ಗಿರ್ವಣಃ ಎಂಬುದು **ಆಮಂತ್ರಿತವಾದ್ದರಿಂದ ಆಮನ್ತ್ರಿತಸ್ಯಚ** ಎಂಬ ಎಂಟನೇ ಅಧ್ಯಾಯದ ಸೂತ್ರದಿಂದ ಸರ್ವಾನುದಾತ್ತ ಬರುವುದು. ಸಂಹಿತಾಕಾಲದಲ್ಲಿ ಸೋಮಾಸಃ ಎಂಬುದರ ಆ ಎಂಬ ಸ್ವರಿತದ ಮುಂದೆ ಇರುವುದರಿಂದ **ಸ್ವರಿತಾತ್ಸಂಹಿತಾಯಾಂ** ಎಂಬುದರಿಂದ ಎಲ್ಲಾ ವರ್ಣಗಳೂ ಪ್ರಚಯಗಳು ಎಂದು ತಿಳಿಯಬೇಕು-

ಪ್ರಚೇತಸೇ ಬಹುನ್ರೀಹೌಪ್ರಕೃತ್ಯಾ ಪೂರ್ವಪದಂ (ಪಾ. ಸೂ. ೬-೩-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುವುದು ॥ ೬ ॥

ಸಂಹಿತಾಪಾಠಃ

ತ್ವಾಂ ಸ್ತೋಮಾ ಅವೀವೃಧನ್ತ್ವಮುಕ್ಥಾ ಶತಕ್ರತೋ ।
ತ್ವಾಂ ವರ್ಧಂತು ನ್ತೋ ಗಿರಃ ॥ ೪ ॥

ಪದಪಾಠಃ

ತ್ವಾಂ । ಸ್ತೋಮಾಃ । ಅವೀವೃಧನ್ । ತ್ವಾಂ । ಉಕ್ಥಾ । ಶತಕ್ರತೋ ಇತಿ ಶತಕ್ರತೋ ॥
ತ್ವಾಂ । ವರ್ಧಂತು । ನಃ । ಗಿರಃ ॥ ೪ ॥

ಸಾಯಣಭಾಷ್ಯಂ ॥

ಹೇ ಶತಕ್ರತೋ ಬಹುಕರ್ಮನ್ಬಹುಪ್ರಜ್ಞ ವೇಂದ್ರ ತ್ವಾಂ ಸ್ತೋಮಾಃ ಸಾಮಗಾನಾಂ ಸ್ತೋತ್ರಾಣ್ಯವೀವೃಧನ್ । ವರ್ಧಿತವಂತಿ । ತಥಾ ಬಹ್ವೃಚಾನಾಮುಕ್ಥಾ ಶಸ್ತ್ರಾಣಿ ತ್ವಾಮವೀವೃಧನ್ । ಯಸ್ಮಾತ್ತ್ವೋ ವರ್ಮೇವವಾಸೀತ್ತಸ್ಮಾದಿದಾನೀಮಪಿ ನೋಽಸ್ಮಾಕಂ ಗಿರಃ ಸ್ತುತಯಸ್ತ್ವಾಂ ವರ್ಧಂತು । ವರ್ಧಯಂತು । ಅತಿವೃದ್ಧಂ ಕುರ್ವಂತು ॥ ಸ್ತೋಮಾಃ । ಮನೋ ನಿತ್ತ್ವಾದಾದ್ಯುದಾತ್ತಃ । ಅವೀವೃಧನ್ । ವೃಧು ವೃದ್ಧೌ । ಣ್ಯಂತಾತ್ । ಪಾ. ೩-೧-೨೬ । ಲುಙ್ಲಿ ಚೆಜಾ । ಪಾ. ೩-೧-೪೮ । ಉರ್ಯಾತ್ ಪಾ. ೭-೪-೭ । ಇತಿ ವೃಧೇರುಪಧಾಯಾ ಋಕಾರಸ್ಯ ಋಕಾರವಿಧಾನಾದಂತರಂಗೋಽಪಿ ಗುಣೋ ಬಾಧ್ಯತೇ । ದ್ವಿರ್ಭಾವ । ಪಾ. ೬-೧.೧೧ । ಹಲಾದಿಶೇಷ । ಪಾ. ೭-೪-೬೦ । ಸಸ್ವದ್ಭಾವ । ಪಾ ೭-೪-೯೩। ಇತ್ವೆ । ಪಾ. ೭-೪-೨೯ । ದೀರ್ಘತ್ವ । ಪಾ. ೭-೪ ೪೪ । ಅಡಾಗಮಾಃ । ಪಾ. ೬ ೪-೭೧ । ಉಕ್ಥಾ । ಉಕ್ಥಾನಿ । ಹಾತ್ಯೃತುದಿವಚಿರಿಚಿಸಿಚಿಭ್ಯಸ್ಥಕ್ । ಉ. ೨ ೭ । ಇತಿ ವಚೇಸ್ಥಕ್ಪ್ರತ್ಯಯಃ । ತಸ್ಯ ಕಿತ್ತ್ವಾತ್ಸಂಪ್ರಸಾರಣಂ । ಶೇಶ್ಛಂದಸಿ ಬಹುಲಂ । ಪಾ. ೬-೧-೭೦ । ಇತಿ ಶಿಲೋಪೋ ನಲೋಪಶ್ಚ । ಪ್ರತ್ಯಯಸ್ವರೇಣಾಂತೋದಾತ್ತಃ। ಅಸಾಮರ್ಥ್ಯಾದಾಮಂತ್ರಿತಪರಸ್ಯಾಪಿ ನ ಪರಾಂಗವದ್ಭಾವ ಇತಿ ನಾನುದಾತ್ತತ್ವಂ। ವರ್ಧಂತು । ಅಂತರ್ಭಾವಿತಣ್ಯರ್ಥಾದ್ವೃಧೇರ್ಯತ್ಯಯೇನ ಪರಸ್ಮೈಪದಂ ॥

ಪ್ರತಿಪದಾರ್ಥ ।

(ಹೇ) ಶತಕ್ರತೋ—ಅನೇಕ ಸಾಹಸ ಕೃತ್ಯಗಳನ್ನೆಸಗಿದ ಅಥವಾ ಬಹುಪ್ರಜ್ಞಾಶಾಲಿಯಾದ ಎಲೈ ಇಂದ್ರನೇ । ಸ್ತೋಮಾಃ—(ಉದ್ಗಾತೃ ಮೊದಲಾದ ಋತ್ವಿಜರು ಗಾನಮಾಡುವ) ತೃಯದಾದಿ ಸ್ತೋಮಗಳು

ಎಂದರೆ ಸ್ತೋತ್ರಗಳು, । ತ್ವಾಂ—ನಿನ್ನನ್ನು । ಅವೀವೃಧನ್—ವೃದ್ಧಿಪಡಿಸಿರುವುವು ಎಂದರೆ ನಿನ್ನ ಗುಣಗಾನ ಮಾಡುವುದರಿಂದ ನಿನ್ನನ್ನು ಪ್ರಶಂಸೆಮಾಡಿರುವುವು । (ಮತ್ತು) ಉಕ್ಥಾ—(ಹೋತೃವರ್ಗದವರು ಪಠಿಸುವ) ಶಸ್ತ್ರಮಂತ್ರಗಳು । ತ್ವಾಂ—ನಿನ್ನನ್ನು (ಅವೀವೃಧನ್-ಪ್ರಶಂಸೆಮಾಡಿರುವವು) । (ಈಗ) ನಃ—ನಮ್ಮ ಎಂದರೆ ನಾವು ಪಠಿಸುತ್ತಿರುವ । ಗಿರಃ—ಸ್ತೋತ್ರರೂಪವಾದ ವಾಕ್ಯಗಳು । ತ್ವಾಂ—ನಿನ್ನನ್ನು । ವರ್ಧಂತು—ವೃದ್ಧಿಪಡಿಸಲಿ (ಪ್ರಶಂಸೆಮಾಡಲಿ)

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಬಹುಸಾಹಸಕೃತ್ಯಗಳನ್ನೆಸಗಿದವನು ಅಥವಾ ನೀನು ಬಹುಬುದ್ಧಿಶಾಲಿಯು; ಸಾಮಗಾನಮಾಡುವ ಉದ್ಗಾತೃಮೊದಲಾದ ಋತ್ವಿಜರು ನಿನ್ನನ್ನು ತ್ರಿವೃದಾದಿಸ್ತೋಮಗಳಿಂದ ನಿನ್ನ ಗುಣಗಾನ ಮಾಡಿ ನಿನ್ನನ್ನು ಪ್ರಶಂಸೆಮಾಡಿರುವರು. ಆದರಂತೆಯೇ ಹೋತೃವರ್ಗದ ಋತ್ವಿಜರು ಶಸ್ತ್ರಮಂತ್ರಪಠನದಿಂದ ನಿನ್ನನ್ನು ಪ್ರಶಂಸೆಮಾಡಿರುವರು. ಇದರಿಂದ ನಿನ್ನ ಗುಣಗಳು ಹೆಚ್ಚಿದುತಾಯಿತು. ಈಗ ನಾವು ಮಾಡುತ್ತಿರುವ ಸ್ತೋತ್ರರೂಪವಾದ ವಾಕ್ಯಗಳು ನಿನ್ನ ಪ್ರಶಂಸೆಯನ್ನು ಇನ್ನೂ ಹೆಚ್ಚಾಗಿ ಅಭಿವೃದ್ಧಿಪಡಿಸಲಿ.

English Translation

(O Indra) performer of many deeds or one endowed with great wisdom, the chants of stomas have magnified you; (so also) the hymns of sastras have magnified you; (similarly) may our praises magnify you.

॥ ವಿಶೇಷವಿಷಯಗಳು ॥

ತ್ವಾಂ ವರ್ಧಂತು ನೋ ಗಿರಃ— ನಾವು ಮಾಡುವ ಸ್ತೋತ್ರರೂಪವಾದ ವಾಕ್ಯಗಳಿಂದ ನಿನ್ನ ಗುಣಗಳು ಹೆಚ್ಚಾಗಿ ಅಭಿವೃದ್ಧಿಯಾಗುವವು ಎಂದರೆ ಪ್ರಶಂಸಿಸಲ್ಪಡುವವು. ನಾವು ನಿನ್ನನ್ನು ಬಹಳವಾಗಿ ಸ್ತೋತ್ರ ಮಾಡುವೆವು ಎಂದರ್ಥವು. ಈ ವಿಧವಾದ ವಾಕ್ಯಪ್ರಯೋಗವು ಋಗ್ವೇದದಲ್ಲಿ ಇಂದ್ರನ ವಿಷಯವಾಗಿಯೂ ಅಗ್ನಿ ಮೊದಲಾದ ಇತರ ದೇವತೆಗಳ ವಿಷಯವಾಗಿಯೂ ಬಹಳವಾಗಿದೆ ಕೆಲವು ಉದಾಹರಣೆಗಳನ್ನು ಕೊಡವೆವು—

(೧) ಅಗ್ನಿಂ ವರ್ಧಂತು ನೋ ಗಿರೋ ಯತೋ ಜಾಯತ ಉಕ್ಥ್ಯಃ॥ (ಋ. ಸಂ. ೩-೧೦-೬)

(೨) ಇಮಾ ಉತ್ವಾ ಪುರುವಸೋ ಗಿರೋ ವರ್ಧಂತು ಯಾ ಮಮ ॥ (ಋ. ಸಂ. ೮-೩-೩)

(೩) ಪ್ರ ವಾಂ ಸ್ತೋಮಾಃ ಸುವೃಕ್ತಯೋ ಗಿರೋ ವರ್ಧಂತ್ವಶ್ವಿನಾ ॥ (ಋ. ಸಂ. ೮-೮-೨೨)

(೪) ಇಂದ್ರಂ ವರ್ಧಂತು ನೋ ಗಿರ ಇಂದ್ರಂ ಸುತಾಸ ಇಂದವಃ ॥ (ಋ. ಸಂ. ೮-೧೩-೧೬)

(೫) ತ್ರಿಕದ್ರುಕೇಷು ಚೇತನಂ ದೇವಾಸೋ ಯಜ್ಞಮತ್ನತ ।
ತಮಿದ್ವರ್ಧಂತು ನೋ ಗಿರಃ ಸದಾವೃಧಂ ॥ (ಋ. ಸಂ. ೮-೧೩-೧೪)

(೬) ತ್ವಾಮಗ್ನೇ ಮನೀಷಿಣಸ್ತ್ವಾಂ ಹಿನ್ವಂತಿ ಚಿತ್ತಿಭಿಃ ।
ತ್ವಾಂ ವರ್ಧಂತು ನೋ ಗಿರಃ ॥ (ಋ. ಸಂ. ೮-೪೦-೧೯)

(೬) ಉತ ತ್ವಾ ಧೀತಯೋ ಮಮ ಗಿರೋ ವರ್ಧಂತಿ ವಿಶ್ವಹಾ ॥ (ಋ. ಸಂ. ೮-೪೧-೨೨)
(೮) ತಮಿಧ್ಮವರ್ಧಂತು ನೋ ಗಿರೋ ವತ್ಸಂ ಸಂ ಶಿಶೀರಿವ ।
ಯೆ ಇಂದ್ರಸ್ಯ ಹೃದಂ ಸನಿಃ ॥ (ಋ. ಸಂ. ೯-೬೧-೧೪)

ಇತ್ಯಾದಿ ಅನೇಕ ಉದಾಹರಣೆಗಳನ್ನು ಕೊಡಬಹುದು.

ಈ ಋಕ್ಕಿನ ಪ್ರತಿಯೊಂದು ಪಾದವು ತ್ವಾಂ ಎಂಬ ಪದದಿಂದ ಪ್ರಾರಂಭವಾಗಿರುವುದು. ಇಂತಹ ಪ್ರಾಸಬದ್ಧವೂ, ಪ್ರೌಢಾರ್ಥಯುಕ್ತವೂ ಆದ ಋಕ್ಕುಗಳು ಋಗ್ವೇದದಲ್ಲಿ ಬೇಕಾದಷ್ಟಿವೆ. ಮೊದಲನೆಯ ಪಾದದಲ್ಲಿ ವಾಕ್ಯವು ಕರ್ತೃಕ್ರಿಯೆಗಳಿಂದ ಕೂಡಿ ಸಂಪೂರ್ಣವಾಗಿರುವುದು. ಅಲ್ಲಿಂದ ಮುಂದಿನ ವಾಕ್ಯಗಳಲ್ಲಿ ತ್ವಾಂ ಮೊದಲಾದ ಮುಖ್ಯವಾದ ಪದಗಳು ಮಾತ್ರ ಪುನಃ ಪರಿತವಾಗಿರುವುವು. ಕರ್ತೃಕ್ರಿಯಾಪದಗಳ ಆವಶ್ಯಕತೆ ಇಲ್ಲ. ಈರೀತಿಯಾದ ವಾಕ್ಯಸರಣಿಯು ಪ್ರೌಢಶೈಲಿಯ ಹೆಗ್ಗುರುತೆಂದು ಹೇಳಲು ಅಡ್ಡಿಯಿಲ್ಲ. ಇಂತಹ ಶೈಲಿಯು ವಾಕ್ಯದ ಅರ್ಥಕ್ಕೆ ಒಂದು ವಿಧವಾದ ಕಳೆಯನ್ನು ಕೊಡುವುದು. ಉದಾಹರಣೆಗಾಗಿ ಒಂದೆರಡು ಇಂತಹ ವಾಕ್ಯಗಳನ್ನು ಇಲ್ಲಿ ಕೊಡುವೆವು.

ಪ್ರಾತರಗ್ನಿಂ ಪ್ರಾತರಿಂದ್ರಂ ಹವಾಮಹೇ ಪ್ರಾತರ್ಮಿತ್ರಾವರುಣಾ ಪ್ರಾತರಶ್ವಿನಾ ।
ಪ್ರಾತರ್ಭಗಂ ಪೂಷಣಂ ಬ್ರಹ್ಮಣಸ್ಪತಿಂ ಪ್ರಾತಃ ಸೋಮಮುತ ರುದ್ರಂ ಹುವೇಮ ॥
(ಋ ಸಂ. ೭-೪೧-೧)

ಇಲ್ಲಿ ಪ್ರಾತಃ ಎಂಬ ಶಬ್ದವು ಅನೇಕಾವೃತ್ತಿ ಪರಿತವಾಗಿದೆ.

ಅಹಂ ದಾಂ ಗೃಣತೇ ಪೂರ್ವ್ಯಂ ವಸ್ವಹಂ ಬ್ರಹ್ಮ ಕೃಣವಂ ಮಹ್ಯಂ ವರ್ಧನಂ ।
ಅಹಂ ಭುವಂ ಯಜಮಾನಸ್ಯ ಚೋದಿತಾಯಜ್ವನಃ ಸಾಕ್ಷಿ ವಿಶ್ವಸ್ಮಿನ್ಭರೇ ॥
(ಋ. ಸಂ ೧೦-೪೯-೧)

ಇಲ್ಲಿ ಅಹಂ ಎಂಬ ಶಬ್ದವು ಪುನಃ ಪುನಃ ಪರಿತವಾಗಿರುವುದು. ಇಷ್ಟೇ ಅಲ್ಲದೆ ಈ ಋಕ್ಕಿರುವ ಸೂಕ್ತದಲ್ಲಿಯೂ ಇನ್ನೂ ಅನೇಕ ಸೂಕ್ತಗಳಲ್ಲಿಯೂ ಎಲ್ಲಾ ಋಕ್ಕುಗಳೂ ಇದರಂತೆಯೇ ಇವೆ.

ಅಗ್ನಿಃ ಸಪ್ತಿಂ ವಾಜಂಭರಂ ದದಾತ್ಯಗ್ನಿರ್ವೀರಂ ಶ್ರುತ್ಯಂ ಕರ್ಮನಿಷ್ಠಾಂ ।
ಅಗ್ನೀ ರೋದಸೀ ವಿ ಚರತ್ಸಮಂಜನ್ನಗ್ನಿರ್ನಾರೀಂ ವೀರಕುಕ್ಷಿಂ ಪುರಂಧಿಂ ॥
(ಋ. ಸಂ. ೧೦-೪೦-೧)

ಈ ಋಕ್ಕಿನಲ್ಲಿಯೂ ಈ ಸೂಕ್ತದ ಇತರ ಎಲ್ಲಾ ಋಕ್ಕುಗಳಲ್ಲಿಯೂ ಅಗ್ನಿಃ ಎಂಬ ಶಬ್ದವು ಪ್ರತಿಪಾದದಲ್ಲಿಯೂ ಪಠಿತವಾಗಿದೆ.

ಶಂ ನ ಇಂದ್ರಾಗ್ನೀ ಭವತಾಮವೋಭಿಃ ಶಂ ನ ಇಂದ್ರಾವರುಣಾ ರಾತಹವ್ಯಾ ।
ಶಮಿಂದ್ರಾ ಸೋಮಾ ಸುವಿತಾಯ ಶಂ ಯೋಃ ಶಂ ನ ಇಂದ್ರಾಪೂಷಣಾ ವಾಜಸಾತೌ ॥
(ಋ. ಸಂ. ೭-೩೫-೧)

ಈ ಋಕ್ಕಿನಲ್ಲಿಯೂ ಈ ಸೂಕ್ತದ ಇತರ ಎಲ್ಲಾ ಋಕ್ಕುಗಳಲ್ಲಿಯೂ ಶಂ ಮತ್ತು ಶಂ ನಃ ಎಂಬ ಪದಗಳು ಪ್ರತಿಪಾದದಲ್ಲಿಯೂ ಪಠಿತವಾಗಿವೆ. ಇಂತಹ ಪ್ರಾಸಬದ್ಧವಾದ ಪ್ರೌಢಶೈಲಿಯ ಋಕ್ಕುಗಳು ಋಗ್ವೇದದಲ್ಲಿ ಬಹಳವಾಗಿವೆ.

।। ವ್ಯಾಕರಣಪ್ರಕ್ರಿಯಾ ।।

ಸ್ತೋಮಾಃ—ಷುಞ್ ಸ್ತುತೌ ಎಂಬ ಸ್ತು ಧಾತುವಿನ ಮುಂದೆ **ಅರ್ತಿಸ್ತು**—(ಉ. ಸೂ. ೧-೧೩೭) ಎಂಬುದರಿಂದ ಮನ್ ಪ್ರತ್ಯಯ ಬರುವುದು. ಮನ್ ಪ್ರತ್ಯಯವು ನಿತ್ತಾದ್ದರಿಂದ **ಪ್ರತ್ಯಯಾಂತವು ಆದ್ಯುದಾತ್ತ.**

ಅವೀವೃಧನ್. ವೃಧು—ವೃದ್ಧೌ ಎಂಬ **ಧಾತುವಿನಮುಂದೆ** ಣಿಚ್ಪ್ರತ್ಯಯ, ಣಿಚ್ಪ್ರತ್ಯಯಾಂತವಾದ ವೃಧುಧಾತುವಿನ ಮುಂದೆ ಜಿಃ ಲಕಾರವನ್ನಿಟ್ಟರೆ ಚ್ಲಿಲುಙಾ (ಪಾ.ಸೂ.೩-೧-೪೩) ಎಂಬುದರಿಂದ ಣ್ಯಂತ ಧಾತುವಿನ ಮುಂದೆ ಚ್ಲಿ ಬರುವುದು. **ಣೇಶ್ಚಿಣ್ಸುಭ್ಯಃ ಕರ್ತರಿ ಚ ಜಿಃ** (ಪಾ. ಸೂ. ೩-೧-೪೮) ಕರ್ತೃರ್ಥಕವಾದಸಾರ್ವ ಧಾತುಕ ಪ್ರತ್ಯಯವು ಪರದಲ್ಲಿರುವಾಗ ಣಿ ಪ್ರತ್ಯಯಾಂತದ ಮುಂದೆಯೂ ಶ್ರೀ ಮೊದಲಾದ ಧಾತುಗಳ ಮುಂದೆಯೂ ಇರುವ ಚ್ಲಿ ಪ್ರತ್ಯಯಕ್ಕೆ ಚಜಿ ಬರುವುದು ಎಂಬುದರಿಂದ ಚ್ಲಿಗೆ ಚಜಿ ಬರುವುದು. (ವೃಧ್+ಇ+ಚಜಿ+ಝಿ) **ಉ ಋುತ್** (ಪಾ. ಸೂ. ೭-೪-೭) ಚಜಿ ಪ್ರತ್ಯಯದ ಹಿಂದಿರುವ ಣಿ ಪ್ರತ್ಯಯಕ್ಕಿಂತಲೂ ಪೂರ್ವದಲ್ಲಿರುವ ಉಪಧಾಭೂತವಾದ ಋಕಾರಕ್ಕೆ ಋತ್ ವಿಕಲ್ಪವಾಗಿ ಬರುವುದು ಎಂದು ವೃಧ್ ಧಾತುವಿನ ಉಪಧಾ ಋಕಾರಕ್ಕೆ ಋಕಾರವೇ ಬರುವುದು. ಹೀಗೆ ಋಕಾರಕ್ಕೆ ಋಕಾರವನ್ನು ವಿಧಾನಮಾಡಿರುವ ಸಾಮರ್ಥ್ಯದಿಂದ ಅಂತರ್ಭೂತ ಣಿ ಪ್ರತ್ಯಯ ನಿಮಿತ್ತಕವಾಗುವುದರಿಂದ ಅಂತರಂಗವಾದಾಗ್ಯೂ **ಪುಗಂತಲಘೂಪಧಸ್ಯಚೆ** (ಪಾ.ಸೂ. ೭-೩-೮೬) ಎಂದು ವಿಹಿತವಾದ ಲಘೂಪಧ ಗುಣ ಬರುವುದಿಲ್ಲ. ಇದರಿಂದ ಗುಣ ಬರುವ ಪಕ್ಷದಲ್ಲಿ ಅತ್ ಬರಬೇಕಾಗುವುದು. ಹಾಗಾದರೆ ಚಜಿ ಪರಕ ಣಿಪರಕವಾದ ಉಪಧಾಭೂತ ಋವರ್ಣವೇ ಇಲ್ಲದಕಾರಣ **ಉ ಋುತ್** (ಪಾ. ಸೂ. ೭-೪-೭)ಎಂಬ ಸೂತ್ರವು ವ್ಯರ್ಥವಾಗಿಹೋಗುವುದು. ಆದ್ದರಿಂದ ಮೊದಲು ಗುಣಬರುವುದಿಲ್ಲ. **ಚೆಜಿಃ** (ಪಾ. ಸೂ. ೬-೧-೧೧) ಚಜಿ ಪರದಲ್ಲಿರುವಾಗ ಅಭ್ಯಾಸವಲ್ಲದ ಧಾತುವಿನ ಮೊದಲನೆಯ ಏಕಾಚ್ಚಿಗೆ ದ್ವಿತ್ವ ಬರುವುದು. ಅಜಾದಿಧಾತುವಾಗಿದ್ದರೆ ಎರಡನೇ ಏಕಾಚ್ಚಿಗೆ ದ್ವಿತ್ವ ಬರುವುದು. (ಏಕಾಚ್ ಎಂದರೆ ಒಂದು ಸ್ವರವುಳ್ಳದ್ದು) ಎಂಬುದರಿಂದ ವೃಧ್‌ಗೆ ದ್ವಿತ್ವ ಬಂದರೆ ವೃಧ್ ವೃಧ್ ಇ+ಅ+ಝಿ **ಉರತ್** (ಪಾ.ಸೂ. ೭-೪-೬೬) ಪ್ರತ್ಯಯವು ಪರದಲ್ಲಿರುವಾಗ ಅಭ್ಯಾಸದಲ್ಲಿರುವ ಋಕಾರಕ್ಕೆ ಅಕಾರ ಬರುವುದು ಎಂದು ಬರುವ ಅಕಾರವು **ಉರಣ್ರಪರಃ** (ಪಾ ಸೂ. ೧-೧-೫೧) ಎಂಬ ಶಾಸ್ತ್ರದಿಂದ ರಪರವಾಗಿ ಬರುವುದು ವರ್ಧ್+ವೃಧ್+ಇ+ಅ+ಝಿ ಎಂದಾಗುವುದು. **ಹಲಾದಿಃಶೇಷಃ** (ಪಾ.ಸೂ. ೭-೪-೬೦) ಅಭ್ಯಾಸದ ಮೊದಲನೆಯ ವ್ಯಂಜನವು ನಿಲ್ಲುವುದು ಮಿಕ್ಕ ವ್ಯಂಜನಗಳು ಲೋಪವನ್ನು ಹೊಂದುವವು ಎಂಬುದರಿಂದ ವರ್ಧ್ ಎಂಬಲ್ಲಿ ರ್ ಧ್ ಗಳಿಗೆ ಲೋಪ ಬರುವುದು. ವ ವೃ ಧ್+ಇ+ಅ+ಝಿ ಈಗ **ಸನ್ಯಙೋಶ್ಚ ಚಜಿ ಪರೇಽನಗ್ಲೋಸೇ** (ಪಾ.ಸೂ. ೭-೪-೭೩) ಚಜಿ ಪರಕ ಣಿ ಪರಕ ಲಘುವರ್ಣದ ಹಿಂದೆ ಇರುವ ಅಂಗಾವಯವವಾಭ್ಯಾಸಕ್ಕೆ ಸನ್ ಪ್ರತ್ಯಯ ಪರದಲ್ಲಿರುವಾಗ ಕಾರ್ಯ ಬರುವಂತೆ ಕಾರ್ಯ ಬರುವುದು ಎಂದು ಒಂದು ಅರ್ಥ. ಅಥವಾ ಚಜಿ ಪರಕ ಣಿಪರಕವಾದ ಯಾವ ಅಂಗ ವಿದೆಯೋ ಆ ಅಂಗಾವಯವವಾದ ಅಭ್ಯಾಸವು ಲಘುವಿನ ಹಿಂದೆ ಇದ್ದರೆ ಸಃ ಪರದಲ್ಲಿರುವಾಗ ಕಾರ್ಯ ಬರುವಂತೆ ಕಾರ್ಯ ಬರುವುದು ಎಂದು ಮತ್ತೊಂದು ಅರ್ಥ. ಈ ಎರಡು ಅರ್ಥಗಳಿಗೂ ವ್ಯತ್ಯಾಸವು ಅನೇಕಾಚ್ಕ ಧಾತುವಿನಲ್ಲಿ ತೋರುವುದು. ಏಕಾಚ್ಕ ಧಾತುವಿನಲ್ಲಿ ವ್ಯತ್ಯಾಸ ತೋರುವುದಿಲ್ಲ. ಈ ಸೂತ್ರದಿಂದ ಸನ್ನಭ್ಯಾವ ಬಂದರೆ **ಸನ್ಯತಃ** (ಪಾ. ಸೂ. ೭-೪-೭೯) ಸಃ ಪದದಲ್ಲಿರುವಾಗ ಅಭ್ಯಾಸದ ಅಕಾರಕ್ಕೆ ಇಕಾರ ಬರುವುದು ಎಂದು ಇತ್ವ ಬಂದರೆ **ವಿವೃಧ್+ಇ+ಅ÷ಝಿ ದೀರ್ಘೋಲಘೋಃ** (ಪಾ. ಸೂ. ೭-೪-೭೪) ಸನ್ನಭ್ಯಾವ ವಿಷಯದಲ್ಲಿ ಅಭ್ಯಾಸದಲ್ಲಿರುವ ಲಘುವರ್ಣಕ್ಕೆ ದೀರ್ಘ ಬರುವುದು ಎಂಬುದರಿಂದ ಅಭ್ಯಾಸದ ಇಕಾರಕ್ಕೆ ದೀರ್ಘಬರುವುದು. **ಉಜ್‌ಲಜ್‌ಲೃಜ್‌ಕ್ಷ್ಮ**

ನುದಾತ್ತೌ (ಪಾ. ಸೂ. ೬-೪-೭೧) ಇವುಗಳು ಪರದಲ್ಲಿರುವಾಗ ಅಂಗಕ್ಕೆ ಆಟ್ ಆಗಮ ಬರುವುದು ಎಂದು ಅರ್ಥವಾಗುವುದು. ಅವೀವೃಧ್-ಇ+ಅ+ಝಿ ಇಗೆ (ಣಿ ಪ್ರತ್ಯಯಕ್ಕೆ) **ಸೇರನಿಟಿ** (ಪಾ. ಸೂ. ೬-೪-೫೧) ಇತ್ಯಾದಿಯಲ್ಲದ ಆರ್ಧಧಾತುಕ ಪರದಲ್ಲಿರುವಾಗ ಣಿ ಗೆ ಲೋಪ ಬರುವುದು ಎಂಬುದರಿಂದ ಣಿ ಪ್ರತ್ಯಯಕ್ಕೆ ಲೋಪಬರುವುದು. ಝಿಕಾರಕ್ಕೆ **ಝೀಂತೇ** (ಪಾ ಸೂ. ೭-೧-೩) ಪ್ರತ್ಯಯಾವಯವವಾದ ಝಕಾರಕ್ಕೆ ಅನ್ತ್ ಆದೇಶ ಬರುವುದು ಎಂಬುದರಿಂದ ಅಂತಾದೇಶ ಬರುವುದು. ಇಕಾರಕ್ಕೆ **ಇತಶ್ಚ** (ಪಾ. ಸೂ. ೬-೪-೧೦೦) ಜಾತ್ತ್ವದ ಲಕಾರಸ್ಥಾನದಲ್ಲಿ ಬಂದ ಇಕಾರಾಂತವಾದ ಪರಸ್ಮೈಪದ ಪ್ರತ್ಯಯದ ಕೊನೆಯಲ್ಲಿರುವ ಇಕಾರಕ್ಕೆ ಲೋಪ ಬರುವುದು ಎಂಬುದರಿಂದ ಲೋಪ. ತಕಾರಕ್ಕೆ **ಸಂಯೋಗಾಂತಸ್ಯಲೋಪಃ** (ಪಾ ಸೂ. ೮-೨-೨೩) ಎಂಬುದರಿಂದ ಲೋಪ. ಸಂಯೋಗಾಂತ ಲೋಪವು **ಪೂರ್ವತ್ರಾಸಿದ್ಧಂ** (ಪಾ. ಸೂ. ೮-೨-೧) ಎಂಬುದರಿಂದ ಅಸಿದ್ಧವಾಗುವುದರಿಂದ **ನಲೋಪಃ ಪ್ರಾತಿಪದಿಕಾಂತಸ್ಯ** (ಪಾ. ಸೂ ೮-೨-೭) ಎಂಬುದರಿಂದ ನಕಾರಕ್ಕೆ ಲೋಪ ಬರುವುದಿಲ್ಲ. ಅವೀವೃಧನ್ ಎಂದಾಗುವುದು.

ಉಕ್ಥಾ—ಉಕ್ಥಾನಿ= ಶಸ್ತ್ರಗಳು ಎಂದರ್ಥವು—**ವಚಿಪರಿಭಾಷಣೇ** ಎಂಬ ಧಾತುವಿನ ಮುಂದೆ **ಪಾತ್ರ್ಯಾತುದಿವಚಿಪಿಶಿಪಿಚ್ಛಿಸ್ಥಕ್** (ಉ.ಸೂ.೩-೧೬-೪) ಈ ಧಾತುಗಳಮುಂದೆ ಥಕ್ ಪ್ರತ್ಯಯ ಬರುವುದು ಎಂಬುದರಿಂದ ಥಕ್ ಬಂದರೆ **ವಚಿಸ್ವಪಿಯಜಾದೀನಾಂಕಿತಿ** (ಪಾ. ಸೂ. ೬-೧-೧೫) ಎಂಬುದರಿಂದ ಸಂಪ್ರಸಾರಣವೂ **ಸಂಪ್ರಸಾರಣಾಚ್ಚೆ** (ಪಾ ಸೂ. ೬-೧-೧೦೮) ಎಂಬುದರಿಂದ ಪೂರ್ವರೂಪವೂ ಚೋಃ ಕುಃ ಎಂಬುದರಿಂದ ಚಕಾರಕ್ಕೆ ಕಕಾರವೂ ಬಂದರೆ ಉಕ್ಥ ಎಂದಾಗುವುದು. ಉಕ್ಥ ಶಬ್ದವು ನಪುಂಸಕಲಿಂಗ ಇನರಮುಂದೆ ಪ್ರಥಮಾ ಬಹುವಚನ ಜಸ್ ಪ್ರತ್ಯಯವನ್ನಿಟ್ಟರೆ **ಜಶ್ಶಸೋಶ್ಶಿಃ** (ಪಾ.ಸೂ.೭-೧-೨೦) ನಪುಂಸಕಲಿಂಗವಾದ ಶಬ್ದದ ಮುಂದಿರುವ ಜಸ್ ಶಸ್‌ಗಳಿಗೆ ಶಿ ಆದೇಶ ಬರುವುದು ಎಂಬುದರಿಂದ ಜಸ್‌ಗೆ ಶಿ ಆದೇಶ **ಶಿಸರ್ವನಾಮಸ್ಥಾನಂ** (ಪಾ ಸೂ ೧-೧-೪೨) ಶಿ ಎಂಬುದು ಸರ್ವನಾಮ ಸ್ಥಾನ ಸಂಜ್ಞೆಯನ್ನು ಹೊಂದುವುದು ಎಂಬುದರಿಂದ ಶಿಗೆ ಸರ್ವನಾಮ ಸ್ಥಾನ ಸಂಜ್ಞೆ ಒಂದರೆ **ನಪುಂಸಕಸ್ಯ ಝಲಚಃ** (ಪಾ. ಸೂ ೭-೧-೭೨) ಸರ್ವನಾಮ ಸ್ಥಾನವು ಪರದಲ್ಲಿರುವಾಗ ಝಲಂತ ಅಥವಾ ಅಜಂತವಾದ ನಪುಂಸಕಲಿಂಗದ ಅಂಗಕ್ಕೆ ನುಮ್ ಆಗಮ ಬರುವುದು ಎಂಬುದರಿಂದ ನುಮ್ ಆಗಮ ಬಂದರೆ ಉಕ್ಥನ್-ಇ ಎಂದಿರುವಾಗ **ಸರ್ವನಾಮಸ್ಥಾನೇಚಾಸಂಬುದ್ಧೌ** (ಪಾ.ಸೂ.೬-೪-೮) ಸಂಬುದ್ಧಿ ಭಿನ್ನ ಸರ್ವನಾಮಸ್ಥಾನ ಪ್ರತ್ಯಯವು ಪರದಲ್ಲಿರುವಾಗ ನಕಾರಾಂತವಾದ ಶಬ್ದದ ಉಪಧೆಗೆ ದೀರ್ಘಬರುವುದು ಎಂಬುದರಿಂದ ದೀರ್ಘಬಂದರೆ ಉಕ್ಥಾನ್ ಇ ಇಲ್ಲಿ **ಶೇಶ್ಚಂದಸಿ ಬಹುಲಂ** (ಪಾ. ಸೂ. ೬-೧-೭೦) ಛಂದಸ್ಸಿನಲ್ಲಿ ಶಿ ಎಂಬುವಕ್ಕೆ ಬಹುಲವಾಗಿ ಲೋಪ ಬರುವುದು ಎಂಬುದರಿಂದ ಶಿಗೆ ಲೋಪ **ನಲೋಪಃಪ್ರಾತಿಪದಿಕಾಂತಸ್ಯ** (ಪಾ. ಸೂ ೮-೨-೭) ಪ್ರಾತಿಪದಿಕ ಸಂಜ್ಞಕವಾದ ಪದದ ಕೊನೆಯಲ್ಲಿರುವ ನಕಾರಕ್ಕೆ ಲೋಪಬರುವುದು ಎಂಬುದರಿಂದ ನ್‌ಗೆ ಲೋಪ ಉಕ್ಥಾ ಎಂದಾಗುವುದು ಇದು ಪ್ರತ್ಯಯಸ್ವರದಿಂದ ಅಂತೋದಾತ್ತವಾಗುವುದು. ಉಕ್ಥ ಶಬ್ದದ ಮುಂದೆ ಶತಕ್ರತೋ ಎಂಬ ಅಮಂತ್ರಿತವು ಇರುವುದು. ಆದರೂ ಉಕ್ಥಾ ಎಂಬುದು ಅವೀವೃಧನ್ ಎಂಬಲ್ಲಿ ಅನ್ವಯಿಸುವುದೇವಿನಾ ಶತಕ್ರತೋ ಎಂಬಲ್ಲಿ ಅನ್ವಯಿಸುವುದಿಲ್ಲ. ಆದ್ದರಿಂದ ಪರಸ್ಪರಾನ್ವಯರೂಪ ಸಾಮರ್ಥ್ಯವಿಲ್ಲ. **ಸುಬಾಮಂತ್ರಿತೇ** ಎಂಬದು ಸಾಮರ್ಥ್ಯವಿರುವಾಗಲೇ ಬರುವುದೆಂದು ಹಿಂದೆಯೇ ಉಪಪಾದಿಸಿರುವೆವು ಆದ್ದರಿಂದ **ಸುಬಾಮಂತ್ರಿತೇ ಪರಾಂಗವತ್ಸ್ವರೇ** (ಪಾ. ಸೂ. ೬-೧-೬) ಎಂಬುದರಿಂದ ಪರಾಂಗವದ್ಭಾವವು ಬರುವುದಿಲ್ಲ. ಆದ್ದರಿಂದ **ಆಮಂತ್ರಿತಸ್ಯಚ** (ಪಾ. ಸೂ. ೮-೧-೧೯) ಎಂಬ ಎಂಟನೇ ಅಧ್ಯಾಯದ ಸೂತ್ರದಿಂದ ಅನುದಾತ್ತ ಬರುವುದಿಲ್ಲ.

वृधु वर्धने ಎಂಬ ಧಾತುವು ಆತ್ಮನೇಪದಿ. ಆದರೂ ಅಂತರ್ಭಾವಿತಣಿಚ್ಪ್ರತ್ಯಯಾರ್ಥಕವಾದ ವೃಧು ಧಾತುವಿನ ಮುಂದೆ ವ್ಯತ್ಯಯದಿಂದ ಪರಸ್ಮೈಪದವು ಬರುವುದು, ಪ್ರಥನುಪುರುಷ ಬಹುವಚನದಲ್ಲಿ ವರ್ಧನ್ತು ಎಂದಾಗುವುದು ॥ ೮ ॥

॥ संहितापाठः ॥

अक्षितोतिः सनेदिमं वाजमिन्द्रः सहस्रिणं ।
यस्मिन्विश्वानि पौंस्या ॥ ९ ॥

॥ पदपाठः ॥

अक्षितऽऊतिः । सनेत् । इमं । वाजं । इन्द्रः । सहस्रिणं ॥
यस्मिन् । विश्वानि । पौंस्या ॥ ९ ॥

॥ सायणभाष्यं ॥

इन्द्र इमं वाजं सोमरूपमन्नं सनेत् । संभजेत् । कीदृश इन्द्रः । अक्षितोतिरहिंसितरक्षणः कदाचिदपि रक्षणान्न विमुञ्चतीत्यर्थः । कीदृशं वाजं । सहस्रिणं प्रकृतौ विकृतिषु च प्रवर्तमानत्वेन सहस्रसंख्योपेतं । यस्मिन्वाजे विश्वानि सर्वाणि पौंस्या पुंस्त्वानि बलानि वर्तन्ते तादृशं वाजमिति पूर्वत्रान्वयः ॥ अक्षितोतिः । ननु क्षि क्षये इत्ययं धातुरकर्मकः । तस्य च कर्मभावावाद्यधिकरणे भावे कर्तरि वा क्तप्रत्ययेन भवितव्यं । तदिह यदि कर्तर्यधिकरणे वा स्यात्तदा तयोरर्थयोरण्यप्रत्ययस्याविधानात्क्तिन्नेव इत्यनुवृत्तौ । पा. ३-४-७८ । निष्ठायामण्यदर्थे । पा. ३-३-१०० । इति दीर्घत्वेन भवितव्यं । तथा च क्षीयो दीर्घात् । पा. ७-२-२५ । इति निष्ठातकारस्येत्वक्षीत्वेति स्यात् न त्वक्षीतेति । अथ नपुंसके भावे क्तः । पा. ३-३-११४ । इति भावपरः क्तिशब्दो गृह्यते । तदा तस्य ण्यदर्थत्वेनाण्यदर्थ इति निषेधाद्दीर्घनत्वयोरभावान्क्तिमिति सिद्ध्यति । तदा तु नञोऽतत्पुरुषः प्रकृतेन नास्तीतीति न विद्यते क्तिमत्रेति बहुव्रीहिणैव भवितव्यं । तथा च नञ्सुभ्यां । पा. ६-२-१७२ । इत्युत्तरपदान्तोदात्तत्वं स्यात् । पुनरूतिशब्देन बहुव्रीहौ पूर्वपदप्रकृतिस्वरत्वेन स एव स्वरस्तिष्ठेदित्यभिमतमाद्युदात्तत्वं न सिद्ध्येदिति । सत्यं । अत एवात्र क्तिप्रधानोऽन्तर्भावितण्यर्थो गृह्यते । तेन सकर्मकत्वात्कर्मण्येषा निष्ठा । तत-

ಶ್ಚಾನ್ಯದರ್ಥ ಇತಿ ನಿಷೇಧಾದ್ವೀಪ್ಸಾಯಾಂ ನಿಷ್ಠಾನತ್ವಂ ಚ ನ ಭವಿಷ್ಯತಿ । ತಥಾ ಚ ನಞಿಶ್ತೆತ್ಪುರುಷೇ ನ ಕ್ಷೈತಾಕ್ಷೈತಾಕ್ಷಯಿತೇತ್ಯರ್ಥಃ । ತತ್ರ ಚಾವ್ಯಯಪೂರ್ವಪದಪ್ರಕೃತಿಸ್ವರತ್ವೇನ ನಞಿ ಉದಾತ್ತೆತ್ವಂ । ಪುನರೂತಿಪದೇನ ಬಹುವ್ರೀಹೌ ಸ ಏವ ಸ್ವರಃ ಸ್ಥಾಸ್ಯತೀತಿ ನ ಕೋಽಪಿ ದೋಷಃ । ರಿ ಕ್ಷಿ ಚಿರಿ ಜಿರಿ ದಾಶದ್ವು ಜಿಷ್ಠಾಂಸಾಯಾಂ । ಧಾ. ೨೭, ೨೮-೩೩ । ಇತಿ ಕ್ಷಿಣೋತೇರ್ಹಿಂಸಾರ್ಥಸ್ಯ ವಾ ಕರ್ಮಣಿ ನಿಷ್ಠಾ । ತಥಾ ಚಾಹಿಂಸಿತೋಽತಿರಿತ್ಯರ್ಥ ಉಕ್ತಕ್ರಮೇಣ ಸ್ವರಃ ಸಿಧ್ಯತೀತಿ ನ ದೋಷಃ । ಸನೇತ್ । ವನ ಷಣ ಸಂಭಕ್ತೌ । ಭೌವಾದಿಕಃ । ವಾಜಂ । ವೃಷಾದಿತ್ವಾದಾದ್ಯುದಾತ್ತಃ । ಇಂದ್ರಃ । ರನೋ ನಿತ್ತ್ವಾದಾದ್ಯುದಾತ್ತಃ । ಸಹಸ್ರಿಣಂ ಸಹಸ್ರಮಸ್ಯಾಸ್ತಿ । ಅತ ಇನಿಠನೌ ಪಾ. ೫-೨-೧೧೫ । ಪ್ರತ್ಯಯಸ್ವರಃ । ವಿಶ್ವಾನಿ । ವಿಶೇಃ ಕ್ವನಿ । ಉ. ೧-೧೫೧ । ನಿತ್ತ್ವಾದಾದ್ಯುದಾತ್ತಃ । ಪುಂಸಃ ಕರ್ಮಾಣಿ ಪೌಂಸ್ಯಾನಿ । ಬ್ರಾಹ್ಮಣಾದೇರಾಕೃತಿಗಣತ್ವಾದ್ಗುಣವಚನಬ್ರಾಹ್ಮಣಾದಿಭ್ಯಃ ಕರ್ಮಣಿ ಚ । ಪಾ. ೫-೧-೧೨೪ । ಇತಿ ಷ್ಯಞ್ । ಞಿತ್ತ್ವಾದಾದ್ಯುದಾತ್ತಃ । ಪೃಥಮಾಬಹುವಚನೇನಸ್ಯ ಸುಸಾಂ ಸುಲುಗಿತ್ಯಾದಿನಾ ಡಾದೇಶಃ । ನನು ಸ್ತ್ರೀಪುಂಸಾಭ್ಯಾಂ ನಞಿಸ್ನಞೌ ಭವನಾತ್ । ಪಾ. ೪-೧-೭೭ । ಇತ್ಯನೇನ ಧಾನ್ಯಾನಾಂ ಭವನೇ ಕ್ಷೇತ್ರೇ ಖಞ್ । ಪಾ. ೫-೨-೧ । ಇತ್ಯೇತತ್ಪರ್ಯಂತೇಷ್ವಪತ್ಯಾದ್ಯರ್ಥೇಷು ನಞಿಸ್ನಞೋರ್ವಿಧಾನಾದ್ಯಥಾ ಪುಂಸೋಽಪತ್ಯಂ ಪೌಂಸ್ನಃ ಪುಂಸ ಆಗತಃ ಪೌಂಸ್ನ ಇತ್ಯಾದಿ ತದ್ಧಿತ್ಪುಂಸೋ ಭಾವಃ ಕರ್ಮ ವೇತ್ಯಸ್ಮಿನ್ನಪ್ಯರ್ಥೇ ಷ್ಯಞಂ ಬಾಧಿತ್ವಾ ಪೌಂಸ್ನಾನೀತ್ಯೇವ ಭವಿತವ್ಯಂ । ಕಥಮುಚ್ಯತೇ ಪೌಂಸ್ಯಾನೀತಿ । ಉಚ್ಯತೇ । ಆ ಚ ತ್ವಾತ್ । ಪಾ. ೫-೧-೧೨೦ । ಇತಿ ಸೂತ್ರೇ ತ್ವಾದಿತ್ಯವಧಿನಿರ್ದೇಶಾದ್ಬ್ರಹ್ಮಸ್ತ್ರಃ । ಪಾ. ೫-೧-೧೨೬ । ಇತ್ಯೇತತ್ಪರ್ಯಂತೈರಿಮನಿಜಾದಿಭಿಃ ಪ್ರತ್ಯಯೈಃ ಸಹ ತ್ವತಲೋಃ ಸಮಾವೇಶಃ । ಏವಂ ತತ್ರೈವ ಚ ಶಬ್ದಾನ್ನಞಿಸ್ನಞೋರಪಿ ಷ್ಯಞಾದಿಭಿಃ ಸಮಾವೇಶ ಏವ । ನ ಬಾಧ್ಯಬಾಧಕಭಾವಃ ॥

॥ ಪ್ರತಿಪದಾರ್ಥ ॥

ಅಕ್ಷಿತೋತಿಃ—ಯಾವಾಗಲೂ ನಾಶವಿಲ್ಲದ ರಕ್ಷಣೆಯನ್ನು ಕೊಡುವ ಅಥವಾ ಹಿಂಸೆಮಾಡದಿರುವವರಿಗೆ ರಕ್ಷಕನಾದ । ಇಂದ್ರಃ—ಇಂದ್ರನು । ಯಸ್ಮಿನ್—ಯಾವ ಹವಿಸ್ಸಿನ ಅಥವಾ ಸೋಮರೂಪವಾದ ಅನ್ನದಲ್ಲಿ ವಿಶ್ವಾನಿ—ಸಮಸ್ತವಾದ । ಪೌಂಸ್ಯಾ—ಬಲಶಕ್ತಿಗಳಿರುವವೋ ಅತಂಹ । ಸಹಸ್ರಿಣಂ—ಪ್ರಕೃತಿವಿಕೃತಿರೂಪಗಳಾದ ಅನೇಕ ಯಾಗಗಳಲ್ಲಿ ಉಪಯೋಗಿಸಲ್ಪಡುವ। ಇಮಂ ವಾಜಂ—ಸೋಮರೂಪವಾದ (ಅಥವಾ ಹವಿಸ್ಸಿನ ರೂಪವಾದ) ಈ ಅನ್ನವನ್ನು । ಸನೇತ್—ಹೊಂದಲಿ ॥

॥ ಭಾವಾರ್ಥ ॥

ಇಂದ್ರನು ಕೊಡುವ ರಕ್ಷಣೆಗೆ ಯಾವಾಗಲೂ ನಾಶವಿಲ್ಲ ಎಂದರೆ ಅವನು ಯಾವಾಗಲೂ ತನ್ನನ್ನು ಸ್ತೋತ್ರಮಾಡುವವರನ್ನು ರಕ್ಷಿಸುವನು. ಈ ವಿಚಾರದಲ್ಲಿ ಸಂಶಯ ಪಡಬೇಕಾಗಿಲ್ಲ. ಸಾವಿರಾರು ಯಜ್ಞಯಾಗಾದಿಗಳಲ್ಲಿ ನಾವು ಉಪಯೋಗಿಸುವ ಶಕ್ತಿವರ್ಧಕಗಳಾದ ಸೋಮ, ಹವಿಸ್ಸು ಮೊದಲಾದ ರೂಪಗಳಿಂದಿರುವ ಅನ್ನವನ್ನು ಇಂತಹ ಇಂದ್ರನು ಹೊಂದಲಿ ಎಂದರೆ ನಾವು ಯಜ್ಞಯಾಗಾದಿಗಳಲ್ಲಿ ಅರ್ಪಿಸುವ ಅನ್ನವನ್ನು ಇಂದ್ರನು ಸ್ವೀಕರಿಸಲಿ

English Translation

May Indra who grants unperishable aid accept this food (in the form of soma) in which exist all manly strength and which we offer in thousands of sacrifices.

॥ ವಿಶೇಷವಿಷಯಗಳು ॥

ಈ ಋಕ್ಕಿನ ಅಭಿಪ್ರಾಯವು ಸ್ಪಷ್ಟವಾಗಿಲ್ಲ. ಆದರೂ ಒಂದು ವಿಧವಾದ ಅರ್ಥವು ಭಾಸವಾಗುವಂತೆ ಭಾಷ್ಯಕಾರರು ಪ್ರಯತ್ನಮಾಡಿರುವರು, ಸ್ಕಂದಸ್ವಾಮಿ ಮತ್ತು ವೆಂಕಟಮಾಧವರು ಈ ಋಕ್ಕಿಗೆ ಇನ್ನೊಂದು ವಿಧವಾಗಿ ಅರ್ಥಮಾಡಿರುವರು. ಅವರ ಭಾಷ್ಯವನ್ನೂ ಅನುವಾದವನ್ನೂ ಇಲ್ಲಿ ಕೊಟ್ಟಿರುತ್ತೇವೆ.

ಸ್ಕಂದಸ್ವಾಮಿಯ ಭಾಷ್ಯ—

> ಅಕ್ಷಿತಾ ಅನ್ಯೇನಾಹಿಂಸಿತಾ ಅಕ್ಷೀಣಾ ವಾ ಊತಿಃ ಪಾಲನಂ ಯಸ್ಯ ಸೋಽಕ್ಷಿತೋತಿಃ । ಸನೇತ್ ಸಂಭಜತು। ಇಮಂ ವಾಜಂ ಸಂಗ್ರಾಮಂ ಇಂದ್ರಃ ಸಹಸ್ರಿಣಂ ಯೋದ್ಧೃಸಹಸ್ರಯುಕ್ತಂ । ಅಸ್ಮಿನ್ ಸಂಗ್ರಾಮೇಽಸ್ಮದ್ರಕ್ಷಣಾಯ ಸನ್ನಿಹಿತೋ ಭವತ್ವಿತಿಶೇಷಃ । ಯಸ್ಮಿನ್ ಸಂಗ್ರಾಮೇ ಕಿಂ ಉಚ್ಯತೇ । (ಯಸ್ಮಿನ್) ವಿಶ್ವಾನಿ ಸರ್ವಾಣಿ । ಪೌಂಸ್ಯಾ । ಬಲನಾಮೈತತ್ । ಹಸ್ತ್ಯಶ್ವರಥಪದಾತಿಲಕ್ಷಣಾನಿ ಬಲಾನಿ । ಅಥವಾ ವಾಜ ಇತ್ಯನ್ನನಾಮ । ಇದಮಸ್ಮದೀಯಂ ಸೋಮಲಕ್ಷಣಮನ್ನಂ ಸಂಭಜೇತ್ ಪಿಬೇತ್ ಇಂದ್ರಃ ಸ್ತುತಿಸಹಸ್ರಯುಕ್ತಂ ಯಸ್ಮಿನ್ ಬಲಾನಿ ಸರ್ವಾಣಿ ಸಾಮರ್ಥ್ಯಲಕ್ಷಣಾನಿ । ವಾಜಃ ಪೀತಃ ಸರ್ವಸಾಮರ್ಥ್ಯಾನಿ ಜನಯತೀತ್ಯರ್ಥಃ । ಅಥವಾ ಯಸ್ಮಿನ್ ವಿಶ್ವಾನಿ ಪೌಂಸ್ಯೇತಿ ಇಂದ್ರವಿಶೇಷಣಂ । ಯಸ್ಮಿನಿಂದ್ರೇ ಸರ್ವಾಣಿ ಬಲಾನಿ ಯೇಃ ಸರ್ವೈರ್ಬಲೈರ್ಬಲವಾನ್ ಯೋ ಮಹಾಬಲ ಇತ್ಯರ್ಥಃ ॥

ಅನುವಾದವು—ಇಂದ್ರನು ಕೊಡುವ ರಕ್ಷಣೆಯು ಕೆಲವು ಕಾಲವಿದ್ದು ನಾಶವಾಗುವುದಿಲ್ಲ. ಯಾವಾಗಲೂ ಇರುವುದೆಂದರ್ಥವು. ಇಂತಹ ರಕ್ಷಣೆಯನ್ನು ಕೊಡುವ ಇಂದ್ರನು ಸಾವಿರಾರು ಯುದ್ಧಭಟರಿಂದ ಕೂಡಿದ ಈ ಯುದ್ಧಭೂಮಿಗೆ ನಮ್ಮ ರಕ್ಷಣೆಗಾಗಿ ಬರಲಿ. ಈ ಯುದ್ಧಭೂಮಿಯಲ್ಲಿ ಹಸ್ತ್ಯಶ್ವರಥಪದಾತಿಗಳೆಂಬ ಚತುರಂಗ ಬಲವು ಇರುವುದು. ಇಂತಹ ಯುದ್ಧಭೂಮಿಗೆ ಬಂದು ನಮ್ಮನ್ನು ಸಲಹಲಿ, ಅಥವಾ, ಸಮಸ್ತಬಲಯುಕ್ತನಾದ ಎಂದರೆ ಮಹಾಬಲಶಾಲಿಯದ ಇಂದ್ರನು ಸಹಸ್ರಸ್ತುತಿಗಳಿಂದ ಕೂಡಿದ ಮತ್ತು ಪಾನಮಾಡುವವರಿಗೆ ಸರ್ವಸಾಮರ್ಥ್ಯವನ್ನೂ ಉಂಟುಮಾಡುವ ಈ ಸೋಮರೂಪವಾದ ಅನ್ನವನ್ನು ಸ್ವೀಕರಿಸಲಿ ಮತ್ತು ನಮ್ಮನ್ನು ಯಾವಾಗಲೂ ತಪ್ಪದೆ ರಕ್ಷಿಸಲಿ.

ಅಕ್ಷಿತೋತಿಃ—ಆಹಿಂಸಿತರಕ್ಷಣಃ ಕದಾಚಿದಪಿ ರಕ್ಷಾಂ ನ ವಿಮುಂಚತೀತ್ಯರ್ಥಃ ಸ್ತೋತ್ರಮಾಡುವವರ ರಕ್ಷಣೆಯನ್ನು ಯಾವಾಗಲೂ ತ್ಯಜಿಸುವವನಲ್ಲ. ಇವನು ಕೊಡುವ ರಕ್ಷಣೆಯು ಕ್ಷೀಣವಾಗುವುದಿಲ್ಲ ಎಂದರ್ಥವು

ಈ ಶಬ್ದವು ಋಗ್ವೇದದಲ್ಲಿ ಈ ಋಕ್ಕಿನಲ್ಲಲ್ಲದೆ ಕೆಳಗೆ ಕೊಟ್ಟಿರುವ ಋಕ್ಕುಗಳಲ್ಲಿ ಮಾತ್ರವಿರುವುದು ಮತ್ತೆಲ್ಲಿಯೂ ಇಲ್ಲ—

ಅರ್ಚ್ಯೇತ್ರೋ ಮಘವಾ ನೈಹ್ಯ ಉಕ್ಥ್ಯೇರ್ಯಜ್ಞೋ ರಾಜಾ ಗಿರಾಮುಕ್ಷಿತೋತಿಃ ।

(ಋ. ಸಂ. ೬-೨೪-೧)

ಜನೀಯಂತೋ ಜನಿದಾಮುಕ್ಷಿತೋತಿಮಾ ಚಾವ್ಯಯಾಮೋ೭ವತೇ ನ ಕೋಶಂ ।

(ಋ. ಸಂ ೪-೧೭-೧೬)

ಸತ್ರಾಜಿತೋ ಧನಸಾ ಅಕ್ಷಿತೋತಯೋ ವಾಜಯಂತೋ ರಥಾ ಇವ ॥

(ಋ. ಸಂ. ೮.೩-೧೫)

ವಾಜಂ—ಅನ್ನ ಅಥವಾ ಸಂಗ್ರಾಮ (ಯುದ್ಧ)

ಸಹಸ್ರಿಣಂ—ಈ ಶಬ್ದವು ವಾಜಶಬ್ದಕ್ಕೆ ವಿಶೇಷಣವಾಗಿರುವುದು. ವಾಜಶಬ್ದಕ್ಕೆ ಅನ್ನವೆಂದು ಅರ್ಥ ಮಾಡುವ ಸಂದರ್ಭದಲ್ಲಿ ಸಹಸ್ರಿಣಂ ಎಂದರೆ ಸಾವಿರಾರು ಯಜ್ಞಗಳಲ್ಲಿ ಅರ್ಪಿಸುವ ಇಥವಾ ಸಾವಿರಾರು ಸ್ತುತಿಗಳಿಂದ ಪ್ರಶಂಸಿಸಲ್ಪಡುವ ಎಂದರ್ಥವು. ವಾಜಶಬ್ದಕ್ಕೆ ಯುದ್ಧವೆಂದು ಅರ್ಥಮಾಡುವಾಗ ಸಹಸ್ರಿಣಂ ಎಂದರೆ ಸಾವಿರಾರು ಯುದ್ಧಭಟರಿಂದ ಕೂಡಿದ ಯುದ್ಧವು ಎಂದು ಹೇಳಬೇಕಾಗುವುದು.

ಯಸ್ಮಿನ್ವಿಶ್ವಾನಿ ಪೌಂಸ್ಯಾ--ಸಮಸ್ತ ಶಕ್ತಿಸಾಮರ್ಥ್ಯಗಳಿರುವ. ವಾಜಶಬ್ದಕ್ಕೆ ಅನ್ನವೆಂಬ ಅರ್ಥವನ್ನು ಹೇಳಿದರೆ ಪೌಂಸ್ಯಾ ಎಂಬ ಶಬ್ದಕ್ಕೆ ಶಕ್ತಿ, ಸಾಮರ್ಥ್ಯ, ಬಲ, ಪುಷ್ಟಿ, ಉತ್ಸಾಹ ಮೊದಲಾದ ಅರ್ಥವನ್ನು ಹೇಳಬಹುದು. ಯುದ್ಧವೆಂಬ ಅರ್ಥವನ್ನು ಹೇಳುವಾಗ ಹಸ್ತ್ಯಶ್ವಾದಿಬಲಗಳು ಅಥವಾ ಪೌರುಷೇಯ, ಪರಾಕ್ರಮ ಧೈರ್ಯ ಮೊದಲಾದ ಅರ್ಥವನ್ನು ಹೇಳಬಹುದು. ಸ್ಕಂದಸ್ವಾಮಿಯು ಹೇಳುವಂತೆ ಪೌಂಸ್ಯಾ ಎಂಬ ಶಬ್ದವು ಇಂದ್ರನಿಗೆ ವಿಶೇಷಣವನ್ನಾಗಿ ಹೇಳುವುದಾದರೆ ಸಮುಸ್ತಬಲದಿಂದ ಕೂಡಿನ, ಮಹಾಬಲಶಾಲಿಯಾದ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಅಕ್ಷಿತೋತಿಃ-ಕ್ಷಿ-ಕ್ಷಯೇ ಎಂಬ ಧಾತುವು ಅಕರ್ಮಕವು. ಇದರ ಮುಂದೆ ಕ್ತ ಪ್ರತ್ಯಯಬರುವುದಾದರೆ, ಧಾತುವು ಅಕರ್ಮಕವಾದ್ದರಿಂದ ಕರ್ಮಾರ್ಥದಲ್ಲಿ ಕ್ತ ಪ್ರತ್ಯಯ ಬರುವುದಿಲ್ಲ. ಕರ್ತೃರ್ಥದಲ್ಲಿಯಾಗಲೀ, ಅಧಿಕರಣಾರ್ಥದಲ್ಲಿಯಾಗಲೀ, ಭಾವಾರ್ಥದಲ್ಲಿಯಾಗಲೀ ಕ್ತ ಪ್ರತ್ಯಯವು ಬರಬೇಕಾಗುವುದು. ಕರ್ತೃರ್ಥ ಅಧಿಕರಣಾರ್ಥಗಳಲ್ಲಿ ಕ್ತ ಪ್ರತ್ಯಯಬರುವುದು ಎಂದು ಹೇಳಿದರೆ ಕ್ಷಿ+ತ ಎಂದಿರುವಾಗ **ನಿಷ್ಠಾಯಾಮಣ್ಯದರ್ಥೇ** (ಪಾ. ಸೂ. ೬-೪-೬೦) (ಣ್ಯತ್ ಪ್ರತ್ಯಯದ ಅರ್ಥ ಭಾವ ಅಥವಾ ಕರ್ಮ, ನಿಷ್ಠಾ ಎಂದರೆ ಕ್ತ ಕ್ತವತೂನಿಷ್ಠಾ (ಪಾ. ಸೂ. ೧-೧-೨೬) ಕ್ತ. ಕ್ತವತು ಪ್ರತ್ಯಯಗಳು ನಿಷ್ಠಾ ಸಂಜ್ಞೆಯನ್ನು ಹೊಂದುವುವು ಎಂಬುದರಿಂದ, ಕ್ತ ಕ್ತವತು ಪ್ರತ್ಯಯಗಳು) ಣ್ಯತ್ಪ್ರತ್ಯಯಾರ್ಥಕವಲ್ಲದ ಕ್ತ ಕ್ತವತು ಪ್ರತ್ಯಯಗಳು ಪರವಾಗಿರುವಾಗ ಕ್ಷಿ ಧಾತುವಿಗೆ ದೀರ್ಘ ಬರುವುದು ಎಂದು ಸೂತ್ರಾರ್ಥ. ಕರ್ತೃ ಅಧಿಕರಣ ಎಂಬ ಅರ್ಥವು ಣ್ಯತ್ಪ್ರತ್ಯಯಾರ್ಥವಲ್ಲದಕಾರಣ ಕರ್ತೃಧಿಕರಣಾರ್ಥಕವಾದ ಕ್ತ ಪ್ರತ್ಯಯವು ಪರದಲ್ಲಿರುವಾಗ ಕ್ಷಿ ಎಂಬುದಕ್ಕೆ ದೀರ್ಘ ಬರುವುದು. ನಂತರ **ಕ್ಷಿಯೋದೀರ್ಘಾತ್** (ಪಾ ಸೂ. ೮-೨-೭೭) ದೀರ್ಘವನ್ನು ಕೊನೆಯಲ್ಲಿ ಹೊಂದಿರುವ ಕ್ಷಿ ಧಾತುವಿನ ಮುಂದಿರುವ ಕ್ತ ಕ್ತವತುಗಳ ತಕಾರಕ್ಕೆ ನಕಾರ ಬರುವುದು ಎಂಬುದರಿಂದ ನಿಷ್ಠಾತಕಾರಕ್ಕೆ ನಕಾರ ಬಂದರೆ ಕ್ಷೀ+ನ ಎಂದಾಗುವುದು. **ಆಟ್ಕುಪ್ವಾಙ್ನುಮ್ವ್ಯವಾಯೇ೭ಪಿ** (ಪಾ. ಸೂ. ೮-೪-೨) ಎಂಬುದರಿಂದ ನಕಾರಕ್ಕೆ ಣಕಾರ ಬಂದರೆ ಕ್ಷೀಣ ಎಂದು ಆಗುತ್ತೆ. ನಞ್‌ನೊಂದಿಗೆ ಸಮಾಸ ಮಾಡಿದರೆ ಅಕ್ಷೀಣ

ಎಂದಾಗುವುದೇ ವಿನಾ ಅಕ್ಷಿತಂ ಎಂದು ಆಗುವುದಿಲ್ಲ. ಇನ್ನು **ನಪುಂಸಕೇಭಾವೇಕ್ತಃ** (ಪಾ. ಸೂ. ೪-೩-೪೬) ನಪುಂಸಕ ಲಿಂಗದಲ್ಲಿ ಕಾಲಸಾಮಾನ್ಯ ತೋರುವಾಗ ಭಾವಾರ್ಥದಲ್ಲಿ ಕ್ತ ಪ್ರತ್ಯಯ ಬರುವುದು ಎಂಬುದರಿಂದ, ಭಾವಾರ್ಥದಲ್ಲಿ ಕ್ತ ಪ್ರತ್ಯಯ ಬರುವುದು ಎಂದರೆ, ಈ ಪಕ್ಷದಲ್ಲಿ ಭಾವಾರ್ಥವು ಣಿಚ್ಪ್ರತ್ಯಯದ ಅರ್ಥವಾದ ರಿಂದ **ಅಣ್ಯದರ್ಥೇ** (ಪಾ. ಸೂ. ೬-೪-೬೦) ಎಂದು ನಿಷೇಧವಿರುವುದರಿಂದ ಕ್ಷಿ ಧಾತುವಿಗೆ ದೀರ್ಘ ಬರುವುದಿಲ್ಲ. ದೀರ್ಘಬಾರದ ಮೇಲೆ **ಕ್ಷಿಯೋದೀರ್ಘಾತ್** (ಪಾ. ಸೂ. ೮-೨-೪೬) ಎಂಬುದರಿಂದ ನಿಷ್ಠಾತಕಾರಕ್ಕೆ ನಕಾರವೂ ಬರುವುದಿಲ್ಲ ಕ್ಷಿತಂ ಎಂದು ಸಿದ್ಧವಾಗುವುದು. ಆದರೂ ಊತಿ ಶಬ್ದಾರ್ಥದೊಂದಿಗೆ **ಅನಸ್ಯಯವಾಗುವುದರಿಂದ** ಕ್ಷಿತ ಶಬ್ದಕ್ಕೆ ನಞ್‌ನೊಂದಿಗೆ ತತ್ಪುರುಷಸಮಾಸವನ್ನು ಮಾಡಲಾಗುವುದಿಲ್ಲ. ಬಹುವ್ರೀಹಿ ಸಮಾಸವನ್ನೇ ಮಾಡಬೇಕಾಗುವುದು. ಬಹುವ್ರೀಹಿ ಬಂದರೆ **ನಞ್‌ಸುಭ್ಯಾಂ** (ಪಾ. ಸೂ, ೬-೩-೧೭೩) ಬಹುವ್ರೀಹಿ ಸಮಾಸದಲ್ಲಿ ನಞ್ ಸು ಇವುಗಳ ಮುಂದಿರುವ ಉತ್ತರಪದವು ಅಂತೋದಾತ್ತವಾಗುವುದು. ಪುನಃ ಅಕ್ಷಿತ ಎಂಬುದಕ್ಕೆ ಊತಿ ಶಬ್ದದೊಂದಿಗೆ ಬಹುವ್ರೀಹಿ ಬಂದರೆ **ಬಹುವ್ರೀಹಿಣಾ ಪ್ರಕೃತ್ಯಾ ಪೂರ್ವಪದಂ** (ಪಾ.ಸೂ. ೬-೩-೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬಂದರೆ ಅದೇ ಸ್ವರವೇ ನಿಲ್ಲಬೇಕಾಗುವುದು. ಅಂತು ಅಕ್ಷಿತೋತಿಃ ಎಂಬಲ್ಲಿ ಇಷ್ಟವಾದ ಆದ್ಯುದಾತ್ತ ಸ್ವರವು ಸಿದ್ಧಿಸದೇ ಹೋಗುವುದು ಈ ರೀತಿ ಕರ್ತೃ ಅಧಿಕರಣ ಎಂಬ ಅರ್ಥಗಳಲ್ಲಿ ಅಕ್ಷಿತ ಎಂಬ ರೂಪವೇ ಸಿದ್ಧಿಸುವುದಿಲ್ಲ. ಭಾವಾರ್ಥದಲ್ಲಿ ರೂಪವು ಸಿದ್ಧಿಸಿದರೂ ವಿವಕ್ಷಿತವಾದ ಆದ್ಯುದಾತ್ತ ಸ್ವರಸಿದ್ಧವಾಗುವುದಿಲ್ಲ. ಧಾತುವು ಅಕರ್ಮಕವಾದ್ದರಿಂದ ಕರ್ಮಾರ್ಥದಲ್ಲಿ ಕ್ತ ಪ್ರತ್ಯಯವೇ ಬರುವುದಿಲ್ಲ. ಆದ್ದರಿಂದ ಇಲ್ಲಿ ಹೇಗೆ ನಿರ್ವಾಹ ಮಾಡುವುದು ಎಂದರೆ ಈಗ ಉಪಪಾದಿತವಾದ ಅಂಶವು ಸತ್ಯವಾದ ದೇ. ಆದ್ದರಿಂದಲೇ ಇಲ್ಲಿ ಅಂತರ್ಭಾವಿತ ಣಿಚ್ಪ್ರತ್ಯಯಾರ್ಥಕವಾದ ಕ್ಷಿ ಧಾತುವನ್ನು ತೆಗೆದುಕೊಳ್ಳುವೆವು ಇದು ಸಕರ್ಮಕವಾದ್ದರಿಂದ ಕರ್ಮಾರ್ಥದಲ್ಲಿಯೇ ಇಲ್ಲಿ ಕ್ತ ಪ್ರತ್ಯಯ ಬರುವುದು. ಈಗ **ಅಣ್ಯದರ್ಥೇ** (ಪಾ. ಸೂ. ೬-೪-೬೦) ಎಂದು ನಿಷೇಧ ಬರುವುದರಿಂದ ದೀರ್ಘವೂ ನಂತರ ನತ್ವವೂ ಬರುವುದಿಲ್ಲ. ನಕ್ಷಿತಾ-ಅಕ್ಷಿತಾ ಎಂದು ನಞ್ ತುತ್ಪುರುಷ ಸಮಾಸ ಅಕ್ಷಿತಾ-ಅಕ್ಷಯಿತಾ (ಕ್ಷಯಿಸದೇ ಇರುವ) ಎಂದರ್ಥವಾಗುವುದು. ಆದ್ದರಿಂದ **ತತ್ಪುರುಷೇತುಲ್ಯಾರ್ಥ** (ಪಾ ಸೂ. ೬-೩-೨) ಎಂಬುದರಿಂದ ಅವ್ಯಯ ಪೂರ್ವಪದ ಪ್ರಕೃತಿಸ್ವರದಿಂದ ನಞ್‌ಗೆ ಉದಾತ್ತ ಬರುವುದು. ಊತಿ ಶಬ್ದದೊಂದಿಗೆ ಬಹುವ್ರೀಹಿ ಬಂದರೂ, **ಬಹುವ್ರೀಹೌಪ್ರಕೃತ್ಯಾ ಪೂರ್ವಪದಂ** (ಪಾ. ಸೂ. ೬-೩-೧) ಎಂಬುದರಿಂದ ಅದೇ ನಿಲ್ಲುವುದು. ಆದ್ದರಿಂದ ರೂಪಸಿದ್ಧಿಯೂ ವಿವಕ್ಷಿತಸ್ವರಸಿದ್ಧಿಯೂ ಆಗುವುದರಿಂದ ಯಾವ ದೋಷವೂ ಬರುವುದಿಲ್ಲ. ಅಥವಾ 'ರಿಕ್ಷಿ ಚಿರಿ ಜಿರಿ ದಾರ ದೃ ಜಿಘೃಂಸಾಯಾಂ, ಎಂಬ ಸ್ವಾದಿಗಣಪರಿತವಾದ ಹಿಂಸಾರ್ಥಕವಾದ ಕ್ಷಿ ಧಾತುವಿನ ಮುಂದೆ ಕರ್ಮಾರ್ಥ ಕ್ತ ಪ್ರತ್ಯಯ ಬರುವುದು. ಅಹಿಂಸಿತವಾದ ಊತಿ (ರಕ್ಷಣ) ಯುಳ್ಳವನು ಎಂದು ಅರ್ಥವಾಗುವುದು. ಈ ಪಕ್ಷದಲ್ಲಿ ದೀರ್ಘ ಬರುವುದಿಲ್ಲ. ತತ್ಪುರುಷಸಮಾಸವು ಸಂಭವಿಸುವುದರಿಂದ ಅವ್ಯಯಪೂರ್ವಪದಪ್ರಕೃತಿಸ್ವರದಿಂದ ನಞ್‌ಗೆ ಆದ್ಯುದಾತ್ತವೇ ಬರುವುದು. ಏವಂಚ ರೂಪಾಸಿದ್ಧಿವಿವಕ್ಷಿತ ಸ್ವರಾಸಿದ್ಧಿರೂಪದೋಷಗಳಿಲ್ಲವು.

ಸನೇತ್-ವನಸನಣಸೇಂಭಕ್ತ್ವಾ—ಷಣಧಾತುವಿಗೆ **ಧಾತ್ವಾದೇಃಷಃ ಸಃ** (ಪಾ.ಸೂ. ೬-೧-೬೪) ಎಂಬುದರಿಂದ ಆದಿ ಷಕಾರಕ್ಕೆ ಸಕಾರಬಂದರೆ **ನಿನಿತ್ತಾಸಾಯೇ ನೈನಿತ್ತಿಕಸ್ಯಾಹ್ಯಸಾಯಃ** ಎಂಬುದರಿಂದ ಣತ್ವ ನಿವೃತ್ತವಾಗಿ ಸನ ಎಂದಿರುವುದು. ಸನ ಧಾತುವು ಭ್ವಾದಿ (೧ನೇ ಗಣ) ಯಲ್ಲಿ ಪಠಿತವಾಗಿರುವುದು. ಸನ ಧಾತುವಿನ ಮುಂದೆ ವಿಧಿಲಿಙ್ ಬಂದರೆ ಅದಕ್ಕೆ ಪ್ರಥಮಪುರುಷ ಏಕವಚನ ತಿ ಪ್ರತ್ಯಯ ಬರುವುದು. **ಯಾಸುಟ್ಪರಸ್ಮೈಪದೇಷೂದಾತ್ತೋಙ್ಚ್ಚಿ** (ಪಾ. ಸೂ. ೩-೪-೧೦೩) ಎಂಬುದರಿಂದ ತಿ ಪ್ರತ್ಯಯಕ್ಕೆ ಯಾಸುಟ್ ಆಗಮ. **ಸುಟ್ತಿಥೋಃ** (ಪಾ. ಸೂ. ೩-೪-೧೦೭) ಎಂಬುದರಿಂದ ತಕಾರಕ್ಕೆ ಸುಟ್ ಆಗಮ. **ಕರ್ತರಿಶಪ್**

(पा. सू. ३-८-३९) ಎಂಬುದರಿಂದ ಧಾತುವಿನ ಮುಂದೆ ಶಪ್ (अ) ವಿಕರಣಬರುವುದು. **लिङ्सलोर्लोपोऽनन्त्यस्य** (पा. सू. ६-३-६९) ಎಂಬುದರಿಂದ ಸಕಾರಗಳೆರಡಕ್ಕೂ ಲೋಪ. **अतोयेयः** (पा. सू. ६-३-९०) ಎಂಬುದರಿಂದ ಯಾ ಗೆ ಇಯ್ ಆದೇಶ. **अदुगुणः** (पा. सू. ६-८-९६) ಎಂಬುದರಿಂದ ಗುಣ, **लोपोव्योर्वलि** (पा. सू. ६-८-६६) ಎಂಬುದರಿಂದ ಯ ಲೋಪ **इतश्च** (पा. सू. ३-४-१००) ಎಂಬುದರಿಂದ ಇಕಾರ ಲೋಪ ಸನೇತ್ ಎಂದಾಗುವುದು. ಇದು ವೃಷಾದಿಗಣದಲ್ಲಿ ರುವುದರಿಂದ **वृषादीनांच** (पा. सू. ६-८-२०३) ಎಂಬುದರಿಂದ ಆದ್ಯುದಾತ್ತ.

ಇಂದ್ರಃ—ಇದಿಪರಮೈಶ್ವರ್ಯೇ ಎಂಬ ಧಾತುವಿಗೆ **इदितोनुम् धातोः** (पा. सू ६-८-३७) ಎಂಬುದರಿಂದ ನುಮಾಗಮ **ऋज्रेन्द्राग्रः** (उ सू. ३-८-९६) ಎಂಬುದರಿಂದ रन् ಪ್ರತ್ಯಯ. ಪ್ರತ್ಯಯವು ನಿತ್ತಾದ್ದರಿಂದ ಪ್ರತ್ಯಯಾಂತವು ಆದ್ಯುದಾತ್ತವಾಗುವುದು.

ಸಹಸ್ರಿಣಂ—ಸಹಸ್ರಂ ಅಸ್ಯ ಅಸ್ತಿ (ಸಹಸ್ರವು ಇವನಲ್ಲಿ ಇದೆ) ಎಂದು ವಿವಕ್ಷಿಸಿದಾಗ **अतेइनिठनौ** (पा. सू. ५-१-११५) ಎಂಬುದರಿಂದ ಇನಿ ಪ್ರತ್ಯಯ, ದ್ವಿತೀಯೈಕವನ ಅಮ್ ಪ್ರತ್ಯಯ. **अट्कुप्वाङ् नुम्व्यवायेऽपि** (पा. सू. ८-४-२) ಎಂಬುದರಿಂದ ನಕಾರಕ್ಕೆ ಣಕಾರ. ಸಹಸ್ರಿಣಾ ಪ್ರತ್ಯಯ ಸ್ವರ ಬರುವುದು.

ವಿಶ್ವಾನಿ-ಓಶ ಧಾತುವಿನ ಮುಂದೆ **अशूप्रुषिलटिकणिखटि विश्वभ्यः क्वन्** (उ सू. ८-८४) ಎಂಬುದರಿಂದ ಕ್ವನ್ ಪ್ರತ್ಯಯ-ಪ್ರತ್ಯಯವು ನಿತ್ತಾದ್ದರಿಂದ ಪ್ರತ್ಯಯಾಂತದ ಆದಿಯು ಉದಾತ್ತ.

ಪೌಂಸ್ಯಾ—ಪುಂಸಃ ಕರ್ಮಾಣಿ ಎಂದು ವಿವಕ್ಷಿಸಿದಾಗ **गुणवचनब्राह्मणादिभ्यः कर्मणिचे** (पा. सू. ५-८-८३४) ಗುಣೋಪಸರ್ಜನದ್ರವ್ಯವಾಚಕವಾದ ಶಬ್ದ ಬ್ರಾಹ್ಮಣಾದಿಗಣಪರಿತಶಬ್ದ ಇವುಗಳ ಮುಂದೆ ಭಾವಾರ್ಥದಲ್ಲಿಯೂ ಕರ್ಮಾರ್ಥದಲ್ಲಿಯೂ ष्यञ् ಬರುವುದು ಎಂಬುದರಿಂದ ಬ್ರಾಹ್ಮಣಾದಿಯು ಆಕೃತಿ ಗಣವಾದ್ದರಿಂದ ಆ ಗಣದಲ್ಲಿ ಸೇರುವ ಪುಂಸ್ ಶಬ್ದದ ಮುಂದೆ ष्यञ् ಪ್ರತ್ಯಯ ಬರುವುದು. ಪ್ರತ್ಯಯವು ಞಿತ್ತಾದ್ದರಿಂದ ಪ್ರತ್ಯಯಾಂತ ಶಬ್ದದ ಆದಿಯು ಉದಾತ್ತ. ಪುಂಸ್+ಯ ಎಂದಿರುವಾಗ **तद्धितेष्वचामादेः** (पा. सू. ७-२-११७) ಞಿತ್ತು ಆಥವಾ ಣಿತ್ತು ಆದ ತದ್ಧಿತಪ್ರತ್ಯಯವು ಪರವಲ್ಲಿರುವಾಗ ಹಿಂದಿನ ಶಬ್ದದ ಅಜ್ ಸಮುದಾಯದ ಮೊದಲನೆಯ ಅಚ್ಚಿಗೆ ವೃದ್ಧಿ ಬಂದರೆ ಪೌಂಸ್+ಯ ಇವರ ಮುಂದೆ ಬರುವ ಪ್ರಥಮಾಬಹುವಚನಕ್ಕೆ **सुपांसुलुक्** (पा. सू ७-१-३९) ಎಂಬುದರಿಂದ ಡಾ ಆದೇಶ ಬಂದರೆ ಪೌಂಸ್ಯಾ ಎಂದು ಆಗುವುದು. ಆದರೆ **स्त्रीपुंसाभ्यां नञ्स्नञौ भवनात्** (पा. सू. ४-१-७६) ಇಲ್ಲಿ ಭವನಾತ್ ಎಂಬುದಕ್ಕೆ ಭವನಪದಘಟಿತಸೂತ್ರಾತ್ (ಭವನ ಎಂಬ ಪದವನ್ನು ಹೊಂದಿರುವ ಸೂತ್ರ) ಎಂದರ್ಥ. ಆ ಸೂತ್ರವು **धान्यानांभवनेक्षेत्रेखञ्** (पा सू. ४-३ ८) ಎಂಬುದು **स्त्रीपुंसाभ्यां** ಎಂಬ ಸೂತ್ರದಿಂದ **धान्यानांभवनेक्षेत्रे** ಸೂತ್ರದವರೆಗೆ ಇರುವ ಅರ್ಥಗಳಲ್ಲಿ ಸ್ತ್ರೀ ಪುಂಸ್ ಶಬ್ದಗಳ ಮುಂದೆ ಕ್ರಮವಾಗಿ ನಞ್ಸ್ನಞ್ ಪ್ರತ್ಯಯವು ಬರುವುದು ಎಂದು ಸೂತ್ರಾರ್ಥವಾಗುವುದು. ಪುಂಸಃ ಅಪತ್ಯಂ ಎಂದು ವಿವಕ್ಷಿಸಿದಾಗ **तस्यापत्यं** (पा.सू. ४-१-९२) ಎಂಬುದರಿಂದ ಅಣ್ ಪ್ರತ್ಯಯ ಬರುವುದಿಲ್ಲ. **स्त्रीपुंसाभ्यां** ಎಂಬುದರಿಂದ ಸ್ನಞ್ ಪ್ರತ್ಯಯವೇ ಬರುವುದು ' ಪೌಂಸ್ನಃ ' ಎಂದಾಗುವುದು. ಹಾಗೆಯೇ **वुंसः आगतः** ಎಂದು ವಿವಕ್ಷಿಸಿದರೂ **ततं आगतः** (पा सू. ४-३-६४) ಎಂಬುದರಿಂದ ಅಣ್ ಬರುವುದಿಲ್ಲ **स्त्रीपुंसाभ्यां**

ಎಂಬುದರಿಂದ ಸ್ನಞ್ ಪ್ರತ್ಯಯವೇ ಬರುವುದು ' ಪೌಂಸ್ನಃ' ಎಂದೇ ಆಗುವುದು. ಇದೇ ರೀತಿಯಲ್ಲಿ ಪುಂಸಃ ಭಾವಃ ಕರ್ಮವಾ ಎಂದು ವಿವಕ್ಷಿಸಿದಾಗಲೂ **ಗುಣವಚನಬ್ರಾಹ್ಮಣಾದಿಭ್ಯಃ ಕರ್ಮಣಿಚ** (ಪಾ. ಸೂ. ೫-೧-೧೨೪) ಎಂಬುದರಿಂದ ವಿಹಿತವಾದ ಷ್ಯಞ್ ಪ್ರತ್ಯಯವನ್ನು ಬಾಧಿಸಿ ಪುಂಸ್ ಶಬ್ದದ ಮುಂದೆ ಸ್ನಞ್ ಪ್ರತ್ಯಯವೇ ಬರಬೇಕು. ಹಾಗಾದರೆ ' ಪೌಂಸ್ನಸಿ ' ಎಂದಾಗುವುದು. ಪ್ರಥಮಾಬಹುವಚನಕ್ಕೆ ಡಾ ಆದೇಶ ಬಂದರೂ ' ಪೌಂಸ್ನಾ' ಎಂದಾಗಬೇಕು. ಪೌಂಸ್ಯಾ ಎಂಬ ರೂಪವು ಹೇಗೆ ಸಿದ್ಧಿಸುವುದು ಎಂದು ಶಂಕೆ ಬರುವುದು. ಇದಕ್ಕೆ ಹೀಗೆ ಸಮಾಧಾನ ಹೇಳಬಹುದು. **ಅಚಿತ್ವಾತ್** (ಪಾ. ಸೂ. ೫-೧-೧೩೦) ಇಲ್ಲಿ **ತಸ್ಯಭಾವಸ್ತ್ವತಲೌ** (ಪಾ. ಸೂ. ೫-೧-೧೧೯) ಎಂಬುದರಿಂದ ತ್ವತಲೌ ಎಂದು ಅನುವೃತ್ತವಾಗುವುದು. ಆರ್ಜ್ ಗೆ ಮರ್ಯಾದೆ ಅವಧಿ ಎಂದರ್ಥ. ತ್ವ ಪದಕ್ಕೆ ತ್ವ ಪದವನ್ನು ಹೊಂದಿರುವ ಸೂತ್ರ ಬ್ರಹ್ಮಣಸ್ತ್ವಃ (ಪಾ. ಸೂ. ೫-೧-೧೩೬) ಎಂದು ಅರ್ಥವಾಗುವುದು. ಏವಂಚ ಅಚಿತ್ವಾತ್ ಎಂಬುದಕ್ಕೆ ಬ್ರಹ್ಮಣಸ್ತ್ವಃ ಎಂಬ ಸೂತ್ರದವರೆಗೆ ತ್ವ ತಲ್‌ಗಳು ಅಧಿಕೃತವಾಗುವುವು ಎಂದು ಅರ್ಥವಾಗುವುದು. 'ತಸ್ಯಭಾವಸ್ತ್ವತಲೌ' ಎಂಬಲ್ಲಿರುವ ತ್ವತಲ್ ಗಳಿಗೆ ಉತ್ತರಸೂತ್ರದಲ್ಲಿ ಅನುವೃತ್ತಿಯಿಂದಲೇ ವಿವಕ್ಷಿತವಾದ ಅರ್ಥವು ಸಿದ್ಧವಾಗುವಾಗ ಈ ಅಧಿಕಾರವು ವ್ಯರ್ಥವೆಂದು ತೋರಬಹುದು. ಈ ಅಧಿಕಾರವಿಲ್ಲದಿದ್ದರೆ **ಪೃಥ್ವಾದಿಭ್ಯ ಇಮನಿಜ್ವಾ** (ಪಾ.ಸೂ. ೫-೧-೧೨೩) ಇತ್ಯಾದಿಯಾದ ಉತ್ತರಸೂತ್ರಗಳಲ್ಲಿ ಪ್ರತ್ಯಕ್ಷನಿರ್ದಿಷ್ಟವಾದ ಇಮನಿಜ್ ನೊಡಲಾದುವುಗಳಿಂದ ವಿಧೇಯಾಕಾಂಕ್ಷೆಯು ಶಾಂತವಾಗುವುದರಿಂದ ತ್ವತಲ್ ಗಳಿಗೆ ಅನುವೃತ್ತಿ ಬರುವುದಿಲ್ಲ. ಶಾಂತಾಕಾಂಕ್ಷವಾದ ಸ್ಥಳದಲ್ಲಿಯೂ ವಿಧೇಯಾಂತರಕ್ಕೆ ಅನುವೃತ್ತಿಯನ್ನು ಒಪ್ಪಿದರೆ **ಅತಇಞ್** (ಪಾ. ಸೂ. ೪-೧-೯೫) ಇತ್ಯಾದಿಕಡೆಗಳಲ್ಲಿಯೂ **ಪ್ರಾಗ್ದೀವ್ಯತೋಽಞ್** (ಪಾ. ಸೂ. ೪-೧ ೮೩) ಎಂದು ಅಧಿಕೃತವಾದ ಞ್ ಪ್ರತ್ಯಯಕ್ಕೆ ಪ್ರವೃತ್ತಿ ಬರಬೇಕಾಗುವುದು. ಅಧಿಕಾರಬೋಧಕವಾದ ಅಚಿತ್ವಾತ್ ಎಂಬ ಸೂತ್ರವಿದ್ದರೆ ಇಲ್ಲಿ ಅವಧಿನಿರ್ದೇಶಸಾನುರ್ಥ್ಯದಿಂದ ಅಪವಾದವಾದ ಇಮನಿಜಾದಿಗಳು ಇರುವ ಸ್ಥಳಗಳಲ್ಲಿ ತ್ವತಲ್‌ಗಳಿಗೆ ಸಮಾವೇಶ ಬರುವುದು ಇದು ಒಂದು ಪ್ರಯೋಜನ ಭಾವಾರ್ಥದಲ್ಲಿ **ತಸ್ಯಭಾವಸ್ತ್ವತಲೌ** ಎಂಬುದರಿಂದ ತ್ವತಲ್‌ಗಳು ವಿಹಿತವಾಗಿರುವುವು. ಕರ್ಮಾರ್ಥದಲ್ಲಿ ವಿಹಿತವಾಗಿಲ್ಲ ಆದ್ದರಿಂದ ಗುಣವಚನಾದಿಗಳ ಮುಂದೆ ಕರ್ಮಾರ್ಥದಲ್ಲಿ ತ್ವತಲ್‌ಗಳು ಬರಲಾರವು. ಈ ಅಚಿತ್ವಾತ್ ಎಂಬ ಸೂತ್ರವಿದ್ದರೆ ಗುಣವಚನ (ಪಾ. ಸೂ. ೫-೧-೧೨೪) ಎಂಬಲ್ಲಿ ತ್ವತಲೌ ಎಂಬುದಕ್ಕೆ ಅನುವೃತ್ತಿ ಬರುವುದರಿಂದ **ಗುಣವಚನಾದಿಭ್ಯಃ ಭಾವೇ ಕರ್ಮಣಿಚ ಷ್ಯಞ್ ಭವತಿ ತ್ವತಲೌ ಚ ಭವತಃ** ಎಂದು ಅರ್ಥವು ವಿಸ್ತರಿಸುವುದರಿಂದ ಗುಣವಚನಾದಿಗಳ ಮುಂದೆ ಕರ್ಮಾರ್ಥದಲ್ಲಿ ತ್ವತಲ್ ಪ್ರತ್ಯಯಗಳು ಬರುವುವು. ಇದು ಮತ್ತೊಂದು ಪ್ರಯೋಜನ. ಆದರೆ ಈ ಎರಡು ಪ್ರಯೋಜನಗಳೂ ಅತ್ವಾತ್ ಎಂದು ಸೂತ್ರಮಾಡಿದರೂ ಸಿದ್ಧಿಸುವುವು. ಹೀಗಿರುವಲ್ಲಿ ಚ ಎಂಬುದು ಅಧಿಕವಾಗಿರುವುದು. ಈ ಚ ಶಬ್ದವು ಷ್ಯಞಾದಿ ಪ್ರತ್ಯಯಗಳಿಗೂ ನಞ್‌ಸ್ನಞ್‌ಗಳಿಗೂ ಬಾಧ್ಯಬಾಧಕಭಾವವಿಲ್ಲ ನಞ್‌ಸ್ನಞ್‌ಗಳಿಗೆ ಷ್ಯಞಾದಿ ಪ್ರತ್ಯಯಗಳಿಂದಿಗೆ ಸಮಾಶವೇಶ ಆಗುವುದು ಎಂದು ಬೋಧಿಸುವುದು. ಆದ್ದರಿಂದ ಷ್ಯಞ್ ಪ್ರತ್ಯಯವು ಪುಂಸ್ ಶಬ್ದದ ಮುಂದೆ ಬರಬಹುದು. ಪೌಂಸ್ಯಾ ಎಂಬ ರೂಪವು ಸಾಧುವಾಗಿಯೇ ಇರುವುದು ॥ ೯ ॥

ಸಂಹಿತಾಪಾಠಃ

ಮಾ ನೋ ಮರ್ತಾ ಅಭಿ ದ್ರುಹನ್ತನೂನಾಮಿನ್ದ್ರ ಗಿರ್ವಣಃ ।
ಈಶಾನೋ ಯವಯಾ ವಧಂ ॥ ೧೦ ॥

ಪದಪಾಠಃ

ಮಾ । ನಃ । ಮರ್ತಾ᳡ಃ । ಅಭಿ । ದ್ರುಹನ್ । ತನೂನಾ᳡ಂ । ಇಂದ್ರ । ಗಿರ್ವಣಃ ॥
ಈಶಾ᳡ನಃ । ಯವಯ । ವಧಂ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಗಿರ್ವಣ ಇಂದ್ರ ಮರ್ತಾ᳡ ವಿರೋಧಿನೋ ಮನುಷ್ಯಾ ನೋ೭ಸ್ಮದೀಯಾನಾಂ ತನೂನಾಂ ಶರೀರಾಣಾಂ ಮಾಭಿ ದ್ರುಹನ್ । ಅಭಿತೋ ದ್ರೋಹಂ ಮಾ ಕುರ್ಯುರಿತಿ । ಈಶಾನಃ ಸಮರ್ಥಸ್ತ್ವಂ ವಧಂ ವೈರಿಭಿಃ ಸಂಪಾದ್ಯಮಾನಂ ಯವಯ । ಅಸ್ಮತ್ತಃ ಪೃಥಕ್ಕುರು । ಮನುಷ್ಯಾ ಇತ್ಯಾದಿಷು ಪಂಚವಿಂಶತಿಸಂಖ್ಯಾಕೇಷು ಮನುಷ್ಯನಾಮಸು ಮರ್ತಾ᳡ ವ್ರಾತಾ ಇತಿ ಪಠಿತಂ ॥ ಮರ್ತಾ᳡ಃ । ಅಸಿಹಸಿಮೃಗ್ರಿಣ್ವಾಮಿದಮಿಲೂಪೂಧೂರ್ವಿಭ್ಯಸ್ತನ್ । ಉ. ೩-೪೬ । ಇತಿ ತನ್ । ನಿತ್ತ್ವಾದಾದ್ಯುದಾತ್ತಃ । ಅಭಿ । ಏವಮಾದೀನಾಮಂತಃ । ಫಿ. ೪-೧೪ । ದ್ರುಹನ್ । ದ್ರುಹ ಜಿಘಾಂಸಾಯಾಂ । ಲಿಙರ್ಥೇ ಲೇಟ್ । ಪಾ. ೩-೪-೭ । ಇತಿ । ಸ್ಯಾರ್ಧನಾಯಾಂ । ಪಾ ೩-೩-೧೬೧ । ಲೇಟ್ । ತಸ್ಯ ಝಿ । ಪಾ. ೩-೪-೭೮ । ಝೋ೦ತಃ । ಪಾ. ೭ ೧ ೩ । ಇತಶ್ಚ ಲೋಪಃ ಪರಸ್ಮೈಪದೇಷು । ಪಾ. ೩-೪-೯೭ । ಇತೀಕಾರ ಲೋಪಃ । ಶಪೋ ಲುಕ್ । ವಾರ್ವಧಾತುಕಮಪಿತ್ । ಪಾ. ೧-೨-೪ । ಇತಿ ತಿಬಾದೀ ಙಿತ್ತ್ವಾಲ್ಲಘೂಪಧಗುಣಾಭಾವಃ । ಸಾ. ೧-೧-೫ । ತನೂನಾಂ । ಅಸಾವಮಥ್ಯರ್ನ್ನ ಪರಾಂಗವದ್ಭಾವಃ । ಇಂದ್ರ ಗಿರ್ವಣಃ । ಗತಂ । ಈಶಾನಃ । ಧಾತೋ೭ನುದಾತ್ತೇತ್ತ್ವಚ್ಛಪೋ ಲುಕಿ ಲಸಾರ್ವಧಾತುಕಾನುದಾತ್ತತ್ವೇ ಧಾತುಸ್ವರ ಏವ ಶಿಷ್ಯತೇ । ಯವಯ । ಯೌತೇರ್ಣಿಚಿ ಸಂಜ್ಞಾಪೂರ್ವಕೋ ವಿಧಿರನಿತ್ಯ ಇತಿ ವೃದ್ಧಿರ್ನ ಕ್ರಿಯತೇ । ಅಥವಾ ಯೌತೀತಿ ಯವಃ । ಪಚಾದ್ಯಚ್ । ಪಾ. ೩-೧-೧೩೪ । ಯವಂ ಕರೋತೀತ್ಯರ್ಥೇ ತತ್ಕರೋತಿ ತದಾಚಷ್ಟೇ । ಪಾ. ೩ ೧-೨೬, ೫-೬ । ಇತಿ ಣಿಚ್ । ಇಷ್ಠವದ್ಭಾವಾಟ್ಟಿಲೋಪಃ । ಪಾ. ೬-೪-೧೫೫-೧ । ತಸ್ಯ ಸ್ಥಾನಿವದ್ಭಾವಾದ್ವೃದ್ಧ್ಯಭಾವಃ । ಪಾ. ೧-೧-೫೬ । ವಧಂ । ಹನಶ್ಚ ವಧಃ । ಪಾ. ೩-೩-೭೬ । ಇತಿ ಭಾವೇ೭ಪ್ । ತತ್ಸನ್ನಿಯೋಗಶಿಷ್ಟಃ ಸ್ಥಾನಿವದ್ಭಾವೇನಾಂತೋದಾತ್ತೋ ವಧಾದೇಶಃ ಉದಾತ್ತನಿವೃತ್ತಿಸ್ವರೇಣಾಪ ಉದಾತ್ತತ್ವಂ ॥ ೧೦ ॥

॥ ಪ್ರತಿಪದಾರ್ಥ ॥

ಗಿರ್ವಣಃ—ಮಾತ್ಯಗಳಿಂದ ಸ್ತುತಿಸಲ್ಪಡುವವ! (ಹೇ) ಇಂದ್ರ—ಎಲೈ ಇಂದ್ರನೇ! ಮರ್ತಾ᳡ಃ— (ನಮ್ಮ ವಿರೋಧಿಗಳಾದ) ಮನುಷ್ಯರು । ನಃ—ನಮ್ಮ । ತನೂನಾಂ—ಶರೀರಗಳಿಗೆ । ಮಾ ಅಭಿ ದ್ರುಹನ್—ಕೆಡಕನ್ನುಂಟುಮಾಡದಿರಲಿ । ಈಶಾನಃ—ಸರ್ವಸಮರ್ಥನಾದ (ಅಥವಾ ಸ್ವಾಮಿಯಾದ) ನೀನು । ವಧಂ—(ಶತ್ರುಗಳಿಂದ ನಮಗೆ ಉಂಟಾಗಬಹುದಾದ) ಬಾಧೆಯನ್ನು । ಯವಯ—ತಪ್ಪಿಸು ।

॥ ಭಾವಾರ್ಥ ॥

ನಮ್ಮಿಂದ ಸ್ತುತಿಸಲ್ಪಡುವ ಎಲೈ ಇಂದ್ರನೇ, ನಮಗೆ ವಿರೋಧಿಗಳಾದ ಮನುಷ್ಯರು ನಮ್ಮ ಶರೀರಗಳಿಗೆ ಎಂದರೆ ನಮಗೆ ಕೆಡಕನ್ನು (ಹಿಂಸೆಯನ್ನು) ಮಾಡದಿರಲಿ. ಸ್ವಾಮಿಯಾದ ನೀನು ಸರ್ವಸಮರ್ಥನಾಗಿರುವುದರಿಂದ ನಮ್ಮ ಶರೀರಕ್ಕೆ ಶತ್ರುಗಳಿಂದ ಉಂಟಾಗಬಹುದಾದ ಹಿಂಸೆಯನ್ನು ತಪ್ಪಿಸು

English Translation.

O Indra, adorable by praises, let not mortals do injury to our persons; you are powerful, keep away our destruction (by enemies)

॥ ವಿಶೇಷವಿಷಯಗಳು ॥

ಮರ್ತಾಃ—ಮನುಷ್ಯಾಃ ಎಂದು ಮೊದಲಾದ ಇಪ್ಪತ್ತೈದು ಮನುಷ್ಯನಾಚಕ ಶಬ್ದಗಳ ಮಧ್ಯದಲ್ಲಿ ಮರ್ತಾಃ ಎಂಬ ಶಬ್ದವು ಪಠಿತವಾಗಿದೆ (ನಿ.೭-೩) ಇಲ್ಲಿ ನಮ್ಮ ಶರೀರಕ್ಕೆ ಹಿಂಸೆಯನ್ನು ಮಾಡದಿರಲೆಂದು ಅಪೇಕ್ಷಿಸುವುದರಿಂದ ನಮಗೆ ಹಿಂಸೆಯನ್ನು ಮಾಡುವ ಮನುಷ್ಯನು ನಮಗೆ ವಿರೋಧಿಗಳಾದ ಮನುಷ್ಯರು ಎಂದು ತಿಳಿಯಬೇಕು. ವಿರೋಧಿಗಳಾದ ಎಂಬ ಅರ್ಥವನ್ನು ಸೂಚಿಸುವ ಶಬ್ದವು ಪ್ರಸಕ್ತವಾದ ಋಕ್ಕಿನಲ್ಲಿಲ್ಲದಿದ್ದರೂ ದ್ರುಹ್ವ ಎಂಬ ಶಬ್ದಪ್ರಯೋಗವಿರುವುದರಿಂದ ಮರ್ತಾಃ ಎಂಬ ಶಬ್ದಕ್ಕೆ ವಿರೋಧಿಗಳಾದ ಮನುಷ್ಯರು ಎಂದು ಭಾಷ್ಯಕಾರರು ಅರ್ಥಮಾಡಿರುವುದು ಯುಕ್ತವಾಗಿರುವುದು.

ಯವಯ—ಛಂದಸ್ಸಿನ ಅನುಕೂಲಕ್ಕಾಗಿ ಸಂಹಿತಾಪಾಠದಲ್ಲಿ ಯವಯಾ ಎಂದು ಅಂತ್ಯಾಕ್ಷರವು ದೀರ್ಘವಾಗಿರುವುದು

ವಧಂ—ಮರಣ, ನಾಶ, ಕೆಡಕು ಎಂದರ್ಥವು. ನೇದಾರ್ಥಯತ್ನಕಾರರು ವಧನೆಂದರೆ ಇಂದ್ರನ ವಜ್ರಾಯುಧವೆಂದು ಅರ್ಥಮಾಡಿರುವರು ಭಾಷ್ಯಕಾರರೂ ಸಹ—

ಅರ್ಚನ್ನೇಕ್ರ ಮರುತಃ ಸಸ್ಮಿನ್ನಾಜೌ ವಿಶ್ವೇ ದೇವಾಸೋ ಅವದೆನ್ನೇನು ತ್ವಾ ।
ವೃತ್ರಸ್ಯ ಯದ್ಭೃಷ್ಟಿಮತಾ ವಧೇನ ನಿ ತ್ವಮಿಂದ್ರ ಪ್ರತ್ಯಾನಂ ಜಘಂಥ ॥

(ಋ- ಸಂ. ೧-೫೬-೧೫)

ಎಂಬ ಈ ಋಕ್ಕಿನಲ್ಲಿ **ವಧೇನ** ಎಂಬ ಶಬ್ದಕ್ಕೆ ಹನನಸಾಧನೇನ ವಜ್ರೇಣ—ಸಂಹಾರಮಾಡಲು ಸಾಧನಭೂತವಾದ ವಜ್ರಾಯುಧದಿಂದ ಎಂದು ಅರ್ಥಮಾಡಿರುವರು. ಈ ಸಂದರ್ಭದಲ್ಲಿ—ನಿನ್ನ ವಜ್ರಾಯುಧವನ್ನು ನಮ್ಮ ಮೇಲೆ ಉಪಯೋಗಿಸದಿರು ಎಂದರ್ಥಮಾಡಬೇಕಾಗುವುದು.

॥ ವ್ಯಾಕರಣಪ್ರಕ್ರಿಯಾ ॥

ಮರ್ತಾಃ (ಅಸಿ) **ಹಸಿ ಮೃಗ್ರೀಣಾಮಿ ದಮಿ ಲೂಪೂಧುರ್ವಿಭ್ಯಸ್ತನ್** (ಉ. ಸೂ. ೩-೩೬೬) (ಅಸಗತಿದೀಪ್ತ್ಯಾದಾನೇ) ಹಸೇ ಹಸನೇ, ಮೃಙ್ಪ್ರಾಣತ್ಯಾಗೇ, ಗ್ಯಾನಿಗರಣೇ, ಇಣ್ಗತೌ, ವಾಗತಿಗಂಧನಯೋಃ ಅಮಗತ್ಯಾದಿಷು—ದಮು ಉಪಶಮೇ ಲೂಞ್ ಛೇದನೇ ಪೂಞ್ ಪವನೇ, ಧುರ್ವೀ ಹಿಂಸಾಯಾಂ ಈ ಧಾತು

ಗಳ ಮುಂದೆ ತನ್ ಪ್ರತ್ಯಯ ಬರುವುದು ಎಂಬುದರಿಂದ ಮೃಜ್ ಧಾತುವಿನ ಮುಂದೆ ತನ್ ಪ್ರತ್ಯಯ ಬಂದು **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಗುಣಬಂದರೆ ಮರ್ತ ಎಂದಾಗುವುದು, ಪ್ರತ್ಯಯವು ನಿತ್ತಾದ್ದರಿಂದ ಆದ್ಯುದಾತ್ತ ಬರುವುದು.

ಅಭಿ—ವಿವಾದೀನಾಮುಂತಃ (ಫಿ. ಸೂ. ೮೨) ಎಂಬುದರಿಂದ ಅಂತೋದಾತ್ತ.

ದ್ರುಹನ್—ಡ್ರುಹ ಜಿಘಾಂಸಾಯಾಂ ಎಂಬ ಧಾತುವಿನ ಮುಂದೆ **ಲಿಜರ್ಥೇ ಲೇಟ್** (ಪಾ. ಸೂ. ೩-೪-೭) ವಿಧ್ಯಾದ್ಯರ್ಥಗಳಲ್ಲಿಯೂ ಹೇತುಹೇತುಮದ್ಭಾವಾದ್ಯರ್ಥಗಳಲ್ಲಿಯೂ ಸಹ ಛಂದಸ್ಸಿನಲ್ಲಿ ಧಾತುವಿನ ಮುಂದೆ ಲೇಟ್ ಬರುವುದು ಎಂಬುದರಿಂದ ಪ್ರಾರ್ಥನೆ ಎಂಬ ಅರ್ಥದಲ್ಲಿ ಲೇಟ್ ಬರುವುದು ಪ್ರಥಮಪುರುಷ ಬಹುವಚನದಲ್ಲಿ ಅದಕ್ಕೆ ಝಿ ಬರುವುದು. ಝಕಾರಕ್ಕೆ **ಝೋಽನ್ತಃ** (ಪಾ. ಸೂ. ೭-೧-೩) ಎಂಬುದರಿಂದ ಅನ್ತಾದೇಶ **ಇತಶ್ಚ ಲೋಪಃ ಪರಸ್ಮೈಪದೇಷು** (ಪಾ. ಸೂ. ೩-೪-೯೭) ಪರಸ್ಮೈಪದಪ್ರತ್ಯಯವು ಪರದಲ್ಲಿರುವಾಗ ಲೇಟ್ಟಿನ ಸ್ಥಾನದಲ್ಲಿ ಬಂದ ತಿಜ್ಝಿನ ಇಕಾರಕ್ಕೆ ಲೋಪವು ವಿಕಲ್ಪವಾಗಿ ಬರುವುದು ಎಂಬುದರಿಂದ ಇಕಾರಕ್ಕೆ **ಲೋಪ ಶಪ್ ವಿಕರಣಕ್ಕೆ ಬಹುಲಂ ಛಂದಸಿ** (ಪಾ. ಸೂ. ೨-೪-೭೩) ಎಂಬುದರಿಂದ ಲುಕ್ **ಸಾರ್ವಧಾತುಕ ಮಪಿತ್** (ಪಾ ಸೂ. ೧-೩-೪) ಅಪಿತ್ತಾದ ಸಾರ್ವಧಾತುಕವು ಜಿತ್ತಾಗುವುದು ಎಂಬುದರಿಂದ ಝಿ **ಸ್ಥಾನ**ಲ್ಲಿರುವ ಅಂತ್ ಎಂಬುದು ಜಿತ್ತಾದ್ದರಿಂದ **ಕ್ಡಿತಿಚ** (ಪಾ. ಸೂ. ೧-೧-೫) ಎಂಬುದರಿಂದ ಗುಣನಿಷೇಧ ಬರುವಕಾರಣ **ಪುಗಂತಲಘೂಪಧಸ್ಯ ಚ** (ಪಾ. ಸೂ. ೭-೩-೮೬) ಎಂಬುದರಿಂದ ಗುಣವು ಬರುವುದಿಲ್ಲ.

ತನೂನಾಂ—ಇಂದ್ರ ಶಬ್ದವು ಆಮಂತ್ರಿತ, ಆದರೂ **ಸುಬಾಮಂತ್ರಿತೇ ಪರಾಂಗವತ್ಸ್ವರೇ** (ಪಾ.ಸೂ. ೭-೧-೨) ಸ್ವರವನ್ನು ಮಾಡುವಾಗ ಆಮಂತ್ರಿತದ ಹಿಂದಿರುವ ಸುಬಂತವು ಪರದಲ್ಲಿರುವ ಪದಕ್ಕೆ ಅಂಗವಾದಂತೆ ಆಗುವುದು ಎಂಬುದರಿಂದ ವಿಹಿತವಾದ ಪರಾಂಗವದ್ಭಾವವು ಇಲ್ಲಿ ಬರುವುದಿಲ್ಲ ಏಕೆಂದರೆ ಇದು ಪದವಿಧಿಯಾದ್ದರಿಂದ **ಸಮರ್ಥಃಪದವಿಧಿಃ** (ಪಾ. ಸೂ. ೨-೧-೧) ಎಂಬ ಪರಿಭಾಷೆಯಿಂದ ಸಾಮರ್ಥ್ಯವಿರುವಾಗಲೇ ಪ್ರವೃತ್ತವಾಗುವುದು. ಇಲ್ಲಿ ತನೂನಾಂ ಎಂಬುದಕ್ಕೆ ಇಂದ್ರ ಎಂಬ ಪದದೊಂದಿಗೆ ಅನ್ವಯವಿಲ್ಲದಕಾರಣ ಸಾಮರ್ಥ್ಯವಿಲ್ಲ. ಆದ್ದರಿಂದ ಪರಾಂಗವದ್ಭಾವ ಬರುವುದಿಲ್ಲ.

ಇಂದ್ರ ಇದು (ಋ. ಸಂ. ೧-೩-೪) ರಲ್ಲಿಯೂ **ಗಿರ್ವಣಃ**—ಇದು ಇದೇ ಸೂಕ್ತದ ಏಳನೇ ಮಂತ್ರದಲ್ಲಿಯೂ ವಿವೃತವಾಗಿರುವುದು.

ಈಶಾನಃ—ಈಶ ಐಶ್ವರ್ಯೇ ಧಾತುವಿನ ಮುಂದೆ ಲಟ್. ಅದಕ್ಕೆ ಶಾನಚ್ ಬರುವುದು. ಶಪ್ ವಿಕರಣಕ್ಕೆ ಬಹುಲಂ ಛಂದಸಿ (ಪಾ. ಸೂ. ೨-೪-೭೩) ಎಂಬುದರಿಂದ ಲುಕ್. ಈಶಧಾತುವು ಅನುದಾತ್ತೇತ್ತಾದ್ದರಿಂದ **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಎಂಬುದರಿಂದ ಶಾನಚ್ಚು ಅನುದಾತ್ತ. ಈಕಾರವು ಧಾತುಸ್ವರದಿಂದ ಉದಾತ್ತವಾಗಿಯೇ ನಿಲ್ಲುವುದು.

ಯವಯಾ—ಯು ಮಿಶ್ರಣಾಮಿಶ್ರಣಯೋಃ ಎಂಬ ಧಾತುವಿನ ಮುಂದೆ ಣಿಚ್ ಪ್ರತ್ಯಯವನ್ನಿಟ್ಟರೆ **ಅಚೋಞ್ಣಿತಿ** (ಪಾ- ಸೂ. ೭-೩-೧೧೫) ಅಜಂತವಾದ ಅಂಗಕ್ಕೆ ಞಿತ್ತು ಅಥವಾ ಣಿತ್ತು ಆದ ಪ್ರತ್ಯಯವು ಪರದಲ್ಲಿರುವಾಗ ವೃದ್ಧಿ ಬರುವುದು ಎಂಬುದರಿಂದ ವಿಹಿತವಾದ ವೃದ್ಧಿಯು **ವೃದ್ಧಿರಾದ್ಯೆಚ್** (ಪಾ.ಸೂ. ೧-೧-೧) ಎಂದು ವಿಹಿತವಾದ ವೃದ್ಧಿ ಎಂಬ ಸಂಜ್ಞೆಯನ್ನು ಮುನ್ನಿಟ್ಟು ಬರುವುದರಿಂದ **ಸಂಜ್ಞಾಪೂರ್ವಕ**. ಆದ್ದರಿಂದ **ಸಂಜ್ಞಾಪೂರ್ವಕೋ ವಿಧಿರನಿತ್ಯಃ** ಸಂಜ್ಞೆಯನ್ನು ಮುನ್ನಿಟ್ಟು ಬರುವ ಶಾಸ್ತ್ರವು ಅನಿತ್ಯವಾದುದು ಎಂಬುದರಿಂದ

ಅನಿತ್ಯವಾದ ಕಾರಣ ಇಲ್ಲಿ ಬರುವುದಿಲ್ಲ. ಗುಣ ಅವಾದೇಶಗಳು ಬಂದರೆ ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಯನಯ ಎಂದಾಗುವುದು. ಅಥವಾ ಯೌತೀತಿ ಯವಃ ಎಂದು ವ್ಯುತ್ಪತ್ತಿಮಾಡಿದರೆ **ನಂದಿಗ್ರಹಿಪಚಾದಿಭ್ಯೋಲ್ಯುಣಿನ್ಯಚಃ** (ಪಾ. ಸೂ. ೩-೧-೧೩೪) ಎಂಬುದರಿಂದ ಯು ಧಾತುವಿನ ಮುಂದೆ ಪಚಾದಿಲಕ್ಷಣವಾದ ಅಚ್ಪ್ರತ್ಯಯ, ಯವ ಎಂದಾಗುವುದು. ಯವಂಕರೋತಿ ಎಂದು ನಿವಕ್ಷಿಸಿದಾಗ **ತತ್ಕರೋತಿತದಾಚಷ್ಟೇ** [ಪಾ. ಸೂ. ೩-೧-೩೬, ೫-೬] ಎಂಬುದರಿಂದ ಣಿಚ್ ಪ್ರತ್ಯಯ. ಅದು ಪರದಲ್ಲಿರುವಾಗ **ಣಾವಿಷ್ಠವತ್ಪ್ರತಿಪದಿಕಸ್ಯ** [ಪಾ. ಸೂ. ೬-೪-೧೫೫-೧] ಎಂಬುದರಿಂದ ಇಷ್ಠವದ್ಭಾವ ಬಂದು ಟೇಃ [ಪಾ. ಸೂ. ೬-೪-೧೫೫] ಎಂಬುದರಿಂದ ಟಿಗೆ ಅಂದರೆ ವಕಾರದ ಮುಂದಿರುವ ಅಕಾರಕ್ಕೆ ಲೋಪ. ಲುಪ್ತವಾದ ಅಕಾರಕ್ಕೆ **ಅಚೇಃಪರಸ್ಮಿನ್ಪೂರ್ವವಿಧೌ** [ಪಾ ಸೂ ೧-೧-೫೭] ಸ್ಥಾನಿವದ್ಭಾವ ಬರುವುದರಿಂದ ಣಿಚ್ಪ್ರತ್ಯಯಸಮಿತ್ತಕವಾದ ಉಪಧಾವೃದ್ಧಿಯು ಬರುವುದಿಲ್ಲ. ಆದ್ದರಿಂದ ಯವಯ ಎಂದಾಗುವುದು. ಸಂಹಿತಾಕಾಲದಲ್ಲಿ ಕೊನೆಯವರ್ಣಕ್ಕೆ ದೀರ್ಘ.

ವಧಂ— ಹನಶ್ಚವಧಃ [ಪಾ. ಸೂ. ೩-೩-೭೬] ಉಪಸರ್ಗದ ಮುಂದೆ ಇಲ್ಲದೇ ಇರುವ ಹನ ಧಾತುವಿನ ಮುಂದೆ ಅಪ್ ಪ್ರತ್ಯಯ ಬರುವುದು. ಹನ ಧಾತುವಿಗೆ ಅಂತೋದಾತ್ತವಾದ ವಧ ಎಂಬ ಆದೇಶವೂ ಬರುವುದು ಎಂಬುದರಿಂದ ಹನ್ ಧಾತುವಿನ ಮುಂದೆ ಅಪ್ ಪ್ರತ್ಯಯವೂ ಹನ್ ಗೆ ವಧ ಆದೇಶವೂ ಬಂದರೆ ವಧ+ಅ ಎಂದಿರುವುದು. ಪ್ರತ್ಯಯವು ಪಿತ್ತಾದ್ದರಿಂದ **ಅನುದಾತ್ತೌಸುಪ್ಪಿತೌ** [ಪಾ. ಸೂ. ೩-೧-೪] ಎಂಬುದರಿಂದ ಅನುದಾತ್ತ. ಸೂತ್ರದಲ್ಲಿ ಅಂತೋದಾತ್ತವಾಗಿ ಪಾಠವಾಗಿರುವುದರಿಂದ ವಧ ಎಂಬುದು ಅಂತೋದಾತ್ತ ಎಂದು ಕೆಲವರು ಅಭಿಪ್ರಾಯಪಡುವರು. ಹನ ಧಾತುವು **ಧಾತೋಃ** [ಪಾ. ಸೂ. ೬-೧-೧೬೨] ಎಂಬುದರಿಂದ ಅಂತೋದಾತ್ತ. ಆದ್ದರಿಂದ ಅದರ ಸ್ಥಾನದಲ್ಲಿ ಬರುವ ವಧ ಆದೇಶವೂ **ಸಹ ಸ್ಥಾನಿವದಾದೇಶಃ** ಎಂಬುದರಿಂದ ಅಂತೋದಾತ್ತ ಎಂದು ಮಾಧವಾಚಾರ್ಯರ ಮತ. ಅಂತು ವಧ ಎಂಬಲ್ಲಿ ಕೊನೆಯಲ್ಲಿರುವ ಅಕಾರವು ಉದಾತ್ತ ಎಂಬುದರಲ್ಲಿ ವಿಪ್ರತಿಪತ್ತಿ ಇಲ್ಲ ಈ ಅಕಾರಕ್ಕೆ **ಅತೋ ಲೋಪಃ** [ಪಾ. ಸೂ. ೬-೪-೪೮] ಎಂಬುದರಿಂದ ಲೋಪ ಬರುವುದು. ನಂತರ **ಅನುದಾತ್ತಸ್ಯ ಚ ಯತ್ರೋದಾತ್ತಲೋಪಃ** [ಪಾ. ಸೂ ೬-೧-೧೬೧] ಯಾವ ಅನುದಾತ್ತವನ್ನು ನಿಮಿತ್ತಮಾಡಿಕೊಂಡು ಉದಾತ್ತಕ್ಕೆ ಲೋಪ ಬರುವುದೋ ಆ ಅನುದಾತ್ತಕ್ಕೆ ಉದಾತ್ತ ಬರುವುದು ಎಂಬುದರಿಂದ ಪ್ರತ್ಯಯವಾದ ಅಕಾರವು ಉದಾತ್ತ. ॥ ೧೦ ॥

ಇಲ್ಲಿಗೆ ಪ್ರಥಮಮಂಡಲದಲ್ಲಿ ಐದನೆಯ ಸೂಕ್ತವು ಸಮಾಪ್ತವು.

ಒಂದನೆಯ ಅಧ್ಯಾಯದಲ್ಲಿ ಹತ್ತನೆಯ ವರ್ಗವು ಸಮಾಪ್ತವು.

ಆರನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಸುರೂಪೇತ್ಯಾದಿಷು ಷಟ್ಸೂಕ್ತೇಷು ತೃತೀಯಸ್ಯ ಯುಂಜಂತೀತಿ ಸೂಕ್ತಸ್ಯ ಮಂತ್ರಸಂಖ್ಯಾ ಋಷಿಚ್ಛಂದೋದೈವತಾನಿ ವಿನಿಯೋಗಶ್ಚೋಕ್ತೇತೇ ಪೂರ್ವವದವಗಂತವ್ಯಾಃ । ದಶರ್ಚೇ ತಸ್ಮಿನ್ಸೂಕ್ತೇ ಆದ್ಯಾಸ್ತಿಸ್ರೋಽಂತಿಮಾ ಚೇತ್ಯೇತಾಶ್ಚತಸ್ರ ಐಂದ್ರ್ಯಃ । ಅಪಶ್ಚೇತ್ಯೇತಾಂ ಚತುರ್ಥೀಮಾರಭ್ಯ ಷಡೃಚೋ ಮಾರುತ್ಯಃ । ತಾಸು ಮಧ್ಯೇ ವೀಳು ಚಿದಿಂದ್ರೇಣೇತ್ಯೇತೇ ದ್ವೇ ಋಚೌ ಮಾರುತ್ಯೌ ಸತ್ಯಾವೈಂದ್ರ್ಯಾವಪಿ ಭವತಃ । ತದೇತತ್ಸರ್ವಮನುಕ್ರಮಣಿಕಾಯಾಮುಕ್ತಂ । ಸುರೂಪಕೃತ್ನುಂ ದಶೈಂದ್ರಮಾ ತು ಯುಂಜಂತ್ಯಾದಿಹೇತ್ಯೇತಾಃ ಷಣ್ಮಾರುತ್ಯೋ ವೀಳುಚಿದಿಂದ್ರೇಣೇತ್ಯೈಂದ್ರ್ಯೋ ಚೇತಿ ॥ ಏತಸ್ಮಿನ್ಸೂಕ್ತೇ ಯುಂಜಂತೀತ್ಯಸೌ ತೃಚಸ್ಯ ತೃತೀಯೇ ರಾತ್ರಿಪರ್ಯಾಯೇ ಬ್ರಾಹ್ಮಣಾಚ್ಛಂಸಿನೋಽನುರೂಪಃ । ತಥಾ ಚಾತಿರಾತ್ರೇ ಪರ್ಯಾಯಾಣಾಮಿತಿ ಖಂಡೇ ಯೋಗೇ ಯೋಗೇ ತವಸ್ತರಂ ಯುಂಜಂತಿ ಬ್ರಧ್ನಮರುಷಂ। ಅ. ೬-೪ । ಇತಿ ಸೂತ್ರಿತಂ ॥

ಅನುವಾದವು-ಅಭಿಪ್ಲವಷಡಹವೆಂಬ ಯಾಗದ ಪ್ರಾತಸ್ಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಹೋತೃವರ್ಗದ ಋತ್ವಿಜನು ಸ್ತೋಮಾವಾಪಾರ್ಥವಾಗಿ **ಸುರೂಪಕೃತ್ನುಮೂತಯೇ** ಎಂದು ನೊದಲಾದ ಆರು ಸೂಕ್ತಗಳನ್ನು ಪಠಿಸಬೇಕೆಂದು ಆ ಸೂಕ್ತಗಳ ವಿನಿಯೋಗವನ್ನು ನಾವು ಹಿಂದೆಯೇ (87 ನೇ ಪೇಜಿನಲ್ಲಿ) ಹೇಳಿರುವೆವು. **ಯುಂಜಂತಿ ಬ್ರಧ್ನಮರುಷಂ** ಎಂಬ ಪ್ರಸಕ್ತವಾದ ಈ ಸೂಕ್ತವು ಆ ಆರು ಸೂಕ್ತಗಳಲ್ಲಿ ಮೂರನೆಯದಾಗಿರುವುದು ಆದುದರಿಂದ ಆ ಆರು ಸೂಕ್ತಗಳ ವಿನಿಯೋಗವೇ ಈ ಸೂಕ್ತಕ್ಕೂ ಅನ್ವಯಿಸುವುದು. ಈ ಸೂಕ್ತದಲ್ಲಿ ಹತ್ತು ಋಕ್ಕುಗಳಿರುವುವು ಇವುಗಳಲ್ಲಿ ನೊದಲಿನ ಮೂರೂ ಮತ್ತು ಕಡೆಯ ಒಂದು ಋಕ್ಕು ಒಟ್ಟು ನಾಲ್ಕು ಋಕ್ಕುಗಳು ಇಂದ್ರನ ಪರವಾಗಿರುವುವು. **ಆದಹ ಸ್ವಧಾಮನು** ಎಂದು ನೊದಲಾದ ನಾಲ್ಕರಿಂದ ಒಂಭತ್ತರವರೆಗಿನ ಆರು ಋಕ್ಕುಗಳು ಮರುದ್ದೇವತಾ ಪರವಾಗಿರುವುವು. ಈ ಆರು ಋಕ್ಕುಗಳಲ್ಲಿಯೂ **ವೀಳು ಚಿದಾರುಜತ್ನುಭಿಃ** ಎಂಬ ಐದನೆಯ ಋಕ್ಕು, **ಇಂದ್ರೇಣ ಸಂ ಹಿ ದೃಕ್ಷಸೇ** ಎಂಬ ಏಳನೆಯ ಋಕ್ಕು ಇವೆರಡೂ ಇಂದ್ರ ಮತ್ತು ಮರುದ್ದೇವತೆಗಳಿಬ್ಬರ ಪರವಾಗಿಯೂ ಇರುವುವು. ಈ ವಿಷಯವು—" **ಸುರೂಪಕೃತ್ನುಂ ದಶೈಂದ್ರಮಾ ತು ಯುಂಜಂತ್ಯಾದಿಹೇತ್ಯೇತಾಃ ಷಣ್ಮಾರುತ್ಯೋ ವೀಳು ಚಿದಿಂದ್ರೇಣೇತ್ಯೈಂದ್ರ್ಯೋ ಚೇತಿ** " ಎಂದರೆ **ಸುರೂಪಕೃತ್ನುಂ** ಎಂಬ ಸೂಕ್ತದಲ್ಲಿರುವ ಹತ್ತು ಋಕ್ಕುಗಳು **ಆತ್ವೇತಾ** ಎಂಬ ಸೂಕ್ತದಲ್ಲಿರುವ ಹತ್ತು ಋಕ್ಕುಗಳೂ **ಯುಂಜಂತಿ ಬ್ರಧ್ನಂ** ಎಂಬ ಸೂಕ್ತದ ನೊದಲ ಮೂರು ಮತ್ತು ಕೊನೆಯಋಕ್ಕು ಇವಿಷ್ಟೂ ಇಂದ್ರದೇವತೆಯ ಪರವಾದವು. **ಆದಹ ಸ್ವಧಾಮನು** ಎಂಬ ಋಕ್ಕಿನಿಂದ **ಆತಃಪರಿಜ್ಮನ್ನಾಗಹಿ** ಎಂಬ ಋಕ್ಕಿನವರೆಗೂ ಆಗುವ ಆರು ಋಕ್ಕುಗಳು ಮರುದ್ದೇವತಾಪರವಾದವು. ಆದರೆ ಈ ಆರು ಋಕ್ಕುಗಳ ಮಧ್ಯದಲ್ಲಿ ವೀಳು ಚಿದಾರುಜತ್ನುಭಿಃ ಮತ್ತು ಇಂದ್ರೇಣ ಸಂ ಹಿ ದೃಕ್ಷಸೇ ಎಂಬ ಎರಡು ಋಕ್ಕುಗಳು ಮಾತ್ರ ಇಂದ್ರ ಹತ್ತು ಮರುತ್ ಎಂಬ ಎರಡು ದೇವತೆಗಳ ಪರವಾಗಿಯೂ ಇರುವವು " ಎಂದು ಸರ್ವಾನುಕ್ರಮಣಿಕೆಯಲ್ಲಿ ಹೇಳಿದೆ. ಪ್ರಸಕ್ತವಾದ ಈ **ಯುಂಜಂತಿ ಬ್ರಧ್ನಂ** ಎಂಬ ಸೂಕ್ತದ ನೊದಲ ಮೂರು ಋಕ್ಕುಗಳು ಅತಿರಾತ್ರದ ಮೂರನೆಯ ರಾತ್ರಿ ಪರ್ಯಾಯದಲ್ಲಿ ಬ್ರಾಹ್ಮಣಾಚ್ಛಂಸಿ ಎಂಬ ಋತ್ವಿಜನಿಂದ ಪಠಿಸಲ್ಪಡಬೇಕು. ಈ ವಿಷಯದಲ್ಲಿ **ತಥಾ ಚಾತಿರಾತ್ರೇ ಪರ್ಯಾಯಾಣಾಮಿತಿ ಖಂಡೇ ಯೋಗೇ ಯೋಗೇ ತವಸ್ತರಂ ಯುಂಜತಿ ಬ್ರಧ್ನಮರುಷಂ ಇತಿ ಸೂತ್ರಿತಂ** (ಆಶ್ವ- ಸೂ. ೬-೪) ಎಂದು ಆಶ್ವಲಾಯನ ಸೂತ್ರದಲ್ಲಿ ಹೇಳಿರುವುದು.

॥ ಓಂ ॥

ಸೂಕ್ತ—೬

॥ ಮಂಡಲ—೧ ॥ ಅನುವಾಕ—೨ ॥ ಸೂಕ್ತ—೬ ॥
॥ ಅಷ್ಟಕ —೧ ॥ ಅಧ್ಯಾಯ—೧ ॥ ವರ್ಗ—೧೧-೧೨ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೧-೧೦ ॥
॥ ಋಷಿಃ—ಮಧುಚ್ಛಂದಾ ವೈಶ್ವಾಮಿತ್ರಃ ॥
॥ ದೇವತಾ—೧-೩ ಇಂದ್ರಃ ॥ ೪, ೬, ೮, ೯. ಮರುತಃ ॥
೫, ೭ ಮರುತ ಇಂದ್ರಶ್ಚ ॥೧೦. ಇಂದ್ರಃ ॥
॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಯುಂಜಂತಿ ಬ್ರಧ್ನಮರುಷಂ ಚರಂತಂ ಪರಿ ತಸ್ಥುಷಃ ॥
ರೋಚಂತೇ ರೋಚನಾ ದಿವಿ ॥ ೧ ॥

॥ ಪದಪಾಠಃ ॥

ಯುಂಜಂತಿ । ಬ್ರಧ್ನಂ । ಅರುಷಂ । ಚರಂತಂ । ಪರಿ । ತಸ್ಥುಷಃ ॥
ರೋಚಂತೇ । ರೋಚನಾ । ದಿವಿ ॥ ೧ ॥

ಸಾಯಣಭಾಷ್ಯಂ

ಇಂದ್ರೋ ಹಿ ಪರಮೈಶ್ವರ್ಯಯುಕ್ತಃ। ಪರಮೈಶ್ವರ್ಯಂ ಚಾಗ್ನಿವಾಯ್ವಾದಿತ್ಯನಕ್ಷತ್ರರೂಪೇಣಾವಸ್ಥಾನಾದುಪಪದ್ಯತೇ । ಬ್ರಧ್ನಮಾದಿತ್ಯರೂಪೇಣಾವಸ್ಥಿತಂ ಅರುಷಂ ಹಿಂಸಕರಹಿತಾಗ್ನಿರೂಪೇಣಾವಸ್ಥಿತಂ ಚರಂತಂ ವಾಯುರೂಪೇಣ ಸರ್ವತಃ ಪ್ರಸರಂತಮಿಂದ್ರಂ ಪರಿ ತಸ್ಥುಷಃ ಪರಿತೋ೭ವಸ್ಥಿತಾ ಲೋಕತ್ರಯವರ್ತಿನಃ ಪ್ರಾಣಿನೋ ಯುಂಜಂತಿ । ಸ್ವಕೀಯೇ ಕರ್ಮಣಿ ದೇವತಾಪ್ರೇಷಣೇ ಸಂಬದ್ಧಂ ಕುರ್ವಂತಿ । ತಸ್ಯೈವೇಂದ್ರಸ್ಯ ಮೂರ್ತಿವಿಶೇಷಭೂತಾನಿ ರೋಚನಾ ರೋಚನಾನಿ ನಕ್ಷತ್ರಾಣಿ ದಿವಿ ದ್ಯುಲೋಕೇ ರೋಚಂತೇ । ಪ್ರಕಾಶಂತೇ । ಅಸ್ಯ ಮಂತ್ರಸ್ಯೋಕ್ತಾರ್ಥಪರತ್ವಂ ಬ್ರಾಹ್ಮಣಾಂತರೇ ವ್ಯಾಖ್ಯಾತಂ । ಯುಂಜಂತಿ ಬ್ರಧ್ನಮಿತ್ಯಾಹ । ಅಸೌ ವಾ ಆದಿತ್ಯೋ ಬ್ರಧ್ನಃ । ಆದಿತ್ಯಮೇವಾಸ್ಮೈ ಯುನಕ್ತಿ । ಅರುಷಮಿತ್ಯಾಹ । ಅಗ್ನಿರ್ವಾ ಅರುಷಃ । ಅಗ್ನಿಮೇವಾಸ್ಮೈ ಯುನಕ್ತಿ । ಚರಂತಮಿತ್ಯಾಹ। ವಾಯುರ್ವೈ ಚರನ್ । ವಾಯುಮೇವಾಸ್ಮೈ ಯುನಕ್ತಿ । ಪರಿ ತಸ್ಥುಷ ಇತ್ಯಾಹ । ಇಮೇ ವೈ ಲೋಕಾಃ ಪರಿ ತಸ್ಥುಷಃ । ಇಮಾನೇವಾಸ್ಮೈ ಲೋಕಾನ್ಯುನಕ್ತಿ । ರೋಚಂತೇ ರೋಚನಾ ದಿವೀತ್ಯಾಹ।

ನಕ್ಷತ್ರಾಣಿ ವೈ ರೋಚನಾ ದಿವಿ । ನಕ್ಷತ್ರಾಣ್ಯೇವಾಸ್ಮೈ ರೋಚಯತಿ । ತೈ. ಬ್ರಾ. ೩-೯-೪-೧ । ಇತಿ । ಪಂಚವಿಂಶತಿ ಸಂಖ್ಯಾಕೇಷು ಮಹನ್ನಾಮಸು ಮಹೋ ಬ್ರಧ್ನ ಇತಿ ಪಠಿತಂ । ಆದಿತ್ಯಸ್ಯಾಪಿ ಮಹತ್ವಾದೇವ ಬ್ರಧ್ನತ್ವಂ ॥ ಯುಂಜಂತಿ । ಆಂತೇಃ ಪ್ರತ್ಯಯಸ್ವರೇಣಾದ್ಯುದಾತ್ತತ್ವಂ । ಬ್ರಧ್ನಂ । ಸ್ಯಾತಿಪದಿಕಾಂತೋದಾತ್ತಃ । ಅರುಷಂ । ಉಷ ರುಷ ರಿಷ ಹಿಂಸಾರ್ಥಾಃ । ರೋಷಂತೀತಿ ರುಷಾ ಹಿಂಸಕಾಃ । ಇಗುಪಧಜ್ಞಾಪ್ರೀಕಿರಃ ಕಃ । ಪಾ. ೩-೧-೧೩೫ । ಇತಿ ಕಃ । ಪ್ರತ್ಯಯಸ್ವರೇಣೋದಾತ್ತಃ । ನ ಸಂತಿ ರುಷಾ ಯಸ್ಯಾಸಾವರುಷಃ ನಞ್ಸುಭ್ಯಾಂ । ಪಾ. ೬-೨-೧೭೨ । ಇತ್ಯುತ್ತರಪದಾಂತೋದಾತ್ತತ್ವಂ । ಅವಿದ್ಯಮಾನಪೂರ್ವಃ । ಪಾ. ೬-೧-೧೦೭ । ಇತಿ ಪೂರ್ವರೂಪ ಏಕಾದೇಶ ಉದಾತ್ತೇನೋದಾತ್ತಃ । ಪಾ ೮-೨-೫ । ಇತ್ಯುದಾತ್ತತ್ವಂ । ಚರಂತಂ । ಶಪಃ ಪಿತ್ತ್ವಾದನುದಾತ್ತತ್ವಂ । ಶತುಶ್ಚ ಲಸಾರ್ವಧಾತುಕಸ್ವರೇಣ ಧಾತುಸ್ವರ ಏವ ಶಿಷ್ಯತೇ । ತಸ್ಥುಷಃ । ತಿಷ್ಠತೇರ್ಲಿಟಃ। ಕ್ವಸುರಾದೇಶಃ। ಪಾ. ೩-೨-೧೦೭ । ವಸ್ವೇಕಾಜಾದ್ಘಸಾಂ ಪಾ. ೭-೨-೬೭ । ಇತೀಟಮುಂತರಂಗಮಪಿ ಬಾಧಿತ್ವಾ ಸಂಪ್ರಸಾರಣಿಂ ಸಂಪ್ರಸಾರಣಾಶ್ರಯಂ ಚ ಬಲೀಯಃ । ಮ. ೬-೧-೧೭-೨ । ಇತಿ ಶಸಿ ಪರತೋ ಭತ್ವಾತ್ । ಪಾ. ೧-೪-೧೮ । ವಸೋಃ ಸಂಪ್ರಸಾರಣಂ। ಪಾ. ೬-೪-೧೩೧ । ಪರಪೂರ್ವತ್ವಂ । ಶಾಸಿವಸಿಘಸೀನಾಂ ಚ । ಪಾ. ೮-೩-೬೦ । ಇತಿ ಷತ್ವಂ ವಸೋಃ । ಪ್ರತ್ಯಯಸ್ವರೇಣೋದಾತ್ತತ್ವಂ । ರೋಚಂತೇ । ತಿಙೋ ಲಸಾರ್ವಧಾತುಕಾನುದಾತ್ತತ್ವಂ । ಶಪಃ ಪಿತ್ತ್ವಾದನುದಾತ್ತತ್ವಂ। ಧಾತುಸ್ವರ ಏವ । ರೋಚನಾ । ಅನುದಾತ್ತೇತಶ್ಚ ಹಲಾದೇಃ। ಪಾ. ೩-೨-೧೪೯। ಇತಿ ಯುಚ್ । ಯುವೋರನಾಕೌ । ಪಾ. ೭-೧-೧ । ಇತ್ಯನಾದೇರಃ । ಚಿತ ಇತ್ಯಂತೋದಾತ್ತತ್ವಂ । ದಿವಿ । ಊಡಿದಮಿತ್ಯಾದಿನಾ ವಿಭಕ್ತೇರುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಪರಿ—ಸುತ್ತಲೂ, ಎಲ್ಲೆಲ್ಲಿಯೂ । ತಸ್ಥುಷಃ—(ಮೂರು ಲೋಕಗಳಲ್ಲಿಯೂ) ಇರುವ ಪ್ರಾಣಿಗಳು ॥ ಬ್ರಧ್ನಂ—ಸೂರ್ಯನ ರೂಪದಿಂದಿರುವ । ಅರುಷಂ—ಹಿಂಸಕರಹಿತನಾದ ಅಗ್ನಿರೂಪದಿಂದಿರುವ । ಚರಂತಂ—ವಾಯು ರೂಪದಿಂದ ಸರ್ವತ್ರ ಸಂಚರಿಸುತ್ತಿರುವ (ಇಂದ್ರನನ್ನು) ಯುಂಜಂತಿ—(ತಮ್ಮ ತಮ್ಮ ಕಾರ್ಯಗಳಲ್ಲಿ ಮುಖ್ಯ ದೇವತೆಯಂತೆ ಭಾವಿಸಿ) ಸಂಬಂಧವನ್ನು ಕಲ್ಪಿಸುವರು । (ಆ ಇಂದ್ರನ ವಿಶೇಷ ಮೂರ್ತಿಸ್ವರೂಪಗಳಾದ) ರೋಚನಾ— ನಕ್ಷತ್ರಗಳು । ದಿವಿ—ಸ್ವರ್ಗಲೋಕದಲ್ಲಿ (ಅಂತರಿಕ್ಷದಲ್ಲಿ) । ರೋಚಂತೆ—ಪ್ರಕಾಶಿಸುತ್ತವೆ.

॥ ಭಾವಾರ್ಥ ॥

ಇಂದ್ರನು ಪರಮೈಶ್ವರ್ಯಯುಕ್ತನು. ಪರಮೈಶ್ವರ್ಯವೆಂದರೆ ಅಗ್ನಿ ವಾಯು ಆದಿತ್ಯ ನಕ್ಷತ್ರ ಇವುಗಳ ರೂಪದಿಂದ ಇದ್ದು ಪ್ರಕಾಶಿಸುವ ಸಾಮರ್ಥ್ಯವು ಆದುದರಿಂದ ಆದಿತ್ಯರೂಪದಿಂದಲೂ ಅಗ್ನಿರೂಪದಿಂದಲೂ, ಸದಾ ಚಲಿಸುತ್ತಿರುವ ವಾಯುರೂಪದಿಂದಲೂ ಆಕಾಶದಲ್ಲಿ ಮಿನುಗುತ್ತಿರುವ ನಕ್ಷತ್ರಗಳ ರೂಪದಿಂದಲೂ ಇಂದ್ರನು ಪ್ರಕಾಶಿಸುತ್ತಿರುವನು. ಇಂತಹ ಇಂದ್ರನನ್ನು ಮೂರುಲೋಕದ ಸಮಸ್ತ ಪ್ರಾಣಿಗಳೂ ತಮ್ಮ ತಮ್ಮ ನ್ಯಾಯ ಹಾರಾದಿಗಳಲ್ಲಿ ಮುಖ್ಯ ದೇವನೆಂದು ಭಾವಿಸಿ ಅವನಲ್ಲಿ ಮಹತ್ತರವಾದ ಗೌರವವೆಂಬ ಸಂಬಂಧವನ್ನು ಕಲ್ಪಿಸಿಕೊಂಡಿರುವರು.

English Translation

Those who are standing around (i.e. living beings inhabiting the three worlds) associate with (Indra) the mighty (in the form of the sun) the non-injuring (in the form of fire) the moving (in the form of wind) the lights (or stars special incarnations of that same Indra) shine in the sky.

॥ ವಿಶೇಷ ವಿಷಯಗಳು ॥

ಈ ಋಕ್ಕಿನ ಪ್ರತಿಪದಾರ್ಥ, ಭಾವಾರ್ಥ, ಮತ್ತು ಇಂಗ್ಲಿಷ್ ಭಾಷಾಂತರವು ಸಾಯಣ ಭಾಷ್ಯವನ್ನು ಅನುಸರಿಸಿರುವುದು. ಸಾಯಣರ ಭಾಷ್ಯವು ತೈತ್ತಿರೀಯ ಬ್ರಾಹ್ಮಣದಲ್ಲಿ (ಕೃಷ್ಣಯಜುರ್ವೇದ) ಹೇಳಿರುವ ಅನುವಾದವನ್ನು ಅನುಸರಿಸಿರುವುದು. ಬ್ರಾಹ್ಮಣಗಳು ವೇದದ ಒಂದು ಭಾಗವೆಂದು ಪರಿಗಣಿಸಲ್ಪಟ್ಟಿರುವುದರಿಂದಲೂ, ಅತಿಪ್ರಾಚೀನವಾದ ವಿವರಣೆಗಳಿಂದ ಕೂಡಿರುವುದರಿಂದಲೂ ವೇದಾರ್ಥ ವಿಚಾರದಲ್ಲಿ ಮುಖ್ಯ ಪ್ರಮಾಣವೆಂದು ನಂಬಬೇಕು. ನಿರುಕ್ತಕಾರರಾದ ಯಾಸ್ಕ ಮಹರ್ಷಿಗಳು ವೇದಮಂತ್ರಗಳಿಗೆ ಅರ್ಥಮಾಡುವ ವಿಚಾರದಲ್ಲಿ ಹೀಗೆ ಹೇಳಿರುವರು–

ತದ್ಯಾನಿ ನಾಮಾನಿ ಪ್ರಾಧಾನ್ಯೇಸ್ತುತೀನಾಂ ದೇವತಾನಾಂ ತದ್ದೈವತಮಿತ್ಯಾಚಕ್ಷತೇ॥ ಯತ್ಕಾಮ ಋಷಿರ್ಯಸ್ಯಾಂ ದೇವತಾಯಾಮಾರ್ಥಪತ್ಯಮಿಚ್ಛನ್ಸ್ತುತಿಂ ಪ್ರಯುಂಕ್ತೇ ತದ್ದೈವತಃ ಸ ಮಂತ್ರೋ ಭವತಿ ॥ ತಾಸ್ತ್ರಿವಿಧಾ ಋಚಃ ಪರೋಕ್ಷಕೃತಾಃ ಪ್ರತ್ಯಕ್ಷಕೃತಾ ಆಧ್ಯಾತ್ಮಿಕಾಶ್ಚ । ತತ್ರ ಪರೋಕ್ಷಕೃತಾಃ ಸರ್ವಾಭಿರ್ನಾಮವಿಭಕ್ತಿಭಿರ್ಯುಜ್ಯಂತೇ, ಪ್ರಥಮಪುರುಷೈಶ್ಚಾಖ್ಯಾತಸ್ಯ ॥ ಅಥ ಪ್ರತ್ಯಕ್ಷಕೃತಾ ಮಧ್ಯಮಪುರುಷೋಪಯೋಗಾಸ್ತ್ವಮಿತಿ ಚೈತೇನ ಸರ್ವನಾಮ್ನಾ ॥ ಅಥಾಧ್ಯಾತ್ಮಿಕ್ಯ ಉತ್ತಮಪುರುಷಯೋಗಾ ಅಹಮಿತಿ ಚೈತೇನ ಸರ್ವನಾಮ್ನಾ ॥ ಪರೋಕ್ಷಕೃತಾಃ ಪ್ರತ್ಯಕ್ಷಕೃತಾಶ್ಚ ಮಂತ್ರಾ ಭೂಯಿಷ್ಠಾ ಅಲ್ಪಶ ಆಧ್ಯಾತ್ಮಿಕಾಃ ॥

(ನಿರುಕ್ತ–ದೈವತಕಾಂಡ. ಅಧ್ಯಾಯ ೭-ಖಂಡ ೧-೩)

ಎಂದರೆ ಮಂತ್ರಗಳಲ್ಲಿ ದೈವತಮಂತ್ರ, ಸ್ತುತಿಮಂತ್ರ, ಆಶೀರ್ಮಂತ್ರ, ಶಪಥ, ಅಭಿಶಾಪ, ಕಶ್ಚಿದ್ಭಾವನ, ಪರಿದೇವನಾ, ನಿಂದಾ, ಪ್ರಶಂಸಾ ಎಂದು ಅನೇಕ ವಿಧವಾಗಿರುವುದು. ದೈವತಮಂತ್ರವೆಂದರೆ ದೇವತೆಗಳ ಮಹಿಮೆಯನ್ನು ವರ್ಣಿಸುವ ಮಂತ್ರ, ಸ್ತುತಿಯೆಂದರೆ ಸ್ತೋತ್ರ, ಪ್ರಾರ್ಥನೆಗಳನ್ನೊಳಗೊಂಡಿರುವ ಮಂತ್ರ, ಆಶೀಃ=ಆಶೀರ್ವಾದ, ಒಳ್ಳೆಯದನ್ನು ಹಾರೈಸುವ ಮಂತ್ರ. ಶಪಥ=ಪ್ರತಿಜ್ಞೆ, ಅಭಿಶಾಪ=ಕೆಟ್ಟಹಾರೈಕೆ, ಕಶ್ಚಿದ್ಭಾವನ=ಒಂದು ವಿಷಯ ಅಥವಾ ತತ್ಸಂಬಂಧ ವಿವರಣೆ, ಪರಿದೇವನಾ–ವ್ಯಸನ ನಿಂದಾ–ನಿಂದೆಯು, ಪ್ರಶಂಸಾ–ಹೊಗಳುವಿಕೆಯು, ದಾನಸ್ತುತಿ ಇತ್ಯಾದಿ

ಮೇಲೆ ಹೇಳಿದ ಅನೇಕ ವಿಧಗಳಲ್ಲಿ ದೈವತವೆಂಬ ಋಕ್ಕುಗಳು ಪರೋಕ್ಷಕೃತ, ಪ್ರತ್ಯಕ್ಷಕೃತ, ಆಧ್ಯಾತ್ಮಿಕ ಎಂದು ಮೂರು ವಿಧವಾಗಿರುವವು. ಪರೋಕ್ಷಕೃತವೆಂದರೆ- ಸ್ತುತಿಸಲ್ಪಡುವ ದೇವತೆಯು ಎದುರಿಗಿಲ್ಲದಿರುವುದರಿಂದ ಸ್ತುತಿಸುವಾಗ ಆ ದೇವತೆಯ ವಿಷಯದಲ್ಲಿ ಪ್ರಥಮಪುರುಷನಾಮಪದಗಳನ್ನೂ ಕ್ರಿಯಾಪದಗಳನ್ನೂ (Third person both in subject and predicate) ಉಪಯೋಗಿಸಿರುವ ಮಂತ್ರಗಳು ಪ್ರತ್ಯಕ್ಷಕೃತವೆಂದರೆ, ಸ್ತುತಿಸಲ್ಪಡುವ ದೇವತೆಯು ಪ್ರತ್ಯಕ್ಷವಾಗಿ ಎದುರಿಗೆ ಇದ್ದಂತೆ ಭಾವಿಸಿ ಅದನ್ನು ನೀನು ನಿನ್ನ ಮೊದಲಾದ ಮಧ್ಯಮಪುರುಷಶಬ್ದಗಳಿಂದ (Second person) ಸಂಬೋಧನೆ ಮಾಡಿ ಸ್ತುತಿಸುವ ಋಕ್ಕುಗಳು. ಆಧ್ಯಾತ್ಮಿಕವೆಂದರೆ ಉತ್ತಮಪುರುಷ (First person) ಪ್ರಯೋಗವನ್ನು ಮಾಡಿ ಸ್ತುತಿಸಿರುವ ಮಂತ್ರಗಳು. ಈ ಮೂರುವಿಧ ಮಂತ್ರಗಳಲ್ಲಿ ಪರೋಕ್ಷಕೃತ ಪ್ರತ್ಯಕ್ಷಕೃತವೆಂಬ ಎರಡುವಿಧ ಮಂತ್ರಗಳು ಹೆಚ್ಚಾಗಿರುವವು, ಆಧ್ಯಾತ್ಮಿಕಮಂತ್ರಗಳು ಕೇವಲ ಸ್ವಲ್ಪಮಾತ್ರವಿರುವವು ಎಂದು.

ಈಕ್ರಮದಂತೆ ಪ್ರಸಕ್ತವಾದ ಯುಂಜಂತಿ ಬ್ರಧ್ನಮರುಷಂ ಎಂಬ ಋಕ್ಕು ದೈವತಮಂತ್ರದಲ್ಲಿ ಪರೋಕ್ಷಕೃತವೆಂಬ ಗುಂಪಿಗೆ ಸೇರಬೇಕಾಗಿರುವುದು. ಆದರೂ ತೈತ್ತಿರೀಯ ಬ್ರಾಹ್ಮಣದಲ್ಲಿ ಈ ಋಕ್ಕಿಗೆ ಅಧ್ಯಾತ್ಮಿಕಾರ್ಥವನ್ನು ಹೇಳಿರುವುದರಿಂದ ಭಾಷ್ಯಕಾರರು ಅದನ್ನನುಸರಿಸಿಯೇ ಅರ್ಥವಾಡಿರುವರು. ಆ ಬ್ರಾಹ್ಮಣದಲ್ಲಿ ಈ ಋಕ್ಕಿನ ವಿವರಣೆಯನ್ನು ಹೇಳುವಾಗ—

ಯುಂಜಂತಿ ಬ್ರಧ್ನಮಿತ್ಯಾಹ । ಅಸೌ ವಾ ಆದಿತ್ಯೋ ಬ್ರಧ್ನಃ । ಆದಿತ್ಯಮೇವಾಸ್ಮೈ ಯುನಕ್ತಿ। ಅರುಷಮಿತ್ಯಾಹ। ಅಗ್ನಿರ್ವಾ ಅರುಷಃ । ಅಗ್ನಿಮೇವಾಸ್ಮೈ ಯುನಕ್ತಿ । ಚರಂತಮಿತ್ಯಾಹ । ವಾಯುರ್ವೈ ಚರನ್ । ವಾಯುಮೇವಾಸ್ಮೈ ಯುನಕ್ತಿ । ಪರಿತಸ್ಥುಷ ಇತ್ಯಾಹ । ಇಮೇ ವೈ ಲೋಕಾಃ ಪರಿ ತಸ್ಥುಷಃ । ಇಮಾನೇವಾಸ್ಮೈ – ಲೋಕಾನ್ ಯುನಕ್ತಿ । ರೋಚಂತೇ ರೋಚನಾ ದಿವೀತ್ಯಾಹ । ನಕ್ಷತ್ರಾಣಿ ವೈ ರೋಚನಾ ದಿವಿ । ನಕ್ಷತ್ರಾಣ್ಯೇವಾಸ್ಮೈ ರೋಚಯತಿ ॥

(ತೈ. ಬ್ರಾ. ೩-೯-೪)

ಎಂದಿದೆ ಎಂದರೆ, ಬ್ರಧ್ನಶಬ್ದಕ್ಕೆ ಆದಿತ್ಯ, ಅರುಷ =ಅಗ್ನಿ, ಚರಂತ =ವಾಯು, ಪರಿ ತಸ್ಥುಷಃ =ಮೂರು ಲೋಕಗಳು, ರೋಚನಾ =ನಕ್ಷತ್ರಗಳು ಎಂದು ಅಧ್ಯಾತ್ಮಿಕಸಂಬಂಧವಾದ ಆರ್ಥವಿವರಣೆಯನ್ನು ಕೊಟ್ಟಿದೆ. ಈ ಅರ್ಥವನ್ನು ನಾವು ಪ್ರಮಾಣವೆಂದು ಒಪ್ಪಬೇಕಾದರೂ ಈ ಋಕ್ಕಿಗೆ ಇತರ ಭಾಷ್ಯಕಾರರು ಮಾಡಿರುವ ಅರ್ಥವನ್ನು ನಿರಾಕರಿಸುವಹಾಗಿಲ್ಲ

ಸ್ಕಂದಸ್ವಾಮಿಯು ಈ ಋಕ್ಕಿಗೆ ಬೇರೆವಿಧವಾಗಿ ಅರ್ಥವಿವರಣೆಯನ್ನು ಮಾಡಿರುವುದರಿಂದ ಅದನ್ನು ಇಲ್ಲಿ ವಿವರಿಸಿದೇವೆ—

ಸ್ಕಂದಸ್ವಾಮಿ ಭಾಷ್ಯಂ—

ಯೋಗಃ ಸಂಬಂಧಃ । ಯುಂಜಂತಿ ಸಂಬಂಧಯಂತಿ । ಕೇನ, ಸಾಮರ್ಥ್ಯಾತ್ ಸ್ತುತಿಭಿರ್ಹವಿರ್ಭಿಶ್ಚ । ಕೇ, ಸಾಮರ್ಥ್ಯಾತ್ ಸ್ತೋತಾರಃ । ಯೇಷ್ಟಾರಶ್ಚ । ಬ್ರಧ್ನಂ ಮಹನ್ನಾಮೈತತ್ । ಮಹಾಂತಮಿಂದ್ರಂ । ಅರುಷಂ । ರುಶತಿರ್ದೀಪ್ತ್ಯರ್ಥಃ । ರುಶದ್ವತ್ಸಾರುಶತೀತಿ ಪ್ರದರ್ಶನಾತ್ । ತಸ್ಯ ವಾ ರೋಚತೇರ್ವಾ ದೀಪ್ತಿಕರ್ಮಣ ಆಜ್–ಪೂರ್ವಸ್ಯೇದಂ ರೂಪಂ । ಆಜಿಶ್ಚ ಹ್ರಸ್ವತ್ವಂ । ಅರುಶಂ ಆರೋಚಮಾನಂ ವಾ । ದೀಪ್ತಮಿತ್ಯರ್ಥಃ। ಅರುಷತ್ಯಾಯಯತೀತಿ । ಗತಿಕರ್ಮಸು ಪಾಠಾದರುಷತೇರ್ಗತ್ಯರ್ಥಸ್ಯಾರುಷಶಬ್ದೋ ಗಂತೃವಚನಃ । ಶತ್ರೂನ್ ಯಜ್ಞಾನ್ ವಾ ಪ್ರತಿಗಂತಾರಂ । ಚರಂತಂ ಪರಿ ಸರ್ವತೋ ಗಚ್ಛಂತಂ । ಯತ್ರ ಯತ್ರೇಂದ್ರೋ ಗಚ್ಛತಿ ತತ್ರ ತತ್ರೈನಂ ಸ್ತೋತಾರೋ ಯೇಷ್ಟಾರಶ್ಚ ಸ್ತುವಂತಿ ಚೇತ್ಯರ್ಥಃ । ಅಥವಾ, ಯುಂಜಂತೀತಿ ಯುಜಿಃ ಶಬ್ದೋಽಪಿ ಸಾಮರ್ಥ್ಯಾತ್ ಸೋಪಸರ್ಗಾರ್ಥೋ ದ್ರಷ್ಟವ್ಯಃ । ಸ್ವಾರ್ಥಸಿದ್ಧೌ ಸ್ತೋತಾರೋ ಯೇಷ್ಟಾರಶ್ಚೈನಂ ನಿಯುಂಜತೇ। ಮಹಾಂತಂ ದೀಪ್ತಂ ಚೇಂದ್ರಂ ಸರ್ವತೋ ಗಚ್ಛಂತಂ, ಯತ್ರ ಯತ್ರ ಗಚ್ಛತಿ ತಶ್ರ ತತ್ರೈನಂ ಮನುಷ್ಯಾ ಇವಮಿದಂ ಚ ನಃ ಕುರ್ವಿತ್ಯರ್ಥಂ ಯಾಚಂತ ಇತ್ಯರ್ಥಃ। ರಥೋಽತ್ರ ಸಾಮರ್ಥ್ಯಾತ್ ಯುಜ್ಯಮಾನಃ ನೇಂದ್ರಂ ಯುಂಜಂತಿ । ಇಂದ್ರಸ್ಯ ರಥಂ ಬ್ರಧ್ನಮರುಷಂ

ಚ ಸರ್ವತೋ॑ ಗಚ್ಛಂತಂ । ಕೇ, ಸಾಮರ್ಥ್ಯಾತ್ ಸಾರಥಯೋ॑ ಮಾತಲಿ-
ಪ್ರಭೃತಯಃ ಆನ್ಯೇ॒ಽಸ್ಯ ರಥಂ ಯುಂಜಂತಿ ಸ ನಃ ಸ್ವಯಂ ಯುನಕ್ತಿ ಬ್ರಧ್ನಾ-
ದಿಗುಣಃ ಯುಂಜಂತಿ ನ ಕಿಂಚಿದಿತಿ। ಏವಂ ಗುಣಕೀರ್ತನಾದಿಂದ್ರಸ್ಯೇಯಂ ಸ್ತುತಿಃ।
ಕಿಂಚ ತಸ್ಥುಷಃ ರೋಚಂತೇ ರೋಚನಾ ದಿವಿ । ತಸ್ಥುಷ ಇತಿ ಷಷ್ಠೀನಿರ್ದೇಶಾತ್
ಪ್ರಭಾವೇನೇತಿ ವಾಕ್ಯಶೇಷಃ । ಸ್ಥಿತಸ್ಯ ವ್ಯಾಪ್ತಿಯಮಾನೇಂದ್ರಸ್ಯ ಪ್ರಭಾವೇನ
ರೋಚಂತೇ ದೀಪ್ಯಂತೇ । ರೋಚನಾ ದೀಪ್ತಿಸ್ವಭಾವಕಾನಿ ನಕ್ಷತ್ರಾಣಿ ದಿವಿ ದ್ಯುಲೋ-
ಕೇ । ಕಥಂಪುನರಿಂದ್ರಪ್ರಭಾವೇನ ನಕ್ಷತ್ರಾಣಿ ದೀಪ್ಯಂತೇ । ಉಚ್ಯತೇ । ವಕ್ಷ್ಯತೇ-
“ ಇಂದ್ರೋ॑ ದೀರ್ಘಾಯ ಚಕ್ಷಸ ಆ ಸೂರ್ಯಂ ರೋಹಯದ್ದಿವಿ ” ಇತಿ ।
ಸೂರ್ಯಸ್ಯ ಪ್ರಭಾವಶ್ಚ ಸುಷುಮ್ಣೋ ನಾಮ ರಶ್ಮಿಃ ತತ್ಸಂಬಂಧಾಚ್ಚೇಂದ್ರಮಾ
ನಕ್ಷತ್ರಾಣಿ ಚ ದೀಪ್ಯಂತೇ । ಅಥವಾ ಯುಜಿರುತ್ಪೂರ್ವಾರ್ಥೇ । ಅಂತರ್ಣೀತಣ್ಯ-
ರ್ಥಶ್ಚ ಪ್ರಸ್ಥವ್ಯಃ । ಉದ್ಯೋಜಯಂತ್ಯುತ್ಸಾಹಯಂತಿ ವೃಷ್ಟಿಕರ್ಮಾಣಿ ಬ್ರಧ್ನಮ-
ರುಷಂ ಚೇಂದ್ರಂ । ಕಿಂ ಕುರ್ವಂತಂ । ಉಚ್ಯತೇ । ಚರಂತಂ ಪರಿ ತಸ್ಥುಷಃ ।
ಪರಿಶಬ್ದೋ ಲಕ್ಷಣೇ ಕರ್ಮಪ್ರವಚನೀಯಃ ತಸ್ಥುಷ ಇತ್ಯನೇನ ಚ ಸಂಬಧ್ಯತೇ ।
ತಸ್ಥಿವಃಶಬ್ದಃ ಸ್ಥಾವರವಚನಃ । ಗಚ್ಛಂತಂ ಸ್ಥಾವರಾಣಿ ಪ್ರತಿ । ಸ್ಥಾವರಗ್ರಹಣಂ
ಚಾತ್ರ ಜಂಗಮಸ್ಯಾಪಿ ಪ್ರದರ್ಶನಾರ್ಥಂ । ಸೋಮಪಾನಾಯಾಸುರಯುದ್ಧಲೋ-
ಲುಪತಯಾ ಜಂಗಮಸ್ಥಾವರಾತ್ಮಕಂ ಕೃತ್ಸ್ನಂ (ಜನಂ, ಜಗತ್) ಪರಿಭ್ರಮಂತಮಿ-
ತ್ಯರ್ಥಃ । ಕೇ ಉದ್ಯೋಜಯಂತಿ । ಉಚ್ಯತೇ । ರೋಚಂತೇ ರೋಚನಾ ದಿವಿ ।
ಏಕವಾಕ್ಯತಾಪ್ರಸಿದ್ಧ್ಯರ್ಥಂ ಯತ್ರ ಚ್ಛಬ್ದಾವಧ್ಯಾಹಾರ್ಯೌ । ಆದಿತ್ಯರಶ್ಮಯೋ
ರೋಚಂತೇ ರೋಚನಾ ದಿವಿ ತೇ ಆದಿತ್ಯರಶ್ಮಯೋ ಹಿ ಪ್ರಾವೃಡಾರಂಭೇ
ರಸದಾತಾರಃ। ತೇ ರಸಾನರ್ಪಯಂತಃ ಉದ್ಯೋಜಯಂತೀಂದ್ರಂ ವೃಷ್ಟಿಕರ್ಮಣಿ ।
ಏತಸ್ಮಿಂಸ್ತ್ವರ್ಥೇ ರಶ್ಮಿವಿಷಯತ್ವಾತ್ ರೋಚನೇತ್ಯೇತತ್ ಪದಮೂಷ್ಮಾಂತ-
ನ್ಯಾಯಂ ದೃಶ್ಯತೇ ನ ಸ್ವರಾಂತಮಂತೋ ನೈಷ ಪದಕಾರಾಭಿಪ್ರಾಯಃ ।
ಜ್ಯೋತಿಷ್ಮಾ॒ನಪೇಕ್ಷಂ ವಾ ರಶ್ಮೀನಾಂ ನಪುಂಸಕತ್ವಂ । ಅಧ್ವರ್ಯವಸ್ತ್ವಾದಿತ್ಯ-
ದೇವತಾಮ್ಯಚಂ ಮನ್ಯಂತೇ । ಕಥಂ । ಏತೇಷಾಂ ಹಿ ವಿನಿಯೋಜನೇ॒ಽಸಿ-
ಯುಕ್ತಶ್ಚಾಶ್ವೀ॒ನಯಾದಿತ್ಯರೂಪೇಣೋಚ್ಯತೇ । ಕಥಮವಗಮ್ಯತೇ । ಶ್ರುತೇಃ ।
ಏವಂ ಹಿ ಶ್ರುತಿರ್ಭವತಿ--ಯುಂಜಂತಿ ಬ್ರಧ್ನಮರುಷಮಿತ್ಯಾಹ। ಅಸೌ ವಾ ಆದಿತ್ಯೋ
ಬ್ರಧ್ನಃ । ಅರುಷೋ॒ಮುಮೇವಾಸ್ಮಾದಾದಿತ್ಯಂ ಯುನಕ್ತಿ । ಸುವರ್ಗಸ್ಯ ಲೋಕಸ್ಯ
ಸಮಷ್ಟೈ ಕೃ ಇತಿ ।ತಸ್ಮಾದಾದಿತ್ಯದೇವತೇಯಮಿತಿ । ತನ್ನ । ತತ್ರಾಪಿ ವಿನಿಯೋಗ-
ವಶಾನ್ನಿಯುಜ್ಯಮಾನೋ॒ಶ್ವೀ ಬ್ರಧ್ನೋ॒ಽರುಷಶ್ಚೀ॒ಚ್ಯತೇ । ಭಕ್ತಿಮಾತ್ರಂ ತು
ಶ್ರುತಿಃ । ಅಪಿ ಚ ಯದಿ ಶ್ರುತಿಬಲಾತ್ ತತ್ರಾದಿತ್ಯೋ ದೇವತಾ, ತಥಾ
ನಾಮ ಇಹ ತ್ವೈಂದ್ರಪ್ರಕರಣೇ ಸಮಾನಾ ಬ್ರಧ್ನಾರುಷಯೋ॒ಶ್ಚೇಂದ್ರೇ॒ಽಪಿ-
ಸಂಭವಾತ್ । ಪರಸ್ಯಾಂ ಚರ್ಚ್ಯಸ್ಯ ಶಬ್ದೇನಾನುವಾದಾತ್ । ತೇನೇಹಾದಿಷ್ಟಸ್ಯ
ಬ್ರಧ್ನಸ್ಯಾನ್ಯಾದೇಶಾತ್ ತಸ್ಯಾಶ್ಚರ್ಚೋ ಹರಿಸಂಬಂಧಾದ್ಯೇಂದ್ರತಾಯಾ ಅಸಂದಿಗ್ಧ-
ತ್ವಾದ್ಯೈಂದ್ರತ್ವಮೇವಾಸ್ಮಾ ಋಚ ಇತಿ ॥

ಅನ್ವಾದವು:—ಯೋಗವೆಂದರೆ ಸಂಬಂಧವು. ಆದುದರಿಂದ ಯುಂಜಂತಿ ಎಂಬ ಕ್ರಿಯಾಪದಕ್ಕೆ ಸಂಬಂಧವನ್ನು ಕಲ್ಪಿಸುವರು ಎಂದರ್ಥವು. ಇಂದ್ರನಿಗೂ ಜನರಿಗೂ ಸಂಬಂಧವು ಹೇಗೆ ಎಂದರೆ ಸ್ತೋತ್ರಗಳಿಂದಲೂ ಹವಿಸ್ಸಮರ್ಪಣೆಮಾಡುವುದರಿಂದಲೂ ಇಂದ್ರನಿಗೂ ಇಂದ್ರನನ್ನು ಸ್ತೋತ್ರಮಾಡುವ ಅಥವಾ ಯಜ್ಞಾದಿಗಳಿಂದ ಆರಾಧಿಸುವ ಜನರಿಗೂ ಸಂಬಂಧವಿರುವುದೆಂದು ತಿಳಿಯಬೇಕು. ಬ್ರಧ್ನಶಬ್ದಕ್ಕೆ—ಮಹತ್, ದೊಡ್ಡದು ಎಂದು ಮಹತ್, ಬ್ರಧ್ನ ಮೊದಲಾದ ಇಪ್ಪತ್ತೈದು ಶಬ್ದಗಳ ಮಧ್ಯದಲ್ಲಿ ಹೇಳಿದೆ (ನಿ. ೩-೧೩-೫). ಆದುದರಿಂದ ಬ್ರಧ್ನಂ ಎಂಬ ಶಬ್ದವನ್ನು ಇಂದ್ರನಿಗೆ ವಿಶೇಷಣಪದವೆಂದು ಭಾವಿಸಿದಲ್ಲಿ ಬ್ರಧ್ನಮಿಂದ್ರಂ ಎಂದರೆ ದೊಡ್ಡವನಾದ, ಮಹಾಸಾಮರ್ಥ್ಯಶಾಲಿಯಾದ ಇಂದ್ರನನ್ನು ಎಂದರ್ಥವಾಗುವುದು. ಅರುಷಂ ಎಂಬ ಶಬ್ದವೂ ಇಂದ್ರನಿಗೆ ವಿಶೇಷಣವು. ರುಶತಿಧಾತುವಿಗೆ ದೀಪ್ತಿ ಕಾಂತಿ ಎಂದರ್ಥವಿರುವುದರಿಂದ ಅರುಷಂ ಎಂದರೆ ಪ್ರಕಾಶಮಾನನಾದ ಎಂದರ್ಥವು. **ರುಶದ್ವತ್ಸಾ ರುಶತೀಶ್ಚೇತ್ಯಾಗಾದಾರೈಗು ಕೃಷ್ಣಾ ಸದನಾನ್ಯಸ್ಯಾಃ** (ಋ ಸಂ. ೧-೧೧೩-೨) ಎಂಬ ಋಕ್ಕಿನಲ್ಲಿ ರುಶತ್ ಶಬ್ದಕ್ಕೆ ದೀಪ್ತಿ ಕಾಂತಿ ಎಂದು ಸ್ಪಷ್ಟವಾಗಿ ಹೇಳಿದೆ (ಈ ಋಕ್ಕಿನಲ್ಲಿರುವ ರುಶತ್ ಶಬ್ದಕ್ಕೆ ಸಾಯಣರೂ ಇದೇ ಅರ್ಥಮಾಡಿದಾರೆ). ಇದಲ್ಲದೆ **ಆರುಷೀತ್ಯಾಯತೀತಿ ಗತಿಕರ್ಮಸು ಪಾಠಾದೇರುಷತ್ಪರ್ಗತ ರ್ಧಸ್ಯಾರುಷಶಬ್ದೋ ಗಂತೃವಚನಃ** ಎಂಬ ವಾಕ್ಯಾನುಸಾರ ಅರುಷತಿಧಾತುವಿಗೆ ಗತ್ಯರ್ಥವಿರುವುದರಿಂದ **ಅರುಷಂ** ಎಂದರೆ **ಗಂತಾರಂ,** (ಶತ್ರುಗಳೊಡನೆ ಯುದ್ಧಕ್ಕಾಗಲಿ, ಯಜ್ಞಗಳಲ್ಲಿ ಹವಿಸ್ಸನ್ನು ಸ್ವೀಕರಿಸುವುದಕ್ಕಾಗಲಿ) ಹೋಗುವವನೆಂದರ್ಥವು. **ಚರಂತಂ**—ಸಮಸ್ತಪ್ರದೇಶಗಳಿಗೂ ಹೋಗುವನು. ಇಂದ್ರನು ಎಲ್ಲೆಲ್ಲಿಗೆ ಹೋಗುವನೋ ಅಲ್ಲೆಲ್ಲಾ ಇಂದ್ರನನ್ನು ಸ್ತೋತ್ರಮಾಡುವವರು ಹೋಗಿ ಆರಾಧಿಸುವರೆಂದರ್ಥವು. ಅಥವಾ **ಯುಂಜಂತಿ ಬ್ರಧ್ನಮರುಷಂ ಚರಂತಂ** ಎಂದಸೆ ಮಹಾಸಾಮರ್ಥ್ಯಶಾಲಿಯೂ ಪ್ರಕಾಶಮಾನನೂ ಆದ ಇಂದ್ರನು ಎಲ್ಲೆಲ್ಲಿ ಹೋಗುವನೋ ಅಲ್ಲೆಲ್ಲಾ ಮನುಷ್ಯರು ತಮತಮಗೆ ಇಂತಿತಹ ಅಭೀಷ್ಟಸಿದ್ಧಿಯಾಗಬೇಕೆಂದು ಇಂದ್ರನನ್ನು ಸ್ತೋತ್ರಗಳಿಂದ ವ್ಯಾಪ್ತಗೊಳಿಸುವರು ಎಂದಭಿಪ್ರಾಯವು

ಅಥವಾ ಬ್ರಧ್ನಮರುಷಂ ಚರಂತಂ ಎಂಬ ಶಬ್ದಗಳನ್ನು ಇಂದ್ರನಿಗೆ ವಿಶೇಷಣವಾಗಿ ಉಪಯೋಗಿಸಬೇಕಾಗಿಲ್ಲ ಈ ಶಬ್ದಗಳಿಗೆ ಮೊದಲಿದ್ದಂತೆ ಪ್ರಕಾಶಮಾನವಾಗಿಯೂ ಎಲ್ಲೆಲ್ಲಿಯೂ ಸಂಚರಿಸುವ ಶಕ್ತಿಯುಳ್ಳದ್ದೂ ಆದ ರಥವೆಂದು ಅರ್ಥವನ್ನು ಹೇಳಬಹುದು ಇಲ್ಲಿ **ಯುಂಜಂತಿ** ಎಂದು ಹೇಳಿರುವುದರಿಂದ ಮಾತಲಿಯೇ ಮೊದಲಾದ ಇಂದ್ರನ ಸಾರಥಿಗಳು ಇಂತಹ ರಥವನ್ನು **ಯುಂಜಂತಿ** ಎಂದರೆ (ಕುದುರೆಗಳನ್ನು ಕಟ್ಟಿ) ಸಿದ್ಧಪಡಿಸುವರು ಎಂದು ಹೇಳಬಹುದು. ಆದುದರಿಂದ ಈ ವಿಷಯವಿಮರ್ಶನೆಗಳೆಲ್ಲವೂ ಇಂದ್ರನ ಸ್ತುತಿರೂಪವಾಗಿರುವುವು. **ತಸ್ಥುಷ** ಎಂದು ಪಷ್ಠೀವಿಭಕ್ತಿಯನ್ನು ಉಪಯೋಗಿಸಿರುವುದರಿಂದ ಇದರ ಮುಂದೆ **ಪ್ರಭಾವತೇನ** ಎಂಬ ಶಬ್ದವನ್ನು ಅಧ್ಯಾಹಾರಮಾಡಿಕೊಳ್ಳಬೇಕು ಹಾಗೆ ಅಧ್ಯಾಹಾರವಾಡಿಕೊಂಡಲ್ಲಿ **ಪರಿ ತಸ್ಥುಷಃ ಪ್ರಭಾವತೇನ ರೋಚಂತೇ ರೋಚನಾ ದಿವಿ** ಎಂದರೆ ಅಂತರಿಕ್ಷದಲ್ಲಿ ಪ್ರಕಾಶಮಾನವಾಗಿ ಬೆಳಗುತ್ತಿರುವ ಸೂರ್ಯನ ರಶ್ಮಿಗಳು ವರ್ಷಾಕಾಲದಲ್ಲಿ ನೀರಿನ ಕಣಗಳನ್ನು ಹೊತ್ತು ಭೂಮಿಯಲ್ಲಿ ವೃಷ್ಟಿಯನ್ನುಂಟುಮಾಡುವಂತೆ ಇಂದ್ರನನ್ನು ಪ್ರೇರಿಸುವುವು ಎಂದು. ಎಂದರೆ **ಸರ್ವಪ್ರದೇಶಗಳಲ್ಲಿಯೂ** ವ್ಯಾಪಕನಾದ ಇಂದ್ರನ ಪ್ರಭಾವದಿಂದ **ರೋಚನಾ-ಪ್ರಕಾಶದಿಂದ** ಬೆಳಗುವ ನಕ್ಷತ್ರಗಳು **ದಿವಿ-ಅಂತರಿಕ್ಷದಲ್ಲಿ ರೋಚಂತೆ-ಪ್ರಕಾಶಿಸುತ್ತವೆ** ಎಂದು ಅರ್ಥವು. ಇಂದ್ರನ ಪ್ರಭಾವದಿಂದ ನಕ್ಷತ್ರಗಳು ಹೇಗೆ ಪ್ರಕಾಶಿಸುವವು ಎಂದರೆ—**ಇಂದ್ರೋ ದೀರ್ಘಾಯ ಚಕ್ಷಸ ಆ ಸೂರ್ಯಂ ರೋಹಯದ್ದಿವಿ** (ಋ. ಸಂ. ೧-೭-೩) ಮಂತ್ರವು ಈ ಅರ್ಥವನ್ನು ಸಮರ್ಥಿಸುವುದು. ಇಂದ್ರನು **ಸರ್ವಕಾಲದಲ್ಲಿಯೂ ಜಗತ್ತನ್ನು** ಬೆಳಗುವುದಕ್ಕಾಗಿ ಸೂರ್ಯನನ್ನು ಸ್ವರ್ಗದಲ್ಲಿ (ಅಂತರಿಕ್ಷದಲ್ಲಿ) ಸ್ಥಾಪಿಸಿದನು ಎಂದು ಇದರ ಅರ್ಥವು. ಸೂರ್ಯನ ಪ್ರಭಾವವಾದ ಸುಷುಮ್ಣ ಎಂಬ ರಶ್ಮಿಸಂಬಂಧದಿಂದ ಚಂದ್ರನೂ ನಕ್ಷತ್ರ

ಗಳೂ ಪ್ರಕಾಶಿಸುವುವು ಅಥವಾ ಈ ರಶ್ಮಿಗಳು ವೃಷ್ಟಿಕರ್ಮದಲ್ಲಿ ಇಂದ್ರನನ್ನು **ಯುಂಜಂತಿ** ಎಂದರೆ ಉತ್ಸಾಹಗೊಳಿಸುವವು. ಹೇಗೆ? **ಚರಂತಂ ಪರಿ ತಸ್ಥುಷಃ** ಎಂದರೆ ತಸ್ಥುಷಃ ಎಂಬ ಶಬ್ದವು ಸ್ಥಾವರವನ್ನು ಸೂಚಿಸುವದಲ್ಲದೆ ಜಂಗಮವಸ್ತುಗಳ ನಿರ್ದೇಶವನ್ನೂ ಸೂಚಿಸುವುದು. ಆದುದರಿಂದ ಸೋಮಪಾನಾರ್ಥವಾಗಿ ಅಥವಾ ಯುದ್ಧಮಾಡುವುದಕ್ಕಾಗಿ ಇಂದ್ರನು ಸ್ಥಾವರಜಂಗಮಾತ್ಮಕವಾದ ಸಕಲ ಜಗತ್ತನ್ನೂ ಸಂಚರಿಸುವನೆಂದರ್ಥವು.

ಯಜ್ಞದಲ್ಲಿ ಮುಖ್ಯಪಾತ್ರವಹಿಸುವ ಅಧ್ವರ್ಯು ಮೊದಲಾದ ಕೆಲವು ಋತ್ವಿಜರು ಈ ಕಾರಣಗಳಿಗಾಗಿ ಈ ಋಕ್ಕನ್ನು ಆದಿತ್ಯದೇವತಾಕವೆಂದು ತಿಳಿಯುವರು. ಏಕೆಂದರೆ ಈ ಋಕ್ಕಿನ ವಿನಿಯೋಗ ವಿಷಯದಲ್ಲಿ ಶ್ರುತವಾಕ್ಯವು (ಬ್ರಾಹ್ಮಣವು)—**ಯುಂಜಂತಿ ಬ್ರಧ್ನಮರುಷಮಿತ್ಯಾಹ । ಅಸೌ ವಾ ಆದಿತ್ಯೋ ಬ್ರಧ್ನಃ । ಅರುಷೋಽಮುಮೇವೈನಾಸ್ಮಾದಾದಿತ್ಯಂ ಯುನಕ್ತಿ ಸುವರ್ಗಸ್ಯ ಲೋಕಸ್ಯ ಸಮಷ್ಟ್ಯೈ** ಎಂದು ಹೇಳುವುದು. ಇಲ್ಲಿ ಬ್ರಧ್ನ ವೆಂದರೆ ಆದಿತ್ಯನೆಂದು ಸ್ಪಷ್ಟವಾಗಿ ಹೇಳಿರುವುದರಿಂದಲೂ ಈ ಋಕ್ಕಿನಲ್ಲಿ ಇಂದ್ರಶಬ್ದವು ಇಲ್ಲದಿರುವುದರಿಂದಲೂ ಇದನ್ನು ಆದಿತ್ಯದೇವತೆಯ ಪರವಾದ ಋಕ್ಕೆಂದು ಹೇಳುವವಿಚಾರದಲ್ಲಿ ಸಂಶಯವುಂಟಾಗುವದು ಸಹಜವೇ ಆಗಿದೆ. ಆದರೆ ಆದು ಸರಿಯಲ್ಲ. ಏಕಂದರೆ ಬ್ರಧ್ನವೆಂದರೆ ಅಶ್ವವೆಂದೂ ಅರ್ಥವಾಗುವುದು (ನಿ ೫-೨೭). ಆದುದರಿಂದ **ಯುಂಜಂತಿ ಬ್ರಧ್ನಮರುಷಂ ಚರಂತಂ** ಎಂಬ ವಾಕ್ಯಕ್ಕೆ ಪ್ರಕಾಶಮಾನವಾಗಿಯೂ, ವೇಗವಾಗಿ ಚಲಿಸುವುದೂ ಆದ ಕುದುರೆಯನ್ನು (ರಥಕ್ಕೆ) ಕಟ್ಟುವರು ಎಂದರ್ಥ ಹೇಳುವಾಗ ಈ ಅರ್ಥವು ಆದಿತ್ಯನಿಗೂ ಇಂದ್ರನಿಗೂ ಸಮವಾಗಿಯೇ ಅನ್ವಯಿಸುವುದು. ಸೂರ್ಯನನ್ನು ಮಾತ್ರವೇ ಉದ್ದೇಶಿಸಿ ಹೇಳಿರುವುದೆಂದು ಹೇಳುವುದಕ್ಕಾಗುವುದಿಲ್ಲ. ಇದಲ್ಲದೆ ಈ ಸೂಕ್ತದ ಮುಂದಿನ ಋಕ್ಕಿನಲ್ಲಿ **ಹರೀ** ಎಂಬ ಇಂದ್ರನ ಅಶ್ವಗಳ ಹೆಸರನ್ನು ಸ್ಪಷ್ಟವಾಗಿ ಸೂಚಿಸಿರುವುದರಿಂದಲೂ ಐದನೆಯ ಋಕ್ಕಿನಲ್ಲಿ ಇಂದ್ರಶಬ್ದವು ಪಠಿತವಾಗಿರುವುದರಿಂದಲೂ ಈ ಮಂತ್ರವು ಇಂದ್ರದೇವತಾಕವೆಂದೇ ತಿಳಿಯಬೇಕು

ಇನ್ನು ವೆಂಕಟಮಾಧವರ ಭಾಷ್ಯದಲ್ಲಿ ಹೆಚ್ಚು ವಿಶೇಷವೇನೂ ಇಲ್ಲ—**ಯುಂಜಂತಿ ಬ್ರಧ್ನಂ । ಯುಂಜಂತಿ ಮಹಾಂತಮಾರೋಚಮಾನಂ ದಿವಿ ಚರಂತಂ ತಸ್ಥಿವಾಂಸೋ ದೇವಾ ವಾ ಲೋಕಾ ವಾ ರೋಚಂತೇ । ರೋಚನಾನಿ ನಕ್ಷತ್ರಾಣಿ ಇಂದ್ರತೇಜಸಾ ಸಂಘುಷ್ಟಾನ್ಯಹಶ್ಚೇಽಪಿ ಪ್ರಸಾರಣಮನ್ಯತ್ರಾಪಿ ಪೃಷ್ಟಂ ॥** ಎಂದು ಮಾತ್ರ ಹೇಳಿರುವರು. ಎಂದರೆ ಹಿಂದೆ ಸ್ಕಂದಸ್ವಾಮಿಯು ಅರ್ಥವನ್ನೇ ಅನುಮೋದಿಸಿರುವರು. **ತಸ್ಥಿವಾಂಸಃ** ಎಂದರೆ ದೇವತೆಗಳು ಅಥವಾ ಲೋಕಗಳೂ ಎಂದೂ, **ರೋಚನಾ** ಎಂದರೆ ನಕ್ಷತ್ರಗಳೂ ಎಂದೂ ಹೇಳಿರುವರು- ಇಂದ್ರನ ತೇಜಸ್ಸಿನಿಂದ ಹಗಲು ಪ್ರಕಾಶಿಸುವುದಲ್ಲದೆ ಆ ತೇಜಸ್ಸು (ಅಥವಾ ಸಾಮರ್ಥ್ಯವು, ಶಕ್ತಿಯು) ಸರ್ವತ್ರ ವ್ಯಾಪಿಸಿರುವುದೆಂದು ಹೇಳಿರುವರು.

ಯುಂಜಂತಿ ಬ್ರಧ್ನಮರುಷಂ ಎಂಬ ಪ್ರಸಕ್ತವಾದ ಋಕ್ಕು ಋಗ್ವೇದಸಂಹಿತೆಯಲ್ಲಿರುವುದಲ್ಲದೆ ಸಾಮ. ಸಂ. ೧೪೬೮, ಅಥರ್ವ. ಸಂ. ೨೦-೨೬-೪, ೨೦-೪೭-೧೦; ೨೦-೬೯-೯; ವಾಜಸನೇಯ ಸಂ. (ಶು. ಯಜುರ್ವೇದ) ೨೩-೫; ತೈ.ಸಂ (ಕೃಷ್ಣಯಜುರ್ವೇದ ಸಂ.) ೭-೪-೨೦-೧; ಮೈತ್ರಾಯಣೀಯ ಸಂ ೩-೧೬-೩, ಕೌಶೀತಕಿ ಆರಣ್ಯಕ ೪-೯; ಇವುಗಳಲ್ಲಿ ಪಠಿತವಾಗಿರುವುದು ಮತ್ತು ತೈ ಬ್ರಾ. ೩-೯-೪ ರಲ್ಲಿ ಈ ಮಂತ್ರದ ಮತ್ತು ಮುಂದಿನ ಎರಡು ಮಂತ್ರಗಳ ಅರ್ಥವಿವರಣೆಯೂ ಇರುವುದು.

ಈ ಸೂಕ್ತವು ಯಾವ ದೇವತಾಪರವಾದುದು ಎಂಬುದು ವಿವಾದಾಸ್ಪದವಾಗಿದೆ. ಏಕೆಂದರೆ ಇಂತಹ ದೇವತೆಯನ್ನೇ ಉದ್ದೇಶಿಸಿ ಹೇಳಿರುವುದೆಂದು ದೃಢಪಟ್ಟಲ್ಲಿ ಅರ್ಥವಿವರಣೆಮಾಡಲು ಅನುಕೂಲವಾಗುವುದು.

ಅನುಕ್ರಮಣಿಕೆಯಲ್ಲಿ ಈ ಸೂಕ್ತದ ೧-೩, ಮತ್ತು ೧೦ನೆಯ ಋಕ್ಕುಗಳು ಇಂದ್ರದೇವತಾಕವೆಂದೂ ೪, ೬, ೮, ೯ನೆಯ ಋಕ್ಕುಗಳು ಮರುದ್ದೇವತಾಪರವೆಂದೂ ಹೇಳಿದೆ. ಮತ್ತು ೫ ಮತ್ತು ೭ನೆಯ ಋಕ್ಕುಗಳು ಇಂದ್ರ ಮತ್ತು ಮರುತ್ತು ಎಂಬ ಎರಡು ದೇವತೆಗಳ ಪರವಾಗಿಯೂ ಇವೆಯೆಂದೂ ಅಲ್ಲಿಯೇ ಹೇಳಿದೆ. ಆದರೆ ಸೂಕ್ತದಲ್ಲಿ ಪ್ರತಿಪಾದಿತವಾದ ವಿಷಯಗಳನ್ನು ವಿಮರ್ಶೆಮಾಡಿದಲ್ಲಿ ಮರುದ್ದೇವತೆಗಳಿಗೆ ಬದಲಾಗಿ ಅಂಗಿರಸರು ಪ್ರತಿಪಾದಿತರಾಗಿರುವರೆಂದೂ, ಇಂದ್ರನಿಗೆ ಅಂಗಿರಸ್ತುಮ ಎಂಬ ಹೆಸರೂ ಇರುವುದರಿಂದಲೂ ಈ ಸೂಕ್ತದಲ್ಲಿ ಮರುದ್ದೇವತೆಗಳ ವಿಷಯವಿಲ್ಲವೆಂದು Oldenberg ಎಂಬ ಪಂಡಿತನು ಅಭಿಪ್ರಾಯಪಡುವನು. ಇದಲ್ಲದೆ ಈ ಸೂಕ್ತದ ಬಹು ಭಾಗವು ಸೂರ್ಯನನ್ನುದ್ದೇಶಿಸಿ ಸ್ತುತಿಸಲ್ಪಟ್ಟಿರುವುದೆಂದು ಹೇಳುವುದಕ್ಕೂ ಸಾಕಾದಷ್ಟು ಅವಕಾಶವಿದೆ. ಪ್ರಾಚೀನ ಪಂಡಿತರಲ್ಲಿಯೂ ಕೂಡ ಈ ಸೂಕ್ತದಲ್ಲಿ ಪ್ರತಿಪಾದಿತರಾದ ದೇವತೆಗಳ ವಿಚಾರದಲ್ಲಿ ಭಿನ್ನಾಭಿಪ್ರಾಯವಿದ್ದಿತು.

ಈ ಸೂಕ್ತವು ನಿರ್ದಿಷ್ಟವಾದ ಯಾವ ಯಜ್ಞಯಾಗಾದಿಕರ್ಮಗಳನ್ನೂ ಪ್ರತಿಪಾದಿಸುವುದಿಲ್ಲ. ಆದುದರಿಂದ ಈ ಸೂಕ್ತದಲ್ಲಿ ತೋರಿಬರುವ ಮುಖ್ಯಾಭಿಪ್ರಾಯವನ್ನು ಡಾ॥ ಸೀತಾನಾಥ ಪ್ರಧಾನ್ ಎಂಬುವರ ಈ ರೀತಿ ಹೇಳಿರುವರು—

It is the twilight of the early dawn ; the stars are still shining. The singers yoke the sun-horse and at the same time Indra's two horses ; It is the same sun who was born (at the time after the bursting open of the rock with the dawns. The patriarchs, Angirases have since regularised the sun-rise and sun-set ; they who had then found out the concealed cows with the help of Indra and had then invoked Indra may the sun now appear with Indra ! Indra joins in the song of the host of the devout singers. Thence come hither o wanderer, or from the bright realm of heaven. For him do our eulogies combinedly strive. We pray to Indra, for reward from here or from heaven, from the earthy or from the aerial region.

ಮಾಕ್ಸ್‌ಮುಲ್ಲರ್ ಪಂಡಿತನು ಈ ಋಕ್ಕಿನ ಅರ್ಧವನ್ನು ಹೀಗೆ ಹೇಳಿರುವನು—

Those who stand around him while he moves on, harness the bright red (steed) ; the lights in heaven shine forth. ಈ ಭಾಷಾಂತರವು ಮೂಲವನ್ನು ಸ್ವಲ್ಪವೂ ಬಿಡದೆ ಅನುಸರಿಸಿರುವುದು.

ಇದರಂತೆ ಕನ್ನಡದಲ್ಲಿ ಪ್ರತಿಪದಾರ್ಥವನ್ನೂ ಭಾವಾರ್ಥವನ್ನೂ ವಿವರಿಸುವೆವು—

॥ ಪ್ರತಿಪದಾರ್ಥ ॥

ಪರಿ ತೆಸ್ಥುಷಃ—ಸುತ್ತಲೂ ಇರುವ ಜನರು । **ಅರುಷಂ**—ಪ್ರಕಾಶಮಾನವಾದ (spirited) । **ಚರಂತಂ**—ವೇಗವಾದ ಗಮನವುಳ್ಳ । **ಬ್ರಧ್ನಂ**—ಕುದುರೆಯನ್ನು । **ಯುಂಜಂತಿ**—(ರಥಕ್ಕೆ) ಹೂಡುವರು । (ಆ ಕಾಲದಲ್ಲಿ) **ರೋಚನಾ**—ನಕ್ಷತ್ರಗಳು ಅಥವಾ ಸೂರ್ಯನ ರಶ್ಮಿಗಳು । **ದಿವಿ**—ಅಂತರಿಕ್ಷದಲ್ಲಿ । **ರೋಚಂತೆ**—ಬೆಳಗುತ್ತಿರುವವು.

॥ ಭಾವಾರ್ಥ ॥

ಸೂರ್ಯನು ಈಗತಾನೆ ಉದಯಿಸಿರುವುದರಿಂದ ರಶ್ಮಿಗಳು ಅಂತರಿಕ್ಷವನ್ನೆಲ್ಲಾ ವ್ಯಾಪಿಸಿ ಪ್ರಕಾಶಿಸುತ್ತಿರುವವು. ಈ ಸಮಯದಲ್ಲಿ ಸುತ್ತಲೂ ಇರುವ ಜನರು ಪ್ರಕಾಶಿಸುತ್ತಿರುವ ಎಂದರೆ ಪುಷ್ಟಿಯುಕ್ತವಾದ ಮತ್ತು ಚಲಿಸಲು ಹಾತೊರೆಯುತ್ತಿರುವ ಕುದುರೆಯನ್ನು (ರಥಕ್ಕೆ) ಹೂಡುವರು. ಈಗ ತಾನೆ ಬೆಳಕು ಹರಿಯುತ್ತಿರುವುದರಿಂದ ನಕ್ಷತ್ರಗಳು ಇನ್ನೂ ಪ್ರಕಾಶಿಸುತ್ತಿರುವುವು.

ಇಲ್ಲಿ ರಥವೆಂದರೆ ಸೂರ್ಯನ ರಥವೋ ಅಥವಾ ಇಂದ್ರನ ರಥವೋ ಎಂಬ ಸಂಶಯವು ತಲೆದೋರುವುದು. ಇಂದ್ರನ ರಥವಾದರೆ ಎರಡು ಕುದುರೆಗಳೆಂದಿರಬೇಕು. ಸೂರ್ಯನ ರಥವಾದರೆ ಏಳು ಕುದುರೆಗಳಿರಬೇಕು. ಆದರೆ **ಏಕೋ ಅಶ್ವೋ ವಹತಿ ಸಪ್ತನಾಮಾ** (ಋ. ಸಂ ೧-೧೬೪-೨) ಎಂದು ಹೇಳಿರುವುದರಿಂದ ಒಂದು ಕುದುರೆಯಿಂದರೂ ಸರಿಹೋಗುವುದು. ಆದರೆ ಎರಡನೆಯ ಋಕ್ಕಿನಲ್ಲಿ ಹರೀ ಎಂದು ಇಂದ್ರನ ಎರಡು ಅಶ್ವಗಳ ಹೆಸರು ನಿರ್ದಿಷ್ಟವಾಗಿರುತ್ತೆ. ಈ ಕಾರಣಗಳಿಂದ ಅನುಕ್ರಮಣಿಕೆಯಲ್ಲಿ ಹೇಳಿರುವುದನ್ನೇ ಪ್ರಮಾಣವೆಂದು ನಂಬಬೇಕಾಗಿರುವುದು

ಇನ್ನು ೪, ೬, ೮ ಮತ್ತು ೯ ನೆಯ ಋಕ್ಕುಗಳಲ್ಲಿ ಮರುದ್ದೇವತೆಗಳನ್ನು ಪ್ರತಿಪಾದನೆಮಾಡಿರುವ ವಿಚಾರವನ್ನು ವಿಮರ್ಶಿಸೋಣ— **ವೀಳು ಚಿದಾರುಜತ್ನುಭಿರ್ಗುಹಾ ಚಿದಿಂದ್ರ ವಹ್ನಿಭಿಃ । ಅವಿಂದ ಉಸ್ರಿಯಾ ಅನು** ಎಂಬ ಐದನೆಯ ಋಕ್ಕಿನಲ್ಲಿ ಪಣಿ ಎಂಬ ಅಸುರರು ದೇವಲೋಕದಿಂದ ಗೋವುಗಳನ್ನು ಅಪಹರಿಸಿ ಯಾರಿಗೂ ತಿಳಿಯದ ದುರ್ಗಮವಾದ ಗುಹೆಯೊಂದರಲ್ಲಿ ಬಚ್ಚಿಟ್ಟಿದ್ದರು. ಅದನ್ನು ಇಂದ್ರನು ದುರ್ಗವನ್ನು ನಾಶಪಡಿಸುವುದರಲ್ಲಿ ಸಮರ್ಥರಾದವರ (ಮರುತ್ತುಗಳ ಅಥವಾ ಅಂಗಿರಸರ) ಸಹಾಯದಿಂದ ಹುಡುಕಿ ಹಿಂದಕ್ಕೆ ತಂದನು ಎಂದು ಹೇಳಿದೆ. ಇಲ್ಲಿ ಸಮರ್ಥರಾದವರೆಂದರೆ ಸಾಯಣ, ಸ್ಕಂದಸ್ವಾಮಿ, ವೆಂಕಟಮಾಧವ ಮೊದಲಾದ ಪ್ರಾಚೀನ ಭಾಷ್ಯಕಾರರು ಮರುದ್ಭಿಃ ಎಂದು ಹೇಳಿರುವರು. ಆದರೆ Max Muller, Macdonell ಮುಂತಾದ ಪಾಶ್ಚಾತ್ಯ ಆಧುನಿಕ ಪಂಡಿತರು—ಆರುಜತ್ನುಭಿಃ ಎಂಬ ಶಬ್ದವು ಅಂಗಿರಸರಿಗೆ ಅನ್ವಯಿಸುವುದೆಂದು ಅಭಿಪ್ರಾಯಪಡುವರು ಏಕಂದರೆ

ವೀಳು ಚಿದ್ಪ್ರಾಸ್ಥಾ ಪಿತರೋ ನ ಉಕ್ಥೈರದ್ರಿಂ ರುಜನ್ನಂಗಿರಸೋ ರವೇಣ ।
ಚಕ್ರುರ್ದಿವೋ ಬೃಹತೋ ಗಾತುಮಸ್ಮೇ ಅಹಃ ಸ್ವರ್ವಿದುಃ ಕೇತುಮುಸ್ರಾಃ ॥

(ಋ. ಸಂ. ೧-೬೨-೨)

ಎಂಬ ಋಕ್ಕಿನಲ್ಲಿಯೂ ಇತರ ಕೆಲವು ಕಡೆಗಳಲ್ಲಿಯೂ ಪಣಿಯೆಂಬ ದೈತ್ಯನನ್ನು ನಿಗ್ರಹಿಸಲು ಅಂಗಿರಸರು ಇಂದ್ರನಿಗೆ ಸಹಾಯಮಾಡಿದರೆಂದು ಹೇಳಿರುವುದರಿಂದ ಪ್ರಸಕ್ತವಾದ ಈ ಸೂಕ್ತದ ಋಕ್ಕುಗಳನ್ನು ಅಂಗಿರಸರನ್ನೇ ಉದ್ದೇಶಿಸಿ ಹೇಳಲಾಗಿದೆಯೆಂದು ಅಭಿಪ್ರಾಯಪಡುವರು. ಇದಲ್ಲದೆ ಈ ಸೂಕ್ತದಲ್ಲಿರುವ ಮರುತ್ಸಂಬಂಧವಾದ ಋಕ್ಕುಗಳೆಲ್ಲಕ್ಕೂ ಅಂಗಿರಸ ಪರವಾಗಿ ಅರ್ಥವೇ ಸಮಂಜಸವಾಗಿ ಕಾಣುವುದೆಂದು Oldenberg ಎಂಬ ಜರ್ಮನ್ ಪಂಡಿತನ ಅಭಿಮತವು. ಅಂತೂ ಈ ವಿಷಯವೂ ವಿವಾದಾಸ್ಪದವಾಗಿದೆಯೆಂದು ಹೇಳಬೇಕಾಗಿದೆ.

॥ ವ್ಯಾಕರಣಪ್ರಕ್ರಿಯಾ ॥

ಯುಞ್ಜಂತಿ— ಯುಜಿರ್ ಯೋಗೇ ಎಂಬ ಧಾತುವಿನ ಮುಂದೆ ಲಟ್ ಪ್ರಥಮಪುರುಷ ಬಹುವಚನ ವನ್ನಿಟ್ಟರೆ ಇದುರುಧಾದಿ ಧಾತುವಾದ್ದರಿಂದ ಶಪ್ ವಿಕರಣಕ್ಕೆ ಅಪವಾದವಾಗಿ **ರುಧಾದಿಭ್ಯಃ ಶ್ನಮ್** (ಪಾ ಸೂ. ೩-೧-೭೮) ಎಂಬುದರಿಂದ ಶ್ನಮ್ ವಿಕರಣ ಬರುವುದು. ಶ್ನಮ್ ಮಿತ್ತಾದ್ದರಿಂದ **ಮಿದಚೋಽಂತ್ಯಾತ್ಪರಃ** (ಪಾ. ಸೂ. ೧-೧-೪೭) ಮಕಾರೋತ್ಸಂಜ್ಞಕವಾದ ಆಗಮವು ಕಡೆಯ ಅಜ್ವರ್ಣದ ಮುಂದೆ ಬರುವುದು ಎಂಬುದರಿಂದ ಯು ವಿನ ಮುಂದೆ ನ ಬರುವುದು. ಯುನಜ್+ಝಿ. **ಝೋಽಂತೇ**ಃ (ಪಾ ಸೂ. ೭-೧-೩) ಎಂಬುದರಿಂದ ಅನ್ತಾದೇಶ. **ಶ್ನಸೋರಲ್ಲೋಪಃ** (ಪಾ.ಸೂ. ೬-೪ ೧೧೧) ಕಿತ್ತು ಅಥವಾ ಙಿತ್ತು ಆದ ಸಾರ್ವಧಾತುಕ ಪ್ರತ್ಯಯ ಪರದಲ್ಲಿರುವಾಗ ಶ್ನಮ್ ಪ್ರತ್ಯಯ ಅಸ್ ಧಾತು ಇವುಗಳ ಅಕಾರಕ್ಕೆ ಲೋಪ ಬರುವುದು. ಎಂಬುದರಿಂದ ಅಕಾರಕ್ಕೆ ಲೋಪ. ಯುನಜ್+ಅನ್ತಿ. **ಈಗ ನಶ್ಚಾಪದಾಂತಸ್ಯ ಝಲಿ** (ಪಾ. ಸೂ. ೮-೩-೨೪) ಝಲ್ ವರ್ಣ ಪರದಲ್ಲಿರುವಾಗ ಪದಾಂತವಲ್ಲದ ನಕಾರ ಮಕಾರಗಳಿಗೆ ಅನುಸ್ವಾರ ಬರುವುದು ಎಂಬುದರಿಂದ ಅನುಸ್ವಾರವೂ **ಅನುಸ್ವಾರಸ್ಯ ಯಯಿ ಪರಸವರ್ಣಃ** (ಪಾ. ಸೂ ೮-೪-೫೭) ಯಯ್ ವರ್ಣ ಪರದಲ್ಲಿರುವಾಗ ಅನುಸ್ವಾರಕ್ಕೆ ಪರಸವರ್ಣ ಒರುವುದು ಎಂಬುದರಿಂದ ಪರಸವರ್ಣವೂ ಬರುವುದು. ಯುಞ್ಜನ್ತಿ ಎಂದಾಗುವುದು. **ನಪದಾಂತದ್ವಿರ್ವಚನೇ ವರೇಯೇಲೋಪೇ ಸ್ವರಸವರ್ಣಾನುಸ್ವಾರದೀರ್ಘಜಶ್ಚರ್ವಿಧಿಷು** (ಪಾ. ಸೂ. ೧-೧-೫೮) ಈ ಕಾರ್ಯಗಳನ್ನು ಮಾಡುವಾಗ ಸ್ಥಾನಿವದ್ಭಾವ ಬರುವುದಿಲ್ಲ ಎಂದು ಸ್ಥಾನಿವದ್ಭಾವಕ್ಕೆ ನಿಷೇಧವಿರುವುದರಿಂದ ಅನುಸ್ವಾರ ಪರಸವರ್ಣಗಳನ್ನು ಮಾಡುವಾಗ ಶ್ನಸೋರಲ್ಲೋಪಃ ಎಂಬುದರಿಂದ ಬಂದ ಅಲೋಪಕ್ಕೆ **ಅಚಃ ಪರಸ್ಮಿನ್ನಪೂರ್ವವಿಧೌ** (ಪಾ. ಸೂ೧ ೧-೧-೫೭) ಸ್ಥಾನಿಭೂತವಾದ ಸ್ವರಕ್ಕಿಂತಲೂ ಪೂರ್ವದಲ್ಲಿರುವ್ಯಷ್ಟವಾದುದಕ್ಕೆ ಕಾರ್ಯವನ್ನು ಮಾಡುವಾಗ ಪರನಿಮಿತ್ತಕವಾಗಿ ಆಜ್ಞ ಸ್ಥಾನದಲ್ಲಿ ಬಂದ ಆದೇಶವು ಸ್ಥಾನಿಯಲ್ಲಿರುವ ಧರ್ಮವನ್ನು ಹೊಂದುವುದು ಎಂಬುದರಿಂದ ಸ್ಥಾನಿವದ್ಭಾವ ಬರುವುದಿಲ್ಲ. ಆದ್ದರಿಂದ ಅನುಸ್ವಾರ ಪರಸವರ್ಣಗಳು ನಿರ್ವಿಘ್ನವಾಗಿ ಬರುವುವು. ಯುಞ್ಜನ್ತಿ ಎಂಬಲ್ಲಿರುವ ಅನ್ತಿ ಎಂಬುದು **ಅದ್ಯುದಾತ್ತೌ ಶ್ಚ** (ಪಾ ಸೂ. ೩-೧-೩) ಎಂಬುದರಿಂದ ಅದ್ಯುದಾತ್ತ.

ಬ್ರಧ್ನಂ— ಪ್ರಾತಿಪದಿಕಸ್ವರದಿಂದ ಅಂತೋದಾತ್ತ.

ಅರುಷಂ— ಉಷರುಷ ರಿಷ ಹಿಂಸಾರ್ಥಾಃ ಎಂಬ ರುಷಧಾತುವು ಇಗುಪಧವಾದ್ದರಿಂದ **ಇಗುಪಧಜ್ಞಾಪ್ರೀಕಿರಃ ಕಃ** (ಪಾ. ಸೂ. ೩-೧-೧೩೫) ಉಸಾಂತ್ಯವರ್ಣವು ಇ, ಉ, ಋ, ೠ, ಎಗಿರುವ ಧಾತುಗಳ ಮತ್ತು ಜ್ಞಾ ಪ್ರೀ ಕ್ಲಾ ಈ ಧಾತುಗಳ ಮುಂದೆಯೂ ಕ ಪ್ರತ್ಯಯ ಬರುವುದು ಎಂಬುದರಿಂದ ಕ ಪ್ರತ್ಯಯ. ಇದು ಪ್ರತ್ಯಯಸ್ವರದಿಂದ ಅಂತೋದಾತ್ತ. ರೋಷನ್ತೀತಿ ರುಷಾಃ ಹಿಂಸಕರು ಎಂದು ಅರ್ಥ. ನ ಸನ್ತಿ ರುಷಾಃ ಯಸ್ಯಾಸೌ ಎಂದು ಬಹುವ್ರೀಹಿಯನ್ನು ಮಾಡಿದಾಗ **ನಞ್ ಸುಭ್ಯಾಂ** (ಪಾ. ಸೂ. ೬-೨-೧೭೨) ಎಂಬುದರಿಂದ ಉತ್ತರ ಪದವು ಅಂತೋದಾತ್ತ, ಅರುಷಶಬ್ದದ ಮುಂದೆ ದ್ವಿತೀಯಾ ಏಕವಚನ ಅಮ್ ಪ್ರತ್ಯಯವನ್ನಿಟ್ಟರೆ **ಅಮ್ಯಪೂರ್ವಃ** (ಪಾ. ಸೂ ೬-೧-೧೦೭) ಅ ಇ ಉ ಋ ೠ ಗಳಿಗೆ ಅಮ್ಮಿನ ಅ ಕಾರವು ಪರದಲ್ಲಿದ್ದರೆ ಪೂರ್ವಪರ ಸ್ಥಾನದಲ್ಲಿ ಪೂರ್ವರೂಪ ಬರುವುದು ಎಂಬುದರಿಂದ ಪೂರ್ವರೂಪ ಬಂದರೆ ಅರುಷಂ ಎಂದಾಗುವುದು. ಅಮ್ಮಿನ ಅಕಾರವು **ಅನುದಾತ್ತೌ ಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ಅನುದಾತ್ತ. **ಏಕಾದೇಶವು ಏಕಾದೇಶಃ ಉದಾತ್ತೇನೋದಾತ್ತಃ** (ಪಾ ಸೂ ೮-೪೫) ಉದಾತ್ತದೊಂದಿಗೆ ಅನುದಾತ್ತಕ್ಕೆ ಬರುವ ಏಕಾದೇಶವು ಉದಾತ್ತವಾಗುವುದು ಎಂಬುದರಿಂದ ಉದಾತ್ತ.

ಚೆರನ್ತ್ಯಂ—ಶಪ್ ವಿಕರಣವು ಪಿತ್ತಾದ್ದರಿಂದ ಅನುದಾತ್ತ. ಶತೃಪ್ರತ್ಯಯವು **ತಾಸ್ಯನುದಾತ್ತೇನ್ಙಿದ-ಪುಪಿದೇಶಾತ್** (ಪಾ. ಸೂ. ೬-೧-೧೮೬) ಇತ್ಯಾದಿ ಸೂತ್ರದಿಂದ ಲಸ್ಥಾನಿಕಸಾರ್ವಧಾತುಕ ಸ್ವರವನ್ನು ಹೊಂದಿ ಅನುದಾತ್ತವಾಗುವುದು. ಚರ್ ಎಂಬಲ್ಲಿ ಧಾತುಸ್ವರ ಅಂತೋದಾತ್ತವೇ ನಿಲ್ಲುವುದು.

ತೆಸ್ಥುಷಃ—ಸ್ಥಾ (ಷ್ಠಾಗತಿನಿವೃತ್ತ್ಯೌ) ಎಂಬ ಧಾತುವಿನ ಮುಂದೆ ಲಿಟ್ಪ್ರತ್ಯಯ ಬರಲು **ಕ್ವಸುಶ್ಚ** (ಪಾ ಸೂ. ೩-೨-೧೦೭) ಎಂಬುದರಿಂದ ಲಿಟ್ಪ್ರತ್ಯಯಕ್ಕೆ ಕ್ವಸು ಆದೇಶ ಬರುವುದು. ಇದರಲ್ಲಿ ವಸ್ ಎಂಬುದು ನಿಲ್ಲುವುದು. **ಲಿಟಿ-ಧಾತೋರನಭ್ಯಾಸಸ್ಯ** (ಪಾ. ಸೂ. ೬-೧-೮) ಎಂಬುದರಿಂದ ದ್ವಿತ್ವ ಬರುವುದು. **ಶರ್ಪೂರ್ವಾಃ ಖಯಃ** (ಪಾ. ಸೂ. ೭-೪-೬೧) ಅಭ್ಯಾಸದಲ್ಲಿರುವ ಶರ್ ವರ್ಣದ ಮುಂದಿರುವ ಖಯ್ ವರ್ಣವು ಉಳಿಯುವುದು (ಮಿಕ್ಕ ವ್ಯಂಜನಗಳಿಗೆ ಲೋಪ ಬರುವುದು) ಎಂಬುದರಿಂದ ಸಲೋಪ. **ಹ್ರಸ್ವಃ** (ಪಾ. ಸೂ. ೭-೪-೫೯) ಎಂಬುದರಿಂದ ಹ್ರಸ್ವ. **ಅಭ್ಯಾಸೇಚರ್ಚ** (ಪಾ. ಸೂ. ೮-೪-೬೪) ಚರ್ತ್ವ ಬಂದರೆ ತಸ್ಥಾ+ವಸ್ ಇದರ ಮುಂದೆ ಶಸ್ ಪ್ರತ್ಯಯವನ್ನಿಟ್ಟರೆ ಭ ಸಂಜ್ಞೆ ಬರುವುದರಿಂದ ನಂತರ **ವಸೋಸ್ಸಂಪ್ರಸಾರಣಂ** (ಪಾ. ಸೂ. ೬-೪-೧೩೧) ಭ ಸಂಜ್ಞಕವಾದ ವಸುಪ್ರತ್ಯಯಾಂತಾಂಗಕ್ಕೆ ಸಂಪ್ರಸಾರಣ ಬರುವುದು ಎಂಬುದರಿಂದ ಸಂಪ್ರಸಾರಣ (ವಕಾರಕ್ಕೆ ಉಕಾರ) **ವೂ ಸಂಪ್ರಸಾರಣಾಚ್ಚೆ** (ಪಾ. ಸೂ. ೬-೧-೧೦೮) ಎಂಬುದರಿಂದ ಪೂರ್ವರೂಪವೂ ಬರುವುದು. ಯದ್ಯಪಿ **ವಸ್ವೇಕಾಚಾದ್ಧ್ರಸಾಂ** (ಪಾ. ಸೂ. ೭-೨-೬೭) ದ್ವಿತ್ವ ಬಂದನಂತರ ಏಕಾಚ್ಕವಾದ ಧಾತು, ಆಕಾರಾಂತ ಧಾತು ಘಿ ಸ್ಲೂ ಧಾತು ಇವುಗಳ ಮುಂದಿರುವ ವಸು ಪ್ರತ್ಯಯಕ್ಕೆ ಇಡಾಗಮ ಬರುವುದು. ಬಾಕಿ ಧಾತುಗಳ ಮುಂದಿರುವ ವಸು ಪ್ರತ್ಯಯಕ್ಕೆ ಇಡಾಗಮ ಬರುವುದಿಲ್ಲ ಎಂಬುದರಿಂದ ವಿಹಿತವಾದ ಇಟ್ ಆಗಮವು ಅಂತರಂಗವಾದ್ದರಿಂದ ಮೊದಲೇ ಬರಬೇಕು. ಆದರೂ **ಸಂಪ್ರಸಾರಣಂ ತವಾಶ್ರಯೇಂ ಚ ಕಾರ್ಯಂ ಬಲವತ್** (ಪಾ.ಮ. ೬-೧-೧೭೭-೨) ಎಂಬುದರಿಂದ ಮೊದಲು ಸಂಪ್ರಸಾರಣ ಪ್ರಯೋಜಕಕಾರ್ಯಗಳೂ ನಂತರ ಸಂಪ್ರಸಾರಣವೂ ಪೂರ್ವರೂಪವೂ ಬರುವುದು. ಆದೇಶ ಪ್ರತ್ಯಯಯೋಃ ಎಂಬುದರಿಂದ ಷತ್ವವೂ, ರುತ್ವವಿಸರ್ಗಗಳೂ ಬರುವುವು. **ತಸ್ಥುಷಃ** ಎಂದು ಆಗುವುದು. ವಸು ಪ್ರತ್ಯಯವು ಪ್ರತ್ಯಯಸ್ವರದಿಂದ ಉದಾತ್ತ.

ರೋಚನ್ತೇ—ತಙ್-ಲಸಾರ್ವಧಾತುಕ ಸ್ವರದಿಂದ ಅನುದಾತ್ತ. ಶಪ್ ಪಿತ್ತಾದ್ದರಿಂದ ಅನುದಾತ್ತ. ಧಾತುಸ್ವರವೇ ನಿಲ್ಲುವುದು.

ರೋಚನಾ—**ಅನುದಾತ್ತೇತ್ಕೃಞ್ಹಲಾದೇಃ** (ಪಾ. ಸೂ. ೩-೧-೧೪೪) ಅನುದಾತ್ತೇತ್ಕವೂ ಅಕರ್ಮಕವೂ ಹಲಾದಿಯೂ ಆದ ಧಾತುವಿನ ಮುಂದೆ ಯುಚ್ ಪ್ರತ್ಯಯ ಬರುವುದು ಎಂಬುದರಿಂದ ರುಚ್ ಧಾತುವಿನ ಮುಂದೆ ಯುಚ್ ಪ್ರತ್ಯಯ ಬಂದರೆ **ಯುವೋರನಾಕೌ** (ಪಾ. ಸೂ. ೭-೧-೧) ಎಂಬುದರಿಂದ ಯುಗೆ ಅನ ಎಂಬ ಆದೇಶ ಬರುವುದು. ಲಘೂಪಧಗುಣ ಬರುತ್ತೆ. ಪ್ರತ್ಯಯವು ಚಿತ್ತಾದ್ದರಿಂದ **ಚಿತಃ** (ಪಾ.ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತ

ದಿವಿ **ಊಡಿದಂ ಪದಾದ್ಯಪ್ಪುಮ್ವದ್ಯುಭ್ಯಃ** (ಪಾ ಸೂ. ೬-೧-೧೬೧) ಎಂಬುದರಿಂದ ವಿಭಕ್ತಿಯು ಉದಾತ್ತವಾಗುವುದು ॥ ೧ ॥

ಸಂಹಿತಾಪಾಠಃ

ಯುಂಜಂತ್ಯಸ್ಯ ಕಾಮ್ಯಾ ಹರೀ ವಿಪಕ್ಷಸಾ ರಥೇ ।
ಶೋಣಾ ಧೃಷ್ಣೂ ನೃವಾಹಸಾ ॥ ೨ ॥

ಪದಪಾಠಃ

ಯುಂಜಂತಿ । ಅಸ್ಯ । ಕಾಮ್ಯಾ । ಹರೀ ಇತಿ । ವಿ ಽ ಪಕ್ಷಸಾ । ರಥೇ ॥
ಶೋಣಾ । ಧೃಷ್ಣೂ ಇತಿ । ನೃ ಽ ವಾಹಸಾ ॥ ೨ ॥

॥ ಸಾಯಣಭಾಷ್ಯಂ ॥

ಅಸ್ಯ ಬ್ರಧ್ನಾದಿಶಬ್ದಪ್ರತಿಪಾದ್ಯಸ್ಯಾದಿತ್ಯಾದಿಮೂರ್ತಿಭಿಸ್ತತ್ರ ತತ್ರಾವಸ್ಥಿತಸ್ಯೇಂದ್ರಸ್ಯ ರಥೇ ಹರೀ ಏತನ್ನಾಮಾನೌ ದ್ವಾವಶ್ವೌ ಸಾರಥಯೋ ಯುಂಜಂತಿ । ಇಂದ್ರಸಂಬಂಧಿನೌರಶ್ವಯೋರ್ಹರಿ-ನಾಮತ್ವಂ ಹರೀ ಇಂದ್ರಸ್ಯ ರೋಹಿತೌ ಗ್ನೇಃ । ನೈ. ೧-೧೫ । ಇತಿ ಪಠಿತತ್ವಾತ್ । ಕೀದೃಶೌ ಹರೀ । ಕಾಮ್ಯಾ ಕಾಮಯಿತವ್ಯೌ ವಿಪಕ್ಷಸಾ । ವಿವಿಧೇ ಪಕ್ಷಸೀ ರಥಸ್ಯ ಪಾರ್ಶ್ವೌ ಯಯೋರಶ್ವಯೋಸ್ತೌ ವಿಪಕ್ಷಸೌ । ರಥಸ್ಯ ದ್ವಯೋಃ ಪಾರ್ಶ್ವಯೋರ್ಯೋಗೀತಾವಿತ್ಯರ್ಥಃ । ಶೋಣಾ ರಕ್ತವರ್ಣೌ ಧೃಷ್ಣೂ ಪ್ರಗಲ್ಭೌ ನೃವಾಹಸಾ ನೄಣಾಂ ಪುರುಷಾಣಾಮಿಂದ್ರತತ್ಸಾರಥಿಪ್ರಮುಖಾಣಾಂ ವೋಢಾರೌ ॥ ಅಸ್ಯ-ಬ್ರಧ್ನಮಿತ್ಯುಕ್ತಸ್ಯ ಪರಾಮರ್ಶಾದಿದಮೋ ನ್ವಾದೇಶೇ ನಶನುದಾತ್ತಸ್ತ್ರೀಯಾದೌ । ಪಾ. ೨-೪-೩೨ । ಇತ್ಯಶ್ । ಶಿತ್ತ್ವಾತ್ ಪಾ ೧-೧-೫೫ । ಸರ್ವಾದೇಶೋ ನುದಾತ್ತಃ । ವಿಭಕ್ತಿರನುದಾತ್ತೈನೇತಿ ಸರ್ವಾ-ನುದಾತ್ತತ್ವಂ । ಕಾಮ್ಯಾ । ಕಮು ಕಾಂತೌ । ಕಮೇರ್ಣಿಚ್ । ಪಾ. ೩-೧-೩೦ । ಕಾಮಯತೇರಚೋ ಯತ್ । ಪಾ ೩-೧-೯೭ । ತಿತ್ಸ್ವರಿತಾಪವಾದತ್ವೇನ ಯತೋ ನಾವಃ । ಪಾ. ೬-೧-೨೧೩ । ಇತ್ಯಾದ್ಯು-ದಾತ್ತತ್ವಂ । ಸುಸಾಂ ಸುಲುಗಿತಿ ದ್ವಿವಚನಸ್ಯ ಡಾದೇಶಃ । ಹರತೋ ರಥಮಿತಿ ಹರೀ । ಹೃಪಿಷೀತ್ಯಾದಿನಾ । ಉ. ೪-೧೧೪ । ಇನ್ । ನಿತ್ತ್ವಾದಾದ್ಯುದಾತ್ತಃ । ವಿಪಕ್ಷಸಾ । ಪಚಿವಚಿಭ್ಯಾಂ ಸುಟ್ ಚ । ಉ. ೪-೨೧೯ । ಇತಿ ಪಚೇರಸುನ್ ಸುಡಾಗಮಶ್ಚ । ವಿಭಿನ್ನೇ ಪಕ್ಷಸೀ ಪಾರ್ಶ್ವೌ ಯಯೋಸ್ತೌ । ವಿಶಬ್ದೋ ನಿಪಾತ-ತ್ವಾದುದಾತ್ತಃ । ಪೂರ್ವಪದಪ್ರಕೃತಿಸ್ವರೇಣ ಸ ಏವ ಶಿಷ್ಯತೇ । ದ್ವಿವಚನಸ್ಯ ಡಾದೇಶಃ । ರಥೇ । ರಮಂತೇ ಽಸ್ಮಿನ್ನಿತಿ ರಥಃ । ರಮು ಕ್ರೀಡಾಯಾಂ । ಹನಿಕುಷಿನೀರಮಿಕಾಶಿಭ್ಯಃ ಕ್ಥನ್ । ಉ. ೨ ೨ । ಇತಿ ಕ್ಥನ್ । ಕಿತ್ತ್ವಾನ್ನುದಾತ್ತೋಪದೇಶೇತ್ಯಾದಿನಾ । ಪಾ. ೬-೪-೩೭ । ಮುಕಾರಲೋಪಃ । ನಿತ್ಸ್ವರೇಣಾ-ದ್ಯುದಾತ್ತಃ । ಶೋಣಾ । ಶೋಣೃ ವರ್ಣಗತ್ಯೋಃ । ಗಮನಕರಣತ್ವಾತ್ಕರಣೇ ಘಞ್ । ಞಿತ್ತ್ವಾದಾ-ದ್ಯುದಾತ್ತಃ । ಸುಸಾಂ ಸುಲುಗಿತಿ ಡಾದೇಶಃ । ಧೃಷ್ಣೂ । ಞಿಧೃಷಾ ಪ್ರಾಗಲ್ಭ್ಯೇ । ತ್ರಸಿಗೃಧಿಧೃಷಿಕ್ಷಿಪೇಃ ಕ್ನುಃ । ಪಾ ೩-೨-೧೪೦ । ಕಿತ್ತ್ವಾದ್ಗುಣಾಭಾವಃ । ಪ್ರತ್ಯಯಸ್ವರಃ । ನೃವಾಹಸಾ । ನೄನ್ನಹತೆ ಇತಿ ವಹೇರ್ವಹಿಹಾಧಾಞ್ಭ್ಯಶ್ಚಂದಸಿ । ಉ ೪-೨೨೦ । ಇತ್ಯಸುನ್ । ಣಿದಿತ್ಯನುವೃತ್ತೇರ್ವೃದ್ಧಿಃ । ನಿತ್ತ್ವಾದಾ-ದ್ಯುದಾತ್ತಃ । ಕೃದುತ್ತರಪದಪ್ರಕೃತಿಸ್ವರತ್ವೇನ ಸ ಏವ ಶಿಷ್ಯತೇ ॥

॥ ಪ್ರತಿಪದಾರ್ಥ ॥

(ಸಾರಥಿಮೊದಲಾದವರು) ಅಸ್ಯ—(ಹಿಂದೆ ಹೇಳಿದಂತೆ ಆದಿತ್ಯಾದಿಶಬ್ದಪ್ರತಿಪಾದಿಕನಾದ) ಇಂದ್ರನ । ರಥೇ—ರಥದಲ್ಲಿ (ರಥಕ್ಕೆ) । ಕಾಮ್ಯಾ—(ಇಂದ್ರನಿಗೆ) ಇಷ್ಟವಾದ ಅಥವಾ ಪ್ರೀತಿಪಾತ್ರವಾದ । ಶೋಣಾ—

ರಕ್ತವರ್ಣವಾಗಿರುವ । **ಧೃಷ್ಣೂ** — ಉತ್ಸಾಹಯುಕ್ತವಾದ । **ನೃವಾಹಸಾ**— (ಮನುಷ್ಯರೂಪದಿಂದಿರುವ ಇಂದ್ರ ಮತ್ತು ಸಾರಥಿಯನ್ನು) ವಹಿಸುವ । **ವಿಪಕ್ಷಸಾ**—ರಥದ ಎಡಬಲಪಾರ್ಶ್ವಗಳಲ್ಲಿ ನಿಯೋಜಿತವಾದ । **ಹರೀ**—ಎರಡು ಕುದುರೆಗಳನ್ನು । **ಯುಂಜಂತಿ**—ಹೂಡುವರು (ಕಟ್ಟುವರು)

॥ ಭಾವಾರ್ಥ ॥

ಸಾರಥಿ ಮೊದಲಾದವರು ಇಂದ್ರನ ರಥಕ್ಕೆ ಅವನ ಪ್ರೀತಿಪಾತ್ರವಾದ ಎರಡು ಕುದುರೆಗಳನ್ನು ಎಡಬಲಗಳೆಂಬ ಎರಡು ಪಾರ್ಶ್ವಗಳಲ್ಲಿ ಹೂಡುವರು. ಆ ಕುದುರೆಗಳು ಕೆಂಪುವರ್ಣದ್ದಾಗಿಯೂ ಉತ್ಸಾಹಭರಿತವಾಗಿಯೂ, ಮನುಷ್ಯರನ್ನು (ಎಂದರೆ ತಮ್ಮ ಸ್ವಾಮಿಯಾದ ಇಂದ್ರ, ಸಾರಥಿ ಮೊದಲಾದವರನ್ನು, ಹೊರುವುದರಲ್ಲಿ ಸಾಮರ್ಥ್ಯವುಳ್ಳವುಗಳಾಗಿಯೂ ಇರುವವು ಇಂತಹ ಉತ್ತಮವಾದ ಕುದುರೆಗಳನ್ನು ಇಂದ್ರನ ರಥಕ್ಕೆ ಕಟ್ಟುವರು.

English Translation.

They are harnessing to his (Indra's) chariot, one on each side, his favourite pair of bay coloured horses, high-spirited and able to carry their brave lord.

॥ ವಿಶೇಷ ವಿಷಯಗಳು ॥

ಯುಂಜಂತೇಸ್ಯ ಕಾಮ್ಯಾ ಎಂಬ ಪಾದವು ಅಪಸ್ತಂಬ ಶ್ರೌತಸೂತ್ರ ೨೦-೧೬-೨, ಮೈತ್ರಾಯಣೀಯ ಸಂಹಿತಾ ೯-೨-೩ ಇವುಗಳಲ್ಲಿ ಪಠಿತವಾಗಿದೆ. ತೈತ್ತಿರೀಯ ಬ್ರಾಹ್ಮಣದ ೩-೯-೪ ರಲ್ಲಿ ಈ ಋಕ್ಕಿನ ವಿವರಣೆ ಇದೆ. ಅಲ್ಲಿ-ಶೋಣಾ ಧೃಷ್ಣೂ ನೃವಾಹಸೇತಾ ಹ । ಅಹೋ ರಾತ್ರೇ ವೈ ನೃವಾಹಸಾ ॥ ಎಂದರೆ ನೃವಾಹಸೌ ಎಂಬ ಶಬ್ದಕ್ಕೆ ಹಗಲು ರಾತ್ರಿಗಳೆಂಬ ಆಧ್ಯಾತ್ಮಿಕವಾದ ಅರ್ಥವನ್ನು ಹೇಳಿದಾರೆ ಹೆಚ್ಚು ವಿಶೇಷವೇನೂ ಇಲ್ಲ.

ಕಾಮ್ಯಾ—ಇಷ್ಟವಾದ, ಪ್ರೀತಿಪಾತ್ರವಾದ, favourite.

ಹರೀ—ಇಂದ್ರನ ಎರಡು ಕುದುರೆಗಳಿಗೆ ಹರೀ ಎಂದು ಹೆಸರು.

ವಿಪಕ್ಷಸಾ—ಬೇರೆ ಬೇರೆ ಪಾರ್ಶ್ವಗಳು ಎಂದರೆ ಎಡಬಲಪಾರ್ಶ್ವಗಳು.

ರಥೇ—ರಮಂತೇಸ್ಮಿನ್ನಿತಿ ರಥಃ । ರಮುಕ್ರೀಡಾಯಾಂ-ಎಂದರೆ ಇದರಲ್ಲಿ ಕುಳಿತು ವಿಹರಿಸುವುದರಿಂದ ಇದಕ್ಕೆ ರಥವೆಂದು ಹೆಸರು.

ಶೋಣಾ—ಕೆಂಪುಬಣ್ಣದ crimson, bright, bay or chestnut.

ಧೃಷ್ಣೂ—ಉತ್ಸಾಹಭರಿತವಾದ, fiery, high-spirited.

ನೃವಾಹಸಾ-ಮನುಷ್ಯನನ್ನು ಅಥವಾ ಮನುಷ್ಯರನ್ನು ಹೊರುವ ಅಥವಾ ಎಳೆಯುವ ಸಾಮರ್ಥ್ಯವುಳ್ಳ

ಕಾಮ್ಯಾ, ಹರೀ, ವಿಪಕ್ಷಸಾ, ಶೋಣಾ, ಧೃಷ್ಣೂ, ನೃವಾಹಸಾ ಎಂಬ ಶಬ್ದಗಳೆಲ್ಲವೂ ದ್ವಿತೀಯಾ ದ್ವಿವಚನಾಂತಶಬ್ದಗಳು **ಹರೀ** ಎಂಬ ಶಬ್ದಕ್ಕೆ ವಿಶೇಷಣಗಳು.

ವ್ಯಾಕರಣಪ್ರಕ್ರಿಯಾ

ಅಸ್ಯ—ಪೂರ್ವಮಂತ್ರದಲ್ಲಿ ಬ್ರಧ್ನ ಮೊದಲಾದ ಪದಗಳಿಂದ ಪ್ರತಿಪಾದಿತನಾದ ಇಂದ್ರನಿಗೆ ಅಸ್ಯ ಎಂಬುದರಿಂದ ಮರಾಮರ್ಶವಿರುವುದರಿಂದ ಅಸ್ಯ ಎಂಬಲ್ಲಿಯ ಇದಂ ಶಬ್ದವು ಅನ್ವಾದೇಶವಿಷಯದಲ್ಲಿರುವುದು. ಆದ್ದರಿಂದ **ಇದಮೋಽನ್ವಾದೇಶೇಽಶನುದಾತ್ತಸ್ತೃತೀಯಾದೌ** (ಪಾ. ಸೂ. ೨-೪-೩೨) ಎಂಬುದರಿಂದ ಅನುದಾತ್ತವಾದ ಅಶ್ ಆದೇಶ ಬರುವುದು ಅಶ್ ಆದೇಶವು ಶಿತ್ತಾದ್ದರಿಂದ **ಅನೇಕಾಲ್ಶಿತ್ಸರ್ವಸ್ಯ** (ಪಾ. ಸೂ. ೧ ೧-೫೫) ಅನೇಕ ವರ್ಣಗಳುಳ್ಳ ಆದೇಶ ಅಥವಾ ಶಕಾರೇತ್ಸಂಜ್ಞಕವಾದ ಆದೇಶ ಇವು ಎಲ್ಲದರ (ಸ್ಥಾನಷಷ್ಠ್ಯಂತ ಪದಬೋಧ್ಯಸ್ಯ ಸರ್ವಸ್ಯ) ಸ್ಥಾನದಲ್ಲಿಯೂ ಬರುವುವು ಎಂಬುದರಿಂದ ಇದಂ ಶಬ್ದದ ಸಂಪೂರ್ಣ ಸ್ಥಾನದಲ್ಲಿ ಅಶ್ ಬರುವುದು. ವಿಭಕ್ತಿಯೂ ಅನುದಾತ್ತವೇ ಆದ್ದರಿಂದ ಅಸ್ಯ ಎಂಬುದು ಸರ್ವಾನುದಾತ್ತ.

ಕಾಮ್ಯಾ—ಕಮು ಕಾಂತೌ ಎಂಬ ಧಾತುವಿನ ಮುಂದೆ **ಕಮೇರ್ಣಿಜ್** (ಪಾ.ಸೂ. ೩-೧-೩೦) ಕಮ್ ಧಾತುವಿನ ಮುಂದೆ ಣಿಜ್ ಪ್ರತ್ಯಯ ಬರುವುದು ಎಂಬುದರಿಂದ ಣಿಜ್ ಪ್ರತ್ಯಯ ಬರುವುದು. **ಅತ ಉಪಧಾಯಾಃ** (ಪಾ ಸೂ. ೭-೨-೧೧೬) ಎಂಬುದರಿಂದ ಉಪಧಾವೃದ್ಧಿ ಕಾಮಿ. ಇದು **ಸನಾದ್ಯಂತಾಧಾತವಃ** (ಪಾ. ಸೂ. ೩-೧-೩) ಎಂಬುದರಿಂದ ಧಾತುಸಂಜ್ಞೆಯನ್ನು ಹೊಂದುವುದು. ಇದರ ಮುಂದೆ **ಆಚೋಯತ್** (ಪಾ. ಸೂ. ೩-೧-೯೭) ಅಜಂತವಾದ ಧಾತುವಿನ ಮುಂದೆ ಯತ್ ಪ್ರತ್ಯಯ ಬರುವುದು ಎಂಬುದರಿಂದ ಯತ್ ಪ್ರತ್ಯಯ ಬರುವುದು. **ಣೇರನಿಟಿ** (ಪಾ. ಸೂ. ೬-೪-೫೫) ಎಂಬುದರಿಂದ ಣಿಗೆ ಲೋಪ ಕಾಮ್ಯ ಎಂದಾಗುವುದು. **ತಿತ್ಸ್ವರಿತಂ** (ಪಾ. ಸೂ. ೬-೧-೧೮೪) ಎಂಬುದರಿಂದ ಸ್ವರಿತ ಪ್ರಾಪ್ತವಾದರೆ ಅದಕ್ಕೆ ಅಪವಾದವಾದ **ಯತೋಽನಾವಃ** (ಪಾ. ಸೂ. ೬-೧-೨೧೩) ಎಂಬುದರಿಂದ ಆದ್ಯುದಾತ್ತ ಬರುವುದು. ಇದರ ಮುಂದೆ ಬರುವ ದ್ವಿತೀಯಾದ್ವಿವಚನ ಔ ಪ್ರತ್ಯಯಕ್ಕೆ **ಸುಪಾಂ ಸುಲುಕ್** (ಪಾ. ಸೂ, ೭-೧-೩೯) ಎಂಬುದರಿಂದ ಡಾ ಆದೇಶ

ಹರತಃ ರಥಂ ಎಂದು ವ್ಯುತ್ಪತ್ತಿಯನ್ನುಮಾಡಿದರೆ ದ್ವಿತೀಯಾ ದ್ವಿವಚನದಲ್ಲಿ ಹರೀ ಎಂದಾಗುತ್ತೆ. **ಹೃ ಪಿ ಷಿ**-(ಉ. ಸೂ. ೪-೨೫೮) ಎಂಬುದರಿಂದ ಹೃ ಧಾತುವಿನ ಮುಂದೆ ಇನ್ ಪ್ರತ್ಯಯ. ಇದು ನಿತ್ತಾದ್ದರಿಂದ ಆದ್ಯುದಾತ್ತ.

ವಿಪಕ್ಷಸಾ ಪಚಿವಚಿಭ್ಯಾಂಸುಟ್ಚ (ವಾ. ಸೂ. ೮-೩-೫೧) **ಡುಪಚೆಷ್ ಪಾಕೇ-ವಚ ಪರಿಭಾಷಣೇ** ಈ ಧಾತುಗಳ ಮುಂದೆ ಅಸುನ್ ಪ್ರತ್ಯಯ ಬರುವುದು, ಪ್ರತ್ಯಯಕ್ಕೆ ಸುಟ್ ಆಗಮವೂ ಬರುವುದು ಎಂಬುದರಿಂದ ಪಚ್ ಧಾತುವಿನ ಮುಂದೆ ಅಸುನ್ ಅದಕ್ಕೆ ಸುಟ್ ಆಗಮವೂ ಬರುವುದು. ಪಚ್+ಸಸ್ ಚೋಃಕುಃ (ಪಾ. ಸೂ. ೮-೨-೩೦) ಎಂಬುದರಿಂದ ಚಕಾರಕ್ಕೆ ಕಕಾರ **ಆದೇಶಪ್ರತ್ಯಯಯೋಃ** (ಪಾ. ಸೂ. ೮-೩-೫೯) ಎಂಬುದರಿಂದ ಪಕ್ಷಸ್ ಸಕಾರಕ್ಕೆ ಷತ್ವ ಎಂದಿರುವುದು ವಿಭಿನ್ನೇ ಪಕ್ಷಸೀ ಪಾರ್ಶ್ವೌ ಯಯೋಸ್ತೌ (ರಥದ ಬೇರೆಬೇರೆಯಾದ ಎರಡು ಪಕ್ಕಗಳಲ್ಲಿ ಕಟ್ಟಿರತಕ್ಕವು) ಎಂದು ವಿಗ್ರಹವಾದಾಗ ವಿಪಕ್ಷಸ್ ಎಂದಾಗುವುದು. ವಿ ಎಂಬುದು ನಿಘಾತವಾದ್ದರಿಂದ ಆದ್ಯುದಾತ್ತ. **ಬಹುವ್ರೀಹೌಪ್ರತ್ಯಾಪೂರ್ವಪದಂ,** (ಪಾ. ಸೂ. ೬-೩-೧) ಎಂಬುದರಿಂದ ವಿಪಕ್ಷಸ್ ಎಂಬಲ್ಲಿ ಆದೇ ಸ್ವರವೇ ನಿಲ್ಲುವುದು, ಇದರಮುಂದೆ ಬರುವ ದ್ವಿತೀಯಾದ್ವಿವಚನಕ್ಕೆ **ಸುಪಾಂಸುಲುಕ್** (ಪಾ.ಸೂ. ೭-೧-೩೯) ಎಂಬುದರಿಂದ ಡಾ ಆದೇಶ

ರಥೇ ರಮಂತ್ಯೇ ಅಸ್ಮಿನ್ನಿತಿ ರಥಃ, ರಮುಕ್ರೀಡಾಯಾಂ ಎಂಬ ಧಾತುವಿನ ಮುಂದೆ **ಹನಿಕುಷಿ ನೀ ರಮಿಕಾಶಿಭ್ಯಃಕ್ಥನ್,** (ಉ ಸೂ. ೨-೧೦೯) ಕ್ಥ ಬರುತ್ತೆ. ಪ್ರತ್ಯಯವು ಕಿತ್ತಾದ್ದರಿಂದ ಧಾತುವಿನ ಮಕಾರಕ್ಕೆ **ಅನುದಾತ್ತೋಪದೇಶ,** (ಪಾ. ಸೂ ೬-೪-೩೭) ಇತ್ಯಾದಿ ಸೂತ್ರದಿಂದ ಲೋಪ, ನಿತ್ಸ್ವರ ಆದ್ಯುದಾತ್ತ ಬರುವುದು.

—

ಶೋಣಾ—ಕುದುರೆಗಳು ಗಮನಕ್ಕೆ ಕರಣವಾಗಿರುವುವು. ಆದ್ದರಿಂದ ' ಶೋಣ್ಯ ವರ್ಣಗತ್ಯೋಃ ಎಂಬ ಶೋಣ್ಯಧಾತುವಿನ ಮುಂದೆ ಕರಣಾರ್ಥದಲ್ಲಿ ಘಞ್ ಪ್ರತ್ಯಯ ಬರುವುದು. ಞಿತ್ತಾದ್ದರಿಂದ ಆದ್ಯುದಾತ್ತ. **ಸುಪಾಂ ಸುಲುಕ್**—(ಪಾ. ಸೂ. ೭-೧-೩೯) ಎಂಬುದರಿಂದ ಟಾಗೆ ಡಾ ದೇಶ.

ಧೃಷ್ಣೂ ಞಿಧೃಷಾಪ್ರಾಗಲ್ಭ್ಯೇ. ಕೃಸಿಗೃಧಿಧೃಷಿಃ ಕ್ಷಿಪೇಃಕ್ನು (ಪಾ. ಸೂ ೩-೨-೧೪೦) ಎಂಬುದರಿಂದ ಧೃಷ್ ಧಾತುವಿನ ಮುಂದೆ ಕ್ನು ಪ್ರತ್ಯಯ. ಪ್ರತ್ಯಯ ಕಿತ್ತಾದ್ದರಿಂದ ಲಘೂಪಧಗುಣ ಬರುವುದಿಲ್ಲ. ಪ್ರತ್ಯಯ ಸ್ವರ ಬರುವುದು.

ನೃವಾಹಸಾ—ನ್ಯನ್-ವಹತಃ ಎಂದು ವಿಗ್ರಹ ಮಾಡಿದಾಗ **ವಹಿಹಾಧಾಞ್ಭ್ಯಶ್ಛಂದಸಿ** (ಉ. ಸೂ. ೪-೬೬೦) ಈ ಧಾತುಗಳ ಮುಂದೆ ಛಂದಸ್ಸಿನಲ್ಲಿ ಅಸುನ್ ಪ್ರತ್ಯಯ ಬರುವುದು. ಅದು ಣಿತ್ತಾಗುವುದು. ಎಂಬುದರಿಂದ ವಹ್ ಧಾತುವಿನ ಮುಂದೆ ಅಸುನ್ ಪ್ರತ್ಯಯ **ಅತ ಉಪಧಾಯಾಃ** (ಪಾ. ಸೂ. ೭-೨-೧೧೬) ಎಂಬುದರಿಂದ ಉಪಧಾವೃದ್ಧಿ. **ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ಟಾಗೆ ಡಾದೇಶ. ನಿತ್ತಾದ್ದರಿಂದ ಆದ್ಯುದಾತ್ತ. **ಗತಿಕಾರಕೋಪಪದಾತ್ಕೃತ್** (ಪಾ ಸೂ. ೬-೨-೧೩೯) ಎಂಬುದರಿಂದ ಕೃದುತ್ತರ ಪದಪ್ರಕೃತಿಸ್ವರ ಬಂದರೆ, ಆದ್ಯುದಾತ್ತವೇ ನಿಲ್ಲುವುದು ॥ ೨ ॥

॥ ಸಂಹಿತಾಪಾಠಃ ॥

ಕೇತುಂ ಕೃಣ್ವನ್ನಕೇತವೇ ಪೇಶೋ ಮರ್ಯಾ ಅಪೇಶಸೇ ।
ಸಮುಷದ್ಭಿರಜಾಯಥಾಃ ॥ ೩ ॥

॥ ಪದಪಾಠಃ ॥

ಕೇತುಂ । ಕೃಣ್ವನ್ । ಅಕೇತವೇ । ಪೇಶಃ । ಮರ್ಯಾಃ । ಅಪೇಶಸೇ ।
ಸಂ । ಉಷದ್ಭಿಃ । ಅಜಾಯಥಾಃ ॥ ೩ ॥

ಸಾಯಣಭಾಷ್ಯಂ

ಹೇ ಮರ್ಯಾ ಮನುಷ್ಯಾ ಇದಮಾಶ್ಚರ್ಯಂ ಪಶ್ಯತೇತ್ಯಧ್ಯಾಹಾರಃ । ಕಿಮಾಶ್ಚರ್ಯಮಿತಿ ತದುಚ್ಯತೇ । ಆದಿತ್ಯರೂಪೋಽಯಮಿಂದ್ರ ಉಷದ್ಭಿರ್ದಾಹಕೈಃ ರಶ್ಮಿಭಿಃ ಪ್ರತಿದಿನಮುಷಃಕಾಲೈರ್ವಾ ಸಂಭೂಯಾಜಾಯಥಾಃ । ಉದಪದ್ಯತ । ಅಥವಾ ಸೂರ್ಯಸ್ಯೈವಾಸ್ತಮಯೇ ಮರಣಮುಪಚರ್ಯ । ವ್ಯತ್ಯಯೇನ ಬಹುವಚನಂ ಕೃತ್ವಾ ಸಂಬೋಧನಂ ಕ್ರಿಯತೇ । ಹೇ ಮರ್ಯ ಪ್ರತಿದಿನಂ ತ್ವಮಜಾಯಥಾ ಇತಿ ಯೋಜ್ಯಂ ಕಿಂ ಕುರ್ವನ್ । ಅಕೇತವೇ ರಾತ್ರೌ ನಿದ್ರಾಭಿಭೂತಕ್ಷೇನ ಪ್ರಜ್ಞಾನರಹಿತಾಯ ಚ

ಪ್ರಾಣಿನೇ ಕೇತುಂ ಕೃಣ್ವನ್ । ಸ್ರಾತಃ ಪ್ರಜ್ಞಾನಂ ಕುರ್ವನ್ । ಅಪೇಶಸೇ ರಾತ್ರ್ಯಾವಂಧಕಾರಾವೃತತ್ವೇನಾನಭಿವ್ಯಕ್ತತ್ವಾದ್ರೂಪರಹಿತಾಯ ಪೆದಾರ್ಥಾಯೆ ಪ್ರಾತರಂಧಕಾರನಿವಾರಣೇನ ಪೇಶೋ ರೂಪಮಭಿವ್ಯಜ್ಯಮಾನಂ ಕುರ್ವನ್ । ಪೇಶ ಇತಿ ರೂಪನಾಮ ಪಿಂಶತೇಃ । ನಿ. ೪-೧೧ । ಇತಿ ಯಾಸ್ಕಃ । ಅಕೇತವೇ೨ಪೇಶಸ ಇತಿ ಚತುರ್ಥೆ ಷಷ್ಠ್ಯರ್ಥೇ ದ್ರಷ್ಟವ್ಯೆ ॥ ಕೇತುಂ ಸ್ರಾತಿಪೆದಿಕಸ್ಪರಃ ಕೃಣ್ವನ್ ಕೃವಿ ಹಿಂಸಾಕರಣಯೋರ್ಜ । ಲಟಃ ಶತ್ರಾದೇಶಃ । ಇದಿತೋ ನುಮ್ ಧಾತೋಃ । ಪಾ ೭-೧-೫೮ । ಇತಿ ನುಮಾಗಮಃ । ಕರ್ತರಿ ಶಪಿ ಸ್ರಾಸ್ತೇ ಧಿನ್ವಿಕೃಣ್ವ್ಯೋರಚೆ । ಪಾ. ೩-೧-೮೦ । ಇತ್ಯುಪ್ರತ್ಯಯಃ । ತಸ್ಪನ್ನಿಯೋಗೇನ ವಕಾರಸ್ಯ ಚಾಕಾರಃ । ಅತೋ ಲೋಪಃ । ಪಾ ೬-೪-೪೮ । ಇತ್ಯಕಾರಲೋಪಃ । ತಸ್ಯ ಸ್ಥಾನಿವದ್ಭಾವಾತ್ಪೂರ್ವಸ್ಯ ಲಘೂಪಧಗುಣೋ ನ ಭವತಿ । ಪಾ. ೭-೪-೬೬ । ಆಕಾರಸ್ಯ ಪ್ರತ್ಯಯಸ್ವರೇಣೋದಾತ್ತತ್ವಂ । ಅಕೇತವೇ । ಬಹುವ್ರೀಹೌ ನಞ್ಸುಭ್ಯಾಂ । ಪಾ. ೬-೨-೧೭೨ । ಇತ್ಯುತ್ತರಪೆದಾಂತೋದಾತ್ತತ್ವಂ । ಪೇಶಃ ನಬ್ಪಿಷಯಸ್ಯಾನಿಸಂತಸ್ಯ । ಫಿ. ೨-೩ । ಇತ್ಯಾದ್ಯುದಾತ್ತಃ । ಮರ್ಯಾಃ। ಛಂದಸಿ ನಿಷ್ಪರ್ಕ್ಯೇತ್ಯಾದೌ । ಪಾ. ೩-೧.೧೩೩ । ಮ್ರಿಯತೇರ್ನಿಪಾತಃ । ಆಮಂತ್ರಿತನಿಘಾತಃ । ಪಾ. ೮-೧-೧೯ । ಅಸಾಮರ್ಥ್ಯಾತ್ಪೂರ್ವಸ್ಯ ನ ಪರಾಂಗವದ್ಭಾವಃ । ಅಪೇಶಸೇ । ನಞ್ಸುಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ಸಂ । ನಿಪಾತ ಆದ್ಯುದಾತ್ತಃ । ಉಷದ್ಭಿಃ । ಉಷ ಪ್ಲುಷ ದಾಹೇ । ಜ್ವಲದ್ಭಿಃ ರಶ್ಮಿಭಿಃ । ಲಟಃ ಶತ್ರಾದೇಶೇ ಶಪಿ ಸ್ರಾಸ್ತೇ ವ್ಯತ್ಯಯೇನ ಶಃ । ಸಾರ್ವಧಾತುಕಮಪಿತ್ । ಪಾ. ೧-೨-೪ । ಇತಿ ತಸ್ಯೆ ಙಿತ್ತ್ವಾಲ್ಲಘೂಪಧಗುಣೋ ನ ಭವತಿ । ಶಸ್ಯ ಪ್ರತ್ಯಯಸ್ವರೇಣೋದಾತ್ತತ್ವಂ ಉಪರಿ ಶತುರದುಪದೇಶಾಲ್ಲಸಾರ್ವಧಾತುಕಾನುದಾತ್ತತ್ವಂ । ಏಕಾದೇಶ ಉದಾತ್ತೇನೋದಾತ್ತಃ । ಅಜಾಯಥಾಃ । ಅಜಾಯತೇತ್ಯರ್ಥೇ ಪುರುಷವ್ಯತ್ಯಯೇ ನಿಘಾತಃ ॥

॥ ಪ್ರತಿಪದಾರ್ಥ ॥

(ಹೇ) ಮರ್ಯಾಃ—ಎಲೈ ಮನುಷ್ಯರೇ (ಈ ಆಶ್ಚರ್ಯವನ್ನು ನೋಡಿ) । ಆದಿತ್ಯರೂಪನಾದ (ಇಂದ್ರನು) ಉಷದ್ಭಿಃ—ಪ್ರತಿದಿನವೂ ಉಷಃಕಾಲದಲ್ಲಿ । ಅಕೇತನೇ—ರಾತ್ರಿಕಾಲದಲ್ಲಿ ನಿದ್ರೆಯಿಂದ ಪ್ರಜ್ಞೆಯಿಲ್ಲದವರಿಗೆ । ಕೇತುಂ—(ಪ್ರಾತಃಕಾಲದಲ್ಲಿ ಎಚ್ಚರಗೊಂಡಾಗ) ಪ್ರಜ್ಞೆಯನ್ನೂ । ಅಪೇಶಸೇ—(ರಾತ್ರಿಕಾಲದಲ್ಲಿ) ಕತ್ತಲೆದೆಶೆಯಿಂದ ಯಾವ ಆಕಾರರೂಪಗಳನ್ನೂ ನೋಡಲು ಅಸಮರ್ಥರಾದವರಿಗೆ ಬೆಳಗಾದಮೇಲೆ । ಪೇಶಃ—(ವಸ್ತುಗಳ) ಆಯಾ ರೂಪಗಳನ್ನು (ನೋಡಲು ಶಕ್ತಿಯನ್ನು) । ಕೃಣ್ವನ್—ಉಂಟುಮಾಡುತ್ತಾ । ಸಂ ಅಜಾಯಥಾಃ—ಉತ್ಪನ್ನವಾಗುವನು ॥

ಅಥವಾ

ಮರ್ಯಾಃ—ಎಲೈ ಮನುಷ್ಯನೇ (ಬಹುವಚನಕ್ಕೆ ಏಕವಚನಾರ್ಥ) । (ತ್ವಂ-ನೀನು) । ಉಷದ್ಭಿಃ ಸಮಜಾಯಥಾಃ—ಪ್ರತಿದಿನವೂ ಸೂರ್ಯಾಸ್ತಮಯ ಕಾಲದಲ್ಲಿ ನಿದ್ರಾವಶದಿಂದ ಮೃತನಂತೆ ಪ್ರಜ್ಞಾರಹಿತನಾಗಿದ್ದು ಪ್ರಾತಃಕಾಲದಲ್ಲಿ ಚೇತನಯುಕ್ತನಾಗಿ ಹುಟ್ಟುವೆ ಎಂದರೆ ಎಚ್ಚರಗೊಳ್ಳುವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಆದಿತ್ಯರೂಪದಿಂದ ಪ್ರತಿದಿನವೂ ಅಸ್ತಮಾನಕಾಲದಲ್ಲಿ ಮುಳುಗುತ್ತಲೂ, ಉಷಃಕಾಲದಲ್ಲಿ ಉದಯಿಸುತ್ತಲೂ ಇರುವೆ. ನೀನು ಅಸ್ತಮಾನನಾದಾಗ ಪ್ರಾಣಿಗಳು ನಿದ್ರಾಭಿಭೂತರಾಗುವುದ

ರಿಂದ ಪ್ರಜ್ಞೆಯಿಲ್ಲದವರಾಗಿರುವರು ಮತ್ತು ಕತ್ತಲೆಯ ದೆಸೆಯಿಂದ ಯಾವ ವಸ್ತುಗಳ ಆಕಾರವನ್ನೂ ಸಹ ನೋಡಲಸಮರ್ಥರಾಗಿರುವರು. ಉಷಃಕಾಲದಲ್ಲಿ ನೀನು ಉದಯಿಸಿದ ಕೂಡಲೆ ಪ್ರಾಣಿಗಳು ಎಚ್ಚರಗೊಂಡು ಪ್ರಜ್ಞೆ ಅಥವಾ ಬುದ್ಧಿಯಿಂದ ಕೂಡಿ ಬೆಳಕಿನಲ್ಲಿ ಸಮಸ್ತವಸ್ತುಗಳ ರೂಪಗಳನ್ನು ನೋಡಲು ಸಮರ್ಥರಾಗುವರು. ಆದುದರಿಂದ ನಿದ್ರೆಯಿಂದ ಮೈಮರೆತಿರುವ ಪ್ರಾಣಿಗಳಿಗೆ ಮತ್ತೆ ಪ್ರಜ್ಞೆಯನ್ನುಂಟುಮಾಡಿ ಸಮಸ್ತವಸ್ತುಗಳ ಆಕಾರಾದಿಗಳನ್ನು ನೋಡಲು ಶಕ್ತಿಯನ್ನು ಪ್ರತಿದಿನವೂ ನೀನೇ ಕೊಡುತ್ತಿರುವೆ.

English Translation

O mortals, (look at this wonder). Indra (in the form of Aditya) rises every day at dawn giving sense to the senseless (while in sleep) and form to the formless.

or O mortal, having been dead (asleep) at the setting of the sun you are born ever with morning rays.

॥ ವಿಶೇಷವಿಷಯಗಳು ॥

ಈ ಋಕ್ಕಿನ ಅರ್ಥವು ಸ್ಪಷ್ಟವಾಗಿಲ್ಲ. ಕೇತುಶಬ್ದಕ್ಕೆ ಪ್ರಜ್ಞೆಯೆಂದು ನಿರುಕ್ತದಲ್ಲಿ ಹೇಳಿರುವುದ (ನಿ. ೩-೧೭). ತೈತ್ತಿರೀಯ ಬ್ರಾಹ್ಮಣದಲ್ಲಿ (೩-೯-೪) ಕೇತುವೆಂದರೆ ಧ್ವಜವೆಂದು ಹೇಳದೆ -**ಕೇತುಂ ಕೃಣ್ವನ್ನ ಕೇತವ ಇತಿ ಧ್ವಜಂ ಪ್ರತಿಮುಂಚತಿ** ಧ್ವಜಸ್ಥಾಪನೆಮಾಡುವಾಗ ಈ ಮಂತ್ರವನ್ನು ಹೇಳುವರು. ಕೇತು ಶಬ್ದಕ್ಕೆ ಧ್ವಜವೆಂದು ಅರ್ಥವಾದರೂ ಇಲ್ಲಿ ಆ ಅರ್ಥವು ಸರಿಹೋಗುವುದಿಲ್ಲ. ಗೃಹ್ಯಕರ್ಮೋಕ್ತಪ್ರಕಾರ ನವಗ್ರಹಾರಾಧನೆ ಮಾಡುವಾಗ ಕೇತುಗ್ರಹವನ್ನು ಆಹ್ವಾನೆಮಾಡುವುದಕ್ಕಾಗಿ ಈ ಮಂತ್ರವನ್ನು ಹೇಳುವರು ಈ ಮಂತ್ರದಲ್ಲಿ ಕೇತುಗ್ರಹವಿಷಯವೇ ಇರುವುದಿಲ್ಲ. ಕೇತು ಎಂಬ ಶಬ್ದಮಾತ್ರ ಪಠಿತವಾಗಿರುವುದರಿಂದ ಇದನ್ನು ಹೇಳುವ ರೂಢಿಯಾಗಿರಬಹುದು. ಅದರಂತೆ ಇತರ ಗ್ರಹಗಳ ಹೆಸರಿನ ಶಬ್ದಗಳಿರುವ ಮಂತ್ರಗಳನ್ನು ಆಯಾ ಗ್ರಹಾರಾಧನೆಯಲ್ಲಿ ಉಪಯೋಗಿಸುವುದೂ ರೂಢಿಯಾಗಿರಬಹುದು. ಏಕೆಂದರೆ ಋಗ್ವೇದದಲ್ಲಿ ನವಗ್ರಹಗಳ ವಿಚಾರವೇ ಇರುವುದಿಲ್ಲ. ಸೂರ್ಯ ಮತ್ತು ಚಂದ್ರ ಎಂಬ ಎರಡು ಹೆಸರುಗಳು ಮಾತ್ರ ಅಲ್ಲಲ್ಲಿ ಕಂಡುಬರುವುದು. ನಕ್ಷತ್ರಗಳ ಹೆಸರು ಸಹ ಇರುವುದಿಲ್ಲ. ಯಜುರ್ವೇದದಲ್ಲಿ ಮಾತ್ರ ನಕ್ಷತ್ರಗಳ ಹೆಸರೂ ಅವುಗಳ ವಿವರಣೆಯೂ ಪೂರ್ಣಿಮಾ ಅಮಾವಾಸ್ಯೆಗಳೂ ವಿವರಿಸಲ್ಪಟ್ಟವೆ. ನವಗ್ರಹಗಳ ಹೆಸರು ಅಲ್ಲಿಯೂ ಇಲ್ಲ. ಆದುದರಿಂದ ಗ್ರಹಯಜ್ಞವು ವೇದಗಳ ಕಾಲದಲ್ಲಿ ಬಳಕೆಯಲ್ಲಿರಲಿಲ್ಲವೆಂದೂ ಈಚಿಗೆ ರೂಢಿಗೆ ಬಂದಿತೆಂದೂ ನಿಸ್ಸಂದೇಹವಾಗಿ ಹೇಳಬಹುದು.

ಪೇಶಃ—**ಪೇಶ ಇತಿ ರೂಪನಾಮ ಪಿಂಶತೇ** (ನಿ. ೮-೧೧) ಪೇಶವೆಂದರೆ ರೂಪವು. **ಅಪೇಶಸೇ**—ರೂಪವಿಲ್ಲದವರಿಗೆ.

ಮರ್ಯಾಃ—ಮನುಷ್ಯರು. ಈ ಶಬ್ದವು ಪ್ರಥಮಾಬಹುವಚನವು. ಈ ಋಕ್ಕಿನಲ್ಲಿ **ಅಜಾಯಥಾಃ** ಎಂಬ ಕ್ರಿಯಾಪದವು ಮಧ್ಯಮಪುರುಷೈಕವಚನವಾಗಿರುವುದು. ಮರ್ಯಾಃ ಎಂಬ ಶಬ್ದವನ್ನು ಕರ್ತೃವೆಂದು

ಭಾವಿಸಿದರೆ ಕ್ರಿಯಾಪದವು ಏಕವಚನವಾಗಿರುವುದರಿಂದ ಒಂದಕ್ಕೊಂದು ಹೊಂದುವುದಿಲ್ಲ. ಛಂದಸ್ಸಿನ ಅನುಕೂಲಕ್ಕಾಗಿ ಮರ್ಯ ಎಂಬ ಏಕವಚನರೂಪವನ್ನು ಮರ್ಯಾ ಎಂದು ದೀರ್ಘವಾಗಿ ಉಪಯೋಗಿಸಿರುವುದೆಂದು ಹೇಳುವ ಪಕ್ಷದಲ್ಲಿ ಇಲ್ಲಿ ಅಂತಹ ಛಂದಸ್ಸಿನ ಅನುಕೂಲಪ್ರತಿಕೂಲಗಳಿಗೆ ಕಾರಣವಿಲ್ಲ. ಏಕೆಂದರೆ ಮರ್ಯಾ ಎಂಬ ಪದದ ಮುಂದೆ ಅಪೇಶಸೇ ಎಂಬ ಪದವಿರುವುದರಿಂದಲೂ ಯಾ ಎಂಬ ಅಕ್ಷರದಲ್ಲಿರುವ ಆಕಾರವು ಮುಂದಿನ ಪದದ ಮೊದಲನೆಯ ಅಕ್ಷರವಾದ ಆಕಾರದೊಡನೆ ಸಂಧಿಯಾಗಬೇಕಾಗಿತ್ತು. ಇಲ್ಲಿ ಹಾಗಿರುವುದಿಲ್ಲ. ಇದಲ್ಲದೆ ಪದಪಾಠದಲ್ಲಿ ಮರ್ಯಾಃ ಎಂದು ವಿಸರ್ಗಾಂತ್ಯವಾದ ಬಹುವಚನಪದವು ಸ್ಪಷ್ಟವಾಗಿದೆ. ಆದುದರಿಂದ ಸಾಯಣರು ಭಾಷ್ಯದ ಪ್ರಾರಂಭದಲ್ಲಿ ಹೇಳಿರುವಂತೆ ಈ ಶಬ್ದವನ್ನು ಸಾಧಾರಣ ಜನರನ್ನು ಸಂಬೋಧನೆಮಾಡುವುದಕ್ಕೆ ಮಾತ್ರ ಉಪಯೋಗಿಸಿರುವುದೆಂದು ಹೇಳಬೇಕು. ಪಾಶ್ಚಾತ್ಯಪಂಡಿತರೂ ಇದೇ ಅಭಿಪ್ರಾಯವನ್ನು ಒಪ್ಪುವರು. ಮರ್ಯ ಎಂಬ ಏಕವಚನಶಬ್ದವನ್ನು ಉಪಯೋಗಿಸುವ ಪಕ್ಷದಲ್ಲಿ ಈ ಸಂದರ್ಭದಲ್ಲಿ ಕ್ವಿಂ ಎಂಬ ಕರ್ತೃಪದವನ್ನು ಅಧ್ಯಾಹಾರಮಾಡಿಕೊಳ್ಳಬೇಕು.

।। ವ್ಯಾಕರಣಪ್ರಕ್ರಿಯಾ ।।

ಕೇತುಮ್—ಫಿಷಃ (ಫಿ. ಸೂ. ೧) ಎಂಬ ಪ್ರಾತಿಪದಿಕ ಸ್ವರದಿಂದ ಕೇತುಶಬ್ದ ಅಂತೋದಾತ್ತ.

ಕೃಣ್ವನ್—ಕೃವಿ ಹಿಂಸಾಕರಣಯೋಶ್ಚ ಎಂಬ ಕೃವಿಧಾತುವಿನ ಮುಂದೆ ಲಟ್ಟನಿಟ್ಟರೆ **ಲಟಶ್ಶತೃಶಾನಚಾವಸ್ಪ್ರಥಮಾಸಮಾನಾಧಿಕರಣೇ** (ಪಾ. ಸೂ. ೩.೨.೧೨೪) ಎಂಬುದರಿಂದ ಶತೃ ಆದೇಶ, ಧಾತುವು ಇದಿತ್ತು (ಇಕಾರೋತ್ಸಂಜ್ಞಕ) ಆದ್ದರಿಂದ **ಇದಿತೋನುಮ್ಧಾತೋಃ** (ಪಾ. ಸೂ. ೭-೧-೫೮) ಇದಿತ್ತಾದ ಧಾತುವಿಗೆ ನುಮ್ ಆಗಮಬರುವುದು ಎಂಬುದರಿಂದ ಬರುವ ನುಮ್ ಆಗಮವು **ಮಿದಚೋಂತ್ಯಾತ್ಪರಃ** (ಪಾ ಸೂ. ೧-೧-೪೭) ಎಂಬ ಪರಿಭಾಷೆಯಿಂದ ಕೃವಿನ ಮುಂದೆ ಬರುವುದು. ಶತೃ ಎಂಬ ಕರ್ತೃರಿಪ್ರತ್ಯಯವು ಪರದಲ್ಲಿರುವುದರಿಂದ **ಕರ್ತರಿಶಪ್** (ಪಾ. ಸೂ. ೩-೧-೬೮) ಎಂಬುದರಿಂದ ಶಪ್ ವಿಕರಣ ಪ್ರಾಪ್ತವಾದರೆ ಅದಕ್ಕೆ ಅಪವಾದವಾದ **ಧಿನ್ವಿಕೃಣ್ಭ್ಯೋರಚಿ**, (ಪಾ ಸೂ. ೩-೧-೮೦) ಧಿನ್ವ್-ಕೃಣ್ವ್ ಇವುಗಳ ಕಡೆಯ ವರ್ಣಕ್ಕೆ ಉಕಾರ ಇವುಗಳ ಮುಂದೆ ಶಪ್ ವಿಕರಣಕ್ಕೆ ಬದಲಾಗಿ ಉ ವಿಕರಣವೂ ಬರುವುದು ಎಂಬುದರಿಂದ ಉಕಾರಾದೇಶವೂ ಉ ಪ್ರತ್ಯಯವೂ ಬಂದರೆ ಕೃನ+ಉ+ಅತ್ **ಅತೋಲೋಪಃ** (ಪಾ. ಸೂ. ೩-೧-೯೦) ಆರ್ಧಧಾತುಕಪ್ರತ್ಯಯೋಪದೇಶ ಕಾಲದಲ್ಲಿ ಉಕಾರಾಂತವಾಗಿರುವುದರ ಉಕಾರಕ್ಕೆ ಆರ್ಧಧಾತುಕ ಪರದಲ್ಲಿರುವಾಗ ಲೋಪಬರುವುದು ಎಂಬುದರಿಂದ ಉ ಪ್ರತ್ಯಯದ ಹಿಂದಿರುವ ಉಕಾರಕ್ಕೆ ಲೋಪ ಬರುವುದು- ಕೃನ್+ಉ+ಅತ್ ಈಗ ಉ ಪ್ರತ್ಯಯವನ್ನು ನಿಮಿತ್ತ ಮಾಡಿಕೊಂಡು **ಪುಗಂತಲಘೂಪಧಸ್ಯ ಚ** (ಪಾ.ಸೂ. ೭-೩-೮೬) ಸಾರ್ವಧಾತುಕ ಆರ್ಧಧಾತುಕ ಪ್ರತ್ಯಯಗಳು ಪರದಲ್ಲಿರುವಾಗ ಪುಕ್ ಎಂಬ ಆಗಮವನ್ನು ಕೊನೆಯಲ್ಲಿ ಹೊಂದಿರುವ ಅಂಗದ ಇಕ್ಕೆಗೂ, ಲಘುವರ್ಣೋಪಧಕವಾದ ಅಂಗದ ಇಕ್ಕೆಗೂ ಗುಣಬರುವುದು ಎಂಬುದರಿಂದ ಗುಣವನ್ನು ಮಾಡುವಾಗ **ಅಚೇಃಪರಸ್ಮಿನ್ಪೂರ್ವವಿಧೌ**, (ಪಾ. ಸೂ. ೧-೧-೫೭) ಎಂಬುದರಿಂದ ಅಲೋಪಕ್ಕೆ ಸ್ಥಾನಿವದ್ಭಾವ ಬರುವುದು. ಉಪಧಾಗುಣವು ಬರುವ ಸ್ಥಳಗಳಲ್ಲಿ ಉಪಧೆಗೂ ನಿಮಿತ್ತವಾದ ಪ್ರತ್ಯಯಕ್ಕೂ ಮಧ್ಯೆ ಒಂದು ವರ್ಣವ್ಯವಿದ್ದೇ ಇರುವುದು. ಆದರೂ **ಯೇನನಾವ್ಯವ್ಯವಧಾನಂ ತೇನ ವ್ಯವಹಿತೇಪಿ, ವಚನಪ್ರಾಮಾಣ್ಯಾತ್ ನಾವ್ಯವಧಾನಂ** ಎಂಬುದಕ್ಕೆ ಅವರ್ಜನೀಯವಾದ ವ್ಯವಧಾನವಿದ್ದರೂ ವಚನಬಲದಿಂದ ಶಾಸ್ತ್ರವು ಪ್ರವೃತ್ತವಾಗುವುದು ಎಂಬುದರಿಂದ, ವ್ಯವಧಾನವಿಲ್ಲದ ಸ್ಥಳದಲ್ಲಿ ಶಾಸ್ತ್ರಕ್ಕೆ ಪ್ರವೃತ್ತಿ ಸರ್ವಥಾ ಇಲ್ಲದೇ ಇರುವುದರಿಂದ ಏಕಮಾತ್ರ ವರ್ಣ ವ್ಯವಧಾನವಿರುವಾಗ

ಬಂದರೂ ಅನೇಕ ವ್ಯವಧಾನವಿರುವಾಗ ಶಾಸ್ತ್ರವು ಪ್ರವೃತ್ತಿಸುವುದಿಲ್ಲ. ಇಲ್ಲಿ ಸ್ಥಾನಿವದ್ಭಾವ ಬಂದಮೇಲೆ ನಕಾರ ಅಕಾರ ಎರಡರಿಂದ ವ್ಯವಧಾನವಾಗುವುದರಿಂದ ಗುಣ ಬರುವುದಿಲ್ಲ. ಕೃನು+ಅತ್ ಬಂಎರುವಾಗ ಶತೃವನ್ನು ನಿಮಿತ್ತ ಮಾಡಿಕೊಂಡು **ಸಾರ್ವಧಾತುಕಾರ್ಧಧಾತುಕಯೋಃ,** (ಪಾ. ಸೂ. ೭-೩-೪೪) ಎಂಬುದರಿಂದ ಗುಣ ಪ್ರಾಪ್ತವಾದರೆ ಕ್ಙಿತಿಚ (ಪಾ- ಸೂ. ೧-೧-೫) ಎಂಬುದರಿಂದ ನಿಷೇಧ ಬಂದು ಇಕೋಯೆಣಚಿ (ಪಾ. ಸೂ. ೬-೧-೭೭) ಎಂಬುದರಿಂದ ಯಣಾದೇಶ ಬಂದರೆ ಕೃನ್ವತ್ ಎಂದಾಗುವುದು. ಶತೃವು ಆದುವದೇಶಾತ್ಪರವಾಗುವುದಿಲ್ಲವಾದ್ದರಿಂದ ತಾಸ್ಯನುದಾತ್ತೇತ್ ಎಂಬ ಅನುದಾತ್ತ ಬರುವುದಿಲ್ಲ. ಪ್ರತ್ಯಯಸ್ವರ ಬಂದರೆ ಶತೃವಿನ ಅಕಾರವು ಆದ್ಯುದಾತ್ತವನ್ನು ಹೊಂದುವುದು. **ಋವರ್ಣಾನ್ನಸ್ಯ ಣತ್ವಂಪಾಚ್ಯೆಂ,** (ಪಾ. ಸೂ. ೮-೪-೧೧) ಎಂಬುದರಿಂದ ಋಕಾರದ ಮುಂದಿರುವ ನಕಾರಕ್ಕೆ ಣಕಾರ, ಕೃಣ್ವತ್ ಇದರ ಮುಂದೆ ಸುಪ್ರತ್ಯಯವನ್ನಿಟ್ಟರೆ **ಉಗಿದಚಾಂ** (ಪಾ. ಸೂ. ೭-೧-೭೦) ಎಂಬುದರಿಂದ ನುಮಾಗಮ, **ಹಲ್ಙ್ಯಾಭ್ಯೋ ದೀರ್ಘಾತ್ಸುತಿಸ್ಯಪೃಕ್ತಂಹಲ್** (ಪಾ, ಸೂ. ೬-೧-೬೮) ಎಂಬುದರಿಂದ ಸು ಲೋಪ, **ಸಂಯೋಗಾಂತಸ್ಯಲೋಪಃ** (ಪಾ, ಸೂ. ೮-೨-೨೩) ಎಂಬುದರಿಂದ ತಲೋಪ. ತಲೋಪವು ಅಸಿದ್ಧವಾಗುವುದರಿಂದ ನಕಾರಕ್ಕೆ ಲೋಪ ಬರುವುದಿಲ್ಲ. ಕೃಣ್ವನ್ ಎಂದಾಗುವುದು.

ಅಕೇತವೇ—ಇಲ್ಲಿ ಬಹುವ್ರೀಹಿಸಮಾಸವನ್ನು ಮಾಡಿದರೆ **ನಞ್ಸುಭ್ಯಾಂ** (ಪಾ. ಸೂ, ೬-೨-೧೭೨) ಎಂಬುದರಿಂದ ಉತ್ತರಪದವು ಅಂತೋದಾತ್ತ.

ಪೇಶಃ— **ನಬ್ವಿಷಯೆಸ್ಯಾನಿಸಂತೆಸ್ಯ** (ಗಾ. ಸೂ ೨೬) ಎಂಬುದರಿಂದ ಆದ್ಯುದಾತ್ತ.

ಮರ್ಯಾಃ—**ಛಂದಸಿನಿಷ್ಪ್ರ್ಕರ್ಷೇವಹೂಯೆಪ್ರಣೇಯೋನ್ನೀಯೋಚ್ಛಿಷ್ಯಮರ್ಯಸ್ತ್ಯರ್ಘ್ಯರ್ಯಖನ್ಯಖಾನ್ಯದೇವಯೆಜ್ಯಾಪೃಚ್ಛೈಪ್ರತಿಷೀವ್ಯಬ್ರಹ್ಮವಾದ್ಯಭಾವ್ಯಸ್ತಾವ್ಯೋಪಚಾಯ್ಯಪೃಡಾನಿ** (ಪಾ. ಸೂ- ೩-೧-೧೩೩) ಛಂದಸ್ಸಿನಲ್ಲಿ ಈ ಶಬ್ದಗಳು ನಿಪಾತಿಸಲ್ಪಡುವುವು ಎಂಬುದರಿಂದ ಮೃಜ್ ಧಾತುವಿನ ಮುಂದೆ ಯತ್ ಪ್ರತ್ಯಯ ನಿಪಾತಿತವಾಗಿರುವುದು. ಆಮಂತ್ರಿತವಾದ್ದರಿಂದ **ಆಮಂತ್ರಿತಸ್ಯಚ** (ಪಾ. ಸೂ. ೮-೧-೧೯) ಎಂಬುದರಿಂದ ಅನುದಾತ್ತ ಬರುವುದು. ಪೇಶಃ, ಎಂಬುದಕ್ಕೆ ಮರ್ಯಾಃ ಎಂಬುದರೊಂದಿಗೆ ಪರಸ್ಪರಾನ್ವಯವಿಲ್ಲವಾದಕಾರಣ ಸಾಮರ್ಥ್ಯವಿಲ್ಲ. ಆದ್ದರಿಂದ **ಸುಬಾಮಂತ್ರಿತೇ** (ಪಾ. ಸೂ. ೨-೧-೨) ಎಂಬುದರಿಂದ ಪರಾಂಗವದ್ಭಾವ ಬರುವುದಿಲ್ಲ.

ಅಪೇಶಸೇ—**ನಞ್ಸುಭ್ಯಾಂ** (ಪಾ. ಸೂ. ೬-೨-೧೭೨) ಎಂಬುದರಿಂದ ಉತ್ತರಪದ ಅಂತೋದಾತ್ತ.

ಸಮ್—ನಿಪಾತವಾದ್ದರಿಂದ ಆದ್ಯುದಾತ್ತ.

ಉಷದ್ಧಿಃ—ಉಷಪ್ಲುಷದಾಹೇ ಧಾತು. ಉಷಧಾತುವಿನ ಮುಂದೆ ಲಟ್ ಪ್ರತ್ಯಯವೂ ಅದಕ್ಕೆ ಶತೃ ಆದೇಶವೂ ಬರುವುದು. ಶತೃ ಪರದಲ್ಲಿರುವಾಗ ಶಪ್ ವಿಕರಣವು ಪ್ರಾಪ್ತವಾದರೆ ಅದಕ್ಕೆ ಬದಲಾಗಿ ವ್ಯತ್ಯಯದಿಂದ ಶ ಎಂಬ ವಿಕರಣವೇ ಬರುವುದು. **ಸಾರ್ವಧಾತುಕಮಪಿತ್** (ಪಾ. ಸೂ. ೧-೨-೪) ಪಿತ್ತಲ್ಲದ ಸಾರ್ವಧಾತುಕವು ಜ್ಞಿತ್ತಿನಂತೆ ಆಗುವುದು. ಎಂಬುದರಿಂದ ಶ ವು ಜ್ಞಿತ್ತಾದ್ದರಿಂದ **ಕ್ಙಿತಿಚ** (ಪಾ. ಸೂ. ೧-೧-೫) ಎಂಬುದರಿಂದ ಲಘೂಪಧಗುಣಕ್ಕೆ ನಿಷೇಧ ಬರುವುದು. ಶ ಎಂಬುದು ಪ್ರತ್ಯಯಸ್ವರದಿಂದ ಉದಾತ್ತ. ಅದರಿ-ಮುಂದಿರುವ ಶತೃವು ಅದುಪದೇಶದ ಪರದಲ್ಲಿರುವ ಲ ಸ್ಥಾನಿಕ ಸಾರ್ವಧಾತುಕವಾದ್ದರಿಂದ, ಅನುದಾತ್ತ, ವಿಕರ-

ಣವ ಅಕಾರ. ಶತೃವಿನ ಅಕಾರಗಳೆರಡಕ್ಕೂ ಅತೋಗುಣೇ ಎಂಬುದರಿಂದ ಪರರೂಪ ಏಕಾದೇಶವಾಗಿ ಬರುವುದು. ಏಕಾದೇಶದಿಂದ ಬಂದ ಅಕಾರವು ಏಕಾದೇಶ ಉದಾತ್ತೇನೋದಾತ್ತಃ (ಪಾ. ಸೂ. ೮-೨-೫) ಎಂಬುದರಿಂದ ಉದಾತ್ತ

ಅಜಾಯಥಾಃ—ಅಜಾಯತ ಎಂಬ ಪ್ರಥಮ ಪುರುಷಕ್ಕೆ ಬದಲಾಗಿ ವ್ಯತ್ಯಯದಿಂದ ಮಧ್ಯಮ ಪುರುಷ ಬಂದಿರುವುದು. ತಿಙ್ಶಿತಿಜಃ (ಪಾ. ಸೂ, ೮-೧-೨೮) ಎಂಬುದರಿಂದ ಅನುದಾತ್ತ ॥ ೩ ॥

ಸಂಹಿತಾಪಾಠಃ

ಆದಹ॑ ಸ್ವ॒ಧಾಮನು॒ ಪುನ॑ರ್ಗರ್ಭ॒ತ್ವಮೇ॑ರಿರೇ ।
ದಧಾ॑ನಾ॒ ನಾಮ॑ ಯ॒ಜ್ಞಿಯಂ ॥ ೪ ॥

॥ ಪದಪಾಠಃ ॥

ಆತ್ । ಅಹ॑ । ಸ್ವ॒ಧಾಂ । ಅನು॑ । ಪುನ॑ಃ । ಗ॒ರ್ಭ॒ತ್ವಂ । ಆ । ಈ॒ರಿ॒ರೇ॒ ।
ದಧಾ॑ನಾಃ । ನಾಮ॑ । ಯ॒ಜ್ಞಿಯಂ ॥ ೪ ॥

॥ ಸಾಯಣಭಾಷ್ಯಂ ॥

ಆತ್ರಾಸ್ತಿ ವಿಶೇಷವಿನಿಯೋಗಃ । ಚತುರ್ವಿಂಶೇಽಹನಿ ಪ್ರಾತಃಸವನೇ ಬ್ರಾಹ್ಮಣಾಚ್ಛಂಸಿಶಸ್ತ್ರ ಆದಹ ಸ್ವಧಾಮನ್ವಿತಿ ದ್ವೇ ಋಚೌ । ಇಂದ್ರೇಣ ಸಂ ಹಿ ದೃಕ್ಷಸ ಇತ್ಯೇಕಾ । ಅಯಂ ತೃಚಃ ಷಳೆಹ-ಸ್ತೋತ್ರಿಯಸಂಜ್ಞಕಃ । ತಥಾ ಚ ಸೂತ್ರಿತಂ ಚತುರ್ವಿಂಶೇ ಹೋತಾಜನಿಷ್ಟೇತಿ ಖಂಡೇ । ಇಂದ್ರೇಣ ಸಂ ಹಿ ದೃಕ್ಷಸ ಆದಹ ಸ್ವಧಾಮನ್ವಿತ್ಯೇಕಾ ದ್ವೇ ಚ । ಆ. ೭-೨ । ಇತಿ । ಯದ್ಯಪ್ಯೇತದೈಂದ್ರಂ ಸೂಕ್ತಂ ತಥಾಪ್ಯಾದಹೇತ್ಯಾದಿಷು ಷಟ್ಸು ಮರುತೋ ವರ್ಣ್ಯಂತೇ । ಪ್ರಾಯೇಣೈಂದ್ರೇ ಮರುತ ಇತ್ಯನುಕ್ರಮಣಿ-ಕಾಯಾಮುಕ್ತತ್ವಾತ್ । ಅನು. ೨ ೨೨ ॥ ಆದಿತ್ಯಯೇಮಾನಂತರ್ಯಾರ್ಥೋ ನಿಪಾತಃ । ಅಹೇತ್ಯವಧಾರ-ಣಾರ್ಥಃ । ಅದಹ ವರ್ಷತೋರನಂತರಮೇವ । ಸ್ವಧಾಮನು । ಇತಃ ಪರಂ ಜನಿಷ್ಯಮಾಣಮನ್ನ-ಮುದಕಂ ವಾನುಲಕ್ಷ್ಯ ಮರುತೋ ದೇವಾ ಗರ್ಭತ್ವಮೇರಿರೇ । ಮೇಘಮಧ್ಯೇ ಜಲಸ್ಯ ಗರ್ಭಾಕಾರಂ ಪ್ರೇರಿತವಂತಃ । ಜಲಸ್ಯ ಕರ್ತಾರಂ ಪರ್ಜನ್ಯಂ ಪ್ರೇರಿತವಂತಃ । ಪ್ರತಿಸಂವತ್ಸರಮೇವಂ ಕುರ್ವಂತೀತಿ ದರ್ಶಯಿತುಂ ಪುನಃಶಬ್ದಃ ಪ್ರಯುಕ್ತಃ । ಕೀದೃಶಾ ಮರುತಃ । ಯಜ್ಞಿಯಂ ಯಜ್ಞಾರ್ಹಂ ನಾಮ ದಧಾನಾ ಧಾರಯಂತಃ । ಸಪ್ತಸು ಗಣೇಷು ಮರುತಾನಿಂದ್ರಜ್ಯಾನ್ಯಾದೃಜ್ಯಶ್ವೀತ್ಯಾದೀನಿ ಯಜ್ಞಾರ್ಹಾಣ್ಯ-ಗ್ಯಾನಿ ನಾಮಾನ್ಯನ್ಯತ್ರಾಮ್ನಾತಾನಿ । ಆಂಧ ಇತ್ಯಾದಿಷ್ವಷ್ಟಾವಿಂಶತಿಸಂಖ್ಯಾಕೇಷ್ವನ್ನನಾಮಸೂರ್ಕ್ ರಸಃ

ಸ್ವಧೇತಿ ಪಠಿತಂ । ಅರ್ಣ ಇತ್ಯಾದಿಸ್ತೋಕತತಸಂಖ್ಯಾಕೇಷೂದಕನಾಮಸು ತೇಜಃ ಸ್ವಧಾಕ್ಷರಮಿತಿ ಪಠಿತಂ॥ ಆದಹ ನಿಪಾತಾವಾದ್ಯುದಾತ್ತೌ । ಸ್ವಧಾಂ । ಸ್ವಂ ಲೋಕಂ ದಧಾತಿ ಪುಷ್ಣಾತೀತಿ । ಸ್ವಧಾ । ಆತೋಽನುಪಸರ್ಗೇ ಕಃ । ಪಾ. ೩-೨-೩ । ಕೃದುತ್ತರಪದಪ್ರಕೃತಿಸ್ವರತ್ವಂ । ಅನುಪುನಃಶಬ್ದೌ ನಿಪಾತಾವಾದ್ಯುದಾತ್ತೌ । ಗರ್ಭಸ್ಯ ಭಾವೋ ಗರ್ಭತ್ವಂ । ಪ್ರತ್ಯಯಸ್ವರಃ । ಏರಿರೇ । ಅಂತರ್ಭಾವಿತಣ್ಯರ್ಥಾದೀರ ಗತಾವಿತ್ಯಸ್ಮಾದನುದಾತ್ತೇತಃ ಪರಸ್ಯ ಲಿಟೋ ಝುಸ್ಯ ಇರೇಚ್ । ಪಾ. ೩-೪-೮೧ । ಚಿತ್ತ್ವಾದಂತೋದಾತ್ತಃ । ಸಹ ಸುಪಾ । ಪಾ. ೨-೧-೪ । ಇತ್ಯತ್ರ ಸುಪೇತಿ ಯೋಗವಿಭಾಗಾದಾಜೂ ಸಹ ತಿಙಃ ಸಮಾಸೇಽಪಿ ಸಮಾಸಸ್ಯ । ಪಾ. ೬-೧-೨೨೩ । ಇತ್ಯಂತೋದಾತ್ತತ್ವಂ । ಇಜಾದೇಶ್ಚ ಗುರುಮತೋಽನೃಚ್ಛಃ । ಪಾ. ೩-೧-೩೬। ಇತ್ಯಾಮ್ ನ ಭವತಿ ಮಂತ್ರತ್ವಾತ್ । ಅಹಶಬ್ದಯೋಗಾನ್ನಿಘಾತಾಭಾವಃ । ತುಪಶ್ಯಪಶ್ಯತಾಹ್ಯೈಃ ಪೂಜಾಯಾಂ । ಪಾ. ೮-೧-೬೯ । ಇತಿ ನಿಷೇಧಾತ್ । ದಧಾನಾಃ । ಶಾನಚೌ ತ್ವಾವಂತೋದಾತ್ತತ್ವೇ ಪ್ರಾಪ್ತೇಽಭ್ಯಸ್ತಾನಾಮಾದಿಃ । ಪಾ. ೬-೧-೧೮೪ । ಇತ್ಯಾದ್ಯುದಾತ್ತತ್ವಂ । ಯಜ್ಞಮರ್ಹತಿ ಯಜ್ಞಿಯಂ । ಯಜ್ಞಾರ್ತ್ವಿಗ್ಭ್ಯಾಂ ಘಖಞೌ । ಪಾ ೫-೧-೭೧ । ಇತಿ ಘಪ್ರತ್ಯಯಃ । ಆಯನೇಯಾನೀಯಿಯಃ ಫಢಖಛಾಂ ಪ್ರತ್ಯಯಾದೀನಾಂ । ಪಾ. ೭-೧-೨ । ಇತೀಯಾದೇಶಃ । ಪ್ರತ್ಯಯಸ್ವರೇಣೇಕಾರ ಉದಾತ್ತಃ ॥

॥ ಪ್ರತಿಪದಾರ್ಥ ॥

ಆತ್ ಅಹ—(ವರ್ಷಾಕಾಲವು ಕಳೆದ) ನಂತರದಲ್ಲಿಯೇ । **ಯಜ್ಞಿಯಂ**—ಯಜ್ಞಾರ್ಹವಾದ । **ನಾಮ**—ಹೆಸರನ್ನು । **ದಧಾನಾಃ**—ಧರಿಸಿರುವ (ಮರುತ್ತುಗಳು ಎಂದರೆ ಮರುದ್ದೇವತೆಗಳು) । **ಸ್ವಧಾಂ ಅನು**—(ಇನ್ನು ಮೇಲೆ ಬೆಳೆಯಬೇಕಾಗಿರುವ ಸಸ್ಯರೂಪವಾದ) ಅನ್ನವನ್ನೂ, ಉದಕವನ್ನೂ (ಉಂಟುಮಾಡುವುದಕ್ಕಾಗಿ) **ಪುನಃ**—ಮತ್ತೆ (ಹಿಂದಿನ ವರ್ಷಾಕಾಲದಲ್ಲಾದಂತೆ ಈಗಲೂ ಸಹ) । **ಗರ್ಭತ್ವಂ**—(ಮೇಘಮಧ್ಯದಲ್ಲಿ ಜಲವು ಗರ್ಭಾಕಾರದಂತೆ ಒಟ್ಟಾಗಿ ಸೇರುವಂತೆ) ಉದಕವು ಮೇಘಮಂಡಲದಲ್ಲಿ ಒಟ್ಟಾಗಿ ಸೇರುವುದನ್ನು । **ಏರಿರೇ**—ಪ್ರೇರಿಸಿದರು (ಎಂದರೆ ಮಳೆಯನ್ನುಂಟುಮಾಡುವ ಪರ್ಜನ್ಯನನ್ನು ಪ್ರೇರಿಸಿದರು).

॥ ಭಾವಾರ್ಥ ॥

ವರ್ಷಾಕಾಲವು ಕಳೆದನಂತರ ಯಜ್ಞಯಾಗಾದಿಗಳಲ್ಲಿ ಗೌರವಿಸಲ್ಪಡುವ ಹೆಸರುಗಳಿಂದ ಪ್ರಸಿದ್ಧರಾದ ಮರುದ್ದೇವತೆಗಳು ಜನರಿಗೆ ಸಸ್ಯರೂಪವಾದ ಅನ್ನ ಮತ್ತು ಉದಕಗಳನ್ನು ಕೊಡುವುದಕ್ಕಾಗಿ ಪುನಃ ಹಿಂದಿನಂತೆ ಈಗಲೂ ವೃಷ್ಟಿಕರ್ಮದ ಅಂಗವಾಗಿ ಗರ್ಭವನ್ನು ಎಂದರೆ ಮೇಘಮಧ್ಯದಲ್ಲಿ ಜಲವು ಒಟ್ಟಾಗಿ ಸೇರಿ ಗರ್ಭರೂಪದಿಂದಿರುವಂತೆ ಪರ್ಜನ್ಯನನ್ನು ಪ್ರೇರಿಸಿದರು.

English Translation.

Thereafter (the Maruts) who bear the names invoked in sacrificial rites, having seen the rain about to be engendered instigated him to resume his embryo condition (in the clouds)

॥ ವಿಶೇಷವಿಷಯಗಳು ॥

ಭಾಷ್ಯಕಾರರು ಈ ಋಕ್ಕಿಗೆ ವಿಶೇಷವಿನಿಯೋಗವಿದೆಯೆಂದು ಹೇಳಿರುವರು. ಇಪ್ಪತ್ತನಾಲ್ಕನೆಯ ದಿವಸದ ಹಗಲಿನಲ್ಲಿ ಪ್ರಾತಸ್ಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು **ಆದಹ ಸ್ವಧಾಮನು** ಎಂದು ಮೊದಲಾದ ಎರಡು ಋಕ್ಕುಗಳನ್ನೂ (ಎಂದರೆ ಈ ಸೂಕ್ತದ ೪ ಮತ್ತು ೫ನೆಯ ಋಕ್ಕುಗಳು) **ಇಂದ್ರೇಣ ಸಂ ಹಿ ದೃಕ್ಷಸೇ** ಎಂಬ (ಈ ಸೂಕ್ತದ ೭ನೇ ಋಕ್ಕು) ಒಂದು ಋಕ್ಕನ್ನು ಎಂದರೆ ಈ ಮೂರು ಋಕ್ಕುಗಳೂ ಸೇರಿದ ತೃಚವನ್ನು ಶಸ್ತ್ರಮಂತ್ರವನ್ನಾಗಿ ಪಠಿಸುವನು. ಈ ತೃಚಕ್ಕೆ (ಮೂರು ಋಕ್ಕುಗಳಿಗೆ) ಸಳಹಸ್ತೋತ್ರಿಯವೆಂದು ಹೆಸರಿರುವುದು. ಈ ವಿಷಯದಲ್ಲಿ ಆಶ್ವಲಾಯನರು ತಮ್ಮ ಶ್ರೌತಸೂತ್ರದ ಹೋತಾಜನಿಸ್ಪರ್ವೆಂಬ ಖಂಡದಲ್ಲಿ **ಇಂದ್ರೇಣ ಸಂ ಹಿ ದೃಕ್ಷಸ ಆದಹ ಸ್ವಧಾಮನ್ವಿತ್ಯೇಕಾ ದ್ವೇ ಚೆ** (ಆಶ್ವ. ಸೂ. ೭-೨) ಎಂದು ಹೇಳಿರುವರು. ಈ ಸೂಕ್ತವು ಇಂದ್ರದೇವತಾಕವಾಗಿದ್ದರೂ ಆದಹ ಎಂದು ಮೊದಲಾದ ಈ ಸೂಕ್ತದ ಆರು ಋಕ್ಕುಗಳಲ್ಲಿ ಮರುದ್ದೇವತೆಗಳು ವರ್ಣಿಸಲ್ಪಟ್ಟಿರುವರು. ಪ್ರಾಯಶಃ ಈ ಕಾರಣಕ್ಕಾಗಿಯೇ ಅನುಕ್ರಮಣಿಕೆಯಲ್ಲಿ (ಅನು. ೨-೨೭) ಐಂದ್ರೋ ಮರುತ ಎಂದು ಉಕ್ತವಾಗಿರುವುದು.

ಈ ಋಕ್ಕಿನ ಅರ್ಥವೂ ಸ್ಪಷ್ಟವಾಗಿಲ್ಲ ಮರುತ್ತುಗಳ ಹೆಸರೂ ಈ ಋಕ್ಕುಗಳಲ್ಲಿಲ್ಲವಾದರೂ ಭಾಷ್ಯಕಾರರೂ ಅನುಕ್ರಮಣಿಕೆಯನ್ನನುಸರಿಸಿ ಮರುತ್ತುಗಳ ಪರವಾಗಿಯೇ ಅರ್ಥಮಾಡಿರುವರು. ವರ್ಷಾಕಾಲದಲ್ಲಿ ಕಪ್ಪಗಿರುವ ದೊಡ್ಡ ದೊಡ್ಡ ಮೋಡಗಳು ಗುಂಪಾಗಿ ಸೇರುವುದರಿಂದ ಅವುಗಳಲ್ಲಿ ಕೂಡುವ ಜಲರಾಶಿಯನ್ನು ಗರ್ಭವೆಂದು ಇಲ್ಲಿ ವರ್ಣಿಸಲಾಗಿದೆ ಈ ರೀತಿಯಾದ ಮೇಘಗರ್ಭದಿಂದ ಜನರಿಗೆ ವೃಷ್ಟಿರೂಪವಾದ ಉದಕವೂ, ಸಸ್ಯರೂಪವಾದ ಅನ್ನವೂ ದೊರೆಯುವುದರಿಂದ ಇದನ್ನು ಮರುದ್ದೇವತೆಗಳು ಪ್ರೇರಿಸುವರೆಂದು ಭಾವವು.

ಆತ್--ಅನಂತರ ಎಂದರೆ ವರ್ಷಾಕಾಲವು ಕಳೆದ ಅನಂತರ ಎಂದರ್ಥವು

ಅಹ--ಏವ ಅವಧಾರಣಾರ್ಥ ಅಥವಾ ಇದನ್ನು ಆಶ್ಚರ್ಯಸಂಜ್ಞಾವಾಚಕಪದವೆಂದೂ ಭಾವಿಸಬಹುದು.

हे परिज्मन् परितो व्याप्तिन्मरुद्गण अतोऽस्थान्मरुद्गणस्थानादंतरिक्षादा गहि । आस्मिन्नस्मदीयकर्मणि । दिवो वा । द्युलोकादा सं आगच्छ । रोचनादधि । दीप्यमानादादित्यमंडलादा सं आगच्छ । अस्मदीयकर्मकाले यत्र यत्र तिष्ठसि ततः सर्वस्मादागच्छेत्यर्थः । किमर्थमागमनमिति तदुच्यते । अस्मिन्नस्मदीयकर्मणि वर्तमाने ऋत्विग्गिरः स्तुतीः संयंजते । संयुक्ता प्रसाधयति । ऋंजतिः प्रसाधनकर्मा । नि ३-१० । इति यास्कः । एताः स्तुतीः क्रोत्तुमागच्छेत्यर्थः । यदेवंप्रकृतिजा मंत्रस्य प्रथमोत्तमपुरुषनिर्देशात्प्रथमपुरुषप्रयोगः । परोक्षकृतलक्षणं च यास्क आह । तास्त्रिविधा ऋचः परोक्षकृताः प्रत्यक्षकृता आध्यात्मिक्यश्च । तत्र परोक्षकृताः सर्वाभिर्नामभिर्भक्तिभिर्युज्यंते । प्रथमपुरुषैश्चाख्याताः । नि ३-८ । इति ॥ अतः । पंचम्यास्तसिल् । पा ५-३-७ । एतदोऽश् । पा. ५-३-५ । शित्त्वात्सर्वादेशः । पा १-१-५५ । लित्करणं प्रत्ययोत्पूर्वसोर्यदात्तत्वं । परिज्मन् । अज गतिक्षेपणयोः । अन्येभ्योऽपि दृश्यंते । पा. ३-२ ७५ । इति मनिन् । अकारलोपश्छांदसः । आमंत्रितनिघातः । गहि । गमेर्बहुलं छंदसि । पा. २-४-७३ । इति शपो लुक् । श्लेर्जित्त्वात् । पा.६-४-७८ । अनुदात्तोपदेशेत्यादिना । पा. ६-४-३७ । मलोपः । आतो धेः । पा ६-४ ८०५ । इति हिलोपः । वो न भवति । तस्मिन्नुत्तर्तव्ये ऽसिद्धवदत्र भात् । पा ६-४ २२ । इति मलोपस्यासिद्धत्वेनाकारांतत्वात् । दिवः । ऊडिदं मित्यादिना विभक्तेरुदात्तत्वं । पा । चायोनुदात्तः । फि ४ ८५ । इत्यनुदात्तः । रोचनात् । रुच दीप्तौ । आनुदात्तेतश्च हलादेः । पा ३ ३-८४ । इति युच् । युवोरनाकौ । पा. ७-१-१ । इत्यनादेशः । चिदित्यंतोदात्तः । अधि । अधिपरी अनर्थकौ । पा १-४-९३ । इति कर्मप्रवचनीयत्वेन सह निपातसंज्ञायाः सनामादेशान्निपाता आद्युदात्ता इत्याद्युदात्तः । अस्मिन् । परिज्मन्नित्यादिष्वस्यैवान्यादेशादिदमोऽन्यादेशेऽशनुदात्तस्य वृत्तिरेयादेः । पा. ३-४-३ । इत्यशं आनुदात्तः शित्त्वात्सर्वादेशः । विभक्तिरनुदात्तौ सुप्तिङौ । पा. ३ ८-४ । इत्यनुदात्तेति सर्वानुदात्तत्वं । ऋंजतेः । ऋजी भृजी भर्जने । समित्युपसर्गयोगात्प्रसाधने वर्तने । निघातः । गिरः । प्रातिपदिकस्वरः ॥

॥ ಪ್ರತಿಪದಾರ್ಥ ॥

ಹೇ ಪರಿಜ್ಮನ್—ಸುತ್ತಲೂ ವ್ಯಾಪಿಸಿರುವ ಮರುದ್ಗಣ (ವೇ) ಗಳೇ. **ಆತಃ**—ನಿಮ್ಮ ಸ್ವಸ್ಥಾನವಾದ ಅಂತರಿಕ್ಷದಿಂದಲಾಗಲಿ **ದಿವೋ ವಾ**-ಸ್ವರ್ಗಲೋಕದಿಂದಲಾಗಲಿ । **ರೋಚನಾತ್**-ಪ್ರಕಾಶಮಾನವಾದ ಸೂರ್ಯ ಮಂಡಲದಿಂದಾಗಲಿ । **ಅಸ್ಮಿನ್**—ಈಗ ನಾವು ಮಾಡುತ್ತಿರುವ ಯಜ್ಞದಲ್ಲಿ ಎಂದರೆ ಯಜ್ಞಪ್ರದೇಶಕ್ಕೆ । **ಅಧಿ ಆ ಗಹಿ**—ಬನ್ನಿರಿ । (ಮತ್ತು ಋತ್ವಿಜನು) **ಗಿರಃ**—ಸ್ತೋತ್ರಗಳನ್ನು । **ಸಮ್ಯಂಜತೇ**—ನಿಮ್ಮ ಪ್ರಸಾಧನಕ್ಕಾಗಿ ಪಠಿಸುವನು ॥

॥ ಭಾವಾರ್ಥ ॥

ಎಲೈ ಮರುದ್ದೇವತೆಗಳೇ. ನೀವು ಸರ್ವತ್ರ ವ್ಯಾಪಿಸಿರತಕ್ಕವರು. ನಾವು ಯಜ್ಞ ಮಾಡುತ್ತಿರುವ ಈ ಸಮಯದಲ್ಲಿ ನೀವು ಅಂತರಿಕ್ಷದಲ್ಲಿದ್ದರೆ ಅಲ್ಲಿಂದಲೇ ಬನ್ನಿ.—ಸ್ವರ್ಗಲೋಕದಲ್ಲಿದ್ದರೆ ಅಲ್ಲಿಂದಲೇ ಬನ್ನಿ. ಅಥವಾ ಸೂರ್ಯಮಂಡಲದಲ್ಲಿದ್ದರೆ ಅಲ್ಲಿಂದಲಾದರೂ ಬನ್ನಿ. ನೀವು ಈಗ ಎಲ್ಲಿದ್ದರೂ ಅಲ್ಲಿಂದಲೇ ಬನ್ನಿ ಈಗ ಋತ್ವಿಜನು (ಎಂದರೆ ಮಂತ್ರದ್ರಷ್ಟೃವಾದ ಮಧುಚ್ಛಂದಋಷಿಯು) ನಿಮ್ಮ ಆಗಮನಕ್ಕಾಗಿ ನಿಮ್ಮನ್ನು ಸ್ತೋತ್ರಗಳಿಂದ ಸ್ತುತಿಸುವನು.

English Translation

O pervader-on-all-sides, come hither from the regions (of the Maruts) or from the sky or from the radiant solar sphere. For in the rite (the priest) fully recites your praises.

॥ ವಿಶೇಷನಿಷಯಗಳು ॥

ಪರಿಜ್ಮನ್—ಸುತ್ತಲೂ ಇರುವ, ಎಲ್ಲೆಲಿಯೂ ಸಂಚರಿಸುವ. ಎಂದರೆ ಗಾಳಿಯು ಭೂಮಿ, ಅಂತರಿಕ್ಷ ಸ್ವರ್ಗ ಮೊದಲಾದ ಸರ್ವಸ್ಥಳದಲ್ಲಿಯೂ ಸದಾ ಬೀಸುತ್ತಿರುವುದೆಂದರ್ಥವು.

ದಿವೋ ವಾ ರೋಚನಾದಧಿ—ಸ್ವರ್ಗದಿಂದಾಗಲಿ ಅಥವಾ ಆದಿತ್ಯಮಂಡಲದಿಂದಾಗಲಿ ಎಂದು ಭಾಷ್ಯಕಾರರು ಹೇಳಿರುವರು. ಅಥವಾ ರೋಚನಾತ್ ಎಂಬ ಪದಕ್ಕೆ ಪ್ರಕಾಶಮಾನವಾದ ಎಂದು ಅರ್ಥವನ್ನು ಹೇಳಿ ದಿವಃ ಎಂಬ ಶಬ್ದಕ್ಕೆ ವಿಶೇಷಣಪದವನ್ನಾಗಿ ಬೇಕಾದರೂ ಭಾವಿಸಬಹುದು. ಇಲ್ಲಿ ಅಧಿ ಶಬ್ದವು ಇರುವುದರಿಂದ ಭಾಷ್ಯಕಾರರು ರೋಚನಾತ್ ಎಂದರೆ ಪ್ರಕಾಶಮಾನವಾದ ಸೂರ್ಯಮಂಡಲವೆಂದು ಅರ್ಥಮಾಡಿರುವರು. ಸ್ಕಂದಸ್ವಾಮಿಯು ಅಧಿ ಶಬ್ದವನ್ನು ಆ ಗಹಿ ಎಂಬ ಕ್ರಿಯಾಪದದೊಡನೆ ಸೇರಿಸಿ ಅನ್ವಯಮಾಡಬೇಕೆಂದು ಹೇಳುವರು.

ಋಂಜತೇ—ಋಂಜತಿಃ ಪ್ರಸಾಧನಕರ್ಮಾ (ನಿ. ೬-೨೧) ಎಂದು ಯಾಸ್ಕರು ನಿರುಕ್ತದಲ್ಲಿ ಹೇಳಿರುವರು. ಇಲ್ಲಿ ಸ್ತೋತ್ರಮಾಡುವ ಋತ್ವಿಜನು ಈ ಮಂತ್ರದ್ರಷ್ಟೃವಾದ ಮಧುಚ್ಛಂದಋಷಿಯೇ ಆಗಿ

ದ್ವರೂ ಉತ್ತಮಪುರುಷಪ್ರಯೋಗವನ್ನು ಮಾಡದೆ ಪ್ರಥಮಪುರುಷಕ್ರಿಯಾಪದವನ್ನು ಉಪಯೋಗಿಸಿರುವರು. ಏಕೆಂದರೆ ಸ್ತುತಿಸಲ್ಪಡುವ ಮರುದ್ದೇವತೆಗಳು ಎದುರಿಗೆ ಇಲ್ಲದಿರುವುದರಿಂದ ಪರೋಕ್ಷವಾಗಿ (ಪ್ರತ್ಯಕ್ಷವಲ್ಲದ) ಸ್ತುತಿಸಿರುವರು. ಇಂತಹ ಸಂದರ್ಭದಲ್ಲಿಯೂ- ದೇವತೆಗಳನ್ನು ಸಂಬೋಧನೆ ಮಾಡದೆ ಅವರ ಸಂಬಂಧವಾದ ಪ್ರಶಂಸೆಯನ್ನು ಅಥವಾ ಯಾವುದಾದರೊಂದು ವಿಷಯವನ್ನು ಮಾತ್ರ ಹೇಳುವ ಋಕ್ಕುಗಳು ಪ್ರಥಮಪುರುಷ ಕರ್ತೃಕ್ರಿಯೆಗಳಿಂದ ಕೂಡಿದ್ದರೆ **ಪರೋಕ್ಷಕೃತ** ಎಂಬ ಋಕ್ಕುಗಳ ಗುಂಪಿಗೆ ಸೇರುವವು. ಋಕ್ಕುಗಳಲ್ಲಿ **ಪರೋಕ್ಷ-ಕೃತ, ಪ್ರತ್ಯಕ್ಷಕೃತ, ಆಧ್ಯಾತ್ಮಿಕ** ಎಂದು ಮೂರು ವಿಧವು. ಯಾಸ್ಕರು ಹೇಳಿರುವ ಈ ವಿಷಯವನ್ನು ನಾವು ಹಿಂದೆಯೇ (ಪೇಜು ೨೦೫) ವಿವರಿಸಿದೇನೆ.

॥ ವ್ಯಾಕರಣಪ್ರಕ್ರಿಯಾ ॥

ಅತಃ ಪಂಚಮ್ಯಾಸ್ತಸಿಲ್, (೫-೭-೩) ದ್ಯ್ವಾದಿಗಳನ್ನು ಬಿಟ್ಟು ಪಂಚಮ್ಯಂತಗಳಾದ ಕಿಂ ಸರ್ವ-ನಾಮ ಬಹುಶಬ್ದಗಳ ಮುಂದೆ ವಿಕಲ್ಪವಾಗಿ ತಸಿಲ್ ಪ್ರತ್ಯಯ ಬರುವುದು ಎಂಬುದರಿಂದ ಏತದ್+ಜಸ್ ಎಂಬು ದರ ಮುಂದೆ ಏತಸ್ಮಾತ್ ಎಂದು ವಿಗ್ರಹಮಾಡಿದಾಗ ತಸಿಲ್ ಪ್ರತ್ಯಯ ಬರುವುದು. **ಸುಪೋಧಾತುಪ್ರಾತಿಪದಿ-ಕಯೋಃ** (ಪಾ.ಸೂ. ೨-೪-೭೧) ಎಂಬುದರಿಂದ ತದ್ಧಿತಾಂತವಾದ್ದರಿಂದ ಪ್ರಾತಿಪದಿಕವಾದ ಏತದ್ ಜಸ್ ತಸಿಲ್ ಎಂಬುದರ ಜಸ್‌ಗೆ ಲುಕ್ ಬರುವುದು. **ಏತದೋಽನ್** (ಪಾ.ಸೂ. ೫-೩-೫) ಈ ಸೂತ್ರವನ್ನು ಏತದಃ ಎಂದೂ ಅನ್ ಎಂದೂ ಎರಡಾಗಿ ಭಾಗ ಮಾಡುವರು- ಮೊದಲನೆಯದಕ್ಕೆ ರೇಫಾದಿಯಾದ ವಾ-ಥಕಾರಾದಿಯಾದ ಪ್ರಾಗ್ದಿಶೀಯಪ್ರತ್ಯಯ ಪರದಲ್ಲಿರುವಾಗ ಏತಚ್ಛಬ್ದಕ್ಕೆ ಏತ ಇತ ಎಂಬ ಆದೇಶಗಳು ಬರುವುವು ಎಂದರ್ಥ. ಎರಡನೆಯದಕ್ಕೆ ಪ್ರಾಗ್ದಿಶೀಯಪ್ರತ್ಯಯವು ಪರದಲ್ಲಿರುವಾಗ ಏತದ್ ಶಬ್ದಕ್ಕೆ ಅನ್ ಬರುವುದು ಎಂದರ್ಥ. **ಪ್ರಕೃತದಲ್ಲಿ** ಏತದ್+ತಸಿಲ್ ಎಂದಿರುವಾಗ ಎರಡನೆಯದರಿಂದ ಅನ್ ಆದೇಶ ಬರುವುದು. ನಿತ್ಸ್ವರವು ಪ್ರತ್ಯಯವಿಷಯದಲ್ಲಿ ಬರುವುದರಿಂದ ಅನ್‌ನ ನಕಾರಕ್ಕೆ ಇತ್ಸಂಜ್ಞೆಯಿಂದ ಪ್ರಯೋಜನವಿಲ್ಲ. ಆದ್ದರಿಂದ ನಕಾರಕ್ಕೆ ಇತ್ಸಂಜ್ಞೆ ಬರುವುದಿಲ್ಲ. ಅನ್ ಎಂಬುದು ಅನೇಕಾಲ್ ಆದ್ದರಿಂದ **ಅನೇಕಾಲ್ಶಿತ್ಸರ್ವಸ್ಯ** (ಪಾ. ಸೂ. ೧-೧-೫೫) ಅನೇಕಾಲ್ ಆದೇಶವೂ ಶಕಾರೇತ್ಸಂಜ್ಞಕವಾದ ಆದೇಶವೂ ಷಷ್ಠ್ಯಂತಪದಬೋಧ್ಯವಾದ ಸಂಪೂರ್ಣಶಬ್ದದ ಸ್ಥಾನದಲ್ಲಿ ಬರುವುದು ಎಂಬುದರಿಂದ ಏತದ್ ಎಂಬ ಸಂಪೂರ್ಣಸ್ಥಾನದಲ್ಲಿ ಅನ್ ಬರುವುದು. ಅನ್+ತಸಿಲ್ ಎಂದಾಗುವುದು. **ಸ್ವಾದಿಷ್ವಸರ್ವನಾಮಸ್ಥಾನೇ** (ಪಾ. ಸೂ. ೪-೧-೧೭) ಕ ಪ್ರತ್ಯಯಾವಧಿಕ ಅಸರ್ವನಾಮ-ಸ್ಥಾನ ಸ್ವಾದಿಪ್ರತ್ಯಯದ ಹಿಂದಿರುವುದು ಪದಸಂಜ್ಞೆಯನ್ನು ಹೊಂದುವುದು ಎಂಬುದರಿಂದ ತಸಿಲ್ ಪ್ರತ್ಯಯದ ಹಿಂದಿರುವ ಅನ್ ಗೆ ಪದಸಂಜ್ಞೆ ಬರುವುದು **ಲೋಪಃ ಪ್ರಾತಿಪದಿಕಾಂತಸ್ಯ** (ಪಾ. ಸೂ. ೮-೨-೭) ಎಂಬುದರಿಂದ ನಲೋಪ ಪ್ರತ್ಯಯದ ಇಲ್‌ಗಳಿಗೆ ಇತ್ಸಂಜ್ಞೆಲೋಪ. ಅತಸ್ ರುತ್ವವಿಸರ್ಗಗಳು ಬಂದರೆ ಅತಃ ಎಂದಾಗುವುದು. ಕಾಶಿಕೆಯಲ್ಲಿ ಏತದೋನ್ ಎಂಬ ಸೂತ್ರವನ್ನು ಏತದೋ೭ಶ್ ಎಂದು ಪಠಿಸಿರುವರು. ಅಶ್ ಶಿತ್ತಾದ್ದರಿಂದ ಸರ್ವಾದೇಶವಾಗಿ ಬರುವುದು. ಸೂತ್ರಾರ್ಥಕ್ರಮವು ಮೊದಲಿನಂತೆಯೇ. ಈ ಪಾಠವನ್ನನುಸರಿಸಿ ಮಾಧವಾಚಾರ್ಯರು ಏತದೋ೭ಶ್ ಎಂಬುದರಿಂದ ಅಶಾದೇಶವನ್ನು ಹೇಳಿರುವರು. ತಸಿಲ್ ಪ್ರತ್ಯಯವು ಲಿತ್ತಾದ್ದರಿಂದ **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಹಿಂದೆ ಇರುವ ವರ್ಣವು ಉದಾತ್ತ.

ಪರಿಜ್ಮನ್—ಅಜಗತಿಕ್ಷೇಪಣಯೋಃ **ಅನ್ಯೇಭ್ಯೋ೭ಪಿ ದೃಶ್ಯಂತೇ** (ಪಾ. ಸೂ ೩-೨-೭೫) ಮನಿನ್ ಕ್ವನಿಪ್, ವನಿಪ್ ವಿಚ್ ಈ ಪ್ರತ್ಯಯಗಳು ಧಾತುಗಣ ಮುಂದೆ ಬರುವುವು ಎಂಬುದರಿಂದ ಅಜಧಾತುವಿನಮುಂದೆ

ಮನಿನ್ ಪ್ರತ್ಯಯ, ಅಜಧಾತುವಿನ ಅಕಾರಕ್ಕೆ ಛಾಂದಸವಾಗಿ ಲೋಪಬರುವುದು. **ಪರಿಜ್ಮಾನಂ ಸುಖಂ ರಥಂ** (ಋ. ಸಂ. ೧-೨-೩) ರಲ್ಲಿ ಬೇರೆ ವಿಧವಾಗಿ **ಪರಿಜ್ಮ** ಎಂದು ವ್ಯುತ್ಪಾದಿತವಾಗಿದೆ. **ಆಮನ್ತ್ರಿತಸ್ಯ ಚ** (ಪಾ. ಸೂ. ೮-೧-೧೯) ಎಂಬುದರಿಂದ ಅನುದಾತ್ತ.

ಗಹಿ—ಗಮ್ಲೃಗತೌ ಧಾತುವಿನ ಮುಂದೆ ಲೋಟ್ ಮಧ್ಯಮಪುರುಷ ಏಕವಚನ ಸಿಪ್ಪನ್ನು ಇಟ್ಟರೆ **ಸೇರ್ಹ್ಯಪಿಚ್ಚೆ** (ಪಾ. ಸೂ. ೩-೪-೮೭) ಲೋಟ್ ಸ್ಥಾನದಲ್ಲಿ ಬಂದ ಸಿಗೆ ಹಿ ಆದೇಶ ಬರುವುದು. ಅದು ಅಪಿತ್ತೂ ಆಗುವುದು ಎಂಬುದರಿಂದ ಸಿಪ್ ಗೆ ಹಿ ಬಂದರೆ ಗಮ್+ಹಿ. ಹಿಯು ಅಪಿತ್ತಾದ್ದರಿಂದ **ಸಾರ್ವಧಾತುಕಮಪಿತ್** (ಪಾ ಸೂ. ೧-೨-೪) ಅಪಿತ್ತಾದ ಸಾರ್ವಧಾತುಕವು ಙಿತ್ತಾಗುವುದು ಎಂಬುದರಿಂದ ಙಿತ್ತು ಆದ್ದರಿಂದ **ಅನುದಾತ್ತೋಪದೇಶವನತಿತನೋತ್ಯಾದೀನಾಮನುನಾಸಿಕಲೋಪೋ ಝಲಿಕ್ಙಿತಿ** (ಪಾ. ಸೂ. ೬-೪-೩೭) ಝಲಾದಿಯಾಗಿಕಿತ್ತು ಅಥವಾ ಙಿತ್ತು ಆದ ಪ್ರತ್ಯಯಗಳು ಪರದಲ್ಲಿರುವಾಗ ಅನುನಾಸಿಕಾಂತವಾದ ಅನುದಾತ್ತೋಪದೇಶ ಧಾತುಗಳು ಅನುನಾಸಿಕಾಂತವಾದ ತನೋತ್ಯಾದಿ ಧಾತುಗಳು, ವನ ಧಾತು ಇವುಗಳ ಕೊನೆಯಲ್ಲಿರುವ ಅನುನಾಸಿಕಕ್ಕೆ ಲೋಪ ಬರುವುದು ಎಂಬುದರಿಂದ ಗಮ್ ಧಾತುವಿನ ಮಕಾರಕ್ಕೆ ಲೋಪ ಬರುವುದು. ಈ ಅನುನಾಸಿಕ ಲೋಪವು **ಅಸಿದ್ಧವದತ್ರಾಭಾತ್** (ಪಾ. ಸೂ. ೬-೪-೨೨) ಈ ಸೂತ್ರವನ್ನಾರಂಭಿಸಿ ಈ ಪಾದ ಮುಗಿಯುವ ಪರ್ಯಂತಕ್ಕೆ (ಪೂರ್ತಾ) ಅಭೀಯವೆಂದು ಹೆಸರು. ಸಮಾನಾಶ್ರಯವಾದ ಅಭೀಯವನ್ನು ಮಾಡುವಾಗ ಅಭೀಯಶಾಸ್ತ್ರವು ಅಸಿದ್ಧವಾಗುವುದು. ಆಗ ಗಮ್ ಎಂಬುದು ಮ ಲೋಪವನ್ನು ಹೊಂದಿದ್ದರೂ, ಅದು ಅಸಿದ್ಧವಾಗುವುದರಿಂದ ಮಕಾರಾಂತದಂತೆ ಆಗುವುದೇ ವಿನಾ ಅಕಾರಾಂತವಾಗುವುದಿಲ್ಲ. ಆದ್ದರಿಂದ **ಅತೋಹೇಃ** (ಪಾ. ಸೂ. ೬-೪-೧೦೫) ಅತಃಪರವಾದ ಹಿ ಗೆ ಲುಕ್ ಬರುವುದು. (ಅತಃ ಎಂಬುದಕ್ಕೆ ಹ್ರಸ್ವಾಕಾರಕ್ಕಿಂತಲೂ ಎಂದರ್ಥ) ಎಂಬುದರಿಂದ ಲುಕ್ ಬರುವುದಿಲ್ಲ.

ದಿವಃ—**ಊಡಿದಂ ಪದಾದ್ಯಪ್ಪುನ್ಸ್ರೈದ್ಯುಭ್ಯಃ** (ಪಾ.ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಯು ಉದಾತ್ತ. ವಾ-ಇದು ಚಾದಿಗಣದಲ್ಲಿರುವುದರಿಂದ **ಚಾದಯೋಽನುದಾತ್ತಾಃ** (ಫಿ. ಸೂ. ೪೪) ಎಂಬುದರಿಂದ ಅನುದಾತ್ತ.

ರೋಚನಾತ್—**ಅನುದಾತ್ತೇತಶ್ಚ ಹಲಾದೇಃ** (ಪಾ.ಸೂ. ೩-೧-೧೪೯) ಅಕರ್ಮಕವೂ ಹಲಾದಿಯೂ ಆದ ಅನುದಾತ್ತೇತ್ಸಂಜ್ಞಕವಾದ ಧಾತುವಿನ ಮುಂದೆ ಯುಚ್ ಬರುವುದು ಎಂಬುದರಿಂದ ಯುಚ್ ಪ್ರತ್ಯಯ ಬಂದರೆ ರುಚ್+ಯು ಎಂದಿರುವುದು. **ಯುವೋರನಾಕೌ** (ಪಾ. ಸೂ. ೭-೧-೧) ಅನುನಾಸಿಕಗಳಾದ ಯು ವು ಇವುಗಳಿಗೆ ಕ್ರಮವಾಗಿ ಅನ, ಅಕ ಈ ಆದೇಶಗಳು ಬರುವುವು ಎಂಬುದರಿಂದ ಯು ಗೆ ಅನ ಆದೇಶ. ರುಚ್+ಅನ ಲಘೂಪಧಗುಣ ಬಂದರೆ ರೋಚನ. ಪಂಚಮಿಾ ವಿಭಕ್ತಿ ಏಕವಚನದಲ್ಲಿ ರೋಚನಾತ್ ಎಂದಾಗುವುದು. ಪ್ರತ್ಯಯವು ಚಕಾರೇತ್ಸಂಜ್ಞಕವಾದ್ದರಿಂದ **ಚಿತೇಃ** (ಪಾ. ಸೂ. ೬-೧-೧೬೩) **ಚಿತಸ್ಸಪ್ರಕೃತೇರ್ಬಹ್ವಜರ್ಥಂ** (ಪಾ. ಸೂ. ೬-೧-೧೬೩ ವಾ. ೧) ಚಕಾರೇತ್ಸಂಜ್ಞಕವಾದ ಪ್ರತ್ಯಯವು ಬಂದಿರುವ ಕಡೆಯಲ್ಲಿ ಪ್ರಕೃತಿಪ್ರತ್ಯಯ ಸಮುದಾಯದ ಅಂತ್ಯವು ಉದಾತ್ತವಾಗುವುದು ಎಂದು ಹೇಳಬೇಕು. ಇಲ್ಲದಿದ್ದರೆ ಬಹುಚ್ ಪ್ರತ್ಯಯ ಮತ್ತು ಅಜಚ್ ಪ್ರತ್ಯಯ ಬಂದ ಸ್ಥಳಗಳಲ್ಲಿ ಇಷ್ಟಸಿದ್ಧಿಯಾಗುವುದಿಲ್ಲ. **ವಿಭಾಷಾಸುಪೋಬಹುಚ್‌ಪುರಸ್ತಾತ್** (ಪಾ. ಸೂ. ೫-೩-೬೮) ಎಂಬ ಸೂತ್ರದಿಂದ ಪ್ರಕೃತಿಯ ಪೂರ್ವಕ್ಕೆ ಬಹುಚ್ ಪ್ರತ್ಯಯ ಬರುವುದು. ಈಷದೂನಃ ಪಟುಃ ಬಹುಪಟುಃ ಎಂದು ಉದಾಹರಣೆ. **ಅವ್ಯಯೇಸರ್ವನಾಮ್ನಾಮಕಚ್ ಪ್ರಾಕ್ಟೇಃ** (ಪಾ.ಸೂ. ೫-೩-೭೧) ಎಂಬುದ

ರಿಂದ ಬರುವ ಅಕಚ್ ಪ್ರತ್ಯಯವು ಟಿಯ ಹಿಂದೆ ಬರುವುದು ಅನ್ಯಕೇ ಎಂದು ಉದಾಹರಣೆ. ಚಿತಃ ಎಂಬಲ್ಲಿ ವಾರ್ತಿಕಾನುಸಾರ ಅರ್ಥವನ್ನಿಟ್ಟುಕೊಳ್ಳದೇ ಇದ್ದರೆ ತೋರಿಸಿರುವ ಈ ಎರಡು ಉದಾಹರಣೆಗಳಲ್ಲಿ ಕೊನೆಯ ವರ್ಣವು ಉದಾತ್ತವಾಗಲಾರದು. ರೋಚನ ಎಂಬಲ್ಲಿ ಪ್ರಕೃತಿ ಪ್ರತ್ಯಯ ಸಮುದಾಯದ ಅಂತ್ಯಕ್ಕೆ ಉದಾತ್ತ ಬರುವುದು.

ಅಧಿ—ಅಧಿಪರೀ ಅನರ್ಥಕೌ (ಪಾ. ಸೂ. ೧-೪-೯೩) ವಿಶೇಷವಾದ ಅರ್ಥವನ್ನು ಬೋಧಿಸದೇ ಇರುವ ಅಧಿ, ಪರಿ ಇವುಗಳು ಕರ್ಮಪ್ರವಚನೀಯಸಂಜ್ಞೆಯನ್ನೂ ನಿಪಾತಸಂಜ್ಞೆಯನ್ನೂ ಹೊಂದುವುವು ಎಂಬುದರಿಂದ ಅಧಿ ಎಂಬುದಕ್ಕೆ ಕರ್ಮಪ್ರವಚನೀಯಸಂಜ್ಞೆಯೊಂದಿಗೆ ನಿಪಾತಸಂಜ್ಞೆಯು ಇರುವುದರಿಂದ **ನಿಪಾತಾ ಆದ್ಯುದಾತ್ತಾಃ** (ಫಿ ಸೂ. ೮೦) ಎಂಬದರಿಂದ ಆದ್ಯುದಾತ್ತ ಬರುವುದು.

ಆಸ್ಮಿನ್—ಇದನ್ ಶಬ್ದಕ್ಕೆ ಸಪ್ತಮಿವಿಭಕ್ತಿ ಪರದಲ್ಲಿರುವಾಗ **ತ್ಯದಾದೀನಾಮಃ** (ಪಾ. ಸೂ. ೭-೩-೧೦೨) ತ್ಯದಾದಿಗಣದಲ್ಲಿರುವ ಶಬ್ದಗಳ ಕೊನೆಯ ವರ್ಣಕ್ಕೆ ಅಕಾರಾದೇಶ ಬರುವುದು ಎಂಬುದರಿಂದ ಅಕಾರಾದೇಶವೂ **ಅತೋಗುಣೇ** (ಪಾ. ಸೂ. ೬-೧-೯೭) ಪದಾಂತವಲ್ಲದ ಹ್ರಸ್ವಾಕಾರವ ಮುಂದೆ ಗುಣ (ಿ, ಏ, ೋ) ವರ್ಣಗಳು ಇದ್ದರೆ ಪರರೂಪ ಬರುವುದು ಎಂಬುದರಿಂದಪರರೂಪವೂ ಬಂದರೆ ಇದ+ಙಾ ಎಂದಿರುವುದು. ಈಗ ಪರಿಜ್ಞಾನ್ ಶಬ್ದದಿಂದ ಬೋಧಿತವಾದ ಮರುದ್ಗಣಕ್ಕೆ ಅಸ್ಮಿನ್ ಶಬ್ದದಿಂದ ಪರಾಮರ್ಶವಾಗುವುದರಿಂದ ' ಕಿಂಚಿತ್ಕಾರ್ಯಂ ವಿಧಾತುಮುಪಾತ್ತಸ್ಯಕಾರ್ಯಾಂತರಂ ವಿಧಾತುಂ ಪುನರುಪಾದಾನನುನ್ಯಾದೇಶಃ ' ಎಂಬ ಲಕ್ಷಣವನ್ನು ಅನುಸರಿಸಿ ಇದು ಅನ್ಯಾದೇಶವಿಷಯದಲ್ಲಿರುವುದು. ಆದ್ದರಿಂದ **ಇದಮೋನ್ಯಾದೇಶೇಶ್ವಶನುದಾತ್ತಸ್ತೃತೀಯೋದಾ** (ಪಾ.ಸೂ. ೨-೪-೩೪) ತೃತೀಯಾದಿ ವಿಭಕ್ತಿಪರದಲ್ಲಿರುವಾಗ ಅನ್ಯಾದೇಶವಿಷಯವಾದ ಇದಮ್ ಶಬ್ದಕ್ಕೆ ಅನುದಾತ್ತವಾದ ಅಶ್ ಬರುವುದು ಎಂಬುದರಿಂದ ಅಶ್ ಆದೇಶವು ಶಿತ್ತಾದ್ದರಿಂದ ಇದಂ ಶಬ್ದದ ಸಂಪೂರ್ಣ ಸ್ಥಾನದಲ್ಲಿ ಅನುದಾತ್ತವಾದ ಅಶ್ ಆದೇಶ ಬರುವುದು. ಙಾ ಎಂಬುದಕ್ಕೆ **ಙಿಸಿಙ್ಯೋಃಸ್ಮಾತ್‌ಸ್ಮಿನೌ** (ಪಾ.ಸೂ. ೭-೧-೧೫) ಅಕಾರಾಂತ ಸರ್ವನಾಮಶಬ್ದದ ಮುಂದಿರುವ ಪಂಚಮಿವಿಭಕ್ತಿಯ ಙಸ್ ಸಪ್ತಮಿವಿಭಕ್ತಿಯ ಙಾ ಇವುಗಳಿಗೆ ಕ್ರಮವಾಗಿ ಸ್ಮಾತ್ ಸ್ಮಿನ್ ಆದೇಶಗಳು ಬರುವುವು ಎಂಬುದರಿಂದ ಸ್ಮಿನ್ ಆದೇಶ ಬಂದರೆ ಅಸ್ಮಿನ್ ಎಂದಾಗುವುದು. ಸ್ಮಿನ್ ಎಂಬ ವಿಭಕ್ತಿಯು **ಅನುದಾತ್ತೌಸುಪ್ಪಿತೌ** (ಪಾ ಸೂ. ೩-೧-೪) ಎಂಬುದರಿಂದ ಅನುದಾತ್ತ. ಈ ರೀತಿಯಲ್ಲಿ ಅಸ್ಮಿನ್ ಎಂಬುದು ಸರ್ವಾನುದಾತ್ತವು.

ಋಞ್ಜತೇ—ಋಜಿ ಭೃಜೀ ಭರ್ಜನೇ. ಋಜಿಧಾತುವು ಇದಿತ್ತಾದ್ದರಿಂದ **ಇದಿತೋನುಮ್‌ಧಾತೋಃ** (ಪಾ. ಸೂ. ೭-೧-೫೮) ಎಂಬುದರಿಂದ ನುಮ್ ಆಗಮ ಬರುವುದು. ನಂತರ **ಅನುಸ್ವಾರ** (ಪಾ.ಸೂ. ೮-೩-೨೪) **ಪರಸವರ್ಣ** (ಪಾ. ಸೂ. ೮-೪-೫೮) ಗಳು ಬಂದರೆ ಋಞ್ಜ ಎಂದಾಗುವುದು. ಲಟ್ ಆತ್ಮನೇಪದ ಪ್ರಥಮ ಪುರುಷ ಏಕವಚನದಲ್ಲಿ **ಋಞ್ಜತೇ** ಎಂದಾಗುವುದು. **ತಿಙ್ಶಿತಿಙಃ** (ಪಾ. ಸೂ. ೮-೧-೨೮) ಎಂಬುದರಿಂದ ಅನುದಾತ್ತ. **ಉಪಸರ್ಗೇ ಚ ಧಾತ್ವರ್ಥೋಬಲಾದನ್ಯತ್ರನೀಯತೇ । ಪ್ರಹಾರಾಹಾರಸಂಹಾರವಿಹಾರಪರಿಹಾರವತ್ ಹಲಞ್ ಧಾತುವಿಗೆ ಹರಣವೆಂದರ್ಥ.** ಆದರೂ ಪ್ರ ಉಪಸರ್ಗ ಸೇರಿದರೆ ಪ್ರಹಾರ ಪೆಟ್ಟು ಎಂದರ್ಥವಾಗುವುದು. ಆಙ್ ಉಪಸರ್ಗ ಸೇರಿದರೆ ಆಹಾರ, ತಿನ್ನತಕ್ಕದ್ದು ಎಂದೂ ಸಂ ಉಪಸರ್ಗ ಸೇರಿದರೆ ಸಂಹಾರ ಕೊಲ್ಲುವುದು ಎಂದೂ ವಿ ಉಪಸರ್ಗ ಸೇರಿದರೆ ವಿಹಾರ, ಆಡುವಿಕೆ ಎಂದೂ ಪರಿ ಶೇರಿದರೆ ಪರಿಹಾರ ಬಿಡುಗಡೆ

ಎಂದೂ ನಾನಾವಿಧವಾದ ಅರ್ಥಗಳು ಉಪಸರ್ಗಬಲದಿಂದ ತೋರುವುವು. ಇದೇ ರೀತಿಯಲ್ಲಿ ಮಿಕ್ಕ ಕಡೆಗಳಲ್ಲಿ ಉಪಸರ್ಗ ಬಲದಿಂದ ಧಾತುಗಳಿಗೆ ಬೇರೆ ಬೇರೆ ಅರ್ಥವು ಏರ್ಪಡುವುದು ಎಂದು ಶ್ಲೋಕದ ಅರ್ಥ. ಇಲ್ಲಿ ಭರ್ಜನಾರ್ಥದಲ್ಲಿ ಋಜೀ ಧಾತುವನ್ನು ಪಠಿಸಿದ್ದರೂ ಸಂ ಎಂಬ ಉಪಸರ್ಗವು ಸೇರಿರುವುದರಿಂದ ಅಲಂಕಾರ ಎಂಬ ಅರ್ಥವನ್ನು ಋಜಿಧಾತುವು ಬೋಧಿಸುವುದು. ಗಿರಃ—ಪ್ರಾತಿಪದಿಕ ಸ್ವರ ಬರುವುದು. ॥ ೯ ॥

॥ ಸಂಹಿತಾಪಾಠಃ ॥

ಇತೋ᳡ ವಾ ಸಾ᳡ತಿಮೀಮಹೇ ದಿ᳡ವೋ ವಾ ಪಾರ್ಥಿ᳡ವಾದಧಿ ।
ಇಂ᳡ದ್ರಂ ಮಹೋ᳡ ವಾ ರಜ᳡ಸಃ ॥ ೧೦ ॥

॥ ಪದಪಾಠಃ ॥

ಇ᳡ತಃ । ವಾ । ಸಾ᳡ತಿಂ । ಈ᳡ಮಹೇ । ದಿ᳡ವಃ । ವಾ । ಪಾರ್ಥಿ᳡ವಾತ್ । ಅಧಿ᳡ ॥
ಇಂ᳡ದ್ರಂ । ಮ᳡ಹಃ । ವಾ । ರಜ᳡ಸಃ ॥ ೧೦ ॥

॥ ಸಾಯಣಭಾಷ್ಯಂ ॥

ಇಂದ್ರಂ ದೇವಂ ಪ್ರತಿ ಸಾತಿಂ ಧನದಾನಮಧೀಮಹೇ । ಆಧಿಕ್ಯೇನ ಯಾಚಾಮಹೇ । ಕಸ್ಮಾ-ಲ್ಲೋಕಾದಿತಿ ತದುಚ್ಯತೇ । ಇತೋ೭ಸ್ಮಾದಭಿದೃಶ್ಯಮಾನಾತ್ಪಾರ್ಥಿವಾತ್ಪೃಥಿವೀಲೋಕಾದ್ವಾ ದಿವೋ ವಾ ದ್ಯುಲೋಕಾದ್ವಾ ಮಹೋ ಮಹತಃ ಪ್ರೌಢಾದ್ರಜಸೋ ವಾ ಪಕ್ಷ್ಯಾದೀನಾಂ ರಂಜಕಾದಂತರಿಕ್ಷ-ಲೋಕಾದ್ವಾ । ಆಯಮಿಂದ್ರೋ ಯತಃಕುತಶ್ಚಿದಾನೀಯಾಸ್ಮಭ್ಯಂ ಧನಂ ಪ್ರಯಚ್ಛೆತ್ಯಿತ್ಯರ್ಥಃ । ಸಪ್ತದಶಸು ಯಾಚ್ಞಾಕರ್ಮಸ್ವೀಮಹೇ ಯಾಮಿತಿ ಪಠಿತಂ ॥ ಇತಃ । ಇತಃ । ಇದಂಶಬ್ದಾತ್ಪಂಚ ಮಾಸ್ತಸಿಲ್ । ಇದಮ ಇಶ್ । ಪಾ. ೫-೩-೩ । ಇತೀಶ್ । ತಿತ್ವಾತ್ಸರ್ವಾದೇಶಃ । ಅತ್ರೋದಿದಮಿತ್ಯ-ಸ್ಯಾವಕಾಶಃ । ಪಾ. ೬-೧-೧೭೧ । ಅಭ್ಯಾಂ ಏಭಿಃ । ಲಿತೀತ್ಯಸ್ಯಾವಕಾಶಃ । ಪಾ. ೬-೧-೧೯೩ । ಪಚನಂ ಪಾಚಕಃ । ಉಭಾವಪಿ ನಿತ್ಯೌ । ತತ್ರ ಪರತ್ವಾದ್ವಿಪ್ರತಿಷೇಧೇ ಪರಂ ಕಾರ್ಯಂ । ಪಾ. ೧-೪-೨ । ಇತಿ ಲಿತೀತೀಕಾರಸ್ಯೋದಾತ್ತತ್ವಂ । ಪಶ್ಚಾತ್ತಸೇಃ ಪ್ರಾಗ್ದಿಶೋ ವಿಭಕ್ತಿಃ । ಪಾ ೫-೩-೧ । ಇತಿ ವಿಭಕ್ತಿಸಂ-ಜ್ಞಕತ್ವಾದೂಡಿದಮಿತ್ಯಾದಿನಾಸರ್ವನಾಮಸ್ಥಾನವಿಭಕ್ತೇರುಚ್ಯಮಾನಮುದಾತ್ತತ್ವಂ ಭವತಿ । ಸಕೃ-ದ್ಗತೌ ವಿಪ್ರತಿಷೇಧೇ ಯದ್ಬಾಧಿತಂ ತದ್ಬಾಧಿತಮೇವ । ಪರಿ. ೪೦ । ಇತ್ಯೂಡಿದಮಿತ್ಯಸ್ಯ ಪುನರಪ್ರವೃತ್ತಿ-ರೇವೇತಿ ಚೇನ್ನ । ಲಕ್ಷ್ಯಾನುರೋಧೇನ ಪುನಃ ಪ್ರಸಂಗವಿಜ್ಞಾನಂ ಚೇತಿ ಸ್ವೀಕಾರಾತ್ । ನನ್ವೇವಂ ಯತಸ್ತತ ಇತ್ಯಾದಾವಪಿ ಪರೇಣ ಲಿತ್ಸರ್ವೇಣ ಬಾಧಿತಮಪಿ ಸಾವೇಕಾಚ ಇತಿ ತಸಿಲ ಉದಾತ್ತತ್ವಂ

ಸ್ಯಾದಿತಿ ಚೇನ್ನ । ಯತ್ತಚ್ಚಬ್ದಯೋಃ ಸಾವವರ್ಣಾಂತತ್ವೇ ನ ಗೋಶ್ವನ್ಯಾವವರ್ಣೇತಿ । ಪಾ. ೬-೧-೧೮೨। ನಿಷೇಧಾತ್ । ನ ಚ ಪುನಃ ಪ್ರಸಂಗವಿಜ್ಞಾನಂ ಚೇತ್ಯೇತತ್ಸಾರ್ವತ್ರಿಕಂ ಲಕ್ಷ್ಯಾನುರೋಧೇನ ಕ್ವಚಿದೇವ ತದಾಶ್ರಯಣಾದಿತಿ । ಸಾತಿಂ । ಷಣು ದಾನೇ । ಧಾತ್ವಾದೇಃ ಷಃ ಸಃ । ಪಾ ೬-೧-೬೪ । ಭಾವೇ ಕ್ತಿನ್ । ಜನಸನಖನಾಂ ಸನ್ಝಲೋಃ । ಪಾ. ೬-೪-೪೨ । ಇತಿ ನಕಾರಸ್ಯಾತ್ವಂ । ತಿತುತ್ರತಥಸಿಸುಸರಕಸೇಷು ಚ । ಪಾ. ೮-೨-೯ । ಇತಿ ನಿಷೇಧಾದಿನ್ನ ಭವತಿ । ನಿತ್ಸರ್ವೇ ಪ್ರಾಪ್ತ ಉದಾತ್ತ ಇತ್ಯನುವೃತ್ತಾವುದಿತಿಯೊತಿ-ಜೂತಿಸಾತಿಹೇತಿಕೀರ್ತಯೇಶ್ಚ । ಪಾ ೩-೩-೯೭ । ಇತಿ ನಿಪಾತನಾದಂತೋದಾತ್ತತ್ವಂ । ಈಮಹೇ । ಈಙ್ ಗತೌ । ಶ್ಯನೋಽಪಿ ಬಹುಲಂ ಛಂದಸೀತಿ ಲುಕ್ । ಅಸ್ಯ ಧಾತೋರ್ಜುತ್ತ್ವಾತ್ತಾಸ್ಯನುದಾತ್ತೇನ್ನಿದುಪದೇಶಾತ್। ಪಾ. ೬-೧-೧೮೬। ಇತಿ ಲಸಾರ್ವಧಾತುಕಸ್ಯಾನುದಾತ್ತತ್ವೇ ಧಾತುಸ್ವರ ಏವ ಶಿಷ್ಯತೇ। ನ ಚ ತಿಜ್ವತಿಜ ಇತಿ ನಿಘಾತಃ । ಚಿವಾಯೋಗೇ ಪ್ರಥಮಾ । ಪಾ. ೮-೧-೫೯ । ಇತಿ ನಿಷೇಧಾತ್ । ಉತ್ತರವಾಕ್ಯಯೋರಪಿ ಹಿ ವಾಶಬ್ದಯೋಗಾದನ್ಯಥಾ ವಾಕ್ಯಾಪರಿಪೂರ್ತೇಸ್ತಿಙ್ಸಿಭಕ್ತೇರವಶ್ಯಮಧ್ಯಾಹಾರಾತ್ತದಪೇಕ್ಷಯೈಷಾ ಪ್ರಥಮಾ ತಿಜ್ವಿಭಕ್ತಿರಿತಿ । ದಿವಃ । ಊಡಿದಮಿತ್ಯಾದಿನಾ ವಿಭಕ್ತೇರುದಾತ್ತತ್ವಂ । ಪಾರ್ಥಿವಾತ್ । ಪೃಥ ಪ್ರಖ್ಯಾನೇ । ಪೃಥತ ಇತಿ ಪೃಥಿವೀ । ಪೃಥೇಃ ಷಿವನ್ಸಂಪ್ರಸಾರಣಂ ಚ । ಉ. ೧-೧೫೦ । ಇತಿ ಷಿವನ್ಪ್ರತ್ಯಯಃ । ಷಿದ್ಗೌರಾದಿಭ್ಯಶ್ಚ । ಪಾ. ೪-೧-೪೧ । ಇತಿ ಙೀಷ್ । ಪ್ರತ್ಯಯೆಸ್ವರೇಣೋದಾತ್ತಃ । ಶೇಷನಿಘಾತೇನಾನುದಾತ್ತಾದಿಃ ಪೃಥಿವೀಶಬ್ದಃ । ಪೃಥಿವ್ಯಾ ವಿಕಾರ ಇತ್ಯರ್ಥ ಓರಞಾತ್ಯನುವೃತ್ತಾವನುದಾತ್ತಾದೇಶ್ಚ। ಪಾ. ೪-೩-೧೪೦ । ಇತ್ಯಞ್ । ಯಸ್ಯೇತಿ ಚ । ಪಾ. ೬-೪-೧೪೮ । ಇತೀಕಾರಲೋಪಃ । ತದ್ಧಿತೇಷ್ವಚಾಮಾದೇಃ । ಪಾ. ೭-೨-೧೧೭ । ಇತ್ಯಾದಿವೃದ್ಧಿಃ । ರಪರತ್ವಂ । ಪಾ. ೮-೪-೫೧ । ಞ್ನಿತ್ಯಾದಿರ್ನಿತ್ಯಮಿತ್ಯಾದ್ಯುದಾತ್ತಃ । ಅಧಿ । ನಿಪಾತತ್ವಾದಾದ್ಯುದಾತ್ತಃ । ಇಂದ್ರಂ । ರನ್ತ್ರತ್ಯಯೋಂತ ಆದ್ಯುದಾತ್ತಃ । ಮಹಃ । ಮಹತ ಇತ್ಯಸ್ಯಾಕಾರತಕಾರಯೋರ್ಲೋಪಶ್ಚಾಂದಸಃ । ಸಾನೇಕಾಚ ಇತಿ ವಿಭಕ್ತೇರುದಾತ್ತತ್ವಂ । ರಜಸಃ । ನಬ್ವಿಷಯಸ್ಯಾನಿಸಂತಸ್ಯೇತ್ಯಾದ್ಯುದಾತ್ತತ್ವಂ ॥ ೧೭ ॥

॥ ಪ್ರತಿಪದಾರ್ಥ ॥

(ವಯಂ-ನಾವು) ಇಂದ್ರಂ-ಇಂದ್ರನನ್ನು । ಇತಃ ಪಾರ್ಥಿವಾದ್ವಾ—(ನಮ್ಮ ಕಣ್ಣಿಗೆ ಕಾಣುತ್ತಿರುವ) ಈ ಪೃಥಿವೀಲೋಕದಿಂದಲಾಗಲಿ । ದಿವೋ ವಾ-ಸ್ವರ್ಗಲೋಕದಿಂದಲಾಗಲಿ । ಮಹಃ—ದೊಡ್ಡದಾವ । ರಜಸೋ ವಾ (ಪಕ್ಷ್ಯಾದಿಗಳಿಗೆ ಆಶ್ರಯಭೂತವಾದ) ಅಂತರಿಕ್ಷ ಲೋಕದಿಂದಲಾಗಲಿ । ಸಾತಿಂ—ಧನಪ್ರಾಪ್ತಿಗಾಗಿ । ಅಧೀಮಹೇ— ಪ್ರಾರ್ಥಿಸುತ್ತೇವೆ.

॥ ಭಾವಾರ್ಥ ॥

ಈಗ ನಮ್ಮ ಕಣ್ಣಿದುರಿಗೆ ಕಾಣುತ್ತಿರುವ ಈ ಭೂಲೋಕದಿಂದಲಾಗಲಿ, ಸ್ವರ್ಗಲೋಕದಿಂದಲಾಗಲಿ, ಅಂತರಿಕ್ಷಲೋಕದಿಂದಾಗಲಿ ನಮಗೆ ಧನವನ್ನು ತಂದುಕೊಡಬೇಕೆಂದು ಇಂದ್ರನನ್ನು ಪ್ರಾರ್ಥಿಸುತ್ತೇವೆ.

English Translation.

We pray to Indra for riches either from this earth, heaven, or from the vast intermediate region.

॥ ವಿಶೇಷವಿಷಯಗಳು ॥

ಸಾತಿಂ— **ಷಣು ದಾನೇ** ಎಂಬ ಧಾತುವಿನಿಂದ ಉತ್ಪನ್ನವಾದ ಈ ಶಬ್ದಕ್ಕೆ ದಾನ, ಕೊಡುವುದು ಎಂದರ್ಥವು. ಏನನ್ನು ಕೊಡುವುದು ಎಂದರೆ ಧನಾದ್ಯೈಶ್ವರ್ಯವು ಅಥವಾ ನಮಗೆ ಬೇಕಾದ ಇತರ ವಸ್ತುಗಳು.

ಈಮಹೇ— ಪ್ರಾರ್ಥಿಸುವೆವು, ಯಾಚನೆ ಮಾಡುವೆವು. ಈಮಹೇ, ಯಾಮಿ ಮೊದಲಾದ ಹದಿನೇಳು ಯಾಚ್ಞಾಕರ್ಮವಾಚಕ ಧಾತುಗಳ ಮಧ್ಯದಲ್ಲಿ ಈಮಹೇ ಎಂಬ ಶಬ್ದವು ಪಠಿತವಾಗಿದೆ.

ಪಾರ್ಥಿವಾತ್— ಪೃಥಿವೀವಿಕಾರಃ ಪಾರ್ಥಿವಃ ತಸ್ಮಾತ್-ಪೃಥಿವೀವಿಕಾರವಾದ ಎಂದರೆ ಭೂಲೋಕ ವೆಂದರ್ಥವು.

ರಜಸಃ— ಪಕ್ಷ್ಯಾದೀನಾಂ ರಂಜಕಾತ್ ಅಂತರಿಕ್ಷಲೋಕಾತ್ ಎಂದು ಭಾಷ್ಯಕಾರರು ಹೇಳಿರುವರು ಎಂದರೆ ಪಕ್ಷ್ಯಾದಿಗಳಿಗೆ ಸಂತೋಷವನ್ನುಂಟುಮಾಡುವ, ಎಂದರೆ ಆಶ್ರಯಭೂತವಾದ, ಮುಖ್ಯ ಸಂಚಾರಮಾಡಲು ಅವಕಾಶವುಳ್ಳ ಎಂದರ್ಥವು

ವ್ಯಾಕರಣಪ್ರಕ್ರಿಯಾ

ಇತಃ— ಪಂಚಮ್ಯಂತ್ಯವಾದ ಇದಮ್ ಶಬ್ದದ ಮುಂದೆ **ಪಂಚಮ್ಯಾಸ್ತಸಿಲ್** (ಪಾ. ಸೂ. ೫.೩-೭) ಎಂಬುದರಿಂದ ತಸಿಲ್ ಪ್ರತ್ಯಯ ಪಂಚಮೀವಿಭಕ್ತಿಗೆ ಲುಕ್. ಇದಮ್+ತಸಿಲ್ **ಇದಮಇತ್** (ಪಾ. ಸೂ. ೫-೩-೩) ಪ್ರಾಗ್ದಿಶೀಯ ಪ್ರತ್ಯಯವು ಪರದಲ್ಲಿರುವಾಗ ಇದಮ್ ಶಬ್ದಕ್ಕೆ ಇಶ್ ಆದೇಶ ಬರುವುದು. ಇಶ್ ಶಿತ್ತಾದ್ದರಿಂದ **ಅನೇಕಾಲ್ ಶಿತ್ಸರ್ವಸ್ಯ** (ಪಾ. ಸೂ. ೧-೧-೫೫) ಎಂಬ ಪರಿಭಾಷೆಯಿಂದ ಇದಮ್‌ಶಬ್ದದ ಸಂಪೂರ್ಣಸ್ಥಾನದಲ್ಲಿ ಬರುವುದು ಇ+ತಸ್ ರುತ್ವ ವಿಸರ್ಗಗಳು ಬಂದರೆ ಇತಃ ಎಂದಾಗುವುದು. ಇಲ್ಲಿ **ಊಡಿದಂ ಪದಾದ್ಯಪ್ಪುಮ್ಪ್ರೈದ್ಯುಭ್ಯಃ** (ಪಾ. ಸೂ. ೬-೧-೧೭೧) ಊಙ್ ಎಂಬ ಆದೇಶ-ಇದಮ್ ಶಬ್ದ-**ಪದ್ದೆ-ನ್ನೋಮಾಸ್‌ಹಲನ್ನಿಶಸನ್** (ಪಾ. ಸೂ. ೬-೧-೬೩) ಎಂದು ವಿಹಿತವಾದ ಆರು ಪದಾದ್ಯಾದೇಶಗಳು ಅಪ್, ಪುಮ್, ಶ್ರೈ, ದಿನ್ ಶಬ್ದಗಳು ಏಕಾಚ್ಚಾಗಿಯೂ ಅಂತೋದಾತ್ತವಾಗಿಯೂ ಇರುವ ಈ ಶಬ್ದಗಳ ಮುಂದಿರುವ ಅಸರ್ವನಾಮ ಸ್ವಾದಿ ವಿಭಕ್ತಿಯು ಉದಾತ್ತವಾಗುವುದು ಎಂಬ ಸೂತ್ರವು **ಲಿತಿ** (ಪಾ. ಸೂ. ೬-೧-೧೯೩) ಎಂಬ ಸೂತ್ರವು ಪ್ರವೃತ್ತಿಸದೇ ಇರತಕ್ಕ ಸ್ಥಳದಲ್ಲಿ ಅಭ್ಯಾಂ ಆಭಿಃ ಎಂಬಲ್ಲಿ ಸಾವಕಾಶವಾಗಿರುವುದು. **ಲಿತಿ** (ಪಾ. ಸೂ. ೬-೧-೧೯೩) ಲಕಾರೇತ್ಸಂಜ್ಞಕ ಪ್ರತ್ಯಯದ ಹಿಂದಿರುವುದು ಉದಾತ್ತವಾಗುವುದು ಎಂಬ ಸೂತ್ರವು **ಊಡಿದಂ. ಪದಾದ್ಯಪ್ಪುಮ್ಪ್ರೈದ್ಯುಭ್ಯಃ** (ಪಾ. ಸೂ. ೬-೧-೧೭೧) ಎಂಬ ಸೂತ್ರವು ಬರದೇ ಇರತಕ್ಕ ಸ್ಥಳದಲ್ಲಿ ಲ್ಯು ಪ್ರತ್ಯಯಾಂತವಾದ ಪಚನಂ ಎಂಬಲ್ಲಿಯೂ ಣ್ವುಲ್ ಪ್ರತ್ಯಯಾಂತವಾದ ಪಾಚಕಃ ಎಂಬಲ್ಲಿಯೂ ಸಾವಕಾಶವಾಗಿರುವುದು. ಈ ಎರಡರಲ್ಲಿ ಒಂದನ್ನು ಮಾತ್ರ ನಿತ್ಯವೆಂದು ಹೇಳಲಾಗುವುದಿಲ್ಲ. 'ಕೃತಾಕೃತಪ್ರಸಂಗಿತ್ವಂ ನಿತ್ಯತ್ವಂ' ಅಂದರೆ ಒಂದು ಶಾಸ್ತ್ರ ಮಾಡಿದರೂ, ಮಾಡದೇ ಇದ್ದರೂ ಯಾವ ಶಾಸ್ತ್ರಕ್ಕೆ ಪ್ರವೃತ್ತಿಇದೆಯೋ ಅದು ನಿತ್ಯ ಎಂದರ್ಥ. ಇಲ್ಲಿ ಊಡಿದಂ (ಪಾ. ಸೂ. ೬-೧-೧೭೧) ಎಂಬ ಶಾಸ್ತ್ರವನ್ನು ಮಾಡಿದರೂ ಮಾಡದೇ ಇದ್ದರೂ **ಲಿತಿ** (ಪಾ. ಸೂ. ೬-೧-೧೯೩) ಎಂಬುದಕ್ಕೆ ಪ್ರಸಕ್ತಿ ಇರುವುದು. **ಲಿತಿ** (ಪಾ. ಸೂ. ೬-೧-೧೯೩) ಎಂಬುದನ್ನು ಮಾಡಿದರೂ ಮಾಡದೇ ಇದ್ದರೂ **ಊಡಿದಮ್** (ಪಾ. ಸೂ. ೬-೧-೧೭೧) ಎಂಬುದಕ್ಕೆ ಪ್ರಸಕ್ತಿ ಇರುವುದು. ಆದ್ದರಿಂದ ಎರಡೂ ನಿತ್ಯಗಳೇ ಆಗುವುವು. ಆದ್ದರಿಂದ ನಿತ್ಯಶಾಸ್ತ್ರವೆಂದು ಒಂದಕ್ಕೆ ಪ್ರಾಬಲ್ಯವನ್ನು ಹೇಳಲಾಗು

ವುದಿಲ್ಲ. ಈ ಎರಡು ಶಾಸ್ತ್ರಗಳೂ ಇತಃ ಎಂಬಲ್ಲಿ ಪ್ರಾಪ್ತವಾಗುವುವು. ಇಲ್ಲಿ ಯಾವ ಶಾಸ್ತ್ರ ಬರುವುದು ಎಂದು ವಿಚಾರಮಾಡಿದರೆ **ವಿಪ್ರತಿಷೇಧೇ ಪರಂಕಾರ್ಯಂ** (ಪಾ. ಸೂ. ೧-೪-೨) ಅನ್ಯತ್ರ ಚರಿತಾರ್ಥಯೋಶ್ಶಾಸ್ತ್ರಯೋಃ ಏಕತ್ರ ಯುಗಪತ್ಸಮಾವೇಶಃ ವಿಪ್ರತಿಷೇಧಃ ಅಂದರೆ **ಪೂರ್ವಶಾಸ್ತ್ರವು** ಪ್ರವೃತ್ತಿಸದೇ ಇರುವ ಸ್ಥಳದಲ್ಲಿ ಪರ ಶಾಸ್ತ್ರಕ್ಕೂ, ಪರಶಾಸ್ತ್ರವು ಪ್ರವೃತ್ತಿಸದೇ ಇರುವ ಸ್ಥಳದಲ್ಲಿ ಪೂರ್ವಶಾಸ್ತ್ರಕ್ಕೂ ಪ್ರವೃತ್ತಿ ಇದ್ದು ಪೂರ್ವಪರಶಾಸ್ತ್ರ ಗಳೆರಡೂ ಒಂದೇ ಕಾಲದಲ್ಲಿ ಒಂದು ಲಕ್ಷ್ಯದಲ್ಲಿ ಪ್ರವೃತ್ತಿಸುವುದಕ್ಕೆ ವಿಪ್ರತಿಷೇಧ ಎಂದು ಹೆಸರು. ಪ್ರಸಕ್ತವಾದ ಎರಡು ಶಾಸ್ತ್ರಗಳಿಗೂ ಇಂತಹ ವಿಪ್ರತಿಷೇಧವು ಇರುವುದೆಂದು ಹಿಂದೆ ಉಪಪಾದಿಸಿರುವೆವು. ಇಂತಹ ವಿಪ್ರತಿ ಷೇಧವಿರುವಾಗ ಯಾವುದು ಪರಶಾಸ್ತ್ರವೋ ಆದೇ ಬರುವುದು ಎಂದು ವಿಪ್ರತಿಷೇಧೇ ಪರಂಕಾರ್ಯಂ ಎಂಬ ಸೂತ್ರವು ಹೇಳುವುದು. ಆದ್ದರಿಂದ ಪರವಾದ 'ಲಿತಿ'ಎಂಬುದರಿಂದ ಇಕಾರವು ಉದಾತ್ತವಾಗುವುದು, ನಂತರ, **ಪ್ರಾಗ್ದಿಶೋ ವಿಭಕ್ತಿಃ** (ಪಾ ಸೂ. ೫-೩-೧) **ಈ** ಸೂತ್ರದಿಂದ ಆರಂಭಿಸಿ **ದಿಕ್‌ಶಬ್ದೇಭ್ಯಃ** (ಪಾ. ಸೂ. ೫-೩-೨೭) ಎಂಬ ಸೂತ್ರದವರೆಗೆ ವಿಧಿಸಿರುವ ಪ್ರತ್ಯಯಗಳು ವಿಭಕ್ತಿ ಸಂಜ್ಞೆಯನ್ನು ಹೊಂದುವುವು ಎಂಬುದರಿಂದ ತಸಿಲ್ ಪ್ರತ್ಯ ಯಕ್ಕೆ ವಿಭಕ್ತಿ ಸಂಜ್ಞೆ ಇರುವುದು ಆದ್ದರಿಂದ **ಊಡಿದಮ್** (ಪಾ. ಸೂ ೬೧೭೧) ಎಂಬುದರಿಂದ ಇದಂ ಶಬ್ದದ ಮುಂದಿರುವ ಆಸರ್ವನಾಮಸ್ಥಾನ ವಿಭಕ್ತಿಯಾದ ತಸಿಲ್ ಪ್ರತ್ಯಯಕ್ಕೆ ಉದಾತ್ತಸ್ವರ ಬರುವುದು ಆದರೆ **ಸಕೃದ್ಗತೌ ವಿಪ್ರತಿಷೇಧೇನಯದ್ಬಾಧಂ ತದ್ಬಾಧಿತನೇವ** (ಪರಿಭಾಷಾ೪೪೦) ಎಂದರೆ ಎರಡು ಶಾಸ್ತ್ರಗಳಿಗೆ ಒಂದು ಲಕ್ಷ್ಯದಲ್ಲಿ ಒಂದೇಕಾಲದಲ್ಲಿ ಪ್ರವೃತ್ತಿ ಬಂದಾಗ **ವಿಪ್ರತಿಷೇಧೇಪರಂಕಾರ್ಯಂ** (ಪಾ ಸೂ. ೧-೪-೨) ಎಂಬುದರಿಂದ ಯಾವ ಶಾಸ್ತ್ರವು ಬಾಧಿಸಲ್ಪಡುವುದೋ ಅದು ಬಾಧಿತವಾದುದೇ. ಅದಕ್ಕೆ ಪುನಃ ಪ್ರವೃತ್ತಿ ಬರುವು ದಿಲ್ಲ ಎಂದರ್ಥ. ವಿಪ್ರತಿಷೇಧೇಪರಂ—ಎಂಬಲ್ಲಿ ಪರಮೇವ–ಎಂದು ಅವಧಾರಣೆಯನ್ನು ವಿನಕ್ಷಿಸಿ ಪರಶಾಸ್ತ್ರವೇ ಬರುವುದು. **ಪೂರ್ವಶಾಸ್ತ್ರ** ಬರುವುದಿಲ್ಲ ಎಂದು ಅರ್ಥವರ್ಣಸೆಮಾಡಿದರೆ ಸಕೃದ್ಗತೌ ಪರಿಭಾಷೆಯು ಸಿದ್ಧವಾಗು ವುದು. ಈ ಪರಿಭಾಷೆಯಿಂದ 'ವಿಪ್ರತಿಷೇಧೇ' ಎಂಬುದರಿಂದ ಬಾಧಿತನಾದ 'ಊಡಿದಮ್' ಎಂಬ ಶಾಸ್ತ್ರಕ್ಕೆ ಪುನಃ ಪ್ರವೃತ್ತಿ ಬರುವುದಿಲ್ಲ ಎಂದು ಹೇಳಬಹುದು. ಆದರೂ **ಪುನಃಪ್ರಸಂಗವಿಜ್ಞಾನಾತ್ಸಿದ್ಧಮ್** (ಪರಿಭಾ. ೫೯) ವಿಪ್ರತಿಷೇಧ ವಿದ್ದಾಗ ಪರಶಾಸ್ತ್ರವು ಪ್ರವೃತ್ತಿಸುವುದು, ಎಂದು 'ವಿಪ್ರತಿಷೇಧೇಪರಂ' ಎಂಬ ಸೂತ್ರಕ್ಕೆ ಅರ್ಥವರ್ಣನೆ ಮಾಡುವುದರಿಂದ ತಿರುಗಿಯೂ ಪ್ರಸಕ್ತವಿರುವಲ್ಲಿ ಬಾಧಿತಶಾಸ್ತ್ರ ಪ್ರವೃತ್ತಿ ಪರಿಜ್ಞಾನವಿರುವುದರಿಂದ ಅದು ಪ್ರವೃತ್ತವಾದ ಮೇಲೆ ಪೂರ್ವ ಶಾಸ್ತ್ರಕ್ಕೆ ಪ್ರವೃತ್ತಿಇದ್ದರೆ ಅದೂ ಪ್ರವೃತ್ತಿಸುವುದು, ಬಾಧಿತ ವಾದ ಶಾಸ್ತ್ರಕ್ಕೂ ಪುನಃ ಪ್ರವೃತ್ತಿಗೆ ದ್ವಾರ (ಉಪಾಯ) ವು ಸಿದ್ಧವಾಯಿತು ಎಂದು ಪರಿಭಾಷೆಯ ಅರ್ಥ. ಈ ವಚನದಿಂದ ವಿಪ್ರತಿಷೇಧ ಶಾಸ್ತ್ರದಿಂದ ಬಾಧಿತವಾಗಿಬ್ಬಾಗ್ಯೂ, 'ಊಡಿದಮ್' ಎಂಬುದು ಪುನಃ ಪ್ರವೃತ್ತಿಸುವುದು. 'ಸಕೃದ್ಗತೌ' ಪುನಃ ಪ್ರಸಂಗ, ಈ ಎರಡು ಪರಿಭಾಷೆಗಳಿಗೂ ಬಾಧ್ಯಬಾಧಕ ಭಾವವಿಲ್ಲ ಲಕ್ಷ್ಯಾ ನುರೋಧವಾಗಿ ಎರಡೂ ಪ್ರವರ್ತಿಸುವುದು ಇಲ್ಲಿ ಲಕ್ಷ್ಯಾನುರೋಧದಿಂದ ಪುನಃ ಪ್ರಸಂಗ ಎಂಬ ಪರಿಭಾಷೆಯೇ ವ್ಯವ ಸ್ಥಾಪಕವಾದುದು ಹಾಗಾದರೆ ಯತಃ, ತತಃ, ಇತ್ಯಾದಿ ಲಕ್ಷ್ಯಗಳಲ್ಲಿ **ಸಾವೇಕಾಚಸ್ತೃತೀಯಾದಿರ್ವಿಭಕ್ತಿಃ** (ಪಾ ಸೂ. ೬-೧-೧೬೪) ಸಪ್ತಮಿಾ ಬಹುವಚನ ಸು ಪ್ರತ್ಯಯಪರದಲ್ಲಿರುವಾಗ ಯಾವ ಶಬ್ದವು ಏಕಾಚ್ಕವಾಗಿ ದೆಯೋ (ಒಂದೇ ಅಚ್ಚನ್ನು ಹೊಂದಿದೆಯೋ) ಅದರ ಮುಂದೆ ಇರುವ ತೃತೀಯಾದಿ ವಿಭಕ್ತಿಯು ಉದಾತ್ತವಾಗು ವುದು ಎಂಬುದೂ, **ಲಿತಿ** (ಪಾ. ಸೂ. ೬-೧-೧೯೩) ಎಂಬುದೂ ಪ್ರವೃತ್ತವಾದರೆ ಪರವಾದ್ದರಿಂದ **ವಿಪ್ರತಿಷೇಧೇಪರಂ ಕಾರ್ಯಂ** (ಪಾ.ಸೂ ೧-೪-೨) ಎಂಬ ಪರಿಭಾಷಾನುಸಾರ 'ಲಿತಿ' ಎಂಬುದರಿಂದ '**ಸಾವೇ ಕಾಚಿಃ**' ಎಂಬ ಪೂರ್ವ ಶಾಸ್ತ್ರವು ಬಾಧಿತವಾಗುವುದು, ಆದರೂ **ಪುನಃಪ್ರಸಂಗವಿಜ್ಞಾನಾತ್ಸಿದ್ಧಂ** (ಪರಿಭಾ ೫೯) ಎಂಬುದರಿಂದ ತಿರು ಗಿಯೂ 'ಸಾವೇಕಾಚಿಃ' ಎಂಬುದು ಬಂದು ಯತಃ. ತತಃ ಎಂಬಲ್ಲಿ ತಸಿಲ್ ಪ್ರತ್ಯಯ ಉದಾತ್ತವಾಗಲಿ ಎನ್ನಬಹುದು. ಇಲ್ಲಿ ಪೃಥಮೈಕವಚನದ ಸುಪ್ರತ್ಯಯ ಪರದಲ್ಲಿರುವಾಗ ಯತ್, ತತ್ ಶಬ್ದಗಳು ಅಕಾರಾಂತವಾಂತ

ವಾಗಿರುವವು ಆದ್ದರಿಂದ ' ನಗೋಶ್ವನ್ಸಾವವರ್ಣರಾಡಬ್ಭ್ಯೋ ಜ್ಯೈ ಧ್ಯೈಕಿ ' ಇವುಗಳ ಮುಂದೆ ಇರುವುದಕ್ಕೆ (ಷಾಷ್ಠಿಕವಾದ) ಉದಾತ್ತ ಬರುವುದಿಲ್ಲ ಎಂದು ನಿಷೇಧವಿರುವುದರಿಂದ, ' ಸಾವೇಕಾಚಃ ' ಎಂಬುದರಿಂದ, ತಸಿಲ್‌ಗೆ, ಉದಾತ್ತ ಬರುವುದಿಲ್ಲ, ಅಥವಾ ಲಕ್ಷ್ಯಾನುಸಾರವಾಗಿ ಇಲ್ಲಿ ಸಕೃದ್ಗತೌ ಎಂಬ ಪರಿಭಾಷೆಯೇ ವ್ಯವಸ್ಥಾಪಕವಾಗುವುದು ' ಪುನಃಪ್ರಸಂಗವಿಜ್ಞಾನಾತ್ಸಿದ್ಧಂ ' ಎಂಬುದು ಎಲ್ಲ ಕಡೆಗಳಲ್ಲಿ ನಿಯಮೇನ ಪ್ರವರ್ತಿಸುವುದು ಎಂಬ ನಿಯಮವಿಲ್ಲ. ಲಕ್ಷ್ಯಾನುಸಾರವಾಗಿ ಇದು ಕೆಲವು ಕಡೆಯಲ್ಲಿ ಮಾತ್ರವೇ ಪ್ರವೃತ್ತಿಸುವುದು. ಆದ್ದರಿಂದ ಇಲ್ಲಿ ಈ ನ್ಯಾಯವು ಪ್ರವೃತ್ತಿಸುವುದಿಲ್ಲ ಎಂದು ಹೇಳಬಹುದು. ಈಗ ಬಾಧಿತವಾದ ' ಸಾವೇಕಾಚ ' ಎಂಬುದಕ್ಕೆ ಪುನಃ ಪ್ರವೃತ್ತಿ ಬರುವುದಿಲ್ಲ. ಆದ್ದರಿಂದ, ಯತಃ, ತತಃ, ಇವು ಆದ್ಯುದಾತ್ತಗಳೇ.

ಸಾತಿಮ್—ಷಣು ದಾನೇ, ' ಧಾತ್ವಾದೇಃಷಃಸಃ ' ಧಾತುವಿನ ಆದಿಯಲ್ಲಿರುವ ಷಕಾರಕ್ಕೆ ಸಕಾರ ಬರುವುದು ಎಂಬುದರಿಂದ ಷಕಾರಕ್ಕೆ ಸಕಾರ ಈರೀತಿ ಷಕಾರನಿವೃತ್ತವಾದರೆ ತನ್ನಿಮಿತ್ತಕವಾದ ನ ಎಂಬುದರ ಸ್ಥಾನದಲ್ಲಿ ಬಂದಿದ್ದ, ಣಕಾರವು ನಿವೃತ್ತವಾಗಿ ನಕಾರವೇ ಇರುವುದು. ಏವಂಚ ಸನ್ ಎಂದಾಯಿತು. ಇದರ ಮುಂದೆ ಭಾವಾರ್ಥದಲ್ಲಿ ಕ್ತಿನ್ ಪ್ರತ್ಯಯವನ್ನು ಹೆಚ್ಚುವುದು. **ಜನಸನಖನಾಂಸನ್‌ರ್ಝುಲೋಃ** (ಪಾ. ಸೂ ೬-೪-೪೩) ರ್ಝುಲಾದಿಯಾದ ಸನ್ಪ್ರತ್ಯಯ ಅಥವಾ ಕಿತ್ತು ಙಿತ್ತು ಆದ ರ್ಝುಲಾದಿ ಪ್ರತ್ಯಯ ಪರದಲ್ಲಿದ್ದರೆ ಜನ್, ಸನ್, ಖನ್ ಧಾತುಗಳ ಕೊನೆಯ ವರ್ಣಕ್ಕೆ ಆಕಾರಬರುವುದು ಎಂಬುದರಿಂದ ನಕಾರಕ್ಕೆ ಆಕಾರ ಬಂದರೆ ಸ+ಆ+ತಿ ಸವರ್ಣ ದೀರ್ಘ, ಸಾತಿ ಎಂದಾಗುವುದು. ಈಗ **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ಎಂಬುದರಿಂದ ಇಡಾಗಮ ಪ್ರಾಪ್ತವಾದರೆ ಅದಕ್ಕೆ **ತಿ, ತು, ತ್ರ, ತ, ಥ, ಸಿ, ಸು, ಸರ, ಕ, ಸೇ ಷು ಚೆ** (ಪಾ- ಸೂ. ೭-೨-೯) ಈ ಹತ್ತು ಕೃತ್ಪ್ರತ್ಯಯಗಳಿಗೆ ಇಡಾಗಮ ಬರುವುದಿಲ್ಲ ಎಂಬುದರಿಂದ ಇಡಾಗಮ ಬರುವುದಿಲ್ಲ. ಕ್ತಿನ್ ಪ್ರತ್ಯಯವು ನಿತ್ತಾದ್ದರಿಂದ ಙ್ನಿತ್ಯಾದಿರ್ನಿತ್ಯಮ್ (ಪಾ. ಸೂ. ೬-೧-೧೯೭) ಎಂಬುದರಿಂದ ಪ್ರತ್ಯಯಾಂತ ಶಬ್ದದ ಆದಿಗೆ ಉದಾತ್ತ ಪ್ರಾಪ್ತವಾದರೆ **ಊತಿ ಯೂತಿ ಜೂತಿ ಸಾತಿ ಹೇತಿ ಕೀರ್ತಯೆಶ್ಚ** (ಪಾ. ಸೂ. ೩-೩-೯೭) ಕ್ತಿನ್ನಂತವಾದ ಈ ಶಬ್ದಗಳು ಅಂತೋದಾತ್ತವಾಗಿ ನಿಪಾತಿಸಲ್ಪಡುವವು ಎಂಬುದರಿಂದ ಅಂತೋದಾತ್ತವಾಗಿ ನಿಪಾತಿಸಲ್ಪಟ್ಟಿರುವುದರಿಂದ ಅಂತೋದಾತ್ತವೇ ಬರುವುದು.

ಈಮಹೇ—**ಈಙ್ ಗತೌ**—ಎಂಬ ಧಾತುವಿನ ಮುಂದೆ ಲಟ್ ಉತ್ತಮಪುರುಷ ಬಹುವಚನ ಮಹಿಙ್ ಪ್ರತ್ಯಯ **ಟಿತ ಆತ್ಮನೇ ಪದಾನಾಂಟೇರೇ** (ಪಾ ಸೂ. ೩-೪-೭೭) ಎಂಬದರಿಂದ ಪ್ರತ್ಯಯದ ಇಕಾರಕ್ಕೆ ಏಕಾರ **ದಿವಾದಿಭ್ಯಃಶ್ಯನ್** (ಪಾ. ಸೂ ೩-೧-೬೯) ಎಂಬುದರಿಂದ ಬಂದ ಶ್ಯನ್ ವಿಕರಣಕ್ಕೆ **ಬಹುಲಂ ಛಂದಸಿ** (ಪಾ. ಸೂ. ೨-೪-೭೩) ಎಂಬುದರಿಂದ ಲುಕ್ ಬರುವುದು. ಈ ಸೂತ್ರವು ಶಪ್ಪಿಗೆ ಲುಗ್ವಿಧಾಯಕವಾದರೂ ಬಹುಲಗ್ರಹಣವಿರುವುದರಿಂದ ಶ್ಯನ್ನಿಗೂ ಲುಕ್ ಬರುವುದು. ಈಮಹೇ ಎಂದಾಗುವುದು ಈಙ್ ಧಾತುವು ಙಿತ್ತಾದ್ದರಿಂದ **ತಾಸ್ಯನುದಾತ್ತೇನ್ಙಿದುಪದೇಶಾತ್** (ಪಾ. ಸೂ- ೬-೧-೧೮೬) ಲಸ್ಥಾನಿಕ ಸಾರ್ವಧಾತುಕವಾದ ಮಹೇ ಎಂಬುದಕ್ಕೆ ಅನುದಾತ್ತ ಬಂದರೆ ಈ ಎಂಬಲ್ಲಿ **ಧಾತೋಃ** (ಪಾ. ಸೂ. ೬-೧-೧೬೨) ಎಂದು ವಿಹಿತವಾದ ಅಂತೋದಾತ್ತವೇ ನಿಲ್ಲುವುದು **ತಿಙ್ಶಿತಿಜಿಃ** (ಪಾ ಸೂ. ೮-೧-೭೧) ತಿಙಂತವಲ್ಲದ ಶಬ್ದದ ಮುಂದೆ ಇರುವ ತಿಙಂತವು ಅನುದಾತ್ತವಾಗುವುದು ಎಂಬುದರಿಂದ ತಿಙಂತ ಶಬ್ದಕ್ಕೆ ಅನುದಾತ್ತ ಪ್ರಾಪ್ತವಾದರೂ **ಚವಾಯೋಗೇ ಪ್ರಥಮಾ** (ಪಾ. ಸೂ. ೮-೧-೫೯) ಚ ವಾ ಎಂಬ ಶಬ್ದಗಳ ಯೋಗವಿರುವಾಗ ಮೊದಲು ಉಚ್ಚರಿತವಾದ ತಿಙಂತವು ಅನುದಾತ್ತವಾಗುವುದಿಲ್ಲ ಎಂದು ನಿಷೇಧವಿರುವುದರಿಂದ ಸರ್ವಾನುದಾತ್ತ ಬರುವುದಿಲ್ಲ. ಆದರೆ

ಈ ಮಂತ್ರದಲ್ಲಿ ಒಂದೇಒಂದು ತಿಙಂತವಿರುವುದರಿಂದ ಇದು ಹೇಗೆ ಪ್ರಥಮೋಚ್ಚರಿತ ತಿಙಂತವಾಗುವುದು ಎಂದು ಸಂಶಯಬರಬಹುದು. ಇಲ್ಲಿ ಇತಃ ಪಾರ್ಥಿವಾತ್ ಲೋಕಾದ್ವಾ ಇಂದ್ರಂ ಪ್ರತಿ ಸಾತಿಂ ಅಧಿ ಈಮಹೇ, ಇಂದ್ರಂ ಪ್ರತಿ ಸಾತಿಂ ದಿವೋ ವಾ ಅಧಿ ಈಮಹೇ ರಜಸಃ (ಅಂತರಿಕ್ಷಲೋಕಾದ್ವಾ) ಇಂದ್ರಂ ಪ್ರತಿ ಸಾತಿಂ ಅಧಿ ಈಮಹೇ ಎಂದು ಮೂರು ವಾಕ್ಯಗಳು ಇರುವುವು. ಎರಡು ಮೂರನೇ ವಾಕ್ಯಗಳಲ್ಲಿ ಸಂಬಂಧಿಸಿದ ಈಮಹೇ ಎಂಬುದನ್ನು ಅಪೇಕ್ಷಿಸಿ ಮೊದಲನೇ ವಾಕ್ಯದಲ್ಲಿರುವ ಈಮಹೇ ಎಂಬುದು ಪ್ರಥಮೋಚ್ಚರಿತವಾದ್ದರಿಂದ, ' ಚವಾಯೋಗೆ. ಎಂಬ ನಿಷೇಧವು ಇಲ್ಲಿ ಬಂದೇಬರುವುದು- ಉತ್ತರ ವಾಕ್ಯಗಳಲ್ಲಿ ವಾಶಬ್ದವಿರುವುದರಿಂದ ' ಈಮಹೇ' ಎಂಬುದಕ್ಕೆ ಸಂಬಂಧವನ್ನು ಹೇಳಲೇಬೇಕು. ಇಲ್ಲದಿದ್ದರೆ ವಾಕ್ಯವು ಪೂರ್ಣವಾದ ಅರ್ಥವನ್ನು ಕೊಡುವುದಿಲ್ಲ.

ದಿವಃ, ' ಊಡಿದಮ್ ' (ಪಾ. ಸೂ. ೬-೧೭೧) ಎಂಬುದರಿಂದ ವಿಭಕ್ತಿಯು ಉದಾತ್ತವಾಗುವುದು.

ಪಾರ್ಥಿವಾತ್— ಪೃಥತೇ ಇತಿ ಪೃಥಿವೀ—ಪ್ರಥ ಪ್ರಖ್ಯಾನೇ ಎಂಬ ಧಾತುವಿನ ಮುಂದೆ **ಪೃಥೇಃಷಿವನ್ ಸಂಪ್ರಸಾರಣಂಚ**, (ಉ. ಸೂ. ೧-೧೪೯) ಪೃಥಧಾತುವಿನ ಮುಂದೆ ಷಿವನ್ ಪ್ರತ್ಯಯ ಬರುವುದು ಸಂಪ್ರಸಾರಣವೂ ಬರುವುದು ಎಂಬುದರಿಂದ ಷಿವನ್ ಪ್ರತ್ಯಯ ಬಂದರೆ ಪೃಥ್+ಇವ್ ಎಂದಿರುವಾಗ. ಇದರಿಂದಲೇ ಸಂಪ್ರಸಾರಣ. ರೇಫಕ್ಕೆ ಋಕಾರ ಬಂದರೆ ಪೃಥ್ + ನಿವ್, ಪ್ರತ್ಯಯವು ಷಿತ್ತಾದ್ದರಿಂದ **ಷಿದ್ಗೌರಾದಿಭ್ಯಶ್ಚ** (ಪಾ.ಸೂ. ೪-೧-೪೧) ಷಿತ್ತಾದ ಪ್ರಾತಿಪದಿಕದ ಮುಂದೆಯೂ, ಗೌರಾದಿಗಣದಲ್ಲಿರುವ ಪ್ರಾತಿಪದಿಕದ ಮುಂದೆಯೂ ಸ್ತ್ರೀತ್ವ ತೋರುವಾಗ ಙೀಷ್ ಬರುವುದು. **ಅವಯವೇ ಅಚರಿತಾರ್ಥಂ ಲಿಂಗಂ ಸಮುದಾಯೋಪಕಾರಕಂಭವತಿ** ಎಂಬ ನ್ಯಾಯದಿಂದ ಪ್ರತ್ಯಯದಲ್ಲಿ ಷಿತ್ವಕ್ಕೆ ಪ್ರಯೋಜನವಿಲ್ಲದೇ ಇರುವುದರಿಂದ ಆ ಷಿತ್ವವು ಪ್ರಾತಿಪದಿಕಕ್ಕೆ **ವಿಶೇಷಣ** ವಾಗುವುದು. **ಙೀಷ್** ಎಂಬಪ್ರತ್ಯಯದ ಈಕಾರವು ಪ್ರತ್ಯಯ ಸ್ವರದಿಂದ ಅಂದರೆ **ಆದ್ಯುದಾತ್ತಶ್ಚ** (ಪಾ. ಸೂ ೩-೧-೩) ಎಂಬುದರಿಂದ ಉದಾತ್ತ ಪಿಕ್ಕವ್ಯಗಳಿಗೆ **ಅನುದಾತ್ತಂಪದಮೇಕವರ್ಜಂ** (ಪಾ. ಸೂ. ೬-೧-೧೫೮) ಎಂಬ ಶೇಷನಿಘಾತ ಸ್ವರದಿಂದ ಅನುದಾತ್ತ, ಅಂತು ಪೃಥಿವೀ ಶಬ್ದವು ಅನುದಾತ್ತಾದಿ ಎಂದು ಏರ್ಪಟ್ಟಿತು. ಪೃಥಿವ್ಯಾಃ ವಿಕಾರಃ ಎಂದು ಅರ್ಥವಿವಕ್ಷೆ ಮಾಡಿದರೆ **ಅನುದಾತ್ತಾದೇಶಶ** (ಪಾ.ಸೂ. ೪-೩-೧೪೦) ಇಲ್ಲಿ **ಓಢಞ್** (ಪಾ ಸೂ. ೪-೩-೧೩೯) ಎಂಬುದರಿಂದ 'ಅಞ್ ಎಂಬ ಪದವು ಅನುವೃತ್ತವಾಗುವುದು, ಅನುದಾತ್ತಾದಿ ಶಬ್ದ ಪ್ರಕೃತಿಕವಾದ **ಸಪ್ತಮ್ಯಂತದ** ನುಂದೆ ವಿಕಾರಾರ್ಥದಲ್ಲಿಯೂ ಅವಯವಾರ್ಥದಲ್ಲಿಯೂ ಅಞ್ ಪ್ರತ್ಯಯ ಬರುವುದು ಎಂಬುದರಿಂದ ಅಞ್ ಪ್ರತ್ಯಯ ಬಂದರೆ ತದ್ಧಿತಾಂತವಾದ್ದರಿಂದ **ಕೃತ್ತದ್ಧಿತಸಮಾಸಾಶ್ಚ** (ಪಾ. ಸೂ ೧-೨-೪೬) ಎಂಬುದರಿಂದ ಪ್ರಾತಿಪದಿಕ ಸಂಜ್ಞೆ ಬಂದರೆ **ಸುಪ್ತೋಧಾತು ಪ್ರಾತಿಪದಿಕಯೋಃ** (ಪಾ. ಸೂ. ೨-೪-೭೧) ಧಾತು, ಪ್ರಾತಿಪದಿಕ ಇವುಗಳ ಅವಯವವಾದ ಸುಪ್ಪಿಗೆ ಲುಕ್ ಬರುವುದು ಎಂಬುದರಿಂದ ಪೃಥಿವೀ+ಙಸ್+ಅ ಎಂಬಲ್ಲಿರುವ ಙಸ್ಸಿಗೆ ಲುಕ್ ಬರುವುದು. **ಯಸ್ಯೇತಿಚೆ** (ಪಾ. ಸೂ. ೬-೪-೧೪೮) ಈಕಾರ ತದ್ಧಿತಗಳು ಪರದಲ್ಲಿರುವಾಗ ಭ ಸಂಜ್ಞಕಾಂಗಾವಯವವಾದ ಇವರ್ಣ ಅವರ್ಣಗಳಿಗೆ ಲೋಪಬರುವುದು ಎಂಬುದರಿಂದ ಈಕಾರಕ್ಕೆ ಲೋಪ **ತದ್ಧಿತೇಷ್ವಚಾಮಾದೇಃ** (ಪಾ. ಸೂ. ೭-೨-೧೧೭) ಇತ್ತು ಣಿತ್ತು ಆದ ತದ್ಧಿತ ಪ್ರತ್ಯಯ ಪರದಲ್ಲಿದ್ದರೆ ಅಚ್ಸಮುದಾಯದಲ್ಲಿ ಮೊದಲನೆಯ ಅಚ್ಚಿಗೆ ವೃದ್ಧಿ ಬರುವುದು ಎಂಬುದರಿಂದ, ಆದಿಭೂತವಾದ ಋಕಾರಕ್ಕೆ ವೃದ್ಧಿ ಪ್ರಸಕ್ತವಾದರೆ **ಉರಣ್ರಪರಃ** (ಪಾ. ಸೂ. ೧-೧-೫೧) ಎಂಬ ಶಾಸ್ತ್ರಾನುಸಾರ ರೇಫಶಿರಸ್ಕವಾಗಿಬರುವುದು. ಪಾರ್ಥಿವ ಎಂದಾಗುವುದು. **ಈಗ ಞ್ನಿತ್ಯಾದಿರ್ನಿತ್ಯಂ** (ಪಾ. ಸೂ. ೬-೧-೧೯೭) ಞಕಾರೇತ್ಸಂಜ್ಞಕಪ್ರತ್ಯಯಾಂತದ, ಮತ್ತು ನಕಾರೇತ್ಸಂಜ್ಞಕ ಪ್ರತ್ಯಯಾಂತದ ಆದಿಯು ಉದಾತ್ತವಾಗುವುದು ಎಂಬುದರಿಂದ **ಪಾರ್ಥಿವ** ಶಬ್ದ ಆದ್ಯುದಾತ್ತ.

ಅಧಿ—ನಿಪಾತಾ ಆದ್ಯುದಾತ್ತಾಃ (ಪಾ. ಸೂ. ೮೦) ಎಂಬುದರಿಂದ ಆದ್ಯುದಾತ್ತ.

ಇಂದ್ರಂ—ಋಜ್ರೇಂದ್ರಾಗ್ನ-(ಉ. ಸೂ. ೨-೧೮೬) ಎಂಬುದರಿಂದ ರನ್ ಪ್ರತ್ಯಯಾಂತ ಆದ್ಯುದಾತ್ತ.

ಮಹಃ—ಮಹತಃ ಎಂಬ ಶಬ್ದದ ಅಕಾರ ತಕಾರ (ಅತ್) ಗಳಿಗೆ ಛಾಂದಸವಾಗಿ ಲೋಪ. ಸಾನೇ-ಕಾಚಸ್ತೃತೀಯಾದಿರ್ವಿಭಕ್ತಿಃ (ಪಾ. ಸೂ ೬-೧-೧೬೮) ಎಂಬುದರಿಂದ ವಿಭಕ್ತಿಯು ಉದಾತ್ತ.

ರಜಸಃ—ನಬ್ವಿಷಯಸ್ಯಾನಿ ಸಂತಸ್ಯ—(ಫಿ. ಸೂ. ೨೬) ಎಂಬುದರಿಂದ ಉದಾತ್ತ ॥ ೧೦ ॥

ಇಲ್ಲಿಗೆ ಪ್ರಥಮ ಮಂಡಲದಲ್ಲಿ ಆರನೆಯ ಸೂಕ್ತವು ಮುಗಿದುದು.
ಪ್ರಥಮಾಷ್ಟಕದ ಪ್ರಥಮಾಧ್ಯಾಯದಲ್ಲಿ ಎಂಟನೆಯ ವರ್ಗವು ಸಮಾಪ್ತವು.

॥ ಓಂ ॥

ಏಳನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಇಂದ್ರಮಿತ್ಯಾದಿಕಂ ದಶರ್ಚಂ ಯತ್ಸೂಕ್ತಂ ತತ್ಸುರೂಪಕೃತ್ನುಮಿತ್ಯಾದಿಷು ಚತುರ್ಥಂ ಋಷಿಚ್ಛಂದೋದೇವತಾ ವಿನಿಯೋಗಶ್ಚ ಪೂರ್ವವತ್ । ವಿಶೇಷವಿನಿಯೋಗಸ್ತು ಚ್ಯತೇ । ಮಹಾವ್ರತೇ ನಿಷ್ಕೇವಲ್ಯಶಸ್ತ್ರ ಇಂದ್ರಮಿದ್ಗಾಥಿನ ಇತಿ ಸೂಕ್ತಂ । ತಥಾ ಚ ಪಂಚಮಾರಣ್ಯಕೇ ಸೂತ್ರಿತಂ । ಶಿರೋ ಗಾಯತ್ರಮಿಂದ್ರಮಿದ್ಗಾಥಿನಃ । ಐ. ಆ. ೫-೨-೧ । ಇತಿ ತಥಾ ಚತುರ್ವಿಂಶೇಹನಿ ಬ್ರಾಹ್ಮಣಾಚ್ಛಂಸಿನಃ ಶಸ್ತ್ರ ಇಂದ್ರಮಿದ್ಗಾಥಿನ ಇತಿ ಷಳಹಸ್ತೋತ್ರಿಯಸ್ತೃಚಃ । ಚತುರ್ವಿಂಶೇ ಹೋತಾಜನಿಷ್ಟೇತ್ಯುಪಕ್ರಮ್ಯಾ ಯೋಹಿ ಸುಷುಮಾ ಹಿ ತ ಇಂದ್ರಮಿದ್ಗಾಥಿನೋ ಬೃಹತ್ । ಆ. ೭-೨ । ಇತಿ ಸೂತ್ರಿತತ್ವಾತ್ । ಅತಿರಾತ್ರೇ ಪ್ರಥಮೇ ಪರ್ಯಾಯೇ೨ಚ್ಛಾವಾಕಶಸ್ತ್ರೇ೨ಯಮೇವ ತೃಚೋ೨ನುರೂಪಃ । ಸೂತ್ರಿತಂ ಚ । ಇಂದ್ರಾಯಾಯ ಮದ್ವನೇ ಸುತಮಿಂದ್ರಮಿದ್ಗಾಥಿನೋ ಬೃಹತ್ । ಆ ೬-೪ । ಇತಿ ॥

ಅನುವಾದವು—ಇಂದ್ರಮಿದ್ಗಾಥಿನೋ ಬೃಹತ್ ಎಂಬ ಈ ಸೂಕ್ತವು ಸುರೂಪಕೃತ್ನುಮೂತಯೇ ಎಂದು ಪ್ರಾರಂಭವಾಗುವ ಎರಡನೆಯ ಅನುವಾಕದ ನಾಲ್ಕನೆಯ (ಕೊನೆಯ) ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿವೆ. ಇದರ ಋಷಿದೇವತಾ ಛಂದಸ್ಸುಗಳೂ ವಿನಿಯೋಗವೂ ಹಿಂದಿನ ಸೂಕ್ತದಂತೆಯೇ. ಆದರೆ ಇದಕ್ಕೆ ವಿಶೇಷ ವಿನಿಯೋಗವಿರುವುದು. ಮಹಾವ್ರತವೆಂಬ ಯಾಗದಲ್ಲಿ ಇಂದ್ರಮಿದ್ಗಾಥಿನ ಎಂಬ ಸೂಕ್ತವನ್ನು ನಿಷ್ಕೇವಲ್ಯಶಸ್ತ್ರಮಂತ್ರವನ್ನಾಗಿ ಪಠಿಸುವರು. ಈ ವಿಷಯವು-ಶಿರೋಗಾಯತ್ರಮಿಂದ್ರಮಿದ್ಗಾಥಿನಃ ಎಂದು ಐತರೇಯ ಆರಣ್ಯಕದಲ್ಲಿ (ಪಂಚಮಾರಣ್ಯಕ) ಹೇಳಿರುವುದು, ಮತ್ತು ಇಪ್ಪತ್ತನಾಲ್ಕನೆಯ ದಿನದಲ್ಲಿ ಬ್ರಾಹ್ಮ-

ಣಾಚ್ಛಂಸಿಯೆಂಬ ಹೋತೃವರ್ಗದ ಋತ್ವಿಜನು ಷಳಹಸ್ತೋತ್ರಿಯವೆಂಬ ತೃಚವನ್ನು ಪಠಿಸುವಾಗ ಇಂದ್ರಮಿದ್ಗಾಥಿನ ಎಂಬ ಋಕ್ಕನ್ನು ಪಠಿಸಬೇಕೆಂದು—**ಚತುರ್ವಿಂಶೇ ಹೋತಾಜನಿಷ್ಟೇತ್ಯುಪಕ್ರಮ್ಯಾಯಾಹಿ ಸುಷುಮಾ ಹಿ ತೆ ಇಂದ್ರಮಿದ್ಗಾಥಿನೋ ಬೃಹತ್** ಎಂದು ಆಶ್ವಲಾಯನ ಸೂತ್ರದಲ್ಲಿ (ಆ. ಸು. ೭-೨) ಹೇಳಿರುವುದು. ಎಂದರೆ, ಆಶ್ವಲಾಯನ ಶ್ರೌತ ಸೂತ್ರದಲ್ಲಿ **ಹೋತಾಜನಿಷ್ಟ** ಎಂಬ ಖಂಡದಲ್ಲಿ **ಆ ಯಾಹಿ ಸುಷುಮಾಹಿತೇ** (ಋ. ಸಂ. ೮-೧೭-೧) ಎಂಬ ಋಕ್ಕನ್ನೂ **ಇಂದ್ರಮಿದ್ಗಾಥಿನೋ ಬೃಹತ್** (ಋ. ಸಂ. ೧-೭-೧) ಎಂಬ ಋಕ್ಕನ್ನೂ ಇಪ್ಪತ್ತನಾಲ್ಕನೆಯ ದಿನದಲ್ಲಿ ಷಳಹಸ್ತೋತ್ರಿಯವೆಂಬ ತೃಚದಲ್ಲಿ ಪಠಿಸಬೇಕು. ಮತ್ತು ಆರಣ್ಯಕದಲ್ಲಿಯೂ-**ಇಂದ್ರಾಯ ಮದ್ವನೇ ಸುತಮಿಂದ್ರಮಿದ್ಗಾಥಿನೋ ಬೃಹತ್** (ಆ. ೬-೪) ಎಂದರೆ **ಇಂದ್ರಾಯ ಮದ್ವನೇ ಸುತಂ** (ಋ. ಸಂ. ೮-೯೨-೧೯) ಎಂಬ ಋಕ್ಕನ್ನು **ಇಂದ್ರಮಿದ್ಗಾಥಿನೋ ಬೃಹತ್** ಎಂಬ ಋಕ್ಕನ್ನು ಮೇಲೆ ಹೇಳಿದ ತೃಚದಲ್ಲಿ ಪಠಿಸಬೇಕೆಂದು ಸೂತ್ರವಿರುವುದು.

ಸೂಕ್ತ—೭

॥ ಮಂಡಲ—೧ ॥ ಅನುವಾಕ—೨ ॥ ಸೂಕ್ತ—೭ ॥

॥ ಅಷ್ಟಕ —೧ ॥ ಅಧ್ಯಾಯ—೧ ॥ ವರ್ಗ—೧೩, ೧೪ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೧–೧೦ ॥

॥ ಋಷಿಃ—ಮಧುಚ್ಛಂದಾ ವೈಶ್ವಾಮಿತ್ರಃ ॥

॥ ದೇವತಾ—ಇಂದ್ರಃ ॥

॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಇಂದ್ರಮಿದ್ಗಾಥಿನೋ ಬೃಹದಿಂದ್ರಮರ್ಕೇಭಿರರ್ಕಿಣಃ ॥
ಇಂದ್ರಂ ವಾಣೀರನೂಷತ ॥ ೧ ॥

॥ ಪದಪಾಠಃ ॥

ಇಂದ್ರಂ । ಇತ್ । ಗಾಥಿನಃ । ಬೃಹತ್ । ಇಂದ್ರಂ । ಅರ್ಕೇಭಿಃ । ಅರ್ಕಿಣಃ ॥
ಇಂದ್ರಂ । ವಾಣೀಃ । ಅನೂಷತ ॥ ೧ ॥

॥ सायणभाष्यं ॥

गाथिनो गीयमानसामयुक्ता उद्गातार इन्द्रमिदिन्द्रमेव बृहत्त्वामिद्धि हवामहे । ऋग्वे ६-४६-८ । इत्यस्यामृचि युष्मत्पुत्रेण बृहन्नामकेन सामर्ग्ण-नूषत । स्तुतवंतः । अर्किणोऽर्चनहेतुमंत्रोपेता होतारोऽर्केभिर्यग्रूप्यै-र्मंत्रैरिन्द्रमेवानूषत । ये त्वशिष्ट्वा अध्वर्यवस्ते वाणेर्वाग्ग्रियेजारूपा-भिरिन्द्रमेवानूषत । अर्कशब्दस्य मंत्रपरत्वं यास्केनोक्तं । अर्कोऽ मंत्रो भवति यदेनेनार्चंति । नि. ५-४ । इति । श्लोक इत्यादिषु सप्तपंचाशत्सु वाज्ञामसु वाशी वाणेति पठितम ॥ गाथिनः । उषिकुषिगार्तिभ्यस्थन् । उ. ३-४ । इति गायतेरस्थन्प्र-त्ययः । नित्त्वादाद्युदात्तः । गाथा एषां संतीति गाथिनः । व्रीह्यादिभ्यश्च । पा. ५-२-११६ । इतीनिः । प्रत्ययस्वरेणेकारं उदात्तः । स च सति शिष्टः । बृहत् । बृहता । तृतीयैकवचनस्य सुपां सुलुगिति लुक् । पृषद्बृहन्महज्जगच्छब्दैर्वत्वे । उ. ३. ७४ । इत्यंतोदात्तोत्तरे निपातितः । अर्केभिः । अर्च पूजायां । अर्च्यतेऽ नेभिरितिकर्मा मंत्राः । पुंसि संज्ञायां घः प्रायेण । पा. ३-३-११८ । इति घः । चजोः कु घिण्यतोः । पा. ७-३-५२ । इति कुत्वं । प्रत्ययस्वरेणांतोदात्तः । बहुलं छंदसि । पा ६-१-१० । इति भिस ऐसादेशो न भवति । अर्काः स्तुतिसाधनभूता मंत्रा एषां संतीत्यर्किणः । वाणेः । वृषादीनां च । पा. ६-१-२०३ । इत्याद्युदात्तः । दिर्घाज्जसि च । पा. ६-१-१०५ । इति पूर्वसवर्णदीर्घनिषेधस्य वा छंदसि । पा. ६-१-१०६ । इति विकल्पितत्वाद्दीर्घत्वं । तृतीयार्थे प्रथमा । अनूषत । णु स्तुतौ । नोः नः । पा. ६-१-६५ । इति नत्वं । लुङ् व्यत्ययेनात्मनेपदं । ऋुस्यादादेशः । पा. ६-१-५ । सिचि इडभाव उकारस्य दीर्घत्वं च छांदसं । धातोः कुटादित्वात् । पा. १-२-१ । सिचो ङित्त्वेन । पा- १-१-५ । गुणाभावः ॥

॥ प्रतिपदार्थ ॥

गाथिनः--गानमाडुववरु एंदरे उद्गातृवे मोदलाद सामगायकरु । इन्द्रमित्--इन्द्रनन्ने । बृहत्--बृहत्सामवेंब साममंत्रदिंद अनूषत--स्तोत्रमाडुवरु एंदरे गानमाडुवरु ॥ अर्किणः--अर्चन मंत्रवन्नु (अह्वानमंत्रवन्नु) पठिसुव होतृ मोदलाद ऋत्विजरु । इन्द्रं--इन्द्रनन्नु । अर्केभिः--ऋङ्मंत्रगळिंद । (अनूषत--स्तोत्र माडुवरु) । (अध्वर्यु मोदलाद इतर ऋत्विजरु) इन्द्रं--इन्द्रनन्नु । वाणेः--वाक्य रूपदिंदिरुव यजुर्वेदद मंत्रगळिंद । (अनूषत--स्तोत्रमाडुवरु).

॥ भावार्थ ॥

यज्ञमाडुव समयदल्लि ऋत्विक्कुगळु इन्द्रनन्नु विधविधवागि स्तोत्रमाडुवरु एंदरे उद्गातृ मोदलाद सामगायकरु तम्म सामवेदल्लिरुव बृहत्सामवेंब (ई मंत्रवु

ಋಗ್ವೇದದಲ್ಲಿ ೬-೪೬-೧ ಋಕ್ಕಿನಲ್ಲಿರುವುದು) ಮಂತ್ರದಿಂದ ಗಾನಮಾಡುವರು ; ಹೋತೃವರ್ಗದವರು ತಮ್ಮ ಋಗ್ವೇದದ ಶಸ್ತ್ರರೂಪವಾದ ಋಕ್ಕುಗಳಿಂದ ಸ್ತೋತ್ರಮಾಡುವರು ; ಅಧ್ವರ್ಯು ಮೊದಲಾದ ಇತರ ಋತ್ವಿಕ್ಕು ಗಳು ತಮ್ಮ ವೇದವಾದ ಯಜುರ್ವೇದದ ವಾಕ್ಯರೂಪವಾದ ಮಂತ್ರಗಳಿಂದ ಇಂದ್ರನನ್ನು ಸ್ತೋತ್ರಮಾಡುವರು ಎಂದರೆ ಋತ್ವಿಕ್ಕುಗಳು ಇಂದ್ರನನ್ನು ಋಗ್ಯಜುಸಾಮವೆಂಬ ಮೂರು ವಿಧವಾದ ವೇದಮಂತ್ರಗಳಿಂದಲೂ ಸ್ತೋತ್ರ ಮಾಡುವರು.

English Translation

The chanters (of the Sama hymns) praise only Indra with (a Saman called) Brihat ; the recetirs of mantras (Rics) praise Indra with the Ric-Verses ; (and the remaning priest Adhvaryus) praise Indra with prose-like Sentences (of Yajus).

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಋಗ್ಯಜುಸ್ಸಾಮಗಳೆಂಬ ವೇದಗಳ ಹೆಸರು ನಿರ್ದಿಷ್ಟವಾಗಿ ಸೂಚಿಸಲ್ಪಡದಿದ್ದರೂ ಭಾಷ್ಯ ಕಾರರು **ಬೃಹತ್, ಅರ್ಕೇಭಿಃ ವಾಣೀಃ** ಎಂಬ ಶಬ್ದಗಳು ಸಾಮವೇದ, ಋಗ್ವೇದ, ಯಜುರ್ವೇದ ಎಂಬ ಮೂರು ವೇದಗಳ ಮಂತ್ರಗಳನ್ನು ಸೂಚಿಸುವುದೆಂದು ಅಭಿವ್ಯಾಯಪಡುವರು. ಪಾಶ್ಚಾತ್ಯಪಂಡಿತರು ಈ ವಾದ ವನ್ನು ಒಪ್ಪುವುದಿಲ್ಲ. ಅವರು ಋಗ್ವೇದವೇ ಇತರ ವೇದಗಳಿಗಿಂತ ಪ್ರಾಚೀನವಾದುದೆಂತಲೂ ಆದುದರಿಂದ ಋಗ್ವೇದದಲ್ಲಿ ಈಚಿನ ವೇದಗಳಾದ ಯಜುರ್ವೇದ ಸಾಮವೇದಗಳು ಸೂಚಿಸಲ್ಪಡಲು ಕಾರಣವಿಲ್ಲವೆಂತಲೂ ಹೇಳುವರು. ಈ ವಾದವನ್ನು ತಿರಸ್ಕರಿಸಲು ಸಾಧ್ಯವಿಲ್ಲವಾದರೂ ಋಗ್ವೇದದ ಪುರುಷಸೂಕ್ತದಲ್ಲಿ (ಋ. ಸಂ. ೧೦-೯೦-೯) ಯಜುಸ್ಸಾಮಶಬ್ದಗಳು ಸ್ಪಷ್ಟವಾಗಿ ಹೇಳಲ್ಪಟ್ಟವೆ. ಇದಲ್ಲದೆ ಸಾಮವೇದದ ಬಹುಭಾಗಮಂತ್ರಗಳು ಋಗ್ವೇದಮಂತ್ರಗಳೇ ಆಗಿರುವುದರಿಂದಲೂ, ಋಗ್ವೇದ ಕಾಲದಲ್ಲಿಯೂ ಋಗ್ವೇದದ ಅನೇಕ ಋಕ್ಕುಗಳನ್ನು ಗಾನ ರೂಪವಾಗಿ ಪಠಿಸುವುದು ರೂಢಿಯಾಗಿದ್ದುದರಿಂದಲೂ ಇಲ್ಲಿ ಸಾಮಮಂತ್ರವನ್ನು ನಿರ್ದೇಸಿಶಿರುವುದು ಅಸಂಭವ ವೇನೂ ಅಲ್ಲ. ಮತ್ತೂ ಯಜುರ್ವೇದವು ಋಗ್ವೇದ ಸಾಮವೇದಗಳಿಗಿಂತ ಈಚಿನದೆಂದು ಎಲ್ಲರೂ ಒಪ್ಪಬೇಕಾದ ವಿಷಯ ಆದರೆ ಈಗಿನ ಯಜುರ್ವೇದವು ಕ್ರಮಪಡಿಸಲ್ಪಟ್ಟಿರುವಂತೆ ಆ ಕಾಲದಲ್ಲಿ ಇಲ್ಲದಿದ್ದರೂ ಅನೇಕ ಯಜು ರ್ವೇದ ಮಂತ್ರಗಳು ಮುಖ್ಯವಾಗಿ ಯಜ್ಞದಲ್ಲಿ ಉಪಯೋಗಿಸುವ ಕೆಲವು ವಾಕ್ಯಗಳು ಆಗ ವಿಶೇಷವಾಗಿ ಬಳಕೆ ಯಲ್ಲಿತ್ತೆಂದು ಧಾರಾಳವಾಗಿ ಹೇಳಬಹುದು. ಅಂತಹ ಅನೇಕ ವಾಕ್ಯಗಳೂ, ಯಜ್ಞಮಾಡುವ ಕ್ರಮ, ವಿಧಾನ ಗಳೂ ಒಟ್ಟುಗೂಡಿ ಈಗಿರುವ ಯಜುರ್ವೇದವಾಗಿ ರೂಪುಗೊಂಡಿರಬಹುದು. ಇದಲ್ಲದೆ ಋಗ್ವೇದದಲ್ಲಿ ಅನೇಕ ಕಡೆ ಯಜುರ್ವೇದದ ಮುಖ್ಯ ಋತ್ವಿಜನಾದ ಅಧ್ವರ್ಯುವಿನ ಹೆಸರು ಸ್ಪಷ್ಟವಾಗಿ ಉಕ್ತವಾಗಿದೆ. ಮತ್ತು ಈ ಋಕ್ಕಿನಲ್ಲಿ ವಾಣೀಃ ಎಂಬ ಶಬ್ದಪ್ರಯೋಗವಿರುವುದರಿಂದ ಛಂದೋಬದ್ಧವಲ್ಲದ ಯಜುರ್ವೇದ ವಾಕ್ಯಗ ಳೆಂದು ಊಹಿಸುವುದಕ್ಕೂ ಸಾಕಾದಷ್ಟು ಅವಕಾಶವಿದೆ. ಈ ಕಾರಣಗಳಿಂದ ಭಾಷ್ಯಕಾರರು ಋಗ್ಯಜುಸ್ಸಾಮ ವೇದಮಂತ್ರಗಳೆಂದು ಅರ್ಥಮಾಡಿರುವ ಅಂಶವನ್ನೂ ತಿರಸ್ಕರಿಸುವಹಾಗಿಲ್ಲ.

ಗಾಥಿನಃ—ಗಾಥಾ ಏಷಾಂ ಸಂತೀತಿ ಗಾಥಿನಃ—ಸಾಮವೇದಮಂತ್ರಗಳಿಗೆ **ಗಾಥಾ** ಎಂದು ಹೇಳು ವುದೂ ಉಂಟು. ಈ ಗಾಥೆಗಳನ್ನು ಎಂದರೆ ಸಾಮಮಂತ್ರಗಳನ್ನು ಗಾನಮಾಡುವವರಿಗೆ **ಗಾಥಿನಃ** ಎಂದು ಹೇಳುವರು.

ಬೃಹತ್—ಬೃಹತ್ ಎಂದರೆ ದೊಡ್ಡದು ಎಂದು ಈ ಶಬ್ದದ ಸಾಧಾರಣಾರ್ಥವು. ಆದರೆ ಸಾಮವೇದದಲ್ಲಿ ಬೃಹತ್ಸಾಮವೆಂಬ ಯಜ್ಞಗಳಲ್ಲಿ ಗಾನಮಾಡುವ ಮುಖ್ಯವಾದ ಸಾಮಮಂತ್ರವಿರುವುದು ಇದು ಋಗ್ವೇದದಲ್ಲಿ—

ತ್ವಾಮಿದ್ಧಿ ಹವಾಮಹೇ ಸಾತಾ ವಾಜಸ್ಯ ಕಾರವಃ ।
ತ್ವಾಂ ವೃತ್ರೇಷ್ವಿಂದ್ರ ಸತ್ಪತಿಂ ನರಸ್ತ್ವಾಂ ಕಾಷ್ಠಾಸ್ವರ್ವತಃ ॥
(ಋ. ಸಂ. ೬-೪೬-೧)

ಈ ಮಂತ್ರವು ಸಾಮವೇದದಲ್ಲಿ ೨೩೪; ೮೦೯, ಅಥರ್ವವೇದ ೨೦-೯೪-೧, ವಾಜಸನೇಯೆ ಸಂಹಿತಾ (ಶು. ಯಜುರ್ವೇದ) ೨೭-೩೭, ತೈತ್ತಿರೀಯ ಸಂಹಿತಾ (ಕೃಷ್ಣಯಜುರ್ವೇದ) ೨-೪-೧೪-೩; ಮೈತ್ರಾಯಣೀಯ ಸಂಹಿತಾ ೭-೨-೬ ಮೊದಲಾದ ಸ್ಥಳಗಳಲ್ಲಿ ಪರಿತವಾಗಿದೆ. ಈ ಬೃಹತ್ಸಾಮವು ಸಾಮವೇದದಲ್ಲಿ ಒಂದು ಮುಖ್ಯ ಮಂತ್ರವಾಗಿದೆ. ಯಜುರ್ವೇದದಲ್ಲಿ ಅನೇಕ ಕಡೆ ಇದರ ವಿಪರಣೆ ಇದೆ

ಅರ್ಕೈಃ—ಅರ್ಕೋ ಮಂತ್ರೋ ಭವತಿ ಯದೇನೇನಾರ್ಚಂತಿ (ನಿ. ೫-೪) ಎಂದು ಯಾಸ್ಕರು ನಿರುಕ್ತದಲ್ಲಿ ಅರ್ಕಶಬ್ದದ ಅರ್ಥವನ್ನು ಹೇಳಿರುವರು. **ಅರ್ಚ-ಪೂಜಾಯಾಂ**—ಪೂಜಿಸುವುದರಿಂದ ಇದಕ್ಕೆ ಅರ್ಕಃ= ಮಂತ್ರವು ಎಂದು ಹೆಸರು.

ಅರ್ಕಿಣಃ—ಅರ್ಕಾಃ ಸ್ತುತಿಸಾಧನಭೂತಾ ಮಂತ್ರಾ ಯೇಷಾಂ ಸಂತೀತ್ಯರ್ಕಿಣಃ-ಎಂದರೆ ಸ್ತುತಿ ಸಾಧನಭೂತವಾದ ಮಂತ್ರಗಳಿಂದ (ಅರ್ಕಗಳಿಂದ) ಸ್ತೋತ್ರಮಾಡುವವರು.

ವಾಣೀಃ—ಶ್ಲೋಕಃ, ಧಾರಾ ಮೊದಲಾದ ಏವತ್ತೇಳು ವಾಙ್ಮಾಮಸೂಚಕ ಶಬ್ದಗಳ ಮಧ್ಯದಲ್ಲಿ ವಾಣೀ ಎಂಬ ಶಬ್ದವು ಪಠಿತವಾಗಿದೆ. (ನಿ. ೨-೨೩) ಇಲ್ಲಿ ವಾಣೀಃ—ಎಂದರೆ ಯಜುರ್ವೇದವಾಕ್ಯಗಳೆಂದು ಭಾಷ್ಯಕಾರರು ಹೇಳಿರುವರು. ಯಜುರ್ವೇದದಲ್ಲಿ ಛಂದೋಬದ್ಧವಾದ ಮಂತ್ರಗಳು ವಿಶೇಷವಾಗಿ ಇಲ್ಲದಿರುವುದರಿಂದ ಈ ವೇದದ ಮಂತ್ರಗಳಿಗೆ ವಾಕ್ಯಗಳೆಂದು ಹೇಳುವ ರೂಢಿ ಇರುವುದು. ಈ ಋಕ್ಕಿನಲ್ಲಿ **ವಾಣೀಃ** ಎಂಬ ಪ್ರಥಮಾವಿಭಕ್ತಿಶಬ್ದವು ತೃತೀಯಾವಿಭಕ್ತ್ಯರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದು.

ಆನೂಷತ— ಣು ಸ್ತುತೌ ಎಂಬ ಧಾತುವಿನ ಲುಙ್‌ರೂಪವು. ಇದು ಪರಸ್ಮೈಪದಧಾತುವಾದರೂ ವ್ಯತ್ಯಯದಿಂದ ಆತ್ಮನೇಪದಧಾತುವಿನಂತೆ ಉಪಯೋಗಿಸಲ್ಪಟ್ಟಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಗಾಥಿನಃ—ಉಷಿಕುಷಿಗಾರ್ತಿಭ್ಯಸ್ಥನ್ (ಉ. ಸೂ ೨-೧೬೧) ಉಷ ದಾಹೇ, ಕುಷ ನಿಷ್ಕರ್ಷೇ, ಗೈ ಶಬ್ದೇ, ಋ ಗತೌ ಈ ಧಾತುಗಳ ಮುಂದೆ ಥನ್ ಪ್ರತ್ಯಯ ಬರುವುದು ಎಂಬುದರಿಂದ ಗೈ ಧಾತುವಿನ ಮುಂದೆ ಥನ್ ಬರುವುದು. ಗೈ+ಥನ್ **ಆದೇಚ ಉಪದೇಶೇಽಶಿತಿ** (ಪಾ. ಸೂ. ೬-೧-೪೫) ಶಕಾರೇತ್ಸಂಜ್ಞಕಪ್ರತ್ಯಯವು ಪರದಲ್ಲಿ ಇಲ್ಲದೇ ಇದ್ದರೆ ಉಪದೇಶದಲ್ಲಿ ಏ ಓ ಐ ಔ ಗಳನ್ನು ಕೊನೆಯಲ್ಲಿ ಹೊಂದಿರುವ ಧಾತುಗಳ ಕೊನೆಯ ವರ್ಣಕ್ಕೆ ಆಕಾರಾದೇಶ ಬರುವುದು ಎಂಬುದರಿಂದ ಗೈನ ಐಕಾರಕ್ಕೆ ಆಕಾರ ಬಂದರೆ ಗಾಥ ನಿಷ್ಪನ್ನರಿಂದ ಗಾಥ ಎಂಬುದು ಆದ್ಯುದಾತ್ತ. ಗಾಥಾ ಏಷಾಂ ಸನ್ತಿ ಇತಿ ಗಾಥಿನಃ **ವ್ರೀಹ್ಯಾದಿಭ್ಯಶ್ಚ** (ಪಾ. ಸೂ-

४-३-८८६) व्रीह्यादिगणपठितवाच शब्दगळ मुंदे मत्वर्थदल्लि इनि-ठन् प्रत्ययगळु बरुवुदु एंबुदरिंद इनि प्रत्ययद **यस्येदे तिचे** (पा. सू. ६-४-) एंबुदरिंद अकारलोपव. प्रत्ययद स्वरदिंद इकार उदात्त, सतशिष्यस्वरदिंद अकार अनुदात्त. अनुदात्तवाद जस् विभक्तिय अकारवु **उदात्तादनुदात्तस्यस्वरितः** (पा. सू. ८-४-६६) एंबुदरिंद स्वरित.

बृहत्—बृहता एंदर्थ. बृहत् शब्दद मुंदे बंद तृतीयाद एकवचनक्के **सुपां सुलुक्** (पा. सू. ७-१-३९) एंबुदरिंद लुक् बरुवुदु. **वर्तमाने पृषद्बृहन्महज्जगच्छतृवच्छे** (उ. सू. ३-३४८) वर्तमानार्थदल्लि अति प्रत्ययांतवागि इवु निपातिसल्पडुवुवु. शतृ प्रत्ययविद्दरे यावव कार्यगळु बरुवुदोव अ कार्यगळु अति प्रत्ययविरुवागलू बरुवुदु एंबुदरिंद बृहत् शब्दवु अतिप्रत्ययांतवागि निपातितवागिरुवुदु. प्रत्ययद स्वरदिंद अंतोदात्तवागुवुदु.

अर्केभिः—अर्च पूजायां धातु. अर्च्यंतेऽनेन इति अर्कः—मंत्रगळु एंदर्थ. **पुंसिसंज्ञायां घः प्रायेण** (पा सू. ३-३-११८) पुल्लिंगदल्लि धातुविन मुंदे करण वा अधिकरण एंब अर्थदल्लि संज्ञे तोरुवागि प्रायशः घ प्रत्ययद बरुवुदु एंबुदरिंद घ प्रत्ययः घ् गे **अशक्ततद्धितेषु** (पा. सू. ८-३-९) एंबुदरिंद इत्संज्ञे बंदु **तस्यलोपः** (पा. सू. ८-३-९) एंबुदरिंद लोप अर्च्+अ **चेर्जोः कुघिण्ण्यतोः** (पा. सू. ७-३-५३) घकारोत्संज्ञक प्रत्ययद परदल्लिरुवागलू ण्यत् प्रत्ययद परदल्लिरुवागलू चकार जकारगळिगे कुत्व (कवर्ग) बरुवुदु एंबुदरिंद च् गे क् बंदरे अर्क एंदागुवुदु. इदर मुंदे तृतीयाद बहुवचन भिस् प्रत्ययवन्नित्टरे **अतोभिस ऐस्** (पा. सू. ७-१-९) एंबुदरिंद ऐसादेश प्राप्तवागुवुदु. आदरू **बहुलं छंदसि** (पा. सू. ७-१-१०) एंबुदरिंद ऐसादेश बरुवुदिल्ल. **बहुवचनेरेङुल्येत्** (पा. सू. ७-३-१०३) एंबुदरिंद प्रत्ययद हिंदिन अकारक्के एत्व बंदरे अर्केभिः एंदागुवुदु.

अर्किणः—अर्काः स्तुतिसाधनवाद मंत्रगळु एषां सन्ति एंदु विग्रहमाडिदाग **अतइनिठनौ** (पा. सू. ५-२-११५) एंबुदरिंद इनि प्रत्ययः प्रथमाबहुवचनदल्लि अर्किणः एंदागुवुदु.

वाणेः—**वृषादीनां च** (पा. सू. ६-१-२०३) एंबुदरिंद आद्युदात्त. वाणे शब्दद मुंदे जस्सन्नित्टरे वाणे+अस् एंदिरुवाग **प्रथमयोः पूर्वसवर्णः** (पा. सू. ६-१-१०२) अग्रवर्णद मुंदे प्रथमा द्वितीयाद विभक्तिगळल्लिरुव अच् इद्दरे पूर्वपरस्थानगळल्लि पूर्वसवर्णदीर्घ बरुवुदु एंदु विहितवाद पूर्वसवर्णदीर्घक्के **दीर्घाज्जसि च** (पा. सू. ६-१-१०४) दीर्घद मुंदे जस् अथवा इच्छ्रुत्यान्याहारद वर्णगळु इद्दरे पूर्वसवर्णदीर्घ बरुवुदिल्ल एंबुदरिंद निषेधवु यद्यपि बरुवुदु. आदरू **वाछंदसि** (पा. सू. ६-१-१०६) छंदस्सिनल्लि दीर्घद मुंदे जस्सु इच्छु परदल्लिद्दरे पूर्वसवर्णदीर्घवु विकल्पवागि बरुवुदिल्ल

ಎಂದು ನಿಷೇಧವು ವಿಕಲ್ಪಿತವಾಗಿರುವುದರಿಂದ ನಿಷೇಧವು ಬರದೇ ಇರುವ ಪಕ್ಷದಲ್ಲಿ **ಪೃಥಮಯೋಃ ಪೂರ್ವಸವರ್ಣಃ** (ಪಾ. ಸೂ. ೬-೧-೧೦೨) ಎಂಬುದರಿಂದ ಪೂರ್ವಸವರ್ಣದೀರ್ಘ ಬರುವುದು, ವಾಣೀಃ ಎಂದಾಗುವುದು. ತೃತೀಯಾವಿಭಕ್ತಿಯ ಅರ್ಥದಲ್ಲಿ ಪ್ರಥಮಾವಿಭಕ್ತಿ ಬಂದಿರುವುದು.

ಅನೂಷಠ—ಣು ಸ್ತುತೌ ಧಾತು. **ಣೋನಃ** (ಪಾ. ಸೂ. ೬-೧-೬೫) ಧಾತುವಿನ ಆದಿಯಲ್ಲಿರುವ ಣಕಾರಕ್ಕೆ ನಕಾರ ಬರುವುದು ಎಂಬುದರಿಂದ ಣಕಾರಕ್ಕೆ ನಕಾರ. ನು ಎಂಬುದರ ಮುಂದೆ ಲುಙ್ಲನ್ನು ಇಟ್ಟರೆ ವ್ಯತ್ಯಯದಿಂದ ಆತ್ಮನೇಪದಪ್ರತ್ಯಯ ಬರುವುದು. ಪ್ರಥಮವುರುಷ ಬಹುವಚನ ಝ ಬಂದರೆ ಅದಕ್ಕೆ **ಆತ್ಮನೇ ಪದೇಷ್ವನತಃ** (ಪಾ. ಸೂ. ೬-೧-೫) ಅಕಾರವನ್ನುಳಿದ ವರ್ಣದ ಮುಂದೆ ಇರುವ ಆತ್ಮನೇ ಪದ ಪ್ರತ್ಯಯಸಂಬಂಧಿಯಾದ ಝ ಗೆ ಅತ್ ಆದೇಶ ಬರುವುದು ಎಂಬುದರಿಂದ ಅತ್ ಆದೇಶ ನು+ಅತ **ಚ್ಲಿ ಲುঙ್ಙ್ಯೋ** (ಪಾ. ಸೂ. ೩-೧-೪೩) ಎಂಬುದರಿಂದ ಧಾತುವಿನ ಮುಂದೆ ಚ್ಲಿಯೂ ಅದಕ್ಕೆ **ಚ್ಲೇಃ ಸ್ಸಿಚ್** (ಪಾ. ಸೂ. ೩-೧-೪೪) ಎಂಬುದರಿಂದ ಸಿಚ್ಚು ಬರುವುದು. **ಆರ್ಧಧಾತುಕಸ್ಯೇಡ್ವಲಾದೇಃ** (ಪಾ.ಸೂ. ೭-೨-೩೫) ಎಂದು ವಿಹಿತವಾದ ಇಡಾಗಮ ಬರದೇ ಇರುವುದೂ ನು ಎಂಬುದಕ್ಕೆ ದೀರ್ಘಬರುವುದೂ ಛಾಂದಸ. ಣು ಧಾತುವು ಕುಟಾದಿಗಣದಲ್ಲಿರುವುದರಿಂದ **ಗಾಙ್ಕುಟಾದಿಭ್ಯೋಽಞ್ಣ್ನಿತ್** (ಪಾ.ಸೂ. ೧-೨-೧) ಎಂಬುದರಿಂದ ಸಿಚ್ ಪ್ರತ್ಯಯ ಙಿತ್ತಾಗುವುದು ಆದ್ದರಿಂದ **ಕ್ಙಿತಿಚ** (ಪಾ. ಸೂ. ೧-೧-೫) ಎಂದು ನಿಷೇಧ ಬರುವುದರಿಂದ **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಪ್ರಾಪ್ತವಾಗುವ ಗುಣ ಬರುವುದಿಲ್ಲ ॥ ೧ ॥

॥ ಸಂಹಿತಾಪಾಠಃ ॥

ಇಂದ್ರು ಇದ್ಧರ್ಯೋ॑ಃ ಸಚಾ ಸಂಮಿಶ್ಲ ಆ ವ॑ಚ್ಯೋಯುಜಾ ।
ಇಂದ್ರೋ॑ ವ॒ಜ್ರೀ ಹಿ॑ರಣ್ಯ॒ಯಃ ॥ ೨ ॥

॥ ಪದಪಾಠಃ ॥

ಇಂದ್ರ॑ಃ । ಇತ್ । ಹರ್ಯೋ॑ಃ । ಸಚಾ॑ । ಸಂ ಽ ಮಿಶ್ಲ॑ಃ । ಆ । ವ॒ಚ್ಯ॑ಃ ಽ ಯುಜಾ॑ ।
ಇಂದ್ರ॑ಃ । ವ॒ಜ್ರೀ । ಹಿ॒ರ॒ಣ್ಯ॒ಯಃ ॥ ೨ ॥

॥ ಸಾಯಣಭಾಷ್ಯಂ ॥

ಇಂದ್ರ ಇದಿಂದ್ರ ಏವ ಹರ್ಯೋರ್ಹರಿನಾಮಕಯೋರಶ್ವಯೋಃ ಸಚಾ ಸಹ ಯುಗಪದಾ ಸಂಮಿಶ್ಲಃ ಸರ್ವತಃ ಸಮ್ಯಗ್ಮಿಶ್ರಯಿತಾ । ಕೀದೃಶಯೋರ್ಹರ್ಯೋಃ । ವಚ್ಯೋಯುಜಾ । ಇಂದ್ರಸ್ಯ ವಚನಮಾತ್ರೇಣ ರಥೇ ಯುಜ್ಯಮಾನಯೋಃ ಸುಶಿಕ್ಷಿತಯೋರಿತ್ಯರ್ಥಃ । ಅಯಮಿಂದ್ರೋ ವಜ್ರೀ ವಜ್ರ-

युक्ष्वो हिरण्ययो हिरण्मयः । सर्वाभरणभूषित इत्यर्थः ॥ हर्योः । हरत इति हरी । इन् । नित्त्वादाद्युदात्तः । सचा सहेत्युक्तं । नि. ४-४ । संमिश्लः । मिश्रणं मिश्रः । मिश्रयतेऽर्थ इन् । पा. ३-३-८९ । सम्यक् मिश्रो यस्यासौ संमिश्रः । लत्वं छान्दसं । सम्यक् मिश्रयितेत्यर्थः । बहुव्रीहौ पूर्वपदप्रकृतिस्वरत्वं । वज्रो-युजा । वज्रेण युज्यते इति वज्रोयुजौ । तयोः । षष्ठ्यृद्विवचनस्य सुपां सुलुगित्याकारादेशः । युज्शब्दो धातुस्वरेणान्तोदात्तः । कृदुत्तरपदप्रकृतिस्वरेण स एव शिष्यते । वज्री । वज्रमस्यास्ति । अत इनिठनौ । पा. ५. २-११५ । प्रत्ययस्वरः । हिरण्ययः । ऋत्व्यवास्त्व्यवास्त्वमाध्वीहिरण्ययानि छंदसि । पा. ६-४-१७५ । इति हिरण्ययशब्दस्य मकारलोपो निपात्यते । अकारः प्रत्ययस्वरेणोदात्तः । पूर्वेणानुदात्तेन सहैकादेश उदात्तेनोदात्त इत्युदात्तः ॥

॥ प्रतिपदार्थ ॥

संमिश्लः—ಎಲ್ಲವನ್ನೂ ಚೆನ್ನಾಗಿ ಮಿಶ್ರವಾಡುವ । **इन्द्रो** ಇತ್-ಇಂದ್ರನೇ । **वज्रोयुजा**-ಇಂದ್ರನ ವಜನಮಾತ್ರದಿಂದ ರಥದಲ್ಲಿ ಕಟ್ಟಲ್ಪಡುವ । **हर्योः**—ಹರೀ ಎಂಬ (ಇಂದ್ರನ) ಕುದುರೆಗಳಿಂದ । **सचा**—ಸಹಿತವಾಗಿ । **आ (याति)**—ಇಲ್ಲಿಗೆ ಬರುವನು ; । **इन्द्रः**—ಇಂದ್ರನು । **वज्री**—ವಜ್ರಾಯುಧವನ್ನು ಧರಿಸಿರುವವನು, । **हिरण्ययः**—ಹಿರಣ್ಮಯನು ಎಂದರೆ ಸುವರ್ಣಾಭರಣಭೂಷಿತನು.

॥ भावार्थ ॥

ಎಲ್ಲವನ್ನೂ ಮಿಶ್ರಮಾಡುವ ಇಂದ್ರನು ಇಲ್ಲಿಗೆ ಬರುತ್ತಿರುವನು. ಅವನ ವಜನ ಮಾತ್ರದಿಂದ ಕುದುರೆಗಳು ರಥಕ್ಕೆ ಕಟ್ಟಲ್ಪಡುವವು. ಇಂತಹ ಕುದುರೆಗಳು ಕಟ್ಟಿದ (ರಥದಲ್ಲಿ ಕುಳಿತು) ಇಲ್ಲಿಗೆ ಬರುವನು. ಆ ಇಂದ್ರನು ಚಿನ್ನದ ಆಭರಣಗಳಿಂದ ಅಲಂಕೃತನಾಗಿ ವಜ್ರಾಯುಧವನ್ನು ಧರಿಸಿರುವನು.

English Translation.

Indra, the good mixer of all things comes verily with his horses that are harnessed at his word; Indra, the richly-decorated (with gold), the wielder of the thundorbolt.

॥ विशेषविषयगळु ॥

सचा—ಸಹ, ಕೂಡಿ, ಸಹಿತವಾಗಿ.

संमिश्लः—ಈ ಶಬ್ದಕ್ಕೆ ಭಾಷ್ಯಕಾರರು—**संमिश्लः सर्वतः सम्यग्मिश्रयिता**—ಚೆನ್ನಾಗಿ ಮಿಶ್ರಮಾಡುವವನು ಎಂದು ಅರ್ಥಮಾಡಿರುವರು. ಇವನ್ನನುಸರಿಸಿ Wilson ಮೊದಲಾದ ಪಾಶ್ಚಾತ್ಯ ಪಂಡಿ

ತರು ಈ ಶಬ್ದಕ್ಕೆ Blender, mixer, mixing oneself very much with, attached to, ಮೊದಲಾದ ಅರ್ಥವಿವರಣೆಯನ್ನು ಕೊಟ್ಟಿರುವರು. ಈ ಶಬ್ದಕ್ಕೆ ಅವಯವಾರ್ಥವು—**ಸಂಮಿಶ್ಲಃ । ಮಿಶ್ರಣಂ ಮಿಶ್ರಃ । ಮಿಶ್ರಯತೇಃರ್ಘಞ್ । ಪಾ. ಸೂ. ೩-೩-೧೮ । ಸಮ್ಯಕ್ ಮಿಶ್ರೋ ಯಸ್ಯಾಸೌ ಸಂಮಿಶ್ರಃ । ಲತ್ವಂ ಛಾಂದಸಂ । ಸಮ್ಯಕ್ ಮಿಶ್ರಯಿತೇತ್ಯರ್ಥಃ ॥** ಎಂದಿರುವುದು. ಈ ವಿಧವಾದ ಅರ್ಥವು ಈ ಶಬ್ದಕ್ಕೆ ಸರಿಯಾಗಿರುವುದಾದರೂ ಈ ಋಕ್ಕಿನಲ್ಲಿ ಸಂಮಿಶ್ಲಶಬ್ದಕ್ಕೆ ಈ ಅರ್ಥವು ಹೊಂದುವುದಿಲ್ಲ. **ಸಂಮಿಶ್ಲಃ** ಎಂದರೆ ಸಂಯುಕ್ತಃ ಅಥವಾ ಸಹಿತಃ ಎಂದು ಅರ್ಥಮಾಡಿದರೆ ಸರಿಹೋಗುವುದು. ಭಾಷ್ಯಕಾರರೂ

ವಿಶ್ವೇ ದೇವಾಸೋ ರಯಿಭಿಃ ಸಮೋಕಸಃ ಸಂಮಿಶ್ಲಾ ಸಸ್ತೋವಿಷೀಭಿರ್ವಿರಪ್ಶಿನಃ ॥

(ಋ. ಸಂ. ೧-೬೪-೧೦)

ಎಂಬ ಋಕ್ಕಿನಲ್ಲಿರುವ **ಸಂಮಿಶ್ಲಾಸಃ** ಎಂಬ ಪದಕ್ಕೆ ಸಂಮಿಶ್ರಾಃ ಸಂಯುಕ್ತಾ ಇತ್ಯರ್ಥಃ ಎಂದು ವಿವರಿಸಿರುವರು. ಈ ಶಬ್ದವಿರುವ ಋಕ್ಕುಗಳನ್ನು ಉದಾಹರಣೆಗಾಗಿ ಇಲ್ಲಿ ಕೊಡಲಾಗುವುದು.

ಯಃ ಸಂಮಿಶ್ಲೋ ಹರ್ಯೋರ್ಯೋ ಸುತೇ ಸಚಾ ವಜ್ರೀ ರಥೋ ಹಿರಣ್ಯಯಃ ॥

(ಋ. ಸಂ. ೮-೩೩ ೪)

ಈ ಋಕ್ಕಿನಲ್ಲೆಯೂ ಪ್ರಸಕ್ತವಾದ ಋಕ್ಕಿನ ಪದಗಳೂ ಅರ್ಥವೂ ವಿಶೇಷ ವ್ಯತ್ಯಾಸವಿಲ್ಲದೆ ಇರುವವು.

ಪ್ರಭಂಗೀ ಶೂರೋ ಮಘವಾ ತುವೀಮಘಃ ಸಂಮಿಶ್ಲೋ ವೀರ್ಯಾಯ ಕಂ ॥

(ಋ. ಸಂ. ೮-೬೧-೧೪)

ಸಂಮಿಶ್ಲೋ ಅರುಷೋ ಭವ ಸೂಪಸ್ಥಾಭಿರ್ನ ಧೇನುಭಿಃ ॥

(ಋ. ಸಂ. ೯-೬೧-೨೧)

ಮಂದ್ರೋ ಹೋತಾ ಸ ಜುಹ್ವಾಸ್ಯೋ ಯಜಿಷ್ಠಃ ಸಂಮಿಶ್ಲೋ ಅಗ್ನಿರಾ ಜಿಘರ್ತಿ ದೇವಾನ್ ॥

(ಋ. ಸಂ. ೧೦-೬-೪)

ಮಂದ್ರಾಃ ಸುಜಿಹ್ವಾಃ ಸ್ವರಿತಾರ ಆಸಭಿಃ ಸಂಮಿಶ್ಲಾ ಇಂದ್ರೇ ಮರುತಃ ಪರಿಷ್ಟುಭಃ ॥

(ಋ. ಸಂ. ೧-೧೬೫-೧೧)

ಯಜ್ಞೈಃ ಸಂಮಿಶ್ಲಾಃ ಪೃಷತೀಭಿರರ್ಷ್ಟಿಭಿರ್ಯಾಮಞ್ಛುಭ್ರಾಸೋ ಆಂಜಿಷು ಪ್ರಿಯಾ ಉತೇ॥

(ಋ. ಸಂ. ೨-೩೬-೨)

ಪ್ರ ಯಂತು ವಾಜಾಸ್ತವಿಷೀಭಿರಗ್ನಯಃ ಶುಭೇ ಸಂಮಿಶ್ಲಾಃ ಪೃಷತೀರಯುಕ್ಷತ ॥

(ಋ. ಸಂ. ೩-೨೬-೪)

ಯಾಮಂ ಯೇಷ್ಠಾಃ ಶುಭಾ ಶೋಭಿಷ್ಠಾಃ ಶ್ರಿಯಾ ಸಂಮಿಶ್ಲಾ ಓಜೋಭಿರುಗ್ರಾಃ ॥

(ಋ. ಸಂ. ೭-೫೬-೬ (೩))

ಈ ಋಕ್ಕುಗಳಲ್ಲೆಲ್ಲಾ ಇರುವ ಸಂಮಿಶ್ಲಶಬ್ದಕ್ಕೆ ಯುಕ್ತ, ಸಹಿತ ಎಂಬ ಅರ್ಥವೇ ಸರಿಯಾಗಿ ಹೊಂದುವುದು. ಈ ಶಬ್ದವು ಮೇಲೆ ಹೇಳಿದ ಋಕ್ಕುಗಳಲ್ಲಲ್ಲದೆ ಋಗ್ವೇದದಲ್ಲಿ ಮತ್ತೆಲ್ಲಿಯೂ ಇಲ್ಲ.

ವಜ್ರೋಯುಜಾ—ಇಂದ್ರಸ್ಯ ವಚನಮಾತ್ರೇಣ ರಥೇ ಯುಜ್ಯಮಾನಯೋಃ ಸುಶಿಕ್ಷಿತಯೋರಿತ್ಯರ್ಥಃ ॥ ಎಂದರೆ ಇಂದ್ರನು ಮಾತನಾಡಿದ ಮಾತ್ರಕ್ಕೆ ರಥಕ್ಕೆ ಕಟ್ಟಲ್ಪಡುವುದಕ್ಕೆ ಸಿದ್ಧವಾಗಿ ಬರುವವು

ಎಂದರೆ ಚೆನ್ನಾಗಿ ಪಳಗಿದ ಕುದುರೆಗಳೆಂದರ್ಥವು. ಕೆಲವು ಪಾಶ್ಚಾತ್ಯಪಂಡಿತರು ಈ ಶಬ್ದಕ್ಕೆ horses which harness themselves ಎಂದು ಅರ್ಥಮಾಡಿರುವರು. ಆದರೆ ಕುದುರೆಗಳು ತಾವೇ ಹೇಗೆ ಸಾರಥಿಯೊದಲಾದವರ ಸಹಾಯವಿಲ್ಲದೆ ರಥಕ್ಕೆ ಕಟ್ಟಿಕೊಳ್ಳುವವು ? ಇದು ಸಾಧ್ಯವೇ ಎಂದು ವಿಚಾರಮಾಡಿಲ್ಲ. ಆದುದರಿಂದ ಭಾಷ್ಯಕಾರರು ಮಾಡಿರುವ-ಇಂದ್ರನ ಮಾನಂತೆ, ಅಥವಾ ಅಜ್ಞೆಯಂತೆ (ರಥಕ್ಕೆ)ಕಟ್ಟಲ್ಪಟ್ಟಿರುವ ಎಂಬ ಅರ್ಥವೇ ಯುಕ್ತವಾಗಿರುವುದು.

ವಜ್ರೀ —ವಜ್ರಮಸ್ಯಾಸ್ತೀತಿ ವಜ್ರೀ—ವಜ್ರಾಯುಧವನ್ನು ಧರಿಸಿರುವವನು ಇಂದ್ರನ ಆಯುಧವು ವಜ್ರಾಯುಧ (Thunderbolt) ಎಂದು ಪ್ರಸಿದ್ಧವಾಗಿರುವುದು. ಋಗ್ವೇದದಲ್ಲಿ ಅನೇಕಕಡೆ ಇದರ ವಿಷಯವು ಪ್ರಸ್ತಾಪಿಸಲ್ಪಟ್ಟಿದೆ.—

ಮಹ್ಯಂ ತ್ವಷ್ಟಾ ವಜ್ರಮತಕ್ಷದಾಯಸಂ ಮಯಿ ದೇವಾಸೋಽನ್ವಜನ್ನಪಿ ಕ್ರತುಂ ॥

(ಋ. ಸಂ. ೧೦-೪೮-೩)

ಈ ಋಕ್ಕಿನಲ್ಲಿ " ದೇವಶಿಲ್ಪಿಯಾದ ತ್ವಷ್ಟೃವು ನನಗೆ ಕಬ್ಬಿಣದಿಂದ ವಜ್ರಾಯುಧವನ್ನು ಮಾಡಿಕೊಟ್ಟನು " ಎಂದು ಇಂದ್ರನೇ ಹೇಳಿದಾನೆ-

ಹಿರಣ್ಯಯೈಃ—**ಹಿರಣ್ಮಯೈಃ**—ಸುವರ್ಣಮಯ ಎಂದರೆ ಸುವರ್ಣಾಭರಣಗಳಿಂದ ಅಲಂಕೃತನಾದ ಎಂದು ಹಿರಣ್ಮಯಶಬ್ದಕ್ಕೆ ಬದಲಾಗಿ ಹಿರಣ್ಯಯ ಎಂಬ ಶಬ್ದವೇ ಆಗ ರೂಢಿಯಲ್ಲಿತ್ತೆಂದು ಹೇಳಬಹುದು.— **ಹಿರಣ್ಯಯೇನ ಸವಿತಾ ರಥೇನ** ಮೊದಲಾದ ಹಿರಣ್ಯಯಶಬ್ದಗಳಿಂದ ಸಹಿತವಾದ ಋಕ್ಕುಗಳು ಬೇಕಾದಷ್ಟಿವೆ.

ವ್ಯಾಕರಣಪ್ರಕ್ರಿಯಾ

ಹರ್ಯೋರ್ಃ— ಹರತಃ ರಥಮಿತಿ ಹರೀ ತಯೋಃ | **ಹೃಞಿಷಿರುಹಿವೃತಿವಿದಿಚಿದಿಕೀರ್ತಿಭ್ಯೋ ಞ** (ಉ ಸೂ. ೪-೫೫೪) ಎಂಬುದರಿಂದ ಹೃಧಾತುವಿನ ಮುಂದೆ ಇನ್ ಪ್ರತ್ಯಯ. **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ ೭-೩-೮೪) ಎಂಬುದರಿಂದ ಬರುವ ಗುಣ **ಉರಣ್ರಪರಃ** (ಪಾ ಸೂ. ೧-೧-೫೧) ಎಂಬ ಶಾಸ್ತ್ರ ಪರ್ಯಾಲೋಚನೆಯಿಂದ ರ ಪರವಾಗಿ ಬರುವುದು.

ಸಚಾ-ಸಹ—(ನಿರುಕ್ತ ೫-೫) ಎಂದು ಯಾಸ್ಕರು ಪಠಿಸಿರುವುದರಿಂದ ಸಚಾ ಎಂಬುದಕ್ಕೆ ಸಹ-ಒಂದೇ ಕಾಲದಲ್ಲಿ ಎಂದು ಅರ್ಥವು.

ಸಂ ಮಿಶ್ಲಃ—**ಮಿಶ್ರ ಸಂಪರ್ಕೇ** ಎಂಬುದು ಚುರಾದಿ (೧೦ನೇ ಗಣದ) ಧಾತು, ಆದ್ದರಿಂದ-**ಚುರಾದಿಭ್ಯೋ ಣಿಚ್** (ಪಾ. ಸೂ. ೩-೧-೨೫) ಎಂಬುದರಿಂದ ಣಿಚ್ ಬರುವುದು. ಆದರ ಮುಂದೆ **ಭಾವೇ** (ಪಾ. ಸೂ. ೩-೩-೧೮) ಸಿದ್ಧಾವಸ್ಥಾಪನ್ನ, ಸಾಧ್ಯಾವಸ್ಥಾಪನ್ನ ಎಂದು ಧಾತ್ವರ್ಥವು ಇಬ್ಬಗೆಯಾಗಿರುವುದು ಪಚತಿ ಇತ್ಯಾದಿ ಸ್ಥಳಗಳಲ್ಲಿ ಸಾಧ್ಯಾವಸ್ಥಾಪನ್ನಾರ್ಥಕ್ಕೆ ಪ್ರತೀತಿ ಇರುವುದು ಸಿದ್ಧಾವಸ್ಥಾಪನ್ನವಾವ ಧಾತ್ವರ್ಥಕ್ಕೆ ಭಾವ ಎಂದು ಹೆಸರು, ಇಂತಹ ಭಾವಾರ್ಥದಲ್ಲಿ, ಧಾತುವಿನ ಮುಂದೆ ಘಞ್ ಪ್ರತ್ಯಯ ಬರುವುದು ಎಂಬುದರಿಂದ ಘಞ್ ಬಂದರೆ **ಣೇರನಿಟಿ** (ಪಾ. ಸೂ, ೬-೪-೫೧) ಎಂಬುದರಿಂದ ಣಿ ಲೋಪ ಮಿಶ್ರ ಎಂದಿರುವುದು ಸಂ ಉಪಸರ್ಗ ದೊಂದಿಗೆ ಸಮ್ಯಕ್ ಮಿಶ್ರಣಂ ಯಸ್ಯ ಸಃ ಸಂಮಿಶ್ರಃ ಎಂದು ಬಹುವ್ರೀಹಿ ಸಮಾಸ. ರೇಫಕ್ಕೆ ಲಕಾರವು ಛಾಂದಸ

ವಾಗಿ ಬರುವುದು. ಸಂಮಿಶ್ಲಃ ಎಂಬುದಕ್ಕೆ ಸಂಮಿಶ್ರಯಿತಾ ಎಂದು ಅರ್ಥ, **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ** (ಪಾ. ಸೂ- ೬-೩-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುವುದು.

ವಚೋಯುಜಾ, ವಚಸಾ ಯುಜ್ಯತೇ ಇತಿ ವಚೋಯುಜಾ, (ಇಂದ್ರನ ವಚನಮಾತ್ರದಿಂದ ಎಳೆಯುವದಕ್ಕಾಗಿ ರಥದಲ್ಲಿ ತಾವಾಗಿಯೇ ಸೇರಿಕೊಳ್ಳತಕ್ಕವು) **ತಯೋಃ, ಷಷ್ಠೀವಿಭಕ್ತಿ ದ್ವಿವಚನಕ್ಕೆ ಸುಪಾಂ-ಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ಆಕಾರಾದೇಶ ಯುಜ್ ಎಂಬುದು **ಧಾತೋಃ** (ಪಾ. ಸೂ) ೬-೧-೧೬೨) ಧಾತುವಿನ ಕೊನೆಯ ವರ್ಣವು ಉದಾತ್ತವಾಗುವುದು ಎಂಬುದರಿಂದ ಉದಾತ್ತ. ಸನ್ನಾಸಾನಂತರ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂದು ವಿಹಿತವಾದ ಕೃದುತ್ತರಪದಪ್ರಕೃತಿಸ್ವರದಿಂದ ಅದೇ ಸ್ವರವೇ ನಿಲ್ಲುವುದು. **ವಜ್ರೀ-ವಜ್ರಮಸ್ಯಾಸ್ತೀತಿ.** ವಜ್ರೀ **ಅತ ಇನಿಠನೌ** (ಪಾ. ಸೂ. ೫-೨-೧೧೫. ಹ್ರಸ್ವಾಕಾರಾಂತವಾದ ಪ್ರಾತಿಪದಿಕದ ಮುಂದೆ ಮತ್ವರ್ಥದಲ್ಲಿ ಇನಿ-ಠನ್ ಎಂಬ ಪ್ರತ್ಯಯಗಳು ಬರುವುವು, ಎಂಬುದರಿಂದ ವಜ್ರ ಶಬ್ದದ ಮುಂದೆ ಇನಿ ಪ್ರತ್ಯಯ. **ಯೆಸ್ಯೇತಿಚೆ** (ಪಾ ಸೂ ೬-೪-೧೪೮) ಈಕಾರ ಅಥವಾ ತದ್ಧಿತಪರವಾಗಿರುವಾಗ ಭಸಂಜ್ಞಕಾಂಗಾವಯವವಾದ ಇವರ್ಣ ಅವರ್ಣಗಳಿಗೆ ಲೋಪವಾಗುವುದು ಎಂಬುದರಿಂದ ಪ್ರತ್ಯಯದ ಹಿಂದಿರುವ ಅಕಾರಕ್ಕೆ ಲೋಪ, ಪ್ರಥಮಾ ವಿಭಕ್ತಿ ಏಕವಚನ ಸು ಪ್ರತ್ಯಯವನ್ನಿಟ್ಟರೆ, **ಸರ್ವನಾಮಸ್ಥಾನೇಚಾಸಂಬುದ್ಧೌ** (ಪಾ. ಸೂ. ೬-೪-೮) ಸಂಬುದ್ಧಿ ಭಿನ್ನವಾದ ಸರ್ವನಾಮಸ್ಥಾನ ಪ್ರತ್ಯಯ ಪರದಲ್ಲಿರುವಾಗ ನಾಂತವಾದ ಅಂಗದ ಉಪಾಂತ್ಯ ವರ್ಣಕ್ಕೆ ದೀರ್ಘಬರುವುದು ಎಂಬುದರಿಂದ ದೀರ್ಘ ಬರುವುದು. ವಜ್ರೀನ್+ಸು ಈಗ **ಹಲ್‌ಙ್ಯಾಭ್ಯೋ ದೀರ್ಘಾತ್ಸುತಿಸ್ಯಪೃಕ್ತಂಹಲ್** (ಪಾ ಸೂ. ೬-೧-೬೮) ವ್ಯಂಜನಾಂತವಾದ ಶಬ್ದದ ಮುಂದೆ ಇರತಕ್ಕದ್ದೂ, ದೀರ್ಘವಾದ ಙೀ, ಆಪ್ ಪ್ರತ್ಯಯಗಳನ್ನು ಕೊನೆಯಲ್ಲಿ ಹೊಂದಿರುವ ಶಬ್ದದ ಮುಂದೆ ಇರತಕ್ಕದ್ದೂ ಆದ ಸುತಿಸರೂಪವಾದ ಅಪೃಕ್ತ ವ್ಯಂಜನಕ್ಕೆ ಲೋಪವಾಗುವುದು. **ಅಪೃಕ್ತಏಕಾಲ್ ಪ್ರತ್ಯಯಃ** (ಪಾ ಸೂ. ೧-೨-೪೧) ಒಂದೇ ಒಂದು ವರ್ಣರೂಪವಾದ ಪ್ರತ್ಯಯಕ್ಕೆ ಅಪೃಕ್ತ ಎಂದು ಹಸರು (ಏಕಶ್ಚಾಸೌ ಅಲ್ ಚ ಏಕಾಲ್ ಎಂದು ಕರ್ಮಧಾರಯಸಮಾಸ) ನು ಎಂಬುದರ ಉಕಾರಕ್ಕೆ ಲೋಪಾನಂತರ ಅದು ಅಪೃಕ್ತವಾಗುವುದು. ಭೂತಪೂರ್ವಗತಿಯಿಂದ ಸುರೂಪವೂ ಆಗಿರುವುದು. ಅದು ವಜ್ರೀನ್ ಎಂಬ ವ್ಯಂಜನಾಂತ ಶಬ್ದದ ಮುಂದೆ ಇರುವುದು. ಆದ್ದರಿಂದ ಅದಕ್ಕೆ ಲೋಪ ಬರುವುದು **ನ ಲೋಪಃ ಪ್ರಾತಿಪದಿಕಾಂತಸ್ಯ** (ಪಾ ಸೂ. ೮-೨-೭) ಎಂಬುದರಿಂದ ನಕಾರಕ್ಕೆ ಲೋಪ ವಜ್ರೀ ಎಂದಾಗುವುದು, ಪ್ರತ್ಯಯಸ್ವರ ಬರುವುದು.

ಹಿರಣ್ಯಯಃ—ಹರಗತಿಕಾಂತ್ಯೋಃ ಧಾತು. ಇದರ ಮುಂದೆ ಹರ್ಯತೇಃ ಕನ್ಯನ್ ಹಿರಚ್ (ಉ. ಸು. ೫-೭೫) ಹರ್ಯಧಾತುವಿನ ಮುಂದೆ ಕನ್ಯನ್ ಪ್ರತ್ಯಯ ಬರುವುದು. ' **ಹರ್ಯ** ' ಎಂಬುದಕ್ಕೆ ' **ಹಿರಚ್** ' ಎಂಬ ಆದೇಶಬರುವುದು ಕನ್ಯನ್ ಪ್ರತ್ಯಯವು ನಿತ್ತು ಆದ್ದರಿಂದ ನಿತ್ಸ್ವರ ಆದ್ಯುದಾತ್ತ ಬಂದರೆ ಶೇಷನಿಘಾತದಿಂದ ಕೊನೆಯ ಎರಡು ಅಕಾರಗಳೂ ಅನುದಾತ್ತಗಳು. **ಹಿರಣ್ಯಪಾಣಿಮೂತಯೇ** (ಋ. ಸಂ. ೧-೧೬-೫) ಎಂಬಲ್ಲಿ **ನಭ್ರಾಷಯಸ್ಯಾನಿಸಂತಸ್ಯ** (ಫಿ. ಸೂ.) ಎಂಬುದರಿಂದ ಹಿರಣ್ಯ ಶಬ್ದವು ಆದ್ಯುದಾತ್ತವೆಂದು ನಿರೂಪಿತವಾಗಿದೆ. ಹಿರಣ್ಯಸ್ಯ ವಿಕಾರಃ ಎಂಬ ಅರ್ಥದಲ್ಲಿ **ಮಯಡ್ವೈತಯೋರ್ಭಾಷಾಯಾಮ ಭಕ್ಷ್ಯಾಚ್ಛಾದನಯೋಃ** (ಪಾ ಸೂ. ೪-೩-೧೪೩) ಭಕ್ಷ್ಯ ಆಚ್ಛಾದನ ಎಂಬ ಅರ್ಥತೋರದೇ ಇರುವಾಗ ಎಲ್ಲಾ ಪ್ರಕೃತಿಗಳ ಮುಂದೆಯೂ ವಿಕಾರ, ಅವಯವ ಎಂಬ ಅರ್ಥಗಳಲ್ಲಿ ಮಯಟ್ ಪ್ರತ್ಯಯ ಬರುವುದು ಎಂಬುದರಿಂದ ಮಯಟ್ ಪ್ರತ್ಯಯ ಬರುವುದು ಹಿರಣ್ಮಯ ಎಂದಿದ್ದರ **ಯತ್ಪ್ಲವಾಸ್ತ್ವಾವಾಸ್ತ್ವಮಾಧ್ವೀಹಿರಣ್ಯಯಾನಿ ಛಂದಸಿ** (ಪಾ. ಸೂ. ೬-೪-೧೭೫) ಋತು ಶಬ್ದದ ಮುಂದೆ ಯತ್ ಪ್ರತ್ಯಯವಿರುವಾಗ ಮತ್ತು ವಾಸ್ತು ಶಬ್ದದಮುಂದೆ ಯತ್ ಪ್ರತ್ಯಯ

ಅಣ್ ಪ್ರತ್ಯಯಗಳಿರುವಾಗ ಯಣಾದೇಶವೂ, ಮಧು ಶಬ್ದದ ಮುಂದೆ ಅಣ್ ಪ್ರತ್ಯಯ ಬಂದರೆ ಸ್ತ್ರೀಲಿಂಗದಲ್ಲಿ ಯಣಾದೇಶವೂ ಹಿರಣ್ಯಶಬ್ದದ ಮುಂದಿರುವ ಮಯಟ್ಪ್ರತ ಮ ಶಬ್ದಕ್ಕೆ ಲೋಪವೂ ಸಹ ನಿಪಾತಿಸಲ್ಪಡುವುದು ಎಂಬುದರಿಂದ ಮ ಶಬ್ದಕ್ಕೆ ಲೋಪಬರುವುದು, ಹಿರಣ್ಯಯ ಎಂದಾಗುವುದು. ಪ್ರತ್ಯಯಸ್ವರ ಬರಬೇಕಾಗುವುದು ಮಕಾರಕ್ಕೆ ಲೋಪ ನಿಪಾತಿತವಾಗುವುದು ಎಂದು ವ್ಯಾಖ್ಯಾನ ಮಾಡಿದರೆ, ಹಿರಣ್ಯ+ಅಯ ಎಂದಿರುವಾಗ **ಅತೋ ಗುಣೇ** (ವಾ. ಸೂ ೬-೧-೯೭) ಎಂಬುದರಿಂದ ಪರರೂಪವು ಏಕಾದೇಶವಾಗಿ ಬರುವುದು. ಅಯ ಎಂಬಲ್ಲಿಯ ಆದಿಯ ಅಕಾರವು ಪ್ರತ್ಯಯ ಸ್ವರದಿಂದ ಉದಾತ್ತ, ಶೇಷ ನಿಘಾತದಿಂದ ಹಿರಣ್ಯ ಶಬ್ದದ ಕೊನೆಯ ಅಕಾರವು ಅನುದಾತ್ತ. ಇವೆರಡಕ್ಕೂ ಬಂದ ಏಕಾದೇಶವು **ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮-೪-೫) ಎಂಬುದರಿಂದ ಉದಾತ್ತ, ಏವಂಚ ಹಿರಣ್ಯಯಃ, ಎಂಬಲ್ಲಿ ಹಿ, ರ, ಎರಡೂ ಅನುದಾತ್ತ, ಣ್ಯ ಉದಾತ್ತ, **ಯಃ ಉದಾತ್ತಾದನುದಾತ್ತಸ್ಯ ಸ್ವರಿತಃ** (ಪಾ. ಸೂ ೮-೪-೬೬) ಎಂಬುದರಿಂದ ಸ್ವರಿತ ಎಂದು ಮಾಧವಾಚಾರ್ಯರು ಉಪಪಾದಿಸಿರುವರು.

ಮಕಾರ ಲೋಪಪಕ್ಷದಲ್ಲಿ **ಯಸ್ಯೇತಿ ಚೆ** (ಪಾ. ಸೂ. ೬-೪-೧೪೮) ಎಂಬುದರಿಂದ ಹಿರಣ್ಯಶಬ್ದದ ಅಕಾರಕ್ಕೆ ಲೋಪಬರುವುದು. ಪ್ರತ್ಯಯದ ಅಕಾರಕ್ಕೆ ಶ್ರವಣ ಬರುವುದು ವಿವಕ್ಷಿತ ಸ್ವರವೂ ಸಿದ್ಧಿಸುವುದು ಎಂದು ಕೆಲವರ ಮತ.

ಮ ಶಬ್ದಕ್ಕೆ ಲೋಪಪಕ್ಷದಲ್ಲಿ ಯಸ್ಯೇತಿ ಚ ಎಂಬ ಲೋಪವನ್ನು ಮಾಡುವಾಗ **ಅಸಿದ್ಧವದತ್ರಾಭಾತ್** (ಪಾ. ಸೂ. ೬-೪-೨೨) ಎಂಬುದರಿಂದ ಮಶಬ್ದ ಲೋಪ ಅಸಿದ್ಧವಾದರೆ ಯಾದಿ ಪ್ರತ್ಯಯ ಪರದಲ್ಲಿಲ್ಲದ ಕಾರಣ ಭ ಸಂಜ್ಞೆ ಬರುವುದಿಲ್ಲವಾದ್ದರಿಂದ ಯಸ್ಯೇತಿ ಚ ಎಂಬುದರಿಂದ ಅಕಾರ ಲೋಪಬರುವುದಿಲ್ಲ. **ಅಕೃತ್ಸಾರ್ವಧಾತುಕಯೋಃ** (ಪಾ. ಸೂ ೭-೪-೨) ಕೃತ್ತು ಸಾರ್ವಧಾತುಕಭಿನ್ನವಾದ ಯಾದಿ ಪ್ರತ್ಯಯ ಪರದಲ್ಲಿರುವಾಗ ಅಜಂತವಾದ ಅಂಗಕ್ಕೆ ದೀರ್ಘಬರುವುದು ಎಂಬುದರಿಂದ ದೀರ್ಘ ಪ್ರಾಪ್ತವಾಗುವುದು, ಅಕೃತ್ಸಾರ್ವಧಾತುಕಯೋಃ ಎಂಬುದು ಭಾಧಿಕಾರದಲ್ಲಿಲ್ಲ. ಆದ್ದರಿಂದ **ಅಸಿದ್ಧವದತ್ರಾಭಾತ್** (ಪಾ. ಸೂ. ೬-೪-೨೨) ಎಂಬುದರಿಂದ ಮಲೋಪಕ್ಕೆ ಅಸಿದ್ಧಿಯನ್ನು ಹೇಳಲಾಗುವುದಿಲ್ಲ. ಅವರೂ **ಅಂಗವೃತ್ತೇಪುನರ್ವೃತ್ತಾವವಿಧಿಃ** (ಪರಿಭಾ. ೯೨) ಎಂಬುದರಿಂದ ಅಂಗಾಧಿಕಾರದಲ್ಲಿರುವ ಒಂದು ಶಾಸ್ತ್ರಕ್ಕೆ ಪ್ರವೃತ್ತಿಬಂದಮೇಲೆ ಮತ್ತೊಂದು ಅಂಗಾಧಿಕಾರಶಾಸ್ತ್ರ ಬರುವುದಿಲ್ಲ ಎಂಬುದರಿಂದ, ಅಂಗಾಧಿಕಾರಪಠಿತವಾದ ಸೂತ್ರದಿಂದ ಮಲೋಪ ಬಂದಮೇಲೆ ಅಂಗಾಧಿಕಾರಪಠಿತವಾದ ಅಕೃತ್ಸಾರ್ವ ಎಂಬುದರಿಂದ ದೀರ್ಘಬರುವುದಿಲ್ಲ ಎಂದು ದೀರ್ಘವಾರಣೆ ಮಾಡಬೇಕು. ವಿವಕ್ಷಿತಸ್ವರವೂ ಸಿದ್ಧಿಸುವುದಿಲ್ಲ ಮವರ್ಣ ಲೋಪಪಕ್ಷದಲ್ಲಿ **ಅಸಿದ್ಧವದತ್ರಾಭಾತ್** (ಪಾ. ಸೂ ೬-೪-೨೨) ಎಂಬುದರಿಂದ ಮಲೋಪವು ಅಸಿದ್ಧವಾಗುವುದರಿಂದ **ಯಸ್ಯೇತಿಚೆ** (ಪಾ. ಸೂ. ೬-೪-೧೪೮) ಎಂಬುದರಿಂದ ಲೋಪ ಬರಲಾರದು ಶಬ್ದ ಲೋಪಪಕ್ಷದಲ್ಲಿ ಹಿರಣ್ಯಯಶಬ್ದವು ಅಂತೋದಾತ್ತವಾಗಬೇಕಾಗುವುದು. ಆದ್ದರಿಂದ ವೇದಭಾಷ್ಯದಲ್ಲಿ ಹೇಳಿರುವಂತೆ ವರ್ಣಲೋಪವನ್ನೇ ಒಪ್ಪಿಕೊಂಡು ವರರೂಪವನ್ನು ಹೇಳಿ **ಏಕಾದೇಶಉದಾತ್ತೇನೋದಾತ್ತೆಃ** (ಪಾ. ಸೂ. ೮-೪-೫) ಎಂಬುದರಿಂದ ಏಕಾದೇಶವು ಉದಾತ್ತವಾಗುವುದು ಎಂದು ವರ್ಣಿಸುವುದು ಯುಕ್ತವಾಗಿರುವುದು ॥ ೨ ॥

॥ ಸಂಹಿತಾಪಾಠಃ ॥

ಇಂದ್ರೋ ದೀರ್ಘಾಯ ಚಕ್ಷಸ ಆ ಸೂರ್ಯಂ ರೋಹಯದ್ದಿವಿ ॥
ವಿ ಗೋಭಿರದ್ರಿಮೈರಯತ್ ॥ ೩ ॥

॥ पदपाठः ॥

इन्द्रः । दीर्घाय । चक्षसे । आ । सूर्यम् । रोहयत् । दिवि ॥
वि । गोभिः । अद्रिम् । ऐरयत् ॥ ५ ॥

॥ सायणभाष्यम् ॥

अयमिन्द्रो दीर्घाय प्रौढाय निरंतराय चक्षसे दर्शनाय दिवि द्युलोके सूर्यमा रोहयत् । पुरा वृत्रासुरेण जगति यदापात्तितं तमस्तन्निवारणेन प्राणिनां दृष्टिसिद्ध्यर्थमादित्यं द्युलोके स्थापितवानित्यर्थः । स च सूर्यो गोभिः स्वकीयैरश्मिभिरद्रिं पर्वतप्रमुखं सर्वं जगद्व्याप्य व्यरयत् । विशेषेण दर्शनार्थं प्रेरितवान् । प्रकाशितवानित्यर्थः । अथवा इन्द्र एव गोभिर्जलैर्निमित्तभूतैरद्रिं मेघं व्यैरयत् । विशेषेण प्रेरितवान् । पंचदशसंख्याकेषु रश्मिनामसु मेदेयेः किरणा गाव इति पठितम् । त्रिंशत्संख्याकेषु मेघनामस्वद्रिर्गार्ग्यवेति पठितम् ॥ दीर्घाय । स्वार्थिकप्रत्ययान्तोदात्तः । चक्षसे । चक्षेः सर्वधातुभ्योऽसुन् । उ. ४-१९४ल । इत्यसुन् । बहुलग्रहणात्त्वा व्यत्ययादेशाभावः । नित्त्वादाद्युदात्तः । सूर्यम् । सुवति प्रेरयतीति सूर्यः । षू प्रेरणे । धात्वादेः षः सः । राजसूर्यसूर्येत्यादिना । पा. ६-१-१९५ । क्यप्प्रत्ययः । तस्य रुडागमश्च निपात्यते । क्यपः कित्त्वाद्गुणाभावः । पित्त्वादनुदात्तत्वं । धातुस्वर एव शिष्यते । रोहयत् । रुहेर्ण्यंतात्लङ् बहुलं छंदसीत्यडभावो नित्त्वादाद्युदात्तत्वं । अद्रिं । अदिशदिभूशुभिभ्यः क्रिन् । उ ४-१३९ । इति क्रिन्प्रत्ययः । अदंति शतवस्त्रणादिकमत्रेत्यद्रिः । नित्त्वादाद्युदात्तत्वं । ऐरयत् । ईर गतौ । ण्यंतात्लङ् । निघातः ॥

॥ प्रतिपदार्थ ॥

इन्द्रः—इन्द्रनु । दीर्घाय चक्षसे—निरंतरवागि एंदरे यावागलू दर्शनमाडुवुदक्कागि (नोडुवुदक्कागि, बेळकिगागि) । सूर्यम्—सूर्यनन्नु । दिवि—स्वर्गलोकदल्लि (अंतरिक्षदल्लि) आ रोहयत्—स्थापिसिदनु (एरिसिदनु) । (आ सूर्यनु) गोभिः—तन्न किरणगळिंद । अद्रिं—पर्वतवन्नु (एंदरे पर्वत मोदलाद समस्त जगत्तन्नु) । वि ऐरयत्—विशेषवागि प्रेरिसिदनु एंदरे प्रकाशपडिसिदनु.

ಅಥವಾ

ಇಂದ್ರಃ—ಇಂದ್ರನು । **ಗೋಭಿಃ**—ವೃಷ್ಟಿಕರ್ಮಕ್ಕೆ ನಿಮಿತ್ತಭೂತವಾದ ಉದಕಗಳಿಂದ । **ಅದ್ರಿಂ**—ಮೇಘವನ್ನು । **ಪ್ರ ಐರಯತ್**—ವಿಶೇಷವಾಗಿ ಪ್ರೇರಿಸಿದನು.

॥ ಭಾವಾರ್ಥ ॥

ಹಿಂದೆ ವೃತ್ರಾಸುರನು ಜಗತ್ತನ್ನು ಅಂಧಕಾರದಿಂದ ಆವರಿಸುವಂತೆ ಮಾಡಲು ಇಂದ್ರನು ವೃತ್ರನನ್ನು ಸಂಹರಿಸಿ ಜಗತ್ತನ್ನು ಪ್ರಳಯಕಾಲದವರೆಗೂ ಬೆಳಗುವುದಕ್ಕಾಗಿ ಸೂರ್ಯನನ್ನು ಅಂತರಿಕ್ಷದಲ್ಲಿ (ಸ್ವರ್ಗದಲ್ಲಿ) ಸ್ಥಾಪಿಸಿದನು. ಸೂರ್ಯನೂ ಸಹ ಪರ್ವತಕಾನನಾದಿಗಳಿಂದ ಕೂಡಿದ ಸಮಸ್ತಜಗತ್ತನ್ನೂ ತನ್ನ ಕಿರಣಗಳಿಂದ ಪ್ರಕಾಶಪಡಿಸಿ ಜಗತ್ತಿನಲ್ಲಿ ಕರ್ತೃಲೆಯಿಂದ ಯಾವ ಕೆಲಸಕಾರ್ಯಗಳನ್ನೂ ಮಾಡಲು ಅಸಮರ್ಥವಾಗಿದ್ದ ಸಮಸ್ತ ಪ್ರಾಣಿಗಳನ್ನೂ ಅವುಗಳ ಕೆಲಸಕಾರ್ಯಗಳಲ್ಲಿ ತೊಡಗುವಂತೆ ಮಾಡಿದನು ಅಥವಾ ಇಂದ್ರನು ಸೂರ್ಯನನ್ನು ಅಂತರಿಕ್ಷದಲ್ಲಿ ಸ್ಥಾಪಿಸಿದ ಮೇಲೆ ಜನರಿಗೆ (ಅಥವಾ ಪ್ರಾಣಿಗಳಿಗೆ) ಸಸ್ಯರೂಪವಾದ ಆಹಾರೋತ್ಪತ್ತಿಗಾಗಿ ಜಲದಿಂದ ಮಳೆಹುಯ್ಯುವಂತೆ ಮೇಘವನ್ನು ಪ್ರೇರಿಸಿದನು.

English Translation

Indra established the sun in the heaven to render all things visible. He illuminated the mountain (*i e.* the world) with his rays or Indra charged the clouds with water

॥ ವ್ಯಾಖ್ಯಾನಭಾಗ ॥

ಭಾಷ್ಯಕಾರರೂ ಸ್ಕಂದಸ್ವಾಮಿಯೂ ಇಲ್ಲಿ ಒಂದು ಪೂರ್ವೇತಿಹಾಸವನ್ನೂ ಹೇಳಿರುವರು. ಪೂರ್ವದಲ್ಲಿ ವೃತ್ರಾಸುರನು ಲೋಕವನ್ನೆಲ್ಲಾ ಅಂಧಕಾರಮಯವಾಗುವಂತೆ ಮಾಡಿದನು ಜನರೂ, ಪ್ರಾಣಿಗಳೂ ಬೆಳಕಿಲ್ಲದ್ದರಿಂದ ತಮ್ಮ ತಮ್ಮ ಕೆಲಸಕಾರ್ಯಗಳನ್ನೂ ಮಾಡಲಸಮರ್ಥರಾದರು. ಇದನ್ನು ನೋಡಿ ಇಂದ್ರನು ವೃತ್ರಾಸುರನನ್ನು ಸಂಹಾರಮಾಡಿ ಲೋಕದಲ್ಲಿ ಬೆಳಕುಂಟಾಗುವಂತೆ ಸೂರ್ಯನನ್ನು ಆಕಾಶದಲ್ಲಿ ಸ್ಥಾಪಿಸಿದನು ಎಂದು ಇದನ್ನೆನು ಸರಿಸಿ ಈ ಋಕ್ಕಿನಲ್ಲಿ ಇಂದ್ರನು ಸೂರ್ಯನನ್ನು ಅಂತರಿಕ್ಷದಲ್ಲಿ ಸ್ಥಾಪಿಸಿದನೆಂದು ಹೇಳಿದೆ

ದೀರ್ಘಾಯೈ—ನಿರಂತರಾಯೈ, **ಪ್ರಲಯಪರ್ಯಂತಂ**—ಯಾವಾಗಲೂ, ಪ್ರಲಯಕಾಲದವರೆಗೂ ಜಗತ್ತು ಇರುವವರೆಗೂ

ಚಕ್ಷಸೇ—ದರ್ಶನ, ಬೆಳಕು ಪ್ರಕಾಶ ಇತ್ಯಾದಿ ಸೂರ್ಯನಿಲ್ಲದಿದ್ದರೆ ಬೆಳಕಾಗಲಿ, ಪ್ರಾಣಿಗಳಿಗೆ ಶಕ್ತಿ ಸಾಮರ್ಥ್ಯಗಳಾಗಲಿ ಇರುವುದಿಲ್ಲ ಲೋಕವ್ಯವಹಾರವೇ ನಡೆಯುವುದಿಲ್ಲ. ಆದುದರಿಂದಲೇ **ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ** (**ಋ. ಸಂ.** ೧-೧೧೫-೧) ಸೂರ್ಯನೇ ಚರಾಚರಾತ್ಮಕವಾದ ಸಮಸ್ತಜಗತ್ತಿಗೂ ಆತ್ಮಭೂತ (ಪ್ರಾಣಸ್ವರೂಪ ಎಂದರೆ ದೇಹಕ್ಕೆ ಪ್ರಾಣವು ಮುಖ್ಯವಾಗಿರುವಂತೆ) ನಾಗಿರುವನು ಎಂದು ಹೇಳಿದೆ.

ವಿಗೋಭಿರದ್ರಿಮೈರಯತ್—ಈ ವಾಕ್ಯದ ಅರ್ಥವು ಸ್ಪಷ್ಟವಾಗಿಲ್ಲ. ಸೂರ್ಯನು ಉದಯಿಸಿದಾಗ ಅವನ ಕಿರಣಗಳು ಮೊದಲು ಎತ್ತರವಾದ ಪರ್ವತದ ಮೇಲೆ ಬೀಳುವುದರಿಂದ ಈ ರೀತಿ ಕವಿಯು ವರ್ಣನೆಮಾಡಿರಬಹುದು. ಇದಲ್ಲದೆ ಇಂದ್ರನು ಮೇಘವನ್ನು ಜಲಕ್ಕಾಗಿ ಎಂದರೆ ವೃಷ್ಟಿಕರ್ಮಕ್ಕಾಗಿ ಪ್ರೇರಿಸಿದನು ಎಂಬ ಅರ್ಥವೂ ಯುಕ್ತವಾಗಿರುವುದು.

ಗೋಭಿಃ—ಕಿರಣಗಳಿಂದ, ಜಲದಿಂದ. ಶ್ವೇದಯುಃ ಮೊದಲಾದ ಹದಿನೈದು ರಶ್ಮಿವಾಚಕಪದಗಳ ಮಧ್ಯದಲ್ಲಿ **ಕಿರಣಾಃ ಗಾವಃ** ಎಂಬ ಶಬ್ದಗಳು ಪಠಿತವಾಗಿವೆ

ಅದ್ರಿಂ—ಪರ್ವತ, ಮೇಘ. ಅದ್ರಿಃ ಗ್ರಾವಾ ಮೊದಲಾದ ಮೂವತ್ತು ಮೇಘವಾಚಕ ಶಬ್ದಗಳ ಮಧ್ಯದಲ್ಲಿ ಅದ್ರಿಶಬ್ದವು ಪಠಿತವಾಗಿದೆ.

।। ವ್ಯಾಕರಣಪ್ರಕ್ರಿಯಾ ।।

ದೀರ್ಘಾಯೈ—ಪ್ರಾತಿಪದಿಕಸ್ವರದಿಂದ ದೀರ್ಘೇಶಬ್ದ ಅಂತೋದಾತ್ತ.

ಯಃ । ಏಕಃ । ಚರ್ಷಣೀನಾಂ । ವಸೂನಾಂ । ಇರಜ್ಯತಿ ॥
ಇಂದ್ರಃ । ಪಂಚ । ಕ್ಷಿತೀನಾಂ ॥ ೯ ॥

॥ ಸಾಯಣಭಾಷ್ಯಂ ॥

ಯ ಇಂದ್ರಃ ಸ್ವಯಮೇಕ ಏವ ಚರ್ಷಣೀನಾಂ ಮನುಷ್ಯಾಣಾಮಿರಜ್ಯತಿ ಈಷ್ಟೇ ತಥಾ ವಸೂನಾಂ ಧನಾನಾಮಿರಜ್ಯತಿ ಸ ಇಂದ್ರಃ ಪಂಚ ನಿಷಾದಪಂಚಮಾನಾಂ ಕ್ಷಿತೀನಾಂ ನಿವಾಸಾರ್ಹಾಣಾಂ ವರ್ಣಾನಾಮನುಗ್ರಹೀತೇತಿ ಶೇಷಃ ॥ ಏಕಃ । ಇಣ್ ಗತೌ । ಇಣ್‌ಭೀಕಾಪಾಶಲ್ಯತಿಮರ್ಚಿಭ್ಯಃ ಕನ್ । ಉ. ೩-೪೩ । ಇತಿ ಕನ್ । ಬಾಹುಲಕಾತ್ಕಲೋಪಾಭಾವಃ ನಿತ್ತ್ವಾದಾದ್ಯುದಾತ್ತತ್ವಂ । ಚರ್ಷಣೀನಾಂ । ಪ್ರಾತಿಪದಿಕಸ್ವರೇಣಾಂತೋದಾತ್ತಃ । ಆಂತೋದಾತ್ತಾದಿತ್ಯನುವೃತ್ತೌ ನಾಮನ್ಯತರಸ್ಯಾಮಿತಿ ವಿಭಕ್ತೇರುದಾತ್ತತ್ವಂ । ವಸೂನಾಂ । ನಿದಿತ್ಯನುವೃತ್ತೌ ಶ್ವಸೃಸ್ಮಿಹಿತ್ರಪ್ಯಸಿವಸಿಹನಿಕ್ಲಿದಿಬಂಧಿಮನಿಭ್ಯಶ್ಚ । ಉ. ೧-೧೧ । ಇತ್ಯುಪ್ರತ್ಯಯಃ । ನಿತ್ತ್ವಾದಾದ್ಯುದಾತ್ತಃ । ಇರಜ್ಯತಿ । ಕಂಡ್ವಾದಿಷ್ವಿರಜ್ ಈಷ್ಟ್ಯಾಯಾಂ । ಆತ್ಮೇಶ್ವರ್ಯೋರ್ಥಃ। ಕಂಡ್ವಾದಿಭ್ಯೋ ಯಕ್ । ಪಾ. ೩-೧-೨೭। ಪ್ರತ್ಯಯಸ್ವರೇಣೋದಾತ್ತಃ । ಪಂಚ ಪಚಿ ವ್ಯಕ್ತೀಕರಣೇ । ಪಂಚೇಶ್ಚೇತಿ ಕನಿನ್ । ನಿತ್ತ್ವಾದಾದ್ಯುದಾತ್ತಃ । ಕ್ಷಿತೀನಾಂ ಪ್ರಾತಿಪದಿಕಸ್ವರೇ।ಣಾಂತೋದಾತ್ತಃ । ನಾಮನ್ಯತರಸ್ಯಾಮಿತಿ ವಿಭಕ್ತೇರುದಾತ್ತತ್ವಂ ॥

॥ ಪ್ರತಿಪದಾರ್ಥ ॥

ಯ ಇಂದ್ರಃ—ಯಾವ ಇಂದ್ರನು । ಚರ್ಷಣೀನಾಂ—ಮನುಷ್ಯರಿಗೂ । ವಸೂನಾಂ—ಧನಗಳಿಗೂ ಇರಜ್ಯತಿ—ಸ್ವಾಮಿಯಾಗಿರುವನೋ । (ಸ) ಇಂದ್ರಃ ಏಕಃ—ಆ ಇಂದ್ರನು ಮಾತ್ರವೇ । ಪಂಚ ಕ್ಷಿತೀನಾಂ—(ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರ ನಿಷಾದರೆಂಬ) ಐದು ವಿಧ ಪಂಗಡದ ಜನಗಳಿಗೆ (ಅನುಗ್ರಹಮಾಡುವವನು) ॥

॥ ಭಾವಾರ್ಥ ॥

ಇಂದ್ರನು ಮನುಷ್ಯರಿಗೆಲ್ಲರಿಗೂ, ಧನಾದ್ಯೈಶ್ವರ್ಯಗಳಿಗೂ ಸ್ವಾಮಿಯಾತ್ರವೇ ಆಗಿರುವುದಲ್ಲದೆ ಮನುಷ್ಯರಲ್ಲಿರುವ ಐದು ಪಂಗಡದ ಜನಗಳಿಗೂ ಅನುಗ್ರಹಮಾಡುವವನಾಗಿರುವನು.

English Translation.

That Indra who alone rules over men, over riches (favours) the five classes of men (tribes).

ವಿಶೇಷನಿಷಯಗಳು

ಈ ಋಕ್ಕಿನಲ್ಲಿ ಮುಖ್ಯವಾದ ವಾಕ್ಯಕ್ಕೆ ಕ್ರಿಯಾಪದವು ಇಲ್ಲದಿರುವುದರಿಂದ ಭಾಷ್ಯಕಾರರು **ಅನುಗ್ರಹೀತಾ** ಅನುಗ್ರಹಮಾಡುವವನು ಎಂಬ ಶಬ್ದವನ್ನು ಅಧ್ಯಾಹಾರಮಾಡಿರುವರು ಆದರೆ ಈ ಋಕ್ಕಿನಲ್ಲಿ ಹೇಳಿರುವ ವಿಷಯಗಳು ಮುಂದಿನ ಋಕ್ಕಿನಲ್ಲಿಯೂ ಮುಂದುವರಿದಿರುವುದರಿಂದ ಈ ಎರಡು ಋಕ್ಕುಗಳನ್ನೂ ಒಟ್ಟಿಗೆ ಸೇರಿಸಿ ಅರ್ಥಮಾಡಿದಲ್ಲಿ ಅರ್ಥವು ಹೊಂದುವುದು. ಈಗ ಈ ಋಕ್ಕಿನಲ್ಲಿ ಹೇಳಿರುವ ಗುಣವಿಶಿಷ್ಟನಾದ ಇಂದ್ರನನ್ನು ಆಹ್ವಾನಮಾಡುವೆವು ಎಂದು ಅಭಿಪ್ರಾಯವು ಸ್ಪಷ್ಟವಾಗಿರುವುದು. ಭಾಷ್ಯಕಾರರು ಹೇಳಿರುವಂತೆ **ಅನುಗ್ರಹೀತಾ** ಎಂಬ ಪದವನ್ನು ಅಧ್ಯಾಹಾರಮಾಡಿಕೊಳ್ಳುವುದರಿಂದ ಬಾಧಕವೇನೂ ಇಲ್ಲ.

ಏಕಃ—ಒಬ್ಬನೇ, ಒಬ್ಬನು ಮಾತ್ರವೇ, ಇತರರಿಗೆ ಆ ಸಾಮರ್ಥ್ಯವಿಲ್ಲ ಎಂದರ್ಥವು.

ಚರ್ಷಣೀನಾಂ—ಮನುಷ್ಯರಿಗೆ, ಜನರಿಗೆ; Folk, people, race ಇತ್ಯಾದಿ.

ವಸೂನಾಂ—ಧನಗಳಿಗೆ, ಐಶ್ವರ್ಯಗಳಿಗೆ.

ಇರಜ್ಯತಿ—ಅಧಿಕಾರಿಯು, ಸ್ವಾಮಿಯು ಆಗಿರುವನು. ಋ ಸಂ. ೪ ೪೬-೧೬ರಲ್ಲಿ **ವಿಶ್ವೇಷಾಮಿರಜ್ಯಂತಂ ವಸೂನಾಂ** ಎಂದು ಹೇಳಿರುವುದು. ಅಲ್ಲಿಯೂ ಸಮಸ್ತಧನಾದ್ಯೈಶ್ವರ್ಯಕ್ಕೂ ಸ್ವಾಮಿಯಾಗಿರುವನು ಎಂಬ ಅರ್ಥವಿರುವುದರಿಂದ **ಇರಜ್ಯತಿ** ಎಂಬ ಶಬ್ದಕ್ಕೆ ಸ್ವಾಮಿಯಾಗಿರುವನು to order, to rule over ಎಂದೇ ಅಭಿಪ್ರಾಯವು.

ಪಂಚ ಕ್ಷಿತೀನಾಂ—**ಕ್ಷಿತಯಃ** ಎಂಬ ಶಬ್ದವು ಮನುಷ್ಯಾಃ ನರಾಃ ಮೊದಲಾದ ಇಪ್ಪತ್ತೈದು ಮನುಷ್ಯವಾಚಕನಾಮಗಳ ಮಧ್ಯದಲ್ಲಿ ಪಠಿತವಾಗಿದೆ (ನಿ. ೩-೭) **ಪಂಚ ಕ್ಷಿತೀನಾಂ** ಎಂದರೆ **ಪಂಚ ಜನಾನಾಂ** ಎಂದರ್ಥವು. ಇದಕ್ಕೆ ಭಾಷ್ಯಕಾರರು **ನಿಷಾದಪಂಚಮಾನಾಂ** ಎಂದೂ, ಸ್ಕಂದಸ್ವಾಮಿಯು **ಕ್ಷಿತೀನಾಂ ಮನುಷ್ಯಜಾತೀನಾಂ ಗಂಧರ್ವಾಃ ಪಿತರೋ ದೇವಾ ಇತ್ಯೇತಾಸಾಂ** ಎಂದೂ ವೆಂಕಟಮಾಧವರು—**ಮನುಷ್ಯಾಣಾಂ ಪಂಚಾನಾಂ ಕ್ಷಿತೀನಾಂ ನಿವಸತಾಂ ಗಂಧರ್ವಾಃ ಪಿತರೋ ದೇವಾ ಅಸುರಾ ರಕ್ಷಾಂಸೀತಿ ಪಂಚತ್ವಂ** ಎಂದೂ ಅರ್ಥವಿವರಣೆಮಾಡಿದಾರೆ. ಸಾಯಣರ ಅಭಿಪ್ರಾಯದಂತೆ **ಕ್ಷಿತೀನಾಂ** ಎಂದರೆ ಭೂಮಿಯಲ್ಲಿ ವಾಸಮಾಡಲು ಯೋಗ್ಯರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ನಿಷಾದ ಎಂಬ ಐದು ಜಾತಿಯ ಜನರೆಂದು ಅರ್ಥವಾಗುವುದು. ನಿಷಾದರೆಂದರೆ ಬ್ರಾಹ್ಮಣಾದಿ ನಾಲ್ಕು ವರ್ಣಗಳಲ್ಲಿ ಸೇರದಿರುವ ಮತ್ತು ಮೃಗಗಳ ಬೇಟೆಯಿಂದಲೇ ಜೀವಿಸುವ ಜನರೆಂದರ್ಥವು. ಈ ದೇಶದ ಪೂರ್ವನಿವಾಸಿಗಳಾದ ಗೊಂಡರು,

ಕೋಲರು, ಭಿಲ್ಲರು ಮೊದಲಾದವರು ಈ ಜಾತಿಗೆ ಸೇರಿದವರು. ಇವರು ಮಧ್ಯಪ್ರಾಂತ್ಯ ಮೊದಲಾದ ಕೆಲವು ಸ್ಥಳಗಳಲ್ಲಿ ಮಾತ್ರ ಈಗಲೂ ಬಹು ಅಲ್ಪಸಂಖ್ಯೆಯಲ್ಲಿ ವಾಸಿಸುತ್ತಿರುವರು. ಪಂಚ ಜನಾಃ ಮತ್ತು ಪಂಚಕೃಷ್ಟೀಃ ಎಂಬ ಶಬ್ದಗಳು ಋಗ್ವೇದದಲ್ಲಿ ಅನೇಕಕಡೆ ಇವೆ—

ತದದ್ಯ ವಾಚಃ ಪ್ರಥಮಂ ಮಸೀಯ ಯೇನಾಸುರಾ᳖ ಅಭಿ ದೇವಾ ಅಸಾಮ ।
ಊರ್ಜಾದ ಉತ ಯಜ್ಞಿಯಾಸಃ ಪಂಚ ಜನಾ ಮಮ ಹೋತ್ರಂ ಜುಷಧ್ವಂ ॥

(ಋ. ಸಂ ೧೦-೫೩-೪)

ಪಂಚ ಜನಾ ಮಮ ಹೋತ್ರಂ ಜುಷಂತಾಂ ಗೋಜಾತಾ ಉತಯೇ ಯಜ್ಞಿಯಾಸಃ ॥

(ಋ. ಸಂ. ೧೦-೫೩-೫)

ಸದ್ಮಿದ್ಧಿದ್ಯಃ ಶವಸಾ ಪಂಚಕೃಷ್ಟೀಃ ಸೂರ್ಯ ಇವ ಜ್ಯೋತಿಷಾಪಸ್ತತಾನ ॥

(ಋ. ಸಂ. ೧೦-೧೬೮-೩)

ಈ ಋಕ್ಕುಗಳಲ್ಲಿರುವ ಪಂಚಜನಾಃ ಮತ್ತು ಪಂಚಕೃಷ್ಟೀಃ ಎಂಬ ಶಬ್ದಗಳಿಗೆ ಯಾಸ್ಕರು ತಮ್ಮ ನಿರುಕ್ತದಲ್ಲಿ ಈರೀತಿ ವಿವರಣೆಮಾಡಿರುವರು—

ಪಂಚ ಜನಾ ಮಮ ಹೋತ್ರಂ ಜುಷಧ್ವಂ ಗಂಧರ್ವಾಃ ಪಿತರೋ ದೇವಾ ಅಸುರಾ ರಕ್ಷಾಂಸೀತ್ಯೇಕೇ । ಚತ್ವಾರೋ ವರ್ಣಾ ನಿಷಾದಃ ಪಂಚಮ ಇತ್ಯೌಪಮನ್ಯವಃ । ನಿಷಾದಃ ಕಸ್ಮಾನ್ನಿಷದನೋ ಭವತಿ ನಿಷಣ್ಣಮಸ್ಮಿನ್ ಪಾಪಕಮಿತಿ ನೈರುಕ್ತಾಃ ॥ ಇತಿ ॥

ಎಂದರೆ, ಪಂಚಜನರೆಂದರೆ, ಗಂಧರ್ವರು, ಪಿತೃಗಳು, ದೇವತೆಗಳು, ಅಸುರರು, ರಾಕ್ಷಸರು ಎಂದು ಐದು ವಿಧ ಜನರೆಂದು ಕೆಲವರು ಹೇಳುವರು. ಬ್ರಾಹ್ಮಣಾದಿ ನಾಲ್ಕುವರ್ಣದವರೂ ನಿಷಾದ ಎಂಬ ಬೇಡರ ಜಾತಿಗೆ ಸೇರಿದ ಜನರೂ ಸೇರಿ ಐದು ವಿಧ ಜನರೆಂದು ಔಪಮನ್ಯು ಮುಂತಾದವರ ಮತವು. (ಇದನ್ನೇ ಸಾಯಣರು ಅನುಮೋದಿಸಿರುವರು). ನಿಷಾದರೆಂದರೆ ಪ್ರಾಣಿಗಳನ್ನು ಕೊಲ್ಲುವವರು ಅಥವಾ ಇವರಲ್ಲಿ ಪಾಪವು ತುಂಬಿರುವುದರಿಂದ ಇವರಿಗೆ ನಿಷಾದರೆಂದು ನೈರುಕ್ತಕಾರರು ಹೇಳುವರು. ಇದಲ್ಲದೆ ಆ ಕಾಲದಲ್ಲಿ ಐದು ಮುಖ್ಯವಾದ ಪಂಗಡಗಳು (tribes) ಇದ್ದಿರಬಹುದು. ಕವಿಯು ಈ ಅಭಿಪ್ರಾಯವನ್ನೇ ಇಟ್ಟುಕೊಂಡು ಪಂಚ ಕ್ಷಿತೀನಾಂ ಎಂದು ಹೇಳಿರಬಹುದು. ಹೇಗಾದರೂ ಈ ವಿಚಾರದಲ್ಲಿ ನಿರುಕ್ತಕಾರರಾದ ಯಾಸ್ಕರ ಕಾಲದಲ್ಲಿಯೂ ಸಹ ಅಭಿಪ್ರಾಯಭೇದವಿದ್ದಿತೆಂಬುವುದು ಸ್ಪಷ್ಟವಾಗಿದೆ.

।। ವ್ಯಾಕರಣಪ್ರಕ್ರಿಯಾ ।।

ಏಕಃ—**ಇಣ್ ಭೀಕಾಪಾಶಲ್ಯತಿಮರ್ಚಿಭ್ಯಃ ಕನ್** (ಉ. ಸೂ. ೩-೩೫) **ಇಣ್ ಗತೌ, ಞಿಭೀ ಭಯೇ, ಕೈ ಶಬ್ದೇ, ಪಾ ಪಾನೇ, ಶಲ ಗತೌ, ಅತ ಸಾತತ್ಯಗಮನೇ, ಮರ್ಚ ಶಬ್ದೇ,** ಈ ಧಾತುಗಳ ಮುಂದೆ ಕನ್ ಪ್ರತ್ಯಯ ಬರುವುದು ಎಂಬುದರಿಂದ ಇಣ್ ಧಾತುವಿನ ಮುಂದೆ ಕನ್ ಪ್ರತ್ಯಯ ಬಂದರೆ ಇಕ. ಬಹುಲಗ್ರಹಣವಿರುವುದರಿಂದ **ಲ ಶಕ್ಯತದ್ಧಿತೇ** (ಪಾ. ಸೂ. ೧-೩-೯) ಎಂಬುದರಿಂದ ಕಕಾರಕ್ಕೆ ಇತ್ಸಂಜ್ಞೆ

ಬರುವುದಿಲ್ಲ. **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಗುಣಬಂದರೆ ಏಕ ಎಂದಾಗುವುದು. ಪ್ರತ್ಯಯ ನಿತ್ತಾದ್ದರಿಂದ ನಿತ್ಸ್ವರ ಆದ್ಯುದಾತ್ತ ಬರುವುದು.

ಚರ್ಷಣೀನಾಂ--ಚರ್ಷಣಿ ಎಂಬುದು ಮನುಷ್ಯ ಎಂಬ ಅರ್ಥವನ್ನು ಕೊಡುವ ಪ್ರಾತಿಪದಿಕ. **ಫಿಷಃ** (ಫಿ. ಸೂ. ೧) ಎಂಬ ಪ್ರಾತಿಪದಿಕಸ್ವರದಿಂದ ಅಂತೋದಾತ್ತ. ಇದರ ಮುಂದೆ ಷಷ್ಠೀವಿಭಕ್ತಿ ಆಮ್ ಪ್ರತ್ಯಯವನ್ನಿಟ್ಟರೆ **ಹ್ರಸ್ವನದ್ಯಾಪೋನುಟ್** (ಪಾ. ಸೂ. ೭-೧-೫೪) ಹ್ರಸ್ವಾಂತವಾದ ಅಂಗದ ಮುಂದೆಯೂ, ನದ್ಯಂತವಾದ ಅಂಗದ ಮುಂದೆಯೂ ಆಬಂತವಾದ ಅಂಗದ ಮುಂದೆಯೂ ಇರುವ ಆಮ್‌ಗೆ ನುಟ್ ಆಗಮ ಬರುವುದು ಎಂಬುದರಿಂದ ನುಡಾಗಮ ಬಂದರೆ **ನಾಮಿ** (ಪಾ. ಸೂ. ೭-೪-೩) ನಾಮ್ ಪರವಲ್ಲಿರುವಾಗ ಅಜಂತವಾದ ಅಂಗಕ್ಕೆ ದೀರ್ಘಬರುವುದು ಎಂದು ದೀರ್ಘ ಬಂದರೆ ಚರ್ಷಣೀನಾಂ ಎಂದಾಗುವುದು. **ನಾಮನ್ಯತರಸ್ಯಾಂ** (ಪಾ. ಸೂ. ೬-೧-೧೭೭) ಮತುಪ್ ಪ್ರತ್ಯಯ ಪರದಲ್ಲಿರುವಾಗ ಯಾವ ಹ್ರಸ್ವವಿರುವುದೋ ಅದನ್ನೇ ಕೊನೆಯಲ್ಲಿ ಹೊಂದಿರುವುದೂ ಅಂತೋದಾತ್ತವೂ ಆಗಿರುವ ಶಬ್ದದ ಮುಂದೆ ಇರುವ ನಾಮ್ ಎಂಬುದು ವಿಕಲ್ಪವಾಗಿ ಉದಾತ್ತವಾಗುವುದು ಎಂಬುದರಿಂದ ವಿಭಕ್ತಿಯು ಉದಾತ್ತ.

ವಸೂನಾಂ--**ಶ್ಯಸ್ಯಸ್ಮಿನ್ಹಿತೇಷ್ಯಸಿವಸಿಹನಿಕ್ಲಿದಿಬನ್ಧಿಮನಿಭ್ಯಶ್ಚ** (ಉ ಸೂ. ೧-೧೦) **ಶ್ಯಾ ಹಿಂಸಾಯಾಂ, ಸ್ಯೈ ಶಬ್ದೋಪತಾಪಯೋಃ, ಸ್ಮಿಹ ಉಪತಾಪೇ, ಶ್ರಪೂಷ್ ಲಜ್ಜಾಯಾಂ, ಅಸು ಕ್ಷೇಪಣೇ, ವಸೆ ನಿವಾಸೇ, ಹನ ಹಿಂಸಾಗತ್ಯೋಃ, ಕ್ಲಿದೂ ಆರ್ದ್ರೀಭಾವೇ, ಬಂಧ ಬಂಧನೇ, ಮನ ಜ್ಞಾನೇ** ಈ ಧಾತುಗಳ ಮುಂದೆ ಉ ಪ್ರತ್ಯಯ ಬರುವುದು. ಅದು ನಿತ್ತಾಗುವುದು ಎಂಬುದರಿಂದ ವಸಧಾತುವಿನ ಮುಂದೆ ಉ ಪ್ರತ್ಯಯ ಬರುವುದು. ಪ್ರತ್ಯಯವು ನಿತ್ತಾದ್ದರಿಂದ ನಿತ್ಸ್ವರ ಆದ್ಯುದಾತ್ತ ಬರುವುದು.

ಇರಜ್ಯತಿ--ಇರಜ್ ಈಷ್ಯಾರ್ಯಾಂ ಎಂದು ಕಂಡ್ವಾದಿಯಲ್ಲಿ ಪಠಿತವಾಗಿರುವುದು. ಆದರೂ ಧಾತುಗಳಿಗೆ ಅನೇಕಾರ್ಥಗಳಿರುವುದರಿಂದ ಇಲ್ಲಿ ಇರಜ್‌ಧಾತುವು ಐಶ್ವರ್ಯ ಎಂಬ ಅರ್ಥವನ್ನು ಹೇಳುವುದು. **ಕಂಡ್ವಾದಿಭ್ಯೋ ಯಕ್** (ಪಾ. ಸೂ. ೩-೧ ೧೭). ಈ ಗಣಪಠಿತವಾದ ಧಾತುಗಳ ಮುಂದೆ ಸ್ವಾರ್ಥದಲ್ಲಿ ನಿತ್ಯವಾಗಿ ಯಕ್ ಬರುವುದು ಎಂಬುದರಿಂದ ಯಕ್ ಪ್ರತ್ಯಯ ಬರುವುದು **ಸನಾದ್ಯನ್ತಾ ಧಾತವಃ** (ಪಾ.ಸೂ. ೩-೧-೩೨) ಎಂಬುದರಿಂದ ಧಾತುಸಂಜ್ಞೆ ಬರಲು ಲಟ್ ಪ್ರಥಮಪುರುಷೈಕವಚನ ತಿಪ್ ಬಂದರೆ ಇರಜ್ಯತಿ ಎಂದಾಗುವುದು. ಇರಜ್ಯತಿ ಎಂಬುದು ಪ್ರತ್ಯಯಸ್ವರದಿಂದ ಅಂತೋದಾತ್ತ.

ಪಂಚೆ--**ಪಚೆ ವ್ಯಕ್ತೀಕರಣೇ.** ಪಚ್ ಧಾತುವು ಇದಿತ್ತಾದ್ದರಿಂದ **ಇದಿತೋನುಮ್ ಧಾತೋಃ** (ಪಾ. ಸೂ. ೭-೧-೫೮) ಎಂಬುದರಿಂದ ನುಮಾಗನು. ಅನುಸ್ವಾರಪರಸವರ್ಣಗಳು ಬಂದರೆ ಪಞ್ಚ. ಇದರ ಮುಂದೆ **ಪಚೇಶ್ಚ** ಎಂಬುದರಿಂದ ಕನಿನ್ ಪ್ರತ್ಯಯ ಬಂದರೆ ಪಂಚನ್ ಎಂದಾಗುವುದು. ನಿತ್ಸ್ವರದಿಂದ ಆದ್ಯುದಾತ್ತ. **ಷಡ್ಭ್ಯೋ ಲುಕ್** (ಪಾ. ಸೂ. ೭-೧-೨೨) ಎಂಬುದರಿಂದ ಜಸ್ಸಿಗೆ ಲುಕ್ ಬಂದರೆ **ನ ಲೋಪಃ ಪ್ರಾತಿಪದಿಕಾಂತಸ್ಯ** (ಪಾ. ಸೂ. ೮-೨-೭) ಎಂಬುದರಿಂದ ನ ಲೋಪ, ಪಂಚ ಎಂದಾಗುವುದು.

ಕ್ಷಿತೀನಾಂ--ಫಿಷಃ (ಫಿ. ಸೂ. ೧) ಎಂಬ ಪ್ರಾತಿಪದಿಕಸ್ವರದಿಂದ ಕ್ಷಿತಿಶಬ್ದ ಅಂತೋದಾಂತ. ಅದರ ಮುಂದೆ ಇರುವ ವಿಭಕ್ತಿಯು **ನಾಮನ್ಯತರಸ್ಯಾಂ** (ಪಾ. ಸೂ. ೬-೧-೧೭೭) ಎಂಬುದರಿಂದ ಉದಾತ್ತ ॥ ೯ ॥

॥ संहितापाठः ॥

इन्द्रं वो विश्वतस्परि हवामहे जनेभ्यः ॥
अस्माकमस्तु केवलः ॥ ८० ॥

॥ पदपाठः ॥

इन्द्रं । वः । विश्वतः । परि । हवामहे । जनेभ्यः ।
अस्माकं । अस्तु । केवलः ॥ ८० ॥

॥ सायणभाष्यं ॥

अग्निनं शंसिष्यन्निन्द्रं वो विश्वतस्परीति जुहुयात् । संस्थितेष्वाग्निनाय स्तुवत इति प्रतिपदे बण्महा असि सूर्यस्येति द्वाभ्यामिन्द्रं वो विश्वतस्परि । अ. ८_४ । इति सूत्रितं ॥ चतुर्विंशेऽहनि प्रातःसवनेऽग्निष्टोमसंस्थे ब्राह्मणाच्छंसिन इन्द्रं वो विश्वतस्परीत्याद्यारंभणीयाऽऽ । चतुर्विंश इत्युपक्रम्य यजुर्नीतिरे नो वरुण इन्द्रं वो विश्वतस्परि अ. ८_१ । इति सूत्रितं ॥

हे ऋत्विग्यजमानाऽऽ विश्वतः सर्वेभ्यो जनेभ्यः परि उपर्यवस्थितमिन्द्रं वो युष्मदर्थं हवामहे । आह्वयामः । अतः स इन्द्रोऽस्माकं केवलोऽसाधारणोऽस्तु । इतरेभ्योऽप्यधिकमनुग्रहमस्मासु करोत्वित्यर्थः ॥ इन्द्रं । रन्नृत्यर्योन्तोः नित्त्वादाद्युदात्तः । वः । अनुदात्तं सर्वमित्यनुवृत्तौ बहुवचनस्य वस्नसौ । पा. ७-१-३८ । इति वस् । विश्वतः । लितीति प्रत्ययोत्पूर्वमुदात्तं । परि । निपातस्त्वादाद्युदात्तः । संहितायां पंचम्याः परावध्यर्थे । पा. ८-१-७८ । इति विसर्जनीयस्य सत्वं । हवामहे । ह्वेञः शपि बहुलं छंदसीति संप्रसारणपरपूर्वत्वे । गुणावादेशौ । जनेभ्यः । जन्यंत इति जनाः । जनयतेः कर्मणि घञ् । जनिवध्योश्च । पा. ७-३-३५ । इत्युपधायाऽऽ वृद्ध्यभावः । घात्त्वादाद्युदात्तत्वं । अस्माकं । अस्मच्छब्दोऽन्तोदात्तः । शेषे लोपः । पा. ८-२-७ । इत्यंतलोपपक्षे साम आकं । पा. ७-१-३९ । इत्याकारेणैकादेश उदात्तः । टेर्लोपपक्षे उदात्तनिवृत्तिस्वरेणाकार उदात्तः । केवलः । वृषादेराकृतिगणत्वादाद्युदात्तः ॥ ८४ ॥ ॥ ३ ॥

ಪ್ರತಿಪದಾರ್ಥ

(ಎಲೈ ಋತ್ವಿಗ್ಯಜಮಾನರಾದ ಜನರೇ, **ವಿಶ್ವತೇಃ ಜನೇಭ್ಯಃ**—ಸಮಸ್ತ ಜನರಿಗಿಂತಲೂ | **ಪರಿ**—ಹೆಚ್ಚಾದ | **ಇಂದ್ರಂ**—ಇಂದ್ರನನ್ನು | **ವಃ**—ನಿಮುವಾಗಿ (ನಿಮ್ಮ ಪರವಾಗಿ) | **ಹವಾಮಹೇ**—ಆಹ್ವಾನ ಮಾಡುವೆವು | (ಆ ಇಂದ್ರನು) **ಅಸ್ಮಾಕಂ**—ನಮಗೆ | **ಕೇವಲಃ**—ಹೆಚ್ಚಾದ ಅನುಗ್ರಹಮಾಡುವವನಾಗಿ (ಮುಖ್ಯ ಪ್ರೀತಿಪಾತ್ರನಾಗಿ) | **ಅಸ್ತು**—ಆಗಲಿ ॥

॥ ಭಾವಾರ್ಥ ॥

ಎಲೈ ಋತ್ವಿಗ್ಯಜಮಾನಾದಿಯಾದ ಜನರೇ, ಇಂದ್ರನು ಸಮಸ್ತಜನರಿಗಿಂತಲೂ ಹೆಚ್ಚಾದವನು ಅಥವಾ ಎಲ್ಲೆಲ್ಲಿಯೂ ಇರುವನು. ಇಂತಹ ಇಂದ್ರನನ್ನು ನಿಮ್ಮ ಪರವಾಗಿ (ಇಲ್ಲಿಗೆ ಎಂದರೆ ಈ ಯಜ್ಞಭೂಮಿಗೆ) ಆಹ್ವಾನಮಾಡುವೆವು. ಆ ಇಂದ್ರನು ನಮಗೆ ಮುಖ್ಯಾನುಗ್ರಾಹಕನಾಗಿರಲಿ ಅಥವಾ ನಮಗೆ ಬೇಕಾದವನಾಗಿರಲಿ.

English Translation.

We imoke for you Indra (who is) above all men. May he be exclusively our own.

॥ ವಿಶೇಷನಿಷಯಗಳು ॥

ಈ ಋಕ್ಕು ಸಾಮವೇದ ೧೬೨೦ ; ಅಥರ್ವವೇದ ೨೦-೩೯-೧ ; ೨೦-೭೦-೧೬ ; ತೈತ್ತಿರೀಯಸಂಹಿತಾ ೧-೬-೧೨-೧ ; ಮೈತ್ರಾಯಣೀಯ ಸಂಹಿತಾ ೪-೧೧-೪ ಈ ಸ್ಥಳಗಳಲ್ಲಿ ಪಠಿತವಾಗಿದೆ. ಹಿಂದಿನ ಋಕ್ಕಿನೊಡನೆ ಸೇರಿಸಿ ಅರ್ಥಮಾಡಿದಲ್ಲಿ ಅಭಿಪ್ರಾಯವು ಸರಿಯಾಗಿ ಹೊಂದುವುದು. ಗೃಹ್ಯಕರ್ಮೋಕ್ತವಾದ ನವಗ್ರಹಾರಾಧನೆ ಮೊದಲಾದ ಕರ್ಮಗಳಲ್ಲಿ ಅಷ್ಟದಿಕ್ಪಾಲಕರನ್ನು ಆಹ್ವಾನವಾಡುವ ಸಂದರ್ಭದಲ್ಲಿಯೂ ಇತರ ಸಂದರ್ಭಗಳಲ್ಲಿಯೂ ಇಂದ್ರನನ್ನು ಆಹ್ವಾನಮಾಡುವುದಕ್ಕಾಗಿ ಈ ಮಂತ್ರವನ್ನು ಉಪಯೋಗಿಸುವರು.

॥ ವ್ಯಾಕರಣಪ್ರಕ್ರಿಯಾ ॥

ಇಂದ್ರಂ—**ಇದಿಪರಮೈಶ್ವರ್ಯೇ** ಧಾತುವಿನ ಮುಂದೆ **ಋಜ್ರೇಂದ್ರಾಗ್ರ** (ಉ ಸೂ. ೨-೧೨೬) ಎಂಬುದರಿಂದ ರನ್ ಪ್ರತ್ಯಯ ಬರುವುದು. ನಿತ್ಸ್ವರದಿಂದ ಆದ್ಯುದಾತ್ತ.

ವಃ—**ಅನುದಾತ್ತಂಸರ್ವಮಪಾದಾದೌ** (ಪಾ. ಸೂ. ೮-೧-೧೭) ಎಂಬುದು ಅನುವೃತ್ತವಾಗಲು **ಬಹುವಚನಸ್ಯ ವಸ್ನಸೌ** (ಪಾ.ಸೂ. ೮-೧-೨೧) ಪದದ ಮುಂದೆ ಇರುವವುಗಳೂ ಪಾದದ ಆದಿಯಲ್ಲಿಲ್ಲದವುಗಳೂ ಷಷ್ಠೀ ಚತುರ್ಥೀ ದ್ವಿತೀಯಾ ಬಹುವಚನಾಂತಗಳೂ ಆದ ಯುಷ್ಮದ್ ಅಸ್ಮದ್ ಶಬ್ದಗಳಿಗೆ ಕ್ರಮವಾಗಿ ವಸ್ ನಸ್ ಆದೇಶಗಳು ಬರುವುವು. ಅವು ಅನುದಾತ್ತಗಳೂ ಆಗುವುವು ಎಂಬುದರಿಂದ ಯುಷ್ಮಭ್ಯಮ್ ಎಂಬುದಕ್ಕೆ ಅನುದಾತ್ತವಾದ ವಸ್ ಆದೇಶ ಬರುವುದು.

ವಿಶ್ವತಃ—**ಪಞ್ಚಮ್ಯಾಸ್ತಸಿಲ್** (ಪಾ. ಸೂ. ೫-೩ ೭) ಎಂಬುದರಿಂದ ತಸಿಲ್ ಬಂದಿರುವುದು. **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ತಸಿಲಿನ **ಪೂರ್ವವರ್ಣವು** ಉದಾತ್ತ.

ಪರಿ—ನಿಪಾತವಾದ್ದರಿಂದ ಆದ್ಯುದಾತ್ತ. **ವಿಶ್ವತಃ ಪರಿ** ಈ ಎರಡರ ಸಂಹಿತಾಕಾಲದಲ್ಲಿ **ಪಂಚಮ್ಯಾಃ ಪರಾವಧ್ಯರ್ಥೇ** (ಪಾ. ಸೂ. ೮-೩-೧೧೧) ಉಪರಿ ಎಂಬ ಅರ್ಥದಲ್ಲಿರುವ ಪರಿಶಬ್ದವು ಪರದಲ್ಲಿರುವಾಗ ಪಂಚಮಿಯಾ ವಿಭಕ್ತಿಯ ವಿಸರ್ಗಕ್ಕೆ ಸಕಾರ ಬರುವುದು ಎಂಬುದರಿಂದ ವಿಶ್ವತಃ ಎಂಬಲ್ಲಿರುವ ವಿಸರ್ಗಕ್ಕೆ ಸಕಾರ ಬಂದರೆ ವಿಶ್ವತಸ್ಪರಿ ಎಂದಾಗುವುದು

ಹವಾಮಹೇ—ಹ್ವೇಞ್ ಧಾತುವಿನ ಮುಂದೆ ಲಟ್ ಉತ್ತಮಪುರುಷ ಬಹುವಚನ ಮಹಿಙ್ ಪ್ರತ್ಯಯ ಶಪ್. ಹ್ವೇ+ಅ+ಮಹಿಙ ಹುಲಂಛಂದಸಿ (ಪಾ. ಸೂ. ೬-೧-೩೪) ಎಂಬುದರಿಂದ ಸಂಪ್ರಸಾರಣ, **ಸಂಪ್ರಸಾರಣಾಚ್ಚ** (ಪಾ. ಸೂ. ೬-೧-೧೦೮) ಎಂಬುದರಿಂದ ಪೂರ್ವರೂಪ, ಗುಣಾವಾದೇಶದೀರ್ಘಗಳು. ಪ್ರತ್ಯಯದ ಟಿಗೆ ಏತ್ವ ಬಂದರೆ ಹವಾಮಹೇ ಎಂದಾಗುವುದು.

ಜನೇಭ್ಯಃ ಜನ್ಯಂತೇ (ಹುಟ್ಟುತ್ತಾರೆ) **ಇತಿ ಜನಾಃ**, ಜನ ಧಾತುವಿನ ಮುಂದೆ ಣಿಚ್. ಣಿಜಂತದ ಮುಂದೆ ಕರ್ಮಣಿ ಘಞ್ **ಣೇರನಿಟಿ** (ಪಾ ಸೂ. ೬-೪-೫೧) ಎಂಬುದರಿಂದ ಣಿ ಲೋಪ. ಣಿಚ್ಚನ್ನು ನಿಮಿತ್ತ ಮಾಡಿಕೊಂಡು **ಅತ ಉಪಧಾಯಾಃ** (ಪಾ. ಸೂ ೭-೨-೧೧೬) ಎಂಬುದರಿಂದ ವೃದ್ಧಿಪ್ರಾಪ್ತವಾದರೆ **ಜನಿವಧ್ಯೋಶ್ಚ** (ಪಾ. ಸೂ. ೭-೩-೩೫) ಜಿಣ್, ಞಿತ್ತು ಣಿತ್ತು ಆದ ಕೃತ್ ಪ್ರತ್ಯಯ ಇವುಗಳು ಪರದಲ್ಲಿರುವಾಗ ಜನ್ ವಧ್ ಧಾತುಗಳ ಉಪಧೆಗೆ ವೃದ್ಧಿಬರುವುದಿಲ್ಲ ಎಂಬುದರಿಂದ ಅದಕ್ಕೆ ನಿಷೇಧಬರುವುದು. **ಘ್ಞಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಪ್ರತ್ಯಯಾಂತ ಶಬ್ದವು ಆದ್ಯುದಾತ್ತ,

ಅಸ್ಮಾಕೆಮ್—ಅಸ್ಮದ್ ಶಬ್ದದ ಮುಂದೆ ಷಷ್ಠೀ ಬಹುವಚನ ಆಮ್. ಅಸ್ಮದ್+ಆಮ್ ಎಂದಿರುವಾಗ **ಸಾಮ ಆಕಮ್** (ಪಾ. ಸೂ. ೭-೧-೩೩) ಯುಷ್ಮದ್, ಅಸ್ಮದ್ ಶಬ್ದಗಳ ಮುಂದೆ ಇರುವ ಸಾನ್ಮ್‌ಗೆ ಆಕಮ್ ಆದೇಶ ಬರುವುದು ಎಂಬುದರಿಂದ ಆಕಮ್ ಆದೇಶವು ಆಮ್‌ನ್ನೇ ಸಾನ್ಮ್ ಎಂದು ಭಾವಿಸಿಕೊಂಡು ವಿಭಕ್ತಿಗೆ ಬರುವುದು; ಅಸ್ಮದ್ ಶಬ್ದ ಅಂತೋದಾತ್ತ. **ಶೇಷೇ ಲೋಪಃ** (ಪಾ. ಸೂ. ೭-೨-೯೦) ಎಂಬುದರಿಂದ ಅಸ್ಮದ್ ಶಬ್ದದ ಕೊನೆಯ ವರ್ಣಕ್ಕೆ ಲೋಪ ಎಂದಿಟ್ಟುಕೊಂಟರೆ ಅಸ್ಮ+ಆಕಮ್. **ಸವರ್ಣದೀರ್ಘ. ಏಕಾದೇಶ ಉದಾತ್ತೇನೋದಾತ್ತಃ** (ಪಾ.ಸೂ. ೮-೨-೫) ಎಂಬುದರಿಂದ ಆಕಾರ ಉದಾತ್ತ. **ಶೇಷೇ ಲೋಪಃ** (ಪಾ.ಸೂ. ೭-೨-೯೦) ಎಂಬುದರಿಂದ ಟಿ ಲೋಪಬರುವುದು ಎಂಬ ಪಕ್ಷದಲ್ಲಿ **ಅನುದಾತ್ತಸ್ಯ ಚ ಯತ್ರೋದಾತ್ತಲೋಪಃ** (ಪಾ. ಸೂ. ೬-೧-೧೬೧) ಎಂಬುದರಿಂದ ಆಕಾರ ಉದಾತ್ತ ॥ ೧೦ ॥

ಎಂಟನೆಯ ಸೂಕ್ತವು

ತೃತೀಯೇ೨ನುವಾಕೇ ಚತ್ವಾರಿ ಸೂಕ್ತಾನಿ । ತತ್ರೈಂದ್ರ ಸಾನಸಿಮಿತ್ಯಾದಿಕಂ ಪ್ರಥಮಂ ದೇವರ್ಚಂ ಸೂಕ್ತಂ ಸುರೂಪಕೃತ್ನುಮಿತ್ಯಾದಿಷು ಷಟ್ಸು ಪಂಚಮಂ । ಋಷ್ಯಾದಯಸ್ತು ಪೂರ್ವವತ್ । ವಿಶೇಷವಿನಿಯೋಗಸ್ತು । ಮಹಾವ್ರತೇ ನಿಷ್ಕೇವಲ್ಯ ಔಷ್ಣಿಹತೃಚಾಶೀತಾವೇಂದ್ರೈ ಸಾನಸಿಂ ರಯಿಮಿತ್ಯಾದಿಕೇ ದ್ವೇ ಸೂಕ್ತೇ । ಪಂಚಮಾರಣ್ಯಕೇ ಔಷ್ಣಿಹೀ ತೃಚಾಶೀತಿರಿತಿ ಖಂಡೇ ಶೌನಕೇನ ಸೂತ್ರಿತಂ । ಸುರೂಪಕೃತ್ನುಮೂತಯ ಇತಿ ತ್ರೀಣ್ಯೇಂದ್ರೈ ಸಾನಸಿಂ ರಯಿಮಿತಿ ಸೂಕ್ತೇ । ಐ. ಆ. ೫-೨-೫ ॥ ಇತಿ ॥ ಅತಿರಾತ್ರೇ ಪ್ರಥಮಪರ್ಯಾಯೇ೨ಚ್ಛಾವಾಕಶಸ್ತ್ರ ಏಂದ್ರೈ ಸಾನಸಿಮಿತಿ ಸೂಕ್ತಂ । ಸೂತ್ರಿತಂ ಚ । ಇಂದ್ರಮಿದ್ಗಾಥಿನೋ ಬೃಹದೇಂದ್ರೈ ಸಾನಸಿಂ । ಆ. ೬-೪ । ಇತಿ ॥ ದರ್ಶಯೋಗ ಇಂದ್ರಯಾಜಿನಃ ಸಾಂನಾಯ್ಯಸ್ಯಾನುವಾಕ್ಯೈಂದ್ರೈ ಸಾನಸಿಂ ರಯಿಮಿತಿ । ಉಕ್ತಾ ದೇವತಾ ಇತ್ಯಸ್ಮಿನ್ಖಂಡ ಏಂದ್ರೈ ಸಾನಸಿಂ ರಯಿಂ ಪ್ರಸಸಾಹಿಷೇ ಪುರುಹೂತ ಶತ್ರೂನ್ । ಆ ೧-೬ । ಇತಿ ಸೂತ್ರಿತಂ ॥

ಅನುವಾದವು—**ಏಂದ್ರೈ ಸಾನಸಿಂ** ಎಂಬ ಸೂಕ್ತದಿಂದ ಮೂರನೆಯ ಅನುವಾಕವು ಪ್ರಾರಂಭವಾಗುವುದು. ಈ ಅನುವಾಕದಲ್ಲಿ ನಾಲ್ಕು ಸೂಕ್ತಗಳಿರುವವು. ಅವುಗಳಲ್ಲಿ ಮೊದಲನೆಯ **ಏಂದ್ರೈ ಸಾನಸಿಂ** ಎಂಬ ಸೂಕ್ತದಲ್ಲಿ ಹತ್ತು ಋಕ್ಕುಗಳಿರುವವು. **ಸುರೂಪಕೃತ್ನುಂ** ಎಂದು ಮೊದಲಾಗುವ ಸೂಕ್ತಗಳಲ್ಲಿ ಇದು ಐದನೆಯದು. ಋಷಿದೇವತಾಛಂದಸ್ಸುಗಳು ಹಿಂದಿನಂತೆಯೇ ಇದರ ವಿಶೇಷವಿನಿಯೋಗವು—ಮಹಾವ್ರತದಲ್ಲಿ ನಿಷ್ಕೇವಲ್ಯ ಶಸ್ತ್ರಮಂತ್ರಪಠನಸಮಾಡುವಾಗ ಎಂಭತ್ತು ಔಷ್ಣಿಹತೃಚಗಳಲ್ಲಿ **ಏಂದ್ರೈ ಸಾನಸಿಂ ರಯಿಂ** ಎಂದು ಮೊದಲಾಗುವ ಎರಡು ಸೂಕ್ತಗಳನ್ನು ಪಠಿಸುವರು. ಐದನೆಯ ಆರಣ್ಯಕದಲ್ಲಿ (ಐತರೇಯ ಆರಣ್ಯಕ ೫) **ಔಷ್ಣಿಹೀ ತೃಚಾಶೀತಿಃ** ಎಂಬ ಖಂಡದಲ್ಲಿ ಈ ವಿಷಯವು ಹೇಳಲ್ಪಟ್ಟಿರುವುದೆಂದು ಶೌನಕರು ತಮ್ಮ ಸೂಕ್ತಾನುಕ್ರಮಣಿಯಲ್ಲಿ ಹೇಳಿರುವರು. ಐತರೇಯ ಬ್ರಾಹ್ಮಣದಲ್ಲಿಯೂ ಸಹ **ಸುರೂಪಕೃತ್ನುಮೂತಯೇ** ಎಂದು ಮೊದಲಾದ ಮೂರು ಸೂಕ್ತಗಳೂ, **ಏಂದ್ರೈ ಸಾನಸಿಂ ರಯಿಂ** ಎಂದು ಮೊದಲಾದ ಎರಡು ಸೂಕ್ತಗಳೂ **ಔಷ್ಣಿಹತೃಚಾಶೀತಿ**ಯಲ್ಲಿ ಸೇರಿರುವುವೆಂದು ಹೇಳಲ್ಪಟ್ಟಿರುವುದು (ಐ. ಆ. ೫-೨-೫) ಇದಲ್ಲದೆ ಅತಿರಾತ್ರಕ್ರತುವಿನಲ್ಲಿ ಪ್ರಥಮಪರ್ಯಾಯದಲ್ಲಿ ಅಚ್ಛಾವಾಕ ಎಂಬ ಋತ್ವಿಜನು ಶಸ್ತ್ರಮಂತ್ರವನ್ನು ಪಠಿಸುವಾಗ **ಏಂದ್ರೈ ಸಾನಸಿಂ** ಎಂಬ ಸೂಕ್ತವನ್ನು ಪಠಿಸಬೇಕೆಂದ ಆಶ್ವಲಾಯನರು ತಮ್ಮ ಶ್ರೌತಸೂತ್ರದಲ್ಲಿ (ಆ. ೬-೪) **ಇಂದ್ರಮಿದ್ಗಾಥಿನೋ ಬೃಹದೇಂದ್ರೈ ಸಾನಸಿಂ** ಎಂಬ ಸೂತ್ರದಲ್ಲಿ ಹೇಳಿರುವರು ಮತ್ತು ದರ್ಶಯಾಗದಲ್ಲಿ ಇಂದ್ರಯಾಜಿಗಳು (ಯಜಮಾನರು) ಸಾಂನಾಯ್ಯಾನುವಾಕ ಪಠನೆಗಾಗಿ **ಏಂದ್ರೈ ಸಾನಸಿಂ ರಯಿಂ** ಎಂಬ ಸೂಕ್ತವನ್ನು ಪಠಿಸುವರು. ಈ ವಿಷಯವನ್ನು ಆಶ್ವಲಾಯನರು ತಮ್ಮ ಶ್ರೌತಸೂತ್ರದಲ್ಲಿ (ಆ. ೧-೬) **ಉಕ್ತಾ ದೇವತಾ** ಎಂಬ ಖಂಡದಲ್ಲಿ **ಏಂದ್ರೈ ಸಾನಸಿ ರಯಿಂ ಪ್ರಸಸಾಹಿಷೇ ಪುರುಷೂತ ಶತ್ರೂನ್** ಎಂಬ ಸೂಕ್ತಗಳನ್ನು ಪಠಿಸಬೇಕೆಂದು ಹೇಳಿರುವರು. ಇದು ಈ ಸೂಕ್ತದ ವಿನಿಯೋಗಕ್ರಮವು.

॥ ಓಂ ॥

——

ಸೂಕ್ತ—೮

॥ ಮಂಡಲ—೧ ॥ ಅನುವಾಕ—೩ ॥ ಸೂಕ್ತ—೮ ॥

॥ ಅಷ್ಟಕ —೧ ॥ ಅಧ್ಯಾಯ—೧ ॥ ವರ್ಗ—೧೫, ೧೬ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೧–೧೦ ॥

॥ ಋಷಿಃ—ಮಧುಚ್ಛಂದಾ ವೈಶ್ವಾಮಿತ್ರಃ ॥

॥ ದೇವತಾ—ಇಂದ್ರಃ ॥

॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಇಂ॑ದ್ರ॒ ಸಾನ॑ಸಿಂ ರ॒ಯಿಂ ಸ॒ಜಿ॑ತ್ವಾನಂ ಸದಾ॒ಸಹ॑ಂ ॥
ವ॒ರ್ಷಿ॒ಷ್ಠ॒ಮೂ॒ತಯೇ॑ ಭರ ॥ ೧ ॥

॥ ಪದಪಾಠಃ ॥

ಆ । ಇ॒ಂದ್ರ॒ । ಸಾ॒ನ॒ಸಿಂ । ರ॒ಯಿಂ । ಸ॒ಜಿ॒ತ್ವಾ॒ನಂ । ಸ॒ದಾ॒ಸಹ॑ಂ ॥
ವ॒ರ್ಷಿ॒ಷ್ಠಂ । ಊ॒ತಯೇ॑ । ಭ॒ರ॒ ॥ ೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಊತಯೇಽಸ್ಮದ್ರಕ್ಷಾರ್ಥಂ ರಯಿಂ ಧನಮಾ ಭರ । ಆಹರ । ಕೀದೃಶಂ ರಯಿಂ - ಸಾನಸಿಂ ಸಂಭಜನೀಯಂ ಸಜಿತ್ವಾನಂ ಸಮಾನಶತ್ರುಜಯಶೀಲಂ । ಧನೇನ ಹಿ ಶೂರಾನ್ಪೃತ್ಯಾನ್ಸೋ ಪಾದ್ಯ ಶತ್ರೂನ್ ಜೀಯಂತೇ । ಸದಾಸಹಂ ಸರ್ವದಾ ಶತ್ರೂಣಾಮಭಿಭವಹೇತುಂ ವರ್ಷಿಷ್ಠಂ ಅತಿಶ- ಯೇನ ವೃದ್ಧಂ । ಪ್ರಭೂತಮಿತ್ಯರ್ಥಃ ॥ ಸಾನಸಿಂ । ವನ ಷಣ ಸಂಭಕ್ತ್ಯಾವಿತ್ಯಸ್ಮಾದಸಿಪ್ರತ್ಯಯೋ_

ವೃದ್ಧಿರಂತೋದಾತ್ತತ್ವಂ ಚ ಸಾನಸಿಧರ್ಣಸೀತ್ಯಾದಿನಾ । ಉ. ೪-೧೦೭ । ನಿಪಾತ್ಯತೇ । ರಯಿಂ । ಪ್ರಾತಿ। ಪದಿಕಸ್ವರೇಣಾಂತೋದಾತ್ತಃ । ಸಜಿತ್ವಾನಂ । ಸಮಾನಾನರೀಷ್ಟೀತುಂ ಶೀಲಮಸ್ಯ । ಅನ್ಯೇಭ್ಯೋಽಪಿ-ದೃಶ್ಯಂತೇ । ಪಾ. ೩-೨ ೭೫ । ಇತಿ ಕ್ವನಿಪ್ । ಉಪಪದಸಮಾಸಃ । ಸಮಾನಸ್ಯ ಚ್ಛಂದಸ್ಯಮೂರ್ಧಪ್ರ-ಭೃತ್ಯುದರ್ಕೇಷು । ಪಾ- ೬-೩-೮೪ । ಇತಿ ಸಮಾನಸ್ಯ ಸಭಾವಃ । ಕೃದುತ್ತರಪದಪ್ರಕೃತಿಸ್ವರೇಣ ಧಾತು-ಸ್ವರ ಏವ ಶಿಷ್ಯತೇ । ವರ್ಷಿಷ್ಠಂ । ವೃದ್ಧಶಬ್ದಾದತಿಶಾಯನೇ ತಮಬಿಷ್ಠನೌ । ಪಾ. ೫-೩-೫೫ । ಇತೀಷ್ಠ-ಪ್ರಿಯಸ್ಥಿರೇತ್ಯಾದಿನಾ । ಪಾ- ೬-೪-೧೫೭ । ವೃದ್ಧಶಬ್ದಸ್ಯ ವರ್ಷಾದೇಶಃ । ಇಷ್ಠನೋ ನಿತ್ತ್ವಾದಾದ್ಯು-ದಾತ್ತತ್ವಂ । ಊತಯೇ । ಉದಾತ್ತ ಇತ್ಯನುವೃತ್ತಾವೂತಿಯೂತಿಜೂತಿಸಾತೀತ್ಯಾದಿನಾ ಕ್ತಿನ್ನುದಾತ್ತೋ ನಿಪಾತಿತಃ । ಭರ । ಪೃಗ್ರಹೋರ್ಭಶ್ಚಂದಸಿ । ಪಾ. ೪ ೨-೪೨-೧ । ಇತಿ ಹಕಾರಸ್ಯ ಭಕಾರಃ । ತೇ ಪ್ರಾಗ್ಧಾತೋಃ । ಪಾ. ೧-೪-೮೦ । ಇತಿ ಧಾತೋಃ ಪ್ರಾಕ್ಪ್ರಯೋಕ್ತವ್ಯಸ್ಯಾಜೋ ವ್ಯವಹಿತಾಶ್ಚ । ಪಾ. ೧-೪-೮೨ । ಇತಿ ಛಂದಸಿ ವ್ಯವಹಿತಪ್ರಯೋಗಃ ॥

॥ ಪ್ರತಿಪದಾರ್ಥ ॥

(ಹೇ) ಇಂದ್ರ— ಎಲೈ ಇಂದ್ರನೇ । ಊತಯೇ— ನಮ್ಮ ರಕ್ಷಣೆಗಾಗಿ । ಸಾನಸಿಂ— ಅನುಭವಿಸಲು ಯೋಗ್ಯವಾದ । ಸಜಿತ್ವಾನಂ— ಶತ್ರುಗಳನ್ನು ಜಯಿಸಲು ಸಹಾಯಕವಾದ । ಸದಾಸಹಂ— ಶತ್ರುಗಳ ಪರಾ ಭವಕ್ಕೆ ಕಾರಣವಾದ । ವರ್ಷಿಷ್ಠಂ— ವಿಪುಲವಾದ । ರಯಿಂ— ಧನವನ್ನು । ಆ ಭರ— ತಂದುಕೊಡು ॥

॥ ಭಾವಾರ್ಥ ॥

ಎಲೈ ಇಂದ್ರನೇ ನೀನು ನಮ್ಮ ಸಂರಕ್ಷಣೆಗಾಗಿ ಬಹಳವಾದ ಧನವನ್ನು ತಂದುಕೊಡು. ಆ ಧನದಿಂದ ನಾವು ಸುಖಾನುಭವವನ್ನು ಮಾಡಬಹುದು ; ಧನಸಹಾಯದಿಂದ ಶೂರರಾದ ಯೋಧರನ್ನು ಸಂಗ್ರಹಿಸಿ ಯುದ್ಧದಲ್ಲಿ ಶತ್ರುಗಳನ್ನು ಗೆಲ್ಲಿಬಹುದು, ನಮ್ಮಲ್ಲಿ ಧನವಿದ್ದರೆ ಶತ್ರುಗಳನ್ನು ಸುಲಭವಾಗಿ ಸೋಲಿಸಬಹುದು. ಈ ಕಾರ್ಯಗಳಿಗಾಗಿ ನಮಗೆ ಹೆಚ್ಚಾದ ಧನವನ್ನು ತಂದು ಕೊಟ್ಟು ನಮ್ಮನ್ನು ಕಾಪಾಡು.

English Translation.

O Indra, bring for our protection riches, most abundent, enjoyable, the source of victory and ever defeating our foes.

॥ ವಿಶೇಷವಿಷಯಗಳು ॥

ಸಾನಸಿಂ— ಸಂಭಜನೀಯಂ–ಸುಖಾನುಭವಸಾಧನವಾದ, enjoyable.

ಸಜಿತ್ವಾನಂ— **ಧನೇನ ಹಿ ಶೂರಾನ್ ಭೃತ್ಯಾನ್ ಸಂಪಾದ್ಯ ಶತ್ರವೋ ಜೀಯಂತೇ** ಎಂದರೆ ಧನ ಸಹಾಯದಿಂದ ವೀರಯೋಧರನ್ನು ಸಂಗ್ರಹಿಸಿ ಶತ್ರುಗಳನ್ನು ಗೆಲ್ಲಬಹುದು ಎಂದು ಭಾಷ್ಯಕಾರರು ಅರ್ಥ ಮಾಡಿರುವರು.

ರಯಿಂ—ಧನ. ಧನವೆಂದರೆ ದ್ರವ್ಯವೆಂದು ಅರ್ಥಮಾತ್ರವಲ್ಲ. ಸುಖಸಾಧನೆಗೆ ಬೇಕಾಗುವ ದ್ರವ್ಯ, ಪುತ್ರಪೌತ್ರಾದಿಗಳು, ಭೃತ್ಯಾದಿಗಳು, ಗೋವು ಮುಂತಾದ ಪಶುಗಳು, ಗೃಹಾದಿಗಳು ಮೊದಲಾದವು.

ವ್ಯಾಕರಣಪ್ರಕ್ರಿಯಾ

ಸಾನಸಿಮ್—ವನಷಣ ಸಂಭಕ್ತೌ, ಎಂಬಲ್ಲಿರುವ ಸನಧಾತುವಿನ ಮುಂದೆ **ಸಾನಸಿ (ಧರ್ಣಸಿ) ವರ್ಣಸಿ ಪರ್ಣಸಿ ತನ್ದುಲಾಂಕುಶ ಚಷಾಲೇಲ್ವಲ ಪೆಲ್ವಲ ಧಿಷ್ಣ್ಯಶಲ್ಯಾಃ** (ಉ. ಸೂ. ೪-೫೪೭) ಎಂಬುದರಿಂದ ಅಸಿ ಪ್ರತ್ಯಯವೂ ಧಾತುವಿಗೆ ಉಪಧಾವೃದ್ಧಿಯೂ ಅಂತೋದಾತ್ತವೂ ಸಹ ನಿಪಾತಿಸಲ್ಪಡುವುದು. ಯದ್ಯಪಿ ಈಗ ಕೌಮುದೀ ಪಾಠದಲ್ಲಿ 'ಧರ್ಣಸಿ' ಎಂಬುದು ಕಾಣಿಸುವುದಿಲ್ಲ. ಆದರೂ ದಶಪಾದೀ ಪಾಠವನ್ನನುಸರಿಸಿ ವೇದಭಾಷ್ಯದಲ್ಲಿ ಧರ್ಣಸಿಯು ಉಪಾತ್ತವಾಗಿರುವುದು.

ರಯಿಂ—ಪ್ರಾತಿಪದಿಕ ಸ್ವರದಿಂದ ಅಂತೋದಾತ್ತ.

ಸಜಿತ್ವಾನಮ್—ಸಮಾನಾನ್ ಅರೀನ್ ಜೇತುಂಶೀಲಮಸ್ಯ ಎಲ್ಲಾ ಶತ್ರುಗಳನ್ನೂ ಜಯಿಸುವುದೇ ಸ್ವಭಾವವಾಗಿ ಉಳ್ಳವನು. **ಆನ್ಯೇಭ್ಯೋ೭ಪಿ ದೃಶ್ಯಂತೇ** (ಪಾ. ಸೂ. ೩-೪-೭೫) ಎಂಬುದರಿಂದ ಸಮಾನಶಬ್ದೋಪಪದಕವಾದ ಜಿ ಧಾತುವಿನ ಮುಂದೆ ಕ್ವನಿಪ್ ಪ್ರತ್ಯಯ. **ಹ್ರಸ್ವಸ್ಯಪಿತಿಕೃತಿತುಕ್** (ಪಾ. ಸೂ. ೬-೧-೭೧) ಪಿತ್ತಾದ ಕೃತ್ಪ್ರತ್ಯಯ ಪರದಲ್ಲಿರುವಾಗ ಹ್ರಸ್ವಾಂತಶಬ್ದಕ್ಕೆ ತುಕ್ ಆಗಮಬರುವುದು ಎಂಬುದರಿಂದ ತುಗಾಗಮ. ಉಪಪದ ಸಮಾಸ ಸಮಾನ ಜಿತ್ವನ್ **ಸಮಾನಸ್ಯಛಂದಸ್ಯಮೂರ್ಧಪ್ರಭೃತ್ಯುದರ್ಕೇಷು** (ಪಾ. ಸೂ. ೬-೩-೮೪) ಎಂಬುದರಿಂದ ಸಮಾನ ಶಬ್ದಕ್ಕೆ ಸ ಆದೇಶಬರುವುದು. **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದಂತವಾದ ಉತ್ತರಪದಕ್ಕೆ ಪ್ರಕೃತಿಸ್ವರ ಬಂದರೆ ಧಾತುಸ್ವರವೇ ನಿಲ್ಲುವುದು.

ವರ್ಷಿಷ್ಠಮ್—**ಅತಿಶಾಯನೇತಮಬಿಷ್ಠನೌ** (ಪಾ. ಸೂ. ೫-೩-೫೫) ಎಂಬುದರಿಂದ ವೃದ್ಧ ಶಬ್ದದ ಮುಂದೆ ಇಷ್ಠನ್ ಪ್ರತ್ಯಯ. **ಪ್ರಿಯಸ್ಥಿರಸ್ಫಿರೋರು ಬಹುಲಗುರುವೃದ್ಧತೃಪ್ರದೀರ್ಘವೃನ್ದಾರಕಾಣಾಂ ಪ್ರಸ್ಥಸ್ಫವರ್ಬಂಹಿ ಗರ್ವರ್ಷಿತ್ರಪ್ರಾಘಿ ಬೃಂದಾಃ** (ಪಾ. ಸೂ. ೬-೪-೧೫೭) ಇಷ್ಠನಾದಿ ಪ್ರತ್ಯಯಗಳು ಪರದಲ್ಲಿರುವಾಗ ಪ್ರಿಯಾದಿ ಶಬ್ದಗಳಿಗೆ ಪ್ರಾದ್ಯಾದೇಶಗಳು ಬರುವುವು ಎಂಬುದರಿಂದ ವೃದ್ಧ ಶಬ್ದಕ್ಕೆ ವರ್ಷ್ ಆದೇಶ, ನಿತರ್ಸ್ವ ಆದ್ಯುದಾತ್ತ ಬರುವುದು.

ಊತಯೇ-ಊತಿಯೂತಿ—(ಪಾ. ಸೂ. ೩-೩-೯೭) ಇತ್ಯಾದಿ ಸೂತ್ರದಿಂದ ಕ್ತಿ ಪ್ರತ್ಯಯವು ಉದಾತ್ತವಾಗಿ ನಿಪಾತಿತವಾಗಿರುವುದು.

ಭರ—ಹೃಞ್ ಹರಣೇ ಧಾತುವಿಗೆ ಲೋಟ್ ಮಧ್ಯಮಪುರುಷ ಏಕವಚನದಲ್ಲಿ ಹರ ಎಂದಾಗುವುದು. **ಹೃಗ್ರಹೋರ್ಭಶ್ಛಂದಸಿ** (ಪಾ. ಸೂ. ೮-೨-೩೧-ವಾ-೨) ಛಂದಸ್ಸಿನಲ್ಲಿ ಈ ಧಾತುಗಳ ಹಕಾರಕ್ಕೆ ಭಕಾರ ಬರುವುದು ಎಂಬುದರಿಂದ ಭಕಾರ ಬಂದರೆ ಭರ ಎಂದಾಗುವುದು. **ತೇಪ್ರಾಗ್ಧಾತೋಃ** (ಪಾ. ಸೂ. ೧-೪-೮೦) ಗತ್ಯುಪಸರ್ಗಗಳು ಧಾತುವಿಗೆ ಅನ್ಯವಹಿತ ಪೂರ್ವದಲ್ಲಿಯೇ ಪ್ರಯೋಗಿಸಲ್ಪಡಬೇಕು ಎಂದಿದ್ದರೂ ಆಜ್ ಎಂಬ ಉಪಸರ್ಗಕ್ಕೆ **ವ್ಯವಹಿತಾಶ್ಚ** (ಪಾ. ಸೂ. ೧-೪-೮೨) ಛಂದಸ್ಸಿನಲ್ಲಿ ವ್ಯವಹಿತವಾಗಿಯೂ ಪ್ರಯೋಗಿಸಲ್ಪಡುವುವು ಎಂಬುದರಿಂದ ವ್ಯವಹಿತವಾಗಿ ಪ್ರಯೋಗವಿರುವುದು. ॥ ೧ ॥

॥ ಸಂಹಿತಾಪಾಠಃ ॥

ನಿ ಯೇನ॑ ಮುಷ್ಟಿಹತ್ಯಯಾ ನಿ ವೃತ್ರಾ ರುಣಧಾಮಹೈ ॥
ತ್ವೋತಾಸ್ತೋ ನ್ಯರ್ವತಾ ॥ ೨ ॥

॥ ಪದಪಾಠಃ ॥

ನಿ । ಯೇನ॑ । ಮುಷ್ಟಿ॒ಽಹತ್ಯಯಾ । ನಿ । ವೃತ್ರಾ । ರುಣಧಾ॑ಮಹೈ ॥
ತ್ವಾ॒ಽಊ॒ತಾಸಃ । ನಿ । ಅರ್ವ॑ತಾ ॥ ೨ ॥

॥ ಸಾಯಣಭಾಷ್ಯಂ ॥

ಯೇನ ಧನೇನ ಸಂಪಾದಿತಾನಾಂ ಭಟಾನಾಂ ನಿ ಮುಷ್ಟಿಹತ್ಯಯಾ ನಿತರಾಂ ಮುಷ್ಟಿಪ್ರಹಾರೇಣ ವೃತ್ರಾ ಶತ್ರೂನ್ನಿ ರುಣಾಧಾಮಹೈ ನಿರುದ್ಧಾ ನ್ಯರವಾಮ ತಾದೃಶಂ ಧನಮಾಹರೇತ್ಯರ್ಥಃ। ತ್ವೋತಾಸಸ್ತ್ವಯಾ ರಕ್ಷಿತಾ ವಯಮರ್ವತಾಸ್ಮದೀಯೇನಾಶ್ವೇನ ನಿ ರುಣಧಾಮಹಾ ಇತ್ಯನುಷಂಗಃ । ಪದಾತಿಯುದ್ಧೇನಾಶ್ವಯುದ್ಧೇನ ಚ ಶತ್ರೂನ್ನಿನಾಶಯಾಮೇತ್ಯರ್ಥಃ॥ ಮುಷ್ಟಿಹತ್ಯಯಾ। ಹನಸ್ತ ಚ । ಪಾ ೩-೧-೧೦೮ । ಇತಿಸುಬಂತಉಪಪದೇ ಕ್ಯಪ್ । ತತ್ಸಂನಿಯೋಗೇನ ನಕಾರಸ್ಯ ತಕಾರಃ । ಕ್ಯದುತ್ತರಪದಪ್ರಕೃತಿಸ್ವರೇ ಪ್ರಾಪ್ತೇ ಪರಾದಿಶ್ಚಂದಸಿ ಬಹುಲಂ ॥ ಪಾ. ೬-೨-೧೯೯ । ಇತಿ ಬಹುಲಗ್ರಹಣೇನ ಕ್ರಿಚೆಕ್ರಾದೀನಾಂ ಛಂದಸ್ಯಂತೋದಾತ್ತತ್ವಾಭಿಧಾನಾತ್ । ಪಾ. ೬-೨-೧೯೯-೧ । ಅಂತೋದಾತ್ತತ್ವಂ । ನಿ । ಆಖ್ಯಾತಸಂಬಂಧಸ್ಯಾಪಿ ನೇರುಪಸರ್ಗಸ್ಯ ವ್ಯವಹಿತಾಶ್ಚೇತಿ ವ್ಯವಹಿತಪ್ರಯೋಗಃ । ವೃತ್ರಾ । ಶೇಶ್ಛಂದಸಿ ಬಹುಲಂ । ಪಾ. ೬-೧-೭೦ ಇತಿ ಶೇರ್ಲೋಪಃ । ನಲೋಪಃ । ರುಣಧಾಮಹೈ । ಆಟ್ಸಂಯೋಗೇನ ಪಿತ್ತ್ವಾತ್ । ಪಾ. ೩-೪-೯೨ . ಶ್ನಸೋರಲ್ಲೋಪಃ । ಪಾ. ೬-೪-೧೧೧ । ಇತ್ಯಕಾರಲೋಪೋ ನ ಭವತಿ । ಪಿತ್ತ್ವಾದೇವ ಚಾಖ್ಯಾತಸ್ಯಾನುದಾತ್ತತ್ವೇನ ವಿಕರಣಸ್ಯ ಶ್ನಮ ಏವೋದಾತ್ತತ್ವಂ ವಿಶೇಷ್ಯತೇ । ನನು ತಿಜ್ಬಿತಿಜ ಇತಿ ನಿಘಾತೇನ ಭವಿತವ್ಯಂ। ನ । ದ್ವೇ ಹ್ಯತ್ರ ತಿಜಿಶ್ವಿಭಕ್ತೀ । ನಿವಿಡಯಾ ಮುಷ್ಟ್ಯಾ ನಿರುಣಧಾಮಹಾ ಇತ್ಯತ್ರೈ ಶ್ರುತ್ಯೈಕಾ । ಅರ್ವತಾ । ನಿರುಣಧಾಮಹಾ ಇತ್ಯತ್ರಾನುಷಕ್ತಾ ದ್ವಿತೀಯಾ । ತಯೋಃ ಸಮುಚ್ಚೆಯಾರ್ಥಶ್ಚಕಾರೋ ಲುಪ್ಯತೇ । ತೇನ ಚಾದಿಲೋಪೇ ವಿಭಾಷಾ । ಪಾ- ೮-೧-೬೩ । ಇತಿ ಪ್ರಥಮೇಯಂ ತಿಜಿಶ್ವಿಭಕ್ತಿರ್ನ ನಿಹನ್ಯತೇ । ಯಥಾ ನಾತ್ಮನಾ ತೈಪ್ಯತಿ ನಾನ್ಯಸ್ಮೈ ದದಾತಿ । ತೈ. ಸಂ- ೨-೫-೪-೩ । ಇತ್ಯತ್ರೈ ಹಿ ಸಮುಚ್ಚೆಯಾರ್ಥಸ್ಯ ಚಶಬ್ದಸ್ಯ ಲೋಪಾತ್ತೈಪ್ಯತೀತಿ ಪ್ರಥಮಾ ತಿಜಿಶ್ವಿಭಕ್ತಿರ್ನ ನಿಹನ್ಯತೇ ದದಾತೀತಿ ದ್ವಿತೀಯಾ ತು ನಿಹನ್ಯತ ಏವ । ನನು ತತ್ರ ದ್ವೇ ತಿಜಿಶ್ವಿಭಕ್ತೀ ಶ್ರೂಯೇತೇ । ಇಹ ಪುನರೇಕೈವ ಶ್ರುತಾ । ಸೈವೋತ್ತರತ್ರಾನುಷಜ್ಯತೇ ನಾನ್ಯಾ ಶ್ರೂಯತ ಇತಿ ದ್ವಿತೀಯಾಭಾವಾತ್ಕಥಮಿಯಂ ಪ್ರಥಮಾ । ನ । ಅನುಷಂಗೆ-

ಲಬ್ಧದ್ವಿತೀಯೋಪೇಕ್ಷಮಪಿ ಪ್ರಾಥಮ್ಯಮುಪಜೀವ್ಯ ನಿಘಾತನಿಷೇಧದರ್ಶನಾತ್ । ಪುರೋಡಾಶಂ ಚಾಧಿಶ್ರಯತ್ಯಾಜ್ಯಂ ಚ । ತೈ. ಸಂ. ೧-೬-೯-೩ । ಪ್ರೋಕ್ಷಣೀಶ್ಚಾಸಾದಯತ್ಯಾಜ್ಯಂ ಚ । ತೈ. ಸಂ. ೧-೬-೯-೪। ಇತ್ಯತ್ರ ಹ್ಯಧಿಶ್ರಯತ್ಯಾಸಾದಯತೀತ್ಯಾಖ್ಯಾತಯೋಃ ಪ್ರಥಮವಾಕ್ಯದ್ವಯಶ್ರುತಯೋರುತ್ತರವಾಕ್ಯದ್ವಯೇಽನುಷಂಗಮಪೇಕ್ಷ್ಯೈವ ಪ್ರಾಥಮ್ಯಸ್ವೀಕಾರೇಣ ಚೇನಾಯೋಗೇ ಪ್ರಥಮಾ । ಪಾ. ೪-೧-೫೯ । ಇತಿ ನಿಘಾತನಿಷೇಧೋ ದೃಷ್ಟ ಇತಿ । ತ್ವಯೋತಾ ರಕ್ಷಿತಾಸ್ತ್ವೋತಾಸಃ । ಪ್ರತ್ಯಯೋತ್ತರಪದಯೋಶ್ಚ । ಪಾ. ೭-೨-೯೮ । ಇತಿ ಮಪರ್ಯಂತಸ್ಯ ತ್ವಾದೇಶೇ ದಕಾರಲೋಪಶ್ಚಾಂದಸಃ । ಅವತೇರ್ನಿಷ್ಠಾಯಾಮಿಡಭಾವಶ್ಚ । ಜ್ವರತ್ವರಸ್ರಿವ್ಯವಿಮವಾಮುಪಧಾಯಾಶ್ಚ । ಪಾ. ೬-೪-೨೦ । ಇತ್ಯೂಟ್ । ಏತ್ಯೇಧತ್ಯೂಟ್ಸು । ಪಾ. ೬-೧-೮೯ । ಇತಿ ವೃದ್ಧ್ಯಭಾವಶ್ಚಾಂದಸಃ । ತೃತೀಯಾ ಕರ್ಮಣಿ । ಪಾ. ೬-೨-೪೯ । ಇತಿ ಪೂರ್ವಪದಪ್ರಕೃತಿಸ್ವರೇಣಾಕಾರ ಉದಾತ್ತಃ । ಏಕಾದೇಶ ಉದಾತ್ತೇನೋದಾತ್ತ ಇತ್ಯುದಾತ್ತ ಓಕಾರಃ । ಅರ್ವತಾ । ಅರ್ವತಿ ಗಚ್ಛತೀತ್ಯರ್ವಾ । ಅರ್ವ ಗತೌ । ಅನ್ಯೇಭ್ಯೋಽಪಿ ದೃಶ್ಯಂತೇ ಇತಿ ವನಿಪ್ಪ್ರತ್ಯಯಃ । ನೇದೃಶಿ ಕೃತಿ । ಪಾ. ೭-೨-೯ । ಇತೀಟ್ ಪ್ರತಿಷೇಧಃ । ಲೋಪೋ ವ್ಯೋರ್ವಲಿ । ಪಾ. ೬-೧-೬೬ । ಇತಿ ವಕಾರಲೋಪಃ । ಅರ್ವಣಸ್ತ್ರಸಾವನಘಃ । ಪಾ. ೬-೪-೧೨೭ । ಇತಿ ತಕಾರಃ । ವನಿಪಃ ಪಿತ್ತ್ವಾದ್ಧಾತುಸ್ವರ ಏವ ॥

॥ ಪ್ರತಿಪದಾರ್ಥ ॥

ಯೇನ—ಯಾವ ಧನಸಹಾಯದಿಂದ ಸಂಪಾದಿಸಲ್ಪಟ್ಟ ಯುದ್ಧಭಟರ । **ನಿ ಮುಷ್ಟಿಹತ್ಯಯಾ**—ವಿಶೇಷವಾದ ಮುಷ್ಟಿಪ್ರಹಾರದಿಂದ । **ವೃತ್ರಾ**—ಶತ್ರುಗಳನ್ನು । **ನಿ ರುಣಧಾಮಹೈ**—(ಮುಂದೆನುಗ್ಗಿ ಬರದಂತೆ) ತಡೆದು ನಿಲ್ಲಿಸುವೆವೋ। **ತ್ವೋತಾಸಃ**—ನಿನ್ನಿಂದ (ಇಂದ್ರನಿಂದ) ರಕ್ಷಿತರಾದ ನಾವು। **ಅರ್ವತಾ**—ಅಶ್ವಗಳಿಂದಲೂ **ನಿ** (ರುಣಧಾಮಹೈ)—ಶತ್ರುಗಳನ್ನು ತಡೆದುನಿಲ್ಲಿಸುವೆವೋ (ಅಂತಹ ಧನವನ್ನು ಕೊಡು.)

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಕೊಡುವ ಧನಸಹಾಯದಿಂದ ಸಂಗ್ರಹಿಸಿದ ಯುದ್ಧಭಟರ ಮುಷ್ಟಿಪ್ರಹಾರಗಳಿಂದ ಎಂದರೆ ಯುದ್ಧಭಟರು ಕೈ ಕೈ ಕಲೆತು ಯುದ್ಧಮಾಡುವುದರಿಂದಲೂ, ಕುದುರೆಗಳ ಸಹಾಯದಿಂದಲೂ ನಮ್ಮ ಶತ್ರುಗಳನ್ನು ಮುಂದೆ ನುಗ್ಗಿ ಬರದಂತೆ ತಡೆದು ನಿಲ್ಲಿಸುವೆವು. ಏಕೆಂದರೆ ನಮಗೆ ನಿನ್ನ ರಕ್ಷಣೆಯು ಇದ್ದೇ ಇದೆ.

English Translation.

By which we repel our enemies crushing them down with our fists or with our horses.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಯೇನ ಎಂಬ ಯಚ್ಶಬ್ದವಿರುವುದರಿಂದ ಇದರ ಅರ್ಥವನ್ನು ಹಿಂದಿನ ಋಕ್ಕಿನ ಪದಗಳೊಡನೆ ಅನ್ವಯಮಾಡಿಕೊಳ್ಳಬೇಕು. ಎಂದರೆ, ಹಿಂದಿನ ಋಕ್ಕಿನಲ್ಲಿ ಇಂದ್ರನನ್ನು ಧನಸಹಾಯಕ್ಕಾಗಿ

ಪ್ರಾರ್ಥಿಸಲಾಗಿದೆ. ಆದುದರಿಂದ ಈ ಋಕ್ಕಿನಲ್ಲಿರುವ **ಯೇನ** ಮುಷ್ಟಿಹತ್ಯಯಾ ಎಂಬ ಶಬ್ದಗಳಿಗೆ ಯಾವ ಧನಸಹಾಯದಿಂದ ಲಬ್ಧರಾದ ಭಟರ ಮುಷ್ಟಿಪ್ರಹಾರದಿಂದ ಎಂದರ್ಥವು. ಯುದ್ಧಮಾಡುವಾಗ ಭಟರು ಕೈ ಕೈ ಕಲೆತು ಯುದ್ಧಮಾಡುವುದು ಸ್ವಭಾವವಷ್ಟೆ. ಆದರಂತೆ ಇಲ್ಲಿ ಮುಷ್ಟಿಹತ್ಯಯಾ ಎಂದರೆ ಮುಷ್ಟಿಪ್ರಹಾರವೆಂದು ಹೇಳಿರುವುದು. ಕುದುರೆಗಳ ಮೇಲೆ ಕುಳಿತು ಯುದ್ಧಮಾಡುವುದೂ ಹಿಂದಿನಿಂದಲೂ ರೂಢಿಯಾಗಿರುವುದು. ಆದುದರಿಂದ ಈ ಎರಡು ವಿಧವಾದ ಯುದ್ಧಕ್ರಮಗಳಿಂದಲೂ ಶತ್ರುಗಳನ್ನು ಮುಂದುವರೆಯದಂತೆ ನಿನ್ನ ಸಹಾಯದಿಂದ ತಡೆದು ನಿಲ್ಲಿಸುವೆವು ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಮುಷ್ಟಿಹತ್ಯಯಾ—**ಹನಸ್ತೃಚ** (ಪಾ. ಸೂ. ೩-೧-೧೦೮) ಉಪಸರ್ಗರಹಿತವಾದ ಸುಬಂತವು ಉಪಪದವಾಗಿರುವಾಗ ಹನಧಾತುವಿನ ಮುಂದೆ ಭಾವಾರ್ಥದಲ್ಲಿ ಕ್ಯಪ್ ಪ್ರತ್ಯಯಬರುವುದು, ಹನ್ ಧಾತುವಿನ ನಕಾರಕ್ಕೆ ತಕಾರವೂ ಬರುವುದು ಎಂಬುದರಿಂದ ' ಹನ ಹಿಂಸಾಗತ್ಯೋಃ, ಎಂಬ ಧಾತುವಿನ ಮುಂದೆ ಕ್ಯಪ್ ಪ್ರತ್ಯಯವೂ ನಕಾರಕ್ಕೆ ತಕಾರವೂ ಬಂದರೆ ಹತ್+ಯ, ಮುಷ್ಟ್ಯಾ ಹನನಂ, ಮುಷ್ಟಿಹತ್ಯಾ ಎಂದಾಗುವುದು. **ಗತಿಕಾರಕೋಪಪದಾತ್ಕೃತ್** (ಪಾ.ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಪ್ರಾಪ್ತವಾದರೆ **ಪರಾದಿಶ್ಚಂದಸಿಬಹುಲಂ** (ಪಾ. ಸೂ. ೬-೨-೧೯೯) ಎಂಬಲ್ಲಿ ಬಹುಲಗ್ರಹಣ ವಿರುವುದರಿಂದ **ಅಂತೋದಾತ್ತ-ಪ್ರಕರಣೇತ್ರಿಚಕ್ರಾದೀನಾಂ ಛಂದಸ್ಯುಪಸಂಖ್ಯಾನಂ** (ಪಾ. ಸೂ. ೯-೨-೧೯೯-ವಾ. ೧) ಎಂದು ಹೇಳಿರುವುದರಿಂದ ಅಂತೋದಾತ್ತಸ್ವರವೇ ಬರುವುದು.

ನಿ—ನಿ ಎಂಬ ಉಪಸರ್ಗವು ತಿಙಂತದಲ್ಲಿ ಅನ್ವಯಿಸುವುದು. ಆದರೂ **ವ್ಯವಹಿತಾಶ್ಚ** (ಪಾ. ಸೂ. ೧-೪-೮೨) ಎಂಬುದರಿಂದ ವ್ಯವಹಿತವಾಗಿ ಪ್ರಯುಕ್ತವಾಗಿರುವುದು.

ವೃತ್ರಾ—ವೃತ್ರ ಶಬ್ದದ ಮುಂದೆ ಜಸ್ಸನ್ನಿಟ್ಟರೆ ಆದಕ್ಕೆ ಶಿ ಬರುವುದು. **ಶೇಶ್ಚಂದಸಿಬಹುಲಂ** (ಪಾ. ಸೂ. ೬-೧-೭೦) ಎಂಬುದರಿಂದ ಆದಕ್ಕೆ ಲೋಪಬರುವುದು. **ನಪುಂಸಕಸ್ಯಝಲಚಃ** (ಪಾ. ಸೂ. ೭-೧-೭೨) ಸರ್ವನಾಮಸ್ಥಾನ ಪರದಲ್ಲಿರುವಾಗ ಝಲಂತವಾದ ಅಥವಾ ಅಜನ್ತವಾದ ನಪುಂಸಕಲಿಂಗದ ಅಂಗಕ್ಕೆ ನುಮ್ ಆಗಮ ಬರುವುದು, ಎಂಬುದರಿಂದ ಬಂದ ನುಮಾಗಮದ ನಕಾರಕ್ಕೆ **ನಲೋಪಃಪ್ರಾತಿಪದಿಕಾಂತಸ್ಯ** (ಪಾ. ಸೂ, ೮-೨-೭) ಎಂಬುದರಿಂದ ಲೋಪಬರುವುದು.

ರುಣಧಾಮಹೈ—ರುಧಿರ್ ಆವರಣೇ ಲೋಟ್ ಆತ್ಮನೇಪದ ಉತ್ತಮಪುರುಷ ಬಹುವಚನ ಮಹಿಙ್ ಬಂದರೆ, ರುಧ್+ಮಹಿ **ಟಿತಆತ್ಮನೇಪದಾನಾಂಟೇರೇ** (ಪಾ ಸೂ ೩-೪-೭೯) ಇಗೆ ಏಕಾರ, **ಏತೈ** (ಪಾ.ಸೂ. ೩-೪-೯೦) ಲೋಟ್ಟಿನ ಉತ್ತಮಪುರುಷದ ಏಕಾರಕ್ಕೆ ಐ ಬರುವುದು ಎಂಬುದರಿಂದ ಐ—ಆದೇಶವು ಏಗೆ ಬರುವುದು, ಮತ್ತೈ ಎಂದಾಗುವುದು. **ರುಧಾದಿಭ್ಯಃಶ್ನಮ್** (ಪಾ. ಸೂ ೩-೧-೭೮) ಎಂಬುದರಿಂದ ಉಕಾರದ ಮುಂದೆ ಶ್ನಮ್ ವಿಕರಣ ಬರುವುದು. ರುನಧಾ+ಮಹೈ **ಆಡುತ್ತಮಸ್ಯಪಿಚ್ಚೆ** (ಪಾ. ಸೂ. ೩-೪-೯೩) ಲೋಟ್ಟಿನ ಉತ್ತಮಪುರುಷಕ್ಕೆ ಆಡಾಗಮ ಬರುವುದು ಅದು ಪಿತ್ತಾಗುವುದು ಎಂಬುದರಿಂದ ಆಡಾಗಮ ಬರುವುದು, ರುನಧ್+ಆಮಹೈ ಈಗ **ಶ್ನಸೋರಲ್ಲೋಪಃ** (ಪಾ. ಸೂ. ೬-೪-೧೧೧) ಶ್ನಮ್ ಪ್ರತ್ಯಯ ಅಸ್ ಧಾತು ಇವುಗಳ ಅಕಾರಕ್ಕೆ ಕಿತ್ತು ಅಥವಾ ಣಿತ್ತು ಆದ ಸಾರ್ವಧಾತುಕ ಪರವಾಗಿರುವಾಗ ಲೋಪಬರುವುದು ಎಂಬುದರಿಂದ

ವಿಹಿತವಾದ ಲೋಪವು, ಆಮಹೈ ಎಂಬ ಸಾರ್ವಧಾತುಕವು ಪಿತ್ತಾದ್ದರಿಂದ, ಙಿತ್ತಾಗುವುದಿಲ್ಲವಾದಕಾರಣ ಙಿತ್ತಾದ ಸಾರ್ವಧಾತುಕ ಪದದಲ್ಲಿಲ್ಲವಾದ್ದರಿಂದ ಬರುವುದಿಲ್ಲ. ' ರಕ್ಷಾಭ್ಯಾಂ ' (ಪಾ. ಸೂ. ೮-೪೧) ಅನುವೃತ್ತವಾಗಲು **ಆಟ್ಕುಪ್ವಾಙ್ನುಮ್ವ್ಯವಾಯೇಽಪಿ**(ಪಾ.ಸೂ. ೮-೪-೨) ಎಂಬುದರಿಂದ ನಕಾರಕ್ಕೆ ಣಕಾರ. ಆಮಹೈ ಎಂಬುದು ಪಿತ್ತಾದ್ದರಿಂದ **ಅನುದಾತ್ತೌಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ **ಅನುದಾತ್ತ**, ಶ್ನಮ್ಮಿನ **ಉದಾತ್ತ** ಸ್ವರ ನಿಲ್ಲುವುದು. ಇಲ್ಲಿ ರುಣಧಾಮಹೈ ಎಂಬುದು ಙಂತವಾದ್ದರಿಂದ **ತಿಙ್ಙತಿಙಃ** (ಪಾ. ಸೂ. ೮-೧-೨೮) ಎಂಬುದರಿಂದ ಸರ್ವಾನುದಾತ್ತ ಬರಬೇಕಾಗುವುದು. ಅಲ್ಲನೇ ? ಎಂದರೆ ಇಲ್ಲ. ಇಲ್ಲಿ ಎರಡು ತಿಙಂತ ಪದಗಳಿರುವುವು. ಯೇನ ನಿಮುಷ್ಟಿಹತ್ಯಾಯಾ ವೃತ್ರಾ ನಿರುಣಧಾಮಹೈ ಎಂಬಲ್ಲಿ ಶ್ರುತವಾಗಿರುವುದು ಒಂದು, ತ್ವೋತಾಸಃ ಆರ್ವತಾ ನಿರುಣಧಾಮಹೈ ಎಂದು ಅನುಷಕ್ತವಾದುದು ಮತ್ತೊಂದು. ಇವೆರಡಕ್ಕೂ ಸಮುಚ್ಚಯವನ್ನು ಹೇಳುವ ಚಕಾರಕ್ಕೆ ಪ್ರಯೋಗವಿಲ್ಲ. ಆದ್ದರಿಂದ **ಚಾದಿಲೋಪೇವಿಭಾಷಾ** (ಪಾ. ಸೂ. ೮-೧-೬೩) ಲೋಪ ಶಬ್ದಕ್ಕೆ ಅಪ್ರಯೋಗ ಎಂದು ಅರ್ಥ. ಈ ಸೂತ್ರದಿಂದ ಪಾಕ್ಷಿಕ ನಿಷೇಧ ಬರುವುದರಿಂದ ಅನುದಾತ್ತ ಬರುವುದಿಲ್ಲ. ಉದಾಹರಣೆ—**ನಾತ್ಮೈನಾ ತೈಪ್ಯತಿ ನಾನ್ಯಸ್ಮೈ ದದಾತಿ** (ತೈ. ಸಂ. ೩-೫-೪-೬) ಇಲ್ಲಿ ಸಮುಚ್ಚಯಾರ್ಥಕವಾದ ಚ ಶಬ್ದಕ್ಕೆ ಪ್ರಯೋಗವಿಲ್ಲದೇ ಇರುವುದರಿಂದ ' ತೃಪ್ಯತಿ ' ಎಂಬ ತಿಙಂತವು ಅನುದಾತ್ತವಾಗುವುದಿಲ್ಲ. ದದಾತಿ ಎಂಬ ಎರಡನೇ ತಿಙಂತವಾದರೋ ಅನುದಾತ್ತನೇ ಆಗುವುದು. ಆದರೆ ಈ ಉದಾಹರಣೆಯಲ್ಲಿ ತೃಪ್ಯತಿ, ದದಾತಿ, ಎಂದು ಎರಡು ತಿಙಂತಪದಗಳು ಉಪಾತ್ತವಾಗಿರುವುವು. ಇಲ್ಲಾದರೋ ರುಣಧಾಮಹೈ ಎಂಬ ತಿಙಂತವು ಒಂದೇ ಇರುವುದು. ಇದೇ ಎರಡನೆಯ ವಾಕ್ಯದಲ್ಲಾಗಲಿ ಸಂಬಂಧಿಸುವುದು. ಇಷ್ಟೇ ಅಲ್ಲದೆ ಎರಡನೆಯದಾದ ತಿಙಂತವು ಇಲ್ಲಿ ಉಪಾತ್ತವಾಗಿಲ್ಲ ಆದ್ದರಿಂದ ಎರಡನೆಯ ತಿಙಂತವಿಲ್ಲದೇ ಇರುವುದರಿಂದ ಇದು ಹೇಗೆ ಪ್ರಥಮ ತಿಙಂತವಾಗುವುದು ಎಂದರೆ **ಚಿನಾಯೋಗೇಪ್ರಥಮಾ** ಎಂಬ ಸೂತ್ರವು ಪ್ರವೃತ್ತಿಸಲು ಉಪಾತ್ತವಾದ ತಿಙಂತ ದ್ವಯವಿರಬೇಕೆಂಬ ನಿಯಮವಿಲ್ಲ, ಒಂದು ತಿಙಂತ ಶ್ರುತವಾಗಿದ್ದು ಅದಕ್ಕೇ ಉತ್ತರ ವಾಕ್ಯದಲ್ಲಿ ಸಂಬಂಧವಿದ್ದರೂ (ಅನುಷಕ್ತ) ಸಂಬಂಧಿಸಿಕೊಂಡ ತಿಙಂತವನ್ನಪೇಕ್ಷಿಸಿ ಉಪಾತ್ತವಾದ ತಿಙಂತವು ಪ್ರಥಮವಾಗುವುದರಿಂದ, ಚಿನಾಯೋಗೇ ಎಂಬ ನಿಷೇಧ ಬಂದೇಬರುವುದು ಆದ್ದರಿಂದಲೇ **ಪುರೋಡಾಶಂಚಾಧಿಶ್ರಯೆತ್ಯಾಜ್ಯಂಚೆ**(ತೈಸಂ. ೧-೬-೯-೩-೪) **ಪ್ರೋಕ್ಷಣೀಶ್ಚಾಸಾದಯೆತ್ಯಾಜ್ಯಂಚೆ** (ತೈಸಂ. ೧-೬.೯-೪) ಎಂಬೀ ಎರಡು ಶ್ರುತಿವಾಕ್ಯಗಳಲ್ಲಿ ಅಧಿಶ್ರಯತಿ, ಆಸಾದಯತಿ, ಎಂಬ ತಿಙಂತಗಳು ಪ್ರಥಮವಾಕ್ಯದಲ್ಲಿ ಉಪಾತ್ತವಾಗಿರುವುವು. ಇವುಗಳಿಗೇ ಆಜ್ಯಂಚ ಎಂಬ ಉತ್ತರವಾಕ್ಯದಲ್ಲಾಗಲಿ ಸಂಬಂಧವಿರುವುದು. ಆದರೂ ಸಂಬಂಧಿಸಿಕೊಂಡ ತಿಙಂತವನ್ನಪೇಕ್ಷಿಸಿ ಉದಾತ್ತವಾದ ತಿಙಂತವು ಪ್ರಥಮವಾಗುವುದು ಎಂದು ಇಟ್ಟುಕೊಂಡು **ಚಿನಾಯೋಗೇ ಪ್ರಥಮಾ** (ಪಾ. ಸೂ. ೮-೧-೪೯) ಎಂಬುದರಿಂದ ಅನುದಾತ್ತ ನಿಷೇಧವು ದೃಷ್ಟವಾಗಿರುವುದು. ಆದ್ದರಿಂದ ಇಲ್ಲಿಯೂ ಪಾಕ್ಷಿಕಾನುದಾತ್ತನಿಷೇಧ ಬರುವುದರಿಂದ ಅನುದಾತ್ತ ಬರುವುದಿಲ್ಲ.

ತ್ವಯಾ ಊತಾಃ ತ್ವೋತಾಸಃ (ನಿನ್ನಿಂದ ರಕ್ಷಿಸಲ್ಪಟ್ಟವರು) ತೃತೀಯಾ ತತ್ಪುರುಷ ಸಮಾಸದಲ್ಲಿ ಪೂರ್ವೋತ್ತರಪದಗಳ ಸುಬ್ವಿಭಕ್ತಿಗೆ **ಸುಸ್ಪೋಧಾತುಪ್ರಾತಿಪದಿಕಯೋಃ** ಎಂಬುದರಿಂದ ಲುಕ್‌ಬಂದರೆ ಯುಷ್ಮದ್+ಊತ ಎಂದಿರುವುದು. ಈಗ **ಪ್ರತ್ಯಯೋತ್ತರಪದಯೋಶ್ಚ** (ಪಾ.ಸೂ. ೭-೨-೯೮) ಪ್ರತ್ಯಯ ಅಥವಾ ಉತ್ತರಪದ ಪರವಾಗಿರುವಾಗ ಯುಷ್ಮದ್ ಅಸ್ಮದ್ ಶಬ್ದಗಳ ಮಪರ್ಯಂತಕ್ಕೆ ತ್ವ ಮ ಎಂಬ ಆದೇಶಗಳು ಕ್ರಮವಾಗಿ ಬರುವುವು. ಎಂಬುದರಿಂದ ಯುಷ್ಮ್ ಎಂಬುದಕ್ಕೆ ತ್ವ ಆದೇಶ ಬಂದರೆ ಪರರೂಪ ಬಂದು **ತ್ವದ್** ಎಂದಿರುವಾಗ **ದ**ಕಾರಕ್ಕೆ ಛಾಂದಸವಾಗಿ ಲೋಪಬರುವುದು. ಊತಾಃ ಎಂಬಲ್ಲಿ ಅವ ಧಾತುವಿನ ಮುಂದೆ ಕ್ತ ಪ್ರತ್ಯಯ ಬಂದರೆ ಅದಕ್ಕೆ ಇಡಾಗಮವೂ ಛಾಂದಸವಾಗಿ ಬರುವುದಿಲ್ಲ. **ಜ್ವರತ್ಸ್ವರಸೃವಮಾಮವಾಮಪದಾಯೋಶ್ಚ** (ಪಾ. ಸೂ. ೬-೪-೨೦)

ಎಂಬುದರಿಂದ ಊಕಾರ ವಕಾರಗಳಿಗೆ ಊಠ್ ಬರುವುದು. ತ್ವ+ಊತ ಎಂಬಲ್ಲಿ **ವಿತ್ಯೇಧತ್ಯೂಠ್ಸು** (ಪಾ. ಸೂ. ೬-೧-೮೯) ಅವರ್ಣದ ಮುಂದೆ ಏಕಾರಾದಿಯಾದ ಏತಿ ಏಧತಿ ಧಾತುಗಳೂ ಊಠ್ ಎಂಬುದೂ ಪರದಲ್ಲಿದ್ದರೆ ಪೂರ್ವಪರಸ್ಥಾನಗಳಲ್ಲಿ ವೃದ್ಧಿ ಬರುವುದು ಎಂಬುದರಿಂದ ವಿಹಿತವಾದ ವೃದ್ಧಿಯು ಛಾಂದಸವಾಗಿ ಬರುವುದಿಲ್ಲ. **ತೃತೀಯಾಕರ್ಮಣಿ** (ಪಾ. ಸೂ. ೬-೩-೪೮) ಕರ್ಮಣಿ ಕ್ತ ಪ್ರತ್ಯಯಾಂತ ಶಬ್ದವು ಪರದಲ್ಲಿರುವಾಗ ತೃತೀಯಾ ವಿಭಕ್ತ್ಯಂತವು ಪ್ರಕೃತಿಸ್ವರವನ್ನು ಹೊಂದುವುದು ಎಂಬುದರಿಂದ ವಿಹಿತವಾದ **ಪೂರ್ವಪದಪ್ರಕೃತಿಸ್ವರ**ದಿಂದ ತ್ವ ಎಂಬುದರ ಅಕಾರವು ಉದಾತ್ತ. ತ್ವ+ಊತ ಎಂಬಲ್ಲಿ **ಆದ್ಗುಣಃ** (ಪಾ. ಸೂ. ೬-೧-೮೭) ಎಂಬುದರಿಂದ ಏಕಾದೇಶವಾಗಿ ಬಂದ ಓಕಾರವು **ವಿಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮-೨-೫) ಎಂಬುದರಿಂದ ರಿಂದ ಉದಾತ್ತ.

ಅರ್ವತಾ—ಅರ್ವ ಗತೌ ಎಂಬ ಧಾತುವಿನ ಮುಂದೆ **ಅನ್ಯೇಭ್ಯೋಽಪಿದೃಶ್ಯಂತೇ** (ಪಾ. ಸೂ. ೩.೨-೭೫) ಎಂಬುದರಿಂದ ವನಿಪ್ ಪ್ರತ್ಯಯ. **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭=೨-೩೫) ಎಂಬುದರಿಂದ ವಿಹಿತವಾದ ಇಟ್ ಆಗಮಕ್ಕೆ **ನೇಡ್ವಶಿಕೃತಿ** (ಪಾ. ಸೂ. ೭-೨-೮) ವಶಾದಿಯಾದ ಕೃತ್ತಿಗೆ ಇಡಾಗವ್ ಬರುವುದಿಲ್ಲ ಎಂದು ನಿಷೇಧವಿರುವುದರಿಂದ ಅದು ಬರುವುದಿಲ್ಲ. ಅರ್ವ್+ವನ್ **ಲೋಪೋವ್ಯೋರ್ವಲಿಃ** (ಪಾ. ಸೂ. ೬-೧-೬೬) **ವಲ್** ವರ್ಣಪರದಲ್ಲಿರುವಾಗ ಯಕಾರ ವಕಾರಗಳಿಗೆ ಲೋಪಬರುವುದು ಎಂಬುದರಿಂದ ವಕಾರಕ್ಕೆ ಲೋಪ. ಅರ್+ವನ್ ಅರ್ವನ್ ಶಬ್ದದ ಮುಂದೆ ತೃತೀಯಾ ಏಕವಚನ ಟಾ ಪ್ರತ್ಯಯವನ್ನಿಟ್ಟರೆ **ಅರ್ವಣಸ್ತ್ರಸಾವನೇಘಃ** (ಪಾ. ಸೂ. ೬-೪-೧೨೭) ಸು ಪ್ರತ್ಯಯ ಪರದಲ್ಲಿಲ್ಲದಿದ್ದರೆ ನಘ್‌ನ ಮುಂದಿಲ್ಲದ ಅರ್ವನ್ ಶಬ್ದಾಂತವಾದ ಅಂಗಕ್ಕೆ ತ್ರ ಆದೇಶ ಬರುವುದು ಎಂಬುದರಿಂದ ಅರ್ವನ್ ಶಬ್ದದ ನಕಾರಕ್ಕೆ ತಕಾರ ಬಂದರೆ ಅರ್ವತಾ ಎಂದಾಗುವುದು. ವನಿಪ್ಪು ಪಿತ್ತು. ಆದ್ದರಿಂದ ಅನುದಾತ್ತವಾಗುವುದು. ಮೊದಲಿನ ಅಕಾರಕ್ಕೆ **ಧಾತೋಃ** (ಪಾ. ಸೂ. ೬-೧-೧೬) ಧಾತುವಿನ ಕೊನೆಯ ವರ್ಣವು ಉದಾತ್ತವಾಗುವುದು ಎಂಬುದರಿಂದ ಉದಾತ್ತ ಬರುವುದು ॥ ೨ ॥

॥ ಸಂಹಿತಾಪಾಠಃ ॥

ಇಂದ್ರ॑ ತ್ವೋ॒ತಾಸ॒ ಆ ವ॒ಯಂ ವಜ್ರಂ॑ ಘ॒ನಾ ದ॑ದೀಮಹಿ ।
ಜಯೇ॑ಮ॒ ಸಂ ಯುಧಿ॒ ಸ್ಪೃಧಃ॑ ॥ ೩ ॥

॥ ಪದಪಾಠಃ ॥

ಇಂದ್ರ॑ । ತ್ವಾ॒ । ಊ॒ತಾಸ॑ಃ । ಆ । ವ॒ಯಂ । ವಜ್ರಂ॑ । ಘ॒ನಾ । ದ॒ದೀ॒ಮ॒ಹಿ॒ ॥
ಜಯೇ॑ಮ । ಸಂ । ಯುಧಿ॑ । ಸ್ಪೃಧಃ॑ ॥ ೩ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವೋತಾಸಸ್ತ್ವಯಾ ಪಾಲಿತಾ ವಯಂ ಘನಾ ಘನಂ ಶತ್ರುಪ್ರಹರಣಾಯೋತ್ಕಂತಃ ದೃಢಂ ವಜ್ರಮಾಯುಧಮಾ ದದೀಮಹಿ । ಸ್ವೀಕುರ್ಮಃ । ತೇನ ಚ ವಜ್ರೇಣ ಯುಧಿ ಯುದ್ಧೇ ಸ್ಪೃಧಃ ಸ್ಪರ್ಧಮಾನಾಂಶ್ಚೈತ್ರೊನ್ಸಂ ಜಯೇಮ ॥ ತ್ವೋತಾಸಃ । ಉಕ್ತಂ । ವಜ್ರಂ । ವಜ ವ್ರಜ ಗತೌ । ಋಜ್ರೇಂದ್ರಾಗ್ರೇತ್ಯಾದಿನಾ ರನ್ಪ್ರತ್ಯಯಾಂತೋ ನಿಪಾತಃ । ಘನಾ । ಘನಃ ಕಾಠಿನ್ಯಂ । ತದಸ್ಯಾಸ್ತೀತ್ಯರ್ಶ ಆದಿತ್ವಾದಚ್ । ಪಾ. ೫-೨-೧೨೭ । ಚಿತ್ತ್ವಾದಂತೋದಾತ್ತಃ । ಸುಪಾಂ ಸುಲುಗಿತಿ ಡಾದೇಶಃ । ದದೀಮಹಿ ಡುದಾಞ್ ದಾನೇ ಪ್ರಾರ್ಥನಾಯಾಂ ಲಿಙ್ । ಕ್ರಿಯಾಫಲಸ್ಯ ಕರ್ತೃಗಾಮಿತ್ವಾತ್ಸ್ವರಿತಞ್ಕಿತಃ । ಪಾ. ೧-೩-೭೨। ಇತ್ಯಾತ್ಮನೇಪದೋತ್ತಮಪುರುಷಬಹುವಚನೇ ಮಹಿಙ್। ಜುಹೋತ್ಯಾದಿತ್ವಾಚ್ಛಪಃ ಶ್ಲುಃ ಪಾ. ೨-೪-೭೫। ಶ್ಲೌ । ಪಾ. ೬-೧-೧೦ ಇತಿ ದ್ವಿರ್ಭಾವಃ । ಲಿಙಃ ಸಲೋಪೋಽನಂತ್ಯಸ್ಯ । ಪಾ. ೭-೨-೭೯। ಇತಿ ಸಲೋಪಃ । ಶ್ನಾಭ್ಯಸ್ತಯೋರಾತಃ । ಪಾ. ೬-೪-೧೧೨ । ಇತ್ಯಾಕಾರಲೋಪಃ । ಜಯೇಮ । ಶಪಃ ಪಿತ್ತ್ವಾದನುದಾತ್ತತ್ವಂ । ತಿಙಶ್ಚ ಲಸಾರ್ವಧಾತುಕಸ್ವರಾದ್ಧಾತುಸ್ವರ ಏವ ಶಿಷ್ಯತೇ । ಛಂದಸಿ ಪರೇಽಪಿ । ಪಾ ೧-೪-೮೧ । ಇತಿ ಸಮಃ ಪರಃ ಪ್ರಯೋಗಃ । ಯುಧಿ । ಯುಧ ಸಂಪ್ರಹಾರೇ । ಸಂಪದಾದಿತ್ವಾ-ದ್ಭಾವನೇ ಕ್ವಿಪ್ । ಪಾ. ೩-೩-೧೦೮-೯ । ಸಾವೇಕಾಚ ಇತಿ ವಿಭಕ್ತೇರುದಾತ್ತತ್ವಂ । ಸ್ಪರ್ಧಂತೇ ಇತಿ ಸ್ಪೃಧಃ । ಸ್ಪರ್ಧ ಸಂಘರ್ಷೇ । ಕ್ವಿಪ್ಚೌ । ಪಾ. ೩-೨-೭೬ । ಇತಿ ಕ್ವಿಪ್ । ಬಹುಲಂ ಛಂದಸೀತಿ ರೇಫಸ್ಯ ಸಂಪ್ರಸಾರಣಮೃಕಾರಃ । ಅಕಾರಲೋಪಶ್ಚ ॥

॥ ಪ್ರತಿಪದಾರ್ಥ ॥

(ಹೇ) ಇಂದ್ರ—ಎಲೈ ಇಂದ್ರನೇ । ತ್ವೋತಾಸಃ—ನಿನ್ನಿಂದ ಪಾಲಿತರಾದ । ವಯಂ—ನಾವು । ಘನಾ—(ಶತ್ರುಗಳನ್ನು ಪ್ರಹರಿಸುವುದರಲ್ಲಿ) ಅತ್ಯಂತ ದೃಢವಾದ । ವಜ್ರಂ—ಆಯುಧವನ್ನು । ಆ ದದೀಮಹಿ—ಸ್ವೀಕರಿಸುವೆವು । (ಆ ವಜ್ರಾಯುಧದಿಂದ) ಯುಧಿ—ಯುದ್ಧದಲ್ಲಿ । ಸ್ಪೃಧಃ—ನಮ್ಮೊಡನೆ ಹೋರಾಡುವ ಶತ್ರುಗಳನ್ನು । ಸಂ ಜಯೇಮ—ಜಯಿಸುವೆವು.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನಿಂದ ರಕ್ಷಿತರಾದ ನಾವು ಶತ್ರುಗಳನ್ನು ಸಂಹಾರಮಾಡುವುದರಲ್ಲಿ ಬಹು ದೃಢವಾದ ವಜ್ರಾಯುಧವನ್ನು ತೆಗೆದುಕೊಂಡು ನಮ್ಮೊಡನೆ ಯುದ್ಧದಲ್ಲಿ ಹೋರಾಡುವ ಶತ್ರುಗಳನ್ನು ಗೆಲ್ಲುವೆವು.

English Translation.

Protected by you, O Indra, we posses a ponderous weapon (thunderbolt) wherewith we may entirely conquer our enemies in a battle.

ಯುಧಿ—ಯುಧ ಸಂಪ್ರಹಾರೇ ಎಂಬ ಧಾತುವಿನ ಮುಂದೆ ಸಂಪದಾದಿಭ್ಯಃಕ್ವಿಪ್ (ಪಾ. ಸೂ. ೩-೩-೧೦೮-೯) ಎಂಬುದರಿಂದ ಭಾವಾರ್ಥದಲ್ಲಿ ಕ್ವಿಪ್ ಪ್ರತ್ಯಯ ಬರುವುದು. ಕ್ವಿಪ್ಪಿಗೆ ಸಂಪೂರ್ಣಕ್ಕೂ ಲೋಪ ಬರುವುದು. ಸಪ್ತಮ್ಯೇಕವಚನವು ಸಾವೇಕಾಚಸ್ತೃತೀಯಾದಿರ್ವಿಭಕ್ತಿಃ (ಪಾ. ಸೂ. ೬-೩-೧೬೮) ಎಂಬುದರಿಂದ ಉದಾತ್ತವಾಗುವುದು.

ಸ್ಪೃಧಃ—ಸ್ಪರ್ಧಂತೇ ಇತಿಸ್ಪೃಧಃ, ಸ್ಪರ್ಧಸಂಘರ್ಷೇ ಧಾತು, ಕ್ವಿಪ್ಪಿ (ಪಾ. ಸೂ. ೩-೩-೭೬) ಎಂಬುದರಿಂದ ಕ್ವಿಪ್ ಪ್ರತ್ಯಯ ಬಹುಲಂಛಂದಸಿ ಎಂಬುದರಿಂದ ರೇಫಕ್ಕೆ ಸಂಪ್ರಸಾರಣ ಋಕಾರವೂ ಸ್ಪ ಎಂಬಲ್ಲಿರುವ ಅಕಾರಕ್ಕೆ ಲೋಪವೂ ಬರುವುದು. ದ್ವಿತೀಯಾ ಬಹುವಚನದಲ್ಲಿ ಸ್ಪೃಧಃ ಎಂದಾಗುವುದು. ॥ ೩ ॥

॥ ಸಂಹಿತಾಪಾಠಃ ॥

ವಯಂ ಶೂರೇಭಿರಸ್ತೃಭಿರಿಂದ್ರ ತ್ವಯಾ ಯುಜಾ ವಯಂ ॥
ಸಾಸಹ್ಯಾಮ ಪೃತನ್ಯತಃ ॥ ೪ ॥

॥ ಪದಪಾಠಃ ॥

ವಯಂ । ಶೂರೇಭಿಃ । ಅಸ್ತೃ ೩ ಭಿಃ । ಇಂದ್ರ । ತ್ವಯಾ । ಯುಜಾ । ವಯಂ ॥
ಸಸಹ್ಯಾಮ । ಪೃತನ್ಯತಃ ॥ ೪ ।

॥ ಸಾಯಣಭಾಷ್ಯಂ ॥

ವಯಂ ಕರ್ಮಾನುಷ್ಠಾತಾರಃ ಶೂರೇಭಿಃ ಶೌರ್ಯಯುಕ್ತೈರಸ್ತೃಭಿರಾಯುಧಾನಾಂ ಪ್ರಕ್ಷೇಪ್ತೃಭಿರ್ಭಟೈಃ ಸಂಯುಜ್ಯೇಮಹೀತಿ ಶೇಷಃ । ಹೇ ಇಂದ್ರ ತಾದೃಶಾ ಭಟಸಹಿತಾ ವಯಂ ಯುಜಾ ಸಹಾಯಭೂತೇನ ತ್ವಯಾ ಪೃತನ್ಯತಃ ಸೇನಾಮಿಚ್ಛತಃ ಶತ್ರೂನ್ಸಾಸಹ್ಯಾಮ । ಅತಿಶಯೇನಾಭಿಭವೇಮ ॥ ಶೂರೇಭಿಃ। ಶು ಶ್ರು ಗತೌ । ಕ್ರನ್ನಿತ್ಯನುವೃತ್ತೌ ಶುಷಿಚಿವಿಮಾನಾಂ ದೀರ್ಘಶ್ಚ । ಉ.೨-೨೫ । ಇತಿ ಕ್ರನ್ । ಕಿತ್ತ್ವಾದ್ಗುಣಾಭಾವಃ । ನಿತ್ತ್ವಾದಾದ್ಯುದಾತ್ತತ್ವಂ। ಬಹುಲಂ ಛಂದಸೀತ್ಯೈಸೋ ನಿಷಿದ್ಧತ್ವಾದ್ಭಿಸಾದಿಚಿನೇ ಋಲ್ಯೇದಿತ್ಯೇವಂ । ಸಹಯೋಗೇ ತೃತೀಯೋಬಲಾದ್ವಯಮಿತ್ಯಸ್ಮತ್ಪದಸಮಭಿವ್ಯಾಹಾರಾಚ್ಚ ವಯಂ ಸಂಯುಜ್ಯೇಮಹೀತಿ ಗಮ್ಯಂ । ವಿನಾಪಿ ಸಹಶಬ್ದೇನ ವೃದ್ಧೋ ಯೂನಾ । ಪಾ. ೧-೨-೬೫ । ಇತಿ ನಿಪಾತನಾದಿತಿ ಹ್ಯುಕ್ತಂ । ಪಾ. ೨-೩-೧೯ । ಅಸ್ತೃಭಿಃ । ಶಸ್ತ್ರಾಸ್ತ್ರಪ್ರಕ್ಷೇಪಣಶೀಲೈಃ। ತದ್ಧರ್ಮಭಿಸ್ತತ್ಸಾಧುಕಾರಿಭಿರ್ವಾ । ಅಸು ಕ್ಷೇಪಣೇ । ತೃನ್ । ಪಾ. ೩-೨-೧೩೫ । ಇತಿ ತಾಚ್ಛೀಲ್ಯಾದಿಷು ತೃನ್ । ನಿತ್ತ್ವಾ-

ಶಪ್ ವಿಕರಣ ಬಂದರೆ **ಜುಹೋತ್ಯಾದಿಭ್ಯಃಶ್ಲುಃ** (ಪಾ. ಸೂ ೩-೪-೭೫) ಜುಹೋತ್ಯಾದಿ ಧಾತುಗಳ ಮುಂದೆ ಬಂದ ಶಪ್ಪಿಗೆ ಶ್ಲು (ಲೋಪ) ಬರುವುದು ಎಂಬುದರಿಂದ ಶ್ಲು ಬಂದರೆ **ಶ್ಲೌ** (ಪಾ. ಸೂ. ೬-೧-೧೦) ಎಂಬುದರಿಂದ ದ್ವಿತ್ವ ಬಂದರೆ ದಾದಾ+ಮಹಿ **ಹ್ರಸ್ವಃ** (ಪಾ.ಸೂ. ೭-೪-೫೯) ಎಂಬುದರಿಂದ ಅಭ್ಯಾಸಕ್ಕೆ ಹ್ರಸ್ವ ಬಂದರೆ ದದಾ+ಮಹಿ, **ಲಿಙಸ್ಸೀಯುಟ್** (ಪಾ. ಸೂ. ೩-೪-೧೦೩) ಆಶೀರ್ಲಿಙರ್ಥಧಾತುವಿನ ಮುಂದೆ ಇರುವ ಲಿಙ್ಗೆ ಸೀಯುಟ್ (ಸೀಯ್) ಆಗಮ ಬರುವುದು ಎಂಬುದರಿಂದ ಸೀಯುಟ್ ಬಂದರೆ ದದಾ+ಸೀಯ್+ಮಹಿ. ಈಗ **ಲಿಙಸ್ಸಲೋಪೋಽನಂತ್ಯಸ್ಯ** (ಪಾ. ಸೂ ೭-೩-೭೯) ಸಾರ್ವಧಾತುಕ ಪ್ರತ್ಯಯ ಸಂಬಂಧಿಯಾದ ಕಡೆಯ ಲ್ಲಿಲ್ಲದ ಸಕಾರಕ್ಕೆ ಲೋಪ ಬರುವುದು ಎಂಬುದರಿಂದ ಸಕಾರಕ್ಕೆ ಲೋಪ, ದದಾ+ಈಯ್ ಮಹಿ ಎಂದಿರುವಾಗ **ಲೋಪೋವ್ಯೋರ್ವಲಿ** (ಪಾ. ಸೂ. ೬-೧-೬೬) ವಲ್ ವರ್ಣ ಪರದಲ್ಲಿರುವಾಗ ಯಕಾರವಕಾರಗಳಿಗೆ ಲೋಪ ಬರುವುದು ಎಂಬುದರಿಂದ ಯಕಾರಕ್ಕೆ ಲೋಪ ದದಾ-ಈಮಹಿ **ಶ್ನಾಭ್ಯಸ್ತಯೋರಾತಃ** (ಪಾ. ಸೂ. ೬-೪-೧೧೨) ಕಿತ್ತು ಅಥವಾ ಙಿತ್ತು ಆದ ಸಾರ್ವಧಾತುಕ ಪ್ರತ್ಯಯ ಪರದಲ್ಲಿರುವಾಗ ಶ್ನ ಪ್ರತ್ಯಯ ಅಭ್ಯಸ್ತ ಇವುಗಳ ದೀರ್ಘಾಕಾರಕ್ಕೆ ಲೋಪಬರುವುದು ಎಂಬುದರಿಂದ **ಆಡಭ್ಯಸ್ತಂ** (ಪಾ. ಸೂ. ೬-೧-೫೫) ಎಂಬ ಸೂತ್ರಾನುಸಾರ ಅಭ್ಯಸ್ತಸಂಜ್ಞಕವಾದ ಧಾತುವಿನ ಆಕಾರಕ್ಕೆ ಲೋಪ ಬಂದರೆ ದದೀಮಹಿ, ಎಂದಾಗುವುದು. **ತಿಙ್ಶಿತಿಙಃ** (ಪಾ. ಸೂ. ೮-೧-೭೮) ತಿಙಂತವಲ್ಲದ ಪದದ ಮುಂದಿರುವ ತಿಙಂತವು ಅನುದಾತ್ತವಾಗುವುದು ಎಂಬುದರಿಂದ ಸರ್ವಾನುದಾತ್ತ.

ಜಯೇಮ—ಜಿಜಯೇ ಧಾತುವಿನ ಮುಂದೆ ವಿಧಿಲಿಙ್ ಪರಸ್ಮೈಪದ ಉತ್ತಮಪುರುಷ ಬಹುವಚನ ಮಸ್, ಜಿ+ಮಸ್ **ನಿತ್ಯಂಙಿತಃ** (ಪಾ. ಸೂ. ೩-೪-೯೯) ಙಕಾರೇತ್ಸಂಜ್ಞಕ ಲಕಾರಸ್ಥಾನದಲ್ಲಿ ಬಂದ ಸಕಾರಾಂತವಾದ ಉತ್ತಮಪುರುಷ ಪ್ರತ್ಯಯದ ಕೊನೆಯ ವರ್ಣಕ್ಕೆ ಲೋಪಬರುವುದು ಎಂಬುದರಿಂದ ಸಕಾರಕ್ಕೆ ಲೋಪ. **ಕರ್ತರಿಶಪ್** (ಪಾ.ಸೂ. ೩-೧-೬೮) ಎಂಬುದರಿಂದ ಶಪ್ ವಿಕರಣ **ಸಾರ್ವಧಾತುಕಾರ್ಧಧಾತುಕಯೋಃ** (ಪಾ.ಸೂ. ೭-೩-೪೪) ಎಂಬುದರಿಂದ ಗುಣ, ಜಿ ಎಂಬುದರ ಇಕಾರಕ್ಕೆ ಏ ಆದೇಶ. **ಏಚೋಯವಾಯಾವಃ** (ಪಾ.ಸೂ. ೬-೧-೭೮) ಎಂಬುದರಿಂದ ಅಯಾದೇಶ. ಜಯ+ಮ **ಯಾಸುಟ್ ಪರಸ್ಮೈಪದೇಷೂದಾತ್ತೋಙಿಚ್ಚ** (ಪಾ.ಸೂ. ೩-೪-೧೦೩) ಎಂಬುದರಿಂದ ಮ ಎಂಬುದಕ್ಕೆ ಯಾಸುಟ್ ಆಗಮ. **ಲಿಙಸ್ಸಲೋಪೋಽನಂತ್ಯಸ್ಯ** (ಪಾ. ಸೂ. ೭-೩-೭೯) ಎಂಬುದರಿಂದ ಸಕಾರಕ್ಕೆ ಲೋಪ. **ಆತೋಯೇಯಃ** (ಪಾ. ಸೂ. ೭-೭-೮೦) ಎಂಬುದರಿಂದ ಯಾಗೆ ಇಯ್ ಆದೇಶ. ಯಕಾರಕ್ಕೆ **ಲೋಪೋವ್ಯೋರ್ವಲಿ** (ಪಾ.ಸೂ. ೬-೧-೬೬) ಎಂಬುದರಿಂದ ಲೋಪ ಜಯ+ಇಮ **ಆದ್ಗುಣಃ** (ಪಾ.ಸೂ. ೬-೧-೮೭) ಎಂಬುದರಿಂದ ಗುಣ- ಜಯೇಮ ಎಂದಾಗುವುದು. ಇಲ್ಲಿ ಶಪ್ಪು ಪಿತ್ತಾದ್ದರಿಂದ ಅನುದಾತ್ತ. **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಎಂಬುದರಿಂದ ಇಮು ಎಂಬ ತಿಙ್ ಪ್ರತ್ಯಯ ಅನುದಾತ್ತ. ಅನುದಾತ್ತಗಳಾದ ಅಕಾರ ಇಕಾರಗಳಿಗೆ ಬಂದ ಏಕಾರವು ಸ್ಥಾನಸಾಮ್ಯದಿಂದ ಅನುದಾತ್ತ. ಅಂತು ಏಮ ಎಂಬ ಎರಡೂ ಅನುದಾತ್ತ. ಜಕಾರ ಧಾತುಸ್ವರದಿಂದ ಉದಾತ್ತ. ಈ ಉದಾತ್ತದ ಮುಂದಿರುವ ಏ ಎಂಬ ಅನುದಾತ್ತವು **ಉದಾತ್ತಾದನುದಾತ್ತಸ್ಯ ಸ್ವರಿತಃ** (ಪಾ. ಸೂ. ೮-೪-೬೬) ಎಂಬುದರಿಂದ ಸ್ವರಿತ. ಸ್ವರಿತದ ಮುಂದೆ ಇರುವ ಮ ಎಂಬ ಅನುದಾತ್ತವು **ಸ್ವರಿತಾತ್ಸಂಹಿತಾಯಾಮನುದಾತ್ತಾನಾಂ** (ಪಾ. ಸೂ. ೧-೨-೩೯) ಎಂಬುದರಿಂದ ಪ್ರಚಯ. ಆದರೆ ಸಂಹಿತಾಕಾಲದಲ್ಲಿ ಸಂ ಎಂಬ ಉದಾತ್ತ ಪರದಲ್ಲಿರುವುದರಿಂದ **ಉದಾತ್ತಸ್ವರಿತ ಪರಸ್ಯ ಸನ್ನತರಃ** (ಪಾ. ಸೂ. ೧-೨-೪೦) ಎಂಬುದರಿಂದ ಅನುದಾತ್ತತರವಾಗುವುದು.

ಸಂ ಎಂಬ ಉಪಸರ್ಗವು ಯದ್ಯಪಿ ಪೂರ್ವದಲ್ಲಿ ಪ್ರಯೋಗಿಸಲ್ಪಡಬೇಕು. ಆದರೂ **ಛಂದಸಿ ಪರೇಽಪಿ** (ಪಾ. ಸೂ. ೧-೪-೮೧) ಎಂಬುದರಿಂದ ಧಾತುವಿನ ಪರದಲ್ಲಿ ಪ್ರಯುಕ್ತವಾಗಿರುವುದು.

ಯುಧಿ—ಯುಧ ಸಂಪ್ರಹಾರೇ ಎಂಬ ಧಾತುವಿನ ಮುಂದೆ ಸಂಪದಾದಿಭ್ಯಃಕ್ವಿಪ್ (ಪಾ. ಸೂ. ೩-೩-೧೦೮-೯) ಎಂಬುದರಿಂದ ಭಾವಾರ್ಥದಲ್ಲಿ ಕ್ವಿಪ್ ಪ್ರತ್ಯಯ ಬರುವುದು. ಕ್ವಿಪ್ಪಿಗೆ ಸಂಪೂರ್ಣಕ್ಕೂ ಲೋಪ ಬರುವುದು. ಸಪ್ತಮ್ಯೇಕವಚನವು ಸಾವೇಕಾಚಸ್ತೃತೀಯಾದಿರ್ವಿಭಕ್ತಿಃ (ಪಾ. ಸೂ. ೬-೩-೧೬೮) ಎಂಬುದರಿಂದ ಉದಾತ್ತವಾಗುವುದು.

ಸ್ಪೃಧಃ—ಸ್ಪರ್ಧಂತೇ ಇತಿಸ್ಪೃಧಃ, ಸ್ಪರ್ಧಸಂಘರ್ಷೇ ಧಾತು, ಕ್ವಿಪ್ಪಿ (ಪಾ. ಸೂ. ೩-೩-೭೬) ಎಂಬುದರಿಂದ ಕ್ವಿಪ್ ಪ್ರತ್ಯಯ ಬಹುಲಂಛಂದಸಿ ಎಂಬುದರಿಂದ ರೇಫಕ್ಕೆ ಸಂಪ್ರಸಾರಣ ಋಕಾರವೂ ಸ್ಪ ಎಂಬಲ್ಲಿರುವ ಅಕಾರಕ್ಕೆ ಲೋಪವೂ ಬರುವುದು. ದ್ವಿತೀಯಾ ಬಹುವಚನದಲ್ಲಿ ಸ್ಪೃಧಃ ಎಂದಾಗುವುದು. ॥ ೩ ॥

॥ ಸಂಹಿತಾಪಾಠಃ ॥

ವಯಂ ಶೂರೇಭಿರಸ್ತೃಭಿರಿಂದ್ರ ತ್ವಯಾ ಯುಜಾ ವಯಂ ॥
ಸಾಸಹ್ಯಾಮ ಪೃತನ್ಯತಃ ॥ ೪ ॥

॥ ಪದಪಾಠಃ ॥

ವಯಂ । ಶೂರೇಭಿಃ । ಅಸ್ತೃ ೩ ಭಿಃ । ಇಂದ್ರ । ತ್ವಯಾ । ಯುಜಾ । ವಯಂ ॥
ಸಸಹ್ಯಾಮ । ಪೃತನ್ಯತಃ ॥ ೪ ।

॥ ಸಾಯಣಭಾಷ್ಯಂ ॥

ವಯಂ ಕರ್ಮಾನುಷ್ಠಾತಾರಃ ಶೂರೇಭಿಃ ಶೌರ್ಯಯುಕ್ತೈರಸ್ತೃಭಿರಾಯುಧಾನಾಂ ಪ್ರಕ್ಷೇಪ್ತೃಭಿರ್ಭಟೈಃ ಸಂಯುಜ್ಯೇಮಹೀತಿ ಶೇಷಃ । ಹೇ ಇಂದ್ರ ತಾದೃಶಾ ಭಟಸಹಿತಾ ವಯಂ ಯುಜಾ ಸಹಾಯಭೂತೇನ ತ್ವಯಾ ಪೃತನ್ಯತಃ ಸೇನಾಮಿಚ್ಛತಃ ಶತ್ರೂನ್ಸಾಸಹ್ಯಾಮ । ಅತಿಶಯೇನಾಭಿಭವೇಮ ॥ ಶೂರೇಭಿಃ। ಶು ಶ್ರು ಗತೌ । ಕ್ರನ್ನಿತ್ಯನುವೃತ್ತೌ ಶುಷಿಚಿವಿಮಾನಾಂ ದೀರ್ಘಶ್ಚ । ಉ.೨-೨೫ । ಇತಿ ಕ್ರನ್ । ಕಿತ್ತ್ವಾದ್ಗುಣಾಭಾವಃ । ನಿತ್ತ್ವಾದಾದ್ಯುದಾತ್ತತ್ವಂ। ಬಹುಲಂ ಛಂದಸೀತ್ಯೈಸೋ ನಿಷಿದ್ಧತ್ವಾದ್ಭಿಸಾದಿಚಿನೇ ಋಲ್ಯೇದಿತ್ಯೇವಂ । ಸಹಯೋಗೇ ತೃತೀಯೋಬಲಾದ್ವಯಮಿತ್ಯಸ್ಮತ್ಪದಸಮಭಿವ್ಯಾಹಾರಾಚ್ಚ ವಯಂ ಸಂಯುಜ್ಯೇಮಹೀತಿ ಗಮ್ಯಂ । ವಿನಾಪಿ ಸಹಶಬ್ದೇನ ವೃದ್ಧೋ ಯೂನಾ । ಪಾ. ೧-೨-೬೫ । ಇತಿ ನಿಪಾತನಾದಿತಿ ಹ್ಯುಕ್ತಂ । ಪಾ. ೨-೩-೧೯ । ಅಸ್ತೃಭಿಃ । ಶಸ್ತ್ರಾಸ್ತ್ರಪ್ರಕ್ಷೇಪಣಶೀಲೈಃ। ತದ್ಧರ್ಮಭಿಸ್ತತ್ಸಾಧುಕಾರಿಭಿರ್ವಾ । ಅಸು ಕ್ಷೇಪಣೇ । ತೃನ್ । ಪಾ. ೩-೨-೧೩೫ । ಇತಿ ತಾಚ್ಛೀಲ್ಯಾದಿಷು ತೃನ್ । ನಿತ್ತ್ವಾ-

ದಾದ್ಯುದಾತ್ತೈಃ । ರಧಾದಿಭ್ಯಶ್ಚ । ಪಾ. ೭-೨-೪೫ । ಇತಿ ವಿಕಲ್ಪವಿಧಾನಾದಯಂ ಪಕ್ಷ ಇಡಭಾವಃ । ತ್ವಯಾ । ಯುಷ್ಮಸಿಭ್ಯಾಂ ಮದಿಕ್ । ಉ. ೧-೧೩೮ । ಕಿತ್ತ್ವಾದ್ಗುಣಾಭಾವಃ । ಯುಷ್ಮದಃ ಪ್ರತ್ಯಯಸ್ವರೇಣಾಕಾರ ಉದಾತ್ತಃ । ತೃತೀಯೈಕವಚನಂ ಟಾ । ಪಾ. ೪-೧-೩ । ತ್ವಮಾವೇಕವಚನೇ । ಪಾ. ೭-೨-೯೭ । ಇತಿ ಮಪರ್ಯಂತಸ್ಯ ತ್ವಾದೇಶಃ । ಅತೋ ಗುಣೇ । ಪಾ. ೬-೧-೯೭ । ಇತಿ ಪರರೂಪತ್ವಂ । ಏಕಾದೇಶ ಉದಾತ್ತೇನೋದಾತ್ತ ಇತ್ಯುದಾತ್ತಃ । ಯುಜಾ । ಅಂಚುಯುಜಿಕ್ರುಂಚಾಂ ಚ । ಪಾ. ೩-೨-೫೯ । ಇತಿ ಕ್ವಿನ್ । ಸಾನೇಕಾಚ ಇತಿ ವಿಭಕ್ತೇರುದಾತ್ತತ್ವಂ । ಸಾಸಹ್ಯಾಮ । ಭೃಶಂ ಪುನಃ ಪುನಃ ಸಹೇಮಹಿ । ಷಹ ಮರ್ಷಣೇ । ಧಾತ್ವಾದೇಃ ಷಃ ಸಃ । ಧಾತೋರೇಕಾಚೋ ಹಲಾದೇಃ ಕ್ರಿಯಾಸಮಭಿಹಾರೇ ಯೆಙ್ । ಪಾ. ೩-೧-೨೨ । ಯೆಙಿಽಪಿ ಚ । ಪಾ ೨-೪-೭೪ । ಇತಿ ಲುಕ್ . ಸನ್ಯಙೋಃ । ಪಾ. ೬-೧-೯ । ಇತಿ ದ್ವಿರ್ಭಾವಃ । ಹಲಾದಿಶೇಷಃ । ಪಾ. ೭-೪-೬೦ । ದೀರ್ಘೋಽಕಿತಃ। ಪಾ. ೭-೪-೮೩ । ಇತಿ ದೀರ್ಘಃ । ಪ್ರಾರ್ಥನಾಯಾಂ ಲಿಙ್ । ಚರ್ಕರೀತಂ ಪರಸ್ಮೈಪದಮುದಾದಿವಚ್ಚೇ ಪ್ರೈಷ್ಯವ್ಯಮಿತಿ ಪರಸ್ಮೈಪದೋತ್ತಮಪುರುಷಬಹುವಚನಂ ಮಸ್। ಕರ್ತರಿ ಶಪ್। ಅದಾದಿವದ್ಭಾವಾಲ್ಲುಕ್। ನಿತ್ಯಂ ಙಿತಃ । ಪಾ. ೩-೪-೯೯ । ಇತ್ಯಂತ್ಯಸಕಾರಲೋಪಃ । ಯಾಸುಟ್ ಪರಸ್ಮೈಪದೇಷೂದಾತ್ತೋ ಙಿಚ್ಚ । ಪಾ. ೩-೪.೧೦೩ । ಇತಿ ಯಾಸುಟ್ । ಲಿಙಃ ಸಲೋಪೋಽನಂತ್ಯಸ್ಯ । ಪಾ. ೭-೨-೭೯ । ಇತಿ ಸಕಾರಲೋಪಃ । ಸತಿ ಶಿಷ್ಟತ್ವಾದ್ಯಾಸುಟ ಏವೋದಾತ್ತತ್ವಂ ಶಿಷ್ಯತೇ । ಪಾದಾದಿತ್ವಾನ್ನ ನಿಘಾತಃ । ಪೃತನ್ಯತಃ । ಯೋದ್ಧುಂ ಪೃತನಾಮಾತ್ಮನ ಇಚ್ಛತಃ । ಸುಪ ಆತ್ಮನಃ ಕ್ಯಚೀತಿ ಕ್ಯಚ್ । ಸನಾದ್ಯಂತಾ ಧಾತವಃ । ಪಾ. ೩-೧-೩೨ । ಇತಿ ಧಾತುಸಂಜ್ಞಾಯಾಂ ಸುಪೋ ಧಾತುಪ್ರಾತಿಪದಿಕಯೋಃ । ಪಾ। ೨-೪-೭೧ । ಇತಿ ಸುಪೋ ಲುಕ್ । ಕ್ಯಚಿ ಚ । ಪಾ. ೭-೪-೩೩ । ಇತ್ಯನುವೃತ್ತೌ ಕವ್ಯಧ್ವರಪೃತನಸ್ಯರ್ಚಿ ಲೋಪಃ । ಪಾ. ೭-೪-೩೮ । ಇತ್ಯಾಕಾರಲೋಪಃ । ಪೃತನ್ಯಧಾತುಶ್ಚಿತ್ತ್ವಾದಂತೋದಾತ್ತಃ । ಉಪರಿ ಲಟಃ ಶತ್ರಾದೇಶಃ । ಕರ್ತರಿ ಶಪ್ । ಪಿತ್ತ್ವಾದನುದಾತ್ತತ್ವಂ । ಶತುಶ್ಚ ಲಸಾರ್ವಧಾತುಕಸ್ವರೇಣೋದಾತ್ತೇನ ಸರ್ವೈಕಾದೇಶ ಉದಾತ್ತೇನೋದಾತ್ತ ಇತಿ ಪೃತನ್ಯಚ್ಚಬ್ಪೋಽಂತೋದಾತ್ತಃ । ಶಸಃ ಸುಪ್ಸ್ವರೇಣಾನುದಾತ್ತಸ್ಯಾಂತೋದಾತ್ತಾದಿತ್ಯನುವೃತ್ತೌ ಶತುರನುಮೋ ನದ್ಯಜಾದೀ । ಪಾ. ೬-೧-೧೭೩ । ಇತ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

ವಯಂ—ನಾವು । ಶೂರೇಭಿಃ—ಪರಾಕ್ರಮಯುಕ್ತರಾದ । ಅಸ್ತೃಭಿಃ—ಆಯುಧಗಳಿಂದ ಹೊಡೆದಾಡುವ ಯುದ್ಧಭಟರಿಂದ (ಸಹಿತರಾಗಿರುವೆವು) । ಹೇ ಇಂದ್ರ—ಎಲೈ ಇಂದ್ರನೇ । ವಯಂ—ನಾವು । ಯುಜಾ—ನಮಗೆ ಸಹಾಯಭೂತನಾದ । ತ್ವಯಾ—ನಿನ್ನಿಂದ ಕೂಡಿ । ಪೃತನ್ಯತಃ—ಸೇನಾಯುಕ್ತರಾದ ಶತ್ರುಗಳನ್ನು । ಸಾಸಹ್ಯಾಮ—ಗೆಲ್ಲುವೆವು ॥

॥ ಭಾವಾರ್ಥ ॥

ಎಲೈ ಇಂದ್ರನೇ ನಮಗೆ ಆಯುಧಪ್ರಯೋಗದಲ್ಲಿ ನಿಪುಣರಾದ ಮತ್ತು ಶೂರರಾದ ಯುದ್ಧಭಟರ ಸಹಾಯವೂ, ನಿನ್ನ ಸಹಾಯವೂ ಇರುವುದರಿಂದ ನಮ್ಮ ಶತ್ರುಗಳು ಸೇನಾಸಹಿತರಾಗಿದ್ದರೂ ಅವರನ್ನು ಜಯಿಸುವೆವು.

English Translation

With the help of the brave missile throwing heroes and with you as our comrade we will overcome our assailants.

॥ ವಿಶೇಷವಿಷಯಗಳು ॥

ಅಸ್ತೃಭಿಃ—ಅಸು ಕ್ಷೇಪಣೆ ಎಂಬ ಧಾತುವಿನ ರೂಪವು. **ಶಸ್ತ್ರಾಸ್ತ್ರಪ್ರಕ್ಷೇಪಣಶೀಲೈಃ** ಎಂದರೆ ಶಸ್ತ್ರಾಸ್ತ್ರಗಳನ್ನು ಅಥವಾ ಆಯುಧಗಳನ್ನು ಶತ್ರುಗಳ ಮೇಲೆ ಎಸೆಯುವವರು.

ಸಾಸಹ್ಯಾಮ—ಮತ್ತೆ ಮತ್ತೆ ಜಯಿಸುವೆವು ಎಂದರೆ ಯುದ್ಧದಲ್ಲಿ ಅನೇಕ ತೊಂದರೆಗಳುಂಟಾದರೂ ಅವುಗಳನ್ನು ಲಕ್ಷ್ಯಮಾಡದೆ ನಿಶ್ಚಯವಾಗಿ ಗೆಲ್ಲುವೆವು. ಛಂದಸ್ಸಿನ ಅನುಕೂಲಕ್ಕಾಗಿ ಸಕಾರವು ಸಂಹಿತಾವಾತ ದಲ್ಲಿ ದೀರ್ಘವಾಗಿರುವುದು.

ಪೃತನ್ಯತಃ—ಪೃತನಾ ಎಂದರೆ ಸೇನೆಯು. **ಪೃತನಾಮಾತ್ಮನ ಇಚ್ಛೆಂತಃ** ಎಂದರೆ ಸೇನೆಯು ಸಹಾಯವನ್ನು ಅಪೇಕ್ಷಿಸುವ, ಸೇನೆಯಿಂದ ಸಹಿತರಾದ (ಶತ್ರುಗಳು) ಎಂದರ್ಥವು.

।। ವ್ಯಾಕರಣಪ್ರಕ್ರಿಯಾ ।।

ಶೂರೇಭಿಃ—ಶುಶ್ರುಗತೌ ಧಾತು. ಶುಸಿ ಚಿ ಮಿನಾನಾಂ ದೀರ್ಘಶ್ಚ (ಉ. ಸೂ- ೨-೧೨೩) ಶುಗತೌ ಷಿಜ್ ಬಂಧನೇ, ಚಿಞ್ ಚಯನೇ, ಡುಮಿಞ್ ಪ್ರಕ್ಷೇಪಣೇ, ಈ ಧಾತುಗಳ ಮುಂದೆ ಕ್ರನ್ ಪ್ರತ್ಯಯವೂ. ಈ ಧಾತುಗಳಿಗೆ ದೀರ್ಘವೂ ಸಹ ಬರುವುದು ಎಂಬುದರಿಂದ ಶು ಧಾತುವಿನ ಮುಂದೆ ಕ್ರನ್ ಬಂದರೆ ಶು+ರ ದೀರ್ಘಬಂದರೆ ಶೂರ, ಪ್ರತ್ಯಯವು ಕಿತ್ತಾದ್ದರಿಂದ ಗುಣ ಬರುವುದಿಲ್ಲ. ನಿಶ್ವಸ್ಸರ ಆದ್ಯುದಾತ್ತ ಬರುವುದು. ಶೂರ ಎಂಬುದರ ಮುಂದೆ ಭಿಸ್ ಪ್ರತ್ಯಯವನ್ನಿಟ್ಟರೆ **ಅತೋಭಿಸಐಸ್** (ಪಾ.. ಸೂ. ೭-೧-೯) ಎಂಬುದರಿಂದ ಐಸಾದೇಶವು ಪ್ರಾಪ್ತವಾಗುವುದು. ಆದರೂ ಬಹುಲಂ ಛಂದಸಿ (ಪಾ. ಸೂ. ೭-೧-೧೦) ಎಂಬುದರಿಂದ ಐಸ್ ಬರುವುದಿಲ್ಲ. ಬಹುವಚನೇ ಝಲ್ಯೇತ್ (ಪಾ ಸೂ. ೭-೩-೧೦೩) ಝಲಾದಿಯಾದ ಬಹುವಚನ ಪರದಲ್ಲಿ ದ್ದರೆ ಅದಂತವಾದ ಅಂಗಕ್ಕೆ ಏ ಬರುವುದು ಎಂಬುದರಿಂದ ಏತ್ವ ಬಂದರೆ ರುತ್ವವಿಸರ್ಗಗಳು ಬಂದು ಶೂರೇಭಿಃ ಎಂದಾಗುವುದು. ಸಹಯುಜ್ಯೇ ಅಪ್ರಧಾನೇ (ಪಾ. ಸೂ. ೨-೩-೧೯) ಸಹ (ಒಂದಿಗೆ) ಶಬ್ದದ ಅರ್ಥವನ್ನು ಬೋಧಿಸುವ ಶಬ್ದಗಳ ಯೋಗವಿದ್ದರೆ ಅಪ್ರಧಾನೀಭೂತ ಅರ್ಥಪ್ರತಿಪಾದಕವಾದ ಶಬ್ದದ ಮುಂದೆ ತೃತೀಯಾ ವಿಭಕ್ತಿ ಬರುವುದು ಎಂಬುದರಿಂದ ಶೂರ ಶಬ್ದದ ಮುಂದೆ ತೃತೀಯಾ ವಿಭಕ್ತಿ ಬಂದಿದೆ. ಆದರೆ ಇಲ್ಲಿ ಸಹಾರ್ಥ ಕವಾದ ಶಬ್ದಗಳು ಯಾವುದೂ ಪ್ರಯುಕ್ತಗಳಾಗಿಲ್ಲ. ಆದರೂ ವೃದ್ಧೋಯೂನಾ ತಲ್ಲಕ್ಷಣಶ್ಚೇದೇವ ವಿಶೇಷಃ (ಪಾ. ಸೂ. ೧-೨-೬೫) ಎಂಬ ಸೂತ್ರದಲ್ಲಿ ಯೂನಾ ಎಂದು ಸಹ ಯೋಗೇ ತೃತೀಯಾ ವಿಭಕ್ತಿಯನ್ನು ಪಾಣಿನ್ಯಾಚಾರ್ಯರು ಪ್ರಯೋಗಿಸಿರುವರು. ಇಲ್ಲಿಯೂ ಸಹಾರ್ಥಕ ಶಬ್ದಗಳು ಅವುಗಳೂ ಇಲ್ಲ. ಆದ್ದರಿಂದ ಆ ಸಹಾರ್ಥಕ ಶಬ್ದ ಪ್ರಯೋಗವಿಲ್ಲದಿದ್ದರೂ ಸಹಯುಜ್ಯೇ-(ಪಾ. ಸೂ. ೨-೩-೧೯) ಎಂಬುದರಿಂದ ತೃತೀಯಾ ವಿಭಕ್ತಿ ಬರುವುದು ಎಂದು ಜ್ಞಾಪಿತವಾಗುವುದು. ಆದ್ದರಿಂದ ಇಲ್ಲಿ ಸಹಾರ್ಥಕ ಶಬ್ದಯೋಗವಿಲ್ಲದಿದ್ದರೂ ತೃತೀಯಾ ವಿಭಕ್ತಿ ಬರಲು ತಡೆಯಿಲ್ಲ. ಈ ಸಹಾರ್ಥ ತೃತೀಯಾ ಬಲದಿಂದಲೂ, ವಯಂ ಎಂಬ ಅಸ್ಮಚ್ಛಬ್ದ ಸಮಭಿ

ವ್ಯಾಹಾರದಿಂದಲೂ ಸಂಯುಜ್ಯೇಮಹಿ, ಎಂಬ ಕ್ರಿಯೆಯು ಗವ್ಯವಾಗುವುದು ' ವಯಂ ಶೂರೇಭಿಃ ' ಎಂಬಲ್ಲಿ ಪೂರ್ಣಾರ್ಥ ತೋರುವುದಿಲ್ಲ ' ವಯಂ ಶೂರೇಭಿಃ ಸಂಯುಜ್ಯೇಮಹಿ ' ಎಂದು ಹೇಳಿದರೆ ಪೂರ್ಣಾರ್ಥ ತೋರುವುದು.

ಅಸ್ತೃಭಿಃ— ' ಅಸುಕ್ಷೇಪಣೇ ಧಾತು. ತೃನ್ (ಪಾ. ಸೂ. ೩-೨-೧೩೫) ಧಾತುಗಳ ಮುಂದೆ ತಚ್ಛೀಲ, ತದ್ಧರ್ಮ, ತತ್ಸಾಧುಕಾರಿಗಳು ಕರ್ತೃಗಳಾಗಿದ್ದರೆ ತೃನ್ ಪ್ರತ್ಯಯ ಬರುವುದು ಎಂಬುದರಿಂದ ತೃನ್ ಪ್ರತ್ಯಯ ಬರುವುದು ಅಸ್ತೃನ್ ಎಂದಿರುವುದು. ಭಿಸ್ಪ್ರತ್ಯಯ ಬಂದರೆ ನಲೋಪಾದಿಗಳು ಬಂದು ಅಸ್ತೃಭಿಃ ಎಂದಾಗುವುದು. ಶಸ್ತ್ರಾಸ್ತ್ರಗಳ ಪ್ರಕ್ಷೇಪಣನೇ ಸ್ವಭಾವವಾಗಿ ಉಳ್ಳವರು, ಶಾಸ್ತ್ರಾಸ್ತ್ರಪ್ರಕ್ಷೇಪಣನೇ ಧರ್ಮವಾಗಿ ಉಳ್ಳವರು, ಶಸ್ತ್ರಾಸ್ತ್ರಪಕ್ಷೇಪಣೆಯನ್ನು ಜೀವನ್ನಾಗಿ ಮಾಡುವವರು (ಶಸ್ತ್ರಾಸ್ತ್ರಪ್ರಕ್ಷೇಪಣಶೀಲೈಃ ತದ್ಧರ್ಮಿಭಿಃ, ತತ್ಸಾಧುಕಾರಿಭಿರ್ವಾ, ಎಂದು ಭಾಷ್ಯದಲ್ಲಿರುವುದು) ತೃನ್ ಪ್ರತ್ಯಯ ನಿತ್ತಾದ್ದರಿಂದ ನಿತ್ಸ್ವರ ಆದ್ಯುದಾತ್ತ ಬರುವುದು **ರಧಾದಿಭ್ಯಶ್ಚ** (ಪಾ, ಸೂ ೭. ೨-೪೫) **ರಧ್, ನಶ್, ತೃಪ್, ದ್ರುಹ್, ಮುಹ್, ಷ್ಣುಹ್' ಷ್ಣಿಹ್** ಈ ಧಾತುಗಳ ಮುಂದೆ ಇರುವ ವಲಾದಿಯಾದ ಆರ್ಧಧಾತುಕಕ್ಕೆ ಇಟ್ ಆಗಮ ವಿಕಲ್ಪವಾಗಿ ಬರುವುದು ಎಂದು ಈ ಸೂತ್ರಕ್ಕೆ ಅರ್ಥ. ಷ್ಣಿಹ್ ಧಾತುವಿನ ಮುಂದೆ, ವೃತ್ ಎಂದಿರುವುದರಿಂದ ಇಲ್ಲಿಗೆ ರಧಾದಿಯು ಮುಗಿಯುವುದು. ನಂತರ 'ಶಮು ಉಪಶಮೇ' ಎಂದಾರಂಭಿಸಿ ಎಂಟು ಧಾತುಗಳು ಶಮಾದಿ ಧಾತುಗಳು. ನಂತರ ಅಸುಕ್ಷೇಪಣೇ ಎಂಬ ಧಾತುವಿರುವುದು. ಆದ್ದರಿಂದ ಅಸುಧಾತುವು ರಧಾದಿಯಲ್ಲಿ ಸೇರುವುದಿಲ್ಲ. ಆದಕಾರಣ, ರದಾದಿಭ್ಯಶ್ಚ ಎಂಬುದು ಇಲ್ಲಿ ಪ್ರವೃತ್ತವಾಗುವುದಿಲ್ಲ. **ತೃನ್‌ತೃಚೌ ಶಂಸಿಕ್ಷದಾದಿಭ್ಯಸ್ತಂಜ್ಞಾಯಾಂ ಚಾನಿಟೌ** (ಉ. ಸೂ. ೨-೨೫೧) ಸಂಜ್ಞೆತೋರುವಾಗ ಶಂಸು ಧಾತುವಿನ ಮುಂದೆ ತೃನ್ ಪ್ರತ್ಯಯವೂ ಕ್ಷದಾದಿ ಧಾತುಗಳ ಮುಂದೆ ತೃಚ್ ಪ್ರತ್ಯಯವೂ ಬರುವುದು. ತೃನ್ ತೃಚ್‌ಗಳಿಗೆ ಇಡಾಗಮವೂ ಬರುವುದಿಲ್ಲ. ಶಂಸುಸ್ತುತೌ ಧಾತು, ಕ್ಷದ ಶಕಲೀಕರಣೇ ಭಕ್ಷಣೇಚ ಇದು ಸೌತ್ರಧಾತು. ಈ ಸೂತ್ರದಿಂದ ಅನಿಟ್ಟಾದ ತೃನ್ ಪ್ರತ್ಯಯ ಬರುವುದು ಎಂದು ಕೆಲವರು ಅಭಿಪ್ರಾಯಪಡುವರು. ಈ ಪಕ್ಷದಲ್ಲಿ ತಚ್ಛೀಲಾದ್ಯರ್ಥಗಳು ತೋರುವುದಿಲ್ಲ. ತಚ್ಛೀಲಾದ್ಯರ್ಥಪ್ರತೀತಿಯು ನಿಯಮೇನ ಅಪೇಕ್ಷಿತವಾದರೆ ಇಡಭಾವವು ಛಾಂದಸವೆಂದು ಇಟ್ಟುಕೊಳ್ಳುವುದು ಯುಕ್ತವು. ಅಂದರೆ 'ಸರ್ವೇವಿಧಯಶ್ಛಂದಸಿ ವಿಕಲ್ಪ್ಯಂತೇ' ಎಂಬುದರಿಂದ ಇಡ್ವಿಧಿಯೂ ಛಂದಸ್ಸಿನಲ್ಲಿ ವೈಕಲ್ಪಿಕವಾದ್ದರಿಂದ ಇಲ್ಲಿ ಪ್ರವರ್ತಿಸುವುದಿಲ್ಲ ಎಂದು ಭಾವ.

ತ್ವಯಾ—**ಯುಷ್ಮಸಿಭ್ಯಾಂಮದಿಕ್** (ಉ. ಸೂ. ೧.೧-೩೬) ಯುಷ್ ಎಂಬುದು ಸೌತ್ರ ಧಾತು. ಅಸುಕ್ಷೇಪಣೇ ಈ ಧಾತುಗಳ ಮುಂದೆ ಮದಿಕ್ ಪ್ರತ್ಯಯ ಬರುವುದು ಎಂಬುದರಿಂದ ಯುಷ್ ಧಾತುವಿನ ಮುಂದೆ ಮದಿಕ್ ಪ್ರತ್ಯಯ. ಪ್ರತ್ಯಯವು ಕಿತ್ತಾದ್ದರಿಂದ ಲಘೂಪಧಗುಣ ಬರುವುದಿಲ್ಲ. ಯುಷ್ಮತ್ ಎಂದಾಗುವುದು. ಪ್ರತ್ಯಯಸ್ವರದಿಂದ ಅಕಾರ ಉದಾತ್ತ. ಸ್ಓಜಸಮೌಟ್ ಭಷ್ಟಾಭ್ಯಾಮ್ಭಿಸ್ ಙೇಭ್ಯಾಂಭ್ಯಸ್ ಙಸಿಭ್ಯಾಂಭ್ಯಸ್ ಙಸೋಸಾಮ್ ಙ್ಯೋಸ್ಸುಪ್ (ಪಾ. ಸೂ. ೪-೧-೨) ಎಂಬುದರಿಂದ ತೃತೀಯಾ ಏಕವಚನ ಟಾ ಪ್ರತ್ಯಯ. **ತ್ವಮಾವೇಕವಚನೇ** (ಪಾ. ಸೂ. ೭-೨-೯೭) ವಿಭಕ್ತಿಪರದಲ್ಲಿರುವಾಗ ಏಕತ್ವವಿಶಿಷ್ಟಾರ್ಥಪ್ರತಿಪಾದಕಗಳಾದ ಯುಷ್ಮದಸ್ಮದ್ಭವದ್ಭಗಳ ಮಪರ್ಯಂತಕ್ಕೆ ತ್ವ ಮ ಎಂಬ ಆದೇಶಗಳು ಕ್ರಮವಾಗಿ ಬರುವುವು ಎಂಬುದರಿಂದ ಯುಷ್ಮ್ ಎಂಬುದಕ್ಕೆ ತ್ವ ಆದೇಶ ಬಂದರೆ ತ್ವ+ಅದ್+ಆ **ಅತೋಗುಣೇ** (ಪಾ.ಸೂ. ೬-೧-೯೭) ಪದಾಂತವಲ್ಲದ ಅಹ್ರಸ್ವಾಕಾರದ ಮುಂದೆ ಗುಣಸಂಜ್ಞಕವರ್ಣ (ಅ ಎ ಓ) ಗಳಿದ್ದರೆ ಪೂರ್ವಪರಸ್ಥಾನಗಳಲ್ಲಿ ಪರರೂಪವು ಏಕಾದೇಶವಾಗಿ ಬರುವುದು ಎಂಬುದರಿಂದ ಪರರೂಪ ಬಂದರೆ ತ್ವದ್+ಅ. ಈ ಏಕಾದೇಶದಿಂದ ಬಂದ

ಅಕಾರವು ಏಕಾದೇಶ ಉದಾತ್ತೇನೋದಾತ್ತಃ (ಪಾ. ಸೂ. ೮-೨-೫) ಎಂಬುದರಿಂದ ಉದಾತ್ತ. **ಯೋಚಿ** (ಪಾ. ಸೂ. ೭-೨-೮೬) ಅದೇಶವನ್ನು ಹೊಂದದೇ ಇರುವ ಅಜಾದಿಯಾದ ವಿಭಕ್ತಿ ಪರದಲ್ಲಿರುವಾಗ ಯುಷ್ಮದ್ ಅಸ್ಮದ್ ಶಬ್ದಗಳ ಕೊನೆಯ ವರ್ಣಕ್ಕೆ ಯಾದೇಶ ಬರುವುದು ಎಂಬುದರಿಂದ ದಕಾರಕ್ಕೆ ಯಾದೇಶ ಬಂದರೆ ತ್ವಯಾ ಎಂದಾಗುವುದು.

ಯುಜಾ--ಯುಷ್ಮದ್ಧೃಕ್ಸ್ರಗ್ದಿಗುಷ್ಣಿಗಞ್ಚ್ಯುಜಿಕ್ಕ್ರುಞ್ಚಾಂಚೆ (ಪಾ. ಸೂ. ೩-೨-೭೯) ಎಂಬುದರಿಂದ ಕ್ವಿನ್ ಪ್ರತ್ಯಯ. **ಸೌವೇಕಾಚಸ್ತೃತೀಯಾದಿರ್ವಿಭಕ್ತಿಃ** (ಪಾ. ಸೂ. ೬-೧-೧೬೮) ಎಂಬುದರಿಂದ ವಿಭಕ್ತಿಯು ಉದಾತ್ತ.

ಸಾಸಹ್ಯಮ—ಹೆಚ್ಚಾಗಿ ಸಹಿಸುವೆವು, ಪುನಃ ಪುನಃ ಸಹಿಸುವೆವು ಎಂದಾಗಲೀ ಅರ್ಥ. ಷಹಮರ್ಷಣೇ ಧಾತು. **ಧಾತ್ವಾದೇಃಷಸಃಸಃ** (ಪಾ ಸೂ. ೬-೧-೬೪) ಎಂಬುದರಿಂದ ಷಕಾರಕ್ಕೆ ಸಕಾರ **ಧಾತೋರೇಕಾಚೋ ಹಲಾದೇಃ ಕ್ರಿಯಾಸಮಭಿಹಾರೇಯಙ್** (ಪಾ.ಸೂ. ೩-೧-೨೨) ಪೌನಃಪುನ್ಯ ಅಥವಾ ಭೃಶಾರ್ಥದ್ಯೋತಿತವಾಗುವಾಗ ಹಲಾದಿಯಾಗಿಯೂ ಏಕಾಚ್ಕವಾಗಿಯೂ ಇರುವ ಧಾತುವಿನ ಮುಂದೆ ಯಙ್ ಬರುವುದು ಎಂಬುದರಿಂದ ಯಙ್ ಬರುವುದು. **ಯಙಚಿಚೇ** (ಪಾ. ಸೂ. ೨-೪-೭೪) ಅಚ್ ಪ್ರತ್ಯಯ ಪರದಲ್ಲಿದ್ದರೂ ಪರದಲ್ಲಿಲ್ಲದಿದ್ದರೂ ಯಙ್ಞಿಗೆ ಲುಕ್ ಬರುವುದು ಎಂಬುದರಿಂದ ಯಙ್ ಪ್ರತ್ಯಯಕ್ಕೆ ಲುಕ್= ಲೋಪ ಬರುವುದು. **ಸನ್ಯಙೋಃ** (ಪಾ ಸೂ. ೬-೧-೯) ಸನ್ ಪ್ರತ್ಯಯಾಂತ ಮತ್ತು ಯಙ್ ಪ್ರತ್ಯಯಾಂತ ಧಾತುಗಳ ಮೊದಲನೇ ಏಕಾಚ್ಚಿಗೆ ದ್ವಿತ್ವ ಬರುವುದು. ಅಜಾದಿ ಧಾತುವಾಗಿದ್ದರೆ ದ್ವಿತೀಯವಾದ ಏಕಾಚ್ಚಿಗೆ ದ್ವಿತ್ವ ಬರುವುದು ಎಂಬುದರಿಂದ ದ್ವಿತ್ವ, ಸಹ್ ಸಹ್ ಎಂದಾಗುವುದು. **ಹಲಾದಿಃ ಶೇಷಃ** (ಪಾ. ಸೂ. ೭-೪-೬೦) ಎಂಬುದರಿಂದ ಮೊದಲನೆಯ ಸಹ್ ಎಂಬುದರ ಹಕಾರಕ್ಕೆ ಲೋಪ ಸಸಹ್ **ದೀರ್ಘೋಲ್ಕಿತೇಃ** (ಪಾ. ಸೂ. ೭-೪-೫೩) ಯಙ್ ಪ್ರತ್ಯಯ ಪರದಲ್ಲಿದ್ದರೂ ಯಙ್ಞಿಗೆ ಲುಕ್ ಬಂದಿದ್ದರೂ ಕಿತ್ತಲ್ಲದ ಅಭ್ಯಾಸಕ್ಕೆ ದೀರ್ಘ ಬರುವುದು ಎಂಬುದರಿಂದ ದೀರ್ಘ ಸಾಸಹ್. ಇದರ ಮುಂದೆ ಪ್ರಾರ್ಥನೆ ಎಂಬ ಅರ್ಥವನ್ನು ವಿವಕ್ಷಿಸಿದಾಗ ಲಿಙ್ ಬರುವುದು. **ಚೆರ್ಕರೀತಂ ಪರಸ್ಮೈಪದಂ ಅದಾದಿವಚ್ಚೆಪ್ರಥ್ಯವ್ಯಂ** ಯಙ್ಲುಗಂತವು ಪರಸ್ಮೈಪದವಾಗಿಯೂ ಅದಾದಿಯಂತೆಯೂ ಆಗುವುದು ಎಂದು ಹೇಳಿರುವುದರಿಂದ ಯುಜ್ ಲುಗಂತದ ಮುಂದಿರುವ ಲಕಾರದ ಸ್ಥಾನದಲ್ಲಿ ಪರಸ್ಮೈಪದ ಪ್ರತ್ಯಯ ಬರುವುದು. ಉತ್ತಮಪುರುಷ ಬಹುತ್ವವನ್ನು ವಿವಕ್ಷಿಸಿದಾಗ ಬಹುವಚನ ಮಸ್ ಬರುವುದು **ಕರ್ತರಿಶಪ್** (ಪಾ. ಸೂ. ೩-೧-೬೮) ಎಂಬುದರಿಂದ ಬಂದ ಶಪ್ ವಿಕರಣಕ್ಕೆ **ಆದಿಪ್ರಭೃತಿಭ್ಯಃಶಪಃ** (ಪಾ. ಸೂ. ೨-೪-೭೨) ಎಂಬುದರಿಂದ ಲುಕ್ ಬರುವುದು **ನಿತ್ಯಂಙಿತಃ** (ಪಾ. ಸೂ. ೩-೪-೯೯) ಙಿತ್ತಾದ ಲಕಾರಸ್ಥಾನದಲ್ಲಿ ಬಂದ ಸಕಾರಾಂತವಾದ ಉತ್ತಮಪುರುಷದ ಕೊನೆಯ ವರ್ಣಕ್ಕೆ ಲೋಪವು ನಿತ್ಯವಾಗಿ ಬರುವುದು ಎಂಬುದರಿಂದ ಮಸ್ಸಿನ ಸಕಾರಕ್ಕೆ ಲೋಪ. **ಯಾಸುಟ್ ಪರಸ್ಮೈಪದೇಷೂದಾತ್ತೋಙಿಚ್ಚೆ** (ಪಾ. ಸೂ. ೩-೪-೧೦೩) ಎಂಬುದರಿಂದ ಮ ಎಂಬುದಕ್ಕೆ ಯಾಸುಡಾಗನು. **ಲಿಬಸ್ಸಲೋಪೋನಂತ್ಯಸ್ಯ** (ಪಾ. ಸೂ. ೭-೨-೯೯) ಎಂಬುದರಿಂದ ಯಾಸುಟ್ಟಿನ ಸಕಾರಕ್ಕೆ ಲೋಪ. ಸಾಸಹ್ಯಾನು ಎಂದಾಗುವುದು. ಸಶಿಶಿಷ್ಟವಾದ್ದರಿಂದ ಯಾಸುಟ್ಟಿನ ಉದಾತ್ತಸ್ವರವೇ ನಿಲ್ಲುವುದು. ಪಾದದ ಆದಿಯಲ್ಲಿರುವುದರಿಂದ **ತಿಙ್ಙತಿಙಃ** (ಪಾ ಸೂ. ೮-೧-೨೮) ಎಂಬುದರಿಂದ ಅನುದಾತ್ತ ಬರುವುದಿಲ್ಲ.

ಪೃತನ್ಯತಃ—**ಯೋದ್ಧುಂ ಪೃತನಾಂ ಆತ್ಮನ ಇಚ್ಛೆಂತಃ** ಯುದ್ಧಮಾಡಲು ಸೈನ್ಯವನ್ನು ತಮಗೆ ಅಪೇಕ್ಷಿಸುವವರು **ಸುಪ ಆತ್ಮನಃ ಕ್ಯಚ್** (ಪಾ. ಸೂ. ೩-೧-೮) ಎಂಬುದರಿಂದ **ಪೃತನಾಮ್** ಎಂಬುದರ ಮುಂದೆ

ಕ್ಯಚ್ ಬರುವುದು **ಸನಾದ್ಯಂತಾಧಾತವಃ** (ಪಾ. ಸೂ. ೩.೧-೩೨) ಎಂಬುದರಿಂದ ಧಾತುಸಂಜ್ಞೆ ಬಂದರೆ **ಸುಪೋಧಾತುಪ್ರಾತಿಪದಿಕಯೋಃ** (ಪಾ. ಸೂ. ೭-೪-೭೧) ಧಾತು ಪ್ರಾತಿಪದಿಕಗಳ ಅವಯವವಾದ ಸುಪ್ಪಿಗೆ ಲುಕ್ ಬರುವುದು ಎಂಬುದರಿಂದ ಧಾತ್ವವಯವವಾದ ಅಮ್ ಎಂಬ ಸುಪ್ಪಿಗೆ ಲುಕ್ ಬರುವುದು. ಪೃತನಾ+ಯ ಎಂದಿರುವುದು. ಈಗ **ಕವ್ಯಧ್ವರಪೃತನಸ್ಯೆರ್ಚಿಲೋಪಶ್ಚ** (ಪಾ.ಸೂ. ೭-೪-೩೯) **ಕ್ಯಚಿಚ್ಚ** (ಪಾ.ಸೂ. ೭-೪-೩೩) ಎಂಬ ಸೂತ್ರವು ಈ ಸೂತ್ರದಲ್ಲಿ ಸಂಬಂಧಿಸುವುದು. ಋಕ್ಕಿನಲ್ಲಿ ಕ್ಯಚ್ ಪ್ರತ್ಯಯ ಪರದಲ್ಲಿರುವಾಗ ಕವಿ, ಅಧ್ವರ ಪೃತನಾ ಶಬ್ದಗಳ ಕೊನೆಯ ವರ್ಣಕ್ಕೆ ಲೋಪಬರುವುದು ಎಂಬುದರಿಂದ ಪೃತನಾ ಶಬ್ದದ ಆಕಾರಕ್ಕೆ ಲೋಪ. ಪೃತನ್ಯ. ಇದು ಚಿತಃ ಎಂಬುದರಿಂದ ಅಂತೋದಾತ್ತ. ಪೃತನ್ಯ ಎಂಬ ಧಾತುವಿನ ಮುಂದೆ ಲಟ್ಪ್ರತ್ಯಯ ಬರಲು **ಲಟಃ ಶತೃಶಾನಚೌ** (ಪಾ. ಸೂ. ೩-೨-೧೨೪) ಎಂಬುದರಿಂದ ಲಟ್ಪ್ರತ್ಯಯಕ್ಕೆ ಶತೃ ಆದೇಶ ಬರುವುದು. **ಕರ್ತರಿಶಪ್** (ಪಾ. ಸೂ. ೩-೧-೬೮) ಎಂಬುದರಿಂದ ವಿಕರಣ ಶಪ್ ಬರುವುದು. ಶಪ್ಪು ಪಿತ್ತಾದ್ದರಿಂದ ಅನುದಾತ್ತ, ಶತೃ ಪ್ರತ್ಯಯವು **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಎಂಬ ಸೂತ್ರಾನುಸಾರ ಅದುಪದೇಶದ ಮುಂದೆ ಇರುವುದರಿಂದ ಅನುದಾತ್ತ. ಪೃತನ್ಯ+ಅ+ಅತ್ ಎಂದಿದ್ದರೆ **ಅತೋಗುಣೇ** (ಪಾ. ಸೂ. ೬-೧-೬೭) ಎಂಬುದರಿಂದ ಎರಡಾವರ್ತಿ ಪರರೂಪ ಬರುವುದು. ಏಕಾದೇಶವು **ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮-೨-೫) ಎಂಬುದರಿಂದ ಉದಾತ್ತ. ಈರೀತಿಯಲ್ಲಿ ಪೃತನ್ಯತ್ ಎಂಬುದು ಅಂತೋದಾತ್ತ. ಇದರ ಮುಂದೆ ದ್ವಿತೀಯಾ ಬಹುವಚನ ಶಸ್ ಪ್ರತ್ಯಯವನ್ನಿಟ್ಟರೆ ಅದು **ಅನುದಾತ್ತೌಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ಅನುದಾತ್ತ. ಆದಕ್ಕೆ **ಶತುರನುನಾಸಿಕಾಜ್ಜಾದೀ** (ಪಾ. ಸೂ. ೬-೧-೧೭೩) **ಅನ್ತೋದಾತ್ತಾದುತ್ತರ-ಪದಾದನ್ಯತರಸ್ಯಾಮನಿತ್ಯೇ ಸಮಾಸೇ** (ಪಾ. ಸೂ. ೬-೧-೧೮೯) ಎಂಬುದರಿಂದ ಅಂತೋದಾತ್ತಾತ್ ಎಂಬ ಪದವು ಅನುವೃತ್ತವಾಗುವುದು. ನುವಾಗಮವನ್ನು ಹೊಂದದೇ ಇರುವ ಯಾವ ಶತೃ ಪ್ರತ್ಯಯವಿದೆಯೋ ಅದನ್ನು ಕೊನೆಯಲ್ಲಿ ಹೊಂದಿರುವ ಅಂತೋದಾತ್ತವಾದ ಶಬ್ದದ ಮುಂದಿರುವ ನದೀಸಂಜ್ಞಕವರ್ಣವೂ ಅಜಾದಿಯಾದ ಶಸಾದಿ ವಿಭಕ್ತಿಯೂ ಸಹ ಉದಾತ್ತವಾಗುವುದು ಎಂಬುದರಿಂದ ಶಸ್ ಪ್ರತ್ಯಯವು ಉದಾತ್ತವಾಗುವದು ॥ ೪ ॥

॥ ಸಂಹಿತಾಪಾಠಃ ॥

ಮ॒ಹಾ ಇ॑ಂದ್ರಃ॒ ಪರ॑ಶ್ಚ॒ ನು ಮ॑ಹಿ॒ತ್ವಮ॑ಸ್ತು॒ ವ॑ಜ್ರಿ॒ಣೇ ।
ದ್ಯೌರ್ನ ಪ್ರ॑ಥಿ॒ನಾ ಶವ॑ಃ ॥ ೫ ॥

॥ ಪದಪಾಠಃ ॥

ಮ॒ಹಾನ್ । ಇ॒ಂದ್ರ॑ಃ । ಪರ॑ಃ । ಚ॒ । ನು । ಮ॒ಹಿ॒ ।ತ್ವಂ । ಅ॒ಸ್ತು॒ । ವ॒ಜ್ರಿ॒ಣೇ ॥
ದ್ಯೌಃ । ನ । ಪ್ರ॒ಥಿ॒ನಾ । ಶವ॑ಃ ॥ ೫ ॥

॥ सायणभाष्यं ॥

अयमिन्द्रो॑ महान् शरीरेण प्रथिः परश्च गुणैरुत्त्वष्ट्वोऽपि । नु किंच वज्रिणे॑ वज्रयुक्ताय॑ इन्द्राय॑ महित्वं पूर्वोक्तं द्विविधमाधिक्यं सर्वदास्तु । स्वभावसिद्धस्यापि भक्त्या प्रार्थनमेतत् । किंच । द्यौर्न॑ द्युलोक इव तवो॑ बलमिन्द्रस्य सेनारूपं पृथिना पृथिम्ना पृथुत्वेन युज्यतामिति शेषः । यथा द्युलोकः प्रभूत इवमस्य सेना प्रभूता । नुशब्दो॑ यद्यपि क्षिप्रनामसु नु मक्षिति पठितस्तथाप्यत्र तस्यान्वयाभावान्निपातत्वेनानेकार्थत्वसंभवाच्च समुच्चयार्थोऽत्र गृहीतः । नुशब्दो॑ लोकेऽपि प्रतिषेधार्थ एव । स्वाध्यायो॑ तु प्रतिषेधार्थ उपमानार्थश्चेति द्विविधः । यो॑ येन पदेनास्वीयते तस्मात्पूर्वं प्रयुज्यमानः प्रतिषेधार्थ उपरिष्टात्प्रयुज्यमान उपमानार्थः । तथा च यास्क उदाहरति । उभयथमन्यध्यायं नेन्द्रं देवममंसतेति प्रतिषेधार्थीयः पुरस्तादुपसाचारस्तस्य यत्प्रतिषेधति । दुर्मदासो॑ न सुरायामिति॒ष्कृतमुपमार्थीयः उपरिष्टादुपसाचारस्तस्य यो॑नोपमिमीते । नि. ८-४ । इति । अतोरुपमेयवाचिनो॑ द्युशब्दस्यापि प्रयुक्तत्वादुपमार्थः स्वीकृतः । अष्टाविंशतिसंख्याकेषु बलनामसूग्रजः पाजः शव इति पठितम् ॥ महानिति नकारस्य संहितायां दीर्घादटि समानपादे । पा. ८-४-४ । इति रुत्वं । अतोऽटि नित्यं । पा. ८-४-३ । इति पूर्वस्याकारस्यानुनासिकः । भोभगोअघोअपूर्वस्य योऽशि । पा. ८- -१८ । इति यकारः । तस्य लोपः । पा. ८-३-१९ । तस्यासिद्धत्वात् । पा. ८-३-१ । स्वरसंधिर्न भवति । महेरिन् । उ. ४-११८ । इत्यौणादिक इन् । महेर्भावो॑ महित्वं । त्व इति प्रत्ययस्वरेणोदात्तः । स एव शिष्यते । वज्रिणे । इकारः प्रत्ययस्वरेणोदात्तः । द्यौः । द्योशब्दः प्रातिपदिकस्वरेणान्तोदात्तः । गोतोणित् । पा. ७-१-९० । इति विभक्तेर्णित्त्वादचो ञ्णिति । पा ७-३-११३ । इति वृद्धिरान्तरतम्यादुदात्तैव भवति । पृथिना । पृथिम्ना । पृथोर्भाव इत्यर्थे पृथ्वादिभ्य इमनिज्वा । पा. ५-१-११३ । इतीमनिच् । र ऋतो॑ हलादेर्लघोः । पा. ७-४-११८ । इति ऋकारस्य रभावः । तुरिष्ठेमेयःसु । पा. ६-४-१५५ । इत्यनुवृत्तौ टेः । पा. ६-४-१५५ । इति टिलोपः । पृथिमन्शब्दश्छित्वात्त्वादेन्तोदात्तः । तृतीयैकवचनेन भक्त्यादेल्लोपोऽनः । पा. ६-४ ११५ । इत्यकारलोपः । भान्दसो॑ मकारलोपः । अनुदात्तस्य च यत्रोदात्तलोपः इति विभक्तेरुदात्तत्वं । शवः । नञ्शिषयोस्यासिसंतंसेभ्यो॑द्युदात्तत्वं ॥ १५ ॥

॥ प्रतिपदार्थ ॥

इन्द्रः—इन्द्रनु । महान्—दोड्डवनु । परश्च—गुणगळिंद उत्कृष्टनु । नु—मत्तु । वज्रिणे—वज्रायुधसहितनाद इन्द्रनिगे । महित्वं—(ई एरडु विधवाद) गुणाधिक्यवु । अस्तु—आगली (इरली) । (एकंदरे) शवः—इन्द्रन (सेनारूपवाद) बलवु । द्यौर्न—स्वर्गलोकदंते । पृथिना—अतिविस्तारवागिरुवुदु (बहु हेच्चागिरुवुदु) ॥

॥ ಭಾವಾರ್ಥ ॥

ಇಂದ್ರನು ಶರೀರದಲ್ಲಿ (ಗಾತ್ರದಲ್ಲಿ) ಮಾತ್ರವೇ ದೊಡ್ಡವನಲ್ಲ, ಗುಣದಲ್ಲಿಯೂ ಶ್ರೀಷ್ಠನು. ಇಂತಹ ಗುಣಾಧಿಕ್ಯವು ವಜ್ರಾಯುಧೋಪೇತನಾದ ಇಂದ್ರನಿಗೆ ಸಹಜವಾಗಿ ಸಲ್ಲುವುದು. ಏಕೆಂದರೆ ಇಂದ್ರನ ಸೇನಾರೂಪವಾದ ಬಲವು (ಅಥವಾ ಸಾಮರ್ಥ್ಯವು) ಸ್ವರ್ಗಲೋಕದಂತೆ ಎಂದರೆ ವಿಶಾಲವಾದ ಅಂತರಿಕ್ಷದಂತೆ (ಆಕಾಶದಂತೆ) ಬಹು ಹೆಚ್ಚಾಗಿರುವುದು.

English Translation

Great is Indra and Supreme. May greatness be ever for the weilder of the thunderbolt; May his strength (of the army) be ever vast as the heavens.

॥ ವಿಶೇಷವಿಷಯಗಳು ॥

ನು--ನುಶಬ್ದೋ ಯದ್ಯಪಿ ಕ್ಷಿಪ್ರನಾಮಸು ಪಠಿತಸ್ತಥಾಪ್ಯತ್ರ ತಸ್ಯಾನ್ವಯಾಭಾವಾನ್ನಿಪಾತಶ್ಚೇನಾನೇಕಾರ್ಥತ್ವಸಂಭವಾಚ್ಚ ಸಮುಚ್ಚಯಾರ್ಥೋಽತ್ರ ಗೃಹೀತಃ--ಎಂದರೆ ನುಶಬ್ದವು ಕ್ಷಿಪ್ರ (ಶೀಘ್ರ) ವೊದಲಾದ ಶಬ್ದಗಳ ಮಧ್ಯದಲ್ಲಿ ಪಠಿತವಾಗಿ ಇದಕ್ಕೆ ಜಾಗ್ರತೆಯಾಗಿ ಎಂಬರ್ಥವಿದ್ದರೂ ಇಲ್ಲಿ ಆ ಅರ್ಥವು ಹೊಂದುವುದಿಲ್ಲವಾದ್ದರಿಂದಲೂ ಅವ್ಯಯಗಳಿಗೆ ಅನೇಕಾರ್ಥವಿರುವುದರಿಂದಲೂ ಇಲ್ಲಿ ನು ಶಬ್ದಕ್ಕೆ ಸಮುಚ್ಚಯಾರ್ಥ ಎಂದರೆ ಮತ್ತು ಎಂಬ ಅರ್ಥವನ್ನು ಹೇಳುವುದು ಯುಕ್ತವೆಂದು ಭಾಷ್ಯಕಾರರು ಅಭಿಪ್ರಾಯಪಡುವರು.

ಮಹಿತ್ವಮಸ್ತು ವಜ್ರಿಣೇ--ಇಂದ್ರನ ಗುಣಗಳು ಸ್ವಭಾವಸಿದ್ಧವಾಗಿ ಅತಿಶಯವಾಗಿದ್ದರೂ ಅವನ ಗುಣಗಳು ಹೆಚ್ಚು ಮಹಿಮೆಯಿಂದ ಪ್ರಕಾಶಿಸಲಿ ಎಂದು ಕವಿಯು ಹೇಳಿರುವುದು ಭಕ್ತಿಯಿಂದ ಮಾಡಿದ ಪ್ರಾರ್ಥನಾರೂಪವಾಗಿರುವುದು.

ದ್ಯೌಃ--ದ್ಯೌಃ ಎಂದರೆ ಸ್ವರ್ಗವು, ಅಂತರಿಕ್ಷಲೋಕವು. ಅಂತರಿಕ್ಷವು (ಆಕಾಶವು) ನಮ್ಮ ಕಣ್ಣಿಗೆ ಕಾಣುವವರೆಗೂ ಅಲ್ಲಿಂದ ಮುಂದಕ್ಕೂ ಅತಿ ವಿಸ್ತಾರವಾಗಿ ಪ್ರಸರಿಸಿರುವುದೆಂದು ಎಲ್ಲರಿಗೂ ತಿಳಿದಿರುವುದು. ಆದುದರಿಂದಲೇ ಅತಿ ದೊಡ್ಡದಾದ ವಸ್ತುವಿನ ಹೋಲಿಕೆಯನ್ನು ಕೊಡುವಾಗ ಕವಿಯು ಅಂತರಿಕ್ಷ (ಆಕಾಶ)ದ ಉಪಮಾನವನ್ನು ಕೊಟ್ಟಿರುವನು.

ನ--ಆಧುನಿಕಸಂಸ್ಕೃತದಲ್ಲಿ ನ ಎಂಬ ಶಬ್ದವು ಪ್ರತಿಷೇಧಾರ್ಥಕವಾಚಕವಾಗಿದ್ದರೂ (ನ=ಇಲ್ಲ) ಋಗ್ವೇದದಲ್ಲಿ ಸ್ವಾಧ್ಯಾಯೇ ತು ಪ್ರತಿಷೇಧಾರ್ಥ ಉಪಮಾನಾರ್ಥಶ್ಚೇತಿ ದ್ವಿವಿಧಃ--ಪ್ರತಿಷೇಧಾರ್ಥ ಮತ್ತು ಉಪಮಾನಾರ್ಥ ಇವೆರಡರಲ್ಲಿಯೂ ನ ಎಂಬ ಶಬ್ದಪ್ರಯೋಗವಿರುವುದು. ನ ಎಂದರೆ ಇವ, ದೌರ್ನ=ಆಕಾಶದಂತೆ. ಇಂತಹ ಪ್ರಯೋಗಗಳು ಋಗ್ವೇದದಲ್ಲಿ ಬೇಕಾದಷ್ಟಿವೆ. ಈ ಪದಪ್ರಯೋಗದಲ್ಲಿ ಒಂದು ವಿಶೇಷವುಂಟು. ಯೇನ ಪದೇನಾನ್ವೀಯತೇ ತಸ್ಮಾತ್ಪೂರ್ವಂ ಪ್ರಯುಜ್ಯಮಾನಃ ಪ್ರತಿಷೇಧಾರ್ಥ ಉಪರಿಷ್ಟಾತ್ಪ್ರಯುಜ್ಯಮಾನ ಉಪಮಾರ್ಥಃ ಎಂದು ಭಾಷ್ಯಕಾರರು ಹೇಳಿರುವರು. ಎಂದರೆ ಸಂಬಂಧಪಟ್ಟ ಪದಕ್ಕೆ ಪೂರ್ವಭಾವಿಯಾಗಿ ನ ಶಬ್ದದ ಪ್ರಯೋಗವಿದ್ದರೆ ಅಲ್ಲಿ ಪ್ರತಿಷೇಧಾರ್ಥವಾಚಕವೆಂದೂ ಸಂಬಂಧಪಟ್ಟ ಪದದ

ಆನಂತರ ಎಂದರೆ ಪದದ ಮುಂದೆ ನ ಶಬ್ದಪ್ರಯೋಗವಿದ್ದರೆ ಅಲ್ಲಿ ಉಪಮಾರ್ಥವಾಚಕವೆಂದೂ ತಿಳಿಯಬೇಕು ಉದಾಹರಣೆ—

ನ ಯಸ್ಯ ದ್ಯಾವಾಪೃಥಿವೀ ಅನು ವ್ಯಚೋ ನ ಸಿಂಧವೋ ರಜಸೋ ಅಂತಮಾನಶಃ ।

(ಋ ಸಂ. ೧-೫೨-೧೪)

ಇಲ್ಲಿ ನ ಎಂಬ ಶಬ್ದವು ಸಂಬಂಧಪಟ್ಟ ದ್ಯಾವಾಪೃಥಿವೀ ಮತ್ತು ಸಿಂಧವಃ ಎಂಬ ಶಬ್ದಗಳ ಪೂರ್ವಭಾವಿಯಾಗಿ ಪಠಿತವಾಗಿರುವುದರಿಂದ ನ ಶಬ್ದವು ಪ್ರತಿಷೇಧಾರ್ಥವಾಚಕವಾಗಿರುವುದು.

ನ ಸ ಸಖಾ ಯೋ ನ ದದಾತಿ ಸಖ್ಯೇ ಸಚಾಭುವೇ ಸಚಮಾನಾಯ ಪಿತ್ವಃ ॥

(ಋ. ಸಂ, ೧೦-೧೧೭-೪)

ಇಲ್ಲಿ ಸಂಬಂಧಪಟ್ಟ ಸಖಾ ಮತ್ತು ದದಾತಿ ಎಂಬ ಪದಗಳಿಗೆ ನ ಶಬ್ದವು ಪೂರ್ವಭಾವಿಯಾಗಿ ಪ್ರಯೋಗಿಲ್ಪಟ್ಟಿರುವುದರಿಂದ ನಶಬ್ದವು ಪ್ರತಿಷೇಧಾರ್ಥವಾಚಕವು

ಮಾ ವೋ ಮೃಗೋ ನ ಯವಸೇ ಜರಿತಾ ಭೂದಜೋಷ್ಯಃ ॥

(ಋ. ಸಂ. ೧-೩೪-೫)

ವಾಶ್ರೇವ ವಿದ್ಯುನ್ಮಿಮಾತಿ ವತ್ಸಂ ನ ಮಾತಾ ಸಿಷಿಕ್ತಿ ॥

(ಋ. ಸಂ. ೧-೩೮-೯)

ಈ ಋಕ್ಕುಗಳಲ್ಲಿ ನ ಎಂಬ ಶಬ್ದವು ಸಂಬಂಧಪಟ್ಟ ಮೃಗಃ ಮತ್ತು ವತ್ಸಂ ಎಂಬ ಶಬ್ದಗಳ ಅನಂತರ (ಮುಂದೆ) ಇರುವುದರಿಂದ ನ ಶಬ್ದಕ್ಕೆ ಇಲ್ಲಿ ಉಪಮಾರ್ಥವಿರುವುದು.

ಶವಃ—ಈ ಶಬ್ದವು ಅಣಃ ಕ್ಷೋದಃ ಮೊದಲಾದ ಉದಕವಾಚಕಪದಗಳ ಮಧ್ಯದಲ್ಲಿ ಪಠಿತವಾಗಿ ಉದಕವೆಂಬ ಅರ್ಥವಿದ್ದರೂ (ನಿ. ೨-೨೪) ಓಜಃ ಪಾಜ ಮೊದಲಾದ ಇಪ್ಪತ್ತೆಂಟು ಬಲನಾಮಕಪದಗಳ ಮಧ್ಯದಲ್ಲಿ ಶವಃ ಶಬ್ದವು ಪಠಿತವಾಗಿರುವುದರಿಂದ (ನಿ. ೩-೯) ಈ ಋಕ್ಕಿನಲ್ಲಿ ಈ ಅರ್ಥವನ್ನೇ ಹೇಳಬೇಕು.

॥ ವ್ಯಾಕರಣಪ್ರಕ್ರಿಯಾ ॥

ಮಹಾನ್—ಈ ಶಬ್ದದ ನಕಾರಕ್ಕೆ ಸಂಹಿತಾಕಾಲದಲ್ಲಿ **ದೀರ್ಘಾದಟಿಸಮಾನಪಾದೇ** (ಪಾ ಸೂ. ೮-೪-೯) ನಕಾರ-ಅಟ್ಪ್ರತ್ಯಾಹಾರದಲ್ಲಿರುವ ವರ್ಣ ಇವುಗಳು ಒಂದೇ ಪಾದದಲ್ಲಿದ್ದರೆ, ಆ ಅಟ್ಪ್ರನ ಹಿಂದಿರುವುದಾಗಿಯೂ ದೀರ್ಘದ ಮುಂದಿರುವದಾಗಿಯೂ ಇರುವ ಆ ನಕಾರಕ್ಕೆ ರು ಆದೇಶ ಬರುವದು ಎಂಬುದರಿಂದ ರು ಆದೇಶ ಬಂದರೆ ಮಹಾ+ರು+ಇಂದ್ರ **ಅತೋಽಟೋನಿತ್ಯಂ** (ಪಾ.ಸೂ. ೮-೩-೩) ಅಪ್ರತ್ಯಾಹಾರದ ಹಿಂದಿರುವ ರು ವಿನ ಹಿಂದೆ ಇರುವ ದೀರ್ಘಾಕಾರಕ್ಕೆ ಅನುನಾಸಿಕವು ನಿತ್ಯವಾಗಿ ಬರುವದು ಎಂಬುದರಿಂದ ಅನುನಾಸಿಕ ಬಂದರೆ, ಮಹಾ್+ರು+ಇನ್ದ್ರ **ಭೋಭಗೋ ಅಘೋ ಅಪೂರ್ವಸ್ಯೋಽತಿ** (ಪಾ. ಸೂ. ೮-೩-೧೭) ಭೋ, ಭಗೋ ಅಘೋ, ಅವರ್ಣ ಇವುಗಳ ಮುಂದೆ ಇರುವ ರುಗೆ ಅಶ್ವರ್ಣ ಪರದಲ್ಲಿದ್ದರೆ ಯಾದೇಶ ಬರುವದು ಎಂಬುದರಿಂದ ಯಾದೇಶ ಬಂದರೆ ಮಹಾಯ್ ಇಂದ್ರಃ **ಲೋಪಶಾಕಲ್ಯಸ್ಯ** (ಪಾ. ಸೂ. ೮-೩-೧೯) ಅವರ್ಣಪೂರ್ವಕವಾದ ಪದದ ಕೊನೆಯಲ್ಲಿರುವ ಯಕಾರವಕಾರಗಳಿಗೆ ಅಶ್ ವರ್ಣ ಪರದಲ್ಲಿದ್ದರೆ ವಿಕಲ್ಪವಾಗಿ ಲೋಪಬರುವದು ಎಂಬುದ

ರಿಂದಯಕಾರಕ್ಕೆ ಲೋಪ ಬಂದರೆ ಮಹಾ᳓ ಇನ್ದ್ರಃ. ಈಗ **ಆದ್ಗುಣಃ** (ಪಾ ಸೂ. ೬-೧-೮೭) ಅವರ್ಣದ ಮುಂದೆ ಇ, ಉ, ಋ, ಲೃ, ಇವುಗಳು ಪರದಲ್ಲಿದ್ದರೆ ಪೂರ್ವಪರಸ್ಥಾನಗಳಲ್ಲಿ ಗುಣವು ಏಕಾದೇಶವಾಗಿ ಬರುವದು ಎಂಬುದರಿಂದ ಗುಣಸಂಧಿಯು ಯದ್ಯಪಿ ಪ್ರಾಪ್ತವಾಗುವದು ಆದರೂ **ಪೂರ್ವತ್ರಾಸಿದ್ಧಮ್** (ಪಾ ಸೂ. ೮-೨-೧) ಸಪಾದಸಪ್ತಾಧ್ಯಾಯದಲ್ಲಿರುವ (ಏಳು ಅಧ್ಯಾಯ ೧ ಪಾದ) ಕಾರ್ಯವನ್ನು ಮಾಡುವಾಗ (ಮೂರು ಪಾದದಲ್ಲಿ) ತ್ರಿಪಾದಿಯಲ್ಲಿ ವಿಹಿತವಾದ ಕಾರ್ಯವು (ಶಾಸ್ತ್ರ) ಅಸಿದ್ಧವಾಗುವದು ಎಂಬುದರಿಂದ ಆರನೇ ಅಧ್ಯಾಯದಲ್ಲಿ ವಿಹಿತವಾದ **ಆದ್ಗುಣಃ** (ಪಾ. ಸೂ. ೬-೧-೮೭) ಎಂಬುದರಿಂದ ಗುಣವನ್ನು ಮಾಡುವಾಗ ತ್ರಿಪಾದಿಯಲ್ಲಿರುವ **ಲೋಪಶಾಕಲ್ಯಸ್ಯ** (ಪಾ. ಸೂ. ೮-೩-೧೯) ಎಂಬುದರಿಂದ ಬಂದ ಯ ಲೋಪವು ಅಸಿದ್ಧವಾಗುವದು. ಆದ್ದರಿಂದ ಯಕಾರದಿಂದ ವ್ಯವಧಾನ ಬರುವದು ಆದಕಾರಣ ಸ್ವರಸಂಧಿಗೆ ಸೇರಿದ ಗುಣಸಂಧಿ ಬರುವದಿಲ್ಲ.

ಮಹಿಷ್ವಂ—ಮಹ ಪೂಜಾಯಾಂ ಎಂಬ ಧಾತುವಿನ ಮುಂದೆ **ಇನ್** (ಉ ಸೂ ೩-೫೫೭) ಎಂಬ ಉಣಾದಿಸೂತ್ರದಿಂದ ಇನ್ ಪ್ರತ್ಯಯ ತಸ್ಯಭಾವಸ್ತ್ವತಲೌ (ಪಾ. ಸೂ. ೫-೧-೧೧೯) ಎಂಬುದರಿಂದ ತ್ವ ಪ್ರತ್ಯಯ ಬಂದರೆ ಮಹಿತ್ವಂ ಎಂದಾಗುವದು. ತ್ವ ಎಂಬುದು ಪ್ರತ್ಯಯಸ್ವರದಿಂದ ಅಂತೋದಾತ್ತ. ಆದೇ ನಿಲ್ಲುವುದು.

ವಜ್ರಿಣೇ—ವಜ್ರಂ ಅಸ್ಯ ಅಸ್ತಿ ಇತಿ ವಜ್ರೀ ತಸ್ಮೈ ಎಂದು ವಿಗ್ರಹ. **ಅತಇನಿಠನೌ** (ಪಾ. ಸೂ. ೫-೨-೧೧೫) ಎಂಬುದರಿಂದ ಇನಿ ಪ್ರತ್ಯಯ ಇಕಾರವು ಪ್ರತ್ಯಯಸ್ವರದಿಂದ ಅಂತೋದಾತ್ತ.

ದ್ಯೌಃ—ದ್ಯೋ ಶಬ್ದವು 'ಫಿಷಃ' (ಫಿ. ಸೂ. ೧) ಎಂಬುದರಿಂದ ಅಂತೋದಾತ್ತ, ದ್ಯೋ ಶಬ್ದದ ಮುಂದೆ ಪ್ರಥಮಾ ಏಕವಚನ ಸು ಪ್ರತ್ಯಯವನ್ನಿಟ್ಟರೆ **ಗೋತೋಣಿತ್** (ಪಾ. ಸೂ. ೭-೧-೯೦) ಗೋ ಶಬ್ದದ ಮುಂದೆ ಇರುವ ಸರ್ವನಾಮಸ್ಥಾನ ಪ್ರತ್ಯಯವು ಣಿತ್ತಿನಂತೆ ಆಗುವುದು. ಇಲ್ಲಿ **ಓತೋಣಿದಿತಿವಾಚ್ಯಮ್** ಎಂದು ವಾರ್ತಿಕವಿರುವುದು. ಓಕಾರಾಂತವಾದ ಶಬ್ದದ ಮುಂದೆ ವಿಹಿತವಾಗಿರುವ ಸರ್ವನಾಮಸ್ಥಾನವು ಣಿತ್ತಿನಂತೆ ಆಗುವುದು ಎಂದು ಇದರ ಅರ್ಥ. ಗೋತೋಣಿತ್ ಎಂಬಲ್ಲಿ ಗೋತಃ ಎಂಬುದನ್ನು ತೆಗೆದುಹಾಕಿ ಓತಃ ಎಂಬುದನ್ನು ಸೇರಿಸಿ, ಓತೋಣಿತ್ ಎಂದು ಹೇಳಬೇಕು ಎಂದು ವಾರ್ತಿಕದ ವಾಚ್ಯಾರ್ಥ. ದ್ಯೋಶಬ್ದವು ಓಕಾರಾಂತವಾದ್ದರಿಂದ ಅದರ ಮುಂದಿರುವ ಸುವು ಣಿತ್ತಿನಂತೆ ಆಗುವುದು **ಆಚೋಞ್ಣಿತಿ** (ಪಾ. ಸೂ. ೭-೩-೧೧೫) ಞಾತ್ತು ಣಿತ್ತು ಆದ ಪ್ರತ್ಯಯಗಳು ಪರದಲ್ಲಿರುವಾಗ ಅಜಂತವಾದ ಅಂಗಕ್ಕೆ ವೃದ್ಧಿ ಬರುವುದು ಎಂಬುದರಿಂದ ವೃದ್ಧಿ ಬಂದರೆ **ಸ್ಥಾನೇ೨ನ್ತರತಮಃ** (ಪಾ. ಸೂ. ೧-೧-೫೦) ಒಂದು ಸ್ಥಾನಿಗೆ ಅನೇಕವಾದ ಆದೇಶಗಳು ಪ್ರಸಕ್ತವಾದರೆ ಸ್ಥಾನ, ಅರ್ಥ, ಗುಣ, ಪ್ರಮಾಣ ಇವುಗಳಿಂದ ಅತ್ಯಂತ ಸದೃಶವಾದ ಆದೇಶಬರುವುದು ಎಂಬುದರಿಂದ ಗುಣ ಸಾಮ್ಯದಿಂದ ಉದಾತ್ತಗುಣಕವಾದ ಓಕಾರದ ಸ್ಥಾನದಲ್ಲಿ ಉದಾತ್ತವಾದ ಔಕಾರ ಬರುವುದು, **ದ್ಯೌಃ** ಎಂದಾಗುವುದು.

ಪೃಥಿನಾ—ಪ್ರಥಿವ್ಯಾ ಎಂದರ್ಥ. ಪೃಥೋರ್ಭಾವಃ ಎಂದು ವಿವಕ್ಷಿಸಿದಾಗ **ಪೃಥ್ವಾದಿಭ್ಯ ಇಮನಿಜ್ವಾ** (ಪಾ. ಸೂ. ೫-೧-೧೨೨) ಪೃಥ್ವಾದಿಗಣಪಠಿತ ಶಬ್ದಪ್ರಕೃತಿಕಷಷ್ಠ್ಯಂತದ ಮುಂದೆ ಭಾವ ಎಂಬ ಅರ್ಥದಲ್ಲಿ ಇಮನಿಜ್ ಪ್ರತ್ಯಯವು ವಿಕಲ್ಪವಾಗಿ ಬರುವುದು ಎಂಬುದರಿಂದ ಇಮನಿಜ್ ಪ್ರತ್ಯಯ. **ರಯತೋಹಲಾ-ಬೇರ್ಲಘೋಃ** (ಪಾ. ಸೂ. ೬-೪-೧೬೧) ಇಷ್ಠನ್, ಇಮನಿಜ್ ಈಯಸುನ್ ಪ್ರತ್ಯಯಗಳು ಪರದಲ್ಲಿರುವಾಗ ವ್ಯಂಜನದ ಮುಂದಿರುವ ಲಘುವಾದ ಋಕಾರಕ್ಕೆ ರೇಫಾದೇಶ ಬರುವುದು ಎಂಬುದರಿಂದ ರೇಫಾದೇಶ ಬಂದರೆ ಪೃಥು+ಇಮನ್, **ಟೇಃ** (ಪಾ. ಸೂ. ೬-೪-೧೫೫) ಇಷ್ಠನ್, ಇಮನಿಜ್ ಈಯಸುನ್ ಪ್ರತ್ಯಯಗಳು ಪರದಲ್ಲಿರೆ

ವಾಗ ಭ ಸಂಜ್ಞಕಾಂಗಾವಯವವಾದ ಟಿಗೆ ಲೋಪ ಬರುವುದು ಎಂಬುದರಿಂದ ಉಕಾರಕ್ಕೆ ಲೋಪ ಬಂದರೆ ಪೃಥಿಮನ್ ಎಂದಾಗುವುದು. ಇದರ ಮುಂದೆ ತೃತೀಯಾ ವಿಭಕ್ತಿ ಏಕವಚನ ಟಾ ಪ್ರತ್ಯಯವನ್ನಿಟ್ಟರೆ **ಯೆಚಿ ಭಮ್** (ಪಾ. ಸೂ. ೧-೪-೪೮) ಎಂಬುದರಿಂದ ಭ ಸಂಜ್ಞೆ ಇರುವುದರಿಂದ **ಅಲ್ಲೋಪೋಽನಃ** (ಪಾ. ಸೂ. ೬-೪-೧೩೪) ಅಸರ್ವನಾಮಸ್ಥಾನ ಯಾದ್ಯಜಾದಿಸ್ವಾದಿ ಪ್ರತ್ಯಯದ ಹಿಂದಿರುವ ಅಂಗಾವಯವವಾದ ಅನ್ ಎಂಬುದರ ಹ್ರಸ್ವಾಕಾರಕ್ಕೆ ಲೋಪಬರುವುದು ಎಂಬುದರಿಂದ ಅಕಾರಕ್ಕೆ ಲೋಪ ಮಲೋಪ, ಭಾಂದಸ, ಏವಂಚ ಪೃಥಿನಾ ಎಂದಾಗುವುದು. ಇಮನಿಚ್ ಚಿತ್ವಾದ್ದರಿಂದ **ಚಿತೇಃ** (ಪಾ. ಸೂ. ೬-೧-೧೬೩) ಎಂಬುದರಿಂದ ಪೃಥಿಮನ್ ಎಂಬುದು ಅಂತೋದಾತ್ತ, ಟಾ ಪ್ರತ್ಯಯದ ಅನುದಾತ್ತ ಆಕಾರ ಪರದಲ್ಲಿರುವಾಗ ಉದಾತ್ತವಾದ ಆಕಾರಕ್ಕೆ ಲೋಪ ಬರುವುದು. ಆದ್ದರಿಂದ **ಅನುದಾತ್ತಸ್ಯ ಚ ಯತ್ರೋದಾತ್ತಲೋಪಃ** (ಪಾ. ಸೂ. ೬-೧-೧೬೧) ಯಾವ ಅನುದಾತ್ತವು ಪರದಲ್ಲಿರುವಾಗ ಉದಾತ್ತಕ್ಕೆ ಲೋಪ ಬರುವುದೋ ಆ ಅನುದಾತ್ತಕ್ಕೆ ಉದಾತ್ತ ಬರುವುದು ಎಂಬುದರಿಂದ ಆ ಎಂಬುದು ಉದಾತ್ತವಾಗುವುದು.

ಶವಃ—ನಬ್ವಿಷಯೇಸ್ಯಾನಿಶಂತಸ್ಯ (ಪಿ. ಸೂ. ೨೬) ಇಸನ್ತವಲ್ಲದ ನಿತ್ಯನಪುಂಸಕಲಿಂಗವಾದ ಶಬ್ದದ ಆದಿಯು ಉದಾತ್ತವಾಗುವುದು ಎಂಬುದರಿಂದ ಆದ್ಯುದಾತ್ತ ॥ ೫ ॥

॥ ಸಂಹಿತಾಪಾಠಃ ॥

ಸ॒ಮೋ॒ಹೇ ವಾ॒ ಯ ಆ॑ಶ॒ತ ನರ॑ಸ್ತೋ॒ಕಸ್ಯ॒ ಸನಿ॑ತೌ ।
ವಿಪ್ರ॑ಸೋ ವಾ ಧಿ॒ಯಾಯ॑ವಃ ॥ ೬ ॥

॥ ಪದಪಾಠಃ ॥

ಸಂ ಽ ಓ॒ಹೇ । ವಾ॒ । ಯೇ । ಆ॒ಶ॒ತ । ನರ॑ಃ । ತೋ॒ಕಸ್ಯ॑ । ಸನಿ॑ತೌ ॥
ವಿಪ್ರ॑ಸಃ । ವಾ॒ । ಧಿ॒ಯಾ॒ಯೇವ॑ಃ ॥ ೬ ॥

॥ ಸಾಯಣಭಾಷ್ಯಂ ॥

ಯೇ ನರಃ ಪುರುಷಾಃ ಸಮೋಹೇ ಸಂಗ್ರಾಮೇ ತೋಕಸ್ಯಾಪತ್ಯಸ್ಯ ಸನಿತೌ ವಾ ಲಾಭೇ ವಾಶತ । ವ್ಯಾಪ್ತವಂತಃ । ಇಂದ್ರಂ ಸ್ತುತ್ಯೇತಿ ಶೇಷಃ । ವಾ ಅಥವಾ ವಿಪ್ರಾಸೋ ಮೇಧಾವಿನೋ ಧಿಯಾಯವಃ ಪ್ರಜ್ಞಾಕಾಮಾಃ ಸಂತ ಆಶತ ತೇ ಸರ್ವೇ ಲಭಂತ ಇತ್ಯಧ್ಯಾಹಾರಃ । ರಣ ಇತ್ಯಾದಿಷು ಷಟ್ಚತ್ವಾರಿಂಶತ್ಸಂಗ್ರಾಮನಾಮಸು ಸಮೋಹೇ ಸಮಿಥ ಇತಿ ಪಠಿತಂ । ಸಂಚಿದೆಕಶತ್ಯಪತ್ಯನಾಮಸು ತುಕ್

ಕೋಽಕಮಿತಿ ಪಠಿತಂ ॥ ಸನೋಹೇ । ಷ್ಣಾತಿಪದಿಕಾಂತೋದಾತ್ತಶ್ಚಂ । ವಾ ಚಾದಯೋಽನುದಾತ್ತಾ ಇತ್ಯನುದಾತ್ತಃ । ಅಶತ । ಅಶೂ ವ್ಯಾಪ್ತೌ । ಛಾಂದಸಶ್ಶ್ಲೂರ್ಲೋಽಪಃ । ಆಡಾಗಮ ಉದಾತ್ತಃ । ಪಾ. ೬-೪-೭೨ । ಸತಿ ಶಿಷ್ಟತ್ವೇನ ಸ ಏವ ಶಿಷ್ಯತೇ । ನರಃ । ಷ್ಣಾತಿಪದಿಕಸ್ವರಃ । ಸನಿತೌ । ಸ್ತ್ರಿಯಾಂ ಕ್ತಿನ್ । ತಿತುತ್ರೇಷ್ವಗ್ರಹಾದೀನಾಮಿತಿ ವಚನಾತ್ । ಪಾ. ೭-೩-೯೦ । ನಿಗೃಹೀತಿನಿಪಠಿತರಿತಿವದಿಡಾಗಮಃ । ವಿಪ್ರಾಸಃ । ಋಜ್ರೇಂದ್ರೇತ್ಯಾದಿನಾ ವಿಪ್ರಶಬ್ದೋ ರನ್ಪ್ರತ್ಯಯಾಂತೋ ನಿಪಾತಿತಃ । ಧಿಯೋ-ಯವಃ ! ಧಿ ಧಾರಣೇ । ಧೀಯತೇ ಧಾರ್ಯತೇಽನಯೇತಿ ಶ್ರುತಮರ್ಥಜಾತಮನಯೇತಿ ಧಿಯಾ ಪ್ರಜ್ಞಾ । ತಾಮಾತ್ಮನ ಇಚ್ಛಂತೀತಿ ಕ್ಯಚ್ । ಕ್ಯಾಚ್ಛಂದಸಿ । ಪಾ. ೩-೨-೧೭೦ । ಇತ್ಯುಪ್ರತ್ಯಯಃ । ಅತೋ ಲೋಪಃ । ಪ್ರತ್ಯಯಸ್ವರೇಣಾಂತೋದಾತ್ತಃ ॥

॥ ಪ್ರತಿಪದಾರ್ಥ ॥

ಯೇ ನರಃ—ಯಾವ ಮನುಷ್ಯರು (ಇಂದ್ರನನ್ನು ಸ್ತೋತ್ರಮಾಡುವರೋ ಅವರು) । ಸನೋಹೇ-ಯುದ್ಧದಲ್ಲಿ (ಜಯಪ್ರಾಪ್ತಿಗಾಗಿಯೂ) । ವಾ-ಅಥವಾ (ಮತ್ತು) । ತೋಕಸ್ಯ-ಪುತ್ರಾದಿಸಂತಾನದ । ಸನಿತೌ-ಲಾಭಕ್ಕಾಗಿಯೂ । ಅಶತ-ಇಂದ್ರನನ್ನು ಹೊಂದುವರು । ವಾ-ಅಥವಾ । ವಿಪ್ರಾಸಃ—ಬುದ್ಧಿವಂತರಾದ ಜನರು । ಧಿಯಾಯವಃ—ಪ್ರಜ್ಞೆಯನ್ನು ಅಥವಾ ಜ್ಞಾನವನ್ನು ಅಪೇಕ್ಷಿಸುವವರೂ (ಸಹ) ಅಶತ-ಇಂದ್ರನನ್ನೇ ಹೊಂದುವರು.)

॥ ಭಾವಾರ್ಥ ॥

ಯಾವ ಮನುಷ್ಯರು ಯುದ್ಧದಲ್ಲಿ ಜಯವನ್ನೂ ಪುತ್ರಪೌತ್ರಾದಿ ಸಂತಾನಗಳನ್ನೂ ಬಯಸುವರೋ ಅವರು ಇಂದ್ರನನ್ನು ಸ್ತೋತ್ರಮಾಡುವುದರಿಂದ ತಮ್ಮ ಅಭೀಷ್ಟಗಳನ್ನು ಹೊಂದುವರು. ಮತ್ತು ಬುದ್ಧಿವಂತರಾದವರೂ ಪ್ರಜ್ಞಾಪೇಕ್ಷಿಗಳೂ ಸಹ ಇಂದ್ರನಿಂದಲೇ ತಮ್ಮ ಅಭೀಷ್ಟಗಳನ್ನು ಪಡೆಯುವರು.

English Translation.

Whatever men have recourse to Indra, in battle or for the acquirement of offspring, and the wise who are desirous of understanding (obtain their desires).

॥ ವಿಶೇಷವಿಷಯಗಳು ॥

ಈ ಋಕ್ಕಿನ ಅರ್ಥವನ್ನು ಸರಿಯಾಗಿ ಊಹಿಸಬಹುದಾದರೂ ಕೆಲವು ಮುಖ್ಯ ಪದಗಳನ್ನು ಅಧ್ಯಾಹಾರಮಾಡಿಕೊಳ್ಳಬೇಕಾಗಿರುವುದು. ಹಿಂದಿನ ಋಕ್ಕಿನಲ್ಲಿ ಇಂದ್ರನ ಮಹಿಮೆ ಅಥವಾ ಶಕ್ತಿಸಾಮರ್ಥ್ಯಗಳು ಅಪಾರವಾಗಿರುವುವೆಂದು ಹೇಳಲ್ಪಟ್ಟಿರುವುದರಿಂದ ಆ ಅಭಿಪ್ರಾಯಕ್ಕೆ ಸಂಬಂಧಪಟ್ಟಿರುವಂತೆ ಈ ಋಕ್ಕಿನಲ್ಲಿ ಜನರು ತಾವು ಅಪೇಕ್ಷಿಸುವ ಯುದ್ಧದಲ್ಲಿ ಜಯ, ಸಂತಾನಪ್ರಾಪ್ತಿ, ತಿಳಿವಳಿಕೆ ಇವುಗಳ ಪ್ರಾಪ್ತಿಗಾಗಿ ಇಂದ್ರನನ್ನು ಆಶ್ರಯಿಸುವರು ಮತ್ತು ಸ್ತೋತ್ರಾದಿಗಳಿಂದ ಅವನನ್ನು ಸ್ತುತಿಸಿ ತಮ್ಮ ಅಭೀಷ್ಟಗಳನ್ನು ಪಡೆಯುವರೆಂದು ಮುಖ್ಯಾಭಿಪ್ರಾಯವು.

सनोहे—रण मोदलाद नलवत्त्रारु युद्धवाचकनामगळ मध्यदल्लि सनोहे ऎंब शब्दवु पठितवागिदे (नि ३-७).

तोकस्य—तुज् मोदलाद हदिन्यैदु आदत्यवाचक शब्दगळ मध्यदल्लि तोकं ऎंब शब्दवु पठितवागिदे (नि. ३-७)

आशत अशू व्याप्तौ ऎंब धातुविन रूप. इन्द्रनन्नु होंदुवुदु ऎंदरे स्तोत्रादिगळिंद इन्द्रनन्नु प्रार्थिसुवुदु.

नरः—ऋकारान्तनपुंशब्दद प्रथमा बहुवचनवु. ई शब्दवु ऄकारान्तवागियू उपयोगिसल्पडुवुदु. आग नरः ऎंबुदु प्रथमैकवचनवु.

विप्रास=विप्राः ऎंबुदर प्राचीन प्रयोगवु.

धियायवः—**धि धारणे** । **धीयते धार्यतेऽनबुध्यते शृतमर्थजातमनेनेति धियो प्रज्ञा** । **तामात्मन इच्छंतीति धियायवः** ॥ धि ऎंब धातुविगे धरिसु अथवा तिळि ऎंदर्थवु केळिद अथवा नोडिद विषयगळन्नु तिळिदुकॊळ्ळुवुदरिंद धियो ऎंब शब्दवुंटागिरुवुदु. तिळिवळिकेयन्नु अथवा प्रज्ञेयन्नु अपेक्षिसुववरिगे धियायवः ऎंदु हेसरु

।। व्याकरणप्रक्रियाः ।।

सनोहे—**षिषः** (षि. सू. ८) ऎंबुदरिंद प्रातिपदिकस्वर अंतोदात्त बरुवुदु **वा चादयोऽनुदात्ताः** (षि सू. ८ळ) ऎंबुदरिंद अनुदात्त

आशत-**अशूव्याप्तौ** धातुविन मुंदे लुङ्. च्लि **लुङि** (पा.सू. ३-१-४३) ऎंबुदरिंद लुङ्नि हिंदे च्लि बरुवुदु. छांदसवागि च्लिगे लोपबरुवुदु. **अडजादीनाम्** (पा. सू. ६-४-७१) लुङ् लङ् लृङ् इवु सरवागिद्दरे अजादि धातुगळिगे अट् आगमु बरुवुदु. अदु उदात्तवू आगुवुदुऎंबुदरिंद अडागमु. सतिशिष्यस्वरवाद्दरिंद इदे निल्लुवुदु. धात्वकारवु शेषानुदात्तस्वरदिंद अनुदात्त. इवेरडक्कू **अटश्च** (पा. सू. ६-१-९०) अट्गे स्वर परदल्लिद्दरे वृद्धि बरुवुदुऎंबुदरिंद वृद्धियु ऎकादेशवागि बरुवुदु. **एकादेश उदात्तेनोदात्तः** (पा.सू. ८-२-५) ऎंबुदरिंद आकार उदात्त. लुङ्गे आत्मनेपद प्रथमपुरुषबहुवचन ऋु-प्रत्यय बंदरे **आत्मनेपदेष्वनतः** (पा. सू ६-१-५) ऎंबुदरिंद ऋुगे अत् आदेश बंदु आशत ऎंदागुवुदु.

नरः—प्रातिपदिकस्वरदिंद अंतोदात्त.

सनितौ—सन धातुविन मुंदे **स्त्रियांक्तिन्** (पा. सू. ३-३-९४) ऎंबुदरिंद क्तिन् प्रत्यय. **ति, तु, त्र, त, थ, सि, सु, सर, क, सेसुचे** (पा. सू. ८-३-९) ऎंबुदरिंद यद्यपि

ಇಲ್ಲಿ ಇಡಾಗಮಕ್ಕೆ ಪ್ರತಿಷೇಧ ಬರುವುದು. ಆದರೂ **ತಿತುತ್ರೇಷ್ವಗ್ರಹಾದೀನಾಮ್** (ಪಾ ಸೂ. ೭-೨-೯, ಭಾವಾ. ೧) ಗ್ರಹಾದಿಗಳ ಮುಂದಿರುವ ತಿ ತು ತ್ರ ಇವುಗಳಿಗೆ ಇಡಾಗಮ ನಿಷೇಧ ಬರುವುದಿಲ್ಲ. ಗ್ರಹಾದಿಯು ಆಕೃತಿಗಣ. ಈ ನಿಷೇಧದಿಂದ ಇಲ್ಲಿ ಇಡಾಗಮನಿಷೇಧ ಬರುವುದಿಲ್ಲ. ನಿಗೃಹೀತಿಃ, ನಿಪತಿತಿಃ ಇತ್ಯಾದಿ ಕಡೆ ಗಳಲ್ಲೂ ಇದರಿಂದ ಇಡಾಗಮಕ್ಕೆ ನಿಷೇಧಬರುವುದಿಲ್ಲ. ಇದರಂತೆ ಪ್ರಕೃತದಲ್ಲಿ ಇಟ್ಟುಕೊಳ್ಳಬೇಕು.

ವಿಪ್ರಾಸಃ—**ಋಜ್ರೇನ್ದ್ರಾಗ್ನಿವಿಪ್ರೇ**—(ಉ. ಸೂ. ೨-೧೦೬) ಎಂಬುದರಿಂದ ವಿಪ್ರ ಶಬ್ದವು ರನ್ಪ್ರತ್ಯ ಯಾಂತವಾಗಿ ನಿಪಾತಿತವಾಗಿರುವುದು. ಆದ್ದರಿಂದ ನಿತ್ಸ್ವರ ಬಂದು ಆದ್ಯುದಾತ್ತವಾಗುವುದು ಇದರ ಮುಂದೆ **ಜಸ್** ಪ್ರತ್ಯಯವನ್ನಿಟ್ಟರೆ **ಆಜ್ಜಸೇರಸುಕ್** (ಪಾ. ಸೂ. ೭-೧-೫೦) ಎಂಬುದರಿಂದ ಅಸುಕ್ ಆಗಮ ಬರುವುದು.

ಧಿಯಾಯವಃ—**ಧಿ ಧಾರಣೇ ಧಾತು. ಧೀಯತೇ ಧಾರ್ಯತೇ ಅವಬುದ್ಧ್ಯತೇ ಶ್ರುತಮರ್ಥಜಾತಂ ಸರ್ವಂ ಅನೇಯಾ ಇತಿ ಧಿಯಾ**= ಪ್ರಜ್ಞಾ. ಯಾವುದರಿಂದ ಕೇಳಿದ ಅರ್ಥಗಳೆಲ್ಲವೂ ಧರಿಸಲ್ಪಡುವುವೋ ಅಂತಹ ಪ್ರಜ್ಞೆಗೆ ಧಿಯಾ ಎಂದು ಹೆಸರು. ಧಿಯಂ ಆತ್ಮನ ಇಚ್ಛತಿ ಎಂದು ವಿವಕ್ಷಿಸಿದಾಗ **ಸುಪ ಆತ್ಮನಃ ಕ್ಯಚ್** (ಪಾ. ಸೂ. ೩-೧-೮) ಎಂಬುದರಿಂದ ಕ್ಯಚ್ ಪ್ರತ್ಯಯ. **ಕ್ಯಾಚ್ಛಂದಸಿ** (ಪಾ.ಸೂ. ೩-೨-೧೭೦) ಕ್ಯಚ್, ಕ್ಯಷ್, ಕ್ಯಚ್ ಕಂಡ್ವಾದಿಯಕ್ ಇವುಗಳನ್ನು ಕೊನೆಯಲ್ಲಿ ಹೊಂದಿರುವ ಧಾತುವಿನ ಮುಂದೆ ತಚ್ಛೀಲಾದ್ಯರ್ಥಗಳಲ್ಲಿ ಉ ಪ್ರತ್ಯಯ ಬರುವುದು ಎಂಬುದರಿಂದ ಉ ಪ್ರತ್ಯಯ ಬರುವುದು. **ಆತೋಲೋಪಃ** (ಪಾ. ಸೂ. ೬-೪-೪೯) ಆರ್ಧಧಾತುಕ ಪ್ರತ್ಯಯ ಪರದಲ್ಲಿರುವಾಗ ಆರ್ಧಧಾತುಕದ ಉಪದೇಶಕಾಲದಲ್ಲಿ ಆದಂತವಾಗಿರುವ ಶಬ್ದದ ಆಕಾರಕ್ಕೆ ಲೋಪ ಬರುವುದು ಎಂಬುದರಿಂದ ಆಕಾರಕ್ಕೆ ಲೋಪ ಬಂದರೆ ಧಿಯಾಯು ಎಂದಾಗುವುದು ಪ್ರತ್ಯಯ ಸ್ವರದಿಂದ ಇದು ಅಂತೋದಾತ್ತ. ಪ್ರಥಮಾವಿಭಕ್ತಿ ಬಹುವಚನದಲ್ಲಿ ಧಿಯಾಯವಃ ಎಂದಾಗುವುದು ॥ ೬ ॥

॥ ಸಂಹಿತಾಪಾಠಃ ॥

ಯಃ ಕುಕ್ಷಿಃ ಸೋಮಪಾತಮಃ ಸಮುದ್ರ ಇವ ಪಿನ್ವತೇ ।
ಉರ್ವೀರಾಪೋ ನ ಕಾಕುದಃ ॥ ೭ ॥

॥ ಪದಪಾಠಃ ॥

ಯಃ । ಕುಕ್ಷಿಃ । ಸೋಮಽಪಾತಮಃ । ಸಮುದ್ರಃ॑ಇವ । ಪಿನ್ವತೇ ॥
ಉರ್ವೀಃ । ಆಪಃ । ನ । ಕಾಕುದಃ ॥ ೭ ॥

॥ ಸಾಯಣಭಾಷ್ಯಂ ॥

ಯಃ ಕುಕ್ಷಿರಸ್ಯೇಂದ್ರಸ್ಯೋದರಪ್ರದೇಶಃ ಸೋಮಸಾತನೋಽತಿಶಯೇನ ಸೋಮಸ್ಯ ಪಾತಾ ಸ ಕುಕ್ಷಿಃ ಸಮುದ್ರ ಇವ ಪಿನ್ವತೇ । ವರ್ಧತೇ । ಸೇಚನಾರ್ಥೋ ಧಾತುರೌಚಿತ್ಯೇನ ವೃದ್ಧಿಂ ಲಕ್ಷಯತಿ । ಕಾಕುದೋ ಮುಖಸಂಬಂಧಿನ್ಯ ಉರ್ವೀರ್ಬಹ್ವ್ಯ ಆಪೋ ನ ಜಲಾನೀವ । ಜಿಹ್ವಾಸಂಬಂಧಮಾಸ್ಯೋದಕಂ ಯಥಾ ಕದಾಚಿದಪಿ ನ ಶುಷ್ಯತಿ ತಥೇಂದ್ರಸ್ಯ ಕುಕ್ಷಿಃ ಸೋಮಪೂರಿತೋ ನ ಶುಷ್ಯತೀತ್ಯರ್ಥಃ । ಯದ್ಯಪಿ ಶ್ಲೋಕ ಇತ್ಯಾದಿಷು ಸಪ್ತಪಂಚಾಶತ್ಸು ವಾಜ್ಞಾಮಸು ಕಾಕುಜ್ಜಿಹ್ವೇತಿ ಪಠಿತಂ ತಥಾಪ್ಯುದಕಸಂಬಂಧಸಿದ್ಧ್ಯರ್ಥಮತ್ರ ಕಾಕುಚ್ಶಬ್ದೇನ ಮುಖಮುಪಲಕ್ಷ್ಯತೇ । ಸಂಬಂಧವಾಚಿನಸ್ತದ್ಧಿತಸ್ಯಾತ್ರ ಛಾಂದಸೋ ಲೋಪೋ ದ್ರಷ್ಟವ್ಯಃ ॥ ಸೋಮಪಾತಮಃ । ಸೋಮಂ ಪಿಬತೀತಿ ಸೋಮಪಾಃ । ಆಕಾರೋ ಧಾತುಸ್ವರೇಣೋದಾತ್ತಃ । ಕೃದುತ್ತರಪದಪ್ರಕೃತಿಸ್ವರೇಣ ಸ ಏವ ಶಿಷ್ಯತೇ । ತಮಪಃ ಪಿತ್ತ್ವಾದನುದಾತ್ತತ್ವಂ । ಸಮುದ್ರಶಬ್ದಃ ಪ್ರಾತಿಪದಿಕತ್ವಾದಂತೋದಾತ್ತಃ । ಇವೇನ ವಿಭಕ್ತ್ಯಲೋಪಃ ಪೂರ್ವಪದಪ್ರಕೃತಿಸ್ವರತ್ವಂ ಚ । ಪಾ. ೨-೧-೪-೨ । ಇತಿ ಪ್ರಕೃತಿಸ್ವರಃ । ಪಿನ್ವತೇ । ಪಿವಿ ಸೇಚನೇ । ಇದಿತೋ ನುಮ್ ಧಾತೋರಿತಿ ನುಮಾಗಮಃ । ಶಪಃ ಪಿತ್ತ್ವೇನಾನುದಾತ್ತತ್ವಂ । ತಿಙಶ್ಚ ಲಸಾರ್ವಧಾತುಕಸ್ವರೇಣ ಧಾತುಸ್ವರ ಏವ ಶಿಷ್ಯತೇ । ಉರ್ವೀಃ । ಉರುಶಬ್ದೋಽಂತೋದಾತ್ತಃ । ವೋತೋ ಗುಣವಚನಾತ್ । ಪಾ. ೪-೧-೪೪ । ಇತಿ ಙೀಷ್ । ಯಣಾದೇಶಃ । ಉದಾತ್ತಯಣೋ ಹಲ್ಪೂರ್ವಾತ್ । ಪಾ. ೬-೧-೧೭೪ । ಇತೀಕಾರ ಉದಾತ್ತಃ । ಜಸಾ ಸಹೈಕಾದೇಶ ಉದಾತ್ತೇನೋದಾತ್ತ ಇತ್ಯೇಕಾದೇಶ ಉದಾತ್ತಃ । ಆಪಃ । ಪ್ರಾತಿಪದಿಕಸ್ವರಃ । ಕಾಕುದಃ । ಪ್ರಾತಿಪದಿಕಸ್ವರೇಣಾಂತೋದಾತ್ತಃ ॥

॥ ಪ್ರತಿಪದಾರ್ಥ ॥

ಯಃ ಕುಕ್ಷಿಃ—ಇಂದ್ರನ ಯಾವ ಉದರವು । ಸೋಮಪಾತಮಃ—ಸೋಮಪಾನ ಮಾಡುವುದೋ (ಆ ಉದರವು)। ಸಮುದ್ರ ಇವ-ಸಮುದ್ರದಂತೆ । ಪಿನ್ವತೇ-ಉಬ್ಬಿ ದೊಡ್ಡದಾಗುವುದು । (ಮತ್ತು) ಕಾಕುದಃ—ಮುಖಸಂಬಂಧವಾದ (ಎಂದರೆ ಬಾಯಿಯೊಳಗೆ ಇರುವ ನಾಲಗೆಯ) ಉರ್ವೀಃ—ಬಹಳವಾದ । ಆಪೋ ನ—ನೀರಿನಂತೆ (ಯಾವಾಗಲೂ ಒಣಗದೆ ವದ್ದೆಯಾಗಿರುವುದು)

॥ ಭಾವಾರ್ಥ ॥

ಅತಿಶಯವಾಗಿ ಸೋಮಪಾನಮಾಡುವುದರಿಂದ ಇಂದ್ರನ ಉದರವು ಸಮುದ್ರದಂತೆ ದೊಡ್ಡದಾಗಿ ಉಬ್ಬಿರುವುದಲ್ಲದೆ ಬಾಯಿಯಲ್ಲಿರುವ ನಾಲಗೆಯು ಸದಾ ನೀರಿನಿಂದ ವದ್ದೆಯಾಗಿರುವಂತೆ ಆರ್ದ್ರೀಭೂತವಾಗಿರುವುದು.

English Translation

The belly of Indra which drinks soma-juice most abundantly swells like ocean and like the ample fluids of the palate.

॥ ವಿಶೇಷವಿಷಯಗಳು ॥

ಇಲ್ಲಿ ಇಂದ್ರನು ಸೋಮಪಾನ ಮಾಡುವುದನ್ನು ಉತ್ಪ್ರೇಕ್ಷೆಯಿಂದ ವರ್ಣಿಸಲಾಗಿದೆ. ಎಂದರೆ ಇಂದ್ರನು ಬಹಳವಾಗಿ (ನಾವು ಅರ್ಪಿಸುವ) ಸೋಮರಸವನ್ನು ಪಾನಮಾಡುವನು. ಅದರಿಂದ ಅವನ ಹೊಟ್ಟೆಯು ಸಮುದ್ರದಂತೆ ಉಬ್ಬುವುದು. ಮತ್ತು ಅತಿಶಯವಾಗಿ ಆಗಾಗ ಸೋಮಪಾನ ಮಾಡುವುದರಿಂದ ಅವನ ನಾಲಿಗೆಯು ಯಾವಾಗಲೂ ಸೋಮದಿಂದ ವದ್ದೆಯಾಗಿಯೇ ಇರುವುದು. ಮನುಷ್ಯರ ಬಾಯಿಯ ನಾಲಗೆಯಿಂದ ಜಿನುಗುತ್ತಿರುವ ದ್ರವದಿಂದ ಯಾವಾಗಲೂ ವದ್ದೆಯಾಗಿರುವಂತೆ ಇಂದ್ರನ ಉದರವೂ ಸಹ ಅತಿಶಯ ಸೋಮಪಾನದಿಂದ ಯಾವಾಗಲೂ ಆರ್ದ್ರವಾಗಿಯೇ ಇರುವುದು. ಎಂದಿಗೂ ಒಣಗುವುದಿಲ್ಲ ಎಂದಭಿಪ್ರಾಯವು.

ಕಾಕುದಃ—ಕಕುತ್ ಎಂದರೆ ತಾಲು palate ಅದರ ಸಂಬಂಧವಾದ ಎಂದರ್ಥವು. ಅಥವಾ ಶ್ಲೋಕ ಮೊದಲಾದ ಐವತ್ತೇಳು ವಾಙ್ನಾಮಗಳಲ್ಲಿ ಕಾಕುತ್ ಜಿಹ್ವಾ ಎಂಬ ಶಬ್ದಗಳು ಪಠಿತವಾಗಿರುವುದರಿಂದ (ನಿ. ೨-೨೩) ಇದಕ್ಕೆ ನಾಲಗೆಯೆಂದೂ ಅರ್ಥವಾಗುವುದು. ನಾಲಗೆಯು, ಮುಖವು (ಬಾಯಿಯು) ಯಾವಾಗಲೂ ಒದ್ದೆಯಾಗಿರುವ ವಿಷಯವು ಸಕಲರಿಗೂ ತಿಳಿದೇ ಇದೆ. ಆ ಉಪಮಾನವನ್ನೇ ಕವಿಯು ಇಲ್ಲಿ ವರ್ಣಿಸಿರುವನು. ಇದಲ್ಲದೆ **ಕಾಕುದಂ ತಾಲ್ವಿತ್ಯಾಚಕ್ಷತೇ** (ನಿ. ೫-೨೬) ಎಂದು ನಿರುಕ್ತವಚನವಿರುವುದಲ್ಲದೆ ಈ ಶಬ್ದಕ್ಕೆ ಪರ್ವತತಿಖರವೆಂದೂ ಅರ್ಥವಿರುವುದು. ಈ ಸಂದರ್ಭದಲ್ಲಿ ಬೆಟ್ಟದ ತುದಿಯಿಂದ ಕೆಳಕ್ಕೆ ಹರಿದು ಬರುತ್ತಿರುವ ಝರಿಗಳು ಬೆಟ್ಟವನ್ನು ಯಾವಾಗಲೂ ವದ್ದೆಯಾಗಿರುವಂತೆ ಮಾಡುವುದು. ಅದರಂತೆ ಎಂತಲೂ ಅರ್ಥಮಾಡಬಹುದು.

ವ್ಯಾಕರಣಪ್ರಕ್ರಿಯಾ

ಸೋಮಪಾತಮಃ—ಸೋಮಂ ಪಿಬತಿ ಇತಿ ಸೋಮಪಾಃ. **ಅತೋಽನುಪಸರ್ಗೇಕಃ** (ಪಾ. ಸೂ. ೩-೨-೩) ಎಂದು ವಿಹಿತವಾದ ಕ ಪ್ರತ್ಯಯವನ್ನು ಬಾಧಿಸಿ **ಅತೋಮನಿನ್‌ಕ್ವನಿಬ್ವನಿಪಶ್ಚ** (ಪಾ.ಸೂ. ೩-೨-೭೪) ಎಂಬಲ್ಲಿ ಚ ಗ್ರಹಣವಿರುವುದರಿಂದ ವಿಚ್ ಪ್ರತ್ಯಯ ಬರುವುದು. ಪಾ ಎಂಬುದು **ಧಾತೋಃ** (ಪಾ. ಸೂ. ೬-೧-೧೬೨) ಎಂಬುದರಿಂದ ಅಂತೋದಾತ್ತ. **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂದು ವಿಹಿತವಾದ ಕೃದುತ್ತರಪದಪ್ರಕೃತಿಸ್ವರದಿಂದ ಸೋಮಪಾ, ಶಬ್ದವೂ ಅಂತೋದಾತ್ತ. ಇದರ ಮುಂದೆ ಅತಿಶಯ ಎಂಬ ಅರ್ಥದಲ್ಲಿ **ಅತಿಶಾಯನೇತಮಬಿಷ್ಠನೌ** (ಪಾ. ಸೂ. ೫-೩-೫೫) ಎಂಬುದರಿಂದ ತಮಪ್ ಪ್ರತ್ಯಯ. ತಮಪ್ಪು ಪಿತ್ತಾದ್ದರಿಂದ **ಅನುದಾತ್ತೌಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ಅನುದಾತ್ತ.

ಸಮುದ್ರ—ಶಬ್ದವು ಪ್ರಾತಿಪದಿಕಸ್ವರದಿಂದ ಅಂತೋದಾತ್ತ. **ಇವೇನವಿಭಕ್ತ್ಯೋಪಃ ಪೂರ್ವಪದಪ್ರಕೃತಿಸ್ವರತ್ವಂಚ** (ಪಾ. ಸೂ. ೨-೧-೪, ವ. ೨) ಎಂಬುದರಿಂದ ಸಮಾಸವೂ ಪೂರ್ವಪದಪ್ರಕೃತಿಸ್ವರವೂ ಬಂದರೆ ಅದೇ ಸ್ವರವೇ ನಿಲ್ಲುವುದು.

ಪಿನ್ವತೇ—ಪಿವಿ-ಸೇಚನೇ ಧಾತು. **ಇದಿತೋನುಮ್ ಧಾತೋಃ** (ಪಾ.ಸೂ. ೭-೧-೫೮) ಎಂಬುದರಿಂದ ನುಮ್ ಆಗಮ. ಲಟ್ ಆತ್ಮನೇಪದ ಪ್ರಥಮಪುರುಷ ಏಕವಚನ ತ ಬರುವುದು. **ಟಿತ ಆತ್ಮನೇಪದಾನಾಂ ಟೇರೇ** (ಪಾ. ಸೂ. ೩-೪-೭೯) ಎಂಬುದರಿಂದ ತ ಗೆ ಏತ್ವ, ಶಪ್ ವಿಕರಣ ಬಂದರೆ ಪಿನ್ವತೇ ಎಂದಾಗುವುದು. ಶಪ್ಪು ಪಿತ್ತಾದ್ದರಿಂದ ಅನುದಾತ್ತ. ತೇ ಎಂಬುದು ಅದುಪದೇಶದ ಮುಂದೆ ಇರುವುದರಿಂದ **ತ್ಯಾಸ್ಸನುದಾತ್ತೇನ್ಙಿತ್**

पदादेशात् (पा. सू. ६-८-२२६) ಎಂಬುದರಿಂದ ಅನುದಾತ್ತ. **येषां च त्रिष्वन्यतरस्यां** (पा. सू. ७-८-६६) ಯಾವಪದದಲ್ಲಿ ಯಚ್ಛಬ್ದವಿದೆಯೋ ಆದರೆ ಮುಂದಿರುವ **त्रिष्** ಶಬ್ದವು ಅನುದಾತ್ತವಾಗುವುದಿಲ್ಲ ಎಂದು ನಿಷೇಧವಿರುವುದರಿಂದ **त्रिष्वाऽऽदितस्त्रिषु** ಎಂಬುದರಿಂದ ಅನುದಾತ್ತ ಬರುವುದಿಲ್ಲ.

ऊर्वीः—ಊರು ಶಬ್ದವು ಅಂತೋದಾತ್ತ, **वोतोगुणवचनात्** (पा. सू. ४-८-४४) ಹ್ರಸ್ವವಾದ ಉಕಾರವನ್ನು ಕೊನೆಯಲ್ಲಿ ಹೊಂದಿರುವ ಗುಣವಾಚಕದ ಮುಂದೆ ಸ್ತ್ರೀಲಿಂಗದಲ್ಲಿ **ङीष्** ಪ್ರತ್ಯಯವು ವಿಕಲ್ಪವಾಗಿ ಬರುವುದು ಎಂಬುದರಿಂದ **ङीष्** ಬರುವುದು. ಯಣಾದೇಶ ಬಂದರೆ **ऊर्व्यै** ಎಂದಾಗುವುದು. **उदात्तयणो हल्पूर्वात्** (पा. सू. ६-८-८३४) ವ್ಯಂಜನದ ಮುಂದೆ ಇರುವ ಉದಾತ್ತಸ್ಥಾನದಲ್ಲಿ ಬಂದ ಯ, ವ, ರ, ಲ ಗಳ ಮುಂದೆ ಇರುವ ನದೀಸಂಜ್ಞಕ ವರ್ಣವೂ, ಶಸಾದಿಯಾದ ವಿಭಕ್ತಿಯೂ ಸಹ ಉದಾತ್ತವಾಗುವುದು ಎಂಬುದರಿಂದ ನದೀಸಂಜ್ಞಕವಾದ **ङीष्** ಪ್ರತ್ಯಯದ **ईकार**ವು ಉದಾತ್ತವಾಗುವುದು. ಉರ್ವೀಶಬ್ದದ ಮುಂದೆ **जस्**ನ್ನಿಟ್ಟರೆ **ऊर्वी+अस्** ಎಂದಿರುವಾಗ **प्रथममयोः पूर्वसवर्णः** (पा. सू. ६-१-१०३) ಎಂಬುದರಿಂದ **पूर्वसवर्णदीर्घ** ಬರುವುದು. **पूर्वसवर्णदीर्घ**ದಿಂದ ಬಂದ ಈಕಾರವು **एकादेशउदात्तेनोदात्तः** (पा. सू. ८-४-७) ಎಂಬುದರಿಂದ ಉದಾತ್ತ.

आपः—ಪ್ರಾತಿಪದಿಕಸ್ವರ ಬರುವುದು.

काकुदः—**काकुत् जिह्वा** (निरु. १-११-३४) ಎಂದು ನಿರುಕ್ತದಲ್ಲಿ 'श्लोकः' ಎಂದು ಆರಂಭಿಸಿ ಪಠಿತವಾದ ಏವತ್ತೇಳು ವಾಙ್ಮಯಗಳ ಮಧ್ಯದಲ್ಲಿ **काकुत्** ಶಬ್ದವನ್ನು ಯಾಸ್ಕರು ಪಠಿಸಿರುವರು. ಆ ಅರ್ಥವನ್ನು ತೆಗೆದುಕೊಂಡರೆ **आपः** ಎಂಬ ಶಬ್ದದಿಂದ ಬೋಧಿತವಾದ ಜಲರೂಪವಾದ ಅರ್ಥದೊಂದಿಗೆ ಅನ್ವಯ ಬರುವುದಿಲ್ಲ. ಆದ್ದರಿಂದ **काकुत्** ಎಂಬುದರಿಂದ ಮುಖವು ಉಪಲಕ್ಷಿತವಾಗುವುದು. **भूमनिन्दाप्रशंसासु नित्ययोगेऽतिशायने संबन्धेऽस्तिविवक्षायां भवन्ति मतुवसो** (पा. सू. ५-२-९४ ಮಭಾ) ಎಂದು ಮಹಾಭಾಷ್ಯಕಾರರು ಹೇಳಿರುವುದರಿಂದ ಸಂಬಂಧಾರ್ಥ-ದಲ್ಲಿ ಮತುಪ್ ಪ್ರತ್ಯಯ ಬರುವುದು. ಆದಕ್ಕೆ ಛಾಂದಸವಾಗಿ ಲೋಪ ಬರುವುದು. ಏವಂಚ **काकुदः** ಎಂಬುದಕ್ಕೆ ಮುಖಸಂಬಂಧಿಯಾದ ಎಂದು ಅರ್ಥ. **काकुदः**—ಇದು ಪ್ರಾತಿಪದಿಕಸ್ವರದಿಂದ ಅಂತೋದಾತ್ತವಾಗುವುದು ॥ ೬ ॥

॥ संहितापाठः ॥

एवा ह्यस्य सूनृता विरप्शी गोमती मही ।
पक्वा शाखा न दाशुषे ॥ ७ ॥

॥ पदपाठः ॥

एव । हि । अस्य । सूनृता । वि । रप्शी । गोऽमती । मही ॥
पक्वा । शाखा । न । दाशुषे ॥ ७ ॥

॥ सायणभाष्यं ॥

अभिष्ट्यवषडहगतेषूक्थ्येषु शस्त्रीयेऽसवनेऽ ब्राह्मणाच्छंसिन एवा ह्यस्य सून्यृतेत्येनुरूपस्तृचः । अथ्यूषु ब्रवाणि त इति खण्डे अथ ब्राह्मणाच्छंसिन इत्युपक्रम्य एवा ह्यसि वीरयुरेवा ह्यस्य सून्यृता । अ. ६-८ । इति सूत्रितम् ॥

अस्येन्द्रस्य सून्यृता प्रियसत्यरूपा वाग्द्यावाशुषे मघवद्भ्यो यजमानायेत्यदर्थमेवा हि एवं खलु । अनन्तरपदवक्ष्यमाणगुणोपेता भवतीत्यर्थः । कीदृशी । विश्वी विविधरमणोपेतेवाक्ययुक्ता । बहुविधोपचारवानिति यावत् । गोमतीः बह्वीभिर्गोभिरुपेता । गोप्रदेत्यर्थः । अत एव मही महतीः पूज्या । यथोक्तवाचो दृष्टान्तः । पक्वा शाखा न । यथा बहुभिः पक्वैः फलैरुपेता सनसंवृक्षादिशाखा प्रीतिहेतुस्तद्वत् । यद्यपि महन्नामसु व्याधन् विश्वीति पठितं तथाप्यत्र मह्यत्येनेन पुनरुक्तिप्रसंगादनयेवार्थोऽ गृहीतः ॥ एव एवमादीनामन्त इत्यंतोदात्तः संहितायां निपातस्य चेति दीर्घः । हि । निपात आद्युदात्तः । अस्य । प्रकृतस्येन्द्रस्य परामर्शादिदमोऽन्वादेश इत्याद्यनाशादेशोऽनुदात्त इति सर्वानुदात्तः । सूनृता । ऊन परिहाणे । सुतरामूनयत्यप्रियमिति सून् । सा चासावृता सत्या चेति सूनृता प्रियसत्या वाक् । परादिश्छंदसि बहुलमित्यृकार उदात्तः । विश्वी । विशेस्त्रन् रपणं विरप् । रप लप व्यक्तायां वाचि । संपदादित्वाद्भावे क्विप् । तदेषामस्तीति विश्वानि वाक्यानि । तानि यस्यां वाचि संति सा वाग्विश्वी । अत इनितनाविति नीः । यस्येति च । पा. ६-४-१४८ । इत्यकारलोपः । अन्येभ्यो ङीप् । पा. ४-१-४ । इति ङीप् । इकारः प्रत्ययस्वरेणोदात्तः । नकारलोपसंधादसः । सवर्णदीर्घ एकादेश उदात्तेनोदात्त इत्युदात्तः । गावोऽस्यां संतीति गोमती । मतुष्ठिन्ङीप् पित्त्वादनुदात्तौ । प्रातिपदिकस्वर एव शिष्यते । मही । महतीः । उगितश्च । पा. ४-१-६ । इति ङीप् । तस्य पित्त्वादनुदात्तत्वे प्राप्ते शतुरनुमो नद्यजादी इत्यत्र बृहन्महतोरुपसंख्यानं । पा. ६-१-१८६-१ । इत्युदात्तत्वं । अच्बलोपसंधादसः । पक्वा । डुपचष् पाके । निष्ठा । पा. ३-२-१०२ । इति क्तप्रत्ययः । पचोः वः । पा. ८-२-५७ । इति वत्वं । चोः कुः । पा. ८-२-३० । इति कुत्वं । प्रत्ययस्वरेणान्तोदात्तः । टापा सह सवर्णदीर्घ एकादेश उदात्तेनोदात्त इत्युदात्तः । शाखा । शाखृ शल्लृ व्याप्तौ । पचाद्यच् । चित्त्वादन्तोदात्ते प्राप्ते वृक्षादेराकृतिगणत्वाद्वृक्षादित्वादाद्युदात्तत्वं । दाशुषे । दाशृ दाने । दाशान्साह्वान्मीढ्वांश्च । पा. ६-१-१२ । इति निपातनात्सम्प्रसारणादिभावो द्विर्वचनाभावश्च । चतुर्थ्येकवचने यजि भं । पा. १-४-१८ । इति भसंज्ञायां वसोः संप्रसारणं । पा. ६-४-१३१ । इति संप्रसारणं वकारस्योकारः । परपूर्वत्वं । शासिवसिघसीनां च । पा. ८-३-६० । इति षत्वं । प्रत्ययस्वरेणोकार उदात्तः ॥

॥ ಪ್ರತಿಪದಾರ್ಥ ॥

ಅಸ್ಯ—ಇಂದ್ರನ । **ಸೂನೃತಾ**—ಪ್ರಿಯವೂ ಸತ್ಯವೂ ಆದ (ವಾಕ್ಯವು) । **ದಾಶುಷೇ**—ಹವಿಸ್ಸನ್ನು ಕೊಡುವ ಯಜಮಾನನಿಗೆ । **ಪಕ್ವಾ**—ಪಕ್ವಫಲೋಪೇತವಾದ । **ಶಾಖಾ ನ**—ಕೊಂಬೆಯಂತೆ । **ವಿರಪ್ಶೀ**—ಬಹುವಿಧ (ಇಷ್ಟಪ್ರದವೂ) । **ಗೋಮತೀ**—ಗೋವುಗಳನ್ನು ಕೊಡುವುದೂ । **ಮಹೀ ಏನಾ ಹಿಂ**—ಪೂಜ್ಯವೂ (ಆಗಿಯೇ ಇರುವುದು)

॥ ಭಾವಾರ್ಥ ॥

ಹವಿಸ್ಸನ್ನು ಕೊಡುವ ಯಜಮಾನ ವಿಷಯದಲ್ಲಿ ಇಂದ್ರನ ಮಾತು ಸತ್ಯವಾಗಿಯೂ ಅನೇಕ ಇಷ್ಟಗಳನ್ನು ಕೊಡುವುದಾಗಿಯೂ ಇರುವುದು. ಆಲ್ಲದೆ ಆ ಇಂದ್ರನ ವಾಕ್ಯವು ಪಕ್ವಫಲಗಳಿಂದ ತುಂಬಿದ ಕೊಂಬೆಯಂತೆ ಯಜಮಾನನಿಗೆ ಅವನ ಬಹುವಿಧ ಇಷ್ಟಗಳನ್ನು ಕೊಡುವುದಲ್ಲದೆ ಗೋವುಗಳನ್ನೂ ಕೊಡುವುದು. ಇಂದ್ರನ ಮಾತು ಯಾವಾಗಲೂ ಪೂಜ್ಯವಾದುದರಿಂದ ಗೌರವಾರ್ಹವು. ಅದು ಎಂದಿಗೂ ಸುಳ್ಳಾಗುವುದಿಲ್ಲ.

ವಿಶೇಷವಿಷಯಗಳು

ಅಭಿಪ್ಲವಷಡಹವೆಂಬ ಯಾಗದ ಉಕ್ಥಮಂತ್ರಪಠನಕಾಲದಲ್ಲಿ ತೃತೀಯಸವನದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು **ವಿವಾಹ್ಯಸ್ಯ ಸೂನೃತಾ** ಎಂಬ ತೃಚವನ್ನು ಪಠಿಸಬೇಕು. ಈ ವಿಷಯವನ್ನು ಆಶ್ವಲಾಯನರು ತಮ್ಮ ಶ್ರೌತಸೂತ್ರದಲ್ಲಿ (ಆ. ೭-೪) **ಏಹ್ಯೂಷು ಬ್ರವಾಣಿ ತೇ** ಎಂಬ ಖಂಡನಲ್ಲಿ **ಅಥ ಬ್ರಾಹ್ಮಣಾಚ್ಛಂಸಿನೇ** ಎಂದು ಪ್ರಾರಂಭಿಸಿ **ವಿವಾಹ್ಯಸಿ ವೀರಯುಃ** (ಋ. ಸಂ. ೮-೯೨-೨೮) ಮತ್ತು **ವಿವಾಹ್ಯಸ್ಯ ಸೂನೃತಾ** (ಋ. ಸಂ. ೧-೮-೮) ಎಂಬ ಋಕ್ಕುಗಳನ್ನು ಪಠಿಸಬೇಕೆಂದು ಹೇಳಿರುವರು.

ಈ ಋಕ್ಕಿನ ಅರ್ಥವು ಸ್ವಲ್ಪ ತೊಡಕಾಗಿರುವುದು. ಇಂದ್ರನು ಯಾವಾಗಲೂ ತನ್ನನ್ನು ಆರಾಧಿಸುವವರಿಗೆ ಅವರವರ ಇಷ್ಟಗಳನ್ನು ಕೊಡುವನು. ಅವನಮಾತು ಪ್ರಿಯವೂ ಸತ್ಯವೂ ಆಗಿರುವುದು, ಅದು ಸುಳ್ಳಾಗುವುದಿಲ್ಲ ಮತ್ತು ಚೆನ್ನಾಗಿ ಪಕ್ವವಾದ ಹಣ್ಣುಗಳಿಂದ ಜಗಿಯುತ್ತಿರವ ವೃಕ್ಷವ ಕೊಂಬೆಯು ಜನರಿಗೆ ಹೇಗೆ ಸಂತೋಷವನ್ನುಂಟುಮಾಡುವುದೋ ಇಂದ್ರನ ಮಾತೂ ಹಾಗೆಯೇ ಜನರಿಗೆ ಪ್ರಿಯವಾಗಿರುವುದು. ಏಕೆಂದರೆ ಇಂದ್ರನು ತನಗೆ ಹವಿಸ್ಸನ್ನು ಕೊಡುವ ಯಜಮಾನನೇ ಮೊದಲಾದವರಿಗೆ ಅವರವರಿಗೆ ಬೇಕಾದ ಗೋವುಗಳೇ ಮೊದಲಾದ ಅನೇಕವಿಧವಾದ ಇಷ್ಟಗಳನ್ನು ಕೊಡುವನು. ಆದುದುರಿಂದ ಅವನ ವಾಕ್ಯವು ಪೂಜ್ಯವೂ ಗೌರವಾರ್ಹವೂ ಆದುದು. ಅದು ಎಂದಿಗೂ ಸುಳ್ಳಾಗಲಾರದು ಎಂದು ಮುಖ್ಯಾಭಿಪ್ರಾಯವು.

ಸೂನೃತಾ—**ಊನ ಪರಿಹಾಣೇ । ಸುತರಾಮೂನಯತ್ಯಪ್ರಿಯಮಿತಿ ಸೂನ್ । ಸಾ ಚಾಸಾವೃತಾ ಸತ್ಯಾ ಚೇತಿ ಸೂನೃತಾ ಪ್ರಿಯಸತ್ಯಾ ವಾಕ್ । ಊನಧಾತುವಿಗೆ ಪರಿಹರಿಸುವುದು ಎಂದರ್ಥವು. ಅಪ್ರಿಯ ಎಂದವೆ ಕೆಡಕನ್ನು ಚೆನ್ನಾಗಿ ಪರಿಹರಿಸುವುದರಿಂದ ಸೂನ್ ಎಂದು ಹೆಸರು. ಋತ ಎಂದರೆ ಸತ್ಯವು ಆದುದರಿಂದ ಸೂನೃತಾಶಬ್ದಕ್ಕೆ ಅಪ್ರಿಯವಲ್ಲದ ಎಂದರೆ ಪ್ರಿಯವಾದ ಮತ್ತು ಸತ್ಯವಾದ ವಾಕ್ಯವು ಎಂದರ್ಥವು. ಸ್ಕಂದಸ್ವಾಮಿಯು ವಿರಪ್ಶೀ ಎಂಬ ಶಬ್ದಕ್ಕೆ **ಸರ್ವಕಾಮಧುಕ್** ಎಂದರೆ ಸಮಸ್ತ ಇಷ್ಟಗಳನ್ನು ಕೊಡುವ ಎಂಬ ಅರ್ಥವನ್ನಲ್ಲದೆ ಇನ್ನೊಂದು ಅರ್ಥವನ್ನು ಹೇಳಿರುವರು—**ಸೂನೃತಾ ಗರ್ಜಿತೇಲಕ್ಷಣಾ ವಾಕ್ । ಗೋಮತೀ**

ಅಪೋಽತ್ರ ಗಾವ ಉಚ್ಯಂತೇ ॥ ಎಂದರೆ ಇಲ್ಲಿ **ಗೋ** ಶಬ್ದಕ್ಕೆ ನೀರು, ಉದಕ ಎಂದು ಅರ್ಥವಾಡಬೇಕು. **ಸೂನೃತಾ** ಎಂದರೆ ಗರ್ಜನೆಯುಕ್ತವಾದ ವಾಕ್ ಅಥವಾ ಶಬ್ದವೆಂದು. ಆದುದರಿಂದ **ಸೂನೃತಾ ಗೋಮತೀ** ಎಂಬ ಶಬ್ದಗಳಿಗೆ ಶಬ್ದಯುಕ್ತವಾದ ಉದಕಗಳು ಎಂದರೆ ಮೇಘಗರ್ಜನೆಯಿಂದ ಕೂಡಿದ ಮಳೆಯು ಎಂದರ್ಥ ಮಾಡಿದಾರೆ

ವಿರಪ್ಶೀ—ವಿವಿಧರಪಣೋಪೇತವಾಕ್ಯಯುತಾ । ಬಹುವಿಧೋಪಚಾರವಾದಿನೀ । ರಪ ಲಪ ವ್ಯಕ್ತಾಯಾಂ ವಾಚಿ । ವಿಚಿತ್ರೇಂ ರಪಣಂ ಯಸ್ಯಾಂ ವಾಚಿ ಅಸ್ತೀತಿ ಸಾ ವಿರಪ್ಶೀ ॥ ರಪ ಧಾತುವಿಗೆ ಶಬ್ದ ಮಾಡು, ಮಾತನಾಡು ಎಂದರ್ಥವು, ವಿಶೇಷವಾಗಿ ಅಥವಾ ವಿಚಿತ್ರವಾಗಿ ಅಥವಾ ವಿಧವಿಧವಾಗಿ ಮಾತನಾಡುವುದಕ್ಕೆ ವಿರಪಣ ಎಂದು. ಇಂತಹ ಶಬ್ದಗಳಿರುವ ವಾಕ್ಯಕ್ಕೆ ವಿರಪ್ಶೀ ಎಂದರೆ ಬಹುವಿಧವಾದ ಉಪಚಾರಶಬ್ದಗಳನ್ನೊಳಗೊಂಡಿರುವ ವಾಕ್ಯವೆಂದರ್ಥವು. ಎಂದರೆ ಇಂದ್ರನ ವಾಕ್ಯವು ಬಹುವಿಧವಾದ ಇಷ್ಟಗಳನ್ನು ಕೊಡುವುದೆಂದರ್ಥವು. ವಿರಪ್ಶೀ ಎಂಬ ಶಬ್ದಕ್ಕೆ **ಮಹತ್**, ದೊಡ್ಡದು ಎಂಬರ್ಥವು ರೂಢಿಯಲ್ಲಿದ್ದರೂ ಈ ಋಕ್ಕಿನಲ್ಲಿ ಆ ಅರ್ಥವನ್ನೇ ಹೇಳುವ ಮಹೀ ಎಂಬ ಶಬ್ದವಿರುವುದರಿಂದ ದ್ವಿರುಕ್ತಿದೋಷವುಂಟಾಗುವುದೆಂದು ಈ ಶಬ್ದಕ್ಕೆ **ಮಹತ್** ಎಂಬ ಅರ್ಥವನ್ನು ಹೇಳದೆ ಅವಯವಾರ್ಥವನ್ನು ಕಲ್ಪಿಸಿರುವುದೆಂದು ಭಾಷ್ಯಕಾರರು ಹೇಳಿರುವರು.

ಏವ—ಛಂದಸ್ಸಿನ ಅನುಕೂಲಕ್ಕಾಗಿ ವಕಾರವು ದೀರ್ಘವಾಗಿರುವುದು.

ಗೋಮತೀ—ಬಹ್ವೀಭಿರ್ಗೋಭಿರುಪೇತಾ । ಗೋಪ್ರದೇತ್ಯರ್ಥಃ ॥ ಗೋವುಗಳಿಂದ ಯುಕ್ತವಾದ ಎಂದರೆ ಗೋವುಗಳನ್ನು ಕೊಡುವ ಎಂದರ್ಥವು.

ಪಕ್ವಾ ಶಾಖಾ—ಇಲ್ಲಿ ಪಕ್ವಾ ಶಾಖಾ ಎಂದರೆ ಪಕ್ವವಾದ ಶಾಖೆಯೆಂದರ್ಥವಲ್ಲ, ಪಕ್ವಫಲಗಳಿಂದ ಜಗಿಯುತ್ತಿರುವ ಶಾಖೆಯೆಂದರ್ಥವು. ಇಂತಹ ಫಲಗಳು ಎಲ್ಲರಿಗೂ ಬೇಕಾಗಿರುವುದರಿಂದ ಕವಿಯು ಈ ಉಪಮಾನವನ್ನು ಕೊಟ್ಟಿರುವನು. ಇಲ್ಲಿ ನ ಎಂದರೆ ಇವ ಎಂದು ಉಪಮಾನಾರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಏವ—**ಏವಾದೀನಾಮಂತಃ** (ಫಿ. ಸೂ. ೮೨) ಏವಾದಿಗಳ ಕೊನೆಯ ವರ್ಣವು ಉದಾತ್ತವಾಗುವುದು ಎಂಬುದರಿಂದ ಏವ ಎಂಬುದು ಅಂತೋದಾತ್ತ. ಸಂಹಿತಾಕಾಲದಲ್ಲಿ **ನಿಪಾತಸ್ಯ ಚ** (ಪಾ. ಸೂ. ೬-೩-೧-೩೬) ಮಂತ್ರದಲ್ಲಿ ನಿಪಾತಕ್ಕೆ ದೀರ್ಘ ಬರುವುದು ಎಂಬುದರಿಂದ ದೀರ್ಘ ಬರುವುದು.

ಹಿ—**ನಿಪಾತಾಆದ್ಯುದಾತ್ತಾಃ**(ಫಿ. ಸೂ. ೮೦) ನಿಪಾತಗಳು ಆದ್ಯುದಾತ್ತಗಳಾಗುವುವು ಎಂಬುದರಿಂದ ಆದ್ಯುದಾತ್ತ.

ಅಸ್ಯ—ಪೂರ್ವದಲ್ಲಿ ಪ್ರಸ್ತುತನಾದ ಇಂದ್ರನಿಗೇ ಅಸ್ಯ ಎಂಬುದರಿಂದ ಪರಾಮರ್ಶವಾಗುವುದು. ಆದ್ದರಿಂದ **ಇದನೋನ್ವಾದೇಶೇಽನುದಾತ್ತಸ್ತೃತೀಯಾದೌ** (ಪಾ. ಸೂ. ೨-೪-೩೨) ತೃತೀಯಾದಿ ವಿಭಕ್ತಿ ಪರದಲ್ಲಿರುವಾಗ ಅನ್ವಾದೇಶವಿಷಯಕವಾದ ಇದಮ್ ಶಬ್ದದ ಸ್ಥಾನದಲ್ಲಿ ಅನುದಾತ್ತವಾದ ಅಶ್ ಬರುವುದು. ಅಶ್ ಆದೇಶವು ಶಿತ್ತಾದ್ದರಿಂದ ಇದಮ್ ಶಬ್ದದ ಸಂಪೂರ್ಣಸ್ಥಾನದಲ್ಲಿ ಬರುವುದು. ಈ ರೀತಿಯಲ್ಲಿ ಅ ಎಂಬುವುದು ಅನುದಾತ್ತ, **ಅನುದಾತ್ತೌಸುಪ್ಪಿತೌ** (ಪಾ. ಸೂ, ೩೭೧-೪) ಎಂಬುದರಿಂದ ಸ್ಯ ಅನುದಾತ್ತ. ಅಂತು ಅಸ್ಯ ಎಂಬುದು ಸರ್ವಾನುದಾತ್ತ.

ಸೂನೃತಾ—**ಊನಪರಿಹಾಣೇ** ಧಾತು. ಸುತರಾಂ ಊನಯತಿ ಅಪ್ರಿಯಂ, ಅಪ್ರಿಯವನ್ನು ಚೆನ್ನಾಗಿ (ನಿಶ್ಶೇಷವಾಗಿ) ಪರಿಹರಿಸುವುದು ಇತಿ, ಸೂನ್, ಋತಾ ಎಂದರೆ ಸತ್ಯವಾದುದು ಎಂದರ್ಥ. ಸೂನ್ ಚ ಸಾ ಋತಾ ಚ, ಸೂನೃತಾ ಪ್ರಿಯವೂ ಸತ್ಯವೂ ಆಗಿರುವ ಮಾತು, **ಪೆರಾದಿಶ್ಚಂಡಸಿ ಬಹುಲಮ್** (ಪಾ. ಸೂ. ೬-೨-೧೯೯) ಇಲ್ಲಿ **ಸಕ್ಥಂಚಾಕ್ರಾನ್ತಾತ್** (ಪಾ. ಸೂ. ೬-೨-೧೯೮) ಎಂಬುದರಿಂದ ಸಕ್ಥಂ ಎಂಬ ಪದವು ಅನುವೃತ್ತವಾಗುವುದು. ಏವಂಚ ಛಂದಸ್ಸಿನಲ್ಲಿ ಪರಪದವಾದ ಸಕ್ಥಶಬ್ದದ ಆದಿಯು ಬಹುಲವಾಗಿ ಉದಾತ್ತವಾಗುವುದು ಎಂದು ಅರ್ಥವು ಯದ್ಯಪಿ ಏರ್ಪಡುವುದು. **ವಿಭಾಷೋತ್ಪುಚ್ಛೇ** (ಪಾ.ಸೂ. ೬-೨-೯೬) ಎಂಬುದರಿಂದ ವಿಭಾಷಾ ಎಂಬ ಪದವು ಅನುವೃತ್ತವಾಗುವುದು. ಹೀಗಿರುವಲ್ಲಿ ಇಲ್ಲಿ ಬಹುಲಗ್ರಹಣವು ವಿಕಲ್ಪವೆಂದು ಇಷ್ಟುಮಾತ್ರವನ್ನು ಬೋಧಿಸಲಿಕ್ಕಾಗಿ ಉಪಾತ್ತವಾಗಿಲ್ಲ. ಬಹೂನರ್ಥಾನ್ ಲಾತಿ ಇತಿ ಬಹುಲಂ ಎಂಬ ವ್ಯುತ್ಪತ್ತಿಯಿಂದ ಬಹುವಿಧವಾದ ಅರ್ಥವನ್ನು ಬೊಧಿಸುವುದಕ್ಕಾಯೇ ಇಲ್ಲಿ ಬಹುಲಗ್ರಹಣವನ್ನು ಮಾಡಿರುವರು. ಇದರ ಅರ್ಥವನ್ನು ವಾರ್ತಿಕಕಾರರು ಹೇಳಿರುವರು ' ಪರಾದಿಶ್ಚ ಪರಾಂತಶ್ಚ ಪೂರ್ವಾಂತಶ್ಚಾಪಿದೃಶ್ಯತೇ' ಪೂರ್ವಾದಯಶ್ಚ ದೃಶ್ಯಂತೇ ವ್ಯತ್ಯಯೋ ಬಹುಲಂಯತಃ ॥ ಎಂಬುದೇ ವಾರ್ತಿಕವು. ಆದ್ದರಿಂದ ಸಕ್ಥ ಶಬ್ದವಿಲ್ಲದೇ ಇದ್ದರೂ ಈ ಸ್ವರ ಬರುವುದು. ಏವಂಚ ಸೂನೃತಾ ಎಂಬಲ್ಲಿ ಋಕಾರವು ಉದಾತ್ತ.

ವಿರಪ್ಶೀ—ವಿಚಿತ್ರಂ ರಪಣಂ ವಿರಪ್ ರಪೆ, ಲಪೆ. **ವ್ಯಕ್ತಾಯಾಂ ವಾಚಿ**. ವಿ ಉಪಸರ್ಗಪೂರ್ವಕವಾದ ರಪ್ ಧಾತುವಿನ ಮುಂದೆ **ಸಂಪದಾದಿಭ್ಯಃಕ್ವಿಪ್** (ಪಾ. ಸೂ. ೩-೩-೧೦೮ ವಾ ೯) ಎಂಬುದರಿಂದ ಕ್ವಿಪ್ ಪ್ರತ್ಯಯ, ಕ್ವಿಪ್ಪಿನಲ್ಲಿ ಎಲ್ಲಾ ವರ್ಣಗಳಿಗೂ ಲೋಪವಾಗುವುದು. ವಿರಪ್= ವಿಚಿತ್ರವಾದ ಮಾತು, ವಿರಪ್ ಏಷಾಂವಾಕ್ಯಾನಾಂ ಅಸ್ತಿ ಇತಿ ವಿರಪ್ಶಾನಿ, ವಿಚಿತ್ರವಾದ ಮಾತುಗಳುಳ್ಳ ವಾಕ್ಯಗಳು ; ವಿರಪ್ಶಗಳು. ಈ ವಾಕ್ಯಗಳು ಯಾವ ವಾಕ್ಯಿನಲ್ಲಿದೆಯೋ ಅದಕ್ಕೆ ವಿರಪ್ಶಿನೀ ಎನ್ನುವರು. ವಿರಪ್ಶಾನಿ ಅಸ್ಯಾಂ ಸನ್ತಿ ಎಂದು ವಿಗ್ರಹಮಾಡಿದಾಗ **ಆತೋಇನಿಠನೌ** (ಪಾ. ಸೂ. ೫-೨-೧೧೫) ಹ್ರಸ್ವಾಕಾರಾಂತ ಪ್ರಾತಿಪದಿಕದ ಮುಂದೆ ಪ್ರಥಮಾವಿಭಕ್ತಿ ಬಂದಿದ್ದರೆ ಅದರ ಮುಂದೆ ಮತುಪ್ ಪ್ರತ್ಯಯದ ಅರ್ಥವನ್ನು ವಿವಕ್ಷಿಸಿದಾಗ ಇನ್, ಠನ್ ಪ್ರತ್ಯಯಗಳು ಬರುವುವು. ಎಂಬುದರಿಂದ ' ಇನಿ ' ಪ್ರತ್ಯಯ ಬಂದರೆ ವಿರಪ್+ಇನ್, **ಯೆಸ್ಯೇತಿಚೆ** (ಪಾ. ಸೂ. ೬-೪-೧೪೬) ಈಕಾರ ಅಥವಾ ತದ್ಧಿತ ಪ್ರತ್ಯಯ ಪರದಲ್ಲಿದ್ದರೆ ಭಸಂಜ್ಞಕಾಂಗಾವಯವವಾದ ಇವರ್ಣ ಅವರ್ಣಗಳಿಗೆ ಲೋಪ ಬರುವುದು ಎಂಬುದರಿಂದ ಅಕಾರಕ್ಕೆ ಲೋಪ. ವಿರಪ್ಶ್+ಇನ್= ವಿರಪ್ಶಿನ್ **ಋನ್ನೇಭ್ಯೋಙೀಷ್** (ಪಾ. ಸೂ, ೪-೧-೫) ಋದಂತ ಅಥವಾ ನಕಾರಾಂತವಾದ ಪ್ರಾತಿಪದಿಕದ ಮುಂದೆ ಸ್ತ್ರೀಲಿಂಗದಲ್ಲಿ ಙೀಷ್ ಬರುವುದು ಎಂಬುದರಿಂದ ಙಿನೀಷ್ ಬಂದರೆ ವಿರಪ್ಶಿನ್+ಈ. ಇಕಾರವು ಪ್ರತ್ಯಯ ಸ್ವರದಿಂದ ಉದಾತ್ತ. ನಕಾರಕ್ಕೆ ಛಾಂದಸವಾಗಿ ಲೋಪ. **ಅಕಸ್ಸವರ್ಣೇದೀರ್ಘಃ** (ಪಾ.ಸೂ. ೬-೧-೬-೧೦೧) ಎಂಬುದರಿಂದ ಸವರ್ಣ ದೀರ್ಘ ಬಂದರೆ ವಿರಪ್ಶೀ ಎಂದಾಗುವುದು. ಉದಾತ್ತ ಅನುದಾತ್ತಗಳಾದ ಇ+ಈಗಳಿಗೆ ಬಂದ ಏಕಾದೇಶವು **ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮-೨-೫) ಎಂಬುದರಿಂದ ಉದಾತ್ತ.

ಗೋಮತೀ—**ಗಾವಃ ಅಸ್ಯಾಂ ಸನ್ತಿ** ಎಂದು ವಿಗ್ರಹ ಮಾಡಿದಾಗ **ತೆದಸ್ಯಾಸ್ತ್ಯಸ್ಮಿನ್ನಿತಿಮತುಪ್** (ಪಾ. ಸೂ. ೫-೨-೯೪) ಎಂಬುದರಿಂದ ಮತುಪ್ ಪ್ರತ್ಯಯ. **ಉಗಿತೆಶ್ಚ** (ಪಾ. ಸೂ. ೪-೧-೬) ಎಂಬುದರಿಂದ ಙೀಷ್, ಮತುಪ್, ಙೀಷ್, ಎರಡೂ ಪಿತ್ತಾದ್ದರಿಂದ ಅನುದಾತ್ತ. ಗೋ ಎಂಬಲ್ಲಿ ಪ್ರಾತಿಪದಿಕ ಸ್ವರವೇ ನಿಲ್ಲುವುದು.

ಮಹೀ—ಮಹತೀ ಎಂದು ಅರ್ಥ, ಮಹತ್ ಶಬ್ದದ ಮುಂದೆ **ಉಗಿತಶ್ಚ** (ಪಾ. ಸೂ. ೪-೧-೬) ಉಗಿತ್ತಾದ ಪ್ರಾತಿಪದಿಕದ ಮುಂದೆ ಸ್ತ್ರೀಲಿಂಗದಲ್ಲಿ ಙೀಪ್ ಬರುವುದು ಎಂಬುದರಿಂದ ಙೀಪ್ ಬರುವುದು, ಙೀಪ್ಪು ಪಿತ್ತಾದ್ದರಿಂದ ಅನುದಾತ್ತ ಪ್ರಾಪ್ತವಾದರೆ **ಶತುರನುನಾಮೋನದ್ಯಜಾದೀ** (ಪಾ. ಸೂ. ೬-೧-೧೭೩) ಎಂಬಲ್ಲಿ ಪಠಿತವಾಗಿರುವ **ಬೃಹನ್ಮಹತೋರುಪಸಂಖ್ಯಾನಂ** (ಪಾ. ಸೂ, ೬-೧-೧೭೩–೧) ಬೃಹತ್ ಮಹತ್ ಶಬ್ದಗಳ ಮುಂದೆ ಇರುವ, ನದೀಸಂಜ್ಞಕ ಪ್ರತ್ಯಯ ಪೂಜಾದಿ ಶಸಾದಿ ಪ್ರತ್ಯಯ ಇವುಗಳು ಉದಾತ್ತಗಳಾಗುವುವು ಎಂಬುದರಿಂದ ಉದಾತ್ತ ಸ್ವರಬರುವುದು. ಮಹತ್ ಎಂಬುದರ ಅತ್ ಎಂಬುದಕ್ಕೆ ಛಾಂದಸವಾಗಿ ಲೋಪ ಬರುವುದು.

ಪಕ್ವಾ—**ಡುಪಚಷ್ ಪಾಕೇ, ಧಾತು. ನಿಷ್ಠಾ** (ಪಾ. ಸೂ. ೩-೨-೧೦೨) ಭೂತಾರ್ಥದಲ್ಲಿರುವ ಧಾತುಗಳ ಮುಂದೆ ಕ್ತ, ಕ್ತವತು ಎಂಬ ಪ್ರತ್ಯಯಗಳು ಬರುವುವು ಎಂಬುದರಿಂದ **ಕ್ತ** ಪ್ರತ್ಯಯ **ಪಚೋ೽ವಃ** (ಪಾ. ಸೂ. ೮-೨-೫೨) ಪಚ ಧಾತುವಿನ ಮುಂದೆ ಇರುವ ಕ್ತ ಕ್ತವತು ಪ್ರತ್ಯಯಗಳ ತಕಾರಕ್ಕೆ ವಕಾರ ಬರುವುದು ಎಂಬುದರಿಂದ **ತಕಾರಕ್ಕೆ ವಕಾರಾದೇಶ. ಚೋಃ ಕುಃ** (ಪಾ. ಸೂಃ ೮-೨-೩೦) ಪದದ ಕೊನೆಯಲ್ಲಿರುವ ಚವರ್ಗಕ್ಕೂ ಝಲ್ಲಿನ ಹಿಂದಿರುವ ಚವರ್ಗಕ್ಕೂ ಕವರ್ಗಬರುವುದು ಎಂಬುದರಿಂದ ಚಕಾರಕ್ಕೆ ಕಕಾರ ಪ್ರತ್ಯಯ ಸ್ವರದಿಂದ ಪಕ್ವ ಎಂಬುದು ಅಂತೋದಾತ್ತ. **ಅಜಾದ್ಯತಷ್ಟಾಪ್** (ಪಾ. ಸೂ. ೪-೧-೪) (ಸ್ತ್ರೀಲಿಂಗದಲ್ಲಿ) ಅಜಾದಿಗಣಪಠಿತವಾದ ಶಬ್ದಗಳ ಮುಂದೆಯೂ ಅಕಾರಾಂತವಾದ ಶಬ್ದದ ಮುಂದೆಯೂ ಇವುಗಳಲ್ಲರುವ ಸ್ತ್ರೀತ್ವ ತೋರುವಾಗ ಟಾಪ್ ಬರುವುದು ಎಂಬುದರಿಂದ ಟಾಪ್ ಪ್ರತ್ಯಯ. **ಅಕಃಸವರ್ಣೇ ದೀರ್ಘಃ** (ಪಾ. ಸೂ. ೬-೧-೧೦೧) ಎಂಬುದರಿಂದ ಸವರ್ಣದೀರ್ಘ, ಪಕ್ವಾ ಎಂದಾಗುವುದು. ಟಾಪ್ ಪ್ರತ್ಯಯವು ಪಿತ್ತಾದ್ದರಿಂದ ಅನುದಾತ್ತ. **ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ ೮-೨-೫) ಎಂಬುದರಿಂದ ಸವರ್ಣ ದೀರ್ಘದಿಂದ ಬಂದ ಆಕಾರವು ಉದಾತ್ತ

ಶಾಖಾ—**ಶಾಖೃ ಶ್ಲಾಘೃ ವ್ಯಾಪ್ತೌ ಧಾತು** ಶಾಖೃಧಾತುವು ಪಚಾದಿಯಾದ್ದರಿಂದ **ನನ್ದಿಗ್ರಹಿಪಚಾದಿಭ್ಯೋ೽ಲ್ಯುಣಿನ್ಯಚಃ** (ಪಾ. ಸೂ. ೩-೧-೧೩೪) ಎಂಬುದರಿಂದ ಅಚ್ ಪ್ರತ್ಯಯ ಬರುವುದು. ಅಚ್ ಪ್ರತ್ಯಯವು ಚಿತ್ತಾದ್ದರಿಂದ **ಚಿತೇಃ** (ಪಾ. ಸೂ. ೬-೧-೧೫೩) ಎಂಬುದರಿಂದ ಅಂತೋದಾತ್ತ ಪ್ರಾಪ್ತವಾದರೆ ಅದನ್ನು ಬಾಧಿಸಿ ವೃಷಾದಿಯು ಆಕೃತಿಗಣವಾದ್ದರಿಂದ ವೃಷಾದಿಯಲ್ಲಿ ಸೇರಿದ ಶಾಖ ಎಂಬುದು **ವೃಷಾದೀನಾಂ ಚ** (ಪಾ. ಸೂ. ೬-೧-೨೦೩) ಎಂಬುದರಿಂದ ಆದ್ಯುದಾತ್ತ. ಟಾಪ್ ಸವರ್ಣದೀರ್ಘಗಳು ಬಂದರೆ **ಸ್ಥಾನೇ೽ನ್ತರತಮಃ** (ಪಾ. ಸೂ. ೧-೧-೫೦) ಎಂಬುದರಿಂದ ಆಕಾರ ಅನುದಾತ್ತ. ನಂತರ **ಉದಾತ್ತಾದನುದಾತ್ತಸ್ಯ ಸ್ವರಿತಃ** (ಪಾ. ಸೂ. ೮-೪-೬೬) ಎಂಬುದರಿಂದ ಆಕಾರ ಸ್ವರಿತವಾಗುವುದು.

ದಾಶುಷೇ—**ದಾಶ್ವಾನ್ ಸಾಹ್ವಾನ್ ಮೀಢ್ವಾಂಶ್ಚ** (ಪಾ. ಸೂ. ೬-೧-೧೭) ಎಂದು ನಿಪಾತನಮಾಡಿರುವುದರಿಂದ ದಾಶೃದಾನೇ ಎಂಬಧಾತುವಿನ ಮುಂದೆ ಕ್ವಸು ಪ್ರತ್ಯಯವನ್ನಿಟ್ಟರೆ ಇಡಾಗಮ ದ್ವಿತ್ವಗಳು ಬರುವುದಿಲ್ಲ. ದಾಶ್ವಸ್ ಎಂಬುದರ ಮುಂದೆ ಚತುರ್ಥೀ ಏಕವಚನ ಙೀ ಪ್ರತ್ಯಯವನ್ನಿಟ್ಟರೆ ದಾಶ್ವಸ್+ಏ ಎಂದಿರುವಾಗ **ಯೆಚಿಭ್ಯಮ್** (ಪಾ. ಸೂ. ೧-೪-೧೪) ಪ್ರತ್ಯಯಾವಧಿಕವಾದ ಯಕಾರಾದಿ ಅಥವಾ ಅಜಾದಿಯಾದ ಸ್ವಾದಿ ಪ್ರತ್ಯಯಗಳ ಹಿಂದೆ ಇರುವುದು ಭ ಸಂಜ್ಞೆಯನ್ನು ಹೊಂದುವುದು ಎಂಬುದರಿಂದ ದಾಶ್ವಸ್ ಎಂಬುದಕ್ಕೆ ಭ ಸಂಜ್ಞೆ ಬಂದರೆ **ವಸೋಃಸ್ಸಂಪ್ರಸಾರಣಮ್** (ಪಾ. ಸೂ. ೬-೪-೧೩೧) ಭ ಸಂಜ್ಞೆಯನ್ನು ಹೊಂದಿರುವ ವಸ್ ಪ್ರತ್ಯಯಾಂತಕ್ಕೆ ಸಂಪ್ರಸಾರಣ ಬರುವುದು ಎಂಬುದರಿಂದ ಸಂಪ್ರಸಾರಣ ಬರುವುದು. ಅಂದರೆ ವ್‌ಗೆ ಉಕಾರ

ಬರುವುದು. ನಂತರ **ಸಂಪ್ರಸಾರಣಾಚ್ಚ** (ಪಾ, ಸೂ. ೬-೧-೧೦೮) ಸಂಪ್ರಸಾರಣದ ಮುಂದೆ ಸ್ವರ ಪರದಲ್ಲಿದ್ದರೆ ಪೂರ್ವಪರಗಳ ಸ್ಥಾನದಲ್ಲಿ ಪೂರ್ವರೂಪ ಬರುವುದು ಎಂಬುದರಿಂದ ಪೂರ್ವರೂಪ ಬಂದರೆ ದಾಶುಸ್+ಏ **ಆದೇಶಪ್ರತ್ಯಯಯೋಃ** (ಪಾ. ಸೂ. ೮-೩-೫೯) ಇಣ್ ಕವರ್ಗಗಳ ಮುಂದೆ ಇರುವ ಆದೇಶರೂಪವಾದ ಸಕಾರಕ್ಕೂ ಪ್ರತ್ಯಯಾವಯವವಾದ ಸಕಾರಕ್ಕೂ ಷತ್ವ ಬರುವುದು ಎಂಬುದರಿಂದ ವಸುಪ್ರತ್ಯಯಾವಯವವಾದ ಸಕಾರಕ್ಕೆ ಷಕಾರ ಬರುವುದು ದಾಶುಷೇ ಎಂದಾಗುವುದು. **ಶಾಸಿ ವಸಿ ಘಸೀನಾಂಚೆ** (ಪಾ. ಸೂ. ೮-೩-೬೦) ಎಂಬ ಸೂತ್ರದಲ್ಲಿ ವಸು ಎಂಬುದರಿಂದ ವಸ ನಿವಾಸೇ ಎಂಬ ಧಾತುವಿಗೇ ಗ್ರಹಣ. ವಸು ಪ್ರತ್ಯಯಕ್ಕೆ ಗ್ರಹಣವಿಲ್ಲ. ಆದ್ದರಿಂದ ಈ ಸೂತ್ರದಿಂದ ಇಲ್ಲಿ ಷತ್ವ ಬರುವುದಿಲ್ಲ. ಇದನ್ನು ಹಿಂದೆಯೇ (ಋ. ಸಂ. ೧-೬-೭) ನಿರೂಪಿಸಿರುವೆವು. ಪ್ರತ್ಯಯಸ್ವರದಿಂದ ಉಕಾರವು ಉದಾತ್ತ ॥ ೯ ॥

॥ ಸಂಹಿತಾಪಾಠಃ ॥

ಏವಾ ಹಿ ತೇ ವಿಭೂತಯ ಊತಯ ಇಂದ್ರ ಮಾವತೇ ॥
ಸದ್ಯಶ್ಚಿತ್ಸಂತಿ ದಾಶುಷೇ ॥ ೯ ॥

॥ ಪದಪಾಠಃ ॥

ಏವ । ಹಿ । ತೇ । ವಿಭೂತಯಃ । ಊತಯಃ । ಇಂದ್ರ । ಮಾವತೇ ॥
ಸದ್ಯಃ । ಚಿತ್ । ಸಂತಿ । ದಾಶುಷೇ ॥ ೯ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತವ ವಿಭೂತಯ ಐಶ್ವರ್ಯವಿಶೇಷಾ ಏವಾ ಹಿ ಏವಂ ವಿಧಾಃ ಖಲು । ಕಿಂ ವಿಧಾ ಇತಿ ತದುಚ್ಯತೇ । ಮಾವತೇ ಮತ್ಸದೃಶಾಯ ದಾಶುಷೇ ಹವಿರ್ದತ್ತವತೇ ಯಜಮಾನಾಯೋತ-ಯಸ್ತ್ವದೀಯರಕ್ಷಾರೂಪಾಃ ಸದ್ಯಶ್ಚಿತ್ಸಂತಿ । ಯದಾ ಕರ್ಮಾನುಷ್ಠಿತಂ ತದೈವ ಭವಂತಿ ॥ ಮಾವತೇ । ಮತ್ಸದೃಶಾಯ । ವತುಪ್ಪ್ರಕರಣೇ ಯುಷ್ಮದಸ್ಮದ್ಭ್ಯಾಂ ಛಂದಸಿ ಸಾದೃಶ್ಯ ಉಪಸಂಖ್ಯಾನಂ । ಪಾ. ೫-೨-೩೯-೧ । ಇತ್ಯಸ್ಮಚ್ಛಬ್ದಾದ್ವತುಪ್ । ಮಪರ್ಯಂತಸ್ಯ ಪ್ರತ್ಯಯೋತ್ತರಪದಯೋಶ್ಚ । ಪಾ. ೭-೨-೯೮ ಇತಿ ಮಾದೇಶಃ । ಅದ್ ಶಬ್ದೇನ ಸಹಾತ್ತೋ ಗುಣೇ । ಪಾ. ೬-೧-೯೭ । ಇತಿ ಪರರೂಪತ್ವಂ । ದೈರ್ಘ್ಯಶ ವತುಷು । ಪಾ. ೬-೩-೯೪ । ಇತ್ಯನುವೃತ್ತಾವಾ ಸರ್ವನಾಮ್ನಃ । ಪಾ. ೬-೩-೯೧ । ಇತಿ ದಕಾರಸ್ಯಾಕಾರಃ। ಸವರ್ಣದೀರ್ಘತ್ವಂ। ವತುಪಃ ಪಿತ್ತ್ವಾತ್ಪ್ರಾತಿಪದಿಕಸ್ವರ ಏವ ಶಿಷ್ಯತೇ। ಸದ್ಯಃ । ಸಮಾನೇ ದ್ಯವೀತ್ಯರ್ಥೇ

ಸದ್ಯಃ ಪರುತ್ಪರಾಯ್ಯೈಷಮಃ । ಪಾ. ೫-೩-೨೨ । ಇತ್ಯಾದಿನಾ ನಿಪಾತಿತಂ । ಪ್ರತ್ಯಯಸ್ವರೇಣಾಂತೋದಾತ್ತತ್ವಂ । ಚಿತ್ । ಚಾದಯೋಽನುದಾತ್ತಾ, ಇತ್ಯನುದಾತ್ತಃ । ಸಂತಿ । ಅಸ ಭುವಿ । ಲಟಃ ಸ್ಥಾನೇ ಝಿ । ಝೋಽಂತಃ । ಪಾ. ೭-೧-೩ । ಅದಿಪ್ರಭೃತಿಭ್ಯಃ ಶಪಃ ಇತಿ ಶಪೋ ಲುಕ್ । ತಿಙಃ ಪ್ರತ್ಯಯೋದ್ಯುದಾತ್ತತ್ವಂ । ಪ್ರತ್ಯಯಲೋಪೇ ಪ್ರತ್ಯಯಲಕ್ಷಣಂ । ಪಾ. ೧-೧-೬೨ । ಇತಿ ಶಬಕಾರಮಾಶ್ರಿತ್ಯ ಲಸಾರ್ವಧಾತುಕಾನುದಾತ್ತತ್ವಂ ನ ಭವತಿ । ವರ್ಣಾಶ್ರಯವಿಧೌ ಪ್ರತ್ಯಯಲಕ್ಷಣಂ ನಾಸ್ತಿ । ಪರಿ. ೨೧ । ಇತಿ ನಿಷೇಧಾತ್ । ದಾಶುಷೇ । ಗತಮಂತ್ರೇ ಗತಂ ॥

॥ ಪ್ರತಿಪದಾರ್ಥ ॥

(ಹೇ) ಇಂದ್ರೆ—ಎಲೈ ಇಂದ್ರನೇ । ತೇ—ನಿನ್ನ । ವಿಭೂತಯಃ—ಐಶ್ವರ್ಯವಿಶೇಷಗಳು । ಏವಾ ಹಿ—ಈ ವಿಧವಾಗಿರುವವು । (ಎಂದರೆ) ಮಾವತೇ—ನನ್ನಂತಿರುವ । ದಾಶುಷೇ—ಹವಿಸ್ಸನ್ನರ್ಪಿಸುವ ಯಜಮಾನನಿಗೆ (ನಿನ್ನ ಮಹಿಮೆಗಳು) ಊತಯೇ—ರಕ್ಷಣಾರೂಪವಾಗಿ । ಸದ್ಯಶ್ಚಿತ್—ತಕ್ಷಣವೇ ಆಗಿರುವವು ॥

॥ ಭಾವಾರ್ಥ ॥

ಎಲೈ ಇಂದ್ರನೇ, ಹವಿಸ್ಸನ್ನು ಅರ್ಪಿಸುವ ನನ್ನಂತಹ ಯಜಮಾನನಿಗೆ (ಅಥವಾ ನನಗೆ) ನೀನು ಕೊಡುವ ರಕ್ಷಣೆಗಳು ಈ ವಿಧವಾದ ಮಹಿಮೆಯಿಂದ ಯುಕ್ತವಾಗಿರುವವು. ಹೇಗೆಂದರೆ ಆ ರಕ್ಷಣೆಗಳು ನಾವು ಮಾಡುತ್ತಿರುವ ಕರ್ಮಾನುಷ್ಠಾನಕಾಲದಲ್ಲಿಯೇ ಒದಗುವವು. ಈ ವಿಧವಾದ ಮಹಿಮೆಯೇ ನಿನ್ನ ಐಶ್ವರ್ಯವಿಶೇಷವು.

English Translation.

Verily, Indra, your glories are at all times (at once) the protectors of every such worshipper as I am.

॥ ವಿಶೇಷ ವಿಷಯಗಳು ॥

ಎಲೈ ಇಂದ್ರನೇ, ನೀನು ನಮ್ಮಂತವರನ್ನು ಯಾವಾಗಲೂ ರಕ್ಷಿಸುವೆ. ಅದರಲ್ಲಿಯೂ ಹವಿಸ್ಸನ್ನರ್ಪಿಸುವ ಯಜಮಾನನಿಗೆ ಯಜ್ಞಮಾಡುತ್ತಿರುವ ಕಾಲದಲ್ಲಿ ತಕ್ಷಣವೇ ನಿನ್ನ ರಕ್ಷಣೆಯು ದೊರೆಯುವುದು. ಇದಲ್ಲವೇ ನಿನ್ನ ಮಹಿಮೆಯು ? ಎಂದು ಮುಖ್ಯಾಭಿಪ್ರಾಯವು.

ಏವ—ಛಂದಸ್ಸಿನ ಅನುಕೂಲಕ್ಕಾಗಿ ಏವಾ ಎಂದು ವಕಾರವು ದೀರ್ಘವಾಗಿರುವುದು.

ಮಾವತೇ—ಮತ್ಸದೃಶಾಯ-ನನಗೆ ಸಮಾನನಾದ, ನನ್ನಂತಿರುವ.

ಸದ್ಯಶ್ಚಿತ್—ತಕ್ಷಣವೇ, ಕೂಡಲೇ, ಆಗಲೇ, ಸಾವಕಾಶವಿಲ್ಲದೆ.

॥ व्याकरणप्रक्रिया ॥

मावतेः—**मत्वर्थीयश्चायं** ननिगे समानवाद एंदर्थवु. **यौत्तदेतेभ्यः परिमाणे वतुप्** (पा.सू. ५-२-३९) एंब सूत्रदल्लि **वतुप्प्रकरणेयुष्मदस्मद्भ्यां छण्दसि ञस्यादृशि उपसंख्यानं** (पा. सू. ५-२-३९-८) एंदु वार्तिकविरुवुदु. **वतुप्** प्रत्ययवन्नु विधिसुव प्रकरणदल्लि 'युष्मदस्मद्भ्यां छण्दसिञस्यादृशे' एंदु वचनवन्नु पठिसबेकु एंदु वार्तिकार्थ. अंदरे युष्मद्, अस्मद् शब्दगळ मुंदे ञस्यादृश एंब अर्थदल्लि नेददल्लि **वतुप्** प्रत्ययवु बरुवुदु एंदु भाव. इदरिंद अस्मद् शब्दद मुंदे वतुप् बंदरे अस्मद्+वतुप्, **प्रत्ययोत्तरपदयोश्च** (पा.सू. ७-२-९८) प्रत्ययद अथवा उत्तरपदपरदल्लिद्दरे युष्मद् अस्मद् शब्दगळ म पर्यंतक्के अंदरे युष्म्, अस्म् इवुगळिगे क्रमवागि त्व, म, एंब आदेशगळु बरुवुदु एंबुदरिंद अस्म् एंबुदक्के म आदेशबंदु म+अद्+वतुप्. ईग **अतोगुणे** (पा. सू. ६-१-९७)पदद कॊनेयल्लिल्लद ह्रस्वाकारक्के गुणसंज्ञकवाद वर्णगळु परदल्लिरुवागे पूर्वपरस्थानदल्लि पररूप बरुवुदु एंबुदरिंद पररूप बंदरे मद्+वतुप् **असेर्लोपो वा** (पा.सू. ६-४-९१) इल्लि **दृग्दृशवतुषु** (पा. सू. ६-४-९४) एंब सूत्रवु अनुवृत्तवागुवुदु. दृक्, दृश, वतु इवुगळु परदल्लिरुवागे सर्वनाम शब्दगळ कॊनेय वर्णक्के आकारादेश बरुवुदु एंबुदरिंद दकारक्के आकारादेश बंदरे म+अ+वत् एंदिरुवुदु. **आकेस्सर्वनाम्नो दीर्घश्च** (पा. सू. ६-३-९७) एंबुदरिंद सवर्णदीर्घ, मावत्, चतुर्थ्यर्थे एकवचन ङे प्रत्ययवन्नु ट्वरे मावतेः एंदागुवुदु वतुप्प्रत्ययवु पित्तागिद्दरिंदलू ङे एंबुदु सुप्पागिद्दरिंदलू **एरङ अनुदात्तौ सुप्पितौ** (पा. सू. ३-१-४) एंबुदरिंद अनुदात्त. मा एंबुदु **ञ्नित्यादिर्नित्यं** स्वरदिंद अंतोदात्तवागियेय निल्लुवुदु

सद्यैः— **समानेऽहनि** एंदु विग्रहमाडिदाग **सद्यैः परुत्परार्यैषमः** (पा. सू. ५-४-२२) एंबुदरिंद समानशब्दक्के स आदेशवू अहन्शब्दक्के **ह्नि** आदेशवू अहन्शब्दवु **ह्नि** आदेशवागि **अह्नष्टखोरेव** (पा. सू. ५-४-८७) एंब सूत्रदिंद टच् प्रत्ययवू **अहस्सर्वैकदेशसंख्यातपुण्याच्च रात्रेः** (पा. सू. ५-४-८६) एंब सूत्रदिंद समासान्त अच् प्रत्ययवू बंदु सकारोत्तरवागि रात्रिशब्दवु लोपवागुवुदु. ईग **टेः** (पा. सू. ६-४-१५५) एंब सूत्रदिंद टिलोपवागि सद्यस् एंदागुत्तदे. ई सद्यस् शब्दक्के **सायंचिरंप्राह्णे प्रगेऽव्ययेभ्यष्ट्युट्युलौ तुट् च** (पा. सू. ४-३-२३) एंब सूत्रदिंद ट्युल् प्रत्ययवू तुडागमवू बंदु सद्यस्+तुड्+ट्युल्. ईग **युवोरनाकौ** (पा. सू. ७-१-१) एंब सूत्रदिंद युवु एंब ट्युलिन यकारक्के अनादेशवू **तुड्शम्भ्यां युच्चितौ** (पा. सू. ६-१-१५८) एंब सूत्रदिंद तुडागमवु चित्तादुदरिंद **चितः** (पा. सू. ६-१-१५८) एंब सूत्रदिंद अंत्यादि अच्चिगे अंतोदात्तवू बंदु सद्यस्+तुड्+अन. ईग **तुड्शम्भ्यां** सूत्रदिंद तुडागमवु तकारादियादुदरिंद **आद्यन्तौ टकितौ** (पा. सू. १-१-४६) एंब सूत्रदिंद तुडागमवु आद्यवयववागि सद्यस्+त+उ+अन. ईग **सार्वधातुकमपित्** (पा. सू. १-२-४) एंब सूत्रदिंद सार्वधातुकवादुदरिंद **ङिच्च** (पा. सू. १-२-११) एंब सूत्रदिंद ङित्तागि **सार्वधातुकमपित्**

ಆದಿಯು ಉದಾತ್ತವಾಗುವುದು ಎಂಬುದರಿಂದ ಆದ್ಯುದಾತ್ತ. ವಿಕರಣವಾದ ಶಪ್ಪಿಗೆ ಲುಕ್ ಬಂದಿರುವುದರಿಂದ ಆದುಪದೇಶದ ಮುಂದೆ ಇಲ್ಲವಾದ್ದರಿಂದ **ತಾಸ್ಯನುದಾತ್ತೇನ್ಙಿದುಪದೇಶಾತ್** (ಪಾ. ಸೂ. ೬-೧-೧೮೬) ಎಂಬುದರಿಂದ ಲಸ್ಥಾನಿಕ ಸಾರ್ವಧಾತುಕವಾದ ಅನ್ತಿ ಗೆ ಅನುದಾತ್ತ ಬರುವುದಿಲ್ಲ. ಆದರೆ ಶಪ್ಪಿಗೆ ಲುಕ್ ಬಂದಿದ್ದರೂ **ಪ್ರತ್ಯಯೇಲೋಪೇಪ್ರತ್ಯಯಲಕ್ಷಣಮ್** (ಪಾ ಸೂ. ೧-೧-೬೨) ಪ್ರತ್ಯಯಕ್ಕೆ ಲೋಪ ಬಂದಿದ್ದರೂ ಪ್ರತ್ಯಯ ನಿಮಿತ್ತಕವಾದ ಕಾರ್ಯವು ಬರುವುದು ಎಂಬುದರಿಂದ ಪ್ರತ್ಯಯ ಲಕ್ಷಣ ಬರುವುದು. **ನಲುಮತಾಂಗಸ್ಯ** (ಪಾ. ಸೂ. ೧ ೧-೬೩) ಲುಮತಾನ್ತಾದಶಬ್ದ (ಲುಕ್, ಶ್ಲು, ಲು) ವನ್ನುಚ್ಚರಿಸಿ ಲೋಪಬಂದಿದ್ದರೆ ಲುಪ್ತ ಪ್ರತ್ಯಯನಿಮಿತ್ತಕವಾದ ಅಂಗೋದ್ದೇಶ್ಯಕವಾದ ಕಾರ್ಯವು ಬರುವುದಿಲ್ಲ ಎಂಬುದರಿಂದ ಪ್ರತ್ಯಯಲಕ್ಷಣಕ್ಕೆ ನಿಷೇಧವು ಬರಲಿ ಎಂದರೆ ಇಲ್ಲಿ ಲುಕ್ ಶಬ್ದವನ್ನು ಉಚ್ಚರಿಸಿ ಲೋಪ ಬಂದಿದ್ದರೂ ಸ್ವರವು ಲಸ್ಥಾನಿಕ ಸಾರ್ವಧಾತುಕಪ್ರತ್ಯಯವನ್ನು ಉದ್ದೇಶಿಸಿಕೊಂಡು ಬರುವ ಕಾರ್ಯ, ಅಂಗೋದ್ದೇಶ್ಯಕ ಕಾರ್ಯವಲ್ಲ, ಆದ್ದರಿಂದ ಬರುವುದಿಲ್ಲ ಅಂದಮೇಲೆ ಪ್ರತ್ಯಯ ಲಕ್ಷಣದಿಂದ ಆದುಪದೇಶನಿಮಿತ್ತಕವಾದ ಅನುದಾತ್ತ ಬರಲಿ ಎಂದು ಹೇಳಬಹುದು. ಇದು ಸರಿಯಲ್ಲ. ಏಕೆಂದರೆ ಆದುಪದೇಶವೆಂದರೆ ಉಪದೇಶಕಾಲದಲ್ಲಿ ಹ್ರಸ್ವವಾದ ಅಕಾರವನ್ನು ಹೊಂದಿರುವುದು ಎಂದರ್ಥ. ಇಂತಹದು ಶಪ್ ಎಂದು ಹೇಳಬೇಕು. ಅಂದರೆ ಶಪ್ಪಿನ ಅಕಾರವನ್ನು ಆಶ್ರಯಿಸಿಕೊಂಡು ಅನುದಾತ್ತವನ್ನು ಉಪಪಾದಿಸಬೇಕು. ಈಗ **ವರ್ಣಾಶ್ರಯೇನಾಸ್ತಿಪ್ರತ್ಯಯಲಕ್ಷಣಮ್** (ಪರಿ. ಭಾ. ೩೧) ವರ್ಣವನ್ನು ಆಶ್ರಯಿಸಿ ಕಾರ್ಯವನ್ನು ಮಾಡುವಾಗ ಪ್ರತ್ಯಯಲಕ್ಷಣ ಬರುವುದಿಲ್ಲ ಎಂದು ಪ್ರತ್ಯಯಲಕ್ಷಣಕ್ಕೆ ನಿಷೇಧ ಬರುವುದು. ಆದ್ದರಿಂದ ಸಾರ್ವಧಾತುಕವು ಆದುಪದೇಶದ ಮುಂದೆ ಇರತಕ್ಕದ್ದಾಗುವುದಿಲ್ಲ. ಆದಕಾರಣ ಅನುದಾತ್ತ ಬರುವುದಿಲ್ಲ.

ದಾಶುಷೇ—ಪೂರ್ವ ಮಂತ್ರದಲ್ಲಿ ಇದರ ಪ್ರಕ್ರಿಯೆಯನ್ನು ವರ್ಣಿಸಲಾಗಿರುವುದು ॥ ೯ ॥

॥ ಸಂಹಿತಾಪಾಠಃ ॥

ಏವಾ᳭ಹ್ಯ᳭ಸ್ಯ ಕಾ᳭ಮ್ಯಾ᳭ ಸ್ತೋ᳭ಮ ಉ᳭ಕ್ಥಂ ಚ᳭ ಶಂಸ್ಯಾ᳭ ॥
ಇಂದ᳭ರಾ᳭ಯ ಸೋ᳭ಮಪೀತಯೇ᳭ ॥ ೧೦ ॥

॥ ಪದಪಾಠಃ ॥

ಏವ । ಹಿ । ಅ᳭ಸ್ಯ । ಕಾ᳭ಮ್ಯಾ । ಸ್ತೋ᳭ಮಃ । ಉ᳭ಕ್ಥಂ । ಚ᳭ । ಶಂಸ್ಯಾ᳭ ॥
ಇಂದ᳭ರಾ᳭ಯ । ಸೋ᳭ಮ ಽ ಪೀತಯೇ᳭ ॥ ೧೦ ॥

॥ ಸಾಯಣಭಾಷ್ಯಂ ॥

ಅಸ್ಯೇಂದ್ರಸ್ಯ ಸ್ತೋಮಃ ಸಾಮಸಾಧ್ಯಂ ಸ್ತೋತ್ರಮುಕ್ಥಂ ಚೇಕ್ರ್ಸಾಧ್ಯಂ ಶಸ್ತ್ರಮಪ್ಯೇವಾ ಹ್ಯೇತೇ ಉಭೇ ಏವಂವಿಧೇ ಖಲು । ಕಿಂವಿಧೇ ಇತಿ ತದುಚ್ಯತೇ । ಕಾಮ್ಯಾ ಕಾಮಯಿತವ್ಯೇ ಶಂಸ್ಯಾ ಋಷ್ವಿಗ್ಭಿಃ ಶಂಸನೀಯೇ । ಕಿಮರ್ಥಂ ಶಂಸನಮಿತಿ ತದುಚ್ಯತೇ । ಇಂದ್ರಾಯ ಸೋಮಪೀತಯೇ ।

ಇಂದ್ರಸ್ಯ ಸೋಮಪಾನಾರ್ಥಂ ॥ ಏವಾ ಹ್ಯಸ್ಯ । ವ್ಯವಹಿತಮಂತ್ರೇ ಗತೆಂ । ಕಾಮ್ಯಾ । ಕಮೇರ್ಣಿಙಂತಾದಚೋ ಯತ್ । ಪಾ. ೩-೧-೯೭ । ಣೇರನಿಟಿ । ಪಾ. ೬-೪-೫೧ । ಇತಿ ಣಿಲೋಪಃ । ತಿತ್ಸ್ವರಿತಮಿತಿ ಸ್ವರಿತೇ ಪ್ರಾಪ್ತೇ ಯತೋಽನಾವಃ । ಪಾ. ೬-೧-೨೧೩ । ಇತ್ಯಾದ್ಯುದಾತ್ತತ್ವಂ । ಸುಪೋ ಡಾದೇಶಃ । ಸ್ತೋಮಃ । ಅರ್ತಿಸ್ತುಸ್ವಿತ್ಯಾದಿನಾ । ಉ. ೧-೧೫೯ । ಮನ್ಪ್ರತ್ಯಯಃ ಉಕ್ಥಂ । ವಚೆ ಪರಿಭಾಷಣೇ । ಪಾತ್ಯತುದಿವಚಿರಿಚಿಸಿಚಿಭ್ಯಸ್ಥಕ್ । ಉ. ೨-೭ । ಇತಿ ಥಕ್ । ಕಿತ್ತ್ವಾತ್ಸಂಪ್ರಸಾರಣಂ । ಪರಪೂರ್ವತ್ವಗುಣಾಭಾವೌ । ಶಂಸ್ಯಾ । ಶಂಸ್ಸು ಸ್ತುತೌ । ಣ್ಯಂತಾದಚೋ ಯತ್ । ಯೆತೋಽನಾವ ಇತ್ಯಾದ್ಯುದಾತ್ತತ್ವಂ । ಸುಪೋ ಡಾದೇಶಃ । ಸೋಮಸ್ಯ ಪೀತಿಃ ಸೋಮಪೀತಿಃ । ಕೃದುತ್ತರಪದಪ್ರಕೃತಿಸ್ವರೇ ಪ್ರಾಪ್ತೇ ವ್ಯತ್ಯಯೇನಾದ್ಯುದಾತ್ತತ್ವಂ । ಅಥವಾ ಸೋಮಸ್ಯ ಪೀತಿರ್ಯಸ್ಯೇಂದ್ರಸ್ಯೇತಿ ಸೋಮಪೀತಿರಿಂದ್ರಃ । ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ । ಪಾ. ೬-೨-೧ । ಇತಿ ಪೂರ್ವಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ಅಸ್ಯ—ಈ ಇಂದ್ರನ (ಇಂದ್ರನ ವಿಷಯವಾಗಿ ಮಾಡಲ್ಪಡುವ) । ಸ್ತೋಮಃ—ಸಾಮಗಾನರೂಪವಾದ ಸ್ತೋತ್ರವೂ । ಉಕ್ಥಂ ಚೆ—ಋಕ್ಕುಗಳಿಂದ ಶಸ್ತ್ರರೂಪವಾಗಿ ಪಠಿಸುವ ಸ್ತೋತ್ರವೂ (ಈ ಎರಡುವಿಧವೂ) । ಕಾಮ್ಯಾ ಏವ ಹಿ—ಇಷ್ಟಪ್ರದವಾದವುಗಳೇ ಆಗಿರುವವು । ಈ ಸ್ತೋತ್ರಗಳು ಇಂದ್ರಾಯ ಸೋಮಪೀತಯೇ—ಇಂದ್ರನ ಸೋಮಪಾನಾರ್ಥವಾಗಿ । ಶಂಸ್ಯಾ—ಋತ್ವಿಜರಿಂದ ಸ್ತುತಿಸಲ್ಪಡುವವು.

॥ ಭಾವಾರ್ಥ ॥

ಇಂದ್ರನನ್ನು ಸೋಮಪಾನಕ್ಕಾಗಿ ಋತ್ವಿಜರು ಆಹ್ವಾನಮಾಡುವ ಸಾಮಗಾನರೂಪವಾದ ಸ್ತೋತ್ರಗಳೂ, ಋಙ್ಮಂತ್ರಗಳಿಂದ ಶಸ್ತ್ರರೂಪವಾಗಿ ಪಠಿಸಲ್ಪಡುವ ಋಕ್ಕುಗಳೂ ಈ ಎರಡು ವಿಧಸ್ತೋತ್ರಗಳೂ ಇಂದ್ರನನ್ನು ಆರಾಧಿಸುವ ಯಜಮಾನರಾದಿಯಾದ ಜನರಿಗೆ ಇಷ್ಟವಾಗಿಯೇ ಇರುವವು.

English Translation.

Verily his chanted and recited praises are to be desired and repeated to Indra, that he may drink the Soma-juice.

॥ ವಿಶೇಷವಿಷಯಗಳು ॥

ಸ್ತೋಮಃ । ಉಕ್ಥಂ—ಸ್ತೋಮವೆಂದರೆ ಗಾನರೂಪವಾಗಿ ಹಾಡಲ್ಪಡುವ ಸಾಮವೇದಮಂತ್ರಗಳು. ಉಕ್ಥಂ ಎಂದರೆ ಶಸ್ತ್ರರೂಪವಾಗಿ ಎಂದರೆ ಗಾನದಂತಲ್ಲದೆ (ರಾಗವಿಲ್ಲದೆ) ಸುಮ್ಮನೆ ಋಗ್ವೇದಮಂತ್ರಗಳನ್ನು ಪಠಿಸುವುದು ಎಂದರ್ಥವು. ಈ ವಿಷಯವನ್ನು ನಾವು ಹಿಂದೆಯೇ ವಿವರಿಸಿದೇವೆ.

॥ ವ್ಯಾಕರಣಪ್ರಕ್ರಿಯಾ ॥

ಏವಾ, ಹಿ, ಅಸ್ಯ ಇವುಗಳ ಪ್ರಕ್ರಿಯೆಯು ಇದೇ ಸೂಕ್ತದ ೪ ನೇ ಮಂತ್ರದಲ್ಲಿ ವರ್ಣಿತವಾಗಿರುವುದು.

ಕಾಮ್ಯಾ—ಕಮುಕಾನ್ತೌ ಧಾತು, ಕಾಂತಿ ಎಂದರೆ ಇಚ್ಛೆ. **ಕಮೇರ್ಣಿಚ್** (ಪಾ. ಸೂ. ೩-೧-೩೦) ಕಮ್ ಧಾತುವಿನ ಮುಂದೆ ಸ್ವಾರ್ಥದಲ್ಲಿ ಣಿಚ್ ಪ್ರತ್ಯಯ ಬರುವುದು ಎಂಬುದರಿಂದ ಣಿಚ್ ಪ್ರತ್ಯಯ **ಅತ ಉಪಧಾಯಾಃ** (ಪಾ.ಸೂ. ೭-೩-೧೧೬) ಎಂಬುದರಿಂದ ಉಪಧಾವೃದ್ಧಿ ಕಾಮಿ ಎಂದಾಗುವುದು. ಇದರ ಮುಂದೆ **ಅಚೋ೦ಯತ್** (ಪಾ. ಸೂ. ೩-೧-೯೭) ಅಜಂತವಾದ ಧಾತುವಿನ ಮುಂದೆ ಯತ್ ಪ್ರತ್ಯಯ ಬರುವುದು ಎಂಬುದರಿಂದ ಯತ್ ಪ್ರತ್ಯಯ **ಣೇರನಿಟಿ** (ಪಾ. ಸೂ. ೬-೪-೫೫) ಇಡಾದಿಯಲ್ಲದ ಆರ್ಧಧಾತುಕ ಪ್ರತ್ಯಯ ಪರದಲ್ಲಿರುವಾಗ ಣಿಗೆ ಲೋಪಬರುವುದು ಎಂಬುದರಿಂದ ಣಿಗೆ ಲೋಪ. ಯತ್ ಪ್ರತ್ಯಯವು ತಕಾರೇತ್ಸಂಜ್ಞಕ ವಾದ್ದರಿಂದ **ತಿತ್ಸ್ವರಿತಮ್** (ಪಾ. ಸೂ. ೬-೧-೧೮೫) ತಕಾರೇತ್ಸಂಜ್ಞಕವಾದ ಪ್ರತ್ಯಯವು ಸ್ವರಿತವಾಗುವುದು ಎಂಬುದರಿಂದ ಸ್ವರಿತಸ್ವರವು ಪ್ರಾಪ್ತವಾಪರೆ ಅದನ್ನು ಬಾಧಿಸಿ **ಯತೋನಾವಃ** (ಪಾ. ಸೂ. ೬-೧-೨೧೩) **ನಿಷ್ಠಾಚೇದ್ಧ್ಯಜನಾತ್** (ಪಾ. ಸೂ. ೬-೧-೨೦೫) ಎಂಬುದರಿಂದ ದ್ವ್ಯಚ್ ಪದವು ಅನುವೃತ್ತವಾಗುತ್ತೆ. ನೌ ಶಬ್ದಭಿನ್ನ ಶಬ್ದದ ಮುಂದೆ ವಿಹಿತವಾದ ಯಾವ ಯತ್ ಪ್ರತ್ಯಯವಿದೆಯೋ ತದನ್ತವಾದ ಎರಡು ಸ್ವರಗಳನ್ನು ಹೊಂದಿರುವ ಶಬ್ದದ ಆದಿಯು ಉದಾತ್ತವಾಗುವುದು ಎಂಬುದರಿಂದ ಆದ್ಯುದಾತ್ತ ಸ್ವರ ಬರುವುದು. ಕಾಮ್ಯ ಎಂಬುದರ ಮುಂದೆ ಬಂದ ಪ್ರಥಮಾದ್ವಿವಚನ ಔ ಪ್ರತ್ಯಯಕ್ಕೆ **ಸುಪಾಂಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ಡಾ ಆದೇಶ.

ಸ್ತೋಮಃ—**ಅರ್ತಿಸ್ತು ಸುಹುಸೃಧೃಕ್ಷಿಸುಭ್ಯಾಯಾ ವಾ ಪದಿಯೆಕ್ಷಿನೀಭೋಮನ್** (ಉ. ಸೂ. ೧-೧೩೭) ಎಂಬುದರಿಂದ ಷ್ಟುಞ್ ಸ್ತುತೌ ಎಂಬ ಸ್ತು ಧಾತುವಿನ ಮುಂದೆ ಮನ್ ಪ್ರತ್ಯಯ **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಗುಣ. ಸ್ತೋಮ ಎಂದಾಗುವುದು.

ಉಕ್ಥಮ್—**ವಚ ಪರಿಭಾಷಣೇ** ಧಾತು ಸಾ, ತ್ಯ್, **ತುದಿ, ವಚಿ, ರಿಚಿ, ಸಿಚಿಭ್ಯಸ್ಥಕ್** (ಉ. ಸೂ. ೨-೧೬೪) ಎಂಬುದರಿಂದ ಥಕ್ ಪ್ರತ್ಯಯವು ವಚ್ ಧಾತುವಿನ ಮುಂದೆ ಬರುವುದು. ಪ್ರತ್ಯಯವು ಕಿತ್, ಆದ್ದರಿಂದ **ವಚಿಸ್ವಪಿಯಜಾದೀನಾಂ ಕಿತಿ** (ಪಾ. ಸೂ. ೬-೧-೧೫) ಎಂಬುದರಿಂದ ಸಂಪ್ರಸಾರಣ =ವಕಾರಕ್ಕೆ ಉಕಾರ. **ಸಂಪ್ರಸಾರಣಾಚ್ಚ** (ಪಾ. ಸೂ. ೬-೧-೧೦೮) ಎಂಬುದರಿಂದ ಪೂರ್ವರೂಪ. ಉಚ್+ಥ ಪ್ರತ್ಯಯವು ಕಿತ್ತಾದ್ದರಿಂದ ಲಘೂಪಧ ಗುಣ ಬರುವುದಿಲ್ಲ. **ಚೋಃಕುಃ** (ಪಾ. ಸೂ. ೮-೨-೩೦) ಎಂಬುದರಿಂದ ಚಕಾರಕ್ಕೆ ಕಕಾರ, ಉಕ್ಥ ಎಂದಾಗುವುದು.

ಶಂಸ್ಯಾ—ಶಂಸು ಸ್ತುತೌ ಇದರ ಮುಂದೆ ಣಿಚ್ ಪ್ರತ್ಯಯ. **ಅಚೋ೦ಯತ್** ಎಂಬುದರಿಂದ ಯತ್ ಪ್ರತ್ಯಯ **ಣೇರನಿಟಿ** ಎಂಬುದರಿಂದ ಣಿ ಲೋಪ. **ಯತೋನಾವಃ** ಎಂಬುದರಿಂದ ಆದ್ಯುದಾತ್ತ. ಪ್ರಥಮಾದ್ವಿವಚನ **ಔ ಗೆ ಸುಪಾಂಸುಲುಕ್** ಎಂಬುದರಿಂದ ಡಾ ಆದೇಶ. ಶಂಸ್ಯಾ ಎಂದಾಗುವುದು.

ಸೋಮಪೀತಯೇ, ಸೋಮಸ್ಯ ಪೀತಿಃ ಸೋಮಪೀತಿಃ, ಗತಿಕಾರಕೋಪಪದಾತ್ಕೃತ್ (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಪ್ರಾಪ್ತವಾದರೆ ವ್ಯತ್ಯಯದಿಂದ ಆದ್ಯುದಾತ್ತ ಬರುವುದು. ಹೀಗೆ ತತ್ಪುರುಷಮಾಡಿದರೆ ಸೋಮಪೀತಯೇ—ಸೋಮರಸದ ಪಾನಕ್ಕಾಗಿ ಎಂದು ಅರ್ಥವಾಗುವುದು ಅಥವಾ ಸೋಮಸ್ಯ ಪೀತಿರ್ಯಸ್ಯ ಸಃ ಸೋಮಪೀತಿಃ ಸೋಮಪಾನವುಳ್ಳ ಇಂದ್ರನಿಗೆ ಎಂದರ್ಥ. **ಈ ಪಕ್ಷದಲ್ಲಿ ಬಹುವ್ರೀಹೌಪ್ರಕೃತ್ಯಾಪೂರ್ವಪದಂ** (ಪಾ. ಸೂ. ೬-೨-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರಬರುವುದು ॥೧೦॥

ಒಂಭತ್ತನೆಯ ಸೂಕ್ತವು

ಇಂದ್ರೇಹೀತ್ಯಾದಿಕಂ ದಶರ್ಚಂ ಸೂಕ್ತಂ ಸುರೂಪಕೃತ್ನುಮಿತ್ಯಾದಿಷು ಷಷ್ಠಂ । ಋಷ್ಯಾದಯಸ್ತಸ್ಯ ಪೂರ್ವವತ್ । ವಿಶೇಷಸ್ತ್ವತಿರಾತ್ರೇ ದ್ವಿತೀಯಪರ್ಯಾಯೇಽಚ್ಛಾವಾಕಶಸ್ತ್ರೇ ಇಂದ್ರೇಹೀತ್ಯನುರೂಪಸ್ತೃಚಃ । ಅತಿರಾತ್ರೇ ಪರ್ಯಾಯಾಣಾಮಿತಿ ಖಂಡ ಇದಂ ವಸೋ ಸುತಮಂಧ ಇಂದ್ರೇಹಿ ಮತ್ಸ್ಯಂಧಸಃ । ಆ. ೬.೪ । ಇತಿ ಸೂತ್ರಿತಂ ॥

ಅನುವಾದವು—ಇಂದ್ರೇಹಿ ಎಂಬ ಈ ಸೂಕ್ತದಲ್ಲಿ ಹತ್ತು ಋಕ್ಕುಗಳಿರುವವು. ಇದು ಸುರೂಪಕೃತ್ನು ಎಂದು ಮೊದಲಾದ ಸೂಕ್ತಗಳಲ್ಲಿ ಆರನೆಯದು. ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ವಿಶೇಷವಿಷಯೋಗವು—ಅತಿರಾತ್ರಕ್ರತುವಿನಲ್ಲಿ ದ್ವಿತೀಯಪರ್ಯಾಯದಲ್ಲಿ ಅಚ್ಛಾವಾಕನೆಂಬ ಹೋತೃವರ್ಗದ ಋತ್ವಿಜನು ಇಂದ್ರೇಹಿ ಎಂಬ ತೃಚವನ್ನು ಪಠಿಸಬೇಕು. ಈ ವಿಷಯವು—**ಅತಿರಾತ್ರೇ ಪರ್ಯಾಯಾಣಾಂ** ಎಂಬ ಖಂಡದಲ್ಲಿ ಇದಂ ವಸೋ ಸುತಮಂಧಃ (ಋ. ಸಂ. ೮-೩-೧) ಮತ್ತು ಇಂದ್ರೇಹಿ ಮತ್ಸ್ಯಂಧಸಃ (ಋ.ಸಂ. ೧.೯.೧) ಎಂಬ ಋಕ್ಕುಗಳನ್ನು ಅತಿರಾತ್ರಕ್ರತುವಿನಲ್ಲಿ (ಪ್ರಥಮ ದ್ವಿತೀಯ) ಪರ್ಯಾಯಗಳಲ್ಲಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದಲ್ಲಿ ಹೇಳಿರುವುದು (ಆ. ಸೂ. ೬.೪).

॥ ಓಂ ॥

ಸೂಕ್ತ—೯

॥ ಮಂಡಲ—೧ ॥ ಅನುವಾಕ—೩ ॥ ಸೂಕ್ತ—೯ ॥
॥ ಅಷ್ಟಕ —೧ ॥ ಅಧ್ಯಾಯ—೧ ॥ ವರ್ಗ—೧೩, ೧೪ ॥
॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೧–೧೦ ॥
॥ ಋಷಿಃ—ಮಧುಚ್ಛಂದಾ ವೈಶ್ವಾಮಿತ್ರಃ ॥
॥ ದೇವತಾ—ಇಂದ್ರಃ ॥
॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಇಂದ್ರೇಹಿ ಮತ್ಸ್ಯಂಧಸೋ ವಿಶ್ವೇಭಿಃ ಸೋಮಪರ್ವಭಿಃ ।
ಮಹಾ ಅಭಿಷ್ಟಿರೋಜಸಾ ॥ ೧ ॥

॥ ಪದಪಾಠಃ ॥

ಇಂದ್ರ । ಆ । ಇಹಿ । ಮತ್ಸಿ । ಅಂಧಸಃ । ವಿಶ್ವೇಭಿಃ । ಸೋಮಪರ್ವಭಿಃ ॥
ಮಹಾನ್ । ಅಭಿಷ್ಟಿಃ । ಓಜಸಾ ॥ ೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಏಹಿ । ಅಸ್ಮಿನ್ಕರ್ಮಣ್ಯಾಗಚ್ಛ । ಆಗತ್ಯ ಚ ವಿಶ್ವೇಭಿಃ ಸರ್ವೈಃ ಸೋಮಪರ್ವಭಿಃ ಸೋಮರಸರೂಪೈರಂಧಸೋಽಂಧೋಭಿರನ್ನೈರ್ಮತ್ಸಿ । ಮಾದ್ಯ । ಹೃಷ್ಟೋ ಭವ । ತತ ಊರ್ಧ್ವಮೋಜಸಾ ಬಲೇನ ಮಹಾನ್ಪೂತ್ವಾಭಿಷ್ಟಿಃ ಶತ್ರೂಣಾಮಭಿಭವಿತಾ ಭವೇತಿ ಶೇಷಃ । ಅಷ್ಟಾವಿಂಶತಿಸಂಖ್ಯಾಕೇಷು ಬಲಾನಾಮಸ್ಮೋಜಃ ಸಾಜ ಇತಿ ಪಠಿತಂ ॥ ಆ ಇಹಿ । ಆದ್ಗುಣಃ । ಪಾ ೬-೧-೮೭ । ಇಂದ್ರ ಏಹಿ। ಯೋ ಹ್ಯುಭಯೋಃ । ಸ್ಥಾನೇ ಲಭತೇ೨ಸಾವನ್ಯತರವ್ಯಪದೇಶಮಿತ್ಯಾಜ್ಯಾಜಿರೇಕಾದೇಶಸ್ಯಾಜ್ ವ್ಯಪದೇಶಾದೋಮಾಜಿರೇಶ್ಚ । ಪಾ. ೬-೧-೯೫ । ಇತಿ ಪರರೂಪಂ । ಮತ್ಸಿ । ಮಾದ್ಯ । ಮದೀ ಹರ್ಷಗ್ಲಪನಯೋಃ । ಲೋಟಃ ಸಿಪ್ । ಸರ್ವೇ ವಿಧಯಶ್ಛಂದಸಿ ವಿಕಲ್ಪ್ಯಂತ ಇತಿ ಸೇರ್ಹಿರಾದೇಶಃ । ಪಾ. ೩-೪-೮೭ । ನ ಭವತಿ । ದಿವಾದಿಭ್ಯಃ ಶ್ಯನ್ । ಪಾ. ೩-೧-೬೯ । ಇತಿ ಶ್ಯನ್ । ಬಹುಲಂ ಛಂದಸೀತಿ ಶ್ಯನೋ ಲುಕ್ । ನ ಲುಮತಾಂಗಸ್ಯ । ಪಾ. ೧-೧-೬೩ । ಇತಿ ಪ್ರತ್ಯಯಲಕ್ಷಣಪ್ರತಿಷೇಧಾಚ್ಚೆನಾಮಷ್ಟಾನಾಂ ದೀರ್ಘಃ ಶ್ಯನಿ । ಪಾ. ೭- -೭೪ । ಇತ್ಯುಪಧಾದೀರ್ಘೋ ನ ಭವತಿ । ಸಿಸಃ ಪಿತ್ತ್ವಾದ್ಧಾತುಸ್ವರ ಏವ । ಅಂಧಸಃ । ಅದೇರ್ನುಮ್ ಧಶ್ಚ । ಉ. ೪-೨೦೫ । ಇತ್ಯಸುನ್ । ವ್ಯತ್ಯಯೇನ ತೃತೀಯಾಬಹುವಚನಂ ಕರ್ತವ್ಯಂ । ನಿತ್ತ್ವಾದಾದ್ಯುದಾತ್ತಃ । ವಿಶ್ವೇಭಿಃ । ಅಶಿಪ್ರುಷೀತ್ಯಾದಿನಾ । ಉ. ೧-೧೫೧ । ಕ್ವನ್ । ನಿತ್ತ್ವಾದಾದ್ಯುದಾತ್ತತ್ವಂ । ಐಸಾದೇಶೋ ಬಹುಲಂ ಛಂದಸೀತಿ ನ ಭವತಿ । ಸೋಮಪರ್ವಭಿಃ । ಲತಾರೂಪಂ ಸೋಮಂ ಪೃಣಂತಿ ಪೂರಯಂತೀತಿ ಸೋಮಪರ್ವಾಣಃ ಸೋಮರಸಾಃ । ಪೃ ಪಾಲನಪೂರಣಯೋಃ । ಆನ್ಯೇಭ್ಯೋ೨ಪಿ ದೃಶ್ಯಂತ ಇತಿ ವನಿಪ್ । ಗುಣೋ ರಪರತ್ವಂ । ವನಿಪಃ ಪಿತ್ತ್ವಾದ್ಧಾತುಸ್ವರ ಏವ । ಉಪಪದಸಮಾಸೇ ಕೃದುತ್ತರಪದಪ್ರಕೃತಿಸ್ವರೇಣ ಪುನಃ ಸ ಏವ ಭವತಿ । ಅಭಿಷ್ಟಿರಭಿಗಂತಾ । ಇಷ ಗತೌ । ಮಂತ್ರೇ ವೃಷೇತ್ಯಾದಿನಾ । ಪಾ. ೩-೩-೯೬ । ಕ್ತಿನ್ನುದಾತ್ತಃ । ಸ ಹಿ ಭಾವಪರೋ೨ಪಿ ಭವಿತಾರಂ ಲಕ್ಷಯತಿ । ಕಿತ್ತ್ವಾಲ್ಲಘೂಪಧಗುಣಾಭಾವಃ । ತಿತುತ್ರತಥಸಿಸುಸರಕಸೇಷು । ಚ । ಪಾ. ೭-೨-೯ । ಇತೀಡಾಗಮೋ ನ ಭವತಿ । ಅಭಿಶಬ್ದಸ್ಯೇಕಾರ ಏಮನಾದಿಷು ಪರರೂಪಂ ವಕ್ತವ್ಯಂ । ಪಾ. ೬-೧-೯೪-೬ । ಇತಿ ಪರರೂಪತ್ವಂ । ಪ್ರಾದಿಸಮಾಸೇ ಕೃದುತ್ತರಪದಪ್ರಕೃತಿಸ್ವರತ್ವಂ । ಓಜಸಾ । ಉಬ್ಜೀರ್ಬಲೋಪಶ್ಚ । ಉ. ೪-೧೯೧ । ಇತ್ಯಸುನ್ । ನಿತ್ತ್ವಾದಾದ್ಯುದಾತ್ತಃ ॥

॥ ಪ್ರತಿಪದಾರ್ಥ ॥

(ಹೇ) ಇಂದ್ರ—ಎಲೈ ಇಂದ್ರನೇ । ಏಹಿ—(ನಾವು ಮಾಡಿತ್ತಿರುವ ಈ ಯಜ್ಞಭೂಮಿಗೆ) ಬಾ । (ಬಂದು) ವಿಶ್ವೇಭಿಃ—ಸಮಸ್ತವಾದ । ಸೋಮಪರ್ವಭಿಃ—ಸೋಮರಸರೂಪವಾದ । ಅಂಧಸಃ—ಅನ್ನಗಳಿಂದ

(ಆಹಾರಗಳಿಂದ) । **ಮತ್ಸಿ**—ತೃಪ್ತನಾಗು । (ಅನಂತರ) **ಓಜಸಾ**—ಬಲದಿಂದ । **ಮಹಾನ್**—ಅಧಿಕನಾಗಿ । **ಅಭಿಷ್ಟಿಃ**—(ಶತ್ರುಗಳಿಗೆ) ಪರಾಭವವನ್ನುಂಟುಮಾಡುವವನಾಗು ॥

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಇಲ್ಲಿಗೆ ಬಂದು ನಾವು ಸಿದ್ಧಪಡಿಸಿರುವ ಸೋಮರೂಪವಾದ ಅನ್ನದಿಂದ ತೃಪ್ತನಾಗಿ ಎಂದರೆ ಸೋಮಪಾನಮಾಡಿ ಅದರಿಂದ ಅಧಿಕವಾಗಿ ಬಲಗೊಂಡು ಶತ್ರುಗಳನ್ನು ಪರಾಭವಗೊಳಿಸು.

English Translation

Come, O Indra, and regale yourself with Soma-libations and with all viands and mighty in strength be victorious (over your enemies).

॥ ವಿಶೇಷವಿಷಯಗಳು ॥

ಮತ್ಸಿ—**ಮದೀ ಹರ್ಷಗ್ಲಪನಯೋಃ** ಎಂಬ ಧಾತುವಿನ ಲೋಟ್ ರೂಪದ ಮಧ್ಯಮಪುರುಷೈಕ ವಚನವು. ಸಂತೋಷಪಡು, ತೃಪ್ತಿಯನ್ನು ಹೊಂದು ಎಂದರ್ಥವು

ಅಂಧಸಃ—ಅಂಧಃ ವಾಜಃ ಮೊದಲಾದ ಇಪ್ಪತ್ತೈದು ಅನ್ನವಾಚಕಶಬ್ದಗಳ ಮಧ್ಯದಲ್ಲಿ ಅಂಧಃ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩ ೯) ಅಂಧಸಃ ಎಂಬ ಶಬ್ದಕ್ಕೆ ಅನ್ನದಿಂದ ಎಂದರ್ಥವು.

ಸೋಮಪರ್ವಭಿಃ—**ಲತಾರೂಪಂ ಸೋಮಂ ಹೃಣಂತಿ ಪೂರಯಂತೀತಿ ಸೋಮಪರ್ವಾಣಃ ಸೋಮರಸಾಃ**—ಎಂದರೆ ಸೋಮಲತೆಯನ್ನು ಹಿಂಡಿ ಪಾತ್ರೆಯಲ್ಲಿ ತುಂಬುವುದರಿಂದ ಅದಕ್ಕೆ ಸೋಮರಸವೆಂದು ಹೆಸರು.

ಸ್ಕಂದಸ್ವಾಮಿಯ ಈ ಸೋಮಪರ್ವಭಿಃ ಎಂಬ ಪದಕ್ಕೆ ಈ ಅರ್ಥದ ಜತೆಗೆ ದೇವತೆಗಳೆಂದೂ ಅರ್ಥ ಮಾಡಿರುವರು, **ಸೋಮಮಯಾನಿ ಪರ್ವಾಣಿ ಯೇಷಾಂ ತೇ ಸೋಮಪರ್ವಾಣಃ ದೇವಾಃ । ಯೋ ಹಿ ಯದಾಹಾರೋ ಭವತಿ ತಸ್ಯ ತನ್ಮಯಾನಿ ಪರ್ವಾಣಿ ಭವಂತಿ । ಸೋಮಾಹಾರಾಶ್ಚ ದೇವಾಃ** ॥ ದೇವತೆಗಳೂ ಸಹ ಸೋಮರೂಪವಾದ ಆಹಾರವನ್ನು ಸೇವಿಸುವುದರಿಂದ ಅವರಿಗೆ ಸೋಮಪರ್ವಾಣಃ ಎಂದು ಹೆಸರು. ಆದುದರಿಂದ ಈ ಋಕ್ಕಿನಲ್ಲಿರುವ (ಹೇ) ಇಂದ್ರ **ವಿಶ್ವೇಭಿಃ ಸೋಮಪರ್ವಭಿಃ** ಏಹಿ ಎಂಬ ವಾಕ್ಯಕ್ಕೆ ಎಲೈ ಇಂದ್ರನೇ ನೀನು ಸಮಸ್ತ ದೇವತೆಗಳಿಂದ ಸಹಿತನಾಗಿ ಇಲ್ಲಿಗೆ ಬರುವವನಾಗು ಎಂದರ್ಥ ಮಾಡಬೇಕು.

ಅಭಿಷ್ಟಿಃ—**ಅಭಿಗಂತಾ**—ಶತ್ರುಗಳಿಗೆ ಪರಾಭವವನ್ನುಂಟುಮಾಡುವವನು, ಶತ್ರುಗಳನ್ನು ಜಯಿಸುವವನು.

ಓಜಸಾ—ಬಲದಿಂದ, **ಸಾಮರ್ಥ್ಯ**ದಿಂದ—**ಓಜಃ ಪಾಜಃ** ಮೊದಲಾದ ಇಪ್ಪತ್ತೈದು ಬಲವಾಚಕ ನಾಮಗಳ **ಮಧ್ಯದಲ್ಲಿ ಓಜಃ ಎಂಬ ಶಬ್ದವು ಪಠಿತವಾಗಿದೆ.** (ನಿ. ೩-೯)

॥ ವ್ಯಾಕರಣಪ್ರಕ್ರಿಯಾ ॥

ಆ ಇಹಿ ಎಂದಿರುವಾಗ **ಆದ್ಗುಣಃ** (ಪಾ. ಸೂ. ೬-೧-೮೭) ಆಕಾರದ ಮುಂದೆ ಇ, ಉ, ಋ, ಲೃಗಳು ಇದ್ದರೆ ಪೂರ್ವಪರಸ್ಥಾನಗಳಲ್ಲಿ ಗುಣವು ಏಕಾದೇಶವಾಗಿ ಬರುವುದು ಎಂಬುದರಿಂದ ಗುಣ ಬಂದರೆ ಏಹಿ ಎಂದಾಗುವುದು. **ಅಂತಾದಿವಚ್ಚೆ** (ಪಾ. ಸೂ. ೬-೧-೮೫) **ಏಕಃಪೂರ್ವಪರಯೋಃ** ಎಂಬ ಸೂತ್ರವು ಅನುವೃತ್ತವಾಗುವುದು. ಪೂರ್ವಶಬ್ದಕ್ಕೆ ಪೂರ್ವಘಟಿತಸಮುದಾಯ ಎಂದೂ ಪರಶಬ್ದಕ್ಕೆ ಪರಘಟಿತಸಮುದಾಯ ಎಂದೂ ಅರ್ಥ. ಏಕಾದೇಶಕ್ಕೆ ಸ್ಥಾನಿಯಾದ ವರ್ಣಗಳು ಎರಡು. ಅವುಗಳಲ್ಲಿ ಪೂರ್ವವರ್ಣದಿಂದ ಕೂಡಿರುವ ಶಬ್ದದ ಕೊನೆಯ ವರ್ಣವೂ, ಪರವರ್ಣದಿಂದ ಕೂಡಿದ ಶಬ್ದದ ಮೊದಲನೆಯ ವರ್ಣವೂ ಬೇರೆ ಬೇರೆ ಇದ್ದರೆ ಯಾವ ಯಾವ ವ್ಯವಹಾರಗಳು ಬರುವುವೋ (ಪ್ರಾತಿಪದಿಕ ಪ್ರತ್ಯಯ ಉಪಸರ್ಗ ಆಜ್ ಮೊದಲಾದ ವ್ಯವಹಾರಗಳು) ಅವು ಏಕಾದೇಶ ಬಂದಮೇಲೆಯೂ ಬರುವುವು ಎಂದು ಸೂತ್ರದ ನಿಷ್ಕೃಷ್ಟವಾದ ಅರ್ಥ. ಈಗ ಏಕಾದೇಶ ಬರುವುದಕ್ಕಿಂತ ಮುಂಚೆ ಆ ಎಂಬಲ್ಲಿ ಆಜ್ ಎಂಬ ವ್ಯವಹಾರವಿತ್ತು. ಏಕಾದೇಶಬಂದಮೇಲೆಯೂ ಪೂರ್ವಾಂತವದ್ಭಾವದಿಂದ ಏ ಎಂಬಲ್ಲಿ ಆ ವ್ಯವಹಾರವು ಇದ್ದೇ ಇರುವುದು ಎಂದು ಏರ್ಪಟ್ಟಿತು. ಇದೇ ಅಂಶವನ್ನು "ಯೋಹ್ಯುಭಯೋಃಸ್ಥಾನೇ, ಲಭತೇಸಾವನ್ಯತರತೋವ್ಯಪದೇಶವ್" ಎಂದು ಭಾಷ್ಯದಲ್ಲಿ ಹೇಳಿರುವರು. ಇನ್ದ್ರ+ಏಹಿ ಎಂದಿರುವಾಗ ಏ ಎಂಬುದು ಹಿಂದೆ ಹೇಳಿದಂತೆ ಆಜ್ಜಾ. ಆದ್ದರಿಂದ **ಓಮಾಙೋಶ್ಚ** (ಪಾ.ಸೂ. ೬-೧-೯೫) ಅವರ್ಣದ ಮುಂದೆ ಓಮ್, ಆಙ್ ಇವು ಇದ್ದರೆ ಪೂರ್ವಪರಸ್ಥಾನಗಳಲ್ಲಿ ಪರರೂಪವು ಏಕಾದೇಶವಾಗಿ ಬರುವುದು ಎಂಬುದರಿಂದ ಪರರೂಪ ಬಂದರೆ ಇನ್ದ್ರೇಹಿ ಎಂದಾಗುವುದು.

ಮತ್ಸಿ—ಮಾದ್ಯ=ಹೃಷ್ಟನಾಗು ಎಂದು ಅರ್ಥ. **ಮದೀಹರ್ಷಗ್ಲಪನಯೋಃ** ಧಾತುವಿನ ಮುಂದೆ **ಲೋಟ್** ಆದಕ್ಕೆ ಮಧ್ಯಮಪುರುಷ ಏಕವಚನ ಸಿಪ್ ಬರುವುದು. **ಮದ್+ಸಿ ಸೇರ್ಹ್ಯಪಿಚ್ಚೆ** (ಪಾ. ಸೂ. ೩-೪-೮೭) ಲೋಟ್ಟಿನ ಸ್ಥಾನದಲ್ಲಿ ಬಂದ ಸಿಗೆ ಹಿ ಆದೇಶ ಬರುವುದು. ಆದು ಅಪಿತ್ತಾ ಆಗುವುದು ಎಂಬುದರಿಂದ ಹಿ ಆದೇಶವು ಯದ್ಯಪಿ ಪ್ರಾಪ್ತವಾಗುವುದು. **ಆದರೂ ಸರ್ವೇ ವಿಧಯೆಶ್ಚಂದಸಿವಿಕಲ್ಪ್ಯಂತೇ** (ಪರಿಭಾ. ೩೫) ಎಂಬುದರಿಂದ ಇದೂ ವಿಕಲ್ಪವಾದ್ದರಿಂದ ಇಲ್ಲಿ ಬರುವುದಿಲ್ಲ. **ದಿವಾದಿಭ್ಯಃಶ್ಯನ್** (ಪಾ. ಸೂ. ೩-೧-೬೯) ಎಂಬುದರಿಂದ ಬಂದ ಶ್ಯನ್ ವಿಕರಣಪ್ರತ್ಯಯಕ್ಕೆ **ಬಹುಲಂಛಂದಸಿ** (ಪಾ. ಸೂ. ೨-೪-೭೩) ಎಂಬುದರಿಂದ ಲುಕ್ (ಲೋಪ) ಬರುವುದು. **ಈಗ ಪ್ರೆತ್ಯಯೆಲೋಪೇ ಪ್ರೆತ್ಯಯೆಲಕ್ಷಣಂ** (ಪಾ. ಸೂ. ೧-೧-೬೨) ಪ್ರತ್ಯಯಕ್ಕೆ ಲೋಪ ಬಂದಿದ್ದರೂ ಲುಪ್ತ ಪ್ರತ್ಯಯನಿಮಿತ್ತಕವಾದ ಕಾರ್ಯ ಬರುವುದು ಎಂಬುದರಿಂದ ಪ್ರತ್ಯಯಲಕ್ಷಣ ಬರುವುದರಿಂದ **ಶಮಾಮಷ್ಟಾನಾಂದೀರ್ಘಃಶ್ಯನಿ** (ಪಾ. ಸೂ. ೭-೩-೭೪) ಶ್ಯನ್ ಪ್ರತ್ಯಯ ಪರದಲ್ಲಿರುವಾಗ ಶಮು ಧಾತು ಮೊದಲಾಗಿ ಎಂಟು ಧಾತುಗಳ ಅಚ್ಚಿಗೆ ದೀರ್ಘ ಬರುವುದು ಎಂಬುದರಿಂದ ದೀರ್ಘವು ಪ್ರಾಪ್ತವಾಗುವುದು ಆದರೂ **ನ ಲುಮತಾಂಗಸ್ಯ** (ಪಾ. ಸೂ. ೧-೧-೬೩) ಲು ಎಂಬುದನ್ನು ಹೊಂದಿರುವ ಪದವನ್ನು ಲುಕ್, ಶ್ಲು, ಲುಪ್ ಉಚ್ಚರಿಸಿ ಎಲ್ಲಿ ಲೋಪ ಬಂದಿದೆಯೋ ಅಲ್ಲಿ ಲುಪ್ತಪ್ರತ್ಯಯ ನಿಮಿತ್ತಕವಾದ ಅಂಗೋದ್ದೇಶ್ಯಕಕಾರ್ಯ ಬರುವುದಿಲ್ಲ ಎಂಬುದರಿಂದ ಶಮ್ ಎಂಬ ಅಂಗವನ್ನು ಉದ್ದೇಶಿಸಿ ದೀರ್ಘವನ್ನು ಮಾಡುವಾಗ ಪ್ರತ್ಯಯಲಕ್ಷಣ ಬರುವುದಿಲ್ಲ. ಏವಂಚ ಶ್ಯ ಪ್ರತ್ಯಯ ಪರದಲ್ಲಿ ಇಲ್ಲದುದರಿಂದ ದೀರ್ಘ ಬರುವುದಿಲ್ಲ. ಸಿಪ್ಪು ಪಿತ್ತಾದ್ದರಿಂದ ಅನುದಾತ್ತ ಧಾತುಸ್ವರವಿಲ್ಲುವುದು. ಮದ್+ಸಿ ಎಂದಿರುವಾಗ **ಖರಿಚೆ** (ಪಾ. ಸೂ. ೮-೪-೫೫) ಖರ್ ವರ್ಣಪರದಲ್ಲಿದ್ದರೆ ಝಲ್ ವರ್ಣಗಳಿಗೆ ಚರ್ ವರ್ಣಗಳು ಬರುವುವು ಎಂಬುದರಿಂದ ದಕಾರಕ್ಕೆ ತಕಾರ ಬಂದರೆ ಮತ್ಸಿ ಎಂದಾಗುವುದು.

ಅನ್ಹಸಃ ಅದೇರ್ನುಮ್ ಧೌಚೆ(ಉ.ಸೂ. ೪-೬೪೫) ಅದ ಧಾತುವಿನ ಮುಂದೆ ಅಸುನ್ ಪ್ರತ್ಯಯವೂ ಆಕಾರದ ಮುಂದೆ ನಕಾರಾಗಮವೂ ದಕಾರಕ್ಕೆ ಧಕಾರವೂ ಬರುವುದು ಎಂಬುದರಿಂದ ಅದಭಕ್ಷಣೇ ಎಂಬ ಅದ

ಧಾತುವಿನ ಮುಂದೆ ಅಸುನ್ ಪ್ರತ್ಯಯವೇ ಮೊದಲಾದುವು ಬಂದರೆ ಅನ್ಧಸ್. ಪ್ರಥಮಾಬಹುವಚನದಲ್ಲಿ ಅನ್ಧಸಃ ಎಂದಾಗುವುದು. ಅರ್ಥ ಹೇಳುವಾಗ ತೃತೀಯಾ ಬಹುವಚನಾಂತವನ್ನಾಗಿ ಮಾಡಿಕೊಳ್ಳಬೇಕು, ಪ್ರತ್ಯಯವು ನಿತ್ತಾದ್ದರಿಂದ ಪ್ರತ್ಯಯಾಂತಕ್ಕೆ ನಿಶ್ಸ್ವರ ಅದ್ಯುದಾತ್ತ ಬರುವುದು.

ವಿಶ್ವೇಭಿಃ—**ಅತೂಪ್ಪುಷಿಲಟಿಕಣಿಖಟಿವಿಶಿಭ್ಯಃ ಕ್ವನ್** (ಉ. ಸೂ. ೧-೧೪೯) **ಅತೂವ್ಯಾಪ್ತೌ, ಪುಷಸ್ನೇಹನಾದೌ, ಲಟದಾಲ್ಯೇ, ಕಣನಿಮಿಾಲನೇ, ಖಟಿಕಾಂಕ್ಷಾಯಾಂ ವಿಶಪ್ರವೇಶನೇ** ಈ ಧಾತುಗಳ ಮುಂದೆ ಕ್ವನ್ ಪ್ರತ್ಯಯ ಬರುವುದು ಎಂಬುದರಿಂದ ವಿಶ್ ಧಾತುವಿನ ಮುಂದೆ ಕ್ವನ್ ಪ್ರತ್ಯಯ ಬಂದರೆ ವಿಶ್+ಕ್ವನ್=ವ, ಪ್ರತ್ಯಯವು ನಿತ್ತಾದ್ದರಿಂದ ಪ್ರತ್ಯಯಾಂತವು ಅದ್ಯುದಾತ್ತ. ವಿಶ್ವಶಬ್ದದ ಮುಂದೆ ತೃತೀಯಾ ಬಹುವಚನ ಭಿಸ್ ಪ್ರತ್ಯಯವನ್ನಿಟ್ಟರೆ **ಬಹುಲಂಛಂದಸಿ** (ಪಾ. ಸೂ. ೭-೧-೧೦) ಎಂಬುದರಿಂದ ಐಸ್ ಆದೇಶವು ಭಿಸ್ಸಿಗೆ ಬರುವುದಿಲ್ಲ.

ಸೋಮಪರ್ವಭಿಃ—**ಲತಾರೂಪಂ ಸೋಮಂ ಪೃಣನ್ತಿ ಪೂರಯನ್ತಿ ಇತಿ ಸೋಮಪರ್ವಾಣಃ** ಸೋಮರಸಾಃ ಸೋಮಲತೆಯನ್ನು ಪೂರಣಮಾಡುವುದರಿಂದ ಸೋಮಪರ್ವಶಬ್ದದಿಂದ ಸೋಮರಸವು ಹೇಳಲ್ಪಡುವುದು. ಪೃ ಪಾಲನಪೂರಣಯೋಃ ಧಾತು. **ಅನ್ಯೇಭ್ಯೋಽಪಿದೃಶ್ಯಂತೇ** (ಪಾ. ಸೂ. ೩-೨-೭೫) ಎಂಬುದರಿಂದ ಪೃ ಧಾತುವಿನ ಮುಂದೆ ವನಿಪ್ ಪ್ರತ್ಯಯ. **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಪೃ ಎಂಬುದಕ್ಕೆ ಗುಣ. ಗುಣವು **ಉರಣ್ರಪರಃ** (ಪಾ. ಸೂ. ೧-೧-೫೧) ಎಂಬುದರಿಂದ ರಪರವಾಗಿ ಬರುವುದು ಸೋಮಪರ್ವನ್ ಎಂದಾಗುವುದು. ವನಿಪ್ಪು ಪಿತ್ತಾದ್ದರಿಂದ ಅನುದಾತ್ತ. ಧಾತುಸ್ವರವೇ ನಿಲ್ಲುವುದು. ಸೋಮಶಬ್ದದೊಂದಿಗೆ **ಉಪಪದಮತಿಙ್** (ಪಾ. ಸೂ. ೨-೨-೧೯) ಉಪಪದವಾಗಿರುವ ಸುಬಂತವು ಸಮರ್ಥವಾದ ತಿಙಂತಭಿನ್ನ ಶಬ್ದದೊಂದಿಗೆ ನಿತ್ಯವಾಗಿ ಸಮಾಸವನ್ನು ಹೊಂದುವುದು ಎಂಬುದರಿಂದ ಉಪಪದ ಸಮಾಸ ಬಂದರೆ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬಂದು ಅದೇ ಸ್ವರವೇ ನಿಲ್ಲುವುದು. ತೃತೀಯಾವಿಭಕ್ತಿ ಬಹುವಚನದಲ್ಲಿ **ನೇಶೋಪಸೃಷ್ಟಾತಿಪದಿಕಾಂತಸ್ಯ** (ಪಾ. ಸೂ. ೮-೩-೭) ಎಂಬುದರಿಂದ ನಕಾರಕ್ಕೆ ಲೋಪಬಂದರೆ ರುತ್ವವಿಸರ್ಗಗಳು ಬಂದು ಸೋಮಪರ್ವಭಿಃ ಎಂದಾಗುವುದು.

ಅಭಿಷ್ಟಿಃ—**ಅಭಿಗನ್ತಾ, ಇಷಗತೌ** ಎಂಬ ಧಾತುವಿನ ಮುಂದೆ **ಮಂತ್ರೇ ವೃಷೇಷಪಚಮನವಿದಭೂವೀರಾ ಉದಾತ್ತಃ** (ಪಾ. ಸೂ. ೩-೩-೯೬) ವೃಷ ಮೊದಲಾದ ಧಾತುಗಳಿಗೆ ಕ್ತಿನ್ ಬರುವುದು. ಅದು ಉದಾತ್ತವೂ ಆಗುವುದು ಎಂಬುದರಿಂದ ಇಷಧಾತುವಿನ ಮುಂದೆ ಉದಾತ್ತವಾದ ಕ್ತಿನ್ ಬರುವುದು, ಕ್ತಿನ್ ಪ್ರತ್ಯಯವು ಭಾವಾರ್ಥದಲ್ಲಿ ಬಂದರೂ ಲಕ್ಷಣೆಯಿಂದ ಭವಿತೃವನ್ನು ಹೇಳುವುದು ತಿ, ತು, ತ್ರ, ತ, ಥ, ಸಿ, ಸು, ಸರ, ಕ, ಸೇ, ಷು ಚೆ (ಪಾ. ಸೂ. ೭-೩-೯) ಈ ಹತ್ತು ಕೃತ್ಪ್ರತ್ಯಯಗಳಿಗೆ ಇಡಾಗಮ ಬರುವುದಿಲ್ಲ ಎಂದು ನಿಷೇಧವಿರುವುದರಿಂದ ತಿ ಎಂಬುದಕ್ಕೆ **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ಎಂಬುದರಿಂದ ಇಡಾಗಮ ಬರುವುದಿಲ್ಲ. ಅಭಿ+ಇಷ್+ತಿ ಎಂದಿರುವಾಗ **ಏಮನ್ನಾದಿಷು ಪರರೂಪಂ ವಕ್ತವ್ಯಮ್** (ಪಾ. ಸೂ. ೬-೧-೯೪-೬) ಎಂಬುದರಿಂದ ಅಭಿ+ಇಷ್ ಎಂಬಲ್ಲಿ ಸವರ್ಣದೀರ್ಘಸಂಧಿಗೆ ಅಪವಾದವಾಗಿ ಪರರೂಪ ಬರುವುದು. ಅಭಿಷ್+ತಿ **ಷ್ಟುನಾಷ್ಟುಃ** (ಪಾ. ಸೂ. ೮-೪-೪೧) ಎಂಬ ಷ್ಟುತ್ವಸಂಧಿಯಿಂದ ತಕಾರಕ್ಕೆ ಟಕಾರ ಬಂದರೆ ಅಭಿಷ್ಟಿ ಎಂದಾಗುವುದು. ಅಭಿ ಎಂಬುದಕ್ಕೆ ಇಷ್ಟಿ ಎಂಬುದರೊಡನೆ **ಕುಗತಿಪ್ರಾದಯಃ** (ಪಾ. ಸೂ. ೨-೨-೧೮) ಎಂಬುದರಿಂದ ಪ್ರಾದಿಸಮಾಸ ಬಂದರೆ ಕೃದುತ್ತರಪದಪ್ರಕೃತಿಸ್ವರವೇ ಬರುವುದು.

ಓಜಸಾ—ಉಬ್ಜೇರ್ಬಲೋಪಶ್ಚ (ಉ. ಸೂ. ೪-೬೩೧) ಎಂಬುದರಿಂದ ಉಬ್ಜಆರ್ಜವೇ ಧಾತುವಿನ ಮುಂದೆ ಅಸುನ್ ಪ್ರತ್ಯಯವೂ ಧಾತುವಿನ ಬಕಾರಕ್ಕೆ ಲೋಪವೂ ಬರುವುದು. ಲಘೂಪಧಗುಣ ಬಂದರೆ ಓಜಸ್ ತೃತೀಯಾ ಏಕವಚನ ಓಜಸಾ. ನಿತ್ತಾದ್ದರಿಂದ ಆದ್ಯುದಾತ್ತ ಬರುವುದು ॥ ೧ ॥

॥ ಸಂಹಿತಾಪಾಠಃ ॥

ಏಮೇನಂ ಸೃಜತಾ ಸುತೇ ಮುಂದಿಮಿಂದ್ರಾಯ ಮುಂದಿನೇ ।
ಚಕ್ರಿಂ ವಿಶ್ವಾನಿ ಚಕ್ರಯೇ ॥ ೨ ॥

॥ ಪದಪಾಠಃ ॥

ಆ । ಈಂ । ಏನಂ । ಸೃಜತ । ಸುತೇ । ಮುಂದಿಂ । ಇಂದ್ರಾಯ । ಮುಂದಿನೇ ॥
ಚಕ್ರಿಂ । ವಿಶ್ವಾನಿ । ಚಕ್ರಯೇ ॥ ೨ ॥

॥ ಸಾಯಣಭಾಷ್ಯಂ ॥

ಈಮಿತ್ಯನರ್ಥಕಃ ಪಾದಪೂರಣಾಯ ಪ್ರಯುಕ್ತಃ । ಹೇ ಅಧ್ವರ್ಯವಃ ಸುತೇಽಭಿಷುತೇ ಚಮಸೇಸ್ಥೇ ಸೋಮ ಏನಂ ಸೋಮಮಿಂದ್ರಾಯೇಂದ್ರಾರ್ಥಮಾಸೃಜತ । ಪುನರಭ್ಯುನ್ನಯತ । ಶುಕ್ರಾಮಂಥಿಚಮಸಗಣೇ ಪುನರಭ್ಯುನ್ನಯನಮಾಪಸ್ತಂಬೇನೋಕ್ತಂ । ಹೋತ್ರಕಾಣಾಂ ಚಮಸಾಧ್ವರ್ಯವಃ ಸಕೃತ್ಪಕೃದ್ಧುತ್ವಾ ಶುಕ್ರಸ್ಯಾಭ್ಯುನ್ನೀಯೋಸಾವರ್ತಧ್ವಮಿತಿ । ಆಪ. ೧೨-೨೩-೪ । ಇತಿ । ಕೀದೃಶಮೇನಂ-ಮಂದಿಂ ಹರ್ಷಹೇತುಂ ಚಕ್ರಿಂ ಸಾಧುಕರಣಶೀಲಂ । ಕೀದೃಶಾಯೇಂದ್ರಾಯ । ಮಂದಿನೇ ಹರ್ಷ-ಯುಕ್ತಾಯ ವಿಶ್ವಾನಿ ಸರ್ವಾಣಿ ಕರ್ಮಾಣಿ ಚಕ್ರಯೇ ಕೃತವತೇ । ಸರ್ವಕರ್ಮನಿಷ್ಪಾದನಶೀಲಾಯೇ। ತ್ಯರ್ಥಃ । ಈಮಿತ್ಯಸ್ಯ ಪಾದಪೂರಣಾರ್ಥತ್ವಂ ಯಾಸ್ಕ ಆಹ । ಅಥ ಯೇ ಪ್ರವೃತ್ತೈಽರ್ಥೈಽಮಿತಾಕ್ಷರೇಷು ಗ್ರಂಥೇಷು ವಾಕ್ಯಪೂರಣಾ ಆಗಚ್ಛಂತಿ ಪದಪೂರಣಾಸ್ತೇ ಮಿತಾಕ್ಷರೇಷ್ವನರ್ಥಕಾಃ ಕಮಿಮಾಮಿದ್ವಿತಿ । ನಿ. ೧-೯ । ಇತಿ । ಅಸ್ಯಾಯಮರ್ಥಃ । ಅನ್ಯೈರೇವ ಪದೈರ್ವಿವಕ್ಷಿತೇಽರ್ಥೇ ಸಮಾಪ್ತೇ ಸತಿ ಯೇ ಶಬ್ದಾ ಈಮಿತ್ಯಾದಯಃ ಪ್ರಯುಕ್ತಾಸ್ತೇ ಶಬ್ದಾ ಅಮಿತಾಕ್ಷರೇಷು ಛಂದೋರಾಹಿತ್ಯೇನ ಪರಿಮಿತಾಕ್ಷರರಹಿತೇಷು ಬ್ರಾಹ್ಮಣಾದಿವಾಕ್ಯೇಷು ವಾಕ್ಯಪೂರಣಾರ್ಥಾ ದ್ರಷ್ಟವ್ಯಾಃ । ಮಿತಾಕ್ಷರೇಷು ಛಂದೋ-ಯುಕ್ತೇಷು ಗ್ರಂಥೇಷು ಪಾದಪೂರಣಾರ್ಥಾಃ । ತೇ ಚ ಕಮಿಮಾಮಿತ್ಯಾದಯ ಇತಿ । ಈಮಿತ್ಯಸ್ಯ ಶಬ್ದ-ಸ್ಯಾನರ್ಥಕ್ಯಾಯೈತಾಮೃಚಮುದಾಜಹಾರ । ಏಮೇನಂ ಸೃಜತಾ ಸುತೇ । ಆಸೃಜತೈನಂ ಸುತೇ ॥ ನಿ. ೧-೧೦ । ಇತಿ ॥ ಏನಂ । ಇದನೋ ದ್ವಿತೀಯಾಯಾಂ ದ್ವಿತೀಯೋಟೌಃ ಸ್ವೇನಃ । ಪಾ. ೨-೪-೩೪ ।

इत्येनादेशोऽनुदात्तः इत्यनुवृत्तेः सर्वानुदात्तः । सृजत । संहितायामन्येषामपि दृश्यते । सा. ६-३-८१६ । इति दीर्घः । मंदिं । प्रमोदहेतुं । मदि स्तुतिमोदमदस्वप्नकान्तिगतिषु । इदितो नुम् । धातोरिति नुम् । मंदमानं प्रयुंक्ष्व इत्यर्थे हेतुमति च । सा. ३-८-७६ । इति णिच् । ण्यन्तस्याजन्तत्वादचि इः । उ-४-८३९ । इतीकारप्रत्ययः । णेरनिटीति णिलोपः । प्रत्ययस्वरेणान्तोदात्तत्वं । मंदिनें । मंदेः पूर्ववत् । चेतुर्थ्यैकवचनेऽनपुंसकस्यापि । सा. ६-८-६३ । व्यत्ययो येन नुमागमः । चेक्रिं । डुकृञ् करणे । अदृगमहनजनः किकिनौ लिट् च । सा. ३-२ ८६८ । इति तच्छीलतद्धर्मतत्साधुकारिषु कर्तृषु किन्प्रत्ययः । तस्य कित्त्वात्पुगणाभावः । यंणादेशः । लिड्द्वद्भावाद्द्विर्वचनं । द्विर्वचनेऽचि । सा. ८-८ ४८ । इति यंणादेशस्य स्थानिवद्भावात्शश्छोऽटि द्विरुच्यते । अभ्यासस्योरत्वरपरत्वश्चुत्वहलादिशेषाः। कृनोः नित्त्वादाद्युदात्तः । विश्वानि । विशेः क्वन् । नित्त्वादाद्युदात्तः । अस्य चेक्रियं इति कृदंतेन योगेऽपि कर्तृकर्मणोः कृति । सा. २-३-६४ । इति षष्ठी न भवति । किकिनौ लिट् चेति कृनोः लिड्द्वद्भावेन न लोकाव्ययेतिषष्ठ्यलर्थतृनाम् । सा. २-३-६८ । इति निषेधात् ॥

॥ प्रतिपदार्थ ॥

(हे अध्वर्यवः—ऎलै अध्वर्यु मोदलाद ऋत्विजरे,) सुतेः—सोमरसवु हिंडि सिद्ध पडिसिरलागि । मंदिनेः—हर्षयुक्तनाद । विश्वानि—समस्त कार्यगळन्नू । चेक्रियेः—माडुवनाद । इंद्रायेः—इंद्रनिगागि । मंदिं—संतोषसवन्नुंडुमाडुव । चेक्रिं—ऒळ्ळॆय कार्यगळन्नु माडलु साधनवाद । एनं—ई सोमरसवन्नु । आ सृजत—अर्पिसिरि (कॊडि) ॥

॥ भावार्थ ॥

ऎलै अध्वर्यु मोदलाद ऋत्विजरे, ईग सोमरसवु लतॆयिंद हिंडि पानयोग्य वागुवंते सिद्ध पडिसल्पट्टिरुवुदु. ई सोमरसवु पानमाडुववरिगॆ हर्षवन्नुंटुमाडुवुदु ; ऒळ्ळॆय कर्मगळन्नु माडलु कारणभूतवागिरुवुदु , इंतह ई सोमरसवन्नु हर्षयुक्तनू, समस्त कार्यगळन्नु माडुवनू आद इंद्रनिगॆ अर्पिसिरि.

English Translation.

The soma being extracted, present this exhilarating and efficacious draught to the rejoicing Indra, the accomplisher of all things.

॥ ವಿಶೇಷವಿಷಯಗಳು ॥

ಈಂ—ಈಂ ಎಂಬ ಶಬ್ದಕ್ಕೆ ಅರ್ಥವಿಲ್ಲವೆಂದೂ ಪಾದವನ್ನು ಪೂರ್ಣಗೊಳಿಸುವುದಕ್ಕಾಗಿ ಉಪಯೋಗಿಸಲ್ಪಟ್ಟಿರುವುದೆಂದೂ ಭಾಷ್ಯಕಾರರೂ, ಸ್ಕಂದಸ್ವಾಮಿಯೂ ಹೇಳಿರುವರು. ಯಾಸ್ಕರೂ ಸಹ ಈ ವಿಚಾರವಾಗಿ ನಿರುಕ್ತದಲ್ಲಿ (ನಿ. ೧-೯) ಈರೀತಿ ಹೇಳಿರುವರು---

ಅಥ ಯೇ ಪ್ರವೃತ್ತೈರರ್ಥೈರಮಿತಾಕ್ಷರೇಷು ಗ್ರಂಥೇಷು ವಾಕ್ಯಪೂರಣಾ ಆಗಚ್ಛಂತಿ ಪದಪೂರಣಾಸ್ತೇ ಮಿತಾಕ್ಷರೇಷ್ವನರ್ಥಕಾಃ ಕಮಿಮಾಮಿದ್ಧಿಮಿತಿ ॥ (ನಿ. ೧-೯)
ಇದಕ್ಕೆ ಭಾಷ್ಯಕಾರರು ಹೀಗೆ ವ್ಯಾಖ್ಯಾನ ಮಾಡಿರುವರು---

ಅನ್ಯೈರೇವ ಪದೈರ್ನಿವಕ್ಷಿತೇಽರ್ಥೇ ಸಮಾಪ್ತೇ ಸತಿ ಯೇ ಶಬ್ದಾ ಈಮಿತ್ಯಾದಯಃ ಶ್ರೂಯಂತಾಸ್ತೇ ಶಬ್ದಾ ಅಮಿತಾಕ್ಷರೇಷು ಛಂದೋರಾಹಿತ್ಯೇನ ಪರಿಮಿತಾಕ್ಷರರಹಿತೇಷು ಬ್ರಾಹ್ಮಣಾದಿವಾಕ್ಯೇಷು ವಾಕ್ಯಪೂರಣಾರ್ಥಾ ದ್ರಷ್ಟವ್ಯಾಃ । ಮಿತಾಕ್ಷರೇಷು ಛಂದೋಯುಕ್ತೇಷು ಗ್ರಂಥೇಷು ಪಾದಪೂರಣಾರ್ಥಾಃ । ತೇ ಚ ಕಮಿಮಾಮಿತ್ಯಾದಯ ಇತಿ । ಈಮಿತ್ಯಸ್ಯ ಶಬ್ದಸ್ಯಾನರ್ಥಕ್ಯಾಯೈತಾಮೃಚಮುದಾಜಹಾರ । ಏಮೇನಂ ಸೃಜತಾ ಸುತೇ । ಆಸೃಜತೈನಂ ಸುತೇ ಇತಿ ॥

ಎಂದರೆ—ಈಂ ಶಬ್ದಕ್ಕೆ ಅರ್ಥವಿಲ್ಲ. ಪಾದಪೂರಣ ಮಾಡುವುದಕ್ಕಾಗಿ ಉಪಯೋಗಿಸಲ್ಪಟ್ಟಿರುವುದು. ಛಂದೋಬದ್ಧವಲ್ಲದ ಮತ್ತು ಇಷ್ಟೇ ಅಕ್ಷರಗಳಿರಬೇಕೆಂಬ ನಿಯಮವಿಲ್ಲದ ಬ್ರಾಹ್ಮಣಾದಿ ವಾಕ್ಯಗಳಲ್ಲಿ ಈಂ ಮೊದಲಾದ ಶಬ್ದಗಳು ವಾಕ್ಯಪೂರಣ ಮಾಡುವುದಕ್ಕಾಗಿ ಉಪಯೋಗಿಸಲ್ಪಡುವುದು. ಅದರಂತೆ ಛಂದೋಬದ್ಧವಾದ ಮತ್ತು ಕ್ಲೃಪ್ತಸಂಖ್ಯೆಯ ಅಕ್ಷರಗಳಿಂದ ಕೂಡಿದ ಋಕ್ಕು ಮೊದಲಾದ ಮಂತ್ರಗಳಲ್ಲಿ ಈ ಶಬ್ದಗಳು ಪಾದಪೂರಣಕ್ಕಾಗಿ ಉಪಯೋಗಿಸಲ್ಪಡುವವು. ಈ ವಿಷಯದಲ್ಲಿ ಉದಾಹರಣೆಗಾಗಿ ಯಾಸ್ಕರು ಏಮೇನಂ ಸೃಜತ ಎಂಬ ಋಕ್ಕನ್ನೇ ಉಪಯೋಗಿಸಿರುವರು. ಈ ಋಕ್ಕಿನಲ್ಲಿ ಈಂ ಎಂಬ ಶಬ್ದಕ್ಕೆ ಈ ಮಂತ್ರದ ಅರ್ಥ ವಿಚಾರದಲ್ಲಿ ಯಾವ ವಿಧವಾದ ಉಪಯೋಗವೂ ಇಲ್ಲದೆ ಕೇವಲ ಪಾದಪೂರಣಕ್ಕಾಗಿ ಎಂದರೆ ಛಂದೋನಿಯಮ ಪ್ರಕಾರ ಗಾಯತ್ರೀ ಛಂದಸ್ಸಿನಲ್ಲಿರಭೇಕಾದ ಎಂಟು ಅಕ್ಷರಗಳನ್ನು ಹೊಂದಿಸುವುದಕ್ಕಾಗಿ ಉಪಯೋಗಿಸಲ್ಪಟ್ಟಿರುವುದು. ಮತ್ತು—

ಕ್ರಿಯಾವಾಚಕಮಾಖ್ಯಾತಮುಪಸರ್ಗೇ ವಿಶೇಷಕೃತ್ ।
ಸತ್ತ್ವಾಭಿಧಾಯಕಂ ನಾಮ ನಿಪಾತಃ ಪಾದಪೂರಣಃ ।' ಇತಿ ॥

ಕಮಿಮಾಮಿದ್ಧಿತಿ ॥ ಏತೇ ಚತ್ವಾರಃ ಕಂ, ಈಂ ಇತ್, ಉ ಇತಿ ॥ ಎಂದರೆ **ಕಂ, ಈಂ ಇತ್, ಉ** ಎಂಬ ನಾಲ್ಕು ಶಬ್ದಗಳು (ನಿಪಾತಗಳು) ಛಂದೋಬದ್ಧವಾದ ಋಕ್ಕಿನ ಪಾದದಲ್ಲಿರಬೇಕಾದ ಕ್ಲೃಪ್ತ ಸಂಖ್ಯೆಯ ಅಕ್ಷರಗಳನ್ನು ಪೂರಯಿಸುವುದಕ್ಕಾಗಿ ಉಪಯೋಗಿಸಲ್ಪಡುವವು. ಇವುಗಳಿಗೆ ಅಂತಹ ಸಂದರ್ಭದಲ್ಲಿ ಯಾವ ನಿರ್ದಿಷ್ಟಾರ್ಥವೂ ಇರುವುದಿಲ್ಲ. ಮತ್ತು ಇವ, ನ- ಚಿತ್, ನು ಎಂಬ ಶಬ್ದಗಳೂ ಸಹ ಪಾದಪೂರಣಕ್ಕಾಗಿ ಉಪಯೋಗಿಸಲ್ಪಡುವುದಾದರೂ ಕೆಲವು ಸಂದರ್ಭಗಳಲ್ಲಿ ಇವುಗಳಿಗೆ ಒಂದು ವಿಧವಾದ ಅರ್ಥವಿರುವುದು. ಆದುದರಿಂದ ಇವ, ನ, ಚಿತ್, ನು ಎಂಬ ಶಬ್ದಗಳು ಅರ್ಥರಹಿತವಾಗಿಯೂ ಅರ್ಥಸಹಿತವಾಗಿಯೂ ಎಂದರೆ ಎರಡು ವಿಧವಾಗಿಯೂ ಉಪಯೋಗಿಸಲ್ಪಡುವವು.

ಸೃಜತ—ಛಂದಸ್ಸಿನ ಅನುಕೂಲಕ್ಕಾಗಿ ತಕಾರವು ಸಂಹಿತಾಪಾಠದಲ್ಲಿ ದೀರ್ಘವಾಗಿರುವುದು.

ಮಂದಿಂ—ಪ್ರನೋದಹೇತುಂ । ಮದಿ ಸ್ತುತಿನೋದನಮದಸ್ವಪ್ನಕಾಂತಿಗತಿಷು ॥ ಈ ಶಬ್ದವು ಮದಿ ಎಂಬ ಧಾತುವಿನ ರೂಪಾಂತರವು. ಸಂತೋಷನನ್ನುಂಟುಮಾಟುವ, ಹರ್ಷಪ್ರದವಾದ ಎಂದರ್ಥವು.

ಮಂದಿನೇ—ಮುಂದಿಂ ಎಂಬ ಶಬ್ದಕ್ಕೆ ಹೇಳಿರುವ ವಿಷಯನೇ ಈ ಶಬ್ದಕ್ಕೂ ಅನ್ವಯಿಸುವುದು. ಇದು ಚತುರ್ಥ್ಯೇಕವಚನವು.

ಚಕ್ರಿಂ ಮತ್ತು ಚಕ್ರಯೇ—ಈ ಶಬ್ದಗಳು **ಡುಕೃಞ್ ಕರಣೇ** ಎಂಬ ಧಾತುವಿನಿಂದ ವ್ಯುತ್ಪನ್ನವಾದ ಶಬ್ದಗಳು. ಇವುಗಳ ನಿಷ್ಪತ್ತಿಗಾಗಿ ವ್ಯಾಕರಣಭಾಗವನ್ನು ನೋಡಿ.

॥ ವ್ಯಾಕರಣಪ್ರಕ್ರಿಯಾ ॥

ಏನಮ್—ಇದಮ್ ಶಬ್ದದ ಮುಂದೆ ದ್ವಿತೀಯಾವಿಭಕ್ತಿ ಏಕವಚನ ಅಮ್ ಪ್ರತ್ಯಯವನ್ನು ಇಟ್ಟರೆ ಇದಮ್+ಅಮ್ ಎಂದಿರುವಾಗ **ದ್ವಿತಿಯೋಟ್ಟೌಸ್ವೇನಃ** (ಪಾ.ಸೂ. ೨-೪-೩೪) ಅನ್ವಾದೇಶ ವಿಷಯದಲ್ಲಿ ದ್ವಿತೀಯಾವಿಭಕ್ತಿ, ತೃತೀಯಾ ಏಕವಚನ ಟಾ ಪ್ರತ್ಯಯ ಷಷ್ಠೀ ಸಪ್ತಮಿವಿಭಕ್ತಿಗಳ ಓಸ್ ಇವು ಪರದಲ್ಲಿದ್ದರೆ ಇದಮ್ ಏತದ್, ಶಬ್ದಗಳಿಗೆ ಏನ ಎಂಬ ಆದೇಶ ಬರುವುದು ಎಂಬುದರಿಂದ ಇದಮ್ ಎಂಬುದಕ್ಕೆ ಏನ ಆದೇಶ ಬಂದರೆ ಏನ+ಅಮ್ **ಅಮಿಪೂರ್ವಃ** (ಪಾ. ಸೂ. ೬-೧-೧೦) ಎಂಬುದರಿಂದ ಪೂರ್ವರೂಪ ಬಂದರೆ ಏನಮ್ ಎಂದಾಗುವುದು. ದ್ವಿತೀಯಾಟ್ಟೌಸ್ವೇನಃ ಎಂಬ ಸೂತ್ರಕ್ಕೆ **ಇದಮೋಽನ್ವಾದೇಶೇಶನುದಾತ್ತಸ್ತೃತೀಯಾದೌ** (ಪಾ.ಸೂ. ೨-೪-೩೨) ಎಂಬುದರಿಂದ ಅನುದಾತ್ತಃ ಎಂಬ ಪದವೂ ಸಂಬಂಧಿಸುವುದು. ಆದ್ದರಿಂದ ಅನುದಾತ್ತವಾದ ಏನ ಎಂಬ ಆದೇಶ ಬರುವುದು ಎಂದು ಅರ್ಥವಾಗುವುದು. ಆದ್ದರಿಂದ ಏನಮ್ ಎಂಬುದು ಸರ್ವಾನುದಾತ್ತ.

ಸೃಜತ—**ಅನ್ಯೇಷಾಮಪಿದೃಶ್ಯತೇ** (ಪಾ. ಸೂ. ೬-೩-೧೩೭) ಎಂಬುದರಿಂದ ಸಂಹಿತಾಕಾಲದಲ್ಲಿ ದೀರ್ಘ ಬರುವುದು ಸೃಜತಾ ಎಂದಾಗುವುದು.

ಮನ್ದಿಮ್—ಹರ್ಷಕ್ಕೆ ಕಾರಣಭೂತವಾದ, ಮದಿಸ್ತುತಿನೋದನಮದಸ್ವಪ್ನಕಾನ್ತಿಗತಿಷು ಧಾತು, ಮದಿ ಧಾತುವು ಇದಿತ್ತಾದ್ದರಿಂದ **ಇದಿತೋನುಮ್ಧಾತೋಃ** (ಪಾ. ಸೂ. ೭-೧-೫೮) ಎಂಬುದರಿಂದ ನುಮಾಗಮ ಬರುವುದು ಮನ್ದ್ ಎಂದಾಗುವುದು. ನಂತರ ಮನ್ದಮಾನಂ ಪ್ರಯುಙ್ಕ್ತೇ, ಎಂದು ಅರ್ಥವನ್ನು ವಿವಕ್ಷೆ ಮಾಡಿದರೆ **ಹೇತುಮತಿಚ** (ಪಾ. ಸೂ. ೩-೧-೨೬) **ತತ್ಪ್ರಯೋಜಕೋಹೇತುಶ್ಚ** (ಪಾ. ಸೂ. ೧-೪-೫೫) ಕರ್ತೃವನ್ನು ಪ್ರೇರಿಸುವವನು, ಹೇತು ಸಂಜ್ಞೆಯನ್ನೂ, ಕರ್ತೃಸಂಜ್ಞೆಯನ್ನೂ ಹೊಂದುವನು ಎಂದು ಎರಡನೇ ಸೂತ್ರದ ಅರ್ಥ, ಇಂತಹ ಹೇತು ಸಂಜ್ಞೆವುಳ್ಳವನಲ್ಲಿರತಕ್ಕ ವ್ಯಾಪಾರವನ್ನು ಅಂದರೆ ಪ್ರೇಷಣಾ, ಅನುಮತಿ, ಉಪದೇಶಾದಿಗಳನ್ನು ವಿವಕ್ಷೆ ಮಾಡಿದರೆ ಧಾತುವಿನ ಮುಂದೆ ಣಿಚ್ ಪ್ರತ್ಯಯಬರುವುದು ಎಂದು ಪ್ರಥಮ ಸೂತ್ರಾರ್ಥ, ಪ್ರೇಷಣಾ ಅಂದರೆ ಆಜ್ಞೆ. ಸಮಾನವಾದ ಅಧಿಕಾರವನ್ನು ಹೊಂದಿರುವ ಮಿತ್ರನೇ ಮೊದಲಾದವರನ್ನು ಪ್ರವರ್ತನೆ ಮಾಡುವುದಕ್ಕೆ ಅಧ್ಯೇಷಣಾ ಎಂದು ಹೆಸರು. ಅನುಮತಿ, ಎಂದರೆ ರಾಜಾದಿಗಳ ಸಂಮತಿ, ಉಪದೇಶ ಎಂದರೆ ರೋಗಿಗೆ ಹಿತಬೋಧನೆ ಮಾಡಿ ಔಷಧಿ ಸೇವನೆಯಲ್ಲಿ ಪ್ರವರ್ತನೆಮಾಡುವುದು. ಇಲ್ಲಿ ಪ್ರೇರಣಾರ್ಥದಲ್ಲಿ ಣಿಚ್ ಪ್ರತ್ಯಯ ಬರುವುದು. ಎಂದರೆ ಮನ್ದ್+ಇ. ಈಗ ಇದು ಅಜಂತವಾದ್ದರಿಂದ, **ಆಚ್ಛೇಃ** (ಉ. ಸೂ. ೪-೫೮೪) ಅಜನ್ತವಾದ ಧಾತುವಿನ ಮುಂದೆ ಇ ಪ್ರತ್ಯಯ ಬರುವುದು ಎಂಬುದರಿಂದ

ಙಿ ಪ್ರತ್ಯಯ ಬಂದರೆ ಮದ್+ಙಿ+ಇ ಸೇರನಿಟಿ (ಪಾ. ಸೂ. ೬-೪-೫೮) ಇಡಾದಿಯಲ್ಲದ ಆರ್ಧಧಾತುಕ ಪರದಲ್ಲಿರುವಾಗ ಣಿಗೆ ಲೋಪಬರುವುದು ಎಂಬುದರಿಂದ ಣಿಚ್ಚಿನ ಇಕಾರಕ್ಕೆ ಲೋಪ ಬರುವುದು. ಮನ್ದಿ ಎಂಬುದು ಪ್ರತ್ಯಯ ಸ್ವರದಿಂದ ಅಂತೋದಾತ್ತ. ದ್ವಿತೀಯಾ ಏಕವಚನದಲ್ಲಿ ಮನ್ದಿಮ್ ಎಂಥಾಗುವುದು.

ಮನ್ದಿನೇ—ಮನ್ದಿ, ಎಂಬಲ್ಲಿ ಮೊದಲಿನಂತೆಯೇ ಪ್ರಕ್ರಿಯೆಯನ್ನು ಉಪಪಾದಿಸಿಕೊಳ್ಳಬೇಕು. ಮುಂದಿ ಶಬ್ದದ ಮುಂದೆ ಚತುರ್ಥೀವಿಭಕ್ತಿ ಏಕವಚನ ಙೀ ಪ್ರತ್ಯಯವನ್ನಿಟ್ಟರೆ ಮನ್ದಿ+ಏ ಎಂದಿರುವಾಗ ಇಕೋಯ್ವಚಿ ವಿಭಕ್ತೌ (ಪಾ. ಸೂ. ೭-೧-೭೩) ಅಜಾದಿ ವಿಭಕ್ತಿ ಪರದಲ್ಲಿರುವಾಗ ಇ ಉ ಋ ಇವುಗಳನ್ನು ಕೊನೆಯಲ್ಲಿ ಹೊಂದಿರುವ ನಪುಂಸಕಲಿಂಗ ಶಬ್ದದ ಮುಂದೆ ನುಮ್ (ನಕಾರಾಗಮ) ಬರುವುದು ಎಂಬುದರಿಂದ ನುಮ್ ಬಂದರೆ ಮಂದಿನೇ ಎಂದಾಗುವುದು. ಆದರೆ ಇಲ್ಲಿ ಮನ್ದಿನೇ ಎಂಬುದು ಇಂದ್ರನಿಗೆ ವಿಶೇಷಣ ಪುಲ್ಲಿಂಗ. ಆದರೂ ಛಂದಸ್ಸಾದ್ದರಿಂದ ಪುಲ್ಲಿಂಗದಲ್ಲಿಯೂ ವ್ಯತ್ಯಯದಿಂದ ನುಮಾಗಮ ಬರುವುದು.

ಚಕ್ರಿಮ್—ಡುಕೃಞ್ ಕರಣೇ ಧಾತು. ಈ ಕೃ ಧಾತುವಿನ ಮುಂದೆ ಅದ್ಯೈಗಮಹನಃಕಿಕಿನೌಲಿಟ್ಸು (ಪಾ- ಸೂ. ೩-೨-೧೭೧) ಆಕಾರಾಂತ ಧಾತು, ಋಕಾರಾಂತ ಧಾತು, ಗಮ್, ಹನ್ ಈ ಧಾತುಗಳು ಇವುಗಳ ಮುಂದೆ ತಚ್ಛೀಲ, ತದ್ಧರ್ಮ, ತತ್ಸಾಧುಕಾರಿ ಎಂಬ ಅರ್ಥಗಳಲ್ಲಿ ಛಂದಸ್ಸಿನಲ್ಲಿ ಕಿ, ಕಿನ್ ಎಂಬ ಪ್ರತ್ಯಯಗಳು ಬರುವುವು. ಅವು ಲಿಟ್ಪಿನಂತೆಯೂ ಆಗುವುವು ಎಂಬುದರಿಂದ ಕಿನ್ ಪ್ರತ್ಯಯ ಬರುವುದು ಕೃ+ಇ ಎಂದಿರುವುದು ಈಗ ದ್ವಿರ್ವಚನೇಽಚಿ (ಪಾ.ಸೂ. ೧-೧-೫೯) ದ್ವಿತ್ವಕ್ಕೆ ನಿಮಿತ್ತವಾದ ಅಜ್ವರ್ಣವು ಪರದಲ್ಲಿದ್ದರೆ ಅದರ ಪೂರ್ವದ ಅಚ್ಚಿಗೆ ದ್ವಿತ್ವವನ್ನು ಮಾಡುವಾಗ ಯಾವ ಆದೇಶವೂ ಬರುವುದಿಲ್ಲ ಎಂದು ಈ ಸೂತ್ರಕ್ಕೆ ಅರ್ಥವಾದಾಗ ಇ ಎಂಬುದು ಲಿಟ್ಟ ಎಂಬ ಅತಿದೇಶದಿಂದ ಲಿಟ್ಪ್ರಾದ್ದರಿಂದ ದ್ವಿತ್ವಕ್ಕೆ ನಿಮಿತ್ತವಾದ ಅಚ್ಚಾಗುವುದರಿಂದ ಲಿಟಿಧಾತೋಃ (ಪಾ. ಸೂ. ೬-೧-೮) ಎಂಬುದರಿಂದ ದ್ವಿತ್ವ ಮಾಡುವಾಗ ಇಕೋಯೆಣಚಿ (ಪಾ. ಸೂ. ೬-೧-೬೬) ಎಂಬುದರಿಂದ ಯಣಾದೇಶ ಬರುವುದಿಲ್ಲ. ಕೃ ಎಂಬುದಕ್ಕೆ ದ್ವಿತ್ವ ಬರುವುದು. ಕೃ ಕೃ+ಇ ಎಂದಾದಾಗ ಎರಡನೇ ಕೃವಿನ ಋಕಾರಕ್ಕೆ ಯಣಾದೇಶದಿಂದ ರೇಫ ಬರುವುದು. ದ್ವಿರ್ವಚನೇಽಚಿ (ಪಾ. ಸೂ. ೧-೧-೫೯) ದ್ವಿತ್ವನಿಮಿತ್ತವಾದ ಅಜ್ವರ್ಣ ಪರದಲ್ಲಿದ್ದರೆ ದ್ವಿತ್ವವನ್ನು ಮಾಡುವಾಗ ಪರನಿಮಿತ್ತಕವೂ ಅಚ್ಚಿನ ಸ್ಥಾನದಲ್ಲಿ ಬಂದುದೂ ಆದ ಆದೇಶವು ಸ್ಥಾನಿನಿಸ್ಥವಾದ ಧರ್ಮವನ್ನು ಹೊಂದುವುದು ಎಂದು ವೃತ್ತಿಕಾರಾದಿಗಳು ಅರ್ಥವರ್ಣನೆ ಮಾಡುವರು. ಈ ಪಕ್ಷದಲ್ಲಿ ಕೃ+ಇ ಎಂದಿರುವಾಗ ಮೊದಲು ಯಣಾದೇಶ ಬರುವುದು. ಕ್ರ್+ಇ ಎಂದು ಇರುವಾಗ ಪರದಲ್ಲಿರುವ ಇಯನ್ನು ನಿಮಿತ್ತಮಾಡಿಕೊಂಡು ಋಕಾರರೂಪವಾದ ಅಚ್ಚಿನ ಸ್ಥಾನದಲ್ಲಿ ಬಂದ ರೇಫವು ಸ್ಥಾನಿಯ ರೂಪವನ್ನು ಹೊಂದುವುದರಿಂದ ದ್ವಿತ್ವಮಾಡುವಾಗ ಋಕಾರದ ರೂಪವನ್ನು ಹೊಂದುವುದು. ಅಂದರೆ ಕೃಗೆ ಲಿಟಿಧಾತೋಃ ಎಂಬುದರಿಂದ ದ್ವಿತ್ವ ಬರುವುದು. ಕೃಕ್ರ್+ಇ ಎಂದಾಗುವುದು. ಈ ಎರಡು ಪಕ್ಷಗಳಿಗೂ ಫಲಭೇದವಿರುವುದಿಲ್ಲ. ಎರಡನೇ ಪಕ್ಷವನ್ನು ಅನುಸರಿಸಿ ವೇದಭಾಷ್ಯದಲ್ಲಿ ದ್ವಿರ್ವಚನೇಽಚೀತಿ ಯಣಾದೇಶಸ್ಯ ಸ್ಥಾನಿವದ್ಭಾವಾತ್ ಕೃಶಬ್ದೋದ್ವಿರುಚ್ಯತೇ ಎಂದು ವರ್ಣಿಸಿರುವರು. ಈಗ ಅಭ್ಯಾಸದ ಋಕಾರಕ್ಕೆ ಉರತ್ (ಪಾ. ಸೂ. ೭-೪-೬೬) ಎಂಬುದರಿಂದ ಬರುವ ಅಕಾರಾದೇಶವು ಉರಣ್ರಪರಃ (ಪಾ. ಸೂ. ೧-೧-೫೧) ಎಂಬ ಶಾಸ್ತ್ರಾನುಸಾರ ರೇಫ ಶಿರಸ್ಯವಾಗಿ ಬರುವುದು. ಕ್ರ್+ಕರ್+ಇ ಎಂದಾಗುವುದು. ಹಲಾದಿಃಶೇಷಃ (ಪಾ.ಸೂ. ೭-೪-೬೦) ಎಂಬುದರಿಂದ ಅಭ್ಯಾಸದಲ್ಲಿ ಮೊದಲನೇ ವ್ಯಂಜನಮಾತ್ರ ನಿಲ್ಲುವುದು. ಎರಡನೆಯ ವ್ಯಂಜನವಾದ ರ್ ಎಂಬುದು ನಿವೃತ್ತವಾಗುವುದು. ಕ+ಕ್ರ್+ಇ ಕುಹೋಶ್ಚುಃ (ಪಾ. ಸೂ. ೭-೪-೬೨) ಎಂಬುದರಿಂದ

ಅಭ್ಯಾಸದಲ್ಲಿರುವ ಕಕಾರಕ್ಕೆ ಚಕಾರ ಬಂದರೆ ಚಕ್ಕೆ ಎಂದಾಗುವುದು. ಕಿನ್ ಪ್ರತ್ಯಯವು ನಿತ್ತಾದ್ದರಿಂದ **ಙ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೫-೪-೧೧೯) ಎಂಬುದರಿಂದ ಪ್ರತ್ಯಯಾಂತವು ಆದ್ಯುದಾತ್ತವಾಗುವುದು.

ವಿಶ್ವಾನಿ—ವಿಶ್ ಧಾತುವಿನ ಮುಂದೆ **ಅಶೂಪ್ರುಷಿ** (ಉ. ಸೂ. ೧-೧೪೯) ಎಂಬುದರಿಂದ ಕ್ವಿನ್ ಪ್ರತ್ಯಯ ಬರುವುದು. ಪ್ರತ್ಯಯವು ನಿತ್ತಾದ್ದರಿಂದ ಆದ್ಯುದಾತ್ತ. ದ್ವಿತೀಯಾಬಹುವಚನಾಂತದಲ್ಲಿ ವಿಶ್ವಾನಿ ಎಂದಾಗುವುದು. ವಿಶ್ವನ್ ಎಂಬುದಕ್ಕೆ ಚಕ್ರಯೇ ಎಂಬ ಕೃದಂತದ ಯೋಗವಿರುವುದು. ಆದ್ದರಿಂದ **ಕರ್ತೃಕರ್ಮಣೋಃಕೃತಿ** (ಪಾ. ಸೂ. ೨-೩-೬೫) ಕೃತ್ಪ್ರಕೃತ್ಯರ್ಥ ಕ್ರಿಯಾನಿರೂಪಿತ ಕರ್ತೃ ಕರ್ಮಾನ್ಯತರ ವಾಚಕವಾದ ಪ್ರಾತಿಪದಿಕದ ಮುಂದೆ ಷಷ್ಠೀ ವಿಭಕ್ತಿ ಬರುವುದು ಎಂಬುದರಿಂದ ಷಷ್ಠೀವಿಭಕ್ತಿಯು ಯದ್ಯಪಿ ಪ್ರಾಪ್ತವಾಗುವುದು. ಆದರೂ ಕಿನ್ ಪ್ರತ್ಯಯಕ್ಕೆ ಕಿಕಿನೌಲಿಟ್ ಎಂದು ಲಿಡ್ವದದ್ಭಾವಾತಿದೇಶವಿರುವುದರಿಂದ ಕಿನ್ ಪ್ರತ್ಯಯವು ಲಕಾರದಂತೆ ಆಗುವುದು. ಆದ್ದರಿಂದ **ನ ಲೋಕಾವ್ಯಯನಿಷ್ಠಾಖಲರ್ಥತೃನಾಮ್** (ಪಾ. ಸೂ. ೨-೩-೬೯) ಲ ಉ ಉಕ ಅವ್ಯಯ ನಿಷ್ಠಾ, ಖಲರ್ಥ, ತೃನ್ ಇವುಗಳಿಗೆ ಪ್ರಯೋಗವಿದ್ದರೆ ಷಷ್ಠೀ ವಿಭಕ್ತಿ ಬರುವುದಿಲ್ಲ ಎಂಬುದರಿಂದ ಷಷ್ಠೀವಿಭಕ್ತಿಗೆ ನಿಷೇಧ ಬರುವುದು. ಆದ್ದರಿಂದ **ಕರ್ಮಣಿದ್ವಿತೀಯಾ** (ಪಾ. ಸೂ. ೨-೩-೨) ಎಂಬುದರಿಂದ ದ್ವಿತೀಯಾ ವಿಭಕ್ತಿಯೇ ಬರುವುದು ॥ ೨ ॥

॥ ಸಂಹಿತಾಪಾಠಃ ॥

ಮತ್ಸ್ವಾ ಸುಶಿಪ್ರ ಮಂದಿಭಿಃ ಸ್ತೋಮೇಭಿರ್ವಿಶ್ವಚರ್ಷಣೇ ।
ಸಚೈಷು ಸವನೇಷ್ವಾ ॥ ೩ ॥

॥ ಪದಪಾಠಃ ॥

ಮತ್ಸ್ವ । ಸುಶಿಪ್ರ । ಮಂದಿಭಿಃ । ಸ್ತೋಮೇಭಿಃ । ವಿಶ್ವಚರ್ಷಣೇ ॥
ಸಚಾ । ಏಷು । ಸವನೇಷು । ಆ ॥ ೩ ॥

॥ ಸಾಯಣಭಾಷ್ಯಂ ॥

ಹೇ ಸುಶಿಪ್ರ ಹೇ ಶೋಭನಹನೋ ಶೋಭನನಾಸಿಕ ವಾ । ಶಿಪ್ರೇ ಹನೂ ನಾಸಿಕೇ ವಾ । ನಿ. ೬-೧೭ । ಇತಿ ಯಾಸ್ಕೇನೋಕ್ತತ್ವಾತ್ । ತಾದೃಶ ಹೇ ಇಂದ್ರ ಮಂದಿಭಿರ್ಹರ್ಷಹೇತುಭಿಃ ಸ್ತೋಮೇಭಿಃ ಸ್ತೋತ್ರೈರ್ಮತ್ಸ್ವ । ಹೃಷ್ಯೋ ಭವ । ಹೇ ವಿಶ್ವಚರ್ಷಣೇ ಸರ್ವಮನುಷ್ಯಯುಕ್ತ । ಸರ್ವೈರ್ಯಜಮಾನೈಃ ಪೂಜ್ಯೇತ್ಯರ್ಥಃ । ತಾದೃಶೇಂದ್ರ ತ್ವಮೇಷು ಯಾಗಗತೇಷು ತ್ರಿಷು ಸವನೇಷು ಸಚಾ ದೇವೈರನ್ಯೈಃ ಸಹಾ ಗಚ್ಛೇತಿ ಶೇಷಃ ॥ ಮದಿ ಸ್ತುತೀತ್ಯಸ್ಯ ಲೋಟ್ಯನಿತ್ಯಮಾಗಮಶಾಸನಮಿತಿ ಕೃತ್ವೇದಿತೋ

ನುಮ್ ಧಾತೋರಿತಿ ನುಮ್ ನ ಭವತಿ । ಆನುದಾತ್ತೇತ್ತ್ವಾತ್ತ್ವಸ್ಯನುದಾತ್ತೇನ್ಙಿದದುಪದೇಶಾತ್ । ಪಾ. ೬-೧-೧೮೬ । ಇತಿ ಲಸಾರ್ವಧಾತುಕಾನುದಾತ್ತತ್ವಂ । ಧಾತುಸ್ವರ ಏವ । ಸಂಹಿತಾಯಾಂ ದ್ವ್ಯಚೋಽತೆಸ್ತಿಙಃ । ಪಾ. ೬-೩-೧೩೫ । ಇತಿ ದೀರ್ಘತ್ವಂ । ಸುಶಿಪ್ರೇತ್ಯಾಮಂತ್ರಿತನಿಘಾತಃ । ಮಂದಿಭಿಃ । ಗತಮಂತ್ರೇ ವ್ಯಾಖ್ಯಾತಂ। ಸ್ತೋಮೇಭಿಃ । ಮನ್ಯತ್ಯಯೆಸ್ಯ ನಿತ್ತ್ವಾದಾದ್ಯುದಾತ್ತತ್ವಂ । ಬಹುಲಂ ಛಂದಸೀತಿ ಭಿಸ ಐಸಾದೇಶೋ ನ ಭವತಿ । ವಿಶ್ವಚರ್ಷಣೇ । ನಿಘಾತಃ । ಸಚಾ । ಉಕ್ತಂ । ಏಷು । ಊಡಿದಮಿತ್ಯಾದಿನಾ ವಿಭಕ್ತೇರುದಾತ್ತತ್ವಂ ॥

॥ ಪ್ರತಿಪದಾರ್ಥ ॥

(ಹೇ) **ಸುಶಿಪ್ರ**—ಸುಂದರವಾದ ಗಲ್ಲವುಳ್ಳ (ಅಥವಾ ನಾಸಿಕವುಳ್ಳ) ಎಲೈ ಇಂದ್ರನೇ । **ಮಂದಿಭಿಃ**—ಸಂತೋಷವನ್ನುಂಟುಮಾಡುವ । **ಸ್ತೋಮೇಭಿಃ**—(ನಾವು ಮಾಡುವ) ಸ್ತೋತ್ರಗಳಿಂದ । **ಮತ್ಸ್ವ**—ಸಂತೋಷಪಡು (ಹರ್ಷವುಳ್ಳವನಾಗು) । (ಹೇ) **ವಿಶ್ವಚರ್ಷಣೇ**—ಸಮಸ್ತ ಮನುಷ್ಯರಿಂದ ಯುಕ್ತನಾದ ಅಥವಾ ಸಮಸ್ತ ಯಜಮಾನರಿಂದ ಪೂಜ್ಯನಾದ ಎಲೈ ಇಂದ್ರನೇ । (ತ್ವಂ-ನೀನು) **ಏಷು ಸವನೇಷು**—(ಪ್ರಾತಸ್ಸವನ, ಮಾಧ್ಯಂದಿನಸವನ, ತೃತೀಯಸವನಗಳೆಂಬ) ಮೂರು ಸವನಗಳಲ್ಲಿಯೂ । **ಸಚಾ**—(ಇತರ ದೇವತೆಗಳಿಂದ) ಸಹಿತನಾಗಿ । ಆ (ಗಚ್ಛ)—ಬರುವವನಾಗು ॥

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ಗಲ್ಲವು ಅಥವಾ ನಾಸಿಕವು ಬಹು ಮನೋಹರವಾಗಿರುವುದು. ಇಂತಹ ನೀನು ನಾವು ಮಾಡುವ ಸ್ತೋತ್ರಗಳಿಂದ ಸಂತುಷ್ಟನಾಗು, ಸಮಸ್ತ ಯಜಮಾನರಾದಿಯಾದ ಜನರಿಂದಲೂ ಪೂಜ್ಯನಾದ ನೀನು ಇತರ ದೇವತೆಗಳೊಡಗೂಡಿ ಯಜ್ಞದ ಪ್ರಾತಸ್ಸವನ, ಮಾಧ್ಯಂದಿನ ಸವನ, ತೃತೀಯ ಸವನಗಳೆಂಬ ಮೂರು ಸವನಗಳಲ್ಲಿಯೂ (ಸವನವೆಂದರೆ, ಸೋಮರಸವನ್ನು ಹಿಂಡಿ ತೆಗೆದು ಸಿದ್ಧಪಡಿಸುವ ಕರ್ಮವಿಶೇಷವು) ನಾವು ಮಾಡುತ್ತಿರುವ ಈ ಯಜ್ಞಭೂಮಿಗೆ ಬರುವವನಾಗು.

English Translation

O Indra, with the handsome chin (or nose) be pleased with these pleasing praises; you who are honoured by all men come to these rites (with the gods).

॥ ವಿಶೇಷವಿಷಯಗಳು ॥

ಮತ್ಸ್ವ—ಛಂದಸ್ಸಿನ ಅನುಕೂಲಕ್ಕಾಗಿ ತ್ಸ್ವ ದೀರ್ಘವಾಗಿರುವುದು.

ಸುಶಿಪ್ರ—ಈ ಶಬ್ದಕ್ಕೆ ಯಾಸ್ಕರು—**ಸುಶಿಪ್ರಮೇತೇನ ವ್ಯಾಖ್ಯಾತಂ। ವಾಜೇ ಸುಶಿಪ್ರ ಗೋಮತಿ** (ಋ. ಸಂ. ೮-೭೧-೮) ಇತ್ಯೇಪಿ ನಿಗಮೋ ಭವತಿ । ಶಿಪ್ರೇ ಹನೂ ನಾಸಿಕೇ ವಾ । ಹನುರ್ಹಂತೇರ್ಃ ।

ನಾಸಿಕಾ ನಸತೇಃ । ವಿಷ್ಯಸ್ವ ಶಿಪ್ರೆ ವಿಸೃಜಸ್ವ ಧೇನೇ (ಋ. ಸಂ. ೧-೧೦೧-೧೦) **ಇತ್ಯಪಿ ನಿಗಮೋ ಭವತಿ ॥** (ನಿ. ೬-೧೭) ಎಂದು ಶಿಪ್ರವೆಂದರೆ ಹನೂ (ಗಲ್ಲ) ಅಥವಾ ನಾಸಿಕೇ (ಮೂಗು) ಎಂದರ್ಥಮಾಡಿ ಋಗ್ವೇದದ ಎರಡು ಋಕ್ಕುಗಳನ್ನು ಉದಾಹರಿಸಿರುವರು. ನಿರುಕ್ತದ ಭಾಷ್ಯಕಾರರೂ ಸಹ **ಶಿಪ್ರೇ-ಹನೂ ನಾಸಿಕೇ ವಾ । ತೇ ಯಸ್ಯ ಸ್ರೆಶಸ್ತೇ ಸ ಶಿಪ್ರೆಃ ॥** ಎಂದರೆ ಶಿಪ್ರಶಬ್ದಕ್ಕೆ ಹನು ಅಥವಾ ನಾಸಿಕವೆಂದರ್ಥವು. ಅವುಗಳನ್ನುಳ್ಳವನಿಗೆ ಶಿಪ್ರಿನ್ ಎಂದು ಹೆಸರು ಎಂದು ಹೇಳಿರುವರು. ಋ. ಸಂ. ೧-೨೭-೨ನೇ ಋಕ್ಕಿನಲ್ಲಿ—

ಶಿಪ್ರಿನ್ವಾಜಾನಾಂ ಪತೇ ಶಚೀವಸ್ತವ ದಂಸನಾ ॥

(ಋ. ಸಂ. ೧-೨೭-೨)

ಭಾಷ್ಯಕಾರರು ಇದೇ ಅರ್ಥವನ್ನೇ ಹೇಳಿರುವರು. ಯಾಸ್ಕರೇ ಈ ಶಬ್ದಕ್ಕೆ ಸ್ಪಷ್ಟವಾಗಿ ವ್ಯಾಖ್ಯಾನ ಮಾಡಿರುವುದರಿಂದ ಈ ಶಬ್ದದ ಅರ್ಥವಿಚಾರದಲ್ಲಿ ಸಂಶಯಕ್ಕೆ ಕಾರಣವಿಲ್ಲ.

ಸುಶಿಪ್ರ ಎಂಬ ಶಬ್ದವು ಈ ಋಕ್ಕಿನಲ್ಲಲ್ಲದೆ ಋ. ಸಂ ೧-೧೦೧-೧೦ , ೩-೩೨-೩ , ೩-೫೦-೨ ; ೫-೨೨-೪ , ೫-೩೬-೫ ; ೬-೪೬-೫ , ೭-೨೪-೪ , ೮-೨೧-೮ ; ೮-೯೩-೧೨ ; ೮-೯೯-೭ ಈ ಋಕ್ಕುಗಳಲ್ಲಿಯೂ ಪಠಿತವಾಗಿದೆ. ಮತ್ತು ಈ ಶಬ್ದದ ಬೇರೆ ವಚನ ವಿಭಕ್ತಿರೂಪಗಳಾವ ಸುಶಿಪ್ರಃ ಎಂಬ ಶಬ್ದವು ಋ. ಸಂ. ೨-೩೩-೫ , ೩-೫೦-೩ ; ೨-೧೨-೬ ; ೮-೬೬-೪ , ೧೦-೯೬-೩ ಎಂಬ ಋಕ್ಕುಗಳಲ್ಲಿಯೂ, ಸುಶಿಪ್ರಾಃ ಎಂಬ ಶಬ್ದವು ಋ. ಸಂ. ೭-೩೭-೧೨ರಲ್ಲಿಯೂ, ಸುಶಿಪ್ರಂ ಎಂಬ ಶಬ್ದವು ಋ. ಸಂ. ೮-೩೨-೪ , ೮-೬೬-೨ರಲ್ಲಿಯೂ ಪಠಿತವಾಗಿದೆ.

ವಿಶ್ವಚರ್ಷಣೇ—ಸರ್ವಮನುಷ್ಯಯುಕ್ತ । ಸರ್ವೈರ್ಯಜಮಾನೈಃ ಪೂಜ್ಯೇತ್ಯರ್ಥಃ ॥ ಚರ್ಷಣೀ ಶಬ್ದಕ್ಕೆ ಮನುಷ್ಯರೆಂದು ಅರ್ಥವಿರುವುದರಿಂದ ವಿಶ್ವಚರ್ಷಣೇ, ಎಂದರೆ ಸಮಸ್ತ ಮನುಷ್ಯರಿಂದ ಕೂಡಿದ ಅಥವಾ ಸಮಸ್ತ (ಯಜಮಾನರಾದಿಯಾದ) ಮನುಷ್ಯರಿಂದ ಪೂಜ್ಯನಾದ ಎಂದು ಭಾಷ್ಯಕಾರರು ಈ ಶಬ್ದಾರ್ಥವನ್ನು ಹೇಳಿರುವರು. ಸ್ಕಂದಸ್ವಾಮಿಯು ಚರ್ಷಣೀ ಶಬ್ದಕ್ಕೆ ಪಶ್ಯತಿಕರ್ಮವೆಂದು ಹೇಳಿ ಸಮಸ್ತ ಮನುಷ್ಯರಿಂದ ನೋಡಲ್ಪಡವವನು ಎಂದರ್ಥಮಾಡಿರುವರು. ವಿಶ್ವಚರ್ಷಣೇ ಎಂಬ ಶಬ್ದವು ಋ. ಸಂ. ೧-೯-೩ ; ೫.೩೮-೧ ; ೮-೨೩-೨; ೯-೬೬-೧ , ೧೦-೫೦-೪ ಎಂಬ ಋಕ್ಕುಗಳಲ್ಲಿಯೂ ವಿಶ್ವಚರ್ಷಣಿ ಎಂಬ ಶಬ್ದವು. ಋ.ಸಂ. ೧೦-೯೩-೧೦ ರಲ್ಲಿಯೂ, ವಿಶ್ವಚರ್ಷಣಿಃ ಎಂಬ ಶಬ್ದವು ಋ. ಸಂ. ೧-೨೭-೯ ; ೨-೩೧-೩ ; ೫-೬-೩ ; ೫-೨೩-೪ ; ೬-೨-೨ ; ೯-೧-೨ , ೧೦-೮೩-೪ , ಎಂಬ ಋಕ್ಕುಗಳಲ್ಲಿಯೂ, ವಿಶ್ವಚರ್ಷಣಿಂ ಎಂಬ ಶಬ್ದವು ಋ. ಸು. ೧-೬೪-೧೪ ; ೩-೨-೧೫ ; ೫-೧೪-೬ , ೬-೪೪-೪ , ೮-೨೩-೬ ಎಂಬ ಋಕ್ಕುಗಳಲ್ಲಿಯೂ ಉಪಯೋಗಿಸಲ್ಪಟ್ಟಿರುವುದು.

ಆ—ಋಕ್ಕಿನಲ್ಲಿ ಆ ಎಂಬ ಉಪಸರ್ಗಮಾತ್ರವಿರುವುದು. ಇದರ ಜತೆಗೆ ಗಚ್ಛ ಎಂಬ ಕ್ರಿಯಾಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕೆಂದು ಭಾಷ್ಯಕಾರರು ಹೇಳಿರುವರು.

॥ ವ್ಯಾಕರಣಪ್ರಕ್ರಿಯಾ ॥

ಮತ್ಸ್ವ—ಮದಿಸ್ತುತಿನೋದಮದಸ್ವಪ್ನಕಾಂತಿಗತಿಷು ಎಂಬ ಧಾತುವಿನ ಮುಂದೆ ಲೋಟ್ ಆತ್ಮನೇಪದ ಮಧ್ಯಮಪುರುಷ ಏಕವಚನ ಥಾಸ್ ಪ್ರತ್ಯಯವನ್ನಿಟ್ಟರೆ ಮದ್+ಥಾಸ್ ಧಾತುವು ಇದಿತ್ತಾದರೂ **ಆಗಮಃ ಶಾಸ್ತ್ರಮನಿತ್ಯಮ್** (**ಅನಿತ್ಯಮಾಗಮಶಾಸನಮ್**) (ಪರಿ. ಭಾ. ೯೩-೨) ಆಗಮಶಾಸ್ತ್ರವು ಅನಿತ್ಯವು ಎಂದು

ಹೇಳಿರುವುದರಿಂದ **ಇದಿತೋನುಮ್ಧಾತೋಃ** (ಪಾ. ಸೂ. ೭-೧-೫೮) ಎಂಬುದರಿಂದ ನುಮ್ ಆಗಮ ಬರುವುದಿಲ್ಲ. ಶಪ್ ವಿಕರಣಕ್ಕೆ ಬಹುಲಂಛಂದಸಿ (ಪಾ. ಸೂ. ೨-೪-೭೩) ಎಂಬುದರಿಂದ ಲುಕ್ **ಥಾಸಃಸೇ** (ಪಾ. ಸೂ. ೩-೪-೮೦) ಎಂಬುದರಿಂದ ಥಾಸ್ ಎಂಬುದರ ಸ್ಥಾನದಲ್ಲಿ ಸೇ ಬರುವುದು. **ಸವಾಭ್ಯಾಂ ವಾಮೌ** (ಪಾ. ಸೂ. ೩-೪-೯೧) ಸ್‌ವ್ ಇವುಗಳ ಮುಂದೆ ಇರುವ ಲೋಟ್ ಪ್ರತ್ಯಯಸಂಬಂಧಿಯಾದ ಏಕಾರಕ್ಕೆ ಕ್ರಮವಾಗಿ ವ, ಆವ್ ಎಂಬ ಆದೇಶಗಳು ಬರುವುವು ಎಂಬುದರಿಂದ ಸಕಾರದ ಮುಂದೆ ಇರುವ ಏಕಾರಕ್ಕೆ ವ ಆದೇಶಬಂದರೆ ಮದ್+ಸ್ವ ದಕಾರಕ್ಕೆ **ಖರಿಚ** (ಪಾ. ಸೂ. ೮-೪-೫೫) ಎಂಬುದರಿಂದ ಚರ್ತ್ವ ಬಂದರೆ ಮತ್ಸ್ವ ಎಂದಾಗುವುದು. ಮದಿ ಧಾತುವು ಅನುದಾತ್ತೇತ್ತು. ಆದ್ದರಿಂದ **ತಾಸ್ಯನುದಾತ್ತೇನ್ಡಿದುಪದೇಶಾತ್** (ಪಾ. ಸೂ. ೬-೧-೧೮೬) **ಲಸ್ಯಾನಿಕಸಾರ್ವಧಾತುಕವಾದ** ಸ್ವ ಎಂಬುದಕ್ಕೆ ಅನುದಾತ್ತ ಬರುವುದು. ಮದ್ ಎಂಬುದು **ಧಾತೋಃ** (ಪಾ. ಸೂ. ೬-೧-೧೬೨) ಎಂಬುದರಿಂದ ಅಂತೋದಾತ್ತ. ನಂತರ **ಉದಾತ್ತಾದನುದಾತ್ತೆಸ್ಯಸ್ವರಿತಃ** (ಪಾ. ಸೂ. ೮-೪-೬೬) ಎಂಬುದರಿಂದ ಮದ್ ಎಂಬ ಉದಾತ್ತದ ಮುಂದೆ ಇರುವ ಸ್ವ ಎಂಬ ಅನುದಾತ್ತವು ಸ್ವರಿತವಾಗುವುದು. ಸಂಹಿತಾಕಾಲದಲ್ಲಿ **ದ್ಯುಜೋತಸ್ತುಜಿಃ** (ಪಾ. ಸೂ ೬-೩-೧೩೫) ಮಂತ್ರದಲ್ಲಿ ಎರಡು ಅಚ್ಚನ್ನು ಹೊಂದಿರುವ ತಿಜಂತದ ಕೊನೆಯ ಹ್ರಸ್ವಾಕಾರಕ್ಕೆ ದೀರ್ಘ ಬರುವುದು ಎಂಬುದರಿಂದ ದೀರ್ಘ ಬಂದರೆ ಮತ್ಸ್ವಾ ಎಂದಾಗುವುದು.

ಸುತಿಸ್ಯ—**ಆಮಂತ್ರಿತಸ್ಯ ಚೆ** (ಪಾ. ಸೂ ೮-೧-೧೯) ಎಂಬುದರಿಂದ ಸರ್ವಾನುದಾತ್ತ.
ಮನ್ದಿಭಿಃ—ಪೂರ್ವಮಂತ್ರದಲ್ಲಿ ವ್ಯಾಖ್ಯಾತವಾಗಿರುವುದು.

ಸ್ತೋಮೇಭಿಃ—**ಅರ್ತಿಸ್ತುಸು** (ಉ. ಸೂ. ೧-೧೩೭) ಎಂಬುದರಿಂದ ಸ್ತು ಧಾತುವಿನ ಮುಂದೆ ಮನ್ ಪ್ರತ್ಯಯ, ಪ್ರತ್ಯಯವು ನಿತ್ತು. ಆದ್ದರಿಂದ ಆದ್ಯುದಾತ್ತ. ಇದರ ಮುಂದೆ ಇರುವ ತೃತೀಯಾ ಬಹುವಚನ ಭಿಸ್ಸಿಗೆ **ಬಹುಲಂಛಂದಸಿ** (ಪಾ. ಸೂ. ೭-೧-೧೦) ಎಂಬುದರಿಂದ ಐಸ್ ಆದೇಶ ಬರುವುದಿಲ್ಲ.

ವಿಶ್ವಚರ್ಷಣೇ—ಎಂಟನೇ ಅಧ್ಯಾಯದಲ್ಲಿರುವ ಸೂತ್ರದಿಂದ **ಈ** ಆಮಂತ್ರಿತಕ್ಕೆ ಅನುದಾತ್ತ ಬರುವುದು.

ಸಚಾ—೫ನೇ ಸೂಕ್ತದ ೨ನೇ ಮಂತ್ರದಲ್ಲಿ ಇದರ ಪ್ರಕ್ರಿಯೆಯು ವಿವೃತವಾಗಿರುವುದು.

ಏಷು—ಇದಮ್ ಶಬ್ದದ ಮುಂದೆ ಇರುವ ಸು ಎಂಬ ಸಪ್ತಮ್ಯಾವಿಭಕ್ತಿಯು **ಊಡಿದಮ್‌ಪದಾದ್ಯ-ಪ್ಪೆಸ್ಸ್ವಿದ್ಯಭ್ಯಃ** (ಪಾ. ಸೂ. ೬-೧-೧೭೧) ಎಂಬುದರಿಂದ ಉದಾತ್ತವಾಗುವುದು ॥ ೩ ॥

॥ ಸಂಹಿತಾಪಾಠಃ ॥

ಅಸೃಗ್ರಮಿಂದ್ರ ತೇ ಗಿರಃ ಪ್ರತಿ ತ್ವಾಮುದಹಾಸತ ।
ಅಜೋಷಾ ವೃಷಭಂ ಪತಿಂ ॥ ೪ ॥

॥ ಪದಪಾಠಃ ॥

ಅಸೃಗ್ರಂ । ಇಂದ್ರ । ತೇ । ಗಿರಃ । ಪ್ರತಿ । ತ್ವಾಂ । ಉತ್ । ಅಹಾಸತ ॥
ಅಜೋಷಾಃ । ವೃಷಭಂ । ಪತಿಂ ॥ ೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ಗಿರಸ್ತ್ವದೀಯಾಃ ಸ್ತುತೀರಸೃಗ್ರಂ । ಸೃಷ್ಟವಾನಸ್ಮಿ । ತಾಶ್ಚ ಗಿರಃ ಸ್ವರ್ಗೇ೭ವಸ್ಥಿತಂ ತ್ವಾಂ ಪ್ರತ್ಯುದಹಾಸತ । ಉದ್ಗತ್ಯ ಹ್ಯಾಪ್ನುವನ್ । ತಾದೃಶೀರ್ಗಿರಸ್ತ್ವಮಜೋಷಾಃ । ಸೇವಿತವಾನಸಿ । ಕೀದೃಶಂ ತ್ವಾಂ । ವೃಷಭಂ ಕಾಮಾನಾಂ ವರ್ಷಿತಾರಂ ಪತಿಂ ಸೋಮಸ್ಯ ಪಾತಾರಂ ಯಜಮಾನಾನಾಂ ಪಾಲಯಿತಾರಂ ವಾ । ಪಾತಾ ವಾ ಪಾಲಯಿತಾ ವಾ । ನಿ. ೪-೨೬ । ಇತಿ ಯಾಸ್ಕೇನೋಕ್ತತ್ವಾತ್ ॥ ಅಸೃಗ್ರಂ । ಅಸೃಜಂ । ಸೃಜ ವಿಸರ್ಗೇ । ಲಙೋ ಮಿಪ್ । ತುದಾದಿಭ್ಯಃಶಃ । ಪಾ. ೩-೧-೭೭। ಬಹುಲಂ ಛಂದಸಿ । ಪಾ. ೭-೧-೪ । ಇತ್ಯತ್ರ ವಿಕರಣಸ್ಯ ರುಡಾಗಮಃ । ಜಕಾರಸ್ಯ ಗಕಾರಃ । ಲುಙ್ಲಙ್ಲೃಙ್ಷ್ವಡುದಾತ್ತ ಇತ್ಯಡಾಗಮ ಉದಾತ್ತಃ । ಸತಿ ಶಿಷ್ಟತ್ವಾತ್ಸ ಏವ ಶಿಷ್ಯತೇ । ಗಿರಃ । ಪ್ರಾತಿಪದಿಕಸ್ವರಃ । ಅಹಾಸತ । ಓಹಾಙ್ ಗತೌ । ಲುಙ್ । ಝಸ್ಯಾದಾದೇಶಃ । ಪಾ. ೭-೧-೫ । ಚ್ಲೇಃ ಸಿಚ್ । ಪಾ. ೩-೧-೪೪ । ಆಡಾಗಮೋ ನಿಘಾತಶ್ಚ । ಅಜೋಷಾಃ । ಜುಷೀ ಪ್ರೀತಿಸೇವನಯೋಃ । ಲಙಸ್ಥಾಸ್ । ತುದಾದಿಭ್ಯಃ ಶಃ । ತಸ್ಯ ಛಂದಸ್ಯುಭಯಥಾ । ಪಾ. ೩-೪-೧೧೬ । ಇತ್ಯಾರ್ಧಧಾತುಕತ್ವೇನ ಙಿತ್ತ್ವಾಭಾವಾಲ್ಲಘೂಪಧಗುಣಾಃ । ಥಾಸಸ್ಥಕಾರಲೋಪಶಬ್ದಾಂದಸಃ । ಸವರ್ಣದೀರ್ಘಃ । ಆಡಾಗಮಃ । ಸತಿ ಶಿಷ್ಟತ್ವಾದುದಾತ್ತಃ । ಶಿಷ್ಯತೇ । ವೃಷಭಂ । ಪೃಷು ವೃಷು ವ್ಯಷು ಸೇಚನೇ । ಅಭಿಜಿತ್ಯನುವೃತ್ತಾ-ವೃಷಿವೃಷಿಭ್ಯಾಂ ಕಿತ್ । ಉ. ೩-೨೩ । ಇತ್ಯಭಚ್ಪ್ರತ್ಯಯಃ । ಕಿತತ್ತ್ವಾದ್ಗುಣಾಭಾವಃ । ಚಿತ್ತ್ವಾದಂತೋದಾತ್ತಃ । ಪತಿಂ । ಪಾ ರಕ್ಷಣೇ । ಪಾತೇರ್ಡತಿಃ । ಉ. ೪-೫೭ । ಡಿತ್ವಾಟ್ಟಿಲೋಪಃ । ಪ್ರತ್ಯಯಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

(ಹೇ) ಇಂದ್ರ—ಎಲೈ ಇಂದ್ರನೇ । ತೇ—ನಿನ್ನ-ಅಥವಾ ನಿನಗಾಗಿ (ನಿನ್ನ ವಿಷಯವಾಗಿ) । ಗಿರಃ—ಸ್ತೋತ್ರರೂಪವಾದ ವಾಕ್ಯಗಳನ್ನು। ಅಸೃಗ್ರಂ—(ಸೃಷ್ಟಿಸಿರುವೆನು) ರಚಿಸಿರುವೆನು। (ಆ ಸ್ತುತಿಗಳು) ವೃಷಭಂ—ಕಾಮಗಳೆಂಬ ವೃಷ್ಟಿಪ್ರದನಾದ । ಪತಿಂ—ಸೋಮಪಾನಮಾಡುವ ಅಥವಾ ಯಜಮಾನರಾದಿಯಾದ ಜನರನ್ನು ರಕ್ಷಿಸುವ । ತ್ವಾಂ ಪ್ರತಿ—(ಸ್ವರ್ಗದಲ್ಲಿರುವ) ನಿನ್ನನ್ನು (ಕುರಿತು)। ಉದಹಾಸತ—(ಮೇಲೆ) ಹೋಗಿ ಮುಟ್ಟಲಿ। (ಮತ್ತು ಆ ಸ್ತೋತ್ರಗಳಿಂದ) ಅಜೋಷಾಃ—ಪ್ರೀತನಾಗು ॥

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ವಿಷಯವಾಗಿ ನಾನು ಸ್ತೋತ್ರಗಳನ್ನು ರಚಿಸಿ ಗಾನಮಾಡಿರುವೆನು. ಆ ಸ್ತೋತ್ರಗಳು ಸ್ವರ್ಗದಲ್ಲಿರುವ, ಸಮಸ್ತ ಇಷ್ಟಾರ್ಥಗಳನ್ನು ಕೊಡುವ ಮತ್ತು ಎಲ್ಲರನ್ನೂ ರಕ್ಷಿಸುವ ನಿನ್ನನ್ನು ಸೇರಿ ನಿನಗೆ ಸಂತೋಷವನ್ನುಂಟುಮಾಡಲಿ.

English Translation.

O Indra, I have (composed) praises in your honour; may these praises reach you (in heaven) the showerer of blessings, and the protector of your worshippers and you are pleased with their praises.

॥ ವಿಶೇಷವಿಷಯಗಳು ॥

ಅಸೃಗ್ರಂ—ಸೃಷ್ಟಿಸಿರುವೆನು ಎಂದರೆ ರಚಿಸಿರುವೆನು ಎಂದರ್ಥವು.

ಉತ್ ಆಹಾಸತ—ಉತ್ ಎಂದರೆ ಮೇಲೆ. ಇಂದ್ರನ ಸ್ಥಾನವು ಮೇಲೆ (ಅಂತರಿಕ್ಷದಲ್ಲಿ) ಸ್ವರ್ಗದಲ್ಲಿರುವುದರಿಂದ ಕವಿಯು ಉದಹಾಸತ—ಮೇಲಿರುವ ನಿನ್ನನ್ನು ಮುಟ್ಟಲಿ ಎಂದು ಸ್ತೋತ್ರ ಮಾಡಿರುವನು.

ಆಜೋಷಾಃ—ಜುಷೀ ಪ್ರೀತಿಸೇವನಯೋಃ—ಸ್ತೋತ್ರಗಳು ನಿನ್ನನ್ನು ಸೇವಿಸಲಿ ಎಂದರೆ ಸ್ತೋತ್ರಗಳಿಂದ ನೀನು ಸಂತುಷ್ಟನಾಗು ಎಂದರ್ಥವು.

ಪತಿಂ—ಸೋಮಸ್ಯ ಪಾತಾರಂ, ಯಜಮಾನಾನಾಂ ಪಾಲಯಿತಾರಂ ವಾ ಎಂದರೆ ಪಾ-ಎಂಬ ಧಾತುವಿಗೆ ಪಾನಮಾಡು ಅಥವಾ ರಕ್ಷಿಸು ಎಂದರ್ಥವಿರುವುದರಿಂದ **ಪತಿಂ** ಎಂದರೆ ಸೋಮಪಾನ ಮಾಡುವ ಅಥವಾ ಯಜಮಾನರನ್ನು ರಕ್ಷಿಸುವ ಎಂದರ್ಥ ಹೇಳಬಹುದು. **ಪಾತಾ ವಾ ಪಾಲಯಿತಾ ವಾ** (ನಿ. ೪-೨-೬) ಎಂದು ಯಾಸ್ಕರು ಅರ್ಥವಿವರಣೆ ಮಾಡಿರುವರು. ವೇಧಾರ್ಥಯತ್ನಕಾರರು **ಪತಿಂ** ಎಂದರೆ husband (ಗಂಡ) ಎಂದು ಅರ್ಥಮಾಡಿರುವರು. ಈ ಅರ್ಥವು ಇಲ್ಲಿ ಸರಿಯಾಗಿಲ್ಲ. ಪತಿಂ ಎಂದರೆ ಸ್ವಾಮಿ ಎಂದು ಹೇಳಬಹುದು.

ವ್ಯಾಕರಣಪ್ರಕ್ರಿಯಾ

ಅಸೃಗ್ರಮ್—ಸೃಜ ವಿಸರ್ಗೇ ಧಾತುವಿನ ಮುಂದೆ ಲಙ್ ಪರಸ್ಮೈಪದ ಉತ್ತಮಪುರುಷಬಹುವಚನ ಮಿಪ್ ಬರುವುದು. ಅದಕ್ಕೆ **ತಸ್ಥಸ್ಥಮಿಪಾಂತಾಂತಂತಾಮಃ** (ಪಾ. ಸೂ. ೩-೪-೧೦೧) ಎಂಬುದರಿಂದ **ಅಮ್** ಬರುವುದು. **ತುದಾದಿಭ್ಯಃಶಃ** (ಪಾ. ಸೂ. ೩-೧-೭೭) ಎಂಬುದರಿಂದ ಶವಿಕರಣ ಬರುವುದು. ಸೃಜ್+ಅ+ಅಮ್ ಅದಕ್ಕೆ **ಬಹುಲಂ ಛಂದಸಿ** (ಪಾ. ೭-೧೪) ಎಂಬುದರಿಂದ ರುಟ್ ಆಗಮ. ಸೃಜ್+ರ+ಅಮ್ **ಚೋಃಕುಃ** (ಪಾ. ಸೂ. ೮-೨-೩೦) ಎಂಬುದರಿಂದ ಜಕಾರಕ್ಕೆ ಗಕಾರ. ಸೃಗ್+ರ+ಅಮ್ **ಲುಙ್ ಲಙ್ ಲೃಙ್ ಕ್ಷ್ವೡದಾತ್ತಃ** (ಪಾ. ಸೂ. ೬-೪-೭೧) ಎಂಬುದರಿಂದ ಉದಾತ್ತನಾದ ಅಟ್ ಆಗಮವು ಧಾತುವಿಗೆ ಬರುವುದು ಅಸೃಗ್+ರ+ಅಮ್ ಪೂರ್ವರೂಪಬಂದರೆ ಅಸೃಗ್ರಮ್ ಎಂದಾಗುವುದು. ಸಕಿತ್ಸ್ವವಾದ್ದರಿಂದ ಅಟ್ ಆಗಮದ ಉದಾತ್ತಸ್ವರವೇ ನಿಲ್ಲುವುದು.

ಗಿರಃ—ಪ್ರಾತಿಪದಿಕಸ್ವರ ಬರುವುದು.

ಆಹಾಸತ—ಓಹಾಙ್ ಗತೌ ಧಾತು. ಇದರಮುಂದೆ ಲುಙ್. ಅದಕ್ಕೆ ಆತ್ಮನೇಪದ ಪ್ರಥಮಪುರುಷ ಬಹುವಚನದಲ್ಲಿ ಝಿ ಆದೇಶ ಬರುವುದು. **ಆತ್ಮನೇಪದೇಷ್ವನತಃ** (ಪಾ.ಸೂ. ೭-೧-೫) ಎಂಬುದರಿಂದ ಝಿ-

कारकै अत् आदेश. च्लिलुङि (पा. सू. ३-८-४४) एंबुदरिंद धातुविन मुंदे च्लि बरुत्तै. अदक्कै च्लेः सिच् (पा सू. ३-८-४) एंबुदरिंद सिच् आदेश. अडागमु. अहासत एंदागुवुदु. तिङ्शित्सिजः (पा. सू. ८-८-४४) एंबुदरिंद सर्वानुदात्त बरुवुदु.

आजोषाः—जुषीप्रीतिसेवनयोः एंब धातुविन मुंदे **लङ्**. आदक्कै आत्मनेपद मध्यमपुरुष एकवचन धास्. **कुदादिभ्यश्शः** एंबुदरिंद शविकरण बरुवुदु. ई विकरणक्कै **थंदस्युभयेथा** (पा. सू, ३-४-८८३) एंबुदरिंद आर्धधातुकसंज्ञे बरुवुदु. आद्दरिंद अदु ङिच्चात्तागुवुदिल्ल. **क्ङिति च** (पा. सू. ८-८-२) एंबुदरिंद गुणनिषेध बरुवुदिल्ल. **पुगंत लघूपधस्य च** (पा. सू. ७,३-८६) एंबुदरिंद लघूपधगुण बरुवुदु. धास् न थकारक्कै छांदसवागि लोप बरुवुदु. जोषस+अस् एंदिरुवाग **आकस्सवर्णेदीर्घः** (पा.सू. ६-८-८८८ एंबुदरिंद सवर्णदीर्घ. जोषास् एंदागुवुदु. अडागमु. आगमद उदात्तवु सतिशिष्ट वाद्दरिंद अदे निल्लुवुदु, आजोषास् रुत्व विसर्गगळु बंदरे आजोषाः एंदागुवुदु

वृषभम्-अयि वृषिभ्यांकित् (उ. सू. ३-४०३) कृ, शृ, शलि, कलि, **गर्दिभ्यो भच्** (उ. सू. ३-४०३) एंब हिंदिन सूत्रदिंद 'अभच्' एंब पदवु अनुवृत्तवागुवुदु. **ऋषि, वृषि** धातुगळ मुंदे अभच् प्रत्यय बरुवुदु. अदु कित्तागुवुदु एंदु सूत्रार्थ. ई सूत्रदिंद वृष् धातुविन मुंदे अभच् बंदरे वृष्+अभ, प्रत्ययवु कित्तु. आद्दरिंद लघूपधगुण बरुवुदिल्ल, वृषभ, एंदागुवुदु. प्रत्ययवु चित्तात्तिद्दरिंद **चितः** (पा. सू. ६,८-८६३) एंबुदरिंद अंतोदात्त.

पतिम्—पा रक्षणे धातु. इदर मुंदे **सातेर्डतिः** (उ सू ८-४४२) रक्षणार्थ वाद पा धातुविन मुंदे डति प्रत्यय बरुवुदु. एंबुदरिंद डति प्रत्यय बंदरे पा+अति, प्रत्ययवु डित्तु. डित्करण सामर्थ्यदिंद पा धातुविन टिगे(आकारक्कै) लोप बरुवुदु. प्रत्यय स्वरदिंद अद्युदात्त ॥ ४ ॥

॥ संहितापारः ॥

सं चोदय चित्रमर्वागराध इन्द्र वरेण्यं ॥

असदित्ते विभु प्रभु ॥ ५ ॥

॥ ಪದಪಾಠಃ ॥

ಸಂ । ಚೋದಯ । ಚಿತ್ರಂ । ಅರ್ವಾಕ್ । ರಾಧಃ । ಇಂದ್ರ । ವರೇಣ್ಯಂ ॥
ಅಸತ್ । ಇತ್ । ತೇ । ವಿಭು । ಪ್ರಭು ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ವರೇಣ್ಯಂ ಶ್ರೇಷ್ಠಂ ರಾಧೋ ಧನಂ ಚಿತ್ರಂ ಮಣಿಮುಕ್ತಾದಿರೂಪೇಣ ಬಹುವಿಧ-ಮರ್ವಾಗಸ್ಮದಭಿಮುಖಂ ಯಥಾ ಭವತಿ ತಥಾ ಸಂಚೋದಯ । ಸಮ್ಯಕ್ ಪ್ರೇರಯ । ಭೋಗಾಯ ಯಾವತ್ಪರ್ಯಾಪ್ತಂ ತಾವದ್ವಿಭುಶಬ್ದೇನೋಚ್ಯತೇ । ತತೋಽಪ್ಯಧಿಕಂ ಪ್ರಭುಶಬ್ದೇನ । ತಾದೃಶಂ ಧನಂ ತೇ ತವೈವಾಸದಿತ್ । ಅಸ್ತ್ಯೇವ । ತಸ್ಮಾದಸ್ಮಭ್ಯಂ ಪ್ರಯಚ್ಛೇತ್ಯರ್ಥಃ । ಮಘವಮಿತ್ಯಾದಿಷ್ವಷ್ಟಾವಿಂಶತಿ-ಧನನಾಮಸು ರಾಯೋ ರಾಧ ಇತಿ ಪಠಿತಂ ॥ ಚೋದಯ । ಚುದ ಪ್ರೇರಣೇ । ಣ್ಯಂತಾಲ್ಲೋಟ್ । ತಿಙ್ಙತಿಙ ಇತಿ ನಿಘಾತಃ । ರಾಧಃ । ರಾಧ್ನುವಂತ್ಯನೇನೇತಿ ರಾಧೋ ಧನಂ । ಸರ್ವಧಾತುಭ್ಯೋಽಸುನ್ ಉ. ೪-೧೮೪ । ನಿತ್ತ್ವಾದಾದ್ಯುದಾತ್ತಃ । ವರೇಣ್ಯಂ । ವೃಜ ವಿಣ್ಯಃ । ವೃಷಾದಿತ್ತ್ವಾದಾದ್ಯುದಾತ್ತಃ । ಅಸತ್ । ಅಸ ಭುವಿ । ಲೇಟ್ । ತಿಪ್ । ಇತಶ್ಚ ಲೋಪಃ । ಪಾ. ೩-೪-೯೭ । ಇತೀಕಾರಲೋಪಃ । ಲೇಟೋಽಡಾಟಾವಿತ್ಯಡಾಗಮಃ । ಆದಿಪ್ರಭೃತಿಭ್ಯಃ ಶಪ ಇತಿ ಶಪೋ ಲುಕ್ । ಆಗಮಾ ಅನುದಾತ್ತಾ ಇತ್ಯಟೋಽನುದಾತ್ತತ್ವಾದ್ಧಾತುಸ್ವರ ಏವ । ವಿಭು । ವಿಭವತೀತಿ ವಿಭು । ಭುವ ಇತ್ಯನುವೃತ್ತೌ ವಿಪ್ರ-ಸಂಭ್ಯೋ ಡ್ವಸಂಜ್ಞಾಯಾಂ । ಪಾ. ೩-೨ ೧೭೦ । ಇತಿ ಡುಪ್ರತ್ಯಯಃ । ಡಿತ್ವಾಟ್ಟಿಲೋಪಃ । ಪ್ರತ್ಯಯ ಸ್ವರೇಣೋಕಾರ ಉದಾತ್ತಃ । ಕೃದುತ್ತರಪದಪ್ರಕೃತಿಸ್ವರೇಣ ಸ ಏವ ಶಿಷ್ಯತೇ ಏವಂ ಪ್ರಭು ॥

॥ ಪ್ರತಿಪದಾರ್ಥ ॥

(ಹೇ) ಇಂದ್ರ—ಎಲೈ ಇಧ್ಮನೇ । ವರೇಣ್ಯಂ—ಶ್ರೇಷ್ಠವಾದ । ಚಿತ್ರಂ—ನಾನಾವಿಧವಾದ । ರಾಧಃ—ಧನವನ್ನು । ಅರ್ವಾಕ್—(ನಮ್ಮ) ಮುಂದೆ (ನಮ್ಮ ಬಳ ಇರುವಂತೆ) ಸಂ ಚೋದಯ—ಪ್ರೇರಿಸು (ಎಂದರೆ ಕೊಡು) । (ಏಕೆಂದರೆ) ತೇ—ನಿನಗೆ । ವಿಭು—(ಭೋಗಸಾಧನೆಗೆ) ಸಾಕಾಗುವಷ್ಟು । (ಮತ್ತು) ಪ್ರಭು—ಅದಕಿಂತಲೂ ಹೆಚ್ಚಾಗಿಯೇ । ಅಸತ್ ಇತ್—ಧನವಿದ್ದೇ ಇರುವುದು ॥

॥ ಭಾವಾರ್ಥ ॥

ಎಲೈ ಇಂದ್ರನೇ, ಶ್ರೇಷ್ಠವಾದ ಮತ್ತು ವಿಧವಿಧವಾದ ಧನಾದಿಗಳನ್ನು ನಮಗೆ ದೊರೆಯುವಂತೆ ಮಾಡು. ಏಕೆಂದರೆ ನಿನ್ನ ಹತ್ತಿರ ಭೋಗಸಾಧನೆಗಾಗಿ ಎಲ್ಲರಿಗೂ ಕೊಡುವಷ್ಟು ಧನವಿರುವುದಲ್ಲದೆ ಅದ ಕಿಂತಲೂ ಎಷ್ಟೋ ಹೆಚ್ಚಾಗಿಯೂ ಇರುವುದು.

English Translation.

Place before us, O Indra, precious and different kinds of riches, for you have riches enough and more than enough.

॥ ವಿಶೇಷ ವಿಷಯಗಳು ॥

ಸಂ ಚೋದಯ—ಧನವನ್ನು ಪ್ರೇರಿಸು ಎಂದರೆ ಧನವು ನಮ್ಮ ಬಳಿಗೆ ಬರುವಂತೆ ಅನುಗ್ರಹಿಸು. ಎಂದರೆ ಧನವನ್ನು ಕೊಡು ಎಂದರ್ಥವು.

ಚಿತ್ರಂ—ವಿಧನಿಧವಾದ, ಎಂದರೆ ಧನದಲ್ಲಿ ದ್ರವ್ಯ, ಗೋವುಗಳು, ಪಶುಗಳು, ಗೃಹ, ಪುತ್ರಾದಿಗಳು ಮೊದಲಾದ ಅನೇಕ ವಿಧಗಳಿರುವವು ಎಂದರ್ಥವು.

ಅರ್ವಾಕ್—ಎದುರಿಗೆ, ನಮ್ಮ ಎದುರಿಗೆ ಎಂದರೆ ನಮಗೆ ಲಭಿಸುವಂತೆ ನಮಗೆ ಸುಲಭವಾಗಿ ದೊರೆಯುವಂತೆ ಎಂದರ್ಥವು

ರಾಧಃ—ಮಘಂ ಮೊದಲಾದ ಇಪ್ಪತ್ತೈಂಟು ಧನವಾಚಕ ಶಬ್ದಗಳ ಮಧ್ಯದಲ್ಲಿ ರಾಯಃ ರಾಧಃ ಎಂಬ ಶಬ್ದಗಳು ಪಠಿತವಾಗಿವೆ. (ನಿ. ೩-೯) ಆದುದರಿಂದ ರಾಧಃ ಎಂದರೆ ಧನವು.

ವರೇಣ್ಯಂ—ಶ್ರೇಷ್ಠವಾದ, ಉತ್ತಮವಾದ, ಬಹು ಬೆಲೆಬಾಳುವ.

ಅಸತ್ ಇತ್—ಇತ್ ಎಂದರೆ ಏವ ಎಂದು. ಎಂದರೆ ಇದ್ದೇ ಇರುವುದು. ಧನವಿರುವ ವಿಷಯದಲ್ಲಿ ಅನುಮಾನವೇ ಇಲ್ಲ ಎಂದರ್ಥವು.

ವಿಭು, ಪ್ರಭು—**ಭೋಗಾಯ ಯಾವತ್ಪರ್ಯಾಪ್ತಂ ತಾವದ್ವಿಭುಶಬ್ದೇನೋಚ್ಯತೇ** । ಎಂದರೆ ಭೋಗಸಾಧನೆಗೆ ಸಾಕಾಗುವಷ್ಟು ಎಂದು ವಿಭುಶಬ್ದಕ್ಕೆ ಅರ್ಥವು. ಪ್ರಭುವೆಂದರೆ ಸಾಕಾಗುವಷ್ಟು ಧನಕ್ಕಿಂತಲೂ ಎಷ್ಟೋ ಹೆಚ್ಚಾಗಿರುವುದೆಂದರ್ಥವು. ಸ್ಕಂದಸ್ವಾಮಿಯು-ಪ್ರಭುಶಬ್ದಕ್ಕೆ ಪ್ರಭೂತಂ ಎಂದರೆ ಬಹಳವಾದ, ಅತಿ ಹೆಚ್ಚಾದ ಎಂದರ್ಥ ಹೇಳಿರುವರು.

॥ ವ್ಯಾಕರಣಪ್ರಕ್ರಿಯಾ ॥

ಚೋದಯ—ಚುದ ಪ್ರೇರಣೇ ಧಾತುವಿನ ಮುಂದೆ **ಹೇತುಮತಿಚ** (ಪಾ. ಸೂ. ೩-೧-೨೬) ಎಂಬುದರಿಂದ ಣಿಚ್ಪ್ರತ್ಯಯ. ಣಿಜಂತಧಾತುವಿನ ಮುಂದೆ ಲೋಟ್ ಪರಸ್ಮೈಪದ ಮಧ್ಯಮಪುರುಷೈಕವಚನ ಸಿಪ್ ಪ್ರತ್ಯಯ- **ಕರ್ತರಿ ಶಪ್** (ಪಾ. ಸೂ. ೩-೧-೬೮) ಎಂಬುದರಿಂದ ಶಪ್, ಚುದ್+ಇ+ಅ-ಸಿ, ಣಿಚ್ಚನ್ನು ನಿಮಿತ್ತವಾಗಿ ಮಾಡಿಕೊಂಡು ಲಘೂಪಧಗುಣ, ಶಪ್ ನಿಮಿತ್ತಕವಾಗಿ **ಸಾರ್ವಧಾತುಕಾರ್ಧಧಾತುಕಯೋಃ** (ಪಾ, ಸೂ. ೭-೩-೮೪) ಎಂಬುದರಿಂದ ಗುಣ ಚೋದೇ+ಅ+ಸಿ. ಏಗೆ ಆಯಾದೇಶ, **ಸೇರ್ಹ್ಯಪಿಚ್ಚೆ** (ವಾ. ಸೂ. ೧-೪-೮೭) ಎಂಬುದರಿಂದ ಸಿಗೆ ಹಿ ಆದೇಶ. ಚೋದಯ+ಹಿ **ಅತೋಹೇಃ** (ಪಾ. ಸೂ. ೬-೪-೧೦೫) ಎಂಬುದರಿಂದ ಹಿಗೆ **ಲುಕ್, ತಿಙ್ಶಿತಿಜಃ** (ಪಾ. ಸೂ. ೮-೧-೭೮) ಎಂಬುದರಿಂದ ಸರ್ವಾನುದಾತ್ತ ಬರುವುದು.

ರಾಧಃ 'ರಾಧ್ನುವನ್ತಿ ಅನೇನ ಇತಿರಾಧಃ ಧನಮ್' ಎಂದು ವಿಗ್ರಹ **ಸರ್ವಧಾತುಭ್ಯೋಽಸುನ್** (ಉ. ಸೂ. ೪-೬೮೮) ಎಂಬುದರಿಂದ ರಾಧ್ ಧಾತುವಿನ ಮುಂದೆ ಅಸುನ್ ಪ್ರತ್ಯಯ. ಅಸುನ್ ಪ್ರತ್ಯಯ ನಿತ್ಯ. ಆದ್ದರಿಂದ ಆದ್ಯುದಾತ್ತ.

ವರೇಣ್ಯಮ್—ವೃಞ್ ಧಾತುವಿನ ಮುಂದೆ **ವೃಞ್ ವಿಣ್ಯಃ** (ಉ. ಸೂ. ೩-೩೭೮) ವೃಞ್ **ವರಣೇ** ಎಂಬ ಧಾತುವಿನ ಮುಂದೆ ಏಣ್ಯ ಪ್ರತ್ಯಯ ಬರುವುದು ಎಂಬುದರಿಂದ ಏಣ್ಯ ಪ್ರತ್ಯಯ ಬರುವುದು. **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಗುಣ ಬಂದರೆ ವರೇಣ್ಯ ಎಂದಾಗುವುದು. ವೃಷಾದಿಯಾದ್ದರಿಂದ **ವೃಷಾದೀನಾಂಚ** (ಪಾ. ಸೂ. ೬-೧-೨೦೩) ಎಂಬುದರಿಂದ ಆದ್ಯುದಾತ್ತ.

ಅಸತ್—ಅಸಭುವಿ ಧಾತು. ಇದರ ಮುಂದೆ ಲೇಟ್ ಪ್ರತ್ಯಯ, ಇದರ ಸ್ಥಾನದಲ್ಲಿ ತಿಪ್ ಆದೇಶ, **ಇತಶ್ಚ ಲೋಪಃ ಪರಸ್ಮೈಪದೇಷು** (ಪಾ. ಸೂ. ೩-೪-೯೭) ಎಂಬುದರಿಂದ ತಿ ಪ್ರತ್ಯಯದ ಇಕಾರಕ್ಕೆ ಲೋಪ **ಲೇಟೋಡಾಟೌ** (ಪಾ. ಸೂ. ೩-೪-೯೪) ಎಂಬುದರಿಂದ ತ್‌ಗೆ ಆಡಾಗಮ ಅಸ್+ಅತ್=ಅಸತ್, ಎಂದಾಗುವುದು ಶಪ್ ಎಂಬ ವಿಕರಣಕ್ಕೆ **ಆದಿಪ್ರಭೃತಿಭ್ಯಃ ಶಪಃ** (ಪಾ. ಸೂ. ೨-೪-೭೨) ಆದ್ ಮೊದಲಾದ ಧಾತುವಿನ ಮುಂದೆ ಬರುವ ಶಪ್ ವಿಕರಣಕ್ಕೆ ಲುಕ್ ಬರುವುದು ಎಂಬುದರಿಂದ ಲುಕ್ ಬರುವುದು. **ಆಗಮಾ ಅನುದಾತ್ತಾಃ** (ಪಾ. ಮ. ೩-೧-೩-೭) ಎಂಬುದರಿಂದ ಆಟ್ ಎಂಬ ಆಗಮವು ಅನುದಾತ್ತ. ಅಸ್ ಎಂಬಲ್ಲಿ **ಧಾತೋಃ** (ಪಾ. ಸೂ. ೬-೧-೧೬೨) ಎಂಬುದರಿಂದ ಅಂತೋದಾತ್ತ ಸ್ವರ ಬಂದು ಅದೇ ನಿಲ್ಲುವುದು.

ವಿಭು-ವಿಭವತೀತಿ ವಿಭು. **ವಿಪ್ರಸಂಭ್ಯೋಡ್ವಸಂಜ್ಞಾಯಾಮ್** (ಪಾ. ಸೂ. ೩-೨-೧೮೦) **ಭುವಃ-ಸಂಜ್ಞಾನ್ತರಯೋಃ** (ಪಾ. ಸೂ. ೩-೨-೧೭೯) ಎಂಬ ಹಿಂದಿನ ಸೂತ್ರದಿಂದ, ಭುವಃ, ಎಂಬುದು ಅನುವೃತ್ತವಾಗುವುದು. ಸಂಜ್ಞೆ ತೋರದೇ ಇರುವಾಗ ವಿ, ಪ್ರ, ಸಂ, ಎಂಬ ಉಪಸರ್ಗಗಳ ಮುಂದೆ ಇರುವ ಭೂಧಾತುವಿನ ಮುಂದೆ ಡು ಪ್ರತ್ಯಯ ಬರುವುದು ಎಂಬುದರಿಂದ ವಿ, ಪೂರ್ವಕವಾದ ಭೂ, ಧಾತುವಿನ ಮುಂದೆ ಡು ಪ್ರತ್ಯಯ ಬರುವುದು. ಡಕಾರಕ್ಕೆ **ಚುಟೂ** (ಪಾ. ಸೂ. ೧-೦-೭) ಎಂಬುದರಿಂದ ಇತ್ಸಂಜ್ಞೆ ಬಂದರೆ ಪ್ರತ್ಯಯದಲ್ಲಿ ಉಕಾರ ನಿಲ್ಲುವುದು. ಡಿತ್ಕರಣ ಸಾಮಾರ್ಥ್ಯದಿಂದ ಭೂ ಎಂಬುದರ ಊಕಾರ ರೂಪವಾದ ಟಗೆ ಲೋಪ, ಎಎಂಬ ವಿಭು ಎಂದಾಗುವುದು. **ಆದ್ಯುದಾತ್ತೌ ಚ** (ಪಾ. ಸೂ- ೩-೧-೩) ಎಂಬ ಪ್ರತ್ಯಯ ಸ್ವರದಿಂದ ಉಕಾರ ಉದಾತ್ತ. **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂದು ವಿಹಿತವಾದ ಕೃದುತ್ತರಪದಪ್ರಕೃತಿಸ್ವರದಿಂದ ವಿಭು ಎಂಬ ಸಮಾಸದಲ್ಲಿ ಅದೇ ಸ್ವರವೇ ನಿಲ್ಲುವುದು. ಇದೇ ರೀತಿಯಲ್ಲಿ ಪ್ರಭು, ಎಂಬಲ್ಲಿಯೂ ಪ್ರಕ್ರಿಯೆಯು ಬರುವುದು ॥ ೫ ॥

॥ ಸಂಹಿತಾಪಾಠಃ ॥

ಆಸ್ಮಾನ್ತ್ಸು ತತ್ರ ಚೋದಯೇಂದ್ರು ರಾಯೇ ರಭಸ್ವತಃ ॥
ತುವಿದ್ಯುಮ್ನ ಯಶಸ್ವತಃ ॥ ೬ ॥

॥ ಪದಪಾಠಃ ॥

ಅಸ್ಮಾನ್ । ಸು । ತತ್ರ । ಚೋದಯ । ಇಂದ್ರ । ರಾಯೇ । ರಭಸ್ವತಃ ॥
ತುವಿದ್ಯುಮ್ನ । ಯಶಸ್ವತಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ತುವಿದ್ಯುಮ್ನ ಪ್ರಭೂತಧನೇಂದ್ರ ರಾಯೇ ಧನಸಿದ್ಧ್ಯರ್ಥಮಸ್ಮಾನನುಷ್ಠಾತೄನ್ ತತ್ರ ಕರ್ಮಣಿ ಸು ಚೋದಯ । ಸುಷ್ಠು ಪ್ರೇರಯ । ಕೀದೃಶಾನಸ್ಮಾನ್ । ರಭಸ್ವತಃ ಉದ್ಯೋಗವತೋ ಯಶಸ್ವತಃ ಕೀರ್ತಿಮತಃ ॥ ತಶ್ಚ ತಚ್ಛಬ್ದಾತ್ಸಪ್ತಮ್ಯಾಸ್ತ್ರಲ್ । ಸಾ ೫-೩-೧೦ । ಲಿತೀತಿ ಪ್ರತ್ಯಯಾತ್ಪೂರ್ವಸ್ಯೋದಾತ್ತತ್ವಂ । ಇಂದ್ರ । ಆಮಂತ್ರಿತಾದ್ಯುದಾತ್ತತ್ವಂ । ಪಾದಾದಿತ್ವಾನ್ನ ನಿಘಾತಃ । ರಾಯೇ । ಊಡಿದಮಿತ್ಯಾದಿನಾ । ವಿಭಕ್ತೇರುದಾತ್ತತ್ವಂ । ರಭಸ್ವತಃ । ರಭ ರಾಭಸ್ಯೇ । ರಾಭಸ್ಯಂ ಕಾರ್ಯೇಷ್ವಕ್ರಮಃ । ಸರ್ವಧಾತುಭ್ಯೋಽಸುನ್। ನಿತ್ತ್ವಾದಾದ್ಯುದಾತ್ತಃ । ಮತುಪಃ ಪಿತ್ತ್ವಾದನುದಾತ್ತತ್ವಂ । ಸ್ವಾದಿಷ್ವಸರ್ವನಾಮಸ್ಥಾನೇ । ಪಾ. ೧-೪-೧೭ । ಇತಿ ನ ಪದತ್ವಂ ತಸೌ ಮತ್ವರ್ಥೇ । ಪಾ. ೧-೪-೧೯ । ಇತಿ ಭಸಂಜ್ಞಾಯಾ ಬಾಧಿತತ್ವಾತ್ । ಅ ಕಡಾರಾದೇಕಾ ಸಂಜ್ಞಾ । ಪಾ. ೧-೪-೧ । ಇತಿ ನಿಯಮಾತ್ ತುವಿದ್ಯುಮ್ನ । ತುವಿ ಬಹು ದ್ಯುಮ್ನಂ ಧನಂ ಯಸ್ಯ । ಷಷ್ಠಿಕಮಾಮಂತ್ರಿತಾದ್ಯುದಾತ್ತತ್ವಂ । ಯಶಸ್ವತಃ । ಯಶೋ ಸ್ಯಾಸ್ತೀತಿ ಮತುಪ್ । ಅಸ್ಮಾಯಾಮೇಧಾಸ್ರಜೋ ವಿನಿಃ । ಪಾ. ೫-೨-೧೨೧ । ಇತಿ ವಿನಿನಾ ನ ಬಾಧ್ಯತೇ ಮತುಪಃ ಸರ್ವತ್ರ ಸಮುಚ್ಚಯಾತ್ । ಯಶಸ್ಯಬ್ದೋ ನಬ್ವಿಷಯೆಸ್ಯಾನಿಸಂತಸ್ಯೇತ್ಯಾದ್ಯುದಾತ್ತಃ । ಮತುಪಃ ಪಿತ್ತ್ವಾತ್ಸ ಏವ ಶಿಷ್ಯತೇ ॥

॥ ಪ್ರತಿಪದಾರ್ಥ ॥

ತುವಿದ್ಯುಮ್ನ—ಬಹುಧನೋಪೇತನಾದ ।(ಹೇ) ಇಂದ್ರ—ಎಲೈ ಇಂದ್ರನೇ । ರಭಸ್ವತಃ—ಉದ್ಯೋಗಶೀಲರಾದ (ಯಜ್ಞಾದಿ ಕರ್ಮಗಳಲ್ಲಿ ಪ್ರವೃತ್ತರಾದ) । ಯಶಸ್ವತಃ—ಕೀರ್ತಿಭಾಜನರಾದ । ಅಸ್ಮಾನ್—ನಮ್ಮನ್ನು । ರಾಯೇ-ಧನಪ್ರಾಪ್ತಿಗಾಗಿ । ತತ್ರ—ಆ ಕರ್ಮದಲ್ಲಿ । ಸು ಚೋದಯ—(ಚೆನ್ನಾಗಿ) ಪ್ರೇರಿಸು ॥

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಬಹುಧನಯುಕ್ತನು ಎಂದರೆ ನಿನ್ನಲ್ಲಿ ಬಹಳವಾದ ಧನವಿರುವುದು. ಆದುದರಿಂದ ಯಾವಾಗಲೂ ಯಜ್ಞಾದಿಕಾರ್ಯಗಳಲ್ಲಿ ತೊಡಗಿರುವ ಮತ್ತು ಕೀರ್ತಿವಂತರಾದ ನಮ್ಮನ್ನು ಧನಪ್ರಾಪ್ತಿಗಾಗಿ ಯಜ್ಞಾದಿಕರ್ಮಗಳಲ್ಲಿ ಆಸಕ್ತರಾಗುವಂತೆ ಪ್ರೇರಿಸುವವನಾಗು.

English Translation.

Indra, you are very rich ; encourage us in this rite for the acquirement of wealth, for we are deligent and renowned.

॥ ವಿಶೇಷವಿಷಯಗಳು ॥

ಅಸ್ಮಾನ್+ಸು=ಅಸ್ಮಾನ್ತ್ಸು. ನಕಾರದ ಮುಂದೆ ಅದರಲ್ಲೂ ವಿಶೇಷವಾಗಿ ದ್ವಿತೀಯಾಬಹುವಚನಾಂತ್ಯವಾದ ನಕಾರದ ಮುಂದೆ ಸಕಾರವು ಬಂದರೆ ಸಂಹಿತಾಪಾಠದಲ್ಲಿ ಅದನ್ನು ಸಂಧಿಮಾಡಿ ಉಚ್ಚರಿಸುವಾಗ ನಕಾರಸಕಾರಗಳ ಮಧ್ಯದಲ್ಲಿ ತಕಾರವನ್ನು ಸೇರಿಸಿ ನ್ತ್ಸು ಎಂದು ಪಠಿಸುವುದು ರೂಢಿಯಾಗಿದೆ- ಈ ವಿಷಯದಲ್ಲಿ—

ಸ ಗಾ ಅವಿಂದತ್ಸೋ ಅವಿಂದದಶ್ವಾನ್ತ್ಸ ಓಷಧೀಃ ಸೋ ಅಪಃ ಸವನಾನಿ ॥

(ಋ. ಸಂ. ೧-೧೦೩-೫)

ಕವಿಗೀರ್ಭಿಃ ಕಾವ್ಯೇನಾ ಕವಿಃ ಸನೊ್ಸೀಮಃ ಪವಿತ್ರಮತ್ಯೇತಿ ರೇಭನ್ ॥

(ಋ. ಸಂ. ೯-೯೬-೧೭)

ಇತ್ಯಾದಿ ಅನೇಕ ಉದಾಹರಣೆಗಳನ್ನು ಕೊಡಬಹುದು.

ರಭಸ್ವತಃ— ರಭ ರಾಭಸ್ಯೇ । ರಾಭಸ್ಯಂ ಕಾರ್ಯೋಪಕ್ರಮಃ ॥ ರಭ ಧಾತುವಿನಿಂದ ರಾಭಸ್ಯ ಎಂಬ ಶಬ್ದವು ಉತ್ಪನ್ನವಾಗಿರುವುದು. ರಾಭಸ್ಯವೆಂದರೆ ಕಾರ್ಯೋಪಕ್ರಮ, ಉದ್ಯೋಗಶೀಲತೆ ಎಂದರ್ಥವು. ರಭಸ್ವತಃ—ರಭಸ್ವಾನ್ ಎಂಬ ಶಬ್ದದ ದ್ವಿತೀಯಾ ಬಹುವಚನ.

ತುವಿದ್ಯುಮ್ನ-ಪ್ರಭೂತಧನ । ತುವಿ ಎಂದರೆ ಬಹು. ದ್ಯುಮ್ನಂ ಎಂದರೆ ಧನವು. ಆದುದರಿಂದ ತುವಿ ದ್ಯುಮ್ನಂ ಯಸ್ಯ ಸಃ ಎಂದು ವಿಗ್ರಹವು. ಬಹುಧನವುಳ್ಳ ಎಂದರ್ಥವು.

ಯೆಶಸ್ವತಃ—ಯೆಶೋಽಸ್ಯಾಸ್ತೀತಿ ಯೆಶಸ್ವಾನ್, ತಾನ್ ॥ ಕೀರ್ತಿಯುಳ್ಳ ಎಂದರ್ಥವು. **ರಭಸ್ವತಃ** ಮತ್ತು **ಯೆಶಸ್ವತಃ** ಎಂಬ ಎರಡು ಶಬ್ದಗಳೂ **ಅಸ್ಮಾನ್** ಎಂಬ ಶಬ್ದಕ್ಕೆ ವಿಶೇಷಣಗಳು.

ವ್ಯಾಕರಣಪ್ರಕ್ರಿಯಾ

ತೆತ್ರೈ—**ಸಪ್ತಮ್ಯಾಸ್ತ್ರಲ್** (ಪಾ. ಸೂ. ೫-೩-೧೦) ದ್ವಿ ಮೊದಲಾದುವುಗಳನ್ನು ಳಿದು ಸಪ್ತಮ್ಯಂತಗಳಾದ ಕಿಮ್, ಸರ್ವನಾಮಸಂಜ್ಞಕ ಶಬ್ದಗಳು, ಬಹು. ಇವುಗಳ ಮುಂದೆ ತ್ರಲ್ ಪ್ರತ್ಯಯ ಬರುವುದು ಎಂಬುದರಿಂದ ತದ್+ಬಿ, ಎಂಬುದರ ಮುಂದೆ ತ್ರಲ್ ಪ್ರತ್ಯಯ ಬಂದರೆ ತದ್ಧಿತಾಂತವಾದ್ದರಿಂದ ಪ್ರಾತಿಪದಿಕ ಸಂಜ್ಞೆ ಬರಲು **ಸುಪೋಧಾತುಪ್ರಾತಿಪದಿಕಯೋಃ** (ಪಾ. ಸೂ. ೨-೪-೭೧) ಎಂಬುದರಿಂದ ಙಿಗೆ ಲುಕ್ ತೈದಾದೀನಾಮಃ (ಪಾ. ಸೂ. ೬-೨-೧೦೩) ಎಂಬುದರಿಂದ ದಕಾರಕ್ಕೆ ಅಕಾರ, ಅತೋಗುಣೇ, (ಪಾ. ಸೂ. ೬-೧-೯೭) ಎಂಬುದರಿಂದ ಪರರೂಪ, ತತ್ರ ಎಂದಾಗುವುದು **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ಪ್ರತ್ಯಯದ ಹಿಂದೆ ಇರುವ ವರ್ಣವು ಉದಾತ್ತವಾಗುವುದು.

ಇನ್ದ್ರ—ಎರಡನೇ ಪಾದದ ಆದಿಯಲ್ಲಿರುವುದು. ಆದ್ದರಿಂದ **ಅಪಾದಾದೌ** ಎಂದು ನಿಷೇಧ ಬರುವ ಕಾರಣ ಆಷ್ಟಮಿಕಾನುದಾತ್ತ ಬರುವುದಿಲ್ಲ. **ಆಮಂತ್ರಿತಸ್ಯಚ** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುವುದು.

ರಾಯೇ—**ಊಡಿದಂಯ್ಪದಾದ್ಯಪ್ಪುಮ್ರೈದ್ಯುಭ್ಯಃ** (ಪಾ. ಸೂ. ೬-೧-೧೭೧) ಎಂಬುದರಿಂದ ರೈ ಶಬ್ದದ ಮುಂದೆ ಇರುವ ಚತುರ್ಥೀ ವಿಭಕ್ತಿಯು ಉದಾತ್ತವಾಗುವುದು.

ರಭಸ್ವತಃ—**ರಭ ರಾಭಸ್ಯೇ**—ರಾಭಸ್ಯ ಎಂದರೆ ಕಾರ್ಯಾರಂಭ ಎಂದರ್ಥ. **ಸರ್ವಧಾತುಭ್ಯೋಽಸುನ್** (ಉ. ಸೂ. ೪-೬೨೮) ಎಂಬುದರಿಂದ ಅಸುನ್ ಪ್ರತ್ಯಯ ರಭಸ್ ಎಂದಾಗುವುದು. ಪ್ರತ್ಯಯವು ನಿತ್ಯವಾದ್ದರಿಂದ ಆದ್ಯುದಾತ್ತ. **ರಭಃ ಅಸ್ಯ ಅಸ್ತಿ** ಎಂದ ವಿಗ್ರಹ ಮಾಡಿದರೆ **ತದಸ್ಯಾಸ್ತ್ಯಸ್ಮಿನ್ನಿತಿಮತುಪ್** (ಪಾ.ಸೂ. ೫-೨-೯೪) ಎಂಬುದರಿಂದ ಮತುಪ್ ಪ್ರತ್ಯಯ, ರಭಸ್ ಎಂಬುದು ಅದುಪಧ-ಆದ್ದರಿಂದ **ಮಾದುಪಧಾಯಾಶ್ಚ ಮತೋ ರ್ವೋಯವಾದಿಭ್ಯಃ** (ಪಾ. ಸೂ. ೮-೨-೯) ಎಂಬುದರಿಂದ ಮಕಾರಕ್ಕೆ ವಕಾರ. **ಸ್ವಾದ್ಯಿಷ್ಣರ್ವನಾಮಸ್ಥಾನೇ** (ಪಾ. ಸೂ. ೧-೪-೧೭) ಕ ಪ್ರತ್ಯಯಾವಧಿಕಾಸರ್ವನಾಮಸ್ಥಾನ ಸ್ವಾದಿಪ್ರತ್ಯಯಾವ್ಯವಹಿತ ಪೂರ್ವದಲ್ಲಿರುವುದು ಪದ ಸಂಜ್ಞೆಯನ್ನು ಹೊಂದುವುದು ಎಂದು ವಿಹಿತವಾದ ಪದಸಂಜ್ಞೆಯು **ತಸೌಮತ್ವರ್ಥೇ** (ಪಾ.ಸೂ. ೧-೪-೧೯) ಮತ್ವರ್ಥ ಪ್ರತ್ಯಯಪರದಲ್ಲಿರುವಾಗ ತಕಾರಾಂತ ಸಕಾರಾಂತ ಶಬ್ದಗಳು ಭ ಸಂಜ್ಞೆಯನ್ನು ಹೊಂದುವುವು ಎಂದು ವಿಹಿತವಾದ ಭ ಸಂಜ್ಞೆಯಿಂದ ಬಾಧಿತವಾಗುವುದು. ಆದರೆ ಎರಡು ಸಂಜ್ಞೆಗಳಿಗೂ ಬಾಧ್ಯಬಾಧಕಭಾವ ಬೇಡ, ಸಮಾವೇಶವೇ ಇರಲಿ ಎನ್ನಲಾಗುವುದಿಲ್ಲ. ಏಕೆಂದರೆ **ಆಕಡಾರಾದೇಕಾಸಂಜ್ಞಾ** (ಪಾ. ಸೂ- ೧-೪-೧) ಇಲ್ಲಿಂದ ಆರಂಭಿಸಿ **ಕಡಾರಾಃಕರ್ಮಧಾರಯೇ** (ಪಾ. ಸೂ. ೨-೪-೩೮) ಎಂಬ ಸೂತ್ರದವರೆಗೆ ವಿಹಿತವಾದ ಸಂಜ್ಞೆಗಳಲ್ಲಿ ಪರವಾದುದೂ ಅನವಕಾಶವಾದುದೂ ಆದ ಒಂದೇ ಸಂಜ್ಞೆ ಬರುವುದು ಎಂಬುದರಿಂದ ಪರವಾದ ಭ ಸಂಜ್ಞೆಯಿಂದ ಪದಸಂಜ್ಞೆಗೆ ಬಾಧವು ಬರುವುದು. ಹೀಗೆ ಪದಸಂಜ್ಞೆ ಇಲ್ಲದೇ ಇರುವುದರಿಂದ ಪದಸಂಜ್ಞಾನಿಮಿತ್ತಕವಾದ ರುತ್ವಾದಿ ಕಾರ್ಯಗಳು ಬರುವುದಿಲ್ಲ.

ತುವಿದ್ಯುಮ್ನ—ತುವಿ-(ಹೆಚ್ಚಾದ) ದ್ಯುಮ್ನಂ (ಧನವು) ಯಸ್ಯಸಃ (ಯಾರಿಗೆ ಇದೆಯೋ ಅವನು) ಎಂದು ಬಹುವ್ರೀಹಿಸಮಾಸ, ಇದು ಆಮಂತ್ರಿತವಾದ್ದರಿಂದ ಆರನೇ ಅಧ್ಯಾಯಗತ ಸೂತ್ರದಿಂದ ಆಮಂತ್ರಿತನಿಮಿತ್ತಕವಾದ ಆದ್ಯುದಾತ್ತ ಬರುವುದು.

ಯಶಸ್ವತಃ—ಯಶಃ ಅಸ್ಯ ಅಸ್ತಿ ಎಂದು ವಿಗ್ರಹಮಾಡಿದಾಗ ಮತಪ್ ಪ್ರತ್ಯಯ, ಮಕಾರಕ್ಕೆ ವಕಾರ ಇವು ರಭಸ್ವತಃ ಎಂಬಲ್ಲಿ ಹೇಳಿದಂತೆ ಬರುವುವು. ಯಶಸ್ ಎಂಬುದರ ಕೊನೆಯಲ್ಲಿ ಅಸ್ ಇರುವುದು ಆದ್ದರಿಂದ **ಅಸ್ಮಾಯಾ ಮೇಧಾಸ್ರಜೋನಿನಿಃ** (ಪಾ. ಸೂ. ೫-೨-೧೨೧) ಅಸಂತವಾದ ಶಬ್ದ, ಮಾಯಾ, ಮೇಧಾ, ಸ್ರಜ್ ಶಬ್ದಗಳು ಇವುಗಳ ಮುಂದೆ ವಿನ್ ಪ್ರತ್ಯಯ ಬರುವುದು ಎಂದು ವಿಶೇಷವಿಹಿತವಾದ ವಿನ್, ವಿಧಿಯಿಂದ ಮತುಪ್ ವಿಧಿಗೆ ಸಾಮಾನ್ಯಸ್ಯ ವಿಶೇಷಣ ಬಾಧಃ, ಸಾಮಾನ್ಯ ಶಾಸ್ತ್ರಕ್ಕೆ ವಿಶೇಷ ಶಾಸ್ತ್ರದಿಂದ ಬಾಧವು ಉಂಟು ಎಂಬುದರಿಂದ ಬಾಧ ಬರಲಿ ಎಂದು ಶಂಕೆಗೆ ಅವಕಾಶ ಉಂಟು. ಆದರೆ **ಈ** ಸೂತ್ರದಲ್ಲಿ **ಕೇಶಾದ್ವೋಽನ್ಯತರಸ್ಯಾಮ್** (ಪಾ. ಸೂ. ೫-೨-೧೧೯) ಎಂಬ ಸೂತ್ರದಿಂದ ' ಅನ್ಯತರಸ್ಯಾಮ್ ' ಎಂಬ ಪದವನ್ನು ಅನುವೃತ್ತಿ ಮಾಡಿಕೊಳ್ಳಬೇಕು. ಅನ್ಯತರಸ್ಯಾಮ್, ಎಂಬುದಕ್ಕೆ ವಿಕಲ್ಪ ಎಂದು ಅರ್ಥ. ಏನಂಜ ಅಸ್ಮಾಯಾ, ಇತ್ಯಾದಿ ಸೂತ್ರಕ್ಕೆ ವಿಕಲ್ಪದಿಂದ ವಿನ್ ಬರುವುದು ಎಂದು ಅರ್ಥವೇರ್ಪಡುವುದು, ವಿನ್ವಿಧಿಯು ವಿಕ

ಲ್ಪವಾದ್ದರಿಂದ ವಿನ್ ಬರದೇ ಇರುವಪಕ್ಷದಲ್ಲಿ ಮತುಪ್ ಬರುವುದು. ಆದ್ದರಿಂದ ವಿನ್ ಪ್ರತ್ಯಯವು ಮತುಪ್ಪಿಗೆ ಬಾಧಕವಾಗುವುದಿಲ್ಲ. ಆದರೆ **ವಿಕಗೋಪೂರ್ವಾಟ್ಖಞ್ನಿತ್ಯಮ್** (ಪಾ. ಸೂ. ೫-೨-೧೧೪) ಎಂಬ ಸೂತ್ರದಲ್ಲಿ ನಿತ್ಯಮ್ ಎಂದು ಇರುವುದರಿಂದ ಅನ್ಯತರಸ್ಯಾಂ ಎಂಬುದಕ್ಕೆ ಅನುವೃತ್ತಿವಿಚ್ಛೇದ ಬರುವುದು. ಆದರೂ **ತಸೌಮತ್ಪರ್ಥೇ** (ಪಾ. ಸೂ. ೧-೪-೧೯) ಎಂಬ ಸೂತ್ರದಲ್ಲಿ ಯಶಸ್ವೀ ಯಶಸ್ವಾನ್ ಎಂದು ಮಹಾಭಾಷ್ಯಕಾರರು ಮಹಾಭಾಷ್ಯದಲ್ಲಿ ಉದಹರಿಸಿರುವರು. ಅನ್ಯತರಸ್ಯಾಂ ಎಂಬುದಕ್ಕೆ ಅನುವೃತ್ತಿ ಇಲ್ಲದೇ ಇದ್ದರೆ ಈ ಎರಡು ರೂಪಗಳು ಸಿದ್ಧವಾಗಲಾರವು. ಆದ್ದರಿಂದ ವಿಚ್ಛಿನ್ನವಾದಾಗ್ಯೂ ಅನ್ಯತರಸ್ಯಾಂ ಎಂಬುದು ಅನುವೃತ್ತವಾಗುವುದು ಎಂದು ಇಟ್ಟುಕೊಳ್ಳಬೇಕು. ಇದೇಪ್ರಕಾರ ಎಲ್ಲೆಡೆಗಳಲ್ಲಿ ಅರ್ಥವಾಗುವುದರಿಂದ ಮತುಪ್ಪಿಗೆ ಯಾವ ಪ್ರತ್ಯಯವೂ ಬಾಧಕವಾಗುವುದಿಲ್ಲ. ವಿಶೇಷ ವಿಹಿತವಾದ ಪ್ರತ್ಯಯವೂ. ಅದು ಬಾರದ ಪಕ್ಷದಲ್ಲಿ ಮತುಪ್ಪೂ ಸಹ ಬರುವುದು. ಈ ಅಂಶವನ್ನು ಮತುಪಸ್ಸರ್ವತ್ರ ಸಮುಚ್ಚಯಾತ್ ಎಂದು ವೇದಭಾಷ್ಯದಲ್ಲಿ ಸಂಗ್ರಹವಾಗಿ ಹೇಳಿರುವರು. ತತ್ತ್ವಬೋಧಿನೀಕಾರರು ಅಸ್ಮಾಯಾ ಎಂಬ ಸೂತ್ರದಲ್ಲಿ **ಹೃದಯೋಚ್ಚಾಲುಜನ್ಯ ತರಸ್ಯಾಮ್** ಎಂಬ ವಾರ್ತಿಕ ವ್ಯಾಖ್ಯಾನಕಾಲದಲ್ಲಿ **ಮತುಸ್ ಸರ್ವತ್ರ ಸಮುಚ್ಚೀಯತ ಏವ** ಎಂದಿರುವರು. **ಕೇಶಾದ್ವೋ-ಸ್ಯತರಸ್ಯಾಮ್** (ಪಾ.ಸೂ. ೫-೩-೧೦೯) ಎಂಬ ಸೂತ್ರದಲ್ಲಿ **ಛಂದಸೀವನಿಪೌಚ, ಛಂದಸೀ ವನಿಪೌ ಚ ವಕ್ತವ್ಯೌ ವಕ್ತವ್ಯ ಮತುಪ್ ಚ** ಎಂಬ ಮಹಾಭಾಷ್ಯ ವ್ಯಾಖ್ಯಾನ ಕಾಲದಲ್ಲಿ **ಅನ್ಯತರಸ್ಯಾಂಗ್ರಹಣಸ್ಯ ಸರ್ವತ್ರಸಂಬಂಧಾನ್ಮತುಬಪಿ ಭವತೀತಿ ಮತ್ವಾಹ ವಕ್ತವ್ಯಮತುಪ್ಚೇತಿ** ಎಂದು ಕೈಯಟಕಾರರು ಸ್ಪಷ್ಟಪಡಿಸಿರುವರು. ಆದ್ದರಿಂದ ಯಶಸ್ ಎಂಬುದರ ಮುಂದೆ ಮತುಪ್ ಪ್ರತ್ಯಯ ಬರಲು ಯಾವ ಬಾಧಕವೂ ಇರುವುದಿಲ್ಲ. ಯಶಸ್ ಶಬ್ದವು ನಪುಂಸಕಲಿಂಗ. ಆದ್ದರಿಂದ **ನಬ್ವಿಷಯೇಸ್ಯಾನಿಸಂತಸ್ಯ** (ಫಿ ಸೂ. ೨೬) ಎಂಬುದರಿಂದ ಆದ್ಯುದಾತ್ತ. ಮತುಪ್ ಪ್ರತ್ಯಯವು ಪಿತ್ತಾದ್ದರಿಂದ ಅನುದಾತ್ತ. ಆದ್ದರಿಂದ ಯಸಸ್ ಎಂಬಲ್ಲಿ ಆದ್ಯುದಾತ್ತನೇ ನಿಲ್ಲುವುದು ॥ ೬ ॥

॥ ಸಂಹಿತಾಪಾಠಃ ॥

ಸಂ ಗೋಮದಿಂದ್ರ ವಾಜವದಸ್ಮೇ ಪೃಥು ಶ್ರವೋ ಬೃಹತ್ ॥
ವಿಶ್ವಾಯುರ್ಧೇಹ್ಯಕ್ಷಿತಂ ॥ ೭ ॥

॥ ಪದಪಾಠಃ ॥

ಸಂ । ಗೋಽಮತ್ । ಇಂದ್ರ । ವಾಜಽವತ್ । ಅಸ್ಮೇ ಇತಿ । ಪೃಥು ।
ಶ್ರವಃ । ಬೃಹತ್ ॥
ವಿಶ್ವಽಆಯುಃ । ಧೇಹಿ । ಅಕ್ಷಿತಂ ॥ ೭ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಶ್ರವೋ ಧನಮಸ್ಮೇ ಸಂ ಧೇಹಿ । ಅಸ್ಮಭ್ಯಂ ಸಮ್ಯಕ್ ಪ್ರಯಚ್ಛ । ಕೀದೃಶಂ ಶ್ರವಃ । ಗೋಮತ್ ಬಹ್ವೀಭಿರ್ಗೋಭಿರುಪೇತಂ ವಾಜವತ್ ಪ್ರಭೂತೇನಾನ್ನೇನೋಪೇತಂ ಪೃಥು ಪರಿಮಾಣೇನಾಧಿಕಂ ಬೃಹತ್ ಗುಣೈರಧಿಕಂ ವಿಶ್ವಾಯುಃ ಕೃತ್ಸ್ನಾಯುಷ್ಯಕಾರಣಂ ಅಕ್ಷಿತಂ ವಿನಾಶರಹಿತಂ ಗೋಮತ್ । ವಾಜವತ್ । ಉಭಯತ್ರ ಮತುಪೋಽನುದಾತ್ತತ್ವಾತ್ಪ್ರಾತಿಪದಿಕಸ್ವರ ಏವ । ವಾಜಶಬ್ದೋ ವೃಷಾದಿರಾದ್ಯುದಾತ್ತಃ । ಅಸ್ಮೇ । ಅಸ್ಮಚ್ಛಬ್ದಾಚ್ಚತುರ್ಥೀಬಹುವಚನಸ್ಯ ಸುಪಾಂ ಸುಲುಗಿತ್ಯಾದಿನಾ ಶೇ ಆದೇಶಃ । ಶಿತ್ತ್ವಾತ್ಸರ್ವಾದೇಶಃ । ಪ್ರಾತಿಪದಿಕಸ್ವರೇಣಾಂತೋದಾತ್ತತ್ವಂ । ಶೇಷೇ ಲೋಪಷ್ಟಿಲೋಪ ಇತಿ ಪಕ್ಷೇ । ಪಾ. ೭-೨-೯೦ । ಉದಾತ್ತನಿವೃತ್ತಿಸ್ವರೇಣ ವಿಭಕ್ತೇರುದಾತ್ತತ್ವಂ । ಅಂತ್ಯಲೋಪಪಕ್ಷೇಽತೋ ಗುಣ ಇತಿ ಪರರೂಪ ಏಕಾದೇಶ ಉದಾತ್ತೇನೋದಾತ್ತ ಇತ್ಯುದಾತ್ತತ್ವಂ । ಪೃಥು । ಪೃಥ ಪ್ರಖ್ಯಾನೇ । ಪೃಥಿವ್ಯಾದಿಭ್ಯಶ್ಚಾಂ ಸಂಪ್ರಸಾರಣಂ ಸಲೋಪಶ್ಚ । ಉ. ೧-೨೯ । ಇತಿ ಕುಪ್ರತ್ಯಯಃ । ರೇಫಸ್ಯ ಸಂಪ್ರಸಾರಣಮೃಕಾರಃ । ಪರಪೂರ್ವತ್ವಂ । ಕೋಃ ಕಿತ್ತ್ವಾನ್ನ ಲಘೂಪಧಗುಣಃ । ಶ್ರೂಯತ ಇತಿ ಶ್ರವೋ ಧನಂ । ಅಸುನ್ಪ್ರತ್ಯಯಃ । ನಿತ್ತ್ವಾದಾದ್ಯುದಾತ್ತಃ । ಬೃಹತ್ । ಪ್ರಾತಿಪದಿಕಸ್ವರಃ । ವಿಶ್ವಾಯುಃ । ವಿಶ್ವಮಾಯುರ್ಯಸ್ಮಿನ್ಪದೇ । ವಿಶ್ವಶಬ್ದಃ ಕ್ವನ್ಪ್ರತ್ಯಯಾಂತಃ । ತಸ್ಯ ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವೇ ಪ್ರಾಪ್ತೇ ಪರಾದಿಶ್ಚಂದಸಿ ಬಹುಲಮಿತಿ ಪೂರ್ವಪದಾಂತೋದಾತ್ತತ್ವಂ । ಏಕಾದೇಶ ಉದಾತ್ತೇನೋದಾತ್ತ ಇತ್ಯುದಾತ್ತಃ । ಅಕ್ಷಿತಂ । ಕ್ಷಿ ಕ್ಷಯ ಇತ್ಯಸ್ಮಾದಂತರ್ಣೀತಣ್ಯರ್ಥಾತ್ಕರ್ಮಣಿ ನಿಷ್ಠಾ । ತೇನ ಸ್ಯದರ್ಥತ್ವಾನ್ನಿಷ್ಠಾಯಾಮಣ್ಯದರ್ಥೇ । ಪಾ. ೬-೪-೬೦ । ಇತಿ ನ ದೀರ್ಘತ್ವಂ । ಅತ ಏವ ಕ್ಷಿಯೋ ದೀರ್ಘಾತ್ । ಪಾ. ೮-೨-೪೬ । ಇತಿ ನ ನಿಷ್ಠಾನತ್ವಂ । ನಞ್ಸನೂಸೇತ್ಯವ್ಯಯಪೂರ್ವಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

(ಹೇ)ಇಂದ್ರ—ಎಲೈ ಇಂದ್ರನೇ । ಅಸ್ಮೇ—ನಮಗೆ । ಪೃಥು—ಬಹಳವಾದ । ಬೃಹತ್—ಗುಣದಲ್ಲಿ ಉತ್ತಮವಾದ । ಗೋಮತ್—ಗೋವುಗಳಿಂದ ಸಹಿತವಾದ (ಗೋರೂಪವಾದ) । ವಾಜವತ್—ಅನ್ನಸಹಿತವಾದ (ಅನ್ನರೂಪವಾದ, ಆಹಾರರೂಪವಾದ) । ವಿಶ್ವಾಯುಃ—ದೀರ್ಘಾಯುಸ್ಸಿಗೆ ಕಾರಣವಾದ । ಅಕ್ಷಿತಂ—ನಾಶರಹಿತವಾದ । ಶ್ರವಃ—ಧನವನ್ನು । ಧೇಹಿ—ಕೊಡುವವನಾಗು ॥

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ನಮಗೆ ಬಹಳ ಧನವನ್ನು ಕೊಡು. ಆ ಧನವು ಉತ್ತಮವಾಗಿಯೂ ಗೋವುಗಳು ಅಶ್ವಗಳು ಮೊದಲಾದ ಪಶುಸಂಪತ್ತಿನ ರೂಪದಲ್ಲಿಯೂ, ಅನ್ನಾಹಾರ ರೂಪದಲ್ಲಿಯೂ ಇರಬೇಕಲ್ಲದೆ ನಾವು ಬಹುಕಾಲ ಜೀವಿಸಿರುವುದಕ್ಕೆ ಸಾಧನಭೂತವಾಗಿಯೂ, ನಾಶರಹಿತನಾಗಿಯೂ ಇರಬೇಕು. ಇಂತಹ ಧನವನ್ನು ನಮಗೆ ಬಹು ಹೆಚ್ಚಾಗಿ ಕೊಡು.

English Translation

Grant us, Indra, wealth beyond measure or calculation, inexhaustible, the source of cattle, of food, of all life.

॥ ವಿಶೇಷವಿಷಯಗಳು ॥

ಗೋಮತ್—ಬಹ್ವೀಭಿರ್ಗೋಭಿರುಪೇತಂ । ಅಥವಾ ಗಾವೋ ಯಸ್ಮಿನ್ ಸಂತಿ ತತ್, ಗೋಮತ್ ಬಹುವಾದ ಗೋವುಗಳಿಂದ ಕೂಡಿದ ಎಂದರೆ ಗೋರೂಪವಾದ ಪಶುಸಂಪತ್ತು ಎಂದರ್ಥವು.

ವಾಜವತಃ—ಅನ್ನ ಮೊದಲಾದ ಆಹಾರ ರೂಪದಲ್ಲಿರುವ.

ಅಸ್ಮೇ—ಎಂದರೆ ಅಸ್ಮಭ್ಯಂ ಎಂದರ್ಥವು. ಋಗ್ವೇದದಲ್ಲಿ ಅನೇಕ ಕಡೆ ಅಸ್ಮಭ್ಯಂ ಎಂಬ ಶಬ್ದಕ್ಕೆ ಬದಲಾಗಿ ಅಸ್ಮೇ ಎಂಬ ಶಬ್ದಪ್ರಯೋಗವಿರುವುದು.

ಶ್ರವಃ—ಮಘಂ ಮೊದಲಾದ ಇಪ್ಪತ್ತೈಂಟು ಧನನಾಮಗಳ ಮಧ್ಯದಲ್ಲಿ ಶ್ರವಃ ಶಬ್ದವು ಪಠಿತವಾಗಿದೆ. (ನಿ. ೩-೯). **ಬೃಹತ್**—ಶ್ರೇಷ್ಠವಾದ, ಸಾರಯುಕ್ತವಾದ, ಗುಣದಲ್ಲಿ ಉತ್ತಮವಾದ.

ವಿಶ್ವಾಯುಃ—**ಕೃತ್ಸ್ನಾಯುಸ್ಯಕಾರಣಂ** ಎಂದರೆ ಬಹುಕಾಲಪರಿಯಂತ ಜೀವಿಸಲು ಸಾಧನಭೂತವಾದ ದ್ರವ್ಯವು ಎಂದು ಭಾಷ್ಯಕಾರರು ಅರ್ಥಮಾಡಿರುವರು. ಹೀಗೆ ಅರ್ಥಮಾಡುವುದಕ್ಕಿಂತಲೂ ಎಂದರೆ **ವಿಶ್ವಾಯುಃ** ಎಂಬ ಶಬ್ದವನ್ನು **ಶ್ರವಃ** (ಧನವು) ಎಂಬ ಶಬ್ದಕ್ಕೆ ವಿಶೇಷಣವನ್ನಾಗಿ ಉಪಯೋಗಿಸುವುದಕಿಂತಲೂ **ವಿಶ್ವಾಯುಃ**—ದೀರ್ಘಾಯುಸ್ಸನ್ನು, ಬಹುಕಾಲ ಜೀವಿಸಿರುವುದನ್ನು ಎಂಬ ಅರ್ಥದಲ್ಲಿ ವಿಶೇಷ್ಯಪದವನ್ನಾಗಿಯೇ ಉಪಯೋಗಿಸುವುದೇ ಯುಕ್ತವಾಗಿರುವುದು. ಸ್ಕಂದಸ್ವಾಮಿಯ ಅಭಿಪ್ರಾಯವೂ ಇದೇರೀತಿ ಇರುವುದು.

ಅಕ್ಷಿತಂ—ನಾಶರಹಿತವಾದ, ಎಂದರೆ ಬಹು ಹೆಚ್ಚಾದ, inexhaustible ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಗೋಮತ್, ವಾಜವತ್—ಗೌಃ ಅಸ್ಯಾಸ್ತೀತಿ ಗೋಮತ್. ವಾಜಃ ಅಸ್ಯ ಅಸ್ತೀತಿ ವಾಜವತ್, ಈ ಎರಡು ಸ್ಥಳದಲ್ಲಿ ಮತುಪ್ ಪಿತ್ತಾದ್ದರಿಂದ ಅನುದಾತ್ತವಾಗುವ ಕಾರಣ ಪ್ರಾತಿಪದಿಕಸ್ವರವೇ ನಿಲ್ಲುವುದು. ವಾಜ ಶಬ್ದವು ವೃಷಾದಿಯಲ್ಲಿರುವುದರಿಂದ **ವೃಷಾದೀನಾಂ ಚ** (೬-೧-೨೦೩) ಎಂಬುದರಿಂದ ಆದ್ಯುದಾತ್ತ.

ಅಸ್ಮೇ—ಅಸ್ಮದ್ ಶಬ್ದದಮುಂದೆ ಚತುರ್ಥೀಬಹುವಚನ ಭ್ಯಸ್ ಪ್ರತ್ಯಯ. ಅದಕ್ಕೆ **ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಇತ್ಯಾದಿ ಸೂತ್ರದಿಂದ ಶೇ ಆದೇಶ. ಶೇ ಎಂಬಲ್ಲಿ ಶ್‌ಗೆ **ಲಶಕ್ವತೇದ್ಧಿತೇ** (ಪಾ. ಸೂ. ೧-೩-೮) ಎಂಬುದರಿಂದ ಇತ್ಸಂಜ್ಞೆ. ಶೇ ಎಂಬುದು ಶಿತ್ತು. ಆದ್ದರಿಂದ **ಆನೇಕಾಲ್ ಶಿತ್ಸರ್ವಸ್ಯ** (ಪಾ. ಸೂ. ೧-೧-೫೫) ಎಂಬುದರಿಂದ ಭ್ಯಸ್ ಎಂಬುದರ ಪೂರ್ಣಸ್ಥಾನದಲ್ಲಿ ಬರುವುದು. **ಅಸ್ಮದ್** ಎಂಬುದು ಪ್ರಾತಿಪದಿಕಸ್ವರದಿಂದ ಅಂತೋದಾತ್ತ. **ಶೇಷೇ ಲೋಪಃ** (ಪಾ. ಸೂ. ೭-೨-೯೦) ಈ ಸೂತ್ರಕ್ಕೆ ಟ ಲೋಪ ಬರುವುದು ಎಂದು ಅರ್ಥವಾದಾಗ ಅಸ್ಮದ್ ಎಂಬುದರ ಅದ್ ಗೆ ಲೋಪ. ಈಗ **ಅನುದಾತ್ತೇಸ್ಯ ಚೆಯೆತ್ರೋ**

ದಾತ್ತಲೋಪಃ (ಪಾ ಸೂ. ೬-೧-೧೬೧) ಎಂಬ ಉದಾತ್ತನಿವೃತ್ತಿಸ್ವರದಿಂದ ಏ ಎಂಬುದು ಉದಾತ್ತ. **ಶೇಷೇ-ಲೋಪಃ** ಈ ಸೂತ್ರಕ್ಕೆ ಕೊನೆಯ ವರ್ಣಕ್ಕೆ ಲೋಪ ಬರುವುದು ಎಂದು ಅರ್ಥವಾದಾಗ ಅಸ್ಮದ್ ಎಂಬಲ್ಲಿ ದ-ಕಾರಕ್ಕೆ ಲೋಪ. ಅಸ್ಮ+ಏ ಎಂದಿರುವಾಗ **ಅತೋಗುಣೇ** (ಪಾ. ಸೂ. ೬-೧-೯೭) ಎಂಬುದರಿಂದ ಪರರೂಪವು ಏಕಾದೇಶವಾಗಿ ಬರುವುದು. ಈ ಏಕಾದೇಶವು **ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮-೪-೫) ಎಂಬುದರಿಂದ ಉದಾತ್ತ.

ಪೃಥು ಪ್ರಥಪ್ರಖ್ಯಾನೇ— ಧಾತು. **ಪೃಥಿಮ್ರದಿಭ್ರಸ್ಜಾಂ ಸಂಪ್ರಸಾರಣಂ ಸಲೋಪಶ್ಚ** (ಉ. ಸೂ. ೧-೨೮) ಪ್ರಥಪ್ರಖ್ಯಾನೇ, ಮ್ರದಮರ್ದನೇ, ಭ್ರಸ್ಜಪಾಕೇ ಈ ಮೂರು ಧಾತುಗಳ ಮುಂದೆ ಕು ಪ್ರತ್ಯಯ ಬರುವುದು. ಈ ಮೂರು ಧಾತುಗಳಿಗೆ ಸಂಪ್ರಸಾರಣವೂ, ಭ್ರಸ್ಜಧಾತುವಿನ ಸಕಾರಕ್ಕೆ ಲೋಪವೂ ಸಹ ಬರುವುದು ಎಂಬುದರಿಂದ ಪೃಥ್ ಧಾತುವಿಗೆ ಸಂಪ್ರಸಾರಣದಿಂದ ರೇಫಕ್ಕೆ ಋಕಾರ ಕು ಪ್ರತ್ಯಯಗಳು ಬಂದರೆ ಪೃ+ಥ್+ಉ **ಸಂಪ್ರಸಾರಣಾಚ್ಚ** (ಪಾ. ಸೂ. ೬-೧-೧೦೮) ಎಂಬುದರಿಂದ ಪೂರ್ವರೂಪ ಬಂದರೆ ಪೃಥು ಎಂದಾಗುವುದು. ಕು ಪ್ರತ್ಯಯವು ಕಿತ್ತು. ಆದ್ದರಿಂದ **ಪುಗಂತ ಲಘೂಪಧಸ್ಯ ಚ** (ಪಾ. ಸೂ. ೭-೩-೮೬) ಎಂಬುದರಿಂದ ಲಘೂಪಧಗುಣ ಬರುವುದಿಲ್ಲ.

ಶ್ರವಃ—ಶ್ರೂಯತೇ ಇತಿ ಶ್ರವಃ, ಧನ ಎಂದರ್ಥ. ಶ್ರು ಧಾತುವಿನ ಮುಂದೆ **ಸರ್ವಧಾತುಭ್ಯೋಽಸುನ್** ಎಂಬುದರಿಂದ ಅಸುನ್ ಪ್ರತ್ಯಯ. **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಶ್ರುವಿನ ಉಕಾರಕ್ಕೆ ಗುಣ ಓಕಾರ. **ಏಚೋಯವಾಯಾವಃ** (ಪಾ. ಸೂ. ೬-೧-೭೮) ಎಂಬುದರಿಂದ ಅವ್ ಆದೇಶ ಶ್ರವಸ್. ಇದರ ಮುಂದೆ ಬರುವ ದ್ವಿತೀಯಾ ಏಕವಚನ ಅಮ್ ಪ್ರತ್ಯಯಕ್ಕೆ **ಸ್ವ-ಮೋರ್ನಪುಂಸಕಾತ್** (ಪಾ. ಸೂ. ೭-೧-೨೩) ನಪುಂಸಕಲಿಂಗದ ಶಬ್ದದ ಮುಂದೆ ಇರುವ ಸು ಅಮ್ ಇವುಗಳಿಗೆ ಲುಕ್ ಬರುವುದು ಎಂಬುದರಿಂದ ಲುಕ್ (ಲೋಪ) ರುತ್ವವಿಸರ್ಗಗಳು, ಶ್ರವಃ ಎಂದಾಗುವುದು. ಪ್ರತ್ಯಯವು ನಿತ್ತಾದ್ದರಿಂದ ಆದ್ಯುದಾತ್ತ.

ಬೃಹತ್--ಪ್ರಾತಿಪದಿಕಸ್ವರ.

ವಿಶ್ವಾಯುಃ—ವಿಶ್ವಂ ಆಯುರ್ಯಸ್ಮಿನ್ ಧನೇ ತತ್ ವಿಶ್ವಶಬ್ದವು **ಆಶೂಪ್ರುಷಿ** (ಉ.ಸೂ. ೧-೧೪೯) ಇತ್ಯಾದಿ ಸೂತ್ರದಿಂದ ಕ್ವನ್ ಪ್ರತ್ಯಯಾಂತ. ಪ್ರತ್ಯಯವು ನಿತ್ತಾದ್ದರಿಂದ ವಿಶ್ವ ಎಂಬುದು ಆದ್ಯುದಾತ್ತ. ಬಹುವ್ರೀಹಿಸಮಾಸದಲ್ಲಿ ಬಹುವ್ರೀಹೌ **ಪ್ರಕೃತ್ಯಾ ಪೂರ್ವಪದಮೋ** (ವಾ. ಸೂ. ೬-೩-೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಪ್ರಾಪ್ತವಾದರೆ **ಪರಾದಿಶ್ಚಂದಸಿ ಬಹುಲಂ** (ಪಾ. ಸೂ ೬-೨-೧೯೯) ಎಂಬುದರಿಂದ ಪೂರ್ವಪದಕ್ಕೆ ಅಂತೋದಾತ್ತ ಸ್ವರ ಬರುವುದು. ವಿಶ್ವ+ಆಯುಃ ಎಂಬಲ್ಲಿ **ಸವರ್ಣದೀರ್ಘೆ**ದಿಂದ ಏಕಾದೇಶವಾಗಿ ಬಂದ ಆ ಎಂಬುದು **ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮-೪-೫) ಎಂಬುದರಿಂದ ಉದಾತ್ತ.

ಅಕ್ಷಿತಂ—ಕ್ಷಿ ಕ್ಷಯೇ ಎಂಬ ಅಂತರ್ಭಾವಿತಣಿಚ್ ಪ್ರತ್ಯಯಾರ್ಥಕವಾದ ಧಾತುವಿನ ಮುಂದೆ ಕರ್ಮಣಿ **ಕ್ತ** ಪ್ರತ್ಯಯ. ಕರ್ಮಾರ್ಥವು ಣಿತ್ ಪ್ರತ್ಯಯದ ಅರ್ಥ. ಆದ್ದರಿಂದ **ನಿಷ್ಠಾಯೋಮಣ್ಯದರ್ಥೇ** (ಪಾ. ಸೂ. ೬-೪-೬೦) ಎಂಬಲ್ಲಿ ಅಣಾದರ್ಥೇ ಎಂದು ನಿಷೇಧವಿರುವುದರಿಂದ ದೀರ್ಘ ಬರುವುದಿಲ್ಲ. ದೀರ್ಘ ಬರದೇ ಇರುವುದರಿಂದಲೇ **ಕ್ಷಿಯೋದೀರ್ಘಾತ್** (ಪಾ. ಸೂ. ೮-೨-೪೬) ಎಂಬುದರಿಂದ ಕ್ತ ಪ್ರತ್ಯಯದ ತಕಾರಕ್ಕೆ ನಕಾರ ಬರುವುದಿಲ್ಲ. ನಞ್ ನೊಂದಿಗೆ ನಞ್‌ಸಮಾಸ ಬಂದರೆ **ತತ್ಪುರುಷೇ ತುಲ್ಯಾರ್ಥ** (ಪಾ. ಸೂ. ೬-೨-೨) ಎಂಬುದರಿಂದ ಅವ್ಯಯಪೂರ್ವಪದಪ್ರಕೃತಿಸ್ವರ ಬರುವುದು. ॥ ೬ ॥

॥ ಸಂಹಿತಾಪಾಠಃ ॥

ಅಸ್ಮೇ ಧೇಹಿ ಶ್ರವೋ ಬೃಹದ್ದ್ಯುಮ್ನಂ ಸಹಸ್ರಸಾತಮಂ ।
ಇಂದ್ರ ತಾ ರಥಿನೀರಿಷಃ ॥ ೪ ॥

॥ ಪದಪಾಠಃ ॥

ಅಸ್ಮೇ ಇತಿ । ಧೇಹಿ । ಶ್ರವಃ । ಬೃಹತ್ । ದ್ಯುಮ್ನಂ । ಸಹಸ್ರಸಾತಮಂ ॥
ಇಂದ್ರ । ತಾಃ । ರಥಿನೀಃ । ಇಷಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಬೃಹಚ್ಛ್ರವೋ ಮಹತೀಂ ಕೀರ್ತಿಮಸ್ಮೇ ಧೇಹಿ । ಅಸ್ಮಭ್ಯಂ ಪ್ರಯಚ್ಛ । ತಥಾ ಸಹಸ್ರಸಾತಮಮತಿಶಯೇನ ಸಹಸ್ರಸಂಖ್ಯಾದಾನೋಪೇತಂ ದ್ಯುಮ್ನಂ ಧನಮಸ್ಮೇ ಧೇಹಿ । ತಥಾ ತಾ ವ್ರೀಹಿಯವಾದಿರೂಪೇಣ ಪ್ರಸಿದ್ಧಾ ರಥಿನೀರ್ಬಹುರಥೋಪೇತಾ ಇಷೋಽನ್ನಾನ್ಯಸ್ಮೇ ಧೇಹಿ ॥ ಅಸ್ಮೇ ಸುಪಾಂ ಸುಲುಗಿತ್ಯಾದಿನಾ ಶೇ ಆದೇಶಃ । ಧೇಹಿ । ಘ್ವಸೋರೇದ್ಧಾವಭ್ಯಾಸಲೋಪಶ್ಚ । ಪಾ. ೬-೪-೧೧೯ ಇತ್ಯೇತ್ವಾಭ್ಯಾಸಲೋಪೌ । ಶ್ರೂಯತ ಇತಿ ಶ್ರವಃ । ಅಸುನೋ ನಿತ್ತ್ವಾದಾದ್ಯುದಾತ್ತತ್ವಂ । ಸಹಸ್ರಂ ಸುನುತೇ ದದಾತೀತಿ ಸಹಸ್ರಸಾಃ । ಷಣು ದಾನೇ । ಜನಸನಖನಕ್ರಮಗಮೋ ವಿಟ್ । ಪಾ- ೩-೨-೬೭ । ವಿಡ್ವನೋರನುನಾಸಿಕಸ್ಯಾತ್ । ಪಾ. ೬-೪-೪೧ । ಇತ್ಯಾಕಾರಾದೇಶಃ । ಧಾತುಸ್ವರೇಣಾಂತೋದಾತ್ತಃ । ಪುನಃ ಕೃದುತ್ತರಪದಪ್ರಕೃತಿಸ್ವರೇಣ ಸ ಏವ ಶಿಷ್ಯತೇ । ರಥಾ ಆಸಾಂ ಸಂತೀತಿ ರಥಿನ್ಯ ಇತಿ ಪ್ರತ್ಯಯಸ್ಯಾದ್ಯುದಾತ್ತತ್ವಂ । ಋನ್ನೇಭ್ಯೋ ಙೀಪ್ । ಪಾ. ೪-೧-೫ । ಸ ಚ ಪಿತ್ತ್ವಾದನುದಾತ್ತಃ । ಇಷೋ ಯೌಗಿಕತ್ವೇ ಧಾತುಸ್ವರಃ । ರೂಢತ್ವೇ ಪ್ರಾತಿಪದಿಕಸ್ವರಃ ॥

॥ ಪ್ರತಿಪದಾರ್ಥ ॥

(ಹೇ) ಇಂದ್ರ—ಎಲೈ ಇಂದ್ರನೇ । ಅಸ್ಮೇ—ನಮಗೆ । ಬೃಹತ್—ಬಹಳವಾದ । ಶ್ರವಃ—ಕೀರ್ತಿಯನ್ನೂ । ಸಹಸ್ರಸಾತಮಂ—ಸಾವಿರಾರು ಪಾಲು ಹೆಚ್ಚಾಗಿರುವ (ಅತಿಶಯವಾದ) । ದ್ಯುಮ್ನಂ—ಧನವನ್ನೂ । ರಥಿನೀಃ—ರಥ ಅಥವಾ ಗಾಡಿಗಳಲ್ಲಿ ತರಲ್ಪಡುವ । ತಾಃ—ವ್ರೀಹಿ, ಯವ ಮೊದಲಾದ ಧಾನ್ಯರೂಪದಿಂದಿರುವ । ಇಷಃ—ಅನ್ನವನ್ನೂ । ಧೇಹಿ—ಕೊಡು.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ನಮಗೆ ಅತಿಶಯವಾದ ಕೀರ್ತಿಯನ್ನೂ, ಸಾವಿರಗಟ್ಟಲೆ ಧನವನ್ನೂ, ಗಾಡಿಗಳ (ರಥಗಳ) ತುಂಬ ಧಾನ್ಯ ಮೊದಲಾದ ಆಹಾರವನ್ನೂ ಕೊಡು.

English Translation

O Indra, grant us great fame, and wealth acquired in a thousand ways and those (articles) of food (which are brought from the field) in carts.

॥ ವಿಶೇಷನಿಷಯಗಳು ॥

ಈ ಋಕ್ಕಿನ ಅರ್ಥವು ಸುಲಭವಾಗಿ ತಿಳಿಯುವಂತೆ ಇದೆ. ವಿಶೇಷವಾದ ತೊಡಕುಗಳೇನೂ ಇಲ್ಲ.

ಶ್ರವಃ—ಈ ಶಬ್ದಕ್ಕೆ ಯಾಸ್ಕರು ತಮ್ಮ ನಿರುಕ್ತದಲ್ಲಿ ಎರಡು ಮೂರು ವಿಧವಾದ ಅರ್ಥವನ್ನು ಕೊಟ್ಟಿರುವರು. **ಮಘಂ ರೇಕ್ಣಃ** ಮೊದಲಾದ ಇಪ್ಪತ್ತೈಂಟು ಧನನಾಮಗಳ ಮಧ್ಯದಲ್ಲಿ ಶ್ರವಃ ಎಂಬ ಶಬ್ದವು ಪಠಿತವಾಗಿರುವುದರಿಂದ ಇದಕ್ಕೆ ಧನವೆಂಬ ಅರ್ಥವೂ ಆಗುವುದು. (ನಿ ೩-೯) ಉತ ಸ್ಮೈನಂ (ಋ. ಸಂ. ೪-೩೮-೫) ಎಂಬ ಋಕ್ಕಿನ ಅರ್ಥವಿವರಣೆ ಮಾಡುವಾಗ **ಶ್ರವಶ್ಚಾಪಿ ಹೆಶುಮಚ್ಚೆ ಯೊಥಂ ಪ್ರಶಂಸಾಂ ಚೆ ಯೊಥಂ ಧನಂ ಚೆ ಯೊಥಂ ಚೇತಿ ವಾ**—ಎಂದರೆ ಶ್ರವಶಬ್ದಕ್ಕೆ ಪ್ರಶಂಸೆ (ಕೀರ್ತಿ) ಅಥವಾ ಧನವೆಂದೂ, (ನಿ ೪-೨೪) ಅಮನ್ಸಾತ್ಸ್ತೋಮಾನ್ (ಋ. ಸಂ. ೧೦-೬೭-೧) ಎಂಬ ಋಕ್ಕಿನ ನಿರುಕ್ತದಲ್ಲಿ **ಶ್ರವ ಇಚ್ಛಮಾನಃ** ಎಂಬ ಶಬ್ದಗಳಿಗೆ ಪ್ರಸಂಸಾಮಿಚ್ಛಮಾನಃ ಎಂದೂ (ನಿ ೯-೧೧). ಪ್ರವೋ ಮಹೇ ತುಂದಮಾನಾಯ (ಋ. ಸಂ. ೧೦-೫೦-೧) ಎಂಬ ಋಕ್ಕಿನ ಅರ್ಥವಿವರಣೆಯಲ್ಲಿ **ಶ್ರವಃ** ಎಂಬ ಶಬ್ದಕ್ಕೆ **ಮಹಚ್ಚೆ ಶ್ರವಣೀಯೆಂ ಯೆಶಃ** ಎಂದೂ ಅರ್ಥ ಮಾಡಿದಾರೆ (ನಿ. ೧೧-೧೦) ಇವಲ್ಲದೆ ಪ್ರಸಕ್ತವಾದ ಈ ಋಕ್ಕಿನಲ್ಲಿ ದ್ಯುಮ್ನಂ ಎಂಬ ಧನವಾಚಕಶಬ್ದದ ಪ್ರಯೋಗವಿರುವುದರಿಂದ ಶ್ರವಃ ಎಂಬ ಶಬ್ದಕ್ಕೆ ಧನವೆಂಬ ಅರ್ಥವನ್ನು ಹೇಳಿದಲ್ಲಿ ದ್ವಿರುಕ್ತಿದೋಷವುಂಟಾಗುವುದೆಂದು ಕೀರ್ತಿ ಎಂಬ ಅರ್ಥವನ್ನು ಹೇಳಿರುವುದು ಯುಕ್ತವಾಗಿಯೇ ಇದೆ.

ಸಹಸ್ರಸಾತಮಂ—ಸಹಸ್ರಂ ಸನುತೇ ದದಾತೀತಿ ಸಹಸ್ರಸಾಃ । ಷಣು ದಾನೇ । ಎಂದರೆ ಷಣು ಧಾತುವಿಗೆ ಕೊಡುವುದು ಎಂದರ್ಥವು. ಆದುದರಿಂದ ಸಹಸ್ರಸಾತಮಂ ಎಂಬ ಶಬ್ದಕ್ಕೆ ಸಾವಿರಗಟ್ಟಲೆ ಎಂದರೆ ಅತಿಶಯವಾಗಿ, ಬಹಳವಾಗಿ ಕೊಡುವ ಎಂದರ್ಥವು.

ತಾಃ—ಸ್ತ್ರೀಲಿಂಗ ತಚ್ಛಬ್ದದ ದ್ವಿತೀಯಾಬಹುವಚನಾಂತವಾದ ಈ ಶಬ್ದವು ಇಷಃ ಎಂಬ ಶಬ್ದಕ್ಕೆ ವಿಶೇಷಣವು. ಈ ಋಕ್ಕಿನಲ್ಲಿ ಈ ಶಬ್ದದ ಅವಶ್ಯಕತೆಯೇನೂ ಕಂಡುಬರುವುದಿಲ್ಲ. ಪ್ರಾಯಶಃ ಪಾದಪೂರಣಕ್ಕಾಗಿ ಉಪಯೋಗಿಸಿರಬಹುದು.

ರಥಿನೀಃ—ರಥಾ ಆಸಾಂ ಸಂತೀತಿ ರಥಿನ್ಯಃ—ರಥಸಂಬಂಧವಾದ, ರಥಗಳಲ್ಲಿ ಅಥವಾ ಗಾಡಿಗಳಲ್ಲಿ ತುಂಬಿ ತರುವಷ್ಟು ಎಂದರೆ ಬಹು ಹೆಚ್ಚಾದ ಎಂದರ್ಥವು. ಒಬ್ಬ ಮನುಷ್ಯನು ತಲೆಯಮೇಲೆ ಹೊತ್ತು ತರುವ ಧಾನ್ಯವು ಅಷ್ಟೇನೂ ಹೆಚ್ಚಾಗಿರುವುದಿಲ್ಲ. ಗಾಡಿಯಲ್ಲಿ ಇನ್ನೂ ಹೆಚ್ಚಾಗಿ ಎಂದರೆ ಎಷ್ಟೋ ಜನರು ಹೊರುವಷ್ಟು ಧಾನ್ಯವನ್ನು ತುಂಬಬಹುದು. ಆದುದರಿಂದ ಗಾಡಿಯಲ್ಲಿ ತುಂಬುವಷ್ಟು ಧಾನ್ಯವೆಂದರೆ ಬಹು ಹೆಚ್ಚಾದ ಧಾನ್ಯವು.

ಇಷಃ—ಈ ಶಬ್ದಕ್ಕೆ ಅನ್ನವೆಂದು ಅರ್ಥವಾದರೂ ಇಲ್ಲಿ ಸಾವಗಾನ್ಯನಾದ ಆಹಾರ ಅಥವಾ ಧಾನ್ಯ ವೆಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದು. ರಥಿನೀಃ ಎಂಬ ಇದರ ವಿಶೇಷಣಪದವು ಈ ಅರ್ಥವನ್ನು ಸಮರ್ಥಿಸುವುದು.

॥ ವ್ಯಾಕರಣಪ್ರಕ್ರಿಯಾ ॥

ಅಸ್ಮೇ—ಅಸ್ಮದ್ ಶಬ್ದದ ಮುಂದೆ ಇರುವ ಚತುರ್ಥೀಬಹುವಚನಕ್ಕೆ **ಸುಪಾಂ ಸುಲುಕ್** (ಪಾ.ಸೂ ೭-೧-೩೯) ಎಂಬುದರಿಂದ ಶೇ ಆದೇಶ.

ಧೇಹಿ—ಡುಧಾಞ್ ಧಾರಣಪೋಷಣಯೋಃ ಧಾತು. ಇದರ ಮುಂದೆ ಲೋಟ್ ಪರಸ್ಮೈಪದ ಮಧ್ಯಮಪುರುಷ ಏಕವಚನ ಸಿಪ್, **ಸೇರ್ಧ್ಯಪಿಚ್ಚೆ** (ಪಾ. ಸೂ. ೩-೪-೮೦) ಎಂಬುದರಿಂದ ಸಿ ಗೆ ಹಿ ಆದೇಶ. ಶಪ್ ವಿಕರಣ. ಅದಕ್ಕೆ **ಜುಹೋತ್ಯಾದಿಭ್ಯಃಶ್ಲುಃ** (ಪಾ. ಸೂ. ೩-೪-೭೫) ಎಂಬುದರಿಂದ ಶ್ಲು (ಲೋಪ). **ಶ್ಲೌ**ಃ—(ಪಾ.ಸೂ. ೬-೧-೧೦) ಎಂಬುದರಿಂದ ಧಾತುವಿಗೆ ದ್ವಿತ್ವ. ಧಾ ಧಾ+ಹಿ **ಘ್ವಸೋರೇದ್ಧಾವಭ್ಯಾಸಲೋಪಶ್ಚ** (ಪಾ ಸೂ. ೬-೪-೧೧೯) ಹಿ ಪರದಲ್ಲಿರುವಾಗ ಘು ಸಂಜ್ಞಕವಾದ ಧಾತು, ಅಸ್ ಧಾತು ಇವುಗಳಿಗೆ ಏತ್ವ ಬರುವುದು, ಅಭ್ಯಾಸಕ್ಕೆ ಲೋಪವೂ ಬರುವುದು ಎಂಬುದರಿಂದ ಅಭ್ಯಾಸವಾದ ಮೊದಲನೆಯ ಧಾ ಗೆ ಲೋಪ ಎರಡನೆಯದರ ಆಕಾರಕ್ಕೆ ಏತ್ವ ಬಂದರೆ ಧೇಹಿ ಎಂದಾಗುವುದು. **ತಿಙ್ಙತಿಙಃ** (ಪಾ. ಸೂ. ೮-೧-೨೮) ಎಂಬುದರಿಂದ ಅನುದಾತ್ತ.

ಶ್ರವಃ—ಅಸುನ್ ಪ್ರತ್ಯಯಾಂತ. ನಿತ್ಸ್ವರದಿಂದ ಆದ್ಯುದಾತ್ತ.

ಸಹಸ್ರಸಾತಮಂ—ಸಹಸ್ರಂ ಸನುತೇ ದದಾತಿ ಇತಿ ಸಹಸ್ರಸಾಃ, ಷಣುದಾನೇ ಧಾತು. **ಧಾತ್ವಾದೇಃ ಷಃಸಃ** ಎಂಬುದರಿಂದ ಷಕಾರಕ್ಕೆ ಸಕಾರ. **ಜನಸನಖನಕ್ರಮಗಮೋವಿಟ್** (ಪಾ. ಸೂ. ೩-೨-೬೭) ಈ ಧಾತುಗಳ ಮುಂದೆ ಛಂದಸ್ಸಿನಲ್ಲಿ ವಿಟ್ ಪ್ರತ್ಯಯ ಬರುವುದು ಎಂಬುದರಿಂದ ವಿಟ್ ಪ್ರತ್ಯಯ. **ವಿಡ್ವನೋರನುನಾಸಿಕಸ್ಯಾತ್** (ಪಾ. ಸೂ. ೬-೪-೪೩) ವಿಟ್ ವನ್ ಈ ಪ್ರತ್ಯಯಗಳು ಪರದಲ್ಲಿರುವಾಗ ಅನುನಾಸಿಕಕ್ಕೆ ಆಕಾರಾದೇಶ ಬರುವುದು. ವಿಟ್ ಪ್ರತ್ಯಯದ ಎಲ್ಲ ವರ್ಣಗಳಿಗೂ ಲೋಪ. ಆಕಾರಾದೇಶ ಬಂದರೆ ಸಹಸ್ರಸಾ ಎಂದಾಗುವುದು. ಸಾ ಎಂಬುದು ಧಾತುಸ್ವರದಿಂದ ಅಂತೋದಾತ್ತ. ಸಮಾಸ ಬಂದನಂತರವೂ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬ ಕೃದುತ್ತರಪದಪ್ರಕೃತಿಸ್ವರದಿಂದ ಅದೇ ನಿಲ್ಲುವುದು. ಅತಿಶಯೇನ ಸಹಸಸ್ರಾಃ ಎಂದು ವಿನಕ್ಪೆ ಮಾಡಿದಾಗ **ಅತಿಶಾಯನೇ ತಮಬಿಷ್ಠನೌ** (ಪಾ. ಸೂ. ೫-೩-೫೫) ಎಂಬುದರಿಂದ ತಮಪ್. ಅದು ಪಿತ್ತಾದ್ದರಿಂದ ಅನುದಾತ್ತ.

ರಥಿನೀಃ—ರಥಾಃ ಅಸಾಂ ಸಂತಿ ಇತಿ ರಥಿನ್ಯಃ **ಅತೆಇನಿಠನೌ** (ಪಾ.ಸೂ. ೫-೨-೧೧೫) ಎಂಬುದರಿಂದ ಇನಿ ಪ್ರತ್ಯಯ, **ಯೆಸ್ಯೇತಿ ಚೆ** (ಪಾ. ಸೂ. ೬-೪-೧೪೮) ಎಂಬುದರಿಂದ ರಥಶಬ್ದದ ಆಕಾರಕ್ಕೆ ಲೋಪ. ರಥಿನ್ ಪ್ರತ್ಯಯಸ್ವರದಿಂದ ಇನ್ ಪ್ರತ್ಯಯವು ಆದ್ಯುದಾತ್ತ. ರಥಿನ್ ಎಂಬುದು ನಕಾರಾಂತ. ಆದ್ದರಿಂದ **ಋನ್ನೇಭ್ಯೋಙೀಸ್** (ಪಾ. ಸೂ. ೪-೧-೫) ಸ್ತ್ರೀತ್ವ ತೋರುವಾಗ ಋಕಾರಾಂತ, ನಕಾರಾಂತ ಶಬ್ದಗಳ ಮುಂದೆ ಙೀಪ್ ಬರುವುದು ಎಂಬುದರಿಂದ ಙೀಪ್ ಬರುವುದು. ಅದು ಪಿತ್ತಾದ್ದರಿಂದ ಅನುದಾತ್ತ.

ಇಷಃ—ಯೌಗಿಕ ಎಂದು ಇಟ್ಟುಕೊಂಡರೆ ಧಾತುಸ್ವರದಿಂದ ಇ ಉದಾತ್ತ. ರೂಢವೆಂದು ಇಟ್ಟುಕೊಂಡರೆ ಪ್ರಾತಿಪದಿಕಸ್ವರದಿಂದ ಉದಾತ್ತ. ॥ ೪ ॥

॥ संहितापाठः ॥

वसोरिन्द्रं वसुपतिं गीर्भिर्गृणन्त ऋग्मियं ॥
होमा गन्तारमूतये ॥ ९ ॥

॥ पदपाठः ॥

वसोः । इन्द्रं । वसुऽपतिं । गीःऽभिः । गृणन्तः । ऋग्मियं ॥
होम । गन्तारं । ऊतये ॥ ९ ॥

॥ सायणभाष्यं ॥

वसोर्वसुनोऽस्मदीयस्य धनस्योत्तमेयो रक्षार्थमिन्द्रं होमः । वयं-माह्वयामः । किं कुर्वन्तः । गीर्भिः स्तुतिभिर्गृणन्तः स्तुवन्तः । कीदृशमिन्द्रं । वसुपतिं धनपालकं ऋग्मियं ऋचाम मात्तारं गन्तारं यागदेशे गमनशीलं ॥ वसोः। वस निवासे। शॄस्वृस्निहीत्यादिना। उ ८-८३ । उसिसृत्यजेरिति । निदिभ्यनुवृत्तेरन्तोदात्तः दाद्युदात्तः । वसुपतिं । सनाशंसभिक्ष उ इति षष्ठीसमासे उदात्तत्वे प्राप्ते पत्यावैश्वर्ये । पा. ६-३-८९ । इति पूर्वपदप्रकृतिस्वरत्वं । गीर्भिः । सावेकाचेति विभक्तेरुदात्तत्वं । गृणन्तः । गॄ शब्दे । लटः शतृ । कर्तरि शप् । पा. ३-१-६८ । शतुः सार्वधातुकमपिदिति ङिच्चात्पुस् शप्श्यनोर्नित्यं । पा. ६-४-८८ । इत्यकारलोपः । शतुरकारस्य प्रत्ययोत्तरपदाद्युदात्तत्वं । ऋग्मियं । ऋचोऽभिगीत इत्यृग्गीतः । तमृग्मियं । मावृज् मार्जने शब्दे च । क्विप्चेति क्विप् । घुमास्थेत्यादिना । पा. ६-४-६६ । ईत्वं । चकारस्य कुत्वेन चोः कुः । ष्टुनाष्टुः । पा. ८-४-४१ । इति जश्त्वं । गकारः द्वितीयैकवर्जनेऽचि श्नुधातुभ्रुवां य्वोरियङुवङौ । पा. ६-४-७७ । इयङुवङादेशः । अनेकाचेति यङ्लुगादेशः । पा. ६-४-७७ । सर्वत्र विधयश्छन्दसि विकल्प्यन्त इति न भवति । कृदुत्तरपदप्रकृतिस्वरेणैकार उदात्तः । होम । आह्वयामः । ह्वेञ् स्पर्धायां शब्दे च । लट् । तस्यास्मदो बहुत्वेऽपि व्यत्ययेन मिप् । इकारस्य व्यत्ययेनाकारः । शपो बहुलं छन्दसीति लुक् । बहुलं छन्दसि । पा. ६-१-३४ । इति ह्वः संप्रसारणं परपूर्वत्वं गुणः । धातोः । पा. ६-१-१६३ । इत्येकारः उदात्तः । मिप्सः पित्स्वरेणाद्युदात्तत्वं । गंतारं। गमॢ गॄ सॄ प्लॄ गतौ । तॄज्वरित्रि तृन् । नित्त्वादाद्युदात्तः। ऊतये । ऊतियूतिजूतीत्यादिना क्तिन्नुदात्तोऽयं निपातितः ॥

॥ ಪ್ರತಿಪದಾರ್ಥ ॥

ವಸೋಃ—(ನಮ್ಮ) ಧನದ । **ಊತಯೇ**—ರಕ್ಷಣೆಗಾಗಿ । **ವಸುಪತಿಂ**—ಧನಾದ್ಯೈಶ್ವರ್ಯಗಳಿಗೆ ಸ್ವಾಮಿಯಾದ । **ಋಗ್ಮಿಯಂ**—ಋಕ್ಕುಗಳಿಂದ ಸ್ತುತಿಸಲ್ಪಡಲು ಯೋಗ್ಯನಾದ । **ಗಂತಾರಂ**—ಯಜ್ಞಭೂಮಿಗೆ (ಯಜಮಾನನ ರಕ್ಷಣಾರ್ಥವಾಗಿ) ಹೋಗುವವನಾದ । **ಇಂದ್ರಂ**—ಇಂದ್ರನನ್ನು । **ಗೀರ್ಭಿಃ**—ವಾಕ್ಯರೂಪವಾದ ಸ್ತುತಿಗಳಿಂದ । **ಗೃಣಂತಃ**—ಸ್ತೋತ್ರಮಾಡುತ್ತಾ । **ಹೋಮ**—ಆಹ್ವಾನಮಾಡುವೆವು ॥

॥ ಭಾವಾರ್ಥ ॥

ಇಂದ್ರನು ಧನಾದ್ಯೈಶ್ವರ್ಯಗಳಿಗೆ ಸ್ವಾಮಿಯು; ಋಕ್ಕುಗಳಿಂದ (ವೇದಮಂತ್ರಗಳಿಂದ) ಸ್ತುತಿಸಲ್ಪಡಲು ಯೋಗ್ಯನು; ಯಜ್ಞಭೂಮಿಗೆ ಹೋಗಿ ಯಜಮಾನರಾದಿಯಾದ ಜನರನ್ನು ಕಾಪಾಡುವವನು. ಇಂತಹ ಇಂದ್ರನನ್ನು ನಮ್ಮ ಧನದ ಸಂರಕ್ಷಣೆಗಾಗಿ ಸ್ತೋತ್ರಗಳಿಂದ ಆಹ್ವಾನಮಾಡುವೆವು.

English Translation

Praising with songs we invoke Indra, the lord of riches, who deserves to be praised and who goes (to protect his worshipper).

॥ ವಿಶೇಷವಿಷಯಗಳು ॥

ವಸುಪತಿಂ—ವಸು ಎಂದರೆ ಧನ, ಪತಿ ಎಂದರೆ ಸ್ವಾಮಿ, ಧನಕ್ಕೆ ಸ್ವಾಮಿ, ಅಧಿಪತಿ ಎಂದರ್ಥವು. ಈ ಋಕ್ಕಿನಲ್ಲಿ ವಸೋಃ ಎಂಬ ಶಬ್ದವಿದ್ದರೂ ಪುನಃ ವಸುಪತಿಂ ಎಂಬ ಶಬ್ದಪ್ರಯೋಗವಿರುವುದರಿಂದ ದ್ವಿರುಕ್ತಿದೋಷವುಂಟಾಗುವುದಿಲ್ಲವೇ ಎಂದರೆ ಇಂತಹ ಕೆಲವು ಪ್ರಯೋಗಗಳು ಋಗ್ವೇದದಲ್ಲಿ ವಿಶೇಷವಾಗಿ ಬಳಕೆಯಲ್ಲಿರುವವು. ಬಳಕೆಯಲ್ಲಿರುವ (ರೂಢಿಯಲ್ಲಿರುವ) ಶಬ್ದಸಮೂಹವನ್ನು ಉಪಯೋಗಿಸುವಾಗ ಅದು ದ್ವಿರುಕ್ತಿದೋಷಸಹಿತವಾಗಿರುವುದೇ ಅಥವಾ ವ್ಯಾಕರಣ ನಿಯಮಗಳಿಗೆ ವಿರುದ್ಧವಾಗಿರುವುದೇ ಎಂಬ ಅಂಶವನ್ನು ಗಮನಿಸಬೇಕಾಗಿಲ್ಲ. ರೂಢಿಯಲ್ಲಿದ್ದು ಎಲ್ಲರೂ ಅದನ್ನು ಬಳಸುವುದರಿಂದಲೇ ಅದರ ಪ್ರಯೋಗವು ಯುಕ್ತವೆಂದು ಭಾವಿಸಲ್ಪಡುವುದು. ಏಕೆಂದರೆ ವ್ಯಾಕರಣಾದಿ ನಿಯಮಗಳು ಬಳಕೆಯಲ್ಲಿರುವ ಭಾಷಾಸಂಪ್ರದಾಯವನ್ನನುಸರಿಸಿಯೇ ರಚಿತವಾಗಿವೆ. ವ್ಯಾಕರಣಕ್ಕೆ ಮೂಲವು ಭಾಷೆಯೇ ಹೊರತು ಭಾಷೆಗೆ ಮೂಲ ವ್ಯಾಕರಣವಲ್ಲ. ಇಂತಹ ದ್ವಿರುಕ್ತಿಸಹಿತವಾದ ಪ್ರಯೋಗಗಳು ಋಗ್ವೇದದಲ್ಲಿ ಬೇಕಾದಷ್ಟಿವೆ. ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ—

ಊರ್ವ ಇವ ಪಪ್ರಥೇ ಕಾನೋ ಅಸ್ಮೇ ತವಾ ಪೃಣ ವಸುಪತೇ ವಸೂನಾಂ ॥

(ಋ. ಸಂ. ೩-೩೦-೧೯)

ಅ ತೂ ಭರ ಮಾಕಿರೇತತ್ಪರಿಷ್ಠಾದ್ವಿದ್ಮಾ ಹಿತ್ವಾ ವಸುಪತಿಂ ವಸೂನಾಂ ॥

(ಋ. ಸಂ. ೩-೩೬-೯)

ಸತ್ರಾಭವೋ ವಸುಪತಿರ್ವಸೂನಾಂ ದತ್ರೋ ವಿಶ್ವಾ ಅಧಿಥಾ ಇಂದ್ರ ಕೃಷ್ಟೀಃ ॥
(ಋ. ಸಂ. ೪-೧೭-೬)

ಇತ್ಯಾದಿ. ಈ ಋಕ್ಕುಗಳೆಲ್ಲವೂ ಇಂದ್ರನ ಪರವಾಗಿಯೇ ಇರುವವು. ಆದುದರಿಂದ ಇಂದ್ರನನ್ನು ವಸುಪತಿ ಎಂದು ಕರೆಯುವುದು ರೂಢಿಯಲ್ಲಿತ್ತೆಂದು ಹೇಳಬಹುದು.

ಋಗ್ಮಿಯಂ—ಋಚೋ ಮಿಮೀತ ಇತ್ಯೃಗ್ಮೀಃ । ಋಚಾಂ ಮಾತರಂ—ಋಕ್ಕುಗಳಿಂದ ಅಳೆಯಲ್ಪಡುವವನು ಎಂದರೆ ಸ್ತೋತ್ರಮಾಡಲ್ಪಡುವವನು ಎಂದು ಭಾಷ್ಯಕಾರರು ಅರ್ಥಮಾಡಿರುವರು. ಸ್ಕಂದ ಸ್ವಾಯು—**ಋಗ್ಮಿಯಂ। ಋಚೆ ಸ್ತುತೌ । ಅರ್ಚನಾ ಋಕ್ । ಸಂಪದಾದಿತ್ವಾತ್ ಕ್ವಿಪ್ । ತದ್ವಂತಂ ಸ್ತುತಿಯೋಗ್ಯಮಿತ್ಯರ್ಥಃ**—ಋಚ ಧಾತುವಿಗೆ ಸ್ತೋತ್ರಮಾಡು ಎಂದರ್ಥವು. ಆದುದರಿಂದ ಋಗ್ಮಿಯಂ ಎಂಬ ಶಬ್ದಕ್ಕೆ ಸ್ತುತಿಸಲ್ಪಡಲು ಯೋಗ್ಯನಾದ ಎಂದು ಹೇಳಿರುವರು. ವೆಂಕಟಮಾಧವರು **ಋಗರ್ಹಂ** ಎಂದರೆ ಋಕ್ಕುಗಳಿಂದ ಸ್ತುತಿಸಲ್ಪಡಲು ಅರ್ಹನಾದ ಎಂದು ಹೇಳಿರುವರು

ಹೋಮ—ಆಹ್ವಯಾಮಃ, ಆಹ್ವಾನ ಮಾಡುವೆವು, ಕರೆಯುವೆವು. **ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ** ಎಂಬ ಧಾತುವಿನ ಲಟ್ ರೂಪದ ಉತ್ತಮಪುರುಷಬಹುವಚನವು. ಇದರ ರೂಪಸಿದ್ಧತ್ತಿಗಾಗಿ ವ್ಯಾಕರಣಭಾಗವನ್ನು ನೋಡಿ.

ಗಂತಾರಂ—ಋಕಾರಾಂತ ಗಂತೃಶಬ್ದದ ದ್ವಿತೀಯೈಕವಚನವು. ಹೋಗುವವನು ಎಂದು ಇದರ ಅರ್ಥವು. ಎಲ್ಲಿಗೆ ಹೋಗುವವನು ಎಂದರೆ ಯಜ್ಞಮಾಡುವ ಯಜಮಾನನನ್ನು ರಕ್ಷಿಸುವುದಕ್ಕಾಗಿ ಯಜ್ಞ ಭೂಮಿಗೆ ಹೋಗುವವನು ಎಂದು ಅರ್ಥವು ಹೊಂದುವಂತೆ **ಯಾಗದೇಶೇ ಗಮನಶೀಲಂ** ಎಂಬ ಪದಗಳನ್ನು ಅಧ್ಯಾಹಾರ ಮಾಡಿಕೊಳ್ಳಬೇಕೆಂದು ಭಾಷ್ಯಕಾರರು ಹೇಳಿರುವರು.

॥ ವ್ಯಾಕರಣಪ್ರಕ್ರಿಯಾ ॥

ವಸೋಃ—**ವಸ ನಿವಾಸೇ** ಧಾತು. ಇದರಮುಂದೆ **ಶ್ಯ ಸ್ಯ ಸ್ನಿಹಿ ತೃಪ್ಯಸಿ ವಸಿ ಹನಿ ಕ್ಲಿದಿ ಬಂಧಿ ಮನಿಭ್ಯಶ್ಚ** (ಉ ಸೂ. ೧-೧೦) ಶ್ಯ ಹಿಂಸಾಯಾಂ, ಸ್ಯ ಶಬ್ದೋಪತಾಪಯೋಃ, ಸ್ನಿಹ ಉಪತಾಪೇ ತೃಪೂರ್ ಲಜ್ಜಾಯಾಂ, ಅಸು ಕ್ಷೇಪಣೇ, ವಸ ನಿವಾಸೇ- ಹನ ಹಿಂಸಾಗತ್ಯೋಃ, ಕ್ಲಿದೂ ಆರ್ದ್ರೀಭಾವೇ, ಬಂಧ ಬಂಧನೇ, ಮನ ಜ್ಞಾನೇ ಈ ಧಾತುಗಳ ಮುಂದೆ ಉ ಪ್ರತ್ಯಯ ಬರುವುದು ಆದು ನಿತ್ತೂ ಆಗುವುದು ಎಂಬುದರಿಂದ ಉ ಪ್ರತ್ಯಯ ಬಂದರೆ ವಸು ಎಂದಾಗುವುದು. ಇದು ನಿತ್ಸ್ವರದಿಂದ ಆದ್ಯುದಾತ್ತ.

ವಸುಪತಿಂ—**ಸಮಾಸಸ್ಯ** (ಪಾ, ಸೂ. ೬-೧ ೨೨೩) ಎಂಬುದರಿಂದ ಅಂತೋದಾತ್ತ ಪ್ರಾಪ್ತವಾದರೆ ಅದನ್ನು ಬಾಧಿಸಿ **ಪತ್ಯಾವೈಶ್ವರ್ಯೇ** (ಪಾ. ಸೂ. ೬-೧-೧೮೪) ಐಶ್ವರ್ಯಾರ್ಥಕವಾದ ಪತಿಶಬ್ದ ಪರದಲ್ಲಿದ್ದರೆ ಪೂರ್ವಪದವು ಪ್ರಕೃತಿಸ್ವರವನ್ನು ಹೊಂದುವುದು ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುವುದು.

ಗೀರ್ಭಿಃ—**ಸಾವೇಕಾಭಿಸ್ತೃತೀಯಾದಿರ್ವಿಭಕ್ತಿಃ** (ಪಾ. ಸೂ. ೬-೧-೧೬೮) ಎಂಬುದರಿಂದ ವಿಭಕ್ತಿಯು ಉದಾತ್ತ.

ಗೃಣನ್ತ್ಸಃ—ಗೃಶಬ್ದೇ ಎಂಬ ಧಾತುವಿನ ಮುಂದೆ ಲಟ್. ಅದರ ಸ್ಥಾನದಲ್ಲಿ **ಲಟಃ ಶತೃಶಾನಚೌ** (ಪಾ. ಸೂ. ೩-೨-೧೨೪) ಎಂಬುದರಿಂದ ಶತೃ **ಕ್ರ್ಯಾದಿಭ್ಯಃ ಶ್ನಾ** (ಪಾ. ಸೂ. ೩-೧-೮೧) ಎಂಬದರಿಂದ ಶ್ನಾ ವಿಕರಣ. ಗೃ+ನಾ+ಅತ್ **ಸ್ನ್ವಾದೀನಾಂ ಹ್ರಸ್ವಃ** (ಪಾ. ಸೂ. ೭-೩-೮೦) ಶಕಾರೇತ್ಸಂಜ್ಞಕಪ್ರತ್ಯಯವು ಪರದಲ್ಲಿರುವಾಗ ಪೂಙ್ ಪವನೇ ಮೊದಲಾದ ಧಾತುಗಳಿಗೆ ಹ್ರಸ್ವ ಬರುವುದು ಎಂಬುದರಿಂದ ಗೃ ಎಂಬುದಕ್ಕೆ ಹ್ರಸ್ವ ಶತೃಪ್ರತ್ಯಯವು ಅಪಿತ್ತಾದ (ಪಿತ್ತಲ್ಲದ) **ಸಾರ್ವಧಾತುಕ**, ಆದ್ದರಿಂದ **ಸಾರ್ವಧಾತುಕಮಪಿತ್** (ಪಾ. ಸೂ. ೧-೨-೪) ಅಪಿತ್ತಾದ ಸಾರ್ವಧಾತುಕವು ಙಿತ್ತಾಗುವುದು ಎಂಬುದರಿಂದ ಙಿತ್ತಾಗುವುದು. **ಶ್ನಾಭ್ಯಸ್ತಯೋರಾತಃ** (ಪಾ. ಸೂ. ೬-೪-೧೧೨) ಕಿತ್ತು ಅಥವಾ ಙಿತ್ತು ಆದ ಸಾರ್ವಧಾತುಕಪರದಲ್ಲಿದ್ದರೆ ಶ್ನಾ ಪ್ರತ್ಯಯ, ಅಭ್ಯಸ್ತ ಇವುಗಳ ಆಕಾರಕ್ಕೆ ಲೋಪ ಬರುವುದು ಎಂಬುದರಿಂದ ಶ್ನಾ ಪ್ರತ್ಯಯದ ಆಕಾರಕ್ಕೆ ಲೋಪ. ಗೃನಾ+ಅತ್ **ಋವರ್ಣಾನ್ನಸ್ಯ ಣತ್ವಂ ವಾಚ್ಯಂ** (ವಾರ್ತಿಕ. ೮-೪-೧) ಎಂಬುದರಿಂದ ನಕಾರಕ್ಕೆ ಣಕಾರ. ಗೃಣತ್, ಇದರಮುಂದೆ ಜಸ್ ಪ್ರತ್ಯಯವನ್ನಿಟ್ಟರೆ **ಉಗಿದಚಾಂ ಸರ್ವನಾಮಸ್ಥಾನೇಽಧಾತೋಃ** (ಪಾ. ಸೂ. ೭-೧-೭೦) ಎಂಬುದರಿಂದ ನುಮ್ ಆಗಮ. ರುತ್ವ ವಿಸರ್ಗಗಳು **ಗೃಣನ್ತ್ಸಃ** ಎಂದಾಗುವುದು. ಶತೃಪ್ರತ್ಯಯದ ಅಕಾರವು ಪ್ರತ್ಯಯಸ್ವರದಿಂದ ಉದಾತ್ತ.

ಋಗ್ಮಿಯಮ್—ಋಚಃ ಮಿವಿನಾತೀ ಇತಿ ಋಗ್ಮೀ, ತಂ ಋಗ್ಮಿಯಂ ಎಂದು ವಿಗ್ರಹ, ಮಾಙ್ ಮಾನೇ ಶಬ್ದೇಚ, ಧಾತು. **ಕ್ವಿಪ್ಚ** (ಪಾ, ಸೂ. ೩-೨.೭೬) ಎಲ್ಲಾ ಧಾತುಗಳ ಮುಂದೆಯೂ ಕ್ವಿಪ್ ಪ್ರತ್ಯಯ ಬರುವುದು ಎಂಬುದರಿಂದ ಋಚ್ ಶಬ್ದೋಪಪದಕವಾದ ಮಾ ಧಾತುವಿನಮುಂದೆ ಕ್ವಿಪ್ಪ್ರತ್ಯಯ ಪ್ರತ್ಯಯದಲ್ಲಿರುವ ಕಕಾರ, ಇಕಾರ ಸಕಾರಗಳಿಗೆ ಇತ್ಸಂಜ್ಞೆ ಲೋಪ. ಋಚ್+ಮಾ+ವ್. **ಛ್ವೋಶೂಡಾಸ್ಥಾ ಗಾಪಾ ಜಹಾತಿ ಸೋಮಲಿ** (ಪಾ.ಸೂ. ೭-೪-೬೭) ಹಲಾದಿಯಾದ ಕಿತ್ತು ಙಿತ್ತು ಆದ ಅರ್ಧಧಾತುಕ ಪ್ರತ್ಯಯಪರದಲ್ಲಿರುವಾಗ ಈ ಧಾತುಗಳ ಆಕಾರಕ್ಕೆ ಈಕಾರದೇಶ ಬರುವುದು ಎಂಬುದರಿಂದ ಈ ಆದೇಶ ಋಚ್+ಮೀ+ವ್. **ವೇರಪೃಕ್ತಸ್ಯ** (ಪಾ. ಸೂ. ೬-೧-೬೭) ಏಕವರ್ಣ ಪ್ರತ್ಯಯವಾದ ವಕಾರಕ್ಕೆ ಲೋಪಬರುವುದು ಎಂಬುದರಿಂದ ವ್ ಗೆ ಲೋಪ, ಯದ್ಯಪಿ ಪರನಿಮಿತ್ತಕವಲ್ಲದೇ ಇರುವುದರಿಂದ ವೇರಪೃಕ್ತಲೋಪವು ಅಂತರಂಗ, ಈತ್ವವು ಪರನಿಮಿತ್ತಕವಾದ್ದರಿಂದ ಬಹಿರಂಗ. ಆದ್ದರಿಂದ **ಅಸಿದ್ಧಂ ಬಹಿರಂಗಮಂತರಂಗೇ** (ಪರಿಭಾ. ೫೦) ಎಂಬುದರಿಂದ ವೇರಪೃಕ್ತಲೋಪವೇ ಮೊದಲು ಬರಬೇಕು. ಅದು ಮೊದಲು ಬಂದರೆ **ಸ್ಥಾನಿವದಾದೇಶೋಽನಲ್ವಿಧೌ** (ಪಾ. ಸೂ. ೧-೧-೫೬) ಎಂಬದರಿಂದ ಅಲಾತ್ರಯಃಕಾರ್ಯ ಮಾಡುವ ಸ್ಥಾನಿವದ್ಭಾವಪ್ರತಿಷೇಧವಿರುವುದರಿಂದಲೂ **ವರ್ಣಾಶ್ರಯೋನಾಸ್ತಿ ಪ್ರತ್ಯಯಲಕ್ಷಣಂ** (ಪರಿಭಾ. ೨೧) ಅಲಾತ್ರಯಕಾರ್ಯವನ್ನು ಮಾಡುವಾಗ ಪ್ರತ್ಯಯಲಕ್ಷಣಕ್ಕೆ ಪ್ರತಿಷೇಧ ಬರುವುದು ಎಂದು ನಿಷೇಧವಿರುವುದರಿಂದಲೂ ಹಲಾದಿಕಿದಾರ್ಧಧಾತುಕ ಪರಕತ್ವವು ಸಂಭವಿಸುವುದಿಲ್ಲ. ಆದ್ದರಿಂದ ಛಾಂದಸವಾದ್ದರಿಂದ ಆಂತರಂಗವಾದಾಗ್ಯೂ ವೇರಪೃಕ್ತಲೋಪ ಬರುವುದಿಲ್ಲ ಎಂದು ಇಟ್ಟುಕೊಳ್ಳಬೇಕು. ಅಥವಾ, ವೇರಪೃಕ್ತಲೋಪವನ್ನು ಮೊದಲು ಹೇಳಿ, ಛಾಂದಸವಾದ್ದರಿಂದ ಅಲ್ವಿಧಿಯಲ್ಲಿಯೂ ಕ್ವಚಿತ್ ಸ್ಥಾನಿವದ್ಭಾವ ಬರುವುದು ಎಂದು ವರ್ಣಿಸಬೇಕು. ಚಕಾರಕ್ಕೆ **ಚೋಃ ಕುಃ** (ಪಾ. ಸೂ. ೮-೨-೩೦. ಜಿವರ್ಗಕ್ಕೆ ಕವರ್ಗವು. ಝಲ್ ಪರದಲ್ಲಿದ್ದರೂ ಪದಾಂತವಿಷಯದಲ್ಲೂ ಬರುವುದು ಎಂಬುದರಿಂದ ಚಕಾರಕ್ಕೆ ಕಕಾರ, **ಝಲಾಂ ಝಶೋಽನ್ತೇ** (ಪಾ.ಸೂ. ೮-೪-೬೯) ಪದದ ಕೊನೆಯಲ್ಲಿರುವ ಝಲ್ ವರ್ಣಗಳಿಗೆ ಜಶ್ ವರ್ಣಗಳು ಬರುವುವು ಎಂಬುದರಿಂದ ಕಕಾರಕ್ಕೆ ಗಕಾರ, ಋಗ್ಮೀ ಶಬ್ದದ ಮುಂದೆ ದ್ವಿತೀಯಾ ವಿಭಕ್ತಿ ಏಕವಚನ ಅಮ್ ಪ್ರತ್ಯಯವನ್ನಿಟ್ಟರೆ **ಅಚಿ ಶ್ನು ಧಾತು ಭ್ರುವಾಂಯ್ವೋರಿಯಙುವಙೌ** (ಪಾ. ಸೂ. ೬-೪-೭೭) ಅಜಾದಿ

ಪ್ರತ್ಯಯ ಪರದಲ್ಲಿರುವಾಗ ಶ್ನು ಪ್ರತ್ಯಯವನ್ನು ಕೊನೆಯಲ್ಲಿ ಹೊಂದಿರುವ ಇವರ್ಣ ಉವರ್ಣಾಂತ ಧಾತುರೂಪವಾದ ಮತ್ತು ಭ್ರೂಶಬ್ದರೂಪವಾದ ಅಂಗಕ್ಕೆ ಇಯಙ್ ಉವಙ್ ಆದೇಶಗಳು ಬರುವುವು. ಇವರ್ಣಕ್ಕೆ ಇಯಙ್, ಉವರ್ಣಕ್ಕೆ ಉವಙ್ ಎಂದು ವಿಭಾಗ, ಆಜಿಶ್ನು ಧಾತು ಭ್ವುವಾಂ ಎಂಬುದು ಅಂಗಕ್ಕೆ ವಿಶೇಷಣವಾದ್ದರಿಂದ ತದಂತಲಾಭ ಒಂದರೆ, ಶ್ನು ಪ್ರತ್ಯಯಾಂತಾಂತವಾದ ಅಂಗಕ್ಕೂ, ಇವರ್ಣೋವರ್ಣಾಂತ ಧಾತ್ವಂತಾಂಗಕ್ಕೂ, ಭ್ರೂಶಬ್ದಾಂತಾಂಗಕ್ಕೂ ಇಯಙ್ ಉವಙ್ ಆದೇಶಗಳು ಅಜಾದಿ ಪ್ರತ್ಯಯ ಪರದಲ್ಲಿರುವಾಗ ಬರುವುವು ಎಂದು ನಿಷ್ಕರ್ಷವಾದ ಸೂತ್ರಾರ್ಥ. ಇದರಿಂದ ಇಯಙಾದೇಶ ಬಂದರೆ ಋಗ್ಮಿಯಮ್ ಎಂದಾಗುವುದು. ಯದ್ಯಪಿ ಇಲ್ಲಿ ಇದಕ್ಕೆ ಅಪವಾದವಾದ ಏರನೇಕಾಚೋಸಂಯೋಗಪೂರ್ವಸ್ಯ (ಪಾ. ಸೂ. ೬-೪-೮೨) ಧಾತ್ವವಯವ ಮಾತ್ರಾರಬ್ಧ ಸಂಯೋಗಪೂರ್ವಕವಲ್ಲದ ಯಾವ ಇಕಾರವಿದೆಯೋ ಅದನ್ನು ಕೊನೆಯಲ್ಲಿ ಹೊಂದಿರುವ ಯಾವ ಧಾತುವಿದೆಯೋ ಆ ಧಾತುವನ್ನು ಕೊನೆಯಲ್ಲಿ ಹೊಂದಿರುವ ಅನೇಕಾಚ್ಕವಾದ ಅಂಗಕ್ಕೆ ಯಣಾದೇಶಬರುವುದು ಎಂಬುದರಿಂದ ಯಣಾದೇಶಕ್ಕೆ ಪ್ರಾಪ್ತಿ ಇರುವುದು. ಆದರೂ **ಸರ್ವೇವಿಧಯಶ್ಛಂದಸಿ ವಿಕಲ್ಪ್ಯಂತೇ** (ಪರಿಭಾ. ೩೫) ಎಂಬ ಪರಿಭಾಷೆಯಿಂದ ಯಣ್ವಿಧಿಯೂ ಛಂದಸ್ಸಿನಲ್ಲಿ ವಿಕಲ್ಪವಾದ್ದರಿಂದ ಇಲ್ಲಿ ಬರುವುದಿಲ್ಲ, **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬ ಕೃದುತ್ತರಪದ ಪ್ರಕೃತಿಸ್ವರದಿಂದ ಇಕಾರವು ಉದಾತ್ತ.

ಹೋಮ— ಅಹ್ವಯಾಮಃ ಎಂದು ಅರ್ಥ 'ಹ್ವೇಞ್ ಸ್ಪರ್ಧಾಯಾಂ ಶಬ್ದೇಚ' ಧಾತು. ಇದರ ಮುಂದೆ ಲಟ್, ಇದರ ಸ್ಥಾನದಲ್ಲಿ ಪರಸ್ಮೈಪದ ಉತ್ತಮಪುರುಷ ಏಕವಚನ ಮಿಪ್. ಇಲ್ಲಿ ಗೃಣನ್ತಃ ಎಂದು ಇರುವುದರಿಂದ ಅಸ್ಮದ್ ಶಬ್ದದ ಬಹುವಚನವಾದ ವಯಂ ಎಂಬುದು ಕರ್ತೃಪದವಾಗುವುದು, ಆದ್ದರಿಂದ ಬಹುವಚನವಾದ ಮಸ್ ಆದೇಶಬರುವುದು ಉಚಿತ. ಆದರೂ ವ್ಯತ್ಯಯದಿಂದ ಏಕವಚನ ಮಿಪ್ ಬಂದಿರುವುದು. ಮಿಯ ಇಕಾರಕ್ಕೆ ವ್ಯತ್ಯಯದಿಂದ ಆಕಾರ. ಶಪ್ ವಿಕರಣಕ್ಕೆ ಬಹುಲಂಛಂದಸಿ (ಪಾ. ಸೂ. ೨-೪-೭೩) ಎಂಬುದರಿಂದ ಲುಕ್ ಹ್ವೇ+ಮ ಹ್ವಸ್ಸಂಪ್ರಸಾರಣಮ್ (ಪಾ. ಸೂ. ೬-೧-೩೭) ಎಂಬಲ್ಲಿರುವ ' ಬಹುಲಂ ಛಂದಸಿ (ಪಾ. ಸೂ. ೬-೧-೩೪) ಎಂಬುದರಿಂದ ಸಂಪ್ರಸಾರಣ=ವಕಾರಕ್ಕೆ ಉಕಾರ ಸಂಪ್ರಸಾರಣಾಚ್ಚ (ಪಾ. ಸೂ. ೬-೧-೧೦೮) ಎಂಬುದರಿಂದ ಉ+ಏಗಳ ಸ್ಥಾನದಲ್ಲಿ ಪೂರ್ವರೂಪ ಏಕಾದೇಶ ಹು+ಮ ಸಾರ್ವಧಾತುಕಾರ್ಧಧಾತು ಕಯೋಃ—(ಪಾ. ಸೂ. ೭-೩-೮೪) ಎಂಬುದರಿಂದ ಗುಣ. ಹೋಮ ಎಂದಾಗುವುದು. ಓಕಾರವು ಧಾತೋಃ (ಪಾ. ಸೂ. ೬-೧-೧೬೨) ಎಂಬುದರಿಂದ ಉದಾತ್ತ. ಮಿಪ್ಪು ಪಿತ್ತಾದ್ದರಿಂದ ಮಕಾರ ಅನುದಾತ್ತ.

ಗನ್ತಾರಂ— ಗಮ್ಲೃ ಸೃಪ್ಲೃ ಗತೌ ಧಾತು. ಇದರ ಮುಂದೆ ತೃನ್ (ಪಾ. ಸೂ. ೩-೨-೧೩೫) ಎಂಬುದರಿಂದ ತಚ್ಛೀಲ ಎಂಬ ಅರ್ಥದಲ್ಲಿ ತೃನ್ ಪ್ರತ್ಯಯ- ಪ್ರತ್ಯಯವು ನಿತ್ತಾದ್ದರಿಂದ ಪ್ರತ್ಯಯಾಂತವು ಆದ್ಯುದಾತ್ತ.

ಊತಯೇ— ಇಲ್ಲಿ ಊತಿಯೂತಿಜೂತಿಸಾತಿ (ಪಾ. ಸೂ. ೩-೩-೯೭) ಎಂಬುದರಿಂದ ಉದಾತ್ತವಾದ ಕ್ತಿನ್ ಪ್ರತ್ಯಯವು ನಿಪಾತಿತವಾಗಿರುವುದು. ॥ ೯ ॥

॥ ಸಂಹಿತಾಪಾಠಃ ॥

ಸುತೇಸುತೇ ನ್ಯೋಕಸೇ ಬೃಹದ್ಬೃಹತ ಏದರಿಃ ॥
ಇಂದ್ರಾಯ ಶೂಷಮರ್ಚತಿ ॥ ೧೦ ॥

॥ ಪದಪಾಠಃ ॥

ಸುತೇ॒ऽसುತೇ । ನಿ॒ऽಓಕಸೇ । ಬೃಹತ್ । ಬೃಹ॒ತೇ । ಆ । ಇತ್ । ಅ॒ರಿಃ ॥
ಇಂದ್ರಾ॑ಯ । ಶೂಷ॑ಂ । ಅ॒ರ್ಚ॒ತಿ ॥ ೧೦ ॥

॥ ಸಾಯಣಭಾಷ್ಯಂ ॥

ಆಕಾರ ಇಚ್ಛಾರ್ಥಸ್ಯ ಪಾದಪೂರಣೌ । ಯದ್ವಾ । ವ್ಯಾಪ್ತಿವಚನ ಆಕಾರಃ । ಆಜ್ಞೀಷದರ್ಥೇ॒ऽಭಿವ್ಯಾಪ್ತೌ । ಅಮ. ೩-೪-೩೨ । ಇತ್ಯಭಿಧಾನಾತ್ । ಇಚ್ಛಾಬ್ದೋ॒ऽಪಿಶಬ್ದಾರ್ಥಃ । ಇಯೆರ್ತಿ ಗಚ್ಛತ್ಯನು-ಷ್ಠೇಯಂ ಕರ್ಮ ಪ್ರಾಪ್ನೋತೀತ್ಯರಿರ್ಯಜಮಾನಃ । ಏದರಿಃ ಸರ್ವೋ॒ऽಪಿ ಯಜಮಾನ ಇಂದ್ರಾಯ ಸುತೇ ಸುತ ಇಂದ್ರಾರ್ಥಮಭಿಷುತೇ ತತ್ತತ್ಸೋಮೇ ಶೂಷಂ ಬಲಮರ್ಚತಿ ಸ್ತೌತಿ । ಇಂದ್ರಸ್ಯ ಪರಾ-ಕ್ರಮಂ ಪ್ರಶಂಸತೀತ್ಯರ್ಥಃ । ಕೀದೃಶಂ ಶೂಷಂ । ಬೃಹತ್ ಪ್ರೌಢಂ। ಕೀದೃಶಾಯೇಂದ್ರಾಯ । ನ್ಯೋ-ಕಸೇ ನಿಯತಸ್ಥಾನಾಯ ಬೃಹತೇ ಪ್ರೌಢಾಯ ॥ ಸುತೇ ಸುತೇ । ಷುಞ್ ಅಭಿಷವೇ । ಕ್ತಪ್ರತ್ಯಯಃ ಪ್ರತ್ಯಯಸ್ವರೇಣೋದಾತ್ತಃ । ನಿತ್ಯವೀಪ್ಸಯೋರಿತಿ ವೀಪ್ಸಾಯಾಂ ದ್ವಿರ್ಭಾವಃ । ತಸ್ಯ ಪರಮಾಮ್ರೇಡಿತ-ಮಿತಿ ದ್ವಿರೇಯಸ್ಯಾಮ್ರೇಡಿತಸ್ಯೇನಾನುದಾತ್ತಂ ಚ । ಪಾ. ೮-೧-೩ । ಇತ್ಯನುದಾತ್ತತ್ವಂ । ನ್ಯೋಕಸೇ । ನಿಯತಮೋಕೋ ಯಸ್ಯ ತಸ್ಮೈ । ನಿಶಬ್ದೋ ನಿಪಾತಾ ಆದ್ಯುದಾತ್ತಾ ಇತ್ಯುದಾತ್ತಃ । ತಸ್ಯ ಯಣಾ-ದೇಶ ಉದಾತ್ತಸ್ವರಿತಯೋರ್ಯಣಃ ಸ್ವರಿತೋ॒ऽನುದಾತ್ತಸ್ಯ । ಪಾ. ೮-೪-೬ । ಇತ್ಯೋಕಾರಃ ಸ್ವರಿತಃ । ಬೃಹತೇ । ಬೃಹನ್ಮಹತೋರುಪಸಂಖ್ಯಾನಂ । ಪಾ. ೬-೧ ೧೭೩-೧ । ಇತ್ಯಜಾದಿನಿಭಕ್ತೇರುದಾತ್ತತ್ವಂ । ಅರಿಃ । ಋ ಗತೌ । ಅಚ ಇಃ । ಉ ೪-೧೩೮ । ಇತೀಕಾರಪ್ರತ್ಯಯಃ । ಗುಣೋ ರಪರತ್ವಂ । ಪ್ರತ್ಯ-ಯಸ್ವರೇಣೇಕಾರ ಉದಾತ್ತಃ । ಇಂದ್ರಾಯ । ಋಜ್ರೇಂದ್ರೇತ್ಯಾದಿನಾ ರನ್ಪ್ರತ್ಯಯ ಇಕಾರ ಉದಾತ್ತಃ। ಶೂಷಂ । ಪ್ರಾತಿಪದಿಕಸ್ವರಃ । ಅರ್ಚತಿ । ನಿಘಾತಸ್ವರಃ ॥ ೧೮ ॥

॥ ಪ್ರತಿಪದಾರ್ಥ ॥

ಅರಿಃ—ಯಜ್ಞಮಾಡುವ ಅಥವಾ ಸ್ತೋತ್ರಮಾಡುವ ಯಜಮಾನನು । ನ್ಯೋಕಸೇ—ತನ್ನ ನಿಯತ ಸ್ಥಾನದಲ್ಲಿರುವ । ಬೃಹತೇ—ಪ್ರೌಢನಾದ ಅಥವಾ ಹೆಚ್ಚಾದ ಸಾಮರ್ಥ್ಯವುಳ್ಳ । ಇಂದ್ರಾಯ—ಇಂದ್ರನಿಗಾಗಿ। ಸುತೇಸುತೇ—ಇಂದ್ರನಿಗಾಗಿ ಸೋಮರಸವನ್ನು ಸಿದ್ಧಪಡಿಸುವ ಪ್ರತಿಸವನದಲ್ಲಿಯೂ । ಬೃಹತ್—ಹೆಚ್ಚಾದ । ಶೂಷಂ—(ಇಂದ್ರನ) ಬಲವನ್ನು (ಶಕ್ತಿಸಾಮರ್ಥ್ಯಗಳನ್ನು) । ಆ ಅರ್ಚತಿ ಇತ್—ಸ್ತೋತ್ರವನ್ನು ಅಥವಾ ಪ್ರಶಂಸೆಯನ್ನು ಮಾಡಿಯೇ ಮಾಡುವನು ॥

॥ ಭಾವಾರ್ಥ ॥

ಇಂದ್ರನ ಬಲವು ಅಥವಾ ಸಾಮರ್ಥ್ಯವು ಅತಿಶಯವಾದುದು. ಇಂತಹ ಇಂದ್ರನನ್ನು ಯಜ್ಞಮಾಡುವ ಯಜಮಾನನು ಸೋಮರಸವನ್ನು ಹಿಂಡಿ ಸಿದ್ಧಪಡಿಸುವ ಪ್ರತಿಸವನಕರ್ಮಾಧಿಕ್ಯದಲ್ಲಿಯೂ (ಪ್ರಾತಃಸವನಾದಿ ಮೂರು ಸವನಗಳಲ್ಲಿಯೂ) ಸ್ತೋತ್ರಾದಿಗಳಿಂದ ಇಂದ್ರನ ಶಕ್ತಿಸಾಮರ್ಥ್ಯಗಳನ್ನು ಪ್ರಶಂಸಿಸುತ್ತಾ ಆಹ್ವಾನ ಮಾಡುವನು.

English Translation.

The sacrificer glorifies the vast prowess of Indra, the mighty. the dweller in his permanent abode in every rite where soma is prepared.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಯಜಮಾನನು ಇಂದ್ರನನ್ನು ಸ್ತೋತ್ರಮಾಡುವನು ಎಂದು ಪ್ರಥಮಪುರುಷ ಪ್ರಯೋಗವಿದ್ದರೂ " ನಾನು ಇಂದ್ರನನ್ನು ಸ್ತೋತ್ರಮಾಡುವೆನು " ಎಂಬ ಉತ್ತಮಪುರುಷಪ್ರಯೋಗಾರ್ಥವನ್ನು ಪರೋಕ್ಷವಾಗಿ ಕವಿಯು ಹೇಳಿರುವನು.

ಸುತೇ ಸುತೇ—ಪ್ರತಿಸವನದಲ್ಲಿಯೂ. **ನಿತ್ಯವೀಪ್ಸಯೋರಿತಿ ವೀಪ್ಸಾಯಾಂ ದ್ವಿರ್ವಾವಃ** । ಪ್ರತಿಯೊಂದು ಎಂಬುದನ್ನು ಸೂಚಿಸುವುದಕ್ಕಾಗಿ ಒಂದೇ ಪದವನ್ನು ಎರಡಾವರ್ತಿ ಉಪಯೋಗಿಸುವುದು ಋಗ್ವೇದದಲ್ಲಿಯೂ ಇತರ ಗ್ರಂಥಗಳಲ್ಲಿಯೂ ರೂಢಿಯಾಗಿದೆ. **ಭರೇಭರೇ, ಹವೇಹವೇ, ಅಹರಹಃ** ಇತ್ಯಾದಿ. **ಸುತೇ-ಸುತೇ** ಎಂದರೆ ಪ್ರತಿಸವನ ಕರ್ಮದಲ್ಲಿಯೂ, ಸೋಮರಸವನ್ನು ಹಿಂಡಿ ತೆಗೆಯುವ ಪ್ರತಿಯೊಂದು ಕರ್ಮದಲ್ಲಿಯೂ ಎಂದರ್ಥವು.

ನ್ಯೋಕಸೇ—ನಿ+ಓಕಸೇ. ಇಲ್ಲಿ ನಿ ಎಂಬುದು ಉಪಸರ್ಗ. ಓಕಾಃ ಎಂಬ ಸಕಾರಾಂತಶಬ್ದಕ್ಕೆ ನಿವಾಸಸ್ಥಾನ, ಯಾವಾಗಲೂ ವಾಸಮಾಡುವ ಸ್ವಸ್ಥಾನ, permanent dwelling, abode etc., ಎಂದರ್ಥವು. ದಿವೌಕಸಃ ಎಂಬ ಶಬ್ದಕ್ಕೆ ಸ್ವರ್ಗವೇ ಸ್ವಸ್ಥಾನವಾಗಿ ಉಳ್ಳವರು ಎಂದರೆ ದೇವತೆಗಳು ಎಂದರ್ಥ. ಅದರಂತೆ ನಿ+ಓಕಸೇ= ನ್ಯೋಕಸೇ ಎಂಬ ಶಬ್ದದಲ್ಲಿ ನಿ ಎಂಬುವುದು ನಿಪಾತ (ಉಪಸರ್ಗ). ಇದಕ್ಕೆ ನಿಯತವಾದ ಎಂದರ್ಥವು. ಆದುದರಿಂದ ನ್ಯೋಕಸೇ ಎಂಬ ಶಬ್ದಕ್ಕೆ ನಿಯತಸ್ಥಾನವುಳ್ಳ ಎಂದರ್ಥವು.

ಆ ಇತ್—ಈ ಶಬ್ದಗಳಿಗೆ ಈ ಋಕ್ಕಿನಲ್ಲಿ ಆವಶ್ಯಕವಾದ ಅರ್ಥವೇನೂ ಇಲ್ಲ. ಪಾದಪೂರಣಕ್ಕಾಗಿ ಉಪಯೋಗಿಸಲ್ಪಟ್ಟಿರುವವು. ಅಥವಾ ಆ ಎಂಬ ಶಬ್ದಕ್ಕೆ ಅಪಿ ಶಬ್ದಾರ್ಥವನ್ನೂ ಹೇಳಬಹುದು ಎಂದು ಭಾಷ್ಯಕಾರರ ಅಭಿಪ್ರಾಯವು.

ಬೃಹತೇ—ಮಹತೇ, **ಮಹತಃ ಶರೀರೇಣ ವೀರ್ಯೇಣ ವಾ** ಎಂದರೆ ಶರೀರದ ಆಕಾರದಲ್ಲಿಯೂ ಪರಾಕ್ರಮದಲ್ಲಿಯೂ ದೊಡ್ಡವನು ಎಂದರ್ಥವು.

ಅರಿಃ—**ಋ ಗತೌ** । **ಇಯರ್ತಿ ಗಚ್ಛತೀತ್ಯನುಷ್ಠೇಯಂ ಕರ್ಮ ಪ್ರಾಪ್ನೋತೀತ್ಯರಿರ್ಯಜಮಾನಃ** । ಋ ಎಂಬ ಧಾತುವಿಗೆ ಹೋಗು, ಹೊಂದು ಎಂದರ್ಥವು. ಕರ್ಮವನ್ನು ಹೊಂದುವನು ಎಂದರೆ ಮಾಡುವವನು, ಯಜಮಾನನು, ಎಂದರ್ಥವು.

ಶೂಷಂ—ಬಲವು, ಸಾಮರ್ಥ್ಯವು. ಓಜಃ ಪಾಜಃ ಮೊದಲಾದ ಇಪ್ಪತ್ತೈಂಟು ಬಲನಾಮಗಳ ಮಧ್ಯದಲ್ಲಿ ಶೂಷಶಬ್ದವು ಪಠಿತವಾಗಿದೆ(ನಿ. ೩-೯). ಇಂದ್ರನ ಶಕ್ತಿಸಾಮರ್ಥ್ಯಗಳು, ಪರಾಕ್ರಮವು, ಮಹಿಮೆಯು ಇತ್ಯಾದಿ. ಶೂಷಶಬ್ದಕ್ಕೆ ಈ ಅರ್ಥವಿದ್ದರೂ ಇಂದ್ರನ ಪರವಾಗಿ ಈ ಶಬ್ದಪ್ರಯೋಗವಿರುವಾಗ ಸಾಧಾರಣವಾಗಿ ಸ್ತೋತ್ರವೆಂಬ ಅರ್ಥವೇ ಸರಿಯಾಗಿ ಹೊಂದುವುದು. ಈ ವಿಷಯದಲ್ಲಿ ಕೆಲವು ಉದಾಹರಣೆಗಳನ್ನು ಕೊಟ್ಟಿರುತ್ತೇವೆ—

ಪ್ರ ವನ್ಮಹೇ ಶವಸಾನಾಯ ಶೂಷಮಾಂಗೂಷಂ ಗಿರ್ವಣಸೇ ಅಂಗಿರಸ್ವತ್.
(ಋ. ಸಂ. ೧-೬೨-೧)

ಇಮಂ ಮಹೇ ವಿದಥ್ಯಾಯ ಶೂಷಂ ಶಶ್ವಚ್ಯತ್ವೇ ಈಡ್ಯಾಯ ಪ್ರ ಜಭ್ರುಃ ।
(ಋ. ಸಂ. ೩-೫೪-೧)

ಉಪ ವ ಏಷೇ ವಂದ್ಯೇಭಿಃ ಶೂಷ್ಯೈಃ ಪ್ರ ಯೇಹ್ವೀ ದಿವಶ್ಚಿತಯೇದ್ಭಿರರ್ಕೈಃ ॥
(ಋ. ಸಂ. ೫-೪೧-೬)

ಆ ಯಂ ಪೃಣಂತಿ ಹರಿಭಿರ್ನ ಧೇನವ ಇಂದ್ರಾಯ ಶೂಷಂ ಹರಿವಂತಮರ್ಚತ ॥
(ಋ. ಸಂ. ೧೦-೯೬-೨)

ಇತ್ಯಾದಿ ಅನೇಕ ಉದಾಹರಣೆಗಳಿವೆ.

ಅರ್ಚತಿ—ಅರ್ಚತಿ, ಗಾಯತಿ ಮೊದಲಾದ ನಲವತ್ತನಾಲ್ಕು ಅರ್ಚತ್ಯರ್ಥವಾಚಕಗಳಾದ ' ಧಾತುಗಳ ಮಧ್ಯದಲ್ಲಿ ಅರ್ಚತಿ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩-೧೪) ಅರ್ಚತಿಶಬ್ದಕ್ಕೆ ಗಾಯತಿ, ಸ್ತೌತಿ ಎಂದರೆ ಸ್ತೋತ್ರಮಾಡುವನು, ಪ್ರಶಂಸೆ ಮಾಡುವನು ಎಂದರ್ಥವು.

ವ್ಯಾಕರಣಪ್ರಕ್ರಿಯಾ

ಸುತೇಸುತೇ—ಷುಞ್ ಅಭಿಷವೇ ಧಾತುವಿನಮುಂದೆ ಕ್ತ ಪ್ರತ್ಯಯ. ಇದು ಪ್ರತ್ಯಯ ಸ್ವರದಿಂದ ಉದಾತ್ತ. ಸಪ್ತಮ್ಯಾ ಏಕವಚನಾಂತ ಸುತೇ— **ನಿತ್ಯವೀಪ್ಸಯೋಃ** (ಪಾ.ಸೂ. ೮-೧-೪) ಎಂಬುದರಿಂದ ದ್ವಿತ್ವ ಬಂದರೆ, ಸುತೇ ಸುತೇ ಎಂದಾಗುವುದು. ಇಲ್ಲಿ ಎರಡನೇ ಸುತೇ ಎಂಬುದಕ್ಕೆ **ತಸ್ಯಪರಮಾಮ್ರೇಡಿತಂ** (ಪಾ.ಸೂ. ೮-೧-೨) ದ್ವಿತ್ವವನ್ನು ಹೊಂದಿದುದರ ಎರಡನೆಯ ರೂಪಕ್ಕೆ ಅಮ್ರೇಡಿತಸಂಜ್ಞೆ ಬರುವುದು ಎಂಬುದರಿಂದ ಅಮ್ರೇಡಿತಸಂಜ್ಞೆ ಬಂದರೆ **ಅನುದಾತ್ತಂ ಚ** (ವ.ಸೂ. ೮-೧-೩) ಆಮ್ರೇಡಿತವು ಅನುದಾತ್ತವಾಗುವುದು ಎಂಬುದರಿಂದ ಅನುದಾತ್ತಸ್ವರ ಬರುವುದು.

ನ್ಯೋಕಸೇ—ನಿಯತಂ ಓಕಃ ಯಸ್ಯ ಸಃ ನ್ಯೋಕಃ ತಸ್ಮೈ ನ್ಯೋಕಸೇ. ನಿ, ಎಂಬುದು **ನಿಪಾತಾ ಆದ್ಯುದಾತ್ತಾಃ** (ಫಿ.ಸೂ. ೮೦) ಎಂಬುದರಿಂದ ಆದ್ಯುದಾತ್ತ. ಉದಾತ್ತವಾದ ಇಯ ಸ್ಥಾನದಲ್ಲಿ **ಇಕೋಯೆಣಚಿ** (ಪಾ. ಸೂ. ೬-೪-೭೭) ಎಂಬುದರಿಂದ ಯಣಾದೇಶ, ಈ ಉದಾತ್ತ ಇಕಾರಸ್ಥಾನದಲ್ಲಿ ಬಂದ ಯಕಾರದ ಮುಂದೆ ಇರುವ ಓಕಾರವು **ಉದಾರಿತ್ತ್ಯೋರ್ಯಣಸ್ವರಿತೋನುದಾತ್ತಸ್ಯ** (ಪಾ. ಸೂ, ೮-೨-೪) ಉದಾತ್ತ ಅಥವಾ ಸ್ವರಿತ ಇವುಗಳ ಸ್ಥಾನದಲ್ಲಿ ಬಂದ ಯಣ್ವರ್ಣದ ಮುಂದೆ ಇರುವ ಅನುದಾತ್ತಕ್ಕೆ ಸ್ವರಿತಸ್ವರ ಬರುವುದು ಎಂಬುದರಿಂದ ಸ್ವರಿತಬರುವುದು.

ಬೃಹತೇ— **ಬೃಹನ್ಮಹತೋರುಪಸಂಖ್ಯಾನಮ್** (ಪಾ. ಸೂ. ೬-೧-೧೭೩-೧) ಬೃಹತ್, ಮಹತ್ ಶಬ್ದಗಳ ಮುಂದೆ ಇರುವ ನದೀಸಂಜ್ಞಕವೂ ಅಜಾದಿಯಾದ ವಿಭಕ್ತಿಯೂ ಸಹ ಉದಾತ್ತವಾಗುವುದು ಎಂದು ವಾರ್ತಿಕಾರ್ಥ. ಇದರಿಂದ ಬೃಹತೇ ಎಂಬಲ್ಲಿ ಏ ಎಂಬ ಅಜಾದಿ ವಿಭಕ್ತಿಯು ಉದಾತ್ತ. ಯದ್ಯಪಿ **ವರ್ತಮಾನೇ ಪೃಷನ್ಮಹದ್ಭೃಹಜ್ಜಗಚ್ಛೃತವಚ್ಚ** (ಉ. ಸೂ. ೨-೨-೪೨) ಎಂಬ ಸೂತ್ರದಲ್ಲಿ **ಶತೃವಚ್ಚ** ಎಂದು ಅತಿದೇಶವಿರು

ವುದರಿಂದ ಶತುರನುಮೋನದ್ಯಜಾದೀ (ಪಾ. ಸೂ. ೬-೧-೧೭೩) ಎಂಬುದರಿಂದಲೇ ಇಲ್ಲಿ ಉದಾತ್ತಸ್ವರವು ಸಿದ್ಧವಾಗುವುದು ಆದರೂ, ನಿಯಮಾರ್ಥವಾಗಿ ವಾರ್ತಿಕವು ಆವಶ್ಯಕವು, ಶತೃವದಚ್ಛಾನದಿಂದ ನದ್ಯಜಾದಿ ಶಸಾದಿ ವಿಭಕ್ತಿಗಳಿಗೆ ಉದಾತ್ತಬರುವ ಪಕ್ಷದಲ್ಲಿ ಬೃಹತ್ ಮಹತ್ ಶಬ್ದಗಳ ಮುಂದೆ ಇರುವ ನದ್ಯಜಾದಿಶಸಾದಿ ವಿಭಕ್ತಿಗಳಿಗೇ ಬರುವುದು ಎಂದು ನಿಯಮಶರೀರ. ಇದರಿಂದ ಸೃಸತ್, ಜಗತ್ ಇವುಗಳ ಮುಂದೆ ಇರುವುದಕ್ಕೆ ಬರುವುದಿಲ್ಲ ಎಂದು ಏರ್ಪಡುವುದು. ಆದ್ದರಿಂದ ಬೃಹನ್ಮಹತೋರುಪಸಂಖ್ಯಾನಂ ಎಂಬ ವಾರ್ತಿಕವು ಆವಶ್ಯಕವು.

ಆರಿಃ--ಋ ಗತೌ ಧಾತು. ಇದರಮುಂದೆ ಅಚೆಇಃ (ಉ. ಸೂ, ೪-೫೭೪) ಎಂಬುದರಿಂದ ಇಕಾರ ಪ್ರತ್ಯಯ. ಸಾರ್ವಧಾತುಕಾರ್ಧಧಾತುಕಯೋಃ (ಪಾ ಸೂ ೭-೩-೮೪) ಎಂಬುದರಿಂದ ಗುಣ. ಉರಣ್ರಪರಃ (ಪಾ. ಸೂ. ೧-೧-೫೧) ಎಂಬುದರಿಂದ ರಪರವಾಗಿ ಬರುವುದು. ಅರಿ ಎಂದಾಗುವುದು. ಪ್ರತ್ಯಯ ಸ್ವರದಿಂದ ಇಕಾರ ಉದಾತ್ತ.

ಇಂದ್ರಾಯ-ಋಜ್ರೇಂದ್ರಾಗ್ರ—(ಉ. ಸೂ. ೨-೧೭೬) ಎಂಬುದರಿಂದ ರನ್ ಪ್ರತ್ಯಯ. ಪ್ರತ್ಯಯವು ನಿತ್ತು. ಆದ್ದರಿಂದ ಪ್ರತ್ಯಯಾಂತದ ಆದಿವರ್ಣವಾದ ಇಕಾರವು ಉದಾತ್ತವಾಗುವುದು.

ಶೂಷಮ್—ಫಿಷಃ—(ಫಿ. ಸೂ. ೧) ಎಂಬುದರಿಂದ ಪ್ರಾತಿಪದಿಕಸ್ವರಬರುವುದು.

ಆರ್ಚತಿ—ತಿಙ್ಶಿತಿಙಃ (ಪಾ. ಸೂ. ೮-೧-೨೮) ಎಂಬುದರಿಂದ ಸರ್ವಾನುದಾತ್ತ ಬರುವುದು ॥ ೧೦ ॥

ಇತಿ ನವಮಂ ಸೂಕ್ತಂ ಸಮಾಪ್ತಮ್.

॥ ಓಂ ॥

ಹತ್ತನೆಯ ಸೂಕ್ತವು

ಗಾಯಂತೀತಿ ಸೂಕ್ತಸ್ಯ ಮಂತ್ರಸಂಖ್ಯಾ ಛಂದೋವಿಶೇಷಶ್ಚೈವಮನುಕ್ರಮ್ಯತೇ । ಗಾಯಂತಿ ದ್ವಾದಶಾನುಷ್ಟುಭಂ ತ್ರಿತಿ । ತುಹಿಹವೇತ್ಯಾದಿಪರಿಭಾಷಾಯಾಂ । ಅನು ೧೨-೩ । ತುಶಬ್ದಸ್ಯ ಸೂಕ್ತದ್ವಯೇ ಪರಿಭಾಷಿತತ್ವಾದಸ್ಯ ಸೂಕ್ತಸ್ಯ ವಕ್ಷ್ಯಮಾಣಸ್ಯ ಚಾನುಷ್ಟುಭತ್ವೇಂ ದ್ರೈಷ್ಟುವ್ಯಂ । ಋಷಿದೇವತೇ ಪೂರ್ವವತ್ ಅಭಿಪ್ಲವಷಡಹಸ್ಯೋಕ್ಥ್ಯೇಷು ತೃತೀಯಸವನೇಽಚ್ಛಾವಾಕಸ್ಯ ಗಾಯಂತೀತಿ ಸ್ತೋತ್ರಿಯಸ್ತೃಚಃ । ಏಹ್ಯೂಷ್ವಿತಿ ಖಂಡೇ ಗಾಯಂತಿ ತ್ವಾ ಗಾಯತ್ರಿಣ ಆ ತ್ವಾ ಗಿರೋ ರಥೀರಿವ । ಆ. ೭-೪ । ಇತಿ ಸೂತ್ರಿತಂ ॥

ಅನುವಾದವು—ಗಾಯಂತಿ ತ್ವಾ ಎಂಬ ಸೂಕ್ತದ ಮಂತ್ರಸಂಖ್ಯಾ ಮತ್ತು ಛಂದೋ ವಿಶೇಷವು ಗಾಯಂತಿ ದ್ವಾದಶಾನುಷ್ಟುಭಂ ತ್ರಿತಿ ಎಂದು ಸೂಕ್ತಾನುಕ್ರಮಣಿಕೆಯಲ್ಲಿ ಹೇಳಿರುವುದು. (ಅನು. ೧೨-೩) ಇಲ್ಲಿ ತು ಎಂಬ ಶಬ್ದವು ಈ ಸೂಕ್ತ ವಾತ್ತು ಮುಂದಿನ ಸೂಕ್ತ ಇವೆರಡರ ಛಂದಸ್ಸೂ ಸಹ ಅನುಷ್ಟುಪ್ ಛಂದಸ್ಸೆಂದು ತಿಳಿಸುವುದಕ್ಕಾಗಿ ಪಾರಿಭಾಷಿಕವಾಗಿ ಉಪಯೋಗಿಸಲ್ಪಟ್ಟಿರುವುದು. ಈ ಸೂಕ್ತದ ಋಷಿ ಮತ್ತು ದೇವತೆಯು ಹಿಂದಿನ ಸೂಕ್ತದಂತೆಯೇ. ವಿನಿಯೋಗವು-ಅಭಿಪ್ಲವಷಡಹವೆಂಬ ಯಾಗದ ತೃತೀಯಸವನದಲ್ಲಿ ಉಕ್ಥಮಂತ್ರಗಳನ್ನು ಪಠಿಸುವಾಗ ಅಚ್ಛಾವಾಕನೆಂಬ ಋತ್ವಿಜನು ಗಾಯಂತಿ ಎಂಬ ತೃಚವನ್ನು ಸ್ತೋತ್ರಿಯ

ಶಸ್ತ್ರಮಂತ್ರವನ್ನಾಗಿ ಪರಿಸುವನು. ಈ ವಿಷಯವು ಆಶ್ವಲಾಯನ ಶ್ರೌತಸೂತ್ರದಲ್ಲಿ **ವಿಹ್ಯೋಷು** ಎಂಬ ಖಂಡದಲ್ಲಿ (ಆ. ಸೂ. ೭-೮) **ಗಾಯಂತಿ ತ್ವಾ ಗಾಯತ್ರಿಣ** (ಋ. ಸಂ. ೧-೧೦-೧ ; ಸಾಮ ೩೪೨ ; ೧೩೪೪) ಮತ್ತು **ಆ ತ್ವಾ ಗಿರೋ ರಥೀರಿವ** (ಋ. ಸಂ. ೮-೯೫-೧ ; ಸಾಮ ೩೪೯) ಎಂಬ ಋಕ್ಕುಗಳನ್ನು ಪಠಿಸಬೇಕೆಂದು ಹೇಳಿರುವುದು.

ಸೂಕ್ತ—೧೦

॥ ಮಂಡಲ—೧ ॥ ಅನುವಾಕ—೩ ॥ ಸೂಕ್ತ—೧೦ ॥

॥ ಅಷ್ಟಕ —೧ ॥ ಅಧ್ಯಾಯ—೧ ॥ ವರ್ಗ—೧೯, ೨೦ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೧-೧೨ ॥

॥ ಋಷಿಃ—ಮಧುಚ್ಛಂದಾ ವೈಶ್ವಾಮಿತ್ರಃ ॥

॥ ದೇವತಾ—ಇಂದ್ರಃ ॥

॥ ಛಂದಃ—ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಗಾಯಂತಿ ತ್ವಾ ಗಾಯತ್ರಿಣೋಽರ್ಚಂತ್ಯರ್ಕಮರ್ಕಿಣಃ ।
ಬ್ರಹ್ಮಾಣಸ್ತ್ವಾ ಶತಕ್ರತ ಉದ್ವಂಶಮಿವ ಯೇಮಿರೇ ॥ ೧ ॥

॥ ಪದಪಾಠಃ ॥

ಗಾಯಂತಿ। ತ್ವಾ । ಗಾಯತ್ರಿಣಃ । ಅರ್ಚಂತಿ । ಅರ್ಕಂ । ಅರ್ಕಿಣಃ ॥
ಬ್ರಹ್ಮಾಣಃ । ತ್ವಾ । ಶತಕ್ರತೋ ಇತಿ ಶತಽಕ್ರತೋ । ಉತ್ । ವಂಶಂ ಽಇವ ।
ಯೇಮಿರೇ ॥ ೧ ॥

॥ ಸಾಯಣಭಾಷ್ಯಂ ॥

ಹೇ ಶತಕ್ರತೋ ಬಹುಕರ್ಮನ್ಬಹುಪ್ರಜ್ಞ ವೇಂದ್ರ ತ್ವಾಂ ಗಾಯತ್ರಿಣ ಉದ್ಗಾತಾರೋ ಗಾಯಂತಿ। ಸ್ತುವಂತಿ । ಅರ್ಕಿಣೋಽರ್ಚನಹೇತುಮಂತ್ರಯುಕ್ತಾ ಹೋತಾರೋಽರ್ಕಮರ್ಚನೀಯಮಿಂದ್ರಮರ್ಚಂತಿ । ಶಸ್ತ್ರಗತೈರ್ಮಂತ್ರೈಃ ಪ್ರಶಂಸಂತಿ । ಬ್ರಹ್ಮಾಣೋ ಬ್ರಹ್ಮಪ್ರಭೃತಯ ಇತರೇ ಬ್ರಾಹ್ಮಣಾಸ್ತ್ವಮುದ್ಯೇಮಿರೇ । ಉನ್ನತಿಂ ಪ್ರಾಪಯಂತಿ । ತತ್ರ ದೃಷ್ಟಾಂತಃ । ವಂಶಮಿವ । ಯಥಾ ವಂಶಾಗ್ರೇ

ನೈತ್ಯಂತಃ ಶಿಲ್ಪಿನಃ ಪ್ರೌಢಂ ವಂಶಮುಪ್ಪನ್ನಂ ಕುರ್ವಂತಿ । ಯಥಾ ವಾ ಸನ್ಮಾರ್ಗವರ್ತಿನಃ ಸ್ವಕೀಯಂ ಕುಲಮುನ್ನತಂ ಕುರ್ವಂತಿ । ತದ್ವತ್ । ಏತಾಮೃಚಂ ಯಾಸ್ಕ ಏವಂ ವ್ಯಾಚಷ್ಟ । ಗಾಯಂತಿ ತ್ವಾ ಗಾಯತ್ರಿಣಃ ಪ್ರಾರ್ಚಂ॑ತ್ತೇಽರ್ಕಮರ್ಕಿಣೋ ಬ್ರಹ್ಮಾಣಸ್ತ್ವಾ ಶತಕ್ರತ ಉದ್ಯೇಮಿರೇ ವಂಶಮಿವ । ವಂಶೋ ವನಶಯೋ ಭವತಿ ವನನಾಚ್ಛ್ರೋಯತ ಇತಿ ವಾ । ನಿ. ೫-೫ । ಅರ್ಕಶಬ್ದಂ ಚ ಬಹುಧಾ ವ್ಯಾಚಷ್ಟೇ। ಅರ್ಕೋ ದೇವೋ ಭವತಿ ಯದೇನಮರ್ಚಂತ್ಯರ್ಕೋ ಮಂತ್ರೋ ಭವತಿ ಯದೇನೇನಾರ್ಚಂತ್ಯರ್ಕಮನ್ನಂ ಭವತ್ಯರ್ಚತಿ ಭೂತಾನ್ಯರ್ಕೋ ವೃಕ್ಷೋ ಭವತಿ ಸ ವೃತಃ ಕಟುಕಿಮ್ನಾ । ನಿ. ೫-೪ । ಇತಿ॥ ಗಾಯಂತಿ । ಶಪ್ತಿಙೌ । ಪಿತ್ತ್ವಾಲ್ಲಸಾರ್ವಧಾತುಕತ್ವಾಚ್ಚಾನುದಾತ್ತೌ । ಧಾತುರುದಾತ್ತಃ । ಗಾಯತ್ರಿಣಃ । ಗಾಯತ್ರಂ ಸಾಮ ಯೇಷಾಮುದ್ಗಾತೃಣಾಮಸ್ತಿ ತೇ । ಅತ ಇನಠನೌ । ಪ್ರತ್ಯಯಸ್ವರೇಣೇಕಾರ ಉದಾತ್ತಃ । ಅರ್ಚಂತಿ । ಅರ್ಚ ಪೂಜಾಯಾಂ । ಭ್ವಾದಿಕಃ । ಶಪ್ತಿಜಾವನುದಾತ್ತೌ! ಧಾತುಸ್ವರ ಏವ ಪಾದಾದಿತ್ವಾನ್ನನಿಘಾತಃ । ಅರ್ಕಂ । ಅರ್ಚಂತ್ಯೇಭಿರಿತ್ಯರ್ಕಾ ಮಂತ್ರಾಃ । ತೈರರ್ಚನೀಯತಯಾ ತದಾತ್ಮಕ ಇಂದ್ರೋಽಪಿ ಲಕ್ಷಣಯಾರ್ಕಃ । ಪುಂಸಿ ಸಂಜ್ಞಾಯಾಂ ಘಃ ಪ್ರಾಯೇಣ । ಪಾ. ೩-೩ ೧೧೮ । ಇತಿ ಕರಣೇ ಘಃ । ಚಜೋಃ ಕು ಘಿಣ್ಯತೋಃ । ಪಾ. ೭-೩-೫೨ । ಇತಿ ಚಕಾರಸ್ಯ ಕುತ್ವಂ । ಕಕಾರಃ। ಪ್ರತ್ಯಯಸ್ವರೇಣಾಂತೋದಾತ್ತಃ । ಅರ್ಕಾ ಮಂತ್ರಾ ಏಷಾಂ ಸಂತೀತ್ಯರ್ಕಿಣೋ ಹೋತಾರಃ । ಏಕಾಷ್ಟ। ರಾಷ್ಟ್ರತೋ ಜಾತೇಃ ಸಪ್ತಮ್ಯಾಂ ಚ ನ ತೌ ಸ್ಮೃತೌ । ಪಾ. ೫-೨-೧೧೫-೨ । ಇತಿ ಕೈದಂತಾದಿನಿಠನೌ ಯದ್ಯಪಿ ಪ್ರತಿಷಿದ್ಧೌ ತಥಾಪ್ಯತ್ರ ವ್ಯತ್ಯಯಾದಿನಿಃ । ಪ್ರತ್ಯಯಸ್ವರೇಣೇಕಾರ ಉದಾತ್ತಃ । ಬ್ರಹ್ಮಾಣಃ - ಪ್ರಾತಿಪದಿಕಸ್ವರೇಣಾಂತೋದಾತ್ತಃ। ಶತಕ್ರತೋ । ನಿಘಾತಃ । ಸಂಹಿತಾಯಾಮವಾದೇಶೇ ಲೋಪಃ ಶಾಕಲ್ಯಸ್ಯ । ಪಾ. ೮-೩-೧೯ । ಇತಿ ವಕಾರಲೋಪಃ । ವಂಶಶಬ್ದಃ ಪ್ರಾತಿಪದಿಕಸ್ವರೇಣಾಂತೋದಾತ್ತಃ । ಇವೇನ ವಿಭಕ್ತ್ಯಲೋಪಃ ಪೂರ್ವಪದಪ್ರಕೃತಿಸ್ವರತ್ವಂ ಚ । ಪಾ. ೨-೧-೪-೨ । ಇತಿ ಸ ಏವ ಶಿಷ್ಯತೇ । ಯೇಮಿರೇ । ಯಮು ಉಪರಮೇ । ತಿಙ್ಙತಿಙ ಇತಿ ನಿಘಾತಃ ॥

॥ ಪ್ರತಿಪದಾರ್ಥ ॥

(ಹೇ) ಶತಕ್ರತೋ— ಬಹಳವಾದ ಸಾಹಸ ಕರ್ಮಗಳನ್ನೆಸಗುವ ಅಥವಾ ಬಹುಪ್ರಜ್ಞಾಶಾಲಿಯಾದ ಎಲೈ ಇಂದ್ರನೇ । ತ್ವಾಂ—ನಿನ್ನನ್ನು । ಗಾಯತ್ರಿಣಃ—ಸಾಮವೇದಗಾನ ಮಾಡುವ ಉದ್ಗಾತೃಗಳೆಂಬ ಋತ್ವಿಜರು । ಗಾಯಂತಿ—ಸಾಮವೇದಮಂತ್ರಗಳಿಂದ ಗಾನರೂಪವಾಗಿ ಸ್ತೋತ್ರಮಾಡುವರು । ಅರ್ಕಿಣಃ— ಋಗ್ವೇದಸಂಬಂಧವಾದ ಋಕ್ಕುಗಳಿಂದ ಸ್ತುತಿಸುವ ಹೋತೃಗಳೆಂಬ ಋತ್ವಿಜರು । ಅರ್ಕಂ—ಪೂಜಿಸಲು ಅಥವಾ ಸ್ತುತಿಸಲ್ಪಡಲು ಯೋಗ್ಯನಾದ ಇಂದ್ರನನ್ನು । ಅರ್ಚಂತಿ—ಶಸ್ತ್ರಮಂತ್ರಪಠನದಿಂದ ಪ್ರಶಂಸೆಮಾಡುವರು । ಬ್ರಹ್ಮಾಣಃ--ಬ್ರಹ್ಮನೇ ಮೊದಲಾದ ಋತ್ವಿಜರಾದಿಯಾದ ಇತರ ಬ್ರಾಹ್ಮಣರು । ತ್ವಾಂ-ನಿನ್ನನ್ನು । ವಂಶಮಿವ-ಬೊಂಬಿನಂತೆ । ಉತ್ ಯೇಮಿರೇ—ಮೇಲಕ್ಕೆತ್ತುವರು(ವಿಶೇಷವಾಗಿ ಹೊಗಳುವರು).

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಬಹು ಸಾಹಸಕೃತ್ಯಗಳನ್ನು ಮಾಡುವವನು ಅಥವಾ ಬಹು ಪ್ರಜ್ಞಾಶಾಲಿಯು. ಇಂತಹ ನಿನ್ನನ್ನು ಯಜ್ಞಾದಿ ಕರ್ಮಗಳಲ್ಲಿ ಉದ್ಗಾತೃಗಳೆಂಬ ಋತ್ವಿಜರು ಸಾಮಗಾನಗಳಿಂದ ನಿನ್ನ

ಪರಾಕ್ರಮವನ್ನು ಗಾನಮಾಡಿ ಹೊಗಳುವರು; ಹೋತೃಗಳೆಂಬ ಋತ್ವಿಜರು ತಮ್ಮ ವೇದವಾದ ಋಗ್ವೇದ ಮಂತ್ರಗಳಿಂದ ಪೂಜಿಸಲ್ಪಡಲು ಯೋಗ್ಯನಾದ ನಿನ್ನನ್ನು ಸ್ತುತಿಸುವರು. ಬ್ರಹ್ಮನೇ ಮೊದಲಾದಿದ್ದಾದ ಇತರ ಬ್ರಾಹ್ಮಣರು ನಿನ್ನನ್ನು ಬೊಂಬನ್ನು ಮೇಲಕ್ಕೆತ್ತುವಂತೆ ಸ್ತೋತ್ರಾದಿಗಳಿಂದ ಹೊಗಳಿ ನಿನ್ನ ಕೀರ್ತಿಯನ್ನು ಹೆಚ್ಚುಮಾಡುವರು (ಅಭಿವೃದ್ಧಿಪಡಿಸುವರು).

English Translation.

O Indra, with many daring deeds or great knowledge, the chanters of the Sama sing about you, the reciters of the Riks praise you who are worthy of praise, and the (priests called) Brahmanas raise you aloft like a bamboo pole.

॥ ವಿಶೇಷ ವಿಷಯಗಳು ॥

ಈ ಋಕ್ಕು ಈ ಸೂಕ್ತದಲ್ಲಲ್ಲದೆ ತೈ. ಸಂ. ೧-೬-೧೨-೨; ಸಾಮ. ೩೪೨; ೧೩೪೪; ವಿ. ೫-೫ ರಲ್ಲಿಯೂ ಪರಿತವಾಗಿದೆ. ಇದರ ಅರ್ಥವು ಅಥವಾ ಇದರಲ್ಲಿ ಹೇಳಿರುವ ವಿಷಯವು ೬ನೇ ಸೂಕ್ತದ ೧ನೇ ಋಕ್ಕಿನ ಅರ್ಥವನ್ನೇ ಬಹುಮಟ್ಟಿಗೆ ಹೋಲುವುದು. ಈ ಋಕ್ಕಿನ ಪೂರ್ವಾರ್ಧದ ಎಂದರೆ ೧ ಮತ್ತು ೨ನೇ ಪಾದಗಳ ಅರ್ಥವು ವಿಶದವಾಗಿದ್ದರೂ ಮೂರದೇ ಪಾದದಲ್ಲಿ ಹೇಳಿರುವ ವಿಷಯವು ಸ್ವಲ್ಪ ತೊಡಕಾಗಿರುವುದು. ಇಲ್ಲಿ ಬ್ರಹ್ಮಾಣಃ ಎಂಬ ಶಬ್ದದ ಅರ್ಥವು ಸರಿಯಾಗಿ ಹೊಂದುವುದಿಲ್ಲ. ಯಜ್ಞಕರ್ಮದಲ್ಲಿ ಹೋತೃ, ಅಧ್ವರ್ಯು, ಉದ್ಗಾತೃ ಎಂಬ ಮೂರು ಋತ್ವಿಗ್ವಿಗ್ದವರ ಕಾರ್ಯಕಲಾಪಗಳನ್ನು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುವುದಕ್ಕಾಗಿ ಬ್ರಹ್ಮನೆಂಬ ಒಬ್ಬ ಋತ್ವಿಜನಿರುವನು. ಇವನು ಮೂರು ವೇದಗಳನ್ನೂ ಯಜ್ಞಾನುಷ್ಠಾನ ಕ್ರಮವನ್ನು ಚೆನ್ನಾಗಿ ತಿಳಿದವನಾಗಿರಬೇಕು. ಇವನು ಯಜ್ಞದ ಕಾರ್ಯಕಲಾಪಗಳಲ್ಲಿ ವಿಶೇಷವಾಗಿ ಭಾಗವಹಿಸುವುದಿಲ್ಲವಾದರೂ ಯಜ್ಞವು ಸರಿಯಾಗಿ ನಡೆಯುವಂತೆ ನೋಡಿಕೊಳ್ಳುತ್ತಾ ಇತರ ಋತ್ವಿಜರಿಗೆ ಅವಶ್ಯಕವಾದ ಕಾರ್ಯಾನುಷ್ಠಾನಗಳಲ್ಲಿ ಅನುಜ್ಞೆಯನ್ನು ಕೊಡುತ್ತಾ ಯಜ್ಞವು ಸಾಂಗವಾಗಿ ನಡೆಯುವುದಕ್ಕೆ ಜವಾಬ್ದಾರನಾಗಿರುವನು. ಈ ವಿಧವಾದ ಬ್ರಹ್ಮವರ್ಗಕ್ಕೆ ಸೇರಿದ ಋತ್ವಿಜರಿಂದೂ ಇತರ ಬ್ರಾಹ್ಮಣರಿಂದೂ ಭಾಷ್ಯಕಾರರು ಬ್ರಹ್ಮಾಣಃ ಎಂಬ ಶಬ್ದಕ್ಕೆ ಅರ್ಥಮಾಡಿರುವರು. ಅಥವಾ ಬ್ರಹ್ಮನೆಂದರೆ ಸ್ತೋತ್ರನೆಂದು ಅರ್ಥವಿರುವುದು. ಆದುದರಿಂದ ಬ್ರಹ್ಮಾಣಃ ಎಂಬ ಶಬ್ದಕ್ಕೆ ಸ್ತೋತ್ರಮಾಡುವವರು ಎಂಬ ಅರ್ಥವನ್ನಾದರೂ ಹೇಳಬಹುದು. ಮೂರನೆಯ ಪಾದದಲ್ಲಿ ಉಪಮಾನಾರ್ಥವಾಗಿ ಹೇಳಿರುವ ವಂಶಮಿವ ಎಂಬ ಶಬ್ದಗಳ ಪ್ರಯೋಗವು ತೊಡಕಾಗಿಯೇ ಇರುವುದು. ವಂಶವೆಂದರೆ ಬಿದಿರು, ಬೊಂಬು ಎಂಬ ವೃಕ್ಷವಿಶೇಷವು. ಬೊಂಬನ್ನು ಮೇಲಕ್ಕೆತ್ತುವಂತೆ (ಅಥವಾ ಎತ್ತಿ ನೆಡುವಂತೆ?) ಎಂಬ ಉಪಮಾನವು ಚೆನ್ನಾಗಿ ಹೊಂದುವುದಿಲ್ಲ. ಬೊಂಬನ್ನು ಎತ್ತುವಂತೆ ನಿನ್ನನ್ನು ಎತ್ತುವರು ಎಂದರೆ ನಿನ್ನನ್ನು ಪ್ರಶಂಸೆಮಾಡಿ ನಿನ್ನ ಕೀರ್ತಿಪ್ರತಿಷ್ಠೆಗಳನ್ನು ಹೆಚ್ಚಿಸುವರು, ನಿನ್ನ ಗುಣಗಾನ ಮಾಡುವುದರಿಂದ ನಿನಗೆ ಉನ್ನತಸ್ಥಾನವನ್ನು ಕಲ್ಪಿಸುವರು ಎಂದು ಕವಿಯ ಅಭಿಪ್ರಾಯವಿರಬಹುದು. ಅಥವಾ ವಂಶಶಬ್ದಕ್ಕೆ ಕುಲ, ಗೋತ್ರ ಮನೆತನ ಎಂಬ ಇನ್ನೊಂದರ್ಥವಿರುವುದರಿಂದ ಅದರಂತೆ ಹೇಳುವುದಾದರೆ—ಸತ್ಕರ್ಮಾಚರಣೆಯಿಂದ ಅಥವಾ ವಿಶೇಷ ಸಾಹಸಕೃತ್ಯಗಳಿಂದ ಕುಲದ ಗೌರವ ಅಥವಾ ಪ್ರತಿಷ್ಠೆಯನ್ನು ಹೆಚ್ಚಿಸುವಂತೆ ಎಂಬ ಅರ್ಥವನ್ನು ಹೇಳಬಹುದು. ಈ ಎರಡು ವಿಧವಾದ ಅರ್ಥವನ್ನೂ ಭಾಷ್ಯಕಾರರು ಹೇಳಿರುವರು.

ಗಾಯತ್ರಿಣಃ—**ಗಾಯತ್ರಂ ಸಾಮ ಯೇಷಾಮುದ್ಗಾತ್ಯಾಣಾಮಸ್ತಿ ತೇ** ಗಾಯತ್ರವೆಂಬ ಸಾಮ ಮಂತ್ರವನ್ನು ಗಾನಮಾಡುವವರು ಎಂದರ್ಥವು ಅಥವಾ ಸಾಮವೇದದಲ್ಲಿ ಗಾನಮಾಡಲ್ಪಡುವ ಅನೇಕ ಮಂತ್ರಗಳು ಗಾಯತ್ರೀ ಛಂದಸ್ಸಿನ ಋಗ್ವೇದಮಂತ್ರಗಳಾಗಿರುವುದರಿಂದ ಇವುಗಳನ್ನು ಗಾನಮಾಡುವ ಉದ್ಗಾತೃ ಮೊದಲಾದ ಋತ್ವಿಜರಿಗೆ **ಗಾಯತ್ರಿಣಃ**—ಗಾಯತ್ರೀ ಛಂದಸ್ಸಿನ ಋಕ್ಕುಗಳನ್ನು ಗಾನಮಾಡುವವರು ಎಂದು ಹೇಳುವುದು ರೂಢಿಯಾಗಿರಬಹುದು.

ಅರ್ಚಂತಿ—**ಅರ್ಚ ಪೂಜಾಯಾಂ**—ಅರ್ಚ ಎಂಬ ಧಾತುವಿಗೆ ಪೂಜೆಮಾಡು ಎಂದರೆ ಸ್ತುತಿಸು ಎಂದರ್ಥವು.

ಅರ್ಕಂ—**ಅರ್ಚಂತ್ಯೇಭಿರಿತ್ಯರ್ಕಾಃ ಮಂತ್ರಾಃ** ॥ ಸ್ತೋತ್ರಮಾಡಲು ಉಪಯೋಗಿಸುವುದರಿಂದ ಮಂತ್ರಗಳಿಗೆ ಅರ್ಕಗಳೆಂದು ಹೆಸರು. ಇಲ್ಲಿ ಅರ್ಕಂ ಎಂದರೆ ಇಂತಹ ಅರ್ಕಗಳಿಂದ ಅಥವಾ ಮಂತ್ರಗಳಿಂದ ಸ್ತುತಿಸಲ್ಪಡುವ ಇಂದ್ರನನ್ನು ಎಂದರ್ಥವು.

ಈ ಋಕ್ಕಿಗೆ ಯಾಸ್ಕಮಹರ್ಷಿಯು ತಮ್ಮ ನಿರುಕ್ತದಲ್ಲಿ ಈ ರೀತಿ ಅರ್ಥವಿವರಣೆ ಮಾಡಿರುವರು—

ಅರ್ಕಃ ॥ **ಅರ್ಕೋ ದೇವೋ ಭವತಿ ಯದೇನಮರ್ಚತಿ** ॥
ಅರ್ಕೋ ಮಂತ್ರೋ ಭವತಿ ಯೇದನೇನಾರ್ಚಂತಿ ॥
ಅರ್ಕಮನ್ನಂ ಭವತ್ಯರ್ಚತಿ ಭೂತಾನಿ ॥
ಅರ್ಕೋ ವೃಕ್ಷೋ ಭವತಿ ಸಂವೃತ್ತಃ ಕಟುಕಿಮ್ನಾ ॥

ಅರ್ಕ ಶಬ್ದಕ್ಕೆ ನಾಲ್ಕು ವಿಧನಾದ ಅರ್ಥವನ್ನು ಹೇಳಿರುವರು—

ದೇವಃ—**ತಾವತ್ಸರ್ವ ಏವಾರ್ಕ ಇತ್ಯುಚ್ಯತೇ ಯತ್-ಯಸ್ಮಾತ್ ಏನಂ-ದೇವಂ ಅರ್ಚಂತಿ ಸ್ತೋತಾರಃ**—ಅರ್ಕ ಎಂದರೆ ದೇವತೆಯು. ಏಕೆಂದರೆ ಇದರಿಂದ ಭಕ್ತರು ಯಾರನ್ನು ಪೂಜಿಸುವುದಕ್ಕೆ ಉಪಯೋಗಿಸುವಲ್ಲೋ ಅಂತಹ ವ್ಯಕ್ತಿ ಅಥವಾ ದೇವನು. ಎಂದರೆ ಭಕ್ತರು ಪೂಜಿಸುವ ವಸ್ತುವಿಗೆ(ದೇವತೆಗೆ)ಅರ್ಕವೆಂದು ಹೆಸರು.

ಅರ್ಕೋ ಮಂತ್ರೋ ಭವತಿ-ಯತ್-ಯಸ್ಮಾತ್, ಅನೇನ-ಮಂತ್ರೇಣ, ಅರ್ಚಂತಿ ಸ್ತೋತಾರಃ ತಸ್ಮಾದರ್ಕಃ—ಅರ್ಕವೆಂದರೆ ಮಂತ್ರವೆಂದೂ ಅರ್ಥವಾಗುವುದು. ಏಕೆಂದರೆ ಸ್ತೋತ್ರಮಾಡುವವರು ಇದರಿಂದ (ಅರ್ಕದಿಂದ ಅಥವಾ ಮಂತ್ರದಿಂದ) ದೇವತೆಯನ್ನು ಅರ್ಚಿಸುವರು. ಆದುದರಿಂದ ಅರ್ಕಶಬ್ದಕ್ಕೆ ಮಂತ್ರವೆಂದೂ ಹೆಸರು.

ಅರ್ಕಮನ್ನಂ ಭವತಿ—**ತದ್ಧಿ ಅರ್ಚಂತಿ ಭೂತಾನಿ, ಯೋ ಹಿ ಪೂಜ್ಯಃ ತಸ್ಯಾನ್ನಮಪಿ ಸಂಸ್ಕಾರ ವಿಶೇಷೇಣ ಸಂಸ್ಕೃತಂ ಪೂಜಾಯಾಂ ಕ್ರಿಯತೇ, ಪೂಜ್ಯಂ ಚ ಸರ್ವಸ್ಯೈವಾನ್ನಂ**—ಅರ್ಕವೆಂದರೆ ಅನ್ನವೆಂದೂ ಅರ್ಥವಾಗುವುದು. ಅನ್ನವು (ಆಹಾರವು) ಸಮಸ್ತ ಪ್ರಾಣಿಗಳಿಗೂ ಅವಶ್ಯಕವಾಗಿರುವುದರಿಂದ ಅನ್ನವನ್ನು ಎಲ್ಲರೂ ಆದರಿಂದ ಗೌರವಿಸಿ ಅಪೇಕ್ಷಿಸುವರು. ಎಂದರೆ ಎಲ್ಲರೂ ಪ್ರೀತ್ಯಾದರಗಳಿಂದ ಗೌರವಿಸಿ ಬಯಸುವುದರಿಂದ ಅರ್ಕಶಬ್ದಕ್ಕೆ ಅನ್ನವೆಂದೂ ಅರ್ಥವಾಗುವುದು.

ಅರ್ಕೋ ವೃಕ್ಷೋ ಭವತಿ ಯ ಏಷ ಪ್ರಸಿದ್ಧಃ | ಸಂವೃತ್ತಃ ಹಿ ಸಂಗತಃ ಸಂವ್ಯಾಪ್ತಃ ಕಟುಕಿಮ್ನಾ ಕಟುಕಭಾವೇನ ಭವತಿ—ಇನ್ನು ಅರ್ಕಶಬ್ದಕ್ಕೆ ವೃಕ್ಷವೆಂಬ ಹೆಸರು ಪ್ರಸಿದ್ಧವಾಗಿಯೇ ಇದೆ. ಅರ್ಕ

ವೃಕ್ಷವೆಂದರೆ ಎಕ್ಕದಗಿಡವೆಂದು ಕರ್ನಾಟಕ ಭಾಷೆಯಲ್ಲಿ ಹೇಳುವರು. ಇದರ ಸಮಿತ್ತುಗಳನ್ನು ಹೋಮಗಳಲ್ಲಿ ಉಪಯೋಗಿಸುವುದರಿಂದಲೂ ಇದನ್ನು ಔಷಧಾದಿಗಳಲ್ಲಿ ಬಳಸುವ ರೂಢಿಯಿರುವುದರಿಂದಲೂ ಅರ್ಕವೃಕ್ಷವು ಎಲ್ಲರಿಗೂ ತಿಳಿದ ವಸ್ತುವಾಗಿದೆ. ಇದು ಕಹಿಯಾಗಿರುವುದರಿಂದ ಕಟುಕಿವೆನ್ನಾ ಎಂದು ಹೇಳುವರು.

ಅರ್ಕಶಬ್ದದ ವಿವರಣೆಯ ಉದಾಹರಣೆಗಾಗಿ ಯಾಸ್ಕರು ಪ್ರಸಕ್ತವಾದ ಈ **ಗಾಯಂತಿ ತ್ವಾ ಗಾಯತ್ರಿಣಃ** ಎಂಬ ಋಕ್ಕನ್ನೇ ತೆಗೆದುಕೊಂಡು ಇದರಲ್ಲಿರುವ ವಂಶಶಬ್ದದ ಅರ್ಥವಿವರಣೆಯನ್ನೂ ಮಾಡಿರುವರು—

ಗಾಯಂತಿ ತ್ವಾ ಗಾಯತ್ರಿಣಃ ಪ್ರಾರ್ಚಂತಿ ತೇऽರ್ಕಮರ್ಕಿಣೋ ಬ್ರಾಹ್ಮಣಾಸ್ತ್ರ್ ಶತಕ್ರತೋ ಉದ್ಯೇಮಿರೇ ವಂಶಮಿವ ವಂಶೋ ವನಶಯೋ ಭವತಿ ವನನಾಚ್ಛ್ಯೋಯತೇ ಇತಿ ವಾ ॥

(ನಿ. ೫-೪)

ಇದಕ್ಕೆ ದುರ್ಗಾಚಾರ್ಯರ ವ್ಯಾಖ್ಯಾನವು ಈರೀತಿ ಇರುವುದು—

ಗಾಯಂತಿ ತ್ವಾ ಗಾಯತ್ರಿಣಃ—ಸ್ತುವಂತಿ ತ್ವಾಂ ಸಾಮಗಾಃ ಸಾಮಭಿಃ । **ಅರ್ಚಂತ್ಯರ್ಕಮರ್ಕಿಣಃ**—ಪೂಜಯಂತಿ ತ್ವಾಂ ಋಗ್ಭಿಃ ಹೋತಾರೋ ಮಂತ್ರಿಣಃ । ಏನಮನೇನ ಪ್ರಕಾರೇಣ ಸರ್ವ ಏತೇ ಬ್ರಾಹ್ಮಣಾಃ ಯಾಜ್ಞೇ ಕರ್ಮಣಿ ಹೇ **ಶತಕ್ರತೋ ಉದ್ಯೇಮಿರ-ಉದ್ಯೇಮಿರೇ ವಂಶಮಿವ** ತ್ವಾಂ ಸ್ತುತಿಭಿಃ ಹವಿರ್ಭಿಶ್ಚ ಯಜ್ಞೇಷು ತವೈವ ಮಹಿಮಾನಂ ವರ್ಧಯಂತೀತ್ಯರ್ಥಃ । **ವಂಶೋ ವನಶಯೋ ಭವತಿ ವನೇ ಶಯಿತ ಇವಾಸ್ತೇ, ವನನಾಚ್ಛ್ಯೋಯತೇ ಇತಿ ವಾ** ಸಂಭಜನಾದ್ವಾ ವಲ್ಮಭಃ ॥ ಏವಮತ್ರ ದೇವಃ ಅರ್ಕಶಬ್ದೇನೋಚ್ಯತೇ ಮಂತ್ರಸ್ಯಾರ್ಕಶಬ್ದವಾಚ್ಯತ್ವೇ **ಅರ್ಚಂತ್ಯರ್ಕಮರ್ಕಿಣಃ** ಇತ್ಯೇಷ ಏವ ನಿಗಮಃ । **ಅರ್ಕಿಣೋ** ಹಿ ಮಂತ್ರಿಣ ಏವಾಭಿಪ್ರೇತಾಃ । ವೃಕ್ಷಸ್ತು ಪ್ರಸಿದ್ಧ ಏವ । ತೇನ ನಿಗಮಸ್ತದಭಿಧಾಯಕೋ ನೈವಾಸ್ತಿ ॥

ಇಲ್ಲಿ ಯಾಸ್ಕರು **ಬ್ರಹ್ಮಾಣಃ** ಎಂಬ ಶಬ್ದಕ್ಕೆ ಬ್ರಾಹ್ಮಣಾಃ ಎಂದರ್ಥ ಹೇಳಿರುವರು **ಬ್ರಾಹ್ಮಣ** ರೆಂದರೆ ಬ್ರಾಹ್ಮಣವರ್ಣದವರೂ ಮತ್ತು ಯಜ್ಞಯಾಗಾದಿಗಳಲ್ಲಿ ಭಾಗವಹಿಸುವ ಬ್ರಹ್ಮನೇ ಮೊದಲಾದ ಋತ್ವಿಜರೂ ಎಂದಾಗುವುದು. ವಂಶಶಬ್ದಕ್ಕೆ—**ವಂಶೋ ವನಶಯೋ ಭವತಿ ವನನಾಚ್ಛ್ಯೋಯತೇ ಇತಿ ವಾ** ಎಂದರ್ಥ ಹೇಳಿರುವರು. ಎಂದರೆ ವನದಲ್ಲಿ ಇರುವುದರಿಂದ ಇದಕ್ಕೆ ವಂಶವೆಂದು ಹೆಸರು ಅಥವಾ ಬಿದಿರು ಮೆಳೆಗಳು ಗಾಳಿಯ ಹೊಡೆತದಿಂದ ಒಂದಕ್ಕೊಂದು ತಿಕ್ಕುವಾಗ ಶಬ್ದಮಾಡುವುದರಿಂದ ಇದಕ್ಕೆ ವಂಶವೆಂದು ಹೆಸರು ಅಥವಾ ಬಳ್ಳಿಗಳಿಂದ ಸುತ್ತುವರಿಯಲ್ಪಡುವುದರಿಂದ ಇದಕ್ಕೆ ವಂಶವೆಂದು ಹೆಸರು ಎಂದು ಹೇಳಿರುವರು.

ಅರ್ಕಿಣಃ—**ಅರ್ಚನಹೇತುಮಂತ್ರಯುಕ್ತಾ ಹೋತಾರಃ** । **ಅರ್ಕಾ ಮಂತ್ರಾ ಏಷಾಂ ಸಂತೀತ್ಯರ್ಕಿಣಃ ಹೋತಾರಃ** ॥ ಅರ್ಕ ಶಬ್ದಕ್ಕೆ (ಋಕ್ಕು) ಮಂತ್ರವೆಂಬ ಅರ್ಥವಿವರಣೆಯಿರುವುದರಿಂದ ಆ ಮಂತ್ರಗಳಿಂದ ಸ್ತುತಿಸುವವರಿಗೆ ಅರ್ಕಿಣಃ ಎಂದು ಹೆಸರು ಎಂದರೆ ಶಸ್ತ್ರರೂಪವಾದ ಋಕ್ಕುಗಳನ್ನು ಪಠಿಸುವ ಹೋತೃ ವರ್ಗದ ಋತ್ವಿಜರು ಎಂದರ್ಥವು.

ಬ್ರಹ್ಮಾಣಃ—ಈ ಶಬ್ದಕ್ಕೆ ಭಾಷ್ಯಕಾರರು ಬ್ರಹ್ಮನೆಂಬ ಋತ್ವಿಜನೇ ಮೊದಲಾದ ಬ್ರಾಹ್ಮಣರು ಎಂದರ್ಥ ಹೇಳಿರುವರು. ಯಾಸ್ಕರು ಸಾಮಾನ್ಯವಾಗಿ ಬ್ರಾಹ್ಮಣರೆಂದೇ ಅರ್ಥವಿವರಣೆ ಮಾಡಿರುವರು.

ಶತಕ್ರತೋ—ಈ ಶಬ್ದಾರ್ಥವಿವರಣೆಯನ್ನು ಹಿಂದೆಯೇ ಹೇಳಿರುವೆವು.

ವಂಶಮಿವ—ಈ ಶಬ್ದದ ವಿವರಣೆಯೂ ಯಾಸ್ಕರ ಅರ್ಥಾನುವಾದದಲ್ಲಿಯೇ ಇರುವುದು.

॥ ವ್ಯಾಕರಣಪ್ರಕ್ರಿಯಾ ॥

ಗಾಯನ್ತಿ—ಗೈಶಬ್ದೇ ಲಟ್ ಪರಸ್ಮೈಪದ ಪ್ರಥಮಪುರುಷ ಬಹುವಚನ ಝಿಪ್ರತ್ಯಯ. **ಝೋನ್ತಃ** (ಪಾ.ಸೂ. ೬-೧-೩) ಎಂಬುದರಿಂದ ಝ್ ಗೆ ಅನ್ತ್ ಆದೇಶ, ಶಪ್ ವಿಕರಣ, ಶಿತ್ತ್ವಾದಪ್ರತ್ಯಯಪರದಲ್ಲಿರುವುದರಿಂದ **ಆದೇಚ ಉಪದೇಶೇಽಶಿತಿ** (ಪಾ. ಸೂ. ೬-೧-೪೫) ಎಂಬುದರಿಂದ ಐಗೆ ಆಕಾರಬರುವುದಿಲ್ಲ. **ವಿಚೋಯೋವಾಯಾವಃ** (ಪಾ.ಸೂ. ೬-೧-೭೮) ಎಂಬುದರಿಂದ ಆಯ್ ಆದೇಶ, ಗಾಯನ್ತಿ ಎಂದಾಗುವುದು. ಶಪ್ಪು ಶಿತ್ತಾದ್ದರಿಂದ ಅನುದಾತ್ತ. ಅನ್ತಿ ಎಂಬ ಲಸ್ಥಾನಿಕವಾದ ಸಾರ್ವಧಾತುಕವು ಶಪ್ ಎಂಬ ಅದುಪದೇಶದ ಮುಂದೆ ಇರುವುದರಿಂದ **ತಾಸ್ಯನುದಾತ್ತಾನ್ಙಿದುಪದೇಶಾತ್**—(ಪಾ ಸೂ. ೬-೧-೧೭೬) ಎಂಬುದರಿಂದ ಅನುದಾತ್ತ. ಗಾ ಎಂಬಲ್ಲಿ ಆಕಾರವು ಧಾತುಸ್ವರದಿಂದ ಉದಾತ್ತ.

ಗಾಯತ್ರಿಣಃ—ಗಾಯತ್ರ ಎಂದು ಸಾಮಕ್ಕೆ ಹೆಸರು. ಗಾಯತ್ರಂ ಸಾಮ ಯೇಷಾಂ ಉದ್ಗಾತೄಣಾಂ ಅಸ್ತಿ ತೇ (ಯಾವ ಉದ್ಗಾತೃಗಳಿಗೆ ಗಾಯತ್ರ ಸಾಮವಿದೆಯೋ ಅವರು) ಎಂದು ವಿಗ್ರಹವಾದಾಗ **ಅತಇನಿಠನೌ** (ಪಾ. ಸೂ- ೫-೨-೧೧೫) ಎಂಬುದರಿಂದ ಇನಿ ಪ್ರತ್ಯಯ. **ಯಸ್ಯೇತಿಚೆ** (ಪಾ. ಸೂ ೬-೪-೧೪೮) ಎಂಬುದರಿಂದ ಪ್ರತ್ಯಯದ ಹಿಂದಿರುವ ಅಕಾರಕ್ಕೆ ಲೋಪ. ಪ್ರಥಮಾ ಬಹುವಚನ ಗಾಯತ್ರಿಣಃ. ಪ್ರತ್ಯಯಸ್ವರದಿಂದ ಇಕಾರ ಉದಾತ್ತ.

ಅರ್ಚನ್ತಿ—ಅರ್ಚ ಪೂಜಾಯಾಂ, ಭ್ವಾದಿಯಲ್ಲಿರುವ (೧ನೇ ಗಣ) ಧಾತು, ಶಪ್ಪು ಪಿತ್ತಾದ್ದರಿಂದಲೂ ಅನ್ತಿ ಎಂಬುದು ಅದುಪದೇಶದ ಮುಂದಿರುವ ಲಸಾರ್ವಧಾತುಕವಾದ್ದರಿಂದಲೂ ಅನುದಾತ್ತ. ಧಾತುಸ್ವರ ನಿಲ್ಲುವುದು. ಪಾದದ ಆದಿಯಲ್ಲಿ ಇರುವುದರಿಂದ **ತಿಙ್ಙತಿಙಃ** (ಪಾ. ಸು. ೮-೧-೨೮) ಎಂಬುದರಿಂದ ಅನುದಾತ್ತ ಬರುವುದಿಲ್ಲ:

ಅರ್ಕಮ್—ಅರ್ಚನ್ತಿ ಏಭಿಃ ಇತಿ, ಅರ್ಕಾಃ, ಮಂತ್ರಾಃ (ಯಾವ ಮಂತ್ರಗಳಿಂದ ಪೂಜಿಸುತ್ತಾರೆಯೋ ಆ ಮಂತ್ರಗಳಿಗೆ ಅರ್ಕಗಳು ಎನ್ನುವರು) ಆ ಮಂತ್ರಗಳಿಂದ ಪೂಜಿಸಲ್ಪಡುವುದರಿಂದ ಮಂತ್ರಾತ್ಮಕನಾದ ಇಂದ್ರನೂ ಸಹ ಲಕ್ಷಣೆಯಿಂದ ಅರ್ಕಪದದಿಂದ ಬೋಧಿಸಲ್ಪಡುವನು. **ಪುಂಸಿಸಂಜ್ಞಾಯಾಂಘಃ ಪ್ರಾಯೇಣ** (ಪಾ. ಸೂ. ೩-೩೧೮) ಪುಲ್ಲಿಂಗದಲ್ಲಿ ಸಂಜ್ಞೆತೋರುವಾಗ ಧಾತುಗಳಮುಂದೆ ಕರಣ, ಅಧಿಕರಣ ಎಂಬ ಅರ್ಥಗಳಲ್ಲಿ ಪ್ರಾಯಃ ಘ ಪ್ರತ್ಯಯ ಬರುವುದು ಎಂಬುದರಿಂದ ಅರ್ಚ ಧಾತುವಿನ ಮುಂದೆ ಘ ಪ್ರತ್ಯಯ ಬಂದರೆ **ಅರ್ಚ್ ಅ**, ಪ್ರತ್ಯಯವು ಶಿತ್ತು (ಘಕಾರೇತ್ಸಂಜ್ಞಕ)ವಾದ್ದರಿಂದ **ಚೆಜೋಃಕುಘಿಣ್ಯತೋಃ** (ಪಾ.ಸೂ. ೭-೩-೫೨) ಘಿತ್ಪ್ರತ್ಯಯ, ಣ್ಯತ್ಪ್ರತ್ಯಯಗಳು ಪರದಲ್ಲಿರುವಾಗ ಚಕಾರ ಜಕಾರಗಳಿಗೆ ಕವರ್ಗ ಬರುವುದು. ಅಂದರೆ ಚಕಾರಕ್ಕೆ ಕಕಾರ ಜಕಾರಕ್ಕೆ ಗಕಾರ ಎಂದು ಅರ್ಥ, ಈ ಸೂತ್ರದಿಂದ ಚಕಾರಕ್ಕೆ ಕಕಾರಬಂದರೆ ಅರ್ಕ ಎಂದಾಗುವುದು. ಪ್ರತ್ಯಯಸ್ವರದಿಂದ ಅಂತೋದಾತ್ತ.

ಅರ್ಕಿಣಃ—ಅರ್ಕಾಃ ಮಂತ್ರಾಃ ಏಷಾಂ ಸನ್ತೀತ್ಯರ್ಕಿಣಃ, ಹೋತೃಗಳು ಎಂದರ್ಥ. **ಅತಇನಿಠನೌ** (ಪಾ. ಸೂ. ೫-೨-೧೧೫) ಎಂಬುದರಿಂದ ಇನಿಪ್ರತ್ಯಯ, ಯದ್ಯಪಿ ಅರ್ಕಶಬ್ದವು ಕೃದಂತ. ಆದ್ದರಿಂದ **ಏಕಾಕ್ಷರಾತ್ಕೃತೋಜಾತೇಸ್ಸಪ್ತಮ್ಯಾಂಚೇನ ತೌಸ್ಮೃತೌ** (ಪಾ. ಮ. ೫-೨-೧೧೫-೧) ಏಕಾಕ್ಷರ ಶಬ್ದ, ಕೃದಂತ ಶಬ್ದ, ಜಾತಿವಾಚಕ ಇವುಗಳ ಮುಂದೆಯೂ ಸಪ್ತಮ್ಯರ್ಥದಲ್ಲಿಯೂ ಸಹ ಇನಿ ಠನ್‌ಗಳು ಬರುವುದಿಲ್ಲ, ಎಂಬ ಮಹಾ

ಭಾಸ್ಯವಚನದಂತೆ ಅರ್ಕಶಬ್ದದ ಮುಂದೆ ಇನಿ ಪ್ರತ್ಯಯ ಬರುವುದು ಉಚಿತವಲ್ಲ. ಆದರೂ ಇಲ್ಲಿ ವ್ಯತ್ಯಯದಿಂದ ಇನಿಪ್ರತ್ಯಯ ಬರುವುದು. ಪ್ರತ್ಯಯ ಸ್ವರದಿಂದ ಇಕಾರ ಉದಾತ್ತ.

ಬ್ರಹ್ಮಾಣಃ—ಪ್ರಾತಿಪದಿಕ ಸ್ವರದಿಂದ ಅಂತೋದಾತ್ತ.

ಶತಕ್ರತೋ—**ಅಮನ್ತ್ರಿತಸ್ಯ ಚ** (೮-೧-೧೯)ಎಂಬುದರಿಂದ ಅನುದಾತ್ತ. ಸಂಹಿತಾಕಾಲದಲ್ಲಿ ಉವರ್ಣ ಪರದಲ್ಲಿರುವಾಗ **ಏಚೋಯವಾಯಾವಃ** (ಪಾ. ಸೂ. ೬-೧-೭೮) ಎಂಬುದರಿಂದ ಓಗೆ **ಅವ್** ಆದೇಶ. ನಂತರ **ಲೋಪಶ್ಯಾಕಲ್ಯಸ್ಯ**, (ಪಾ. ಸೂ. ೮-೩-೧೯) ಎಂಬುದರಿಂದ ವಕಾರಕ್ಕೆ ಲೋಪ. **ಪೂರ್ವತ್ರಾಸಿದ್ಧಂ** (ಪಾ. ಸೂ. ೮-೨-೧) ಎಂಬುವುದರಿಂದ ವ ಲೋಪವು ಅಸಿದ್ಧವಾಗುವುದರಿಂದ **ಆದ್ಗುಣಃ** (ಪಾ. ಸೂ. ೬-೧-೮೭) ಎಂಬುದರಿಂದ ಗುಣ ಬರುವುದಿಲ್ಲ.

ವಂಶಮಿವ—ವಂಶಶಬ್ದವು ಪ್ರಾತಿಪದಿಕಸ್ವರದಿಂದ ಅಂತೋದಾತ್ತ. ಇದಕ್ಕೆ ಇವ ಶಬ್ದದೊಂದಿಗೆ ಸಮಾಸ ಬಂದಮೇಲೆಯೂ ಇವೇನ ವಿಭಕ್ತ್ಯಲೋಪಃ **ಪೂರ್ವಪದಪ್ರಕೃತಿಸ್ವರತ್ವಂ ಚ** (ಪಾ. ಸೂ. ೨-೧-೪) ಎಂಬುದರಿಂದ ಆದೀ ನಿಲ್ಲುವುದು.

ಯೇಮಿರೇ—ಯಮುಉಪರಮೇ ಧಾತು ಲಿಟ್ ಆತ್ಮನೇಪದಿ ಪ್ರ-ಪು-ಬಹುವಚನ ಝಿ. **ಲಿಟಸ್ತ ಝಯೋರೇ ಶಿರೇಚ್** (ಪಾ. ಸದ. ೩-೪-೮೧) ಎಂಬುದರಿಂದ ಇರೇಚ್ ಆದೇಶ. **ಲಿಟಿಧಾತೋರನಭ್ಯಾಸಸ್ಯ** (ಪಾ.ಸೂ. ೬-೧-೮)ಎಂಬುದರಿಂದ ದ್ವಿತ್ವ. ಯಮ್, ಯಮ್+ಇರೇ ಎಂದಿರುವಾಗ **ಆತ ಏಕ ಹಲ್ಮಧ್ಯೇಽನಾದೇ ಶಾದೇರ್ಲಿಟಿ** (ಪಾ. ಸೂ. ೬-೪-೧೨೦) ಕಿತ್ತಾದಲಿಟ್ಟು ಪರದಲ್ಲಿರುವಾಗ, ಲಿಣ್ಣಿಮಿತ್ತಾದೇಶಾದ್ಯವಯವಕ ಭಿನ್ನಾಂಗ ಸಂಬಂಧಿಯಾದ ಅಸಂಯುಕ್ತವರ್ಣ ಮಧ್ಯದಲ್ಲಿರುವ ಹ್ರಸ್ವಾಕಾರಕ್ಕೆ ಏತ್ವವೂ, ಅಭ್ಯಾಸಕ್ಕೆ ಲೋಪವೂ ಸಹ ಬರುವುದು ಎಂಬುದರಿಂದ ಏತ್ವಾಭ್ಯಾಸಲೋಪಗಳು ಬಂದರೆ ಯೇಮಿರೇ ಎಂದಾಗುವುದು. ಯಮು ಉಪರಮೇ ಎಂಬಧಾತುವು ಭ್ವಾದಿಯಲ್ಲಿ ಪರಸ್ಮೈಪದವಾಗಿರುವುದು. ಆದರೂ ಇಲ್ಲಿ ವ್ಯತ್ಯಯದಿಂದ ಆತ್ಮನೇಪದ ಬಂದಿರುವುದು. **ತಿಜ್ಜತಿಜಃ** (ಪಾ. ಸೂ. ೪-೧-೨೮) ಎಂಬುದರಿಂದ ಸಂಜ್ಞಾನುದಾತ್ತ ಬರುವುದು ॥ ೧ ॥

॥ ಸಂಹಿತಾಪಾಠಃ ॥

ಯತ್ಸಾನೋಃ ಸಾನುಮಾರುಹದ್ಭೂರ್ಯಸ್ಪಷ್ಟ ಕರ್ತ್ವಂ ।
ತದಿಂದ್ರೋ ಅರ್ಥಂ ಚೇತತಿ ಯೂಥೇನ ವೃಷ್ಣಿರೇಜತಿ ॥ ೨ ॥

॥ ಪದಪಾಠಃ ॥

ಯತ್ । ಸಾನೋಃ । ಸಾನುಂ । ಆ । ಅರುಹತ್ । ಭೂರಿ । ಅಸ್ಪಷ್ಟ । ಕರ್ತ್ವಂ ॥
ತತ್ । ಇಂದ್ರಃ । ಅರ್ಥಂ । ಚೇತತಿ । ಯೂಥೇನ । ವೃಷ್ಣಿಃ । ಏಜತಿ ॥ ೨ ॥

॥ सायणभाष्यं ॥

यदद्यदा सानोः सानुमारुहत् यजमानः सोमवल्लीसमिदाद्याहरणायैकस्मात्पर्वतभागादपरं पर्वतभागमारूढवान् । तथा भूरिप्रभूतं कर्त्वं कर्म सोमयागरूपसमस्पष्ट स्पृष्टवान्। उपक्रान्तवानित्यर्थः । तत्तदानीमिन्द्रोऽर्थं-यजमानस्य प्रयोजनं चेतयति । जानाति । ज्ञात्वा च वृष्णिः कामानां वर्षिता सन् यूथेन मरुद्गणेन सहैजति । कंपते । स्वस्थानाद्यज्ञभूमिमागन्तुमुद्युङ्क्त इत्यर्थः ॥ सानोः । षणु दाने । सनोति ददाति निवसतामवकाशमिति सानुः । व्यसनि-जनिचरिचटिरहिभ्योऽञ्णिण् । उ.८-३ । णित्त्वादुपधायाः वृद्धिः । ञ्नित्त्वादाद्युदात्तत्वं-च । अरुहत् । रुहेर्लङ् तिप् शप् संज्ञापूर्वकोऽविधिरनित्यः । परि ६३-८ । इति लघूपधगुणोऽत्र न भवति । लुङ्लङ्लृङ्क्ष्वडुदात्तः । सति शिष्टत्वात्स्वरे एव शिष्यते । निपात्यैर्व्यदृदिहंतेति । पा ७-८-३८ । निषेधान्निघातोऽत्र न भवति । भूरि । आदिश्चादिभूशुभ्यः क्विन् । उ ४-३३ । कित्त्वाद्गुणाभावः । नित्त्वादाद्युदात्तः । अस्पष्ट । स्पृश बाधनस्पर्शनयोः । स्मरितञ्जित इत्यात्मनेपदम् । लङः प्रथमपुरुषैकवचनम् त । बहुलं छन्दसीति शपो लुक् । व्रश्चादिषत्वष्टुत्वे । पा ८-२-३६, ८-४-४८ । लुङ्लङ्लृङ्क्ष्वडुदात्त इत्यडागम उदात्तः । स एव शिष्यते । अनुषंगेण यच्छब्दयोगान्निघाताभावः कर्त्वं । डुकृञ् करणे । अन्येभ्योऽपि दृश्यंते । पा. ३-२-७३ । इति निच् । गुणोरपरत्वं । विचेः सर्वापहारी लोपः । करोः भावः कर्त्वं। अर्थं । अर्तेररुषिकुषिगार्तिभ्यस्थन् । उ. २-४ । नित्त्वादाद्युदात्तः । यूथेन । तिथपृष्ठगूथयूथप्रोथाः । उ. २-७३ । इति थक्प्रत्ययान्तोनिपातितः । वृष्णिः । निरित्यनुवृत्तौ सृवृषिभ्यां कित् । उ. ४-४ । इति निप्रत्ययान्तः । कित्त्वाद्गुणाभावः । प्रत्ययस्वरेणान्तोदात्तः । एजति एजृ कंपने । तिप्तिझ इति निघातः ॥

॥ प्रतिपदार्थ ॥

यत्—यावाग । (यजमानನು ಸೋಮಲತಾ ಮತ್ತು ಸಮಿತ್ಸಂಗ್ರಹಣಾರ್ಥವಾಗಿ) सानोः—ಒಂದು ಗಿರಿಶಿಖರದಿಂದ । सानुं— ಮತ್ತೊಂದು ಶಿಖರವನ್ನು । ಆ ಆರುಹತ್— ಹತ್ತುವನ್ನೋ । (ಮತ್ತು) भूरि—ಬಹಳವಾದ । कर्त्वं—(ಸೋಮಯಾಗರೂಪವಾದ) ಕರ್ಮವನ್ನು । अस्पष्ट—ಪ್ರಾರಂಭ ಮಾಡಿದನೋ । तत्—ಆಗ । इन्द्रः—ಇಂದ್ರನು । अर्थं—ಯಜಮಾನನ ಇಷ್ಟವನ್ನು । चेतति—ತಿಳಿಯುವನು । (ತಿಳಿದಬಳಿಕ) वृष्टिः—ಕಾಮವೃಷ್ಟಿಪ್ರದನಾದ ಇಂದ್ರನು । यूथेन—ಮರುದ್ಗಣಸಹಿತನಾಗಿ । एजति--(ತನ್ನ ನಿವಾಸದಿಂದ ಕದಲಿ ಎಂದರೆ ಹೊರಟು) ಯಜಮಾನನ ಸವಿೂಪಕ್ಕೆ ಬರಲು ಉದ್ಯುಕ್ತನಾಗುವನು.

॥ भावार्थ ॥

ಬೆಟ್ಟದ ಮೇಲೆ ಬೆಳೆದಿರುವ ಸೋಮಲತೆಯನ್ನೂ ಯಜ್ಞಕ್ಕೆ ಬೇಕಾಗುವ ಸಮಿತ್ತುಗಳನ್ನೂ ತರುವುದಕ್ಕಾಗಿ ಯಜ್ಞಮಾಡುವ ಯಜಮಾನನು ಪರ್ವತಕ್ಕೆ ಹೋಗಿ ಅಲ್ಲಿ ಒಂದು ತುದಿಯಿಂದ ಮತ್ತೊಂದು ತುದಿಗೆ

ಹೋಗುತ್ತಾ ಸೋಮಲತೆಯನ್ನು ಹುಡುಕಿ ತಂದು ಯಜ್ಞಾರಂಭವನ್ನು ಮಾಡುವನು. ಅದನ್ನು ತಿಳಿದ ಇಂದ್ರನು ಯಜಮಾನನ ಇಷ್ಟಾರ್ಥಗಳನ್ನು ಕೊಡುವವನಾದುದರಿಂದ ಅದಕ್ಕಾಗಿ ಯಜ್ಞಭೂಮಿಗೆ ತನ್ನ ಸ್ನೇಹಿತರಾದ ಮರುದ್ಗಣಗಳೊಡಗೂಡಿ ತನ್ನ ಸ್ವಸ್ಥಾನದಿಂದ ಹೊರಟುಬರುವನು.

English Translation.

When Indra the showerer of blessings knows the object of the worshipper who has wandered from one ridge of the mountain to the other in quest of soma plant and who has just begun the sacrifice, he (Indra) approaches the sacrificial place with the troop of (Maruts).

॥ ವಿಶೇಷವಿಷಯಗಳು ॥

ಈ ಋಕ್ಕಿನ ಅರ್ಥವನ್ನು ಜೊಂದಿಸುವುದಕ್ಕಾಗಿ ಅನೇಕ ಶಬ್ದಗಳನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗಿರುವುದು. **ಸಾನೋಃ ಸಾನುಮಾರುಹತ್**--ಬೆಟ್ಟದ ಒಂದು ತುದಿಯಿಂದ (ಶಿಖರ ಅಥವಾ ತಪ್ಪಲು ಪ್ರದೇಶ) ಮತೊಂದು ತುದಿಯನ್ನು ಏರುವನು ಎಂದೆ, ಯಾರು ಏರುವನು ಮತ್ತು ಏತಕ್ಕಾಗಿ ಏರುವನು ಎಂಬ ಪ್ರಶ್ನೆಯು ಉದ್ಭವಿಸುವುದು. ಇಲ್ಲಿ ಅರ್ಥವನ್ನು ಹೊಂದಿಸುವುದಕ್ಕಾಗಿ ಭಾಷ್ಯಕಾರರು--ಯಜಮಾನನು ಸೋಮಲತೆಯನ್ನೂ ಸಮಿದಾದಿ ಯಜ್ಞಸಾಧನಗಳನ್ನೂ ತರುವುದಕ್ಕಾಗಿ ಎಂಬ ಶಬ್ದಗಳನ್ನು ಅಧ್ಯಾಹಾರ ಮಾಡಿರುವರು. ಮತ್ತು ಯೂಥಶಬ್ದಗೆ ಹಿಂಡು ಸಮೂಹ, ಗಣ ಎಂಬರ್ಥವಿರುವುದರಿಂದ, ಯಾವ ಸಮೂಹವೆಂಬ ಪ್ರಶ್ನೆಗೆ ಮರುತ್ತುಗಳ ಸಮೂಹ ಎಂದು ಮರುತ್ ಶಬ್ದವನ್ನೂ ಅಧ್ಯಾಹಾರ ಮಾಡಿರುವರು. ಇದಲ್ಲದೆ ವೃಷ್ಣಿ ಶಬ್ದಕ್ಕೆ ವರ್ಷಿತಾ ಎಂದರೆ ವೃಷ್ಟಿಪ್ರದನು, ಮಳೆಯನ್ನು ಉಂಟುಮಾಡುವವನು ಎಂದರ್ಥವಿರುವುದರಿಂದ ವೃಷ್ಟಿಗೆ ಸಹಾಯಕವಾಗಿ ಮರುದ್ಗಣಗಳೊಡನೆ ಬರುವನು ಎಂಬ ಅರ್ಥವು ಸರಿಹೋಗುವುದಾದರೂ ಭಾಷ್ಯಕಾರರು ವೃಷ್ಣಿಶಬ್ದಕ್ಕೆ ಕಾಮಾನಾಂ ವರ್ಷಿತಾ—ಇಷ್ಟಾರ್ಥಗಳೆಂಬ ಮಳೆಯನ್ನು ಕೊಡುವವನು ಎಂದು ಅರ್ಥ ಹೇಳಿರುವುದರಿಂದ ಮಳೆಯಲ್ಲದ ಇತರ ಇಷ್ಟಾರ್ಥಗಳನ್ನು ಕೊಡುವುದಕ್ಕೆ ಮರುದ್ಗಣಗಳ ಸಹಾಯವು ಅವಶ್ಯಕವೇ ಎಂಬ ಸಂದೇಹಕ್ಕೆ ಅವಕಾಶವಿರುವುದು. ಆದುದರಿಂದ ಈ ಋಕ್ಕಿನಲ್ಲಿರುವ **ಯೂಥೇನ** ಎಂಬ ಶಬ್ದಕ್ಕೆ **ಮರುದ್ಗಣದಿಂದ** ಎಂಬ ಅರ್ಥವೇ ಕವಿಯ ಅಭಿಪ್ರಾಯವಾಗಿತ್ತೆಂಬುದು ಸಂದೇಹಾಸ್ಪದವಾಗಿದೆ. ವೆಂಕಟಮಾಧವರು ವಸುಸಮೂಹೇನ ಎಂಬ ಅರ್ಥವನ್ನು ಹೇಳಿರುವರು. ಆದುದರಿಂದ ದೇವತೆಗಳ ಸಮೂಹದೊಡನೆ ಎಂದು ಅರ್ಥ ಹೇಳುವುದೇ ಯುಕ್ತವಾಗಿ ತೋರುವುದು.

ಯತ್, ತತ್—ಇಲ್ಲಿ ಈ ಶಬ್ದಗಳು ಯಚ್ಛಬ್ದತಚ್ಛಬ್ದಗಳ ಯಾವ ವಿಭಕ್ತಿವಚನಗಳೂ ಅಲ್ಲ, ಅವ್ಯಯಗಳು. ಇವುಗಳಿಗೆ **ಯದಾ ತದಾ** ಯಾವಾಗ, ಆಗ ಎಂಬ ಅರ್ಥವನ್ನು ಹೇಳಬೇಕು.

ಸಾನೋಃ, ಸಾನುಂ—ಗಿರಿಶಿಖರ ಅಥವಾ ಬೆಟ್ಟದ ತಪ್ಪಲು. ಸೋಮಲತೆಯು ವಿಶೇಷವಾಗಿ ಬೆಟ್ಟಪ್ರದೇಶಗಳಲ್ಲಿ ಬೆಳೆಯುವುದರಿಂದಲೂ, ಮೈದಾನದ ಸಮಭೂಮಿಯಲ್ಲಿ ಬೆಳೆಯುವ ಲತೆಗಿಂತಲೂ ಬೆಟ್ಟದ ಹೆಚ್ಚು ಹೆಚ್ಚು ಎತ್ತರ ಪ್ರದೇಶಗಳಲ್ಲಿ ಬೆಳೆಯುವ ಸೋಮಲತೆಯಲ್ಲಿ ಹೆಚ್ಚಾದ ಮತ್ತು ಉತ್ತಮವಾದ ರಸವು ದೊರೆ

ಯುವುದರಿಂದಲೂ ಸೋಮಲತೆಗಳನ್ನು ತರುವುದಕ್ಕಾಗಿ ಎತ್ತರವಾದ ಬೆಟ್ಟಗಳಿಗೆ ಹೋಗುವುದು ಆ ಕಾಲದಲ್ಲಿ ರೂಢಿಯಾಗಿತ್ತು. ಈ ವಿಷಯವು ಋಗ್ವೇದದ ಅನೇಕ ಕಡೆಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದೆ.

ಅಸ್ಪಷ್ಟ—**ಸ್ಪಶ ಬಾಧನಸ್ಪರ್ಶನಯೋಃ** ॥ ಸ್ಪರ್ಶಮಾಡಿದನು ಎಂದರೆ ಉಪಕ್ರಮ ಮಾಡಿದನು ಎಂದರ್ಥವು.

ಕರ್ತ್ವಂ—ಎಂದರೆ ಕರ್ಮ. ಅಪಃ ಅಪ್ನಃ ಮೊದಲಾದ ಇಪ್ಪತ್ತಾರು ಕರ್ಮವಾಚಕ ಶಬ್ದಗಳ ಮಧ್ಯದಲ್ಲಿ ಕರ್ತ್ವಂ ಎಂಬ ಶಬ್ದವು ಪಠಿತವಾಗಿದೆ (ನಿ. ೩-೨).

ವೃಷ್ಣಿಃ—**ಕಾಮಾನಾಂ ವರ್ಷಿತಾ ಅಥವಾ ವರ್ಷಿತಾ** ॥ ವೃಷ್ಟಿಪ್ರದನು, ಮಳೆಯನ್ನು ಕೊಡುವವನು. ವೃಷ್ಣಿಶಬ್ದವು ಋಗ್ವೇದದಲ್ಲಿ ಅನೇಕ ಕಡೆ ಇಂದ್ರನಪರವಾಗಿ ಎಂದರೆ ಇಂದ್ರನ ಗುಣಗಳನ್ನು ಹೇಳುವ ಸಂದರ್ಭಗಳಲ್ಲಿ ಉಪಯೋಗಿಸಲ್ಪಟ್ಟಿದೆ.

ಏಜತಿ—ಏಜೃ **ಕಂಪನೆ**, ಏಜೃ ಧಾತುವಿಗೆ ಕಂಪಿಸುವುದು, ಚಲಿಸುವುದು ಎಂದರ್ಥ. ಇಲ್ಲಿ ಏಜತಿ-ಚಲಿಸುವನು ಎಂದರೆ ಸ್ವಸ್ಥಾನದಿಂದ ಯಜಮಾನ ಸವಿೂಪಕ್ಕೆ ಬರುವುದಕ್ಕಾಗಿ ಹೊರಡುವನು.

॥ ವ್ಯಾಕರಣಪ್ರಕ್ರಿಯಾ ॥

ಸಾನೋಃ—ಷಣುದಾನೇ ಧಾತು. ಸನೋತಿ = ದದಾತಿ ಸಿವಸತಾಂ ಅವಕಾಶಂ ಇತಿ ಸಾನುಃ (ವಾಸ ಮಾಡುವವರಿಗೆ ಅವಕಾಶವನ್ನು ಸನೋತಿ = ಕೊಡುವುದು. ಆದ್ದರಿಂದ ಸಾನು=ಬೆಟ್ಟದ ತಪ್ಪಲು ಪ್ರದೇಶ) ದ್ಯಾಸನಿ ಜನಿ **ಚರಿಚಟಿ** (ರಹಿ) **ಭ್ಯೋಞುಣ್** (ಉ. ಸೂ, ೧-೩) ದ್ಯಾ ವಿದಾರಣೇ, ಷಣುದಾನೇ, ಜನಜನನೇ ಚರಗತೌ, ಚಟಭೇದನೇ (ರಹತ್ಯಾಗೇ) ಎಂಬ ಧಾತುಗಳ ಮುಂದೆ ಞುಣ್ ಪ್ರತ್ಯಯ ಬರುವುದು ಎಂಬುದರಿಂದ ಞುಣ್ ಪ್ರತ್ಯಯ. **ಧಾತ್ವಾದೇಃಷಃಸಃ** (ಪಾ. ಸೂ. ೬-೧-೬೪) ಷಕಾರಕ್ಕೆ ಸಕಾರ, ಷಕಾರ ನಿವೃತ್ತಿಯಾದರೆ ತನ್ನಿಮಿತ್ತಕವಾದ ಣಕಾರಕ್ಕೂ ನಿವೃತ್ತಿ. **ಆತೋಉಪಧಾಯಾಃ** (ಪಾ. ಸೂ. ೭-೩-೩೩) ಎಂಬುದರಿಂದ ಉಪಧಾವೃದ್ಧಿ. ಸಾನು ಎಂದಾಗುವುದು. ಪ್ರತ್ಯಯವು ಞಿತ್ತು ಆದ್ದರಿಂದ ಞ್ನಿತ್ಯಾದಿರ್ನಿತ್ಯಮ್ (ಪಾ ಸೂ. ೬-೧-೧೯೭) ಎಂಬುದರಿಂದ ಪ್ರತ್ಯಯಾಂತದ ಆದಿಯು ಉದಾತ್ತ.

ಆರುಹತ್-ರುಹ ಬೀಜಜನ್ಮನಿ ಪ್ರಾದುರ್ಭಾವೇಚ, ಧಾತುವಿನ ಮುಂದೆ ಲಜ್ ಆದರಸ್ಥಾನದಲ್ಲಿ **ತಿಪ್ ಕರ್ತರಿಶಪ್** (ಪಾ. ಸೂ. ೩-೧-೬೮) ಎಂಬುದರಿಂದ ಶಪ್ ವಿಕರಣ **ಸಂಜ್ಞಾಪೂರ್ವಕೋವಿಧಿರನಿತ್ಯಃ** (ಪರಿಭಾ ೯೩-೧) ಎಂಬುದರಿಂದ ಅನಿತ್ಯವಾದ್ದರಿಂದ **ಪುಗಂತಲಘೂಪಧಸ್ಯಚ** (ಪಾ.ಸೂ. ೭-೩-೮೬) ಎಂಬುದರಿಂದ ಲಘೂಪಧಗುಣಬರುವುದಿಲ್ಲ. **ಇತಶ್ಚ** (ಪಾ ಸೂ. ೩-೪-೧೦೦) ಎಂಬುದರಿಂದ ಇಕಾರಲೋಪ **ಲುಜ್ ಲಜ್ ಲೃಜ್ ಹ್ವೃಡುದಾತ್ತಃ** (ಪಾ. ಸೂ. ೬-೪-೬೧) ಎಂಬುದರಿಂದ ಉದಾತ್ತವಾದ ಅಟ್ ಆಗಮ ಬರುವುದು. ಸಶಿಶಿಷ್ವಾವಾದ್ದರಿಂದ ಆದೇ ನಿಲ್ಲುವುದು. **ತಿಜ್ಜಿತಿಜಃ** (ಪಾ. ಸೂ ೮-೧-೬೮) ಎಂಬುದರಿಂದ ಅನುದಾತ್ತವು ಪ್ರಾಪ್ತವಾದರೆ **ನಿಪಾತೈರ್ಯದ್ಯದಿಹನ್ತಕುವಿನ್ನೇಚ್ಚೇಚ್ಚಣಕ್ಚ್ಚಿದ್ಯತ್ರಯುಕ್ತಮ್** (ಪಾ. ಸೂ. ೮-೧-೩೦) ಯತ್-ಯದಿ, ಹನ್ತ, ಕುವಿತ್, ನೇತ್ ಚೇತ್ ಚಣ್ ಕಚ್ಚಿತ್, ಯತ್ರ ಈ ನಿಪಾತಗಳ ಯೋಗವಿದ್ದರೆ ಅನುದಾತ್ತ ಬರುವುದಿಲ್ಲ ಎಂದು ನಿಷೇಧ ಬರುವುದರಿಂದ ಅನುದಾತ್ತ ಬರುವುದಿಲ್ಲ.

ಭೂರಿ ಆದಿತ್ಯದಿಭೂಶುಭಿಭ್ಯಃಕ್ರಿನ್ (ಉ. ಸೂ. ೪-೫೦೩) ಅದ ಭಕ್ಷಣೇ, ಶದ್ಲೃಶಾತನೇ ಭೂಸತ್ತ್ಯಾಂ, ಶುಭ ಶುಮ್ಭ ಶೋಭಾರ್ಥೇ ಈ ಧಾತುಗಳ ಮುಂದೆ ಕ್ರಿನ್ ಪ್ರತ್ಯಯ ಬರುವುದು ಎಂಬುದರಿಂದ ಕ್ರಿನ್ ಪ್ರತ್ಯಯವು ಭೂಧಾತುವಿನ ಮುಂದೆ ಬರುವುದು. **ಭೂರಿ**--ಪ್ರತ್ಯಯವು ಕಿತ್ತಾದ್ದರಿಂದ **ಕ್ಞಿತಿಚ** (ಪಾ. ಸೂ. ೧-೧-೫) ಎಂದು ನಿಷೇಧ ಬರುವುದರಿಂದ **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಗುಣ ಬರುವುದಿಲ್ಲ. ಪ್ರತ್ಯಯವು ನಿತ್ತು. ಆದ್ದರಿಂದ ಭೂ ಎಂಬುದು ಆದ್ಯುದಾತ್ತವಾಗುವುದು.

ಆಸ್ಪಷ್ಟ--ಸ್ಪಶ ಬಾಧನಸ್ಪರ್ಶನಯೋಃ, ಧಾತು. ಇದು ಸ್ವರಿತೇತ್ತು ಆದ್ದರಿಂದ **ಸ್ವರಿತಞಿತಃ ಕರ್ತ್ರಭಿಪ್ರಾಯೇಕ್ರಿಯಾಫಲೇ** (ಸಾ. ಸೂ. ೧-೩-೭೨) ಕ್ರಿಯಾಫಲವು ಕರ್ತೃವಿಗೆಸೇರುವ ಪಕ್ಷದಲ್ಲಿ ಸ್ವರಿತೇತ್ತು ಅಥವಾ ಞಿತ್ತು ಆದ ಧಾತುವಿನ ಮುಂದೆ ಆತ್ಮನೇಪದ ಬರುವುದು ಎಂಬುದರಿಂದ ಆತ್ಮನೇ ಪದಪ್ರತ್ಯಯ ಬರುವುದು. ಸ್ಪಶ್ ಧಾತುವಿನ ಮುಂದೆ ಲಙ್ ಆದರ ಸ್ಥಾನದಲ್ಲಿ ಪ್ರಥಮ ಪುರುಷ ಏಕವಚನ ತ ಬರುವುದು. ಸ್ಪಶ್....ತ, ಶಪ್ ವಿಕರಣಕ್ಕೆ **ಬಹುಲಂಛಂದಸಿ** (ಪಾ. ಸೂ. ೨-೪-೭೩) ಎಂಬುದರಿಂದ **ಲುಕ್** ಬರುವುದು. **ವ್ಯಚ್ಚಿಭಸ್ಜಸೃಜಮೃಜಯಜರಾಜಭ್ರಾಜಭಶಾಂ ಷಃ** (ಪಾ.ಸೂ. ೮-೩-೩೭) ಎಂಬುದರಿಂದ ಷತ್ವ. **ಷ್ಟುನಾಷ್ಟುಃ** (ಪಾ. ಸೂ. ೮-೪-೪೧) ಎಂಬುದರಿಂದ ಷ್ಟುತ್ವ **ಲುಙ್ಲಙ್ಲೃಙ್ಕ್ವಡುದಾತ್ತಃ** (ಪಾ ಸೂ. ೬-೪-೭೧) ಎಂಬುದರಿಂದ ಉದಾತ್ತವಾದ ಅಡಾಗಮ, ಆಗಮಕ್ಕೆ ಬಂದ ಉದಾತ್ತ ಸ್ವರವೇ ನಿಲ್ಲುವುದು. ಅಕರ್ಷಿಸಿಕೊಂಡ ಯಚ್ಛಬ್ದದ ಯೋಗವಿರುವುದರಿಂದ **ನಿಪಾತೈರ್ಯದ್ಯದಿ** (ಪಾ. ಸೂ. ೮-೧-೩೦) ಎಂಬುದರಿಂದ ಅನುದಾತ್ತಕ್ಕೆ ನಿಷೇಧ ಬರುವುದು.

ಕರ್ತ್ವಮ್—'ಡುಕೃಞ್ ಕರಣೇ, ಧಾತು. **ಆನ್ಯೇಭ್ಯೋಽಪಿದೃಶ್ಯನ್ತೇ** (ಪಾ. ಸೂ. ೩-೨-೭೫) ಎಂಬುದರಿಂದ ವಿಚ್ ಪ್ರತ್ಯಯ. ಸಾರ್ವಧಾತುಕಾರ್ಧಧಾತುಕಯೋಃ (ಪಾ. ಸೂ. ೭-೩-೮೪) ಎಂಬುದರಿಂದ ಗುಣ. **ಉರಣ್ರಪರಃ** (ಪಾ. ಸೂ. ೧-೧-೫೧) ಎಂಬುದರಿಂದ ರಪರವಾಗಿ ಬರುವುದು ವಿಚ್ ಪ್ರತ್ಯಯದಲ್ಲಿ ಎಲ್ಲಾ ವರ್ಣಗಳಿಗೂ ಲೋಪಬರುವುದು, ಕರ್ ಎಂದಾಗುವುದು. ಕರೋಭಾವಃ ಎಂದು ವಿವಕ್ಷಿಸಿದಾಗ ತಸ್ಯ ಭಾವ ಸ್ತ್ವತಲೌ (ಪಾಸೂ ೫-೧-೧೧೯) ಎಂಬುದರಿಂದ ತ್ವ ಪ್ರತ್ಯಯ ಬರುವುದು, ಕರ್ತ್ವಮ್ ಎಂದಾಗುವುದು.

ಅರ್ಥಮ್—'ಋಗತೌ' ಧಾತು. ಇದರ ಮುಂದೆ **ಉಷಿಕುಷಿಗಾರ್ತಿಭ್ಯಸ್ಥನ್** (ಪಾ.ಸೂ. ೨-೧೬೧) ಉಪದಾಹೇ, ಕುಷನಿಸ್ಯನೇರ್, ಗೈ ಶಬ್ದೇ ಋಗತೌ, ಈ ಧಾತುಗಳ ಮುಂದೆ ಥನ್ ಪ್ರತ್ಯಯ ಬರುವುದು ಎಂಬುದರಿಂದ ರ್ಥ ಪ್ರತ್ಯಯ, ಗುಣ ರಪರತ್ವ ಅರ್ಥ ಎಂದಾಗುವುದು. ನಿತ್ತಾದ್ದರಿಂದ ಆದ್ಯುದಾತ್ತ.

ಯೂಥೇನ—**ತಿತ ಸೈಷ್ಮ ಗೂಥಯೂಥಪ್ರೋತಾಃ** (ಪಾ. ಸೂ. ೨-೧೬೯) ಎಂಬುದರಿಂದ ಥನ್ ಪ್ರತ್ಯಯಾಂತವಾಗಿ ನಿಪಾತಿತವಾಗಿರುವುದು.

ಪೃಷ್ಣಿಃ—**ಸೃವೃಷಣ್ಯಾಂ ಕಿತ್** (ಉ. ಸೂ. ೪-೪೮೬) ಸೃಗತೌ, ವೃಷು ಸೇಚನೇ ಎಂಬ ಧಾತುಗಳ ಮುಂದೆ ನಿ ಪ್ರತ್ಯಯ ಬರುವುದು. ಅದು ಕಿತ್ತೂ ಆಗುವುದು ಎಂಬುದರಿಂದ ವೃಷ್ ಧಾತುವಿನ ಮುಂದೆ ನಿ ಪ್ರತ್ಯಯ ಕಿತ್ತಾದ್ದರಿಂದ ಗುಣ ಬರುವುದಿಲ್ಲ. ಪ್ರತ್ಯಯಸ್ವರದಿಂದ ಅಂತೋದಾತ್ತ.

ಏಜತಿ ಏಜೃಕಂಪನೇ, ಧಾತು **ತಿಜ್ಞಿತಿಜಃ** (ಪಾ.ಸೂ. ೪-೧-೩೮) ಎಂಬುದರಿಂದ ಅನುದಾತ್ತ ॥ ೨ ॥

॥ संहितापाठः ॥

युक्ष्वा हि केशिना हरी वृषणा कक्ष्यप्रा ।
अथा न इन्द्र सोमपा गिरामुपश्रुतिं चर ॥ ३ ॥

॥ पदपाठः ॥

युक्ष्व । हि । केशिना । हरी इति । वृषणा । कक्ष्यऽप्रा ॥
अथ । नः । इन्द्र । सोमऽपाः । गिराम् । उपऽश्रुतिम् । चर ॥३॥

॥ सायणभाष्यं ॥

हे सोमपाः सोमपानयुक्तेन्द्र हरी त्वदीयावश्वौ युक्ष्व हि। सर्वथा संयोजय। अथानन्तरं नोऽस्मदीयानां गिरां स्तुतीनामुपश्रुतिं समीपे शृणवमुद्दिश्य चर। तत्प्रदेशं गच्छ। कीदृशौ हरी। केशिना स्कन्धप्रदेशे लंबमानकेशयुक्तौ वृषणा सेचनसमर्थौ युवानौ कक्ष्यप्रा। अश्वस्योदरबंधनरज्जुः कक्ष्या तस्याः पूरकौ। पुष्टाविगावित्यर्थः। युक्ष्व। श्नमो लोपश्चान्दसः। सति शिष्यत्वेन प्रत्यक्षयेस्वरः शिष्यते। द्व्यचोऽतस्तिङ इति संहितायां दीर्घत्वं। केशिना। प्रशस्ताः केशा अनयोः सन्तीति मत्वर्थीय इनिः। प्रत्यक्षयेस्वरः। सुपां सुलुगित्याकिना द्विवचनस्याकारादेशः। वृषणा। पृषु वृषु मृषु सेचने। कनिन्युवृषितक्षिराजिधन्सिध्म्याप्रतिदिवः। उ. ८-७३६। इति कनिन्। ज्ञाश्रुस्मृदृशां सनः। पा. ७-४-५४। इत्युपधायाः सन्नियोगे दीर्घाभावः। पूर्ववदाकारः। कक्ष्यप्रा। कक्ष्याया उदरबंधनरज्जोर्भवं कक्ष्यं सूत्रं। तत्पूरयतः पुष्टौ कुरुत इति कक्ष्यप्रौ। प्रा पूरणे। अतोऽनुपसर्गे कः। पा. ३-२-३। इति कप्रत्ययः। कृदुत्तरपदप्रकृतिस्वरेणान्तोदात्तत्वं। आकारः पूर्ववत्। अथ। निपातस्येति संहितायां दीर्घः। नः अनुदात्तं सर्वमपादादाविति सूत्रेणानुवृत्तौ बहुवचनस्य वस्नसौ। पा. ८ ८ २८। इति नसादेशोऽनुदात्तः। इन्द्र सोमपा। उभावामंत्रितस्य चेति सर्वानुदात्तौ। गिरां। सानेरकाचस्तृतीयादिर्विभक्तिरिति विभक्तिरुदात्ता। उपशब्दोपसर्गः। निपातस्यादादुदात्तः। श्रुशब्देन स्वादिसमासे कृदुत्तरपदप्रकृतिस्वरत्वे स्वास्थे शादौ च सति कृत्यतौ। पा. ६ २ ५० ।
इति तुवर्जितशादिपरत्वाद्धेतेः प्रकृतिस्वरः। चर। निघातः ॥

॥ ಪ್ರತಿಪದಾರ್ಥ ॥

ಸೋಮಪಾಃ—ಸೋಮಪಾನ ಮಾಡುವ । (**ಹೇ**) ಇಂದ್ರ—ಎಲೈ ಇಂದ್ರನೇ । **ಕೇಶಿನಾ**—ಕೇಸರ ಯುಕ್ತವಾದ (ಕತ್ತಿನಲ್ಲಿ ಉದ್ದವಾಗಿ ಬೆಳದಿರುವ ಕೂದಲುಗಳುಳ್ಳ) । **ವೃಷಣಾ**—ಸೇಚನಸಮರ್ಥವಾದ ಎಂದರೆ ಒಳ್ಳೆಯ ಪ್ರಾಯದಿಂದಿರುವ । **ಕಕ್ಷ್ಯಪ್ರಾ**—ಕಕ್ಷ್ಯೆಯಲ್ಲಿ (ಉದರದಲ್ಲಿ) ಕಟ್ಟುವ ಹಗ್ಗವು ಬಿಗಿಯಾಗುವಂತೆ ಪುಷ್ಟವಾದ ಶರೀರವುಳ್ಳ । **ಹರೀ**—ನಿನ್ನ (ಎರಡು) ಕುದುರೆಗಳನ್ನು । **ಯುಷ್ವಾ ಹಿ** (ರಥಕ್ಕೆ) ಕಟ್ಟು । **ಅಥ**—ಅನಂತರ । **ನಃ**—ನಮ್ಮ । **ಗಿರಾಂ**--ಸ್ತುತಿರೂಪವಾದ ವಾಕ್ಯಗಳ । **ಉಪಶ್ರುತಿಂ**—ಶ್ರವಣಾರ್ಥವಾಗಿ (ಕೇಳುವುದಕ್ಕಾಗಿ) ಸವಿಾಪಕ್ಕೆ । **ಚರ**—ಬರುವವನಾಗು ॥

॥ ಭಾವಾರ್ಥ ॥

ಎಲೈ ಸೋಮಪಾನದಲ್ಲಿ ಆಸಕ್ತನಾದ ಇಂದ್ರನೇ, ನಿನ್ನ ಕುದುರೆಗಳು ಕೇಸರಯುಕ್ತವಾದವು, ಯೌವನದಿಂದ ಚೆನ್ನಾಗಿ ಬೆಳೆದು ಉದರದಲ್ಲಿ ಕಟ್ಟುವ ಹಗ್ಗವು ಬಿಗಿಯಾಗುವಂತೆ ಪುಷ್ಟವಾದ ಶರೀರವುಳ್ಳವುಗಳು. ಇಂತಹ ಕುದುರೆಗಳನ್ನು ನಿನ್ನ ರಥಕ್ಕೆ ಕಟ್ಟಿ ನಮ್ಮ ಸ್ತೋತ್ರರೂಪವಾದ ವಾಕ್ಯಗಳನ್ನು ಸವಿಾಪದಲ್ಲಿದ್ದು ಕೇಳುವುದಕ್ಕಾಗಿ ನಮ್ಮ ಬಳಿಗೆ ಬರುವವನಾಗು.

English Translation.

India, drinker of soma, harness your pair of long-maned youthful and well-conditioned horses and then come to hear our praises.

॥ ವಿಶೇಷವಿಷಯಗಳು ॥

ಯುಷ್ವ--ಛಂದಸ್ಸಿನ ಅನುಕೂಲಕ್ಕಾಗಿ ಸಂಹಿತಾಪಾಠದಲ್ಲಿ ಅಂತ್ಯದ ಅಕಾರವು ದೀರ್ಘವಾಗಿರುವುದು. ಈ ಶಬ್ದಕ್ಕೆ ಸಂಯೋಜಯ-ಸೇರಿಸು, ರಥಕ್ಕೆ ಕಟ್ಟು, ಹೂಡು ಎಂದರ್ಥವು

ಕೇಶಿನಾ—ಸ್ಕಂಧಪ್ರದೇಶೇ ಲಂಬಮಾನಕೇಶಯುಕ್ತೌ, ಪ್ರಲಂಬಕೇಸರೌ ಎಂದರೆ ಕತ್ತಿನ ಮೇಲೆ ಉದ್ದವಾಗಿ ಬೆಳದಿರುವ ಕೇಸರಗಳುಳ್ಳ, long-maned.

ವೃಷಣಾ—ರೇತಸ್ಸೇಚನಸಮರ್ಥೌ । ರೇತಸ್ಸೇಚನಸಮರ್ಥವಾದ ಎಂದರೆ ಪ್ರಾಯದ, ಯೌವನ ದೆಶೆಯಲ್ಲಿರುವ-

ಕಕ್ಷ್ಯಪ್ರಾ—ಕಕ್ಷ್ಯಪ್ರಾ ಅಶ್ವಸ್ಯೋದರಬಂಧನರಜ್ಜುಃ ಕಕ್ಷ್ಯಾ । ತಸ್ಯಾಃ ಪೂರಕೌ । ಪುಷ್ಟ್ಯಂಗಾವಿತ್ಯರ್ಥಃ ॥ ಕಕ್ಷ್ಯಾ ಎಂದರೆ ಕುದುರೆಯನ್ನು ರಥಕ್ಕೆ ಕಟ್ಟುವಾಗ ಅದರ ಉದರದ ಸುತ್ತಲೂ ಸೇರಿಸಿ ಕಟ್ಟುವ ಹಗ್ಗವು. ಆ ಹಗ್ಗವು ಬಿಗಿಯಾಗುವಂತೆ (filling out their girth) ಪುಷ್ಟವಾಗಿ ಬೆಳೆದಿರುವ ಕುದುರೆಗಳು ಎಂದರ್ಥವು.

ಸೋಮಪಾಃ—ಸೋಮಸ್ಯ ಪಾತೇಃ, ಇದು ಸಂಬೋಧನ ಪ್ರಥಮೈಕವಚನವು, ಇಂದ್ರಶಬ್ದಕ್ಕೆ ವಿಶೇಷಣಪದವು,

गिराम्—गीः एंब शब्दद षष्ठ्येबहुवचनवु. ऋग्वेददल्लि स्तोत्रगळु, स्तोत्रगळु, प्रशंसेगळु एंब अर्थदल्लि गिरः गिराम्, गीर्भिः मोदलाद शब्दगळन्नु उपयोगिसुवुदु रूढियागिदे. आदुदरिंद नः गिराम् एंदरे **अस्मत्कृतस्तोत्राणाम्** नावु माडुव स्तोत्रगळ एंदर्थवु.

उपश्रुतम्—**सवितोपे श्रवणमुद्दिश्य। श्रुतेः सवितोपं** । केळुवुदक्कागि सवितोपक्के, सवितोपदल्लि निंतु केळुवुदक्कागि एंदर्थवु.

चेर—**आगच्छ**, बरुववनागु.

॥ व्याकरणप्रक्रियाः ॥

युक्ष्व,—युजिर् योगे धातु. उभयपदि, इदर मुंदे लोट् अत्मनेपद मध्यमपुरुष एकवचन **थास्. थासस्से** (पा. सू. ३-४-८०) एंबुदरिंद थास्सिगे से आदेश. **सवाभ्याम् वामौ** (पा. सू. ३-४-९०) एकारक्के वकारादेश, युज्+स्व, श्नम् विकरण प्रत्ययक्के **बहुलं छंदसि** (पा. सू. २-४-३९)एंबुदरिंद लुक्. यद्यपि ई सूत्रवु शप्पिगे लुक् बरुवुदु एंदु विधिसुवुदु. आदरू (ऋ. सं. अ. ८, सू. ९. मं. ८) रल्लि मुक्ति एंबल्लि इदे सूत्रदिंद श्यन्निगे लुक्कन्नु भाष्यकाररु हेळिरुवरु. अदरंते इल्लि श्नम्गू लुक्कन्नु हेळबहुदु ई अंशवु बहुलग्रहणदिंद सिद्धवाडुवुदु. बहुलशब्दद अर्थवन्नु हिंदेयेय हेळिरुवेवु. **चोः कुः** (पा. सू. ८-२-३०) एंबुदरिंद कुत्व, जकारक्के गकार, **झरि च** (पा. सू. ८-४-५५) एंबुदरिंद चर्त्व, गकारक्के ककार, **आदेशप्रत्यययोः** (पा.सू. ८-३-५९) एंबुदरिंद सकारक्के षकार. युक्ष्व एंदागुवुदु. सतिशिष्टवाद्दरिंद प्रत्ययस्वरवे निल्लुवुदु. **संहितायामादल्लि द्व्यचोतेस्तिङः** (पा.सू. ६-३-१३५) एंबुदरिंद युक्ष्व एंबुदक्के दीर्घ बरुवुदु.

केशिना—प्रशस्ताः केशाः अनयोस्सन्ति एंदु विग्रह माडिदाग **अत इनिठनौ** (पा. सू. ५-२-११५) एंबुदरिंद मत्वर्थदल्लि इनि प्रत्ययवु बरुवुदु. केश+इन् एंदिरुवाग **यस्येतिच** (६-४-१४४) एंबुदरिंद अकारलोप. प्रत्ययस्वर बरुवुदु. केशिन् एंबुदरे मुंदे बरुव द्वितीया द्विवचन औ प्रत्ययक्के **सुसाऽसावलुक्**—(पा. सू. ६-१-९९) एंबुदरिंद अकारादेश.

वृषणा—पृषु, वृषु, वृषु सेचने धातु. वृष् धातुविन मुंदे **कनिन्युवृषितक्षिराजिधन्विद्युप्रतिदिवः** (उ. सू. १-१५४) एंबुदरिंद कनिन् प्रत्ययवु. **ङ्याप्प्रातिपदिकात्** (पा. सू. ४-१-१९८) एंबुदरिंद आद्युदात्त. **वा षपूर्वस्य निगमे** (पा.सू. ८-४-९) संबुद्धियन्नुळिद सर्वनामस्थान प्रत्ययवु परदल्लिरुवाग षकारद मुंदे इरुव उपधाभूतवाद

ಅಚ್ಚಿಗೆ ದೀರ್ಘವು ವಿಕಲ್ಪವಾಗಿ ಬರುವುದು ಎಂಬುದರಿಂದ ವಿಧಿಸಿರುವ ಉಪಧಾ ದೀರ್ಘವು ವಿಕಲ್ಪವಾದ್ದರಿಂದ ಇಲ್ಲಿ ಬರುವುದಿಲ್ಲ. ದ್ವಿತೀಯಾದ್ವಿವಚನಕ್ಕೆ **ಸುಪಾಂಸುಲುಕ್**—(ಪಾ. ಸೂ ೭-೧-೩೯) ಎಂಬುದರಿಂದ ಆಕಾರ.

ಕಕ್ಷ್ಯಪ್ರಾ—ಕಕ್ಷ್ಯಯೋಃ ಭವಂ ಕಕ್ಷ್ಯಮ್. ಕುದುರೆಯ ಹೊಟ್ಟೆಗೆ ಕಟ್ಟುವ ಹಗ್ಗ. ಅದನ್ನು ಪ್ರಾತಃ ಪುಷ್ಪವಾಗಿರುವುದರಿಂದ ತುಂಬಿಸುವುವು ಎಂದು ವಿಗ್ರಹ ಮಾಡಿದರೆ ಕಕ್ಷ್ಯಶಬ್ದೋಪಪದಕವಾದ ಪ್ರಾ ಧಾತುವಿನ ಮುಂದೆ **ಆತೋನುಪಸರ್ಗೇಕಃ** (ಪಾ. ಸೂ. ೩-೨-೩) ಉಪಸರ್ಗವಲ್ಲದ ಸುಬಂತವು ಉಪಪದವಾಗಿರುವಾಗ ಆಕಾರಾಂತ ಧಾತುವಿನ ಮುಂದೆ ಕ ಪ್ರತ್ಯಯ ಬರುವುದು ಎಂಬುದರಿಂದ ಕ ಪ್ರತ್ಯಯ ಬಂದರೆ **ಆತೋಲೋಪ ಇಟಿಚ** (ಪಾ.ಸೂ. ೬-೪-೬೪) ಎಂಬುದರಿಂದ ಆಕಾರಕ್ಕೆ ಲೋಪ. **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬಂದು ಅಂತೋದಾತ್ತವಾಗುವುದು. ಇದರ ಮುಂದೆ ಅಸ್ಮಾಕಂ ಎಂಬುದಕ್ಕೆ ಬರುವ ದ್ವಿತೀಯಾದ್ವಿವಚನಕ್ಕೆ ನೊದಲಿನಂತೆ ಆಕಾರದೇಶ.

ಅಥ—**ನಿಪಾತಸ್ಯಚ** (ಪಾ.ಸೂ. ೬-೩-೧೩೬) ಎಂಬುದರಿಂದ ಸಂಹಿತಾಕಾಲದಲ್ಲಿ ದೀರ್ಘ.

ನಃ-ಬಹುವಚನಸ್ಯವಸ್ನಸೌ (ಪಾ. ಸೂ. ೮-೧ ೨೧) **ಅನುದಾತ್ತಂ ಸರ್ವಮಪಾದಾದೌ** (ಪಾ.ಸೂ. ೮-೧-೧೮) ಎಂಬ ಸೂತ್ರವು ಅನುವೃತ್ತವಾಗುವುದು. ಪದದ ಮುಂದೆ ಇರತಕ್ಕವುಗಳೂ ಪಾದದ ಆದಿಯಲ್ಲಿ, ಇಲ್ಲಿಪದವುಗಳೂ ಆದ ಷಷ್ಠೀಚತುರ್ಥೀ ದ್ವಿತೀಯಾ ಬಹುವಚನಾಂತಯುಷ್ಮದಸ್ಮಚ್ಛಬ್ದಗಳಿಗೆ ಕ್ರಮವಾಗಿ ಅನುದಾತ್ತಗಳಾದ ವಸ್, ನಸ್ ಆದೇಶಗಳು ಬರುವುವು ಎಂಬುದರಿಂದ ಅಸ್ಮಚ್ಛಬ್ದ ಷಷ್ಠೀ ಬಹುವಚನಾಂತವಾದ ಅನುದಾತ್ತವಾದ ನಸ್ ಆದೇಶಬರುವುದು.

ಇನ್ದ್ರ, ಸೋಮಪಾಃ ಇವೆರಡೂ ಅಮಂತ್ರಿತಗಳಾದ್ದರಿಂದ **ಆಮಂತ್ರಿಸ್ಯಚ** (ಪಾ. ಸೂ. ೮-೧ ೧೯) ಎಂಬುದರಿಂದ ಎರಡೂ ಸರ್ವಾನುದಾತ್ತಗಳಾಗುವುವು.

ಗಿರಾಮ್—ಸಾವೇಕಾಚಸ್ತೃತಾಯಾದಿರ್ವಿಭಕ್ತಿಃ (ಪಾ. ಸೂ. ೬-೧.೧೭೪) ಸಪ್ತಮಿಯಾ ಬಹುವಚನಸು ಪ್ರತ್ಯಯ ಪರದಲ್ಲಿರುವಾಗ ಯಾವ ಶಬ್ದವು ಒಂದೇ ಸ್ವರವನ್ನು (ಅಚ್ಚನ್ನು) ಹೊಂದಿರುವುದೋ ಅದರ ಮುಂದೆ ಇರುವ ತೃತೀಯಾದಿ ವಿಭಕ್ತಿಯು ಉದಾತ್ತವಾಗುವುದು ಎಂಬುದರಿಂದ ಗಿರಾ ಎಂಬಲ್ಲಿರುವ ತೃತೀಯಾ ವಿಭಕ್ತಿಯು ಉದಾತ್ತವಾಗುವುದು.

ಉಪ—ಈ ಶಬ್ದವು ನಿಪಾತ. ಆದ್ದರಿಂದ **ನಿಪಾತಾ ಆದ್ಯುದಾತ್ತಾಃ** (ಫಿ.ಸೂ. ೪೦) ಎಂಬುದರಿಂದ ಆದ್ಯುದಾತ್ತ. ಇದಕ್ಕೆ ಶ್ರುತಿ ಶಬ್ದದೊಂದಿಗೆ **ಕುಗತಿಪ್ರಾದಯಃ** (ಪಾ, ಸೂ. ೨-೨-೧೯) ಎಂಬುದರಿಂದ ಪ್ರಾದಿ ಸಮಾಸ ಬರುವುದು. ನಂತರ **ಗತಿಕಾರಕೋಪಪದಾತ್ಕೃತ್** (ಪಾ. ಸೂ- ೬-೨-೧೩೯) ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಪ್ರಾಪ್ತವಾದರೆ ಅದನ್ನು ಬಾಧಿಸಿ **ತಾದೌಚನಿತಿಕೃತ್ಯತೌ** (೬-೨-೫೦) ತು ಶಬ್ದವನ್ನು ಬಿಟ್ಟು ತಕಾರಾದಿಯಾದ ಕೃತ್ಪ್ರತ್ಯಯ ಪರದಲ್ಲಿರುವಾಗ ಅನಂತರವಾದ ಗತಿಯು ಪ್ರಕೃತಿಸ್ವರವನ್ನು ಹೊಂದುವುದು ಎಂಬುದರಿಂದ ಉಪ ಎಂಬ ಗತಿಸಂಜ್ಞಕವು ಪ್ರಕೃತಿಸ್ವರವನ್ನು ಹೊಂದುವುದು.

ಚರ—**ತಿಙ್ಶಿತಿಜಃ** (ಪಾ- ಸೂ. ೮-೧-೨೮) ಎಂಬುದರಿಂದ ಸರ್ವಾನುದಾತ್ತ ॥ ೩ ॥

॥ ಸಂಹಿತಾಪಾಠಃ ॥

ಏಹಿ ಸ್ತೋಮಾँ ಅಭಿ ಸ್ವರಾಭಿ ಗೃಣೀಹ್ಯಾ ರುವ ।
ಬ್ರಹ್ಮ ಚ ನೋ ವಸೋ ಸಚೇಂದ್ರ ಯಜ್ಞಂ ಚ ವರ್ಧಯ ॥೪॥

॥ ಪದಪಾಠಃ ॥

ಆ । ಇಹಿ । ಸ್ತೋಮಾನ್ । ಅಭಿ । ಸ್ವರ । ಅಭಿ । ಗೃಣೀಹಿ । ಆ । ರುವ ॥
ಬ್ರಹ್ಮ । ಚ । ನಃ । ವಸೋ ಇತಿ । ಸಚಾ । ಇಂದ್ರ । ಯಜ್ಞಂ । ಚ ।
ವರ್ಧಯ ॥ ೪ ॥

॥ ಸಾಯಣಭಾಷ್ಯಂ ॥

ವಿಶೇಷವಿನಿಯೋಗಸ್ತು ಯತ್ರ ಶ್ರೌತೋ ನ ಸೂತ್ರಿತಃ । ಸ್ಮಾರ್ತಂ ತತ್ರ ವಿಜಾನೀಯಾದ್ಯೈಗ್ನಿ-ಧಾನಾದಿಸೂತ್ರತಃ ॥ ಏಹಿ ಸ್ತೋಮಾನಿತ್ಯೃಗೇಷಾ ಸೂತ್ರೇ ವಿಶೇಷಾಕಾರೇಣ ನ ವಿನಿಯುಕ್ತಾ । ಸಾಧಾರಣವಿನಿಯೋಗಸ್ತು ಬ್ರಹ್ಮಯಜ್ಞಾದೌ ಸರ್ವತ್ರಾನುಸಂಧೇಯಃ ॥

ಹೇ ವಸೋ ನಿವಾಸಕಾರಣಭೂತೇಂದ್ರ ಏಹಿ । ಅಸ್ಮಿನ್ಕರ್ಮಣ್ಯಾಗಚ್ಛ । ಆಗತ್ಯ ಚ ಸ್ತೋಮಾನುದ್ಗಾತೃಪ್ರಯುಕ್ತಾನಿ ಸ್ತೋತ್ರಾಣ್ಯಭಿ ಸ್ವರ । ಅಭಿಲಕ್ಷ್ಯ ಪ್ರಶಂಸಾರೂಪಂ ಶಬ್ದಂ ಕುರು । ತಥಾ-ಧ್ವರ್ಯವಮಭಿಲಕ್ಷ್ಯ ಗೃಣೀಹಿ । ಶಬ್ದಂ ಕುರು । ತಥಾ ಹೋತೃಪ್ರಯುಕ್ತಾನಿ ಶಸ್ತ್ರಾಣ್ಯಾಲಕ್ಷ್ಯ ರುವ । ಶಬ್ದಂ ಕುರು । ಪರಿತೋಷೇಣ ಸರ್ವಾನೃತ್ವಿಜಃ ಪ್ರಶಂಸೇತ್ಯರ್ಥಃ । ತತ ಊರ್ಧ್ವಂ ನೋಽಸ್ಮಾಕಂ ಬ್ರಹ್ಮ ಚಾನ್ನಂ ಚ ಯಜ್ಞಂ ಚಾನುಷ್ಠೀಯಮಾನಂ ಕರ್ಮ ಚ ಸಚಾ ಸಹ ವರ್ಧಯ । ಸಾಂಗತ್ವಸಂಪಾದನೇನ ಯಜ್ಞಂ ವರ್ಧಯಿತ್ವಾ ತತ್ಫಲಮನ್ನಂ ಚ ಪ್ರವೃದ್ಧಂ ಕುರು । ಅಂಧಃ ಇತ್ಯಾದಿಸ್ವಷ್ಟಾವಿಂಶತ್ಯನ್ನನಾಮಸು ಬ್ರಹ್ಮ ವರ್ಚ ಇತಿ ಪಠಿತಂ ॥ ಇಹಿ । ಇಣ್ ಗತೌ । ಸೇರ್ಹಿಃ । ಹೇರಪಿಙ್ಹೇ ಚ ಜುತ್ವಾದ್ಗುಣಾಭಾವಃ । ನಿಘಾತಃ । ಆಙಾ ಸಹ ಗುಣ ಏಕಾದೇಶ ಉದಾತ್ತೇನೋದಾತ್ತ ಇತ್ಯುದಾತ್ತಃ । ಸ್ತೋಮಾನ್ । ಅರ್ತಿ-ಸ್ತುಸ್ವಿತ್ಯಾದಿನಾ ಮನ್ । ನಿತ್ತ್ವಾದಾದ್ಯುದಾತ್ತಃ । ಉತ್ತರಪದೇನ ಸಂಹಿತಾಯಾಂ ನಕಾರಸ್ಯ ದೀರ್ಘಾ-ದಟಿ ಸಮಾನಪಾದ ಇತಿ ರುತ್ವಂ । ಆತೋಽಟಿ ನಿತ್ಯಮಿತ್ಯಾಕಾರಸ್ಯಾನುನಾಸಿಕಃ । ಭೋಭಗೋಅಘೋ ಅಪೂರ್ವಸ್ಯ ಯೋಽಶೀತಿ ಯತ್ವಂ । ತಸ್ಯ ಲೋಪಃ ಶಾಕಲ್ಯಸ್ಯೇತಿ ಲೋಪಃ । ತಸ್ಯಾಸಿದ್ಧತ್ವಾತ್ಸ್ವರಸಂ-ಧಿರ್ನ ಭವತಿ । ಅಭಿ । ಏವಮಾದೀನಾಮಂತ ಇತ್ಯಂತೋದಾತ್ತಃ । ಸ್ವರ । ಸ್ವೃ ಶಬ್ದೋಪತಾಪಯೋಃ । ನಿಘಾತಃ । ಅಭಿ । ಗತಂ । ಗೃಣೀಹಿ । ಗೃ ಶಬ್ದೇ । ಸೇರ್ಹ್ಯಪಿಚ್ಚೇತಿ ಹಿಃ । ಕ್ರ್ಯಾದಿಭ್ಯಃ ಶ್ನಾ । ಈಃ ಹಲ್ಯಘೋಃ । ಪಾ. ೬-೪-೧೧೩ । ಇತೀತ್ವಂ । ಶ್ನಾದೀನಾಂ ಹ್ರಸ್ವಃ । ಪಾ. ೭-೩-೮೦ । ಇತ್ಯೃಕಾರಸ್ಯ ಋಕಾರಃ । ಋವರ್ಣಾಚ್ಛೇತಿ ವಕ್ತವ್ಯಂ । ಕಾ ೮-೪-೧-೧ । ಇತಿ ಣತ್ವಂ । ತಿಙ್ಶಿತಿಙಿ ಇತಿ ನಿಘಾತಃ ।

ರುವ । ರು ಶಬ್ದೇ । ಸೇಹ್ಯಪಿಚ್ಚೆ । ಶಪಿ ಹ್ಯಾಪ್ತೇ ವ್ಯತ್ಯಯೇನ ಶಃ । ತಸ್ಯ ಜುತ್ವೇನ ಗುಣಾಭಾವಾದು-ವಜಾದೇಶಃ । ಅತೋ ಹೇರಿತಿ ಹೇರ್ಲುಕ್ । ತಿಜ್ಜಿತಿಜ ಇತಿ ನಿಘಾತಃ । ಬ್ರಹ್ಮ । ತೃಹಿ ವೃಹಿ ವೃದ್ಧೌ । ಮನಿನ್ನಿತ್ಯನುವೃತ್ತೌ ವೃಂಹೇರಮ್ ನ ಲೋಪಶ್ಚ । ಉ. ೪-೧೪೫ । ಇತಿ ಮನಿನ್ । ತತ್ಸಂನಿಯೋಗೇನ ನಲೋಪಃ । ಆಮಾಗಮಶ್ಚ । ನಿದಚೋಽಂತ್ಯಾತ್ಪರಃ । ಪಾ. ೧-೧-೪೭ । ಇತ್ಯಕಾರಾತ್ಪರಃ । ಯಜ್ಞಾ-ದೇಶಃ । ಮನಿನೋ ನಿತ್ತ್ವಾದ್ಯುದಾತ್ತತ್ವಂ । ವಸೋ । ಆಮಂತ್ರಿತನಿಘಾತಃ । ಯಜ್ಞಂ । ಯಜಯಾ-ಚೇತ್ಯಾದಿನಾ । ಪಾ. ೩-೩-೯೦ । ನಜ್ । ಪ್ರತ್ಯಯಸ್ವರಃ । ವರ್ಧಯ । ನಿಘಾತಃ । ಅತ್ರ ಚಕಾರದ್ಯೇಯ-ಶ್ರವಣಾದಿಯೇಮೇವ ತಿಜ್ಯಭಿಧಕ್ತಿಃ ಪೂರ್ವವಾಕ್ಯೇಷ್ವನುಷಜ್ಯತೇ । ಅತೋಽನುಷಕ್ತ್ಯೈವ ಪ್ರಥಮಾ ನ ಶ್ರುತೇತ್ಯಶ್ರುತಾಯಾಶ್ಚ ನಾಯೋಗೇ ಪ್ರಥಮಾ । ಪಾ. ೮-೧-೫೯ । ಇತಿ ನಿಘಾತನಿಷೇಧೋ ನ ಭವತಿ ॥

॥ ಪ್ರತಿಪದಾರ್ಥ ॥

ವಸೋ--ಶ್ರೇಷ್ಠನಾದ (ಅಥವಾ ನಿವಾಸಸ್ಥಾನಕ್ಕೆ ಕಾರಣಭೂತನಾದ) । (ಹೇ) ಇಂದ್ರ—ಎಲೈ ಇಂದ್ರನೇ। **ಆ ಇಹಿ**—(ನಾವು ಮಾಡುತ್ತಿರುವ ಈ ಯಜ್ಞಭೂಮಿಗೆ ಬಾ । (ಬಂದು) **ಸ್ತೋಮಾನ್**—ಉದ್ಗಾತೃ ಮೊದಲಾದ ಸಾಮಗಾನಮಾಡುವ ಋತ್ವಿಜರು ಪಠಿಸುವ ಅಥವಾ ಗಾನಮಾಡುವ) ಸ್ತೋತ್ರಗಳನ್ನು । **ಅಭಿ ಸ್ವರ**—(ಗಮನವಿಟ್ಟು ಕೇಳಿ) ಪ್ರಶಂಸೆ ಮಾಡು (ಎಂದರೆ ಮೆಚ್ಚು) । ಮತ್ತು) **ಅಭಿಗೃಣೀಹಿ**—(ಅಧ್ವರ್ಯುವು ಮಾಡುವ ಕರ್ಮಗಳನ್ನೂ) ಪ್ರಶಂಸಿಸು । (ಮತ್ತು) **ರುವ**--ಹೋತೃವರ್ಗದ ಋತ್ವಿಜರು ಪಠಿಸುವ ಶಸ್ತ್ರಮಂತ್ರ ಗಳನ್ನು ಕೇಳಿ ನಿನ್ನ ಮೆಚ್ಚಿಗೆಯನ್ನು ಸೂಚಿಸು । (ಅನಂತರ) **ನಃ**—ನಮಗೆ । **ಬ್ರಹ್ಮ ಚ**—ಅನ್ನವನ್ನೂ (ಆಹಾರವನ್ನೂ) । **ಯಜ್ಞಂ ಚ**—ನಾವು ಮಾಡುತ್ತಿರುವ ಯಜ್ಞವನ್ನೂ । **ಸಚಾ**—ಸಹಿತನಾಗಿ ಎಂದರೆ ನೀನು ಇಲ್ಲಿದ್ದುಕೊಂಡು । **ವರ್ಧಯ**-ವೃದ್ಧಿಪಡಿಸು (ಎಂದರೆ ಯಜ್ಞವನ್ನು ಸಾಂಗವಾಗುವಂತೆ ಸಮಾಪ್ತಿಗೊಳಿಸಿ ಅದರ ಫಲಭೂತವಾದ ಅನ್ನಾದ್ಯಾಹಾರಗಳನ್ನು ನಮಗೆ ಅನುಗ್ರಹಿಸು).

॥ ಭಾವಾರ್ಥ ॥

ಎಲೈ ಇಂದ್ರನೇ, ನಾವು ವಾಸಮಾಡುವ ನಿವಾಸಸ್ಥಾನಗಳನ್ನು ನೀನೇ ನಮಗೆ ಕೊಡುವುದರಿಂದ ಅವುಗಳಿಗೆ ನೀನೇ ಕಾರಣಭೂತನು. ಇಂತಹ ಶ್ರೇಷ್ಠಗುಣಯುಕ್ತನಾದ ಎಲೈ ಇಂದ್ರನೇ, ನೀನು ಇಲ್ಲಿಗೆ ಎಂದರೆ ನಾವು ಮಾಡುತ್ತಿರುವ ಯಜ್ಞಕ್ಕೆ ಬಂದು ಸಾಮರೂಪಸ್ತೋತ್ರಗಳಿಂದ ಗಾನಮಾಡುವ ಉದ್ಗಾತೃಗಳೆಂಬ ಋತ್ವಿಜ ರನ್ನೂ, ಅಧ್ವರ್ಯುವನ್ನೂ ಶಸ್ತ್ರಮಂತ್ರಪಠನ ಮಾಡುತ್ತಿರುವ ಹೋತೃವರ್ಗದ ಋತ್ವಿಜರನ್ನೂ ಅವರವರು ಮಾಡುವ ಸ್ತೋತ್ರಗಳನ್ನೂ ಲಕ್ಷ್ಯವಿಟ್ಟು ಕೇಳಿ ಅವುಗಳಿಗೆ ನಿನ್ನ ಪ್ರಶಂಸಾರೂಪವಾದ ಮೆಚ್ಚಿಗೆಯನ್ನು ಶಬ್ದ ಮೂಲಕ ಸೂಚಿಸು. ಬಳಿಕ ನಮ್ಮ ಯಜ್ಞಕರ್ಮವು ಬೆಳೆದು ಪೂರ್ಣವಾಗುವಂತೆ ಮಾಡಿ ನಮಗೆಅನ್ನಾದ್ಯಾ-ಹಾರಗಳನ್ನು ಅನುಗ್ರಹಿಸು.

English Translation

Come hither, O good Indra, applaud our prayers, praise them, receive them approvingly. O Indra, bless our sacrifice and bestow upon us abundant food.

॥ ವಿಶೇಷವಿಷಯಗಳು ॥

ಭಾಷ್ಯಕಾರರು ಈ ಋಕ್ಕಿನ ವಿಶೇಷವಿನಿಯೋಗದ ವಿಷಯವಾಗಿ--

ವಿಶೇಷವಿನಿಯೋಗಸ್ತು ಯತ್ರ ಶ್ರೌತೋ ನ ಸೂತ್ರಿತಃ ।
ಸ್ಮಾರ್ತಂ ತತ್ರ ವಿಜಾನೀಯಾದ್ಗೃಹ್ಯವಿಧಾನಾದಿಸೂತ್ರತಃ ॥

ಎಂಬ ವಿಧಿವಾಕ್ಯವನ್ನನುಸರಿಸಿ—ಯಾವುದಾದರೂ ಮಂತ್ರಕ್ಕೆ ವಿಶೇಷವಿನಿಯೋಗವು ಶ್ರೌತಸೂತ್ರದಲ್ಲಿ ಹೇಳಲ್ಪಡದಿರುವ ಸಂದರ್ಭದಲ್ಲಿ ಸ್ಮಾರ್ತಕರ್ಮಾನುಷ್ಠಾನದಲ್ಲಿ ಆ ಮಂತ್ರದ ವಿನಿಯೋಗವನ್ನು ಋಗ್ವಿಧಾನ ಮೊದಲಾದ ಸೂತ್ರಗ್ರಂಥಗಳನ್ನು ನೋಡಿ ತಿಳಿದುಕೊಳ್ಳಬೇಕೆಂದೂ, ಪ್ರಸಕ್ತವಾದ ಏಹಿ ಸ್ತೋಮಾನ್ ಎಂಬ ಋಕ್ಕಿಗೆ ಶ್ರೌತಸೂತ್ರದಲ್ಲಿ ವಿಶೇಷ ವಿನಿಯೋಗವು ಹೇಳದೆ ಇರುವುದರಿಂದ ಬಹ್ಯಯಜ್ಞಾದಿ ಕರ್ಮಗಳಲ್ಲಿ ಇದರ ಸಾಧಾರಣ ವಿನಿಯೋಗವಿರುವುದೆಂದೂ ಹೇಳಿರುವರು.

ಈ ಋಕ್ಕಿನಲ್ಲಿ ಸ್ತುರ, ಗೃಣೀಹಿ, ರುವ ಎಂಬ ಮೂರು ಕ್ರಿಯಾಪದಗಳಿರುವುವು. ಸ್ತುರ-ಸ್ತೃ ಶಬ್ದೋಪತಾಪಯೋಃ । ಗೃಣೀಹಿ-ಗೃ ಶಬ್ದೇ । ರುವ-ರು ಶಬ್ದೇ । ಎಂದು ಧಾತುಪಾಠವಿರುವುದರಿಂದ ಈ ಮೂರು ಧಾತುಗಳಿಗೂ ಶಬ್ದಮಾಡು ಎಂದು ಒಂದೇ ಅರ್ಥವಿರುವುದು, ಇದಕ್ಕೆ ಅಭಿ-ಅಭಿಲಕ್ಷ್ಯ ಎಂಬ ಉಪಸರ್ಗವನ್ನು ಸೇರಿಸಿ ಅರ್ಥಮಾಡುವಾಗ ಪ್ರಶಂಸಾರೂಪವಾದ ಶಬ್ದವನ್ನು ಮಾಡು ಎಂದರೆ ಪ್ರಶಂಸೆಮಾಡು, ಶಬ್ದದ ಮೂಲಕ (ಅಥವಾ ವರ್ಣನಾಡುವುದರ ಮೂಲಕ) ನಿನ್ನ ಮೆಚ್ಚಿಗೆಯನ್ನು ಸೂಚಿಸು ಎಂದರ್ಥಮಾಡಿರುವರು ಸ್ಕಂದಸ್ವಾಮಿ ಮತ್ತು ವೆಂಕಟಮಾಧವರೂ ಇದೇ ಅರ್ಥವನ್ನೇ ಅನುಮೋದಿಸಿರುವುದರಿಂದ ಇದನ್ನೇ ಸ್ವೀಕರಿಸಬೇಕಾಗಿರುವುದು.

ಪಸೋ-ನಿವಾಸಕಾರಣಭೂತೇಂದ್ರ, ನಿವಾಸ ಸ್ಥಾನಗಳಿಗೆ ಕಾರಣಭೂತನಾದ ಎಂದು ಭಾಷ್ಯಕಾರರ ಅರ್ಥವು. ಸ್ಕಂದಸ್ವಾಮಿಯು—**ವಸೋ । ಶತಪಥೇ ವಸಿಷ್ಠ ಇತಿ ವಸುಶಬ್ದ ಶ್ಯಾತಿಶಯಿತಪ್ರತ್ಯಯಾಂತಸ್ಯ "ಯದ್ವೈನಃ ಶ್ರೇಷ್ಠಸ್ತೇನ ವಸಿಷ್ಠ" ಇತಿ ಪ್ರಶಸ್ಯತಮೇನ ವಚನೇನ ಶ್ರೇಷ್ಠಶಬ್ದೇನಾರ್ಥವಿವರಣದರ್ಶನಾತ್ ವಸುಶಬ್ದಃ ಪ್ರಶಸ್ಯನಾಮ ॥** ಎಂದರೆ ಶುಕ್ಲ ಯಜುರ್ವೇದದ ಶತಪಥಬ್ರಾಹ್ಮಣದಲ್ಲಿ ಹೇಳಿರುವಂತೆ ವಸುಶಬ್ದಕ್ಕೆ ಶ್ರೇಷ್ಠ, ಪ್ರಶಸ್ಯ ಎಂದು ಅರ್ಥವಿವರಣೆಯಿರುವುದರಿಂದ ವಸುಶಬ್ದಕ್ಕೆ ಪ್ರಶಸ್ಯ ಎಂದರ್ಥಮಾಡಿರುವರು. ಅಥವಾ ವಸುಶಬ್ದಕ್ಕೆ ಧನವೆಂದೂ ಅರ್ಥವಾಗುವುದರಿಂದ ವಸೋ ಎಂದರೆ ಧನವಂತನಾದ ಎಲೈ ಇಂದ್ರನೇ ಎಂಬ ಅರ್ಥವನ್ನು ಬೇಕಾದರೂ ಹೇಳಬಹುದು.

ಬ್ರಹ್ಮ—ಅಂಧಃ, ವಾಜಃ ಮೊದಲಾದ ಇಪ್ಪತ್ತೈದು ಅನ್ನವಾಚಕ ಶಬ್ದಗಳ ಮಧ್ಯದಲ್ಲಿ ಬ್ರಹ್ಮ ಶಬ್ದವು ಪಠಿತವಾಗಿರುವುದರಿಂದ ಬ್ರಹ್ಮಶಬ್ದಕ್ಕೆ ಅನ್ನವೆಂದು ಅರ್ಥವು. (ನಿ. ೩-೯) ಆಹಾರಯೋಗ್ಯವಾದ ಯಾವ ವಸ್ತುವಿಗಾದರೂ ಅನ್ನವೆಂದು ಹೇಳುವ ರೂಢಿ ಇದೆ. ಇದಲ್ಲದೆ ಯಾಸ್ಕರು—**ಅನ್ನಂ ಕಸ್ಮಾದಾನತಂ ಭೂತೇಭ್ಯೋಽತ್ತೇರ್ವಾ ಅಭಿಮುಖ್ಯೇನ ಹ್ಯೇತತ್ ನತಂ ಪ್ರಹ್ವೀಭೂತಂ ಭವತಿ ಭೋಜನಾಯ ಭೂತಾನಾಂ । ಅತ್ತೇರ್ವಾ ।** ಎಂದು ಹೇಳಿ **ಅದ್ಯತೇಽತ್ತಿ ಚ ಭೂತಾನಿ । ತಸ್ಮಾದನ್ನಂ ತದುಚ್ಯತ** ಇತಿ ಎಂದು ಉಪನಿಷದ್ವಾಕ್ಯವನ್ನು ಉದಹರಿಸಿರುವರು.

ಸಚಾ—ಸಹಿತವಾಗಿ. ಈ ಋಕ್ಕಿನಲ್ಲಿ ಈ ಶಬ್ದಕ್ಕೆ ಯಾವ ಉಪಯೋಗವೂ ಇದ್ದಂತೆ ಕಂಡುಬರುವುದಿಲ್ಲ. ಸಹಿತವಾಗಿ ಎಂದರೆ ನೀನೇ ಪ್ರತ್ಯಕ್ಷವಾಗಿ ಎಂದು ಅರ್ಥವನ್ನು ಹೇಳಬಹುದು.

ವರ್ಧಯ—ವೃದ್ಧಿಪಡಿಸು, ಸಮೃದ್ಧಿಗೊಳಿಸು, ನಿರ್ವಿಘ್ನವಾಗಿ ನೆರವೇರಿಸು. ಈ ಧಾತುವಿನ ಪ್ರಯೋಗವು ಋಗ್ವೇದದಲ್ಲಿ ವಿಶೇಷವಾಗಿದೆ. ಇದಕ್ಕೆ ವೃದ್ಧಿಪಡಿಸು ಎಂಬ ಸಾಮಾನ್ಯಾರ್ಥವಲ್ಲದೆ ಅನೇಕ ಸಂದರ್ಭಗಳಲ್ಲಿ ಭಾವಾರ್ಥವನ್ನೂ ಹೇಳಬೇಕಾಗುವುದು. ಉದಾಹರಣೆಗಾಗಿ **ತ್ವಾಂ ವರ್ಧಂತು ನೋ ಗಿರಃ**—ಎಂಬ ವಾಕ್ಯದಲ್ಲಿ ವರ್ಧಂತು ಎಂಬ ಶಬ್ದಕ್ಕೆ ಪ್ರಶಂಸೆನಾಡಲಿ ಎಂಬ ಅರ್ಥವು **ಹೊಂದುವುದು**. ಪ್ರಸಕ್ತವಾದ ಋಕ್ಕಿನಲ್ಲಿ **ಬ್ರಹ್ಮ ಚ ವರ್ಧಯ**—ಅನ್ನವನ್ನು ವೃದ್ಧಿಪಡಿಸು ಎಂದರೆ ಅನ್ನವನ್ನು ಬಹು ಹೆಚ್ಚಾಗಿ ಕೊಡು ಎಂದರ್ಥವು. ಅದರಂತೆಯೇ **ಯಜ್ಞಂ ಚ ವರ್ಧಯ** ಯಜ್ಞವನ್ನು ವೃದ್ಧಿಪಡಿಸು ಎಂದರೆ ಯಜ್ಞವು ನಿರ್ವಿಘ್ನವಾಗಿ ನೆರವೇರುವಂತೆ ಅನುಗ್ರಹಿಸು ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಇಹಿ—ಇಣ್ ಗತೌ ಧಾತು. ಅದರ ಮುಂದೆ ಲೋಟ್ ಮಧ್ಯಮಪುರುಷ ಏಕವಚನ ಸಿಪ್ ಸೇರ್ಯುಪಿಚ್ಚ (ಪಾ ಸೂ. ೩-೪-೮೭) ಎಂಬುದರಿಂದ ಸಿಗೆ ಹಿ ಆದೇಶ, **ಶಪ್ ವಿಕರಣಕ್ಕೆ ಆದಿಪ್ರ್ಭೃತಿಭ್ಯಃ ಶಪಃ** (ಪಾ. ಸೂ. ೭-೪-೭೨) ಎಂಬುದರಿಂದ ಲುಕ್ ಬರುವುದು. ಹಿಯು ಅಪಿತ್ತು. ಆದ್ದರಿಂದ **ಸಾರ್ವಧಾತುಕಮಪಿತ್** (ಪಾ. ಸೂ. ೧-೬-೪) ಎಂಬುದರಿಂದ ಙಿತ್ತಾಗುವುದು. ಆದಕಾರಣ **ಕ್ಙಿತಿಚ** (ಪಾ. ಸೂ. ೧-೧-೫) ಎಂಬುದರಿಂದ ಗುಣನಿಷೇಧ ಬರುವುದು. **ತಿಙ್ಙತಿಙಃ** (ಪಾ. ಸೂ. ೮-೧-೨೮) ಎಂಬುದರಿಂದ ಅನುದಾತ್ತ. ಆ ಉಪಸರ್ಗವನ್ನು ಸೇರಿಸಿದರೆ, ಗುಣವು ಏಕಾದೇಶವಾಗಿ ಬಂದು 'ಏಹಿ' ಎಂದಾಗುವುದು. ಆ ಎಂಬುದು ನಿಪಾತವಾದ್ದರಿಂದ **ಉದಾತ್ತ. ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮-೪-೫) ಎಂಬುದರಿಂದ ಏಕಾದೇಶದಿಂದ ಬಂದ ಏಕಾರವು ಉದಾತ್ತ.

ಸ್ತೋಮಾನ್-ಆರ್ತಿಸ್ತುಸು--(ಉ. ಸೂ. ೧-೧೫೭) ಎಂಬುದರಿಂದ ಸ್ತು ಧಾತುವಿನ ಮುಂದೆ ಮನ್ ಪ್ರತ್ಯಯ ಬರುವುದು. **ಸಾರ್ವಧಾತುಕಾರ್ಧಧಾತುಕಯೋಃ** (ಪಾ ಸೂ. ೭-೩.೮೪) ಎಂಬುದರಿಂದ ಗುಣ, ದ್ವಿತೀಯಾ ಬಹುವಚನದಲ್ಲಿ ಸ್ತೋಮಾನ್ ಎಂದಾಗುವುದು. ಉತ್ತರಪದದೊಂದಿಗೆ ಸಂಹಿತಾಕಾಲದಲ್ಲಿ **ದೀರ್ಘಾದಟಿ ಸಮಾನಪಾದೇ** (ಪಾ. ಸೂ. ೮-೩-೯) ದೀರ್ಘದ ಮುಂದೆ ಇರುವ ನಕಾರಕ್ಕೆ ಅಡ್ವರ್ಣಪರದಲ್ಲಿರುವಾಗ ರು ಆದೇಶಬರುವುದು. ಆದರೆ ಆ ನಕಾರ ಅಡ್ವರ್ಣಗಳು ಒಂದೇ ಪಾದದಲ್ಲಿ, ಇರಬೇಕು. ಎಂಬುದರಿಂದ ನಕಾರಕ್ಕೆ ರು ಆದೇಶ ಬರುವುದು. ಸ್ತೋಮಾರ್+ಅಭಿ **ಅತೋಟಿನಿತ್ಯಮ್** (ಪಾ ಸೂ. ೮-೩-೩) ಅಡ್ವರ್ಣದ ಹಿಂದೆ ಇರುವ ರು ವಿನ ಹಿಂದೆ ಇರುವ ದೀರ್ಘಾಕಾರಕ್ಕೆ ನಿತ್ಯವಾಗಿ ಅನುನಾಸಿಕ ಬರುವುದು ಎಂಬುದರಿಂದ ಅನುನಾಸಿಕ ಬಂದರೆ ಸ್ತೋಮಾ್ **ಭೋಭಗೋಅಘೋ ಅಪೂರ್ವಸ್ಯಯೋಶಿ** (ಪಾ. ಸೂ. ೮-೩-೧೭) ಅಶ್ ವರ್ಣಪರದಲ್ಲಿರುವಾಗ ಭೋ- ಭಗೋ-ಅಘೋ ಮತ್ತು ಅವರ್ಣ ಇವುಗಳ ಮುಂದೆ ಇರುವ ರುಗೆ ಯ್ ಆದೇಶ ಬರುವುದು ಎಂಬುದರಿಂದ ಯ್ ಆದೇಶ. **ಲೋಪಃ ಶಾಕಲ್ಯಸ್ಯ** (ಪಾ. ಸೂ. ೮-೩-೧೯) ಪದದ ಕೊನೆಯಲ್ಲಿರುವ ಅವರ್ಣಪೂರ್ವಕವಾದ ಯಕಾರ ವಕಾರಗಳಿಗೆ ಅಶ್ ವರ್ಣ ಪರದಲ್ಲಿರುವಾಗ ಲೋಪಬರುವುದು ಎಂಬುದರಿಂದ ಯಕಾರಕ್ಕೆ ಲೋಪ. ಸ್ತೋಮಾ+ಅಭಿ ಈಗ **ಅಕಸ್ಯವರ್ಣೇದೀರ್ಘಃ,**

(ಪಾ. ಸೂ. ೬-೧-೧೦೧) ಎಂಬುದರಿಂದ ಸವರ್ಣ ದೀರ್ಘವು ಪ್ರಾಪ್ತವಾಗುವುದು. ಆದರೆ **ಪೂರ್ವತ್ರಾಸಿದ್ಧಮ್** (ಪಾ. ಸೂ. ೮-೨-೧) ಎಂಬುದರಿಂದ ಆರನೇ ಅಧ್ಯಾಯದಲ್ಲಿ ನ ಸೂತ್ರದಿಂದ ಸವರ್ಣ ದೀರ್ಘವನ್ನು ಮಾಡು ವಾಗ, ತ್ರಿಪಾದಿಯಲ್ಲಿನ ಸೂತ್ರದಿಂದ ಬಂದ ಯ ಲೋಪವು ಅಸಿದ್ಧವಾಗುವುದು. ಆದ್ದರಿಂದ ್ಲಆ+ಅ ಇವುಗಳ ಮಧ್ಯೆ ಯಕಾರವಿದ್ದಂತೆ ಆಗುವುದು. ಆ ಎಂಬುದಕ್ಕೆ ಸವರ್ಣಸ್ವರ ಪರವಾಗುವುದಿಲ್ಲ. ಆದ್ದರಿಂದ ಸವರ್ಣ ದೀರ್ಘ ಬರುವುದಿಲ್ಲ.

ಅಭಿ-ವಿವಾದೀನಾಮನ್ತಃ (ಫಿ. ಸೂ. ೮೨) ಎಂಬುದರಿಂದ ಅಂತೋದಾತ್ತ.

ಸ್ವರ—ಸ್ವೃ ಶಬ್ದೋಪತಾಪಯೋಃ, ಧಾತು. ಲೋಟ್ ಮಧ್ಯಮಪುರುಷ ಏಕವಚನಾಂತ, ಅನು ದಾತ್ತ ಸ್ವರಬರುವುದು.

ಅಭಿ—ಅಂತೋದಾತ್ತ.

ಗೃಣೇಹಿ—'ಗೃ ಶಬ್ದೇ, ಧಾತು' ಇದರ ಮುಂದೆ ಲೋಟ್ ಪರಸ್ಮೈಪದ ಮಧ್ಯಮಪುರುಷ ಏಕವಚನ ಸಿಪ್ **ಸೇರ್ಹ್ಯಪಿಚ್ಚ** (ಪಾ. ಸೂ. ೩-೪-೮೭) ಎಂಬುದರಿಂದ ಸಿಗೆ 'ಹಿ, ಆದೇಶ' **ಕ್ರಾದಿಭ್ಯಃಶ್ನಾ** (ಪಾ. ಸೂ. ೩-೧-೭೮) ಎಂಬುದರಿಂದ ಶ್ನಾ ವಿಕರಣಪ್ರತ್ಯಯ. **ಈಹಲ್ಯಘೋಃ** (ಪಾ. ಸೂ. ೬-೪-೧೧೩) ಶ್ನಾ ಪ್ರತ್ಯಯ, ಘೃಸಂಜ್ಞೆಯನ್ನು ಹೊಂದದೇ ಇರುವ ಅಭ್ಯಸ್ತ ಸಂಜ್ಞೆಯುಳ್ಳ ಧಾತು. ಇವುಗಳ ಆಕಾರಕ್ಕೆ ಕೆತ್ತು, ಅಥವಾ ಜಿತ್ತು ಆದ ಹಲಾದಿಯಾದ ಪ್ರತ್ಯಯಗಳು ಪರದಲ್ಲಿದ್ದರೆ ಈಕಾರಾದೇಶ ಬರುವುದು ಎಂಬುದ ರಿಂದ ಶ್ನಾ ಪ್ರತ್ಯಯದ ಆಕಾರಕ್ಕೆ ಈಕಾರ ಬಂದರೆ ಗೃನೀ+ಹಿ, ಎಂದಾಗುವುದು. ಈಗ **ಸ್ನಾದೀನಾಂಹ್ರಸ್ವಃ** (ಪಾ. ಸೂ. ೭-೩-೪೦) ಶಕಾರೇತ್ಸಂಜ್ಞಕ ಪ್ರತ್ಯಯವು ಪರದಲ್ಲಿರುವಾಗ ಪೂಜ್ ಪವನೇ ಮೊದಲಾದ ಧಾತುಗಳಿಗೆ ಹ್ರಸ್ವ ಬರುವುದು ಎಂಬುದರಿಂದ ಹ್ರಸ್ವವು ಗೃನಾ ಧಾತುವಿನ ಋಕಾರಕ್ಕೆ ಬಂದರೆ ಗೃ+ನೀಹಿ ಎಂದಾಗುವುದು. **ರಷಾಭ್ಯಾಂನೋಣಸ್ಸಮಾನಪದೇ** (ಪಾ.ಸೂ. ೮-೪-೧) ಎಂಬ ಸೂತ್ರದಲ್ಲಿ ರಷಾಭ್ಯಾಂಣತ್ವೇ ಋಕಾರ ಗ್ರಹಣಂ, ಎಂದು ವಾರ್ತಿಕ. ರಷಾಭ್ಯಾಂಣತ್ವೇ ಋಕಾರಗ್ರಹಣಂ ಕರ್ತವ್ಯಂ ರಷಾಭ್ಯಾಂ ನೋಣಸ್ಸಮಾನಪದೇ ಋಕಾರಾ ಜ್ಜೇತಿ ವಕ್ತವ್ಯಮ್, ಎಂದು ಮಹಾಭಾಷ್ಯಕಾರರು ವಾರ್ತಿಕಕ್ಕೆ ವಿವರಣೆ ಮಾಡಿರುವರು. ಋಕಾರಕ್ಕೆ ಣಕಾರವನ್ನು ವಿಧಿಸುವ ರಷಾಭ್ಯಾಂ ಎಂಬ ಸೂತ್ರದಲ್ಲಿ ಋಕಾರಾಚ್ಚ ಎಂಬುದನ್ನು ಸೇರಿಸಿಕೊಳ್ಳಬೇಕು. ಋಕಾರದ ಮುಂದೆ ಇರುವ ನಕಾರಕ್ಕೆ ಣಕಾರ ಬರುವುದು ಎಂದು ಇದಕ್ಕೆ ಅರ್ಥ, ಇದರಿಂದ ಪ್ರಕೃತದಲ್ಲಿ ನಕಾರಕ್ಕೆ ಣಕಾರ ಬರು ವುದು. ಈ ವಾರ್ತಿಕವನ್ನು ಪ್ರತ್ಯಾಖ್ಯಾನ ಮಾಡುವ ಪಕ್ಷದಲ್ಲಿ **ಛಂದಸ್ಯೃದವಗ್ರಹಾತ್** (ಪಾ. ಸೂ. ೮-೪-೨೬) ಎಂಬಲ್ಲಿ ಋತಃ ಎಂದೂ ಛಂದಸ್ಯವಗ್ರಹಾತ್ ಎಂದೂ ಮಹಾಭಾಷ್ಯಕಾರರು ಸೂತ್ರವಿಭಾಗ ಮಾಡುವರು. ಋತಃ ಎಂಬುದಕ್ಕೆ ಋಕಾರದ ಮುಂದೆ ಇರುವ ನಕಾರಕ್ಕೆ ಣಕಾರ ಬರುವುದು ಎಂದು ಅರ್ಥ. **ಛಂದಸ್ಯವ-ಗ್ರಹಾತ್** (ಪಾ. ಸೂ. ೮-೪-೨೬) ಇಲ್ಲಿ ಋತಃ ಎಂಬ ಪದವು ಅನುವೃತ್ತವಾಗುವುದು. ಛಂದಸ್ಸಿನಲ್ಲಿ ಋಕಾ ರಾಂತವಾದ ಅವಗ್ರಹದ ಮುಂದೆ ಇರುವ ನಕಾರಕ್ಕೆ ಣಕಾರ.ಬರುವುದು ಎಂದು ಅರ್ಥ. ಇಲ್ಲಿ ಋತಃ ಎಂಬ ಮೊದಲನೆಯ ಅಂಶದಿಂದ ನಕಾರಕ್ಕೆ ಣಕಾರಬರುವುದು. ಗೃಣೇಹಿ ಎಂದಾಗುವುದು. **ತಿಙ್ಶಿತಿಬಃ** (ಪಾ. ಸೂ. ೮-೧-೭೮) ಎಂಬುದರಿಂದ ಅನುದಾತ್ತ.

ರುವ—ರು ಶಬ್ದೇ, ಧಾತು. ಲೋಟ್, ಮ. ಪು. ಏ ಸಿಪ್ ಅದಕ್ಕೆ ಸೇರ್ಹ್ಯಪಿಚ್ಚ ಎಂಬುದರಿಂದ ಹಿ. (ಆದಾದಿ ಎರಡನೇಗಣ) ಆದ್ದರಿಂದ ವಿಕರಣ ಶಪ್ ಬಂದು ಅದಕ್ಕೆ **ಅದಿಪ್ರಭೃತಿಭ್ಯಃಶಪಃ** (ಪಾ.ಸೂ. ೨-೪-೭೨) ಎಂಬುದರಿಂದ ನ್ಯಾಯವಾಗಿ ಲುಕ್ಕು ಬರಬೇಕು. ಆದರೂ ಇಲ್ಲಿ, ವ್ಯತ್ಯಯದಿಂದ ಶ ವಿಕರಣ ಪ್ರತ್ಯಯ

ಬರುವುದು ರು+ಆ+ಹಿ ಸರ್ವಧಾತುಕಮಪಿತ್ (ಪಾ. ಸೂ. ೧-೩-೪) ಎಂಬುದರಿಂದ ಶ ಪ್ರತ್ಯಯ. ಜಿತ್ತು ಆದ್ದರಿಂದ ಗುಣಬರವುದಿಲ್ಲ. ಅಚಿಶ್ನುಧಾತುಭ್ರುವಾಂಯ್ವೋರಿಯಙ್ವಠೌ (ಪಾ. ಸೂ. ೬-೪-೭೭) ಎಂಬುದರಿಂದ ಉವಙ್ ಆದೇಶ ಬರುವುದು. ರುವ್+ಅಹಿ ಅತೋಹೇಃ (ಪಾ.ಸೂ. ೬-೪-೧೦೫) ಎಂಬುದರಿಂದ ಹೀಗೆ ಲುಕ್ ಬರುವುದು ರುವ ಎಂದಾಗುವುದು. ತಿಙ್ಙತಿಙಃ (ಪಾ. ಸೂ. ೮-೧-೨೮) ಎಂಬುದರಿಂದ ಅನುದಾತ್ತ.

ಬೃಹ್-ಬೃಹ,ಬೃಹವೃದ್ಧೌ, ಧಾತು. ಬೃಹಿ ಧಾತುವು ಇದಿತ್ತು. ಆದ್ದರಿಂದ ಇದಿತೋನುಮ್ ಧಾತೋಃ (ಪಾ. ಸೂ, ೭-೧-೫೮) ಎಂಬುದರಿಂದ ನುಮಾಗಮ ಬೃನ್ ಹ್ ಎಂದಿರುವುದು, ಈಗ ಬೃಹೇರ-ಮ್‌ನಲೋಪಶ್ಚ (ಉ. ಸೂ. ೩-೫೮೫) ಬೃಹಿ ಧಾತುವಿನ ಮುಂದೆ ಮನಿನ್ ಪ್ರತ್ಯಯಬರುವುದು, ಧಾತುವಿಗೆ ಆಮ್ ಆಗಮ ಬರುವುದು. ನುಮಾಗದಿಂದ ಬಂದ ನಕಾರಕ್ಕೆಲೋಪ ಎಂದು ಇದರ ಅರ್ಥ. ಇಲ್ಲಿ ಸರ್ವಧಾತುಭ್ಯೋ ಮನಿನ್ ಎಂಬ ಹಿಂದಿನ ಸೂತ್ರದಿಂದ ಮನಿನ್ ಎಂಬ ಪದವು ಅನುವೃತ್ತವಾಗಿರುವುದು. ಈ ಉಣಾದಿ ಸೂತ್ರದಿಂದ ಬೃನ್ಹ್ ಎಂಬುದರ ಮುಂದೆ ಮನಿನ್ ಪ್ರತ್ಯಯವೂ, ಬೃನ್ಹ್ ಎಂಬುದರ ನಕಾರಕ್ಕೆ ಲೋಪವೂ ಬರುವುದು. ಅಲ್ಲದೆ ಆಮಾಗಮವು ಮಿದಚೋಂತ್ಯಾತ್ಪರಃ (ಪಾ. ಸೂ. ೧-೧-೪೭) ಯಾವ ಸಮುದಾಯಕ್ಕೆ ಮಿತ್ತಾದ ಆಗಮವನ್ನು ವಿಧಿಸಿರುವರೋ ಆ ಸಮುದಾಯದ ಅಚ್ ಸಮುದಾಯಮಧ್ಯ ದಲ್ಲಿ ಯಾವುದು ಕೊನೆಯ ಅಚ್ಚೋ ಆದರ ಮುಂದೆ ಆ ಸಮುದಾಯಕ್ಕೆ ಅಂತಾವಯವವಾಗಿ ಮಕಾರೇ ತ್ಸಂಜ್ಞಕವಾದ ಆಗಮವು ಬರುವುದು ಎಂಬುದರಿಂದ, ಬೃವಿನ ಮುಂದೆ ಆಮ್ ಆಗಮ ಬರುವುದು. ಬೃ-ಆಹ್+ಮನ್ ಇಕೋಯೆಣಚಿ (ಪಾ.ಸೂ. ೬-೧-೭೭) ಎಂಬುದರಿಂದ ಋಕಾರಕ್ಕೆ ರೇಫ ಬ್ರಹ್ಮನ್ ಎಂದಾಗುವುದು. ಇಲ್ಲಿ ಬೃಂಹೇರ್ನೋಕ್ಷಿ (ಉ. ಸೂ. ೪-೫೮೫) ಎಂದು ಸೂತ್ರಪಾಠವನ್ನು ಕೆಲವರು ಮಾಡಿರುವರು. ಬೃಹಿ ಧಾತುವಿನ ಮುಂದೆ ಮನಿನ್ ಪ್ರತ್ಯಯ ಬರುವುದು. ನುಮಾಗಮದಿಂದ ಬಂದ ನಕಾರಕ್ಕೆ ಅಕಾರ ಬರುವುದು ಎಂದು ಸೂತ್ರಾರ್ಥ. ಇದರಿಂದ ಬೃನ್+ಹ್ ಎಂಬುದರ ಮುಂದೆ ಮನಿನ್ ಪ್ರತ್ಯಯವೂ, ನಕಾರಕ್ಕೆ ಅಕಾರವೂ ಒಂದರೆ ಋಗೆಂಯಣ್ ಬಂದು ಬ್ರಹ್ಮನ್ ಎಂದಾಗುವುದು. ಮನಿನ್ ಪ್ರತ್ಯಯವು ನಿತ್ತಾದ್ದರಿಂದ ಬ್ರಹ್ಮ್ ಎಂಬುದು ಆದ್ಯುದಾತ್ತ.

ವಸೋಃ—ಆಮಂತಿತಸ್ಯಚ (ಪಾ. ಸೂ. ೮-೧.೧೯) ಎಂಬುದರಿಂದ ಅನುದಾತ್ತ.

ಯಜ್ಞಮ್—ಯಜಯಾಚಯತವಿಚ್ಛಪ್ರಚ್ಛರಕ್ಷೋನಡಂ (ಪಾ. ಸೂ ೩-೩-೯೦) ಎಂಬ ಸೂತ್ರ ದಿಂದ ಯಜ್ ಧಾತುವಿನ ಮುಂದೆ ನಙ್ ಪ್ರತ್ಯಯ. ಯಜ್‌ನ ಸ್ಫೋಶ್ಚನಾಶ್ಚಾಃ (ಪಾ. ಸೂ. ೮-೪-೪೦) ಎಂಬ ಶ್ಚುತ್ವದಿಂದ ತವರ್ಗದ ಐದನೆಯ ನ್‌ಗೆ ಚವರ್ಗ ಐದನೆಯದಾದ ಞ್ ಬರುವುದು.

ವರ್ಧಯೆ—ತಿಙ್ಙತಿಙಃ (ಪಾ. ಸೂ. ೮-೧-೨೮) ಎಂಬುದರಿಂದ ಅನುದಾತ್ತ. ಈ ಮಂತ್ರದಲ್ಲಿ ಬ್ರಹ್ಮ ಚವರ್ಧಯ, ಯಜ್ಞಂಚವರ್ಧಯ ಎಂದು ಎರಡು ಚಕಾರವು ಶ್ರುತವಾಗಿರುವುದರಿಂದ, ಈ ತಿಙ್ ವಿಭಕ್ತಿಗೆ ಪೂರ್ವ ವಾಕ್ಯದಲ್ಲಿಯೂ ಸಂಬಂಧವು ಏರ್ಪಡುವುದು. ಆರಿದರೆ ಬ್ರಹ್ಮಚ ವರ್ಧಯ, ಯಜ್ಞಂ ಚ ವರ್ಧಯ ಎಂದಾಗು ವುದು. ಆದ್ದರಿಂದ ಪೂರ್ವವಾಕ್ಯದಲ್ಲಿ ಸಂಬಂಧಿಸಿದ ವರ್ಧಯ ಎಂಬುದೇ ಪ್ರಥಮ ತಿಙ್ ವಿಭಕ್ತಿಯಾಗುವುದು. ಮಂತ್ರದಲ್ಲಿ ಉಪಾತ್ತವಾಗಿ ಶ್ರುತವಾದ ವರ್ಧಯ ಎಂಬುದು ಪ್ರಥಮ ತಿಙ್ ವಿಭಕ್ತಿಯಾಗುವುದಿಲ್ಲ. ಪ್ರಥಮ ತಿಙ್ ವಿಭಕ್ತಿಯಾಗಿ ಅಶ್ರುತವಾದ ವರ್ಧಯ ಎಂಬದಕ್ಕೆ ಚವಾಯೋಗೇ ಪ್ರಥಮಾ (ಪಾ. ಸೂ. ೮-೧-೫೯) ಚ ವಾ ಎಂಬ ಶಬ್ದಗಳ ಯೋಗವಿರುವಾಗ ಪ್ರಥಮ ತಿಙ್ ವಿಭಕ್ತಿಯು ಅನುದಾತ್ತವನ್ನು ಹೊಂದುವುದಿಲ್ಲ ಎಂಬುದರಿಂದ ಅನುದಾತ್ತ ನಿಷೇಧ ಬರುವುದಿಲ್ಲ. ॥ ೪ ॥

॥ ಸಂಹಿತಾಪಾಠಃ ॥

ಉಕ್ಥಮಿಂದ್ರಾಯ ಶಂಸ್ಯಂ ವರ್ಧನಂ ಪುರುನಿಷ್ಷಿಧೇ ।
ಶಕ್ರೋ ಯಥಾ ಸುತೇಷು ಣೋ ರಾರಣತ್ಸಖ್ಯೇಷು ಚ ॥ ೫ ॥

॥ ಪದಪಾಠಃ ॥

ಉಕ್ಥಂ । ಇಂದ್ರಾಯ । ಶಂಸ್ಯಂ । ವರ್ಧನಂ । ಪುರುನಿಃ ಽ ಸಿಧೇ ।
ಶಕ್ರಃ । ಯಥಾ । ಸುತೇಷು । ನಃ । ರರಣತ್ । ಸಖ್ಯೇಷು । ಚ ॥ ೫ ॥

॥ ಸಾಯಣಭಾಷ್ಯಂ ॥

ಅಭಿಷ್ಟವಷಡಹಗತೋಕ್ಥ್ಯೇಷ್ವಬ್ಭಾವಾಕಸ್ಯ ತೃತೀಯಸವನೇ ಉಕ್ಥಮಿಂದ್ರಾಯ ಶಂಸ್ಯ-ಮಿತ್ಯನುರೂಪಸ್ತ್ರ್ಯಚಃ । ಏಹ್ಯೂ ಷ್ವಿತಿ ಋಂಡ ಇಂದ್ರಂ ವಿಶ್ವಾ ಅವೀವೃಧನ್ನುಕ್ಥಮಿಂದ್ರಾಯ ಶಂಸ್ಯಂ । ಅ. ೭-೪ । ಇತಿ ಸೂತ್ರಿತಂ ॥

ಇಂದ್ರಾಯೇಂದ್ರಾರ್ಥಂ ವರ್ಧನಂ ವೃದ್ಧಿಸಾಧನಮುಕ್ಥಂ ಶಸ್ತ್ರಂ ಶಂಸ್ಯಂ । ಅಸ್ಮಾಭಿಃ ಶಂಸ-ನೀಯಂ । ಕೀದೃಶಾಯೇಂದ್ರಾಯ । ಪುರುನಿಷ್ಷಿಧೇ ಬಹೂನಾಂ ಶತ್ರೂಣಾಂ ನಿಷೇಧಕಾರಿಣೇ । ಶಕ್ರ ಇಂದ್ರೋ ನೋಽಸ್ಮದೀಯೇಷು ಸುತೇಷು ಪುತ್ರೇಷು ಸಖ್ಯೇಷು ಚ ಸಖಿತ್ವೇಷ್ವಪಿ ಯಥಾ ಯೇನ ಪ್ರಕಾರೇಣ ರಾರಣತ್ । ಅತಿಶಯೇನ ಶಬ್ದಂ ಕುರ್ಯಾತ್ತಥಾ ಶಂಸ್ಯಮಿತಿ ಪೂರ್ವತ್ರಾನ್ವಯಃ । ಅಸ್ಮ-ದೀಯೇನ ಶಸ್ತ್ರೇಣ ಪರಿತುಷ್ಟ ಇಂದ್ರೋಽಸ್ಮಾಕಂ ಪುತ್ರಾನಸ್ಮತ್ಸಖ್ಯಾನಿ ಚ ಬಹುಧಾ ಪ್ರಶಂಸತ್ವಿತ್ಯರ್ಥಃ॥ ಉಕ್ಥಂ । ವಚೇಸ್ಥಕ್ಪ್ರತ್ಯಯೇ ಉಕ್ತಃ ।ಉ. ೨-೭ । ಪ್ರತ್ಯಯಸ್ವರಃ । ಶಂಸ್ಯಂ । ಶಸ್ಸು ಸ್ತುತೌ । ಣ್ಯಂತಾ-ದಚೋ ಯತ್ । ನೇರನಿಟೀತಿ ಣಿಲೋಪಃ । ತಿತ್ಸ್ವರಿತೇ ಸ್ವಾಸ್ತೇ ಯತೋಽನಾವ ಇತ್ಯಾದ್ಯುದಾ-ತ್ತತ್ವಂ । ವರ್ಧನಂ । ಕರಣಾಧಿಕರಣಯೋಶ್ಚ । ಪಾ. ೩-೩-೧೧೭ । ಇತಿ ಕರಣೇ ಲ್ಯುಟ್ । ಲಿತೀತಿ ಪ್ರತ್ಯಯಪೂರ್ವಸ್ಯೋದಾತ್ತತ್ವಂ । ಪುರುನಿಷ್ಷಿಧೇ । ಬಹೂನಾಂ ಶತ್ರೂನಾಂ ನಿಷೇಧಕಾಯ । ಷಿಧ ಗತ್ಯಾಂ । ಧಾತ್ವಾದೇಃ ಷಃ ಸಃ । ಅತ್ರ ನಿರಿತ್ಯುಪಸರ್ಗಸ್ಯ ನಿಶಬ್ದಸಮಾನಾರ್ಥಸ್ಯ ಸ್ಯಾಕ್ಪ್ರಯೋಗಃ । ಕ್ವಿಪ್ಚೇತಿ ಕ್ವಿಪ್ । ಕ್ವಿಪಃ ಸರ್ವಾಪಹಾರೀ ಲೋಪಃ । ಕುಗತಿಪ್ರಾದಯಃ । ಪಾ. ೨-೨-೧೮ । ಇತಿ ಸಮಾಸಃ । ನಿಸಃ ಸಕಾರೇಣೇನೋ ವ್ಯವಧಾನಂ ಛಾಂದಸತ್ವಾದನಾದೃತ್ಯೋಪಸರ್ಗಾತ್ಸ್ವನೋತೀತ್ಯಾ-ದಿನಾ । ಪಾ. ೮-೩-೬೫ । ಧಾತುಸಕಾರಸ್ಯ ಷತ್ವಂ । ನಿಸಃ ಸಕಾರಸ್ಯ ಷ್ಟುನಾ ಷ್ಟುಃ । ಪಾ. ೮-೪-೪೧ । ಇತಿ ಷತ್ವಂ । ಪುರುಶಬ್ದೇನ ಕರ್ಮಣಿ ಷಷ್ಠ್ಯಂತೇನ ಸಮಾಸಃ । ಷಿಧೋ ಧಾತುಸ್ವರೇಣೋದಾತ್ತತ್ವಂ ।

ನಿಷ್ಪಿಧ ಇತಿ ಪ್ರಾದಿಸಮಾಸೇ ಕೃದುತ್ತರಪದಪ್ರಕೃತಿಸ್ವರತ್ವಂ । ಕೃದ್ಗ್ರಹಣೇ ಗತಿಕಾರಕಪೂರ್ವಸ್ಯಾಪಿ ಗ್ರಹಣಾತ್ಪುನಃ ಕಾರಕಸಮಾಸೇಽಪಿ ಸ ಏವ ಸ್ವರಃ । ಶಕ್ನೋತೀತಿ ಶಕ್ರಃ । ಸ್ಫಾಯಿತಂಚಿವಂಚಿಶಕೀತ್ಯಾದಿನಾ । ಉ ೨.೧೩ । ರಕ್ । ಪ್ರತ್ಯಯಸ್ವರಃ । ಯಥಾ । ಪ್ರಕಾರವಚನೇ ಥಾಲ್ । ಪಾ. ೫-೩-೨೩ । ಲಿಪ್ಸ್ವರೇಣ ಪ್ರತ್ಯಯೋಕಪ್ವೋರ್ಽಕಾರ ಉದಾತ್ತಃ । ಸುತೇಷು । ಕ್ತಃ ಪ್ರತ್ಯಯಸ್ವರೇಣೋದಾತ್ತಃ । ನಸೋ ನಕಾರಸ್ಯ ನಶ್ಚ ಧಾತುಸ್ಥೋರುಷುಭ್ಯಃ । ಪಾ. ೮-೪-೨೭ । ಇತಿ ಸಂಹಿತಾಯಾಂ ಣತ್ವಂ । ರಾರಣಾತ್ । ರಣ ಶಬ್ದಾರ್ಥಃ । ಧಾತೋರೇಕಾಚಃ । ಪಾ. ೩-೧-೨೨ । ಇತಿ ಯಙ್ । ಯಙಶ್ಚೋಽಚಿ ಚ । ಪಾ. ೨-೪-೭೪ । ಇತಿ ಲುಕ್ । ಪ್ರತ್ಯಯಲಕ್ಷಣೇನ । ಪಾ. ೬-೧-೯ । ದ್ವಿರ್ಭಾವೋ ಹಲಾದಿಶೇಷಃ । ದೀರ್ಘೋಽಕಿತಃ । ಪಾ. ೭-೪-೮೩ । ಇತಿ ದೀರ್ಘಃ । ಪ್ರತ್ಯಯಲಕ್ಷಣೇನ ಸನಾದ್ಯಂತಾ ಧಾತವಃ । ಪಾ, ೩ ೧-೩೨ । ಇತಿ ಧಾತುಸಂಜ್ಞಾಯಾಂ ಲಿಙರ್ಥೇ ಲೇಟ್ । ಪಾ. ೩-೪-೭ । ಇತಿ ಹೇತುಹೇತುಮದ್ಭಾವಲಕ್ಷಣೇ । ಪಾ. ೩ ೩-೧೫೬ । ಲಿಙರ್ಥೇ ಲೇಟ್ । ಅತ್ರ ಹೀಂದ್ರಕರ್ತೃಕಂ ರಾರಣನಮುಕ್ಥಶಂಸನಸ್ಯ ಕರ್ತವ್ಯತ್ವೇ ಹೇತುಃ । ಲೇಟಸ್ತಿಪ್ । ಇತಶ್ಚ ಲೋಪಃ ಪರಸ್ಮೈಪದೇಷ್ವಿತೀಕಾರಲೋಪಃ । ಲೇಟೋಽಡಾಟಾವಿತ್ಯಡಾಗಮಃ। ಕರ್ತರಿ ಶಪ್। ತಸ್ಯ ಚೇರ್ಕರೀತಂ ಪರಸ್ಮೈಪದಮದಾದಿನಚ್ಚ ದ್ರಷ್ಟವ್ಯಮಿತ್ಯದಾದಿವದ್ಭಾವಾದದಿಪ್ರಭೃತಿಭ್ಯಃ ಶಪ ಇತಿ ಪ್ರಾಪ್ತೋ ಲುಗ್ಬಹುಲಂ ಛಂದಸೀತಿ ನಿಷಿಧ್ಯತೇ। ಶಪೋಽಸುದಾತ್ತತ್ವಾದ್ಧಾತೋರಂತೋದಾತ್ತ ಏವ ಶಿಷ್ಯತೇ । ಶಪಾ ಲಸಾರ್ವಧಾತುಕಸ್ಯ ವ್ಯವಧಾನಾತ್ತಶ್ಚ ಪರತೋ ವಿಧೀಯಮಾನಮಭ್ಯಸ್ತಾನಾಮಾದಿರಿತ್ಯಾದ್ಯುದಾತ್ತತ್ವಂ ನ ಭವತಿ । ನ ಚ ತಿಙ್ಶಿತಿಙ ಇತಿ ನಿಘಾತಃ । ಅತ್ರ ಯಥಾಶಬ್ದಯೋಗೇನ ಯಾವದ್ಯಥಾಭ್ಯಾಂ । ಪಾ ೮-೧-೬೬। ಇತಿ ನಿಷೇಧಾತ್ । ಚೇವಾಯೋಗೇ ಪ್ರಥಮೇತಿ ವಾತ್ರ ನಿಘಾತೋ ನ ಭವಿಷ್ಯತಿ। ಅತ್ರ ಹ್ಯುತ್ತರವಾಕ್ಯೇ ಸಖ್ಯೇಷು ಚೇತಿ ಚಾನುಕೃಷ್ಟವಿಭಕ್ತ್ಯಪೇಕ್ಷಯೀಯಂ ಪ್ರಥಮಾ ತಿಙ್ವಿಭಕ್ತಿಃ । ಸಖ್ಯೇಷು । ಸಖ್ಯುಃ ಕರ್ಮಾಣಿ ಸಖ್ಯಾನಿ । ತೇಷು । ಕರ್ಮಣಿ ಚೇತ್ಯನುವೃತ್ತೌ ಸಖ್ಯುರ್ಯಃ । ಪಾ. ೫-೧-೧೨೬ । ಇತಿ ಸಖಿಶಬ್ದಾದ್ಯಪ್ರತ್ಯಯಃ । ಶಸ್ರ ಭಸಂಜ್ಞಾಯಾಂ ಯಸ್ಯೇತಿ ಚ । ಪಾ. ೬-೪-೧೪೮ । ಇತೀಕಾರಲೋಪಃ । ಪ್ರತ್ಯಯಸ್ವರಃ ॥

॥ ಪ್ರತಿಪದಾರ್ಥ ॥

ಪುರುನಿಷ್ಪಿಧೇ—ಅನೇಕ ಶತ್ರುಗಳನ್ನು ನಾಶಮಾಡುವ । **ಇಂದ್ರಾಯ**—ಇಂದ್ರನಿಗೋಸ್ಕರ । **ವರ್ಧನಂ**—ವೃದ್ಧಿಗೆ ಸಾಧನಭೂತವಾದ । **ಉಕ್ಥಂ**—ಶಸ್ತ್ರರೂಪವಾದ ಮಂತ್ರವು ಅಥವಾ ಸ್ತೋತ್ರವು । **ಶಂಸ್ಯಂ**--(ನಮ್ಮಿಂದ) ಸುತ್ತಿಸಲ್ಪಡಬೇಕು । **ಯಥಾ**—(ಯಾವ ಪ್ರಕಾರದಿಂದ) ಹಾಗೆ ಮಾಡುವ ಸ್ತೋತ್ರದಿಂದ । **ಶಕ್ರಃ**—ಬಲಶಾಲಿಯಾದ ಇಂದ್ರನು । **ನಃ**—ನಮ್ಮ । **ಸುತೇಷು**—ಪುತ್ರರಲ್ಲಿಯೂ । **ಸಖ್ಯೇಷು ಚ**—ನಮ್ಮಲ್ಲಿ ಸ್ನೇಹಭಾವದಿಂದಿರುವವರಲ್ಲಿಯೂ । **ರಾರಣತ್**–ಶಬ್ದಮೂಲಕ ತನ್ನ ಮೆಚ್ಚಿಗೆಯನ್ನು ಸೂಚಿಸುವನು ॥

॥ ಭಾವಾರ್ಥ ॥

ಇಂದ್ರನು ಅನೇಕ ಶತ್ರುಗಳನ್ನು ನಾಶಮಾಡುವವನು ಇಂತಹ ಇಂದ್ರನ ತೃಪ್ತಿಗಾಗಿ ನಾವು ಶಸ್ತ್ರ ಮಂತ್ರಗಳನ್ನು ಸೋತ್ರವಾಡಿ ಪಠಿಸಬೇಕು. ಆಥವಾ ಶಸ್ತ್ರಮಂತ್ರಗಳಿಂದ ಇಂದ್ರನ ಗುಣಗಾನ ಮಾಡಬೇಕು. ಹಾಗೆ ಇಂದ್ರನನ್ನು ಪ್ರಶಂಸೆ ಮಾಡುವುದರಿಂದ ಇಂದ್ರನು ಸಂತೋಷಗೊಂಡು, ನಮ್ಮಲ್ಲಿಯೂ ನಮ್ಮ ಪುತ್ರರಲ್ಲಿಯೂ, ನಮ್ಮ ಸ್ನೇಹಿತರಾದಿಯಾದ ಹಿತೈಷಿಗಳಲ್ಲಿಯೂ ತನ್ನ ಮೆಚ್ಚಿಗೆಯನ್ನು ಸೂಚಿಸುವನು.

English Translation

An agreeable hymn is to be sung to Indra, the destroyer of many enemies, so that the mighty Indra may speak with kindness to our sons and to our friends.

॥ ವಿಶೇಷವಿಷಯಗಳು ॥

ಅಭಿಷ್ಟವಷಡಹವೆಂಬ ಯಾಗದ ತೃತೀಯ ಸವನದಲ್ಲಿ ಆಚ್ಛಾವಾಕನೆಂಬ ಋತ್ವಿಜನು ಉಕ್ಥಮಂತ್ರ ಪಠನಮಾಡುವಾಗ **ಉಕ್ಥಮಿಂದ್ರಾಯ ಶಂಸ್ಯಂ** ಎಂಬ ತೃಚವನ್ನು (ಮೂರು ಋಕ್ಕನ್ನು) ಪಠಿಸಬೇಕೆಂದು ವಿಶೇಷ ವಿನಿಯೋಗವು ಆಶ್ವಲಾಯನ ಶ್ರೌತಸೂತ್ರದ ಏಹ್ಯೂಷು ಎಂಬ ಖಂಡದಲ್ಲಿ (ಆಶ್ವ.ಸೂ. ೭-೮) **ಇಂದ್ರೇಂ ವಿಶ್ವಾ ಅವೀವೃಧನ್ನುಕ್ಥಮಿಂದ್ರಾಯ ಶಂಸ್ಯಂ** ಎಂಬ ಸೂತ್ರದಲ್ಲಿ ಹೇಳಲ್ಪಟ್ಟಿರುವುದು.

ವರ್ಧನಂ—ವೃದ್ಧಿಸಾಧನಂ—ವೃದ್ಧಿಗೆ ಸಾಧನಭೂತವಾದ ಎಂದರೆ ಇಂದ್ರನನ್ನು ಸ್ತೋತ್ರ ಮಾಡುವುದರಿಂದ ನಮಗೆ ಅಭಿವೃದ್ಧಿಯುಂಟಾಗುವುದೆಂದರ್ಥವು. ಅಥವಾ ಋಗ್ವೇದದಲ್ಲಿ ಉಪಯೋಗಿಸಿರುವ ವೃಧ ಧಾತುವಿನ ಅರ್ಥವು—ವೃದ್ಧಿಪಡಿಸು ಎಂದರೆ ಪ್ರಶಂಸೆ ಮಾಡು, ತೃಪ್ತಿಯನ್ನುಂಟುಮಾಡು ಎಂದಿರುವುದರಿಂದ ಇಲ್ಲಿ **ವರ್ಧನಂ** ಎಂಬ ಶಬ್ದಕ್ಕೆ ಇಂದ್ರನಿಗೆ ತೃಪ್ತಿಯನ್ನುಂಟುಮಾಡುವ ಎಂಬರ್ಥವನ್ನು ಹೇಳಬಹುದು.

ಪುರುನಿಷ್ಪಿಧೇ—ಬಹೂನಾಂ ಶತ್ರೂಣಾಂ ನಿಷೇಧಕಾರಿಣೇ ಎಂದು ಭಾಷ್ಯಕಾರರು ಈ ಶಬ್ದಕ್ಕೆ ಅರ್ಥವಿವರಣೆ ಮಾಡಿರುವರು. ಈ ಶಬ್ದದಲ್ಲಿ ಇರುವ **ಪುರು** =ಬಹು ಎಂಬ ಶಬ್ದಕ್ಕೆ ಅನೇಕರು ಎಂದು ಮಾತ್ರ ಅರ್ಥವಾಗುವುದು. ಶತ್ರುಶಬ್ದವನ್ನು ಅಧ್ಯಾಹಾರ ಮಾಡಿರುವರು.

ಶಕ್ರಃ—ಶಕ್ತಿಮಾನ್ ಸಾಮರ್ಥ್ಯವುಳ್ಳ, ಬಲವುಳ್ಳ ಎಂದರ್ಥವು. ಆಧುನಿಕ ಸಂಸ್ಕೃತದಲ್ಲಿಯೂ, ವೇದಗಳಲ್ಲಿಯೂ ಶಕ್ರ ಶಬ್ದಕ್ಕೆ ಇಂದ್ರನೆಂಬರ್ಥವು ವಿಶೇಷ ರೂಢಿಯಲ್ಲಿರುವುದು.

ಯಥಾ—ಈ ಋಕ್ಕಿನಲ್ಲಿ ಯಥಾ ಎಂಬ ಶಬ್ದವು ಮಾತ್ರವಿರುವುದರಿಂದ ತಥಾ ಎಂಬ ಶಬ್ದವನ್ನು ಅಧ್ಯಾಹಾರಮಾಡಿಕೊಳ್ಳಬೇಕು. ಉತ್ತರಾರ್ಧದ **ಶಕ್ರೋ ಯಥಾ ರಾರಣತ್ಸಖ್ಯೇಷು ಚ** ಎಂಬ ವಾಕ್ಯವು ಪೂರ್ವಾರ್ಧದ ಉಕ್ಥಮಿಂದ್ರಾಯ ಎಂಬ ವಾಕ್ಯಕ್ಕೆ ಅಧೀನವಾಕ್ಯವು.

ರಾರಣತ್—ಈ ಶಬ್ದಕ್ಕೆ ಅಥವಾ ಈ ಶಬ್ದಕ್ಕೆ ಮೂಲವಾದ ರಣ ಎಂಬ ಧಾತುವಿಗೆ ಶಬ್ದವಾಡು ಎಂದರ್ಥವಿರುವುದು. ಪುತ್ರರಲ್ಲಿಯೂ ಸ್ನೇಹಿತರಲ್ಲಿಯೂ ಶಬ್ದವಾಡುವನು ಎಂದು ಹೇಳಿದರೆ ಯಾವ ನಿರ್ದಿಷ್ಟಾರ್ಥವೂ ಹೊಂದುವುದಿಲ್ಲವಾದ್ದರಿಂದ ಶಬ್ದರೂಪವಾದ ಮೆಚ್ಚಿಗೆಯನ್ನು (approve) ಸೂಚಿಸುವನು ಎಂದು ಅರ್ಥಮಾಡಿರುವರು. ಕೆಲವು ಪದಗಳನ್ನು ಅಧ್ಯಾಹಾರ ಮಾಡಿಕೊಳ್ಳದಿದ್ದರೆ ಈ ಋಕ್ಕಿಗೆ ಸರಿಯಾಗಿ ಅರ್ಥವಿವರಣೆಮಾಡುವುದಕ್ಕಾಗುವುದಿಲ್ಲ.

ಸುತೇಷು—ಸುತಶಬ್ದದ ನಾನಾ ರೂಪಗಳಿಗೆ ಋಗ್ವೇದದಲ್ಲಿ ಸಾಮಾನ್ಯವಾಗಿ "ಸೋಮಲತೆಯನ್ನು ಜಜ್ಜಿ ರಸವನ್ನು ಹಿಂಡಿದ" ಎಂಬರ್ಥವೇ ರೂಢಿಯಲ್ಲಿದ್ದರೂ ಕೆಲವು ಸಂದರ್ಭಗಳಲ್ಲಿ ಅಪರೂಪವಾಗಿ ಸುತ ಶಬ್ದಕ್ಕೆ ಪುತ್ರಶಬ್ದವೆಂದೂ ಅರ್ಥವಿರುವುದು ಈ ವಿಷಯದಲ್ಲಿ.

ಪ್ರ ನು ವೋಚಾ ಸುತೇಷು ವಾಂ ವೀರ್ಯಾ ೩ ಯಾನಿ ಚಕ್ರಥುಃ ॥
(ಋ. ಸಂ. ೬-೫೯-೧)

ಮೊದಲಾದ ಉದಾಹರಣೆಗಳನ್ನು ಕೊಡಬಹುದು.

॥ ವ್ಯಾಕರಣಪ್ರಕ್ರಿಯಾ ॥

ಉಕ್ಥಮ್—ವಚಪರಿಭಾಷಣೇ, ಧಾತು. **ಪಾತ್ರ್ಯಾ ತುದಿ ವಚಿ ರಿಚಿ ಸಿಚಿಭ್ಯಸ್ಥಕ್** (ಉ. ಸೂ. ೨-೧೬೪) ಎಂಬುದರಿಂದ ವಚ್ ಧಾತುವಿನ ಮುಂದೆ ಥಕ್ ಪ್ರತ್ಯಯ, **ವಚಿಸ್ವಪಿಯಜಾದೀನಾಂಕಿತಿ** (ಪಾ. ಸೂ. ೬-೧-೧೫) ಎಂಬುದರಿಂದ ಸಂಪ್ರಸಾರಣ, ವಕಾರಕ್ಕೆ ಉಕಾರ ಸಂಪ್ರಸಾರಣಾಚ್ಚ ಎಂಬುದರಿಂದ ಪೂರ್ವರೂಪ, ಚಕಾರಕ್ಕೆ **ಚೋಃಕುಃ** (ಪಾ. ಸೂ. ೮-೨-೩೦) ಎಂಬುದರಿಂದ ಕಕಾರ, ಉಕ್ಥಮ್ ಎಂದಾಗುವುದು. ಪ್ರತ್ಯಯ ಸ್ವರ ಬರುವುದು.

ಶಂಸ್ಯಮ್—ಶಂಸು ಸ್ತುತೌ ಧಾತು. ಇದರ ಮುಂದೆ ಣಿಚ್ ಪ್ರತ್ಯಯ. ಶಂಸ್+ಇ—**ಅಚೋ-ಯತ್** (ಪಾ. ಸೂ. ೩-೧-೯೭) ಅಜಂತವಾದ ಧಾತುವಿನ ಮುಂದೆ ಯತ್ ಪ್ರತ್ಯಯ ಬರುವುದು ಎಂಬುದರಿಂದ ಯತ್ ಪ್ರತ್ಯಯ. ಶಂಸ್+ಇ+ಯ. **ಣೇರನಿಟಿ** (ಪಾ. ಸೂ. ೬-೪-೫೧) ಎಂಬುದರಿಂದ ಣಿಗೆ ಲೋಪ. ಶಂಸ್ಯ ಎಂದಾಗುವುದು. **ತಿಕ್ಸ್ವರಿತಂ** (ಪಾ. ಸೂ. ೬-೧-೧೮೫) ಎಂಬುದರಿಂದ ಸ್ವರಿತ ಪ್ರಾಪ್ತವಾದರೆ ಆದನ್ನು ಬಾಧಿಸಿ **ಯತೋಽನಾವಃ** (ಪಾ. ಸೂ. ೬-೪-೩೧೩) ಎಂಬುದರಿಂದ ಆದ್ಯುದಾತ್ತಸ್ವರ ಬರುವುದು.

ವರ್ಧನಮ್-ಕರಣಾಧಿಕರಣಯೋಶ್ಚ (ಪಾ. ಸೂ. ೩-೩೧೧೭) ಲ್ಯುಟ್ ಪ್ರತ್ಯಯ. ಯುಗೆ **ಯುವೋರನಾಕೌ** (ಪಾ. ಸೂ. ೭-೧-೧) ಎಂಬುದರಿಂದ ಅನ ಆದೇಶ ಲಘೂಪಧಗುಣ, **ಲಿತಿ** (ಪಾ. ಸೂ. ೬-೧-೧೯೩ ಎಂಬುದರಿಂದ ಪ್ರತ್ಯಯದ ಹಿಂದೆ ಇರುವ ಅಚ್ಚು ಉದಾತ್ತವಾಗುವುದು.

ಪುರುನಿಷ್ಪಿಧೇ—ಬಹು ಸಂಖ್ಯಾಕರಾದ ಶತ್ರುಗಳಿಗೆ ನಿಷೇಧಮಾಡತಕ್ಕ ಎಂದು ಅರ್ಥ, ಷಿಧಗತ್ಯಾಂ, ಧಾತು. **ಧಾತ್ವಾದೇಃ ಷಃಸಃ** (ಪಾ. ಸೂ. ೬-೧-೬೪) ಎಂಬುದರಿಂದ ಷಕಾರಕ್ಕೆ ಸಕಾರ, ಇಲ್ಲಿ 'ನಿ' ಎಂಬ ಉಪಸರ್ಗದ ಅರ್ಥಕ್ಕೆ ಸಮಾನವಾದ ಅರ್ಥವನ್ನು ಬೋಧಿಸುವ 'ನಿಸ್' ಎಂಬ ಉಪಸರ್ಗಕ್ಕೆ ಪೂರ್ವದಲ್ಲಿ ಪ್ರಯೋಗ, ನಿಸ್+ಸಿಧ್ ಇದರ ಮುಂದೆ **ಕ್ವಿಪ್ಚಿ** (ಪಾ. ಸೂ. ೩-೨-೭೬) ಎಂಬುದರಿಂದ ಕ್ವಿಪ್ ಪ್ರತ್ಯಯ. ಕ್ವಿಪ್ ಪ್ರತ್ಯಯದಲ್ಲಿ ಸಕಲ ವರ್ಣಗಳಿಗೂ ಲೋಪ. **ಕುಗತಿಪ್ರಾದಯಃ** (ಪಾ. ಸೂ. ೨-೨-೧೮) ಎಂಬುದರಿಂದ ಪ್ರಾದಿ ಸಮಾಸ ಬರುವುದು. ಇಲ್ಲಿ ನಿಸ್ ಉಪಸರ್ಗದ ಇಕಾರಕ್ಕೂ ಸಿಧ್ ಧಾತುವಿನ ಸಕಾರಕ್ಕೂ ಮಧ್ಯೆ ಉಪಸರ್ಗದ ಸಕಾರದಿಂದ ವ್ಯವಧಾನವಿರುವುದು. ಆದರೂ, ಇದು ಛಂದಸ್ಸಾದ್ದರಿಂದ ಆ ವ್ಯವಧಾನವನ್ನು ಅನಾದರಿಸಿ **ಉಪಸರ್ಗಾತ್ಸುನೋತಿ, ಸುವತಿ, ಸ್ಯತಿ, ಸ್ತೌತಿಭತಿ, ಸ್ಥಾ, ಸೇನಯ, ಸೇಧ, ಸಿಚ, ಸಚ, ಸ್ವಂಜಾಮ್** (ಪಾ. ಸೂ. ೮-೩-೬೫) ಉಪಸರ್ಗದಲ್ಲಿರುವ ಇಣ್ ವರ್ಣದ ಮುಂದೆ ಇರುವ ಇವುಗಳ ಸಂಬಂಧಿಯಾದ ಸಕಾರಕ್ಕೆ ಷತ್ವಬರುವುದು ಎಂಬುದರಿಂದ ಧಾತು ಸಕಾರಕ್ಕೆ ಷಕಾರ. **ಸಹೇಸ್ಸಾಡಃಸಃ** (ಪಾ. ಸೂ. ೮-೩-೫೬) ಎಂಬುದರಿಂದ ಸಃ ಎಂಬ ಪ್ರಥಮಾಂತವು ಅನುವೃತ್ತವಾಗಿ ಷಷ್ಠ್ಯಂತವಾಗಿ ವಿಪರಿಣತವಾಗುವುದು. **ಅಪದಾಂತಸ್ಯಮೂರ್ಧನ್ಯಃ** (ಪಾ. ಸೂ. ೮-೩-೩೭) **ಇಣ್ಕೋಃ** (ಪಾ. ಸೂ. ೮-೩-೫೭) ಎರಡು ಸೂತ್ರಗಳೂ

ಅಧಿಕಾರದಿಂದ ಬರುವುವು. ಪಾಣಿನ್ಯಾಚಾರ್ಯರು ಉಪದೇಶಿಸಿರುವ ದೇಶದಲ್ಲಿ ಶಾಕ್ವಾತ್ತಾಗಿ ಲಕ್ಷ್ಯ ಸಂಸ್ಕಾರೋಪಯುಕ್ತ ವಾಕ್ಯಾರ್ಥವನ್ನು ಬೋಧಿಸದೇ ತನಗಿಂತಲೂ ಉತ್ತರದಲ್ಲಿರುವ ಸೂತ್ರಗಳೊಂದಿಗೆ ಏಕವಾಕ್ಯತಯಾ ವಾಕ್ಯಾರ್ಥ ಬೋಧವನ್ನು ಉಂಟುಮಾಡುವದಕ್ಕೆ ಅಧಿಕಾರವೆಂದು ಹೆಸರು. ಕೋಃ ಎಂಬುದು ಅಧಿಕಾರದಿಂದ ಪ್ರಾಪ್ತವಾದರೂ ಉಪಸರ್ಗಗಳಲ್ಲಿ ಕವರ್ಗವಿಲ್ಲದೇ ಇರುವುದರಿಂದ ಅಸಂಭವದೋಷ ಬರುವಕಾರಣ ಇಲ್ಲಿ ಸಂಬದ್ಧವಾಗುವುದಿಲ್ಲ. ಪ್ರಕೃತದಲ್ಲಿ ವ್ಯಾವೃತ್ತಿ ಇಲ್ಲದಕಾರಣ ಅಪದಾಂತಸ್ಯ ಎಂಬುದಕ್ಕೂ ಸಂಬಂಧವಿಲ್ಲ ಮುಂಡೂ ಕಾನುವೃತ್ತಿ ಪರಿಕ್ಲೇಶ ಪರಿಹಾರಕ್ಕಾಗಿ ಅನುವೃತ್ತಿ ಮಾಡಿದರೂ ಬಾಧಕವಿಲ್ಲ. ಇಣಃ ಎಂಬುದು ಉಪಸರ್ಗಾತ್ ಎಂಬುದಕ್ಕೆ ವಿಶೇಷಣವೆಂದು ಇಟ್ಟುಕೊಂಡರೆ **ಯೋಗವಿಧಿಸ್ತದಂತಸ್ಯ** (ಪಾ. ಸೂ. ೧-೧-೭೨) ಎಂಬುದರಿಂದ ತದಂತಲಾಭ ಬಂದರೆ ' ಇಣ್ಣಂತಾದುಪಸರ್ಗಾತ್ ' ಇಣ್ ವರ್ಣವನ್ನು ಕೊನೆಯಲ್ಲಿ ಹೊಂದಿರುವ ಉಪಸರ್ಗದ ಮುಂದೆ ಇರುವ ಸುನೋತ್ಯಾದಿಗಳ ಸಕಾರಕ್ಕೆ ಮೂರ್ಧನ್ಯಾದೇಶ ಬರುವುದು ಎಂದು ಅರ್ಥವಾಗುವುದು. ಈಪಕ್ಷದಲ್ಲಿ ಸುನೋತ್ಯಾದಿಗಳು ನಿ ಅಭಿ ಮೊದಲಾದ ಉಪಸರ್ಗಗಳ ಮುಂದೆ ಇರುವಾಗ ಷತ್ವ ಬರುವುದು. ನಿಸ್ ಎಂಬುದರ ಮುಂದೆ ಇರುವ ಸುನೋತ್ಯಾದಿಗಳಿಗೆ ಷತ್ವ ಬರಲಾರದು. ಉದಾಹರಣೆ ನಿಷ್ಸುನೋತಿ, ನಿಷ್ಟೇಧತಿ, ನಿಃಷಿಂಚತಿ. ಇವಕ್ಕಾಗಿ **ಉಪಸರ್ಗಾತ್ ಷತ್ವೇ ನಿಸ ಉಪಸಂಖ್ಯಾನಮುಸಿಣಂತತ್ವಾತ್** (ಪಾ. ಸೂ ೮-೩-೬೫ ೧) ಎಂಬ ವಚನವು ಹುಟ್ಟಿತು. ನಂತರ **ನಸಾ ವರ್ಣಾಶ್ರಯತ್ವಾತ್** (ಪಾ. ಸೂ. ೮-೩-೬೫-೨) ಎಂಬುದರಿಂದ ಮೊದಲನೆ ವಚನಸ್ಯೆ ಅಕರ್ತವ್ಯತೆಯನ್ನು ಹೇಳಿರುವರು. ಈಪಕ್ಷದಲ್ಲಿ ಇಣ್ಣಿನ ಮುಂದೆ ಇರುವ ಸಕಾರಕ್ಕೆ ಷಕಾರ ಬರುವುದು, ಇಣ್ಣು ಉಪಸರ್ಗ ಸಂಬಂಧಿಯಾಗಿಯೂ, ಸಕಾರವು ಸುನೋತ್ಯಾದಿಗಳ ಸಂಬಂಧಿಯಾಗಿಯೂ ಇರುವಪಕ್ಷದಲ್ಲಿ ಎಂದು ಅರ್ಥವಾಗುವುದು. ಈಗ ನಿಷ್ಸುನೋತಿ ಎಂಬಲ್ಲಿ ಧಾತು ಸಕಾರವು ಉಪಸರ್ಗದ ಇಕಾರದ ಮುಂದೆ ಇರುವುದರಿಂದ ಷತ್ವ ಬರುವುದು. ಆದರೆ ಮಧ್ಯೇ ಸಕಾರದಿಂದ ವ್ಯವಧಾನವಿರುವುದು. ಆದರೂ **ನುನ್ವಿಸರ್ಜನೀಯಶರ್ ವ್ಯವಾಯೇಽಪಿ** (ಪಾ. ಸೂ. ೮-೩-೫೭) ನುಮಾಗಮ, ಶ, ಷ, ಸ ವಿಸರ್ಗ ಇವುಗಳಿಂದ ವ್ಯವಧಾನವಿದ್ದರೂ ಷತ್ವ ಬರುವುದು. ಈ ಸೂತ್ರವು ಷತ್ವ ವಿಧಾಯಕ ಸೂತ್ರಗಳಲ್ಲಿ ಅಧಿಕೃತವಾಗುವುದು. ಆದ್ದರಿಂದ ಸಕಾರದಿಂದ ವ್ಯವಧಾನವಿದ್ದರೂ ಷತ್ವಬರಲು ತಡೆಯಿಲ್ಲ. ಇದೇ ಅಂಶವನ್ನು ಮಹಾಭಾಷ್ಯದಲ್ಲಿ **ತತ್ರ ಶರ್ವ್ಯವಾಯೀ ಇತ್ಯೇವಸಿದ್ಧೇಮ್** ಎಂದು ಹೇಳಿರುವರು. ಏವಂಚ ಪ್ರಕೃತದಲ್ಲಿ ನಿಸ್ ಸಿಧೇ ಎಂಬಲ್ಲಿ ಸಕಾರದಿಂದ ವ್ಯವಧಾನವಿದ್ದರೂ ಶರ್ವ್ಯವಾಯೇ ಎಂದು ಹೇಳಿರುವುದರಿಂದ ಷತ್ವವು ನಿರ್ವಿಘ್ನವಾಗಿ (ತಡೆಇಲ್ಲದೆ) ಬರುವುದು. ಆದ್ದರಿಂದ ನಿಶಸ್ಸಕಾರೇಣ ಇಣೋ ವ್ಯವಧಾನಂ ಛಾಂದಸತ್ವಾದನಾದೃತ್ಯ ಎಂದು ವೇದಭಾಷ್ಯದಲ್ಲಿ ಛಂದಸ್ಸಾದ್ದರಿಂದ ವ್ಯವಧಾನವು ಅನಾದೃತವಾಗಿರುವುದೆಂದು ವರ್ಣಿಸಿರುವುದು ವೃಥಾ ಪ್ರಯಾಸವೆಂದು ತೋರುವುದು. ನಿಸ್ ಎಂಬ ಉಪಸರ್ಗದ ಸಕಾರಕ್ಕೆ ಷಿಧ್ ಎಂಬಲ್ಲಿನ ಸಕಾರದ ಯೋಗವಿರುವುದರಿಂದ ಷ್ಟುನಾಷ್ಟುಃ (ಪಾ. ಸೂ. ೮-೪-೪೧) ಎಂಬುದರಿಂದ ಷ್ಟುತ್ವ ಬಂದು ಷಕಾರ ಬರುವುದು ನಿಷ್ಷಿಧ್ ಎಂದಾಗುವುದು. ಇದರೊಂದಿಗೆ ಪುರೂಣಾಂ ಎಂಬ ಕರ್ಮಣಿಷಷ್ಠ್ಯಂತವಾದ ಪದವು ಸಮಾಸವನ್ನು ಹೊಂದುವುದು. ಪುರುನಿಷ್ಷಿಧ್ ಎಂಬ ಪ್ರಾದಿ ಸಮಾಸವು **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರ ಪದಪ್ರಕೃತಿ ಸ್ವರವನ್ನು ಹೊಂದುವುದು. ಕೃದಂತ ಎಂದರೆ ಯಾವ ಪ್ರಕೃತಿಯ ಮುಂದೆ ಯಾವ ಕೃತ್ಪ್ರತ್ಯಯವನ್ನು ವಿಧಿಸಲಾಗುವುದೋ ಆ ಪ್ರಕೃತ್ಯಾದ್ಯವಯವಕವೂ ಆ ಪ್ರತ್ಯಯ ಚರಮಾವಯವಕವೂ ಆದ ಸಮುದಾಯ ಎಂದು ಅರ್ಥ. ಇದನ್ನೇ ಸಂಸ್ಕೃದಲ್ಲಿ ತತ್ಪ್ರತ್ಯಯಪ್ರಕೃತ್ಯಾದ್ಯವಯವಕ-ತತ್ಪ್ರತ್ಯಯಚರಮಾವಯವಕತ್ವಂ ತತ್ಪ್ರತ್ಯಯಾಂತತ್ವಂ ಎಂದು ಸಾಮಾನ್ಯವಾಗಿ ಹೇಳುವರು. ಇಲ್ಲಿ ಷಿಧ್

ಎಂಬುದರ ಮುಂದೆ ಕ್ವಿಪ್ ಬಂದಿರುವುದರಿಂದ ಷಿಧ್+ಕ್ವಿಪ್ ಎಂಬುದು ಕೃದಂತ, ಪ್ರತ್ಯಯವು ಲುಪ್ತವಾದರೂ ಪ್ರತ್ಯಯಲೋಪೇ ಪ್ರತ್ಯಯ ಲಕ್ಷಣಂ ಎಂಬುದರಿಂದ ಆ ಪ್ರತ್ಯಯವು ಇದ್ದೇ ಇರುವುದು. ಆದ್ದರಿಂದ ಷಿಧ್ ಎಂಬುದು ಕೃದಂತ ಎಂದು ಸಿದ್ಧವಾಯಿತು. ನಿಷ್ಪ್ರಿಧ್ ಎಂಬುದರಲ್ಲಿ ಷಿಧ್ ಎಂಬ ಉತ್ತರಪದವು ಕೃದಂತವಾದ್ದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುವುದು. ಇನ್ನು ಕರ್ಮಪ್ರವಚನೀಯಂತ ಪುರುಶಬ್ದ ನಿಷ್ಪ್ರಿಧ್ ಎಂಬಿವುಗಳಿಗೆ ಸಮಾಸ ಬಂದರೂ, ಕೃದುತ್ತರಪದಪ್ರಕೃತಿಸ್ವರವೇ ಬರುವುದು. ಆದರೆ ನಿಷ್ಪ್ರಿಧ್ ಎಂಬುದರ ಮುಂದೆ ಕ್ವಿ ಪ್ರತ್ಯಯ ಬರಲಿಲ್ಲ ಕ್ವಿಪ್ಚ ಎಂಬಲ್ಲಿ **ಧಾತೋಃ** (ಪಾ. ಸೂ. ೩-೧-೯೧) ಎಂದು ಅಧಿಕಾರವಿಗುವುದರಿಂದ ಧಾತುವಿನ ಮುಂದೆಯೇ ಕ್ವಿಪ್ ಬಂದಿರುವುದು. ಆದ್ದರಿಂದ ಷಿಧ್ ಎಂಬುದು ಕ್ವಿಬಂತರೂಪ ಕೃದಂತವಾಗುವುದೇ ವಿನಾ ನಿಷ್ಪ್ರಿಧ್ ಎಂಬುದು ಕೃದಂತವಾಗುವುದಿಲ್ಲ. ಆದ್ದರಿಂದ ಹೇಗೆ ಕೃದುತ್ತರಪದಪ್ರಕೃತಿಸ್ವರ ಬರುವುದು ಎಂದು ಸಂದೇಹ ತೋರುವುದು. ಆದರೆ **ಕೃದ್ಗ್ರಹಣೇಗತಿಕಾರಕಪೂರ್ವಸ್ಯಾಪಿಗ್ರಹಣಂ** (ಪರಿಭಾ ೨೮) ಕೃತ್ವ, ಕದಾಚಿತ್ಕಸ್ಯ ಅನ್ಯತರಧರ್ಮ ಪುರಸ್ಕಾರವಾಗಿ ಎಲ್ಲಿ ಕೃತ್ತಿಗೆ ಉಪಾದಾನವಿದೆಯೋ ಅಲ್ಲಿ ಗತಿಯ ಮುಂದೆ ಇರುವ ಕೃತ್ತಿಗೂ (ಗತಿಪೂರ್ವಕಕ್ಕೂ) ಕಾರಕಪೂರ್ವಕ್ಕೂ ಗ್ರಹಣ ಬರುವುದು ಎಂದು ಈ ಪರಿಭಾಷೆಯ ಅರ್ಥ, ಕೃತ್ವರೂಪ ಸಾಮಾನ್ಯ ಧರ್ಮಪುರಸ್ಕಾರವಾಗಿ ' ಗತಿಕಾರಕೋಪಪದಾತ್ಕೃತ್ ' ಎಂಬಲ್ಲಿ ಕೃತ್ತಿಗೆ ಗ್ರಹಣವಿರುವುದು. ಆದ್ದರಿಂದ ಪೂರ್ವೋಕ್ತಪರಿಭಾಷೆಯು ಇಲ್ಲಿ ಸಂಚರಿಸುವುದು. ಈಗ ಸೂತ್ರಾರ್ಥವು ಹೀಗೆ ನಿಷ್ಕರ್ಷವಾಗುವುದು. ತತ್ಪುರುಷ ಸಮಾಸದಲ್ಲಿ ಗತಿ, ಕಾರಕ, ಇವುಗಳ ಮುಂದೆ ಇರುವ ಕೃದಂತವೂ ಗತಿ ಪೂರ್ವಕವಾದ ಕೃದಂತವೂ ಸಹ ಪ್ರಕೃತಿ ಸ್ವರವನ್ನು ಹೊಂದುವುದು ಎಂದು ಇಲ್ಲಿ ಪುರು ಎಂಬುದು ಕರ್ಮಕಾರಕ. ಇದರ ಮುಂದೆ ಇರುವ ಗತಿಪೂರ್ವಕ ಕೃದಂತ ನಿಷಿಧ್. ಅದಕ್ಕೆ ಪ್ರಕೃತಿಸ್ವರ ಬಂದರೆ ಧಾತುಸ್ವರವೇ ನಿಲ್ಲುವುದು. ಮಿಕ್ಕವುಗಳಿಗೆ **ಅನುದಾತ್ತಂ ಪದಮೇಕವರ್ಜಂ** (ಪಾ. ಸೂ. ೬-೧-೧೫೮) ಎಂಬುದರಿಂದ ಅನುದಾತ್ತ ಬರುವುದು. ಪುರುನಿಷ್ಪ್ರಿಧ್ ಎಂಬುದರ ಮುಂದೆ ಬರುವ ಚತುರ್ಥೀ ಏಕವಚನ ಙೀಪ್ರತ್ಯಯದ ಏಕಾರವು **ಅನುದಾತ್ತೌಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ಅನುದಾತ್ತವಾಗಿ **ಉದಾತ್ತಾದನುದಾತ್ತಸ್ಯ ಸ್ವರಿತಃ** (ಪಾ. ರೂ. ೮-೪-೬೬) ಎಂಬುದರಿಂದ ಸ್ವರಿತವಾಗುವುದು.

ಶಕ್ಯಃ—**ಸ್ಥಾಯಿತಞ್ಚಿ ವಜ್ಯಾಶಕಿ** (ಉ. ಸೂ. ೨-೧೭೦) ಎಂಬುದರಿಂದ ಶಕ್ಲೃಶಕ್ತೌ ಎಂಬ ಧಾತುವಿನ ಮುಂದೆ ರಕ್ ಪ್ರತ್ಯಯ. ಪ್ರತ್ಯಯಸ್ವರ ಬರುವುದು.

ಯೆಥಾ—**ಪ್ರಕಾರವಚನೇಥಾಲ್** (ಪಾ. ಸೂ. ೫-೩-೨೩) ಎಂಬುದರಿಂದ ಥಾಲ್ ಪ್ರತ್ಯಯ. ಪ್ರತ್ಯಯವು ಲಿತ್, ಆದ್ದರಿಂದ **ಲಿತಿ** (ಪಾ. ಸೂ. ೬-೧-೧೬೩) ಎಂಬುದರಿಂದ ಪ್ರತ್ಯಯದ; ಹಿಂದೆ ಇರುವ ಅಕಾರವು ಉದಾತ್ತವಾಗುವುದು.

ಸುತೇಸು—ಷುಞ್ ಧಾತುವಿನ ಮುಂದೆ ಕ್ತ ಪ್ರತ್ಯಯ. ಪ್ರತ್ಯಯಸ್ವರದಿಂದ ಉದಾತ್ತ.

ನಃ—ಅಸ್ಮಾಕಂ ಎಂಬ ಅಸ್ಮದ್ ಶಬ್ದದ **ಷಷ್ಠೀಬಹುವಚನಾಂತಕ್ಕೆ ಬಹುವಚನಸ್ಯ ವಸ್ನಸೌ** (ಪಾ. ಸೂ. ೮-೧-೨೧) ಎಂಬುದರಿಂದ ಅನುದಾತ್ತವಾದ ನಸ್ ಆದೇಶ. ಸಂಹಿತಾಕಾಲದಲ್ಲಿ ನಸ್ ಎಂಬುದರ ನಕಾರಕ್ಕೆ **ನಶ್ಚ ಧಾತುಸ್ಥೋರುಷುಭ್ಯಃ** (ಪಾ. ಸೂ. ೮-೪-೨೭) ವೇದದಲ್ಲಿ ಧಾತುವಿನಲ್ಲಿರತಕ್ಕನಿಮಿತ್ತ- ಉರು ಶಬ್ದ ಷು ಶಬ್ದ ಇವುಗಳ ಮುಂದೆ ಇರುವ ಅಸ್ಮಚ್ಛಬ್ದಕ್ಕೆ ಆದೇಶವಾಗಿ ಬಂದ ನಸ್ ಎಂಬುದರ ನಕಾರಕ್ಕೆ ಣಕಾರ

ಬರುವುದು. ಎಂಬುದರಿಂದ ಸುತೇಷು ಎಂಬಲ್ಲಿನ ಷು ಶಬ್ದದ ಮುಂದೆ ಇರುವ ನಸ್ ನ ಕಾರಕ್ಕೆ ಣತ್ವ ಬರುವುದು, ಸುತೇಷುಣಃ ಎಂದಾಗುವುದು. ಷು ಎಂಬುದರಿಂದ ಷಕಾರಾದೇಶವನ್ನು ಹೊಂದಿದ ಷುಞ್ ಧಾತುವಿನ ಷು ಎಂಬುದಕ್ಕೆ ಅನುಕರಣವೆಂದು ಶೇಖರಕಾರರು ಅಭಿಪ್ರಾಯಪಡುವರು. **ಷುಞಭಿಕೃತಷತ್ವಸ್ಯ ಷುಞೋನುಕರಣಂ** (ಶೇ. ಪಾ.ಸೂ. ೪-೪-೩೭) ಆದ್ದರಿಂದಲೇ ಗೃ(ಗ್ರ) ಹೇಷುನಃ ಎಂಬಲ್ಲಿ ಣತ್ವ ಬರುವುದಿಲ್ಲ ಎಂದು ಉಜ್ವಲಾದಿಸಿರುವರು. ಸುಬೋಧಿನೀಕಾರರೂ ಇದೇ ರೀತಿ ಹೇಳಿರುವರು. ಭಟ್ಟೋಜಿದೀಕ್ಷಿತರೂ ಕೌಮುದಿಯಲ್ಲಿ ಈ ಅರ್ಥವನ್ನೇ ಇಟ್ಟುಕೊಂಡು ಅಭೀಷುಣಃ ಮೊದಲಾದ ಉದಾಹರಣೆಗಳನ್ನಿತ್ತಿರುವರು. ಹೀಗೆಹೇಳುವ ಪಕ್ಷದಲ್ಲಿ ಪ್ರಕೃತದಲ್ಲಿ ಣತ್ವಕ್ಕೆ ಪ್ರವೃತ್ತಿ ಹೇಗೆ ಎಂಬುದು ಚಿಂತನೀಯವು.

ರಾರಣತ್—ರಣ ಶಬ್ದಾರ್ಥಃ, ಧಾತು. ಇದರ ಮುಂದೆ **ಧಾತೋರೇಕಾಚೋಹಲಾದೇಃಕ್ರಿಯಾಸಮಭಿಹಾರೇಯಙ್** (ಪಾ. ಸೂ. ೩-೧--೨೨) ಎಂಬುದರಿಂದ ಯಙ್ ಪ್ರತ್ಯಯ, **ಯೋಜಿಚಿಚ** (ಪಾ. ಸೂ. ೨-೪-೭೪) ಎಂಬುದರಿಂದ ಯಙ್ಞಿ ಗೆ ಲುಕ್, **ಪ್ರತ್ಯಯೆಲೋಪೇಪ್ರತ್ಯಯಲಕ್ಷಣಮ್** (ಪಾ. ಸೂ. ೧-೧-೬೨) ಎಂಬ ಪ್ರತ್ಯಯಲಕ್ಷಣದಿಂದ ಯಙ್ಞಿ ಗೆ ಲುಕ್ ಬಂದರೂ ರಣ್ ಎಂಬುದು ಯಙ್ಞಂತವಾಗುವುದು. ಆದ್ದರಿಂದ **ಸನ್ಯಙೋಃ** (ಪಾ. ಸೂ. ೬-೧-೯) ಎಂಬುದರಿಂದ ದ್ವಿತ್ವ 'ರಣ್ ರಣ್ ಎಂದಾಗುವುದು. **ಹಲಾದಿಃಶೇಷಃ** (ಪಾ. ಸೂ. ೭-೪-೬೦) ಎಂಬುದರಿಂದ ಅಭ್ಯಾಸದ ಣಕಾರಕ್ಕೆ ಲೋಪ. **ದೀರ್ಘೋಕಿತೆಃ** (ಪಾ. ಸೂ. ೭-೪-೭೩) ಎಂಬುದರಿಂದ ಅಭ್ಯಾಸಕ್ಕೆ ದೀರ್ಘ, ರಾರಣ್, ಪ್ರತ್ಯಯಲಕ್ಷಣದಿಂದ ಯಙಂತವಾದ್ದರಿಂದ **ಸನಾದ್ಯಂತಾಧಾತವಃ** (ಪಾ ಸೂ. ೩-೧-೩೨) ಎಂಬುದರಿಂದ ಧಾತುಸಂಜ್ಞೆ ಬರುವುದು. ನಂತರ **ಲಿಙರ್ಥೇ ಲೇಟ್** (ಪಾ. ಸೂ. ೩-೪-೭) ಹೇತು ಹೇತುಮದ್ಭಾವವೂ ವಿಧ್ಯಾದಿಗಳೂ ಲಿಙರ್ಥವೆಂದು ಹಿಂದೆಯೇ ನಿರೂಪಿತವಾಗಿರುವುದು. ಹೇತುಹೇತುಮದ್ಭಾವ ಎಂಬ ಅರ್ಥದಲ್ಲಿ ಲೇಟ್. ಇಲ್ಲಿ ಇಂದ್ರಕರ್ತೃಕವಾದ ರಾರಣನವು ಉಕ್ಥ ಸಾಮಶಂಸನದ ಕರ್ತವ್ಯತೆಯಲ್ಲಿ ಹೇತುವಾಗಿರುವುದು. ಲೇಟ್ಪರೆ ತಿಪ್ ಇತಶ್ಚ **ಲೋಪಃ ಪರಸ್ಮೈಪದೇಷು** (ಪಾ. ಸೂ ೩-೪-೭೯) ಎಂಬುದರಿಂದ ತಿಯ ಇಗೆ ಲೋಪ. **ಲೇಟೋಡಾಟೌ** (ಪಾ. ಸೂ. ೩-೪-೯೪) ಎಂಬುದರಿಂದ **ತಿ**ಗೆ ಆಟ್ ಆಗಮ ರಾರಣ್+ಅತ್. **ಕರ್ತರಿಶಪ್** (ಪಾ. ಸೂ. ೩-೧-೬೮) ಎಂಬುದರಿಂದ ವಿಕರಣ **ಶಪ್** ಬರುವುದು. ರಾರಣ್+ಅ+ಅತ್, 'ಚರ್ಕರೀತಂ ಪರಸ್ಮೈಪದಮ್, ಅದಾದಿಭ್ಯಶ್ಚ ದ್ರಪ್ಸವ್ಯಮ್' ಎಂಬುದರಿಂದ ಯಙ್ಲುಗಂತವು ಅದಾದಿಯಾಗುವುದರಿಂದ ಇದರ ಮುಂದೆ ಇರುವ ವಿಕರಣ ಪ್ರತ್ಯಯಕ್ಕೆ **ಆದಿಪ್ರಭೃತಿಭ್ಯಃ ಶಪಃ** (ಪಾ. ಸೂ. ೨-೪-೭೩) ಎಂಬುದರಿಂದ ಲುಕ್ ಪ್ರಾಪ್ತವಾಗುವುದು. ಆದರೂ **ಬಹುಲಂ ಛಂದಸಿ** (ಪಾ. ಸೂ. ೨-೪-೭೩) ಎಂಬುದರಿಂದ ಲುಕ್ ಬರುವುದಿಲ್ಲ. ಶಪ್ಪು ಪಿತ್ತಾದ್ದರಿಂದ ಅನುದಾತ್ತ. ಆದ್ದರಿಂದ ರಾರಣ ಎಂಬಲ್ಲಿ **ಧಾತೋಃ** (ಪಾ. ಸೂ. ೬-೧-೧೬೨) ಎಂಬುದರಿಂದ ಅಂತೋದಾತ್ತನೇ ನಿಲ್ಲುವುದು. ಈಶಪ್ ವಿಕರಣದಿಂದ ಲಸ್ಥಾನಿಕ ಸಾರ್ವಧಾತುಕವಾದ **ಅತ್** ಎಂಬುದಕ್ಕೂ ರಾರಣ್ ಧಾತುವಿಗೂ ವ್ಯವಧಾನವಿರುವುದು. ಆದ್ದರಿಂದ **ಅಭ್ಯಸ್ತಾನಾಮಾದಿಃ** (ಪಾ. ಸೂ. ೬-೧-೧೯೯) ಇಷ್ಟಿನ್ನವಾದ ಯಾವ ಅಚ್ಚಿರುವುದೋ ಅಂತಹ ಅಜಾದಿಯಾದ ಲಸ್ಥಾನಿಕ ಸಾರ್ವಧಾತುಕ ಪರವಾಗಿರುವಾಗ ಅಭ್ಯಸ್ತಗಳ ಆದಿಯು ಉದಾತ್ತವಾಗುವುದು ಎಂಬುದರಿಂದ ಆದ್ಯುದಾತ್ತ ಬರುವುದಿಲ್ಲ. ಶಬಕಾರ ಆಗಮಾಕಾರಗಳಿಗೆ **ಅತೋ ಗುಣೇ** (ಪಾ. ಸೂ-೬-೧-೯೭) ಎಂಬುದರಿಂದ ಪರರೂಪ, **ತಿಙ್ಞತಿಙಃ** (ಪಾ. ಸೂ. ೮-೧-೭೮) ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ. ಏಕೆಂದರೆ ' ಶಕ್ಯೋಯಥಾ ' ಎಂದು ಯಥಾ ಶಬ್ದದ ಯೋಗವಿರುವುದರಿಂದ **ಯಾವದ್ಯಥಾಭ್ಯಾಮ್** (ಪಾ. ಸೂ. ೮-೧-೬೬) ಯಾವತ್-ಯಥಾ ಎಂಬ ಶಬ್ದಗಳಿಂದ ಯುಕ್ತವಾದ ತಿಙಂತವು ಅನುದಾತ್ತವಾಗುವುದಿಲ್ಲ

ಎಂದು ನಿಷೇಧವಿರುವುದು. ಆದಕಾರಣ ಅನುದಾತ್ತ ಬರುವುದಿಲ್ಲ. ಅಥವಾ ಇಲ್ಲಿ ಸಖ್ಯೇಷು ಚ ಎಂಬಲ್ಲಿರುವ ಚಕಾರದಿಂದ ಉತ್ತರವಾಕ್ಯದಲ್ಲಿ ರಾರಣತ್ ಎಂಬ ತಿಙಂತವು ಅನುಕೃಷ್ಟವಾಗುವುದು. ಆ ಅನುಕೃಷ್ಟವಾದ ತಿಙಂತವನ್ನು ಅಪೇಕ್ಷಿಸಿ ಪೂರ್ವವಾಕ್ಯೋಪಾತ್ತವಾದ ರಾರಣತ್ ಎಂಬುದು ಪ್ರಥಮೋಚ್ಚರಿತ ತಿಙಂತವಾಗುವುದು. ಆದ್ದರಿಂದ ಚೇವಾಯೋಗೇಪ್ರಥಮಾ (ಪಾ. ಸೂ. ೮-೧-೫೯) ಚ, ವಾ ಶಬ್ದಗಳಿಂದ ಯೋಗವಿರುವಾಗ ಪ್ರಥಮೋಚ್ಚರಿತ ತಿಙಂತವು ಅನುದಾತ್ತವಾಗುವುದಿಲ್ಲ ಎಂದು ನಿಷೇಧ ಬರುವುದರಿಂದ ಇಲ್ಲಿ ಅನುದಾತ್ತ ಬರುವುದಿಲ್ಲ.

ಸಖ್ಯೇಷು—ಸಖ್ಯುಃ ಕರ್ಮಾಣಿ ಸಖ್ಯಾನಿ. ತೇಷು ಎಂದು ವಿಗ್ರಹ, ಸಖ್ಯುರ್ಯಃ (ಪಾ- ಸೂ. ೫-೧-೧೨೬) ಇಲ್ಲಿ ಗುಣವಚನ ಬ್ರಾಹ್ಮಣಾದಿಭ್ಯಃ ಕರ್ಮಣಿಚ (ಪಾ. ಸೂ. ೫-೧-೧೨೪) ಎಂಬ ಸೂತ್ರದಿಂದ ಕರ್ಮಣಿಚ ಎಂಬುದು ಅನುವೃತ್ತವಾಗುವುದು. ಸಖಿಶಬ್ದಪ್ರಕೃತಿಕ ಷಷ್ಠ್ಯಂತದ ಮುಂದೆ ಭಾವ, ಕರ್ಮ ಎಂಬ ಅರ್ಥಗಳಲ್ಲಿ ಯ ಪ್ರತ್ಯಯ ಬರುವುದು ಎಂದು ಸೂತ್ರಾರ್ಥ. ಇಲ್ಲಿ ಕರ್ಮ ಎಂಬ ಅರ್ಥದಲ್ಲಿ ಯ ಪ್ರತ್ಯಯ ಬರುವುದು. ಸಖಿ+ಯ ಯಚಿಭಮ್ (ಪಾ. ಸೂ. ೧-೪-೧೮) ಕ ಪ್ರತ್ಯಯಾವಧಿಕಾ ಸೆರ್ವಸ್ಥಾನೆಯಾದ್ಯಜಾದಿಸ್ವಾದಿ ಪ್ರತ್ಯಯ ಪರದಲ್ಲಿರುವಾಗ ಪೂರ್ವಕ್ಕೆ ಭ ಸಂಜ್ಞೆ ಬರುವುದು ಎಂಬುದರಿಂದ ಭ ಸಂಜ್ಞೆ ಬರುವುದು. ಯೆಸ್ಯೇತಿಚೆ (ಪಾ. ಸೂ. ೬-೪-೧೪೮) ಈಕಾರ ತದ್ಧಿತಗಳು ಪರವಾಗಿರುವಾಗ ಭ ಸಂಜ್ಞಕಾಂಗಾವಯವವಾದ ಇವರ್ಣಾವರ್ಣಗಳಿಗೆ ಲೋಪ ಬರುವುದು ಎಂಬುದರಿಂದ ಇಕಾರಕ್ಕೆ ಲೋಪ, ಸಪ್ತಮಿಾ ಬಹುವಚನದಲ್ಲಿ ಸಖ್ಯೇಷು ಎಂದಾಗುವುದು. ಸಖ್ಯ ಎಂಬಲ್ಲಿ ಆದ್ಯುದಾತ್ತಶ್ಚ (ಪಾ. ಸೂ. ೩-೧-೩) ಎಂಬುದರಿಂದ ಯ ಎಂಬುದು ಉದಾತ್ತ ॥ ೫ ॥

॥ ಸಂಹಿತಾಪಾಠಃ ॥

ತಮಿತ್ಸಖಿತ್ವ ಈಮಹೇ ತಂ ರಾಯೇ ತಂ ಸುವೀರ್ಯೇ ॥
ಸ ಶಕ್ರ ಉತ ನಃ ಶಕದಿಂದ್ರೋ ವಸು ದಯಮಾನಃ ॥ ೬ ॥

॥ ಪದಪಾಠಃ ॥

ತಂ । ಇತ್ । ಸಖಿಽ ತ್ವೇ । ಈಮಹೇ । ತಂ । ರಾಯೇ । ತಂ । ಸುಽವೀರ್ಯೇ ॥
ಸಃ । ಶಕ್ರಃ । ಉತ । ನಃ । ಶಕತ್ । ಇಂದ್ರಃ । ವಸು । ದಯಮಾನಃ ॥ ೬ ॥

॥ ಸಾಯಣಭಾಷ್ಯಂ ॥

ಸಖಿತ್ವೇ ನಿಮಿತ್ತಭೂತೇ ಸತಿ ತಮಿತ್ತಮೇವೇಂದ್ರಮಿಾಮಹೇ । ಪ್ರಾಪ್ನುಮಃ । ತಥಾ ರಾಯೇ ಧನಾರ್ಥಂ ತಮಿಾಮಹೇ । ತಥಾ ಸುವೀರ್ಯೇ ಶೋಭನಸಾಮರ್ಥ್ಯನಿಮಿತ್ತಂ ತಮಿಾಮಹೇ । ಉತಾಪಿ ಚೆ ಶಕ್ರೇ ಶಕ್ತಿಮಾನ್ಸ ಇಂದ್ರೋ ನೋಽಸ್ಮಭ್ಯಂ ವಸು ಧನಂ ದಯಮಾನಃ ಪ್ರಯಚ್ಛನ್ ಶಕತ್ ।

ಅಸ್ಮದೀಯರಕ್ಷಣೇ ಶಕ್ತೋಽಭೂತ್ । ಸಪ್ತದಶಯೋಜನಾತ್ಮಕಮಸ್ಮೀಮಹೇ ಯಾಮಿಸಾತಿ ಪರಿತಃ । ತದನುಸಾರೇಣೇಂದ್ರಂ ಯಾಚಾಮಹ ಇತಿ ವ್ಯಾಖ್ಯೇಯಂ ॥ ಸಖ್ಯುರ್ಭಾವಃ ಸಖಿತ್ವಂ । ತಸ್ಯ ಭಾವಸ್ತ್ವತಲೌ । ಪಾ- ೫-೧-೧೧೯ । ಇತಿ ತ್ವಃ । ಪ್ರತ್ಯಯಸ್ವರೇಣೋದಾತ್ತಃ । ಈಮಹೇ । ಈಙ್ ಗತೌ । ಜುತ್ತ್ವಾದಾತ್ಮನೇಪದಂ । ಪಾ. ೧-೩-೧೨ । ದಿವಾದಿಭ್ಯಃ ಶ್ಯನ್ । ಬಹುಲಂ ಛಂದಸೀತಿ ಶ್ಯನೋ ಲುಕ್ । ತಿಜ್ಜತಿಜ ಇತಿ ನಿಘಾತಃ । ರಾಯೇ । ಊಡಿದವಿತಿ ನಿಘಾತ್ತೇರುದಾತ್ತತ್ವಂ । ಸುವೀರ್ಯೇ । ಶೋಭನಂ ವೀರ್ಯಂ ಯಸ್ಯಾಸೌ ಸುವೀರ್ಯಃ ಭವಿತೃವಾಚಿನಾನೇನ ಭಾವೋಽ ಲಕ್ಷ್ಯತೇ । ಸುವೀರ್ಯತ್ವ ಇತ್ಯರ್ಥಃ ಬಹುವ್ರೀಹಾವಿತ್ಯನುವೃತ್ತೌ ವೀರವೀರ್ಯೌ ಚ । ಪಾ. ೬-೨-೧೨೦ । ಇತ್ಯುತ್ತರಪದಾದ್ಯುದಾತ್ತತ್ವಂ । ಶಕ್ನೋತೀತಿ ಶಕ್ತಃ । ಸ್ಫಾಯಿತಂಚಿವಂಚಿಶಕೀತ್ಯಾದಿನಾ ರಕ್ । ಪ್ರತ್ಯಯಸ್ವರಃ । ಶಕತ್ । ಶಕ್ಲೃ - ಶಕೌ । ಧಾತುಸಂಬಂಧಾಧಿಕಾರೇ ಛಂದಸಿ ಲುಙ್ಲಙ್ಲಿಟಃ । ಪಾ- ೩-೪-೬ । ಇತಿ ಲುಙ್ । ಯತಃ ಶಕ್ನೋತ್ಯತಶ್ಚಸ್ತಮಿಮಹ ಇತಿ ಧಾತುಸಂಬಂಧಃ । ಲುಙಸ್ತಿಪ್ । ಪುಷಾದಿದ್ಯುತಾದ್ಯೃದಿತಃ ಪರಸ್ಮೈ - ಪದೇಷು । ಪಾ. ೩-೧-೫೫ । ಇತಿ ಚ್ಲೇರಙಾದೇಶಃ । ಬಹುಲಂ ಛಂದಸಿ । ಪಾ. ೬-೪-೭೫ । ಇತ್ಯಡಾಗ ಮಾಭಾವಃ । ತಿಜ್ಜತಿಜ ಇತಿ ನಿಘಾತಃ । ವಸು । ನಿದಿತ್ಯನುವೃತ್ತೌ ವಸೇರುಸ್ಪ್ರತ್ಯಯಃ । ಉ- ೧-೧೧ । ನಿತ್ತ್ವಾದಾದ್ಯುದಾತ್ತತ್ವಂ । ದಯಮಾನಃ । ದಯೃ ದಾನಗತಿರಕ್ಷಣಹಿಂಸಾದಾನೇಷು । ಅನುದಾತ್ತೇತ್ತ್ವಾ - ದಾತ್ಮನೇಪದಂ । ಲಟಃ ಶಾನಜಾದೇಶಃ । ಪಾ. ೩-೨-೧೨೪ । ಶಪಃ ಪಿತ್ತ್ವಾದನುದಾತ್ತತ್ವಂ । ಶಾನಚೌ ಶ್ಚಿತ ಇತ್ಯಂತೋದಾತ್ತತ್ವಂ ಬಾಧಿತ್ವಾದುಪದೇಶಾಚ್ಚಾಪ ಉತ್ತರತ್ವೇನ ಪರತ್ವಾಲ್ಲಸಾರ್ವಧಾತುಕತ್ವಾದನುದಾ - ತ್ತತ್ವಂ । ಧಾತುಸ್ವರ ಏವ ಶಿಷ್ಯತೇ ॥ ೧೯ ॥

॥ ಪ್ರತಿಪದಾರ್ಥ ॥

(ನಾವು) ಸಖಿತ್ವೇ—ಸ್ನೇಹಕ್ಕಾಗಿ । ತವಿಷ್—ಅವನನ್ನೇ (ಇಂದ್ರನನ್ನೇ) ಈಮಹೇ—ಪ್ರಾರ್ಥಿ ಸುವೆವು। ರಾಯೇ—ಧನಾದ್ಯೈಶ್ವರ್ಯಕ್ಕಾಗಿ। ತಂ—ಅವನನ್ನು (ಇಂದ್ರನನ್ನು) (ಈಮಹೇ—ಯಾಚಿಸುವೆವು)। ಸುವೀರ್ಯೇ—ಹೆಚ್ಚಾದ ಸಾಮರ್ಥ್ಯಕ್ಕಾಗಿ । ತಂ—ಅವನನ್ನು (ಈಮಹೇ—ಯಾಚಿಸುವೆವು) । ಉತ—ಮತ್ತು । ಶಕ್ರಃ—ಬಲಶಾಲಿಯಾದ । ಸ ಇಂದ್ರಃ—ಆ ಇಂದ್ರನು । ನಃ—ನಮಗೆ । ವಸು—ಧನವನ್ನು । ದಯಮಾನಃ—ಕೊಡುವವನಾಗಿ । ಶಕತ್—ನಮ್ಮನ್ನು ರಕ್ಷಿಸುವುದರಲ್ಲಿ ಸಮರ್ಥನಾಗಿರಲಿ ॥

॥ ಭಾವಾರ್ಥ ॥

ನಾವು ಸ್ನೇಹಕ್ಕಾಗಿಯೂ, ಧನಕ್ಕಾಗಿಯೂ, ಶಕ್ತಿಸಾಮರ್ಥ್ಯಗಳಿಗಾಗಿಯೂ ಇಂದ್ರನನ್ನೇ ಯಾಚಿಸು ವೆವು (ಪ್ರಾರ್ಥಿಸುವೆವು). ಆ ಇಂದ್ರನು ಬಲಶಾಲಿಯಾದುದರಿಂದ ನಮಗೆ ಧನವನ್ನು ಕೊಡುವುದಲ್ಲದೆ ನಮ್ಮನ್ನು ರಕ್ಷಿಸುವುದರಲ್ಲಿ ಸಮರ್ಥನಾಗಿರುವನು.

English Translation.

To him (Indra) alone we pray for friendship, to him for wealth, to him for great valour. For he, the powerful Indra conferring wealth is able to protect us.

॥ ವಿಶೇಷವಿಷಯಗಳು ॥

ಈಮಹೇ--ಈಮಹೇ, ಯಾಮಿ, ಮನ್ಮಹೇ ಮೊದಲಾದ ಹದಿನೇಳು ಯಾಚ್ಞಾಕರ್ಮವನ್ನು ಸೂಚಿಸುವ ಕ್ರಿಯಾಪದಗಳ ಮಧ್ಯದಲ್ಲಿ **ಈಮಹೇ** ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩-೧೯) **ಈಮಹೇ** ಎಂದರೆ ಯಾಚಿಸುತ್ತೇವೆ, ಪ್ರಾರ್ಥಿಸುತ್ತೇವೆ ಎಂದರ್ಥವು.

ಸುವೀರ್ಯೇ—ಸು=ಒಳ್ಳೆಯ, ಹೆಚ್ಚಾದ, ವೀರ್ಯ =ಪರಾಕ್ರಮ, ಶಕ್ತಿ, ಸಾಮರ್ಥ್ಯ. Great valour, grat power ಇತ್ಯಾದಿ

ವ್ಯಾಕರಣಪ್ರಕ್ರಿಯಾ

ಸಖಿತ್ವೇ-ಸಖ್ಯುಃ ಭಾವಃ ಸಖಿತ್ವಂ, ತಸ್ಮಿನ್. ' ತಸ್ಯಭಾವಸ್ತ್ವತಲೌ, (ಪಾ. ಸೂ. ೫-೧ ೧೧೯) ಎಂಬುದರಿಂದ ತ್ವ ಪ್ರತ್ಯಯ. ಪ್ರತ್ಯಯಸ್ವರದಿಂದ ಉದಾತ್ತ.

ಈಮಹೇ--- ' ಈಜ್ ಗತೌ ' ಧಾತು. ಧಾತುವು ಜಿತ್ತು ಆದ್ದರಿಂದ ' **ಅನುದಾತ್ತೆಜಿತಆತ್ಮನೇಪದಂ,** (ಪಾ. ಸೂ. ೧-೩-೧೨) ಎಂಬುದರಿಂದ ಆತ್ಮನೇ ಪದ ಪ್ರತ್ಯಯವು ಬರುವುದು. ಲಟ್ ಉ. ಪು ಬಹುವಚನದಲ್ಲಿ ಮಹಿಙ್ ಬರುವುದು. ಈ+ಮಹಿ. **ಟಿತ ಆತ್ಮನೇ ಪದಾನಾಂಟೇರೇ** (ಪಾ. ಸೂ. ೩-೪-೭೮) ಎಂಬುದರಿಂದ ಏತ್ವ ಬರುವುದು. ' **ದಿವಾದಿಭ್ಯಃ ಶ್ಯನ್** ' (ಪಾ. ಸೂ. ೩-೧-೬೯) ಎಂಬುದರಿಂದ ಬರುವ ಶ್ಯನ್ ಎಂಬ ವಿಕರಣ ಪ್ರತ್ಯಯಕ್ಕೆ ಬಹುಲಂ ಛಂದಸಿ (ಪಾ.ಸೂ. ೨-೪-೭೩) ಎಂಬುದರಿಂದ ಲುಕ್ ' **ತಿಙ್ಶಿತಿಙಃ** (ಪಾ. ಸೂ. ೪-೧-೩೮) ಎಂಬುದರಿಂದ ಅನುದಾತ್ತ.

ರಾಯೋ--ಊಡಿದಮ್ ಪದಾದ್ಯಪ್ಪುಮ್ಭ್ರೈದ್ಯುಭ್ಯಃ, (ಪಾ. ಸೂ. ೬-೧-೧೭೧) ಎಂಬುದರಿಂದ ರೈ ಶಬ್ದದ ಮುಂದೆ ಇರುವ ಚತುರ್ಥೀವಿಭಕ್ತಿ ಙೀ ಪ್ರತ್ಯಯವು ಉದಾತ್ತ.

ಸುವೀರ್ಯೇ—ಶೋಭನಂ ವೀರ್ಯಂ ಯಸ್ಯಾಸೌ ಸುವೀರ್ಯಃ ಎಂದು ವಿಗ್ರಹ, ಭವಿತೃವಾಚಿಯಾದ ಸುವೀರ್ಯಶಬ್ದದಿಂದ ಭಾವಾರ್ಥವು ಲಕ್ಷಿಸಲ್ಪಡುವುದು. ಸುವೀರ್ಯೇ ಎಂಬುದಕ್ಕೆ ಸುವೀರ್ಯತ್ವೇ ಎಂದು ಅರ್ಥ. ವೀರವೀರ್ಯೌಚ (ಪಾ ಸೂ ೬-೩-೧೩೦) ಇಲ್ಲಿ ಬಹುವ್ರೀಹೌ ವಿಶ್ವಂಸಂಜ್ಞಾಯಾಂ (ಪಾ. ಸೂ. ೬-೩-೧೦೬) ಎಂಬುದರಿಂದ ಬಹುವ್ರೀಹೌ ಎಂಬ ಪದವು ಅನುವೃತ್ತವಾಗುವುದು. ಬಹುವ್ರೀಹಿಸಮಾಸದಲ್ಲಿ ಸು ಎಂಬುದರ ಮುಂದೆ ಇರುವ ವೀರ, ವೀರ್ಯ ಎಂಬ ಶಬ್ದಗಳು ಛಂದಸ್ಸಿನಲ್ಲಿ ಆದ್ಯುದಾತ್ತಗಳಾಗುವುವು ಎಂಬುದರಿಂದ ಉತ್ತರಪದವಾದ ವೀರ್ಯಶಬ್ದದ ಆದಿಯು ಉದಾತ್ತವಾಗುವುದು

ಶಕ್ನೋತಿ ಇತಿ ಶಕ್ರಃ—ಶಕ್ಲೃಧಾತುವಿನ ಮುಂದೆ ಸ್ಥಾಯಿತೆಙ್ಞಿವಙ್ಞಿಶಕಿ (ಉ. ಸೂ. ೨-೧೭೦) ಎಂಬುದರಿಂದ ರಕ್ ಪ್ರತ್ಯಯ. ಪ್ರತ್ಯಯಸ್ವರಬರುವುದು. **ಶಕತ್**—ಶಕ್ಲೃ ಶಕ್ತೌ ಎಂಬ ಧಾತುವಿನ ಮುಂದೆ **ಧಾತುಸಂಬಂಧೇ ಪ್ರತ್ಯಯಾಃ** (ಪಾ. ಸೂ. ೩-೪-೧) ಎಂಬ ಅಧಿಕಾರದಲ್ಲಿರುವ **ಛಂದಸಿಲುಙ್ಲಙ್ಲಿಟಃ** (ಪಾ. ಸೂ. ೩-೪-೬) ಎಂಬುದರಿಂದ ಲುಙ್ ಬರುವುದು. ಯಾವ ಕಾರಣದಿಂದ ಸಮರ್ಥನಾಗುವನೋ ಆದರಿಂದ ಆವನನ್ನು ಹೊಂದುತ್ತೇನೆ. **ಯೆತಶಕ್ನೋತಿ ಅತಸ್ತಮಿಮಾಮಹೇ** ಎಂದು ಧಾತುಸಂಬಂಧವಿರುವುದು. ಲುಙ್ಲಾಗೆ ತಿಪ್. ಇಕಾರಕ್ಕೆ ಇತಶ್ಚ **ಲೋಪಃಪರಸ್ಮೈಪದೇಷು** (ಪಾ. ಸೂ. ೩-೪-೯೭) ಎಂಬುದರಿಂದ ಲೋಪ.

ಚ್ಲೌ ಲುಙಿ (ಪಾ.ಸೂ. ೩-೧-೪೩) ಎಂಬುದರಿಂದ ಧಾತುವಿನ ಮುಂದೆ ಚ್ಲಿ ಬರುವುದು ಶಕ್+ಚ್ಲಿ+ತ್. ಇದಿತ್ತಾದ ಧಾತುವಿನ ಮುಂದೆ ಇರುವ ಚ್ಲಿಗೆ **ಪುಷಾದಿದ್ಯುತಾದ್ಲ್ಯೃದಿತಃ ಪರಸ್ಮೈಪದೇಷು** (ಪಾ. ಸೂ. ೩-೧-೫೫) ಪರಸ್ಮೈಪದಪ್ರತ್ಯಯಪರದಲ್ಲಿರುವಾಗ ಪುಷಾದಿಗಣದ ಧಾತುಗಳು- ದ್ಯುತಾದಿಗಣಧಾತುಗಳು ಇದಿತ್ತಾದ ಧಾತುಗಳು ಇವುಗಳ ಮುಂದೆ ಇರುವ ಚ್ಲಿಗೆ ಅಙ್ ಆದೇಶ ಬರುವುದು ಎಂಬುದರಿಂದ ಅಙ್ ಬಂದರೆ ಶಕ್+ಅ+ತ್ **ಲುಙ್‌ಲಙ್‌ಲೃಙ್‌ಕ್ಷ್ವಡುದಾತ್ತಃ** (ಪಾ. ಸೂ. ೬-೪-೭೧) ಎಂಬುದರಿಂದ ಅಡಾಗಮ ಪ್ರಾಪ್ತವಾದರೆ **ಬಹುಲಂಛಂದಸ್ಯಮಾಙ್ಯೋಗೇಪಿ** (ಪಾ. ಸೂ, ೬-೪-೭೫) ಎಂಬುದರಿಂದ ಅಡಾಗಮ ಬರುವುದಿಲ್ಲ. **ತಿಙ್ಙತಿಙಃ** (ಪಾ. ಸೂ.೪-೧-೩೪) ಎಂಬುದರಿಂದ ಸರ್ವಾನುದಾತ್ತ.

ವಸು— ಶ್ಯಾಸ್ವ್ಯಸ್ಮಿಹಿತ್ರಪ್ಯಸಿವಸಿಹನಿಕ್ಲಿದಿಬಂಧಿಮನಿಭ್ಯಶ್ಚ (ಉ. ಸೂ, ೧-೧೦) ಧಾನ್ಯೇನಿತ್ (ಉ. ಸೂ. ೧-೯) ಎಂಬುದರಿಂದ ನಿತ್ ಎಂದೂ, ಭೃಮೃಷೀ .....ಉಃ (ಉ.ಸೂ. ೧-೭) ಎಂಬುದರಿಂದ ಉಃ ಎಂದೂ ಅನುವೃತ್ತವಾಗುವುದು. ಶ್ಯಾ ಮೊದಲಾದ ಹತ್ತು ಧಾತುಗಳ ಮುಂದೆ ಉ ಪ್ರತ್ಯಯ ಬರುವುದು. ಅದು ನಿತ್ತಾಗುವುದು ಎಂದು ಸೂತ್ರಾರ್ಥ. ಇದರಿಂದ ವಸನಿವಾಸೇ ಎಂಬುದರ ಮುಂದೆ ಉ ಪ್ರತ್ಯಯ ಬರುವುದು, ಪ್ರತ್ಯಯವು ನಿತ್ತಾದ್ದರಿಂದ ಞ್ನಿತ್ಯಾದಿರ್ನಿತ್ಯಮ್ (ಪಾ. ಸೂ. ೬-೧-೧೯೭) ಎಂಬುದರಿಂದ ವಸು ಎಂಬುದು ಆದ್ಯುದಾತ್ತ.

ದಯಮಾನಃ—ದಯ ದಾನಗತಿರಕ್ಷಣಹಿಂಸಾದಾನೇಷು ಧಾತು. ಇದು ಅನುದಾತ್ತೇತ್ತು. ಆದ್ದರಿಂದ **ಅನುದಾತ್ತಙಿತ ಆತ್ಮನೇಪದಂ** (ಪಾ. ಸೂ. ೧-೩-೧) ಎಂಬುದರಿಂದ ಆತ್ಮನೇಪದಿ ದಯಧಾತುವಿನ ಮುಂದೆ ಲಟ್ಪ್ರತ್ಯಯವನ್ನು ಇಟ್ಟರೆ ಅದರ ಸ್ಥಾನದಲ್ಲಿ **ಲಟ್‌ಶತೃಶಾನಚೌ** (ಪಾ. ಸೂ. ೩-೨-೧೨೪) ಎಂಬುದರಿಂದ ಆತ್ಮನೇಪದ ಸಂಜ್ಞಕವಾದ ಶಾನಚ್ ಪ್ರತ್ಯಯ ಬರುವುದು **ಕರ್ತರಿಶಪ್** (ಪಾ. ಸೂ. ೩-೧.೬೮) ಎಂಬುದರಿಂದ ಶಪ್ ವಿಕರಣ ಬರುವುದು ದಯ್+ಅ+ಆನ **ಆನೇಮುಕ್** (ಪಾ. ಸೂ. ೭-೨-೮೨) ಆನ ಎಂಬುದು ಪರದಲ್ಲಿರುವಾಗ ಅಂಗಾವಯವವಾದ ಹ್ರಸ್ವಾಕಾರಕ್ಕೆ ಮುಗಾಗಮ ಬರುವುದು ಎಂಬುದರಿಂದ ಮುಕ್ ಆಗಮ. ಅದು ಕಿತ್ತು. ಆದ್ದರಿಂದ **ಆದ್ಯಂತೌಟಕಿತೌ** (ಪಾ.ಸೂ- ೧-೧-೪೬) ಎಂಬುದರಿಂದ ಅಂತಾವಯವವಾಗಿ ಬರುವುದು. ದಯ್+ಅಮ್+ಆನ=ದಯಮಾನ ಎಂದಾಗುವುದು. ಶಪ್ಪು ಪಿತ್ತಾದ್ದರಿಂದ ಅನುದಾತ್ತ. ಶಾನಚ್ಚು ಚಿತ್ತು ಆದ್ದರಿಂದ ಚಿತಃ (ಪಾ. ಸೂ ೬-೧-೧೬೩) ಎಂಬುದರಿಂದ ಅಂತೋದಾತ್ತ ಪ್ರಾಪ್ತವಾಗುವುದು. ಆದರೆ ಅದನ್ನು ಬಾಧಿಸಿ ಅದುಪದೇಶವಾದ ಶಪ್ ವಿಕರಣದ ಮುಂದೆ ಇರುವುದರಿಂದ **ತಾಸ್ಯನುದಾತ್ತೇನ್ಡಿದುಪದೇಶಾತ್** (ಪಾ. ಸೂ. ೬-೧-೧೮೬) **ಲಸಾರ್ವಧಾತುಕಾನುದಾತ್ತ** ಬರುವುದು. ದಯ್ ಎಂಬಲ್ಲಿ ಧಾತುಸ್ವರನೇ ನಿಲ್ಲುವುದು. ॥ ೬ ॥

॥ ಸಂಹಿತಾಪಾಠಃ ॥

ಸುವಿವೃತಂ ಸುನಿರಜಮಿಂದ್ರ ತ್ವಾದಾತಮಿದ್ಯಶಃ ।
ಗವಾಮಪ ವ್ರಜಂ ವೃಧಿ ಕೃಣುಷ್ವ ರಾಧೋ ಅದ್ರಿವಃ ॥ ೭ ॥

॥ पदपाठः ॥

सु॒ऽविवृ॑तं । सु॒निः॑ऽअजं । इन्द्र॑ । त्वा॒ऽदात॑म् । इत् । यशः॑ ॥
गवा॑म् । अप॑ । व्र॒जं । वृधि । कृ॒णु॒ष्व॒ । राधः॑ । अद्रि॑ऽवः ॥ २ ॥

॥ सायणभाष्यं ॥

हे इंद्र॒ यशोऽन्नं कर्मफलभूतं सुविवृतं सुष्ठु सर्वत्र प्रसृतं सुनिरजं सुखेन निःशेषं प्राप्तुं शक्यं त्वादातमित्त्वयैव शोधितं च संपन्नमिति शेषः अतः परं क्षीरादिरसलाभार्थं गवां व्रजं निवासस्थानमपि वृधि । अपवृतमुद्घाटितं द्वारं कुरु । हे अद्रिवः पर्वतोपलक्षितवज्रयुक्तेंद्र राधोः धनं कृणुष्व । संपादय ॥ सुविवृतं । वृञ् वरणे । कर्मणि क्तप्रत्ययः । विशब्देन प्रादिसमासः । विवृतमित्यत्र कृदुत्तरपदप्रकृतिस्वरं बाधित्वा कर्मवाचिनि क्तान्तेऽपरतो गतिरनंतरः। पा. ६-२-४९ । इति पूर्वपदप्रकृतिस्वरे प्राप्ते परादिश्छंदसि बहुलं । ६-२ ११९ । इत्यन्तोदात्तः । पुनः सुशब्देन समासे कृदुत्तरपदप्रकृतिस्वरेण स एवकार उदात्तः। ननु वृतमित्येव कृदंतं न तु विवृतमिति प्रत्ययग्रहणे यस्मात्स विहितस्तदादेस्तदंतस्य ग्रहणं । परि. ३६ । इति वचनात् । सुविवृतमित्यत्र च समासे वृतमित्येतावन्मात्रं नोत्तरपदं किंतु विवृतमिति । तत्कथं कृदुत्तरपदप्रकृतिस्वरत्वमिति चेत् उच्यते । प्रत्ययग्रहणपरिभाषाप्रवादेन कृद्ग्रहणे गतिकारकपूर्वस्यापि ग्रहणं । परि. ७७ । इत्यनेन विवृतमित्यस्यापि कृदंतव्यपदेशोऽस्ति तयैव परिभाषया । तथा च कर्मणि क्तान्ते उत्तरपदे परतो गतिरनंतर इति सुशब्दस्य प्रकृतिस्वरः प्राप्नोति । न चात्रापि परादिश्छंदसि बहुलमित्येवं नास्ति विस्तारः। तथा हि सति सुविवृतमित्यत्र विवृतमित्येवोत्तरपदमिति तदादिरिकार एवोदात्तः स्यात् । विवृतमिति समासे यद्यप्यृकारः पदादिर्भवति तथापि सुविवृतमिति समासस्य सति शिष्टत्वेन बलीयस्त्वात्तत्र त्रैस्वर्ये इकार एवोत्तरपदादानिकार एवोदात्तस्वरेण भवितव्यमिति । उच्यते । गतिरनंतर इत्यत्रानुवृत्तेः कृद्ग्रहणे कृद्ग्रहणपरिभाषा नाश्रीयते । तदाश्रयणे व्यवहितगतावपि प्रकृतिस्वरे सत्यनंतरग्रहणमनर्थकं स्यात् । अनेनैव चाभिप्रायेणानंतरग्रहणस्य प्रयोजनमभ्युद्धृतमित्यत्र व्यवहितस्याभिशब्दस्य मा भूदिति प्रत्युदाहृतं । तस्मात्सुविवृतमित्यकार एवोदात्त इति स्थितं । सुनिरजं । अनायासेन निरवशेषं प्राप्यं ।

अज गतिक्षेपणयोः । सुनिसोरुपसर्गयोः प्राक्प्र्योगः । ईषद्दुःसुषु कृच्छ्राकृच्छ्रार्थेषु खल् । पा. ३-३-८३६ । न चात्र सुशब्दस्य निसा व्यवधानं शंकनीयं । सुशब्दस्य ह्युपपदमात्रं खलोऽ निमित्तं नानंतर्यं । अत एव सुपरिहरं दुष्परिहरमित्यादयेः प्रयोगा इति । पूर्ववद्गतिसमासे ल्गतीति प्रत्ययात्पूर्वमुदात्तमिति धात्वकार उदात्तः । निसा सहसमासे कृदुत्तरपदप्रकृतिस्वरेण स एव शिष्यते । पुनः सुशब्देन सहसमासे कृद्ग्रहणे गतिकारकपूर्वस्यापि ग्रहणमिति परिभाषयाऽ कृदुत्तरपदप्रकृतिस्वरेण स एव शिष्यतेऽ । त्वादातं । त्वयाऽ शोधनेन विशदीकृतं । दैप् शोधनेऽ । आदेच उपदेशेऽत्यतिति । पा- ६-१-४५ । इत्यात्वं । सत्यपि हि सकारेऽ नानुबंधकृतमनेजंतत्वं ॥ परि ५ ॥ इत्येजंत एवायं । निषेति कर्मणि क्तः । दाधा घ्वदाप् । पा- १-१-२० । इत्यत्रादाबिति प्रतिषेधेन घुसंज्ञायाऽ अभावाद्वोऽ दद्घोः । पा. ७-४-४६ । इति ददादेशोऽ न भवति । नसु दाप् लवन इति प्रतिपदोक्तस्यैव दापस्तत्रादाबिति निषेधः । न पुनर्लाक्षणिकस्य दैपः । लक्षणप्रतिपदोक्तयोः प्रतिपदोक्तस्यैव ग्रहणं न तु लाक्षणिकस्य । परि १०३ । इत निपूर्वादिति चेन्न । गामादागृहणेष्वविशेषः । परि १०६ ।इति प्रतिपेसवात् । युष्मच्छब्दात्तृतीयैकवचनेसि सुपाऽ सुलुगिति डादेशः ॥ त्वमावेकवचने । पा. ७-२-९७ । इति ममपूर्वांतस्यैऽ त्वादेशः । अतोऽ गुण इति पररूपत्वं । भसंज्ञायां टेरित्यदंबस्यऽ लोपः । उदात्तनिवृत्तिस्वरेणाकार उदात्तः । कर्तृकरणेऽ कृता बहुलं । पा- २-१ ३२ । इति तृतीयासमासः। तत्पुरुषेऽ कृति बहुलं । पा ६-३- ०१४ । इति तृतीयायाऽ अलुक् । कृदुत्तरपदप्रकृतिस्वरेऽ प्राप्तेऽ तृतीयाऽ कर्मणि । पा ६-२-४८ । इति पूर्वपदप्रकृतिस्वरत्वं । येशः । अशू व्याप्तौ । अशेर्युट्च । उ ४ ०१० । इत्यसुन् । तत्सन्नियोगेन धातोर्युडागमः । नित्त्वादाद्युदात्तत्वं । गवां प्रातिपदिकस्वरः। सावेकाचे इति विभक्तेरुदात्तत्वं प्राप्तं । न गोश्वन्त्सावनडुहां दात्यति निषिध्यते । वृधि । वृञोस् वरणेऽ। शुशृणुभ्यः कित्। वृञ् भ्यश्च । पा. ६-४-०७१ । इति हेर्धिरादेशः । बहुलं धृंडसीति श्नोरपि लुक् । निघातः । कृणुष्व । कृञ् । हिंसाकरणयोरश्च । इदितोऽ नुम् । व्यत्ययोऽनात्मनेऽ पदं । लोटोसवाल् । ३-४-४८ । थासः सेऽ । पा- ३-४-८० । सवाभ्यां वामौ । पा. ३-४-९० । कर्तरि शपि प्राप्ते । पा- ३-१-७९ । धिन्विकृण्व्योरच्चे । पा. ३-१-८० । इत्युप्रत्ययेः । तत्सन्नियोगेन वकारस्य ऊकारः । तस्यातोऽ लोपः । पा. ६-४-४६ । इति लोपः। अचेः परस्मिन्पूर्वविधौ । पा. ०-१-४८ । इत्यकारलोपस्य स्थानिवद्भावान्नाद्यूनाल्लघूपदगुणोऽ न भवति । अत्र सति शिष्टस्वरबलीयस्त्वमन्यत्रैऽ विकरणेभ्यऽ इति सति शिष्टमसि विकरणस्वरं बाधित्वा तिङि एव प्रत्ययादुदात्तत्वं । राधः । असुनंतोऽ नित्त्वादाद्युदात्तः । अद्रिवः । अद्रिर्वज्रं । तदस्यास्तीति मतुप् । घंडसीरः । पा. ४-२-०१४ । इति वत्वं । संबुद्धावुगिदचां । पा. ७- ०-७० । इति नुम् । हल्ङ्यादिसंयोगांतलोपः । पा. ६-०-६८ । मतुवसोरुः संबुद्धौ घंडसि । पा. ८.३-० । इति रुत्वं । विसर्जनीयेः । आमंत्रितस्य च निघातः ॥

॥ ಪ್ರತಿಪದಾರ್ಥ ॥

(ಹೇ) ಇಂದ್ರ—ಎಲೈ ಇಂದ್ರನೇ । **ಸುವಿವೃತಂ**—ಎಲ್ಲೆಲ್ಲಿಯೂ ಚೆನ್ನಾಗಿ ಪ್ರಸರಿಸಿರುವ ಎಂದರೆ ಹೆಚ್ಚಾಗಿರುವ । **ಸುನಿರಜಂ**—ಸುಲಭವಾಗಿ ದೊರೆಯುವ । **ಯೆಶಃ**—ಅನ್ನವನ್ನು (ಆಹಾರವನ್ನು) । **ತ್ವಾದಾತಂ ಇತ್**—ನೀನು ಚೆನ್ನಾಗಿ ಶೋಧಿಸಿಕೊಡುವವನಾಗು । (ಹೇ) **ಅದ್ರಿವಃ**—ಎಲೈ ವಜ್ರಾಯುಧಧಾರಿಯಾದ ಇಂದ್ರನೇ । **ಗವಾಂ**—ಗೋವುಗಳ । **ವ್ರಜಂ**—ಕೊಟ್ಟಿಗೆಯನ್ನು । **ಅಪ ವೃಧಿ**—ಬಾಗಿಲನ್ನು ತೆಗೆ (ದು ನಮಗೆ ಗೋವುಗಳನ್ನು ಕೊಡು) । **ರಾಧಃ**—ಧನವನ್ನು । **ಕೃಣುಷ್ವ**—(ನಮಗೆ) ದೊರಕಿಸು ॥

॥ ಭಾವಾರ್ಥ ॥

ಎಲೈ ಇಂದ್ರನೇ ನಮಗೆ ಬಹಳವಾದ ಅನ್ನವು ದೊರೆಯುವಂತೆ ಮಾಡು. ಆ ಅನ್ನವು ಎಲ್ಲಿಯೆಲ್ಲಿಯೂ ಇದ್ದು ನಮಗೆ ಸುಲಭವಾಗಿ ಸಿಕ್ಕುವಂತಿರಬೇಕು. ಇದಲ್ಲದೆ ಗೋವುಗಳ ಕೊಟ್ಟಿಗೆಯನ್ನು ತೆರೆದು ನಮಗೆ ಬಹಳವಾದ ಗೋವುಗಳನ್ನೂ ಧನವನ್ನೂ ಸಂಪಾದಿಸಿಕೊಡು.

English Translation

O Indra, the food is rendered abundant everywhere and easily obtainable; O wielder of thunderbolt, throw open, then the cow-fold and give us wealth.

॥ ವಿಶೇಷವಿಷಯಗಳು ॥

ಸುವಿವೃತಂ—ಈ ಶಬ್ದಕ್ಕೆ ಭಾಷ್ಯಕಾರರು--" **ಸುಷ್ಠು ಸರ್ವತ್ರ ಪ್ರಸೃತಂ**--ಎಲ್ಲಾ ಕಡೆಯಲ್ಲಿಯೂ ಚೆನ್ನಾಗಿ ಹರಡಿರುವ " ಎಂದೂ ಸ್ಕಂದಸ್ವಾಮಿಯು—**ಸುಷ್ಠು ಲೋಕೇ ಪ್ರಕಾಶಂ**—ಲೋಕದಲ್ಲಿ ಚೆನ್ನಾಗಿ ದೊರೆಯುವ " ಎಂದೂ ಅರ್ಥಮಾಡಿದಾರೆ. Wilson ಪಂಡಿತನು ಈ ಶಬ್ದಕ್ಕೆ rendered everywhere abundant ಎಂದು ಅರ್ಥವನ್ನು ವಿವರಿಸಿದಾನೆ.

ಸುನಿರಜಂ—**ಸುಖೇನ ನಿಶ್ಶೇಷಂ ಪ್ರಾಪ್ತುಂ ಶಕ್ಯಂ** ಎಂದು ಭಾಷ್ಯಕಾರರೂ, **ಸುನಿರಜಂ । ನಿರಿ ಶ್ಚೇಷ ನೀಶ್ಚೇತಸ್ಯ ಸ್ಥಾನೇ ಅಜಗತಿಷ್ಟೇಷಣಯೋಃ । ಸುನಿಷ್ಟೇಷಂ । ಯತ್ರ ಯತ್ರ ವಿನಿಯೋಕ್ತುಮಿಷ್ಯತೇ ತತ್ರ ತತ್ರ ಪ್ರಭೂತತ್ವಾತ್ ಸುವಿನಿಯೋಜಮಿತ್ಯರ್ಥಃ** ॥ ಎಂದು ಸ್ಕಂದಸ್ವಾಮಿಯೂ ವ್ಯಾಖ್ಯಾನ ಮಾಡಿದಾರೆ. ಎಂದರೆ ಸುಲಭವಾಗಿ ಸಿಕ್ಕುವ, ಎಲ್ಲೆಲ್ಲಿಯೂ ಹರಡಿರುವುದರಿಂದ ಸುಲಭವಾಗಿ ದೊರೆಯುವ ಎಂದರ್ಥವು.

ತ್ವಾದಾತಂ—**ತ್ವಯಾ ಶೋಧನೇನ ವಿಶದೀಕೃತಂ** ಎಂದು ಭಾಷ್ಯಕಾರರೂ, **ತ್ವಯೋ ದತ್ತಂ** ಎಂದು ಸ್ಕಂದಸ್ವಾಮಿಯೂ ಅರ್ಥವಿವರಣೆ ಮಾಡಿರುವರು. ಭಾಷ್ಯಕಾರರು **ದೈಪ್ ಶೋಧನೇ** ಎಂಬ ಧಾತು

ವಿನ ಆದೇ ಚ ಉಪದೇಶೇऽಶಿತಿ ಇತ್ಯಾತ್ವಂ (ಪಾ. ಸೂ. ೬-೧-೪೫) ಸೂತ್ರಪ್ರಕಾರ ದೈಪ್ ಧಾತುವಿನ ರೂಪಾಂತರವೆಂದು ಹೇಳಿ ಅದಕ್ಕನುಸಾರವಾಗಿ "ನಿನ್ನಿಂದ ಶೋಧನೆ ಮಾಡಿ ವಿಶದಪಡಿಸಲ್ಪಟ್ಟ" ಎಂದರ್ಥ ಮಾಡಿರುವರು. ಸ್ಕಂದಸ್ವಾಮಿಯ ವ್ಯಾಖ್ಯಾನ ಪ್ರಕಾರ ತ್ವಾದಾತಂ ಎಂದರೆ ತ್ವಯಾ ದತ್ತಂ—ನಿನ್ನಿಂದ ಕೊಡಲ್ಪಟ್ಟ ಎಂದಾಗುವುದು. ಒಟ್ಟಿನಲ್ಲಿ ಅಭಿವ್ಯಾಯವು ಒಂದೇ ಆದರೂ ಶಬ್ದದ ರೂಪನಿಷ್ಪತ್ತಿಯು ಬೇರೆ ಬೇರೆಯಾಗಿರುವುದು. ತ್ವಾದಾತಂ ಎಂಬ ಶಬ್ದವು ಈ ಋಕ್ಕಿನಲ್ಲಿಲ್ಲದೆ ಋ. ಸಂ. ೩-೪೦-೬ ; ೫-೭-೧೦ ; ೫-೫೯-೧೧ರಲ್ಲಿಯೂ, ತ್ವಾದತ್ತಃ ಎಂಬ ಶಬ್ದವು ಋ. ಸಂ. ೮-೯೨-೧೮ ರಲ್ಲಿಯೂ, ತ್ವಾದತ್ತೇಭಿಃ ಎಂಬ ಶಬ್ದವು ಋ. ಸಂ. ೨-೩೩-೨ ರಲ್ಲಿಯೂ ಪಠಿತವಾಗಿದೆ. (ಈ ಋಕ್ಕಿನಲ್ಲಿರುವ ಅದ್ರಿವಃ ಎಂಬ ಶಬ್ದದ ವಿವರಣೆಯನ್ನು ನೋಡಿ).

ಯೆಶಃ—ಅಂಧಃ, ವಾಜಃ, ಮೊದಲಾದ ಇಪ್ಪತ್ತೆಂಟು ಅನ್ನವಾಚಕಶಬ್ದಗಳ ಮಧ್ಯದಲ್ಲಿ ಯಶಃ ಶಬ್ದವು ಪಠಿತವಾಗಿರುವುದರಿಂದ ಇಲ್ಲಿ ಯಶಃ ಶಬ್ದಕ್ಕೆ ಅನ್ನವೆಂದರ್ಥವು.

ಆಪ ವೃಧಿ—ಉದ್ಘಾಟಿತದ್ವಾರಂ ಕುರು—ಬಾಗಿಲನ್ನು ತೆರೆ throw open the door (of cow-fold)

ವ್ರಜಂ—ಗೋಷ್ಠಂ ಅಥವಾ ಗವಾಂ ನಿವಾಸಸ್ಥಾನಂ—ಗೋವುಗಳನ್ನು ಕಟ್ಟುವ ಕೊಟ್ಟಿಗೆ cow fold.

ಇಲ್ಲಿ ಯಶಃ ಎಂಬ ಶಬ್ದಕ್ಕೆ ಉದಕವೆಂದೂ (ನಿ. ೨-೨೪) ವ್ರಜ ಮತ್ತು ಅದ್ರಿ ಶಬ್ದಗಳಿಗೆ ಮೇಘ ವೆಂದೂ (ನಿ. ೨-೨೧) ಅರ್ಥಮಾಡಿದಲ್ಲಿ ಮೇಘ ಸಮೂಹವನ್ನು ಪ್ರಹರಿಸಿ ಮಳೆಯನ್ನು ಬರುವಂತೆ ಮಾಡಿ ಅಮೂಲಕ ಉದಕವನ್ನು ಕೊಡು ಎಂದರ್ಥವು ಸರಿಹೋಗುವುದು. Wilson ಪಂಡಿತನೂ ಕೂಡ ಈ ವಿಷಯ ದಲ್ಲಿ—the text is literally rendered : the meaning being that Indra as the sender of rain should fertilize the fields, and by providing abundant pasturage enable the cattle to yield store of milk ಈ ಅಭಿಪ್ರಾಯವನ್ನು ಅನುಮೋದಿಸಿದಾನೆ.

ಅದ್ರಿವಃ—ಅದ್ರಿರ್ವಜ್ರಂ । ಶತಪರ್ವಾಸ್ಯೇತಿ ॥ ಅದ್ರಿ ಎಂದರೆ ವಜ್ರಾಯುಧವು. ಆದುದರಿಂದ ಅದ್ರಿ ವಾನ್ ಎಂದರೆ ವಜ್ರಾಯುಧಧರನು ಎಂದರ್ಥವು. ನಿರುಕ್ತದಲ್ಲಿ ಅದ್ರಿಯೆಂದರೆ ಪರ್ವತವೆಂದು ಹೇಳಿರುವುದ ರಿಂದ ಭಾಷ್ಯಕಾರರು ಪರ್ವತೋಪಲಕ್ಷಿತವಜ್ರಯುಕ್ತ ಎಂದರ್ಥ ಹೇಳಿರುವರು. ಇದಲ್ಲದೆ ಅದ್ರಿಶಬ್ದಕ್ಕೆ ಮೇಘವೆಂದೂ ಹೆಸರು (ನಿ. ೨-೨೧) ಮತ್ತು ಯಾಸ್ಕರು—

ಯದಿಂದ್ರ ಚಿತ್ರ ಮೇಹನಾಸ್ತಿ ತ್ವಾದಾತಮದ್ರಿವಃ ।
ರಾಧಸ್ತನ್ನೋ ವಿದದ್ವಸ ಉಭಯಾಹಸ್ತ್ಯಾ ಭರ ॥
(ಋ. ಸಂ. ೫-೫೯-೧)

ಎಂಬ ಋಕ್ಕಿಗೆ ಅರ್ಥವಿವರಣೆ ಮಾಡುವಾಗ ಅದ್ರಿವನ್ । ಅದ್ರಿರಾದೃಣಾತ್ಯೇತೇನ (ಹೇ ಅದ್ರಿವಃ—ವಜ್ರಿನ್) ಎಂದೂ ತ್ವಾದಾತಂ ಎಂಬ ಶಬ್ದಕ್ಕೆ ತ್ವಯಾ ನಸ್ತದ್ದಾತವ್ಯಂ ಎಂದೂ ಅರ್ಥಮಾಡಿರುವರು. ಆದು ದರಿಂದ ಈ ಅದ್ರಿವನ್ ಮತ್ತು ತ್ವಾದಾತಂ ಎಂಬ ಎರಡುಶಬ್ದಗಳಿಗೂ ಯಾಸ್ಕರು ಕೊಟ್ಟಿರುವ ವಿವರಣೆಯೇ ಪರಿಗ್ರಾಹ್ಯವು.

॥ ವ್ಯಾಕರಣಪ್ರಕ್ರಿಯಾ ॥

ಸುವಿವೃತಮ್ 'ವೃಞ್ ವರಣೇ' ಧಾತು. ಇದರ ಮುಂದೆ ಕರ್ಮಾರ್ಥದಲ್ಲಿ ಕ್ತ ಪ್ರತ್ಯಯ. ವಿ ಶಬ್ದಕ್ಕೂ ವೃತ ಶಬ್ದಕ್ಕೂ **ಕುಗತಿಪ್ರಾದಯಃ** (ಪಾ. ಸೂ. ೨-೨-೧೮) ಎಂಬುದರಿಂದ ಪ್ರಾದಿಸಮಾಸ, ವಿವೃತಮ್ ಎಂಬಲ್ಲಿ ವೃತಮ್ ಎಂಬುದು ಕೃದಂತವಾದ್ದರಿಂದ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರವು ಪ್ರಾಪ್ತವಾಗುವುದು. ಆದರೆ ಅದನ್ನು ಬಾಧಿಸಿ **ಗತಿರನಂತರಃ** (ಪಾ. ಸೂ. ೬-೨-೪೯) ಕರ್ಮಾರ್ಥಕ ಕ್ತ ಪ್ರತ್ಯಯಾಂತವು ಪರದಲ್ಲಿರುವಾಗ ಅವ್ಯವಹಿತವಾದ ಗತಿಯು ಪೂರ್ವಪದ ಪ್ರಕೃತಿ ಸ್ವರವನ್ನು ಹೊಂದುವುದು ಎಂಬುದರಿಂದ ಕರ್ಮಾರ್ಥಕ ಕ್ತ ಪ್ರತ್ಯಯಾಂತವಾದ ವೃತ ಎಂಬುದರ ಹಿಂದೆ ಇರುವ ಗತಿ ಸಂಜ್ಞಕವಾದ ವಿಗೆ ಪ್ರಕೃತಿಸ್ವರ ಆದ್ಯುದಾತ್ತವೇ ಪ್ರಾಪ್ತವಾಗುವುದು. ಇದನ್ನೂ ಬಾಧಿಸಿ **ಪೆರಾದಿಶೃಂದಶಿ ಬಹುಲಮ್** (ಪಾ. ಸೂ. ೬-೨-೧೯೯) ಎಂಬುದರಿಂದ ಪರಪದವಾದ ವೃತ ಶಬ್ದದ ಆದಿಯಾದ ಋಕಾರವು ಉದಾತ್ತ. ತಿರುಗಿಯೂ ಸು ಶಬ್ದದೊಂದಿಗೆ ಪ್ರಾದಿ ಸಮಾಸವನ್ನು ಮಾಡಿದರೆ **ಗತಿಕಾರಕೋ**....(ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರ ಪದಪ್ರಕೃತಿಸ್ವರವೇ ಬಂದು ಆ ಋಕಾರವೇ ಉದಾತ್ತವಾಗುವುದು. ಸು ಶಬ್ದದೊಂದಿಗೆ ವಿವೃತ ಶಬ್ದಕ್ಕೆ ಸಮಾಸಬಂದಾಗ 'ಗತಿಕಾರಕೋಪಪದಾತ್ಕೃತ್' ಎಂಬುದು ಹೇಗೆ ಬರುವುದು ? ಇಲ್ಲಿ ವಿವೃತಂ ಎಂಬುದು ಸುಗೆ ಪರದಲ್ಲಿರುವುದು. ಅದು ಕೃದಂತವಾಗುವುದಿಲ್ಲ. **ಪ್ರತ್ಯಯೇಗ್ರಹಣೇ ಯಸ್ಮಾತ್ಸವಿಹಿತಸ್ತದಾದೇಸ್ತದಂತಸ್ಯಗ್ರಹಣಮ್** (ಪರಿಭಾ ೨೩) ಪ್ರತ್ಯಯತ್ವ, ತದ್ವ್ಯಾಪ್ಯ ಅನ್ಯತರ ಧರ್ಮ ಪುರಸ್ಕಾರವಾಗಿ ಎಲ್ಲಿ ಪ್ರತ್ಯಯಕ್ಕೆ ಗ್ರಹಣವಿರುವುದೋ ಅಲ್ಲಿ ಯಾವ ಪ್ರಕೃತಿಯಿಂದ ಆ ಪ್ರತ್ಯಯವು ವಿಹಿತವಾಗಿರುವುದೋ ಆ ಪ್ರಕೃತ್ಯಾದ್ಯವಯವಕವಾದ ಆ ಪ್ರತ್ಯಯಾಂತಕ್ಕೆ ಗ್ರಹಣಬರುವುದು ಎಂದು ಪರಿಭಾಷಾರ್ಥ, 'ಗತಿ ಕಾರಕೋಪಪದಾತ್ಕೃತ್' ಎಂಬ ಸೂತ್ರದಲ್ಲಿ ಪ್ರತ್ಯಯತ್ವವ್ಯಾಪ್ಯವಾದ ಕೃತ್ವಧರ್ಮಪುರಸ್ಕಾರವಾಗಿ ಪ್ರತ್ಯಯಕ್ಕೆ ಗ್ರಹಣವಿರುವುದು. ಆದ್ದರಿಂದ ಈ ಪರಿಭಾಷೆಯಿಂದ ಕೃತ್ಪ್ರತ್ಯಯವು ಯಾವ ಪ್ರಕೃತಿಯ ಮುಂದೆ ವಿಹಿತವಾಗುವುದೋ ಆ ಪ್ರತ್ಯಾದ್ಯವಯವಕವಾದ ಆ ಕೃತ್ಪ್ರತ್ಯಯಾಂತಕ್ಕೆ ಗ್ರಹಣ ಬರುವುದು. ಇಲ್ಲಿ ಕ್ತ ಪ್ರತ್ಯಯ ವೃ ಎಂಬ ಪ್ರಕೃತಿಯ ಮುಂದೆ ವಿಹಿತವಾಗಿರುವುದು. ಆದ್ದರಿಂದ ವೃ ಎಂಬ ಪ್ರಕೃತ್ಯಾದ್ಯವಯವಕ ಕ್ತ ಎಂಬ ಕೃತ್ಪ್ರತ್ಯಯ ಚರಮಾವಯವಕವಾದ ವೃತ ಎಂಬುದು ಕೃದಂತವಾಗುತ್ತದು. ಕೃದಂತವಾದ ವೃತ ಎಂಬುದು ಸು ಶಬ್ದದ ಮುಂದೆ ಇಲ್ಲ. ಸುಶಬ್ದದ ಮುಂದೆ ಇರುವ ವಿವೃತ ಎಂಬುದು ಕೃದಂತವಾಗುವುದಿಲ್ಲ. ಆದ್ದರಿಂದ ಗತಿಯ ಮುಂದೆ ಇರುವ ಕೃದಂತಕ್ಕೆ ವಿಧಿಸಿರುವ ಕೃದುತ್ತರಪದಪ್ರಕೃತಿಸ್ವರವು ಬರಲಾರದು ಎಂದು ಪೂರ್ವಪಕ್ಷ ಬರುವುದು. ಆದರೆ 'ಪ್ರತ್ಯಯಗ್ರಹಣೇಯಸ್ಮಾತ್ಸವಿತಸ್ತದಾದೇಸ್ತದಂತಸ್ಯ ಗ್ರಹಣಂ' ಎಂಬ ಪರಿಭಾಷೆಗೆ **ಕೃದ್ಗ್ರಹಣೇಗತಿಕಾರಕಪೂರ್ವಸ್ಯಾಪಿಗ್ರಹಣಂ** (ಪರಿಭಾ ೨೮) ಎಂಬ ಪರಿಭಾಷೆಯು ಅಪವಾದವಾದುದು. ಆದಕ್ಕೆ ಕೃತ್ವತದ್ವ್ಯಾಪ್ಯಾನ್ಯತರ ಧರ್ಮಪುರಸ್ಕಾರವಾಗಿ ಎಲ್ಲಿ ಕೃತ್ತಿಗೆ ಗ್ರಹಣವಿದೆಯೋ ಅಲ್ಲಿ ಗತಿಪೂರ್ವಕಕ್ಕೂ ಗ್ರಹಣಬರುವುದು. ಎಂದು ಅರ್ಥ. ಗತಿಕಾರಕೋಪಪದಾತ್ಕೃತ್ ಎಂಬಲ್ಲಿ ಕೃತ್ವಧರ್ಮಪುರಸ್ಕಾರವಾಗಿ ಕೃತ್ತಿಗೆ ಗ್ರಹಣವಿರುವುದು. ಆದ್ದರಿಂದ ಗತಿಪೂರ್ವಕವೂ ಕಾರಕಪೂರ್ವಕವೂ ಕೃದಂತವೆಂದು ಭಾವಿಸಲ್ಪಡುವುದು. ಆದ್ದರಿಂದ ವಿ ಎಂಬ ಗತಿಪೂರ್ವಕವಾದ ವೃತ ಅಂದರೆ ವಿವೃತ ಎಂಬುದು ಕೃದಂತವೇ ಆಯಿತು. ಅದು ಸು ಎಂಬ ಗತಿಯ ಮುಂದೆ ಇರುವುದರಿಂದ ಕೃದುತ್ತರಪದಪ್ರಕೃತಿಸ್ವರ ಬಂದು ಋಕಾರವು ಉದಾತ್ತವಾಗುವುದು ಎಂಬುದು ಯುಕ್ತವಾಗಿಯೇ ಇರುವುದು.

ಹಾಗಾದರೆ ಕೃದ್ಗ್ರಹಣಪರಿಭಾಷೆಯಿಂದ ಹೇಗೆ ವಿವೃತಂ ಎಂಬುದು ಕೃದಂತವಾಗುವುದೋ ಹಾಗೆಯೇ ಆದೇ ಪರಿಭಾಷೆಯಿಂದಲೇ ಕ್ತಾಂತವೂ ಆಗುವುದು. ಗತಿಕಾರಕ ಎಂಬ ಸೂತ್ರದಲ್ಲಿ ಕೃತ್ವಧರ್ಮಪುರ

ಸ್ಕಾರವಾಗಿ ಕೃತ್ತಿಗೆ ಉಪಾದಾನವಿರುವುದು. ಗತಿರನಂತರಃ ಎಂಬಲ್ಲಿ ಕ್ಷೇಚ (ಪಾ. ಸೂ. ೫-೨-೪೫) ಎಂಬುದು ಅನುವೃತ್ತಿಯಾಗುವುದರಿಂದ ಕೃತ್ವವ್ಯಾಪ್ಯ ಕ್ತತ್ವಥರ್ಮ್ಯಪುರಸ್ಕಾರವಾಗಿ ಕೃತ್ತಿಗೆ ಉಪಾದಾನವಿರುವುದು. ಆದ್ದರಿಂದ ' ಗತಿರನಂತರಃ ' ಎಂಬ ಸೂತ್ರದಲ್ಲಿ ಕೃದ್ಗ್ರಹಣಪರಿಭಾಷೆಯು ಉಪಸ್ಥಿತವಾಗುವುದರಿಂದ ಗತಿಕಾರಕ ಪೂರ್ವಕವಾದ ಕರ್ಮಾರ್ಥಕಕ್ತಾಂತ ಪರದಲ್ಲಿರುವಾಗ ಅನಂತರವಾದ ಗತಿಯು ಪ್ರಕೃತಿ ಸ್ವರವನ್ನು ಹೊಂದುವುದು ಎಂದು ಆರ್ಥವೇಪರ್ಡುವುದು. ಆದ್ದರಿಂದ 'ಗತಿಕಾರಕೋಪಪದಾತ್ಕೃತ್' ಎಂಬ ಕೃದುತ್ತರಪದ ಪ್ರಕೃತಿಸ್ವರವನ್ನು ಬಾಧಿಸಿ 'ಗತಿರನಂತರಃ' ಎಂಬುದರಿಂದ ವಿವೃತ ಎಂಬ ಕ್ತಾಂತ ಪರದಲ್ಲಿರುವಾಗ ಸು ಎಂಬ ಗತಿಗೆ ಪ್ರಕೃತಿ ಸ್ವರ ಆದ್ಯುದಾತ್ತ ಬರಲಿ ಎಂದು ಕೇಳಬಹುದು. ಆದರೆ ಇಲ್ಲಿಯೂ ಹಿಂದೆ ಹೇಳಿದಂತೆ ಪರಾದಿಶ್ಚಂದೆಸಿಬಹುಲಂ (ಪಾ. ಸೂ. ೬-೨-೧೧೯) ಎಂಬುದರಿಂದ ಗತಿರನಂತರಃ (ಪಾ. ಸೂ. ೬-೨-೪೯) ಎಂಬುದು ಬರುವುದಿಲ್ಲ ಎಂದು ಹೇಳಲಾಗುವುದಿಲ್ಲ. ಹಾಗೆ ಹೇಳಿದಪಕ್ಷದಲ್ಲಿ 'ಪರಾದಿಃ' ಎಂಬುದರಿಂದ ಸ್ವರವನ್ನು ಮಾಡುವ ಪಕ್ಷದಲ್ಲಿ ಸುವಿವೃತಂ ಎಂಬಲ್ಲಿ ವಿವೃತಂ ಎಂಬುದು ಪರಪದವಾಗುವುದು. ಆದ್ದರಿಂದ ಅದರ ಆದಿಯಾದ ಇಕಾರವು ಉದಾತ್ತವಾಗಬೇಕಾಗುವುದು. ವಿವೃತಂ ಎಂಬ ಸಮಾಸದಲ್ಲಿ ಯದ್ಯಪಿ ಋಕಾರವು ಪದಾದಿಯಾಗುವುದು. ಆದರೂ ಸುವಿವೃತಂ ಎಂಬ ಸಮಾಸವು ಸತಿಶಿಷ್ಟವಾಗುವಕಾರಣ ಬಲೀಯಸ್ತ್ವಾಗುವುದರಿಂದ ಅಸಮಾಸದ ಉತ್ತರಪದಾದಿಯಾದ ಇಕಾರಕ್ಕೆ ಉದಾತ್ತ ಸ್ವರ ಬರಬೇಕಾಗುವುದು ಎಂದು ಪೂರ್ವಪಕ್ಷ ಬರುವುದು. ಇದಕ್ಕೆ ಹೀಗೆ ಸಮಾಧಾನ ಹೇಳಬಹುದು. ಗತಿರನಂತರಃ (ಪಾ. ಸೂ. ೬-೨-೪೯) ಎಂಬ ಸೂತ್ರದಲ್ಲಿ ಅನಂತರ ಗ್ರಹಣವಿರುವ ಸಾಮರ್ಥ್ಯದಿಂದ ಕೃದ್ಗ್ರಹಣಪರಿಭಾಷೆಯು ಅಲ್ಲಿ ಉಪಸ್ಥಿತವಾಗುವುದಿಲ್ಲ. ಕೃದ್ಗ್ರಹಣಪರಿಭಾಷೆಯು ಉಪಸ್ಥಿತವಾದರೆ ವ್ಯವಹಿತವಾದ ಗತಿಗೂ ಪ್ರಕೃತಿಸ್ವರವು ಬರಬೇಕಾಗುವುದರಿಂದ ಅನಂತರ ಗ್ರಹಣವು ವ್ಯರ್ಥವೇ ಆಗುವುದು. ಇದೇ ಅಭಿಪ್ರಾಯದಿಂದಲೇ ಅನಂತರಗ್ರಹಣಕ್ಕೆ ಪ್ರಯೋಜನವನ್ನು ತೋರುವಾಗ, ಅಭ್ಯುದ್ಧೃತಮ್ ಎಂದು ಪ್ರತ್ಯುದಾಹರಣೆ ಕೊಟ್ಟಿರುವರು. ಇಲ್ಲಿ ವ್ಯವಹಿತವಾದ ಅಭಿ ಎಂಬ ಗತಿಗೆ ಪ್ರಕೃತಿಸ್ವರ ಬರಬಾರದು ಎಂದು ಅಭಿಪ್ರಾಯ. ಇಲ್ಲಿ ಕೃದ್ಗ್ರಹಣ ಪರಿಭಾಷೆಯು ಉಪಸ್ಥಿತವಾದರೆ ಉದ್ಧೃತ ಎಂಬುದು ಕ್ತಾಂತವಾಗುವುದರಿಂದ ಅಭಿ ಎಂಬುದು ಅನಂತರವಾದ ಗತಿಯೇ ಆಗಿಬಿಡುವುದು. ಆದ್ದರಿಂದ ಅಭಿಗೆ ಪ್ರಕೃತಿ ಸ್ವರವೇ ಬರಬೇಕಾಗುವುದು. ಏವಂಚ ಅನಂತರಗ್ರಹಣವು ವ್ಯರ್ಥವಾಗುವುದು. ಕೃದ್ಗ್ರಹಣಪರಿಭಾಷೆಯು ಉಪಸ್ಥಿತವಾಗದೇ ಹೋದರೆ ಪ್ರತ್ಯಯಗ್ರಹಣ ಪರಿಭಾಷೆಯಿಂದ ಹೃತ ಎಂಬುದು ಕ್ತಾಂತವಾಗುವುದೇ ವಿನಾ ಉದ್ಧೃತ ಎಂಬುದು ಕ್ತಾಂತವಾಗುವುದಿಲ್ಲ. ಆದ್ದರಿಂದ ಉತ್ ಎಂಬ ಅನಂತರ ಗತಿಗೆ ಪ್ರಕೃತಿಸ್ವರ ಬರುವುದು. ವ್ಯವಹಿತವಾದ ಅಭಿ ಎಂಬುದಕ್ಕೆ ಅನಂತರಗ್ರಹಣವಿರುವುದರಿಂದ ಪ್ರಕೃತಿಸ್ವರ ಬರುವುದಿಲ್ಲ. ಆದ್ದರಿಂದ ಅನಂತರ ಗ್ರಹಣವು ಸಾರ್ಥಕವಾಗುವುದು. ಏವಂಚ ಸುವಿವೃತಂ ಎಂಬಲ್ಲಿ ವಿವೃತಂ ಎಂಬುದು ಕ್ತಾಂತವಾಗುವುದಿಲ್ಲವಾದಕಾರಣ ಗತಿರನಂತರ ಎಂಬುದರಿಂದ ಸುಗೆ ಪ್ರಕೃತಿಸ್ವರವು ಬರುವುದಿಲ್ಲ, 'ಗತಿಕಾರಕೋ' ಎಂಬಲ್ಲಿ ಕೃದ್ಗ್ರಹಣಪರಿಭಾಷೆ ಬರುವುದರಿಂದ ವಿವೃತ ಎಂಬುದು ಕೃದಂತವಾಗುವುದರಿಂದ ಸು ಎಂಬುದರ ಮುಂದೆ ಇರುವ ವಿವೃತಂ ಎಂಬುದಕ್ಕೆ ಕೃದುತ್ತರ ಪದಪ್ರಕೃತಿಸ್ವರ ಬಂದು ಋಕಾರವೇ ಉದಾತ್ತವಾಗಿ ನಿಲ್ಲುವುದು. ಇಷ್ಟಕ್ಕೆ ಈ ಮಹಾವಾಕ್ಯಾರ್ಥವನ್ನು ನಿಲ್ಲಿಸುವ.

ಸುನಿರಜಮ್—ಆಯಾಸವಿಲ್ಲದೆ ನಿಶ್ಚೇಷವಾಗಿ ಹೊಂದಲು ಯೋಗ್ಯವಾದುದು ಎಂದರ್ಥ. ಅಜಗತಿಕ್ಷೇಪಣಯೋಃ ಧಾತು. ಇದರ ಹಿಂದೆ ಸು, ನಿಸ್ ಎಂಬ ಉಪಸರ್ಗಗಳನ್ನು ಪ್ರಯೋಗಿಸುವುದು. ಈಷದ್ದುಸ್ಸುಷ್ಕೃಚ್ಛ್ರಾಕೃಚ್ಛ್ರಾರ್ಥೇಷುಖಲ್ (ಪಾ. ಸೂ. ೩-೩-೧೨೬) ಕೃಚ್ಛ್ರಾರ್ಥಕವಾದ ದುರ್,

ಎಂಬುದು ಉಪಪದವಾಗಿದ್ದರೂ, ಅಕೃಚ್ಛ್ರಾರ್ಥಕವಾದ ಈಷತ್, ಸು ಎಂಬಿವು ಉಪಪದವಾಗಿರುವಾಗಲೂ ಧಾತುವಿನ ಮುಂದೆ ಖಲ್ ಪ್ರತ್ಯಯ ಬರುವುದು ಎಂಬುದರಿಂದ ಖಲ್ ಪ್ರತ್ಯಯವು ಅಜಧಾತುವಿನ ಮುಂದೆ ಬರುವುದು. ಖಕಾರ ಲಕಾರಗಳಿಗೆ ಇತ್ಸಂಜ್ಞೆಯೂ ಲೋಪವೂ ಸಹ ಬರುವುದು. ಸುನಿಸ್+ಅಜ್+ಅ ಎಂದಾಗುವುದು. ಇಲ್ಲಿ ಸು ಎಂಬುದಕ್ಕೆ ನಿಸ್ ಎಂಬುದರಿಂದ ವ್ಯವಧಾನವಿರುವುದರಿಂದ ಖಲ್ ಪ್ರತ್ಯಯ ಬರುವುದಿಲ್ಲವೆಂದು ಶಂಕಿಸಕೂಡದು. ಸು ಎಂಬುದು ಉಪಪದವಾಗಿದ್ದರೆ ಖಲ್ ಪ್ರತ್ಯಯ ಬರುವುದು. ಇಷ್ಟೇ ವಿನಾ ಸುಶಬ್ದಾನಂತರ್ಯವು ಅಪೇಕ್ಷಿತವಾಗಿಲ್ಲವು. ಸು ಮೊದಲಾದುವುಗಳಿಗಿಂತಲೂ ಪರದಲ್ಲಿರುವ ಧಾತುಗಳ ಮುಂದೆ ಖಲ್ ಬರುವುದು ಎಂದು ಅರ್ಥವು ಸೂತ್ರಕ್ಕೆ ಏರ್ಪಟ್ಟಿದ್ದರೆ ನಿಸ್ಸಿನಿಂದ ವ್ಯವಧಾನವಿರುವುದರಿಂದ ಧಾತುವು ಸು ಎಂಬುದಕ್ಕಿಂತಲೂ ಪರವಾಗುವುದಿಲ್ಲವಾದ್ದರಿಂದ ಖಲ್ ಪ್ರತ್ಯಯ ಬರುವುದಿಲ್ಲ ಎಂದು ಹೇಳಬಹುದಾಗಿತ್ತು. ಆದರೆ ಆರೀತಿ ಸೂತ್ರಕ್ಕೆ ಅರ್ಥವು ಏರ್ಪಡುವುದಿಲ್ಲ. ಆದ್ದರಿಂದ ವ್ಯವಧಾನಶಂಕೆಗೆ ಅವಕಾಶವಿಲ್ಲ. ಆದುದರಿಂದಲೇ ಸುಪರಿಹರಂ, ದುಷ್ಪರಿಹರಮ್ ಇತ್ಯಾದಿಯಾದ ಖಲ್ ಪ್ರತ್ಯಯಾಂತವಾದ ಪ್ರಯೋಗಗಳು ಕಂಡುಬರುವುವು. ಪೂರ್ವದಂತೆ ಇಲ್ಲಿಯೂ ಎರಡಾವರ್ತಿ ಗತಿ ಸಮಾಸ. ಖಲ್ ಪ್ರತ್ಯಯವು ಲಿತ್ತಾದ್ದರಿಂದ 'ಲಿತಿ' ಎಂಬುದರಿಂದ ಪ್ರತ್ಯಯದ ಹಿಂದೆ ಇರುವ ಧಾತು ಸಂಬಂಧಿಯಾದ ಅಕಾರವು ಉದಾತ್ತ. ನಿಸ್ ಎಂಬ ಉಪಸರ್ಗದೊಂದಿಗೆ ಗತಿಸಮಾಸ ಮಾಡಿದರೆ ಕೃದುತ್ತರಪದಪ್ರಕೃತಿಸ್ವರದಿಂದ ಧಾತ್ವಕಾರದ ಉದಾತ್ತ ಸ್ವರನೇ ನಿಲ್ಲುವುದು. ಪುನಃ ಸು ಎಂಬುದರೊಡನೆ ಸಮಾಸ ಮಾಡಿದರೂ, ಕೃದ್ಗ್ರಹಣೇಗತಿಕಾರಕಪೂರ್ವಸ್ಯಾಪಿ ಗ್ರಹಣಮ್ (ಪರಿಭಾ ೨೮) ಎಂಬುದರಿಂದ ನಿರಜ ಎಂಬುದು ಕೃದಂತವಾಗುವುದರಿಂದ ಕೃದುತ್ತರಪದ ಪ್ರಕೃತಿ ಸ್ವರವೇ ಬಂದು ಆ ಉದಾತ್ತನೇ ನಿಲ್ಲುವುದು. ಶೇಷ ನಿಘಾತದಿಂದ ಮಿಕ್ಕವು ಅನುದಾತ್ತಗಳು. ಉದಾತ್ತವಾದ ಧಾತ್ವಕಾರದ ಮುಂದೆ ಇರುವ ಪ್ರತ್ಯಯ ಸಂಬಂಧಿಯಾದ ಅನುದಾತ್ತ ಅಕಾರವು **ಉದಾತ್ತಾನುದಾತ್ತಸ್ಯಸ್ವರಿತಃ** ಎಂಬುದರಿಂದ ಸ್ವರಿತ.

ತ್ವಾದಾತಂ—ತ್ವಯಾ ಶೋಧನೇನ ವಿಶದೀಕೃತಮ್—ನಿನ್ನಿಂದ ಶೋಧನ ಮಾಡುವಿಕೆಯಿಂದ ವಿಶದೀಕೃತವಾದುದು. ದೈವ್ ಶೋಧನೇ ಧಾತು. **ಆದೇಚ ಉಪದೇಶೇ೨ಶಿತಿ** (ಪಾ. ಸೂ. ೬-೧-೪೫) ಶಿತ್ತಾದ ಪ್ರತ್ಯಯ ಪರದಲ್ಲಿಲ್ಲದೇ ಇದ್ದರೆ ಉಪದೇಶದಲ್ಲಿ ಏಜಂತವಾದ ಧಾತುವಿಗೆ ಆತ್ವ ಬರುವುದು ಎಂಬುದರಿಂದ ದೈ ಎಂಬುದರ ಏಕಾರಕ್ಕೆ ಆತ್ವ ಬರುವುದು. ಆದರೆ ಧಾತುವು ದೈವ್ ಎಂದು ಪಕಾರಾಂತವಾಗಿ ಉಪದೇಶಿಸಲ್ಪಟ್ಟಿರುವುದು. ದೈ ಎಂದು ಏಜಂತವಾಗಿ ಉಪದೇಶವಾಗಿಲ್ಲ. ಏವಂಚ ಉಪದೇಶದಲ್ಲಿ ಏಜಂತವಲ್ಲದೇ ಇರುವುದರಿಂದ ಆದೇಚ ಎಂಬುದರಿಂದ ಆತ್ವವು ಹೇಗೆ ಬರುವುದು ಎಂದು ಶಂಕೆ ತೋರುವುದು. ಆದರೂ **ನಾನುಬಂಧಕೃತಮನೇಜಂತತ್ವಂ** (ಪರಿಭಾ ೬) ಅನುಬಂಧ (ಇತ್ಸಂಜ್ಞಕವಾದ ವರ್ಣ) ಪ್ರಯುಕ್ತವಾದ ಏಜ್ವೃತ್ತಿಚರಮಾವಯವಕತ್ವಾಭಾವವನ್ನು ಆಶ್ರಯಿಸಲಾಗುವುದಿಲ್ಲ ಎಂದು ಪರಿಭಾಷಾರ್ಥ. ಅನುಬಂಧೇನ ಕೃತಮ್—ಅನುಬಂಧಕೃತಂ ಎಂದು ತೃತೀಯಾ ತತ್ಪುರುಷ, ಏಚ್ಚಾಸಾವಂತಶ್ಚ ಏಜಂತಃ-ತಸ್ಯಾಭಾವಃ ಅನೇಜಂತಃ-ತಸ್ಯಭಾವ ಅನೇಜಂತತ್ವಂ. ಹೀಗೆ ತತ್ಪುರುಷ ಸಮಾಸಗರ್ಭ ಅವ್ಯಯೀಭಾವ ಸಮಾಸವು ಇಲ್ಲಿ ವಿವಕ್ಷಿತವು. ಈ ಪರಿಭಾಷೆಯಿಂದ ಅನುಬಂಧಗಳಿಗೆ ಅವಿದ್ಯಮಾನವದ್ಭಾವ ಬೋಧನ ಮೂಲಕವೋ ಏಚ್ಚಿನ ಚರಮಾವಯವತ್ವಾ (ಕೊನೆಯವರ್ಣವಾಗುವಿಕೆ)ರೋಪ ಮೂಲಕವೋ ಉಪದಿಶ್ಯಮಾನವಾಗಿರುವ ದೈವ್‌ನ ಲ್ಲಿಏಜಂತತ್ವಬುದ್ಧಿ ಪ್ರಯೋಜಕವಾದ ಏಜ್ ಗತ ಚರಮಾವಯವತ್ವಕ್ಕೆ ಪ್ರತಿಬಂಧಕವಾಗಿರುವ ಪಕಾರಾನುಬಂಧದಿಂದ ವಿಶೇಷಣಾಭಾವ ಪ್ರಯುಕ್ತ ವಿಶಿಷ್ಟಾಭಾವವಿಧಿಯಿಂದ ಪ್ರಸಕ್ತವಾದ ಏಜಂತತ್ವಾಭಾವಕ್ಕೆ ಅಭಾವು ಬೋಧಿತವಾಗುವುದು. ಆದ್ದರಿಂದ

ದೈವ್ ಎಂಬುದು ಏಜಂತವಾಗುವುದರಿಂದ ಆತ್ವ ಬರುವುದು- ನಂತರ ನಿಷ್ಠಾ (ಪಾ. ಸೂ. ೩-೩.೧೦೨) ಎಂಬುದರಿಂದ ಕರ್ಮಣಿಕ್ತ ಪ್ರತ್ಯಯ ಬರುವುದು. ದಾ+ತ ಎಂದಿರುವುದು. ಈಗ ದಾ ಎಂಬುದು ದಾರೂಪವಾಗಿದ್ದರೂ ದಾಪ್ ಸಂಬಂಧಿಯಾದ್ದರಿಂದ **ದಾಧಾಘ್ವದಾಪ್** (ಪಾ. ಸೂ. ೧-೧-೨೦) ದಾಪ್ ಲವನೇ ದೈಪ್ ಶೋಧನೇ ಈ ಎರಡು ಧಾತುಗಳನ್ನು ಬಿಟ್ಟು ದಾ ರೂಪವಾಗಿಯೂ ಧಾ ರೂಪವಾಗಿಯೂ ಇರುವ ಧಾತುಗಳಿಗೆ ಘು ಸಂಜ್ಞೆ ಬರುವುದು ಎಂದು ಹೇಳಿರುವುದರಿಂದ ಇಲ್ಲಿ ಘು ಸಂಜ್ಞೆ ಬರುವುದಿಲ್ಲ. ಅದಾಪ್ ಎಂಬ ನಿಷೇಧವಿಂದ ದಾಪ್ ಲವನೇ ಎಂಬ ಪ್ರತಿಪದೋಕ್ತಕ್ಕೆ ನಿಷೇಧವೇ ವಿನಾ ದೈಪ್ ಶೋಧನೇ ಎಂಬುದಕ್ಕೆ ನಿಷೇಧ ಬರುವುದಿಲ್ಲ. ದೈಪ್ ಧಾತುವಿನಲ್ಲಿ ದಾಪ್ ರೂಪತ್ವ ಲಾಕ್ಷಣಿಕವಾಗುವುದು. ಲಾಕ್ಷಣಿಕ ಲಕ್ಷಣದಿಂದ ಉಂಟಾದ ಲಕ್ಷಣ ಎಂದರೆ ಶಾಸ್ತ್ರ. ದೈಪಿನಲ್ಲಿ 'ಆದೇಶ ಉಪದೇಶೇ೪ಶಿತಿ' ಎಂಬ ಶಾಸ್ತ್ರದಿಂದ ಆತ್ವ ಬಂದು ದಾಪ್ ರೂಪ ಏರ್ಪಡುವುದರಿಂದ ಇದು ಲಾಕ್ಷಣಿಕವು. ಲಕ್ಷಣಪ್ರತಿಪದೋಕ್ತಯೋಃ ಪ್ರತಿಪದೋಕ್ತಸ್ಯಗ್ರಹಣಮ್ ಎಂಬ ಪರಿಭಾಷೆಯಿಂದ ಪ್ರತಿಪದೋಕ್ತವಾದ ದಾಪ್‌ಗೆ ಪರ್ಯುದಾಸ ಬರುವುದೇ ವಿನಾ ದೈಪ್‌ನಿಂದ ಆಗಿ ಲಾಕ್ಷಣಿಕವಾದ ದಾಪ್‌ಗೆ ಪರ್ಯುದಾಸ ಬರಲಾರದು ಎಂದು ಶಂಕೆಯುಂಟಾಗಬಹುದು. ಆದರೆ ಅದಕ್ಕೆ ಅವಕಾಶ ವಿಲ್ಲ. **ಗಾಮಾದಾಗ್ರಹಣೇಷ್ವವಿಶೇಷಃ** (ಪರಿ. ೧೦೬) ಗಾ, ಮಾ-ದಾ ಇವುಗಳನ್ನು ಗ್ರಹಿಸುವಾಗ ಲಾಕ್ಷಣಿಕ ಪ್ರತಿಪದೋಕ್ತ ಎಂಬ ವಿಶೇಷವನ್ನು ಆದರಿಸದೇ ಎಲ್ಲಕ್ಕೂ ಗ್ರಹಣಬರುವುದು ಎಂದು ಇದರ ಅರ್ಥ. ಇದು ಪ್ರತಿಪದೋಕ್ತ ಪರಿಭಾಷೆಗೆ ಅಪವಾದವಾದುದು. ಇದರಿಂದ ಲಾಕ್ಷಣಿಕವಾದ ಅಂದರೆ ದೈಪ ದಾತುವಿನಿಂದ ಆದ ದಾ ರೂಪಕ್ಕೂ ಅದಾ ಪ್ ಎಂಬ ಪರ್ಯುದಾಸ ಬಂದೇ ಬರುವುದು. ಆದ್ದರಿಂದ ಇದಕ್ಕೆ ಘು ಎಂಬ ಸಂಜ್ಞೆ ಇಲ್ಲ. ಘು ಸಂಜ್ಞೆ ಇಲ್ಲದೇ ಇರುವುದರಿಂದ **ದೋದದ್ಘೋಃ** (ಪಾ. ಸೂ. ೭-೪-೪೬) ತಕಾರಾದಿಯಾದ ಕಿತ್ ಪ್ರತ್ಯಯ ಪರದಲ್ಲಿರುವಾಗ ಘು ಸಂಜ್ಞಕವಾದ ದಾ ಎಂಬುದಕ್ಕೆ ದಥ್ ಆದೇಶ ಬರುವುದು ಎಂಬುದರಿಂದ ದಥ್ ಆದೇಶ ಬರುವುದಿಲ್ಲ. ಯದ್ಯಪಿ ದದ್ಘೋಃ, ಎಂಬಲ್ಲಿ ದತ್, ದದ್, ದಥ್ ದಥ್ ಎಂದು ನಾಲ್ಕು ಪದವಿಭಾಗ ಮಾಡಬಹುದು. ಆದರೂ ಮೊದಲಿನ ಮೂರರಲ್ಲಿ ದೋಷವಿರುವುದರಿಂದ ದಥ್ ಎಂದು ಪದ ವಿಭಾಗವೇ ಯುಕ್ತವು. ತಾಂತೇ ದೀರ್ಘತ್ವಾಬ್ಯೋದೋಷೋ ದೋಷೋದಾಂತೇ ನಿಷ್ಠಾನತ್ವಂ | ಧಾಂತೇದೋ ಷೋಧತ್ವಾಖ್ಯಃಸ್ಯಾತ್ ನಿರ್ದೋಷತ್ವಾತ್ ಧಾಂತೋಗ್ರಾಹ್ಯಃ ||ಎಂದು ಹೇಳಿರುವುದರಿಂದ ದಥ್ ಎಂಬ ಭೇದವನ್ನು ಪುರಸ್ಕರಿಸಿ ಸೂತ್ರಾರ್ಥ ವರ್ಣನೆ ಮಾಡಿರುವೆವು. ಯುಷ್ಮದ್ ಶಬ್ದದ ಮುಂದೆ ತೃತೀಯಾ ವಿಭಕ್ತಿ, ಏಕವಚನ ಟಾ ಪ್ರತ್ಯಯವಿನ್ನಿಟ್ಟರೆ ಯುಷ್ಮದ್+ಟಾ **ಸುಪಾಂಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ಟಾಗೆ ಡಾ ಆದೇಶ ಯುಷ್ಮದ್+ಅ. **ತ್ವಮಾವೇಕವಚನೇ** (ಪಾ. ಸೂ. ೪-೨-೯೭) ವಿಭಕ್ತಿ ಪರದಲ್ಲಿರುವಾಗ ಏಕತ್ವ ವಿಶಿಷ್ಟಾರ್ಥ ಪ್ರತಿಪಾದಕಗಳಾದ ಯುಷ್ಮದ್ ಅಸ್ಮದ್ ಶಬ್ದಗಳ ಮಪರ್ಯಂತಕ್ಕೆ ಕ್ರಮವಾಗಿತ್ವ, ಮ ಎಂಬ ಆದೇಶಗಳು ಬರುವುವು ಎಂಬುದರಿಂದ ತ್ವ ಆದೇಶ ಬಂದರೆ, ತ್ವ+ಅದ್+ಅ. **ಅತೋಗುಣೇ** (ಪಾ, ಸೂ. ೬-೧-೯೭) ಎಂಬುದರಿಂದ ಪರರೂಪ, ತ್ವದ್+ಅ. ಯಚಿಭಂ ಎಂಬುದರಿಂದ ಭ ಸಂಜ್ಞೆ ಬಂದರೆ **ಟೇಃ** (ಪಾ.ಸೂ. ೬-೪-೧೪೩) ಎಂಬುದರಿಂದ ಅದ್ ಎಂಬ ಟಿಗೆ ಲೋಪ. ತ್ವಾ ದಾತ ಎಂದಾಗುವುದು. **ಯೌಷ್ಮ ದಿಭ್ಯಾಂ ಮದಿಕ್** (ಉ. ಸೂ. ೧-೧೩೬) ಎಂಬುದರಿಂದ ಯುಷ್ ಧಾತುವಿನ ಮುಂದೆ ಮದಿಕ್ ಪ್ರತ್ಯಯ ಬಂದು ಯುಷ್ಮದ್ ಎಂದಾಗುವುದು. ಅವ್ಯುತ್ಪತ್ತಿಪಕ್ಷದಲ್ಲಿ ಪ್ರತ್ಯಯಸ್ವರದಿಂದ ಅದ್ ಎಂಬಲ್ಲಿರುವ ಅಕಾರ ಉದಾತ್ತ. ಅವ್ಯುತ್ಪತ್ತಿಪಕ್ಷದಲ್ಲಿ ಪ್ರಾತಿಪದಿಕ ಸ್ವರದಿಂದ ಉದಾತ್ತ. ಡಾದೇಶ ಸಂಬಂಧಿಯಾದ ಅನುದಾತ್ತ ಆಕಾರ ಪರದಲ್ಲಿರುವಾಗ ಟಲೋಪ ಬಂದು ಅದ್‌ನ ಉದಾತ್ತ ಅಕಾರಕ್ಕೆ ಲೋಪ ಬಂದಿರುವುದು. ಆದ್ದರಿಂದ **ಅನುದಾತ್ತೇಸ್ಯಚಯತ್ತೋದಾತ್ತೇಲೋಪಃ** (ಪಾ. ಸೂ. ೬-೧-೧೬೧) ಎಂಬುದರಿಂದ ಅಕಾರ ಉದಾತ್ತ.

ಕರ್ತೈಕರಣೇಕೃತಾಬಹುಲಮ್ (ಪಾ. ಸೂ. ೨-೧-೩೨) ಕರ್ತೈಕರಣಾನ್ಯತರಾರ್ಥ ಪ್ರತಿಪಾದಕ ತೃತೀಯಾಂತ ಸುಬಂತವು ಕೃದಂತದೊಂದಿಗೆ ಬಹುಲವಾಗಿ ಸಮಾಸವನ್ನು ಹೊಂದುವುದು ಎಂಬುದರಿಂದ ತ್ವಾ ಎಂಬ ತೃತೀಯಾಂತ, ದಾಶ ಎಂಬ ಕೃದಂತಗಳಿಗೆ ಸಮಾಸ ಬರುವುದು. **ಸುಪೋಧಾತುಪ್ರಾತಿಪದಿಕಯೋಃ** (ಪಾ. ಸೂ. ೨-೪-೭೧) ಎಂಬುದರಿಂದ ತೃತೀಯಾ ವಿಭಕ್ತಿಯಾದ ತ್ವಾ ಎಂಬುದರ ಆಕಾರಕ್ಕೆ ಲೋಪ ಪ್ರಾಪ್ತವಾಗುವುದು, **ತತ್ಪುರುಷೇಕೃತಿಬಹುಲಂ** (ಪಾ. ಸೂ ೬-೩-೧೪) ಕೃದಂತ ಉತ್ತರಪದವು ಪರದಲ್ಲಿದ್ದರೆ ತತ್ಪುರುಷ ಸಮಾಸದಲ್ಲಿ ಸಪ್ತಮಿಗೆ ಬಹುಲವಾಗಿ ಅಲುಕ್ ಬರುವುದು ಎಂಬುದರಿಂದ ಲುಕ್ ಬರುವುದಿಲ್ಲ. ಕೃದುತ್ತರ ಪದಪ್ರಕೃತಿಸ್ವರವು ಪ್ರಾಪ್ತವಾದರೆ ಅದನ್ನು ಬಾಧಿಸಿ **ತೃತೀಯೋಕರ್ಮಣಿ** (ಪಾ. ಸೂ. ೬-೨-೪೮) ಕರ್ಮಣಿಕೃತ್ ಪ್ರತ್ಯಯಾಂತವು ಪರದಲ್ಲಿದ್ದರೆ ಕೃತೀಯಾಂತವು ಪ್ರಕೃತಿಸ್ವರವನ್ನು ಹೊಂದುವುದು ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುವುದು.

ಯಶಃ—ಅಶೂ ವ್ಯಾಪ್ತೌ ಧಾತು. **ಅಶೇರ್ಯುಟ್ಚ** (ಪಾ. ಸೂ. ೪-೬೩೦) ಅಶ್ ಧಾತುವಿನ ಮುಂದೆ ಅಸುನ್ ಪ್ರತ್ಯಯ ಬರುವುದು. ಧಾತುವಿಗೆ ಯುಟ್ ಆಗಮ ಬರುವುದು. ಎಂಬುದರಿಂದ ಅಶ್ ಧಾತುವಿನ ಮುಂದೆ ಅಸುನ್ ಪ್ರತ್ಯಯವೂ ಧಾತುವಿಗೆ ಯುಡಾಗಮವೂ ಬಂದರೆ ಯಶಸ್ ಎಂದಾಗುವುದು. ಇದರ ಮುಂದೆ ಬರುವ ಪ್ರಥಮಾ ವಿಭಕ್ತಿ ಏಕವಚನ ಸು ಪ್ರತ್ಯಯಕ್ಕೆ **ಹಲ್ಙಾಭ್ಯಃ** (ಪಾ. ಸೂ. ೬-೧-೬೮) ಎಂಬುದರಿಂದ ಲೋಪ. ಯಶಸ್ ಎಂಬದಕ್ಕೆ ರುತ್ವ ವಿಸರ್ಗಗಳು ಬಂದರೆ ಯಶಃ ಎಂದಾಗುವುದು. ಪ್ರತ್ಯಯವು ಸಿತ್ವಾದ್ದರಿಂದ ಸಿತ್ಸ್ವರ. ಆದ್ಯುದಾತ್ತ ಬರುವುದು.

ಗವಾಮ್—ಪ್ರಾತಿಪದಿಕಸ್ವರ ಬರುವುದು. **ಸಾವೇಕಾಚಸ್ತೃತೀಯಾದಿರ್ವಿಭಕ್ತಿಃ** (ಪಾ. ಸೂ. ೬-೧-೧೭೮) ಎಂಬುದರಿಂದ ವಿಭಕ್ತಿಗೆ ಉದಾತ್ತಸ್ವರ ಪ್ರಾಪ್ತವಾದರೆ **ನಗೋಶ್ವನ್ ಸಾವವರ್ಣರಾಡಙ್ಕ್ಯುಙ್-ಕ್ವಿಙ್ಭಿಃ** (ಪಾ. ಸೂ. ೧-೧೮೪) ಎಂಬುದರಿಂದ ಅದಕ್ಕೆ ನಿಷೇಧ ಬರುವುದು **ಅನುದಾತ್ತೌಸುಪ್ಪಿತೌ** ಎಂಬುದರಿಂದ ವಿಭಕ್ತಿಯು ಅನುದಾತ್ತವೇ ಆಗುವುದು.

ವೃಧಿ—ವೃಞ್ ವರಣೇ, ಧಾತು. ಇದರ ಮುಂದೆ ಲೋಟ್ ಮಧ್ಯಮಪುರುಷ ಏಕವಚನ ತಿಪ್ ಅದಕ್ಕೆ ಸೇರ್ಯ್ಸಪಿಚ್ಚ ಎಂಬುದರಿಂದ ಹಿ ಆದೇಶ. **ಸ್ವಾದಿಭ್ಯಃಶ್ನುಃ** (ಪಾ. ಸೂ. ೩.೧-೭೩) ಎಂಬುದರಿಂದ ಶ್ನು ವಿಕರಣ ಪ್ರತ್ಯಯ. ಅದಕ್ಕೆ **ಬಹುಲಂ ಛಂದಸಿ** (ಪಂ. ಸೂ. ೨-೪-೭೩) ಶ್ನು ಎಂಬುದಕ್ಕೂ ಲುಕ್ ಬರುವುದು. **ಶುಕೃಣು ಪ್ಲೃಕೃವೃಭ್ಯಶ್ಛಂದಸಿ** (ಪಾ- ಸೂ. ೬-೪ ೧೦೨) ಈ ಧಾತುಗಳ ಮುಂದೆ ಇರುವ ಹಿಗೆ ಧಿ ಆದೇಶ ಬರುವುದು ಎಂಬುದರಿಂದ ಧಿ ಆದೇಶ ವೃಧಿ. ಹಿಯು ಅಪಿತ್ತಾದರಿಂದ ಙಿತ್ತಾಗುವುದು, ಆದ್ದರಿಂದ **ಙ್ಣಿಚಿತಿಚ** (ಪಾ. ಸೂ. ೧-೧-೫) ಎಂಬುದರಿಂದ ನಿಷೇಧ ಬರುವಕಾರಣ ಗುಣಬರುವುದಿಲ್ಲ. **ತಿಙ್ಙತಿಙಃ** ಎಂಬುದರಿಂದ ಅನುದಾತ್ತ ಬರುವುದು

ಕೃಣುಷ್ವ— ಕೃದಿಹಿಂಸಾಕರಣಯೋಶ್ಚ, ಧಾತು, ಧಾತುವು ಇದಿತ್ತು. ಆದ್ದರಿಂದ **ಇದಿತೋನುಮ್-ಧಾತೋಃ**(ಪಾ.ಸೂ. ೭-೧-೮೮) ಎಂಬುದರಿಂದ ನುಮ್ ಆಗಮ. ನುಮ್ ಮಿತ್ತಾದ್ದರಿಂದ **ಮಿದಚೋಂತ್ಯಾತ್ಪರಃ** (ಪಾ. ಸೂ. ೧-೧-೪೭) ಅಂತ್ಯದ ಸ್ವರದ ಮುಂದೆ ಬರುವುದು. ವ್ಯತ್ಯಯದಿಂದ ಆತ್ಮನೇ ಪದ. ಧಾತುವಿನ ಮುಂದೆ ಲೋಟ್. ಆದಕ್ಕೆ ಆತ್ಮನೇ ಪದ ಮಧ್ಯಮಪುರುಷ ಏಕವಚನ ಸಂಜ್ಞಿಕ ಥಾಸ್ ಥಾಸಸ್ಸೇ (ಪಾ.ಸೂ.

೩-೪-೮೦) ಎಂಬುದರಿಂದ ಥಾಸ್‌ಗೆ ಸೇ ಆದೇಶ ಕೃನ್‌ವ್-ಸೇ **ಸವಾಭ್ಯಾಂ ವಾಮೌ** (ಶಾ. ಸೂ. ೩-೪-೯೧) ಎಂದು ಏಕಾರಕ್ಕೆ ವಕಾರಾದೇಶ. ಕೃನ್‌ವ್+ಸ್ಯ. **ಕರ್ತರಿ ಶಪ್** (ಪಾ. ಸೂ. ೩-೧-೬೮) ಎಂಬುದರಿಂದ ಶಪ್ ವಿಕರಣ ಪ್ರಾಪ್ತವಾದರೆ ಅದನ್ನು ಬಾಧಿಸಿ **ಧಿನ್ವಿಕೃಣ್ವ್ಯೋರಚ** (ಪಾ. ಸೂ. ೩-೧-೮೦) ಧಿವಿ, ಕೃವಿ, ಧಾತುಗಳ ಕೊನೆಯ ವರ್ಣಕ್ಕೆ ಉಕಾರಾದೇಶವೂ ಶಪ್ ವಿಷಯದಲ್ಲಿ ಇವುಗಳ ಮುಂದೆ ಉ ಪ್ರತ್ಯಯವೂ ಬರುವುದು ಎಂಬುದರಿಂದ, ಉ ವಿಕರಣ ಪ್ರತ್ಯಯವೂ, ವಕಾರಕ್ಕೆ ಉಕಾರವೂ ಬರುವುದು. ಕೃನ್+ಉ+ಉ-ಸ್ಯ ಎಂದಾಗುವುದು ಈ ಎರಡು ಧಾತುಗಳೂ ಭ್ವಾದಿ (೧ನೇ ಗಣ)ಯಲ್ಲಿರುವುವು. ಆದರೆ ವೋಪದೇವರು ಈ ಎರಡೂ ತನಾದಿ ಧಾತುಗಳು ಎಂದು ಸ್ವೀಕರಿಸುವರು ಅವರ ಮತದಲ್ಲಿ ಧಿನ್ವಿಕೃಣ್ವ್ಯೋರಚ ಎಂಬ ಸೂತ್ರದಲ್ಲಿ ಚ ಎಂಬುದು ಅನವಶ್ಯಕ- ಉಕಾರಾದೇಶವನ್ನು ಮಾತ್ರ ವಿಧಿಸಿದರೆ ಸಾಕು. **ಆತೋಲೋಪಃ** (ಪಾ. ಸೂ. ೬-೪-೪೯) ಎಂಬುದರಿಂದ ಅರ್ಧಧಾತುಕವಾದ ಉ ಪ್ರತ್ಯಯದ ಹಿಂದೆ ಇರುವ ಆಕಾರಕ್ಕೆ ಲೋಪ. ಕೃನ್+ಉ+ಸ್ಯ ಈಗ ಕೃನ್ ಎಂಬುದು ಲಘೂಪಧ ಆದ್ದರಿಂದ **ಪುಗಂತಲಘೂಪಧಸ್ಯ ಚ** (ಪಾ. ಸೂ. ೭-೩-೮೬) ಎಂಬುದರಿಂದ ಲಘೂಪಧಗುಣವು ಪ್ರಾಪ್ತವಾಗುವುದು. ಆದರೂ ಅದು ಬರುವುದಿಲ್ಲ ಏಕೆಂದರೆ **ಅಚಃ ಪರಸ್ಮಿನ್ಪೂರ್ವವಿಧೌ** (ಪಾ. ಸೂ ೧-೧-೫೭) ಸ್ಥಾನಿಭೂತವಾದ ಸ್ವರಕ್ಕಿಂತಲೂ ಪೂರ್ವತ್ವೇನ ದೃಷ್ಟವಾದುದಕ್ಕೆ ಕಾರ್ಯವನ್ನು ಮಾಡುವಾಗ ಪರನಿಮಿತ್ತಕವೂ ಅಜ್ ಸ್ಥಾನದಲ್ಲಿ ಬಂದದೂ ಆದ ಆದೇಶವು ಸ್ಥಾನಿವದ್ಭಾವವನ್ನು ಹೊಂದುವುದು ಎಂಬುದರಿಂದ ಅಲೋಪಕ್ಕೆ ಸ್ಥಾನಿವದ್ಭಾವ ಬರುವುದು ಹೇಗೆಂದರೆ ಸ್ಥಾನಿಭೂತವಾದ ಅಚ್ಚು ಉಕಾರ. ಇದಕ್ಕಿಂತ ಪೂರ್ವತ್ವೇನ ದೃಷ್ಟವಾಗಿರುವುದು ಕೃನ್ ಎಂಬಲ್ಲಿರುವ ಋಕಾರ. ಆದಕ್ಕೆ ಗುಣರೂಪವಾದ ಕಾರ್ಯವನ್ನು ಮಾಡುವಾಗ ಪರದಲ್ಲಿರುವ ಉ ಪ್ರತ್ಯಯವನ್ನು ನಿಮಿತ್ತವಾಡಿಕೊಂಡು ಬಂದುದೂ, ಆ ಎಂಬ ಅಚ್ಚಿನ ಸ್ಥಾನದಲ್ಲಿ ಬಂದುದೂ ಆದ ಲೋಪರೂಪವಾದ ಆದೇಶವು ಸ್ಥಾನಿವದ್ಭಾವವನ್ನು ಹೊಂದುವುದು ಎಂಬುದರಿಂದ ಸ್ಥಾನಿವದ್ಭಾವ ಬಂದರೆ ಉಕಾರವು ಇದ್ದಂತೆ ಆಗುವುದು ಈಗ ವಕಾರೋಪಧವಾಗುವುದೇ ವಿನಾ ಲಘೂಪಧವಾಗುವುದಿಲ್ಲ ಆದ್ದರಿಂದ ಲಘೂಪಧಗುಣ ಬರುವುದಿಲ್ಲ ಕೃನ್+ಉ+ಸ್ಯ 'ಋವರ್ಣಾನ್ನಸ್ಯ ಣತ್ವಂ ವಾಚ್ಯಂ' ಎಂಬುದರಿಂದ ನಕಾರಕ್ಕೆ ಣಕಾರ, ಆದೇಶಪ್ರತ್ಯಯಯೋಃ ಎಂಬುದರಿಂದ ಪ್ರತ್ಯಯಾವಯವವಾದ ಸಕಾರಕ್ಕೆ ಷಕಾರ, ಕೃಣುಷ್ಯ ಎಂದಾಗುವುದು ಸತಿಶಿಷ್ಟಸ್ವರಬಲೀಯಸ್ತ್ವಮನ್ಯತ್ರವಿಕರಣೇಭ್ಯಃ—ವಿಕರಣಾತಿರಿಕ್ತ ಸ್ಥಳದಲ್ಲಿ ಸತಿಶಿಷ್ಟಸ್ವರವು ಬಲವಾದುದು ಇಲ್ಲಿ ಉ ಎಂಬ ವಿಕರಣಕ್ಕೆ ಬರುವ ಸ್ವರವು ಸತಿಶಿಷ್ಟವಾದುದು. ಆದರೂ ಅದು ಬಲವಾದುದಲ್ಲ ಆದ್ದರಿಂದ ಆದ್ಯುದಾತ್ತಶ್ಚ ಎಂಬುದರಿಂದ ಸ್ಯ ಎಂಬ ತಿಪ್‌ಪ್ರತ್ಯಯಕ್ಕೆ ಆದ್ಯುದಾತ್ತ ಬರುವುದು ಶೇಷನಿಘಾತದಿಂದ ಮಿಕ್ಕವು ಅನುದಾತ್ತಗಳು.

ರಾಧಃ—ಸರ್ವಧಾತುಭ್ಯೋಽಸುನ್ (ಉ. ಸೂ. ೪-೬೮೮) ಎಂಬುದರಿಂದ ಅಸುನ್ ಪ್ರತ್ಯಯ ಪ್ರತ್ಯಯವು ನಿತ್ತಾದ್ದರಿಂದ ರಾಧಃ ಎಂಬುದು ಆದ್ಯುದಾತ್ತ.

ಅದ್ರಿವಃ—ಅದ್ರಿ ಎಂದರೆ ವಜ್ರ ಎಂದು ಅರ್ಥ. ಅದ್ರಿಃ ಅಸ್ಯ ಅಸ್ತಿ ಎಂದು ವಿಗ್ರಹಮಾಡಿದರೆ **ತದಸ್ಯಾಸ್ತ್ಯಸ್ಮಿನ್ನಿತಿಮತುಪ್** (ಪಾ. ಸೂ. ೫-೨-೯೪) ಎಂಬುದರಿಂದ ಮತುಪ್ ಬರುವುದು. **ಭಂದಸೀರಃ** (ಪಾ. ಸೂ. ೮-೩-೧೫) ಇವರ್ಣಾಂತ ರೇಫಾಂತ ಶಬ್ದಗಳ ಮುಂದೆ ಇರುವ ಮತುಪ್ಪಿನ ಮಕಾರಕ್ಕೆ ಭಂದಸ್ಸಿನಲ್ಲಿ ವಕಾರ ಬರುವುದು ಎಂಬುದರಿಂದ ಮಕಾರಕ್ಕೆ ವಕಾರ. ಅದ್ರಿ+ವತ್ ಇದರ ಮುಂದೆ ಸಂಬೋಧನಪ್ರಥಮಾ ಏಕವಚನ ಸುಪ್ರತ್ಯಯವನ್ನಿಟ್ಟರೆ **ಋಗಿದಚಾಂ ಸರ್ವನಾಮಸ್ಥಾನೇಧಾತೋಃ** (ಪಾ ಸೂ. ೬-೧-೬೦) ಎಂಬುದರಿಂದ ನುಮಾಗಮವು 'ಮಿದಚೋಂತ್ಯಾತ್ಪರಃ' ಎಂಬ ಪರಿಭಾಷಾಪ್ರಕಾರ ಅಂತ್ಯಸ್ವರದ ಮುಂದೆ ಬರುವುದು.

ಅದ್ರಿವನ್ ತ್+ಸು **ಹಲ್ಙ್ಯಾಭ್ಯೋದೀರ್ಘಾತ್ಸುತಿಸ್ಯ ಪೃಕ್ತಂಹಲ್** (ಪಾ. ಸೂ. ೬-೧-೬೮) ಎಂಬುದರಿಂದ ಸುಲೋಪ. **ಸಂಯೋಗಾಂತಸ್ಯ ಲೋಪಃ** (ಪಾ. ಸೂ. ೮-೨-೨೩) ಎಂಬುದರಿಂದ ತಲೋಪ. **ಪೂರ್ವತ್ರಾಸಿದ್ಧಮ್** (ಪಾ. ಸೂ. ೮-೧೯೭) ಎಂಬುದರಿಂದ ತಲೋಪವು ಅಸಿದ್ಧವಾಗುವುದರಿಂದ **ನಲೋಪಃಪ್ರಾತಿಪದಿಕಾಂತಸ್ಯ** (ಪಾ. ಸೂ. ೮-೨-೭) ಎಂಬುದರಿಂದ ನಲೋಪ ಬರುವುದಿಲ್ಲ. **ಮತುವಸೋರುಸಂಬುದ್ಧೌ ಛಂದಸಿ** (ಪಾ. ೮-೩-೧) ಛಂದಸ್ಸಿನಲ್ಲಿ ಮತುಪ್ ಪ್ರತ್ಯಯಾಂತ ಅಥವಾ ವಸುಪ್ರತ್ಯಯಾಂತವಾದ ಪದದ ಕೊನೆಯ ವರ್ಣಕ್ಕೆ ರು ಆದೇಶ ಬರುವುದು ಎಂಬುದರಿಂದ ನಕಾರಕ್ಕೆ ರು ಆದೇಶ ಬಂದರೆ ಅದ್ರಿವರ್ ಎಂದಾಗುವುದು. **ಖರವಸಾನಯೋರ್ವಿಸರ್ಜನೀಯಃ** (ಪಾ. ಸೂ. ೮-೩-೧೫) ಖರ್ವರ್ಣ ಪರದಲ್ಲಿರುವಾಗಲೂ ಅವಸಾನ ವಿಷಯದಲ್ಲೂ ಪದದ ಕೊನೆಯಲ್ಲಿರುವ ರೇಫಕ್ಕೆ ವಿಸರ್ಗ ಬರುವುದು ಎಂಬುದರಿಂದ ರೇಫಕ್ಕೆ ವಿಸರ್ಗ ಬಂದರೆ ಅದ್ರಿವಃ ಎಂದಾಗುವುದು. **ಆಮಂತ್ರಿತಸ್ಯ ಚ** (ಪಾ-ಸೂ. ೮-೧-೧೯) ಎಂಬುದರಿಂದ ಅನುದಾತ್ತ ಬರುವುದು. ॥೭॥

॥ ಸಂಹಿತಾಪಾಠಃ ॥

ನಹಿ ತ್ವಾ॑ रोद॑सी उ॒भे ऋ॑घा॒यमा॑णमिन्व॒तः ।
जेष्ठं॑ स्व॒र्वतीर॒पः सं गा अ॒स्मभ्यं॑ धूनुहि ॥ ೮ ॥

॥ ಪದಪಾಠಃ ॥

ನ॒हि । त्वा॒ । रोद॑सी॒ इति॑ । उ॒भे इति॑ । ऋ॒घा॒यमा॑णं । इ॒न्व॒तः ।
जेष्ठं॑ । स्व॒र्वतीः॑ । अ॒पः । सं । गाः । अ॒स्मभ्यं॑ । धू॒नु॒हि॒ ॥ ೮ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಋಘಾಯಮಾಣಂ ಶತ್ರುವಧಂಕುರ್ವಾಣಂ ತ್ವಾಂ ರೋದಸೀ ಉಭೇ ದ್ಯಾವಾಪೃಥಿವ್ಯಾವಪಿ ತ್ವದೀಯಂ ಮಹಿಮಾನಂ ನಹೀನ್ವತಃ । ವ್ಯಾಪ್ತುಂ ನ ಸಮರ್ಥೇ ಇತ್ಯರ್ಥಃ । ತಾದೃಶಸ್ತ್ವಂ ಸ್ವರ್ವತೋಃ ಸ್ವರ್ಲೋಕಯುಕ್ತಾ ಆಪೋ ವೃಷ್ಟಿರೂಪಾ ಜೇಷಃ । ಜಯೇಃ । ಪ್ರೇರಯೇತ್ಯರ್ಥಃ । ಅಪಾಂ ಸ್ವರ್ಗಸಂಬಂಧಶ್ಚಾನ್ಯತ್ರ ದಿವೋ ವೃಷ್ಟಿಂ ಚ್ಯಾವಯತಿ । ತೈ. ಸಂ. ೩-೩-೪-೧ । ಇತಿ ಶ್ರುತಂ । ಕಿಂಚ ವೃಷ್ಟಿಪ್ರದಾನಾದನ್ನಸಂಪತ್ತೇರೂರ್ಧ್ವಮಸ್ಮಭ್ಯಂ ಕ್ಷೀರಾದಿರಸಪ್ರದಾ ಗಾಃ ಸಂ ಧೂನುಹಿ । ಸಮ್ಯಕ್ ಪ್ರೇರಯ ॥ ನಹಿ । ನಞಿಃ । ಹಿಶಬ್ದೇನ ಸಹ ಸುಪಾ । ಪಾ. ೨-೧-೪ । ಇತಿ ಸಮಾಸಃ । ಸಮಾಸತ್ವಾದಂತೋದಾತ್ತತ್ವಂ । ತ್ವಾ । ಅನುದಾತ್ತಂ ಸರ್ವಮಿತ್ಯನುವೃತ್ತೌ ತ್ವಾಮೌ ದ್ವಿತೀಯಾಯಾಃ । ಪಾ. ೮-೧-೨೩ । ಇತಿ ತ್ವಾದೇಶಃ । ರೋದಸೀ । ರುದೇರಸುನ್ । ನಿತ್ತ್ವಾದಾದ್ಯುದಾತ್ತೌ । ಉಗಿತಶ್ಚ ।

सा- ४-८६ । इति ज्ञेस् । उभे । प्रातिपदिकस्वरेणान्तोदात्तः । शम्या सहैकादेश उदात्तः । ऋघायमाणम् । न्यन्तीत्यृघा । अन्येभ्योऽपि दृश्यन्त इति विच् । दृशिग्रहणस्य विध्यन्तरोपसंग्रहणार्थत्वान्न कारलोपो हकारस्य च घकारः । अनृघा ऋघा भवतीत्यभूततद्भावे लोहितादिडाज्भ्यः क्यष् । सा. ३-८-८३ । इति क्यस्यत्यये भवति । स ह्यकृतिगणः । लोपश्च हलः । सा. ३-८-८२ । इत्यनुवृत्तेर्नकारलोपश्च । वा क्यषः । सा- ८-३-९० । इत्यात्मनेपदम् । लटः शानच् । शपोऽदुपदेशात्परान्नाच्चानङोऽनुदात्तत्वम् । शपः पित्त्वादनुदात्तत्वम् । क्यषः प्रत्ययस्वरः । एकादेशस्योदात्तत्वम् । इन्वतिः । इवि व्याप्तौ । इदितो नुम् धातोरिति नुम् । शपः पित्त्वादनुदात्तत्वम् । लडादेशस्य तसश्च लसार्वधातुकस्वरेण धातुस्वर एव शिष्यते । हि चेति निषेधात्तिङ्ङिति इति निघातो न भवति । जेषः । जेः प्रार्थनायां लिङर्थे लेट् । तस्य मध्यमपुरुषैकवचनं सिप् । इतश्च लोपः परस्मैपदेष्वितीकारलोपः । कर्तरि शपि प्राप्ते तदपवादः सिब्बहुलं लेटीति सिप् । आडागमस्यानुदात्तत्वादाद्युदात्तः स्वर एव शिष्यते । स्वरासामस्तीति सर्वत्यः । न्यङ्स्वरौ स्वरितौ । फि. ४-६ । इति स्वरशब्दः स्वरितः । मतुब्वीप् पित्त्वादनुदात्तौ । संहितायां स्वरितात्संहितायामनुदात्तानाम् । सा ८-२-४४ । इत्येकश्रुतिः । स्वरित एव शिष्यते । अपः । ऊडिदमित्यादिना विभक्तेरुदात्तत्वम् । धूनुहि । धूञ् कंपने । लोट् । सेर्ह्यपिच्च । स्वादिभ्यः श्नुः । उतश्च प्रत्ययादसंयोगपूर्वात् । सा ६-४-८८ । इति प्राप्तस्य लुकश्चाभावसत्वादभावः ॥

॥ प्रतिपदार्थ ॥

ऋघायमाणम्—शत्रुवधेयन्नु माडुव । त्वा—निन्नन्नु (निन्न महिमेयन्नु)। उभे रोदसी—भूमध्यंतरिक्षगळु । नहि इन्वतिः—हॊंदलसमर्थगळागिरुववु । (अंतह नीनु) स्वर्वतीः—स्वर्गलोकदल्लिरुव । अपः—वृष्टिरूपवाद उदकवन्नु । जेषः—जयिसु (एंदरॆ मळॆयरूपदल्लि उदकवु भूमिय मेलॆ बीळुवंतॆ प्रेरिसु, । (अनंतर) अस्मभ्यं—नमगॆ । गाः—गोवुगळन्नु । सं धूनुहि—कळुहिसिकॊडु.

॥ भावार्थ ॥

ऎलॆ इंद्रनॆ, शत्रुसंहारमाडुव सामर्थ्यवुळ्ळ निन्न महिमॆयु भूमध्यंतरिक्षगळु हिडिसलारदष्टु अतिशयवागिरुवुदु (हॆच्चागिरुवुदु). ईग नीनु स्वर्गलोकदल्लिरुव उदकवन्नु वृष्टिरूपवागि भूमिय मेलॆ बीळुवंतॆ माडु मत्तु नमगॆ हालन्नु कॊडुव गोवुगळन्नु कळुहिसिकॊडु.

English Translation.

Heaven and earth are unable to hold you (your exploits) the destroyer of your enemies; command the waters of heaven (so that they may fall upon earth as rain) and send us cows.

॥ ವಿಶೇಷವಿಷಯಗಳು ॥

ರೋದಸೀ—ದ್ಯಾವಾಪೃಥಿವೀ, ಭೂಮ್ಯಂತರಿಕ್ಷಲೋಕಗಳು ಅಥವಾ ಭೂಮಿ ಮತ್ತು ಸ್ವರ್ಗಲೋಕಗಳು. ಸ್ವಧೇ ಪುರಂಧೀ ಮೊದಲಾದ ಇಪ್ಪತ್ತುನಾಲ್ಕು ದ್ಯಾವಾಪೃಥಿವೀವಾಚಕಗಳಾದ ಶಬ್ದಗಳ ಮಧ್ಯದಲ್ಲಿ ರೋದಸೀ ಎಂಬ ಶಬ್ದವು ಪಠಿತವಾಗಿದೆ. (ನಿ. ೩.೨೧)

ಋಘಾಯಮಾಣಂ—ನ್ಯಾನ್ ಹಂತೀತ್ಯೃಘಾ । ಮನುಷ್ಯರನ್ನು ಎಂದರೆ ಶತ್ರುಗಳನ್ನು ಸಂಹಾರ ಮಾಡುವ.

ತ್ವಾ—ನಿನ್ನನ್ನು ಎಂದರೆ ನಿನ್ನ ಮಹಿಮೆಯನ್ನು.

ಇನ್ವತಃ—ಇವಿ ವ್ಯಾಪ್ತೌ । ವ್ಯಾಪಿಸುವುದಕ್ಕೆ ಅಸಮರ್ಥವು ಎಂದರೆ ನಿನ್ನ ಮಹಿಮೆಯು ಅಪಾರವಾಗಿರುವುದರಿಂದ ಅವು ಬಹಳ ವಿಸ್ತಾರವಾದ ಭೂಮ್ಯಂತರಿಕ್ಷಗಳೂ ಹಿಡಿಸಲಾರದಷ್ಟು ಹೆಚ್ಚಾಗಿರುವವು ಎಂದಭಿಪ್ರಾಯವು,

ಜೇಷಃ—ಗೆಲ್ಲುವಿ, ಎಂದರೆ ಉದಕಗಳು ಅಥವಾ ವೃಷ್ಟಿಯು ಮಳೆ ಹುಯ್ಯುವಂತೆ ಮಾಡುವ ಸಾಮರ್ಥ್ಯವು, ನಿನ್ನ ಅಧೀನದಲ್ಲಿರುವ, ಎಂದರ್ಥವು.

ಸ್ವರ್ವತೀಃ—ಸ್ವರ್ಗಲೋಕದಲ್ಲಿರುವ. ಮಳೆಯು ಹುಯ್ಯುವಾಗ ಅಂತರಿಕ್ಷದಿಂದ (ಆಕಾಶದಿಂದ) ಬೀಳುವುದರಿಂದಲೂ, ಸ್ವರ್ಗಲೋಕವು ಅಂತರಿಕ್ಷಲೋಕದ ಮೇಲುಭಾಗದಲ್ಲಿರುವುದೆಂದು ಪ್ರತೀತಿ ಇರುವುದರಿಂದಲೂ ವೃಷ್ಟಿರೂಪವಾದ ಉದಕವು ಸ್ವರ್ಗದಲ್ಲಿರುವ ನೀರೆಂದು ಹೇಳುವುದು ರೂಢಿಯಾಗಿರುವುದು. ಈ ವಿಷಯದಲ್ಲಿ—

> ಏತದ್ವಾ ಅಪಾಂ ನಾಮಧೇಯಂ ಗುಹ್ಯಂ ಯದಾಧಾನಾ ಮಾಂದಾಸು ತೇ ಶುಕ್ರೇ ಶುಕ್ರಮಾ ಧೂನೋಮೀತ್ಯಾಹಾಪಾಮೇವ ನಾಮಧೇಯೇನ ಗುಹ್ಯೇನ ದಿವೋ ವೃಷ್ಟಿಮವ ರುಂಧೇ ಶುಕ್ರಂ ತೇ ಶುಕ್ರೇಣ ಗೃಹ್ಣಾಮೀತ್ಯಾಹೈತದ್ವಾ ಅಹ್ನೋ ರೂಪಂ ಯದ್ಯಾತ್ಸ್ರಸ್ಯೇರ್ಯಸ್ಯ ರಶ್ಮಯೋ ವೃಷ್ಟ್ಯಾ ಏ ಈಶತೇಽಹ್ನ ಏವ ರೂಪೇಣ ಸೂರ್ಯಸ್ಯ ರಶ್ಮಿಭಿರ್ದಿವೋ ವೃಷ್ಟಿಂ ಚ್ಯಾವಯತ್ಯಾಸ್ಮಿನ್ನುಗ್ರಾ ಅಚುಚ್ಯವುರಿತ್ಯಾಹ ಯಥಾಯಜುರೇವೈತತ್ ॥

ಎಂದು ಶೈತ್ತಿರೀಯ ಸಂಹಿತೆಯಲ್ಲಿ ಹೇಳಿರುವುದು.

ಧೂನುಹಿ—ಧೂಞ್ ಕಂಪನೇ । ಈ ಧಾತುವಿಗೆ ಕಂಪಿಸು, ಚಲಿಸು ಎಂದರ್ಥವಿದ್ದರೂ, ಪ್ರೇರಿಸು, ತಳುಹಿಸು, ಕೊಡು ಎಂಬ ಅರ್ಥವನ್ನು ಭಾಷ್ಯಕಾರರೂ ಇತರರೂ ಅನುಮೋದಿಸುವರು.

॥ ವ್ಯಾಕರಣಪ್ರಕ್ರಿಯಾ ॥

ನಹಿ-ಸಹಸುಪಾ (ಪಾ. ಸೂ. ೨-೧-೪) ಸುಬಂತವು ಸಮರ್ಥವಾದ ಸುಬಂತದೊಂದಿಗೆ ಸಮಾಸ ವನ್ನು ಹೊಂದುವುದು ಎಂಬುದರಿಂದ ನಞ್‌ಗೆ ಹಿ ಶಬ್ದದೊಂದಿಗೆ ಸಮಾಸ ಬರುವುದು. ಸಮಾಸವಾದ್ದರಿಂದ **ಸಮಾಸಸ್ಯ** (ಪಾ. ಸೂ. ೬-೧-೨೨೩) ಎಂಬುದರಿಂದ ಅಂತೋದಾತ್ತಸ್ವರ ಬರುವುದು.

ತ್ವಾ—ಯುಷ್ಮದ್ ಶಬ್ದದ ಮುಂದೆ ದ್ವಿತೀಯಾ ಏಕವಚನ ಅಮ್ ಪ್ರತ್ಯಯ. ಆ ಅಮ್‌ಗೆ **ಙೇಪ್ರಥಮಯೋರಮ್** (ಪಾ. ಸೂ. ೭-೧-೨೮) ಯುಷ್ಮದ್+ಅಸ್ಮದ್ ಶಬ್ದಗಳ ಮುಂದೆ ಇರುವ ಙೇ ಎಂಬು ದಕ್ಕೂ ಪ್ರಥಮಾದ್ವಿತೀಯಾ ವಿಭಕ್ತಿಗಳಿಗೂ ಅಮ್ ಆದೇಶ ಬರುವುದು. ಇಲ್ಲಿ ಅಮ್‌ಗೆ ಅಮ್ ಆದೇಶವನ್ನು ವಿಧಿಸದೇ ಇದ್ದರೆ ಅಮ್ ಎಂಬುದು ಆದೇಶವನ್ನು ಹೊಂದದೇ ಇರುವ ವಿಭಕ್ತಿಯಾಗುವುದು. ಆದ್ದರಿಂದ **ಯೋಽಚಿ** (ಪಾ. ಸೂ. ೬-೪-೧೮) ಅತ್ವಯತ್ವಗಳಿಗೆ ನಿಮಿತ್ತನಾಗದೇ ಇರುವ ಅಜಾದಿ ವಿಭಕ್ತಿಯು ಪರದಲ್ಲಿ ದ್ದರೆ ಯುಷ್ಮದ್-ಅಸ್ಮದ್ ಶಬ್ದಗಳಿಗೆ ಯಾದೇಶ ಬರುವುದು ಎಂಬುದರಿಂದ ಯಾದೇಶ ಬರಬೇಕಾಗಿ ಬರುವುದು. ಆದೇಶವನ್ನು ವಿಧಿಸಿದರೆ ವಿಭಕ್ತಿಯು ಆದೇಶವನ್ನು ಹೊಂದುವುದರಿಂದ 'ಯೋಚಿ' ಎಂಬುದು ಬರುವುದಿಲ್ಲ. ಯುಷ್ಮದ್+ಅಮ್ ಎಂದಿರುವಾಗ **ತ್ವಮಾವೇಕವಚನೇ** (ಪಾ. ಸೂ. ೭-೨-೯೭) ಏಕತ್ವ ವಿಶಿಷ್ಟಾರ್ಥ ಪ್ರತಿ ಪಾದಕಗಳಾದ ಯುಷ್ಮದ್, ಅಸ್ಮದ್ ಶಬ್ದಗಳ ಮಪರ್ಯಂತಕ್ಕೆ ತ್ವತು ಆದೇಶಗಳು ಬರುವುವು ಎಂಬುದರಿಂದ ಮಪರ್ಯಂತಕ್ಕೆ ತ್ವ ಆದೇಶ ಬಂದರೆ ತ್ವ+ಅದ್+ಅಮ್ ದ್ವಿತೀಯೈಯೋರಂಚೆ (ಪಾ. ಸೂ. ೭-೨-೮೭) ದ್ವಿತೀಯಾ ವಿಭಕ್ತಿ ಪರದಲ್ಲಿರುವಾಗ ಯುಷ್ಮದ್, ಅಸ್ಮದ್, ಶಬ್ದಗಳಿಗೆ ಅಕಾರ ಬರುವುದು. ತ್ವ+ಅ+ಅ+ಅಮ್ **ಅತೋ-ಗುಣೇ** (ಪಾ. ಸೂ. ೬-೧-೯೭) ಎಂಬುದರಿಂದ ಪರರೂಪ, **ಅಕಃಸವರ್ಣೇದೀರ್ಘಃ** (ಪಾ. ಸೂ. ೬-೧-೧೦೧) ಸವರ್ಣದೀರ್ಘ, ತ್ವಾ+ಅಮ್ **ಅಮಿಪೂರ್ವಃ** (ಪಾ. ಸೂ. ೬-೧-೧೦೭) ಎಂಬುದರಿಂದ ಪೂರ್ವರೂಪ. ತ್ವಾಮ್ ಎಂದಾಗುವುದು. ಈಗ **ತ್ವಾಮೌದ್ವಿತೀಯೋಃ** (ಪಾ. ಸೂ. ೮-೧-೨೩) ಪದಸ್ಯ+ಪದಾತ್, **ಅನುದಾತ್ತಂಸರ್ವ-ಮಪಾದಾದೌ** (೮-೧-೧೮) ಇವುಗಳು ಅಧಿಕೃತಗಳಾಗುವವು. ಪದದ ಮುಂದೆ ಇರತಕ್ಕವೂ ಪಾದದ ಆದಿಯಲ್ಲಿಲ್ಲದ ವುಗಳೂ ಆದ ದ್ವಿತೀಯಾ ಏಕವಚನಾಂತಗಳಾದ ಯುಷ್ಮದಸ್ಮದ್ಭ್ಯಬ್ದಗಳಿಗೆ ಕ್ರಮವಾಗಿ ತ್ವಾ ವಾ ಎಂಬ ಆದೇಶಗಳು ಬರುವುವು. ಅವು ಅನುದಾತ್ತಗಳೂ ಆಗುವುವು ಎಂಬುದರಿಂದ ತ್ವಾಮ್ ಎಂಬುದಕ್ಕೆ ಅನುದಾತ್ತ ವಾದ ತ್ವಾ ಆದೇಶ ಬರುವುದು.

ರೋದಸೀ—ರುದ್ ಧಾತುವಿನ ಮುಂದೆ **ಸರ್ವಧಾತುಭ್ಯೋಽಸುನ್** (ಉ. ಸೂ. ೪-೬೮೪) ಎಂಬುದರಿಂದ ಅಸುನ್ ಪ್ರತ್ಯಯ, ಲಘೂಪಧ ಗುಣ, ಪ್ರತ್ಯಯವು ನಿತ್ತಾದ್ದರಿಂದ ರೋದಸ್ ಎಂಬುದು ಆದ್ಯು ದಾತ್ತ. ಅಸುನ್ ಪ್ರತ್ಯಯದ ಉಕಾರಕ್ಕೆ ಇತ್ಸಂಜ್ಞೆ ಬಂದಿರುವುದರಿಂದ ಅದು ಇದಿತ್ತು, ರೋದಸ್ ಎಂಬುದು ಉಗಿದಂತ. ಆದ್ದರಿಂದ **ಉಗಿತಶ್ಚ** (ಪಾ. ಸೂ. ೪-೧-೬) ಸ್ತ್ರೀತ್ವ ತೋರುವಾಗ ಉಗಿದಂತವಾದ ಪ್ರಾತಿಪದಿಕದ ಮುಂದೆ ಙೀಪ್ ಬರುವುದು ಎಂದು ಙೀಪ್ ಬರುತ್ತೆ. ಙೀಪ್ನು ಪಿತ್ತಾದ್ದರಿಂದ ಅನುದಾತ್ತ.

ಉಭೇ—ಉಭ ಎಂಬುದು ಪ್ರಾತಿಪದಿಕ ಸ್ವರದಿಂದ ಅಂತೋದಾತ್ತ. **ಅಜಾದ್ಯತಷ್ಟಾಪ್** (ಪಾ. ಸೂ. ೪-೧-೪) ಎಂಬುದರಿಂದ ಟಾಪ್ ಬರುವುದು. ಅದು ಪಿತ್ತಾದ್ದರಿಂದ ಅನುದಾತ್ತ. ಉಭ+ಆ ಎರಡಕ್ಕೂ ಸವ ರ್ಣದೀರ್ಘ. ಏಕಾದೇಶ ಉದಾತ್ತೇನೋದಾತ್ತಃ ಎಂಬುದರಿಂದ ಉದಾತ್ತ. ಉಭಾ ಶಬ್ದದ ಮುಂದೆ ಪ್ರ. ದ್ವಿ. ಔ ಪ್ರತ್ಯಯವನ್ನು ಹಚ್ಚಿದರೆ **ಔಙ ಆಪಃ** (ಪಾ. ಸೂ. ೭-೧-೧೮) ಅಬಂತವಾದ ಅಂಗದ ಮುಂದೆ ಇರುವ ಔಕಾರ ರೂಪ ವಿಭಕ್ತಿಗೆ (ಔ, ಔಟ್) ಶೀ ಆದೇಶ ಬರುವುದು ಎಂಬುದರಿಂದ ಶೀ ಆದೇಶ ಬಂದರೆ ಶಕಾರಕ್ಕೆ

ಇತ್ಸಂಜ್ಞೆ ಲೋಪ ಬಂದು ಈ ನಿಲ್ಲುವುದು. ಉಭಾ+ಈ. ಈ ಎಂಬುದು ಸುಪ್ಪಾದ್ದರಿಂದ ಅನುದಾತ್ತ. ಅಡ್ಗುಣಃ (ಪಾ.ಸೂ.೬-೧-೮೭) ಎಂಬುದರಿಂದ ಅ+ಈಗಳ ಸ್ಥಾನದಲ್ಲಿ ಏಕಾರರೂಪವಾದ ಗುಣವು ಏಕಾದೇಶವಾಗಿ ಬರುವುದು. ಈ ಏಕಾದೇಶವೂ ' ಏಕಾದೇಶ ಉದಾತ್ತೇನೋದಾತ್ತಃ ' ಎಂಬುದರಿಂದ ಉದಾತ್ತ.

ಋಭಾಯಮಾಣಮ್— ನೃ೯ ಹಸ್ತಿ ಎಂದು ವಿಗ್ರಹ ಮಾಡಿದರೆ ಪ್ರಥಮೈಕವಚನದಲ್ಲಿ ಋಭಾ ಎಂದಾಗುವುದು. ನೃನ್ ಎಂಬುದು ಉಪಪದವಾಗಿರುವಾಗ ಹನ್ ಧಾತುವಿನ ಮುಂದೆ **ಅನ್ಯೇಭ್ಯೋಪಿದೃಶ್ಯಂತೇ** (ಪಾ. ಸೂ. ೩-೨-೭೫) ಎಂಬುದರಿಂದ ವಿಚ್ ಪ್ರತ್ಯಯ ಬರುವುದು. ನೃ+ಶಸ್-ಹನ್-ವಿಚ್. ವಿಚ್ ನ ವರ್ಣಗಳೆಲ್ಲ ಲೋಪ ಕೃದಂತವಾದ್ದರಿಂದ ಪ್ರಾತಿಪದಿಕ ಸಂಜ್ಞೆ ಬಂದು **ಸುಪೋಧಾತುಸ್ಪ್ರಾತಿಪದಿಕಯೋಃ** (ಪಾ.ಸೂ.೭-೪-೭೧) ಎಂಬುದರಿಂದ ಶಸ್‌ಗೆ ಲೋಪ, 'ಅನ್ಯೇಭ್ಯೋಽಪಿದೃಶ್ಯಂತೇ' ಎಂಬ ಸೂತ್ರದಲ್ಲಿ ದೃಶ್ಯಂತೇ ಎಂಬುದು ವಿಧ್ಯಂತರೋಪಸಂಗ್ರಹಕ್ಕಾಗಿ (ಬೇರೆ ಶಾಸ್ತ್ರಸಂಗ್ರಹಕ್ಕಾಗಿ) ಇರುವುದು. ಆದ್ದರಿಂದ ನೃನ ನಕಾರಕ್ಕೆ ಲೋಪವೂ, ಹನ್ ಧಾತುವಿನ ಹಕಾರಕ್ಕೆ ಭಕಾರವೂ ಬರುವುದು ಋಭ್ ಎಂದಾಗುವುದು. ಅನೃಭಾ ಋಭಾ ಭವತಿ ಎಂದು ಅಭೂತ ತದ್ಭಾವವನ್ನು ವಿವಕ್ಷಿಸಿದರೆ **ಲೋಹಿತಾದಿಡಾಚ್ಭ್ಯಃಕ್ಯಷ್** (ಪಾ. ಸೂ. ೩-೧-೧೩) ಲೋಹಿತಾದಿ ಶಬ್ದಗಳ ಮುಂದೆಯೂ ಡಾಚ್ ಪ್ರತ್ಯಯಾಂತ ಶಬ್ದಗಳ ಮುಂದೆಯೂ ಭವತಿ - ಎಂಬ ಅರ್ಥದಲ್ಲಿ ಕ್ಯಷ್ ಪ್ರತ್ಯಯ ಬರುವುದು ಎಂಬುದರಿಂದ ಲೋಹಿತಾದಿಯು ಆಕೃತಿಗಣವಾದಕಾರಣ ಋಭುನ್ ಎಂಬುದರ ಮುಂದೆ ಕ್ಯಷ್ ಪ್ರತ್ಯಯ ಬರುವುದು. ಕ್ಯಷ್‌ನಲ್ಲಿ ಕಕಾರಷಕಾರಗಳು ಇತ್ಸಂಜ್ಞೆಯಿಂದ ನಿವೃತ್ತಿಗಳಾಗುವುವು. ಋಭುನ್+ಯ ' ಭೃಶಾದಿಭ್ಯೋ ಭುವ್ಯಚ್ವೇರ್ಲೋಪಶ್ಚ ಹಲಃ (ಪಾ ಸೂ. ೩ ೧-೧೨) ಎಂಬ ಸೂತ್ರದಿಂದ ' ಲೋಪಶ್ಚ ಹಲಃ ' ಎಂಬುದು ' ಲೋಹಿತಾದಿ ' ಎಂಬಲ್ಲಿ ಅನುವೃತ್ತವಾಗುವುದು- ಆದ್ದರಿಂದ ಕ್ಯಷ್ ಬರುವುದಲ್ಲದೆ ಹಲ್ ವರ್ಣಗಳು ಪೂರ್ವದಲ್ಲಿದ್ದವೆ ಆದಕ್ಕೆ ಲೋಪವೂ ಬರುವುದು ಎಂದು ಅರ್ಥವು ಏರ್ಪಡುವುದು. ಆದ್ದರಿಂದ ನಕಾರಕ್ಕೆ ಲೋಪ ' **ಆಕೃತ್ಸಾರ್ವಧಾತುಕಯೋಃ** (ಪಾ. ಸೂ. ೭-೪-೫೫) ಕೃತ್ತು ಸಾರ್ವಧಾತುಕ ಇವುಗಳನ್ನು ಳೆದು ಕೆತ್ತು ಜೂತ್ತು ಆದ ಯಾದಿಪ್ರತ್ಯಯ ಪರದಲ್ಲಿರುವಾಗ ಅಜಂತವಾದ ಅಂಗಕ್ಕೆ ದೀರ್ಘ ಬರುವುದು ಎಂಬುದರಿಂದ ದೀರ್ಘಬಂದರೆ ಋಭಾಯ ಇದರ ಮುಂದೆ ಲಟ್. ಲಟ್ಟಿಗೆ **ವಾಕ್ಯಷಃ** (ಪಾ. ಸು. ೧-೩.೯೦) ಕ್ಯಷಂತದ ಮುಂದೆ ಪರಸ್ಮೈಪದವು ವಿಕಲ್ಪವಾಗಿ ಬರುವುದು ಎಂಬುದರಿಂದ ಆತ್ಮನೇಪದ ಸಂಜ್ಞಕವಾದ ಶಾನಚ್ ಪ್ರತ್ಯಯವು **ಲಟಶ್ಶತೃಶಾನಚಾ** ಎಂಬುದರಿಂದ ಬರುವುದು. ವಿಕರಣ ಶಪ್ ಬರುವುದು ಋಭಾಯ+ಅ+ಅನ, ಶಪ್ಪು ಪಿತ್ತಾದ್ದರಿಂದ ಅನುದಾತ್ತ. ಶಪ್ಪು ಅದುತವಾದ ಉಪದೇಶವಾದ್ದರಿಂದ ಇದರ ಮುಂದೆ ಇರುವ ಲಸ್ಯಾನಿಕಸಾರ್ವಧಾತುವಾದ ಶಾನಚ್ಚು **ಸಾಸ್ಯನುದಾತ್ತೇನ್ಙಿದುದಪದೇಶಾತ್** (ಪಾ.ಸೂ.೬-೧-೧೮೬) ಎಂಬುದರಿಂದ ಅನುದಾತ್ತ. ಕ್ಯಷ್‌ಗೆ ಪ್ರತ್ಯಯಸ್ವರ ಉದಾತ್ತ ಬರುವುದು. **ಅತೋಗುಣೇ** (ಪಾ. ಸೂ. ೬-೧-೯೭) ಎಂಬುದರಿಂದ ಹ್ರಸ್ವಾಕಾರಗಳೆಗಡಕ್ಕೂ ಪರರೂಪ ಬಂದರೆ ಋಭಾಯ+ಅನ. ಏಕಾದೇಶದಿಂದ ಬಂದ ಆಕಾರವು ಏಕಾದೇಶ ಉದಾತ್ತೇನೋದಾತ್ತಃ, ಎಂಬುದರಿಂದ ಉದಾತ್ತ. **ಆನೇಮುಕ್** (ಪಾ. ಸೂ. ೭-೩-೮೨) ಎಂಬುದರಿಂದ ಮುಗಾಗಮ-ಋಭಾಯಮಾನ ನಕಾರಕ್ಕೆ ಣಕಾರ. ಋಭಾಯಮಾಣ ಎಂದಾಗುವುದು. ಈ ಪ್ರಕ್ರಿಯೆಯು ವೃತ್ತಿಕಾರಮತವನ್ನು ಅನುಸರಿಸಿ ಬಂದಿರುವುದು. ವಸ್ತುತಃ ಇಲ್ಲಿ ಕ್ಯಷ್ ಪ್ರತ್ಯಯವು ಬರುವುದಿಲ್ಲ. ಲೋಹಿತಾದಿಗಣದಲ್ಲಿ ಅಜಂತಶಬ್ದಗಳೇ ಪಠಿತವಾಗಿರುವುವು. ಆದ್ದರಿಂದ ಆಕೃತಿಗಣವಾದರೂ ಅಜಂತದ ಮುಂದೆ ಕ್ಯಷ್ ಬರುವುದೇ ವಿನ ಹಲಂತದ ಮುಂದೆ ಕ್ಯಷ್ ಬರುವುದಿಲ್ಲ. ಆದುದರಿಂದಲೇ ಮಹಾಭಾಷ್ಯದಲ್ಲಿ ಪತಂಜಲಿಮಹರ್ಷಿಗಳು ಲೋಹಿತಾ ಎಂಬ ಸೂತ್ರದಲ್ಲಿ ' ನಾಯಂ

ಹಲಂತಾದ್ವಿಧೀಯತೇ ' ಕ್ಯಷ್ ಪ್ರತ್ಯಯವು ಹಲಂತ ಶಬ್ದಗಳ ಮುಂದೆ ವಿಧಿಸಲ್ಪಡುವುದಿಲ್ಲ. ಎಂದು ಕಂಠೋಕ್ತವಾಗಿ ಹೇಳಿರುವರು. ಅಪಠಿತಸಂಗ್ರಹಾರ್ಥೋಽಪ್ಯಾದಿಶಬ್ದೋ ನ ಭವತಿ, ತಸ್ಯವಾರ್ತಿಕಕಾರೀಣ ದೂಷಿತತ್ವಾತ್ ಎಂಬ ಕೈಯಟಕ್ಕೆ ವಾಖ್ಯಾನ ಮಾಡುವ ಪ್ರಸಂಗದಲ್ಲಿ ಅಪಠಿತೇತಿ ಎಂಬ ಪ್ರತೀಕ ದಲ್ಲಿ ಉದ್ಯೋತಕಾರರು, ತೇನ ಚರ್ಮಾಯತಿ, ಚರ್ಮ್ಮಾಯತೇ ಇತ್ಯಾದಿ ವೃತ್ಯಾದ್ಯುಕ್ತಮಸಂಗತಮ್ ' ನಾಯಂ ಹಲಂತಾದ್ವಿಧೀಯತೇ ಇತಿ ಭಾಷ್ಯೋಕ್ತೇರಿತಿ ಬೋಧ್ಯಮ್ ಎಂದು ಹೇಳಿರುವರು. ವಾರ್ತಿಕಕಾರರು ಲೋಹಿತಡಾಚ್ಚ್ಯಃ ಕ್ವಸ್ವಜನಂ ಎಂದು ವಾರ್ತಿಕವಾಠವನ್ನೂ ಆದಿಗ್ರಹಣವನ್ನೇ ಪ್ರತ್ಯಾಖ್ಯಾನ ಮಾಡಿ ರುವರು. ಕೌಮುದೀಕಾರರೂ ಅತ್ರಾ ಜ್ವೇರಿತ್ಯನುವೃತ್ತ್ಯಾಭೂತತದ್ಭಾವವಿಷಯುಕ್ವಂ ಲಭ್ಧಂ, ತಚ್ಚ ಲೋಹಿತ ಶಬ್ದಸ್ಯೈವವಿಶೇಷಣಂ, ನತು ಡಾಚೋಽಸಂಭವಾತ್, ನಾಪ್ಯಾದಿಗ್ರಾಹ್ಯಾಣಾಂ, ತಸ್ಯಪ್ರತ್ಯಾಖ್ಯಾನಾತ್- ತಥಾಚ ವಾರ್ತಿಕಂ, ಲೋಹಿತಡಾಚ್ಚ್ಯಃ ಕ್ವಸ್ವಜನಂ, ಭೃಶಾದಿಷ್ವಿತರಾಣೀತಿ ಎಂದು ಆದಿ ಗ್ರಹಣಕ್ಕೆ ಪ್ರತ್ಯಾಖ್ಯಾನವನ್ನು ವಿವರಿಸಿರುವರು. ಆದುದರಿಂದ ' ಋಫೆನ್ ' ಎಂಬ ನಾಂತವಾದ ಶಬ್ದದ ಮುಂದೆ ಕ್ಯಷ್ ವರ್ಣನೆಯು ಭಾಷ್ಯ ಸಮ್ಮತವಲ್ಲವೆಂದು ತೋರುವುದು. ' ನಾಯಂನಾಂತಾದ್ವಿಧೀಯತೇ ' ಎಂದು ಮಹಾಭಾಷ್ಯದಲ್ಲಿ ನಾಂತಶಬ್ದದ ವಿಷಯದಲ್ಲಿ ಪ್ರತ್ಯೇಕ ನಿಷೇಧವೂ ಇರುವುದು. ಆದುದರಿಂದ ಇಲ್ಲಿ ಹೀಗೆ ಪ್ರಕ್ರಿಯೆಯು ಯುಕ್ತವು. ಋಫೇವ ಆಚರತಿ ಎಂದು ವಿಗ್ರಹವನ್ನು ಮಾಡಿ ಕರ್ತುಃಕ್ಯಜ್‌ಲೋಪೇಶ್ಚ (ಪಾ. ಸೂ. ೩-೧-೧೧) ಉಪಮಾನವಾಚಕವೂ ಕರ್ಮವಾಚಕವೂ ಆದ ಸುಬಂತದ ಮುಂದೆ ವಿಕಲ್ಪದಿಂದ ಕ್ಯಜ್ ಪ್ರತ್ಯಯ ಬರುವುದು ಎಂದು ಇದರ ಅರ್ಥ. ಇದರಿಂದ ಕ್ಯಜ್ ಪ್ರತ್ಯಯ ಬಂದರೆ ಋಫೆನ್+ಸು+ಯ. ಕ್ಯಜ್ ಸನಾದಿಯಲ್ಲಿರುವುದರಿಂದ ಸನಾದ್ಯಂತಾಧಾತವಃ (ಪಾ. ಸೂ. ೩-೧-೩೨) ಎಂಬುದರಿಂದ ಧಾತು ಸಂಜ್ಞೆ ಬಂದು ' ಸುಪೋಧಾತು ಪ್ರಾತಿಪದಿಕಯೋಃ ' ಎಂಬುದರಿಂದ ಧಾತ್ವವಯವವಾದ ಸುಗೆ ಲೋಪ ಋಫೆನ್+ಯ ನಃಕ್ಯೇ (ಪಾ ಸೂ. ೧-೪-೧೫) ಕ್ಯಚ್ ಕ್ಯಜ್ ಪರದಲ್ಲಿರುವಾಗ ನಾಂತವೇ ಪದವಾಗುವುದು, ಬಾಕಿಯವು ಪದವಾಗುವುದಿಲ್ಲ ಎಂಬುದರಿಂದ ನಾಂತಕ್ಕೆ ಪದಸಂಜ್ಞೆ ಇರುವುದರಿಂದ ನ ಲೋಪಃ ಪ್ರಾತಿಪದಿಕಾಂತಸ್ಯ (ಪಾ. ಸೂ. ೮-೨-೭) ಎಂಬುದರಿಂದ ನಲೋಪ. ನಲೋಪಃ ಸುಪ್ಸ್ವರಸಂಜ್ಞಾತುಗ್ವಿಧಿಷುಕೃತಿ (ಪಾ. ಸೂ. ೮-೨-೨) ಸುಬ್ವಿಧಿಯಲ್ಲಿಯೂ, ಸ್ವರ ವಿಧಿಯ ಲ್ಲಿಯೂ ಸಂಜ್ಞಾ ವಿಧಿಯಲ್ಲಿಯೂ, ಕೃತಿತುಗ್ವಿಧಿಯಲ್ಲಿಯೂ, ನಲೋಪವು ಅಸಿದ್ಧವಾಗುವುದು. ಮಿಕ್ಯ ಕಾರ್ಯಗ ಳನ್ನು ಮಾಡುವಾಗ ನಲೋಪವು ಅಸಿದ್ಧವಾಗುವುದಿಲ್ಲ ಎಂದು ಹೇಳಿರುವುದರಿಂದ ದೀರ್ಘವನ್ನು ಮಾಡುವಾಗ ' ಪೂರ್ವತ್ರಾಸಿದ್ಧಮ್ ' (ಪಾ. ಸೂ. ೮-೨-೧) ಎಂಬುದರಿಂದ ನಕಾರ ಲೋಪವು ಅಸಿದ್ಧವಾಗುವುದಿಲ್ಲ. ಆದ್ದ ರಿಂದ ಅಕೃತ್ಸಾರ್ವಧಾತುಕಯೋಃ (ಪಾ. ಸೂ. ೭-೪-೨) ಎಂಬುದರಿಂದ ದೀರ್ಘ ಬರುವುದು. ಋಫಾಯ್, ಇದರ ಮುಂದೆ ಲಟ್ ಕ್ಯಜ್ಜು ಜುತ್ತಾದ್ದರಿಂದ ಅನುದಾತ್ತೇಙಿತ ಆತ್ಮನೇಪದಮ್ (ಪಾ. ಸೂ. ೧-೩-೧) ಎಂಬು ದರಿಂದ ಲಟ್ಟಿನ ಸ್ಥಾನದಲ್ಲಿ ಆತ್ಮನೇ ಪದ ಬರುವುದು. ಮಿಕ್ಯ ಪ್ರಕ್ರಿಯೆ ಪೂರ್ವದಂತೆ.

ಇನ್ವತಃ—ಇವಿವ್ಯಾಪ್ತೌ, ಧಾತು. ಇದಿತೋನುಮ್ ಧಾತೋಃ (ಪಾ. ಸೂ. ೭-೧-೮೮)ಎಂಬುದರಿಂದ ನುಮಾಗಮ ಬರುವುದು. ಇದರ ಮುಂದೆ ಲಟ್. ಅದಕ್ಕೆ ಪ್ರಥಮಪುರುಷ ದ್ವಿವಚನ ಸಂಜ್ಞಕವಾದ ತಸ್. ಶಪ್ ವಿಕರಣ ಇನ್ವತಸ್. ರುತ್ವ ವಿಸರ್ಗಗಳು ಬಂದರೆ ಇನ್ವತಃ ಎಂದಾಗುವುದು. ಶಪ್ಪು ಪಿತ್ ಆದ್ದರಿಂದ ಅನು ದಾತ್ತ. ತಾಸ್ಯನುದಾತ್ತೇಙ್ (ಪಾ. ಸೂ. ೬-೧-೧೮೬) ಎಂಬುದರಿಂದ ಅದಂತೋಪದೇಶದ ಮುಂದೆ ಇರುವ ಲಸ್ಥಾನಿಕ ಸಾರ್ವಧಾತುಕವು ಅನುದಾತ್ತ. ಧಾತುವಿನ ಸ್ವರವೇ ನಿಲ್ಲುವುದು. ಹಿಚಿ (ಪಾ. ಸೂ. ೮-೧-೩೪) ಅಂಗಾಪ್ರಾತಿಲೋನ್ಯೇ (ಪಾ. ಸೂ. ೮-೧-೩೫) ಎಂಬುದರಿಂದ ಅಪ್ರಾತಿಲೋನ್ಯೇ ಎಂಬುದು ಅನುವೃತ್ತವಾ

ಗುವುದು. ಅಪ್ರಾತಿಲೋಮ್ಯ ಎಂದರೆ ಅನುಕೂಲ್ಯ ಎಂದರ್ಥ. ಅನುಕೂಲ್ಯ ತೋರುವಾಗ ಹಿ ಎಂಬ ಶಬ್ದದಿಂದ ಕೂಡಿದ ತಿಙಂತವು ಅನುದಾತ್ತವಾಗುವುದಿಲ್ಲ ಎಂಬುದರಿಂದ ನಿಷೇಧ ಬರುವುದರಿಂದ **ತಿಙ್ಯತಿಙಃ** (ಪಾ.ಸೂ. ೮-೧-೨೮) ಎಂಬದರಿಂದ ಅನುದಾತ್ತ ಬರುವುದಿಲ್ಲ.

ಜೇಷಃ—ಜಿ ಜಯೇ ಧಾತು. ಇದರ ಮುಂದೆ ಪ್ರಾರ್ಥನಾರೂಪವಾದ **ಲಿಙರ್ಥ**ದಲ್ಲಿ ಲೇಟ್—ಅದಕ್ಕೆ ಮಧ್ಯಮಪುರುಷ ಏಕವಚನ ಸಂಜ್ಞಕವಾದ ಸಿಪ್ ಪಕಾರಕ್ಕೆ **ಹಲಂತ್ಯಮ್** (ಪಾ. ಸೂ. ೧-೩-೩) ಎಂಬುದರಿಂದ ಇತ್ಸಂಜ್ಞೆ. ಇಕಾರಕ್ಕೆ **ಇತಶ್ಚ ಲೋಪಃ ಪರಸ್ಮೈಪದೇಷು** (ಪಾ. ಸೂ. ೩-೪-೯೭) ಎಂಬುದರಿಂದ ಲೋಪ. **ಕರ್ತರಿಶಪ್** ಎಂಬುದರಿಂದ ಶಪ್ ವಿಕರಣ ಪ್ರಾಪ್ತವಾದರೆ ಅದನ್ನು ಬಾಧಿಸಿ **ಸಿಬ್ಬಹುಲಂ ಲೇಟಿ** (ಪಾ ಸೂ. ೩-೧-೩೪) ಎಂಬುದರಿಂದ ಸಿಪ್ ಬರುವುದು. **ಜಿ+ಸ್+ಸ್ ಲೇಟೋಡಾಟೌ** (ಪಾ ಸೂ. ೪-೪-೯೪) ಎಂಬುದರಿಂದ ಸಿಪ್ಪಿಗೆ ಆಡಾಗಮ. ಜಿ ಎಂಬುದಕ್ಕೆ **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಗುಣ. ಜೇಸಸ್ ಪ್ರಥಮ ಸಕಾರಕ್ಕೆ **ಆದೇಶ ಪ್ರತ್ಯಯಯೋಃ** (ಪಾ.ಸೂ. ೮-೩-೫೯) ಎಂಬುದರಿಂದ ಷತ್ವ ರುತ್ವ ವಿಸರ್ಗಗಳು ಬಂದರೆ ಜೇಷಃ ಎಂದಾಗುವುದು. ಆಗಮವು ಅನುದಾತ್ತವಾದ್ದರಿಂದ ಧಾತುಸ್ವರ ಮಾತ್ರ ನಿಲ್ಲುವುದು.

ಸ್ವರ್ವತೀಃ—ಸ್ವಃ ಅಸ್ಯಾಮಸ್ತಿ ಎಂದು ವಿಗ್ರಹವಾಡಿದರೆ ಸ್ವರ್ ಶಬ್ದದ ಮುಂದೆ **ತದಸ್ಯಾಸ್ತ್ಯಸ್ಮಿನ್ನಿತಿಮತುಪ್** (ಪಾ. ಸೂ. ೫-೨-೯೪) ಎಂಬುದರಿಂದ ಮತುಪ್. ಮತುಪ್ಪಿನ ಮಕಾರಕ್ಕೆ ಸ್ವರ್ ಶಬ್ದವು ದೀರ್ಘಾಂತವಾದ್ದರಿಂದ **ಛಂದಸೀರಃ** (ಪಾ. ಸೂ. ೮-೨-೧೫) ಎಂಬುದರಿಂದಲೋ ಸ್ವರ್ ಶಬ್ದವು ಅದುಪಧವಾದ್ದರಿಂದ **ಮಾದುಪಧಾಯಾಶ್ಚ ಮತೋರ್ವೋ ಯವಾದಿಭ್ಯಃ** (ಪಾ. ಸೂ. ೮-೨-೯) ಎಂಬುದರಿಂದಲೋ ವಕಾರ ಸ್ವರ್ವತ್ ಎಂದಾಗುವುದು. **ಉಗಿತಶ್ಚ** (ಪಾ. ಸೂ. ೪-೧-೬) ಎಂಬುದರಿಂದ ಙೀಪ್ ಬಂದರೆ ಸ್ವರ್ವತೀ ಎಂದಾಗುವುದು. ಮತುಪ್, ಙೀಪ್ ಎರಡೂ ಪಿತ್ತಾದ್ದರಿಂದ ಅನುದಾತ್ತ. **ನ್ಯಙ್ಸ್ವರೌ ಸ್ವರಿತೌ** (ಫಿ. ಸೂ. ೭೪) ನ್ಯಙ್, ಸ್ವರ್ ಈ ಎರಡು ಶಬ್ದಗಳು ಸ್ವರಿತಗಳಾಗುವವು ಎಂಬುದರಿಂದ ಸ್ವರ್ ಎಂಬುದಕ್ಕೆ ಸ್ವರಿತಸ್ವರ ಬರುವುದು. ಸಂಹಿತಾಕಾಲದಲ್ಲಿ **ಸ್ವರಿತಾತ್ಸಂಹಿತಾಯಾಮನುದಾತ್ತಾನಾಂ** (ಪಾ. ಸೂ. ೧-೨-೩೯) ಸಂಹಿತಾಕಾಲದಲ್ಲಿ ಸ್ವರಿತದ ಮುಂದೆ ಇರುವ ಅನುದಾತ್ತಗಳಿಗೆ ಏಕಶ್ರುತಿ (ಪ್ರಚಯ) ಬರುವುದು ಎಂಬುದರಿಂದ ಅನುದಾತ್ತಗಳು ಪ್ರಚಯಗಳಾಗುವವು. ಸ್ವರ್ ಎಂಬಲ್ಲಿ ಸ್ವರಿತಸ್ವರವೇ ನಿಲ್ಲುವುದು.

ಅಪಃ—**ಊಡಿದಮ್ಪದಾದ್ಯಪ್ಪುಮ್ರೈದ್ಯುಭ್ಯಃ** (ಪಾ ಸೂ. ೬-೧-೧೭೧) ಎಂಬುದರಿಂದ ಅಪ್ ಶಬ್ದದ ಮುಂದೆ ಇರುವ ಶಸ್ ವಿಭಕ್ತಿಯು ಉದಾತ್ತವಾಗುವುದು. **ಧೂನುಹಿ ಧೂಞ್** ಕಂಪನೇ ಧಾತು. ಇದರ ಮುಂದೆ ಲೋಟ್ ಅದಕ್ಕೆ ಮಧ್ಯಮಪುರುಷ ಏಕವಚನ ಸಿಪ್. **ಸೇರ್ಧ್ಯಸಿಚ್ಚೆ** (ಪಾ. ಸೂ. ೩-೪-೮೭) ಸಿಗೆ ಹಿ ಆದೇಶ ಧೂ+ಹಿ **ಸ್ವಾದಿಭ್ಯಃ ಶ್ನುಃ** ಎಂಬುದರಿಂದ ಶ್ನು ವಿಕರಣ ಧೂನುಹಿ. **ಉತಶ್ಚ ಪ್ರತ್ಯಯಾದಾ ಸಂಯೋಗಪೂರ್ವಾತ್** (ಪಾ, ಸೂ. ೬-೪-೧೦೬) ಸಂಯೋಗಪೂರ್ವಕವಲ್ಲದ ಪ್ರತ್ಯಯ ಸಂಬಂಧಿಯಾದ ಹ್ರಸ್ವ ಉಕಾರದ ಮುಂದೆ ಇರುವ ಹಿಗೆ ಲುಕ್ ಬರುವುದು ಎಂಬುದರಿಂದ ಹಿಗೆ ಲುಕ್ ಪ್ರಾಪ್ತವಾಗುವುದು. ಆದರೂ **ಸರ್ವೇವಿಧಯಶ್ಛಂದಸಿ ವಿಕಲ್ಪ್ಯಂತೇ** (ಪರಿಭಾ. ೩೫) ಎಂಬುದರಿಂದ ಇಲ್ಲಿ ಬರುವುದಿಲ್ಲ, ಧೂನುಹಿ ಎಂದಾಗುವುದು ॥೪॥

॥ संहितापाठः ॥

आशु॒त्कर्ण॑ श्रु॒धी हव॑ं नू॒ चि॑द्दधिष्व मे॒ गिरः॑ ।
इन्द्र॒ स्तोम॒मिमं॑ म॒म कृ॑ष्वा यु॒जश्चि॑दन्त॒रं ॥९॥

॥ पदपाठः ॥

आशु॑त्ऽकर्ण । श्रु॒धि । हव॑ं । नु । चि॒त् । द॒धि॒ष्व । मे॒ । गिरः॑ ॥
इन्द्र॑ । स्तोम॑ं । इ॒मं । म॒म । कृ॒ष्व॒ । यु॒जः॑ । चि॒त् ।
अ॒न्त॒रं ॥ ९ ॥

॥ सायणभाष्यं ॥

हे आशुत्कर्ण सर्वतः श्रोतारौ कर्णौ यस्य तादृगिन्द्र हवमस्मदीयमाह्वानं नु क्षिप्रं शृधि । शृणु । मे मम होतुर्गिरश्चित्स्तुतीरपि दधिष्व । चित्रे धारय । किंच मम मदीयमिमं स्तोमं स्तोत्ररूपं वाक्समूहं युजश्चित्स्वकीयसख्युरप्यन्तरं कृष्व । आसन्नं कुरु । यथा वचनं तस्य प्रियं मन्यसे तद्वदस्मदीयमस्तुतिमपि प्रीतं कुर्वित्यर्थः ॥ आशुत्कर्ण । आ समन्ताच्छ्रृणोतेः इत्याशुत् । क्विप् । ह्रस्वस्य तुक् । सा. ६-८-३८ । तादृशौ कर्णौ यस्य । आमन्त्रितस्य चेत्याद्युदात्तत्वं । शृधी । शृ श्रवणे । लोटोर्हिः । शृणुतं शृ चे । सा. ३-८-३५ । इति निहितशब्दोर्बहुलं छंदसीति लुक् । तत्सन्नियोगशिष्टत्वाच्छ्नुभावोऽपि निवर्तते । शृ शृणुष्व कृवृभ्वश्छंदसि । सा. ६-४-८०३ । इति हेर्धिरादेशः सति शिष्टत्वात्प्रत्ययस्वरः । आमन्त्रितं पूर्वमविद्यमानवत् । सा. ८-८-३३ । इत्यविद्यमानवत्त्वेन पदादिपरत्वात्त्रिष्ठजिञ इति निघातोऽ न भवति । संहितायामन्येषामपि दृश्यत इति दीर्घः । हवं । ह्वेञ् स्पर्धायां शब्दे च । बहुलं छंदसीत्यन्येभ्योपि दृश्यत इति क्विप् । संप्रसारणे कृते पश्चाद्धकारान्तत्वेन ष्टुत्वढत्वे । सा. ८-३-७९ । इत्यप्प्रत्ययः । अपरः पित्त्वाद्धातुस्वरः । नु । संहितायामचि तुनुघमक्षुतङ्कुत्रुस्रुभ्यः । सा. ६-४-७३३ । इति दीर्घः । चित् । चादिरनुदात्तः । दधिष्व । दधातेर्लोट् । थासः सेः । सवाभ्यां वामौ । सा. ३-४-९० । शपः श्लुः । अभ्यासस्य ह्रस्वत्वादि । छंदस्युभयथेत्यार्धधातुकस्यापि स्येकारादिरागमः । आकारलोपः । निघातः । मम । तवममो ङसि ।

ಪಾ. ೭-೨-೯೬ । ಇತ್ಯನೇನ ಮಪರ್ಯಂತಸ್ಯ ಮಮಾದೇಶಃ । ಸ್ವಾತಿಪದಿಕಸ್ವರೇಣಾಂತೋದಾತ್ತೌ ಸ್ವಾಸ್ತೇ ಯುಷ್ಮದಸ್ಮದೋರ್ಙಸಿ । ಪಾ- ೬-೧-೨೧೧ । ಇತ್ಯಾದ್ಯುದಾತ್ತೌ । ಕೃಷ್ಣ । ಡುಕೃಞ್ ಕರಣೇ ಲೋಟ್ । ಥಾಸಃ ಸೇ । ಸವಾಭ್ಯಾಂ ವಾಮೌ । ಶಪ್ಲೋ ಬಹುಲಂ ಛಂದಸೀತಿ ಲುಕ್ । ಸತಿ ಶಿಷ್ಟತ್ವಾತ್ಕೈತ್ಯೆಯಸ್ವರಃ । ಹಾದಾದಿತ್ವಾನ್ನ ನಿಘಾತಃ । ಯುಜಃ । ಸಾನೇಕಾಚೆ ಇತಿ ವಿಭಕ್ತೇರುದಾತ್ತತ್ವಂ । ಅಂತರಂ । ವೃಷಾದಿತ್ವಾದಾದ್ಯುದಾತ್ತಃ ॥

॥ ಪ್ರತಿಪದಾರ್ಥ ॥

(ಹೇ) ಅಶ್ರುತ್ಕರ್ಣ—ಎಲ್ಲವನ್ನೂ ಕೇಳಲು ಸಾಮರ್ಥ್ಯವುಳ್ಳ ಕಿವಿಗಳಿರುವ ಎಲೈ ಇಂದ್ರನೇ । ಹವಂ—ನಮ್ಮ ಆಹ್ವಾನವನ್ನು (ನಾವು ನಿನ್ನನ್ನು ಕರೆಯುವುದನ್ನು) । ನು—ಜಾಗ್ರತೆಯಾಗಿ । ಶ್ರುಧಿ—ಕೇಳು । ಮೇ—(ಹೋತೃವಾದ) ನನ್ನ । ಗಿರಶ್ಚಿತ್—(ಸ್ತೋತ್ರರೂಪವಾದ) ವಾಕ್ಯಗಳನ್ನೂ ಸಹ । ಧಿಷ್ಣ—ಚಿತ್ತದಲ್ಲಿ ಧರಿಸು । (ಮತ್ತು) ಮಮ—ನನ್ನ (ಎಂದರೆ ನಾನು ಮಾಡುವ) । ಇಮಂ ಸ್ತೋಮಂ—ಈ ಸ್ತೋತವನ್ನು । ಅಂತರಂ ಯುಜಶ್ಚಿತ್ಕೃಷ್ಣ—ನಿನ್ನ ಸ್ನೇಹಿತನ ವಾಕ್ಯದಂತೆ ಪ್ರಿಯವನ್ನಾಗಿ ಪರಿಗಣಿಸು ॥

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ಕಿವಿಗಳು ಎಲ್ಲವನ್ನೂ (ಎಲ್ಲಾ ಕಡೆಯಲ್ಲಿಯೂ) ಕೇಳಲು ಸಮರ್ಥವಾಗಿರುವವು. ಆದುದರಿಂದ ನಾವು ಮಾಡುವ ಆಹ್ವಾನವನ್ನು (ನಾವು ನಿನ್ನನ್ನು ಕರೆಯುವುದನ್ನು) ಬೇಗನೆ ಕೇಳು; ನನ್ನ ಮಾತನ್ನು ಮನಸ್ಸಿನಲ್ಲಿ ನೆನಪಿಡು; ಮತ್ತು ನಾನು ಮಾಡುವ ಈ ಸ್ತೋತ್ರವನ್ನು ಅಥವಾ ಸ್ತೋತ್ರರೂಪವಾದ ವಾಕ್ಯಗಳನ್ನು ನಿನ್ನ ಸ್ನೇಹಿತನ ಮಾತಿನಂತೆ ಅತಿ ಪ್ರಿಯವಾದವುಗಳೆಂದು ಭಾವಿಸು.

English Translation.

O Indra, whose ears hear all things, listen quickly to my invocation; hold my praises (in four heart); keep near this my hymn as it were the words of a friend.

॥ ವಿಶೇಷವಿಷಯಗಳು ॥

ಅಶ್ರುತ್ಕರ್ಣ—ಆ ಸಮಂತಾತ್ ಶೃಣುತೇ ಇತ್ಯಾಶ್ರುತ್ । ತಾದೃಶೌ ಕರ್ಣೌ ಯಸ್ಯ ಸಃ । ಸರ್ವತಃ ಶ್ರೋತಾರೌ ಕರ್ಣೌ ಯಸ್ಯ ತಾದೃಗಿಂದ್ರ—ಆಶ್ರುತ್ ಎಂದರೆ ಎಲ್ಲಾ ಕಡೆಯಲ್ಲಿಯೂ ಸರ್ವ ಸ್ಥಳಗಳಲ್ಲಿಯೂ ಕೇಳುವ ಎಂದು. ಇಂತಹ ಕರ್ಣಗಳುಳ್ಳವನಿಗೆ ಅಶ್ರುತ್ಕರ್ಣ ಎಂದು ಹೆಸರು. ನಾವು ಮಾಡುವ ಸ್ತೋತ್ರವನ್ನೂ ನಮ್ಮ ವಾಕ್ಯಗಳನ್ನೂ ಇಂದ್ರನು ಎಲ್ಲಿದ್ದರೂ ಕೇಳುವ ಸಾಮರ್ಥ್ಯವುಳ್ಳವನೆಂದಭಿಪ್ರಾಯವು.

ಶ್ರುಧಿ, ನು, ಕೃಷ್ಟ—ಈ ಶಬ್ದಗಳ ಅಂತ್ಯಾಕ್ಷರವು ಛಂದಸ್ಸಿನ ಅನುಕೂಲಕ್ಕಾಗಿ ಸಂಹಿತಾಪಾಠದಲ್ಲಿ ದೀರ್ಘವಾಗಿರುವುದು.

ದಧಿಷ್ಮ ಮೇ ಗಿರಃ—ನಮ್ಮ ಮಾತುಗಳನ್ನು ಅಥವಾ ನಮ್ಮ ಪ್ರಾರ್ಥನೆಯನ್ನು ನಿನ್ನ ಚಿತ್ತದಲ್ಲಿ ಧರಿಸು ಎಂದರೆ ನಾವು ಮಾಡುವ ಪ್ರಾರ್ಥನೆಯನ್ನು ಗಮನವಿಟ್ಟು ಕೇಳಿ ಅದನ್ನು ಮರೆಯದಂತೆ ಜ್ಞಾಪಕದಲ್ಲಿಡು ಎಂದರ್ಥವು.

ಯುಜಶ್ಚಿದಂತರಂ—ಸ್ನೇಹಿತರ ಮಾತಿನಂತೆ ಪ್ರಿಯವಾದುದನ್ನಾಗಿ ಎಂದು ಭಾಷ್ಯಕಾರರು ಅರ್ಥ ಮಾಡಿರುವರು. ಇಲ್ಲಿ ಸ್ನೇಹಿತರೆಂಬ ಪದವನ್ನು ಸೂಚಿಸುವ ಯಾವ ಶಬ್ದವೂ ಇಲ್ಲದಿದ್ದರೂ ಅರ್ಥವು ಹೊಂದುವಂತೆ ಭಾಷ್ಯಕಾರರು ಸಖ್ಯುಃ ಎಂಬ ಶಬ್ದವನ್ನು ಅಧ್ಯಾಹಾರ ಮಾಡಿರುವರು.

॥ ವ್ಯಾಕರಣಪ್ರಕ್ರಿಯಾ ॥

ಆಶ್ರುತ್ಕರ್ಣ—ಆ ಸಮಂತಾತ್ (ಸರ್ವತೋಮುಖವಾಗಿ) ಶೃಣುತ (ಕೇಳಿ) ಇತಿ ಆಶ್ರುತ್—ಆಙ್ ಪೂರ್ವಕವಾದ 'ಶ್ರುಶ್ರವಣೇ' ಧಾತುವಿನ ಮುಂದೆ **ಕ್ವಿಪ್‌ಚ** (ಪಾ. ಸೂ. ೩-೨-೭೬) ಎಂಬುದರಿಂದ ಕ್ವಿಪ್ ಪ್ರತ್ಯಯ. ಕ್ವಿಪ್ ನಲ್ಲಿ ಎಲ್ಲ ವರ್ಣಗಳಿಗೂ **ಲೋಪ**—ಆಶ್ರು ಎಂದಿರುವಾಗ **ಪ್ರತ್ಯಯಲೋಪೇ ಪ್ರತ್ಯಯ ಲಕ್ಷಣಮ್** (ಪಾ. ಸೂ. ೧-೧-೬೨) ಎಂಬ ಪ್ರತ್ಯಯಲಕ್ಷಣದಿಂದ ಕ್ವಿಪ್ ಪ್ರತ್ಯಯ ಪರದಲ್ಲಿದ್ದಂತೆ ಆಗುವುದು. ಆದ್ದರಿಂದ **ಹ್ರಸ್ವಸ್ಯಪಿತಿಕೃತಿತುಕ್** (ಪಾ. ಸೂ. ೬-೧-೭೧) ಪಿತ್ತಾದ ಕೃತ್ಪ್ರತ್ಯಯ ಪರದಲ್ಲಿರುವಾಗ ಹ್ರಸ್ವಕ್ಕೆ ತುಕ್ ಆಗಮ ಬರುವುದು ಎಂಬುದರಿಂದ ತುಕ್ ಬರುವುದು. ಆಶ್ರುತ್ ಎಂದಾಗುವುದು. ಆಶ್ರುತೌ ಕರ್ಣೌ ಯಸ್ಯ ಸಃ ಎಂದು ಬಹುವ್ರೀಹಿ ಸಮಾಸ ಮಾಡಿದರೆ ಆಶ್ರುತ್ಕರ್ಣಃ ತಸ್ಯ ಸಂಬುದ್ಧಿಃ, ಆಶ್ರುತ್ಕರ್ಣ, ಇದು ಆಮಂತ್ರಿತ. ಆದ್ದರಿಂದ **ಆಮಂತ್ರಿತಸ್ಯಚ** (ಪಾ. ಸೂ. ೬-೧-೧೯೮) ಎಂಬುದರಿಂದ ಆದ್ಯುದಾತ್ತ.

ಶ್ರುಧೀ—ಶ್ರುಶ್ರವಣೇ ಧಾತು. ಇದರ ಮುಂದೆ ಲೋಟ್ ಪರಸ್ಮೈಪದ ಮಧ್ಯಮಪುರುಷ ಏಕವಚನ ಸಿಪ್. ಸಿಪ್ಪಿಗೆ ಹಿ ಆದೇಶ, ಶ್ರು+ಹಿ. **ಶ್ರುವಃಶೃಚ** (ಪಾ. ಸೂ. ೩-೧-೭೪) ಶ್ರುಗೆ ಶೃ ಆದೇಶ ಬರುವುದು. ಶಬ್ವಿಷಯದಲ್ಲಿ ಶ್ನು ಎಂಬ ವಿಕರಣ ಪ್ರತ್ಯಯವೂ ಬರುವುದು ಎಂಬುದರಿಂದ ಬಂದ ಶ್ನು ವಿಕರಣಕ್ಕೆ ಬಹುಲಂ ಛಂದಸಿ (ಪಾ. ಸೂ. ೨-೪-೭೩) ಎಂಬುದರಿಂದ ಲುಕ್, ಹೀಗೆ ವಿಕರಣ ಶ್ನು ಪ್ರತ್ಯಯ ನಿವೃತ್ತವಾದರೆ ತತ್ಸನ್ನಿಯೋಗಶಿಷ್ಟವಾದ ಶೃ ಆದೇಶವೂ ಸನ್ನಿಯೋಗಶಿಷ್ಟಾನಾಮನ್ಯತರಾಪಾಯೇ ಉಭಯೋರಪ್ಯಪಾಯಃ (ಪರಿ. ೮೬) ಎಂಬುದರಿಂದ ನಿವೃತ್ತವಾಗುವುದು. **ಶ್ರು ಶೃಣು ಸ್ಕೃಕೃವೃಭ್ಯಶ್ಛಂದಸಿ** (ಪಾ. ಸೂ ೬-೪-೧೦೨) ಎಂಬುದರಿಂದ ಹಿಗೆ ಧಿ ಆದೇಶ. ಶ್ರುಧಿ ಇಲ್ಲಿ ಸತಿಶಿಷ್ಟವಾದ್ದರಿಂದ ಪ್ರತ್ಯಯಸ್ವರ ಆದ್ಯುದಾತ್ತ ನಿಲ್ಲುವುದು. ಯದ್ಯಪಿ ಆಶ್ರುತ್ಕರ್ಣ ಎಂಬ ಪದದಮುಂದೆ ಶ್ರುಧಿ ಎಂಬುದು ಇರುವುದು. ಆದ್ದರಿಂದ **ತಿಙ್ಶಿತಿಜಃ** ಎಂಬುದರಿಂದ ಅನುದಾತ್ತ ಪ್ರಾಪ್ತವಾಗುವುದು ಆದರೂ ಆಶ್ರುತ್ಕರ್ಣ ಎಂಬುದು ಆಮಂತ್ರಿತ ಆದ್ದರಿಂದ **ಆಮಂತ್ರಿತಂಪೂರ್ವ-ಮವಿದ್ಯಮಾನವತ್** (ಪಾ. ಸೂ. ೮-೧-೭) ಎಂಬುದರಿಂದ ಅದಕ್ಕೆ ಅವಿದ್ಯಮಾನವದ್ಭಾವ ಬರುವುದು. ಆದ ಕಾರಣ ಪದಾತ್ಪರತ್ವ ಸಂಭವಿಸುವುದಿಲ್ಲ ಆದ್ದರಿಂದ ಅನುದಾತ್ತ ಬರುವುದಿಲ್ಲ. ಸಂಹಿತಾಕಾಲದಲ್ಲಿ **ಅನ್ಯೇಷಾಮಪಿ ದೃಶ್ಯತೇ** (ಪಾ. ಸೂ. ೬-೩-೧೩೭) ಎಂಬುದರಿಂದ ದೀರ್ಘ ಬರುವುದು ಶ್ರುಧೀ ಎಂದಾಗುವುದು.

ಹವಮ್—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ ಧಾತು, **ಬಹುಲಂ ಛಂದಸಿ** (ಪಾ. ಸೂ. ೬-೧-೩೪) ಎಂಬುದರಿಂದ ಅನೈಮಿತ್ತಕವಾಗಿ ಸಂಪ್ರಸಾರಣ ಬರುವುದು **ಸಂಪ್ರಸಾರಣಾಚ್ಚ** (ಪಾ. ಸೂ. ೬-೧-೧೦೮) ಎಂಬುದರಿಂದ ಪೂರ್ವರೂಪ=ಹು ಎಂದಾಗುವುದು. ಈಗ ಉವರ್ಣಾಂತವಾದ್ದರಿಂದ **ಋದೋರಪ್** (ಪಾ.ಸೂ. ೩-೩-೫೭) ಎಂಬುದರಿಂದ ಅಪ್ ಪ್ರತ್ಯಯ, ಗುಣ ಆವಾದೇಶಗಳು ಬಂದರೆ ಹವ ಎಂದಾಗುವುದು. **ಅಪ್** ಪ್ರತ್ಯಯವು ಪಿತ್ತಾದ್ದರಿಂದ ಅನುದಾತ್ತ. ಇದರ ಮುಂದೆ ದ್ವಿತೀಯಾ ಏಕವಚನ **ಅಮ್** ಪ್ರತ್ಯಯವನ್ನಿಟ್ಟರೆ **ಅಮಿಪೂರ್ವಃ** (ಪಾ. ಸೂ. ೪-೧-೨೩) ಎಂಬುದರಿಂದ ಪೂರ್ವರೂಪ ಬಂದು ಹವಮ್ ಎಂದು ನಿಷ್ಪನ್ನವಾಗುವುದು.

ನು—ಸಂಹಿತಾಕಾಲದಲ್ಲಿ 'ಋಚಿ ತು, ನು, ಘೇ, ಮಕ್ಷು ತಬ್, ಕು, ತ್ರೋರುಷ್ಯಾಣಾಮ್ (ಪಾ.ಸೂ. ೬-೩-೧೩೩) ಋಕ್ಕಿನಲ್ಲಿ ಇವುಗಳಿಗೆ ದೀರ್ಘ ಬರುವುದು ಎಂಬುದರಿಂದ ದೀರ್ಘಬಂದರೆ ನೂ ಎಂದಾಗುವುದು.

ಚಿತ್—ಇದು ಚಾದಿಗಣದಲ್ಲಿರುವುದು. ಆದುದರಿಂದ ಚಾದಯೋನುದಾತ್ತಾಃ (ಫಿ. ಸೂ. ೪೪) ಎಂಬುದರಿಂದ ಅನುದಾತ್ತ

ದಧಿಷ್ವ—ಡು ಧಾಞ್ ಧಾರಣ **ಪೋಷಣಯೋಃ**. ಧಾತು. ಜುಹೋತ್ಯಾದಿಯಲ್ಲಿರುವುದು. ಇದರ ಮುಂದೆ ಲೋಟ್ ಆತ್ಮನೇಪದ ಮಧ್ಯಮಪುರುಷ **ಥಾಸ್**, ಥಾಸ್‌ಗೆ ಥಾಸಸ್ಸೇ (ಪಾ. ಸೂ. ೩-೧-೮೦) ಎಂಬುದರಿಂದ ಸೇ ಆದೇಶ, ಸವಾಭ್ಯಾಂವಾಮೌ (ಪಾ. ಸೂ. ೩-೪-೯೧) ಎಂಬುದರಿಂದ ಏಕಾರಕ್ಕೆ ವಕಾರ, **ಕರ್ತರಿಶಪ್** (ಪಾ.ಸೂ. ೩-೧-೬೮) ಎಂಬುದರಿಂದ ಶಪ್ ವಿಕರಣ. ಆದಕ್ಕೆ **ಜುಹೋತ್ಯಾದಿಭ್ಯಃ ಶ್ಲುಃ** (ಪಾ. ಸೂ. ೭-೪-೭೮) ಎಂಬುದರಿಂದ ಶ್ಲು. **ಶ್ಲೌ** (ಪಾ. ಸೂ. ೬-೧-೧೦) ಎಂಬುದರಿಂದ ದ್ವಿತ್ವ. ಧಾ ಧಾ+ಸ್ವ ಅಭ್ಯಾಸಕ್ಕೆ **ಹ್ರಸ್ವಃ** (ಪಾ. ಸೂ ೭-೪-೫೯) ಅಭ್ಯಾಸದಲ್ಲಿರುವ ಅಚ್ಚಿಗೆ ಹ್ರಸ್ವ ಬರುವುದು ಎಂಬುದರಿಂದ ಹ್ರಸ್ವ. **ಅಭ್ಯಾಸೇ ಚರ್ಚ** (ಪಾ.ಸೂ. ೮-೪-೫೪) ಅಭ್ಯಾಸದಲ್ಲಿರುವ ಝಷ್ ವರ್ಣಗಳಿಗೆ ಜಶ್ತ್ವವೂ ಖಯ್ ವರ್ಣಗಳಿಗೆ ಚರ್ತ್ವವೂ ಬರುವುದು. ಎಂಬುದರಿಂದ ಅಭ್ಯಾಸದಲ್ಲಿರುವ ಧಕಾರಕ್ಕೆ ದಕಾರ. ದ ಧಾ+ಸ್ವ. ಈಗ **ಛಂದಸ್ಯುಭಯಥಾ** (ಪಾ. ಸೂ. ೩-೪-೧೧೭) ಧಾತ್ವಧಿಕಾರದಲ್ಲಿ ವಿಹಿತವಾದ ಪ್ರತ್ಯಯವು ಛಂದಸ್ಸಿನಲ್ಲಿ ಸಾರ್ವಧಾತುಕ ಸಂಜ್ಞೆ, ಯನ್ನೂ ಆರ್ಧಧಾತುಕ ಸಂಜ್ಞೆಯನ್ನೂ ಹೊಂದುವುದು ಎಂಬುದರಿಂದ ಸ್ಸ ಎಂಬುದಕ್ಕೆ ಆರ್ಧಧಾತುಕ ಸಂಜ್ಞೆ ಬರುವುದು. ಆದ್ದರಿಂದ **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ಎಂಬುದರಿಂದ ಇಡಾಗಮ ದಧಾ+ಇಸ್ವ ಪೂರ್ವೋಕ್ತ ಸೂತ್ರದಿಂದ ಸಾರ್ವಧಾತುಕಸಂಜ್ಞೆಯೂ ಇರುವುದರಿಂದ **ಶ್ನಾಭ್ಯಸ್ತಯೋರಾತಃ** (ಪಾ. ಸೂ. ೬-೪-೧೧೨) ಶ್ನಾ ಪ್ರತ್ಯಯ ಅಭ್ಯಸ್ತ ಇವುಗಳ ಆಕಾರಕ್ಕೆ ಕಿತ್ತು ಅಥವಾ ಙಿತ್ತು ಆದ ಸಾರ್ವಧಾತುಕ ಪರದಲ್ಲಿರುವಾಗ ಲೋಪ ಬರುವುದು ಎಂಬುದರಿಂದ ಆಕಾರಕ್ಕೆ **ಲೋಪ, ಆದೇಶ ಪ್ರತ್ಯಯೆಯೋಃ** (ಪಾ. ಸೂ. ೮-೩-೫೯) ಎಂಬುದರಿಂದ ಸ್ಸ ಎಂಬುದರ ಸಕಾರಕ್ಕೆ ಷಕಾರ. ದಧಿಷ್ವ ಎಂದಾಗುವುದು. **ತಿಜ್ಜಿತಿಜಃ** (ಪಾ. ಸೂ. ೮-೧-೨೮) ಎಂಬುದರಿಂದ ಅನುದಾತ್ತ.

ಮಮ—ಅಸ್ಮದ್ ಶಬ್ದದ ಮುಂದೆ ಷಷ್ಠೀವಿಭಕ್ತಿ ಏಕವಚನ ಙಸ್ ಪ್ರತ್ಯಯ. ಅಸ್ಮದ್+ಙಸ್ **ತವ-ಮಮೌ ಙಸಿ** (ಪಾ. ಸೂ. ೭-೨-೯೭) ಙಸ್ ಪ್ರತ್ಯಯ ಪರದಲ್ಲಿರುವಾಗ ಯುಷ್ಮದ್ ಅಸ್ಮದ್ ಶಬ್ದಗಳ ಮಪರ್ಯಂತಕ್ಕೆ ಕ್ರಮವಾಗಿ ತವ ಮಮ ಎಂಬ ಆದೇಶಗಳು ಬರುವುವು ಎಂಬುದರಿಂದ ಅಸ್ಮ್ ಎಂಬುದಕ್ಕೆ ಮಮ ಎಂಬ ಆದೇಶ. ಮಮ+ಆದ್+ಅಸ್. **ಅತೋಗುಣೇ** (ಪಾ. ಸೂ. ೬-೧-೯೭) ಎಂಬುದರಿಂದ ಮಮ+

अद् एंबल्लि एरडु अकारगळिगू पररूप, मवुद्+अश् यु॒ष्म॒दस्म॒द्भ्यां ङ॑सिँसोँ॒श् (पा.सू. ७-८-७८) युष्मद् अस्मद् शब्दगळ मुंदे इरुव ङसिँगे अश् आदेश बरुवुदु एंबुदरिंद ङसिँगे अश् आदेश. अश्नु शित्तादुद्दरिंद अनेकाल् शित्सर्वस्य एंबुदरिंद सर्वस्थानदल्लियू बरुवुदु. मवुद्+अ. शेषेलोपः (पा. सू. ७-३-७०) एंबुदरिंद टिलोप पक्षदल्लि अद्गे लोप, मवु एंदाग्वुदु, शेषे लोपः एंबुदरिंद अंत्यलोप बरुवुदु एंब पक्षदल्लि, दकारक्के लोप बंदरे मवु+अ एंदिरुवाग पररूप बंदरे मवु एंदाग्गुवुदु. इल्लि मवु+अ एंदिरुवाग टाङसिङसामिनात्स्याः (पा सू. ७.१-१२) हस्व अकारांतवाद अंगद मुंदे इरुव टा, ङसि, ङस् इवुगळिगे क्रमवागि इन् अत्, स्य एंब आदेशगळु बरुवुवु एंबुदरिंद ङस्-न अकारक्के स्य आदेश बरली एंदु केळलु अवकाशविरुवुदु. स्यादेशवन्नु ओप्पिदरे अश् विधानवु व्यर्थवागुवुदु एंदु हेळलागुवुदिल्ल. योऽचि (१-३-७८) एंबुदरिंद बरुव यत्व वारण माडुवुदरिंद अदु सार्थकवागुवुदु. अशादेश इल्लदिद्दरे, अश् एंबुदु आदेशवन्नु हॊंदद विभक्तियागुवुदरिंद दकारक्के यादेश बरबेकागुवुदु. अशादेश बंदरे आदेश वन्नु हॊंदिद विभक्तियागुवुदु. आदेशवन्नु हॊंदद विभक्तियागुवुदिल्ल. आद्दरिंद योऽचि (पा. सू. ८-३-७८) आदेशवन्नु हॊंदद अजादि विभक्तियु परदल्लिरुवाग युष्मद् अस्मद् शब्दगळिगे यादेश बरुवुदु एंबुदरिंद यादेश बरुवुदिल्ल. हीगे यत्ववारणेयिंद अश् विधियु सार्थक. आद्दरिंद अश्विधि सामर्थ्यदिंद स्य आदेश बरुवुदिल्लवेंदु हेळलागुवुदिल्ल. स्य आदेशक्के अश् विधियु अपवादवेंदू हेळलागुवुदिल्ल अशादेश कालदल्लि स्यादेशक्के प्राप्ति इद्दरे येननाप्राप्तेयोविधिरारभ्यते स तस्य बाधकोः भवति (परिभा. ७८) एंबुदरिंद बाधवु बरुत्तित्तु मवुद्+ङस् एंदिरुवाग प्रकृतियु अदंतवागुवुदिल्ल. आद कारण स्यादेशक्के प्राप्ति इल्ल. आद्दरिंद तानु बरुवकालदल्लि प्राप्तवागदे इरुव स्य आदेशवन्नु अश् विधियु बाधिसलारदु आद्दरिंद स्यादेश बरली एंदु पूर्वपक्ष बरबहुदु. आदरे इदक्के अवकाशविल्ल. युष्मदस्मद्भ्यां ङसिँसोँश् एंबुदू अंगाधिकारदल्लिरुव शास्त्र. आद्दरिंद अंगवृत्तेः पुनर्वृत्तावविधिः (परि. ९७) ऒंदु अंगाधिकारशास्त्र बंदनंतर मत्तॊंदु अंगाधिकारशास्त्र बरुवुदिल्ल एंबुदरिंद अशादेश बंदनंतर स्य आदेश बरुवुदिल्ल एंदु समाधान हेळबहुदु, अंगवृत्तेः पुनर्वृत्तावविधिः इदक्के ऒंदु अंगाधिकारीयशास्त्र बंदनंतर मत्तॊंदु अंगाधिकारीयशास्त्र बरुवुदिल्ल एंदु अर्थवल्ल. अंग शब्दवु अंगोद्देश्यकवाद कार्य एंब अर्थवन्नु हेळुवुदु. अंगोद्देश्यकवाद कार्य बंदनंतर मत्तॊंदु अंगोद्देश्यकवाद कार्य बरुवुदिल्ल एंदु इदक्के अर्थ एंदु केलवरु वर्णिसुवरु. यद्यपि ई अर्थवु ज्याग्रादीयसः(पा.सू. ६-४-१६०) एंब सूत्रद भाष्यक्के विरुद्धवु. ज्याग्रादीयसः-किमर्थं ज्याग्रहरस्येयस अत्त्व मुच्यते न लोपः प्रकृतस्योनुवर्तेत का रूपसिद्धिः । ज्यायान् । अकृद्यकार इति दीर्घत्वं भविष्यति । एवं तर्हि सिद्धे सति यज्ज्याग्रहरस्येयस अत्त्वं शास्तितज्ज्ञापयत्याचार्योः भवत्येषा परिभाषा अङ्गावृत्तेः पुनर्वृत्तावविधिः इति एंदु महाभाष्यदल्लिरुवुदु. ई भाष्यवन्नु नोडिदरे प्रत्ययद ईकार लोप बंदमेले प्रकृतिगे दीर्घ बरलारदु. अदक्काग अत्त्वविधि

ಸಾರ್ಥಕವೆಂದು ಸ್ಪಷ್ಟವು. ಏವಂಚ ಆಂಗೋದ್ದೇಶ್ಯಕಕಾರ್ಯ ಬಂದಮೇಲೆ ಇತ್ಯಾದಿವರ್ಣನೆಯು ಇದಕ್ಕೆ ವಿರುದ್ಧವು. ಆದರೂ ಈ ಪಕ್ಷದಲ್ಲಿ ಸಮಾಧಾನವು ಅಪೇಕ್ಷಿತವಾದರೆ ಯುಷ್ಮದಸ್ಮದ್ಭ್ಯಾಂಙಸೋಶ್ ಎಂಬ ಸೂತ್ರದಲ್ಲಿ ಅಶ್ ಎಂಬಲ್ಲಿ ಅ ಅಶ್ ಎಂದು ಪರರೂಪದಿಂದ ಮತ್ತೊಂದು ಅಕಾರವನ್ನು ಪ್ರಶ್ಲೇಷಮಾಡಿಕೊಳ್ಳುವುದು. ಅಕಾರರೂಪವಾದ ಅಶ್ ಬರುವುದು ಎಂದು ಸೂತ್ರಾರ್ಥ. ಅಶ್ ವಿಕಾರವನ್ನು ಹೊಂದುವುದೇ ಇಲ್ಲವೆಂದು ಇದರಿಂದ ವಿವರಿಸುವುದು. ಆದ್ದರಿಂದ ನ್ಯಾದೇಶ ಬರುವುದಿಲ್ಲ. ಮಮ ಎಂಬಲ್ಲಿ ಪ್ರಾತಿಪದಿಕಸ್ವರದಿಂದ ಆಂತೋದಾತ್ತ ಪ್ರಾಪ್ತವಾದರೆ ಅದನ್ನು ಬಾಧಿಸಿ **ಯುಷ್ಮದಸ್ಮದ್ಭೋರ್ಙಿ** (ಪಾ.ಸೂ. ೬-೧-೨೧೧) ಙಿಸ್ ಪ್ರತ್ಯಯ ಪರದಲ್ಲಿರುವಾಗ ಯುಷ್ಮದ್ ಅಸ್ಮದ್ ಶಬ್ದಗಳ ಆದಿಯು ಉದಾತ್ತವಾಗುವುದು ಎಂಬುದರಿಂದ ಆದ್ಯುದಾತ್ತ.

ಕೃಷ್ವ—ಡುಕೃಞ್ ಕರಣೇ ಧಾತು. ಲೋಟ್ ಥಾಸಾದೇಶ, ಥಾಸ್‌ಗೆ **ಥಾಸಸ್ಸೇ** (ಪಾ. ಸೂ. ೩-೪-೮೦) ಎಂಬುದರಿಂದ ಸೇ ಆದೇಶ. ಇದರ ಏಕಾರಕ್ಕೆ **ಸವಾಭ್ಯಾಂ ವಾಮೌ** (ಪಾ. ಸೂ. ೩-೪-೯೧) ಎಂಬುದರಿಂದ ವಕಾರಾದೇಶ. ಕೃ-ಸ್ವ-ಶಪ್ ವಿಕರಣಕ್ಕೆ ಅಪವಾದವಾಗಿ **ತನಾದಿಕೃಞ್ಭ್ಯಉಃ** (ಪಾ. ೩-೧-೭೯) ಎಂದು ಬರುವ ಉ-ವಿಕರಣಕ್ಕೆ **ಬಹುಲಂ ಛಂದಸಿ** ಎಂಬುದರಿಂದ ಲುಕ್, **ಆದೇಶಪ್ರತ್ಯಯಯೋಃ** ಎಂಬುದರಿಂದ ಸಕಾರಕ್ಕೆ ಷಕಾರ, ಕೃಷ್ವ ಎಂದಾಗುವುದು. ಸಂಹಿತಾಕಾಲದಲ್ಲಿ **ದ್ವ್ಯಚೋತಸ್ತಿಙಃ** (ಪಾ ಸೂ. ೬-೩-೧೩೫) ಎಂಬುದರಿಂದ ದೀರ್ಘ ಸತಿಶಿಷ್ಟವಾದ್ದರಿಂದ ಪ್ರತ್ಯಯಸ್ವರ ಬರುವುದು ಪಾದದ ಆದಿಯಲ್ಲಿರುವುದರಿಂದ ಅನುದಾತ್ತ ಬರುವುದಿಲ್ಲ.

ಯುಜಃ—**ಸಾವೇಕಾಚಸ್ತೃತೀಯಾದಿರ್ವಿಭಕ್ತಿಃ** (ಪಾ. ಸೂ. ೬-೧-೧೬೮) ಎಂಬುದರಿಂದ ವಿಭಕ್ತಿಯು ಉದಾತ್ತ.

ಅಂತರಮ್—ಇದು ವೃಷಾದಿಯಲ್ಲಿರುವುದು- ಆದ್ದರಿಂದ **ವೃಷಾದೀನಾಂ ಚ** (ಪಾ.ಸೂ. ೬-೧-೨೦೩ ಎಂಬುದರಿಂದ ಆದ್ಯುದಾತ್ತ. ॥ ೯ ॥

॥ ಸಂಹಿತಾಪಾಠಃ ॥

ವಿದ್ಮಾ ಹಿ ತ್ವಾ ವೃಷಂತಮಂ ವಾಜೇಷು ಹವನಶ್ರುತಂ ।
ವೃಷಂತಮಸ್ಯ ಹೂಮಹ ಊತಿಂ ಸಹಸ್ರಸಾತಮಾಂ ॥ ೧೦ ॥

॥ ಪದಪಾಠಃ ॥

ವಿದ್ಮ । ಹಿ । ತ್ವಾ । ವೃಷನ್ ೽ ತಮಂ । ವಾಜೇಷು । ಹವನ ೽ ಶ್ರುತಂ ॥
ವೃಷನ್ ೽ತಮಸ್ಯ । ಹೂಮಹೇ । ಊತಿಂ । ಸಹಸ್ರ ೽ ಸಾತಮಾಂ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಾಂ ವಿದ್ಮ । ಜಾನೀಮಃ । ಕೀದೃಶಂ ತ್ವಾಂ । ವೃಷಂತಮಂ ಕಾಮಾನಾಮತಿಶಯೇನ ವರ್ಷಿತಾರಂ ವಾಜೇಷು ಸಂಗ್ರಾಮೇಷು ಹವನಶ್ರುತಂ ಅಸ್ಮದೀಯಸ್ಯಾಹ್ವಾನಸ್ಯ ಶ್ರೋತಾರಂ । ವೃಷಂತಮಮಸ್ಯಾತಿಶಯೇನ ಕಾಮಾದೀನಾಂ ವರ್ಷಿತುಸ್ತವೋತಿಂ ರಕ್ಷಾಮಸ್ಮದ್ವಿಷಯಾಮುದ್ದಿಶ್ಯ ಹೂಮಹೇ । ತ್ವಾಮಾಹ್ವಯಾಮಃ । ಕೀದೃಶೀಮೂತಿಂ । ಸಹಸ್ರಶಾತಮಾಮತಿಶಯೇನ ಧನಸಹಸ್ರಾಣಾಂ ದಾತ್ರೀಂ ॥ ವಿದ್ಮ । ವಿದೋ ಲಟೋ ವಾ । ಪಾ- ೩ ೪-೮೩ । ಇತಿ ಮಸೋ ಮಾದೇಶಃ । ಪ್ರತ್ಯಯೆಸ್ವರೇಣಾಂತೋದಾತ್ತಃ । ದ್ವ್ಯಚೋಽತಸ್ತಿಙ ಇತಿ ಸಂಹಿತಾಯಾಂ ದೀರ್ಘಃ । ವೃಷಂತಮಂ । ಪೃಷು ವೃಷು ಮೃಷು ಸೇಚನೇ । ಕನಿನ್ಯುವೃಷಿತಕ್ಷಿರಾಜಿಧನ್ವಿದ್ಯುಪ್ರತಿದಿವನಃ । ಉ. ೧-೧೫೬ । ಇತಿ ಕನಿನ್ । ನಿತ್ತ್ವಾದಾದ್ಯುದಾತ್ತಃ । ತಮಪಃ ಪಿತ್ತ್ವಾತ್ಸ ಏವ ಶಿಷ್ಯತೇ । ಅಯಸ್ಮಯಾದೀನಿ ಛಂದಸಿ । ಪಾ- ೧-೪-೨೦ । ಇತಿ ಭತ್ವೇನ ಪದತ್ವಾಭಾವಾನ್ನಲೋಪಾಭಾವಃ । ಪಾ ೮-೨-೭ । ವಾಜೇಷು । ವಾಜಶಬ್ದೋ ವೃಷಾದಿರಾದ್ಯುದಾತ್ತಃ । ಹವನಶ್ರುತಂ । ಹೂ ಇತ್ಯನುವೃತ್ತೌ ಬಹುಲಂ ಛಂದಸೀತಿ ಲ್ಯುಟಿ ಸಂಪ್ರಸಾರಣಂ । ಹವನಂ ಶೃಣೋತೀತಿ ಕ್ವಿಪ್ । ತುಗಾಗಮಃ । ವೃಷಂತಮಸ್ಯ । ಉಕ್ತಂ । ಹೂಮಹೇ ಬಹುಲಂ ಛಂದಸೀತಿ ಸಂಪ್ರಸಾರಣಂ । ತಪ ಇತ್ಯನುವೃತ್ತೌ ಬಹುಲಂ ಛಂದಸೀತಿ ತಪ್ರೋ ಲುಕ್ । ಊತಿಂ । ಊತಿಯೋತೀತ್ಯಾದಿನಾಂತೋದಾತ್ತೋ ನಿಪಾತಿತಃ । ಸಹಸ್ರಸಾತಮಾಂ । ಸಹಸ್ರಂ ಸನೋತೀತಿ ಸಹಸ್ರಸಾಃ । ಷಣು ದಾನೇ । ಜನಸನಖನಕ್ರಮಗಮೋ ವಿಟ್ । ಪಾ. ೩-೨-೬೭ । ವಿಡ್ವನೋರನುನಾಸಿಕಸ್ಯಾತ್ । ಪಾ. ೬-೪-೪೧ । ಇತ್ಯಾಕಾರಾದೇಶಃ । ಕೃದುತ್ತರಪದಪ್ರಕೃತಿಸ್ವರತ್ವಂ ತಮಪಃ ಪಿತ್ತ್ವಾದೇವ ಶಿಷ್ಯತೇ ॥

॥ ಪ್ರತಿಪದಾರ್ಥ ॥

(ಹೇ) ಇಂದ್ರ—ಎಲೈ ಇಂದ್ರನೇ । ತ್ವಾಂ—ನಿನ್ನನ್ನು । ವೃಷಂತಮಂ--(ಇಷ್ಟಾರ್ಥಗಳೆಂಬ) ವೃಷ್ಟಿಪ್ರದನನ್ನಾಗಿಯೂ । ವಾಜೇಷು—ಯುದ್ಧಗಳಲ್ಲಿ । ಹವನಶ್ರುತಂ--ನನ್ನ ಆಹ್ವಾನವನ್ನು ಕೇಳುವವನನ್ನಾಗಿಯೂ । ವಿದ್ಮ—ತಿಳಿಯುತ್ತೇವೆ । ಹಿ-ಏಕೆಂದರೆ । ವೃಷಂತಮಸ್ಯ—(ಕಾಮಾರ್ಥಗಳ) ವೃಷ್ಟಿಪ್ರದನಾದ ನಿನ್ನ । ಸಹಸ್ರಸಾತಮಾಂ—ಸಾವಿರಾರು ವಿಧಗಳಲ್ಲಿ ನೀನು ಕೊಡುವ । ಊತಿಂ—ರಕ್ಷಣೆಯನ್ನು ಅಥವಾ ನಮ್ಮ ರಕ್ಷಣೆಗಾಗಿ । ಹೂಮಹೇ--ಕರೆಯುತ್ತೇವೆ (ಪ್ರಾರ್ಥಿಸುತ್ತೇವೆ) ॥

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ನಮ್ಮ ಇಷ್ಟಾರ್ಥಪ್ರದನೆಂದೂ ಯುದ್ಧಗಳಲ್ಲಿ ನಮ್ಮ ಆಹ್ವಾನವನ್ನು (ಮೊರೆಯನ್ನು) ಕೇಳುವವನೆಂದೂ ನಾವು ಬಲ್ಲೆವು. ಆದುದರಿಂದಲೇ ಇಷ್ಟಾರ್ಥಗಳೆಂಬ ವೃಷ್ಟಿಪ್ರದನಾದ ನಿನ್ನ ನಾನಾ ವಿಧವಾದ ರಕ್ಷಣೆಗಾಗಿ ನಾವು ನಿನ್ನನ್ನು ಕರೆಯುವೆವು.

English Translation.

O Indra, we know you, the rainer of blessings, the hearer of our call in battles; we invoke the thousand-fold protection of you, the showerer of bounties.

॥ ವಿಶೇಷವಿಷಯಗಳು ॥

ಈ ಋಕ್ಕಿನ ಅರ್ಥವು ಸುಲಭವಾಗಿ ತಿಳಿಯುವಂತೆ ಇದೆ. ವಿಶೇಷ ತೊಡಕುಗಳಾಗಲಿ, ಕ್ಲಿಷ್ಟವಾದ ಶಬ್ದಗಳಾಗಲಿ ಇಲ್ಲ.

ವಿದ್ಮ—ಛಂದಸ್ಸಿನ ಅನುಕೂಲಕ್ಕಾಗಿ ಅಂತ್ಯಾಕ್ಷರವು ದೀರ್ಘವಾಗಿರುವುದು.

ವೃಷಂತಮುಂ, ವೃಷಂತಮಸ್ಯ—ವೃಷ್ಟಿಪ್ರದನಾದ ಎಂದರೆ ನಮ್ಮ ಇಷ್ಟಾರ್ಥಗಳೆಂಬ ಮಳೆಯನ್ನು ಕೊಡುವವನಾದ ಎಂದರ್ಥವು

ಹವನಶ್ರುತಂ—ನಮ್ಮ ಆಹ್ವಾನವನ್ನು ಕೇಳುವ, ನಮ್ಮ ಮೊರೆಯನ್ನು ಗಮನಿಸುವ.

ಸಹಸ್ರಸಾತಮಾಂ—ಈ ಶಬ್ದದ ವಿವರಣೆಯನ್ನು ಹಿಂದೆಯೇ ಕೊಟ್ಟಿದೇವೆ. (ಋ. ಸಂ. ೧-೩-೯ನೇ ಋಕ್ಕನ್ನು ನೋಡಿ).

ವ್ಯಾಕರಣಪ್ರಕ್ರಿಯಾ

ವಿದ್ಮ—ವಿದ ಜ್ಞಾನೇ ಧಾತು, ಇದರ ಮುಂದೆ ಲಟ್. ಅದರ ಸ್ಥಾನದಲ್ಲಿ **ಪರಸ್ಮೈಪದ** ಉತ್ತಮ ಪುರುಷ ಬಹುವಚನ ಮಸ್. ಶಪ್ ವಿಕರಣಕ್ಕೆ **ಅದಿಪ್ರಭೃತಿಭ್ಯಃ ಶಪಃ** (ಪಾ.ಸೂ. ೨-೪-೭೨)ಎಂಬುದರಿಂದ ಲುಕ್. ವಿದೋ ಲಟೋವಾ (ಪಾ. ಸೂ. ೩-೪-೮೩) ವಿದಜ್ಞಾನೇ ಧಾತುವಿನ ಮುಂದೆ ಬಂದ ಲಟ್ಟಸ್ಥಾನದಲ್ಲಿ ಬಂದ ಪರಸ್ಮೈಪದ ಸಂಜ್ಞಕವಾದ ತಿಪ್ ಮೊದಲಾದ ಒಂಭತ್ತು ಪ್ರತ್ಯಯಗಳಿಗೆ ಕ್ರಮವಾಗಿ ಣಲ್,ಅತುಸ್, ಉಸ್, ಥಲ್, ಅಥುಸ್, ಅ,ಣಲ್.ವ, ಮ ಎಂಬ ಆದೇಶಗಳು ಬರುವವು ಎಂಬುದರಿಂದ, ಮಸ್ ಗೆ ಮ ಆದೇಶ ಬರುವುದು. ವಿದ್ಮ ಎಂದಾಗುವುದು. ಸಂಹಿತಾಕಾಲದಲ್ಲಿ **ದ್ವ್ಯಚೋತಸ್ತಿಙಃ** (ಪಾ. ಸೂ. ೬-೩-೧೩೫) ಋಕ್ಕಿನಲ್ಲಿ ಎರಡು ಅಚ್ಚುಳ್ಳ ತಿಙಂತದ ಹ್ರಸ್ವಾಕಾರಕ್ಕೆ ದೀರ್ಘ ಬರುವುದು ಎಂಬುದರಿಂದ ದೀರ್ಘ ಬಂದರೆ ವಿದ್ಮಾ ಎಂದಾಗುವುದು.

ವೃಷಂತಮಮ್—ವೃಷು, ವೃಷು, ಮೃಷು ಸೇಚನೇ, ಧಾತು. ವೃಷ್ ಧಾತುವಿನ ಮುಂದೆ **ಕನಿನ್ ಯುವೃಷಿತಕ್ಷಿರಾಜಿಧನ್ವಿದ್ಯುಪ್ರತಿದಿವಃ** (ಉ. ಫಾ. ೧-೧೫೪) ಎಂಬುದರಿಂದ ಕನಿನ್ ಪ್ರತ್ಯಯ. ಕ್ ಇನ್ ಇವುಗಳಿಗೆ ಇತ್ಸಂಜ್ಞೆ ಲೋಪಗಳು ಬರುವುವು. ಅನ್ ಉಳಿಯುವುದು ವೃಷ+ಅನ್-ವೃಷನ್. ಇದು ನಿತ್ಸ್ವರದಿಂದ ಆದ್ಯುದಾತ್ತ. ಇದರ ಮುಂದೆ ಅತಿಶಯಾರ್ಥದಲ್ಲಿ ತಮಪ್ ಪ್ರತ್ಯಯ. ತಮಪ್ ಪಿತ್ತಾದ್ದರಿಂದ ಅನುದಾತ್ತ. ಆದ್ಯುದಾತ್ತನೇ ನಿಲ್ಲುವುದು. **ಆಯಸ್ಮಯಾದೀನಿಛಂದಸಿ** (ಪಾ. ಸೂ. ೧-೪-೨೦) ಎಂಬುದರಿಂದ ಭ ಸಂಜ್ಞೆಯು ಪದಸಂಜ್ಞೆಯನ್ನು ಬಾಧಿಸಿ ಬರುವುದು. ಆದ್ದರಿಂದ ಪದಸಂಜ್ಞೆ ಬರುವುದಿಲ್ಲ. ಆದ ಕಾರಣ **ನಲೋಪಃ ಪ್ರಾತಿಪದಿಕಾಂತಸ್ಯ** (ಪಾ. ಸೂ ೮-೨-೭) ಎಂಬುದರಿಂದ ನಕಾರಕ್ಕೆ ಲೋಪ ಬರುವುವಿಲ್ಲ.

ವಾ-ಇದು ವೃಷಾದಿಯಲ್ಲಿರುವುದು. ಆದ್ದರಿಂದ ಆದ್ಯುದಾತ್ತ

ಹವನಶ್ರುತಮ್—ಹ್ವೇಞ್ ಧಾತುವಿನ ಮುಂದೆ ಲ್ಯುಟ್ ಪ್ರತ್ಯಯವನ್ನಿಟ್ಟರೆ ಅದಕ್ಕೆ ಅನಾದೇಃ ಬಂದು ಹ್ವೇ+ಅನ ಎಂದಿರುವಾಗ **ಬಹುಲಂ ಛಂದಸಿ** (ಪಾ.ಸೂ. ೬-೧-೩೪) ಇಲ್ಲಿ ಹ್ವೆಸ್ಸಂಪ್ರಸಾರಣಂ (ಪಾ.ಸೂ

६-८-३७) ऐंबुदु अनुवृत्तवागुवुदु. इदरिंद संप्रसारण वकारक्के उकार. संप्रसार णाच्च, पूर्वरूप हु+अन गुण अवादेश हवन. हवनं शृणोति ऐंदु विग्रहवादाग हवन शब्दोपपदकवाद श्रुधातुविन मुंदे क्विप् प्रत्ययु बरुवुदु. **हृस्वस्यपितिकृतितुक्** (पा. सू. ६-८-७१) ऐंबुदरिंद तुगागमु. हवनश्रुत्, द्वितीयाऽ एकवचन अम् प्रत्ययु. हवनश्रुतम् ऐंदागुवुदु.

वृषंतमस्य— वृषंतम ऐंबुदक्के प्रकृतियु मोदलु ई मंत्रदल्लिये वर्णित वागिरुवुदु. षष्ठीविभक्तिऽएकवचनान्त वृषंतमस्य ऐंदागुवुदु.

हूमहे— ह्वेञ् स्पर्धायाम् शब्दोच धातु. इदरमुंदे लट्. अदक्के उत्तमपुरुषबहुवचन महिङ्. **टित आत्मनेपदानांटेरे** (पा सू. ३.४-७९) ऐंबुदरिंद महि ऐंबुदर इकारक्के एकारु. ह्वे+महे शप् विकरण अदक्के बहुलं छंदसि(पा. सू. ३-४-७३) ऐंबुदरिंद लुक्. **बहुलं छंदसि** (पा. सू. ६-४-७५) ह्वस्संप्रसारणं ऐंदु अनुवृत्तवागुवुदु. इदरिंद संप्रसारण बंदु संप्रसारणाच्च ऐंबुदरिंद पूर्वरूप बंदरे हु+महे **हलः** (पा. सू ६-४-२) अंगावयववाद हल् वर्णद मुंदे इरुव संप्रसारण वन्नु कोनेयल्लि कोंडिरुव अंगक्के दीर्घ बरुवुदु ऐंबुदरिंद दीर्घे. हूमहे ऐंदागुवुदु

ऊतिं— ऊतियूतिजूतिसातिहेतिकीर्तयश्च(पा सू. ३-३-९७)ऐंबुदरिंद ई क्तिन् प्रत्ययांतगळु अंतोदात्तवागि निपातितगळागिरुवुवु

सहस्रसातमाम्— सहस्रं सुनोति इति सहस्रसाः. षणुदानदे धातु. **धात्वादेः षः सः**(पा. सू. ६-१-६४) ऐंबुदरिंद षकारक्के सकार, णकारक्के निवृत्ति. सहस्रशब्दोपपदवाद सन् धातुविन मुंदे **जनसनखनक्रमगमोऽ विट्** (पा. सू. ३-२-६२) ई धातुगळ मुंदे विट् प्रत्ययु बरुवुदु ऐंबुदरिंद विट् प्रत्ययु, प्रत्ययद एल्ला वर्णगळिगू लोप- विष्व- नोरनुनासिकस्यात् (पा. सू. ६-४-४१) विट्वन् ई प्रत्ययगळ हिंदे इरुव अनुनासिकक्के आकारादेश बरुवुदु ऐंबुदरिंद आकारादेशवु नकारक्के बरुवुदु. सवर्णदीर्घ सहस्रसा ऐंदागुवुदु. कृदुत्तरपदप्रकृतिस्वर बरुवुदु. इदरमुंदे अतिशयार्थदल्लि तमप् प्रत्ययु. तमप्पु पित्तादुद्दरिंद अनुदात्त. सहस्रसा ऐंबल्लि पूर्वोक्तस्वरवे निल्लुवुदु. स्त्रीलिंग वाद्दरिंद सहस्रसातम ऐंबुदर मुंदे अजाद्यतष्टाप् ऐंबुदरिंद टाप् प्रत्ययु. पित्तादुद्दरिंद टाप्पु अनुदात्त. अंतर्यतनुदिंद टापिनोंदिगे बरुव सवर्णदीर्घवू अनुदात्त. द्वितीयाऽ एकवचन अम् प्रत्ययु. अमिपूर्वः (पा. ६-१-१०३) ऐंबुदरिंद पूर्वरूप. सहस्रसातमाम् ॥ ८० ॥

॥ ಸಂಹಿತಾಪಾಠಃ ॥

ಆ ತೂ ನ॑ ಇಂದ್ರ॒ ಕೌಶಿಕ ಮಂದಸಾನಃ ಸುತಂ ಪಿ॑ಬ ।
ನವ್ಯ॒ಮಾಯುಃ॒ ಪ್ರ ಸೂ ತಿ॑ರ ಕೃಧೀ ಸಹಸ್ರ॒ಸಾಮ್ಯ॒ಷಿಂ ॥೧೧॥

॥ ಪದಪಾಠಃ ॥

ಆ । ತು । ನಃ॒ । ಇಂ॒ದ್ರ॒ । ಕೌ॒ಶಿ॒ಕ॒ । ಮಂ॒ದ॒ಸಾ॒ನಃ । ಸು॒ತಂ । ಪಿ॒ಬ॒ ॥
ನವ್ಯಂ॑ । ಆಯುಃ॑ । ಪ್ರ । ಸು । ತಿ॒ರ॒ । ಕೃ॒ಧಿ॒ । ಸ॒ಹ॒ಸ್ರ॒ಽಸಾಂ । ಋ॒ಷಿಂ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ॒ ತು ಕ್ಷಿಪ್ರಂ ನೋ॒ಽಸ್ಮಾನ್ಪ್ರತ್ಯಾ ಗಚ್ಛೇತಿ ಶೇಷಃ । ಹೇ ಕೌಶಿಕ ಕುಶಿಕಸ್ಯ ಪುತ್ರೇಂದ್ರ ಮಂದಸಾನೋ ಹೃಷ್ಟೋ ಭೂತ್ವಾ ಸುತಮಭಿಷುತಂ ಸೋಮಂ ಪಿಬ । ಯದ್ಯಪಿ ವಿಶ್ವಾಮಿತ್ರಃ ಕುಶಿಕಸ್ಯ ಪುತ್ರಸ್ತಥಾಪಿ ತದ್ಗೋಪೇಣೇಂದ್ರಸ್ಯೈವೋತ್ಪನ್ನತ್ವಾತ್ಕುಶಿಕಪುತ್ರತ್ವಮನಿರುದ್ಧಂ । ಅಯಂ ವೃತ್ತಾಂತೋ॒ಽನುಕ್ರಮಣಿಕಾಯಾಮುಕ್ತಃ । ಕುಶಿಕಸ್ತೈ॒ಷೀರಥಿರಿಂದ್ರತುಲ್ಯಂ ಪುತ್ರಮಿಚ್ಛನ್ಪ್ರಹ್ವ॑ಚರ್ಯಂ ಚಕಾರ। ತಸ್ಯೇಂದ್ರ ಏವ ಗಾಥೀ ಪುತ್ರೋ ಜಜ್ಞೇ। ಅನು. ಋಗ್ವೇ ೩-೧ । ಇತಿ । ಹೇ ಇಂದ್ರ ನವ್ಯಂ ಸರ್ವೈರ್ದೇವೈಃ ಸ್ತುತ್ಯಂ ಕರ್ಮಾನುಷ್ಠಾನಪರಮಾಯುರ್ಜೀವಿತಂ ಪ್ರ ಸೂ ತಿರ । ಪ್ರಕರ್ಷೇಣ ಸುಷ್ಠು ವರ್ಧಯ । ತತೋ ಮಾಂ ಸಹಸ್ರಸಾಂ ಸಹಸ್ರಸಂಖ್ಯಾಕಲಾಭೋಪೇತಮೃಷಿಮತೀಂದ್ರಿಯದ್ರಷ್ಟಾರಂ ಕೃಧಿ । ಕುರು॥ ತು । ಸಂಹಿತಾಯಾಮಚಿ ತುನುಘಮಕ್ಷುತಶಮ್ಯುತೋರುಷ್ಯಾಣಾಮಿತಿ ದೀರ್ಘಃ। ನಃ । ಸಂಹಿತಾಯಾಮುದಾತ್ತಾದನುದಾತ್ತಸ್ಯ ಸ್ವರಿತಃ । ಇಂದ್ರ । ಆಮಂತ್ರಿತನಿಘಾತಃ । ಕೌಶಿಕ । ನಿಘಾತಃ । ಮಂದಸಾನಃ । ಹೃಷ್ಯನ್ । ಮದಿ ಸ್ತುತಿಮೋದಮದಸ್ವಪ್ನಕಾಂತಿಗತಿಷು । ಆಸಾನಜಿತ್ಯನುವೃತ್ತಾವೃಂಜಿವ್ಯಧಿಮಂದಿಸಹಿಭ್ಯಃ ಕಿತ್ । ಉ. ೨-೮೭ । ಇತ್ಯಸಾನಚ್ಪ್ರತ್ಯಯಃ । ಚಿತ್ತ್ವಾದಂತೋದಾತ್ತಃ । ಸುತಂ । ಪ್ರತ್ಯಯಸ್ವರಃ । ನವ್ಯಂ । ಣ ಸ್ತುತೌ । ಅಚೋ ಯತ್ । ಗುಣಃ । ವಾಂತೋ ಯಿ ಪ್ರತ್ಯಯೇ । ಪಾ. ೬-೧ ೭೯ । ಇತ್ಯವಾದೇಶಃ । ಯತೋ॒ಽನಾವ ಇತ್ಯಾದ್ಯುದಾತ್ತತ್ವಂ । ಆಯುಃ । ಉಸಿನಿದಿತ್ಯನುವೃತ್ತಾನೇತೇರ್ಣಿಚ್ಚ । ಉ. ೨-೧೧೯ । ಇತ್ಯುಸಿಪ್ರತ್ಯಯಃ ಣಿತ್ತಾದ್ವೃದ್ಧ್ಯಾಯಾದೇಶೌ । ನಿತ್ತ್ವಾದಾದ್ಯುದಾತ್ತತ್ವಂ । ಸು । ನಿಪಾತಸ್ಯ ಚೇತಿ ಸಂಹಿತಾಯಾಂ ದೀರ್ಘತ್ವಂ । ತಿರ । ತರತೇರ್ವ್ಯತ್ಯಯೇನ ಶಃ । ಋತ ಇದ್ಧಾತೋಃ । ಪಾ. ೭-೧ ೧೦೦ । ಇತೀತ್ವಂ । ಅತೋ ಹೇರಿತಿ ಹೇರ್ಲುಕ್ । ಕೃಧಿ। ಡುಕೃಞ್ ಕರಣೇ । ಬಹುಲಂ ಛಂದಸೀತಿ ಶಪ್ಲೋ ಲುಕ್ । ಶ್ಲು ಶ್ನಸೋರ್ಯಲೋಪಶಾಕಟಾಯನಸ್ಯೇತಿ ಹೇರ್ಧಿರಾದೇಶಃ । ಸಹಸ್ರಸಾಂ । ಉಕ್ತಂ । ಋಷಿಂ । ಋಷೀ ಗತೌ । ಇನ್ನಿತ್ಯನುವೃತ್ತಾವಿಗುಪಧಾತ್ಕಿಚ್ಚ । ಕಿತ್ತ್ವಾದ್ಗುಣಾಭಾವಃ । ನಿತ್ತ್ವಾದಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

(ಹೇ) ಇಂದ್ರ--ಎಲೈ ಇಂದ್ರನೇ । **ತು** ಜಾಗ್ರತೆಯಾಗಿ । **ನಃ**--ನಮ್ಮ (ಸವಿಾಪಕ್ಕೆ) । **ಆ** (ಗಚ್ಛ)—ಬಾ । (**ಹೇ**) **ಕೌಶಿಕ**--ಎಲೈ ಕುಶಿಕಪುತ್ರನಾದ ಇಂದ್ರನೇ । (ನೀನು) **ಮಂದಸಾನಃ**—ಸಂತೋಷವುಳ್ಳವನಾಗಿ। **ಸುತಂ**—ಹಿಂಡಿ ಸಿದ್ಧಪಡಿಸಿರುವ ಸೋಮರಸವನ್ನು । **ಪಿಬ**—ಕುಡಿ । (ನನಗೆ) **ನವ್ಯಂ**—ಪ್ರಾರ್ಥಿಸಲ್ಪಟ್ಟ (ಬೇಕಾದ) । **ಆಯುಃ**—ಆಯುಸ್ಸನ್ನು । **ಪ್ರ ಸು ತಿರ**—ವಿಶೇಷವಾಗಿ ವೃದ್ಧಿಪಡಿಸು । (ನನ್ನನ್ನು) **ಸಹಸ್ರಸಾಂ**—ಸಾವಿರಾರು ಲಾಭಾದಿಗಳನ್ನು ಪಡೆಯುವ । **ಋಷಿಂ**—ಋಷಿಯನ್ನಾಗಿ । **ಕೃಧಿ**-ಮಾಡು ॥

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಬೇಗ ನಮ್ಮ ಬಳಿಗೆ ಬಂದು ನಾವು ಸಿದ್ಧಪಡಿಸಿರುವ ಈ ಸೋಮರಸವನ್ನು ಸಂತೋಷದಿಂದ ಪಾನಮಾಡು. ನಮ್ಮ ಆಯುಸ್ಸನ್ನು ಹೆಚ್ಚುವಂತೆ ಮಾಡು ಮತ್ತು (ಸಾಧಾರಣ) ಋಷಿಯಾಗಿರುವ ನನ್ನನ್ನು ಸಾವಿರಾರು ವಿಧದಲ್ಲಿ ಪ್ರಯೋಜನ ಹೊಂದುವಂತೆ ಮಾಡು.

English Translation

Come quickly, Indra, son of Kusika, and drink the soma libation with delight; prolong the life which we merit and make me a Rishi abundantly endowed with thousands of benefits

॥ ವಿಶೇಷವಿಷಯಗಳು ॥

ತು, ಸು, ಕೃಧಿ—ಈ ಋಕ್ಕಿನಲ್ಲಿರುವ ಈ ಶಬ್ದಗಳ ಅಂತ್ಯಾಕ್ಷರಗಳು ಛಂದಸ್ಸಿನ ಅನುಕೂಲಕ್ಕಾಗಿ ದೀರ್ಘವಾಗಿವೆ.

ಆ--ಈ ಋಕ್ಕಿನಲ್ಲಿ ಆ ಎಂಬ ಉಪಸರ್ಗಮಾತ್ರವಿದೆ ಇದರ ಜತೆಗೆ ಗಚ್ಛ ಎಂಬ ಕ್ರಿಯಾಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಇಂತಹ ಪ್ರಯೋಗಗಳು ಋಗ್ವೇದದಲ್ಲಿ ಬೇಕಾದಷ್ಟಿವೆ.

ಕೌಶಿಕ—ಇಲ್ಲಿ ಇಂದ್ರನನ್ನು ಕುಶಿಕಪುತ್ರನೆಂದು ಸಂಬೋಧನೆ ಮಾಡಿದೆ. ಈ ವಿಷಯದಲ್ಲಿ ಭಾಷ್ಯಕಾರರು ಅನುಕ್ರಮಣಿಕೆಯಲ್ಲಿ ಹೇಳಿರುವ ವೃತ್ತಾಂತವನ್ನು ಉದಾಹರಿಸಿದಾರೆ—

ಕುಶಿಕಸ್ತ್ವಷೀರಥಿರಿಂದ್ರತುಲ್ಯಂ ಪುತ್ರಮಿಚ್ಛನ್ ಬ್ರಹ್ಮಚರ್ಯಂ ಚಚಾರ । ತಸ್ಯೇಂದ್ರ ಏವ ಗಾಧೀ ಪೂತ್ರೋ ಜಜ್ಞೇ ॥

(ಋ. ಅನು. ೩-೧)

ಸ್ಕಂದಸ್ವಾಮಿಯು ಈ ವಿಷಯದಲ್ಲಿ—

ಅತ್ರ ಚೇತಿಹಾಸಮಾಚಕ್ಷತೇ । ಇಷೀರಥಪುತ್ರಃ ಕುಶಿಕೋ ನಾಮ ರಾಜಾ ಪುತ್ರಮಿಂದ್ರತುಲ್ಯಂ ಕಾಮಯಮಾನೋ ಬ್ರಹ್ಮಚರ್ಯಂ ಚಚಾರ । ತಸ್ಯ ಗಾಧೀ ನಾಮೇಂದ್ರ ಏವ ಸ್ವಯಂ ಪುತ್ರೋ ಜಾತ ಇತಿ ॥

ವೆಂಕಟಮಾಧವರು--

ಪುತ್ರಮಿಂದ್ರಸಮಮಿಚ್ಛನ್ ಕುಶಿಕೋ ಬ್ರಹ್ಮಚರ್ಯಂ ಚಚಾರ । ತಸ್ಯೇಂದ್ರಃ ಸ್ವಯಮೇವ ಪುತ್ರೋಽಭೂತ್ । ಸಾಸ್ಯ ಕೌಶಿಕತಾ ॥

ಎಂದು ಹೇಳಿರುವರು. ಮುಖ್ಯಾಭಿಪ್ರಾಯವೇನೆಂದರೆ, ಹಿಂದೆ ಇಷೀರಥನೆಂಬ ರಾಜನಿಗೆ ಕುಶಿಕನೆಂಬ ಪುತ್ರನಿದ್ದನು. ಅವನು ತನಗೆ ಇಂದ್ರನಿಗೆ ಸಮನಾದ ಪುತ್ರನಾಗಬೇಕೆಂದು ಬಯಸಿ ಬ್ರಹ್ಮಚರ್ಯವನ್ನಾಚರಿಸುತ್ತಿದ್ದನು. ಆಗ ಇಂದ್ರನು ಗಾಧಿಯೆಂಬ ಹೆಸರಿನಿಂದ ತಾನೇ ಅವನ ಮಗನಾಗಿ ಹುಟ್ಟಿದನು ಎಂದು. ವಿಶ್ವಾಮಿತ್ರ ಋಷಿಯು ಗಾಧಿರಾಜನ ಮಗನು ಮತ್ತು ಈ ಋಕ್ಕಿನ ದ್ರಷ್ಟಾವಾದ ಮಧುಚ್ಛಂದ ಋಷಿಯು ವಿಶ್ವಾಮಿತ್ರನ ವಂಶೋದ್ಭವನಾದುದರಿಂದ ತನ್ನ ವಂಶದಲ್ಲಿ ಎಂದರೆ ಕುಶಿಕವಂಶದಲ್ಲಿ ಉತ್ಪನ್ನನಾದ ಇಂದ್ರನನ್ನು ಕೌಶಿಕನೆಂದು ಸಂಬೋಧನೆಮಾಡಿರುವನು.

ನವ್ಯಂ—ಭಾಷ್ಯಕಾರರು, **ಣು ಸ್ತುತೌ** ಎಂಬ ಧಾತುವಿನ ರೂಪಾಂತರವೆಂದು ಹೇಳಿ **ನವ್ಯ**ಶಬ್ದಕ್ಕೆ **ಸರ್ವೈರ್ದೇವೈಃ ಸ್ತುತ್ಯಂ ಕರ್ಮಾನುಷ್ಠಾನಪರಂ**—ಕರ್ಮಾನುಷ್ಠಾನಾದಿಗಳಿಗೆ ಸಾಧನವಾದ ಮತ್ತು ಸಮಸ್ತ ದೇವತೆಗಳೂ ಸ್ತುತಿಸುವ ಅಥವಾ ಅಪೇಕ್ಷಿಸುವ ಎಂದು ಅರ್ಥವಿವರಣೆ ಮಾಡಿರುವರು. ಎಂದರೆ **ಸರ್ವರೂ ಅಪೇಕ್ಷಿಸುವ ದೀರ್ಘಾಯುಸ್ಸು** ಎಂದರ್ಥವು ಬಹಳಕಾಲ ಜೀವಿಸಿರಬೇಕೆಂದು ಬಯಸುವುದು ಸಹಜವಾಗಿಯೇ ಇದೆ. ಅಥವಾ ಸ್ವಂದಸ್ವಾಮಿಯು ಹೇಳಿರುವಂತೆ **ನವ್ಯಂ** ಎಂಬ ಶಬ್ದಕ್ಕೆ **ನವಂ**--ಹೊಸದಾದ ಎಂಬ ಅರ್ಥವನ್ನು ಹೇಳುವುದಾದರೆ **ನವ್ಯಂ ಆಯುಃ** ಎಂಬ ಶಬ್ದಗಳಿಗೆ ಹೊಸ ಚೈತನ್ಯವು, ಅಥವಾ ಇಲ್ಲಿಂದ ಮುಂದಕ್ಕೆ ಇನ್ನೂ ಹೆಚ್ಚಾದ ಆಯುಸ್ಸು ಎಂದು ತಾತ್ಪರ್ಯವನ್ನು ಹೇಳಬೇಕು. ಒಟ್ಟಿನಲ್ಲಿ ಹೇಳುವುದಾದರೆ **ಬಹುಕಾಲ ಜೀವಿಸಿರುವಂತೆ ಮಾಡು. ನಮ್ಮ ಆಯುಸ್ಸನ್ನು ವೃದ್ಧಿಪಡಿಸು,** prolong our life **ಎಂದಭಿಪ್ರಾಯವು.**

ಸಹಸ್ರಸಾಂ—ಸಾವಿರಾರು ಲಾಭಗಳು, ಸ್ರಯೋಜನಗಳು, ಅನೇಕ ವಿಧವಾದ ಇಷ್ಟಾರ್ಥಗಳು.

ಋಷಿಂ-ಋಷೀ ಗತೌ- ಎಂಬ ಧಾತುವಿಗೆ ಗತ್ಯರ್ಥ ಅಥವಾ ಜ್ಞಾನಾರ್ಥವಿರುವುದರಿಂದ ಋಷಿಯೆಂದರೆ **ತಿಳಿವಳಿಕೆಯುಳ್ಳವನು, ಪ್ರಜ್ಞಾಶಾಲಿಯು,** ಅಥವಾ ಭಾಷ್ಯಕಾರರು ಹೇಳುವಂತೆ **ಅತೀಂದ್ರಿಯದ್ರಷ್ಟಾರಂ**—**ಬಾಹ್ಯೇಂದ್ರಿಯಗಳಿಗೆ ಗೋಚರವಾಗದ ವಿಷಯಗಳನ್ನು ತಿಳಿದುಕೊಳ್ಳುವ ಶಕ್ತಿಯುಳ್ಳ ಮಹಾಪುರುಷನು** ಎಂದರ್ಥವು. ಇಲ್ಲಿ **ಋಷಿ**ಯೆಂದರೆ ಈ ಮಂತ್ರದ್ರಷ್ಟಾವಾದ ಮಧುಚ್ಛಂದಋಷಿಯು. ತನಗೆ ದೀರ್ಘಾಯುಸ್ಸನ್ನು ಕೊಟ್ಟು ಉತ್ತಮ ಋಷಿಯನ್ನಾಗಿ ಮಾಡಬೇಕೆಂದು ಇಂದ್ರನನ್ನು ಪ್ರಾರ್ಥಿಸುವಾಗ ಉತ್ತಮಪುರುಷ ಕ್ರಿಯಾಪದವನ್ನು ಉಪಯೋಗಿಸದೆ ಪ್ರಥಮಪುರುಷ ಪ್ರಯೋಗವನ್ನೇ ಮಾಡಿರುವನು.

॥ ವ್ಯಾಕರಣಪ್ರಕ್ರಿಯಾ ॥

ತು--ಸಂಹಿತಾಕಾಲದಲ್ಲಿ **ಋಚಿತುನುಘ್ರುಕ್ಷುತಬ್ಕುತ್ರೋರುಷ್ಯಾಣಾಮ್** (ಪಾ.ಸೂ. ೬-೩-೧೩೩) ಎಂಬುದರಿಂದ ತು ಎಂಬುದಕ್ಕೆ ದೀರ್ಘ ಬರುವುದು. **ನಿಪಾತಾ ಆದ್ಯುದಾತ್ತಾಃ** (ಫಿ. ಸೂ. ೮೦) ಎಂಬುದರಿಂದ ಇದು ಉದಾತ್ತ.

ನಃ ಅಸ್ಮಾನ್ ಎಂಬುದಕ್ಕೆ **ಬಹುವಚನಸ್ಯೆವಸ್ನಸೌ** (ಪಾ. ಸೂ. ೮-೧-೨೧) ಎಂಬುದರಿಂದ ಅನು ದಾತ್ತವಾದ ವಸ್ ಆದೇಶ ಬಂದಿರುವುದು, **ಸಂಹಿತಾಕಾಲದಲ್ಲಿ ಉದಾತ್ತಾದನುದಾತ್ತೆಸ್ಯ ಸ್ವರಿತೆಃ** (ಪಾ. ಸೂ. ೮-೪-೬೬) ಎಂಬುದರಿಂದ ನಃ ಎಂಬುದು ಸ್ವರಿತವಾಗುವುದು.

ಇಂದ್ರ—ಇದು ಆಮಂತ್ರಿತ. ಆದ್ದರಿಂದ **ಆಮಂತ್ರಿತಸ್ಯಚೆ** (ಪಾ. ಸೂ. ೮-೧-೧೯) ಎಂಬುದರಿಂದ ಅನುದಾತ್ತ ಬರುವುದು.

ಕೌಶಿಕ—ಇದೂ ಆಮಂತ್ರಿತ. ಆದ್ದರಿಂದ ಸರ್ವಾನುದಾತ್ತ.

ಮಂದಸಾನಃ—ಹೃಷ್ಯನ್ (ಸಂತೋಷಿಸುವನಾಗಿ) ಎಂದರ್ಥ. ಮದಿ ಸ್ತುತಿ ಮೋದ ಮದ ಸ್ವಪ್ನ ಕಾಂತಿಗತಿಷು, ಧಾತು. ಇದರ ಮುಂದೆ **ಋಜಿಜ್ಞಿ ವೃಧಿಮನ್ನಿಸಹಿಭ್ಯಃಕಿತ್** (ಉ. ಸೂ. ೨-೨೪೪) **ಛಂದಸ್ಯೆ ಸಾನಚ್ ಶುಜ್ಯಾಭ್ಯಾಂ** (ಉ. ಸೂ. ೨-೨೪೬) ಎಂಬುದರಿಂದ ಅಸಾನಚ್ ಎಂಬುದು ಅನುವೃತ್ತವಾಗುವುದು. ಋಜಿ ಭರ್ಜನೇ ವೃಧು ವೃದೌ, ಮದಿಸ್ತುತಿಮೋದಮದಸ್ವಪ್ನಕಾಂತಿಗತಿಷು, ಷಹಹಿರ್ಷಣೇ ಈ ಧಾತುಗಳ ಮುಂದೆ ಅಸಾನಚ್ ಪ್ರತ್ಯಯ ಬರುವುದು. ಅದು ಕಿತ್ವಾಗುವುದು ಎಂದು ಸೂತ್ರಾರ್ಥ. ಇಲ್ಲಿ ಬಾಲವು ನೋರಮೆಯಲ್ಲಿ ಋಜಿಗತೌ ಮದೀಹರ್ಷೇ ಧಾತುಗಳು ಎತ್ತಲ್ಪಟ್ಟಿರುವುವು. ಋಜಗತೌ ಎಂದು ಧಾತುವಿದ್ದರೂ ಋಜಿಗತೌ ಎಂಬುದು ಧಾತುಪಾಠದಲ್ಲಿ ಕಾಣಿಸುವುದಿಲ್ಲ. ಮದೀಹರ್ಷೇ ಎಂಬದನ್ನು ಗ್ರಹಿಸದೆ ಅದು ಇದಿತ್ತ ಲ್ಲದೇ ಇರುವುದರಿಂದ ಅದಕ್ಕೆ ನುಮಾಗಮ ಬರುವುದಿಲ್ಲ. ಆದ್ದರಿಂಧ ಪ್ರಕೃತ ಸೂತ್ರದಲ್ಲಿ ಮನ್ದಿ ಎಂಬ ನಿರ್ದೇ ಶವು ಸರಿಯಾಗುವುದಿಲ್ಲ ಅದುದರಿಂದ ಇದು ಲೇಖಕಶೋಧಕ ದೋಷದಿಂದ ಬಂದಿರಬಹುದು ಎಂದು ಭಾವಿಸ ಬಹುದು, ಪ್ರತ್ಯಯವು ಚಿತ್ವಾದ್ದರಿಂದ **ಚಿತೆಃ** (ಪಾ ಸೂ ೬-೧-೧೬೩) ಎಂಬುದರಿಂದ ಅಂತೋದಾತ್ತವಾಗು ವುದು.

ಸುತಮ್—ಕ್ತ ಪ್ರತ್ಯಯಾಂತ, ಪ್ರತ್ಯಯಸ್ವರ ಬರುವುದು.

ನವ್ಯಮ್-ಣು ಸ್ತುತೌ, ಧಾತು. ಣೋನಃ (ಪಾ ಸೂ. ೬-೧-೬೫) ಎಂಬುದರಿಂದ ಣಕಾರಕ್ಕೆ ನಕಾರ ಆಜೋಯತ್ (ಪಾ. ಸೂ. ೩-೧-೯೬) ಅಜಂತವಾದ ಧಾತುವಿನ ಮುಂದೆ ಯತ್ ಪ್ರತ್ಯಯ ಬರುವುದು ಎಂಬುದ ರಿಂದ ಯತ್ ನು+ಯ. ಯ ಎಂಬ ಆರ್ಧಧಾತುಕ ಪ್ರತ್ಯಯ ಪರದಲ್ಲಿರುವುದರಿಂದ ಸಾರ್ವಧಾತುಕಾರ್ಧಧಾತು ಕಯೋಃ, ಎಂಬುದರಿಂದ ಗುಣ. ಉಕಾರಕ್ಕೆ ಓಕಾರ. ನೋ+ಯ **ವಾಂತೋಯಿ ಪ್ರತ್ಯಯೇ** (ಪಾ. ಸೂ. ೬-೧-೭೯) ಯಕಾರಾದಿಯಾದ ಪ್ರತ್ಯಯ ಪರದಲ್ಲಿರುವಾಗ ಓಕಾರ ಔಕಾರಗಳಿಗೆ ಕ್ರಮವಾಗಿ ಅವ್, ಆವ್ ಆದೇ ಶಗಳು ಬರುವುವು ಎಂಬುದರಿಂದ ಪ್ರತ್ಯಯದ ಹಿಂದೆ ಇರುವ ಓಕಾರಕ್ಕೆ ಅವ್ ಆದೇಶ. ನವ್ಯ. **ಯತೋೞನಾವಃ** (ಪಾ. ಸೂ. ೬-೧-೨೧೩) ಎಂಬುದರಿಂದ ಆದ್ಯುದಾತ್ತಸ್ವರ ಬರುವುದು- ದ್ವಿತೀಯಾ ಏಕವಚನವನ್ನು ಹಚ್ಚಿದರೆ ನವ್ಯಮ್ ಎಂದಾಗುವುದು.

ಆಯುಃ—**ಏತೇರ್ಣಿಚ್ಚೆ** (ಉ ಸೂ. ೨-೨೭೫) **ಜನೇರುಸಿಃ** (ಉ ಸೂ ೨-೨೭೬) ಎಂಬುದರಿಂದ ಉಸಿಃ ಎಂದೂ **ಆರ್ಚಿಷ್ಯಾವಸಿಯಜಿತನಿಧನಿತಪಿಭ್ಯೋನಿತ್** (ಉ. ಸೂ ೨-೨೭೪) ಎಂಬುದರಿಂದ ನಿತ್ ಎಂದೂ ಎರಡು ಪದಗಳು ಅನುವೃತ್ತಗಳಾಗುವುವು ಇಣ್ ಗತೌ ಎಂಬ ಧಾತುವಿನ ಮುಂದೆ ಉಸಿ ಪ್ರತ್ಯಯ ಬರುವುದು. ಅದು ಣಿತ್ವಾ, ನಿತ್ವಾ ಸಹ ಆಗುವುದು ಎಂದ. ಸೂತ್ರಾರ್ಥಸಿದ್ಧವಾಗುವುದು. ಇದರಿಂದ ಇಣ್

ಧಾತುವಿನ ಮುಂದೆ ಉಸ್ ಪ್ರತ್ಯಯ ಬಂದರೆ ಇ+ಉಸ್-ಪ್ರತ್ಯಯ ಣಿತ್ವಾದ್ಧರಿಂದ **ಆಚೋಣ್ಣಿ** (ಪಾ. ಸೂ. ೭-೨-೧೧೫) ಎಂಬುದರಿಂದ ವೃದ್ಧಿ ಬಂದರೆ ಸ್ಥಾನಸಾಮ್ಯದಿಂದ ಇಗೆ ಏ ಬರುವುದು. **ಏಚೋಯವಾಯಾವಃ** (ಪಾ.ಸೂ. ೬-೧-೭೮) ಎಂಬುದರಿಂದ ಆಯ್ ಆದೇಶ ಬಂದರೆ ಆಯುಸ್. ರುತ್ವ ವಿಸರ್ಗಗಳು ಬಂದರೆ ಆಯುಃ ಎಂದಾಗುವುದು, ಪ್ರತ್ಯಯವು ಕಿತ್ವಾದ್ದರಿಂದ **ಙ್ಣಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತಸ್ವರ ಬರುವುದು.

ಸು—ಸಂಹಿತಾಕಾಲದಲ್ಲಿ **ನಿಪಾತಸ್ಯ ಚ** (ಪಾ. ಸೂ. ೬-೩-೧೩೬) ಎಂಬುದರಿಂದ ದೀರ್ಘ ಬರುವುದು.

ತಿರ—ತ್ಯ ಪ್ಲವನತರಣಯೋಃ ಧಾತು. ಭಾದಿಯಲ್ಲಿ(೧ನೇಗಣ)ರುವುದು. ಇದರ ಮುಂದೆ ಲೋಟ್ ಆದಕ್ಕೆ ಮಧ್ಯಮಪುರುಷ ಏಕವಚ ಸಿಪ್. **ಸಿಪ್ಪಿಗೆ ಸೇರ್ಧ್ಯಪಿಚ್ಚೆ** (ಪಾ. ಸೂ ೩-೪-೮೭) ಎಂಬುದರಿಂದ ಹಿ ಆದೇಶ ತ್ಯ+ಹಿ. ನ್ಯಾಯವಾಗಿ ಶಪ್ ವಿಕರಣ ಬರಬೇಕು. ಆದರೂ ವ್ಯತ್ಯಯದಿಂದ ಶ ಎಂಬ ವಿಕರಣ ಪ್ರತ್ಯಯ ಬರುವುದು. ಶ, ಎಂಬುದು ಅಪಿತ್ವಾದ ಸಾರ್ವಧಾತುಕ. ಆದ್ದರಿಂದ **ಸಾರ್ವಧಾತುಕಮಪಿತ್** (ಪಾ. ಸೂ. ೧-೨-೪) ಎಂಬುದರಿಂದ ಜಿತ್ವಾಗುವುದು, **ಕ್ಙಿತಿಚ** (ಪಾ. ಸೂ ೧-೧-೫) ಎಂಬುದರಿಂದ ಗುಣಕ್ಕೆ ನಿಷೇಧ ಬರುವುದು. **ಋತೋಇದ್ಧಾತೋಃ** (ಪಾ. ಸೂ. ೭-೧-೧೦೦) ಋಕಾರಾಂತ ಧಾತುರೂಪವಾದ ಅಂಗಕ್ಕೆ ಇತ್ವ ಬರುವುದು ಎಂಬುದರಿಂದ ಬರುವ ಇತ್ವವು **ಆಲೋಂತ್ಯಸ್ಯ** (ಪಾ. ಸೂ. ೧-೧-೫೩) ಎಂಬುದರಿಂದ ಕೊನೆಯಲ್ಲಿರುವ ಋಕಾರಕ್ಕೆ ಬರುವುದು. ಆದು **ಉರಣ್ರಪರಃ** (ಪಾ. ಸೂ. ೧-೧-೫೧) ಎಂಬುದರಿಂದ ರೇಫ ಶಿರಸ್ಕವಾಗಿ ಬರುವುದು. ತಿರ್+ಇ+ಹಿ **ಆತೋಹೇಃ** (ಪಾ. ಸೂ. ೬-೪-೧೦೫) ಆದಂತಾಂಗದ ಮುಂದೆ ಇರುವ ಹಿಗೆ ಲುಕ್ ಬರುವುದು ಎಂಬುದರಿಂದ ಹಿಗೆ ಲುಕ್ ಬರುವುದು. ತಿರ ಎಂದಾಗುವುದು,

ಕೃಧಿ—ಡುಕೃಞ್ ಕರಣೇ, ಧಾತು ಲೋಟ್. ಆದಕ್ಕೆ ಸಿಪ್. ಆದಕ್ಕೆ ಹಿ ಆದೇಶ. ಕೃ+ಹಿ ಶಪ್ ವಿಕರಣಕ್ಕೆ **ಬಹುಲಂ ಛಂದಸಿ** (ಪಾ. ಸೂ. ೨-೪-೭೬) ಎಂಬುದರಿಂದ ಲುಕ್. **ಶ್ಲುಶ್ಲಣುಸ್ಯ ಕೃವೃಭ್ಯಶ್ಛಂದಸಿ** (೬-೪.೧೦೨) ಎಂಬುದರಿಂದ ಹಿಗೆ ಧಿ ಆದೇಶ. ಕೃಧಿ ಎಂದಾಗುವುದು.

ಸಹಸ್ರಸಾಮ್--ಪೂರ್ವಮಂತ್ರದಲ್ಲಿ ವಿವೃತವಾಗಿರುವುದು.

ಋಷಿಮ್--ಋಷೀ ಗತೌ ಧಾತು **ಇಗುಪಧಾತ್ಕಿತ್** (ಉ. ಸೂ. ೪-೧೧೯) **ಸರ್ವಧಾತುಭ್ಯ ಇನ್** (ಉ. ಸೂ. ೪-೧೧೭) ಎಂಬುದರಿಂದ ಇನ್ ಎಂಬುದು ಅನುವೃತ್ತವಾಗುವುದು. ಇಗುಪಧವಾದ ಧಾತುವಿನ ಮುಂದೆ ಇನ್ ಪ್ರತ್ಯಯ ಬರುವುದು ಅದು ಕಿತ್ವಾಗುವುದು ಎಂಬುದರಿಂದ ಋಷ್ ಎಂಬುದರ ಮುಂದೆ ಇನ್ ಬರುವುದು. ಪ್ರತ್ಯಯವು ಕಿತ್ವಾದ್ದರಿಂದ ಗುಣನಿಷೇಧ ಬರುವುದು. ನಿತ್ವಾದ್ದರಿಂದ **ಙ್ಣಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬ.ದರಿಂದ ಆದ್ಯುದಾತ್ತ ಬರುವುದು. ಇದರ ಮುಂದೆ ದ್ವಿತೀಯಾವಿಭಕ್ತಿ ಏಕವಚನ **ಅಮ್** ಪ್ರತ್ಯಯವನ್ನಿಟ್ಟರೆ ಪೂರ್ವರೂಪ ಬಂದು ಋಷಿಮ್ ಎಂದಾಗುವುದು ॥ ೧೧ ॥

॥ ಸಂಹಿತಾಪಾಠಃ ॥

ಪರಿ᳡ ತ್ವಾ ಗಿರ್ವಣೋ ಗಿರ ಇಮಾ ಭವಂತು ವಿಶ್ವತಃ ।
ವೃದ್ಧಾಯುಮನು ವೃದ್ಧಯೋ ಜುಷ್ಟಾ ಭವಂತು ಜುಷ್ಟಯಃ॥೧॥

॥ ಪದಪಾಠಃ ॥

ಪರಿ᳡ । ತ್ವಾ । ಗಿರ್ವಣಃ । ಗಿರಃ । ಇಮಾಃ । ಭವಂತು । ವಿಶ್ವತಃ ।
ವೃದ್ಧ ಽ ಆಯುಂ । ಅನು । ವೃದ್ಧಯಃ । ಜುಷ್ಟಾಃ । ಭವಂತು । ಜುಷ್ಟಯಃ ॥೧॥

॥ ಸಾಯಣಭಾಷ್ಯಂ ॥

ಪ್ರವರ್ಗ್ಯೇ ಪರಿ ತ್ವೇತ್ಯಭಿಷ್ಟುಯಾತ್ । ಸ್ಪೃಹ್ಯೋ ವೇದಕರ್ಮಿಣಃ ಋಂಡೇ ಪರಿ ತ್ವಾ ಗಿರ್ವಣೋ ಗಿರೋಽಧಿ ದ್ವಯೋರಧಧಾ ಉಕ್ಥ್ಯಂ ವಚಃ। ಆ. ೪-೬ । ಇತಿ ಸೂತ್ರಿತಂ । ತಥಾ ಹವಿರ್ಧಾನಪ್ರವರ್ತನೇ ಸೇಯಂ ಪರಿಧಾನೀಯಾ । ಹವಿರ್ಧಾನೇ ಪ್ರವರ್ತಯಂತೀತಿ ಋಂಡೇ ಪರಿ ತ್ವಾ ಗಿರ್ವಣೋ ಗಿರ ಇತಿ ಪರಿದಧ್ಯಾತ್ । ಆ. ೪-೯ । ಇತಿ ಸೂತ್ರಿತಂ । ತಥಾ ಬ್ರಾಹ್ಮಣಂ ಚ। ಪರಿ ತ್ವಾ ಗಿರ್ವಣೋ ಗಿರ ಇತ್ಯುತ್ತ-ಮಯಾ ಪರಿದಧಾತಿ । ಐ. ಬ್ರಾ. ೧-೨೯ । ಇತಿ ॥

ಹೇ ಗಿರ್ವಣೋಽಸ್ಮದೀಯೈಸ್ತುತಿಭಾಗಿಂದ್ರ ವಿಶ್ವತಃ ಸರ್ವೇಷು ಕರ್ಮಸು ಪ್ರಯುಜ್ಯಮಾನಾ ಇಮಾ ಗಿರೋಽಸ್ಮದೀಯಾ ಸ್ತುತಯಸ್ತ್ವಾ ತ್ವಾಂ ಪರಿ ಭವಂತು । ಸರ್ವತಃ ಪ್ರಾಪ್ನುವಂತು । ಕೀದೃ-ಶ್ಯೋ ಗಿರಃ । ವೃದ್ಧಾಯುಮನು ಪ್ರವೃದ್ಧೇನಾಯುಷ್ಕೇಣೋಪೇತಂ ತ್ವಾಮನುಸೃತ್ಯ ವೃದ್ಧಯೋ ವರ್ಧ-ಮಾನಾಃ । ಕಿಂಚೈತಾ ಗಿರೋ ಜುಷ್ಟಾಸ್ತ್ವಯಾ ಸೇವಿತಾಃ ಸತ್ಯೋ ಜುಷ್ಟಯೋಽಸ್ಮಾಕಂ ಪ್ರೀತಿಹೇತವೋ ಭವಂತು ॥ ಗಿರ್ವಣಃ । ಗೀರ್ಭಿರ್ವನ್ಯತ ಇತಿ ಗಿರ್ವಣಾಃ । ವನ ಷಣ ಸಂಭಕ್ತೌ । ಸರ್ವಧಾತುಭ್ಯೋಽಸು-ಸುನ್ । ಗಿರ ಉಪಧಾಯಾ ದೀರ್ಘಾಭಾವಶ್ಛಾಂದಸಃ । ಆಮಂತ್ರಿತನಿಘಾತಃ । ವಿಶ್ವತಃ । ಲಿತೀತಿ ಪ್ರತ್ಯ-ಯಾತ್ಪೂರ್ವಸ್ಯೋದಾತ್ತತ್ವಂ । ವೃದ್ಧಾಯುಂ । ವೃಧು ವೃದ್ಧೌ । ಕ್ತಸ್ಯೇತ್ಯಯಃ । ಉದಿತೋ ವಾ. । ಸಾ. ೭-೨-೫೬ । ಇತೀಟಃ ಕ್ತ್ವಾಪ್ರತ್ಯಯೇ ನಿಕೆಲ್ಪಿತೇತ್ವಾದ್ಯೆಸ್ಯ ವಿಭಾಷಾ । ಸಾ. ೭-೨-೧೫ । ಇತಿ ನಿಷ್ಠಾ-ಯೋನಿಡಭಾವಃ । ಪ್ರತ್ಯಯಸ್ವರಃ । ಇಣ್ ಗತೌ । ಛಂದಸೀಣಃ । ಉ.೧-೨ । ಇತ್ಯುಣ್ । ಣಿತ್ತ್ವಾದ್ವೃದ್ಧಿಃ । ಆಯಾದೇಶಶ್ಚ । ವೃದ್ಧಮಾಯುರ್ಯಸ್ಯ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ವೃದ್ಧಯಃ ವೃಧೇಃ ಕ್ತಿನಿ ತಿತುತ್ರತಥಸಿಸುಸರಕಸೇಷು ಚ । ಸಾ ೭ ೨-೯ । ಇತೀಡಭಾವಃ । ನಿತ್ತ್ವಾದಾದ್ಯುದಾತ್ತತ್ವಂ ಜುಷ್ಟಾಃ । ಶ್ವಿದಿತೋ ನಿಷ್ಠಾಯಾಂ । ಸಾ. ೭-೨-೪೪ । ಇತೀಡಭಾವಃ । ಜುಷ್ಟಿರ್ಸಿತೇ ಇತ್ಯನು-ವೃತ್ತೌ ನಿತ್ಯಂ ಮಂತ್ರೇ । ಸಾ. ೬-೧ ೨೧೦ । ಇತ್ಯಾದ್ಯುದಾತ್ತತ್ವಂ । ಜುಷ್ಟಯಃ । ಜುಷೀ ಪ್ರೀತಿಸೇವ-ನಯೋಃ ಕ್ತಿನ್ । ತಿತುತ್ರೇತೀಡಭಾವಃ । ನಿತ್ತ್ವಾದಾದ್ಯುದಾತ್ತಃ ॥ ೨೦ ॥

ಪ್ರತಿಪದಾರ್ಥ

(ಹೇ) ಗಿರ್ವಣಃ--ನಮ್ಮಿಂದ ಸ್ತುತಿಸಲ್ಪಡಲು ಆರ್ಹನಾದ ಎಲೈ ಇಂದ್ರನೇ । **ವಿಶ್ವತಃ**--ಎಲ್ಲೆಲ್ಲಿಯೂ ಎಂದರೆ ಎಲ್ಲಾ ಕರ್ಮಗಳಲ್ಲಿಯೂ ನಾವು ಉಪಯೋಗಿಸುವ । **ಇಮಾ ಗಿರಃ**—ಸ್ತೋತ್ರರೂಪವಾದ ಈ ವಾಕ್ಯಗಳು । **ತ್ವಾ**—ನಿನ್ನನ್ನು । **ಪರಿ ಭವಂತು**--ಎಲ್ಲೆಡೆಯಿಂದಲೂ ಬಂದು ಸೇರಲಿ । **ವೃದ್ಧಾಯುಂ**—ದೀರ್ಘಾಯಸ್ಸುಳ್ಳ ನಿನ್ನನ್ನು । **ಅನು**—ಅನುಸರಿಸಿರುವ । **ವೃದ್ಧಯಃ**—ಪ್ರವರ್ಧಮಾನವಾದ । **ಜುಷ್ಟಾಃ**—ನಿನ್ನಿಂದ ಸೇವಿಸಲ್ಪಟ್ಟ (ವಾಕ್ಯಗಳು) । **ಜುಷ್ಟಯಃ**—ನಮಗೆ ಪ್ರೀತಿಯನ್ನುಂಟುಮಾಡುವವುಗಳಾಗಿ । **ಭವಂತು**—ಆಗಲಿ ॥

॥ ಭಾವಾರ್ಥ ॥

ಎಲೈ ಸ್ತುತಿಪ್ರಿಯನಾದ ಇಂದ್ರನೇ, ನಾವು ಮಾಡುವ ಸ್ತುತಿರೂಪವಾದ ಈ ವಾಕ್ಯಗಳು ನಿನ್ನನ್ನು ಸುತ್ತಲೂ ಬಂದು ಸೇರಿ ನಿನಗೆ ಸಂತೋಷವನ್ನುಂಟುಮಾಡಲಿ. ಈ ವಾಕ್ಯಗಳು ನಿನಗೆ ಸಂತೋಷವುಂಟು ಮಾಡುವುದರಿಂದ ನಿನ್ನ ಆಯುಸ್ಸನ್ನು (ಶಕ್ತಿಯನ್ನು) ಹೆಚ್ಚಿಸಲಿ ಮತ್ತು ಈ ನಮ್ಮ ವಾಕ್ಯಗಳು ನಿನಗೆ ಸಂತೋಷವನ್ನುಂಟುಮಾಡುವುದರಿಂದ ನಮಗೂ ಅದರಿಂದ ಸಂತೋಷವುಂಟಾಗಲಿ.

English Translation.

O deserver of praise, may these our praises be on all occasions around you (accepted by you), may they increase your power, O long-lived, and being agreeable to you, may they become our enjoyments.

ವಿಶೇಷವಿಷಯಗಳು

ಈ ಋಕ್ಕಿನ ಅರ್ಥವು ಬಹಳ ತೊಡಕಾಗಿರುವುದು ಅಭಿಸ್ರಾಯವು ಸರಿಯಾಗಿ ಹೊಂದುವುದಿಲ್ಲ. ಋಷಿಯ ಆಶಯವೇನೆಂಬುದು ಸ್ಪಷ್ಟವಾಗಿ ತಿಳಿಯುವಂತಿಲ್ಲ.

ಗಿರ್ವಣಃ—ಗೀರ್ಭಿರ್ವನ್ಯತ ಇತಿ ಗಿರ್ವಣಾಃ । ವನ ಷಣ ಸಂಭಕ್ತೌ॥ **ಅಸ್ಮದೀಯಸ್ತುತಿಭಾಕ್**॥ ನಮ್ಮ ವಾಕ್ಯಗಳಿಂದ ಭಜಿಸಲ್ಪಡುವವನು, ಸ್ತುತಿಸಲ್ಪಡುವವನು, ಸ್ತುತ್ಯರ್ಹನು ಎಂದರ್ಥವು.

ವಿಶ್ವತಃ—ಎಲ್ಲಾ ಕಡೆಗಳಲ್ಲಿಯೂ ಅಥವಾ ಎಲ್ಲಾ ಸಂದರ್ಭಗಳಲ್ಲಿಯೂ.

ವೃದ್ಧಾಯುಂ—ಪ್ರವೃದ್ಧೇನಾಯುಷ್ಯೇಣೋಪೇತಂ—ಹೆಚ್ಚುವ ಅಥವಾ ಹೆಚ್ಚುತ್ತಿರುವ (ವೃದ್ಧಿಯಾಗುತ್ತಿರುವ) ಆಯುಸ್ಸಿನಿಂದ ಕೂಡಿದವನು, ಬಹುಕಾಲ ಜೀವಿಸಿರುವವನು. ಸ್ಕಂದಸ್ವಾಮಿಯು **ಈ** ಶಬ್ದಕ್ಕೆ **ವೃದ್ಧಾನ್ ಶತ್ರೂನ್ ಅತಿಗಂತಾರಂ**—ಶತ್ರುಗಳನ್ನು ನಿಗ್ರಹಿಸುವವನು ಎಂದು ಅರ್ಥಮಾಡಿದಾರೆ.

ಅನು-ಅನುಸೃತ್ಯ, ಪ್ರಾಪ್ಯ—ಎಂದರೆ ನಾವು ಮಾಡುವ ಸ್ತೋತ್ರಗಳು ನಿನಗೆ ಸೇರಿ ಎಂದರೆ ನಿನಗೆ ಕೇಳಿಸಿ.

ವೃದ್ಧಯಃ— **ವರ್ಧಮಾನಾಃ**—ಹೆಚ್ಚಾಗಿ, ವಿಶೇಷವಾಗಿ, ವೃದ್ಧಿಯಾಗುವ, ಬಹಳವಾದ.

ಜುಷ್ಟಾಃ, ಜುಷ್ಟಯಃ— **ಜುಷೀ ಪ್ರೀತಿಸೇವನಯೋಃ**—ಜುಷೀ ಎಂಬ ಧಾತುವಿಗೆ ಪ್ರೀತಿಸು, ಸೇವಿಸು ಎಂದರ್ಥವಿರುವುದರಿಂದ ಈ ಶಬ್ದಗಳಿಗೆ ಪ್ರೀತಿಯನ್ನುಂಟುಮಾಡುವ, ಪ್ರೀತ್ಯಾಸ್ಪದವಾದ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಗಿರ್ವಣಃ— ಗೀರ್ಭಿಃ ವನ್ಯತೇ ಇತಿ ಗಿರ್ವಣಾಃ ಎಂದು ವಿಗ್ರಹ. ಗ್ವಶಬ್ದೇ ಧಾತು. ಕ್ರ್ಯಾದಿಯಲ್ಲಿರುವುದು. ಇದರಮುಂದೆ **ಕ್ವಿಪ್ ಚ** (ಪಾ. ಸೂ. ೩-೨-೭೬) ಎಂಬುದರಿಂದ ಕ್ವಿಪ್ ಪ್ರತ್ಯಯ. **ಋತೇ-ಇದ್ಧಾತೋಃ** (ಪಾ. ಸೂ. ೬-೧-೧೦೦) ಎಂಬುದರಿಂದ ಇತ್ವ ಅದು ಪರವಾಗಿ ಬರುವುದು. ವನಷಣ ಸಂಭಕ್ತ್ಯೌ ಧಾತು. ಇದರಮುಂದೆ **ಸರ್ವಧಾತುಭ್ಯೋ ಽಸುನ್** (ಉ. ಸೂ. ೪-೬೫೪) ಎಂಬುದರಿಂದ ಅಸುನ್ ಪ್ರತ್ಯಯ ಗಿರ್+ಭಿಸ್+ವನಸ್ ಎಂಬುದಕ್ಕೆ ಪ್ರಾತಿಪದಿಕಸಂಜ್ಞೆ ಬಂದು **ಸುಪೋಧಾತುಪ್ರಾತಿಪದಿಕಯೋಃ** (ಪಾ. ಸೂ. ೨-೪-೭೧) ಎಂಬುದರಿಂದ ಭಿಸ್ ಪ್ರತ್ಯಯಕ್ಕೆ ಲುಕ್ ಬರುವುದು. ಪ್ರತ್ಯಯಲಕ್ಷಣದಿಂದ ಗಿರ್ ಎಂಬುದು ಪದ ಆದ್ದರಿಂದ **ವೋರಿಯಹಧಾಯೋದೀರ್ಘ ಇಕಃ** (ಪಾ. ಸೂ. ೮-೨-೭೬) ಪದಾಂತವಿಷಯದಲ್ಲಿ ದೀರ್ಘಾಂತವಕಾರಾಂತಧಾತುಗಳ ಉಪಧಾಭೂತವಾದ (ಉವಾಂತ್ಯವಾದ) ಇಕ್‌ಗೆ ದೀರ್ಘ ಬರುವುದು ಎಂಬುದರಿಂದ ಗಿರ್ ನ ಇಕಾರಕ್ಕೆ ದೀರ್ಘವು ಪ್ರಾಪ್ತವಾಗುವುದು. ಸರ್ವೀವಿಧಯಶ್ಚಂದಸಿ ವಿಕಲ್ಪ್ಯಂತೇ (ಪರಿಭಾ. ೩೫) ಎಂಬುದರಿಂದ ಛಂದಸ್ಸಿನಲ್ಲಿ ದೀರ್ಘವಿಧಿಯೂ ವಿಕಲ್ಪವಾದ್ದರಿಂದ ಬರುವುದಿಲ್ಲ. ಗಿರ್ವನಸ್ ಎಂಬುದರ ಮುಂದೆ ಸಂಬೋಧನಪ್ರಥಮಾವಿಕವಚನ ಸು ಪ್ರತ್ಯಯವನ್ನು ಹಚ್ಚುವುದು. **ಹಲ್‌ಙ್ಯಾಬ್ಭ್ಯಃ** (ಪಾ. ಸೂ. ೬-೧-೬೮) ಎಂಬುದರಿಂದ ಸುಲೋಪ. ಋತ್ವವಿಸರ್ಗಗಳೂ ನಕಾರಕ್ಕೆ ಣಕಾರವೂ ಬಂದರೆ ಗಿರ್ವಣಃ ಎಂದಾಗುವುದು. ಇದು ಅಮಂತ್ರಿತ. ಆದ್ದರಿಂದ **ಅಮಂತ್ರಿತಸ್ಯ ಚ** (ಪಾ. ಸೂ. ೮-೧-೧೯) ಎಂಬುದರಿಂದ ಅನುದಾತ್ತ.

ವಿಶ್ಪತಃ— ತಸಿಲ್ ಪ್ರತ್ಯಯಾಂತ. ಪ್ರತ್ಯಯವು ಲಿತ್. ಆದ್ದರಿಂದ ಪ್ರತ್ಯಯದ ಹಿಂದೆ ಇರುವ ಅಕಾರವು **ಲಿತಿ** (ಪಾ. ಸೂ ೬-೧-೧೯೩) ಎಂಬುದರಿಂದ ಉದಾತ್ತ.

ವೃದ್ಧಾಯುಂ— ವೃಧು ವೃದ್ಧೌ ಧಾತು. ಇದರ ಮುಂದೆ ಕ್ತ ಪ್ರತ್ಯಯ. ವೃಧ್+ತ ವೃಧ್ ಧಾತುವು ಉದಿತ್ತು. ಇದರ ಮುಂದೆ ಕ್ತ್ವಾ ಪ್ರತ್ಯಯವನ್ನಿಟ್ಟರೆ **ಉದಿತೋ ವಾ** (ಪಾ.ಸೂ. ೭-೨-೫೯) ಉದಿತ್ತಾದ ಧಾತುವಿನ ಮುಂದೆ ಇರುವ ಕ್ತ್ವಾ ಪ್ರತ್ಯಯಕ್ಕೆ ಇಡಾಗಮವು ವಿಕಲ್ಪವಾಗಿ ಬರುವುದು ಎಂದು ವಿಕಲ್ಪದಿಂದ ಇಡಾಗಮವನ್ನು ವಿಧಾನಮಾಡಿರುವರು ಆದ್ದರಿಂದ **ಯಸ್ಯ ವಿಭಾಷಾ** (ಪಾ ಸೂ. ೭-೨-೧೫) ಯಾವ ಧಾತುವಿನ ಮುಂದಿರುವ ಪ್ರತ್ಯಯಕ್ಕೆ ಕ್ವಚಿತ್ ಇಡಾಗಮವನ್ನು ವಿಕಲ್ಪವಾಗಿ ವಿಧಿಸುವರೋ ಅದರಮುಂದೆ ಇರುವ ಕ್ತ, ಕ್ತವತು ಪ್ರತ್ಯಯಗಳಿಗೆ ಇಡಾಗಮ ಬರುವುದಿಲ್ಲ ಎಂಬುದರಿಂದ **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ಎಂಬುದರಿಂದ ಪ್ರಾಪ್ತವಾಗುವ ಇಡಾಗಮಕ್ಕೆ ನಿಷೇಧ ಬರುವುದು. ವೃಧ್+ ತ ಎಂದಿರುವಾಗ **ಝಷಸ್ತಥೋ ಧೋ ಽಧಃ** (ಪಾ. ಸೂ. ೮-೨-೪೦) ಧಾ ಧಾತುಸಂಬಂಧಿಯಲ್ಲದ ಝಷ್‌ವರ್ಣದ ಮುಂದೆ ಇರುವ ತಕಾರ ಥಕಾರಗಳಿಗೆ ಧಕಾರ ಬರುವುದು ಎಂಬುದರಿಂದ ಝಷ್ ಪ್ರತ್ಯಾಹಾರದಲ್ಲಿರುವ ಧಕಾರದ ಮುಂದೆ ಇರುವ ತಕಾರಕ್ಕೆ ಧಕಾರ ಬರುವುದು. ವೃಧ್+ಧ **ಝಲಾಂ ಜಶ್ ಝಶಿ** (ಪಾ. ಸೂ. ೮-೪-೫೩) ಝಶ್ ವರ್ಣದ ಹಿಂದೆ ಇರುವ ಝಲ್ ವರ್ಣಗಳಿಗೆ ಜಶ್ ವರ್ಣಗಳು ಬರುವುವು ಎಂಬುದರಿಂದ ಧಕಾರಕ್ಕೆ ದಕಾರ ಬಂದರೆ ವೃದ್ಧ

ಎಂದಾಗುವುದು. ಪ್ರತ್ಯಯಸ್ವರ ಬರುವುದು. ಇಣ್ ಗತೌ ಧಾತು. **ಇವರ್ಣಮುಂದೆ ಛಂದಸೀಣಃ** (ಉ.ಸೂ. ೧-೨) ಛಂದಸ್ಸಿನಲ್ಲಿ ಇಣ್ ಧಾತುವಿನ ಮುಂದೆ ಉಣ್ ಪ್ರತ್ಯಯ ಬರುವುದು ಎಂಬುದರಿಂದ ಉಣ್ ಪ್ರತ್ಯಯಬಂದರೆ ಇ+ಉ. ಉಣ್ ಪ್ರತ್ಯಯವು ಣಿತ್. ಆದ್ದರಿಂದ **ಆಚೋಣ್ಣಿತಿ** (ಪಾ. ಸೂ. ೭-೩-೧೧೫) ಞಿತ್ತು ಣಿತ್ತು ಆದ ಪ್ರತ್ಯಯಗಳು ಪರದಲ್ಲಿರುವಾದ ಅಜಂತವಾದ ಅಂಗಕ್ಕೆ ವೃದ್ಧಿ ಬರುವುದು ಎಂಬುದರಿಂದ ವೃದ್ಧಿಬಂದರೆ ಐ+ಉ **ಏಚೋಯವಾಯಾವಃ** (ಪಾ. ಸೂ. ೬-೧-೭೮) ಎಂಬುದರಿಂದ ಆಯ್ ಆದೇಶ ಬಂದರೆ ಆಯು ಎಂದಾಗುವುದು. ವೃದ್ಧಂ ಆಯುಃ ಯಸ್ಯ ಸಃ ವೃದ್ಧಾಯುಃ ಎಂದು ಬಹುವ್ರೀಹಿಸಮಾಸ. **ಬಹುವ್ರೀಹೌ ಪ್ರಕೃತ್ಯಾ-ಪೂರ್ವಪದಂ** (ಪಾ. ಸೂ. ೬-೩-೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುವುದು.

ವೃದ್ಧಯಃ—**ಸ್ತ್ರಿಯಾಂ ಕ್ತಿನ್** (ಪಾ. ಸೂ. ೩-೩ ೯೪) ಎಂಬುದರಿಂದ ವೃಧ್ ಧಾತುವಿನ ಮುಂದೆ ಕ್ತಿನ್ ಪ್ರತ್ಯಯ, **ತಿ, ತು, ತ್ರೈ ತಥ, ಸಿಸು, ಸರ, ಕ, ಸೇ, ಷುಚೆ** (ಪಾ. ಸೂ. ೭-೩-೯) ಎಂಎಂದರಿಂದ ತಿಗೆ ಇಡಾಗಮ ಬರುವುದಿಲ್ಲ. ಧತ್ವ ಜಶ್ತ್ವಗಳು ಪೂರ್ವದಂತೆಯೇ ಬರುವುವು. ವೃದ್ಧಿ ಎಂದಾಗುವುದು. **ಞ್ನಿತ್ಯಾ-ದಿರ್ನಿತ್ಯಮ್** (ಪಾ. ಸೂ. ೬-೧-೧೭) ಎಂಬುದರಿಂದ ವೃದ್ಧಿ ಎಂಬುದು ಆದ್ಯುದಾತ್ತ. ಪ್ರಥಮಾ ಬಹುವಚನದಲ್ಲಿ ವೃದ್ಧಯಃ ಎಂದಾಗುವುದು.

ಜುಷ್ಟ್ಯಾಃ—**ಜುಷೀ ಪ್ರೀತಿಸೇವನಯೋಃ**—ಇದಿತ್ತಾದ ಧಾತು. ಇದರ ಮುಂದೆ ಕ್ತ ಪ್ರತ್ಯಯ **ಶ್ವೀದಿತೋನಿಷ್ಠಾಮ್** (ಪಾ. ಸೂ. ೭-೨-೧೪) ಶ್ವಿ ಧಾತು ಇದಿತ್ತಾದ ಧಾತು ಇವುಗಳ ಮುಂದೆ ಇರುವ ಕ್ತ, ಕ್ತವತು, ಪ್ರತ್ಯಯಗಳಿಗೆ ಇಡಾಗಮ ಬರುವುದಿಲ್ಲ ಎಂದು ನಿಷೇಧವಿರುವುದರಿಂದ ಕ್ತ ಪ್ರತ್ಯಯಕ್ಕೆ ಇಡಾಗಮ ಬರುವುದಿಲ್ಲ. ಪ್ರತ್ಯಯಸ್ವರವು ಪ್ರಾಪ್ತವಾದರೆ ಅದನ್ನು ಬಾಧಿಸಿ **ನಿತ್ಯಂಮಂತ್ರೇ** (ಪಾ. ಸೂ. ೬-೧-೨೧೦) **ಜುಷ್ಟಾರ್ಪಿತೇಚ ಛಂದಸಿ** (ಪಾ. ಸೂ. ೬-೧-೨೦೯) ಎಂಬ ಪೂರ್ವಸೂತ್ರದಿಂದ ಜುಷ್ಟಾರ್ಪಿತೇ ಎಂಬ ಪದವು ಅನುವೃತ್ತವಾಗುವುದು. ಜುಷ್ಟ ಅರ್ಪಿತ ಎಂಬ ಶಬ್ದಗಳು ಮಂತ್ರದಲ್ಲಿ ನಿತ್ಯವಾಗಿ ಆದ್ಯುದಾತ್ತಗಳಾಗುವುವು ಎಂಬುದರಿಂದ ಆದ್ಯುದಾತ್ತ ಬರುವುದು.

ಜುಷ್ಟಯಃ—ಜುಷೀ ಪ್ರೀತಿಸೇವನಯೋಃ ಧಾತು. ಕ್ತಿನ್ ಪ್ರತ್ಯಯ. **ತಿತುತ್ರ**.... (ಪಾ. ಸೂ. ೭-೨-೯) ಎಂಬುದರಿಂದ ಇಡಾಗಮ ಬರುವುದಿಲ್ಲ **ಷ್ಟುನಾಷ್ಟುಃ** (ಪಾ- ಸೂ. ೮-೪-೪೧) ಎಂಬುದರಿಂದ ಷ್ಟುತ್ವ ಬಂದು ತಕಾರಕ್ಕೆ ಟಕಾರ, ಜುಷ್ಟಿ ಎಂದಾಗುವುದು. ನಿತ್ಸ್ವರದಿಂದ ಆದ್ಯುದಾತ್ತ. ಪ್ರಥಮಾಬಹುವಚನದಲ್ಲಿ ಜುಷ್ಟಯಃ ಎಂದಾಗುವುದು. ॥ ೧೨ ॥

॥ ಇತಿ ದಶಮಂ ಸೂಕ್ತಂ ಸಮಾಪ್ತಂ ॥

ಇಲ್ಲಿಗೆ ಪ್ರಥಮಮಂಡಲದಲ್ಲಿ ಹತ್ತನೆಯ ಸೂಕ್ತವು ಮುಗಿದುದು.

॥ ಓಂ ॥

ಹನ್ನೊಂದನೆಯ ಸೂಕ್ತವು

ಇಂದ್ರಂ ವಿಶ್ವಾ ಇತ್ಯಷ್ಟರ್ಚಸ್ಯ ಸೂಕ್ತಸ್ಯ ಮಧುಚ್ಛಂದಸಃ ಪುತ್ರೋ ಜೇತೃನಾಮಕ ಋಷಿಃ। ತಥಾ ಜಾನುಕ್ರಾಂತಂ। ಇಂದ್ರಮಷ್ಟೌ ಜೇತಾ ಮಾಧುಚ್ಛಂದಸ ಇತಿ । ಛಂದಸ್ತ್ವಾನುಷ್ಟುಭಮಿತಿ ಪೂರ್ವ-ಸೂತ್ರೋಕ್ತಂ । ಇಂದ್ರೋ ದೇವತಾನುವರ್ತತೇ ॥ ವಿನಿಯೋಗಸ್ತು । ಮಹಾವ್ರತೇ ನಿಷ್ಕೇವಲ್ಯೇ ಕೃ-ತ್ಸ್ನಸೂಕ್ತಂ ಶಂಸನೀಯಂ । ಊರೂ ಇತಿ ಖಂಡೇ ಶೌನಕೇನ ಸೂತ್ರಿತಂ । ಇಂದ್ರಂ ವಿಶ್ವಾ ಅವೀವೃಧ-ನಿತ್ಯಾನುಷ್ಟುಭಂ ತಸ್ಯ ಪ್ರಥಮಾಯಾಃ ಪೂರ್ವಮರ್ಧರ್ಚಂ ಶಸ್ತ್ರೋತ್ಪತ್ತೌ ಶಸ್ತ್ರೋತ್ಪತ್ತೌ ಪೂರ್ವಮರ್ಧರ್ಚಂ ವ್ಯತಿಷಜತಿ ಪಾದ್ಯೈಃ ಪಾದಾನನುಷ್ಟುಪ್ಕಾರಂ ಪ್ರಾಗುತ್ತಮಾಯಾಃ । ಐ.ಆ. ೫ ೩-೧ । ಇತಿ । ಬ್ರಾಹ್ಮಣಂ ಚ ಪ್ರಥಮಾರಣ್ಯಕೇ ಪಠ್ಯತೇ ಪ್ರ ವೋ ಮಹ ಇತಿ ಖಂಡೇ । ಇಂದ್ರಂ ವಿಶ್ವಾ ಅವೀ-ವೃಧ್ವನ್ನಿತಿ ಪದಾನುಷಂಗಾಃ । ಐ. ಆ. ೧-೫-೨ । ಇತಿ । ತಥಾ ಪೃಷ್ಠ್ಯಸ್ಯ ಪಂಚಮೇಽಹನಿ ನಿಷ್ಕೇವಲ್ಯೇ ಶಸ್ತ್ರ ಇಂದ್ರಂ ವಿಶ್ವಾ ಅವೀವೃಧನ್ನಿತ್ಯನುರೂಪಸ್ತೃಚಃ। ಸ್ತೋಮೇ ವರ್ಧಮಾನ ಇತಿ ಖಂಡೇ ಸೂತ್ರಿತಂ ಉಪ ನೋ ಹರಿಭಿಃ ಸುತಮಿಂದ್ರಂ ವಿಶ್ವಾ ಅವೀವೃಧನ್ । ಆ ೭-೧೨ । ಇತಿ ॥

ಅನುವಾದವು

ಇಂದ್ರಂ ವಿಶ್ವಾ ಎಂಬ ಈ ಸೂಕ್ತಕ್ಕೆ ಮಧುಚ್ಛಂದಋಷಿಯು ಪುತ್ರನಾದ ಜೇತಾ ಎಂಬುವನು ಋಷಿಯು ಅನುಕ್ರಮಣಿಕೆಯಲ್ಲಿಯೂ ಇಂದ್ರಮಷ್ಟೌ ಜೇತಾ ಮಾಧುಚ್ಛಂದಸ ಇತಿ ಎಂದರೆ ಎಂಟು ಋಕ್ಕು ಗಳುಳ್ಳ ಇಂದ್ರಂ ವಿಶ್ವಾ ಎಂಬ ಸೂಕ್ತಕ್ಕೆ ಮಧುಚ್ಛಂದಪುತ್ರನಾದ ಜೇತಾ ಎಂಬುವನು ಋಷಿಯು ಎಂದು ಹೇಳಲ್ಪಟ್ಟಿದೆ. ಛಂದಸ್ಸು ಅನುಷ್ಟುಪ್ ಎಂದು ಹಿಂದೆಯೇ ಹೇಳಿದೆ ಇಂದ್ರನೇ ದೇವತೆಯು. ವಿನಿಯೋಗವೇನೆಂದರೆ— ಮಹಾವ್ರತವೆಂಬ ಯಾಗದಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಪಠನ ಮಾಡುವಾಗ ಈ ಸೂಕ್ತವೆಲ್ಲವನ್ನೂ ಪಠಿಸ ಬೇಕು ಎಂದು ಶೌತ್ರಸೂತ್ರದ ಊರೂ ಎಂಬ ಖಂಡದಲ್ಲಿ ಶೌನಕರು ಹೇಳಿರುವರು ಮತ್ತು ಐತರೇಯಾರಣ್ಯಕ ದಲ್ಲಿ (ಐ.ಆ. ೫-೨-೧) ಇಂದ್ರಂ ವಿಶ್ವಾ ಅವೀವೃಧನ್ನಿತ್ಯಾನುಷ್ಟುಭಂ ಎಂದು ಮೊದಲಾಗಿ ಈ ಸೂಕ್ತದ ವಿನಿಯೋ ಗಕ್ರಮವನ್ನೂ ಮತ್ತು ಇದರ ವಿವರಣೆರೂಪವಾದ ಬ್ರಾಹ್ಮಣ ಭಾಗವನ್ನೂ ಅದೇ ಆರಣ್ಯಕದಲ್ಲಿ (ಐ.ಆ. ೧-೫-೨) ಪ್ರ ವೋ ಮಹೇ ಎಂಬ ಖಂಡದಲ್ಲಿಯೂ ಹೇಳಿರುವುದು. ಮತ್ತು ಪೃಷ್ಠ್ಯಯಾಗದ ಐದನೇ ದಿನಸದಲ್ಲಿ ನಿಷ್ಕೇವಲ್ಯ ಶಸ್ತ್ರಮಂತ್ರಪಠನ ಮಾಡುವಾಗ ಇಂದ್ರಂ ವಿಶ್ವಾ ಅವೀವೃಧನ್ ಎಂದು ಮೊದಲಾಗುವ ಮೂರು ಋಕ್ಕುಗಳನ್ನು ಸ್ತೋಮಾಪಾಪಕ್ಕಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಉಪ ನೋ ಹರಿಭಿಃ ಸುತ-ಮಿಂದ್ರಂ ವಿಶ್ವಾ ಅವೀವೃಧನ್** ಎಂಬ ಸೂತ್ರದಲ್ಲಿ ಹೇಳಿರುವುದು.

॥ ಓಂ ॥

ಸೂಕ್ತ—೧೧

॥ ಮಂಡಲ—೧ ॥ ಅನುವಾಕ—೩ ॥ ಸೂಕ್ತ—೧೧ ॥

॥ ಅಷ್ಟಕ —೧ ॥ ಅಧ್ಯಾಯ—೧ ॥ ವರ್ಗ— ೨೧ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೪ ॥

॥ ಋಷಿಃ—ಜೇತಾ ಮಾಧುಚ್ಛಂದಸಃ ॥

॥ ದೇವತಾ—ಇಂದ್ರಃ ॥

॥ ಛಂದಃ—ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಇಂದ್ರಂ ವಿಶ್ವಾ ಅವೀವೃಧನ್ತ್ಸಮುದ್ರವ್ಯಚಸಂ ಗಿರಃ ॥
ರಥೀತಮಂ ರಥೀನಾಂ ವಾಜಾನಾಂ ಸತ್ಪತಿಂ ಪತಿಂ ॥ ೧ ॥

॥ ಪದಪಾಠಃ ॥

ಇಂದ್ರಂ । ವಿಶ್ವಾಃ । ಅವೀವೃಧನ್ । ಸಮುದ್ರ ऽವ್ಯಚಸಂ । ಗಿರಃ ॥
ರಥಿ ऽತಮಂ । ರಥೀನಾಂ । ವಾಜಾನಾಂ । ಸತ್ ऽಪತಿಂ । ಪತಿಂ ॥ ೧ ॥

॥ ಸಾಯಣಭಾಷ್ಯಂ ॥

ವಿಶ್ವಾಃ ಸರ್ವಾ ಗಿರೋ ऽಸ್ಮದೀಯಾಃ ಸ್ತುತಯ ಇಂದ್ರಮವೀವೃಧನ್ । ವರ್ಧಿತವತ್ಯಃ । ಕೀದೃಶಮಿಂದ್ರಂ । ಸಮುದ್ರವ್ಯಚಸಂ ಸಮುದ್ರವದ್ವ್ಯಾಪ್ತವಂತಂ ರಥೀನಾಂ ರಥಯುಕ್ತಾನಾಂ ಯೋದ್ಧೃಣಾಂ ಮಧ್ಯೇ ರಥೀತಮಂ ಅತಿಶಯೇನ ರಥಯುಕ್ತಂ ವಾಜಾನಾಮನ್ನಾನಾಂ ಪತಿಂ ಸ್ವಾಮಿನಂ ಸತ್ಪತಿಂ ಸತಾಂ ಸನ್ಮಾರ್ಗವರ್ತಿನಾಂ ಪಾಲಕಂ ॥ ವಿಶ್ವಾಃ । ವಿಶೇಃ ಕ್ವನ್ । ನಿತ್ಸರ್ವಃ । ಅವೀವೃಧನ್ । ವೃಧೇರ್ಣಿಚಿ ಚಬ್ಯುರ್ಯದಿತ್ಯನುವೃತ್ತೌ ನಿತ್ಯಂ ಛಂದಸಿ । ಸಾ ೭-೪-೭೨ । ಇತ್ಯೃಕಾರಸ್ಯ ಋಕಾರವಿಧಾನಾಲ್ಲಘೂಪಧಗುಣಾಭಾವಃ । ನಿಘಾತಸ್ವರಃ । ಸಮುದ್ರವ್ಯಚಸಂ । ವ್ಯಚೇರಸುನ್ । ಗಾಙ್ಕುಟಾದಿಭ್ಯೋ ऽಞ್ಣ್ನಿತ್ । ಪಾ. ೧-೨-೧ । ಇತಿ ಪ್ರಾಪ್ತಸ್ಯ ಙಿತ್ವಸ್ಯ ವ್ಯಚೇಃ ಕುಟಾದಿತ್ವಮನಸಿ । ಪಾ. ೧-೨-೧-೧ ।

ಇತ್ಯಸಿನಿಷೇಧಾದ್ಧ್ರಹಿಜ್ಯೇತ್ಯಾದಿನಾ ಜಾತಿ ವಿಧೀಯಮಾನಂ ಸಂಪ್ರಸಾರಣಂ । ಪಾ. ೬-೧.೧೬ । ನ ಭವತಿ ಸಮುದ್ರವ್ಯಚೆ ಇವ ವ್ಯಚೋ ಯಸ್ಯ। ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ರಥೀತಮಂ ರಥೀನಾಂ ರಥಶಬ್ದಾದುತ್ಪನ್ನಸ್ಯೇನಶ್ಚಾಂದಸಂ ದೀರ್ಘತ್ವಂ । ಪ್ರತ್ಯಯಸ್ವರೇಣೋದಾತ್ತತ್ವಂ ಚ । ವಾಜಾನಾಂ । ವೃಷಾದಿತ್ವಾದಾದ್ಯುದಾತ್ತತ್ವಂ । ಸತ್ಪತಿಂ । ಪತ್ಯುನ್ನತೌ ಶ್ಯೈ । ಪಾ. ೬-೩-೬೦ । ಇತಿ ಪೂರ್ವಪದ-ಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ವಿಶ್ವಾಃ—ಸಮಸ್ತವಾದ । **ಗಿರಃ**—ನಾವು ಮಾಡುವ ಸ್ತೋತ್ರರೂಪವಾದ ವಾಕ್ಯಗಳು । **ಸಮುದ್ರ-ವ್ಯಚಸಂ**—ಸಮುದ್ರದಂತೆ ವ್ಯಾಪಿಸಿರುವ । **ರಥೀನಾಂ**—ರಥಯುಕ್ತರಾದ ಯುದ್ಧಭಟರ (ಮದ್ಯದಲ್ಲಿ) । **ರಥೀ-ತಮಂ**—ಅತಿಶಯವಾಗಿ ರಥದಿಂದ ಕೂಡಿರುವ। **ವಾಜಾನಾಂ**—ಅನ್ನಾದ್ಯಾಹಾರಗಳಿಗೆ। **ಪತಿಂ**—ಸ್ವಾಮಿಯಾದ । **ಸತ್ಪತಿಂ**—ಸಜ್ಜನರ ರಕ್ಷಕನಾದ । **ಇಂದ್ರಂ**—ಇಂದ್ರನನ್ನು । **ಅವೀವೃಧನ್**—ಅಭಿವೃದ್ಧಿಪಡಿಸಿರುವವು ಎಂದರೆ ಪ್ರಶಂಸೆ ಮಾಡಿರುವವು ॥

॥ ಭಾವಾರ್ಥ ॥

ಇಂದ್ರನು ಸಮುದ್ರದಂತೆ ಸರ್ವವ್ಯಾಪಿಯು; ರಥದಲ್ಲಿ ಕುಳಿತು ಯುದ್ಧವಮಾಡುವ ವೀರಭಟರಲ್ಲಿ ಅತ್ಯಂತ ಶ್ರೀಷ್ಠನು, ಅನ್ನಾದ್ಯಾಹಾರಗಳಿಗೆ ಒಡೆಯನು, ಸಜ್ಜನರ ಪಾಲಕನು. ಇಂತಹ ಇಂದ್ರನನ್ನು ನಮ್ಮ ಸ್ತುತಿರೂಪವಾದ ವಾಕ್ಯಗಳೆಲ್ಲಾ ಪ್ರಶಂಸೆ ಮಾಡಿರುವವು.

English Translation

All our praises have glorified Indra who is as great as the ocean, who is the best charioteer of all charioteers, the lord of food, the protector of the virtuous.

॥ ವಿಶೇಷವಿಷಯಗಳು ॥

ಅವೀವೃಧನ್—ವೃಧ್ ಧಾತುವು ಸಾಧಾರಣವಾಗಿ ಋಗ್ವೇದದಲ್ಲಿ ಪ್ರಶಂಸೆಮಾಡು ಸ್ತುತಿಸು ಎಂಬ ಅರ್ಥದಲ್ಲಿ ಉಪಯೋಗಿಸಲ್ಪಡುವುದು. ಈ ಋಕ್ಕಿನಲ್ಲಿ ಗಿರಃ ಇಂದ್ರಂ ಅವೀವೃಧನ್ ಎಂದರೆ ನಮ್ಮ ವಾಕ್ಯಗಳು ಇಂದ್ರನನ್ನು ಪ್ರಶಂಸೆಮಾಡಿರುವವು, ಹೊಗಳಿರುವವು ಎಂದರ್ಥವು.

ಸಮುದ್ರವ್ಯಚಸಂ—ಸಮುದ್ರದಂತೆ ವ್ಯಾಪ್ತನಾದ. ಈ ಉಪಮಾನವು ಅಷ್ಟೇನೂ ಸಮಂಜಸವಾಗಿರುವುದಿಲ್ಲ. ಏಕೆಂದರೆ ಸಮುದ್ರವು ಎಲ್ಲೆಲ್ಲಿಯೂ ವ್ಯಾಪಿಸಿರುವುದಿಲ್ಲ. ಆದರೆ ಸಮುದ್ರವು ಬಹುವಿಸ್ತಾರವಾಗಿಯೂ, ಆಗಾಧವಾಗಿಯೂ ಇರುವುದರಿಂದ ಋಷಿಯು ಈ ಅಭಿಪ್ರಾಯವನ್ನೇ ಮನಸ್ಸಿನಲ್ಲಿಟ್ಟುಕೊಂಡು ಸಮುದ್ರದ ಉಪಮಾನವನ್ನು ಕೊಟ್ಟಿರಬಹುದು.

ರಥೀತಮಂ, ರಥೀನಾಂ—ಋಗ್ವೇದದಲ್ಲಿ ಇಂತಹ ದ್ವಿರುಕ್ತಿಗಳು ಬಹಳವಾಗಿವೆ. **ವಸೋರಿಂದ್ರಂ ವಸುಪತಿಂ ; ಸೋಮಪಾ ಸೋಮಪೀತಯೇ** ಎಂದು ಮೊದಲಾದ ಅನೇಕ ಉದಾಹರಣೆಗಳನ್ನು ಕೊಡ ಬಹುದು. ಈ ಪದಗಳಿಗೆ ರಥಿಕರಲ್ಲಿ ಶ್ರೇಷ್ಠನಾದವನು ಎಂದರ್ಥವು.

ಸತ್ಪತಿಂ—**ಸತಾಂ ಪತಿಂ ಪಾಲಕಂ**—ಸಜ್ಜನರ ಸಂರಕ್ಷಕನು, ಪಾಲಕನು ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ವಿಶ್ವಾಃ—**ವಿಶ ಪ್ರವೇಶನೇ, ಧಾತು.** ಇದರ ಮುಂದೆ **ಅಶೂಪ್ರುಷಿಲಟಿಕಣಿಖಟಿವಿಶಿಭ್ಯಃ ಕ್ವನ್** (ಉ. ಸೂ. ೧-೧೯೯) ಎಂಬುದರಿಂದ ಕ್ವನ್‌ಪ್ರತ್ಯಯ ವಿಶ್ವನ್. ಇದು ನಿತ್ಸ್ವರದಿಂದ ಆದ್ಯುದಾತ್ತ.

ಅವೀವೃಧ—ವೃಧು ವರ್ಧನೇ ಧಾತು. ಇದರ ಮುಂದೆ ಣಿಚ್ಪ್ರತ್ಯಯ. ಣಿಜಂತಾಲ್ಲುಙ್. ಲುಙ್ಲಙ್ಗೆ ಪ್ರಥಮಪುರುಷ ಏಕವಚನ ಝಿ ಆದೇಶ, ಝಕಾರಕ್ಕೆ ಝೋನ್ತೇಃ (ಪಾ. ಸೂ. ೭-೧-೩) ಎಂಬುದರಿಂದ ಅನ್ತ್ ಆದೇಶ. ಇಕಾರಕ್ಕೆ ಇತೆಶ್ಚ (ಪಾ. ಸೂ. ೩-೪-೧೮೦) ಎಂಬುದರಿಂದ ಲೋಪ, ಸಂಯೋಗಾನ್ತ ಲೋಪ. ಅನ್ ಎಂದಾಗುವುದು. ಚ್ಲೌ ಲುಙಾ (ಪಾ. ಸೂ. ೩-೧-೪೩) ಎಂಬುದರಿಂದ ಣಿಜಂತ ಧಾತುವಿನ ಮುಂದೆ ಚ್ಲಿ ಬರ್ವುದು. ವೃಧ್+ಇ+ಚ್ಲಿ+ಅನ್ **ಣಿಶ್ರಿದ್ರುಸ್ರುಭ್ಯಃ ಕರ್ತರಿ ಚಙ್** (ಪಾ ಸೂ ೩-೧-೪೮) ಕರ್ತೃರ್ಥವಾದ ಲುಙ್ ಪರದಲ್ಲಿರುವಾಗ ಣ್ಯಂತ ಧಾತುವಿನ ಮುಂದೆಯೂ ಶ್ರಿ, ದ್ರು, ಸ್ರು ಧಾತುಗಳ ಮುಂದೆಯೂ ಇರುವ ಚ್ಲಿಗೆ ಚಙ್ ಬರುವುದು ಎಂಬುದರಿಂದ **ಚಙ್** ಬಂದರೆ ವೃಧ್+ಇ+ಅ+ಅನ್. ಚಙಾ (ಪಾ ಸೂ. ೬-೧-೧೧) ಎಂಬುದರಿಂದ ದ್ವಿತ್ವ. ವೃಧ್ ವೃಧ್+ಇ+ಅ+ಅನ್ ಉರತ್ ಎಂಬುದರಿಂದ ಅಭ್ಯಾಸದ ಋಕಾರಕ್ಕೆ ಅಕಾರ ರಪರವಾಗಿ ಬರುವುದು. **ಹಲಾದಿಃ ಶೇಷಃ** (ಪಾ. ಸೂ. ೭-೪-೬೦) ಎಂಬುದರಿಂದ ಅಭ್ಯಾಸದಲ್ಲಿರುವ ಧಕಾರರೇಫಗಳಿಗೆ ನಿವೃತ್ತಿ. ಧಾತುವಿನ ಉಪಧಾಭೂತವಾದ ಋಕಾರಕ್ಕೆ **ಪುಗಂತಲಘೂಪಧಸ್ಯ ಚ** (ಪಾ. ಸೂ. ೭-೩-೮೬) ಎಂಬುದರಿಂದ ಗುಣ ಪ್ರಾಪ್ತವಾಗುವುದು. ಆದರೆ **ನಿತ್ಯಂ ಛಂದಸಿ** (ಪಾ. ಸೂ ೭-೪-೮) **ಉರ್ಅತ್** (ಪಾ. ಸೂ. ೭-೪೭) ಎಂಬ ಸೂತ್ರವು ಇಲ್ಲಿ ಅನುವೃತ್ತವಾಗುವುದು. ಛಂದಸ್ಸಿನಲ್ಲಿ ಚಙಾನ ಹಿಂದೆ ಇರುವ ಣಿಪ್ರತ್ಯಯದ ಹಿಂದೆ ಇರುವ ಅಂಗದ ಉಪಧಾಭೂತವಾದ ಋಕಾರಕ್ಕೆ ನಿತ್ಯವಾಗಿ ಋಕಾರ ಬರುವುದು ಎಂದು ಋಕಾರಕ್ಕೆ ಋಕಾರವನ್ನೇ ವಿಧಿಸಿರುವುದರಿಂದ ಗುಣಬರುವುದಿಲ್ಲ. ವೃಧ್+ಇ+ಅ+ಅನ್ **ಸನ್ಯಙೋಶ್ಚ ಣಿಚ್ಚಙ್ ಪರೇ೭ನೈ-ಗ್ಲೋಪೇ** (ಪಾ. ಸೂ. ೭-೪ ೯೩) ಎಂಬುದರಿಂದ ಸನ್ವದ್ಭಾವ ಬರುವುದು. ಆದ್ದರಿಂದ ಸನ್ಯತಃ (ಪಾ. ಸೂ. ೭-೪-೭೯) ಎಂಬುದರಿಂದ ಅಭ್ಯಾಸದ ಅಕಾರಕ್ಕೆ ಇಕಾರ. **ದೀರ್ಘೋ೭ಲಘೋಃ** (ಪಾ.ಸೂ. ೭-೪-೯೪) ಎಂಬುದರಿಂದ ದೀರ್ಘ. **ಲುಙ್ಲಙ್ಲೃಙ್ಕ್ಷ್ವಡುದಾತ್ತಃ** (ಪಾ. ಸೂ. ೬-೪-೭೧) ಎಂಬುದರಿಂದ ಆಡಾಗಮ ಅವೀವೃಧ್+ಇ+ಅ+ಅನ್ ಣೇರನಿಟ (ಪಾ. ಸೂ. ೬-೪-೫೧) ಎಂಬುದರಿಂದ ಣಿಗೆ ಲೋಪ. **ಅತೋಗುಣೇ** ಎಂಬುದರಿಂದ ಪರರೂಪ, ಅವೀವೃಧ ಎಂದಾಗುವುದು. **ತಿಙ್ಶಿತಾಜಿಃ** (ಪಾ. ಸೂ. ೮-೧-೭೮) ಎಂಬುದರಿಂದ ಸರ್ವಾನುದಾತ್ತ.

ಸಮುದ್ರವ್ಯಚಸಮ್—**ವ್ಯಚೇ ವಾಜೀಕರಣೇ** ಧಾತು. **ಸರ್ವಧಾತುಭ್ಯೋ೭ಸುನ್** (ಉ. ಸೂ. ೪-೬೫) ಎಂಬುದರಿಂದ ಅಸುನ್ ಪ್ರತ್ಯಯ. **ವ್ಯಚೇಃಕುಟಾದಿತ್ವಮನಸಿ** (ಕಾ. ವಾ. ೧-೨-೧-೧)

ಅಸ್ ಪರದಲ್ಲಿಲ್ಲದೇ ಇರುವ ವ್ಯಚ ಧಾತುವು ಕುಟುಂದಿಯಾಗುವುದು ಎಂದರ್ಥ. ಇದರಿಂದ ವ್ಯಚ್+ಅಸ್ ಎಂದಿರುವಾಗ ಅಸ್‌ನ ಹಿಂದೆ ಇರುವ ವ್ಯಚ್ ಎಂಬುದು ಕುಟಾದಿಯಾಗುವುದಿಲ್ಲ. ಆದ್ದರಿಂದ **ಗಾಙ್‌ಕುಟಾದಿಭ್ಯೋಞ್ಣಿನ್ಙಿತ್** (ಪಾ. ಸೂ. ೧-೨-೧) ಗಾಙ್ ಕುಟಾದಿ ಇವುಗಳ ಮುಂದೆ ಇರುವ ಞಿತ್ತು ಣಿತ್ತು ಙಿಲ್ಲದ ಪ್ರತ್ಯಯವು ಞಿತ್ತಾಗುವುದು ಎಂಬುದರಿಂದ ಞಿತ್ವ ಬರುವುದಿಲ್ಲ. ಆದ್ದರಿಂದ ಗ್ರಹಿಜ್ಯಾವಯಿವ್ಯಧಿವಷ್ಟಿವಿಚತಿವೃಶ್ಚತಿಪೃಚ್ಛತಿಭ್ಯಶ್ಚ ತೀನಾಂ ಞಿತಿ ಚ, (ಪಾ ಸೂ. ೬-೧-೧೬) ಗ್ರಹ್ಯಾದಿ ಧಾತುಗಳಿಗೆ ಕಿತ್ತು ಞಿತ್ತು ಆದ ಪ್ರತ್ಯಯಗಳು ಪರದಲ್ಲಿರುವಾಗ ಸಂಪ್ರಸಾರಣ ಬರುವುದು ಎಂಬುದರಿಂದ ಸಂಪ್ರಸಾರಣ ಬರುವುದಿಲ್ಲ. ಸಮುದ್ರಸ್ಯ ವ್ಯಚ ಇವ ವ್ಯಚಃ ಯಸ್ಯ ಸಃ ಎಂದು ಬಹುವ್ರೀಹಿ ಸಮಾಸ ಮಾಡಿದರೆ ಬಹುವ್ರೀಹೌ ಪ್ರಕೃತ್ಯಾಪೂರ್ವಪದಂ (ಪಾ. ಸೂ. ೬-೩-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುವುದು.

ರಥೀತಮಮ್—ರಥಃ ಅಸ್ಯ ಅಸ್ತಿ ಇತಿ ರಥೀ ಅತ ಇನಿಠನೌ (ಪಾ. ಸೂ. ೫-೨-೧೧೫) ಎಂಬುದರಿಂದ ರಥ ಶಬ್ದದ ಮುಂದೆ ಇನ್ ಪ್ರತ್ಯಯ. **ಯಸ್ಯೇತಿ ಚ** (ಪಾ. ಸೂ. ೬-೪-೧೪೮) ಎಂಬುದರಿಂದ ರಥ ಶಬ್ದದ ಅಕಾರಕ್ಕೆ ಲೋಪ ಅತಿಶಯಿತಃ ರಥೀ ಎಂದು ವಿಗ್ರಹವಾಕ್ಯ ಮಾಡಿ **ಅತಿಶಾಯನೇತಮಬಿಷ್ಠನೌ** (ಪಾ.ಸೂ. ೫-೩-೫೫) ಎಂಬುದರಿಂದ ತಮಪ್ ಪ್ರತ್ಯಯ ರಥಿನ್+ಸುತಮ. ಸುಲೋಪ. ಪ್ರತ್ಯಯ ಲಕ್ಷಣದಿಂದ ಪದಸಂಜ್ಞೆ ಇರುವುದರಿಂದ **ನಲೋಪಃ ಪ್ರಾತಿಪದಿಕಾಂತಸ್ಯ** (ಪಾ. ಸೂ. ೮-೨-೭) ಎಂಬುದರಿಂದ ನಲೋಪ. ಛಾಂದಸವಾಗಿ ರಥಿಶಬ್ದದ ಇಕಾರಕ್ಕೆ ದೀರ್ಘ ರಥೀತಮ- ದ್ವಿತೀಯಾ ಏಕವಚನದಲ್ಲಿ ರಥೀತಮಮ್, ತಮಪ್ ಪಿತ್ತಾದ್ದರಿಂದ **ಅನುದಾತ್ತೌಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ಅನುದಾತ್ತ. ಇನ್ ಎಂಬುದು ಪ್ರತ್ಯಯ ಸ್ವರದಿಂದ ಉದಾತ್ತ.

ರಥೀನಾಂ—ರಥಿನ್ ಶಬ್ದದ ಮುಂದೆ ಷಷ್ಠೀ ಬಹುವಚನ ಆಮ್ ಪ್ರತ್ಯಯ. ಛಾಂದಸವಾಗಿ ಇಕಾರಕ್ಕೆ ದೀರ್ಘ. ರಥೀನಾಮ್ ಎಂದಾಗುವುದು. ಇನ್ ಪ್ರತ್ಯಯಸ್ವರದಿಂದ ಉದಾತ್ತ ಆಮ್ ಸುಪ್ಪಿದ್ದರಿಂದ ಅನುದಾತ್ತ. ನಂತರ ಉದಾತ್ತಾನುದಾತ್ತಸ್ಯ ಸ್ವರಿತಃ (ಪಾ ಸೂ ೮-೪-೬೬) ಎಂಬುದರಿಂದ ಆಮ್ ಸ್ವರಿತ.

ವಾಜಾನಾಂ—ವೃಷಾದಿಯಾದ್ದರಿಂದ **ವೃಷಾದೀನಾಂಚ** (ಪಾ. ಸೂ. ೬-೧-೨೦೩) ಎಂಬುದರಿಂದ ಆದ್ಯುದಾತ್ತ.

ಸತ್ಪತಿಮ್-ಪತ್ಯಾನೈಶ್ವರ್ಯೇ (ಪಾ. ಸೂ. ೬-೨-೧೯) ಐಶ್ವರ್ಯಾರ್ಥಕವಾದ ಪತಿಶಬ್ದ ಪರದಲ್ಲಿರುವಾಗ ಪೂರ್ವಪದವು ಪ್ರಕೃತಿಸ್ವರವನ್ನು ಹೊಂದುವುದು ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುವುದು. ಅತ ಭೂವಿ ಧಾತು. ಇದರ ಮುಂದೆ ಲಟ್. ಅದಕ್ಕೆ ಶತೃಪ್ರತ್ಯಯ. ಶಪ್ ವಿಕರಣಕ್ಕೆ ಅದಿಪ್ರಭೃತಿಭ್ಯಃ ಶಪಃ ಎಂಬುದರಿಂದ **ಲುಕ್ ಶ್ನಸೋರಲ್ಲೋಪಃ** (ಪಾ; ಸೂ. ೬-೪-೧೦೧) ಎಂಬುದರಿಂದ ಧಾತುವಿನ ಅಕಾರಕ್ಕೆ ಲೋಪ. ಸತ್ ಎಂದಾಗುವುದು ಇದು ಪ್ರತ್ಯಯ ಸ್ವರದಿಂದ ಅಂತೋದಾತ್ತ. ಸತಾಂ ಪತಿಃ, ಸತ್ಪತಿಃ ಎಂದು ಷಷ್ಠೀತತ್ಪುರುಷ ಸಮಾಸ ॥ ೧ ॥

॥ ಸಂಹಿತಾಪಾಠಃ ॥

ಸಖ್ಯೇ ತ ಇಂದ್ರ ವಾಜಿನ್ವೋ ಮಾ ಭೇಮ ಶವಸಸ್ಪತೇ ।
ತ್ವಾಮಭಿ ಪ್ರ ಣೋನುವ್ವೋ ಜೇತಾರಮಪರಾಜಿತಂ ॥ ೨ ॥

॥ ಪದಪಾಠಃ ॥

ಸಖ್ಯೇ । ತೇ । ಇಂದ್ರ । ವಾಜಿನಃ । ಮಾ । ಭೇಮ । ಶವಸಃ । ಪತೇ ॥
ತ್ವಾಂ । ಅಭಿ । ಪ್ರ । ನೋನುಮುಃ । ಜೇತಾರಂ । ಅಪರಾಜಿತಂ ॥ ೨ ॥

॥ ಸಾಯಣಭಾಷ್ಯಂ ॥

ಸ್ತೋಮಾಃ ಸ್ತೋತಾರ ಋತ್ವಿಜ ಓಜಸಾ ಬಲೇನೇಶಾನಂ ಜಗತೋ ನಿಯೋಮಕಮಿಂದ್ರಮಭ್ಯನೂಷತ ।ಸರ್ವತ್ರ ಸ್ತುತವಂತಃ । ಯಸ್ಯೇಂದ್ರಸ್ಯ ರಾತಯೋ ಧನದಾನಾನಿ ಸಹಸ್ರಂ ಸಹಸ್ರಸಂಖ್ಯೋಪೇತಾನಿ ಸಂತಿ । ಉತ ವಾಥವಾ ಭೂಯಸೀಃ ಸಹಸ್ರಸಂಖ್ಯಾಯಾ ಅಸ್ಯಧಿಕಾಃ ಸಂತಿ । ತಮಿಂದ್ರಮಿತಿ ಪೂರ್ವಕ್ರಾನ್ವಯೇಃ ॥ ಇಂದ್ರಂ । ಯುಜ್ರೇಂದ್ರೇತ್ಯಾದಿನಾ ರನ್। ನಿತ್ತ್ವಾದಾದ್ಯುದಾತ್ತಃ । ಈಶಾನಂ । ಲಟಃ ಶಾನಚ್ । ಅದಿಪ್ರಭೃತಿಭ್ಯಃ ಶಪ ಇತಿ ಶಪೋ ಲುಕ್ । ಧಾತೋರನುದಾತ್ತೇತ್ತ್ವಾತ್ತ್ವಸ್ಯನುದಾತ್ತೇತ್ಯಾದಿನಾ ಶಾನಚೋಽನುದಾತ್ತತ್ವಂ । ಓಜಸಾ । ನಭ್ಯಿಷಯೆತ್ವಾದಾದ್ಯುದಾತ್ತಃ । ಸ್ತೋಮಾಃ । ಅರ್ತಿಸ್ತುಸ್ವಿತ್ಯಾದಿನಾ ಮನ್ಪ್ರತ್ಯಯಃ । ನಿತ್ತ್ವಾದಾದ್ಯುದಾತ್ತಃ । ಅನೂಷತ । ಣು ಸ್ತುತೌ । ಣೋ ನಃ । ಲುಙ್ । ವ್ಯತ್ಯಯೇನ ಝಿಃ । ತಸ್ಯಾದಾದೇಶಃ । ಪಾ. ೭-೧-೫ । ಚ್ಲೇಃ ಸಿಚ್ । ಅಸ್ಯ ಧಾತೋಃ ಕುಟಾದಿತ್ವೇನ ಸಿ-

छोः ञ्नित्वाद्ध्लोपाभावः । इडभावशङ्कान्दसः । दीर्घत्वं च । आडागमः । सहस्रं । कर्दमादीनां च । फि. ३-८० । इति द्वितीयाक्षरमुदात्तं । रातयः । मंत्रे वृषेत्यादिना क्तिन्नुदात्तः । उत । प्रातिपदिकस्वरः । वा । चादिरनुदात्तः । संति । प्रत्ययोदात्तत्वं । तिङ्ङतिङ इति निघातोन भवति यद्यप्यत्तान्निघ्यमिति प्रतिषेधात् । स हि व्यवहितेऽपि भवतीत्युक्तं । भूयसीः । सहस्रादतिशयेन बहोर्भूयस्भावः । अत्र विभक्तव्यस्य सहस्रस्य संनिधिबलादुपसर्जनत्वप्रतीतेर्द्विवचनविभज्योपपदे तरबीयसुनौ । पा. ५-३-५७ । इति बहुशब्दादीयसुन् । बहोर्लोपोभू च बहोः । पा. ६-४-१५८ । इतीकारलोपः । प्रकृतेर्भूः इत्यादेशश्च । ईयसुनोनित्त्वादाद्युदात्तत्वं । उगितश्चेति ङीप् ॥ ३८ ॥

॥ प्रतिपदार्थ ॥

यस्य—यावन इन्द्रन । रातयः—धनप्रदानगळु। सहस्रं—साविरारु पालिनष्टु । उत वा—अथवा । भूयसीः—इन्नू हेच्चागि । संति—इरुवुवो (अंतह) । ईशानं—जगत्तिगे नियामकनाद । इंद्रं—इंद्रनन्नु । स्तोमाः—स्तोत्रमाडुव ऋत्विजरु । ओजसा—तम्म शक्ति इरुवष्टुमट्टिगे । अभि अनूषत—स्तोत्रमाडुवरु ॥

॥ भावार्थ ॥

इंद्रनु तन्नन्नु स्तोत्र माडुववरिगे सावि र संख्येयष्टु अथवा अदक्कू हेच्चागि धनादिगळन्नु कॊडुवनु. इंतह इंद्रनन्नु ऋत्विजरे मॊदलाद जनरु तम्म शक्तियन्नेल्ला उपयोगिसि स्तोत्रमाडुवरु.

English Translation

The reciters of Sacred hymns praise with all their might Indra, the ruler of the world whose bounties are counted by thousands or even more.

ईशानं—जगत्तिगे स्वामि, अधिपति, Thr ruler of the world.

॥ विशेषविषयगळु ॥

ओजसा—बलेन, बलदिंद, तम्म शक्ति इरुवष्टु. उत्साहदिंद कूडि इत्यादि.

स्तोमाः—ई शब्दक्कॆ भाष्यकाररु स्तोतारो ऋत्विजः एंदरॆ स्तोत्रमाडुव ऋत्विजरु एंदु अर्थमाडिरुवरु. स्तोमशब्दवु नपुंसकलिंगवागिरुवाग स्तोत्रवेंदू पुल्लिंगवादाग स्तोत्रमाडुवरेंदू अर्थवु.

सहस्रं— सहस्रसंख्याकवागि, बहळवागि,

[illegible] । भूयसीः—सहस्रसंख्यिगिंतलू हेच्चागि, एणिसलारदष्टु हेच्चागि, अतिशयवागि [illegible]

॥ ವ್ಯಾಕರಣಪ್ರಕ್ರಿಯಾ ॥

ಇಂದ್ರಂ— **ಋಜ್ರೇಂದ್ರಾಗ್ರ**-(ಉ. ಸೂ. ೨-೧೪೬) ಎಂಬುದರಿಂದ ರನ್ ಪ್ರತ್ಯಯಾಂತ. ನಿತ್ತಾದ್ದರಿಂದ ಆದ್ಯುದಾತ್ತ.

ಈಶಾನಂ— **ಈಶ ಐಶ್ವರ್ಯೇ** ಧಾತು. ಇದು ಅನುದಾತ್ತೇತ್ತು. ಆದ್ದರಿಂದ ಆತ್ಮನೇಪದ ಇದರ ಮುಂದೆ ಲಟ್. ಲಟ್ಟಿಗೆ ಲಟಶ್ಶತೃಶಾನಚೌ ಎಂಬುದರಿಂದ ಶಾನಚ್ ಪ್ರತ್ಯಯ ಈಶ್+ಆನ. **ಆದಿಪ್ರಭೃತಿಭ್ಯಃ ಶಪಃ** (ಪಾ. ಸೂ. ೨-೪-೭೨) ಎಂಬುದರಿಂದ ಶಪ್‌ಗೆ ಲುಕ್. **ತಾಸ್ಯನುದಾತ್ತೇತ್** (ಪಾ. ಸೂ. ೬-೧-೧೮೬) ಎಂದು ಲಸ್ಥಾನಿಕಸಾರ್ವಧಾತುಕವಾದ ಶಾನಚ್ ಪ್ರತ್ಯಯವು ಅನುದಾತ್ತ.

ಓಜಸಾ— **ನಬ್ಭಿಷಯೆಸ್ಯಾನಿಸನ್ತ್ಯಸ್ಯ** (ಫಿ. ಸೂ. ೨೬) ಎಂಬುದರಿಂದ ಆದ್ಯುದಾತ್ತ.

ಸ್ತೋಮಾಃ— **ಅರ್ತಿಸ್ತುಸು** (ಉ. ಸೂ. ೧-೧೩೭) ಎಂಬುದರಿಂದ ಸ್ತು ಧಾತುವಿನ ಮುಂದೆ ಮನ್ ಪ್ರತ್ಯಯ. ನಿತ್ಸ್ವರ ಆದ್ಯುದಾತ್ತ ಬರುವುಗು

ಅನೂಷತ— **ಣು ಸ್ತುತೌ** ಧಾತು. **ಣೋನಃ** (ಪಾ. ಸೂ. ೬-೧-೬೫) ಎಂಬುದರಿಂದ ಣಕಾರಕ್ಕೆ ನಕಾರ. **ಲುಙ್‌ಚ್ಲಿಲುಙಾಂ** (ಪಾ. ಸೂ. ೩-೧-೪೩) ಎಂಬುದುರಿಂದ ಚ್ಲಿ ಪ್ರತ್ಯಯ. ಅದಕ್ಕೆ **ಚ್ಲೇಸ್ಸಿಚ್** (೩-೧-೪೪) ಎಂಬುದರಿಂದ ಸಿಚ್ ಆದೇಶ. ಇದು ಪರಸ್ಮೈಪದ ಧಾತುವಾದ್ದರಿಂದ ಪ್ರಥಮಪುರುಷಬಹುವಚನದಲ್ಲಿ ನ್ಯಾಯವಾಗಿ ಝಿ ಪ್ರತ್ಯಯ ಬರಬೇಕು. ಆದರೂ ಇಲ್ಲಿ ವ್ಯತ್ಯಯದಿಂದ ಆತ್ಮನೇಪದ ಪ್ರಥಮಪುರುಷ ಬಹುವಚನಸಂಜ್ಞಕವಾದ ಝಿ ವೇ ಬರುವುದು ಝಿಗೆ **ಆತ್ಮನೇಪದೇಷ್ವನತಃ** (ಪಾ. ಸೂ ೭-೧-೫) ಎಂಬುದರಿಂದ ಅತ್ ಆದೇಶ. ನುಸ್+ಅತ ಈಧಾತುವು ಕುಟಾದಿಯಲ್ಲಿರುವುದು. ಆದ್ದರಿಂದ **ಗಾಙ್ಕುಟಾದಿಭ್ಯೋಽಞ್ಣಿನ್ಙಿತ್** (ಪಾ. ಸೂ. ೧-೨-೧) ಎಂಬುದರಿಂದ ಸಿಚ್ಚು ಙಿತ್ತಾಗುವುದು ಆದ್ದರಿಂದ ಗುಣ ಬರುವುದಿಲ್ಲ. ಛಾಂದಸಪ್ರಕ್ರಿಯೆಯಿಂದ ಇಡಾಗಮ ಬರುವುದಿಲ್ಲ. ಧಾತುಗೆ ದೀರ್ಘವೂ ಛಾಂದಸ. ಆಡಾಗಮ ಅನೂಷತ ಎಂದಾಗುವುದು.

ಸಹಸ್ರಂ— **ಕರ್ದಮಾದೀನಾಂಚ** (ಫಿ. ಸೂ ೫೯) ಮೊದಲನೆಯ ವರ್ಣ ಅಥವಾ ಎರಡನೆಯ ವರ್ಣ ಉದಾತ್ತ ಎಂಬುದರಿಂದ ಎರಡನೆಯ ವರ್ಣ ಉದಾತ್ತ.

ರಾತಯಃ— **ಮನ್ತ್ರೇ ವೃಷೇಷಪಚಮನವಿದಭೂವಿರಾ ಉದಾತ್ತಃ** (ಪಾ. ಸೂ. ೩-೩-೯೬) ಎಂಬುದರಿಂದ ರಾ ಧಾತುವಿನ ಮುಂದೆ ಉದಾತ್ತವಾದ ಕ್ತಿ ಪ್ರತ್ಯಯ.

ಉತ— ಪ್ರಾತಿಪದಿಕಸ್ವರಬರುವುದು. **ವಾ-ಚಾದಯೋನುದಾತ್ತಾಃ** (ಫಿ. ಸೂ. ೪೪) ಎಂಬುದರಿಂದ ಅನುದಾತ್ತ.

ಸನ್ತಿ— **ಅಸಭುವಿ** ಧಾತು. ಲಟ್ ಝಿ **ಅನ್ತಾದೇಶ. ಶಪ್‌ಗೆ ಲುಕ್ ಶ್ನಸೋರಲ್ಲೋಪಃ** (ವಾ. ಸೂ. ೬-೪-೧೧೧) ಎಂಬುದರಿಂದ ಧಾತ್ವಕಾರಕ್ಕೆ ಲೋಪ, ಸನ್ತಿ. **ತಿಙ್ ಪ್ರತ್ಯಯಸ್ವರ** ಬರುವುದು. **ಯದ್ವೃತ್ತಾನ್ನಿತ್ಯಂ** (ಪಾ. ಸೂ. ೮-೧-೬೬) ಎಂಬ ನಿಷೇಧವು ಪೂಜನಾತ್ಪೂಜತಃ ಎಂಬ ಸೂತ್ರದಲ್ಲಿ ಪುನಃ ಪೂಜಿತಗ್ರಹಣವಿರುವುದರಿಂದ ವ್ಯವಹಿತವಾಗಿದ್ದರೂ ಬರುವುದೆಂದು ಹಿಂದೆ ವಿವರಿಸಲಾಗಿರುವುದು. ಆದ್ದರಿಂದ **ತಿಙ್ಶಿತಿಜಃ** ಎಂಬುದರಿಂದ ಅನುದಾತ್ತ ಬರುವುದಿಲ್ಲ

ಭೂಯಸೀಃ—ಸಹಸ್ರಾದಪಿ ಅತಿಶಯೇನ ಬಹ್ವ್ಯಃ ಎಂದು ವಿಗ್ರಹ. **ದ್ವಿವನವಿಭಜ್ಯೋಪಪದೇತರಬೀಯೆಸುನ್** (ಪಾ. ಸೂ. ೫-೩-೫೭) ದ್ವ್ಯರ್ಥಪ್ರತಿಪಾದಕವಾದ ಶಬ್ದ, ವಿಭಕ್ತ್ಯರ್ಥವಾಚಕಶಬ್ದ ಇವು ಉಪಪದವಾಗಿರುವಾಗ ಎರಡರ ಮಧ್ಯದಲ್ಲಿ ಅನ್ಯತರಾಪೇಕ್ಷಯಾ ಅತಿಶಯ ವಿಶಿಷ್ಟಸ್ವಾರ್ಥಬೋಧಕವೂ, ವಿಭಾಗಸ್ರಯೋಜಕಧರ್ಮವಾಚಕವೂ ಆದ ಸುಬಂತ ತಿಙಂತಗಳ ಮುಂದೆ ಸ್ವಾರ್ಥದಲ್ಲಿ ತರಪ್ ಈಯಸುನ್ ಪ್ರತ್ಯಯಗಳು ಬರುವುವು ಎಂದು ಸೂತ್ರಾರ್ಥ. ಉಪಪದ ಎಂಬುದರಿಂದ ಸವಿಾಪದಲ್ಲಿ ಉಚ್ಚರಿತ ಪದಕ್ಕೆ ಗ್ರಹಣ. **ತತ್ರೋಪಪದಂಸಪ್ತಮಿಾಸ್ಥಂ** (ಪಾ. ಸೂ. ೩-೧-೯೨) ಎಂಬುದಕ್ಕೆ ಗ್ರಹಣವಿಲ್ಲ. ಧಾತ್ವಧಿಕಾರದಲ್ಲಿ ಮಾತ್ರ ಇದು ಸಂಭವಿಸುವುದೇ ವಿನಾ ಮಿಕ್ಕ ಸ್ಥಳದಲ್ಲಿ ಇದು ಸಂಭವಿಸುವುದಿಲ್ಲ. ದ್ವಿತ್ವವಿಶಿಷ್ಟಾರ್ಥಪ್ರತಿಪಾದಕಶಬ್ದಕ್ಕೂ ವಿಭಕ್ತ್ಯರ್ಥವಾಚಕ್ಕೂ ವಿಗ್ರಹವಾಕ್ಯದಲ್ಲಿ ಮಾತ್ರ ಪ್ರಯೋಗವು ಅವಶ್ಯಕ, ತದ್ಧಿತವೃತ್ತಿಯಲ್ಲಿ ಗತಾರ್ಥವಾಗುವುದರಿಂದ ಅವುಗಳ ಪ್ರಯೋಗವು ಅನವಶ್ಯಕ. ಇಂದ್ರನಲ್ಲಿ ಸಹಸ್ರಸಂಖ್ಯಾಕವಾದ ಧನಧಾನ್ಯಗಳು ಇರುವುವು ಅಥವಾ ಸಹಸ್ರಕ್ಕಿಂತಲೂ ಹೆಚ್ಚಾದ ಧನವಿರುವುದು ಎಂದು ಉತ್ತರಾರ್ಧಮಂತ್ರದ ಅರ್ಥ. ವಿಭಕ್ತ್ಯವ್ಯವಾದ ಸಹಸ್ರವು ಉಪಪದವಾಗಿರುವಾಗ ಈ ಸೂತ್ರದಿಂದ ಬಹುಶಬ್ದದ ಮುಂದೆ ಈಯಸುಪ್ರತ್ಯಯ ಬರುವುದು. ಬಹು+ಈಯಸ್ ಎಂದಿರುವಾಗ **ಬಹೋರ್ಲೋಪೋಭೂಚ ಬಹೋಃ** (ಪಾ. ಸೂ. ೬ ೪-೧೫೮) ಬಹುಶಬ್ದದ ಮುಂದೆ ಇರುವ ಇಮನಿಚ್ ಈಯಸುಪ್ರತ್ಯಯಗಳಿಗೆ ಲೋಪ ಬರುವುದು ಬಹುಶಬ್ದಕ್ಕೆ ಭೂ ಆದೇಶವೂ ಬರುವುದು ಎಂಬುದರಿಂದ ಈಯಸುಪ್ರತ್ಯಯಕ್ಕೆ ಬರುವ ಲೋಪವು **ಆದೇಃ ಪರಸ್ಯ** (ಪಾ. ಸೂ. ೧-೧-೫೪) ಪಂಚಮ್ಯಂತಪದವನ್ನು ಚ್ಛೇದಿಸಿ ಎಲ್ಲಿ ಪರಕ್ಕೆ ಕಾರ್ಯವನ್ನು ವಿಧಿಸಿರುವುದೋ ಅಲ್ಲಿ ಆ ಕಾರ್ಯವು ಯಾವುದಕ್ಕೆ ವಿಹಿತವಾಗಿದೆಯೋ ಆದರ ಆದಿವರ್ಣಕ್ಕೆ ಬರುವುದು ಎಂಬುದರಿಂದ ಈಕಾರಕ್ಕೆ ಲೋಪ, ಇದೇ ಸೂತ್ರದಿಂದಲೇ ಭೂ ಆದೇಶವೂ ಬಂದರೆ ಭೂಯಸ್. ಈಯಸುಪ್ರತ್ಯಯವು ನಿತ್. ಆದ್ದರಿಂದ **ಙ್ಞಿತ್ಯಾದಿರ್ನಿತ್ಯಂ** (ಪಾ. ಸೂ. ೬-೧-೧೯೭) ಎಂಬುದರಿಂದ ಭೂಯಸ್ ಎಂಬುದು ಆದ್ಯುದಾತ್ತ. ಭೂಯಸ್ ಎಂಬುದು ಉಗಿದಂತವಾದ ಪ್ರಾತಿಪದಿಕ. ಆದ್ದರಿಂದ **ಉಗಿತಶ್ಚ** (ಪಾ. ಸೂ. ೪-೧-೬) ಉಗಿದಂತವಾದ ಪ್ರಾತಿಪದಿಕದಮುಂದೆ ಸ್ತ್ರೀಲಿಂಗದಲ್ಲಿ ಙೀಪ್ ಬರುವುದು ಎಂಬುದರಿಂದ ಙೀಪ್ ಪ್ರತ್ಯಯ ಬರುವುದು. ಭೂಯಸ್+ಙೀಪ್ ಙಕಾರಕ್ಕೆ ಲಶಕ್ವತದ್ಧಿತೇ ಎಂಬುದರಿಂದಲೂ ಪಕಾರಕ್ಕೆ ಹಲನ್ತ್ಯಂ (ಪಾ. ಸೂ. ೧-೩-೩) ಎಂಬುದರಿಂದಲೂ ಇತ್ಸಂಜ್ಞೆ **ತಸ್ಯಲೋಪಃ** (ಪಾ. ಸೂ. ೧-೩-೯) ಎಂಬುದರಿಂದ ಲೋಪ. ಙೀಪ್ ಪ್ರತ್ಯಯ ಪಿತ್ತು. ಆದ್ದರಿಂದ **ಅನುದಾತ್ತೌ ಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ಅನುದಾತ್ತ ॥ ೮ ॥

ಹನ್ನೆರಡನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಚತುರ್ಥಾನುವಾಕೇ ಷಟ್ ಸೂಕ್ತಾನಿ । ತತ್ರಾಗ್ನಿಂ ದೂತಮಿತ್ಯಾದಿಕಸ್ಯ ದ್ವಾದಶರ್ಚಸ್ಯ ಪ್ರಥಮಸ್ಯ ಸೂಕ್ತಸ್ಯ ಕಣ್ವಪುತ್ರೋ ಮೇಧಾತಿಥಿರ್ಋಷಿಃ । ಅಪವಾದಾಭಾವಾದನುವರ್ತಮಾನಂ ಪ್ರಾಗ್ನಿರಣ್ಯಸ್ತೋಮಾದಿಕ್ಯುಕ್ತಂ ಗಾಯತ್ರಮೇವ ಛಂದಃ । ಅಗ್ನಿರ್ದೇವತಾಕತ್ವಂ ವಿಸ್ಪಷ್ಟಂ । ಅತ ಏವಾನುಕ್ರಮ್ಯತೇ । ಅಗ್ನಿಂ ದ್ವಾದಶ ಮೇಧಾತಿಥಿಃ ಕಾಣ್ವ ಆಗ್ನೇಯಮಗ್ನಿನೇತಿ ಸಾದೋ ದ್ವ್ಯಗ್ನಿರ್ದೈವತೋ ನಿರ್ಮಥ್ಯ ಆಹವನೀಯಶ್ಚೇತಿ ॥ ವಿನಿಯೋಗಸ್ತು । ಪ್ರಾತರನುವಾಕ ಆಗ್ನೇಯೇ ಕ್ರತೌ ಗಾಯತ್ರೇ ಛಂದಸ್ಯಗ್ನಿಂ ದೂತಮಿತಿ ಸೂಕ್ತಂ । ಅಥೈತಸ್ಯಾ ರಾತ್ರೇರ್ವಿವಾಸಕಾಲ ಇತಿ ಖಂಡೇಽಗ್ನಿಮೀಳೇಽಗ್ನಿಂ ದೂತಂ । ಆ. ೪. ೧೩. । ಇತಿ ಸೂತ್ರಿತಂ ॥ ತಥಾ ಪೃಷ್ಠ್ಯಷಡಹಸ್ಯ ದ್ವಿತೀಯೇಽಹನೀದಮೇವ ಸೂಕ್ತಮಾಜ್ಯಶಸ್ತ್ರಂ । ಪೃಷ್ಠ್ಯಸ್ಯಾಭಿಪ್ಲವೇನೋಕ್ತೇ ಆಹನೀ ಇತಿ ಖಂಡೇ ಸೂತ್ರಿತಂ । ಅಗ್ನಿಂ ದೂತಮಿತಿ ದ್ವಿತೀಯೇ । ಆ. ೭. ೧೦ । ಇತಿ ॥ ದರ್ಶಪೂರ್ಣಮಾಸಯೋಃ ಸಾಮಿಧೇನೀಷ್ವಗ್ನಿಂ ದೂತಮಿತ್ಯೇಕಾ ನಮಃ ಪ್ರವಕ್ತ್ರೇ ಇತಿ ಖಂಡೇ ಸೂತ್ರಿತಂ। ಈಳೇನ್ಯೋ ನಮಸ್ಯಸ್ತಿರೋಽಗ್ನಿಂ ದೂತಂ ವೃಣೀಮಹೇ ॥ ಆ. ೧-೧೨ । ಇತಿ ॥

ಅನುವಾದವು

ಹನ್ನೆರಡನೆಯ ಸೂಕ್ತದಿಂದ ನಾಲ್ಕನೆಯ ಅನುವಾಕವು ಪ್ರಾರಂಭವಾಗುವುದು. ಈ ಅನುವಾಕದಲ್ಲಿ ಆರು ಸೂಕ್ತಗಳಿರುವವು. ಈ ಆರು ಸೂಕ್ತಗಳಲ್ಲಿ ಮೊದಲನೆಯದಾದ **ಅಗ್ನಿಂ ದೂತಂ** ಎಂಬ ಹನ್ನೆರಡು ಋಕ್ಕಿನ ಸೂಕ್ತಕ್ಕೆ ಕಣ್ವಪುತ್ರನಾದ ಮೇಧಾತಿಥಿಯು ಋಷಿಯು. ಗಾಯತ್ರಿಯು ಛಂದಸ್ಸು. ಅಗ್ನಿಯೇ ದೇವತೆಯು ಈ ವಿಷಯವು ಅನುಕ್ರಮಣಿಕೆಯ **ಅಗ್ನಿಂ ದ್ವಾದಶ ಮೇಧಾತಿಥಿಃ ಕಾಣ್ವಃ** ಎಂಬ ಖಂಡದಲ್ಲಿ ಹೇಳಲ್ಪಟ್ಟಿದೆ ವಿನಿಯೋಗಕ್ರಮವೇನೆಂದರೆ—**ಆಗ್ನೇಯ** ಕ್ರತುವಿನ ಪ್ರಾತರನುವಾಕಮಂತ್ರಪಠನಕಾಲದಲ್ಲಿ ಗಾಯತ್ರೀಛಂದಸ್ಸಿನ ಋಕ್ಕುಗಳನ್ನು ಹೇಳುವಾಗ **ಅಗ್ನಿಂ ದೂತಂ** ಎಂಬ ಈ ಸೂಕ್ತವನ್ನು ಪಠಿಸಬೇಕು. ಈ ವಿಷಯವು ಆಶ್ವಲಾಯನ ಶ್ರೌತಸೂತ್ರದ **ಅಥೈತಸ್ಯಾ ರಾತ್ರೇರ್ವಿವಾಸಕಾಲೇ** ಎಂಬ ಖಂಡದಲ್ಲಿ (ಆ. ೪-೧೩) ಹೇಳಲ್ಪಟ್ಟಿರುವುದು ಮತ್ತು ಪೃಷ್ಠ್ಯಷಡಹಕ್ರತುವಿನ ಎರಡನೇ ದಿವಸದಲ್ಲಿ ಈ ಸೂಕ್ತವನ್ನು ಆಜ್ಯಶಸ್ತ್ರಮಂತ್ರಗಳನ್ನಾಗಿ ಪಠಿಸುವರು. ಈ ವಿಷಯವು ಆಶ್ವಲಾಯನಸೂತ್ರದ ೭-೧೦ ರಲ್ಲಿ **ಅಗ್ನಿಂ ದೂತಮಿತಿ ದ್ವಿತೀಯೇ** ಎಂದು **ಪೃಷ್ಠ್ಯಾಭಿಪ್ಲವೇನೋಕ್ತೇ ಆಹನೀ** ಎಂಬ ಖಂಡದಲ್ಲಿ ಹೇಳಲ್ಪಟ್ಟಿರುವುದು. ಮತ್ತು ದರ್ಶಪೂರ್ಣಮಾಸಯಾಗಗಳಲ್ಲಿ ಸಾಮಿಧೇನೀ ಎಂಬ ಋಕ್ಕುಗಳನ್ನು ಪಠಿಸುವಾಗ **ಅಗ್ನಿಂ ದೂತಂ** ಎಂಬ ಋಕ್ಕನ್ನು ಪಠಿಸಬೇಕೆಂದು **ನಮಃ ಪ್ರವಕ್ತ್ರೇ** ಎಂಬ ಖಂಡದಲ್ಲಿ ಹೇಳಲ್ಪಟ್ಟಿರುವುದು. ಈ ವಿಷಯವೂ ಸಹ ಆಶ್ವಲಾಯನ ಶ್ರೌತಸೂತ್ರದ ೧-೨ ಖಂಡದಲ್ಲಿ **ಈಳೇನ್ಯೋ-ನಮಸ್ಯಸ್ತಿರೋಽಗ್ನಿಂ ದೂತಂ ವೃಣೀಮಹೇ** ಎಂದು ಹೇಳಲ್ಪಟ್ಟಿರುವುದು.

॥ ॐ ॥

सूक्त—८३

॥ मंडल—८ ॥ अनुवाक—४ ॥ सूक्त—८३ ॥

॥ अष्टक —८ ॥ अध्याय—८ ॥ वर्ग— ३३, ३४॥

॥ सूक्तदल्लिरुव ऋक्संख्ये ८–८३ ॥

॥ ऋषिः—८-८३ मेधातिथिः काण्वः ॥

॥ देवता—अग्निः । ६-अग्निर्नर्मथ्योऽग्निर्वाहवनीयश्च ॥

॥ छंदः—गायत्री ॥

॥ संहितापाठः ॥

अग्निं दूतं वृणेमहे होतारं विश्ववेदसं ।
अस्य यज्ञस्य सुक्रतुं ॥ ८ ॥

॥ पदपाठः ॥

अग्निं । दूतं । वृणेमहे । होतारं । विश्व ऽ वेदसं ॥
अस्य । यज्ञस्य । सु ऽ क्रतुं ॥ ८ ॥

॥ सायणभाष्यं ॥

अग्नेर्दूरतत्वमेतस्मंत्र्यव्याख्यानेन तैत्तिरीयब्राह्मणे समाम्नायतेऽग्निर्देवानां दूत आसीदुशनाः काव्योऽसुराणां । तै- सं ३. ५. ८- ५ । इति । तादृशं देवदूतमग्निमस्मिन्यज्ञे वृणेमहे । संभजामः । कीदृशं । होतारं देवानामाह्वातारं विश्वतेदसं सर्वधनोपेतं अस्य प्रवर्तमानस्य यज्ञस्य निष्पादकत्वेन सुक्रतुं शोभनकर्माणं शोभनप्रज्ञं वा ॥ मधुमित्यादिष्वष्टाविंशतिसंख्यकेषु धननामसु वेदस्यब्दः पठितः ॥ होतारं । ह्वेञः स्पर्धायां शब्ये चे । ताच्छील्यादिषु तृन् । बहुलं छंदसीति संप्रसारणे परपूर्वत्वे गुणः । नित्त्वादाद्युदात्तः । विश्ववेदसं । बहुव्रीहौ । विश्वं संज्ञायां । पा- ६. २. ८०६. । इति पूर्वपदांतोदात्तत्वं । अस्य । ऊडिदमित्यादिना विभक्तेरुदात्तत्वं । सुक्रतुं । क्रत्वादयश्च । पा. ६. २. ८८८ । इत्याद्युदात्तत्वं ॥

॥ ಪ್ರತಿಪದಾರ್ಥ ॥

ದೂತಂ— ದೇವತೆಗಳಿಗೆ ದೂತನಾದ । **ಹೋತಾರಂ**—ದೇವತೆಗಳನ್ನು ಯಜ್ಞಯಾಗಾದಿಗಳಿಗೆ ಕರೆತರುವ । **ವಿಶ್ವವೇದಸಂ**—ಸಮಸ್ತ ಧನಯುಕ್ತನಾದ । **ಅಸ್ಯ ಯಜ್ಞಸ್ಯ**—ಈ ಯಜ್ಞದ । **ಸುಕ್ರತುಂ**—ಕರ್ಮಕರ್ತನಾದ ಅಥವಾ ಈ ಯಜ್ಞವಿಧಾನವನ್ನು ಚೆನ್ನಾಗಿ ತಿಳಿದಿರುವ । **ಅಗ್ನಿಂ**—ಅಗ್ನಿನಾಮಕ ದೇವತೆಯನ್ನು । (ನಾವು) **ವೃಣೀಮಹೇ**—ಆರಿಸಿ ಆಹ್ವಾನ ಮಾಡುವೆವು (ಕರೆಯುವೆವು)

॥ ಭಾವಾರ್ಥ ॥

ಅಗ್ನಿಯು ದೇವತೆಗಳಿಗೆ ದೂತನಾಗಿರುವನು ಮತ್ತು ಅವರನ್ನು ನಾವು ಮಾಡುವ ಯಜ್ಞಯಾಗಾದಿ ಕರ್ಮಗಳಿಗೆ ಕರತರುವನು. ಈ ಅಗ್ನಿಯು ಬಹಳ ಧನವುಳ್ಳವನು, ಈ ಯಜ್ಞದಲ್ಲಿ ಮುಖ್ಯಪಾತ್ರವಹಿಸುವವನು. ಅಥವಾ ಯಜ್ಞದ ಸ್ವರೂಪವನ್ನು ಚೆನ್ನಾಗಿ ತಿಳಿದಿರುವವನು. ಇಂತಹ ಅಗ್ನಿಯನ್ನು ನಾವು ಆರಿಸಿಕೊಂಡಿರುವೆವು (ಪ್ರಾರ್ಥಿಸುವೆವು.)

English Translation

We select (invoke) Agni, the messenger of Gods, their invoker, the possessor of riches, the perfector of this rite or the highly wise.

॥ ವಿಶೇಷವಿಷಯಗಳು ॥

ಈ ೧೨ ನೆಯ ಸೂಕ್ತದಿಂದ ೨೩ ನೆಯ ಸೂಕ್ತದವರೆವಿಗೂ ಕಣ್ವವುತ್ರನಾದ ಮೇಧಾತಿಥಿಯು ಋಷಿಯು. ಈ ಸೂಕ್ತಗಳು ಇದುವರೆಗೆ ವಿವರಿಸಿದ ಮಧುಚ್ಛಂದಋಷಿಯ ಸೂಕ್ತಗಳಂತೆ ಹೆಚ್ಚು ತೊಡಕುಗಳಿಲ್ಲದೆ ವಿಶೇಷ ಪದಗಳನ್ನು ಅಧ್ಯಾಹಾರಮಾಡಿಕೊಳ್ಳಬೇಕಾದ ಅವಶ್ಯಕತೆಯೂ ಇಲ್ಲದೆ ತಕ್ಕಮಟ್ಟಿಗೆ ಸುಲಭಶೈಲಿಯಲ್ಲಿದ್ದು ಎಲ್ಲರಿಗೂ ಅರ್ಥವಾಗುವಂತಿರುವವು. ಕೆಲವು ಋಷಿಗಳ ಭಾಷಾಶೈಲಿಯು ಬಹು ಕ್ಲಿಷ್ಟವಾಗಿರುವುದು, ಕೆಲವರ ಶೈಲಿಯು ಸುಲಭವಾಗಿ ತಿಳಿಯುವಂತೆ ಇರುವುದು. ಹಿಂದೆ ಹೇಳಿದ ಕ್ರಮದಂತೆ ಪ್ರಾರಂಭದಲ್ಲಿ ಅಗ್ನಿಪರವಾದ ಸೂಕ್ತಗಳೂ ಬಳಿಕ ಇಂದ್ರನ ಪರವಾದ ಸೂಕ್ತಗಳೂ ಅನಂತರ ಇತರ ದೇವತಾಕವಾದ ಸೂಕ್ತಗಳೂ ಇರುವವು. ಈ ಋಷಿಯ ವಂಶಸ್ಥರು ಈ ಮಂಡಲದಲ್ಲಿ ೩೬-೫೦ ನೆಯ ಸೂಕ್ತಗಳಿಗೂ ೮ ನೆಯ ಮಂಡಲದ ಸೂಕ್ತಗಳಿಗೂ ೯ ನೆಯ ಮಂಡಲದಲ್ಲಿ ೨ ನೆಯ ಸೂಕ್ತಕ್ಕೂ ದ್ರಷ್ಟೃಗಳಾಗಿರುವರು. **ಅಗ್ನಿಂ ದೂತಂ ವೃಣೀಮಹೇ** ಎಂಬ ಋಕ್ಕು ತೈತ್ತಿರೀಯ ಸಂಹಿತಾ ೨-೫-೮-೫; ೫-೫.೬-೧, ತೈ. ಬ್ರಾ ೩-೫-೨-೩; ಸಾಮವೇದ ೧-೩; ಮೈತ್ರಾಯಣೀಯ ಸಂಹಿತಾ ೪-೧೦-೨ ಈ ಸ್ಥಳಗಳಲ್ಲಿ ಪಠಿತವಾಗಿದೆ

ದೂತಂ—ಭಾಷ್ಯಕಾರರು ದೂತಶಬ್ದಕ್ಕೆ ಅರ್ಥವನ್ನು ವಿವರಿಸುವಾಗ **ಅಗ್ನಿರ್ದೇವಾನಾಂ ದೂತ ಆಸೀದುಶನಾಃ ಕಾವ್ಯೋಽಸುರಾಣಾಂ** (ತೈ. ಸಂ. ೩-೫-೮-೫) ಎಂಬ ಯಜುರ್ವೇದ ವಾಕ್ಯವನ್ನು ಉದಹರಿಸಿರುವರು. ಎಂದರೆ ಅಗ್ನಿಯು ದೇವತೆಗಳ ದೂತನು, ಕವಿಪುತ್ರನಾದ ಉಶನಸ್ ಎಂಬುವನು ಅಸುರರ ದೂತನು ಎಂದು

ಇದರ ಅರ್ಥವು. **ಪರೋಕ್ಷಂ ವಾ ಅಸ್ಯೇ ದೇವಾಃ** (ಅಗ್ನಿಯಲ್ಲದ) ಇತರ ದೇವತೆಗಳು ನಮಗೆ ಪ್ರತ್ಯಕ್ಷವಾಗಿ ಕಾಣಿಸುವುದಿಲ್ಲ ಎಂದು ಯಜುರ್ವೇದ ಶ್ರುತಿಯು ಹೇಳುವಂತೆ ನಾವು ಎಂದರೆ ಮನುಷ್ಯರು ಅರ್ಪಿಸುವ ಹವಿಸ್ಸು ಮೊದಲಾದ ವಸ್ತುಗಳನ್ನು ದೇವತೆಗಳಿಗೆ ತಲವುವಂತೆ ಮಾಡಲು ಅಗ್ನಿಯಲ್ಲಿ ಹೋಮಮಾಡುವುದರಿಂದ ಅಗ್ನಿಯು ಮನುಷ್ಯರಿಗೂ ದೇವತೆಗಳಿಗೂ ಮಧ್ಯಸ್ಥನಾಗಿದ್ದು ಹೋಮಮಾಡಿದ ಹವಿಸ್ಸನ್ನು ದೇವತೆಗಳಿಗೆ ಒಯ್ಯುವನೆಂದು ಪ್ರತೀತಿ ಇರುವುದು. ಆದುದರಿಂದ ಅಗ್ನಿಯು ದೇವದೂತನೆಂದು ಹೇಳುವ ರೂಢಿಯಿರುವುದು.

ವೃಣೀಮಹೇ—ವರಣಮಾಡುವೆವು. ಆರಿಸಿಕೊಳ್ಳುವೆವು. Select, Choose ಇತ್ಯಾದಿ. ಸ್ಕಂದ ಸ್ವಾಮಿಯು ಪ್ರಾರ್ಥಿಸುವೆವು ಎಂದು ಅರ್ಥವಿವರಣೆ ಮಾಡಿರುವರು.

ವಿಶ್ವವೇದಸಂ—**ಸರ್ವಧನೋಪೇತಂ** ಸಮಸ್ತಧನಯುಕ್ತನಾದ ಎಂದರ್ಥವು. ಋಗ್ವೇದದ **ಅಗ್ನಿ ಮೀಳೇ** ಎಂಬ ಮೊದಲನೆಯ ಋಕ್ಕಿನಲ್ಲಿಯೇ **ರತ್ನಧಾತಮಂ** ಎಂಬ ಶಬ್ದವು ಈ ಅರ್ಥವನ್ನು ಸಮರ್ಥಿಸುವುದು. ವ.ಳಿ ಮೊದಲಾದ ಇಪ್ಪತ್ತೈಂಟು ಧನನಾಮಗಳಲ್ಲಿ ವೇದಸ್ ಶಬ್ದವು ಪಠಿತವಾಗಿರುವುದು (೨-೩-೯) ಆದುದರಿಂದ ವೇದಸ್ ಶಬ್ದಕ್ಕೆ ಧನವೆಂಬ ಅರ್ಥವನ್ನು ಹೇಳಬೇಕು.

ಸುಕ್ರತುಂ—**ಶೋಭನಕರ್ಮಾಣಂ ಅಥವಾ ಶೋಭನಪ್ರಜ್ಞಂ**, ಎಂದರೆ ಯಜ್ಞಾದಿ ಕರ್ಮಗಳಿಗೆ ಅವಶ್ಯಕವೆನಿಸುವ, ಯಜ್ಞಕರ್ಮವನ್ನು ಸಾಂಗಗೊಳಿಸುವ, ಉತ್ತಮವಾದ ಪ್ರಜ್ಞೆಯುಳ್ಳ, ಯಜ್ಞಾದಿಕರ್ಮಗಳ ಸ್ವರೂಪವನ್ನು ಚೆನ್ನಾಗಿ ತಿಳಿದಿರುವ ಇತ್ಯಾದಿ ಅರ್ಥಗಳನ್ನು ಹೇಳಬಹುದು. ಕ್ರತುಶಬ್ದವು ಅಪಃ ಮೊದಲಾದ ಇಪ್ಪತ್ತಾರು ಕರ್ಮವಾಚಕ ಶಬ್ದಗಳ ಮಧ್ಯದಲ್ಲಿಯೂ (ನಿ. ೩-೧) ಕೇತಃ ಮೊದಲಾದ ಹನ್ನೊಂದು ಪ್ರಜ್ಞಾವಾಚಕ ಶಬ್ದಗಳ ಮಧ್ಯದಲ್ಲಿಯೂ (ನಿ. ೩-೧೩) ಪಠಿತವಾಗಿರುವುದರಿಂದ ಕ್ರತುಶಬ್ದಕ್ಕೆ ಕರ್ಮ ಮತ್ತು ಪ್ರಜ್ಞೆ ಎಂಬ ಎರಡು ವಿಧವಾದ ಅರ್ಥಗಳಿರುವವು

॥ ವ್ಯಾಕರಣಪ್ರಕ್ರಿಯಾ ॥

ಹೋತಾರಂ—**ಹ್ವೇಞ್‌ಸ್ಪರ್ಧಾಯಾಂ** ಶಬ್ದೇ ಚ ಧಾತು. ಇದರಮುಂದೆ **ತೃನ್** (ಪಾ. ಸೂ. ೩-೨-೧೩೫) ಎಂಬ ಸೂತ್ರದಿಂದ ತಚ್ಛೀಲ, ತದ್ಧರ್ಮ, ತತ್ಸಾಧುಕಾರಿ, ಎಂಬ ಅರ್ಥಗಳಲ್ಲಿ ತೃನ್‌ಪ್ರತ್ಯಯ. ಹ್ವೇ+ತೃ ಬಹುಲಂ ಛಂದಸಿ (ಪಾ. ಸೂ. ೬-೧-೩೪) ಎಂಬುದರಿಂದ ಸಂಪ್ರಸಾರಣ ವಕಾರಕ್ಕೆ ಉಕಾರ. **ಸಂಪ್ರಸಾರಣಾಚ್ಚ** (ಪಾ.ಸೂ. ೬-೧-೧೦೮) ಎಂಬುದರಿಂದ ಪೂರ್ವರೂಪ. ಹು+ತೃ **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಸಾರ್ವಧಾತುಕಆರ್ಧಧಾತುಕಪ್ರತ್ಯಯಗಳು ಪರದಲ್ಲಿರುವಾಗ ಇಗಂತವಾದ ಅಂಗಕ್ಕೆ ಗುಣ ಬರುವುದು ಎಂದು ಸೂತ್ರಾರ್ಥ. **ತಿಙ್‌ಶಿತ್ಸಾರ್ವಧಾತುಕಂ** (ಪಾ. ಸೂ. ೩-೪-೧೧೩) ತಿಪ್‌ತಸ್‌ಝಿ ಮೊದಲಾದ೧೮ ತಿಙ್ ಪ್ರತ್ಯಯಗಳಿಗೂ ಶಕಾರವನ್ನು ಇತ್ಸಂಜ್ಞೆಹೊಂದಿರುವ ಪ್ರತ್ಯಯಗಳಿಗೂ ಸಾರ್ವಧಾತುಕವೆಂದು ಹೆಸರು. **ಆರ್ಧಧಾತುಕಂ ಶೇಷಃ** (ಪಾ. ಸೂ. ೩-೪-೧೧೪) **ತಿಙ್‌ಶಿತ್** ಇವುಗಳನ್ನುಳಿದು **ಧಾತೋಃ** (ಪಾ. ಸೂ. ೩-೧-೯೧) ಎಂಬ ಅಧಿಕಾರದಲ್ಲಿ ವಿಹಿತವಾದ ಪ್ರತ್ಯಯಕ್ಕೆ ಆರ್ಧಧಾತುಕವೆಂದು ಹೆಸರು. ಇಲ್ಲಿ ತೃನ್ ಎಂಬುದು ತಿಙ್ ಪ್ರತ್ಯಯವಲ್ಲ ಶಿತ್ತೂ ಅಲ್ಲ. ಧಾತೋಃ ಎಂಬ ಅಧಿಕಾರದಲ್ಲಿ ವಿಹಿತವಾದ ಪ್ರತ್ಯಯ, ಆದ್ದರಿಂದ ಆರ್ಧಧಾತುಕವು. ಆದು ಪರದಲ್ಲಿರುವಾಗ ಹು ಎಂಬ ಇಗಂತವಾದ ಅಂಗಕ್ಕೆ ಗುಣ ಬರುವುದು ಎಂದರೆ ಉಕಾರಕ್ಕೆ ಓಕಾರಬರುವುದು ಹೋತೃ ಎಂದಾಗುವುದು. ಇದರ ಮುಂದೆ ದ್ವಿತೀಯಾಏಕವಚನ ಅಮ್ ಪ್ರತ್ಯಯ

ವನ್ನಿಟ್ಟರೆ **ಋತೋಜ್ಞಾಸರ್ವನಾಮಸ್ಥಾನಯೋಃ** (ಪಾ ಸೂ. ೬-೩-೧೧೦) ಎಂಬುದರಿಂದ ಋಕಾರಕ್ಕೆ ಗುಣವು ರಪರವಾಗಿ ಬರುವುದು ಹೋತರ್+ಅಮ್ **ಅಪ್ ತೃನ್ ತೃಚ್** (ಪಾ. ೬-೪-೧೧) ಎಂಬುದರಿಂದ ಉಪಧಾ ದೀರ್ಘ ಬಂದರೆ ಹೋತಾರಂ ಎಂದಾಗುವುದು. ಹೋತೃ ಎಂಬುದು ನಿತ್ಸ್ವರದಿಂದ ಆದ್ಯುದಾತ್ತ.

ವಿಶ್ವವೇದಸಂ—ವಿಶ್ವಂ ವೇದಃ ಯಸ್ಯ ಸಃ ತಂ ವಿಶ್ವವೇದಸಂ. **ಬಹುವ್ರೀಹೌ ವಿಶ್ವಂ ಸಂಜ್ಞಾಯಾಂ** (ಪಾ. ಸೂ. ೬-೩-೧೦೬) ಸಂಜ್ಞೆ ತೋರುವಾಗ ಬಹುವ್ರೀಹಿಸಮಾಸದಲ್ಲಿ ಪೂರ್ವಪದಭೂತವಾದ ವಿಶ್ವ ಶಬ್ದವು ಅಂತೋದಾತ್ತವಾಗುವುದು ಎಂಬುದರಿಂದ ಅಂತೋದಾತ್ತ. ಈ ಸೂತ್ರವಿಲ್ಲದಿದ್ದರೆ ವಿಶ್ವಶಬ್ದವು ಕ್ವಿ ಪ್ರತ್ಯಯಾಂತವಾದ್ದರಿಂದ ನಿತ್ಸ್ವರದಿಂದ ಆದ್ಯುದಾತ್ತ. **ಬಾಹುವ್ರೀಹೌಪ್ರಕೃತ್ಯಾಪೂರ್ವಪದಂ** (ಪಾ. ಸೂ. ೬-೩-೧) ಎಂಬುದರಿಂದ ಆದ್ಯುದಾತ್ತ ಬರಬೇಕಾಗುವುದು. ಅದನ್ನು ಬಾಧಿಸಿ ಅಂತೋದಾತ್ತ ಬರುವುದು.

ಅಸ್ಯ—**ಊಡಿದಂ ಪದಾದ್ಯಪ್ಪೆನ್ಯೃದ್ಯುಭ್ಯಃ** (ಪಾ. ಸೂ. ೬-೧-೧೭೧) ಎಂಬುದರಿಂದ ಇದಂ ಶಬ್ದದ ಮುಂದೆ ಸ್ಯ ವಿಭಕ್ತಿಯು ಉದಾತ್ತ.

ಸುಕ್ರತುಂ—**ಕೃತ್ವಾದಯೆಶ್ಚ** (ಪಾ. ಸೂ. ೬-೩-೧೧೪) ಸು ಎಂಬುದರ ಮುಂದೆ ಇರುವ ಕೃತ್ವಾದಿ ಗಣಪಠಿತವಾದ ಶಬ್ದಗಳು ಅದ್ಯುದಾತ್ತಗಳಾಗುವುವು ಎಂಬುದರಿಂದ ಸು ಎಂಬುದರ ಮುಂದೆ ಇರುವ ಕ್ರತು ಶಬ್ದವು ಆದ್ಯುದಾತ್ತ. ॥ ೧ ॥

॥ ಸಂಹಿತಾಪಾಠಃ ॥

ಅ॒ಗ್ನಿ॒ಮ॒ಗ್ನಿಂ ಹ॒ವೀ॒ಮ॒ಭಿಃ ಸ॒ದಾ ಹ॒ವಂ॒ತ॒ ವಿ॒ಶ್ಪ॒ತಿ॒ಂ ।
ಹ॒ವ್ಯ॒ವಾಹ॒ಂ ಪು॒ರು॒ಪ್ರಿ॒ಯ॒ಂ ॥ ೨ ॥

॥ ಪದಪಾಠಃ ॥

ಅ॒ಗ್ನಿ॒ಂ॒ ಅ॒ಗ್ನಿ॒ಂ । ಹ॒ವೀ॒ಮ॒ ಭಿಃ । ಸ॒ದಾ । ಹ॒ವ॒ಂ॒ತ॒ । ವಿ॒ಶ್ಪ॒ತಿ॒ಂ ॥
ಹ॒ವ್ಯ॒ ವಾ॒ಹ॒ಂ । ಪು॒ರು॒ ಪ್ರಿ॒ಯ॒ಂ ॥ ೨ ॥

॥ ಸಾಯಣಭಾಷ್ಯಂ ॥

ಯದ್ಯಪ್ಯಗ್ನಿಃ ಸ್ವರೂಪೇಣೈಕ ಏವ ತಥಾಪಿ ಪ್ರಯೋಗಭೇದಾದಾಹವನೀಯಾದಿಸ್ಥಾನಭೇದಾತ್ಪಾವಕಾದಿವಿಶೇಷಣಭೇದಾದ್ವಾ ಬಹುವಿಧತ್ವಮಭಿಪ್ರೇತ್ಯಾಗ್ನಿಮಗ್ನಿಮಿತಿ ವೀಪ್ಸಾ । ತಂ ಹವೀಮಭಿರಾಹ್ವಾನಕರಣೈರ್ಮಂತ್ರೈಃ ಸದಾ ಹವಂತೇ । ನಿರಂತರಮನುಷ್ಠಾತಾರ ಆಹ್ವಯಂತಿ । ಕೀದೃಶಂ । ವಿಶ್ಪತಿಂ

ವಿಶಾಂ ಪ್ರಜಾನಾಂ ಹೋತ್ರಾದೀನಾಂ ಪಾಲಕಂ ಹವ್ಯವಾಹಂ ಯಜಮಾನಸಮರ್ಪಿತಸ್ಯ ಹವಿಷೋ ದೇವಾನ್ಪ್ರತಿ ವೋಢಾರಂ । ಅತ ಏವ ಪುರುಪ್ರಿಯಂ ಬಹೂನಾಂ ಪ್ರೀತ್ಯಾಸ್ಪದಂ ॥ ಅಗ್ನಿಮಗ್ನಿಂ । ನಿತ್ಯವೀಪ್ಸಯೋರಿತಿ ವೀಪ್ಸಾಯಾಂ ದ್ವಿರ್ಭಾವಃ। ತಸ್ಯ ಪರಮಾಮ್ರೇಡಿತಮಿತ್ಯುತ್ತರಸ್ಯಾಮ್ರೇಡಿತಸಂಜ್ಞಾಯಾಮನುದಾತ್ತಂ ಚೇತ್ಯನುದಾತ್ತಂ । ಹವೀಮಭಿಃ । ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ । ಆಹ್ವಾನಕರಣಭೂತೇಷು ಮಂತ್ರೇಷು ಸ್ವನ್ಯಾಪಾರಸ್ಯಾತಂತ್ರ್ಯಾತ್ಕರ್ತೃತ್ವವಿವಕ್ಷಯಾನ್ಯೇಭ್ಯೋಽಪಿ ದೃಶ್ಯಂತ ಇತಿ ಕರ್ತರಿ ಮನಿನ್ । ತಸ್ಯ ಛಾಂದಸ ಈಡಾಗಮಃ । ಬಹುಲಂ ಛಂದಸೀತಿ ಧಾತೋಃ ಸಂಪ್ರಸಾರಣಂ ಪರಪೂರ್ವತ್ವಂ ಗುಣಾವಾದೇಶೌ । ನಿತ್ಯಾವಾದ್ಯುದಾತ್ತತ್ವಂ । ಸದಾ ಸರ್ವೈಕಾನ್ಯೇತ್ಯಾದಿನಾ । ಪಾ. ೫. ೩. ೧೫ । ಸರ್ವತಶ್ಚಾದ್ವಾ ಪ್ರತ್ಯಯಃ । ಸರ್ವಸ್ಯ ಸೋಽನ್ಯತರಸ್ಯಾಂ ದಿ । ಪಾ. ೫. ೩. ೬ । ಇತಿ ಸಭಾವಃ । ವ್ಯತ್ಯಯೇನಾದ್ಯುದಾತ್ತತ್ವಂ । ಹವಂತ । ಹ್ವೇಞಶ್ಚೋ ಲಟ್ । ಝಸ್ಯಾಂತಾದೇಶಃ । ಟೇರೇತ್ವಾಭಾವಶ್ಛಾಂದಸಃ । ಶಪಿ ಬಹುಲಂ ಛಂದಸೀತಿ ಸಂಪ್ರಸಾರಣಂ । ತಿಙ್ಙತಿಙ ಇತಿ ನಿಘಾತಃ । ವಿಶ್ಪತಿಂ । ಪತ್ಯಾವೈಶ್ವರ್ಯೇ ಇತಿ ಪೂರ್ವಪದಪ್ರಕೃತಿಸ್ವರೇ ಪ್ರಾಪ್ತೇ ಪರಾದಿಶ್ಛಂದಸಿ ಬಹುಲಮಿತ್ಯುತ್ತರ ಪದಾದ್ಯುದಾತ್ತತ್ವಂ । ಹವ್ಯವಾಹಂ । ವಹ ಪ್ರಾಪಣೇ । ವಹಶ್ಚ । ಪಾ ೩. ೨. ೬೪ । ಇತಿ ಣ್ವಿಪ್ರತ್ಯಯಃ । ಕೃದುತ್ತರಪದಪ್ರಕೃತಿಸ್ವರತ್ವಂ । ಪುರುಪ್ರಿಯಂ । ಪುರೂಣಾಂ ಪ್ರಿಯಂ । ಸಮಾಸಾಂತೋದಾತ್ತತ್ವಂ ॥

॥ ಪ್ರತಿಪದಾರ್ಥ ॥

ವಿಶ್ಪತಿಂ—ಯಜಮಾನ ಹೋತೃ ಮೊದಲಾದ ಪ್ರಜೆಗಳಿಗೆ ಸ್ವಾಮಿಯಾದ (ಪಾಲಕನಾದ) । ಹವ್ಯವಾಹಂ—ಯಜಮಾನನು ಸಮರ್ಪಿಸುವ ಹವಿಸ್ಸನ್ನು ದೇವತೆಗಳಿಗೆ ಒಯ್ಯುವ । ಪುರುಪ್ರಿಯಂ—ಎಲ್ಲರಿಗೂ ಪ್ರೀತಿಪಾತ್ರನಾದ । ಅಗ್ನಿಮಗ್ನಿಂ—(ಆಹವನೀಯಾದಿ ಸ್ಥಾನವಿಶೇಷಗಳಲ್ಲಿರುವ) ಪ್ರತಿ ಅಗ್ನಿಯನ್ನು । ಹವೀಮಭಿಃ—ಆಹ್ವಾನಗಳಿಗಾಗಿ ಉಪಯೋಗಿಸುವ ಮಂತ್ರಗಳಿಂದ । ಸದಾ—ಯಾವಾಗಲೂ । ಹವಂತ—(ಯಜ್ಞಾನುಷ್ಠಾತೃಗಳು) ಆಹ್ವಾನಮಾಡುವರು ॥

॥ ಭಾವಾರ್ಥ ॥

ಅಗ್ನಿಯು ಒಬ್ಬನೇ ಆದರೂ ಆಹವನೀಯ, ಗಾರ್ಹಪತ್ಯ ಮೊದಲಾದ ಸ್ಥಾನಭೇದಗಳಿಂದ ಬೇರೆಬೇರೆಯಾಗಿ ತೋರುವನು ಯಜಮಾನಾದಿಯಾದ ಸಮಸ್ತ ಪ್ರಜೆಗಳಿಗೂ ಪಾಲಕನು. ಯಜ್ಞದಲ್ಲಿ ಅರ್ಪಿಸುವ ಹವಿಸ್ಸನ್ನು ದೇವತೆಗಳಿಗೆ ಒಯ್ಯುವವನು, ಸಕಲರಿಗೂ ಪ್ರಿಯನಾದವನು. ಇಂತಹ ಅಗ್ನಿಯನ್ನೇ ಯಜ್ಞ ಮಾಡುವ ಜನರು ಯಾವಾಗಲೂ ಆಹ್ವಾನಮಂತ್ರಗಳಿಂದ ಪ್ರಾರ್ಥಿಸಿ ಕರೆಯುವರು

English Translation.

They (offerers of oblations) constantly invoke Agni and Agni again, the lord of men, the bearer of offerings, the beloved of many.

॥ ವಿಶೇಷವಿಷಯಗಳು ॥

ಅಗ್ನಿಮಗ್ನಿಂ— **ನಿತ್ಯವೀಪ್ಸಯೋರಿತಿ ವೀಪ್ಸಾಯಾಂ ದ್ವಿರ್ಭಾವಃ** ॥ ಒಂದು ಶಬ್ದವನ್ನು ಎರಡಾವರ್ತಿ ಉಚ್ಚರಿಸುವುದರಿಂದ ಪ್ರತಿಯೊಂದು ಎಂಬರ್ಥವು ಸೂಚಿತವಾಗುವುದು. ಇಲ್ಲಿ ಪ್ರತಿಯೊಂದು ಅಗ್ನಿಯನ್ನೂ ಎಂದರೆ ಯಜ್ಞಗಳಲ್ಲಿ ಬೇರೆ ಬೇರೆ ಸ್ಥಾನಗಳಲ್ಲಿ ಪ್ರತಿಷ್ಠಿಸಲ್ಪಟ್ಟಿರುವ ಆಹವನೀಯ, ದಕ್ಷಿಣಾಗ್ನಿ, ಗಾರ್ಹಪತ್ಯ ಇತ್ಯಾದಿ.

ವಿಶ್ಪತಿಂ— **ವಿಶಾಂ ಪ್ರಜಾನಾಂ ಪತಿಂ,** ಪ್ರಜೆಗಳ ಅಥವಾ ಜನರ ಅಧಿಪತಿಯು, ಸ್ವಾಮಿಯು, Ruler of men, progeny.

ವ್ಯಾಕರಣಪ್ರಕ್ರಿಯಾ

ಅಗ್ನಿಮಗ್ನಿಂ— **ನಿತ್ಯವೀಪ್ಸಯೋಃ** (ಪಾ. ಸೂ ೮-೧-೪) ನಿತ್ಯವೀಪ್ಸಯೋಃ ಎಂಬ ಪದವು ನಿತ್ಯ-ವೀಪ್ಸೆ, ಎಂಬ ಎರಡು ಅರ್ಥವನ್ನು ನಿರ್ದೇಶಿಸುವ ಪದ. ಈ ಅರ್ಥದಲ್ಲಿ ಯಾವುದಕ್ಕೆ ಏನು ಬರುವುದು ಎಂದರೆ ಸ್ಥಾನ್ಯಾಕಾಂಕ್ಷೆ ವಿಧೇಯಾಕಾಂಕ್ಷೆ ಇರುವುದು. ಆದ್ದರಿಂದ **ಸರ್ವಸ್ಯ ದ್ವೇ** (ಪಾ. ಸೂ. ೮-೧-೧) ಎಂಬ ಸೂತ್ರವು ಅಧಿಕೃತವಾಗುವುದು. **ಪದಸ್ಯ** (ಪಾ. ಸೂ. ೮-೧-೧೬) ಎಂದು ಅಷ್ಟಾಧ್ಯಾಯಿಯಲ್ಲಿ ಮುಂದೆ ಹೇಳುವ ಸೂತ್ರವೂ ಸಹ ಇಲ್ಲಿ ಸಂಬಂಧಿಸುವುದು. ದ್ವೇ, ಎಂಬುದುದು ಸಂಖ್ಯಾವಾಚಕ ಸೆಂಖ್ಯೇಯಾಕಾಂಕ್ಷೆ (ಎಣಿಕೆಗೆ ವಿಷಯವಾದುದು) ಬಂದರೆ ಶಬ್ದಶಾಸ್ತ್ರವಾದ್ದರಿಂದ ಶಬ್ದೇ ಎಂದು ಲಬ್ಧವಾಗುವುದು. ನಿತ್ಯಶಬ್ದಕ್ಕೆ ಅಭೀಕ್ಷ್ಣ್ಯ ಎಂದರೆ ಪೌನಃಪುನ್ಯ ಎಂದರ್ಥ. ವೀಪ್ಸಾ ಎಂದರೆ ವ್ಯಾಪ್ತೀಚ್ಛೆ. ಆದರೆ ಶಾಬ್ದಬೋಧದಲ್ಲಿ ವ್ಯಾಪ್ತಿ ಮಾತ್ರ ತೋರುವುದು. ಇತ್ಥಂಚ ಪೌನಃಪುನ್ಯವ್ಯಾಪ್ತಿ ಇವು ತೋರುವಾಗ ಪದದ ಸಂಪೂರ್ಣದ ಸ್ಥಾನದಲ್ಲಿ ಎರಡು ಶಬ್ದಗಳು ಒರುವುವು ಎಂದು ಅರ್ಥವು ಏರ್ಪಡುವುದು. ಇಲ್ಲಿ ವ್ಯಾಪ್ತಿ ಎಂಬ ಅರ್ಥವನ್ನು ವಿವಕ್ಷಿಸಿದಾಗ ಅಗ್ನಿಮ್ ಎಂಬ ಪೂರ್ಣಪದದ ಸ್ಥಾನದಲ್ಲಿ ಎರಡು ಅಗ್ನಿಮ್ ಎಂಬ ಪದಗಳು ಬರುತ್ತವೆ. ಅಗ್ನಿಮ್ ಅಗ್ನಿಮ್. ಪ್ರತಿಯೊಂದು ಅಗ್ನಿಯನ್ನೂ ಎಂದು ಅರ್ಥ. ಪೌನಃಪುನ್ಯ ಎಂಬುದು ಕ್ರಿಯೆಯಲ್ಲಿರುವ ಧರ್ಮ, ಪೌನಃ ಪುನ್ಯ ಎಂಬ ಅರ್ಥದಲ್ಲಿ ಬರುವ ದ್ವಿರ್ವಚನವು ತಿಙಂತಕ್ಕೂ ಅವ್ಯಯಸಂಜ್ಞಕವಾದಕೃದಂತಕ್ಕೂ ಸಹ ಬರುವುದು. **ತಸ್ಯ ಪರಮಾಮ್ರೇಡಿತಮ್** (ಪಾ. ಸೂ. ೮-೧-೨) ದ್ವಿತ್ವವನ್ನು ಹೊಂದಿದ ಶಬ್ದದ ಎರಡನೆ ರೂಪಕ್ಕೆ ಆಮ್ರೇಡಿತ ಸಂಜ್ಞೆ ಬರುವುದು ಎಂಬುದರಿಂದ ಆಮ್ರೇಡಿತ ಸಂಜ್ಞೆಬರುವುದು. ಆದಕ್ಕೆ **ಅನುದಾತ್ತಂಚ** (ಪಾ. ಸೂ ೮-೧-೩) ಎಂಬುದರಿಂದ ಅನುದಾತ್ತ ಸ್ವರ ಬರುವುದು.

ಹವೀಮಭಿಃ— **ಹ್ವೇಞ್ಸ್ಪರ್ಧಾಯಾಂಶಬ್ದೇ ಚ** ಧಾತು ಇದರ ಮುಂದೆ **ಅನ್ಯೇಭ್ಯೋಽಪಿದೃಶ್ಯಂತೇ** (ಪಾ. ಸೂ. ೩-೨-೭೫) ಎಂಬುದರಿಂದ ಕರ್ತೃರ್ಥದಲ್ಲಿ ಮನಿನ್ ಪ್ರತ್ಯಯ ಬರುವುದು. ಯದ್ಯಪಿ ಮಂತ್ರಗಳು ಆಹ್ವಾನದಲ್ಲಿ ಕರಣಗಳಾಗಿರುವುವು ಆದರೂ **ವಿವಕ್ಷಾತಃಕಾರಕಾಣಿಭವನ್ತಿ** ಎಂಬ ನ್ಯಾಯದಿಂದ ಸ್ವವ್ಯಾಪಾರದಲ್ಲಿರುವ ಸ್ವಾತಂತ್ರ್ಯವನ್ನು ವಿವಕ್ಷಿಸಿ ಸ್ಥಾಲೀಪಚತಿ ಎಂಬಲ್ಲಿ ಕರ್ತೃಸಂಜ್ಞೆ ಬರುವಂತೆ ಇಲ್ಲಿಯೂ ಸ್ವವ್ಯಾಪಾರಗತವಾದ ಸ್ವಾತಂತ್ರ್ಯವನ್ನು ವಿವಕ್ಷಿಸಿ ಕರ್ತೃರ್ಥದಲ್ಲಿ ಮನಿನ್ ಪ್ರತ್ಯಯ ಬರಲು ತಡೆಯಿಲ್ಲ. ಹ್ವೇ+ಮನ್- ಮನಿನ್ ಪ್ರತ್ಯಯಕ್ಕೆ ಛಾಂದಸವಾಗಿ ಈಡಾಗಮ ಬರುವುದು ಹ್ವೇ+ಈಮನ್. **ಬಹುಲಂ ಛಂದಸಿ**

(ಪಾ. ಸೂ. ೬-೧-೩೪) ಎಂಬುದರಿಂದ ಧಾತುವಿಗೆ ಸಂಪ್ರಸಾರಣದಿಂದ ಏಕಾರಕ್ಕೆ ಉಕಾರ, ಪೂರ್ವರೂಪ, ಗುಣ, ಅವಾದೇಶ ಹವೀಮನ್ ತೃತೀಯಾಬಹುವಚನ ಭಿಸ್ ಪ್ರತ್ಯಯ. **ಸ್ವಾದಿಷ್ವಸರ್ವನಾಮಸ್ಥಾನೇ** (ಪಾ. ಸೂ. ೪-೧-೧೭) ಎಂಬುದರಿಂದ ನಲೋಪ ರುತ್ವ ವಿಸರ್ಗಗಳು ಹವೀಮಭಿಃ ಎಂದಾಗುವುದು. ಹವೀಮಭಿಸ್ ಎಂಬುದು ನಿತ್ಸ್ವರದಿಂದ ಆದ್ಯುದಾತ್ತ.

ಸದಾ—ಸರ್ವೈಕಾನ್ಯಕಿಂಯತ್ತದಃಕಾಲೇದಾ (ಪಾ. ಸೂ. ೫-೩-೧೫) ಕಾಲಾರ್ಥದಲ್ಲಿರುವುಗಳೂ ಸಪ್ತಮ್ಯಂತಗಳೂ ಆದ ಸರ್ವ, ಏಕ, ಅನ್ಯ, ಕಿಮ್- ಯದ್, ತದ್. ಇವುಗಳ ಮುಂದೆ ಸ್ವಾರ್ಥದಲ್ಲಿ ದಾ ಪ್ರತ್ಯಯ ಬರುವುದು ಎಂಬುದರಿಂದ ದಾ ಪ್ರತ್ಯಯ ಬಂದರೆ ಸರ್ವ+ದಾ ಈಗ **ಸರ್ವಸ್ಯ ಸೋನ್ಯತರಸ್ಯಾಂದಿ** (ಪಾ. ಸೂ. ೫-೩-೭) ಪ್ರಾಗ್ದಿಶೀಯವಾದ ದಕಾರಾದಿ ಪ್ರತ್ಯಯ ಪರದಲ್ಲಿರುವಾಗ ಸರ್ವಶಬ್ದದ ಸ್ಥಾನದಲ್ಲಿ ಸ ಎಂಬ ಆದೇಶವು ವಿಕಲ್ಪವಾಗಿ ಬರುವುದು ಎಂಬುದರಿಂದ ಸರ್ವ ಶಬ್ದಕ್ಕೆ ಸ ಆದೇಶ ಬಂದರೆ ಸದಾ ಎಂದಾಗುವುದು- ಸರ್ವಸ್ಮಿನ್ ಕಾಲೇ ಎಂದು ವಿಗ್ರಹ, ಪ್ರತ್ಯಯಸ್ವರ ಬಂದು ನ್ಯಾಯವಾಗಿ ಸದಾ ಎಂಬುದು ಅಂತೋದಾತ್ತವಾಗ ಬೇಕು ಆದರೂ ವ್ಯತ್ಯಯದಿಂದ ಆದ್ಯುದಾತ್ತವಾಗುವುದು.

ಹವನ್ತ—ಹ್ವೇಞ್ ಧಾತುವಿನ ಮುಂದೆ ಲಟ್. ಅದಕ್ಕೆ ಝಾ **ಆದೇಶ ಝೋನ್ತೇಃ** (ಪಾ. ಸೂ. ೭-೧-೩) ಎಂಬುದರಿಂದ ಝಕಾರಕ್ಕೆ ಅನ್ತಾದೇಶ **ಟಿತಆತ್ಮನೇಪದಾನಾಂ ಟೇರೇ** (ಪಾ.ಸೂ. ೩-೪-೭೭) ಎಂಬುದರಿಂದ ಪ್ರಾಪ್ತವಾದ ಏತ್ವವು ಬರದೇ ಇರುವಿಕೆಯು ಛಾಂದಸವು. ವಿಕರಣ ಶಪ್ ಹ್ವೇ-ಅ+ಅನ್ತ. **ಬಹುಲಂ ಛಂದಸಿ** (ಪಾ. ಸೂ. ೬-೧-೩೪) ಎಂಬುದರಿಂದ ಸಂಪ್ರಸಾರಣ. ಪೂರ್ವರೂಪ. ಗುಣ. ಅವಾದೇಶ. ಹವನ್ತ ಎಂದಾಗುವುದು. **ತಿಙ್ಙತಿಙಃ** (ಪಾ. ಸೂ. ೮-೧-೨೮) ಎಂಬುದರಿಂದ ಅನುದಾತ್ತ.

ವಿಶ್ಪತಿಮ್—ಪತ್ಯಾವೈಶ್ವಸ್ಯೇ (ಪಾ. ಸೂ. ೬-೩-೧೮) ಎಂಬುದರಿಂದ **ಪೂರ್ವಪದಪ್ರಕೃತಿಸ್ವರ** ಪ್ರಾಪ್ತವಾದರೆ ಅದನ್ನು ಬಾಧಿಸಿ **ಹೆರಾದಿಶ್ಚಂದೆಸಿಬಹುಲಮ್** (ಪಾ. ಸೆದ. ೬-೩-೧೧೯) ಎಂಬುದರಿಂದ ಉತ್ತರ ಪದವಾದ ಪತಿ ಎಂಬುದಕ್ಕೆ ಆದ್ಯುದಾತ್ತ ಬರುವುದು.

ಹವ್ಯವಾಹಂ—ಹವ್ಯಂ ವಹತಿ ಇತಿ ಹವ್ಯವಾಹಃ ತಮ್. ವಹ ಪ್ರಾಪಣೇ ಧಾತು. ಇದರ ಮುಂದೆ **ವಹಶ್ಚ** (ಪಾ. ಸೂ. ೩-೨-೬೪) ಛಂದಸ್ಸಿನಲ್ಲಿ ಸುಬಂತವು ಉಪಪದವಾಗಿರುವಾಗ ವಹ ಧಾತುವಿನ ಮುಂದೆ ಣ್ವಿ ಪ್ರತ್ಯಯ ಬರುವುದು ಎಂಬುದರಿಂದ ಣ್ವಿ ಪ್ರತ್ಯಯ. ಹವ್ಯ+ಅಮ್+ವಹ್+ಣ್ವಿ ನ್ಯಾಯವಾಗಿ ಅಲೌಕಿಕ ಪ್ರಕ್ರಿಯಾ ವಾಕ್ಯವನ್ನು ಹವ್ಯ+ಅಸ್ ವಹ್+ಣ್ವಿ ಎಂದು ತೋರಿಸಬೇಕು. ಕೃದಂತವಾದ್ದರಿಂದ ಪ್ರಾತಿಪದಿಕ ಸಂಜ್ಞೆ ಸುಪ್ತಿಗೆ ಲುಕ್.ಣ್ವಿ ಪ್ರತ್ಯಯಕ್ಕೆ ಖಂಡಶಃ ಲೋಪಃ ಉಪಧಾವೃದ್ಧಿ. ಹವ್ಯವಾಹ ಕೃದುತ್ತರ ಪದ ಪ್ರಕೃತಿಸ್ವರ ಬರುವುದು. ಏಕವಚನ ಅಮ್. ಹವ್ಯವಾಹಮ್.

ಪುರುಪ್ರಿಯಮ್—ಪುರೂಣಾಂ ಪ್ರಿಯಸ್ತಮ್ ಎಂದು ವಿಗ್ರಹ. ಷಷ್ಠೀತತ್ಪುರುಷ. **ಸವನಸ್ಯ** (ಪಾ ಸೂ. ೬-೧-೨೨೩) ಎಂಬುದರಿಂದ ಅಂತೋದಾತ್ತ ॥ ೨ ॥

॥ ಸಂಹಿತಾಪಾಠಃ ॥

ಅಗ್ನೇ ದೇವಾ ಇಹಾವಹ ಜಜ್ಞಾನೋ ವೃಕ್ತಬರ್ಹಿಷೇ ।
ಅಸಿ ಹೋತಾ ನ ಈಡ್ಯಃ ॥ ೩ ॥

॥ ಪದಪಾಠಃ ॥

ಅಗ್ನೇ । ದೇವಾನ್ । ಇಹ । ಆ । ವಹ । ಜಜ್ಞಾನಃ । ವೃಕ್ತ ಽ ಬರ್ಹಿಷೇ ॥
ಅಸಿ । ಹೋತಾ । ನಃ । ಈಡ್ಯಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಜಜ್ಞಾನೋ ಽರಣ್ಯೋರುತ್ಪನ್ನಸ್ತ್ವಂ ವೃಕ್ತಬರ್ಹಿಷ ಆಸ್ತರಣಾರ್ಥಂ ಛಿನ್ನೇನ ಬರ್ಹಿಷಾ ಯುಕ್ತಾಯ ತಂ ಯಜಮಾನಮನುಗ್ರಹೀತುಮಿಹ ಕರ್ಮಾಣಿ ಹವಿರ್ಭೂಜೋ ದೇವಾನಾವಹ । ಸೋ ಽಸ್ಮದರ್ಥಂ ಹೋತಾ ದೇವಾನಾಮಾಹ್ವಾತಾ ತ್ವಮಿಡ್ಯಃ ಸ್ತುತ್ಯೋ ಽಸಿ ॥ ದೇವಾನಿತ್ಯತ್ರ ಸಂಹಿತಾಯಾಂ ದೀರ್ಘಾದಟಿ ಸಮಾನಪಾದ ಇತಿ ರುತ್ವಂ । ಆಕಾರೋ ಽಟಿ ನಿತ್ಯಮಿತ್ಯನುನಾಸಿಕಭಾವಃ । ಜಜ್ಞಾನಃ । ಜನೀ ಪ್ರಾದುರ್ಭಾವೇ । ಲಿಟಃ ಕಾನಚ್ । ಗಮಹನೇತ್ಯುಪಧಾಲೋಪಃ । ದ್ವಿರ್ವಚನೇ ಽಚಿ । ಪಾ. ೧-೧-೫೯ । ಇತಿ ತಸ್ಯ ಸ್ಥಾನಿವದ್ಭಾವಾದ್ದ್ವಿರ್ವಚನಂ । ಚಿತ್ತ್ವಾದಂತೋದಾತ್ತಃ । ವೃಕ್ತಬರ್ಹಿಷೇ ಓವ್ರಶ್ಚೀದನೇ। ನಿಷ್ಕೃತಿ ಕ್ತಪ್ರತ್ಯಯಃ। ಯಸ್ಯ ವಿಭಾಷೇತೀಟ್ಪ್ರತಿಷೇಧಃ। ವೃಕ್ತಂ ಬರ್ಹಿರ್ಯಸ್ಮೈ ಯಜಮಾನಾಯ ಯೇನ ವಾ ಋತ್ವಿಜಾ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರಃ । ಅಸಿ । ಅಸ್ತೇಃ ಸಿಪ್ । ಆದಿಪ್ರಭೃತಿಭ್ಯಃ ಶಪ ಇತಿ ಶಪೋ ಲುಕ್ । ತಾಸಸ್ತ್ಯೋರ್ಲೋಪಃ । ಪಾ ೭-೪-೫೦ । ಇತಿ ಸಕಾರಸ್ಯ ಲೋಪಃ । ಪಾದಾದಿತ್ವಾನ್ನ ನಿಘಾತಃ । ಹೋತಾ । ಹ್ವಯತೇಸ್ತಾಚ್ಛೀಲ್ಯಾದಿಷು ತೃನ್ । ಬಹುಲಂ ಛಂದಸೀತಿ ಸಂಪ್ರಸಾರಣಂ । ನಿತ್ತ್ವಾದಾದ್ಯುದಾತ್ತಃ । ಈಡ್ಯಃ । ಈಡಸ್ತುತೌ । ಋಹಲೋರ್ಣ್ಯತ್ । ಪಾ. ೩-೧-೧೨೪ । ತಿಶ್ಚಾರಿತೇ ಪ್ರಾಪ್ತ ಈಡವಂದವೃಶಂಸದುಹಾಂ ಣ್ಯತಃ । ಪಾ ೬-೧-೨೧೪ । ಇತ್ಯಾದ್ಯುದಾತ್ತತ್ವಂ ॥

॥ ಪ್ರತಿಪದಾರ್ಥ ॥

(ಹೇ) ಅಗ್ನೇ—ಎಲೈ ಅಗ್ನಿಯೇ । ಜಜ್ಞಾನಃ—ಅರಣಿಯಲ್ಲಿ ಉತ್ಪನ್ನನಾದ (ನೀನು) । ವೃಕ್ತಬರ್ಹಿಷೇ—ಆಸನಾರ್ಥವಾಗಿ ಕತ್ತರಿಸಿದ ದರ್ಭೆಗಳನ್ನು ಹರಡಿರುವ ಯಜಮಾನನನ್ನು ಅನುಗ್ರಹಿಸುವುದಕ್ಕಾಗಿ। ಇಹ—ಈ ಕರ್ಮದಲ್ಲಿ (ಯಜ್ಞದಲ್ಲಿ) । ದೇವಾನ್—ದೇವತೆಗಳನ್ನು । ಆ ವಹ—ಕರೆದುಕೊಂಡು ಬಾ । ನಃ—ನಮಗಾಗಿ । ಹೋತಾ—ದೇವತೆಗಳನ್ನು ಕರೆದುಕೊಂಡುಬರುವ ನೀನು । ಈಡ್ಯಃ—ಸ್ತುತಿಸಲ್ಪಡಲರ್ಹನಾಗಿ । ಅಸಿ—ಇರುವೆ ॥

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು (ಅರಣಿಯಲ್ಲಿ) ಉತ್ಪನ್ನನಾದವನು. ಇಂತಹ ನೀನು ದೇವತೆಗಳು ಬಂದು ಕುಳಿತುಕೊಳ್ಳುವುದಕ್ಕಾಗಿ ಕತ್ತರಿಸಿದ ದರ್ಭೆಗಳನ್ನು ಹಾಸಿ ಸಿದ್ಧಪಡಿಸಿರುವ ಯಜಮಾನನಿಗೆ ಅನುಗ್ರಹಮಾಡುವುದಕ್ಕಾಗಿ ದೇವತೆಗಳನ್ನು ಇಲ್ಲಿಗೆ ಕರೆದುಕೊಂಡು ಬಾ. ಏಕೆಂದರೆ ದೇವತೆಗಳನ್ನು ಕರೆದುಕೊಂಡು ಬರುವುದರಿಂದ ನೀನು ನಮ್ಮೆಲ್ಲರಿಂದಲೂ ಸ್ತುತಿಸಲ್ಪಡಲು ಅರ್ಹನಾಗಿರುವೆ.

English Translation

Agni, when born, bring hither the gods for him who has prepared their seats with the clipped sacred grass; you are their invoker for us and are to be adored.

॥ ವಿಶೇಷ ವಿಷಯಗಳು ॥

ಜಜ್ಞಾನಃ—ಹುಟ್ಟಿದ, ಉತ್ಪನ್ನನಾದ, born. ಹುಟ್ಟಿದ ಅಗ್ನಿಯೆಂದರೆ--ಯಜ್ಞಗಳಲ್ಲಿ ಅರಣಿ ಎಂಬ ಎರಡು ಮರದ ತುಂಡುಗಳನ್ನು ಒಂದಕ್ಕೊಂದು ಉಜ್ಜಿ ಬೆಂಕಿಯನ್ನು ಉತ್ಪತ್ತಿಮಾಡುವರು. ಆದುದರಿಂದ ಅಗ್ನಿಯು ಅರಣಿಯಲ್ಲಿ ಹುಟ್ಟಿದನೆಂದು ಹೇಳುವ ರೂಢಿಯಿದೆ.

ವೃಕ್ತಬರ್ಹಿಷೇ—ಈ ಶಬ್ದವನ್ನು ಹಿಂದೆಯೇ ವಿವರಿಸಿದೇನೆ. ಬರ್ಹಿ ಎಂದರೆ ಕತ್ತರಿಸಿದ ದರ್ಭೆಯು. ಇಂತಹ ದರ್ಭೆಗಳನ್ನು ದೇವತೆಗಳು ಬಂದು ಕೂಡುವುದಕ್ಕೆ ಹರಡಿ ಸಿದ್ಧಪಡಿಸಿದ ಯಜಮಾನನಿಗೋಸ್ಕರ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ದೇವಾನ್—ಸಂಹಿತಾಕಾಲದಲ್ಲಿ ಇವರ್ಣ ಪರದಲ್ಲಿರುವುದರಿಂದ **ದೀರ್ಘಾದಟಿಸಮಾನಪಾದೇ** (ಪಾ. ಸೂ. ೮-೩-೯) ನಕಾರವೂ ಅಡ್ವರ್ಣವೂ ಒಂದೇ ಪಾದದಲ್ಲಿರುವ ಪಕ್ಷಕ್ಕೆ ಅಡ್ವರ್ಣದ ಹಿಂದೆ ಇರುವುದೂ ದೀರ್ಘದ ಮುಂದೆ ಇರತಕ್ಕದ್ದೂ ಆದ ನಕಾರಕ್ಕೆ ರು ಆದೇಶ ಬರುವುದು ಎಂಬುದರಿಂದ ರು ಆದೇಶ ಬಂದರೆ ದೇವಾರ್ ಇ **ಆತೋಽಟಿನಿತ್ಯಮ್** (೮-೩-೩) ಅಡ್ವರ್ಣದ ಹಿಂದೆ ಇರುವ ರುವಿಗೆ ಹಿಂದೆ ಇರುವ ದೀರ್ಘಾಕಾರಕ್ಕೆ ನಿತ್ಯವಾಗಿ ಅನುನಾಸಿಕವು ಬರುವುದು. ಇ ಎಂಬುದು ಅಡ್ವರ್ಣ. ಅದರ ಹಿಂದೆ ದೇವಾರ್ ಎಂಬಲ್ಲಿ ರ್-ಎಂಬ ರು ಇರುವುದು. ಆ ರುವಿನ ಹಿಂಭಾಗದಲ್ಲಿ ವಕಾರದ ಮುಂದೆ ಆಕಾರವಿರುವುದು. ಆದಕ್ಕೆ ನಿತ್ಯವಾಗಿ ಅನುನಾಸಿಕ ಬಂದರೆ ದೇವಾರ್ ಇ ರ್ ಗೆ **ಭೋಭಗೋ ಅಘೋ ಅಪೂರ್ವಸ್ಯೋಶಿ** (ಪಾ. ಸೂ. ೮-೩-೧೭) ಎಂಬುದರಿಂದ ಯತ್ವ. **ಲೋಪಶಾಕಲ್ಯಸ್ಯ** (ಪಾ. ಸೂ. ೮-೩-೧೯) ಎಂಬುದರಿಂದ ಯಕಾರಕ್ಕೆ ಲೋಪ. ದೇವಾँ ಇಹ ಎಂದಾಗುವುದು.

ಜಜ್ಞಾನಃ—ಜನೀ ಪ್ರಾದುರ್ಭಾವೇ ಧಾತು. ಇದರ ಮುಂದೆ ಲಿಟ್. ಅದರ ಸ್ಥಾನದಲ್ಲಿ **ಲಿಟಃ-ಕಾನಜ್ವಾ** (ಪಾ. ಸೂ. ೩-೨-೧೦೬) ಎಂಬುದರಿಂದ ಕಾನಜ್ವಾದೇಶ. **ಗಮಹನಜನಖನಘಸಾಂ ಲೋಪಃ**

ಕ್ಷಿತ್ಯನಜಾ (ಪಾ.ಸೂ. ೬-೪-೯೭) ಅಜ್ ಎಂಬುದನ್ನು ಳಿದು ಆಜಾದಿಯಾದ ಕಿತ್ ಅಥವಾ ಙಿತ್ ಆದ ಪ್ರತ್ಯಯ ಗಳು ಪರದಲ್ಲಿರುವಾಗ ಗಮ್ ಮೊದಲಾದ ಧಾತುವಿನ ಉಪಧಾಭೂತವಾದ ವರ್ಣಕ್ಕೆ ಲೋಪ ಬರುವುದು ಎಂಬುದರಿಂದ ಙ್ ಎಂಬುದರ ಮುಂದೆ ಇರುವ ಅಕಾರಕ್ಕೆ ಲೋಪ ಜ್ಗ್+ಅನ. **ದ್ವಿರ್ವಚನೇ೭ಚಿ** (ಪಾ.ಸೂ. ೧-೧-೫೯) ದ್ವಿತ್ವಕ್ಕೆ ನಿಮಿತ್ತವಾದ ಅಜ್ವರ್ಣಪರದಲ್ಲಿದ್ದರೆ ಅಚ್ ಸ್ಥಾನಿಕವಾದ ಆದೇಶವು ದ್ವಿತ್ವವನ್ನು ಮಾಡುವಾಗ ಸ್ಥಾನಿವದ್ಭಾವವನ್ನು ಹೊಂದುವುದು ಎಂಬುದರಿಂದ ಅಕಾರಲೋಪಕ್ಕೆ ಸ್ಥಾನಿವದ್ಭಾವ ಬಂದರೆ, **ಲಿಟೆಧಾತೋರನಭ್ಯಾಸಸ್ಯ** (ಪಾ.ಸೂ. ೬-೧-೮) ಎಂಬುದರಿಂದ ದ್ವಿತ್ವ. ಜಗ್ ಜ್ನ್ ಅನ. ಹಲಾದಿಃಶೇಷಃ (ಪಾ.ಸೂ. ೭-೪-೬೦) ಎಂಬುದರಿಂದ ಅಭ್ಯಾಸದಲ್ಲಿರುವನಕಾರಕ್ಕೆ ನಿವೃತ್ತಿ. ಶ್ಚುತ್ವದಿಂದ ತವರ್ಗಪಂಚಮಾಕ್ಷರವಾದ ನಕಾರಕ್ಕೆ, ಚವರ್ಗ ಪಂಚಮಾಕ್ಷರ ಞಕಾರ, ಜಜ್ಞಾನ ಎಂದಾಗುವುದು. ಪ್ರತ್ಯಯವು ಚಿತ್ತಾದ್ದರಿಂದ ಚಿತ್ಸ್ವರ ಅಂತೋದಾತ್ತ ಬರುವುದು.

ವೃಕ್ತಬರ್ಹಿಷೇ—ಓ ವ್ರಶ್ಚೂ ಛೇದನೇ ಧಾತು. ಊದಿತ್ತು. **ಸ್ವರತಿಸೂರತಿ ಸೂಯತಿ ಧೂ ಞಾದಿತೋನಾ** (ಪಾ. ಸೂ. ೭-೨-೪೪) ಸ್ವರತ್ಯಾದಿ ಧಾತುಗಳ ಮುಂದೆಯೂ ಊದಿತ್ತಾದ ಧಾತುಗಳ ಮುಂದೆಯೂ ಇರುವ ವಲಾದಿಯಾದ ಆರ್ಧಧಾತುಕಕ್ಕೆ ಇಡಾಗಮವು ವಿಕಲ್ಪವಾಗಿ ಬರುವುದು ಎಂದು ವಿಕಲ್ಪ ದಿಂದ ಇಡಾಗಮವು ವಿಹಿತವಾಗಿರುವುದು- ಆದ್ದರಿಂದ **ನಿಷ್ಠಾ** (ಪಾ. ಸೂ. ೩-೨-೧೦೨) ಎಂಬುದರಿಂದ ಇದರ ಮುಂದೆ ಕ್ತ ಪ್ರತ್ಯಯವನ್ನು ಇಟ್ಟಾಗ **ಯಸ್ಯವಿಭಾಷಾ** (ಪಾ. ಸೂ. ೭-೨-೧೫) ಎಂಬುದರಿಂದ ಇಡಾಗಮಕ್ಕೆ ಪ್ರತಿಷೇಧ ಬರುವುದು. ವ್ರಶ್ಚ್+ತ **ಓದಿತೆಶ್ಚ** (ಪಾ. ಸೂ. ೮-೨-೪೫) ಓಕಾರೇತ್ಸಂಜ್ಞಕವಾದ ಧಾತುವಿನ ಮುಂದೆ ಇರುವ ಕ್ತ ಪ್ರತ್ಯಯದ ತಕಾರಕ್ಕೆ ನಕಾರ ಬರುವುದು ಎಂಬುದರಿಂದ ಕ್ತ ಪ್ರತ್ಯಯದ ತಕಾರಕ್ಕೆ ನಕಾರ ಬಂದರೆ ವ್ರಶ್ಚ್+ನ ಎಂದಿರುವಾಗ **ಗ್ರಹಿಜ್ಯಾವಯಿವ್ಯಧಿ ವಷ್ಟಿ ವಿಚತಿ ವೃಶ್ಚತಿ ಪೃಚ್ಛತಿ ಭೃಜ್ಜತೀನಾಂ ಜ್ಝಲಿಚೆ** (ಪಾ. ಸೂ. ೬-೧-೩೮) ಎಂಬುದರಿಂದ ಸಂಪ್ರಸಾರಣ ರೇಫಕ್ಕೆ ಋಕಾರ ಬಂದರೆ ಪೂರ್ವ ರೂಪ ಬಂದು ವೃಶ್ಚ್+ನ **ಸ್ಕೋಸ್ಸಂಯೋಗಾದ್ಯೋರಂತ್ಯೇಚ** (ಪಾ. ಸೂ. ೮-೨-೨೯) ಸಂಯೋಗವು ಪದದ ಕೊನೆಯಲ್ಲಿದ್ದರೂ, ಝಲ್ ವರ್ಣದ ಹಿಂದೆ ಇದ್ದರೂ ಆ ಸಂಯೋಗದ ಆದಿಯಲ್ಲಿರುವ ಸಕಾರ ಕಕಾರಗಳಿಗೆ ಲೋಪ ಬರುವುದು. ಎಂಬುದರಿಂದ ಸಕಾರಕ್ಕೆ ಲೋಪ ಬರುವುದು. ಈ ಸೂತ್ರದಿಂದ ಸಲೋಪವನ್ನು ಮಾಡುವಾಗ **ಓದಿತೆಶ್ಚ** (ಪಾ. ಸೂ. ೮-೨-೪೫) ಎಂಬುದರಿಂದ ಬಂದ ನಿಷ್ಠಾದೇಶವಾದ ನತ್ವವು **ಪೂರ್ವತ್ರಾಸಿದ್ಧಮ್** ಎಂಬುದರಿಂದ ಅಸಿದ್ಧವಾಗುವುದರಿಂದ ಸಂಯೋಗವು ಝಲ್ ವರ್ಣದ ಹಿಂದೆ ಇರ ತಕ್ಕದ್ದಾಗಿ ಆಗುವುದು. ನಕಾರಜಾವನುಸ್ವಾರ ಪಂಚಮೌ ಝಲಿಧಾತುಷು ಸಕಾರಜಶ್ಕಾರಶ್ಚೇಷಾಟ್ಟವರ್ಗ ಸ್ತವರ್ಗಜಃ ಅಂದರೆ ಧಾತುಗಳಲ್ಲಿ ಝಲ್ ವರ್ಣದ ಹಿಂದೆ ಇರುವ ಅನುಸ್ವಾರ, ಮತ್ತು ತತ್ತದ್ವರ್ಗೀಯ ಪಂಚ ಮಾಕ್ಷರಗಳೂ ಸಹ ನಕಾರದಿಂದ ಹುಟ್ಟಿದವು. ಚಕಾರದ ಹಿಂದೆ ಇರುವ ಶಕಾರವು ಸಕಾರದಿಂದ ಹುಟ್ಟಿದುದು ಷಕಾರದ ಯೋಗವಿದ್ದು ಟವರ್ಗವಿದ್ದರೆ ಅದು ತವರ್ಗದಿಂದ ಹುಟ್ಟಿದುದು ಎಂದು ತಿಳಿಯತಕ್ಕದ್ದು ಎಂದು ಈ ಶ್ಲೋಕದ ಅರ್ಥ. ಇದರಿಂದ ವ್ರಶ್ಚ್ ಎಂಬಲ್ಲಿ ಚಕಾರದ ಹಿಂದೆ ಇರುವ ಶಕಾರ ಸಕಾರದಿಂದ ಹುಟ್ಟಿದುದು ಎಂದು ಏರ್ಪಟ್ಟಿತು. ಅಂದರೆ ವ್ರಸ್ ಶ್ ಎಂದಿರುವಾಗ **ಸ್ತೋಶ್ಚುನಾಶ್ಚುಃ** (ಪಾ. ಸೂ. ೮-೪-೪೦) ಎಂಬುದ ರಿಂದ ಶ್ಚುತ್ವ ಬಂದು ನಿಷ್ಪನ್ನವಾದುದು ಎಂದು ಏರ್ಪಟ್ಟಿತು. ಸಂಯೋಗಾದಿ ಲೋಪವನ್ನು ಮಾಡುವಾಗ ಆ ಶ್ಚುತ್ವದಿಂದ ಬುದ ಶಕಾರವು **ಪೂರ್ವತ್ರಾಸಿದ್ಧಮ್** ಎಂಬುದರಿಂದ ಅಸಿದ್ಧವಾಗುವುದು. ಆದ್ದರಿಂದ ಸಂಯೋ ಗಾದಿಯಾದ ಸಕಾರವು ಸಿಗುವುದು. ಏವಂಚ ಸಂಯೋಗಾದಿ ಲೋಪ ಬಂದರೆ ವೃಚ್+ನ **ಚೋಃಕುಃ** (ಪಾ. ಸೂ.

೮-೨-೩೦) ಝಲ್ವರ್ಣಪರದಲ್ಲಿರುವಾಗಲೂ ಪದಾಂತವಿಷಯದಲ್ಲಿರುವಾಗಲೂ ಚವರ್ಗಕ್ಕೆ ಕವರ್ಗ ಬರುವುದು ಎಂಬುದರಿಂದ ಚಕಾರಕ್ಕೆ ಕಕಾರ. ಇಲ್ಲಿಯೂ ಕುತ್ವವದ್ನು ಮಾಡುವಾಗ ಪೂರ್ವತ್ರಾಸಿದ್ಧಮ್ ಎಂಬುದರಿಂದ ನತ್ವವು ಅಸಿದ್ಧವಾಗುವುದು. ಆದರೆ ನತ್ವವು ಅಸಿದ್ಧವಾಗುವುದರಿಂದ **ವ್ರಶ್ಚಭ್ರಜ್ಜ ಸೃಜಮೃಜಯಜರಾಜಭ್ರಾಜಚ್ಛಶಾಂಷಃ** (ಪಾ.ಸೂ. ೮-೨-೩೬) ಎಂದು ವ್ರಶ್ಚ ಎಂಬಲ್ಲಿರುವ ಚಕಾರಕ್ಕೆ ಷಕಾರಬರಲಿ ಎಂದು ಕೇಳಬಹುದು. ಆದರೂ **ನಿಷ್ಠಾದೇಶಃಷತ್ವಸ್ವರಪ್ರತ್ಯಯೇಷ್ವಿಧಿಷುಸಿದ್ಧೋವಾಚ್ಯಃ** (ಪಾ. ಸೂ. ೮-೨-೬ ವಾ. ೬) ಎಂದು ಷತ್ವಾದಿ ಕಾರ್ಯಗಳನ್ನು ಮಾಡುವಾಗ ನಿಷ್ಠಾದೇಶವು ಸಿದ್ಧನೇ ಆಗುವುದು ಎಂಬುದರಿಂದ ನತ್ವವು ಅಸಿದ್ಧವಾಗುವುದಿಲ್ಲ ಆದ್ದರಿಂದ ಷತ್ವ ಬರುವುದಿಲ್ಲ. ಈ ವಿಷಯವು ಮಾಧವೀಯ ಧಾತು ವೃತ್ತಿಯಲ್ಲಿಯೂ, ಸಿದ್ಧಾನ್ತಕೌಮುದಿಯಲ್ಲಿಯೂ ಸಹ ವ್ಯಕ್ತವಾಗಿರುವುದು. ಕ್ಷುಭ್ನಾದಿಗಣದಲ್ಲಿ ಆ ಣತ್ವನಿಷೇಧಕ್ಕಾಗಿ ನೃನಮನ ಶಬ್ದಪಾಠ ಮಾಡಿರುವುದರಿಂದ ಋಕಾರವನ್ನು ನಿಮಿತ್ತಮಾಡಿ ಕೊಂಡೂ **ಆಟ್ಕುಪ್ವಾಙ್** (ಪಾ. ಸೂ. ೮-೪-೨) ಎಂಬುದರಿಂದ ಣತ್ವ ಬರುವುದು ಎಂದು ಏರ್ಪಡುವುದು. ಅದುದರಿಂದ ಪೂರ್ವೋಕ್ತ ಸೂತ್ರದಿಂದ ನಕಾರಕ್ಕೆ ಣಕಾರ ಬಂದರೆ ವೃಕ್ಣಃ ಎಂದಾಗಬೇಕು ಇಲ್ಲಿ ಛಾಂದಸ ಪ್ರಕ್ರಿಯೆಯಿಂದ ಓದಿತಶ್ಚ ಎಂದು ವಿಹಿತವಾದ ನಿಷ್ಠಾನತ್ವವೂ **ವ್ರಶ್ಚಭ್ರಸ್ಜ**—(ಪಾ ಸೂ ೮-೨-೩೬) ಎಂದುವಿಹಿತವಾದ ಷತ್ವವೂ ಸಹ ಬರುವುದಿಲ್ಲವೆಂದು ಹೇಳಬೇಕು. ಏವಂಚ ವೃಜ್+ತ ಎಂದಿರುವಾಗ ಕುತ್ವ ಬಂದರೆ ವೃಕ್ತ ಎಂದು ರೂಪವು ಸಿದ್ಧವಾಗುವುದು. ವೃಕ್ತ ಎಂಬುದು ಪ್ರತ್ಯಯ ಸ್ವರದಿಂದ ಅಂತೋದಾತ್ತ. ವೃಕ್ತಂ ಬರ್ಹಿಃ ಯಸ್ಮೈ ಯಜಮಾನಾಯ, ಎಂದಾಗಲೀ ವೃಕ್ತಂ ಬರ್ಹಿಃಯೇನ ಋತ್ವಿಜಾ, ಎಂದಾಗಲೀ ಬಹುವ್ರೀಹಿಸಮಾಸ ಮಾಡಿದರೆ **ಬಹುವ್ರೀಹೌ ಪ್ರಕೃತ್ಯಾಪೂರ್ವಪದಂ** (ಪಾ- ಸೂ. ೬-೨ ೧) ಎಂಬುದರಿಂದ **ಪೂರ್ವಪದಪ್ರಕೃತಿ** ಸ್ವರಬರುವುದು.

ಅಸಿ—ಅಸ ಭುವಿ ಧಾತು ಇದರ ಮುಂದೆ ಲಟ್. ಅದರ ಸ್ಥಾನದಲ್ಲಿ ಸಿಪ್. ಶಪ್ ವಿಕರಣಕ್ಕೆ **ಆದಿಪ್ರಭೃತಿಭ್ಯಃ ಶಪಃ** (೨-೪-೭೨) ಎಂಬುದರಿಂದ ಲುಕ್ **ತಾಸಸ್ತ್ಯೋರ್ಲೋಪಃ** (ಪಾ. ಸೂ. ೭-೪-೫೦) ಸಕಾರಾದಿ ಪ್ರತ್ಯಯಪರದಲ್ಲಿರುವಾಗ ತಾಸ್ ಪ್ರತ್ಯಯ ಅಸ್ ಧಾತು ಇವುಗಳ ಕೊನೆಯಲ್ಲಿರುವ ಸಕಾರಕ್ಕೆ ಲೋಪ ಬರುವುದು ಎಂಬುದರಿಂದ ಸಕಾರಕ್ಕೆ ಲೋಪ. ಅಸಿ ಎಂದಾಗುವುದು. ಇದು ಪಾದದ ಆದಿಯಲ್ಲಿ ಇರುವುದರಿಂದ ಅನುದಾತ್ತಸ್ವರ ಬರುವುದಿಲ್ಲ.

ಹೋತಾ—ಹ್ವೇಞ್ ಸ್ಪರ್ಧಾಯಾಂ ಶಬ್ದೇಚ ಧಾತು. ಇದರ ಮುಂದೆ **ತೃನ್** (ಪಾ ಸೂ. ೩-೨-೧೩೫) ಎಂಬುದರಿಂದ ತಚ್ಛೀಲ ಮೊದಲಾದ ಅರ್ಥಗಳಲ್ಲಿ ತೃ ಪ್ರತ್ಯಯ **ಬಹುಲಂ ಛಂದಸಿ** (ಪಾ. ಸೂ. ೬-೧-೩೪) ಎಂಬುದರಿಂದ ಸಂಪ್ರಸಾರಣ ಸಂಪ್ರಸಾರಣಾಚ್ಚ ಎಂಬುದರಿಂದ ಪೂರ್ವರೂಪ- ಗುಣ ಪ್ರಥಮಾವಿಭಕ್ತಿ ಏಕವಚನದಲ್ಲಿ ಹೋತಾ ಎಂದಾಗುವುದು. ಪ್ರತ್ಯಯವು ನಿತ್ತಾದ್ದರಿಂದ ನಿತ್ಸ್ವರ ಆದ್ಯುದಾತ್ತ ಬರುವುದು.

ಈಡ್ಯಃ—ಈಡಸ್ತುತೌ ಧಾತು. **ಋಹಲೋರ್ಣ್ಯತ್** (ಪಾ. ಸೂ. ೩-೧-೧೨೪) ಋಕಾರಾಂತ ಅಥವಾ ಹಲಂತವಾದ ಧಾತುಗಳ ಮುಂದೆ ಣ್ಯತ್ ಪ್ರತ್ಯಯ ಬರುವುದು ಎಂಬುದರಿಂದ ಣ್ಯತ್ ಪ್ರತ್ಯಯ ಬರುವುದು, **ತಿತ್ಸ್ವರಿತಮ್** (ಪಾ. ಸೂ. ೬-೧-೧೮೪) ಎಂಬುದರಿಂದ ಸ್ವರಿತವು ಪ್ರಾಪ್ತವಾದರೆ ಅದನ್ನು ಬಾಧಿಸಿ **ಈಡವನ್ದೇವೃಶಂಸದುಹಾಂಣ್ಯತೇಃ** (ಪಾ. ಸೂ. ೬-೧-೩೧೪) ಎಂಬುದರಿಂದ ಆದ್ಯುದಾತ್ತಸ್ವರಬರುವುದು ॥ ೩ ॥

॥ ಸಂಹಿತಾಪಾಠಃ ॥

ತಾ॑ ಉ॒ಶತ॑ತೋ ವಿ ಬೋ॑ಧಯ॒ ಯದ॑ಗ್ನೇ॒ ಯಾಸಿ॑ ದೂ॒ತ್ಯಂ᳖ ।
ದೇ॒ವೈರಾ ಸ॑ತ್ಸಿ ಬ॒ರ್ಹಿಷಿ॑ ॥ ೪ ॥

॥ ಪದಪಾಠಃ ॥

ತಾನ್ । ಉ॒ಶತ॑ತಃ । ವಿ । ಬೋ॒ಧ॒ಯ॒ । ಯತ್ । ಅ॒ಗ್ನೇ॒ । ಯಾಸಿ॑ । ದೂ॒ತ್ಯಂ᳖ ।
ದೇ॒ವೈಃ । ಆ । ಸ॒ತ್ಸಿ॒ । ಬ॒ರ್ಹಿಷಿ॑ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಯದ್ಯಸ್ಮಾತ್ಕಾರಣಾದ್ದೂತಂ ಯಾಸಿ ದೇವಾನಾಂ ದೂತಕರ್ಮ ಪ್ರಾಪ್ನೋಷಿ ತ-
ಸ್ಮಾತ್ಕಾರಣಾದುಶತೋ ಹವಿಃ ಕಾಮಯಮಾನಾಂಸ್ತಾನ್ ದೇವಾನ್ ಹವಿಃ ಸ್ವೀಕಾರಾರ್ಥಂ ವಿ ಬೋಧಯ।
ವಿಬೋಧ್ಯ ಚ ಬರ್ಹಿಷ್ಯಸ್ಮಿನ್ಕರ್ಮಣಿ ತೈರ್ದೇವೈಃ ಸಹ ಆ ಸತ್ಸಿ । ಆಸೀದ । ಆಗತ್ಯೋಪವಿಶ ॥ ತಾನ್।
ದೀರ್ಘಾದಟಿ ಸವರ್ಣದೀರ್ಘತ್ವೇ ಇತಿ ಸಂಹಿತಾಯಾಂ ರುತ್ವಂ । ಅತೋಽಟಿ ನಿತ್ಯಮಿತ್ಯನುನಾಸಿಕಭಾವಃ ।
ಉಶತಃ । ವಶ ಕಾಂತೌ । ಲಟಃ ಶತೃ । ಆದಿಪ್ರಭೃತಿಭ್ಯಃ ಶಪ ಇತಿ ಶಪೋ ಲುಕ್ । ಗ್ರಹಿಜ್ಯೇತ್ಯಾದಿನಾ
ಸಂಪ್ರಸಾರಣಂ । ಶತುರನುಮೋ ನದ್ಯಜಾದೀ ಇತಿ ವಿಭಕ್ತೇರುದಾತ್ತತ್ವಂ । ಯಾಸಿ । ಯಜ್ಞೈರ್ದೇವಾನ್ಪ್ರಿಣಾ-
ಯೀತಿ ನಿಘಾತಪ್ರತಿಷೇಧಃ । ದೂತಸ್ಯ ಭಾಗಃ ಕರ್ಮ ವಾ ದೂತ್ಯಂ । ದೂತಸ್ಯ ಭಾಗಕರ್ಮಣೀ । ಪಾ.
೪-೪-೧೨೦ । ಇತಿ ಯತ್ । ತಸ್ಯ ತಿತ್ಸ್ವರಿತಾಪವಾದತ್ವೇನ ಯತೋಽನಾವ ಇತಿ ಪ್ರಾಪ್ತಮಾದ್ಯುದಾ-
ತ್ತತ್ವಂ ಸರ್ವೇ ವಿಧಯಶ್ಛಂದಸಿ ವಿಕಲ್ಪ್ಯಂತ ಇತಿ ನಿವರ್ತತೇ । ಅತಸ್ತಿತ್ಸ್ವರಿತಮಿತ್ಯೇವ ಭವತಿ । ಶೇಷ-
ನಿಘಾತಃ । ಸತ್ಸಿ । ಸೀದಸಿ । ಷದಲ್ಸೃ ವಿಶರಣಗತ್ಯವಸಾದನೇಷು । ಲಟಃ ಸಿಪಿ ಶಪೋ ಬಹುಲಂ ಛಂ-
ದಸೀತಿ ಲುಕ್ । ನ ಲುಮತಾಂಗಸ್ಯೇತಿ ಪ್ರತ್ಯಯಲಕ್ಷಣಪ್ರತಿಷೇಧಾತ್ ಪುಷ್ಪ್ರೋತ್ಯಾದಿನಾ । ಪಾ. ೭-
೩-೭೮ । ಸೀದಾದೇಶೋ ನ ಭವತಿ । ಬರ್ಹಿಷಿ । ವೃಹ ವೃಹಿ ವೃದ್ಧೌ । ವೃಹೇರ್ನಲೋಪಶ್ಚ । ಉ. ೨-
೧೧೦ । ಇತೀಸಿಪ್ರತ್ಯಯಃ । ಪ್ರತ್ಯಯಸ್ವರೇಣೇಕಾರ ಉದಾತ್ತಃ ॥

॥ ಪ್ರತಿಪದಾರ್ಥ ॥

(ಹೇ) ಅಗ್ನೇ—ಎಲೈ ಅಗ್ನಿಯೇ । ಯತ್—ಯಾವಕಾರಣದಿಂದ । ದೂತ್ಯಂ—ದೇವತೆಗಳಿಗೆ ದೂತ
ಭಾವವನ್ನು । ಯಾಸಿ—ಹೊಂದಿರುವೆಯೋ (ಆಕಾರಣದಿಂದ) ಉಶತಃ-ಹವಿಸ್ಸನ್ನ ಪೇಕ್ಷಿಸುವ । ತಾನ್—ಆ ದೇವ
ತೆಗಳನ್ನು। ವಿಬೋಧಯ—ಎಚ್ಚರಿಸು (ಪ್ರೇರಿಸು) । (ಅನಂತರ) ದೇವೈಃ—ಆ ದೇವತೆಗಳಿಂದ ಸಹಿತನಾಗಿ ।
ಬರ್ಹಿಷಿ—ಆಸನಕ್ಕಾಗಿ ಹರಡಿರುವ ದರ್ಭೆಗಳಲ್ಲಿ । ಆ ಸತ್ಸಿ—ಕುಳಿತುಕೋ ॥

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ದೇವತೆಗಳಿಗೆ ದೂತನು. ಆದುದರಿಂದ (ಯಜ್ಞಗಳಲ್ಲಿ) ಹವಿಸ್ಸನ್ನು ಅಪೇಕ್ಷಿಸುವ ಆ ದೇವತೆಗಳನ್ನ ಪ್ರೇರಿಸಿ ಇಲ್ಲಿಗೆ ಕರೆದುಕೊಂಡು ಬಂದು ಅವರೊಡನೆ ಆಸನಾರ್ಥವಾಗಿ ಸಿದ್ಧಪಡಿಸಿರುವ ಕತ್ತರಿಸಿದ ದರ್ಭೆಗಳ ಮೇಲೆ ಕುಳಿತುತೋ ॥

English Translation

O Agni, as you go as messenger of Gods, awaken them desirous of oblations ; sit down with them on the sacred grass.

॥ ವಿಶೇಷವಿಷಯಗಳು ॥

ಬರ್ಹಿಷಿ—ಆಸನಕ್ಕಾಗಿ ಎಂದರೆ ದೇವತೆಗಳು ಕುಳಿತುಕೊಳ್ಳುವುದಕ್ಕಾಗಿ ತುದಿಗಳನ್ನು ಕತ್ತರಿಸಿದ ದರ್ಭೆಗಳನ್ನು ಹರಡುವುದು ಪದ್ಧತಿಯು. ಆಜ್ಯಪಾತ್ರೆಗಳನ್ನೂ ಹವಿಸ್ಸನ್ನೂ ಇಂತಹ ದರ್ಭೆಗಳನ್ನು ಹರಡಿ ಅದರ ಮೇಲೆ ಇಡುವುದು ಶ್ರೇಸ್ಕನೆಂದೂ ಪದ್ಧತಿಯೆಂದೂ ಭಾವಿಸೆಲ್ಪಟ್ಟಿರುವುದು.

॥ ವ್ಯಾಕರಣಪ್ರಕ್ರಿಯಾ ॥

ತಾನ್—**ದೀರ್ಘಾದಟಿಸಮಾನಪಾದೇ** (ಪಾ. ಸೂ. ೮-೩-೯) ಎಂಬುದರಿಂದ ಸಂಹಿತಾ ಕಾಲದಲ್ಲಿ ನಕಾರಕ್ಕೆ ರು ಆದೇಶ. **ಆತೋಽಟಿನಿತ್ಯಮ್** (ಪಾ. ಸೂ. ೮-೩-೩) ಎಂಬುದರಿಂದ ದೀರ್ಘಾಕಾರಕ್ಕೆ ಅನುನಾಸಿಕವಾದ ಆಕಾರ **ಭೋಭಗೋ** (ಪಾ. ಸೂ. ೮ ೩-೧೭) ಎಂಬುದರಿಂದ ಯಶ್ಚ **ಲೋಪಶಾಕಲ್ಯಸ್ಯ** (ಪಾ ಸೂ ೮.೩-೧೯) ಎಂಬುದರಿಂದ ಯ ಲೋಪ. **ತಾ** ಉಶತಃ ಎಂದಾಗುವುದು.

ಉಶತಃ—ವಶ ಕಾನ್ತ್ಸೌ ಧಾತು. ಇದರ ಮುಂದೆ ಲಟ್. ಅದಕ್ಕೆ **ಲಟಶ್ಶತೃ** (ಪಾ.ಸೂ. ೩-೨-೧೨೪) ಎಂಬುದರಿಂದ ಶತೃ. **ಆದಿಸ್ಪೃಭೃತಿಭ್ಯಃಶಪಃ** (ಪಾ. ಸೂ. ೩-೪-೭೨) ಎಂಬುದರಿಂದ ವಿಕರಣ ಶಪ್‌ಗೆ ಲುಕ್ **ಗ್ರಹಿಜ್ಯಾವಯಿ ವ್ಯಧಿವಷ್ಟಿ** (ಪಾ. ಸೂ. ೬-೧-೧೬) ಎಂಬುದರಿಂದ ಸಂಪ್ರಸಾರಣ ವಕಾರಕ್ಕೆ ಉಕಾರ. ಸಂಪ್ರಸಾರಣಾಚ್ಚ ಎಂಬುದರಿಂದ ಪೂರ್ವರೂಪ. ಉಶತ್ ದ್ವಿತೀಯಾ ಬಹುವಚನಾಂತ. **ಶತುರನುಮೋನದ್ಯಜಾದೀ** (ಪಾ. ಸೂ. ೬-೧-೧೭೩) ಎಂಬುದರಿಂದ ವಿಭಕ್ತಿಯು ಉದಾತ್ತ.

ಯೋಸಿ—**ಯೋ** ಪ್ರಾಪಣೇ ಧಾತು ಲಟ್. ಮಧ್ಯಮಪುರುಷ ಏಕವಚನ. **ಯದ್ವೃತ್ತಾನ್ನಿತ್ಯಮ್** (ಪಾ. ಸೂ. ೮-೧-೬೬) ಯಾವ ಪದದಲ್ಲಿಯಚ್ಛ್ರುತಿಯಿರುವುದೋ ಅದರ ಮುಂದೆ ಇರುವ ತಿಙಂತವು ಅನುದಾತ್ತವಾಗುವುದಿಲ್ಲ ಎಂದು ನಿಷೇಧ ಬರುವುದರಿಂದ **ತಿಙ್ಶಿತಿಙಃ** ಎಂಬುದರಿಂದ **ಅನುದಾತ್ತ** ಬರುವುದಿಲ್ಲ

ದೂತ್ಯಮ್—ದೂತಸ್ಯ ಭಾವಃ, ಕರ್ಮ ವಾ, ಎಂದು ವಿಗ್ರಹ. ಭಾಗ ಎಂದರೆ ಅಂಶ. ಕರ್ಮ ಎಂದರೆ ಕ್ರಿಯಾ. ಭಾಗಾರ್ಥದಲ್ಲಿ ಪುಲ್ಲಿಂಗ ದ್ವಿವಚನಾನ್ತ. ಕರ್ಮಾರ್ಥದಲ್ಲಿ ನಪುಂಸಕಲಿಂಗ ದ್ವಿತೀಯಾ ಏಕವಚನಾನ್ತ. **ದೂತಸ್ಯಭಾಗಕರ್ಮಣೀ** (ಪಾ. ಸೂ. ೪-೪-೧೩೦) ದೂತಶಬ್ದ ಪ್ರಕೃತಿಕ ಪಷ್ಠ್ಯಂತದ ಮುಂದೆ ಭಾಗ ಕರ್ಮ ಎಂಬ ಅರ್ಥಗಳಲ್ಲಿ ಯತ್ ಪ್ರತ್ಯಯ ಬರುವುದು. ಎಂಬುದರಿಂದ ದೂತ ಶಬ್ದದ ಮುಂದೆ ಯತ್ ಪ್ರತ್ಯಯ

ಬರುವುದು. ಯತ್ ಪ್ರತ್ಯಯವು ತಕಾರೇತ್ಸಂಜ್ಞಕ. ಆದ್ದರಿಂದ **ತಿಙ್ಶ್ಚಿತಮ್** (ಪಾ. ಸೂ. ೬-೧-೧೮೫) ಎಂಬುದರಿಂದ ಸ್ವರಿತಸ್ವರ ಪ್ರಾಪ್ತವಾದರೆ ಆದನ್ನು ಬಾಧಿಸಿ **ಯತೋನಾವ** (ಪಾ. ಸೂ. ೬-೧.೨೧೩) ಎಂಬುದರಿಂದ ಆದ್ಯುದಾತ್ತ ಪ್ರಾಪ್ತವಾಗುವುದು. ಅದು **ಸರ್ವೇವಿಧಯೆಶ್ಚಂದಸಿ ವಿಕಲ್ಪ್ಯಂತೇ** (ಪರಿಭಾ. ೩೫) ಎಂಬ ಪರಿಭಾಷೆಯಿಂದ ವಿಕಲ್ಪವಾದ್ದರಿಂದ ಪ್ರವೃತ್ತ ವಾಗುವುದಿಲ್ಲ. ಆದ್ದರಿಂದ ಸ್ವರಿತ ಸ್ವರವೇ ಬರುವುದು. **ಅನುದಾತ್ತಂ ಪದಮೇಕವರ್ಜಮ್** (ಪಾ. ಸೂ. ೬-೧-೧೫೮) ಎಂಬುದರಿಂದ ಮಿಕ್ಕ ಡೂ ಎಂಬುದಕ್ಕೆ ಅನುದಾತ್ತ ಬರುವುದು.

ಸೆತ್ಸಿ—ಸೀದಸಿ ಎಂದು ಅರ್ಥ. ಪದ್ಲೃವಿಶರಣಗತ್ಯವಸಾದನೇಷು ಧಾತು. ಇದರ ಮುಂದೆ ಲಟ್, ಆದರ ಸ್ಥಾನದಲ್ಲಿ ಮಧ್ಯಮ ಏಕವಚನ ಸಿಪ್. ಸದ್+ಸಿ ಬಹುಲಂಛಂದಸಿ (ಪಾ. ಸೂ. ೨-೪-೭೩) ಎಂಬುದರಿಂದ ಶಪ್ ವಿಕರಣಕ್ಕೆ ಲುಕ್. **ನೇಲುಮತಾಂಗಸ್ಯ** (ಪಾ. ಸೂ. ೧-೧-೬೩) ಎಂಬುದರಿಂದ ಪ್ರತ್ಯಯ ಲಕ್ಷಣಕ್ಕೆ ಪ್ರತಿಷೇಧ ಬರುವುದು ಆದ್ದರಿಂದ **ಪಾಘ್ರಾಧ್ಮಾ**...(ಪಾ. ಸೂ. ೭-೩-೭೮) ಎಂಬುದರಿಂದ ಸೀದ ಎಂಬ ಆದೇಶ ಬರುವುದಿಲ್ಲ. ಖರಿಚ (ಪಾ. ಸೂ. ೮-೪-೫೫) ಎಂಬುದರಿಂದ ಚರ್ತ್ವ. ಸರ್ವಾನುದಾತ್ತ ಬರುವುದು.

ಬರ್ಹಿಷಿ—ಬೃಹ ಬೃಹಿ ವೃದ್ಧೌ ಧಾತು, **ಬೃಂಹೇರ್ನಲೋಪಶ್ಚ** (ಉ. ಸೂ. ೨-೨೬೬) ಬೃಹಿ ಧಾತುವಿನ ಮುಂದೆ ಇಸಿ ಪ್ರತ್ಯಯ ಬರುವುದು. ನಕಾರಕ್ಕೆ ಲೋಪವೂ ಬರುವುದು ಎಂದು ಇದರ ಅರ್ಥ. ಈಸೂತ್ರದಿಂದ ಬೃಹಿ ಧಾತುವಿನ ಮುಂದೆ ಇಸಿ ಪ್ರತ್ಯಯವೂ ಬೃಹಿಧಾತುವು ಇದಿತ್ತಾದ್ದರಿಂದ **ಇದಿತೋನುಮ್ಧಾತೋಃ** (ಪಾ.ಸೂ. (೭-೧-೫೮) ಎಂಬುದರಿಂದ ಬಂದ ನುಮಾಗಮಸಂಬಂಧಿಯಾದ ನಕಾರಕ್ಕೆ ಲೋಪವೂ-ಸಹ ಬರುವುದು. ಬೃಹ್+ ಇಸ್ ಲಘೂಪಧಗುಣ, ರಪರತ್ವ. ಬರ್ಹಿಸ್ ಎಂದಾಗುವುದು ಪ್ರತ್ಯಯ ಸ್ವರದಿಂದ ಇಕಾರವು ಉದಾತ್ತ. ಸಪ್ತಮ್ಯೇಕವಚನದಲ್ಲಿ ಬರ್ಹಿಷಿ ಎಂದಾಗುವುದು. ॥ ೪ ॥

॥ ಸಂಹಿತಾಪಾಠಃ ॥

ಘೃತಾಹವನ ದೀದಿವಃ ಪ್ರತಿ ಷ್ಮ ರಿಷತೋ ದಹ ॥
ಅಗ್ನೇ ತ್ವಂ ರಕ್ಷಸ್ವಿನಃ ॥ ೫ ॥

॥ ಪದಪಾಠಃ ॥

ಘೃತ ಆಹವನ । ದೀದಿವ ಇತಿ ದೀದಿವಃ । ಪ್ರತಿ । ಷ್ಮ । ರಿಷತಃ । ದಹ ॥
ಅಗ್ನೇ । ತ್ವಂ । ರಕ್ಷಸ್ವಿನಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಘೃತಾಹವನ ಘೃತೇನಾಹೂಯತೇವಾನ ದೀದಿವೋ ದೀಪ್ಯಮಾನಾಗ್ನೇ ತ್ವಂ ರಕ್ಷಸ್ವಿನೋ ರಕ್ಷೋಯುಕ್ತಾನ್ ರಿಷತೋ ಹಿಂಸಕಾನ್ ಶತ್ರೂನ್ಪ್ರತ್ಯಸ್ಮಾಕಂ ಪ್ರತಿಕೂಲಾನ್ದಹ ಸ್ಮ । ಸರ್ವಥಾ ಭಸ್ಮೀಕುರು ॥ ಘೃತೇನಾಹೂಯತೇಽಸ್ಮಿನ್ನಿತಿ ಕರಣಾಧಿಕರಣಯೋಶ್ಚೇತ್ಯಧಿಕರಣೇ ಲ್ಯುಟ್ । ಅತ್ರೇ ಜುಹೋತೇರವಿವಕ್ಷಿತಕರ್ಮತ್ವೇನಾಕರ್ಮಕತ್ವಾದ್ಧೃತಸ್ಯ ಕರಣತ್ವಮೇವ ನ ತು ಕರ್ಮತ್ವಂ । ಅತೋ ನೈಷಾ ತೃತೀಯಾ ಚ ಹೋಶ್ಚಂದಸಿ । ಪಾ. ೨-೩-೩ । ಇತಿ ಕರ್ಮಣಿ ತೃತೀಯಾ । ಕಿಂತು ಕರ್ತೃಕರಣಯೋಸ್ತೃತೀಯಾ । ಪಾ. ೨-೩-೧೮ । ಇತಿ ಕರಣವಾಚಿನ್ಯೇವ । ಅತಃ ಕರ್ತೃಕರಣೇ ಕೃತಾ ಬಹುಲಂ । ಪಾ. ೨-೧-೩೨ । ಇತಿ ಸಮಾಸಃ । ತತ್ರ ಪೂರ್ವಪದಪ್ರಕೃತಿಸ್ವರಾಪವಾದೇ ಕೃದುತ್ತರಪದಪ್ರಕೃತಿಸ್ವರೇ ಪ್ರಾತಿಪದಿಕಾವಸ್ಥಾಯಾಮೇವ ಕೃತೇ ಸತಿ ಪಶ್ಚಾದ್ವಿಭಕ್ತ್ಯುತ್ಪನ್ನಾಯಾಮಾಮಂತ್ರಿತಸ್ಯ ಚೇತ್ಯಾದ್ಯುದಾತ್ತತ್ವಂ। ದೀದಿವಃ । ದೀವ್ಯತೇರ್ಲಿಟಃ । ಕ್ವಸುಃ । ತಸ್ಯ ವಸ್ವೇಕಾಜಾದ್ಧ್ವಸಾಮಿತಿ ನಿಯಮಾದಿಡಭಾವಃ । ದ್ವಿರ್ವಚನಂ। ಹಲಾದಿಶೇಷಃ। ಉತ್ತರವಕಾರಸ್ಯ ಲೋಪೋ ವ್ಯೋರ್ವಲೀತಿ ಲೋಪಃ। ಕ್ವಸುಃ । ಕಿತ್ತ್ವಾದ್ಗುಣಾಭಾವಃ । ತುಜಾದೀನಾಂ ದೀರ್ಘೋಽಭ್ಯಾಸಸ್ಯ । ಪಾ.೬-೧-೭ । ಇತಿ ದೀರ್ಘತ್ವಮಭ್ಯಾಸಸ್ಯ । ಸಂಬುದ್ಧಾವುಗಿದಚಾಮಿತಿ ನುಮ್ । ಸಂಯೋಗಾಂತಸ್ಯ ಲೋಪಃ । ಪಾ. ೮-೨-೨೩ । ಇತಿ ಸಕಾರಲೋಪೇ ನಕಾರಸ್ಯ ಮತುವಸೋ ರುಃ ಸಂಬುದ್ಧೌ ಛಂದಸೀತಿ ರುತ್ವಂ । ವಿಸರ್ಗಃ । ಪದಾತ್ಪರತ್ವಾದಾಮಂತ್ರಿತನಿಘಾತಃ । ನನು ಪೂರ್ವಾಮಂತ್ರಿತಸ್ಯಾವಿದ್ಯಮಾನವತ್ತ್ವಾತ್ಪಾದಾದಿತ್ವೇನ ನ ನಿಘಾತೋಪಪತ್ತಿಃ । ನ ಚ ನಾಮಂತ್ರಿತೇ ಸಮಾನಾಧಿಕರಣೇ ಸಾಮಾನ್ಯವಚನಂ । ಪಾ ೭-೧-೭೩ । ಇತ್ಯವಿದ್ಯಮಾನವತ್ತ್ವಪ್ರತಿಷೇಧಃ । ಉಭಯೋರಗ್ನಿಪದವಿಶೇಷಣತ್ವೇನ ವಿಶೇಷವಚನತ್ವಾತ್। ಅತ ಏವ ಪರಸ್ಪರಮನನ್ವಯೇನಾಸಾಮರ್ಥ್ಯಾತ್ಸಮರ್ಥಃ ಪದವಿಧಿಃ ॥ ಪಾ. ೮-೧-೧ । ಇತಿ ಚ ನಿಯಮಾತ್ಪೂರ್ವಸ್ಯ ನ ಪರಾಂಗವದ್ಭಾವೋ ಯೇನೈಕಪದ್ಯೇನ ನಿಘಾತಃ ಸ್ಯಾತ್ । ಅತ ಏವ ಹೀಡೇ ರಂತೇಽದಿತೇ ಸರಸ್ವತೀತ್ಯಾದೌ । ತೈ. ಸಂ. ೭-೧-೬-೮ । ಪೃಥಕ್ ಪೃಥಗಾದ್ಯುದಾತ್ತತ್ವಮಿತಿ । ಉಚ್ಯತೇ । ಅತ್ರ ದೀದಿವ ಇತಿ ನಾಗ್ನಿಪದಸ್ಯ ವಿಶೇಷಣಂ ಕಿಂತು ಘೃತಾಹವನಪದಸ್ಯೈವ ದ್ಯೋತನಾರ್ಥಂ । ಘೃತಾಹವನ ಇತಿ ವಿಶೇಷ್ಯತ್ವೇನ ವಿವಕ್ಷಿತತ್ವಾತ್ । ವಿಶಿಷ್ಯಸ್ಯ ತು ಪಶ್ಚಾದಗ್ನಿವಿಶೇಷಣತಾ । ತತ್ರ ದೀದಿವಃ ಪದಂ ಪ್ರತಿ ಘೃತಾಹವನಪದಸ್ಯ ವಿಶೇಷ್ಯತ್ವಾನ್ನಾಮಂತ್ರಿತೇ ಸಮಾನಾಧಿಕರಣ ಇತ್ಯವಿದ್ಯಮಾನವತ್ತ್ವಪ್ರತಿಷೇಧಾನ್ನಿಘಾತೋಪಪತ್ತಿಃ । ಅತ ಏವ ಪರಸ್ಪರವಿಶೇಷಣವಿಶೇಷ್ಯಭಾವೇನ ಸಾಮರ್ಥ್ಯಾತ್ಸುಬಾಮಂತ್ರಿತ ಇತಿ ಪರಾಂಗವದ್ಭಾವೇ ಶೇಷನಿಘಾತೇನಾಸಿ ಸ್ವರೋಪಪತ್ತಿರಿತಿ । ಇಡೇ ರಂತೇ ಇತ್ಯಾದೌ ತು ನೈವಂ ಪರಸ್ಪರಾನ್ವಯೇ ಇತಿ ವೈಷಮ್ಯಂ । ರಿಷತಃ । ರುಷ ರಿಷ ಹಿಂಸಾರ್ಥಾ ಇತಿ ಭ್ವಾದಿಕಸ್ಯ ಲಟಃ । ಶತ್ರಾದೇಶೇ ಶಪಿ ಛಾಂದಸೋ ಗುಣಾಭಾವಃ । ಕ್ರಾದಾದಿಕಸ್ಯ ವಾ ರುಶ ರಿಶ ಹಿಂಸಾಯಾಮಿತ್ಯಸ್ಯ ಛಾಂದಸಂ ಷತ್ವಂ । ವಿಕರಣಸ್ಯ ಶಸ್ಯ ಜ್ಞಾತ್ವಾದ್ಗುಣಾಭಾವಃ । ರಕ್ಷಸ್ಯಬ್ದಾದಸ್ಮಾಯಾಮೇಧಾಸ್ರಜೋ ವಿನಿಃ । ಪಾ ೫-೨-೧೨೧ । ಇತಿ ಮತ್ವರ್ಥೀಯೋ ವಿನಿಃ । ತಸ್ಯ ಪ್ರತ್ಯಯಾದ್ಯುದಾತ್ತತ್ವಂ ॥

॥ ಪ್ರತಿದಾರ್ಥ॥

ಘೃತಾಹವನ—ಘೃತ (ತುಪ್ಪ) ವನ್ನು ಹೋಮಮಾಡುವುದರಿಂದ ಆಹ್ವಾನಮಾಡಲ್ಪಡುವ। ದೀದಿವಃ— ಪ್ರಕಾಶಮಾನನಾದ। (ಹೇ) ಅಗ್ನೇ—ಎಲೈ ಅಗ್ನಿಯೇ। ತ್ವಂ—ನೀನು । ರಕ್ಷಸ್ವಿನಃ—ರಾಕ್ಷಸರಿಂದ ಸಹಿತರಾದ । ರಿಷತಃ—ಹಿಂಸೆಮಾಡುವ । ಪ್ರತಿ—ನನಗೆ ವಿರೋಧಿಗಳಾದವರನ್ನು । ದಹ ಸ್ಮ—ಚೆನ್ನಾಗಿ ಭಸ್ಮಮಾಡು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನನ್ನು ಆಹ್ವಾನಮಾಡುವಾಗ ಘೃತದಿಂದ ಹೋಮಮಾಡುವೆವು. ಆದರಿಂದ ನೀನು ಜಾಜ್ವಲ್ಯಮಾನನಾಗಿ ಪ್ರಕಾಶಿಸುವೆ. ಇಂತಹ ನೀನು ರಾಕ್ಷಸರೂ ನಮ್ಮನ್ನು ಹಿಂಸೆಮಾಡುವವರೂ ಆದ ನಮ್ಮ ವಿರೋಧಿಗಳನ್ನು ಸುಟ್ಟು ಭಸ್ಮಮಾಡು.

English Translation

Resplendent Agni, invoked by oblations of clarified butter burn down our adversaries defended by evil spirits (Rakshas)

॥ ವಿಶೇಷವಿಷಯಗಳು ॥

ಘೃತಾಹವನ, ದೀದಿವಃ— ಅಗ್ನಿಯಲ್ಲಿ ತುಪ್ಪವನ್ನು ಹೋಮಮಾಡಿ ಆಹ್ವಾನ ಮಾಡುವುದು ಯಜ್ಞಗಳಲ್ಲಿ ಪದ್ಧತಿಯು ಮತ್ತು ಆರೀತಿ ಮಾಡುವ ಘೃತಹೋಮದಿಂದ ಅಗ್ನಿಯು ಜಾಜ್ವಲ್ಯಮಾನವಾಗಿ ಪ್ರಕಾಶಿಸುವುದರಿಂದ ದೀದಿವಃ—ಎಂಬ ಶಬ್ದವು ಇಲ್ಲಿ ಉಪಯೋಗಿಸಲ್ಪಟ್ಟಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಘೃತಾಹವನ— ಘೃತೇನ ಹೂಯತೇ ಅಸ್ಮಿನ್ ಎಂದು ವಿಗ್ರಹ ಮಾಡಿದರೆ ಕರಣಾಧಿಕರಣಯೋರ್ಲ್ಯು (ಪಾ. ಸೂ. ಸೂ. ೩-೩-೧೧೭) ಕರಣ ಮತ್ತು ಅಧಿಕರಣ ಎಂಬ ಅರ್ಥಗಳಲ್ಲಿ ಧಾತುವಿನ ಮುಂದೆ ಲ್ಯುಟ್ ಪ್ರತ್ಯಯ ಒರುವುದು ಎಂಬುದರಿಂದ ಹು ದಾನಾದನಯೋಃ ಎಂಬ ಧಾತುವಿನ ಮುಂದೆ ಲ್ಯುಟ್ ಪ್ರತ್ಯಯ. ಯುವೋರನಾಕೌ (ಪಾ. ಸೂ. ೭-೧-೧) ಎಂಬುದರಿಂದ ಅನಾದೇಶ, ಗುಣ, ಅವಾದೇಶ, ಹವನ ಎಂದು ಸಿದ್ಧವಾಗುವುದು. ಧಾತುವು ಸಕರ್ಮಕವಾದರೂ ಕರ್ಮವನ್ನು ವಿವಕ್ಷೆ ಮಾಡುವುದಿಲ್ಲವಾದ್ದರಿಂದ ಅಕರ್ಮಕವಾಗುವುದು. ಆದ್ದರಿಂದ ಘೃತ ಎಂಬುದು ಹುಧಾತೂಪಾತ್ತಕ್ರಿಯೆಯಲ್ಲಿ ಕರಣವಾಗುವುದೇ ವಿನಾ ಕರ್ಮವಾಗುವುದಿಲ್ಲ. ಕರ್ಮವಲ್ಲದುದರಿಂದ ತೃತೀಯಾ ಚ ಹೋಶ್ಛಂದಸಿ (ಪಾ. ಸೂ. ೨-೩-೩) ಹುಧಾತ್ವರ್ಥಕ್ರಿಯಾನಿರೂಪಿತ ಕರ್ಮವಾಚಕದ ಮುಂದೆ ತೃತೀಯಾವಿಭಕ್ತಿಯೂ ಚಕಾರದಿಂದ ದ್ವಿತೀಯಾವಿಭಕ್ತಿಯೂ ಸಹ ಛಂದಸ್ಸಿನಲ್ಲಿ ಬರುವುದು ಎಂಬುದರಿಂದ ಕರ್ಮಣಿ ತೃತೀಯಾವಿಭಕ್ತಿ ಬರುವುದಿಲ್ಲ. ಕರ್ತೃಕರಣಯೋಸ್ತೃತೀಯಾ (ಪಾ ಸೂ. ೨-೩-೧೮) ಕರ್ತ್ರರ್ಥಕ ಅಥವಾ ಕರಣಾರ್ಥಕವಾದ ಪ್ರಾತಿಪದಿಕದ ಮುಂದೆ ತೃತೀಯಾ ಬರುವುದು ಎಂಬುದರಿಂದ ಕರಣಾರ್ಥಕವಾದ ತೃತೀಯೆಯು ಬರುವುದು. ಏವಂಚ ಘೃತೇನ ಎಂಬುದು ಕರಣತೃತೀಯಾಂತ. ಇದಕ್ಕೆ ಹವನ ಎಂಬ ಕೃದಂತದೊಂದಿಗೆ ಕರ್ತೃಕರಣೇ ಕೃತಾಬಹುಲಮ್ (ಪಾ. ಸೂ. ೨-೧-೩೨ ಕರ್ತೃಕರಣಾನ್ಯತರಾರ್ಥಪ್ರತಿಪಾದಕವಾದ ತೃತೀಯಾಂತ ಸುಂಬತವು ಸಮರ್ಥವಾದ ಕೃದಂತದೊಂದಿಗೆ ಸಮಾಸವನ್ನು ಹೊಂದುವುದು ಎಂಬುದರಿಂದ ಸಮಾಸ ಬರುವುದು. ಘೃತಹವನ ಎಂದಿರುವುದು. ಈಗ ತೆಪ್ತನಪೇತುಲ್ಯಾರ್ಥ (ಪಾ. ಸೂ. ೬-೨-೨) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಪ್ರಾಪ್ತವಾದರೆ ಅದನ್ನು ಬಾಧಿಸಿ ಗತಿಕಾರಕೋ....(ಪಾ. ಸೂ. ೬-೨-೧೩೯) ಎಂಬುದರಿಂದ ಪ್ರಾತಿಪದಿಕವಾಗಿರುವಾಗಲೇ ಕೃದುತ್ತರಪದ

ಪ್ರಕೃತಿ ಸ್ವರ ಬರುವುದು. ನಂತರ ಸಂಬೋಧನ ಪ್ರಥಮಾವಿಭಕ್ತಿಯನ್ನು ಹಚ್ಚಿದರೆ ಅದಕ್ಕೆ **ಏಙ್ ಹ್ರಸ್ವಾತ್ಸೆಂಬುದ್ಧೇಃ** (ಪಾ. ಸೂ. ೬-೧-೯೯) ಏಙಂತ ಅಥವಾ ಹ್ರಸ್ವಾಂತವಾದ ಅಂಗದ ಮುಂದೆ ಇರುವ ಸಂಬುದ್ಧ್ಯವಯವವಾದ ವ್ಯಂಜನಕ್ಕೆ ಲೋಪ ಬರುವುದು ಎಂಬುದರಿಂದ ಲೋಪ. ಈಗ ಘೃತಹವನ ಎಂಬುದು ಆಮಂತ್ರಿತವಾಗುವುದು. ಆದ್ದರಿಂದ **ಆಮಂತ್ರಿತಸ್ಯಚ** (ಪಾ. ಸೂ. ೬-೧-೧೯೮) ಎಂಬುದರಿಂದ ಆದ್ಯುದಾತ್ತ ಬರುವುದು.

ದೀದಿವಃ— ದಿವುಕ್ರೀಡಾವಿಜಗೀಷಾವ್ಯವಹಾರದ್ಯುತಿ ಸ್ತೋದಮೋದಸ್ವಪ್ನಕಾಂತ್ಯಗತಿಷು ಧಾತು. ಇದರ ಮುಂದೆ ಲಿಟ್ ಅದರ ಸ್ಥಾನದಲ್ಲಿ **ಕ್ವಸುಶ್ಚ** (ಪಾ. ಸೂ ೩-೨-೧೦೭) ಎಂಬುದರಿಂದ ಕ್ವಸುಪ್ರತ್ಯಯ. ದಿವ್+ವಸ್, ಈಗ **ವಸ್ವೇಕಾಜಾದ್ಧಸಾಮ್** (ಪಾ. ಸೂ. ೭-೨-೬೭) ದ್ವಿತ್ವ ಮಾಡಿದ ನಂತರ ಏಕಾಚ್ಕವಾದಧಾತು ಆಕಾರಾಂತ ಧಾತು ಘ್ಸ್ಲೃ ಧಾತು ಇವುಗಳ ಮುಂದೆ ಇರುವ ವಸ್‌ಗೆ ಮಾತ್ರ ಇಡಾಗಮ ಬರುವುದು. ಬಾಕಿ ಧಾತುಗಳ ಮುಂದೆ ಇರುವ ವಸ್‌ಗೆ ಇಡಾಗಮ ಬರುವುದಿಲ್ಲ ಎಂದು ಹೇಳಿರುವುದರಿಂದ ಇಲ್ಲಿ ವಸ್‌ಗೆ ಇಡಾಗಮ ಬರುವುದಿಲ್ಲ. **ಲಿಟಿಧಾತೋರನಭ್ಯಾಸಸ್ಯ** (ಪಾ. ಸೂ. ೬-೧-೮) ಎಂಬುದರಿಂದ ದ್ವಿತ್ವ ದಿವ್. ದಿವ್+ವಸ್. **ಹಲಾದಿಃಶೇಷಃ** (ಪಾ. ಸೂ) ೭-೪-೬೦ ಎಂಬುದರಿಂದ ಅಭ್ಯಾಸದಲ್ಲಿರುವ ವಕಾರಕ್ಕೆ ನಿವೃತ್ತಿ, **ತುಜಾದೀನಾಂ ದೀರ್ಘೋಽಭ್ಯಾಸಸ್ಯ** (ಪಾ. ಸೂ. ೬-೧-೭) ತುಜಾದಿಯು ಆಕೃತಿಗಣ. ತುಜಾದಿಗಣಕ್ಕೆ ಸೇರಿದ ಧಾತುಗಳ ಅಭ್ಯಾಸಕ್ಕೆ ಛಂದಸ್ಸಿನಲ್ಲಿ ದೀರ್ಘ ಬರುವುದು ಎಂಬುದರಿಂದ ದೀರ್ಘ ದೀದಿವ್+ವಸ್. **ಲೋಪೋವ್ಯೋರ್ವಲಿ** (ಪಾ.ಸೂ. ೬-೧-೬೬) ವಲ್ ಪ್ರತ್ಯಾಹರದ ವರ್ಣಗಳು ಪರದಲ್ಲಿರುವಾಗ ವಕಾರ ಯಕಾರಗಳಿಗೆ ಲೋಪ ಬರುವುದು ಎಂಬುದರಿಂದ ಎರಡನೆಯ ದಿವ್ ಶಬ್ದದ ವಕಾರಕ್ಕೆ ಲೋಪ. ದೀದಿವಸ್. ಕ್ವಸುಪ್ರತ್ಯಯವು ಕಿತ್ತು. ಆದ್ದರಿಂದ ದೀದಿ ಎಂಬುದಕ್ಕೆ **ಸಾರ್ವಧಾತುಕಾರ್ಧಧಾತುಕೆಯೋಃ** (ಪಾ. ಸೂ ೭-೩-೮೪) ಎಂಬುದರಿಂದ ಗುಣ ಬರುವುದಿಲ್ಲ. ಇದರ ಮುಂದೆ ಸಂಬೋಧನಪ್ರಥಮಾ ಏಕವಚನ ಸುಪ್ರತ್ಯಯವನ್ನು ಹಚ್ಚುವುದು. **ಉಗಿದಚಾಂ ಸರ್ವನಾಮಸ್ಥಾನೇಽಧಾತೋಃ** (ಪಾ ಸೂ. ೭-೧-೭೦) ಧಾತು ಸಂಬಂಧಿಯಲ್ಲದ ಉಗಿತ್ತು, ನಕಾರಲೋಪವನ್ನು ಹೊಂದಿರುವ ಅಞ್ಚು ಧಾತು ಇವುಗಳಿಗೆ ಸರ್ವನಾಮಸ್ಥಾನ ಪರದಲ್ಲಿರುವಾಗ ನುಮಾಗಮ ಬರುವುದು ಎಂಬುದರಿಂದ ನುಮಾಗಮ, ದೀದಿವನ್ಸ್+ಸು. **ಹಲ್‌ಙ್ಯಾಬ್ಭ್ಯೋ** (ಪಾ. ಸೂ. ೬-೧-೬೮) ಎಂಬುದರಿಂದ ಸುಲೋಪ **ಸಂಯೋಗಾಂತಸ್ಯಲೋಪಃ** (ಪಾ. ಸೂ. ೮-೨-೨೩) ಸಂಯೋಗವನ್ನು ಕೊನೆಯಲ್ಲಿ ಹೊಂದಿರುವ ಪದದ ಕೊನೆಯ ವರ್ಣಕ್ಕೆ ಲೋಪ ಬರುವುದು ಎಂಬುದರಿಂದ ಸಕಾರಕ್ಕೆ ಲೋಪ ದೀದಿವನ್ ಎಂದಿರುವುದು ಈಗ **ಮತುವಸೋರು ಸಂಬುದ್ಧೌ ಛಂದಸಿ** (ಪಾ. ಸೂ. ೮-೩-೧) ಛಂದಸ್ಸಿನಲ್ಲಿ ಸಂಬುದ್ಧಿಯ ಹಿಂದೆ ಇರುವ ಮತುಪ್ ಪ್ರತ್ಯಯಾಂತ ವಸುಪ್ರತ್ಯಯಾಂತಗಳ ಕೊನೆಯ ವರ್ಣಕ್ಕೆ ರು ಆದೇಶ ಬರುವುದು ಎಂಬುದರಿಂದ ನಕಾರಕ್ಕೆ ರು ಆದೇಶ. **ಖರವಸಾನಯೋರ್ವಿಸರ್ಜನೀಯಃ** (ಪಾ ಸೂ. ೮-೩-೧೫) ಎಂಬುದರಿಂದ ರೇಫಕ್ಕೆ ವಿಸರ್ಗ ದೀದಿವಃ ಎಂದಾಗುವುದು. ಇದು ಘೃತಾಹವನ ಎಂಬ ಪದದ ಮುಂದೆ ಇರುವುದು. ಆದ್ದರಿಂದ **ಆಮಂತ್ರಿತಸ್ಯಚ** (ಪಾ. ಸೂ ೮-೧-೧೯) ಎಂಬುದರಿಂದ ಸರ್ವಾನುದಾತ್ತ ಬರುವುದು. ಇಲ್ಲಿ ಘೃತಾಹವನ ಎಂಬುದೂ ಆಮಂತ್ರಿತ, ದೀದಿವಃ ಎಂಬುದೂ ಆಮಂತ್ರಿತ, ಮೊದಲನೆಯ ಆಮಂತ್ರಿತಕ್ಕೆ **ಆಮಂತ್ರಿತಂಪೂರ್ವಮವಿದ್ಯಮಾನವತ್** (ಪಾ. ಸೂ ೮-೧-೭೭) ಪೂರ್ವದಲ್ಲಿರುವ ಆಮಂತ್ರಿತವು ಅವಿದ್ಯಮಾನದಂತೆ ಆಗುವುದು ಅಂದರೆ ಇಲ್ಲದಂತೆ ಆಗುವುದು ಎಂದು ಭಾವ. ಇದರಿಂದ ಅವಿದ್ಯಮಾನವದ್ಭಾವ ಬಂದರೆ ಎರಡನೇ ಆಮಂತ್ರಿತವು ಸದಾತ್ಪರವಾಗುವುದಿಲ್ಲ ಆದ್ದರಿಂದ ಆಪ್ಪಯುಕ್ತವಾದ ಆಮಂತ್ರಿತಾನುದಾತ್ತವು ಹೇಗೆ ಉಪಪನ್ನವಾಗುವುದು, **ನಾಮಂತ್ರಿತೇ ಸಮಾನಾಧಿಕರಣೇ ಸಾಮಾನ್ಯ ವಚನೇನ** (ಪಾ. ಸೂ. ೮-೧-೭೩) ಸಾಮಾನ್ಯ ವಚನ ಎಂದರೆ ವಿಶೇಷ್ಯವಾಚಕ ಎಂದು ಅರ್ಥ. ಸಮಾನಾಧಿ

ಕರಣವಿಶೇಷಣವಾಗಲಕ್ಕು ಪರದಲ್ಲಿದ್ದರೆ ವಿಶೇಷ್ಯವಾಚಕವಾದ ಆಮಂತ್ರಿತವು ಅವಿದ್ಯಮಾನನವದ್ಭಾವವನ್ನು ಹೊಂದುವುದಿಲ್ಲ ಎಂಬುದರಿಂದ ಅವಿದ್ಯಮಾನವದ್ಭಾವಕ್ಕೆ ಪ್ರತಿಷೇಧ ಬರುವುದು. ಆದ್ದರಿಂದ ಅವಿದ್ಯಮಾನವದ್ಭಾವ ಬರದೇ ಇದ್ದರೆ ಪದಾತ್ಪರತ್ವವು ಸಂಭವಿಸುವುದರಿಂದ ಅಪ್ಪಮಿಕಾನುದಾತ್ತವು ಉಪಪನ್ನವಾಗುವುದು ಎಂದು ಹೇಳಲು ಆಗುವುದಿಲ್ಲ. ಏಕೆಂದರೆ ಇಲ್ಲಿ ಘೈತಾಹವನ ದೀದಿವಃ ಎಂಬ ಎರಡು ಆಮಂತ್ರಿತಗಳೂ ಅಗ್ನೇ ಎಂಬುದಕ್ಕೆ ವಿಶೇಷಣವಾಗಿರುವುವು. ಆದ್ದರಿಂದ ಅಗ್ನೇ ಎಂಬುದು ಸಾವಮಾನ್ಯ ವಚನ ಇವೆರಡೂ ವಿಶೇಷ ವಚನಗಳೇ ಆಗುವುವು. ಆದಕಾರಣ ಅವಿದ್ಯಮಾನವದ್ಭಾವಕ್ಕೆ ಪ್ರತಿಷೇಧ ಬರುವುದಿಲ್ಲ. ಇದೇ ರೀತಿಯಲ್ಲಿ ಎರಡು ಆಮಂತ್ರಿತಗಳೂ ಅಗ್ನೇ ಎಂಬಲ್ಲಿ ಅನ್ವಯಿಸುವುವು. ಆಮಂತ್ರಿತಗಳೆರಡಕ್ಕೂ ಪರಸ್ಪರಾನ್ವಯವಿಲ್ಲ. ಆದಕಾರಣ ಪರಸ್ಪರಾನ್ವಯದಿಂದ ಅರ್ಥಬೋಧಕತ್ವರೂಪವಾದ ಸಾಮರ್ಥ್ಯವಿಲ್ಲ. ಸುಬಾಮಂತ್ರಿತೇಪರಾಂಗವತ್ಸ್ವರೇ (ಪಾ. ಸೂ. ೭-೧-೨) ಸ್ವರವನ್ನು ಮಾಡುವಾಗ ಆಮಂತ್ರಿತದ ಹಿಂದೆ ಇರುವ ಸುಬಂತವು ಪರಾಂಗವದ್ಭಾವವನ್ನು ಹೊಂದುವುದು ಅಂದರೆ ಪರದಲ್ಲಿರುವ ಆಮಂತ್ರಿತದ ಏಕದೇಶದಂತೆ ಆಗುವುದು ಎಂದು ವಿಹಿತವಾದ ಪರಾಂಗವದ್ಭಾವವು ಪದವಿಧಿಯಾದ್ದರಿಂದ ಸಮರ್ಥಃಪದವಿಧಿಃ (ಪಾ. ಸೂ. ೨-೧-೧) ಎಂಬ ಪರಿಭಾಷೆಯಿಂದ ಸಾಮರ್ಥ್ಯವಿರುವಾಗಲೇ ಪ್ರವರ್ತಿಸುವುದು. ಪ್ರಕೃತದಲ್ಲಿ ಎರಡಕ್ಕೂ ಸಾಮರ್ಥ್ಯವಿಲ್ಲದ ಕಾರಣ ಪರಾಂಗವದ್ಭಾವವೂ ಬರುವುದಿಲ್ಲ. ಆದ್ದರಿಂದ ಪರಾಂಗವದ್ಭಾವದಿಂದ ಘೈತಾಹವನ ದಿದೀವ ಎಂಬ ಪದಗಳೆರಡನ್ನೂ ಒಂದೇ ಪದವೆಂದು ಭಾವಿಸಿ ಷಾಷ್ಠವಾದ ಆಮಂತ್ರಿತಸ್ಯಚ (ಪಾ. ಸೂ. ೮-೧-೧೯) ಎಂಬುದರಿಂದ ಘೈ ಎಂಬುದು ಉದಾತ್ತವೂ ಮಿಕ್ಕವುಗಳು ಅನುದಾತ್ತಂಪದಮೇಕವರ್ಜಂ (ಪಾ.ಸೂ ೬-೧-೧೫೮)ಎಂಬುದರಿಂದ ಅನುದಾತ್ತಗಳೂ ಆಗುವುವು ಎಂದೂಹೇಳಲಾಗುವುದಿಲ್ಲ. ಆದುದರಿಂದ ಪರಸ್ಪರಾನ್ವಯವಿಲ್ಲದೇ ಇರುವ ಇಡೇರನ್ತೇ೨ದಿತೇಸರಸ್ವತಿ (ತೈ. ಸಂ. ೭-೧-೬-೮) ಎಂಬ ಮಂತ್ರದಲ್ಲಿ ಪ್ರತಿಯೊಂದು ಆಮಂತ್ರಿತಕ್ಕೂ ಷಾಷ್ಠ ಸೂತ್ರದಿಂದ ಆದ್ಯುದಾತ್ತವೇ ಬಂದಿರುವುದು. ಪ್ರಕೃತದಲ್ಲಿಯೂ ಇದೇ ರೀತಿಯಲ್ಲಿ ಪ್ರತ್ಯೇಕವಾಗಿ ಆದ್ಯುದಾತ್ತ ಬರಬೇಕೇ ವಿನಾ ಅಪ್ಪಮಿಕಾನುದಾತ್ತವು ಹೇಗೆ ಉಪಪನ್ನವಾಗುವುದು ಎಂದು ಶಂಕೆ ಅವತರಿಸಬಹುದು. ಈ ಶಂಕೆಗೆ ಹೀಗೆ ಸಮಾಧಾನವನ್ನು ಹೇಳಬಹುದು. ಇಲ್ಲಿ ದೀದಿವಃ ಎಂಬ ಪದವು ಅಗ್ನೇ ಎಂಬುದಕ್ಕೆ ವಿಶೇಷಣವಲ್ಲ. ಘೈತಾಹವನ ಎಂಬ ಪದಕ್ಕೇ ವಿಶೇಷಣವು. ಘೈತಾಹವನಪದವನ್ನು ವಿಶೇಷ್ಯವೆಂದೇ ವಿವಕ್ಷಿಸುವುವೆವು. ಅನಂತರ ದೀದಿವಃ ಘೈತಾಹವನ ಎಂಬ ವಿಶಿಷ್ಟವು ಅಗ್ನೇ ಎಂಬಲ್ಲಿ ವಿಶೇಷಣವಾಗುವುದು. ಈಗ ದೀದಿವಃ ಎಂಬ ಪದವನ್ನು ಉದ್ದೇಶಿಸಿ ಘೈತಾಹವನ ಪದವು ವಿಶೇಷ್ಯವಾಗುವುದರಿಂದ ಸಾವಮಾನ್ಯವಚನವಾಗುವುದು. ಆದ್ದರಿಂದ ನಾಮಂತ್ರಿತೇ ಸಮಾನಾಧಿಕರಣೇ ಸಾಮಾನ್ಯವಚನೇಮ್ (ಪಾ. ಸೂ. ೮-೧-೭೩) ಎಂಬುದರಿಂದ ಅವಿದ್ಯಮಾನವದ್ಭಾವಕ್ಕೆ ಪ್ರತಿಷೇಧ ಬರುವುದು. ಏನಂಚ ಪದಾತ್ಪರತ್ವ ಸಂಭವಿಸುವುದರಿಂದ ಅಪ್ಪಮಿಕಾನುದಾತ್ತವು ಉಪಪನ್ನವಾಗುವುದು. ಈ ರೀತಿಯಲ್ಲಿ ದಿದೀವಃ ಘೈತಾಹವನ ಪದಗಳಿಗೆ ಪೆರಸ್ಪರಾನ್ವಯವಿರುವುದರಿಂದ ಸಾಮರ್ಥ್ಯವೂ ಇರುವುದು. ಆದ್ದರಿಂದ ಸುಬಾಮಂತ್ರಿತೇಪರಾಂಗವತ್ಸ್ವರೇ (ಪಾ. ಸೂ. ೭-೧-೨) ಎಂಬುದರಿಂದ ಪರಾಂಗವದ್ಭಾವವೂ ಬರುವುದು. ಪರಾಂಗವದ್ಭಾವ ಬಂದರೆ ಘೈತಾಹವನ ದೀದಿವಃ ಎಂಬ ಪದಗಳು ಒಂದೇ ಪದದಂತೆ ಆಗುವುದರಿಂದ ಆರನೇ ಅಧ್ಯಾಯದಲ್ಲಿರುವ ಆಮಂತ್ರಿತಸ್ಯಚ ಎಂಬುದರಿಂದ ಆದ್ಯುದಾತ್ತ ಬಂದು ಘೈ ಎಂಬುದು ಉದಾತ್ತವಾಗುವುದು. ಮಿಕ್ಕ ವರ್ಣಗಳು ಅನುದಾತ್ತಂಪದಮೇಕವರ್ಜಂ (ಪಾ ಸೂ. ೬-೧-೧೫೮) ಎಂಬುದರಿಂದ ಅನುದಾತ್ತಗಳಾಗುವುವು. ಈ ರೀತಿಯಲ್ಲಿಯೂ ದೀದಿವಃ ಎಂಬುದಕ್ಕೆ ಸರ್ವಾನುದಾತ್ತಸ್ವರವು ಉಪಪನ್ನವಾಗುವುದು. ಇಡೇರನ್ತೇ೨ದಿತೇಸರಸ್ವತಿ (ತೈ. ಸಂ. ೭-೧-೬-೮) ಎಂಬಲ್ಲಿ ಈರೀತಿ ಪರಸ್ಪರಾನ್ವಯವಿಲ್ಲ. ಆದ್ದರಿಂದ ಅಲ್ಲಿ ಸರ್ವಾನುದಾತ್ತವು ಉಪಪನ್ನವಾಗುವುದಿಲ್ಲ. ಪ್ರತಿಯೊಂದು ಆಮಂತ್ರಿತಕ್ಕೆ ಷಾಷ್ಠಸೂತ್ರದಿಂದ

ಆದ್ಯುದಾತ್ತವೇ ಬರುವುದು. ಈ ಪ್ರಕಾರವಾಗಿ ಘೃತಾಹವನನದೀದಿವಃ ಎಂಬುದಕ್ಕೂ ಇಡೇರನ್ತೇ ಎಂಬುದಕ್ಕೂ ಪರಸ್ಪರಾನ್ವಯಸತ್ವ ತದಭಾವರೂಪವಾದ ವೈಷಮ್ಯವು ಇರುವುದು.

ರಿಷತಃ—ರುಷ ರಿಷ ಹಿಂಸಾರ್ಥಾಃ ಧಾತು. ಇದು ಭ್ವಾದಿಯ (೧ಷೇ ಗಣ) ಲ್ಲಿರುವುದು. ಇದರ ಮುಂದೆ ಲಟ್ ಆದರ ಸ್ಥಾನದಲ್ಲಿ **ಲಟಶ್ಶತೃಶಾನಚೌ** (ಪಾ. ಸೂ. ೩-೨-೧೨೪) ಎಂಬುದರಿಂದ ಶತೃ ಆದೇಶ. **ಕರ್ತರಿಶಪ್** (ಪಾ. ಸೂ. ೩-೧-೬೮) ಎಂಬುದರಿಂದ ವಿಕರಣಶಪ್ ಬರುವುದು. ಇದನ್ನು ನಿಮಿತ್ತವಾಗಿ ಕೊಂಡು **ಪುಗನ್ತಲಘೂಪಧಸ್ಯಚೆ** (ಪಾ. ಸೂ. ೭-೩-೮೬) ಎಂಬುದರಿಂದ ಲಘೂಪಧಗುಣವು ಯದ್ಯಪಿ ಪ್ರಾಪ್ತವಾಗುವುದು. ಆದರೂ ಛಾಂದಸಪ್ರಕ್ರಿಯೆಯಿಂದ ಗುಣವು ಬರುವುದಿಲ್ಲ. ರಿಷ್+ಅ+ಅತ್ **ಅತೋ-ಗುಣೇ** (ಪಾ. ಸೂ. ೬-೧-೯೭) ಎರಡು ಅಕಾರಗಳಿಗೂ ಪರರೂಪ. ರಿಷತ್ ಎಂದಾಗುವುದು. ಅಥವಾ ರುಶ-ರಿಶ ಹಿಂಸಾಯಾಂ ಧಾತು. ಇದು ತುದಾದಿಯಲ್ಲಿರುವುದು. ಇದರ ಮುಂದೆ ಲಟ್ ಶತೃ ಆದೇಶ ಬಂದರೆ **ತುದಾದಿಭ್ಯಃ ಶಃ** (ಪಾ. ಸೂ. ೩-೧-೭೭) ಎಂಬುದರಿಂದ ಶ ಎಂಬ ವಿಕರಣಪ್ರತ್ಯಯ ಬರುವುದು. ಅದು ಅಪಿತು. **ಸಾರ್ವಧಾತುಕಮಪಿತ್** (ಪಾ. ಸೂ. ೧-೩-೪) ಎಂಬುದರಿಂದ ಪಿತ್ತಾಗುವುದು **ಕ್ಷಿತಿಚೆ** (ಪಾ. ಸೂ. ೧-೧೫) ಎಂಬುದರಿಂದ ಗುಣನಿಷೇಧ ಬರುವುದರಿಂದ ಲಘೂಪಧಗುಣ ಬರುವುದಿಲ್ಲ, ಇಲ್ಲಿ ಷಕಾರವು ಛಾಂದಸ ಪ್ರಕ್ರಿಯೆಯಿಂದ ಬರುವುದು. ಪರರೂಪ ರಿಷತ್ ಎಂದಾಗುವುದು. ಎರಡು ಪ್ರಕಾರದಲ್ಲೂ ದ್ವಿತೀಯಾಬಹುವಚನದಲ್ಲಿ ರಿಷತಃ ಎಂಬ ರೂಪವು ಏರ್ಪಡುವುದು.

ರಕ್ಷಸ್ವಿನಃ—ರಕ್ಷಸ್ ಶಬ್ದವು ಅಸಂತ. ಆದ್ದರಿಂದ **ಅಸ್ಮಾಯಾಮೇಧಾಸ್ರಜೋವಿನಿಃ** (ಪಾ. ಸೂ. ೫-೪-೧೨೧) ಅಸನ್ತವಾದ ಶಬ್ದಗಳು ಮಾಯಾ ಮೇಧಾ ಸ್ರಜ್ ಈ ಶಬ್ದಗಳು ಇವುಗಳ ಮುಂದೆ ಮತ್ವರ್ಥದಲ್ಲಿ ವಿನಿಪ್ರತ್ಯಯ ಬರುವುದು ಎಂಬುದರಿಂದ ವಿನಿಪ್ರತ್ಯಯ ಎಂದರೆ ರಕ್ಷಸ್ವಿನ್, ದ್ವಿತೀಯಾ ಬಹುವಚನ ಶಸ್, ರಕ್ಷಸ್ವಿನಃ ಪ್ರತ್ಯಯಸ್ವರ ಆದ್ಯುದಾತ್ತ ಬರುವುದು. ॥ ೫ ॥

॥ ಸಂಹಿತಾಪಾಠಃ ॥

ಅಗ್ನಿನಾಗ್ನಿಃ ಸಮಿಧ್ಯತೇ ಕವಿರ್ಗೃಹಪತಿರ್ಯುವಾ ।
ಹವ್ಯವಾಡ್ಜುಹ್ವಾಸ್ಯಃ ॥ ೬ ॥

॥ ಪದಪಾಠಃ ॥

ಅಗ್ನಿನಾ । ಅಗ್ನಿಃ । ಸಂ । ಇಧ್ಯತೇ । ಕವಿಃ । ಗೃಹಪತಿಃ । ಯುವಾ ।
ಹವ್ಯವಾಟ್ । ಜುಹುಆಸ್ಯಃ ॥ ೬ ॥

॥ ಸಾಯಣಭಾಷ್ಯಂ ॥

ಅಗ್ನಿಮಂಥನೇಽಗ್ನಿನಾಗ್ನಿಃ ಸಮಿಧ್ಯತ ಇತ್ಯೇಷಾನುವಚನೀಯಾ । ಪ್ರಾತರ್ವೈಶ್ವದೇವ್ಯಾಂ ಪ್ರೇಷಿತ ಇತಿ ಖಂಡೇ ಸೂತ್ರಿತಂ । ಅಗ್ನಿನಾಗ್ನಿಃ ಸಮಿಧ್ಯತೇ ತ್ವಂ ಹ್ಯಗ್ನೇ ಅಗ್ನಿನಾ । ಅ. ೨-೧೬ । ಇತಿ ॥ ಏಷೈವಾಗ್ನಿಮತ ಇತ್ಯಸ್ಯಾನುವಾಕ್ಯಾ । ಅಥಾಗ್ನೇಯ್ಯ ಇತಿ ಖಂಡೇಽಗ್ನಾವಗ್ನಿಪ್ರಣಯನ ಇತ್ಯುಪಕ್ರಮ್ಯ ಸೂತ್ರಿತಂ । ಯದ್ವೋ ವಯಂ ಪ್ರಮಿನಾಮ ವ್ರತಾನ್ಯಗ್ನಿನಾಗ್ನಿಃ ಸಮಿಧ್ಯತೇ। ಅ. ೩-೧೩। ಇತಿ ॥

ಅಗ್ನಿರಾಹವನೀಯೋಽಸ್ಯಸ್ಮಿನ್ಪ್ರತಿಪತ್ಸ್ಯಮಾನೇನಾಗ್ನಿನಾ ನಿರ್ಮಥ್ಯೇನ ಪ್ರಣೀತೇನ ವಾ ಸಹ ಸಮಿಧ್ಯತೇ । ಸಮ್ಯಕ್ ದೀಪ್ಯತೇ । ಕೀದೃಶೋಽಗ್ನಿಃ । ಕವಿರ್ಮೇಧಾವೀ ಗೃಹಪತಿರ್ಯಜಮಾನಸ್ಯ ಗೃಹಸ್ಯ ಪಾಲಕೋ ಯುವಾ ನಿತ್ಯತರುಣೋ ಹವ್ಯವಾಟ್ ಹವಿಷೋ ವೋಢಾ ಜುಹ್ವಾಸ್ಯೋ ಜುಹೂರೂಪೇಣ ಮುಖೇನ ಯುಕ್ತಃ ॥ ಗೃಹಪತಿಃ । ಪತ್ಯಾವೈಶ್ವರ್ಯ ಇತಿ ಪೂರ್ವಪದಪ್ರಕೃತಿಸ್ವರತ್ವಂ । ಯುವಾ । ಯು ಮಿಶ್ರಣೇ । ಕನಿನ್ಯುವೃಷಿತಕ್ಷಿರಾಜಿಧನ್ವಿದ್ಯುಪ್ರತಿದಿವ ಇತಿ ಕನಿನ್ । ನಿತ್ತ್ವಾದಾದ್ಯುದಾತ್ತಃ । ಹವ್ಯಂ ವಹತೀತಿ ಹವ್ಯವಾಟ್ । ವಹಶ್ಚೇತಿ ಣ್ಪ್ರತ್ಯಯೇ । ಣೇತ್ತ್ವಾದುಪಧಾವೃದ್ಧಿಃ । ಗತಿಕಾರಕೋಪಪದಾತ್ಕೃದುತ್ತರಪದಪ್ರಕೃತಿಸ್ವರತ್ವಂ । ಜುಹ್ವಾಸ್ಯಃ । ಹೂಯತೇಽನಯೇತಿ ಜುಹೂಃ । ಹುವಃ ಶ್ಲುವಚ್ಚೇ ಉ. ೨-೭೦ । ಇತಿ ಕ್ವಿಪ್ । ತೆಪ್ತನ್ನಿಯೋಗಾದ್ವೀರ್ಘಃ । ಶ್ಲುವದ್ಭಾವಾದ್ದ್ವಿರ್ಭಾವಃ । ಚುತ್ವಜಶ್ತ್ವೇ । ಪ್ರಾತಿಪದಿಕಸ್ವರೇಣಾಂತೋದಾತ್ತಃ । ಜುಹೂರಾಸ್ಯಂ ಯಸ್ಯೇತಿ ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವೇನ ಸ ಏವ ಶಿಷ್ಯತೇ । ಶೇಷನಿಘಾತಃ । ಯೇಷಾಮದೇಶ ಉದಾತ್ತಸ್ವರಿತಯೋರ್ಯಣಃ ಸ್ವರಿತೋಽನುದಾತ್ತಸ್ಯ । ಪಾ. ೮-೪-೬ । ಇತ್ಯಕಾರಃ ಸ್ವರಿತಃ ॥ ೨೨ ॥

॥ ಪ್ರತಿಪದಾರ್ಥ ॥

ಅಗ್ನಿಃ—ಆಹವನೀಯವೆಂಬ ಅಗ್ನಿಯು । ಅಗ್ನಿನಾ—ಅರಣಿಯಲ್ಲಿ ಕಡೆದು ಉತ್ಪನ್ನಮಾಡಿದ ಅಗ್ನಿಯಿಂದ । ಸಂ ಇಧ್ಯತೇ— ಹೊತ್ತಿಸಲ್ಪಟ್ಟು ಚೆನ್ನಾಗಿ ಉಜ್ವಲಗೊಳಿಸಲ್ಪಡುತ್ತದೆ । (ಇಂತಹ ಈ ಅಗ್ನಿಯು) ಕವಿಃ— ಮೇಧಾವಿಯು, ವಿವೇಕಿಯು । ಗೃಹಪತಿಃ—ಯಜಮಾನನ ಗೃಹದ ಪಾಲಕನು । ಯುವಾ—ನಿತ್ಯತರುಣನು । ಹವ್ಯವಾಟ್—ದೇವತೆಗಳಿಗೆ ಹವಿಸ್ಸನ್ನು ಒಯ್ಯುವವನು । ಜುಹ್ವಾಸ್ಯಃ—ಜುಹೂರೂಪವಾದ ಮುಖವುಳ್ಳವನು.

॥ ಭಾವಾರ್ಥ ॥

ಯಜ್ಞದ ಪ್ರಾರಂಭದಲ್ಲಿ ಅಗ್ನಿಯನ್ನು ಅರಣಿಯಲ್ಲಿ ಕಡೆದು ಉತ್ಪತ್ತಿಮಾಡುವರು. ಈ ಅಗ್ನಿಯಿಂದ ಗಾರ್ಹಪತ್ಯ ಮೊದಲಾದ ಇತರ ಅಗ್ನಿಗಳನ್ನು ಹೊತ್ತಿಸಿ ಉದ್ದೀಪನಗೊಳಿಸುವರು. ಇಂತಹ ಈ ಅಗ್ನಿಯು ಬಹಳ ಮೇಧಾವಿಯು, ಯಜ್ಞಮಾಡುವ ಯಜಮಾನನ ಗೃಹರಕ್ಷಕನು, ನಿತ್ಯತರುಣನು, ದೇವತೆಗಳಿಗೆ ಹವಿಸ್ಸನ್ನು ಒಯ್ಯುವವನು. ಜುಹೂ ಎಂಬ ಹೋಮಮಾಡುವ ಸಾಧನವೇ ಇವನ ಮುಖವು.

English Translation

Agni is kindlod by Agni, the ever young and wise, the gaurdian of the dwelling (of the Sacrificer) the bearer of offerings, whose mouth is the sacrificial spoon.

॥ ವಿಶೇಷವಿಷಯಗಳು ॥

ಅಗ್ನಿನಾ, ಅಗ್ನಿಃ— ಒಂದು ಅಗ್ನಿಯಿಂದ ಮತ್ತೊಂದು ಅಗ್ನಿಯು ಹೊತ್ತಿಸಲ್ಪಡುವುದು ಎಂದರೆ ಯಜ್ಞಾರಂಭದಲ್ಲಿ ಅರಣಿಯೆಂಬ ಮರದ ತುಂಡನ್ನು ಉಜ್ಜಿ ಕಡೆದು ಉತ್ಪತ್ತಿಮಾಡಿದ ಅಗ್ನಿಯಿಂದ ಇತರ ಅಗ್ನಿಗಳನ್ನು ಹೊತ್ತಿಸುವರೆಂದರ್ಥವು. ಯಜ್ಞದಲ್ಲಿ ಅರಣಿಯಿಂದಲೇ ಅಗ್ನಿಯನ್ನು ಈ ಋಕ್ಕನ್ನು ಪಠಿಸುತ್ತಾ ಉತ್ಪನ್ನಮಾಡಬೇಕು. ಬೇರೆ ವಿಧದಲ್ಲಿ ಅಥವಾ ಮೊದಲೇ ಹೊತ್ತಿಸಿ ಸಿದ್ಧವಾಗಿರುವ ಅಗ್ನಿಯನ್ನು ಯಜ್ಞದಲ್ಲಿ ಉಪಯೋಗಿಸುವುದಿಲ್ಲ.

ಈ ಋಕ್ಕಿನ ವಿನಿಯೋಗಕ್ರಮವು ಈ ರೀತಿ ಇರುವುದು-ಅಗ್ನಿಮಥನಕಾಲದಲ್ಲಿ **ಅಗ್ನಿನಾಗ್ನಿಃ ಸಮಿಧ್ಯತೇ** ಎಂಬ ಋಕ್ಕನ್ನು ಪಠಿಸಬೇಕು. ಈ ವಿಷಯವು ಆಶ್ವಲಾಯನಶ್ರೌತಸೂತ್ರದ **ಪ್ರಾತರ್ವೈಶ್ವದೇವ್ಯಾಂ ಪ್ರೇಷಿತೆ** ಎಂಬ ಖಂಡದಲ್ಲಿ **ಅಗ್ನಿನಾಗ್ನಿಃ ಸಮಿಧ್ಯತೇ** (ಋ. ಸಂ. ೧-೧೨-೬) ಮತ್ತು **ತ್ವಂ ಹ್ಯಗ್ನೇ ಅಗ್ನಿನಾ** ಎಂಬ ಋಕ್ಕುಗಳನ್ನು ಪಠಿಸಬೇಕೆಂದು ಹೇಳಿರುವುದು. ಮತ್ತು ಈ ಋಕ್ಕು ಪುರೋನುವಾಕ್ಯಾ ಋಕ್ಕನ್ನಾಗಿಯೂ ಉಪಯೋಗಿಸುವರು. ಈ ವಿಷಯವು ಆಶ್ವಲಾಯನಶ್ರೌತಸೂತ್ರದ **ಅಥಾಗ್ನೇಯ್ಯೆ** ಎಂಬ ಖಂಡದಲ್ಲಿ **ಅಗ್ನಾವಗ್ನಿ ಹ್ಯಣಯನ** ಎಂಬ ಸೂತ್ರದಲ್ಲಿ **ಯದ್ವೋ ವಯಂ ಪ್ರಮಿನಾಮ** (ಋ. ಸಂ. ೧೦-೨-೪) ಎಂಬ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿಯೂ, **ಅಗ್ನಿನಾಗ್ನಿಃ ಸಮಿಧ್ಯತೇ** (ಋ. ಸಂ. ೧-೧೨-೬) ಎಂಬ ಋಕ್ಕನ್ನು ಪುರೋನುವಾಕ್ಯಾ ಮಂತ್ರವನ್ನಾಗಿಯೂ ಉಪಯೋಗಿಸಬೇಕೆಂದು ಹೇಳಿರುವುದು.

ಕವಿಃ— ಮೇಧಾವಿ, ಬುದ್ಧಿವಂತನು, ವಿವೇಕಿಯು, The wise etc.

ಗೃಹಪತಿಃ—**ಯಜಮಾನಗೃಹಸ್ಯ ಪಾಲಕಃ**—ಯಜಮಾನನ ಮನೆಯನ್ನು ಸಂರಕ್ಷಿಸುವವನು. ಯಜ್ಞಯಾಗಾದಿಗಳನ್ನು ಮಾಡುವ ಯಜಮಾನನು ಆಹಿತಾಗ್ನಿಯೆಂದು ಹೇಳಲ್ಪಡುವನು. ಆಹಿತಾಗ್ನಿಯೆಂದರೆ ಯಜ್ಞಾರಂಭಕಾಲದಲ್ಲಿ ವಿಧ್ಯುಕ್ತವಾಗಿ ಅಗ್ನ್ಯಾಧ್ಯಾನವೆಂಬ ಕರ್ಮವನ್ನು ಮಾಡಿ ಅಗ್ನಿಯನ್ನು ಉತ್ಪತ್ತಿಮಾಡಿ ಮುಂದೆ ಮಾಡುವ ಯಜ್ಞದಲ್ಲಿ ಉಪಯೋಗಿಸುವವನು. ಈ ರೀತಿ ಸಂಸ್ಕೃತವಾದ ಅಗ್ನಿಯನ್ನು ಆಹಿತಾಗ್ನಿಯು ತನ್ನ ಜೀವಮಾನ ಪರ್ಯಂತರವಾಗಿ ಕಾಪಾಡಬೇಕು. ಆದುದರಿಂದ ಯಜಮಾನನ ಗೃಹದಲ್ಲಿ ಯಾವಾಗಲೂ ಇದ್ದು ಅವನು ಮಾಡುವ ಯಜ್ಞಾದಿಗಳಿಗೆ ಅನುಕೂಲನಾಗಿರುವುದರಿಂದ ಅಗ್ನಿಯನ್ನು ಗೃಹಪತಿ ಎಂದು ಕರೆಯುವ ರೂಢಿ ಬಂದಿರಬಹುದು. **ಗೃಹಪತಿಃ** ಎಂಬ ಶಬ್ದವು ಋ. ಸಂ. ೧-೧೨-೬ ; ೧-೩೬-೫ ; ೧-೬೦-೪ ; ೨-೧-೨ ; ೪-೯-೪ , ೬-೧೫-೧೩ ; ೬-೪೮-೮ ; ೭-೧೬-೫ ; ೮-೬೦-೧೯ ; ೧೦-೧೨೨-೧ ಋಕ್ಕುಗಳಲ್ಲಿಯೂ, **ಗೃಹಪತಿಂ** ಎಂಬ ಶಬ್ದವು ಋ. ಸಂ. ೪-೧೧-೫ ; ೫-೪-೧ ; ೫-೪-೨ ; ೬-೧೬-೪೨ ; ೬-೫೩-೨ ; ೭-೧-೧ ; ೧೦-೧೧೪-೬ ಋಕ್ಕುಗಳಲ್ಲಿಯೂ, **ಗೃಹಪತೇ** ಎಂಬ ಶಬ್ದವು ೬-೧೫-೧೯ ಎಂಬ ಋಕ್ಕಿನಲ್ಲಿಯೂ ಪಠಿತವಾಗಿದೆ.

ಯುವಾ—ನಿತ್ಯತರುಣನು, ಎಂದರೆ ಹವಿಸ್ಸು. ಆಜ್ಯ, ಸಮಿತ್ತು ಮೊದಲಾದ ಹೋಮದ್ರವ್ಯಗಳನ್ನು ಅಗ್ನಿಯಲ್ಲಿ ಹೋಮಮಾಡುವುದರಿಂದ ಅಗ್ನಿಯು ಯಾವಾಗಲೂ ಜ್ವಾಲೆಗಳಿಂದ ಕೂಡಿ ಪ್ರಕಾಶಿಸುತ್ತಿರುವನು. ಯಾವಾಗಲೂ ಒಂದೇ ವಿಧವಾಗಿ ಪ್ರಕಾಶವುಳ್ಳವನಾಗಿರುವುದರಿಂದ ಅಗ್ನಿಯನ್ನು **ಯುವಾ**—ತರುಣನು ಎಂದು ಹೇಳುವುದು ರೂಢಿಯಾಗಿದೆ.

ಹವ್ಯವಾಟ್—ಹವ್ಯಂ ವಹತೀತಿ ಹವ್ಯವಾಟ್ । ಅಗ್ನಿಯಲ್ಲಿ ಹೋಮಮಾಡುವ ಹವಿರ್ದ್ರವ್ಯಗಳನ್ನು ದೇವತೆಗಳಿಗೆ ಒಯ್ಯುವುದರಿಂದ **ಹವ್ಯವಾಟ್** ಎಂದರೆ ಹವ್ಯವನ್ನು ವಹಿಸುವವನು ಎಂದರ್ಥಾಭಿಪ್ರಾಯವು.

ಜುಹ್ವಾಸ್ಯೈ—ಜುಹೂ ಎಂದರೆ ಯಜ್ಞಗಳಲ್ಲಿ ತುಪ್ಪವನ್ನು ಹೋಮಮಾಡುವಾಗ ಉಪಯೋಗಿಸುವ ಸೌಟಿನಂತಿರುವ ಉದ್ದವಾದ ಮರದ ಪಾತ್ರೆಯು. ಈ ಜುಹೂ ಎಂಬ ಯಜ್ಞಸಾಧನವನ್ನು ಮಾಡುವಕ್ರಮ, ಅದರ ಆಕಾರಪ್ರಮಾಣಾದಿಗಳು, ಅದನ್ನು ಯಾವ ದ್ರವ್ಯದಿಂದ ಹೇಗೆ ಮಾಡಬೇಕು ಮುಂತಾದ ಕ್ರಮಗಳು ಶುಲ್ಬಸೂತ್ರಗಳಲ್ಲಿ ವಿವರಿಸಲ್ಪಟ್ಟಿವೆ. ಈ ಜುಹೂವನ್ನು ತುಪ್ಪದಿಂದ ತುಂಬಿ ಹೋಮಮಾಡುವಾಗ ಅಗ್ನಿಯ ಸಪ್ತಜಿಹ್ವೆಗಳೆಂದು ಹೇಳಲ್ಪಡುವ ಜ್ವಾಲೆಗಳಿಗೆ ಸೋಕುವುದರಿಂದ ಅಗ್ನಿಯನ್ನು ಜುಹ್ವಾಸ್ಯೈ–ಮುಖದಲ್ಲಿ ಅಥವಾ ಬಾಯಿಯಲ್ಲಿ ಜುಹೂ ಎಂಬ ಪಾತ್ರೆಯುಳ್ಳವನು, ಜುಹೂ ಎಂಬ ಪಾತ್ರೆಯರೂಪವಾದ ಬಾಯುಳ್ಳವನು ಎಂದು ಕರೆಯುವುದು ರೂಢಿಯಾಗಿದೆ.

ವ್ಯಾಕರಣಪ್ರಕ್ರಿಯಾ

ಗೃಹಪತಿಃ—ಪತ್ಯಾವೈಶ್ವರ್ಯೇ (ಪಾ. ಸೂ. ೬-೩ ೧೮) ತತ್ಪುರುಷಸಮಾಸದಲ್ಲಿ ಐಶ್ವರ್ಯಾರ್ಥಕವಾದ ಪತಿಶಬ್ದವು ಪರದಲ್ಲಿದ್ದರೆ ಪೂರ್ವಪದವು ಪ್ರಕೃತಿಸ್ವರವನ್ನು ಹೊಂದುವುದು ಎಂದು ಸೂತ್ರಾರ್ಥ. ಇಲ್ಲಿ ಗೃಹ ಎಂಬುದು ಗೇಹೇಕಃ (ಪಾ.ಸೂ ೩-೧ ೪೪) ಗೇಹವು (ಮನೆಯು) ಕರ್ತೃವಾದಾಗ ಗ್ರಹ ಧಾತುವಿನ ಮುಂದೆ ಕ ಪ್ರತ್ಯಯ ಬರುವುದು. ಎಂಬುದರಿಂದ ಗ್ರಹ ಧಾತುವಿನ ಮುಂದೆ ಕಪ್ರತ್ಯಯ ಬಂದು **ಗ್ರಹಿಜಾವಯಿ....**, (ಪಾ. ಸೂ. ೬-೧-೧೬) ಎಂಬುದರಿಂದ ಸಂಪ್ರಸಾರಣ ಬಂದರೆ ಗೃಹಶಬ್ದವು ನಿಷ್ಪನ್ನವಾಗುವುದು. ಅಥವಾ ಗೃಹೂಗ್ರಹಣೇ ಧಾತುವು ಭ್ವಾದಿಯಲ್ಲಿರುವುದು. ಇದರ ಮುಂದೆ **ಇಗುಪಧಜ್ಞಾಪ್ರೀಕಿರಃ ಕಃ** (ಪಾ. ಸೂ. ೩-೧-೧೩೫) ಎಂಬುದರಿಂದ ಇಗುಪಧನಿಮಿತ್ತಕವಾದ ಕಪ್ರತ್ಯಯ ಬಂದರೂ ಗೃಹ ಎಂದು ಸಿದ್ಧವಾಗುವುದು. ಎರಡು ಪ್ರಕಾರದಲ್ಲೂ ಪ್ರತ್ಯಯಸ್ವರದಿಂದ ಗೃಹಶಬ್ದವು ಅಂತೋದಾತ್ತ. ಪತ್ಯಾವೈಶ್ವರ್ಯೇ, ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬಂದರೆ ಅದೇ ಸ್ವರ ನಿಲ್ಲುವುದು.

ಯುವಾ — ಯು ಮಿಶ್ರಣೇ ಧಾತು. ಕನಿನ್ಯುವೃಷಿತಕ್ಷಿರಾಜಿಧಿಸ್ವಿದ್ಯುಪ್ರತಿದಿವಃ, (ಉ. ಸೂ. ೧-೧೫೪) ಎಂಬುದರಿಂದ ಯು, ಎಂಬುದರ ಮುಂದೆ ಕನಿನ್ ಪ್ರತ್ಯಯಬರುವುದು. ಯುವನ್ ಎಂಬುದು ನಿಷ್ಪನ್ನರೂಪದಿಂದ ಆದ್ಯುದಾತ್ತ. ಪ್ರಥಮೈಕವಚನದಲ್ಲಿ ಸುಲೋಪ, ಉಪಧಾದೀರ್ಘ ನಲೋಪಗಳು ಬಂದು ಯುವಾ ಎಂದು ಸಿದ್ಧವಾಗುವುದು.

ಹವ್ಯವಾಟ್—ಹವ್ಯಂ ವಹತಿ ಇತಿ ಹವ್ಯವಾಟ್-ಹವ್ಯಶಬ್ದೋಪಪದಕವಾದ ವಹ್ ಧಾತುವಿನ ಮುಂದೆ ವಹಶ್ಚ (ಪಾ. ಸೂ. ೪-೨-೬೪) ಛಂದಸ್ಸಿನಲ್ಲಿ ಸುಬಂತವು ಉಪಪದವಾಗಿರುವಾಗ ವಹ ಧಾತುವಿನ ಮುಂದೆ ಣ್ವಿ ಪ್ರತ್ಯಯಬರುವುದು ಎಂಬುದರಿಂದ ಣ್ವಿ ಪ್ರತ್ಯಯಬರುವುದು, ಈ ಣ್ವಿ ಪ್ರತ್ಯಯವು ಲೋಕದಲ್ಲಿಯೂ ಪ್ರವೃತ್ತವಾಗುವುದು ಎಂದು ಕೆಲವರು ಅಭಿಪ್ರಾಯ ಪಡುವರು ಎಂದು ಶೇಖರಕಾರರು ನಿರೂಪಿಸಿರುವರು, ಪ್ರತ್ಯ

ಯವು ಣಿತ್ತಾದ್ದರಿಂದ **ಅತೇಲುಸಿಧಾಯಾಃ** (ಪಾ. ಸೂ. ೭೧-೧೧೬) ಎಂಬುದರಿಂದ ಉಪಧಾವೃದ್ಧಿ ಬರುವುದು ಣ್ವಿ ಪ್ರತ್ಯಯದಲ್ಲಿ ಎಲ್ಲಾ ವರ್ಣಗಳಿಗೂ ಲೋಪಬರುವುದು, ಹವ್ಯವಾಹ್-ಎಂದಾಗುವುದು. ವಾಹ್-ಎಂಬುದು ಧಾತುಸ್ವರದಿಂದ ಅಂತೋದಾತ್ತ. ಸಮಾಸಬಂದಮೇಲೆಯೂ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬಂದರೆ ಅದೇ ನಿಲ್ಲುವುದು. ಇದರ ಮುಂದೆ ಪ್ರಥಮಾವಿಭಕ್ತಿ ಏಕವಚನ ಸುಪ್ರತ್ಯಯ, ಅದಕ್ಕೆ **ಹಲ್ಙ್ಯಾಭ್ಭ್ಯಃ** (ಪಾ. ಸೂ. ೬-೧-೬೮) ಎಂಬುದರಿಂದ ಲೋಪ. ಹಕಾರಕ್ಕೆ **ಹೋಢಃ** (ಪಾ. ಸೂ. ೮-೨-೩೧) ಝಲ್ ವರ್ಣದ ಹಿಂದೆ ಇರುವ ಅಥವಾ ಪದದ ಕೊನೆಯಲ್ಲಿರುವ ಹಕಾರಕ್ಕೆ ಢಕಾರ ಬರುವುದು ಎಂಬುದರಿಂದ ಢಕಾರ ಬಂದರೆ ಹವ್ಯವಾಢ್. **ಝಲಾಂಜಶೋಽನ್ತೇ** (ಪಾ ಸೂ. ೮-೨-೩೯) ಎಂಬುದರಿಂದ ಜಶ್ತ್ವ ಬಂದು ಢಕಾರಕ್ಕೆ ಡಕಾರ ಬರುವುದು. **ವಾವಸಾನೇ** (ಪಾ. ಸೂ. ೮-೪-೫೬) ಎಂಬುದರಿಂದ ಚರ್ತ್ವ ಬಂದರೆ ಹವ್ಯವಾಟ್ ಎಂದಾಗುವುದು.

ಎಂಬ ಋಕ್ಕಿನ ಅರ್ಥವಿವರಣೆ ಮಾಡುವಾಗಲೂ ಭಾಷ್ಯಕಾರರು ಮಧೋಃ ಎಂಬ ಶಬ್ದಕ್ಕೆ **ಮದಕರಸ್ಯ ಸೋಮಸ್ಯ** ಮದವನ್ನುಟುಮಾಡುವ ಸೋಮರಸದ ಎಂಬ ಅರ್ಥವನ್ನೇ ಹೇಳಿರುವರು. ಮಧುಶಬ್ದಕ್ಕೆ ಸೋಮರಸವೆಂದು ಅರ್ಥಪ್ರತಿಪಾದನೆ ಮಾಡುವ ಋಕ್ಕುಗಳು ಋಗ್ವೇದದಲ್ಲಿ ಅನೇಕ ಇವೆ. ಆದುದರಿಂದ **ಮಧುಮಂತಂ** ಎಂಬ ಶಬ್ದಕ್ಕೆ ಸೋಮರಸಸಹಿತವಾದ ಎಂಬ ಅರ್ಥವನ್ನು ಹೇಳಬಹುದು.

ತನೂನಪಾತ್—ಈ ಶಬ್ದವೂ ಅಗ್ನಿಯ ಮತ್ತೊಂದು ಹೆಸರು. ಈ ಶಬ್ದಕ್ಕೆ ತನ್ನಿಂದಲೇ ಹುಟ್ಟಿದವನು ಎಂದು ಕೆಲವರು ಅರ್ಥಮಾಡಿರುವರು. ಈ ಅರ್ಥಸಮರ್ಥನೆಗಾಗಿ **ಅಗ್ನಿನಾಗ್ನಿಃ ಸಮಿಧ್ಯತೇ** (ಒಂದು) ಅಗ್ನಿಯಿಂದ (ಮತ್ತೊಂದು) ಅಗ್ನಿಯು ಹೊತ್ತಿಸಲ್ಪಡುವುದು ಎಂಬ ಋಕ್ಕನ್ನು ಉದಾಹರಿಸುವರು ಮತ್ತು ನಿರುಕ್ತದಲ್ಲಿ ತುಕ್, ತೋಕಂ ಮೊದಲಾದ ಹದಿನೈದು ಅಪತ್ಯವಾಚಕಶಬ್ದಗಳ ಮಧ್ಯದಲ್ಲಿ ನಪಾತ್ ಎಂಬ ಶಬ್ದವು ಪಠಿತವಾಗಿರುವುದರಿಂದ(ನಿ -೩-೨)ನಪಾತ್ ಶಬ್ದಕ್ಕೆ ಮಗನು, ಪುತ್ರನು ಎಂದರ್ಥವು. ತನುಃ= ತನ್ನ ಶರೀರದಿಂದ ನಪಾತ್= ಹುಟ್ಟಿದವನು. ಮತ್ತು ಯಾಸ್ಕಮಹರ್ಷಿಯು ತಮ್ಮ ನಿರುಕ್ತದ ದೈವತಕಾಂಡದಲ್ಲಿ ತನೂನಪಾತ್ ಎಂಬ ಶಬ್ದದ ಅರ್ಥವಿವರಣೆ ಮಾಡುವಾಗ—

> **ತನೂನಪಾತ್**—ತನೂನಪಾದಾಜ್ಯಮಿತಿ ಕಾತ್ಥಕ್ಯಃ । ನಪಾದಿತ್ಯನಂತರಾಯಾಃ ಪ್ರಜಾಯಾ ನಾಮಧೇಯಂ ನಿರ್ಣತತಮಾ ಭವತಿ । ಗೌರಶ್ಚ ತನೂರುಚ್ಯತೇ । ತತಾ ಅಸ್ಯಾಂ ಭೋಗಾಃ ತಸ್ಯಾಃ ಪಯೋ ಜಾಯತೇ ಪಯಸ್ಯ ಆಜ್ಯಂ ಜಾಯತೇ ॥
> **ಅಗ್ನಿರಿತಿ ಶಾಕಪೂಣಿಃ**—ಅಪೋಽತ್ರ ತನ್ವ ಉಚ್ಯಂತೇ । ತತಾ ಅಂತರಿಕ್ಷೇ ತಾಭ್ಯ ಓಷಧಿವನಸ್ಪತಯೋ ಜಾಯಂತ ಓಷಧಿವನಸ್ಪತಿಭ್ಯ ಏಷ ಜಾಯತೇ ॥
>
> (ನಿ. ೮-೫)

ಎಂದು ಹೇಳಿದಾರೆ—ಅಭಿಪ್ರಾಯವೇನೆಂದರೆ, ಕಾತ್ಥಕ್ಯ ಎಂಬುವರು ತನೂನಪಾತ್ ಎಂಬದರೆ ಆಜ್ಯ (ಕರಗಿಸಿದ ತುಪ್ಪ)ವೆಂದು ಹೇಳುವರು. ಇದನ್ನು ಸಮರ್ಥಿಸುವುದಕ್ಕಾಗಿ ತನೂಃ ಎಂದರೆ ಗೌಃ, ಗೋವು, ನಪಾತ್—

ಎಂದರೆ ಪ್ರಜೆ, ಹುಟ್ಟಿದ ಎಂದರ್ಥವು. ಆದುದರಿಂದ ತನೂ-ಗೋವಿನಿಂದ, ನಪಾತ್-ಹುಟ್ಟಿದ ಎಂದರೆ ಉಂಟಾದ ಹಾಲು, ಹಾಲಿನಿಂದ ಉತ್ಪನ್ನವಾದುದು ತುಪ್ಪವು ಅಥವಾ ಆಜ್ಯವು ಎಂದು ತನೂನಪಾತ್ ಶಬ್ದಕ್ಕೆ ಆಜ್ಯವೆಂಬ ಅರ್ಥವನ್ನು ಸಮರ್ಥಿಸಿರುವರು. ಈ ಅರ್ಥದ ಉದಾಹರಣೆಗಾಗಿ--

ತನೂನಪಾತ್ಪಥ ಋತಸ್ಯ ಯಾನಾನ್ಮಧ್ವಾ ಸಮಂಜನ್ತ್ಸ್ವದಯಾ ಸುಜಿಹ್ವ ।
ಮನ್ಮಾನಿ ಧೀಭಿರುತ ಯಜ್ಞಮೃಂಧನ್ದೇವತ್ರಾ ಚ ಕೃಣುಹ್ಯಧ್ವರಂ ನಃ ॥

(ಋ. ಸು. ೧೮-೧೧೦-೨)

ಎಂಬ ಋಕ್ಕನ್ನು ಕೊಟ್ಟಿರುವರು. ಈ ಋಕ್ಕೂ ಸಹ ಆಪ್ರೀಸೂಕ್ತದಲ್ಲಿಯೇ ಇರುವುದರಿಂದ ಇದರಲ್ಲಿರುವ ತನೂನಪಾತ್ ಎಂಬ ಶಬ್ದಕ್ಕೆ ಆಜ್ಯವೆಂಬ ಅರ್ಥವು ಯುಕ್ತವೇ ಎಂಬ ಸಂದೇಹಕ್ಕೆ ಅವಕಾಶವಿರುವುದು. ಇನ್ನು ಶಾಕಪೂಣಿಯ ಮತದಂತೆ ತನೂನಪಾತ್ ಎಂದಧಿ ಅಗ್ನಿಯು. ಇಲ್ಲಿ ತನು-ಎಂದರೆ ನೀರು. ನೀರು ಮಳೆಯ ರೂಪದಿಂದ ಬಿದ್ದು ಅದರಿಂದ ಓಷಧಿವನಸ್ಪತಿಗಳು ಉತ್ಪನ್ನವಾಗುವವು. ವನಸ್ಪತಿಯಿಂದ (ಅರಣಿ ಎಂಬ ಮರದ ತುಂಡು) ಹುಟ್ಟುವುದರಿಂದ ಅಗ್ನಿಗೆ ತನೂನಪಾತ್ ಎಂದು ಹೆಸರು.

॥ ವ್ಯಾಕರಣಪ್ರಕ್ರಿಯಾ ॥

ಮಧುಮನ್ನಿಮ್—ಫಲಿಪಾಟ ನಮಿ ಮನಿ ಜನಾಂ ಗುಕ್ಪಟಿ ನಾಕಿಧತಶ್ಚ, (ಉ. ಸೂ. ೧-೧೪) ಫಲ ನಿಷ್ಪತ್ತೌ, ಪಟ ಗತೌ, ಣಿಜಂತ, ಣಮ ಪ್ರಹ್ವತ್ವೇ ಶಬ್ದೇ, ಮನ ಜ್ಞಾನೇ, ಜನೀ ಪ್ರಾದುರ್ಭಾವೇ. ಈ ಧಾತುಗಳ ಮುಂದೆ ಉ ಪ್ರತ್ಯಯ ಬರುವುದು. ಅದು ನಿತ್ತಾಗುವುದು ಫಲ್ ಎಂಬುದಕ್ಕೆ ಗುಕ್ ಎಂಬ ಆಗಮವೂ ಮಿಕ್ಕವುಗಳಿಗೆ ಯಥಾಕ್ರಮವಾಗಿ ಪಟ, ನಾಕಿಧ, ತ ಈ ಆದೇಶಗಳೂ ಬರುವುವು ಎಂದು ಸೂತ್ರಾರ್ಥ, ಏಕಾಪಿ ಷಷ್ಠೀ ವಿಷಯಭೇದಾದ್ಭಿದ್ಯತೇ, ಅಂದರೆ ಷಷ್ಠೀವಿಭಕ್ತಿಪ್ರತ್ಯಯವು ಒಂದೇ ಆದರೂ ವಿಷಯಭೇದದಿಂದ ಬೇರೆ ಬೇರೆ ಅರ್ಥವನ್ನು ಕೊಡುವುದು ಎಂಬ ನ್ಯಾಯದಿಂದ ಗುಗಾಗಮ ವಿಷಯದಲ್ಲಿ ಫಲಿ ಶಬ್ದಾನ್ವಿತವಾದ ಷಷ್ಠಿಯು ಅವಯವಾರ್ಥಕ ಪಟ್ಯಾದ್ಯಾದೇಶಗಳನ್ನು ವಿಧಿಸುವಾಗ ಮಿಕ್ಕ ನಾಲ್ಕರಲ್ಲಿ ಅನ್ವಿತವಾದ ಷಷ್ಠಿಯು ಸ್ಥಾನಷ್ಠೀ, ಅದರಲ್ಲೂ ಥ ತ ಆದೇಶ ವಿಷಯದಲ್ಲಿ ಮನ್ ಜ್ಞ ಇವುಗಳ ಅಂತ್ಯಕ್ಕೆ ಆದೇಶವನ್ನು ಬೋಧಿಸುವುದು. ಇದರಿಂದ ಮನ ಧಾತುವಿನ ಮುಂದೆ ಉಪ್ರತ್ಯಯ ಬಂದರೆ ಮನ್+ಉ, ನಕಾರಕ್ಕೆ ಥಕಾರಾದೇಶ ಮಥು ಎಂದಾಗುವುದು. ಪ್ರತ್ಯಯವು ನಿತ್ತಾದ್ದರಿಂದ ಮಥುಶಬ್ದವು ಜ್ನಿತ್ಯಾದಿರ್ನಿತ್ಯಮ್ (ಪಾ, ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತ. ಧಾನ್ಯೇ ನಿತ್ (ಉ. ಸೂ. ೧-೯) ಎಂಬುದರಿಂದ ನಿತ್, ಎಂಬುದು ಫಲಿಪಾಟ ಎಂಬಲ್ಲಿ ಅನುವೃತ್ತವಾಗುವುದು.

ತನೂನಪಾತ್—ಇದು ಅಮಂತ್ರಿತ. ಆದ್ದರಿಂದ ಆಷ್ಟಮಿಕವಾದ **ಆಮಂತ್ರಿತಸ್ಯೇಚ** (ಪಾ. ಸೂ. ೧-೧೯) ಎಂಬುದರಿಂದ ಸರ್ವಾನುದಾತ್ತ ಬರುವುದು.

ಅದ್ಯ—ಅಸ್ಮಿನ್ ಕಾಲೇ ಎಂದು ವಿಗ್ರಹ. **ಸದ್ಯಃ ಪರುತ್ಪರಾಯ್ಶ್ಚೈಷಮಃ ಪರೇದ್ಯ್ವದ್ಯೆ** (ಪಾ. ಸೂ. ೫-೩-೨೨) ಎಂಬುದರಿಂದ ನಿಪಾತಿತವಾಗಿರುವುದು. ಇದಮೋಽಶ್ ದ್ಯಶ್ಚ, ಅಂದರೆ ಸಪ್ತಮ್ಯಂತವಾದ ಇದಮ್ ಶಬ್ದದ ಮುಂದೆ ದ್ಯ ಎಂಬ ಅಕಾರಾಂತವಾದ ಪ್ರತ್ಯಯ ಬರುವುದು. ಇದಮ್

ಶಬ್ದಕ್ಕೆ ಅಶ್ ಆದೇಶವೂ ಬರುವುದು ಎಂದು ಭಾಷ್ಯವಾಕ್ಯದ ಅರ್ಥ. ಇದರಿಂದ ಸಪ್ತಮ್ಯಂತವಾದ ಇದಮ್ ಶಬ್ದದ ಮುಂದೆ ದ್ಯಪ್ರತ್ಯಯ ಬಂದರೆ ಇದಮ್+ಙಿ+ದ್ಯ, ತದ್ಧಿತಾಂತವಾದ್ದರಿಂದ ಪ್ರಾತಿಪದಿಕಸಂಜ್ಞೆ ಬರುವುದು. **ಸುಪೋಧಾತು ಪ್ರಾತಿಪದಿಕಯೋಃ** (ಪಾ. ಸೂ. ೨೪-೭೧) ಎಂಬುದರಿಂದ ಙಿಪ್ರತ್ಯಯಕ್ಕೆ ಲುಕ್. ಇದಮ್ ಶಬ್ದಕ್ಕೆ ಅಶ್ ಬರುವುದು. ಅದು ಶಿತ್ತಾದ್ದರಿಂದ ಸರ್ವಾದೇಶವಾಗಿ ಬರುವುದು. ಅದ್ಯ ಎಂದಾಗುವುದು. ಇದು ಪ್ರತ್ಯಯಸ್ವರದಿಂದ ಅಂತೋದಾತ್ತ. **ತದ್ಧಿತಶ್ಚಾಸರ್ವವಿಭಕ್ತಿಃ** (ಪಾ. ಸೂ. ೧-೧-೩೮) ಅಸರ್ವವಿಭಕ್ತಿಃ ಎಂಬಲ್ಲಿ ಬಹುವ್ರೀಹಿಸಮಾಸ ಮಾಡಬೇಕು. ಅಲ್ಲಿ ಸರ್ವಾ ವಿಭಕ್ತಯಃ ಯಸ್ಯಾತ್ ನ ಭವನ್ತಿ ಸಃ ಎಂದು ಬಹುವಚನಾಂತ ವಿಗ್ರಹವು ಸಂಭವಿಸುವುದಿಲ್ಲ. ಏಕೆಂದರೆ ಪ್ರಕೃತ ಸೂತ್ರದ ಲ್ಲಿಯೇ ಮಹಾಭಾಷ್ಯದಲ್ಲಿ **ದ್ವೇಕಯೋರ್ದ್ವಿವಚನೈಕವಚನೇ** (ಪಾ ಸೂ. ೧-೪-೨೨) **ಬಹುಷು ಬಹುವಚನಮ್** (ಪಾ ಸೂ ೧-೪-೨೧) ಎಂಬ ಸೂತ್ರವಿನ್ಯಾಸವನ್ನು ಒಡೆದು ಏಕವಚನಮ್, ದ್ವಯೋರ್ದ್ವಿವಚನಮ್, ಬಹುಷು ಬಹುವಚನಮ್ ಎಂದು ಸೂತ್ರವಿನ್ಯಾಸವನ್ನು ಮಾಡಿ ಏಕವಚನವು ಉತ್ಸರ್ಗವಾಗಿ ಬರುವುದು ದ್ವಿತ್ವ ಬಹುತ್ವ ತೋರಿದಾಗ ದ್ವಿವಚನ ಬಹುವಚನಗಳು ಅದಕ್ಕೆ ಬಾಧಕಗಳಾಗುವುವು ಎಂದು ಪ್ರತಿಪಾದಿತವಾಗಿರುವುದು. ಇಲ್ಲಿ ಏಕವಚನಮ್, ಎಂಬುದಕ್ಕೆ ಙ್ಯಂತಾಬಂತಪ್ರಾತಿಪದಿಕಗಳ ಮುಂದೆ ಏಕವಚನ ಬರುವುದು ಎಂದು ಅರ್ಥವು ಏರ್ಪಡುವುದು. ಈ ಸಾಮಾನ್ಯವಿಧಿಯಿಂದ ದ್ವಿತಬಹುತ್ವಗಳು ತೋರದೇ ಇರುವಾಗ ಏಕವಚನ ಬರುವುದು ಎಂದು ಏರ್ಪಡುವುದು. ಏವಂಚ ದ್ವಿತ್ವಬಹುತ್ವಗಳು ತೋರದೇ ಇರುವಾಗ ಏಕತ್ವವಿದ್ದರೂ, ಏಕತ್ವ ವಿಲ್ಲದೇ ಇದ್ದರೂ ಏಕವಚನ ಬರುವುದು ಎಂದು ಸಿದ್ಧವಾಗುವುದು. ಇಲ್ಲಿ ದ್ವಿತ್ವಬಹುತ್ವಗಳಲ್ಲಿ ದ್ವಿವಚನ ಬಹುವಚನ ವಿಧಾನಮಾತ್ರದಿಂದಲೇ ದ್ವಿತ್ವಾದಿಗಳು ತೋರದೇ ಇರುವಾಗ ಏಕವಚನವು ಉತ್ಪನ್ನವಾಗುವುದು. ಹೀಗಿರುವಾಗ ಏಕವಚನಮ್, ಎಂಬುದು ವ್ಯರ್ಥವಾಗಿ ಕರ್ಮತ್ವಾದ್ಯರ್ಥಪ್ರತೀತಿ ಇಲ್ಲದೆ ಇದ್ದರೂ ಏಕವಚನವು ಬರುವುದು ಎಂದು ಬೋಧಿಸುವುದು. ಏವಂಚ ಲಿಂಗಸಂಖ್ಯಾನ್ವಯವಿಲ್ಲದೇ ಇರುವ ಅವ್ಯಯಗಳ ಮುಂದೆ ಏಕವಚನವು ಪ್ರವರ್ತಿಸುವಾಗ ವಿನಿಗಮಕವಿಲ್ಲದೇ ಇರುವುದರಿಂದ ಎಲ್ಲಾ ವಿಭಕ್ತಿಯ ಏಕವಚನವೂ ಬರುವುದು. ಆದುದರಿಂದಲೇ ಅವ್ಯಯಾದಾಪ್ಸುಪಃ, ಎಂಬಲ್ಲಿ ಪ್ರತ್ಯಾಹಾರಗ್ರಹಣವು ಸಾರ್ಥಕವಾಗುವುದು. ಈ ರೀತಿಯಾಗಿ ಅವ್ಯಯದ ಮುಂದೆ ಎಲ್ಲಾ ವಿಭಕ್ತಿಗಳೂ ಬರುವುವು. ಆದ್ದರಿಂದ ಸರ್ವಾಃ ವಿಭಕ್ತಯಃ ಯಸ್ಮಾನ್ನ ಭವನ್ತಿ ಎಂದು ಬಹುವಾಚನಾಂತ ವಿಗ್ರಹವನ್ನು ಮಾಡಲು ಸಾಧ್ಯವಿಲ್ಲ. ಆದ್ದರಿಂದ ಸರ್ವಾ ವಚನತ್ರಯಾತ್ಮಿಕಾ ವಿಭಕ್ತಿರ್ಯಸ್ಮಾನ್ನೋತ್ಪದ್ಯತೇ ಕಿಂತು ಏಕವಚನಾನ್ಯೇವೋತ್ಪದ್ಯಂತೇ ಸ ತದ್ಧಿತಾಂತಃ ಅವ್ಯಯಸಂಜ್ಞಕಃ ಭವತಿ ಎಂದು ಫಲಿಸುವುದು. ಏವಂಚ ಯಾವ ತದ್ಧಿತಾಂತದ ಮುಂದೆ ವಚನತ್ರಯಾತ್ಮಕವಾದ ಎಲ್ಲಾ ವಿಭಕ್ತಿಯೂ ಬರುವುದಿಲ್ಲವೋ ಏಕವಚನ ಮಾತ್ರವೇ ಬರುವುದೋ ಆ ತದ್ಧಿತಾಂತವು ಅವ್ಯಯಸಂಜ್ಞೆಯನ್ನು ಹೊಂದುವುದು ಎಂದು ಈ ಸೂತ್ರದ ನಿರ್ಗಳಿತಾರ್ಥ

ಅದ್ಯ—ಎಂಬಲ್ಲಿ ಈ ಸೂತ್ರದಿಂದ ಅವ್ಯಯ ಸಂಜ್ಞೆ ಬಂದರೆ ಅದರ ಮುಂದೆ ಬರುವ ಸಪ್ತಮಿಾ ಏಕವಚನಕ್ಕೆ **ಅವ್ಯಯಾದಾಪ್ಸುಪಃ** (ಪಾ. ಸೂ. ೨-೪-೮೨) ಎಂಬುದರಿಂದ ಲುಕ್ ಬರುವುದು. ಸಂಹಿತಾಕಾಲದಲ್ಲಿ **ಅನ್ಯೇಷಾಮಪಿದೃಶ್ಯತೇ** (ಪಾ. ಸೂ. ೬-೩-೧೩೭) ಎಂಬುದರಿಂದ ದೀರ್ಘಬರುವುದು.

ಕೃಣುಹಿ—**ಕೃವಿ ಹಿಂಸಾಕರಣಯೋಶ್ಚ ಧಾತು. ಇದಿತೋನುಮ್ಧಾತೋಃ** (ಪಾ. ಸೂ. ೭-೧-೪೮) ಎಂಬುದರಿಂದ ನುಮಾಗಮವು ಬರುವುದು- ಕೃನ್+ವ್ ಎಂದಾಗುವುದು. ಇದರ ಮುಂದೆ **ಲೋಟ್** ಮಧ್ಯಮಪುರುಷ ಏಕವಚನ ಸಿಪ್, ಅದಕ್ಕೆ ಹಿ ಆದೇಶ. ಶಪ್ ವಿಕರಣಕ್ಕೆ ಅಪವಾದವಾಗಿ ಉ ಎಂಬ ವಿಕರಣವು ಧಿನ್ವಿಕೃನ್ವೋ-

ರಚೆ (ಪಾ. ಸೂ. ೩-೧-೮೦) ಧಿನ್ವ್ ಕೃಣ್ವ್ ಇವುಗಳ ಮುಂದೆ ಶಬ್ವಿಷಯದಲ್ಲಿ ಉ ಪ್ರತ್ಯಯವೂ, ಇವುಗಳಿಗೆ ಅಂತಾದೇಶವಾಗಿ ಅಕಾರವೂ ಬರುವುದು ಎಂಬುದರಿಂದ ವಕಾರಕ್ಕೆ ಅಕಾರಾದೇಶವೂ ಬರುವುದು. ಏವಂಚ ಕೃನ + ಉ + ಹಿ ಎಂದಿರುವಾಗ ಅತೋಲೋಪಃ (ಪಾ. ಸೂ. ೬-೪-೪೮) ಎಂಬುದರಿಂದ ಅಕಾರಕ್ಕೆ ಲೋಪ. ಈ ಅಕಾರಲೋಪಕ್ಕೆ ಸ್ಥಾನಿವದ್ಭಾವ ಬರುವುದರಿಂದ ಲಘೂಪಧಗುಣ ಬರುವುದಿಲ್ಲ. ಇಲ್ಲಿ ಉತಶ್ಚ ಪ್ರತ್ಯಯಾದಸಂಯೋಗಪೂರ್ವಾತ್ (ಪಾ. ಸೂ. ೬-೪-೧೦೬) ಎಂಬುದರಿಂದ ಹಿಗೆ ಲುಕ್ ಪ್ರಾಪ್ತವಾಗುವುದು. ಆದರೂ ಉತಶ್ಚಪ್ರತ್ಯಯಾಚ್ಛಂದೋವಾ ವಚನಮ್ (ಪಾ. ಸೂ. ೬-೪-೧೦೬-೧) ಉತಶ್ಚ-ಪ್ರತ್ಯಯಾತ್ (ಪಾ. ಸೂ. ೬-೪-೧೪೬) ಎಂದು ವಿಹಿತವಾದ ಹಿ ಲುಕ್ಕು ಛಂದಸ್ಸಿನಲ್ಲಿ ವಿಕಲ್ಪವಾಗಿ ಬರುವುದು ಎಂಬುದರಿಂದ ಹಿಗೆ ಲುಕ್ ಬರುವುದಿಲ್ಲ. ಋವರ್ಣಾನ್ನಸ್ಯ ಣತ್ವಂ ವಾಚ್ಯಮ್, ಎಂಬುದರಿಂದ ನಕಾರಕ್ಕೆ ಣಕಾರ. ಕೃಣುಹಿ ಎಂದಾಗುವುದು. ತಿಜ್ಜತಿಜಿಃ (ಪಾ. ಸೂ- ೪-೧-೨೮) ಎಂಬುದರಿಂದ ಸರ್ವಾನುದಾತ್ತ ಬರುವುದು·

ವೀತಯೇ—ಮಂತ್ರೇ ವೃಷೇಷಪಚೇಮನವಿದಭೂವಿರಾ ಉದಾತ್ತಃ (ಪಾ. ಸೂ. ೩-೩-೯೬) ಎಂಬುದರಿಂದ ಕ್ತಿನ್ ಪ್ರತ್ಯಯವು ಉದಾತ್ತವಾಗಿ ಬರುವುದು. ॥ ೨ ॥

॥ ಸಂಹಿತಾಪಾಠಃ ॥

ನರಾಶಂಸಮಿಹ ಪ್ರಿಯಮಸ್ಮಿನ್ಯಜ್ಞ ಉಪ ಹ್ವಯೇ ।
ಮಧುಜಿಹ್ವಂ ಹವಿಷ್ಕೃತಂ ॥ ೩ ॥

॥ ಪದಪಾಠಃ ॥

ನರಾಶಂಸಂ । ಇಹ । ಪ್ರಿಯಂ । ಅಸ್ಮಿನ್ । ಯಜ್ಞೇ । ಉಪ । ಹ್ವಯೇ ॥
ಮಧುಽಜಿಹ್ವಂ । ಹವಿಃಽಕೃತಂ ॥ ೩ ॥

॥ ಸಾಯಣಭಾಷ್ಯಂ ॥

ಇಹ ದೇವಯಜನದೇಶೇಽಸ್ಮಿನ್ವರ್ತಮಾನೇ ಯಜ್ಞೇ ನರಾಶಂಸಮೇತನ್ನಾಮಕಮಗ್ನಿಮುಪ ಹ್ವಯೇ । ಆಹ್ವಯಾಮಿ । ಕೀದೃಶಂ । ಪ್ರಿಯಂ ದೇವಾನಾಂ ಪ್ರೀತಿಹೇತುಂ ಮಧುಜಿಹ್ವಂ ಮಧುರ ಭಾಷಿಜಿಹ್ವೋಪೇತಂ ಮಾಧುರ್ಯರಸಾಸ್ವಾದಕಜಿಹ್ವೋಪೇತಂ ವಾ ಹವಿಷ್ಕೃತಂ ಹವಿಷೋ ನಿಷ್ಪಾದಕಂ ॥ ಸರಶಬ್ದೋ ನ್ಯ ನಯೆ ಇತ್ಯಸ್ಮಾದಬಂತಃ । ಪ್ರತ್ಯಯಸ್ಯ ಪಿತ್ತ್ವಾದ್ಧಾತುಸ್ವರ ಏವ ಶಿಷ್ಯತೇ । ಶಂಸಂತ್ಯ-ಸ್ಮಿನ್ನಿತಿ ಶಂಸಃ । ಹಲಶ್ಚ । ಪಾ. ೩-೩-೧೨೧ । ಇತ್ಯಧಿಕರಣೇ ಘಞ್ । ನರಾಣಾಂ ಶಂಸ ಇತಿ ಸಮಾಸೇ

कृदुत्तरपदप्रकृतिस्वरश्चैके प्राप्ते उभे वनस्पत्यादिषु युगपत् । पा- ६.१-८४० । इति पूर्वोत्तरपदे प्रकृतिस्वरे भवतः । अत एव वनस्पत्यादिषु पाठान्नरत्वस्य दीर्घत्वं। इह । इदमो ह इति हप्रत्ययः । इदम इशितीशादेशः । प्रत्ययस्वरः । प्रियं । प्रीणातीति प्रियः । इगुपधज्ञाप्रीकिरः क इति कः । प्रत्ययस्वरः । अस्मिन् । ऊडिदमित्यादिना विभक्तेरुदात्तत्वं । हुये । निघातः । मधुजिह्वं । मधुशब्दस्यादुदात्तत्वमुक्तं । बहुव्रीहौ पूर्वपदप्रकृतिस्वरेण स एव शिष्यते । हविष्कृतं । हविः करोतीति हविष्कृत् । क्विपि हृस्वस्य तुक् । नित्यं समासेऽनुत्तरपदस्थस्येति षत्वं । कृदुत्तरपदप्रकृतिस्वरत्वं ॥

॥ प्रतिपदार्थ ॥

इह—ईं यज्ञप्रदेशदल्लि । अस्मिन् यज्ञे—नावु माडुत्तिरुव ई यज्ञदल्लि । प्रियं— देवतेगळिगे प्रीतिपात्रनाद । मधुजिह्वं—मधुरवाद (ओळ्ळेय) मातन्नाडुव अथवा माधुर्यरसवन्नु अस्वादने माडुव जिह्वेयुळ्ळ । हविष्कृतं—हविस्सन्नु (पचन) माडुव । नराशंसं—नराशंसनेंब हेसरिनिंद करेयल्पडुव अग्नियन्नु । उपह्वये— आह्वानमाडुवेनु ॥

॥ भावार्थ ॥

नराशंसनेंदु हेळल्पडुव एळै अग्नियेः- नीनु देवतेगळिगे प्रियनादवनु. मधुरवागि मातनाडुवनु अथवा माधुर्ययुक्तवाद हविस्सन्नु अस्वादने माडुवनु, हविस्सन्नु पचनमाडि सिद्धपडिसुवनु. इंतह नराशंसनन्नु ईग नावु माडुत्तिरुव यज्ञदल्लि आह्वान माडुवेनु.

English Translation

I invoke here at this sacrifice Narasamsa, the beloved one, the sweet-tongoned, preparer of sacrifcial food.

॥ विशेषविषयगळु ॥

ई ऋक्किगे देवतेयु नराशंसनु एंदरे आ हेसरिनिंद करेयल्पडुव अग्नियु. यास्कर अर्थविवरणेयु ईरीति इरुवुदु—

(८) नराशंसः । नराशंसो यज्ञ इति काठ्थक्यः । नरा अस्मिन्नासीनाः शंसंति ॥

(೨) ಅಗ್ನಿರಿತಿ ಶಾಕಪೂಣಿಃ । ನರೈಃ ಪ್ರಶಸ್ಯೋ ಭವತಿ ॥

ನರಾಶಂಸ ಶಬ್ದಕ್ಕೆ ಎರಡು ವಿಧವಾದ ಅರ್ಥವನ್ನು ಹೇಳಿರುವರು. (೧) ನರಾಶಂಸನೆಂದರೆ ಯಜ್ಞವು. ಈ ಯಜ್ಞದಲ್ಲಿ ಕುಳಿತು ನರಾಃ ಎಂದರೆ ಮನುಷ್ಯರು (ಅಗ್ನಿಯನ್ನು ಅಥವಾ ದೇವತೆಯನ್ನು) ಶಂಸನ (ಸ್ತುತಿ) ಮಾಡುವುದರಿಂದ ಈ ಕರ್ಮಕ್ಕೆ ಯಜ್ಞನೆಂದು ಹೆಸರು. ಇದು ಕಾತ್ಥಕ್ಯರ ಮತವು. (೨) ನರರಿಂದ ಎಂದರೆ ಮನುಷ್ಯರಿಂದ ಸ್ತುತಿಸಲ್ಪಡುವವನಾದುದರಿಂದ ನರಾಶಂಸನೆಂದರೆ ಅಗ್ನಿಯೆಂದು ಹೆಸರು. ಇದು ಶಾಕಪೂಣಿಯ ಮತವು. ಈ ಎರಡನೆಯ ಅರ್ಥವಿವರಣೆಯೇ ಇಲ್ಲಿ ಯುಕ್ತವಾಗಿರುವುದು ಸ್ಕಂದಸ್ವಾಮಿಯೂ—**ನರೈಃ ಪ್ರಶಸ್ಯತ ಇತಿ ನರಾಶಂಸೋಽಗ್ನಿಃ ತಂ ನರಾಶಂಸಂ** ॥ ಮನುಷ್ಯರಿಂದ ಸ್ತುತಿಸಲ್ಪಡುವವನಾದ್ದರಿಂದ ಅಗ್ನಿಗೆ ನರಾಶಂಸನೆಂದು ಹೆಸರು ಎಂದು ಹೇಳಿರುವರು

ಪ್ರಿಯಂ—ಭಾಷ್ಯಕಾರರು **ದೇವಾನಾಂ ಪ್ರಿಯಂ** ದೇವತೆಗಳಿಗೆ ಪ್ರಿಯನಾದವನು ಎಂದೂ ಸ್ಕಂದ ಸ್ವಾಮಿಯು, **ಮನುಷ್ಯಾಣಾಂ ಪ್ರಿಯಂ** ಮನುಷ್ಯರಿಗೆ ಪ್ರಿಯನಾದವನು ಎಂದೂ ಅರ್ಥಮಾಡಿರುವರು. ಎರಡು ವಿಧವಾದ ಅರ್ಥವೂ ಸಮಂಜಸವಾಗಿರುವುದು-

ಮಧುಜಿಹ್ವಂ—**ಮಧುರಭಾಷಿಜಿಹ್ವೋಪೇತಂ**—ಮಧುರವಾಗಿ ಮಾತನಾಡುವ ನಾಲಗೆಯುಳ್ಳವನು **ಮಾಧುರ್ಯರಸಾಸ್ವಾದಕಜಿಹ್ವೋಪೇತಂ**—ಮಧುರವಾದ ರಸವನ್ನು (ಹವಿಸ್ಸು, ಆಜ್ಯ ಮುಂತಾದ ಹೋಮ ದ್ರವ್ಯಗಳು) ಆಸ್ವಾದನೆ ಮಾಡುವ ಜಿಹ್ವೆಯುಳ್ಳವನು ಎಂದು ಭಾಷ್ಯಕಾರರು ಅರ್ಥವಿವರಣೆ ಮಾಡಿರುವರು. ಸ್ಕಂದಸ್ವಾಮಿಯು—**ಮಧುಜಿಹ್ವಃ= ನಿತ್ಯಮೃಷ್ಟಾನಾಂ ಹವಿಷಾಂ ಭಕ್ಷಯಿತಾ**, ನಿತ್ಯವೂ ರುಚಿಯಾದ ಅಥವಾ ಮಧುರವಾದ ಹವಿಸ್ಸನ್ನು ಭಕ್ಷಿಸುವವನು; ಅಥವಾ **ಜಿಹ್ವೇತಿ ವಾಙ್ನಾಮ ಮಧ್ವೀ ಜಿಹ್ವಾ ಯಸ್ಯ ಸ ಮಧುಜಿಹ್ವಃ । ಹೋತೃತ್ವಾದ್ದ್ಯಗ್ನೇರ್ದೇವತಾನಾಂ ಸ್ತಾವಕತ್ವಾದಸ್ತಿ ಮಧುವಾಕ್ತ್ವಂ । ಸುಭಗವಚನ ಮಿತ್ಯರ್ಥಃ** ॥ ಎಂದರೆ ಜುಹ್ವಾ ಎಂದರೆ ವಾಕ್ಯ, ಮಾತು, ಆದುದರಿಂದ ಮಧುಜಿಹ್ವಃ ಎಂದರೆ ಒಳ್ಳೆಯ ಮಾತು ಗಳನ್ನಾಡುವವನು. ಕರ್ಣಾನಂದವನ್ನುಂಟುಮಾಡುವ ಮಾತನ್ನಾಡುವವನು. ದೇವತೆಗಳನ್ನು ಆಹ್ವಾನ ಮಾಡು ವಾಗ ಅವರನ್ನುದ್ದೇಶಿಸಿ ಮಧುರ ವಾಕ್ಯಗಳನ್ನಾಡುವವನಾದುದರಿಂದ ಮಧುಜಿಹ್ವ ಎಂದು ಅಗ್ನಿಗೆ ಹೆಸರು ಎಂದು ಭಾಷ್ಯಕಾರರು ಹೇಳಿರುವ ಎರಡು ವಿಧವಾದ ಅರ್ಥವಿವರಣೆಯನ್ನೇ ಪ್ರಕಾರಾಂತರವಾಗಿ ಹೇಳಿರು ವರು. Honey-tongoned, sweet-longoned ಮೊದಲಾದ ಅರ್ಥಗಳನ್ನು ಹೇಳಬಹುದು.

ಹವಿಷ್ಕೃತಂ—**ಹವಿಷೋ ನಿಷ್ಪಾದಂ, ಹವಿಷಾಂ ಕರ್ತಾರಂ** ಹವಿಸ್ಸನ್ನು ಮಾಡುವವನು, ಸಿದ್ಧ ಪಡಿಸುವವನು. ಎಂದರೆ ಹವಿಸ್ಸನ್ನು ಮಾಡುವಾಗ ಅಗ್ನಿಯ ಮೇಲಿಟ್ಟು ಪಾಕಮಾಡಬೇಕಾಗುವುದರಿಂದ ಅಗ್ನಿಯು ಹವಿಸ್ಸನ್ನು ಮಾಡುವವನೆಂದು ಹೇಳಿರುವುದು. Preparer of sacrifical food

॥ ವ್ಯಾಕರಣಪ್ರಕ್ರಿಯಾ ॥

ನರಾಶಂಸಂ—ನೃ+ ನಯೇ ಧಾತು **ಋದೋರಪ್** (ವಾ. ಸೂ. ೩-೩-೫೭) ಋಕಾರಾಂತ ಅಥವಾ ಉಕಾರಾಂತವಾದ ಧಾತುಗಳ ಮುಂದೆ ಭಾವಾರ್ಥದಲ್ಲಿಯೂ ಕರ್ತೃಭಿನ್ನವಾದ ಕಾರಕವನ್ನು ಹೇಳುವಾಗಲೂ ಅಪ್ ಪ್ರತ್ಯಯ ಬರುವುದು ಎಂಬುದರಿಂದ ಅಪ್ ಪ್ರತ್ಯಯವು ನೃ ಧಾತುವಿನ ಮುಂದೆ ಬರುವುದು. ನೃ+ಅ ಗಣವು

ರಪರವಾಗಿ ಬರುವುದು ನರ ಎಂದಾಗುವುದು. ಪ್ರತ್ಯಯವು ಪಿತ್ತಾದ್ದರಿಂದ ಅನುದಾತ್ತ. ನಕಾರದ ಮುಂದೆ ಇರುವ ಅಕಾರವು ಧಾತುಸ್ವರದಿಂದ ಉದಾತ್ತವಾಗಿಯೇ ನಿಲ್ಲುವುದು. ಶಂಸನ್ತಿ ಅಸ್ಮಿನ್ ಇತಿ ಶಂಸಃ ಹಲಶ್ಚ (ಪಾ. ಸೂ. ೩-೩-೧೨೧) ಹಲಂತವಾದ ಧಾತುವಿನ ಮುಂದೆ ಘಞ್ ಪ್ರತ್ಯಯ ಬರುವುದು ಎಂಬುದರಿಂದ ಅಧಿಕರಣಾರ್ಥದಲ್ಲಿ ಶಂಸ್ ಧಾತುವಿನ ಮುಂದೆ ಘಞ್ ಪ್ರತ್ಯಯ ಬರುವುದು. ಶಂಸ ಎಂಬುದು ಞ್ನಿತ್ಯಾದಿರ್ನಿತ್ಯಂ (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತ. ನರಾಣಾಂ ಶಂಸಃ ಎಂದು ಸಮಾಸ ಮಾಡಿದರೆ ಗತಿಕಾರಕೋಪಪದಾತ್ಕೃತ್ (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರವು ಪ್ರಾಪ್ತವಾದರೆ ಅದನ್ನು ಬಾಧಿಸಿ ಥಾಥಘಞ್ಕ್ತಾಜಬಿತ್ರಕಾಣಾಂ (ಪಾ.ಸೂ. ೬-೨-೧೪೪) ಎಂಬುದರಿಂದ ಉತ್ತರಪದಕ್ಕೆ ಅಂತೋದಾತ್ತವು ಪ್ರಾಪ್ತವಾಗುವುದು. ಇದನ್ನು ಬಾಧಿಸಿ ನರಾಶಂಸಶಬ್ದವು ವನಸ್ಪತ್ಯಾದಿಗಣದಲ್ಲಿ ಪಠಿತವಾಗಿರುವುದರಿಂದ ಉಭೇವನಸ್ಪತ್ಯಾದಿಷು ಯುಗಪತ್ (ಪಾ. ಸೂ. ೬-೨-೧೪೦) ಈ ಗಣಪಠಿತವಾದ ಶಬ್ದಗಳಲ್ಲಿರುವ ಪೂರ್ವೋತ್ತರಪದಗಳು ಯುಗಪತ್ ಪ್ರಕೃತಿಸ್ವರವನ್ನು ಹೊಂದುವುದು ಎಂಬುದರಿಂದ ಪೂರ್ವೋತ್ತರಪದಗಳೆರಡಕ್ಕೂ ಏಕಕಾಲದಲ್ಲಿ ಪ್ರಕೃತಿಸ್ವರ ಬರುವುದು. ಈ ವನಸ್ಪತ್ಯಾದಿಗಣದಲ್ಲಿ ನರಾಶಂಸ ಎಂದು ದೀರ್ಘವಾಗಿ ನರಶಬ್ದವನ್ನು ಪಾಠಮಾಡಿರುವುದರಿಂದ ನರಶಬ್ದಕ್ಕೆ ದೀರ್ಘ ಬರುವುದು. ಕೌಮುದೀಕಾರರೂ ಸಹ ಇದೇ ರೀತಿಯಲ್ಲಿ ನಿಪಾತನದಿಂದ ದೀರ್ಘವನ್ನು ಉಪಪಾದಿಸಿರುವರು. ಕೆಲವರು ಅನ್ಯೇಷಾಮಪಿ ದೃಶ್ಯತೇ (ಪಾ. ಸೂ. ೬-೩-೧೩೭) ಎಂಬುದರಿಂದ ಪೂರ್ವಪದಕ್ಕೆ ದೀರ್ಘ ಬರುವುದು ಎಂದು ಉಪಪಾದಿಸುವರು.

ಇಹ ಇದಮೋ ಹಃ (ಪಾ. ಸೂ. ೫-೩-೧೧) ಸರ್ತ್ಯಂತವಾದ ಇದಂ ಶಬ್ದದ ಮುಂದೆ ಹ ಪ್ರತ್ಯಯ ಬರುವುದು ಎಂಬುದರಿಂದ ಇದಂ ಙಾ ಎಂಬುದರ ಮುಂದೆ ಹ ಪ್ರತ್ಯಯ. ಙಾಗೆ ಲುಕ್. ಇದಮ ಇಶ್ (ಪಾ.ಸೂ. ೫-೩-೩) ಎಂಬುದರಿಂದ ಇದಂ ಶಬ್ದಕ್ಕೆ ಇಶ್ ಆದೇಶ ಬರುವುದು. ಇಹ ಎಂದಾಗುವುದು. ಪ್ರತ್ಯಯಸ್ವರ ಬರುವುದು

ಪ್ರಿಯಂ—ಪ್ರೀಣಾತಿ ಇತಿ ಪ್ರಿಯಃ ಇಗುಪಧಜ್ಞಾಪ್ರೀಕಿರಃ ಕಃ (ಪಾ.ಸೂ. ೩-೧-೧೩೫) ಇಗುಪಧಕವಾದ ಧಾತು. ಜ್ಞಾ ಅವಬೋಧನೇ, ಪ್ರೀಞ್ ತರ್ಪಣೇ, ಕ್ಯ ವಿಕ್ಷೇಪೇ ಈ ಧಾತುಗಳು ಇವುಗಳ ಮುಂದೆ ಕ ಪ್ರತ್ಯಯ ಬರುವುದು ಎಂಬುದರಿಂದ ಪ್ರೀಞ್ ತರ್ಪಣೇ ಎಂಬುದರ ಮುಂದೆ ಕ ಪ್ರತ್ಯಯ. ಪ್ರತ್ಯಯವು ಕಿತ್ತಾದ್ದರಿಂದ ಗುಣ ಬರುವುದಿಲ್ಲ. ಅಚಿಶ್ನುಧಾತುಭ್ರುವಾಂಯ್ವೋರಿಯಙುವಙೌ (ಪಾ. ಸೂ. ೬-೪-೭೭) ಎಂಬುದರಿಂದ ಇಯಙ್ ಆದೇಶ ಬಂದರೆ ಪ್ರಿಯ ಎಂದಾಗುವುದು. ಪ್ರತ್ಯಯಸ್ವರ ಬರುವುದು ಅಸ್ಮಿನ್ ಊಡಿದಂಪದಾದ್ಯಪ್ಪುನ್ಮ್ಯೈದ್ಯುಭ್ಯಃ (ಪಾ- ಸೂ. ೬-೧-೭೧) ವಿಭಕ್ತಿಯು ಉದಾತ್ತ.

ಹ್ವಯೇ—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ ಧಾತು. ಞಿತ್ತಾದ್ದರಿಂದ ಉಭಯಪದಿಯು. ಆತ್ಮನೇಪದ ಲಟ್ ಉತ್ತಮಪುರುಷ ಏಕವಚನ ಇಟ್. ಟಿತ ಆತ್ಮನೇ ಪದಾನಾಂ ಟೇರೇ (ಪಾ. ಸೂ. ೩-೪-೭೭) ಎಂಬುದರಿಂದ ಇಗೆ ಏಕಾರ. ಕರ್ತರಿಶಪ್ ಎಂಬುದರಿಂದ ಪರರೂಪ. ಹ್ವಯೇ ಎಂದಾಗುವುದು ತಿಙ್ಶಿತಿಙಃ ಎಂಬುದರಿಂದ ಸರ್ವಾನುದಾತ್ತ.

ಮಧುಜಿಹ್ವಂ—ಮಧುಶಬ್ದವು ಆದ್ಯುದಾತ್ತವೆಂದು ಹಿಂದಿನ ಮಂತ್ರದಲ್ಲಿ ಹೇಳಲಾಗಿರುವುದು. ಮಧು ಜಿಹ್ವಾ ಯಸ್ಯ ಸಃ ಎಂದು ಬಹುವ್ರೀಹಿಸಮಾಸವನ್ನು ಮಾಡಬೇಕು. ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ (ಪಾ. ಸೂ. ೬-೨-೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬಂದು ಅದೇ ಸ್ವರ ನಿಲ್ಲುವುದು.

ಹವಿಷ್ಮತೇಂ—ಹವಿಃಕರೋತಿ ಎಂದು ವಿಗ್ರಹ. ಹವಿಶ್ಶಬ್ದೋಪಪದಕವಾದ ಕೃಞ್ ಧಾತು ಪಿನ ಮುಂದೆ ಕ್ವಿಪ್‌ಚೆ (ಪಾ. ಸೂ. ೩-೨-೭೬) ಎಂಬುದರಿಂದ ಕ್ವಿಪ್ ಬರುವುದು. ಕೃದಂತವಾದ್ದರಿಂದ ಪ್ರಾತಿಪದಿಕಸಂಜ್ಞೆ ಬರುವುದು. ಸುಪ್ಪಿಗೆ ಲುಕ್ ಕ್ವಿಪ್ಪಿಗೆ ಲೋಪ. ಹವಿಸ್+ಕೃ ಎಂಬುದರ ಮುಂದೆ ಹ್ರಸ್ವಸ್ಯ ಪಿತಿಕೃತಿತುಕ್ (ಪಾ. ಸೂ. ೬-೧-೭೧) ಸಕಾರೋತ್ಸಂಜ್ಞಕವಾದ ಕೃತ್ತು ಪರದಲ್ಲಿರುವಾಗ ಹ್ರಸ್ವಾಂತವಾದ ಶಬ್ದಕ್ಕೆ ತುಕ್ ಆಗಮ ಬರುವುದು ಎಂಬುದರಿಂದ ತುಗಾಗಮವು. ಅದ್ಯಂತೌ ಟಕಿತೌ ಎಂಬ ಪರಿಭಾಷಾಪರ್ಯಾಲೋಚನೆಯಿಂದ ಅಂತಾವಯವನಾಗಿ ಬರುವುದು. ಹವಿಸ್+ಕೃತ್. ಸಕಾರಕ್ಕೆ ರುತ್ವ ವಿಸರ್ಗಗಳು. ಹವಿಃಕೃತ್ ಎಂದಿರುವಾಗ ನಿತ್ಯಂ ಸಮಾಸೇಽನುತ್ತರಪದೇಸ್ಥಸ್ಯ (ಪಾ.ಸೂ. ೮-೩-೪೫) ಎಂಬುದರಿಂದ ವಿಸರ್ಗಕ್ಕೆ ಷಕಾರ ಬರುವುದು. ಹವಿಷ್ಕೃತ್ ಎಂದಾಗುವುದು. ಗತಿಕಾರಕೋಪಪದಾತ್ಕೃತ್ (ಪಾ. ಸೂ. ೬-೨ ೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಅಂತೋದಾತ್ತ ಬರುವುದು. ಕೃತ್ ಎಂಬ ಉತ್ತರಪದವು ಧಾತುಸ್ವರದಿಂದ ಅಂತೋದಾತ್ತ. ಇದರ ಮುಂದೆ ಅಮ್ ಪ್ರತ್ಯಯ. ಅದು ಸುವ್ವಾದ್ದರಿಂದ ಅನುದಾತ್ತ. ನಂತರ ಉದಾತ್ತಾನುದಾತ್ತಸ್ಯ ಸ್ವರಿತಃ ಎಂಬುದರಿಂದ ಸ್ವರಿತಸ್ವರ ಬರುವುದು. ॥ ೩ ॥

॥ ಸಂಹಿತಾಪಾಠಃ ॥

ಅಗ್ನೇ ಸುಖತಮೇ ರಥೇ ದೇವಾ ಈಳಿತ ಆ ವಹ ।
ಅಸಿ ಹೋತಾ ಮನುರ್ಹಿತಃ ॥ ೪ ॥

॥ ಪದಪಾಠಃ ॥

ಅಗ್ನೇ । ಸುಖತಮೇ । ರಥೇ । ದೇವಾನ್ । ಈಳಿತಃ । ಆ । ವಹ ।
ಅಸಿ । ಹೋತಾ ।। ಮನುಃ । ಹಿತಃ ॥ ೪ ॥

॥ ಸಾಯಣಭಾಷ್ಯಂ ॥

ಇಟ್‌ಶಬ್ದಾಭಿಧೇಯ ಹೇ ಅಗ್ನೇ ಈಳಿತೋಽಸ್ಮಾಭಿಃ ಸ್ತುತಃ ಸನ್ ಸುಖತಮೇಽತಿಶಯೇನ ಸುಖಹೇತೌ ಕಸ್ಮಿಂಶ್ಚಿದ್ರಥೇ ದೇವಾನ್ ಸ್ಥಾಪಯಿತ್ವಾ ಕರ್ಮಭೂಮಾವಾ ವಹ। ಇಟ್‌ಶಬ್ದಾಭಿಧೇಯತ್ವಮತ್ರ ಸೂಚಯಿತುಮಿಳಿತ ಇತಿ ವಿಶೇಷಣಂ । ಮನುರ್ಹಿತೋ ಮನುನಾ ಮಂತ್ರೇಣ ಮನುಷ್ಯೇಣ ವಾ ಯಜಮಾನಾದಿರೂಪೇಣ ಹಿತೋಽತ್ರ ಸ್ಥಾಪಿತಸ್ತ್ವಂ ಹೋತಾ ದೇವಾನಾಮಾಹ್ವಾತಾಸಿ ॥ ಸುಖತಮೇ । ಸುಖಮಸ್ಮಿನ್ನಸ್ತೀತಿ ಮತುಪ್ । ತಸ್ಯ ಗುಣವಚನೇಭ್ಯೋ ಮತುಪೋ ಲುಗ್ವಕ್ತವ್ಯಃ । ಪಾ. ೫-೩-೬೪-೩ । ಇತಿ ಲುಕ್ । ಅತಿಶಯೇನ ಸುಖಃ ಸುಖತಮಃ । ತಮಪೋಽನುದಾತ್ತೌತ್ವಾತ್ಪ್ರಾತಿಪದಿಕ-

ಸ್ವರಃ । ರಥೇ । ರಮುಕ್ರೀಡಾಯಾಂ । ರಮಂತೇಽಸ್ಮಿನ್ನಿತಿ ರಥಃ । ಹನಿಕುಷಿನೀರಮಿಕಾಶಿಭ್ಯಃ ಕ್ಥನ್ । ಉ. ೨-೨ । ಇತಿ ಕ್ಥನ್ । ಏಕಾಚೋ ಉಪದೇಶೇಽನುದಾತ್ತಾತ್ । ಪಾ. ೭-೨-೧೦ । ಇತೀಟ್ಪ್ರತಿಷೇಧಃ । ಅನುದಾತ್ತೋಪದೇಶೇತ್ಯಾದಿನಾ । ಪಾ. ೬-೪-೩೭ । ಮಕಾರಲೋಪಃ । ನಿತ್ತ್ವಾದಾದ್ಯುದಾತ್ತತ್ವಂ । ಈಳಿತಃ । ಈಡ ಸ್ತುತೌ । ನಿಷ್ಠೇತಿ ಕ್ತಃ । ಇಡಾಗಮಃ । ತಸ್ಯಾಗಮಾ ಅನುದಾತ್ತಾ ಇತ್ಯನುದಾತ್ತೇಃ । ಪ್ರತ್ಯಯಸ್ವರಃ । ದೇವಾನಿತಿ ನಕಾರಸ್ಯ ಸಂಹಿತಾಯಾಂ ದೀರ್ಘಾದಟಿ ಸಮಾನಪಾದ ಇತಿ ರುತ್ವಂ । ಆತೋಽಟಿ ನಿತ್ಯಮಿತ್ಯಾಕಾರಸ್ಯಾನುನಾಸಿಕಭಾವಃ । ಭೋಭಗೋ ಇತ್ಯಾದಿನಾ ರೋರ್ಯತ್ವಂ । ತಸ್ಯ ಲೋಪಃ ಶಾಕಲ್ಯಸ್ಯೇತಿ ಲೋಪಃ । ತಸ್ಯಾಸಿದ್ಧತ್ವಾದಾದ್ಗುಣೋ ನ ಭವತಿ । ಅ । ನಿಪಾತತ್ವಾದಾದ್ಯುದಾತ್ತಃ । ಅಸಿ । ಅಸ ಭುವಿ । ಲಟಃ ಏಸ್ । ಆದಿಪ್ರಭೃತಿಭ್ಯಃ ಶಪ ಇತಿ ಶಪೋ ಲುಕ್ । ತಾಸಸ್ಯೋರ್ಲೋಪ ಇತಿ ಸಕಾರಸ್ಯ ಲೋಪಃ । ಹೋತಾ । ತಾಚ್ಛೀಲ್ಯೇ ತೃನ್ । ಸೌ ಋದುಶನ ಇತ್ಯಾದಿನಾ । ಪಾ. ೭-೧-೯೪ । ಅನಙ್ । ಋತ್ತ್ವಾದಂತಾದೇಶಃ ಆಸ್ಪೃನ್ನಿತ್ಯಾದಿನಾ । ಪಾ. ೬-೪-೧೧ । ಉಪಧಾದೀರ್ಘಃ । ಹಲ್ಙ್ಯಾದಿ ಲೋಪನಲೋಪೌ । ನಿತ್ತ್ವಾದಾದ್ಯುದಾತ್ತಃ । ಮನುರ್ಹಿತಃ । ಮನ್ಯತ ಇತಿ ಮನುಃ । ಮನ ಜ್ಞಾನೇ । ಶ್ಯಸ್ಯಸ್ಮಿಹಿತ್ರಸ್ಯಸಿವಸಿಹನಿಕ್ಲಿದಿಬಂಧಿಮನಿಭ್ಯಶ್ಚ । ಉ ೧-೧೦ । ಇತ್ಯುಪ್ರತ್ಯಯಃ । ತತ್ರ ನಿದಿತ್ಕನುವೃತ್ತೇರ್ನಿತ್ತ್ವಾದಾದ್ಯುದಾತ್ತಃ । ಹಿತಃ । ದಧಾತೇರ್ನಿಷ್ಠೇತಿ ಕರ್ಮಣಿ ಕ್ತಃ । ದಧಾತೇರ್ಹಿಃ । ಪಾ. ೭-೪-೪೨ । ಇತಿ ಹಿರಾದೇಶಃ । ಮನುನಾ ಹಿತ ಇತಿ ಸಮಾಸೇ ತೃತೀಯಾಯಾಃ ಸ್ಥಾನೇ ಸುಸಾಂ ಸುಲುಗಿತ್ಯಾದಿನಾ ಸ್ಯಿತ್ಯಾದೇಶಃ । ತಸ್ಯ ರುತ್ವಂ । ಲುಗಭಾವಶ್ಛಾಂದಸಃ । ತೃತೀಯಾ ಕರ್ಮಣೀತಿ ಪೂರ್ವಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

(ಹೇ) ಅಗ್ನೇ—ಇಟ್ ಎಂಬ ಹೆಸರಿನಿಂದ ಕರೆಯಲ್ಪಡುವ ಎಲೈ ಅಗ್ನಿಯೇ । ಈಳಿತಃ—ನಮ್ಮಿಂದ ಸ್ತುತಿಸಲ್ಪಡುವವನಾಗಿ । ದೇವಾನ್—ದೇವತೆಗಳನ್ನು । ಸುಖತನೋ-ಅತಿಶಯ ಸೌಖ್ಯಹೇತುವಾದ । ರಥೇ—ರಥದಲ್ಲಿ ಕುಳ್ಳಿರಿಸಿಕೊಂಡು । ಆ ವಹ—ಇಲ್ಲಿಗೆ ಕರೆದುಕೊಂಡು ಬಾ । (ಏಕೆಂದರೆ ನೀನು) ಮನುರ್ಹಿತಃ—ಮಂತ್ರದಿಂದ ಅಥವಾ ಯಜಮಾನ ರೂಪದಿಂದಿರುವ ಮನುಷ್ಯನಿಂದ ಸ್ಥಾಪಿಸಲ್ಪಟ್ಟ । ಹೋತಾ—ದೇವತೆಗಳನ್ನು ಆಹ್ವಾನ ಮಾಡುವವನಾಗಿ । ಅಸಿ—ಇರುವೆ ॥

॥ ಭಾವಾರ್ಥ ॥

ಎಲೈ ಅಗ್ನಿಯೇ ನಿನ್ನನ್ನು ಇಟ್ (ಇಳ) ಎಂದು ಕರೆಯುವರು. ಏತಕ್ಕೆಂದರೆ ನೀನು ನಮ್ಮಿಂದ (ಮನುಷ್ಯರಿಂದ) ಸ್ತುತಿಸಲ್ಪಡುವವನು. ಇಂತಹ ನೀನು ದೇವತೆಗಳನ್ನು ಸುಖವನ್ನುಂಟುಮಾಡುವ ರಥದಲ್ಲಿ ಕುಳ್ಳಿರಿಸಿಕೊಂಡು ಇಲ್ಲಿಗೆ ಕರೆದುಕೊಂಡು ಬಾ. ಏತಕ್ಕೆಂದರೆ ನಿನ್ನನ್ನು ಯಜಮಾನನು ದೇವತೆಗಳನ್ನು ಆಹ್ವಾನ ಮಾಡಲು ಹೋತೃವನ್ನಾಗಿ ಸ್ಥಾಪಿಸಿರುವನು.

English Translation

O Agni (called Ila) being praised (by men) conduct the gods hither in an easy-moving chariot ; for you are the invoker instituted by men.

॥ ವಿಶೇಷವಿಷಯಗಳು ॥

ಯಾಸ್ಕರ ಅರ್ಥವಿವರಣೆಯು—**ಈಳಃ । ಈಳ ಈಟ್ಟೇಃ ಸ್ತುತಿಕರ್ಮಣಃ ಇಂಧತೇರ್ವಾ ॥** ಈಳಃ ಅಥವಾ ಈಳಿತ ಎಂಬ ಶಬ್ದವು **ಈಡ ಸ್ತುತೌ** ಸ್ತೋತ್ರಮಾಡು ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಸ್ತುತಿ ಸಲ್ಲಿಸುವವನಾದುದರಿಂದ ಅಗ್ನಿಗೆ ಈಳ ಎಂದು ಹೆಸರು

ಸುಖತಮೇ—ಸುಖಮಸ್ಮಿನ್ನಸ್ತೀತಿ । ಅತಿಶಯೇನ ಸುಖಃ ಸುಖತಮಃ । ಅತಿಶಯೇನ ಸುಖ ಹೇತೌ (ಕಸ್ಮಿಂಶ್ಚಿದ್ಪ್ರಧೇ) ಎಂದರೆ ಅತಿಶಯವಾಗಿ ಸುಖವನ್ನುಂಟುಮಾಡುವ, **ಚಲಿಸುವಾಗ** ಅಲುಗಾಡದೆ ಇರುವ. ಕುಳಿತುಕೊಳ್ಳಲು ಮೆತ್ತನೆಯ ಆಸನಾದಿಗಳನ್ನು ಹಾಕಿ ಸಿದ್ಧಪಡಿಸಿರುವ, ಪ್ರಯಾಣ ಮಾಡಲು ಸುಖಪ್ರದವಾದ, easy-moving chariot ಎಂದರ್ಥವು.

ರಥೇ—ರಮು ಕ್ರೀಡಾಯಾಂ । ರಮಂತೇಽಸ್ಮಿನ್ನಿತಿ ರಥಃ । ಸುಖವಾಗಿ ಇದರಲ್ಲಿ ಕುಳಿತು ವಿಹರಿಸಬಹುದಾದ್ದರಿಂದ ಇದಕ್ಕೆ ರಥವೆಂದು ಹೆಸರು.

ಈಳಿತಃ—ಈಡ ಸ್ತುತೌ—ಸ್ತುತಿಸಲ್ಪಡುವ praised, adored etc.

ಹೋತಾ—ದೇವಾನಾಮಾಹ್ವಾತಾ—ದೇವತೆಗಳನ್ನು ಯಜ್ಞಭೂಮಿಗೆ ಕರೆತರುವವನು.

ಮನುರ್ಹಿತಃ--ಮನುನಾ ಮಂತ್ರೇಣ, ಯಜಮಾನಾದಿರೂಪೇಣ ಮನುಷ್ಯೇಣ ವಾ ಸ್ಥಾಪಿತಃ ॥ ಎಂದರೆ ಮಂತ್ರಪೂರ್ವಕವಾಗಿ ಅಥವಾ ಮನುಷ್ಯರೂಪದಿಂದಿರುವ ಯಜಮಾನನಿಂದ ಸ್ಥಾಪಿಸಲ್ಪಟ್ಟ (ಪ್ರಾರ್ಥಿಸಲ್ಪಟ್ಟ, ನಿಯಮಿಸಲ್ಪಟ್ಟ) ಎಂದರ್ಥವು. ಸ್ಕಂದಸ್ವಾಮಿಯು **ಪ್ರಜಾಪತಿನಾ ನಿಹಿತಃ** ಪ್ರಜಾಪತಿಯಿಂದ (ಬ್ರಹ್ಮನಿಂದ) ಸ್ಥಾಪಿಸಲ್ಪಟ್ಟ ಎಂಬ ಅರ್ಥವನ್ನು **ಮನುಷ್ಯೇಷು ನಿಹಿತಃ ಉಪಕಾರಕ ಇತ್ಯರ್ಥಃ** ಮನುಷ್ಯರಲ್ಲಿ (ದೇವತೆಗಳಿಂದ) ಇರಿಸಲ್ಪಟ್ಟವನು ಎಂದರೆ ಮನುಷ್ಯರಿಗೆ ಉಪಕಾರಮಾಡುವುದಕ್ಕಾಗಿ ಭೂಮಿಯಲ್ಲಿ ಮನುಷ್ಯರ ಮಧ್ಯದಲ್ಲಿ ಸ್ಥಾಪಿಸಲ್ಪಟ್ಟ, ಮನುಷ್ಯರಿಗೆ ಉಪಕಾರವನ್ನು ಮಾಡುವ ಎಂಬ ಅರ್ಥಗಳನ್ನು ಹೇಳಿರುವರು. Oldenberg ಎಂಬ ಪಾಶ್ಚಾತ್ಯಪಂಡಿತರು ಈ ಶಬ್ದಕ್ಕೆ "Instituted by Manus," not by men. ಎಂದು ಅರ್ಥವಿವರಣೆ ಮಾಡಿರುವನು.

॥ ವ್ಯಾಕರಣಪ್ರಕ್ರಿಯಾ ॥

ಸುಖತಮೇ—ಸುಖಮಸ್ಮಿನ್ ಅಸ್ತಿ ಎಂದು ವಿಗ್ರಹ, ಗುಣವಾಚಕವಾದ ಸುಖಶಬ್ದದ ಮುಂದೆ **ತೆದಸ್ಯಾಸ್ತ್ಯಸ್ಮಿನ್ನಿತಿಮತುಪ್** (ಪಾ. ಸೂ. ೫-೨-೯೪) ಎಂಬುದರಿಂದ ಮತುಪ್ ಪ್ರತ್ಯಯ. ಮತುಪ್ ಪ್ರತ್ಯಯಕ್ಕೆ **ಗುಣವಚನೇಭ್ಯೋಮತುಪೋ ಲುಗಿಷ್ಟಃ** (ಪಾ. ಸೂ.. ೫-೩-೯೪ ವಾ. ೩) ಎಂಬುದರಿಂದ ಮತುಪ್ ಪ್ರತ್ಯಯಕ್ಕೆ ಲುಕ್ ಬರುವುದು. ಈಗ ಗುಣವಾಚಕವಾದ ಸುಖಶಬ್ದದ ಮುಂದೆ ಅತಿಶಯಾರ್ಥದಲ್ಲಿ **ಅತಿಶಾಯನೇ ತಮಬಿಷ್ಠನೌ** (ಪಾ. ಸೂ. ೫-೩-೫೫) ಎಂಬುದರಿಂದ ತಮಪ್ ಬರುವುದು. ಸುಖತಮ ಎಂದಾಗುವುದು. ಮತುಪ್ಪು ಪಿತ್ತಾದ್ದರಿಂದ ಅನುದಾತ್ತ. ಪ್ರಾತಿಪದಿಕ ಸ್ವರವೇ ನಿಲ್ಲುವುದು.

रथे—रमन्त्येऽस्मिन् एन्दु विग्रह. रमुक्रीडायाम् धातु. इदर मुन्दे **हनिकुषिनीरमिकाशिभ्यः क्थन्** (उ. सू. ३-८३) हन हिंसागत्योः, कुष् निष्कर्षे, णीञ् प्रापणे, रमु क्रीडायाम् **काशृ दीप्तौ** ई धातुगळ मुन्दे क्थन् प्रत्ययु बरुवुदु एन्बुदरिन्द क्थन् बन्दरे रम्+थ, ईग थ एन्ब अर्धधातुकक्के **अर्धधातुकस्येड्वलादेः** (पा सू. ७-३-३८) एन्बुदरिन्द इडागवु प्राप्तवागुवुदु. रम् धातुवन्नु अनुदात्त धातुगळन्नु परिगणने माडुव कारिकेयल्लि लिप् लुप् वप् शप् स्वप् सेपि यभ् रभ् लभ् गम् नम् यमोऽरमिः एन्दु परिगणने माडिरुवरु. आद्दरिन्द रम् धातुवु अनुदात्तोपदेशवु, एकाच्कु वागियू इरुवुदु. आद्दरिन्द **एकाचो उपदेशेऽनुदात्तात्** (पा. सू. ७-३-८०) उपदेशदल्लि यावुदु अनुदात्तवू एकाच्कवू आगिरुवुदो आ धातुविन मुन्दे इरुव वलादियाद आर्धधातुकक्के इडागम बरुवुदिल्ल एन्बुदरिन्द इडागमक्के निषेध बरुवुदु नन्तर **अनुदात्तोपदेशवनतितनोत्यादीनामनुनासिकलोपोझलि क्ङिति** (पा. सू. ६-४-३७) कित्तु अथवा ङित्तु आद झलादिप्रत्ययु परदल्लिरुवाग अनुनासिकवन्नु कॊनेयल्लि हॊन्दिरुव अनुदात्तोपदेशवे मॊदलाद धातुगळ कॊनेय अनुनासिकक्कू वनधातुविन कॊनेय वर्णक्कू लोप बरुवुदु एन्बुदरिन्द मकारक्के लोप. रथ एन्दागुवुदु. प्रत्ययवु नित्तद्दरिन्द **ञ्नित्यादिर्नित्यम्** (पा. सू ६-१-१९७) एन्बुदरिन्द रथशब्दवु आद्युदात्तवागुवुदु.

ईळिते—ईड स्तुतौ धातु. इदर मुन्दे **निष्ठा** (पा. सू. ३-२-१०२) एन्बुदरिन्द क्त प्रत्ययु बरुवुदु. **आर्धधातुकस्येड्वलादेः** (पा.सू. ७-३-३८) एन्बुदरिन्द इडागमु. **अज्झ्यघ्यष्ठडकारस्य ळकारं बह्वृचा जगुः** एन्ब सम्प्रदायदिन्द डकारक्के ळकार, अथवा **द्व्योश्छन्दस्यस्यसरयोः** (प्रा. श.) एन्बुदरिन्द डकारक्के ळकार. इडागमदिन्द बन्दिरुव इकारवु अगमा अनुदात्तः एन्बुदरिन्द अनुदात्त. प्रत्ययस्वर नील्लुवुदु.

देवान् एन्बल्लि संहिताकालदल्लि **दीर्घादटि समानपादे** (पा.सू ८-३-९) एन्बुदरिन्द नकारक्के रु आदेश. **अतोऽटेरनित्यम्** (पा.सू. ८-३-३) एन्बुदरिन्द अकारक्के अनुनासिक. **भोभगोऽघोऽअपूर्वस्ययोऽशि** (पा. सू. ८-३-१७) एन्बुदरिन्द रुगे यआदेश. **लोपशाकल्यस्य** (पा. सू. ८-३-१९) एन्बुदरिन्द बन्द यकारलोपवु असिद्धवागुवुदु. आद्दरिन्द **आद्गुणः** (पा. सू. ६-१-८७) एन्बुदरिन्द गुण बरुवुदिल्ल.

अ—इदु निपात. आद्दरिन्द **निपाता आद्युदात्ताः** एन्बुदरिन्द अ एन्बुदु आद्युदात्त.

असि—अस भुवि धातु. इदर मुन्दे लट्. अदर स्थानदल्लि मध्यम पुरुष एकवचन सिप् **कर्तरिशप्** (पा. सू. ३-१-६८) एन्बुदरिन्द बन्द शप्गे **आदिर्ञिटुडवः** (पा सू. १-३-५८) एन्बुदरिन्द लुक्. **तासेर्लोपः** (पा सू. ८-४-३०) सकारादियाद प्रत्ययु परदल्लिरुवाग तास् प्रत्ययु, अस् धातु इवुगळकॊनेय वर्णक्के लोप बरुवुदु एन्बुदरिन्द अस् धातुसंबन्धि

ಯಾದ ಸಕಾರಕ್ಕೆ ಲೋಪ, ಅಸಿ ಎಂದಾಗುವುದು. ಪಾದಾದಿಯಲ್ಲಿರುವುದರಿಂದ **ತಿಙ್ಙತಿಙಃ** (ಪಾ.ಸೂ ೮-೧-೨೮) ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ. ಸಿಪ್ಪು ಪಿತ್ತಾದ್ದರಿಂದ ಅನುದಾತ್ತ. ಧಾತುಸ್ವರವೇ ನಿಲ್ಲುವುದು.

ಹೋತಾ— ಹ್ವೇಞ್ ಸ್ಪರ್ಧಾಯಾಂ ಶಬ್ದೇಚ ಧಾತು. ಇದರ ಮುಂದೆ **ಆಕ್ಷೇಸ್ತಚ್ಛೀಲತದ್ಧರ್ಮತತ್ಸಾಧುಕಾರಿಷು** (ಪಾ.ಸೂ.೩-೨-೧೩೪) ಎಂಬ ಅಧಿಕಾರದಲ್ಲಿರುವ **ತೃನ್** (ಪಾ.ಸೂ. ೩-೨-೧೩೫) ಎಂಬುದರಿಂದ ತೃನ್ ಪ್ರತ್ಯಯಬರುವುದು- **ಬಹುಲಂ ಛಂದಸಿ** (ಪಾ.ಸೂ- ೬-೧-೩೪) ಎಂಬುದರಿಂದ ಸಂಪ್ರಸಾರಣ. **ಸಂಪ್ರಸಾರಣಾಚ್ಚ** (ಪಾ. ಸೂ. ೬-೧-೧೦೮) ಎಂಬುದರಿಂದ ಪೂರ್ವರೂಪ. **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಹುಗೆ ಗುಣ. ಹೋತೃ ಎಂದಾಗುವುದು. ಇದರ ಮುಂದೆ ಪ್ರಥಮಾವಿಭಕ್ತಿ ಏಕವಚನಸಂಜ್ಞಕ ಸು ಪ್ರತ್ಯಯ, **ಋದುಶನಸ್ಪುರುದಂಸೋಽನೇಹಸಾಂಚ** (ಪಾ. ಸೂ. ೭-೧-೯೪) ಸಂಬುದ್ಧಿಭಿನ್ನವಾದ ಸು ಪ್ರತ್ಯಯ ಪರದಲ್ಲಿರುವಾಗ ಹ್ರಸ್ವಋವರ್ಣಾಂತ ಶಬ್ದಗಳು ಉಶನಸ್ ಪುರುದಂಸಸ್, ಅನೇಹಸ್, ಈ ಶಬ್ದಗಳನ್ನು ಕೊನೆಯಲ್ಲಿ ಹೊಂದಿರುವ ಶಬ್ದಗಳು, ಇವುಗಳಿಗೆ ಅನಙ್ ಆದೇಶ ಬರುವುದು ಎಂಬುದರಿಂದ ಬರುವ ಅನಙಾದೇಶವು ಅನೇಕಾಲ್ಶಾದರೂ ಙಿತ್ತಾದ್ದರಿಂದ **ಙಿಚ್ಚೆ** (ಪಾ. ಸೂ. ೧-೧-೫೩) ಙಕಾರೋತ್ಸಂಜ್ಞಕವಾದ ಆದೇಶವು ಅನೇಕಾಲ್ಶಾಗಿದ್ದರೂ ಯಾವುದಕ್ಕೆ ವಿಹಿತವಾಗಿರುವುದೋ ಅದರ ಅಂತ್ಯಕ್ಕೆ ಬರುವುದು ಎಂಬುದರಿಂದ, ಹೋತೃಶಬ್ದದ ಕೊನೆಯ ಋಕಾರಕ್ಕೆ ಬರುವುದು ಹೋತನ್+ಸ್. **ಅಪ್ತೃನ್ತೃಚ್ ಸ್ವಸೃ ನಪ್ತೃ ನೇಷ್ಟೃ ತ್ವಷ್ಟೃ ಕ್ಷತ್ತೃ ಹೋತೃ ಪೋತೃ ಪ್ರಶಾಸ್ತೃಣಾಮ್** (ಪಾ. ಸೂ. ೬-೪-೧೧) ಸಂಬುದ್ಧಿಭಿನ್ನವಾದ ಸರ್ವನಾಮಸ್ಥಾನಸಂಜ್ಞಕವಾದ ಪ್ರತ್ಯಯಗಳು ಪರದಲ್ಲಿರುವಾಗ ಅಪ್‌ಶಬ್ದ ತೃನ್ನಂತ, ತೃಜನ್ತ ಸ್ವಸೃ ಮೊದಲಾದ ಶಬ್ದಗಳು ಇವುಗಳ ಉಪಧಾಭೂತವಾದ ವರ್ಣಕ್ಕೆ ದೀರ್ಘ ಬರುವುದು ಎಂಬುದರಿಂದ ದೀರ್ಘಬಂದರೆ ಹೋತಾನ್+ಸ್. **ಹಲ್‌ಙ್ಯಾಭ್ಯೋ ದೀರ್ಘಾತ್ಸುತಿಸ್ಯಪೃಕ್ತಂ ಹಲ್** (ಪಾ.ಸೂ. ೬-೧-೬೮) ಎಂಬುದರಿಂದ ಸು ಪ್ರತ್ಯಯಕ್ಕೆ ಲೋಪ. **ನಲೋಪಃಸ್ಪ್ರಾತಿಪದಿಕಾಂತಸ್ಯ** (ಪಾ. ಸೂ. ೮-೨-೭) ಎಂಬುದರಿಂದ ನಕಾರಕ್ಕೆ ಲೋಪ. ಹೋತಾ ಎಂದು ರೂಪವು ಸಿದ್ಧವಾಗುವುದು. ಇದು ನಕಾರೋತ್ಸಂಜ್ಞಕವಾದ ಪ್ರತ್ಯಯವನ್ನು ಕೊನೆಯಲ್ಲಿ ಹೊಂದಿರುವುದರಿಂದ **ಞ್ನಿತ್ಯಾದಿರ್ನಿತ್ಯಮ್** (ಪಾ ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತವಾಗುವುದು.

ಮನುರ್ಹಿತಃ— ಮನ್ಯತೇ ಇತಿ ಮನುಃ — ಮನ ಜ್ಞಾನೇ ಧಾತು. ಇದರ ಮುಂದೆ **ಶ್ಯಾ ಸ್ಯೃ ಸ್ನಿಹಿ ತ್ರಪ್ಯಸಿ ವಸಿ ಹನಿ ಕ್ಲಿದಿ ಬಂಧಿ ಮನಿಭ್ಯಶ್ಚ** (ಉ. ಸೂ. ೧-೧೦) ಶ್ಯ ಹಿಂಸಾಯಾಂ, ಸ್ಯೃ ಶಬ್ದೋಪತಾಪಯೋಃ, ಸ್ನಿಹ ಉಪತಾಪೇ. ತ್ರಪೂಷ್ ಲಜ್ಜಾಯಾಂ, ಅಸು ಕ್ಷೇಪಣೇ. ವಸ ನಿವಾನೇ, ಹನ ಹಿಂಸಾಗತ್ಯೋಃ, ಕ್ಲಿದೂ ಆರ್ದ್ರೀಭಾವೇ, ಬಂಧ ಬಂಧನೇ, ಮನ ಜ್ಞಾನೇ, ಈ ಧಾತುಗಳ ಮುಂದೆ ಉ ಪ್ರತ್ಯಯ ಬರುವುದು. ಅದು ನಿತ್ ಆಗುವುದು. ಈ ಅರ್ಥವು **ಧಾನ್ಯೇನಿತ್** (ಉ. ಸೂ. ೧-೯) ಎಂಬುದರಿಂದ ನಿತ್ ಎಂಬುದನ್ನು ಅನುವೃತ್ತಿ ಮಾಡಿಕೊಳ್ಳುವುದರಿಂದ ಲಬ್ಧವಾಗುವುದು. ಈ ಸೂತ್ರದಿಂದ ಉ ಪ್ರತ್ಯಯ ಬರುವುದು. ನಿತ್ಸ್ವರ ಆದ್ಯುದ್ಧತ್ತ ಬರುವುದು. ಮನು ಎಂದು ಏರ್ಪಟ್ಟಿತು. ಹಿತಃ-ಡುಧಾಞ್ ಧಾರಣಪೋಷಣಯೋಃ, ಇದರ ಮುಂದೆ **ನಿಷ್ಠಾ** (ಪಾ. ಸೂ. ೩-೨-೧೦೨) ಎಂಬುದರಿಂದ ಕರ್ಮಣಿಕ್ತ ಪ್ರತ್ಯಯ. **ದಧಾತೇರ್ಹಿಃ** (ಪಾ.ಸೂ. ೭-೪-೪೨) ತಕಾರಾದಿಯೂ. ಕಕಾರೋತ್ಸಂಜ್ಞಕವೂ ಆದ ಪ್ರತ್ಯಯವು ಪರದಲ್ಲಿರುವಾಗ ಧಾ ಧಾತುವಿನ ಸ್ಥಾನದಲ್ಲಿ ಹಿ ಆದೇಶ ಬರುವುದು ಎಂಬುದರಿಂದ ಹಿ ಆದೇಶ ಬಂದರೆ ಹಿತ ಎಂದಾಗುವುದು. ನಂತರ ಮನುನಾ ಹಿತಃ

ಎಂದು ತೃತೀಯಾತತ್ಪುರುಷಸಮಾಸ. ಮನು-ಟಾ-ಹಿತಸು- ತೃತೀಯಾವಿಭಕ್ತಿ ಟಾ ಪ್ರತ್ಯಯಕ್ಕೆ **ಸುಪಾಂಸು-ಲುಕ್** (ಪಾ ಸೂ. ೭-೧-೩೯) ಎಂಬುದರಿಂದ ಸು ಆದೇಶ ಮನು+ಸ್+ಹಿತ. **ಸಸಜುಷೋರುಃ** (ಪಾ.ಸೂ. ೮-೨-೬೬) ಎಂಬುದರಿಂದ ರುತ್ವ ಮನುರ್ಹಿತ ಸ್ಥಾನಿವದ್ಭಾವದಿಂದ ರುವು ಯದ್ಯಪಿ ಸುಳ್ಳು ಆದ್ದರಿಂದ **ಸುಪೋ-ಧಾತು ಪ್ರಾತಿಪದಿಕಯೋಃ** (ಪಾ. ಸೂ. ೨-೪-೭೧) ಎಂಬುದರಿಂದ ಲುಕ್ ಪ್ರಾಪ್ತವಾಗುವುದು. ಆದರೂ ಛಂದಸ್ಸಿನಲ್ಲಿ **ಸರ್ವೇ ವಿಧಯೆಶ್ಛಂದಸಿ ವಿಕಲ್ಪ್ಯಂತೇ** (ಪರಿಭಾ ೩೫) ಎಂಬುದರಿಂದ ಎಲ್ಲಾ ವಿಧಿಗಳಿಗೂ ವಿಕಲ್ಪವಿರುವುದರಿಂದ ಇಲ್ಲಿ ಲುಕ್ ಬರುವುದಿಲ್ಲ. **ಸಮಾಸಸ್ಯ** (ಪಾ. ಸೂ. ೬-೧-೨೨೩) ಎಂಬುದರಿಂದ ಅಂತೋದಾತ್ತವು ಪ್ರಾಪ್ತವಾದರೆ ಅದನ್ನು ಬಾಧಿಸಿ **ತತ್ಪುರುಷೇತುಲ್ಯಾರ್ಥ** (ಪಾ ಸೂ ೬-೨-೨) ಎಂಬುದರಿಂದ ಪೂರ್ವಪದಪ್ರಕೃತಿಸ್ವರವೂ, ಇದನ್ನು ಬಾಧಿಸಿ **ಗತಿಕಾರಕೋಪಪದಾತ್ಕೃತ್** (ಪಾ ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರವೂ, ಇದನ್ನು ಬಾಧಿಸಿ **ಥಾಥಘಞ್ಙ್ಕ್ತಾಜಬಿತ್ರಕಾಣಾಂ** (ಪಾ. ಸೂ. ೬-೨-೧-೧೪೪) ಎಂಬುದರಿಂದ ಕಾರಕದ ಮುಂದೆ ಇರುವ ಕ್ತ ಪ್ರತ್ಯಯಾಂತಕ್ಕೆ ಅಂತೋದಾತ್ತವೂ ಪ್ರಾಪ್ತವಾದರೆ ಇದನ್ನೂ ಬಾಧಿಸಿ **ತೃತೀಯಾಕರ್ಮಣಿ** (ಪಾ. ಸೂ. ೬-೨-೪೮) ಕರ್ಮಣಿಕ್ತ ಪ್ರತ್ಯಯಾಂತವು ಪರದಲ್ಲಿರುವಾಗ ತೃತೀಯಾಂತವು ಪ್ರಕೃತಿಸ್ವರವನ್ನು ಹೊಂದುವುದು ಎಂಬುದರಿಂದ ಪೂರ್ವಪದಪ್ರಕೃತಿಸ್ವರವೇ ಬರುವುದು. ಆಂದರೆ ಮನುರ್ಹಿತ ಎಂಬಲ್ಲಿ ಮಕಾರದ ಮುಂದೆ ಇರುವ ಅಕಾರವೇ ಉದಾತ್ತವಾಗುವುದು. ಮಿಕ್ಕ ವರ್ಣಗಳಿಗೆ **ಅನುದಾತ್ತಂಪದಮೇಕವರ್ಜಂ** (ಪಾ ಸೂ ೬-೧-೧೫೮) ಎಂಬುದರಿಂದ ಅನುದಾತ್ತ ಬರುವುದು. ನಂತರ **ಉದಾತ್ತಾದನುದಾತ್ತಸ್ಯ ಸ್ವರಿತಃ** (ಪಾ ಸೂ. ೮-೪-೬೬) ಎಂಬುದರಿಂದ ಎಡನೆಯ ಸ್ವರವಾದ ಉಕಾರವು ಸ್ವರಿತ, ನಂತರ **ಸ್ವರಿತಾತ್ಸಂಹಿತಾಯಾಮನುದಾತ್ತಾನಾಮ್** (ಪಾ. ಸೂ. ೧-೨-೩೯) ಎಂಬುದರಿಂದ ಮಿಕ್ಕ ಸ್ವರಗಳು ಪ್ರಚಯಗಳಾಗುವುವು ॥ ೪ ॥

॥ ಸಂಹಿತಾಪಾಠಃ ॥

ಸ್ತೃಣೀತ ಬರ್ಹಿರಾನುಷಗ್ಘೃತಪೃಷ್ಠಂ ಮನೀಷಿಣಃ ।
ಯತ್ರಾಮೃತಸ್ಯ ಚಕ್ಷಣಂ ॥ ೫ ॥

॥ ಪದಪಾಠಃ ॥

ಸ್ತೃಣೀತ । ಬರ್ಹಿಃ । ಆನುಷಕ್ । ಘೃತ ಽ ಪೃಷ್ಠಂ । ಮನೀಷಿಣಃ ॥
ಯತ್ರ । ಅಮೃತಸ್ಯ । ಚಕ್ಷಣಂ ॥ ೫ ॥

॥ सायणभाष्यं ॥

हे मनीषिणोः बुद्धिमंत ऋत्विजोः बर्हिर्दर्भं स्तृणीतं । वेदेरुपर्यास्तृणीतेत्यादेशः । अथापि बर्हिर्नामकोऽग्निः सूच्यते । कीदृशं बर्हिरास्तरणीयं । अनुषक् अनुक्रमेण सक्तं परस्परं संबद्धं घृतपृष्ठं । घृतपूर्णानां स्रुचां बर्हिष्या सादितत्वाद्घृतं पृष्ठं उपरिभागे यस्य बर्हिषस्तद्घृतपृष्ठं । यत्र यस्मिन्नर्पिरिष्यमृतस्यामृतसमानस्य घृतस्य चक्षणं दर्शनं भवति । यद्वा । मरणरहितस्य देवस्य बर्हिर्नामकस्याग्नेर्दर्शनं भवति । तत्पर्हिः स्तृणीतेति पूर्वत्रान्वयः ॥ स्तृणीत । स्तृञ् आच्छादने । लोणित्यभ्यमपुरुषस्य बहुवचनं । लोटोलज्झित् । पा. ३-४-लज । तस्थस्थमिपां । पा. ३-४-१०१ । इति थस्य तादेशः । क्र्यादिभ्यः श्ना । ई हल्यघोः । पा. ६-४-११३ । इतीत्वं । ऋवर्ण्यच्छेति वक्तव्यं । का. ७-४-११ । इति णत्वं । स्नादीनां ह्रस्वः । पा. ८-३-७८ । इति धातोर्ह्रस्वत्वं । सति शिष्टस्वरबलीयस्त्वमन्यत्र विकरणेभ्यः । अतस्त्विज इव प्रत्ययस्वरेणोदात्तत्वं बर्हिः । ब्रूंहेर्नलोपश्च । उ. ३-११० । इतीस्प्रत्ययेनलोपः । प्रत्ययस्वरः । अनुषक् । आ समंतादनुषजतीत्यनुषक् । षंज संगे । धात्वादेः षः सः । क्विब्हेति क्विप् । अनिदितां । पा. ६-४-२४ । इति लोपः । आजनोरुपसर्गयोः प्राक्सदोयोगः । गतिसमासः । उपसर्गादसुनोतीत्यादिना षत्वं । घृतपृष्ठं । घृ क्षरणदीप्त्योः क्तः । निष्ठेति क्तः । प्रत्ययस्वरेणोदात्तः । घृतयुक्तं पृष्ठमस्येति बहुव्रीहौ पूर्वपदप्रकृतिस्वरत्वं । मनीषिणः । आमंत्रितनिघातः । अमृतस्य । न विद्यते मृतं मरणमस्मिन्नित्यमृतं । बहुव्रीहौ पूर्वपदप्रकृतिस्वरत्वं बाधित्वा नञ्सुभ्यामित्युत्तरपदांतोदात्तत्वे प्राप्ते नञोजरमरमित्रमृताः । पा. ६-३-११५ । इत्युत्तरपदाद्युदात्तत्वं । चक्षणं । चक्षिङ् व्यक्तायां वाचि । वाग्भिव्यक्तिर्वाचो धातुरिहाभिव्यक्तिमात्रं लक्षयति । ल्युट् च । पा. ३-३-११७ । इति भावे ल्युट् । योरनादेशः । तस्यार्धधातुकत्वाच्चक्षिङः ख्याञ् । पा. २-४-५४ । इति ख्याञादेशे प्राप्तेर्यसनयोश्च । पा. २-४-५४-१० । इति प्रतिषेधः ॥

॥ प्रतिपदार्थ ॥

(हे) मनीषिणः—ಬುದ್ಧಿವಂತರಾದ ಋತ್ವಿಜರೇ । अनुषक्—ಅನುಕ್ರಮವಾಗಿ ಒಂದನ್ನೊಂದು ಸ್ಪರ್ಶಮಾಡುವಂತೆ, ಎಂದರೆ ವತ್ತಾಗಿರುವಂತೆಯೂ । घृतपृष्ठं—ತುಪ್ಪದಿಂದ (ಅಥವಾ ನೀರಿನಿಂದ) ಚುಮುಕಿಸಲ್ಪಟ್ಟು ನೆನೆದಿರುವುದಾಗಿಯೂ । यत्र—ಯಾವ ದರ್ಭೆಗು ಮೇಲೆ । अमृतस्य—ಅಮೃತಸಮಾನವಾದ ಘೃತದ ಅಥವಾ ಮರಣರಹಿತನಾದ ಬರ್ಹಿರ್ನಾಮಕನಾದ ಅಗ್ನಿಯ । चक्षणं—ದರ್ಶನವುಂಟಾಗುವುದೋ ಅಂತಹ । बर्हिः—ಅಗ್ರಭಾಗವನ್ನು ಕತ್ತರಿಸಿದ ಕುಶದರ್ಭೆಯನ್ನು । स्तृणीत—(ವೇದಿಯ ಮೇಲೆ) ಹರಡಿರಿ ॥

॥ ಭಾವಾರ್ಥ ॥

ಎಲೈ ಬುದ್ಧಿವಂತರಾದ ಋತ್ವಿಜರೇ, ಬರ್ಹಿಃ ಎಂಬ ಅಗ್ನಿಯು ಬಂದು ಕೂಡುವುದಕ್ಕಾಗಿ ವೇದಿಯ ಮೇಲೆ ಆಸನಾರ್ಥವಾಗಿ ದರ್ಭೆಯನ್ನು ಹರಡಿರಿ. ಅದನ್ನು ಹರಡುವಾಗ ಮೆತ್ತಗಿರುವಂತೆ ಒತ್ತೊತ್ತಾಗಿರಬೇಕು. ಘೃತದಿಂದ ಅಥವಾ ನೀರಿನಿಂದ ನೆನೆಸಲ್ಪಟ್ಟು ಮೆತ್ತಗಿರಬೇಕು. ಅದರ ಮೇಲೆ ಇರುವ ಘೃತವು ಅಥವಾ ಬರ್ಹಿ ಎಂಬ ಅಗ್ನಿಯು ಎಲ್ಲರಿಗೂ ಕಾಣುವಂತಿರಬೇಕು. ಈ ರೀತಿಯಾಗಿ ವೇದಿಯ ಮೇಲೆ ಕುಶ ವೆಂಬ ದರ್ಭೆಗಳನ್ನು ಚೆನ್ನಾಗಿ ಹರಡಿರಿ.

English Translation.

Strew, learned priests, in due order, the sacrificial grass the back (or surface) of which is sprinkled with clarified butter (or water), that we may see the immortal ones thereon.

॥ ವಿಶೇಷವಿಷಯಗಳು ॥

ಈ ಋಕ್ಕಿನ ಅರ್ಥವು ಸ್ವಲ್ಪ ತೊಡಕಾಗಿರುವುದು. ಬರ್ಹಿಃ ಶಬ್ದಕ್ಕೆ ಯಾಸ್ಕರು—**ಬರ್ಹಿಃ ಪರಿಬರ್ಹಣಾತ್** ಎಂದು ವಿವರಣೆ ಮಾಡಿರುವರು. **ಬರ್ಹಿಃ ಪ್ರಸಿದ್ಧಮೇವ ಕುಶಮಯಮಂ ಯಜ್ಞಾಂಗಂ । ಪರಿಬರ್ಹಣಾತ್ ಪರಿಚ್ಛೇದನಾತ್ ಲೂನಂ ಹಿ ತದ್ಭವತಿ ।** ಬರ್ಹಿಯೆಂದರೆ ಯಜ್ಞದಲ್ಲಿ ಉಪಯೋಗಿಸುವ, ಅಗ್ರ ಭಾಗವನ್ನು ಕತ್ತರಿಸಿದ ಕುಶವೆಂಬ ದರ್ಭೆಯು. ಪರಿಬರ್ಹಣವೆಂದರೆ ಕತ್ತರಿಸುವುದು ಎಂದರ್ಥವು. ಎಂದರೆ ಅಗ್ರಭಾಗವನ್ನು ಕತ್ತರಿಸಿರುವುದರಿಂದ ಈ ವಿಧವಾದ ದರ್ಭೆಗೆ ಬರ್ಹಿಃ ಎಂದು ಹೆಸರು. ಅಥವಾ ಬರ್ಹಿಃ ಎಂದರೆ **ಪ್ರವೃಜ್ಯತೇ= ಪ್ರಚ್ಛಿದ್ಯತೇ, ಲೂಯತೇ ಅಥವಾ ಪ್ರವೃಜ್ಯತೇ= ಪ್ರಸ್ತೀರ್ಯತೇ ॥** ಕತ್ತರಿಸಲ್ಪಡುವುದರಿಂದ ಅಥವಾ ಹರಡಲ್ಪಡುವುದರಿಂದ ಇದಕ್ಕೆ ಬರ್ಹಿಃ ಎಂದು ಹೆಸರು ಎಂದು ಬೇಕಾದರೂ ಹೇಳಬಹುದು. ಈ ಅರ್ಥವನ್ನು ಸಮರ್ಥಿಸುವುದಕ್ಕಾಗಿ ಯಾಸ್ಕರು—

ಪ್ರಾಚೀನಂ ಬರ್ಹಿಃ ಪ್ರದಿಶಾ ಪೃಥಿವ್ಯಾ ವಸ್ತೋರಸ್ಯಾ ವೃಜ್ಯತೇ ಅಗ್ರೇ ಅಹ್ನಾಂ ॥
ವ್ಯಪ್ರಥತೇ ವಿತರಂ ವರೀಯೋ ದೇವೇಭ್ಯೋ ಅದಿತಯೇ ಸ್ಯೋನಂ ॥
(ಋ. ಸಂ. ೧೦-೧೧೦-೪)

ಎಂಬ ಋಕ್ಕನ್ನು ಉದಾಹರಿಸಿ, ಇದಕ್ಕೆ ವಿವರಣೆರೂಪವಾಗಿ—

ಪ್ರಾಚೀನಂ ಬರ್ಹಿಃ ಪ್ರದಿಶಾ ಪೃಥಿವ್ಯಾ ವಸನಾಯಾಸ್ಯಃ ಪ್ರವೃಜ್ಯತೇ ಅಗ್ರೇ ಅಹ್ನಾಂ ಬರ್ಹಿಃ ಪೂರ್ವಾಹ್ಣೇ ತದ್ವಿಪ್ರಥತೇ ವಿತರಂ ವಿಕೀರ್ಣತರಮಿತಿ ವಾ ವಿಸ್ತೀರ್ಣತರಮಿತಿ ವಾ ವರೀಯೋ ವರತರಮುರುತರಂ ವಾ ದೇವೇಭ್ಯಶ್ಚಾದಿತಯೇ ಚ ಸ್ಯೋನಂ । ಸ್ಯೋನಮಿತಿ ಸುಖನಾಮ ಸ್ಯತೇರವಸ್ಯನ್ತ್ಯೇತತ್ ಸೇವಿತವ್ಯಂ ಭವತೀತಿ ವಾ ॥

ಎಂದು ಹೇಳಿರುವರು. ಈ ವಿವರಣೆಯಿಂದ ಬರ್ಹಿಃ ಶಬ್ದಕ್ಕೆ ಚೆನ್ನಾಗಿಯೂ ವಿಸ್ತಾರವಾಗಿಯೂ ಹರಡಿರುವ ಕತ್ತರಿಸಿದ ದರ್ಭೆಗಳು ಎಂದರ್ಥವು. ಇಂತಹ ಕತ್ತರಿಸಿದ ದರ್ಭೆಗಳನ್ನು ಯಜ್ಞದಲ್ಲಿ ಎರಡು ಕಾರಣಗಳಿಗಾಗಿ ಹರಡಿ ಸಿದ್ಧಪಡಿಸುವರು. ಒಂದು-ಅಗ್ನಿಯ ಮುಂದೆ ಆಜ್ಯಪಾತ್ರೆ (ಘೃತಪಾತ್ರೆ) ಸ್ರುಕ್ ಇವುಗಳನ್ನಿಡುವುದ ಕ್ಕಾಗಿ ದರ್ಭೆಯನ್ನು ಹರಡುವರು. ಎರಡು-ಆಹ್ವಾನ ಮಾಡಲ್ಪಟ್ಟ ದೇವತೆಗಳು ಬಂದು ಕೂಡುವ ಆಸನಾ ರ್ಥವಾಗಿ. ದರ್ಭಾಸನದಲ್ಲಿ ಕುಳಿತು ಕರ್ಮಾನುಷ್ಠಾನ ಮಾಡುವುದು ಶ್ರೇಷ್ಠವೆಂದು ಪರಿಗಣಿಸಲ್ಪಟ್ಟಿದೆ. ಆದುದರಿಂದ ದೇವತೆಗಳು ಕುಳಿತುಕೊಳ್ಳುವುದಕ್ಕಾಗಿ ಯಜ್ಞವೇದಿಯ ಒಂದು ಭಾಗದಲ್ಲಿ ಬರ್ಹಿಃ ಎಂಬ ಕತ್ತರಿ ಸಿದ ದರ್ಭೆಗಳನ್ನು ಹರಡಿ ಆಸನವನ್ನು ಸಿದ್ಧಪಡಿಸುವುದು ಪದ್ಧತಿಯಾಗಿದೆ ಇದುವರೆಗೆ ಹೇಳಿದ ಸಮಿದ್ಧ. ತನೂನಪಾತ್, ನರಾಶಂಸ, ಇಳ, ಬರ್ಹಿಃ. ಈ ಐದೂ ಅಗ್ನಿಯ ವಿವಿಧರೂಪಗಳೆಂದು ಭಾವಿಸಲ್ಪಟ್ಟು ಈ ಹೆಸ ರುಗಳಿಂದ ಪಶುಯಾಗದಲ್ಲಿ ಹೋಮ ಮಾಡುವರು.

ಆನುಷಕ್—**ಆನುಕ್ರಮೇಣ ಸಕ್ತಂ ಪರಸ್ಪರಂ ಸಂಬದ್ಧಂ**—ದರ್ಭೆಗಳು ಒಂದಕ್ಕೊಂದು ತಗಲು ವಂತೆ, ಪರಸ್ಪರ ಸಂಬಂಧವಾಗಿ ಎಂದರೆ ವಿರಳವಾಗದಂತೆ ಒತ್ತೊತ್ತಾಗಿರುವ ಎಂದರ್ಥವು. ವಿರಳವಾಗಿರು ವಂತೆ ಸ್ವಲ್ಪ ದರ್ಭೆಗಳನ್ನು ಹಾಸಿದಲ್ಲಿ ಮೆತ್ತಗಿರುವುದಿಲ್ಲ. ದರ್ಭೆಗಳನ್ನು ಹೆಚ್ಚಾಗಿಯೂ ಒತ್ತೊತ್ತಾಗಿಯೂ ಹರಡಿದಲ್ಲಿ ಆಸನವು ಮೆತ್ತಗಿರುವುದು ಎಂದಭಿಪ್ರಾಯವು.

ಘೃತಪೃಷ್ಠಂ—**ಘೃ ಕ್ಷರಣದೀಪ್ತ್ಯೋಃ । ಘೃತಯುಕ್ತಂ ಪೃಷ್ಠಮಸ್ಯೇತಿ ।** ಘೃತದಿಂದ ಸವರಿದ ಅಥವಾ ನೆನೆದ, ಅಥವಾ ನೀರಿನಿಂದ ಚುಮುಕಿಸಲ್ಪಟ್ಟ. ಘೃತಶಬ್ದಕ್ಕೆ ನೀರು ಎಂದೂ ಅರ್ಥವಾಗುವುದು. (ನಿ. ೨-೨೪) ಒಣಗಿದ ದರ್ಭೆಯು ಮೃದುವಾಗುವುದಕ್ಕಾಗಿ ನೀರನ್ನು ಚುಮುಕಿಸುವುದು ಪದ್ಧತಿಯು.

ಅಮೃತಸ್ಯ—**ನ ವಿದ್ಯತೇ ಮೃತಂ ಮರಣಂ ಅಸ್ಮಿನ್ನಿತ್ಯಮೃತಂ ।** ಮರಣರಹಿತವಾದ ಎಂದರೆ ದೇವನಾದ ಅಗ್ನಿಯು. ಅಥವಾ ಅಮೃತಕ್ಕೆ ಸಮಾನವಾದ ಘೃತವು ಎಂದು ಭಾಷ್ಯಕಾರರು ಹೇಳಿರುವರು.

ಚಕ್ಷಣಂ—**ಚಕ್ಷಿಙ್ ವ್ಯಕ್ತಾಯಾಂ ವಾಚಿ ।** ವ್ಯಕ್ತವಾಗುವುದು, ಕಾಣಿಸುವುದು ಎಂದರ್ಥವು. **ಅಮೃತಸ್ಯ ಚಕ್ಷಣಂ** ಎಂಬ ಶಬ್ದಗಳಿಗೆ ಸರಿಯಾದ ಅರ್ಥವೇನೆಂಬುದು ಸ್ಪಷ್ಟವಾಗಿಲ್ಲ. ಋಷಿಯ ಆಶಯವೂ ಸರಿಯಾಗಿ ತಿಳಿಯುವಂತಿಲ್ಲ. ಈ ಶಬ್ದಗಳಿಗೆ ರೂಢಿಯಲ್ಲಿರುವ ಅರ್ಥವನ್ನು ನಾವು ಹೇಳಿದ್ದರೂ ಋಷಿಯ ಮನಸ್ಸಿನಲ್ಲಿದ್ದ ಮುಖ್ಯಾಭಿಪ್ರಾಯವು ವಿಶದವಾಗಿಲ್ಲ.

ವ್ಯಾಕರಣಪ್ರಕ್ರಿಯಾ

ಸ್ತೃಣೀತ—ಸ್ತೃ ಞ್ ಆಚ್ಛಾದನೇ, ಕ್ರ್ಯಾದಿಗಣಕ್ಕೆ ಸೇರಿದ ಧಾತು. ಲೋಟ್ ಪರಸ್ಮೈಪದ ಮಧ್ಯಮ ಪುರುಷ ಬಹುವಚನ ಥಪ್ರತ್ಯಯವು ಇದರ ಮುಂದೆ ಬರುವುದು. ಸ್ತೃ+ಥ **ಲೋಟೋಲಙ್ವತ್** (ಪಾ. ಸೂ. ೩-೪-೫೮) ಲೋಟ್ಪಗೆ ಲಙ್ಗೆ ಕಾರ್ಯ ಬರುವಂತೆ ಕಾರ್ಯವು ಬರುವುದು ಎಂದು ಹೇಳಿರುವುದರಿಂದ **ತಸ್ಥಸ್ಥ ಮಿಪಾಂ ತಾಂತಂತಾಮಃ** (ಪಾ. ಸೂ. ೩-೪-೧೦೧) ಋಕಾರೋತ್ಪಂಜ್ಞಕವಾದ ಲಕಾರಸ್ಥಾನದಲ್ಲಿ ಬಂದ ತಸ್, ಥಸ್, ಥ, ಮಿಪ್. ಈ ನಾಲ್ಕಕ್ಕೆ ಕ್ರಮವಾಗಿ ತಾಮ್, ತಮ್, ತ, ಅಮ್, ಎಂಬ ನಾಲ್ಕು ಆದೇಶಗಳು ಬರು ವುವು ಎಂಬುದರಿಂದ ಥ ಎಂಬುದಕ್ಕೆ ತ ಆದೇಶ. **ಕ್ರ್ಯಾದಿಭ್ಯಃ ಶ್ನಾ,** (ಪಾ.ಸೂ. ೩-೧-೮೧) ಕರ್ತೃರ್ಥಕವಾದ ಸಾರ್ವ

ಧಾತುಕಪ್ರತ್ಯಯವು ಪರದಲ್ಲಿರುವಾಗ ಕ್ಯಾದಿಗಣದ ಧಾತುಗಳ ಮುಂದೆ ಶ್ನಾ, ಎಂಬ ವಿಕರಣ ಪ್ರತ್ಯಯವು ಸ್ವಾರ್ಥದಲ್ಲಿ ಬರುವುದು ಎಂಬುದರಿಂದ ಶ್ನಾ, ಬಂದರೆ ಸ್ತೃ+ನಾ+ತ. **ಈಹಲ್ಯಘೋಃ** (ಪಾ. ಸೂ ೬-೪-೧೧೩) ಹಲಾದಿಯೂ ಕಿತ್ತು ಅಥವಾ **ಜಿತ್ಕೃ** ಆದ ಸಾರ್ವಧಾತುಕಪ್ರತ್ಯಯ ಪರದಲ್ಲಿದ್ದರೆ, ಶ್ನಾ ಪ್ರತ್ಯಯ, ಘು ಸಂಜ್ಞೆಯನ್ನು ಹೊಂದದೇ ಅಭ್ಯಸ್ತ ಸಂಜ್ಞೆಯನ್ನು ಹೊಂದಿರುವ ಧಾತು, ಇವುಗಳ ಆಕಾರಕ್ಕೆ ಈತ್ವ ಬರುವುದು ಎಂಬುದರಿಂದ ಶ್ನಾ ಪ್ರತ್ಯಯದ ಆಕಾರಕ್ಕೆ ಈತ್ವ ಬಂದರೆ ಸ್ತೃ+ನೀ+ತ **ಪ್ಸಾದೀನಾಂಹ್ರಸ್ವಃ** (ಪಾ. ಸೂ ೭-೩-೮೦) ಎಂಬುದರಿಂದ ಧಾತುವಿನ ಋಕಾರಕ್ಕೆ ಹ್ರಸ್ವ. **ಋವರ್ಣಾಚ್ಛೀತಿ ವಕ್ತವ್ಯಮ್** (ಪಾ ಸೂ. ೮ ೪-೧-೧) ಎಂಬುದರಿಂದ ನಕಾರಕ್ಕೆ ಣಕಾರ, ಸ್ತೃಣೀತ, ಎಂದಾಗುವುದು ಇದು ಪಾದದ ಆದಿಯಲ್ಲಿರುವುದರಿಂದ **ತಿಜ್ಞಿತಿಜಿಃ** ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ. ಯದ್ಯಪಿ ಶ್ನಾ ಪ್ರತ್ಯಯ ಸ್ವರವು ಸತಿಶಿಷ್ಟ ಅಂದರೆ ಕೊನೆಯಲ್ಲಿ ಬರತಕ್ಕದ್ದು. ಆದರೂ ಅದು ವಿಕರಣವಾದ್ದರಿಂದ ಸತಿಶಿಷ್ಟಸ್ವರಬಲೀಯಸ್ತ್ವನುನ್ಯತ್ರವಿಕರಣೇಭ್ಯಃ, ಎಂಬ ವಚನಾನುಸಾರವಾಗಿ ಅದು ಪ್ರಬಲವಾಗುವುದಿಲ್ಲ. ಆದ್ದರಿಂದ ತಿಙ್ ಪ್ರತ್ಯಯವಾದ ತ, ಎಂಬುದೇ ಪ್ರತ್ಯಯ ಸ್ವರದಿಂದ ಉದಾತ್ತವಾಗುವುದು.

ಬರ್ಹಿಃ— ಬೃಹಿ ವೃದ್ಧೌ, ಧಾತು. ಇದಿತ್ತು. ಆದ್ದರಿಂದ **ಇದಿತೋನುಮ್ಧಾತೋಃ** (ಪಾ. ಸೂ. ೭-೧-೫೮) ಎಂಬುದರಿಂದ ನುಮಾಗಮ. ಇದರ ಮುಂದೆ **ಬೃಂಹೇರ್ನಲೋಪಶ್ಚ** (ಉ ಸೂ- ೨--೨೬೭) ಬೃಹಿ ಧಾತುವಿನ ಮುಂದೆ ಇಸಿ ಪ್ರತ್ಯಯವೂ ನಕಾರಕ್ಕೆ ಲೋಪವೂ ಸಹ ಬರುವುದು ಎಂಬುದರಿಂದ ಇಸಿ ಪ್ರತ್ಯಯ ನಲೋಪಗಳು ಒಂದರೆ, ಬೃರ್+ಇಸ್, ಲಘೂಪಧಗುಣವು ರಪರವಾಗಿ ಬರುವುದು ಬರ್ಹಿಸ್ ಎಂದಾಗುವುದು. ಪ್ರತ್ಯಯ ಸ್ವರ ಬರುವುದು. ದ್ವಿತೀಯಾವಿಕವಚನದಲ್ಲಿ ಬರ್ಹಿಃ ಎಂದಾಗುವುದು.

ಅನುಷಕ್-ಅ ಸಮನ್ತಾತ್ ಅನುಜುಷತಿ ಇತಿ ಅನುಷಕ್. ಷಜ್ಞಿಸಂಗೇ, ಧಾತು. **ಧಾತ್ವಾದೇಃ ಷಃಸಃ** (ಪಾ ಸೂ. ೬-೧-೬೪) ಎಂಬುದರಿಂದ ಷಕಾರಕ್ಕೆ ಸಕಾರ, **ಕ್ವಿಪ್ಚ** (ಪಾ.ಸೂ ೩-೨,೭೬) ಎಂಬುದರಿಂದ ಕ್ವಿಪ್, ಕ್ವಿಪ್ ಪ್ರತ್ಯಯವು ಲುಪ್ತವಾಗುವುದು. **ಅನಿದಿತಾಂಹಲ ಉಪಧಾಯಾಃಕ್ಙಿತಿ** (ಪಾ ಸೂ. ೬-೪-೨೪) ಎಂಬುದರಿಂದ ನಕಾರಕ್ಕೆ ಲೋಪ, ಅಜ್, ಅನು ಎಂಬ ಉಪಸರ್ಗಗಳನ್ನು ಕ್ರಮವಾಗಿ ಪೂರ್ವಭಾಗದಲ್ಲಿ ಪ್ರಯೋಗಿಸುವುದು. ಅ+ಅನು+ಸಜ್ **ಕುಗತಿಪ್ರಾದಯಃ** (ಪಾ. ಸೂ. ೨೨-೧೮) ಎಂಬುದರಿಂದ ಗತಿಸಮಾಸ ಆ ಅನು ಎಂಬಲ್ಲಿ **ಸವರ್ಣದೀರ್ಘೆ. ಉಪಸರ್ಗಾತ್ಸುನೋತಿಸುವತಿ** (ಪಾ.ಸೂ ೮-೩-೬೫) ಎಂಬುದರಿಂದ ಸಕಾರಕ್ಕೆ ಷಕಾರ. ಇದರ ಮುಂದೆ ದ್ವಿತೀಯೈಕವಚನ ಅಮ್. ಅದಕ್ಕೆ **ಸ್ವಮೋರ್ನಪುಂಸಕಾತ್** (ಪಾ ಸೂ ೭-೧-೨೩) ನಪುಂಸಕ ಲಿಂಗವಾದ ಅಂಗದ ಮುಂದೆ ಇರುವ ಸು ಅಮ್ ಇವುಗಳಿಗೆ ಲುಕ್ ಬರುವುದು ಎಂಬುದರಿಂದ ಲುಕ್ **ಚೋಃ ಕಿ**ಕುಃ (ಪಾ. ಸೂ. ೮-೩-೩೦) ಎಂಬುದರಿಂದ ಕುತ್ವ, ಚವರ್ಗದ **ತೃತೀಯಾಕ್ಷರವಾದ** ಜಕಾರಕ್ಕೆ ಕವರ್ಗದ **ತೃತೀಯ** ಗ ಬರುವುದು. **ಝಲಾಂಜಶೋನ್ತೇ** (ಪಾ. ಸೂ. ೮-೩-೩೯) ಎಂಬುದರಿಂದ ಜಶ್ತ್ವ. **ವಾನೇಸಾನೇ** (ಪಾ. ಸೂ. ೮-೪-೫೬) ಎಂಬುದರಿಂದ ಚರ್ತ್ವ. ಗಕಾರಕ್ಕೆ ಕಕಾರ. ಅನುಷಕ್ ಎಂದಾಗುವುದು.

ಘೃತಪೃಷ್ಠಮ್— ಘೃ ಕ್ಷರಣದೀಪ್ತ್ಯೋಃ, ಧಾತು. ಇದರ ಮುಂದೆ **ನಿಷ್ಠಾ** (ಪಾ. ಸೂ. ೩-೨-೧೦೨) ಎಂಬುದರಿಂದ ಕ್ತ ಪ್ರತ್ಯಯ ಘೃತಶಬ್ದವು ಪ್ರತ್ಯಯ ಸ್ವರದಿಂದ ಅಂತೋದಾತ್ತ. ಘೃತಯುಕ್ತಂ ಪೃಷ್ಠಂ ಅಸ್ಯ ಎಂದು ಬಹುವ್ರೀಹಿ. **ಬಹುವ್ರೀಹೌಪ್ರಕೃತ್ಯಾಪೂರ್ವಪದಮ್** (ಪಾ. ಸೂ ೬-೩-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುವುದು.

ಮನೀಷಿಣಃ— ಅಮಂತ್ರಿತ. ಆದ್ದರಿಂದ ಆಸ್ವಮಿಕಾನುದಾತ್ತ ಬರುವುದು.

ಅಮೃತಸ್ಯ—ನ ವಿದ್ಯತೇ ಮೃತಂ-ಮರಣಂ ಅಸ್ಮಿನ್ ಎಂದು ವಿಗ್ರಹ. ಅಮೃತಶಬ್ದವು ಬಹುವ್ರೀಹಿ ಸಮಾಸವಾದ್ದರಿಂದ ಪೂರ್ವಪದಪ್ರಕೃತಿಸ್ವರವು ಪ್ರಾಪ್ತವಾಗುವುದು ಅದನ್ನು ಬಾಧಿಸಿ **ನಞ್‌ಸುಭ್ಯಾಮ್** (ಪಾ. ಸೂ. ೬-೨-೧೭೨) ಬಹುವ್ರೀಹಿಸಮಾಸದಲ್ಲಿ **ನಞ್**, ಸು ಇವುಗಳ ಮುಂದೆ ಇರುವ ಉತ್ತರಪದವು ಅಂತೋದಾತ್ತವಾಗುತ್ತೆ ಎಂದು ಅಂತೋದಾತ್ತವು ಪ್ರಾಪ್ತವಾಗುವುದು. ಇದನ್ನೂ ಬಾಧಿಸಿ **ನಞೋ ಜರಮರಮಿತ್ರಮೃತಾಃ** (ಪಾ, ಸೂ. ೬-೨-೧೧೬) ಬಹುವ್ರೀಹಿಸಮಾಸದಲ್ಲಿ ನಞ್ ನ ಮುಂದೆ ಇರುವ ಜರ, ಮರ, ಮಿತ್ರ ಮೃತ, ಈ ಶಬ್ದಗಳು ಆದ್ಯುದಾತ್ತಗಳಾಗುವುವು ಎಂಬುದರಿಂದ ಉತ್ತರಪದಕ್ಕೆ ಆದ್ಯುದಾತ್ತ ಬರುವುದು.

ಚಿಕ್ಷಣಮ್—ಚಕ್ಷಿಙ್ ವ್ಯಕ್ತಾಯಾಂ ವಾಚಿ, ಧಾತು, ಇದು ವಾಕ್ಯನ ಅಭಿವ್ಯಕ್ತಿಯನ್ನು ಹೇಳ ತಕ್ಕದ್ದು. ಇಲ್ಲಿ ಲಕ್ಷಣೆಯಿಂದ ಅಭಿವ್ಯಕ್ತಿಯನ್ನು ಮಾತ್ರ ಬೋಧಿಸುವುದು. ಇದರ ಮುಂದೆ **ಲ್ಯುಟ್ ಚ**, (ಪಾ. ಸೂ. ೩-೩-೧೧೫) ಧಾತುವಿನ ಮುಂದೆ ನಪುಂಸಕ ಲಿಂಗದಲ್ಲಿ ಭಾವಾರ್ಥದಲ್ಲಿ ಲ್ಯುಟ್ ಪ್ರತ್ಯಯಕ್ತ ಪ್ರತ್ಯಯಗಳು ಬರುವುವು ಎಂಬುದರಿಂದ ಲ್ಯುಟ್, ಬರುವುದು ಲಕಾರಟಕಾರಗಳು ಇತ್ಸಂಜ್ಞೆಯನ್ನು ಹೊಂದಿ ಲುಪ್ತ ಗಳಾಗುವುವು. ಯು, ಗೆ **ಯುವೋರನಾಕೌ** (ಪಾ ಸೂ. ೭-೧-೧ ಎಂಬುದರಿಂದ ಅನ ಆದೇಶ. ಚಕ್ಷ್+ಅನ, ಅನ ಎಂಬುದು ಆರ್ಧಧಾತುಕ. ಆದ್ದರಿಂದ **ಚಕ್ಷಿಙ್ ಖ್ಯಾಞ್** (ಪಾ. ಸೂ. ೨-೪-೫೪) ಆರ್ಧಧಾತುಕ ಪ್ರತ್ಯಯವು ಪರದಲ್ಲಿಗುವಾಗ ಚಕ್ಷಿಙ್ ಧಾತುವಿಗೆ ಖ್ಯಾಞ್ ಆದೇಶ ಬರುವುದು ಎಂಬುದರಿಂದ ಖ್ಯಾಞ್ ಆದೇಶಕ್ಕೆ ಯದ್ಯಪಿ ಪ್ರಾಪ್ತಿ ಇರುವುದು ಆದರೂ **ಅಸನಯೋರ್ಲ್ಲು** (ಪಾ. ಸೂ. ೭-೪-೫೪ ವಾ ೧೦) ಅಸ್, ಅನ ಪ್ರತ್ಯಯಗಳು ಪರದಲ್ಲಿದ್ದರೆ ಚಕ್ಷಿಙ್ ಧಾತುವಿಗೆ ಖ್ಯಾಞ್ ಆದೇಶ ಬರುವುದಿಲ್ಲ ಎಂಬುದರಿಂದ ಪ್ರಷೇಧ ಬರುವುದರಿಂದ ಖ್ಯಾಞಾದೇಶ ಬರುವುದಿಲ್ಲ. ಇಲ್ಲಿ ಕೈಯ್ಯಟದಲ್ಲಿ **ಅದುದಾತ್ತೇತಶ್ಚ ಹಲಾದೇಃ** (ಪಾ. ಸೂ. ೩-೨-೧೫೯) ಎಂಬುದರಿಂದ ಯುಚ್ ಪ್ರತ್ಯಯವನ್ನು ಹೇಳಿ ವಿಚಕ್ಷಣಃ ಎಂಬುದನ್ನು ವ್ಯುತ್ಪಾದನೆ ಮಾಡಿರುವರು. ಈ ಪಕ್ಷದಲ್ಲಿ ವಿಚಕ್ಷಣ ಎಂಬುದು ಅಂತೋದಾತ್ತ. ಲ್ಯುಟ್ ಪಕ್ಷದಲ್ಲಿ ಲಿತಿ, ಎಂಬುದರಿಂದ ಆದುದ್ಯಾತ್ತ ಬಂದು **ಶೇಷಾನುದಾತ್ತಸ್ವರದಿಂದ** ಮಿಕ್ಕ ಎರಡು ಆಕಾರಗಳೂ ಅನುದಾತ್ತಗಳು, ನಂತರ ಉದಾತ್ತಾದನುದಾತ್ತಸ್ಯ ಸ್ವರಿತಃ ಎಂಬುದರಿಂದ ಎರಡನೇ ಆಕಾರ ಸ್ವರಿತ, ಸ್ವರಿತಾತ್ಸಂಹಿತಾಯಾಮನುದಾತ್ತಾನಾಂ, ಎಂಬುದರಿಂದ ಮೂರನೇ ಆಕಾರ ಪ್ರಚಯವಾಗುವುದು. ಈ ರೀತಿ ಸ್ವರಸಿದ್ಧಿಗಾಗಿಯೇ ಇಲ್ಲಿ ಲ್ಯುಟ್ ವರ್ಣಿತವಾಗಿರುವುದು.

॥ ಸಂಹಿತಾಪಾಠಃ ॥

ವಿ ಶ್ರಯಂತಾಮೃತಾವೃಧೋ ದ್ವಾರೋ ದೇವೀರಸಶ್ಚತಃ ।
ಅದ್ಯಾ ನೂನಂ ಚ ಯಷ್ಟವೇ ॥ ೬ ॥

॥ ಪದಪಾಠಃ ॥

ವಿ । ಶ್ರಯಂತಾಂ । ಋತಸ್ಯ ವೃಧಃ । ದ್ವಾರಃ । ದೇವೀಃ । ಅಸಶ್ಚತಃ ॥
ಅದ್ಯ । ನೂನಂ । ಚ । ಯಷ್ಟವೇ ॥ ೬ ॥

॥ ಸಾಯಣಭಾಷ್ಯಂ ॥

ದ್ವಾರೋ ಯಜ್ಞಶಾಲಾದ್ವಾರಾಣಿ ವಿ ಶ್ರಯಂತಾಂ । ಕಪಾಟೋದ್ಘಾಟನೇನ ವಿವ್ರಿಯಂತಾಂ । ಕೀದೃಶ್ಯಃ। ಋತಾವೃಧ ಋತಸ್ಯ ಸತ್ಯಸ್ಯ ಯಜ್ಞಸ್ಯ ವಾ ವರ್ಧಯಿತ್ರ್ಯೋ ದೇವೀರ್ದ್ಯೋತಮಾನಾ ಅಸಶ್ಚತೋಽಸಶ್ಚಂತ್ಯ ಉದ್ಘಾಟನೇನ ಪ್ರವೇಷ್ಟೃಪುರುಷಸಂಗರಹಿತಾಃ । ಯದ್ವಾ । ಅಸಶ್ಚತಃ ಪ್ರವೇಷ್ಟೃಪುರುಷರಹಿತಾನ್ಯಜ್ಞಗೃಹಾಂಸ್ತತ್ಪುರುಷಪ್ರವೇಶಾಯ ದ್ವಾರಾಭಿಮಾನಿನ್ಯ ಏತತ್ಸಂಜ್ಞಿಕಾ ಅಗ್ನಿವಿಶೇಷಮೂರ್ತಯೋ ವಿ ಶ್ರಯಂತಾಂ। ವಿಶೇಷೇಣ ಸೇವಂತಾಂ । ದ್ವಾರಸೇವಯಾ ತತ್ರ ಪುರುಷಪ್ರವೇಶೇನ ವಾ ಕಿಂ ಪ್ರಯೋಜನಮಿತಿ ತದುಚ್ಯತೇ । ಅದ್ಯಾಸ್ಮಿನ್ದಿನೇ ನೂನಮವಶ್ಯಂ ಯಷ್ಟವೇ ಯಷ್ಟುಂ । ಚಕಾರಾದ್ದಿನಾಂತರೇಷ್ವಪೀತಿ ದ್ರಷ್ಟವ್ಯಂ ॥ ಋತಾವೃಧಃ । ಋತಂ ವರ್ಧಯಂತೀತ್ಯರ್ಥೇ ವೃಧೇರಂತರ್ಭಾವಿತಣ್ಯರ್ಥಾತ್ಕ್ವಿಪ್ಪ್ರತ್ಯಯೇ ಕ್ವಿಪ್ । ಉಪಪದಸಮಾಸಃ । ಅನ್ಯೇಷಾಮಪಿ ದೃಶ್ಯತ ಇತಿ ಪೂರ್ವಪದಸ್ಯ ದೀರ್ಘತ್ವಂ। ವೃಧಿರ್ಧಾತುಸ್ವರೇಣೋದಾತ್ತಃ । ಸಮಾಸೇಕ್ಕದುತ್ತರಪದಪ್ರಕೃತಿಸ್ವರತ್ವೇನ ಸ ಏವ ಶಿಷ್ಯತೇ। ದೇವೀಃ । ವಾ ಛಂದಸೀತಿ ಪೂರ್ವಸವರ್ಣದೀರ್ಘತ್ವಂ । ದೇವಶಬ್ದಾತ್ಪ್ರಚಾದ್ಯಜಂತಾತ್ಸ್ತ್ರಿಯಾಂ ಗಾದಾಖ್ಯಾಯಾಂ । ಪಾ. ೪-೧-೪೬ । ಇತಿ ಙೀಷ್ । ಪ್ರತ್ಯಯಸ್ವರೇಣೋದಾತ್ತಃ । ವಿಭಕ್ತ್ಯಾ ಸಹೈಕಾದೇಶ ಉದಾತ್ತೇನೋದಾತ್ತ ಇತ್ಯುದಾತ್ತಃ । ಅಸಶ್ಚತಃ । ಗ್ಲುನ್ಮ್ಲು ಷಸ್ಜ ಗತೌ । ಜಕಾರಸ್ಯ ವ್ಯತ್ಯಯೇನ ಚಕಾರಃ । ಲಟಃ ಶತ್ರಾದೇಶಃ । ದ್ವಾರಾಭಾವೇ ನ ವಿದ್ಯಂತೇ ಸಶ್ಚಂತೋ ಗಚ್ಛಂತೋ ಯೇಷು ಪ್ರಾಗ್ವಂಶಾದಿಷು ತಾನಸಶ್ಚತಃ । ಅದ್ಯ । ಸದ್ಯಃಪರುದಿತ್ಯಾದಿನಾ ದ್ಯಪ್ರತ್ಯಯಾಂತೋ ನಿಪಾತಿತಃ । ತದ್ಧಿತಶ್ಚಾಸರ್ವವಿಭಕ್ತಿರಿತ್ಯವ್ಯಯಸಂಜ್ಞಕತ್ವಾತ್ಪ್ರಸ್ಯಾ ವಿಭಕ್ತೇರ್ಲುಕ್ । ಪ್ರತ್ಯಯಸ್ವರೇಣಾಂತೋದಾತ್ತಃ । ಸಂಹಿತಾಯಾಮನ್ಯೇಷಾಮಪಿ ದೃಶ್ಯತ ಇತಿ ದೀರ್ಘತ್ವಂ । ನೂನಂ । ಏವಮಾದೀನಾಮಂತ ಇತ್ಯಂತೋದಾತ್ತತ್ವಂ । ಯಷ್ಟವೇ । ಯಜೇಸ್ತುಮರ್ಥೇ ಸೇಸೇನಿತ್ಯಾದಿನಾ । ಪಾ. ೩-೪-೯ । ತವೇನ್ಪ್ರತ್ಯಯಃ । ವ್ಯಶ್ಚಾದಿನಾ ಷತ್ವಂ । ನಿತ್ತ್ವಾದಾದ್ಯುದಾತ್ತಃ ॥

॥ ಪ್ರತಿಪದಾರ್ಥ ॥

ಅದ್ಯ—ಈ ದಿವಸದಲ್ಲಿ (ಈಗಲೇ) । ನೂನಂ—ಅವಶ್ಯಕವಾಗಿ । ಯಷ್ಟವೇ ಚ—(ನಾವು) ಯಜ್ಞ ಮಾಡುವುದಕ್ಕಾಗಿ । ಋತಾವೃಧಃ—ಯಜ್ಞದ ವೃದ್ಧಿಗೆ ಎಂದರೆ ಯಜ್ಞವು ಮುಂದೆ ನಡೆಯುವುದಕ್ಕೆ ಸಹಾಯ ಭೂತವಾದ । ದೇವೀಃ—ಪ್ರಕಾಶಿಸುವ (ಬೆಳಕನ್ನುಂಟುಮಾಡುವ) । ಅಸಶ್ಚತಃ—ಸಂಗಡಹಿತವಾದ ಎಂದರೆ ಇದುವರೆಗೆ ಯಾರೂ ಪ್ರವೇಶಿಸದಿರುವ । ದ್ವಾರಃ—ಯಜ್ಞಶಾಲೆಯ ದ್ವಾರಗಳು (ಬಾಗಿಲುಗಳು) । ವಿಶ್ರಯಂತಾಂ—ತೆರೆಯಲ್ಪಡಲಿ ॥

॥ ಭಾವಾರ್ಥ ॥

ಯಾಗಶಾಲೆಯ ದ್ವಾರಗಳು ಚೆನ್ನಾಗಿ ಬೆಳಕನ್ನುಂಟುಮಾಡಿ ಯಜ್ಞವು ನಡೆಯುವುದಕ್ಕೆ ಸಹಾಯ ಭೂತವಾಗಿರುವವು. ಇದುವರೆಗೆ (ಎಂದರೆ ಈದಿನ) ಈ ಯಜ್ಞಶಾಲೆಯನ್ನು ಯಾರೂ ಪ್ರವೇಶಿಸಿಲ್ಲ. ಇಂತಹ ಯಜ್ಞಶಾಲೆಯ ಬಾಗಿಲುಗಳು ನಾವು ಮಾಡುವ ಯಜ್ಞಕ್ಕಾಗಿ ಈಗಲೇ ತಡವಿಲ್ಲದೆ ತೆರೆಯಲ್ಪಡಲಿ.

English Translation.

Let the divine doors, the promoters of the sacred rite, hitherto unentered be set open; for certainly to-day the sacrifice is to be performed.

॥ ವಿಶೇಷವಿಷಯಗಳು ॥

ಯಜ್ಞಶಾಲೆಯನ್ನು ಪ್ರವೇಶಮಾಡುವಾಗ ಯಜಮಾನಾದಿ ಋತ್ವಿಜರು ಯಜ್ಞಶಾಲೆಯ ದ್ವಾರಗಳನ್ನು ಪ್ರಾರ್ಥಿಸುವರು. ಈ ಸೂಕ್ತದಲ್ಲಿರುವ ಋಕ್ಕುಗಳೆಲ್ಲವೂ ಸಮಿಧ್ಕರ್ಮಕ್ಕಾಗಿ ಅಗ್ನಿಪರವಾಗಿಯೇ ಇದ್ದರೂ ಈ ಋಕ್ಕಿನಲ್ಲಿ **ದೇವೀರ್ದ್ವಾರಃ** ಎಂದರೆ ದ್ವಾರದೇವತೆಗಳನ್ನು (ದ್ವಾರಾಭಿಮಾನಿ ದೇವತೆಗಳನ್ನು) ಪ್ರಾರ್ಥಿಸುವಾಗಿದೆ ಯಾಸ್ಕರ ವಿವರಣೆಯು—

ದ್ವಾರಃ । ದ್ವಾರೋ ಜವತೇರ್ವಾ ದ್ರವತೇರ್ವಾ ವಾರಯತೇರ್ವಾ ॥
ಅಗ್ನಿರಿತಿ ಶಾಕಪೂಣಿಃ ॥

ದ್ವಾರವೆಂದರೆ ಪ್ರವೇಶಿಸುವಷ್ಟಿ, ಒಳಕ್ಕೆ ಹೋಗುವುದಕ್ಕೆ ಅಥವಾ ಒಳಗೆ ಹೋಗುವುದನ್ನು ತಪ್ಪಿಸುವುದಕ್ಕೆ ಇರುವುದರಿಂದ ಇದಕ್ಕೆ ದ್ವಾರವೆಂದು ಹೆಸರು. ದ್ವಾರವೆಂದರೆ ಅಗ್ನಿಯೆಂದು ಶಾಕಪೂಣಿಯ ಮತವು ಎಂದಿರುವುದು. ಹೋಮವನ್ನು ಮಾಡುವ ಹೋಮಗೃಹವು ಅಗ್ನಿಯ ಸ್ವರೂಪವೆಂದೂ ಆದುದರಿಂದ ಅದರ ದ್ವಾರಗಳೂ ಅಗ್ನಿಯ ವಿಶೇಷ ರೂಪಗಳೆಂದು (ಅಗ್ನಿವಿಶೇಷಮೂರ್ತಯಃ) ಹೇಳುವರು. The doors of the chamber in which the oblation is offered, said to be personifications of Agni.

ವಿಶ್ರಯಂತಾಂ—ಕಪಾಟೋದ್ಘಾಟನೇನ ವಿವ್ರಿಯಂತಾಂ । ವಿವೃತಾ ಭವಂತು । ಬಾಗಿಲುಗಳು ಚೆನ್ನಾಗಿ ತೆರೆಯಲ್ಪಡಲಿ.

ಋತಾವೃಧಃ—ಋತಂ (ಯಜ್ಞಂ) ವರ್ಧಯಂತೀತಿ ಋತಾವೃಧಃ ಯಜ್ಞವು ಮುಂದುವರೆಯಲು ಸಹಾಯಭೂತವಾದ ಎಂದರೆ ಯಾಗಶಾಲಾಶ್ರವೇಶದಿಂದ ಯಜ್ಞದಲ್ಲಿ ಮಾಡಬೇಕಾಗಿರುವ ಹೋಮಾದಿಗಳನ್ನು ನಡೆಸಲು ಸಹಾಯವಾಗುವುದು ಎಂದಭಿಪ್ರಾಯವು.

ದೇವೀಃ—ದ್ಯೋತಮಾನಾಃ ಪ್ರಕಾಶಮಾನವಾದ, ಚೆನ್ನಾಗಿ ಬೆಳಕನ್ನುಂಟುಮಾಡುವ. ಬಾಗಿಲನ್ನು ತೆರೆದರೆ ಚೆನ್ನಾಗಿ ಬೆಳಕುಂಟಾಗುವುದು ಸಹಜವೇ ಆಗಿದೆ ಇಲ್ಲಿ **ದೇವೀಃ** ಎಂಬ ಶಬ್ದವನ್ನು **ದ್ವಾರಃ** ಎಂಬ ಶಬ್ದಕ್ಕೆ ವಿಶೇಷಣ ಪದವನ್ನಾಗಿ ಭಾವಿಸಿ ಅರ್ಥಮಾಡಿದರೂ **ದೇವೀರ್ದ್ವಾರಃ** ಎಂಬ ಎರಡು ಶಬ್ದಗಳೂ ದ್ವಾರಾಭಿಮಾನಿ ದೇವತೆಗಳು ಎಂಬ ಅರ್ಥದಲ್ಲಿಯೂ ಉಪಯೋಗಿಸಲ್ಪಡಬಹುದು. ಏಕೆಂದರೆ ಅನುಕ್ರಮಣಿಕೆಯಲ್ಲಿ ಈ ಋಕ್ಕಿನ ದೇವತೆಯು **ದೇವೀರ್ದ್ವಾರಃ** ಎಂದು ನಿರ್ದೇಶಿಸಲ್ಪಟ್ಟಿದೆ.

ಅಸಶ್ಚತಃ—ದ್ವಾರಾಭಾವೇ **ಸಶ್ಚಂತೋ ಗಚ್ಛಂತೋ ಯೇಷು**। **ನ ಸಶ್ಚತಃ ಅಸಶ್ಚತಃ**—ಪ್ರವೇಶರಹಿತವಾದ, ಯಾರೂ ಪ್ರವೇಶಿಸಿಲ್ಲದ, ಅಥವಾ ಪ್ರವೇಶಿಸುವವರನ್ನು ತಡೆಯುವ ಇತ್ಯಾದ್ಯರ್ಥಗಳನ್ನು ಹೇಳಬಹುದು.

ಅದ್ಯ—ಈಗ, ಈದಿನ, ನಾವು ಯಜ್ಞವಾಡುತ್ತಿರುವ ಈ **ಕಾಲ** ಅಂತ್ಯಾಕ್ಷರತ್ವ ಛಂದಸ್ಸಿನ **ಅನುಕೂಲಕ್ಕಾಗಿ** ಸಂಹಿತಾಪಾಠದಲ್ಲಿ ದೀರ್ಘವಾಗಿರುವುದು.

ನೂನಂ—ಅವಶ್ಯಕವಾಗಿ, ನಿಶ್ಚಯವಾಗಿ certainly, without fail.

ಚಿತ್—ಈ ಶಬ್ದಕ್ಕೆ ಇಲ್ಲಿ ಹೆಚ್ಚು ಅರ್ಥವೇನೂ ಇಲ್ಲ. ಒಂದು ವಿಧದಲ್ಲಿ ನೋಡಿದರೆ **ಈ** ಋಕ್ಕಿನಲ್ಲಿ **ಈ** ಶಬ್ದದ ಅವಶ್ಯಕತೆಯೇ ಇರುವುದಿಲ್ಲ. ಭಾಷ್ಯಕಾರರು ಇದಕ್ಕೆ **ದಿನಾಂತರೇಷ್ವಪಿ**—ಇತರ ದಿನಗಳಲ್ಲಿಯೂ ಎಂದರ್ಥ ಹೇಳಿರುವರು.

॥ ವ್ಯಾಕರಣಪ್ರಕ್ರಿಯಾ ॥

ಋತಾವೃಧಃ—ಋತಂ ವರ್ಧಯಂತಿ ಎಂಬ ಅರ್ಥದಲ್ಲಿ ಅಂತರ್ಭಾವಿತ ಣಿಚ್ಪ್ರತ್ಯಯಾರ್ಥಕವಾದ ವೃಧ್ ಧಾತುವಿನ ಮುಂದೆ **ಕ್ವಿಪ್‌ಚೌ** (ಪಾ. ಸೂ. ೩-೨-೭೬) ಎಂಬುದರಿಂದ ಕ್ವಿಪ್ ಬರುವುದು. **ಉಪಪದಮತಿಙ್** (ಪಾ. ಸೂ. ೨-೨-೧೯) ಉಪಪದವಾದ ಸುಬಂತವು ಸಮರ್ಥವಾದ ಶಬ್ದದೊಂದಿಗೆ ನಿತ್ಯವಾಗಿ ಸಮಾಸವನ್ನು ಹೊಂದುವುದು ಎಂಬುದರಿಂದ ಸಮಾಸ, **ಅನ್ಯೇಷಾಮಪಿ ದೃಶ್ಯತೇ** (ಪಾ ಸೂ. ೬-೩-೧೩೭) ಎಂಬುದರಿಂದ ಪೂರ್ವಪದಕ್ಕೆ ದೀರ್ಘ. ವೃಧ್ ಎಂಬುದು ಧಾತುಸ್ವರದಿಂದ ಉದಾತ್ತಸಮಾಸ ಬಂದಮೇಲೆ **ಗತಿಕಾರಕೋಪಪದಾತ್ಕೃತ್** (ಪಾ ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬಂದು ಅದೇ ಸ್ವರನೇ ನಿಲ್ಲುವುದನ್ನು ಪ್ರಥಮಾಬಹುವಚನಾಂತ.

ದೇವಿನೀಃ—ದೇವಶಬ್ದವು ದಿವು ಕ್ರೀಡಾದೌ, ಧಾತುವಿನ ಮುಂದೆ **ನಂದಿಗ್ರಹಿಪಚಾದಿಭ್ಯೋಲ್ಯುಣಿನ್ಯೇಚಃ** (ವಾ. ಸೂ. ೩-೧-೧೩೪) ಎಂಬುದರಿಂದ ಅಚ್ಪ್ರತ್ಯಯ ಬಂದು ನಿಷ್ಪನ್ನವಾಗಿರುವುದು. ಆದ್ದರಿಂದ ಚಿತಃ, ಎಂಬುದರಿಂದ ಅಂತೋದಾತ್ತ, ಇವರ ಮುಂದೆ **ಪುಂಯೋಗಾದಾಖ್ಯಾಯಾಂ** (ಪಾ. ಸೂ ೪-೧-೪೮) ಪುಲ್ಲಿಂಗದಲ್ಲಿ ಪ್ರಸಿದ್ಧವಾದ ಶಬ್ದವು ಪುರುಷಸಂಬಂಧದಿಂದ ಲಕ್ಷಣಾಮೂಲಕವಾಗಿ ಸ್ತ್ರೀಲಿಂಗದಲ್ಲಿದ್ದರೆ ಅಂತಹ ಶಬ್ದದ ಮುಂದೆ ಙೀಷ್ ಬರುವುದು. (ಪುರುಷಸಂಬಂಧವು ದಾಂಪತ್ಯರೂಪವಾದುದು. ಅಥವಾ ಜನ ಜನಕಭಾವವು ವಿವಕ್ಷಿತವು) ಎಂಬುದರಿಂದ ದೇವಸ್ಯ ಸ್ತ್ರೀ ಎಂದು ವಿವಕ್ಷಿಸಿದಾಗ ಙೀಷ್, ಬರುವುದು. ದೇವ+ಈ **ಯಸ್ಯೇತಿಚ** (ಪಾ. ಸೂ. ೬-೪.೧೪೮) ಎಂಬುದರಿಂದ ಅಕಾರಕ್ಕೆ ಲೋಪ. ಈಕಾರವು ಪ್ರತ್ಯಯಸ್ವರದಿಂದ ಉದಾತ್ತ. ಇದರ ಮುಂದೆ ಪ್ರಥಮಾಬಹುವಚನ ಜಸ್ ಪ್ರತ್ಯಯ **ಪ್ರಥಮಯೋಃ ಪೂರ್ವಸವರ್ಣಃ** (ಪಾ ಸೂ ೬-೧-೧೦೨) ಎಂಬುದರಿಂದ ಪೂರ್ವಸವರ್ಣದೀರ್ಘ ಪ್ರಾಪ್ತವಾದರೆ **ದೀರ್ಘಾಜ್ಜಸಿಚಿ** (ಪಾ. ಸೂ. ೬-೧-೧೦೫) ಎಂಬುದರಿಂದ ಅವಕ್ಕೆ ನಿಷೇಧವು ಬರುವುದು. ಆದರೂ **ವಾಛಂದಸಿ** (ಪಾ. ಸೂ. ೩-೪-೪೮ ಎಂಬುದರಿಂದ ಪೂರ್ವಸವರ್ಣದೀರ್ಘವು ಏಕಾದೇಶವಾಗಿ ಬರುವುದು. ಈ ಏಕಾದೇಶವು **ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮.೨-೫) ಎಂಬುದರಿಂದ ಉದಾತ್ತ.

ಅಸಶ್ಚತಃ—ಗ್ಲು ಜ್ಞಾ ಪಸ್ಜ ಗತೌ ಧಾತು. ಜಕಾರಕ್ಕೆ ವ್ಯತ್ಯಯದಿಂದ ಚಕಾರ **ಧಾತ್ವಾದೇಃ ಷಃ ಸಃ** (ಪಾ. ಸೂ. ೬-೧-೬೪) ಎಂಬುದರಿಂದ ಷಕಾರಕ್ಕೆ ಸಕಾರ. ಇದರ ಮುಂದೆ ಲಟ್ ಆದರ ಸ್ಥಾನದಲ್ಲಿ **ಲಟಃ ಶತೃ** (ಪಾ. ಸೂ. ೩-೨-೧೨೪) ಎಂಬುದರಿಂದ ಶತೃ ಆದೇಶ. ಶಪ್ ವಿಕರಣ. ಸಸ್ಜ್+ಅ+ಅತ್ **ಅತೋಗುಣೇ** ಎಂಬುದರಿಂದ ಪರರೂಪ ಸಸ್ಜತ್. ದ್ವಾರಾಭಾವೇನ ನ ವಿದ್ಯಂತೇ ಸಶ್ಚಂತೋ ಗಚ್ಛಂತಃ ಯೇಷು ಪ್ರಾಗ್ವಂಶಾದಿಷು, ತಾನ್ ಎಂದು ವಿಗ್ರಹ. ದ್ವಿತೀಯಾಬಹುವಚನ ಶಸ್ ಬಂದು **ಅಸಶ್ಚತಃ** ಎಂದಾಗುವುದು.

ಅದ್ಯ—**ಸದ್ಯಃ ಪರುತ್** (ಪಾ. ಸೂ ೫-೩-೨೨) ಇತ್ಯಾದಿ ಸೂತ್ರದಿಂದ, ಸ್ಪ್ರತ್ಯಯಾಂತವಾಗಿ ನಿಪಾತಿಸಲ್ಪಟ್ಟಿರುವುದು. **ತದ್ದಿತೇಶ್ಚಾ ಸರ್ವವಿಭಕ್ತೇಃ** (ಪಾ. ಸೂ. ೧-೧-೩೮) ಎಂಬುದರಿಂದ ಅವ್ಯಯಸಂಜ್ಞೆ ಇರುವುದರಿಂದ ಇದರ ಮುಂದೆ ಬರುವ ಸಪ್ತಮಿಯಾ ಏಕವಚನ ಙಿಪ್ರತ್ಯಯಕ್ಕೆ **ಅವ್ಯಯಾದಾಪ್ ಸುಪಃ** (ಪಾ. ಸೂ. ೨-೪-೮೨) ಎಂಬುದರಿಂದ ಲುಕ್ ಬರುವುದು. ಇದು ಪ್ರತ್ಯಯಸ್ವರದಿಂದ ಅಂತೋದಾತ್ತ. ಸಂಹಿತಾಕಾಲದಲ್ಲಿ **ಅನ್ಯೇಷಾಮಪಿ ದೃಶ್ಯತೇ** (ಪಾ. ಸೂ ೬-೩-೧೩೭) ಎಂಬುದರಿಂದ ದೀರ್ಘ.

ನೂನಂ—**ಏವಾದೀನಾಮನ್ತಃ** (ಪಾ. ಸೂ. ೮೨) ಎಂಬುದರಿಂದ ಅಂತೋದಾತ್ತ.

ಯಷ್ಟವೇ—ಯಜದೇವಪೂಜಾದೌ ಧಾತು. ಇದರ ಮುಂದೆ **ತುಮರ್ಥೇಸೇಸೇನಸೇ ಅಸೇನ್ಕ್ಸೇ ಕಸೇನಧ್ಯೈ ಅಧ್ಯೈನ್ ಕಧ್ಯೈ ಕಧ್ಯೈನ್ ಶಧ್ಯೈ ಶಧ್ಯೈನ್ ತವೈ ತವೇಙ್ ತವೇನಃ** (ಪಾ.ಸೂ. ೩-೪-೯) ಎಂಬುದರಿಂದ ತುಮುನ್ ಪ್ರತ್ಯಯಾರ್ಥದಲ್ಲಿ ತವೇನ್ಪ್ರತ್ಯಯ ಯಜ್+ತವೇ **ವ್ರಶ್ಚಭ್ರಸ್ಜಸೃಜಮೃಜಯಜರಾಜಭ್ರಾಜಚ್ಛಶಾಂ ಷಃ** (ಪಾ. ಸೂ. ೮-೨-೩೬) ಎಂಬುದರಿಂದ ಜಕಾರಕ್ಕೆ ಷಕಾರ. **ಷ್ಟುನಾಷ್ಟುಃ** (ಪಾ. ಸೂ. ೮-೪-೪೧) ಎಂಬುದರಿಂದ ಷ್ಟುತ್ವ ಬಂದು ತಕಾರಕ್ಕೆ ಟಕಾರ ಬರುವುದು. ಯಷ್ಟವೇ ಎಂದಾಗುವುದು ಪ್ರತ್ಯಯವು ನಿತ್ತಾದ್ದರಿಂದ ನಿತ್ಸ್ವರದಿಂದ ಇದು ಆದ್ಯುದಾತ್ತ. ॥ ೬ ॥

॥ ಸಂಹಿತಾಪಾಠಃ ॥

ನಕ್ತೋಷಾಸಾ ಸುಪೇಶಸಾಸ್ಮಿನ್ಯಜ್ಞ ಉಪ ಹ್ವಯೇ ।
ಇದಂ ನೋ ಬರ್ಹಿರಾಸದೇ ॥ ೭ ॥

॥ ಪದಪಾಠಃ ॥

ನಕ್ತೋಷಸಾ । ಸು ೩ ಪೇಶಸಾ । ಅಸ್ಮಿನ್ । ಯಜ್ಞೇ । ಉಪ । ಹ್ವಯೇ ॥
ಇದಂ । ನಃ । ಬರ್ಹಿಃ । ಆ ೩ ಸದೇ ॥ ೭ ॥

॥ सायणभाष्यं ॥

नक्तशब्द उषःशब्दश्च लोके कालविशेषवाचिनौ । इह तु तत्कालाभिमानि वह्नि मूर्तिद्वयीये प्रयुज्येते । नक्तोषासा नक्तोषसौ नामिके वह्निमूर्ती अस्मिन्वर्तमाने यज्ञकर्मण्यूप ह्वयेते । आह्वयामि । किमर्थं । सुपेशसा शोभनरूपयुक्ते ॥ नक्तं चोषाश्च नक्तोषसा । द्वितीयेद्विवचनस्य सुसाम सुलोगित्याकारः मलोपश्च उपधादीर्घश्छान्दसः । देवताद्वन्द्वे च । पा. ६.३.२५ । इति पूर्वोत्तरपदयोरुभयोर्गतेः प्रकृतिस्वरत्वं । सुपेशसा । शोभनं पेशो रूपं ययोस्ते । पूर्ववदाकारः । वेतोऽशब्दो नञ्विषयोत्वादाद्युदात्तः । बहुव्रीहौ नञ्सुभ्याम्-मित्युत्तरपदादन्तोदात्तत्वस्यापवादत्वेनाद्युदात्तं द्व्यच्छन्दसि । पा. ६.२.१७९ । इत्युत्तरपदाद्युदात्तत्वं । अस्मिन् । ऊडिदमित्यादिना विभक्तिरुदात्ता । आसदे । षद्लृ विशरणगत्यवसादनेषु । धात्वादेः षः सः । आङ्पूर्वादसात्संपनाद्भ्यो भावे क्विप् । पा. ३.३.९०९. ९ । प्रादिसमासः । कृदुत्तरपदप्रकृतिस्वरत्वं ॥

॥ प्रतिपदार्थ ॥

नः—नमस्कार । इदं—ईवेदियल्लि हरडिरुव । बर्हिः—असनार्थवागि सिद्धपडिसिरुव दर्भेयन्नु । आसदे—हॊंदुवुदक्कोस्कर (नावु हाकिरुव दर्भेयल्लि कुळितुकॊळ्ळुवुदक्काग) । सुपेशसा—शोभन (उत्तमवाद) रूपगळिंद । नक्तोषासा—रात्रि मत्तु उषःकालग ळॆंब (अथवा ई कालगळ अभिमानिगळाद) देवतॆगळन्नु । अस्मिन् यज्ञे—नडॆयुत्तिरुव ई यज्ञदल्लि । ऊप ह्वयामहे—आह्वान माडुवॆनु.

॥ भावार्थ ॥

नावु माडुत्तिरुव यज्ञदल्लि वेदियु मेलॆ दर्भॆगळन्नु हरडि असनवन्नु सिद्दपडि सिरुवॆवु. ई असनद मेलॆ बंदु कुळितुकॊळ्ळुवुदक्काग उत्तमवाद रूपगळिंद शोभिसुव (रात्रि मत्तु प्रातःकालद अभिमानिदेवतॆगळाद नक्तोषासा ॲंब) देवतॆगळन्नु ईग नडॆयुत्तिरुव यज्ञदल्लि आह्वान माडुवॆनु.

English Translation.

I invoke here at this sacrifice Night and Dawn, the beautifully adorned goddesses, that they may sit down on this our sacrificial grass.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ **ನಕೋ೯ಷಾಸಾ** ಎಂಬ ರಾತ್ರಿ ಮತ್ತು ಪ್ರಾತಃಕಾಲದ ಅಭಿಮಾನಿದೇವತೆಗಳು ಆಹ್ವಾನ ಮಾಡಲ್ಪಟ್ಟಿರುವರು. **ನಕೋ೯ಷಸಾ** ಎಂಬ ಶಬ್ದಕ್ಕೆ ಯಾಸ್ಕರ ವಿವರಣೆಯು ಈರೀತಿ ಇರುವುದು—

ಉಷಾಸಾನಕ್ತಾ । ಉಷಾಸಾನಕೋ೯ಷಾಶ್ಚ ನಕ್ತಾ ಚೋಷಾ ವ್ಯಾಖ್ಯಾತಾ । ನಕ್ತೇತಿ ರಾತ್ರಿನಾಮಾನಕ್ತಿ ಭೂತಾನ್ಯನಯಾಯೇನಾಪಿ ವಾ ನಕ್ತಾನ್ಯಕ್ತವರ್ಣಾ ॥

ನಕೋ೯ಷಾಸಾ, ಉಷಾಸಾನಕ್ತಾ ಎಂದು ಎರಡು ವಿಧನಾಗಿ ಪರಿಷಿದರೂ, ಅರ್ಥನಾತ್ರ ಒಂದೇ ಆಗಿರುವುದು. **ಉಷಾಃ** ಶಬ್ದದ ವಿವರಣೆಯನ್ನು ಹಿಂದೆಯೇ ಹೇಳಿರುವೆವು **ನಕ್ತಾ** ಎಂದರೆ ರಾತ್ರಿಯ ಹೆಸರು. ಏತೆಂದರೆ, **ನಕ್ತಾ** ಎಂದರೆ **ಅನ್ಯಕ್ತವರ್ಣಾ** ಕತ್ತಲೆಯಾಗಿರುವುದರಿಂದ ವಸ್ತುಗಳು ಅನ್ಯಕ್ತವಾಗಿರುವವು ಎಂದರೆ ಚೆನ್ನಾಗಿ ಕಾಣಿಸಿದೆ ಇರುವವು. ಆದುದರಿಂದ ಕತ್ತಲೆಯಿಂದ ಕೂಡಿದ ರಾತ್ರಿಗೆ ನಕ್ತಾ ಎಂದು ಹೆಸರು ಮತ್ತು ಈ ರಾತ್ರಿಕಾಲದಲ್ಲಿ ಪ್ರಾಣಿಗಳು ತನ್ನು ತಮ್ಮ ವ್ಯಾಪಾರಗಳನ್ನು ಮಾಡಲಸಮರ್ಥವಾಗಿರುವವು. **ಅನಕ್ತಿ, ಕ್ಲೇದಯತಿ ಭೂತಾನಿ ಅನಯಾಯೇನ ಇತಿ । ಅಪಿ ವಾನಕ್ತಾ ಅನ್ಯಕ್ತವರ್ಣಾ । ಯಥಾ ಅಹಃ ಸರ್ವಮಭಿವ್ಯಕ್ತರೂಪಂ ಭವತಿ ನ ತಥಾ ರಾತ್ರಿಃ ॥** ಕತ್ತಲೆಯು ಪ್ರಾಣಿಗಳ ವ್ಯಾಪಾರಾದಿಗಳು ಸರಿಯಾಗಿ ನಡೆಯಲು ಅವಕಾಶವಿಲ್ಲದಂತೆ ಅವುಗಳಿಗೆ ತೊಂದರೆ ಕೊಡುವುದರಿಂದ ಅಂತಹ ಕತ್ತಲೆಯಿಂದ ಕೂಡಿದ ರಾತ್ರಿಗೆ ನಕ್ತಾ ಎಂದು ಹೆಸರು ಅಥವಾ ಯಾವುದೂ ಚೆನ್ನಾಗಿ ಕಾಣಿಸದಂತೆ ಅವ್ಯಕ್ತವಾಗಿರುವುದರಿಂದ **ನಕ್ತಾ** ಎಂದು ಹೆಸರು. ಹಗಲಿನಲ್ಲಿ ಸಮಸ್ತ ವಸ್ತುಗಳ ರೂಪಗಳು ಸ್ಪಷ್ಟವಾಗಿ ಕಾಣಿಸುವವು. ರಾತ್ರಿಯಲ್ಲಿ ಆರೀತಿ ಕಾಣಿಸುವುದಿಲ್ಲ. ಆದುದರಿಂದ ರಾತ್ರಿಕಾಲಕ್ಕೆ ನಕ್ತಾ ಎಂದು ಹೆಸರು ಎಂದು ಅರ್ಥವಿವರಣೆ ಮಾಡಿರುವರು. (ನಿ. ೮-೧೧).

ಉಷಾಃ ಎಂಬ ಶಬ್ದಕ್ಕೆ ಅರ್ಥವಿವರಣೆಯನ್ನು ಹಿಂದೆಯೇ ಮಾಡಿರುವೆವು ಎಂದು ಹೇಳಿರುವರಷ್ಟೆ. ಆ ವಿವರಣೆಯು ಈರೀತಿ ಇರುವುದು—

ವಿಭಾವರೀ, ಸೂನರೀ ಮೊದಲಾದ ಹದಿನಾರು ಶಬ್ದಗಳು ಉಷೋನಾಮ ಶಬ್ದಗಳು. (೨-೧೯) ಮತ್ತು

ಉಷಾಃ ಕಸ್ಮಾದುಚ್ಛತೀತಿ ಸತ್ಯಾ ರಾತ್ರೇರಪರಃ ಕಾಲಃ ॥

ರಾತ್ರಿಕಾಲದ ತಮಸ್ಸನ್ನು (ಕತ್ತಲೆಯನ್ನು ನಿವಾರಣೆ ಮಾಡುವುದರಿಂದ ಉಷಾಃ ಎಂದು ಹೆಸರು ಎಂದರೆ ರಾತ್ರಿಯ ಅಪರಕಾಲವು, ಕೊನೆಯ ಭಾಗವು. ಈ ಅರ್ಥವನ್ನು ಸಮರ್ಥಿಸುವುದಕ್ಕಾಗಿ ಒಂದು ಉದಾಹರಣೆಯನ್ನು ಕೊಟ್ಟಿರುವರು.

ಇದಂ ಶ್ರೇಷ್ಠಂ ಜ್ಯೋತಿಷಾಂ ಜ್ಯೋತಿರಾಗಾಚ್ಚಿತ್ರಃ ಪ್ರಕೇತೋ ಅಜನಿಷ್ಟ ವಿಭ್ವಾ ।
ಯಥಾ ಪ್ರಸೂತಾ ಸವಿತುಃ ಸವಾಯ ಏವಾ ರಾತ್ರ್ಯುಷಸೇ ಯೋನಿಮಾರೈಕ್ ॥
(ಋ. ಸಂ. ೧-೧೧೩-೧)

ಈ ಋಕ್ಕಿನ ನಿರುಕ್ತವು—

ಇದಂ ಶ್ರೇಷ್ಠಂ ಜ್ಯೋತಿಷಾಂ ಜ್ಯೋತಿರಾಗಮತ್ । ಚಿತ್ರಂ ಪ್ರಕೇತನಂ ಪ್ರಜ್ಞಾತತಮಮಜನಿಷ್ಟ ವಿಭೂತತಮಂ ಯಥಾ ಪ್ರಸೂತಾ ಸವಿತುಃ ಪ್ರಸವಾಯೈ ರಾತ್ರಿರಾದಿತ್ಯಸ್ಯ । ಏವಂ ರಾತ್ರ್ಯುಷಸೇ ಯೋನಿಮರಿಚತ್ ಸ್ಥಾನಂ । ಸ್ತ್ರೀಯೋನಿರಭಿಯುತ ಏನಾಂ ಗರ್ಭಃ ॥

ಸೂರ್ಯನ ಉತ್ತಮವಾದ ಮತ್ತು ಅತಿಪ್ರಕಾಶಮಾನವಾದ ಬೆಳಕು ಉದಯಿಸುತ್ತಿರುವುದು. ಇಂತಹ ಸೂರ್ಯನ ಪ್ರಕಾಶಕ್ಕೆ ಪೂರ್ವಭಾವಿಯಾಗಿರುವ ಉಷಃಕಾಲವು ಆ ಪ್ರಕಾಶದ ನಿಕೇತನ (ಧ್ವಜದಂತೆ)ದಂತೆ ಬೆಳಕಿಗೆ ಮುಂಚೆಯೇ ತಲೆದೋರುವುದು. ಹೇಗೆಂದರೆ, ಸೂರ್ಯನ ಬೆಳಕು ಹಗಲೆಲ್ಲಾ ಪ್ರಕಾಶಿಸಿ ಅಸ್ತಮಾನ ಕಾಲದಲ್ಲಿ ರಾತ್ರಿಗೆ ಯೋನಿಭೂತವಾಗಿ ಎಂದರೆ ಕಾರಣವಾಗಿರುವಂತೆ ರಾತ್ರಿಯು ತನ್ನ ಅವಸಾನಕಾಲದಲ್ಲಿ ಉಷಃಕಾಲಕ್ಕೆ ಯೋನಿಭೂತವಾಗಿರುವುದು ಎಂದರೆ ಕಾರಣಭೂತವಾಗಿರುವುದು. ಯೋನಿಯೆಂದರೆ ಜನ್ಮ ಸ್ಥಾನವು. ಹಗಲಿನ ಕೊನೆಯಲ್ಲಿ ರಾತ್ರಿಯೂ ರಾತ್ರಿಯ ಕೊನೆಯಲ್ಲಿ ಉಷಃಕಾಲವೂ ಒಂದಾಗುತ್ತಲೊಂದು ಪರಿವರ್ತನರೂಪದಿಂದ ಪ್ರಾಪ್ತವಾಗುವವು ಎಂದು ಮುಖ್ಯಾಭಿಪ್ರಾಯವು. ಆದುದರಿಂದ ಉಷಃ ಎಂದರೆ ರಾತ್ರಿ ಕಳೆದನಂತರ ಸೂರ್ಯೋದಯಕ್ಕೆ ಪೂರ್ವದಲ್ಲಿ ಸಮಸ್ತ ದಿಕ್ಕುಗಳನ್ನು ವ್ಯಾಪಿಸಿ ತಲೆದೋರುವ ಪ್ರಕಾಶವು, ಬೆಳಕು ಎಂದರ್ಥವು.

ಭಾಷ್ಯಕಾರರ (ಸಾಯಣರ) ಅರ್ಥವಿವರಣೆಯು–**ನಕ್ತೆತಶಬ್ದ ಉಷಶ್ಶಬ್ದಶ್ಚ ಲೋಕೇ ಕಾಲವಿಶೇಷವಾಚಿನೌ। ಇಹ ತು ತತ್ಕಾಲಾಭಿಮಾನಿನಿವಹ್ನಿಮೂರ್ತಿದ್ವಯೇ ಪ್ರಯುಜ್ಯೇತೇ । ನಕ್ತೋಷಾಸಾ ನಕ್ತೋಷೋನಾಮಿಕೇ ವಹ್ನಿಮೂರ್ತೀ–**ಎಂದರೆ ನಕ್ತ (ರಾತ್ರಿ)ಉಷಃ (ಪ್ರಾತಃಕಾಲ) ಎಂಬ ಈ ಎರಡು ಶಬ್ದಗಳಿಗೆ ಲೋಕ ವ್ಯವಹಾರದಲ್ಲಿ ರಾತ್ರಿ, ಪ್ರಾತಃಕಾಲ ಎಂಬ ಕಾಲವಿಶೇಷಗಳನ್ನು ಸೂಚಿಸುವ ಅರ್ಥವಿರುವುದು. ಇಲ್ಲಿ ಎಂದರೆ ಈ ಋಕ್ಕಿನಲ್ಲಿ ಅಥವಾ ಋಗ್ವೇದದಲ್ಲಿ, ಈ ಶಬ್ದಗಳು ರಾತ್ರಿ ಮತ್ತು ಪ್ರಾತಃಕಾಲಾಭಿಮಾನಿದೇವತೆಗಳೆಂಬ ಅರ್ಥವನ್ನು ಪ್ರತಿಪಾದಿಸುವವು. ಆದುದರಿಂದ **ನಕ್ತೋಷಾಸಾ** ಅಥವಾ **ಉಷಾಸಾನಕ್ತಾ** ಎಂಬ ಶಬ್ದಗಳು ರಾತ್ರಿ ಮತ್ತು ಉಷಃಕಾಲಾಭಿಮಾನಿದೇವತೆಗಳಾದ ಅಗ್ನಿಯ ಎರಡು ಮೂರ್ತಿ (ರೂಪಗಳು)ಗಳೆಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿವೆ. ಈ ಋಕ್ಕಿನಲ್ಲಿ ಉಪಯೋಗಿಸಿರುವ **ಸುಪೇಶಸಾ** (ಒಳ್ಳೆಯ ರೂಪ ಅಥವಾ ಆಕಾರವುಳ್ಳ) ಎಂಬ ಶಬ್ದವು ಈ ಅರ್ಥವನ್ನು ಸಮರ್ಥಿಸುವುದು. ಏಕೆಂದರೆ ರಾತ್ರಿ ಮತ್ತು ಪ್ರಾತಃಕಾಲಗಳು ಕಾಲ ವಿಭಾಗಗಳಾದ್ದರಿಂದ ಅವುಗಳಿಗೆ ರೂಪವಾಗಲೀ, ಆಕಾರವಾಗಲಿ ಇರುವುದಿಲ್ಲ. ಆ ಕಾಲದ ಅಭಿಮಾನಿದೇವತೆಗಳೆಂದು ಹೇಳುವ ಪಕ್ಷದಲ್ಲಿ ಆ ದೇವತೆಗಳಿಗೆ ರೂಪವನ್ನು ನಿರ್ದೇಶಿಸಬಹುದು. ಈ ಋಕ್ಕಿನಲ್ಲಿ ಅರೀತಿ ನಿರ್ದೇಶವಿರುವುದರಿಂದ ಇಲ್ಲಿ ಆ ಕಾಲಗಳ ಅಭಿಮಾನಿದೇವತೆಗಳನ್ನೇ ಪ್ರತಿಪಾದಿಸಿರುವುದೆಂದು ತಿಳಿಯಬೇಕು, **ನಕ್ತೋಷಸಾ** ಎಂಬ ಶಬ್ದದಲ್ಲಿರುವ ಷಕಾರವು ಛಂದಸ್ಸಿನ ಅನುಕೂಲಕ್ಕಾಗಿ ದೀರ್ಘವಾಗಿರುವುದು.

ಸುಪೇಶಸಾ--ನಿರ್ಣಿಕ್, ವಪ್ರಃ ಮೊದಲಾದ ಹದಿನಾರು ರೂಪವಾಚಕ ಶಬ್ದಗಳ ಮಧ್ಯದಲ್ಲಿ ಪೇಶಃ ಎಂಬ ಶಬ್ದವು ಪಠಿತವಾಗಿರುವುದರಿಂದ ಪೇಶಃ ಎಂದರೆ ರೂಪವು. ಆದುದರಿಂದ **ಸುಪೇಶಸಾ-ಶೋಭನರೂಪಯುಕ್ತೇ** —ಶೋಭನರೂಪದಿಂದ ಕೂಡಿದ, ಸುಂದರರಾದ ಎಂದರ್ಥವು.

ಆಸದೇ--ಷದ್ಲೃ ವಿಶರಗತ್ಯವಸಾದನೇಷು। ಹೊಂದುವುದಕ್ಕಾಗಿ ಎಂದರೆ ಬಂದು ಕುಳಿತುಕೊಳ್ಳುವುದಕ್ಕಾಗಿ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ನಕ್ತೋಷಸಾ-ನಕ್ತಂಚ ಉಷಶ್ಚ ನಕ್ತೋಷಸಾ ಎಂದು ದ್ವಂದ್ವಸಮಾಸ, ಇದರ ಮುಂದೆ ದ್ವಿತೀಯಾ ದ್ವಿವಚನ ಔಟ್ ಪ್ರತ್ಯಯ. ಅದಕ್ಕೆ **ಸುಪಾಂಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ಆಕಾರಾದೇಶಂನ-ಕ್ತಮ್ ಎಂಬುದರ ಮಕಾರಕ್ಕೆ ಲೋಪವೂ, ಉಷಸ್ ಶಬ್ದದ ಉಪಧಾಭೂತವಾದ ಅಕಾರಕ್ಕೆ ದೀರ್ಘವೂ ಸಹ ಭಾಂದಸವಾಗಿ ಬರುವುದು, **ದೇವತಾದ್ವಂದ್ವೇಚ**, (ಪಾ. ಸೂ. ೬-೩-೨೬೧) ದೇವತಾವಾಚಕಪದಗಳನ್ನೊಳ ಗೊಂಡ ದ್ವಂದ್ವಸಮಾಸದಲ್ಲಿ ಪೂರ್ವೋತ್ತರಪದಗಳೆರಡೂ ಒಟ್ಟಿಗೆ ಪ್ರಕೃತಿಸ್ವರವನ್ನು ಹೊಂದುವುವು ಎಂಬುದರಿಂದ ಪೂರ್ವಪದ ಉತ್ತರಪದಗಳೆರಡಕ್ಕೂ ಪ್ರಕೃತಿಸ್ವರಬರುವುದು.

ಸುಪೇಶಸಾ—ಶೋಭನಂ ಪೇಶಃ ಯಯೋಸ್ತೌ, ಪೂರ್ವದಂತೆಯೇ ದ್ವಿತೀಯಾದ್ವಿವಚನಕ್ಕೆ ಆಕಾರಾದೇಶ ಪೇಶಃ ಎಂಬ ಶಬ್ದವು ನಪುಂಸಕಲಿಂಗ. ಆದ್ದರಿಂದ **ನಪುಂಸಕಸ್ಯಾನಿಸಂತಸ್ಯ**, (ಪಿ. ಸೂ. ೨-೨೬) ಎಂಬುದ ರಿಂದ ಆದ್ಯುದಾತ್ತ. ಬಹುವ್ರೀಹಿಸಮಾಸದಲ್ಲಿ **ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್** ಎಂಬುದರಿಂದ ಪೂರ್ವ ಪದಪ್ರಕೃತಿಸ್ವರಪ್ರಾಪ್ತವಾವಾದರೆ ಅದನ್ನು ಬಾಧಿಸಿ **ನಞ್ ಸುಭ್ಯಾಮ್** (ಪಾ.ಸೂ. ೬-೨-೧೭೨) ಎಂಬುದರಿಂದ ಉತ್ತರಪದಕ್ಕೆ ಅಂತೋದಾತ್ತ ಪ್ರಾಪ್ತವಾಗುವುದು ಅದನ್ನೂ ಬಾಧಿಸಿ **ಆದ್ಯುದಾತ್ತಂದ್ವ್ಯಚ್ಛ್ಯೆಂದಸಿ** (ಪಾ.ಸೂ. ೬.೨.೧೧೯) ಬಹುವ್ರೀಹಿಸಮಾಸದಲ್ಲಿ ಆದ್ಯುದಾತ್ತವೂ ದ್ಯಚ್ಛ್ಯವೂ ಆದ ಉತ್ತರಪದವು ಸು ಎಂಬುದರ ಮುಂದೆ ಇದ್ದರೆಆದ್ಯುದಾತ್ತವೇ ಆಗುವುದು ಎಂಬುದರಿಂದ ಪೇಶ ಎಂಬುದು ಆದ್ಯುದಾತ್ತವೇ ಆಗುವುದು.

ಅಸ್ಮಿನ್ — **ಊಡಿದಂ ಪದಾದ್ಯೆಪ್ಸ್ಮೈದ್ಯುಭ್ಯಃ** (ಪಾ. ಮಾ. ೬-೧-೧೭೧) ಎಂಬುದ ರಿಂದ ವಿಭಕ್ತಿಯು ಉದಾತ್ತ

ಆಸದೇ—ಷದ್ಲೃ ವಿಶರಣಗತ್ಯವಸಾದನೇಷು ಧಾತು. **ಧಾತ್ವಾದೇಃ ಷಃ ಸಃ** (ಪಾ. ಸೂ. ೬-೧-೬೪) ಎಂಬುದರಿಂದ ಷಕಾರಕ್ಕೆ ಸಕಾರ. **ಸಂಪದಾದಿಭ್ಯಃ ಕ್ವಿಪ್** (ಪಾ. ಸೂ. ೩-೩-೧೦೮. ವಾ. ೯) ಎಂಬುದ ರಿಂದ ಭಾವಾರ್ಥದಲ್ಲಿ ಆಙ್ ಪೂರ್ವಕವಾದ ಸದ್ ಧಾತುವಿನ ಮುಂದೆ ಕ್ವಿಪ್ ಬರುವುದು. ಸದ್ ಎಂಬುದು ಧಾತುಸ್ವರದಿಂದ ಉದಾತ್ತ. ಆಙ್ ನೊಂದಿಗೆ **ಕುಗತಿಪ್ರಾದಯಃ** (ಪಾ. ಸೂ. ೨೨-೧೮) ಎಂಬುದ ರಿಂದ ಪ್ರಾದಿಸಮಾಸ. ಆಸದ್ ಎಂಬುದು **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೯೧೯) ಎಂಬ ಕೃದುತ್ತರಪದಪ್ರಕೃತಿಸ್ವರದಿಂದ ಆದೇ ನಿಲ್ಲುವುದು. ಇದರ ಮುಂದೆ ಚತುರ್ಥ್ಯೇಕವಚನ ಙೀಪ್ರತ್ಯಯ. ಆದು ಸುಪ್ಪಾದರಿಂದ ಅನುದಾತ್ತ. **ಉದಾತ್ತಾದನುದಾತ್ತಸ್ಯ** (ಪಾ.ಸೂ. ೮-೪-೬೬) ಎಂಬುದರಿಂದ ಸ್ವರಿತವಾಗುವುದು.

॥ ಸಂಹಿತಾಪಾಠಃ ॥

ತಾ ಸುಜಿಹ್ವಾ ಉಪ ಹ್ವಯೇ ಹೋತಾರಾ ದೈವ್ಯಾ ಕವೀ ।
ಯಜ್ಞಂ ನೋ ಯಕ್ಷತಾಮಿಮಂ ॥ ೮ ॥

॥ ಪದಪಾಠಃ ॥

ತಾ । ಸು ಽ ಜಿಹ್ವಾ । ಉಪ । ಹ್ವಯೇ । ಹೋತಾರಾ । ದೈವ್ಯಾ । ಕವೀ ಇತಿ ॥
ಯಜ್ಞಂ । ನಃ । ಯಕ್ಷತಾಂ । ಇಮಂ ॥ ೮ ॥

॥ ಸಾಯಣಭಾಷ್ಯಂ ॥

ತಚ್ಛಬ್ದೋ ಽತ್ರ ಸರ್ವನಾಮತ್ವಾತ್ಪ್ರಸಿದ್ಧಾರ್ಥನಾಚೀ । ತಾ ತೌ ಯಾಜ್ಞಿಕಾನಾಂ ಪ್ರಸಿದ್ಧೌ ದ್ಯಾವಗ್ನೀ ಉಪಹ್ವಯೇ । ಆಹ್ವಯಾಮಿ । ನೋ ಽಸ್ಮದೀಯಮಿಮಂ ಯಜ್ಞಂ ಯಕ್ಷತಾಂ । ತಾವುಭೌ ಯಜತಾಮನುತಿಷ್ಠತಾಂ । ಕೀದೃಶೌ ಸುಜಿಹ್ವೌ ಶೋಭನಜಿಹ್ವೋಪೇತೌ । ಪ್ರಿಯವಚನೌ ಶೋಭನಜ್ವಾಲೌ ವೇತ್ಯರ್ಥಃ। ಹೋತಾರೌ ಹೋಮನಿಷ್ಪಾದಕೌ ದೈವ್ಯಾ ದೈವ್ಯೌ ದೇವಸಂಬಂಧಿನೌ । ಅತ ಏವೇಮಾವಗ್ನೀ ದೈವ್ಯಹೋತೃನಾಮಕೌ । ಕವೀ ಮೇಧಾವಿನೌ ॥ ತಾ ತೌ । ದ್ವಿತೀಯೌದ್ವಿವಚನಸ್ಯ ಸುಸಾಂ ಸುಲುಗಿತ್ಯಾಕಾರಃ । ಏಕಾದೇಶ ಉದಾತ್ತೇನೋದಾತ್ತ ಇತ್ಯುದಾತ್ತಃ । ಸುಜಿಹ್ವೌ । ಶೋಭನಾ ಜಿಹ್ವಾ ಯಯೋಸ್ತೌ । ನಘ್ಸ್ಯಾಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ಪೂರ್ವಪದೇಕಾದೇಶಸ್ವರಃ । ಸಂಹಿತಾಯಾಮಾವಾದೇಶಃ । ವಸ್ಯ ಲೋಪಃ ಶಾಕಲ್ಯಸ್ಯೇತಿ ಲೋಪಃ । ಹೋತಾರಾ । ಜುಹೋತೇಸ್ತೃನ್ । ದ್ವಿವಚನೇ ಋತೋ ಙಿ। ಪಾ. ೭-೩-೧೧೦ । ಇತಿ ಗುಣಃ । ಅಸ್ಯೈನ್ನಿತ್ಯುಪಧಾದೀರ್ಘಃ । ಪೂರ್ವವದಾಕಾರಃ । ನಿತ್ತ್ವಾದಾದ್ಯುದಾತ್ತಃ । ದೈವ್ಯಾ । ದೇವಾನಾಮಿಮೌ । ದೇವಾದ್ಯಞಞೌ । ಪಾ. ೪-೧ ೮೫-೩ । ಇತಿ ಯಞ್ । ಯಸ್ಯೇತಿ ಚೇತ್ಯಕಾರಲೋಪಃ । ಞ್ನಿತ್ಯಾದಿರ್ನಿತ್ಯಮಿತ್ಯಾದ್ಯುದಾತ್ತಃ । ಪೂರ್ವವದಾಕಾರಃ । ಯಕ್ಷತಾಂ । ಯಜತಾಂ । ಲೋಟಿ ಶಪಿ ಪರತಃ ಸಿಬ್ಬಹುಲಂ ಲೇಟೀತಿ ಬಹುಲಗ್ರಹಣಾತ್ಸಿಪ್ । ಕುತ್ವಚರ್ತ್ವಷಢ್ತ್ವಾನಿ ॥

॥ ಪ್ರತಿಪದಾರ್ಥ ॥

ಸುಜಿಹ್ವೌ—ಉತ್ತಮವಾದ ಜಿಹ್ವೆಗಳುಳ್ಳ ಎಂದರೆ ಪ್ರಿಯವಚನಗಳನ್ನಾಡುವ ಅಥವಾ ಶೋಭನಜ್ವಾಲೆಗಳಿಂದ ಯುಕ್ತರಾದ । ಕವೀ—ಮೇಧಾವಿಗಳಾದ । ತಾ—ಆ ಎಂದರೆ ಯಜ್ಞಕರ್ಮದಲ್ಲಿ ಪ್ರಸಿದ್ಧರಾದ । ದೈವ್ಯಾ—ದೇವಸಂಬಂಧಿಗಳಾದ । ಹೋತಾರಾ—ಹೋಮನಿಷ್ಪಾದಕರಾದ । (ದೈವ್ಯಾ ಹೋತಾರಾ— ದೈವ್ಯ ಹೋತೃಗಳೆಂಬ ಇಬ್ಬರು ಅಗ್ನಿಮೂರ್ತಿ ವಿಶೇಷಗಳನ್ನು) । ಉಪ ಹ್ವಯೇ—ನನ್ನ ಸವಿಾಪಕ್ಕೆ ಬರುವಂತೆ ಆಹ್ವಾನ ಮಾಡುವೆನು । (ಇವರು) ನಃ—ನನ್ನ ಎಂದರೆ ನಾವು ಮಾಡುತ್ತಿರುವ । ಇಮಂ ಯಜ್ಞಂ—ಈ ಯಜ್ಞವನ್ನು । ಯಕ್ಷತಾಂ— ಅನುಷ್ಠಾನಮಾಡಲಿ ಎಂದರೆ ನಿರ್ವಹಿಸಲಿ.

॥ ಭಾವಾರ್ಥ ॥

ದೈವ್ಯಾ ಹೋತಾರಾ ಎಂಬ (ಅಗ್ನಿರೂಪ ವಿಶೇಷಗಳಾದ) ಈರ್ವರು ದೇವತೆಗಳು ಪ್ರಿಯವಚನಗಳನಾಡುವವರು (ಅಥವಾ ಚೆನ್ನಾಗಿ ಜ್ವಲಿಸುವ ಜ್ವಾಲೆಗಳಿಂದ ಕೂಡಿರುವವರು) ಬಹಳ ಬುದ್ಧಿಶಾಲಿಗಳು ಹೋತೃ ಕರ್ಮದಲ್ಲಿ ನಿಷ್ಣಾತರಾದವರು ಇಂತಹ ದೇವಸಂಬಂಧಿಗಳಾದ ದೈವ್ಯಾ ಹೋತಾರಾ ಎಂಬ ದೇವತೆಗಳನ್ನು ಆಹ್ವಾನಮಾಡುವೆನು (ಕರೆಯುವೆನು). ಅವರು ಇಲ್ಲಿಗೆ ಬಂದು ಹೋತೃಸ್ಥಾನದಲ್ಲದ್ದುಕೊಂಡು ನಾವು ಮಾಡುತ್ತಿರುವ ಯಜ್ಞಕರ್ಮವನ್ನು ನಿರ್ವಹಿಸಲಿ.

English Translation

I invoke those Daivya and Hotara, those two divine hotries who are good-tongued and wise. May they perform this our sacrifice.

॥ ವಿಶೇಷವಿಷಯಗಳು ॥

ದೈವ್ಯಾ ಹೋತಾರಾ ಎಂಬ ಶಬ್ದದ ವಿಷಯದಲ್ಲಿ ಯಾಸ್ಕರ ವಿವರಣೆಯು.—

ದೈವ್ಯಾ ಹೋತಾರಾ ದೈವ್ಯೌ ಹೋತಾರಾವಯಂ ಚಾಗ್ನಿರಸಾ ಚ ಮಧ್ಯಮಃ ॥

ಎಂದರೆ ಈ ಶಬ್ದವು ಅಗ್ನಿಯನ್ನೇ ಸೂಚಿಸುವುದು. ಅಗ್ನಿಯು ದೇವತೆಗಳನ್ನು ಆಹ್ವಾನ ಮಾಡುವುದರಿಂದ ದೇವತೆಗಳಿಗೂ ಮನುಷ್ಯರಿಗೂ ಅಗ್ನಿಯು ಮಧ್ಯಸ್ಥನಾಗಿರುವನು ಎಂದು ಈ ವಿಷಯದಲ್ಲಿ ಒಂದು ಉದಾಹರಣೆಯನ್ನು ಕೊಟ್ಟಿರುವರು.

ದೈವ್ಯಾ ಹೋತಾರಾ ಪ್ರಥಮಾ ಸುವಾಚಾ ಮಿಮಾನಾ ಯಜ್ಞಂ ಮನುಷೋ ಯಜಧ್ಯೈ ।
ಪ್ರಚೋದಯಂತಾ ವಿದಥೇಷು ಕಾರೂ ಪ್ರಾಚೀನಂ ಜ್ಯೋತಿಃ ಪ್ರದಿಶಾ ದಿಶಂತಾ ॥
(ಋ. ಸಂ. ೧೦-೧೧೦-೭)

ಇದಕ್ಕೆ ದುರ್ಗಾಚಾರ್ಯಕೃತವ್ಯಾಖ್ಯಾನವು--

ಯಾವೇತೌ ದೈವ್ಯೌ ಹೋತಾರೌ । ದೇವೇಷು ಭವೌ ದೇವ್ಯೌ ದೇವಾವೇವ ದೇವ್ಯೌ । ಸ್ವಾರ್ಥೇ ಏವ ತದ್ಧಿತಃ । ಮನುಷ್ಯಹೋತಾರೌ ಅಪೇಕ್ಷ್ಯ । ದೈವ್ಯೌ ಹೋತಾರೌ ಹೋತೃಮೈತ್ರಾವರುಣೌ ಇತಿ ವಿಶೇಷಣಂ । ಹೋತಾರಾ ಹೋತಾರೌ ಆಹ್ವಾತಾರೌ ದೇವಾನಾಂ ವಾಯ್ವಗ್ನೀ । ಪ್ರಥಮಾ ಪ್ರಥಮೌ ಮುಖ್ಯೌ ಮನುಷ್ಯಹೋತಾರಾವಪೇಕ್ಷ್ಯ । ಸುವಾಚಾ ಸುವಾಚೌ, ಪ್ರಶಸ್ತವಾಚೌ, ಸುಸ್ತುತೌ । ಮಿಮಾನಾ ಯಜ್ಞಂ ಯಜ್ಞನಿರ್ಮಾತಾರೌ ನಿತ್ಯಂ । ಮನುಷಃ ಮನುಷ್ಯಸ್ಯ ಯಜಧ್ಯೈ ಯಜನಾಯ । ಪ್ರಚೋದಯಂತಾ ಪ್ರಚೋದಯಮಾನೌ । ವಿದಥೇಷು ಯಜ್ಞೇಷು । ಕಾರೂ ಕರ್ತಾರೌ । ಇತ್ಯಾದಿ

ಇವರ ಮುಖ್ಯಾಭಿಪ್ರಾಯವೇನೆಂದರೆ--ದೇವತೆಗಳಿಗೆ ಅಗ್ನಿವಾಯುಗಳು ಹೋತೃಗಳೆಂದೂ ಮನುಷ್ಯರಿಗೆ ಹೋತೃ ಮೈತ್ರಾವರುಣರೆಂಬ ಋತ್ವಿಜರು ಹೋತೃಗಳೆಂದೂ ಪ್ರಸಿದ್ಧವು. ಆಗ್ನಿ ಅಥವಾ ಅಗ್ನಿವಾಯುಗಳು ದೇವತೆಗಳಿಗೂ ಮನುಷ್ಯರಿಗೂ ಮಧ್ಯದಲ್ಲಿದ್ದು ಅವರಿಗೆ ಸಂಬಂಧವನ್ನು ಕಲ್ಪಿಸುವುದರಿಂದ ಅಗ್ನಿಯು ಮಧ್ಯಮನೆಂದು ಹೇಳಲ್ಪಡುವನು. ದೈವ್ಯಾ ಹೋತಾರಾ ಎಂಬ ಈ ದೇವತೆಗಳ ಹೆಸರು ಅಪ್ರೀಸೂಕ್ತಗಳಲ್ಲಲ್ಲದೆ—

ತೈಷ್ಟಾರಂ ವಾಯುಮಮೃಧವೋ ಯೆ ಓಹತೇ ದೈವ್ಯಾ ಹೋತಾರಾ ಉಷಸಂ ಸ್ವಸ್ತಯೇ ।
(ಋ. ಸಂ. ೧೦-೬೫-೧೦)

ದೈವ್యా ಹೋತಾರಾ ಪ್ರಥಮಾ ಪುರೋಹಿತ ಋತಸ್ಯ ಪಂಥಾಮನ್ವೇಮಿ ಸಾಧುಯಾ ॥
(ಋ. ಸಂ. ೧೦-೬೬-೧೩)

ಎಂಬ ಎರಡು ಋಕ್ಕುಗಳಲ್ಲಿ ಮಾತ್ರ ಪಠಿತವಾಗಿರುವುದು. ಋ. ಸಂ. ೭-೨-೭ನೆಯ ಋಕ್ಕಿನಲ್ಲಿ ಜಾತವೇದಸಾ ಎಂಗೂ ಋ. ಸಂ. ೧೦-೭೦-೭ನೆಯ ಋಕ್ಕಿನಲ್ಲಿ ಪುರೋಹಿತೌ ಎಂದೂ ಇವರನ್ನು ಕರೆದಿದಾರೆ. ಮತ್ತು ಮೇಲೆ ಹೇಳಿದ ಋಕ್ಕುಗಳಲ್ಲಿರುವ **ಮಿಮಾನಾ ಯಜ್ಞಾಂ ಮನುಷೋ ಯಜಧ್ಯೈ, ಯಜ್ಞೇಷು ಮಾನುಷೇಷು ಕಾರೂ,** ಮತ್ತೂ **ಪ್ರಚೋದಯೆಂತಾ ವಿದಥೇಷು ಕಾರೂ** ಎಂಬ ಶಬ್ದಗಳು ಈ ದೇವತೆಗಳು ಮನುಷ್ಯರು ಮಾಡುವ ಯಜ್ಞಗಳನ್ನು ನಿರ್ವಹಿಸುವವರು ಅಥವಾ ಪ್ರೇರಿಸುವವರು ಎಂದು ಹೇಳಿರುವುದರಿಂದ ಇವರನ್ನು ಪುರೋಹಿತರೆಂದು ಕರೆದಿರುವುದು) ಸಹಜವಾಗಿದೆ. ದೇವತೆಗಳಲ್ಲಿ ಹೋತೃಗಳು ಅಗ್ನಿವಾಯುಗಳಾದರೆ ಮನುಷ್ಯರಲ್ಲಿ ಹೋತೃ, ಇವನ ಸಹಾಯಕ ಋತ್ವಿಜನಾದ ವೈತ್ರಾವರುಣನು ಹೋತೃಗಳೆಂದು ಕರೆಯಲ್ಪಡುವರು. ಈ ವೈತ್ರಾವರುಣನು ಪ್ರೈಷಮಂತ್ರಗಳಿಂದ ಇತರ ಋತ್ವಿಜರಿಗೆ ಆಯಾಯ ಕಾರ್ಯಗಳನ್ನು ಮಾಡುವಂತೆ ಆಜ್ಞಾಪಿಸುವನು. ಯಜುರ್ವೇದದಲ್ಲಿ (ತೈ. ಸಂ. ೬-೧-) **ವೈತ್ರಾವರುಣೋ ಹಿ ಪುರಸ್ತಾದ್ದೈತ್ವಿಗ್ಯೋ ವಾಚಂ ವಿಭಜತಿ**— ಎಂದು ಹೇಳಿರುವುದು.

ಸುಜಿಹ್ವಾ-ಸುಜಿಹ್ವೌ--ಶೋಭನಾ ಜಿಹ್ವಾ ಯಯೋಸ್ತೌ ಸುಜಿಹ್ವೌ । ಶೋಭನಜಿಹ್ವೋಪೇತೌ, ಪ್ರಿಯವಚನೌ, ಶೋಭನಜ್ವಾಲೌ ವಾ ॥ ಉತ್ತಮವಾದ ನಾಲಗೆಯುಳ್ಳ, ಪ್ರಿಯವಾದ ಮಾತುಗಳನ್ನಾಡುವ ಅಥವಾ ಅಗ್ನಿಪರವಾಗಿ ಹೇಳುವುದಾದರೆ ಉತ್ತಮವಾದ ಜ್ವಾಲೆಗಳುಳ್ಳ ಎಂದರ್ಥವು.

ಯೆಷ್ಟತಾಂ—ಯಜತಾಂ, ಯಜ್ಞಮಾಡಲಿ ಎಂದರೆ ಯಜ್ಞವನ್ನು ನಿರ್ವಹಿಸಲಿ ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ತಾ—ತೌ ಎಂದರ್ಥ. ತದ್ ಶಬ್ದದ ಮುಂದೆ ದ್ವಿತೀಯಾದ್ವಿವಚನ ಔಟ್. ಅದಕ್ಕೆ **ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ಆಕಾರ. **ತ್ಯದಾದೀನಾಮಃ** (ಪಾ. ಸೂ. ೭-೨-೧೦೨) ಎಂಬುದರಿಂದ ದಕಾರಕ್ಕೆ ಅಕಾರ. **ಅತೋಗುಣೇ** (ಪಾ. ಸೂ ೬-೧-೯೭) ಎಂಬುದರಿಂದ ಪರರೂಪ. ಸವರ್ಣದೀರ್ಘ. **ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮-೨-೫) ಎಂಬುದರಿಂದ ಏಕಾದೇಶದಿಂದ ಬಂದ ಅಕಾರವು ಉದಾತ್ತ.

ಸುಜಿಹ್ವಾ—ಶೋಭನಾ ಜಿಹ್ವಾ ಯಯೋಸ್ತೌ. ಶೇವ ಯೆಹ್ವ ಜಿಹ್ವಾ ಗ್ರೀವಾಮಾವಾಃ (ಪಾ. ಸೂ. ೧-೧೫೨) ಎಂಬುದರಿಂದ ವನ್ ಪ್ರತ್ಯಯಾಂತವಾಗಿ ಜಿಹ್ವಾ ಶಬ್ದವು ನಿಪಾತಿತವಾಗಿರುವುದು. ಲಿಹಂತಿ ಅನಯಾ ಜಿಹ್ವಾ ಇತಿ. ಲಿಹ ಆಸ್ವಾದನೇ ಧಾತು. ಇದರ ಮುಂದೆ ವನ್ ಪ್ರತ್ಯಯ. ಲಕಾರಕ್ಕೆ ಜಕಾರ. ಗುಣಾಭಾವವೂ ನಿಪಾತಿತವಾಗಿರುವುದು. ಜಿಹ್ವಾ ಶಬ್ದವು ನಿತ್ಸ್ವರದಿಂದ ಆದ್ಯುದಾತ್ತ. ಬಹುವ್ರೀಹಿಯಲ್ಲಿ ಪೂರ್ವಪದಪ್ರಕೃತಿಸ್ವರ ಪ್ರಾಪ್ತವಾದರೆ ಅದನ್ನು ಬಾಧಿಸಿ **ನಞ್‌ಸುಭ್ಯಾಮ್** (ಪಾ. ಸೂ. ೬-೨-೧೭೨) ಎಂಬುದರಿಂದ ಉತ್ತರಪದವಾದ ಜಿಹ್ವಾ ಎಂಬುದು ಅಂತೋದಾತ್ತ. ಸುಜಿಹ್ವ ಎಂಬುದರ ಮುಂದೆ ದ್ವಿತೀಯಾದ್ವಿವಚನ ಔಟ್ ಪ್ರತ್ಯಯ. ಸುಜಿಹ್ವ+ಔ ವೃದ್ಧಿರೇಚಿ (ಪಾ. ಸೂ. ೬-೧-೮೮) ಎಂಬುದರಿಂದ ವೃದ್ಧಿಯು ಪ್ರಾಪ್ತವಾದರೆ ಅದನ್ನು ಬಾಧಿಸಿ **ಪ್ರೆಥೆ**

ಮಯೋಃಪೂರ್ವೇಸವರ್ಣಃ (ಪಾ. ಸೂ. ೬-೧-೧೦೨) ಎಂಬುದರಿಂದ ಪೂರ್ವಸವರ್ಣದೀರ್ಘವು ಪ್ರಾಪ್ತವಾದರೆ ಅದಕ್ಕೆ ನಾದಿಚಿ (ಪಾ. ೬-೧-೧೦೪) ಆಕಾರದ ಮುಂದೆ ಇಚ್ ವರ್ಣಗಳಿದ್ದರೆ ಪೂರ್ವಸವರ್ಣದೀರ್ಘ ಬರುವುದಿಲ್ಲ ಎಂಬುದರಿಂದ ನಿಷೇಧಬರುವುದು. ಏವಂಚ ವೃದ್ಧಿರೇಚಿ ಎಂಬುದರಿಂದ ವೃದ್ಧಿಯು ಏಕಾದೇಶವಾಗಿ ಬರುವುದು ಸುಜಿಹ್ವೌ ಎಂದಾಗುವುದು. ಏಕಾದೇಶ ಉದಾತ್ತೇನೋದಾತ್ತಃ ಎಂಬುದರಿಂದ ವೃದ್ಧಿರೂಪ ಏಕಾದೇಶದಿಂದ ಬಂದ ೌಕಾರವು ಉದಾತ್ತ. ಸುಜಿಹ್ವೌ ಎಂಬುದರ ಮುಂದೆ ಉಪಶಬ್ದದ ಉಕಾರಪರದಲ್ಲಿರುವುದರಿಂದ ಸಂಹಿತಾಕಾಲದಲ್ಲಿ ಏಚೋಯವಾಯಾವಃ (ವಾ. ಸೂ. ೬-೧-೭೮) ಎಂಬುದರಿಂದ ೌಗೆ ಅವ್ ಆದೇಶ. ಸುಜಿಹ್ವಾವ್+ಉಪ ಲೋಪಶಾಕಲ್ಯಸ್ಯ (ಪಾ ಸೂ. ೮-೩-೧೯) ಎಂಬುದರಿಂದ ವಕಾರಕ್ಕೆ ಲೋಪ. ಈ ವಕಾರಲೋಪವು ಆದ್ಗುಣಃ ಎಂಬುದರಿಂದ ಗುಣವನ್ನು ಮಾಡುವಾಗ ಪೂರ್ವತ್ರಾಸಿದ್ಧಮ್ (ಪಾ. ಸೂ ೮-೨-೧) ಎಂಬುದರಿಂದ ಅಸಿದ್ಧವಾಗುವುದು. ಆದ್ದರಿಂದ ವಕಾರದಿಂದ ವ್ಯವಧಾನವು ಏರ್ಪಡುವುದು. ಅದಕಾರಣ ಗುಣ ಬರುವುದಿಲ್ಲ.

ಹೋತಾರಾ—ಹು ದಾನಾದನೆಯೋಃ ಜುಹೋತ್ಯಾದಿಯಲ್ಲಿರುವ ಧಾತು. ಇದರ ಮುಂದೆ ತೃನ್. ಲಘೂಪಧಗುಣ. ಪ್ರಥಮಾವಿಭಕ್ತ್ಯಿವಚನ ೌ ಪ್ರತ್ಯಯ. ಹೋತೃ+ೌ, ಋತೋ ಙಿಸರ್ವನಾಮಸ್ಥಾನಯೋಃ (ಪಾ. ಸೂ. ೭-೩-೧೧೦) ಎಂಬುದರಿಂದ ಬರುವ ಗುಣವು ರಪರವಾಗಿ ಬರುವುದು. ಆಸ್ ತೃನ್ ತೃಚ್ಸ್ವಸೃ (ಪಾ. ಸೂ. ೬-೪-೧೧) ಎಂಬುದರಿಂದ ಉಪಧಾದೀರ್ಘ. ಹೋತಾರೌ ಎಂದಾಗುವುದು. ೌ ಪ್ರತ್ಯಯಕ್ಕೆ ಸುಪಾಂ ಸುಲುಕ್ ಎಂಬುದರಿಂದ ಆಕಾರ. ಹೋತಾರಾ ಎಂದು ಸಿದ್ಧವಾಗುವುದು. ಹೋತೃ ಎಂಬುದು ನಕಾರೇತ್ಸಂಜ್ಞಕಪ್ರತ್ಯಯಾಂತ ಆದ್ದರಿಂದ ಞ್ನಿತ್ಯಾದಿರ್ನಿತ್ಯಂ (ಪಾ.ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತ.

ದೈವ್ಯಾ—ದಿವ್ ಧಾತುವಿನ ಮುಂದೆ ನಂದಿಗ್ರಹಿ (ಪಾ- ಸೂ. ೩-೧-೧೩೪) ಎಂಬುದರಿಂದ ಅಚ್ ಪ್ರತ್ಯಯ. ಲಘೂಪಧಗುಣ. ದೇವ ಶಬ್ದವು ಚಿತ್ಸ್ವರದಿಂದ ಅಂತೋದಾತ್ತ. ದೇವಾದ್ಯಞ್ಞಞೌ (ಪಾ. ಸೂ. ೪-೧-೮೫ ವಾ. ೩) ದೇವಶಬ್ದದ ಮುಂದೆ ಪ್ರಾಗ್ದೀವ್ಯತೀಯದಲ್ಲಿರುವ ಅರ್ಥಗಳಲ್ಲಿ ಯಞ್ ಅಞ್ ಎಂಬ ಪ್ರತ್ಯಯಗಳು ಬರುವುವು ಎಂಬುದರಿಂದ ದೇವಸ್ಯ ಇಮೌ ಎಂದು ವಿವಕ್ಷಿಸಿದಾಗ ಯಞ್ ಪ್ರತ್ಯಯ ತದ್ಧಿತೇಷ್ವಚಾಮಾದೇಃ (ಪಾ. ಸೂ. ೭-೩-೧೧೭) ಎಂಬುದರಿಂದ ಆದಿವೃದ್ಧಿ. ಏಕಾರಕ್ಕೆ ಐಕಾರ. ಯಸ್ಯೇತಿಚ (ಪಾ. ಸೂ. ೬ ೪-೧೪೮) ಎಂಬುದರಿಂದ ಪ್ರತ್ಯಯದ ಹಿಂದೆ ಇರುವ ಅಕಾರಕ್ಕೆ ಲೋಪ ಞ್ನಿತ್ಯಾದಿರ್ನಿತ್ಯಂ (ಪಾ.ಸೂ ೬-೧-೧೯೭) ಎಂಬುದರಿಂದ ದೈವ್ಯಶಬ್ದ ಆದ್ಯುದಾತ್ತ. ಇದರ ಮುಂದೆ ೌ ಪ್ರತ್ಯಯ. ಅದಕ್ಕೆ ಪೂರ್ವದಂತೆಯೇ ಆಕಾರಾದೇಶ. ಸವರ್ಣದೀರ್ಘ. ದೈವ್ಯಾ ಎಂದಾಗುವುದು.

ಯಕ್ಷತಾಂ—ಯಜ ದೇವಪೂಜಾದೌ ಇದರ ಮುಂದೆ ಲೋಟ್ ಪ್ರಥಮಪುರುಷ ದ್ವಿವಚನ ತಸ್ ಲೋಟೋಲಙ್ವತ್ ಎಂಬುದರಿಂದ ಲಙ್ವದ್ಭಾವ, ತಸ್ಥಸ್ತಮಿಪಾಂತಾಂತಂತಾಮಃ, ಎಂಬುದರಿಂದ ತಾಂ ಆದೇಶ. ಶಪ್ ವಿಕರಣ. ಯಜ್+ಅ+ತಾಂ ಸಿಬ್ಬಹುಲಂ ಲೇಟಿ (ಪಾ. ಸೂ. ೩-೧-೩೪) ಎಂಬಲ್ಲಿ ಬಹುಲಗ್ರಹಣವಿರುವುದರಿಂದ ಶಪ್ ವಿಕರಣಕ್ಕಿಂತಲೂ ಪೂರ್ವಕ್ಕೆ ಸಿಪ್ ಬರುವುದು. ಯಜ್+ಸ್ ಅ+ ತಾಂ ಚೋಃಕುಃ ಎಂಬುದರಿಂದ ಕುತ್ವ ಜಕಾರಕ್ಕೆ ಗಕಾರ. ಖರಿಚ (ಪಾ. ಸೂ. ೮-೪-೫೫) ಎಂಬುದರಿಂದ ಶ್ಚರ್ತ್ವ ಗಕಾರಕ್ಕೆ ಕಕಾರ. ಆದೇಶಪ್ರತ್ಯಯಯೋಃ (ಪಾ. ಸೂ. ೮-೩-೫೯) ಎಂಬುದರಿಂದ ಸಕಾರಕ್ಕೆ ಷಕಾರ. ಯಕ್ಷತಾಂ ಎಂದಾಗುವುದು. ತಿಙ್ಶಿತಿಙಃ ಎಂಬುದರಿಂದ ಸರ್ವಾನುದಾತ್ತ ॥ ೮ ॥

॥ ಸಂಹಿತಾಪಾಠಃ ॥

ಇಳಾ ಸರಸ್ವತೀ ಮಹೀ ತಿಸ್ರೋ ದೇವೀರ್ಮಯೋಭುವಃ ।
ಬರ್ಹಿಃ ಸೀದಂತ್ವಸ್ರಿಧಃ ॥ ೯ ॥

॥ ಪದಪಾಠಃ ॥

ಇಳಾ । ಸರಸ್ವತೀ । ಮಹೀ । ತಿಸ್ರಃ । ದೇವೀಃ । ಮಯಃ ಽ ಭುವಃ ॥
ಬರ್ಹಿಃ । ಸೀದಂತು । ಅಸ್ರಿಧಃ ॥ ೯ ॥

॥ ಸಾಯಣಭಾಷ್ಯಂ ॥

ಅತ್ರ ಮಹೀಶಬ್ದೋ ಮಹತ್ವೇಗುಣಯುಕ್ತಾಂ ಭಾರತೀಮಾಚಷ್ಟೇ ಽನ್ಯೇಷ್ವಪ್ಯೇಷಸೂಕ್ತೇಷು ಸರ್ವತ್ರೈವೇಷ್ವಿಳಾ ಸರಸ್ವತೀ ಭಾರತೀತ್ಯಾಮ್ನಾತತ್ವಾತ್ । ಇಳಾದಿಶಬ್ದಾಭಿಧೇಯಾ ವಹ್ನಿಮೂರ್ತಯಸ್ತಿಸ್ರೋ ದೇವೀರ್ದಿವ್ಯಮಾನಾ ಬರ್ಹಿರ್ವೇದ್ಯಾಮಾಸ್ತೀರ್ಣಂ ಸೀದಂತು । ಸ್ರಾಪ್ನುವಂತು। ಕೀದೃಶ್ಯಃ । ಮಯೋಭುವಃ ಸುಖೋತ್ಪಾದಿಕಾ ಅಸ್ರಿಧಃ ಶೋಷೇಣ ಕ್ಷಯೇಣ ವಾ ರಹಿತಾಃ ॥ ಇಳಾ । ಈಡ ಸ್ತುತೌ । ಛಾಂದಸಂ ಹ್ರಸ್ವತ್ವಂ । ಕ್ವಿಪ್ । ಧಾತುಸ್ವರಃ । ಟಾಪಂ ಚಾಪಿ ಹಲಂತಾನಾಂ ಯಥಾ ವಾಚಾ ದಿಶಾ ನಿಶೇತಿ ಟಾಪ್ । ಸರಸ್ವತೀ । ಸರೋ ಽಸುನಂತೋ ನಿತ್ತ್ವಾದಾದ್ಯುದಾತ್ತಃ । ತದಸ್ಯಾಸ್ತೀತಿ ಮತುಪ್ । ಅದುಪಧತ್ವಾದ್ವತ್ವಂ । ತಸೌ ಮತ್ವರ್ಥ ಇತಿ ಭತ್ವೇನ ಪದತ್ವಸ್ಯ ಬಾಧಿತತ್ವಾದ್ರುತ್ವಾದ್ಯಭಾವಃ । ಉಗಿತಶ್ಚೇತಿ ಙೀಪ್। ಮತುಬ್ವೀಪೌ ಪಿತ್ವಾದನುದಾತ್ತೌ । ಮಹೀ । ಮಹತೀಶಬ್ದೇ ತಕಾರಲೋಪಶ್ಚಾಂದಸಃ । ಯಸ್ಯೇತಿ ಚೇತ್ಯಕಾರಲೋಪಃ । ಉದಾತ್ತನಿವೃತ್ತಿಸ್ವರೇಣ ಙೀಪ ಉದಾತ್ತತ್ವಂ । ತಿಸ್ರಃ । ತ್ರಿಶಬ್ದಾಜ್ಜಸಿ ತ್ರಿಚತುರೋಃ ಸ್ತ್ರಿಯಾಂ ತಿಸೃಚತಸೃ । ಪಾ. ೭-೨-೯೯ । ಇತಿ ತಿಸ್ರಾದೇಶಃ । ಅಚಿ ರ ಋತಃ । ಪಾ. ೭-೨-೧೦೦ । ಇತಿ ರೇಫಾದೇಶಃ । ತಿಸೃಭ್ಯೋ ಜಸಃ । ಪಾ. ೬-೧-೧೬೬ । ಇತಿ ಜಸ ಉದಾತ್ತತ್ವಂ । ದೇವೀಃ ದೇವಾನಾಂ ಸತ್ಯೋ ಽಯೇ ದೇವ್ಯಃ ಪುಂಯೋಗಾದಾಖ್ಯಾಯಾಮಿತಿ ಙೀಷ್ । ಯಸ್ಯೇತಿ ಚೇತ್ಯಕಾರ ಲೋಪಃ । ಪ್ರತ್ಯಯಸ್ವರೇಣ ಙೀಷ ಉದಾತ್ತತ್ವಂ । ಜಸಿದೀರ್ಘಾಜ್ಜಸಿ ಚ । ಪಾ. ೬-೧-೧೦೫ । ಇತಿ ನಿಷಿದ್ಧಂ ದೀರ್ಘತ್ವಂ । ವಾ ಛಂದಸೀತಿ ಪಕ್ಷೇ ಽಭ್ಯನುಜ್ಞಾಯತೇ । ಮಯೋಭುವಃ । ವಿಾಙ್ ಹಿಂಸಾಯಾಂ । ಹಿನಸ್ತಿ ದುಃಖಮಿತಿ ಸುಸುಂ ಮಯಃ । ತದ್ಭಾವಯಂತೀತಿ ಮಯೋಭುವಃ । ಅಂತರ್ಭಾವಿತಣ್ಯರ್ಥಾದ್ಭುವಃ ಕ್ವಿಪ್ । ಕೃದುತ್ತರಪದಪ್ರಕೃತಿಸ್ವರತ್ವಂ । ಬರ್ಹಿಃ । ಬೃಂಹೇರ್ನಲೋಪಶ್ಚೇತಿ ಸಿಪ್ರತ್ಯಯಃ । ಪ್ರತ್ಯಯಸ್ವರಃ । ಸೀದಂತು । ಷದ್ಲೃ ವಿಶರಣಾದೌ । ಪಾಘ್ರೇತ್ಯಾದಿನಾ ಸೀದಾದೇಶಃ । ಅಸ್ರಿಧಃ । ಸ್ರಿಧೇರ್ಹಿಂಸಾರ್ಥಸ್ಯ ಶೋಷಣಾರ್ಥಸ್ಯ ವಾ ಸರಿಪದಾದಿಭ್ಯೋ ಭಾವೇ ಕ್ವಿಪಿ ನಞಾ ಬಹುವ್ರೀಹೌ । ಪೂರ್ವಪದಪ್ರಕೃತಿಸ್ವರಂ ಬಾಧಿತ್ವಾ ನಞ್ಸುಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ ॥

॥ ಪ್ರತಿಪದಾರ್ಥ ॥

ಮಯೋಭುವಃ—ಸುಖವನ್ನುಂಟುಮಾಡುವ । **ಅಸ್ರಿಧಃ**—ಕ್ಷಯರಹಿತರಾದ ಅಥವಾ ಹಿಂಸೆಮಾಡದಿರುವ । **ಇಳಾ**—ಇಳಾ ಎಂಬ ದೇವಿಯೂ । **ಸರಸ್ವತೀ**—ಸರಸ್ವತೀ ಎಂಬ ದೇವಿಯೂ । **ಮಹೀ**—ಮಹತ್ವಗುಣಯುಕ್ತಳಾದ (ಭಾರತೀ ಎಂಬ) ದೇವಿಯೂ । **ತಿಸ್ರೋ ದೇವೀಃ**—ಇಳಾದಿ ಶಬ್ದಗಳಿಂದ ಕರೆಯಲ್ಪಡುವ ಅಗ್ನಿಮೂರ್ತಿಗಳಾದ ಪ್ರಕಾಶಮಾನರಾದ ಈ ಮೂರು ಜನ ದೇವತೆಯರು । **ಬರ್ಹಿಃ**—ವೇದಿಯ ಮೇಲೆ ಆಸ್ತರಣಾರ್ಥವಾಗಿ ಹರಡಿರುವ ದರ್ಭೆಯನ್ನು । **ಸೀದಂತಃ**—ಕೂಂದಲಿ (ಎಂದರೆ ದರ್ಭೆಯ ಮೇಲೆ ಕುಳಿತುಕೊಳ್ಳಲಿ).

॥ ಭಾವಾರ್ಥ ॥

ಅಗ್ನಿಮೂರ್ತಿಸ್ವರೂಪರೂ ದೇದೀಪ್ಯಮಾನರೂ ಆದ, ಸರ್ವರಿಗೂ ಸುಖವನ್ನುಂಟುಮಾಡುವ ಮತ್ತು ಯಾರಿಗೂ ಹಿಂಸೆಮಾಡದಿರುವ ಇಳಾ ಸರಸ್ವತೀ ಭಾರತಿ (ಮಹಿ)ಯರೆಂಬ ಮೂರು ಮಂದಿ ದೇವಿಯರು ಯಜ್ಞವೇದಿಯ ಮೇಲೆ ಆಸನಾರ್ಥವಾಗಿ ಹಾಸಿರುವ ದರ್ಭೆಯ ಮೇಲೆ ಬಂದು ಕುಳಿತುಕೊಳ್ಳಲಿ.

English Translation

May Ila, Saraswati, Mahi (Bharati), the three comfort-giving and unhurting goddesses sit on the sacrificial grass.

॥ ವಿಶೇಷವಿಷಯಗಳು ॥

ತಿಸ್ರೋ ದೇವೀಃ ಎಂಬ ವಿಷಯದಲ್ಲಿ ಯಾಸ್ಕರು—

ತಿಸ್ರೋ ದೇವೀಃ । ತಿಸ್ರೋ ದೇವೀಸ್ತಿಸ್ರೋ ದೇವ್ಯಃ ॥

ಎಂದು ಮಾತ್ರ ಹೇಳಿ ಉದಾಹರಣೆಗಾಗಿ ಕೊಟ್ಟಿರುವ ಋಕ್ಕಿನಲ್ಲಿ

ಆ ನೋ ಯಜ್ಞಂ ಭಾರತೀ ತೂಯಮೇತ್ವಿಳಾ ಮನುಷ್ವದಿಹ ಚೇತಯಂತೀ ।
ತಿಸ್ರೋ ದೇವೀರ್ಬರ್ಹಿರೇದಂ ಸ್ಯೋನಂ ಸರಸ್ವತೀ ಸ್ವಪಸಃ ಸದಂತು ॥

(ಋ. ಸಂ. ೧೦-೧೧೦-೮)

ಏತು ನೋ ಯಜ್ಞಂ ಭಾರತೀ ಸ್ವಿಪ್ರಂ । ಭರತ ಅದಿತ್ಯಸ್ತಸ್ಯ ಭಾ ಇಳಾ ಚ ಮನುಷ್ವದಿಹ ಚೇತಯಮಾನಾ ತಿಸ್ರೋ ದೇವ್ಯೋ ಬರ್ಹಿರಿದಂ ಸುಖಂ ಸರಸ್ವತೀ ಚ ಸಕರ್ಮಾಣ ಆಸೀದಂತು ॥

ಎಂದು ವಿವರಿಸಿರುವರು. ಎಂದರೆ—

ಭಾರತೀ—ಭರತನೆಂದರೆ ದ್ವಾದಶಾದಿತ್ಯರಲ್ಲಿ ಒಬ್ಬನು. ಆದಿತ್ಯನ ದೀಪ್ತಿಗೆ ಭಾ ಎಂದು ಹೆಸರು. ಆದುದರಿಂದ ಭಾರತಿಯೆಂದರೆ ಸೂರ್ಯನ ಪ್ರಕಾಶವು ಅಥವಾ ಸೂರ್ಯಮಂಡಲದಲ್ಲಿ ಪ್ರಕಾಶರೂಪದಿಂದಿರುವ ಅಗ್ನಿಯು.

ಇಳಾ—ಇಳಾ ಎಂದರೆ ಪೃಥಿವಿಯು. **ಮನುಷ್ವತ್ ಚೇತಯಂತೀ**—ಮನುಷ್ಯರಂತೆ ಪ್ರೇರಿಸುವ ಶಕ್ತಿಯುಳ್ಳ ಎಂದರೆ ಭೂಮಿಯ ಮೇಲೆ ಇರುವ ಮನುಷ್ಯರಿಗೆ ಅನ್ನಾದ್ಯಾಹಾರಗಳನ್ನು ಧನಾದಿಗಳನ್ನು, ಕೊಡುವುದರಿಂದ ಇಳಾ ಎಂದರೆ ಪೃಥಿವೀಸ್ಥಾನದಲ್ಲಿರುವ ಅಗ್ನಿಯ ರೂಪವಿಶೇಷವು.

ಸರಸ್ವತೀ—ಅಂತರಿಕ್ಷ ಸ್ಥಾನದಲ್ಲಿರುವ ಶಿಡಿಲುಮಿಂಚುಗಳಿಗೆ ಅಭಿಮಾನಿದೇವತೆಯಾಗಿರುವುದರಿಂದ ಸರಸ್ವತಿಯು ಅಂತರಿಕ್ಷಸ್ಥಾನದಲ್ಲಿರುವ ಅಗ್ನಿಸ್ವರೂಪವೆಂದು ಹೇಳಲ್ಪಡುವುದು.

ಆದುದರಿಂದ ಇಳಾ, ಸರಸ್ವತೀ, ಭಾರತೀ ಎಂಬ ಮೂರು ಮಂದಿ ದೇವಿಯರನ್ನು ಸ್ವರ್ಗ, ಅಂತರಿಕ್ಷ, ಭೂಮಿಯ ಮೇಲೆ ಇರುವ ಅಗ್ನಿಯ ಮೂರು ರೂಪಗಳೆಂದು ಹೇಳುವ ರೂಢಿಯಿರುವುದು. (೭೪-೭೫ನೇ ಪೇಜು ಗಳನ್ನು ನೋಡಿ).

ಮಹೀ—ಮಹೀಶಬ್ದೋ ಮಹತ್ತ್ವಗುಣಯುಕ್ತಾಂ ಭಾರತೀಮಾಚಷ್ಟೇ।ನ್ಯೇಷ್ವಾಪ್ರೀಸೂಕ್ತೇಷು ಸದೈಶೇಷ್ವಿಳಾ ಸರಸ್ವತೀ ಭಾರತೀತ್ಯಾಮ್ನಾತತ್ವಾತ್ ॥ ಎಂದರೆ, ಈ ಋಕ್ಕಿನಲ್ಲಿರುವ ಮಹೀ ಎಂಬ ಶಬ್ದಕ್ಕೆ ಮಹತ್ವಗುಣಯುಕ್ತಳಾದ ಭಾರತಿಯು ಎಂದರ್ಥವು. ಏಕೆಂದರೆ, ಆಪ್ರೀಸೂಕ್ತಗಳಲ್ಲಿ ತಿಸ್ರೋದೇವೀಃ ಎಂದು ಹೇಳಿರುವ ಋಕ್ಕುಗಳಲ್ಲಿ ಇಳಾ, ಸರಸ್ವತೀ, ಭಾರತೀ ಎಂದು ಮೂವರು ದೇವಿಯರ ಹೆಸರುಗಳನ್ನು ಸ್ಪಷ್ಟವಾಗಿ ಹೇಳಿದೆ. ಈ ಋಕ್ಕಿನಲ್ಲಿ ಮಾತ್ರ ಇಳಾ, ಸರಸ್ವತೀ ಎಂಬ ಎರಡು ಹೆಸರುಗಳನ್ನು ಹೇಳಿ ಮತ್ತೊಂದು ಹೆಸರಿನ ಸ್ಥಾನದಲ್ಲಿ ಮಹೀ ಎಂದಿರುವುದರಿಂದ ಮಹೀ ಎಂಬ ಶಬ್ದವು ಭಾರತೀ ಎಂಬ ಹೆಸರನ್ನೇ ನಿರ್ದೇಶಿಸಿರುವುದೆಂದು ಹೇಳಲು ಅನುಮಾನವೇ ಇಲ್ಲ ಕೆಲವು ಪಾಶ್ಚಾತ್ಯಪಂಡಿತರು ಮಹೀ ಎಂಬ ಶಬ್ದವು ಮಹೀ ಎಂಬ ಹೆಸರಿನ ಬೇರೆ ಒಂದು ದೇವತೆಯನ್ನು ಸೂಚಿಸುವುದೆಂದು ಅಭಿಪ್ರಾಯಪಡುವರು. ಅದು ಸರಿಯಲ್ಲ. ಛಂದಸ್ಸಿನ ಅನುಕೂಲಕ್ಕಾಗಿ ಭಾರತೀ ಶಬ್ದಕ್ಕೆ ಬದಲಾಗಿ ಮಹೀಶಬ್ದವನ್ನು ಉಪಯೋಗಿಸಿರಬಹುದು.

ಬರ್ಹಿಃ ಸೀದಂತು—ವೇದ್ಯಾಮಾಸ್ತೀರ್ಣಂ ಸ್ಯಾಪ್ನುವಂತು—ಆಸನಾರ್ಥವಾಗಿ ಹಾಸಿರುವ ದರ್ಭೆಗಳನ್ನು ಹೊಂದಲಿ ಎಂದರೆ ದರ್ಭೆಯ ಆಸನದ ಮೇಲೆ ಕುಳಿತುಕೊಳ್ಳಲಿ ಎಂದಭಿಪ್ರಾಯವು.

ಇಳಾ, ಸರಸ್ವತೀ, ಮಹೀ—ಈಡ ಸ್ತುತೌ । ಸರ ಅಸ್ಯಾಸ್ತೀತಿ । ಮಹೀ ಮಹತೀ, ತಕಾರಲೋಪಶ್ಛಾಂದಸಃ॥ ಸ್ತುತಿಸಲ್ಪಡುವುದರಿಂದ ಇಡಾ ಎಂದೂ, ಸರಃ ಎಂದರೆ (ಉದಕವು) ಇರುವುದರಿಂದ ಸರಸ್ವತೀ ಎಂದೂ, ಮಹತೀ ಶಬ್ದದ ತಕಾರವು ಛಂದಸ್ಸಿನ ಅನುಕೂಲಕ್ಕಾಗಿ ಲೋಪವಾಗಿರುವುದರಿಂದ ಮಹೀ ಎಂದಾಗಿ ಮಹತ್ವಗುಣಯುಕ್ತಳಾದ (ಭಾರತೀ) ಎಂದೂ ಈ ಶಬ್ದಗಳ ಅವಯವಾರ್ಥನಿಷ್ಪತ್ತಿಯಿರುವುದು.

ದೇವೀಃ—ದೇವಾನಾಂ ಪತ್ನ್ಯೋ ದೇವ್ಯಃ । ತಾಃ । ಅಥವಾ ದೇವೀಃ ದೀಪ್ಯಮಾನಾಃ ॥ ದೇವತೆಗಳ ಪತ್ನಿಯರಾದುದರಿಂದ ಅಥವಾ ಪ್ರಕಾಶಮಾನರಾದುದರಿಂದ ದೇವೀಃ ಎಂದು ಈ ದೇವತೆಗಳಿಗೆ ಹೆಸರು.

ಮಯೋಭುವಃ—ವಿಾಙ್ ಹಿಂಸಾಯಾಂ । ಹಿನಸ್ತಿ ದುಃಖಮಿತಿ ಸುಖಂ ಮಯಃ । ತದ್ಭಾವಯಂತೀತಿ ಮಯೋಭುವಃ । ವಿಾಙ್ ಧಾತುವಿಗೆ ಹಿಂಸೆಮಾಡು ದುಃಖವನ್ನುಂಟುಮಾಡು ಎಂದರ್ಥವು. ದುಃಖರಹಿತವಾದುದು ಸುಖವು. ಸುಖವನ್ನುಂಟುಮಾಡುವುದರಿಂದ ಮಯೋಭುವ ಎಂಬ ರೂಪನಿಷ್ಪತ್ತಿಯಾಗಿರುವುದು.

ಅಸಿಧ್ರಃ—ಸ್ರಿಧೇರ್ಹಿಂಸಾರ್ಥಸ್ಯ ಶೋಷಣಾರ್ಥಸ್ಯ ವಾ ಭಾವೇ ಕ್ವಿಪ್ । ಶೋಷೇಣ ಕ್ಷಯೇಣ ವಾ ರಹಿತಾಃ ॥ ಸ್ರಿಧಿ ಧಾತುವಿಗೆ ಹಿಂಸೆಮಾಡು, ಶೋಷಣೆಮಾಡು ಎಂದರ್ಥವು. ಅಸಿಧ್ರಃ ಎಂದರೆ ಅರೀತಿ ಇಲ್ಲದಿರುವ, ಶೋಷಣರಹಿತರಾದ, ಕ್ಷಯರಹಿತರಾದ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಇಳಾ—ಈಡಸ್ತುತೌ ಧಾತು. ಈಕಾರಕ್ಕೆ ಛಾಂದಸವಾಗಿ ಹ್ರಸ್ವ ಬರುವುದು. **ಕ್ವಿಪ್ಚ** (ಪಾ. ಸೂ. ೩-೨-೭೬) ಎಂಬುದರಿಂದ ಕ್ವಿಪ್. ಕ್ವಿಪ್‌ಗೆ ಲೋಪ. **ಧಾತೋಃ** (ಪಾ.ಸೂ. ೬-೧-೧೬೨) ಎಂಬುದರಿಂದ ಅಂತೋದಾತ್ತ. **ಷ್ಟ್ಯೋಶ್ಚಾಸ್ಯ ಸ್ವರಯೋಃ** (ಪ್ರಾ ಶಾ.) ಎಂಬುದರಿಂದ ಡಕಾರಕ್ಕೆ ಳಕಾರ. ವಷ್ಟಿಭಾಗುರಿಂಲ್ಲೋಪಮವಾಪ್ಯೋರುಪಸರ್ಗಯೋಃ । ಆಪಂ ಜೈವ ಹಲನ್ತಾನಾಂ ಯಥಾ ವಾಚಾ ನಿಶಾ ದಿಶಾ (ಕೌ. ೨-೪-೮೨) ಭಾಗುರಿಮಹರ್ಷಿಗಳು ಅವ ಅಪಿ ಎಂಬ ಉಪಸರ್ಗಗಳ ಅಕಾರಕ್ಕೆ ಲೋಪವನ್ನು ಹೇಳುವರು. ಅವಗಾಹಃ ಎಂಬಲ್ಲಿ ವಗಾಹಃ ಎಂದೂ ಅಪಿಧಾನಂ ಎಂಬಲ್ಲಿ ಪಿಧಾನಂ ಎಂದೂ ಆಗುವುದು.।ಶಬ್ದಗಳು ಹಲಂತವಾಗಿದ್ದರೆ ಅವುಗಳ ಮುಂದೆ ಆಪ್ ಪ್ರತ್ಯಯವನ್ನು ಅಪೇಕ್ಷಿಸುವರು ಎಂದು ಶ್ಲೋಕದ ಅರ್ಥ. ಇದರಿಂದ ಇಳ್ ಎಂಬುದರ ಮುಂದೆ ಟಾಪ್ ಬರುವುದು ಇಳಾ ಎಂದಾಗುವುದು.

ಸರಸ್ವತೀ—ಸೃ ಧಾತುವಿನ ಮುಂದೆ ಅಸುನ್ ಪ್ರತ್ಯಯವು. **ಸರ್ವಧಾತುಭ್ಯೋಽಸುನ್** (ಉ. ಸೂ. ೪-೬೮೮) ಎಂಬುದರಿಂದ ಬರುವುದು. ಗುಣ. ರಪರತ್ವ. ಸರಃ. ಇದು ನಿತ್ಸ್ವರದಿಂದ ಆದ್ಯುದಾತ್ತ. ಸರಃ ಅಸ್ಯ ಅಸ್ತಿ ಎಂದು ವಿಗ್ರಹ ಮಾಡಿದರೆ **ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್** (ಪಾ. ಸೂ. ೫-೨-೯೪) ಎಂಬುದರಿಂದ ಮತುಪ್ ಸದಸ್ ಎಂಬುದು ಆದುಪದ ಆದ್ದರಿಂದ **ಮಾದುಪಧಾಯೋಶ್ಚ** (ಪಾ. ಸೂ. ೮-೨-೯) ಎಂಬುದರಿಂದ ಮಕಾರಕ್ಕೆ ವಕಾರ **ತೆಸೌಮತ್ವರ್ಥೇ** (ಪಾ.ಸೂ. ೧-೪-೧೯) ಮತ್ವರ್ಥಪ್ರತ್ಯಯವು ಪರದಲ್ಲಿರುವಾಗ ತಕಾರಾಂತ ಸಕಾರಾಂತಪದಗಳು ಭ ಸಂಜ್ಞೆಯನ್ನು ಹೊಂದುವುವು ಎಂಬುದರಿಂದ ಪದಸಂಜ್ಞೆಯನ್ನು ಬಾಧಿಸಿ ಭಸಂಜ್ಞೆ ಬರುವುದು. ಆದ್ದರಿಂದ **ಸಸಜುಷೋಃ ರುಃ** (ಪಾ. ಸೂ. ೮-೨-೬೬) ಇತ್ಯಾದಿ ಶಾಸ್ತ್ರಗಳಿಂದ ರುತ್ವಾದಿ ಕಾರ್ಯಗಳು ಬರುವುದಿಲ್ಲ. **ಉಗಿದಚ್ಚ** (ಪಾ. ಸೂ. ೬-೩-೪೫) ಎಂಬುದರಿಂದ ಙೀಪ್, ಮತುಪ್ ಙೀಪ್ ಎರಡೂ ಪಿತ್ತಾದ್ದರಿಂದ ಅನುದಾತ್ತ.

ಮಹೀ—ಮಹತೀ ಶಬ್ದದ ತಕಾರಕ್ಕೆ ಛಾಂದಸವಾಗಿ ಲೋಪ, ಹಕಾರೋತ್ತರದಲ್ಲಿರುವ ಅಕಾರಕ್ಕೆ **ಯಸ್ಯೇತಿಚ** (ಪಾ. ಸೂ. ೬-೪-೧೪೮) ಎಂಬುದರಿಂದ ಲೋಪ, **ಅನುದಾತ್ತಸ್ಯಚ ಯತ್ರೋದಾತ್ತ-ಲೋಪಃ** (ಪಾ. ಸೂ. ೬-೧-೧೬೨) ಎಂಬುದರಿಂದ ಉದಾತ್ತವಾದ ಅಕಾರಲೋಪಕ್ಕೆ ನಿಮಿತ್ತವಾದ ಈಕಾರವು ಉದಾತ್ತವಾಗುವುದು.

ತಿಸ್ರಃ—ತ್ರಿ ಶಬ್ದದ ಮುಂದೆ **ಜಸ್ ತ್ರಿಚತುರೋಃಸ್ತ್ರಿಯಾಂ ತಿಸೃ ಚತಸೃ** (ಪಾ. ಸೂ. ೭-೩-೯೯) ವಿಭಕ್ತಿಯು ಪರದಲ್ಲಿರುವಾಗ ಸ್ತ್ರೀತ್ವವಿಶಿಷ್ಟಾರ್ಥಪ್ರತಿಪಾದಕಗಳಾದ ತ್ರಿ ಚತುರ್ ಶಬ್ದಗಳ ಸ್ಥಾನದಲ್ಲಿ ಕ್ರಮವಾಗಿ ತಿಸೃ-ಚತಸೃ ಎಂಬ ಆದೇಶಗಳು ಬರುವುದು ಎಂಬುದರಿಂದ ತ್ರಿಸೃ ಆದೇಶ. ತಿಸೃ+ಅಸ್ **ಋತೋಙಿ ಸರ್ವನಾಮಸ್ಥಾನಯೋಃ** (ಪಾ. ಸೂ. ೬-೩-೧೧೦) ಎಂಬುದರಿಂದ ಗುಣವು ಪ್ರಾಪ್ತವಾದರೆ ಅದಕ್ಕೆ ಅಪವಾದ **ಆಚ್ಛಿಯತಃ** (ಪಾ- ಸೂ. ೭-೨-೧೦೦) ಅಜ್ವರ್ಣಪರದಲ್ಲಿದ್ದರೆ ತಿಸೃ, ಚತಸೃ ಇವುಗಳ ಋಕಾರಕ್ಕೆ ರ ಆದೇಶ ಬರುವುದು ಎಂಬುದರಿಂದ ರೇಫಾದೇಶ. ರುತ್ವ ವಿಸರ್ಗ, ತಿಸ್ರಃ ಎಂದಾಗುವುದು. ಅನುದಾತ್ತೌ ಸುಪ್ಪಿತೌ ಎಂಬುದರಿಂದ ಜಸ್ ಪ್ರತ್ಯಯವು ಅನುದಾತ್ತ. ತ್ರಿಶಬ್ದವು ಅಂತೋದಾತ್ತ. ಆದರ ಸ್ಥಾನದಲ್ಲಿ ಬರುವ ತಿಸೃ ಆದೇಶವೂ ಸ್ಥಾನಿವದ್ಭಾವದಿಂದ ಅಂತೋದಾತ್ತ. ಉದಾತ್ತವಾದ ಋಕಾರದ ಸ್ಥಾನದಲ್ಲಿ ರೇಫರೂಪವಾದ ಯಣ್ ಬಂದಿರುವುದು ಆದ್ದರಿಂದ **ಉದಾತ್ತ ಸ್ವರಿತಯೋರ್ಯಣಃ ಸ್ವರಿತೋ೨ನುದಾತ್ತಸ್ಯ** ಉದಾತ್ತ ಅಥವಾ ಸ್ವರಿತ ಇವುಗಳ ಸ್ಥಾನದಲ್ಲಿ ಬಂದಿರುವ ಯಣ್ವರ್ಣದ ಮುಂದೆ ಇರುವ ಅನುದಾತ್ತವು ಸ್ವರಿತವಾಗುವುದು ಎಂಬುದರಿಂದ ಸ್ವರಿತ ಪ್ರಾಪ್ತವಾದರೆ ಅದನ್ನು ಬಾಧಿಸಿ **ತಿಸೃಭ್ಯೋ೨ಜಸಃ** (ಪಾ.ಸೂ. ೭-೧-೧೭೭) ತಿಸೃ ಶಬ್ದದ ಮುಂದೆ ಇರುವ ಜಸ್ ಪ್ರತ್ಯಯದ ಅಂತವು ಉದಾತ್ತವಾಗುವುದು. ಎಂಬುದರಿಂದ ಜಸ್ ಪ್ರತ್ಯಯವು ಉದಾತ್ತ.

ದೇವೀಃ—ದೇವಶಬ್ದವು ಅಚ್ಪ್ರತ್ಯಯಾಂತ. **ದೇವಾನಾಂ ಪತ್ನ್ಯ ಃ ದೇವ್ಯಃ ಪುಂಯೋಗಾದಾಖ್ಯಾಯಾಮ್** (ಪಾ. ಸೂ. ೪-೧-೪೮) ಎಂಬುದರಿಂದ ಙೀಷ್ ಯಸ್ಯೇತಿಚ (೬-೪-೧೪೮) ಎಂಬುದರಿಂದ ಅಕಾರಕ್ಕೆ ಲೋಪ, ಙೀಷ್ ಪ್ರತ್ಯಯವು ಪ್ರತ್ಯಯಸ್ವರದಿಂದ ಉದಾತ್ತ, ದೇವೀ ಎಂದಾಯಿತು. ಇದರ ಮುಂದೆ ಜಸ್ ಪ್ರತ್ಯಯವನ್ನಿಟ್ಟರೆ **ಪ್ರೆಥಮಯೋಃಪೂರ್ವಸವರ್ಣಃ** (ಪಾ. ಸೂ. ೬-೧-೧೦೨) ಎಂದು ವಿಹಿತವಾದ ಪೂರ್ವಸವರ್ಣ ದೀರ್ಘಕ್ಕೆ **ದೀರ್ಘಾಜ್ಜಸಿಚ** (ಪಾ. ಸೂ. ೬-೧-೧೦೫) ಎಂಬುದರಿಂದ ನಿಷೇಧ ಪ್ರಾಪ್ತವಾದರೂ **ವಾಳಂಡಿಸಿ** (ಪಾ. ಸೂ. ೬-೧-೧೦೬) ಎಂಬುದರಿಂದ ಪಾಕ್ಷಿಕವಾದ ಅಭ್ಯನುಜ್ಞೆ ಇರುವಕಾರಣ ಪೂರ್ವಸವರ್ಣ ದೀರ್ಘವು ಬರುವುದು. ರುತ್ವ, ವಿಸರ್ಗ, ದೇವೀಃ ಎಂದಾಗುವುದು.

ಮಯೋಭುವಃ—ಮಾಙ್ ಹಿಂಸಾಯಾಂ ಕ್ಯಾದಿ ಧಾತು. ಮಿನಾತಿ ಹಿನಸ್ತಿ ದುಃಖಮ್. ದುಃಖವನ್ನು ಹೋಗಲಾಡಿಸುವುದು) ಎಂದು ವಿಗ್ರಹ. **ಸರ್ವಧಾತುಭ್ಯೋ೨ಸುನ್** (ಉ. ಸೂ. ೪-೬೩೪) ಎಂಬುದರಿಂದ ಅಸುನ್ ಪ್ರತ್ಯಯ, ಗುಣ. ಅಯಾದೇಶ, ಯಸ್ ಎಂದಾಗುವುದು. ಮಯಸ್ ಶಬ್ದಕ್ಕೆ ಸುಖ ಎಂದು ಅರ್ಥ. ಮಯಃ ಭಾವಯನ್ತಿ ಇತಿ ಮಯೋಭುವಃ, ಮಯಶ್ಶಬ್ದೋಪಪದಕವಾದ ಅಂತರ್ಭಾವಿತ ಣಿಚ್ ಪ್ರತ್ಯಯಾರ್ಥಕ ಭೂಧಾತುವಿನ ಮುಂದೆ **ಕ್ವಿಪ್‌ಚ** (ಪಾ. ಸೂ. ೩-೨-೭೬) ಎಂಬುದರಿಂದ ಕ್ವಿಪ್. ಮಯೋಭೂಶಬ್ದದ ಮುಂದೆ ಜಸ್. **ಅ ಚಿ ಶ್ನು** (ಪಾ. ಸೂ. ೬-೪-೭೭) ಎಂಬುದರಿಂದ ಉವಙ್ ಆದೇಶ. ಮಯಸ್+ಭೂ ಎಂದಿರುವಾಗ ರುತ್ವ ಉತ್ವ ಗುಣಗಳು ಬರುವುವು. **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬ ಕೃದುತ್ತರಪದಪ್ರಕೃತಿಸ್ವರದಿಂದ ಮಯೋಭೂಃ ಎಂಬುದು ಅಂತೋದಾತ್ತ.

ಬರ್ಹಿಃ—ಬೃಹಿ ವೃದ್ಧೌ. ಇದಿತ್ವಾದ್ದಲಿಂದ ನುಮಾಗಮ. ಬೃಂಹೇರ್ನ ಲೋಪಶ್ಚ (ಉ. ಸೂ. ೨-೨೬೬) ಎಂಬುದರಿಂದ ಇಸಿ ಪ್ರತ್ಯಯವೂ ನಕಾರಕ್ಕೆ ಲೋಪವೂ ಬರುವುದು. ಲಘೂಪಧಗುಣ ಪ್ರತ್ಯಯ ಸ್ವರದಿಂದ ಅಂತೋದಾತ್ತ.

ಸೀದಂತಂ — ಷದ್ಲೃ ವಿಶರಣಗತ್ಯವಸಾದನೇಷು. ಧಾತ್ವಾದೇಃ ಷಃ ಸಃ ಎಂಬುದರಿಂದ ಷಕಾರಕ್ಕೆ ಸಕಾರ. ಲೋಟ್ ಪ್ರಥಮಪುರುಷಬಹುವಚನ ಝಿ ಪ್ರತ್ಯಯ. ಝೋನ್ತಃ (ಪಾ. ಸೂ. ೭-೧-೩) ಎಂಬುದರಿಂದ ಝಕಾರಕ್ಕೆ ಅನ್ತ್ ಆದೇಶ ವಿರುಃ (ಪಾ. ಸೂ. ೩-೪-೮೬) ಎಂಬುದರಿಂದ ಏಕಾರಕ್ಕೆ ಉಕಾರ. ಶಪ್ ವಿಕರಣ. ಸದ್-ಅ+ಅನ್ತು. ಸದ್ ಎಂಬುದಕ್ಕೆ ಸಾಹ್ವಾಧ್ಮಾನ್ನಾ (ಪಾ. ಸೂ. ೭-೩-೯೫) ಎಂಬುದರಿಂದ ಸೀದ ಎಂಬ ಆದೇಶ. ಸೀದನ್ತು ಎಂದಾಗುವುದು. ತಿಙ್ಶಿತಿಙಃ ಎಂಬುದರಿಂದ ಸರ್ವಾನುದಾತ್ತ.

ಅಸ್ರಿಧಃ—ಸ್ರಿಧ್ ಧಾತುವು ಹಿಂಸಾರ್ಥಕ ಅಥವಾ ಶೋಷಣಾರ್ಥಕ ಇದರ ಮುಂದೆ ಸಂಪದಾದಿ. ಭ್ಯಃಕ್ವಿಪ್ (ಪಾ. ಸೂ. ವಾ. ೦-೩-೧೦೮-೯) ಎಂಬುದರಿಂದ ಕ್ವಿಪ್. ನ ವಿದ್ಯತೇ ಸ್ರಿತ್ ಯಾಸಾಂ ತಾಃ ಅಸ್ರಿಧಃ ಎಂದು ಬಹುವ್ರೀಹಿ. ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್ (ಪಾ. ಸೂ. ೬-೩-೧) ಎಂದು ವಿಹಿತವಾದ ಪೂರ್ವಪದಪ್ರಕೃತಿಸ್ವರವನ್ನು ಬಾಧಿಸಿ ನಞ್‌ಸುಭ್ಯಾಮ್ (ಪಾ. ಸೂ. ೬-೩-೧೭೩) ಎಂಬುದರಿಂದ ಉತ್ತರ ಪದಕ್ಕೆ ಅಂತೋದಾತ್ತಸ್ವರ ಬರುವುದು ॥ ೯ ॥

॥ ಸಂಹಿತಾಪಾಠಃ ॥

ಇಹ ತ್ವಷ್ಟಾರಮಗ್ರಿಯಂ ವಿಶ್ವರೂಪಮುಪ ಹ್ವಯೇ ।
ಅಸ್ಮಾಕಮಸ್ತು ಕೇವಲಃ ॥ ೧೦ ॥

॥ ಪದಪಾಠಃ ॥

ಇಹ । ತ್ವಷ್ಟಾರಂ । ಅಗ್ರಿಯಂ । ವಿಶ್ವ ऽ ರೂಪಂ । ಉಪ । ಹ್ವಯೇ ॥
ಅಸ್ಮಾಕಂ । ಅಸ್ತು । ಕೇವಲಃ ॥ ೧೦ ॥

॥ ಸಾಯಣಭಾಷ್ಯಂ ॥

ಪತ್ನೀಸಂಯಾಜೇ ತ್ವಷ್ಟುಃ ಪುರೋನುವಾಕ್ಯೇಹ ತ್ವಷ್ಟಾರಮಗ್ರಿಯಮಿತಿ । ಶಂ ಯುವಾಕಾಯು ಸಂಪ್ರೈಷಿತ ಇತಿ ಖಂಡೇ ಸೂತ್ರಿತಂ । ಸಂ ತೇ ಪಯಾಂಸಿ ಸಮು ಯಂತು ವಾಜಾ ಇಹ ತ್ವಷ್ಟಾರಮಗ್ರಿಯಂ । ಅ. ೧-೧೦ ॥ ಇತಿ ॥

त्वष्टारं त्वष्ट्रनामकमग्निमिह कर्मण्यसह्वयेः। कीदृशं । अग्रियं श्रेष्ठं विश्वरूपं बहुविधरूपोपेतं । सोऽस्माकं केवलोऽसाधारणोऽस्तु । इतरयेज-मानेभ्योऽस्यधिकमनुग्रहं करोत्वित्यर्थः॥ त्वष्टारं । तक्षतू त्वष्टरू तनूकरणे । तृन्। स्वरतिसूतिसूयतिधूञूदितोवा। पा. ३-१-४४। इतीडभावपक्षे स्ट्योः संयोगाद्योरंते च । पा. ८-२-२४। इति ककारलोपः । ष्टुत्वं । द्वितीयैकवचनेऽयं तोः ञसर्व-नामस्थानयोरिति गुणेऽप्त्रृन्नित्यादिनोपधायाः दीर्घः । तृनः नित्त्वादाद्युदात्तत्वं । अग्रियं अग्र्यादित्यनुवृत्तौ घच्छौ च । पा. ४-४-११२ । इति घच् । अयनेयीत्यादिना । पा. ६-४-२ । घकारस्य इयादेशः । यस्येति लोपः । अयनादिघप्रदेशिवद्वचनं स्वरसिद्ध्यर्थं । पा. ६-४-२-८ । इत्युपदेशिवदाद्यन्नित्त्वात्प्रत्ययाद्युदात्तत्वात्त्र्य-द्ध्वचश्चित्त्वादंतोदात्तत्वं । विश्वरूपं । विश्वानि रूपाणि त्वष्ट्रत्वष्ट्रन्त्वेन यस्य । त्वष्टा वै पशूनां मिथुनानां रूपकृत् । तै सं-६-१-४-४ । इति श्रुतेः। विश्वशब्दस्याद्युदात्तत्वात्पूर्वपदे प्रकृतिस्वरत्वेन प्राप्ते बहुव्रीहौ विश्वं संज्ञायां । पा. ६-२-१०६ । इति पूर्वपदान्तोदात्तत्वं । अस्माकं । असु क्षेपणे । युष्मदस्मद्भ्यां मदिक् । उ.१-१४९ । प्रत्ययस्वरेणान्तोदात्तः । षष्ठ्यर्थबहुवचनमामर्थं। अत्र परमपि योगेऽणि । पा.६-३-९८ । इति यत्वं प्राधिक्या नित्यत्वात्प्रकृतिपदविधित्वाच्चाम आकमादेशे कृते । पा. ६-१-११ । अनादेश इति निषेधेन । पा. ६-३-९६ । यत्वाभावाच्छेषे लोपे इति ककारलोपेऽकारान्तत्वेन पश्चात्त्राप्रत्ययापि सुटः । पा. ६-१-४३ । सामु इति निर्देशेऽस्मन्निन्यंतर्भावेन निवृत्तिः । एवमर्थ एव हि सामु इति ससुट्कनिर्देशः । केवलः । वृषादेरकृतिगणत्वा-दाद्युदात्तः ॥

॥ प्रतिपदार्थ ॥

अग्रियं—श्रेष्ठवाद । विश्वरूपं—बहुविधरूपगळुळ्ळ त्वष्टारं—त्वष्ट्रवेंब (अग्निरूप विशेष) देवतेयन्नु । इह—ई यज्ञकर्मदल्लि । उप ह्वयेः—आह्वानमाडु-वेनु । (अ त्वष्ट्रवु) अस्माकं—नमगे (नम्म विषयदल्लि) । केवलः—असाधारणनागि एंदरे हेच्चाद अभिमानवुळ्ळवनागि । अस्तु—आगलि ॥

॥ भावार्थ ॥

त्वष्टा एंब देवतेयु देवतेगळल्लि श्रेष्ठनादवनु. अनेक विधवाद रूप (आकार) गळुळ्ळ वस्तुगळ निर्मापकनु. इंतह देवतेयन्नु ई यज्ञदल्लि आह्वानमाडुवेनु. अवनु नम्म विषयदल्लि अत्यंत अभिमानवुळ्ळवनागि आगलि.

English Translation.

I invoke Twashtir, the foremost and the multi-form here. May he be soley ours.

॥ ವಿಶೇಷವಿಷಯಗಳು ॥

ಈ ಮಂತ್ರದ ವಿನಿಯೋಗವು—ಯಜ್ಞದಲ್ಲಿ ಮಾಡುವ ಪತ್ನೀಸಂಯಾಜವೆಂಬ ಹೋಮದಲ್ಲಿ ಇಹ ತ್ವಷ್ಟಾರಮಗ್ರಿಯಂ ಎಂಬ ಋಕ್ಕನ್ನು ಪುರೋನುವಾಕ್ಯಾಮಂತ್ರವನ್ನಾಗಿ ಉಪಯೋಗಿಸುವರು. ಆಶ್ವಲಾಯನ ಶ್ರೌತಸೂತ್ರದ ಶಂ ಯುವಾಕಾಯೆ ಸಂಪ್ರೇಷಿತ ಎಂಬ ಖಂಡದಲ್ಲಿ ಸಂ ತೇ ಪಯೋಂಸಿ ಸಮು ಯಂತು ವಾಜಾ ಇಹ ತ್ವಷ್ಟಾರಮಗ್ರಿಯಂ (ಋ. ಸಂ. ೧-೧೩-೧೦) ಎಂಬ ಋಕ್ಕುಗಳನ್ನು ಯಾಜ್ಯಾ ಪುರೋನುವಾಕ್ಯಾ ಮಂತ್ರಗಳನ್ನಾಗಿ ಉಪಯೋಗಿಸಬೇಕೆಂದು ಹೇಳಿರುವುದು. (ಆಶ್ವ. ಸೂ. ೧-೧೦)
ಯಾಸ್ಕರ ವಿವರಣೆಯು—

> ತ್ವಷ್ಟಾ । ತ್ವಷ್ಟಾ ತೂರ್ಣಮಶ್ನುತ ಇತಿ ನೈರುಕ್ತಾಃ । ತ್ವಿಷೇರ್ವಾ ಸ್ಯಾದ್ದೀಪ್ತಿಕರ್ಮಣ ಸ್ತ್ವಕ್ಷತೇರ್ವಾ ಸ್ಯಾತ್ಕರೋತಿಕರ್ಮಣಃ ।' ಮಾಧ್ಯಮಿಕಸ್ತ್ವಷ್ಟೇತ್ಯಾಹುರ್ಮಧ್ಯಮೋ ಚ ಸ್ಥಾನೇ ಸಮಾಮ್ನಾತಃ । ಅಗ್ನಿರಿತಿ ಶಾಕಪೂಣಿಃ ॥ (ನಿ. ೮-೧೪)

ಎಂದರೆ ತ್ವಷ್ಟಾ ಎಂಬ ಶಬ್ದಕ್ಕೆ ಜಾಗ್ರತೆಯಾಗಿ ವ್ಯಾಪಿಸುವವನು ಎಂದು ನಿರುಕ್ತಕಾರರು ಹೇಳುವರು ಅಥವಾ ಪ್ರಕಾಶಮಾನನಾಗಿರುವವನು ಅಥವಾ ಕರ್ಮಗಳನ್ನು (ಶಿಲ್ಪಕರ್ಮಗಳನ್ನು ?) ಮಾಡುವವನು, ಮಾಧ್ಯಮಿಕನೆಂದೂ ಕೆಲವರು ಹೇಳುವರು. ಎಂದರೆ ದ್ಯಾವಾಪೃಥಿವಿಗಳ ಮಧ್ಯದಲ್ಲಿ ಇರುವವನು. ಅಗ್ನಿಯೆಂದು ಶಾಕಪೂಣಿಯು ಹೇಳುವನು.

ತ್ವಷ್ಟೃವು ವಿಶ್ವಕರ್ಮನಂತೆ ದೇವತೆಗಳ ಶಿಲ್ಪಿಯೆಂದೂ ಕೆಲವರು ಹೇಳುವರು. ಏಕೆಂದರೆ ಯಾಸ್ಕರು ಉದಾಹರಣೆಗಾಗಿ ಕೊಟ್ಟಿರುವ ಋಕ್ಕಿನಲ್ಲಿ

> ಯ ಇಮೇ ದ್ಯಾವಾಪೃಥಿವೀ ಜನಿತ್ರೀ ರೂಪೈರಪಿಂಶದ್ಭುವನಾನಿ ವಿಶ್ವಾ ।
> ತಮದ್ಯ ಹೋತರಿಷಿತೋ ಯಜೀಯಾನ್ ದೇವಂ ತ್ವಷ್ಟಾರಮಿಹ ಯಕ್ಷಿ ವಿದ್ವಾನ್ ॥
> (ಋ ಸಂ. ೧೦-೧೧೦-೯)

ತ್ವಷ್ಟೃವು ದ್ಯಾವಾಪೃಥಿವಿಗಳ ನಿರ್ಮಾಪಕನು ಮತ್ತು ಸಮಸ್ತ ಲೋಕಗಳಲ್ಲಿರುವ ಪ್ರಾಣಿಗಳಿಗೆ ಅವರವರಿಗೆ ಯೋಗ್ಯವಾದ ರೂಪ, ಸೌಂದರ್ಯ ಋದ್ಧಿ, ವೃದ್ಧಿ ಮೊದಲಾದವುಗಳಿಗೆ ಕಾರಣಕರ್ತನು ಎಂದು ಹೇಳಿರುವುದು. ಇದಲ್ಲದೆ ತ್ವಷ್ಟಾ ವೈ ಪಶೂನಾಂ ಮಿಥುನಾನಾಂ ರೂಪಕೃತ್ (ತೈ. ಸಂ. ೬-೧-೮-೫) ತ್ವಷ್ಟಾ ರೂಪಾಣಾಮಧಿಪತಿಃ (ತೈ. ಸಂ. ೩-೩-) ತ್ವಷ್ಟಾ ರೂಪಾಣಿ ವಿಕರೋತಿ—ಮೊದಲಾದ ಶ್ರುತಿ (ಯಜುರ್ವೇದ) ವಾಕ್ಯಗಳು ತ್ವಷ್ಟೃವಿನ ವಸ್ತುನಿರ್ಮಾಣಕುಶಲತೆಯನ್ನು ಪ್ರತಿಪಾದಿಸುವವು. ಮತ್ತು

> ಮಧ್ಯಂ ತ್ವಷ್ಟಾ ವಜ್ರಮತಕ್ಷದಾಯೆಸಂ ಮಯಿ ದೇವಾಸೋಽವೃಜನ್ನಪಿ ಕ್ರತುಂ ॥
> (ಋ. ಸಂ. ೧೦-೪೮-೩)

ತ್ವಷ್ಟೃವು ನನಗೆ ಉಕ್ಕಿನಿಂದ ವಜ್ರಾಯುಧವನ್ನು ನಿರ್ಮಾಣ ಮಾಡಿಕೊಟ್ಟನು ಎಂದು ಇಂದ್ರನು ಹೇಳಿರುವನು. ದೇವತೆಗಳಿಗೆ ಅವಶ್ಯಕವಾದ ಯಜ್ಞಸಾಮಗ್ರಿಗಳನ್ನೂ, ಇತರ ಅನೇಕ ವಸ್ತುಗಳನ್ನು ನಿರ್ಮಿಸಿ ಕೊಟ್ಟಿರುವನೆಂದು ಋಗ್ವೇದದ ಅನೇಕ ಮಂತ್ರಗಳಲ್ಲಿ ಹೇಳಿದೆ.

ತ್ವಷ್ಟೃವು ದ್ವಾದಶಾದಿತ್ಯರಲ್ಲಿ ಒಬ್ಬನೆಂದು ಪ್ರಸಿದ್ಧಿಯು. ಆದುದರಿಂದಲೇ ಪ್ರಕಾಶವಾನನು ಎಂದು ಯಾಸ್ಕರು ಅರ್ಥವಿವರಣೆ ಮಾಡಿರುವರು.

ಅಗ್ರಿಯಂ—ಶ್ರೇಷ್ಠಂ, ಪ್ರಧಾನಂ—ಶ್ರೇಷ್ಠನು, ಮುಖ್ಯನು.

ವಿಶ್ವರೂಪಂ—ವಿಶ್ವಾನಿ ರೂಪಾಣಿ ತ್ವಷ್ಟ್ರುತ್ಪನ್ನತ್ವೇನ ಯಸ್ಯ ॥ ಅನೇಕ ರೂಪಗಳ ಕಾರಣ ಕರ್ತನಾದುದರಿಂದ ವಿಶ್ವರೂಪನೆಂದು ಹೇಳಲ್ಪಡುವನು.

ಅಸ್ಮಾಕಮಸ್ತು ಕೇವಲಃ—ಈ ಋಕ್ಕಿನ ಮೂರನೆಯಪಾದವಾದ ಅಸ್ಮಾಕಮಸ್ತು ಕೇವಲಃ ಎಂಬ ವಾಕ್ಯವು ಋ. ಸಂ. ೧-೭-೧೦ನೆಯ ಋಕ್ಕಿನಲ್ಲಿಯೂ ಪಠಿತವಾಗಿರುವುದು. ಅಲ್ಲಿ ಇದು ಇಂದ್ರನ ಪರವಾಗಿರುವುದು. ನಮಗೆ ಮುಖ್ಯಾನುಗ್ರಾಹಕನಾಗಿರಲಿ ಎಂದು ಇದರ ಅಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ತ್ವೆಷ್ಟಾರಮ್—ತಕ್ಷೂ ತ್ವಕ್ಷೂ ತನೂಕರಣೇ ಧಾತು. ತ್ವಕ್ಷೂ ಧಾತುವಿನ ಮುಂದೆ ತೃನ್ ಪ್ರತ್ಯಯ, ಊದಿತ್ತು ಧಾತು. ಆದ್ದರಿಂದ ಸ್ವರತಿಸೂತಿಸೂಯತಿಧೂಞಾದಿತೋವಾ (ಪಾ. ಸೂ. ೭-೨-೪೪) ಸ್ವರತ್ಯಾದಿ ಧಾತುಗಳು, ಊಕಾರೇತ್ಸಂಜ್ಞಕವಾದ ಧಾತು, ಇವುಗಳ ಮುಂದೆ ಇರುವ ವಲಾದಿಯಾದ ಆರ್ಧಧಾತುಕಕ್ಕೆ ಇಡಾಗಮವು ವಿಕಲ್ಪವಾಗಿ ಬರುವುದು ಎಂಬುದರಿಂದ ಇಡಾಗಮ ವಿಕಲ್ಪವಾಗಿ ಬರುವುದು. ಇಡಾಗಮವು ಬರದೇ ಇರುವ ಪಕ್ಷದಲ್ಲಿ ತ್ವಕ್ಷ್+ತೃ ಎಂದಿರುವಾಗ **ಸ್ಕೋಃಸಂಯೋಗಾದ್ಯೋರಂತೇಚ** (ಪಾ. ಸೂ. ೮-೨-೨೯) ಪದದ ಕೊನೆಯಲ್ಲಿರತಕ್ಕದ್ದು. ಅಥವಾ ಝಲ್ ವರ್ಣದ ಹಿಂದೆ ಇರತಕ್ಕದ್ದು ಆದ ಸಂಯೋಗದ ಆದ್ಯವಯವವಾದ ಸಕಾರ ಕಕಾರಗಳಿಗೆ ಲೋಪಬರುವುದು ಎಂಬುದರಿಂದ ಕಕಾರಕ್ಕೆ ಲೋಪ. ತ್ವಷ್+ತೃ **ಷ್ಟುನಾಷ್ಟುಃ** (ಪಾ. ಸೂ. ೮-೪-೪೧) ಎಂಬುದರಿಂದ ಷಕಾರದ ಮುಂದೆ ಇರುವ ತಕಾರಕ್ಕೆ ಟಕಾರ. ತ್ವಷ್ಟೃ ಎಂದಾಗುವುದು. ಇದರ ಮುಂದೆ ದ್ವಿತೀಯಾ ವಿಭಕ್ತಿ ಏಕವಚನ ಅಮ್ ಪ್ರತ್ಯಯ. **ಋತೋಞಿಸರ್ವನಾಮಸ್ಥಾನೆಯೋಃ** (ಪಾ. ಸೂ. ೭-೩-೧೧೦) ಎಂಬುದರಿಂದ ಗುಣ. **ಉರಣ್ರಪರಃ** (ಪಾ. ಸೂ. ೧-೧-೫೧) ಎಂಬುದರಿಂದ ರಪರವಾಗಿ ಬರುವುದು. ತ್ವಷ್ಟರ್+ಅಮ್ **ಅಪ್ ತೃನ್ ತೃಚ್** (ಪಾ. ಸೂ. ೬-೪-೧೧) ಎಂಬುದರಿಂದ ಉಪಧಾದೀರ್ಘ. **ತ್ವೆಷ್ಟಾರಮ್** ಎಂದಾಗುತ್ತೆ. ತೃನ್ ಪ್ರತ್ಯಯವು ನಿತ್. ಆದ್ದರಿಂದ ನಿತ್ಸ್ವರದಿಂದ ಆದ್ಯುದಾತ್ತ ಬರುವುದು.

ಅಗ್ರಿಯಮ್—**ಘಜ್ಞೌ ಚ** (ಪಾ. ಸೂ. ೪-೪-೧೧೭) **ಅಗ್ರಾದ್ಯೈಶ್** (ಪಾ. ಸೂ. ೪-೪-೧೧೬) ಎಂಬ ಸೂತ್ರದಿಂದ ಅಗ್ರಾತ್ ಎಂಬ ಪದವು ಅನುವೃತ್ತವಾಗುವುದು. ಅಗ್ರಶಬ್ದಪ್ರಕೃತಿಕವಾದ ಸಪ್ತಮ್ಯಂತದ ಮುಂದೆ ಭವಃ ಎಂಬ ಅರ್ಥದಲ್ಲಿ ಘಜ್ ಛ ಎಂಬ ಎರಡು ಪ್ರತ್ಯಯಗಳು ಬರುವುವು ಎಂಬುದರಿಂದ ಘೆಜ್ ಬಂದರೆ ಅಗ್ರ+ಘ. **ಆಯನೇಯೀನೀಯಿಯೋಃ ಫ ಢ ಖ ಛಾಂ ಪ್ರತ್ಯಯಾದೀನಾಮ್** (ಪಾ. ಸೂ. ೭-೧-೨) ಪ್ರತ್ಯಯದ ಆದಿಯಲ್ಲಿರುವ ಫ ಢ ಖ ಛ ಘ ಇವುಗಳಿಗೆ ಕ್ರಮವಾಗಿ ಆಯನ್, ಏಯ್, ಈನ್, ಈಯ್, ಇಯ್ ಆದೇಶಗಳು ಬರುವುವು ಎಂಬುದರಿಂದ ಘ ಗೆ ಇಯ್ ಬಂದರೆ ಅಗ್ರ+ಇಯ್+ಅ. **ಯಸ್ಯೇತಿಚ** (ಪಾ. ಸೂ. ೬-೪-೧೪೮) ಎಂಬುದರಿಂದ ಅಕಾರ ಲೋಪ ಅಗ್ರಿಯ ಎಂದಾಗುವುದು. ಇಲ್ಲಿ ಈ ಸೂತ್ರದಿಂದ

ಬರುವ ಆದೇಶಗಳು ಪ್ರತ್ಯಯಾದಿಗಳಾದ ಘ್ ಮೊದಲಾದ ವ್ಯಂಜನಗಳಿಗೆ ಬರುವುವು. ಪ್ರಕೃತದಲ್ಲಿ ಘ್ ಎಂಬುದಕ್ಕೆ ಇಯ್ ಆದೇಶ ಬರುವುದು. ಅಂಗಾಧಿಕಾರದಲ್ಲಿ ವಿಧಿಸಿರುವುದರಿಂದ ಪ್ರಕೃತಿಪ್ರತ್ಯಯಸಾಪೇಕ್ಷವಾಗಿ ಈ ಆದೇಶಗಳು ಬರುವುವು. ಆದ್ದರಿಂದ ಇವು ಬಹಿರಂಗಗಳು. **ಆದ್ಯುದಾತ್ತಶ್ಚ** (ಪಾ. ಸೂ. ೩-೧-೩) ಎಂಬುದು ಪ್ರಕೃತಿಯನ್ನು ಅಪೇಕ್ಷಿಸುವುದಿಲ್ಲ ಆದ್ದರಿಂದ ಇದು ಅಂತರಂಗ. ಅಂತರಂಗವಾದ್ದರಿಂದ ಆಯ ನ್ನಾದಿಯಾದ ಆದೇಶಗಳು ಬರುವುದಕ್ಕಿಂತಲೂ ಮುಂಚೆಯೇ ಆದ್ಯುದಾತ್ತಶ್ಚ ಎಂಬುದರಿಂದ ಆದ್ಯುದಾತ್ತ ಬರು ವುದು. **ಪ್ರತ್ಯಯಃ** (ಪಾ. ಸೂ ೩-೧-೧) **ಪರಶ್ಚ** (ಪಾ ಸೂ ೩-೧-೨) **ಆದ್ಯುದಾತ್ತಶ್ಚ** (ಪಾ. ಸೂ. ೩-೧-೩) ಈ ಮೂರು ಸೂತ್ರಗಳೂ ಪ್ರತ್ಯಯವಿಧಿಯಲ್ಲಿ ಅಧಿಕೃತಗಳಾಗುವುವು. ಆದ್ದರಿಂದ ಆದ್ಯುದಾತ್ತ ಸ್ವರವು ಪ್ರತ್ಯಯಸನ್ನಿಯೋಗಶಿಷ್ಟವಾಗುವುದು. ಆದ್ದರಿಂದ ಪ್ರತ್ಯಯೋತ್ಪತ್ತಿಸಮನಂತರವೇ ಆದ್ಯುದಾತ್ತ ಸ್ವರವು ಬರುವುದು. ಈಗ ಘಚ್ ಪ್ರತ್ಯಯಸ್ವರವು ಮೊದಲು ಬರುವುದು ನಂತರ ಘ ಗೆ ಇಯ್ ಬರುವುದು. ಘ ಎಂಬುದು ವ್ಯಂಜನ. ಅದಕ್ಕೆ ಸ್ವರವಿಲ್ಲ. ಅದರ ಸ್ಥಾನದಲ್ಲಿ ಬರುವ ಆದೇಶವೂ ಅಂತರತಮ್ಯದಿಂದ ಪ್ರವೃತ್ತಿಕಾಲದಲ್ಲಿ ಅಸ್ವರಕವಾಗಿಯೇ ಬರುವುದು. ಇದೇ ಅಂಶವನ್ನು **ಅಕ್ರಿಯಮಾಣೇಹ್ಯುಪದೇಶಿವದ್ಭಾವೇ ಪ್ರತ್ಯಯಸಂಜ್ಞಾಸನ್ನಿಯೋಗೇನಾದ್ಯುದತ್ತತ್ವೇ ಕೃತೇ ಅಂತರ್ಯತ ಆದೇಶಾ ಅಸ್ವರಕಾಣಾಂ ಅಸ್ವರ-ಕಾಃ ಸ್ಯುಃ** (೭-೧-೨ ಮಭಾ) ಎಂದು ಭಾಷ್ಯಕಾರರು ಹೇಳಿರುವರು. ಪ್ರವೃತ್ತಿಕಾಲದಲ್ಲಿ ಸ್ವರವಿಲ್ಲದವುಗಳಾಗಿ ಬಂದರೂ ಪ್ರಯೋಗಕಾಲದಲ್ಲಿ ಸ್ವರವಿಲ್ಲದೇ ಉಚ್ಚಾರಣೆ (ಪ್ರಯೋಗ) ಉಚ್ಚಾರಣೆ ಇಲ್ಲದೇ ಇರುವುದರಿಂದ **ಅನುದಾತ್ತಂಪದಮೇಕವರ್ಜಂ** ಎಂಬುದರಿಂದ ಆಯನ್ನಾದ್ಯಾದೇಶಗಳು ಅನುದಾತ್ತಗಳಾಗಿ ಬರಬೇಕಾಗು ವುದು. ಅಸ್ವರಕಾಣಾಮಸ್ವರಕಾಃಸ್ಯುಃ, ಎಂಬುದಕ್ಕೆ ಇನ್ನೊಂದು ತೆರನಾಗಿಯೂ ಅರ್ಥ ಹೇಳಬಹುದು. ಅನುದಾತ್ತವನ್ನು ಉಚ್ಚಾರಣೆ ಮಾಡಿದರೆ ಗಾತ್ರಗಳಿಗೆ (ಅವಯವಗಳಿಗೆ) ಶೈಥಿಲ್ಯವೂ, ಸ್ವರಕ್ಕೆ ಸ್ನಿಗ್ಧತೆಯೂ, ಕಂಠವಿವರಕ್ಕೆ ಮಹತ್ವವೂ ಉಂಟಾಗುವುದು. ಇದೇ ರೀತಿಯಲ್ಲಿ ವ್ಯಂಜನವನ್ನು ಉಚ್ಚಾರಣೆ ಮಾಡಿದರೂ ಆಗುವುದು. ಆದರೂ ಯೋಗ್ಯತೆ ಇಲ್ಲದೇ ಇರುವುದರಿಂದ ವ್ಯಂಜನಗಳಲ್ಲಿ ಅನು ದಾತ್ತಸ್ವರ ಬರುವುದಿಲ್ಲ. ಈರೀತಿಯಲ್ಲಿ ವ್ಯಂಜನಗಳಲ್ಲಿ ಅನುದಾತ್ತ ಧರ್ಮವಿದೆ, ಉದಾತ್ತ ಧರ್ಮವಿಲ್ಲ ಎಂದು ಸ್ಪಷ್ಟವು. ಅಸ್ವರಕಾಣಾಂ ಎಂಬಲ್ಲಿರುವ ಸ್ವರಪದದಿಂದ ಉದಾತ್ತಸ್ವರವನ್ನು ತೆಗೆದುಕೊಳ್ಳುವುದು. ಅಸ್ವ ಕಾಣಾಂ ಉದಾತ್ತ ಸ್ವರರಹಿತಗಳಾದ ವ್ಯಂಜನಗಳಿಗೆ, ಅಸ್ವರಕಾಃ — ಇಷ್ಟವಾದ ಉದಾತ್ತ ಸ್ವರವಿಲ್ಲದೇ ಇರು ವುದರಿಂದ ಅನುದಾತ್ತಗಳಾದ ಆದೇಶಗಳೇ ಬರುವುವು ಎಂದು ವರ್ಣಿಸುವರು. ಏವಂಚ ಪ್ರಕೃತದಲ್ಲಿ ಘ್‌ಗೆ ಬರುವ ಇಯ್ ಆದೇಶವು ಅನುದಾತ್ತವಾಗಬೇಕಾಗುವುದು. ಎಂದರೆ ಇಲ್ಲಿ ವಾರ್ತಿಕಕಾರರು **ಆಯನಾದಿಷೂಪ-ದೇಶಿವದ್ವಚನಂ ಸ್ವರಸಿದ್ಧ್ಯರ್ಥಂ** (ಪಾ. ಸೂ. ೭-೧-೨-೧) ಎಂದು ಹೇಳಿರುವರು. ಸ್ವರಸಿದ್ಧಿಗಾಗಿ ಪ್ರತ್ಯ ಯೋಪದೇಶಕಾಲದಲ್ಲಿಯೇ ಆಯನ್ನಾದ್ಯಾದೇಶ ಬರುವುದು ಎಂದು ಹೇಳಬೇಕು ಎಂದು ಇದರ ಅರ್ಥ. ಇದ ರಿಂದ ಪ್ರತ್ಯಯೋತ್ಪತ್ತಿಕಾಲದಲ್ಲಿಯೇ ಇಯಾದೇಶ ಬಂದರೆ ಅಗ್ರ+ಇಯ ಎಂಬಲ್ಲಿ ಪ್ರತ್ಯಯಾದ್ಯುದಾತ್ತಸ್ವರ ವನ್ನು ಬಾಧಿಸಿ **ಚಿತ್ಕರಣದಿಂದ ಚಿತೇಃ** (ಪಾ. ಸೂ. ೬-೧-೧೬೩) ಎಂಬುದರಿಂದ ಇಯ ಎಂಬುದು ಅಂತೋದಾತ್ತ ವಾಗುವುದು. ಅಥವಾ ಬಹಿರಂಗವಾದ್ದರಿಂದ ಮೊದಲು ಆದೇಶಗಳು ಬರದೇ ಇದ್ದರೆ **ಘೆಚ್ಶೌಚ** ಎಂಬಲ್ಲಿ ಚಿತ್ಕ ರಣವು ವ್ಯರ್ಥವಾಗುವುದು. ಹೇಗೆಂದರೆ ಅಗ್ರ+ಘ ಈಗ ಪ್ರತ್ಯಯಾದ್ಯುದಾತ್ತ ಬಂದರೂ, ಅಕಾರ ಉದಾತ್ತ ನಂತರ ಘಗೆ ಅನುದಾತ್ತವಾದ ಇಯ್ ಬರುವುದು. ಏವಂಚ ಇಯ ಎಂಬುದು ಅಂತೋದಾತ್ತವೇ ಆಯಿತು. ಆದ್ದರಿಂದ ಅಂತೋದಾತ್ತಸ್ವರಸಿದ್ಧಿಗಾಗಿ ಮಾಡಿರುವ ಚಿತ್ಕರಣವು ಚಿತ್ಕರಣವಿಲ್ಲದೇ ಇದ್ದರೂ ಅಂತೋದಾತ್ತ ಸ್ವರ ಸಿದ್ಧಿಸುವುದರಿಂದ ವ್ಯರ್ಥವಾಗುವುದು. ವ್ಯರ್ಥಂಸತ್ ಕಿಂಚಿದರ್ಥಂ ಜ್ಞಾಪಯತಿ ಅಂದರೆ ವ್ಯರ್ಥವಾದ

ಪದವು ತಾನು ಸಾರ್ಥಕವಾಗುವಂತೆ ಒಂದು ಅರ್ಥವನ್ನು ಜ್ಞಾಪಿಸುವುದು ಎಂದು ಹೇಳಿರುವುದರಿಂದ ಒಂದು ವಚನವನ್ನು ಜ್ಞಾಪಿಸುವುದು. ಅದು ಯಾವುದು? ಎಂದರೆ ಉಪದೇಶಾವಸ್ಥಾಯಾಮಾಯನ್ನಾದಯೋ ಭವನ್ತಿ, ಎಂದು ಜ್ಞಾಪಿಸುವುದು- ಇದರ ಅರ್ಥವನ್ನು ಉದ್ಯೋತಕಾರರು ಪ್ರತ್ಯಯಸಂಬಂಧ್ಯಾದೇಶಾನಾಮುತ್ಪತ್ತಿ ಸನ್ನಿಯೋಗಶಿಷ್ಟಕಾರ್ಯಾದಪಿ ಪೂರ್ವಂ ಪ್ರವೃತ್ತಿರ್ಜ್ಞಾಯತೇ ಇತಿ ಭಾಷ್ಯಾರ್ಥಃ ಎಂದು ಹೇಳಿರುವರು. ಪ್ರತ್ಯಯಸಂಬಂಧಿಯಾದ ಆಯನಾದ್ಯಾದೇಶಗಳು, ಪ್ರತ್ಯಯೋತ್ಪತ್ತಿಸನ್ನಿಯೋಗಶಿಷ್ಟವಾದ ಆದ್ಯುದಾತ್ತಕ್ಕಿಂತಲೂ ಮೊದಲೇ ಬರುವುವು ಎಂದು ಚಿತ್ಕರಣದಿಂದ ಜ್ಞಾಪಿತವಾಗುವುದು ಎಂದು ಅರ್ಥ. ಈಗ ಚಿತ್ಕರಣ ವಿಲ್ಲದೆ ಇದ್ದರೆ ಅಗ್ರ+ಏ ಎಂದಿರುವಾಗ ಆದ್ಯುದಾತ್ತ ಬರುವುದಕ್ಕಿಂತಲೂ ಮುಂಚೆಯೇ ಇಯಾದೇಶ ಬಂದರೆ ಅಗ್ರ+ಇಯ ಎಂದಿರುವಾಗ ಆದ್ಯುದಾತ್ತ ಬಂದರೆ ಇಕಾರವು ಉದಾತ್ತವಾಗುವುದು. ಶ್ರುತಿಯಲ್ಲಿ ಆಕಾರವು ಉದಾತ್ತವಾಗಿರುವುದು. ಅದ್ದರಿಂದ ಅಂತೋದಾತ್ತಸ್ವರಸಿದ್ಧಿಗಾಗಿ ಚಿತ್ಕರಣವು ಸಾರ್ಥಕವಾಗುವುದು. ಏನಂಚ ಉಪದೇಶಿವದ್ವಚನವನ್ನು ಮಾಡಬೇಕಾದುದಿಲ್ಲ. ಈ ಅಂಶವನ್ನು ನವಾಕ್ವಚಿಚ್ಚಿತ್ಕರಣಾತ್ (ಪಾ. ಸೂ. ೭-೧-೨-೨) ಎಂದು ವಾರ್ತಿಕಕಾರರೇ ಹೇಳಿರುವರು, ಈ ರೀತಿಯಲ್ಲಿ ಅಗ್ರಿಯ ಎಂಬುದು ಅಂತೋದಾತ್ತವಾಗುವುದು.

ವಿಶ್ವರೂಪಂ-ವಿಶ್ವಾನಿ ರೂಪಾಣಿ ತ್ವಷ್ಟುಃ ಉತ್ಪನ್ನತ್ವೇನ ಯಸ್ಯ ಸಃ ವಿಶ್ವರೂಪಃ ಎಂದು ಬಹುವ್ರೀಹಿ ರೂಪವು. ತ್ವಷ್ಟೃವಿನಿಂದ ಉತ್ಪನ್ನವಾದುದು ಎಂಬ ಅರ್ಥವನ್ನು **ತ್ವೈಷ್ಟ್ರಾ ವೈ ಪಶೂನಾಂ ಮಿಥುನಾನಾಂ ರೂಪಕೃತ್** (ತೈ. ಶ್ರ. ಸಂ. ೬-೧-೮-೫) ಈ ಶ್ರುತಿಯು ಬೋಧಿಸುವುದು. ವಿಶ್ವಶಬ್ದವು ವಿಶ್ ಧಾತುವಿನ ಮುಂದೆ ಕ್ವನ್ ಪ್ರತ್ಯಯ ಬಂದು ನಿಷ್ಪನ್ನವಾಗುವುದು. ಆದ್ದರಿಂದ ನಿತ್ಸ್ವರದಿಂದ ಆದ್ಯುದಾತ್ತ. ಬಹುವ್ರೀಹಿಯಾದ್ದರಿಂದ **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** (ಪಾ. ಸೂ. ೬-೨-೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರವು ಪ್ರಾಪ್ತವಾಗುವುದು, ಆದರೂ ಅದನ್ನು ಬಾಧಿಸಿ **ಬಹುವ್ರೀಹೌ ವಿಶ್ವಂ ಸಂಜ್ಞಾಯಾಂ** (ಪಾ. ಸೂ. ೬-೨-೧೦೬) ಬಹುವ್ರೀಹಿಸಮಾಸದಲ್ಲಿ ಸಂಜ್ಞೆ ತೋರುವಾಗ ಪೂರ್ವಪದವಾದ ವಿಶ್ವಶಬ್ದವು ಅಂತೋದಾತ್ತವಾಗುವುದು ಎಂಬುದರಿಂದ ಅಂತೋದಾತ್ತಸ್ವರ ಬರುವುದು.

ಅಸ್ಮಾಕಂ—ಅಸು ಕ್ಷೇಪಣೇ ಧಾತು. ಇದರ ಮುಂದೆ **ಯುಷ್ಮಸಿಭ್ಯಾಂ ಮದಿಕ್** (ಉ. ಸೂ. ೧-೧೫೬) ಯುಷ್ ಅಸ್ ಈ ಧಾತುಗಳ ಮುಂದೆ ಮದಿಕ್ ಪ್ರತ್ಯಯ ಬರುವುದು ಎಂಬುದರಿಂದ ಮದಿಕ್ ಪ್ರತ್ಯಯ **ಅಸ್ಮದ್** ಎಂದಾಗುವುದು. ಇದು ಪ್ರತ್ಯಯಸ್ವರದಿಂದ ಅಂತೋದಾತ್ತ. ಇದರ ಮುಂದೆ ಷಷ್ಠೀಬಹುವಚನ ಆಮ್ ಪ್ರತ್ಯಯ. ಅಸ್ಮದ್+ಆಮ್ ಈಗ **ಯೋಷಿ** (ಪಾ. ಸೂ. ೭-೨-೯೯) ಆದೇಶವನ್ನು ಹೊಂದದೇ ಇರುವ ಅಜಾದಿ ವಿಭಕ್ತಿ ಪರದಲ್ಲಿರುವಾಗ ಯುಷ್ಮದ್ ಅಸ್ಮದ್ ಶಬ್ದಗಳಿಗೆ ಯಾದೇಶ ಬರುವುದು ಎಂಬುದರಿಂದ ಯಾದೇಶಕ್ಕೆ ಪ್ರಾಪ್ತಿ ಇದೆ. **ಸಾಮಿ ಅಕಮ್** (ಪಾ. ಸೂ. ೭-೧-೩೩) ಯುಷ್ಮದ್ ಅಸ್ಮದ್ ಶಬ್ದಗಳ ಮುಂದೆ ಇರುವ ಸಾಮ್‌ಗೆ ಅಕಂ ಬರುವುದು ಎಂಬುದರಿಂದ ಅಕಂ ಆದೇಶಕ್ಕೂ ಪ್ರಾಪ್ತಿ ಇದೆ. **ಯೋಷಿ** (ಪಾ. ಸೂ. ೭-೨-೯೯) ಎಂಬುದು ಪರದಲ್ಲಿರುವ ಶಾಸ್ತ್ರ. ಆದ್ದರಿಂದ **ವಿಪ್ರತಿಷೇಧೇ ಪರಂ ಕಾರ್ಯಂ** (ಪಾ. ಸೂ. ೧-೪-೨) ಎಂಬ ಪರಿಭಾಷಾನುಸಾರ ಯತ್ವವು ಪ್ರಾಪ್ತವಾಗುವುದು. ಆದರೂ **ಸಾಮಿ ಅಕಂ** (ಪಾ. ಸೂ. ೭-೧-೩೩) ಎಂಬುದು ನಿತ್ಯ, ಅಂದರೆ ಯಾದೇಶವನ್ನು ಮಾಡಿದರೂ ಅಕಂ ಬರುವುದು ಯಾದೇಶವನ್ನು ಮಾಡದೆ ಇದ್ದರೂ ಅಕಂ ಬರುವುದು. ಅದ್ದರಿಂದ ಅಕಂ ಆದೇಶವು ಕೃತಾಕೃತಪ್ರಸಂಗಿಯಾಗುವುದು. ಆದ

ಕಾರಣ ಅದು ನಿತ್ಯವಾಗುವುದು. ಅಕಂ ಆದೇಶ ಮಾಡುವುದಕ್ಕಿಂತಲೂ ಮುಂಚೆ ಯಾದೇಶಕ್ಕೆ ಪ್ರಾಪ್ತಿ ಇದ್ದರೂ ಅಕಮಾದೇಶ ಬಂದಮೇಲೆ ಯೋಚಿ ಎಂಬುದು ಬರುವುದಿಲ್ಲ. ಏಕೆಂದರೆ ಆದೇಶವನ್ನು ಹೊಂದದ ವಿಭಕ್ತಿ ಪರದಲ್ಲಿರುವಾಗ ಇದು ಬರುವುದು. ಅಕಮಾದೇಶ ಬಂದಮೇಲೆ ವಿಭಕ್ತಿಯು ಆದೇಶವನ್ನು ಹೊಂದಿದ ವಿಭಕ್ತಿಯಾಗುವುದು. ಆದ್ದರಿಂದ ಕೃತಾಕೃತಪ್ರಸಂಗಿತ್ವರೂಪವಾದ ನಿತ್ಸ್ವರವು ಯೋಚಿ ಎಂಬುದಕ್ಕೆ ಬರುವುದಿಲ್ಲ. ಅದಕಾರಣ **ಪರನಿತ್ಯಾನ್ತರಂಗಾಪವಾದಾನಾಮುತ್ತರೋತ್ತರಂ ಬಲೀಯಃ** (ಪರಿಭಾ. ೩೮) ಎಂಬುದರಿಂದ ಪರವಾದ ಯತ್ವವನ್ನು ಬಾಧಿಸಿ ನಿತ್ಯವಾದ ಅಕಮೇ ಬರುವುದು. ಅಕಂ ಪ್ರತಿಪದೋಕ್ತವಾದ್ದರಿಂದಲೂ ಯತ್ವಕ್ಕಿಂತಲೂ ಪ್ರಬಲ. ಯದ್ಯಪಿ ಇಲ್ಲಿ ಯುಷ್ಮದ್+ಅಸ್ ಎಂದಿರುವಾಗ ಸಾಮ್ ಇಲ್ಲ. ಆಮ್ ಪ್ರತ್ಯಯಕ್ಕೆ **ಆಮಿ ಸರ್ವನಾಮ್ನಃ ಸುಟ್** (ಪಾ. ಸೂ. ೭-೧-೫೨) ಅವರ್ಣಾಂತವಾದ ಶಬ್ದಕ್ಕಿಂತಲೂ ಪರದಲ್ಲಿರುವ ಸರ್ವನಾಮ ಶಬ್ದದ ಮುಂದೆ ವಿಹಿತವಾಗಿರುವ ಆಮ್‌ಗೆ ಸುಟ್ ಆಗಮ ಬರುವುದು ಎಂಬುದರಿಂದ ಸುಟ್ ಆಗಮ ಬಂದರೆ ಸಾಮ್ ಆಗುವುದು. ಇಲ್ಲಿ ಅಕಮಾದೇಶ ಬರುವುದಕ್ಕಿಂತಲೂ ಮುಂಚೆ ಯತ್ವ ಬರುವುದರಿಂದ **ಶೇಷೇ ಲೋಪಃ** (ಪಾ. ಸೂ. ೭-೩-೯೦) ಎಂಬುದು ಬರುವುದಿಲ್ಲವಾದ್ದರಿಂದ ಅವರ್ಣಾಂತವಾದ ಅಂಗವು ಸಿಗುವುದಿಲ್ಲ. ಆದ್ದರಿಂದ ಸಸುಟ್ಕವಾಗಿ ನಿರ್ದೇಶವು ವ್ಯರ್ಥವೆಂದು ತೋರಬಹುದು. ಸುಡಾಗಮವಿಶಿಷ್ಟವಾಗಿ ನಿರ್ದೇಶಮಾಡದೇ ಇದ್ದರೆ ಅಮ ಅಕಂ ಎಂದು ಸೂತ್ರವನ್ನು ಮಾಡಿದರೆ ಅಕಮಾದೇಶ ಬಂದಮೇಲೆ ಸ್ಥಾನಿವದ್ಭಾವನಿಂದ ಅಕ° ಎಂಬುದು ಅಮ್ ಆದ್ದರಿಂದ **ಶೇಷೇ ಲೋಪಃ** (ಪಾ.ಸೂ. ೭-೩-೯೦) ಎಂಬುದರಿಂದ ಅಂತ್ಯವಾದ ದಕಾರಕ್ಕೆ ಲೋಪ ಬರುವುದು ಎಂಬ ಪಕ್ಷದಲ್ಲಿ ಸುಟ್ ಆಗಮವು ಬರಬೇಕಾಗಿ ಬರುವುದು ಆ ಸುಡಾಗಮ ವಾರಣೆಗಾಗಿ ಸಸುಟ್ಕವಾಗಿ ನಿರ್ದೇಶಮಾಡಿರುವರು. ಸಸುಟ್ಕವಾಗಿ ನಿರ್ದೇಶಮಾಡಿದರೆ ಸುಟ್ಟಗೂ ಸ್ಥಾನಿತ್ವವಿರುವುದರಿಂದ ಭಾವಿಯಾಗಿ ಬರುವ ಅದಕ್ಕೂ ನಿವೃತ್ತಿ ಏರ್ಪಡುವುದು. ಆದ್ದರಿಂದ ಸಸುಟ್ಕನಿರ್ದೇಶವು ಸಾರ್ಥಕವಾಗುವುದು. ಶೇಷೇ ಲೋಪಃ ಎಂಬುದರಿಂದ ಟಗೆ ಲೋಪ ಎಂಬ ಪಕ್ಷದಲ್ಲಿ ಸಸುಟ್ಕನಿರ್ದೇಶವು ಅವಶ್ಯಕವಿಲ್ಲ.

ಕೇವಲಃ—ವೃಷಾದಿಯು ಆಕೃತಿಗಣ. ಆದ್ದರಿಂದ **ವೃಷಾದೀನಾಂ ಚಿ** (ಪಾ. ಸೂ. ೬-೧-೨೦೩) ಎಂಬುದರಿಂದ ಅಂತೋದಾತ್ತಸ್ವರಬರುವುದು. ॥ ೧೦ ॥

॥ ಸಂಹಿತಾಪಾಠಃ ॥

ಅವ॑ ಸೃಜಾ ವನಸ್ಪತೇ ದೇವ॑ ದೇವೇಭ್ಯೋ ಹ॒ವಿಃ ।
ಪ್ರ ದಾತು॑ರಸ್ತು॒ ಚೇತ॑ನಂ ॥ ೧೧ ॥

॥ ಪದಪಾಠಃ ॥

ಅವ॑ । ಸೃಜ । ವನಸ್ಪತೇ । ದೇವ॑ । ದೇವೇಭ್ಯಃ । ಹ॒ವಿಃ ॥
ಪ್ರ । ದಾತು॑ಃ । ಅಸ್ತು॒ । ಚೇತ॑ನಂ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ವನಸ್ಪತೇ ಏತನ್ನಾಮಕಾಗ್ನೇ ದೇವ ಹವಿರ್ಭುಗ್ಭ್ಯೋ ದೇವೇಭ್ಯೋ ಽಸ್ಮದೀಯಂ ಹವಿರವ ಸೃಜ । ಸಮರ್ಪಯೇತ್ಯರ್ಥಃ ಪ್ರ ದಾತುರ್ಯಜಮಾನಸ್ಯ ಚೇತನಂ ಪರಲೋಕವಿಷಯಂ ವಿಜ್ಞಾನಂ ತ್ವತ್ಪ್ರಸಾದಾದಸ್ತು ॥ ವನಸ್ಪತೇ । ಆಮಂತ್ರಿತನಿಘಾತಃ । ದೇವ । ಪಾದಾದಿತ್ವಾನ್ನ ನಿಘಾತಃ । ಷಾಷ್ಠಿಕಮಾಮಂತ್ರಿತಾದ್ಯುದಾತ್ತತ್ವಂ । ಹವಿಃ । ಇಸಃ ಪ್ರತ್ಯಯೆಸ್ವರಃ । ದಾತುಃ । ದದಾತೇಸ್ತೃಚ್ । ಚಿತ ಇತ್ಯಂತೋದಾತ್ತಃ । ಜಸಿ ಯುತ ಉತ್ । ಪಾ. ೬-೧-೧೧೧ ಇತ್ಯುತ್ವಂ । ಏಕಾದೇಶೋ ರಪರತ್ವಂ ಚ । ರಾತ್ಸಸ್ಯ । ಪಾ. ೮-೨-೨೪ । ಇತಿ ಸಲೋಪಃ । ಏಕಾದೇಶಸ್ವರೇಣೋಕಾರ ಉದಾತ್ತಃ । ಚೇತನಂ । ಚಿತೇ ಸಂಜ್ಞಾನೇ । ಕರಣೇ ಲ್ಯುಟ್ । ಯೋರನಾದೇಶಃ । ಲಘೂಪಧಗುಣಃ । ಲಿತೀತಿ ಪ್ರತ್ಯಯಾತ್ಪೂರ್ವಸ್ಯೋದಾತ್ತತ್ವಂ ॥

॥ ಪ್ರತಿಪದಾರ್ಥ ॥

ದೇವ—ದೇವನಾದ । ವನಸ್ಪತೇ—ವನಸ್ಪತಿಯೇ ಅಥವಾ ವನಸ್ಪತಿ ಎಂಬ ಹೆಸರಿನ ಅಗ್ನಿಯೇ । ದೇವೇಭ್ಯಃ—ದೇವತೆಗಳಿಗೆ । ಹವಿಃ—ನಾವು (ಸಿದ್ಧಪಡಿಸಿರುವ) ಹವಿಸ್ಸನ್ನು । ಅವ ಸೃಜ—ಸಮರ್ಪಿಸು । ದಾತುಃ—ದೇವತೆಗಳಿಗೆ ಹವಿಸ್ಸನ್ನು ಕೊಡುವ ಯಜಮಾನನಿಗೆ । ಚೇತನಂ—(ಪರಲೋಕವಿಷಯವಾದ) ಉತ್ತಮ ಜ್ಞಾನವು । ಅಸ್ತು—(ನಿನ್ನ ಅನುಗ್ರಹದಿಂದ) ಉಂಟಾಗಲಿ ॥

॥ ಭಾವಾರ್ಥ ॥

ಎಲೈ ವನಸ್ಪತಿಯೇ, ಅಥವಾ ವನಸ್ಪತಿನಾಮಕ ಅಗ್ನಿಯೇ, ನಾವು ಕೊಡುವ ಹವಿಸ್ಸನ್ನು ದೇವತೆಗಳಿಗೆ ಸಮರ್ಪಿಸು ಮತ್ತು ಹವಿಸ್ಸನ್ನು ಕೊಡುವ ಯಜಮಾನನಿಗೆ ನಿನ್ನ ಅನುಗ್ರಹದಿಂದ ಉತ್ತಮವಾದ ಜ್ಞಾನವು ಉಂಟಾಗಲಿ.

English Translation.

Present, divine Vanaspati, our oblation to the gods, and may true knowledge be the reward of the giver.

॥ ವಿಶೇಷವಿಷಯಗಳು ॥

ವನಸ್ಪತೇ—ವನಸ್ಪತಿ ಶಬ್ದಕ್ಕೆ ಯಾಸ್ಕರ ವಿವರಣೆಯು—

ವನಸ್ಪತ ಇತ್ಯೇನಮಾಹೈಷ ಹಿ ವನಾನಾಂ ಸಾತಾ ವಾ ಸಾಲಯಿತಾ ವಾ । ವನಂ ವನೋತೇಃ ॥ (ನಿ. ೮-೩)

ತಥ್ಯೋ ವನಸ್ಪತಿಃ । ಯೂಪ ಇತಿ ಕಾತ್ಥಕ್ಯಃ । ಅಗ್ನಿರಿತಿ ಶಾಕಪೂಣಿಃ ॥ (ನಿ. ೮-೧೪).

ಎಂದರೆ ಅಗ್ನಿಯನ್ನೇ ವನಸ್ಪತಿಯೆಂದು ಹೇಳುವರು. ಏಕೆಂದರೆ ಅಗ್ನಿಯು ವನಗಳ ಪಾಲಕನು ಅಥವಾ ಸಂರಕ್ಷಕನು. ವೃಕ್ಷದಲ್ಲಿ ಅಗ್ನಿಯು ಅಂತರ್ಭೂತವಾಗಿದ್ದರೂ ಅದನ್ನು ಸುಡುವುದಿಲ್ಲವಾದ್ದರಿಂದ ಅದರ ಸಂರಕ್ಷ ನೆಂದು ಹೇಳಲ್ಪಡುವನು. ಅಥವಾ ದಾರ್ವಾದಿ ಯಜ್ಞಸಾಧನಗಳಿಗೆ ಉಪಯೋಗವಾಗುವುದರಿಂದ ವನವೆಂದು ಹೆಸರು. ವನಸ್ಪತಿ ಎಂದರೆ ವೃಕ್ಷರಾಜ, ದೊಡ್ಡದಾದ ವೃಕ್ಷ ಎಂದರ್ಥವು. ವನಸ್ಪತಿ ಎಂದರೆ ಯಾವ ದೇವ ತೆಯು? ಯಜ್ಞದಲ್ಲಿ ಪಶುವನ್ನು ಕಟ್ಟುವುದಕ್ಕಾಗಿ ನೆಟ್ಟಿರುವ ಮರದ ಕಂಭವೆಂದು ಕಾತ್ಥಕ್ಯರ ಅಭಿಪ್ರಾ ಯವು. ವನಸ್ಪತಿಯೆಂದರೆ ಅಗ್ನಿಯೆಂದು ಶಾಕಪೂಣಿಯ ಅಭಿಪ್ರಾಯವು.

ಕಾತ್ಥಕ್ಯರ ಅಭಿಪ್ರಾಯವನ್ನು ಸಮರ್ಥಿಸುವುದಕ್ಕಾಗಿ ಯಾಸ್ಕರು ಒಂದು ಋಕ್ಕನ್ನು ಉದಾಹರಣೆ ಯಾಗಿ ಕೊಟ್ಟಿರುವರು—

ಅಂಜಂತಿ ತ್ವಾಮಧ್ವರೇ ದೇವಯಂತೋ ವನಸ್ಪತೇ ಮಧುನಾ ದೈವ್ಯೇನ ॥

(ಋ. ಸಂ. ೩-೮-೧)

ಎಂದರೆ ಎಲೈ ವನಸ್ಪತಿಯೇ (ಯೂಪಸ್ತಂಭವೇ) ಯಜ್ಞದಲ್ಲಿ ಋತ್ವಿಗ್ಯಜಮಾನರು ನಿನ್ನನ್ನು ಮಂತ್ರ ಸಂಸ್ಕೃತವಾದ ಘೃತ (ತುಪ್ಪ)ದಿಂದ ಲೇಪನ ಮಾಡುವರು ಎಂದು ಪಶುವನ್ನು ಕಟ್ಟುವ ಯೂಪಸ್ತಂಭವನ್ನು ದ್ವೇ ಷಿಸಿ ಸಂಬೋಧನೆ ಮಾಡಿರುವುದು. ಮತ್ತು ಇದೇ ಸೂಕ್ತದ ೩, ೬, ೧೧ ನೆಯ ಋಕ್ಕುಗಳಲ್ಲಿಯೂ ವನಸ್ಪತಿಯನ್ನು ಯೂಪಸ್ತಂಭವೆಂದು ಸಂಬೋಧನೆ ಮಾಡಿರುವುದಲ್ಲದೆ ಈ ಸೂಕ್ತಕ್ಕೆ ಯೂಪವೇ ದೇವತೆಯು ಎಂದು ಪ್ರಸಿದ್ಧ ವಾಗಿರುವುದು. ಈ ಸೂಕ್ತದ ಹನ್ನೊಂದನೆಯ ಋಕ್ಕಿನಲ್ಲಿ—" **ವನಸ್ಪತೇ ಶತವಲ್ಶೋ ವಿರೋಹ ಸಹಸ್ರವಲ್ಶಾ ವಿ ವಯಂ ರುಹೇಮ** " ಎಂದರೆ, ಎಲೈ ವನಸ್ಪತಿಯೇ, ನೂರಾರು ಮತ್ತು ಸಾವಿರಾರು (ಸ್ಥಳಗಳಲ್ಲಿ) ಚಿಗರು ಗಳಿಂದ ಕೂಡಿ ಬೆಳೆ ಎಂದು ಹೇಳಿರುವುದು ವನಸ್ಪತಿಯಾದ ವೃಕ್ಷಕ್ಕೇ ಅನ್ವಯಿಸುವುದಾಗಿರುವುದು. ಋ. ಸಂ. ೧೦-೭೦-೧೦ ನೇ ಋಕ್ಕಿನಲ್ಲಿ " **ವನಸ್ಪತೇ ರಶನಯೋ ನಿಯೂಯಥ** " ಎಲೈ ವನಸ್ಪತಿಯೇ, ಪಶುವನ್ನು ಕಟ್ಟುವ ಹಗ್ಗದಿಂದ ಕಟ್ಟಿ ಎಂದು ಹೇಳಿರುವುದು ವನಸ್ಪತಿ ಶಬ್ದಕ್ಕೆ ಯೂಪಸ್ತಂಭವೆಂಬ ಅರ್ಥವನ್ನು ಪುಷ್ಟೀಕರಿಸುವುದು. ಆದುದರಿಂದ ವನಸ್ಪತಿಯೆಂದರೆ ಯೂಪಸ್ತಂಭವೆಂದೇ ಅರ್ಥವು. ಅಗ್ನಿಯೆಂದು ಪರೋಕ್ಷಾರ್ಥವು.

ದಾತುಃ—ಹವಿಃಪ್ರದಾತುಃ ಯಜಮಾನಸ್ಯ । ಹವಿಸ್ಸನ್ನು ಸಮರ್ಪಿಸುವ ಯಜಮಾನನ.

ಚೇತನಂ—ಪರಲೋಕವಿಷಯಂ ವಿಜ್ಞಾನಂ, ಪರಲೋಕವಿಷಯವಾದ ಜ್ಞಾನವೆಂದು ಭಾಷ್ಯ ಕಾರರು ಹೇಳಿರುವರು. ಚೇತನಂ ಎಂದರೆ ಜ್ಞಾನವು ತಿಳಿವಳಿಕೆ, ವಿವೇಕ ಎಂದರ್ಥವು. ವೆಂಕಟನಾಥರು **ದಾತುರ್ಯಜಮಾನಸ್ಯ ಪ್ರಜ್ಞಾಪನಂ ದೇವೇಷು ತ್ವಯಾ ನಿವೇದಿತಸ್ಯ**-ಯಜಮಾನನ ವಿಷಯವಾಗಿ ದೇವತೆ ಗಳಿಗೆ ನೀನು ವಿಜ್ಞಾಪಿಸಬೇಕು ಎಂಬರ್ಥವನ್ನು ಹೇಳಿರುವರು.

॥ ವ್ಯಾಕರಣಪ್ರಕ್ರಿಯಾ ॥

ವನಸ್ಪತೇ-ಆಮಂತ್ರಿತಸ್ಯ ಚ (ಪಾ.ಸೂ. ೮-೧-೧೯) ಎಂಬುದರಿಂದ ಸರ್ವಾನುದಾತ್ತ.

ದೇವ—ಎರಡನೇ ಪಾದದ ಆದಿಯಲ್ಲಿರುವುದು. ಆದ್ದರಿಂದ **ಆಪಾದಾದೌ** (ಪಾ. ಸೂ- ೮-೧-೧೮) ಎಂದು ನಿಷೇಧ ಬರುವುದರಿಂದ ಸರ್ವಾನುದಾತ್ತ ಬರುವುದಿಲ್ಲ. **ಆಮಂತ್ರಿತಸ್ಯ ಚ** (ಪಾ. ಸೂ. ೬-೧-೧೯೭) ಎಂಬ ಆರನೇ ಅಧ್ಯಾಯದ ಸೂತ್ರದಿಂದ ಆದ್ಯುದಾತ್ತ ಬರುವುದು.

ಹವಿಃ—ಹು ದಾನಾದನಯೋಃ, ಧಾತು—**ಆರ್ಚಿ ಶುಚಿ ಹು** (ಉ.ಸೂ. ೨-೨೬೬) ಎಂಬುದರಿಂದ **ಇಸಿ** ಪ್ರತ್ಯಯ, ಗುಣ. 'ಅನಿಸನ್ತಸ್ಯ,' ಎಂದು ಪರ್ಯುದಾಸವಿರುವುದು. ಪ್ರಸಜ್ಯಪ್ರತಿಷೇಧೋಽಯಂ ಕ್ರಿಯಯಾ ಸಹ ಯತ್ರ ನಞ್ | ಪರ್ಯುದಾಸಸ್ತು ವಿಜ್ಞೇಯೋ ಯತ್ರೋತ್ತರಪದೇನ ನಞ್ ॥ ಇಸಿ ನಭವತಿ ಎಂದು ಕ್ರಿಯೆಯೊಂದಿಗೆ ನಞ್ ಪದಕ್ಕೆ ಅನ್ವಯ ಬಂದರೆ ಅದು ಸ್ರಸಜ್ಯಪ್ರತಿಷೇಧ ಎನ್ನಲ್ಪಡುವುದು. ನ, ಇಸ್, ಅನಿಸ್ ಎಂದು ಉತ್ತರಪದವಾದ ಇಸ್ ಎಂಬುದರಲ್ಲಿ ನಞ್‌ಗೆ ಅನ್ವಯ ಬಂದರೆ ಪರ್ಯುದಾಸ ಎನ್ನಲ್ಪಡುವುದು. ಪ್ರಸಜ್ಯಪ್ರತಿಷೇಧ ಸ್ಥಳದಲ್ಲಿ ಯೋಗ್ಯಕ್ರಿಯಾಧ್ಯಾಹಾರ, ಅಸಮರ್ಥ ಸಮಾಸಾಶ್ರಯಣ, ವಾಕ್ಯಭೇದ, ಎಂಬ ಮೂರು ದೋಷಗಳು ನಿಯಮವಾಗಿರುವುದು. ಆದ್ದರಿಂದ ಪರ್ಯುದಾಸವನ್ನು ಹೇಳಲವಕಾಶವಿಲ್ಲದೇ ಇರುವ ಸ್ಥಳಗಳಲ್ಲಿ ಪ್ರಸಜ್ಯಪ್ರತಿಷೇಧವನ್ನು ಹೇಳಬೇಕು ಇಲ್ಲಿ ಪರ್ಯುದಾಸವನ್ನೇ ಆಶ್ರಯಿಸಬೇಕು. ಏನಂಚ ಇಸಂತ ಭಿನ್ನವಾದ ನಪುಂಸಕಲಿಂಗಶ್ರುತಿಪಾದಕ ಶಬ್ದದ ಆದಿಯು ಉದಾತ್ತವಾಗುವುದು. ಎಂದು ನಞ್ಪ್ರಸಯಸ್ಯಾನಿಸಂತಸ್ಯ (ಫಿ.ಸೂ. ಎಂಬುದಕ್ಕೆ ಅರ್ಥವು ಏರ್ಪಡುವುದು. ಹವಿಸ್ ಎಂಬುದು ಇಸಂತವಾದ್ದರಿಂದ ಇಲ್ಲಿ ಈ ಸೂತ್ರದಿಂದ ಆದ್ಯುದಾತ್ತ ಬರುವುದಿಲ್ಲ. ಪ್ರತ್ಯಯಸ್ವರ ಬರುವುದು. ಏವಂಚ ಹವಿಃ ಎಂಬುದು ಅಂತೋದಾತ್ತ.

ದಾತುಃ—ಡುದಾಞ್ ದಾನೇ, ಧಾತು. ಇದರ ಮುಂದೆ **ಣ್ವುಲ್‌ತೃಚೌ** (ಪಾ. ಸೂ. ೩-೧-೧೩೩) ಎಂಬುದರಿಂದ ತೃಚ್ ಪ್ರತ್ಯಯ. ತೃಚ್‌ಪ್ರತ್ಯಯವು ಚಿತ್ ಆದ್ದರಿಂದ **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ದಾತೃ ಎಂಬುದು ಅಂತೋದಾತ್ತ. ಇದರ ಮುಂದೆ ಷಷ್ಠೀ ವಿಭಕ್ತಿ ಏಕವಚನ ಙಸ್ ಪ್ರತ್ಯಯ **ಋತ ಉತ್** (ಪಾ. ಸೂ. ೬-೧-೧೧೧) ಋಕಾರಾಂತವಾದ ಶಬ್ದದ ಮುಂದೆ ಙಸಿ, ಙಸ್ ಪ್ರತ್ಯಯ ಸಂಬಂಧಿಯಾದ ಅಕಾರವಿದ್ದರೆ ಪೂರ್ವಪರಗಳಾದ ಋಕಾರ ಏಕಾರಗಳ ಸ್ಥಾನದಲ್ಲಿ ಉಕಾರವು ಏಕಾದೇಶವಾಗಿ ಬರುವುದು ಎಂಬುದರಿಂದ ಉಕಾರವು ಋ+ಅ ಗಳ ಸ್ಥಾನದಲ್ಲಿ ಬರುವುದು. ಅದು **ಉರಣ್ರಪರಃ** (ಪಾ. ಸೂ. ೧-೧-೫೧) ಎಂಬ ಸೂತ್ರಾನುಸಾರ ರ ಪರವಾಗಿ ಬರುವುದು. ದಾತುರ್+ಸ್ ಎಂದಾಗುವುದು. **ರಾತ್ಸಸ್ಯ** (ಪಾ. ಸೂ. ೮-೨-೨೪) ರೇಫದ ಮುಂದೆ ಇರುವ ಸಂಯೋಗದ ಚರಮವರ್ಣಕ್ಕೆ ಲೋಪ ಬರುವುದು ಎಂಬುದರಿಂದ ಸಂಯೋಗದ ಕೊನೆಯಲ್ಲಿರುವುದೂ ರೇಫದ ಮುಂದೆ ಇರತಕ್ಕದ್ದೂ ಆದ ಸಕಾರಕ್ಕೆ ಲೋಪ. ಯದ್ಯಪಿ ಇಲ್ಲಿ **ಸಂಯೋಗಾಂತಸ್ಯ ಲೋಪಃ** (ಪಾ.ಸೂ. ೮.೨-೨೩) ಎಂಬುದರಿಂದಲೇ ಸಲೋಪವನ್ನು ಹೇಳಬಹುದು. ಆದರೂ ಶೇಫದ ಮುಂದೆ ಇರುವ ಸಂಯೋಗಾಂತ ವರ್ಣಕ್ಕೆ ಲೋಪ ಬರುವ ಪಕ್ಷದಲ್ಲಿ ಸಕಾರಕ್ಕೆ ಮಾತ್ರವೇ ಬರುವುದು. ಸಕಾರವನ್ನು ಬಿಟ್ಟು ಯಾವ ವರ್ಣ ರೇಫದ ಮುಂದೆ ಇದ್ದರೂ ಅದಕ್ಕೆ ಲೋಪ ಬರುವುದಿಲ್ಲ ಎಂದು ನಿಯಮಲಾಭಕ್ಕಾಗಿ **ಈ** ಸೂತ್ರವು ಅವಶ್ಯಕವು. ಈ ನಿಯಮದಿಂದ ಊರ್ಕ್ ಎಂಬಲ್ಲಿ ರೇಫದ ಮುಂದೆ ಇರುವ ಕಕಾರಕ್ಕೆ ಲೋಪ ಬರುವುದಿಲ್ಲ. ರೇಫಕ್ಕೆ ವಿಸರ್ಗ. ದಾತುಃ ಎಂದಾಗುವುದು. **ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮.೨-೫) ಎಂಬುದರಿಂದ ಉಕಾರ ಉದಾತ್ತ.

ಚೇತನಂ—ಚಿತೀ ಸಂಜ್ಞಾನೇ ಧಾತು. ಇದರ ಮುಂದೆ **ಕರಣಾಧಿಕರಣಯೋಶ್ಚ** (ಪಾ. ಸೂ. ೩-೩-೧೧೭) ಎಂಬುದರಿಂದ ಕರಣ ಎಂಬ ಅರ್ಥದಲ್ಲಿ ಲ್ಯುಟ್ ಪ್ರತ್ಯಯ. **ಯುವೋರನಾಕೌ** (ಪಾ. ಸೂ. ೭-೧-೧) ಎಂಬುದರಿಂದ ಯುಗೆ ಅನ ಆದೇಶ, ಚಿತ್+ಅನ. **ಪುಗನ್ತ್ಲಘೂಪಧಸ್ಯ ಚ** (ಪಾ. ಸೂ. ೭-೩-೮೬) ಎಂಬುದರಿಂದ ಲಘೂಪಧಗುಣ. ಇಕಾರಕ್ಕೆ ಏಕಾರ. ಚೇತನ ಎಂದಾಗುವುದು. **ಲಿತಿ** (ಪಾ. ಸೂ. ೬-೧ ೧೯೩) ಎಂಬುದರಿಂದ ಪ್ರತ್ಯಯದ ಹಿಂದೆ ಇರುವ ಏಕಾರವು ಉದಾತ್ತವಾಗುವುದು ॥ ೧೧ ॥

॥ ಸಂಹಿತಾಪಾಠಃ ॥

ಸ್ವಾಹಾ ಯಜ್ಞಂ ಕೃಣೋತನೇಂದ್ರಾಯ ಯಜ್ವನೋ ಗೃಹೇ ।
ತತ್ರ ದೇವಾ ಉಪ ಹ್ವಯೇ ॥ ೧೨ ॥

॥ ಪದಪಾಠಃ ॥

ಸ್ವಾಹಾ । ಯಜ್ಞಂ । ಕೃಣೋತನ । ಇಂದ್ರಾಯ । ಯಜ್ವನಃ । ಗೃಹೇ ॥
ತತ್ರ । ದೇವಾನ್ । ಉಪ । ಹ್ವಯೇ ॥ ೧೨ ॥

॥ಸಾಯಣಭಾಷ್ಯಂ ॥

ಸ್ವಾಹಾಶಬ್ದೋ ಹವಿಷ್ಪ್ರದಾನವಾಚೀ ಸನ್ ವಿತನ್ನಾಮಕಮಗ್ನಿವಿಶೇಷಂ ಲಕ್ಷಯತಿ । ತದಗ್ನಿಸಂಪಾದಿತಂ ಯಜ್ಞಮಿಂದ್ರಾಯೇಂದ್ರತುಷ್ಟ್ಯರ್ಥಂ ಯಜ್ವನೋ ಯಜಮಾನಸ್ಯ ಗೃಹೇ ಋತ್ವಿಜಃ ಕೃಣೋತನ । ಕುರುತ । ತತ್ರ ಯಜ್ಞೇ ದೇವಾನುಪ ಹ್ವಯೇ ॥ ಕೃಣೋತನ । ಕೃವಿ ಹಿಂಸಾಕರಣಯೋಶ್ಚ । ಇದಿತ್ವಾನ್ನುಮ್ । ಲೋಣ್ಮ್ಧ್ಯಮಬಹುವಚನಸ್ಯ ತಸ್ಥಸ್ಥಮಿಪಾಮಿತಿ ತಾದೇಶಃ । ತಸ್ತನಸ್ತನಥನಾಶ್ಚ । ಪಾ ೭ ೧.೪೫। ಇತಿ ತನಬಾದೇಶಃ । ತಪಿ ಪ್ರಾಪ್ತೇ ಧಿನ್ವಿಕೃಣ್ವ್ಯೋರಚ್ಛೇತ್ಯುಪ್ರತ್ಯಯಃ। ತತ್ಸನ್ನಿಯೋಗೇನ ವಕಾರಸ್ಯ ಚಾಕಾರಃ । ತಸ್ಯಾತೋ ಲೋಪೇ ಇತಿ ಲೋಪಃ । ತಸ್ಯಾಚಃ ಪರಸ್ಮಿನ್ನಿತಿ ಸ್ಥಾನಿವದ್ಭಾವಾದ್ಯೆಕಾರಸ್ಯ ಲಘೂಪಧಗುಣೋ ನ ಭವತಿ । ತನಪಃ ಪಿತ್ತ್ವೇನಾಙ್ತಿತ್ವಾದುಕಾರಸ್ಯ ಗುಣಃ । ಇಂದ್ರಾಯ । ಋಜ್ರೇಂದ್ರೇತ್ಯಾದಿನಾ ರನ್ । ನಿತ್ತ್ವಾದಾದ್ಯುದಾತ್ತಃ। ಯಜ್ವನಃ । ಯಜ ದೇವಪೂಜಾಸಂಗತಿಕರಣಾದಾನೇಷು । ಸುಯೋಜೋರ್ಜ್ವನಿಸ್ । ಪಾ. ೩-೨-೧೦೩ । ಜಸಿ ಭಸಂಜ್ಞಾಯಾಮಲ್ಲೋಪೇ ಪ್ರಾಪ್ತೇ ನ ಸಂಯೋಗಾದ್ವಮಂತಾತ್ । ಪಾ. ೬-೪-೧೩೭ । ಇತಿ ನಿಷೇಧಃ । ವನಿಪಃ ಪಿತ್ತ್ವೇನ ಧಾತುಸ್ವರ ಏವ ಶಿಷ್ಯತೇ। ಗೃಹೇ । ಗ್ರಹ ಉಪಾದಾನೇ । ಗೇಹೇ ಕಃ । ಪಾ. ೩-೧-೧೪೪ । ಇತಿ ಕಪ್ರತ್ಯಯಃ । ಗ್ರಹಿಜ್ಯೇತ್ಯಾದಿನಾ । ಪಾ. ೬-೧-೧೬ । ಸಂಪ್ರಸಾರಣಂ । ಪರಪೂರ್ವತ್ವಂ । ಪ್ರತ್ಯಯಸ್ವರಃ । ತತ್ರ । ತ್ರಲ್ । ಲಿತೀತಿ ಪ್ರತ್ಯಯಾತ್ಪೂರ್ವಸ್ಯೋದಾತ್ತತ್ವಂ । ದೇವಾ॰ ಉಪೇತ್ಯತ್ರ ಸಂಹಿತಾಯಾಂ ದೀರ್ಘಾದಟೀತಿ ನಕಾರಸ್ಯ ರುತ್ವಂ । ಆತೋಽಟಿ ನಿತ್ಯಮಿತ್ಯಾಕಾರಸ್ಯಾನುನಾಸಿಕಾದೇಶಃ । ಭೋಭಗೋ ಇತಿ ಯತ್ವಂ । ತಸ್ಯ ಲೋಪಃ ಶಾಕಲ್ಯಸ್ಯೇತಿ ಲೋಪಃ ॥ ೨೫ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಜರೇ) ಇಂದ್ರಾಯ—ಇಂದ್ರನ ತೃಪ್ತಿಗಾಗಿ । ಯಜ್ವನಃ—ಯಜ್ಞಮಾಡುವ ಯಜಮಾನನ । ಗೃಹೇ—ಮನೆಯಲ್ಲಿ (ಯಜ್ಞಶಾಲೆಯಲ್ಲಿ) ಸ್ವಾಹಾ—ಸ್ವಾಹಾಕಾರಪೂರ್ವಕವಾಗಿ (ಅಥವಾ ಸ್ವಾಹಾ

ಎಂಬ ಹೆಸರುಳ್ಳ ಅಗ್ನಿಯಿಂದ ಸಂಪಾದಿತವಾದ) । **ಯಜ್ಞಂ**—ಯಜ್ಞವನ್ನು । **ಕೃಣೋತನ**—ಮಾಡಿರಿ । **ತತ್ರ**—ಆ ಯಜ್ಞಭೂಮಿಗೆ । **ದೇವಾನ್**—ದೇವತೆಗಳನ್ನು । **ಉಪ ಹ್ವಯೇ**—ಆಹ್ವಾನ ಮಾಡುವೆನು (ಕರೆಯುವೆನು.)

॥ ಭಾವಾರ್ಥ ॥

ಎಲೈ ಅಧ್ವರ್ಯು ಮೊದಲಾದ ಋತ್ವಿಜರೇ, ಯಜಮಾನ ಮನೆಯಲ್ಲಿ ಇಂದ್ರನ ಸಂತೋಷಾರ್ಥವಾಗಿ ಯಜ್ಞವನ್ನು ಸ್ವಾಹಾಕಾರಪೂರ್ವಕವಾಗಿ ಮಾಡಿರಿ ಅಥವಾ ಸ್ವಾಹಾ ಎಂಬ ಅಗ್ನಿಸಂಬಂಧವಾದ ಹವಿಸ್ಸನ್ನೆ ಸಿಸುತ್ತಾ ಯಜ್ಞಮಾಡಿರಿ. ಅದಕ್ಕಾಗಿ ಅಲ್ಲಿಗೆ ದೇವತೆಗಳನ್ನು ಆಹ್ವಾನ ಮಾಡುವೆನು.

English Translation.

Perform the sacrifice to Indra conveyed through ***swaha*** in the house of the sacrificer. I invoke the gods thither.

॥ ವಿಶೇಷವಿಷಯಗಳು ॥

ಸ್ವಾಹಾ—ಯಾಸ್ಕರ ವಿವರಣೆಯು—

ಸ್ವಾಹಾಕೃತಯೇಽ । ಸ್ವಾಹಾಕೃತಯೇಽ ಸ್ವಾಹೇತೇತ್ ಸು ಆಹೇತಿ ವಾ । ಸ್ವಾ ವಾಗಾಹೇತಿ ವಾ । ಸ್ವಂ ಪ್ರಾಹೇತಿ ವಾ । ಸ್ವಾಹುತಂ ಹವಿರ್ಜುಹೋತೀತಿ ವಾ ॥

ಸ್ವಾಹಾ ಎಂಬ ಶಬ್ದಕ್ಕೆ ನಾಲ್ಕು ವಿಧವಾದ ಅವಯವಾರ್ಥಗಳಿರುವವು.

(೧) **ಸು ಆಹೇತಿ ವಾ**—ಸು=ಚೆನ್ನಾಗಿ ಆಹ = ಹೇಳುತ್ತಾನೆ. ಚೆನ್ನಾಗಿ ಅಥವಾ ಸ್ಪಷ್ಟವಾಗಿ ಉಚ್ಚರಿಸುವುದರಿಂದ ಇದಕ್ಕೆ ಸ್ವಾಹಾ ಎಂದು ಹೆಸರು.

(೨) **ಸ್ವಾ ವಾಗಾಹೇತಿ ವಾ**—ಸ್ವಾ = ಸ್ವಕೀಯವಾದ ವಾಕ್ = ವಾಕ್ಯವು **ತಂ ಸ್ವಾ ವಾಗ್ಭ್ಯವದಜ್ಜುಹುಧೀತಿ ತತ್ಸ್ವಾಹಾಕಾರಸ್ಯ ಜನ್ಮ** ಎಂದು ಶ್ರುತಿವಾಕ್ಯವಿರುವುದು (ಬ್ರಾಹ್ಮಣ). ಎಂದರೆ ಹೋಮ ಮಾಡುವಾಗ ವೇದಮಂತ್ರವಾದ ಋಕ್ಕಿನ ಅಂತ್ಯದಲ್ಲಿ ಸ್ವಾಹಾ ಎಂಬ ಶಬ್ದವನ್ನು ತಾನೇ (ಹೋಮ ಮಾಡುವವನು) ಸೇರಿಸಿ ಹೇಳುವುದರಿಂದ ಸ್ವಾಹಾ ಎಂದು ಹೆಸರು.

(೩) **ಸ್ವಂ ಪ್ರಾಹೇತಿ ವಾ**—ಇಲ್ಲಿ ಸ್ವಂ = ತನ್ನ ಹವಿಸ್ಸನ್ನು ಆಹ—ಹೋಮ ಮಾಡುವೆನೆಂದು ಹೇಳುವನು. ಅದ್ದರಿಂದ ಸ್ವಾಹಾ ಎಂದು ಹೆಸರು.

(೪) **ಸ್ವಾಹುತಂ ಹವಿರ್ಜುಹೋತೀತಿ ವಾ**—ತಾನು ಹೋಮಮಾಡಿದ ಹವಿಸ್ಸನ್ನು **ಸ್ವಾಹಾ** ಎಂಬ ಶಬ್ದೋಚ್ಚಾರಣೆ ಮೂಲಕ ಹೋಮ ಮಾಡುವುದರಿಂದ ಎಂದರೆ ಅಗ್ನಿಯಲ್ಲಿ ಹವಿಃಪ್ರದಾನ ಮಾಡುವುದರಿಂದ **ಸ್ವಾಹಾ** ಎಂದು ಹೆಸರು.

ಸ್ವಾಹಾಕಾರಾರ್ಥಕ್ಕೆ ಯಾಸ್ಕರು ಈ ಋಕ್ಕನ್ನು ಉದಾಹರಣೆಯಾಗಿ ಕೊಟ್ಟಿರುವರು—

ಸದ್ಯೋ ಜಾತೋ ವ್ಯಮಿಮೀತ ಯಜ್ಞಮಗ್ನಿರ್ದೇವಾನಾಮಭವತ್ಪುರೋಗಾಃ ।
ಅಸ್ಯ ಹೋತುಃ ಪ್ರದಿಶ್ಯೃತಸ್ಯ ವಾಚಿ ಸ್ವಾಹಾಕೃತಂ ಹವಿರದಂತು ದೇವಾಃ ॥

(ಋ. ಸಂ. ೧೦-೧೧೦-೧೧)

ಇದರ ಮುಖ್ಯಾರ್ಥವು— ಈಗತಾನೇ ಉತ್ಪನ್ನನಾದ (ಎಂದರೆ ಯಜ್ಞದಲ್ಲಿ ಈಗ ಪ್ರತಿಷ್ಠಿಸಲ್ಪಟ್ಟಿರುವ) ಅಗ್ನಿಯು ದೇವತೆಗಳ ಮುಂದೆ ಕುಳಿತು ಹೋತೃವಿನ ಕರ್ತವ್ಯವನ್ನು ಎಂದರೆ ದೇವತೆಗಳನ್ನು ಆಹ್ವಾನಮಾಡುವ ಕಾರ್ಯವನ್ನು ನೆರವೇರಿಸುತ್ತಾ ಯಜ್ಞವನ್ನು ನಿರ್ವಹಿಸುವನು. ಇಂತಹ ಹೋತೃವು ಪೂರ್ವದಿಕ್ಕಿನಲ್ಲಿ ಇದ್ದು ಸಮರ್ಪಿಸುವ ಸ್ವಾಹಾಕಾರಶಬ್ದಪೂರ್ವಕವಾಗಿ ಹೋಮಮಾಡುವ ಹವಿಸ್ಸನ್ನು ದೇವತೆಗಳು ಭಕ್ಷಿಸಲಿ ಎಂದು. ಆದುದರಿಂದ ಸ್ವಾಹಾ ಎಂದರೆ ಯಜ್ಞಾರ್ಥವಾಗಿ ವಿಧಿಪೂರ್ವಕವಾಗಿ ಪ್ರತಿಷ್ಠಿತವಾದ ಅಗ್ನಿಯಲ್ಲಿ ದೇವತೆಗಳ ಪ್ರೀತಿಗಾರ್ಥವಾಗಿ ಹವಿಸ್ಸನ್ನು ಹೋಮಮಾಡುವಾಗ ಮಂತ್ರಾಂತ್ಯದಲ್ಲಿ ಉಚ್ಚರಿಸುವ ಶಬ್ದಕ್ಕೆ ಸ್ವಾಹಾ ಎಂದು ಹೆಸರು ಎಂದಭಿಪ್ರಾಯವು.

ಕೆಲವು ಆಪ್ರೀಸೂಕ್ತಗಳಲ್ಲಿ ಸ್ವಾಹಾಕೃತಯಃ ಎಂದು ಬಹುವಚನ ಪ್ರಯೋಗವಿರುವುದು. ಈ ಸೂಕ್ತದಲ್ಲಿರುವ ಹನ್ನೊಂದು ದೇವತೆಗಳಿಗೆ ಹೋಮಮಾಡುವಾಗ ಉಪಯೋಗಿಸುವ ಹನ್ನೊಂದು ಪ್ರಯಾಜಾ ಮಂತ್ರಗಳಿಗೂ ಸ್ವಾಹಾಕಾರವನ್ನು ಸೇರಿಸಿ ಪಠಿಸುವುದರಿಂದ ಸ್ವಾಹಾಕೃತಯಃ ಎಂದು ಬಹುವಚನವನ್ನು ಪ್ರಯೋಗಿಸಿರುವುದು.

ಪುರಾಣಾದಿಗಳಲ್ಲಿ ಸ್ವಾಹಾ ಎಂಬ ಶಬ್ದವು ಬೇರೆ ಅರ್ಥದಲ್ಲಿ ಉಪಯೋಗಿಸಲ್ಪಡುವುದು. ಅಂಗಿರಾ ಋಷಿಯು ಪುತ್ರನಾದ ಬೃಹಸ್ಪತಿಯ ಮಗಳಿಗೆ ಸ್ವಾಹಾ ಎಂದು ಮಹಾಭಾರತದಲ್ಲಿ ಹೇಳಿರುವುದು, ಪುರಾಣಗಳಲ್ಲಿ ಸ್ವಾಹಾದೇವಿಯು ದಕ್ಷಪ್ರಜಾಪತಿಯ ಮಗಳೆಂದೂ, ಅಗ್ನಿಯ ಪತ್ನಿಯೆಂದೂ ಹೇಳಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಕೃಞೋತೇನ್— ಕೃವಿ ಹಿಂಸಾಕರಣಯೋಶ್ಚ ಧಾತು. ಇದಿತ್ತು. ಆದ್ದರಿಂದ 'ಇದಿತೋನುಮ್ ಧಾತೋಃ' ಎಂಬುದರಿಂದ ಋಕಾರದ ಮುಂದೆ ನುಮ್ ಆಗಮ. ಕೃನ್ವ್ ಎಂದಾಗುವುದು. ಇದಗ ಮುಂದೆ ಲೋಟ್ ಮಧ್ಯಮಪುರುಷ ಬಹುವಚನ ಥ ಪ್ರತ್ಯಯ. ಲೋಟೋಲಜ್ವಿತ್ (ಶಾ. ಸೂ. ೩-೪-೪೫) ಎಂಬುದರಿಂದ ಲಜ್ವಿದ್ಭಾವ ಬಂದರೆ ತಸ್ಥಸ್ಥಮಿಪಾಂ ತಾಂತಂತಾಮಃ (ಪಾ. ಶೂ. ೩-೪-೧೦೧) ಎಂಬುದರಿಂದ ಥಗೆ ತ ಆದೇಶ. ತಪ್ತನಪ್ತನಥನಾಶ್ಚ (ಪಾ. ಸೂ- ೩-೧-೪೫) ಲೋಟ್ ಮಧ್ಯಮಪುರುಷಕ್ಕೆ ಆದೇಶವಾಗಿ ಬಂದ ತಕಾರಕ್ಕೆ, ತಪ್, ತನಪ್, ತನ, ಥನ ಎಂಬ ನಾಲ್ಕು ಆದೇಶಗಳು ಬರುವುವು ಎಂಬುದರಿಂದ ಇಲ್ಲಿ ತ ಎಂಬುದರ ಸ್ಥಾನದಲ್ಲಿ ತನಪ್ ಆದೇಶ ಕೃನ್ವ್+ತನ ಕರ್ತರಿ ಶಪ್ ಎಂಬುದರಿಂದ ಶಪ್ ವಿಕರಣ ಪ್ರಾಪ್ತವಾದರೆ ಧ್ವಿನ್ವಿ-ಕೃಞ್ಯೋ ರಚೆ (ಪಾ. ಸೂ. ೩-೧-೮೦) ಧಿನ್ವ್ ಕೃಞ್ವ್ ಇವುಗಳ ಕೊನೆಯ ವರ್ಣಕ್ಕೆ ಅಕಾರಾದೇಶ ಬರುವುದು. ಶಬ್ವಿಷಯದಲ್ಲಿ ಉ ಪ್ರತ್ಯಯವೂ ಬರುತ್ತೆ ಎಂದು ಅಕಾರಾದೇಶ ಉ ಪ್ರತ್ಯಯಗಳು ಬಂದರೆ ಕೃನ+ಉ+ತನ. ಅತೋಲೋಪಃ (ಪಾ. ಸೂ. ೬ ೪-೪೮) ಅರ್ಧಧಾತುಕ ಪ್ರತ್ಯಯ ಪರವಾಗಿರುವಾಗ ಅರ್ಧಧಾತುಕೋಪದೇಶ ಕಾಲದಲ್ಲಿ ಯಾವುದು ಅಕಾರಾಂತವಾಗಿರುವುದೋ ಅದರ ಅಕಾರಕ್ಕೆ ಲೋಪ ಬರುವುದು

ಎಂಬುದರಿಂದ ಕೃನ ಎಂಬಲ್ಲಿರುವ ಅಕಾರಕ್ಕೆ ಲೋಪ. **ಈ ಅಕಾರ ಲೋಪಕ್ಕೆ ಅಚಃ ಪರಸ್ಮಿನ್ಪೂರ್ವವಿಧೌ** (ಪಾ. ಸೂ. ೧-೧-೫೭) ಎಂಬುದರಿಂದ ಸ್ಥಾನಿವದ್ಭಾವ ಬರುವುದರಿಂದ ಋಕಾರಕ್ಕೆ ಲಘೂಪಧಗುಣ ಬರುವುದಿಲ್ಲ. **ತನಷ್** ಪಿತ್ತು ಆದ್ದರಿಂದ ಅಪಿತ್ ಎಂದು ಪರ್ಯುದಾಸಮಾಡಿರುವುದರಿಂದ **ಸಾರ್ವಧಾತುಕಮಪಿತ್** (ಪಾ. ಸೂ. ೧ ೨-೪) ಎಂಬುದರಿಂದ ಙಿತ್ವ ಬರುವುದಿಲ್ಲ- ಆದಕಾರಣ **ಕ್ಙಿತಿಚ** (ಪಾ. ಸೂ. ೧-೧-೫) ಎಂಬುದರಿಂದ ಗುಣಕ್ಕೆ ನಿಷೇಧ ಬರುವುದಿಲ್ಲ. **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ ೭-೩-೮೪) ಎಂಬುದರಿಂದ ಉಕಾರಕ್ಕೆ ಗುಣ ಓಕಾರ, **ಯುವರ್ಣಾನ್ನ್ಯಸ್ಯಣಶ್ನಂವಕ್ತವ್ಯಂ** (ಪಾ. ಸೂ. ೮-೪-೧-೧) ಎಂಬುದರಿಂದ ನಕಾರಕ್ಕೆ ಣಕಾರ, ಕೃಣೋತನ ಎಂದಾಗುವುದು. ತಿಙ್ಚತಿಙಃ ಎಂಬುದರಿಂದ ಸರ್ವಾನುದಾತ್ತ.

ಇನ್ಧ್ಯೈ—ಇದಿ ಪರಮೈಶ್ವರ್ಯೇ ಧಾತು. ನುಮಾಗಮ. **ಋಜ್ರೇನ್ಧ್ರಾಗ್ರ** (ಉ. ಸೂ. ೨-೧೦೬) ಇತ್ಯಾದಿ ಸೂತ್ರದಿಂದ ರನ್ ಪ್ರತ್ಯಯ. ಪ್ರತ್ಯಯವು ನಿತ್ತು. ಆದ್ದರಿಂದ ಇನ್ನಿತ್ಯಾದಿರ್ನಿತ್ಯಮ್ (ಪಾ. ಸೂ. ೬-೧-೧೯೭) ಎಂಬುದರಿಂದ ಇನ್ಧ್ರ ಎಂಬುದು ಆದ್ಯುದಾತ್ತ.

ಯಜ್ವನಃ—**ಯಜ ದೇವಪೂಜಾಸಂಗತಿಕರಣದಾನೇಷು. ಸುಯಜೋರ್ಙ್ವನಿಪ್** (ಪಾ. ಸೂ. ೩-೨-೧೦೩) ಷುಞ್ ಅಭಿಷವೇ, ಯಜ ದೇವ ಪೂಜಾದೌ. ಈ ಧಾತುಗಳ ಮುಂದೆ ಭೂತಾರ್ಥದಲ್ಲಿ ಙ್ವನಿಪ್ ಪ್ರತ್ಯಯ ಬರುವುದು. ಎಂಬುದರಿಂದ ಙ್ವನಿಪ್ ಪ್ರತ್ಯಯ. ಇದರಲ್ಲಿ ವನ್ ಎಂಬುದು ನಿಲ್ಲುವುದು. ಯಜ್ವನ್ ಶಬ್ದದ ಮುಂದೆ ಷಷ್ಠೀ ವಿಭಕ್ತಿ ಏಕವಚನ ಙಸ್ ಪ್ರತ್ಯಯ ಯಜ್ವನ್+ಅಸ್ ಇದಕ್ಕೆ **ಯೆಚಿಭಮ್** (ಪಾ ಸೂ. ೧-೪-೧೦೮) ಎಂಬುದರಿಂದ ಭ ಸಂಜ್ಞೆ ಬರುವುದು. ಆದ್ದರಿಂದ **ಅಲ್ಲೋಪೋಽನಃ** (ಪಾ. ಸೂ. ೬-೪-೧೩೪) ಅಂಗಾವಯವವೂ ಕಾರ್ತ್ಯಯಾವಧಿಕ ಅಸರ್ವನಾಮಸ್ಥಾನ ಯಾದ್ಯಜಾದ್ಯನ್ಯತರಸ್ಯಾದಿಪ್ರತ್ಯಯಾವ್ಯವಹಿತ ಪೂರ್ವವರ್ತಿಯೂ ಆದ ಧಾತು ಅನ್ ಇರುವುದೋ ಅದರ ಅಕಾರಕ್ಕೆ ಲೋಪ ಬರುವುದು ಎಂಬುದರಿಂದ ಯಜ್ವನ್ ಶಬ್ದದ ಅನ್ನಿನ ಅಕಾರಕ್ಕೆ ಲೋಪವು ಯದ್ಯಪಿ ಪ್ರಾಪ್ತವಾಗುವುದು. ಆದರೂ ಅದಕ್ಕೆ **ನ ಸಂಯೋಗಾದ್ಪೂರ್ವಮನ್ತಾತ್** (ಪಾ. ಸೂ. ೬-೪-೧೩೭) ವಕಾರಾಂತ ಮಕಾರಾಂತವಾದ ಸಂಯೋಗದ ಮುಂದೆ ಇರುವ ಅನ್ನಿನ ಅಕಾರಕ್ಕೆ ಲೋಪ ಬರುವುದಿಲ್ಲ ಎಂಬುದರಿಂದ ಙ್ವ್ ಎಂಬ ವಕಾರಾಂತ ಸಂಯೋಗದ ಮುಂದೆ ಇರುವ ಅನ್ ನ ಅಕಾರಕ್ಕೆ ಲೋಪ ಬರುವುದಿಲ್ಲ.

ಗೃಹೇ—**ಗೇಹಕಃ** (ಪಾ. ಸೂ. ೩-೧-೧೪೪) ಎಂಬುದರಿಂದ ಕ ಪ್ರತ್ಯಯ. ಕಕಾರಕ್ಕೆ ಲಶಕ್ವತದ್ಧಿತೇ (ಪಾ. ಸೂ. ೧-೩-೮) ಎಂಬುದರಿಂದ ಇತ್ಸಂಜ್ಞೆ ತಸ್ಯಲೋಪಃ ಎಂಬುದರಿಂದ ಲೋಪ **ಗೃಹಿಜ್ಯಾವಯಿವ್ಯಧಿವಷ್ಟಿ ವೃಶ್ಚತಿ ಭೃಜ್ಜತೀನಾಂಙಿತಿಚ** (ಪಾ. ೬-೧-೧೬) ಎಂಬುದರಿಂದ ಸಂಪ್ರಸಾರಣ ರೇಫಕ್ಕೆ ಋಕಾರ. ಇಗ್ಯಣಸ್ಸಂಪ್ರಸಾರಣಮ್ (ಪಾ. ಸೂ. ೧-೧-೪೫) ಯ ವ ರ ಲ ಇವುಗಳ ಸ್ಥಾನದಲ್ಲಿ ಕ್ರಮವಾಗಿ ಬರುವ ಇ, ಉ, ಋ. ಲೃ ಇವುಗಳಿಗೆ ಸಂಪ್ರಸಾರಣವೆಂದು ಹೆಸರು. **ಸಂಪ್ರಸಾರಣಾಚ್ಚ** (ಪಾ.ಸೂ. ೬-೧-೧೦೮) ಎಂಬುದರಿಂದ ಋಕಾರ ಅಕಾರಗಳಿಗೆ ಪೂರ್ವರೂಪ ಗೃಹ, ಸಪ್ತಮಿವಿಭಕ್ತಿ ಏಕವಚನದಲ್ಲಿ ಗೃಹೇ ಎಂದು ರೂಪವು. ಕ ಪ್ರತ್ಯಯ ಸ್ವರವು ಬರುವುದು.

ತಕ್ರೇ–ಸಪ್ತಮ್ಯಾಸ್ತ್ರಲ್ (ಪಾ. ಸೂ. ೫-೩-೧೦) ಎಂಬುದರಿಂದ ತತ್ ಶಬ್ದ ಪ್ರಕೃತಿಕ ಸಪ್ತಮ್ಯಂತದ ಮುಂದೆ ತ್ರಲ್ ಪ್ರತ್ಯಯ ತದ್ಧಿತಾನ್ತವಾದ್ದರಿಂದ '**ಕೃತ್ತದ್ಧಿತಸಮಾಸಾಶ್ಚ**' ಎಂಬುದರಿಂದ **ಪ್ರಾತಿಪದಿಕ** ಸಂಜ್ಞೆ '**ಸುಪೋಧಾತು ಪ್ರಾತಿಪದಿಕಯೋಃ**' ಙಿಗೆ ಲುಕ್ **ಪ್ರಾಗ್ದಿಶೋ ವಿಭಕ್ತೆಃ** ಎಂಬುದರಿಂದ ತ್ರಲ್ಲಿಗೆ ವಿಭಕ್ತಿ ಸಂಜ್ಞೆ ಇರುವುದು. ಆದ್ದರಿಂದ ಆದು ಪರವಾಗಿರುವಾಗ **ತ್ಯದಾದೀನಾಮಃ** (ಪಾ. ಸೂ. ೭-೩-೧೦೨ ಎಂಬುದರಿಂದ

ದಕಾರಕ್ಕೆ ಅಕಾರ, ತ+ಅ+ತ್ರ ಅತೋಗುಣೇ (ಪಾ. ಸೂ. ೬-೧-೯೭) ಎಂಬುದರಿಂದ ಪರರೂಪ ತತ್ರ ಎಂದು ರೂಪ. ಲಿತಿ (೬-೧-೧೯೩) ಎಂಬುದರಿಂದ ತ್ರಲ್ ಪ್ರತ್ಯಯದ ಹಿಂದೆ ಇರುವ ವರ್ಣವು ಉದಾತ್ತ.

ದೇವಾ॑ ಉಷ–ದೇವಶಬ್ದವು ದಿವ್ ಧಾತುವಿನ ಮುಂದೆ ಪಚಾದಿ (ಪಾ.ಸೂ. ೩. ೧-೧೩೪) ಲಕ್ಷಣವಾದ ಅಚ್ ಪ್ರತ್ಯಯ ಬಂದು ಲಘೂಪಧಗುಣ (ಪಾ ಸೂ ೭-೩-೮೬) ಬಂದು ನಿಷ್ಪನ್ನವಾಗಿರುವುದು. ಇದರ ಮುಂದೆ ದ್ವಿತೀಯಾಬಹುವಚನ ಶಸ್ ದೇವ+ಅಸ್ ಪ್ರೆಥಮಯೋಃ ಪೂರ್ವಸವರ್ಣಃ (ಪಾ.ಸೂ. ೬-೧.೧೦೨) ಎಂಬುದರಿಂದ ಪೂರ್ವಸವರ್ಣದೀರ್ಘ ದೇವಾಸ್ ತಸ್ಮಾಚ್ಛಸೋನಃಪುಂಸಿ (ಪಾ. ಸೂ. ೬-೧-೧೦೩) ಪೂರ್ವಸವರ್ಣದೀರ್ಘದ ಮುಂದೆ ಇರುವ ಶಸ್ ಪ್ರತ್ಯಯಾವಯವವಾದ ಸಕಾರಕ್ಕೆ ನಕಾರ ಬರುವುದು ಎಂಬುದರಿಂದ ಸಕಾರಕ್ಕೆ ನಕಾರ, ದೇವಾನ್. ಸಂಹಿತಾಕಾಲದಲ್ಲಿ ಉಷ ಶಬ್ದವು ಪರವಾದಾಗ **ದೀರ್ಘಾದಟಿಸಮಾನಪಾದೇ** (ಪಾ. ಸೂ. ೮-೩-೯) ಎಂಬುದರಿಂದ ನಕಾರಕ್ಕೆ ರು ಆದೇಶ, ದೇವಾರ್+ಉಷ **ಅತೋಽಟಿನಿತ್ಯಮ್** (ಪಾ. ಸೂ. ೮-೩-೩) ಎಂಬುದರಿಂದ ರೇಫದ ಹಿಂದೆ ಇರುವ ಅಕಾರಕ್ಕೆ ಅನುನಾಸಿಕವಾದ ಅಕಾರ, ದೇವಾರ್+ಉಷ. **ಭೋ ಭಗೋ ಅಘೋ ಅಪೂರ್ವಸ್ಯೋಽಶಿ** (ಪಾ. ಸೂ. ೮-೩-೧೭) ಎಂಬುದರಿಂದ ರುಗೆ ಯತ್ವ ದೇವಾಯ್+ಉಷ **ಲೋಪಶಾಕಲ್ಯಸ್ಯ** (ಪಾ. ಸೂ. ೮-೩-೧೯) ಎಂಬುದರಿಂದ ಯಕಾರಕ್ಕೆ ಲೋಪ. ದೇವಾ+ಉಷ. ಈಗ **ಆದ್ಗುಣಃ** (ಪಾ.ಸೂ. ೬-೧-೮೭) ಎಂಬುದರಿಂದ ಅ+ಉಗಳಿಗೆ ಓಕಾರರೂಪವಾದ ಗುಣವು ಯದ್ಯಪಿ ಪ್ರಾಪ್ತವಾಗುವುದು. ಆದರೂ ಯ ಲೋಪಕ್ಕೆ **ಪೂರ್ವತ್ರಾಸಿದ್ಧಮ್** (ಪಾ. ಸೂ. ೮-೨-೧) ಎಂಬುದರಿಂದ ಗುಣವನ್ನು ಮಾಡುವಾಗ ಅಸಿದ್ಧತ್ವ ಬರುವುದು. ಆದ್ದರಿಂದ ಅವರ್ಣದ ಮುಂದೆ ಯಕಾರವು ಇದ್ದಂತೆ ಆಗುವುದು. ಅಜ್ವರ್ಣ ಪರದಲ್ಲಿರುವುದಿಲ್ಲ. ಆದ್ದರಿಂದ ಗುಣ ಬರುವುದಿಲ್ಲ ॥ ೧೨ ॥

ಹದಿನಾಲ್ಕನೆಯ ಸೂಕ್ತವು.

ಐಭಿರಗ್ನೇ ಇತ್ಯಾದಿಕಸ್ಯ ದ್ವಾದಶರ್ಚಸ್ಯ ತೃತೀಯಸೂಕ್ತಸ್ಯ ಋಷಿಶ್ಛಂದಸೀ ಪೂರ್ವವತ್ । ತಚ್ಚೇ ಸೂಕ್ತಂ ಬಹುದೇವತಾಕಂ । ಅತ ಏವಾನುಕ್ರಮ್ಯತೇ । ಐಭಿರ್ನೈಶ್ವದೇವಮಿತಿ ॥ ವಿನಿಯೋಗಸ್ತು । ವ್ಯೂಢದ್ವಾದಶಾಹಸ್ಯ ಪ್ರೆಥಮೇ ಛಂದೋಮೇ ತೃತೀಯಸವನೇ ವೈಶ್ವದೇವಶಸ್ತ್ರ ಐಭಿರಗ್ನೇ ದುವೋ ಗಿರ ಇತಿ ಸೂಕ್ತಂ ॥ ತಥಾ ಚ ಸೂತ್ರಿತಂ । ಅಥ ಛಂದೋಮಾಃ ಸಮುದ್ರಾದೂರ್ಮಿರಿತ್ಯುಪಕ್ರಮ್ಯೈಭಿರಗ್ನೇ ದುವೋ ಗಿರ ಇತಿ ವೈಶ್ವದೇವಂ । ಆ ೯-೯೧ । ಇತಿ ॥

ಅನುವಾದವು—ನಾಲ್ಕನೆಯ ಅನುವಾಕದಲ್ಲಿ ಮೂರನೆಯ ಸೂಕ್ತವಾದ ಐಭಿರಗ್ನೇ ಎಂಬ ಸೂಕ್ತದಲ್ಲಿ ಹನ್ನೆರಡು ಋಕ್ಕುಗಳಿರುವವು. ಋಷಿ ಮತ್ತು ಛಂದಸ್ಸು ಹಿಂದಿನ ಸೂಕ್ತದಂತೆಯೇ ಅನೇಕ ದೇವತೆಗಳಿರುವುದರಿಂದ ಸೂಕ್ತವು ಬಹುದೇವತಾಕವಾದುದು. ಆದುದರಿಂದ ಅನುಕ್ರಮಣಿಕೆಯಲ್ಲಿ ವಿಶ್ವೇದೇವತಾಕವಾದ ಸೂಕ್ತವೆಂದು ಹೇಳಲ್ಪಟ್ಟಿರುವುದು. **ವಿನಿಯೋಗವು**—ವ್ಯೂಢದ್ವಾದಶಾಹಯಾಗದ ಪ್ರಥಮ ಛಂದೋಮದಲ್ಲಿ **ತೃತೀಯ**

ಸವನದಲ್ಲಿ ವೈಶ್ವದೇವಶಸ್ತ್ರಮಂತ್ರಪಠನ ಮಾಡುವಾಗ ಐಭಿರಗ್ನೇ ದುವೋ ಗಿರ ಎಂಬ ಸೂಕ್ತವನ್ನು ಪಠಿಸ ಬೇಕು. ಆಶ್ವಲಾಯನ ಶ್ರೌತಸೂತ್ರದಲ್ಲಿ ಅಥ ಛಂದೋಮಾಃ ಸಮುದ್ರಾದೂರ್ಮಿರಿತ್ಯೈಪಕ್ರಮ್ಯೈಭಿರಗ್ನೇ ದುವೋಗಿರ ಇತಿ ವೈಶ್ವದೇವಂ—ಎಂದರೆ ಸಮುದ್ರಾದೂರ್ಮಿ ಎಂದು ಮೊದಲು ಮಾಡಿ ಐಭಿರಗ್ನೇ ದುವೋಗಿರ ಎಂಬ ಮಂತ್ರಗಳು ಛಂದೋಮಾ ಮಂತ್ರಗಳೆಂದು ಹೇಳಲ್ಪಟ್ಟಿದೆ. (ಆ. ಸೂ. ೮-೯).

॥ ಓಂ ॥

ಸೂಕ್ತ—೧೪

॥ ಮಂಡಲ—೧ ॥ ಅನುವಾಕ—೪ ॥ ಸೂಕ್ತ—೧೪ ॥

॥ ಅಷ್ಟಕ —೧ ॥ ಅಧ್ಯಾಯ—೧ ॥ ವರ್ಗ— ೨೬, ೨೭ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೧-೧೨ ॥

॥ ಋಷಿಃ—ಮೇಧಾತಿಥಿಃ ಕಾಣ್ವಃ ॥

॥ ದೇವತಾ—ವಿಶ್ವೇ ದೇವಾಃ (ವಿಶ್ವೈರ್ದೇವೈಃ ಸಹಿತೋಗ್ನಿಃ ।
೩-ಇಂದ್ರವಾಯುಬೃಹಸ್ಪತಿಮಿತ್ರಾಗ್ನಿಪೂಷಭಗಾದಿ-
ತ್ಯಮರುದ್ಗಣಾಃ । ೧೦-ವಿಶ್ವದೇವಾಗ್ನೀಂದ್ರವಾಯು
ಮಿತ್ರಧಾಮಾನಿ । ೧೧. ಅಗ್ನಿಃ) ॥

॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಐಭಿರಗ್ನೇ ದುವೋ ಗಿರೋ ವಿಶ್ವೇಭಿಃ ಸೋಮಪೀತಯೇ ।
ದೇವೇಭಿರ್ಯಾಹಿ ಯಕ್ಷಿ ಚ ॥ ೧ ॥

॥ ಪದಪಾಠಃ ॥

ಆ । ಏಭಿಃ । ಅಗ್ನೇ । ದುವಃ । ಗಿರಃ । ವಿಶ್ವೇಭಿಃ । ಸೋಮ ಽ ಪೀತಯೇ ॥
ದೇವೇಭಿಃ । ಯಾಹಿ । ಯಕ್ಷಿ । ಚ ॥ ೧ ।

॥ ಸಾಯಣಭಾಷ್ಯಂ ॥

ಹೇ ಅಗ್ನೇ ಏಭಿರಸ್ಮನ್ಯಜ್ಞೇ ಸಂಭಾವಿತೈರ್ವಿಶ್ವೇಭಿರ್ದೇವೇಭಿಃ ಸರ್ವೈರ್ದೇವೈಃ ಸಹ ಸೋಮಪೀತಯೇ ಸೋಮಪಾನೋಪೇತಯಾಗಾರ್ಥಂ ದುವೋ೨ಸ್ಮದೀಯಾಂ ಪರಿಚೆರ್ಯಾಂ ಗಿರೋ೨ಸ್ಮದೀಯಾಃ ಸ್ತುತೀಶ್ಚ ಪ್ರತ್ಯಾ ಯಾಹಿ । ಆಗಚ್ಛ । ಯಜ್ಞಂ ಚ । ಆಗತ್ಯ ಯಜ ಚ ॥ ಏಭಿಃ । ಪೂರ್ವನಿರ್ದಿಷ್ಟಾನಾಂ ದೇವಾನಾಮಿದಮಾ ಪರಾಮರ್ಶಾದಿದಮೋ೨ನ್ಯಾದೇಶೇಽಶನುದಾತ್ತಸ್ಯ ತೀಯಾದೌ । ಪಾ. ೨-೪-೩೨ । ಇತ್ಯಶನುದಾತ್ತಃ । ಶಿತ್ತ್ವಾತ್ಸರ್ವಾದೇಶಃ । ನೇದಮದಸೋರಕೋಃ । ಪಾ. ೭-೧-೧೧ । ಇತಿ ಭಿಸ ಐಸಾದೇಶಾಭಾವಃ । ವಿಭಕ್ತಿರನುದಾತ್ತೈವ । ನ ಚೋಡಿದಮಿತ್ಯಾದಿನಾ ವಿಭಕ್ತೇರುದಾತ್ತತ್ವಂ ತತ್ರಾಂಶೋದಾತ್ತಾದಿತ್ಯಧಿಕಾರಾತ್ । ದುವಃ । ನಬ್ವಿಷಯಸ್ಯಾನಿಸಂತಸ್ಯೇತ್ಯಾದ್ಯುದಾತ್ತತ್ವಂ । ವಿಶ್ವೇಭಿಃ । ವಿಶ್ವಶಬ್ದೋ ವಿಶೇಃ ಕ್ವನಂತೋ ನಿತ್ತ್ವಾದಾದ್ಯುದಾತ್ತಃ । ಬಹುಲಂ ಛಂದಸೀತಿ ಭಿಸ ಐಸ್ ನ ಭವತಿ । ಬಹುವಚನೇ ಝಲ್ಯೇತ್ । ಪಾ. ೭-೩-೧೦೩ । ಇತ್ಯೇತ್ವಂ । ಸೋಮಪೀತಯೇ । ಸೋಮಶಬ್ದೋ೨ರ್ಶಆದ್ಯಜಂತೋ ಮನಂತೋ ನಿತ್ತ್ವಾದಾದ್ಯುದಾತ್ತಃ । ಸೋಮಸ್ಯ ಪೀತಿರ್ಯಸ್ಮಿನ್ಯಾಗೇ ಸ ಸೋಮಪೀತಿಃ । ತಸ್ಮೈ । ತಾದರ್ಥ್ಯೇ ಚತುರ್ಥೀ । ದೇವೇಭಿಃ । ಬಹುಲಂ ಛಂದಸೀತಿ ಭಿಸ ಐಸಾದೇಶಾಭಾವಃ । ಬಹುವಚನೇ ಝಲ್ಯೇದಿತ್ಯೇತ್ವಂ । ಯಜ್ಞಿ । ಯಜೇರ್ಲೋ೨ಟಿ ಸಿಪ್ । ಬಹುಲಂ ಛಂದಸೀತಿ ಶಪೋ ಲುಕ್ । ವ್ರಶ್ಚಾದಿನಾ ಷತ್ವಂ । ಷಢೋಃ ಕಃ ಸೀತಿ ಕತ್ವಂ । ಸೇರ್ಹಿರಾದೇಶಶ್ಚಾಂದಸತ್ವಾನ್ನ ಭವತಿ । ಸಿಪಃ ಪಿತ್ತ್ವೇನಾನುದಾತ್ತತ್ವಾದ್ಧಾತುಸ್ವರ ಏವ ॥

॥ ಪ್ರತಿಪದಾರ್ಥ ॥

(ಹೇ) ಅಗ್ನೇ—ಎಲೈ ಅಗ್ನಿಯೇ । ಏಭಿಃ—ಈ ನಮ್ಮ ಯಜ್ಞದಲ್ಲಿ ಸಂಭಾವಿತರಾದ । ವಿಶ್ವೇಭಿಃ—ಸಮಸ್ತರಾದ । ದೇವೇಭಿಃ—ದೇವತೆಗಳೊಡನೆ । ದುವಃ—ನಾವು ಮಾಡುವ ಶುಶ್ರೂಷೆಯನ್ನೂ । ಗಿರಃ—ಸ್ತೋತ್ರರೂಪವಾದ ವಾಕ್ಯಗಳನ್ನು ಸ್ವೀಕರಿಸುವುದಕ್ಕೂ । ಸೋಮಪೀತಯೇ—ಸೋಮಪಾನ ಮಾಡುವುದಕ್ಕೂ। ಪ್ರತಿ ಆ ಯಾಹಿ—ಬರುವವನಾಗು । ಯಜ್ಞಿ ಚ—ಯಜ್ಞವನ್ನೂ ನೆರವೇರಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಈ ನಮ್ಮ ಯಜ್ಞದಲ್ಲಿ ನಾವು ಮಾಡುವ ಶುಶ್ರೂಷೆಯನ್ನೂ, ಸ್ತೋತ್ರಗಳನ್ನು ಸ್ವೀಕರಿಸುವುದಕ್ಕೂ, ಸೋಮಪಾನ ಮಾಡುವುದಕ್ಕೂ ಸಮಸ್ತದೇವತೆಗಳೊಡನೆ ಬಾ. ಬಂದನಂತರ ಈ ಯಜ್ಞಕರ್ಮವನ್ನೂ ಸಾಂಗವಾಗಿ ನೆರವೇರಿಸು.

English Translation

Come, Agni with all those gods to receive our adoration and praises and for drinking soma; and also perform the sacrifice.

॥ ವ್ಯಾಕರಣಪ್ರಕ್ರಿಯಾ ॥

ವಿಭಿಃ—ಇದಮ್ ಶಬ್ದದ ಮುಂದೆ ಭಿಸ್ ಪ್ರತ್ಯಯ, ಇದಮ್ ಶಬ್ದವು ಪೂರ್ವದಲ್ಲಿ ಪ್ರಸ್ತುತರಾದ ದೇವತೆಗಳನ್ನು ಪರಾಮರ್ಶಿಸುವುದು. ಆದ್ದರಿಂದ ಅನ್ಯಾದೇಶವಿರುವುದು. ಆದಕಾರಣ **ಇದೆಮೋನ್ಯಾದೇಶೇಽನುದಾತ್ತಸ್ತೃತೀಯಾದೌ**, (ಪಾ. ಸೂ. ೨-೪-೩೨) ಎಂಬುದರಿಂದ ಅನುದಾತ್ತವಾದ ಅಶ್ ಆದೇಶವು ಇದಮ್ ಶಬ್ದಕ್ಕೆ ಬರುವುದು. ಅಶ್ ಶಿತ್ತಾದ್ದರಿಂದ ಅನೇಕಾಲ್ ಶಿತ್ಸರ್ವಸ್ಯ, ಎಂಬುದರಿಂದ ಸರ್ವಾದೇಶವಾಗಿಬರುವುದು. ಅ+ಭಿಸ್, ಈಗ **ಅತೋಭಿಸ ಐಸ್**, (ಪಾ. ಸೂ. ೭-೧-೯) ಎಂಬುದರಿಂದ ಐಸ್ ಆದೇಶವು ಪ್ರಾಪ್ತವಾಗುವುದು. ಅದಕ್ಕೆ **ನೇದಮದಸೋರಕೋಃ** (ಪಾ. ಸೂ. ೭-೧-೧೧) ಕಕಾರವನ್ನು ಹೊಂದದೇ ಇರುವ ಇದಮ್, ಅದಸ್ ಶಬ್ದಗಳ ಮುಂದೆ ಇರುವ ಭಿಸ್‌ಗೆ ಐಸಾದೇಶ ಬರುವುದಿಲ್ಲ ಎಂಬುದರಿಂದ ನಿಷೇಧ ಬರುವುದು. ಆದ್ದರಿಂದ ಐಸ್ ಆದೇಶ ಬರುವುದಿಲ್ಲ. **ಬಹುವಚನೇ ಝಲ್ಯೇತ್** (ಪಾ. ಸೂ. ೭-೩-೧೦೩) ಝಲಾದಿಯಾದ ಬಹುವಚನ ಪರದಲ್ಲಿರುವಾಗ ಅದಂತವಾದ ಅಂಗಕ್ಕೆ ಏತ್ವ ಬರುವುದು ಎಂಬುದರಿಂದ ತ ಗೆ ಏ ಬಂದರೆ ಏ+ಭಿಸ್ ರುತ್ವ ವಿಸರ್ಗಗಳು ಬಂದರೆ ಏಭಿಃ ಎಂದುರೂಪ. **ಊಡಿದೇಮ್ ಪದಾದ್ಯಪ್ಸುಮೃಡ್ಯೂಧ್ಯಃ** (ಪಾ. ಸೂ. ೬-೧-೧೭೬) ಇಲ್ಲಿ ಸಾವೇಕಾಚಸ್ತೃತೀಯಾದಿರ್ವಿಭಕ್ತಿಃ (ಪಾ. ಸೂ. ೬-೧-೧೬೮) ಎಂಬುದರಿಂದ ಏಕಾಚಃ, ಎಂದೂ, ಅನ್ತೋದಾತ್ತಾದುತ್ತರಪದಾದನ್ಯತರಸ್ಯಾಮನಿತ್ಯಸಮಾಸೇ, (ಪಾ. ಸೂ. ೬-೧-೧೬೯) ಎಂಬುದರಿಂದ ಅಂತೋದಾತ್ತಾತ್ ಎಂದೂ ಎರಡು ಪದಗಳು ಅನುವೃತ್ತಗಳಾಗುವುವು. ಏವಂಚ, ಒಂದೇ ಅಚ್ಚನ್ನು ಹೊಂದಿರುವುವೂ ಅಂತೋದಾತ್ತಗಳೂ ಆದ ಇದಮಾದಿ ಶಬ್ದಗಳ ಮುಂದೆ ಇರುವ ಅಸರ್ವನಾಮಸ್ಥಾನವಿಭಕ್ತಿಯು ಉದಾತ್ತವಾಗುವುದು ಎಂದು ಸೂತ್ರಾರ್ಥವಾಗುವುದು. ಇಲ್ಲಿ ಅಶ್, ಆದೇಶ ಅನುದಾತ್ತ, ಏ. ಯು ಸ್ಥಾನಿವದ್ಭಾವದಿಂದ ಇದಮ್ ಶಬ್ದವಾದರೂ ಅಂತೋದಾತ್ತವಾಗುವುದಿಲ್ಲ. ಆದ್ದರಿಂದ ಈ ಸೂತ್ರದಿಂದ ವಿಭಕ್ತಿಗೆ ಉದಾತ್ತ ಬರುವುದಿಲ್ಲ. **ಅನುದಾತ್ತೌಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ಭಿಸ್ ಪ್ರತ್ಯಯವು ಅನುದಾತ್ತವೇ ಆಗುವುದು.

ದುವಃ— **ನಭ್ರಾಪಯೆಸ್ಯಾನಿಸಂತಸ್ಯ** (ಪಿ ಸೂ.೨೬)ಎಂಬುದರಿಂದ ಆದ್ಯುದಾತ್ತ. ವಿಶ್ವೇಭಿಃ ವಿಶ ಪ್ರವೇಶನೇ ಧಾತುವಿನ ಮುಂದೆ **ಅಶೂವೃಷಿ ಲಟಕಣಿಖುಟವಿಶಿಭ್ಯಃಕ್ವಿ** (ಉ. ಸೂ. ೧೪೯) ಎಂಬುದರಿಂದ ಕ್ವಿನ್ ಪ್ರತ್ಯಯ, ಪ್ರತ್ಯಯವು ನಿತ್, ಆದ್ದರಿಂದ **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತ. ವಿಶ್ವಶಬ್ದದ ಮುಂದೆ ಭಿಸ್ ಪ್ರತ್ಯಯವನ್ನಿಟ್ಟರೆ, **ಬಹುಲಂ ಛಂದಸಿ** (ಪಾ. ಸೂ. ೭-೧-೧೦) ಛಂದಸ್ಸಿನಲ್ಲಿ ಭಿಸ್‌ಗೆ ಐಸ್ ಆದೇಶವು ಬಹುಲವಾಗಿ ಬರುವುದು ಎಂಬುದರಿಂದ ಐಸ್ ಆದೇಶ ಬರುವುದಿಲ್ಲ. ವಿಶ್ವ+ಭಿಸ್, ಎಂದಿರುವಾಗ **ಬಹುವಚನೇ ಝಲ್ಯೇತ್** (ಪಾ ಸೂ. ೭-೩-೧೦೩) ಎಂಬುದರಿಂದ ಅಕಾರಕ್ಕೆ ಏಕಾರ ವಿಶ್ವೇ+ಭಿಸ್, ರುತ್ವ ವಿಸರ್ಗ. ವಿಶ್ವೇಭಿಃ.

ಸೋಮಪೀತಯೇ—ಸೋಮಶಬ್ದವು **ಅರ್ತಿಸ್ತುಸುಹುಸೃಧ್ವಸ್ತ್ವಕ್ಷ್ವಕ್ಷ್ವಭ್ಯೋವಾಪದಿಯೆಕ್ಷಿನೀಭ್ಯೋ ಮನ್** (ಉ. ಸೂ. ೧-೧೫೭) ಎಂಬುದರಿಂದ ಸ್ತುಧಾತುವಿನ ಮುಂದೆ ಮನ್ ಪ್ರತ್ಯಯ ಬಂದು ನಿಷ್ಪನ್ನವಾಗಿರುವುದು. ಆದ್ದರಿಂದ ನಿತ್ಸ್ವರ ಬಂದು ಆದ್ಯುದಾತ್ತವಾಗುವುದು. **ಸೋಮಸ್ಯ ಪೀತಿರ್ಯಸ್ಮಿನ್ ಯಾಗೇ ಸಃ ತಸ್ಮೈ** ಸೋಮಪೀತಯೇ ಎಂದು ಬಹುವ್ರೀಹಿ. **ಚತುರ್ಥೀವಿಧಾನೇ ತದರ್ಥೇ ಉಪಸಂಖ್ಯಾನಮ್** (ಪಾ. ಸೂ, ೨-೩-೧೩-೧) ತಸ್ಮೈ ಇದಂ ತದರ್ಥಮ್ ಅರ್ಥೇನ ನಿತ್ಯಸಮಾಸಃ ವಿಶೇಷ್ಯಲಿಂಗತಾ ಚ ಎಂಬುದರಿಂದ ಸಮಾಸ, ತದರ್ಥಸ್ಯಭಾವಃ ತಾದರ್ಥ್ಯಮ್. **ಗುಣವಚನೆಬ್ರಾಹ್ಮಣಾದಿಭ್ಯಃ ಷ್ಯಞ್** (ಪಾ ಸೂ. ೫-೧-೧೨೪) ಎಂಬುದರಿಂದ

ಭಾವಾರ್ಥದಲ್ಲಿ ಷ್ಯಞ್ ಪ್ರತ್ಯಯ. ತತ್ ಶಬ್ದಕ್ಕೆ ಕಾರ್ಯ ಎಂದು ಅರ್ಥ, ಕಾರಣವು ಕಾರ್ಯಕ್ಕಾಗಿ ಇರುವುದು. ಅಲ್ಲವೇ ? ಆದ್ದರಿಂದ ತದರ್ಥ ಶಬ್ದದಿಂದ ಕಾರ್ಯಪ್ರಯೋಜನಕವಾದ ಕಾರಣವು ಬೋಧಿತವಾಗುವುದು. ಬ್ರಾಹ್ಮಣಾಯ ದಧಿ ಇತ್ಯಾದಿಸ್ಥಳಗಳಲ್ಲಿ ಚತುರ್ಥೀ ವಿಭಕ್ತಿನಿರ್ವಾಹಕ್ಕಾಗಿ ಕಾರ್ಯಪದದಿಂದ ವಿಶಿಷ್ಟಕಾರ್ಯವನ್ನು ವಿವಕ್ಷಿಸಬೇಕು. ಬ್ರಾಹ್ಮಣರು ದಧಿಯಿಂದ ಉಂಟಾಗಲಾರರು ಆದ್ದರಿಂದ ಇಲ್ಲಿ ಚತುರ್ಥಿಯು ಬರಲಾರದು, ವಿಶಿಷ್ಟವಾದ ಕಾರ್ಯವನ್ನು ವಿವಕ್ಷಿಸಿದರೆ ಭೋಜನ ವಿಶಿಷ್ಟ, ಬ್ರಾಹ್ಮಣನು ಕಾರ್ಯ. ಇಲ್ಲಿ ದಧಿಯು ವಿಶೇಷಣವಾದ ಭೋಜನಕ್ಕೆ ಕಾರಣವಾಗುವುದು. ಆದ್ದರಿಂದ ಭೋಜನವಿಶಿಷ್ಟ, ಬ್ರಾಹ್ಮಣನಿಗೆ ದಧಿಯು ಕಾರಣವಾಗಬಹುದು. ಏವಂಚ ಇಲ್ಲಿ ಚತುರ್ಥಿಯು ಉಪಪನ್ನವಾಗುವುದು. ಸಮಾಸಕೃತ್ತದ್ಧಿತೇಷು ಭಾವಪ್ರತ್ಯಯೇನ ಸಂಬಂಧಾಭಿಧಾನಮ್ ಸಮಾಸ, ಕೃದಂತ, ತದ್ಧಿತಾಂತ ಇವುಗಳ ಮುಂದೆ ಬರುವ ಭಾವಪ್ರತ್ಯಯ ಸಂಬಂಧವನ್ನು ಹೇಳುವುದು. ಎಂಬುದರಿಂದ ತದರ್ಥ ಎಂಬ ಸಮಾಸದ ಮುಂದೆ ಬಂದಿರುವ ಭಾವಾರ್ಥಕವಾದ ಷ್ಯಞ್ ಪ್ರತ್ಯಯವು ಸಂಬಂಧವನ್ನು ಹೇಳುವುದು. ಏವಂಚ ತಾದರ್ಥ್ಯ ಎಂದರೆ ತದರ್ಥಸಂಬಂಧಕಾರ್ಯಪ್ರಯೋಜನಕಕಾರಣಸಂಬಂಧ ಎಂದು ಅರ್ಥ. ತಥಾಚ ಕಾರ್ಯಕಾರಣಭಾವಸಂಬಂಧ ತೋರುವಾಗ ಕಾರ್ಯವಾಚಕವಾದ ಪ್ರಾತಿಪದಿಕದ ಮುಂದೆ ಚತುರ್ಥೀ ಬರುವುದು ಎಂದು ವಾರ್ತಿಕದ ಅರ್ಥವು ಏರ್ಪಡುವುದು. ಇಲ್ಲಿ ಅಗ್ನ್ಯಾಗಮನದಿಂದ ಸೋಮಪಾನೋಪೇತ ಯಾಗವು ಉಂಟಾಗುವುದು. ಆದ್ದರಿಂದ ಸೋಮಪೀತಿಶಬ್ದವು ಕಾರ್ಯವಾಚಕ. ಇದರ ಮುಂದೆ ಚತುರ್ಥೀ ವಿಭಕ್ತಿ ಬರುವುದು. ಭಾಷ್ಯದಲ್ಲಿ ಯೂಪಾಯ ದಾರು ಎಂದು ಈವಚನಕ್ಕೆ ಉದಾಹರಣೆ ಇರುವುದು. ದಾರು ಎಂದರೆ ಮರ. ಮರದಿಂದ ಯೂಪಸ್ತಂಭವು ಉಂಟಾಗುವುದರಿಂದ ಯೂಪ ಕಾರ್ಯ. ಆದರ ಮುಂದೆ ಚತುರ್ಥೀ ವಿಭಕ್ತಿಯು ಬಂದಿರುವುದು ಎಂದು ತಿಳಿಯಬೇಕು. ಕುಂಡಲಾಯ ಹಿರಣ್ಯಂ ಎಂಬುದು ಮತ್ತೊಂದು ಉದಾಹರಣೆಯೂ ಈ ವಚನಕ್ಕೆ ಭಾಷ್ಯದಲ್ಲಿ ಕೊಡಲ್ಪಟ್ಟಿರುವುದು.

ದೇವೇಭಿಃ— ದೇವಶಬ್ದ ಅಕಾರಾಂತ. ಇದರ ಮುಂದೆ ಇರುವ ಭಿಸ್‌ಗೆ **ಅತೋಭಿಸಏಸ್** (ಪಾ. ಸೂ. ೭.೧-೯) ಎಂಬುದರಿಂದ ಏಸ್ ಆದೇಶ ಪ್ರಾಪ್ತವಾಗುವುದು ಆದರೂ ಬಹುಲಂಛಂದಸಿ (ಪಾ ಸೂ. ೭-೧-೧೦) ಎಂಬುದರಿಂದ ಏಸ್ ಬರುವುದಿಲ್ಲ. ಆಮೇಲೆ ಭಿಸ್ ಝಲಾದಿಯಾದ ಬಹುವಚನವಾದ್ದರಿಂದ ಬಹುವಚನೇ ಝಲ್ಯೇತ್ ಎಂಬುದರಿಂದ ದೇವಶಬ್ದದ ಅಕಾರಕ್ಕೆ ಏಕಾರಾದೇಶ ರುತ್ವ ವಿಸರ್ಗ, ದೇವೇಭಿಃ

ಯಾಹಿ— **ತಿಙ್ಙತಿಙಃ** (ಪಾ. ಸೂ.೮-೧-೨೮) ಎಂಬುದರಿಂದ ಸರ್ವಾನುದಾತ್ತ.

ಯೆಕ್ಷಿ— ಯಜ ದೇವಪೂಜಾಸಂಗತಿಕರಣದಾನೇಷು, ಧಾತು. ಇದರ ಮುಂದೆ ಲೋಟ್. ಆದರ ಸ್ಥಾನದಲ್ಲಿ ಮಧ್ಯಮಪುರುಷಏಕವಚನ ಸಿಪ್ ಯಜ್+ಸಿ. **ಕರ್ತರಿಶಪ್** (ಪಾ. ಸೂ. ೩-೧-೬೮) ಎಂದು ಬಂದ ವಿಕರಣ ಶಪ್‌ಗೆ **ಬಹುಲಂ ಛಂದಸಿ** (ಪಾ. ಸೂ. ೨-೪-೭೩) ಎಂಬುದರಿಂದ ಲುಕ್. **ವ್ರಶ್ಚಭ್ರಸ್ಜಸೃಜ ಮೃಜಯಜರಾಜಭ್ರಾಜಚ್ಛಶಾಂ ಷಃ** (ಪಾ. ಸೂ. ೪-೨-೩೬) ಎಂಬುದರಿಂದ ಜಕಾರಕ್ಕೆ ಷಕಾರ ಯಜ್+ಸಿ+ **ಷಢೋಃಕಸ್ಸಿ** (ಪಾ ಸೂ. ೮-೩-೪೩) ಸಕಾರ ಪರದಲ್ಲಿರುವಾಗ ಷಕಾರ ಢಕಾರಗಳಿಗೆ ಕಕಾರ ಬರುವುದು ಎಂಬುದರಿಂದ ಷಕಾರಕ್ಕೆ ಕಕಾರ. ಯಕ್+ಸಿ **ಸೇರ್ಧ್ಯಪಿಚ್ಚೆ** (ಪಾ ಸೂ. ೩-೪-೮೭) ಎಂಬುದರಿಂದ ಸಿಗೆ ಹಿ ಆದೇಶವು ಯದ್ಯಪಿ ಪ್ರಾಪ್ತವಾಗುವುದು. ಆದರೂ ಛಾಂದಸವಾಗಿ ಇಲ್ಲಿ ಬರುವುದಿಲ್ಲ. ಸಿಪ್ ಪಿತ್ತು. ಆದ್ದರಿಂದ ಅನುದಾತ್ತೌ ಸುಪ್ಪಿತೌ ಎಂಬುದರಿಂದ ಅನುದಾತ್ತ. ಆದೇಶ ಪ್ರತ್ಯಯಯೋಃ ಎಂಬುದರಿಂದ ಸಕಾರಕ್ಕೆ ಷಕಾರ ಯಕ್ಷಿ ಎಂದಾಗುವುದು. ಇದು ಯಾಹಿ ಎಂಬ ತಿಙಂತದ ಮುಂದೆ ಇರುವುದು. ಆದ್ದರಿಂದ ತಿಙ್ಙತಿಙಃ ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ

॥ संहितापाठः ॥

आ त्वा कण्वा अहूषत गृणन्ति विप्र ते धियः ।
देवेभिरग्न आ गहि ॥ १ ॥

॥ पदपाठः ॥

आ । त्वा । कण्वाः । अहूषत । गृणन्ति । विप्र । ते ।धियः ।
देवेभिः । अग्ने । आ । गहि ॥ १ ॥

॥ सायणभाष्यं ॥

हे विप्र मेधाविन्नग्ने कण्वा मेधाविन ऋत्विजस्त्वा यज्ञनिष्पादकं त्वामाहूषत । आह्वयन्ति । तथा ते धियस्त्वदीयानि कर्माणि गृणन्ति । कथयन्ति । ततोऽहे अग्ने देवेभिर्देवैः सहा गहि । आगच्छ । विप्र इत्यादिषु चतुर्ष्वृङ्मन्त्रेषु मेधाविनामसु कण्व ऋभुरिति पठितम् ॥ त्वा । त्वामौ द्वितीयायाम इति शसादेशः । सर्वानुदात्तः । कण्वाः । कण शब्दार्थः । अशिप्रुशिलटिकणिखटिभ्यो वेत्यादिना क्वन् । नित्त्वादाद्युदात्तः । आहूषत । ह्वेञ् स्पर्धायां शब्दे च । छन्दसि लुङ्लङ्लिटः इति वर्तमाने लुङ् । ह्वाश्त्वादात्मनेपदं । ह्वु आत्मनेपदेष्वनत इत्यदादेशः । ह्लेः सिच् । अकार्षीत् इतीट्प्रतिषेधः । सा. ६-४-७० । बहुलं छन्दसीति संप्रसारणाभावः पूर्वत्वं । हलः । सा- ६-४-२ । इति दीर्घत्वं । आदेशप्रत्यययोरिति षत्वं । ष्टुनाष्टुः इति कारस्य नकारः । अडागमः । गृणन्ति । ग्रॄ शब्दे । लट् । झि । रुधादिभ्यः श्नम् । श्नाप्रत्ययस्य इति धातोरुर्यस्यत्वं । श्नाभ्यस्तयोरातः । सा. ६-४-११२ । इत्याकारलोपः । झपत्वर्णाच्छेति वक्तव्यं । का. ७-४-११ । इति णत्वं । तिङः स्वर एव शिष्यते । विप्र । आमन्त्रितनिघातः । शे । अनुदात्तौ सुप्पितौ । तेवमयोर्नेकवचनस्य । सा. ७-१-३९ । इति षष्ठ्याः स्थाने इत्यादेशः । देवेभिः । छन्दस ऐसभ्यः । गहि । गम्लृ सृप्लृ गतौ । लोटः सिप् । सेर्ह्यपिच्चे । कर्तरि शप् । तस्य बहुलं छन्दसीति लुक् । अनुदात्तोपदेशेत्यादिना मकारलोपः । तस्यासिद्धवदत्राभादित्यसिद्धत्वादतेरो हेरिति हेर्लुग्न भवति ॥

॥ ಪ್ರತಿಪದಾರ್ಥ ॥

(ಹೇ) ವಿಪ್ರ—ಎಲೈ ಪ್ರಾಜ್ಞನಾದ ಅಗ್ನಿಯೇ, । ಕಣ್ವಾಃ—ಮೇಧಾವಿಗಳಾದ ಋತ್ವಿಕ್ಕುಗಳು (ಕಣ್ವ ಋಷಿಯ ವಂಶಸ್ಥರು) । ತ್ವಾ—ನಿನ್ನನ್ನು । ಆ ಅಹೂಷತ—(ಪ್ರಾರ್ಥಿಸಿ) ಕರೆಯುತ್ತಾರೆ । (ಹಾಗೆಯೇ) ತೇ—ನಿನ್ನ । ಧಿಯಃ—ಕೆಲಸಗಳನ್ನು । ಗೃಣಂತಿ—ಹೊಗಳುತ್ತಾರೆ. (ಆದ್ದರಿಂದ) । ಅಗ್ನೇ—ಎಲೈ ಅಗ್ನಿಯೇ । ದೇವೇಭಿಃ——ದೇವತೆಗಳೊಡನೆ । ಆ ಗಹಿ—ದಯಮಾಡು.

॥ ಭಾವಾರ್ಥ ॥

ಎಲೈ ಪ್ರಾಜ್ಞನಾದ ಅಗ್ನಿಯೇ, ನಿನ್ನ ಗುಣಗಳನ್ನು ಹೊಗಳಲು ಬುದ್ಧಿವಂತರಾದ ಋತ್ವಿಕ್ಕುಗಳು (ಅಥವಾ ಕಣ್ವಋಷಿಯ ವಂಶಸ್ಥರು) ನಿನ್ನನ್ನು ಪ್ರಾರ್ಥಿಸಿ ಯಜ್ಞಕ್ಕೆ ಕರೆಯುತ್ತಾರೆ. ಮತ್ತು ನಿನ್ನಶ್ರೇಷ್ಠವಾದ ಕೆಲಸಗಳನ್ನು ಹೊಗಳುತ್ತಾರೆ. ಆದುದರಿಂದ ನೀನು ಸಕಲ ದೇವತೆಗಳೊಡನೆ ನಮ್ಮ ಯಜ್ಞಕ್ಕೆ ದಯಮಾಡು.

English Translation.

The Kanwas invoke you, wise Agni, and extrol your deeds; come Agni with the gods,

॥ ವಿಶೇಷವಿಷಯಗಳು ॥

ಕಣ್ವಾಃ--ವಿಪ್ರ ವೊದಲಾದ ಇಪ್ಪತ್ತುನಾಲ್ಕು ಮೇಧಾವಿ ನಾಮಗಳ ಮಧ್ಯದಲ್ಲಿ ಕಣ್ವಶಬ್ದವು ಪಠಿತವಾಗಿರುವುದರಿಂದ (ನಿ. ೩-೧೯) ಕಣ್ವಶಬ್ದಕ್ಕೆ ಮೇಧಾವಿ, ಬುದ್ಧಿವಂತ ಎಂದರ್ಥವಾಗುವುದು. ಭಾಷ್ಯಕಾರರು ಈ ರೀತಿ ಸಾಧಾರಣವಾದ ಅರ್ಥಮಾಡಿದ್ದರೂ ಈ ಋಕ್ಕಿನ ಋಷಿಯು ಕಣ್ವವಂಶಸ್ಥನಾದುದರಿಂದ ಇಲ್ಲಿ ಕೆಣ್ವಾಃ ಎಂದರೆ ಕಣ್ವವಂಶದಲ್ಲಿ ಉತ್ಪನ್ನರಾದ ಯಜಮಾನಋತ್ವಿಗಾದಿ ಜನರು ಎಂದು ಅರ್ಥಮಾಡುವುದೇ ಸಮಂಜಸವಾಗಿ ಕಾಣುವುದು.

ಧಿಯಃ--ಅಪಃ ಮೊದಲಾದ ಇಪ್ಪತ್ತಾರು ಕರ್ಮವಾಚಕನಾಮಗಳ ಮಧ್ಯದಲ್ಲಿ ಧೀಃ ಶಬ್ದವು ಪಠಿತವಾಗಿರುವುದರಿಂದ (ನಿ. ೩-೨) ಧಿಯಃ ಎಂದರೆ ಕರ್ಮಗಳನ್ನು, ಕೆಲಸಗಳನ್ನು ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಆ-ನಿಪಾತಾ ಆದ್ಯುದಾತ್ತಾಃ ಎಂಬುದರಿಂದ ಆದ್ಯುದಾತ್ತ-

ತ್ವಾ—ತ್ವಾಮೌದ್ವಿತೀಯೋಯೋಃ (ಪಾ. ಸೂ. ೪-೧.೨೩) ಪದದ ಮುಂದೆ ಇರತಕ್ಕವೂ ಪಾದದ ಆದಿಯಲ್ಲಿಲ್ಲದೇ ಇರತಕ್ಕವೂ ಆದ ದ್ವಿತೀಯಾವಿಭಕ್ತಿ ಏಕವಚನಾಂತಗಳಾದ ಯುಷ್ಮದ್ ಅಸ್ಮದ್ ಶಬ್ದಗಳಿಗೆ ಕ್ರಮವಾಗಿ ತ್ವಾ ಮಾ ಆದೇಶಗಳು ಬರುವುವು. ಅವು ಅನುದಾತ್ತಗಳಾಗುವುವು ಎಂಬುದರಿಂದ ತ್ವಾವ್ ಎಂಬುದಕ್ಕೆ ತ್ವಾ ಎಂಬ ಅನುದಾತ್ತವಾದ ಆದೇಶ ಬರುವುದು.

ಕಣ್ವಾಃ — ಕಣಶಬ್ದಾರ್ಥ ಧಾತು. ಇದರ ಮುಂದೆ **ಆಕೂಪಾರ-ಸಿಲಟಿಕಣಿಖಟಿವಿಭ್ಯಃಕ್ವನ್** (ಉ. ಸೂ. ೧-೧-೪೯) ಎಂಬುದರಿಂದ ಕ್ವನ್‌ಪ್ರತ್ಯಯ ಬರುವುದು. ಕಣಧಾತ್ವರ್ಥಃ ಕಣ ಗತೌ, ಕಣ ನಿಮಿತಾಲನೇ ಎಂದು ಕಣಧಾತುವು ಮೂರು ಇರುವುದು. ತತ್ವಬೋಧಿನ್ಯಾದಿವ್ಯಾಖ್ಯಾಕಾರರು ಕಣ ನಿಮಿತಾಲನೇ ಎಂಬ ಚುರಾದಿಧಾತುವನ್ನು ಇಲ್ಲಿ ಸ್ವೀಕರಿಸಿರುವರು. ಆದರೂ ಮೂರು ಧಾತುಗಳ ಮುಂದೆಯೂ ಕ್ವನ್ ಬರಬಹುದೆಂದು ವೇದಭಾಷ್ಯಕಾರರು ಅಭಿಪ್ರಾಯಪಡುವರು. ಪ್ರತ್ಯಯ ನಿತ್ತಾದ್ದರಿಂದ ಕಣ್ವಾಃ ಆದ್ಯುದಾತ್ತ.

ಅಹೂಷತ—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ ಧಾತು. **ಛಂದಸಿ ಲುಙ್‌ಲಙ್‌ಲಿಟಃ** (ಪಾ. ಸೂ. ೩-೪-೬) ಧಾತ್ವರ್ಥ ಸಂಬಂಧ ತೋರುವಾಗ ಎಲ್ಲಾ ಕಾಲದಲ್ಲಿಯೂ (ಭೂತಭವಿಷ್ಯದ್ವರ್ತಮಾನ) ಈ ಲಕಾರಗಳು ಬರುವುವು ಎಂಬುದರಿಂದ ವರ್ತಮಾನ ಕಾಲದಲ್ಲಿ ಲುಙ್ ಪ್ರತ್ಯಯವು ಹ್ವೇಞ್ ಧಾತುವಿನ ಮುಂದೆ ಬರುವುದು. ಹ್ವೇ+ಲ್-ಇಕಾರವು ಞಿತ್ಸಂಜ್ಞೆಯನ್ನು ಹೊಂದಿರುವುದರಿಂದ ಈ ಧಾತು ಞಿತ್. ಆದ್ದರಿಂದ **ಸ್ವರಿತ ಞಿತಃ ಕರ್ತ್ರಭಿಪ್ರಾಯೇ ಕ್ರಿಯಾಫಲೇ** (ಪಾ. ಸೂ. ೧-೩-೭೨) ಕ್ರಿಯಾಫಲವು ಕರ್ತೃವಿಗೆ ಸೇರುವಾಗ ಸ್ವರಿತೇತ್. ಞಿತ್ ಆದ ಧಾತುಗಳ ಮುಂದೆ ಆತ್ಮನೇಪದ ಬರುವುದು. ಎಂಬುದರಿಂದ ಆತ್ಮನೇಪದ ಬರುವುದು. ಪ್ರಥಮಪುರುಷ ಬಹುವಚನವಾದ ಝಿ ಪ್ರತ್ಯಯ. ಹ್ವೇ+ಝಿ, ಚ್ಲಿ ಲುಙಿ (ಪಾ. ಸೂ. ೩-೧-೪೩) ಎಂಬುದರಿಂದ ಧಾತುವಿನ ಮುಂದೆ ಚ್ಲಿ ಪ್ರತ್ಯಯ. ಆದಕ್ಕೆ **ಚ್ಲೇಃಸ್ಸಿಚ್** (ಪಾ. ಸೂ. ೩-೧-೪೪) ಎಂಬುದರಿಂದ ಸಿಚ್ ಆದೇಶ. ಹ್ವೇ+ಸ್-ಝಿ. ಸಿಚ್ ಅರ್ಧಧಾತುಕ. ಆದ್ದರಿಂದ **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ಎಂಬುದರಿಂದ ಇಡಾಗಮವು ಪ್ರಾಪ್ತವಾಗುವುದು. ಹ್ವೇ ಧಾತುವು ಅಜನ್ತ ಊದ್ಯುದಂತೈಃ—ಎಂಬ ಕಾರಿಕೆಯಲ್ಲಿ ಇದು ಸೇರಿಲ್ಲ. ಆದ್ದರಿಂದ ಇದು ಉಪದೇಶಕಾಲದಲ್ಲಿಯೇ ಅನುದಾತ್ತ. ಅಲ್ಲದೆ ಉಪದೇಶಕಾಲದಲ್ಲಿ ಏಕಾಚ್ಕವಾಗಿಯೂ ಇದೆ. ಆದಕಾರಣದಿಂದ **ಏಕಾಚೋ ಉಪದೇಶೇಽನುದಾತ್ತಾತ್** (ಪಾ. ಸೂ. ೭-೨-೧೦) ಎಂಬುದರಿಂದ ಇಡಾಗಮಕ್ಕೆ ನಿಷೇಧ ಬರುವುದು. **ಹ್ವಸ್ವಂಪ್ರಸಾರಣಮ್** (ಪಾ. ಸೂ. ೬-೧-೩೨) ಎಂಬುದು ಅನುವೃತ್ತವಾದರೆ **ಬಹುಲಂಛಂದಸಿ** (ಪಾ. ಸೂ. ೬-೧-೩೪) ಎಂಬುದರಿಂದ ಸಂಪ್ರಸಾರಣ ವಕಾರಕ್ಕೆ ಉಕಾರ. ಹು ಏ+ಸ್ ಝಿ. **ಸಂಪ್ರಸಾರಣಾಚ್ಚ** (ಪಾ. ಸೂ. ೬-೧-೧೦೮) ಎಂಬುದರಿಂದ ಉ+ಏಗಳಿಗೆ ಪೂರ್ವರೂಪ, ಹು-ಸ್-ಝಿ ಹಲಃ (ಪಾ. ಸೂ. ೬-೪-೨) ಅಂಗಾವಯವವಾವ ವ್ಯಂಜನದ ಮುಂದೆ ಇರುವ ಯಾವ ಸಂಪ್ರಸಾರಣವುಂಟೋ ಅದನ್ನು ಕೊನೆಯಲ್ಲಿ ಹೊಂದಿರುವ ಅಂಗದ ಕೊನೆಯ ವರ್ಣಕ್ಕೆ ದೀರ್ಘ ಬರುವುದು ಎಂಬುದರಿಂದ ದೀರ್ಘ, ಹೂ+ಸ್+ಝಿ. ಉತಃ, ನಿರುತಂ, ವಿಧ್ಯತಿ, ಇವುಗಳಲ್ಲಿ ದೀರ್ಘವಾರಣೆಗಾಗಿ ಈ ರೀತಿಯಲ್ಲಿ ಹಲಃ ಎಂಬುದಕ್ಕೆ ಅರ್ಧವು ವರ್ಣಿಸಲಾಗಿರುವುದು. **ಆತ್ಮನೇಪದೇಷ್ವನತಃ** (ಪಾ. ಸೂ. ೭-೧-೫) ಎಂಬುದರಿಂದ ಝಿಕಾರಕ್ಕೆ ಅತ್ ಆದೇಶ, ಹೂ+ಸ್. ಅತ ಲುಙ್‌ಲಙ್‌ಲೃಙಃ ಕ್ಷ್ಯಡುದಾತ್ತಃ (ಪಾ. ಸೂ. ೬-೪-೭೧) ಎಂಬುದರಿಂದ ಧಾತುವಿಗೆ ಆಡಾಗಮ ಅಹೂಸ್+ಅತ. **ಆದೇಶಪ್ರತ್ಯಯಯೋಃ** (ಪಾ. ಸೂ. ೮-೩-೫೯) ಎಂಬುದರಿಂದ ಸಕಾರಕ್ಕೆ ಷಕಾರ ಅಹೂಷತ ಎಂದಾಗುವುದು. ಸಿಚ್ ಪ್ರತ್ಯಯವನ್ನು ನಿಮಿತ್ತ ಮಾಡಿಕೊಂಡು **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಊಕಾರಕ್ಕೆ ಗುಣವು ಪ್ರಾಪ್ತವಾದರೂ **ಸರ್ವೇವಿಧಯಶ್ಛಂದಸಿ ವಿಕಲ್ಪ್ಯಂತೇ** (ಪರಿಭಾ ೩೫) ಎಂಬ ಪರಿಭಾಷಾನುಸಾರ ಛಂದಸ್ಸಿನಲ್ಲಿ ಅದು ವಿಕಲ್ಪವಾಗುವ ಕಾರಣ ಇಲ್ಲಿ ಬರುವುದಿಲ್ಲ. ತಿಙ್ಙತಿಙಃ ಎಂದು ಸರ್ವಾನುದಾತ್ತ.

ಗೃಣನ್ತಿ—ಗೃ ಶಬ್ದೇ ಧಾತು. ಇದರ ಮುಂದೆ **ವರ್ತಮಾನೇಲಟ್** (ಪಾ. ಸೂ. ೩-೨-೧೨೩) ವರ್ತಮಾನೇ ಎಂಬುದು ಪ್ರಕೃತ್ಯರ್ಥಕ್ಕೆ ವಿಶೇಷಣ. ಪ್ರತ್ಯಯವು ದ್ಯೋತಕ, ವರ್ತಮಾನ ಕ್ರಿಯಾವಾಚಕವಾದ

ಧಾತುವಿನ ಮುಂದೆ ಲಟ್ ಬರುವುದು. ಭೂತಭವಿಷ್ಯತೋಃಪ್ರತಿದ್ವಂದ್ವೀ ವರ್ತಮಾನಕಾಲಃ, ಎಂದು ಭಾಷ್ಯ ದಲ್ಲಿರುವುದು. ಅತೀತಾನಾಗತಭಿನ್ನಕಾಲತ್ವಂ ವರ್ತಮಾನಕಾಲತ್ವಮ್, ಭೂತಭವಿಷ್ಯದ್ಭಿನ್ನವಾದುದು ವರ್ತಮಾನ ಕಾಲ, ಎಂದು ಕೆಲವರು ಲಕ್ಷಣವನ್ನು ಹೇಳುವರು. ಪ್ರಾರಬ್ಧಾಪರಿಸಮಾಪ್ತಕ್ರಿಯಾಶ್ರಯತ್ವಂ ಕಾಲಗತಂ ವರ್ತಮಾನತ್ವಮ್, ಪ್ರಾರಂಭಿಸಲ್ಪಟ್ಟು ಮುಗಿಯದೇ ಇರುವ ಕ್ರಿಯೆಗೆ ಆಶ್ರಯವಾದ ಕಾಲ ವರ್ತಮಾನಕಾಲ ಎಂದು ಹಲವರು ಲಕ್ಷಣ ಹೇಳುವರು. ಈ ಸೂತ್ರದಿಂದ ಗ್ಯಾಧಾತುವಿನ ಮುಂದೆ ಲಟ್ ಗ್ಯಾ+ಲ್ ಪಸ್ಮೈಪದ ಪ್ರಥಮಪುರುಷ ಬಹುವಚನ ಝಿ ಆದೇಶ. ಗ್ಯಾ+ಝಿ, ರ್ಝೋನ್ತ್ಸಃ (ಪಾ ಸೂ. ೭-೧-೩) ಎಂಬುದರಿಂದ ಝಕಾರಕ್ಕೆ ಅನ್ತಾದೇಶ ಗ್ಯಾ+ಅನ್ತಿ ಕ್ರ್ಯಾದಿಭ್ಯಃಶ್ನಾ (ಪಾ.ಸೂ. ೩-೧-೮೧) ಎಂಬುದರಿಂದ ಶ್ನಾ ವಿಕರಣ. ಗ್ಯಾ+ನಾ+ಅನ್ತಿ ಸ್ನಾದೀನಾಂಹ್ರಸ್ವಃ (ಪಾ. ಸೂ. ೭-೩-೮೦) ಎಂಬುದರಿಂದ ಧಾತುವಿಗೆ ಹ್ರಸ್ವ ಗೃ ನಾ+ಅನ್ತಿ ಶ್ನಾಭ್ಯಸ್ತಯೋರಾತಃ (ಪಾ. ಸೂ. ೬-೪-೧೧೨) ಕೆತ್ತು ಆಥವಾ ಜಿತ್ತು ಆದ ಪ್ರತ್ಯಯಗಳು ಪರದಲ್ಲಿರುವಾಗ ಶ್ನಾ ಪ್ರತ್ಯಯ ಅಭ್ಯಸ್ತ ಇವುಗಳ ಆಕಾರಕ್ಕೆ ಲೋಪ, ಶ್ನಾ ಪ್ರತ್ಯವು ಸಾರ್ವಧಾತುಕಮಪಿತ್ (ಪಾ.ಸೂ. ೧-೩-೪) ಎಂಬುದರಿಂದು ಜಿತ್ತಾಗುವುದು. ಗೃ+ನ್+ಅನ್ತಿ ಋವರ್ಣಾಚ್ಛೇತಿ ವಕ್ತವ್ಯಮ್ (ಪಾ. ಸೂ ೮-೪-೧- ವಾ. ೧) ಎಂಬುದರಿಂದ ನಕಾರಕ್ಕೆ ಣಕಾರ ಗೃಣನ್ತಿ, ಎಂದು ಸಿದ್ಧವಾಗುವುದು. ಅಹೂಷತ ಎಂಬ ತಿಙಂತದ ಮುಂದೆ ಇರುವುದರಿಂದ ತಿಙ್ಶಿತ್ಸಾರ್ವಧಾತುಕಮ್ ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ. ತಿಙ್ ಪ್ರತ್ಯಯವಾದ್ದರಿಂದ ಆದ್ಯುದಾತ್ತಶ್ಚ (ಪಾ. ಸೂ. ೩-೧-೩) ಎಂಬುದರಿಂದ ಆದ್ಯುದಾತ್ತಸ್ವರ ಬಂದು ಅನ್ತಿ ಎಂಬುದರ ಆಕಾರವು ಉದಾತ್ತವಾಗುವುದು.

ವಿಶ್ಯ—ಇದು ಆಮನ್ತ್ರಿತ. ಆದ್ದರಿಂದ ಆಮನ್ತ್ರಿತಸ್ಯಚ (ಪಾ. ಸೂ. ೮-೧೯) ಎಂಬುದರಿಂದ ಪೂರ್ವನ ದಾತ್ತ ಬರುವುದು.

ತೇ—ಅನುದಾತ್ತಂ ಸರ್ವಮಪಾದಾದೌ (ಪಾ. ಸೂ. ೪-೧-೧೪,) ಪದಾತ್ (ಪಾ. ಸೂ. ೪-೧೧-೭) ಎಂಬಿವು ಅನುವೃತ್ತವಾಗಲು ತೇ ಮಯೋವೇಕವಚನೇನಸ್ಯ (ಪಾ. ಸೂ. ೪-೧-೩೨) ಪದದ ಮುಂದೆ ಇರುವುದೂ ಪಾದದ ಆದಿಯಲ್ಲಿಲ್ಲದವೂ ಆದ ಷಷ್ಠ್ಯೇಕವಚನಾಂತವಾದ ಯುಷ್ಮದಸ್ಮದ್ಭ್ಯದ್ಭಗಳಿಗೆ ಕ್ರಮವಾಗಿ ತೇ ನೇ ಆದೇಶಗಳು ಬರುವುವು. ಅವು ಅನುದಾತ್ತಗಳಾಗುವುವು ಎಂಬುದರಿಂದ ತವ ಎಂಬುದಕ್ಕೆ ತೇ ಆದೇಶ ಬರುವುದು. ಅದು ಅನುದಾತ್ತವೂ ಆಗುವುದು.

ದೇವೇಭಿಃ—ಬಹುಲಂ ಛಂದಸಿ ಎಂಬುದರಿಂದ ಭಿಸ್‌ಗೆ ಐಸ್ ಆದೇಶ ಬರುವುದಿಲ್ಲ.

ಗಹಿ—ಗವ್ಲೃ ಸೃಪ್ಲೃ ಗತೌ, ಧಾತು. ಇದರ ಮುಂದೆ ಲೋಟ್, ಮಧ್ಯಮಪುರುಷ ಏಕವಚನ ಸಿಪ್ ಗಮ್+ಸಿ ಸೇರ್ಹ್ಯಪಿಚ್ಚ (ಪಾ. ಸೂ. ೩-೪-೮೭) ಎಂಬುದರಿಂದ ಸಿಗೆ ಹಿ ಆದೇಶ. ಇದು ಸಾರ್ವಧಾತುಕಮಪಿತ್ (ಪಾ ಸೂ. ೧-೩-೪) ಎಂಬುದರಿಂದ ಜಿತ್ತು, ಕರ್ತರಿ ಶಪ್ ಎಂಬುದರಿಂದ ವಿಕರಣ+ಶಪ್ ಆದಕ್ಕೆ ಬಹುಲಂ ಛಂದಸಿ, (ಪಾ. ಸೂ. ೨-೪-೭೩) ಎಂಬುದರಿಂದ ಲುಕ್. ಅನುದಾತ್ತೋಪದೇಶವನತಿತಕನೋತ್ಯಾದೀನಾಮನುನಾಸಿಕಲೋಪೋ ಝಲಿಕ್ಕಿತಿ (ಪಾ.ಸೂ. ೬-೪-೩೭) ಎಂಬುದರಿಂದ ಮಕಾರಕ್ಕೆ ಲೋಪ. ಅಸಿದ್ಧವದತ್ರಾಭಾತ್ (ಪಾ. ಸೂ. ೬-೪-೨೨) ಈ ಸೂತ್ರದಿಂದ ಈ ಪಾದ ಮುಗಿಯುವ ವರೆಗೂ ಇರುವ ಶಾಸ್ತ್ರಗಳಿಗೆ ಅಭೀಯ, ಎಂದು ಹೇಳುವರು. ಈ ಸೂತ್ರದಿಂದ ಅತೋಹೇಃ (ಪಾ ಸೂ. ೬-೪-೧೦೫) ಎಂಬುದರಿಂದ ಹಿ ಗೆ

ಲುಕ್ಕನ್ನು ಮಾಡುವಾಗ ಅನುದಾತ್ತೋಪದೇಶ ಎಂಬುದರಿಂದ ವಿಹಿತವಾದ ಮಕಾರಲೋಪವು ಅಸಿದ್ಧವಾಗುವುದು. ಆದ್ದರಿಂದ ಹಿಯು ಆಕಾರಾಂತವಾದ ಅಂಗದ ಮುಂದೆ ಇರತಕ್ಕದ್ದಾಗುವುದಿಲ್ಲವಾದಕಾರಣ ಹಿಗೆ ಲುಕ್ ಬರುವುದಿಲ್ಲ.

॥ ಸಂಹಿತಾಪಾಠಃ ॥

ಇಂದ್ರವಾಯೂ ಬೃಹಸ್ಪತಿಂ ಮಿತ್ರಾಗ್ನಿಂ ಪೂಷಣಂ ಭಗಂ ।
ಆದಿತ್ಯಾನ್ಮಾರುತಂ ಗಣಂ ॥ ೩ ॥

॥ ಪದಪಾಠಃ ॥

ಇಂದ್ರವಾಯೂ ಇತಿ । ಬೃಹಸ್ಪತಿಂ । ಮಿತ್ರಾ । ಅಗ್ನಿಂ । ಪೂಷಣಂ । ಭಗಂ ॥
ಆದಿತ್ಯಾನ್ । ಮಾರುತಂ । ಗಣಂ ॥ ೩ ॥

॥ ಸಾಯಣಭಾಷ್ಯಂ ॥

ಇಂದ್ರಾದಿದೇವಾನಾರ್ಮರುತಂ ಮರುತಾಂ ನಾಯೂನಾಂ ಸಂಬಂಧಿನಂ ಗಣಂ ಚ ಹೇ ಅಗ್ನೇ ಯಷ್ಟೀತಿ ಪದದ್ವಯಮನುವರ್ತತೇ ॥ ಇಂದ್ರಶ್ಚ ವಾಯುಶ್ಚೇಂದ್ರವಾಯೂ । ದೇವತಾದ್ವಂದ್ವೇ ಚೆ । ಪಾ. ೬-೩-೨೬। ಇತಿ ಪ್ರಾಪ್ತಸ್ಯಾನಙ ಉಭಯತ್ರ ನಾಯೋಃ ಪ್ರತಿಷೇಧೋ ವಕ್ತವ್ಯಃ। ಪಾ. ೬-೩-೨೬ ೧ ಇತಿ ಪ್ರತಿಷೇಧಃ । ದೇವತಾದ್ವಂದೇ ಚೆ । ಪಾ. ೬-೨-೧೪೧ । ಇತಿ ಪ್ರಾಪ್ತಸ್ಯೋಭಯಪದಪ್ರಕೃತಿಸ್ವರಸ್ಯ ನೋತ್ತರಪದೇಽನುದಾತ್ತಾದೌ । ಪಾ. ೬-೨-೧೪೨ । ಇತಿ ನಿಷೇಧಃ । ಸಮಾಸಾಂತೋದಾತ್ತತ್ವಮೇವ । ಬೃಹಸ್ಪತಿಂ । ತದ್ಧಿತೇಷ್ವಚಾಮಾದೇಃ ಕರಪಸ್ತ್ಯೋಶ್ಚೋತ್ತರದೇವತಯೋರಭಿಧೇಯಯೋಃ ಸುಟ್ ತಲೋಪೌ ವಕ್ತವ್ಯೌ । ಮ. ೬-೧-೧೫೭ । ಇತಿ ತಲೋಪಃ ಸುಡಾಗಮಶ್ಚ । ಬೃಹಚ್ಛಬ್ದಮಾದ್ಯುದಾತ್ತಂ ಕೇಚಿದ್ಪಣ್ಯಂತೀತಿ ವಾಮನಃ । ಪಾ ರಕ್ಷಣೇ । ಪಾತೀತಿ ಪತಿಃ। ಪಾತೇರ್ಡತಿಃ । ಉ. ೪-೧೭। ಪ್ರತ್ಯಯಸ್ವರೇಣಾದ್ಯುದಾತ್ತಃ। ಸಮಾಸ ಉಭೇ ವನಸ್ಪತ್ಯಾದಿಷು ಯುಗಪತ್ । ಪಾ. ೬-೨-೧೪೦ । ಇತ್ಯುಭಯಪದಪ್ರಕೃತಿಸ್ವರತ್ವಂ । ಮಿತ್ರಾ । ದ್ವಿತೀಯಾಯಾಃ ಸುಸಾಂ ಸುಲಗಿತ್ಯಾದಿನಾ ವಿಭಕ್ತೇರಾಜಾದೇಶಃ । ಆದಿತ್ಯಾನ್ । ಅದಿತೇರಪತ್ಯಾನ್ಯಾದಿತ್ಯಾಃ । ದಿತ್ಯದಿತ್ಯಾದಿತ್ಯಪತ್ಯುತ್ತರಪದಾಣ್ಯಃ । ಪಾ. ೪-೧-೮೫ । ಪ್ರತ್ಯಯಸ್ವರಃ । ಮಾರುತಂ । ಮರುತಾಂ ವಿಕಾರಃ । ಅನುದಾತ್ತಾದೇಶ್ಚ । ಪಾ. ೪-೩-೧೪೦ । ಇತ್ಯಞ್ । ಞಿತ್ತ್ವಾದ್ಯುದಾತ್ತಃ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಇಂದ್ರವಾಯೂ**—ಇಂದ್ರವಾಯುಗಳನ್ನೂ । **ಬೃಹಸ್ಪತಿಂ**—ಬೃಹಸ್ಪತಿಯನ್ನೂ । **ಮಿತ್ರಾ** — ಮಿತ್ರನನ್ನೂ । **ಅಗ್ನಿಂ** — ಅಗ್ನಿಯನ್ನೂ । **ಪೂಷಣಂ**—ಪೂಷನನ್ನೂ । **ಭಗಂ** — ಭಗನನ್ನೂ । **ಆದಿತ್ಯಾ**—ಆದಿತ್ಯರನ್ನೂ । **ಮಾರುತಂ ಗಣಂ**—ಮರುದ್ಗಣಗಳನ್ನೂ ಉದ್ದೇಶಿಸಿ । (ಯಕ್ಷಿ-ಯಜ್ಞವಮಾಡು)

॥ ಭಾವಾರ್ಥ ॥

ಎಲೈ ಅಗ್ನಿಯೇ, ಇಂದ್ರ, ವಾಯು, ಬೃಹಸ್ಪತಿ, ಮಿತ್ರ, ಅಗ್ನಿ, ಪೂಷಾ, ಭಗ, ಆದಿತ್ಯರು (ಅಥವಾ ದೇವತೆಗಳು) ಮರುದ್ಗಣಗಳು ಇವರನ್ನು ಉದ್ದೇಶಿಸಿ ಯಜ್ಞವಮಾಡು.

English Translation

Sacrifice to Indra, Vayu, Brihaspati, Mitra, Agni, Pushan, Bhaga, the Adityas. and the hosts of Maruts.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಕ್ರಿಯಾಪದವಿಲ್ಲದೇ ಇರುವುದರಿಂದ **ಅಗ್ನೇ ಯಕ್ಷಿ**--ಎಲೈ ಅಗ್ನಿಯೇ, ಯಜ್ಞವನಾಡು ಎಂಬ ಪದಗಳನ್ನು ಅಧ್ಯಾಹಾರಮಾಡಿಕೊಳ್ಳಬೇಕೆಂದು ಭಾಷ್ಯಕಾರರು ಹೇಳಿರುವರು. ಈ ಗುಂಪಿನಲ್ಲಿ ಅಗ್ನಿಯೂ ಇರುವುದರಿಂದ ಅಗ್ನಿಯೇ, ಎಂದು ಅಗ್ನಿಯನ್ನು ಸಂಬೋಧನೆಮಾಡಿ ಅಗ್ನಿಯನ್ನುದ್ದೇಶಿಸಿ ಯಜ್ಞಮಾಡು ಎಂದು ಹೇಳುವುದು ಯುಕ್ತವಾಗಿ ಕಾಣುವುದಿಲ್ಲ. ವೇದಾರ್ಥಯತ್ನಕಾರರು ಈ ಕಾರಣಕ್ಕಾಗಿ I invoke ಎಂದರೆ ಇಂದ್ರವಾಯು ಮೊದಲಾದ ದೇವತೆಗಳನ್ನು ನಾನು ಆಹ್ವಾನ ಮಾಡುತ್ತೇನೆ ಎಂದು **ಅಹಂ ಹ್ವಯೇ** ಎಂಬ ಎರಡು ಪದಗಳನ್ನು ಅಧ್ಯಾಹಾರ ಮಾಡಿರುವರು.

ಇಂದ್ರವಾಯೂ–ಇಂದ್ರಶ್ಚ ವಾಯುಶ್ಚೇಂದ್ರವಾಯೂ । ದೇವತಾದ್ವಂದ್ವೇ । ಇಂದ್ರ ಮತ್ತು ವಾಯು ಎಂಬ ಎರಡು ದೇವತೆಗಳನ್ನು ದ್ವಿವಚನಾಂತವಾದ ಒಂದೇ ಶಬ್ದದಿಂದ ನಿರ್ದೇಶಿಸಲಾಗಿದೆ.

ಮಿತ್ರಾ—ಈ ಶಬ್ದಕ್ಕೆ ಇಲ್ಲಿ ದ್ವಿತೀಯಾವಿಭಕ್ತಿಯ ಏಕವಚನಾರ್ಥವನ್ನು ಹೇಳಬೇಕು.

ಆದಿತ್ಯಾನ್—ಆದಿತೇರಪತ್ಯಾನ್ಯಾದಿತ್ಯಾಃ । ದೇವಮಾತೆಯಾದ ಅದಿತಿಯ ಮಕ್ಕಳಿಗೆ ಆದಿತ್ಯರೆಂದು ಹೆಸರು. ದೇವತೆಗಳು ಅಥವಾ ದ್ವಾದಶಾದಿತ್ಯರು ಎಂದರ್ಥವು.

ಮಾರುತಂ—ಮಾರುತಾಂ ಎಂಬ ಷಷ್ಠೀಬಹುವಚನದ ಅಂತ್ಯಾಕ್ಷರವು ಛಂದಸ್ಸಿನ ಅನುಕೂಲಕ್ಕಾಗಿ ಹ್ರಸ್ವವಾಗಿರುವುದು.

ಮಾರುತಂ ಗಣಂ—ಮರುದ್ದೇವತೆಗಳ ಸಮೂಹವು. ಪುರಾಣಾದಿಗಳಲ್ಲಿ ಮರುದ್ದೇವತೆಗಳು ಏಳು ಮಂದಿ (ಸಪ್ತಮರುತ್ತುಗಳು) ಇರುವರೆಂದು ಹೇಳಿದೆ. ಋಗ್ವೇದದಲ್ಲಿಯೂ ಸಹ ಮರುತ್ ಶಬ್ದವು ಸಾಧಾರಣವಾಗಿ ಬಹುವಚನದಲ್ಲಿಯೇ ಉಪಯೋಗಿಸಲ್ಪಡುವುದು. **ಮಾರುತಂ ಗಣಂ** ಎಂದರೆ ಮರುದ್ದೇವತೆಗಳ ಗುಂಪು, ಸಮೂಹವು ಎಂದರ್ಥವು.

ವ್ಯಾಕರಣಪ್ರಕ್ರಿಯಾ

ಇನ್ದ್ರಶ್ಚ ವಾಯುಶ್ಚ—ಇನ್ದ್ರ ವಾಯೂ ಎಂದು ದ್ವಂದ್ವಸಮಾಸ. **ದೇವತಾದ್ವಂದ್ವೇ ಚ** (ಪಾ.ಸೂ. ೬-೩-೨೬) ದೇವತಾಬೋಧಕ ಪದಗಳನ್ನೊಳಗೊಂಡ ದ್ವಂದ್ವಸಮಾಸದಲ್ಲಿ ಉತ್ತರಪದದ ಹಿಂದೆ ಇರುವ ಪೂರ್ವಪದಕ್ಕೆ ಆನಙ್ ಆದೇಶ ಬರುವುದು ಎಂದು ಸೂತ್ರಾರ್ಥ. ಇಂದ್ರ ವಾಯು, ಶಬ್ದಗಳು ದೇವತೆಯನ್ನು ಬೋಧಿಸತಕ್ಕವು. ಆದ್ದರಿಂದ ಇಲ್ಲಿ ವಾಯು ಎಂಬ ಉತ್ತರಪದದ ಹಿಂದೆ ಇರುವ ಇನ್ದ್ರ ಪದಕ್ಕೆ ಆನಙಾದೇಶ ಪ್ರಾಪ್ತವಾಗುವುದು. ಆದರೂ **ಉಭಯೇಶ್ವ ವಾಯೋಃ ಪ್ರತಿಷೇಧೋ ವಕ್ತವ್ಯಃ** (ಪಾ. ಸೂ. ೬-೩-೨೭-೧) ಎರಡು ಕಡೆಯಲ್ಲಿಯೂ ಅಂದರೆ ವಾಯುಪದವು ಪೂರ್ವಪದವಾಗಿದ್ದರೂ ಸರಿಯೆ, ಉತ್ತರ ಪದವಾಗಿದ್ದರೂ ಸರಿಯೆ, ಆ ದ್ವಂದ್ವಸಮಾಸದಲ್ಲಿ ಆನಙ್ ಆದೇಶಕ್ಕೆ ಪ್ರತಿಷೇಧವನ್ನು ಹೇಳಬೇಕು ಎಂಬ ವಾರ್ತಿಕದಿಂದ ಪ್ರತಿಷೇಧ ಬರುವುದರಿಂದ ಆನಙ್ ಆದೇಶ ಬರುವುದಿಲ್ಲ. **ದೇವತಾದ್ವಂದ್ವೇ ಚ** (ಪಾ. ಸೂ. ೬-೩-೨೬) ದೇವತಾಬೋಧಕ ಪದಗಳನ್ನೊಳಗೊಂಡ ದ್ವಂದ್ವಸಮಾಸದಲ್ಲಿ ಪೂರ್ವೋತ್ತರ ಪದಗಳೆರಡೂ ಏಕ ಕಾಲದಲ್ಲಿ ಪ್ರಕೃತಿಸ್ವರವನ್ನು ಹೊಂದುವುವು ಎಂಬುದರಿಂದ ಪೂರ್ವಪದ ಉತ್ತರ ಪದಗಳೆರಡಕ್ಕೂ ಪ್ರಕೃತಿಸ್ವರ ಪ್ರಾಪ್ತವಾಗುವುದು. ಇನ್ದ್ರಶಬ್ದ ರನ್ ಪ್ರತ್ಯಯಾನ್ತವಾದ್ದರಿಂದ ಆದ್ಯುದಾತ್ತ. ವಾಯು ಶಬ್ದವು ಉಙ್ ಪ್ರತ್ಯಯಾಂತ. ಪ್ರತ್ಯಯಸ್ವರದಿಂದ ಅಂತೋದಾತ್ತ. ಈ ಸ್ವರಗಳೇ ಬರಬೇಕಾಗಿ ಬಂದರೆ **ನೋತ್ತರಪದೇಽನುದಾತ್ತಾದಾವಪೈಥಿವೀರುದ್ರಪೂಷಮನ್ನಿಷು** (ಪಾ- ಸೂ. ೬-೨-೧೪೨) ಪೃಥಿವೀ ಮೊದಲಾದ ಶಬ್ದಗಳನ್ನುಳಿದು ಅನುದಾತ್ತಾದಿಯಾದ ಉತ್ತರಪದವು ಪರದಲ್ಲಿದ್ದರೆ ಪೂರ್ವೋಕ್ತವಾದ ಸ್ವರ ಬರುವುದಿಲ್ಲ ಎಂಬುದರಿಂದ ನಿಷೇಧ ಬರುವುದು. ಆದ್ದರಿಂದ ಉಭಯಪದ ಪ್ರಕೃತಿಸ್ವರ ಬರುವುದಿಲ್ಲ. **ಸಮಾಸಸ್ಯ** (ಪಾ ಸೂ. ೬-೧-೨೨೩) ಎಂಬುದರಿಂದ ಅಂತೋದಾತ್ತನೇ ಬರುವುದು. ಮಿಕ್ಕ ವರ್ಣಗಳು ಶೇಷನಿಘಾತದಿಂದ ಅನುದಾತ್ತಗಳಾಗುವುವು.

ಬೃಹಸ್ಪತಿಮ್-ಬೃಹತೀ ಎಂದರೆ ವಾಕ್, ಬೃಹತ್ಯಾಃಪತಿಃ ಬೃಹಸ್ಪತಿಃ ಎಂದು ವಿಗ್ರಹ, ಬೃಹತೀ ಪತಿ ಎಂದಿರುವಾಗ ಪತಿ ಶಬ್ದದ ಹಿಂದೆ ಇರುವ ಬೃಹತೀ ಶಬ್ದಕ್ಕೆ **ಕುಕ್ಕುಟ್ಯಾದೀನಾಮಂಡಾದಿಷು** (ಪಾ.ಸೂ. ೬-೩-೨೨-೧. ವಾ) ಅಂಡಾದಿ ಶಬ್ದಗಳು ಪರದಲ್ಲಿರುವಾಗ ಕುಕ್ಕುಟೀ ಮೊದಲಾದ ಶಬ್ದಗಳಿಗೆ ಪುಂವದ್ಭಾವ ಬರುವುದು ಎಂಬುದರಿಂದ ಪುಂವದ್ಭಾವ ಬರುವುದು. ಬಾದರೆ **ಙೀಪ್** ನಿವೃತ್ತವಾಗುವುದು. ಬೃಹತ್+ಪತಿ ಈಗ **ತದ್ಧಿತೋಽಕರಪತ್ಕೋಶ್ಚೋರದೇವತಯೋಸ್ಸುಟ್ತಲೋಪಶ್ಚ** (ಗ. ಸೂ. ೬-೧-೧೫೬) ತದ್, ಬೃಹತ್ ಶಬ್ದಗಳಿಗೆ ಕ್ರಮವಾಗಿ ಕರ ಪತಿ ಎಂಬವು ಪರದಲ್ಲಿದ್ದರೆ ದಕಾರ ತಕಾರಗಳಿಗೆ ಲೋಪವೂ, ಕರ, ಪತಿ ಶಬ್ದಗಳಿಗೆ ಸುಟ್ ಆಗಮವೂ ಬರುವುದು ಎಂಬುದರಿಂದ ಬೃಹತ್ ಶಬ್ದದ ತಕಾರಕ್ಕೆ ಲೋಪವೂ, ಪತಿ ಶಬ್ದಕ್ಕೆ ಸುಟ್ ಆಗಮವೂ ಬರುವುದು. ಸುಟ್, ಟಿತ್. ಆದ್ದರಿಂದ **ಆದ್ಯುನ್ತೌ ಟಕಿತೌ** (ಪಾ. ಸೂ. ೧-೧-೪೬) ಎಂಬುದರಿಂದ ಪತಿ ಶಬ್ದದ ಆದ್ಯವಯವವಾಗಿ ಬರುವುದು- ಬೃಹಸ್ಪತಿ ಎಂದಾಗುವುದು. ಕುಕ್ಕುಟ್ಯಾದೀನಾಮಂಡಾದಿಷು, ಎಂಬು

ದನ್ನು ಮಹಾಭಾಷ್ಯಕಾರರು ಪ್ರತ್ಯಾಖ್ಯಾನ ಮಾಡಿರುವರು. ಆ ಪಕ್ಷದಲ್ಲಿ ಬೃಹತಃ ವಾಕ್ಸಮೂಹಸ್ಯ, ಪತಿಃ ಎಂದು ವಿಗ್ರಹ ಮಾಡಿಕೊಳ್ಳಬೇಕು. ಬೃಹತ್ಯಾಃಪತಿಃ ಎಂದು ವಿಗ್ರಹವು ವಾಗ್ಪೀ (ವಾಗ್ವೈ) ಬೃಹತೀ, ತಸ್ಯಾ, ಏಷ ಪತಿಃ, ಎಂಬ ಭಂಡೋಗಬ್ರಾಹ್ಮಣವನ್ನು ಅನುಸರಿಸಿ ಉಕ್ತವಾಗಿರುವುದು. ಬೃಹತ್ ಶಬ್ದವು ಆದ್ಯುದಾತ್ತ ವೆಂದು ಕೆಲವರು ಹೇಳುವರು ಎಂದು ವಾಮನರು ಅಭಿಪ್ರಾಯ ಪಡುವರು. ಆದ್ದರಿಂದ ಬೃಹತ್ ಶಬ್ದ ಆದ್ಯುದಾತ್ತ. ಪಾ ರಕ್ಷಣೇ ಧಾತು. ಪಾತೀತಿ ಪತಿಃ, (ರಕ್ಷಿಸುವನು) ಎಂದು ವಿಗ್ರಹ. **ಪಾತೇರ್ಡತಿಃ** (ಉ.ಸೂ. ೪-೪೭) ಪಾರಕ್ಷಣೇ ಎಂಬ ಧಾತುವಿನ ಮುಂದೆ ಡತಿ ಪ್ರತ್ಯಯ ಬರುವುದು ಎಂಬುದರಿಂದ ಡತಿ ಪ್ರತ್ಯಯ ಬಂದರೆ, ಪಾ+ಅತಿ. ಪ್ರತ್ಯಯವು ಡಿತ್ತಾದ್ದರಿಂದ ಪಾ ಶಬ್ದದ (ಟಿಗೆ) ಆಕಾರಕ್ಕೆ ಲೋಪ, ಪ್+ಅತಿ=ಪತಿ ಎಂದು ಆಗುವುದು. **ಆದ್ಯುದಾತ್ತೌ ಶ್ನಿ** (ಪಾ. ಸೂ. ೩-೧-೩) ಎಂಬ ಪ್ರತ್ಯಯ ಸ್ವರದಿಂದ ಇದು ಆದ್ಯುದಾತ್ತ, ಇವೆರಡಕ್ಕೂ ಸವರ್ಣಸ ಬಂದರೆ **ಉಭೇವನಸ್ಪತ್ಯಾದಿಷುಯುಗಪತ್** (ಪಾ. ಸೂ. ೬-೩-೯೦) ಎಂಬುದರಿಂದ ಎರಡು ಪದಗಳಿಗೂ ಪ್ರಕೃತಿಸ್ವರವೇ ಬರುವುದು. ಬೃಹತ್ ಶಬ್ದದ ಆಕಾರಕ್ಕೆ **ಉದಾತ್ತಸ್ವರಿತಪರಸ್ಯಸನ್ನತರಃ** (ಪಾ. ಸೂ. ೧-೨-೪೦) ಎಂಬುದರಿಂದ ಅನುದಾತ್ತತರಸ್ವರ ಬರುವುದು.

ಮಿತ್ರಾ — ಮಿತ್ರ ಶಬ್ದವು ಪ್ರಾತಿಪದಿಕಸ್ವರದಿಂದ ಅಂತೋದಾತ್ತ. ಇದರ ಮುಂದೆ ದ್ವಿತೀಯಾ ವಿಭಕ್ತಿ ಏಕವಚನ ಅಮ್. ಅದಕ್ಕೆ **ಸುಪಾಂಸುಲುಕ್** (ಪಾ. ಸೂ. ೭-೧-೩೯) ಎಂಬುದರಿಂದ ಆಜ್ ಆದೇಶ, ಮಿತ್ರ+ಆ ಸವರ್ಣದೀರ್ಘ. ಏಕಾದೇಶ ಉದಾತ್ತೇನೋದಾತ್ತಃ, (ಪಾ. ಸೂ. ೮-೨-೫) ಎಂಬುದರಿಂದ ಏಕಾದೇಶವು ಉದಾತ್ತ.

ಆದಿತ್ಯಾನ್—ಅದಿತೇಃ ಅಪತ್ಯಾನಿ ಪುಮಾಂಸಃ ಆದಿತ್ಯಾಃ ಎಂದು ವಿಗ್ರಹ. **ದಿತ್ಯದಿತ್ಯಾದಿತ್ಯ ಪತ್ಯುತ್ತರಪದಾಣ್ಣ್ಯಃ** (ಪಾ. ಸೂ. ೪-೧.೮೫) ಈ ಸೂತ್ರವನ್ನಾರಂಭಿಸಿ **ತೇನ ದೀವ್ಯತಿ ಖನತಿಜಯತಿಜಿತಮ್** (ಪಾ. ಸೂ. ೪-೪-೪೨) ಎಂಬ ಸೂತ್ರದ ವರೆಗೆ ಅಷ್ಟಾಧ್ಯಾಯಿಯಲ್ಲಿ ನಿರ್ದಿಷ್ಟವಾದ ಅಪತ್ಯಾದ್ಯರ್ಥಗಳಲ್ಲಿ ದಿತಿ, ಅದಿತಿ, ಆದಿತ್ಯ, ಪತಿ ಶಬ್ದವನ್ನು ಉತ್ತರಪದದಲ್ಲಿ ಹೊಂದಿರುವ ಶಬ್ದ ಇವುಗಳ ಮುಂದೆ ಣ್ಯಕ್ ಪ್ರತ್ಯಯ ಬರುವುದು ಎಂಬುದರಿಂದ ಅದಿತಿ ಶಬ್ದಪ್ರಕೃತಿಕವಾದ ಷಷ್ಠ್ಯಂತದ ಮುಂದೆ ಣ್ಯತ್, ಬಂದರೆ ಅದಿತಿ+ಜಸ್-ಣ್ಯ ತದ್ಧಿತಾಂತವಾದ್ದರಿಂದ ಪ್ರಾತಿಪದಿಕ ಸಂಜ್ಞೆ. ಸುಪ್ಪಿಗೆ ಲುಕ್, ಅದಿತಿ+ಯ. **ಯಸ್ಯೇತಿಚೆ** (ಪಾ. ಸೂ. ೬-೪-೧೪೮) ಎಂಬುದರಿಂದ ಆಕಾರಲೋಪ. **ತದ್ಧಿತೇಷ್ವಚಾಮಾದೇಃ** (ಪಾ. ಸೂ. ೭-೨-೧೧೭) ಎಂಬುದರಿಂದ ಆದಿವೃದ್ಧಿ, ಆದಿತ್ಯ ಎಂದಾಗುವುದು. ಇದು ಪ್ರತ್ಯಯಸ್ವರದಿಂದ ಅಂತೋದಾತ್ತ, ದ್ವಿತೀಯಾ ಬಹುವಚನ ಶಸ್, ಪೂರ್ವಸವರ್ಣ ದೀರ್ಘ. **ತಸ್ಮಾಚ್ಛಸೋನಃಪುಂಸಿ** (ಪಾ.ಸೂ. ೬-೧-೧೦೩) ಎಂಬುದರಿಂದ ಸಕಾರಕ್ಕೆ ನಕಾರ, ಏಕಾದೇಶವು ಉದಾತ್ತವಾಗುವುದು. ಆದಿತ್ಯಾನ್ ಎಂದು ರೂಪವು.

ಮಾರುತಮ್—ಮೃಗ್ರೋರುತಿಃ (ಉ. ಸೂ. ೧-೪೪) ಮೃಙ್ ಪ್ರಾಣತ್ಯಾಗೇ ಗ್ಲಾನಿಗರಣೇ, ಈ ಧಾತುಗಳ ಮುಂದೆ ಉತಿಪ್ರತ್ಯಯ ಬರುವುದು ಎಂಬುದರಿಂದ ಮೃ, ಧಾತುವಿನ ಮುಂದೆ ಉತಿಪ್ರತ್ಯಯ, ಮೃ+ಉತ್ ಗುಣರಪರತ್ವ, ಇಲ್ಲಿ ಪ್ರತ್ಯಯಸ್ವರದಿಂದ ಉಕಾರ ಉದಾತ್ತ. ಶೇಷನಿಘಾತದಿಂದ ಆಕಾರ ಅನುದಾತ್ತ. ಈ ರೀತಿಯಾಗಿ ಮರುತ್ ಶಬ್ದ ಅನುದಾತ್ತಾದಿ. ಮರುತಾಂ ವಿಕಾರಃ ಎಂದು ವಿಗ್ರಹ. **ಅನುದಾತ್ತಾದೇಶ್ಚ** (ಪಾ. ಸೂ. ೪-೧-೪೫) ಅನುದಾತ್ತಾದಿಯಾದ ಶಬ್ದ ಪ್ರಕೃತಿಕವಾದ ಷಷ್ಠ್ಯಂತದ ಮುಂದೆ ವಿಕಾರ, ಅವ

ಯವ ಎಂಬ ಅರ್ಥಗಳಲ್ಲಿ ಅಞ್ ಪ್ರತ್ಯಯ ಬರುವುದು ಎಂಬುದರಿಂದ ಅಞ್ ಬರುವುದು. ಮರುತ್+ಅ ಆದಿ ವೃದ್ಧಿ, ಮಾರುತ. ಪ್ರತ್ಯಯವು ಞಿತ್ ಆದ್ದರಿಂದ ಞ್ನಿತ್ಯಾದಿರ್ನಿತ್ಯಮ್ (ಪಾ. ಸೂ. ೬-೧,೧೯೭) ಎಂಬುದರಿಂದ ಮಾರುತ ಶಬ್ದ ಆದ್ಯುದಾತ್ತ ॥ ೩ ॥

॥ ಸಂಹಿತಾಪಾಠಃ ॥

ಪ್ರ ವೋ ಭ್ರಿಯಂತ ಇಂದವೋ ಮತ್ಸರಾ ಮಾದಯಿಷ್ಣವಃ ।
ದ್ರುಪ್ಸಾ ಮಧ್ವಶ್ಚಮೂಷದಃ ॥ ೪ ॥

॥ ಪದಪಾಠಃ ॥

ಪ್ರ । ವಃ । ಭ್ರಿಯಂತೇ । ಇಂದವಃ । ಮತ್ಸರಾಃ । ಮಾದಯಿಷ್ಣವಃ ॥
ದ್ರುಪ್ಸಾಃ । ಮಧ್ವಃ । ಚಮೂಷದಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರಾದಿದೇವಾ ವೋ ಯುಷ್ಮದರ್ಥಮಿಂದವಃ ಸೋಮಾಃ ಪ್ರ ಭ್ರಿಯಂತೇ । ಪ್ರಕರ್ಷೇಣ ಸಂಪಾದ್ಯಂತೇ । ಕೀದೃಶಾಃ । ಮತ್ಸರಾಸ್ತೃಪ್ತಿಕರಾಃ । ಮತ್ಸರಃ ಸೋಮೋ ಮದಂತೇ ಸ್ತೃಪ್ತಿಕರ್ಮಣಃ । ನಿ. ೨-೫ । ಇತಿ ಯಾಸ್ಕಃ । ಮಾದಯಿಷ್ಣವೋ ಹರ್ಷಹೇತವೋ ದ್ರುಪ್ಸಾ ಬಿಂದುರೂಪಾ ಮಧ್ವೋ ಮಧುರಾಃ ಚಮೂಷದೆಶ್ಚಮೂಷು ಚಮಸಾದಿಪಾತ್ರೇಷ್ವವಸ್ಥಿತಾಃ ॥ ಪ್ರ । ವ್ಯವಹಿತಾಶ್ಚ । ಪಾ. ೧-೪-೮೨ । ಇತಿ ವ್ಯವಹಿತಪ್ರಯೋಗಃ । ಭ್ರಿಯಂತೇ । ಭೃಞೋ ಯಕಿ ರಿಙ್ ಶಯಗ್ಲಿಙ್ಕ್ಷು । ಪಾ. ೭-೪-೭೮ । ಇತಿ ರಿಙಾದೇಶಃ । ಹೃಞೋ ವಾ । ಹೃಗ್ರಹೋರ್ಭಶ್ಚಂದಸೀತಿ ಹಕಾರಸ್ಯ ಭಕಾರಃ । ಇಂದವಃ । ಉಂದೀ ಕ್ಲೇದನೇ । ಉಂದಂತಿ ಪಾತ್ರಾಣೀತಿ । ನಿದಿತ್ಯನುವೃತ್ತಾವುಂದೇರಿಚ್ಚಾದೇಃ । ಉ.೧-೧೩ । ಇತ್ಯುಪ್ರತ್ಯಯ ಆದೇರಿಕಾರಶ್ಚ । ನಿತ್ವಾದಾದ್ಯುದಾತ್ತಃ । ಮತ್ಸರಾಃ । ಮದ ತೃಪ್ತಿಯೋಗೇ । ಚಿದಿತ್ಯನುವೃತ್ತೌ ಕೃಧೂಮದಿಭ್ಯಃ ಕಿತ್ । ಉ. ೩-೭೩ । ಇತಿ ಸರಪ್ರತ್ಯಯಃ ತಿತುತ್ರತಥಸಿಸುಸರಕಸೇಸು ಚೇತೀಟ್ ಪ್ರತಿಷೇಧಃ । ಚಿತ್ತ್ವಾದಂತೋದಾತ್ತಃ । ಮಾದಯಿಷ್ಣವಃ । ಮದೀಹರ್ಷಗ್ಲಪನಯೋಃ । ಮದೇರ್ಣ್ಯಂತಾನೇಶ್ಚಂದಸಿ । ಪಾ.೩-೨-೧೩೭ । ಇತೀಷ್ಣುಚ್ । ನೇರನಿಟೀತಿ ಣಿಲೋಪೇ ಪ್ರಾಪ್ತೇಽಯಾಮಂತಾಲ್ವಾಯ್ಯೇತ್ನಿಷ್ಣುಷು । ಪಾ. ೬-೪-೫೫ । ಇತ್ಯಯಾದೇಶಃ । ಚಿತ್ತ್ವಾದಂತೋದಾತ್ತಃ । ಮಧ್ವಃ । ಮಧುಶಬ್ದ ಆದ್ಯುದಾತ್ತೆ ಉಕ್ತಃ । ಮಧುಶಬ್ದಸ್ಯ ವ್ಯತ್ಯಯೇನ ಪುಲ್ಲಿಂಗತ್ವಂ । ಸಂಜ್ಞಾಪೂರ್ವಕೋ ವಿಧಿರನಿ-

ತ್ಯ ಇತಿ ಚಸಿ ಚೆ । ಪಾ. ೭-೩-೧೦೯ । ಇತಿ ಗುಣೋ ನ ಭವತಿ । ಚಮೂಷದಃ । ಚಮು ಭಮು ಜಮು ರುಸು ಅದನೇ । ಚಮ್ಯತೇ ಭಕ್ಷ್ಯತೇ ಯೇಷು ಚಮುಸೇಷು ತೇ ಚಮ್ವಃ । ಕೃಷಿಚಮಿಶ್ಯಾದಿನಾ । ಉ.೧-೮೨ । ಊಃ । ತತ್ರ ಸೀದಂತೀತಿ ಚಮೂಷದಃ । ಸತ್ಸೂದ್ವಿಷೇತ್ಯಾದಿನಾ । ಪಾ. ೩-೨-೬೧ । ಕ್ವಿಪ್ । ಸುಷಾಮಾದೇರಾಕೃತಿಗಣತ್ವಾತ್ ಷತ್ವಂ । ಕೃದುತ್ತರಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರಾದಿ ದೇವತೆಗಳೇ) **ವಃ**—ನಿಮಗೋಸ್ಕರವಾಗಿ । **ಮತ್ಸರಾಃ**——ತೃಪ್ತಿಯನ್ನು ಕೊಡತಕ್ಕ । **ಮಾದಯಿಷ್ಣವಃ**—ಹರ್ಷದಾಯಕಗಳಾದ । **ದ್ರಪ್ಸಾಃ**—ಬಿಂದುರೂಪಗಳಾದ । **ಮಧ್ವಃ**—ಮಧುರಗಳಾದ ।, **ಚಮೂಷದಃ**—ಚಮಸ ಪಾತ್ರೆಗಳಲ್ಲಿರತಕ್ಕ । **ಇಂದವಃ**—ಸೋಮರಸಗಳು । **ಪ್ರಭ್ರಿಯೆಂತೇ**—ಚನ್ನಾಗಿ ಸಿದ್ಧಪಡಿಸಲ್ಪಡುತ್ತಲಿವೆ.

॥ ಭಾವಾರ್ಥ ॥

ಎಲೈ ಇಂದ್ರಾದಿ ದೇವತೆಗಳೇ, ನಿಮಗೋಸ್ಕರವಾಗಿ ಮಧುರವಾದ, ನಿಮಗೆ ಹರ್ಷಜನಕವಾಗಿಯೂ, ತೃಪ್ತಿದಾಯಕವಾಗಿಯೂ ಇರುವ ಮತ್ತು ಬಿಂದುರೂಪವಾಗಿರುವ ಸೋಮರಸಗಳು ಶೇಖರಿಸಲ್ಪಡುತ್ತಿವೆ. ಅಥವಾ ಸಿದ್ಧಪಡಿಸಲ್ಪಡುತ್ತವೆ.

English Translation.

For you (gods) are poured out these (soma) juices, satisfying, exhilarating, sweet, falling in drops or standing in the cup.

॥ ವಿಶೇಷವಿಷಯಗಳು ॥

ಮತ್ಸರಾಃ-ಸೋಮೋ ಮಂದತೇಸ್ತೃಪ್ತಿಕರ್ಮಣಃ (ನಿ. ೨-೫) ಹರ್ಷವನ್ನುಂಟುಮಾಡುವುದರಿಂದ ಸೋಮರಸಕ್ಕೆ ಮತ್ಸರ ಎಂದು ಹೇಳುವುದುಂಟು.

ಮಾದಯಿಷ್ಣವಃ—ಮದೀ ಹರ್ಷಗ್ಲಪನಯೋಃ ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದಕ್ಕೆ ಹರ್ಷಹೇತುವಾದ ಎಂದರ್ಥವು.

ದ್ರಪ್ಸಾಃ—ಬಿಂದುರೂಪಾಃ, ಸೋಮಲತೆಯನ್ನು ಜಜ್ಜಿ ಹಿಂಡುವಾಗ ರಸವು ಜಿನುಗುತ್ತಾ ತೊಟ್ಟು ತೊಟ್ಟಾಗಿ ಬೀಳುವುದರಿಂದ ಬಿಂದುರೂಪ ಎಂದು ಹೇಳಲ್ಪಡುವುದು.

ಚಮೂಷದಃ—**ಚಮ್ಯತೇ ಭಕ್ಷ್ಯತೇ ಯೇಷು ಚಮುಸೇಷು ತೇ ಚಮ್ವಃ** । ಚಮಸವೆಂಬ ಯಜ್ಞಪಾತ್ರೆಯಲ್ಲಿರುವ. ತಿನ್ನುವ ಅಥವಾ ಪಾನಮಾಡುವ ಪಾತ್ರೆಗೆ ಚಮಸ ಎಂದು ಚಮುಸಶಬ್ದದ ನಿಷ್ಪತ್ತಿಯು. ಇಂತಹ ಪಾತ್ರೆಯಲ್ಲಿರುವ ಸೋಮರಸವು.

॥ ವ್ಯಾಕರಣಪ್ರಕ್ರಿಯಾ ॥

ಪ್ರೈ--ವ್ಯವಹಿತಾಶ್ಚ (ಪಾ. ಸೂ. ೧-೪-೮೨) ಛಂದಸ್ಸಿನಲ್ಲಿ ವ್ಯವಹಿತವಾಗಿಯೂ ಉಪಸರ್ಗಗಳು ಪ್ರಯೋಗಿಸಲ್ಪಡುವುವು ಎಂಬುದರಿಂದ ವ್ಯವಹಿತವಾಗಿ ಪ್ರಯುಕ್ತವಾಗಿರುವುದು.

ಭ್ರಿಯೇನ್ತೇ--ಭೃ ಧರಣೇ ಅಥವಾ ಡುಭೃಞ್ ಧಾರಣಪೋಷಣಯೋಃ, ಇವುಗಳ ಮುಂದೆ ಕರ್ಮಣಿ ಲಟ್--ಇದರ ಸ್ಥಾನದಲ್ಲಿ ಭಾವಕರ್ಮಣೋಃ (ಪಾ. ಸೂ. ೧-೩-೧೩) ಭಾವಾರ್ಥ ಕರ್ಮಾರ್ಥಗಳಲ್ಲಿರುವ ಲಕಾರದ ಸ್ಥಾನದಲ್ಲಿ ಆತ್ಮನೇ ಪದ ಬರುವುದು ಎಂಬುದರಿಂದ ಆತ್ಮನೇ ಪದ ಬರುವುದು. ಪ್ರಥಮಪುರುಷ ಬಹುವಚನ ಝಿ ಪ್ರತ್ಯಯ. ಭೃ+ಝಿ **ಸಾರ್ವಧಾತುಕೇಯಕ್** (ಪಾ. ಸೂ. ೩-೧-೬೭) ಎಂದು ಭಾವ, ಕರ್ಮಾರ್ಥಕವಾದ ಸಾರ್ವಧಾತುಕಪರವಾಗಿರುವಾಗ ಧಾತುವಿನ ಮುಂದೆ ಯಕ್ ಪ್ರತ್ಯಯ, ಭೃ+ಯ+ಝಿ. **ಟಿತಆತ್ಮನೇಪದಾನಾಂ-ಟೇರೇ** (ಪಾ.ಸೂ ೩-೪-೭೮) ಎಂಬುದರಿಂದ ಟಿಗೆ ಏಕಾರಾದೇಶ. **ಝೋರನ್ತಃ** (ಪಾ.ಸೂ.೩-೧-೩) ಎಂಬುದರಿಂದ ಝಕಾರಕ್ಕೆ ಅನ್ತ್ ಆದೇಶ. ಭೃ+ಯ+ಅನ್ತೇ **ರಿಙ್ಶಯಗ್ಲಿಙ್ಷು** (ಪಾ. ಸೂ. ೭-೪-೨೮) ಶ ಎಂಬ ವಿಕರಣ ಪ್ರತ್ಯಯ. ಯಕ್, ಯಾದಿಯಾದ ಆರ್ಧಧಾತುಕ, ಲಿಙ್ ಇವು ಪರದಲ್ಲಿರುವಾಗ ಹ್ರಸ್ವಋಕಾರಕ್ಕೆ ರಿಙ್ ಆದೇಶ ಬರುವುದು ಎಂಬುದರಿಂದ ಋಕಾರಕ್ಕೆ ರಿಙ್ ಆದೇಶ- ಭ್ರಿಯತೇ ಎಂದಾಗುವುದು. ಯಕ್ ಕಿತ್ತು ಆದ್ದರಿಂದ ಗುಣ ಬರುವುದಿಲ್ಲ. ಅಥವಾ ಹೃಞ್ ಹರಣೇ ಧಾತುವಿನ ಮುಂದೆ ಕರ್ಮಣಿ ಲಕಾರ ಬಂದರೆ ಹಿಂದೆ ಹೇಳಿದಂತೆ ಹ್ರಿಯನ್ತೇ ಎಂದಾಗುವುದು. **ಈಗ ಹೃಗ್ರಹೋರ್ಭಶ್ಛಂದಸಿ** (ಪಾ. ಸೂ. ೮-೨.೩೨-೧) ಎಂಬುದರಿಂದ ಹಕಾರಕ್ಕೆ ಭಕಾರಾದೇಶ, ಭ್ರಿಯನ್ತೇ ಎಂದಾಗುವುದು.

ಇನ್ದವಃ--ಉನ್ದೀ ಕ್ಲೇದನೇ ಧಾತು. ಉನ್ದನ್ತಿ ಪಾತ್ರಾಣಿ (ಪಾತ್ರೆಗಳನ್ನು ನೆನೆಸುವುವು) ಇತಿ ಇನ್ದವಃ **ಉನ್ದೇರಿಚ್ಚಾದೇಃ** (ಉ. ಸೂ. ೧-೧೨) ಉನ್ದೀಕ್ಲೇದನೇ ಧಾತುವಿನ ಮುಂದೆ ಉತ್ ಪ್ರತ್ಯಯ ಬರುವುದು. ಅದು ನಿತ್ತಾಗುವುದು. ಉನ್ದೀಧಾತುವಿನ ಆದ್ಯಕ್ಷರವಾದ ಉಕಾರಕ್ಕೆ ಇಕಾರಾದೇಶ ಬರುವುದು. ಎಂಬುದರಿಂದ ಉ ಪ್ರತ್ಯಯ ಇಕಾರಾದೇಶಗಳು ಬಂದರೆ ಇನ್ದು ಎಂದಾಗುವುದು. ನಿತ್ಸ್ವರ ಆದ್ಯುದಾತ್ತ ಬರುವುದು.

ಮತ್ಸರಾಃ—ಮದ ತೃಪ್ತಿಯೋಗೇ ಚುರಾದಿಧಾತು ಇದರ ಮುಂದೆ **ಕೃ ಧೂ ಮದಿಭ್ಯಃ ಕಿತ್** (ಉ. ಸೂ. ೩-೩೫೩) ಡುಕೃಞ್ ಕರಣೇ, ಧೂಞ್ ಕಂಪನೇ (ಮದೀ ಹರ್ಷೇ) ಮದ ತೃಪ್ತಿಯೋಗೇ ಇವುಗಳ ಮುಂದೆ ಸರ ಪ್ರತ್ಯಯ ಬರುವುದು, ಅದು ಕಿತ್ತು ಮತ್ತು ಚಿತ್ತು ಆಗುವುದು ಎಂಬುದರಿಂದ ಸರ ಪ್ರತ್ಯಯ. ಇದು ಆರ್ಧಧಾತುಕ- ಆದರೂ ತಿ, ತು, ತ್ರ, ತ, ಧ, ಸಿ, ಸು, ಸರ, ಕ, ಸೇಷು, ಚ (ಪಾ ಸೂ. ೭-೨-೯) ಎಂಬುದರಿಂದ ಇಡಾಗಮವು ಪ್ರತಿಷೇಧಿತವಾಗಿರುವುದರಿಂದ ಇಡಾಗಮ ಬರುವುದಿಲ್ಲ. ಚಿತ್ತಾದ್ದರಿಂದ ಚಿತಃ ಎಂಬುದರಿಂದ ಅಂತೋದಾತ್ತ ಬರುವುದು.

ಮಾದಯಿಷ್ಣವಃ--ಮದೀ ಹರ್ಷಗ್ಲಪನಯೋಃ ಧಾತು. ಇದರ ಮುಂದೆ ಹೇತುಮತಿಚ (ಪಾ. ಸೂ. ೩-೧-೨೬) ಎಂಬುದರಿಂದ ಣಿಚ್. ಇದರ ಮುಂದೆ ಣೇಶ್ಛಂದಸಿ (ಪಾ. ಸೂ. ೩-೨ ೧೩೭) ಛಂದಸ್ಸಿನಲ್ಲಿ ಣಿಜನ್ತವಾದ ಧಾತುವಿನ ಮುಂದೆ ತಚ್ಛೀಲಾದ್ಯರ್ಥಗಳಲ್ಲಿ ಇಷ್ಣುಚ್ ಪ್ರತ್ಯಯ ಬರುವುದು ಎಂಬುದರಿಂದ ಇಷ್ಣುಚ್ ಬರುವುದು. ಮದ್+ಇ+ಇಷ್ಣು. ಣೇರನಿಟ್ (ಪಾ. ಸೂ. ೬-೪-೫೧) ಎಂಬುದರಿಂದ ಣಿಗೆ ಲೋಪವು ಪ್ರಾಪ್ತವಾಗುವುದು. ಆದರೂ **ಅಯೋಮನನ್ತಾಲ್ವಾಯ್ವೀನ್ತ್ವಿಷ್ಣುಷು** (ಪಾ. ಸೂ. ೬-೪-೬೫) ಅಮ್, ಅನ್ತ, ಆಲು

ಅಯ್ಯ, ಇತ್ನ, ಇಸ್ನ ಇವು ಪರವಾಗಿರುವಾಗ ಣಿಗೆ ಅಯ್ ಆದೇಶ ಬರುವುದು ಎಂಬುದರಿಂದ ಅಯ್ ಆದೇಶ ಬರುವುದು. ಮದ್+ಅಯ್+ಇಷ್ಣು. ಉಪಧಾವೃದ್ಧಿ. ಪ್ರಥಮಾ ಬಹುವಚನ ಮಾದಯಿಷ್ಣವಃ. ಚಿತ್ಸ್ವರ ಅನ್ತೋದಾತ್ತ ಬರುವುದು.

ಮಧ್ವಃ--೧೩ನೇ ಸೂಕ್ತ ಎರಡನೇ ಮಂತ್ರದಲ್ಲಿ ಮಧು ಶಬ್ದವು ಆದ್ಯುದಾತ್ತವು ಎಂದು ಹೇಳಲಾಗಿದೆ. ಮಧು ಶಬ್ದವು ಯದ್ಯಪಿ ನಪುಂಸಕಲಿಂಗ. ಆದರೂ ಇಲ್ಲಿ ವ್ಯತ್ಯಯದಿಂದ ಪುಲ್ಲಿಂಗವಾಗಿರುವುದು. ಇದರ ಮುಂದೆ **ಜಸ್** ಇಟ್ಟರೆ ಮಧು+ಜಸ್. ಈಗ **ಜಸಿಚ** (ಪಾ. ಸೂ. ೭-೩-೧೦೯) ಜಸ್ ಪ್ರತ್ಯಯಪರದಲ್ಲಿರುವಾಗ ಇಗನ್ತವಾದ ಅಂಗಕ್ಕೆ ಗುಣ ಬರುವುದು ಎಂಬುದರಿಂದ ಗುಣಕ್ಕೆ ಪ್ರಾಪ್ತಿ ಇದೆ. ಆದರೂ ಅದು ಗುಣ ಎಂಬ ಸಂಜ್ಞೆ ಬೋಧಕ ಪದವನ್ನು ಮುನ್ನಿಟ್ಟು ಬರುವುದು. ಆದ್ದರಿಂದ **ಸಂಜ್ಞಾಪೂರ್ವಕೋವಿಧಿರನಿತ್ಯಃ** (ಪರಿಭಾ. ೯೩) ಎಂಬುದರಿಂದ ಅನಿತ್ಯವಾಗುವುದು. ಆದಕಾರಣ ಇಲ್ಲಿ ಬರುವುದಿಲ್ಲ.

ಚಮೂಷದಃ- ಚಮು ಭಮು, ಜಮು ಝಮು ಅದನೇ, ಧಾತು. **ಕೃಷಿಚಮಿತನಿಧನಿಸರ್ಜಿಖರ್ಜಿಭ್ಯ ಊಃ** (ಉ.ಸೂ.೧-೮೧) ಕೃಷ ವಿಲೇಖನೇ ಚಮು ಅದನೇ ತನು ವಿಸ್ತಾರೇ, ಧನ ಧಾನ್ಯೇ, ಸರ್ಜ ಸರ್ಜನೇ, ಖರ್ಜ ವ್ಯಥನೇ ಈ ಧಾತುಗಳ ಮುಂದೆ ಊ ಪ್ರತ್ಯಯ ಬರುವುದು ಎಂಬುದರಿಂದ ಚಮುಧಾತುವಿನ ಮುಂದೆ ಊ ಪ್ರತ್ಯಯ. ಚಮ್ಯತೇ ಭಕ್ಷ್ಯತೇ ಯೇಷು ಚಮಸೇಷು ತೇ (ಯಾವ ಪಾತ್ರೆಗಳಲ್ಲಿ ತಿನ್ನಲಾಗುವುದೋ ಆವು.) ಚಮ್ವಃ ಚಮೂಷು ಸೀದನ್ತಿ ಇತಿ ಚಮೂಷದಃ **ಸತ್ಸೂದ್ವಿಷದ್ರುಹ ದುಹಯುಜವಿದಬಿಭಿಚ್ಛಿದಜಿನೀರಾಜಾಮುಪಸರ್ಗೇಽಪಿಕ್ವಿಪ್** (ಪಾ. ಸೂ. ೩-೨-೬೧) ಷದ್ಲೃ ವಿಶರಣಾದೌ, ಷೂಙ್ ಪ್ರಾಣಿಗರ್ಭವಿಮೋಚನೇ ಅದಾದಿ-ದ್ವಿಷ ಅಪ್ರೀತೌ, ದ್ರುಹ ಜಿಘಾಂಸಾಯಾಂ, ದುಹ ಪ್ರಪೂರಣೇ, ಯುಜಿರ್ ಯೋಗೇ-ಯುಜ ಸಮಾಧೌ, ವಿದ ಜ್ಞಾನೇ, ವಿದ ವಿಚಾರಣೇ, ವಿದ ಸತ್ತಾಯಾಂ, ಭಿದಿರ್ ವಿದಾರಣೇ, ಭಿದಿರ್ ದ್ವೈಧೀಕರಣೇ, ಜಿ ಜಯೇ, ಣೀಞ್ ಪ್ರಾಪಣೇ, ರಾಜೃ ದೀಪ್ತೌ. ಈ ಧಾತುಗಳ ಮುಂದೆ ಉಪಸರ್ಗವಿದ್ದರೂ ಇಲ್ಲದಿದ್ದರೂ ಸುಂಬಂತವು ಉಪಪದವಾಗಿದ್ದರೆ ಕ್ವಿಪ್ ಬರುವುದು ಎಂಬುದರಿಂದ ಚಮೂಶಬ್ದೋಪಪದಕವಾದ ಸದ್ ಧಾತುವಿನ ಮುಂದೆ ಕ್ವಿಪ್ ಪ್ರತ್ಯಯ, ಚಮೂಸದ್ ಎಂದಿರುವಾಗ **ಸುಷಾಮಾದಿಷು ಚ** (ಪಾ. ಸೂ. ೮-೩-೯೮) ಸುಷಾಮಾದಿಯಲ್ಲಿ ಸೇರುವ ಶಬ್ದಗಳ ಸಕಾರಕ್ಕೆ ಷಕಾರ ಬರುವುದು ಎಂಬುದರಿಂದ ಚಮೂ ಸಕಾರಕ್ಕೆ ಷಕಾರ, ಸುಷಾಮಾದಿಯು ಆಕೃತಿಗಣ, ಆದ್ದರಿಂದ ಈ ಶಬ್ದವು ಅದಕ್ಕೆ ಸೇರುವುದು. **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಕೃದುತ್ತರಪದ ಪ್ರಕೃತಿಸ್ವರ ಬರುವುದು. ಉತ್ತರಪದವು ಧಾತುಸ್ವರದಿಂದ **ಅಂತೋದಾತ್ತ**. ಇದರ ಮುಂದೆ ಜಸ್. ಅದು ಅನುದಾತ್ತ. ಅದಕ್ಕೆ ಉದಾತ್ತಾದನುದಾತ್ತಸ್ಯ ಎಂಬುದರಿಂದ ಸ್ವರಿತ ಬರುವುದು ॥ ೪ ॥

॥ ಸಂಹಿತಾಪಾಠಃ ॥

ಈಳತೇ ತ್ವಾಮವಸ್ಯವಃ ಕಣ್ವಾಸೋ ವೃಕ್ತಬರ್ಹಿಷಃ ।
ಹವಿಷ್ಮಂತೋ ಅರಂಕೃತಃ ॥ ೫ ॥

॥ ಪದಪಾಠಃ ॥

ಈಳತೇ । ತ್ವಾಂ । ಅವಸ್ಯವಃ । ಕಣ್ವಾಸಃ । ವೃಕ್ತಬರ್ಹಿಷಃ ॥
ಹವಿಷ್ಮಂತಃ । ಅರಂಕೃತಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಾಮಿಳತೇ । ಋತ್ವಿಜಃ ಸ್ತುವಂತಿ । ಕೀದೃಶಾಃ । ಅವಸ್ಯವಃ । ಅವನಂ ರಕ್ಷಣಂ ತದ್ವೇಚ್ಛವಾನಿಚ್ಛಂತಃ । ಕಣ್ವಾಸೋ ಮೇಧಾವಿನೋ ವೃಕ್ತಬರ್ಹಿಷ ಆಸ್ತರಣಾರ್ಥಂ ಛಿನ್ನೆದರ್ಭಾ ಹವಿಷ್ಮಂತೋ ಹವಿರ್ಯುಕ್ತಾ ಅರಂಕೃತೋಽಲಂಕರ್ತಾರಃ ॥ ಈಳತೇ । ಈಡ ಸ್ತುತೌ । ಅನುದಾತ್ತೇತ್ತ್ವಾಲ್ಲಟೋ ರುಃ । ಆದಿಪ್ರಭೃತಿಭ್ಯಃ ಶಪ ಇತಿ ಶಪೋ ಲುಕ್ । ಝಸ್ಯಾದೇಶಃ । ಟೇರೇತ್ವಂ । ತಾಸ್ಯನುದಾತ್ತೇದಿತ್ಯಾದಿನಾ ಲಸಾರ್ವಧಾತುಕಸ್ಯಾನುದಾತ್ತತ್ವಾದ್ಧಾತುಸ್ವರ ಏವ ಶಿಷ್ಯತೇ । ಅವಸ್ಯವಃ । ಅವಂ ತ್ಯವನಾ ದೇವಾಃ । ತಾನತಿಶಯೇನೇಚ್ಛಂತಿ । ಸುಪ ಆತ್ಮನಃ ಕ್ಯಚ್ । ಕ್ಯಚಿ ಚ । ಸಾ. ೭-೪-೩೩ । ಇತೀತ್ವಂ ನ ಭವತಿ । ನ ಛಂದಸ್ಯಪುತ್ರಸ್ಯ । ಪಾ ೭.೪.೩೫ । ಇತಿ ನಿಷೇಧಾತ್ । ಸರ್ವಪ್ರಾತಿಪದಿಕೇಭ್ಯೋ ಲಾಲಸಾಯಾಂ ಸುಗ್ವಕ್ತವ್ಯಃ । ಮ. ೭-೧-೫೧-೨ । ಇತಿ ಸುಕ್ । ಕ್ಯಾಚ್ಛಂದಸೀತ್ಯುಪ್ರತ್ಯಯಃ । ಆತೋ ಲೋಪಃ । ಪ್ರತ್ಯಯಸ್ವರೇಣಾಂತೋದಾತ್ತತ್ವಂ । ಕಣ್ವಾಸಃ । ಕಣ ಶಬ್ದಾರ್ಥಃ । ಕಣಂತಿ ಧ್ವನಂತಿ ಸ್ತೋತ್ರಾದಿಷಾಠೇನೇತಿ ಕಣ್ವಾ ಋತ್ವಿಜಃ । ಅಶಿಪ್ರುಷೀತ್ಯಾದಿನಾ ಕ್ವನ್ । ನಿತ್ತ್ವಾದಾದ್ಯುದಾತ್ತಃ । ಅಜ್ಜನೇರಸುಕ್ । ಪಾ. ೭-೧-೫೦ । ಇತ್ಯಸುಕ್ । ವೃಕ್ತಬರ್ಹಿಷಃ । ವೃಕ್ತಮುಕ್ತಂ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ಹವಿಷ್ಮಂತಃ । ಹವಿರೇಷಾಮಸ್ತೀತಿ ಹವಿಷ್ಮಂತಃ । ತಸೌ ಮತ್ವರ್ಥ ಇತಿ ಭ ತ್ವೇನಾಪದತ್ವಾನ್ನ ರುತ್ವಂ । ಅರಂಕೃತಃ । ಅಲಂಕುರ್ವಂತೀತ್ಯರಂಕೃತಃ । ಕ್ವಿಪ್ಚೇತಿ ಕ್ವಿಪ್ । ಹ್ರಸ್ವಸ್ಯ ತುಕ್ । ಕಪಿಲಕಾದೀನಾಂ ಸಂಜ್ಞಾಛಂದಸೋರ್ವಾ ಲೋ ರಶ್ವಮಾಪದ್ಯತೇ । ಪಾ. ೮-೨-೧೮.೩ । ಇತಿ ಲಕಾರಸ್ಯ ರೇಫಾದೇಶಃ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) ಅವಸ್ಯವಃ—ರಕ್ಷಣೆ ಮಾಡತಕ್ಕ ದೇವತೆಗಳ (ಸಹಾಯವನ್ನು) ಅಪೇಕ್ಷಿಸುವ । ವೃಕ್ತಬರ್ಹಿಷಃ—(ಆಸನಕ್ಕಾಗಿ) ಪರಿಸ್ಕರಿಸಿದ ದರ್ಭವುಳ್ಳ । ಹವಿಷ್ಮಂತಃ—ಹವಿಸ್ಸನ್ನು ಹಿಡಿದಿರುವ । ಅರಂಕೃತಃ—ಅಲಂಕಾರಗಳನ್ನು ಅರ್ಪಿಸುವ । ಕಣ್ವಾಸಃ—ಬುದ್ಧಿವಂತರಾದ ಅಥವಾ ಕಣ್ವಋಷಿಯ ವಂಶಸ್ಥರಾದ ಋತ್ವಿಕ್ಕುಗಳು ।ತ್ವಾಂ—ನಿನ್ನನ್ನು । ಈಳತೇ——ಸ್ತೋತ್ರಮಾಡುತ್ತಾರೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಋತ್ವಿಕ್ಕುಗಳು ತಮ್ಮ ಯಜ್ಞರಕ್ಷಣೆಗಾಗಿ ದೇವತೆಗಳ ಸಹಾಯವನ್ನು ಅಪೇಕ್ಷಿಸುತ್ತಾರೆ. ಅವರು ಸ್ತೋತ್ರ ಮಾಡುವುದರಲ್ಲಿ ನಿಪುಣರು. ದೇವತೆಗಳನ್ನು ಕರೆತರುವವನು ನೀನೇ ಆದ್ದರಿಂದ ಈಗ ನಿನ್ನನ್ನು ಸ್ತೋತ್ರಮಾಡುತ್ತಾರೆ. ನಿನ್ನ ಆಸನಕ್ಕಾಗಿ ದರ್ಭವನ್ನು ಪರಿಸ್ಕರಿಸಿದ್ದಾರೆ. ಹವಿಸ್ಸನ್ನೂ ಅಲಂಕಾರಗಳನ್ನೂ ಅರ್ಪಿಸುತ್ತಾರೆ. ದಯವಿಟ್ಟು ಬಾ.

English Translation.

O Agni, the Kanvas (or the wise priests) desirous of your favour, having spread the sacrificial grass and carrying the oblations and ornaments are praising you.

॥ ವಿಶೇಷ ವಿಷಯಗಳು ॥

ಅವಸ್ಯವಃ—**ಅವನಂ ರಕ್ಷಣಂ ತದ್ವೇಷಾಂಸ್ ದೇವಾನಿಚ್ಛಂತಃ। ಅವಂತೀತ್ಯವಾ ದೇವಾಃ ॥** ಮನುಷ್ಯರನ್ನು ರಕ್ಷಿಸುವುದರಿಂದ ದೇವತೆಗಳಿಗೆ **ಅವಾಃ** ಎಂದು ಹೆಸರು. ಆ ದೇವತೆಗಳನ್ನು ಆಪೇಕ್ಷಿಸುವವರಿಗೆ **ಅವಸ್ಯವಃ** ಎಂದು ಹೆಸರು.

ಕಣ್ವಾಸಃ—ಕಣ್ವಶಬ್ದದ ಬಹುವಚನವು. **ಕಣ್ವಾಃ** ಎಂಬುದರ ಪ್ರಾಚೀನ ಪ್ರಯೋಗವು. **ಕಣಂತಿ ಧ್ವನಂತಿ ಸ್ತೋತ್ರಾದಿಷಾತೇನೇತಿ ಕಣ್ವಾಃ ಋತ್ವಿಜಃ ಮೇಧಾವಿನಃ ॥** ಸ್ತೋತ್ರಾದಿಗಳನ್ನು ಉಚ್ಚರಿಸುತ್ತಾ ಧ್ವನಿಮಾಡುವುದರಿಂದ ಋತ್ವಿಜರಿಗೆ **ಕಣ್ವಾಃ** ಎಂದು ಹೆಸರು. ಈ ಶಬ್ದಕ್ಕೆ **ಮೇಧಾವಿನಃ**. ಬುದ್ಧಿವಂತರು ಎಂಬ ಅರ್ಥವನ್ನು ಭಾಷ್ಯಕಾರರು ಹೇಳಿರುವರು- ಈ ಶಬ್ದಕ್ಕೆ ಅವಯವಾರ್ಥನಿಷ್ಪತ್ತಿಯಿಂದ ಉಂಟಾಗುವ ಅರ್ಥವಲ್ಲದೆ, ಬೇರೆ ಅರ್ಥವನ್ನು ಹೇಳಬಹುದು. ಈ ಋಕ್ಕಿನ ಋಷಿಯು ಕಣ್ವವಂಶಸ್ಥನಾದುದರಿಂದ ತನ್ನೆ ವಂಶೀಯರಾದ ಋತ್ವಿಗ್ಯಜಮಾನಾದಿ ಜನರನ್ನು ನಿರ್ದೇಶಿಸಿ ಹೇಳುವಾಗ **ಕಣ್ವಾಸಃ=ಕಣ್ವಋಷಿಯ ವಂಶಸ್ಥರಾದ** ನಾವುಗಳು ಎಂಬ ಅರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡು **ಕಣ್ವಾಸಃ** ಎಂಬ ಶಬ್ದವನ್ನು ಉಪಯೋಗಿಸಿರಬಹುದೆಂದು ಹೇಳುವುದೇ ಸಮಂಜಸವಾಗಿರುವುದು.

ವ್ಯಕ್ತೇಬರ್ಹಿಷಃ—ಈ ಶಬ್ದವಿವರಣೆಯನ್ನು ನಾವು ೨೮ನೇ ಪುಟದಲ್ಲಿ ಕೊಟ್ಟಿದೇವೆ.
ಆರಂಕೃತಃ—ಈ ಶಬ್ದದ ವಿವರಣೆಗಾಗಿ (ಋ, ಸಂ. ಭಾಗ ೧-೬೭೭ನೇ ಪೇಜನ್ನು ನೋಡಿ.)

॥ ವ್ಯಾಕರಣಪ್ರಕ್ರಿಯಾ ॥

ಈಳತೇ — ಈಡಸ್ತುತೌ-ಅನುದಾತ್ತೇತ್. ಅದ್ದರಿಂದ **ಅನುದಾತ್ತೇಙಿತ ಆತ್ಮನೇಪದಮ್** (ಪಾ. ಸೂ ೧-೩-೧) ಎಂಬುದರಿಂದ ಆತ್ಮನೇಪದ ಬರುವುದು. ಪ್ರ. ಪು. ಬ. ಋ. ಬರುವುದು. ಕರ್ತರಿಶಪ್ ಎಂಬುದರಿಂದ ಬಂದ ಶಪ್ ವಿಕರಣಕ್ಕೆ **ಆದಿಪ್ರಭೃತಿಭ್ಯಃಶಪಃ** (ಪಾ. ಸೂ. ೨-೪-೭೨) ಎಂಬುದರಿಂದ ಲುಕ್. ಋಕಾರಕ್ಕೆ **ಆತ್ಮನೇಪದೇಷ್ವನತಃ** (ಪಾ. ಸೂ. ೭-೧-೫) ಎಂಬುದರಿಂದ ಅತ್ ಆದೇಶ. **ಟಿತ ಆತ್ಮನೇ ಪದಾನಾಂಟೇರೇ** (ಪಾ.ಸೂ. ೩-೪-೭೭) ಎಂದು ಟಿಗೆ ಏಕಾರಾದೇಶ. ಈಡತೇ ಡಕಾರಕ್ಕೆ 'ದ್ವಯೋಶ್ಚಾಸ್ಯಸ್ವರಯೋಃ' ಎಂಬುದರಿಂದ ಳಕಾರ. **ತಾಸ್ಯನುದಾತ್ತೇತ್** (ಪಾ. ಸೂ. ೭-೧-೧೮೬) ಎಂಬುದರಿಂದ ಲಕಾರ ಸ್ಥಾನದಲ್ಲಿ ಬಂದಿರುವ ಅತೇ ಎಂಬ ಸಾರ್ವಧಾತುಕಕ್ಕೆ ಅನುದಾತ್ತಸ್ವರ ಬರುವುದು. ಧಾತುಸ್ವರವೇ ನಿಲ್ಲುವುದು.

ಅವಸ್ಯತಿ-ಅವನ್ತಿ ರಕ್ಷನ್ತಿ ಇತ್ಯವಾಃ=ದೇವಾಃ, ಅವ ರಕ್ಷಣೇ ಧಾತು. ಅಚ್ ಪ್ರತ್ಯಯ. ಅವಾನ್ ಅತಿ. ಶಯೇನ ಇಚ್ಛನ್ತಿ ಎಂದು ವಿಗ್ರಹ. ಸುಪ ಆತ್ಮನಃ ಕ್ಯಚ್ (ಪಾ-ಸೂ. ೩-೧-೮) ಎಂಬುದರಿಂದ ಕ್ಯಚ್ ಪ್ರತ್ಯಯ

ನ ಛಂದಸ್ಯಪುತ್ರಸ್ಯ (ಪಾ. ಸೂ. ೭-೪-೩೫) ಛಂದಸ್ಸಿನಲ್ಲಿ ಪುತ್ರ ಶಬ್ದವನ್ನುಳಿದ ಅಕಾರಾಂತವಾದ ಶಬ್ದಗಳಿಗೆ ಈತ್ಪದೀರ್ಘಗಳು ಕ್ಯಚ್ ಪರದಲ್ಲಿರುವಾಗ ಬರುವುದಿಲ್ಲ ಎಂದು ನಿಷೇಧವಿರುವುದರಿಂದಲೂ ಕ್ಯಚಿ ಚೆ (ಪಾ. ಸೂ. ೭-೪-೩೩) ಕ್ಯಚ್ ಪ್ರತ್ಯಯ ಪರದಲ್ಲಿರುವಾಗ ಅಕಾರಕ್ಕೆ ಈಕಾರ ಬರುವುದು ಎಂಬುದರಿಂದಲೂ ಅಕಾರಕ್ಕೆ ಈಕಾರ ಬರುವುದಿಲ್ಲ. ಇದೇ ನಿಷೇಧದಿಂದ **ಅಕೃತ್ಸಾರ್ವಧಾತುಕಯೋಃ** (ಪಾ. ಸೂ. ೭-೪-೨) ಎಂಬುದರಿಂದ ದೀರ್ಘವೂ ಬರುವುದಿಲ್ಲ. **ಸರ್ವಪ್ರಾತಿಪದಿಕೇಭ್ಯೋ ಲಾಲಸಾಯೈಂ ಸುಗ್ವಕ್ತವ್ಯಃ** (ಪಾ. ಸೂ. ೭-೧-೫೧ ವ. ೨) ಉತ್ಯಟೀಚ್ಛೆ ತೋರುವಾಗ ಕ್ಯಚ್ ಪ್ರತ್ಯಯ ಪರದಲ್ಲಿದ್ದರೆ ಎಲ್ಲಾ ಪ್ರಾತಿಪದಿಕಗಳಿಗೂ ಸುಕ್ ಆಗಮ ಬರುವುದು ಎಂಬುದರಿಂದ ಸುಗಾಗಮ ಬಂದರೆ ಅವಸ್+ಯ ಕ್ಯಾಚ್ಛ್ನಸಿ (ಪಾ. ಸೂ. ೩-೨-೧೭೦) ಕ್ಯ ಎಂಬುದರಿಂದ ಕ್ಯಚ್-ಕ್ಯಙ್-ಕ್ಯಷ್ ಇವುಗಳಿಗೆ ಸಾಮಾನ್ಯವಾಗಿ ಗ್ರಹಣವು. ಕ್ಯಾಂತವಾದ ಧಾತುವಿನ ಮುಂದೆ ಛಂದಸ್ಸಿನಲ್ಲಿ ತಚ್ಛೀಲಾದ್ಯರ್ಥಗಳಲ್ಲಿ ಉ ಪ್ರತ್ಯಯ ಬರುವುದು ಎಂದು ಕಾಶಿಕಾಕಾರರು ಅಭಿಪ್ರಾಯಪಡುವರು. ಕ್ಯಶಬ್ದದಿಂದ ವ್ಯಾಖ್ಯಾನ ಬಲದಿಂದ ಕಂಡ್ವಾದಿಯಕ್ಕಿ ಗೂ ಗ್ರಹಣವು ಉಂಟು ಎಂದು ಮತ್ತೆ ಕೆಲವರು ಅಭಿಪ್ರಾಯಪಡುವರು. ಇದರಿಂದ ಉ ಪ್ರತ್ಯಯ ಬಂದರೆ ಅವಸ್ಯ+ಉ **ಅತೋಲೋಪಃ** (ಪಾ. ಸೂ. ೬-೪-೪೮) ಎಂಬುದರಿಂದ ಅಕಾರಕ್ಕೆ ಲೋಪ. ಅವಸ್ಯು ಎಂದಾಗುವುದು. ಪ್ರತ್ಯಯಸ್ವರದಿಂದ ಅಂತೋದಾತ್ತ. ಪ್ರಥಮಾವಿಭಕ್ತಿ ಬಹುವಚನದಲ್ಲಿ ಅವಸ್ಯವಃ ಎಂದಾಗುವುದು.

ಕಣ್ವಾಸಃ— ಕಣಶಬ್ದಾರ್ಥಃ ಧಾತು. ಕಣನ್ತಿ-ಧ್ವನನ್ತಿ ಸ್ತೋತ್ರಾದಿಪಾಠೇನ (ಸ್ತೋತ್ರಾದಿಗಳನ್ನು ಹೇಳುವುದರಿಂದ ಶಬ್ದಮಾಡುವರು) ಇತಿ ಕಣ್ವಾಃ, ಋತ್ವಿಜಃ, ಕಣ್ವ ಎಂದರೆ ಋತ್ವಿಕ್ಕುಗಳು. **ಆತಿಪ್ಯುಷಿಲಟಿಕೆಣಿಖುಟಿವಿತಿಭ್ಯಃಕ್ವನ್** (ಉ. ಸೂ. ೧-೧೪೯) ಎಂಬುದರಿಂದ ಕಣಧಾತುವಿನ ಮುಂದೆ ಕ್ವನ್ ಪ್ರತ್ಯಯ. ಆವರ ಮುಂದೆ ಜಸ್ಸನ್ನಿಟ್ಟರೆ **ಅಜ್ಜಸೇರಸುಕ್** (ಪಾ. ಸೂ. ೭-೧-೫೦) ಎಂಬುದರಿಂದ ಅಸುಗಾಗಮ, ಕಣ್ವಾಸಃ ಎಂದಾಗುವುದು.

ವೃಕ್ತಬರ್ಹಿಷಃ— ಸೂ. (೧೨ ಋ ೩)ರಲ್ಲಿ ವೃಕ್ತ ಶಬ್ದಕ್ಕೆ ಪ್ರಕ್ರಿಯೆಯು ಉಪಪಾದಿತವಾಗಿರುವುದು. ವೃಕ್ತ ಎಂಬುದು ಪ್ರತ್ಯಯ ಸ್ವರದಿಂದ ಅಂತೋದಾತ್ತ. ವೃಕ್ತಾನಿ ಬರ್ಹೀಂಷಿ ಯೇಷಾಂ ತೇ ಎಂದು ಬಹುವ್ರೀಹಿ. **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** (ಪಾ. ಸೂ. ೬-೨-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರಬರುವುದು.

ಹವಿಷ್ಮಂತೇಃ— ಹವಿಃ ಏಷಾಮಸ್ತಿ ಇತಿ ಹವಿಷ್ಮನ್ತಃ ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್ (ಪಾ ಸೂ. ೫-೨-೯೪) ಎಂಬುದರಿಂದ ಹವಿಸ್ ಶಬ್ದದ ಮುಂದೆ ಮತುಪ್ ಪ್ರತ್ಯಯ. **ಆದೇಶಪ್ರತ್ಯಯಯೋಃ** (ಪಾ.ಸೂ. ೮-೩-೫೯) ಎಂಬುದರಿಂದ ಸಕಾರಕ್ಕೆ ಷಕಾರ. ಜಸ್ ಪ್ರತ್ಯಯ. **ಉಗಿದಚಾಂಸರ್ವನಾಮಸ್ಥಾನೇ**ಧಾತೋಃ (ಪಾ. ಸೂ. ೭-೧-೭೦) ಎಂಬುದರಿಂದ ನುಮಾಗಮ. **ತಸೌಮತ್ವರ್ಥೇ** (ಪಾ. ಸೂ. ೧-೪-೧೯) ಎಂಬುದರಿಂದ ಹವಿಸ್ ಎಂಬುದಕ್ಕೆ ಭ ಸಂಜ್ಞೆ ಬರುವುದು. ಇದರಿಂದ ಪದಸಂಜ್ಞೆಗೆ ಬಾಧ ಬರುವುದರಿಂದ ಸಕಾರಕ್ಕೆ ರುತ್ವ ಬರುವುದಿಲ್ಲ.

ಆರಂಕೃತೇಃ— ಅಲಂಕುರ್ವನ್ತಿ ಇತಿ ಆರಂಕೃತಃ ಅಲಮ್ ಎಂಬ ಸುಬಂತವು ಉಪಪದವಾಗಿರುವಾಗ ಕೃಞ್ ಧಾತುವಿನ ಮುಂದೆ ಕ್ವಿಪ್ಚ್ (ಪಾ. ಸೂ. ೩-೨-೭೬) ಎಂಬುದರಿಂದ ಕ್ವಿಪ್ ಪ್ರತ್ಯಯ ಬರುವುದು.

ಕ್ವಿಪ್ ಪ್ರತ್ಯಯಕ್ಕೆ ಲೋಪ. ಪ್ರತ್ಯಯಲಕ್ಷಣದಿಂದ ಕ್ವಿಪ್ ಪರವಾಗಿರುವುದು. ಆದ್ದರಿಂದ **ಹ್ರಸ್ವಸ್ಯ ಪಿತ್ಕೃತಿತುಕ್** (ಪಾ. ಸೂ. ೬-೧-೭೧) ಎಂಬುದರಿಂದ ತುಗಾಗಮ. ಅದು ಕಿತ್ತಾದ್ದರಿಂದ **ಆದ್ಯನ್ತೌಟಕಿತೌ** (ಪಾ. ಸೂ. ೧-೧-೪೬) ಎಂಬುದರಿಂದ ಅನ್ತಾವಯವಾಗಿ ಬರುವುದು. **ಕಪಿಲಕಾದೀನಾಂ ಸಂಜ್ಞಾ ಛಂದಸೋರ್ವಾ ಲೋ ರಶ್ಯೇಮಾಪದ್ಯತೇ** (ಪಾ. ಸೂ. ಮ. ೮-೨ ೧೮) ಸಂಜ್ಞೆ ತೋರುವಾಗಲೂ ಛಂದಸ್ಸಿನಲ್ಲಿಯೂ ಸಹ ಕಪಿಲಕಾದಿಗೆ ಸೇರಿದ ಶಬ್ದಗಳ ಲಕಾರಕ್ಕೆ ರೇಫವು ವಿಕಲ್ಪವಾಗಿ ಬರುವುದು ಎಂಬುದರಿಂದ ಅಲಂಶಬ್ದದ ಲಕಾರಕ್ಕೆ ರೇಫ ಬರುವುದು. ಕಪಿಲಕಾದಿಯು ಆಕೃತಿಗಣವಾದ್ದರಿಂದ ಅಲ್ಲಿ ಅಲಂಶಬ್ದವು ಸೇರುವುದು. ಇಲ್ಲಿ ಮಹಾಭಾಷ್ಯದಲ್ಲಿ **ವಾಲಮೂಲಲಘ್ವಲಮಜ್ಗುಲೀನಾಂ ವಾ ಲೋ ರಶ್ಯೇಮಾಪದ್ಯತೇ** (ಮಭಾ ೮-೨-೧೮-೨) ವಾಲ, ಮೂಲ ಲಘು, ಅಲಮ್, ಅಜ್ಗುಲಿ ಈ ಶಬ್ದಗಳ ಲಕಾರಕ್ಕೆ ರೇಫವು ವಿಕಲ್ಪವಾಗಿ ಬರುವುದು. ಉದಾಹರಣೆ, ಅಶ್ವವಾರಃ, ಅಶ್ವವಾಲಃ, ಮೂರದೇವಃ, ಮೂಲದೇವಃ, ಲಘುಸ್ಯದಃ, ರಘುಸ್ಯದಃ, ಅಲಂಭಕ್ತಾಯ-ಅರಂಭಕ್ತಾಯ, ಸ್ವಂಗುಲಿಃ-ಸ್ವಂಗುರಿಃ ಎಂದು ಹೇಳಿ ನಂತರ ಸಂಜ್ಞಾಚ್ಛನ್ದೋ-ರ್ವಾ ಕಪಿಲಕಾದೀನಾಮ್ ಎಂದು ವಚನವಿರುವುದು. ಇದಕ್ಕೆ ಉದಾಹರಣೆ — ಕಪಿರಕಃ, ಕಪಿಲಕಃ; ತಿಲ್ವಿಲಿಕಮ್-ತಿರ್ವಿರಿಕಮ್, ಕಲ್ಮಷಮ್-ಕರ್ಮರಮ್, ರೋಮಾಣಿ-ಲೋಮಾನಿ, ಪಾಂಸುಲಂ - ಪಾಂಸುರಂ, ಕರ್ಮ-ಕಲ್ಮ, ಶುಕ್ರಃ-ಶುಕ್ಲಃ-ಎಂದು ಇರುವುದು. ಕೈಯಟಕಾರರು ಕಪಿಲಕಾದಿಷು ವಾರಶ್ಯಲಃ, ಕಪಿಲಕಾದಿ ಶಬ್ದಗಳ ರೇಫಕ್ಕೆ ಲಕಾರವು ವಿಕಲ್ಪವಾಗಿ ಬರುವುದು ಎಂದಿರುವರು. ಇದಕ್ಕೆ ಉದ್ಯೋತದಲ್ಲಿ ಪೂರ್ವವಾಕ್ಯೇನ ಲಶ್ಯರತ್ವಂ ವೋಕ್ತಂ ಅನೇನ ರಶ್ಲಲೋವೇತ್ಯರ್ಥಃ, ಅಂದರೆ ವಾಲಮೂಲ ಎಂಬ ಪೂರ್ವವಾಕ್ಯದಿಂದ ಲಕಾರಕ್ಕೆ ರೇಫ ವಿಕಲ್ಪವಾಗಿ ವಿಹಿತವಾಗಿರುವುದು ಈ ವಾಕ್ಯದಿಂದ ರೇಫಕ್ಕೆ ಲಕಾರವು ವಿಕಲ್ಪದಿಂದ ವಿಧಿಸಲ್ಪಡುವುದು ಎಂದು, ವಿವರಣೆ ಇರುವುದು. ಆದುದರಿಂದ ಕೈಯಟ ಉದ್ಯೋತಕಾರರ ಪಾರವನ್ನು ಅನುಸರಿಸಿದರೆ ಇಲ್ಲಿ ವಾಲಮೂಲ, ಎಂಬುದರಿಂದ ಲಕಾರಕ್ಕೆ ರೇಫ ಬರುವುದು ಎಂದು ವರ್ಣಿಸುವುದು ಯುಕ್ತವು ॥ ೫ ॥

॥ ಸಂಹಿತಾಪಾಠಃ ॥

ಘೃತಪೃಷ್ಠಾ ಮನೋಯುಜೋ ಯೇ ತ್ವಾ ವಹಂತಿ ವಹ್ನಯಃ ।
ಆ ದೇವಾನ್ಸೋಮಪೀತಯೇ ॥ ೬ ॥

॥ ಪದಪಾಠಃ ॥

ಘೃತ ಽ ಪೃಷ್ಠಾಃ । ಮನಃ ಽ ಯುಜಃ । ಯೇ । ತ್ವಾ । ವಹಂತಿ । ವಹ್ನಯಃ ।
ಆ । ದೇವಾನ್ । ಸೋಮ ಽ ಪೀತಯೇ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಾ ತ್ವಾಂ ಯೇ೨ಶ್ವಾ ರಥೇನ ವಹಂತಿ । ಕೀದೃಶಾಃ । ಘೃತಪೃಷ್ಠಾಃ । ಪುಷ್ಟಾಂಗತ್ವೇನ ದೀಪ್ತಪೃಷ್ಠಾ ಮನೋಯುಜೋ ಮನಃಸಂಕಲ್ಪಮಾತ್ರೇಣ ರಥೇ ಯುಜ್ಯಮಾನಾ ವಹ್ನಯೋ ವೋಢಾರಃ । ತೈರಶ್ವೈಃ ಸೋಮಪೀತಯೇ ಸೋಮಪಾನಯೋಗಾರ್ಥಂ ದೇವಾನಾ ವಹೇತಿ ಶೇಷಃ ॥ ಘೃತಪೃಷ್ಠಾಃ। ಘೃ ಕ್ಷರಣದೀಪ್ತ್ಯೋಃ । ಘೃತಂ ದೀಪ್ತಂ ಪೃಷ್ಠಂ ಯೇಷಾಂ ತೇ ಘೃತಪೃಷ್ಠಾಃ । ಘೃತಶಬ್ದಃ ಪ್ರತ್ಯಯೆಸ್ವರೇಣಾಂತೋದಾತ್ತಃ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ಮನಸಾ ಯುಂಜತ ಇತಿ ಮನೋಯುಜಃ । ಋತ್ವಿಗ್ದಧೃಗಿತ್ಯಾದಿನಾ ಕ್ವಿನ್ । ಕೃದುತ್ತರಪದಪ್ರಕೃತಿಸ್ವರತ್ವಂ । ತ್ವಾ । ತ್ವಾನೌ ದ್ವಿತೀಯೌಯಾ ಇತ್ಯನುದಾತ್ತಸ್ತ್ವಾದೇಶಃ । ವಹಂತಿ । ಶಪ್ಯಜೋರನುದಾತ್ತತ್ವಾದ್ಧತುಸ್ವರಃ । ಯದ್ವೃತ್ತಯೋಗಾನ್ನಿಘಾತಾಭಾವಃ । ವಹ್ನಯಃ । ನಿರಿತ್ಯನುವೃತ್ತೌ ವಹಿಶ್ರಿಶ್ರುಯುದ್ರುಗ್ಲಾಹುವ್ಯಾಶಿಭ್ಯೋ ನಿತ್ । ಉ- ೪-೫೧ । ಇತಿ ನಿ ಪ್ರತ್ಯಯಃ । ತಸ್ಯ ನಿತ್ತ್ವಾದ್ಯುದಾತ್ತತ್ವಂ । ಸೋಮಪೀತಯೇ। ಉಕ್ತಂ । ಸಕಾರೇ ಪರತೋ ನಕಾರಸ್ಯ ಸಂಹಿತಾಯಾಂ ನತ್ವ । ಪಾ- ೮-೩-೩೦ । ಇತಿ ಧುಡಾಗಮಃ । ಖರಿ ಚ। ಪಾ. ೮-೪-೫೫ । ಇತಿ ಚರ್ತ್ವಂ। ಚಯೋ ದ್ವಿತೀಯೌ೨ ಶರಿ ಪೌಷ್ಕರಸಾದೇಃ । ಪಾ- ೮.೪-೪೮-೩೭ । ಇತಿ ದ್ವಿತೀಯಸ್ಥಕಾರಃ ॥ ೨೬ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) ಘೃತಪೃಷ್ಠಾಃ—ಪುಷ್ಟವಾಗಿರುವುದರಿಂದ ತುಪ್ಪದಂತೆ ನುಣುಪಾದ ಬೆನ್ನುಗಳುಳ್ಳ ಮನೋಯುಜಃ—ಸಂಕಲ್ಪಮಾತ್ರದಿಂದಲೆ (ರಥಕ್ಕೆ) ಸೇರಿಕೊಳ್ಳತಕ್ಕ । ವಹ್ನಯಃ—ಹೊರಲು ಶಕ್ತವಾದ । ಯೇ—ಯಾವ ಕುದುರೆಗಳು । ತ್ವಾ—ನಿನ್ನನ್ನು । ವಹಂತಿ—ಎಳೆದುಕೊಂಡುಬರುತ್ತವೆಯೋ (ಆ ಕುದುರೆಗಳಿಂದಲೇ) । ಸೋಮಪೀತಯೇ—ಸೋಮಪಾನಕ್ಕಾಗಿ । ದೇವಾನ್—ದೇವತೆಗಳನ್ನು । ಆ (ವಹ)—ಕರೆದುಕೊಂಡು ಬಾ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನನ್ನು ರಥದಲ್ಲಿ ಕುಳ್ಳಿರಿಸಿ ಯಜ್ಞಭೂಮಿಗೆ ಹೊತ್ತುಕೊಂಡು ಬರುವ ಕುದುರೆಗಳ ಬೆನ್ನುಗಳು ಪುಷ್ಟವಾಗಿರುವುದರಿಂದ ಪ್ರಕಾಶಮಾನವಾಗಿವೆ. ಅವುಗಳು ತಮ್ಮ ಸಂಕಲ್ಪಮಾತ್ರದಿಂದ ರಥಕ್ಕೆ ಸೇರಿಕೊಳ್ಳಬಲ್ಲವು. ಅವುಗಳು ಹೊರಲು ಸಮರ್ಥವಾಗಿವೆ. ಅವುಗಳ ಮೇಲೆಯೇ ಸೋಮಪಾನಕ್ಕಾಗಿ ದೇವತೆಗಳನ್ನು ಕರೆದುಕೊಂಡು ಬಾ.

English Translation

By means of horses which have backs as soft and smooth as clarified butter which harnessing themselves promptly according to your wish, carry you and the gods hither to drink soma-juice.

॥ ವಿಶೇಷವಿಷಯಗಳು ॥

ಘೃತಪೃಷ್ಠಾಃ—ಈ ಶಬ್ದದ ವಿವರಣೆಯನ್ನು ನಾವು ಹಿಂದಿನ ಸೂಕ್ತದ ೫ನೆಯ ಋಕ್ಕಿನಲ್ಲಿ (ಪೇಜು. 549) ಮಾಡಿದೇವೆ. ಇಲ್ಲಿ ಈ ಶಬ್ದವು ವಹ್ನಯಃ ಎಂಬ ಶಬ್ದಕ್ಕೆ ವಿಶೇಷಣವಾಗಿರುವುದರಿಂದ ಅರ್ಥವು ಸ್ವಲ್ಪ ವ್ಯತ್ಯಾಸವಾಗಿರುವುದು. ತುಪ್ಪದಂತೆ ಮೃದುವಾದ ಅಥವಾ ನಯವಾದ ಬೆನ್ನುಗಳುಳ್ಳ backs as smooth as clarifed butter ಎಂದರ್ಥವು.

ವಹ್ನಯಃ—**ವೋಢಾರಃ ಅಶ್ವಾ ಇತ್ಯರ್ಥಃ** ರಥವನ್ನು ವಹಿಸುವುದರಿಂದ ಅಶ್ವಗಳಿಗೆ ವಹ್ನಯಃ ಎಂದು ಹೆಸರು.

ಮನೋಯುಜಃ—ಅಗ್ನಿಯ ಮನಸ್ಸಂಕಲ್ಪಮಾತ್ರದಿಂದ ರಥದಲ್ಲಿ ಕಟ್ಟಲ್ಪಡುವುವು. **ಮನಸಾ ಯುಂಜತ ಇತಿ ಮನೋಯುಜಃ** ಎಂದು ನಿಷ್ಪತ್ತಿಯು.

॥ ವ್ಯಾಕರಣಪ್ರಕ್ರಿಯಾ ॥

ಘೃತಪೃಷ್ಠಾಃ—ಪ್ರತ್ಯಯಸ್ವರದಿಂದ ಅಂತೋದಾತ್ತ. ಇದಕ್ಕೆ ಅಪವಾದವಾದ ನಬ್ವಿಷಯಸ್ಯಾನಿಷ್ಠಸ್ಯ, (ಫಿ ಸೂ. ೨೬) ಎಂಬುದರಿಂದ ಆದ್ಯುದಾತ್ತ ಪ್ರಾಪ್ತವಾದರೆ ಅದನ್ನು ಬಾಧಿಸಿ **ಘೃತಾದೀನಾಂಚ** (ಫಿ. ಸೂ. ೨೧) ಎಂಬುದರಿಂದ ಘೃತಶಬ್ದ ಅಂತೋದಾತ್ತ. ಘೃಕ್ಷರಣದೀಪ್ತ್ಯೋಃ, ಧಾತು. **ಘೃತಂ**= ದೀಪ್ತಂ ಪೃಷ್ಠಂ ಯೇಷಾಂ ತೇ ಎಂದು ಬಹುವ್ರೀಹಿ. **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** (ಪಾ ಸೂ ೬-೨-೧) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ.

ಮನೋಯುಜಃ—ಮನಸಾ ಯುಜ್ಯಂತೇ ಇತಿ ಮನೋಯುಜಃ **ಋತ್ವಿಗ್ದಧೃಕ್ಸ್ರಗ್ದಿಗುಷ್ಣಿಗಞ್ಜಿ-ಯುಜಿಕ್ರುಞ್ಚಾಂಚ** (ಪಾ. ಸೂ. ೩-೨-೫೯) ಎಂಬುದರಿಂದ ಮನಶ್ಶಬ್ದವು ಉಪಪದವಾಗಿರುವಾಗ ಯುಜ್‌ಧಾತುವಿನ ಮುಂದೆ ಕ್ವಿನ್ ಪ್ರತ್ಯಯ. ಯುಜ್ ಎಂಬುದರ ಉಕಾರ ಧಾತು ಸ್ವರದಿಂದ ಅಂತೋದಾತ್ತ, **ಸಮಾಸಾನಂತರ ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬಂದು ಅದೇ ಸ್ವರ ನಿಲ್ಲುವುದು. ನಿರುಪಪದಾದ್ಯುಜೇಃಕ್ವಿನ್—ಉಪಪದವಿಲ್ಲದೇ ಇರುವ ಯುಜ್ ಧಾತುವಿನ ಮುಂದೆ ಕ್ವಿನ್ ಬರುವುದು ಎಂದು ಕೌಮುದೀಕಾರ ಪ್ರಭೃತಿಗಳು ಅಭಿಪ್ರಾಯಪಡುವರು. ಆದರೂ ವೇದಭಾಷ್ಯಕಾರರ ಅಭಿಮತದಂತೆ ಸೋಪಪದಕವಾದ ಯುಜ್‌ನ ಮುಂದೆ ಕ್ವಿನ್ ಪ್ರತ್ಯಯ ಉತರ್ಷಾದಿಸಲ್ಪಟ್ಟಿರುವುದು.

ತ್ವಾ-ತ್ವಾಮ್—ಎಂಬ ಯುಷ್ಮದ್ ಶಬ್ದದ ದ್ವಿತೀಯಾ ಏಕವಚನಾಂತಕ್ಕೆ **ತ್ವಾಮೌದ್ವಿತೀಯೋಯೋಃ** (ಪಾ. ಸೂ. ೮-೧-೨೩) ಎಂಬುದರಿಂದ ಅನುದಾತ್ತವಾದ ತ್ವಾ ಆದೇಶ ಬರುವುದು.

ವಹನ್ತಿ—ವಹ ಪ್ರಾಪಣೇ ಲಟ್, ಝಿ ಝೋನ್ತೇಃ (ಪಾ.ಸೂ. ೭-೧-೩) ಎಂಬುದರಿಂದ ಅಂತಾದೇಶ. ಶಪ್, ಅತೋಗುಣೇ, ಪರರೂಪ, ಶಪ್ಪು ಪಿತ್. ಆದ್ಯುದಾತ್ತೌ ಸುಪ್ಪಿತೌ (ಪಾ.ಸೂ. ೩-೧-೪) ಎಂಬುದರಿಂದ ಅನುದಾತ್ತ. ಅನ್ತಿ ಯು ಲಸ್ಥಾನಿಕವಾದ ಸಾರ್ವಧಾತುಕ, ಶಪ್ ಎಂಬ ಆದುಪದೇಶದ ಮುಂದೆ ಇರುವುದು. ಆದ್ದರಿಂದ **ತಾಸ್ಯನುದಾತ್ತೇನ್ಙಿದುಪದೇಶಾತ್** (ಪಾ. ಸೂ. ೬-೧-೧೮೮) ಎಂಬುದರಿಂದ ಅನುದಾತ್ತ. ಧಾತು,

स्वरवे निल्लुवुदु. यो त्वा वहस्ति, वह्नयः,'एंदु यो, एंब यच्छब्ददिंद कूडिरुव पदद मुंदे वहस्ति, एंबुदु इरुवुदु. आद्दरिंद यॆद्युत्तान्नित्यं (पा. सू. ८-८-६६) यावा पद दल्लि यच्छब्दविरुवुदो आदर मुंदे इरुव तिङंतवु अनुदात्तवागुवुदिल्ल एंबुदरिंद निषेध बरुवुदु. आदकारण तिङ्शितिः, एंबुदरिंद अनुदात्त बरुवुदिल्ल. **पूजनात्पूजितमनु** दात्तं (पा. सू. ८-८-६८) कात्पूर्वादिभ्य इति वक्तव्यं, एंब वार्तिकवु इल्लिरुवुदु. एवंच पूज नार्थकवाद कात्पूर्वादिशब्दगळ मुंदिरुव पूजितवाचकवु अनुदात्त एंदु सूत्रार्थ. इल्लि पूज नादनुदात्तम् एंदु सूत्रविन्यास माडिदरू पूजितगळु ससंबंधिकगळाद्दरिंदलू प्रत्या सत्तियिंदलू सह पूजित एंबुदु लब्धवागुवुदु. हीगिरुवल्लि पूजितग्रहणवु व्यर्थवागि अत्रप्रकरणे पंचमीनिर्देशेपि नानन्तर्यमाश्रीयते,–ई प्रकरणदल्लि पंचमीनिर्देशविद्दरू आनंतर्यवु आश्रयिसल्पडुवुदिल्ल एंदु ज्ञापिसुवुदु. ईग पूजनात् एंब पंचमीनिर्देश दिंद आनंतर्यार्थवु लभिसुवुदिल्ल. पूजित ग्रहणविद्दरे कमलानिकमलानि. एंबल्लि द्विरुक्तियिंद प्रशस्यकमलवेंदु अर्थवेर्सडुवंते सूत्रोपात्तवाद पूजितपदप्रत्यासत्तिलब्धवाद पूजित पदगळिरडरिंद प्रशस्त पूजित एंब अर्थवु बोधितवागुवुदु. इल्लि प्राशस्त्यवु आनंतर्यरूप वादुदु. इत्थं च आनंतर्यलाभकाग्गि पूजितग्रहणवु सार्धकवागुवुदु. ई ज्ञापितवचन विल्लदे इद्दरे पूजनात् पंचमीनिर्देशविरुवुदरिंद तस्मादित्युत्तरस्य (पा. सू. ८-८-६८) एंबुदरिंद आनंतर्यार्थवु सिद्धवागुवुदरिंद पूजितग्रहणक्के वैयर्थ्यवु बंदे बरुवुदु. आद्दरिंद ई प्रकरणदल्लि पंचमीनिर्देशविद्दरू आनंतर्यवु आश्रयिसल्पडुवुदिल्ल एंदु ऒप्पलेबेकु. प्रकृतदल्लि यो त्वा वहस्ति, एंबल्लि त्वा पदव्यवधानविद्दरू यॆद्युत्तान्नित्यं एंब निषेधवु बंदेबरुवुदु. आद्दरिंद सर्वानुदात्त बरुवुदिल्ल.

वह्नयः—वहि श्रि श्रुयुद्रुस्ग्लाहाव्रश्चिभ्योनिन् (उ. सू. ४-४८) इल्लि व्रीज्या ज्वरिभ्योनिः (उ. सू. ४-४४८) एंब सूत्रदिंद निः, एंबुदु अनुवृत्तवागुवुदु. वह प्राप णे. श्रिञ् सेवायाम्, शृ श्रवणे, युमिश्रणे द्रु गतौ, ग्लै म्लै हर्षक्षये, ओहाक् त्यागे, व्रश्चत्वारसंयोगे ई धातुगळ मुंदे नि प्रत्यय बरुवुदु. आदु नित्तू आगुवुदु एंबु दरिंद वह धातुविन मुंदे नि प्रत्यय बरुवुदु. आदु नित्तादुदरिंद व्रश्च्नित्यादिर्नित्यं (पा. सू. ६-१-१९८) एंबुदरिंद वह्नि शब्दवु आद्युदात्त.

सोमपीतयेऽ—इदे सूक्तद मॊदलनेय ऋक्किनल्लि इदक्के प्रक्रियेयु उक्तवागिरु वुदु. देवान् सोमपीतयेऽ, एंबल्लि संहितावकाशदल्लि नकारक्के परदल्लि सकारवु इरुवुदु, आद्दरिंद नश्च (पा. सू. ८-३-७०) नकारांतवाद पददमुंदे इरुव सकारक्के धुडागमु बरुवुदु एंबुदरिंद सकारक्के धुडागमु बरुवुदु. आदु टित्तादुदरिंद सकारक्के आदियागि बरुवुदु. देवान्+ध् सोमु एंदाय्तु. **ऋरिचे** (पा. सू. ८-४-४४) ऋर् वर्णपरदल्लिरुवाग ऱुल् प्रत्याहार बोध्यवाद वर्णगळिगे छर्वर्णगळु बरुवुवु एंबुद रिंद ऋ ऋ सकार परदल्लिरुवुदरिंद ध् एंब ऱुल्लिगे छर् बरुवुदु. छर् एंदरे च, ट, त, क, प, श, ष, सगळु इवेल्लक्कू प्राप्ति इद्दरू **स्थानेन्तरतमः** (पा. सू. १.१-५०) दंत

ಸ್ಥಾನದಲ್ಲಿ ಹುಟ್ಟಿದ ಚರ್ ಪ್ರತ್ಯಾಹಾರಬೋಧ್ಯವಾದ ತ್ ಎಂಬುದೇ ಬರುವುದು. ದೇವಾನ್+ತ್+ಸೋಮ ಚೆಯೋದ್ಧಿತೀಯೋಃ ಶರಿ ಪೌಷ್ಕರಸಾದೇಃ (ಪಾ. ಸೂ. ವಾ. ೮-೪-೪೮-೩) ಪೌಷ್ಕರಸಾದಿ ಎಂದು ಆಚಾರ್ಯರ ಹೆಸರು. ಇವರ ಮತದಲ್ಲಿ ಶರ್ ವರ್ಣಗಳ ಹಿಂದೆ ಇರುವ ಚಯ್ ವರ್ಣಗಳಿಗೆ ಆಯಾ ವರ್ಗದ ಎರಡನೇ ವರ್ಣವು ಬರುವುದು ಎಂಬುದರಿಂದ ಸಕಾರ ರೂಪ ಶರ್ ಪ್ರತ್ಯಾಹಾರದ ಹಿಂದೆ ಇರುವ ಶರ್ ಎಂಬ ಚಯ್ ವರ್ಣಕ್ಕೆ ತವರ್ಗದ ಎರಡನೇ ವರ್ಣ ಥ್ ಬರುವುದು ದೇವಾನ್+ಥ್+ಸೋಮ ಎಂದಾಗುವುದು. ಈ ಉಪಪಾದನೆಯು ಪ್ರಕಾರ ದೇವಾನ್ಥ್ಸೋಮಪೀತಯೇ, ಎಂದು ಮಂತ್ರದಲ್ಲಿರಬೇಕು ॥೬॥

॥ ಸಂಹಿತಾಪಾಠಃ ॥

ತಾನ್ಯ॑ಜತ್ರ್ಯಾ॒ ಋತಾ॒ವೃಧೋ॑ ಅ॒ಗ್ನೇ ಪ॒ತ್ನೀ॒ವತ॑ಸ್ಕೃ॒ಧಿ ।
ಮ॒ಧ್ವಃ ಸು॑ಜಿಹ್ವ॒ ಪಾಯ॑ಯ ॥ ೭ ॥

॥ ಪದಪಾಠಃ ॥

ತಾನ್ । ಯ॒ಜ॒ತ್ರಾ॒ನ್ । ಋ॒ತ॒ಽವೃ॒ಧಃ॒ । ಅ॒ಗ್ನೇ॒ । ಪ॒ತ್ನೀ॒ಽವ॑ತಃ । ಕೃ॒ಧಿ॒ ॥
ಮ॒ಧ್ವಃ । ಸು॒ಽಜಿ॒ಹ್ವ॒ । ಪಾ॒ಯ॒ಯ॒ ॥ ೭ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತಾನಿಂದ್ರಾದೀನ್ದೇವಾನ್ಯಜತ್ರಾನ್ಯಜನೀಯಾನ್ ಋತಾವೃಧಃ ಸತ್ಯಸ್ಯ ಯಜ್ಞಸ್ಯ ವಾ ವರ್ಧಕಾನ್ ಪತ್ನೀವತಃ ಪತ್ನೀಯುಕ್ತಾನ್ಕೃಧಿ । ಕುರು । ಹೇ ಸುಜಿಹ್ವ । ಶೋಭನಜಿಹ್ವೋಪೇತ ಮಧ್ವೋ ಮಧುರಸ್ಯ ಸೋಮಸ್ಯ ಭಾಗಂ ದೇವಾನ್ಪಾಯಯ ॥ ಯಜತ್ರಾ । ಅಮಿನಕ್ಷಿಯಜಿಬಂಧಿಪತಿ-ಭ್ಯೋಽತ್ರನ್ । ಉ. ೩-೧೦೫ । ಇತಿ ಯಜೇರತ್ರನ್ಪ್ರತ್ಯಯಃ। ಋತಾವೃಧಃ । ವೃಧುವೃದ್ಧೌ । ಆಂತರ್ಭಾವಿತಣ್ಯರ್ಥಾತ್ ಕ್ವಿಪ್ಚೇತಿ ಕ್ವಿಪ್ । ಅನ್ಯೇಷಾಮಪಿ ದೃಶ್ಯತ ಇತಿ ಪೂರ್ವಪದಸ್ಯ ದೀರ್ಘತ್ವಂ । ವೃದ್ಧೇರ್ಧಾತುಸ್ವರಃ । ಸಮಾಸೇ ಕೃದುತ್ತರಪದಪ್ರಕೃತಿಸ್ವರತ್ವಂ । ಅಗ್ನೇ । ಪಾದಾದಿತ್ವಾನ್ನಾಮಂತ್ರಿತನಿಘಾತಃ। ಷಾಷ್ಠಿಕಮಾದ್ಯುದಾತ್ತತ್ವಂ । ಪತ್ನೀವತಃ । ಪತ್ಯುರ್ನೋ ಯಜ್ಞಸಂಯೋಗೇ । ಪಾ. ೪-೧-೩೩ । ಇತಿ ಙೀಪ್ । ಇಕಾರಸ್ಯ ಚ ನಕಾರಃ । ತಾ ಏಷಾಂ ಸಂತೀತಿ ಮತುಪ್ । ಛಂದಸೀರ ಇತಿ ವತ್ವಂ । ಪತಿಶಬ್ದೋ ಡತಿಪ್ರತ್ಯಯಾಂತತ್ವಾದಾದ್ಯುದಾತ್ತಃ । ಙೀಮ್ಮತುಪೋರನುದಾತ್ತತ್ವಾತ್ಸ ಏವ ಶಿಷ್ಯತೇ । ಕೃಧಿ । ಕೃಞೋ ಲೋಟಃ ಸಿಃ । ಸೇರ್ಧ್ಯಪಿಚ್ಚೇತಿ ಹಿಃ । ಬಹುಲಂ ಛಂದಸೀತಿ ವಿಕರಣಲುಕ್ । ಶ್ರುಶೃಣು-

ಸ್ಯಾಕೃವೃಭ್ಯಶ್ಛಂದಸಿ । ಪಾ. ೬-೪-೧೦೨ । ಇತಿ ಹೇರ್ಧಿರಾದೇಶಃ । ಜ್ಞಾತ್ವಾದ್ಗುಣಾಭಾವಃ । ಮಧ್ವಃ । ಉಕ್ತಂ । ಸುಜಿಹ್ವ । ಆಮಂತ್ರಿತ ನಿಘಾತಃ । ಪಾಯಯೇಯ । ಪಾಪಾನೇ । ಪಿಬಂತಂ ಪ್ರಯುಂಕ್ತ ಇತಿ ಹೇತುಮತಿ ಚೇತಿ ಣಿಚ್। ಶಾಘಾಸಾಹ್ವಾವ್ಯಾವೇಪಾಂ ಯುಕ್। ಪಾ.೭-೩-೩೭ । ಇತಿ ಯುಕ್ । ಪೂರ್ವ-ಸ್ಯಾಮಂತ್ರಿತಸ್ಯಾವಿದ್ಯಮಾನವತ್ತ್ವಂ । ಅತ ಏವಾನ್ಯವಧಾಯಕತ್ವಾನ್ನೈಘ್ಯ ಇತ್ಯಪೇಕ್ಷ್ಯ ತಿಙ್ಙತಿಙ ಇತಿ ನಿಘಾತಃ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ, । **ಯೆಜತ್ರಾನ್**—ಪೂಜಾರ್ಹರಾದ । **ಪತ್ನೀವತಃ**—ಪತ್ನಿಯೊಡಗೂಡಿದ **ತಾನ್**—ಆ ಇಂದ್ರಾದಿದೇವತೆಗಳನ್ನು । **ಋತಾವೃಧಃ**—ಯಜ್ಞವನ್ನು (ಸತ್ಯವನ್ನು) ವೃದ್ಧಿಪಡಿಸುವವರಾಗಿ । **ಕೃಧಿ**—ಮಾಡು । **ಸುಜಿಹ್ವ**—ಪ್ರಕಾಶಮಾನವಾದ ನಾಲಿಗೆಯುಳ್ಳ ಅಗ್ನಿಯೇ । **ಮಧ್ವಃ**—ಮಧುರನಾದ ಸೋಮರಸವನ್ನು । **ಪಾಯಯೇ**—(ಅವರಿಗೆ) ಕುಡಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಇಂದ್ರಾದಿ ದೇವತೆಗಳು ಪೂಜಾರ್ಹರು. ಸಪತ್ನೀಕರಾದ ಅವರನ್ನು ಕರೆತಂದು ನಮ್ಮ ಯಜ್ಞವು ಬೆಳೆಯುವಂತೆ ಸಹಾಯಮಾಡು. ಮಾಧುರ್ಯವನ್ನು ಸವಿಯಬಲ್ಲ ನಾಲಿಗೆಯುಳ್ಳ ಎಲೈ ಅಗ್ನಿಯೇ ಮಧುರವಾದ ಸೋಮರಸವನ್ನು ಇಂದ್ರಾದಿದೇವತೆಗಳಿಗೂ ಕುಡಿಸು.

English Translation.

O sweet tongued Agni, put those adorable gods with their wives here and make them drink of the sweet Soma

॥ ವಿಶೇಷವಿಷಯಗಳು ॥

ಯೆಜತ್ರಾನ್—ಯೆಜನೀಯಾನ್—ಪೂಜಾರ್ಹರು.

ಪತ್ನೀವತಃ—ಪತ್ನಿಯರಿಂದ ಸಹಿತರಾದವರು.

ಋತಾವೃಧಃ—ಋತಸ್ಯ ಸತ್ಯಸ್ಯ ವಾ ಯಜ್ಞಸ್ಯ ವರ್ಧಕಾನ್-ಯಜ್ಞಕರ್ಮವನ್ನು ವೃದ್ಧಿಗೊಳಿಸುವವರು. ನಿರ್ವಿಘ್ನವಾಗಿ ನಡೆಯುವಂತೆ ಮಾಡುವವರು.

ಮಧ್ವಃ—ಎಂದರೆ ಸೋಮರಸದ ಎಂದರ್ಥ. ಇದಕ್ಕೆ ಭಾಗಂ ಎಂಬ ಶಬ್ದವನ್ನು ಅಧ್ಯಾಹಾರಮಾಡಿ ಸೇರಿಸಿದರೆ ಸೋಮರಸದ ಭಾಗವನ್ನು ಎಂದರ್ಥವಾಗುವುದು.

॥ ವ್ಯಾಕರಣಪ್ರಕ್ರಿಯಾ ॥

ಯಜತ್ರಾನ್—**ಅಮಿನಕ್ಷಿಯಜಿವಧಿಪತಿಭ್ಯೋಽತ್ರನ್** (ಉ. ಸೂ. ೩-೩೮೫) ಅಮು ಗತ್ಯಾದಿಷು, **ನಕ್ಷ ಗತೌ**, ಯಜ ದೇವಪೂಜಾದೌ, ವಧ ಹಿಂಸಾಯಾಂ, ಪತ್ಲೃ ಗತೌ ಈ ಧಾತುಗಳ ಮುಂದೆ ಅತ್ರನ್ ಪ್ರತ್ಯಯ ಬರುವುದು ಎಂಬುದರಿಂದ ಯಜ ಧಾತುವಿನ ಮುಂದೆ ಅತ್ರನ್ ಪ್ರತ್ಯಯ. ಪ್ರತ್ಯಯವು ನಿತ್ತ್ವಾದ್ದರಿಂದ ಯಜತ್ರ ಎಂಬುದು ನಿತ್ಸ್ವರದಿಂದ ಆದ್ಯುದಾತ್ತ. ದ್ವಿತೀಯಾ ಬಹುವಚನದಲ್ಲಿ ಯಜತ್ರಾನ್ ಎಂದಾಗುವುದು. **ಸಂಹಿತಾ** ಕಾಲದಲ್ಲಿ ಋಕಾರ ಪರದಲ್ಲಿರುವಾಗ **ದೀರ್ಘಾದಟಿಸಮಾನಪಾದೇ** (ಪಾ. ಸೂ. ೮-೩-೯) ಎಂಬುದರಿಂದ ನಕಾರಕ್ಕೆ ರುತ್ವ. **ಅತೋಽಟಿನಿತ್ಯಂ** (ಪಾ. ಸೂ. ೮-೩-೩) ಎಂಬುದರಿಂದ ಆಕಾರಕ್ಕೆ ಅನುನಾಸಿಕ ಆಕಾರ.

ಋತಾವೃಧಃ—ಋತಂ ವರ್ಧಯನ್ತಿ ಎಂಬ ಅರ್ಥದಲ್ಲಿ ಋತಶಬ್ದೋಪಪದಕವಾಗಿ ಅಂತರ್ಭಾವಿತ ಣಿಚ್ ಪ್ರತ್ಯಯಾಂತವಾದ ವೃಧುಧಾತುವಿನ ಮುಂದೆ **ಕ್ವಿಪ್‌ಚೌ** (ಪಾ. ಸೂ. ೩-೨-೭೬) ಎಂದು ಕ್ವಿಪ್ ಪ್ರತ್ಯಯ, ಸುಪ್ಪಿಗೆ ಲುಕ್. **ಅನ್ಯೇಷಾಮಪಿದೃಶ್ಯತೇ** (ಪಾ. ಸೂ. ೬-೩-೧೩೭) ಎಂಬ.ದರಿಂದ ಋತ ಎಂಬ ಪೂರ್ವಪದಕ್ಕೆ ದೀರ್ಘ. ದ್ವಿತೀಯಾ ಬಹುವಚನಾಂತ. ಋತಾವೃಧಃ ಎಂಬಲ್ಲಿ **ಧಾತೋಃ** (ಪಾ. ಸೂ. ೩-೧-೧೯) ಎಂಬುದರಿಂದ ಅಂತೋದಾತ್ತಸ್ವರ ಬರುವುದು. ಸಮಾಸ ಬಂದಮೇಲೆ ಕೃದುತ್ತರಪದಪ್ರಕೃತಿಸ್ವರ ಬಂದು ಆದೇ ಸ್ವರ ನಿಲ್ಲುವುದು.

ಅಗ್ನೇ—ಇದು ಪಾದಾದಿಯಲ್ಲಿರುವುದು. ಆದ್ದರಿಂದ **ಆಮನ್ತ್ರಿತಸ್ಯಚ** (ಪಾ. ಸೂ. ೮-೧-೧೯) ಎಂಬ ಎಂಟನೇ ಅಧ್ಯಾಯದ ಸೂತ್ರದಿಂದ ಅನುದಾತ್ತ ಬರುವುದಿಲ್ಲ. **ಆಮನ್ತ್ರಿತಸ್ಯಚ** (ಪಾ. ಸೂ. ೬-೧-೧೯೮) ಎಂಬ ಆರನೇ ಅಧ್ಯಾಯದ ಸೂತ್ರದಿಂದ ಆದ್ಯುದಾತ್ತ ಬರುವುದು.

ಪತ್ನೀವತಃ—**ಪತ್ಯುರ್ನೋ ಯಜ್ಞಸಂಯೋಗೇ** (ಪಾ. ಸೂ. ೪-೧-೩೩) ಸ್ತ್ರೀಲಿಂಗದಲ್ಲಿ ಯಜ್ಞ ಸಂಬಂಧ ತೋರುವಾಗ ಪತಿಶಬ್ದದ ಕೊನೆಯ ವರ್ಣಕ್ಕೆ ನಕಾರದೇಶವು ಬರುವುದು ಎಂಬುದರಿಂದ ಇಕಾರಕ್ಕೆ ನಕಾರಾದೇಶ. ಪತ್ನ್ ಈಗ ನಾಂತವಾದ್ದರಿಂದ **ಋನ್ನೇಭ್ಯೋ ಙೀಸ್** (ಪಾ. ಸೂ. ೪.೧-೫) ಸ್ತ್ರೀಲಿಂಗದಲ್ಲಿ ಋಕಾರಾಂತ ನಕಾರಾಂತ ಶಬ್ದಗಳ ಮುಂದೆ ಙೀಪ್ ಬರುವುದು ಎಂಬುದರಿಂದ ಙೀಪ್ ಬರುವುದು ಪತ್ನೀ ಎಂದಾಗುವುದು. ವೇದಾಭ್ಯಾಸದಲ್ಲಿ **ಪ್ರತ್ಯುರ್ನೋ ಯಜ್ಞಸಂಯೋಗೇ** (೪-೧-೩೩) ಎಂಬುದಕ್ಕೆ ಸ್ತ್ರೀಲಿಂಗದಲ್ಲಿ ಪತಿಶಬ್ದದ ಮುಂದೆ ಙೀಪ್ ಬರುವುದು. ಇಕಾರಕ್ಕೆ ನಕಾರವೂ ಬರುವುದು ಎಂದು ಈ ಸೂತ್ರಕ್ಕೆ ಅರ್ಥವರ್ಣನೆ ಇರುವುದು. ಈ ಪಕ್ಷದಲ್ಲಿ ವಿಧೇಯ ಭೇದದಿಂದ ವಾಕ್ಯಭೇದಾದಿದೋಷಗಳು ಬರುವುದರಿಂದ ವಿಕ್ಕ ವೈಯ್ಯಾಕರಣರು ಈ ಅರ್ಥವನ್ನು ಒಪ್ಪುವುದಿಲ್ಲ. ಇಲ್ಲಿ ಸ್ವರ್ಗಕಾಮೋ ಯಜೇತ ಇತ್ಯಾದಿ ಶ್ರುತಿಗಳಲ್ಲಿ ಸ್ವರ್ಗಕಾಮಃ ಎಂದು ಪುಲ್ಲಿಂಗವೇ ಇರುವುದು. ಆದ್ದರಿಂದ ಯಾಗಾನುಷ್ಠಾನವೂ, ಅದರಿಂದ ಉಂಟಾಗುವ ಫಲಾನುಭವವೂ, ಪುರುಷನಿಗೆ ಬರುವುದು. ಆದ್ದರಿಂದ ಯಜ್ಞಸಂಬಂಧವು ಸ್ತ್ರೀಗೆ ಹೀಗೆ? ಯಜ್ಞಸಂಬಂಧವಿಲ್ಲದಿದ್ದರೆ, ಯಜ್ಞಸಂಯೋಗೇ ಎಂದು ನಕಾರ ವಿಧಿಯು ಹೇಗೆ ಸರಿಹೋಗುವುದು? ಎಂದರೆ ಯಾಗದಲ್ಲಿ ದಂಪತಿಗಳಿಗೇ ಅಧಿಕಾರವು. ಪುರುಷನಾದಾಗ್ಯೂ ವಿಧುರನಿಗೆ ಯಾಗಾನುಷ್ಠಾನದಲ್ಲಿ ಅಧಿಕಾರವಿಲ್ಲ. ಇದೇ ಸೂತ್ರದಲ್ಲಿ ಕೈಯ್ಯಟದಲ್ಲಿ ಪತ್ನಾ ಶ್ಚ ದಂಪತ್ಯೋಸ್ಸಹಾಧಿಕಾರಾದ್ಯಜ್ಞೇ ತದಧಿಕಾರಾತ್ಕರ್ತೃತ್ವಾತ್ತತ್ಫಲಸಂಬಂಧಾದ್ಯಜ್ಞಸಂಯೋಗಃ, ಎಂದುನಿರೂಪಿತವಾಗಿರುವುದು. ಪೂರ್ವಮೀಮಾಂಸೆಯಲ್ಲಿಯೂ ಆರನೇ ಅಧ್ಯಾಯ ಮೊದಲನೇ ಪಾದದಲ್ಲಿ ಲಿಂಗ ವಿಶೇಷನಿರ್ದೇಶಾತ್ಪುಂಯುಕ್ತ್ವೈತಿಶಾಯನಃ ಎಂಬ ಅಧಿಕರಣದಲ್ಲೂ ಸ್ವವಚೋಸ್ತುವಚನಾದ್ಯೈಕರ್ಮ್ಯಂಸ್ಯಾತ್ ಎಂಬ ಅಧಿಕರಣದಲ್ಲಿಯೂ ಸಹ ದಂಪತಿಗಳಿಗೆ ಸಹಾಧಿಕಾರವು ಸ್ಥಾಪಿತವಾಗಿರುವುದು 'ಪತಿಶಬ್ದೋಯಮೈಶ್ವರ್ಯ-

ವಾಚಿ ಎಂದು ಮಹಾಭಾಷ್ಯದಲ್ಲಿ ಈ ಸೂತ್ರದ ಪತಿಶಬ್ದವು ಐಶ್ವರ್ಯಾರ್ಥಕವೆಂದು ನಿರೂಪಿತವಾಗಿರುವುದು ಆಗ ಯಜ್ಞಸಂಯೋಗೇ ಎಂಬುದು ಸತಿಸಪ್ತಮಿಯಾ. ಯಜ್ಞಸಂಬಂಧವಿರಲಾಗಿ ಪ್ರತ್ಯಾಸತ್ಯಾ ಆ ಯಜ್ಞದಿಂದ ಉಂಟಾಗುವ ಯಾವ ಐಶ್ವರ್ಯವಿದೆಯೋ ಆ ಐಶ್ವರ್ಯವಾಚಕವಾದ ಪತಿಶಬ್ದಕ್ಕೆ ಸ್ತ್ರೀಲಿಂಗದಲ್ಲಿ ನಕಾರಾದೇಶ ಬರುವುದು ಎಂದು ಸೂತ್ರಾರ್ಥವು ಏರ್ಪಡುವುದು. ಪತ್ನ್ಯಃ ಏಷಾಂ ಸನ್ತಿ ಎಂದು ವಿಗ್ರಹ ಮಾಡಿದರೆ **ತೆದಿಷ್ಯಾಸ್ತ್ಯಸ್ತಿನ್ಮಿತಿ ಮತುಪ್** (ಪಾ. ಸೂ. ೫-೨-೯೪) ಎಂಬುದರಿಂದ ಮತುಪ್ ಬರುವುದು. ಮಕಾರಕ್ಕೆ ಛಂದೆಸೀರಃ (ಪಾ. ಸೂ. ೮-೨-೧೫) ಎಂಬುದರಿಂದ ವಕಾರ. ಪತ್ನೀವತ್ ಎಂದಾಯ್ತು. **ಪಾತೇರ್ಡತಿಃ** (ಉ. ಸೂ. ೪-೪೭) ಎಂಬುದರಿಂದ ಪತಿಶಬ್ದ ಡತಿಪ್ರತ್ಯಯಾಂತ. ಆದ್ದರಿಂದ ಪ್ರತ್ಯಯಸ್ವರದಿಂದ ಆದ್ಯುದಾತ್ತ, ಜೀಪ್ ಮತುಪ್ ಎರಡೂ ಪಿತ್ತಾದ್ದರಿಂದ **ಅನುದಾತ್ತೌ ಸುಪ್ಪಿತೌ** (ಪಾ. ಸೂ. ೩-೧-೪) ಎಂಬುದರಿಂದ ಅನುದಾತ್ತ. ಆದ್ಯುದಾತ್ತವೇ ನಿಲ್ಲುವುದು. ದ್ವಿತೀಯಾಬಹುವಚನದಲ್ಲಿ ಪತ್ನೀವತಃ ಎಂದಾಗುವುದು.

ಕೃಧಿ—ಡುಕೃಞ್ ಕರಣೇ ಧಾತು. ಲೋಟ್, ಅದಕ್ಕೆ ಮಧ್ಯಮಪುರುಷ ಏಕವಚನ ಸಿಪ್. **ಸೇರ್ಧ್ಯಪಿಚ್ಚೇ** (ಪಾ ಸೂ. ೩-೪-೮೭) ಎಂಬುದರಿಂದ ಸಿಗೆ ಹಿ ಆದೇಶ. **ತೆನಾದಿಕೃಞ್ಭ್ಯ ಉಃ** (ಪಾ. ಸೂ. ೩-೧-೭೯) ಎಂಬುದರಿಂದ ಬಂದ ಉ ವಿಕರಣಕ್ಕೆ **ಬಹುಲಂ ಛಂದೆಸಿ** (ಪಾ- ಸೂ. ೯-೪-೭೩) ಎಂಬುದರಿಂದ ಲುಕ್. **ಶ್ಲುಶ್ನಣುಸ್ನೇಕೃವೃಭ್ಯಶ್ಚಂದೆಸಿ** (ಪಾ. ಸೂ. ೬-೪-೧೦೨) ಇವುಗಳ ಮುಂದೆ ಇರುವ ಹಿ ಗೆ ಧಿ ಆದೇಶ ಬರುವುದು ಎಂಬುದರಿಂದ ಹಿಗೆ ಧಿ ಆದೇಶ. **ಸಾರ್ವಧಾತುಕಮಪಿತ್** (ಪಾ. ಸೂ. ೧-೨-೪) ಎಂಬುದರಿಂದ ಪ್ರತ್ಯಯ ಙಿತ್. **ಕ್ಙಿತಿಚೆ** (ಪಾ. ಸೂ. ೧-೧-೫) ಎಂಬುದರಿಂದ ಗುಣಕ್ಕೆ ನಿಷೇಧ. ಕೃಧಿ ಎಂದಾಗುವುದು. **ತಿಙ್ಙತಿಙಃ** ಎಂಬುದರಿಂದ ಸರ್ವಾನುದಾತ್ತ.

ಮಧ್ವಃ—೧೩. ಸೂ. ೨ ಋಕ್ಕಿನಲ್ಲಿ ಮಧುಶಬ್ದವು ಆದ್ಯುದಾತ್ತವೆಂದು ಪ್ರತಿಪಾದಿತವಾಗಿರುವುದು. ಅದು ನಪುಂಸಕಲಿಂಗವಾದರೂ ಇಲ್ಲಿ ವ್ಯತ್ಯಯದಿಂದ ಪುಲ್ಲಿಂಗ. ಅದರ ಮುಂದೆ ಷಷ್ಠೀಏಕವಚನ ಙಸ್. ಮಧುಶಬ್ದಕ್ಕೆ **ಶೇಷೋಘ್ಯಸಖಿ** (ಪಾ. ಸೂ. ೧-೪-೭) ಸಖಿ ಶಬ್ದವನ್ನುಳಿದು ನದೀಸಂಜ್ಞೆಯನ್ನು ಹೊಂದದೇ ಇರುವ ಹ್ರಸ್ವ ಇ ಉ ವರ್ಣಾಂತ ಶಬ್ದಗಳು ಘಿ ಸಂಜ್ಞೆಯನ್ನು ಹೊಂದುವುವು ಎಂಬುದರಿಂದ ಘಿ ಸಂಜ್ಞೆ ಇರುವುದು. ಆದ್ದರಿಂದ **ಘೇರ್ಙಿತಿ** (ಪಾ. ಸೂ. ೭-೩-೧೧) ಙಿತ್ತಾದ ಸುಪ್ಪು ಪರದಲ್ಲಿರುವಾಗ ಘಿ ಸಂಜ್ಞೆಯನ್ನು ಹೊಂದಿರುವ ಅಂಗಕ್ಕೆ ಗುಣ ಬರುವುದು ಎಂಬುದರಿಂದ ಗುಣವು **ಪ್ರಾಪ್ತ**ವಾಗುವುದು. ಆದರೂ **ಸಂಜ್ಞಾಪೂರ್ವಕೋವಿಧಿರನಿತ್ಯಃ** (ಪರಿಭಾಷಾ) ಎಂಬುದರಿಂದ ಗುಣ ಬರುವುದಿಲ್ಲ. ಯಣಾದೇಶ, ರುತ್ವ, ವಿಸರ್ಗ. ಮಧ್ವಃ ಎಂದಾಗುವುದು.

ಸುಜಿಹ್ವ— ಅಮನ್ತ್ರಿತಾನುದಾತ್ತ ಬರುವುದು.

ಪಾಯಯೇ- ಪಾ ಪಾನೇ, ಧಾತು. ಪಿಬಂತಂ ಪ್ರಯುಙ್ಕ್ತೇ=(ಕುಡಿಯುತ್ತಿರುವನನ್ನು ಪ್ರೇರಿಸುವವನು) ಎಂದು ವಿವಕ್ಷಿಸಿದಾಗ ಹೇತುಮತಿಚೆ (ಪಾ. ಸೂ. ೩-೧-೨೬) ಎಂಬುದರಿಂದ ಣಿಚ್ **ಶಾಚ್ಛಾಸಾಹ್ವಾವ್ಯಾವೇಪಾಯ್ಯುಕ್** (ಪಾ.ಸೂ. ೭-೩-೩೭) ಶೋ ತನೂಕರಣೇ, ಛೋ ಛೇದನೇ, ಸೋಽನ್ತಕರ್ಮಣಿ, ಹ್ವೇಞ್ ಸ್ಪರ್ಧಾಯಾಂ, ವ್ಯೇಞ್ ಸಂವರಣೇ, ವೇಞ್ ತಸ್ತುಸಂತಾನೇ, ಪಾ ಪಾನೇ, ಈ ಧಾತುಗಳಿಗೆ ಣಿ ಪ್ರತ್ಯಯ ಪರದಲ್ಲಿರುವಾಗ ಯುಗಾಗಮ ಬರುವುದು ಎಂಬುದರಿಂದ ಪಾ ಗೆ ಯುಗಾಗಮ ಪಾಯ್+ಇ ಎಂದಾಯ್ತು. ಪಾ ರಕ್ಷಣೇ ಅದಾದಿ ಲುಗ್ವಿಕರಣ, ಪಾಪಾನೇ ಭ್ವಾದಿ ಅಲುಗ್ವಿಕರಣ, ಈ ಎರಡು ಧಾತುಗಳು ಯದ್ಯಪಿ ಇರುವುವು. **ಲುಗ್ವಿಕರಣಾಲುಗ್ವಿಕರಣಯೋರಲುಗ್ವಿಕರಣಸ್ಯ** (ಪರಿಭಾ ೯೩) ಲುಗ್ವಿಕರಣಕ್ಕೂ ಅಲುಗ್ವಿಕರಣಕ್ಕೂ

ಗ್ರಹಣ ಪ್ರಾಪ್ತವಾದರೆ ಅಲುಗ್ವಿಕರಣಕ್ಕೇ ಗ್ರಹಣ ಬರುವುದು ಎಂಬುದರಿಂದ ಭ್ವಾದಿಧಾತುವಿಗೇ ಗ್ರಹಣ ಬರುವುದು. ಪಾಯು ಎಂಬುದರ ಮುಂದೆ ಲೋಟ್, ಆದಕ್ಕೆ ಸಿಪ್ ವಿಕರಣ, ಶಪ್ ಗುಣ, ಆಯಾದೇಶ, ಸಿ ಗೆ ಹಿ ಆದೇಶ, ಆದಕ್ಕೆ ಲುಕ್, ಪಾಯಯ ಎಂದಾಗುವುದು. ಇದರ ಹಿಂದೆ ಇರುವ ಸುಜಿಹ್ವ ಎಂಬ ಆಮಂತ್ರಿತಕ್ಕೆ **ಆಮನ್ತ್ರಿತಂಪೂರ್ವಮವಿದ್ಯಮಾನವತ್** (ಪಾ. ಸೂ. ೮-೧-೭೨) ಎಂಬುದರಿಂದ ಅವಿದ್ಯಮಾನವದ್ಭಾವ ಬರುವುದು. ಇದಕ್ಕೆ ಅವಿದ್ಯಮಾನವದ್ಭಾವ ಬರುವುದರಿಂದಲೇ ಇದು ನ್ಯವಧಾಯಕವಾಗುವುದಿಲ್ಲ. ಆದ್ದರಿಂದ ಮಧ್ವಃ ಎಂಬ ಪದವನ್ನು ನಿಮಿತ್ತ ಮಾಡಿಕೊಂಡು **ತಿಙ್ಶಿತಿಜಿಃ** (ಪಾ. ಸೂ. ೮-೧-೭೧) ಎಂಬುದರಿಂದ ಸರ್ವಾನುದಾತ್ತ ಬರುವುದು ॥ ೬ ॥

॥ ಸಂಹಿತಾಪಾಠಃ ॥

ಯೇ ಯಜತ್ರಾ ಯ ಈಡ್ಯಾಸ್ತೇ ತೇ ಪಿಬಂತು ಜಿಹ್ವಯಾ ।
ಮಧೋರಗ್ನೇ ವಷಟ್ಕೃತಿ ॥ ೮ ॥

॥ ಪದಪಾಠಃ ॥

ಯೇ । ಯಜತ್ರಾಃ । ಯೇ । ಈಡ್ಯಾಃ । ತೇ । ತೇ । ಪಿಬಂತು । ಜಿಹ್ವಯಾ ॥
ಮಧೋಃ । ಅಗ್ನೇ । ವಷಟ್ಕೃತಿ ॥

॥ ಸಾಯಣಭಾಷ್ಯಂ ॥

ಯೇ ದೇವಾ ಯಜತ್ರಾ ಯಷ್ಟವ್ಯಾಃ । ಕಥಾ ಯೇ ದೇವಾ ಈಡ್ಯಾಃ ಸ್ತುತ್ಯಾಃ । ತೇ ಸರ್ವೇ ಽಪಿ ವಷಟ್ಕೃತಿ ವಷಟ್ಕಾರಕಾಲೇ ವಷಟ್ಕಾರಯುಕ್ತೇ ಯಾಗೇ ವಾ ಹೇ ಅಗ್ನೇ ತೇ ತ್ವದೀಯಯಾ ಜಿಹ್ವಯಾ ಮಧೋರ್ಮಧುರಸ್ಯ ಸೋಮಸ್ಯ ಭಾಗಂ ಪಿಬಂತು ॥ ಯಜತ್ರಾಃ । ಗತಂ । ಈಡ್ಯಾಃ । ಈಡಸ್ತುತೌ । ಋಹಲೋರ್ಣ್ಯತ್ । ತಿಶ್ಚಿತ್ಸ್ವರಿತೇ ಪ್ರಾಪ್ತೇ ಈಡವಂದವೃಶಂಸದುಹಾಂ ಣ್ಯತ ಇತ್ಯಾದ್ಯುದಾತ್ತತ್ವಂ । ದ್ವಿತೀಯಸ್ಯ ತೇಶಬ್ದಸ್ಯ ಯುಷ್ಮದಾದೇಶಸ್ಯ ಸರ್ವಾನುದಾತ್ತತ್ವಂ । ಮಧೋಃ । ಉಪ್ರತ್ಯಯಸ್ಯ ನಿತ್ತ್ವಾದಾದ್ಯುದಾತ್ತತ್ವಮುಕ್ತಂ । ಅಗ್ನೇ । ಆಮಂತ್ರಿತನಿಘಾತಃ । ವಷಟ್ಕೃತಿ । ಕರೋತೇಃ ಸಂಹಿತಾದಿಭ್ಯೋ ಭಾವೇ ಕ್ವಿಪ್ । ವಷಡಿತ್ಯಸ್ಯ ಕರಣಂ ಯಸ್ಮಿನ್ಯಾಗ ಇತಿ ಬಹುವ್ರೀಹಿಃ । ವಷಡಿತ್ಯಸ್ಯ ವಿಪ್ರಕೃತ್ವಾದಾದ್ಯುದಾತ್ತತ್ವಂ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ಆಗ್ನೇ—ಎಲೈ ಅಗ್ನಿಯೇ, । **ಯೇ**—ಯಾವ ದೇವತೆಗಳು । **ಯಜಿಷ್ಠಾಃ**— ಯಜ್ಞಭಾಗಾರ್ಹರೋ (ಮತ್ತು ಹಾಗೆಯೇ) । **ಯೇ**—ಯಾವ ದೇವತೆಗಳು । **ಈಡ್ಯಾಃ**—ಸ್ತುತಿಪಾತ್ರರೋ । **ತೇ**—ಅವರೆಲ್ಲರೂ । **ವಷಟ್‌ಕೃತಿ**—ಯಜ್ಞದ ವಷಟ್ಕಾರಕಾಲದಲ್ಲಿ (ಆಹುತಿಪ್ರದಾನಕಾಲದಲ್ಲಿ) । **ತೇ**— ನಿನ್ನ । **ಜಿಹ್ವಯಾ**—ನಾಲಿಗೆಯಿಂದ (ಅಗ್ನಿಯಲ್ಲಿ ಹೋಮಮಾಡುವುದರಿಂದ)। **ಮಧೋಃ**—ಮಧುರವಾದ ಸೋಮರಸಭಾಗವನ್ನು । **ಪಿಬಂತು**—ಪಾನಮಾಡಲಿ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ಯಾವ ದೇವತೆಗಳು ಯಜ್ಞಭಾಗಾರ್ಹರೋ ಮತ್ತು ಯಾರು ಯಾರು ಸ್ತೋತ್ರಾರ್ಹರೋ ಅವರೆಲ್ಲರೂ ಸಹ ವಷಟ್ಕಾರಪೂರ್ವಕವಾದ ಆಹುತಿಪ್ರದಾನಕಾಲದಲ್ಲಿ ನಿನ್ನ ಮುಖದಿಂದಲೇ ಎಂದರೆ ಅಗ್ನಿಯಲ್ಲಿ ಹೋಮಮಾಡುವುದರಿಂದಲೇ ಮಧುರವಾದ ಸೋಮರಸಭಾಗವನ್ನು ಕುಡಿಯಲಿ.

English Translation.

O Agni, those gods that deserve to be sacrificed and those that deserve to be praised, may they drink of the sweet soma with your tongue as soon as (the word) Vashat is pronounced

॥ ವಿಶೇಷವಿಷಯಗಳು ॥

ಯಜಿಷ್ಠಾಃ—ಯಜನೀಯಾಃ— ಪೂಜಾರ್ಹರು, ಯಜ್ಞಭಾಗಾರ್ಹರು.

ಈಡ್ಯಾಃ—ಸ್ತುತ್ಯರ್ಹರು, ಪ್ರಶಂಸಾರ್ಹರು.

ವಷಟ್ಕೃತಿ—ವಷಟ್ಕಾರಕಾಲದಲ್ಲಿ ಅಥವಾ ವಷಟ್ಕಾರಯುಕ್ತವಾದ ಯಾಗದಲ್ಲಿ, ಯಜ್ಞದಲ್ಲಿ ಕೆಲವು ಮಂತ್ರಗಳಿಂದ ಹೋಮಮಾಡುವಾಗ ಮಂತ್ರಾಂತ್ಯದಲ್ಲಿ ವೌಷಟ್ ಎಂಬ ಶಬ್ದವನ್ನು ಸೇರಿಸಿ ಸ್ವಾಹಾಕಾರವನ್ನು ಉಚ್ಚರಿಸುವಂತೆ ಉಚ್ಚರಿಸುವರು. ಇದಕ್ಕೆ ವಷಟ್ಕೃತಿ ಅಥವಾ ವಷಟ್ಕಾರವೆಂದು ಹೇಳುವರು.

॥ ವ್ಯಾಕರಣಪ್ರಕ್ರಿಯಾ ॥

ಯಜಿಷ್ಠಾಃ—ಹಿಂದಿನ ಮಂತ್ರದಲ್ಲಿ ವ್ಯಾಖ್ಯಾತವಾಗಿರುವುದು.

ಈಡ್ಯಾಃ—ಈಡಸ್ತು ತೌ ಧಾತು, ಹಲಂತ್ಯ. ಋಹಲೋರ್ಣ್ಯತ್ (ಪಾ.ಸೂ ೩-೧-೧೨೪) ಋಕಾರಾಂತ ವ್ಯಂಜನಾಂತವಾದ ಧಾತುಗಳ ಮುಂದೆ ಣ್ಯತ್ ಪ್ರತ್ಯಯ ಬರುವುದು ಎಂಬುದರಿಂದ ಈಡ್ ಧಾತುವಿನ ಮುಂದೆ ಣ್ಯತ್- ಪ್ರತ್ಯಯವು ತಕಾರೇತ್ಸಂಜ್ಞಕ. ಆದ್ದರಿಂದ ತಿತ್ಸ್ವರಿತಂ (ಪಾ. ಸೂ. ೬-೧-೧೮೫) ಎಂಬುದರಿಂದ ಸ್ವರಿತವು ಪ್ರಾಪ್ತವಾಗುವುದು. ಆದರೂ ಅದನ್ನು ಬಾಧಿಸಿ ಈಡವನ್ದೇವ್ಯಶಂಸದುಹಾಂಣ್ಯತಃ (ಪಾ. ಸೂ.

६-८-३८) ण्यत् प्रत्ययान्तवाद ईः धातुगळ आदियु उदात्तवागुवुदु एंबुदरिंद ईड्य एंबल्लि आद्युदात्त बरुवुदु.

तेः— तच्छब्दद मुंदे ङस्. त्यदादीनामः (पा. सू. ७-३-८०३) विभक्ति परवल्लिरुवाग त्यदादिगणपठितशब्दगळ कॊनेय वर्णक्के अकारादेश बरुवुदु एंबुदरिंद तद् शब्दद दकारक्के अकार. अतोगुणे (पा. सू. ६-८-९३) एंबुदरिंद पररूप. ङसश्शी (पा. सू. ७-८-८७) अवर्णान्तवाद सर्वनाम शब्दद मुंदे इरुव ङस्सिगे शी आदेश बरुत्ते एंदु शी आदेश. शीयु अनेकाल्लाद्दरिंद अनेकाल् शित्सर्वस्य (पा.सू. ८-८-४४) एंबुदरिंद सर्वादेश वागि बरुवुदु. अद्युग्णः (पा. सू. ६-८-७७) एंबुदरिंद गुण, तेः एंदागुवुदु. फिषोन्त्य उदात्तः (फि.सू. ८) एंबुदरिंद तच्छब्द अन्योदात्त. पररूप गुण ई एरडु एकादेशगळु. एकादेश उदात्तेनोदात्तः, एंबुदरिंद उदात्त.

तेः—इदु षष्ठीविभक्तिएकवचनान्तवाद युष्मद् शब्दद तव, एंबुदक्के आदेशवागि बंदिरुवुदु. आद्दरिंद इदु सर्वानुदात्त.

मधोः—उप्रत्ययवु अतिदेशदिंद निमित्तागुवुदरिंद मधु शब्दवु आद्युदात्तवेंदु सू. ८३.४४. ३रल्लि प्रतिपादितवागिरुवुदु. इदु व्यत्ययदिंद इल्लिपुल्लिंग. षष्ठी एकवचनद ङिस्सन्निट्परे ष्यङ शेषोसखि एंबुदरिंद फि संज्ञे इरुवुदरिंद ष्येर्ङिति, एंबुदरिंद गुण. उकारक्के ओकार बरुवुदु. ङसिङसोश्च (पा. सू. ६-८-८८०) ए ओ गळ मुंदे ङसि, ङस् इवुगळ अकारविद्दरे पूर्वरूपवु एकादेशवागि बरुवुदु एंबुदरिंद पूर्वरूपै रुत्व विसर्गगळु

अग्ने—अप्वमिकसूत्रदिंद आमन्त्रितानुदात्त बरुवुदु.

वषट्कृति—संपेदादिभ्यः क्विप् (पा. सू. ३-३-८०९-९) एंबुदरिंद भावार्थदल्लि कृञ् धातुविन मुंदे क्विप् बरुवुदु. क्विप्पु पित्ताद कृत्ते आद्दरिंद अदु परवागिरुवाग ह्रस्वस्यपितिकृतितुक् एंबुदरिंद कृगे तुगागमु बरुवुदु- कृत् एंदागुवुदु. वषट्यः कृत् यस्मिन् सः, यावव यागदल्लि वषट् एंबुदक्के कारणविदेयो अदु बहुव्रीहौ प्रकृत्या पूर्वपदं एंबुदरिंद पूर्वपद प्रकृतिस्वर बरुवुदु. वषट् एंब पूर्वपदवु निपात. आद्दरिंद निपाता आद्युदात्ताः (फि. सू. ९०) एंबुदरिंद आद्युदात्त. सप्तम्यामेकवचनदल्लि वषट्कृति एंदागुवुदु ॥९॥

॥ संहितापाठः ॥

आक्तेꣳ सूर्यस्य रोचनाद्विश्वान्देवाँ उषर्बुधः ।
विप्रो होतेह वक्षति ॥ ९ ॥

॥ ಪದಪಾಠಃ ॥

ಆ । ಕೀಂ । ಸೂರ್ಯಸ್ಯ । ರೋಚನಾತ್ । ವಿಶ್ವಾನ್ । ದೇವಾನ್ । ಉಷಃಬುಧಃ ॥
ವಿಪ್ರಃ । ಹೋತಾ । ಇಹ । ವಕ್ಷತಿ ॥ ೯ ॥

॥ ಸಾಯಣಭಾಷ್ಯಂ ॥

ವಿಪ್ರೋ ಮೇಧಾವೀ ಹೋತಾ ಹೋಮನಿಷ್ಪಾದಕೋಽಗ್ನಿರುಷರ್ಬುಧ ಉಷಃಕಾಲೇ ಯಾಗಗಮನಾಯ ಪ್ರಬುಧ್ಯಮಾನಾನ್ವಿಶ್ವಾನ್ದೇವಾನ್ಸೂರ್ಯಸ್ಯ ಸಂಬಂಧಿನೋ ರೋಚನಾತ್ಸ್ವರ್ಗಲೋಕಾದಿಹ ಕರ್ಮಣ್ಯಾಕೀಂ ವಕ್ಷತಿ। ಆವಹತು ॥ ಆಕೀಂ। ನಿಪಾತ ಆದ್ಯುದಾತ್ತಃ । ಸೂರ್ಯಸ್ಯ । ಸೂರ್ಯಶಬ್ದೋ ರಾಜಸೂಯೆಸೂರ್ಯೇತ್ಯಾದಿನಾ । ಪಾ- ೩. ೧. ೧೧೪ । ಕ್ಯಪ್ರತ್ಯಯೋಂತೋ ನಿಪಾತಿತಃ । ಕ್ಯಪಃ ಪಿತ್ತ್ವಾದ್ಧಾತುಸ್ವರೇಣಾದ್ಯುದಾತ್ತಃ । ರೋಚನಾತ್ । ರೋಚಮಾನಾತ್ । ರುಚ ದೀಪ್ತೌ । ಅನುದಾತ್ತೇತಶ್ಚ ಹಲಾದೇಃ । ಪಾ. ೩-೩-೧೪೯ । ಇತಿ ಕರ್ತರಿ ಯುಚ್ । ಚಿತ ಇತ್ಯಂತೋದಾತ್ತತ್ವಂ । ವಿಶ್ವಾನ್ । ವಿಶೇಃ ಕ್ವನಂತೋ ನಿತ್ತ್ವಾದಾದ್ಯುದಾತ್ತಃ। ಉಷರ್ಬುಧಃ । ಉಷರ್ಬುಧ್ಯಂತ ಇತ್ಯುಷರ್ಬುಧಃ। ಕ್ವಿಪ್ಚೇತಿ ಕ್ವಿಪ್ ಧಾತುಸ್ವರೇಣೋಕಾರ ಉದಾತ್ತಃ । ಸಮಾಸೇ ಕೃದುತ್ತರಪದಪ್ರಕೃತಿಸ್ವರತ್ವಂ । ವಿಪ್ರಃ । ಋಜ್ರೇಂದ್ರೇತ್ಯಾದಿನಾರನ್। ನಿತ್ತ್ವಾದಾದ್ಯುದಾತ್ತಃ । ಹೋತಾ । ಹ್ವಯತೇಸ್ತಾಚ್ಛೀಲ್ಯೇ ತೃನ್ । ಬಹುಲಂ ಛಂದಸೀತಿ ಸಂಪ್ರಸಾರಣಂ । ಪರಪೂರ್ವತ್ವಂ । ಗುಣಃ । ನಿತ್ತ್ವಾದಾದ್ಯುದಾತ್ತಃ । ಇಹ । ಇದೇನೋ ಹ ಇತಿ ಹಪ್ರತ್ಯಯಃ । ಇದಮ ಇಶಿತೀಶ್ । ಶಿತ್ತ್ವಾತ್ಸರ್ವಾದೇಶಃ । ಪ್ರತ್ಯಯಸ್ವರಃ। ವಕ್ಷತಿ । ವಹೇಃ ಪ್ರಾರ್ಥನಾಯಾಂ ಲಿಙರ್ಥೇ ಲೇಟ್। ತಸ್ಯ ತಿಪ್ । ಕರ್ತರಿ ಶಪ್ । ಶಪಿ ಪರತಃ ಸಿಬ್ಬಹುಲಂ ಲೇಟೀತಿ ಸಿಪ್। ಧಶ್ವಕರ್ತ್ವಷತ್ವಾನಿ । ತಿಜ್ಯಾತಿಜ ಇತಿ ನಿಘಾತೇನ ॥

॥ ಪ್ರತಿಪದಾರ್ಥ ॥

ವಿಪ್ರಃ—ಪ್ರಾಜ್ಞನಾದ (ಮತ್ತು) । ಹೋತಾ—ಹೋಮಸಂಪಾದಕನಾದ ಅಗ್ನಿಯು । ಉಷರ್ಬುಧಃ—ಯಾಗ ಗಮನಕ್ಕಾಗಿ ಉಷಃಕಾಲದಲ್ಲಿಯೇ ಎಬ್ಬಿಸಲ್ಪಟ್ಟ । ವಿಶ್ವಾನ್ ದೇವಾನ್—ಎಲ್ಲ ದೇವತೆಗಳನ್ನೂ । ಸೂರ್ಯಸ್ಯ—ಸೂರ್ಯನ । ರೋಚನಾತ್—ದಿವ್ಯಮಂಡಲದಿಂದ ಅಥವಾ ಸ್ವರ್ಗದಿಂದ । ಇಹ—ಈ ಕರ್ಮಕ್ಕೆ (ಯಜ್ಞಕ್ಕೆ) । ಆಕೀಂ ವಕ್ಷತಿ-ಕರೆತರಲಿ.

॥ ಭಾವಾರ್ಥ ॥

ಅಗ್ನಿಯು ಮೇಧಾವಿಯು. ಹೋಮಸಂಪಾದಕನು. ಯಾಗಾರ್ಥವಾಗಿ ಬರಲು ಎಲ್ಲ ದೇವತೆಗಳನ್ನೂ ಉಷಃಕಾಲದಲ್ಲಿಯೇ ಎಬ್ಬಿಸುತ್ತಾನೆ. ಅವನು ಅವರನ್ನೆಲ್ಲಾ ಸೂರ್ಯನ ಸಂಬಂಧವಾದ ಪ್ರಕಾಶಮಾನವಾದ ಸ್ವರ್ಗಲೋಕದಿಂದ ಈ ಯಾಗ ಕರ್ಮಕ್ಕೆ ಕರೆತರಲಿ.

English Translation.

Let the wise invoker of the gods bring hither, from the region of solar light the Visve Devas (all the gods) that awake with the dawn.

॥ ವಿಶೇಷವಿಷಯಗಳು ॥

ಆಕೀಂ—ಹಿಕಂ ನುಕಂ ಸುಕಂ ಆಹಿಕಂ ಆಕೀಂ ಮೊದಲಾದ ಒಂಭತ್ತು ಶಬ್ದಗಳು ಸರ್ವಪದ ಸಮಾವ್ನಾಯೆ ಎಂದು ಯಾಸ್ಕರು ಹೇಳಿರುವುದರಿಂದ (ನಿ. ೩-೧೩) ಆಕೀಂ ಎಂಬ ಶಬ್ದಕ್ಕೆ ಸರ್ವಪದಶಬ್ದಾರ್ಥವು. ಇದನ್ನು ಉಪಸರ್ಗವನ್ನಾಗಿ ಉಪಯೋಗಿಸುವರು. ಆದುದರಿಂದ ಇಲ್ಲಿ **ಆಕೀಂ ವಕ್ಷತಿ** ಎಂದರೆ **ಆ ವಕ್ಷತಿ** ಎಂದರ್ಥವು.

ಉಷರ್ಬುಧಃ—**ಉಷಃಕಾಲೇ ಯೋಗಗಮನಾಯೆ ಪ್ರಬುಧ್ಯಮಾನಾನ್। ಉಷಃ ಬುಧ್ಯಂತ ಇತಿ ಉಷರ್ಬುಧಃ** ॥ ಉಷಃಕಾಲದಲ್ಲಿ ಎಬ್ಬಿಸಲ್ಪಟ್ಟ.

ಹೋತಾ—ಇಲ್ಲಿ ಹೋತಾ ಎಂದರೆ ದೇವತೆಗಳನ್ನು ಆಹ್ವಾನ ಮಾಡುವ ಅಗ್ನಿಯು,

॥ ವ್ಯಾಕರಣಪ್ರಕ್ರಿಯಾ ॥

ಆಕೀಮ್—ನಿಪಾತವಾದ್ದರಿಂದ ಅದ್ಯುದಾತ್ತ.

ಸೂರ್ಯಸ್ಯ, ರಾಜಸೂಯ, ಸೂರ್ಯ, ಮೃಷೋದ್ಯ, ರುಚ್ಯ, ಕುಪ್ಯ, ಕೃಷ್ಟಪಚ್ಯಾವ್ಯಥ್ಯಾಃ (ಪಾ. ಸೂ. ೩-೧-೧೧೪) ಈ ಏಳು ಶಬ್ದಗಳು ಕ್ಯಬಂತವಾಗಿ ನಿಪಾತಿಸಲ್ಪಡುವುವು ಎಂಬುದರಿಂದ ಕ್ಯಪ್ ಪ್ರತ್ಯಯಾಂತವಾಗಿ ಸೂರ್ಯಶಬ್ದವು ನಿಪಾತಿತವಾಗಿರುವುದು. ಸರತಿ ಆಕಾಶೇ=ಆಕಾಶದಲ್ಲಿ ಹೋಗುತ್ತಾನೆ ಎಂದು ವಿವಕ್ಷಿಸಿದರೆ ಸೃ ಗತೌ ಧಾತುವಿನ ಮುಂದೆ ಕ್ಯಪ್ ಖಂದಾಗ ಸೃಧಾತುವಿನ ಋಕಾರಕ್ಕೆ ಉಕಾರವು ನಿಪಾತಿತವಾಗುವುದು. ಅದು ಉರಣ್ರಪರಃ ಎಂಬುದರಿಂದ ರ ಪರವಾಗಿ ಬರುವುದು. ಸುರ್+ಯ. **ಹಲಿಚಿ** (ಪಾ. ಸೂ. ೮-೨-೭೭) ಹಲ್ ವರ್ಣಪರವಾಗಿರುವಾಗ ರೇಫಾಂತ ಅಥವಾ ವಕಾರಾಂತ ಧಾತುಗಳ ಉಪಾಂತ್ಯದಲ್ಲಿರುವ ಇ, ಉ, ಋ, ಲೃ ಗಳಿಗೆ ದೀರ್ಘ ಬರುವುದು ಎಂಬುದರಿಂದ ದೀರ್ಘ ಬರುವುದು, ಅಥವಾ ಸುವತಿ ಕರ್ಮಣಿ ಲೋಕಂ ಪ್ರೇರಯತಿ, ಜನರನ್ನು ಉದ್ಯೋಗ ಮಾಡುವಂತೆ ಪ್ರೇರಿಸುವನು ಎಂದು ವಿವಕ್ಷಿಸಿದರೆ ಷೂ ಪ್ರೇರಣೇ ಎಂದು ತುದಾದಿಗಣದ ಧಾತುವಿನ ಮುಂದೆ ಕ್ಯಪ್ ಬಂದಾಗ ಆದಕ್ಕೆ ರುಡಾಗಮವು ನಿಪಾತಿತವಾಗುವುದು, ಸೂರ್ಯ ಎಂದಾಗುವುದು. ಕ್ಯಪ್ ಪ್ರತ್ಯಯವು ಪಿತ್ತಾದ್ದರಿಂದ ಅನುದಾತ್ತ. ಅದ್ದರಿಂದ ಧಾತುಸ್ವರ ಬಂದು ಸೂರ್ಯಶಬ್ದವು ಆದ್ಯುದಾತ್ತವಾಗುವುದು.

ರೋಚನಾತ್—ರುಚ ದೀಪ್ತೌ. ಧಾತು. ಅನುದಾತ್ತೇತ್ತು. **ಅನುದಾತ್ತೇತಶ್ಚ ಹಲಾದೇಃ** (ಪಾ.ಸೂ. ೩-೩-೧೪೯) ಅಕರ್ಮಕವೂ ಅನುದಾತ್ತೇತ್ತೂ ಹಲಾದಿಯೂ ಆದ ಧಾತುವಿನ ಮುಂದೆ ಯುಚ್ ಬರುವುದು ಎಂಬುದರಿಂದ ಕರ್ತೃರ್ಥದಲ್ಲಿ ಯುಚ್. ಯುಗೆ **ಯುವೋರನಾಕೌ**, (ಪಾ. ಸೂ. ೭-೧-೧) ಎಂಬುದರಿಂದ ಅನಾದೇಶ, ಲಘೂಪಧ ಗುಣ. ರೋಚನ. **ಚಿತಃ** (ಪಾ. ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತ,

ವಿಶ್ವಾನ್—ವಿಶ ಪ್ರವೇಶನೇ ಧಾತುವಿನ ಮುಂದೆ **ಅತೂಪುಷಿ** (ಉ.ಸೂ. ೧-೧೪೯) ಎಂಬುದರಿಂದ ಕ್ವನ್ ಪ್ರತ್ಯಯ, ನಿತ್ತಾದ್ದರಿಂದ ಆದ್ಯುದಾತ್ತ

ಉಷರ್ಬುಧಃ—ಉಷಸಿ ಬುಧ್ಯಂತ್ಯೇ ಇತ್ಯುಷರ್ಬುಧಃ, ಉಷಸ್ ಶಬ್ದೋಪಪದಕವಾದ ಬುಧ ಅವಗಮನೇ ಧಾತುವಿನ ಮುಂದೆ **ಕ್ವಿಪ್ ಚ** (ಪಾ. ಸೂ. ೩-೨-೭೬) ಎಂಬುದರಿಂದ ಕ್ವಿಪ್ ಧಾತುಸ್ವರದಿಂದ ಬುಧ್ ಶಬ್ದದ ಉಕಾರವು ಉದಾತ್ತ. ಸಮಾಸಾನಂತರವೂ ಗತಿಕಾರಕೋಪಪದಾತ್ಕೃತ್ ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬಂದು ಆದೇ ನಿಲ್ಲುವುದು.

ವಿಪ್ರಃ—ಋಜ್ರೇನ್ದ್ರಾಗ್ರವಿಪ್ರೆ (ಉ. ಸೂ. ೨-೧೪೬) ಎಂಬುದರಿಂದ **ಡುಸಪ್**ಬೀಜಸಂತಾನೇ, ಎಂಬ ಧಾತುವಿನ ಮುಂದೆ ರನ್ ಪ್ರತ್ಯಯ ಬಂದಾಗ ಉಪಧಾಭೂತ ಅವರ್ಣಕ್ಕೆ ಇತ್ವವು ನಿಪಾತಿತವಾಗುವುದು. ನಿತ್ಸ್ವರದಿಂದ ಆದ್ಯುದಾತ್ತ.

ಹೋತಾ—ಹ್ವೇಞ್ ಸ್ಪರ್ಧಾಯಾಂ ಶಬ್ದೇಚ ಧಾತು. ಇದರಮುಂದೆ ತೃನ್, (ಪಾ.ಸೂ ೩-೨-೧೩೫) ಎಂಬುದರಿಂದ ತಾಚ್ಛೀಲ್ಯಾರ್ಥದಲ್ಲಿ ತೃನ್ ಬರುವುದು. **ಹ್ವಸ್ಸಮ್ಪ್ರಸಾರಣಮ್** (ಪಾ.ಸೂ. ೬-೧-೩೨) ಎಂದು ಅನುವೃತ್ತವಾಗಲಾಗಿ **ಬಹುಲಂಛಂದಸಿ** (ಪಾ.ಸೂ. ೬-೧-೩೪)ಎಂಬುದರಿಂದ ಸಂಪ್ರಸಾರಣ. **ಸಂಪ್ರಸಾರಣಾಚ್ಚ** (ಪಾ. ಸೂ. ೬-೧-೧೦೮) ಎಂಬುದರಿಂದ ಪೂರ್ವರೂಪ, ಸಾರ್ವಧಾತಕಾರ್ಧಧಾತುಕಯೋಃ (ಪಾ. ಸೂ. ೭-೩-೮೪) ಎಂಬುದರಿಂದ ಗುಣ, ಹೋತೃ. ನಿತ್ಸ್ವರದಿಂದ ಆದ್ಯುದಾತ್ತ.

ಇಹ—ಇದನೋಹಃ (ಪಾ. ಸೂ. ೫-೩-೧೧) ಇದಂ ಶಬ್ದಪ್ರಕೃತಿಕವಾದ ಸಪ್ತಮ್ಯಂತ್ಯದ ಮುಂದೆ **ಹ** ಪ್ರತ್ಯಯ ಬರುವುದು ಎಂಬುದರಿಂದ ಹ ಪ್ರತ್ಯಯ ಬಂದರೆ ಇದಂ+ಙಿ. ಹ ತದ್ಧಿತಾಂಶವಾದ್ದರಿಂದ **ಕೃತ್ತದ್ಧಿತಸಮಾಸಾಶ್ಚ** (ಪಾ ಸೂ. ೧-೨-೪೬) ಎಂಬುದರಿಂದ ಪ್ರಾತಿಪದಿಕ ಸಂಜ್ಞೆ ಬರುವುದು. **ಸುಪೋಧಾತು ಪ್ರಾತಿಪದಿಕಯೋಃ** (ಪಾ.ಸೂ. ೨-೪-೭೧) ಎಂಬುದರಿಂದ ಸುಪ್ಪಾದ ಙಿಗೆ ಲುಕ್. ಇದಮ್ ಇಶ್(ಪಾ.ಸೂ. ೫-೩-೩) ಪ್ರಾಗ್ದಿಶೀಯಪ್ರತ್ಯಯ ಪರವಾಗಿರುವಾಗ ಇದಂ ಶಬ್ದಕ್ಕೆ ಇಶಾದೇಶ ಬರುವುದು ಎಂಬುದರಿಂದ ಇದಂ ಗೆ ಇಶ್. ಅದು ಶಿತ್ತಾದ್ದರಿಂದ **ಅನೇಕಾಲ್ಶಿತ್ಸರ್ವಸ್ಯ** (ಪಾ. ಸೂ. ೧-೧-೫೫) ಎಂಬುದರಿಂದ ಸರ್ವಾದೇಶವಾಗಿ ಬರುವುದು. ಇಹ ಎಂದಾಗುವುದು. ಪ್ರತ್ಯಯ ಸ್ವರ ಬರುವುದು.

ವಕ್ಷತಿ—ವಹ ಪ್ರಾಪಣೇ ಧಾತು. **ಲಿಙರ್ಥೇಲೇಟ್** (ಪಾ. ಸೂ. ೩-೪-೭) ಎಂಬುದರಿಂದ ಪ್ರಾರ್ಥನಾರೂಪವಾದ ಅರ್ಥದಲ್ಲಿ ಲೇಟ್, ಆದಕ್ಕೆ ತಿಪ್ ವಹ್+ತಿ. ಕರ್ತರಿ ಶಪ್ ಎಂಬುದರಿಂದ ಶಪ್. **ಸಿಬ್ಬಹುಲಂಲೇಟಿ** (ಪಾ. ಸೂ. ೩-೧-೩೪) ಎಂಬುದರಿಂದ ಶಪ್ ಪದಲ್ಲಿರುವಾಗ ಧಾತುವಿನ ಮುಂದೆ ಸಿಪ್ ಬರುತ್ತೆ. ವಹ್+ಸ್+ಅ+ತಿ ಹೋಢಃ (ಪಾ. ಸೂ. ೮-೨-೩೧) ಪದಾಂತ ವಿಷಯದಲ್ಲೂ ಝಲ್ ಪರದಲ್ಲಿರುವಾಗಲೂ ಹಕಾರಕ್ಕೆ ಢಕಾರಾದೇಶ ಬರುವುದು ಎಂಬುದರಿಂದ ಹಕಾರಕ್ಕೆ ಢಕಾರ. **ಷಢೋಃಕಸ್ಸಿ** (ಪಾ.ಸೂ. ೮-೩-೪೧) ಸಕಾರ ಪರದಲ್ಲಿರುವಾಗ ಷಕಾರ ಢಕಾರಗಳಿಗೆ ಕಕಾರ ಬರುವುದು ಎಂಬುದರಿಂದ ಕ. **ಆದೇಶಪ್ರತ್ಯಯಯೋಃ** (ಪಾ. ಸೂ. ೮-೩-೫೯) ಎಂಬುದರಿಂದ ಸಕಾರಕ್ಕೆ ಷಕಾರ, ವಕ್ಷತಿ ಎಂದಾಗುವುದು. ತಿಙ್ಶಿತಿಐಃ ಎಂಬುದರಿಂದ ಸರ್ವಾನುದಾತ್ತ ಬರುವುದು ॥ ೯ ॥

॥ ಸಂಹಿತಾಪಾಠಃ ॥

ವಿಶ್ವೇಭಿಃ ಸೋಮ್ಯಂ ಮಧ್ವಗ್ನ ಇಂದ್ರೇಣ ವಾಯುನಾ ।
ಪಿಬಾ ಮಿತ್ರಸ್ಯ ಧಾಮಭಿಃ ॥ ೧೦ ॥

॥ ಪದಪಾಠಃ ॥

ವಿಶ್ವೇಭಿಃ । ಸೋಮ್ಯಂ । ಮಧು । ಅಗ್ನೇ । ಇಂದ್ರೇಣ । ವಾಯುನಾ ।
ಪಿಬ । ಮಿತ್ರಸ್ಯ । ಧಾಮಭಿಃ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಂ ವಿಶ್ವೇಭಿಃ ಸರ್ವೈಃ ಪೂಷಭಗಾದಿಭಿರ್ದೇವೈರಿಂದ್ರೇಣ ವಾಯುನಾ ಮಿತ್ರಸ್ಯ ಸಂಬಂಧಿಭಿರ್ಧಾಮಭಿಸ್ತೇಜೋರೂಪೈರ್ಮೂರ್ತಿವಿಶೇಷರೂಪೈಶ್ಚ ಸಹ ಸೋಮ್ಯಂ ಸೋಮಸಂಬಂಧಿ ಮಧು ಮಧುರಂ ಭಾಗಂ ಪಿಬ ॥ ವಿಶ್ವೇಭಿಃ ಬಹುಲಂ ಛಂದಸೀತಿ ಭಿಸ ಐಸಾದೇಶಾಭಾವಃ । ಸೋಮ್ಯಂ । ಸೋಮಮರ್ಹತಿ ಯ ಇತ್ಯನುವೃತ್ತೌ ಮಯೇ ಚ । ಪಾ. ೪-೪ ೧೩೮ । ಇತಿ ಯಪ್ರತ್ಯಯಃ ಸೋಮಸ್ಯ ವಿಕಾರ ಇತ್ಯರ್ಥೇ । ಯಸ್ಯೇತಿ ಚೇತ್ಯಕಾರಲೋಪಃ । ಪ್ರತ್ಯಯಸ್ವರಃ । ಫಲಿಪಾಟಿನಮಿಮನೀತ್ಯಾದಿನಾ । ಉ. ೧-೧೯। ಉಪ್ರತ್ಯಯಃ । ನಿದಿತ್ಯನುವೃತ್ತೇರ್ನಿತ್ತ್ವಾದಾದ್ಯುದಾತ್ತಃ । ವಾಯುನಾ । ಕ್ಯವಾಸಾಜೇತ್ಯಾದಿನಾ ಉಙ್ । ಅತೋ ಯುಕ್ ಚಿಣ್ಣಿತೋಃ । ಪಾ- ೭-೩-೩೩ । ಇತಿ ಯುಕ್ । ಪ್ರತ್ಯಯಸ್ವರಃ । ಪಿಬ ಪಾ ಪಾನೇ । ಲೋಟಃ ಸೇರ್ಹಿರಾದೇಶಃ । ಶಪಿ ಪಾಘ್ರೇತ್ಯಾದಿನಾ ಪಿಬಾದೇಶಃ । ಅತೋ ಹೇರಿತಿ ಹೇರ್ಲುಕ್ । ಶಪಃ ಪಿತ್ತ್ವಾದ್ಧಾತುಸ್ವರಃ । ಪಾದಾದಿತ್ವಾನ್ನ ನಿಘಾತಃ । ದ್ವ್ಯಚೋಽತಸ್ತಿಙ ಇತಿ ಸಂಹಿತಾಯಾಂ ದೀರ್ಘಃ । ಧಾಮಭಿಃ । ಧಾಙ್ । ಅತೋ ಮನಿನ್ನಿತಿ ಮನಿನ್ । ನಿತ್ಸ್ವರಃ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ವಿಶ್ವೇಭಿಃ— ಪೂಷ, ಭಗ ಮುಂತಾದ ಸಕಲ ದೇವತೆಗಳೊಡನೆಯೂ । ಇಂದ್ರೇಣ— ಇಂದ್ರನೊಡನೆಯೂ । ವಾಯುನಾ— ವಾಯುವಿನೊಡನೆಯೂ । ಮಿತ್ರಸ್ಯ ಧಾಮಭಿಃ—ಮಿತ್ರನ ಮೂರ್ತಿವಿಶೇಷರೂಪಗಳೊಡನೆಯೂ ತೇಜಸ್ಸುಗಳೊಡನೆಯೂ ಸಹ । ಸೋಮ್ಯಂ ಮಧು—ಮಧುರವಾದ ಸೋಮರಸವನ್ನು । ಪಿಬ—ಪಾನಮಾಡು.

॥ ಭಾವಾರ್ಥ ॥

ಎಲೈ ಅಗ್ನಿಯೇ ನೀನು ಇಂದ್ರನೊಡನೆಯೂ, ವಾಯುವಿನೊಡನೆಯೂ, ಪೂಷ, ಭಗ ಮುಂತಾದ ಇತರ ಎಲ್ಲ ದೇವತೆಗಳೊಡನೆಯೂ ಮತ್ತು ತೇಜೋರೂಪಗಳಾದ ಮಿತ್ರನ ಮೂರ್ತಿವಿಶೇಷಗಳೊಡನೆಯೂ ಸಹ ಮಧುರವಾದ ಸೋಮರಸವನ್ನು ಪಾನಮಾಡು.

English Translation.

O Agni, drink this sweet soma juice with the Visve devas, Indra, Vayu, and the various forms of Mitra.

॥ ವಿಶೇಷವಿಷಯಗಳು ॥

ಈ ಋಕ್ಕನ್ನು ಅಗ್ನಿಷ್ಟೋಮಯಾಗದಲ್ಲಿ ಪ್ರಉಗಶಸ್ತ್ರಮಂತ್ರಪಠನದ ಯಾಜ್ಯಾಮಂತ್ರವನ್ನಾಗಿ ಉಪಯೋಗಿಸುವರು. ಆಶ್ವಲಾಯನ ಶ್ರೌತಸೂತ್ರದಲ್ಲಿ ಸ್ತೋತ್ರಮಗ್ರೇ ಶಸ್ತ್ರಾತ್ ಎಂಬ ಖಂಡದಲ್ಲಿ **ವಿಶ್ವೇಭಿಃ-ಸೋಮ್ಯಂ ಮಧು** ಎಂಬ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಉಪಯೋಗಿಸಬೇಕೆಂದು ಹೇಳಿರುವುದು. (ಆ. ೫-೧೮).

ಪಿಬ—ಛಂದಸ್ಸಿನ ಅನುಕೂಲಕ್ಕಾಗಿ ಸಂಹಿತಾಪಾಠದಲ್ಲಿ ಅಂತ್ಯಾಕ್ಷರವು ದೀರ್ಘವಾಗಿರುವುದು.

ಮಿತ್ರಸ್ಯ ಧಾಮಭಿಃ—ಮಿತ್ರಸ್ಯ ಸಂಬಂಧಿಭಿರ್ಧಾಮಭಿಸ್ತೇಜೋಮೂರ್ತಿವಿಶೇಷರೂಪೈಶ್ಚ—ಮಿತ್ರನ ಸಂಬಂಧವಾದ ತೇಜೋಮೂರ್ತಿರೂಪಗಳಿಂದ with various forms of Mitra. ಧಾಮಭಿಃ—ಎಂದರೆ ತೇಜಸ್ಸುಗಳಿಂದ ಅಥವಾ ತೇಜೋಮೂರ್ತಿಗಳಿಂದ, Rays, ಇಲ್ಲಿ ಮಿತ್ರನ ತೇಜೋಮೂರ್ತಿಗಳು ಯಾವವು ಎಂಬುದು ಸ್ಪಷ್ಟವಾಗಿಲ್ಲ.

॥ ವ್ಯಾಕರಣಪ್ರಕ್ರಿಯಾ ॥

ವಿಶ್ವೇಭಿಃ—ಬಹುಲಂ ಛಂದಸಿ (ಪಾ. ಸೂ. ೭-೧-೧೦) ಎಂಬುದರಿಂದ ಭಿಸ್ ಪ್ರತ್ಯಯಕ್ಕೆ **ತತೋ ಭಿಸಏಸ್** (ಪಾ. ಸೂ. ೭-೧-೯) ಎಂಬುದರಿಂದ ಪ್ರಾಪ್ತವಾದ ಏಸ್ ಆದೇಶ ಬರುವುದಿಲ್ಲ.

ಸೋಮ್ಯಂ—ಮಯಟೇ ಚ (ಪಾ.ಸೂ. ೪-೪-೧೩೮) **ಸೋಮಮರ್ಹತಿ ಯಃ** (ಪಾ.ಸೂ. ೪-೪-೧೩೭) ಎಂಬುದರಿಂದ ಸೋಮಂ, ಯಃ ಎಂಬ ಪದಗಳು ಅನುವೃತ್ತವಾಗುವುವು. ಸೋಮಶಬ್ದಪ್ರಕೃತಿಕವಾದ ಸಮರ್ಥ ವಿಭಕ್ತ್ಯಂತದ ಮುಂದೆ ಆಗತ, ವಿಕಾರ, ಅವಯವ, ಪ್ರಕೃತವಚನ, ಎಂಬ ಮಯಡರ್ಥಗಳಲ್ಲಿ ಯಪ್ರತ್ಯಯ ಬರುವುದು ಎಂದು ಸೂತ್ರಾರ್ಥ. ಆಗತಾರ್ಥದಲ್ಲಿ ಪಂಚಮಿಯು ಸಮರ್ಥ ವಿಭಕ್ತಿ, ವಿಕಾರ, ಅವಯವ, ಈ ಅರ್ಥಗಳಲ್ಲಿ ಷಷ್ಠಿಯು ಸಮರ್ಥ ವಿಭಕ್ತಿ. ಪ್ರಕೃತವಚನದಲ್ಲಿ ಪ್ರಥಮಾವಿಭಕ್ತಿಯು ಸಮರ್ಥವಾಗುವುದು. ಇಲ್ಲಿ ಸೋಮಸ್ಯ ವಿಕಾರಃ ಎಂದು ವಿವಕ್ಷಿಸಿದಾಗ ವಿಕಾರಾರ್ಥದಲ್ಲಿ ಷಷ್ಠ್ಯಂತದ ಮುಂದೆ ಯಪ್ರತ್ಯಯ ಬರುವುದು. ತದ್ಧಿತಾಂತವಾದ್ದರಿಂದ ಪ್ರಾತಿಪದಿಕ, ಸುಬ್ಲುಕ್, ಸೋಮ+ಯ **ಯೆಸ್ಯೇತಿ ಚ** (ಪಾ.ಸೂ. ೬-೪-೧೪೮) ಎಂಬುದರಿಂದ ಅಕಾರಕ್ಕೆ ಲೋಪ, ಪ್ರತ್ಯಯ ಸ್ವರ ಬರುವುದು. ದ್ವಿತೀಯಾ ಏಕವಚನದಲ್ಲಿ ಸೋಮ್ಯಂ ಎಂದಾಗುತ್ತೆ.

ಮಧು—**ಫಲಿಪಾಟನಮಿಮನಿ** (ಉ ಸೂ. ೧-೧೪) ಎಂಬುದರಿಂದ ಉಪ್ರತ್ಯಯ. ಇಲ್ಲಿ **ನಿತ್** ಎಂದು ಅನುವೃತ್ತವಾಗುವುದರಿಂದ ಪ್ರತ್ಯಯವು ನಿತ್ತಾಗುವುದು. ಆದ್ದರಿಂದ ನಿತ್ಸ್ವರ ಬರುವುದು. **ವಾಯುನಾ-ಕೈನಾ-ಪಾಜಿ** (ಉ ಸೂ ೧-೧) ಎಂಬುದರಿಂದ ವಾಧಾತುವಿನ ಮುಂದೆ ಉಣ್. **ಆತೋಯುಕ್ ಚಿಣ್ಕೃತೋಃ**

(ಪಾ. ಸೂ. ೭-೩-೭೮) ಚಿಣ್‌ಕೃತ್ಪ್ರತ್ಯಯಗಳು ಪರದಲ್ಲಿರುವಾಗ ಆಕಾರಾಂತ ಧಾತುವಿಗೆ ಯುಗಾಗಮ ಬರುವುದು. ಯುಕ್ ಕಿತ್ತಾದ್ದರಿಂದ ಅಂತಾವಯವವಾಗಿ ಬರುವುದು. ಪ್ರತ್ಯಯಸ್ವರ ಬರುವುದು.

ಪಿಬ—ಪಾ ಪಾನೇ, ಲೋಟ್ ಮಧ್ಯಮಪುರುಷ ಏಕವಚನ ಸಿಪ್, ಸಿಗೆ **ಸೇರ್ಧ್ಯಪಿಚ್ಚ** (ಪಾ. ಸೂ. ೩-೪-೮೭) ಎಂಬುದರಿಂದ ಹಿ ಆದೇಶ. **ಕರ್ತರಿಶಪ್** (ಪಾ. ಸೂ. ೩-೧-೬೮) ಎಂಬುದರಿಂದ ಏಕರಣ ಶಪ್ **ಪಾ-ಘ್ರಾಧ್ಮಾ** (ಪಾ. ಸೂ. ೭-೩-೭೮) ಎಂಬುದರಿಂದ ಪಾಗೆ ಪಿಬ ಆದೇಶ, **ಆತೋಹೇಃ** (ಪಾ. ಸೂ. ೬-೪-೧೦೫) ಎಂಬುದರಿಂದ ಹಿಗೆ ಲುಕ್ ಶಪ್ ಪಿತ್ತಾದ್ದರಿಂದ ಧಾತುಸ್ವರವೇ ನಿಲ್ಲುವುದು. ಪಾದದ ಆದಿಯಲ್ಲಿರುವುದರಿಂದ **ತಿಙ್ಙತಿಙಃ** (ಪಾ. ಸೂ. ೮-೧-೨೮) ಎಂಬುದರಿಂದ ಅನುದಾತ್ತ ಬರುವುದಿಲ್ಲ. **ದ್ವ್ಯಚೋತೆಸ್ತಿಙಃ** (ಪಾ. ಸೂ. ೬-೩-೧೩೫) ಮಂತ್ರದಲ್ಲಿ ಎರಡು ಅಚ್ಚನ್ನು ಹೊಂದಿರುವ ತಿಙಂತದ ಕೊನೆಯ ಆಕಾರಕ್ಕೆ ದೀರ್ಘ ಬರುವುದು ಎಂಬುದರಿಂದ ಸಂಹಿತಾಕಾಲದಲ್ಲಿ ಪಿಬ ಎಂಬುದರ ಆಕಾರಕ್ಕೆ ದೀರ್ಘ ಬರುವುದು.

ಧಾಮಭಿಃ—ಡುಧಾಞ್ ಧಾರಣಪೋಷಣಯೋಃ, ಧಾತು. **ಅತೋಮನಿನ್ ಕ್ವನಿಬ್ವನಿಪಶ್ಚ** (ಪಾ. ಸೂ. ೩-೨-೭೩) ಎಂಬುದರಿಂದ ಮನಿನ್ ಪ್ರತ್ಯಯ. ಪ್ರತ್ಯಯವು ನಿತ್ತಾದ್ದರಿಂದ ನಿತ್ಸ್ವರ ಬಂದು ಧಾಮನ್ ಶಬ್ದವು ಆದ್ಯುದಾತ್ತವಾಗುವುದು ॥ ೧೦॥

॥ ಸಂಹಿತಾಪಾಠಃ ॥

ತ್ವಂ ಹೋತಾ ಮನುರ್ಹಿತೋಽಗ್ನೇ ಯಜ್ಞೇಷು ಸೀದಸಿ ।
ಸೇಮಂ ನೋ ಅಧ್ವರಂ ಯಜ ॥ ೧೧ ॥

॥ ಪದಪಾಠಃ ॥

ತ್ವಂ । ಹೋತಾ । ಮನುಃ । ಹಿತಃ । ಅಗ್ನೇ । ಯಜ್ಞೇಷು । ಸೀದಸಿ ।
ಸಃ । ಇಮಂ । ನಃ । ಅಧ್ವರಂ । ಯಜ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಮನುರ್ಹಿತೋ ಮನುಷಾ ಹೋತ್ರಾದಿರೂಪೇಣ ಮನುಷ್ಯೇಣ ಹಿತಃ ಸಂಪಾದಿತೋ ಹೋಮನಿಷ್ಪಾದಕೋ ಯಸ್ತ್ವಂ ಯಜ್ಞೇಷು ಸೀದಸಿ ತಿಷ್ಠಸಿ ಸ ತ್ವಂ ನೋಽಸ್ಮದೀಯಮಿಮಮಧ್ವರಂ ಯಜ್ಞಂ ಯಜ ನಿಷ್ಪಾದಯ ॥ ಮನುರ್ಹಿತಃ । ಮನ್ಯತ ಇತಿ ಮನುಃ । ನಿಚ್ಚೇತ್ಯನುವೃತ್ತೌ ಬ. ಹುಲಮನ್ಯೇತ್ರಾಪಿ । ಉ. ೨-೧೨೨ । ಉಸ್ । ನಿತ್ತ್ವಾದಾದ್ಯುದಾತ್ತಃ । ಹಿತಃ । ಧಾಞೋ ಧಾತೋ-

ನಿರ್ಮಿತೇತಿ ಕೃತ್ಪ್ರತ್ಯಯಃ । ದಧಾತೇರ್ಹವಿರಿತಿ ಹವಿರಾದೇಶಃ । ಮನುಷಾ ಹಿತೋ ಮನುರ್ಹಿತಃ । ಕರ್ತೃಕರ-ಣೇ ಕೃತಾ ಬಹುಲಮಿತಿ ಸಮಾಸಃ । ಕೃತ್ಸ್ವರಾಪವಾದೇನಾನೃತೀಯೇತಿ ಕರ್ಮಣೀತಿ ಪೂರ್ವಪದಪ್ರಕೃತಿ-ಸ್ವರತ್ವಂ । ಸೀದಸಿ । ಷದ್ಲೃ ವಿಶರಣಗತ್ಯವಸಾದನೇಷು । ಲಟಃ ಸಿಪ್ । ಶಪಿ ಸಾರ್ವಧಾತುಕತ್ವಾದಿನಾ ಸೀ-ದಾದೇಶಃ । ನಿಘಾತಃ । ಸೇಮಮಿತ್ಯತ್ರ ಸಂಹಿತಾಯಾಂ ಸೋಽಚಿ ಲೋಪೇ ಚೇತ್ಪಾದಪೂರಣಂ । ಪಾ. ೬-೧-೧೩೫ ॥ ಇತಿ ಸೋರ್ಲೋಪೇ ಗುಣಃ । ಅಧ್ವರಂ । ನ ವಿದ್ಯತೇ ಧ್ವರೋ ಹಿಂಸಾ ಯಸ್ಮಿನ್ನೋಽಧ್ವರಃ । ನಞ್ಸುಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ನೋ ಽಧ್ವರಮಿತ್ಯತ್ರ ಸಂಹಿತಾಯಾಮೋಜಃ ಪದಾಂ ತಾದಿತಿ। ಪಾ. ೬-೧-೧೦೯ । ಇತಿ ಪೂರ್ವಂರೂಪಂ ಪ್ರಾಪ್ತಂ ಪ್ರಕೃತ್ಯಾಂತಃಪಾದಮನ್ಯಪರ ಇತಿ ಪ್ರಕೃತಿ-ಭಾವಾನ್ನಿವರ್ತತೇ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ, (ಯಾವ) । ತ್ವಂ—ನೀನು । ಮನುರ್ಹಿತಃ—ಹೋತ್ರಾದಿಮಾನವರಿಂದ ನಿಯಮಿತನಾಗಿಯೂ । ಹೋತಾ—ಹೋಮನಿಷ್ಪಾದಕನಾಗಿಯೂ । ಯಜ್ಞೇಷು—ನಮ್ಮ ಯಜ್ಞಕಾಲಗಳಲ್ಲಿ। ಸೀದಸಿ—(ನಮ್ಮೊಡನೆ) ಇರುತ್ತೀಯೋ । ಸಃ—ಅಂತಹ ನೀನು । ನಃ—ನಮ್ಮ । ಇಮಂ ಅಧ್ವರಂ—ಈ ಯಜ್ಞವನ್ನು । ಯಜ—ನೆರವೇರಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ದೇವತೆಗಳನ್ನು ಯಜ್ಞಕ್ಕೆ ಕರೆದುಕೊಂಡುಬಂದು ಮಾನವರಾದ ನಮ್ಮಿಂದ ಮಾಡಲ್ಪಡುವ ನಮ್ಮ ಯಜ್ಞಕಾಲದಲ್ಲಿ ನಮ್ಮೊಡನೆ ಇರುತ್ತೀಯೆ. ಅಂತಹ ನೀನು ನಮ್ಮ ಯಜ್ಞವನ್ನು ನೆರವೇರಿಸು.

English Translation.

O Agni, appointed by man as the invoker of the gods you are present at the sacrifice. Therefore perform this our sacrifice.

॥ ವಿಶೇಷವಿಷಯಗಳು ॥

ಮನುರ್ಹಿತಃ—ಮನ್ಯತ ಇತಿ ಮನುಃ । ಮನುಷಾ ಹೋತ್ರಾದಿರೂಪೇಣ ಮನುಷ್ಯೇಣ ಹಿತಃ । ಸಂಪಾದಿತಃ । ಮನುಷ್ಯನಾದ ಯಜಮಾನನು ಯಜ್ಞಕರ್ಮದಲ್ಲಿ ಭಾಗವಹಿಸುವುದಕ್ಕಾಗಿ ನಿಯಮಿಸಿರುವ ಅಥವಾ ಯಜ್ಞದಲ್ಲಿ ಮುಖ್ಯಪಾತ್ರವನ್ನು ವಹಿಸುವನಾದುದರಿಂದ ಅಗ್ನಿಕುಂಡದಲ್ಲಿ ಇಡಲ್ಪಟ್ಟಿರುವವನು.

॥ ವ್ಯಾಕರಣಪ್ರಕಿಯಾ ॥

ಮನುರ್ಹಿತಃ—ಮನ್ಯತೇ ಇತಿ ಮನುಃ—ಮನ ಜ್ಞಾನೇ ದಿವಾದಿಧಾತು. **ಬಹುಲಮನ್ಯತ್ರಾಪಿ** (ಉ. ಸೂ. ೨–೨೭೪) **ನಿತ್** (ಉ. ಸೂ. ೨-೨-೬೪) ಎಂಬುದರಿಂದ ಇಲ್ಲಿ ನಿತ್ ಎಂದು ಅನುವೃತ್ತವಾಗುವುದು. ಬೇರೆ ಧಾತುಗಳ ಮುಂದೆಯೂ ಬಹುಲವಾಗಿ ಉಸ್ ಬರುವುದು. ಅದು ನಿತ್ತಾಗುವುದು ಎಂಬುದರಿಂದ ಮನಧಾತುವಿನ ಮುಂದೆ ಉಸ್ ಪ್ರತ್ಯಯ, ಮನ್+ಉಸ್, ಮನುಃ. ಪ್ರತ್ಯಯವು ನಿತ್ತಾದ್ದರಿಂದ ಇದು ಆದ್ಯುದಾತ್ತ.

ಹಿತಃ—ಡುಧಾಞ್ ಧಾರಣಪೋಷಣಯೋಃ ಧಾತು. ಇದರ ಮುಂದೆ **ನಿಷ್ಠಾ** (ಪಾ ಸೂ- ೩-೨-೧೦೨) ಎಂಬುದರಿಂದ ಕರ್ಮಣಿಕ್ತ ಪ್ರತ್ಯಯ. ಧಾ+ತ **ದಧಾತೇರ್ಹಿಃ** (೭.೪-೪೨) ಎಂಬುದರಿಂದ ಧಾಗೆ ಹಿ ಆದೇಶ. **ಮನುಷಾ ಹಿತಃ ಮನುರ್ಹಿತಃ ಕರ್ತೃಕರಣೇ ಕೃತಾಬಹುಲಮ್** (ಪಾ. ಸೂ. ೨–೧-೩೭) ಕರ್ತೃಕರಣಗಳಲ್ಲಿ ಯಾವುದಾದರೂ ಒಂದು ಅರ್ಥವನ್ನು ಹೇಳುವ ತೃತೀಯಾವಿಭಕ್ತಿಯನ್ನು ಕೊನೆಯಲ್ಲಿ ಹೊಂದಿರುವ ಶಬ್ದವು ಸಮರ್ಥವಾದ ಕೃದಂತದೊಂದಿಗೆ ಬಹುಲವಾಗಿ ಸಮಾಸವನ್ನು ಹೊಂದುವುದು ಎಂಬುದರಿಂದ ಸಮಾಸ. ಇಲ್ಲಿ **ಸಮಾಸಸ್ಯ** (ಪಾ. ಸೂ. ೬-೧-೨೨೩) ಎಂಬುದರಿಂದ ಅನ್ತೋದಾತ್ತ ಪ್ರಾಪ್ತವಾದರೆ ಅದನ್ನು ಬಾಧಿಸಿ **ತೆಕ್ಕುರುಷೇ ತುಲ್ಯಾರ್ಥತೃತೀಯಾ** (ಪಾ. ಸೂ. ೬–೨-೨) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಪ್ರಾಪ್ತವಾದರೆ ಅದನ್ನು ಬಾಧಿಸಿ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಪ್ರಾಪ್ತವಾದರೆ ಅದನ್ನು ಬಾಧಿಸಿ **ಧಾಥಘೋಙ್ಕ್ತಾಜಬಿತ್ರಕಾಣಾಮ್** (ಪಾ. ಸೂ. ೬-೨-೧೪೪) ಎಂಬುದರಿಂದ ಅಂತೋದಾತ್ತ ಪ್ರಾಪ್ತವಾದರೆ ಅದನ್ನೂ ಬಾಧಿಸಿ, **ತೃತೀಯಾಕರ್ಮಣಿ** (ಪಾ. ಸೂ. ೬-೨-೪೮) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಬರುವುದು. ಕೃತ್ಸ್ವರಾಪವಾದೇನ ಎಂಬ ವೇದಭಾಷ್ಯದ ಮುಂದೆ ಥಾಥಾದಿ ಸೂತ್ರೇಣಾನ್ತೋದಾತ್ತೇ ಪ್ರಾಪ್ತೇ ತದಪವಾದೇನ ಎಂದು ಸೇರಿಸಿಕೊಳ್ಳಬೇಕು. ಆದುದರಿಂದಲೇ ಶೇಖರಕಾರರು ತೃತೀಯಾಕರ್ಮಣಿ ಎಂಬ ಸೂತ್ರದಲ್ಲಿ ಅಯಮಪಿ ಥಾಥಾದಿ ಸ್ವರಾಪವಾದಃ ಅಂದರೆ ಇಬೂ ದಾಥಘೋಙ್ ಎಂಬ ಸೂತ್ರದಿಂದ ವಿಹಿತವಾದ ಸ್ವರಕ್ಕೆ ಅಪವಾದ ಎಂದು ಕಂಠೋಕ್ತವಾಗಿ ಹೇಳಿರುವರು.

ಸೀದಸಿ—ಷದ್ಲೃ ವಿಶರಣಗತ್ಯವಸಾದನೇಷು, ಧಾತು. ಇದರ ಮುಂದೆ ಲಟ್‌ಮಧ್ಯಮಪುರುಷ ಏಕವಚನ ಸಿಪ್. ಧಾತ್ವಾದೇಃ ಷಃಸಃ, ಎಂಬುದರಿಂದ ಷಕಾರಕ್ಕೆ ಸಕಾರ ಸದ್+ಸಿ ಕರ್ತರಿಶಪ್, ಎಂಬುದರಿಂದ ಶಪ್ ವಿಕರಣ. **ಪಾಘ್ರಾಧ್ಮಾ** (ಪಾ. ಸೂ. ೭-೩-೭೮) ಎಂಬುದರಿಂದ ಸದ್ ಗೆ ಸೀದಾದೇಶ. ಸೀದಸಿ ಎಂದಾಗುವುದು. **ತಿಙ್ಶಿತಿಙಃ** ಎಂಬುದರಿಂದ ಸರ್ವಾನುದಾತ್ತ ಬರುವುದು.

ಸೇಮಮ್—ಸಸ್+ಇಮಮ್ ಎಂದಿರುವಾಗ **ಸೋ೭ಚಿಲೋಪೇಚೇತ್ಪಾದಪೂರಣಮ್** (ಪಾ. ಸೂ. ೬-೧-೧೩೪) ಲೋಪವು ಬಂದರೇನೇ ಪಾದ ಪೂರಣವಾಗುವ ಪಕ್ಷಕ್ಕೆ ಸಸ್ ಎಂಬುದರ ಸುಪ್ರತ್ಯಯಕ್ಕೆ ಅಜ್ವರ್ಣ ಪರದಲ್ಲಿರುವಾಗ ಲೋಪ ಬರುವುದು ಎಂಬುದರಿಂದ ಸ್‌ಗೆ ಲೋಪ. ಇಲ್ಲಿ ಸ್ ಗೆ ಲೋಪ ಬರದೇ ಇದ್ದರೆ ಸಸ್+ಇಮಮ್ ಎಂದಿರುವಾಗ **ಸಸೇಜುಷೋರುಃ** (ಪಾ.ಸೂ. ೮-೩-೬೬) ಎಂಬುದರಿಂದ ಸ್‌ಗೆ ರುತ್ವ. **ಭೋಭಗೋ** (ಪಾ. ಸೂ. ೮-೩-೧೭) ಎಂಬುದರಿಂದ ರುಗೆ ಯಾದೇಶ, ಸಯ್+ಇಮಮ್. **ಲೋಪಶಾಕಲ್ಯಸ್ಯ** (ಪಾ.ಸೂ ೮-೩-೧೯) ಎಂಬುದರಿಂದ ಯತ್ವ. ನಂತರ ಯ.ಲೋಪ ಸ+ಇಮಮ್ ಎಂದಾಗುವುದು. ಈಗ **ಆದ್ಗುಣಃ** (ಪಾ ಸೂ. ೬-೧-) ಎಂಬುದರಿಂದ ಗುಣವನ್ನು ಮಾಡುವಾಗ ಲೋಪಶಾಕಲ್ಯಸ್ಯ ಎಂಬುದರಿಂದ ಬಂದ ಯಲೋಪವು **ಪೂರ್ವತ್ರಾಸಿ**–

ಪ್ಧಮ್ (ಪಾ. ಸೂ. ೮-೩-೧) ಎಂಬುದರಿಂದ ಅಸಿದ್ಧವಾಗುವುದು. ಏವಂಚ ಗುಣವಿಧಾಯಕಶಾಸ್ತ್ರದೃಷ್ಟಿಯಿಂದ ಸಯ್ ಇಮಮ್ ಎಂದು ಇರುವುದು. ಈಗ ಅವರ್ಣಕ್ಕೆ ಇಕಾರ ಪರವಾಗುವುದಿಲ್ಲವಾದ್ದರಿಂದ ಗುಣ ಬರುವುದಿಲ್ಲ. ಸ+ಇಮಮ್ ಎಂದೇ ಇರಬೇಕಾಗುವುದು. ಹೀಗಾದರೆ ಸೇಮಂನೋ ಅಧ್ವರಂ ಯಜ, ಎಂಬಲ್ಲಿ ಸ ಇಮಂ ನೋ ಅಧ್ವರಂ ಯಜ, ಎಂದಿರಬೇಕಾಗುವುದು. ಈಗ ಪಾದದಲ್ಲಿ ಒಂಭತ್ತು ಅಕ್ಷರಗಳಾಗುವುವು. ಅಂಡರೆ ಪಾಡ ಪೂರ್ತಿಗೆ ಸಾಕಾದ ಲ ಅಕ್ಷರಗಳಿಗಿಂತ ೧ ಅಕ್ಷರ ಜಾಸ್ತಿಯಾಗುವುದು. ಆದ್ದರಿಂದ ಪಾದ ಪೂರಣವಾಗುವುದಿಲ್ಲ. ಸೋಚಿ (ಪಾ. ಸೂ. ೬-೧-೧೩೪) ಎಂಬುದರಿಂದ ಸ್ ಗೆ ಲೋಪ ಬಂದರೆ ಪೂರ್ತ್ಯಾಸಿದ್ಧಮ್ ಎಂಬುದು ಬರುವುದಿಲ್ಲವಾದರಿಂದ ಗುಣ ಬರುವುದು, ಸೇಮಮ್ ಎಂದಾಗುವುದು. ಸೇಮಂ ನೋ ಅಧ್ವರಂ ಯಜ, ಎಂಬಲ್ಲಿ ಲ ಅಕ್ಷರಗಳಾಗುವುವು. ಆದ್ದರಿಂದ ಪಾದ ಪೂರಣೆಯಾಗುವುದು.

ಅಧರ್ವಮ್—ನ ವಿದ್ಯತೇ ಧ್ವರಃ ಹಿಂಸಾ ಯಸ್ಮಿನ್ ಸಃ ಅಧ್ವರಃ, ಯಾವುದರಲ್ಲಿ ಹಿಂಸೆ ಇಲ್ಲವೋ ಅದು ಎಂದರ್ಥ, ಬಹುವ್ರೀಹಿಯಾದ್ದರಿಂದ ಪೂರ್ವಪದಪ್ರಕೃತಿಸ್ವರ ಪ್ರಾಪ್ತವಾದರೆ ಅದನ್ನು ಬಾಧಿಸಿ ನಞ್-ಸುಭ್ಯಾಮ್ (ಪಾ. ಸೂ. ೬-೨-೧೭೨) ಎಂಬುದರಿಂದ ಉತ್ತರಪದಕ್ಕೆ ಅಂತೋದಾತ್ತ ಬರುವುದು. ನಸ್+ ಅಧ್ವರಮ್ ಎಂದಿರುವಾಗ ನಸಜುಷೋರುಃ (ಪಾ. ಸೂ. ೮-೨-೬೬) ಎಂಬುದರಿಂದ ಸ್ ಗೆ ರು ಆದೇಶ. ಅತೋ-ರೋರಪ್ಲುತಾದಪ್ಲುತೇ (ಪಾ. ಸೂ. ೬-೧-೧೧೩) ಎಂಬುದರಿಂದ ರುಗೆ ಉತ್ವ, ನ+ಉ+ಅಧ್ವರಮ್. ಆದ್ಗುಣಃ (ಪಾ. ಸೂ. ೬-೧-೮೭) ಎಂಬುದರಿಂದ ಗುಣ, ನೋ+ಅಧ್ವರಮ್ ಎಂದಾಗುವುದು. ಈಗ ಸಂಹಿತಾಕಾಲದಲ್ಲಿ ಏಙಃಪದಾಂತಾದತಿ (ಪಾ. ಸೂ. ೬-೧-೧೦೯) ಪದದಕೊನೆಯಲ್ಲಿರುವ ಏ ಓ ಗಳಿಗೆ ಹ್ರಸ್ವಾಕಾರ ಪರದಲ್ಲಿರುವಾಗ ಪೂರ್ವರೂಪ ಬರುವುದು ಎಂಬುದರಿಂದ ಪೂರ್ವರೂಪವು ಪ್ರಾಪ್ತವಾಗುವುದು. ಆದರೂ ಪ್ರಕೃತ್ಯಾನ್ತಃ ಪಾದಮವ್ಯಪರೇ (ಪಾ. ಸೂ. ೬-೧-೧೧೫) ಋಕ್ಪಾದದ ಮಧ್ಯದಲ್ಲಿರುವ ಏ ಓ ಗಳಿಗೆ ವಕಾರ ಯಕಾರಗಳ ಹಿಂದಿಲ್ಲದ ಹ್ರಸ್ವಾಕಾರ ಪರದಲ್ಲಿದ್ದರೆ ಪ್ರಕೃತಿಭಾವ ಬರುವುದು ಎಂಬುದರಿಂದ ಪ್ರಕೃತಿಭಾವ ಬರುವುದು. ಆದ್ದರಿಂದ ಪೂರ್ವರೂಪವು ಬರುವುದಿಲ್ಲ. ನೋ ಅಧ್ವರೇ ಎಂದೇ ಇರುವುದು ॥ ೧೧ ॥

॥ ಸಂಹಿತಾಪಾಠಃ ॥

ಯುಕ್ಷ್ವಾ ಹ್ಯರುಷೀ ರಥೇ ಹರಿತೋ ದೇವ ರೋಹಿತಃ।
ತಾಭಿರ್ದೇವಾँ ಇಹಾ ವಹ ॥ ೧೨ ॥

॥ ಪದಪಾಠಃ ॥

ಯುಕ್ಷ್ವ । ಹಿ । ಅರುಷೀಃ । ರಥೇ । ಹರಿತಃ । ದೇವ । ರೋಹಿತಃ ॥
ತಾಭಿಃ । ದೇವಾನ್ । ಇಹ । ಆ । ವಹ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ದೇವಾಗ್ನೇ ರೋಹಿತೋ ರೋಹಿಚ್ಛಬ್ದಾಭಿಧೇಯಾಸ್ತದ್ವೀಯಾ ವಡವಾ ರಥೇ ಯುಕ್ಷ್ವ । ಯೋಜಯ । ಹಿಶಬ್ದಃ ಪಾದಪೂರಣಾರ್ಥಃ । ಕೀದೃಶೀಃ । ಅರುಷೀರ್ಗತಿಮತೀರ್ಹರಿತೋ ಹರ್ತುಂ ರಥಾರೂಢಾನ್ಪುರುಷಾನ್ನೇತುಂ ಸಮರ್ಥಾಃ । ತಾಭಿರ್ವಡವಾಭಿರಿಹಾಸ್ಮಿನ್ಕರ್ಮಣಿ ದೇವಾನಾ ವಹ॥ ಯುಕ್ಷ್ವ । ಯುಜಿರ್ ಯೋಗೇ । ಲೋಟ್ । ಸ್ವರಿತೇತ್ವಾದಾತ್ಮನೇಪದಂ । ಥಾಸಃ ಸೇ । ಸವಾಭ್ಯಾಂ ವಾಮೌ । ರುಧಾದಿಭ್ಯಃ ಶ್ನಮ್ । ತಸ್ಯ ಬಾಹುಲಕಾಲ್ಲುಕ್ । ಕುತ್ವಷತ್ವೇ । ಪ್ರತ್ಯಯಸರ್ವೇಣಾಂತೋದಾತ್ತಃ । ಸಂಹಿತಾಯಾಂ ದ್ವ್ಯಚೋಽತಸ್ತಿಙ ಇತಿ ದೀರ್ಘ । ಅರುಷೀಃ । ಋ ಗತೌ । ರಂತಿ ಗಚ್ಛಂತೀತ್ಯರುಷ್ಯೋ ವಡವಾಃ । ಋಹನಿಭ್ಯಾಮುಷನ್ । ಉ. ೪-೭೩ । ಧಾತೋರ್ಗುಣೋ ರಪರತ್ವಂ । ನಿತ್ತ್ವಾದಾದ್ಯುದಾತ್ತ್ವೋ ಋರುಷಶಬ್ದಃ। ತಸ್ಮಾತ್ಸ್ತ್ರಿಯಾಂ ಙೀಪ್। ಶಸಿ ಪ್ರಥಮಯೋಃ ಪೂರ್ವಸವರ್ಣಃ। ಪಾ ೬-೧-೧೦೨ । ಇತಿ ದೀರ್ಘಃ । ರಥೇ । ರಮೇರೌಣಾದಿಕಃ ಕ್ಥನ್ಪ್ರತ್ಯಯಃ । ನಿತ್ತ್ವಾದಾದ್ಯುದಾತ್ತಃ । ಹರಿತಃ। ಹೃಸೃರುಹಿಯುಷಿಭ್ಯ ಇತಿಃ । ಉ. ೧-೯೯ । ಇತಿ ಹರತೇರಿತಿಪ್ರತ್ಯಯಃ । ಇಕಾರಃ ಪ್ರತ್ಯಯಸ್ವರೇಣೋದಾತ್ತಃ । ರೋಹಿತಃ । ರುಹೇರಪಿ ತೇನೈವ ಸೂತ್ರೇಣೇತಿಃ । ಇಕಾರಃ ಪ್ರತ್ಯಯಸ್ವರೇಣೋದಾತ್ತಃ । ತಾಭಿಃ । ಸಾವೇಕಾಚ ಇತಿ ವಿಭಕ್ತೇಃ ಪ್ರಾಪ್ತಮುದಾತ್ತತ್ವಂ ಸಾವನರ್ಧೀತಿ ನಿಷಿಧ್ಯತೇ । ದೇವಾನಿತ್ಯತ್ರ ಪೂರ್ವವದ್ಯತ್ವಾನುನಾಸಿಕೌ ॥ ೨೭ ॥

॥ ಪ್ರತಿಪದಾರ್ಥ ॥

ದೇವ—ಪ್ರಕಾಶಮಾನನಾದ ಅಗ್ನಿಯೇ । ಅರುಷೀಃ—ವೇಗವಾಗಿ ಓಡಬಲ್ಲ । ಹರಿತಃ—ಎಳೆಯಲು ಸಮರ್ಥಗಳಾದ । ರೋಹಿತಃ—ರೋಹಿತ್ ಎಂಬ ಹೆಸರುಳ್ಳ ನಿನ್ನ ಹೆಣ್ಣು ಕುದುರೆಗಳನ್ನು । ರಥೇ—ರಥಕ್ಕೆ ಯುಕ್ಷ್ವ—ಸೇರಿಸು (ನೊಗಕ್ಕೆ ಕಟ್ಟು) । ತಾಭಿಃ—ಆ ಹೆಣ್ಣು ಕುದುರೆಗಳ ಸಹಾಯದಿಂದ । ಇಹ—ಈ ನಮ್ಮ ಯಜ್ಞಕರ್ಮನಿಮಿತ್ತವಾಗಿ । ದೇವಾನ್—ದೇವತೆಗಳನ್ನು । ಆ ವಹ—ಕರೆದುಕೊಂಡು ಬಾ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ದೇವತಾತ್ಮನು. ರೋಹಿತ್ ಎಂಬ ನಿನ್ನ ಹೆಣ್ಣುಕುದುರೆಗಳು ಬಲಶಾಲಿಗಳು. ವೇಗವಾಗಿ ಓಡಬಲ್ಲವು. ಕುಳಿತಿರುವವರನ್ನು ಅನಾಯಾಸವಾಗಿ ಎಳೆಯಬಲ್ಲವು. ಆ ಕುದುರೆಗಳನ್ನು ನಿನ್ನ ರಥಕ್ಕೆ ಕಟ್ಟಿ ಅವುಗಳ ಸಹಾಯದಿಂದ ನಮ್ಮ ಈ ಯಜ್ಞಕರ್ಮನಿಮಿತ್ತವಾಗಿ ದೇವತೆಗಳನ್ನು ಕರೆದುಕೊಂಡುಬಾ.

English Translation.

Agni, harness your twany red mares to your chariot and by means of them bring the gods hither.

॥ ವಿಶೇಷವಿಷಯಗಳು ॥

ಯುಕ್ಷ್ವ— ಛಂದಸ್ಸಿನ ಅನುಕೂಲಕ್ಯಾಗಿ ಅಂತ್ಯಾಕ್ಷರವು ಸಂಹಿತಾಪಾಠದಲ್ಲಿ ದೀರ್ಘವಾಗಿರುವುದು.

ಅರುಷೀಃ— ಋ ಗತೌ । ರಂತಿ ಗಚ್ಛಂತೀತ್ಯರುಷ್ಯೋ ವಡವಾಃ ॥

ಋ ಎಂಬ ಧಾತುವಿಗೆ ಗಮನಾರ್ಥವಿರುವುದು. ಅಶ್ವಗಳು ಗತಿಯುಕ್ತವಾದವುಗಳಾದುದರಿಂದ ಅರುಷ್ಯಃ ಎಂದು ಹೇಳಲ್ಪಡುವವು, ಅರುಷೀಃ ಎಂಬದು ದ್ವಿತೀಯಾ ಬಹುವಚನವು.

॥ ವ್ಯಾಕರಣಪ್ರಕ್ರಿಯಾ ॥

ಯುಕ್ಷ್ವ— ಯುಜಿರ್ ಯೋಗೇ ಧಾತು. ಲೋಟ್. ಧಾತುವು ಸ್ವರಿತೇತ್ತಾದ್ದರಿಂದ ಆತ್ಮನೇಪದ ಪ್ರತ್ಯಯ ಬರುವುದು. ಮಧ್ಯಮಪುರುಷ ಏಕವಚನ ಥಾಸ್. ಥಾಸ್‌ಗೆ **ಥಾಸಸ್ಸೇ** (ಪಾ. ಸೂ. ೩-೪-೮೦) ಎಂಬುದರಿಂದ ಸೇ ಆದೇಶ. **ಸವಾಭ್ಯಾಂವಾಮೌ** (ಪಾ.ಸೂ. ೩-೪-೯೧) ಎಂಬುದರಿಂದ ಏಕಾರಕ್ಕೆ ವಕಾರಾದೇಶ **ರುಧಾದಿಭ್ಯಃಶ್ನಮ್** (ಪಾ. ಸೂ. ೩-೧-೭೮) ಎಂಬುದರಿಂದ ಶ್ನಮ್ ವಿಕರಣ. ಅದಕ್ಕೆ **ಬಹುಲಂಛಂದಸಿ** (ಪಾ. ಸೂ. ೨.೪-೭೩) ಎಂಬುದರಿಂದ ಲುಕ್. ಯುಜ್+ಸ್ವ ಚೋಃಕುಃ (ಪಾ. ಸೂ. ೮-೨-೩೦) ಎಂಬುದರಿಂದ ಚವರ್ಗದ ತೃತೀಯವರ್ಣವಾದ ಜಕಾರಕ್ಕೆ ಕವರ್ಗದ ತೃತೀಯವರ್ಣ ಗಕಾರ. ಯುಗ್+ಸ್ವ ಖರಿಚ (ಪಾ. ಸೂ. ೮-೪-೫೫) ಎಂಬುದರಿಂದ ಚರ್ತ್ವಬಂದರೆ ಗಕಾರಕ್ಕೆ ಕಕಾರ. **ಆದೇಶ ಪ್ರತ್ಯಯಯೋಃ** (ಪಾ. ಸೂ. ೮-೩-೫೯) ಎಂಬುದರಿಂದ ಸಕಾರಕ್ಕೆ ಷಕಾರ. ಯುಕ್ಷ್ವ ಎಂದಾಗುವುದು. ಪಾದಾದಿಯಲ್ಲಿರುವುದರಿಂದಲೂ ಪದದ ಮುಂದೆ ಇಲ್ಲದೇ ಇರುವುದರಿಂದಲೂ **ತಿಙ್ಶಿತಿಜಃ** (ಪಾ. ಸೂ. ೮-೧-೭೮) ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ- ಪ್ರತ್ಯಯಸ್ವರ ಬರುವುದು. ಆದ್ದರಿಂದ ಯುಕ್ಷ್ವ ಎಂಬುದು ಅಂತೋದಾತ್ತ. ಸಂಹಿತಾ ಕಾಲದಲ್ಲಿ **ದ್ವ್ಯಚೋಽತಸ್ತಿಙಃ** (ಪಾ. ಸೂ ೬-೩-೧೩೫) ಎಂಬುದರಿಂದ ಯುಕ್ಷ್ವ ಎಂಬುದರ ಅಕಾರಕ್ಕೆ ದೀರ್ಘ.

ಅರುಷೀಃ— ಋ ಗತೌ ಧಾತು. ಋ ಧಾತುವು ಭ್ವಾದಿಯಲ್ಲಿ ಋ ಗತಿಪ್ರಾಪಣಯೋಃ ಎಂದು ಪಠಿತವಾಗಿರುವುದು. ಇದರ ಮುಂದೆ ಲಟ್ ಪ್ರಥಮಪುರುಷ ಬಹುವಚನ ಝಿ. **ಝೋಽಂತ್ಯಾತ್** ಎಂಬುದರಿಂದ ಝಕಾರಕ್ಕೆ ಅನ್ತಾದೇಶ **ಕರ್ತರಿಶಪ್** (ಪಾ. ಸೂ. ೪-೧-೬೮) ಎಂಬುದರಿಂದ ಶಪ್, ಋ+ಅ-ಅನ್ತಿ. ಈಗ **ಪಾಘ್ರಾಧ್ಮಾ** ಎಂಬುದರಿಂದ ಋಗೆ ಋಚ್ಛಾದೇಶ ಬಂದರೆ ಋಚ್ಛನ್ತಿ ಎಂದಾಗುವುದು. ಇನ್ನೊಂದು ಋ ಧಾತುವು ಜುಹೋತ್ಯಾದಿಯಲ್ಲಿ ಋಸೃಗತೌ ಎಂದು ಪಠಿತವಾಗಿರುವುದು. ಇದರ ಮುಂದೆ ಲಟ್, ಅದಕ್ಕೆ ಝಿ. **ಕರ್ತರಿಶಪ್** (ಪಾ. ಸೂ. ೩-೧-೬೮) ಎಂಬುದರಿಂದ ಶಪ್. ಅದಕ್ಕೆ **ಜುಹೋತ್ಯಾದಿಭ್ಯಃ ಶ್ಲುಃ** (೭-೪-೭೫) ಶ್ಲು **ಲೋಪ** ಒರುವುದು **ಶ್ಲೌ** ಎಂಬುದರಿಂದ ದ್ವಿತ್ವ ಋ+ಋ+ಝಿ **ಉರತ್** (ಪಾ. ಸೂ. ೭.೪-೬೬) ಎಂಬುದರಿಂದ ಅಭ್ಯಾಸದಲ್ಲಿರುವ ಋಕಾರಕ್ಕೆ ಅತ್ವವು ರ ಪರವಾಗಿ ಬರುತ್ತೆ. ಅಕಾರಕ್ಕೆ **ಇತ್ವ. ಅರ್ತಿಪಿಪರ್ತೋಶ್ಚ** ಎಂಬುದರಿಂದ ಅಕಾರಕ್ಕೆ ಇತ್ವ ಬರುವುದು. ಇರ್+ಋ+ಝಿ. ಹಲಾದಿಃಶೇಷಃ ಎಂಬುದರಿಂದ ರೇಫಕ್ಕೆ ನಿವೃತ್ತಿ. ಝಿಯು **ಸಾರ್ವಧಾತುಕಮಪಿತ್** ಎಂಬುದರಿಂದ ಙಿತ್ತಾಗುವುದರಿಂದ ಉತ್ತರಖಂಡವಾದ ಋಗೆ ಗುಣ ಬರುವುದಿಲ್ಲ. ಅಭ್ಯಾಸಸ್ಯಾಸವರ್ಣೇ ಎಂಬುದರಿಂದ ಇಗೆ ಇಯಙಾದೇಶ, ಇಯ್+ಋ+ಝಿ **ಅಡಭ್ಯಸ್ತಾತ್** (ಪಾ. ಸೂ. ೭-೧-೯) ಅಭ್ಯಸ್ತದ್ದಮುಂದೆ ಇರುವ ಝಕಾರಕ್ಕೆ ಅತ್ ಆದೇಶ ಬರುವುದು ಎಂಬುದರಿಂದ ಅತ್ ಆದೇಶವು ಝಕಾರಕ್ಕೆ

ಬರುವುದು. ಇಕೋ ಯಣಚಿ (ಪಾ. ಸೂ. ೬-೧-೭೭) ಎಂಬುದರಿಂದ ಯಣಾದೇಶ. ಋಕಾರಕ್ಕೆ ರೇಫ ಬರುವುದು. ಇಯರ್ತಿ ಎಂದಾಗುವುದು. ಏವಂಚ ಋ ಧಾತುವಿನಲ್ಲಿ ರಸ್ತಿ ಎಂದು ರೂಪವು ಆಗುವುದಿಲ್ಲ. ಇಲ್ಲಿ ಇಯರ್ತಿ ಅಥವಾ ಋಚ್ಛತ್ಯಿ ಗಚ್ಛತ್ಯಿ ಇತಿ ಅರುಷ್ಯಃ ಪಡವಾಃ ಎಂದು ವಿಗ್ರಹವು ಯುಕ್ತವು. ಋಹನಿಭ್ಯಾಮುಷನ್ (ಉ. ಸೂ. ೪-೫೧೩) ಋ ಗತೌ, ಹನ ಹಿಂಸಾಗತ್ಯೋಃ ಈ ಧಾತುಗಳ ಮುಂದೆ ಉಷನ್ ಪ್ರತ್ಯಯ ಬರುವುದು ಎಂಬುದರಿಂದ ಋ ಧಾತುವಿನ ಮುಂದೆ ಉಷನ್ ಪ್ರತ್ಯಯ. ಸಾರ್ವಧಾತುಕಾರ್ಧಧಾತುಕಯೋಃ ಎಂಬುದರಿಂದ ಋಕಾರಕ್ಕೆ ಗುಣ. ಅದು ರ ಪರವಾಗಿ ಬರುವುದು. ಅರುಷ ಎಂದಾಗುವುದು. ಈಗ ಉಪಲಬ್ಧವಾಗುವ ಉಣಾದಿ ಸೂತ್ರಪಾಠದಲ್ಲಿ ಋಹನಿಭ್ಯಾಮೂಷನ್ ದೀರ್ಘಪಾಠವು ಇರುವುದು. ಆ ಪಕ್ಷದಲ್ಲಿ ಇಲ್ಲಿ ಊಕಾರಕ್ಕೆ ಹ್ರಸ್ವವು ಛಾಂದಸವಾಗಿ ಬರುವುದು. ಅರುಷ ಎಂಬುದು ನಿಶ್ಚಿತ್ವರದಿಂದ ಆದ್ಯುದಾತ್ತ. ಇದರ ಮುಂದೆ ಛಾಂದಸವಾಗಿ ಜಸ್. ಯೆಸ್ಯೇತಿಚೆ (ಪಾ. ಸೂ. ೬-೪-೧೪೮) ಎಂಬುದರಿಂದ ಆಕಾರ ಲೋಪ, ಅರುಷೀ ಎಂದಾಯ್ತು. ದ್ವಿತೀಯಾ ಬಹುವಚನ ಶಸ್. ಪ್ರಥಮಯೋಃ ಪೂರ್ವಸವರ್ಣಃ (ಪಾ. ಸೂ. ೬-೧-೧೦೨) ಎಂಬುದರಿಂದ ಪೂರ್ವಸವರ್ಣ ದೀರ್ಘ, ರುತ್ವ ವಿಸರ್ಗಗಳು. ಅರುಷೀಃ ಎಂದಾಗುವುದು.

ರಥೇ—ರಮು ಕ್ರೀಡಾಯಾಮ್. ರಮನ್ತೇ ಅಸ್ಮಿನ್ನಿತಿ ರಥಃ । ಹನಿಕುಷಿನೀರಮಿಕಾಶಿಭ್ಯಃಕ್ಥನ್ (ಉ. ಸೂ. ೩-೧೫೯) ಎಂಬುದರಿಂದ ಕ್ಥನ್ ಪ್ರತ್ಯಯ. ಏಕಾಚೋ ಉಪದೇಶೇಽನುದಾತ್ತಾತ್ (೭-೨-೧೦) ಎಂಬುದರಿಂದ ಇಡಾಗಮಕ್ಕೆ ನಿಷೇಧ. ಅನುದಾತ್ತೋಪದೇಶ (ಪಾ. ಸೂ. ೬-೪-೩೭) ಎಂಬುದರಿಂದ ಮಕಾರಕ್ಕೆ ಲೋಪ. ನಿಶ್ಚಿತ್ವರದಿಂದ ಆದ್ಯುದಾತ್ತ.

ಹರಿತಃ—ಹೃಸೃರುಹಿಯುಷಿಭ್ಯಃ ಇತಿಃ (ಉ.ಸೂ. ೧೧೬) ಹೃಞ್ ಹರಣೇ, ಸೃ ಗತೌ, ರುಹ ಬೀಜ ಜನ್ಮನಿ, ಯುಸ್ ಸೌತ್ರಧಾತು ಇವುಗಳ ಮುಂದೆ ಇತಿ ಪ್ರತ್ಯಯ ಬರುವುದು ಎಂಬುದರಿಂದ ಹೃ ಧಾತುವಿನ ಮುಂದೆ ಇತಿ ಪ್ರತ್ಯಯ ಹೃ+ಇತ್. ಸಾರ್ವಧಾತುಕಾರ್ಧಧಾತುಕಯೋಃ ಎಂಬುದರಿಂದ ಗುಣ, ರಪರ ಹರಿತ್ ಎಂದಾಯ್ತು. ಪ್ರತ್ಯಯ ಸ್ವರದಿಂದ ಇಕಾರವು ಉದಾತ್ತ. ದ್ವಿತೀಯಾ ಬಹುವಚನಾಂತ.

ರೋಹಿತಃ—ರುಹ ಬೀಜಜನ್ಮನಿ ಧಾತು. ರುಹಧಾತುವಿನ ಮುಂದೆಯೂ ಹೃಸೃ (ಉ. ಸೂ. ೧-೮೭) ಎಂಬುದರಿಂದ ಇತಿ ಪ್ರತ್ಯಯ. ಇಕಾರವು ಪ್ರತ್ಯಯಸ್ವರದಿಂದ ಉದಾತ್ತ . ಪುಗಂತಲಘೂಪಧಸ್ಯಚೆ (ಪಾ. ಸೂ. ೭-೩-೮೬) ಎಂಬುದರಿಂದ ಲಘೂಪಧಗುಣ. ಉಕಾರಕ್ಕೆ ಓಕಾರ, ದ್ವಿತೀಯಾಬಹುವಚನದಲ್ಲಿ ರೋಹಿತಃ ಎಂದಾಗುವುದು.

ತಾಭಿಃ—ತದ್ ಶಬ್ದದ ಮುಂದೆ ಭಿಸ್. ತ್ಯದಾದೀನಾಮಃ (ಪಾ. ಸೂ. ೭-೩-೧೦೨) ಎಂಬುದರಿಂದ ದಕಾರಕ್ಕೆ ಅಕಾರ. ಅತೋಗುಣೇ (ಪಾ. ಸೂ. ೬-೧-೯೭) ಎಂಬುದರಿಂದ ಪರರೂಪ. ಅಜಾದ್ಯತಷ್ಟಾಪ್ (ಪಾ. ಸೂ. ೪-೧-೪) ಎಂಬುದರಿಂದ ಟಾಪ್ ಸವರ್ಣದೀರ್ಘ ತಾಭಿಃ ಎಂದಾಗುವುದು. ಸಾನೇಕಾಚಸ್ತೃತೀಯಾದಿರ್ವಿಭಕ್ತಿಃ (ಪಾ. ಸೂ. ೬-೧-೧೬೯) ಎಂಬುದರಿಂದ ವಿಭಕ್ತಿಗೆ ಪ್ರಾಪ್ತವಾಗುವ ಉದಾತ್ತಸ್ವರಕ್ಕೆ ಪಗೋಶ್ವನ್ಸಾವವರ್ಣ (ಪಾ. ಸೂ. ೬-೧-೧೭೩) ಎಂಬುದರಿಂದ ಪ್ರತಿಷೇಧ ಬರುವುದು. ಅದ್ದರಿಂದ ಅನುದಾತ್ತೌ ಸುಪ್ಪಿತೌ (ಪಾ. ಸೂ. ೩-೧-೪) ಎಂಬುದರಿಂದ ವಿಭಕ್ತಿಯು ಅನುದಾತ್ತ.

ದೇವಾನ್+ಇಹ ಎಂದಿರುವಾಗ ಸಂಹಿತಾಕಾಲದಲ್ಲಿ ದೀರ್ಘಾದಟಿ ಸಮಾನಪಾದೇ (ಪಾ. ಸೂ. ೮-೪-೫೭) ಎಂಬುದರಿಂದ ನಕಾರಕ್ಕೆ ರುತ್ವ. ಅತೋಟಿನಿತ್ಯಮ್ (ಪಾ. ಸೂ. ೮-೩-೩) ಎಂಬುದರಿಂದ

ಆಕಾರಕ್ಕೆ ಅನುನಾಸಿಕ. ಭೋಭಗೋ ಎಂಬುದರಿಂದ ರುಗೆ ಯಾವೇಶ. ಲೋಪಶಾಕಲ್ಯಸ್ಯ (ಪಾ. ಸೂ-೮-೩-೧೯) ಎಂಬುದರಿಂದ ಯಲೋಪ. ಪೂರ್ವತ್ರಾಸಿದ್ಧಮ್ ಎಂಬುದರಿಂದ ಯಲೋಪವು ಅಸಿದ್ಧವಾಗುವುದರಿಂದ ಅದ್ಗುಣಃ ಎಂಬುದರಿಂದ ಗುಣಬರುವುದಿಲ್ಲ. ದೇವಾ ಇಹ ಎಂದಾಗುವುದು ॥ ೧೭ ॥

ಹದಿನೈದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಇಂದ್ರ ಸೋಮಮಿತ್ಯಾದಿಕಸ್ಯ ದ್ವಾದಶರ್ಚಸ್ಯ ಚತುರ್ಥಸ್ಯ ಸೂಕ್ತಸ್ಯ ಋಷಿಶ್ಚೈಂದಿಸೀ ಪೂರ್ವವತ್ । ಯದ್ಯಪ್ಯೇತತ್ಸೂಕ್ತಂ ಕೃತ್ಸ್ನಮೃತುದೇವತಾಕಂ ತಥಾಪಿ ಪ್ರತ್ಯೃಚಮಿಂದ್ರಾದಿದೇವತಾಂತರಾಣಿ ಮಿಲಿತಾನಿ। ತಥಾ ಚಾನುಕ್ರಮ್ಯತೇ। ಇಂದ್ರ ಸೋಮಮೃತವ್ಯಂ ತತ್ರೈಂದ್ರೀ ಮಾರುತೀ ತ್ವಾಷ್ಟ್ರ್ಯಾಗ್ನೇಯ್ಯೈಂದ್ರೀ ಮೈತ್ರಾವರುಣೀ ಚತಸ್ರೋ ದ್ರವಿಣೋದಸ ಆಶ್ವಿನ್ಯಾಗ್ನೇಯ್ಯೃತುದೇವತಾಃ ಸರ್ವತ್ರೇತಿ॥ ವಿನಿಯೋಗಸ್ತು ಸ್ಮಾರ್ತೋ ದ್ರಷ್ಟವ್ಯಃ ॥

ಅನುವಾದವು—ಈ ಅನುವಾಕದ ನಾಲ್ಕನೆಯ ಸೂಕ್ತವಾದ ಇಂದ್ರ ಸೋಮಂ ಪಿಬ ಎಂಬ ಸೂಕ್ತದಲ್ಲಿ ಹನ್ನೆರಡು ಋಕ್ಕುಗಳಿರುವವು. ಋಷಿ ಮತ್ತು ಛಂದಸ್ಸು ಹಿಂದಿನ ಸೂಕ್ತದಂತೆಯೇ. ಈ ಸೂಕ್ತದ ಋಕ್ಕುಗಳೆಲ್ಲಾ ಋತು ದೇವತಾಕವಾಗಿದ್ದರೂ ಆ ಋತುವಿನೊಡನೆ ಪ್ರತಿ ಋಕ್ಕಿನಲ್ಲಿಯೂ ಇಂದ್ರಾದಿದೇವತೆಗಳು ಮಿಳಿತರಾಗಿರುವರು. ಅನುಕ್ರಮಣಿಕೆಯಲ್ಲಿ--ಇಂದ್ರ ಸೋಮಮೃತವ್ಯಂ ತತ್ರೈಂದ್ರೀ ಮಾರುತೀ ತ್ವಾಷ್ಟ್ರ್ಯಾಗ್ನೇಯ್ಯೈಂದ್ರೀ ಮೈತ್ರಾವರುಣೀ ಚತಸ್ರೋ ದ್ರವಿಣೋದಸ ಆಶ್ವಿನಾಗ್ನೇಯ್ಯ ತುದೇವತಾಃ ಸರ್ವತ್ರೇತಿ-ಎಂದರೆ ಈ ಸೂಕ್ತವೆಲ್ಲವೂ ಋತುದೇವತೆಗಳ ಪರವಾಗಿರುವವು. ಆ ಋತುವಿನೊಡನೆ ಇಂದ್ರ, ಮರುತಃ, ತ್ವಷ್ಟಾ, ಅಗ್ನಿ, ಇಂದ್ರಃ ಮಿತ್ರಾವರುಣೌ ಎಂಬ ದೇವತೆಗಳು ಒಂದೊಂದು ಋಕ್ಕಿಗೂ, ಅಲ್ಲಿಂದ ಮುಂದಕ್ಕೆ ನಾಲ್ಕು ಋಕ್ಕುಗಳಿಗೆ ದ್ರವಿಣೋದಾಃ ಎಂಬ ದೇವತೆಯೂ, ಅನಂತರ ಉಳಿದ ಎರಡು ಋಕ್ಕುಗಳಿಗೆ ಕ್ರಮವಾಗಿ ಅಶ್ವಿನೌ, ಅಗ್ನಿಃ ಎಂಬ ದೇವತೆಗಳೂ ಇರುವರು. ವಿನಿಯೋಗವು ಸ್ಮಾರ್ತಪ್ರಯೋಗದಲ್ಲಿ ಇರುವುದನ್ನು ನೋಡಿ ತಿಳಿದುಕೊಳ್ಳಬೇಕು.

॥ ಓಂ ॥

ಸೂಕ್ತ—೧೫

॥ ಮಂಡಲ—೧ ॥ ಅನುವಾಕ—೪ ॥ ಸೂಕ್ತ—೧೫ ॥

॥ ಅಷ್ಟಕ —೧ ॥ ಅಧ್ಯಾಯ—೧ ॥ ವರ್ಗ— ೨೮, ೩೯ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೧–೧೨ ॥

॥ ಋಷಿಃ—ಮೇಧಾತಿಥಿಃ ಕಾಣ್ವಃ ॥

॥ ದೇವತಾ— ॥ ಋತವಃ ॥ ೧-ಇಂದ್ರಃ । ೨-ಮರುತಃ । ೩-ತ್ವಷ್ಟಾ । ೪—ಅಗ್ನಿಃ । ೫—ಇಂದ್ರಃ । ೬—ಮಿತ್ರಾವರುಣೌ । ೭–೧೦–ಪ್ರವಿನೋದಾಃ । ೧೧-ಅಶ್ವಿನೌ । ೧೨—ಅಗ್ನಿಃ ।

॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಇಂದ್ರ॑ ಸೋ॒ಮಂ ಪಿ॑ಬ ಋತು॒ನಾ ತ್ವಾ॒ ವಿಶ॑ನ್ತ್ವಿಂ॒ದ॑ವಃ ।
ಮ॒ತ್ಸ॒ರಾಸ॒ಸ್ತ॒ದೋ॑ಕಸಃ ॥ ೧ ॥

॥ ಪದಪಾಠಃ ॥

ಇಂ॒ದ್ರ॒ । ಸೋ॒ಮ॑ಂ । ಪಿ॒ಬ॒ । ಋ॒ತು॒ನಾ । ಆ । ತ್ವಾ॒ । ವಿಶ॑ನ್ತು । ಇಂ॒ದ॑ವಃ ॥
ಮ॒ತ್ಸ॒ರಾಸ॑ಃ । ತ॒ತ್ಓ॑ಕಸಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಋತುನಾ ಸಹ ಸೋಮಂ ಪಿಬ । ಇಂದವಃ ಪೀಯಮಾನಾಃ ಸೋಮಸ್ತ್ವಾ ತ್ವಾಮಾ ವಿಶಂತು । ಕೀದೃಶಾಃ । ಮತ್ಸರಾಸಸ್ತೃಪ್ತಿಕರಾಃ ತದೋಕಸಸ್ತನ್ನಿವಾಸಾಃ । ಸರ್ವದಾ ತ್ವದುದರಸ್థಾಯಿನ ಇತ್ಯರ್థಃ॥ ಇಂದ್ರ । ಪಾಷ್ಮಿಕಮಾಮಂತ್ರಿತಾದ್ಯುದಾತ್ತತ್ವಂ । ಸೋಮಂ । ಅರ್ತಿಸ್ತುಸ್ವಿತ್ಯಾ-

ದಿನಾ ಮನ್ । ನಿತ್ಯಾದಾದ್ಯುದಾತ್ತೈಃ । ಪಿಬ । ಪಿಬಾ ಮಿತ್ರಸ್ಯ । ಋಗ್ವೇ ೧.೧೪.೧೦ । ಇತ್ಯತ್ರೋಕ್ತಂ। ಅಸ್ಯ ತ್ವಾ ವಿಶಂತ್ವಿತ್ಯುತ್ತರವಾಕ್ಯಗತಾಖ್ಯಾತಾರ್ಥೇನ ಸಹ ಸಮುಚ್ಚೆಯಾರ್ಥತ್ವಶಬ್ದೋ ಲುಪ್ತಃ । ಅತೆ-ಶ್ಚಾದಿಲೋಪೇ ವಿಭಾಷೇತೀಯಂ ಪ್ರಥಮಾ ತಿಙ್ಶಿತ್ಸಪ್ತಮ್ಯರ್ಥಕ್ತಿರ್ನ ನಿಹನ್ಯತೇ ವಿಂತಶ್ವಿತಿ । ಚಿಲೋಪಸಾಮ್ಯೇಽಪಿ ದ್ವಿತೀಯೆತ್ವಾನ್ನಿಹನ್ಯತ ಏವ । ಸಂಹಿತಾಯಾಮಾದ್ಗುಣ ಇತಿ ಪ್ರಾಪ್ತಸ್ಯ ಗುಣಸ್ಯ ಋತ್ಯಕಃ । ಪಾ. ೬-೧ ೧೨೮ । ಇತಿ ಶಾಕಲ್ಯಮತೇ ಪ್ರಕೃತಿಭಾವಾದಭಾವಃ । ಇಂದವಃ । ಪ್ರ ವೋ ಭ್ರಿಯಂತೇ । ಋಗ್ವೇ ೧.೧೪.೪. । ಇತ್ಯತ್ರೋಕ್ತಂ । ಮತ್ಸರಾಸಃ । ತತ್ರೈವೋಕ್ತಂ । ಆಜ್ಜಸೇರಸುಗಿತ್ಯಸುಕ್ । ತದೋಕಸಃ । ತದೇವೌಕಃ ಸ್ಥಾನಂ ಯೇಷಾಂ ತೇ ತಥೋಕ್ತಾಃ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಋತುನಾ ಸಹ—ಋತುದೇವತೆಯೊಂದಿಗೆ । ಸೋಮಂ—ಸೋಮರಸವನ್ನು । ಪಿಬ—ಪಾನಮಾಡು । ಮತ್ಸರಾಸಃ—ತೃಪ್ತಿಯನ್ನು ಕೊಡತಕ್ಕ । ಇಂದವಃ—ಸೋಮರಸಗಳು । ತದೋಕಸಃ—ನಿನ್ನ ಉದರವೆಂಬ ಅದೇಸ್ಥಾನವುಳ್ಳವುಗಳಾಗಿ । ತ್ವಾಂ—ನಿನ್ನನ್ನು (ನಿನ್ನ ಉದರವನ್ನು) ಆ ವಿಶಂತು—ಪ್ರವೇಶಿಸಲಿ.

॥ ಭಾವಾರ್ಥ ॥

ಎಲೈ ಇಂದ್ರನೇ, ಋತುದೇವತೆಯೊಡನೆ ಸೋಮರಸವನ್ನು ಕುಡಿ. ಅದು ನಿನಗೆ ತೃಪ್ತಿಯನ್ನುಂಟು ಮಾಡುತ್ತದೆ. ಮತ್ತು ಶಾಶ್ವತನಾಗಿ ನಿನ್ನ ಉದರದಲ್ಲೇ ನೆಲೆಯಾಗಿ ನಿಲ್ಲುವಂತಹುದಾಗಿ ನಿನ್ನ ಉದರವನ್ನು ಪ್ರವೇಶಿಸಲಿ.

English Translation.

Indra, drink with the Ritu (season) the Soma juice; let the satisfying drops enter your stomach and stay there (as if that were their home).

॥ ವಿಶೇಷವಿಷಯಗಳು ॥

ತದೋಕಸಃ—ತನ್ನಿವಾಸಾಃ । ಸರ್ವದಾ ತ್ವೆದುದರಸ್ಥಾಯಿನ ಇತ್ಯರ್ಥಃ । ತದೈವೌಕಃ ಸ್ಥಾನಂ ಯೇಷಾಂ ತೇ ತದೋಕಸಃ ॥ ಎಂದರೆ ಅದೇ ಸ್ಥಾನವಾಗಿ ಉಳ್ಳ, ನಿನ್ನ ಉದರವೇ ಸೋಮರಸಕ್ಕೆ ಸರ್ವದಾ ಸ್ಥಾನವಾಗಿರುವುದು. ನಿನ್ನ ಉದರದಲ್ಲಿ ಸೋಮರಸವು ಯಾವಾಗಲೂ ಇರಲಿ ಎಂದರೆ ನೀನು ಸರ್ವದಾ ಸೋಮಪಾನ ಮಾಡುತ್ತಿರುವೆ ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಇನ್ದ್ರ—ಆಮನ್ತ್ರಿತಸ್ಯ (ಪಾ. ಸೂ. ೬-೧-೯೮) ಎಂಬ ಆರನೇ ಅಧ್ಯಾಯದಸೂತ್ರದಿಂದ ಆದ್ಯುದಾತ್ತ.

ಸೋಮಮ್—ಅರ್ತಿಸ್ತುಸು (ಉ. ಸೂ. ೧-೧-೩೭) ಎಂಬುದರಿಂದ ಮನ್ ಪ್ರತ್ಯಯ. ಪ್ರತ್ಯಯವು ನಿತ್ತಾದ್ದರಿಂದ ನಿಶ್ಚರ ಆದ್ಯುದಾತ್ತ ಬರುವುದು.

ಪಿಬ—ಪಿಬಾ ಮಿತ್ರಸ್ಯ (ಋ. ಸಂ. ೧-೧೪-೧೦) ಎಂಬಲ್ಲಿ ವಿವೃತವಾಗಿರುವುದು. ಇವಕ್ಕೆ ಆತ್ವಾ ವಿಶನ್ತು ಎಂಬ ಉತ್ತರ ವಾಕ್ಯದಲ್ಲಿರುವ ಆಖ್ಯಾತ (ತಿಙಂತ)ದೊಂದಿಗೆ ಸಮುಚ್ಚಯವನ್ನು ಪ್ರತಿಪಾದಿಸುವ ಚ ಶಬ್ದವು ಲುಪ್ತವಾಗಿರುವುದು ಅಂದರೆ ಪ್ರಯುಕ್ತವಾಗಿಲ್ಲ. ಆದ್ದರಿಂದ **ಚಾದಿಲೋಪೇ ವಿಭಾಷಾ** (ಪಾ. ಸೂ. ೪-೧-೬೩) ಚ, ವಾ, ಹಾ, ಅಹ, ಏವ ಇವುಗಳಿಗೆ ಲೋಪಬಂದಿದ್ದರೆ ಮೊದಲನೆಯ ತಿಙಂತವು ಅನುದಾತ್ತವಾಗುವುದಿಲ್ಲ ಎಂದು ಅರ್ಥ. ಶಾಸ್ತ್ರದಲ್ಲಿ ಚ, ವಾ ಮೊದಲಾದವುಗಳಿಗೆ ಲೋಪವನ್ನು ವಿಧಿಸಿಲ್ಲ. ಆದ್ದರಿಂದ ಇಲ್ಲಿ ಲೋಪವೆಂದರೆ ಪ್ರಯೋಗಮಾಡದೇ ಇರುವುದು. ಅರ್ಥಪ್ರಕರಣಾದಿಗಳಿಂದ ಚಾರ್ಥವು ಗಮ್ಯಮಾನವಾಗುವುದರಿಂದ ಚಾದಿಗಳನ್ನು ಪ್ರಯೋಗ ಮಾಡುವುದಿಲ್ಲ. ಚ ಶಬ್ದಕ್ಕೆ ಸಮುಚ್ಚಯ ಎಂದರ್ಥ. ಅಹ ಶಬ್ದಕ್ಕೆ ಕೇವಲ ಎಂದರ್ಥ. ಎರಡು ತಿಙಂತಗಳಿಗೂ ಕರ್ತೃವು ಒಂದೇ ಆಗಿದ್ದರೆ ಅಲ್ಲಿ ಚ ಶಬ್ದಕ್ಕೆ ಲೋಪ. ಕರ್ತೃವು ಬೇರೆ ಬೇರೆಯಾಗಿದ್ದರೆ ಅಹ ಶಬ್ದಕ್ಕೆ ಲೋಪವೆಂದು ತಿಳಿಯಬೇಕು. ಈ ನಿಯಮವು ಅವಧಾರಣಾರ್ಥಕವಾದ ಏವ ಶಬ್ದಕ್ಕೆ ಪ್ರಯೋಗವಿರುವಾಗ ಮಾತ್ರ. ಎಲ್ಲೆಡೆಗಳಲ್ಲಿಯೂ ಅಲ್ಲ. ಹೀಗೆ ಪ್ರಯೋಗ ಮಾಡದೇ ಇರುವೆಡೆಗಳಲ್ಲಿ ತಿಙಂತಕ್ಕೆ ಅನುದಾತ್ತ ಬರುವುದಿಲ್ಲ. ವಿಶನ್ತು ಎಂಬಲ್ಲಿಯೂ ಚ ಲೋಪವು ಸಮಾನನೇ ಆದರೂ ಅದು ಪ್ರಥಮ ತಿಙಂತವಲ್ಲ. ಆದ್ದರಿಂದ ಅನುದಾತ್ತ ಬಂದೇಬರುವುದು. ಪಿಬ+ಋತುನಾ. ಇಲ್ಲಿ ಸಂಹಿತಾಕಾಲದಲ್ಲಿ **ಆದ್ಗುಣಃ** (ಪಾ.ಸೂ. ೬-೧-೮೭) ಎಂಬುದರಿಂದ ಗುಣಕ್ಕೆ ಯದ್ಯಪಿ ಪ್ರಾಪ್ತಿ ಇರುವುದು. ಆದರೂ **ಋತ್ಯಕಃ** (ಪಾ. ಸೂ. ೬-೧-೭೮) ಪದದ ಕೊನೆಯಲ್ಲಿರುವ ಅ, ಇ, ಉ, ಋ, ಇವುಗಳಿಗೆ ಹ್ರಸ್ವವಾದ ಋಕಾರವು ಪರದಲ್ಲಿದ್ದರೆ ಶಾಕಲ್ಯರ ಮತದಲ್ಲಿ (ಪ್ರಕೃತಿಭಾವ ಬರುವುದು) ಹ್ರಸ್ವ ಬರುವುದು ಎಂಬುದರಿಂದ ಪಿಬ ಶಬ್ದದ ಅಕಾರಕ್ಕೆ ಹ್ರಸ್ವ. ಈ ಹ್ರಸ್ವವಿಧಿ ಸಾಮರ್ಥ್ಯದಿಂದ ಗುಣ ಬರುವುದಿಲ್ಲ. ಈ ಫಲಿತಾರ್ಥವನ್ನಿಟ್ಟುಕೊಂಡು ಪ್ರಕೃತಿಭಾವ ಬರುವುದು ಎಂದು ವಾಖ್ಯಾನ ಮಾಡುವರು.

ಇನ್ದವಃ—ಪ್ರ ವೋ ಭ್ರಿಯನ್ತ ಇನ್ದವಃ (ಋ. ಸಂ. ೧-೧೪-೪) ಎಂಬ ಮಂತ್ರದಲ್ಲಿ ಇದರ ಪ್ರಕ್ರಿಯೆಯು ಉಪಪಾದಿತವಾಗಿರುವುದು. ಇಲ್ಲಿ **ಆಜ್ಜಸೇರಸುಕ್** (ಪಾ. ಸೂ, ೭-೧-೫೦) ಎಂಬುದರಿಂದ ಅಸುಕ್ ಆಗಮವು ಬರುವುದು.

ತದೋಕಸಃ—ತತ್ ಓಕಃ ಸ್ಥಾನಂ ಯೇಷಾಂ ತೇ ತಥೋಕಸಃ ಯಾವ ಸೋಮಗಳಿಗೆ ಇನ್ದ್ರನ ಉದರವೇ ವಾಸಸ್ಥಾನವಾಗಿರುವುದೋ ಅವು. ಬಹುವ್ರೀಹಿಸಮಾಸವಾದ್ದರಿಂದ (ಪಾ. ಸೂ. ೬-೩-೧) **ಬಹುವ್ರೀಹೌಪ್ರಕೃತ್ಯಾಪೂರ್ವಪದಂ** ಎಂಬುದರಿಂದ ಪೂರ್ವಪದಪ್ರಕೃತಿಸ್ವರವು ಬರುವುದು ॥ ೧ ॥

॥ ಸಂಹಿತಾಪಾಠಃ ॥

ಮರುತಃ ಪಿಬತ ಋತುನಾ ಪೋತಾರ್ದ್ವ್ಯಜ್ಞಂ ಪುನೀತನ ।
ಯೂಯಂ ಹಿ ಷ್ಠಾ ಸುದಾನವಃ ॥ ೨ ॥

। ಪದಪಾಠಃ ।

ಮರುತಃ । ಪಿಬತ । ಋತುನಾ । ಪೋತ್ರಾತ್ । ಯಜ್ಞಂ । ಪುನೀತನ ॥
ಯೂಯಂ । ಹಿ । ಷ್ಠ । ಸುದಾನವಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಮರುತಃ ಋತುನಾ ಸಹ ಪೋತ್ರಾತ್ಪೋತೃನಾಮಕಸ್ಯ ಋತ್ವಿಜಃ ಸಾತ್ರಾತ್ಪೋಮಂ ಪಿಬತ । ತತೋಽಸ್ಮದೀಯಂ ಯಜ್ಞಂ ಪುನೀತನ । ಶೋಧಯತ । ಹೇ ಸುದಾನವಃ ಶೋಭನದಾತಾರೋ ಮರುತಃ । ಹಿ ಯಸ್ಮಾದ್ಯೂಯಂ ಸ್ಥ ಯುಷ್ಮಾಕಂ ಶೋಧಯಿತೃತ್ವಂ ಪ್ರಸಿದ್ಧಂ । ತಸ್ಮಾಚ್ಛೋಧಯೇದಮಿತ್ಯರ್ಥಃ ॥ ಪಿಬತ । ಅತ್ರ ತಿಙುತ್ತರಪದೇಶಾಚ್ಚಪಃ ಪರತ್ವಲ್ಲಸಾರ್ವಧಾತುಕಾನುದಾತ್ತತ್ವಂ । ಧಾತುಸ್ವರಃ । ಪೂರ್ವಮಂತ್ರಿತಸ್ಯಾವಿದ್ಯಮಾನವತ್ತ್ವೇನ ಪದಾದಿಪರತ್ವಾನ್ನಿಘಾತಾಭಾವಃ । ಪೂರ್ವವತ್ಪ್ರಕೃತಿಭಾವಃ । ಪೋತ್ರಾತ್ । ಪೋತುಃ ಸಂಬಂಧಿ ಸಾತ್ರಂ ಪೋತ್ರಂ । ತಸ್ಯೇದಮಿತ್ಯಣ್ । ತದ್ಧಿತೇಷ್ವಚಾಮಾದೇಃ । ಪಾ. ೭-೨-೧೧೭ । ಇತಿ ಪ್ರಾಪ್ತಾ ವೃದ್ಧಿಃ ಸರ್ವೇ ವಿಧಯಶ್ಛಂದಸಿ ವಿಕಲ್ಪ್ಯಂತ ಇತಿ ನ ಭವತಿ । ನನ್ವೇವಮಂತ್ಯಸ್ಯ ಯಕಾರಸ್ಯಾಚೋ ಞ್ಣಿತಿ । ಪಾ. ೭-೨-೧೧೫ । ಇತಿ ವೃದ್ಧಿಃ ಪ್ರಾಪ್ನೋತಿ । ತ್ವಾಸ್ಪ್ರ್ಯೇ ಜಾಗತ ಇತ್ಯತ್ರ ಹಿ ವಿಪ್ರತಿಷೇಧೇ ಪರಂ ಕಾರ್ಯಂ । ಪಾ. ೧-೪-೨ । ಇತಿ ಪರಯಾದಿವ್ಯಾಖ್ಯಂತ್ಯೇಽಪಲಕ್ಷಣಾ ವೃದ್ಧಿರ್ಬಾಧ್ಯತ ಇತ್ಯುಕ್ತಂ। ಇಹ ತು ಪರಸ್ಯಾ ಆದಿವೃದ್ಧೇಶ್ಛಾಂದಸತ್ವೇನ ನಿವೃತ್ತತ್ವಾತ್ತದಂತ್ಯವೃದ್ಧಿಃ ಪ್ರಾಪ್ನೋತ್ಯೇವೇತಿ । ಏವಂ ತರ್ಹ್ಯತ್ರಾಪ್ಯಾದಿವೃದ್ಧಿರೌಕಾರಃ ಕ್ರಿಯತಾಂ। ತಸ್ಯ ತು ಛಾಂದಸ ಓಕಾರೋ ಭವಿಷ್ಯತಿ । ಪುನೀತನ । ಪೂಙ್ ಪವನೇ । ಲೋಟ್ । ಲೋಟೋ ಲಙ್ವತ್। ಪಾ ೩-೪-೮೫ । ಇತಿ ಲಬ್ವದ್ಭಾವಾತ್ತಸ್ಯ ತಸ್ಥಸ್ಥಮಿಪಾಮಿತಿ ತಾದೇಶಃ । ಕ್ರ್ಯಾದಿಭ್ಯಃ ಶ್ನಾ । ಈಹಲ್ಯಘೋರಿತೀಕಾರಃ । ತಪ್ತನಪ್ತನಥನಾಶ್ಚೇತಿ ತನಾದೇಶಃ । ಪ್ವಾದೀನಾಂ ಹ್ರಸ್ವ ಇತಿ ಹ್ರಸ್ವಃ । ಪ್ರತ್ಯಯೇದ್ವಯಸ್ಯಾಪಿ ಸಾರ್ವಧಾತುಕಮಪಿದಿತಿ ಙಿತ್ತ್ವಾತ್ಸ್ವಸ್ಯ ಪೂರ್ವಯೋರಿಕೋರ್ಗುಣಾಭಾವಃ । ಯೂಯಂ । ಯುಷ್ಮದಃ । ಪರಸ್ಯ ಜಸೋ ಜೀಪ್ರಥಮಯೋರಂ । ಪಾ. ೭-೧-೨೮। ಇತ್ಯಮಾದೇಶಃ । ನ ವಿಭಕ್ತೌ ತುಸ್ಮಾಃ । ಪಾ. ೧-೪-೪ । ಇತಿ ಮಕಾರಸ್ಯೇತ್ಸಂಜ್ಞಾಪ್ರತಿಷೇಧಃ । ಯೂಯವಯೌ ಜಸಿ । ಪಾ. ೭-೨-೯೩ । ಇತಿ ಮಪರ್ಯಂತಸ್ಯ ಯೂಯಾದೇಶಃ । ಶೇಷೇ ಲೋಪಃ । ಅತ್ರ ಯೂಯಾದೇಶಾತ್ಪ್ರಾಗೇವಾಂಗತ್ವಾತ್ಪ್ರತಿಪದಿಕಸ್ಯಾಂತೋದಾತ್ತತ್ವಂ । ಶೇಷನಿಘಾತಃ । ತತೋ ಯೂಯಾದೇಶಃ ಸ್ಥಾನೇಂತರತಮಃ । ಪಾ. ೧-೧-೫೦ । ಇತಿ ಸರ್ವಾನುದಾತ್ತಃ । ತತ್ರ ಶೇಷೇ ಲೋಪೋಽಂತ್ಯಲೋಪ ಇತಿ ಪಕ್ಷೇ ಪೂರ್ವಸವರ್ಣದೀರ್ಘತ್ವಂ ಬಾಧಿತ್ವಾ ಯೋಽಯಮಮಿ ಪೂರ್ವಃ । ಪಾ. ೬-೧-೧೦೭ । ಇತಿ ಪ್ರಾತಿಪದಿಕಾಂತೇನೋದಾತ್ತೇನ ಸಹಾನುದಾತ್ತಸ್ಯ ಸುಪ ಏಕಾದೇಶಃ ಸ ಏಕಾದೇಶ ಉದಾತ್ತೇನೋದಾತ್ತ ಇತ್ಯುದಾತ್ತಃ । ಟಿಲೋಪಪಕ್ಷೇ ತೂದಾತ್ತನಿವೃತ್ತಿಸ್ವರೇಣ ವಿಭಕ್ತೇರುದಾತ್ತತ್ವಂ । ಸ್ಥ । ಅಸ ಭುವಿ । ಲಟೋ ಮಧ್ಯಮಬಹುವಚನಂ ಥ । ಅದಿಪ್ರಭೃತಿಭ್ಯಃ ಶಪಃ ಇತಿ ಶಪೋ ಲುಕ್ । ಶ್ನಸೋರಲ್ಲೋಪಃ ಇತ್ಯಕಾರಲೋಪಃ । ವ್ಯತ್ಯಯೇನ ಪಕ್ಷಂ । ಹಿ ಚೇತಿ ನಿಪೇಧಾತ್ತಿಙ್ಶಿತಿಙ ಇತಿ ನಿಘಾತೋ ನ ಭವತಿ । ಸಂಹಿತಾ-

ಯಾಮನ್ಯೇಷಾಮಪಿ ದೃಶ್ಯತೇ ಇತಿ ದೀರ್ಘತ್ವಂ । ಅತ್ರ ಹೇ ಸುದಾನವೋ ಯೂಯಂ ಹಿ ಸ್ಥೇತಿ ವಿವಕ್ಷಿತಂ । ಸುದಾನವಃ । ದಾಭಾಭ್ಯಾಂ ನುಃ । ಉ. ೩-೩೨ । ಸೋಃ ಪ್ರಾದಿಸವಾಸಃ । ಅಮಂತ್ರಿತನಿಘಾತಃ । ಅತ್ರ ಯೂಯಮಿತ್ಯುದ್ದಿಶ್ಯ ಸುದಾನವಃ ಸ್ಥೇತಿ ನ ವಿಧೀಯತೇ ಯೇನಾನಾಮಂತ್ರಿತತ್ವಾನ್ನಿಘಾತೋ ನ ಸ್ಯಾತ್ । ಕಿಂತು ಸುದಾನವ ಇತಿ ಸಿದ್ಧವದ್ದ್ಯಾತೃತ್ವೇನ ಸಂಬೋಧ್ಯ ತೇಷು ತೇಷು ಮಾರುತಸೂಕ್ತೇಷು ಮರುತಾಂ ಪ್ರಸಿದ್ಧಾತ್ಪ್ರಭಾವಾತಿಶಯಾದ್ಯೂಯಂ ಸ್ಥೇತಿ ಯುಷ್ಮಚ್ಛಬ್ದೇನ ಪ್ರತಿನಿರ್ದಿಶ್ಯ ಪುನೀತನೇತಿ ಪ್ರಾರ್ಥನೇ ಪವನೇ ತೇಷಾಂ ಹೇತುತ್ವಂ ಹಿಶಬ್ದೇನೋಚ್ಯತೇ ॥

॥ ಪ್ರತಿಪದಾರ್ಥ ॥

ಮರುತಃ—ಎಲೈ ಮರುತ್ತುಗಳೇ । **ಋತುನಾ**—ಋತುದೇವತೆಯೊಂದಿಗೆ । **ಪೋತ್ರಾತ್**—ಪೋತೃ ವೆಂಬ ಋತ್ವಿಕ್ಕಿನ ಪಾತ್ರೆಯಿಂದ । **ಪಿಬತ**—(ಸೋಮರಸವನ್ನು) ಕುಡಿಯಿರಿ, (ಅನಂತರ) । **ಯಜ್ಞಂ**—ನಮ್ಮ ಯಜ್ಞವನ್ನು । **ಪುನೀತನ**—ಪವಿತ್ರಗೊಳಿಸಿ । **ಸುದಾನವಃ**—ಚೆನ್ನಾಗಿ ಇಷ್ಟಾರ್ಥಗಳನ್ನು ಕೊಡುವ ಮರುದ್ದೇವತೆಗಳೇ । **ಯೂಯಂ**—ನೀವು । **ಹಿ ಸ್ಥ**—ಮಂತ್ರಗಳಲ್ಲಿ ಅಂತಹವರೆಂದು ಪ್ರಸಿದ್ಧರಲ್ಲವೇ ?

॥ ಭಾವಾರ್ಥ ॥

ಎಲೈ ಮರುತ್ತುಗಳೇ, ಮೊದಲು ಋತುದೇವತೆಯೊಂದಿಗೆ ಪೋತೃವೆಂಬ ಋತ್ವಿಕ್ಕಿನ ಪಾತ್ರೆಯಿಂದ ನಮ್ಮ ಯಜ್ಞದ ಸೋಮರಸವನ್ನು ಕುಡಿದು ಅನಂತರ ನಮ್ಮ ಯಜ್ಞವನ್ನು ಪವಿತ್ರವನ್ನಾಗಿ ಮಾಡಿ. ಎಲೈ ಇಷ್ಟಾರ್ಥಗಳನ್ನು ಕೊಡುವ ಮರುತ್ತುಗಳೇ, ಅಂತಹ ಪ್ರಭಾವಶಾಲಿಗಳೆಂದು ಮಂತ್ರಗಳಲ್ಲಿ ಪ್ರಸಿದ್ಧರಾದವರು ನೀವೇ ಆಗಿದ್ದೀರಲ್ಲವೇ ?

English Translation.

O Maruts, drink with Ritu from the Potri's sacrificial cup; consecrate the sacrifice, for you are great givers.

॥ ವಿಶೇಷವಿಷಯಗಳು ॥

ಪೋತ್ರಾತ್—ಯಜ್ಞದಲ್ಲಿ ಭಾಗವಹಿಸುವ ಹದಿನಾರು ಜನ ಋತ್ವಿಜರಲ್ಲಿ ಪೋತೃನೆಂಬುವನೂ ಒಬ್ಬನು. ಇವನು ಸಾಧಾರಣವಾಗಿ ನೇಷ್ಟಾ ಎಂಬ ಋತ್ವಿಜನೊಡನೆ ಸಹಕರಿಸಿ ಕೆಲಸವಮಾಡುವನು. ಇಲ್ಲಿ **ಪೋತ್ರಾತ್ ಪಿಬತ** ಎಂಬ ಶಬ್ದಕ್ಕೆ **ಪೋತುಃ ಸಂಬಂಧಿಪಾತ್ರಾತ್ ಸೋಮಂ ಪಿಬತ** ಎಂದರೆ ಪೋತೃನ ಪಾತ್ರೆಯಲ್ಲಿರುವ ಸೋಮರಸವನ್ನು ಪಾನಮಾಡು ಎಂದು ಭಾಷ್ಯಕಾರರು ಅರ್ಥವಿವರಣೆ ಮಾಡಿರುವರು.

ಸುದಾನವಃ—ಶೋಭನದಾತಾರಃ, ಅಥವಾ ಸುಷ್ಠು ದಾತಾರಃ—ಒಳ್ಳೆಯ ಪದಾರ್ಥಗಳನ್ನು ಕೊಡುವವರು ಅಥವಾ ಚೆನ್ನಾಗಿ (ಬಹಳವಾಗಿ) ಕೊಡುವವರು ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಪಿಬತೆ--ಪಾ ಪಾನೇ ಧಾತು. ಲೋಟ್ ಮಧ್ಯಮಪುರುಷ ಬಹುವಚನ **ಥೆ. ಲೋಟೋಲಜ್ವತ್** (ಪಾ. ಸೂ. ೩-೪-೮೫) ಲೋಟಿಗೆ ಲಙ್‌ಗೆ ಕಾರ್ಯ ಬರುವಂತೆ ಕಾರ್ಯ ಬರುವುದು ಎಂಬುದರಿಂದ ಲಙ್ವದ್ಭಾವಾತಿದೇಶ ಬರುವುದು. ಅತಿದೇಶ ಎಂದರೆ ತದ್ಧರ್ಮಾಭಾವವತಿ ತದ್ಧರ್ಮಬೋಧಕತ್ವಮ್. ಆ ಧರ್ಮವಿಲ್ಲದೇ ಇರುವುದರಲ್ಲಿ ಆಧರ್ಮವನ್ನು ಬೋಧಿಸುವಿಕೆ, ಇಲ್ಲಿ ಲೋಟನಲ್ಲಿ ಲಙ್‌ತ್ವರೂಪ ಧರ್ಮವಿಲ್ಲ. ಆದ್ದರಿಂದ ಲಙ್ಗೆ ಕಾರ್ಯ ಬರಲಾ ಸಾಧ್ಯವಲ್ಲ. ಆದರೂ ಈ ಸೂತ್ರದಿಂದ ಲಙ್‌ಕಾರ್ಯವು ಬರುವುದು. **ತಸ್ಥಸ್ಥಮಿಪಾಂತಾಂತಾಮಃ** (ಪಾ. ಸೂ. ೩-೪-೧೦೦) ಎಂಬುದರಿಂದ ಥ.ಗೆ ತ ಆದೇಶ. ವಿಕರಣ ಶಪ್. **ಸಾಹ್ವ್ಯಧ್ಮಾ** (ಪಾ.ಸೂ. ೭-೩-೭೮) ಎಂಬುದರಿಂದ ಪಾ ಗೆ ಪಿಬಾದೇಶ, ಪಿಬತ ಎಂದಾಗುವುದು. ಶಪ್ ಪಿತ್ತಾದ್ದರಿಂದ ಅನುದಾತ್ತ. ಅಕಾರಾಂತೋಪದೇಶವಾದ ಶಪ್ ನ ಮುಂದೆ ಲಸ್ಥಾನಿಕಸಾರ್ವಧಾತುಕವಾದ ತ ಎಂಬುದು ಇರುವುದು. ಆದ್ದರಿಂದ **ತಾಸ್ಯನುದಾತ್ತೇನ್ಡಿದುಪದೇ-ಶಾತ್** (ಪಾ. ಸೂ. ೬-೧-೧೮೬) ಎಂಬುದರಿಂದ ತ ಗೆ ಅನುದಾತ್ತ ಬರುವುದು. ಧಾತುಸ್ವರವೇ ನಿಲ್ಲುವುದು. ಇದಕ್ಕಿಂತ ಪೂರ್ವದಲ್ಲಿ ಮರುತಃ ಎಂಬ ಆಮಂತ್ರಿತವು, ಆಮನ್ತ್ರಿತಂಪೂರ್ವಮವಿದ್ಯಮಾನವತ್ (ಪಾ. ಸೂ. ೮-೧-೭) ಎಂಬುದರಿಂದ ಅವಿದ್ಯಮಾನನದ್ಭಾವವನ್ನು ಹೊಂದುವುದು. ಆದ್ದರಿಂದ ಪಿಬತ ಎಂಬುದು ಪದಾತ್ಪರವಾಗುವುದಿಲ್ಲ. ಪಾದಾದಿಗತವೂ ಆಗುವುದು. ಆದಕಾರಣ **ತಿಙ್ಶಿತಿಬಃ** ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ.

ಪೋಕ್ತಾತ್-ಪೋತುಃ ಇದಮ್ (ಪೋತೃವಿನ ಸಂಬಂಧಿಯಾದ ಪಾತ್ರೆ) ಎಂದು ವಿಗ್ರಹ **ತಸ್ಯೇದಮ್** (ಪಾ. ಸೂ. ೪-೩-೧೨೦) ಸಮರ್ಥಗಳ ಮಧ್ಯದಲ್ಲಿ ತದ್ಧಿತಪ್ರತ್ಯಯವಿಧಾಯಕಶಾಸ್ತ್ರದಲ್ಲಿ ಪ್ರಥಮೋಚ್ಚರಿತವಾದ ಪದದಿಂದ ಬೋಧಿತವಾದ ಯಾವ ಪ್ರಾತಿಪದಿಕಪ್ರಕೃತಿಕಷಷ್ಠ್ಯಂತವಿದೆಯೋ ಅದರ ಮುಂದೆ ಇದಮ್ ಎಂಬ ಅರ್ಥದಲ್ಲಿ ಅಣ್ ಬರುವುದು. ಅದು ಪ್ರತ್ಯಯವಾಗುವುದು. ಅದು ಪರದಲ್ಲಿಯೇ ಬರುವುದು. ಅದು ಆದ್ಯುದಾತ್ತವಾಗುವುದು ಎಂದು ಸೂತ್ರಾರ್ಥ. ಪೋತುಃ ಇದಮ್ ಎಂಬಿವು ಎರಡು ಸಮರ್ಥಗಳು. ಇವುಗಳಲ್ಲಿ ತದ್ಧಿತಪ್ರತ್ಯಯವಿಧಾಯಕವಾದ ತಸ್ಯೇದಮ್, ಎಂಬ ಶಾಸ್ತ್ರದಲ್ಲಿ ಮೊದಲು ಉಚ್ಚರಿತವಾದ ಪದ ತಸ್ಯ ಎಂಬುದು. ಆದರಿಂದ ಬೋಧಿತವಾದ ಪ್ರಾತಿಪದಿಕಪ್ರಕೃತಿಕಷಷ್ಠ್ಯಂತ ಪೋತುಃ, ಅದರ ಮುಂದೆ ಇದಮ್ ಎಂಬ ಅರ್ಥದಲ್ಲಿ ಅಣ್ ಬರುವುದು. ಪೋತೃ+ಅಸ್+ಅ ತದ್ಧಿತಾಂತವಾದ್ದರಿಂದ **ಕೃತ್ತದ್ಧಿತಸಮಾಸಾಶ್ಚ** (ಪಾ. ಸೂ. ೧-೨-೪೬) ಎಂಬುದರಿಂದ ಪ್ರಾತಿಪದಿಕ ಸಂಜ್ಞೆ ಬರುವುದು. **ಸುಪೋಧಾತು ಪ್ರಾತಿಪದಿಕಯೋಃ** (ಪಾ. ಸೂ. ೨-೪-೭೧) ಎಂಬುದರಿಂದ ಸುಪ್ ಗೆ ಲುಕ್, ಪೋತೃ+ಅ. **ಈಗ ತದ್ಧಿತೇಷ್ವಚಾಮಾದೇಃ** (ಪಾ. ಸೂ. ೭-೨-೧೧೭) ಋತ್ತು ಅಥವಾ ಣಿತ್ತು ಆದ ತದ್ಧಿತಪ್ರತ್ಯಯ ಪರದಲ್ಲಿರುವಾಗ ಅಚ್ಸಮುದಾಯದಲ್ಲಿ ಮೊದಲನೆಯ ದಾದ ಅಚ್ಚಿಗೆ ವೃದ್ಧಿ ಬರುವುದು ಎಂಬುದರಿಂದ ವೃದ್ಧಿಯು ಓಕಾರಕ್ಕೆ ಪ್ರಾಪ್ತವಾಗುವುದು. **ಸರ್ವೇ ವಿಧಯೆಶ್ಚಂ-ದಸಿ ವಿಕಲ್ಪ್ಯಂತೇ** (ಪರಿಭಾ-೩೫) ಎಲ್ಲಾ ಶಾಸ್ತ್ರಗಳೂ ಛಂದಸ್ಸಿನಲ್ಲಿ ವಿಕಲ್ಪವಾಗಿ ಬರುವುವು ಎಂಬುದರಿಂದ ಈ ವೃದ್ಧಿವಿಧಾಯಕವೂ ವಿಕಲ್ಪವಾದ್ದರಿಂದ ಇಲ್ಲಿ ಬರುವುದಿಲ್ಲ. ಹೀಗೆ ವೃದ್ಧಿಯು ಬರದೇ ಇದ್ದರೆ **ಅಚೋಞ್ಣಿತಿ** (ಪಾ. ಸೂ. ೭-೨-೧೧೫) ಞಿತ್ತು ಣಿತ್ತು ಆದ ಪ್ರತ್ಯಯ ಪರದಲ್ಲಿರುವಾಗ ಅಜನ್ತವಾದ ಅಙ್ಗಕ್ಕೆ ವೃದ್ಧಿಯು ಬರುವುದು ಎಂಬುದರಿಂದ ಪೋತೃ ಎಂಬಲ್ಲಿ ಕೊನೆಯಲ್ಲಿರುವ ಋಕಾರಕ್ಕೆ ವೃದ್ಧಿಯು ಪ್ರಾಪ್ತವಾಗುವುದು. ಹೇಗೆಂದರೆ ಗೋಶಬ್ದದ ಮುಂದೆ ಸುಪ್ರತ್ಯಯವನ್ನಿಟ್ಟರೆ ಅದಕ್ಕೆ **ಗೋತೋಣಿತ್** (ಪಾ.ಸೂ. ೭-೧-೯೦) ಎಂಬುದರಿಂದ ಣಿದ್ವದ್ಭಾವ ಬರುವುದು.ಸುಪ್ರತ್ಯಯವು ತದ್ಧಿತವಲ್ಲದುದರಿಂದ ಆದಿವೃದ್ಧಿ ಬರುವುದಿಲ್ಲ. **ಅಚೋಞ್ಣಿತಿ**(ಪಾ. ಸೂ. ೭-೨-೧೧೫) ಎಂಬುದರಿಂದ ಅನ್ತ್ಯವೃದ್ಧಿಯು ಇಲ್ಲಿ ಬಂದು ಸಾವಕಾಶವಾಗುವುದು. **ಪಙ್** ಧಾತುವಿನ ಮುಂದೆ ಣ್ವುಲ್

ಆದಕ್ಕೆ ಅಕಾದೇಶ ಪರ್+ಅಕ ಇಲ್ಲಿ ಆದಿವೃದ್ಧಿ ಅನ್ತ್ಯವೃದ್ಧಿಗಳಿಗೆ ಪ್ರಾಪ್ತಿ ಇಲ್ಲ. ಆತ ಉಪಧಾಯಾಃ(ಪಾ. ಸೂ. ೭-೩-೧೧೬) ಎಂಬುದರಿಂದ ಉಪಧಾವೃದ್ಧಿ ಬಂದು ಪಾಚಕ ಎಂದಾಗುವುದು.ಹೀಗೆ ಇಲ್ಲಿ ಉಪಧಾವೃದ್ಧಿಯು ಸಾವಕಾಶವಾಗಿರುವುದು. ಶೌಶ್ರುತಃ--ಸುಶ್ರುತಃ ಅಪತ್ಯಂ ಪುಮಾನ್ ಎಂದು ವಿಗ್ರಹ. ತಸ್ಯಾಪತ್ಯಂ (ಪಾ. ಸೂ. ೪-೧-೯೨) ಎಂಬುದರಿಂದ ಅಣ್. ಸುಶ್ರುತ್+ಅ ಇಲ್ಲಿ ಅಂಗವು ಅಜನ್ತವಲ್ಲದುದರಿಂದ ಅಚೋಞ್ಣಿತಿ (ಪಾ-ಸೂ. ೭. ೨-೧೧೫) ಎಂದು ಅಂತ್ಯವೃದ್ಧಿ ಬರುವುದಿಲ್ಲ. ಉಪಧಾವರ್ಣವು ಅಕಾರವಲ್ಲದುದರಿಂದ ಆತ ಉಪಧಾಯಾಃ ಎಂಬುದರಿಂದ ಉಪಧಾವೃದ್ಧಿಯೂ ಬರುವುದಿಲ್ಲ. ಹೀಗೆ ಅನ್ತ್ಯೋಪಧಾವೃದ್ಧಿಗಳು ಬರದೇ ಇರುವ ಸ್ಥಳದಲ್ಲಿ ಆದಿವೃದ್ಧಿಯು ಬಂದು ಸಾವಕಾಶವಾಗುವುದು. ಈ ರೀತಿಯಲ್ಲಿ ಆದಿವೃದ್ಧಿ ಅಂತ್ಯವೃದ್ಧಿ ಉಪಧಾವೃದ್ಧಿ ಇವುಗಳು ಪ್ರತ್ಯೇಕ ಲಕ್ಷ್ಯಗಳಲ್ಲಿ ಸಾವಕಾಶವಾಗಿರುವುವು. ತ್ವಷ್ಟುಃ ಅಪತ್ಯಂ ಪುಮಾನ್ ತ್ವಾಷ್ಟಃ, ಇಲ್ಲಿ ತ್ವಷ್ಟೃ ಶಬ್ದದ ಮುಂದೆ ಅಪತ್ಯಾರ್ಥದಲ್ಲಿ ಅಣ್ ಬಂದು ತ್ವಷ್ಟೃ+ಅ ಎಂದಿರುವಾಗ ಅಂತ್ಯವೃದ್ಧಿ ಆದಿ ವೃದ್ಧಿಗಳೆರಡೂ ಪ್ರಾಪ್ತವಾಗುವುವು. ಜಗತ್+ಅ, ಎಂದಿರುವಾಗ ಉಪಧಾವೃದ್ಧಿ ಆದಿವೃದ್ಧಿಗಳೆರಡೂ ಪ್ರಾಪ್ತವಾಗುವುವು. ಹೀಗೆ ಪ್ರಾಪ್ತವಾದರೆ ವಿಪ್ರತಿಷೇಧೇ ಪರಂ ಕಾರ್ಯಮ್, (ಪಾ.ಸೂ. ೧-೪-೨) ಬೇರೆ ಬೇರೆ ಲಕ್ಷ್ಯಗಳಲ್ಲಿ ಸಾವಕಾಶವಾದ ಶಾಸ್ತ್ರಗಳಿಗೆ ಒಂದು ಲಕ್ಷ್ಯದಲ್ಲಿ ಒಂದೇಕಾಲದಲ್ಲಿ ಪ್ರಾಪ್ತಿಯಾಗುವುದಕ್ಕೆ ವಿಪ್ರತಿಷೇಧ ಎನ್ನಲಾಗುವುದು. ಈ ವಿಪ್ರತಿಷೇಧವಿದ್ದರೆ ಯಾವುದು ಪರಶಾಸ್ತ್ರವೋ ಅದೇ ಬರುವುದು ಎಂಬುದರಿಂದ ಎರಡು ಕಡೆಯಲ್ಲಿ ಕ್ರಮವಾಗಿ ಅಂತ್ಯೋಪಧಾವೃದ್ಧಿಗಳನ್ನು ಬಾಧಿಸಿ ಪರವಾದ ಆದಿವೃದ್ಧಿಯೇ ಬರುವುದು. ಆದಿವೃದ್ಧಿ ಬಂದಮೇಲೆ ಸಕೃದ್ಗತೌ ವಿಪ್ರತಿಷೇಧೇನ ಯದ್ಬಾಧಿತಂ ತದ್ಬಾಧಿತಮೇವ (ಪರಿಭಾ. ೪೦) ಎಂಬುದರಿಂದ ಪುನಃ ಅಂತ್ಯೋಪಧಾವೃದ್ಧಿಗಳು ಬರುವುದಿಲ್ಲ. ಅನುಶತಿಕಾದಿ ಗಣದಲ್ಲಿ ಉಭಯಪದವೃದ್ಧಿಗಾಗಿ ಪುಷ್ಕರಸಾದಿ ಶಬ್ದವನ್ನು ಪಾಠ ಮಾಡಿರುವುದರಿಂದ ಇಲ್ಲಿ ಪುನಃಪ್ರಸಂಗವಿಜ್ಞಾನಾತ್ಸಿದ್ಧಮ್ (ಪರಿಭಾ. ೬೯) ಎಂಬುದು ಬರುವುದಿಲ್ಲ. ಈ ಪರಿಭಾಷೆಯನ್ನು ಆಶ್ರಯಿಸುವ ಪಕ್ಷದಲ್ಲಿ ಪುಷ್ಕರಸದ್+ಇ ಎಂದಿರುವಾಗ ಆದಿವೃದ್ಧಿ ಉಪಧಾವೃದ್ಧಿಗಳೆರಡೂ ಬಂದರೆ ಪೌಷ್ಕರಸಾದಿ ಎಂಬ ರೂಪವು ಸಿದ್ಧವಾಗುವುದರಿಂದ ಅನುಶತಿಕಾದೀನಾಂಚ (ಪಾ. ಸೂ. ೭-೩-೨೦) ಎಂಬುದರಿಂದ ಉಭಯ ಪದವೃದ್ಧಿಗಾಗಿ ಅನುಶತಿಕಾದಿಯಲ್ಲಿ ಪುಷ್ಕರಸದ್ ಶಬ್ದಕ್ಕೆ ಪಾಠವು ವ್ಯರ್ಥವಾಗುವುದು. ಆದ್ದರಿಂದ ಸಕೃದ್ಗತೌ—ಎಂಬುದು ಇಲ್ಲಿ ಪ್ರವೃತ್ತಿಸುವುದೇ ವಿನಾ ಪುನಃಪ್ರಸಂಗ, ಎಂಬುದು ಇಲ್ಲಿ ಪ್ರವೃತ್ತಿಸುವುದಿಲ್ಲ. ಏವಂಚ ಆದಿವೃದ್ಧಿಯು ಅಂತ್ಯವೃದ್ಧಿಉಪಧಾವೃದ್ಧಿಗಳಿಗೆ ಬಾಧಕವಾಗುವುದು. ಈ ಅಂಶವನ್ನು ಆದಿವೃದ್ಧಿರನ್ತ್ಯೋಪಧಾವೃದ್ಧೀ ಬಾಧತೇ, ಎಂದು ಕೌಮುದಿಯಲ್ಲಿ ಹೇಳಲಾಗಿರುವುದು. ಪ್ರಕೃತದಲ್ಲಿ ಬಾಧಕವಾದ ಆದಿವೃದ್ಧಿಯು ಭಾಂದಸವಾಗಿ ಬರದ ಮೇಲೆ ಆದರಿಂದ ಅಂತ್ಯವೃದ್ಧಿಯು ಬಾಧಿತವಾಗುವುದಿಲ್ಲ. ಆದ್ದರಿಂದ ಅಂತ್ಯವೃದ್ಧಿಯು ಬರಲಿ ಎನ್ನಬಹುದು. ಹೀಗಾದ ಪಕ್ಷದಲ್ಲಿ ಇಲ್ಲಿಯೂ ಆದಿವೃದ್ಧಿಯು ಬರಲಿ. ಪೌತ್ರ ಎಂದಿರುವಾಗ ಔ ಕಾರಕ್ಕೆ ಓ ಕಾರವು ಭಾಂದಸವಾಗಿ ಬರುವುದು ಎಂದು ಹೇಳುತ್ತೇವೆ. ಈಗ ಆದಿವೃದ್ಧಿಯಿಂದ ಬಾಧಿತವಾಗುವುದರಿಂದ ಅಂತ್ಯ ವೃದ್ಧಿಯು ಬರುವುದಿಲ್ಲ.

ಪುನೀತನ—ಪೂಞ್ ಪವನೇ, ಕ್ರ್ಯಾದಿ ಧಾತು ಲೋಟ್ ಪರಸ್ಮೈಪದ ಮಧ್ಯಮಪುರುಷ ಬಹುವಚನ ಥ. ಆದೇಶ ಪೂ+ಥ ಲೋಟೋ ಲಙ್ವತ್ (ಪಾ. ಸೂ. ೩-೪-೮೫) ಎಂಬುದರಿಂದ ಲಙ್ವದ್ಭಾವ ಬರುವುದರಿಂದ ತಸ್ಥಸ್ಥಮಿಪಾಂತಾಂತಂತಾಮಃ (ಪಾ. ಸೂ. ೩-೪-೧೦೧) ಎಂಬುದರಿಂದ ಥ ಗೆ ತ ಆದೇಶ. ತಪ್ತನಪ್ತನಥನಾಶ್ಚ (ಪಾ. ಸೂ. ೭-೧-೪೫) ಎಂಬುದರಿಂದ ತ ಎಂಬುದಕ್ಕೆ ತನ ಆದೇಶ. ಪೂ+ತನ ಕ್ರ್ಯಾದಿಭ್ಯಃ ಶ್ನಾ (ಪಾ. ಸೂ. ೩-೧-೮೧) ಎಂಬುದರಿಂದ ವಿಕರಣ ಶ್ನಾ ಪ್ರತ್ಯಯ. ಪೂ+ನಾ+ತನ. ಈಹಲ್ಯ

ಘೋಃ (ಪಾ. ಸೂ. ೬-೪-೧೧೩) ಕಿತ್ತು ಙಿತ್ತು ಆದ ಹಲಾದಿಸಾರ್ವಧಾತುಕ ಪರದಲ್ಲಿರುವಾಗ ಶ್ನಾಪ್ರತ್ಯಯದ ಆಕಾರಕ್ಕೂ ಅಭ್ಯಸ್ತಗಳ ಆಕಾರಕ್ಕೂ ಸಹ ಈಕಾರ ಬರುವುದು ಎಂಬುದರಿಂದ ಶ್ನಾಪ್ರತ್ಯಯದ ಆಕಾರಕ್ಕೆ ಈಕಾರ, ಪೂ+ನೀ+ತನ. **ಪ್ವಾದೀನಾಂ ಹ್ರಸ್ವಃ** (ಪಾ. ಸೂ. ೭-೩-೮೦) ಎಂಬುದರಿಂದ ಪೂಗೆ ಹ್ರಸ್ವ ಬರುವುದು ಪುನೀತನ ಎಂದಾಗುವುದು. ನೀ ತನ್ ಎಂಬ ಎರಡು ಪ್ರತ್ಯಯಗಳೂ ಅಪಿತ್ತಾದ ಸಾರ್ವಧಾತುಕಗಳು. ಆದ್ದರಿಂದ **ಸಾರ್ವಧಾತುಕಮಪಿತ್** (ಪಾ.ಸೂ. ೧-೨-೪) ಎಂಬುದರಿಂದ ಙಿತ್ತಾಗುವುವು. ಆದ್ದರಿಂದ **ಕ್ಙಿತಿ ಚ,** (ಪಾ. ಸೂ. ೧-೧-೫) ಎಂಬುದರಿಂದ ಗುಣಕ್ಕೆ ನಿಷೇಧ ಬರುವದು. ಆದಕಾರಣ ತನಪ್ರತ್ಯಯವನ್ನು ನಿಮಿತ್ತಮಾಡಿಕೊಂಡ ಈಕಾರಕ್ಕೂ ನೀ ಪ್ರತ್ಯಯವನ್ನು ನಿಮಿತ್ತಮಾಡಿಕೊಂಡ ಉಕಾರಕ್ಕೂ **ಸಾರ್ವಧಾತುಕಾರ್ಧಧಾತುಕ-ಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಗುಣವು ಬರುವುದಿಲ್ಲ.

ಯೂಯಮ್— ಯುಷ್ಮ್ಯಸಿಭ್ಯಾಂಮದಿಕ್ (ಉ. ಸೂ. ೧-೧೩೬) ಯುಷ್ ಎಂಬುದು ಸೌತ್ರವಾದ ಧಾತು. ಇದರ ಮುಂದೆ ಮದಿಕ್ ಪ್ರತ್ಯಯ, ಯುಷ್ಮದ್ ಎಂಬುದು ಪ್ರತ್ಯಯ ಸ್ವರದಿಂದ ಅಂತೋದಾತ್ತ. **ಉಣಾದಯೋ೭ವ್ಯುತ್ಪನ್ನಾನಿ ಪ್ರಾತಿಪದಿಕಾನಿ** (ಪರಿಭಾ. ೨೨) ಉಣಾದಿ ಸೂತ್ರನಿಷ್ಪನ್ನವಾದ ಶಬ್ದಗಳು ಅವ್ಯುತ್ಪನ್ನವಾದ ಅಂದರೆ ಪ್ರಕೃತಿಪ್ರತ್ಯಯವಿಭಾಗರಹಿತಗಳಾದ ಪ್ರಾತಿಪದಿಕಗಳು ಎಂಬ ಪಕ್ಷದಲ್ಲಿ **ಫಿಷೋ೭ನ್ತ್ಯ ಉದಾತ್ತಃ** (ಪಾ. ಸೂ. ೧-೧) ಎಂಬುದರಿಂದ ಅಂತೋದಾತ್ತ. ಯುಷ್ಮದ್ ಶಬ್ದದ ಮುಂದೆ ಜಸ್ ಪ್ರತ್ಯಯ ಯುಷ್ಮದ್+ಜಸ್. **ಜೀಪ್ರಥಮಯೋರಮ್** (ಪಾ. ಸೂ. ೭-೧-೨೮) ಯುಷ್ಮದಸ್ಮಚ್ಛಬ್ದಗಳ ಮುಂದೆ ಇರುವ ಪ್ರಥಮಾದ್ವಿತೀಯಾ ವಿಭಕ್ತಿಗಳಿಗೆ ಅಮಾದೇಶ ಬರುವುದು ಎಂಬುದರಿಂದ ಜಸ್‌ಗೆ ಅಮ್ ಆದೇಶ. ಯುಷ್ಮದ್+ಅಮ್, ಅಮ್‌ನ ಮಕಾರಕ್ಕೆ **ಹಲ್ತ್ಯಮ್** (ಪಾ. ಸೂ. ೧-೩-೩) ಉಪದೇಶದ ಕೊನೆಯಲ್ಲಿರುವ ವ್ಯಂಜನಕ್ಕೆ ಇತ್ಸಂಜ್ಞೆ ಬರುವುದು ಎಂಬುದರಿಂದ ಇತ್ಸಂಜ್ಞೆಯು ಪ್ರಾಪ್ತವಾದರೆ ಅದಕ್ಕೆ **ನವಿಭಕ್ತಾ೭೭ತುಸ್ಮಾಃ** (ಪಾ. ಸೂ. ೧-೩-೪) ವಿಭಕ್ತಿಯಲ್ಲಿ ತವರ್ಗ ಸಕಾರ ಮಕಾರಗಳಿಗೆ ಇತ್ಸಂಜ್ಞೆ ಬರುವುದಿಲ್ಲ ಎಂದು ನಿಷೇಧವಿರುವುದರಿಂದ ಮಕಾರಕ್ಕೆ ಇತ್ಸಂಜ್ಞೆ ಬರುವುದಿಲ್ಲ ಯೂಯವಯೌ ಜಸಿ (ಪಾ. ಸೂ ೭-೨-೯೩) ಜಸ್ ಪರದಲ್ಲಿರುವಾಗ ಯುಷ್ಮದಸ್ಮಚ್ಛಬ್ದಗಳ ಮಪರ್ಯಂತಕ್ಕೆ ಕ್ರಮವಾಗಿ ಯೂಯ ವಯ ಎಂಬ ಆದೇಶಗಳು ಬರುವುವು ಎಂಬುದರಿಂದ ಮಪರ್ಯಂತಕ್ಕೆ ಯೂಯ ಆದೇಶ, ಯೂಯ+ಅದ್+ಅಮ್, **ಶೇಷೇಲೋಪಃ** ಎಂಬುದು ಅತ್ವ ಯತ್ವಗಳಿಗೆ ನಿಮಿತ್ತವಾಗದ ವಿಭಕ್ತಿಯನ್ನು ನಿಮಿತ್ತ ಮಾಡಿಕೊಂಡು ಬರುವುದು. ಏನಂದೆ ಬಹಿರ್ಭೂತ ವಿಭಕ್ತಿ ನಿಮಿತ್ತಕವಾದ್ದರಿಂದ ಬಹಿರಂಗ. ಅತೋಗುಣೇ ಪರರೂಪವು ಅನ್ತರ್ಭೂತನಿಮಿತ್ತಕವಾದ್ದರಿಂದ ಅಂತರಂಗ. ಆದ್ದರಿಂದ ಅಸಿದ್ಧಂಬಹಿರಂಗಮಂತರಂಗೇ (ಪರಿಭಾ. ೫೦) ಎಂಬುದರಿಂದ ಶೇಷೇಲೋಪಃ ಎಂಬುದು ಅಸಿದ್ಧವಾಗುವುದರಿಂದ ಮೊದಲು ಪರರೂಪ ಬರುವುದು. ಶೇಷೇಲೋಪಃ ಎಂಬುದು ಪರವಾದಾಗ್ಯೂ ಅದು ಮೊದಲು ಬರುವುದಿಲ್ಲ. ಪರರೂಪ ಬಂದರೆ ಯುಷ್ಮದ್+ಅಮ್. ಈಗ ಶೇಷೇಲೋಪಃ (ಪಾ. ಸೂ. ೭-೨-೯೦) ಎಂಬುದು ಬರುವುದು. ಇಲ್ಲಿ ಬಹಿರಂಗವಾದ ಯೂಯ ಆದೇಶಕ್ಕಿಂತಲೂ ಮೊದಲೇ ಅಂತರಂಗವಾದ್ದರಿಂದ ಪ್ರತ್ಯಯಸ್ವರ ಅಥವಾ ಪ್ರಾತಿಪದಿಕಸ್ವರ ಬರುವುದು. **ಅನುದಾತ್ತಂ ಪದಮೇಕವರ್ಜಮ್** (ಪಾ. ಸೂ. ೬-೧-೧೫೮) ಎಂಬ ಶೇಷನಿಘಾತದಿಂದ ಯುಷ್ಮ ಎಂಬುದು ಅನುದಾತ್ತ. ನಂತರ **ಸ್ಥಾನೇ೭ನ್ತರತಮಃ** (ಪಾ.ಸೂ. ೧-೧-೫೦) ಎಂಬ ಪರಿಭಾಷಾನುಸಾರ ಅನುದಾತ್ತವಾದ ಯುಷ್ಮ ಎಂಬುದರ ಸ್ಥಾನದಲ್ಲಿ ಸರ್ವಾನುದಾತ್ತವಾದ ಯೂಯ ಆದೇಶ ಬರುವುದು. ಯೂಯ+ಅದ್ ಇವುಗಳಿಗೆ ಬಂದ ಏಕಾದೇಶವಾದ ಪರರೂಪವು **ಏಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮.೪.೫) ಎಂಬುದರಿಂದ ಉದಾತ್ತ. **ಶೇಷೇಲೋಪಃ** (ಪಾ. ಸೂ. ೭-೨-೯೦) ಅತ್ವಯತ್ವ ನಿಮಿತ್ತೇತರ ವಿಭಕ್ತಿ ಪರತಃ ಯುಷ್ಮದಸ್ಮದೋಃ ಅನ್ತ್ಯಸ್ಯ ಲೋಪಃ ಎಂದು ಸೂತ್ರ

ರ್ಥವಾಗಿ ಆಂತ್ಯಕ್ಕೆ ಲೋಪ ಬರುವುದು ಎಂಬ ಪಕ್ಷದಲ್ಲಿ ದಕಾರಕ್ಕೆ ಲೋಪ, ಯೂಯ+ಅಮ್. ಅಮಿ ಪೂರ್ವಃ (ಪಾ. ಸೂ. ೬-೧-೧೦೭) ಎಂಬುದರಿಂದ ಪೂರ್ವರೂಪವು ಏಕಾದೇಶವಾಗಿ ಬರುವುದು. ಈ ಏಕಾದೇಶದಿಂದ ಬಂದ ಅಕಾರವು ಏಕಾದೇಶ ಉದಾತ್ತೇನೋದಾತ್ತಃ (ಪಾ. ಸೂ. ೮-೪-೫) ಎಂಬುದರಿಂದ ಉದಾತ್ತ. ಶೇಷೇಲೋಪಃ (ಪಾ.ಸೂ. ೬-೪-೯೦) ಶೇಷ ಇತಿ ಸಪ್ತಮ್ಯಾಸ್ಥಾನತಃ ಅಧಿಕರಣತ್ವವಿವಕ್ಷಯಾ ತಥಾಚ ವಿಧಕ್ತ್ಯೌ ಪರತಃ ಮಪರ್ಯನ್ತಾಚ್ಛಬ್ದಸ್ಯ ಅದ್ ಇತ್ಯಸ್ಯ ಲೋಪಃ ಎಂದು ಅರ್ಥವಾದಾಗ ಯೂಯದ್+ಅಮ್ ಎಂಬಲ್ಲಿ ಅದ್ ಎಂಬುದಕ್ಕೆ ಲೋಪ, ಈ ಪಕ್ಷದಲ್ಲಿ ಅಮ್ ಎಂಬ ಅನುದಾತ್ತವನ್ನು ನಿಮಿತ್ತಮಾಡಿಕೊಂಡು ಉದಾತ್ತವಾದ ಅದ್‌ಗೆ ಲೋಪಬಂದಿರುವುದು. ಆದ್ದರಿಂದ ಅನುದಾತ್ತಸ್ಯ ಚ ಯತ್ರೋದಾತ್ತಲೋಪಃ (ಪಾ. ಸೂ. ೬-೧-೧೬೧) ಎಂಬ ಉದಾತ್ತನಿವೃತ್ತಿಸ್ವರದಿಂದ ವಿಭಕ್ತಿಯು ಉದಾತ್ತವಾಗುವುದು. ಪಕ್ಷದ್ವಯದಲ್ಲಿಯೂ ಯೂಯಮ್ ಎಂಬುದು ಅಂತೋದಾತ್ತ.

ಸ್ಥ—ಅಸ ಭುವಿ ಧಾತು. ಲಟ್ ಪರಸ್ಮೈಪದ ಮಧ್ಯಮಪುರುಷ ಬಹುವಚನ ಥ ಆದೇಶ. ಕರ್ತರಿ ಶಪ್ ಎಂಬುದರಿಂದ ಬಂದ ವಿಕರಣ ಶಪ್‌ಗೆ ಆದಿಪ್ರಭೃತಿಭ್ಯಃ ಶಪಃ ಎಂಬುದರಿಂದ ಲುಕ್. ಅಸ್+ಥ ಶ್ನಸೋರಲ್ಲೋಪಃ (ಪಾ. ಸೂ. ೬-೪-೧೧೧) ಶ್ನಮ್ ಪ್ರತ್ಯಯ ಅಸ್ ಧಾತು ಇವುಗಳ ಅಕಾರಕ್ಕೆ ಕೆತ್ತು ಜಿತ್ತು, ಆದ ಸಾರ್ವಧಾತುಕಪರವಾಗಿರುವಾಗ ಲೋಪ ಬರುವುದು ಎಂಬುದರಿಂದ ಲೋಪ, ಸ್ಥ ಎಂದಾಗುವುದು. ವ್ಯತ್ಯಯದಿಂದ ಸಕಾರಕ್ಕೆ ಷಕಾರ. ಷ್ಟುನಾಷ್ಟುಃ (ಪಾ- ಸೂ. ೮-೪-೪೧) ಎಂಬ ಷ್ಟುತ್ವದಿಂದ ವರ್ಗದ್ವಿತೀಯವಾದ ಥಕಾರಕ್ಕೆ ಟವರ್ಗದ್ವಿತೀಯಠಕಾರ ಷ್ಠ ಎಂದಾಯ್ತು. ಹಿಚ (ಪಾ. ಸೂ. ೮-೧-೩೪) ಹಿ ಶಬ್ದದಿಂದ ಕೂಡಿರುವ ತಿಙಂತವು ಅನುದಾತ್ತವಾಗುವುದಿಲ್ಲ ಎಂಬುದರಿಂದ ಇಲ್ಲಿ ಹಿಷ್ಠ ಎಂದು ಹಿ ಶಬ್ದದ ಯೋಗವಿರುವುದರಿಂದ ಅನುದಾತ್ತಕ್ಕೆ ನಿಷೇಧ ಬರುವುದು. ಆದ್ದರಿಂದ ತಿಙ್ಶಿತಿಙಃ ಎಂಬುದರಿಂದ ಅನುದಾತ್ತ ಬರುವುದಿಲ್ಲ. ಸಂಹಿತಾಕಾಲದಲ್ಲಿ ಅನ್ಯೇಷಾಮಪಿದೃಶ್ಯತೇ ಎಂಬುದರಿಂದ ದೀರ್ಘ ಬರುವುದು.

ಸುದಾನವಃ—ದಾಭಾಭ್ಯಾಂ ನುಃ (ಉ. ಸೂ. ೩-೩೧೨) ಡುದಾಞ್ ದಾನೇ, ಭಾ ದೀಪ್ತೌ ಈ ಧಾತುಗಳ ಮುಂದೆ ನು ಪ್ರತ್ಯಯ ಬರುವುದು ಎಂಬುದರಿಂದ ದಾ ಧಾತುವಿನ ಮುಂದೆ ನು ಪ್ರತ್ಯಯ ದಾನು ಎಂದಾಗುವುದು. ಇದರೊಂದಿಗೆ ಸು ಶಬ್ದಕ್ಕೆ ಕುಗತಿಪ್ರಾದಯಃ (ಪಾ. ಸೂ. ೨-೨-೧೮) ಎಂಬುದರಿಂದ ಸಮಾಸ, ಸಂಬೋಧನ ಪ್ರಥಮಾ ಬಹುವಚನಾಂತ. ಇದು ಆಮಂತ್ರಿತ. ಆದ್ದರಿಂದ ಆಮನ್ತ್ರಿತಸ್ಯಚ (ಪಾ, ಸೂ. ೮-೧-೧೯) ಎಂಬುದರಿಂದ ಸರ್ವಾನುದಾತ್ತ ಬರುವುದು. ಇಲ್ಲಿ ಸುದಾನವಃ ಎಂಬುದನ್ನು ಪ್ರಥಮಾ ಬಹುವಚನಾಂತವಾಗಿ ಇಟ್ಟುಕೊಂಡು ಯೂಯಂ ಸುದಾನವಃ ಸ್ಥ ಎಂದು ಯೂಯಂ ಶಬ್ದೋಧಿತಗಳಾದ ಮರುತ್ತುಗಳನ್ನು ಉದ್ದೇಶಿಸಿ ಸುದಾನವಃ ಸ್ಥ=ಪ್ರಸಿದ್ಧದಾತೃತ್ವಯುಕ್ತರಾಗಿ ಎಂದು ದಾತೃತ್ವವು ವಿಧಿಸಲ್ಪಡುವುದಿಲ್ಲ. ಏಕೆಂದರೆ ಹೀಗೆ ವಿಧಿಯನ್ನು ಸ್ವೀಕರಿಸಿದರೆ ಸುದಾನವಃ [illegible]ದು ಆಮಂತ್ರಿತವಾಗುವುದಿಲ್ಲವಾದ್ದರಿಂದ ಆಮನ್ತ್ರಿತಾನುದಾತ್ತವು ಉಪಪನ್ನವಾಗುವುದಿಲ್ಲ. ಆದ್ದರಿಂದ ಸುದಾನವಃ ಎಂಬುದು ಸಂಬೋಧನಪ್ರಥಮಾಬಹುವಚನಾಂತ ಎಂದು ಸ್ವೀಕರಿಸಿ ಹೇ ಸುದಾನವಃ ಯೂಯಂ ಹಿ ಸ್ಥ ಎಂದು ವಿವಕ್ಷಿತವು. ಓ ಪ್ರಸಿದ್ಧ ದಾತೃಗಳಾದ ಮರುತ್ತುಗಳೇ, ನೀವು ಆಯಾಯ ಮಾರುತಸೂಕ್ತಗಳಲ್ಲಿ ಪ್ರತಿಪಾದಿತವಾಗಿರುವ ಪ್ರಭಾವಾತಿಶಯವುಳ್ಳವರು ಎಂದು ಸುದಾನವಃ ಎಂದು ಸಿದ್ಧವಾದ ದಾತೃತ್ವದಿಂದ ಮರುತ್ತುಗಳನ್ನು ಸಂಬೋಧನೆ ಮಾಡಿ ಯೂಯಮ್ ಎಂಬುದರಿಂದ ಆಯಾ ಮಾರುತಸೂಕ್ತಗಳಲ್ಲಿ ಪ್ರಸಿದ್ಧವಾದ ಪ್ರಭಾವಾತಿಶಯಗಳನ್ನು ಪ್ರತಿನಿರ್ದೇಶ ಮಾಡಿ ಪುನೀತನ, ಪವಿತ್ರಮಾಡಿರಿ ಎಂದು ಪ್ರಾರ್ಥಿಸಿದರೆ ಪವಿತ್ರೀಕರಣದಲ್ಲಿ ಯುಷ್ಮಚ್ಛಬ್ದಸಂಗೃಹೀತಗಳಾದಪ್ರಭಾವಾತಿಶಯಗಳಿಗೆ ಹೇತುತ್ವವು ಹಿ ಶಬ್ದದಿಂದ ಬೋಧಿತವಾಗುವುದು ॥ ೨ ॥

॥ संहितापाठः ॥

अभि यज्ञं गृणीहि नो ग्नावो नेष्टः पिब ऋतुना ।
त्वं हि रत्नधा असि ॥ ५ ॥

॥ पदपाठः ॥

अभि । यज्ञं । गृणीहि । नः । ग्नावः । नेष्टरिति । पिब । ऋतुना ॥
त्वं । हि । रत्न ऽ धाः । असि ॥ ५ ॥

॥ सायणभाष्यं ॥

ग्नाशब्दः स्त्रीनामसु । तथा च यास्कः अह । मेना गा इति स्त्रीणां मेना मानयंत्येना गा गच्छंत्येनाः । नि. ३-२८ । इति । गा अस्य संतीति ग्नावान् । नेष्टृ ऽशब्दोऽत्र त्वष्टारं देवमाह । कस्मिंश्चिद्देवसत्रे नेष्टुत्वेन त्वष्टुर्वृक्तत्वात् । हे ग्नावः पत्नीयुक्त नेष्टः त्वष्टः । नोऽस्मदीयं यज्ञमभि गृणीहि । अभितोदेवानां सविधाहे स्तुहि । ऋतुना सह त्वं सोमं पिब । हि यस्मात्त्वं रत्नधा असि रत्नानां दातासि दाता भवसि तस्मात्प्रेमं पातुमर्हसीत्यर्थः ॥ अभि । उपसर्गश्चाभिवर्जं । फि ४-७५ । इति पर्युदासादभेरंतोदात्तत्वं । गृणीहि । गॄ शब्दे । लोटि सिप्रो हिः । क्र्यादिभ्यः श्ना । हेर्ध्यात्त्वादीह्यल्यघोरिति त्वं । श्नाप्रत्ययस्य ज्ञात्वाद्ग्लाभावः । प्वादीनां ह्रस्वः । तिङ्ङतिङ इति निघातः । ग्नावस्य संतीति मतुप् । व्यत्ययेन वत्वं । संबुद्धौ मतुवसो रुरिति रुत्वं । विसर्गः । पादादित्वेनामंत्रितनिघाताभावात् षाष्ठिकमामंत्रितादुदात्तत्वं । ग्नाव इत्यस्य विशेषणतया विशेषवचनत्वान्नामंत्रितेसमानाधिकरण इति निषेधाभावादनिद्यमानवत्त्वेनोत्तरस्य नेष्टृ ऽशब्दस्य षाष्ठिकमादुदात्तत्वं । पिब । शसः पित्त्वादाद्धातुस्वरः । पूर्वयोरामंत्रितयोरविद्यमानवत्त्वेन निघाताभावः । रत्नानि दधातीति रत्नधाः । क्विप्प्रत्ययः । धातुस्वरः । समासे कृदुत्तरपदप्रकृतिस्वरत्वेन स एव शिष्यते । असि । सिप्रः पित्त्वादाद्धातुस्वरः । तिङ्ङतिङ इति निघातो न भवति हि चेति प्रतिषेधात् ॥

॥ ಪ್ರತಿಪದಾರ್ಥ ॥

ಗ್ನಾವಃ— ಪತ್ನೀಯುಕ್ತನಾದ । **ನೇಷ್ಟಃ**—ಎಲೈ ತ್ವಷ್ಟೃವೇ । **ನಃ**—ನಮ್ಮ । **ಯಜ್ಞಂ**--ಯಜ್ಞವನ್ನು । **ಅಭಿ ಗೃಣೀಹಿ**—(ದೇವತೆಗಳ) ಸಮೀಪದಲ್ಲಿಲ್ಲ ಹೊಗಳು । **ಋತುನಾ**—ಋತು ದೇವತೆಯೊಂದಿಗೆ । **ಪಿಬ**—ಸೋಮರಸವನ್ನು ಪಾನಮಾಡು। **ಹಿ**—ಏತಕ್ಕೆಂದರೆ । **ತ್ವಂ**—ನೀನು । **ರತ್ನಧಾ**—ಯಜ್ಞಫಲರೂಪವಾದ ರತ್ನಾದ್ಯೈಶ್ವರ್ಯವನ್ನು ಕೊಡುವವನಾಗಿ । **ಅಸಿ**-- ಇರುವೆ.

॥ ಭಾವಾರ್ಥ ॥

ಎಲೈ ತ್ವಷ್ಟೃವೇ, ನೀನು ಯಜ್ಞಫಲರೂಪವಾದ ರತ್ನಾದ್ಯೈಶ್ವರ್ಯವನ್ನು ಕೊಡುವವನು ಎಂಬುದಾಗಿ ಪ್ರಸಿದ್ಧನಾಗಿರುವೆ. ಇಂತಹ ನೀನು ಪತ್ನೀಯುಕ್ತನಾಗಿ ಬಂದು ನಮ್ಮ ಸೋಮರಸವನ್ನು ಋತು ದೇವತೆಯೊಡನೆ ಪಾನಮಾಡು. ಮತ್ತು ದೇವತೆಗಳ ಬಳಿಗೆ ಹೋಗಿ ನಮ್ಮ ಯಜ್ಞವನ್ನು ಹೊಗಳು.

English Translation.

Neshtri, (Twashtri) commend our sacrifice to the gods; drink with Ritu, for you are a giver of riches.

॥ ವಿಶೇಷವಿಷಯಗಳು ॥

ಗ್ನಾವಃ--ಗ್ನಾ ಶಬ್ದವು ಸ್ತ್ರೀವಾಚಕವು. **ಗ್ನಾ ಗಂಚ್ಛಂತ್ಯೇನಾಃ** (ನಿ. ೩-೨೧) ಎಂದು ಯಾಸ್ಕರು ಹೇಳಿರುವರು. **ಗ್ನಾ ಅಸ್ಯ ಸಂತೀತಿ ಗ್ನಾವಾನ್ ತಸ್ಯ ಸಂಬುದ್ಧಿಃ** । ಸ್ತ್ರೀಯೊಡನೆ ಇರುವವನಿಗೆ ಗ್ನಾವಾನ್ ಎಂದು ಹೆಸರು ಈ ಗ್ನಾವಃ ಎಂಬ ಸಂಬೋಧನ ಪ್ರಥಮೈಕವಚನವು ನೇಷ್ಟಃ ಎಂಬ ಶಬ್ದಕ್ಕೆ ವಿಶೇಷಣವು.

ನೇಷ್ಟಃ—ಕೆಲವು ಯಜ್ಞಗಳಲ್ಲಿ ತ್ವಷ್ಟೃವು ನೇಷ್ಟೃವೆಂಬ ಋತ್ವಿಕ್ಕಿನ ಭಾಗವನ್ನು ವಹಿಸಿದ್ದನೆಂದು ಪ್ರಸಿದ್ಧಿ ಇರುವುದರಿಂದ ತ್ವಷ್ಟೃವನ್ನು ನೇಷ್ಟೃಶಬ್ದದಿಂದ ಸಂಬೋಧನೆ ಮಾಡುವುದು ರೂಢಿಯಲ್ಲಿರುವುದು. ಆದುದರಿಂದ ನೇಷ್ಟೃಶಬ್ದಕ್ಕೆ ಇಲ್ಲಿ ತ್ವಷ್ಟೃದೇವತೆಯೆಂಬ ಅರ್ಥವನ್ನು ಹೇಳಬೇಕೆಂದು ಭಾಷ್ಯಕಾರರ ಅಭಿಪ್ರಾಯವು.

ರತ್ನಧಾಃ—**ರತ್ನಾನಾಂ ದಾತಾ**—ರತ್ನಗಳನ್ನು (ಶ್ರೇಷ್ಠ ವಸ್ತುಗಳನ್ನು) ಕೊಡುವವನು ಎಂದರ್ಥವು. ಋಗ್ವೇದದಲ್ಲಿ ಸಾಧಾರಣವಾಗಿ ದಾ ಧಾತುವಿಗೆ ಬದಲಾಗಿ ಧಾ ಧಾತುವಿನ ಪ್ರಯೋಗವು ರೂಢಿಯಲ್ಲಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಅಭಿ-ಉಪಸರ್ಗಾಶ್ಚಾಭಿವರ್ಜಮ್'—(ಫಿ. ಸೂ. ೮೧) ಎಂದು ಪರ್ಯುದಾಸ ಮಾಡಿರುವುದರಿಂದ ಅಭಿಗೆ ಆದ್ಯುದಾತ್ತ ಬರುವುದಿಲ್ಲ. **ಫಿಷೋನ್ತ ಉದಾತ್ತಃ** ಎಂಬುದರಿಂದ ಅಂತೋದಾತ್ತ ಬರುವುದು.

ಏವಾದಿಯಲ್ಲಿ ಅಭಿಶಬ್ದಕ್ಕೆ ಪಾಠವನ್ನು ಬಹುಜನರು ಒಪ್ಪುವರು. ಆದ್ದರಿಂದ **ಏವಾದೀನಾಮನ್ತ್ಯಃ** (ಫಿ. ಸೂ. ೮೨) ಎಂಬುದರಿಂದ ಅಭಿ ಅಂತೋದಾತ್ತ. **ಮಾನೋ ಮರ್ತಾ ಅಭಿದ್ರುಹನ್** (ಋ. ಸೂ. ೬-ಋ ೧೦) ಎಂಬ ಮಂತ್ರದಲ್ಲಿಯೂ ಏಹಿಸ್ತೋವಾꣳ ಅಭಿ (ಸೂ. ೧೦-ಋ. ೪) ಎಂಬಲ್ಲಿಯೂ ವೇದಭಾಷ್ಯಕಾರರು ಏವಾದೀನಾಮಂತಃ ಎಂಬುದರಿಂದ ಅಂತೋದಾತ್ತವನ್ನು ಉಪಪಾದಿಸಿರುವರು.

ಗೃಣೇಹಿ—ಗೃ ಶಬ್ದೇ ಕ್ರ್ಯಾದಿ ಧಾತು. ಲೋಟ್ ಮಧ್ಯಮಪುರುಷ ಏಕವಚನ ಸಿಪ್. ಅದಕ್ಕೆ **ಸೇರ್ಧ್ಯಪಿಚ್ಚೆ** (ಪಾ. ಸೂ-೪-೪-೮೭) ಎಂಬುದರಿಂದ ಹಿ ಆದೇಶ. ಗೃ+ಹಿ. **ಕ್ರ್ಯಾದಿಭ್ಯಃಶ್ನಾ** ಎಂಬುದರಿಂದ ಶ್ನಾ ವಿಕರಣ. ಗೃ+ನಾ+ಹಿ, **ಸಾರ್ವಧಾತುಕಮಪಿತ್**, ಎಂಬುದರಿಂದ ಹಿಯು ಜಿತ್ತು. ಆದ್ದರಿಂದ **ಈಹಲ್ಯಘೋಃ** (ಪಾ-ಸೂ. ೬-೪-೧೧೩) ಎಂಬುದರಿಂದ ಶ್ನಾ ಪ್ರತ್ಯಯದ ಆಕಾರಕ್ಕೆ ಈಕಾರದೇಶ. ಗೃ+ನೀ ಹಿ, ಹಿಯು ಜಿತ್ತಾದ್ದರಿಂದ ಇದರ ಹಿಂದೆ ಇರುವ ಈಗೆ ಗುಣ ಬರುವುದಿಲ್ಲ. ಶ್ನಾ ಪ್ರತ್ಯಯವು **ಸಾರ್ವಧಾತುಕಮಪಿತ್** ಎಂಬುದರಿಂದ ಜಿತ್ತಾಗುವುದರಿಂದ ಇದರ ಹಿಂದಿನ ಋಕಾರಕ್ಕೆ ಗುಣ ಬರುವುದಿಲ್ಲ. **ಶ್ನಾದೀನಾಂ ಹ್ರಸ್ವಃ** (ಪಾ ಸೂ. ೭-೩-೭೦) ಎಂಬುದರಿಂದ ಗೃಗೆ ಹ್ರಸ್ವ, ಗೃಣೇಹಿ, ಎಂದಾಗುವುದು. **ತಿಜ್ಜಿತಿಜಿಃ** (ಪಾ. ಸೂ. ೮-೧-೩೮) ಎಂಬುದರಿಂದ ಸರ್ವಾನುದಾತ್ತ.

ಗ್ನಾವಃ—**ಗ್ನಾಃಸ್ತ್ರಿಯಃ ಅಸ್ಯ ಸನ್ತಿ** ಎಂದು ವಿಗ್ರಹ ಮಾಡಿದರೆ ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್ ಎಂಬುದರಿಂದ ಮತುಪ್ ಪ್ರತ್ಯಯ ಬರುವುದು. ಮಕಾರಕ್ಕೆ ವ್ಯತ್ಯಯದಿಂದ ವಕಾರ ಗ್ನಾವತ್. ಇದರಮುಂದೆ ಸಂಬೋಧನ ಪ್ರಥಮೈಕವಚನ ಸುಪ್ರತ್ಯಯ. **ಉಗಿದಚಾಂಸರ್ವನಾಮಸ್ಥಾನೇಽಧಾತೋಃ** (ಪಾ.ಸೂ. ೬-೧-೬೦) ಎಂಬುದರಿಂದ ನುಮಾಗಮ ಗ್ನಾವನ್ತ್+ಸ್. **ಹಲ್ ಙ್ಯಾಭ್ಯೋ ದೀರ್ಘಾತ್** (ಪಾ.ಸೂ. ೬-೧-೬೮)ಎಂಬುದರಿಂದ **ಸುಲೋಪ ಸಂಯೋಗಾಂತಸ್ಯಲೋಪಃ** (ಪಾ. ಸೂ. ೮-೨-೨೩) ಎಂಬುದರಿಂದ ತಕಾರ ಲೋಪ. ಗ್ನಾವನ್ ಎಂದಿರುವಾಗ **ಮತುವಸೋರುಸಂಬುದ್ಧೌ ಛಂದಸಿ** (ಪಾ. ಸೂ. ೮.೩-೧) ಎಂಬುದರಿಂದ ನಕಾರಕ್ಕೆ ರುತ್ವ ಗ್ನಾವರ್ ರೇಫಕ್ಕೆ **ಸಸಜುಷೋರುಃ** ಎಂಬುದರಿಂದ ವಿಸರ್ಗ ಬಂದರೆ ಗ್ನಾವಃ ಎಂದಾಗುವುದು. ಗ್ನಾವರ್+ನೇಷ್ಟಃ ಎಂದು ಸಂಹಿತಕಾಲದಲ್ಲಿ **ಹಶಿಚ** (ಪಾ. ಸೂ. ೬-೧-೧೧೪) ಹಶ್ ವರ್ಣ ಪರದಲ್ಲಿರುವಾಗ ಪ್ಲುತವಲ್ಲದ ಹ್ರಸ್ವಾಕಾರದ ಮುಂದೆ ಇರುವ ರುಗೆ ಉತ್ವ ಬರುವುದು ಎಂಬುದರಿಂದ ಉತ್ವ. ಆದರೆ ಉತ್ವವು ಸಪಾದ ಸಪ್ತಾಧ್ಯಾಯದ ಕಾರ್ಯ ಆದನ್ನು ಮಾಡುವಾಗ **ಪೂರ್ವತ್ರಾಸಿದ್ಧಮ್** (ಪಾ. ಸೂ. ೮-೨-೧) ಎಂಬುದರಿಂದ ಸಂಯೋಗಾಂತಲೋಪವು ಅಸಿದ್ಧವಾಗುವುದು. ಏವಂಚ ತಕಾರ ಪರವಾಗಿ ಬಿಡುವುದರಿಂದ ಹಶ್ ಪರವಾಗುವುದಿಲ್ಲ. ಆದ್ದರಿಂದ ಹೇಗೆ ಉತ್ವ ಬರುವುದು ಎಂದರೆ ಉತ್ವವು ಸಪಾದ ಸಪ್ತಾಧ್ಯಾಯದ ಶಾಸ್ತ್ರವಾದರೂ ಆದನ್ನು ಮಾಡುವಾಗ **ಸಂಯೋಗಾನ್ತ-ಲೋಪೋರೋರುತ್ವೇ** (ಪಾ.ಸೂ. ೮-೨-೬ ವಾ) ರುಗೆ ಉತ್ವವನ್ನು ಮಾಡುವಾಗ ಸಂಯೋಗಾನ್ತಲೋಪವು ಸಿದ್ಧವಾಗುವುದು ಎಂಬ ವಚನದಿಂದ ಅಸಿದ್ಧವಾಗುವುದಿಲ್ಲ. ಆದ್ದರಿಂದ ಉತ್ವ ಬರುವುದು. ಗ್ನಾವಃ+ಉ+ನೇಷ್ಟಃ ಗುಣ, ಗ್ನಾವೋನೇಷ್ಟಃ ಎಂದಾಗುವುದು. ಗ್ನಾವಃ-ಎಂಬುದು ಎರಡನೇ ಪಾದದ ಆದಿಯಲ್ಲಿರುವುದು. ಆದ್ದರಿಂದ **ಅಪಾದಾದೌ** (ಪಾ. ಸೂ. ೮-೧-೧೮) ಎಂದು ಪ್ರತಿಷೇಧ ಬರುವುದರಿಂದ **ಆಮಂತ್ರಿತಸ್ಯಚ** (ಪಾ. ಸೂ. ೮-೧-೧೯) ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ. ಆರನೇ ಅಧ್ಯಾಯದ **ಆಮನ್ತ್ರಿತಸ್ಯಚ** (ಪಾ. ಸೂ. ೬-೧-೧೯೮) ಎಂಬುದರಿಂದ ಆದ್ಯುದಾತ್ತ ಬರುವುದು. ಗ್ನಾವಃ ಎಂಬುದು ನೇಷ್ಟಃ ಎಂಬುದಕ್ಕೆ ವಿಶೇಷಣವಾದ್ದರಿಂದ **ವಿಶೇಷವಚನವಾಗುವುದು.** ಸಾಮಾನ್ಯನಚನವಾಗುವುದಿಲ್ಲ. ಆದ್ದರಿಂದ **ನಾಮನ್ತ್ರಿತೇ ಸಮಾನಾಧಿಕರಣೇ ಸಾಮಾನ್ಯವಚನಂ** (ಪಾ. ಸೂ. ೮-೧-೭೩) ಎಂಬುದರಿಂದ ಅವಿದ್ಯಮಾನವದ್ಭಾವಕ್ಕೆ ಪ್ರತಿಷೇಧವು ಬರುವುದಿಲ್ಲ.

ಅದಕಾರಣ ಆಮನ್ತ್ರಿತಂ ಪೂರ್ವಮವಿದ್ಯಮಾನವತ್ (ಪಾ.ಸೂ. ೮-೧-೭೩) ಎಂಬುದರಿಂದ ಪೂರ್ವದ ಆಮಂತ್ರಿತವಾದ ಗ್ನಾವಃ ಎಂಬುದಕ್ಕೆ ಅವಿದ್ಯಮಾನವದ್ಭಾವ ಬರುವುದು. ಏವಂಚ ನೇಷ್ಟಃ ಎಂದ ಆಮಂತ್ರಿತವೂ ಪಾದಾದಿ ಗತವಾಗುವುದರಿಂದ ಆಪ್ಪಮಿಕಸಂಜ್ಞಾನುದಾತ್ತ ಬರುವುದಿಲ್ಲ. ಷಾಷ್ಠಸೂತ್ರದಿಂದ ಆದ್ಯುದಾತ್ತವೇ ಬರುವುದು.

ಪಿಬ— ಶಪ್ಪು ಪಿತ್ವಾದ್ದರಿಂದ ಧಾತುಸ್ವರ ನಿಲ್ಲುವುದು. ಇದರ ಹಿಂದೆ ಇರುವ ಆಮನ್ತ್ರಿತಗಳೆರಡಕ್ಕೂ ಅವಿದ್ಯಮಾನವದ್ಭಾವ ಬರುವುದರಿಂದ ಪಿಬ, ಎಂಬುದಕ್ಕೆ ಸರ್ವಾನುದಾತ್ತ ಬರುವುದಿಲ್ಲ. ರತ್ನಾನಿ ದಧಾತಿ ಇತಿ ರತ್ನಧಾಃ ಡುಧಾಞ್ ಧಾರಣಪೋಷಣಯೋಃ ಎಂಬುದರ ಮುಂದೆ ಕ್ವಿಪ್ಪ್ ಎಂಬುದರಿಂದ ಕ್ವಿಪ್. ಧಾತು ಸ್ವರವೇ ಬರುವುದು. ಸಮಾಸ ಬಂದನಂತರ ಗತಿಕಾರಕೋಪಪದಾತ್ಕೃತ್ ಎಂಬುದರಿಂದ ಕೃದುತ್ತರ-ಪದಪ್ರಕೃತಿಸ್ವರ ಬಂದು ಆದೇ ಸ್ವರ ನಿಲ್ಲುವುದು.

ಅಸಿ-ಅಸ ಭುವಿ ಲಟ್, ಮಧ್ಯಮಪುರುಷ ಏಕವಚನ ಸಿಪ್. ಶಪ್ ವಿಕರಣಕ್ಕೆ ಆದಿಶ್ರ್ಯಭೃತಿಭ್ಯಃಶಪಃ ಎಂಬುದರಿಂದ ಲುಕ್. ತಾಸೇಸ್ಥ್ಯೋರ್ಲೋಪಃ (ಪಾ. ಸೂ. ೭-೪-೫೦) ಎಂಬುದರಿಂದ ಸಕಾರಕ್ಕೆ ಲೋಪ. ಅಸಿ ಎಂದಾಗುವುದು. ಶಪ್ಪು ಪಿತ್ವಾದ್ದರಿಂದ ಅನುದಾತ್ತೌ ಸುಪ್ಪಿತೌ, ಎಂಬುದರಿಂದ ಅನುದಾತ್ತ. ಧಾತು ಸ್ವರ ನಿಲ್ಲುವುದು. ಹಿ ಶಬ್ದಯೋಗವಿರುವುದರಿಂದ ಹಿಚ ಎಂಬುದರಿಂದ ಪ್ರತಿಷೇಧ ಬರುವುದು. ಆದಕಾರಣ ತಿಙ್ಙತಿಙಃ ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ. ಉದಾತ್ತಾದನುದಾತ್ತಸ್ಯ ಸ್ವರಿತಃ ಎಂಬುದರಿಂದ ಸಿಪ್ ನ ಇಕಾರ ಸ್ವರಿತವಾಗುವುದು. ॥ ೩ ॥

॥ ಸಂಹಿತಾಪಾಠಃ ॥

ಅಗ್ನೇ ದೇವಾँ ಇಹಾ ವಹ ಸಾದಯಾ ಯೋನಿಷು ತ್ರಿಷು ।
ಪರಿ ಭೂಷ ಪಿಬ ಋತುನಾ ॥ ೪ ॥

॥ ಪದಪಾಠಃ ॥

ಅಗ್ನೇ । ದೇವಾನ್ । ಇಹ । ಆ । ವಹ । ಸಾದಯ । ಯೋನಿಷು । ತ್ರಿಷು ॥
ಪರಿ । ಭೂಷ । ಪಿಬ । ಋತುನಾ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ದೇವಾನಿಹಾಸ್ಮಿನ್ಕರ್ಮಣ್ಯಾ ವಹ । ತತೋ ಯೋನಿಷು ಸ್ಥಾನೇಷು ತ್ರಿಷು ಸವನೇಷು ಸಾದಯ । ದೇವಾನುಪವೇಶಯ । ತತಸ್ತಾನ್ಪರಿ ಭೂಷ । ಅಲಂಕುರು । ಋತುನಾ ಸಹ ಕ್ಷಂ ಸೋಮಂ

ಪಿಬ ॥ ಅಗ್ನೇ ದೇವಾನಿತ್ಯಯಂ ಪಾದೋ ಗತಃ । ಯೋನಿಷು । ಯು ಮಿಶ್ರಣೇ । ವಹಿಶ್ರೀತ್ಯಾದಿನಾ ।ಉ ೪-೫೧ । ನಿ ಪ್ರತ್ಯಯಃ । ನಿತ್ತ್ವಾದಾದ್ಯುದಾತ್ತಃ । ಶ್ರಿಷು । ಷಟ್ ಶ್ರಿಚೆತುರ್ಭ್ಯೋ ಡಲಾದಿಃ । ಪಾ. ೬-೧-೧೬೯ । ಇತಿ ವಿಭಕ್ತೇರುದಾತ್ತತ್ವಂ । ಭೂಷ ಅಲಂಕಾರೇ । ತಿಙ್ಙತಿಙಿ ಇತಿ ನಿಘಾತಃ । ಪಿಬ ಋತುನಾ। ಗತೌ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ದೇವಾನ್—ದೇವತೆಗಳನ್ನು । ಇಹ—ಈ ಯಜ್ಞಕರ್ಮನಿಮಿತ್ತವಾಗಿ । ಆ ವಹ—ಕರೆದುಕೊಂಡು ಬಾ । ತ್ರಿಷು ಯೋನಿಷು—ಮೂರು(ಪ್ರತ್ಯೇಕವಾದ) ಸ್ಥಾನಗಳಲ್ಲಿ (ಸವನಗಳಲ್ಲಿ) । ಸಾದಯ—ಕುಳ್ಳಿರಿಸು । ಪರಿ ಭೂಷ—ಅಲಂಕರಿಸು। ಋತುನಾ—ಋತುದೇವತೆಯೊಂದಿಗೆ । ಪಿಬ—(ಸೋಮರಸವನ್ನು) ಕುಡಿ.

॥ ಭಾವಾರ್ಥ ॥

ಎಲೈ ಅಗ್ನಿಯೇ, ದೇವತೆಗಳನ್ನು ನಮ್ಮ ಯಜ್ಞಕ್ಕೆ ಕರೆದುಕೊಂಡು ಬಾ. ಅವರನ್ನು ಪ್ರಾತಸ್ಸವನ, ಮಾಧ್ಯಂದಿನಸವನ, ತೃತೀಯಸವನಗಳೆಂಬ ಮೂರುಸವನಗಳಲ್ಲೂ ಮೂರು ಪ್ರತ್ಯೇಕವಾದ ಸ್ಥಾನಗಳಲ್ಲಿ ಕುಳ್ಳಿರಿಸು. ಯೋಗ್ಯವಾದ ಅಲಂಕಾರಗಳನ್ನು ಮಾಡು. ನೀನೂ ಸಹ ಋತುದೇವತೆಯೊಂದಿಗೆ ಸೋಮರಸವನ್ನು ಕುಡಿ.

English Translation

Agni, bring the gods hither, seat them in three places (or in the three savanas), decorate them and drink with Ritu.

॥ ವಿಶೇಷವಿಷಯಗಳು ॥

ಸಾದಯ—ಛಂದಸ್ಸಿನ ಅನುಕೂಲಕ್ಯಾಗಿ ಈ ಶಬ್ದದ ಅಂತ್ಯಾಕ್ಷರವು ಸಂಹಿತಾಪಾಠದಲ್ಲಿ ದೀರ್ಘವಾಗಿರುವುದು.

ಯೋನಿಷು ತ್ರಿಷು—**ತ್ರಿಷು ಸ್ಥಾನೇಷು** ಎಂದರೆ ಪ್ರಾತಸ್ಸವನ, ಮಾಧ್ಯಂದಿನಸವನ, ತೃತೀಯಸವನಗಳು. ಸವನವೆಂದರೆ ಸೋಮರಸವನ್ನು ಹಿಂಡುವ ಕರ್ಮವು. ಈ ಕರ್ಮವು ಯಜ್ಞದಲ್ಲಿ ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲಗಳೆಂಬ ಮೂರು ಕಾಲಗಳಲ್ಲಿಯೂ ಮಂತ್ರಪಠನಪೂರ್ವಕವಾಗಿ ನಡೆಯುವುದರಿಂದ ಈ ಕರ್ಮಗಳಿಗೆ ಕ್ರಮವಾಗಿ ಪ್ರಾತಸ್ಸವನ, ಮಾಧ್ಯಂದಿನಸವನ, ತೃತೀಯಸವನಗಳೆಂದು ಹೆಸರಿರುವುದು.

ಪರಿ ಭೂಷ—ಅಲಂಕುರು—ಅಲಂಕರಿಸು ಎಂಬರ್ಥವನ್ನು ಭಾಷ್ಯಕಾರರು ಹೇಳಿರುವರು. ಭೂಷ ಶಬ್ದಕ್ಕೆ ಅಲಂಕರಿಸು ಎಂಬರ್ಥವಿದ್ದರೂ ಇಲ್ಲಿ ದೇವತೆಗಳನ್ನು ಅಲಂಕರಿಸುವ ಅವಶ್ಯಕತೆಯೇನಿರಬಹುದೆಂಬ ಸಂಶಯಕ್ಕೆ ಅಸ್ಪದನಿದೆ.

॥ ವ್ಯಾಕರಣಪ್ರಕ್ರಿಯಾ ॥

ಆಗ್ನೇದೇವಾಁ ಇಹಾವಹ ಎಂಬೀ ಪಾದಕ್ಕೆ ೧೫ನೇ ಸೂಕ್ತ ೩, ೧೦ನೇ ಋಕ್ಕುಗಳಲ್ಲಿ ಪ್ರಕ್ರಿಯೆಯು ಉಪಪಾದಿತವಾಗಿರುವುದು.

ಸಾದಯಾ—ಷದ್ಲೃ ವಿಶರಣಗತ್ಯವಸಾದನೇಷು, ಧಾತೋ. ಣಿಚ್ ಧಾತ್ವಾದೇಃ ಷಃ ಸಃ ಎಂಬುದರಿಂದ ಷಕಾರಕ್ಕೆ ಸಕಾರ. ಅತ ಉಪಧಾಯಾಃ (ಪಾ. ಸೂ. ೭-೩-೧೧೬) ಉಪಧಾವೃದ್ಧಿ ಸಾದಿ. ಇದರ ಮುಂದೆ ಲೋಟ್ ಮಧ್ಯಮಪುರುಷ ಏಕವಚನ ಸಿಪ್. ಸೇರ್ಹ್ಯಪಿಚ್ಚೆ (ಪಾ. ಸೂ, ೩-೪-೮೭) ಎಂಬುದರಿಂದ ಹಿ ಆದೇಶ. ವಿಕರಣ ಶಪ್, ಗುಣ. ಅಯಾದೇಶ ಸಾದಯ+ಹಿ ಅತೋಹೇಃ (ಪಾ. ಸೂ. ೬-೪-೧೦೫) ಎಂಬುದರಿಂದ ಹಿಗೆ ಲುಕ್. ಣಿಚ್ಪ್ರತ್ಯಯ ಸ್ಥಾನದಲ್ಲಿ ಬಂದ ಅಕಾರ ಪ್ರತ್ಯಯಸ್ವರದಿಂದ ಉದಾತ್ತ. ಶಪ್ ಪಿತ್ತಾದ್ದರಿಂದ ಅನುದಾತ್ತ. ಸಚಸ್ವನಃ ಎಂಬಲ್ಲಿ ಬಂದಂತೆ ಇಲ್ಲಿಯೂ ದೀರ್ಘ.

ಯೋನಿಷು—ಯು ಮಿಶ್ರಣೇ. ವಹಿ, ಶ್ರಿ ಶ್ರು, ಯು, ದ್ರು, ಗ್ಲಾ, ಶ್ವರಿಭ್ಯೋ ನಿತ್ (ಉ. ಸೂ. ೪-೪೯೧) ಈ ಧಾತುಗಳ ಮುಂದೆ ನಿ ಪ್ರತ್ಯಯ ಬರುವುದು, ಅದು ನಿತ್ತಾಗುವುದು ಎಂಬುದರಿಂದ ಯು ಧಾತುವಿನ ಮುಂದೆ ನಿ ಪ್ರತ್ಯಯ, ಯು+ನಿ ಸಾರ್ವಧಾತುಕಾರ್ಧಧಾತುಕಯೋಃ (ಪಾ. ಸೂ. ೭-೩-೮೪) ಎಂಬುದರಿಂದ ಗುಣ, ಉಕಾರಕ್ಕೆ ಓಕಾರ, ಸಪ್ತಮ್ಯಾಬಹುವಚನದಲ್ಲಿ ಯೋನಿಷು ಎಂದಾಗುವುದು. ನಿ ಪ್ರತ್ಯಯವು ನಿತ್ತಾದ್ದರಿಂದ ನಿತ್ಸ್ವರ ಆದ್ಯುದಾತ್ತ ಬರುವುದು.

ತ್ರಿಷು—ಷಟ್ತ್ರಿಚತುರ್ಭ್ಯೋ ಹಲಾದಿಃ (ಪಾ. ಸೂ. ೯-೧-೧೦೯) ಷ್ಣಾನ್ತಾಷಟ್ (ಪಾ. ಸೂ. ೧-೧-೨೪) ಷಕಾರಾಂತ ನಕಾರಾಂತವಾದ ಸಂಖ್ಯಾವಾಚಕಗಳು ಷಟ್ ಸಂಜ್ಞೆಯನ್ನು ಹೊಂದುವುವು ಎಂದು ವಿಹಿತವಾದ ಷಟ್ಸಂಜ್ಞಕ ತ್ರಿಶಬ್ದ, ಚತುರ್ಶಬ್ದ ಇವುಗಳ ಮುಂದೆ ಇರುವ ಹಲಾದಿಯಾದ ವಿಭಕ್ತಿಯು ಉದಾತ್ತವಾಗುವುದು ಎಂಬುದರಿಂದ ವಿಭಕ್ತಿಯು ಉದಾತ್ತವಾಗುವುದು.

ಭೂಷ—ಭೂಷ ಅಲಂಕಾರೇ ಭ್ವಾದಿಧಾತು. ಲೋಟ್ ಮಧ್ಯಮಪುರುಷ ಏಕವಚನ ಸಿಪ್. ಹಿ ಆದೇಶ ವಿಕರಣ ಶಪ್. ಅತೋಹೇಃ ಎಂಬುದರಿಂದ ಹಿಗೆ ಲುಕ್ ಭೂಷ ಎಂದಾಗುವುದು. ತಿಜ್ಜಾತಿಜಃ ಎಂಬುದರಿಂದ ಸರ್ವಾನುದಾತ್ತ.

ಪಿಬ ಋತುನಾ—ಇನ್ದ್ರ ಸೋಮಂ ಪಿಬ ಋತುನಾ (ಋ. ಸಂ. ಸೂ. ೧೫-ಋ. ೧) ರಲ್ಲಿ ಈ ಎರಡು ಪದಗಳೂ ವಿವರಿಸಲ್ಪಟ್ಟಿರುವುವು ॥ ೪ ॥

॥ ಸಂಹಿತಾಪಾಠಃ ॥

ಬ್ರಾಹ್ಮಣಾದಿನ್ದ್ರ ರಾಧಸಃ ಪಿಬಾ ಸೋಮಮೃತೂ೧ರನು ।
ತವೇದ್ಧಿ ಸಖ್ಯಮಸ್ತೃತಂ ॥ ೫ ॥

॥ ಪದಪಾಠಃ ॥

ಬ್ರಾಹ್ಮಣಾತ್ । ಇಂದ್ರ । ರಾಧಸಃ । ಪಿಬ । ಸೋಮಂ । ಋತೂನ್ । ಅನು ॥
ತವ । ಇತ್ । ಹಿ । ಸಖ್ಯಂ । ಅಸ್ತೃತಂ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಬ್ರಾಹ್ಮಣಾದ್ಬ್ರಾಹ್ಮಣಾಚ್ಛಂಸಿಸಂಬಂಧಾದ್ರಾಧಸೋ ಧನಭೂತಾತ್ಪಾತ್ರಾತ್ಸೋಮಂ ಪಿಬ । ಕಿಂ ಕೃತ್ವಾ । ಋತೂನನು ಋತುದೇವಾನನುಸೃತ್ಯ । ಋತವೋ೭ಪಿ ಪಿಬಂತ್ಯರ್ಥಃ । ಹಿ ಯಸ್ಮಾತ್ತವೇತ್ತವ ಸಖ್ಯಮಸ್ತೃತಮಸ್ತೃತಾನಾಮವಿಚ್ಛಿನ್ನಂ ತಸ್ಮಾದೃತುಭಿಃ ಸಹ ಪಾನಂ ಯುಕ್ತಂ ॥ ಬ್ರಾಹ್ಮಣಾತ್ । ಬ್ರಹ್ಮಶಬ್ದೇನಾತ್ರ ಬ್ರಹ್ಮವರ್ಗೇ ದ್ವಿತೀಯೋ ಬ್ರಾಹ್ಮಣಾಚ್ಛಂಸೀ ಕಥ್ಯತೇ । ಸ ಚ ಪುಲ್ಲಿಂಗೇ ಶೇಷನಿಘಾತೇನಾನುದಾತ್ತಾದಿಃ । ತಸ್ಯ ಸಂಬಂಧ್ಯುತ್ತೆಷ್ಪಶ್ಚಮುಸಃ । ಸ ಚ ತಸ್ಯೈವಾವಯವೇನ್ನಿಯತ ಇತ್ಯವಯವವಿವಕ್ಷಾಯಾಮನುದಾತ್ತಾದೇರಞ್ । ಪಾ. ೪-೨-೪೪ । ತೇನ ಞಿತ್ತ್ವಾದಾದ್ಯುದಾತ್ತೆಷ್ಟಮಸಪೋಽತ್ರ ಬ್ರಾಹ್ಮಣಶಬ್ದಃ । ರಾಧಸಃ । ಸರ್ವಧಾತುಭ್ಯೋ೭ಸುನ್ । ನಿತ್ತ್ವಾದಾದ್ಯುದಾತ್ತಃ । ಪಿಬ । ಪಾದಾದಿತ್ತ್ವಾದಾದ್ಯುದಾತ್ತೆತ್ವಂ । ದ್ವ್ಯಚೋ೭ತೆಸ್ತಿಙ ಇತಿ ದೀರ್ಘತ್ವಂ । ಋತೂ ೪ ರನ್ವಿತ್ಯತ್ರ ದೀರ್ಘಾದಟಿ ಸಮಾನಪಾದ ಇತಿ ನಕಾರಸ್ಯ ರುತ್ವಂ । ಅತ್ರಾನುನಾಸಿಕಃ ಪೂರ್ವಸ್ಯ ತು ವಾ । ಪಾ. ೮-೩-೨ । ಇತ್ಯೋಕಾರಸ್ಯಾನುನಾಸಿಕತ್ವಂ । ತವ । ಯುಷ್ಮದಸ್ಮದ್ಭ್ಯಾಂ ಙಸೋ೭ಶ್ । ಪಾ. ೭-೧-೨೭ । ತಿತ್ತ್ವಾತ್ತ್ವಾರ್ಥದೇಶಃ ತವಮಮೌ ಙಸಿತಿ ತವಾದೇಶಃ। ಯುಷ್ಮದಸ್ಮದೋರ್ಙಸೀತ್ಯಾದ್ಯುದಾತ್ತೆತ್ವೆಂ । ಸಖ್ಯಂ । ಸಖ್ಯುಃ ಕರ್ಮ ಸಖ್ಯಂ। ಸಖ್ಯುರ್ಯದಃ । ಯಸ್ಯೇತಿ ಲೋಪಃ । ಪ್ರತ್ಯಯಸ್ವರಃ। ಅಸ್ತೃತಂ । ಸ್ತೃಣಾತೇರ್ಹಿಂಸಾರ್ಥಸ್ಯ ಕ್ತಃ । ನಞ್ಸಮಾಸಃ । ಅವ್ಯಯಪೂರ್ವಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಹಿ—ಯಾವ ಕಾರಣದಿಂದ । ತವೇತ್—ನಿನ್ನದೇ ಆದ । ಸಖ್ಯಂ—ಸ್ನೇಹವು । ಅಸ್ತೃತಂ— (ಋತುದೇವತೆಗಳೊಂದಿಗೆ) ಅವಿಚ್ಛಿನ್ನವಾದುದೋ (ಅತಃ—ಆಕಾರಣದಿಂದ) ಬ್ರಾಹ್ಮಣಾತ್— ಬ್ರಾಹ್ಮಣಾಚ್ಛಂಸಿ ಎಂಬ ಋತ್ವಿಜನ । ರಾಧಸಃ — ಬೆಲೆಬಾಳತಕ್ಕ ಚಮಸ ಪಾತ್ರೆಯಿಂದ । ಸೋಮಂ—ಸೋಮರಸವನ್ನು । ಪಿಬ— ಕುಡಿ.

॥ ಭಾವಾರ್ಥ ॥

ಎಲೈ ಇಂದ್ರನೇ ನಿನ್ನ ಮತ್ತು ಋತುದೇವತೆಗಳ ಸ್ನೇಹವು ಶಾಶ್ವತವಾಗುದೆಂದು ಲೋಕಪ್ರಸಿದ್ಧವಾಗಿರುವುದು. ಆದುದರಿಂದ ಬ್ರಾಹ್ಮಣಚ್ಛಂಸಿ ಎಂಬ ಋತ್ವಿಜನ ಬೆಲೆಬಾಳತಕ್ಕ ಚಮಸಪಾತ್ರೆಯಿಂದ ಋತುದೇವತೆಗಳೊಡನೆ ನೀನೂ ಸೋಮರಸವನ್ನು ಪಾನಮಾಡು.

English Translation.

Drink the soma juice, Indra, from the cups of priest called Brahmanachamsi, after Ritu for whom your friendship is uninterrupted (everlasting).

॥ ವಿಶೇಷವಿಷಯಗಳು ॥

ಬ್ರಾಹ್ಮಣಾತ್—ಬ್ರಾಹ್ಮಣಾಚ್ಛಂಸಿ ಎಂಬ ಹೆಸರಿನ ಋತ್ವಿಕ್.

ರಾಧಸಃ—ಧನಭೂತಾತ್ ಪಾತ್ರಾತ್—ರಾಧಶ್ಶಬ್ದಕ್ಕೆ ಧನವೆಂದು ಮಾತ್ರ ಅರ್ಥವು. ಪಾತ್ರೆ ಎಂಬ ಅರ್ಥವಾಗುವುದಿಲ್ಲವಾದರೂ ಭಾಷ್ಯಕಾರರು ಆ ಅರ್ಥವನ್ನು ಅಧ್ಯಾಹಾರ ಮಾಡಿರುವರು. ಅಥವಾ ರಾಧಸಃ ಎಂಬ ಶಬ್ದಕ್ಕೆ ಅಮೂಲ್ಯವಾದ, ಅನರ್ಘ್ಯವಾದ ಪಾತ್ರೆಯಿಂದ, costly vessel ಎಂದು ಅರ್ಥವನ್ನು ಬೇಕಾದರೂ ಹೇಳಬಹುದು.

ಅಸ್ರೃತೇಂ—ಅವಿಚ್ಛಿನ್ನಂ, ಅವಿಚ್ಛಿನ್ನವಾದ, uninteruptedr ಕೆಲವು ಕಾಲವಿದ್ದು ನಿಂತುಹೋಗದ, ಶಾಶ್ವತವಾದ ಇತ್ಯಾದಿ.

॥ ವ್ಯಾಕರಣಪ್ರಕಿಯಾ ॥

ಬ್ರಾಹ್ಮಣಾತ್—ಸೋಮಸಂಸ್ಥಾಕವಾದ ಯಾಗದಲ್ಲಿ ಬ್ರಹ್ಮ, ಬ್ರಾಹ್ಮಣಾಚ್ಛಂಸೀ, ಅಗ್ನೀಧ್ರ, ಪೋತೃ ಎಂಬ ನಾಲ್ವರು ಬ್ರಹ್ಮವರ್ಗಕ್ಕೆ ಸೇರಿದವರು. ಈ ಬ್ರಹ್ಮವರ್ಗದಲ್ಲಿ ಎರಡನೆಯವನಾದ ಬ್ರಾಹ್ಮಣಾಚ್ಛಂಸಿಯು ಇಲ್ಲಿರುವ ಬ್ರಹ್ಮಶಬ್ದದಿಂದ ಬೋಧಿಸಲ್ಪಡುತ್ತಾನೆ. ಬ್ರಹ್ಮಶಬ್ದವು ಬೃಹಿ ವೃದ್ಧೌ ಧಾತುವಿನ ಮೇಲೆ ಪ್ರಾಚೀನ ಕ್ರಮದಲ್ಲಿ ಬೃಂಹೇರಮ್ ನಲೋಪಶ್ಚ ಎಂಬುದರಿಂದಲೋ, ಉಪಲಭ್ಯಮಾನವಾದ ಉಣಾದಿಸೂತ್ರ-ಕ್ರಮದಲ್ಲಿ ಬೃಂಹೇರ್ನೋಚ್ಚ ಎಂಬುದರಿಂದಲೋ ಮನಿನ್ ಪ್ರತ್ಯಯ ಬಂದು ನಿಷ್ಪನ್ನವಾಗುವುದು. ಬ್ರಹ್ಮನ್ ಪುಂಸಿಚೆ (ಅಂ. ಸೂ. ೧೫೦) ಎಂಬುದರಿಂದ ನಪುಂಸಕಲಿಂಗದಲ್ಲೂ, ಪುಲ್ಲಿಂಗದಲ್ಲೂ ಇರುವುದು. ನಪುಂಸಕಲಿಂಗದಲ್ಲಿ ಜ್ಞಿತ್ಯಾದಿರ್ನಿತ್ಯಮ್ ಎಂಬುದರಿಂದ ಬ್ರಹ್ಮನ್ ಎಂಬುದು ಆದ್ಯುದಾತ್ತ. ಪುಲ್ಲಿಂಗದಲ್ಲಿ ಉಞ್ಞ್ಯಾದೀನಾಂಚೆ (ಪಾ. ಸೂ ೬-೧-೧೬೦) ಈ ಗಣಕ್ಕೆ ಸೇರಿದ ಶಬ್ದಗಳ ಅಂತವು ಉದಾತ್ತವಾಗುವುದು ಎಂಬುದರಿಂದ ಅಂತೋದಾತ್ತ. ಈ ಪಕ್ಷದಲ್ಲಿ ಅನುದಾತ್ತಂಪದಮೇಕವರ್ಜಮ್ (ಪಾ. ಸೂ. ೬-೧-೧೫೮) ಎಂಬ ಶೇಷನಿಘಾತದಿಂದ ಬ್ರಹ್ಮಶಬ್ದವು ಅನುದಾತ್ತಾದಿಯಾಗುವುದು. ಈ ಬ್ರಹ್ಮವರ್ಗಕ್ಕೆ ಸೇರಿದವರಿಗೂ ಇನ್ನೂ ಕೆಲವರು ಪ್ರಧಾನರಾದ ಯಾಜಮಾನಾದಿಗಳಿಗೂ ಸಹ ಸೋಮಪಾನವುಂಟು. ಸೋಮಪಾನ ಮಾಡುವ ಪಾತ್ರೆಗೆ ಚಮಸ ಎಂದು ಹೆಸರು. ಈ ಚಮಸವು ಚತುರಶ್ರ(ಚಚ್ಚೌಕ)ವಾಗಿರಬೇಕು. ಇವುಗಳ ಹಿಡಿಗಳು ನಾನಾ ವಿಧವಾಗಿರುವುವು.

ಚತುರಶ್ರೋ ಬ್ರಹ್ಮಚಮಸಃ ಹೋತುಸ್ತು ಪರಿಮಂಡಲಃ ।
ಪೃಥುಸ್ತು ಯಜಮಾನಸ್ಯ ತ್ರ್ಯಶ್ರಿರುದ್ಗಾತುರಿಷ್ಯತೇ ॥ ೧ ॥

प्रशास्तुरवतप्पः स्याद्युत्तप्पोः ब्रह्मशंसिनः ।
पोतुरग्नेः विशाप्पीः स्यात् नेष्टुप्पुः विगृहीतकः ॥ ७ ॥

अच्छावाकस्य राप्नावानाग्नीध्रस्य मयूखगः ।
सव्यावृतस्सदस्यःस्याद्देवतच्छमसलक्षणम् ॥ ८ ।

दक्षिणानामेव अकारश्चमसाश्चतुरश्रगाः ।
होतुर्ब्राह्मण उद्गातुर्यप्टुश्चाप्तुश्च शंसिनः ॥ ९ ॥

पोतृनेष्ट्रच्छावाकानामाग्नीध्रस्येति च क्रमः ॥ ऐंदु लक्षणवन्नु अग्निष्टोमयोगदल्लि प्रातःसवनदल्लि सोमपात्रासादनप्रकरणदल्लि प्राचीनरु हेळिरुवरु. इदरिंद ब्रह्मणाच्छंसिय सोमपात्रेय दंडवु ऊर्ध्ववागिरुवुदु अंदरे मेलक्के एत्तिकोंडिरुवंते कैत्तल्पट्टिरुवुदु ऐंदु अर्थवट्टितु. मेलक्के एत्तिद हिडियुळ्ळ चमसपात्रेयु ब्रह्मणाच्छंसिगे अवयविगे अवयवगळंते नियतवागिरुवुदु. आदुदरिंद इदन्नु अवयवनेंदु विवक्षे माडबहुदु. हीगे विवक्षेमाडिदागे अनुदात्तादेरञ् (पा. सू.४-३-४४) अनुदात्तादियाद प्रातिपदिकप्रकृतिकषष्ठ्यंतद मुंदे अवयवविकार समूह ऐंब अर्थगळल्लि अञ् प्रत्यय बरुवुदु ऐंबुदरिंद अञ् प्रत्ययवु ब्रह्मणः अवयवः (ब्रह्मणाच्छंसिय अवयववु) ऐंदु विग्रहवन्नु माडिदाग बरुवुदु. ऐवंचे ब्राह्मणाच्छंसि अवयव ऐंदरे अवयवदंते नियतवाद मेलक्के एत्तिरुवंते कैत्तिद हिडियुळ्ळ चमसपात्रे ऐंदु इल्लिरुव ब्राह्मणशब्दद अर्थवु. अञ्प्रत्ययवु ञ्नित्त्वाद्दरिंद ञ्नित्यादिर्नित्यम् (पा. सू. ६ ८-१४८) ऐंबुदरिंद आद्युदात्त बरुवुदु.

रावधसः—सर्वधातुभ्योऽसुन् (उ सू. ४-६३८) ऐंबुदरिंद रावध, धातुविन मुंदे असुन् प्रत्यय, नित्स्वर आद्युदात्त बरुवुदु.

पिब—पिबा मित्रस्य (ऋ. सं. ८-१४-८७) ऐंबल्लि इदु विवृतवागिरुवुदु. पादद आदियल्लिरुवुदु. आप्पमिकानुदात्त बरुवुदिल्ल. द्व्यचोतस्तिङः (पा. सू. ६-३-१३५) ऐंबुदरिंद दीर्घ.

ऋतून्रनु-ऋतून्+अनु ऐंदिरुवाग दीर्घादटिसमानपादे (पा. सू. ८-४-६४) ऐंबुदरिंद नकारक्के रु आदेश ऋतूर्+अनु. आत्त्वनुनासिकः पूर्वस्यैतावा (पा. सू. ८-३-२) रुप्रकरणदल्लि यावुदु विहितवागिदेयो अदक्किंतलू पूर्ववल्लिरुवुदर स्थानदल्लि अनुनासिकवु विकल्पवागि बरुवुदु ऐंबुदरिंद ऊकारक्के अनुनासिकवाद ऊकारवु बरुवुदु. ऋतून् अनु.

ತವ—ಯುಷ್ಮದ್ ಶಬ್ದದ ಮುಂದೆ ಷಷ್ಠ್ಯೇಕವಚನ ಙಸ್. ಯುಷ್ಮದ್+ಙಸ್ **ಯುಷ್ಮದಸ್ಮದ್ಭ್ಯಾಂ ಙಸೋಶ್** (ಪಾ. ಸೂ. ೭-೧ ೨೭) ಯುಷ್ಮದ್ ಅಸ್ಮದ್ ಶಬ್ದಗಳ ಮುಂದೆ ಇರುವ ಙಸ್‌ನ ಸ್ಥಾನದಲ್ಲಿ **ಅಶ್** ಆದೇಶ ಬರುವುದು ಎಂಬುದರಿಂದ ಙಸ್‌ಗೆ ಅಶ್ ಬರುವುದು ಅದು **ಶಿತ್ವಾದ್ದ್ವರಿಂದ ಅನೇಕಾಲ್ಶಿತ್ಸರ್ವಸ್ಯ** (ಪಾ. ಸೂ. ೧-೧-೪೫) ಎಂಬುದರಿಂದ ಸರ್ವಸ್ಥಾನದಲ್ಲಿ ಬರುವುದು. ಯುಷ್ಮದ್+ಅ **ತವಮಮೌ ಙಸಿ** (ಪಾ. ಸೂ. ೭-೨-೯೭) ಙಸ್ ಪರದಲ್ಲಿರುವಾಗ ಯುಷ್ಮದ್ ಅಸ್ಮದ್ ಶಬ್ದಗಳ ಮಪರ್ಯನ್ತಕ್ಕೆ ತವ ಮಮ ಆದೇಶಗಳು ಬರುವುವು ಎಂಬುದರಿಂದ ಮಪರ್ಯಂತಕ್ಕೆ ತವ ಆದೇಶ ತವ+ಅದ್+ಅ **ಅತೋಗುಣೇ** ತವರೂಪ, ಶೇಷೇ ಲೋಪಃ ಎಂಬುದರಿಂದ ಟ ಲೋಪ. **ಯುಷ್ಮದಸ್ಮದೋರ್ಙಿ** (ಪಾ. ಸೂ. ೬-೧-೨೧೧) ಙಸ್ ಪರದಲ್ಲಿರುವಾಗ ಯುಷ್ಮ, ಪಸ್ಮಚ್ಛಬ್ದಗಳ ಆದಿಯು ಉದಾತ್ತವಾಗುವುದು ಎಂಬುದರಿಂದ **ಶೇಷೇಲೋಪಃ** (ಪಾ. ಸೂ. ೭-೨-೯೦) ಎಂಬಲ್ಲಿ ಟಲೋಪ. **ಅನುದಾತ್ತಸ್ಯ ಚ ಯತ್ರೋದಾತ್ತಲೋಪಃ** (ಪಾ ಸೂ ೬-೧- ೧೬೧) ಎಂಬ ಉದಾತ್ತ ನಿಪಾತ್ತಿ ಸ್ವರದಿಂದಲೂ, ಶೇಷೇಲೋಪಃ, ಎಂಬಲ್ಲಿ ಅಂತ್ಯಲೋಪ ಪಕ್ಷದಲ್ಲಿ **ವಿಕಾದೇಶ ಉದಾತ್ತೇನೋದಾತ್ತಃ** (ಪಾ. ಸೂ. ೮-೨-೫) ಎಂಬುದರಿಂದಲೂ ವಿಭಕ್ತಿಗೆ ಉದಾತ್ತವು ಪ್ರಾಪ್ತವಾದರೆ ಅದನ್ನು ಬಾಧಿಸಿ ಯುಷ್ಮದ್ ಶಬ್ದದ ಆದಿಗೆ ಉದಾತ್ತ ಬರುವುದು. ಮಿಕ್ಕ ವರ್ಣಗಳು ಶೇಷಾನುದಾತ್ತ ಸ್ವರದಿಂದ ಅನುದಾತ್ತಗಳು.

ಸಖ್ಯುರ್ಮ್—ಸಖ್ಯುಃ ಕರ್ಮ ಎಂದು ವಿಗ್ರಹ **ಸಖ್ಯುರ್ಯಃ** (ಪಾ. ಸೂ (೫-೧-೧೨೬) ಸಖಿ ಶಬ್ದಪ್ರಕೃತಿಕವಾದ ಷಷ್ಠ್ಯಂತವಾದ ಸಮರ್ಥದ ಮುಂದೆ ಭಾವಕರ್ಮಾರ್ಥಗಳಲ್ಲಿ ಯಪ್ರತ್ಯಯ ಬರುವುದು ಎಂಬುದರಿಂದ, ಕರ್ಮಾರ್ಥದಲ್ಲಿ ಯಪ್ರತ್ಯಯ ಸಖಿ ಶಬ್ದದ ಮುಂದೆ ಬರುವುದು. ಸಖಿ+ಯ ಯಸ್ಯೇತಿ ಚ (ಪಾ. ಸೂ. ೬-೪-೧೪೮) ಎಂಬುದರಿಂದ ಇಕಾರಲೋಪ. ಪ್ರತ್ಯಯಸ್ವರ ಬರುವುದು.

ಅಸ್ತೃತಮ್—ಸ್ತೃಞ್ ಆಚ್ಛಾದನೇ, ಸ್ವಾದಿ ಧಾತು. ಧಾತುಗಳಿಗೆ ಅನೇಕಾರ್ಥವಿರುವುದರಿಂದ ಇಲ್ಲಿ ಸ್ತೃ, ಧಾತುವು ಹಿಂಸಾರ್ಥದಲ್ಲಿರುವುದು. ಇದರ ಮುಂದೆ ಕ್ತ ಪ್ರತ್ಯಯ ಸ್ತೃ+ತ, **ವಿಕಾಚಿಉಸದೇಶೇಟ್ಸನುದಾತ್ತಾತ್** (ಪಾ. ಸೂ. ೭-೨.೧೦) ಎಂಬುದರಿಂದ ಇಡಾಗನುಕ್ಕೆ ನಿಷೇಧ, ಅಥವಾ **ಋತಶ್ಚ ಸಂಯೋಗಾದೇಃ** (ಪಾ. ಸೂ. ೭-೨-೪೩) ಸಂಯೋಗಾದಿಯಾದ ಋಕಾರವನ್ನು ಕೊನೆಯಲ್ಲಿ ಹೊಂದಿರುವ ಧಾತುವಿನ ಮುಂದೆ ಇರುವ ಲಿಙ್ಸಿಚ್‌ಗಳಿಗೆ ಆತ್ಮನೇಪದಪ್ರತ್ಯಯ ಪರದಲ್ಲಿರುವಾಗ ಇಡಾಗಮು ವಿಕಲ್ಪವಾಗಿ ಬರುವುದು ಎಂದು ಇಡಾಗಮುವು ವಿಕಲ್ಪದಿಂದ ವಿಹಿತವಾಗಿರುವುದರಿಂದ ಯಸ್ಯ ವಿಭಾಷಾ ಎಂಬುದರಿಂದ ಕ್ತ ಗ್ರತ್ಯಯಕ್ಕೆ ಇಡಾಗಮು ಬರುವುದಿಲ್ಲ. ನಸ್ತೃತಮ್ ಅಸ್ತೃತಮ್, ಎಂದು ನಞ್‌ಸಮಾಸ. **ತೆಕ್ಪುರುಷೇತುಲ್ಯಾರ್ಥತೃತ್ತೀಯಾಸಪ್ತಮ್ಯುಮಾನಾವ್ಯಯದ್ವಿತೀಯೋಕೃತ್ಯಾಃ** (ಪಾ. ಸೂ. ೬-೨-೨) ಎಂಬುದರಿಂದ ಅವ್ಯಯಪೂರ್ವಪದ-ಪ್ರಕೃತಿಸ್ವರ ಬರುವುದು. ಪೂರ್ವಪದವು ನಿಪಾತವಾದ್ದರಿಂದ **ನಿಪಾತಾ ಆದ್ಯುದಾತ್ತಾಃ** (ಫಿ. ಸೂ. ೮೦) ಎಂಬುದರಿಂದ ಆದ್ಯುದಾತ್ತ. ಸ್ತೃಞ್ ಆಚ್ಛಾದನೇ ಧಾತುವು ಕ್ರ್ಯಾದಿ, ಲಟ್ಪ್ರಥಮಪುರುಷ ಏಕವಚನದಲ್ಲಿ ಸ್ತೃಣಾತಿ ಎಂದಾಗುವುದು. ಇದರ ಮುಂದೆ ಕ್ತಪ್ರತ್ಯಯವನ್ನಿಟ್ಟರೆ ಸ್ತೃ+ತ **ಲಿಙ್ಸಿಚೋರಾತ್ಮನೇಪದೇಷು** (ಪಾ. ಸೂ ೭-೨-೪೬) ವೃಞ್ ಧಾತು, ವೃಞ್ ಧಾತು ಋಕಾರಾಂತವಾದ ಧಾತುಗಳು. ಇವುಗಳ ಮುಂದೆ ಇರುವ ಲಿಙ್ ಸಿಚ್, ಇವುಗಳಿಗೆ ಇಡಾಗಮುವು ಆತ್ಮನೇಪದ ಪ್ರತ್ಯಯ ಪರವಾಗಿರುವಾಗ ವಿಕಲ್ಪವಾಗಿ ಬರುವುದು ಎಂದು ಇಡಾಗಮುವು ವಿಕಲ್ಪವಾಗಿ ವಿಹಿತವಾಗಿರುವುದು. ಆದ್ದರಿಂದ **ಯಸ್ಯ ವಿಭಾಷಾ** (ಪಾ. ಸೂ. ೭-೨-೧೫) ಎಂಬುದರಿಂದ ಕ್ತಪ್ರತ್ಯಯಕ್ಕೆ ಇಡ ಗಮು ಬರುವುದಿಲ್ಲ. **ಲ್ವಾದಿಭ್ಯಶ್ಚ** (ಪಾ.ಸೂ. ೮-೨ ೪೪) ಎಂಬುದರಿಂದ ಕ್ತಪ್ರತ್ಯಯದ ತಕಾ

ರಕ್ಕೆ ನಕಾರ. ಸ್ತ್ರಾ+ನ ಋತ ಇದ್ಧಾತೋಃ (ಪಾ. ಸೂ. ೭-೧-೧೦೦) ಎಂಬುದರಿಂದ ಋಕಾರಕ್ಕೆ ಇಕಾರ. ಉರಣ್ರಪರಃ (ಪಾ. ಸೂ. ೧-೧-೫೧) ಎಂಬುದರಿಂದ ರಪರವಾಗಿ ಬರುವುದು. ಹಲಿಚಿ (ಪಾ. ಸೂ. ೮-೩-೭೭ ಎಂಬುದರಿಂದ ದೀರ್ಘ. ಸ್ತೀರ್+ನ, ರಷಾಭ್ಯಾಂನೋಣಸ್ಸಮಾನಪದೇ (ಪಾ. ಸೂ.೮.೪-೧) ಎಂಬುದರಿಂದ ನಕಾರಕ್ಕೆ ಣಕಾರ ಸ್ತೀರ್ಣ ಎಂದಾಗುವುದು. ಆದುದರಿಂದ ಅಸ್ತೃತಮ್ ಎಂಬಲ್ಲಿ ಸ್ವಾದಿಧಾತುಹನ್ನು ಇಟ್ಟುಕೊಳ್ಳುವುದು ಸೂಕ್ತವಾಗಿದೆ. ॥ ೫ ॥

॥ ಸಂಹಿತಾಪಾಠಃ ॥

ಯುವಂ ದಕ್ಷಂ ಧೃತವ್ರತ ಮಿತ್ರಾವರುಣ ದೂಳಭಂ ।
ಋತುನಾ ಯಜ್ಞಮಾಶಾಥೇ ॥ ೬ ॥

॥ ಪದಪಾಠಃ ॥

ಯುವಂ । ದಕ್ಷಂ । ಧೃತ ಽ ವ್ರತಾ । ಮಿತ್ರಾವರುಣಾ । ದುಃ ಽ ದಭಂ ॥
ಋತುನಾ । ಯಜ್ಞಂ । ಆಶಾಥೇ ಇತಿ ॥ ೬ ॥

॥ ಸಾಯಣಭಾಷ್ಯಂ ॥

ಹೇ ಧೃತವ್ರತಾ ಸ್ವೀಕೃತಕರ್ಮಾಣೌ ಮಿತ್ರಾವರುಣಾ ಹೇ ಮಿತ್ರನಾಮಕವರುಣನಾಮಕೌ ದೇವೌ ಯುವಮುಭೌ ಯುವಾಮೃತುನಾ ಸಹಾಸ್ಮದೀಯಂ ಯಜ್ಞಮಾಶಾಥೇ । ವ್ಯಾಪ್ನುಥಃ । ಕೀದೃಶಂ ಯಜ್ಞಂ । ದಕ್ಷಂ ಪ್ರವೃದ್ಧಂ ದೂಳಭಂ ದುರ್ದಹಂ ಶತ್ರುಭಿರ್ದಗ್ಧುಂ ವಿನಾಶಯಿತುಮಶಕ್ಯಮಿತ್ಯರ್ಥಃ ॥ ಯುವಂ। ಪ್ರಥಮಾದ್ವಿವಚನಸ್ಯ ಜೋಪ್ರಥಮಯೋರಮಿತ್ಯಮಾದೇಶಃ। ಯುವಾವೌ ದ್ವಿವಚನೇ। ಪಾ. ೭-೨-೯೨ । ಇತಿ ಮಪರ್ಯಂತಸ್ಯ ಯುವಾದೇಶಃ । ಶೇಷೇ ಲೋಪ ಇತಿ ಟಲೋಪೋ೭ಂತ್ಯಲೋಪೋ ವಾ। ಅಮಿ ಪೂರ್ವತ್ವಂ । ಭಾಷಾಯಾಮೇವ ಹ್ಯಾತ್ವಂ । ಟಲೋಪಪಕ್ಷ ಉದಾತ್ತನಿವೃತ್ತಿಸ್ವರೇಣಾಮ ಉದಾತ್ತತ್ವಂ । ಅಂತ್ಯಲೋಪಪಕ್ಷ ಏಕಾದೇಶ ಉದಾತ್ತಃ । ದಕ್ಷಂ । ದಕ್ಷ ವೃದ್ಧೌ । ದಕ್ಷಂತ್ಯನೇನೇತಿ ಕರಣೇ ಘಞ್ । ಏವಂ ಹಿ ಪುಲ್ಲಿಂಗತ್ವನಿರ್ಣಯಮಃ । ಅನ್ಯಸ್ಯಾನಿರ್ಣಯಮ ಇತಿ ನಪುಂಸಕತ್ವಂ । ಧೃತವ್ರತಾ ಮಿತ್ರಾವರುಣಾ । ಧೃತಾನಿ ವ್ರತಾನಿ ಯೈರ್ಯಾಂ ತೌ ಧೃತವ್ರತೌ । ಮಿತ್ರಶ್ಚ ವರುಣಶ್ಚ ಮಿತ್ರಾವರುಣೌ । ಉಭಯತ್ರ ಸುಸಾಂ ಸುಲುಗಿತ್ಯಾದಿನಾ ವಿಭಕ್ತೇರಾಕಾರಃ । ಮಿತ್ರಶಬ್ದಸ್ಯ ದೇವತಾದ್ವಂದ್ವೇ ಚೇತ್ಯಾನಙಾದೇಶಃ । ಪ್ರಥಮಸ್ಯಾಮಂತ್ರಿತನಿಘಾತಃ । ದ್ವಿತೀಯಸ್ಯ ಸಾದಾದಿತ್ವಾದಾದ್ಯುದಾತ್ತತ್ವಂ । ಸಂಹಿತಾಯಾಂ

ಛಾಂದಸಂ ಹ್ರಸ್ವತ್ವಂ । ದೊಳೆಭಂ । ದಹ ಭಸ್ಮೀಕರಣೇ । ದುಃಖೇನ ದಹ್ಯತ ಇತಿ ದುರ್ದಹಂ । ಈಷದ್ದುಃಸುಷ್ವಿತ್ಯಾದಿನಾ । ಪಾ. ೩-೩-೧೨೬ । ದುರ್ಯುಪಪದೇಃ ದಗ್ದೇಃ ಖಲ್ । ವ್ಯತ್ಯಯೋ ಬಹುಲಮಿತ್ಯುಕಾರಸ್ಯ ಊಕಾರೋ ರೇಫಸ್ಯ ಲೋಪೋ ದಕಾರಸ್ಯ ಡಕಾರೋ ಹಕಾರಸ್ಯ ಚ ಭಕಾರಃ । ಲಿತೀತಿ ಪ್ರತ್ಯಯೋತ್ಪೂರ್ವಮುದಾತ್ತತ್ವಂ । ಕೃದುತ್ತರಪದತ್ವೇನ ಸ ಏವ ಶಿಷ್ಯತೇ । ಆಶಾಥೇ । ಅಶೂ ವ್ಯಾಪ್ತೌ ಛಂದಸಿ ಲುಙ್‌ಲಙ್‌ಲಿಟಃ ಇತಿ ವರ್ತಮಾನೇ ಲಿಟ್ । ಮಧ್ಯಮದ್ವಿವಚನಮಾಥಾಂ । ಟೇರೇತ್ವಂ । ಆತ ಆದೇಃ । ಪಾ. ೭-೪-೭೦ । ಇತ್ಯಭ್ಯಾಸಸ್ಯ ದೀರ್ಘಃ । ಅಶ್ನೋತೇಶ್ಚ । ಪಾ. ೭-೪-೭೨ । ಇತಿ ಸ್ನಾಪ್ತೋನುಡಾಗಮೋಽನಿತ್ಯಮಾಗಮಶಾಸನಮಿತಿ ನಿವರ್ತತೇ ॥ ೨೮ ॥

॥ ಪ್ರತಿಪದಾರ್ಥ ॥

ಧೃತವ್ರತಾ—ನಮ್ಮಿಂದ ಮಾಡಲ್ಪಡುವ ಯಜ್ಞಕರ್ಮವನ್ನಂಗೀಕರಿಸುವ । **ಮಿತ್ರಾವರುಣಾ**—ಎಲೈ ಮಿತ್ರಾವರುಣರೇ । **ಯುವಂ**—ನೀವಿಬ್ಬರೂ । **ಋತುನಾ**—ಋತುದೇವತೆಯೊಂದಿಗೆ । **ದಕ್ಷಂ**—ಪ್ರವೃದ್ಧವಾದ। **ದೊಳೆಭಂ**—(ಶತ್ರುಗಳಿಂದ) ದಹಿಸಲು (ನಾಶಮಾಡಲು) ಸಾಧ್ಯವಿಲ್ಲದೇ ಇರುವ। **ಯಜ್ಞಂ ಆಶಾಥೇ**—ಯಜ್ಞವನ್ನು ವ್ಯಾಪಿಸುತ್ತಿರುವಿರಿ. ನಮ್ಮ ಯಜ್ಞಕ್ಕೆ ದಯಮಾಡುತ್ತಿರುವಿರಿ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ನಮ್ಮ ಯಜ್ಞಕರ್ಮವನ್ನಂಗೀಕರಿಸುವಿರಿ. ನಿಮ್ಮಗಳ ಅನುಗ್ರಹದಿಂದ ನಮ್ಮ ಯಜ್ಞವು ವೃದ್ಧಿಯಾಗುತ್ತಿದೆ- ಮತ್ತು ನಿಮ್ಮ ಸಹಾಯವಿರುವುದರಿಂದ ಶತ್ರುಗಳು ವಿಘ್ನವನ್ನುಂಟು ಮಾಡಲು ಸಾಧ್ಯವಿಲ್ಲ. ದಯವಿಟ್ಟು ಋತುದೇವತೆಯೊಡನೆ ನಮ್ಮ ಯಜ್ಞಕ್ಕೆ ಬನ್ನಿ.

English Translation.

Mitra and Varuna, propitious to pious acts, be present with Ritu at our sacrifice, efficacious and undisturbed by foes.

॥ ವಿಶೇಷವಿಷಯಗಳು ॥

ಧೃತವ್ರತಾ—ಧೃತಕರ್ಮಾಣೌ ಅಥವಾ ಸ್ವೀಕೃತಕರ್ಮಾಣೌ ಎಂದರೆ ನಾವು ಮಾಡುವ ಯಜ್ಞಕರ್ಮವನ್ನು ಸ್ವೀಕಾರಮಾಡುವ, ಎಂದರ್ಥವು. **ಧೃತವ್ರತಾ, ಮಿತ್ರಾವರುಣಾ** ಎಂಬ ಶಬ್ದಗಳ ಅಂತ್ಯಾಕ್ಷರವು ಛಂದಸ್ಸಿನ ಅನುಕೂಲಕ್ಕಾಗಿ ಸಂಹಿತಾಕಾಲದಲ್ಲಿ ಹ್ರಸ್ವವಾಗಿರುವುದು.

ಈ ಧೃತವ್ರತಾ ಎಂಬ ಶಬ್ದವು—

ಇಂದ್ರಾವರುಣಾ ಸುತಪಾವಿಮಂ ಸುತಂ ಸೋಮಂ ಪಿಬತಂ ಮಹ್ಯಂ ಧೃತವ್ರತಾ ॥

(ಋ. ಸಂ. ೬-೬೮-೧೦)

ಎಂಬ ಋಕ್ಕಿನಲ್ಲಿಯೂ ಪಠಿತವಾಗಿರುವುದು. ಇಲ್ಲಿ ಈ ಶಬ್ದವು ಇಂದ್ರಾವರುಣರ ಪರವಾಗಿರುವುದು. ಇದಲ್ಲದೆ ಧೃತವ್ರತಃ ಧೃತವ್ರತಾಃ ಧೃತವ್ರತಾಯ ಧೃತವ್ರತೇ ಎಂಬ ಶಬ್ದಗಳು ಅನೇಕ ಋಕ್ಕುಗಳಲ್ಲಿ ಪಠಿತವಾಗಿವೆ.

ದೂಳಭಂ— ದುಃದಭಂ, ಶತ್ರುಭಿರ್ದಗ್ಧುಂ ವಿನಾಶಯಿತುಮಶಕ್ಯಂ ॥ ಶತ್ರುಗಳಿಂದ ದಹಿಸುವುದಕ್ಕೆ ಅಶಕ್ಯವಾದ ಎಂದರ್ಥವು. ಇದೇ ಅರ್ಥವನ್ನು ಸೂಚಿಸುವ ದೂಳಭ ಎಂಬ ಶಬ್ದವು ಋ. ಸಂ. ೨-೨೮-೪ , ೭-೪೬-೪ ರಲ್ಲಿಯೂ ದೂಳಭಃ ಎಂಬ ಶಬ್ದವು ಋ. ಸಂ. ೩-೨-೨ ; ೪-೯.೨ ; ೪-೯ ೪ ರಲ್ಲಿಯೂ ದೂಳಭಾಸಃ ಎಂಬ ಶಬ್ದವು ಋ. ಸಂ. ೩-೫೬-೪ ; ೭-೬೦-೬ ರಲ್ಲಿಯೂ ಪಠಿತವಾಗಿದೆ.

॥ ವ್ಯಾಕರಣಪ್ರಕ್ರಿಯಾ ॥

ಯುವಮ್— ಯುಷ್ಮದ್ ಶಬ್ದದ ಮುಂದೆ ಪ್ರಥಮಾದ್ವಿವಚನ ಔ. ಪ್ರತ್ಯಯ ಯುಷ್ಮದ್+ಔ ಯುವಾವೌದ್ವಿವಚನೇ (ಪಾ. ಸೂ. ೭-೨-೯೨) ವಿಭಕ್ತಿ ಪರದಲ್ಲಿರುವಾಗ ದ್ವಿತ್ವವಿಶಿಷ್ಟಾರ್ಥಪ್ರತಿಪಾದಕಗಳಾದ ಯುಷ್ಮದಸ್ಮಚ್ಛಬ್ದಗಳ ಮಪರ್ಯಂತಕ್ಕೆ ಕ್ರಮವಾಗಿ ಯುವ, ಆವ ಎಂಬ ಆದೇಶಗಳು ಬರುವುವು. ಎಂಬುದರಿಂದ ಯುಷ್ಮ್ ಎಂಬುದಕ್ಕೆ ಯುವ ಆದೇಶ, ಪರರೂಪ, ಯುವದ್+ಔ. ಜಶ್ಶಿತ್ಪ್ರಥಮಯೋರಮ್ (ಪಾ. ಸೂ. ೭-೧-೨೮) ಯುಷ್ಮದಸ್ಮಚ್ಛಬ್ದಗಳ ಮುಂದೆ ಇರುವ ಜಶ್‌ಗೂ ಪ್ರಥಮಾ, ದ್ವಿತೀಯಾ ವಿಭಕ್ತಿಗಳಿಗೂ ಸಹ ಅಮ್ ಆದೇಶ ಬರುವುದು ಎಂಬುದರಿಂದ ಔಗೆ ಅಮ್ ಬರುವುದು. ಯುವದ್+ಅಮ್ ಪ್ರಥಮಾಯೊಶ್ಚ ದ್ವಿವಚನೇ ಭಾಷಾಯೊಮ್ (ಪಾ ಸೂ. ೭-೨-೮೮) ಪ್ರಥಮಾವಿಭಕ್ತಿ ದ್ವಿವಚನ ಪರದಲ್ಲಿರುವಾಗ ಯುಷ್ಮದಸ್ಮಚ್ಛಬ್ದಗಳಿಗೆ ಆಕಾರವು ಅಂತಾದೇಶವಾಗಿ ಲೋಕದಲ್ಲಿ ಬರುವುದು ಎಂದು ಈ ಸೂತ್ರದ ಅರ್ಥ. ಭಾಷಾಯಾಂ ಲೋಕದಲ್ಲಿ ಎಂದರ್ಥ, ಈ ಸೂತ್ರದಿಂದ ಆತ್ವವು ವೇದದಲ್ಲಿ ಬರುವುದಿಲ್ಲ. ಶೇಷೇಲೋಪಃ (ಪಾ. ಸೂ. ೭-೨-೯೦) ಎಂಬುದರಿಂದ ಟಗೆ ಲೋಪ. ಅಥವಾ ಅಂತ್ಯವರ್ಣಕ್ಕೆ ಲೋಪ. ಅಂತ್ಯಲೋಪ ಪಕ್ಷದಲ್ಲಿ ಆಮಿಪೂರ್ವಃ (ಪಾ. ಸೂ. ೬-೧-೧೦೭) ಎಂಬುದರಿಂದ ಪೂರ್ವರೂಪ ಬರುವುದು. ಯುವಮ್ ಎಂದಾಗುವುದು. ಟಲೋಪಪಕ್ಷದಲ್ಲಿ ಅನುದಾತ್ತಸ್ಯ ಚ ಯತ್ರೋದಾತ್ತಲೋಪಃ (ಪಾ. ಸೂ. ೬-೧-೧೬೧) ಎಂಬ ಉದಾತ್ತ ನಿವೃತ್ತಿಸ್ವರದಿಂದ ಅಮ್‌ನ ಆಕಾರವು ಉದಾತ್ತ. ಅಂತ್ಯಲೋಪಪಕ್ಷದಲ್ಲಿ ಏಕಾದೇಶ ಉದಾತ್ತೇನೋದಾತ್ತಃ (ಪಾ ಸೂ. ೮-೨-೫) ಎಂಬುದರಿಂದ ಆಮಿಪೂರ್ವಃ ಎಂಬುದರಿಂದ ಬಂದ ಏಕಾದೇಶವು ಉದಾತ್ತ. ಹೀಗೆ ಪಕ್ಷದ್ವಯದಲ್ಲಿ ಯುವಮ್ ಎಂಬುದು ಆಂತೋದಾತ್ತವಾಗುವುದು.

ದೆಕ್ಷಮ್— ದಕ್ಷ ವೃದ್ಧೌ ದಕ್ಷನ್ತಿ ಅನೇನ ಇತಿ ದಕ್ಷಮ್. ಹಲಶ್ಚ (ಪಾ.ಸೂ. ೩-೩-೧೨೧) ಹಲಂತವಾದ ಧಾತುಗಳ ಮುಂದೆ ಕರಣ, ಅಧಿಕರಣ ಎಂಬ ಅರ್ಥಗಳಲ್ಲಿ ಪುಲ್ಲಿಂಗದಲ್ಲಿ ಸಂಜ್ಞೆ ತೋರುವಾಗ ಘಞ್ ಪ್ರತ್ಯಯ ಬರುವುದು ಎಂಬುದರಿಂದ ದಕ್ಷ ಧಾತುವಿನ ಮುಂದೆ ಕರಣಾರ್ಥದಲ್ಲಿ ಘಞ್ ಪ್ರತ್ಯಯ ಬರುವುದು. ಹೀಗೆ ಘಞ್ ಪ್ರತ್ಯಯವನ್ನು ಮಾಡಿದರೆ ದಕ್ಷಃ ಎಂದು ನ್ಯಾಯವಾಗಿ ಪುಲ್ಲಿಂಗವಾಗಬೇಕು. ಆದರೂ ಅನ್ಯಸ್ಯಾನಿಯಮಃ ಎಂಬುದರಿಂದ ನಪುಂಸಕಲಿಂಗವಾಗುವುದು.

ಧೃತವ್ರತಾ, ಮಿತ್ರಾವರುಣಾ— ಧೃತಾನಿ ವ್ರತಾನಿ ಯಾಭ್ಯಾಂ ತೌ (ಯಾವ ಮಿತ್ರ ವರುಣ ಇವರಿಬ್ಬರಿಂದ ಕರ್ಮವು ಸ್ವೀಕರಿಸಲ್ಪಟ್ಟಿತೋ ಅವರು ಎಂದು ಅರ್ಥ, ಧೃತವ್ರತೌ. ಮಿತ್ರಶ್ಚ ವರುಣಶ್ಚ ಮಿತ್ರಾವರುಣೌ, ದ್ವಂದ್ವಸಮಾಸ. ಎರಡು ಕಡೆಯಲ್ಲಿಯೂ ಸಂಬೋಧನ ಪ್ರಥಮಾದ್ವಿವಚನ ವಿಭಕ್ತಿಯಾದಔಗೆ ಸುಪಾಂಸುಲುಕ್

(ಪಾ. ಸೂ. ೬-೧-೬೯) ಇತ್ಯಾದಿ ಸೂತ್ರದಿಂದ ಅಕಾರಾದೇಶ ಬರುವುದು. ಮಿತ್ರ ಶಬ್ದಕ್ಕೆ ದೇವತಾದ್ವಂದ್ವೇಚ (ಪಾ. ಸೂ. ೬-೩-೨೬) ಎಂದು ಆನಙ್ ಆದೇಶ ಬರುತ್ತೆ. ಅದು ಙಿತ್ತಾದ್ದರಿಂದ ಙಿಚ್ಚ (ಪಾ. ಸೂ. ೧-೧-೫೩) ಙಿತ್ತಾದ ಆದೇಶವು ಅನೇಕಾಲ್ಲಾಗಿದ್ದರೂ ಕೊನೆಯ ವರ್ಣಕ್ಕೆ ನಙ್ ಬರುವುದು ಎಂಬುದರಿಂದ ಮಿತ್ರಶಬ್ದದ ಕೊನೆಯ ವರ್ಣವಾದ ಅಕಾರಕ್ಕೆ ನಞಾದೇಶ. ನಲೋಪಃಪ್ರಾತಿಪದಿಕಾಂತಸ್ಯ (ಪಾ. ಸೂ. ೮-೨-೭) ಎಂಬುದರಿಂದ ನಕಾರಕ್ಕೆ ಲೋಪ ಮಿತ್ರಾವರುಣಾ ಎಂದಾಗುವುದು. ಧೃತವ್ರತಾ ಎಂಬಲ್ಲಿ ಆಮನ್ತ್ರಿತಸ್ಯಚ (ಪಾ. ಸೂ. ೮-೧-೧೯) ಎಂಬುದರಿಂದ ಆಮನ್ತ್ರಿತಾನುದಾತ್ತ ಬರುವುದು. ಮಿತ್ರಾವರುಣಾ ಎಂಬುದು ಪಾದದ ಆದಿಯಲ್ಲಿರುವುದರಿಂದ ಇದಕ್ಕೆ ಆಮಂತ್ರಿತಾನುದಾತ್ತ ಬರುವುದಿಲ್ಲ. ಆರನೇ ಅಧ್ಯಾಯದ ಆಮನ್ತ್ರಿತಸ್ಯಚ ಎಂಬುದರಿಂದ ಆದ್ಯುದಾತ್ತ ಬರುವುದು. ಧೃತವ್ರತಾ ಎಂಬಲ್ಲಿ ಮಿತ್ರಾವರುಣಾ ಎಂಬಲ್ಲಿಯೂ ಸೆಂಹಿತಾಕಾಲದಲ್ಲಿ ಛಾಂದಸವಾಗಿ ಹ್ರಸ್ವ ಬರುವುದು.

ದೂಳಭಮ್-ದಹ ಭಸ್ಮೀಕರಣೇ ಧಾತು. ದುಃಖೇನ ದಹ್ಯತೇ ಇತಿ ದುರ್ದಹಮ್. ಈಷದ್ದುಸ್ಸುಷು-ಕೃಚ್ಛ್ರಾಕೃಚ್ಛ್ರಾರ್ಥೇಷು ಖಿಲ್ (ಪಾ.ಸೂ. ೩-೩-೧೭೬) ಕೃಚ್ಛ್ರಾರ್ಥದಲ್ಲಿ ದುರ್ ಎಂಬ ಉಪಸರ್ಗದ ಮುಂದೆ ಇರುವ ಅಕೃಚ್ಛ್ರಾರ್ಥದಲ್ಲಿ ಈಷತ್, ಸು ಎಂಬುದರ ಮುಂದೆ ಇರುವ ಧಾತುವಿನ ಮುಂದೆ ಭಾವಕರ್ಮಾರ್ಥಗಳಲ್ಲಿ ಖಿಲ್ ಪ್ರತ್ಯಯ ಬರುವುದು ಎಂಬುದರಿಂದ ದುರ್ ಉಪಸರ್ಗಪೂರ್ವಕವಾದ ದಹ ಧಾತುವಿನ ಮುಂದೆ ಖಿಲ್ ಬರುವುದು. ಲಕಾರಖಕಾರಗಳು ಇತ್ಸಂಜ್ಞೆಯಿಂದ ನಿವೃತ್ತಿಗಳಾಗುವುವು. ದುರ್+ದಹ್+ಅ. ವ್ಯತ್ಯ-ಯೋಬಹುಲಂ (ಪಾ. ಸೂ. ೩-೧-೮೫) ಇಲ್ಲಿ ಭಾಷ್ಯಕಾರರು ಈ ಸೂತ್ರವನ್ನು ಎರಡಾಗಿ ಭಾಗಮಾಡಿರುವರು. ವ್ಯತ್ಯಯಃ ಎಂಬುದು ಪ್ರಥಮಭಾಗ ಛಂದಸ್ಸಿನಲ್ಲಿ ಸ್ಯಾದಿವಿಕರಣ ಪ್ರತ್ಯಯಗಳು ವ್ಯತ್ಯಯವಾಗಿರುವುವು ಎಂದು ಇದರ ಅರ್ಥ. ಬಹುಲಮ್ ಎಂಬುದು ದ್ವಿತೀಯಭಾಗ ಛಂದಸ್ಸಿದಲ್ಲಿ ಎಲ್ಲಾ ವಿಧಿಗಳೂ ಬಹುಲವಾಗಿ ಬರುವುವು ಎಂದು ಇದರ ಅರ್ಥ. ಈ ಬಹುಲಗ್ರಹಣದ ಅರ್ಥವನ್ನೇ ವಾರ್ತಿಕಕಾರರು ಸಂಗ್ರಹಿಸಿರುವರು. ಸುಪ್ತಿಙುಪಗ್ರಹ ಲಿಂಗನರಾಣಾಂ ಕಾಲಹಲಚ್ ಸ್ವರಕರ್ಮಯೆಜಾಂಚೆ । ವ್ಯತ್ಯಯೆ ಮಿಚ್ಛೆತಿಶಾಸ್ತ್ರಕೃದೇಷಾಂಸ್ತೋಪಿಚೆ ಸಿದ್ಧ್ಯತಿಬಾಹುಲಕೇನ (ಪಾ. ಸೂ. ೩-೧-೮೫ ವಾ. ೧) ಇದರಿಂದ ದುರ್ ದಹ್+ಅ ಎಂಬಲ್ಲಿ ಉಕಾರಕ್ಕೆ ಊಕಾರ, ರೇಫಕ್ಕೆ ಲೋಪ, ದಕಾರಕ್ಕೆ ಡಕಾರ, ಹಕಾರಕ್ಕೆ ಭಕಾರವೂ ಸಹ ಬರುವುದು. ದೂಡಭ ಎಂದಾಗುವುದು. ಅಜ್ಝಥ್ಯಸ್ಯ ಡಕಾರಸ್ಯ ಳಕಾರಂ ಬಹ್ವೃಚಾ ಜಗುಃ, ಎಂಬುದರಿಂದ ಡಕಾರಕ್ಕೆ ಳಕಾರ. ದೂಳಭಮ್ ಎಂದಾಗುವುದು. ಲಿತಿ (ಪಾ. ಸೂ. ೬.೧.೧೯೩) ಎಂಬುದರಿಂದ ಪ್ರತ್ಯಯದ ಹಿಂದೆ ಇರುವ ಳ ಎಂಬುದರ ಅಕಾರವು ಉದಾತ್ತ. ದುರ್ ಎಂಬುದರೊಂದಿಗೆ ಸಮಾಸ ಬಂದರೆ ಗತಿಕಾರಕೋಪಪದಾತ್ಕೃತ್ (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬಂದು ಆದೇ ಸ್ವರ ನಿಲ್ಲುವುದು.

ಆಶಾಥೇ—ಅಶೂ ವ್ಯಾಪ್ತೌ, ಧಾತು. ಇದರ ಮುಂದೆ ಛಂದಸಿ ಲುಙ್ಲಙ್ಲಿಟಃ (ಪಾ. ಸೂ. (ಪಾ. ಸೂ. ೩-೪-೬) ಎಂಬುದರಿಂದ ವರ್ತಮಾನಾರ್ಥದಲ್ಲಿ ಲಿಟ್ ಬರುವುದು. ಲಿಟಿಧಾತೋರನಭ್ಯಾಸಸ್ಯ (ಪಾ. ಸೂ. ೬-೧-೮) ಎಂಬುದರಿಂದ ದ್ವಿತ್ವ. ಅಶ್-ಆಶ್+ಲಿಟ್. ಲಿಟ್‌ಗೆ ಮಧ್ಯಮಪುರುಷ ದ್ವಿವಚನ ಅಥಾಮ್ ಆದೇಶ. ಟಿತಆತ್ಮನೇಪದಾನಾಂ ಟೇರೇ (ಪಾ. ಸೂ. ೩-೪-೭೮) ಎಂಬುದರಿಂದ ಅಮ್‌ಗೆ ಏಕಾರಾದೇಶ ಆಶ್-ಆಶ್+ಅಥೇ. ಹಲಾದಿಃಶೇಷಃ (ಪಾ. ಸೂ. ೭-೪-೬೦) ಯೋಗ ವಿಭಾಗ ಪಕ್ಷಪಕ್ಷ ಪಲಂಬಿಸಿಯೋ, ಜಾತಿಪಕ್ಷಾಶ್ರಯಣದಿಂದಲೋ ಈ ಸೂತ್ರದಿಂದ ಅಭ್ಯಾಸದಲ್ಲಿರುವ ಶಕಾರಕ್ಕೆ ನಿವೃತ್ತಿ. ಅತ ಆದೇಃ (ಪಾ. ಸೂ. ೭-೪-೭೦)

ಅಭ್ಯಾಸದ ಆದಿಯ ಅಕಾರಕ್ಕೆ ದೀರ್ಘ ಬರುವುದು ಎಂಬುದರಿಂದ ಆದಿ ಅಕಾರಕ್ಕೆ ದೀರ್ಘ ಆ+ಅಶ್+ಅಥೈ, ಅಶ್ನೋತೇರ್ಹ್ಲ (ಪಾ. ಸೂ. ೬-೪-೭೨) ದೀರ್ಘವಾದ ಅಭ್ಯಾಸದ ಅಕಾರದ ಮುಂದೆ ಇರುವ ಅಶ್ ಧಾತುವಿಗೆ ನುಮಾಗಮ ಬರುವುದು ಎಂಬುದರಿಂದ ಯದ್ಯಪಿ ನುಮಾಗಮವು ಪ್ರಾಪ್ತವಾಗುವುದು. ಆದರೂ **ಆಗಮುಶಾಸ್ತ್ರೇ ಮನಿತ್ಯತ್ವಮ್** (ಪರಿಭಾ. ೪೯) ಎಂದರಿಂದ ಅದು ಅನಿತ್ಯವಾಗುವುದರಿಂದ ಬರುವುದಿಲ್ಲ. **ಅಕಸ್ಸವರ್ಣೇದೀರ್ಘಃ** (ಪಾ. ಸೂ. ೬-೧-೧೦೧) ಎಂಬುದರಿಂದ ಸವರ್ಣ ದೀರ್ಘ ಆಶಾಥೈ ಎಂದಾಗುವುದು. **ತಿಙ್ಶಿತಿಜಃ** ಎಂಬುದರಿಂದ ಸರ್ವಾನುದಾತ್ತ ॥ ೬ ॥

॥ ಸಂಹಿತಾಪಾಠಃ ॥

ಧ್ರವಿಣೋದಾ ದ್ರವಿಣಸೋ ಗ್ರಾವಹಸ್ತಾಸೋ ಅಧ್ವರೇ ।
ಯಜ್ಞೇಷು ದೇವಮೀಳತೇ ॥ ೭ ॥

॥ ಪದಪಾಠಃ ॥

ದ್ರವಿಣಃ ಽ ದಾಃ । ದ್ರವಿಣಸಃ । ಗ್ರಾವ ಽ ಹಸ್ತಾಸಃ । ಅಧ್ವರೇ ।
ಯಜ್ಞೇಷು । ದೇವಂ । ಈಳತೇ ॥ ೭ ॥

॥ ಸಾಯಣಭಾಷ್ಯಂ ॥

ಅಧ್ವರೇಽಗ್ನಿಷ್ಟೋಮೇ ಪ್ರಕೃತಿರೂಪೇ ಯಜ್ಞೇಷು ವಿಕೃತಿರೂಪೇಷೂಕ್ಥ್ಯಾದಿಷು ಚ ದೇವಮಗ್ನಿಮಾ ಳತೇ । ಋತ್ವಿಜಃ ಸ್ತುವಂತಿ । ಕೀದೃಶಾ ಋತ್ವಿಜಃ । ದ್ರವಿಣಸೋ ಧನಾರ್ಥಿನೋ ಗ್ರಾವಹಸ್ತಾಸೋಽಭಿಷವಸಾಧನಸಾಷಾಣಧಾರಿಣಃ । ಕೀದೃಶಂ ದೇವಂ । ದ್ರವಿಣೋದಾ ಧನಸ್ಯದಂ । ಯದ್ವಾ । ಧನಪ್ರದೋಽಗ್ನಿಃ ಸೋಮಂ ಪಿಬತ್ವಿತಿ ಶೇಷಃ । ತಮೇತಂ ಮಂತ್ರಂ ಯಾಸ್ಕ ಏವಂ ನಿರ್ವಕ್ತಿ । ದ್ರವಿಣೋದಾಃ ಕಸ್ಮಾದ್ಧನಂ ದ್ರವಿಣಮುಚ್ಯತೇ ಯದೇನದಭಿದ್ರವಂತಿ ಬಲಂ ವಾ ಪ್ರವಿಣಂ ಯದೇನೇನಾಭಿದ್ರವಂತಿ ತಸ್ಯ ದಾತಾ ದ್ರವಿಣೋದಾಸ್ತುಸ್ಯೈಷಾ ಭವತಿ । ದ್ರವಿಣೋದಾ ದ್ರವಿಣಸ ಇತ್ಯಾದಿ । ನಿ. ೮-೧ । ಸೋಽಯಂ ಯಾಸ್ಕೋಕ್ತೋ ನಿರ್ವಚನಪ್ರಪಂಚಸ್ತಸ್ಮಿನ್ನೇವ ಗ್ರಂಥೇಽವಗಂತವ್ಯಃ ॥ ದ್ರವಿಣೋದಾಃ । ದ್ರುದಕ್ಷಿಭ್ಯಾಮಿನನ್ । ಉ. ೨ ೫೦ । ನಿತ್ತ್ವಾದಾದ್ಯುದಾತ್ತೋ ದ್ರವಿಣಶಬ್ದಃ । ತದ್ದದಾತೀತಿ ದ್ರವಿಣೋದಾಃ । ಕ್ವಿಪ್ಪೇತಿ ಕ್ವಿಪ್ । ಪೂರ್ವಪದಸ್ಯ ಸಕಾರೋಪಜನಶ್ಚಾಂದಸಃ । ರುತ್ವೋತ್ವೇ । ಕೃದುತ್ತರಪದಪ್ರಕೃತಿಸ್ವರತ್ವೇ । ದೇವವಿಶೇಷಣತ್ವೇನೈಕವಾಕ್ಯತಾಪತ್ತೇ ದ್ವಿತೀಯೋಯಾಃ ಸ್ವಾದೇಶಃ । ಅಥವಾ ದ್ರವಿಣಮಾತ್ಮನ ಇಚ್ಛಂತಿ ದ್ರವಿಣಸ್ಯಂತಿ । ಸುಪ ಆತ್ಮನಃ ಕ್ಯಚ್ । ಸರ್ವಪ್ರಾತಿಪದಿಕೇಭ್ಯೋ

ಆಲಸಾಯಾಂ ಸುಗ್ವಕ್ತವ್ಯಃ । ಮ. ೭-೧-೫೧-೨ । ಇತಿ ಕ್ಯಚಿ ಪರತಃ ಸುಗಾಗಮಃ । ದ್ರವಿಣಸ್ಯತೇಃ ಸಂಪದಾದಿತ್ವಾದ್ಭಾವೇ ಕ್ವಿಪ್ । ತತೋ ಲೋಪಃ । ಕ್ವಾ ಲುಪ್ತಂ ನ ಸ್ಥಾನಿವದ್ಭವತಿ । ಮ ೧-೧-೫೮-೨ । ಇತಿ ತಸ್ಯ ಸ್ಥಾನಿವತ್ತ್ವಪ್ರತಿಷೇಧಾದ್ಯಲೋಪಃ । ಏವಂ ದ್ರವಿಣಸ್ತಶಬ್ದೋ ಧನೇಚ್ಛಾವಚನಃ । ದ್ರವಿಣೇಚ್ಛಾಂ ದಸ್ಯತಿ ಯಥೇಷ್ಟಧನಪ್ರದಾನೇನೋಪಕ್ಷಪಯತೀತ್ಯರ್ಥೇ ದಸು ಉಪಕ್ಷಯೇ ಇತ್ಯಸ್ಮಾದಂತರ್ಭಾವಿತಣ್ಯರ್ಥಾತ್ಕ್ವಿಪ್ಪ್ರತ್ಯಯೇತಿ ಕ್ವಿಪ್ । ಏವಂ ದ್ರವಿಣೋದಃಶಬ್ದಃ ಸಕಾರಾಂತೋ ಭವತಿ। ತಥಾ ದ್ರವಿಣೋದಸಾಃ ಪ್ರವಾದಾ ಭವಂತೀತಿ ನೈರುಕ್ತೋ ವ್ಯವಹಾರ ಉಪಪದ್ಯತೇ । ನಿ. ೮-೨ । ಅತೋ ದ್ರವಿಣೋದಸ್ಶಬ್ದೋ ಭಿನ್ನವಾಕ್ಯತ್ವೇ ಸ್ವಾರ್ಥೇ ಪ್ರಥಮಾ । ಏಕವಾಕ್ಯತ್ವೇ ತು ವ್ಯತ್ಯಯೇನ ದ್ವಿತೀಯಾರ್ಥೋ ಭವತಿ । ದ್ರವಿಣಸ ಇತ್ಯತ್ರಾಪಿ ವಾಕ್ಯಭೇದಪಕ್ಷೇ ದ್ರವಿಣಸಃ ಸೋಮಸ್ಯೇತ್ಯರ್ಥೇ ಸಕಾರೋಪಜನಶ್ಚಾಂದಸಃ । ಆದ್ಯುದಾತ್ತತ್ವಂ ತು ನಿಯಮೇನ ಸ್ಥಿತಂ । ಋತ್ವಿಗ್ವಿಶೇಷಣತ್ವೇನೈಕವಾಕ್ಯತ್ವಪಕ್ಷೇ ತು ಕ್ಯಜಂತಾತ್ಕ್ವಿಪ್ । ಅತೋ ಲೋಪಾದಿ ಪೂರ್ವವತ್ । ಅತ್ರ ತು ಪಕ್ಷೇ ಕ್ಯಚ್ಕ್ವಿತ್ತ್ವೇನಾಂತೋದಾತ್ತತ್ವೇ ಪ್ರಾಪ್ತೇ ವ್ಯತ್ಯಯೇನಾದ್ಯುದಾತ್ತತ್ವಂ । ಗ್ರಾವಯುಕ್ತಾ ಹಸ್ತಾ ಯೇಷಾಂ ತೇ ಗ್ರಾವಹಸ್ತಾಸಃ । ಅಜ್ಜನೇರಸುಕ್ । ಗ್ರಾವಶಬ್ದೋ ವೃಷಾದಿತ್ವಾದಾದ್ಯುದಾತ್ತಃ । ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ಅಧ್ವರೇ । ನ ವಿದ್ಯತೇ ಧ್ವರೋ ಹಿಂಸಾ ಯಸ್ಮಿನ್ । ನಞ್ಸುಭ್ಯಾಮಿತ್ಯುತ್ತರಪದಾಂತೋದಾತ್ತತ್ವಂ । ಈಳತೇ । ಅನುದಾತ್ತೇತ್ತ್ವಾದಾತ್ಮನೇಪದಂ । ಆದಿಪ್ರಭೃತಿಭ್ಯ ಇತಿ ತಪೋ ಲುಕ್ । ಋಸ್ಯಾಡಾದೇಶಃ ॥

॥ ಪ್ರತಿಪದಾರ್ಥ ॥

ದ್ರವಿಣಸಃ—ಧನಾರ್ಥಿಗಳಾದ ಋತ್ವಿಕ್ಕುಗಳು । ಗ್ರಾವಹಸ್ತಾಸಃ—(ಸೋಮರಸವನ್ನು ಹಿಂಡಲು ಸಾಧನವಾದ) ಕಲ್ಲನ್ನು ಕೈಯಲ್ಲಿಟ್ಟುಕೊಂಡು । ದ್ರವಿಣೋದಾಃ—ಧನಪ್ರದನಾದ । (ಅಥವಾ ದ್ರವಿಣೋದನೆಂಬ ಹೆಸರಿನ) । ದೇವಂ—ದೇವನಾದ ಅಗ್ನಿಯನ್ನು । ಅಧ್ವರೇ—ಪ್ರಕೃತಿರೂಪವಾದ ಅಗ್ನಿಷ್ಟೋಮಯಾಗದಲ್ಲೂ । ಯಜ್ಞೇಷು — ವಿಕೃತಿರೂಪಗಳಾದ ಉಕ್ಥ್ಯಾದಿಯಾಗಗಳಲ್ಲೂ । ಈಳತೇ—ಸ್ತೋತ್ರಮಾಡುತ್ತಾರೆ.

॥ ಭಾವಾರ್ಥ ॥

ಧನಾರ್ಥಿಗಳಾದ ಋತ್ವಿಕ್ಕುಗಳು ಕೈಯಲ್ಲಿ ಸೋಮರಸವನ್ನು ಹಿಂಡಲು ಸಾಧನವಾದ ಕಲ್ಲನ್ನು ಹಿಡಿದುಕೊಂಡು ಪ್ರಕೃತಿಯಾದ ಅಗ್ನಿಷ್ಟೋಮಯಾಗದಲ್ಲೂ ವಿಕೃತಿಗಳಾದ ಉಕ್ಥ್ಯಾದಿಯಾಗಗಳಲ್ಲೂ ಸಹ ಸೋಮರಸವನ್ನು ಪಾನಮಾಡಲು ದ್ರವಿಣೋದಾ ಎಂಬ ಅಗ್ನಿಯನ್ನು ಆಹ್ವಾನಿಸಿ ಸ್ತೋತ್ರಮಾಡುತ್ತಾರೆ.

English Translation.

The priests desirous of wealth, with the soma-pressing stones in their hands praise the divine (Agni) Dravinodas who is the giver of riches, in the Soma and other sacrifices.

॥ ವಿಶೇಷವಿಷಯಗಳು ॥

ದ್ರವಿಣೋದಾಃ—ಈ ಶಬ್ದಕ್ಕೆ ಯಾಸ್ಕರು ವಿಸ್ತಾರವಾದ ವಿವರಣೆಯನ್ನು ಬರೆದಿರುವರು—

ದ್ರವಿಣೋದಾಃ । ದ್ರವಿಣೋದಾಃ ಕಸ್ಮಾದ್ಧನಂ ದ್ರವಿಣಮುಚ್ಯತೇ । ಯದೇನದಭಿದ್ರವಂತಿ। ಬಲಂ ವಾ ದ್ರವಿಣಂ ಯದೇನೇನಾಭಿದ್ರವಂತಿ। ತಸ್ಯ ದಾತಾ ದ್ರವಿಣೋದಾಃ। (ನಿ. ೮-೧)

ಇಲ್ಲಿ ದ್ರವಿಣೋದಾಃ ಎಂಬ ಶಬ್ದದ ನಿಷ್ಪತ್ತಿಯು, ದ್ರವಿಣಂ ದದಾತೀತಿ ದ್ರವಿಣೋದಾಃ. ದ್ರವಿಣಶಬ್ದಕ್ಕೆ ಧನ, ಬಲ ಎಂದು ಎರಡು ಅರ್ಥಗಳಿರುವವು. ಅದುದರಿಂದ ದ್ರವಿಣೋದಾಃ ಎಂದರೆ ಧನವನ್ನು ಅಥವಾ ಬಲವನ್ನು ಕೊಡುವವನು ಎಂದರ್ಥವು. ಇದು ಈ ಶಬ್ದದ ಅವಯವಾರ್ಥವು. ಇದಲ್ಲದೆ ಯಾಸ್ಕರು ಪ್ರಸಕ್ತವಾದ ಈ ಋಕ್ಕಿಗೆ ನಿರ್ವಚನವನ್ನು ಹೀಗೆ ಹೇಳಿರುವರು—

ದ್ರವಿಣೋದಾ ಯಸ್ತ್ವಂ । ದ್ರವಿಣಸ ಇತಿ ದ್ರವಿಣಸಾದಿನ ಇತಿ ವಾ ದ್ರವಿಣಸಾನಿನ ಇತಿ ವಾ ದ್ರವಿಣಸಸ್ತಸ್ಮಾತ್ ಪಿಬ ತ್ವಿತಿ ವಾ । ಯಜ್ಞೇಷು ದೇವಮಿಳತೇ । ಯಾಚಂತಿ ಸ್ತುವಂತಿ, ವರ್ಧಯಂತಿ ಪೂಜಯಂತೀತಿ ವಾ ॥

ಎಂದರೆ ಧನ, ಹವಿಸ್ಸು ಮುಂತಾದವುಗಳನ್ನು ಅಪೇಕ್ಷಿಸುವ ಋತ್ವಿಜರು ದ್ರವಿಣೋದಾ ಎಂಬ ನಿನ್ನನ್ನು ಯಜ್ಞಗಳಲ್ಲಿ ಸೋಮಪಾನ ಮಾಡುವಂತೆ, ಪ್ರಾರ್ಥಿಸುತ್ತಾರೆ ಎಂದು ಮುಖ್ಯಾರ್ಥವು. ಇಲ್ಲಿ ದ್ರವಿಣೋದಾಃ ಎಂಬದು ಪ್ರಥಮಾ ವಿಭಕ್ತಿಯ ಏಕಪದನವಾಗಿದ್ದರೂ ದೇವಂ ಎಂಬ ದ್ವಿತೀಯೈಕವಚನಕ್ಕೆ ಹೇಗೆ ವಿಶೇಷಣವಾಯಿತೆಂದರೆ—ದ್ರವಿಣೋದಾ ಯಃ ದೇವಃ ತಂ ದೇವಂ, ಯಾವ ದೇವನು ಧನದಾತನೋ ಆ ದೇವನನ್ನು ಎಂದು ಅರ್ಥವಾಗುವಂತೆ ಪದಗಳನ್ನು ಅಧ್ಯಾಹಾರವಾಡಿಕೊಳ್ಳಬೇಕು. ದ್ರವಿಣಸಃ —ಎಂದರೆ ಧನ ಅಥವಾ ಹವಿಸ್ಸನ್ನು ದೇವತಾಯಜನಾರ್ಥವಾಗಿ ದೇವನನ್ನು ಪ್ರಾರ್ಥಿಸುವವರಾದುದರಿಂದ ದ್ರವಿಣಸಃ ಎಂಬ ಶಬ್ದಕ್ಕೆ ಋತ್ವಿಜರು ಎಂದರ್ಥವು. ಮತ್ತು ಈಳತೇ ಎಂದರೆ ಯಾಚಿಸುತ್ತಾರೆ, ಸ್ತುತಿಸುತ್ತಾರೆ, ಪ್ರಶಂಸೆವಾಡುತ್ತಾರೆ, ಪೂಜಿಸುತ್ತಾರೆ ಎಂಬ ಅನೇಕ ಅರ್ಥಗಳನ್ನು ಹೇಳಬಹುದು.

ತತ್ಕೋ ದ್ರವಿಣೋದಾ ಇಂದ್ರ ಇತಿ ಕ್ರೌಷ್ಟುಕಿಃ ।
ಸ ಬಲಧನಯೋರ್ದಾತೃತಮಸ್ತಸ್ಯ ಚೆ ಸರ್ವಾ ಬಲಕೃತಿಃ ॥

ದ್ರವಿಣೋದಾಃ ಎಂಬ ಶಬ್ದದ ಅವಯವಾರ್ಥವನ್ನೇನೋ ಹೇಳಿದ್ದಾಯಿತು. ಆದರೆ ಈ ದ್ರವಿಣೋದಾಃ ಎಂಬ ದೇವತೆಯು ಯಾರು? ಎಂದರೆ, ಇಂದ್ರನೇ ದ್ರವಿಣೋದಾಃ ಎಂಬುದಾಗಿ ಹೇಳಲ್ಪಡುವನು, ಏಕೆಂದರೆ ದ್ರವಿಣ ಶಬ್ದವು ಸೂಚಿಸುವ, ಬಲ, ಧನ. ಇವುಗಳನ್ನು ಅತಿಶಯವಾಗಿ ಕೊಡುವವನು ಇಂದ್ರನೇ ಆದುದರಿಂದ ಇಂದ್ರನನ್ನೇ ದ್ರವಿಣೋದಾಃ ಎಂಬದಾಗಿ ಹೇಳಬೇಕೆಂದು ಕ್ರೌಷ್ಟುಕಿ ಎಂಬುವರ ಅಭಿಪ್ರಾಯವು.

ಅಥಾಸ್ಯಗ್ನಿಂ ದ್ರವಿಣೋದಸಮಾಹೈವ ಸುವರೇಶಸ್ತಾಜ್ಜಾಯತೇ ।
ಯೋ ಅಸ್ಮನೋರಂತರಗ್ನಿಂ ಜಜಾನ ಇತ್ಯಪಿ ನಿಗಮೋ ಭವತಿ ॥

ಮತ್ತು ಇವರು ಈ ಶಬ್ದಕ್ಕೆ ಮತ್ತೊಂದು ಅರ್ಥವನ್ನು ಹೇಳುವರು. ಇಂದ್ರನು ದ್ಯಾವಾಪೃಥಿವಿಗಳನ್ನು ಸೃಷ್ಟಿಸಿದನು. ಅವುಗಳ ಮಧ್ಯದಲ್ಲಿ ಅಗ್ನಿಯನ್ನೂ ಸೃಷ್ಟಿಸಿದನು. ಆದುದರಿಂದ ದ್ರವಿಣೋದಾಃ ಶಬ್ದಕ್ಕೆ ಅಗ್ನಿಯೆಂದೂ ಹೇಳಬಹುದು ಎಂದು ಈ ಅರ್ಥವನ್ನು ಸಮರ್ಥಿಸುವುದಕ್ಕಾಗಿ '' ಅಶ್ಮನೋರಂತರಗ್ನಿಂ ಜಜ್ಞಾನ '' ಎಂಬ ಋಕ್ಕನ್ನು ಉದಾಹರಣೆಯಾಗಿ ಕೊಟ್ಟಿರುವರು.

> ಅಥಾಪ್ಯೃತುಯಾಜೇಷು ದ್ರವಿಣೋದಸಾಃ ಪ್ರವಾದಾ ಭವಂತಿ। ತೇಷಾಂ ಪುನಃ ಪಾತ್ರ-ಸ್ಯೇಂದ್ರಪಾನಮಿತಿ ಭವತಿ ॥ ಅಥಾಪ್ಯೇನಂ ಸೋಮಪಾನೇನ ಸ್ತೌತಿ । ಅಥಾಪ್ಯಾಹ ದ್ರವಿಣೋದಾಃ ಪಿಬತು ದ್ರವಿಣೋದಸ ಇತಿ ॥

ಋತುಗಳನ್ನುದ್ದೇಶಿಸಿ ಮಾಡುವ ಯಜ್ಞಗಳಲ್ಲಿ ಋತ್ವಿಜರ ಹಸ್ತದಲ್ಲಿರುವ ಪಾತ್ರೆಯಿಂದ ಇಂದ್ರನು ಸೋಮಪಾನ ಮಾಡುವನೆಂದು ಹೇಳಿರುವದರಿಂದಲೂ ಇಂದ್ರನನ್ನು ಸೋಮಪಾನಸಂಬಂಧವಾದ ಮಂತ್ರಗಳಿಂದ ಸ್ತೋತ್ರ ಮಾಡುವುದರಿಂದಲೂ, ಋತ್ವಿಜರನ್ನು ದ್ರವಿಣೋದಸರೆಂದು ಕರೆಯುವ ರೂಢಿ ಇದೆ. ಇಷ್ಟೆಲ್ಲವೂ ಕ್ರೌಷ್ಟುಕಿ ಎಂಬುವರ ಮತವು.

> ಆಯಮೇವಾಗ್ನಿರ್ದ್ರವಿಣೋದಾ ಇತಿ ಶಾಕಪೂಣಿಃ ಆಗ್ನೇಯೇಷ್ವೇವ ಹಿ ಸೂಕ್ತೇಷು ದ್ರವಿ-ಣೋದಸಾಃ ಪ್ರವಾದಾ ಭವಂತಿ.

ಅಗ್ನಿಯೇ ದ್ರವಿಣೋದಾಃ ಎಂದು ಶಾಕಪೂಣಿಯವರ ಮತವು, ಏಕೆಂದರೆ ಅಗ್ನಿಸಂಬಂಧವಾದ ಸೂಕ್ತಗಳಲ್ಲಿ ಋತ್ವಿಜರು ಅಗ್ನಿಯನ್ನು ಸ್ತುತಿಸುವಾಗ ದ್ರವಿಣೋದಾಃ ಎಂಬ ಶಬ್ದವನ್ನು ಅಗ್ನಿಗೆ ವಿಶೇಷಣಪದವನ್ನಾಗಿ ಉಪಯೋಗಿಸುವರು.

> ಯಥೋ ಏತಸ್ಯ ಬಲಧನಯೋರ್ದಾತೃತಮ ಇತಿ ಸರ್ವಾಸು ದೇವತಾಸ್ವೈಶ್ವರ್ಯಂ ವಿದ್ಯತೇ । ಯತೋ '' ಏತದೋಜಸೋ ಜಾತಮುತಮನ್ಯ ಏನಂ '' ಇತಿ ಚಾಹೇತ್ಯಯಮಪ್ಯಗ್ನಿ-ರೋಜಸಾ ಬಲೇನ ಮಥ್ಯಮಾನೋ ಜಾಯತೇ ತಸ್ಮಾದೇನಮಾಹ ಸಹಸಸ್ಪುತ್ರಂ ಸಹಸಃ ಸೂನುಂ ಸಹಸೋ ಯಹುಂ ॥

ಸಮಸ್ತ ದೇವತೆಗಳಲ್ಲಿಯೂ ಐಶ್ವರ್ಯವಿರುವುದು. ಆದುದರಿಂದ ಅಗ್ನಿಯೂ ಬಲ, ಧನ ಇವುಗಳನ್ನು ಕೊಡುವನು. ಬಲಧನಗಳನ್ನು ಕೊಡುವುದರಿಂದ ಅಗ್ನಿಯನ್ನೂ ದ್ರವಿಣೋದಾಃ ಎಂದು ಹೇಳಬಹುದು. ಇದಲ್ಲದೆ ದ್ರವಿಣಶಬ್ದಕ್ಕೆ ಬಲವೆಂದು ಅರ್ಥವಿರುವುದಷ್ಟೆ. ಅಗ್ನಿಯನ್ನು ಉತ್ಪತ್ತಿಮಾಡುವಾಗ ಬಲವನ್ನು ಉಪಯೋಗಿಸಿ (ಬಲವಾಗಿ) ಮಥನಮಾಡುವುದರಿಂದ ಅಗ್ನಿಯು ಬಲದಿಂದ ಹುಟ್ಟಿದನೆಂದು ಹೇಳುವ ಪ್ರತೀತಿ ಇದೆ. ಆದುದರಿಂದಲೇ ಅಗ್ನಿಯನ್ನು ಸಹಸಸ್ಪುತ್ರಂ, (ಸಹಸಃ-ಬಲದ, ಪುತ್ರಂ-ಪುತ್ರನಾದ ಅಗ್ನಿಯನ್ನು) ಸಹಸಃ ಸೂಫುಂ, ಸಹಸೋ ಯಹುಂ ಎಂಬ ಶಬ್ದಗಳಿಂದ ಸ್ತುತಿಸುವರು :—

> ದ್ವನ್ನಃ ಸರ್ಪಿರಾಸುತಿಃ ಪ್ರತ್ನೋ ಹೋತಾ ವರೇಣ್ಯಃ ।
> ಸಹಸಸ್ಪುತ್ರೋ ಅದ್ಭುತಃ ॥
>
> (ಋ. ಸಂ. ೫-೭-೬)

ತ್ವಂ ಹ ಯದ್ಯವಿಷ್ಠ್ಯ ಸಹಸಃ ಸೂನವಾಹುತಃ ।
ಋತಾವಾ ಯಜ್ಞಿಯೋ ಭುವಃ ॥

(ಋ. ಸಂ. ೮-೭೫-೩)

ಅಗ್ನೇ ವಾಜಸ್ಯ ಗೋಮತ ಈಶಾನಃ ಸಹಸೋ ಯಹೋ ।
ಅಸ್ಮೇ ಧೇಹಿ ಜಾತವೇದೋ ಮಹಿಶ್ರವಃ ॥

(ಋ. ಸಂ. ೧-೭೯-೪)

ಎಂಬ ಋಕ್ಕುಗಳಲ್ಲಿ ಕ್ರಮವಾಗಿ ಸಹಸಸ್ಪುತ್ರ, ಸಹಸಃಸೂನು, ಸಹಸೋ ಯಹು ಎಂಬ ಶಬ್ದಗಳು ಅಗ್ನಿಯನ್ನು ಸ್ತುತಿಸುವಾಗ ಉಪಯೋಗಿಸಲ್ಪಟ್ಟಿರುವವು. ಅದುದರಿಂದ ಬಲಧನಗಳನ್ನು ಇತರ ದೇವತೆಗಳು ಕೊಡುವವರಾದರೂ ಅಗ್ನಿಯೇ ವಿಶೇಷವಾಗಿ ದ್ರವಿಣೋದಾಃ ಎಂಬ ಶಬ್ದದಿಂದ ಪ್ರತಿಪಾದಿತನಾಗಿರುವನು.

ಗ್ರಾವಹಸ್ತಾಸಃ—ಸೋಮಲತೆಯನ್ನು ಜಜ್ಜುವುದಕ್ಕಾಗಿ ಕೈಯಲ್ಲಿ ಕಲ್ಲನ್ನು ಹಿಡಿದಿರುವವರು.

ಅಧ್ವರೇ, ಯಜ್ಞೇಷು--ಅಧ್ವರ ಯಜ್ಞ ಎಂಬ ಶಬ್ದಗಳು ಸಾಧಾರಣವಾಗಿ ಯಜ್ಞವೆಂಬ ಸಾಮಾನ್ಯಾರ್ಥವನ್ನು ಸೂಚಿಸುವುದಾದರೂ ಇಲ್ಲಿ ಭಾಷ್ಯಕಾರರು ದ್ವಿರುಕ್ತಿದೋಷ ಬರಬಹುದೆಂಬ ಶಂಕೆಯಿಂದ ಅಧ್ವರಶಬ್ದಕ್ಕೆ ಪ್ರಕೃತಿರೂಪವಾದ ಅಗ್ನಿಷ್ಟೋಮವೆಂದೂ, ಯಜ್ಞಶಬ್ದಕ್ಕೆ ವಿಕೃತಿರೂಪವಾದ ಉಕ್ಥ್ಯ ಮೊದಲಾದ ಯಾಗವಿಶೇಷಗಳೆಂದೂ ಅರ್ಥವಿವರಣೆಮಾಡಿರುವರು. ಪ್ರಕೃತಿಯೆಂದರೆ ಎಲ್ಲಾ ಯಜ್ಞಗಳಿಗೂ ಸಾಮಾನ್ಯವಾಗಿ ಅನ್ವಯಿಸುವ ಕಾರ್ಯಕ್ರಮಗಳನ್ನೊಳಗೊಂಡ ಮೂಲಭೂತವಾದ ಯಜ್ಞಕರ್ಮವು. ವಿಕೃತಿಯೆಂದರೆ ಪ್ರಕೃತಿಯಜ್ಞದಲ್ಲಿ ಸಂದರ್ಭೋಚಿತವಾಗಿ ಅಲ್ಲಲ್ಲಿ ಕೆಲವು ವ್ಯತ್ಯಾಸಗಳನ್ನು ಮಾಡಿ ನೆರವೇರಿಸುವ ಯಜ್ಞಕರ್ಮವು ಎಂದರೆ ವಿಕೃತಿಯಾಗದಲ್ಲಿ ನಡೆಯುವ ಕರ್ಮಗಳೆಲ್ಲವೂ ಪ್ರಕೃತಿಯಾಗದಂತೆಯೇ ಇದ್ದು ಒಂದೆರಡು ವಿಷಯಗಳಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವಿರುವುದು. ಪ್ರಕೃತಿವಿಕೃತಿಯಾಗಗಳ ವಿಷಯವಾಗಿ ನಾವು ಹಿಂದೆಯೇ ವಿವರಣೆ ಮಾಡಿದೇವೆ.

॥ ವ್ಯಾಕರಣಪ್ರಕ್ರಿಯಾ ॥

ದ್ರವಿಣೋದಾಃ—'ದ್ರು ದೆಕ್ಷಿಧ್ಯಾಮಿನೆನ್' (ಉ. ಸೂ. ೩-೨೦೮) ದ್ರುಗತೌ, 'ದಕ್ಷ ವೃದ್ಧೌ, ಈ ಧಾತುಗಳ ಮುಂದೆ 'ಇನನ್' ಪ್ರತ್ಯಯ ಬರುವುದು, ಎಂಬುದರಿಂದ ದ್ರು ಧಾತುವಿನ ಮುಂದೆ ಇನನ್ ಬಂದರೆ ದ್ರು+ಇನ, 'ಸಾರ್ವಧಾತುಕಾರ್ಧಧಾತುಕಯೋಃ' (ಪಾ. ಸೂ. ೭-೩-೮೪) ಎಂಬುದರಿಂದ ಗುಣ=ಉಕಾರಕ್ಕೆ ಓಕಾರ, ಏಚೋಯವಾಯಾವಃ' (ಪಾ.ಸೂ. ೬-೧-೭೮) ಎಂಬುದರಿಂದ ಓಕಾರಕ್ಕೆ ಅವಾದೇಶ ದ್ರವಿನ. ಆಟ್ಕುಪ್ವಾಙ್ನುಮ್ ವ್ಯವಾಯೇಪಿ (ಪಾ-ಸೂ- ೮-೪ ೨) ಎಂಬುದರಿಂದ ನಕಾರಕ್ಕೆ ಣಕಾರ, ದ್ರವಿಣ ಎಂದಾಯಿತು, ದ್ರವಿಣಂ ದದಾತಿ ಇತಿ ದ್ರವಿಣೋದಾಃ, ದ್ರವಿಣಂ ಎಂಬ ಸುಬಂತವು ಉಪಪದವಾಗಿರುವಾಗ ಕ್ವಿಪ್ಪ್ (ಪಾ.ಸೂ. ೩-೨-೭೬) ಎಂಬುದರಿಂದ ದಾ, ಧಾತುವಿನ ಮುಂದೆ ಕ್ವಿಪ್, ಕ್ವಿಪ್ರತ್ಯಯಕ್ಕೆ ಲೋಪವಾದ್ದರಿಂದ ಕೃತ್ತದ್ಧಿತಸಮಾಸಾಶ್ಚ(ಪಾ.ಸೂ.೧-೨-೪೬) ಎಂಬುದರಿಂದ ಪ್ರಾತಿಪದಿಕಸಂಜ್ಞೆ ಬರುವುದು, ಸುಪೋಧಾತುಪ್ರಾತಿಪದಿಕಯೋಃ (ಪಾ.ಸೂ. ೨-೪-೭೧) ಎಂಬುದರಿಂದ ಅಮ್ ಪ್ರತ್ಯಯಕ್ಕೆ ಲುಕ್, ಪೂರ್ವಪದಕ್ಕೆ ಭಾಂದಸವಾಗಿ

ಸಕ್ ಆಗಮ ಬಂದು ಸಕಾರವು ಸೇರಿಕೊಳ್ಳುವುದು. ದ್ರವಿಣಸ್+ದಾ **ಸಸಜುಷೋರುಃ**, (ಪಾ.ಸೂ.೮-೩-೬೬) ಎಂಬುದರಿಂದ ಸಕಾರಕ್ಕೆ ರುತ್ವ ದ್ರವಿಣರ್+ದಾ **ಹಶಿಟಿ** (ಪಾ ಸೂ. ೬-೧-೧೪೪) ಎಂಬುದರಿಂದ ರುಗೆ ಉತ್ವ ದ್ರವಿಣ+ಉ+ದಾ, **ಆದ್ಗುಣಃ** (ಪಾ.ಸೂ, ೬-೧-೮೭) ಎಂಬುದರಿಂದ ಗುಣ, ದ್ರವಿಣೋದಾ ಎಂದು ಆಗುವುದು, ದಾ ಎಂಬುದು **ಧಾತೋಃ**, (ಪಾ. ಸೂ. ೬-೧-೧೬೨) ಎಂದು ವಿಹಿತವಾದ ಧಾತುಸ್ವರದಿಂದ ಅಂತೋದಾತ್ತ, **ಸಮಾಸಾನಂತರ ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿ-ಸ್ವರ ಬಂದು ಅದೇ ನಿಲ್ಲುವುದು, ದ್ರವಿಣೋದಾಃ, ಎಂಬುದು ದೇವಂ ಎಂಬ ದ್ವಿತೀಯಾಏಕವಚನಾಂತಕ್ಕೆ ವಿಶೇಷಣವು. ಆದುದರಿಂದ ಒಂದೇ ವಾಕ್ಯವಾಗುವುದು ಎಂದು ವಿವಕ್ಷಿಸಿದರೆ ದ್ರವಿಣೋದಾ ಎಂಬುದರ ಮುಂದೆ ಬರುವ ದ್ವಿತೀಯಾಏಕವಚನ ಅಮ್ ಪ್ರತ್ಯಯಕ್ಕೆ **ಸುಪಾಂಸುಲುಕ್**, (ಪಾ.ಸೂ. ೭-೧-೩೯) ಎಂಬುದರಿಂದ ಸು ಆದೇಶ ಬರುವುದು. ದ್ರವಿಣೋದಾಸ್ ರುತ್ವ ವಿಸರ್ಗಗಳು ದ್ರವಿಣೋದಾಃ ಎಂದಾಗುವುದು, ಅಥವಾ ದ್ರವಿ-ಣಂ ಆತ್ಮನ ಇಚ್ಛನ್ತಿ, ಎಂದು ವಿಗ್ರಹವಾಕ್ಯಮಾಡಿದರೆ ದ್ರವಿಣಸ್ಯಂತಿ, ಎಂದಾಗುವುದು, ಈ ಪಕ್ಷದಲ್ಲಿ ದ್ರವಿಣಂ ಎಂಬುದರ ಮುಂದೆ ಆತ್ಮನ ಇಚ್ಛಂತಿ ಎಂಬ ಅರ್ಥದಲ್ಲಿ **ಸುಪ ಆತ್ಮನಃಕ್ಯಚ್** ಎಂಬುದರಿಂದ ಕ್ಯಚ್ ಪ್ರತ್ಯಯ, **ಸನಾದ್ಯನ್ತಾ ಧಾತವಃ**, (ಪಾ.ಸೂ. ೩-೧-೩೨) ಎಂಬುದರಿಂದ ಕ್ಯಜಂತಕ್ಕೆ ಧಾತುಸಂಜ್ಞೆ, **ಸುಪೋ ಧಾತುಪ್ರಾತಿಪದಿಕಯೋಃ**, (ಪಾ.ಸೂ. ೨.೪ ೭೧) ಎಂಬುದರಿಂದ ಧಾತ್ವವಯವವಾದ ಸುಪ್ ಗೆ ಲುಕ್, **ಸರ್ವಪ್ರಾತಿಪದಿಕೇ-ಭ್ಯೋ ಲಾಲಸಾಯೋಂ ಸುಗ್ವಕ್ತವ್ಯಃ**, (ಪಾ. ಸೂ. ವ. ಭಾ. ೭-೧ ೫೧-೨) ಲಾಲಸಾ-ಎಂದರೆ, ಅತಿಶಯೇನ ಅಭ್ಯವಜಿಹೀರ್ಷಾ ಎಂದು ಕೈಯಟಕಾರರು ವಿವರಿಸಿರುವರು. ಉತ್ಕಟೇಚ್ಛಾ ಎಂದು ತತ್ವಬೋಧಿನೀ, ಕ್ಯಚ್ ಪ್ರತ್ಯಯ ಪರದಲ್ಲಿರುವಾಗ ಉತ್ಕಟೇಚ್ಛೆ ಹೋರಿದರೆ ಎಲ್ಲಾ ಪ್ರಾತಿಪದಿಕಗಳಿಗೂ ಸುಗಾಗಮ ಬರುವುದು ಎಂಬುದರಿಂದ ಸುಕ್ ಆಗಮ. ದ್ರವಿಣಸ್ಯ ಎಂದಾಗುವುದು ಇದರ ಮುಂದೆ **ಸಂಪದಾದಿಭ್ಯಃ ಕ್ವಿಪ್** (ಪಾ.ಸೂ-ವಾರ್ತಿ. ೩-೩-೧೦೮-೯) ಎಂಬುದರಿಂದ ಭಾವಾರ್ಥದಲ್ಲಿ ಕ್ವಿಪ್ ಪ್ರತ್ಯಯ, ದ್ರವಿಣಸ್ಯ+ವ್ **ಅತೋಲೋಪಃ** (ಪಾ ಸೂ.೬-೪-೪೮) ಅರ್ಧಧಾತುಕಪ್ರತ್ಯಯೋಪದೇಶಕಾಲದಲ್ಲಿ ಯಾವುದು ಅಕಾರಾಂತವಾಗಿರುವುದೋ ಅದರ ಅಕಾರಕ್ಕೆ ಲೋಪ ಬರುವುದು ಎಂಬುದರಿಂದ ಪ್ರತ್ಯಯದ ಹಿಂದಿನ ಅಕಾರಕ್ಕೆ ಲೋಪ, ದ್ರವಿಣಸ್ಯ್+ವ್—ಈ ಅಲೋಪಕ್ಕೆ ಯ ಲೋಪವನ್ನು ಮಾಡುವಾಗ **ಅಚಿಃ ಪರಸ್ಮಿನ್ ಪೂರ್ವವಿಧೌ** (ಪಾ.ಸೂ. ೧-೧-೫೭) ಎಂಬುದರಿಂದ ಸ್ಥಾನಿವದ್ಭಾವವು ಪ್ರಾಪ್ತವಾಗುತ್ತದೆ ಆದರೂ **ಕ್ವಾ ಲುಪ್ತಂ ನ ಸ್ಥಾನಿವತ್ ಭವತಿ** (ಪಾ.ಮ. ೧-೧-೫೮-೨) ಕ್ವಿಪ್ ಪ್ರತ್ಯಯವನ್ನು ನಿಮಿತ್ತಮಾಡಿಕೊಂಡು ಯಾವುದಕ್ಕೆ ಲೋಪಬಂದಿದೆಯೋ ಅದಕ್ಕೆ ಸ್ಥಾನಿವದ್ಭಾವಬರುವುದಿಲ್ಲ ಎಂಬುದರಿಂದ, ಸ್ಥಾನಿವದ್ಭಾವಕ್ಕೆ ನಿಷೇಧಬರುವುದು. **ಲೋಪೋವ್ಯೋರ್ವಲಿ** (ಪಾ.ಸೂ. ೬-೧-೬೬) ವಲ್ ವರ್ಣ ಪರದಲ್ಲಿರುವಾಗ ವಕಾರ ಯಕಾರಗಳಿಗೆ ಲೋಪ ಬರುವುದು ಎಂಬುದರಿಂದ ಯಕಾರಕ್ಕೆ ಲೋಪ. **ವೇರಪೃಕ್ತಸ್ಯ** (ಪಾ.ಸೂ. ೬-೧-೬೬) ಅಪೃಕ್ತವೆಂದರೆ ಏಕವರ್ಣರೂಪವಾದ ಪ್ರತ್ಯಯ; ಅಪೃಕ್ತವಾದ ವಕಾರಕ್ಕೆ ಲೋಪಬರುತ್ತದೆ ಎಂಬುದರಿಂದ ವಕಾರ ಲೋಪ, ಯದ್ಯಪಿ ಪರನಿಮಿತ್ತವಲ್ಲದುದರಿಂದ ವೇರಪೃಕ್ತಲೋಪವು ಅಂತರಂಗ, ಪರನಿಮಿತ್ತಕವಾದ್ದರಿಂದ, ವಲಿಲೋಪವು ಬಹಿರಂಗ, ಅದ್ದರಿಂದ **ಅಸಿದ್ಧಂ ಬಹಿರಂಗಮನ್ತರಙ್ಗೇ**, (ಪರಿಭಾ. ೫೦) ಎಂಬುದರಿಂದ ವಲಿಲೋಪವು ವೇರಪೃಕ್ತಲೋಪವನ್ನು ಮಾಡುವಾಗ ಅಸಿದ್ಧವಾಗುವುದು. ಏವಂಚ ಮೊದಲು ವೇರಪೃಕ್ತಲೋಪಬಂದರೆ ಅಲ್ವಿಧಿಯಲ್ಲಿ ಸ್ಥಾನಿವದ್ಭಾವಕ್ಕೆ ಪ್ರತಿಷೇಧಬರುವುದರಿಂದ ವಲಿಲೋಪವು ಬರದೇಹೋಗುವುದು. ಆದರೆ **ವೇರಪೃಕ್ತಲೋಪಾದ್ವಲಿ ಲೋಪೋಬಲಿಯಾನ್**, ಎಂಬುದರಿಂದ ಮೊದಲು ವಲಿಲೋಪವೇ ಬರುವುದು, ನಂತರ ವೇರಪೃಕ್ತಲೋಪ ಬರುವುದು, ದ್ರವಿಣಸ್, ಎಂದಾಗುವುದು. ಇದಕ್ಕೆ ಧನೇಚ್ಛೆ ಎಂದು ಅರ್ಥ. ದ್ರವಿಣೇಚ್ಛಾಂ ದಸ್ಯತಿ, ಯಥೇಶ್ವಧನ ಪ್ರದಾ

ನೇನ ಉಪಕ್ಷಪಯತಿ, ಅಂದರೆ ಯಥೇಷ್ಟವಾಗಿ ಧನವನ್ನು ಕೊಟ್ಟು ಆದರಿಂದ ಧನೇಚ್ಛೆಯನ್ನು ತೊಲಗಿಸುವನು ಎಂಬ ಅರ್ಥವನ್ನು ವಿವಕ್ಷಿಸಿದಾಗ, ಅಂತರ್ಭಾವಿತಣಿಚ್ಕ್ರ್ತ್ಯಯಾರ್ಥಕವಾದ ದಸು ಉಪಕ್ಷಯೇ, ಎಂಬ ಧಾತುವಿನ ಮುಂದೆ ಕ್ವಿಪ್‌ಚೆ ಎಂಬುದರಿಂದ ಕ್ವಿಪ್ ಪ್ರತ್ಯಯ, ಕ್ವಿಪ್‌ಪ್ರತ್ಯಯಕ್ಕೆ ಲೋಪ, ಈ ರೀತಿಯಲ್ಲಿ ದ್ರವಿಣೋದಸ್ ಶಬ್ದವು ಸಕಾರಾಂತವಾಗುವುದು, ಈ ವ್ಯುತ್ಪತ್ತಿಯಿಂದ ದ್ರವಿಣೋದಸಾಃ ಪ್ರವಾದಾ ಭವನ್ತಿ, (ನಿರು. ೮-೨) ಎಂಬ ನಿರುಕ್ತಿಯ ವ್ಯವಹಾರವು ಉಪಪನ್ನವಾಗುವುದು, ಆದ್ದರಿಂದ ದ್ರವಿಣೋದಾಃ, ಎಂಬುದು ದೇವಂ ಎಂಬುದಕ್ಕೆ ವಿಶೇಷಣವಲ್ಲ ಎಂದು ಇಟ್ಟುಕೊಂಡರೆ ಎರಡು ವಾಕ್ಯವು ಏರ್ಪಡುವುದು ಈ ಪಕ್ಷದಲ್ಲಿ ಸ್ವಾರ್ಥದಲ್ಲಿ ಪ್ರಥಮಾವಿಭಕ್ತಿ ಏಕವಚನ ಸು ಪ್ರತ್ಯಯಬಂದು ದ್ರವಿಣೋದಾಃ, ಎಂದಾಗುವುದು, ಏಕವಾಕ್ಯತಾ ಪಕ್ಷದಲ್ಲಿ ವ್ಯತ್ಯಯದಿಂದ ಪ್ರಥಮಾವಿಭಕ್ತಿಗೆ ದ್ವಿತೀಯಾವಿಭಕ್ತಿಯ ಅರ್ಥವನ್ನು ಇಟ್ಟುಕೊಳ್ಳಬೇಕು.

ದ್ರವಿಣಸಃ—ಇಲ್ಲಿಯೂ ವಾಕ್ಯಭೇದಪಕ್ಷದಲ್ಲಿ ದ್ರವಿಣಸಃ ಎಂಬುದಕ್ಕೆ ಸೋಮರಸದ ಎಂದರ್ಥ. ಈ ಅರ್ಥದಲ್ಲಿ ಛಾಂದಸಪ್ರಕ್ರಿಯೆಯಿಂದ ಸಗಾಗಮ ಬಂದು ದ್ರವಿಣಸಃ ಎಂದಾಗುವುದು. ಜ್ಞಿತ್ಯಾದಿರ್ನಿತ್ಯಂ, ಎಂಬುದರಿಂದ ಆದ್ಯುದಾತ್ತವು ನಿಯತವಾಗಿ ಬರುವುದು. ದ್ರವಿಣಃಃ ಎಂಬುದು ಋತ್ವಿಕ್ಕುಗಳಿಗೆ ವಿಶೇಷಣವಾಗಿ ಒಂದೇ ವಾಕ್ಯವಾಗುವುದು ಎಂಬ ಪಕ್ಷದಲ್ಲಿ ಹಿಂದೆ ಹೇಳಿದಂತೆ ಕ್ಯಜಂತದ ಮುಂದೆ ಕ್ವಿಪ್, ಆತೋಲೋಪಃ, ಇತ್ಯಾದಿ ಶಾಸ್ತ್ರಗಳಿಂದ ಆಕಾರಲೋಪವೇ ಮೊದಲಾದ ಕಾರ್ಯಗಳು ಮೊದಲಿನಂತೆಯೇ ಬರುವುವು. ಈ ಪಕ್ಷದಲ್ಲಿ ಕ್ಯಚ್ ಪ್ರತ್ಯಯವು ಚಿತ್ತಾತ್ವದಿಂದ ಚಿತೇಃ, (ಪಾ.ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತಪ್ರಾಪ್ತವಾದರೆ ವ್ಯತ್ಯಯದಿಂದ ಆದ್ಯುದಾತ್ತ ಬರುವುದು. ಅಧ್ವರೇ ಯಜ್ಞೇಷು ಚ ದ್ರವಿಣಸೋ ಗ್ರಾವಹಸ್ತಾಸೋ ಋತ್ವಿಜಃ, ದ್ರವಿಣೋದಾ ದೇವಮಿಳತೇ, ಎಂದು ಏಕವಾಕ್ಯತಾಪಕ್ಷದಲ್ಲಿ ಅನ್ವಯ. ದ್ರವಿಣಸಃ ಗ್ರಾವಹಸ್ತಾಸಃ, ಋತ್ವಿಜಃ, ಅಧ್ವರೇ, ಯಜ್ಞೇಷು ಚ ದೇವಮಿಳತೇ, ದ್ರವಿಣೋದಾಃ ಅಗ್ನಿಃ ಸೋಮಂ ಪಿಬತು, ಎಂದೂ, ಗ್ರಾವಹಸ್ತಾಸಃ ಋತ್ವಿಜಃ ಅಧ್ವರೇ ಯಜ್ಞೇಷು ಚ ದೇವಮಿಳತೇ, ದ್ರವಿಣೋದಾಃ ಅಗ್ನಿಃ ದ್ರವಿಣಸಃ ಸೋಮಸ್ಯ ಪಾತಾ ಭವತು ಎಂದೂ ಭಿನ್ನವಾಕ್ಯತಾಪಕ್ಷದಲ್ಲಿ ಅನ್ವಯವು.

ಗ್ರಾವಹಸ್ತಾಸಃ—ಗ್ರಾವಯುಕ್ತಾಃ ಹಸ್ತಾಃ ಯೇಷಾಂ ತೇ ಗ್ರಾವಹಸ್ತಾಸಃ ಎಂದು ಬಹುವ್ರೀಹಿಸಮಾಸ. ಗ್ರಾವಹಸ್ತಶಬ್ದದ ಮುಂದೆ ಜಸ್, ಅಜ್ಜಸೇರಸುಕ್ (ಪಾ.ಸೂ. ೭-೧-೫೦) ಎಂಬುದರಿಂದ ಜಸ್ಸಿಗೆ ಅಸುಗಾಗಮ. ಗ್ರಾವಶಬ್ದವು ವೃಷಾದಿಗಣಕ್ಕೆ ಸೇರಿದುದು, ಆದ್ದರಿಂದ ವೃಷಾದೀನಾಂಚ, (ಪಾ.ಸೂ ೬-೧-೨೦೩) ಎಂಬುದರಿಂದ ಆದ್ಯುದಾತ್ತವಾಗುವುದು, ಸಮಾಸಬಂದಮೇಲೆಯೂ ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಂ, (ಪಾ.ಸೂ. ೬೨೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುವುದು.

ಆಧ್ವರೇ— ನ ವಿದ್ಯತೇ ಧ್ವರಃ ಹಿಂಸಾ ಯಸ್ಮಿನ್ ಸಃ ಅಧ್ವರಃ, ಪೂರ್ವಪದಪ್ರಕೃತಿಸ್ವರವನ್ನು ಬಾಧಿಸಿ ನಞ್‌ಸುಭ್ಯಾಂ (ಪಾ.ಸೂ.—೬-೨-೧೭೨) ಎಂಬುದರಿಂದ ಉತ್ತರಪದಕ್ಕೆ ಅಂತೋದಾತ್ತ ಬರುವುದು.

ಈಳತೇ—ಈಡ ಸ್ತುತೌ, ಧಾತು. ಅನುದಾತ್ತೇತ್ತು, ಆದ್ದರಿಂದ ಅನುದಾತ್ತಙಿತ ಆತ್ಮನೇಪದಂ, (ಪಾ.ಸೂ. ೧-೩-೧) ಬಂಬುದರಿಂದ ಆತ್ಮನೇಪದ ಬರುವುದು. ಲಟ್-ಪ್ರಥಮಪುರುಷಬಹುವಚನದಲ್ಲಿ ಝಿ ಬರುವುದು. ಶಪ್ ವಿಕರಣಕ್ಕೆ ಅದಿಪ್ರಭೃತಿಭ್ಯಃ ಶಪಃ (ಪಾ. ಸೂ. ೨-೪-೭೨) ಎಂಬುದರಿಂದ ಲುಕ್. ಆತ್ಮನೇಪದೇಷ್ವನತಃ (ಪಾ.ಸೂ' ೭-೧-೫) ಎಂಬುದರಿಂದ ಝಿಕಾರಕ್ಕೆ ಅತ್ ಆದೇಶ. ಟಿತ ಆತ್ಮನೇ ಪದಾನಾಂ ಟೇರೇ (ಪಾ.ಸೂ. ೩-೪-೭೮) ಎಂಬುದರಿಂದ ಟಿಗೆ ಏತ್ವ, ಈಡತೇ- ಡಕಾರಕ್ಕೆ ಅಜ್ಝಸ್ಥಸ್ಯ ಡಕಾರಸ್ಯ—ಎಂಬುದರಿಂದ ಳಕಾರ ॥೭॥

॥ ಸಂಹಿತಾಪಾಠಃ ॥

ದ್ರವಿಣೋದಾ ದದಾತು ನೋ ವಸೂನಿ ಯಾನಿ ಶೃಣ್ವಿರೇ ।
ದೇವೇಷು ತಾ ವನಾಮಹೇ ॥ ೮ ॥

॥ ಪದಪಾಠಃ ॥

ದ್ರವಿಣಃ ಽ ದಾಃ । ದದಾತು । ನಃ । ವಸೂನಿ । ಯಾನಿ । ಶೃಣ್ವಿರೇ ॥
ದೇವೇಷು । ತಾ । ವನಾಮಹೇ ॥ ೮ ॥

॥ ಸಾಯಣಭಾಷ್ಯಂ ॥

ದ್ರವಿಣೋದಾ ದೇವೋ ನೋಽಸ್ಮಭ್ಯಂ ವಸೂನಿ ಧನಾನಿ ದದಾತು, ಯಾನಿ ಧನಾನಿ ಶೃಣ್ವಿರೇ ಹವಿರುಪಯುಕ್ತತ್ವೇನ ಶ್ರೂಯಂತೇ । ತಾ ತಾನಿ ಚ ಸರ್ವಾಣಿ ಧನಾನಿ ದೇವೇಷು ನಿಮಿತ್ತಭೂತೇಷು ವನಾಮಹೇ । ಸಂಭಜಾಮಃ । ಧನೈರ್ದೇವಾನ್ಯಷ್ಟುಂ ತಾನಿ ಸ್ವೀಕುರ್ಮ ಇತ್ಯರ್ಥಃ ॥ ದ್ರವಿಣೋದಾಃ । ಗತಂ । ವಸೂನಿ । ಶ್ನಸ್ಯೃಸ್ನಿಹೀತ್ಯಾದಿನಾ । ಉ. ೧.೧೧ । ಉಪ್ರತ್ಯಯಃ । ನಿದಿತ್ಯನುವೃತ್ತೇರಾದ್ಯುದಾತ್ತಃ । ಶೃಣ್ವಿರೇ । ಶ್ರು ಶ್ರವಣೇ । ಛಂದಸಿ ಲುಙ್ಲಙ್ಲಿಟ ಇತಿ ವರ್ತಮಾನೇ ಲಿಟ್ । ಝು ಇರೇಚ್ । ಪಾ. ೩.೪-೮೧ । ಛಂದಸ್ಯುಭಯಥೇತಿ ಸಾರ್ವಧಾತುಕತ್ವೇ ವ್ಯತ್ಯಯೇನ ಶ್ನುಃ । ತಕ್ಸಂನಿಯೋಗೇನ ಶ್ರುಭಾವಶ್ಚ । ಉವಙು ಪ್ರಾಪ್ತೇ ಹುಶ್ನುವೋಃ ಸಾರ್ವಧಾತುಕೇ । ಪಾ. ೬.೪-೮೭ । ಇತಿ ಯಣಾದೇಶಃ । ಚಿತ ಇತ್ಯಂತೋದಾತ್ತತ್ವಂ । ಯದ್ವೃತ್ತಾನ್ನಿತ್ಯಮಿತಿ ನಿಘಾತಪ್ರತಿಷೇಧಃ । ತಾ । ಶೇಶ್ಛಂದಸಿ ಬಹುಲಮಿತಿ ಶೇರ್ಲೋಪಃ । ನಲೋಪಃ ಪ್ರಾತಿಪದಿಕಾಂತಸ್ಯ । ಪಾ. ೮-೨-೭ । ಇತಿ ನಲೋಪಃ । ವನಾಮಹೇ । ವನ ಷಣ ಸಂಭಕ್ತ್ಯೌ । ವ್ಯತ್ಯಯೇನಾತ್ಮನೇಪದಂ ॥

॥ ಪ್ರತಿಪದಾರ್ಥ ॥

ದ್ರವಿಣೋದಾಃ—ಧನಪ್ರದನಾದ ದೇವನು (ಅಗ್ನಿಯು)। ಯಾನಿ—ಯಾವ ಧನಗಳು । ಶೃಣ್ವಿರೇ—ಹವಿಸ್ಸಿಗೆ ಉಪಯುಕ್ತವೆಂದು ಪ್ರಸಿದ್ಧವಾಗಿವೆಯೋ । ತಾ ವಸೂನಿ—ಆ ಧನಗಳನ್ನು । ನಃ— ನಮಗೆ । ದದಾತು—ಕೊಡಲಿ । ತಾ—ಆ ಎಲ್ಲ ಧನಗಳನ್ನೂ । ದೇವೇಷು—ದೇವತೆಗಳ ನಿಮಿತ್ತವಾಗಿ । ವನಾಮಹೇ—ಸ್ವೀಕರಿಸುತ್ತೇವೆ.

॥ ಭಾವಾರ್ಥ ॥

ಯಾಗಾದಿ ದೇವತಾಕಾರ್ಯಗಳಿಗಾಗಿ ನಾವು ಧನವನ್ನ ಪೇಕ್ಷಿಸುತ್ತೇವೆ. ಈ ಕಾರ್ಯಗಳಿಗಾಗಿ ಪ್ರಸಿದ್ಧವಾದ ಯಾವ ಧನವಿದೆಯೋ ಅದನ್ನೆಲ್ಲ ಧನಪ್ರದನಾದ ಅಗ್ನಿಯು ನಮಗೆ ದಯಪಾಲಿಸಲಿ.

English Translation

May Dravinodas give us riches that may be heard of; we ask them towards the service of the gods.

॥ ವಿಶೇಷವಿಷಯಗಳು ॥

ಯೋನಿ ಶೃಣ್ವೇರೇ—ಯಾವ ಯಾವ ವಿಧವಾದ ಧನಾದ್ಯೈಶ್ವರ್ಯಗಳಿವೆಯೆಂದು ನಾವು ಕೇಳಿರುವೆವೋ ಅಂತಹ ವಸ್ತುಗಳೆಲ್ಲವನ್ನೂ ಎಂದರ್ಥವು. ಇಲ್ಲಿ **ದೇವೇಷು ತಾ ವನಾಮಹೇ** ಎಂದು ಹೇಳಿರುವುದರಿಂದ ಆ ವಸ್ತುಗಳು ದೇವತೆಗಳಿಗೆ ಸಮರ್ಪಿಸುವುದಕ್ಕೆ ಯೋಗ್ಯವಾದವುಗಳಾಗಿರಬೇಕು. ಆದುದರಿಂದ ಹವಿಃಪ್ರದಾನಕ್ಕೆ ಉಪಯುಕ್ತವಾದ ವಸ್ತುಗಳು ಎಂದು ಭಾಷ್ಯಕಾರರು ಹೇಳಿರುವರು.

॥ ವ್ಯಾಕರಣಪ್ರಕ್ರಿಯಾ ॥

ದ್ರವಿಣೋದಾಃ—ಪೂರ್ವಮಂತ್ರದಲ್ಲಿ ವ್ಯಾಖ್ಯಾತವಾಗಿರುವುದು.

ವಸೋನಿ—**ಶ್ಯಾಸ್ವೈ, ಸ್ನಿಹಿ, ತ್ರಪ್ಯೈ, ಸಿ, ವಸಿ, ಹನಿ, ಕ್ಲಿದಿ, ಬನ್ಧಿ, ಮನಿಭ್ಯೆಷ್ಣು** (ಉ. ಸೂ. ೧-೧೦) ಎಂಬುದರಿಂದ ವಸ ನಿವಾಸೇ, ಧಾತುವಿನ ಮುಂದೆ ಉ ಪ್ರತ್ಯಯ ಬರುವುದು. ಈ ಸೂತ್ರದಲ್ಲಿ **ಧಾನ್ಯೇನಿತ್** (ಉ. ಸೂ. ೧-೯) ಎಂಬುದರಿಂದ ನಿತ್ ಎಂಬುದು ಅನುವೃತ್ತವಾಗುವುದು. ಆದ್ದರಿಂದ ಉ ಪ್ರತ್ಯಯವು ನಿತ್ತಾಗುವುದು. **ಙ್ಞಿತ್ಯಾದಿರ್ನಿತ್ಯಮ್** (ಪಾ.ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತ ಬರುವುದು.

ಶೃಣ್ವೇರೇ–ಶ್ರು ಶ್ರವಣೇ, ಧಾತು. **ಛಂದಸಿ ಲುಙ್ಲಙ್ಲಿಟಃ** (ಪಾ. ಸೂ. ೩-೪-೬) ಎಂಬುದರಿಂದ ವರ್ತಮಾನಾರ್ಥದಲ್ಲಿ ಲಿಟ್ ಬರುವುದು. ಪ್ರಥಮಪುರುಷ ಬಹುವಚನ ಝಿ. **ಲಿಟಸ್ತ ಝಯೋರೇರಿರೇಜ್** (ಪಾ. ಸೂ. ೩-೪-೮೧) ಎಂಬುದರಿಂದ ಝಿಗೆ ಇರೇಜ್ ಬರುವುದು. **ಛಂದಸ್ಯುಭಯಥಾ** (ಪಾ. ಸೂ. ೩-೪-೧೧೭) ಎಂಬುದರಿಂದ ಸಾರ್ವಧಾತುಕಸಂಜ್ಞೆಯೂ ಇರುವುದು. ಆದ್ದರಿಂದ **ಶ್ರುವಃಶೃಚೆ** (ಪಾ. ಸೂ. ೩-೧-೭೪) ಶ್ರು ಧಾತುವಿಗೆ ಶೃ ಆದೇಶ ಬರುವುದು. ಶ್ನು ಪ್ರತ್ಯಯವೂ ಸಹ ಬರುವುದು ಎಂಬುದರಿಂದ ಶೃ ಆದೇಶವೂ, ಆದರೆ ಜತೆಯಲ್ಲಿ ವಿಹಿತವಾಗಿರುವ ಶ್ನು ಪ್ರತ್ಯಯವೂ ಬರುವುದು. ಶೃನು+ಇರೇ. **ಈಗ ಇಕೋಯೆಣಚಿ** (ಪಾ. ಸೂ. ೬-೧-೭೭) ಎಂಬುದರಿಂದ ಯಣಾದೇಶವು ಪ್ರಾಪ್ತವಾದರೆ ಅದನ್ನು ಬಾಧಿಸಿ **ಅಚಿಶ್ನುಧಾತುಭ್ರುವಾಂಯ್ವೋರಿಯಙುವಙೌ** (ಪಾ. ಸೂ. ೬-೪-೭೭) ಎಂಬುದರಿಂದ ಉವಙಾದೇಶವು ಪ್ರಾಪ್ತವಾಗುವುದು. ಅದನ್ನೂ ಬಾಧಿಸಿ 'ಹುಶ್ನುವೋಸ್ಸಾರ್ವಧಾತುಕೇ, ' (ಪಾ. ಸೂ. ೬-೪-೮೭) ಹುಧಾತು, ಶ್ನು ಪ್ರತ್ಯಯಾಂತವೂ ಅನೇಕಾ

ಚ್ಯವೂ ಆದ ಅಜ್ಗ ಇವುಗಳ ಸಂಯೋಗಪೂರ್ವಕವಲ್ಲದ ಉಕಾರಕ್ಕೆ ಆಜಾದಿಯಾದ ಸಾರ್ವಧಾತುಕಪ್ರತ್ಯಯ ಪರವಾಗಿರುವಾಗ ಯಣ್ ಬರುವುದು ಎಂಬುದರಿಂದ ಯಣಾದೇಶ. **ಯವರ್ಣಾನ್ನೆಸ್ಯಣಙ್ವೆಂವಾಚ್ಯಮ್** (ಪಾ. ಸೂ. ೪-೪-೧ ವಾ ೧) ಎಂಬುದರಿಂದ ನಕಾರಕ್ಕೆ ಣಕಾರ, ಶೃಣ್ವೀರೇ ಎಂದಾಗುವುದು. ಇರೇಜ್ ಪ್ರತ್ಯಯವು ಚಿತ್ವಾದ್ವಚಿಂದ **ಚಿತೇಃ** (ಪಾ. ಸೂ. ೬ ೧-೧೬೩) ಎಂಬುದರಿಂದ ಆಂತೋದಾತ್ತ ಬರುವುದು. **ಯೆದ್ಧ್ಯೈ-ತ್ತಾನ್ನಿತ್ಯಮ್** (ಪಾ. ಸೂ. ೮-೧-೬೬) ಎಂಬುದರಿಂದ ಸರ್ವಾನುದಾತ್ತಕ್ಕೆ ಪ್ರತಿಷೇಧ ಬರುವುದರಿಂದ **ತಿಙ್ಶಿತಿಜಃ** (ಪಾ. ಸೂ. ೮-೧-೭೮) ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ.

ತಾ—ತದ್‌ಶಬ್ದವು ನಪುಂಸಕಲಿಂಗವಾದಾಗ ಅದರ ಮುಂದೆ ಶಸ್. **ತ್ಯದಾದೀನಾಮಃ** (ಪಾ. ಸೂ. ೭-೩-೧೦೩) ಎಂಬುದರಿಂದ ದಕಾರಕ್ಕೆ ಅಕಾರ, 'ಅತೋಗುಣೇ' (ಪಾ.ಸೂ. ೬-೧-೯೭) ಪರರೂಪ **ಜಶ್ಶಸೋಃಶಿಃ** (ಪಾ. ಸೂ. ೭-೧-೨೦) ನಪುಂಸಕಲಿಂಗವಾದ ಅಂಗದ ಮುಂದೆ ಇರುವ ಜಸ್ ಶಸ್ ಇವುಗಳಿಗೆ ಶಿ ಆದೇಶಬರುವುದು ಎಂಬುದರಿಂದ ಶಸ್‌ಗೆ ಶಿ ಆದೇಶ. **ಶಿಸರ್ವನಾಮಸ್ಥಾನೆಮ್** (ಪಾ. ಸೂ. ೧-೧-೪೨) ಎಂಬುದರಿಂದ ಶಿಗೆ ಸರ್ವನಾಮಸ್ಥಾನಸಂಜ್ಞೆ ಇರುವುದು **ನಪುಂಸಕಸ್ಯ ಝಲಚಃ** (ಪಾ. ಸೂ. ೭-೧-೭೨) ಝಲಂತವೂ ಅಜಂತವೂ ಆದ ನಪುಂಸಕಲಿಂಗವಾದ,ಅಂಗಕ್ಕೆ ಸರ್ವನಾಮಸ್ಥಾನ ಪ್ರತ್ಯಯ ಪರದಲ್ಲಿರುವಾಗ ನುಮಾಗಮ ಬರುವುದು ಎಂಬುದರಿಂದ ನುಮಾಗಮ, ತನ್+ ಇಸರ್ವನಾಮಸ್ಥಾನೇ ಚಾಸಂಬುದ್ಧೌ (ಪಾ. ಸೂ. ೬-೪-೮) ಎಂಬುದರಿಂದ ಉಪಧಾ ದೀರ್ಘ **ತಾನ್+ಇ. ಶೇಶ್ಚಂದಸಿ ಬಹುಲಮ್** (ಪಾ. ಸೂ. ೬-೧-೭೦) ಎಂಬುದರಿಂದ ಶಿಗೆ ಲೋಪ. **ನಲೋಪಃ ಪ್ರಾತಿಪದಿಕಾನ್ತಸ್ಯ** (ಪಾ. ಸೂ. ೮-೨-೭) ಎಂಬುದರಿಂದ ನಕಾರಕ್ಕೆ ಲೋಪ. ತಾ ಎಂದಾಗುವುದು. ಇದಕ್ಕೆ **ತಾನಿ** ಎಂದರ್ಥ.

ವನಾಮಹೇ—ವನ ಷಣ ಸಂಭಕ್ತೌ ಧಾತು. **ವ್ಯತ್ಯಯೋಬಹುಲಮ್** (ಪಾ. ಸೂ. ೩-೧-೮೫) ಎಂಬಲ್ಲಿ 'ಸುಪ್ತಿಙುಪಗ್ರಹ' ಇತ್ಯಾದಿ ಕಾರಿಕೆಯಲ್ಲಿ ಉಪಗ್ರಹ ಎಂಬುದಕ್ಕೆ ಪರಸ್ಮೈಪದ-ಆತ್ಮನೇ ಪದ ಎಂದು ಅರ್ಥವರ್ಣಿಸಲಾಗಿರುವುದು. ಏವಂಚ ಪರಸ್ಮೈಪದಾತ್ಮನೇಪದಗಳಿಗೆ ವ್ಯತ್ಯಯ ಬರುವುದು. ವ್ಯತ್ಯಯ ಪದವು ವಿ- ಅತಿ ಎಂಬ ಎರಡು ಉಪಸರ್ಗಪೂರ್ವಕವಾದ ಇಣ್‌ಗತೌ ಧಾತುವಿನ ಮುಂದೆ ಭಾವಾರ್ಥದಲ್ಲಿ ಣಿಚ್ ಪ್ರತ್ಯಯ ಬಂದು ಸಿದ್ಧವಾಗಿರುವುದು. ಅತಿಕ್ರಮಿಸಿಹೋಗುವಿಕೆ ಎಂದು ಇದರ ಅರ್ಥ. ಪ್ರಕೃತ ಪರಸ್ಮೈಪದವು ಬರುವ ಹಾಗೆ ನಿಮಿತ್ತವಿದ್ದರೆ ಅದನ್ನು ಅತಿಕ್ರಮಿಸಿ ಆತ್ಮನೇಪದವೂ ಆತ್ಮನೇಪದ ನಿಮಿತ್ತವಿದ್ದರೆ ಅದನ್ನು ಅತಿಕ್ರಮಿಸಿ ಪರಸ್ಮೈಪದವೂ, ಸಹ ಕೆಲವೆಡೆಯಲ್ಲಿ ಬರುವುದು ಎಂದು ಏರ್ಪಟ್ಟಿತು. ವನಧಾತುವು ಪರಸ್ಮೈಪದಿಯಾದರೂ ಅದನ್ನು ಅತಿಕ್ರಮಿಸಿ **ವ್ಯತ್ಯಯೋಬಹುಲಂ** (೩-೧-೮೫) ಎಂಬುದರಿಂದ ಆತ್ಮನೇಪದಬರುವುದು. **ತಿಙ್ಶಿತಿಜಃ** (ಪಾ. ಸೂ. ೮-೧-೭೮) ಎಂಬುದರಿಂದ ಸರ್ವಾನುದಾತ್ತ ॥ ೮ ॥

॥ ಸಂಹಿತಾಪಾಠಃ ॥

द्युविनोदाः पिपीषति जुहोत प्र च तिष्ठत ।
नेष्ट्राद्यृतुभिरिष्यत ॥ ९ ॥

। पदपाठः ।

द्रविणोदाः । पिपीषति । जुहोत । प्र । च । तिष्ठत ।
नेष्ट्रात् । ऋतुऽभिः । इष्यत ॥ ९ ॥

॥ सायणभाष्यं ॥

द्रविणोदा देव ऋतुभिः सह नेष्ट्रान्नेष्टृसंबन्धिपात्रात्पिपीषति । सोममं पातुमिच्छति । ततोऽ हे ऋत्विज इष्यत । होमस्थानं गच्छत । गत्वा च जुहोत । होमं कुरुत । हुत्वा प्र तिष्ठत च । होमस्थानात्स्थानान्तरं प्रति प्रस्थानमपि कुरुत ॥ द्रविणोदाः । गतं । पिपीषति । पा पाने । पातुमिच्छतीति सन् । धात्वादेस ईकारः । तिङ्ङतिङ इति निघातः । जुहोत । लोण्म्ध्यमबहुवचनं । तस्य लञ्वद्भावात्तादेशः । तस्य तप्तनप्तनथनाश्चेति तबादेशः । तस्य पित्त्वादुदात्तः । अभ्यस्तानामादिरित्युदात्तवत्त्वसुदात्तौ चे । पा. ६.१.१९० । इत्यभ्यादेरुदात्तत्वे प्राप्ते भेर्हिरेर्भृहुमदजनधनदरिद्राजागरां प्रत्ययोत्तरपूर्वं पित । पा. ६.१.१९१ । इत्योकारे उदात्तः । तिष्ठत । ष्ठा गतिनिवृत्तौ । लोण्म्ध्यमबहुवचनस्य थस्य लञ्वद्भावात्तादेशः । शपि पाघ्राध्मेत्यादिना तिष्ठादेशः । समवप्रविभ्यः स्थः । पा. १.३.२२ । इत्यात्मनेपदं न भवति । तत्रानुवृत्तस्य निर्दिश्यग्रहणस्यानंतर्यार्थत्वात् । अत्र चशब्देन व्यवधानात्पे प्राग्धातोः । पा. १.४.८० । इत्युपसर्गत्वेन प्राक्प्रयोक्तव्यस्यापि प्रशब्दस्य व्यवहितत्वाच्चेति भण्डसि व्यवहितस्यापि योगः । अत्र चशब्दो जुहोतेति पूर्वेण सह समुच्चयार्थः । न पुनरिष्यतेत्युत्तरेण । तेनाप्रथमत्वाच्चेत्वायोगे प्रथमा । पा. ६.१.१९८ । इति निसेधाभावात्तिङ्ङतिङ इति निघातः । नेष्ट्रात् । पोत्रादेर्यज्ञं पुनीतेति । ऋग्वे १.१४.३। इत्यत्र पोत्रशब्देन यदुक्तं तदत्र द्रष्टव्यं । इष्यत । इष गतौ । लोण्म्ध्यमबहुवचनं ॥

॥ प्रतिपदार्थ ॥

द्रविणोदाः—धनप्रदनाद अग्नियु। ऋतुभिः—ऋतुदेवतेगळोंदिगे। नेष्ट्रात्—नेष्टृविन पात्रेयिंद । पिपीषति—(सोमरसवन्नु) पानमाडलिच्छिसुत्तानॆ. (अद्दरिंद ऎल्लॆ ऋत्विक्कुगळॆ) । इष्यत—(यज्ञस्थानक्कॆ) नडयिरि. । जुहोत--होमवमाडि (अनंतर)। प्रतिष्ठत—होमस्थानवन्नु बिट्टु निम्म स्वस्थानगळिगॆ तॆरळिरि.

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ಧನಪ್ರದನಾದ ಮತ್ತು ದೇವತಾತ್ಮನಾದ ಅಗ್ನಿಯು ನೇಷ್ಟೃವಿನ ಪಾತ್ರೆಯಿಂದ ಸೋಮರಸಪಾನಮಾಡಲು ಅಪೇಕ್ಷಿಸುತ್ತಾನೆ. ಆದುದರಿಂದ ನೀವೆಲ್ಲ ಯಜ್ಞಸ್ಥಾನಕ್ಕೆ ಬಂದು ಹೋಮ ಮಾಡಿ ನಂತರ ಹೊರಡಿರಿ.

English Translation

Dravinodas desires to drink with the Ritu's from the cup of Neshtri; hasten, priests, present the oblation and depart.

॥ ವಿಶೇಷವಿಷಯಗಳು ॥

ಪಿಪೀಷತಿ—ಪಾ ಪಾನೇ । ಪಾತುಮಿಚ್ಛತಿ । ಪಾನಮಾಡಬೇಕೆಂದು ಅಪೇಕ್ಷಿಸುತ್ತಾನೆ.

ನೇಷ್ಟ್ರಾತ್—ನೇಷ್ಟೃವೆಂಬ ಋತ್ವಿಜನ ಹಸ್ತದಲ್ಲಿರುವ ಪಾತ್ರೆಯಿಂದ ಸೋಮರಸವನ್ನು.

॥ ವ್ಯಾಕರಣಪ್ರಕ್ರಿಯಾ ॥

ದ್ರವಿಣೋದಾಃ—ಏಳನೇ ಮಂತ್ರದಲ್ಲಿ ವ್ಯಾಖ್ಯಾತವಾಗಿರುವುದು.

ಪಿಪೀಷತಿ—ಪಾ ಪಾನೇ ಧಾತು. ಪಾತುಮಿಚ್ಛತಿ, ಎಂದು ವಿಗ್ರಹ. **ಧಾತೋಃ ಕರ್ಮಣಸ್ಸಮಾನ-ಕರ್ತೃಕಾದಿಚ್ಛಾಯಾಂವಾ** (ಪಾ.ಸೂ. ೩-೧-೭) ಇಷು ಇಚ್ಛಾಯಾಂ ಧಾತು, ಈ ಇಷುಧಾತು ಸಮಾನಕರ್ತೃಕವೂ, ಈ ಇಷುಧಾತುನಿರೂಪಿತಕರ್ಮವಾಚಕವೂ ಆದ ಯಾವ ವ್ಯಾಪಾರವಿದೆಯೋ ಆ ವ್ಯಾಪಾರವಾಚಕವಾದ ಧಾತುವಿನ ಮುಂದೆ ಇಚ್ಛಾರ್ಥದಲ್ಲಿ ಸನ್ ಪ್ರತ್ಯಯ ಬರುವುದು ಎಂದು ಸೂತ್ರಾರ್ಥ. ಇಲ್ಲಿ ಇಚ್ಛಿಸುವವನು ಅಗ್ನಿ. ಈ ಅಗ್ನಿಯು ಇಷು ಧಾತುವಿಗೆ ಕರ್ತೃವು. ಇದೇ ಅಗ್ನಿಯೇ ಪಾ ಧಾತ್ವರ್ಥವಾದ ಗಳಬಿಲಾಧಸ್ಸಂಯೋಗಾನುಕೂಲ ವ್ಯಾಪಾರದಲ್ಲಿಯೂ ಕರ್ತೃವು. ಈ ರೀತಿ ಪಾಧಾತ್ವರ್ಥ ವ್ಯಾಪಾರಕ್ಕೆ ಇಚ್ಛಾಸಮಾನ್ಯ ಕರ್ತೃಕತ್ವವು ಇರುವುದು. ಈ ವ್ಯಾಪಾರವು ಇಷು ಧಾತುವಿಗೆ ಕರ್ಮವೂ ಆಗಿರುವುದು. ಆದ್ದರಿಂದ ಇಂತಹ ವ್ಯಾಪಾರವಾಚಕವಾದ ಪಾ ಧಾತುವಿನ ಮುಂದೆ ಇಚ್ಛಾರ್ಥದಲ್ಲಿ ಸನ್ ಬರುವುದು ಪಾ+ಸ, **ಸನ್ಯಙೋಃ**, (ಪಾ. ಸೂ. ೬-೧-೯) ಎಂಬುದರಿಂದ ದ್ವಿತ್ವ ಪಾ ಪಾ+ಸ, **ಹ್ರಸ್ವಸ್ಯ**ಃ, (ಪಾ. ಸೂ. ೭-೪-೫೯) ಎಂಬುದರಿಂದ ಅಭ್ಯಾಸಕ್ಕೆ ಹ್ರಸ್ವ **ಸನ್ಯತಃ**. (ಪಾ ಸೂ. ೭-೪-೭೯) ಎಂಬುದರಿಂದ ಅಭ್ಯಾಸದ ಅಕಾರಕ್ಕೆ ಇತ್ವ, ಪಿಪಾಸತಿ ಎಂದಾಗುವುದು. ಈಗ ಅಕಾರಕ್ಕೆ ಧಾಂದಸವಾಗಿ ಈತ್ವ ಬರುವುದು. **ಆದೇಶಪ್ರತ್ಯಯಯೋಃ**. (ಪಾ. ಸೂ. ೮-೩-೫೯) ಎಂಬುದರಿಂದ ಸಕಾರಕ್ಕೆ ಷತ್ವ ಪಿಪೀಷತಿ ಎಂದು ಸಿದ್ಧವಾಗುವುದು. **ತಿಙ್ಶಿತಿಙಃ** (೮-೧೩-೭೮) ಎಂಬುದರಿಂದ ಸರ್ವಾನುದಾತ್ತ ಬರುವುದು.

ಜುಹೋತ—ಹು ದಾನಾದನಯೋಃ ಜುಹೋತ್ಯಾದಿ ಧಾತು, ಲೋಟ್, ಮಧ್ಯಮಪುರುಷ ಬಹುವಚನ ಥ ಆದೇಶ, **ಲೋಟೋ ಲಙ್ವತ್** (ಪಾ. ಸೂ. ೩-೪-೮೫) ಎಂಬುದರಿಂದ ಲಙ್ವದ್ಭಾವವಿರುವುದು, ಆದ್ದರಿಂದ

ತಸ್ಥಸ್ಥಮಿಪಾಂ ತಾಂ ತಂ ತಾಮಃ (ಪಾ. ಸೂ. ೩-೪-೧೦೧) ಎಂಬುದರಿಂದ ಥ ಗೆ ತ ಆದೇಶ. ಇದಕ್ಕೆ **ತಪ್ತನಪ್ತನಥನಾಶ್ಚ** (ಪಾ.ಸೂ. ೭-೧-೪೫) ಎಂಬುದರಿಂದ ತಪ್ ಆದೇಶ. ಕರ್ತರಿ ಶಪ್ ಎಂಬುದರಿಂದ ಶಪ್ ವಿಕರಣ, ಆದಕ್ಕೆ **ಜುಹೋತ್ಯಾದಿಭ್ಯಃ ಶ್ಲುಃ** (ಪಾ.ಸೂ. ೨-೪-೭೫) ಎಂಬುದರಿಂದ ಶ್ಲು (ಲೋಪ) ಶ್ಲೌ (ಪಾ.ಸೂ. ೬-೧-೧೦) ಎಂಬುದರಿಂದ ಧಾತುವಿಗೆ ದ್ವಿತ್ವ ಹು-ಹು+ತ ಕುಹೋಶ್ಚುಃ (ಪಾ. ಸೂ. ೭-೪-೬೨) ಘೋಷ, ಸಂವಾರನಾದ ಮಹಾಪ್ರಾಣಪ್ರಯತ್ನಕವಾದ ಹಕಾರಕ್ಕೆ ಇಂತಹ ಝಕಾರ, **ಅಭ್ಯಾಸೇಚರ್ಚೆ** (ಪಾ. ಸೂ. ೮-೪-೬೪) ಎಂಬುದರಿಂದ ಝಕಾರಕ್ಕೆ ಜಕಾರ ಜು-ಹು+ತ, ತಬಾದೇಶವು ಪಿತ್ತು. ಆದ್ದರಿಂದ **ಸಾರ್ವಧಾತುಕಮಪಿತ್** (ಪಾ. ಸೂ. ೧-೩-೪) ಎಂಬುದರಿಂದ ಙಿತ್ವಾಗುವುದಿಲ್ಲ. **ಕ್ಙಿತಿಚ** (ಪಾ.ಸೂ. ೧-೧-೫) ಎಂಬುದರಿಂದ ಗುಣನಿಷೇಧಬರುವುದಿಲ್ಲ. **ಸಾರ್ವಧಾತುಕಾರ್ಧಧಾತುಕಯೋಃ**, (ಪಾ. ಸೂ. ೭-೩-೮೪) ಎಂಬುದರಿಂದ ಗುಣ. ಜುಹೋತ ಎಂದಾಗುವುದು. ತ ಎಂಬ ಲಸ್ಥಾನಿಕವಾದ ಸಾರ್ವಧಾತುಕವು ಪಿತ್ತಾದ್ದರಿಂದ **ಅನುದಾತ್ತೌಸುಪ್ಪಿತೌ** (ಪಾ.ಸೂ. ೩-೧-೪) ಎಂಬುದರಿಂದ ಅನುದಾತ್ತ. **ಅನುದಾತ್ತೇಚ** (ಪಾ.ಸೂ. ೬-೧-೧೯೦) **ಅಭ್ಯಸ್ತಾನಾಮಾದಿಃ**, (ಪಾ.ಸೂ. ೬-೧-೧೯೯) ಎಂಬ ಸೂತ್ರವು ಇಲ್ಲಿ ಅನುವೃತ್ತವಾಗುವುದು. ನ ವಿದ್ಯತೇ ಉದಾತ್ತಃ ಯಸ್ಮಿನ್ ಸಃ, ಅನುದಾತ್ತಃ, ತಸ್ಮಿನ್ ಅನುದಾತ್ತೇ ಎಂದು ವಿಗ್ರಹ, ಯಾವ ಲಕಾರಸ್ಥಾನದಲ್ಲಿ ಬಂದ ಸಾರ್ವಧಾತುಕಪ್ರತ್ಯಯದಲ್ಲಿ ಉದಾತ್ತವಿರುವುದಿಲ್ಲವೋ ಅಂತಹ ಸಾರ್ವಧಾತುಕವು ಪರದಲ್ಲಿದ್ದರೆ ಅಭ್ಯಸ್ತದ ಆದಿಯು ಉದಾತ್ತವಾಗುವುದು ಎಂಬುದರಿಂದ ಆದ್ಯುದಾತ್ತವು ಪ್ರಾಪ್ತವಾಗುವುದು, ಆದರೆ ಇದನ್ನು ಬಾಧಿಸಿ **ಭೀಹ್ರೀ, ಭೃ ಹು ಮದ ಜನ ಧನ ದರಿದ್ರಾ ಜಾಗರಾಂ ಪ್ರತ್ಯಯೋತ್ಪೂರ್ವಂ ಪಿತಿ** (ಪಾ. ಸೂ. ೬-೧-೧೯೨) ಇಂಭೀ ಭಯೇ, ಹ್ರೀ ಲಜ್ಜಾಯಾಂ, ಡುಭೃಞ್ ಧಾರಣಪೋಷಣಯೋಃ, ಹು ದಾನಾದನಯೋಃ, ಮದೀ ಹರ್ಷೇ ಇದು ದಿವಾದಿಯಾದರೂ ಭಾಂದಸಪ್ರಕ್ರಿಯೆಯಿಂದ ಶಪ್‌ಗೆ ಶ್ಲು ಬರುವುದು. ಜನ ಜನನೇ, ಧನ ಧಾನ್ಯೇ, ದರಿದ್ರಾ ದುರ್ಗತೌ, ಜಾಗೃ ನಿದ್ರಾಕ್ಷಯೇ. ದರಿದ್ರಾ, ಜಾಗೃ ಧಾತುಗಳಿಗೆ **ಜಕ್ಷಿತ್ಯಾದಯಃ ಷಟ್** (ಪಾ. ಸೂ. ೬-೧೬) ಜಕ್ಷ ಧಾತು ಆದರ ಮುಂದಿರುವ ಆರು ಧಾತುಗಳೂ ಸಹ ಅಭ್ಯಸ್ತಸಂಜ್ಞೆಯನ್ನು ಹೊಂದುವುವು ಎಂಬುದರಿಂದ ಅಭ್ಯಸ್ತಸಂಜ್ಞೆ ಇರುವುದು, ಮಿಕ್ಕವುಗಳಿಗೆ **ಉಭೇ ಅಭ್ಯಸ್ತಂ** (ಪಾ.ಸೂ. ೬-೧-೫) ಎಂಬುದರಿಂದ ಅಭ್ಯಸ್ತ ಸಂಜ್ಞೆ ಇರುವುದು, ಅಭ್ಯಸ್ತಸಂಜ್ಞೆಯನ್ನು ಹೊಂದಿರುವ ಭೀ ಮೊದಲಾದ ಧಾತುಗಳಿಗೆ ಹಕಾರೇತ್ಸಂಜ್ಞಕವಾದ ಲಸ್ಥಾನಿಕಸಾರ್ವಧಾತುಕವು ಪರದಲ್ಲಿದ್ದರೆ ಪ್ರತ್ಯಯದ ಹಿಂದೆ ಇರುವ ವರ್ಣವು ಉದಾತ್ತವಾಗುವುದು ಎಂಬುದರಿಂದ, ತ ಪ್ರತ್ಯಯದ ಹಿಂದಿರುವ ಓಕಾರವು ಉದಾತ್ತವಾಗುವುದು.

ತಿಷ್ಠತ— ಷ್ಠಾ ಗತಿನಿವೃತ್ತೌ ಧಾತು. **ಧಾತ್ವಾದೇಃ ಷಃ ಸಃ** (ಪಾ.ಸೂ. ೬-೧-೬೪) ಎಂಬುದರಿಂದ ಷಕಾರಕ್ಕೆ ಸಕಾರ. ಷ್ಟುತ್ವನಿಂದ ಬಂದ ಠಕಾರಕ್ಕೆ ನಿವೃತ್ತಿ ಸ್ಥಾ ಎಂದಿರುವುದು. ಇದರ ಮುಂದೆ ಲೋಟ್ ಮಧ್ಯಮ ಪುರುಷ ಬಹುವಚನ, ಥ-ಸ್ಥಾ+ಥ **ಲೋಟೋಲಙ್ವಿತ್** (ಪಾ. ಸೂ. ೩-೪-೪೫) ಎಂಬುದರಿಂದ ಲಙ್ವದ್ಭಾವ. **ತಸ್ಥಸ್ಥಮಿಪಾಂತಾಂತಂತಾಮಃ** (ಪಾ. ಸೂ. ೩-೪-೧೦೧) ಎಂಬುದರಿಂದ ಥ ಗೆ ತ ಆದೇಶ, **ಕರ್ತರಿಶಪ್** (ಪಾ.ಸೂ. ೩-೧-೬೮) ಎಂಬುದರಿಂದ ಶಪ್+ಸ್ಥಾ+ಅ+ತ **ಸಾಹ್ವೌಧ್ಮ್ಮಾ—**, (ಪಾ.ಸೂ. ೬-೩-೭೮) ಇತ್ಯಾದಿ ಸೂತ್ರದಿಂದ ಸ್ಥಾಗೆ **ತಿಷ್ಠಾದೇಶ ತಿಷ್ಠತ** ಎಂದಾಗುವುದು, **ಸಮವಪ್ರವಿಭ್ಯಸ್ಥಃ** (ಪಾ.ಸೂ. ೧-೩-೨೨) ಸಂ ಅವ, ಪ್ರ, ವಿ, ಈ ಉಪಸರ್ಗಗಳ ಮುಂದೆ ಇರುವ ಸ್ಥಾ ಧಾತುವಿನ ಮುಂದೆ ಇರುವ ಲಕಾರಸ್ಥಾನದಲ್ಲಿ ಆತ್ಮನೇಪದ ಬರುವುದು ಎಂಬುದರಿಂದ ಇಲ್ಲಿ ಉಪಸರ್ಗವಿದ್ದರೂ ಆತ್ಮನೇಪದ ಬರುವುದಿಲ್ಲ. ಏಕೆಂದರೆ ಇಲ್ಲಿ ಸಮವಪ್ರವಿಭ್ಯಃ ಎಂದು ಪಂಚಮೀ ನಿರ್ದೇಶವಿರುವುದು. ಆದ್ದರಿಂದ **ತಸ್ಮಾದಿತ್ಯುತ್ತರಸ್ಯ** (ಪಾ. ಸೂ.೧-೧-೬೭)

ಕಾರ್ಯವಿಧಾಯಕಶಾಸ್ತ್ರದಲ್ಲಿ ಪಂಚಮ್ಯಂತವನ್ನು ಉಚ್ಚರಿಸಿ ವಿಧಿಸುವ ಕಾರ್ಯವು ಅವ್ಯವಹಿತಪರದಲ್ಲಿರುವುದಕ್ಕೆ ಬರುವುದು ಎಂದು ಈ ಪರಿಭಾಷೆಯ ಅರ್ಥ. ಈ ಪರಿಭಾಷೆಯು ಸವರ್ನಾದಿ ಉಪಸರ್ಗಗಳಿಗೆ ಅವ್ಯವಹಿತಪರದಲ್ಲಿ ಸ್ಥಾಧಾತುವಿದ್ದರೆ ಆತ್ಮನೇ ಪದವನ್ನು ವಿಧಿಸುವುದು. ಇಲ್ಲಿ ಪ್ರ ಚ ತಿಷ್ಠತ ಎಂದು ಮಧ್ಯೇ ಚ ಶಬ್ದದಿಂದ ವ್ಯವಧಾನವಿರುವುದು. ಆದ್ದರಿಂದ ಆತ್ಮನೇಪದ ಬರುವುದಿಲ್ಲ.

ಪ್ರ—ಎಂಬುದು ಉಪಸರ್ಗ. ಆದ್ದರಿಂದ **ತೇಸ್ಪ್ರಾಗ್ಧಾತೋಃ** (ಪಾ.ಸೂ. ೧-೪-೮೦) ಗತ್ಯುಪಸರ್ಗಗಳನ್ನು ಧಾತುವಿನ ಅವ್ಯವಹಿತ ಪೂರ್ವದಲ್ಲಿ ಪ್ರಯೋಗಿಸಬೇಕು ಎಂಬುದರಿಂದ, ಧಾತುವಿಗೆ ಅವ್ಯವಹಿತಪೂರ್ವದಲ್ಲಿಯೇ ಯದ್ಯಪಿ ಪ್ರವು ಪ್ರಯುಕ್ತವಾಗಬೇಕು. ಆದರೂ **ವ್ಯವಹಿತಾಶ್ಚ** (ಪಾ.ಸೂ. ೧-೪-೮೨) ಛಂದಸ್ಸಿನಲ್ಲಿ ವ್ಯವಹಿತವಾಗಿಯೂ ಗತ್ಯುಪಸರ್ಗಗಳಿಗೆ ಪ್ರಯೋಗ ಬರುವುದು ಎಂಬುದರಿಂದ ಇಲ್ಲಿ ವ್ಯವಹಿತವಾಗಿ ಪ್ರವು ಪ್ರಯುಕ್ತವಾಗಿರುವುದು. ಇಲ್ಲಿ ಚಶಬ್ದವು ಜುಹೋತ, ಪ್ರತಿಷ್ಠಿತ ಚ, ಹೋಮಮಾಡಿರಿ, ಹೋಮಮಾಡಿ ಸ್ಥಾನಾಂತರಕ್ಕೂ ಹೋಗಿ ಎಂದು ಪೂರ್ವಕ್ರಿಯೆಯೊಂದಿಗೆಸಮುಚ್ಚಯವನ್ನು ಬೋಧಿಸುವುದು. ಇಷ್ಯತ ಎಂಬುದರೊಂದಿಗೆ ಅನ್ವಯಿಸಿ ಪ್ರತಿಷ್ಠಿತ, ಇಷ್ಯತ ಚ ಎಂದು ಸಮುಚ್ಚಯವನ್ನು ಬೋಧಿಸುವುದಿಲ್ಲ. ಆದ್ದರಿಂದ ಚಶಬ್ದಾನ್ವಿತಕ್ರಿಯೆಯನ್ನು ಅಪೇಕ್ಷಿಸಿ ತಿಷ್ಠತ ಎಂಬುದು ಪ್ರಥಮಶ್ರವಣಭಕ್ತಿಯಾಗುವುದಿಲ್ಲ. ಏವಂಚ **ಚೇವಾಯೋಗೇ ಪ್ರೈಥಮಾ** (ಪಾ. ಸೂ. ೮-೧-೫೯) ಚ ವಾ ಶಬ್ದದಿಂದ ಯೋಗವಿದ್ದರೆ ಮೊದಲನೆಯ ತಿಙಂತವು ಅನುದಾತ್ತವಾಗುವುದಿಲ್ಲ ಎಂಬುದರಿಂದ ಅನುದಾತ್ತಕ್ಕೆ ನಿಷೇಧಬರುವುದಿಲ್ಲ. **ತಿಙ್ಙತಿಙಃ** ಎಂಬುದರಿಂದ ಸರ್ವಾನುದಾತ್ತ ಬರುವುದು.

ನೇಷ್ಪ್ರಾತ್—**ಪೋತ್ರಾದ್ಯಜ್ಞಂ ಪುನೀತನೆ** (ಋ. ಸಂ. ೧-೧-೧೫-೨) ಎಂಬ ಮಂತ್ರದಲ್ಲಿ ಪೋತ್ರ ಶಬ್ದಕ್ಕೆ ಹೇಳಿರುವಂತೆ ಇಲ್ಲಿಯೂ ಪ್ರಕ್ರಿಯೆಯನ್ನು ಹೇಳಿಕೊಳ್ಳಬೇಕು.

ಇಷ್ಯತೆ—ಇಷ ಗತೌ ದಿವಾದಿ, ಲೋಟ್‌ಮಧ್ಯಮಪುರುಷಬಹುವಚನ ಥ ಆದೇಶ. **ಲೋಟೋಲಙ್ವತ್** (ಪಾ. ಸೂ. ೩-೪-೮೫) ಎಂಬುದರಿಂದ ಲಙ್ವದ್ಭಾವ **ತಸ್ಥಸ್ಥಮಿಪಾಂತಾಂತಂತಾಮಃ** (ಪಾ. ಸೂ. ೩-೪-೧೦೧) ಎಂಬುದರಿಂದ ಥಗೆ ತ ಆದೇಶ ದಿವಾದಿಭ್ಯಃಶ್ಯನ್ ಎಂಬುದರಿಂದ ಶ್ಯನ್ ವಿಕರಣ. ಇಷ್ಯತ ಎಂದಾಗುವುದು. **ತಿಙ್ಙತಿಙಃ** (ಪಾ.ಸೂ. ೮-೧-೨೮) ಎಂಬುದರಿಂದ ಸರ್ವಾನುದಾತ್ತ ಬರುವುದು ॥ ೯ ॥

। ಸಂಹಿತಾಪಾಠಃ ।

ಯತ್ತ್ವಾ ತುರೀಯಮೃತುಭಿರ್ದ್ರವಿಣೋದ್ದೋ ಯಜಾಮಹೇ ।
ಅಧ ಸ್ಮಾ ನೋ ದದಿರ್ಭವ ॥ ೧೦ ॥

। ಪದಪಾಠಃ ।

ಯತ್ । ತ್ವಾ । ತುರೀಯಂ । ಋತುಽಭಿಃ । ದ್ರವಿಣಃ ಽದಃ । ಯಜಾಮಹೇ ।
ಅಧ । ಸ್ಮ । ನಃ । ದದಿಃ । ಭವ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ದ್ರವಿಣೋದೋ ದೇವ ಯದ್ಯಸ್ಮಾತ್ಕಾರಣಾದೃತುಭಿಃ ಸಹ ತ್ವಾಂ ಯಜಾಮಹೇ । ಅಧೇ-ತ್ಯಯಂ ನಿಪಾತಸ್ತೃಚ್ಪ್ರಾರ್ಥಃ । ತಸ್ಮಾತ್ಕಾರಣಾನ್ನೋಽಸ್ಮಭ್ಯಂ ದದಿರ್ಧನಸ್ಯ ದಾತಾ ಭವ ಸ್ಮ । ಅವಶ್ಯಂ ಭವ । ತುರೀಯಂ ಚತುರ್ಣಾಂ ಪೂರಣಂ ॥ ತುರೀಯಂ । ಚತುರಶ್ಚಯತಾವಾದ್ಯಕ್ಷರಲೋಪಶ್ಚ । ಪಾ. ೫-೨-೫೧-೧ । ಇತಿ ಛಪ್ರತ್ಯಯಃ । ತಸ್ಯ ಪ್ರತ್ಯಯಸ್ಥರೇಫೋದಾತ್ತಾತ್ಪ್ರಾಗೇವಾಯನೇಯೀನಿ-ತ್ಯಾದಿನಾ । ಪಾ- ೭-೧-೨ । ಈಯಾದೇಶಃ । ಆಯನಾದಿಷೂಪದೇಶಿವದ್ವಚನಂ ಸ್ವರಸಿದ್ಧ್ಯರ್ಥಂ । ಪಾ. ೭-೧-೨-೧ । ಇತಿ ವಚನಾತ್ಕೃತ ಆದೇಶೇ ಪ್ರತ್ಯಯಸ್ಥರೇಫೋಕಾರ ಉದಾತ್ತಃ । ದ್ರವಿಣೋದಃ । ಉಕ್ತಂ । ಸಾದಾದಿತ್ವಾದಾಮಂತ್ರಿತಾದ್ಯುದಾತ್ತತ್ವಂ । ಯಜಾಮಹೇ । ಅತ್ರ ತಪಃ ಪಿತ್ತ್ವೇನ ತಿಙಶ್ಚ ಲಸಾರ್ವಧಾತುಕಸ್ವರೇಣ ಧಾತುಸ್ವರ ಏವ । ಪೂರ್ವಸ್ಯಾಮಂತ್ರಿತಸ್ಯಾವಿದ್ಯಮಾನವತ್ತ್ವಾದ್ಯೆದ್ಯೈತ್ತ-ಯೋರ್ಗಾದ್ಯಾ ನ ನಿಘಾತಃ । ವ್ಯವಹಿತಯೋರ್ಗೇರಪಿ ಹಿ ಸ ನಿಷೇಧ ಇತ್ಯುಕ್ತಂ । ಅಧ । ಛಾಂದಸೋ ಧ-ಕಾರಃ । ಸ್ಮ । ಚಾದಿರನುದಾತ್ತಃ । ಸಂಹಿತಾಯಾಂ ನಿಪಾತಸ್ಯ ಚೇತಿ ದೀರ್ಘಃ । ದದಿಃ । ಡುದಾಞ್-ದಾನೇ । ಆದೃಗಮಹನಜನಃ ಕಿಕಿನೌ ಲಿಟ್ ಚ ।ಪಾ. ೩-೨-೧೭೧ । ಇತಿ ಕಿಪ್ರತ್ಯಯಃ । ಲಿಡ್ವದ್ಭಾವಾ-ದ್ದ್ವಿರ್ವಚನಾದಿ । ಅತೋ ಲೋಪ ಇಟಿ ಚ । ಪಾ. ೬-೪-೯೪ । ಇತ್ಯಾಕಾರಲೋಪಃ । ಪ್ರತ್ಯಯಸ್ಥರಃ ॥

॥ ಪ್ರತಿಪದಾರ್ಥ ॥

ದ್ರವಿಣೋದಃ—ಎಲೈ ಧನಪ್ರದನಾದ ಅಗ್ನಿಯೇ । ಯತ್—ಯಾವಕಾರಣದಿಂದ । ಋತುಭಿಃ—ಋತುದೇವತೆಗಳೊಂದಿಗೆ । ತುರೀಯಂ—ನಾಲ್ಕನೆಯ ಸಲ । ತ್ವಾ—ನಿನ್ನನ್ನು । ಯಜಾಮಹೇ—ಪೂಜಿಸು ತ್ತೇವೋ । ಅಧ—ಆದ್ದರಿಂದ । ನಃ—ನಮಗೆ। ದದಿಃ—ಧನಪ್ರದನಾಗಿ । ಭವ ಸ್ಮ—ಖಂಡಿತವಾಗಿಯೂ ಆಗು.

॥ ಭಾವಾರ್ಥ ॥

ಎಲೈ ಅಗ್ನಿಯೇ ನಾವು ಧನಾಕಾಂಕ್ಷಿಗಳಾಗಿ ಋತುದೇವತೆಗಳೊಂದಿಗೆ ನಾಲ್ಕನೆಯವನಾದ ನಿನ್ನನ್ನು ಪೂಜಿಸುತ್ತಿದ್ದೇವೆ. ಆದುದರಿಂದ ನೀನು ಖಂಡಿತ ನಮ್ಮ ಪೂಜೆಯನ್ನು ಸ್ವೀಕರಿಸಿ ಧನಪ್ರದನಾಗು.

English Translation.

Dravinodas, Since we adore you for the fourth time along with the Ritus; therefore be a giver (of riches) to us.

॥ ವಿಶೇಷ ವಿಷಯಗಳು ॥

ತುರೀಯಂ—ನಾಲ್ಕನೆಯ ಸಲ. ಈ ಸೂಕ್ತದಲ್ಲಿ ದ್ರವಿಣೋದಾ ಎಂಬ ಅಗ್ನಿಯನ್ನು ಸ್ತುತಿಸುವ ಋಕ್ಕುಗಳು ನಾಲ್ಕು ಇವೆ (೭ ರಿಂದ ೧೦ ವರೆಗಿನ ಋಕ್ಕುಗಳು) ಅವುಗಳಲ್ಲಿ ಇದು ನಾಲ್ಕನೆಯದು. ಆದುದ ರಿಂದ ಇಲ್ಲಿ ತುರೀಯಂ ಎಂದರೆ ನಾಲ್ಕನೆಯ ಸಲ ಅಥವಾ ನಾಲ್ಕನೆಯ ಋಕ್ಕಿನಿಂದ ಸ್ತುತಿಸುತ್ತೇವೆ ಎಂಅರ್ಥವು,

॥ ವ್ಯಾಕರಣಪ್ರಕ್ರಿಯಾ ॥

ತುರೀಯೇಂ— ಚತುರ್ಣಾಂ ಪೂರಣಂ, ಎಂದು ವಿಗ್ರಹ. **ಚತುರಶ್ಚಯುತಾವಾದ್ಯೆಷ್ಟರಲೋಪಶ್ಚ** (ಪಾ. ಸೂ. ೫-೩-೫೧) ಪೂರಣಾರ್ಥದಲ್ಲಿ ಚುತುರ್ ಶಬ್ದದ ಮುಂದೆ ಪರ್ಯಾಯದಿಂದ ಛ-ಯತ್ ಪ್ರತ್ಯಯಗಳು ಬರುವುವು, ಅಲ್ಲದೆ ಮೊದಲನೆಯ ಅಕ್ಷರಕ್ಕೆ ಲೋಪವೂ ಬರುವುದು ಎಂಬುದರಿಂದ ಚತುರ್ ಶಬ್ದದ ಮುಂದೆ ಛ ಪ್ರತ್ಯಯ ಚತುರ್+ಛ ಈ ವಾರ್ತಿಕದಿಂದಲೇ ಆದ್ಯಕ್ಷರಕ್ಕೆ ಲೋಪ, ಅಕ್ಷರವೆಂದರೆ ಅಚ್ ಸಹಿತವಾದ ಮೊದಲನೆಯ ವ್ಯಂಜನ, ವ್ಯಂಜನಸಹಿತವಾದ ಆದಿಭೂತವಾದ ಅಚ್ಚು ಎಂದು ಅರ್ಥಹೇಳಬಾರದು. ಹೀಗೆ ಅರ್ಥವನ್ನು ಹೇಳದರೆ 'ನಟಭಾರ್ಯಾವದ್ವ್ಯಂಜನಾನ್ಯಭವನ್ತಿ' ಎಂಬ ನ್ಯಾಯದಿಂದ ಪೂರ್ವಪರಗಳಲ್ಲಿರುವ ವ್ಯಂಜನಸಹಿತವಾದ ಆದಿಭೂತವಾದ ಅಚ್ಚು ಎಂದು ಅರ್ಥವೇರ್ಪಡುವುದು. ಆಗ ಚತುರ್ ಎಂಬಲ್ಲಿ ಚತ್‌ಗೆ ಲೋಪಬರಬೇಕಾಗುವುದು. ಆದ್ದರಿಂದ ಅಚ್ ಸಹಿತವಾದ ಮೊದಲನೆಯ ವ್ಯಂಜನವೆಂದೇ ಆದ್ಯಕ್ಷರ ಎಂಬುದಕ್ಕೆ ಅರ್ಥ. ಏನಂಚ ಚ ಶಬ್ದಕ್ಕೆ ಲೋಪ. ತುರ್+ಛ **ಆಯೆನ್ನಾದಿಷೂಪದೇಶಿವದ್ವಚನಂಸ್ವರಸಿದ್ಧ್ಯರ್ಥಮ್** (ಪಾ. ಮ. ೭-೧-೩-೧) ಎಂದು ಆದ್ಯುದಾತ್ತಶ್ಚ ಎಂಬುದರಿಂದ ಆದ್ಯುದಾತ್ತ ಬರುವುದಕ್ಕಿಂತಲೂ ಮುಂಚೆಯೇ **ಆಯೆ-ನೇಯೀಯಾ** (ಪಾ. ಸೂ. ೭-೧-೨) ಎಂಬುದರಿಂದ ಛ ಪ್ರತ್ಯಯಕ್ಕೆ ಈಯಾದೇಶ, ಈ ಆದೇಶ ಬಂದಮೇಲೆ ಪ್ರತ್ಯಯಸ್ವರದಿಂದ ಈಯ ಎಂಬುದರ ಈಕಾರವು ಉದಾತ್ತವಾಗುವುದು.

ದ್ರವಿಣೋದಃ— ೭ನೇ ಮಂತ್ರದಲ್ಲಿ ಇದರ ಪ್ರಕ್ರಿಯೆಯು ಉಪಪಾದಿತವಾಗಿರುವುದು. ಇಲ್ಲಿ ದ್ರವಿ-ಣೋದಃ ಎಂಬುದು ಸಂಬೋಧನ ಪ್ರಥಮೈಕವಚನಾಂತ. ಆದ್ದರಿಂದ ಆಮನ್ತ್ರಿತ. ಇದು ಪಾದದ ಆದಿಯ-ಲ್ಲಿರುವುದರಿಂದ **ಆಮನ್ತ್ರಿತಸ್ಯಚ** (ಪಾ. ಸೂ. ೮-೧-೧೯) ಎಂಬುದರಿಂದ ಅನುದಾತ್ತ ಬರುವುದಿಲ್ಲ. ಆರನೇ ಅಧ್ಯಾಯದ **ಆಮನ್ತ್ರಿತಸ್ಯಚ** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತ ಬರುವುದು.

ಯಜಾಮಹೇ — ಯಜದೇವಪೂಜಾದೌ, ಲಟ್. ಆತ್ಮನೇಪದ ಉತ್ತಮಪುರುಷಬಹುವಚನ ಮಹಿಙ್ ಕರ್ತರಿಶಪ್ (ಪಾ ಸೂ. ೩-೧-೬೮) ಯಜ್+ಅ+ಮಹಿ. ಟಿತ ಆತ್ಮನೇ ಪದಾನಾಂಟೇರೇ (ಪಾ.ಸೂ. ೩-೪-೭೮) ಎಂಬುದರಿಂದ ಟಿಗೆ ಏತ್ವ. ಅತೋದೀರ್ಘೋಯಞಿ (ಪಾ. ಸೂ. ೭-೩-೧೦೧) ಎಂಬುದರಿಂದ ದೀರ್ಘ, ಯಜಾಮಹೇ ಎಂದಾಗುವುದು. ಇಲ್ಲಿ ಶಪ್ ಪಿತ್, ಆದ್ದರಿಂದ **ಅನುದಾತ್ತೌಸುಪ್ಪಿತೌ** (ಪಾ. ಸೂ. ೩೧೪) ಎಂಬುದರಿಂದ ಅನುದಾತ್ತ. ಮಹೇ ಎಂಬ ಲಸ್ಥಾನಿಕವಾದ ಸಾರ್ವಧಾತುಕವು ಶಪ್ ಎಂಬ ಅದುಪದೇಶದ ಮುಂದೆ ಇರುವುದು. ಆದ್ದರಿಂದ **ತಾಸ್ಯನುದಾತ್ತೇತ್**-(ಪಾ. ಸೂ. ೬-೧-೧೮೬) ಎಂಬುದರಿಂದ ಅನುದಾತ್ತ. ಏವಂಚ ಧಾತುಸ್ವರವೇ ನಿಲ್ಲುವುದು, **ದ್ರವಿಣೋದಃ** ಎಂಬ ಪೂರ್ವಮಂತ್ರಿತವು **ಆಮನ್ತ್ರಿತಂ ಪೂರ್ವ-ಮವಿದ್ಯಮಾನವತ್** (ಪಾ. ಸೂ. ೮-೧-೭೨) ಎಂಬುದರಿಂದ ಅವಿದ್ಯಮಾನವದ್ಭಾವವನ್ನು ಹೊಂದುವುದು. ಆದ್ದರಿಂದ ಯಜಾಮಹೇ ಎಂಬುದು ಪಾದಾದಿಗತವಾಗುವುದರಿಂದ **ತಿಙ್ಙತಿಙಃ** (ಪಾ. ಸೂ. ೮-೧-೨೮) ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ. **ಅಥವಾ ಯದ್ವೃತ್ತಾನ್ನಿತ್ಯಮ್** (ಪಾ. ಸೂ. ೮-೧-೬೬) ಎಂಬುದರಿಂದ **ಪ್ರತಿಷೇಧ** ಬರುವುದು. **ಪೂಜಾನಾತ್ಪೂಜಿತ**- (ಪಾ. ಸೂ. ೮-೧-೬೭) ಎಂಬಲ್ಲಿ ಪುನಃ ಪೂಜಿತ ಗ್ರಹಣವಿರುವು ದರಿಂದ ' ಅತ್ರಪ್ರಕರಣೇ ಪಂಚಮ್ಯಾನಿರ್ದೇಶೇ೭ಪಿ ನಾನಂತರ್ಯಮಿಷ್ಯತೇ, ಎಂದು ಜ್ಞಾಪಿತವಾಗಿರುವುದು. ಎಂದು ಹಿಂದೆಯೇ ಉಪಪಾದಿತವಾಗಿದೆ. ಆದ್ದರಿಂದ ಯತ್‌ಶಬ್ದಕ್ಕೆ ವ್ಯವಹಿತಯೋಗವಿದ್ದರೂ ಯದ್ವೃತ್ತಾನ್ನಿತ್ಯಮ್ ಎಂಬ ಪ್ರತಿಷೇಧ ಬರಲು ತಡೆ ಇಲ್ಲ.

ಅಥ—ಅಥ ಎಂಬುದು ನಿಪಾತ, ಥಕಾರಕ್ಕೆ ಛಾಂದಸವಾಗಿ ಥಕಾರ. ನಿಪಾತಾ ಆದ್ಯುದಾತ್ತಾಃ (ಫಿ. ಸೂ. ೮೦) ಎಂಬುದರಿಂದ ಆದ್ಯುದಾತ್ತ.

ಸ್ಮ—ಚಾದಯೋನುದಾತ್ತಾಃ (ಫಿ. ಸೂ. ೮೪)ಎಂಬುದರಿಂದ ಅನುದಾತ್ತ. ಸಂಹಿತಾ ಕಾಲದಲ್ಲಿ ನಿಪಾತಸ್ಯಚ (ಪಾ. ಸೂ. ೬-೩-೧೩೯) ಎಂಬುದರಿಂದ ದೀರ್ಘ.

ದದಿಃ—ಡುದಾಞ್ ದಾನೇ ಧಾತು. ಇದರ ಮುಂದೆ ಆದ್ಯೈಗಮಹನಃಕಿಕಿನೌಲಿಟ್ಟ್ (ಪಾ. ಸೂ. ೩-೨-೧೮೯) ಆಕಾರಾಂತ, ಋಕಾರಾಂತ, ಧಾತುಗಳು ಗಮಾದಿ ಧಾತುಗಳು ಇವುಗಳ ಮುಂದೆ ಕಿ- ಕಿನ್ ಎಂಬ ಪ್ರತ್ಯಯಗಳು ಬರವುವು- ಅವು ಲಿಟ್ಪ್ರನಂತೆಯೂ ಆಗುವುವು ಎಂಬುದರಿಂದ ಆಕಾರಾಂತವಾದ ದಾ ಧಾತುವಿನ ಮುಂದೆ ಕಿ ಪ್ರತ್ಯಯ. ಇದು ಲಿಟ್ಪ್ರನಂತೆ ಆಗುವುದರಿಂದ ಲಿಟಿಧಾತೋರನಭ್ಯಾಸಸ್ಯ (ಪಾ. ಸೂ. ೬-೧-೮) ಎಂಬುದರಿಂದ ದ್ವಿತ್ವ, ಹ್ರಸ್ವಃ (ಪಾ. ಸೂ. ೭-೪-೫೯) ಎಂಬುದರಿಂದ ಹ್ರಸ್ವ ದ+ದಾ+ಇ ಆತೋಲೋಪಇಟಿಚ (ಪಾ. ಸೂ. ೬-೪-೬೪) ಎಂಬುದರಿಂದ ಆಕಾರಕ್ಕೆ ಲೋಪಬರುವುದು, ದದಿ ಎಂದು ಆಗುವುದು. ಇದು ಪ್ರತ್ಯಯಸ್ವರದಿಂದ ಅಂತೋದಾತ್ತವಾಗುವುದು ॥ ೧೦ ॥

॥ ಸಂಹಿತಾಪಾಠಃ ॥

ಅಶ್ವಿನಾ ಪಿಬತಂ ಮಧು ದೀದ್ಯಗ್ನೀ ಶುಚಿವ್ರತಾ ।
ಋತುನಾ ಯಜ್ಞವಾಹಸಾ ॥ ೧೧ ॥

॥ ಪದಪಾಠಃ ॥

ಅಶ್ವಿನಾ । ಪಿಬತಂ । ಮಧು । ದೀದ್ಯಗ್ನೀ ಇತಿ ದೀದಿ೪ ಅಗ್ನೀ । ಶುಚಿ೪ವ್ರತಾ ।
ಋತುನಾ । ಯಜ್ಞ೪ವಾಹಸಾ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನೌ ಮಧು ಮಾಧುರ್ಯೋಪೇತಂ ಸೋಮಂ ಪಿಬತಂ । ಕೀದೃಶೌ । ದೀದ್ಯಗ್ನೀ ದ್ಯೋತಮಾನಾಹವನೀಯೌದ್ಯಗ್ನಿಯುಕ್ತೌ ಶುಚಿವ್ರತಾ ಶುದ್ಧಕರ್ಮಾಣೌ ಋತುನಾ ಋತುದೇವತಯೋಸಹ ಯಜ್ಞವಾಹಸಾ ಯಜ್ಞಸ್ಯ ನಿರ್ವಾಹಕೌ ॥ ಅಶ್ವಿನಾ । ಸಂಬೋಧನದ್ವಿವಚನಸ್ಯ ಸುಪಾಂ ಸುಲುಗಿತ್ಯಾಕಾರಃ । ಆಮಂತ್ರಿತಾದ್ಯುದಾತ್ತಃ । ಪಿಬತಂ । ಶಪಃ ಪಿತ್ತ್ವಾದನುದಾತ್ತತ್ವೇ । ತಿಙಶ್ಚ ಲಸಾರ್ವ-

ಧಾತುಸ್ವರೇಣ ಧಾತುಸ್ವರ ಏವ ಶಿಷ್ಯತೇ । ಮಧು । ಫಲಿಪಾಟೇತ್ಯಾದಿನಾ । ಉ. ೧-೧೯ । ಉಪ್ರೈತ್ಯಯಃ । ನಿದಿತ್ಯನುವೃತ್ತೇರ್ನಿತ್ತ್ವಾದಾದ್ಯುದಾತ್ತಃ । ದೀದ್ಯಗ್ನೀ । ದಿವು ಕ್ರೀಡಾದೌ । ಅನ್ಯೇಭ್ಯೋಽಪಿ ದೃಶ್ಯಂತೇ ಇತಿ ವಿಚ್ । ವೇರಪೃಕ್ತಲೋಪಾದ್ವಲಿ ಲೋಪೋ ಬಲೀಯಾನಿತಿ ಪ್ರಥಮವಕಾರಸ್ಯ ಲೋಪಃ। ಪಾ. ೬-೧-೬೬, ೬೭ । ಪ್ರಥಮಂ ಪ್ರತ್ಯಯಲೋಪೇ ಹಿ ವರ್ಣಾಶ್ರಯವಿಧೌ ಪ್ರತ್ಯಯಲಕ್ಷಣಂ ನಾಸ್ತಿ । ಪರಿ ೨೧ । ಇತಿ ನಿಷೇಧಾದ್ವಲಿಲೋಪೋ ನ ಸ್ಯಾತ್ । ಛಾಂದಸಂ ದ್ವಿರ್ವಚನಂ । ತುಜಾದಿತ್ವಾದಭ್ಯಾಸಸ್ಯ ದೀರ್ಘತ್ವಂ । ಯಜ್ಞಲುಗಂತಾದ್ವಾ ಸಂಜ್ಞಾಪೂರ್ವಕೋ ವಿಧಿರನಿತ್ಯಃ ಇತ್ಯಭ್ಯಾಸಸ್ಯ ಗುಣಾಭಾವಃ । ದೀದಿರಗ್ನಿರ್ಯಯೋಸ್ತೌ ದೀದ್ಯಗ್ನೀ । ಆಮಂತ್ರಿತಾದ್ಯುದಾತ್ತತ್ವಂ । ಸಾದಾದಿತ್ವಾನ್ನ ನಿಘಾತಃ। ಶುಚಿವ್ರತಾ ಶುಚಿ ವ್ರತಂ ಯಯೋಸ್ತೌ । ಸುಪಾಂ ಸುಲುಗಿತ್ಯಾಕಾರಃ । ದೀದ್ಯಗ್ನಿಶಬ್ದಸ್ಯ ಸಾಮಾನ್ಯವಚನತ್ವೇನ ನಾಮಂತ್ರಿತ ಇತ್ಯವಿದ್ಯಮಾನವತ್ತ್ವಪ್ರತಿಷೇಧಾದಾಪ್ಯಮಿಕನಿಘಾತತ್ವಂ । ಪೂರ್ವಸ್ಯ ಪರಾಂಗವದ್ಭಾವಾದ್ವೃಕಸ್ಯರ್ಯಂ । ಯಜ್ಞವಾಹಸಾ । ವಹ ಪ್ರಾಪಣೇ । ಯಜ್ಞಂ ವಹತ ಇತಿ ಯಜ್ಞವಾಹಸೌ । ವಹಿಹಾಧಾಭ್ಯಶ್ಚಂದಸಿ ಉ. ೪-೨೨೦ । ಇತ್ಯಸುನ್ । ತತ್ರ ಹಿ ಗತಿಕಾರಕಯೋರಪಿ ಪೂರ್ವಪದಪ್ರಕೃತಿಸ್ವರತ್ವಂ ಚೇತಿ ವಚನಾತ್ಪೋಷಪದಾನಾಮಪಿ ಭವತಿ । ಉ. ೪-೨೨೬ । ಇತ್ಯುಕ್ತಂ । ಣಿದಿತ್ಯನುವೃತ್ತೇರುಪಧಾವೃದ್ಧಿಃ । ಸುಪಾಂ ಸುಲುಗಿತ್ಯಾದಿನಾ ವಿಭಕ್ತೇರಾಕಾರಃ । ಆಮಂತ್ರಿತನಿಘಾತಃ । ಅಸಾಮರ್ಥ್ಯಾತ್ಪೂರ್ವಸ್ಯ ನ ಪರಾಂಗವದ್ಭಾವಃ ॥

॥ ಪ್ರತಿಪದಾರ್ಥ ॥

ದೀದ್ಯಗ್ನೀ—ಆಹವನೀಯಾದ್ಯಗ್ನಿಗಳಿಂದ ಶೋಭಿಸುತ್ತಿರುವ । ಶುಚಿವ್ರತಾ—ಶುದ್ಧವಾದ ಕರ್ಮಗಳನ್ನು ಳ್ಳ । ಋತುನಾ—ಋತುದೇವತೆಯೊಂದಿಗೆ । ಯಜ್ಞವಾಹಸಾ—ಯಜ್ಞನಿರ್ವಾಹಕರಾದ । ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ಮಧು—ಮಧುರವಾದ ಸೋಮರಸವನ್ನು । ಪಿಬತಂ—ಕುಡಿಯಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವು ಯಾವಾಗಲೂ ಆಹವನೀಯಾದಿ ಅಗ್ನಿಗಳಿಂದ ಕೂಡಿ ಪ್ರಕಾಶಿಸುತ್ತಿರುವಿರಿ. ಋತುದೇವತೆಯೊಡಗೂಡಿ ಯಜ್ಞವನ್ನು ನಿರ್ವಹಿಸುತ್ತೀರಿ. ದಯವಿಟ್ಟು ಮಧುರವಾದ ಸೋಮರಸವನ್ನು ಪಾನಮಾಡಿ.

English Translation.

Aswins, performers of pious acts, accepters of the sacrifice with the Ritus, and accompained by brilliant Agni, drink the sweet draught.

॥ ವಿಶೇಷವಿಷಯಗಳು ॥

ದೀದ್ಯಗ್ನೀ—ದಿವು ಕ್ರೀಡಾದೌ । ದೀದಿರಗ್ನಿರ್ಯಯೋಸ್ತೌ ॥ ಪ್ರಕಾಶವಾನವಾದ ಆಹವನೀಯಾದ್ಯಗ್ನಿಯುಕ್ತರು ಎಂದರೆ ಆಹವನೀಯಾದ್ಯಗ್ನಿಗಳಲ್ಲಿ ಈ ಅಶ್ವಿನೀದೇವತೆಗಳನ್ನುದ್ದೇಶಿಸಿ ಹೋಮ ಮಾಡುವುದರಿಂದ ಪ್ರಕಾಶಮಾನವಾದ ಅಗ್ನಿಯುಳ್ಳವರು ಎಂದು ಹೇಳಿರುವರು.

ಶುಚಿವ್ರತಾ—ಶುಚಿ ವ್ರತಂ ಯೆಯೋಸ್ತೌ—ಶುದ್ಧಕರ್ಮಗಳುಳ್ಳವರು ಎಂದರೆ, ಇವರು ಮಾಡುವ ಕರ್ಮಗಳು ಶುದ್ಧವಾದವು ಎಂದರ್ಥವು.

ಯೆಜ್ಞವಾಹಸಾ—ವಹ ಪ್ರಾಪಣೇ । **ಯೆಜ್ಞಂ ವಹತ ಇತಿ ಯೆಜ್ಞವಾಹಸೌ** । **ಯೆಜ್ಞಸ್ಯ ನಿರ್ವಾಹಕೌ** ॥ ಯಜ್ಞವನ್ನು ನಿರ್ವಹಿಸುವವರು ನಿರ್ವಿಘ್ನವಾಗಿ ನಡೆಯುವಂತೆ ಮಾಡುವವರು.

॥ ವ್ಯಾಕರಣಪ್ರಕಿಯಾ ॥

ಅಶ್ವಿನಾ—ಸಂಬೋಧನದ್ವಿವಚನಕ್ಕೆ **ಸುಪಾಂಸುಲುಕ್-** (ಪಾ.ಸೂ. ೭-೧-೩೯) ಎಂಬುದರಿಂದ ಆಕಾರಾದೇಶ, ಆಮನ್ತ್ರಿತಸ್ಯಚ (ಪಾ.ಸೂ ೬-೧-೧೯೭) ಎಂಬುದರಿಂದ ಆದ್ಯುದಾತ್ತ ಬರುವುದು. ಪಾದಾದಿಯಲ್ಲಿರುವುದರಿಂದ ಅಸ್ವರಿತಾನುದಾತ್ತ ಬರುವುದಿಲ್ಲ.

ಪಿಬತಂ—**ಪಾ ಪಾನೇ**. ಲೋಟ್ ಮಧ್ಯಮಪುರುಷ ದ್ವಿವಚನ **ಥಸ್. ಲೋಟೋಲಙ್ವತ್** (ಪಾ.ಸೂ. ೩-೪-೮೫) ಎಂಬುದರಿಂದ ಲಙ್ವದ್ಭಾವವಿರುವುದು. ಆದ್ದರಿಂದ **ತೆಧ್ವಸ್ವಮಿಪಾಂತಾಂತೆಂತಾಮಃ** (ಪಾ. ಸೂ. ೩-೪-೧೦೧) ಎಂಬುದರಿಂದ ಥಸ್ ಗೆ ತಂ ಆದೇಶ ಪಾ+ತಂ **ಕರ್ತರಿಶಪ್** (ಪಾ.ಸೂ ೩-೧-೬೮) ಎಂಬುದರಿಂದ ಶಪ್ ವಿಕರಣ, **ಪಾಘ್ರಾಧ್ಮಾ**— (ಪಾ.ಸೂ. ೭-೩-೭೮) ಎಂಬುದರಿಂದ ಪಾಗೆ ಪಿಬ ಆದೇಶ, ಪಿಬ+ಅ+ತಂ, **ಅತೋಗುಣೇ** (ಪಾ.ಸೂ. ೬-೧-೯೭) ಎಂಬುದರಿಂದ ಪರರೂಪ ಪಿಬತಂ. ಈ ರೀತಿ ಪಿಬ ಆದೇಶವು ಅವಂತ ಎಂಬ ಪಕ್ಷದಲ್ಲಿ ಪಿಬ ಎಂಬುದು ಸೂತ್ರದಲ್ಲಿ ಆದ್ಯುದಾತ್ತವಾಗಿ ನಿಪಾತಿತವಾಗಿರುವುದು. ಇದನ್ನೇ **ಧಾತೋಃ** ಪಾ.ಸೂ. ೬-೧-೧೬೨) ಎಂಬಲ್ಲಿ 'ಪಿಚೌವಾನಿಪಾತನಾತ್' ಎಂದು ವಾರ್ತಿಕಕಾರರು ಹೇಳಿರುವರು. ಈ ಪಕ್ಷದಲ್ಲಿ **ಪುಗಂತಲಘೂಪಧಸ್ಯೇಚ** (ಪಾ. ಸೂ. ೭-೩-೮೬) ಎಂಬುದರಿಂದ ಲಘೂಪಧ ಗುಣಕ್ಕೆ ಪ್ರಾಪ್ತಿ ಇಲ್ಲ ಇದೇ ಸಿದ್ಧಾಂತ ಪಕ್ಷವು. ಪಾಘ್ರಾಧ್ಮಾ ಎಂಬಲ್ಲಿ ವಿಹಿತವಾದ ಆದೇಶವು ಪಿಬ್ ಎಂದು ಬಾಂತ ಎಂಬ ಪಕ್ಷದಲ್ಲಿ **ಧಾತೋಃ** (ಪಾ- ಸೂ. ೬-೧-೧೬೨) ಎಂಬುದರಿಂದ ಅಂತೋದಾತ್ತಸ್ವರವು ಸುಕರವಾಗಿ ಸಿದ್ಧವಾಗುವುದು. **ಅಂಗವೃತ್ತೇ ಪುನರ್ವೃತ್ತಾವವಿಧಿಃ** (ಪರಿಭಾ. ೯೨) ಎಂಬುದರಿಂದ ಪಿಬಾದೇಶಾನಂತರ ಗುಣವು ಬರುವುದಿಲ್ಲ ಎಂದು ಗುಣಕ್ಕೆ ವಾರಣೆ ಮಾಡಬೇಕು. ಈ ಪಕ್ಷವೇ 'ಧಾತುಸ್ವರ ಏವ ಶಿಷ್ಯತೇ ' ಎಂದು ವೇದಭಾಷ್ಯದಲ್ಲಿ ಆಶ್ರಯಿಸಲಾಗಿರುವುದು. ಶಪ್ ಪಿತ್ತಾದ್ದರಿಂದ ಅನುದಾತ್ತ. ಲಸ್ಯಾನಿಕ ಸಾರ್ವಧಾತುಕವಾದ ತಂ ಎಂಬುದು **ತಾಸ್ಯನುದಾತ್ತೇತ್** -(ಪಾ.ಸೂ.೬-೧-೧೭೬) ಎಂಬುದರಿಂದ ಅನುದಾತ್ತ, ಏವಂಚ ಪಿಬ್ ಎಂಬುದರ ಇಕಾರವು ಧಾತುಸ್ವರದಿಂದ ಉದಾತ್ತವಾಗುವುದು.

ಮಧು-ಮಧುಮಂತೆಂ ಋ. ಸಂ. ೧-೧-೩-೨ ರಲ್ಲಿ ಇದಕ್ಕೆ ಪ್ರಕ್ರಿಯೆಯು ಉಪಪಾದಿತವಾಗಿರುವುದು. ಇಲ್ಲಿ ಸಂಗ್ರಹವಾಗಿ ಜ್ಞಾಪಿಸುವ. ಮನ ಜ್ಞಾನೇ ಧಾತುವಿನ ಮುಂದೆ **ಫಲಿಷಾಟ್** - (ಉ. ಸೂ. ೧-೧೪) ಎಂಬುದರಿಂದ ಉ ಪ್ರತ್ಯಯ ಬರುವುದು. ಇಲ್ಲಿ ನಿತ್ ಎಂಬುದು ಅನುವೃತ್ತವಾಗಿರುವುದರಿಂದ ಉ ಪ್ರತ್ಯಯವು ನಿತ್ಯಾಗುವುದು. ಆದ್ದರಿಂದ ಮಧು ಎಂಬುದು ನಿತ್ಸ್ವರದಿಂದ ಆದ್ಯುದಾತ್ತ.

ದೀದ್ಯಗ್ನೀ—ದಿವು ಕ್ರೀಡಾದೌ ಧಾತು, ಇದರ ಮುಂದೆ **ಅನ್ಯೇಭ್ಯೋ೨ಪಿದೃಶ್ಯಂತೇ** (ಪಾ.ಸೂ. ೩-೨-೭೫) ಮನಿನ್, ಕ್ವನಿಪ್, ವನಿಪ್, ವಿಚ್ ಈ ಪ್ರತ್ಯಯಗಳು ಧಾತುವಿನ ಮುಂದೆ ಬರುವುವು ಎಂಬುದರಿಂದ ದಿವ್ ಧಾತುವಿನ ಮುಂದೆ ವಿಚ್, ದಿವ್+ವ್, ವೇರಪೃಕ್ತಲೋಪಾದ್ವಲಿಲೋಪೋ ಬಲೀಯಾನ್, **ವೇರಪೃಕ್ತಸ್ಯ** (ಪಾ.ಸೂ.೬-೧-೬೭) ಎಂದು ವಿಹಿತವಾದ ವಕಾರ ಲೋಪಕ್ಕಿಂತಲೂ **ಲೋಪೋವ್ಯೋರ್ವಲಿ** (ಪಾ.ಸೂ. ೬-೧-೬೬) ಎಂದು ವಿಹಿತವಾದ ವಲಿಲೋಪವು ಪ್ರಬಲವಾದುದು ಎಂಬುದರಿಂದ ಅಪೃಕ್ತಲೋಪವು ಅಂತರಂಗವಾದಾಗ್ಯೂ ಅದಕ್ಕಿಂತ ಮೊದಲು **ಲೋಪೋವ್ಯೋರ್ವಲಿ** (ಪಾ. ಸೂ. ೬-೧-೬೬) ಎಂಬುದರಿಂದ ಮೊದಲನೆಯ ವಕಾರಕ್ಕೆ ಲೋಪ, ಮೊದಲು ವೇರಪೃಕ್ತಸ್ಯ, ಎಂಬುದರಿಂದ ಪ್ರತ್ಯಯಕ್ಕೆ ಲೋಪ ಬರುವ ಪಕ್ಷಕ್ಕೆ **ವರ್ಣಾಶ್ರಯೇ ನಾಸ್ತಿ ಪ್ರತ್ಯಯಲಕ್ಷಣಂ** (ಪರಿಭಾ. ೯೩-೧) ವರ್ಣಾಶ್ರಯವಾದ ಕಾರ್ಯವನ್ನು ಮಾಡುವಾಗ ಪ್ರತ್ಯಯ ಲಕ್ಷಣ ಬರುವುದಿಲ್ಲ ಎಂಬುದರಿಂದ ಪ್ರತ್ಯಯಲಕ್ಷಣ ಬರುವುದಿಲ್ಲ. ಆದ್ದರಿಂದ ವಲ್ ಪರಕತ್ವವು ಸಂಭವಿಸುವುದಿಲ್ಲ. ಏವಂಚ ಪ್ರಥಮ ವಕಾರಕ್ಕೆ ಲೋಪವು ಬರದೇ ಹೋಗುವುದು. ಆದ್ದರಿಂದ ಮೊದಲು ಪ್ರಥಮ ವಕಾರಕ್ಕೆ ಪೂರ್ವೋಕ್ತ ರೀತಿಯಲ್ಲಿ ಲೋಪ, ನಂತರ ವೇರಪೃಕ್ತಸ್ಯ ಎಂಬುದರಿಂದ ಎರಡನೇ ವಕಾರಕ್ಕೆ ಲೋಪ. ಛಾಂದಸವಾಗಿ ದಿಗೆ ದ್ವಿತ್ವ, ದಿದಿ ಎಂದಾಗುವುದು. ಈಗ **ತೆುಜಾದೀನಾಂ ದೀರ್ಘೋಭ್ಯಾಸಸ್ಯ** (ಪಾ.ಸೂ. ೬-೧-೭)ಎಂಬುದರಿಂದ ಮೊದಲನೆಯ ದಿಗೆ ದೀರ್ಘ ದೀದಿ ಎಂದಾಗುವುದು. ಅಥವಾ ದಿವ್ ಧಾತುವಿನ ಮುಂದೆ **ಧಾತೋರೇಕಾಜೋಹಲಾದೇ ಃಕ್ರಿಯಾಸಮಭಿಹಾರೇಯೆಜ್** (ಪಾ.ಸೂ. ೩.೧-೨೨) ಎಂಬುದರಿಂದ ಯಜ್, ಯಜೋಚಿಚ್, (ಪಾ.ಸೂ. ೩-೪-೩೪) ಎಂಬುದರಿಂದ ಯಜ್‌ಗೆ ಲುಕ್, **ಸನ್ಯಜೋಃ** (ಪಾ.ಸೂ. ೬-೧-೯) ಎಂಬುದರಿಂದ ದ್ವಿತ್ವ ದಿವ್‌ದಿವ್. **ಹಲಾದಿಶ್ಶೇಷಃ** (ಪಾ.ಸೂ. ೭-೪-೬೦) ಎಂಬುದರಿಂದ ಅಭ್ಯಾಸದಲ್ಲಿರುವ ವಕಾರಕ್ಕೆ ನಿವೃತ್ತಿ, ದಿದಿವ್ **ಗುಣೋಯಜ್‌ಲುಕೋಃ** (ಪಾ.ಸೂ. ೭-೪-೮೪) ಯಜ್‌ನಲ್ಲಿಯೂ ಯಜ್ಲುಕ್ಕಿನಲ್ಲಿಯೂ ಇಗಂತವಾದ ಅಭ್ಯಾಸಕ್ಕೆ ಗುಣಬರುವುದು ಎಂಬುದರಿಂದ ಮೊದಲನೆಯ ದಿಗೆ ಯದ್ಯಪಿ ಗುಣವು ಪ್ರಾಪ್ತವಾಗುವುದು. ಆದರೂ **ಸಂಜ್ಞಾಪೂರ್ವಕೋವಿಧಿರನಿತ್ಯಃ** (ಪರಿಭಾ. ೯೩-೧) ಎಂಬುದರಿಂದ ಗುಣವಿಧಿಯು ಅನಿತ್ಯವಾಗುವುದರಿಂದ ಇಲ್ಲಿ ಬರುವುದಿಲ್ಲ. **ದೀರ್ಘೋ೨ಕಿತಃ** (ಪಾ.ಸೂ. ೭-೪-೮೩) ಕಿತ್ತಲ್ಲದ ಅಜಂತವಾದ ಅಭ್ಯಾಸಕ್ಕೆ ಯಜ್‌ನಲ್ಲಿಯೂ ಯಜ್‌ಲುಕ್ಕಿನಲ್ಲಿಯೂ ಸಹ ದೀರ್ಘ ಬರುವುದು ಎಂಬುದರಿಂದ ದೀರ್ಘ, ದೀದಿವ್ ಎಂದಾಗುವುದು. ಮೊದಲಿನಂತೆ ವಿಚ್ ಬಂದರೆ ದೀದಿ ಎಂದಾಗುವುದು. ದೀದಿಃ ಅಗ್ನಿಃ ಯಯೋಸ್ತೌ ದೀದ್ಯಗ್ನೀ ಎಂದು ಬಹುವ್ರೀಹಿಸಮಾಸ. ಅಪ್ಪಮಿಕಸೂತ್ರದಿಂದ ಅನುದಾತ್ತವು ಪ್ರಾಪ್ತವಾದರೂ ಇದು ಪಾದದ ಆದಿಯಲ್ಲಿರುವುದರಿಂದ ಇಲ್ಲಿ ಬರುವುದಿಲ್ಲ. ಷಾಷ್ಠಸೂತ್ರದಿಂದ ಆದ್ಯುದಾತ್ತವೇ ಬರುವುದು.

ಶುಚಿವ್ರತಾ—ಶುಚಿ ವ್ರತಂ ಯಯೋಸ್ತೌ ಎಂದು ವಿಗ್ರಹ. **ಸುಪಾಂಸುಲುಕ್**-(ಪಾ.ಸೂ, ೭-೧-೩೯) ಎಂಬುದರಿಂದ ಸಂಬೋಧನಪ್ರಥಮಾದ್ವಿವಚನಕ್ಕೆ ಆಕಾರಾದೇಶ. ದೀದ್ಯಗ್ನೀ, ಶುಚಿವ್ರತಾ, ಈ ಎರಡು ಆಮಂತ್ರಿತಗಳಿಗೂ ಅಶ್ವಿನಾ ಎಂಬಲ್ಲಿ ಅನ್ವಯವು ವರ್ಣಿತವಾಗಿರುವುದು. ಆದ್ದರಿಂದ ಅಶ್ವಿನಾ ಎಂಬುದು ಸಾಮಾನ್ಯ

ವಚನ, ಮಿಕ್ಕ ಎರಡು ಆಮಂತ್ರಿತಗಳೂ ಸಹ ವಿಶೇಷಣವಾದ್ದರಿಂದ ವಿಶೇಷನವಚನಗಳೇ ಆಗುವುವು. ಆದ್ದರಿಂದ **ನಾಮನ್ತ್ರಿತೇಸಮಾನಾಧಿಕರಣೇ ಸಾಮಾನ್ಯವಚನಂ** (ಪಾ.ಸೂ. ೮-೧.೭೩) ಎಂಬುದಕ್ಕೆ ಪ್ರಾಪ್ತಿ ಇಲ್ಲ. ಎರಡು ಆಮಂತ್ರಿತಗಳಿಗೂ ಪರಸ್ಪರಾನ್ವಯವಿಲ್ಲದೇ ಇರುವುದರಿಂದ ಸಾಮರ್ಥ್ಯವಿಲ್ಲದ ಕಾರಣ **ಸುಬಾಮಂತ್ರಿತೇ** (ಪಾ.ಸೂ. ೨-೧-೨) ಎಂಬುದರಿಂದ ಪರಾಂಗವದ್ಭಾವಕ್ಕೂ ಪ್ರಾಪ್ತಿ ಇಲ್ಲ. ಏನಂಚ ಶುಚಿವ್ರತಾ ಎಂಬಲ್ಲಿ ಸರ್ವಾನುದಾತ್ತವು ಹೇಗೆ ಉಪಪನ್ನವಾಗುವುದು ಎಂದು ಶಂಕೆ ಅವತರಿಸುವುದು ಸತ್ಯವು. ಆದರೆ ಇಲ್ಲಿ ದೀದ್ಯಗ್ನೀ ಎಂಬುದನ್ನೇ ವಿಶೇಷ್ಯವನ್ನಾಗಿ ವಿವಕ್ಷೆಮಾಡುವೆವು. ಶುಚಿವ್ರತಾ ಎಂಬುದು ಅದಕ್ಕೆ ವಿಶೇಷಣವು. ಈ ವಿಶಿಷ್ಟಕ್ಕೆ ಅಶ್ವಿನಾ ಎಂಬಲ್ಲಿ ಅನ್ವಯವು ಎಂದು ವರ್ಣಿಸುವೆವು. ಈಗ ದೀದ್ಯಗ್ನೀ ಎಂಬುದು ಸಾಮಾನ್ಯವಚನವಾಗುವುದರಿಂದ **ನಾಮಂತ್ರಿತೇ-** (ಪಾ.ಥೂ. ೮-೧-೭೩) ಎಂಬುದರಿಂದ **ಆಮಂತ್ರಿತಂ ಪೂರ್ವಮವಿದ್ಯಮಾನವತ್** (ಪಾ. ಸೂ. ೮-೧-೭೨) ಎಂದು ಪ್ರಾಪ್ತವಾದ ಅವಿದ್ಯಮಾನವದ್ಭಾವಕ್ಕೆ ಪ್ರತಿಷೇಧ ಬರುವುದು, ಆದ್ದರಿಂದ ಶುಚಿವ್ರತಾ ಎಂಬುದು ಪಾದಾದಿಯಾಗುವುದಿಲ್ಲ. ಏನಂಚ **ಆಮಂತ್ರಿತಸ್ಯಚೆ** (ಪಾ ಸೂ. (೮-೧-೧೯೭) ಎಂಬುದರಿಂದ ಸರ್ವಾನುದಾತ್ತ ಬರುವುದು. ಅಥವಾ ದೀದ್ಯಗ್ನೀ ಶುಚವ್ರತಾ ಎಂಬೆರಡಕ್ಕೂ ಈ ವ್ಯಾಖ್ಯಾನದಲ್ಲಿ ಪರಸ್ಪರಾನ್ವಯವಿರುವುದರಿಂದ **ಸಾಮರ್ಥ್ಯವಿರುವ ಕಾರಣ ಸುಬಾಮಂತ್ರಿತೇ ಪರಾಂಗವತ್ಸ್ವರೇ** (ಪಾ ಸೂ ೨-೧-೨) ಎಂಬುದರಿಂದ ಪರಾಂಗವದ್ಭಾವ ಬರುವುದು. ಏವಂ ಚ ದೀದ್ಯಗ್ನೀ ಶುಚಿವ್ರತಾ ಎಂಬಿವು ಒಂದೇ ಪದವೆಂಬ ಬುದ್ಧಿಯುಂಟಾಗುವುದು. ಆದ್ದರಿಂದ ಷಾಷ್ಠಸೂತ್ರವಾದ **ಆಮಂತ್ರಿತಸ್ಯಚೆ** (ಪಾ. ಸೂ. ೬-೧-೧೯೭) ಎಂಬುದರಿಂದ ದೀ ಎಂಬ ಆದಿವರ್ಣಕ್ಕೆ ಆದ್ಯುದಾತ್ತ ಬರುವುದು. **ಅನಂತರ ಅನುದಾತ್ತಂ ಪದಮೇಕವರ್ಜಂ** (ಪಾ ಸೂ. ೬-೧-೧೫೮) ಎಂಬುದರಿಂದ ಮಿಕ್ಕ ವರ್ಣಗಳು ಅನುದಾತ್ತಗಳಾಗುವುವು. ಉದಾತ್ತದ ಮುಂದೆ ಇರುವ ದಿ ಎಂಬ ಅನುದಾತ್ತವು **ಉದಾತ್ತಾದನುದಾತ್ತಸ್ಯಸ್ವರಿತಃ** (ಪಾ.ಸೂ.೮-೪.೬೬) ಎಂಬುದರಿಂದ ಸ್ವರಿತವಾಗುವುದು. ಸ್ವರಿತದ ಮುಂದೆ ಇರುವ ಅನುದಾತ್ತಗಳು **ಸ್ವರಿತಾತ್ಸಂಹಿತಾಯಾಮನುದಾತ್ತಾನಾಂ** ಎಂಬುದರಿಂದ ಪ್ರಚಯಗಳಾಗುವುವು.

ಯೆಜ್ಞವಾಹಸಾ--ಯಜ್ಞಂ ವಹತ ಇತಿ ಯಜ್ಞವಾಹಸೌ, ವಹ ಪ್ರಾಪಣೇ ಧಾತು. ವಹಿಹಾಧಾಭ್ಯಶ್ಚಂದಸಿ (ಉ. ಸೂ. ೪-೬೬೦) ವಹ ಪ್ರಾಪಣೇ, ಓಹಾಕ್ ತ್ಯಾಗೇ, ಡುಧಾಞ್ ಧಾರಣಪೋಷಣಯೋಃ. ಈ ಧಾತುಗಳ ಮುಂದೆ ಅಸುನ್ ಪ್ರತ್ಯಯ ಬರುವುದು. ಅದು ಣಿತ್ವಾಗುವುದು ಎಂಬುದರಿಂದ ಯಜ್ಞಂ ಎಂಬ ಕರ್ಮಕಾರಕೋಪಪದವಾದ ವಹ್ ಧಾತುವಿನ ಮುಂದೆ ಅಸುನ್ ಪ್ರತ್ಯಯ, ಗತಿಕಾರಕಯೋರಪಿಪೂರ್ವಪದ ಪ್ರಕೃತಿಸ್ವರತ್ವಂಚ (ಉ.ಸೂ. ೪-೬೬೬) ಎಂಬುದರಿಂದ ಗತಿಕಾರಕೋಪಪದಕಗಳಾದ ಧಾತುಗಳ ಮುಂದೆಯೂ ಪ್ರತ್ಯಯಗಳು ಬರುವುವು ಎಂದು ಹೇಳಿರುವುದರಿಂದ ವಹಿಹಾ ಎಂಬ ಸೂತ್ರದಲ್ಲಿ ನಿರುಪಪದಧಾತುಗ್ರಹಣವಿದ್ದರೂ ಸೋಪಪದಕಗಳಾದ ಧಾತುಗಳ ಮುಂದೆಯೂ ಅಸುನ್ ಪ್ರತ್ಯಯ ಬರುವುದು. ಯಜ್ಞ+ಅಮ್+ಹಾ+ಅಸ್. ಪ್ರತ್ಯಯವು ಣಿತ್ವಾದ್ದರಿಂದ **ಅತ ಉಪಧಾಯಾಃ** (ಪಾ.ಸಪ. ೭-೨-೧೧೬) ಎಂಬುದರಿಂದ ಉಪಧಾವೃದ್ಧಿ. ಕೃದಂತವಾದ್ದರಿಂದ ಪ್ರಾತಿಪದಿಕಸಂಜ್ಞೆ ಬರುವುದು ಆದ್ದರಿಂದ ಪ್ರಾತಿಪದಿಕಾವಯವವಾದ ಅಮ್ ವಿಭಕ್ತಿಗೆ ಲುಕ್. ಸಂಬೋಧನ ದ್ವಿವಚನ ಔ ಪ್ರತ್ಯಯಕ್ಕೆ **ಸುಪಾಂಸುಲುಕ್**(ಪಾ.ಸೂ. ೭-೧-೩೯) ಎಂಬುದರಿಂದ ಆಕಾರಾದೇಶ. ಋತುನಾ ಯಜ್ಞವಾಹಸಾ ಎಂಬ ಎರಡು ಪದಗಳಿಗೂ ಪರಸ್ಪರಾನ್ವಯವಿಲ್ಲ. ಆದಕಾರಣ **ಸುಬಾಮಂತ್ರಿತೇ** ಎಂಬುದರಿಂದ ಋತುನಾ ಎಂಬ ಪೂರ್ವಪದಕ್ಕೆ ಪರಾಂಗವದ್ಭಾವ ಬರುವುದಿಲ್ಲ, **ಆಮಂತ್ರಿತಸ್ಯಚೆ** (ಪಾ.ಸೂ. ೮-೧-೧೯) ಎಂಬುದರಿಂದ ಸರ್ವಾನುದಾತ್ತ ಬರುವುದು ॥೧೧॥

॥ ಸಂಹಿತಾಪಾಠಃ ॥

ಗಾರ್ಹಪತ್ಯೇನ ಸಂತ್ಯ ಋತುನಾ ಯಜ್ಞನೀರಸಿ ।
ದೇವಾನ್ದೇವಯತೇ ಯಜ ॥ ೧೨ ॥

॥ ಪದಪಾಠಃ ॥

ಗಾರ್ಹ ಽ ಪತ್ಯೇನ । ಸಂತ್ಯ । ಋತುನಾ । ಯಜ್ಞ ಽ ನೀಃ । ಅಸಿ ॥
ದೇವಾನ್ । ದೇವ ಽ ಯತೇ । ಯಜ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಸಂತ್ಯ ಫಲಪ್ರದಾಗ್ನಿದೇವ ಗಾರ್ಹ್ಯಪತ್ಯೇನ ಗೃಹಪತಿಸಂಬಂಧಿನಾ ರೂಪೇಣ ಯುಕ್ತಃ ಸನ್ ಋತುನಾ ಋತುದೇವೇನ ಸಹ ಯಜ್ಞನೀರ್ಯಜ್ಞಸ್ಯ ನಿರ್ವಾಹಕೋ ಽಸಿ । ತಸ್ಮಾತ್ತ್ವಂ ದೇವಯತೇ ದೇವವಿಷಯಕಾಮನಾಯುಕ್ತಾಯ ಯಜಮಾನಾಯ ದೇವಾನ್ಯಜ ॥ ಗಾರ್ಹಪತ್ಯೇನ । ಗೃಹಪತಿನಾ ಸಂಯುಕ್ತೇ ಞ್ಯಃ । ಪಾ. ೪-೪-೯೦ । ಯಸ್ಯೇತಿ ಲೋಪಃ । ಞಿತ್ಸ್ವಾದಾದಿವೃದ್ಧಿರಾದ್ಯುದಾತ್ತತ್ವಂ ಚ । ಗೃಹಪತಿತ್ವಮಿತ್ಯರ್ಥೇ ಪತ್ಯಂತಪುರೋಹಿತಾದಿಭ್ಯಃ । ಪಾ. ೫-೧-೧೨೮ । ಇತಿ ಯಕಿ ತ್ವಂತೋದಾತ್ತತ್ವಂ ಸ್ಯಾತ್ । ಸಂತ್ಯ । ಸನನೇ ಭವಃ ಷಣು ದಾನೇ । ಕ್ತಿಚ್ಕ್ತೌ ಚೇತಿ ಕ್ತಿಚ್ । ನ ಕ್ತಿಚಿ ದೀರ್ಘ-ತ್ವ । ಪಾ. ೬-೪-೩೯ । ಇತಿ ದೀರ್ಘನಲೋಪಾಭಾವಃ । ಭವನೇ ಭಂದಸಿ । ಪಾ. ೪-೪-೧೧೦ । ಇತಿ ಯತ್ । ತತ್ರ ಸಾಧುಃ । ಪಾ. ೪-೪-೯೮ । ಇತಿ ವಾ । ನಿಘಾತಃ । ಯಜ್ಞಂ ನಯತೀತಿ ಯಜ್ಞನೀಃ ಸತ್ಸೂದ್ವಿಷೇತ್ಯಾದಿನಾ ಕ್ವಿಪ್ । ಕೃದುತ್ತರಪದಪ್ರಕೃತಿಸ್ವರಃ । ದೇವಯತೇ । ದೇವಾನಾತ್ಮನ ಇಚ್ಛತೀತಿ ದೇವಯನ್ । ತಸ್ಮೈ । ಕ್ಯಚಿ ಚೇತೀತ್ವಂ ನ ಭವತಿ । ನ ಚ್ಛಂದಸ್ಯಪುತ್ರಸ್ಯೇತಿ ನಿಷೇಧಾತ್ । ಅಶ್ವಾಘಸ್ಯ । ಪಾ. ೭-೪-೩೭ । ಇತ್ಯಾತ್ವವಿಧಾನಾದೀತ್ವನಿಷೇಧೇ ಪ್ರಾಪ್ತೇಸ್ಯ ದೀರ್ಘಸ್ಯಾಪ್ಯೇಷ ನಿಷೇಧ ಇತ್ಯುಕ್ತಂ । ಶತುರನುನೋ ನದ್ಯಜಾದೀ ಇತಿ ವಿಭಕ್ತೇರುದಾತ್ತತ್ವಂ । ಅತ್ರ ಕ್ಯಚೆಶ್ಚಿತ್ತ್ವಾದಂತೋದಾತ್ತತ್ವಂ । ಶಸಃ ಪಿತ್ತ್ವಾದನುದಾತ್ತತ್ವಂ । ಶತುಶ್ಚ ಲಸಾರ್ವಧಾತುಕಸ್ವರೇಣೋಭಯೋಃ ಕ್ಯಚಾ ಸಹೈಕಾದೇಶ ಏಕಾದೇಶ ಉದಾತ್ತೇನೋದಾತ್ತ ಇತ್ಯುದಾತ್ತಃ । ತಸ್ಮಾದಂತೋದಾತ್ತತ್ವಾತ್ಪರಸ್ಯಾ ವಿಭಕ್ತೇಃ ಶತುರನುನೋ ನದ್ಯಜಾದೀ ಇತ್ಯುದಾತ್ತತ್ವಂ ॥ ೨೯ ॥

॥ ಪ್ರತಿಪದಾರ್ಥ ॥

ಸನ್ತ್ಯೈ— ಫಲಪ್ರದಾನದಲ್ಲಿ ಸಮರ್ಥನಾದ ಎಲೈ ಅಗ್ನಿಯೇ(ನೀನು) । **ಗಾರ್ಹಪತ್ಯೇನ**—ಗಾರ್ಹಪತ್ಯಾಗ್ನಿಯಿಂದ ಕೂಡಿದವನಾಗಿ । **ಋತೆನಾ**—ಋತುದೇವನೊಡನೆ । **ಯಜ್ಞಾನೀಃ**—ಯಜ್ಞನಿರ್ವಾಹಕನಾಗಿ । **ಅಸಿ**—ಆಗಿದ್ದೀಯೆ (ಆದ್ದರಿಂದ) । **ದೇವಯತೇ**—ಯಜ್ಞಕ್ಕಾಗಿ ದೇವತೆಗಳನ್ನಪೇಕ್ಷಿಸುವ ಯಜಮಾನನಿಗೋಸ್ಕರ । **ದೇವಾನ್**—ದೇವತೆಗಳನ್ನು । **ಯಜ**—ಆರಾಧಿಸು.

॥ ಭಾವಾರ್ಥ ॥

ಎಲೈ ಅಗ್ನಿದೇವನೇ, ನೀನು ಇಷ್ಟಾರ್ಥಗಳನ್ನು ಕೊಡುವವನು. ಗಾರ್ಹಪತ್ಯಾಗ್ನಿರೂಪದಿಂದ ಕೂಡಿ ಯಜಮಾನನ ಯಜ್ಞಕರ್ಮಗಳನ್ನು ಋತುದೇವತೆಯೊಡನೆ ನಿರ್ವಹಿಸುತ್ತೀಯೆ. ಆದುದರಿಂದ ಯಾವಾಗಲೂ ದೇವಯಾಗಾಪೇಕ್ಷೆಯುಳ್ಳ ಯಜಮಾನನಿಗಾಗಿ ನೀನು ಯಾಗವನ್ನು ನಿರ್ವಹಿಸು.

English Translation.

O Agni, giver of rewards, being the lord of the house, and partaker with Ritu of the sacrifice, perform the sacrifice on behalf of the worshipper.

॥ ವಿಶೇಷವಿಷಯಗಳು ॥

ಸಂತ್ಯೈ—ಷಣು ದಾನೇ । ಸನನೇ ಭವ ॥ ಷಣು ಧಾತುವಿಗೆ ಕೊಡುವುದು ಎಂದರ್ಥವು. ಆದುದರಿಂದ ಈ ಧಾತುವಿನಿಂದ ನಿಷ್ಪನ್ನವಾದ ಸಂತ್ಯೈ ಎಂಬ ಶಬ್ದಕ್ಕೆ ಕೊಡುವವನು ಎಂದರ್ಥವು. ಏನನ್ನು ಕೊಡುವವನು ಎಂದರೆ ಯಜ್ಞಯಾಗಾದಿಕರ್ಮಗಳಿಗೆ ಫಲವನ್ನು ಕೊಡುವವನು. ಅಥವಾ ರತ್ನಧಾತಮಃ ಮೊದಲಾದ ಶಬ್ದಗಳಲ್ಲಿ ಹೇಳಿರುವಂತೆ ಧನಾದ್ಯೈಶ್ವರ್ಯವನ್ನು ಕೊಡುವವನು.

ಯಜ್ಞನೀಃ—ಯಜ್ಞಂ ನಯತೀತಿ ಯಜ್ಞನೀಃ । ಯಜ್ಞಸ್ಯ ನಿರ್ವಾಹಕಃ ॥ ಯಜ್ಞವನ್ನು ನಿರ್ವಹಿಸುವವನು.

ದೇವಯತೇ—ದೇವಾನಾತ್ಮನ ಇಚ್ಛಂತೀತಿ ದೇವಯನ್ ತಸ್ಮೈ ಯಜಮಾನಾಯ ॥ ತಾನು ಮಾಡುವ ಯಜ್ಞಕ್ಕೆ ದೇವತೆಗಳು ಬರಬೇಕೆಂದು ಅಪೇಕ್ಷಿಸುವ ಯಜಮಾನನಿಗೋಸ್ಕರ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಗಾರ್ಹಪತ್ಯೇನೇ— ಗೃಹಪತಿನಾ ಸಂಯುಕ್ತೇ ಞ್ಯಃ (ಪಾ ಸೂ. ೪-೪-೯೦) ಗೃಹಪತಿಶಬ್ದಪ್ರಕೃತಿಕವಾದ ತೃತೀಯೂವಿಭಕ್ತ್ಯಂತಸಮರ್ಥದ ಮುಂದೆ ಸಂಯುಕ್ತ ಎಂಬ ಅರ್ಥದಲ್ಲಿ ಞ್ಯ ಪ್ರತ್ಯಯ ಬರುವುದು ಎಂಬುದರಿಂದ ಗೃಹಪತಿನಾ ಶಬ್ದದ ಮುಂದೆ ಞ್ಯ ಪ್ರತ್ಯಯ. ಗೃಹಪತಿ+ಟಾ+ಞ್ಯ. **ಚುಟೂ** (ಪಾ. ಸೂ. ೧-೩-೭) ಎಂಬುದರಿಂದ ಪ್ರತ್ಯಯದ ಆದಿಯಲ್ಲಿರುವ ಞಕಾರಕ್ಕೆ ಇತ್ಸಂಜ್ಞೆ. **ತಸ್ಯಲೋಪಃ** (ಪಾ. ಸೂ. ೧-೩-೯) ಎಂಬುದರಿಂದ ಲೋಪ. ತದ್ಧಿತಾಂತಪ್ರಾತಿಪದಿಕಾವಯವವಾದ ಟಾ ಎಂಬ ಸುಪ್‌ಗೆ **ಸುಪೋಧಾತು**- (ಪಾ. ಸೂ. ೨-೪-೭೧) ಎಂಬುದರಿಂದ ಲುಕ್. ಗೃಹಪತಿ+ಯ. **ಯಸ್ಯೇತಿಚ** (ಪಾ. ಸೂ. ೬-೪-೧೬೮) ಎಂಬುದರಿಂದ ಇಕಾರಕ್ಕೆ ಲೋಪ, ಪ್ರತ್ಯಯವು ಞಿತ್ತಾದ್ದರಿಂದ **ತದ್ಧಿತೇಷ್ವಚಾಮಾದೇಃ** (ಪಾ. ಸೂ. ೭.೨-೧೧೭) ಎಂಬುದರಿಂದ ಆದಿವೃದ್ಧಿ. 'ಉರಣ್ರಪರಃ' ಎಂಬುದರಿಂದ ರಪರವಾಗಿ ಬರುವುದು. ಗಾರ್ಹಪತ್ಯ ಎಂದಾಗುವುದು. ಪ್ರತ್ಯಯವು ಞಿತ್ತಾದ್ದರಿಂದ **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತ ಬರುವುದು. **ಪತ್ಯಂತಪುರೋಹಿತಾದಿಭ್ಯೋ ಯಕ್** (ಪಾ, ಸೂ. ೫-೧-೧೨೮) ಪತಿಶಬ್ದವನ್ನು ಕೊನೆಯಲ್ಲಿ ಹೊಂದಿರುವ ಶಬ್ದಗಳು, ಪುರೋಹಿತಾದಿಗಣಪಠಿತಶಬ್ದಗಳು ಈ ಶಬ್ದಪ್ರಕೃತಿಕವಾದ ಷಷ್ಠ್ಯಂತ ಸಮರ್ಥದ ಮುಂದೆ ಭಾವ, ಕರ್ಮ ಎಂಬ ಅರ್ಥಗಳಲ್ಲಿ ಯಕ್ ಬರುವುದು ಎಂಬುದರಿಂದ ಗೃಹಪತೇರ್ಭಾವಃ ಎಂಬ ಅರ್ಥದಲ್ಲಿ ಪತ್ಯಂತವಾದ ಗೃಹಪತಿಶಬ್ದದ ಮುಂದೆ ಯಕ್ ಪ್ರತ್ಯಯ ಬರುವುದು ಎಂದು ವರ್ಣಿಸಿದರೆ ಗಾರ್ಹಪತ್ಯ ಎಂಬ ರೂಪವು ಯದ್ಯಪಿ ಸಿದ್ಧವಾಗುವುದು. ಆದರೂ ಆಗ ಪ್ರತ್ಯಯಸ್ವರ ಬಂದು ಗಾರ್ಹಪತ್ಯ ಎಂಬುದು ಅಂತೋದಾತ್ತವಾಗುವುದು. ಆದ್ಯುದಾತ್ತವು ಸಿದ್ಧವಾಗುವುದಿಲ್ಲ. ಆದ್ದರಿಂದ ಞ್ಯ ಪ್ರತ್ಯಯವು ಉಪಪಾದಿತವಾಗಿರುವುದು.

ಸನ್ತ್ಯ—ಸನನೇ ಭವ=ಫಲವನ್ನು ಕೊಡುವುದರಲ್ಲಿರತಕ್ಕವನೇ ಎಂದು ಅರ್ಥ. ಷಣು ದಾನೇ ಧಾತು. **ಕ್ತಿಚ್‌ಕ್ತೌ ಚ ಸಂಜ್ಞಾಯಾಮ್** (ಪಾ. ಸೂ. ೩-೩-೧೭೪) ಆಶೀರರ್ಥ ಸೋರುವಾಗಲೂ, ಸಂಜ್ಞೆ ತೋರುವಾಗಲೂ ಧಾತುವಿನ ಮುಂದೆ ಕ್ತಿಚ್, ಕ್ತ, ಎಂಬ ಪ್ರತ್ಯಯಗಳು ಬರುವುವು ಎಂಬುದರಿಂದ ಕ್ತಿಚ್ ಬರುತ್ತೆ. ಧಾತ್ವಾದೇಃಷಃಸಃ ಎಂಬುದರಿಂದ ಷಕಾರಕ್ಕೆ ಸಕಾರ. ರಷಾಭ್ಯಾಂ ಎಂಬುದರಿಂದ ಬಂದ ಣತ್ವಕ್ಕೆ ನಿವೃತ್ತಿ. ಸನ್+ತಿ. **ನ ಕ್ತಿಚಿ ದೀರ್ಘಶ್ಚ** (ಪಾ. ಸೂ. ೬-೪-೩೯) ಕ್ತಿಚ್ ಪ್ರತ್ಯಯ ಪರದಲ್ಲಿರುವಾಗ ಅನುದಾತ್ತೋಪದೇಶವಾದ ಧಾತುಗಳು ಅಂದರೆ ಅನಿಟ್ಟುವಾದ ಧಾತುಗಳು, ವನತಿತನೋತ್ಯಾದಿ ಧಾತುಗಳು ಇವುಗಳಿಗೆ ದೀರ್ಘವೂ, ಇವುಗಳ ಅನುನಾಸಿಕ ವರ್ಣಕ್ಕೆ ಲೋಪವೂ ಸಹ ಬರುವುದಿಲ್ಲ ಎಂದು ಸೂತ್ರಾರ್ಥ. **ಅನುನಾಸಿಕಸ್ಯಕ್ವಿಝ್ಣು-ಲೋಃಕ್ಷ್ಣಿತಿ** (ಪಾ. ಸೂ. ೬-೪-೧೫) ಕ್ವಿ ಪ್ರತ್ಯಯ ಪರವಾಗಿರುವಾಗಲೂ ಝ್ಞುಲಾದಿಯಾದ ಕಿತ್ತು ಞಿತ್ತು ಆದ ಪ್ರತ್ಯಯ ಪರವಾಗಿರುವಾಗಲೂ ಅನುನಾಸಿಕಾಂತವಾದ ಧಾತುವಿನ ಉಪಾಂತ್ಯವರ್ಣಕ್ಕೆ ದೀರ್ಘ ಬರುವುದು ಎಂಬುದರಿಂದ ಪ್ರಾಪ್ತವಾದ ದೀರ್ಘಕ್ಕೂ **ಅನುದಾತ್ತೋಪದೇಶವನತಿತನೋತ್ಯಾದೀನಾಮನುನಾಸಿಕ-ಲೋಪೋಝ್ಞುಲಿಕ್ಷ್ಣಿತಿ** (ಪಾ. ಸೂ. ೬-೪-೩೭) ಅನುನಾಸಿಕ ವರ್ಣವನ್ನು ಕೊನೆಯಲ್ಲಿ ಹೊಂದಿರುವ ತನೋತ್ಯಾದಿ ಧಾತುಗಳ ಕೊನೆಯ ವರ್ಣಕ್ಕೂ ವನ್ ಧಾತುವಿನ ಕೊನೆಯ ವರ್ಣಕ್ಕೂ ಸಹ ಝ್ಞುಲಾದಿಯಾದ ಕಿತ್ತು. ಅಥವಾ ಞಿತ್ತು ಆದ ಪ್ರತ್ಯಯ ಪರದಲ್ಲಿರುವಾಗ ಲೋಪ ಬರುವುದು ಎಂಬುದರಿಂದ ಪ್ರಾಪ್ತವಾದ ನಕಾರ ಲೋಪಕ್ಕೂ ನ ಕ್ತಿಞಿದೀರ್ಘಶ್ಚ ಎಂಬುದರಿಂದ ನಿಷೇಧಬರುವುದು. ಸನ್ತಿ ಎಂದಾಗುವುದು. ವಸ್ತುತಃ ಇಲ್ಲಿ

ಸನಃಕ್ತಿಚಿ ಲೋಪಶ್ಚಾಸ್ಯಾನ್ಯತರಸ್ಯಾಮ್ (ಪಾ. ಸೂ. ೬೪-೪೬) ಕ್ತಿಚ್ ಪ್ರತ್ಯಯ ಪರದಲ್ಲಿರುವಾಗ ಸನ್ ಧಾತುವಿನ ನಕಾರಕ್ಕೆ ಲೋಪವೂ, ಅತ್ವವೂ ಸಹ ವಿಕಲ್ಪವಾಗಿ ಬರುವುದು ಎಂಬುದರಿಂದ ಅತ್ವನಲೋಪಗಳು ವಿಕಲ್ಪವಾಗಿ ವಿಹಿತವಾಗಿರುವುದರಿಂದ ಅನೆರಡೂ ಬರದೇ ಇರುವಪಕ್ಷದಲ್ಲಿ ಸನ್ತಿ ಎಂದು ರೂಪವು ಸಿದ್ಧವಾಗುವುದು ಎಂದು ವರ್ಣನೆ ಮಾಡುವುದು ಯುಕ್ತವು. **ಸರ್ವಏವಾಯಂ ಯೋಗಶ್ಶಕ್ಯೋಽವಕ್ತುಮ್** (ಪಾ. ಮಭಾ. ೬-೪-೪೫) ಈ ಸಂಪೂರ್ಣ ಸೂತ್ರವನ್ನೂ ಬಿಡುವುದಕ್ಕೆ ಸಾಧ್ಯವು ಎಂಬ ಪ್ರತ್ಯಾಖ್ಯಾನಪಕ್ಷದಲ್ಲಿಯೂ ಕೈಯಟದಲ್ಲಿ ಸನಃಕ್ತಿಚಿ ಇತ್ಯೇವ ಲೋಪಸ್ಯ ಪ್ರಕರಣಾತ್ಸಿದ್ಧತ್ವಾಲ್ಲೋಪಶ್ಚೇತ್ಯಪಿ ನ ವಕ್ತವ್ಯಮಿತ್ಯರ್ಥಃ. ಬಹೂನಾಂ ಪದಾನಾಂ ಪ್ರತ್ಯಾಖ್ಯಾನಾಚ್ಚ ಸರ್ವಏವಾಯಂ ಯೋಗ ಇತ್ಯುಚ್ಯತೇ, ಎಂದು ವರ್ಣಸಲಾಗಿರುವುದು. ಲೋಪಃ, ಚ, ಅಸ್ಯ, ಅನ್ಯತರಸ್ಯಾಮ್ ಎಂಬ ಬಹುಪದಗಳು ಅನವಶ್ಯಕವೆಂದು ಪ್ರತ್ಯಾಖ್ಯಾನ ಮಾಡಿರುವುದರಿಂದ ' ಸರ್ವಏವಾಯಂ ' ಎಂಬ ಭಾಷ್ಯವು ಪ್ರವೃತ್ತವಾಗಿರುವುದು. ಅಲ್ಲದೆ ಸಂಪೂರ್ಣಸೂತ್ರಪ್ರತ್ಯಾಖ್ಯಾನವು ಭಾಷ್ಯಾಭಿಪ್ರಾಯವಲ್ಲ. ಸನಃಕ್ತಿಚಿ ಎಂದು ಇಷ್ಟುಮಾತ್ರ ಸೂತ್ರವು ಸಾಕು ಎಂದು ವರ್ಣಿತವಾಗಿರುವುದು. ಈ ಪಕ್ಷದಲ್ಲಿ ಸನಃಕ್ತಿಚಿ ಎಂದು ವಿಹಿತವಾದ ಅತ್ವಲೋಪಗಳು ವಿಕಲ್ಪಗಳಾದ್ದರಿಂದ ಅವು ಬರದೇ ಇರುವಪಕ್ಷದಲ್ಲಿ ಸನ್ತಿ ಎಂದು ರೂಪವು ಸಿದ್ಧವಾಗುವುದು ಎಂದು ವರ್ಣಿಸುವುದು ಯುಕ್ತವು. ಸನ್ತ್ಯಂ ಭವಃ ಎಂದು ವಿಗ್ರಹವನ್ನು ವಿವಕ್ಷಿಸಿದರೆ **ಭವೇ ಛಂಡಸಿ** (ಪಾ. ಸೂ. ೪-೪೧-೦) ಪ್ರಾತಿಪದಿಕ ಪ್ರಕೃತಿಕವಾದ ಸಪ್ತಮ್ಯಂತಸಮರ್ಥದ ಮುಂದೆ ಭವಾರ್ಥದಲ್ಲಿ ಯತ್ ಪ್ರತ್ಯಯವು ಛಂದಸ್ಸಿನಲ್ಲಿ ಬರುವುದು ಎಂಬುದರಿಂದ ಯತ್ ಬಂದರೆ ಸನ್ತಿ+ಙಿ-ಯ ಎಂದಿರುವುದು. ಅಥವಾ ಸನ್ತ್ಯಂಸಾಧುಃ ಎಂದು ವಿಗ್ರಹ ಮಾಡಿದರೆ **ತತ್ರ ಸಾಧುಃ** (ಪಾ.ಸೂ. ೪-೪-೯೫) ಪ್ರಾತಿಪದಿಕ ಪ್ರಕೃತಿಕವಾದ ಸಪ್ತಮ್ಯಂತವಾದ ಸಮರ್ಥದ ಮುಂದೆ ಸಾಧುಃ ಎಂಬ ಅರ್ಥದಲ್ಲಿ ಯತ್ ಬರುವುದು ಎಂಬುದರಿಂದ ಯಿತ್ ಬಂದರೆ ಸನ್ತಿ+ಙಿ+ಯ. ಎರಡೆಡೆಯಲ್ಲೂ ತದ್ಧಿತಾಂತಪ್ರಾತಿಪದಿಕಾವಯವವಾದ ಸುಪ್ಪಿಗೆ ಲುಕ್. **ಯೇಸ್ಯೇತಿ ಚೆ** (ಪಾ. ಸೂ. ೬-೪-೧೪೮) ಎಂಬುದರಿಂದ ಇಕಾರ ಲೋಪ, ಸನ್ತ್ಯ ಎಂದಾಗುವುದು. ಪ್ರಥಮೈಕವಚನದಲ್ಲಿ ಸನ್ತ್ಯಃ, ಸಂಬೋಧನ ಪ್ರಥಮೈಕವಚನದಲ್ಲಿ ಸನ್ತ್ಯ ಎಂದುರೂಪವು. **ಆಮನ್ತ್ರಿತಸ್ಯ ಚೆ** (ಪಾ. ಸೂ. ೮-೧-೧೯) ಎಂಬುದರಿಂದ ಸರ್ವಾನುದಾತ್ತ ಬರುವುದು

ಯಜ್ಞನೀಃ-ಯಜ್ಞಂ ನಯತೀತಿ ಯಜ್ಞನೀಃ, ಸತ್ಸೂದ್ವಿಷದ್ರುಹದುಹಯುಜವಿದಭಿದಚ್ಛಿದಜಿನೀರಾಜಾಮುಪಸರ್ಗೇಽಪಿಕ್ವಿಪ್ (ಪಾ. ಸೂ. ೩-೨-೬೧) ಷದ್ಲೃ ವಿಶರಣಾದೌ, ಸೂಧಾತುವು ಷೂಙ್ ಪ್ರಾಣಿಗರ್ಭವಿಮೋಚನೇ ಆದಾದಿ, ಷೂಙ್ ಪ್ರಾಣಿಪ್ರಸವೇ ದಿವಾದಿ, ಷೂ ಪ್ರೇರಣೇ ತುದಾದಿ, ಈ ರೀತಿಯಲ್ಲಿ ಮೂರು ಇರುವುದು. ಇಲ್ಲಿ **ಸಹಚರಿತಾಸಹಚರಿತಯೋಸ್ಸಹ ಚರಿತಸ್ಯೈವಗ್ರಹಣಮ್** (ಪರಿಭಾ. ೧೦೩) ಎಂಬುದರಿಂದ ಆದಾದಿಕವಾದ ದ್ವಿಷ್ ಧಾತು ಸಾಹಚರ್ಯವಿರುವುದರಿಂದ ಆದಾದಿಕವಾದ ಧಾತುವಿಗೇ ಗ್ರಹಣ, ದ್ವಿಷ ಅಪ್ರೀತೌ, ದ್ರುಹ ಜಿಘಾಂಸಾಯಾಮ್, ದುಹ ಪ್ರಪೂರಣೇ, ಯುಜಿರ್ ಯೋಗೇ, ಯುಜ ಸಮಾಧೌ, ವಿದ ಎಂಬುದರಿಂದ ವಿದ ಜ್ಞಾನೇ ಆದಾದಿ, ವಿದ ಸತ್ತಾಯಾಂ ದಿವಾದಿ, ವಿದ ವಿಚಾರಣೇ ತುದಾದಿ, ಈ ಮೂರಕ್ಕೂ ಗ್ರಹಣವುಂಟು, ವಿದ ಎಂದು ಆಕಾರಾಂತವಾಗಿ ನಿರ್ದೇಶ ಮಾಡಿರುವುದರಿಂದ ವಿದ್ಲೃ ಲಾಭೇ ಎಂಬ ತುದಾದಿ ಧಾತುವಿಗೆ ಗ್ರಹಣವಿಲ್ಲ. ಛಿದಿರ್ ವಿದಾರಣೇ, ಛಿದಿರ್ ದ್ವೈಧೀಕರಣೇ. ಜಿ ಜಯೇ, ಜಿ ಅಭಿಭವೇ, ಣೀಞ್ ಪ್ರಾಪಣೇ, ರಾಜೃ ದೀಪ್ತೌ, ಈ ಧಾತುಗಳ ಮುಂದೆ ಉಪಸರ್ಗವಿದ್ದರೂ ಇಲ್ಲದಿದ್ದರೂ ಸುಬಂತವು ಉಪಪದವಾಗಿರುವಾಗ ಕ್ವಿಪ್ ಪ್ರತ್ಯಯ ಬರುವುದು ಎಂಬುದರಿಂದ ಯಜ್ಞಂ ಎಂಬ ಸುಬಂತವು ಉಪಪದವಾಗಿರುವಾಗ ಣೀಞ್ ಧಾತುವಿನ ಮುಂದೆ ಕ್ವಿಪ್ ಬರುವುದು **ಣೋನಃ** (ಪಾ. ಸೂ. ೬-೧-೬೫) ಎಂಬುದರಿಂದ ಣಕಾರಕ್ಕೆ ನಕಾರ. ಪ್ರಾತಿ

ಪದಿಕಾವಯವವಾದ ಸುಪ್‌ಗೆ ಲುಕ್, ಕ್ವಿಪ್‌ಗೆ ಲೋಪ, ಯಜ್ಞನೀ, ಪ್ರಥಮೈಕವಚನ ಸು ಪ್ರತ್ಯಯ. ರುತ್ವ-ವಿಸರ್ಗ, ಯಜ್ಞನೀಃ ಎಂದಾಗುವುದು, ನೀ ಎಂಬ ಉತ್ತರಪದವು ಧಾತುಸ್ವರದಿಂದ ಅಂತೋದಾತ್ತ. ಸಮಾ-ಸಾನಂತರವೂ ಗತಿಕಾರಕೋಪಪದಾತ್ಕೃತ್ (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿ-ಸ್ವರ ಬಂದು ಆದೇಸ್ವರ ನಿಲ್ಲುವುದು.

ದೇವಯತೇ—ದೇವಾನ್ ಆತ್ಮನಃ ಇಚ್ಛತಿ, ದೇವತೆಗಳನ್ನು ತನಗಾಗಿ ಇಚ್ಛಿಸುವನು, ಎಂದು ವಿಗ್ರಹವಾದಾಗ ದೇವಯನ್ ಎಂದಾಗುವುದು. ಹೇಗೆಂದರೆ, **ಸುಪ ಆತ್ಮನಃ ಕ್ಯಚ್** (ಪಾ.ಸೂ. ೩-೧-೮) ಎಂಬುದರಿಂದ ದೇವಂ ಎಂಬುದರ ಮುಂದೆ ಕ್ಯಚ್, ಸನಾದ್ಯಂತಾ ಧಾತವಃ (ಪಾ.ಸೂ. ೩-೧-೩೨)=ಎಂಬುದರಿಂದ ಧಾತುಸಂಜ್ಞೆ. ಧಾತ್ವವಯವವಾದ ಸುಪ್ಪಿಗೆ **ಸುಪೋಧಾತು**—(ಪಾ.ಸೂ. ೨-೪-೭೧)ಎಂಬುದರಿಂದ ಲುಕ್, ದೇವ+ಯ ಈಗ **ಕ್ಯಚಿಚ** (ಪಾ.ಸೂ. ೭-೪-೩೩) ಕ್ಯಚ್ ಪ್ರತ್ಯಯ ಪರದಲ್ಲಿರುವಾಗ ಆಕಾರಕ್ಕೆ ಈಕಾರಾದೇಶ ಬರುವುದು ಎಂಬುದರಿಂದ ಪ್ರಾಪ್ತವಾಗುವ ಈಕಾರಾದೇಶಕ್ಕೆ **ನ ಛಂದಸ್ಯಪುತ್ರಸ್ಯ** (ಪಾ.ಸೂ. ೭-೪-೩೫) ಕ್ಯಚ್ ಪ್ರತ್ಯಯ ಪರದಲ್ಲಿರುವಾಗ ಪುತ್ರಶಬ್ದಭಿನ್ನವಾದ ಹ್ರಸ್ವ ಆಕಾರಾಂತ ಶಬ್ದಗಳಿಗೆ ಈತ್ವ ದೀರ್ಘಗಳು ಬರುವುದಿಲ್ಲ ಎಂದು ನಿಷ್ಕೃಷ್ಟಸೂತ್ರಾರ್ಥ. **ಅನಂತರಸ್ಯ ವಿಧಿರ್ವಾ ಭವತಿ ಪ್ರತಿಷೇಧೋ ವಾ** (ಪರಿಭಾ. ೬೧) ಎಂಬುದರಿಂದ ಈ ನಿಷೇಧವು ಅನಂತರವಾದ ಕ್ಯಚಿಚ ಎಂಬುದಕ್ಕೆ ಮಾತ್ರ ಯದ್ಯಪಿ ನಿಷೇಧಕವಾಗುವುದು. ಆಗ ಈತ್ವ ಬರದಿದ್ದರೂ **ಅಕೃತ್ಸಾರ್ವಧಾತುಕಯೋಃ** (ಪಾ. ಸೂ. ೭-೪-೨೫) ಎಂಬುದರಿಂದ ದೀರ್ಘವು ಬರಬೇಕಾಗಿ ಬರುವುದು. ಏಕೆಂದರೆ ಅಕೃತ್ಸಾರ್ವಧಾತುಕಯೋಃ ಎಂಬುದಕ್ಕೆ ಕ್ಯಚಿಚ ಎಂಬುದು ಅಪವಾದವಾದುದು. ಅಪವಾದವಾದುದು ಬರದೇ ಹೋದರೆ ಉತ್ಸರ್ಗವು ತಡೆ ಇಲ್ಲದೆ ಬರುವುದು. ಆದುದರಿಂದ, ಕ್ಯಚ್ ಪ್ರತ್ಯಯ ಪರದಲ್ಲಿರುವಾಗ ಪುತ್ರಶಬ್ದಭಿನ್ನವಾದ ಅದಂತಶಬ್ದಕ್ಕೆ ಯಾವಯಾವುದು ಪ್ರಾಪ್ತವಾಗುವುದೋ ಅದೆಲ್ಲವೂ ಬರುವುದಿಲ್ಲ ಎಂದು ನಛಂದಸಿ ಎಂಬುದಕ್ಕೆ ಅರ್ಥವನ್ನು ಹೇಳಬೇಕು. ಅನಂತರಸ್ಯ ಎಂಬುದನ್ನು ಆಶ್ರಯಿಸುವುದಿಲ್ಲ. ಈ ಅಂಶದಲ್ಲಿ ಪ್ರಮಾಣನೇನೆಂದರೆ **ಅಶ್ವಾಘಸ್ಯಾತ್** (ಪಾ.ಸೂ. ೭-೪-೩೭) ಛಂದಸ್ಸಿನಲ್ಲಿ ಕ್ಯಚ್ ಪ್ರತ್ಯಯ ಪರದಲ್ಲಿರುವಾಗ ಅಶ್ವ ಅಘ ಇವುಗಳಿಗೆ ಆತ್ವ ಬರುವುದು ಎಂದು ಆತ್ವವಿಧಾನನೇ ಪ್ರಮಾಣವು. ಅಶ್ವಾಯಂತಃ, ಅಘಾಯವಃ ಎಂಬಲ್ಲಿ ದೀರ್ಘಾಕಾರಶ್ರವಣಕ್ಕಾಗಿ ಆತ್ವವು ವಿಧಿಸಲ್ಪಟ್ಟಿರುವುದು. ನ ಛಂದಸ್ಯ-ಪುತ್ರಸ್ಯ ಎಂಬುದು ಈತ್ವ ಮಾತ್ರಕ್ಕೆ ಅನಂತರಸ್ಯ ಎಂಬ ನ್ಯಾಯದಿಂದ ನಿಷೇಧಕ ಎಂದು ಇಟ್ಟುಕೊಂಡರೆ ಅಕೃ-ತ್ಸಾರ್ವಧಾತುಕಯೋಃ ಎಂಬುದರಿಂದಲೇ ದೀರ್ಘೆ ಬಂದು ಅಶ್ವಾಯಂತಃ ಅಘಾಯವಃ ಎಂಬ ರೂಪಗಳು ಸಿದ್ಧವಾಗುವುವು. ಆಗ ಅಶ್ವಾಘಸ್ಯಾತ್ ಎಂಬ ಸೂತ್ರವು ವ್ಯರ್ಥವಾಗುವುದು. ವ್ಯರ್ಥಂ ಸತ್ ಕಿಂಚಿದರ್ಥಂ ಜ್ಞಾಪಯತಿ ಎಂಬ ನ್ಯಾಯದಿಂದ ಈ ಸೂತ್ರವು ಕ್ಯಚಿಚ ಎಂಬುದರ ಈತ್ವ ಮಾತ್ರಕ್ಕೆ ನಿಷೇಧಕವಲ್ಲ. ದೀರ್ಘೆಕ್ಕೂ ಸಹ ನಿಷೇಧಕವೆಂದು ಜ್ಞಾಪಿಸುವುದು. ಈಗ ಈ ಸೂತ್ರವಿಲ್ಲದಿದ್ದರೆ ಅಶ್ವಾಯಂತಃ ಇತ್ಯಾದಿ ರೂಪಗಳು ಸಿದ್ಧಿಸವು. ಆದ್ದರಿಂದ ಸೂತ್ರವು ಸಾರ್ಥಕವಾಗುವುದು. ಆದಕಾರಣ ಕ್ಯಚಿಚ ಎಂಬುದು ಈತ್ವ ದೀರ್ಘೆಗಳೆರಡಕ್ಕೂ ನಿಷೇಧಕ ವೆಂದು ಸಿದ್ಧವಾಗುವುದು. ಏವಂಚ ಪ್ರಕೃತದಲ್ಲಿ ದೇವ+ಯ ಎಂಬಲ್ಲಿ ಅಕೃತ್ಸಾರ್ವಧಾತುಕಯೋಃ ಎಂಬುದ ರಿಂದ ದೀರ್ಘವೂ ಬರುವುದಿಲ್ಲ. ದೇವಯ ಎಂಬುದು ಧಾತು, ಇದರ ಮುಂದೆ **ವರ್ತಮಾನೇ ಲಟ್** (ಪಾ.ಸೂ. ೩-೨-೧೨೩) ಎಂಬುದರಿಂದ ಲಟ್, ಅದರ ಸ್ಥಾನದನಲ್ಲಿ **ಲಟಃ ಶತೃಶಾನಚೌ**- (ಪಾ.ಸೂ. ೩-೨-೧೨೪) ಎಂಬುದ ರಿಂದ ಶತೃ, ದೇವಯ+ಅತ್. ಕರ್ತರಿ ಶಪ್ ಎಂಬುದರಿಂದ ಶಪ್, ದೇವಯ+ಅ+ಅತ್, **ತತೋಗುಣೇ** (ಪಾ.ಸೂ. ೬-೧-೯೭) ಎಂಬುದರಿಂದ ಪರರೂಪವು ಎರಡಾವರ್ತಿ ಬರುವುದು ದೇವಯತ್ ಎಂದಾಗುವುದು.

ಇಲ್ಲಿ ಕ್ಯಚ್ ಪ್ರತ್ಯಯವು ಚಿತ್ತಾದ್ದರಿಂದ ಚಿತೇಃ (ಪಾ.ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತ. ಶಪ್ ಪಿತ್ತಾದ್ದರಿಂದ ಅನುದಾತ್ತೌ ಸುಪ್ಪಿತೌ (ಪಾ.ಸೂ. ೩-೧-೪) ಎಂಬುದರಿಂದ ಅನುದಾತ್ತ. ಅತ್ ಎಂಬ ಶತೃ-ಪ್ರತ್ಯಯವು ಲಟ್ ಲಕಾರಸ್ಥಾನದಲ್ಲಿ ಬಂದಿರುವುದು. ಆದು ಶಿತ್ತಾದ್ದರಿಂದ ತಿಙ್ಶಿತ್ಸಾರ್ವಧಾತುಕಂ (ಪಾ.ಸೂ. ೩-೪-೧೧೩) ಎಂಬುದರಿಂದ ಸಾರ್ವಧಾತುಕ. ಶಪ್ ಎಂಬ ಅಕಾರಾಂತೋಪದೇಶದ ಮುಂದೆ ಇರುವುದು. ಆದ್ದರಿಂದ ತಾಸ್ಯನುದಾತ್ತೇನ್ಡಿದುಪದೇಶಾತ್- (ಪಾ.ಸೂ. ೬-೧-೧೮೬) ಎಂಬುದರಿಂದ ಅತ್ ಎಂಬುದು ಅನುದಾತ್ತ. ಶಪ್‌ನ ಅಕಾರದೊಂದಿಗೆ ಪರರೂಪೈಕಾದೇಶದಿಂದ ಬಂದ ಅಕಾರವು ವಿಕಾದೇಶ ಉದಾತ್ತೇನೋದಾತ್ತಃ (ಪಾ.ಸೂ. ೬-೧-೧೫೫) ಎಂಬುದರಿಂದ ಉದಾತ್ತ, ಈ ಉದಾತ್ತದೊಂದಿಗೆ ಅತ್ ಎಂಬುದರ ಅನುದಾತ್ತಾಕಾರಕ್ಕೆ ಪರರೂಪದಿಂದ ಬರುವ ಅಕಾರವೂ ಪೂರ್ವೋಕ್ತರೀತಿಯಲ್ಲಿ ಉದಾತ್ತ. ಏನಂಚ ದೇವಯತ್ ಎಂಬಲ್ಲಿ ಯ ಎಂಬುದು ಉದಾತ್ತವಾದ್ದರಿಂದ ಇದು ಅಂತೋದಾತ್ತ ಎಂದು ಸಿದ್ಧವಾಯಿತು. ಇದರ ಮುಂದೆ ಚತುರ್ಥೀವಿಭಕ್ತಿ ಏಕವಚನಸಂಜ್ಞಕವಾದ ಙೇಪ್ರತ್ಯಯ ದೇವಯತ್+ಏ, ಶತುರನುನಾವನದ್ಯಜಾದೀ(ಪಾ.ಸೂ. ೬-೧-೧೬೩) ನುಮಾಗಮವನ್ನು ಹೊಂದದೇ ಇರುವ ಯಾವ ಶತೃ ಪ್ರತ್ಯಯವಿದೆಯೋ ಅವನ್ನು ಕೊನೆಯಲ್ಲಿ ಹೊಂದಿ ಅಂತೋದಾತ್ತವಾಗಿರುವ ಶಬ್ದದ ಮುಂದೆ ಇರುವ ನದೀಸಂಜ್ಞಕವರ್ಣವೂ, ಅಜಾದಿಯಾದ ಶಸಾದಿವಿಭಕ್ತಿಯೂ ಸಹ ಉದಾತ್ತವಾಗುವುದು ಎಂಬುದರಿಂದ ಏ ಎಂಬ ವಿಭಕ್ತಿಯು ಉದಾತ್ತ. ॥೧೫॥

ಹದಿನಾರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಆ ತ್ವಾ ವಹಂತ್ವಿತಿ ಪಂಚಮಂ ನವರ್ಚಂ ಸೂಕ್ತಂ । ಋಷಿಚ್ಛಂದಸೀ ಪೂರ್ವವತ್ । ಅನುವಿರ್ದೇತೇ ವಿಶೇಷಾದೇಶಾಭಾವಾದಿಂದ್ರೋ ದೇವತಾ ॥ ವಿನಿಯೋಗಸ್ತು । ಪ್ರಾತಃಸವನೇ ವೈತ್ರಾವರುಣಸ್ಯೋನ್ನೀಯಮಾನೇ ಸೂಕ್ತಮಾತ್ವಾ ವಹಂತು ಹರಯ ಇತಿ । ತಥಾ ಚ ದ್ವಿದೇವತ್ಯೈ ಋಕ್ಷರಂತೀತಿ ಖಂಡೇ ಸೂತ್ರಿತಂ । ಉನ್ನೀಯಮಾನೇಭ್ಯೋಽನ್ಯಾಹಾ ತ್ವಾವಹಂತು । ಆ. ೫-೫- । ಇತಿ ॥ ತಥಾ ಷೋಡಶಿಶಸ್ತ್ರ ಆ ತ್ವಾ ವಹಂತು ಹರಯ ಇತಿ ತಿಸ್ರಃ । ತಥಾ ಸೂತ್ರಿತಮಥ ಷೋಡಶೀತಿ ಖಂಡೇ । ಆ ತ್ವಾ ವಹಂತು ಹರಯ ಇತಿ ತಿಸ್ರೋ ಗಾಯತ್ರ್ಯಃ । ಆ. ೬-೨- । ಇತಿ ॥

ಅನುವಾದವು—ಇತ್ಯಾ ವಹಂತು ಎಂಬುದು ನಾಲ್ಕನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವುವು. ಋಷಿಚ್ಛಂದಸ್ಸುಗಳು ಹಿಂದಿನ ಸೂಕ್ತದಂತೆ. ಇಂದ್ರನು ದೇವತೆಯು. ವಿನಿಯೋಗವು—ಪ್ರಾತಸ್ಸವನಕಾಲದಲ್ಲಿ ವೈತ್ರಾವರುಣನೆಂಬ ಋತ್ವಿಜನು ಉನ್ನಯನವೆಂಬ ಕರ್ಮದಲ್ಲಿ ಆತ್ವಾ ವಹಂತು ಎಂಬ ಸೂಕ್ತವನ್ನು ಪಠಿಸಬೇಕು- ಆಶ್ವಲಾಯನ ಶ್ರೌತಸೂತ್ರದಲ್ಲಿ ದ್ವಿದೇವತ್ಯೈ ಋಚ್ಚರಂತೀತಿ ಎಂಬ ಖಂಡದಲ್ಲಿ ಉನ್ನಯನಕ್ಕಾಗಿ ಆತ್ವಾವಹಂತು ಎಂಬ ಸೂಕ್ತವನ್ನು ಪಠಿಸಬೇಕೆಂದು ಹೇಳಿರುವುದು (ಆ.ಸೂ.೫-೫). ಇದಲ್ಲದೆ ಷೋಡಶೀ ಎಂಬ ಖಂಡದಲ್ಲಿ ಷೋಡಶಿಶಸ್ತ್ರಪಠನಕ್ಕಾಗಿ ಆತ್ವಾವಹಂತು ಹರಯಃ ಎಂಬ ಗಾಯತ್ರೀ ಋಕ್ಕಿನ ತೃಚವನ್ನು ಪಠಿಸಬೇಕೆಂದು ಅದೇ ಸೂತ್ರದಲ್ಲಿಯೇ ಹೇಳಿರುವುದು. (ಆ. ೬-೨).

॥ ಓಂ ॥

ಸೂಕ್ತ—೧೬

॥ ಮಂಡಲ—೧ ॥ ಅನುವಾಕ—೪ ॥ ಸೂಕ್ತ—೧೬ ॥

॥ ಅಷ್ಟಕ —೧ ॥ ಅಧ್ಯಾಯ—೧ ॥ ವರ್ಗ— ೩೦, ೩೧ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೧–೯ ॥

॥ ಋಷಿಃ—ಮೇಧಾತಿಥಿಃ ಕಾಣ್ವಃ ॥

॥ ದೇವತಾ— ಇಂದ್ರಃ ।

॥ ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಆ ತ್ವಾ ವಹಂತ್ವಹರಯೋ ವೃಷಣಂ ಸೋಮಪೀತಯೇ ।
ಇಂದ್ರ ತ್ವಾ ಸೂರಚಕ್ಷಸಃ ॥ ೧ ॥

॥ ಪದಪಾಠಃ ॥

ಆ । ತ್ವಾ । ವಹಂತ್ವಹರಯಃ । ವೃಷಣಂ । ಸೋಮಽಪೀತಯೇ ॥
ಇಂದ್ರ । ತ್ವಾ । ಸೂರಽಚಕ್ಷಸಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ವೃಷಣಂ ಕಾಮಾನಾಂ ವರ್ಷಿತಾರಂ ತ್ವಾಂ ಸೋಮಪೀತಯೇ ಸೋಮಪಾನಾರ್ಥಂ ಹರಯಸ್ತ್ವದೀಯಾ ಅಶ್ವಾ ಆ ವಹಂತು । ಅಸ್ಮಿನ್ಕರ್ಮಣ್ಯನಯೆಂತು । ತಥಾ ಸೂರಚಕ್ಷಸಃ ಸೂರ್ಯಸೇ-ಮಾನಪ್ರಕಾಶಯುಕ್ತಾ ಋತ್ವಿಜಸ್ತ್ವಾಂ ಮಂತ್ರೈಃ ಪ್ರಕಾಶಯಂತ್ವಿತಿ ಶೇಷಃ ॥ ಹರಂತೀತಿ ಹರಯಃ । ಇನ್ ಸರ್ವಧಾತುಭ್ಯಃ । ಉ.೪-೧೧೭ । ಇತೀನ್ । ನಿತ್ತ್ವಾದಾದ್ಯುದಾತ್ತಃ । ವೃಷಣಂ । ಕನಿನ್ಯುವೃಷಿತಕ್ಷಿ-ತ್ಯಾದಿನಾ ಕನಿನ್ । ಕಿತ್ತ್ವಾಲ್ಲಘೂಪಧಗುಣಾಭಾವಃ । ವಾ ಷಪೂರ್ವಸ್ಯ ನಿಗಮೇ । ಪಾ. ೬-೪-೯ । ಇತಿ ವಿಕಲ್ಪಿತಮುಪಧಾದೀರ್ಘತ್ವಂ । ಸೋಮಪೀತಯೇ । ಐಭಿರಗ್ನ ಇತ್ಯತ್ರೋಕ್ತಂ । ಋಗ್ವೇ ೧-೧೪-೧ .

सूरचक्षसः । चक्षिङ् व्यक्तायां वाचि । सर्वधातुभ्योऽसुन् । चक्षिङः ख्याञ् । पा ३-४-३४ । इति न भवति । अनसोः प्रतिषेधो वक्तव्य इति निषेधात् । सू प्रेरणे । सुवतीति सूरः । सुसूधागृधिभ्यः क्रन् । उ. ३-३४ । इति क्रन् । कित्त्वाद्गुणाभावः । नित्त्वादाद्युदात्तः । सूरवत्त्वाज्ज्ञानं प्रकाशो येषाम् । बहुव्रीहौ पूर्वपदप्रकृति-स्वरत्वम् ॥

॥ प्रतिपदार्थ ॥

ಇಂದ್ರೆ—ಎಲೈ ಇಂದ್ರನೇ । वृषणं—(ಇಷ್ಟಾರ್ಥಗಳನ್ನು) ವರ್ಷಣಮಾಡುವ (ಕೊಡುವ) । त्वा—ನಿನ್ನನ್ನು । सोमपीतये—ಸೋಮಪಾನಮಾಡುವುದಕ್ಕೋಸ್ಕರ । हरयः— (ನಿನ್ನ) ಕುದುರೆಗಳು । आ वहन्तु—(ಈ ಕರ್ಮ ನಡೆಯುತ್ತಿರುವ ಪ್ರದೇಶಕ್ಕೆ) ಕರೆದುಕೊಂಡು ಬರಲಿ । सूरचक्षसः—ಸೂರ್ಯನಂತೆ ಪ್ರಕಾಶವುಳ್ಳ ತೇಜಸ್ವಿಗಳಾದ ಋತ್ವಿಜರು । त्वा—ನಿನ್ನನ್ನು (ಸ್ತೋತ್ರಮಾಡಲಿ).

॥ भावार्थ ॥

ಎಲೈ ಇಂದ್ರನೇ, ನೀನು ಸಕಲ ಇಷ್ಟಾರ್ಥಗಳನ್ನು ಕೊಡುವವನು. ನಿನ್ನನ್ನು ಮಹಾತೇಜಸ್ವಿಗಳಾದ ಋತ್ವಿಜರು ಸ್ತುತಿಸುತ್ತಾರೆ. ನೀನು ನಿನ್ನ ಅಶ್ವಗಳನ್ನೇರಿ ಸೋಮಪಾನಮಾಡುವುದಕ್ಕೆ ನಮ್ಮ ಯಜ್ಞಶಾಲೆಗೆ ಬಾ.

English Translation

Indra, let your horses bring you, bestower of riches, to drink the Soma-Juice ; May the priests radiant as the Sun, praise you.

॥ विशेषविषयगळु ॥

सूरचक्षसः-सूर्यसमानप्रकाशयुक्ता ऋत्विजस्त्वां मंत्रैः प्रकाशयंतु ॥ ಸೂರ್ಯನಂತೆ ತೇಜಸ್ವಿಗಳಾದ ಋತ್ವಿಜರು ನಿನ್ನನ್ನು ಮಂತ್ರಗಳಿಂದ ಸ್ತುತಿಸಲಿ. ಪ್ರಕಾಶಪಡಿಸಲಿ ಎಂದರ್ಥವು.

॥ व्याकरणप्रक्रिया ॥

हरयः—हृञ् हरणे, ಧಾತು. सर्वधातुभ्यः इन् (उ.सू. ४-११८) ಎಲ್ಲಾ ಧಾತುಗಳ ಮುಂದೆಯೂ ಇನ್ ಪ್ರತ್ಯಯ ಬರುವುದು ಎಂಬುದರಿಂದ ಇನ್ ಹೃ + ಇ, सार्वधातुकार्धधातुकयोः (ಪಾ. ಸೂ. ೭-೩-೮೪) ಎಂಬುದರಿಂದ ಗುಣ. उरण्रपरः, ಎಂಬುದರಿಂದ ರ ಪರವಾಗಿ ಬರುವುದು, ಹರಿ

ಎಂದಾಗುವುದು. ಇದರ ಮುಂದೆ ಜಸ್, ಜಸಿಚಿ, (ಪಾ. ಸೂ. ೭-೩-೧೦೯) ಎಂಬುದರಿಂದ ಗುಣ, ಹರೇ+ಅಸ್ ಏಚೋಯೆವಾಯಾವಃ, (ಪಾ. ಸೂ. ೬-೧-೭೮) ಎಂಬುದರಿಂದ ಅಯಾದೇಶ. ಹರಯಸ್ ರುತ್ವ ವಿಸರ್ಗ, ಹರಿ ಎಂಬುದು ನಿಶ್ಚ್ವರದಿಂದ ಆದ್ಯುದಾತ್ತ.

ವೃಷಣಂ—ವೃಷು ಸೇಚನೇ, ಧಾತು. ಇದರ ಮುಂದೆ **ಕನಿನ್ಯುವೃಷಿತಕ್ಷಿರಾಜಿಧನ್ವಿದ್ಯುಪ್ರಪ್ರಾದಿವಃ** (ಉ.ಸೂ. ೧-೧೫೪) ಎಂಬುದರಿಂದ ಕನಿನ್ ಪ್ರತ್ಯಯ. ಪ್ರತ್ಯಯವು ಕಿತ್, ಆದ್ದರಿಂದ ಕ್ಷ್ಣಿತಿಚ, ಎಂಬುದರಿಂದ ಗುಣ ನಿಷೇಧ ಬರುವುದರಿಂದ ಪುಗಂತಲಘೂಪಧಸ್ಯಚ, ಎಂಬುದರಿಂದ ಉಪಧಾಗುಣ ಬರುವುದಿಲ್ಲ. ವೃಷನ್, ಎಂಬುದರ ಮುಂದೆ ದ್ವಿತೀಯಾ ಏಕವಚನ ಅಮ್ ಪ್ರತ್ಯಯ ವೃಷನ್+ಅಮ್. **ವಾಷಪೂರ್ವಸ್ಯನಿಗಮೇ** (ಪಾ. ಸೂ. ೪-೪-೯) ಸಂಬುದ್ಧಿಭಿನ್ನವಾದ ಸರ್ವನಾಮಸ್ಥಾನಪ್ರತ್ಯಯವು ಪರವಾಗಿರುವಾಗ ಷಕಾರದ ಮುಂದೆ ಇರುವ ಉಪಧಾಭೂತವಾದ ಅಚ್‌ಗೆ ದೀರ್ಘವು ವಿಕಲ್ಪವಾಗಿ ಬರುವುದು ಎಂಬುದರಿಂದ ದೀರ್ಘವು ವಿಕಲ್ಪವಾಗಿ ವಿಹಿತವಾಗಿರುವುದು. ಆದ್ದರಿಂದ ಇಲ್ಲಿ ದೀರ್ಘಬರುವುದಿಲ್ಲ. **ಯುವರ್ಣಾನ್ನಸ್ಯಸೈಣತ್ವೆಂವಾಚ್ಯೆಮ್** (ಪಾ. ಸೂ. ವಾ. ೮-೪-೧-೧) ಎಂಬುದರಿಂದ ನಕಾರಕ್ಕೆ ಣಕಾರ, ವೃಷಣಮ್, ಎಂದಾಗುವುದು.

ಸೋಮಪೀತಯೇ-ವಿಭಿರಗ್ನೇ (ಋ. ಸಂ. ೧-೧೪-೧) ಎಂಬಲ್ಲಿ ವಿವೃತವಾಗಿರುವುದು

ಸೂರಚಕ್ಷಸಃ—ಚಕ್ಷಿಙ್ ವ್ಯಕ್ತಾಯಾಂ ವಾಚಿ, ಧಾತು. ಸರ್ವಧಾತುಭ್ಯೋ ಽಸುನ್ (ಉ.ಸೂ.೪-೬೮೮) ಎಂಬುದರಿಂದ ಅಸುನ್ ಪ್ರತ್ಯಯ, ಅಸುನ್ ಎಂಬುದು **ಆರ್ಧಧಾತುಕಂಶೇಷಃ**, (ಪಾ.ಸೂ. ೩-೪-೧೧೪) ಎಂಬುದರಿಂದ ಆರ್ಧಧಾತುಕವಾದ ಪ್ರತ್ಯಯ, ಆದ್ದರಿಂದ ಚಕ್ಷಿಙಃಖ್ಯಾಞ್ (ಪಾ.ಸೂ. ೨-೪-೫೪) ಆರ್ಧಧಾತುಕ ಪ್ರತ್ಯಯ ಪರದಲ್ಲಿರುವಾಗ ಚಕ್ಷಿಙ್‌ಧಾತುವಿಗೆ ಖ್ಯಾಞ್ ಆದೇಶ ಬರುವುದು, ಎಂಬುದರಿಂದ ಖ್ಯಾಞ್ ಆದೇಶವು ಯದ್ಯಪಿ ಪ್ರಾಪ್ತವಾಗುವುದು. ಆದರೂ **ವರ್ಜನೇ ಪ್ರತಿಷೇಧಃ** (ಪಾ.ಸೂ. ೨-೪-೫೪-೧೯)ವರ್ಜನಾರ್ಥ ತೋರುವಾಗ ಚಕ್ಷಿಙ್‌ಗೆ ಖ್ಯಾಞ್ ಬರುವುದಿಲ್ಲ ಎಂದು ಹೇಳಿ ನಂತರ- **ಅಸನೆಯೋಶ್ಚ** (ಪಾ. ಸೂ. ವಾ. ೨-೪-೫೪-೧೦) ಅಸ್ ಅನ ಪ್ರತ್ಯಯಗಳು ಪರದಲ್ಲಿರುವಾಗ ಚಕ್ಷಿಙ್‌ಗೆ ಖ್ಯಾಞ್ ಬರುವುದಿಲ್ಲ ಎಂದು ವಾರ್ತಿಕಕಾರರು ಹೇಳಿರುವರು ಆದ್ದರಿಂದ ಇಲ್ಲಿ ಅಸ್ ಪ್ರತ್ಯಯ ಪರದಲ್ಲಿರುವಕಾರಣ ಚಕ್ಷಿಙ್‌ಗೆ ಖ್ಯಾಞ್ ಬರುವುದಿಲ್ಲ. ಷೂ ಪ್ರೇರಣೇ- ತ.ದಾದಿಧಾತು. ಸುವತಿ ಇತಿ ಸೂರಃ, ಜನರನ್ನು ಕಾರ್ಯಗಳಲ್ಲಿ ಪ್ರೇರಿಸುವನು ಎಂದು ಅರ್ಥ. **ಧಾತ್ವಾದೇಃಷಃ ಸಃ** (ಪಾ. ಸೂ. ೬-೧-೬೪) ಎಂಬುದರಿಂದ ಷಕಾರಕ್ಕೆ ಸಕಾರ. **ಸುಸೂಧಾಗೃಧಿಭ್ಯಃಕ್ಸನ್** (ಉ. ಸೂ. ೩-೧೪೨) ಷುಞ್ ಅಭಿಷವೇ, ಷೂ ಪ್ರೇರಣೇ- ಷುಧಾಞ್ ಧಾರಣಪೋಷಣಯೋಃ, ಗೃಧು ಅಭಿಕಾಂಕ್ಷಾಯಾಮ್, ಈಧಾತುಗಳ ಮುಂದೆ ಕ್ಸನ್ ಬರುವುದು ಎಂಬುದರಿಂದ ಸೂ ಧಾತುವಿನ ಮುಂದೆ ಕ್ಸನ್.ಸೂ + ರ, ಪ್ರತ್ಯಯವು ಕಿತ್ ಆದ್ದರಿಂದ ಕ್ಷ್ಣಿತಿಚಿ (ಪಾ.ಸೂ.೧-೧-೫) ಎಂದು ನಿಷೇಧ ಬರುವುದರಿಂದ **ಸಾರ್ವಧಾತುಕಾರ್ಧಧಾತುಕಯೋಃ**, (ಪಾ. ಸೂ. ೭-೪-೨೫) ಎಂಬುದರಿಂದ ಗುಣಬರುವುದಿಲ್ಲ—ಸೂರ ಎಂದಾಗುವುದು. ಇದು ನಿಶ್ಚ್ವರದಿಂದ ಆದ್ಯುದಾತ್ತ. ಸೂರವತ್ ಚಕ್ಷಃ ಖ್ಯಾನಂ=ಪ್ರಕಾಶಃ ಯೇಷಾಂ ತೇ ಸೂರಚಕ್ಷಸಃ ಎಂದು ಬಹುವ್ರೀಹಿಸಮಾಸ. **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** (ಪಾ. ಸೂ. ೬-೧-೨) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುವುದು ॥ ೧ ॥

॥ ಸಂಹಿತಾಪಾಠಃ ॥

ಇಮಾ ಧಾನಾ ಘೃತಸ್ನವೋ ಹರೀ ಇಹೋಪ ವಕ್ಷತಃ ।
ಇಂದ್ರಂ ಸುಖತಮೇ ರಥೇ ॥ ೨ ॥

॥ ಪದಪಾಠಃ ॥

ಇಮಾಃ । ಧಾನಾಃ । ಘೃತಽಸ್ನವಃ । ಹರೀ ಇತಿ । ಇಹ । ಉಪ । ವಕ್ಷತಃ ॥
ಇಂದ್ರಂ । ಸುಖಽತಮೇ । ರಥೇ ॥ ೨ ॥

॥ ಸಾಯಣಭಾಷ್ಯಂ ॥

ಹರಿಶಬ್ದ ಇಂದ್ರರಥಸ್ಯ ವೋಢಾರಾಪಶ್ವಾವಾಚಷ್ಟೇ । ತಥಾ ಚ ಶ್ರುತ್ಯಂತರಂ । ಹರ್ಯೋಃ ಸ್ಥಾತೇತಿ । ಹರಿಭ್ಯಾಂ ಶ್ವೇಂದ್ರೋ ದೇವತಾಂ ಗಮಯತೀತಿ ಚ । ಏತದೇವಾಭಿಪ್ರೇತ್ಯ ನಿಘಂಟುಕಾರ ಆಹ । ಹರೀ ಇಂದ್ರಸ್ಯೇತಿ । ತಾದೃಶೌ ಹರೀ ಇಮಾ ಯಾಗಾರ್ಥಂ ವೇದ್ಯಾಮಾಸಾದಿತತ್ವೇನ ಪುರೋವರ್ತಿನೀರ್ಧಾನಾ ಭ್ರಷ್ಟ್ರಯವತಂಡುಲಾನುದ್ದಿಶ್ಯ ಸುಖತಮೇ ರಥ ಇಂದ್ರಮವಖ್ಯಾಪ್ಯೇಹಾಸ್ಮಿನ್ಕರ್ಮಣ್ಯುಪ ವಕ್ಷತಃ । ವೇದಿಸವಿಧಾಪೇ ವಹತಾಂ । ಕೀದೃಶೀರ್ಧಾನಾಃ । ಘೃತಸ್ನುವೋಽಲಂಕರಣೋಪಸ್ತರಣಾಭಿಘಾರಣೇನ ಘೃತಸ್ರಾವಿಣೀಃ ॥ ಧೀಯಂತ ಇತಿ ಧಾನಾಃ । ಧಾಪ್ವ್ಯವಸ್ಯಜ್ಯತಿಭ್ಯೋ ನಃ । ಉ- ೩-೬ । ಇತಿ ನಃ । ಪ್ರತ್ಯಯಸ್ವರಃ । ಘೃತಸ್ನುವಃ । ಘೃತಂ ಸ್ನುವಂತೀತಿ ಘೃತಸ್ನುವಃ । ಕ್ವಿಪಿ ತುಗಭಾವಶ್ಚಾಂಡಸಃ । ಧಾತುಸ್ವರಃ । ಸಮಾಸೇ ಕೃದುತ್ತರಪದಪ್ರಕೃತಿಸ್ವರತ್ವಂ । ಸ್ನೋಃ ಸಂಯೋಗಪೂರ್ವತ್ವೇನ ಯಣಭಾವಾದುವಙಾದೇಶಃ । ಹರೀ । ಹೃಞ್ ಹರಣೇ । ಸರ್ವಧಾತುಭ್ಯ ಇನ್ । ನಿತ್ತ್ವಾದಾದ್ಯುದಾತ್ತೌ । ಪ್ರಗೃಹ್ಯತ್ವಾತ್ಸಂಹಿತಾಯಾಂ ಪ್ರಕೃತಿಭಾವಃ । ವಕ್ಷತಃ । ಪ್ರಾರ್ಥನಾಯ್ಯೇ ಲಿಙರ್ಥೇ ಲೇಟ್ । ತಸ್ಯೆ ಪ್ರಥಮ ಪುರುಷದ್ವಿವಚನಂ ತಸ್ । ಲೇಟೋಽಡಾಟಾವಿತ್ಯಡಾಗಮಃ । ತಪಿ ಪ್ರಾಪ್ತೇ ಸಿಬ್ಬಹುಲಂ ಲೇಟೀತಿ ಸಿಪ್ । ಥಸ್ತಕುತ್ವಷತ್ವಾನಿ । ತಿಜ್ಜಿತಿಙ ಇತಿ ನಿಘಾತಃ । ಸುಖತಮೇ । ಗತಂ ॥

॥ ಪ್ರತಿಪದಾರ್ಥ ॥

ಹರೀ—ಇಂದ್ರನ ಎರಡು ಕುದುರೆಗಳು । ಇಮಾಃ—ಈ (ಯಾಗಕ್ಕೋಸ್ಕರ ವೇದಿಯ ಮೇಲೆ ಸಿದ್ಧ ಪಡಿಸಿರುವ) । ಘೃತಸ್ನುವಃ—ಘೃತಸಿಕ್ತವಾದ ಎಂದರೆ ತುಪ್ಪದಿಂದ ನೆನೆದಿರುವ । ಧಾನಾಃ—ಯವ, ತಂಡುಲ ಮೊದಲಾದ ಧಾನ್ಯಗಳ ಸ್ವೀಕಾರಕ್ಕಾಗಿ । ಸುಖತಮೇ—ಸುಖಕರವಾದ । ರಥೇ—ರಥದಲ್ಲಿ । ಇಂದ್ರಂ-ಇಂದ್ರನನ್ನು (ಕುಳ್ಳಿರಿಸಿಕೊಂಡು) । ಇಹ—ಇಲ್ಲಿಗೆ (ಈ ಯಜ್ಞವು ನಡೆಯುತ್ತಿರುವ ಪ್ರದೇಶಕ್ಕೆ) । ಉಪ ವಕ್ಷತಃ—ಕರೆತರಲಿ.

॥ ಭಾವಾರ್ಥ ॥

ಯಜ್ಞದಲ್ಲಿ ಹೋಮಾರ್ಥವಾಗಿ ತುಪ್ಪದಿಂದ ಚೆನ್ನಾಗಿ ನೆನೆದಿರುವ ಯವ ತಂಡುಲಾದಿ ಧಾನ್ಯಗಳು ಯಜ್ಞಕುಂಡದ ಸುತ್ತಲೂ ಅಲಂಕರಣೋಪಸ್ತರಣಗಳನ್ನು ಮಾಡುವಾಗ ಉದರಿರುವುವು. ಅದನ್ನು ತಿನ್ನುವುದ ಕ್ಕಾಗಿ ಹರೀ ಎಂಬ ಇಂದ್ರನ ಎರಡು ಕುದುರೆಗಳು ಇಂದ್ರನನ್ನು ಸುಖಕರವಾದ ರಥದಲ್ಲಿ ಕುಳ್ಳಿರಿಸಿಕೊಂಡು ಈ ಯಜ್ಞಭೂಮಿಯ ಸಮೀಪಕ್ಕೆ ಕರೆತರಲಿ.

English Translation

Let the horses convey Indra in an easy-moving chariot hither where these grains of parched barely steeped in clarified butter are being prepared for the Sacrifice.

॥ ವಿಶೇಷವಿಷಯಗಳು ॥

ಧಾನಾಃ—ಅಗ್ನಿಯಲ್ಲಿ ಹೋಮಮಾಡುವುದಕ್ಕಾಗಿ ಸಿದ್ಧಪಡಿಸಿರುವ ಯವ ತಂಡುಲಾದಿ ಧಾನ್ಯಗಳು ಅಗ್ನಿಸಂಸ್ಕಾರಕಾರ್ಯದಲ್ಲಿ ಅಲಂಕರಣ, ಉಪಸ್ತರಣ ಮೊದಲಾದ ಕರ್ಮಗಳನ್ನು ಯವ ತಂಡುಲಾದಿಗಳಿಂದ ಮಾಡುವಾಗ ಆ ಧಾನ್ಯದ ಕಾಳುಗಳು ಅಗ್ನಿಕುಂಡದ ಸುತ್ತಲೂ ಉದರಿರುವುವು. ಅವು ಇಂದ್ರನ ಅಶ್ವಗಳಿಗೆ ಸಲ್ಲಬೇಕಾದ ಯಜ್ಞಭಾಗವು. ಅದನ್ನು ತಿನ್ನುವುದಕ್ಕಾಗಿ ಇಂದ್ರನ ಕುದುರೆಗಳು ಇಂದ್ರನ ಸಹಿತವಾಗಿ ಬರಲಿ ಎಂದಭಿಪ್ರಾಯವು.

ಘೃತಸ್ನುವಃ—ಘೃತಂ ಸ್ನುವಂತೀತಿ ಘೃತಸ್ನುವಃ । ತುಪ್ಪವಿಂದ ಚೆನ್ನಾಗಿ ನೆನೆದಿರುವ ಅಥವಾ ತುಪ್ಪವು ಜಿನುಗುತ್ತಿರುವ.

॥ ವ್ಯಾಕರಣಪ್ರಕ್ರಿಯಾ ॥

ಧಾನಾಃ—ಧೀಯಂತೇ ಇತಿ ಧಾನಾಃ ಡುಧಾಞ್ ಧಾರಣಪೋಷಣಯೋಃ ಧಾತು. ಧಾಸ್ಫ್ವ-ಸ್ಯಜ್ಯತಿಭ್ಯೋನಃ (ಉ. ಸೂ. ೩-೩೮೬) ಡುಧಾಞ್ ಧಾರಣಾದೌ, ಪ್ಯಾ ಪಾಲನಪೂರಣಯೋಃ, ವಸ ನಿವಾಸೇ, ಅಜ ಗತೌ, ಅತ ಸಾತತ್ಯಗಮನೇ. ಈ ಧಾತುಗಳ ಮುಂದೆ ನ ಪ್ರತ್ಯಯ ಬರುವುದು ಎಂಬುದರಿಂದ ಧಾ ಧಾತು ವಿನ ಮುಂದೆ ನ ಪ್ರತ್ಯಯ ಬಂದರೆ ಧಾನ, ಎಂದಾಗುವುದು. ಸ್ತ್ರೀತ್ವ ವಿವಕ್ಷೆಯಿರುವುದರಿಂದ ಅಜಾದ್ಯತೋಷ್ಟಾಪ್ (ಪಾ. ಸೂ. ೪-೧-೪) ಎಂಬುದರಿಂದ ಟಾಪ್ ಪ್ರತ್ಯಯ, ಧಾನ + ಆ ಸವರ್ಣದೀರ್ಘ, ದ್ವಿತೀಯಾವಿಭಕ್ತಿ ಬಹುವಚನದಲ್ಲಿ ಧಾನಾಃ ಎಂದಾಗುವುದು. ನ ಎಂಬುದಕ್ಕೆ ಆದ್ಯುದಾತ್ತೆಶ್ಚ (ಪಾ. ಸೂ. ೩-೧-೩) ಎಂಬುದರಿಂದ ಆದ್ಯುದಾತ್ತ ಬರುವುದು. ಟಾ ಪ್ರತ್ಯಯದೊಂದಿಗೆ ಬಂದ ಸವರ್ಣದೀರ್ಘರೂಪವಾದ ಏಕಾದೇಶವೂ ಏಕಾದೇಶ ಉದಾತ್ತೇನೋದಾತ್ತಃ, ಎಂಬುದರಿಂದ ಉದಾತ್ತ. ಏವಂಚ ಧಾನಾಶಬ್ದವು ಅಂತೋದಾತ್ತ.

ಘೃತೆಸ್ನುವಃ—ಸ್ನು ಪ್ರಸ್ರವಣೇ, ಧಾತು, ಅದಾದಿ. ಘೃತಂ ಸ್ನುವನ್ತಿ ಇತಿ ಘೃತಸ್ನುವಃ ಘೃತಂ ಎಂಬ ಸುಬಂತವು ಉಪಪದವಾಗಿರುವಾಗ ಸ್ನು ಧಾತುವಿನ ಮುಂದೆ ಕ್ವಿಪ್ ಚ (ಪಾ. ಸೂ. ೩-೨-೭೬) ಎಂಬುದರಿಂದ

ಕ್ವಿಪ್, ಕ್ವಿಪ್‌ಗೆ ಲೋಪ, ಧಾತ್ವಾದೇಃಷಃಸಃ (ಪಾ.ಸೂ. ೬-೧-೬೪) ಎಂಬುದರಿಂದ ಷಕಾರಕ್ಕೆ ಸಕಾರ. ಕೃದಂತ-ಪ್ರಾತಿಪದಿಕಾವಯವವಾವ ಅಮ್ ಎಂಬ ಸುಪ್ತಿಗೆ ಲುಕ್, ಘೃತಸ್ನು ಎಂದಾಯಿತು, ಈಗ ಕ್ವಿಪ್ ಎಂಬ ಪಿತ್ತಾದ ಕೃತ್ತು ಲುಪ್ತವಾದರೂ ಪ್ರತ್ಯಯೆಲೋಪೇ ಪ್ರತ್ಯಯಲಕ್ಷಣಮ್ (ಪಾ. ಸೂ. ೧-೧-೬೨) ಎಂಬುದರಿಂದ ಪರದಲ್ಲಿರುವುದು. ಆದ್ದರಿಂದ ಹ್ರಸ್ವಸ್ಯ ಪಿತಿಕೃತಿತುಕ್ ಎಂಬುದರಿಂದ ತುಗಾಗಮವು ಪ್ರಾಪ್ತವಾಗುವುದು. ಆದರೂ ಛಾಂದಸಪ್ರಕ್ರಿಯೆಯಿಂದ ಬರುವುದಿಲ್ಲ. ಅಥವಾ ಆಗಮಶಾಸ್ತ್ರಮನಿತ್ಯಮ್ (ಪರಿಭಾ. ೯೪) ಎಂಬುದರಿಂದ ಬರುವುದಿಲ್ಲ. ಸ್ನು ಎಂಬುದು ಧಾತುವಾದ್ದರಿಂದ ಧಾತೋಃ (ಪಾ. ಸೂ. ೬-೧-೧೬೨) ಎಂಬುದರಿಂದ ಅಂತೋದಾತ್ತ. ಸಮಾಸಾನಂತರವೂ ಗತಿಕಾರಕೋಪಪದಾತ್ಕೃತ್ (ಪಾ. ಸೂ ೬-೨-೧೩೯) ಎಂಬ ಕೃದುತ್ತರಪದಪ್ರಕೃತಿಸ್ವರದಿಂದ ಆದೇ ನಿಲ್ಲುವುದು. ಘೃತಸ್ನು ಎಂಬುದರ ಮುಂದೆ ಶಸ್. ಘೃತಸ್ನು+ಅಸ್, ಉಕಾರವು ಸ್ನ್ ಎಂಬ ಸಂಯೋಗದ ಮುಂದೆ ಇರುವುದು. ಆದ್ದರಿಂದ ಓಸ್ಸ್ಸಿಪಿ (ಪಾ ಸೂ. ೬-೪-೮೩) ಅಜಾದಿಯಾದ ಸುಪ್ ಪ್ರತ್ಯಯ ಪರದಲ್ಲಿರುವಾಗ, ಧಾತ್ವವಯವ ಮಾತ್ರದಿಂದ ಉಂಟಾದ ಯಾವ ಸಂಯೋಗವಿದೆಯೋ ಅದರ ಮುಂದೆ ಇಲ್ಲದೇ ಇರುವ ಯಾವ ಉಕಾರವಿದೆಯೋ ಆ ಉಕಾರವನ್ನು ಕೊನೆಯಲ್ಲಿ ಹೊಂದಿರುವ ಯಾವ ಧಾತುವಿದೆಯೋ ಆ ಧಾತುವನ್ನು ಕೊನೆಯಲ್ಲಿ ಹೊಂದಿರುವ ಅನೇಕಾಚ್ಯವಾದ ಅಂಗಕ್ಕೆ ಯಣಾದೇಶ ಬರುವುದು ಎಂಬುದರಿಂದ ಯಣಾದೇಶ ಬರುವುದಿಲ್ಲ. ಅಚಿಶ್ನುಧಾತುಭ್ರುವಾಂಯ್ವೋರಿಯಙ್ಣುವಙೌ (ಪಾ. ಸೂ. ೬-೪-೭೭) ಎಂಬುದರಿಂದ ಉಕಾರಕ್ಕೆ ಉವಙಾದೇಶ, ಘೃತಸ್ನುವಮ್ ಎಂದಾಗುವುದು.

ಹರೀ—ಹೃಞ್ ಹರಣೇ, ಸೆರ್ಹ್ಯಧಾತುಭ್ಯಇನ್ (ಉ. ಸೂ. ೪-೫-೫೫೭) ಎಂಬುದರಿಂದ ಇನ್ ಪ್ರತ್ಯಯ ಗುಣ ರಪರತ್ವ, ಇಣ್ನಿತ್ಯಾದಿರ್ನಿತ್ಯಮ್ (ಪಾ.ಸೂ. ೬-೧-೧೯೨) ಎಂಬುದರಿಂದ ಹರಿ ಎಂಬುದು ಆದ್ಯುದಾತ್ತ. ಇದರ ಮುಂದೆ ಪ್ರಥಮಾದ್ವಿವಚನ ಔ ಪ್ರತ್ಯಯ ಹರಿ+ಔ, ಪ್ರಥಮಯೋಃಪೂರ್ವಸವರ್ಣಃ (ಪಾ. ಸೂ. ೬-೧-೧೦೨) ಎಂಬುದರಿಂದ ಪೂರ್ವಸವರ್ಣದೀರ್ಘೆ ಹರೀ ಎಂದಾಗುವುದು. ಈಕಾರವು ಅಂತಾದಿವಚ್ಚೆ (ಪಾ. ಸೂ ೬-೧-೮೫) ಎಂದು ಪರಾದಿವದ್ಭಾವ ಬರುವುದರಿಂದ ಈಕಾರಾಂತವಾದ ದ್ವಿವಚನವಾಗುವುದು. ಏವಂಚ ಇದಕ್ಕೆ ಈದೂದೇ ದ್ವಿವಚನಂ ಪ್ರಗೃಹ್ಯಮ್ (ಪಾ. ಸೂ. ೧-೧-೧೧) ಈಕಾರಾಂತ, ಊಕಾರಾಂತ, ಏಕಾರಾಂತ ದ್ವಿವಚನಗಳು ಪ್ರಗೃಹ್ಯ ಸಂಜ್ಞೆಯನ್ನು ಹೊಂದುವುವು ಎಂಬುದರಿಂದ ಪ್ರಗೃಹ್ಯಸಂಜ್ಞೆ ಇರುವುದು. ಆದ್ದರಿಂದ ಸಂಹಿತಾಕಾಲದಲ್ಲಿ ಹರೀ+ಇಹ ಎಂಬಲ್ಲಿ ಸ್ವರ ಪರವಾಗಿರುವಾಗ ಪ್ಲುತಪ್ರಗೃಹ್ಯಾ ಅಚಿನಿತ್ಯಮ್ (ಪಾ- ಸೂ. ೬-೧-೧೨೫) ಅಚ್ ಪರದಲ್ಲಿರುವಾಗ ಪ್ಲುತ ಮತ್ತು ಪ್ರಗೃಹ್ಯ ಇವು ನಿತ್ಯವಾಗಿ ಪ್ರಕೃತಿಭಾವವನ್ನು ಹೊಂದುವುವು. ಎಂಬುದರಿಂದ ಪ್ರಕೃತಿಭಾವ ಬರುವುದು. ಪ್ರಕೃತ್ಯಾ ಸ್ವಭಾವೇನ ನಿರ್ವಿಕಾರಸ್ವರೂಪೇಣ ಭಾವಃ ಥನನಂ ಸ್ಥಿತಿಃ ಪ್ರಕೃತಿಭಾವಃ, । ಪ್ರಕೃತಿಭಾವ ಎಂದರೆ ವಿಕಾರವನ್ನು ಹೊಂದದೇ ಇರುವುದು ಎಂಬ ಅರ್ಥ.

ವಕ್ಷತೇಃ—ವಹ ಪ್ರಾಪಣೇ, ಧಾತು, ಇದರ ಮುಂದೆ ಲಿಙರ್ಥೇ ಲೇಟ್ (ಪಾ. ಸೂ. ೩-೪-೭) ಎಂಬುದರಿಂದ ಪ್ರಾರ್ಥನಾರೂಪವಾದ ಲಿಙರ್ಥದಲ್ಲಿ ಲೇಟ್ ಬರುವುದು, ಅದಕ್ಕೆ ಪ್ರಥಮ ಪುರುಷ ದ್ವಿವಚನ ತಸ್ ವಹ್+ತಸ್ ಲೇಟೋಡಾಟೌ (ಪಾ. ಸೂ. ೩-೪-೯೪) ಎಂಬುದರಿಂದ ಲೇಟಿಗೆ ಆಡಾಗಮ ವಹ್+ಅತಸ್, ಕರ್ತರಿ ಶಪ್, ಎಂಬುದರಿಂದ ಶಪ್ ಪ್ರಾಪ್ತವಾದರೆ ಅದನ್ನು ಬಾಧಿಸಿ ಸಿಬ್ಬಹುಲಂ ಲೇಟಿ (ಪಾ. ಸೂ. ೩-೧-೩೪) ಎಂಬುದರಿಂದ ಸಿಪ್, ವಹ್+ಸ್+ಅತಸ್. ಹೋಢಃ (ಪಾ. ಸೂ. ೮-೨-೩೧) ಎಂಬುದರಿಂದ ಹಕಾರಕ್ಕೆ ಢಕಾರ, ಷ್ಟೋಃಕೆಸ್ಸಿ (ಪಾ. ಸೂ. ೮-೧-೪೧) ಎಂಬುದರಿಂದ ಢಕಾರಕ್ಕೆ ಕಕಾರ, ವಕ್ ಸ್+ಅತಸ್, ಆದೇಶ-

ಪ್ರೈತ್ಯೆಯೆಯೋಃ (ಪಾ. ಸೂ. ೮-೩-೫೧) ಎಂಬುದರಿಂದ ಸಕಾರಕ್ಕೆ ಷಕಾರ, ವಕ್ಷತಸ್, ರುತ್ವವಿಸರ್ಗಗಳು ವಕ್ಷತಃ ಎಂದಾಗುವುದು. ತಿಜ್ಜತಿಜಃ (ಪಾ. ಸೂ. ೮-೧-೩೮) ಎಂಬುದರಿಂದ ಸರ್ವಾನುದಾತ್ತ.

ಸುಖತಮೇ— ಅಗ್ನೇ ಸುಖತಮೇ ರಥೇ (ಋ. ಸಂ. ೧-೧೩-೪) ಎಂಬಲ್ಲಿ ವಿವರಿಸಲ್ಪಟ್ಟಿರುವುದು ॥ ೨ ॥

॥ ಸಂಹಿತಾಪಾಠಃ ॥

ಇಂದ್ರಂ ಪ್ರಾತರ್ಹವಾಮಹ ಇಂದ್ರಂ ಪ್ರಯತ್ಯಧ್ವರೇ ।
ಇಂದ್ರಂ ಸೋಮಸ್ಯ ಪೀತಯೇ ॥ ೩ ॥

॥ ಪದಪಾಠಃ ॥

ಇಂದ್ರಂ । ಪ್ರಾತಃ । ಹವಾಮಹೇ । ಇಂದ್ರಂ । ಪ್ರ ಽ ಯತಿ । ಅಧ್ವರೇ ।
ಇಂದ್ರಂ । ಸೋಮಸ್ಯ । ಪೀತಯೇ ॥ ೩ ॥

॥ ಸಾಯಣಭಾಷ್ಯಂ ॥

ಪ್ರಾತಃ ಕರ್ಮಾರಂಭೇ ಪ್ರಾತಃಸವನ ಇಂದ್ರಂ ಹವಾಮಹೇ । ಆಹ್ವಯಾಮಃ । ತಥೈವಾಧ್ವರೇ ಸೋಮಯಾಗೇ ಪ್ರಯತಿ ಪ್ರಗಚ್ಛತಿ ಪ್ರಾರಭ್ಯ ವರ್ತಮಾನೇ ಸತಿ ಮಾಧ್ಯಂದಿನೇ ಸವನೇ ತಮಿಂದ್ರಂ ಹವಾಮಹೇ । ತಥಾ ಯಜ್ಞಸಮಾಪ್ತ್ಯವಸರೇ ತೃತೀಯೇ ಸವನೇ ಸೋಮಸ್ಯ ಪೀತಯೇ ಸೋಮಪಾನಾರ್ಥಂ ಹವಾಮಹೇ ॥ ಪ್ರಾತಃ । ಸ್ವರಾದಿಷ್ವಂತೋದಾತ್ತೋ ನಿಪಾತಿತಃ । ಹವಾಮಹೇ । ಹ್ವೇಞ್ಃ ಲಟಿ ಶಪಿ ಪರತೋ ಹ್ವಃ।ಸಂಪ್ರಸಾರಣಮಿತ್ಯನುವೃತ್ತೌ ಬಹುಲಂ ಛಂದಸೀತಿ ಸಂಪ್ರಸಾರಣಂ । ಪರಪೂರ್ವತ್ವಂ । ಗುಣಾವಾದೇಶೌ । ಪ್ರಯತಿ । ಇಣ್ ಗತೌ । ಲಟಃ ಶತೃ । ಆದಿಪ್ರಭೃತಿಭ್ಯಃ ಶಪಿ ಇತಿ ಶಪೋ ಲುಕ್ । ಶತುರ್ಜಿತ್ತ್ವಾದ್ಗುಣಾಭಾವಃ ಪ್ರಾದಿಸಮಾಸಃ । ಕೃದ್ಗ್ರಹಣೇ ಗತಿಕಾರಕಪೂರ್ವಸ್ಯಾಪಿ ಗ್ರಹಣಂ । ಸರಿ- ೨೮ ಇತಿ ವಚನಾತ್ಪೃತ್ಯಯಗ್ರಹಣ ಇತಿ ನಿಯಮಾಭಾವಾತ್ ಶತುರನುಮೋ ನದ್ಯಜಾದೀ ಇತಿ ವಿಭಕ್ತೇರುದಾತ್ತತ್ವಂ । ಅಧ್ವರೇ । ಉಕ್ತಂ । ಸಂಹಿತಾಯಾಮುದಾತ್ತಸ್ವರಿತೆಯೋರ್ಯಣಃ ಸ್ವರಿತೋಽನುದಾತ್ತಸ್ಯ । ಪಾ- ೮-೨-೪ । ಇತ್ಯೆಕಾರಸ್ಯ ಸ್ವರಿತತ್ವಂ । ಪೀತಯೇ । ಪಾ ಪಾನೇ । ಕ್ತಿನಿ ಛಾಂದಸಮಂತೋದಾತ್ತತ್ವಂ ॥

॥ ಪ್ರತಿಪದಾರ್ಥ ॥

ಪ್ರಾತಃ—(ಕರ್ಮಪ್ರಾರಂಭದಲ್ಲಿ ಪಡೆಯುವ) ಪ್ರಾತಃಸವನದಲ್ಲಿ । ಇಂದ್ರಂ—ಇಂದ್ರನನ್ನು । ಹವಾಮಹೇ—ಆಹ್ವಾನಿಸುತ್ತೇವೆ । ಅಧ್ವರೇ—ಸೋಮಯಾಗವು । ಪ್ರಯತಿ—ನಡೆಯುತ್ತಿರಲು (ಪ್ರಾಪ್ತವಾಗುವ ಮಾಧ್ಯಂದಿನಸವನದಲ್ಲಿ) । ಇಂದ್ರಂ—ಇಂದ್ರನನ್ನು । (ಹವಾಮಹೇ—ಕರೆಯುತ್ತೇವೆ) । (ತೃತೀಯಾ—ಅದೇ ರೀತಿಯಲ್ಲಿ ಯಜ್ಞಸಮಾಪ್ತಿಕಾಲದಲ್ಲಿ ನಡೆಯುವ ತೃತೀಯಸವನದಲ್ಲಿ) । ಸೋಮಸ್ಯ—ಸೋಮರಸದ ಪೀತಯೇ—ಪಾನಕ್ಕಾಗಿ (ಇಂದ್ರನನ್ನು) । (ಹವಾಮಹೇ—ಕರೆಯುತ್ತೇವೆ).

॥ ಭಾವಾರ್ಥ ॥

ಸೋಮಯಜ್ಞಾಂಗವಾದ, ಪ್ರಾತಸ್ಸವನ, ಮಾಧ್ಯಂದಿನಸವನ, ತೃತೀಯ ಸವನಗಳೆಂಬ ಮೂರು ಸವನ ಕಾಲಗಳಲ್ಲಿಯೂ ಇಂದ್ರನನ್ನು ಸೋಮಪಾನವಮಾಡುವುದಕ್ಕೆ ಕರೆಯುತ್ತೇವೆ.

English Translation.

We invoke Indra at the morning rite, we invoke Indra at the succeeding Sacrifice, we invoke Indra to drink the Soma-Juice.

॥ ವಿಶೇಷವಿಷಯಗಳು ॥

ಯಜ್ಞಕರ್ಮದಲ್ಲಿ ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ ಎಂಬ ಮೂರು ಕಾಲಗಳಲ್ಲಿಯೂ ಸೋಮಲತೆಯನ್ನು ಜಜ್ಜಿ ಸೋಮರಸವನ್ನು ಪಾನಾರ್ಥವಾಗಿ ಸಿದ್ಧಪಡಿಸುವುದು ಪದ್ಧತಿಯು. ಈ ಕರ್ಮಗಳಿಗೆ ಕ್ರಮವಾಗಿ ಪ್ರಾತಸ್ಸವನ, ಮಾಧ್ಯಂದಿನಸವನ, ತೃತೀಯಸವನಗಳೆಂದು ಹೆಸರು. ಈ ಋಕ್ಕಿನಲ್ಲಿ ಪ್ರಾತಃಕಾಲವನ್ನು ಮಾತ್ರ ನಿರ್ದೇಶಮಾಡಿದ್ದರೂ ಮುಂದೆ ನಡೆಯುವ ಯಾಗದಲ್ಲಿಯೂ ಇಂದ್ರನನ್ನು ಸೋಮ ಪಾನಕ್ಕಾಗಿ ಆಹ್ವಾನಮಾಡಿರುವುದರಿಂದ ಹಿಂದೆ ಹೇಳಿದ ಮೂರು ವಿಧವಾದ ಸವನಗಳಲ್ಲಿಯೂ ಇಂದ್ರನನ್ನು ಆಹ್ವಾನಮಾಡುತ್ತೇನೆಂದು ಋಷಿಯ ಆಶಯವು.

ಪ್ರಯತಿ—ಇಣ್ ಗತೌ । ಪ್ರಗಚ್ಛತಿ । ಯಜ್ಞಕರ್ಮವು ಸಾಗುತ್ತಿರುವಾಗ ಅಥವಾ ಮುಂದುವರೆಯುತ್ತಿರುವಾಗ ಎಂದರೆ ಮಧ್ಯಾಹ್ನ ಸಾಯಂಕಾಲಗಳಲ್ಲಿ ನಡೆಯುವ ಮಾಧ್ಯಂದಿನಸವನ ಮತ್ತು ತೃತೀಯ ಸವನಗಳಲ್ಲಿ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಪ್ರಾತಃ—ಸ್ವರಾದಿಯಲ್ಲಿ ಅಂತೋದಾತ್ತವಾಗಿ ನಿಪಾತಿತವಾಗಿರುವುದು.

ಹವಾಮಹೇ—ಹ್ವೇಞ್ ಸ್ಪರ್ಧಾಯಾಂ ಶಬ್ದೇಚ, ಧಾತು. ಇದರ ಮುಂದೆ ಲಟ್. ಅದರ ಸ್ಥಾನದಲ್ಲಿ ಆತ್ಮನೇಪದ ಉತ್ತಮಪುರುಷ ಬಹುವಚನ ಮಹಿಙ್, ಹ್ವೇ+ಮಹಿ, ಟಿತ ಆತ್ಮನೇಪದಾನಾಮೇರೇ

(ಪಾ, ಸೂ. ೩-೪-೯೭) ಎಂಬುದರಿಂದ ಟಗೆ ಏಶ್ವ. ಕರ್ತರಿಶಪ್ ಎಂಬುದರಿಂದ ಶಪ್, ಹ್ವೇ+ಅ-ಮಹೇ ಹ್ವೇಃಸೆಂ-ಪ್ರಸಾರಣಂ (ಪಾ. ಸೂ. ೬-೧-೩೨) ಎಂಬುದು ಅನುವೃತ್ತವಾಗಲಾಗಿ ಬಹುಲಂಛಂದಸಿ (ಪಾ. ಸೂ. ೬-೧-೩೪) ಹ್ವೇಞ್ ಧಾತುವಿಗೆ ಛಂದಸ್ಸಿನಲ್ಲಿ ಬಹುಲವಾಗಿ ಸಂಪ್ರಸಾರಣ ಬರುವುದು ಎಂಬುದರಿಂದ ಸಂಪ್ರಸಾರಣ=ವಕಾರಕ್ಕೆ ಉಕಾರ ಹು+ಏ+ಅ+ಮಹೇ ಸಂಪ್ರಸಾರಣಾಚ್ಚ (ಪಾ. ಸೂ. ೬-೧-೧೦೮) ಎಂಬುದರಿಂದ ಪೂರ್ವರೂಪ ಹು+ಅ+ಮಹೇ. ಸಾರ್ವಧಾತುಕಾರ್ಧಧಾತುಕಯೋಃ ಎಂಬುದರಿಂದ ಸಾರ್ವಧಾತುಕವಾದ ಶಪ್ಪನ್ನು ನಿಮಿತ್ತ ಮಾಡಿಕೊಂಡು ಉಕಾರಕ್ಕೆ ಗುಣ ಓಕಾರ ಬರುವುದು. ಏಚೋಯವಾಯವಃ (ಪಾ. ಸೂ. ೬-೧-೭೮) ಎಂಬುದರಿಂದ ಓಕಾರಕ್ಕೆ ಅವಾದೇಶ ಹವ+ಮಹೇ. ಆತೋದೀರ್ಘೋಯಞಿ (ಪಾ- ಸೂ. ೭-೩-೧೦೧) ಎಂಬುದರಿಂದ ವಕಾರದ ಮುಂದಿರುವ ಅಕಾರಕ್ಕೆ ದೀರ್ಘ. ಹವಾಮಹೇ ಎಂದಾಗುವುದು. ತಿಙ್ಶಿತಿಙಃ (ಪಾ. ಸೂ. ೮-೧-೨೮) ಎಂಬುದರಿಂದ ಸರ್ವಾನುದಾತ್ತ.

ಪ್ರಯತಿ—ಇಣ್ ಗತೌ ಅದಾದಿ ಧಾತು, ಇದರ ಮುಂದೆ ಲಟ್, ಅದರ ಸ್ಥಾನದಲ್ಲಿ ಲಟಶ್ಶತೃಶಾನೆ-ಚಾವಪ್ರಥಮಾಸಮಾನಾಧಿಕರಣೇ (ಪಾ.ಸೂ. ೩-೨-೧೨೪) ಎಂಬುದರಿಂದ ಶತೃ, ಕರ್ತರಿಶಪ್ ಎಂಬುದರಿಂದ ಬರುವ ಶಪ್‌ಗೆ ಆದಿಪ್ರಭೃತಿಭ್ಯಃಶಪಃ (ಪಾ.ಸೂ. ೩-೪-೭೨) ಎಂಬುದರಿಂದ ಲುಕ್, ಇ+ಅತ್, ಸಾರ್ವಧಾತುಕ-ಮಪಿತ್ (ಪಾ.ಸೂ. ೧-೨-೪) ಎಂಬುದರಿಂದ ಅತ್ ಎಂಬ ಶತೃಪ್ರತ್ಯಯವು ಙಿತ್ವಾಗುವುದು. ಆದ್ದರಿಂದ ಸಾರ್ವಧಾತುಕಾರ್ಧಧಾತುಕಯೋಃ ಎಂಬುದರಿಂದ ಪ್ರಾಪ್ತವಾಗುವ ಗುಣಕ್ಕೆ ಕ್ಙಿತಿಚೆ (ಪಾ. ಸೂ. ೧-೧-೫) ಎಂಬುದರಿಂದ ನಿಷೇಧ ಬರುವುದು. ಇಕೋ ಯೆಣಚಿ (ಪಾ.ಸೂ. ೬-೧-೭೭)ಎಂಬುದರಿಂದ ಯಣಾದೇಶವು ಪ್ರಾಪ್ತವಾದರೆ ಅದನ್ನು ಬಾಧಿಸಿ ಆಚಿಶ್ನುಧಾತುಭ್ರುವಾಂ (ಪಾ. ಸೂ. ೬-೪-೭೭) ಎಂಬುದರಿಂದ ಇಯಙ್ ಆದೇಶ ಪ್ರಾಪ್ತವಾದರೆ ಅದನ್ನೂ ಬಾಧಿಸಿ ಇಣೋಯೆಣ್ (ಪಾ. ಸೂ. ೬-೪-೮೧) ಅಜಾದಿ ಪ್ರತ್ಯಯವು ಪರದಲ್ಲಿರುವಾಗ ಇಣ್ ಧಾತುವಿಗೆ ಯಣಾದೇಶ ಬರುವುದು ಎಂಬುದರಿಂದ ಯಣಾದೇಶ, ಯತ್ ಎಂದಾಯಿತು. ಕುಗತಿಪ್ರಾದಯಃ (ಪಾ. ಸೂ. ೨-೨-೧೮) ಎಂಬುದರಿಂದ ಪ್ರ ಶಬ್ದಕ್ಕೆ ಇದರೊಂದಿಗೆ ಸಮಾಸ, ಪ್ರಯತ್ ಸಪ್ತಮ್ಯೇಕವಚನ ಙಿ ಪ್ರತ್ಯಯ, ಪ್ರಯತಿ ಎಂದಾಗುವುದು. ಶತೃಪ್ರತ್ಯಯವು ಪ್ರತ್ಯಯಸ್ವರದಿಂದ ಉದಾತ್ತ. ಸಮಾಸಾನಂತರವೂ ಗತಿ-ಕಾರಕೋಪಪದಾತ್ಕೃತ್ ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರಬಂದು ಅದೇ ಸ್ವರ ನಿಲ್ಲುವುದು. ಏವಂಚ ಪ್ರಯತ್ ಎಂಬುದು ಅಂತೋದಾತ್ತ ಆದ್ದರಿಂದ ಶತುರನುನಾಸಿಕಾದ್ಯಜಾದೀ (ಪಾ.ಸೂ. ೬-೧-೧೭೩) ನುಮಾಗಮವನ್ನು ಹೊಂದದ ಯಾವ ಶತೃಪ್ರತ್ಯಯವಿದೆಯೋ ಅದನ್ನು ಕೊನೆಯಲ್ಲಿ ಹೊಂದಿ ಅಂತೋದಾತ್ತವಾಗಿರುವ ಶಬ್ದದ ಮುಂದೆ ಇರುವ ನದೀಸಂಜ್ಞಕವರ್ಣವೂ, ಅಜಾದಿಯಾದ ಶಸಾವಿ ವಿಭಕ್ತಿಯೂ ಸಹ ಉದಾತ್ತವಾಗುವುದು ಎಂಬುದರಿಂದ ಸಪ್ತಮ್ಯೇಕವಚನ ಙಿ ಪ್ರತ್ಯಯವು ಉದಾತ್ತವಾಗುವುದು. ಆದರೆ ಪ್ರಯತ್, ಅ ಎಂಬುದು ಹೇಗೆ ಶತೃಪ್ರತ್ಯಯಾಂತ, ಪ್ರತ್ಯಯಗ್ರಹಣೇ ಯಸ್ಮಾತ್ತೆನವಿಹಿತಸ್ತದಾದೇಸ್ತದಂತಸ್ಯ ಗ್ರಹಣಂ (ಪರಿಭಾ. ೨೩) ಎಂಬುದರಿಂದ ಶತೃಪ್ರತ್ಯಯ ಪ್ರಕೃತ್ಯಾದ್ಯವಯವಕ ಶತೃಪ್ರತ್ಯಯ ಚರಮಾವಯವಕವಾದ ಶಬ್ದವು ಶತೃಪ್ರತ್ಯಯಾಂತವಾಗುವುದು. ಇಲ್ಲಿ ಇಣ್ ಧಾತುವಿನ ಮೇಲೆ ಶತೃವನ್ನು ವಿಧಿಸಿರುವುದರಿಂದ ಯತ್ ಎಂಬುದು ಶತೃಪ್ರತ್ಯಯಾಂತವಾದರೂ ಪ್ರಯತ್ ಎಂಬುದು ಶತೃಪ್ರತ್ಯಯಾಂತವಾಗುವುದಿಲ್ಲ. ಆದ್ದರಿಂದ ವಿಭಕ್ತಿಗೆ ಉದಾತ್ತವು ಹೇಗೆ ಬರುವುದು ಎಂದರೆ, ಶತೃವು ಕೃತ್ಪ್ರತ್ಯಯ, ಆದ್ದರಿಂದ ಕೃದ್ಗ್ರಹಣೇ ಗತಿಕಾರಕ ಪೂರ್ವಸ್ಯಾಪಿ ಗ್ರಹಣಂ (ಪರಿಭಾ. ೨೮) ಕೃತ್ವತದ್ವ್ಯಪ್ಯನ್ಯಶರಧರ್ಮಪುರಸ್ಕಾರದಿಂದ ಎಲ್ಲಿ ಕೃತ್ತಿಗೆ ಉಪಾದಾನವಿದೆಯೋ ಅಲ್ಲಿ ಗತಿಪೂರ್ವಕಕಾರಕಪೂರ್ವಕಗಳಿಗೂ ಗ್ರಹಣ ಬರುವುದು ಎಂದು ಈ ಪರಿಭಾಷೆಯು ಬೋಧಿ

ಸುವುದು. ಶತುರನುಮೋ ಎಂಬಲ್ಲಿ ಕೃತ್ವವ್ಯಾಪ್ಯವಾದ ಶತೃತ್ವರೂಪ ಧರ್ಮಪುರಸ್ಕಾರದಿಂದ ಕೃತ್ತಿಗೆ ಗ್ರಹಣ ವಿದೆ. ಆದ್ದರಿಂದ ಇಲ್ಲಿ ಗತಿಕಾರಕಪೂರ್ವಕಗಳಿಗೂ ಗ್ರಹಣ ಬರುವುದು, ಅಂದರೆ ಪ್ರತ್ಯಯಗ್ರಹಣಪರಿಭಾಷೆಯು ಗತಿಕಾರಕವಿಷಯದಲ್ಲಿ ಬರುವುದಿಲ್ಲ. ಏವಂಚ ಶತೃಪ್ರತ್ಯಯಾಂತ ಎಂದರೆ ಶತೃಪ್ರತ್ಯಯಚರಮಾವಯವಕ ಎಂದಿಸ್ಪೇ ಅರ್ಥವು. ಪ್ರಯತ್ ಎಂಬುದೂ ಶತೃಪ್ರತ್ಯಯಚರಮಾವಯವಕವಾಗುವುದರಿಂದ ಶತೃಪ್ರತ್ಯಯಾಂತ ವಾಗುವುದು. ಆದ್ದರಿಂದ ಅದರ ಮುಂದೆ ಇರುವ ವಿಭಕ್ತಿಗೆ ಶತುರನಮೋ, ಎಂಬುದರಿಂದ ಉದಾತ್ತವು ಬರು ವುದು, ಯತ್ ಎಂಬುದು ಶತ್ರಂತವಾದ್ದರಿಂದ ಅದರ ಮುಂದೆ ಇರುವ ವಿಭಕ್ತಿಗೆ ಕೃದ್ಗ್ರಹಣ ಪರಿಭಾಷಾ ಸಂಚಾರವಿಲ್ಲದಿದ್ದರೂ ಅಂತೋದಾತ್ತ ಬರಲು ಯದ್ಯಪಿ ತಡೆ ಇಲ್ಲ. ಆದರೂ ಇಲ್ಲಿ ನ್ಯಾಯವಾದ ಅರ್ಥವು ಉಪ ಪಾದಿಸಲಾಗಿರುವುದು ಎಂದು ತಿಳಿಯಬೇಕು.

ಅಧ್ವರೇ-ದ್ರವಿಣೋದಾಃ—(ಋ.ಸಂ.೧-೧೫೫-೭) ಎಂಬಲ್ಲಿ ಇದರ ಪ್ರಕ್ರಿಯೆಯು ಹೇಳಲಾಗಿರು ವುದು. **ಪ್ರಯೆತಿ+ಅಧ್ವರೇ** ಎಂಬಲ್ಲಿ ಸಂಹಿತಾಕಾಲದಲ್ಲಿ ಉದಾತ್ತವಾದ ಇ ಯ ಸ್ಥಾನದಲ್ಲಿ ಅನುದಾತ್ತವಾದ ಅಕಾರವನ್ನು ನಿಮಿತ್ತಮಾಡಿಕೊಂಡು **ಇಕೋಯಣಚಿ** (ಪಾ.ಸೂ. ೬-೧-೭೭) ಎಂಬುದರಿಂದ ಯಣಾದೇಶ ಬರುವುದು, ಪ್ರಯತ್ಯಧ್ವರೇ ಎಂದಾಗುವುದು. ಈಗ **ಉದಾತ್ತಸ್ವರಿತಯೋರ್ಯಣಸ್ಸ್ವರಿತೋ೭ನುದಾತ್ತಸ್ಯ** (ಪಾ.ಸೂ. ೮-೪-೪) ಎಂಬುದರಿಂದ ಯಕಾರದ ಮುಂದೆ ಇರುವ ಅಕಾರವು ಸ್ವರಿತವಾಗುವುದು.

ಪೀತಯೇ—ಪಾ ಪಾನೇ ಧಾತು, **ಸ್ತ್ರಿಯಾಂ ಕ್ತಿನ್** (ಪಾ.ಸೂ. ೩-೩-೯೪) ಎಂಬುದರಿಂದ ಕ್ತಿನ್ ಪ್ರತ್ಯಯ **ಪಾ+ತಿ ಘುಮಾಸ್ಥಾಗಾಪಾಜಹಾತಿಸಾಂಹಲಿ** (ಪಾ.ಸೂ. ೬-೪-೬೬) ಎಂಬುದರಿಂದ ಆಕಾರಕ್ಕೆ ಈಕಾರ ಪೀತಿ, ಎಂದಾಯ್ತು. ಪ್ರತ್ಯಯವು ನಿತ್ಯಾದ್ದರಿಂದ **ಜ್ಞಿತ್ಯಾದಿರ್ನಿತ್ಯಮ್** (ಪಾ.ಸೂ. ೬-೧-೧೯೭) ಎಂಬುದರಿಂದ ಯದ್ಯಪಿ ಆದ್ಯುದಾತ್ತವು ಪ್ರಾಪ್ತವಾಗುವುದು. ಆದರೂ ಭಾಂದಸವಾಗಿ ಅಂತೋದಾತ್ತ ಬರು ವುದು. ಇದರ ಮುಂದೆ ಚತುರ್ಥೀಏಕವಚನ **ಙೇ** ಪ್ರತ್ಯಯ **ಪೀತಿ+ಏ ಙಿತಿ ಹ್ರಸ್ವಶ್ಚ** (ಪಾ.ಸೂ. ೧-೪-೬) ಙಕಾರೇತ್ಸಂಜ್ಞವಾದ ಪ್ರತ್ಯಯವು ಪರದಲ್ಲಿರುವಾಗ ಇಯಙುವಙಾದೇಶಾನ್ಯತರಕರ್ತೃಕಸ್ಥಿತ್ಯಾಶ್ರಯತ್ವ-ಯೋಗ್ಯಗಳೂ, ಸ್ತ್ರೀಶಬ್ದಭಿನ್ನಗಳೂ ನಿತ್ಯಸ್ತ್ರೀತ್ವವಿಶಿಷ್ಟಾರ್ಥಪ್ರತಿಪಾದಕಗಳೂ ಆದ ಈದಂತ ಊದಂತ ಶಬ್ದ ಗಳೂ, ಸ್ತ್ರೀತ್ವವಿಶಿಷ್ಟಾರ್ಥಪ್ರತಿಪಾದಕಗಳಾದ ಹ್ರಸ್ವವಾದ ಇ ಉವರ್ಣಾಗಂತ ಶಬ್ದಗಳೂ ಸಹ ವಿಕಲ್ಪವಾಗಿ ನದೀಸಂಜ್ಞೆಯನ್ನು ಹೊಂದುವುವು ಎಂಬುದರಿಂದ ವಿಹಿತವಾದ ನದೀಸಂಜ್ಞೆಯು ವಿಕಲ್ಪವಾದ್ದರಿಂದ ತದಭಾವ ಪಕ್ಷದಲ್ಲಿ **ಶೇಷೋಘ್ಯಸಖಿ** (ಪಾ.ಸೂ. ೧-೪-೭) ಎಂಬುದರಿಂದ ಘಿ ಸಂಜ್ಞೆ ಬರುವುದು. **ಘೇರ್ಙಿತಿ** (ಪಾ.ಸೂ. ೧-೪-೧೧೧) ಎಂಬುದರಿಂದ ಇಕಾರಕ್ಕೆ ಗುಣ ಏಕಾರ ಪೀತೇ+ಏ, **ಏಚೋಯವಾಯಾವಃ** (ಪಾ.ಸೂ. ೬-೧-೭೮) ಎಂಬುದರಿಂದ ಅಯಾದೇಶ ಪೀತಯೇ ಎಂದಾಗುವುದು. ॥ ೩ ॥

॥ ಸಂಹಿತಾಪಾಠಃ ॥

ಉಪ॑ ನಃ ಸುತಮಾ ಗ॑ಹಿ ಹರಿ॑ಭಿರಿಂದ್ರ ಕೇ॑ಶಿಭಿಃ ।
ಸುತೇ॑ ಹಿ ತ್ವಾ ಹವಾ॑ಮಹೇ ॥ ೪ ॥

॥ ಪದಪಾಠಃ ॥

ಉಪ । ನಃ । ಸುತಂ । ಆ । ಗಹಿ । ಹರಿ ऽ ಭಿಃ । ಇಂದ್ರ । ಕೇಶಿ ऽ ಭಿಃ ॥
ಸುತೇ । ಹಿ । ತ್ವಾ । ಹವಾಮಹೇ ॥ ೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಕೇಶಿಭಿಃ ಕೇಸರಯುಕ್ತೈರ್ಹರಿಭಿರಶ್ವೈಸ್ತ್ವಂ ನೋಽಸ್ಮದೀಯಂ ಸುತಮಭಿಷುತಂ ಸೋಮಂ ಪ್ರತ್ಯುಪ ಸಮೀಪ ಆ ಗಹಿ। ಆಗಚ್ಛ । ಸುತೇऽಭಿಷುತೇ ಸೋಮೇ ನಿಮಿತ್ತಭೂತೇ ಸತಿ ಯಸ್ಮಾತ್ಕಾರಣಾತ್ತ್ವಾ ಹವಾಮಹೇ ತ್ವಾಮಾಹ್ವಯಾಮಃ । ತಸ್ಮಾದಾಗಚ್ಛೇತಿ ಪೂರ್ವತ್ರಾನ್ವಯಃ ॥ ಗಹಿ । ಗಮೇರ್ಲೋಟಿ ಸೇರ್ಹಿಃ । ಶಪಿ ಇತ್ಯನುವೃತ್ತೌ ಬಹುಲಂ ಛಂದಸೀತಿ ಶಪೋ ಲುಕ್ । ಇಷುಗಮಿಯಮಾಂ ಛಃ। ಪಾ. ೭-೩-೭೭ । ಇತಿ ಛತ್ವಂ ನ ಭವತಿ । ನ ಲುಮತಾಂಗಸ್ಯೇತಿ ಪ್ರತಿಷೇಧಾತ್ । ಅನುದಾತ್ತೋಪದೇಶೇತ್ಯಾದಿನಾನುನಾಸಿಕಲೋಪಃ । ತಸ್ಯಾಸಿದ್ಧವದತ್ರಾಭಾತ್ । ಪಾ. ೬-೪-೨೨ । ಇತ್ಯಸಿದ್ಧತ್ವಾದತೋ ಹೇರಿತಿ ಹೇರ್ಲುಗ್ನ ಭವತಿ । ಕೇಶಿಭಿಃ ಕ್ಲಿಶೇರನ್ ಲೋ ಲೋಪೇಷ್ಟ । ಉ- ೫-೫೩ । ಇತ್ಯೇನ್। ಮತ್ವರ್ಥೀಯೇ ಇನಿಃ । ಪ್ರತ್ಯಯಸ್ವರಃ । ಹವಾಮಹೇ । ಹ್ವ ಇತ್ಯನುವೃತ್ತೌ ಬಹುಲಂ ಛಂದಸೀತಿ ಸಂಪ್ರಸಾರಣಂ। ಶಪಃ ಪಿತ್ತ್ವಾದನುದಾತ್ತತ್ವಂ । ತಿಙಶ್ಚ ಲಸಾರ್ವಧಾತುಕಸ್ವರೇಣ ಧಾತುಸ್ವರ ಏವ- ತಿಙ್ಙತಿಙ ಇತಿ ನ ನಿಘಾತೋ ಹಿ ಚೇತಿ ಪ್ರತಿಷೇಧಾತ್ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಸುತೇ—ಸೋಮವು ಸಿದ್ಧಪಡಿಸಲ್ಪಟ್ಟಾಗ । ತ್ವಾ—ನಿನ್ನನ್ನು । ಹವಾಮಹೇ—ಕರೆಯುತ್ತೇವೆ (ಅದ್ದರಿಂದ) । ಕೇಶಿಭಿಃ—ಕೇಸರದಿಂದ ಯುಕ್ತವಾದ । ಹರಿಭಿಃ—ಅಶ್ವಗಳಿಂದ ಸಹಿತನಾಗಿ । ನಃ—ನಮ್ಮ । ಸುತಂ—ಸಿದ್ಧವಾದ ಸೋಮವನ್ನು (ಪಾನ ಮಾಡುವುದಕ್ಕಾಗಿ) । ಉಪ ಆ ಗಹಿ—ನಮ್ಮ ಸಮೀಪಕ್ಕೆ ಬಾ.

॥ ಭಾವಾರ್ಥ ॥

ಎಲೈ ಇಂದ್ರನೇ ನಿನಗಾಗಿ ಸೋಮರಸವನ್ನು ನಾವು ಸಿದ್ಧಪಡಿಸಿ ನಿನ್ನನ್ನು ಆಹ್ವಾನ ಮಾಡುವೆವು. ಆ ಸೋಮರಸವನ್ನು ಪಾನ ಮಾಡುವುದಕ್ಕಾಗಿ ಕೇಸರಯುಕ್ತವಾದ ನಿನ್ನ ಕುದುರೆಗಳ ಸಹಿತನಾಗಿ ನಮ್ಮ ಸಮೀಪಕ್ಕೆ ಬಾ.

English Translation

Come Indra to our extracted soma libation by means of your long-maned horses. For we invoke you as soon as the soma is prepared.

॥ ವಿಶೇಷವಿಷಯಗಳು ॥

ಕೇತಿಭಿಃ—ಉದ್ದವಾದ ಕೇಸರಗಳಿಂದ ಕೂಡಿದ. ಕೇಸರವೆಂದರೆ ಕುದುರೆಗಳ ಕತ್ತಿನ ಮೇಲೆ ಉದ್ದವಾಗಿ ಬೆಳೆದಿರುವ ಕೂದಲುಗಳು.

॥ ವ್ಯಾಕರಣಪ್ರಕ್ರಿಯಾ ॥

ಗಹಿ—ಗಮ್ಲೃ ಗತೌ, ಧಾತು. ಲೋಟ್ ಪರಸ್ಮೈಪದ ಮಧ್ಯಮಪುರುಷ ಏಕವಚನ ಸಿಪ್ ಸೇರ್ಹ್ಯಪಿಚ್ಚೆ (ಪಾ. ಸೂ. ೩-೪-೮೭) ಲೋಟ್‌ಸ್ಥಾನದಲ್ಲಿ ಬಂದ ಸಿಗೆ ಹಿ ಆದೇಶ. ಬರುವುದು. ಅದು ಅಪಿತ್ತಾಗುವುದು ಎಂಬುದರಿಂದ ಸಿಗೆ ಹಿ, ಆದೇಶ ಕೆರ್ತ್ತುರಿ ಶಪ್ (ಪಾ. ಸೂ. ೩-೧-೭೮) ಎಂಬುದರಿಂದ ಶಪ್, ಗಮ್+ಅ+ಹಿ ಬಹುಲಂ ಛಂದಸಿ (ಪಾ. ಸೂ. ೨-೪-೭೩) ಆದಿಪ್ರಭೃತಿಭ್ಯಃ, ಎಂಬುದರಿಂದ ಶಪಃ ಎಂಬುದು ಅನುವೃತ್ತವಾಗುವುದು. ಶಪ್‌ಗೆ ಬಹುಲವಾಗಿ ಲುಕ್ ಬರುವುದು ಎಂಬುದರಿಂದ ಶಪ್‌ಗೆ ಲುಕ್ ಬರುವುದು. ಪ್ರತ್ಯಯೇ-ಲೋಪೇಪ್ರತ್ಯಯಲಕ್ಷಣಮ್ (ಪಾ. ಸೂ. ೧-೧-೬೨) ಎಂಬುದರಿಂದ ಪ್ರಾಪ್ತವಾಗುವ ಪ್ರತ್ಯಯ ಲಕ್ಷಣಕ್ಕೆ ನಲುಮತಾಂಗಸ್ಯ (ಪಾ. ಸೂ. ೧-೧-೬೩) ಎಂಬುದರಿಂದ ನಿಷೇಧ ಬರುವುದು. ಆದ್ದರಿಂದ ಕಿತ್ತಾದ ಪ್ರತ್ಯಯ ಪರವಾಗುವುದಿಲ್ಲ. ಆದಕಾರಣ ಇಷುಗಮಿಯಮಾಂಛಃ (ಪಾ. ಸೂ. ೭-೩-೭೭) ಶಕಾರೇತ್ಸಂಜ್ಞಕವಾದ ಪ್ರತ್ಯಯವು ಪರದಲ್ಲಿರುವಾಗ ಇಷು ಇಚ್ಛಾಯಾಂ, ಗಮ್ಲೃ ಗತೌ, ಯಮು ಉಪರಮೇ ಈ ಧಾತುಗಳ ಕೊನೆಯ ವರ್ಣಕ್ಕೆ ಛಕಾರ ಬರುವುದು ಎಂಬುದರಿಂದ ಛತ್ವ ಬರುವುದಿಲ್ಲ. ಅನುದಾತ್ತೋಪದೇಶವನತಿ ತನೋತ್ಯಾದಿನಾಮನುನಾಸಿಕ ಲೋಪೋಝಲಿಕ್ಕಿತಿ (ಪಾ. ಸೂ. ೬-೪-೩೭) ಅನುನಾಸಿಕ ಎಂಬುದು ಲುಪ್ತಷಷ್ಠ್ಯಂತ ಇದು ವನತಿ ವ್ಯತಿರಿಕ್ತವಾದುವುಗಳಿಗೆ ವಿಶೇಷಣ, ಇತರ ವ್ಯಾವೃತ್ತಿ ಇಲ್ಲದ ಕಾರಣ ವನತಿಗೆ ವಿಶೇಷಣವಾಗುವುದಿಲ್ಲ ಸಂಭವವ್ಯಭಿಚಾರಾಭ್ಯಾಂ ಸ್ಯಾದ್ವಿಶೇಷಣಮರ್ಥವತ್ ಎಂದು ನ್ಯಾಯವಿರುವುದು. ಸಂಭವ ಎಂದರೆ ಯೋಗ್ಯತೆ, ವ್ಯಭಿಚಾರ ಎಂದರೆ ಇತರ ವ್ಯಾವೃತ್ತಿ, ಕೃಷ್ಣಃಹಂಸಃ, ಇಲ್ಲಿ ಹಂಸವು ಬಿಳುಪೇ ವಿನಾ ಕಪ್ಪಲ್ಲ. ಆದ್ದರಿಂದ ಯೋಗ್ಯತೆ ಇಲ್ಲದ ಕಾರಣ ಹಂಸಃ ಎಂಬುದಕ್ಕೆ ಕೃಷ್ಣಃ ಎಂದು ವಿಶೇಷವನ್ನು ಕೊಡಲಾಗುವುದಿಲ್ಲ. ಕೃಷ್ಣಕಾಕಃ, ಇಲ್ಲಿ ಕಾಗೆಗಳೆಲ್ಲವೂ ಕಪ್ಪೇ. ಆದ್ದರಿಂದ ಕಾಗೆಗೆ ಕೃಷ್ಣಃ ಎಂಬ ಪದಾರ್ಥಾನ್ವಯಯೋಗ್ಯತೆಯು ಯದ್ಯಪಿ ಇದೆ, ಆದರೂ ಇತರ ವ್ಯಾವೃತ್ತಿ ಇಲ್ಲ. ಆದಕಾರಣ ಕಾಕಃ ಎಂಬಲ್ಲಿ ಕೃಷ್ಣಃ ಎಂಬ ವಿಶೇಷಣವು ಅನವಶ್ಯಕ, ಇದರಂತೆ ಇಲ್ಲಿಯೂ ವನತಿಗೆ ಅಘನಾಸಿಕ ವಿಶೇಷಣವು ಅನವಶ್ಯಕ. ಝಲಾದಿಯಾದ ಕಿತ್ತು ಅಥವಾ ಜ್ಞಾತ್ತು ಆದ ಪ್ರತ್ಯಯವು ಪರದಲ್ಲಿರುವಾಗ ಅಘನಾಸಿಕಾನ್ತಗಳಾದ ಅನುಡಾತ್ತೋಪದೇಶ, ತನೋತ್ಯಾದಿಧಾತು ಇವುಗಳ ಅನುನಾಸಿಕಕ್ಕೂ ವನಧಾತುವಿನ ಅನುನಾಸಿಕಕ್ಕೂ ಲೋಪ ಬರುವುದು ಎಂಬುದರಿಂದ ಅನುನಾಸಿಕವಾದ ಮಕಾರಕ್ಕೆ ಲೋಪ. ಗಮ್, ನಮ್, ಯಮೋರಮಿಃ ಎಂದು ಅನುದಾತ್ತೋಪದೇಶ ಪರಿಗಣನ ಕಾರಿಕೆಯಲ್ಲಿ ಸಮ್ ಧಾತುವು ಪರಿತವಾಗಿರುವುದರಿಂದ ಇದು ಅನುದಾತ್ತೋಪದೇಶ, ಗಹಿ+ಎಂದಿರುವಾಗ ಅತೋಹೇಃ (ಪಾ. ಸೂ. ೬-೪-೧೦೫) ಅದಂತವಾದ ಅಂಗದ ಮುಂದೆ ಇರುವ ಹಿಗೆ ಲುಕ್ ಬರುವುದು ಎಂಬುದರಿಂದ ಯದ್ಯಪಿ ಹಿಗೆ ಲುಕ್ ಪ್ರಾಪ್ತವಾಗುವುದು. ಆದರೂ ಅಸಿದ್ಧವದತ್ಥಾತ್ಥಾತ್ (ಪಾ. ಸೂ. ೬-೪-೨೧) ಸವರ್ಣಾಶ್ರಯವಾದ ಅಭೀಯ ಕಾರ್ಯವನ್ನು ಮಾಡುವಾಗ ಸವರ್ಣಾಶ್ರಯವಾದ ಅಭೀಯ ಕಾರ್ಯವು ಅಸಿದ್ಧವಾಗುವುದು ಎಂಬುದರಿಂದ ಹಿಯನ್ನು ಆಶ್ರಯಿಸಿಕೊಂಡು ಲುಕ್ಕನ್ನು ಮಾಡುವಾಗ ಹಿಯನ್ನು ಆಶ್ರಯಿಸಿಕೊಂಡು ಬಂದ ಅನುದಾತ್ತೋಪದೇಶ, ಎಂಬುದರಿಂದ ಮಕಾರಲೋಪವು ಅಸಿದ್ಧವಾಗುವುದು. ಏವಂಚ ಅಂಗವು ಮಾಂತವಾಗುವುದು, ಅದಂತವಾಗುವುದಿಲ್ಲ. ಆದ್ದರಿಂದ ಹಿಗೆ ಲುಕ್ ಬರುವುದಿಲ್ಲ.

ಕೇಶಿಭಿಃ—**ಕ್ಲಿಶೇರನ್ ಲೋಲೋಪಶ್ಚ** (ಉ. ಸೂ. ೫-೭-೧೧) **ಕ್ಲಿಶೂ ವಿಬಾಧನೇ**, ಈ ಧಾತು ವಿನ ಮುಂದೆ ಅನ್ ಪ್ರತ್ಯಯ ಬರುವುದು. ಧಾತುವಿನ ಲಕಾರಕ್ಕೆ ಲೋಪ ಬರುವುದು ಎಂಬುದರಿಂದ ಕ್ಲಿಶ್ ಎಂಬುದರ ಮುಂದೆ ಅನ್ ಪ್ರತ್ಯಯ ಲಕಾರ ಲೋಪಗಳು ಬಂದರೆ ಕಿಶ್+ಅ=ಪುಗನ್ತ ಲಘೂಪಧಸ್ಯೇಚ, ಎಂಬುದರಿಂದ ಲಘೂಪಧಗುಣ, ಕೇಶ ಎಂದಾಗುವುದು. **ಅತೆಇನಿಠನೌ** (ಪಾ. ಸೂ. ೫-೨-೧೧೫) ಎಂಬುದರಿಂದ ಇನಿ ಪ್ರತ್ಯಯ ಕೇಶ+ಇನ್. **ಯೆಸ್ಯೇತಿಚೆ** (ಪಾ. ಸೂ. ೬-೪-೧೪೮) ಎಂಬುದರಿಂದ ಅಕಾರ **ಲೋಪ ಕೇಶಿನ್** ಎಂದಾಗುವುದು. ಇದು ಪ್ರತ್ಯಯಸ್ವರದಿಂದ ಅಂತೋದಾತ್ತ. ಇದರ ಮುಂದೆ ತೃತೀಯಾ ವಿಭಕ್ತಿ ಬಹುವಚನ ಭಿಸ್, **ಕೇಶಿನ್+ಭಿಸ್. ಸ್ವಾದಿಷ್ವಸರ್ವನಾಮಸ್ಥಾನೇ** (ಪಾ. ಸೂ. ೮-೧-೧೭) ಎಂಬುದರಿಂದ ಕೇಶಿನ್ ಎಂಬುದಕ್ಕೆ ಪದ ಸಂಜ್ಞೆ ಇದೆ. ಆದ್ದರಿಂದ **ನಲೋಪಃಸ್ಪ್ರಾತಿಪದಿಕಾನ್ತಸ್ಯ** (ಪಾ. ಸೂ. ೮-೨-೭) ಎಂಬುದರಿಂದ ನಕಾರಕ್ಕೆ ಲೋಪ ರುತ್ವ ವಿಸರ್ಗಗಳು ಬಂದರೆ ಕೇಶಿಭಿಃ ಎಂದಾಗುವುದು.

ಹವಾಮಹೇ—**ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ**, ಧಾತು. ಇದರ ಮುಂದೆ ಲಟ್, ಆತ್ಮನೇಪದ ಉತ್ತಮಪುರುಷಬಹುವಚನ ಮಹಿಙ್. **ಟಿತಆತ್ಮನೇಪದಾನಾಂಟೇರೇ** (ಪಾ. ಸೂ. ೩-೪-೭೮) ಎಂಬುದರಿಂದ ಟಿಗೆ ಏಕಾರ, ಕರ್ತರಿ ಶಪ್, **ಹ್ವೇ+ಅ+ಮಹೇ ಹ್ವಸ್ಸಂಪ್ರಸಾರಣಂ** (ಪಾ. ಸೂ. ೬-೧-೩೬) ಎಂಬುದು ಅನುವೃತ್ತವಾಗಲಾಗಿ ಬಹುಲಂ ಛಂದಸಿ (ಪಾ.ಸೂ ೬-೧-೩೪) ಎಂಬುದರಿಂದ ಸಂಪ್ರಸಾರಣ, **ಸಂಪ್ರಸಾರಣಾಚ್ಚ** (ಪಾ.ಸೂ. ೬-೧-೧೦೮) ಎಂಬುದರಿಂದ ಪೂರ್ವರೂಪ, **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಗುಣ, **ಏಚೋಯವಾಯಾವಃ** (ಪಾ. ಸೂ. ೬-೧-೭೮) ಎಂಬುದರಿಂದ ಅವಾದೇಶ ಹವ್+ಅ+ಮಹೇ, **ಅತೋದೀರ್ಘೋಯಞಿ** (ಪಾ.ಸೂ. ೭-೩-೧೦೧) ಎಂಬುದರಿಂದ ಅಕಾರಕ್ಕೆ ದೀರ್ಘ, ಹವಾಮಹೇ ಎಂದಾಗುವುದು. ಶಪ್ ಪಿತ್ತಾದ್ದರಿಂದ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತ, ಆದುಪದೇಶವಾದ ಶಪ್ ನ ಮುಂದೆ ಇರುವ ಮಹೇ ಎಂಬ ತಿಙ್ ಪ್ರತ್ಯಯವು **ತಾಸ್ಯನುದಾತ್ತೇತ್** (ಪಾ.ಸೂ. ೬-೧-೧೮೬) ಎಂಬುದರಿಂದ ಅನುದಾತ್ತ. ಏವಂಚ ಧಾತುಸ್ವರವೇ ನಿಲ್ಲುವುದು. **ಹಿಚೆ** (ಪಾ. ಸೂ. ೮-೪-೩೪) ಹಿ ಶಬ್ದದಿಂದ ಕೂಡಿರುವ ತಿಙಂತವು ಅನುದಾತ್ತವಾಗುವುದಿಲ್ಲ ಎಂದು ನಿಷೇಧವಿರುವುದರಿಂದಲೂ ಪ್ರಕೃತ **ಸುತೇಹಿ ತ್ವಾ ಹವಾಮಹೇ** ಎಂಬಲ್ಲಿ ಹಿಶಬ್ದಯೋಗವಿರುವುದರಿಂದಲೂ **ತಿಙ್ಶಿತಿಜಿಃ** ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ. ಪೂಜನಾತ್ಪೂಜಿತ ಎಂಬ ಸೂತ್ರದಲ್ಲಿ ಪೂಜಿತಗ್ರಹಣದಿಂದ ಅತ್ರ ಪ್ರಕರಣೇ ಪಂಚಮ್ಯಾನಿರ್ದೇಶೇಽಪಿ ನಾನಂತರ್ಯಮಿಷ್ಯತೇ ಎಂದು ಜ್ಞಾಪಿತವಾಗಿರುವುದು. ಆದ್ದರಿಂದ ತ್ವಾ ಎಂಬುದರಿಂದ ವ್ಯವಧಾನವಿದ್ದರೂ ಹಿಚ ಎಂಬ ನಿಷೇಧ ಬರಲು ತಡೆ ಇಲ್ಲ. ಈ ಅಂಶವು ಹಿಂದೆಯೇ ಉಪಪಾದಿತವಾಗಿರುವುದು. ॥ ೪ ॥

॥ ಸಂಹಿತಾಪಾಠಃ ॥

ಸೇಮಂ ನಃ ಸ್ತೋಮಮಾ ಗಹ್ಯುಪೇದಂ ಸವನಂ ಸುತಂ ।
ಗೌರೋ ನ ತೃಷಿತಃ ಪಿಬ ॥ ೫ ॥

॥ ಪದಪಾಠಃ ॥

ಸಃ । ಇಮಂ । ನಃ । ಸ್ತೋಮಂ । ಆ । ಗಹಿ । ಉಪ । ಇದಂ । ಸವನಂ । ಸುತಂ ।
ಗೌರಃ । ನ । ತೃಷಿತಃ । ಪಿಬ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಸ ತ್ವಂ ನೋಽಸ್ಮದೀಯಮಿಮಂ ಸ್ತೋಮಂ ಸ್ತುತಿಂ ಪ್ರತ್ಯಾ ಗಹಿ । ಆಗಚ್ಛ । ಆಗಮನೇ ಹೇತುರುಚ್ಯತೇ । ಉಪ ದೇವಯಜನಸಮೀಪೇ ಸುತಮಭಿಷುತಸೋಮಯುಕ್ತಮಿದಾನೀಮನುಷ್ಠೀಯಮಾನಂ ಸವನಂ ಪ್ರಾತಃಸವನಾದಿರೂಪಂ ಕರ್ಮ ವರ್ತತೇ । ತಸ್ಮಾದ್ಗೌರೋ ನ ಗೌರೋ ಮೃಗ ಇವ ತೃಷಿತಃ ಸನ್ನಿಮಂ ಸೋಮಂ ಪಿಬ ॥ ಸಃ ಇಮಮಿತ್ಯತ್ರ ಸಂಹಿತಾಯಾಂ ಸೋಽಚಿ ಲೋಪೇ ಚೇತ್ಪಾದಪೂರಣಂ । ಪಾ ೬-೧-೧೩೪ । ಇತಿ ಸುಲೋಪಃ । ಗಹಿ । ಗತಂ । ಸವನಂ । ಸೂಯತೇಽಸ್ಮಿನ್ಸೋಮ ಇತ್ಯಧಿಕರಣೇ ಲ್ಯುಟ್ । ಲಿತೀತಿ ಪ್ರತ್ಯಯೋತ್ಪೂರ್ವಸ್ಯೋದಾತ್ತತ್ವಂ । ಲುಡಂತಾತ್ಸಪ್ತಮ್ಯಾಃ ಸುಪಾಂ ಸುಪೋ ಭವಂತೀತಿ ವಕ್ತವ್ಯಂ । ಮ. ಭ-೧-೩೯ । ಇತಿ ವಚನಾದ್ದ್ವಿತೀಯಾ । ಅಭಿಷುತಸೋಮಯುಕ್ತಮಿದಂ ಸವನಮಿತಿ ಕರ್ಮಣ್ಯೇವ ನಾ ದ್ವಿತೀಯಾ। ತದಾ ಸುತಶಬ್ದಾದರ್ಶಆದಿತ್ವಾದಚ್ । ಪಾ. ೫-೨-೧೨೭ । ತೃಷಿತಃ । ಞಿತೃಷ ಪಿಪಾಸಾಯಾಂ । ನಿಷ್ಠೇತಿ ಕ್ತಃ । ಪ್ರತ್ಯೆಸ್ವರೇಣೋದಾತ್ತಃ । ಪಶ್ಚಾದಿಟಿ ಆಗಮಾ ಅನುದಾತ್ತಾ ಇತ್ಯನುದಾತ್ತತ್ವಂ ॥ ೫ಂ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ। ಸಃ—(ಆ) ನೀನು। ನಃ—ನಮ್ಮ । ಇಮಂ—ಈ । ಸ್ತೋಮಂ—ಸ್ತುತಿಯನ್ನು (ಕೇಳುವುದಕ್ಕಾಗಿ) । ಆ ಗಹಿ—ಬಾ । ಉಪ—(ಯಜ್ಞವೇದಿಯ) ಸಮೀಪದಲ್ಲಿ । ಸುತಂ—ಸಿದ್ಧಪಡಿಸಿದ ಸೋಮರಸದಿಂದ ಯುಕ್ತವಾದ । ಇದಂ—ಈಗ ನಡೆಸಬೇಕಾಗಿರುವ । ಸವನಂ—ಪ್ರಾತಸ್ಸವನರೂಪವಾದ ಕರ್ಮವು (ನಡೆಯುತ್ತಿದೆ) । ತೃಷಿತಃ—ಬಾಯಾರಿದ । ಗೌರೋ ನ — ಗೌರವರ್ಣವುಳ್ಳ ಜಿಂಕೆಯಂತೆ । ಪಿಬ—(ಸೋಮರಸವನ್ನು) ಪಾನಮಾಡು ।

॥ ಭಾವಾರ್ಥ ॥

ಪ್ರಾತಸ್ಸವನಕ್ಕೆ ಬೇಕಾದ ಸೋಮರಸವು ಸಿದ್ಧವಾಗಿದೆ. ಆ ಸವನಾಂಗವಾಗಿ ನಾವು ಮಾಡುವ ಸ್ತುತಿಯಿಂದ ತುಷ್ಟನಾಗಿ ಬಂದು, ಬಾಯಾರಿದ ಮೃಗವು (ಜಿಂಕೆಯು) ನೀರನ್ನು ಕುಡಿಯುವಂತೆ, ಸೋಮರಸವನ್ನು ಪಾನಮಾಡು.

English Translation.

O Indra, accept this our praise and come to this our sacrifice of the expressed soma; drink like a thirsty stag.

॥ ವಿಶೇಷವಿಷಯಗಳು ॥

ಗೌರಃ—ಗೌರವರ್ಣವಾದ ಜಿಂಕೆಯು. ಇಲ್ಲಿ ನ ಎಂಬ ಶಬ್ದವು ಉಪಮಾನಾರ್ಥಸೂಚಕವು. **ಗೌರೋ ನ**—ಎಂದರೆ ಜಿಂಕೆಯಂತೆ.

ತೃಷಿತಃ—ಬಾಯಾರಿದ. ಬಾಯಾರಿಕೆಯಿಂದ ಬಳಲಿದ ಮೃಗವು ಆತುರದಿಂದ ನೀರು ಕುಡಿಯುವಂತೆ ನಮ್ಮ ಸೋಮರಸವನ್ನು ಆಸಕ್ತಿಯಿಂದ ಯಥೇಚ್ಛವಾಗಿ ಪಾನಮಾಡಬೇಕೆಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಸೇಃ—ಇಮಮ್, ಇಲ್ಲಿ ಸಸ್+ಇಮಮ್ ಎಂದಿರುವಾಗ ಸಂಹಿತಾಕಾಲದಲ್ಲಿ **ಸೋಽಚಿಲೋಪೇ-ಚೇತ್ಪಾದಪೂರಣಮ್** (ಪಾ.ಸೂ. ೬-೧-೧೩೪) ಲೋಪ ಬಂದೇ ಪಾದಪೂರಣೆಯಾಗುವ ಪಕ್ಷದಲ್ಲಿ ಅಜ್ವರ್ಣಪರದಲ್ಲಿರುವಾಗ ಸಸ್ ಎಂಬುದರ ಸುಪ್ರತ್ಯಯಕ್ಕೆ ಲೋಪಬರುವುದು ಎಂಬುದರಿಂದ ಸುಗೆ ಲೋಪ ಸ+ಇಮಮ್ **ಆದ್ಗುಣಃ** (ಪಾ.ಸೂ. ೬-೧-೮೭) ಎಂಬುದರಿಂದ ಕ್ರಮವಾಗಿ ಕಂಠತಾಲುಸ್ಥಾನಗಳಲ್ಲಿ ಹುಟ್ಟುವ ಅಕಾರ ಇಕಾರ ಸ್ಥಾನಗಳಲ್ಲಿ ಕಂಠತಾಲುಸ್ಥಾನದಲ್ಲಿ ಹುಟ್ಟತಕ್ಕದ್ದೂ ಗುಣಸಂಜ್ಞಿಕವೂ ಆದ ಏಕಾರ ಬರುವುದು. ಸೇಮಮ್ ಎಂದಾಗುವುದು. ಕಂಠ್ಯಾವಹಾವಿಚುಯಶಾಸ್ತ್ವಾಲವ್ಯಾವೋಷ್ಠ್ಯಜಾವುಪೂ । ಸ್ಯುರ್ಮೂರ್ಧನ್ಯಾ ಋಟುರಷಾದನ್ತ್ಯಾ ಲೃತುಲಸಾಃಸ್ಮೃತಾಃ॥೧೭॥ಜಿಹ್ವಾಮೂಲೇ ತು ಕುಃ ಪ್ರೋಕ್ತಃ ದನ್ತ್ಯೋಷ್ಠ್ಯೌ ವಸ್ಮೃತೋ ಬುಧೈಃ । ಏ ಐ ತು ಕಂಠತಾಲವ್ಯಾವೋ ಔಕಂಠೋಷ್ಠ್ಯೌಸ್ಮೃತೌ ॥೧೮॥ ಎಂಬ ಪಾಣಿನೀಯ ಶಿಕ್ಷಾವಚನದಿಂದ ಅ ಕಂಠಸ್ಥಾನಿಕ, ಇ,ತಾಲುಸ್ಥಾನಿಕ ಏ ಕಂಠತಾಲುಸ್ಥಾನಿಕ ಎಂದು ಸಿದ್ಧವಾಗುವುದು. ಇಲ್ಲಿ **ಸೋಽಚಿಲೋಪೇ**(ಪಾ. ಸೂ. ೬-೧-೧೩೪) ಎಂಬುದರಿಂದ ಸುಲೋಪವು ಬರದೇ ಇರುವ ಪಕ್ಷಕ್ಕೆ ಸಸ್+ಇಮಮ್ ಎಂಬಲ್ಲಿ **ಸಸಜುಷೋರುಃ** (ಪಾ.ಸೂ. ೮-೨-೬೬) ಎಂಬುದರಿಂದ ರುತ್ವವೂ, ಅದಕ್ಕೆ **ಭೋಭಗೋ ಅಘೋ ಅಪೂರ್ವಸ್ಯೋಽಶಿ** (ಪಾ.ಸೂ. ೬-೩-೧೭) ಎಂಬುದರಿಂದ ಯತ್ವವೂ ಬರುವುದು. ನಂತರ **ಲೋಪಶಾಕಲಸ್ಯ** (ಪಾ. ಸೂ. ೮-೩-೧೯) ಎಂಬುದರಿಂದ ಯಕಾರಕ್ಕೆ ಲೋಪ. **ಪೂರ್ವತ್ರಾಸಿದ್ಧಂ** (ಪಾ. ಸೂ. ೮-೨-೧) ಎಂಬುದರಿಂದ ಆದ್ಗುಣಃ ಎಂದು ಗುಣವನ್ನು ಮಾಡುವಾಗ, ಯ ಲೋಪವು ಅಸಿದ್ಧವಾಗುವುದು. ಆದ್ದರಿಂದ ಗುಣ ಬರಲು ಅವಕಾಶವಾಗುವುದಿಲ್ಲ. ಏವಂಚ ಸ ಇಮಮ್ ಎಂದೇ ಇರಬೇಕಾಗುವುದು. ಆದ್ದರಿಂದ ಪಾದಪೂರಣೆಯಾಗುವುದಿಲ್ಲ.

ಗಹಿ—ಪೂರ್ವ ಮಂತ್ರದಲ್ಲಿ ವ್ಯಾಖ್ಯಾತವಾಗಿದೆ.

ಸವನದುಃ—ಸೂಯತೇ ಅಸ್ಮಿನ್ ಸೋಮಃ ಎಂದು ವಿವಕ್ಷಿಸಿದಾಗ ಷೂಙ್ ಪ್ರಾಣಿಪ್ರಸವೇ, ಧಾತು. **ಧಾತ್ವಾದೇಃಷಃಸಃ** ಎಂಬುದರಿಂದ ಷಕಾರಕ್ಕೆ ಸಕಾರ, ಸೂ ಎಂಬುದರ ಮುಂದೆ ಅಧಿಕರಣಾರ್ಥದಲ್ಲಿ **ಕರಣಾಧಿಕರಣಯೋಶ್ಚ** (ಪಾ. ಸೂ. ೩-೩-೧೧೭) ಎಂಬುದರಿಂದ ಲ್ಯುಟ್, ಯುವೋರನಾಕೌ (ಪಾ. ಸೂ. ೭-೧-೧) ಎಂಬುದರಿಂದ ಅನ ಆದೇಶ ಸೂ+ಅನ **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೪೪) ಎಂಬುದರಿಂದ ಗುಣ, **ಏಚೋಯವಾಯಾವಃ** (ಪಾ. ಸೂ. ೬-೧-೭೮) ಎಂಬುದರಿಂದ ಅವಾದೇಶ ಸವನ ಎಂದಾಗುವುದು. ಅನ ಪ್ರತ್ಯಯದ ಹಿಂದೆ ಇರುವ ಅಕಾರವು **ಲಿತಿ** (ಪಾ. ಸೂ. ೬-೧-೧೯೩) ಎಂಬುದರಿಂದ ಉದಾತ್ತ. **ಸವನ** ಎಂಬುದು ಅಧಿಕರಣಾರ್ಥಕ ಲ್ಯುಡಂತ. ಇದರ ಮುಂದೆ **ಸಪ್ತಮ್ಯಾ ಏಕವಚನೇ ಙಿ** ಪ್ರತ್ಯಯಬರುವುದು.

ಆದರೆ ಸ್ಥಾನದಲ್ಲಿ **ಸುಪಾಂ ಸುಲುಕ್** (ಪಾ. ಸೂ. ೭-೧-೩೯) ಎಂಬ ಸೂತ್ರದಲ್ಲಿ ಉಕ್ತವಾಗಿರುವ **ಸುಪಾಂಸು-ಪೋಭವನ್ತಿ** (ಪಾ. ಸೂ. ಮ. ೩-೧-೩೯-೧) ಸುಪ್ಪುಗಳ ಸ್ಥಾನದಲ್ಲಿ ವಿವಕ್ಷಿತಗಳಾದ ಸುಪ್‌ಗಳು ಬರುವುವು. ಎಂಬುದರಿಂದ ದ್ವಿತೀಯಾ ಏಕವಚನ ಅಮ್ ಬರುವುದು. ಸವನ+ಅಮ್ **ಅಮಿಪೂರ್ವಃ** (ಪಾ. ಸೂ. ೬-೧-೧೦೭) ಎಂಬುದರಿಂದ ಪೂರ್ವರೂಪ ಸವನಮ್ ಎಂದಾಗುವುದು. ಸವನೇ ಸುತಂ ಇದಂ ಪಿಬ ಎಂದು ಪ್ರಾತಸ್ಸವನಾದಿರೂಪವಾದ ಕರ್ಮದಲ್ಲಿ ಹಿಂಡಲ್ಪಟ್ಟ ಸೋಮವನ್ನು ಇಂದ್ರನೇ, ಪಾನಮಾಡು ಎಂದು **ಈ** ಪಕ್ಷದಲ್ಲಿ ಅರ್ಥವು. ಅಥವಾ, ಸುತಮಸ್ಯ ಅಸ್ತಿ ಎಂದು ವಿವಕ್ಷಿಸಿದಾಗ **ಅರ್ಶಆದಿಭ್ಯೋಽಚ್** (ಪಾ.ಸೂ. ೫-೨-೧೨೭) ಎಂಬುದರಿಂದ ಅಚ್ ಪ್ರತ್ಯಯ ಸುತ+ಅ. **ಯೆಸ್ಯೇತಿಚೆ** (ಪಾ ಸೂ. ೬-೪-೧೪೮) ಎಂಬುದರಿಂದ ಆಕಾರ ಲೋಪ. ಸುತಮ್ ಎಂದರೆ ಹಿಂಡಿದ ಸೋಮರಸದಿಂದ ಕೂಡಿರುವ ಎಂದರ್ಥ. ಈ ಪಕ್ಷದಲ್ಲಿ ಸುತಂ ಇದಂ ಸವನಂ ಪಿಬ, ಹಿಂಡಿದ ಸೋಮರಸದಿಂದ ಕೂಡಿರುವ ಈ ಪ್ರಾತಸ್ಸವನಾದಿರೂಪ ಕರ್ಮವನ್ನು ಅನುಭವಿಸು ಎಂದು ಅರ್ಥ. ಸವನ ಎಂಬುದು ಪ್ರಾಧಾತೂಪಸ್ಥಾಪ್ಯಕ್ರಿಯಾನಿರೂಪಿತಕಲ್ಪ್ಯವಾಚಕವಾಗುವುದರಿಂದ **ಕರ್ಮಣಿ ದ್ವಿತೀಯಾ** (ಪಾ. ಸೂ. ೨-೯-೨) ಎಂಬುದರಿಂದ ದ್ವಿತೀಯಾವಿಭಕ್ತಿ ಬರುವುದು ಎಂದು ಉಪಪತ್ತಿಹೇಳಬಹುದು. ವೇದಭಾಷ್ಯದಲ್ಲಿ ಅರ್ಥವಿವರಣೆ ಮಾಡುವಾಗ ಸವನಂ ಎಂಬುದು ಪ್ರಥಮಾಂತ ಎಂದು ಇಟ್ಟುಕೊಂಡು ಕ್ರಿಯಾಪದವನ್ನು ಅಧ್ಯಾಹಾರಮಾಡಿಕೊಂಡು ವ್ಯಾಖ್ಯಾನಮಾಡಿರುವರು. ಆ ಪಕ್ಷದಲ್ಲಿ **ಸುಪಾಂ ಸುಲುಕ್** ಎಂಬುದರಿಂದ ಪ್ರಥಮೈಕವಚನಪ್ರತ್ಯಯಕ್ಕೆ ಅಮ್ ಆದೇಶ ಎಂದು ವರ್ಣಿಸಬೇಕು.

ತೃಷಿತಃ—ಞಿತೃಷ ಪಿಪಾಸಾಯಾಂ, ಧಾತು. **ನಿಷ್ಠಾ** (ಪಾ. ಸೂ. ೨-೨-೩೬) ಎಂಬುದರಿಂದ ಕರ್ಮಣಿ ಕ್ತ ಪ್ರತ್ಯಯ. **ಆರ್ಧಧಾತುಕಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ಎಂಬುದರಿಂದ ಇಡಾಗಮ. ತೃಷಿತ ಎಂದಾಗುವುದು. ಕ್ತ ಪ್ರತ್ಯಯಕ್ಕೆ **ಅದ್ಯುದಾತ್ತೌಶ್ಚ** ಎಂಬುದರಿಂದ ಅದ್ಯುದಾತ್ತ ಬಂದಮೇಲೆ ಬಂದ ಇಡಾಗಮವು **ಆಗಮಾ ಅನುದಾತ್ತಾಃ** ಎಂಬುದರಿಂದ ಅನುದಾತ್ತ ॥ ೫ ॥

॥ ಸಂಹಿತಾಪಾಠಃ ॥

ಇಮೇ᳡ ಸೋಮಾ᳡ಸ ಇಂದ᳡ವಃ ಸು᳡ತಾಸೋ᳡ ಅಧಿ᳡ ಬ᳡ರ್ಹಿಷಿ᳡ ।
ತಾಁ᳡ ಇ᳡ಂದ್ರ ಸಹ᳡ಸೇ ಪಿಬ ॥ ೬ ॥

॥ ಪದಪಾಠಃ ॥

ಇ᳡ಮೇ । ಸೋ᳡ಮಾ᳡ಸಃ । ಇಂ᳡ದವಃ । ಸು᳡ತಾ᳡ಸಃ । ಅ᳡ಧಿ᳡ । ಬ᳡ರ್ಹಿಷಿ᳡ ॥
ತಾನ್ । ಇ᳡ಂದ್ರ । ಸಹ᳡ಸೇ । ಪಿ᳡ಬ ॥ ೬ ॥

॥ सायणभाष्यं ॥

इन्दुशब्द उन्दी क्ल्देदने इति धातोरुत्वन्नः। इन्दवः क्ल्देदनयुक्ता इमे वेद्यामवस्थिताः सोमासस्तत्तत्पात्रगताः सोमा बर्हिषि यज्ञेऽध्यधिक्येन सुतासः। अभिषुताः। हे इन्द्र सहसे बलार्थं तान् सोमान् पिब ॥ सोमासः । अज्जसेरसुगिति जसोऽसुगागमः। इन्दवः । उक्तं । सुतासः । पूर्ववदसुक्। संहितायां प्रकृत्यान्तःपादमव्यपर इति प्रकृतिभावात्परपूर्वत्वं न भवति । बर्हिषि। ब्यत्ययेनाकारलोपश्च। ऊ ३-८८० । इतीस्। प्रत्ययस्वरः । तां इन्द्रेत्यत्र दीर्घादटि समानपादे इतिरुत्वं । यत्वयलोपौ । अनुनासिकः । सहसे । षह मर्षणे । असुनंतोन्नित्त्वादाद्युदात्तः॥

॥ प्रतिपदार्थ ॥

सुतासः—सिद्धपडिसल्पट्ट । इन्दवः—द्रवयुक्तवाद (अथवा जिनुगुत्तिरुव) । इमे—ई (वेदियमेलिरुव) । सोमासः—(बेरे बेरे पात्रेगळल्लिरुव) सोमरसगळु । बर्हिषि—यज्ञदल्लि । अधि—अधिक प्रमाणदल्लि (पवित्रवाद, विशेषवाद रीतियल्लि) इडल्पट्टिरुवुदु । इन्द्र—एलैय इन्द्रने । सहसे—बलाभिवृद्धिगागि । तान्—आ सोमरसगळन्नु । पिब—पानमाडु ।

॥ भावार्थ ॥

ई वेदियमेलॆ नानाविध पात्रेगळल्लिरुव सोमरसवु साधारणवागि हिंडि तेगेदुदल्ल. यज्ञाङ्गवागि मंत्रपूर्वकवागि सिद्धपडिसल्पट्टिवॆ. एलैय इन्द्रनेय, आदन्नु बलाभिवृद्धिगागि पान माडु.

English Translation

These dripping Soma juices are effused upon the sacred grass; drink them Indra, to recruit your strength.

॥ विशेषविषयगळु ॥

इन्दवः—सोमलतॆयन्नु कल्लिनिंद जज्जि रसवन्नु हिंडुवाग आ रसवु तोट्टुतोट्टुगळागि जिनुगुवुदु. आरीति तोट्टिक्कुत्तिरुव सोमरसक्कॆ इन्दवः ऎंदु हेळुव रूढियिदॆ. ई शब्दवु उन्दी क्ल्देदनेय ऎंब धातुविनिंद निष्पन्नवागिदॆ.

॥व्याकरणप्रक्रियाः॥

सोमासः—सुङ् अभिषवे धात्वादेः षसः सः (पा. सू. ६.८-६४) एंबुदरिंद षकारक्के सकार. सु एंबुदर मुंदे अर्तिस्तुसु- (उ. सू. ८.८३६) एंबुदरिंद मन्. सार्वधातुकार्धधातुकयोः एंबुदरिंद गुण, सोम एंदागुवुदु. इदु नित्स्वरदिंद अद्युदात्त. इदर मुंदे जस्, सोम+जस्=सोम+अस्. अज्जसेरसुक् (पा.सू. ६-८-४०) एंबुदरिंद जस्गे असुक् आगम. अदु कित्वाद्दरिंद अदेङ्गुणे (पा. सू- ८-८-४६) एंबुदरिंद जस्गे अंतावयववागि बरुवुदु. सोम+असस्, पूर्वसवर्णदीर्घ. सोमासस् रुत्व विसर्गगळु.

इन्द्वेः—प्रैषोभ्यो यन्तु इन्द्वेः (ऋ. सं. ८-८४-४) एंब मंत्रदल्लि विवृतवागिरुवुदु.

सुतासः—सुङ् धातु. षकारक्के सकार, निष्ठा एंबुदरिंद क्त प्रत्यय. अर्धधातुकस्येड्वलादेः एंबुदरिंद इडागमवु प्राप्तवादरू विकाचे उपदेशेऽनुदात्तात् एंबुदरिंद निषेध. सुत एंबुदर मुंदे जस्. मोदलिनंते जस्गे असुक् आगम. पूर्वसवर्णदीर्घ. रुत्व विसर्गगळु. सुतासः एंदागुवुदु संहिताकालदल्लि सुतासस् अधि. एंदिरुवाग ससजुषोरुः (पा. सू. ८-३-६८) एंबुदरिंद सकारक्के रुत्व, सुतासर्+अधि अतोरोरप्लुतादप्लुते एंबुदरिंद रुगे उत्व, आद्गुणः एंबुदरिंद गुण, सुतासो+अधि. अवपदान्तात्पुतौ (पा. सू. ६.८-८०६) एंबुदरिंद पूर्वरूपवु प्राप्तवागुवुदु. आदरे अदक्के प्रकृत्यान्तःपादमव्यपरे (पा. सू. ६-८-८८४) ऋक्पादमध्यदल्लिरुव ए ओ गळु स्वरपरदल्लिरुवाग प्रकृतिभाववन्नु हॊंदुवुवु. आदरे आ स्वरवु वकार यकार परकवागिद्दरे ई प्रकृतिभाववु बरुवुदिल्ल एंबुदरिंद इल्लि प्रकृतिभाव बरुवुदु. आद्दरिंद पूर्वरूपवु बरुवुदिल्ल.

बर्हिषि—बृहि वृद्धौ, धातु. इदु इदित्वाद्दरिंद इदितोनुम्धातोः (पा. सू. ७८-४८) एंबुदरिंद नुमागमु बरुवुदु. बृन्ह्, इदर मुंदे बृंहेर्नलोपश्च (उ. सू. ४-४६६) बृहि धातुविन मुंदे इसि प्रत्यय बरुवुदु. नकारक्के लोपवू बरुवुदु एंबुदरिंद बृन्ह् एंबुदर मुंदे इस् बंदु नकारक्के लोप बरुवुदु. बृह्+इस्, पुगंतलघूपधस्य च, एंबुदरिंद लघूपधगुणवु. उरण्रपरः एंबुदरिंद र परवागि बरुवुदु. बर्हिस् एंदागुवुदु. प्रत्ययस्वरदिंद इदु अंतोदात्त, सप्तम्यामविभक्तिरेकवचन ङि प्रत्यय. आदेशप्रत्यययोः (पा. सू. ८-३-४८) एंबुदरिंद प्रत्ययावयववाद सकारक्के षकार बर्हिषि एंदागुवुदु.

ताम इंद्रे—इल्लि तान्+इन्द्रे एंदिरुवाग संहिताकालदल्लि दीर्घादटि समानपादे (पा. सू. ८-३-९) एंबुदरिंद सकारक्के रुत्व. आतोऽटि नित्यम् (पा. सू. ८-३-३) एंबुद

ರಿಂದ ಆಕಾರಕ್ಕೆ ಅನುನಾಸಿಕ. ಭೋಧಗೋ ಅಘೋ ಅಪೂರ್ವಸ್ಯೆಯೋ್ವತಿ (ಪಾ. ಸೂ. ೮-೩-೧೭) ಎಂಬು ದರಿಂದ ರುಗೆ ಯಾದೇಶ, ತಾ್ಯ್+ಇನ್ದ್ರ ಲೋಪಶಾಕಲ್ಯಸ್ಯ ಎಂಬುದರಿಂದ ಯಕಾರಕ್ಕೆ ಲೋಪ ತಾ್ಇಂದ್ರ ಎಂದಾಗುವುದು.

ಸಹಸೇ—ಷಹ ಮರ್ಷಣೇ. ಧಾತ್ವಾದೇಃಷಃಸಃ (ಪಾ. ಸೂ. ೬-೧-೬೪) ಎಂಬುದರಿಂದ ಷಕಾರಕ್ಕೆ ಸಕಾರ. ಸರ್ವಧಾತುಭ್ಯೋ್ಽಸುನ್ (ಉ. ಸೂ.೪-೬೫) ಎಂಬುದರಿಂದ ಅಸುನ್ ಪ್ರತ್ಯಯ ಸಹಸ್, ನಿಶ್ಚ್ವರದಿಂದ ಇದು ಆದುದ್ಯಾತ್ತ. ಚತುರ್ಥೀ ಏಕವಚನ ಙೀಪ್ರತ್ಯಯ, ಸಹಸೇ ಎಂದಾಗುವುದು ॥ ೬ ॥

॥ ಸಂಹಿತಾಪಾಠಃ ॥

ಅ॒ಯಂ ತ॒ ಇ॑ನ್ದ್ರ॒ ಸೋ॒ಮೋ ಅ॑ಗ್ರಿ॒ಯೋ ಹೃ॑ದಿ॒ಸ್ಪೃ॒ಗ॑ಸ್ತು॒ ಶಂ॑ತ॒ಮಃ ।
ಅಥಾ॒ ಸೋ॒ಮಂ ಸು॒ತಂ ಪಿ॑ಬ ॥ ೭ ॥

॥ ಪದಪಾಠಃ ॥

ಅ॒ಯಂ । ತ॒ ಇ॒ನ್ದ್ರ॒ । ಸೋ॒ಮಃ । ಅ॒ಗ್ರಿ॒ಯಃ । ಹೃ॒ದಿ॒ಸ್ಪೃಕ್ । ಅ॒ಸ್ತು॒ । ಶಮ್ಽತ॑ಮಃ ।
ಅಥ॑ । ಸೋ॒ಮ॒ಂ । ಸು॒ತಂ । ಪಿ॒ಬ ॥ ೭ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಅಯಮಸ್ಮಾಭಿಃ ಕ್ರಿಯಮಾಣಃ ಸ್ತೋಮಃ ಸ್ತೋತ್ರವಿಶೇಷೋಽಗ್ರಿಯಃ ಶ್ರೇಷ್ಠಃ ಸನ್ ತೇ ತವ ಹೃದಿಸ್ಪೃಕ್ ಮನಸ್ಯಂಗೀಕೃತಃ ಶಂತಮಃ ಸುಖತಮೋಽಸ್ತು । ಅಥ ಸ್ತುತೇರನಂತರಂ ಸುತಮಭಿಷುತಂ ಸೋಮಂ ಪಿಬ ॥ ಅಗ್ರಿಯಃ । ಅಗ್ರಾದಿತ್ಯನುವೃತ್ತ್ಯಾ ಘಚ್ಪ್ರತ್ಯಯೌ ಚ । ಪಾ. ೪-೪-೧೦೬ । ಇತಿ ಘಚ್ । ಚಿತ್ತ್ವಾದಂತೋದಾತ್ತಃ । ಹೃದಿ ಸ್ಪೃಶತೀತಿ ಹೃದಿಸ್ಪೃಕ್ । ಸ್ಪೃಶೋಽನುದಕೇ ಕ್ವಿನ್ । ಪಾ. ೩-೨-೫೮ । ತತ್ಪುರುಷೇ ಕೃತಿ ಬಹುಲಂ । ಪಾ. ೬-೩-೧೪ । ಇತ್ಯಲುಕ್ । ಕ್ವಿನ್ವೃತ್ತ್ಯಯಸ್ಯ ಕುಃ । ಪಾ. ೮-೨-೬೨ । ಇತಿ ಶಕಾರಸ್ಯ ಕುತ್ವಂ । ಹೃದುತ್ತರಪದಪ್ರಕೃತಿಸ್ವರತ್ವಂ । ಶಂತಮಃ । ಸುಖಕರದ್ರವ್ಯವಚನೋಽತ್ರ ಶಂಶಬ್ದಃ ತತಸ್ತಮಪ್ । ಅತ್ರ ಸುಖಪ್ರಕರ್ಷಸ್ಯ ಗುಣದ್ವಾರಾ ಗುಣನಿಷ್ಠದ್ರವ್ಯೇ ಸಂಕ್ರಾಂತತ್ವಾದದ್ರವ್ಯಪ್ರಕರ್ಷ ಇತಿ ನಿಷೇಧಾತ್ ಕಮೇತ್ತಿಜವ್ಯಯೇತ್ಯಾದಿನಾ । ಪಾ. ೫-೪-೧೧ । ಅಮ್ ನ ಭವತಿ ದ್ರವ್ಯಸ್ಯ ಸ್ವತಃ ಪ್ರಕರ್ಷಾಭಾವಾತ್ । ಈದೃಗರ್ಥ ಏವ ಹಿ ಸ ನಿಷೇಧಃ । ಅಥಾ ಸೋಮಂ । ಸಂಹಿತಾಯಾಂ ನಿಪಾತಸ್ಯೇತಿ ದೀರ್ಘಃ ॥

॥ ಪ್ರತಿಪದಾರ್ಥ ॥

(ಹೇ ಇಂದ್ರ—ಎಲೈ ಇಂದ್ರನೇ) । ಅಗ್ರಿಯಃ—ಶ್ರೇಷ್ಠವಾದ । ಅಯಂ—ಈ (ನಮ್ಮಿಂದ ಮಾಡಲ್ಪಡುವ) । ಸ್ತೋಮಃ—ಸ್ತೋತ್ರವು । ತೇ—ನಿನ್ನ । ಹೃದಿಸ್ಪೃಕ್—ಹೃದಯವನ್ನು ಸ್ಪರ್ಶಮಾಡುವುದಾಗಿಯೂ (ಮನಸ್ಸಿಗೆ ಒಪ್ಪಿಗೆಯಾಗಿಯೂ) । ಶಂತಮಃ—ಸುಖಕಾರಕವಾಗಿಯೂ । ಅಸ್ತು—ಆಗಲಿ । ಅಥ—ಸ್ತುತಿಯು ಮುಗಿದ ಮೇಲೆ । ಸುತಂ—ಸಿದ್ಧವಾಗಿರುವ । ಸೋಮಂ—ಸೋಮರಸವನ್ನು । ಪಿಬ—ಪಾನಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ನಾವು ನಿನ್ನ ವಿಷಯವಾಗಿ ಮಾಡುತ್ತಿರುವ ಈ ಸ್ತೋತ್ರವು ನಿನ್ನ ಹೃದಯವನ್ನು ಮುಟ್ಟಿ ನಿನಗೆ ಆಹ್ಲಾದಕರವಾಗಿ ಸಂತೋಷವನ್ನುಂಟುಮಾಡಲಿ. ಬಳಿಕ ನಾವು ಸಿದ್ಧಪಡಿಸಿರುವ ಈ ಸೋಮರಸವನ್ನು ಪಾನಮಾಡು.

English Translation.

May this excellent hymn touching you heart be most agreeable to you. Drink, then Indra, the extracted Soma-juice.

॥ ವಿಶೇಷವಿಷಯಗಳು ॥

ಅಗ್ರಿಯಃ—ಶ್ರೇಷ್ಠಃ (ಅಗ್ರೇ ಭವಃ), ಶ್ರೇಷ್ಠವಾದ, ಉತ್ತಮವಾದ.

ಹೃದಿಸ್ಪೃಕ್—ಹೃದಿ ಸ್ಪೃಶತೀತಿ ಹೃದಿಸ್ಪೃಕ್ ॥ ಹೃದಯವನ್ನು ಮುಟ್ಟುವ, ಹೃದಯವನ್ನು ಕರಗಿಸುವ, ಮನಸ್ಸಿಗೆ ನಾಟುವ, touching your heart, etc, ನಾವು ಮಾಡುವ ಸ್ತೋತ್ರವು ನಿನ್ನ ಮನಸ್ಸಿಗೆ ನಾಟಲಿ ಎಂದಭಿಪ್ರಾಯವು.

ಶಂತಮಃ—ಸುಖವನ್ನುಂಟುಮಾಡುವ, ನಾವು ಮಾಡುವ ಸ್ತೋತ್ರವು ನಿನಗೆ ಸಂತೋಷವನ್ನುಂಟುಮಾಡಲಿ ಎಂದರ್ಥವು.

ಅಥ—ಈ ಶಬ್ದದ ಅಂತ್ಯಾಕ್ಷರವು ಛಂದಸ್ಸಿನ ಅನುಕೂಲಕ್ಕಾಗಿ ಸಂಹಿತಾಪಾಠದಲ್ಲಿ ದೀರ್ಘವಾಗಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಅಗ್ರಿಯಃ—ಘಚ್ಛೌ ಚ (ಪಾ. ಸೂ. ೪-೪-೧೧೭) ಅಗ್ರಾದ್ಯೈತ್ (ಪಾ. ಸೂ. ೪-೪-೧೧೬) ಎಂಬ ಹಿಂದಿನ ಸೂತ್ರದಿಂದ ಅಗ್ರಾತ್ ಎಂಬ ಪದವು ಅನುವೃತ್ತವಾಗುವುದು. ಅಗ್ರ ಎಂಬ ಪ್ರಾತಿಪದಿಕಪ್ರಕೃತಿಕ ಸಪ್ತ

ಪ್ಯಂತದ ಮುಂದೆ ಭವ ಎಂಬ ಅರ್ಥದಲ್ಲಿ ಘೆಚ್-ಛ-ಯತ್ ಎಂಬ ಪ್ರತ್ಯಯಗಳು ಬರುವುವು ಎಂಬುದರಿಂದ ಇಲ್ಲಿ ಅಗ್ರೇ ಭವಃ ಎಂದು ವಿವಕ್ಷಿಸಿದಾಗ ಘೆಚ್ ಬರುವುದು. ತದ್ಧಿತಾಂತಪ್ರತಿಪದಿಕಾವಯವವಾದ ಸುಪ್‌ಗೆ ಲುಕ್. ಆಯನೇಯೀನೀಯಿಯೇಃ ಫಢ ಖಚೆ ಫಾಂ ಪ್ರತ್ಯಯಾದೀನಾಮ್ (ಪಾ. ಸೂ ೧.೩-೬) ಪ್ರತ್ಯಯದ ಆದಿಯಲ್ಲಿರುವ ಘ್‌ಗೆ, ಆಯನ್ ಆದೇಶ, ಢ್‌ಗೆ-ಏಯ್, ಖ್‌ಗೆ-ಈನ್, ' ಛಗೆ-ಈಯ್, ಫ್‌ಗೆ ಇಯ್ ಆದೇಶ ಬರುವುದು ಎಂಬುದರಿಂದ ಘ್‌ಗೆ ಇಯಾದೇಶ ಅಗ್ರ+ಇಯ, ಯಸ್ಯೇತಿಚ ಎಂಬುದರಿಂದ ಅಕಾರ ಲೋಪ ಅಗ್ರಿಯ, ಘೆಚ್ ಪ್ರತ್ಯಯವು ಚಿತ್. ಆದ್ದರಿಂದ ಚಿತೇಃ (ಪಾ. ಸೂ. ೬-೧-೧೬೩) ಎಂಬುದರಿಂದ ಅಗ್ರಿಯ ಎಂಬುದು ಅಂತೋದಾತ್ತ. ಪ್ರಥಮೈಕವಚನ ಸುಪ್ರತ್ಯಯ. ರುತ್ವ ವಿಸರ್ಗಗಳು. ಅಗ್ರಿಯಃ ಎಂದಾಗುವುದು.

ಹೃದಿಸ್ಪೃಕ್--ಹದಿ ಸ್ಪೃಶತಿ ಇತಿ ಹೃದಿಸ್ಪೃಕ್. ಸ್ಪೃಶೋ೭ನುದಕೇಕ್ವಿನ್ (ಪಾ. ಸೂ. ೩-೨-೫೮) ಉದಕಶಬ್ದವನ್ನು ಳೆದ ಸುಬಂತವು ಉಪಪದವಾಗಿರುವಾಗ ಸ್ಪೃಶ್ ಧಾತುವಿನ ಮುಂದೆ ಕ್ವಿನ್ ಪ್ರತ್ಯಯ ಬರುವುದು ಎಂಬುದರಿಂದ ಕ್ವಿನ್ ಪ್ರತ್ಯಯ. ವರ್ಣಗಳೆಲ್ಲಕ್ಕೂ ಲೋಪ. ತತ್ಪುರುಷೇಕೃತಿಬಹುಲಂ (ಪಾ. ಸೂ. ೬-೩- ೧೪) ಕೃದಂತ ಉತ್ತರಪದ ಪರವಾಗಿದ್ದರೆ ತತ್ಪುರುಷ ಸಮಾಸದಲ್ಲಿ ಸಪ್ತಮಿವಿಭಕ್ತಿಗೆ ಅಲುಕ್ ಬರುವುದು ಎಂಬುದರಿಂದ 'ಸುಪೋಧಾತು ಪ್ರಾತಿಪದಿಕಯೋಃ' ಎಂಬುದರಿಂದ ಪ್ರಾಪ್ತವಾದ ಲುಕ್ ಬರುವುದಿಲ್ಲ. ಹೃದಿ ಸ್ಪೃಕ್ ಎಂಬುದರ ಮುಂದೆ ಸುಪ್ರತ್ಯಯ. ಅದಕ್ಕೆ ಹಲ್‌ಙ್ಯಾಭ್ಯೋದೀರ್ಘಾತ್- (ಪಾ. ಸೂ. ೬-೧-೬೫) ಎಂಬುದರಿಂದ ಲೋಪ. ಕ್ವಿನ್‌ಪ್ರತ್ಯಯಸ್ಯ ಕುಃ (ಪಾ.ಸೂ. ೮-೨-೬೨)ಯಾವ ಶಬ್ದದ ಮುಂದೆ ಕ್ವಿನ್ ಪ್ರತ್ಯಯವು ಬಂದಿರುವುದೋ ಅದಕ್ಕೆ ಪದಾಂತ ವಿಷಯದಲ್ಲಿ ಕವರ್ಗವು ಅಂತಾದೇಶವಾಗಿ ಬರುವುದು ಎಂಬುದರಿಂದ ವಿಹಿತವಾದ ಕುತ್ವವು.--ವ್ರಶ್ಚಭ್ರಸ್ಜಸೃಜಮೃಜಯಜರಾಜಭ್ರಾಜ ಚ್ಛಶಾಂ ಷಃ (ಪಾ.ಸೂ. ೮-೨-೩೬) ಎಂಬುದರಿಂದ ಶಾಂತಲಕ್ಷಣವಾದ ಷತ್ವವನ್ನು ಮಾಡುವಾಗ ಅಸಿದ್ಧವಾಗುವುದು. ಆದ್ದರಿಂದ ಮೊದಲು ಈ ಸೂತ್ರದಿಂದ ಷತ್ವ ಬರುವುದು. ಸ್ಪೃಷ್ ಎಂದಾಗುತ್ತೆ ಝಲಾಂಜಶೋೇನ್ತೇ (ಪಾ. ಸೂ. ೮-೨-೩೯) ಎಂಬುದರಿಂದ ಜಶ್ತ್ವ ಬಂದು ಷಕಾರಕ್ಕೆ ಡಕಾರ ಬರುವುದು. ಈಗ ಕ್ವಿನ್‌ಪ್ರತ್ಯಯಸ್ಯ ಕುಃ ಎಂಬುದರಿಂದ ಕುತ್ವ ಟವರ್ಗ ತೃತೀಯವರ್ಣಡ ಕಾರಕ್ಕೆ ಕವರ್ಗತೃತೀಯ ಗಕಾರ, ಘೈತಸ್ಪೃಗ್ ವಾಶರಿ (ಪಾ. ಸೂ. ೮-೩-೩೬) ಎಂಬುದರಿಂದ ವಿಕಲ್ಪದಿಂದ ಚರ್ತ್ವ ಬರುವುದು. ಘೈತಸ್ಪೃಕ್ ಎಂದಾಗುವುದು. ಸ್ಪೃಕ್ ಎಂಬುದು ಧಾತುಸ್ವರದಿಂದ ಅಂತೋದಾತ್ತ. ಸಮಾಸಾನಂತರವೂ ಗತಿಕಾರಕೋಪಪದಾತ್ಕೃತ್ (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದ ಪ್ರಕೃತಿಸ್ವರ ಬರುವುದು, ಅದೇಸ್ವರ ನಿಲ್ಲುವುದು.

ಕಂಕಮಃ— ಸುಖಕರವಾದ ದ್ರವ್ಯ ಎಂಬ ಅರ್ಥಜನ್ನುಶಂ ಎಂಬ ಪದವು ಬೋಧಿಸುವುದು. ಅತಿಶಯಿತಃಶಮ್ ಎಂದು ವಿವಕ್ಷಿಸಿದಾಗ ಅತಿಶಾಯನೇತಮಬಿಷ್ಠನೌ (ಪಾ. ಸೂ. ೫-೩-೫೫) ಎಂಬುದರಿಂದ ತಮಪ್ ಬರುವುದು. ಶಮ್+ತಮ ಇಲ್ಲಿ ಸುಖದ ಪ್ರಕರ್ಷ (ಅತಿಶಯ)ವು ಸುಖರೂಪ. ಗುಣದ್ವಾರದಿಂದ ಸುಖರೂಪ ಗುಣವಿಶಿಷ್ಟ ದ್ರವ್ಯಪ್ರಕರ್ಷದಲ್ಲಿ ವಿಶ್ರಾಂತವಾಗುವುದು. ಆದ್ದರಿಂದ ಅದ್ರವ್ಯಪ್ರಕರ್ಷೇ, ಎಂದು ನಿಷೇಧವಿರುವುದರಿಂದ ಕಿಮೇತ್ತಿಙವ್ಯಯಘಾದಾಮ್ವದ್ರವ್ಯಪ್ರಕರ್ಷೇ (ಪಾ.ಸೂ. ೫-೪-೧೧) ಕಿಮ್‌ಶಬ್ದ, ಏದನ್ತ ಶಬ್ದ, ತಿಙಂತ, ಅವ್ಯಯ ಇವುಗಳ ಮುಂದೆ ಇರುವ ಯಾವ ಘಸಂಜ್ಞಕ ಪ್ರತ್ಯಯವಿದೆಯೋ ಅದನ್ನು ಕೊನೆಯಲ್ಲಿ ಹೊಂದಿರುವ ಶಬ್ದದ ಮುಂದೆ ಅಮು, ಬರುವುದು. ಆದರೆ ದ್ರವ್ಯಪ್ರಕರ್ಷ ತೋರುವಾಗ ಈ ಅಮು ಪ್ರತ್ಯಯ ಬರುವುದಿಲ್ಲ ಎಂಬುದರಿಂದ ಇಲ್ಲಿ ಅಮು ಪ್ರತ್ಯಯ ಬರುವುದಿಲ್ಲ. ದ್ರವ್ಯಕ್ಕೆ ಸ್ವತಃ ಪ್ರಕರ್ಷವಿಲ್ಲ. ಆದ್ದರಿಂದ ಗುಣಾದಿ

ಪ್ರಕರ್ಷವನ್ನು ಮುನ್ನಿಟ್ಟುಕೊಂಡೇ ದ್ರವ್ಯಕ್ಕೆ ಪ್ರಕರ್ಷವನ್ನು ಉಪಪಾದಿಸಬೇಕು. ಈ ಅಂಶವನ್ನು (ಅದ್ರವ್ಯಪ್ರಕರ್ಷೇ, ಇತಿ ನಿಷೇಧ ಉಪಚರಿತಗುಣಕ್ರಿಯಾಗತಪ್ರಕರ್ಷದ್ರವ್ಯವಿಷಯೋ ದ್ರಷ್ಟವ್ಯಃ) ಎಂದು ತಮಪ್ ಸೂತ್ರದಲ್ಲಿ ಕೈಯಟಕಾರರು ಹೇಳಿರುವರು. ಪ್ರಕೃತದಲ್ಲಿ ಸುಖರೂಪ ಗುಣಪ್ರಕರ್ಷದ್ವಾರಾ ಸುಖಾಶ್ರಯದ್ರವ್ಯಪ್ರಕರ್ಷ ತೋರುವುದರಿಂದ ಅದ್ರವ್ಯಪ್ರಕರ್ಷೇ ಎಂದು ನಿಷೇಧ ಬರುವುದರಿಂದ ಅನ್ ಪ್ರತ್ಯಯ ಬರುವುದಿಲ್ಲ. ತರಪ್ತಮಪೌಘಃ (ಪಾ.ಸೂ. ೧-೧-೨೨) ತರಪ್ ತಮಪ್ ಪ್ರತ್ಯಯಗಳು ಘ ಸಂಜ್ಞೆಯನ್ನು ಹೊಂದುವುವು ಎಂದು ಘ ಸಂಜ್ಞೆಯು ಉಕ್ತವಾಗಿದೆ.

ಅಥಾ ಸೋಮಮ್—ಸಂಹಿತಾಕಾಲದಲ್ಲಿ ನಿಪಾತಸ್ಯೇಚೆ (ಪಾ.ಸೂ. ೬-೩-೧೩೬) ಎಂಬುದರಿಂದ ದೀರ್ಘ. ॥ ೭ ॥

। ಸಂಹಿತಾಪಾಠಃ ।

ವಿಶ್ವಮಿತ್ಸವನಂ ಸುತಮಿಂದ್ರೋ ಮದಾಯ ಗಚ್ಛತಿ ।
ವೃತ್ರಹಾ ಸೋಮಪೀತಯೇ ॥ ೮ ॥

। ಪದಪಾಠಃ ।

ವಿಶ್ವಂ । ಇತ್ । ಸವನಂ । ಸುತಂ । ಇಂದ್ರಃ । ಮದಾಯ । ಗಚ್ಛತಿ ॥
ವೃತ್ರಽಹಾ । ಸೋಮಽಪೀತಯೇ ॥ ೮ ॥

। ಸಾಯಣಭಾಷ್ಯಂ ।

ವೃತ್ರಹಾ ಶತ್ರುಘಾತಕ ಇಂದ್ರಃ ಸೋಮಪೀತಯೇ ಸೋಮಪಾನಾಯ ಮದಾಯ ತತ್ಪಾನಜನ್ಯಹರ್ಷಾಯ ಚೆ ವಿಶ್ವಮಿತ್ಸರ್ವಮಪಿ ಸುತಮಭಿಷುತಸೋಮಯುಕ್ತಂ ಸವನಂ ಪ್ರಾತಃಸವನಾದಿರೂಪಂ ಕರ್ಮ ಗಚ್ಛತಿ ॥ ವಿಶ್ವಂ । ಆಶಿಪುಷೀತ್ಯಾದಿನಾ ಕ್ವನ್ । ನಿತ್ತ್ವಾದಾದ್ಯುದಾತ್ತಃ । ಸವನಂ ಸುತಂ । ಪೂರ್ವವತ್ । ಮದಾಯೆ । ಮದೋನುಪಸರ್ಗೇ । ಪಾ. ೩-೩-೬೭ । ಇತ್ಯೇಪ್ರತ್ಯಯಃ । ಪಿತ್ತ್ವಾದ್ಧಾತುಸ್ವರಃ । ಗಚ್ಛತಿ । ಇಷುಗಮಿಯಮಾಂ ಛಃ । ವೃತ್ರಹಾ । ವೃತ್ರಂ ಹತವಾನ್ । ಬ್ರಹ್ಮಭ್ರೂಣವೃತ್ರೇಷು ಕ್ವಿಪ್ । ಪಾ- ೩-೨-೮೭ । ಇನ್ಹನ್ಪೂಷ್ಣ್ಯಾದಿನಾ ನಿವೃತ್ತಂ ದೀರ್ಘತ್ವೆಂ ಸೌ ಚೆ । ಪಾ. ೬-೪-೧೩, ೧೩ । ಇತಿ ಪ್ರತಿಪ್ರಸವಾದ್ಧವತಿ । ಕೃಪುತ್ತರಪದಪ್ರಕೃತಿಸ್ವರತ್ವಂ । ಸೋಮಪೀತಯೇ । ವ್ಯಧಿಕರಣಬಹುವ್ರೀಹಿರಿತ್ಯುಕ್ತಂ । ತತ್ಪುರುಷೇ ವಾ ದಾಸೀಭಾರಾದಿತ್ವಾತ್ । ಪಾ. ೬-೨-೪೨ । ಪೂರ್ವಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ವೃತ್ರಹಾ—ಶತ್ರುಗಳನ್ನು ಸಂಹಾರಮಾಡುವ ಅಥವಾ ವೃತ್ರಾಸುರನನ್ನು ಸಂಹಾರಮಾಡಿದ । **ಇಂದ್ರಃ**—ಇಂದ್ರನು। **ಸೋಮಪೀತಯೇ**—ಸೋಮಪಾನಮಾಡುವುದಕ್ಕೋಸ್ಕರಲೂ । **ಮದಾಯ**—(ಸೋಮ ಪಾನದಿಂದಾಗುವ) ಹರ್ಷಕ್ಕೋಸ್ಕರಲೂ। **ವಿಶ್ವಂ**—ಸಮಸ್ತವಾದ । **ಸುತಂ**—ಸೋಮರಸವನ್ನುಸಿದ್ಧಮಾಡುವ । **ಸವನಂ**—(ಪ್ರಾತಸ್ಸವನಾದಿ ರೂಪವಾದ) ಕರ್ಮಗಳಿಗೆ । **ಗಚ್ಛತಿ ಇತ್**—ಹೋಗಿಯೇ ಹೋಗುತ್ತಾನೆ

॥ ಭಾವಾರ್ಥ ॥

ರಾಕ್ಷಸರನ್ನು ಅಥವಾ ವೃತ್ರನನ್ನು ಸಂಹಾರಮಾಡುವ ಇಂದ್ರನು ಸೋಮರಸವನ್ನು ಹಿಂಡಿ ತೆಗೆಯುವ ಎಲ್ಲಾ ಪ್ರಾತಸ್ಸವನಾದಿ ಕರ್ಮಗಳಿಗೂ ಹೋಗಿ ಸೋಮಪಾನಮಾಡಿ, ಅದರಿಂದ ತುಷ್ಟನಾಗುತ್ತಾನೆ.

English Translation.

Indra, the killer of Vritra (or of enemies) goes to every ceremoney where Soma is prepared that he may drink the Soma and be intoxicated.

॥ ವಿಶೇಷವಿಷಯಗಳು ॥

ವೃತ್ರಹಾ—ವೃತ್ರಶಬ್ದವು, ಮೇಘ, ಬಲ, ಉದಕ, ವೃತ್ರಾಸುರ ಮೊದಲಾದ ಅನೇಕ ಅರ್ಥಗಳನ್ನು ಸೂಚಿಸುವುದಾದರೂ ಇಲ್ಲಿ ಭಾಷ್ಯಕಾರರು ವೃತ್ರಶಬ್ದಕ್ಕೆ ಶತ್ರುವೆಂದು ಅರ್ಥಮಾಡಿರುವರು. ವೃತ್ರಾಸುರನೆಂದು ಬೇಕಾದರೂ ಅರ್ಥಮಾಡಬಹುದು. ಅದರಂತೆ ವೃತ್ರಹಾ ಎಂದರೆ ಶತ್ರುನಾಶಕನು ಅಥವಾ ವೃತ್ರಾಸುರಸಂಹಾರಕನು ಎಂದರ್ಥವಾಗುವುದು.

ಮದಾಯ—ಸೋಮಪಾನದಿಂದ ಉಂಟಾಗುವ ಮದ (ಮತ್ತು) ಅಥವಾ ಹರ್ಷಕ್ಕಾಗಿ, Intoxication.

॥ ವ್ಯಾಕರಣಪ್ರಕ್ರಿಯಾ ॥

ವಿಶ್ವಮ್—ವಿಶ ಪ್ರವೇಶನೇ ಧಾತು. ಇದರ ಮುಂದೆ **ಅತೃಪ್ವೃಷಿಲಟಿಕಣಿಖಟಿವಿಶಿಭ್ಯಃ ಕ್ವನ್** (ಉ.ಸೂ. ೧-೧೪೯) ಎಂಬುದರಿಂದ ಕ್ವನ್ ಪ್ರತ್ಯಯ, **ಜ್ಞಾತ್ಯಾದಿರ್ನಿತ್ಯಮ್** (ಪಾ.ಸೂ. ೬-೧-೧೯೭) ಎಂಬುದರಿಂದ ನಿತ್ಸ್ವರೆ ಬಂದು ವಿಶ್ವನ್ ಎಂಬುದು ಆದ್ಯುದಾತ್ತ. ಸವನಂ ಸುತಮ್, **ಸೋಮಂ ನಃ** (ಋ.ಸಂ. ೧-೧೬-೫) ಎಂಬಲ್ಲಿ ಇವು ವಿವೃತಗಳಾಗಿರುವುವು.

ಮದಾಯ-ಮದೋಽನುಪಸರ್ಗೇ (ಪಾ.ಸೂ. ೩-೩-೬೭) ಉಪಸರ್ಗವಲ್ಲದ ಸುಬಂತವು ಉಪಪದವಾಗಿರುವಾಗ ಮದಧಾತುವಿನ ಮುಂದೆ **ಅಪ್** ಪ್ರತ್ಯಯ, ಬರುವುದು ಎಂದು ಮದ್ ಧಾತುವಿನ ಮುಂದೆ

ಅಪ್ ಪ್ರತ್ಯಯವು ಪಿತ್ ಆಂದರೆ ಪಕಾರೇತ್ಸಂಜ್ಞಕ. ಆದ್ದರಿಂದ ಅನುದಾತ್ತೌಸುಪ್ಪಿತೌ (ಪಾ. ಸೂ. ೩.೧-೪) ಎಂಬುದರಿಂದ ಅನುದಾತ್ತ, ಧಾತುಸ್ವರವೇ ನಿಲ್ಲುವುದು.

ಗಚ್ಛತಿ--ಗಮ್ಲೃ ಗತೌ. ಇಷು ಗಮಿಯಮಾಂಛಃ (ಪಾ ಸೂ. ೭-೩-೭೭) ಎಂಬುದರಿಂದ ಗಮ್ ಧಾತು ವಿನಮುಂದೆ ಲಟಃ ತಿಪ್ ಶಪ್ ಬಂದಾಗ ಛಕಾರಾದೇಶ.

ವೃತ್ರಹಾ—ವೃತ್ರಂ ಹತವಾನ್ ಎಂದು ವಿಗ್ರಹ, ಹನ ಹಿಂಸಾಗತ್ಯೋಃ, ಧಾತು. ಬ್ರಹ್ಮಭ್ರೂಣವೃತ್ರೇಷುಕ್ವಿಪ್ (ಪಾ.ಸೂ. ೩-೨-೮೭) ಕರ್ಮವಾಚಕಗಳಾದ ಬ್ರಹ್ಮ, ಭ್ರೂಣ, ವೃತ್ರ ಎಂಬ ಪದಗಳು ಉಪಪದವಾಗಿರುವಾಗ ಭೂತಾರ್ಥದಲ್ಲಿ ಹನ ಧಾತುವಿನ ಮುಂದೆ ಕ್ವಿಪ್ ಪ್ರತ್ಯಯ ಬರುವುದು ಎಂಬುದರಿಂದ ಕ್ವಿಪ್, ಇಲ್ಲಿ ಯದ್ಯಪಿ ಕ್ವಿಪ್‌ಚಿ (ಪಾ. ಸೂ. ೩-೨-೭೬) ಎಂಬುದರಿಂದಲೇ ಕ್ವಿಪ್ ಬರುವುದು, ಆದ್ದರಿಂದ ಸಿದ್ಧೇಸತ್ಯಾರಭ್ಯ ಮಾಣೋವಿಧಿರ್ನಿಯಮಾಯ ಭವತಿ, ಎಂಬ ನ್ಯಾಯದಿಂದ ನಿಯಮಕ್ಕಾಗಿ ಈ ಸೂತ್ರವು ಆವಶ್ಯಕವು. ಇಲ್ಲಿ ಕಾಶಿಕಾಕಾರರು ನಾಲ್ಕು ವಿಧವಾಗಿ ನಿಯಮವನ್ನು ಹೇಳುವರು, ಸೂತ್ರದಲ್ಲಿ ಶ್ರುತವಾಗಿರುವುದರಿಂದ ಮೊದಲು ಬ್ರಹ್ಮಾದಿಪದಗಳನ್ನು ಪ್ರಯೋಗಿಸಬೇಕು, ನಂತರ ಪ್ರಕೃತಿಭೂತವಾದ್ದರಿಂದ ಹನ್‌ಧಾತು, ನಂತರ ಪರಿಶೇಷದಿಂದ ಭೂತೇ ಎಂಬುದು ಪ್ರಯುಕ್ತವಾಗುವುದು ಕ್ವಿಪ್, ವಿಧೇಯವಾದ್ದರಿಂದ ಎಲ್ಲದಕ್ಕೂ ಕೊನೆಯಲ್ಲಿ ಪ್ರಯುಕ್ತವಾಗುವುದು, ಏವಂಚ ಹೀಗೆ ಹೇಳಿದ ಹಾಗಾಯಿತು. ಬ್ರಹ್ಮಾದಿಷು ಉಪಪದೇಷು, ಹನ್ತೇಃ ಭೂತೇ ಕ್ವಿಪ್ । ಹೀಗಿರಲು ಯತ ಏವಕಾರಸ್ತತೋನ್ಯತ್ರ ನಿಯಮಃ, ಏವಕಾರವು ಯಾವ ಪದದ ಮುಂದೆ ಇರುವುದೋ ಅದಕ್ಕಿಂತಲೂ ಬೇರೆಕಡೆಯಲ್ಲಿ ನಿಯಮವು (ವ್ಯಾವೃತ್ತಿ) ಬರುವುದು ಎಂಬ ನ್ಯಾಯದಿಂದ ಬರತಕ್ಕ ನಿಯಮವು ತನಗೆ ಅವ್ಯವಹಿತಸವಿಾಪಪದಲ್ಲಿರುವುದಕ್ಕೆ ಬರುವುದು, ಏವಂಚ ಬ್ರಹ್ಮಾದಿಷ್ವೇವ ಹನ್ತೇಃಭೂತೇಕ್ವಿಪ್, ಎಂದು ನಿಯಮವನ್ನು ಹೇಳಿದರೆ, ಅದಕ್ಕೆ ಸವಿಾಪದಲ್ಲಿರುವುದು ಹನ್ ಧಾತುವಾದ್ದರಿಂದ, ಆ ಧಾತುವಿನ ಉಪಪದಾನ್ತರನಿವೃತ್ತಿಫಲಕವಾದ ಪ್ರಕೃತಿನಿಯಮವಾಗುವುದು, 'ಸ್ವಸಜಾತೀಯೇತರವ್ಯಾವರ್ತಕತ್ವಂ ನಿಯಮತ್ವಂ, ಈ ನಿಯಮದಿಂದ ಬ್ರಹ್ಮಾದಿಗಳಿಗಿಂತಲೂ ಜೇರಿ ಉಪಪದಯೋಗವಿದ್ದರೆ ಹನ್‌ಧಾತುವಿನ ಮುಂದೆ ಭೂತಾರ್ಥದಲ್ಲಿ ಕ್ವಿಪ್ ಬರುವುದಿಲ್ಲ ಎಂದು ಏರ್ಪಡುವುದು. ಉದಾಹರಣೆ : ವೃತ್ರಂ ಹತವಾನ್ ಎಂದು ವಿವಕ್ಷಿಸಿದಾಗ ವೃತ್ರಹಾ, ಎಂದು ಪ್ರಯೋಗ ಬರುವುದಿಲ್ಲ. ಭೂತಾರ್ಥದಲ್ಲಿ ಪ್ರಯೋಗವಿಲ್ಲದಿದ್ದರೂ ವರ್ತಮಾನಭವಿಷ್ಯದರ್ಥಗಳಲ್ಲಿ ವೃತ್ರಂ ಹನ್ತಿ-ವೃತ್ರಂ ಹನಿಷ್ಯತಿ, ಎಂದು ವಿವಕ್ಷಿಸಿದಾಗ ಕ್ವಿಪ್ ಬಂದೇ ಬರುವುದು, ಈ ಅರ್ಥಗಳಲ್ಲಿ ವೃತ್ರಹಾ ಎಂಬುದು ಸಾಧುವೇ ಆಗುವುದು. ಈ ನಿಯಮಕ್ಕೆ ಪ್ರಕೃತಿ ನಿಯಮವೆಂದು ಹೆಸರು. ಪ್ರಕೃತಿಗೆ ಉಪಪದಾಂತರ ವ್ಯಾವೃತ್ತಿ ಫಲಕವಾದ್ದರಿಂದ ಇದಕ್ಕೆ ಈ ಹೆಸರು ಬಂದಿದೆ. ಇನ್ನು ಬ್ರಹ್ಮಾದಿಷು ಉಪಪದೇಷು ಹನ್ತೇರೇವ ಭೂತೇ ಕ್ವಿಪ್ ಎಂದು ನಿಯಮವಾದಾಗ ಉಪಪದವು ಕಾಲವಾಚಕವಾದ ಭೂತೇ ಎಂಬೀ ಎರಡಕ್ಕೂ ಸಾವಿಾಪ್ಯವು ಅವಿಶಷ್ಟ (ಒಂದೇ) ಆಗಿರುವದು. ಆದರೂ ಉಪಪದವು ಮೊದಲು ನಿರ್ದಿಷ್ಟವಾಗಿರುವುದರಿಂದ ಉಪಪದದ ನಿಯಮವೆನ್ನುವರು, ಈ ನಿಯಮದಿಂದ ಈ ಉಪಪದಕ್ಕೆ ಸಂಬಂಧವಿರುವಾಗ ಬೇರೆ ಧಾತುಗಳ ಮುಂದೆ ಭೂತಾರ್ಥದಲ್ಲಿ ಕ್ವಿಪ್ ಬರುವುದಿಲ್ಲ. ಉದಾಹರಣೆ : ವೃತ್ರಂಜಿತವಾನ್, ಎಂದು ವಿವಕ್ಷಿಸಿದಾಗ ವೃತ್ರಶಬ್ದವು ಉಪಪದವಾಗಿರುವಾಗ ಜಿ ಧಾತುವಿನ ಮುಂದೆ ಭೂತಾರ್ಥದಲ್ಲಿ ಕ್ವಿಪ್ ಬರುವುದಿಲ್ಲ. ಆದ್ದರಿಂದ ಈ ಅರ್ಥದಲ್ಲಿ ವೃತ್ರಜಿತ್ ಎಂದು ಪ್ರಯೋಗವು ಸಾಧುವಲ್ಲ. ವೃತ್ರಂ ಜಯತಿ, ವೃತ್ರಂ ಜೇಷ್ಯತಿ, ಎಂದು ವರ್ತಮಾನ ಭವಿಷ್ಯತ್ಕಾಲಗಳಲ್ಲನ್ನು ವಿವಕ್ಷಿಸಿದಾಗ, ಬ್ರಹ್ಮಾದಿಗಳು ಉಪಪದ

ವಾದ ಹನ್‌ಧಾತು ವ್ಯತ್ತಿರಿಕ್ತಧಾತುವಿನ ಮುಂದೆ ಭೂತಾರ್ಥದಲ್ಲಿ ಕ್ವಿಪ್ ಬರುವುದಿಲ್ಲ ಎಂದು ವ್ಯಾವರ್ತಕಾಕಾರವು ಏರ್ಪಡುತ್ತದರಿಂದ, ವೃತ್ರಜಿತ್ ಎಂಬ ಪ್ರಯೋಗವು ಸಾಧುವೇ ಆಗುವುದು, ಹೀಗೆ ಪ್ರಕೃತಿನಿಯಮ, ಉಪಪದನಿಯಮ ಎಂದು ಎರಡು ನಿಯಮಗಳಾದುವು. ಇನ್ನು ಬ್ರಹ್ಮಾದಿಷು ಉಪಪದೇಷು ಹನ್ತೇಃ ಭೂತೇ-ಏವ ಕ್ವಿಪ್ ಎಂದು ನಿಯಮಾಕಾರವಾದರೆ, ಇಲ್ಲಿ ಹನ್ತೇಃ -- ಕ್ವಿಪ್ ಎಂಬೀ ಎರಡಕ್ಕೂ ಸಾವಿಾಸ್ಯವು. ಯದ್ಯಪಿ ಅವಿಶಿಷ್ಟ (ಒಂದೇ) ಆದರೂ ಪ್ರತ್ಯಯವು ಪ್ರಧಾನವಾದ್ದರಿಂದ ಇದು ಪ್ರತ್ಯಯನಿಯಮವಾಗುವುದು. ಈ ನಿಯಮದಿಂದ ಬ್ರಹ್ಮಾದಿಗಳು ಉಪಪದವಾಗಿರುವಾಗ ಹನ್ ಧಾತುವಿನ ಮುಂದೆ ಭೂತಕಾಲವಾಚಿರಿಕ್ತಕಾಲ ದಲ್ಲಿ ಕ್ವಿಪ್ ಬರುವುದಿಲ್ಲ ಎಂದು ವ್ಯಾವರ್ತಕಾಕಾರವು ಏರ್ಪಡುತ್ತದು. ಉದಾಹರಣೆ—ಬ್ರಹ್ಮಾಣಂ ಹನ್ತಿ, ಬ್ರಹ್ಮಾಣಂ ಹನಿಷ್ಯತಿ ಎಂಬೀ ಅರ್ಥಗಳಲ್ಲಿ ವರ್ತಮಾನಕಾಲ, ಭವಿಷ್ಯತ್ಕಾಲಗಳು ಪ್ರತೀತವಾಗುವುದರಿಂದ ಕ್ವಿಪ್ ಬರುವುದಿಲ್ಲ. ಆದ್ದರಿಂದ ಈ ಅರ್ಥಗಳಲ್ಲಿ ಬ್ರಹ್ಮಹಾ ಎಂದಾಗುವುದಿಲ್ಲ. ಈ ಉಪಪದಗಳಿದ್ದರೆ ಭೂತಾರ್ಥ ದಲ್ಲಿ ಹನ್ ಧಾತುವಿನ ಮುಂದೆ ಕ್ವಿಪ್ ಬರದೇ ಇದ್ದರೂ ಉಪಪದಾಂತರಯೋಗವಿರುವಾಗ ಹನ್ ಧಾತುವಿನ ಮುಂದೆ ಭೂತಾರ್ಥದಲ್ಲಿ. ಕ್ವಿಪ್ ಬಂದೇ ಬರುವುದು. ಪುರುಷಂ ಹನ್ತಿ, ಹನಿಷ್ಯತಿ ವಾ ಎಂದು ವಿವಕ್ಷಿಸಿದಾಗ ಪುರುಷಹಾ ಎಂದಾಗಿಯೇ ಆಗುವುದು. ಬ್ರಹ್ಮಾದಿಷು ಉಪಪದೇಷು ಹನ್ತೇಃ ಭೂತೇ ಕ್ವಿಬೇವ, ಎಂದು ನಿಯಮವಾದಾಗ ಭೂತೇ ಎಂಬುದು ಇದರ ಸವಿಾಪದಲ್ಲಿರುವುದರಿಂದ, ಯತ ಏವಕಾರಃ ಎಂಬ ನ್ಯಾಯದಿಂದ ಕಾಲನಿಯಮವಾಗುವುದು. ಈ ನಿಯಮದಲ್ಲಿ ಬ್ರಹ್ಮಾದಿಗಳು ಉಪಪದವಾಗಿರುವಾಗ ಹನ್ ಧಾತುವಿನ ಮುಂದೆ ಭೂತಾರ್ಥದಲ್ಲಿ ಕ್ವಿಪ್ ಗಿಂತಲೂ ಬೇರೆ ಪ್ರತ್ಯಯ ಬರುವುದಿಲ್ಲ ಎಂದು ಏರ್ಪಡುತ್ತದು. ಆದ್ದರಿಂದ ಬ್ರಹ್ಮಾಣಂ ಹತವಾನ್ ಎಂದು ವಿವಕ್ಷಿಸಿದರೆ **ಕರ್ಮಣಿ ಹನಃ** (ಪಾ. ಸೂ. ೩-೨-೮೬) ಎಂಬುದರಿಂದ ಭೂತಾರ್ಥದಲ್ಲಿ ಣಿನಿ ಪ್ರತ್ಯಯ ಬರುವುದಿಲ್ಲ. ಆದಕಾರಣ ಬ್ರಹ್ಮಘಾತೀ ಎಂದು ಪ್ರಯೋಗವು ಸಾಧುವಾಗುವುದಿಲ್ಲ. ಆದರೆ ಬ್ರಹ್ಮಾ ದಿಷು ಎಂದು ನಿಯಮದಲ್ಲಿ ಸೇರಿರುವುದರಿಂದ ಬೇರೆಪದಗಳು ಉಪಪದಗಳಾಗಿದ್ದರೆ ಹನ್ ಧಾತುವಿನ ಮುಂದೆ ಭೂತಾರ್ಥದಲ್ಲಿ ಕ್ವಿಪ್ ಬಂದೇಬರುವುದು, ಪಿತೃವ್ಯಂ ಹತವಾನ್ ಪಿತೃವ್ಯಘಾತೀ ಎಂದು ಉದಾಹರಣೆ. ಈ ರೀತಿ ಪ್ರಕೃತಿನಿಯಮ ಉಪಪದನಿಯಮ ಪ್ರತ್ಯಯನಿಯಮ ಕಾಲನಿಯಮರೂಪವಾದ ತಾಲ್ಯುವಿಧ ನಿಯಮ ಲಾಭ ಕ್ಕಾಗಿ ಬ್ರಹ್ಮಭ್ರೂಣವೃತ್ರೇಷು ಕ್ವಿಪ್ (ಪಾ. ಸೂ. ೩-೨-೮೭) ಎಂಬ ಸೂತ್ರವು ಅನಶ್ಯಕವೆಂದು ಕಾಶಿಕಾರರ ಅಭಿಪ್ರಾಯ. ಮಹಾಭಾಷ್ಯದಲ್ಲಿ ಉಭಯತೋ ನಿಯಮೋ೭ಯಮ್ । ಬ್ರಹ್ಮಾದಿಷ್ವೇವ । ಕ್ವಿಬೇವ । ಎಂದು ಇರುವುದು. ಆದ್ದರಿಂದ ಪ್ರಕೃತಿನಿಯಮ, ಕಾಲನಿಯಮಗಳೆರಡೇ ಭಾಷ್ಯಾಭಿಮತವಾದ ನಿಯಮಗಳು. ಹೀಗೆ ಎರಡು ನಿಯಮಗಳನ್ನು ಆಶ್ರಯಿಸುವ ಭಾಷ್ಯಕಾರರ ಅಭಿಪ್ರಾಯವೇನಿರಬಹುದು ಎಂದು ವಾಚಕರು ಕೇಳದೆ ಬಿಡರು. ಬ್ರಹ್ಮಭ್ರೂಣವೃತ್ರೇಷು ಕ್ವಿಪ್, (ಪಾ.ಸೂ. ೩-೨-೮೭) ಎಂಬ ಸೂತ್ರದಲ್ಲಿ ಉಪಪದವೂ ಪ್ರತ್ಯಯವೂ ಸಹ ಶ್ರುತವಾಗಿರುವುದು. ಹನ್ ಧಾತುವೂ ಭೂತೇ ಎಂಬ ಕಾಲವಾಚಕವೂ ಸಹ ಶ್ರುತವಾಗಿಲ್ಲ. ಅವು ಪ್ರಕರಣ ದಿಂದ ಲಬ್ಧವಾಗುವುವು, ಶ್ರುತಿಲಿಂಗವಾಕ್ಯಪ್ರಕರಣಸ್ಥಾನಸಮಾಖ್ಯಾನಾಂ ಪಾರದೌರ್ಬಲ್ಯಮರ್ಥವಿಪ್ರಕ-ರ್ಷಾತ್, ಎಂಬುದರಿಂದ ಶ್ರುತಿಪ್ರಮಾಣಕ್ಕಿಂತಲೂ ಪ್ರಕರಣವು ಬಹು ದುರ್ಬಲವಾದುದು. ಆದ್ದರಿಂದ ದುರ್ಬಲಪ್ರಮಾಣೋಪಸ್ಥಾಪಿತಗಳಾದ ಪ್ರಕೃತಿಕಾಲಗಳಿಗೆ ಉಪರೋಧವು ನ್ಯಾಯವು, ಶ್ರುತವಾದ ಉಪಪದ ಪ್ರತ್ಯಯಗಳಿಗೆ ಉಪರೋಧವು ನ್ಯಾಯವಲ್ಲವು ಎಂದು ಮಹಾಭಾಷ್ಯಕಾರ ಅಭಿಪ್ರಾಯ. ಏವಂಚ ಈ ನ್ಯಾಯಯುಕ್ತವಾದ ಭಾಷ್ಯಕ್ಕೆ ವಿರೋಧವಿರುವುದರಿಂದ ವೃತ್ತಿಕಾರರಮತವು ಉಪೇಕ್ಷಿಸತಕ್ಕದ್ದು ಎಂದು ಕೈಯಟಕಾರರು ಸ್ಪಷ್ಟಪಡಿಸಿರುವರು. ಇಲ್ಲಿ ಧಾತೂಪಪದವಿಷಯಂ ನಿಯಮದ್ವಯಂ ಭಾಷ್ಯೇ ಪ್ರದರ್ಶಿತಂ ಎಂದು ಹರದತ್ತರು ಹೇಳಿರುವರು. ಇಲ್ಲಿ ಧಾತುಕಾಲವಿಷಯಂ, ಎಂದು ಹೇಳುವುದಕ್ಕೆ ಬದಲಾಗಿ

ಉಪಪದಪದವು ಪ್ರಾಮಾದಿಕವಾಗಿ ಬಿದ್ದಿರುವುದು ಎಂದು ಜ್ಞಾನೇನ್ದ್ರಸರಸ್ವತಿಗಳು (ಭಿಕ್ಷುಗಳು) ನಿರೂಪಿಸಿರುವರು. ಏವಂಚ ನಿಯಮಲಾಭಕ್ಕಾಗಿ ಬ್ರಹ್ಮಭ್ರೂಣ ಎಂಬ ಸೂತ್ರವು ಆವಶ್ಯಕವು. ವೃತ್ರಂ ಹತವಾನ್ ಎಂಬಲ್ಲಿ ಇದರಿಂದ ಕ್ವಿಪ್-ಕ್ವಿಬಂತವಾದಾಗ ಕೃತದ್ಧಿತಸಮಾಸಾಶ್ಚ(ಪಾ.ಸೂ.೧-೨-೪೬) ಎಂಬುದರಿಂದ ಪ್ರಾತಿಪದಿಕ ಸಂಜ್ಞೆ, **ಸುಪೋಧಾತುಪ್ರಾತಿಪದಿಕೆಯೋಃ** (ಪಾಸೂ. ೨-೪-೭೧) ಎಂಬುದರಿಂದ ಪ್ರಾತಿಪದಿಕಾವಯವವಾದ ಅಮ್‌ಗೆ ಲುಕ್- ಕ್ವಿಪ್ಸರ್ವಸ್ಯಾಪಿಲೋಪಃ. ವೃತ್ರಹನ್ ಇದರ ಮುಂದೆ ಪ್ರಥಮಾವಿಭಕ್ತಿ ಏಕವಚನ ಸುಪ್ರತ್ಯಯ, ವೃತ್ರ-ಹನ್+ಸು, **ಸರ್ವನಾಮಸ್ಥಾನೇಚಾಸಂಬುದ್ಧೌ** (ಪಾ.ಸೂ. ೬-೪-೮) ಸಂಬುದ್ಧಿಯನ್ನುಳಿದ ಸರ್ವನಾಮಸ್ಥಾನ-ಪ್ರತ್ಯಯವು ಪರವಾಗಿರುವಾಗ ನಕಾರಾಂತವಾದ ಅಂಗದ ಉಪಾನ್ತ್ಯವರ್ಣಕ್ಕೆ ದೀರ್ಘಬರುವುದು ಎಂಬುದರಿಂದ ದೀರ್ಘವು ಪ್ರಾಪ್ತವಾಗುವುದು. ಆದರೆ **ಇನ್‌ಹನ್ ಪೂಷಾರ್ಯಮ್ಣಾಂಶೌ** (ಪಾ.ಸೂ. ೬-೪.೧೨) ಶಿ ಪ್ರತ್ಯಯ ಪರವಾಗಿರುವಾಗ ಇನ್, ಹನ್, ಪೂಷನ್, ಅರ್ಯಮನ್ ಈ ಶಬ್ದಗಳನ್ನು ಕೊನೆಯಲ್ಲಿ ಹೊಂದಿರುವ ಅಂಗದ ಉಪಾಂತ್ಯವರ್ಣಕ್ಕೆ ದೀರ್ಘಬರುವುದು ಎಂದು ಈ ಸೂತ್ರಾರ್ಥ. **ಸರ್ವನಾಮಸ್ಥಾನೇ ಚಾಸಂಬುದ್ಧೌ** (ಪಾ.ಸೂ. ೬-೪-೮) ಎಂಬುದರಿಂದಲೇ ಇವುಗಳ ಉಪಾಂತ್ಯವರ್ಣಕ್ಕೆ ದೀರ್ಘವುಬರುವುದು ಸಿದ್ಧವಾಗುವುದು. ಆದ್ದರಿಂದ ಸಿದ್ಧೇ ಸತ್ಯಾರಭ್ಯಮಾಣೋವಿಧಿರ್ನಿಯಮಾಯ ಭವತಿ ಎಂಬುದರಿಂದ ಈ ಸೂತ್ರವು ನಿಯಾಮಕವಾಗುವುದು. ಇನ್, ಹನ್, ಪೂಷನ್, ಅರ್ಯಮನ್ ಏತದಂತವಾದ ಅಂಗದ ಉಪಾಂತ್ಯವರ್ಣಕ್ಕೆ ದೀರ್ಘ ಬರುವ ಪಕ್ಷದಲ್ಲಿ ಶಿ ಪ್ರತ್ಯಯ ಪರವಾಗಿರುವಾಗಲೇ ಬರುವುದು ಎಂದು ನಿಯಮಾಕಾರ. ಇದರಿಂದ ಶಿ ಪ್ರತ್ಯಯವು ಪರದಲ್ಲಿ ಇಲ್ಲದೇ ಇದ್ದರೆ ಇನ್ನಾದ್ಯಂತಾಂಗದ ಉಪಾಂತ್ಯವರ್ಣಕ್ಕೆ ದೀರ್ಘ ಬರುವುದಿಲ್ಲ ಎಂದು ಏರ್ಪಡುವುದು. ಆದ್ದರಿಂದ ವೃತ್ರಹನ್+ಸು ಎಂಬಲ್ಲಿ ಶಿಯು ಪರದಲ್ಲಿ ಇಲ್ಲದ ಕಾರಣ ದೀರ್ಘ ಬರದೇ ಹೋಗುವುದು. ಆದರೂ **ಸೌಚೆ** (ಪಾ.ಸೂ. ೬-೪-೧೩) ಸು ಪ್ರತ್ಯಯ ಪರದಲ್ಲಿರುವಾಗ ಇನ್, ಹನ್, ಪೂಷನ್, ಅರ್ಯಮನ್, ಇವುಗಳನ್ನು ಕೊನೆಯಲ್ಲಿ ಹೊಂದಿರುವ ಅಂಗದ ಉಪಾಂತ್ಯವರ್ಣಕ್ಕೆ ದೀರ್ಘ ಬರುವುದು ಎಂಬುದರಿಂದ ದೀರ್ಘ ಬರುವುದು, ಪ್ರತಿಪ್ರಸವ ಎಂದರೆ ನಿಷೇಧಕ್ಕೆ ನಿಷೇಧಕ ಎಂದು ಅರ್ಥ. ಇಲ್ಲಿ ಸರ್ವನಾಮಸ್ಥಾನೇಚ ಎಂಬುದರಿಂದ ಪ್ರಾಪ್ತವಾದ ದೀರ್ಘಕ್ಕೆ ಇನ್, ಹನ್, ಪೂಷಾ ಎಂಬುದು ಫಲತಃ ನಿಷೇಧಕವಾಯಿತು. ಇದಕ್ಕೆ **ಸೌಚೆ** (ಪಾ.ಸೂ. ೬-೪-೧೩) ಎಂಬುದು ಫಲತಃ ನಿಷೇಧವಾಯಿತು. ಆದ್ದರಿಂದ ದೀರ್ಘೆತ್ವಂ ಸೌಚೇತಿ ಪ್ರತಿಪ್ರಸವಾದ್ಭವತಿ ಎಂದು! ಭಾಷ್ಯದಲ್ಲಿ ವರ್ಣಿತವಾಗಿರುವುದು. ವೃತ್ರಹನ್+ಸು ಎಂದಿರುವಾಗ **ಹಲ್‌ಙ್ಯಾಭ್ಯಃ**--(ಪಾ.ಸೂ. ೬-೧-೬೮) ಎಂಬುದರಿಂದ ಸುಲೋಪ. **ನ ಲೋಪಃ ಪ್ರಾತಿಪದಿಕಾಂತಸ್ಯ** (ಪಾ.ಸೂ. ೮-೨-೭) ಎಂಬುದರಿಂದ ನಲೋಪ, ವೃತ್ರಹಾ ಎಂದಾಗುವುದು. ಹಾ ಎಂಬುದು ಧಾತುಸ್ವರದಿಂದ ಉದಾತ್ತ, ಸಮಾಸಾನಂತರವೂ ಕೃದುತ್ತರಪದಪ್ರಕೃತಿಸ್ವರದಿಂದ ಎಂದರೆ **ಗತಿಕಾರಕೋಪಪದಾತ್ಕೃತ್** (ಪಾ.ಸೂ. ೬-೨-೧೩೯) ಎಂಬುದರಿಂದ ಆದೇ ಸ್ವರ ಬರುವುದು.

ಸೋಮಪೀತಯೇ— ಪ್ರಥಮಾವಿಭಕ್ತ್ಯಂತಪದಗಳಿಗೆ ಬಹುವ್ರೀಹಿಸಮಾಸವು ಬರುವುದು. ಬೇರೆ ವಿಭಕ್ತ್ಯಂತಗಳು ಬಹುವ್ರೀಹಿಸಮಾಸದಲ್ಲಿ ಸೇರಿದ್ದರೆ ಅದನ್ನು ವ್ಯಧಿಕರಣಬಹುವ್ರೀಹಿ ಎನ್ನುವರು. ಏಭಿರಗ್ನೇಽದುವೋಽಗಿರಃ (ಋ.ಸಂ. ೧-೧೪-೧)ರಲ್ಲಿ ಸೋಮಪೀತಯೇ ಎಂಬುದಕ್ಕೆ ವ್ಯಧಿಕರಣಬಹುವ್ರೀಹಿಸಮಾಸವು ನಿರೂಪಿತವಾಗಿರುವುದು. ಸೋಮಶಬ್ದವು ನಿಶ್ಚಸ್ವರದಿಂದ ಆದ್ಯುದಾತ್ತ. ಬಹುವ್ರೀಹಿಯಲ್ಲಿ **ಬಹುವ್ರೀಹೌ ಪ್ರಕೃತ್ಯಾಪೂರ್ವಪದಂ** (ಪಾ.ಸೂ. ೬-೨-೧) ಎಂಬುದರಿಂದ ಆದೇ ಸ್ವರ ಬರುವುದು. ಸೋಮಸ್ಯ ಪೀತಿಃ ಸೋಮಪೀತಿಃ ತಸ್ಯೈ ಸೋಮಪೀತಯೇ ಎಂದು ತತ್ಪುರುಷವನ್ನು ಮಾಡಿದರೂ ಸಮಾಸಸ್ಯ ಎಂಬುದರಿಂದ

ಪ್ರಾಪ್ತವಾಗುವ ಅಂತೋದಾತ್ತವನ್ನು ಬಾಧಿಸಿ, ದಾಸೀಭಾರಾಧಿಯು ಆಕೃತಿಗಣವಾದ್ದರಿಂದ ಆ ಗಣಕ್ಕೆ ಸೇರುವ ಸೋಮುಪೀತಿ ಎಂಬುದಕ್ಕೆ ಕುರುಗಾರ್ಹಪತಿರಿಕ್ತಗುರ್ವಸೊತಜರತ್ಯಶ್ಲೀಲ ದೈಥರೂಪಾ ಪಾರೇವಡವಾತ್ಯೈ. ತಿಲಕದ್ರೋಃ ಪಣ್ಯಕಂಬಲೋ ದಾಸೀಭಾರಾಣಾಂಚೆ (ಪಾ.ಸೂ. ೬-೨-೪೨) ಎಂಬುದರಿಂದ ಪೂರ್ವಪದ ಪ್ರಕೃತಿಸ್ವರವು ಬರುವುದು. ವ್ಯಧಿಕರಣಬಹುವ್ರೀಹಿಸಮಾಸಾಶ್ರಯಣವು ಅಗತಿಕ ಗತಿಯಾದ್ದರಿಂದ ತತ್ಪುರುಷವು ವರ್ಣಿಸಲಾಗಿರುವುದು. ॥ ೮ ॥

॥ ಸಂಹಿತಾಪಾಠಃ ॥

ಸೇಮಂ ನಃ ಕಾಮಮಾ ಪೃಣ ಗೋಭಿರಶ್ವೈಃ ಶತಕ್ರತೋ ।
ಸ್ತವಾಮ ತ್ವಾ ಸ್ವಾಧ್ಯಃ ॥ ೯ ॥

। ಪದಪಾಠಃ ।

ಸಃ । ಇಮಂ । ನಃ । ಕಾಮಂ । ಆ । ಪೃಣ । ಗೋಭಿಃ । ಅಶ್ವೈಃ । ಶತಕ್ರತೋ ಇತಿ ಶತಽಕ್ರತೋ ॥
ಸ್ತವಾಮ । ತ್ವಾ । ಸುಽಆಧ್ಯಃ ॥ ೯ ॥

॥ ಸಾಯಣಭಾಷ್ಯಂ ॥

ಹೇ ಶತಕ್ರತೋ ಸ ತ್ವಂ ನೋಽಸ್ಮದೀಯಮಿಮಂ ಕಾಮಂ ಕಾಮ್ಯಮಾನಂ ಫಲಂ ಗೋಭಿರಶ್ವೈಶ್ಚ ಸಹಾ ಪೃಣ । ಸರ್ವತಃ ಪೂರಯ । ವಯಮಪಿ ಸ್ವಾಧ್ಯಃ ಸುಷ್ಠು ಸರ್ವತೋ ಧ್ಯಾನಯುಕ್ತಾಃ ಸಂತಸ್ತ್ವಾ ತ್ವಾಂ ಸ್ತವಾಮ ॥ ಸೇಮಂ । ಸಂಹಿತಾಯಾಂ ಸೋಽಚಿ ಲೋಪೇ ಚೇತ್ಪಾದಪೂರಣಮಿತಿ ಸುಲೋಪಃ । ಕಾಮಂ । ಕಮೇರ್ಭಾವೇ ಕರ್ಮಣ್ಯತೋ ಘಞೋಽಂತ ಉದಾತ್ತಃ । ಪಾ. ೬-೧-೧೫೯ । ಇತ್ಯಂತೋದಾತ್ತತ್ವೇ ಪ್ರಾಪ್ತೇ ವೃಷಾದಿಷು ಪಾಠಾದಾದ್ಯುದಾತ್ತತ್ವಂ । ಪೃಣ । ಪೃಣ ಪ್ರೀಣನೇ । ಲೋಟಿ ಸೇರ್ಹಿಃ । ತುದಾದಿಭ್ಯಃ ಶಃ । ತಸ್ಯ ಙಿತ್ತ್ವಾದ್ಗುಣಾಭಾವಃ । ಅತೋಹೇರಿತಿ ಹೇರ್ಲುಕ್ । ಗೋಭಿಃ । ಸಾವೇಕಾಚೆ ಇತಿ ಪ್ರಾಪ್ತಂ ವಿಭಕ್ತೇರುದಾತ್ತತ್ವಂ ನ ಗೋಶ್ವನ್ಸಾವವರ್ಣೇತಿ ಪ್ರತಿಷಿಧ್ಯತೇ । ಅಶ್ವೈಃ । ಕ್ವನಂತ ಇತ್ಯುಕ್ತಂ । ಅಸಾಮರ್ಥ್ಯಾನ್ನ ಹರಾಂಗವದ್ಭಾವಃ । ಸ್ತವಾಮ । ಷ್ಟುಞ್ ಸ್ತುತೌ । ಧಾತ್ವಾದೇಃ ಷಃ ಸಃ । ಲೋಡುತ್ತಮಬಹುವಚನೇನಸ್ಯ ಲೋಟೋ ಲಜ್ವದಿತಿ ಲಜ್ವದ್ಭಾವಾನ್ನಿತ್ಯಂ ಙಿತಃ ।

सा. ६-४-६८ । इति सकारस्य लोपः । अडुत्तैमस्य पिच्छे । सा. ६-४-६७ । इत्याडागमः प्रत्ययेऽस्य पित्त्वादनुदात्तत्वं । धाञ्स्वर एव । स्वाध्यः । ध्यै चिन्तायां । स्वाङ्पो रुपसर्गयोः स्वाक्त्वयोगः । अन्येभ्योऽपि दृश्यते । सा. ३-३-७५ । इति क्विप् दृशिग्रहणस्य विधर्मंतरोपसंग्रहणार्थत्वादत्र संप्रसारणे सति पूर्वपरयोस्त्वं । हल इ दीर्घः । जस्येरनेकाचः । सा. ६-४-६३ । इति यञादेशः । गतिकारकोपपदात्कृदि त्यृत्तरपदप्रकृतिस्वरत्वं । उदात्तयणो हल्पूर्वादिति जस उदात्तत्वं न भवति तत्रासर्वनामस्थानमित्यनुवृत्तेः । अत उदात्तस्वरितयोर्यणः स्वरितोऽनुदात्तस्येदि स्वरितत्वमेव भवति ॥ ३० ॥

॥ प्रतिपदार्थ ॥

हे शतक्रतो—ಎಲೈ ಇಂದ್ರನೇ । सः त्वं—ಆ ನೀನು । नः—ನಮ್ಮ । इमं—ಈ कामं—ಅಪೇಕ್ಷಿತವಾದ ಫಲವನ್ನು (ಇಷ್ಟಾರ್ಥವನ್ನು) । गोभिरश्वैः—ಗೋವುಗಳು ಮತ್ತು ಅಶ್ವಗಳಿಂದ आ॒पृण—ಪೂರ್ಣಮಾಡು । (वयमेनमि—ನಾವೂ) । स्वाध्यः—ಒಳ್ಳೆಯ ಧ್ಯಾನಶೀಲರಾಗಿ । त्वा—ನಿನ್ನನ್ನು । स्तवाम—ಸ್ತೋತ್ರಮಾಡುತ್ತೇವೆ.

॥ भावार्थ ॥

ಎಲೈ ಇಂದ್ರನೇ, ನೀನು ಗೋವು, ಅಶ್ವ ಮೊದಲಾದವುಗಳನ್ನು ಕೊಟ್ಟು ನಮ್ಮ ಇಷ್ಟಾರ್ಥವನ್ನು ಪೂರ್ತಿಗೊಳಿಸು. ನಾವೂ ಸದಾ ಧ್ಯಾನಶೀಲರಾಗಿ ನಿನ್ನನ್ನು ಸ್ತುತಿಸುತ್ತೇವೆ.

English Translation

O Satakratu (Indra) fulfil this our desire by giving us cows and horses Profoundly meditating we praise you.

॥ ವಿಶೇಷವಿಷಯಗಳು ॥

गोभिरश्वैः आपृण—ಗೋವುಗಳು ಮತ್ತು ಅಶ್ವಗಳಿಂದ ಪೂರ್ತಿಮಾಡು ಎಂದರೆ ನಮಗೆ ಗೋವುಗಳನ್ನೂ ಅಶ್ವಗಳನ್ನೂ ಕೊಟ್ಟು ನಮ್ಮ ಇಷ್ಟಾರ್ಥವನ್ನು ಪೂರ್ಣಗೊಳಿಸು ಎಂದರ್ಥವು.

स्वाध्यः—ध्यै चिन्तायां । सुष्ठु सर्वतो ध्यानयुक्ताः [संतः ॥ ನಿನ್ನನ್ನು (ಇಂದ್ರನನ್ನು) ಮನಸ್ಸಿನಲ್ಲಿ ಚೆನ್ನಾಗಿ ಧ್ಯಾನಮಾಡುತ್ತಾ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಸೇಮಮ್—ತದ್ ಶಬ್ದದ ಮುಂದೆ ಪ್ರಥಮಾವಿಭಕ್ತಿ ಏಕವಚನ ಸು ಪ್ರತ್ಯಯ. **ತದೋಸ್ಸೆಸ್ಸಾವನೇಂತ್ಯಯೋಃ** (ಪಾ. ಸೂ. ೭-೨-೧೦೬) ತ್ಯದಾದಿಗಣಪಠಿತವಾದ ಶಬ್ದಗಳ ಕೊನೆಯಲ್ಲಿಲ್ಲದ ತಕಾರ ದಕಾರಗಳಿಗೆ ಸು ಪ್ರತ್ಯಯ ಪರವಾಗಿರುವಾಗ ಸಕಾರಾದೇಶಬರುವುದು ಎಂಬುದರಿಂದ ತಕಾರಕ್ಕೆ ಸಕಾರ, ಸದ್+ಸ್ **ತ್ಯದಾದೀನಾಮಃ** (ಪಾ. ಸೂ. ೭-೨-೧೦೨) ಎಂಬುದರಿಂದ ದಕಾರಕ್ಕೆ ಅಕಾರ, ಸ+ಅ+ಸ್ **ಅತೋರುನೇ,** (ಪಾ. ಸೂ. ೬-೧-೯೭) ಎಂಬುದರಿಂದ ಪರರೂಪ. ಇಷ್ಟು ಅಂಶಗಳನ್ನು **ಸೇಮಂ ನಸ್ತೋಮಮಾ** (ಋ. ಸಂ. ೧-೧೬-೫) ಎಂಬಲ್ಲಿಯೂ ಇಟ್ಟುಕೊಳ್ಳುವುದು. ಸಸ್+ಇಮಮ್. **ಸೋಚಿಲೋಪೇಚೇತ್ಪಾದಪೂರಣಮ್** (ಪಾ. ಸೂ. ೬-೧-೧೩೪) ಎಂಬುದರಿಂದ ಸ್‌ಗೆ ಲೋಪ. ಗುಣ- ಸೇಮಮ್ ಎಂದಾಗುವುದು. ಇದರ ಮಿಕ್ಕ ವಿವರಣೆಯು ಸೇಮಂ ನಸ್ತೋಮಮಾ ಎಂಬ ಮಂತ್ರದಲ್ಲಿರುವುದು.

ಕಾಮಮ್—ಕಮು ಕಾಂತೌ ಧಾತು, ಇದರ ಮುಂದೆ **ಹಲಶ್ಚ** (ಪಾ.ಸೂ.೩-೩-೧೩೧) ಎಂಬುದರಿಂದ ಘಞ್ ಪ್ರತ್ಯಯ. ಕಮ್+ಅ **ಅತ ಉಪಧಾಯಾಃ** (ಪಾ. ಸೂ. ೭-೨-೧೧೬) ಎಂಬುದರಿಂದ ಉಪಧಾವೃದ್ಧಿ ಕಾಮ, ಎಂದಾಯಿತು. ಘಞ್ ಪ್ರತ್ಯಯವು ಞಿತ್ತಾದ್ದರಿಂದ **ಞ್ನಿತ್ಯಾದಿರ್ನಿತ್ಯಮ್** (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತವು ಪ್ರಾಪ್ತವಾದರೆ ಅದನ್ನು ಬಾಧಿಸಿ **ಕರ್ಷಾತ್ವತೋಘಞಂತ ಉದಾತ್ತಃ** (ಪಾ. ಸೂ. ೬-೧-೧೫೯) ಕರ್ಷದ್ಧಾತು ಮತ್ತು ಆಕಾರವನ್ನು ಹೊಂದಿರುವ ಧಾತುಗಳು ಇವುಗಳ ಮುಂದೆ ಘಞ್ ಬಂದರೆ ಘಞ್ ಪ್ರತ್ಯಯಾಂತ್ತದ ಕೊನೆಯ ವರ್ಣವು ಉದಾತ್ತವಾಗುವುದು ಎಂಬುದರಿಂದ ಉದಾತ್ತವು ಪ್ರಾಪ್ತವಾಗುವುದು. ಅದನ್ನೂ ಬಾಧಿಸಿ **ವೃಷಾದೀನಾಂಚ** (ಪಾ. ಸೂ. ೬-೧-೨೦೩) ವೃಷಾದಿಗಣಪಠಿತವಾದ ಶಬ್ದಗಳ ಆದಿಯು ಉದಾತ್ತವಾಗುವುದು ಎಂಬುದರಿಂದ ವೃಷಾದಿ ಗಣದಲ್ಲಿ ಪಠಿತವಾಗಿರುವ ಕಾಮ ಎಂಬುದು ಆದ್ಯುದಾತ್ತವಾಗುವುದು.

ಕೃಣ—ಕೃಣ ಹ್ರೀಣನೇ ತುದಾಯಲ್ಲಿರುವ ಧಾತು; ಇದರ ಮುಂದೆ ಲೋಟ್. ಮಧ್ಯಮಪುರುಷ ಏಕವಚನ ಸಿಪ್. **ಸೇರ್ಹ್ಯಪಿಚ್ಚೆ** (ಪಾ.ಸೂ. ೩-೪-೮೭) ಎಂಬುದರಿಂದ ಹಿ ಆದೇಶ **ತುದಾದಿಭ್ಯಶ್ಶಃ** (ಪಾ. ಸೂ. ೩-೧-೭೭) ಎಂಬುದರಿಂದ ಶ ವಿಕರಣ ಕೃಣ್+ಅ ಹಿ **ಸಾರ್ವಧಾತುಕಮಪಿತ್** (ಪಾ. ಸೂ. ೧-೨-೪) ಪಕಾರೇತ್ಸಜ್ಞಕವಲ್ಲಿದ ಸಾರ್ವಧಾತುಕವು ಞಿತ್ತಾಗುವುದು ಎಂಬುದರಿಂದ ಶ ಪ್ರತ್ಯಯ ಞಿತ್ತು. ಆದ್ದರಿಂದ **ಕ್ಙಿತಿಚ** (ಪಾ. ಸೂ. ೧-೧-೫) ಎಂಬುದರಿಂದ ಗುಣಕ್ಕೆ ನಿಷೇಧ ಬರುವುದು. ಆದಕಾರಣ **ಪುಗಂತಲಘೂಪಧಸ್ಯಚ** (ಪಾ ಸೂ. ೭-೩-೮೬) ಎಂಬುದರಿಂದ ಗುಣ ಬರುವುದಿಲ್ಲ. **ಅತೋಹೇಃ** (ಪಾ. ಸೂ. ೬-೪-೩೦೫) ಎಂಬುದರಿಂದ ಹಿಗೆ ಲುಕ್ ಬರುತ್ತೆ, ಕೃಣ ಎಂದಾಗುತ್ತೆ. **ತಿಙ್ಙತಿಙ** (ಪಾ. ಸೂ-೮-೧-೨೮) ಎಂಬುದರಿಂದ ಸರ್ವಾನುದಾತ್ತ. ಸಂಹಿತಾಕಾಲದಲ್ಲಿ ಆ ಎಂಬ ಉದಾತ್ತದ ಮುಂದೆ ಇರುವ ಕೃಗೆ ಉದಾತ್ತಾನುದಾತ್ತಸ್ಯಸ್ವರಿತಃ (ಪಾ.ಸೂ. ೮-೪-೬೬) ಎಂಬುದರಿಂದ ಸ್ವರಿತ ಬರುವುದು. ಇದರ ಮುಂದೆ ಇರುವ ಣ ಎಂಬ ಅನುದಾತ್ತಕ್ಕೆ ಗೋ ಎಂಬ ಉದಾತ್ತವು ಪರದಲ್ಲಿರುವುದರಿಂದ **ಉದಾತ್ತಸ್ವರಿತಪರಸ್ಯಸನ್ನೇತಃ** (ಪಾ. ಸೂ. ೧-೨-೪೦) ಎಂಬುದರಿಂದ ಅನುದಾತ್ತಸ್ವರವು ಬರುವುದು.

ಗೋಭಿಃ—**ಸಾವೇಕಾಚಸ್ತೃತೀಯಾದಿರ್ವಿಭಕ್ತಿಃ** (ಪಾ. ಸೂ. ೬-೧-೧೬೮) ಸಪ್ತಮಿಾ ಬಹುವಚನ ಸುಪ್ ಪ್ರತ್ಯಯಪರದಲ್ಲಿರುವಾಗ ಒಂದೇ ಅಚ್ಚನ್ನು ಹೊಂದಿರುವ ಯಾವ ಶಬ್ದವಿದೆಯೋ ಅದರ ಮುಂದೆ

ಇರುವ ತೃತೀಯಾದಿ ವಿಭಕ್ತಿಯು ಉದಾತ್ತವಾಗುವುದು ಎಂಬುದರಿಂದ ಗೋಷು ಎಂಬಲ್ಲಿ ಗೋ ಎಂಬ ಪ್ರಕೃತಿಯು ಏಕಾಚ್ಚವಾಗಿರುವುದರಿಂದ ಅದರ ಮುಂದೆ ಇರುವ ಭಿಸ್‌ಗೆ ಉದಾತ್ತವು ಪ್ರಾಪ್ತವಾಗುವುದು. ಆದಶೆ **ನಗೋಶ್ವನ್ಸ್ವವರ್ಣರಾಡಙ್ಙ್ಯಾಪ್ಪ್ರಾತಿಪದಿಕಾತ್** (ಪಾ.ಸೂ. ೬-೧-೧೮೨) ಗೋ ಶಬ್ದಾದಿಗಳ ಮುಂದೆ ಇರುವ ವಿಭಕ್ತಿಗೂ ಮತುಪ್ಪಿಗೂ ಸಹ ಹಿಂದೆ ಹೇಳಿದ ಸ್ವರವು ಬರುವುದಿಲ್ಲ ಎಂದು ನಿಷಿದ್ಧವಾಗಿರುವುದರಿಂದ ವಿಭಕ್ತಿಯು ಉದಾತ್ತವಾಗುವುದಿಲ್ಲ.

ಅಶ್ವೈಃ—ಅಶ್ವ ಎಂಬುದು **ಅಶೂಪ್ಯುಷಿ** (ಉ. ಸೂ. ೧-೧೪೯) ಎಂಬುದರಿಂದ ಕ್ವನ್ ಪ್ರತ್ಯಯಾಂತ. ನಿತ್ಸ್ವರದಿಂದ ಆದ್ಯುದಾತ್ತ, ಇದರ ಮುಂದೆ ಶತಕ್ರತೋ ಎಂಬ ಆಮಂತ್ರಿತವು ಇರುವುದು. ಅಶ್ವೈಃ ಎಂಬುದಕ್ಕೂ ಶತಕ್ರತೋ ಎಂಬುದಕ್ಕೂ ಪರಸ್ಪರಾನ್ವಯವಿಲ್ಲ. ಆದ್ದರಿಂದ ಸಾಮರ್ಥ್ಯವಿಲ್ಲ. ಆದ ಕಾರಣದಿಂದ **ಸುಬಾಮಂತ್ರಿತೇಪರಾಂಗವತ್ಕ್ರಿಯಾರೇ** (ಪಾ.ಸೂ. ೨-೧-೨) ಎಂಬುದರಿಂದ ಪರಾಂಗವದ್ಭಾವದಿಂದ ಒಂದೇ ಪದವೆಂದು **ಭಾವಿಸಿ** ಅಪ್ಪಮಿಕವಾದ ಆಮಂತ್ರಿತಸ್ಯಚ ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ.

ಸ್ತವಾಮ—ಷ್ಟುಞ್ ಸ್ತುತೌ, ಧಾತು, **ಧಾತ್ವಾದೇಃಷಃಸಃ** (ಪಾ ಸೂ. ೬-೧-೬೪) ಎಂಬುದರಿಂದ ಷಕಾರಕ್ಕೆ ಸಕಾರ, ಲೋಟ್ ಉತ್ತಮಪುರುಷ ಬಹುವಚನ ಮಸ್. ಸ್ತು+ಮಸ್, **ಲೋಟೋ ಲಙ್ವತ್** (ಪಾ. ಸೂ. ೩-೪-೮೫) ಎಂಬುದರಿಂದ ಲಙ್ವದ್ಭಾವ ಬರುವುದು. ಆದ್ದರಿಂದ **ನಿತ್ಯೆಂಙಿತಃ** (**ಪಾ.ಸೂ.** ೩-೪-೯೯) ಸಕಾರಾಂತವಾದ ಞಕಾರೇತ್ಸಂಜ್ಞಕ ಉತ್ತಮ.ಪುರುಷದ ಕೊನೆಯ ವರ್ಣಕ್ಕೆ ಲೋಪ ಬರುವುದು ಎಂಬುದನಿಂದ ಸಕಾರಕ್ಕೆ ಲೋಪ. ಕರ್ತರಿಶಪ್ (ಪಾ.ಸೂ. ೩-೧-೬೮) ಎಂಬುದರಿಂದ ಶಪ್. ಅದಕ್ಕೆ **ಅದಿಪ್ರಭೃತಿಭ್ಯಃ ಶಪಃ** (ಪಾ ಸೂ. ೨-೪-೭೨) ಎಂಬುದರಿಂದ ಲುಕ್. **ಆಡುತ್ತಮಸ್ಯಪಿಚ್ಚೆ** (ಪಾ ಸೂ. ೩-೪-೯೨) ಎಂಬುದರಿಂದ ಮಗೆ ಆಡಾಗಮ ಸ್ತು+ಅಮ, ತಿಙ್ಞಾದ ಆಮ ಎಂಬುದು ಅಙಾದಿಯಾಯಿತು. ಆದ್ದರಿಂದ **ತುರುಸ್ತು ಶಮ್ಯಮಸ್ಸಾರ್ವಧಾತುಕೇ** (**ಪಾ.ಸೂ.** ೭-೩-೯೫) ಈ ಧಾತುಗಳ ಮುಂದಿರುವ ಸಾರ್ವಧಾತುಕಸಂಜ್ಞಕವಾದ ಹಲಾದಿಯಾದ ತಿಙ್ ಪ್ರತ್ಯಯಕ್ಕೆ ಈಡಾಗಮವು ವಿಕಲ್ಪವಾಗಿ ಬರುವುದು ಎಂದು ವಿಹಿತವಾದ ಈಡಾಗಮವು ಬರುವುದಿಲ್ಲ. **ಸಾರ್ವಧಾತುಕಾರ್ಧಧಾತುಕಯೋಃ**(ಪಾ.ಸೂ. ೭-೩-೪೪) ಎಂಬುದರಿಂದ ಗುಣ, ಉಕಾರಕ್ಕೆ ಓಕಾರ—ಅದಕ್ಕೆ **ಏಚೋಯಯೆವಾಯಾವಃ** (ಪಾ.ಸೂ. ೬-೧-೭೮) ಎಂಬುದರಿಂದ ಅವಾದೇಶ, ಸ್ತವಾಮ ಎಂದಾಗುವುದು. ಇಲ್ಲಿ ಪ್ರತ್ಯಯವು **ಪಿತ್ತಾದ್ದರಿಂದ ಅನುದಾತ್ತೌ ಸುಪ್ಪಿತೌ** (ಪಾ.ಸೂ. ೩-೧-೪) ಎಂಬುದರಿಂದ ಅನುದಾತ್ತ. ಆದ್ದರಿಂದ ಧಾತು ಸ್ವರವೇ ನಿಲ್ಲುವುದು.

ಸ್ವಾಧ್ಯಃ—ಧ್ಯೈ ಚಿನ್ತಾಯಾಮ್, ಧಾತು. ಸು ಆಙ್ ಎಂಬ ಉಪಸರ್ಗಗಳಿಗೆ ಪೂರ್ವಭಾಗದಲ್ಲಿ ಪ್ರಯೋಗ, **ಅದೇಶ ಉಪದೇಶೇಽಶಿತಿ** (ಪಾ. ಸೂ. ೬-೧-೪೫) ಎಂಬುದರಿಂದ ಆತ್ವ ಸು+ಆ-ಧ್ಯಾ, ಯಣಾದೇಶ ಸ್ವಾ+ಧ್ಯಾ **ಅನ್ಯೇಭ್ಯೋಽಪಿದೃಶ್ಯತೇ** (ಪಾ. ಸೂ. ೩-೨-೧೭೮) ಭ್ರಾಜಾದಿಗಳಿಗಿಂತಲೂ ಬೇರೆ ಧಾತುಗಳ ಮುಂದೆಯೂ ಕ್ವಿಪ್ ಪ್ರತ್ಯಯವು ಕಾಣಲ್ಪಡುವುದು, ಎಂಬುದರಿಂದ, ಕ್ವಿಪ್, ಅದಕ್ಕೆ ಅವಯವಶಃ ಲೋಪ, ಇಲ್ಲಿ ಸೂತ್ರದಲ್ಲಿ ದೃಶ್ಯತೇ ಎಂಬ ದೃಶಿಗ್ರಹಣವು ಶಾಸ್ತ್ರಾಂತರಾಪ್ರಾಪ್ತಕಾರ್ಯಸಂಗ್ರಹಕ್ಕಾಗಿ ಇರುವುದು. ಆದ್ದರಿಂದ ಪ್ರಕೃತದಲ್ಲಿ ಸಂಪ್ರಸಾರಣ ಬರುವುದು ಸ್ವಾಧ್+ಇ+ಅ. **ಸಾಂಪ್ರಸಾರಣಾಚ್ಚ** (ಪಾ. ಸೂ. ೬-೧-೧೦೮) ಎಂಬುದರಿಂದ ಇ+ಅ ಗಳಿಗೆ ಪೂರ್ವರೂಪ, ಸ್ವಾಧಿ, ಲುಪ್ತವಾದ ಕ್ವಿ ಪ್ರತ್ಯಯವನ್ನು ನಿವಿತ್ತವಾಡಿಕೊಂಡು **ಯೆಸ್ಮಾತ್ಪ್ರತ್ಯಯೆವಿಧಿಸ್ತದಾದಿಸ್ಪ್ರತ್ಯಯೇಙ್ಗಮ್** (ಪಾ. ಸೂ. ೧-೪-೧೩) ಯಾವ ಪ್ರಕೃತಿ ವಿಶೇಷದ ಮುಂದೆ ಯಾವ ಪ್ರತ್ಯಯವು ವಿಧಿಸಲ್ಪಡುವುದೋ ಆ ಪ್ರತ್ಯಯವು ಪರವಾಗಿರುವಾಗ ಪ್ರತ್ಯವಿಧಾನಾವಧಿಭೂತಪ್ರಕೃತಿ.

ವಿಶೇಷಾದ್ಯವಯವಕವಾದ ಶಬ್ದವು ಅಂಗಸಂಜ್ಞೆಯನ್ನು ಹೊಂದುವುದು, ಎಂಬುದರಿಂದ ಅಂಗಸಂಜ್ಞೆ ಇರುವುದು. ಆದ್ದರಿಂದ ಹಲಃ (ಪಾ. ಸೂ. ೬-೪-೨) ಅಂಗಾವಯವವಾದ ವ್ಯಂಜನದ ಮುಂದಿರುವ ಯಾವ ಸಂಪ್ರಸಾರಣವಿದೆಯೋ ಅದನ್ನು ಕೊನೆಯಲ್ಲಿ ಹೊಂದಿರುವ ಅಂಗಕ್ಕೆ ದೀರ್ಘಬರುವುದು ಎಂಬುದರಿಂದ ದೀರ್ಘ, ಸ್ವಾಧೀ ಎಂದಾಯಿತು. ಇದರ ಮುಂದೆ ಜಸ್ ಸ್ವಾಧೀ+ಅಸ್. ಈಗ **ಆಚಿಶ್ನುಧಾತು**- (ಪಾ. ಸೂ. ೬-೪-೭೭) ಎಂಬುದರಿಂದ ಇಯಙಾದೇಶವು ಪ್ರಾಪ್ತವಾದರೆ ಅದನ್ನು ಬಾಧಿಸಿ **ಏರನೇಕಾಚೋಽಸಂಯೋಗಪೂರ್ವಸ್ಯ** (ಪಾ. ಸೂ. ೬-೪-೮೨) ಧಾತ್ವವಯವಮಾತ್ರದಿಂದಾದ ಸಂಯೋಗದ ಮುಂದೆ ಇಲ್ಲದೇ ಇರುವ ಯಾವ ಇಕಾರ ವಿದೆಯೋ ಅದನ್ನು ಕೊನೆಯಲ್ಲಿ ಹೊಂದಿರುವ ಯಾವ ಧಾತುವು ಇದೆಯೋ ಅದನ್ನು ಕೊನೆಯಲ್ಲಿ ಹೊಂದಿರುವ ಅನೇಕಾಚ್ಕವಾದ ಅಂಗಕ್ಕೆ ಆಜಾದಿಸ್ಪ್ರತ್ಯಯಪರವಾಗಿರುವಾಗ ಯಣಾದೇಶಬರುವುದು ಎಂಬುದರಿಂದ ಯಣಾದೇಶ ಬರುವುದು. ಹೇಗೆಂದರೆ ಸ್ವಾಧೀ ಎಂಬಲ್ಲಿ ಈ ಎಂಬುದು ಸಂಯುಕ್ತಾಕ್ಷರದ ಮುಂದೆ ಇಲ್ಲ ಅಂದಮೇಲೆ ಧಾತ್ವವಯವಮಾತ್ರದಿಂದುಂಟಾದ ಸಂಯೋಗದ ಮುಂದೆ ಸುತರಾಂ ಇಲ್ಲ, ಅದನ್ನು ಕೊನೆಯಲ್ಲಿ ಹೊಂದಿರುವ ಧಾತು ಧೀ, ಎಂಬುದು. ಇದನ್ನು ಕೊನೆಯಲ್ಲಿ ಹೊಂದಿರುವ ಅಂಗ, ಸ್ವಾಧೀ ಎಂಬುದು. ಅದು ಅನೇಕವಾಗಿಯೂ ಇರುವುದು. ಆದ್ದರಿಂದ ಆದಕ್ಕೆ ಯಣಾದೇಶ ಬರುವುದು. ಅದು **ಅಲೋನ್ತ್ಯಸ್ಯ** (ಪಾ. ಸೂ. ೧-೧-೫೨) ಎಂಬ ಪರಿಭಾಷೆಯಿಂದ ಕೊನೆಯ ಈ ಕಾರಕ್ಕೆ ಬರುವುದು, ಸ್ವಾಧ್ಯಸ್-ರುತ್ವ ವಿಸರ್ಗಗಳು ಸ್ವಾಧ್ಯಃ, ಎಂದಾಗುವುದು. ಧೀ ಎಂಬುದು ಧಾತುಸ್ವರದಿಂದ ಅಂತೋದಾತ್ತ ಉಪಸರ್ಗಗಳೊಂದಿಗೆ ಸಮಾಸಾನಂತರ, **ಗತಿಕಾರಕೋಪಪದಾತ್ಕೃತ್** (ಪಾ. ಸೂ ೬-೨-೧೩೮) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರಬಂದು ಅದೇ ನಿಲ್ಲುವುದು. ಉದಾತ್ತವಾದ ಈಕಾರದ ಸ್ಥಾನದಲ್ಲಿ ಯಣ್ ಬಂದಿರುವುದು. ಅದು ಹಲ್+(ವ್ಯಂಜನ) **ಪೂರ್ವಕವಾ**ಗಿಯೂ ಇರುವುದು. ಆದರೂ **ಉದಾತ್ತಯಣೋಹಲ್ಪೂರ್ವಾತ್** (ಪಾ.ಸೂ. ೬-೧-೧೭೪) ಎಂಬುದರಿಂದ ಜಸ್ ವಿಭಕ್ತಿಗೆ ಉದಾತ್ತ ಬರುವುದಿಲ್ಲ. ಏಕೆಂದರೆ, ಈ ಸೂತ್ರಕ್ಕೆ **ಅಞ್ಚೇಶ್ಚ** (ಪಾ.ಸೂ. ೬-೧-೧೭೦) ಎಂಬುದರಿಂದ **ಅಸರ್ವನಾಮಸ್ಥಾನಮ್** ಎಂಬುದು ಅನುವೃತ್ತವಾಗುವುದು. ಆದ್ದರಿಂದ ಉದಾತ್ತದ ಸ್ಥಾನದಲ್ಲಿ ಬಂದುದೂ ವ್ಯಂಜನಪೂರ್ವಕವೂ ಆದ ಯಾವ ಯಣ್ ಇದೆಯೋ ಅದರ ಮುಂದೆ ಇರುವ ನದೀಸಂಜ್ಞಕವೂ, ಅಸರ್ವನಾಮವಿಭಕ್ತಿಯೂ ಸಹ ಉದಾತ್ತವಾಗುವುದು ಎಂದು ಉದಾತ್ತಯಣೋಹಲ್ಪೂರ್ವಾತ್ ಎಂಬುದಕ್ಕೆ ಅರ್ಥವಾಗುವುದು. ಪ್ರಕೃತ ಜಸ್ ಎಂಬುದು **ಸುಡನಪುಂಸಕಸ್ಯ** (ಪಾ.ಸೂ. ೧-೧-೪೩) ನಪುಂಸಕ ಶಬ್ದದ ಮುಂದೆ ಇಲ್ಲದೇ ಇರುವ, ಸು, ಔ, ಜಸ್, ಅಮ್, ಔಟ್ ಈ ಐದು ಪ್ರತ್ಯಯಗಳು ಸರ್ವನಾಮಸ್ಥಾನ ಸಂಜ್ಞೆಯನ್ನು ಹೊಂದುವುವು ಎಂಬುದರಿಂದ ಸರ್ವನಾಮಸ್ಥಾನವಾಗುವುದು. ಅಸರ್ವನಾಮಸ್ಥಾನವಾಗುವುದಿಲ್ಲ. ಆದ್ದರಿಂದ ಉದಾತ್ತಯಣಃ ಎಂಬುದರಿಂದ ಜಸ್‌ಗೆ ಉದಾತ್ತಸ್ವರಬರುವುದಿಲ್ಲ. ಉದಾತ್ತಸ್ವರಿತಯೋರ್ಯಣಸ್ಸ್ವರಿತೋಽನುದಾತ್ತಸ್ಯ, ಉದಾತ್ತ ಅಥವಾ ಸ್ವರಿತ ಇವುಗಳ ಸ್ಥಾನದಲ್ಲಿ ಬಂದ ಯಾವ ಯಣ್ ಇದೆಯೋ ಅದರ ಮುಂದೆ ಇರುವ ಅನುದಾತ್ತದ ಸ್ಥಾನದಲ್ಲಿ ಸ್ವರಿತವು ಬರುವುದು ಎಂಬುದರಿಂದ ಅನುದಾತ್ತೌ ಸುಪ್ಪಿತೌ ಎಂಬುದರಿಂದ ಅನುದಾತ್ತವಾದ ಜಸ್‌ಗೆ ಸ್ವರಿತ ಸ್ವರವೇ ಬರುವುದು ॥ ೯ ॥

ಹದಿನೇಳನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಇಂದ್ರಾವರುಣಯೋರಿತ್ಯಾದಿಕಂ ನವರ್ಚಂ ಷಷ್ಠಂ ಸೂಕ್ತಂ । ಅತ ಏವ ನವತಶ್ಚಾನುವೃತ್ತಾ-ವನುಕ್ರಮ್ಯತೇ । ಇಂದ್ರಾವರುಣಯೋರೈಂದ್ರಾವರುಣಂ ಯುವಾಕು ಪಾದನಿಚೃತಾವಿತಿ । ಅತ್ರ ದೇವತಾ ವಿಸ್ಪಷ್ಟಾ । ಋಷಿಚ್ಛಂದಸೀ ತು ಪೂರ್ವವದನುವರ್ತೇತೇ । ಅಯಂ ತು ವಿಶೇಷಃ । ಯುವಾಕು ಹೀತ್ಯಾ-ದಿಕೇ ದ್ವೇ ಋಚೌ ಪಾದನಿಚೃನ್ನಾಮಕಚ್ಛಂದೋಯುಕ್ತೇ ॥ ವಿನಿಯೋಗಸ್ತು ಸ್ಮಾರ್ತೋ ಲೈಂಗಿಕೋ ವಾ ಕಶ್ಚಿದವಗಂತವ್ಯಃ ॥

ಅನುವಾದ—ಇಂದ್ರಾವರುಣಯೋಃ ಎಂಬುದು ಈ ನಾಲ್ಕನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ ೪-೫ನೇ ಋಕ್ಕುಗಳು ಪಾದನಿಚೃತ್ ಎಂಬ ಛಂದಸ್ಸಿನ ಋಕ್ಕುಗಳೆಂದು ಹೇಳಲ್ಪಟ್ಟಿದೆ. ಇಂದ್ರಾವರುಣರು ದೇವತೆಗಳು. ಋಷಿಛಂದಸ್ಸುಗಳು ಹಿಂದಿನ ಸೂಕ್ತದಂತೆ. ಆದರೆ ಯುವಾಕು ಹಿ ಶಚೀನಾಂ, ಇಂದ್ರಃ ಸಹಸ್ರದಾವ್ನಾಂ ಎಂಬ ಎರಡು ಋಕ್ಕುಗಳು ಮಾತ್ರ ಪಾದನಿಚೃತ್ ಎಂಬ ಹೆಸರಿನ ಛಂದಸ್ಸುಗಳುಳ್ಳ ಋಕ್ಕುಗಳು. ವಿನಿಯೋಗವನ್ನು ಸ್ಮಾರ್ತಪ್ರಯೋಗದಲ್ಲಿ ನೋಡಿ ತಿಳಿದುಕೊಳ್ಳಬಹುದು.

॥ ಓಂ ॥

ಸೂಕ್ತ—೧೭

॥ ಮಂಡಲ—೧ ॥ ಅನುವಾಕ—೪ ॥ ಸೂಕ್ತ—೧೭ ॥

॥ ಅಷ್ಟಕ —೧ ॥ ಅಧ್ಯಾಯ—೧ ॥ ವರ್ಗ— ೩೨, ೩೩ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೧-೯ ॥

॥ ಋಷಿಃ—ಮೇಧಾತಿಥಿಃ ಕಾಣ್ವಃ ॥

॥ ದೇವತಾ— ಇಂದ್ರಾವರುಣೌ ।

॥ ಛಂದಃ—೧-೩, ೬-೯, ಗಾಯತ್ರೀ । ೪, ೫, ಪಾದನಿಚೃತ್ ॥

॥ ಸಂಹಿತಾಪಾಠಃ ॥

ಇಂದ್ರಾವರುಣಯೋರಹಂ ಸಮ್ರಾಜೋರವ ಆ ವೃಣೇ ।
ತಾ ನೋ ಮೃಳಾತ ಈದೃಶೇ ॥ ೧ ॥

॥ ಪದಪಾಠಃ ॥

ಇಂದ್ರಾವರುಣಯೋಃ । ಅಹಂ । ಸಂಽರಾಜೋಃ । ಅವಃ । ಆ । ವೃಣೇ ॥
ತಾ । ನಃ । ಮೃಳಾತಃ । ಈದೃಶೇ ॥ ೧ ॥

॥ ಸಾಯಣಭಾಷ್ಯಂ ॥

ಅಹಮನುಷ್ಠಾತಾ ಸಮ್ರಾಜೋಃ ಸಮ್ರಾಟೀನರಾಜ್ಯೋಪೇತಯೋಃ ಸಮ್ಯಗ್ವೀಪ್ಯಮಾನಯೋ-ರ್ವೇಂದ್ರಾವರುಣಯೋರ್ದೇವಯೋಃ ಸಂಬಂಧ್ಯವೋ ರಕ್ಷಣಮಾ ವೃಣೇ । ಸರ್ವತಃ ಪ್ರಾರ್ಥಯೇ । ತಾ ತೌ ದೇವಾವೀದೃಶೇ ಏವಂವಿಧೇಽಸ್ಮದೀಯವರಣೇ ನಿಮಿತ್ತಭೂತೇ ಸತಿ ಮೃಳಾತಃ । ಅಸ್ಮಾನ್ಸುಖಯತಃ॥ ಇಂದ್ರಶಬ್ದೋ ರನ್ತ್ಯೇಯಾಂತಃ । ವರುಣಶಬ್ದ ಉನನ್ತ್ಯೇಯಾಂತಃ । ಉಭೌ ನಿತ್ತ್ವಾದಾದ್ಯುದಾತ್ತೌ । ಸಮಾಸೇ ದೇವತಾದ್ವಂದ್ವೇ ಚೇತಿ ಪೂರ್ವಪದಸ್ಯಾನಜಾದೇಶಃ । ಉಭೇ ಯುಗಪದಿತ್ಯನುವೃತ್ತೌ ದೇವ-ತಾದ್ವಂದ್ವೇ ಚೇತಿ ಯುಗಪದುಭಯಪದ ಪ್ರಕೃತಿಸ್ವರಶ್ಚ । ಸಮ್ರಾಜೋಃ । ರಾಜ್ಞ ದೀಪ್ತೌ । ಸಶ್ಚ-ದ್ವಿಷೇತ್ಯಾದಿನಾ ಕ್ವಿಪ್ । ಸಮೋ ಮೋಽನುಸ್ವಾರಃ । ಪಾ. ೮-೩-೨೩ । ಇತ್ಯನುಸ್ವಾರೇ ಪ್ರಾಪ್ತೇ ಮೋ ರಾಜಿ ಸಮಃ ಕ್ವೌ । ಪಾ- ೮-೩-೨೫ । ಇತಿ ಮಕಾರಾದೇಶಃ । ಕೃದುತ್ತರಪದಪ್ರಕೃತಿಸ್ವರತ್ವಂ । ಕರ್ತೃಕ-ರ್ಮಣೋಃ ಕೃತಿ । ಪಾ.೨-೩-೬೫ । ಇತಿ ಕರ್ತರಿ ಷಷ್ಠೀ । ಅವಃ । ಅವ ರಕ್ಷಣಾದಿಷು । ಭಾವೇಽನುನ್ । ನಿತ್ತ್ವಾದಾದ್ಯುದಾತ್ತಃ । ತಾ । ಸುಪಾಂ ಸುಲುಗಿತ್ಯಾದಿನಾ ದ್ವಿವಚನಸ್ಯ ಡಾದೇಶಃ । ಟಿಲೋಪೇ ವಿಭ-ಕ್ತೇರುದಾತ್ತನಿವೃತ್ತಿಸ್ವರಃ । ಮೃಳಾತಃ । ಮೃಡ ಸುಖನೇ । ಪ್ರಾರ್ಥನಾಯಾಂ ಲಿಙರ್ಥೇ ಲೇಟ್ । ದ್ವಿವಚನಂ ತಸ್ । ಲೇಟೋಽಡಾಟಾವಿತ್ಯಾಡಾಗಮಃ । ತುದಾದಿಭ್ಯಃ ಶಃ । ಜಿತ್ತ್ವಲ್ಲಘೂಪಧಗುಣಾ-ಭಾವಃ । ಈದೃಶೇ । ತ್ಯದಾದಿಷು ದೃಶೋಽನಾಲೋಚನೇ ಕಞ್ ಚ । ಪಾ- ೩-೨-೬೦ । ಇತೀದಂಶಬ್ದ ಉಪಪದೇ ದೃಶೇಃ ಕಞ್ । ಉಪಪದಸಮಾಸ ಇದಂಕಿಮೋರೀಶ್ಕೀ । ಪಾ. ೬-೩-೯೦ । ಇತೀದಮ ಈಶ್ । ಶಿತ್ತ್ವಾತ್ಸರ್ವಾದೇಶಃ । ಕಞಃ ಕಿತ್ತ್ವಾದ್ಗುಣಾಭಾವಃ । ಞಿತ್ತ್ವಾದುತ್ತರಪದಸ್ಯಾದ್ಯುದಾತ್ತತ್ವಂ । ಉಪಪದಸಮಾಸೇ ಕೃದುತ್ತರಪದಪ್ರಕೃತಿಸ್ವರತ್ವೇನ ತದೇವ ಶಿಷ್ಯತೇ ॥

॥ ಪ್ರತಿಪದಾರ್ಥ ॥

ಅಹಂ—(ಯಾಗಕರ್ತೃವಾದ) ನಾನು । ಸಮ್ರಾಜೋಃ—ಚೆನ್ನಾಗಿ ಪ್ರಕಾಶಿಸುತ್ತಿರುವ ಅಥವಾ ಒಳ್ಳೆಯ ರಾಜ್ಯದಿಂದ ಕೂಡಿರುವ । ಇಂದ್ರಾವರುಣಯೋಃ—ಇಂದ್ರ ಮತ್ತು ವರುಣರ । ಅವಃ—ರಕ್ಷಣೆ ಯನ್ನು । ಆ ವೃಣೇ—(ಎಲ್ಲೆಡೆಗಳಲ್ಲಿಯೂ) ಪ್ರಾರ್ಥಿಸುತ್ತೇನೆ । ತಾ—ಆ ಇಬ್ಬರು ದೇವತೆಗಳು । ಈದೃಶೇ—ಈ ನನ್ನ ಪ್ರಾರ್ಥನೆಯ ವಿಷಯದಲ್ಲಿ । ನಃ—ನಮಗೆ । ಮೃಳಾತ—ಸುಖವನ್ನುಂಟುಮಾಡಲಿ ।

॥ ಭಾವಾರ್ಥ ॥

ಯಾಗವನ್ನಾರಂಭಿಸಿರುವ ನಾನು ನನ್ನ ಯಜ್ಞವು ಸಾಂಗವಾಗಿ ನೆರವೇರುವ ಉದ್ದೇಶದಿಂದ ಮಹಾ ತೇಜಸ್ವಿಗಳಾದ ಮತ್ತು ರಾಜ್ಯಯುಕ್ತರಾದ ಇಂದ್ರ ಮತ್ತು ವರುಣರನ್ನು ಮರೆಹೋಗುತ್ತೇನೆ. ಅವರು ನನ್ನ ಈ ಪ್ರಾರ್ಥನೆಯನ್ನು ಈಡೇರಿಸಿ ನನಗೆ ಸಂತೋಷವನ್ನುಂಟುಮಾಡಲಿ.

English Translation.

I seek the protection of the sovereign rulers Indra and Varuna; may they both favour us accordingly.

॥ ವಿಶೇಷ ವಿಷಯಗಳು ॥

ಈ ಸೂಕ್ತಕ್ಕೆ ಇಂದ್ರ ಮತ್ತು ವರುಣರೆಂಬ ಇಬ್ಬರು ದೇವತೆಗಳು. ಋಗ್ವೇದದಲ್ಲಿ ಇಬ್ಬಿಬ್ಬರು ದೇವತೆಗಳನ್ನು ಒಟ್ಟಾಗಿ ಸೇರಿಸಿ ಆಹ್ವಾನ ಮಾಡುವುದೂ, ಸ್ತೋತ್ರಮಾಡುವುದೂ ವಿಶೇಷವಾಗಿ ಕಂಡುಬರುವುದು. ಈ ವಿಧವಾದ ಎರಡು ದೇವತೆಗಳನ್ನು (ದೇವತಾದ್ವಂದ್ವಗಳನ್ನು) ಪ್ರತಿಪಾದಿಸುವ ಮಂತ್ರಗಳಿಗೆ ಸಂಸ್ತವಿಕ ಮಂತ್ರವೆಂದು ಹೆಸರು. ಇವುಗಳಲ್ಲಿ ಮುಖ್ಯವಾದ ದೇವತೆಗಳು—ಅಗ್ನಿಃ, ಸೋಮಃ, ವರುಣಃ, ಪೂಷಾ, ಬೃಹಸ್ಪತಿಃ, ಬ್ರಹ್ಮಣಸ್ಪತಿಃ, ಪರ್ವತಃ, ಕುತ್ಸಃ, ವಿಷ್ಣುಃ, ವಾಯುಃ, ಮಿತ್ರಃ, ರುದ್ರಃ, ವಾತಃ, ಪರ್ಜನ್ಯ ಎಂದು ಹದಿನಾಲ್ಕು ಮಂದಿ ದೇವತೆಗಳಿರುವರು. ಹೇಗೆಂದರೆ—

ಇಂದ್ರಾಗ್ನೀ—(ಇಂದ್ರ+ಅಗ್ನಿ)--

ಇಂದ್ರಾಗ್ನೀ ರೋಚನಾ ದಿವಃ (ಋ. ಸಂ. ೩-೧೨-೯).

ಇಂದ್ರಾಸೋಮಾ—(ಇಂದ್ರ+ಸೋಮ)—

ಇಂದ್ರಾಸೋಮಾ ಸಮುಶಂಸಂ (ಋ. ಸಂ. ೭-೧೦೪-೨).

ಇಂದ್ರಾವರುಣಾ— (ಇಂದ್ರ+ವರುಣ)—

ಇಂದ್ರಾವರುಣಾ ಯುವಮುಧ್ವರಾಯೆ ನಃ (ಋ. ಸಂ. ೭-೮೨-೧).

ಇಂದ್ರಾಪೂಷಣಾ (ಇಂದ್ರ+ಪೂಷಾ)—

ಇಂದ್ರಪೂಷಣಾ ವಯಂ (ಋ. ಸಂ. ೬-೫೭-೧).

ಇಂದ್ರಾಬೃಹಸ್ಪತೀ (ಇಂದ್ರ+ಬೃಹಸ್ಪತಿ)—

ಇದಂ ವಾಮಾಸ್ಯೇ ಹವಿಃ ಪ್ರಿಯಮಿಂದ್ರಾಬೃಹಸ್ಪತೀ । (ಋ. ಸಂ. ೪-೪೯-೧).

ಇಂದ್ರಾಬ್ರಹ್ಮಣಸ್ಪತೀ (ಇಂದ್ರ+ಬ್ರಹ್ಮಣಸ್ಪತಿ)—

ಆಚ್ಛೇಂದ್ರಾಬಹ್ಮಣಸ್ಪತೀ ಹವಿರ್ನಃ (ಋ. ಸಂ. ೨-೨೪-೧೨)॥

ಇಂದ್ರಾಪರ್ವತಾ(ಇಂದ್ರ+ಪರ್ವತಾ)—

ಇಂದ್ರಾಪರ್ವತಾ ಬೃಹತಾ ರಥೇನ (ಋ. ಸಂ ೩-೫೩-೧).

ಇಂದ್ರಾಕುತ್ಸಾ (ಇಂದ್ರ+ಕುತ್ಸ)—

ಇಂದ್ರಾಕುತ್ಸಾ ವಹಮಾನಾ ರಥೇನ (ಋ. ಸಂ. ೫-೩೧-೯)

ಇಂದ್ರಾವಿಷ್ಣೂ (ಇಂದ್ರ+ವಿಷ್ಣು)—

ಇಂದ್ರಾವಿಷ್ಣೂ ದೃಂಹಿತಾಃ ಶಂಬರಸ್ಯ (ಋ. ಸಂ. ೭-೯೯-೫).

ಇಂದ್ರೆವಾಯೂ (ಇಂದ್ರ+ವಾಯು)—

ಇಂದ್ರೆವಾಯೂ ಇಮೇ ಸುತಾಃ (ಋ. ಸಂ. ೧-೨-೪).

ಮಿತ್ರಾವರುಣಾ (ಮಿತ್ರ+ವರುಣ)—

ಆ ನೋ ಮಿತ್ರಾವರುಣಾ (ಋ. ಸಂ. ೩-೬೨-೧೬).

ಸೋಮಾಪೂಷಣಾ (ಸೋಮ+ಪೂಷಾ)—

ಸೋಮಾಪೂಷಣಾ ಜನನಾ ರಯೀಣಾಂ (ಋ. ಸಂ. ೨-೪೦-೧).

ಸೋಮಾರುದ್ರಾ (ಸೋಮ+ರುದ್ರ)—

ಸೋಮಾರುದ್ರಾ ಯುವಮೇತಾನ್ಯಸ್ಮೈ (ಋ. ಸಂ. ೬-೭೪-೩).

ವಾತಾಪರ್ಜನ್ಯಾ (ವಾತ+ಪರ್ಜನ್ಯ)—

ಧರ್ತಾರೋ ದಿವ ಋಭವಃ ಸುಹಸ್ತಾ ವಾತಾಪರ್ಜನ್ಯಾ ಮುಹುಷಸ್ಯ ತೆನ್ಯತೋಃ (ಋ. ಸಂ. ೧೦-೬೬-೧೦).

ಅಗ್ನೀಷೋಮೌ (ಅಗ್ನಿ+ಸೋಮ)—

ಅಗ್ನೀಷೋಮಾವಿಮಂ ಸು ಮೇ (ಯ. ಸಂ. ೧-೯೩-೧).

ಅಗ್ನೀಪರ್ಜನ್ಯಾ (ಅಗ್ನಿ+ಪರ್ಜನ್ಯ).

ಅಗ್ನೀಪರ್ಜನ್ಯಾವವತಂ ಧಿಯಂ ಮೇ (ಋ. ಸಂ. ೬-೫೨-೧೬).

ಅಗ್ನಾವಿಷ್ಣೂ (ಅಗ್ನಿ+ವಿಷ್ಣು)—

ಅಗ್ನಾವಿಷ್ಣೂ ಸಜೋಷಸಾ (ತೈ. ಸಂ. ೪-೭-೧).

ಇಂತಹ ಸಂಸ್ತವ ಮಂತ್ರಗಳು ಋಗ್ವೇದದಲ್ಲಿ ಬಹಳವಾಗಿವೆ. ಅನೇಕ ಸಂದರ್ಭಗಳಲ್ಲಿ ದೇವತಾದ್ವಂದ್ವವನ್ನು ನಿರ್ದೇಶಿಸುವಾಗ ದ್ವಿವಚನವನ್ನು ಉಪಯೋಗಿಸದೆ ಪ್ರತ್ಯೇಕವಾಗಿ ಏಕವಚನವನ್ನು ಉಪಯೋಗಿಸಿರುವ ಋಕ್ಕುಗಳೂ ಅನೇಕವಾಗಿವೆ. ಉದಾಹರಣೆಗಾಗಿ—

ಅಗ್ನೆ ಇಂದ್ರೆಶ್ಚ ದಾಶುಷೇ ದುರೋಣೇ (ಋ. ಸಂ. ೩-೨೫-೪).
ತ್ವಂ ನೋ ಅಗ್ನೇ ವರುಣಸ್ಯ ವಿದ್ವಾನ್ (ಋ. ಸಂ. ೪-೧-೪).
ಮರುತಃ ಪಿಬತ ಋತುನಾ (ಋ. ಸಂ. ೧-೧೫-೨).

ಇತ್ಯಾದಿ. ಈ ಋಕ್ಕುಗಳಲ್ಲಿ ಅಗ್ನಿ+ಇಂದ್ರ, ಅಗ್ನಿ+ವರುಣ, ಮರುತಃ+ಋತು ಎಂಬ ದೇವತಾದ್ವಂದ್ವಗಳನ್ನು ನಿರ್ದೇಶಿಸಿದ್ದರೂ ದ್ವಿವಚನ ಪ್ರಯೋಗವನ್ನು ಮಾಡಿಲ್ಲ. ಪ್ರತ್ಯೇಕ ಪ್ರತ್ಯೇಕವಾಗಿ ಏಕವಚನದಲ್ಲಿಯೇ ದೇವತೆಗಳನ್ನು ನಿರ್ದೇಶಿಸಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಇಂದ್ರಾವರುಣಯೋಃ—ಇನ್ದ್ರಶ್ಚ, ವರುಣಶ್ಚ-ಇನ್ದ್ರಾವರುಣೌ, ತಯೋಃ, ಎಂದು ದ್ವಂದ್ವಸಮಾಸ, ಇದಿ ಪರವೈಶ್ವದ್ಯೇ ಧಾತುವಿನ ಮುಂದೆ **ಋಜ್ರೇನ್ದ್ರಾಗ್ರ**.....(ಉ.ಸೂ.೨-೧೮೬) ಎಂಬುದರಿಂದ ರನ್ ಪ್ರತ್ಯಯ, ಧಾತುವು ಇದಿತ್ತಾದ್ದರಿಂದ **ಇದಿತೋನುಮ್ ಧಾತೋಃ** (ಪಾ. ಸೂ. ೭-೧-೫೮) ಎಂಬುದರಿಂದ ನುಮಾಗವು ಇನ್ದ್ರ ಎಂದಾಗುವುದು. **ಕ್ವಾವೃದಾರಿಭ್ಯಉನನ್** (ಉ.ಸೂ. ೩-೩೩೩) ಕ್ವ ವಿಕ್ಷೇಪೇ, ವೃಙ್ ವರಣೇ ದ್ವಾವಿ ದಾರಣೇ ಣಿಜನ್ತ, ಇವುಗಳ ಮುಂದೆ ಉನನ್ ಪ್ರತ್ಯಯ ಬರುವುದು ಎಂಬುದರಿಂದ ವೃಙ್ ಧಾತುವಿನ ಮುಂದೆ ಉನನ್, ವೃ+ಉನ **ಸಾರ್ವಧಾತುಕಾರ್ಧಧಾತುಕಯೋಃ** (ಪಾ.ಸೂ. ೭-೩-೮೪) ಎಂಬುದರಿಂದ ಗುಣ, **ಉರಣ್ರಪರಃ** (ಪಾ.ಸೂ.೧-೧-೫೧) ಎಂಬುದರಿಂದ ರಪರವಾಗಿ ಬರುವುದು. ವರುನ **ಅಟ್ಕುಪ್ವಾಙ್ನುಮ್ವ್ಯವಾಯೇಽಪಿ** (ಪಾ.ಸೂ. ೮-೪-೨) ಎಂಬುದರಿಂದ ನಕಾರಕ್ಕೆ ಣಕಾರ ವರುಣ ಎಂದಾಗುವುದು. ಈ ಎರಡು ಪದಗಳೂ ನಕಾರೇತ್ಸಂಜ್ಞಕವಾದ ಪ್ರತ್ಯಯವನ್ನು ಕೊನೆಯಲ್ಲಿ ಹೊಂದಿರುವುವು. ಆದ್ದರಿಂದ **ಞ್ನಿತ್ಯಾದಿರ್ನಿತ್ಯಮ್** (ಪಾ.ಸೂ. ೬-೧-೧೯೭) ಎಂಬುದರಿಂದ ಎರಡೂ ಆದ್ಯುದಾತ್ತಗಳು. ಇವುಗಳಿಗೆ ದ್ವಂದ್ವಸಮಾಸದಲ್ಲಿ **ದೇವತಾದ್ವನ್ದ್ವೇಚ** (ಪಾ. ಸೂ. ೬-೩-೨೯) ದೇವತಾವಾಚಕವಾದ ಎರಡು ಪದಗಳನ್ನೊಳಗೊಂಡ ದ್ವಂದ್ವಸಮಾಸದಲ್ಲಿ ಉತ್ತರಪದ ಪರವಾಗಿರುವಾಗ **ಪೂರ್ವಪದಕ್ಕೆ ಆನಙ್ ಆದೇಶ** ಬರುವುದು. ಆನಙ್ ಆದೇಶವು ಙಿತ್ತಾದ್ದರಿಂದ ಙಿಚ್ಚ (ಪಾ- ಸೂ. ೧-೧-೫೩) ಎಂಬುದರಿಂದ ಅಂತಾದೇಶವಾಗಿ ಬರುವುದು. **ನಲೋಪಃ ಪ್ರಾತಿಪದಿಕಾನ್ತಸ್ಯ** (ಪಾ. ಸೂ. ೮-೨-೭) ಎಂಬುದರಿಂದ ನಕಾರಕ್ಕೆ ಲೋಪ. **ದೇವತಾದ್ವನ್ದ್ವೇಚ** (ಪಾಸೂ. ೬-೩-೧೪೧) ಇಲ್ಲಿ **ಉಭೇ ವನಸ್ಪತ್ಯಾದಿಷು ಯುಗಪತ್** (ಪಾ.ಸೂ. ೬-೩-೧೪೦) ಎಂಬುದರಿಂದ ಉಭೇ ಯುಗಪತ್ ಎಂಬ ಎರಡು ಪದಗಳು ಅನುವೃತ್ತಗಳಾಗುವುವು. ಏವಂಚ ದೇವತಾವಾಚಕಪದಗಳಿಂದ ಕೂಡಿದ ದ್ವಂದ್ವಸಮಾಸದಲ್ಲಿ ಪೂರ್ವಪದ ಉತ್ತರಪದಗಳೆರಡೂ ಒಂದೇ ಕಾಲದಲ್ಲಿ ಪ್ರಕೃತಿಸ್ವರವನ್ನು ಹೊಂದುವುವು ಎಂದು ಸೂತ್ರಾರ್ಥವಾಗುವುದು, ಇದರಿಂದ ಉಭಯಪದಪ್ರಕೃತಿಸ್ವರ ಬರುವುದು.

ಸಮ್ರಾಜೋಃ—ರಾಜೃ ದೀಪ್ತೌ ಧಾತು. **ಸುತ್ಸೂದ್ವಿಷೇ**.....**ಜನೀರಾಜಾಮುಪಸರ್ಗೇಽಪಿ ಕ್ವಿಪ್** (ಪಾ.ಸೂ. ೩-೨-೬೧) ಎಂಬುದರಿಂದ ಕ್ವಿಪ್ ಪ್ರತ್ಯಯ, ಸಮ್+ರಾಜ್+ ಎಂದಿರುವಾಗ ಸಮ್ ಎಂಬುದರ ಮಕಾರಕ್ಕೆ **ಮೋನುಸ್ವಾರಃ** (ಪಾ.ಸೂ. ೮-೩-೨೩) ವ್ಯಂಜನಪರದಲ್ಲಿರುವಾಗ ಮಕಾರಾಂತವಾದ ಪದದ ಕೊನೆಯಲ್ಲಿರುವ ಮಕಾರಕ್ಕೆ ಅನುಸ್ವಾರ ಬರುವುದು ಎಂಬುದರಿಂದ ಅನುಸ್ವಾರವು **ಪ್ರಾಪ್ತ**ವಾಗುವುದು. ಆದರೆ **ನೋರಾಜಿಸಮಃಕ್ವೌ** (ಪಾ.ಸೂ. ೮-೩-೨೫) ಕ್ವಿಬಂತವಾದ ರಾಜೃಧಾತ್ವವು ಪರದಲ್ಲಿರುವಾಗ ಸಮ್ ಶಬ್ದದ ಮಕಾರಕ್ಕೆ ಮಕಾರವೇ ಬರುವುದು ಎಂಬುದರಿಂದ ಮಕಾರವೇ ಒರುವುದು, **ಸಮ್ರಾಜ್** ಎಂದಿರುವುದು.

ಅವಃ—ಅವ ರಕ್ಷಣಾದೌ, ಧಾತು. **ಸರ್ವಧಾತುಭ್ಯೋಽಸುನ್** (ಉ. ಸೂ. ೪-೬೨೮) ಎಂಬುದರಿಂದ ಭಾವಾರ್ಥದಲ್ಲಿ ಅಸುನ್ ಪ್ರತ್ಯಯ, ನಿಶ್ಚಿತ್ತರದಿಂದ ಆದ್ಯುದಾತ್ತ. ಏವಂಚ **ಅವಃ** ಎಂಬುದು ಕೃದಂತ, ಈ

ಕೃದಂತದ ಯೋಗವಿರುವುದರಿಂದ ಇಂದ್ರಾವರುಣಯೋಃ, ಎಂಬಲ್ಲಿ **ಕೃತ್ಯೈರ್ಕರ್ಮಣೋಃಕೃತಿ** (ಪಾ.ಸೂ. ೨-೩-೬೫) ಕೃತ್ ಪ್ರತ್ಯಯಕ್ಕೆ ಪ್ರಕೃತಿಭೂತವಾದ ಯಾವ ಧಾತುವಿದೆಯೋ ಆ ಧಾತುವಾಚ್ಯವಾದ ಕ್ರಿಯೆಯಲ್ಲಿ ಕರ್ತೃ ಅಥವಾ ಕರ್ಮ ಆಗಿರುವ ಪದದ ಮುಂದೆ ಷಷ್ಠೀವಿಭಕ್ತಿ ಬರುವುದು ಎಂಬುದರಿಂದ ಇಂದ್ರಾವರುಣಯೋಃ ಎಂಬಲ್ಲಿ ಷಷ್ಠೀ ಬಂದಿರುವುದು, ಹೇಗೆಂದರೆ ಕೃತ್ ಅಸುನ್ ಪ್ರತ್ಯಯ, ಅದಕ್ಕೆ ಪ್ರಕೃತಿ ಆವಧಾತು, ಅದರ ಅರ್ಥಭೂತವಾದ ಕ್ರಿಯೆ, ಅನಿಷ್ಟನಿವೃತ್ತಿಪೂರ್ವಕ ಇಷ್ಟಪ್ರಾಪ್ತ್ಯನುಕೂಲ ವ್ಯಾಪಾರ, ಈ ವ್ಯಾಪಾರಾಶ್ರಯತ್ವವು ಇಂದ್ರವರುಣರಿಗೆ ಇರುವುದರಿಂದ ಅವರು ಅವಧಾತ್ವರ್ಥ ಕ್ರಿಯೆಯಲ್ಲಿ ಕರ್ತೃಭೂತರು, ಈ ಕರ್ತೃವಾಚಕವಾದ ಇಂದ್ರಾವರುಣ ಪದದ ಮುಂದೆ, ಪೂರ್ವೋಕ್ತ ಸೂತ್ರದಿಂದ ಷಷ್ಠೀವಿಭಕ್ತಿ ಬರುವುದು, ಕಾರಕಾಣಾಂ ಕ್ರಿಯೈವಾನ್ವಯಃ, ಎಂಬ ಪಕ್ಷದಲ್ಲಿ ಸಮ್ರಾಜೋಃ ಎಂಬಲ್ಲಿಯೂ ಇದೇರೀತಿಯಲ್ಲಿ ಷಷ್ಠೀವಿಭಕ್ತಿ ಬರುವುದು.

ತಾ—ತದ್ ಶಬ್ದದ ಮುಂದೆ ಪ್ರಥಮಾ ದ್ವಿವಚನ ಔ ಪ್ರತ್ಯಯ. ತದ್+ಔ, **ಸುಪಾಂಸುಲುಕ್** (ಪಾ.ಸೂ. ೭-೧-೩೯) ಎಂಬುದರಿಂದ ಔಗೆ ಡಾ ಆದೇಶ, ಡಿತ್ಕರಣ ಸಾಮರ್ಥ್ಯದಿಂದ ಭಸಂಜ್ಞೆ ಇಲ್ಲದೇ ಇದ್ದರೂ ಅದ್ ಎಂಬ ಟಿಗೆ ಲೋಪ, **ಅನುದಾತ್ತಸ್ಯಚಯತ್ತೋದಾತ್ತಲೋಪಃ** (ಪಾ. ಸೂ. ೬-೧-೧೬೧) ಎಂಬ ಉದಾತ್ತನಿವೃತ್ತಿ ಸ್ವರದಿಂದ, ಆ ಎಂಬ ವಿಭಕ್ತಿಯು ಉದಾತ್ತವಾಗುವುದು,

ಮೃಳತಃ,—ಮೃಡ ಸುಖನೇ ಧಾತು, ಈ ಮೃಡ್ ಧಾತುವಿನ ಮುಂದೆ **ಲಿಙರ್ಥೇಲೇಟ್** (ಪಾ ಸೂ. ೩-೪-೭) ಎಂಬುದರಿಂದ ಪ್ರಾರ್ಥನಾರೂಪವಾದ ಲಿಙರ್ಥದಲ್ಲಿ ಲೇಟ್ ಬರುವುದು, ಅದರ ಸ್ಥಾನದಲ್ಲಿ ಪ್ರಥಮ ಪುರುಷ ದ್ವಿವಚನ ತಸ್, ಮೃಡ್+ತಸ್. **ಲೇಟೋಡಾಟೌ** (ಪಾ. ಸೂ. ೩-೪-೯೪) ಎಂಬುದರಿಂದ ಆಡಾಗಮ, ಆಗಮವು ಟಿತ್ತಾದ್ದರಿಂದ **ಆದ್ಯನ್ತೌಟಿಕಿತೌ** (ಪರಿಭಾ ಪಾ. ಸೂ. ೧-೧-೪೬) ಎಂಬುದರಿಂದ ಆದ್ಯವಯವವಾಗಿ ಬರುವುದು. ಮೃಡ್+ಆತಸ್ **ತುದಾದಿಭ್ಯಃ ಶಃ** (ಪಾ.ಸೂ. ೩-೧-೭೭) ಎಂಬುದರಿಂದ ಶ ವಿಕರಣ ಪ್ರತ್ಯಯ, ಇದು ಅಪಿತ್ತಾದ ಸಾರ್ವಧಾತುಕ, ಆದ್ದರಿಂದ **ಸಾರ್ವಧಾತುಕಮಪಿತ್** (ಪಾ. ಸೂ. ೧-೨-೪) ಎಂಬುದರಿಂದ ಙಿತ್ತಾಗುವುದು. **ಕ್ಙಿತಿಚ** (ಪಾ. ಸೂ. ೧-೧-೫) ಎಂಬುದರಿಂದ ಗುಣಕ್ಕೆ ನಿಷೇಧಬರುವುದು. ಆದ ಕಾರಣ **ಪುಗನ್ತ್ಯಲಘೂಪದಸ್ಯಚೆ**(ಪಾ. ಸೂ. ೭-೩-೮೬) ಎಂಬುದರಿಂದ ಲಘೂಪಧ ಗುಣ ಬರುವುದಿಲ್ಲ, ಸವರ್ಣದೀರ್ಘ, ಈಗಲೂ **ಅಂತಾದಿವಚ್ಚ** (ಪಾ.ಸೂ. ೬-೧-೮೫) ಎಂಬುದರಿಂದ ಪೂರ್ವಾಂತವದ್ಭಾವ ಬರುವುದರಿಂದ, ಶ ವಿಕರಣ ಪರಕತ್ವ ಸಂಭವಿಸುವುದರಿಂದ ಗುಣಬರುವುದಿಲ್ಲ ಮೃಡಾತಃ-ಅಜ್ಝಗ್ಭ್ಯಸ್ಥಡಕಾರಸ್ಯ ಳಕಾರಂ ಬಹ್ವೃಚಾ ಜಗುಃ, ಎಂಬುದರಿಂದ ಡಕಾರಕ್ಕೆ ಳಕಾರ.

ಈದೃಶೇ—ಇದಮಿವ ಪಶ್ಯತಿ ಇತಿ ಈದೃಶಃ. ತಸ್ಮಿನ್. **ಈದೃಶೇ, ತೃದಾದಿಷು ದೃಶೋಽನಾಲೋಚನೇಕಞ್ಚ** (ಪಾ. ಸೂ. ೩-೨-೬೦) ತೃದಾದಿಗಣಪಠಿತವಾದ ಶಬ್ದಗಳು ಉಪಪದವಾಗಿರುವಾಗ ಜ್ಞಾನಾರ್ಥಕವಲ್ಲದ ದೃಶ್ ಧಾತುವಿನ ಮುಂದೆ ಕಞ್ ಪ್ರತ್ಯಯ ಬರುವುದು, ಕಞ್ ಎಂಬಲ್ಲಿ ಚ ಗ್ರಹಣದಿಂದ **ಪಾಕ್ಷಿಕ**ವಾಗಿ ಕ್ವಿನ್ ಪ್ರತ್ಯಯವೂ ಬರುವುದು ಎಂಬುದರಿಂದ ಇದಮ್ ಶಬ್ದೋಪಪದಕವಾದ ದೃಶ್ ಧಾತುವಿನ ಮುಂದೆ ಕಞ್ ಪ್ರತ್ಯಯ, **ಉಪಪದಮತಿಙ್** (ಪಾ. ಸೂ. ೨-೨-೧೯) ಎಂಬುದರಿಂದ ಸಮಾಸ, ಸಮಾಸಾವಯವವಾದ ಸುಪ್‌ಗೆ ಲುಕ್ ಇದಮ್+ದೃಶ, **ಇದಂಕಿಮೋರೀಶ್‌ಕೀ** (ಪಾ. ಸೂ. ೬-೩-೯೦) ದೃಕ್-ದೃಶ, ವತು ಇವು ಪರದಲ್ಲಿರುವಾಗ ಇದಮ್ ಶಬ್ದಕ್ಕೆ ಈಶ್ ಆದೇಶವೂ, ಕಿಮ್ ಶಬ್ದಕ್ಕೆ ಕೀ ಆದೇಶವೂ ಸಹ ಬರುವುದು. ಎಂಬುದರಿಂದ ಇದಮ್ ಶಬ್ದಕ್ಕೆ ಈಶ್ ಆದೇಶ, ಆದು ಶಿತ್ತಾದ್ದರಿಂದ **ಅನೇಕಾಲ್‌ಶಿತ್ಸರ್ವಸ್ಯ** (ಪಾ. ಸೂ.

८-८-३३) ಎಂಬುದರಿಂದ ಸರ್ವಾದೇಶವಾಗಿ ಬರುವುದು. ಈದೃಶ ಎಂದಾಯಿತು, ಸಪ್ತಮಿಯಾ ಏಕವಚನದಲ್ಲಿ ಈದೃಶೇ ಎಂದಾಗುವುದು. ಕಞ್ ಪ್ರತ್ಯಯವು ಕಿತ್ತಾದ್ದರಿಂದ, ದೃಶ ಎಂಬಲ್ಲಿ ಲಘೂಪಧಗುಣ ಬರುವುದಿಲ್ಲ. ಪ್ರತ್ಯಯವು ಙಿತ್, ಆದ್ದರಿಂದ ಙ್ಣಿತ್ಯಾದಿರ್ನಿತ್ಯಮ್, ಎಂಬುದರಿಂದ ದೃಶ ಎಂಬುದು ಆದ್ಯುದಾತ್ತ. ಸರ್ವಾಸ ಬಂದಮೇಲೂ, ಗತಿಕಾರಕೋಪಪದಾತ್ಕೃತ್ (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದ ಪ್ರಕೃತಿ ಸ್ವರ ಬಂದರೆ ದೃಶ ಎಂಬುದರ ಆದ್ಯುದಾತ್ತವೇ ಬರುವುದು. ಆದ್ದರಿಂದ ಈದೃಶೇ, ಎಂಬುದು ಮಧ್ಯೋದಾತ್ತ ॥ ೧ ॥

॥ संहितापाठः ॥

गंतारा हि स्थोऽवसे हवं विप्रस्य मावतः ।
धर्तारा चर्षणीनां ॥ २ ॥

॥ पदपाठः ॥

गंतारा । हि । स्थः । अवसे । हवं । विप्रस्य । मा ऽवतः ॥
धर्तारा । चर्षणीनां ॥ २ ॥

॥ सायणभाष्यं ॥

हे इंद्रावरुणौ अवसेऽवितुमनुष्माकारं रक्षितुं मावतो मद्विधस्य विप्रस्य ब्राह्मणस्यार्त्विजो हवमाह्वानं गंतारौ स्थो हि । प्राप्तिशीलौ भवथः खलु । कीदृशौ । चर्षणीनां मनुष्याणां धर्तारौ योगक्षेमसंपादनेन धारयितारौ ॥ गंतारा । गमेस्तृच्प्रत्ययः । द्विवचनस्य सुपां सुलुगित्यादिनाकारादेशः । ऋदृशोऽञि गुणः । पा. ६-४-८६ । अप्तृन्नित्यादिनोपधादीर्घत्वं । तृनोर्ऽ नित्त्वादाद्युदात्तत्वं । स्थः । असे भुवि । लङ्मध्यमपुरुषद्विवचनं थस् । अदिप्रभृतिभ्यः शपः इति शपोर्ऽ लुक् हि चेति निघातप्रतिषेधः । अवसे । अव रक्षणे । तुमर्थे सेसेन्नित्येसेन् । पा. ३-४-९ । नित्त्वादाद्युदात्तः । हवं । ह्वेञाह्वः बहुलं छंदसीत्येत्वेमित्त्वेकं संप्रसारणं पूर्वरूपत्वं च ऊदोरबित्यप् । गुणावादेशौ । अपः पित्त्वादनुदात्तत्वं । धातुस्वरेण विप्रस्य । डुवप् बीजसंतानसंतानयोः । अस्य ऋज्रेंद्रेत्यादिना रन् नित्त्वात्

ವಾದ್ಯುದಾತ್ತೇಃ । ಮಾವತಃ । ವತುಪ್ಪ್ರಕರಣೇ ಯುಷ್ಮದಸ್ಮದ್ಭ್ಯಾಂ ಛಂದಸಿ ಸಾದೈಶ್ಯ ಉಪಸಂಖ್ಯಾನಂ । ಪಾ. ೫-೨-೩೯-೧ । ವತುಸ್ । ಪ್ರತ್ಯಯೋತ್ತರಪದಯೋರಸ್ಮದೋ ಮುಪರ್ಯಂತಸ್ಯ ಮಾದೇಶಃ । ಪಾ. ೭-೨-೯೪ । ಅ ಸರ್ವನಾಮ್ನಃ । ಪಾ. ೬-೩-೯೧ । ಇತಿ ಟಕಾರಸ್ಯಾಕಾರಃ । ಸವರ್ಣದೀರ್ಘಃ । ಮತುಪಃ ಪಿತ್ತ್ವಾದನುದಾತ್ತತ್ವಂ । ಪ್ರಾತಿಪದಿಕಾಂತೋದಾತ್ತತ್ವೇ ಸ ಏವ ಶಿಷ್ಯತೇ । ಧರ್ತಾರಾ । ಧೃಞ್ ಧಾರಣೇ । ಣ್ವುಲ್ತೃಚೌ । ಪಾ. ೩-೧-೧೩೩ । ಇತಿ ತೃಚ್ । ಏಕಾಚ ಉಪದೇಶ ಇತೀಟ್ಪ್ರತಿಷೇಧಃ । ಗುಣೋ ರಪರತ್ವಂ । ಅಪ್ತೃನ್ತೃತ್ಯಾದಿನೋಪಧಾದೀರ್ಘಃ । ಸುಪಾಂ ಸುಲುಗಿತ್ಯಾಕಾರಃ । ತೃಚೇಶ್ಚಿತ್ತ್ವಾದಂತೋದಾತ್ತತ್ವಂ । ಚರ್ಷಣೀನಾಂ । ಕೃಷೇರಾದೇಶ್ಚಚಃ । ಉ. ೨-೧೦೫ । ಇತ್ಯನಿಪ್ರತ್ಯಯಃ । ತಕ್ಷಂನಿ ಯೋಗೇನ ಕಕಾರಸ್ಯ ಚಕಾರಃ । ಪ್ರತ್ಯಯೋದ್ಯುದಾತ್ತತ್ವಂ ಬಾಧಿತ್ವಾ ಛಾಂದಸಮಂತೋದಾತ್ತತ್ವಂ । ಅತ ಏವ ನಾಮನ್ಯತರಸ್ಯಾಮಿತಿ ವಿಭಕ್ತೇರುದಾತ್ತತ್ವಂ । ತಕ್ರ ಹಿ ಮತುಪಿ ಯೋ ಹ್ರಸ್ವಾಂತಸ್ತತ ಉತ್ತರಸ್ಯ ನಾಮ ಉದಾತ್ತತ್ವಮಿತಿ ವ್ಯಾಖ್ಯಾತಂ ॥

॥ ಪ್ರತಿಪದಾರ್ಥ ॥

(ಹೇ ಇಂದ್ರಾವರುಣೌ — ಎಲೈ ಇಂದ್ರ ವರುಣರೇ) । ಚರ್ಷಣೀನಾಂ — ಮನುಷ್ಯರ । ಧರ್ತಾರೌ — (ಯೋಗಕ್ಷೇಮದ) ಧಾರಕರಾದ (ನೀವು) । ಅವಸೇ — (ಯಾಗಕರ್ಮವಿನ) ರಕ್ಷಣಾರ್ಥವಾಗಿ । ಮಾವತಃ— ನನ್ನಂತಹ । ವಿಪ್ರಸ್ಯ—(ಬ್ರಾಹ್ಮಣನಾದ) ಋತ್ವಿಜನ । ಹವಂ—ಆಹ್ವಾನವನ್ನು (ಮನ್ನಿಸಿ) । ಗಂತಾರಾ ಸ್ಥಃ ಹಿ—ಬರುವ ಸ್ವಭಾವವುಳ್ಳವರಷ್ಟೇ.

॥ ಭಾವಾರ್ಥ ॥

ಎಲೈ ಇಂದ್ರಾವರುಣರೇ, ನೀವು ಮನುಷ್ಯರ ಯೋಗಕ್ಷೇಮವನ್ನು ನೋಡಿಕೊಳ್ಳುವವರು. ಆದುದರಿಂದ ನನ್ನಂತಹ ಋತ್ವಿಜನ ರಕ್ಷಣೆಗಾಗಿ ನನ್ನ ಆಹ್ವಾನವನ್ನು ಮನ್ನಿಸಿ ಇಲ್ಲಿಗೆ ಅವಶ್ಯಕವಾಗಿ ಬರುವ ಸ್ವಭಾವವುಳ್ಳವರು.

English Translation

O Indra and Varuna, you are the protectors of the people and you go at the call of a minister like me to protect him.

॥ ವಿಶೇಷವಿಷಯಗಳು ॥

ವಿಪ್ರಸ್ಯ—ವಿಪ್ರಶಬ್ದಕ್ಕೆ ಮೇಧಾವಿ ಎಂಬ ಅರ್ಥವಿದ್ದರೂ ಇಲ್ಲಿ ಸ್ತೋತ್ರಮಾಡುತ್ತಿರುವ ಎಂಬ ಅರ್ಥವು ಸರಿಯಾಗಿ ಹೊಂದುವುದು.

ಮಾವತಃ—ಮದ್ವಿಧಸ್ಯ । ನನ್ನಂತಹ, ಎಂದರೆ ನನ್ನಂತೆ ನಿಮ್ಮನ್ನು ಸ್ತೋತ್ರಮಾಡುವ ಯಜಮಾನನಿಗೆ ಎಂದರ್ಥವು.

ಧರ್ತಾರಾ—ಧೃಞ್ ಧಾರಣೇ । ಯೋಗಕ್ಷೇಮಸಂಪಾದನೇನ ಧಾರಯಿತಾರೌ । ಮನುಷ್ಯರ ಯೋಗಕ್ಷೇಮವನ್ನು ಧರಿಸುವವರು ಎಂದರೆ ಅದರಲ್ಲಿ ಆಸಕ್ತಿಯುಳ್ಳವರು, ಯೋಗಕ್ಷೇಮದ ಧಾರವನ್ನು ಹೊತ್ತಿರುವವರು.

॥ ವ್ಯಾಕರಣಪ್ರಕ್ರಿಯಾ ॥

ಗನ್ತಾರಾ—ಗಮ್ಲೃ ಗತೌ, ಧಾತು. ಇದರ ಮುಂದೆ **ತೈನ್** (ಪಾ ಸೂ. ೩-೨-೧೩೫) ಎಂಬುದರಿಂದ ತಚ್ಪ್ರೀಲ ಎಂಬ ಅರ್ಥದಲ್ಲಿ ತೃನ್ ಬರುವುದು. ಗಮ್+ತೃ. **ನಶ್ಚಾಪದಾನ್ತಸ್ಯ ಝಲಿ** (ಪಾ.ಸೂ. ೮-೩-೨೪) **ಎಂಬುದರಿಂದ ಮ್‌ಗೆ ಅನುಸ್ವಾರ. ಅನುಸ್ವಾರಸ್ಯಯಯಿ ಪರಸವರ್ಣಃ** (ಪಾ.ಸೂ. ೮-೪-೫೮) ಎಂಬುದರಿಂದ ಅನು ಸ್ವಾರದ ಸ್ಥಾನದಲ್ಲಿ ಸ್ಥಾನೇಂತರತಮಃ ಎಂಬ ಪರಿಭಾಷಾ ಸಹಕಾರದಿಂದ ಪರಸವರ್ಣವೂ ಅನುನಾಸಿಕವೂ ಆದ ನಕಾರ ಬರುವುದು. ಗನ್ತೃ ಎಂದಾಗುವುದು. ಇದರ ಮುಂದೆ ಪ್ರ. ದ್ವಿ ಔ ಪ್ರತ್ಯಯ. ಇದಕ್ಕೆ **ಸುಪಾಂಸು-ಲುಕ್**-(ಪಾ ಸೂ. ೭-೧-೩೯) ಎಂಬುದರಿಂದ ಆಕಾರಾದೇಶ. ಗನ್ತೃ+ಆ. **ಋತೋ ಙಿ ಸರ್ವನಾಮಸ್ಥಾನ-ಯೋಃ** (ಪಾ ಸೂ. ೭-೩-೧೧೦) ಎಂಬುದರಿಂದ ಗುಣ. **ಉರಣ್ರಪರಃ** ಎಂಬುದರಿಂದ ರ ಪರವಾಗಿ ಬರುವುದು. ಗನ್ತರ್+ಆ ಎಂದಾಗುವುದು. ಇಲ್ಲಿ **ಋದೃಶೋಽಙಿ ಗುಣಃ** (ಪಾ.ಸೂ. ೭-೪-೧೬) ಋಕಾರಾಂತವಾದ ಧಾತು, ದೃಶ್ ಧಾತು ಇವುಗಳಿಗೆ ಅಙ್ ಪರದಲ್ಲಿರುವಾಗ ಗುಣವು ಬರುವುದು ಎಂಬುದರಿಂದ ವಿಹಿತವಾದ ಗುಣವು ಅಙ್ ಪರದಲ್ಲಿರುವಾಗ ಬರುವುದು ಇಲ್ಲಿ ಅಙ್ ಪ್ರತ್ಯಯವು ಇಲ್ಲದ ಕಾರಣ ಈ ಸೂತ್ರವು ಇಲ್ಲಿ ಬರುವುದಿಲ್ಲ. ಆದ್ದರಿಂದ ಇಲ್ಲಿ ಋದೃಶೋಽಙಿ ಎಂಬ ಸೂತ್ರದಿಂದ ಗುಣೋಪಪಾದನೆಯು ಪ್ರಾಮಾದಿಕನೆಂದು ತಿಳಿಯಬೇಕು. **ಅಸ್ತೃನ್ ತೃಚ್**- (ಪಾ.ಸೂ. ೬-೪-೧೧) ಎಂಬುದರಿಂದ ಉಪಧಾದೀರ್ಘ, ಗನ್ತಾರಮ್ ಎಂದಾಗುವುದು. ತೃನ್ ಪ್ರತ್ಯಯವು ನಿತ್. ಆದ್ದರಿಂದ **ಞ್ನಿತ್ಯಾದಿರ್ನಿತ್ಯಮ್** ಎಂಬುದರಿಂದ ಗನ್ತೃ ಎಂಬುದು ಆದ್ಯುದಾತ್ತ.

ಸ್ಥಃ-ಅಸ-ಭುವಿ, ಧಾತು. ಅದಾದಿ. ಇದರ ಮುಂದೆ ಲಟ್, ಮಧ್ಯಮಪುರುಷ ದ್ವಿವಚನ ಥಸ್, ಅಸ್+ಥಸ್ **ಕರ್ತರಿಶಪ್** (ಪಾ ಸೂ. ೩-೧-೬೮) ಎಂಬುದರಿಂದ ಶಪ್, **ಆದಿಪ್ರಭೃತಿಭಿಶ್ಯಹಿಃ** (ಪಾ.ಸೂ. ೨-೪-೭೨) ಎಂಬುದರಿಂದ ಅದಕ್ಕೆ ಲುಕ್, **ಸಾರ್ವಧಾತುಕಮಪಿತ್** (ಪಾ. ಸೂ. ೧-೨-೪) ಎಂಬುದರಿಂದ ಥಸ್ ಬುತ್ ಆಗುವುದು. **ಶ್ನಸೋರಲ್ಲೋಪಃ** (ಪಾ.ಸೂ ೬-೪-೧) ಎಂಬುದರಿಂದ ಅಸ್‌ನ ಆಗೆ ಲೋಪ, ರುತ್ವ, ವಿಸರ್ಗ, ಸ್ಥಃ ಎಂದಾಗುವುದು. **ಹಿಚಿ** (ಪಾ. ಸೂ ೮-೧-೩೪) ಹಿ ಎಂಬುದರಿಂದ ಕೂಡಿಕೊಂಡಿರುವ ತಿಙಾಂತವು ಅನುದಾತ್ತವಾಗುವುದಿಲ್ಲ ಎಂಬುದರಿಂದ ಹಿಸ್ಥ ಎಂದು ಹಿಯುಕ್ತವಾದ ಸ್ಥಗೆ ಸರ್ವಾನುದಾತ್ತ ನಿಷೇಧ ಬರುವುದರಿಂದ, **ತಿಙ್ಶಿತಿಙಃ** ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ.

ಅವಸೇ—ಅವ ರಕ್ಷಣೇ ಧಾತು. **ತುಮರ್ಥೇ ಸೇ, ಸೇನ ಸೇ, ಅಸೇನ್, ಕ್ಸೇ, ಕಸೇನ್, ಅಧ್ಸೈ, ಅಧ್ಯೈನ್, ಕಧ್ಯೈ, ಕಧ್ಯೈನ್, ಶಧ್ಯೈ, ಶಧ್ಯೈನ್ ತೆನ್ಯೈ, ತವೇಙ್, ತವೇನಃ** (ಪಾ.ಸೂ, ೩-೪-೯) ಅವ್ಯಯ ಕೃತೋಭಾವೇ, ಎಂಬ ವಚನದಿಂದ ತುಮರ್ಥವು ಭಾವ. ಈ ಅರ್ಥದಲ್ಲಿ ಈ ನಿರ್ದಿಷ್ಟವಾದ ಪ್ರತ್ಯಯಗಳು ಬರುವುವು ಎಂಬುದರಿಂದ ಅಸೇನ್, ಪ್ರತ್ಯಯ. ಅವ್+ಅಸೇ=ಅವಸೇ, ಇದು ನಿಶ್ಚಿತರದಿಂದ ಆದ್ಯುದಾತ್ತ.

ಹವಮ್--ಹ್ವೇಞ್ ಸ್ಪರ್ಧಾಯಾಂ ಶಬ್ದೇಚ ಧಾತು, **ಹ್ವಸ್ಸಂಪ್ರಸಾರಣಯೋಂ** (ಪಾ.ಸೂ.೬-೧-೩೨) ಎಂಬುದು ಅನುವೃತ್ತವಾಗಲು **ಬಹುಲಂ ಛಂದಸಿ** (ಪಾ. ಸೂ ೬-೧-೩೪) ಎಂಬುದರಿಂದ ಅನೈಮಿತ್ತಿಕವಾಗಿ ಸಂಪ್ರಸಾರಣ ಅಂದರೆ ವಕಾರಕ್ಕೆ ಉಕಾರ **ಸಂಪ್ರಸಾರಣಾಚ್ಚ** (ಪಾ ಸೂ ೬-೧-೧೦೮) ಎಂಬುದರಿಂದ ಪೂರ್ವರೂಪ ಹು ಎಂದಿರುವಾಗ **ಋದೋರಪ್** (ಪಾ.ಸೂ. ೩-೩-೫೭) ಋಕಾರಾಂತ, ಉಕಾರಾಂತಗಳಾದ ಧಾತುಗಳ ಮುಂದೆ ಅಪ್ ಪ್ರತ್ಯಯ ಬರುವುದು. ಎಂಬುದರಿಂದ ಹು ಎಂಬುದರ ಮುಂದೆ ಅಪ್ ಪ್ರತ್ಯಯ, **ಸಾರ್ವಧಾತುಕಾರ್ಧಧಾತುಕಯೋಃ** (ಪಾ.ಸೂ. ೭-೩-೮೪) ಎಂಬುದರಿಂದ ಗುಣ ಉಕಾರಕ್ಕೆ ಓಕಾರ. **ಏಚೋಯೇ-**

ವಾಯೋವಃ (ಪಾ.ಸೂ. ೬-೧-೭೮) ಎಂಬುದರಿಂದ ಅವಾದೇಶ ಹವ ಎಂದಾಯ್ತು. ಅಪ್ ಪ್ರತ್ಯಯವು ಪಿತ್ತಾ ದ್ದರಿಂದ ಅನುದಾತ್ತೌ ಸುಪ್ಪಿತೌ ಎಂಬುದರಿಂದ ಅನುದಾತ್ತ. ಆದಕಾರಣ ಧಾತುಸ್ವರವೇ ನಿಲ್ಲುವುದು. ಇದರ ಮುಂದೆ ಅಮ್ ಪ್ರತ್ಯಯ, **ಅಮಿಪೂರ್ವಃ** (ಪಾ.ಸೂ. ೬-೧-೧೦೭) ಎಂಬುಧರಿಂದ ಪೂರ್ವರೂಪ, ಹವಮ್ ಎಂದಾ ಗುವುದು.

ವಿಪ್ರಸ್ಯ—ಡುವಪ್ ಬೀಜಸನ್ತಾನೇ, ಧಾತು. ಇದಕ್ಕೆ ಋಜ್ರೇನ್ದ್ರಾಗ್ರ ವಿಪ್ರ-(ಉ ಸೂ ೨-೧೪೬) ಇತ್ಯಾದಿ ಸೂತ್ರದಿಂದ ರನ್ ಪ್ರತ್ಯಯವು ನಿಪಾತಿತವಾಗಿರುವುದು. ನಿಶ್ಚಿತರದಿಂದ ಆದ್ಯುದಾತ್ತ.

ಮಾವತಃ—**ಯತ್ತದೇತೇಭ್ಯಃ ಪರಿಮಾಣೇವತುಪ್** (ಪಾ.ಸೂ. ೫-೨-೩೯). ಈ ಸೂತ್ರದಲ್ಲಿ **ವತುಪ್ ಪ್ರಕರಣೇ ಯುಷ್ಮದಸ್ಮದ್ಭ್ಯಾಂ ಛಂದಸಿಸಾದೃಶ್ಯ ಉಪಸಂಖ್ಯಾನಮ್** (ಪಾ ಸೂ. ೫-೨-೩೯-೧) ಛಂದಸ್ಸಿನಲ್ಲಿ ಯುಷ್ಮದ್-ಅಸ್ಮದ್ ಶಬ್ದಗಳ ಮುಂದೆ ಸಾದೃಶ್ಯಾರ್ಥದಲ್ಲಿ ವತುಪ್ ಪ್ರತ್ಯಯ ಬರುವುದು ಎಂದು ವಚನವನ್ನು ವತುಪ್ ಪ್ರಕರಣದಲ್ಲಿ ಮಾಡಬೇಕು ಎಂಬುದರಿಂದ ಅಸ್ಮದ್ ಎಂಬುದರ ಮುಂದೆ ಸಾದೃಶ್ಯಾರ್ಥದಲ್ಲಿ ವತುಪ್ ಬರುತ್ತೆ. ಅಸ್ಮದ್+ವತ್, **ಪ್ರತ್ಯಯೋತ್ತರಪದಯೋಶ್ಚ** (ಪಾ.ಸೂ. ೭-೨-೯೮) ಪ್ರತ್ಯಯ ಅಥವಾ ಉತ್ತರಪದ ಪರವಾಗಿದ್ದರೆ ಯುಷ್ಮದ್, ಅಸ್ಮದ್ ಶಬ್ದಗಳ ಮಪರ್ಯಂತಕ್ಕೆ ಕ್ರಮವಾಗಿ ತ್ವ-ಮ, ಎಂಬ ಆದೇಶಗಳು ಬರುವುವು ಎಂಬುದರಿಂದ, ಅಸ್ಮ್ ಎಂಬುದಕ್ಕೆ ಮ, ಆದೇಶ, ಮ+ಅದ್+ವತ್ ಎಂದಾಯಿತು. **ಅತೋ-ಗುಣೇ** (ಪಾ. ಸೂ. ೬-೧-೯೭) ಎಂಬುದರಿಂದ ಪರರೂಪ, ಮದ್+ವತ್, **ಅಸರ್ವನಾಮ್ನಃ** (ಪಾ.ಸೂ. ೬-೩-೯೧) ದೃಕ್, ದೃಶ, ವತು, ಇವುಗಳು ಪರದಲ್ಲಿರುವಾಗ ಸರ್ವನಾಮಶಬ್ದದ ಕೊನೆಯ ವರ್ಣಕ್ಕೆ ಆಕಾರಾದೇಶ ಬರುವುದು. ಮ+ಆ+ವತ್ **ಅಕಃಸವರ್ಣೇ ದೀರ್ಘಃ** (ಪಾ. ಸೂ. ೬-೧-೧೦೧) ಎಂಬುದರಿಂದ ಸವರ್ಣದೀರ್ಘ **ಮಾವತ್**. ವತುಪ್ ಪ್ರತ್ಯಯವು ಪಿತ್ತು ಆದ್ದರಿಂದ ಅನುದಾತ್ತೌಸುಪ್ಪಿತೌ ಎಂಬುದರಿಂದ ಅನುದಾತ್ತ. ಮಾ ಎಂಬುದು ಪ್ರಾತಿಪದಿಕಸ್ವರದಿಂದ ಅಂತೋದಾತ್ತ. ಇದೇ ಸ್ವರವೇ ನಿಲ್ಲುವುದು.

ಧರ್ತಾರಾ—**ಧೃಞ್ ಧಾರಣೇ, ಧಾತು, ಣ್ವುಲ್ ತೃಚೌ** (ಪಾ.ಸೂ. ೩-೧-೧೩೩) ಎಂಬುದರಿಂದ ತೃಚ್, ಧೃ ಧಾತುವು ಉಪದೇಶದಲ್ಲಿ ಅನುದಾತ್ತವಾಗಿಯೂ, ಏಕಾಚ್ಯವಾಗಿಯೂ ಇರುವುದು. ಆದ್ದರಿಂದ **ಏಕಾಚೋ ಉಪದೇಶೇಽನುದಾತ್ತಾತ್** (ಪಾ.ಸೂ. ೭-೨-೧೦) ಎಂಬುದರಿಂದ ತೃಗೆ **ಆರ್ಧಧಾತುಕಸ್ಯೇಡ್ವ-ಲಾದೇಃ** ಎಂಬುದರಿಂದ ಪ್ರಾಪ್ತವಾಗುವ ಇಡಾಗಮಕ್ಕೆ ಪ್ರತಿಷೇಧ ಬರುವುದು. ತೃಚ್ ಪ್ರತ್ಯಯವನ್ನು ನಿಮಿತ್ತಮಾಡಿಕೊಂಡು ಧೃಗೆ **ಸಾರ್ವಧಾತುಕಾರ್ಧಧಾತುಕಯೋಃ** ಎಂಬುದರಿಂದ ಗುಣ. ಅದು ರಪರವಾಗಿ ಬರುವುದು, ಧರ್ತೃ ಎಂದಾಗುವುದು. ಇದರ ಮುಂದೆ ಔ ಪ್ರತ್ಯಯ. ಆದಕ್ಕೆ **ಸುಪಾಂಸುಲುಕ್**-(ಪಾ ಸೂ.೭-೧-೩೯) ಎಂಬುದರಿಂದ ಆಕಾರಾದೇಶ, ಧರ್ತೃ ಎಂಬಲ್ಲಿ **ಋತೋಙಿ ಸರ್ವನಾಮಸ್ಥಾನಯೋಃ** ಎಂಬುದರಿಂದ ಗುಣ, ರಪರತ್ವ, ಅಪ್ತೃನ್ತೃಚ್, ಇತ್ಯಾದಿ ಸೂತ್ರದಿಂದ ಉಪಧಾದೀರ್ಘ. ಧರ್ತಾರಾ ತೃಚ್ ಪ್ರತ್ಯಯವು ಚಿತ್ತಾದ್ದ ರಿಂದ ಚಿತಃ, ಎಂಬುದರಿಂದ ಧರ್ತೃ ಎಂಬುದು ಅಂತೋದಾತ್ತ.

ಚರ್ಷಣೀನಾಮ್—ಕೃಷ ವಿಲೇಖನೇ ಧಾತು. ಇದರ ಮುಂದೆ **ಕೃಷೇರಾದೇಶ್ಚಚೋಃ** (ಉ ಸೂ. ೨-೩೬) ಕೃಷ ಧಾತುವಿನ ಮುಂದೆ ಅನಿ ಪ್ರತ್ಯಯ ಬರುವುದು. ಧಾತುವಿನ ಮೊದಲನೆಯ ವರ್ಣವಾದ ಕಕಾರಕ್ಕೆ ಚಕಾರ ಬರುವುದು ಎಂಬುದರಿಂದ ಅನಿಪ್ರತ್ಯಯವೂ ಕಕಾರಕ್ಕೆ ಚವೂ ಬಂದರೆ ಚೃಷ್+ಅನಿ, **ಪುಗನ್ತ್ಯ**

लघूपधगुणस्यचे (पा. सू. ६-४-४६) ऐंबुदरिंद लघूपधगुण रपरवागि बरुवुदु. चर्षनि, अट्कुप्वाङ्नुम्व्यवायेऽपि (पा. सू. ८-४-३) ऐंबुदरिंद नकारक्के णकार चर्षणि, इदर मुंदे षष्ठीबहुवचन अम्. चर्षणि+अम्. ह्रस्वनदाम्शौनुट् (पा सू. ६-८-७४) ऐंबुदरिंद नुडागमु. नामि (पा. सू. ६-४-३) नाम् परदल्लिरुवाग अजन्तवाद अंगक्के दीर्घबरुवुदु ऐंबुदरिंद दीर्घ, चर्षनीनाम् अनि ऐंबुदक्के आद्युदात्तश्च ऐंबुदरिंद प्रत्ययाद्युदात्तवु प्राप्तवादरे भाग्दसवागि अंतोदात्त बरुवुदु. इदु अंतोदात्त वाद्दरिंदलेय नामन्यतरस्याम्. (पा.सू. ६-८-६६) ऐंबुदरिंद विधक्तिगे उदात्त बरुवुदु. चर्षनीः ऐंबुदु अंतोदात्तवादरू ह्रस्वांतवल्ल. आद्दरिंद हेगे उदात्त बरुवुदु? ऐंदरे नामन्यतरस्याम् ऐंबुदक्के मतुप्प्रत्ययु परदल्लिरुवाग यावुदु ह्रस्वांतवागियू अंतोदात्तवागियू इरुवुदोर अदर मुंदे इरुव नाम् ऐंबुदु विकल्पवागि उदात्त वागुवुदु ऐंदु अर्थ. चर्षनि ऐंबुदर मुंदे मतुप्पन्नु इट्टरे, अदु ह्रस्वांतवागियू अंतोदात्तवागियू इरुवुदु. आद्दरिंद ईग दीर्घांतवादरू विधक्तिगे उदात्त बर बहुदु ॥ ३ ॥

॥ संहितापाठः ॥

अनुकामं तर्पयेथामिंद्रावरुणा रायऽआ ।
ता वां नेदिष्ठमीमहे ॥ ४ ॥

॥ पदपाठः ॥

अनु ऽकामं । तर्पयेथाम् । इंद्रावरुणा । रायः । आ ॥
ता । वां । नेदिष्ठं । ईमहे ॥ ४ ॥

॥ सायणभाष्यं ॥

इंद्रावरुणा हे इंद्रावरुणौ अनुकाममस्मदीयाभिलाषमनु रायो धनस्य प्रदानेना तर्पयेथाम् । सर्वतोऽस्मान्प्रीणीतं । वयं यदा यदा धनं कामयामहे तदा तदा प्रयच्छेतमित्यर्थः । ता वां तादृशौ युवां नेदिष्ठ-

ಮತಿಶಯೇನ ಸಾಮೀಪ್ಯಂ ಯಥಾ ಭವತಿ ತಥಾ ಈಮಹೇ । ಯಾಚಾಮಹೇ ಕಾಲವಿಲಂಬಮಂತರೇಣ ಧನಂ ದಾತವ್ಯಮಿತ್ಯರ್ಥಃ । ಸಪ್ತದಶಸು ಯಾ ಚ್ಞಾಕರ್ಮಸ್ವೀಮಹ ಇತಿ ಪಠಿತಂ ॥ ಅನುಕಾಮಂ । ಕಾಮಸ್ಯ ಪಶ್ಚಾದನುಕಾಮಂ । ಅಥವಾ ಕಾಮೇ ಕಾಮೇಽನುಕಾಮಂ । ಅನುರಿಹ ಪಶ್ಚಾದರ್ಥೇ । ಅಥವಾ ವೀಪ್ಸಾಲಕ್ಷಣೇ ಯಥಾರ್ಥೇ । ಯೋಗ್ಯತಾ ವೀಪ್ಸಾ ಪದಾರ್ಥಾನತಿವೃತ್ತಿಃ ಸಾದೃಶ್ಯಂ ಚೇತಿ ಚತ್ವಾರೋ ಹಿ ಯಥಾರ್ಥಾ ಗೃಹೀತಾಃ । ಅವ್ಯಯಂ ವಿಭಕ್ತ್ಯರ್ಥಾದಿನಾ । ಪಾ. ೨-೧-೬ । ಅವ್ಯಯೀಭಾವಸಮಾಸಃ । ಅವ್ಯಯೀಭಾವಶ್ಚ । ಪಾ. ೧-೧-೪೧ । ಇತ್ಯವ್ಯಯಸಂಜ್ಞಾಯಮಭ್ಯರ್ಹಾದಾಪ್ಸುಪಃ । ಪಾ. ೨-೪-೮೨ । ಇತಿ ಪ್ರಾಪ್ತಸ್ಯ ಲುಕೋಽಪವಾದೋ ನಾವ್ಯಯೀಭಾವಾದತೋಽಮ್ ತ್ವಪಂಚಮ್ಯಾಃ । ಪಾ. ೨-೪-೮೩ । ಇತಿ ವಿಭಕ್ತೇರಮಾದೇಶಃ । ಸಮಾಸಸ್ಯೇತ್ಯಂತೋದಾತ್ತೆತ್ವಂ । ತರ್ಪಯೇಥಾಂ । ತೃಪೇರ್ಣ್ಯಂತಾಲ್ಲೋಟೋ ಣಿಚ್ಚ । ಪಾ. ೧ ೩-೭೪ । ಇತ್ಯಾತ್ಮನೇಪದಂ । ಮಧ್ಯಮದ್ವಿವಚನಮಾಥಾಂ । ಟೇರೇತ್ಸೆ ಅಮೇತಃ । । ಪಾ. ೩-೪-೯೦ । ಇತ್ಯಾಮಾದೇಶಃ । ಶಪಿ ಸತ್ಯತೋ ಯೀಯೆಃ । ಪಾ. ೭-೨-೮೦ । ಇತ್ವಾಕಾರಸ್ಯೇಯಾದೇಶಃ । ಆದ್ಗುಣೋ ಯಲೋಪಶ್ಚ । ಇಂದ್ರಾವರುಣಾ । ಸುಪಾಂ ಸುಲುಗಿತಿ ದ್ವಿವಚನಸ್ಯಾಕಾರಃ । ಅಮಂತ್ರಿತಾದ್ಯುದಾತ್ತತ್ವಂ । ಸಂಹಿತಾಯಾಮಾಕಾರಸ್ಯ ಹ್ರಸ್ವತ್ವಂ । ರಾಯಃ । ಊಡಿದಮಿತ್ಯಾದಿನಾ ವಿಭಕ್ತೇರುದಾತ್ತತ್ವಂ । ತಾ । ಸುಪಾಂ ಸುಲುಗಿತಿ ವಿಭಕ್ತೇರಾಕಾರಃ । ಪದಾತ್ಪರತ್ವಾದ್ಯುವಾಮಿತ್ಯಸ್ಯ ವಾಮಾದೇಶೋಽನುದಾತ್ತಃ । ನೇದಿಷ್ಠಂ । ಅತಿಶಯೇನಾಂತಿಕಂ । ಅತಿಶಾಯನ ಇಷ್ಠನ್ । ಅಂತಿಕವಾಢಯೋರ್ನೇದಸಾಧೌ । ಪಾ. ೫-೩-೬೩ । ಇತಿ ನೇದಾದೇಶಃ । ಯುಸ್ಯೇತಿ ಲೋಪಃ । ಇಷ್ಠನೋ ನಿತ್ತ್ವಾದಾದ್ಯುದಾತ್ತತ್ವಂ । ಈ ಮಹೇ । ಈಙ್ ಗತೌ । ಜುತ್ತ್ವಾದಾತ್ಮನೇಪದಂ । ಬಹುಲಂ ಛಂದಸೀತಿ ಶ್ಯನೋ ಲುಕ್ । ನಿಘಾತಃ ॥

॥ ಪ್ರತಿಪದಾರ್ಥ ॥

ಇಂದ್ರಾವರುಣಾ—ಎಲೈ ಇಂದ್ರವರುಣರೇ । ಅನುಕಾಮಂ—ನಮ್ಮ ಇಷ್ಟಾರ್ಥಕ್ಕನುಸಾರವಾಗಿ ಅಥವಾ ನಮ್ಮ ಇಷ್ಟಾರ್ಥಗಳನ್ನು ಒಂದೊಂದಾಗಿ । ರಾಯಃ—ಧನಪ್ರದಾನದಿಂದ । ಆ ತರ್ಪಯೇಥಾಂ—(ನಮ್ಮನ್ನು) ತೃಪ್ತಿಪಡಿಸಿ । ತಾ—ಅಂತಹ । ವಾಂ—ನಿಮ್ಮಿಬ್ಬರನ್ನು । ನೇದಿಷ್ಠಂ—ಅತ್ಯಂತ ಸಮೀಪವಾಗಿ (ಕಾಲವಿಳಂಬವಿಲ್ಲದಂತೆ) । ಈಮಹೇ—ಸ್ತುತಿಸುತ್ತೇವೆ-

॥ ಭಾವಾರ್ಥ ॥

ಎಲೈ ಇಂದ್ರ ಮತ್ತು ವರುಣರೇ, ನಾವು ನಿಮ್ಮನ್ನು ಐಶ್ವರ್ಯಾದಿಗಳಿಗಾಗಿ ನಮ್ಮ ಸಮೀಪದಲ್ಲಿರುವಂತೆ ಸ್ತೋತ್ರಮಾಡುತ್ತೇವೆ. ನಾವು ಪ್ರಾರ್ಥಿಸದಕೂಡಲೇ ನೀವು ನಮಗೆ ಬೇಕಾದ ಧನವನ್ನು ಕೊಡಿ.

English Translation.

Indra and Varuna, satisfy us with wealth according to our desires. We therefore pray you to be nearest to us.

॥ ವಿಶೇಷವಿಷಯಗಳು ॥

ಅನುಕಾಮಂ—**ಕಾಮಸ್ಯ ಪಶ್ಚಾದನುಕಾಮಂ । ಅಥವಾ ಕಾಮೇಕಾಮೇ ಅನುಕಾಮಂ । ಅನುರಿಧ ಪಶ್ಚಾದರ್ಥೇ ಅಥವಾ ವೀಪ್ಸಾಲಕ್ಷಣೇ ಯಥಾರ್ಥೇ ॥ ಅಸ್ಮದೀಯಮಭಿಲಾಷಮನು ॥** ನಮ್ಮ ಇಷ್ಟಾನುಸಾರವಾಗಿ ಅಥವಾ ನಾವು ಅಪೇಕ್ಷಿಸುವ ಪ್ರತಿಯೊಂದು ಇಷ್ಟವನ್ನೂ ಎಂದರ್ಥವು.

ನೇದಿಷ್ಠಂ—**ಅತಿಶಯೇನ ಸಾಮೀಪ್ಯಂ ಯಥಾ ಭವತಿ ತಥಾ । ಅತಿಶಯೇನಾಂತಿಕಂ । ಅತ್ಯಂತ** ಸಮೀಪದಲ್ಲಿರುವಂತೆ, ನಮಗೆ ಇಷ್ಟಾರ್ಥಗಳನ್ನು ಕೊಡುವುದಕ್ಕಾಗಿ ನೀವು ನಮಗೆ ಅತ್ಯಂತ ಸಮೀಪದಲ್ಲಿರಿ ಬೇಕೆಂದರ್ಥವು.

ಈಮಹೇ—ಈಮಹೇ, ಯಾಮಿ ಮೊದಲಾದ ಹದಿನೇಳು ಯಾಚ್ಞಾಕರ್ಮವಾಚಕಶಬ್ದಗಳ ಮಧ್ಯದಲ್ಲಿ ಈಮಹೇ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩-೧೯) ಈಮಹೇ ಎಂದರೆ ಯಾಚಿಸುತ್ತೇವೆ, ಪ್ರಾರ್ಥಿಸುತ್ತೇವೆ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಅನುಕಾಮಮ್—ಕಾಮಸ್ಯ ಪಶ್ಚಾತ್-ಅನುಕಾಮಮ್ ಎಂದು ವಿಗ್ರಹ. ಅನು ಎಂಬ ಉಪಸರ್ಗಕ್ಕೆ ಇಲ್ಲಿ ಪಶ್ಚಾತ್ ಎಂದು ಅರ್ಥ. ಅಥವಾ ಕಾಮೇಕಾಮೇ ಅನುಕಾಮಮ್ ಎಂದು ವಿಗ್ರಹ. ಇಲ್ಲಿ ಅನು ಎಂಬುದಕ್ಕೆ ವೀಪ್ಸೆ ಎಂದರ್ಥ. ಈ ವೀಪ್ಸೆಯು ಯಥಾ ಶಬ್ದಾರ್ಥಗಳಲ್ಲಿ ಸೇರಿರುವುದು. ಯೋಗ್ಯತೆ, ವೀಪ್ಸೆ, ಪದಾರ್ಥಾನತಿವೃತ್ತಿ, ಸಾದೃಶ್ಯ ಎಂದು ಯಥಾಶಬ್ದಕ್ಕೆ ನಾಲ್ಕು ಅರ್ಥಗಳಿರುವುವು. ಮೊದಲನೇ ಅರ್ಥದಲ್ಲಿ ಅನು ಎಂಬ ಅವ್ಯಯವು ಪಶ್ಚಾದ್ವಚನವಾಗುವುದು. ಎರಡನೇ ಅರ್ಥದಲ್ಲಿ ಅದು ಯಥಾರ್ಥವಾಚಕವಾಗುವುದು. ಈ ಎರಡು ಸಪ್ತಮ್ಯರ್ಥದಲ್ಲಿಯೂ **ಅವ್ಯಯಂ ವಿಭಕ್ತಿ ಸಮೀಪ, ಸಮೃದ್ಧಿ, ವ್ಯದ್ಧ್ಯರ್ಥಾಭಾವಾ, ಸಂಪ್ರತಿ, ಶಬ್ದ ಪ್ರಾದುರ್ಭಾವ, ಪಶ್ಚಾ, ದೃಥಾ, ನುಪೂರ್ವ್ಯ ಯೌಗಪದ್ಯ, ಸಾದೃಶ್ಯ, ಸಂಪತ್ತಿ, ಸಾಕಲ್ಯಾನ್ತವಚನೇಷು** (ಪಾ ಸೂ. ೨-೧-೬) ವಿಭಕ್ತಿಶಬ್ದ ಮೊದಲುಗೊಂಡು ಅಂತಶಬ್ದ ಪರ್ಯಂತಕ್ಕೆ ಇರುವ ಹದಿನಾರು ಶಬ್ದಗಳಿಗೂ ದ್ವಂದ್ವ, ಅಂತಾಶ್ಚತೇ ವಚನಾಶ್ಚ ಅನ್ತವಚನಾಃ ತೇಷು ವಿಭಕ್ತ್ಯೇತ್ಯಾದಿ ಅಂತವಚನೇಷು ಎಂದು ವಿಗ್ರಹ, ವಿಭಕ್ತ್ಯರ್ಥವೇ ಮೊದಲಾದ ಅರ್ಥಪ್ರತಿಪಾದಕವಾದ ಅವ್ಯಯವು ಸಮರ್ಥವಾದ ಸುಬಂತದೊಂದಿಗೆ ಸಮಾಸವನ್ನು ಹೊಂದುವುದು. ಅದು ಅವ್ಯಯೀಭಾವವಾಗುವುದು ಎಂಬುದರಿಂದ, ಅವ್ಯಯೀಭಾವಸಮಾಸಬರುವುದು. **ಅವ್ಯಯೀಭಾವಶ್ಚ** (ಪಾ. ಸೂ. ೧ ೧-೪೧) ಅವ್ಯಯೀಭಾವಸಮಾಸವೂ ಸಹ ಅವ್ಯಯಸಂಜ್ಞೆಯನ್ನು ಹೊಂದುವುದು ಎಂಬುದರಿಂದ ಅನುಕಾಮ ಎಂಬುದಕ್ಕೆ ಅವ್ಯಯಸಂಜ್ಞೆ ಇರುವುದು. ಅದ್ದರಿಂದ ಅನುಕಾಮ ಎಂಬುದರ ಮುಂದೆ ಸುಪ್ ಪ್ರತ್ಯಯವು ಬಂದರೆ ಅದಕ್ಕೆ **ಅವ್ಯಯಾದಾಪ್ಸುಪಃ** (ಪಾ ಸೂ. ೨-೪-೮೨) ಅವ್ಯಯದ ಮುಂದೆ ಇರುವ ಆಪ್‌ಗೂ ಸುಪ್ಪಿಗೂ ಲುಕ್ ಬರುವುದು ಎಂಬುದರಿಂದ ಲುಕ್ ಪ್ರಾಪ್ತವಾದರೆ **ನಾವ್ಯಯೀಭಾವಾದತೋಽತ್ತ್ವಸಂಚಮ್ಯಾಃ** (ಪಾ.ಸೂ. ೨-೪-೮೩) ಎಂಬುದರಿಂದ ನಿಷೇಧವೂ, ಅಮಾದೇಶವೂ ಬರುವುದು. ಈ ಸೂತ್ರದಲ್ಲಿ ನಾವ್ಯಯೀಭಾವಾದತಃ ಎಂದು ಒಂದು ವಾಕ್ಯ. ಅಕಾರಾಂತವಾದ ಅವ್ಯಯೀಭಾವದ ಮುಂದೆ ಇರುವ ಸುಪ್ಪಿಗೆ ಲುಕ್ ಬರುವುದಿಲ್ಲ ಎಂದು ಇದರ ಅರ್ಥ. ಅನುಕಾಮು ಎಂಬುದು ಅಕಾರಾಂತ

ವಾದ ಅವ್ಯಯೀಭಾವ. ಅದ್ದರಿಂದ ಇದರ ಮುಂದೆ ಬರುವ ಸುಬ್ವಿಭಕ್ತಿಗ ಈ ವಾಕ್ಯದಿಂದ ಲುಕ್ ಬರುವುದಿಲ್ಲ. ಅನ್ವ್ವಪಂಚಮ್ಯಾಃ ಎಂಬುದು ಎರಡನೇ ವಾಕ್ಯ. ಆಕಾರಾಂತವಾದ ಅವ್ಯಯೀಭಾವದ ಮುಂದೆ ಇರುವ ಪಂಚಮೀ ಭಿನ್ನವಾದ ಸುಪ್‌ಗೆ ಅಮ್ ಬರುವುದು ಎಂದು ಇದರ ಅರ್ಥ. ಇದರಿಂದ ಅನುಕಾಮ ಎಂಬುದರ ಮುಂದೆ ಪಂಚಮೀಭಿನ್ನವಾದ ದ್ವಿತೀಯಾ, ಸಪ್ತಮೀ ವಿಭಕ್ತಿಗಳನ್ನಿಟ್ಟಾಗ ಅವಕ್ಕೆ ಪೂರ್ವವಾಕ್ಯದಿಂದ ಲುಕ್ ಬರುವು ದಿಲ್ಲ. ಈ ವಾಕ್ಯದಿಂದ ಅಮ್ ಆದೇಶ ಬರುವುದು. ಅನುಕಾಮ+ಅಮ್ ಅಮಿಪೂರ್ವಃ (ಪಾ. ಸೂ. ೬-೧-೧೦೭) ಎಂಬುದರಿಂದ ಪೂರ್ವರೂಪ ಅನುಕಾಮಮ್ ಎಂದಾಗುವುದು. ಸಮಾಸಸ್ಯ (ಪಾ. ಸೂ. ೬-೧-೨೨೩) ಸಮಾಸದ ಕೊನೆಯ ವರ್ಣವ್ ಉದಾತ್ತವಾಗುವುದು ಎಂಬುದರಿಂದ ಅನುಕಾಮ ಎಂಬುದು ಅಂತೋದಾತ್ತ. ಅನುದಾತ್ತೌ ಸುಪ್ಪಿತೌ ಎಂಬುದರಿಂದ ಅಮ್ ಅನುದಾತ್ತ. ಏಕಾದೇಶವು ಏಕಾದೇಶಉದಾತ್ತೇನೋದಾತ್ತಃ ಎಂಬುದರಿಂದ ಉದಾತ್ತ. ಏವಂಚ ಅನುಕಾಮಂ ಎಂಬುದು ಅಂತೋದಾತ್ತ.

ತರ್ಪಯೇಥಾಮ್—ತೃಪ ಪ್ರೀಣನೇ ಧಾತು. ತತ್ಪ್ರಯೋಜಕೋಹೇತುಶ್ಚ (ಪಾ. ಸೂ. ೧-೪-೫೫) ಎಂಬುದರಿಂದ ಹೇತುಸಂಜ್ಞೆ. ಹೇತುಮತಿಚ (ಪಾ. ಸೂ. ೩-೧-೨೬) ಎಂಬುದರಿಂದ ಣಿಚ್, ಣಿಚೆಶ್ಚ (ಪಾ. ಸೂ. ೧-೩-೭೪) ಕ್ರಿಯಾಫಲವು ಕರ್ತೃವಿಗೆ ಸೇರುವಾಗ ಣಿಚ್ ಪ್ರತ್ಯಯಾಂತವಾದ ಧಾತುವಿನ ಮುಂದೆ ಆತ್ಮನೇಪದ ಬರುವುದು ಎಂಬುದರಿಂದ, ತೃಪ್+ಇ ಎಂಬ ಣಿಜನ್ತ ಧಾತುವಿನ ಮುಂದೆ ಬರುವ ಲೋಟ್ ಲಕಾರಸ್ಥಾನದಲ್ಲಿ ಆತ್ಮನೇಪದ ಪ್ರತ್ಯಯ ಬರುವುದು. ಪ್ರಥಮಪುರುಷದ್ವಿವಚನವನ್ನು ವಿವಕ್ಷಿಸಿದಾಗ ಆಥಾಮ್ ಎಂಬುದು ಬರುವುದು. ತೃಪ್+ಇ+ಆಥಾಮ್. ಟಿತಆತ್ಮನೇಪದಾನಾಂಟೇರೇ (ಪಾ. ಸೂ. ೩-೪-೭೯) ಎಂಬುದರಿಂದ ಆಮ್ ಎಂಬ ಟಿಗೆ ಏತ್ವ. ಆಮೇತಃ (ಪಾ. ಸೂ. ೩-೪-೯೦) ಲೋಟ್ ಸಂಬಂಧಿಯಾದ ಏಕಾರಕ್ಕೆ ಆಮ್ ಬರುವುದು ಎಂಬುದರಿಂದ ಆಮ್, ತೃಪ್+ಣಿ+ಆಥಾಮ್, ಣಿಚ್ಚನ್ನು ನಿಮಿತ್ತ ಮಾಡಿಕೊಂಡು ಪುಗಂತಲಘೂಪಧಸ್ಯೇಚ ಎಂಬುದರಿಂದ ತೃಪ್‌ಗೆ ಲಘೂಪಧಗುಣ, ಉರಣ್ಯಪರಃ ಎಂಬುದರಿಂದ ರ ಪರವಾಗಿ ಬರುವುದು. ತರ್ಪಿ+ಆಥಾಮ್ ಕರ್ತರಿಶಪ್ ಎಂಬುದರಿಂದ ಶಪ್, ತರ್ಪಿ+ಅ+ಆಥಾಮ್, ಶಪ್ಪನ್ನು ನಿಮಿತ್ತಮಾಡಿಕೊಂಡು ಸಾರ್ವಧಾತುಕಾರ್ಧಧಾತುಕಯೋಃ (ಪಾ. ಸೂ. ೭-೩-೮೪) ಎಂಬುದರಿಂದ ಗುಣ. ಏಚೋಯವಾಯಾವಃ (ಪಾ. ಸೂ ೬-೧-೭೮) ಅಯಾದೇಶ, ತರ್ಪಯ+ಆಥಾಮ್. ಆಥಾಮ್ ಎಂಬುದು ಪಿತ್ತಲ್ಲದ ಸಾರ್ವಧಾತುಕ. ಆದ್ದರಿಂದ ಸಾರ್ವಧಾತುಕಮಪಿತ್ (ಪಾ. ಸೂ. ೧-೩-೪) ಎಂಬುದರಿಂದ ಙಿತ್ತಾಗುವುದು. ಏವಂಚ ಆತೋಙಿತಃ (ಪಾ. ಸೂ. ೭-೩-೮೧) ಹ್ರಸ್ವಾಕಾರದ ಮುಂದೆ ಇರುವ ಙಕಾರೇತ್ಸಂಜ್ಞಕವಾದ ಪ್ರತ್ಯಯ ಸಂಬಂಧಿಯಾದ ಆಕಾರಕ್ಕೆ ಇಯ್ ಬರುವುದು ಎಂಬುದರಿಂದ ಆಕಾರಕ್ಕೆ ಇಯ್ ಆದೇಶ ತರ್ಪಯ+ಇಯ್+ಥಾಮ್. ಆದ್ಗುಣಃ (ಪಾ. ಸೂ. ೬-೧-೮೭) ಎಂಬುದರಿಂದ ಅಕಾರ ಇಕಾರಗಳಿಗೆ ಏಕಾರ ತರ್ಪಯೇಯ್+ಥಾಮ್. ವಕಾರ ವಲ್, ಅದು ಪರದಲ್ಲಿರುವುದರಿಂದ ಲೋಪೋವ್ಯೋರ್ವಲಿ (ಪಾ. ಸೂ. ೬-೧-೬೬) ಎಂಬುದರಿಂದ ಯಕಾರಕ್ಕೆ ಲೋಪ. ತರ್ಪಯೇಥಾಮ್ ಎಂದಾಗುವುದು. ಅತೋಯೇಯಃ (ಪಾ. ಸೂ. ೭-೩-೮೦) ಇಲ್ಲಿ ಯಾ, ಇಯಃ, ಅಥವಾ ಯಾಸ್ ಇಯಃ ಎಂದು ಎರಡುವಿಧವಾಗಿ ಪದವಿಭಾಗ ಮಾಡುವರು. ಎರಡನೇ ಪಕ್ಷದಲ್ಲಿ ಯಾಸ್+ಇಯ ಎಂದಿರುವಾಗ ಸಕಾರಕ್ಕೆ ಸೆಸಜುಷೋರುಃ, ಎಂಬುದರಿಂದ ರುತ್ವ, ಭೋಭಗೋ ಎಂಬುದರಿಂದ ಅದಕ್ಕೆ ಯತ್ವ, ಲೋಪಶ್ಯಾಕಲ್ಯಸ್ಯ ಎಂಬುದರಿಂದ ಯ ಲೋಪ ಬಂದ ಮೇಲೆ ಯಾ+ಇಯ ಎಂದಿರುವಾಗ ಪೂರ್ವತ್ರಾಸಿದ್ಧಮ್, ಎಂಬುದರಿಂದ ಗುಣವನ್ನು ಮಾಡುವಾಗ ಯ ಲೋಪವು ಅಸಿದ್ಧವಾಗುವುದು. ಆದ್ದರಿಂದ ಯದ್ಯಪಿ ಗುಣಸಂಧಿ ಬರುವುದಿಲ್ಲ. ಆದರೂ ಇದು ಋಷಿ

ಪ್ರಯೋಗವಾದ್ದರಿಂದ ಆರ್ಷವಾಗಿ ಸಂಧಿ ಬಂದಿರುವುದು ಎಂದು ಹೇಳಬಹುದು. ಅಂತು ಈ ಎರಡು ಪ್ರಕಾರಗಳಲ್ಲಿ ಯಾವುದಾದರೂ ಇರಲಿ, ಹ್ರಸ್ವ ಅಕಾರದ ಮುಂದೆ ಇರುವ ಸಾರ್ವಧಾತುಕಪ್ರತ್ಯಯಾವಯವವಾದ ಯಾ ಅಥವಾ ಯಾಸ್ ಗೆ ಇಯ ಆದೇಶ ಬರುವುದು ಎಂದು ಅತೋಯೇಯಃ ಎಂಬ ಸೂತ್ರಕ್ಕೆ ಅರ್ಥವು, ತರ್ಪ+ಯ+ಅಥಾಮ್ ಎಂಬಲ್ಲಿ ಯಾ, ಅಥವಾ ಯಾಸ್, ಎಂಬುದು ಇಲ್ಲದೇ ಇರುವುದರಿಂದ ಈ ಸೂತ್ರದಿಂದ ಇಲ್ಲಿ ಇಯಾದೇಶ ಬರುವುದಿಲ್ಲ. ಆದ್ದರಿಂದ ಈ ಸೂತ್ರದಿಂದ ಇಯಾದೇಶೋಪವರ್ಣನೆಯು ಪ್ರಾಮಾದಿಕ ವೆಂದು ಹೇಳಬಹುದು.

ಇನ್ದ್ರಾವರುಣಾ—ಇಂದ್ರಶ್ಚ ವರುಣಶ್ಚ ಇಂದ್ರಾವರುಣಾ, ಎಂದು ದ್ವಂದ್ವಸವಾಸ. ಇವರ ವಿವರಣೆಯು ಇಂದ್ರಾವರುಣಯೋರಹಮ್ (ಋ. ಸಂ. ೧-೧೭-೧) ರಲ್ಲಿ ಇರುವುದು, ಇಲ್ಲಿ ಇಂದ್ರ ವರುಣ ಎಂಬುದರ ಮುಂದೆ ಸಂಬೋಧನಪ್ರಥಮಾ ದ್ವಿವಚನ ಔ ಪ್ರತ್ಯಯ. ಅದಕ್ಕೆ **ಸುಪಾಂಸುಲುಕ್**-. (ಪಾ. ಸೂ. ೭-೧-೩೯) ಎಂಬುದರಿಂದ ಆಕಾರ, ಸವರ್ಣದೀರ್ಘ. ಇಂದ್ರಾವರುಣಾ, ಇದು ಪಾದಾದಿಯಲ್ಲಿರುವುದರಿಂದ ಆಷ್ಟಮಿಕಾನುದಾತ್ತ ಬರುವುದಿಲ್ಲ. ಷಾಷ್ಠಸೂತ್ರವಾದ ಆಮನ್ತ್ರಿತಸ್ಯಚ, ಎಂಬುದರಿಂದ ಆದ್ಯುದಾತ್ತ ಬರುವುದು, ಸಂಹಿತಾಕಾಲದಲ್ಲಿ ಆಕಾರಕ್ಕೆ ಹ್ರಸ್ವಬರುವುದು.

ರಾಯೇ—ರೈ ಶಬ್ದವು ಧನವಾಚಕ, ಇದರ ಮುಂದೆ ಷಷ್ಠೀವಿಭಕ್ತ್ಯೈಕವಚನ ಙಸ್, ರೈ+ಅಸ್ ಆಯಾದೇಶ, ರುತ್ವ, ವಿಸರ್ಗ. **ಊಡಿದಮ್ಪದಾದ್ಯೆಪ್ಪುಮ್ರೈದುಭ್ಯಃ** (ಪಾ. ಸೂ. ೬-೧-೧೭೧) ಎಂಬುದರಿಂದ ವಿಭಕ್ತ್ಯುದಾತ್ತವಾಗುವುದು.

ತಾ-ತದ್-ಶಬ್ದದ ಮುಂದೆ ದ್ವಿತೀಯಾದ್ವಿವಚನ ಔಟ್, ಅದಕ್ಕೆ ಸುಪಾಂಸುಲುಕ್ ಎಂಬುದರಿಂದ **ಆಕಾರಾದೇಶ. ತ್ಯದಾದೀನಾಮಃ** (ಪಾ. ಸೂ. ೭-೨-೧೦೨) ಎಂಬುದರಿಂದ ದಕಾರಕ್ಕೆ ಅಕಾರ, ಅತೋಗುಣೇ, ಎಂಬುದರಿಂದ ಪರರೂಪ, ಸವರ್ಣದೀರ್ಘ, ತಾ, ಎಂದಾಗುವುದು.

ವಾಂ—ಇದು ಪದದ ಮುಂದೆ ಇರುವುದು. ಆದ್ದರಿಂದ ಯುವಾಮ್, ದ್ವಿತೀಯಾ ದ್ವಿವಚನಾಂತಕ್ಕೆ **ಯುಷ್ಮದಸ್ಮದೋಃ ಷಷ್ಠೀಚತುರ್ಥೀದ್ವಿತೀಯಾಸ್ಥಯೋರ್ವಾಂನಾವೌ** (ಪಾ. ಸೂ. ೮-೧-೨೦) ಎಂಬುದರಿಂದ ಅನುದಾತ್ತವಾದ ವಾಮ್ ಆದೇಶ.

ನೇದಿಷ್ಠಮ್—ಅತಿಶಯೇನ ಅಂತಿಕಮ್, ಎಂದು ವಿಪ್ರಹ. **ಅತಿಶಾಯನೇತೆಮಬಿಷ್ಠನೌ** (ಪಾ. ಸೂ. ೫-೩-೫೫) ಎಂಬುದರಿಂದ ಇಷ್ಠನ್ ಪ್ರತ್ಯಯ ಬರುವುದು, ಅನ್ತಿಕ+ಇಷ್ಠ, **ಅನ್ತಿಕ ಬಾಢಯೋರ್ನೇ-ದ ಸಾದೌ** (ಪಾ. ಸೂ. ೫-೩-೬೩) ಇಷ್ಠನ್, ಈಯಸುನ್ ಪ್ರತ್ಯಯಗಳು ಪರದಲ್ಲಿರುವಾಗ ಅನ್ತಿಕ ಶಬ್ದಕ್ಕೆ ನೇದ ಆದೇಶವೂ, ಬಾಢ ಶಬ್ದಕ್ಕೆ ಸಾಧ ಆದೇಶವೂ ಸಹ ಬರುವುದು ಎಂಬುದರಿಂದ ನೇದಾದೇಶ ಬಂದಾಗ ನೇದ+ಇಷ್ಠ **ಯಸ್ಯೇತಿಚೆ** (ಪಾ. ಸೂ. ೬-೪-೧೪೮) ಎಂಬುದರಿಂದ ಆಕಾರಕ್ಕೆ ಲೋಪ, ನೇದಿಷ್ಠ ಎಂದಾಗುವುದು. ಇಷ್ಠನ್ ಪ್ರತ್ಯಯವು ನಿತ್ತು, ಆದ್ದರಿಂದ ಞ್ನಿತ್ಯಾದಿರ್ನಿತ್ಯಮ್ ಎಂಬುದರಿಂದ ನೇದಿಷ್ಠ ಎಂಬುದು ಆದ್ಯುದಾತ್ತ.

ಈಮಹೇ—ಈಙ್ ಗತೌ, ಧಾತು, ಙಿತ್, ಆದ್ದರಿಂದ **ಆನುದಾತ್ತೋಙಿತ ಆತ್ಮನೇಪದೇಷ್ವಮ್** (ಪಾ ಸೂ. ೧-೩-೧೨) ಎಂಬುದರಿಂದ ಆತ್ಮನೇಪದ ಬರುವುದು. ಲಟ್ ಉತ್ತಮಪುರುಷಬಹುವಚನ ಮಹಿಙ್

ಈ+ಮಹಿ, ಟಿಡಢಣಶ್ಕಸಜದಘನಾಮ್, ಎಂಬುದರಿಂದ ಟಗೆ ಏಕಾರ, ದಿವಾದಿಭ್ಯಃಶ್ಯನ್ (ಪಾ. ಸೂ. ೩-೧.೬೯) ಎಂಬುದರಿಂದ ಶ್ಯನ್, ಬಹುಲುಛಂದಸಿ (ಪಾ- ಸೂ. ೨-೪-೭೩) ಎಂಬುದರಿಂದ ಲುಕ್. ಈ ಮಹೇ ಎಂದಾಗುವುದು, ತಿಙ್ಶಿತಿಜಿಃ ಎಂಬುದರಿಂದ ಸಂಪ್ರಸಾರದಾತ್ತ ಬರುವುದು " ೩ ॥

॥ ಸಂಹಿತಾಪಾಠಃ ॥

ಯುವಾಕು ಹಿ ಶಚೀನಾಂ ಯುವಾಕು ಸುಮತೀನಾಂ ।
ಭೂಯಾಮ ವಾಜದಾವ್ನಾಂ ॥ ೪ ॥

ಯುವಾಕು । ಹಿ । ಶಚೀನಾಂ । ಯುವಾಕು । ಸುಮತೀನಾಂ ।
ಭೂಯಾಮ । ವಾಜದಾವ್ನಾಂ ॥ ೪ ॥

॥ ಸಾಯಣಭಾಷ್ಯಂ ॥

ಹಿ ಯಸ್ಮಾತ್ಕಾರಣಾಚ್ಛಚೀನಾಮಸ್ಮದೀಯಕರ್ಮಣಾಂ ಸಂಬಂಧಿ ಸೋಮರೂಪಂ ಹವಿರ್ಯುವಾಕು ವಸತೀವರ್ಯೇಕಧನಾತ್ಮಕೈರುದಕೈಃ ಪಯಃಸಕ್ತ್ವಾದಿದ್ರವ್ಯಾಂತರೈಶ್ಚ ಮಿಶ್ರಿತಂ । ತಥಾ ಸುಮತೀನಾಂ ಶೋಭನಬುದ್ಧಿಯುಕ್ತಾನಾಮೃತ್ವಿಜಾಂ ಸ್ತೋತ್ರರೂಪಂ ವಚನಮಪಿ ಯುವಾಕು ನಾನಾವಿಧೈಃ ಸ್ತುತ್ಯಗುಣೈರ್ಮಿಶ್ರಿತಂ । ತಸ್ಮಾತ್ಕಾರಣಾತ್ ಹೇ ಇಂದ್ರಾವರುಣೌ ತಥಾವಿಧಂ ಹವಿಃ ಸ್ವೀಕುರ್ವತೋರ್ಯುವಯೋಃ ಪ್ರಸಾದಾದ್ವಯಂ ವಾಜದಾವ್ನಾಮನ್ನಪ್ರದಾನಾಂ ಪುರುಷಾಣಾಂ ಮಧ್ಯೇ ಮುಖ್ಯಾ ಭೂಯಾಮ । ಭವೇಮ । ಅಪೋಽಸ್ಮ ಇತ್ಯಾದಿಷು ಪಡ್ವಿಂಶತಿಸಂಖ್ಯಾಕೇಷು ಕರ್ಮನಾಮಸು ಶಚೀ ಕರ್ಮನಾಮೇತಿ ಪಠಿತಂ ॥ ಯುವಾಕು । ಯು ಮಿಶ್ರಣೇ । ಕಟೆಕುಷಿಭ್ಯಾಂ ಕಾಕುಃ । ಉ.೩-೭೭ । ಇತ್ಯತ್ರ ಬಾಹುಲಕಾದ್ಯಾತೇರಪಿ ಕಾಕುಃ ಪ್ರತ್ಯಯಃ । ಕಿತ್ವೇನ ಗುಣಾಭಾವಾದುಕಾರಸ್ಯೋವಙಾದೇಶಃ । ಪ್ರತ್ಯಯಸ್ವರೇಣ ಮಧ್ಯೋದಾತ್ತತ್ವಂ । ಶಚೀಶಬ್ದಃ ಕೇಷಾಂಚಿನ್ಮತೇ ಶಾರ್ಙ್ಗರವಾದಿಃ । ಙೀನಂತೋ ನಿತ್ತ್ವಾದಾದ್ಯುದಾತ್ತಃ । ಸಾ. ೪-೧.೭೩ । ಇತ್ಯುಭೇ ವನಸ್ಪತ್ಯಾದಿಷು ಯುಗಪದಿತ್ಯತ್ರ । ಕಾ. ೬-೨-೧೪೦। ವೃತ್ತಿಕೃತೋಕ್ತಂ । ಸುಮತೀನಾಂ । ವಿದ್ಯಾಮ ಸುಮತೀನಾಂ । ಋಗ್ವೇ ೧-೪-೩ । ಇತ್ಯತ್ರೋಕ್ತಂ । ಭೂಯಾಮ । ಪ್ರಾರ್ಥನಾಯಾಂ ಲಿಙ್ । ಉತ್ತಮಬಹುವಚನೇ ನಿತ್ಯಂ ಙಾಶ ಇತಿ ಸಕಾರಲೋಪಃ । ಯಾಸುಟ್ ಪರಸ್ಮೈಪದೇಷೂದಾತ್ತೋ ಙಿಚ್ಚೇ । ಪಾ. ೩-೪-೧೦೩ । ಇತ್ಯುದಾತ್ತೋ ಯಾಸುಡಾಗಮಃ । ಲಿಙಃ ಸಲೋಪೋಽನಂತ್ಯಸ್ಯ । ಪಾ. ೭-೨-೭೯ । ಇತಿ ಸಕಾರಲೋಪಃ । ಬಹುಲಂ ಛಂದಸೀತಿ ಶಪೋ ಲುಕ್ । ಸತಿ ಶಿಷ್ಟತ್ವಾದ್ಯಾಸುಡುದಾತ್ತ ಏವ ಶಿಷ್ಯತೇ । ವಾಜದಾವ್ನಾಂ । ವಾಜಂ ದದಾತೀತಿ ವಾಜದಾವಾನಃ । ಅತೋ ಮನಿ-

ನ್ನಿತ್ಯಾದಿನಾ ವನಿಪ್ । ತಸ್ಯ ಪಿತ್ವಾದ್ಧಾತುಸ್ವರ ಏವ ಶಿಷ್ಯತೇ । ಸಪೂಸೇ ಕೃದುತ್ತರಪದಪ್ರಕೃತಿಸ್ವರತ್ವೇನೈ ಸ ಏವ ಶಿಷ್ಯತೇ । ಅಮ್ಯಲ್ಲೋಪೋ೨ನಃ । ಪಾ. ೬-೪-೧೩೪ । ಇತ್ಯಕಾರಲೋಪಃ । ತೆಸ್ಯಾಚಿಃ ಪರಸ್ಮಿನ್ನಿತಿ ಸ್ಥಾನಿವದ್ಭಾವಾಲ್ಲೋಪೋ ವ್ಯೋರ್ವಲೀತಿ ವಕಾರಲೋಪೋ ನ ಭವತಿ ॥

॥ ಪ್ರತಿಪದಾರ್ಥ ॥

ಹಿ—ಯಾವ ಕಾರಣದಿಂದ । ತಚೀನಾಂ—(ನಾವು ಮಾಡುವ) ಕರ್ಮಗಳ (ಸಂಬಂಧಿಯಾದ ಸೋಮರೂಪವಾದ ಹವಿಸ್ಸು) । ಯುವಾಕು--ಪಯಃ ಸಕ್ತ್ವಾದಿ ಪದಾರ್ಥಗಳಿಂದ ಯುಕ್ತವಾದದ್ದೋ । ಸುಮತೀನಾಂ-ಶುದ್ಧವಾದ ಬುದ್ಧಿಯುಳ್ಳವರ (ಋತ್ವಿಜರ ಸ್ತುತಿಯು) । ಯುವಾಕು--(ಸೋತ್ರಗಳಲ್ಲಿರಬೇಕಾದ) ನಾನಾ ಗುಣಗಳಿಂದ ಯುಕ್ತವಾದದ್ದೋ (ಆದ್ದರಿಂದ ನಾವು) । ವಾಜದಾವ್ನಾಂ--ಅನ್ನವನ್ನು (ಹವಿಸ್ಸನ್ನು) ಕೊಡುವವರಲ್ಲಿ (ಅಗ್ರಗಣ್ಯರಾಗಿ) । ಭವೇಮ—(ನಾವು ಕೊಟ್ಟ ಹವಿಸ್ಸನ್ನು ಸ್ವೀಕರಿಸಿದ ನಿಮ್ಮ ಪ್ರಸಾದದಿಂದ) ಆಗೋಣ.

॥ ಭಾವಾರ್ಥ ॥

ನಾವು ನಿಮಗೆ ಹವಿಸ್ಸಾಗಿ ಅರ್ಪಿಸುವುದು ಪಯಃಸಕ್ತ್ವಾದೇ ಮೊದಲಾದ ಪದಾರ್ಥಗಳಿಂದ ಯುಕ್ತವಾದದ್ದು. ಮತ್ತು ಋತ್ವಿಜರು ನಿಮ್ಮನ್ನು ನಾನಾ ವಿಧವಾದ ಉತ್ತಮಗುಣಯುಕ್ತರನ್ನಾಗಿ ಸ್ತುತಿಸುತ್ತಾರೆ. ಇವೆರಡರಿಂದ ತೃಪ್ತರಾಗಿ ನೀವು ನನ್ಮನ್ನು ಅನ್ನದಾತೃಗಳಲ್ಲಿ ಮುಖ್ಯರಾಗಿ ಅಥವಾ ಉತ್ತಮರನ್ನಾಗಿ ಮಾಡಬೇಕು.

English Translation

The mingled libations of our pious rites, the different praises of our right-minded priests are prepared; may we be included among the givers of food.

॥ ವಿಶೇಷವಿಷಯಗಳು ॥

ಯುವಾಕು--ವಸತೀವರ್ಯೇಕಧಾನಾತ್ಮಕೈರುದಕೈಃ ಪಯಃಸಕ್ತ್ವಾದಿದ್ರವ್ಯಾಂತರೈಶ್ಚ ಮಿಶ್ರಿತಂ ನೀರು, ಹಾಲು, ಸಕ್ತು (ಹಿಟ್ಟು) ಇವುಗಳನ್ನು ಮಿಶ್ರಮಾಡಿ ಹೋಮಾರ್ಥವಾಗಿ ಸಿದ್ಧಪಡಿಸಿರುವ ಹವಿಸ್ಸೆಂದು ಭಾಷ್ಯಕಾರರು ಈ ಶಬ್ದಕ್ಕೆ ಇಲ್ಲಿ ಅರ್ಥವಿವರಣೆ ಮಾಡಿರುವರು. ಎರಡನೆಯ ಆವರ್ತಿ ಬರುವ ಈ ಯುವಾಕು ಶಬ್ದಕ್ಕೆ ಸೋತ್ರಗಳ ಮಿಶ್ರಣ. ಅಥವಾ ನಾನಾ ವಿಧವಾದ ಸ್ತೋತ್ರಗಳ ಸಮೂಹವೆಂದು ವಿವರಣೆ ಮಾಡಿರುವರು. ಮತ್ತು—

ಅಶ್ವಿನಾ ಮಧುಷುತ್ತಮೋ ಯುವಾಕುಃ ಸೋಮಸ್ತಂ ಪಾತೆಮಾ ಗತಂ ದುರೋಣೇ ।

(ಋ. ಸೂ. ೬-೫೮-೪)

ಎಂಬ ಋಕ್ಕಿನಲ್ಲಿರುವ ಯುವಾಕುಃ ಎಂಬ ಶಬ್ದಕ್ಕೆ ಯುವಾಂ ಕಾಮಯಮಾನೋ ವರ್ತತೇ । ಯದ್ವಾ । ಯುವಾಕುರ್ವಸತೀವರೀಸ್ರೆಭೃತಿಭಿರ್ಮಿಶ್ರಿತ ಇತ್ಯರ್ಥಃ ॥ ಎಂದರೆ ನಿಮ್ಮನ್ನು ಅಪೇಕ್ಷಿಸುವ ಅಥವಾ ನಿಮಗೆ ಬೇಕಾದ ಎಂದು ಅರ್ಥವನ್ನೂ ಮೇಲೆ ಹೇಳಿದ ಮಿಶ್ರಣವೆಂಬ ಅರ್ಥವನ್ನೂ ಹೇಳಿರುವರು. ಮತ್ತು—

ತಾ ವಿದ್ವಾಂಸಾ ಹವಾಮಹೇ ವಾಂ ತಾ ನೋ ವಿದ್ವಾಂಸಾ ಮನ್ಮ ವೋಚೇತಮದ್ಯ ।
ಪ್ರಾರ್ಚದ್ದೇಯಮಾನೋ ಯುವಾಕುಃ ॥

(ಋ. ಸಂ. ೧-೧೨೦-೩)

ದುಹೀಯನ್ಮಿತ್ರಧಿತಯೇ ಯುವಾಕು ರಾಯೇ ಚ ನೋ ಮಿಮೀತಂ ವಾಜವತ್ಯೈ ।

(ಋ. ಸಂ.೧-೧೨೦-೯)

ಧಾಮಾನಿ ಮಿತ್ರಾವರುಣಾ ಯುವಾಕುಃ ಸಂ ಯೋ ಯೂಥೇವ ಜನಿಮಾನಿ ಚಷ್ಟೇ ।

(ಋ. ಸಂ. ೭-೬೦-೩)

ಅವೋರ್ವಾಂ ನೂನಮಶ್ವಿನಾ ಯುವಾಕುರ್ಹುವೇ ಯದ್ವಾಂ ಸುತೇ ಮಾಧ್ವೀ ವಸೂಯುಃ ।

(ಋ. ಸಂ. ೭-೬೭-೪)

ಉತ ತ್ಯಂ ಭುಜ್ಯುಮಶ್ವಿನಾ ಸಖಾಯೋ ಮಧ್ಯೇ ಜುಹುರ್ದುರೀನಾಸಃ ಸಮುದ್ರೇ ।
ನಿರೀಂ ಪರ್ಷದರಾವಾ ಯೋ ಯುವಾಕುಃ ॥

(ಋ. ಸಂ. ೭-೬೮-೭)

ಈ ಋಕ್ಕುಗಳಲ್ಲಿರುವ ಯುವಾಕುಃ ಎಂಬ ಶಬ್ದಕ್ಕೆ ಭಾಷ್ಯಕಾರರು ಯುವಾಂ ಕಾಮಯಮಾನಃ. ನಿಮ್ಮನ್ನು ಅಪೇಕ್ಷಿಸುವ ಅಥವಾ ನಿಮಗೆ ಇಷ್ಟವಾದ ಎಂಬ ಅರ್ಥವನ್ನೇ ಹೇಳಿರುವರು. ಆದರೂ ಈ ಶಬ್ದಕ್ಕೆ ಯಾವುದೋ ಒಂದು ನಿರ್ದಿಷ್ಟವಾದ ಅರ್ಥವಿರಬೇಕೆಂದು ತೋರುತ್ತದೆ.

ಶಚೀನಾಂ—ಶ್ಲೋಕಃ ಧರಾ ಮೊದಲಾದ ಐವತ್ತೇಳು ವಾಙ್ನಾಮಗಳ ಮಧ್ಯದಲ್ಲಿ ಶಚೀಶಬ್ದವು ಪಠಿತವಾಗಿರುವುದರಿಂದ (ನಿ. ೨-೨೩) ಶಚೀಶಬ್ದಕ್ಕೆ ವಾಕ್ಯವು ಎಂದರ್ಥವು. ಮತ್ತು ಅಪಃ ಅಪ್ನಃ ಮೊದಲಾದ ಇಪ್ಪತ್ತಾರು ಕರ್ಮನಾಮಗಳಲ್ಲಿ ಶಚೀಶಬ್ದವು ಪಠಿತವಾಗಿರುವುದರಿಂದ (ನಿ. ೩-೨) ಶಚೀಶಬ್ದಕ್ಕೆ ಕರ್ಮವೆಂದೂ ಅರ್ಥವು. ಕೇತಃ ಕೇತು ಮೊದಲಾದ ಹನ್ನೊಂದು ಪ್ರಜ್ಞಾನಾಮಗಳ ಮಧ್ಯದಲ್ಲಿ ಶಚೀಶಬ್ದವು ಪಠಿತವಾಗಿರುವುದರಿಂದ (ನಿ. ೩-೧೩) ಶಚೀ ಶಬ್ದಕ್ಕೆ ಪ್ರಜ್ಞೆಯೆಂದೂ ಅರ್ಥವು. ಅದುದರಿಂದ ಶಚೀಶಬ್ದಕ್ಕೆ, ವಾಕ್ಯ, ಕರ್ಮ ಪ್ರಜ್ಞೆ ಎಂಬ ಮೂರು ವಿಧವಾದ ಅರ್ಥಗಳಿದ್ದರೂ ಇಲ್ಲಿ ಭಾಷ್ಯಕಾರರು ಕರ್ಮವೆಂಬ ಅರ್ಥಕ್ಕೇ ಪ್ರಾಧಾನ್ಯವನ್ನು ಕೊಟ್ಟಿರುವರು. ಯಾಸ್ಕರು ಸಹ—

ತ್ರೈಯಃ ಕೇಶಿನ ಋತುಥಾ ವಿಚಕ್ಷತೇ ಸಂವತ್ಸರೇ ವಪತ ಏಕ ಏಷಾಂ ।
ವಿಶ್ವಮೇಕೋ ಅಭಿ ಚಷ್ಟೇ ಶಚೀಭಿರ್ಧ್ರಾಜಿರೇಕಸ್ಯ ದದೃಶೇ ನ ರೂಪಂ ॥

(ಋ. ಸಂ. ೧-೧೬೪-೪೪)

ಎಂಬ ಋಕ್ಕಿಗೆ ವ್ಯಾಖ್ಯಾನಮಾಡುವಾಗ ವಿಶ್ವಮೇಕೋ ಅಭಿ ಚಷ್ಟೇ ಶಚೀಭಿಃ ಎಂದರೆ ಸರ್ವಮೇಕೋಽಭಿ-ವಿಪಶ್ಯತಿ ಕರ್ಮಭಿರಾದಿತ್ಯಃ ಎಂದು ಶಚೀ ಶಬ್ದಕ್ಕೆ ಕರ್ಮವೆಂಬ ಅರ್ಥವನ್ನೇ ಹೇಳಿರುವರು (ನಿ ೧೨-೨೭) ಪ್ರಸಕ್ತವಾದ ಋಕ್ಕಿಗೆ ಅರ್ಥಮಾಡುವಾಗ ಶಚೀಶಬ್ದದ ಮೂರು ಅರ್ಥಗಳಲ್ಲಿ ಯಾವುದನ್ನು ಬೇಕಾದರೂ ಹೇಳ ಬಹುದು.

ಸುಮತೀನಾಂ—ಶೋಭನಬುದ್ಧಿಯುಕ್ತಾನಾಮೃತ್ವಿಜಾಂ । ಒಳ್ಳೆಯ ಬುದ್ಧಿವಂತರಾದ ಋತ್ವಿಗ್ಜನರ, ಅಥವಾ ಬುದ್ಧಿವಂತರಾದ ಜನರ.

ವಾಜದಾನ್ನಾಂ—ವಾಜಂ ಅನ್ನಂ ದದತ್ಯೇತಿ ವಾಜದಾವಾನಃ ತೇಷಾಂ । ಅನ್ನವನ್ನು ಅಥವಾ ಹವಿಸ್ಸನ್ನು ಕೊಡುವವರಲ್ಲಿ (ಸಮರ್ಪಿಸುವವರಲ್ಲಿ) ಮುಖ್ಯರಾದವರು ಎಂದು ಮುಖ್ಯಶಬ್ದವನ್ನು ಅರ್ಥವನ್ನು ಹೊಂದಿಸುವುದಕ್ಕಾಗಿ ಭಾಷ್ಯಕಾರರು ಅಧ್ಯಾಹಾರ ಮಾಡಿರುವರು. ಒಟ್ಟಿನಲ್ಲಿ ಈ ಋಕ್ಕಿನ ಅರ್ಥವು ವಿಶೇಷ ತೊಡಕಿಲ್ಲದೆಂದ ಕೂಡಿರುವುದು. ಅರ್ಥವು ಸ್ಪಷ್ಟವಾಗಿಲ್ಲ.

॥ ವ್ಯಾಕರಣಪ್ರಕ್ರಿಯಾ ॥

ಯುವಾಕು—ಯು ಮಿಶ್ರಣೇ, ಧಾತು. ಕಟಿಕುಷಿಭ್ಯಾಂಕಾಕುಃ (ಉ. ಸಾ. ೩-೩೫೭) ಕಟೆ ವರ್ಷಾ ವರಣಯೋಃ, ಕುಷ ನಿಷ್ಕರ್ಷೇ, ಈ ಧಾತುಗಳ ಮುಂದೆ ಕಾಕು ಪ್ರತ್ಯಯ ಬರುವುದು ಎಂದು ಈ ಸೂತ್ರಕ್ಕೆ ಅರ್ಥ. ಕೆಲವರು ಕರಿ ಕುಷಿಭ್ಯಾಂಕಾಕುಃ ಎಂದು ಈ ಸೂತ್ರವನ್ನು ಪಠಿಸುವರು. ಅವರ ಮತದಲ್ಲಿ ಕಶ ಕೃಚ್ಛ್ರ-ಜೀವನೇ ಎಂಬ ಧಾತುವನ್ನು ಗ್ರಹಿಸಬೇಕು ಇಲ್ಲಿ ಉಜ್ವಲದತ್ತರು ಕಟಿಕಷಿಭ್ಯಾಂ ಎಂದು ವಾಶವನ್ನು ಇಟ್ಟು ಕೊಂಡು ಕಶ ಶಿಷ ಎಂಬ ದಂಡಪಠಿತವಾದ ಧಾತುವಿಗೆ ಗ್ರಹಣವೆನ್ನುವರು. ಕಷಾಕುಃ ಎಂದು ಉದಾಹರಣೆಯನ್ನೂ ತೋರುವರು. ಕುಷಾಕುಃ ಕಪಿವಹ್ನ್ಯರ್ಕೇ ಎಂಬ ಮೇದಿನೀಕೋಶಕ್ಕೆ ವಿರುದ್ಧವಾಗಿರುವುದು. ಇದಿಂತಿರಲಿ. ಇಲ್ಲಿ ಬಹುಲಗ್ರಹಣದಿಂದ ಯು ಧಾತುವಿನ ಮುಂದೆಯೂ ಕಾಕು ಪ್ರತ್ಯಯ ಬರುವುದು. ಪ್ರತ್ಯಯದಲ್ಲಿ ಕಕಾರವು ಇತ್ ಆದ್ದರಿಂದ ಗುಣಬರುವುದಿಲ್ಲ. ಯು+ಆಕು **ಆಚಿಶ್ನುಧಾತು.** (ಪಾ. ಸೂ. ೬-೪-೭೭) ಎಂಬುದರಿಂದ ಉವ-ಙಾದೇಶ, ಯುವಾಕು. **ಆದ್ಯುದಾತ್ತೌಶ್ಚ** (ಪಾ. ಸೂ. ೩-೧-೩) ಎಂಬುದರಿಂದ ಪ್ರತ್ಯಯದ ಆದಿಯಲ್ಲಿರುವ ಆಕಾರವು ಉದಾತ್ತವಾಗುವುದು. ಏವಂಚ ಯುವಾಕು ಎಂಬುದು ಮಧ್ಯೋದಾತ್ತ.

ಶಚೀನಾಮ್—ಶಚೀಶಬ್ದಃ ಕೇಷಾಂಚಿನ್ಮತೇ ಶಾರ್ಙ್ಗರವಾದಿಃ ಙೀನನ್ತಃ ನಿತ್ಯಾದಾದ್ಯುದಾತ್ತಃ ಇತಿ **ಉಭೇವನಸ್ಪತ್ಯಾದಿಷುಯುಗಪತ್** (ಪಾ. ಸೂ. ೬-೩.೧೪೦) ಇತ್ಯತೋ ವೃತ್ತಿಕೃತೋಕ್ತಮ್. ಶಚಿಶಬ್ದವನ್ನು ಕೆಲವರು ಶಾರ್ಙ್ಗರವಾದಿಗಣಪಠಿತವಾದ ಶಬ್ದಗಳ ಮುಂದೆ ಙೀನ್ ಪ್ರತ್ಯಯ ಬರುವುದು ಎಂಬುದರಿಂದ ಙೀನ್ ಬರುತ್ತೆ. ಪ್ರತ್ಯಯವು ಙ್ನಿತ್ತು. ಆದ್ದರಿಂದ ಶಚೀ ಎಂಬ ಪ್ರತ್ಯಯಾಂತವು **ಙ್ನಿತ್ಯಾದಿರ್ನಿತ್ಯಮ್** (ಪಾ. ಸೂ.೬-೧-೧೯೭) ಎಂಬುದರಿಂದ ಆದ್ಯುದಾತ್ತ ಎಂದು ಕಾಶಿಕಾ ವೃತ್ತಿಕಾರರು ಉಭೇವನಸ್ಪತ್ಯಾದಿಷು ಯುಗಪತ್ ಎಂಬ ಸೂತ್ರವಲ್ಲಿ ಹೇಳಿರುವರು. ಆದ್ದರಿಂದ ಶಚೀಶಬ್ದ ಆದ್ಯುದಾತ್ತ-

ಸುಮತೀನಾಮ್—ವಿದ್ಯಾಮ ಸುಮತೀನಾಮ್ (ಋ. ಸಂ. ೧-೪-೩) ಎಂಬಲ್ಲಿ ಇದು ವಿವರಿಸಲಾಗಿ ರುವುದು.

ಭೂಯೋಮ—ಭೂ ಸತ್ತಾಯಾಮ್ ಧಾತು ಇದರ ಮುಂದೆ ಪ್ರಾರ್ಥನೆ ಎಂಬ ಅರ್ಥದಲ್ಲಿ **ಲಿಙ್** ಉತ್ತಮಪುರುಷಬಹುವಚನ ಮಸ್ ಭೂ+ಮಸ್ **ನಿತ್ಯೇಙಿತಃ** (ಪಾ. ಸೂ ೩-೪-೯೯) ಎಂಬುದರಿಂದ ಸಕಾರಕ್ಕೆ ಲೋಪ. **ಯಾಸುಟ್ ಪರಸ್ಮೈಪದೇಷೂದಾತ್ತೋ ಙಿಚ್ಚ** (ಪಾ. ಸೂ. ೩-೪-೧೦೩) ಎಂಬುದರಿಂದ ಲಿಙ್‌ಗೆ ಯಾಸುಟ್ ಆಗಮ. ಅದು ಟಿತ್ತಾದ್ದರಿಂದ **ಆದ್ಯುನ್ತೋಟಿಕಿತೌ** (ಪಾ. ಸೂ. ೧-೧-೪೬) ಎಂಬುದರಿಂದ ಆದ್ಯವಯವವಾಗಿ ಬರುವುದು. ಭೂ+ಯಾಸ್+ಮ ಲಿಬಸ್ಸೋಪೋ೭ನನ್ತ್ಯಸ್ಯ (ಪಾ. ಸೂ. ೭-೨-೭೯) ಸಾರ್ವಧಾತುಕಸಂಜ್ಞಕವಾದ ಲಿಙ್ ಸಂಬಂಧಿಯಾದ ಕೊನೆಯಲ್ಲಿಲ್ಲದ ಸಕಾರಕ್ಕೆ ಲೋಪ ಬರುವುದು ಎಂಬುದರಿಂದ ಸಕಾರಕ್ಕೆ ಲೋಪ ಭೂ+ಯಾಮ ಕರ್ತರಿಶಪ್ ಎಂಬುದರಿಂದ ಬಂದ ವಿಕರಣ ಶಪ್‌ಗೆ ಬಹುಲಂಛಂದಸಿ ಎಂಬುದರಿಂದ ಲುಕ್. ಯಾಸುಟ್ ಆಗಮಕ್ಕೆ ವಿಹಿತವಾದ ಉದಾತ್ತವು ಸಶಿಶ್ವಸ್ತರಬಲೀಯೆ. **ಸ್ತ್ವಂಚೆ** (ಪಾ. ಮ. ೬-೧-೧೫೮) ಎಂಬುದರಿಂದ ಅದು ಪ್ರಬಲವಾದ ಕಾರಣ ಅದೇ ನಿಲ್ಲುವುದು.

ವಾಜದಾವ್ನಾಮ್—ವಾಜಂ ದದತಿ ಇತಿ ವಾಜದಾವಾನಃ. ವಾಜ ಎಂಬ ಕರ್ಮವಾಚಕವು ಉಪಪದವಾಗಿರುವಾಗ ದಾಞ್ ಧಾತುವಿನ ಮುಂದೆ **ಆತೋ೭ನಿನ್ ಕ್ವನಿಬ್ವನಿಪಶ್ಚ**(ಪಾ.ಸೂ.೩-೨-೭೪)ಆಕಾರಾಂತವಾದ ಧಾತುವಿನ ಮುಂದೆ ಛಂದಸ್ಸಿನಲ್ಲಿ ಮನಿನ್, ಕ್ವನಿಪ್, ವನಿಪ್ ಪ್ರತ್ಯಯಗಳು ಸುಬಂತ ಉಪಪದವಾಗಿರುವಾಗಲೂ ಉಪಸರ್ಗ ಉಪಪದವಾಗಿರುವಾಗಲೂ ಬರುವುವು ಎಂಬುದರಿಂದ ವನಿಪ್ ಬರುವುದು. ವಾಜ+ಅಮ್+ದಾ ವನ್ ಇದು ಕೃದಂತ, **ಕೃತ್ತದ್ಧಿತ ಸಮಾಸಾಶ್ಚ**, ಎಂದು ಪ್ರಾತಿಪದಿಕ ಸಂಜ್ಞೆ ಸುಪೋಧಾತು ಪ್ರಾತಿಪದಿಕಯೋಃ ಎಂಬುದರಿಂದ ಅಮ್‌ಗೆ ಲುಕ್. ವನಿಪ್ಪು ಪಿತ್ತಾದ್ದರಿಂದ **ಅನುದಾತ್ತೌಸುಪ್ಪಿತೌ** ಎಂಬುದರಿಂದ ಅನುದಾತ್ತ. ದಾ+ಎಂಬುದು ಧಾತು ಸ್ವರದಿಂದ ಉದಾತ್ತ. ವಾಜಂ ಎಂಬುದು ದಾವನ್ ಎಂಬ ಕೃದಂತದೊಂದಿಗೆ **ಉಪಪದಮತಿಙ್** (ಪಾ. ಸೂ. ೨-೨-೧೯) ಎಂಬುದರಿಂದ ಸಮಾಸವನ್ನು ಹೊಂದಿದ ಮೇಲೆ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬಂದು ಅದೇ ಸ್ವರ ನಿಲ್ಲುವುದು. ಇದರ ಮುಂದೆ ಷಷ್ಠೀ ಬಹುವಚನ ಆಮ್ ಪ್ರತ್ಯಯ ವಾಜದಾವನ್+ಆಮ್. ಈ ಪ್ರತ್ಯಯದ **ಪೂರ್ವಭಾಗಕ್ಕೆ ಯೆಚಿಭಮ್** (ಪಾ. ಸೂ. ೧-೪-೧೮) ಎಂಬುದರಿಂದ ಭ ಸಂಜ್ಞೆ ಇದೆ. **ಆಲ್ಲೋಪೋ೭ನಃ** (ಪಾ. ಸೂ. ೬-೪-೧೩೪) ಸರ್ವನಾಮಸ್ಥಾನಸಂಜ್ಞೆಯನ್ನು ಹೊಂದದ ಯಾದ್ಯಜಾದಿಸ್ಥಾವಿಪ್ರತ್ಯಯಾವ್ಯವಹಿತಪೂರ್ವವರ್ತಿಯೂ, ಅಂಗಾವಯವವೂ ಆದ ಯಾವ ಅನ್ ಇದೆಯೋ ಆದರ ಹ್ರಸ್ವಾಕಾರಕ್ಕೆ ಲೋಪ ಬರುವುದು ಎಂಬುದರಿಂದ ವಾಜದಾವನ್ ಎಂಬಲ್ಲಿ ಕೊನೆಯಲ್ಲಿರುವ ಅನ್ ನ ಅಕಾರಕ್ಕೆ ಲೋಪ. ವಾಜದಾವ್+ನ್+ಆಮ್, ಈಗ ನ್ ಎಂಬ ವಲ್ ಪರದಲ್ಲಿರುವುದರಿಂದ ವಕಾರಕ್ಕೆ **ಲೋಪೋವ್ಯೋರ್ವಲಿ** (ಪಾ. ಸೂ. ೬-೧-೬೬) ಎಂಬುದರಿಂದ ವಕಾರಕ್ಕೆ ಲೋಪವು ಯದ್ಯಪಿ ಪ್ರಾಪ್ತವಾಗುವುದು. ಆದರೂ ಇಲ್ಲಿ ಬಂದಿರುವ ಅಕಾರಲೋಪಕ್ಕೆ **ಆಚಃಪರಸ್ಮಿನ್ಪೂರ್ವವಿಧೌ** (ಪಾ. ಸೂ. ೧-೧-೫೭) ಎಂಬುದರಿಂದ ಸ್ಥಾನಿವದ್ಭಾವ ಬರುವುದು. ಹೇಗೆಂದರೆ ಸ್ಥಾನಿಭೂತವಾದ ಅಚ್ಚಿಗಿಂತಲೂ ಪೂರ್ವದಲ್ಲಿ ದೃಷ್ಟವಾದುದಕ್ಕೆ ಕಾರ್ಯವನ್ನು ಮಾಡುವಾಗ ಪರನಿಮಿತ್ತಕವೂ ಆಚ್ಚಿನ ಸ್ಥಾನದಲ್ಲಿ ಬಂದುದೂ ಆದ ಆದೇಶವು ಸ್ಥಾನಿವದ್ಭಾವವನ್ನು ಹೊಂದುವುದು ಎಂದು ಈ ಸೂತ್ರಕ್ಕೆ ಅರ್ಥ. ಇಲ್ಲಿ ಸ್ಥಾನಿಯು ಅಕಾರ, ಅದರ ಹಿಂದೆ ದೃಷ್ಟವಾದುದು ವಕಾರ, ಅದಕ್ಕೆ ಲೋಪ ಕಾರ್ಯವನ್ನು ಮಾಡುವಾಗ, ಅ ಎಂಬ ಅಚ್‌ನ ಸ್ಥಾನದಲ್ಲಿ ಬಂದುದೂ, ಆಮ್ ಎಂಬ ಪರವನ್ನು ನಿಮಿತ್ತ ಮಾಡಿಕೊಂಡು ಬಂದುದೂ ಆದ ಲೋಪಕ್ಕೆ ಸ್ಥಾನಿವದ್ಭಾವ ಬರುವುದು. ಅಂದರೆ ಸ್ಥಾನಿ ಇದ್ದಂತೆ ಆಗುವುದು. ಏವಂಚ ಅಕಾರದಿಂದ ವ್ಯವಧಾನ ಬರುವಕಾರಣ **ಲೋಪೋವ್ಯೋರ್ವಲಿ** ಎಂಬುದರಿಂದ ವಕಾರಕ್ಕೆ ಲೋಪ ಬರುವುದಿಲ್ಲ. ವಾಜದಾವ್ನಾಮ್ ಎಂದಾಗುವುದು ॥ ೪ ॥

॥ संहितापाठः ॥

इन्द्रः सहस्रदावान्ां वरुणः शंस्यानाम् ।
क्रतुर्भवत्युक्थ्यः ॥ ४४ ॥

॥ पदपाठः ॥

इन्द्रः । सहस्रऽदावान्ां । वरुणः । शंस्यानाम् ॥
क्रतुः । भवति । उक्थ्यः ॥ ४४ ॥

॥ सायणभाष्यं ॥

अयमिन्द्रः सहस्रदावान्ां सहस्रसंख्याकधनप्रदानाम् मध्ये क्रतुर्धनदानस्य कर्ता भवति । प्रभूतं ददातीत्यर्थः । तथा वरुणः शंस्यानाम् स्तुत्यानाम् मध्य उक्थ्यः स्तुत्यो भवति । अतिशयेन स्तुत्य इत्यर्थः ॥ वरुणः उनन्वित्यादयो निघण्टौ दा । द्युदात्तः । शंस्यानाम् । शंसु स्तुतौ । ऋहलोर्ण्यत् । तिस्रश्चरित मिति प्राप्ते ईडवन्दवृशंसदुहाम् ण्यत इत्याद्युदात्तः । क्रतुः । कृञः कतुः । उ. १-८९ । इति कतुः । कित्त्वाद्गुणाभावे यणादेशः । प्रत्ययस्वरेणाद्युदात्तः । उक्थ्यः । उक्थ्यं शस्त्रं । तेन स्तुत्यत्वेन तत्र भव उक्थ्यः । भवे छंदसि । पा. ४-४-११० । इति यत् । यस्येति लोपः । अत्र तित्स्वरितमित्येतदप्यधिकृत्य तीर्थ्ययो कूप्याय्येत्यादिवत् द्व्यचष्टप्वाद्यतोऽनाव इति प्राप्तमाद्युदात्तत्वं सर्वत्र विधयेश्छंदसि विकल्पयंत इति न क्रियते । ननु यस्येति लोपात्प्रागेव तित्स्वरितत्वमस्तु न हि तदा यतोऽनाव इत्येतदस्ति द्व्यचष्टप्वाभावात् । अत एव ह्यूर्म्यायै च सूर्म्यायै चेत्यादौ स्वरितत्वं दृश्यते । न च परत्वान्नित्यत्वाच्च यस्येति लोपेन प्रथमतो भाव्यमिति वाच्यं । प्रकृतिप्रत्यययोश्चरयोर्वहिरंगाद्यस्येति लोपस्यान्तरंगत्वेन तित्स्वरितमित्येतस्य प्राबल्यात् । अत ऊर्म्यायै इत्यादिवदुक्थ्य इत्यत्रापि लक्षणत एव स्वरितत्वं भविष्यतीति किं छांदसेन । यत्र हि लोपमंतरेणैव द्व्यचष्टप्वं तत्र यतोऽनाव इत्येतद्भवति । यथा चेयं यीयेयमिति । लोपसनिबंधनद्व्यचष्टप्वप्रदेशेषु तु स्वरितेनैव भवितव्यमिति । एवं कर्हि तीर्थ्ययो कूप्याय्येत्यादौ यदाद्युदात्तत्वं तदेव छांदसमस्तु अथात्र तु पर्णादाकंगं बलीयः । परि. ३३ । इत्यंतरंगत्वेऽपि स्वरितत्वं बाधित्वा लोप एव भविष्यति । तर्ह्यूक्थ्य ऊर्म्यायै सूर्म्यायेत्यादौ च छांदसमस्तु । सर्वथैकत्र छांदसान्न मुच्यते ॥ ४३ ॥

॥ ಪ್ರತಿಪದಾರ್ಥ ॥

(ಅಯಂ) ಇಂದ್ರಃ—(ಈ ಮೇಲೆ ಹೇಳಿದ ಹವಿರಾದಿಗಳನ್ನು ಸ್ವೀಕರಿಸಿ ನಮಗೆ ಶ್ರೇಯಸ್ಸನ್ನುಂಟು ಮಾಡುವ) ಇಂದ್ರನು । ಸಹಸ್ರದಾವ್ನಾಂ—ಸಾವಿರಗಟ್ಟಲೆ (ಧನವನ್ನು) ಕೊಡುವವರಲ್ಲಿ । ಕೃತುಃ—(ಧನ ದಾನದ) ಕರ್ತೃವು । ಭವತಿ—ಆಗುತ್ತಾನೆ । ವರುಣಃ—ವರುಣನು । ಶಂಸ್ಯಾನಾಂ—ಸ್ತುತಿಸಲ್ಪಡುವವರಲ್ಲಿ । ಉಕ್ಥ್ಯಃ—(ವಿಶೇಷವಾಗಿ) ಸ್ತುತ್ಯನು । ಭವತಿ—ಆಗುತ್ತಾನೆ.

॥ ಭಾವಾರ್ಥ ॥

ಇಂದ್ರನು ಹಿಂದೆ ವರ್ಣಿತವಾದಂತೆ ತೃಪ್ತನಾಗಿ ನಮಗೆ ಬೇಕಾದಷ್ಟು ಧನವನ್ನು ಕೊಡುತ್ತಾನೆ. ಅದೇ ರೀತಿ ವರುಣನೂ ನಮ್ಮಿಂದ ವಿಶೇಷವಾಗಿ ಸ್ತುತಿಸಲ್ಪಡುವವನಾಗಿರುವನು.

English Translation

Indra is a giver among the givers of thousands; Varuna is to be praised among those who deserve to be praised.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಮೇಲೆ ಹೇಳಿದ ಅರ್ಥವನ್ನು ಸ್ವಲ್ಪ ವ್ಯತ್ಯಾಸ ಮಾಡಿದಲ್ಲಿ ಅಭಿಪ್ರಾಯವು ಚೆನ್ನಾಗಿ ಹೊಂದುವುದು.

ಸಾವಿರಗಟ್ಟಲೆ ಧನಾದಿಗಳನ್ನು ಕೊಡುವವರಲ್ಲಿ ಇಂದ್ರನೂ, ಬಹಳವಾಗಿ ಸ್ತುತಿಸಲ್ಪಡುವವರಲ್ಲಿ ವರುಣನೂ ಹೆಸರಾದವರು. ಇವರ ಕಾರ್ಯವು ಸ್ಮರ್ತವ್ಯವಾದುದು ಎಂದು.

ಕೃತುಃ—ಆಪಃ ಅಪ್ನಃ—ಮೊದಲಾದ ಇಪ್ಪತ್ತಾರು ಕರ್ಮನಾಮಗಳ ಮಧ್ಯದಲ್ಲಿ ಕೃತುಶಬ್ದವು ಪಠಿತವಾಗಿರುವುದರಿಂದ (ನಿ. ೩-೨) ಕ್ರತುವೆಂದರೆ ಕರ್ಮವು. ಇಲ್ಲಿ ಇಂದ್ರ ಮತ್ತು ವರುಣ ಇವರು ಮಾಡುವ ಸಾಹಸಕರ್ಮವು ಅಥವಾ ಜನರಿಗೆ ಧನಾದಿಗಳನ್ನು ಕೊಡುವ ಕರ್ಮವು.

ಉಕ್ಥ್ಯಃ—ಉಕ್ಥಂ ಶಸ್ತ್ರಂ । ತೇನ ಸ್ತುತ್ಯಶ್ಚೇನ ತೇತ್ರೇ ಭವ ಉಕ್ಥ್ಯಃ । ಉಕ್ಥವೆಂದರೆ ಶಸ್ತ್ರ ಮಂತ್ರವು. ಆ ಮಂತ್ರವನ್ನು ಪಠಿಸಿ ಸೋತ್ರವಾಡುವುದಕ್ಕೆ ಉಕ್ಥ್ಯವೆಂದು ಅರ್ಥವು. ಇಲ್ಲಿ ಇಂದ್ರಾವರುಣರು ಧನಾದಿಗಳನ್ನು ಕೊಡುವ ಕಾರ್ಯವು ಪ್ರಶಂಸನೀಯವು ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ವರುಣಃ—ಕ್ವಾವೃದಾರಿಭ್ಯ ಉನನ್ (ಉ. ಸೂ. ೩-೩೩) ಎಂಬುದರಿಂದ ವೃ, ಧಾತುವಿನ ಮುಂದೆ ಉನನ್ ಪ್ರತ್ಯಯ ಬಂದು ನಿಷ್ಪನ್ನವಾಗಿದೆ. ನಿತ್ಸ್ವರದಿಂದ ಆದ್ಯುದಾತ್ತ.

शंस्यानाम्—शंसु स्तुतौ धातु. ऋहलोर्ण्यत् (पा.सू. ३-८-८३४) ऐंबुदरिंद ण्यत् बरुवुदु. तित्स्वरितम् (पा सू.६-८-८४४) ऐंबुदरिंद स्वरितवु प्राप्तवादरी इदक्कॆ अपवाद ईडवन्द्वे व्यशंसदिहान्यॆतः (पा.सू. ६-८-८३४) ऐंबुदरिंद ण्यत् प्रत्ययान्त वाद शंस्य ऐंबुदु आद्युदात्त.

कृतुः—कृञः कतुः (उ. सू. ८-२२) ॠकृञ् करणे, ऐंबुदरॆ मुंदॆ कतु प्रत्ययु बरुवुदु, ऐंबुदरिंद कृ, धातुविन मुंदॆ कतु प्रत्ययु, लशक्वतद्धिते, ऐंबुदरिंद प्रत्ययद आदियल्लिरुव ककारक्कॆ इत्संज्ञॆ, लोप, प्रत्ययवु कित्तादुद्दरिंद गुण बरुवुदिल्ल. इकोयॆणचि (पा. सू. ६-८-२२) ऐंबुदरिंद यणादेश, अंदरॆ ॠगॆ रेफ. क्रतु ऐंदागुवुदु. इदु प्रत्ययस्वरदिंद अंतोदात्त.

ऊक्थ्यः—ऊक्थ अंदरॆ शस्त्र, अस्त्रगीतमुन्नस्साह्यगुणॆनिस्तगुणाभिधानं शस्त्रं ऐंदु शस्त्रक्कॆ लक्षणवन्नु याज्ञिकरु हेळुवरु. वरुणनु ई शस्त्रदिंद स्तुतिसल्पडुत्तानॆ, ऐवंचि ऊक्थॆ भवः ऐंदु विग्रहवन्नु माडिदरॆ, भवॆत्थंदसि (पा. सू. ४-४-८८८) सप्तम्यंतद मुंदॆ भवार्थदल्लि यत् प्रत्ययु बरुवुदु ऐंबुदरिंद यत्, प्रातिपदिकावयवावाद सप्तम्यॆकवचनप्रत्ययक्कॆ लुक्, ऊक्थ+य यॆस्यॆतिचॆ (पा. सू. ६-४-८४४) ईकार अथवा तद्धित परदल्लिरुवाग भ संज्ञकाकारावयववाद इकार अकारगळिगॆ लोप बरुवुदु ऐंबुदरिंद यत् ऐंब तद्धित परवागिरुवाग अकारक्कॆ लोप, ऊक्थ्य, ऐंदागुवुदु. यत् प्रत्ययवु तकारेत्संज्ञक, आद्दरिंद तित्स्वरितम् (पा. सू. ६-८-८४४) तकारेत्संज्ञक प्रत्ययद कॊनॆय वर्णवु स्वरितवागुवुदु ऐंबुदरिंद स्वरितस्वर बरुवुदु. यद्यपि इल्लि ऊक्थ्य ऐंब यत्प्रत्ययांतवु द्व्यच्क ऐंदरॆ ऐरडु स्वर (अच्) गळन्नु हॊंदिरुवुदु- आद्दरिंद तीर्थ्याय ऐंबल्लिय तीर्थ्य, कूप्याय ऐंबल्लिय कूप्य इवुगळल्लि तित्स्वरितम् ऐंबुदक्कॆ अपवादवाद यॆतोऽनावः (पा.सू, ६-८-४८३) नॊशब्द भिन्नवाद शब्दद मुंदॆ विहितवाद यावन यत् प्रत्ययविदॆयो अदन्नु कॊनॆयल्लि हॊंदिरुव द्व्यच्क शब्दद आदियु उदात्तवागुवुदु ऐंबुदरिंद आद्युदात्तवु बंदिरुवंतॆ इल्लियू यॆतोऽनावः ऐंबुदरिंद आद्युदात्तवु प्राप्तवागुवुदु. आदरू सर्वॆविधयॆश्छंदसिविकल्प्यन्तॆ (परिभा, ८८) छंदस्सिनल्लि ऎल्ला विधिगळिगू विकल्पविरुवुदु ऐंबुदरिंद यतोऽनावः ऐंबुदू विकल्पवागुवुदरिंद इल्लि बरुवुदिल्ल.

आदरॆ ऊक्थ+य ऐंदिरुवाग यॆस्यॆतिचॆ ऐंबुदरिंद अकारक्कॆ लोप बरुवुदक्किंतलू मॊदलॆ तित्स्वरितम् ऐंब स्वरितवु बरलि. ईग इल्लि मूरु स्वरगळु (अच्) इरुवुदरिंद अपवादवाद यॆतोऽनावः ऐंबुदक्कॆ प्राप्तियॆ इल्ल. आदरॆ तित्स्वरितम् ऐंबुदक्किंतलू यस्यॆतिच ऐंबुदु अष्टाध्यायियल्लि परदल्लि पठितवागिरुवुदु. आद्दरिंद विस्पष्टार्थॆ-परंकार्यम् (पा. सू. ८-४-४) ऐंबुदरिंद परवाद यस्यॆति लोपवॆ मॊदलु बरबॆकागुवुदु. अल्लदॆ यस्यॆतिच, ऐंबुदु नित्य ऐंदरॆ कृताकृतप्रसंगि, तित्स्वरितम् ऐंबु

ಶಾಸ್ತ್ರವು ಪ್ರವರ್ತಿಸಿದರೂ ಪ್ರವರ್ತಿಸದೇ ಇದ್ದರೂ ಬರುವುದು. ತಿತ್ಸ್ವರಿತಮ್ ಎಂಬುದು ಯಸ್ಯೇತಿಚ ಲೋಪ ಬರದೇ ಇದ್ದರೆ ಬರುವುದು. ಲೋಪ ಬಂದರೆ ಬಾಧಕವಾದ ಯತೋನಾವಃ ಎಂಬುದರಿಂದ ಬಾಧಿತವಾಗುವುದರಿಂದ ಬರುವುದಿಲ್ಲ. ಆದ್ದರಿಂದ ಕೃತಾಕೃತ ಪ್ರಸಂಗಿಯಾಗುವುದಿಲ್ಲ. ಯಸ್ಯ ಚ ಲಕ್ಷಣಾಂತರೇಣ ನಿಮಿತ್ತಂ ವಿಹನ್ಯತೇ ತದಪ್ಯನಿತ್ಯಮ್ (ಎಂಬ ಪರಿಭಾಷಾನುಸಾರ ಇಲ್ಲಿ ಅನಿತ್ಯತ್ವವು ಉಪಪಾದಿತವಾಗಿದೆ.) ಆದ ಕಾರಣ ನಿತ್ಯವಾಗುವುದಿಲ್ಲ. ಹೀಗೆ ನಿತ್ಯವಾದ್ದರಿಂದಲೂ ಪರವಾದ್ದರಿಂದಲೂ ಯಸ್ಯೇತಿಚ ಎಂಬುದು ಪ್ರಬಲ. ಆದ್ದರಿಂದ ಮೊದಲು ಯಸ್ಯೇತಿಚ ಎಂಬುದರಿಂದ ಲೋಪ ಬರಬೇಕೇ ಹೊರತು ತಿತ್ಸ್ವರಿತಮ್ ಎಂಬುದು ಬರಲು ಅವಕಾಶವಿಲ್ಲ ಎನ್ನಬಹುದು. ಆದರೂ ತಿತ್ಸ್ವರಿತಮ್ ಎಂಬುದು ಪ್ರತ್ಯಯಮಾತ್ರವನ್ನು ಅಪೇಕ್ಷಿಸಿ ಬರುವುದರಿಂದ ಅಲ್ಪಾಪೇಕ್ಷವಾದ್ದರಿಂದ ಅಥವಾ ಪರನಿಮಿತ್ತಕವಲ್ಲದುದರಿಂದ ಅಂತರಂಗ, ಯಸ್ಯೇತಿಚ ಎಂಬುದು ಪ್ರಕೃತಿ ಪ್ರತ್ಯಯಗಳೆರಡನ್ನೂ ಆಶ್ರಯಿಸಿಕೊಂಡು ಬರುವುದು. ಏವಂಚ ಬಹ್ವಪೇಕ್ಷವಾಗುವುದರಿಂದ ಅಥವಾ ಪರನಿಮಿತ್ತಕವಾದ್ದರಿಂದ ಬಹಿರಂಗ. ಪರನಿತ್ಯಾನ್ತರಙ್ಗಾಪವಾದಾನಾಮುತ್ತರೋತ್ತರಂ ಬಲೀಯಃ (ಪರಿಭಾ. ೩೪)ಎಂಬುದರಿಂದ ಪರ, ನಿತ್ಯ ಇವುಗಳೆರಡಕ್ಕಿಂತಲೂ ಅಂತರಂಗಶಾಸ್ತ್ರವು ಪ್ರಬಲ. ಆದ್ದರಿಂದ ಅಸಿದ್ಧಂ ಬಹಿರಙ್ಗಮನ್ತರಙ್ಗೇ (ಪರಿಭಾ. ೫೦) ಎಂಬುದರಿಂದ ಅಂತರಙ್ಗವಾದ ತಿತ್ಸ್ವರಿತಮ್ ಎಂಬುದನ್ನು ಮಾಡುವಾಗ ಬಹಿರಂಗವಾದ ಯಸ್ಯೇತಿಚ ಎಂಬುದು ಅಸಿದ್ಧವಾಗುವುದು. ಏವಂಚ ಯಸ್ಯೇತಿಚ ಬರುವುದಕ್ಕಿಂತಲೂ ಮೊದಲೇ ತಿತ್ಸ್ವರಿತಮ್ ಎಂಬುದು ಬರುವುದು. ಆದ್ದರಿಂದಲೇ ಊರ್ಮ್ಯಾಯಚ ಸೂರ್ಮ್ಯಾಯಚ ಇತ್ಯಾದಿ ಸ್ಥಳಗಳಲ್ಲಿ ಸ್ವರಿತವೇ ಇರುವುದು. ಇದರಂತೆಯೇ ಉಕ್ಥ್ಯ ಎಂಬಲ್ಲಿ ಪಾಣಿನಿಸೂತ್ರದಿಂದಲೇ ಸ್ವರಿತವು ಸಿದ್ಧವಾಗುವುದು. ಹೀಗಿರುವಾಗ ಏತಕ್ಕಾಗಿ ಸರ್ವೇವಿಧಯಶ್ಛಂದಸಿ ಎಂಬ ಪರಿಭಾಷೆಯನ್ನು ಆಶ್ರಯಿಸಿ, ಉಕ್ಥ್ಯ ಎಂಬಲ್ಲಿ ಸ್ವರಿತವನ್ನು ಸಾಧಿಸಬೇಕು? ಎಂದರೆ ಎಲ್ಲಿ ಯಸ್ಯೇತಿಚ ಲೋಪ ಬರದೇ ಎರಡು ಸ್ವರದಿಂದ ಕೂಡಿದ ಯತ್ಪ್ರಯಾಂತವಿದೆಯೋ ಅಂತಹ ಜೇಯಂ, ಜೇಯಂ ಇತ್ಯಾದಿ ಸ್ಥಳಗಳಲ್ಲಿ ಯತೋನಾವಃ ಎಂಬ ಸೂತ್ರವು ಸಾವಕಾಶವಾಗುವುದು. ಲೋಪ ಬಂದನಂತರ ಎರಡು ಸ್ವರ ಸಿಗುವ (ಪ್ರದೇಶ) ಲಕ್ಷ್ಯಗಳಲ್ಲಿ ಸ್ವರಿತವೇ ಯುಕ್ತವು ಎಂದು ಹೇಳಬಹುದು. ಹೀಗೆ ಇಲ್ಲಿ ಸ್ವರಿತವನ್ನು ನ್ಯಾಯವಾದ ರೀತಿಯಲ್ಲಿ ಉಪಪಾದಿಸಿದರೆ ತೀರ್ಥ್ಯಾಯ, ಕೂಪ್ಯಾಯ, ಎಂಬಲ್ಲಿಯೂ ಲೋಪಾನಂತರ ಎರಡು ಸ್ವರಗಳಿರುವುದರಿಂದ ಸ್ವರಿತ ಬರಬೇಕಾಗುವುದು. ಆದ್ದರಿಂದ ಇಲ್ಲಿ ಛಾಂದಸವಾಗಿ ಆದ್ಯುದಾತ್ತ ಬರುವುದು ಎಂದು ಹೇಳಿಕೊಳ್ಳಬೇಕಾಗುವುದು. ಇದಕ್ಕಾಗಿ ಇಲ್ಲಿ ವಾರ್ಣಾದಾಙ್ಗಂ ಬಲೀಯಃ (ಪರಿಭಾ. ೫೫) ವರ್ಣನಿಮಿತ್ತಕವಾದ ಶಾಸ್ತ್ರಕ್ಕಿಂತಲೂ ಅಙ್ಗಾಧಿಕಾರದಲ್ಲಿರುವ ಶಾಸ್ತ್ರವು ಬಲವಾದುದು. ಏವಂಚ ಯಸ್ಯೇತಿಚ ಎಂಬುದು ಅಂಗಾಧಿಕಾರದಲ್ಲಿರುವುದರಿಂದ, ತಿತ್ಸ್ವರಿತಮ್ ಎಂಬುದಕ್ಕಿಂತಲೂ ಬಲವಾಗಿರುವುದು. ಆದ್ದರಿಂದ ಮೊದಲು ಯಸ್ಯೇತಿಚ ಎಂಬುದರಿಂದ ಆಕಾರಲೋಪ, ನಂತರ ತಿತ್ಸ್ವರಿತಮ್ ಎಂಬುದಕ್ಕೆ ಅಪವಾದವಾದ ಯತೋ೭ನಾವಃ ಎಂಬುದರಿಂದ ಆದ್ಯುತ್ತಾತ್ತವು ಸಿದ್ಧಿಸುವುದು. ಇಲ್ಲಿ ಛಾಂದಸವನ್ನು ಹೇಳಬೇಕಾದುದಿಲ್ಲ ಎಂದು ಹೇಳಬಹುದು. ಹೀಗಾದರೆ ಉಕ್ಥ್ಯಃ ಉರ್ಮ್ಯಾಯ ಸೂರ್ಮ್ಯಾಯ ಇತ್ಯಾದಿ ಲಕ್ಷ್ಯಗಳಲ್ಲಿ ಛಾಂದಸವಾಗಿ ಯತೋನಾವಃ ಎಂಬುದಕ್ಕೆ ಅಪ್ರವೃತ್ತಿಯನ್ನು ಹೇಳಿ ಸ್ವರಿತವನ್ನು ಉಪಪಾದಿಸಬೇಕಾಗುವುದು. ಸರ್ವಥಾ ಒಂದು ಕಡೆಯಲ್ಲಿ ಛಾಂದಸತ್ವವನ್ನು ಸ್ವೀಕರಿಸಿಯೇ ಸ್ವೀಕರಿಸಬೇಕು. ಉಕ್ಥ್ಯಾಯ, ಸೂರ್ಮ್ಯಾಯ, ಇತ್ಯಾದಿಗಳಲ್ಲಿ ಸ್ವರಿತವು ಶಾಸ್ತ್ರಸಿದ್ಧವೆಂದು ಉಪಪಾದಿಸಿದರೆ ತೀರ್ಥ್ಯಾಯ, ಇತ್ಯಾದಿಗಳಲ್ಲಿ ಆದ್ಯುದಾತ್ತವು ಛಾಂದಸವೆಂದು ಉಪಪಾದಿಸಬೇಕಾಗುವುದು. ತೀರ್ಥ್ಯಾಯ ಇತ್ಯಾದಿ ಸ್ಥಳಗಳಲ್ಲಿ ಆದ್ಯುದಾತ್ತವು ಶಾಸ್ತ್ರಸಿದ್ಧವೆಂದು ಉಪಪಾದಿಸಿದರೆ

ಉಕ್ಥ್ಯಾಯ, ಸೂವರ್ಯ್ಯಾಯ, ಇತ್ಯಾದಿಸ್ಥಳಗಳಲ್ಲಿ ಸ್ವರಿತವನ್ನು ಛಾಂದಸವಾಗಿ ಉದಾತ್ತವಾದಿಸಬೇಕು. ಸರ್ವ ಪ್ರಕಾರದಿಂದಲೂ ಈ ಎರಡುಕಡೆಗಳಲ್ಲಿ ಯಾವುದಾದರೂ ಒಂದು ಕಡೆಯಲ್ಲಿ ಛಾಂದಸತ್ವವನ್ನು ಹೇಳದೆ ತಪ್ಪಿಸಿಕೊಳ್ಳಲಾಗುವುದಿಲ್ಲ. ॥ ೫ ॥

॥ ಸಂಹಿತಾಪಾಠಃ ॥

ತಯೋ॑ರಿದವ॑ಸಾ ವ॒ಯಂ ಸ॒ನೇಮ॒ ನಿ ಚ॑ ಧೀಮಹಿ ।
ಸ್ಯಾ॒ದುತ ಪ್ರ॒ರೇಚ॑ನಂ ॥ ೬ ॥

॥ ಪದಪಾಠಃ ॥

ತಯೋ॑ಃ । ಇತ್ । ಅವ॑ಸಾ । ವ॒ಯಂ । ಸ॒ನೇಮ॑ । ನಿ । ಚ॑ । ಧೀ॒ಮ॒ಹಿ ।
ಸ್ಯಾ॒ತ್ । ಉ॒ತ । ಪ್ರ॒ ಽ ರೇಚ॑ನಂ ॥ ೬ ॥

॥ ಸಾಯಣಭಾಷ್ಯಂ ॥

ತಯೋರಿತ್ಪೂರ್ವೋಕ್ತಯೋರಿಂದ್ರಾವರುಣಯೋರೇವಾವಸಾ ರಕ್ಷಣೇನ ವಯಮನುಷ್ಠಾತಾರಃ ಸನೇಮ । ಸಂಭಜೇಮ ಧನಮಿತಿ ಶೇಷಃ । ನಿ ಧೀಮಹಿ ಚ । ಪ್ರಾಪ್ತೇ ಧನೇ ಯಾವದಪೇಕ್ಷಿತಂ ತಾವದ್ಭುಕ್ತ್ವಾ ತತೋಽವಶಿಷ್ಯಂ ಧನಂ ಕೃಚ್ಛ್ರೇಣಾಪಿ ಧಿರೂಪೇಣ ಸ್ಥಾಪಯೇಮಾಮುತ್ರ । ಉತಾಪಿ ಚ ಪ್ರರೇಚನಂ ಭುಕ್ತ್ವಾನ್ನಿಹಿತಾಚ್ಚ ಪ್ರಕರ್ಷೇಣಾಧಿಕಂ ಧನಂ ಸ್ಯಾತ್ । ಸುಪಾಂ ಸುಲುಗಿತ್ಯಾದಿನಾ ಷಷ್ಠ್ಯಾಃ ಸುಃ ॥ ಅವಸಾ । ಅವಸ್ ।
ನಿಷ್ಠಾತ್ತಾದಾದ್ಯುದಾತ್ತತ್ವಾತ್ । ವಯಂ । ಯುಷ್ಮಯಂ ಹಿ ಷ್ಮಾ । ಋಗ್ವೇ. ೧-೧೫-೨ । ಇತ್ಯತ್ರ ಯೇದುಕ್ತಂ ತದತ್ರ ದ್ರಷ್ಟವ್ಯಂ । ಸನೇಮ । ಆಶಿಷಿ ಲಿಙ್ । ತಸ್ಯ ಮಸ್ । ನಿತ್ಯಂ ಙಿತ ಇತಿ ಸಕಾರ ಲೋಪಃ । ಕಿದಾಶಿಷಿ । ಪಾ. ೩-೪-೧೦೪ । ಇತಿ ಯಾಸುಟ್ । ಛಂದಸ್ಯುಭಯಥೇತಿ ಸಾರ್ವಧಾತುಕಮಪ್ಯಸ್ತೀತಿ ಲಿಙಃ ಸಲೋಪೋಽನಂತ್ಯಸ್ಯೇತಿ ಸಕಾರಲೋಪಃ । ಅತೋ ಯೀಯ ಇತೀಯಾದೇಶಃ । ಲೋಪೋ ವ್ಯೋರ್ವಲೀತಿ ಯಲೋಪಃ । ಲಙ್ಶಾಶಿಷ್ಯಙ್ । ಪಾ. ೩-೧-೪೬ । ಇತ್ಯಙ್ । ಆದ್ಗುಣಃ । ಪಾದಾದಿತ್ವಾನ್ನಿಷ್ಠಾತಃ । ಧೀಮಹಿ । ಡುಧಾಞ್ ಧಾರಣಪೋಷಣಯೋಃ । ಆಶಿಷಿ ಲಿಙ್ಲೋ ಮಹಿಙ್ । ತಸ್ಯ ಛಂದಸ್ಯುಭಯಥೇತಿ ಸಾರ್ವಧಾತುಕಾರ್ಧಧಾತುಕಸಂಜ್ಞೇ । ತತ್ರ ಸಾರ್ವಧಾತುಕತ್ವೇನ ಲಿಙಃ ಸಲೋಪೋಽನಂತ್ಯಸ್ಯೇತಿ ಸಕಾರಲೋಪಃ । ಸಾರ್ವಧಾತುಕಮಪಿದಿತಿ ಙಿತ್ವಂ ತಸ್ ಚ । ಬಹುಲಂ ಛಂದಸೀತಿ-ಶಪೋಽಭಾವೇ ಶಪೋ ಲುಕ್ । ಅರ್ಧಧಾತುಕತ್ವಾದಾತೋ ಲೋಪ ಇಟಿ ಚ । ಪಾ. ೬-೪-೬೪ ।

ಇತ್ಯಾಕಾರಲೋಪಃ । ನಿಘಾತಃ । ಸನೇಮೇತ್ಯಪೇಕ್ಷಯಾ ದ್ವಿತೀಯೆತ್ವಾದತ್ರ ಚೇವಾಯೋಗೇ ಪ್ರಥಮೇತಿ ನ ನಿಷೇಧಃ । ಸ್ಯಾತ್ । ಅಸ್ತೇಃ । ಪ್ರಾರ್ಥನಾಯಾಂ ಲಿಙ್ । ತಿಪ್ । ಇತಶ್ಚೇತೀಕಾರ ಲೋಪಃ । ಯಾಸುಟ್ ಪರಸ್ಮೈಪದೇಷೂದಾತ್ತೋ ಙಿಚ್ಚೇತಿ ಯಾಸುಡ್ ಙಿತ್ತ್ವೇ । ಅದಿಪ್ರಭೃತಿಭ್ಯಃ ಶಪ ಇತಿ ಶಪೋ ಲುಕ್ । ಶ್ನಸೋರಲ್ಲೋಪ ಇತ್ಯಕಾರಲೋಪಃ । ಪಾದಾದಿತ್ವಾದನಿಘಾತಃ । ಉತ । ಏವಮಾದೀನಾಮಂತ ಇತ್ಯಂತೋದಾತ್ತಃ । ಪ್ರರೇಚನಂ । ರಿಚಿರ್ ವಿರೇಚನೇ । ಭಾವೇ ಲ್ಯುಟ್ । ಯೋರನಾದೇಶಃ । ಲಿತೀತಿ ಪ್ರತ್ಯಯೋತ್ಪೂರ್ವಸ್ಯೋದಾತ್ತತ್ವಂ । ಪ್ರಾದಿಸಮಾಸಃ । ಕೃದುತ್ತರಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

ತೆಯೋಃ—ಆ ಇಂದ್ರಾವರುಣರ । ಅವಸಾ ಇತ್—ರಕ್ಷಣೆಯಿಂದಲೇ । ವಯಂ—(ಅನುಷ್ಠಾತೃಗಳಾದ) ನಾವು । ಸನೇಮ—(ಧನವನ್ನು) ಸಂಗ್ರಹ ಮಾಡೋಣ । ನಿ ಧೀಮಹಿ ಚ—ಶೇಖರಿಸಿಯೂ ಇಡೋಣ । ಉತ—ಮತ್ತು । (ಆಧನವು) ಪ್ರರೇಚನಂ—(ಅನುಭವಿಸಿದ ಮತ್ತು ಶೇಖರಿಸಿದುದಕ್ಕಿಂತಲೂ) ಹೆಚ್ಚಾಗುವಂತೆ । ಸ್ಯಾತ್—ಆಗಲಿ.

॥ ಪದಪಾಠಃ ॥

ನಾವು ಇಂದ್ರ ಮತ್ತು ವರುಣರ ಕೃಪೆಯಿಂದ ಅಪಾರವಾದ ಧನವನ್ನು ಸಂಗ್ರಹಮಾಡಿ ಯಥೇಚ್ಛವಾಗಿ ಆ ಧನವನ್ನನುಭವಿಸಿ ಉಳಿದುದನ್ನು ಶೇಖರಿಸೋಣ ಮತ್ತೂ ನಾವು ಅನುಭವಿಸಿದ ಹಾಗೆಲ್ಲಾ ಆ ಧನವು ಹೆಚ್ಚುವಂತಾಗಲಿ.

English Translation.

Through their protection we enjoy riches and heap them up; still may we have even a surplus.

॥ ವಿಶೇಷವಿಷಯಗಳು ॥

ನಿ ಧೀಮಹಿ—ಶೇಖರಿಸಿ ಇಡೋಣ, ಕೂಡಿಹಾಕೋಣ lay by.

ಉತ—ಅಷ್ಟೇ ಅಲ್ಲ, ಅಥವಾ ಮತ್ತು ಎಂಬ ಯಾವ ಅರ್ಥವನ್ನು ಬೇಕಾದರೂ ಹೇಳಬಹುದು.

ಪ್ರರೇಚನಂ—ಭುಕ್ತ್ವಾನ್ನಿಹಿತಾಚ್ಚೈ ಪ್ರಕರ್ಷೇಣಾಧಿಕಂ ಧನಂ. ನಾವು ಯಥೇಚ್ಛವಾಗಿ ಅನುಭವಿಸಿ ಕೂಡಿಹಾಕಿದುದಕ್ಕಿಂತಲೂ ಅಧಿಕವಾದ ಧನವು ಎಂದರೆ ಇಂದ್ರಾವರುಣರು ಕೊಡುವ ಧನವು ಅವರ ಅನುಗ್ರಹದಿಂದ ಅಧಿಕವಾಗಿ ವೃದ್ಧಿಗೊಳ್ಳಲಿ ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಅವಸಾ—ಸರ್ವಧಾತುಭ್ಯೋಽಸುನ್ (ಉ. ಸೂ. ೪-೬೨) ಎಂಬುದರಿಂದ ಅವ, ಧಾತುವಿನ ಮುಂದೆ ಅಸುನ್ ಪ್ರತ್ಯಯ, ನಿತ್ಸ್ವರದಿಂದ ಆದ್ಯುದಾತ್ತ, ತೃತೀಯೈಕವಚನಾನ್ತ.

ವಯಮ್—ಯೂಯಂ ಹಿ ಷ್ಮಾ (ಋ. ಸಂ. ೧-೧೫೫-೨) ಎಂಬ ಮಂತ್ರದಲ್ಲಿ ಯೂಯಂ ಎಂಬುದಕ್ಕೆ ಹೇಳಿದಂತೆ ಪ್ರಕ್ರಿಯೆಯನ್ನು ವಯಂ ಎಂಬಲ್ಲಿಯೂ ಹೇಳಿಕೊಳ್ಳುವುದು. ಯೂಯವಮ್ ಎಂಬಲ್ಲಿ ಯುಷ್ಮಚ್ಛಬ್ದಪ್ರಕೃತಿ. ವಯಮ್ ಎಂಬಲ್ಲಿ ಅಸ್ಮಚ್ಛಬ್ದಪ್ರಕೃತಿ, ಇಷ್ಟೇ ವಿಶೇಷ.

ಸನೇಮ—ವನ ಷಣ ಸಂಭಕ್ತ್ಯೋ. ಧಾತ್ವಾದೇಃಷಃಸಃ, ಎಂಬುದರಿಂದ ಷಕಾರಕ್ಕೆ ಸಕಾರ. ಇದರ ಮುಂದೆ ಆಶೀರ್ಲಿಙ್ ಉತ್ತಮಪುರುಷ ಬಹುವಚನ ಮಸ್ ಸನ್+ಮಸ್, **ನಿಶ್ಯಂಜ್ಞಾತಃ** (ಪಾ ಸೂ. ೩-೪-೯೯) ಎಂಬುದರಿಂದ ಮಸ್, ಸಕಾರಕ್ಕೆ ಲೋಪ. **ಯಾಸುಟ್ ಪರಸ್ಮೈಪದೇಷೂದಾತ್ತೋ ಙಿಚ್ಚ** (ಪಾ ಸೂ. ೩-೪-೧೦೩ ಎಂಬುದರಿಂದ ಯಾಸುಡಾಗಮ. ಟಿತ್ತಾದ್ದರಿಂದ ಆದ್ಯನ್ತೌಟಕಿತೌ ಎಂಬುದರಿಂದ ಆದ್ಯವಯವವಾಗಿ ಬರುವುದು. **ಕಿದಾಶಿಷಿ** (ಪಾ. ಸೂ. ೩-೪-೧೦೪) ಎಂಬುದರಿಂದ ಅದು ಕಿತ್ತಾಗುವುದು. ಇದು ಯಾಸುಡಾಗಮಕ್ಕೆ ವಿಧಾಯಕ ವಲ್ಲವೆಂದು ಹಿಂದೆಯೇ ಹೇಳಲಾಗಿದೆ. ಸನ್+ಯಾಸ್+ಮ **ಛಂದೆಸ್ಯುಭಯೆಥಾ** (ಪಾ.ಸೂ. ೩-೪-೧೧೭)ಎಂಬುದರಿಂದ ಯಾಸ್‌ಮ ಎಂಬುದಕ್ಕೆ ಸಾರ್ವಧಾತುಕಸಂಜ್ಞೆ ಆರ್ಧಧಾತುಕಸಂಜ್ಞೆ ಎರಡೂ ಇರುವುದು. ಆದ್ದರಿಂದ ಸಾರ್ವಧಾತುಕಸಂಜ್ಞೆಯನ್ನು ಪುರಸ್ಕರಿಸಿಕೊಂಡು ಸಕಾರಕ್ಕೆ ಲೋಪ, **ಲಿಙ್ಯಾಶಿಷ್ಯಙ್** (ಪಾ.ಸೂ. ೩-೧-೮೬) ಆಶೀರರ್ಥವಾದ ಲಿಙ್ ಪರದಲ್ಲಿರುವಾಗ ಧಾತುವಿನ ಮುಂದೆ ಲಿಙ್ ಬರುವುದು ಎಂಬುದರಿಂದ ಆಙ್. ಸನ್+ಅ+ಯಾ+ಮ **ಆತೋಯೇಯಃ** (ಪಾ. ಸೂ. ೭-೩-೮೦) ಎಂಬುದರಿಂದ ಯಾ ಗೆ ಇಯ್ ಆದೇಶ, ಸನ + ಇಯ್ + ಮ **ಲೋಪೋವ್ಯೋರ್ವಲಿ** (ಪಾ. ಸೂ. ೬-೧-೬೬) ಎಂಬುದರಿಂದ ಯ ಗೆ ಲೋಪ, **ಆದ್ಗುಣಃ** (ಪಾ. ಸೂ. ೬.೧-೮೭) ಎಂಬುದರಿಂದ ಗುಣ **ಸನೇಮ** ಎಂದಾಗುವುದು, ಇದು ಪಾದದ ಆದಿಯಲ್ಲಿರುವುದರಿಂದ **ತಿಙ್ಞತಿಙಃ** ಎಂಬುದರಿಂದ ಅನುದಾತ್ತ ಬರುವುದಿಲ್ಲ, ಏ ಎಂಬ ಏಕಾದೇಶವು ಉದಾತ್ತವಾಗಿ ನಿಲ್ಲುವುದು.

ಧೀಮಹಿ—ಡುಧಾಞ್ ಧಾರಣಪೋಷಣಯೋಃ, ಧಾತು. ಆಶೀರರ್ಥದಲ್ಲಿ ಲಿಙ್. ಲಿಙಸ್ಸೀಯುಟ್ ಎಂಬುದರಿಂದ ಸೀಯುಡಾಗಮ ಉತ್ತಮಪುರುಷ ಬಹುವಚನ ಮಹಿಙ್, ಇದಕ್ಕೆ ಛಂದೆಸ್ಯುಭಯೆಥಾ, ಎಂಬುದರಿಂದ ಸಾರ್ವಧಾತುಕ ಸಂಜ್ಞೆಯೂ ಸಹ ಇರುವುದು. ಸಾರ್ವಧಾತುಕಸಂಜ್ಞೆ ಇರುವುದರಿಂದ **ಲಿಙಸ್ಸಲೋಪೋನನ್ತ್ಯಸ್ಯ**, ಎಂಬುದರಿಂದ ಸೀಯುಟ್‌ನ ಸಕಾರಕ್ಕೆ ಲೋಪ, **ಸಾರ್ವಧಾತುಕಮಪಿತ್** (ಪಾ. ಸೂ. ೧-೨-೪) ಎಂಬುದರಿಂದ ಙಿತ್ವ ಇವು ಬರುವುವು. **ಕರ್ತರಿ ಶಪ್** ಎಂಬುದರಿಂದ ಶಪ್ಪು ಬರುವುದು. ಆದರೆ ಆದಕ್ಕೆ ಬಹುಲಂಛಂದಸಿ (ಪಾ. ಸೂ. ೨-೪-೭೩) ಎಂಬುದರಿಂದ ಧಾಞ್ ಧಾತುವು ಜುಹೋತ್ಯಾದಿ ಯಾದಾಗ್ಯೂ ಲುಕ್ ಬರುವುದು. ಅಥವಾ ಶಪ್ಪನ್ನು ಮಾಡುವಾಗ ಆರ್ಧಧಾತುಕಸಂಜ್ಞೆಯನ್ನೇ ಇಟ್ಟುಕೊಂಡು ಶಪ್ ಬರುವುದಿಲ್ಲ ಎಂದು ಹೇಳಿದರೂ ಹೇಳಬಹುದು. ಧಾ+ಈಯ್+ಮಹಿ ಆರ್ಧಧಾತುಕಸಂಜ್ಞೆ ಇರುವುದರಿಂದ **ಆತೋಲೋಪಇಟಿಚ** (ಪಾ. ಸೂ. ೬-೪-೬೪) ಎಂಬುದರಿಂದ ಆಕಾರಕ್ಕೆ ಲೋಪ, ಲೋಪೋವ್ಯೋರ್ವಲಿ ಎಂಬುದರಿಂದ ಯ ಲೋಪ ಧೀಮಹಿ ಎಂದಾಗುವುದು. ಇಲ್ಲಿ ಸೃತ್ಯಯದಲ್ಲಿ ಸ್ವತಃ ಙಿತ್ವವಿರುವುದರಿಂದ ' ಸಾರ್ವಧಾತುಕಮಪಿತ್ ' ಎಂಬುದರಿಂದ ಅತಿದೇಶಿಕ ಙಿತ್ವೋಪಪಾದನಕ್ಕೆ ಫಲವಿಲ್ಲ, ಸಾರ್ವಧಾತುಕ ಸಂಜ್ಞೆಗೆ ಇದೂ ಒಂದು ಫಲವೆಂದು ಅಭಿಪ್ರಾಯದಿಂದ ಙಿತ್ವವು ಉಪಪಾದಿತವಾಗಿರುವುದು, ನಿ ಚ ಧೀಮಹಿ, ಎಂದು ಚ ಶಬ್ದಯೋಗವಿದೆ. ಆದರೂ ಸನೇಮ ಎಂಬ ತಿಙನ್ತವು ಮೊದಲು ಇರುವುದರಿಂದ ಅದನ್ನು ಅಪೇಕ್ಷಿಸಿ ಧೀಮಹಿ ಎಂಬುದು ಎರಡನೆಯದಾಗುವುದು. ಆದ್ದರಿಂದ **ಚಿವಾಯೋಗೇ ಪ್ರಥಮಾ** (ಪಾ.ಸೂ. ೮-೧-೫೯) ಎಂಬುದರಿಂದ ಅನುದಾತ್ತಕ್ಕೆ ನಿಷೇಧಬರುವುದಿಲ್ಲ. **ತಿಙ್ಞತಿಙಃ** ಎಂಬುದರಿಂದ ಸರ್ವಾನುದಾತ್ತ ಬರುವುದು.

ಸ್ಯಾತ್-ಅಸ ಭುವಿ, ವಿಧಿನಿಮನ್ತ್ರಣಾಮನ್ತ್ರಣಾಧೀಷ್ಟಸಂಪ್ರಶ್ನಪ್ರಾರ್ಥನೇಷು ಲಿಙ್ (ಪಾ. ಸೂ. ೩-೩-೧೬) ಎಂಬುದರಿಂದ ಪ್ರಾರ್ಥನಾರೂಪವಾದ ಅರ್ಥದಲ್ಲಿ ಲಿಙ್, ತಿಪ್. ಇತಶ್ಚ (ಪಾ ಸೂ. ೩-೪-೧೦೦) ಎಂಬುದರಿಂದ ಯಾಸುಡಾಗಮ. ಇದರಿಂದಲೇ ಆದು ಙಿತ್ತೂ ಆಗುವುದು. ಆಸ್+ಯಾಸ್+ತ್, ಕರ್ತರಿಶಪ್ ಎಂಬುದರಿಂದ ಶಪ್ ಅದಕ್ಕೆ ಆದಿಪ್ರಭೃತಿಭ್ಯಃಶಪಃ (ಪಾ. ಸೂ. ೨-೪-೭೨) ಎಂಬುದರಿಂದ ಲುಕ್. ಶ್ನಸೋರಲ್ಲೋಪಃ (ಪಾ. ಸೂ. ೬-೪-೧೧೧) ಎಂಬುದರಿಂದ ಧಾತುಸಂಬಂಧಿಯಾದ ಆಕಾರಕ್ಕೆ ಲೋಪ, ಲಿಙಸ್ಸಲೋಪೋನನ್ತ್ಯಸ್ಯ ಎಂಬುದರಿಂದ ಯಾಸುಡಾಗಮದ ಸಕಾರಕ್ಕೆ ಲೋಪ ಏವಂಚ ಸ್ಯಾತ್ ಎಂದಾಗುವುದು. ಪಾದದ ಆದಿಯಲ್ಲಿರುವುದರಿಂದ ತಿಙ್ಶಿತಿಙಃ ಎಂಬುದರಿಂದ ಸರ್ವಾನುಹಾತ್ತ ಬರುವುದಿಲ್ಲ.

ಉತ—ಏವಾದೀನಾಮನ್ತ್ರಃ (ಫಿ. ಸೂ. ೪-೮೨) ಎಂಬುದರಿಂದ ಅಂತೋದಾತ್ತ.

ಪ್ರರೇಚನಮ್—ರಿಚಿರ್ ವಿರೇಚನೇ ಧಾತು. ಇರಇತ್ಸಂಜ್ಞಾವಾಚ್ಯಾ (ವಾದಿಕ. ೧-೩-೭) ಎಂಬುದರಿಂದ ಇರ್‌ಗೆ ಇತ್ಸಂಜ್ಞೆ ಲೋಪ. ಲ್ಯುಟ್ಟೆ (ಪಾ.ಸೂ. ೩-೩-೧೧೫) ನಪುಂಸಕಲಿಂಗದಲ್ಲಿ ಭಾವಾರ್ಥದಲ್ಲಿ ಧಾತುವಿನ ಮುಂದೆ ಕ್ತ, ಲ್ಯುಟ್ ಪ್ರತ್ಯಯಗಳು ಬರುವುವು ಎಂಬುದರಿಂದ ಲ್ಯುಟ್ ಪ್ರತ್ಯಯ, ಯುವೋರನಾಕೌ (ಪಾ.ಸೂ. ೭-೧-೧) ಎಂಬುದರಿಂದ ಯುಗೆ ಅನ ಆದೇಶ ರಿಚ್+ಅನ ಪುಗನ್ತ್ಯಲಘೂಪಧಸ್ಯಚ (ಪಾ. ಸೂ. ೭-೩-೮೬) ಎಂಬುದರಿಂದ ಲಘೂಪಧಗುಣ, ರೇಚನ, ಲಿತಿ (ಪಾ. ಸೂ. ೬-೧-೧೯೩) ಎಂಬುದರಿಂದ ಅನ ಪ್ರತ್ಯಯದ ಹಿಂದೆ ಇರುವುದು ಉದಾತ್ತ, ಪ್ರಶಬ್ದದೊಂದಿಗೆ ಕುಗತಿಪ್ರಾದಯಃ (ಪಾ. ಸೂ. ೨-೨-೧೮) ಎಂಬುದರಿಂದ ಪ್ರಾದಿಸಮಾಸ. ಗತಿಕಾರಕೋಪಪದಾತ್ಕೃತ್ ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುವುದು. ॥ ೬ ॥

॥ ಸಂಹಿತಾಪಾಠಃ ॥

ಇಂದ್ರಾವರುಣ ವಾಮಹಂ ಹುವೇ ಚಿತ್ರಾಯ ರಾಧಸೇ ।
ಅಸ್ಮಾನ್ಸು ಜಿಗ್ಯುಷಸ್ಕೃತಂ ॥ ೭ ॥

॥ ಪದಪಾಠಃ ॥

ಇಂದ್ರಾವರುಣಾ । ವಾಂ । ಅಹಂ । ಹುವೇ । ಚಿತ್ರಾಯ । ರಾಧಸೇ ॥
ಅಸ್ಮಾನ್ । ಸು । ಜಿಗ್ಯುಷಃ । ಕೃತಂ ॥ ೭ ॥

॥ ಸಾಯಣಭಾಷ್ಯಂ ॥

ಇಂದ್ರಾವರುಣಾ ಹೇ ಇಂದ್ರಾವರುಣೌ ವಾಂ ಯುವಾಮುಭಾವಹಂ ಹುವೇ । ಆಹ್ವಯಾಮಿ । ಕಿಮರ್ಥಂ । ಚಿತ್ರಾಯೆ ಮಣಿಮುಕ್ತಾದಿರೂಪೇಣ ವಿವಿಧಾಯೆ ರಾಧಸೇ ಧನಾಯೆ । ತತ ಆಹುತೌ ಯುವಾಮಸ್ಮಾನನುಷ್ಠಾತೄನ್ ಸು ಜಿಗ್ಯುಷಃ । ಶತ್ರುವಿಷಯೇ ಸುಷ್ಠು ಜಯಯುಕ್ತಾನ್ ಕೃತಂ ಕುರುತಂ ॥ ಇಂದ್ರಾವರುಣಾ । ಸುಪಾಂ ಸುಲುಗಿತ್ಯಾದಿನಾ ಸಂಬೋಧನಸ್ಯಾಕಾರಃ । ದೇವತಾದ್ವಂದ್ವೇ ಚೇತಿ ಪೂರ್ವಪದಸ್ಯಾನಙ್ । ಆಮಂತ್ರಿತಾದ್ಯುದಾತ್ತತ್ವಂ । ಸಂಹಿತಾಯಾಂ ಛಾಂದಸೋ ಹ್ರಸ್ವತ್ವಂ । ಹುವೇ । ಹೂಯತೇರ್ಲುಙಿ ಚ್ಲೇರ್ಮೈಕವಚನೇಮಿಟ್ । ತಪ ಇತ್ಯನುವೃತ್ತೌ ಬಹುಲಂ ಛಂದಸೀತಿ ಲುಕ್ । ಹೂ ಇತ್ಯನುವೃತ್ತೌ ಬಹುಲಂ ಛಂದಸೀತಿ ಸಂಪ್ರಸಾರಣಂ ಪರಪೂರ್ವತ್ವಂ । ಆಚಿ ಶ್ನುಧಾಶ್ವಿತ್ಯಾದಿನೋವಙ್ । ಪಾ. ೬ ೪-೭೭ । ನ ಚೆ ಹುಶ್ನುವೋರಿತ್ಯಾದಿನಾ । ಪಾ. ೬-೪ ೮೭ । ಯೆಣಾದೇಶಃ । ಜುಹೋತೇರೇವ ಹಿ ಶ್ರುತಿಪದೋಕ್ತಸ್ಯ ತತ್ । ನ ಪುನರಸ್ಯ ಲಾಕ್ಷಣಿಕತ್ವಾತ್ । ಇಟಃ ಪ್ರತ್ಯಯಸ್ಯೇರೇಣೋದಾತ್ತತ್ವಂ । ಪಾದಾದಿತ್ವಾನ್ನಿಘಾತಃ । ರಾಧಸೇ । ಅಸುನ್ । ನಿತ್ತ್ವಾದಾದ್ಯುದಾತ್ತತ್ವಂ । ಅಸ್ಮಾನ್ । ಶಸಿ ದ್ವಿತೀಯಾಯಾಂ ಚ । ಪಾ. ೭-೨-೮೭ । ಇತ್ಯಾತ್ವಂ । ಶಸೋ ನಃ । ಪಾ. ೭-೧ ೨೮ । ಇತಿ ನತ್ವಂ । ಜಿಗ್ಯುಷಃ । ಜಿ ಜಯೇ । ಲಿಟಃ ಕ್ವಸುಶ್ಚೇತಿ ಕ್ವಸುಃ । ದ್ವಿರ್ಭಾವಃ । ಸನ್‌ಲಿಟೋರ್ಜೇಃ । ಪಾ. ೭-೩-೫೭ । ಇತಿ ದ್ವಿತೀಯಸ್ಯ ಕುತ್ವಂ । ಕ್ವಸೋಃ ಕಿತ್ತ್ವಾದ್ಗುಣಾಭಾವಃ । ಕ್ರಾದಿನಿಯಮಾತ್ಕ್ವಸ್ಯೇಟೋ ವಸ್ಯೇಟಾಜಾದ್ಯಸಾಮಿತಿ ನಿಯಮೇನ ನಿವೃತ್ತಿಃ । ದ್ವಿತೀಯಾ ಬಹುವಚನಂ ಶಸ್ । ಛಸಂಜ್ಞಾಯಾಂ ವಸೋಃ ಸಂಪ್ರಸಾರಣಮಿತಿ ಸಂಪ್ರಸಾರಣಂ । ಪರಪೂರ್ವತ್ವಂ । ಏರನೇಕಾಚೆ ಇತಿ ಯೆಣಾದೇಶಃ । ಶಾಸಿವಸಿಘಸೀನಾಂ ಚೇತಿ ಷತ್ವಂ । ಪ್ರತ್ಯಯಸ್ವರೇಣೋಕಾರ ಉದಾತ್ತಃ । ಕೃತಂ । ಡುಕೃಞ್ ಕರಣೇ । ಲೋಣ್ಮಧ್ಯಮದ್ವಿವಚನಸ್ಯ ಲಜ್ವದ್ಭಾವಾತ್ತಮಾದೇಶಃ । ತಪೋ ಬಹುಲಂ ಛಂದಸೀತಿ ಲುಕ್ । ತಜ್ಜಾತಿಶ ಇತಿ ನಿಘಾತಃ ॥

॥ ಪ್ರತಿಪದಾರ್ಥ ॥

ಇಂದ್ರಾವರುಣಾ—ಇಂದ್ರ ಮತ್ತು ವರುಣರೇ । ವಾಂ—ನಿಮ್ಮಿಬ್ಬರನ್ನೂ । ಅಹಂ—(ಅನುಷ್ಠಾತೃವಾದ) ನಾನು । ಚಿತ್ರಾಯ—(ವಜ್ರ, ವೈಢೂರ್ಯಾದಿ) ನಾನಾ ರೂಪವಾದ । ರಾಧಸೇ—ಧನಕ್ಕೋಸ್ಕರ । ಹುವೇ—ಆಹ್ವಾನಿಸುತ್ತೇನೆ (ಹೀಗೆ ಆಹ್ವಾನಿಸಲ್ಪಟ್ಟ ನೀವು) । ಅಸ್ಮಾ—(ಅನುಷ್ಠಾತೃಗಳಾದ) ನಮ್ಮನ್ನು । ಸು ಜಿಗ್ಯುಷಃ—ಒಳ್ಳೆಯ ಜಯಶಾಲಿಗಳನ್ನಾಗಿ । ಕೃತಂ—ಮಾಡಿ.

॥ ಭಾವಾರ್ಥ ॥

ಎಲೈ ಇಂದ್ರ ಮತ್ತು ವರುಣರೇ, ನಾವು ನಿಮ್ಮನ್ನು ಸ್ತೋತ್ರಗಳಿಂದ ಸ್ತುತಿಸಿ ಆಹ್ವಾನಿಸುತ್ತೇನೆ. ನೀವು ನಮಗೆ ವಜ್ರವೈಢೂರ್ಯಾದಿ ನಾನಾವಿಧವಾದ ದ್ರವ್ಯವನ್ನು ಕೊಡಿ ಮತ್ತು ಶತ್ರುಗಳನ್ನು ಜಯಿಸುವಂತೆ ಮಾಡಿ.

English Translation.

Indra and Varuna, I invoke you for several kinds of wealth; make us victorious (over our enemies).

॥ ವಿಶೇಷ ವಿಷಯಗಳು ॥

ಇಂದ್ರಾವರುಣಾ—ಈ ಶಬ್ದದ ಅಂತ್ಯಾಕ್ಷರವು ದೀರ್ಘವಾಗಿದ್ದರೂ ಸಂಹಿತಾಪಾಠದಲ್ಲಿ ಛಂದಸ್ಸಿನ ಅನುಕೂಲಕ್ಕೋಸ್ಕರ ಹ್ರಸ್ವವಾಗಿರುವುದು. ಇದರಂತೆ ಈ ಸೂಕ್ತದ ೩ನೆಯ ಋಕ್ಕಿನಲ್ಲಿಯೂ ೮, ೯ ನೆಯ ಋಕ್ಕುಗಳಲ್ಲಿಯೂ ಈ ಶಬ್ದದ ಅಂತ್ಯಾಕ್ಷರವು ಸಂಹಿತಾಪಾಠದಲ್ಲಿ ಹ್ರಸ್ವವಾಗಿಯೇ ಇರುವುದು.

ಚಿತ್ರಾಯೆ—ಮಣಿಮುಕ್ತಾದಿರೂಪೇಣ ವಿವಿಧಾಯ ಎಂದು ಭಾಷ್ಯಕಾರರು ಹೇಳಿರುವರು. ಹೀಗೆ ಹೇಳುವುದಕ್ಕಿಂತಲೂ ಧನ, ಪಶುಸಂಪತ್ತು, ಆಹಾರ ಮುಂತಾದ ಉಪಯುಕ್ತವಾದ ನಾನಾವಿಧ ಸಂಪತ್ತುಗಳು ಎಂದು ಹೇಳುವುದು ಸಮಂಜಸವಾಗಿರುವುದು. ಆ ಕಾಲದ ಋಷಿಗಳಿಗೆ ಮಣಿಮುಕ್ತಾದಿ ಧನಗಳಿಗಿಂತ ಗೋವುಗಳು, ಆಹಾರಗಳು, ಶತ್ರುಜಯ ಮುಂತಾದವುಗಳ ಅವಶ್ಯಕತೆಯು ಹೆಚ್ಚಾಗಿತ್ತೆಂದು ಧಾರಾಳವಾಗಿ ಹೇಳಬಹುದು.

ಜಿಗ್ಯುಷಃ—ಜಿ ಜಯೇ । ಶತ್ರುವಿಷಯೇ ಸುಷ್ಟು ಜಯೆಯುಕ್ತಾನ್ ॥ ಶತ್ರುಗಳನ್ನು ಜಯಿಸುವ ಶಕ್ತಿಯುಳ್ಳವರನ್ನಾಗಿ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಇನ್ದ್ರಾವರುಣಾ—ಇನ್ದ್ರಶ್ಚ ವರುಣಶ್ಚ ಎಂದು ದ್ವಂದ್ವಸಮಾಸ. ಸಂಬೋಧನದ್ವಿವಚನ ಔ ಪ್ರತ್ಯಯಕ್ಕೆ ಸುಪಾಂ ಸುಲುಕ್—, (ಪಾ.ಸೂ.೭-೧-೩೯) ಎಂಬುದರಿಂದ ಆಕಾರಾದೇಶ. ದೇವತಾದ್ವಂದ್ವೇ ಚೆ (ಪಾ.ಸೂ. ೬-೩-೨೬) ಎಂಬುದರಿಂದ ಪೂರ್ವಪದಕ್ಕೆ ಅನಙ್ ಆದೇಶ. ಪಾದಾದಿಯಲ್ಲಿರುವುದರಿಂದ ಅಪ್ಪಮಿಕಾಮನ್ತ್ರಿತಾನುದಾತ್ತ ಬರುವುದಿಲ್ಲ. ಷಾಷ್ಯವಾದ ಅಮನ್ತ್ರಿತಸ್ಯಚ ಎಂಬುದರಿಂದ ಆದ್ಯುದಾತ್ತ ಬರುವುದು. ಸಂಹಿತಾಕಾಲದಲ್ಲಿ ಛಾಂದಸವಾಗಿ ಹ್ರಸ್ವ ಬರುವುಹು.

ಹುವೇ—ಹ್ವೇಞ್ ಸ್ಪರ್ಧಾಯಾಂ ಶಬ್ದೇ ಚ ಧಾತು. ಇದು ಜ್ಞಾತ್ಯಾದ್ದರಿಂದ ಫಲವು ಕರ್ತೃವಿಗೆ ಸೇರುವಾಗ ಆತ್ಮನೇಪದಿ, ಲಟ್, ಆದರ ಸ್ಥಾನದಲ್ಲಿ ಉತ್ತಮಪುರುಷ ಏಕವಚನ ಇಟ್. ಹ್ವೇ+ಇ ಕರ್ತರಿಶಪ್ ಎಂಬುದರಿಂದ ಶಪ್. ಬಹುಲಂಛಂದಸಿ (ಪಾ.ಸೂ. ೨-೪-೭೩) ಆದಿಪ್ರಭೃತಿಭ್ಯಃ ಶಪಃ ಎಂಬುದರಿಂದ ಶಪಃ ಎಂಬುದು ಇಲ್ಲಿ ಅನುವೃತ್ತವಾಗುವುದು. ಏವಂಚ ಛಂದಸ್ಸಿನಲ್ಲಿ ಶಪ್‌ಗೆ ಬಹುಲವಾಗಿ ಲುಕ್ ಬರುವುದು ಎಂಬುದರಿಂದ ಶಪ್‌ಗೆ ಲುಕ್ ಬರುವುದು. ಬಹುಲಂ ಛಂದಸಿ (ಪಾ.ಸೂ. ೬-೧-೩೪) ಇಲ್ಲಿ ಹ್ವೆಸ್ಸಂಪ್ರಸಾರಣಮ್ (ಪಾ. ಸೂ. ೬-೧-೩೨) ಎಂಬ ಸೂತ್ರವು ಅನುವೃತ್ತವಾಗುವುದು. ಛಂದಸ್ಸಿನಲ್ಲಿ ಹ್ವೇಞ್ ಧಾತುವಿಗೆ ಬಹುಲವಾಗಿ ಸಂಪ್ರಸಾರಣ ಬರುವುದು ಎಂಬುದರಿಂದ ಸಂಪ್ರಸಾರಣ, ವಕಾರಕ್ಕೆ ಉಕಾರ. ಸಂಪ್ರಸಾರಾಚ್ಚ (ಪಾ. ಸೂ. ೬-೧-೧೦೮) ಎಂಬುದರಿಂದ ಪೂರ್ವರೂಪ, ಹು+ಇ ಆಚಿಶ್ನುಧಾತು. ಭ್ರುವಾಂಯ್ವೋರಿಯ್ಯಙ್ವ ಔ (ಪಾ.ಸೂ. ೬-೪-೭೭) ಎಂಬುದರಿಂದ ಉವಪಾದೇಶ. ಹುವೇ ಎಂದಾಗುವುದು. ಇಲ್ಲಿ ಹು+ಇ ಎಂದಿರುವಾಗ ಹುಶ್ನುವೋಸ್ಸಾರ್ವಧಾತುಕೇ (ಪಾ. ಸೂ. ೬-೪-೮೭) ಅಜಾದಿಯಾದ ಸಾರ್ವಧಾತುಕ ಪ್ರತ್ಯಯ ಪರದಲ್ಲಿರುವಾಗ ಹು ಧಾತು, ಶ್ನು ಪ್ರತ್ಯಯಾಂತವಾದ ಅನೇಕಾಜ್ಕಾದ ಅಜ್ಗಳ ಇವುಗಳ ಸಂಯೋಗ

ಪೂರ್ವಕವಲ್ಲದ ಉಕಾರಕ್ಕೆ ಯಣಾದೇಶ ಬರುವುದು ಎಂಬುದರಿಂದ ಯಣಾದೇಶವು ಬರಲಿ ಎಂದು ಶಂಕಿಸಬಹುದು. ಆದರೆ ಹುಶ್ನುವೋಃ ಎಂಬ ಸೂತ್ರದಲ್ಲಿ ಪ್ರತಿಪದೋಕ್ತವಾದ ಹುವಿಗೆ ಗ್ರಹಣವೇ ಹೊರತು ಲಾಕ್ಷಣಿಕವಾದ ಹುವಿಗೆ ಗ್ರಹಣವಿಲ್ಲ. ಲಕ್ಷಣವೆಂದರೆ ಸೂತ್ರ. ಲಕ್ಷಣೇನ ನಿವೃತ್ತಂ ಲಾಕ್ಷಣಿಕಮ್ ಅಂದರೆ ಸೂತ್ರಸಹಾಯದಿಂದ ನಿಷ್ಪನ್ನವಾದುದಕ್ಕೆ ಲಾಕ್ಷಣಿಕವೆಂದು ಹೆಸರು. ಇಲ್ಲಿಯ ಹುವು, ಹ್ವೇ ಧಾತುವಿನ ಮೇಲೆ ಬಹುಲಂಛಂದಸೀ ತ್ಯಾದಿ ಸೂತ್ರಸಹಾಯದಿಂದ ನಿಷ್ಪನ್ನವಾಗಿರುವುದು. ಆದ್ದರಿಂದ ಲಾಕ್ಷಣಿಕ. ಹು ದಾನಾದನಯೋಃ ಎಂಬ ಹು ಧಾತುವು ಹೀಗೆ ಸೂತ್ರಸಹಾಯದಿಂದ ನಿಷ್ಪನ್ನವಾಗುವುದಿಲ್ಲ. ಆದ್ದರಿಂದ ಆದು ಲಾಕ್ಷಣಿಕವಲ್ಲ. ಹುಶ್ನುವೋಃ ಎಂಬಲ್ಲಿ ಹು ಎಂಬುದರಿಂದ ಹು ದಾನಾದನಯೋಃ ಎಂಬ ಪ್ರತಿಪದೋಕ್ತವಾದ ಧಾತುವಿಗೆ ಗ್ರಹಣವು **ಲಕ್ಷಣ-ಪ್ರತಿಪದೋಕ್ತಯೋಃಪ್ರತಿಪದೋಕ್ತಸ್ಯಗ್ರಹಣಮ್** (ಪರಿಭಾ. ೧೧೫) ಎಂಬುದರಿಂದ ಬರುವುದು- ಆದ್ದರಿಂದ ಲಾಕ್ಷಣಿಕವಾದ ಹ್ವೇಞ್ ಧಾತುವಿನಿಂದ ಉಂಟಾದ ಹುಗೆ ಹುಶ್ನುವೋಃ ಎಂಬುದರಿಂದ ಯಣ್ ಬರುವುದಿಲ್ಲ. ಏರನೇಕಾಚಃ ಎಂಬುದರಿಂದ ಅನುವೃತ್ತವಾದ ಅನೇಕಾಚಃ ಎಂಬುದು ಅಂಗಕ್ಕೆ ವಿಶೇಷಣ, ಶ್ನು ಪ್ರತ್ಯಯವಾಡ್ದರಿಂದ ತದಂತಲಾಭ. ಹುಶ್ನುವೋಃ ಎಂಬುದು ಅಂಗಸ್ಯ ಎಂದು ಅನುವೃತ್ತವಾಗಿ ವಿಪರಿಣತವಾದ ಅಂಗಯೋಃ ಎಂಬುದಕ್ಕೆ ವಿಶೇಷಣ. **ಯೇನವಿಧಿಸ್ತದಂತಸ್ಯ** (ಪಾ ಸೂ. ೧-೧-೭೨) ಎಂಬುದರಿಂದ ತದನ್ತಲಾಭ. ತಥಾಚ ಹು ಧಾತ್ವಂತವೂ,-ಶ್ನು ಪ್ರತ್ಯಯಾಂತವೂ, ಶ್ನು ಪ್ರತ್ಯಯಾಂತಾಂತವೂ ಅನೇಕಾಚ್ಕವೂ ಆದ ಯಾವ ಅಂಗವಿದೆಯೋ ಆ ಅಂಗದ ಸಂಯೋಗಪೂರ್ವಕವಲ್ಲದ ಉಕಾರಕ್ಕೆ ಯಣಾದೇಶ ಬರುವುದು ಎಂದು ಹುಶ್ನುವೋಃ ಎಂಬುದಕ್ಕೆ ಅರ್ಥವು. ಏವಂಚ ಹು+ಇ ಎಂದಿರುವಾಗ ಅಂಗವು ಅನೇಕಾಚ್ಕವಾಗುವುದಿಲ್ಲವಾದ್ದರಿಂದ ಹುಶ್ನುವೋಃ ಎಂದು ವಿಹಿತವಾದ ಯಣಾದೇಶಕ್ಕೆ ಪ್ರಾಪ್ತಿಯೇ ಇಲ್ಲವು. ಉಪಾಯಸ್ಯ ಉಪಾಯಾಂತರಾದೂಹೆ ಕಶ್ಚಮ್ ಎಂಬ ನ್ಯಾಯದಿಂದಲೋ ಅನೇಕಾಚ್ಕಗ್ರಹಣಪ್ರತ್ಯಾಖ್ಯಾನಪಕ್ಷವಿಂದಲೋ ವೇದಭಾಷ್ಯಕಾರರು ಲಕ್ಷಣಪ್ರತಿಪದೋಕ್ತ ಪರಿಭಾಷೆಯಿಂದ ಯಣಾದೇಶಕ್ಕೆ ವಾರಣೆ ಮಾಡಿರುವರು ಎಂದು ಹೇಳಿದರೆ ಸಮಂಜಸವಾಗಬಹುದು. ಇಟ್ ಪ್ರತ್ಯಯ ಆದ್ದರಿಂದ ಪ್ರತ್ಯಯಸ್ವರದಿಂದ ಉದಾತ್ತ. **ಅನುದಾತ್ತಸರ್ವಮಪಾದಾದಾ** (ಪಾ.ಸೂ. ೮-೧-೧೪) ಎಂದು ಪರ್ಯುದಾಸ ಮಾಡಿರುವುದರಿಂದ ಪಾದಾದಿಯಲ್ಲಿರುವ ಹುವೇ ಎಂಬುವಕ್ಕೆ ತಿಙ್ಞತಿಙಃ ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ.

ರಾಧಸೇ—ರಾಧ ಸಂಸಿದ್ಧೌ. ಇದರ ಮುಂದೆ ಸರ್ವಧಾತುಭ್ಯೋ೭ಸುನ್ (ಉ. ಸೂ. ೪-೬೨) ಎಂಬುದರಿಂದ ಅಸುನ್. ಞ್ನಿತ್ಯಾದಿರ್ನಿತ್ಯಮ್ ಎಂಬ ನಿತ್ಸ್ವರದಿಂದ ಆದ್ಯುದಾತ್ತ.

ಅಸ್ಮಾನ್—ಅಸ್ಮದ್ ಶಬ್ದದ ಮುಂದೆ ದ್ವಿತೀಯಾಬಹುವಚನ ಶಸ್, ಅಸ್ಮದ್+ಶಸ್ ಶಕಾರಕ್ಕೆ ಇತ್ಸಂಜ್ಞೆ ಲೋಪ. ಅಸ್ಮದ್+ಅಸ್. ದ್ವಿತೀಯಾಂಚ (ಪಾ.ಸೂ. ೭-೨-೮೭) ದ್ವಿತೀಯಾ ವಿಭಕ್ತಿಪರದಲ್ಲಿರುವಾಗ ಯುಷ್ಮದ್ ಅಸ್ಮದ್ ಶಬ್ದಗಳ ಕೊನೆಯ ವರ್ಣಕ್ಕೆ ಆಕಾರ ಬರುವುದು ಎಂಬುದರಿಂದ ದಕಾರಕ್ಕೆ ಆಕಾರ ಅಸ್ಮ+ಅ+ಅಸ್, ಸವರ್ಣದೀರ್ಘೇ ಅಸ್ಮಾ+ಅಸ್ ಶಸೋನ (ಪಾ. ಸೂ. ೬-೧-೯೯) ಯುಷ್ಮದ್ ಅಸ್ಮದ್ ಶಬ್ದಗಳ ಮುಂದೆ ಇರುವ ಶಸ್‌ಗೆ ನಕಾರಾದೇಶ ಬರುವುದು ಎಂಬುದರಿಂದ ಬರುವ ನಕಾರಾದೇಶವು ಅಲೋನ್ತ್ಯಸ್ಯ ಎಂಬುದಕ್ಕೆ ಅಪವಾದವಾದ **ಆದೇಃಸೆರಸ್ಯ** (ಪಾ. ಸೂ. ೧-೧-೫೪) ಎಂಬುದರಿಂದ ಅಸ್‌ನ ಅಕಾರಕ್ಕೆ ಬರುವುದು. **'ಅಸ್ಮಾ ನ್ ಸ್ ಸಂಯೋಗಾನ್ತಸ್ಯಲೋಪಃ** (ಪಾ. ಸೂ. ೮-೨-೨೩) ಎಂಬುದರಿಂದ ಸಕಾರಕ್ಕೆ ಲೋಪ ಅಸ್ಮಾನ್ ಎಂದಾಗುವುದು.

ಜಿಗ್ಯುಷಃ—ಜಿ ಜಯೇ ಧಾತು. ಲಿಟ್ ಅದಕ್ಕೆ **ಕ್ವಸುಶ್ಚ** (ಪಾ. ಸೂ. ೩-೨-೧೦೭) ಎಂಬುದರಿಂದ ಕ್ವಸು ಆದೇಶ. **ಲಿಟಿಧಾತೋರನಭ್ಯಾಸಸ್ಯ** (ಪಾ. ಸೂ. ೬-೧-೮) ಎಂಬುದರಿಂದ ದ್ವಿತ್ವ. ಜಿ+ಜಿ+ವಸ್ **ಸೆನ್ ಲಿಟೋರ್ಜೇಃ** (ಪಾ. ಸೂ. ೭-೩-೫೭) ಸನ್, ಲಿಟ್ ಏತನ್ನಿಮಿತ್ತಕವಾದ ಜಿ ಧಾತು ಸಂಬಂಧಿಯಾದ ಯಾವ ಅಭ್ಯಾಸವಿದೆಯೋ ಅದರ ಮುಂದೆ ಇರುವುದಕ್ಕೆ ಕುತ್ವ (ಕವರ್ಗ) ಬರುವುದು ಎಂಬುದರಿಂದ ಜಕಾರಕ್ಕೆ ಗಕಾರ, ಜಿ+ಗಿ+ವಸ್, ವಸ್ ಪ್ರತ್ಯಯವು ವಲಾದಿಯಾದ ಆರ್ಧಧಾತುಕ. ಆದ್ದರಿಂದ **ಆರ್ಧಧಾತುಕ-ಸ್ಯೇಡ್ವಲಾದೇಃ** (ಪಾ. ಸೂ. ೭-೨-೩೫) ಎಂಬುದರಿಂದ ಇಡಾಗಮಪ್ರಾಪ್ತವಾಗುವುದು. ಅದಕ್ಕೆ ಏಕಾಚ ಉಪದೇಶೇಽನುದಾತ್ತಾತ್ (ಪಾ.ಸೂ. ೭-೨-೧೦) ಎಂಬುದರಿಂದ ನಿಷೇಧ ಬರುವುದು. ಪುನಃ **ಕೃಸೃಭೃ-ವೃಸ್ತುದ್ರುಸ್ರುಶ್ರುವೋ ಲಿಟಿ,** (ಪಾ ಸೂ. ೭-೨-೧೩) ಪ್ರಕೃತ್ಯಾಶ್ರಯ ಪ್ರತ್ಯಯಾಶ್ರಯಗಳಾದ ಎಷ್ಟು ಇಣ್ನಿಷೇಧ-ಗಳಿರುವುವೋ ಅವು ಲಿಟ್ಟಿನಲ್ಲಿ ಬರುವುದಾದರೆ ಕೃಸೃ ಮೊದಲಾದ ಧಾತುಗಳಿಗೇ ಬರುವುವು. ಕ್ರ್ಯಾದಿ ಭಿನ್ನವಾದ ಧಾತುಗಳ ಮುಂದೆ ಇರುವ ಲಿಟ್ಟಿಗೆ ಇಡಾಗಮನಿಷೇಧ ಬರುವುದಿಲ್ಲ ಎಂಬ ಕ್ರ್ಯಾದಿನಿಯಮದಿಂದ ಕ್ರ್ಯಾದಿಯಲ್ಲದೇ ಇರುವ ಜಿ ಧಾತುವಿನ ಮುಂದೆ ಇರುವ ವಸ್ ಎಂಬ ಲಿಟ್ಟಿಗೆ ಇಡಾಗಮಕ್ಕೆ ನಿಷೇಧಬರುವುದಿಲ್ಲ. ಏವಂಚ ಇಡಾಗಮವು ಪ್ರಾಪ್ತವಾಗುವುದು. ಇದಕ್ಕೆ **ವಸ್ತೇಕಾಚಾದ್ಸಸ್ಯಾಮ್** (ಪಾ ಸೂ. ೭-೨-೬೩) ವಸ್‌ಗೆ ಇಡಾಗಮ ಬರುವ ಪಕ್ಷಕ್ಕೆ ದ್ವಿತ್ವಾನಂತರ ಏಕಾಚ್ಯವಾದ ಧಾತು, ಆದಂತಧಾತು, ಘಸ್ಲೃ ಧಾತು ಇವುಗಳ ಮುಂದೆ ಇರುವ ವಸ್‌ಗೆ ಮಾತ್ರ ಇಡಾಗಮ ಬರುವುದು. ಇವುಗಳಿಗಿಂತಲೂ ಬೇರೆ ಧಾತುವಿನ ಮುಂದೆ ಇರುವ ವಸ್‌ಗೆ ಇಡಾಗಮ ಬರುವುದಿಲ್ಲ ಎಂಬ ನಿಯಮದಿಂದ ನಿವೃತ್ತಿ ಬರುವುದು. ಜಿಗಿವಸ್ ಎಂಬುದರ ಮುಂದೆ ದ್ವಿತೀಯಾಬಹುವಚನ ಶಸ್, ಜಿಗಿವಸ್+ಅಸ್ **ಯೆಜಿಭ್ಯಮ್** (ಪಾ ಸೂ. ೧-೪-೧೮) ಎಂಬುದರಿಂದ ಭ ಸಂಜ್ಞೆ ಬರುವುದು. **ವಸೋಸ್ಸಂಪ್ರಸಾರಣಮ್** (ಪಾ.ಸೂ. ೬-೪-೩೧) ವಸುಪ್ರತ್ಯಯಾಂತವಾದ ಭಸಂಜ್ಞಕಾಂಗಕ್ಕೆ ಸಂಪ್ರಸಾರಣ ಬರುವುದು ಎಂಬುದರಿಂದ ಸಂಪ್ರಸಾರಣ, ವಕಾರಕ್ಕೆ ಉಕಾರ, **ಸಂಪ್ರಸಾರಣಾಚ್ಚ** ಎಂಬುದರಿಂದ ಪೂರ್ವರೂಪ, ಜಿಗಿ+ಉಸ್+ಅಸ್ **ವಿರನೇಕಾಚಿಃ** (ಪಾ.ಸೂ. ೬-೪-೮೨) ಎಂಬುದರಿಂದ, ಯಣಾದೇಶ, ಇಕಾರಕ್ಕೆ ಯಕಾರ, **ಆದೇಶಪ್ರತ್ಯಯಯೋಃ** (ಪಾ.ಸೂ. ೮-೩-೫೯) ಎಂಬುದರಿಂದ ಸಕಾರಕ್ಕೆ ಷಕಾರ, ವಸ್ ಪ್ರತ್ಯಯದ ಸಕಾರಕ್ಕೆ **ಶಾಸಿವಸಿಘೀನಾಂಚ** (ಪಾ. ಸೂ. ೮-೩-೬೦) ಎಂಬುದರಿಂದ ಷತ್ವ ಬರುವುದಿಲ್ಲವೆಂದು ಹಿಂದೆಯೇ ಸ್ಪಷ್ಟಪಡಿಸಲಾಗಿರುವುದು. ರುತ್ವ ವಿಸರ್ಗಗಳು. ಜಿಗ್ಯುಷಃಕೃತಮ್ ಎಂದಿರುವಾಗ **ಕಃಕರೇ, ತ್ಕರತಿ, ಕೃಧಿ, ಕೃತೇಷ್ವನಿದಿತೇಃ** (ಪಾ. ಸೂ. ೮-೩-೫೦) ಅದಿತಿ ಶಬ್ದದ ಮುಂದೆ ಇಲ್ಲದೇ ಇರುವ ವಿಸರ್ಗಕ್ಕೆ ಕಃ ಮೊದಲಾದುವು ಪರದಲ್ಲಿರುವಾಗ ಸತ್ವ ಬರುವುದು ಎಂಬುದರಿಂದ ಸತ್ವ. ಯದ್ಯಪಿ ವ್ಯಾಖ್ಯಾನಕಾರರು ಕೃತ ಎಂಬುದು ಕ್ತಪ್ರತ್ಯಯಾಂತ ಎಂದು ವ್ಯಾಖ್ಯಾನಮಾಡಿರುವರು. ಇದನ್ನೂ ಗ್ರಹಿಸಿದರೆ ಬಾಧಕವೇನೂ ಇಲ್ಲ. ಕ್ತಾಂತವನ್ನೇ ಗ್ರಹಿಸಬೇಕು ಎಂಬುದಕ್ಕೆ ಪರ್ಯಾಪ್ತವಾದ ಪ್ರಮಾಣವು ದೊರೆಯದು. ಕೃತ ಎಂಬುದಕ್ಕೆ ಕೃತ ಎಂಬ ಅನುಪೂರ್ವಿಕವಾದ ಶಬ್ದ ಎಂದರ್ಥ. ಇಂತಹ ಅನುಪೂರ್ವಿಯುಕ್ತ ಪ್ರತ್ಯಯ ಬಂದಾಗಲೂ ಇರುವುದು, ಮುಂದೆ ವಿವರಿಸುವಂತೆ ಪ್ರಕ್ರಿಯೆಯಾದಾಗಲೂ ಇರುವುದು. ಇಲ್ಲಿ ಅವಿಶೇಷಾತ್ ಎರಡಕ್ಕೂ ಗ್ರಹಣವು—ಜಿಗ್ಯುಷಃ : ಎಂಬಲ್ಲಿ ಪ್ರತ್ಯಯಸ್ವರದಿಂದ ಉಕಾರ ಉದಾತ್ತ.

ಕೃತೇಮ್—ಡುಕೃಞ್ ಕರಣೇ, ಧಾತು. ಲೋಟ್, ಮಧ್ಯಮಪುರುಷದ್ವಿವಚನ ಥಸ್ **ಲೋಟೋ ಲಜ್ವಿತ್** (ಪಾ.ಸೂ. ೩-೪-೮೫) ಎಂಬುದರಿಂದ ಲಜ್ವದ್ಭಾವ, **ತಸ್ಥಸ್ಥಮಿಪಾಂತಾಂತೇಂತಾಮಃ** (ಪಾ.ಸೂ.

೩-೪-೧೦೧) ಎಂಬುದರಿಂದ ಥಸ್‌ಗೆ ತಮ್ ಆದೇಶ, ಕೃತಮ್ ಕರ್ತರಿಶಪ್ ಎಂಬುದರಿಂದ ಬರುವ ಶಪ್‌ಗೆ ಬಹುಲಂ ಛಂದಸಿ (ಪಾ.ಸೂ. ೨-೪-೭೩) ಎಂಬುದರಿಂದ ಲುಕ್. ಯದ್ಯಪಿ ಇಲ್ಲಿ ಕರ್ತರಿ ಶಪ್ ಎಂಬುದಕ್ಕೆ ಅಪೇವಾದ ತನಾದಿಕೃಞ್ಭ್ಯಉಃ (ಪಾ.ಸೂ. ೩-೧-೭೯) ಎಂಬುದರಿಂದ ಉವಿಕರಣ ಪ್ರಾಪ್ತವಾಗುವುದು. ಆದರೆ ಸರ್ವೇವಿಧಯಶ್ಚಂದಸಿ ವಿಕಲ್ಪ್ಯಂತೇ (ಪರಿಭಾ. ೭೫) ಎಂಬುದರಿಂದ ವಿಕಲ್ಪವಾದ್ದರಿಂದ ಬರುವುದಿಲ್ಲ. ಈ ಕ್ಲೇಶಗಳನ್ನು ಪರಿಹರಿಸಲು ಕ್ತಾಂತವೆಂದು ಹೇಳಬಹುದು. ಆ ಪಕ್ಷದಲ್ಲಿ ವಿವಕ್ಷಿತವಾದ ಸರ್ವಾನುದಾತ್ತ ಸಿದ್ಧವಾಗುವುದಿಲ್ಲ. ಆದ್ದರಿಂದ ಕ್ತಾಂತವೆಂದು ವರ್ಣಿಸಲಾಗುವುದಿಲ್ಲ. ತಿಜನ್ತವೆಂದು ಪೂರ್ವೋಕ್ತ ರೀತಿಯಲ್ಲಿ ಉಪಪಾದಿಸಿದರೆ ತಿಜ್ಞತಿಜಿಃ ಎಂಬುದರಿಂದ ಸರ್ವಾನುದಾತ್ತ ಬರುವುದು. ॥ ೬ ॥

॥ ಸಂಹಿತಾಪಾಠಃ ॥

ಇಂದ್ರಾವರುಣ ನೂ ನು ವಾಂ ಸಿಷಾಸಂತೀಷು ಧೀಷ್ವಾ ।
ಅಸ್ಮಭ್ಯಂ ಶರ್ಮ ಯಚ್ಛತಂ ॥ ೮ ॥

॥ ಪದಪಾಠಃ ॥

ಇಂದ್ರಾವರುಣಾ । ನು । ನು । ವಾಂ । ಸಿಸಾಸಂತೀಷು । ಧೀಷು । ಆ ॥
ಅಸ್ಮಭ್ಯಂ । ಶರ್ಮ । ಯಚ್ಛತಂ ॥ ೮ ॥

॥ ಸಾಯಣಭಾಷ್ಯಂ ॥

ಇಂದ್ರಾವರುಣಾ ಹೇ ಇಂದ್ರಾವರುಣೌ ಧೀಷ್ವಸ್ಮದೀಯಬುದ್ಧಿಷು ವಾಂ ಯುವಾಂ ಸಿಷಾಸೆಂತೀಷು ಸನಿತುಂ ಸಂಭಕ್ತುಂ ಸಮ್ಯಕ್ ಸೇವಿತುಮಿಚ್ಛಂತೀಷು ತದಾನೀಮಾತ್ಮಸಮಂತಾದಸ್ಮಭ್ಯಂ ಶರ್ಮ ಸುಖಂ ನೂ ನು ಅತಿಶಯೇನ ಕ್ಷಿಪ್ರಂ ಯಚ್ಛತಂ । ದತ್ತಂ । ಷಡ್ವಿಂಶತಿಸಂಖ್ಯಾಕೇಷು ಕ್ಷಿಪ್ರನಾಮಸು ನು ಮುಷ್ಣಿತಿ ಪಠಿತಂ । ತಸ್ಯ ದ್ವಿರಾವೃತ್ತಿಬಲಾದತಿಶಯೋ ಲಭ್ಯತೇ ॥ ಇಂದ್ರಾವರುಣಾ । ಉಕ್ತಂ । ನೂ ನು । ಯುಚಿ ತುನುಘಮುಷ್ಣುತಜ್ಯುತ್ರೋರುಷ್ಯಾಣಾಂ । ಪಾ. ೬-೩-೧೩೫ । ಇತಿ ಪೂರ್ವಸ್ಯ ದೀರ್ಘತ್ವಂ । ಸಿಷಾಸಂತೀಷು । ವನ ಷಣ ಸಂಭಕ್ತ್ಯೌ । ಧಾತ್ವಾದೇಃ ಷಃ ಸಃ । ಇಚ್ಛಾಯಾಂ ಸನ್ । ದ್ವಿರ್ಭಾವೋ ಹಲಾದಿಶೇಷಃ । ಸನ್ಯತ ಇತೀತ್ವಂ । ಆದೇಶಪ್ರತ್ಯಯಯೋರಿತಿ ಷತ್ವಂ । ಸನೀವಂತೇತ್ಯಾದಿನಾ । ಪಾ. ೬-೩-೪೯ । ವಿಕಲ್ಪಾದಿಡಭಾವಃ । ಜನಸನಖನಾಂ ಸನ್ಝಲೋಃ । ಪಾ. ೬-೪-೪೨ । ಇತಿ ನಕಾರಸ್ಯಾಕಾರಃ । ಉಪರಿ ಲಟಃ ಶತೃ । ಕರ್ತರಿ ಶಪ್ । ಉಗಿತಶ್ಚೇತಿ ಙೀಪ್ । ಶಪ್‌ಶ್ಯನೋರ್ನಿತ್ಯಂ । ಪಾ. ೬-೧-೬೧ । ಇತಿ ನುಮ್ । ಙೀಪಃ ಶಪಶ್ಚ ಪಿತ್ತ್ವಾಚ್ಛತುಶ್ಚ ಅಸಾರ್ವಧಾತುಕತ್ವೇನಾನುದಾತ್ತತ್ವಂ ।

ಸನೋ ನಿತ್ತ್ವಾದಾದ್ಯುದಾತ್ತತ್ವಂ। ಶದೇವ ಶಿಷ್ಯತೇ। ಧೀಷು। ಸಾನೇಕಾಚ ಇತಿ ವಿಭಕ್ತ್ಯುದಾತ್ತತ್ವಂ। ಅಸ್ಮಭ್ಯಂ। ಅಸ್ಮಭ್ಯಮಪ್ರತಿಷ್ಕುತಃ। ಋಗ್ವೇ. ೧-೨-೬। ಇತ್ಯತ್ರೋಕ್ತಂ। ಯಚ್ಛತಂ। ದಾಣ್ ದಾನೇ। ಶಪಿ ಪಾಘ್ರೇತ್ಯಾದಿನಾ ಯಚ್ಛಾದೇಶಃ॥

॥ ಪ್ರತಿಪದಾರ್ಥ ॥

ಇಂದ್ರಾವರುಣಾ—ಎಲೈ ಇಂದ್ರವರುಣರೇ। ಧೀಷು—(ನಮ್ಮ) ಬುದ್ಧಿಗಳು। ವಾಂ—ನಿಮ್ಮಿಬ್ಬರನ್ನು ಸಿಷಾಸಂತೀಷು—ಸೇವಿಸಲು ಇಚ್ಛಿಸುತ್ತಿರಲು। ಅಸ್ಮಭ್ಯಂ—ನಮಗೆ। ಆ—ಎಲ್ಲಾ ದೃಷ್ಟಿಯಿಂದಲೂ। ಶರ್ಮ—ಸುಖವನ್ನು। ನೋ ನು—ಬಹಳ ಶೀಘ್ರವಾಗಿ। ಯಚ್ಛತಂ—ಕೊಡಿ।

॥ ಭಾವಾರ್ಥ ॥

ಎಲೈ ಇಂದ್ರ ಮತ್ತು ವರುಣರೇ ನಮ್ಮ ಮನಸ್ಸುಗಳು ಸದಾ ನಿಮ್ಮನ್ನು ಸೇವಿಸುವುದರಲ್ಲಿಯೇ ಮಗ್ನವಾಗಿರುತ್ತವೆ. ಎಂದರೆ ನಾವು ನಿಮ್ಮನ್ನು ಸತತವಾಗಿ ಸೇವಿಸುತ್ತಿದ್ದೇವೆ. ಆಕ್ಕರಿಂದ ನೀವು ಪ್ರಸನ್ನರಾಗಿ ನಮಗೆ ಎಲ್ಲ ವಿಧದಲ್ಲಿಯೂ ಸುಖವನ್ನುಂಟುಮಾಡಿ.

English Translation.

Indra and Varuna, quickly bestow happiness upon us, for our minds are devoted to you both.

॥ ವಿಶೇಷವಿಷಯಗಳು ॥

ನೋ ನು—ನು ಮುಂತ್ತು ಮೊದಲಾದ ಇಪ್ಪತ್ತಾರು ಕ್ಷಿಪ್ರವಾಚಕಶಬ್ದಗಳ ಮಧ್ಯದಲ್ಲಿ ನು ಎಂಬ ಶಬ್ದವು ಪಠಿತವಾಗಿರುವುದರಿಂದ ನು ಎಂದರೆ ಬೇಗನೆ, ಶೀಘ್ರವಾಗಿ ಎಂದರ್ಥವು. ಇಲ್ಲಿ ನು ಎಂಬ ಶಬ್ದವು ಎರಡಾವರ್ತಿ ಪಠಿತವಾಗಿರುವುದರಿಂದ ಬಹುಬೇಗನೆ, ಸ್ವಲ್ಪವೂ ಕಾಲವಿಳಂಬಮಾಡದೆ ಎಂದರ್ಥವು. ಛಂದಸ್ಸಿನ ಅನುಕೂಲಕ್ಕಾಗಿ ನು ಎಂಬ ಶಬ್ದವು ಪ್ರಥಮದಲ್ಲಿ ದೀರ್ಘವಾಗಿರುವುದು. ಇದಲ್ಲದೆ ಯಾಸ್ಕರು ನು ಎಂಬ ಶಬ್ದಕ್ಕೆ ಇನ್ನೂ ಕೆಲವು ಅರ್ಥಗಳನ್ನು ಹೇಳಿರುವರು—

ನು ಇತ್ಯೇಷೋಽನೇಕಕರ್ಮಾ।
ಇದಂ ನು ಕರಿಷ್ಯತೀತಿ ಹೇತ್ವಪದೇಶೇ।
ಅಥಾಪ್ಯುಪಮಾರ್ಥೇ ಭವತಿ॥ (ನಿ. ೧-೪)

ನು ಎಂಬ ಶಬ್ದವು ಅನೇಕ ಕರ್ಮಗಳನ್ನೂ ಕಾರಣವನ್ನೂ ಸೂಚಿಸುವುದು ಮತ್ತು ಉಪಮಾರ್ಥದಲ್ಲಿಯೂ ಉಪಯೋಗಿಸಲ್ಪಡುವುದು. ಹೇಗೆಂದರೆ—ವೃಕ್ಷಸ್ಯ ನು ತೇ (ಋ. ಸಂ. ೬-೨೪-೩) ಎಂದರೆ ವೃಕ್ಷಸ್ಯೇವ ತೇ ಎಂದು.

ಸಿಷಾಸಂತೀಷು ಧೀಷು—ನಮ್ಮ ಬುದ್ಧಿಗಳು ಅಥವಾ ಮನಸ್ಸು ನಿಮ್ಮನ್ನು ಸೇವಿಸಲು ಹಾತೊರೆಯುತ್ತಿರುವವು, ಅಪೇಕ್ಷಿಸುತ್ತಿರುವವು. ಇಲ್ಲಿ ಪ್ರಥಮಾವಿಭಕ್ತ್ಯರ್ಥದಲ್ಲಿ ಸಪ್ತಮೀವಿಭಕ್ತಿಪ್ರಯೋಗವು. ಇಂತಹ ಪ್ರಯೋಗವು ಅಧುನಿಕಸಂಸ್ಕೃತದಲ್ಲಿಯೂ ವಿಶೇಷವಾಗಿ ಬಳಕೆಯಲ್ಲಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಇನ್ದ್ರಾವರುಣಾ—ಪೂರ್ವಮಂತ್ರದಲ್ಲಿ ವ್ಯಾಖ್ಯಾತವಾಗಿದೆ.

ನೂ ನು—**ಋಚಿಷುನುಧಮಷ್ಟುತೆಜ್ ಕುತ್ರೋರುಷ್ಯಾಣಾಮ್** (ಪಾ.ಸೂ. ೬-೩-೧೩೩) ಎಂಬುದರಿಂದ ನೊದಲನೆಯ ನುಗೆ ದೀರ್ಘ.

ಸಿಷಾಸನ್ತೀಷು—ವನ ಷಣ ಸಂಭಕ್ತೌ ಧಾತು, **ಧಾತ್ವಾದೇಃಷಃಸಃ** ಎಂಬುದರಿಂದ ಷಣ ಧಾತುವಿನ ಷಕಾರಕ್ಕೆ ಸಕಾರ, ಣತ್ವಕ್ಕೆ ನಿವೃತ್ತಿ. **ಧಾತೋಃ ಕರ್ಮಣಃಸಮಾನಕರ್ತೃಕಾದಿಚ್ಛಾಯಾಂವಾ** (ಪಾ. ಸೂ. ೩-೧-೭) ಎಂಬುದರಿಂದ ಸನಿತುಮಿಚ್ಛತಿ ಎಂದು ವಿವಕ್ಷಿಸಿದಾಗ ಸನ್ ಧಾತುವಿನ ಮುಂದೆ **ಸನ್ ಪ್ರತ್ಯಯ ಸನ್+ಸ. ಸನ್ಯಙೋಃ** (ಪಾ.ಸೂ. ೬-೧-೯) ಎಂಬುದರಿಂದ ದ್ವಿತ್ವ, ಸನ್ ಸನ್ + ಸ **ಹಲಾದಿಃ ಶೇಷಃ** (ಪಾ. ಸೂ. ೭-೪-೬೦) ಎಂಬುದರಿಂದ ಅಭ್ಯಾಸದ ಮೊದಲನೆಯ ಸನ್**ನ** ನಕಾರಕ್ಕೆ ನಿವೃತ್ತಿ, **ಸನ್ಯತಃ** (ಪಾ. ಸೂ. ೭-೪-೯) ಎಂಬುದರಿಂದ ಅಭ್ಯಾಸದ ಅಕಾರಕ್ಕೆ ಇತ್ವ ಸಿಸನ್+ಸ, ಸನ್ ಪ್ರತ್ಯಯವು ಆರ್ಧಧಾತುಕ, ಆದ್ದರಿಂದ **ಆರ್ಧಧಾತುಕಸ್ಯೇಡ್ವಲಾದೇಃ** (ಪಾ.ಸೂ. ೭-೨-೩೫) ಎಂಬುದರಿಂದ ಇಡಾಗಮ ಪ್ರಾಪ್ತವಾಗುವುದು. ಆದರೂ **ಸನೀವನ್ತರ್ಧಭ್ರಸ್ಜದಮ್ಭುಶ್ರಿಸ್ವ್ಯಯೂರ್ಣುಭರಜ್ಞಪಿಸನಾಮ್** (ಪಾ. ಸೂ ೭-೨-೪೯) ಇವ್ ಎಂಬುದನ್ನು ಕೊನೆಯಲ್ಲಿ ಹೊಂದಿರುವ ಧಾತುಗಳು ಋಧ್, ಭ್ರಸ್ಜ್, ದಮ್ಭು, ಶ್ರಿ, ಸ್ವೃ, ಯು, ಊರ್ಣು, ಭರ, ಜ್ಞಪಿ, ಸನ್, ಈ ಧಾತುಗಳ ಮುಂದೆ ಇರುವ ಸನ್‌ಗೆ ಇಡಾಗಮವು ವಿಕಲ್ಪವಾಗಿ ಬರುವುದು ಎಂಬುದರಿಂದ ಸನ್ ಧಾತುವಿನ ಮುಂದೆ ಇರುವ ಸನ್ ಪ್ರತ್ಯಯಕ್ಕೆ ಇಡಾಗಮವು ವಿಕಲ್ಪವಾಗಿ ವಿಹಿತವಾಗಿರುವುದು. ಆದ್ದರಿಂದ ಪಾಕ್ಷಿಕವಾಗಿ ಇಡಾಗಮ ಬರುವುದಿಲ್ಲ. **ಜನಸನಖನಾಂಸನ್‌ಝಲೋಃ** (ಪಾ.ಸೂ. ೬-೪-೪೨) ಝಲಾದಿಯಾದ ಸನ್ ಪ್ರತ್ಯಯ ಪರದಲ್ಲಿರುವಾಗಲೂ, ಝಲಾದಿಯಾದ ಕಿತ್ ಅಥವಾ ಙಿತ್ ಆದ ಪ್ರತ್ಯಯ ಪರದಲ್ಲಿರುವಾಗಲೂ ಜನ್, ಸನ್, ಖನ್ ಈ ಮೂರು ಧಾತುಗಳ ಕೊನೆಯ ವರ್ಣಕ್ಕೆ ಆಕಾರಾದೇಶ ಬರುವುದು ಎಂಬುದರಿಂದ ನಕಾರಕ್ಕೆ ಆಕಾರ, ಸವರ್ಣದೀರ್ಘ, ಸಿಸಾ+ಸ. **ಆದೇಶ ಪ್ರತ್ಯಯೆಯೋಃ** (ಪಾ.ಸೂ. ೮-೩-೫೯) ಎಂಬುದರಿಂದ ಎರಡನೆಯ ಸಕಾರಕ್ಕೆ ಷಕಾರ ಸಿಷಾಸ, ಇದಕ್ಕೆ **ಸನಾದ್ಯನ್ತಾ ಧಾತವಃ** (ಪಾ.ಸೂ. ೩-೧-೩೨) ಎಂಬುದರಿಂದ ಧಾತುಸಂಜ್ಞೆ ಇದೆ. ಇದರ ಮುಂದೆ **ಲಟ್ ಲಟಶ್ಶತೃಶಾನಚಾವಸ್ಪ್ರಥಮಾಸಮಾನಾಧಿಕರಣೇ** (ಪಾ.ಸೂ. ೩-೨-೧೨೪) ಎಂಬುದರಿಂದ ಶತೃ ಪ್ರತ್ಯಯ, ಕರ್ತರಿಶಪ್ ಎಂಬುದರಿಂದ ಶಪ್ ಸಿಷಾಸ+ಅ+ಅತ್ **ಅತೋಗುಣೇ** ಎಂಬುದರಿಂದ ಎರಡಾವರ್ತಿ ಪರರೂಪ, ಸಿಷಾಸತ್. **ಉಗಿತಶ್ಚ** (ಪಾ.ಸೂ. ೪-೧-೬) ಎಂಬುದರಿಂದ ಙೀಪ್ ಸಿಷಾಸತ್ + ಈ, **ಶಪ್‌ಶ್ಯನೋರ್ನಿತ್ಯಮ್** (ಪಾ.ಸೂ. ೭-೧-೮೧) ಶಪ್ ಶ್ಯನ್ ಇವುಗಳ ಸಂಬಂಧಿಯಾದ ಯಾವ ಅಕಾರವಿದೆಯೋ ಅದರ ಮುಂದೆ ಇರುವ ಯಾವ ಶತೃಪ್ರತ್ಯಯಾವಯವವಿದೆಯೋ ಅದನ್ನೇ ಕೊನೆಯಲ್ಲಿ ಹೊಂದಿರುವ ಅಂಗಕ್ಕೆ ಶೀ ಪರವಾಗಿರುವಾಗಲೂ ನದೀಸಂಜ್ಞಕವಾದ ವರ್ಣ ಪರವಾಗಿರುವಾಗಲೂ ನಿತ್ಯವಾಗಿ ನುಮಾಗಮ ಬರು

ವುದು ಎಂಬುದರಿಂದ ನುಮಾಗನು. ಅದು ಮಿದಚೋನ್ತ್ಯಾತ್ಪರಃ (ಪಾ.ಸೂ. ೧-೧-೪೭) ಎಂಬುದರಿಂದ ಅಂತ್ಯವಾದ ಸ್ವರದ ಮುಂದೆ ಬರುವುದು. ಏಷಾಶಸ್ತ್ರೀ ಎಂದಾಗುವುದು ಙೀಪ್, ಶಪ್ ಎರಡೂ ಪಿತ್ತಾದ್ದರಿಂದ ಅನುದಾತ್ತೌ ಸುಪ್ಪಿತೌ ಎಂಬುದರಿಂದ ಅನುದಾತ್ತ. ಶತೃಪ್ರತ್ಯಯವು ಅದುಪದೇಶವಾದ ಶಪ್ ಗಿಂತಲೂ ಪರದಲ್ಲಿರುವುದು. ಆದ್ದರಿಂದ ತಾಸ್ಯನುದಾತ್ತೇತ್—, (ಪಾ.ಸೂ. ೬-೧-೧೮೬) ಎಂಬುದರಿಂದ ಅನುದಾತ್ತ, ಸನ್ ಪ್ರತ್ಯಯವು ನಿತ್. ಆದ್ದರಿಂದ ಞ್ನಿತ್ಯಾದಿರ್ನಿತ್ಯಮ್ (ಪಾ.ಸೂ. ೬-೧-೧೯೭) ಎಂಬುದರಿಂದ ಏಷಾಸ ಎಂಬುದು ಆದ್ಯುದಾತ್ತ, ಇದೇ ಸ್ವರವೇ ನಿಲ್ಲುವುದು ಸಪ್ತಮೀ ಬಹುವಚನದಲ್ಲಿ ಏಷಾಶಸ್ತ್ರೀಷು ಎಂದಾಗುವುದು.

ಧೀಷು—ಧ್ಯೈ ಚಿನ್ತಾಯಾಂ. ಧ್ಯಾಯತೇಸ್ಸಂಪ್ರಸಾರಣಂಚ (ಪಾ.ಸೂ. ೩,೩-೧೦೮) ಧ್ಯೈ ಧಾತು ವಿಗೆ ಸಂಪ್ರಸಾರಣವೂ ಅದರ ಮುಂದೆ ಕ್ವಿಪ್ ಪ್ರತ್ಯಯವೂ ಬರುವುದು ಎಂಬುದರಿಂದ ಕ್ವಿಪ್ ಆದಕ್ಕೆ ಲೋಪ, ಸಂಪ್ರಸಾರಣ=ಯಕಾರಕ್ಕೆ ಇಕಾರ ಸಂಪ್ರಸಾರಣಾಚ್ಚ್ವಿ (ಪಾ.ಸೂ. ೬-೧-೧೦೦) ಎಂಬುದರಿಂದ ಪೂರ್ವರೂಪ. ಧಿ ಎಂದಾಯ್ತು. ಹಲಃ, (ಪಾ.ಸೂ. ೬-೪-೨) ಎಂಬುದರಿಂದ ದೀರ್ಘೇ ಧೀ ಎಂದಾಗುವುದು. ಇದರ ಮುಂದೆ ಸಪ್ತಮೀ ಬಹುವಚನ ಸುಪ್ ಧೀ+ಸು ಆದೇಶಪ್ರತ್ಯಯಯೋಃ ಷಷ್ಠ್ಯಾವೇಕಾಚಸ್ತೃತೀಯಾದಿರ್ವಿಭಕ್ತಿಃ (ಪಾ ಸೂ. ೬-೧-೧೬೮) ಎಂಬುದರಿಂದ ವಿಭಕ್ತಿಯು ಉದಾತ್ತ.

ಅಸ್ಮೈಭ್ಯಮ್—ಅಸ್ಮೈಭ್ಯಮಪ್ರತಿಷ್ಕುತೇಃ (ಋ.ಸಂ- ೧-೭-೬) ಎಂಬಲ್ಲಿ ವಿವೃತವಾಗಿದೆ.

ಯೇಚ್ಛೈತಮ್—ದಾಣ್ ದಾನೇ, ಲೋಟ್, ಮಧ್ಯಮಪುರುಷದ್ವಿವಚನ ಥಸ್, ಲೋಟೋಲಙ್ವತ್ ಎಂಬುದರಿಂದ ಲಙ್ವದ್ಭಾವ, ತಸ್ಥಸ್ಥಮಿಪಾಂ ಎಂಬುದರಿಂದ ತಮ್ ಆದೇಶ, ಕರ್ತರಿಶಪ್, ಪಾಘ್ರಾಧ್ಮಾ (ಪಾ.ಸೂ. ೭-೩-೭೮) ಎಂಬುದರಿಂದ ದಾಣ್ ಎಂಬುದಕ್ಕೆ ಯಚ್ಛ ಆದೇಶ, ಯಚ್ಛತಮ್ ಎಂದಾಗುವುದು ॥ ೮ ॥

॥ ಸಂಹಿತಾಪಾಠಃ ॥

ಪ್ರ ವಾಮಶ್ನೋತು ಸುಷ್ಟುತಿರಿಂದ್ರಾವರುಣಾ ಯಾಂ ಹುವೇ ।
ಯಾವ್ಯುಧಾಧೇ ಸದಸ್ಟುತಿಂ ॥ ೯ ॥

॥ ಪದಪಾಠಃ ॥

ಪ್ರ । ವಾಂ । ಅಶ್ನೋತು । ಸುಽಸ್ತುತಿಃ । ಇಂದ್ರಾವರುಣಾ । ಯಾಂ । ಹುವೇ ।
ಯಾಂ । ಯುಧಾಧೇ ಇತಿ । ಸದಽಸ್ತುತಿಂ ॥ ೯ ॥

॥ सायणभाष्यं ॥

इन्द्रावरुणा हे इन्द्रावरुणौ यामस्मत्कर्तृकां शोभनस्तुतिं प्रति हुवे युवामुभावाह्वयामि । किंच सधस्तुतिं युवयोरुभयोः साहित्येन क्रियमाणायाः स्तवक्रियायाया यां सुष्टुतिं प्रतिलभ्य यद्धाथे युवां वर्धाथे । तादृशीं सुष्टुतिः शोभनस्तुतिहेतुभूतं ऋक्समूहोऽस्मदीयो वामश्नोतु । युवा व्याप्नोतु ॥ अश्नोतु । अशू व्याप्तौ । लोटोऽर्थे व्यत्ययेन तिप् । स्वादिभ्यः श्नुः । सुष्टुतिः । नञ्विभक्तेरस्य सुष्टुतिं । ऋग्वेदे. ७-६-६ । इत्यत्रोक्तं । इन्द्रावरुणा । हुवे । उक्तं । अत्र तु यद्वृत्तयोगान्न निघातः । यद्धाथे । यधृ वृद्धौ । लट् । व्यत्ययेनात्मनेपदं । मध्यमद्विवचनेऽश्नोर्बहुलं छन्दसीति लुक् । प्रत्ययस्वरेणाकार उदात्तः । यच्चबन्तयोगान्न निघातः । सधस्तुतिं । सह स्तुतिर्यस्यां सुष्टुतौ सा सधस्तुतिः । अत्र सुष्टुतिरित्यस्मत्पदार्थे स्तुतिशब्दस्य स्तूयतेऽनयेति करणसाधनत्वेन ऋक्परत्वेऽयं स्तुतिशब्दो भावसाधनतया स्तवनक्रियापरः । तस्मिन्भावसाधनत्वेन क्रियापरेऽयं करणसाधनतया ऋक्पर इति समस्यमानपदार्थादस्मत्पदार्थस्य हकारस्य व्यत्ययेन धकारः । सहशब्द एवमादित्वादन्तोदात्तः । बहुव्रीहित्वेन पूर्वपदप्रकृतिस्वरत्वं ॥ ४३ ॥ ॥ ४ ॥

॥ प्रतिपदार्थ ॥

इन्द्रावरुण—इन्द्र मत्तु वरुणरे । यां—यावं नम्मु स्तुतियन्नु द्वेशिसि । हुवे—(नम्मिब्बरन्नु) आह्वानिसुत्तेवे । (मत्तु) यां सधस्तुतिं—नम्मिब्बरन्नु एकीकरिसि माडुव यावं स्तोत्रदिंद । यद्धाथे—अभिवृद्धि हॊंदुत्तिरुवे (संतोषिसुत्तिरुवे) । सुष्टुतिः—(अंतह) स्तोत्ररूपवाद (ऋक्समूहवु) । वामश्नोतु—निम्मन्नु हॊंदलि.

॥ भावार्थ ॥

एलै इन्द्र मत्तु वरुणरे, नावु निम्मन्नु स्तुतियिंद प्रत्येकवागि आह्वानिसुत्तेवे. ऒंदॊंदुवेळे निम्मिब्बरनू ऒट्टागि उद्देशिसि स्तुतिसुत्तेवे. इंतह स्तोत्रगळिंद नीवु संतुष्टरागि.

English Translation

May the earnest praise which I offer to Indra and Varuna reach you both ; and may you fulfil that prayer addressed to you both.

॥ विशेषविषयगळु ॥

अश्नोतु— व्याप्नोतु—नावु माडुव स्तोत्रवु निम्मन्नु सेरलि, निमगे प्रियवागलि ऎंदर्थवु.

ಋಧಾಥೇ—ಯಥು ವೃದ್ಧಿ । ವರ್ಧೇತಾಂ ॥ ನೀವು, ನಾವು ಮಾಡಿದ ಸ್ತುತಿಯನ್ನು ಮೆಚ್ಚಿರಿ, ಅಥವಾ ಪ್ರಶಂಸೆಮಾಡಿರಿ, ಅದರಿಂದ ಸಂತೃಪ್ತರಾಗಿರಿ ಇತ್ಯಾದ್ಯರ್ಥಗಳನ್ನು ಹೇಳಬಹುದು.

ಸಧಸ್ತುತಿಂ—ಸಹ ಸ್ತುತಿರ್ಯಸ್ಯಾಂ ಸುಷ್ಟುತೌ ಸಾ ಸಧಸ್ತುತಿಃ ॥ ಇಬ್ಬರನ್ನು ಸೇರಿಸಿ ಒಟ್ಟಾಗಿ ಸ್ತುತಿಸುವ ಸ್ತೋತ್ರಕ್ಕೆ ಸಧಸ್ತುತಿಯೆಂದು ಹೆಸರು. ಇಲ್ಲಿ ಇಂದ್ರ ಮತ್ತು ವರುಣ ಎಂಬ ಇಬ್ಬರು ದೇವತೆಗಳನ್ನು ಒಟ್ಟಾಗಿ ಸೇರಿಸಿ ಸ್ತೋತ್ರಮಾಡಲ್ಪಟ್ಟಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಅಶ್ನೋತು—ಅಶೂ ವ್ಯಾಪ್ತೌ ಲೋಟ್ ಅನುದಾತ್ತೇತ್ತು, ಆದ್ದರಿಂದ 'ಅನುದಾತ್ತಙಿತಆತ್ಮನೇಪದಮ್' ಎಂಬುದರಿಂದ ಆತ್ಮನೇಪದವು ಯದ್ಯಪಿ ಬರಬೇಕು. ಆದರೂ **ವ್ಯತ್ಯಯೋಬಹುಲಂ** (ಪಾ.ಸೂ. ೩-೧-೮೫) ಎಂಬುದರಿಂದ ವ್ಯತ್ಯಯವಾಗಿ ಪರಸ್ಮೈಪದ ತಿಪ್ರತ್ಯಯವು ಬರುವುದು. **ಸ್ವಾದಿಭ್ಯಃ ಶ್ನುಃ** (ಪಾ.ಸೂ. ೩-೧-೭೩) ಎಂಬುದರಿಂದ ಶ್ನು ವಿಕರಣ. ಅಶ್+ನು+ತಿ ಗುಣ ಏರುಃ ಎಂಬುದರಿಂದ ಇಕಾರಕ್ಕೆ ಉಕಾರ.

ಸುಷ್ಟುತಿಃ—ನ ವಿನ್ದೇ ಅಸ್ಯ ಸುಷ್ಟುತಿಮ್ (ಋ. ಸಂ. ೧-೭-೭) ಎಂಬಲ್ಲಿ ವ್ಯಾಖ್ಯಾತವಾಗಿದೆ.

ಇಂದ್ರಾವರುಣಾ, ಹುವೇ—ಇದೇ ಸೂಕ್ತ ೭ನೇ ಮಂತ್ರದಲ್ಲಿ ನೋಡಿರಿ. ಅಲ್ಲಿ ಪದಾದಿಯಲ್ಲಿರುವುದರಿಂದ ಸರ್ವಾನುದಾತ್ತ ಬರುವುದಿಲ್ಲ ಎಂದು ಹೇಳಲಾಗಿದೆ ಇಲ್ಲಿಯಾದರೋ ಯೆದ್ವೃತ್ತಾನ್ನಿತ್ಯಮ್ (ಪಾ.ಸೂ. ೮-೧-೬೬) ಯಾವ ಪದದಲ್ಲಿ ಯಚ್ಶಬ್ದವಿದೆಯೋ ಅದರ ಮುಂದೆ ಇರುವ ತಿಙಂತವು ಅನುದಾತ್ತವಾಗುವುದಿಲ್ಲ ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ.

ಋಧಾಥೇ—ಋಧು ವೃದ್ಧೌ ಲಟ್ ವ್ಯತ್ಯಯದಿಂದ ಆತ್ಮನೇಪದ ಪ್ರಥಮಪುರುಷ ದ್ವಿವಚನ ಆಥಾಮ್. **ಟಿತಆತ್ಮನೇಪದಾನಾಂಟೇರೇ** (ಪಾ. ಸೂ. ೩-೪-೭೯) ಎಂಬುದರಿಂದ ಟಗೆ (ಆಮ್) ಏತ್ವ. **ಸ್ವಾದಿಭ್ಯಃಶ್ನುಃ** ಎಂಬುದರಿಂದ ಶ್ನು ಪ್ರತ್ಯಯ. ಅದಕ್ಕೆ ಬಹುಲಂ ಛಂದಸಿ (ಪಾ. ಸೂ. ೨-೪-೭೩) ಎಂಬುದರಿಂದ ಲುಕ್. ಋಧಾಥೇ ಎಂದಾಗುವುದು. ಪ್ರತ್ಯಯಸ್ವರದಿಂದ ಅಂದರೆ **ಆದ್ಯುದ್ಯುದಾತ್ತೌ ಶ್ಚ** (ಪಾ. ಸೂ. ೩-೧-೩) ಎಂಬುದರಿಂದ ಆಥೇ ಪ್ರತ್ಯಯದ ಆದಿಯಲ್ಲಿರುವ ಆಕಾರ ಉದಾತ್ತ. ಯಾವ್ಯಧಾಥೇ ಎಂದು ಯಚ್ಶಬ್ದಘಟಿತವಾದ ಪದದ ಮುಂದೆ ಇರುವುದು. ಆದ್ದರಿಂದ ಯದ್ವೃತ್ತಾನ್ನಿತ್ಯಮ್ ಎಂದು ನಿಷೇಧ ಬರುವುದರಿಂದ **ತಿಙ್ಶಿತಿಙಃ** ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ.

ಸಧಸ್ತುತಿಮ್—ಸಹ ಸ್ತುತಿರ್ಯಸ್ಯಾಂ ಸುಷ್ಟುತೌ ಸಾ ಸಧಸ್ತುತಿಃ ಎಂದು **ಅನೇಕಮನ್ಯಪದಾರ್ಥೇ** (ಪಾ. ಸೂ. ೨-೨-೨೪) ಎಂಬುದರಿಂದ ಬಹುವ್ರೀಹಿ, ಅನ್ಯಪದಾರ್ಥದಲ್ಲಿ ಅನೇಕ ಸುಬಂತಗಳು ಸಮಾಸವನ್ನು ಹೊಂದುವುವು. ಇವಕ್ಕೆ ಬಹುವ್ರೀಹಿ ಎಂದು ಹೆಸರು ಎಂದು ಸೂತ್ರಾರ್ಥ. ಅನ್ಯಪದಾರ್ಥ ಎಂದರೆ ಯಾವ ಪದಗಳಿಗೆ ಸಮಾಸವನ್ನು ಹೇಳುವೆವೊ ಅದಕ್ಕಿಂತಲೂ ಬೇರೆಯಾದ ಪದದ ಅರ್ಥದಲ್ಲಿರತಕ್ಕದ್ದು ಎಂದು ಅರ್ಥ. ಇಲ್ಲಿ ಸಹ ಸ್ತುತಿ ಎಂಬಿವುಗಳಿಗೆ ಸಮಾಸವನ್ನು ಹೇಳುವೆವು. ಆದ್ದರಿಂದ ಸ್ತುತಿ ಎಂಬುದು ಹೇಗೆ ಅನ್ಯಪದಾರ್ಥವಾಗುವುದು ಎಂದು ಶಂಕೆಗೆ ಅವಕಾಶವಿಲ್ಲ. ಸಮಾಸದಲ್ಲಿ ಸೇರಿರುವ ಸ್ತುತಿ ಎಂಬುದರ ಅರ್ಥವೇ

ಬೇರೆ. ಅನ್ಯಪದಾರ್ಥವಾಗಿ ವಿವಕ್ಷಿತವಾದ ಸುಷ್ಟುತಿಶಬ್ದೋಪಸ್ಥಿತವಾದ ಅರ್ಥವೇ ಬೇರೆ. ಹೇಗೆಂದರೆ ಅನ್ಯಪದಾರ್ಥವಾದ ಸುಷ್ಟುತಿ ಎಂಬಲ್ಲಿ ಸ್ತುತಿ ಶಬ್ದಕ್ಕೆ ಸ್ತೂಯತೇ ಅನಯಾ ಇತಿ ಸ್ತುತಿಃ, ಕರಣಾರ್ಥದಲ್ಲಿ ಕ್ತಿನ್ ಪ್ರತ್ಯಯವಾಗಿ ಸ್ತೋತ್ರಕರಣವಾದ (ಸಾಧನವಾದ) ಋಕ್ಕು ಎಂದು ಅರ್ಥವಾದರೆ ಸಮಾಸದಲ್ಲಿ ಸೇರಿದ ಸ್ತುತಿ ಶಬ್ದಕ್ಕೆ ಸ್ತವನಂಸ್ತುತಿಃ ಎಂದು ಭಾವಾರ್ಥದಲ್ಲಿ ಕ್ತಿನ್ ಬಂದು ಸ್ತವನಕ್ರಿಯೆ ಎಂದು ಅರ್ಥ. ಅನ್ಯಪದಾರ್ಥದಲ್ಲಿ ಸ್ತುತಿ ಶಬ್ದವು ಭಾವಾರ್ಥ ಕ್ತಿನ್ ಪ್ರತ್ಯಯಾನ್ತವಾಗಿ ಸ್ತವನ ಹೇಳುವುದು ಎಂದು ವಿವಕ್ಷಿಸಿದರೆ, ಸಮಾಸದಲ್ಲಿ ಸೇರಿರುವ ಸ್ತುತಿ ಶಬ್ದವು ಕರಣಾರ್ಥಕ ಕ್ತಿನ್ ಪ್ರತ್ಯಯಾಂತವಾಗಿ ಋಕ್ ಎಂಬ ಅರ್ಥವನ್ನು ಪ್ರತಿಪಾದಿಸುವುದು ಏವಂಚ ಸಮಸ್ಯಮಾನನಾದ ಪದಪ್ರತಿಪಾದ್ಯಾರ್ಥಕ್ಕಿಂತಲೂ ಸುಷ್ಟುತಿಪದೋಪಸ್ಥಾಪಿತವಾದ ಅರ್ಥವು ಬೇರೆಯಾದ್ದರಿಂದ ಅದು ಅನ್ಯಪದಾರ್ಥವಾಗುವುದು. ಸಹ ಎಂಬಲ್ಲಿ ಹಕಾರಕ್ಕೆ ವ್ಯತ್ಯಯದಿಂದ ಧಕಾರ. ಏವಾದೀನಾಮನ್ತಃ (ಫಿ. ಸೂ. ೪-೮೨) ಎಂಬುದರಿಂದ ಸಹ ಶಬ್ದವು ಅಂತೋದಾತ್ತ. ಬಹುವ್ರೀಹಿ ಸಮಾಸ ಬಂದನಂತರವೂ ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್ (ಪಾ.ಸೂ. ೬-೨-೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರ ಬರುವುದು ॥ ೯ ॥

ಹದಿನೆಂಟನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಪಂಚಮೇಽನುವಾಕೇ ಷಟ್ ಸೂಕ್ತಾನಿ । ತತ್ರ ಸೋಮಾನಮಿತ್ಯಾದಿಕಂ ನವರ್ಚಂ ಪ್ರಥಮಂ ಸೂಕ್ತಂ । ಋಷಿಚ್ಛಂದಸೀ ಪೂರ್ವವತ್ । ದೇವತಾವಿಶೇಷಸ್ತ್ವೇವಮನುಕ್ರಮ್ಯತೇ । ಸೋಮಾನಮಿತಿ ಪಂಚ ಬ್ರಾಹ್ಮಣಸ್ಪತ್ಯಾಶ್ಚತುರ್ಥ್ಯಮಿಂದ್ರಶ್ಚ ಸೋಮಶ್ಚ ಪಂಚಮ್ಯಾಂ ದಕ್ಷಿಣಾ ಚಾನ್ಯಾಃ ಸಾದಸಸ್ಪತ್ಯಾ ನಾರಾಶಂಸೀ ವಾಂತ್ಯೇತಿ । ಸೂಕ್ತ್ತಗತಾ ಆದ್ಯಾಃ ಪಂಚರ್ಚೋ ಬ್ರಹ್ಮಣಸ್ಪತಿ ದೇವತಾಕಾಃ । ತಾಸಾಂ ಮಧ್ಯೇ ಸ ಹಾ ವೀರ ಇತ್ಯೇತಸ್ಯಾಶ್ಚತುರ್ಥ್ಯಾ ಋಚೋ ಬ್ರಹ್ಮಣಸ್ಪತಿರಿಂದ್ರಶ್ಚ ಸೋಮಶ್ಚೇತಿ ತಿಸ್ರೋ ದೇವತಾಃ । ತ್ವಂ ತಮಿತ್ಯೇತಸ್ಯಾಃ ಪಂಚಮ್ಯಾ ದಕ್ಷಿಣಯಾ ಸಹ ಪೂರ್ವೋಕ್ತಾಸ್ತಿಸ್ರೋ ದೇವತಾಃ । ಷಷ್ಠೀಮಾರಭ್ಯ ತಿಸೃಣಾಂ ಸದಸಸ್ಪತಿರ್ದೇವತಾ । ನರಾಶಂಸಮಿತ್ಯೇತಸ್ಯಾ ನವಮ್ಯಾಃ ಸದಸಸ್ಪತಿರ್ನರಾಶಂಸೋ ವಾ ವಿಕಲ್ಪ್ಯತೇ ॥ ವಿನಿಯೋಗಸ್ತು ಪೂರ್ವವತ್ ॥

ಅನುವಾಕವು—ಈ ಸೂಕ್ತದಿಂದ ಐದನೆಯ ಅನುವಾಕವು ಪ್ರಾರಂಭವಾಗುವುದು. ಈ ಅನುವಾಕದಲ್ಲಿ ಆರು ಸೂಕ್ತಗಳಿರುವವು. ಅವುಗಳಲ್ಲಿ ಸೋಮಾನಂ ಎಂಬ ಒಂಭತ್ತು ಋಕ್ಕಿನ ಸೂಕ್ತವೇ ಮೊದಲನೆಯದು. ಋಷಿಛಂದಸ್ಸುಗಳು ಹಿಂದಿನ ಸೂಕ್ತದಂತೆ. ದೇವತಾವಿಶೇಷವು ಅನುಕ್ರಮಣಿಕೆಯಲ್ಲಿ ಈ ರೀತಿ ಹೇಳಲ್ಪಟ್ಟಿರುವುದು. "ಸೋಮಾನಮಿತಿ ಪಂಚ ಬ್ರಾಹ್ಮಣಸ್ಪತ್ಯಾಶ್ಚತುರ್ಥ್ಯಮಿಂದ್ರಶ್ಚ ಸೋಮಶ್ಚ ಪಂಚಮ್ಯಾಂ ದಕ್ಷಿಣಾ ಚಾನ್ಯಾಃ ಸಾದಸಸ್ಪತ್ಯಾ ನಾರಾಶಂಸೀ ವಾಂತ್ಯೇತಿ" ಎಂದರೆ ಐದನೆಯ ಅನುವಾಕದ ಸೋಮಾನಂ ಎಂಬ ಸೂಕ್ತದಲ್ಲಿ ಮೊದಲ ಮೂರು ಋಕ್ಕುಗಳಿಗೆ ಬ್ರಹ್ಮಣಸ್ಪತಿಯೂ, ನಾಲ್ಕನೆಯ ಋಕ್ಕಿಗೆ ಬ್ರಹ್ಮಣಸ್ಪತಿ, ಇಂದ್ರ, ಸೋಮ ಎಂಬುವರೂ, ಐದನೆಯ ಋಕ್ಕಿಗೆ ಬ್ರಹ್ಮಣಸ್ಪತಿ, ದಕ್ಷಿಣಾ ಎಂಬುವರೂ, ಆರರಿಂದ ಎಂಟರವರೆಗಿನ ಋಕ್ಕುಗಳಿಗೆ ಸದಸಸ್ಪತಿಯೂ, ಒಂಭತ್ತನೆಯ ಋಕ್ಕಿಗೆ ಸದಸಸ್ಪತಿ ಅಥವಾ ನರಾಶಂಸನು, ದೇವತೆಗಳು ಎಂದು

ಹೇಳಲ್ಪಟ್ಟಿದೆ. ಸೂಕ್ತದ ಮೊದಲನೆಯ ಐದು ಋಕ್ಕುಗಳೂ ಬ್ರಹ್ಮಣಸ್ಪತಿದೇವತಾಕವಾದವು. ಅವುಗಳಲ್ಲಿ ಸ ಘಾ ವೀರಃ ಎಂಬ ನಾಲ್ಕನೆಯ ಋಕ್ಕಿಗೆ ಬ್ರಹ್ಮಣಸ್ಪತಿ, ಇಂದ್ರ, ಸೋಮ ಎಂದು ಮೂವರು ದೇವತೆಗಳಿರುವರು. ಕ್ವಂ ತೆಂ ಎಂಬ ಐದನೆಯ ಋಕ್ಕಿಗೆ ದಕ್ಷಿಣಾ ಎಂಬ ದೇವತೆಯೊಡನೆ ಹಿಂದಿನ ಋಕ್ಕಿನ ಮೂವರು ದೇವತೆಗಳು. ಆರರಿಂದ ಎಂಟರವರೆಗಿನ ಮೂರು ಋಕ್ಕುಗಳಿಗೆ ಸರಸಸ್ಪತಿಯು ದೇವತೆಯು. ನರಾಶಂಸಂ ಎಂಬ ಒಂಭತ್ತನೆಯ ಋಕ್ಕಿಗೆ ಸದಸಸ್ಪತಿ ಅಥವಾ ನರಾಶಂಸನು ವಿಕಲ್ಪದಿಂದ ದೇವತೆಯು. ವಿನಿಯೋಗವು ಹಿಂದಿನಂತೆ ॥

॥ ಓಂ ॥

ಸೂಕ್ತ—೧೪

॥ ಮಂಡಲ—೧ ॥ ಅನುವಾಕ—೫ ॥ ಸೂಕ್ತ—೧೪ ॥

॥ ಅಷ್ಟಕ—೧ ॥ ಅಧ್ಯಾಯ—೧ ॥ ವರ್ಗ ೩೪, ೩೫ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೧–೯ ॥

॥ ಋಷಿಃ—ಮೇಧಾತಿಥಿಃ ಕಾಣ್ವಃ ॥

॥ ದೇವತಾ— ೧-೩ ಬ್ರಹ್ಮಣಸ್ಪತಿಃ ॥ ೪. ಬ್ರಹ್ಮಣಸ್ಪತಿರಿಂದ್ರಶ್ಚ ಸೋಮಶ್ಚ ।
೫. ಬ್ರಹ್ಮಣಸ್ಪತಿರ್ದಕ್ಷಿಣಾ ಚ । ೬-೮. ಸದಸಸ್ಪತಿಃ ।೯. ಸದಸ-
ಸ್ಪತಿರ್ನರಾಶಂಸೋ ವಾ ॥

ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಸೋಮಾನಂ ಸ್ವರಣಂ ಕೃಣುಹಿ ಬ್ರಹ್ಮಣಸ್ಪತೇ ।
ಕಕ್ಷೀವಂತಂ ಯ ಔಶಿಜಃ ॥ ೧ ॥

॥ ಪದಪಾಠಃ ॥

ಸೋಮಾನಂ । ಸ್ವರಣಂ । ಕೃಣುಹಿ । ಬ್ರಹ್ಮಣಃ । ಪತೇ ॥
ಕಕ್ಷೀವಂತಂ । ಯಃ । ಔಶಿಜಃ ॥ ೧ ॥

॥ सायणभाष्यं ॥

हे ब्रह्मणस्पते एतन्नामकदेव सोमानमभिषवस्य कर्तारं मामनुष्यातारं स्वरणं देवेषु प्रकाशनवंतं कृणुहि। कुरु। अत्र दृष्ट्वांतः। कक्षीवंतमेतन्नामकमृषिं। इवशब्दोऽत्राध्याहर्तव्यः। कक्षीवान्यथा देवेषु प्रसिद्धस्तद्वदित्यर्थः। यः कक्षीवान्नैशिरौशिज उशिजः पुत्रः। तमिवेति पूर्वत्र योजना। कक्षीवतोऽनुष्यातृषु मुनिषु प्रसिद्धस्त्रैत्रिरीय्यैरामन्यते। एवं नै पर आट्णारः कक्षीवान् औशिजो दीर्घतमस उशिजः पुत्रः श्रायसस्त्रसदस्युः पौरुकुत्स्यः प्रजाकामा अचिन्वत। तै. सं. ३-६-३-६। इति ऋगंतरेऽप्यृषित्वकथनेनानुष्यातृत्वप्रसिद्धिः सूच्यते। अहं कक्षीवाँ ऋषिरस्मि विप्रः। ऋग्वे. ४-३६-१। इति। तस्मादस्यानुष्यातारं प्रति द्वष्ट्वांतत्वं युक्तं। सोऽयं मंत्रो यास्केनैवं व्याख्यातः। सोमानं सोतारं प्रकाशनवंतं कुरु ब्रह्मणस्पते कक्षीवंतमिव यं औशिजः। कक्षीवान्नाम्नर्क्ष्यावान्नैशिज उशिजः पुत्रः उशिग्जेष्ठः कांतिकर्मणोऽपि त्वयं मनुष्यकक्ष एवाभिप्रेतः स्यात्तं सोमानं सोतारं मा प्रकाशनवंतं कुरु ब्रह्मणस्पते। नि. ६-१०। इति। अस्मिन्मंत्रे सोमानमिति पादेन कृणुहि ब्रह्मण इति पादेन सूचितं तात्पर्यं तैत्तिरीया आमनंति। सोमानं स्वरणमित्याह सोमपीथनिवावरुंद्धे। कृणुहि ब्रह्मणस्पत इत्याह ब्रह्मवर्चसमेवावरुंद्धे। तै. सं. १-३-७-४ इति ॥ सोमानं। सुनोतीति। षुञ् अभिषवे। अन्येभ्योऽपि दृश्यंत इति मनिन्। दृषिग्रहणस्य विध्यंतरोपसंग्रहणार्थत्वान्नित्त्वेऽपि नाद्युदात्तत्वं किंतु प्रत्ययस्वर एव। उंभादिषु पठा सोमसुञ्शब्दो द्रष्टव्यः। पा. ६-१-१६० बहुलग्रहणादौणादिको वा मनिर्द्रष्टव्यः। स्वरणं। प्रख्यातं। स्वृ शब्दोपतापयोः। कृत्यल्युटो बहुलं। पा. ३-३-११३। इति कर्मणि ल्युट्। लिति त्यकार उदात्तः। कृणुहि। कृवि हिंसाकरणयोश्च। इदितो नुमुधातोरिति नुमुं। लोटः सिपो हिः। शपि प्राप्ते धिन्विकृण्व्योरच्चेत्युप्रत्ययः। तत्सन्नियोगेन वकारस्य चाकारः। तस्यातो लोपः इति लोपः। तस्य स्थानिवद्भावान्न पूर्वस्य लघूपधगुणः। हेर्ज्ञित्त्वादुकारस्य न गुणः। उतश्च प्रत्ययाच्छंदोवाचनं। पा. ६-४-१०४-८। इति हेर्लुगू। सति शिष्टस्वरबलीयस्त्वमन्यत्र विकरणेभ्य इति वचनाद्धेरेव प्रत्ययस्वरेणोदात्तत्वं। पादादित्वान्न निघातः। ब्रह्मणः षष्ठ्यंतः पतिपुत्रेत्यादिना। पा. ८-३-५३। संहितायां विसर्जनीयस्य सकारः। सुञामंत्रितपरांगवदभावात्पदद्वयस्यामंत्रितनिघातः। कक्षीवंतं। कक्षे भवा कक्ष्या शृङ्खलादिरसंबंधिनी रज्जुः। भवे छंदसि। पा. ४-४-११०। इति यत्प्रत्ययः। सास्यास्तीत्यर्थे असंदीवदष्ठीवच्चक्रीवत्कक्षीवत्। पा. ८-२-१२। इत्यृषिविशेषनामा कक्षीवच्छब्दो निपातितः। छंदसीर इति वत्वं। यप्रत्ययस्वरेण तदादेशोऽयं निपातित ईकार उदात्तः। मतुप्पुपौ पित्त्वादनुदात्तौ। औशिजः। वश कांतौ। इजेत्यनुवृत्तौ वशेः कित्। उ. २-११। इतीजिप्रत्ययः। तस्य कित्त्वाद्गुणहिंस्ज्योत्यादिना संप्रसारणं परपूर्वत्वे गुणाभावः। स तस्यापत्यं। पा. ४-१-९२। इति प्राग्दीव्यतोऽण्। पा. ४-१-८३। आदिवृद्धिः। प्रत्ययस्वरेणांतोदात्तत्वं ॥

॥ ಪ್ರತಿಪದಾರ್ಥ ॥

ಹೇ ಬ್ರಹ್ಮಣಸ್ಪತೇ—ಎಲೈ ಬ್ರಹ್ಮಣಸ್ಪತಿಯೇ । **ಯಃ**—ಯಾವ । **ಔಶಿಜಃ**—ಉಶಿಕ್ಪುತ್ರನಾದ **ಕಕ್ಷೀವಾನ್** ಎಂಬ ಋಷಿ ಇದ್ದನೋ । **ಕಕ್ಷೀವಂತಂ**—ಅಂತಹ ಕಕ್ಷೀವಾನನೆಂಬ ಋಷಿಯಂತೆ । **ಸೋಮಾನಂ**—ಸೋಮರಸವನ್ನು ಸಿದ್ಧಪಡಿಸುವವನನ್ನು (ಯಜಮಾನನಾದ ನನ್ನನ್ನು) **ಸ್ವರಣಂ**—ದೇವತೆಗಳಲ್ಲಿ ಪ್ರಸಿದ್ಧನನ್ನಾಗಿ ಅಥವಾ ಬ್ರಹ್ಮವರ್ಚಸ್ವಿಯನ್ನಾಗಿ । **ಕೃಣುಹಿ**—ಮಾಡು.

॥ ಭಾವಾರ್ಥ ॥

ಉಶಿಜಪುತ್ರನಾದ ಕಕ್ಷೀವಾನ್ ಎಂಬುವನು ಸೋಮಯಾಗವನ್ನು ಮಾಡಿದವನೆಂದು ದೇವತೆಗಳಲ್ಲಿ ಪ್ರಸಿದ್ಧನಾಗಿದ್ದಾನೆ. ಎಲೈ ಬ್ರಹ್ಮಣಸ್ಪತಿಯೇ, ಯಜ್ಞಕರ್ತೃವಾದ ನನ್ನನ್ನೂ, ಆ ಕಕ್ಷೀವಂತನಂತೆ, ಸೋಮಯಾಗ ಕರ್ತೃನೆಂದು ಪ್ರಸಿದ್ಧಪಡಿಸು.

English Translation

O Brahmanaspati, make (me) who offer Soma juice illustrious among the gods like Kakshivan, the son of Usij.

॥ ವಿಶೇಷವಿಷಯಗಳು ॥

ಈ ಸೂಕ್ತಕ್ಕೆ ಬ್ರಹ್ಮಣಸ್ಪತಿಯು ದೇವತೆಯು. ಈ ಬ್ರಹ್ಮಣಸ್ಪತಿಯು ಯಾರು? ದೇವತೆಗಳಲ್ಲಿ ಇವನ ಸ್ಥಾನವಾವುದು? ಎಂಬುವುದನ್ನು ಸೂಕ್ಷ್ಮವಾಗಿ ವಿವರಿಸುವೆವು. ಯಾಸ್ಕಮಹರ್ಷಿಯ ನಿರುಕ್ತದಲ್ಲಿ (ನಿ. ೧೦-೧೪) ಬ್ರಹ್ಮಣಸ್ಪತಿಯ ವಿಚಾರವಾಗಿ ಈ ರೀತಿ ಹೇಳಿರುವರು—

ಬ್ರಹ್ಮಣಸ್ಪತಿಃ । ಬ್ರಹ್ಮಣಸ್ಪತಿರ್ಬ್ರಹ್ಮಣಃ ಪಾತಾ ವಾ ಪಾಲಯಿತಾ ವಾ ॥

ಇಲ್ಲಿ ಬ್ರಹ್ಮಶಬ್ದಕ್ಕೆ ಅನ್ನವೆಂದೂ ಧನವೆಂದೂ ಸ್ತೋತ್ರವೆಂದೂ ಅರ್ಥವಾಗುವುದು. (ನಿ. ೩-೯) ಅದುದರಿಂದ **ಬ್ರಹ್ಮಣಃ ಪಾತಾ** ಎಂದರೆ **ಅನ್ನಸ್ಯ ಪಾತಾ** ಅನ್ನಕ್ಕೆ (ಆಹಾರಕ್ಕೆ) ಸ್ವಾಮಿಯು ಅಥವಾ ಅಧಿಪತಿಯು ಎಂದರ್ಥವು. ಬ್ರಹ್ಮಣಸ್ಪತಿಯು ಹೇಗೆ ಅನ್ನಕ್ಕೆ ಅಧಿಪತಿಯು ಎಂದರೆ ಯಾಸ್ಕರು ಉದಾಹರಣೆಗಾಗಿ—

ಅಶ್ಮಾಸ್ಯಮವತಂ ಬ್ರಹ್ಮಣಸ್ಪತಿರ್ಮಧುಧಾರಮಭಿ ಯಮೋಜಸಾತೃಣತ್ ।
ತಮೇವ ವಿಶ್ವೇ ಪಪಿರೇ ಸ್ವರ್ದೃಶೋ ಬಹುಸಾಕಂ ಸಿಸಿಚುರುತ್ಸಮುದ್ರಿಣಂ ॥
(ಋ. ಸಂ. ೨-೨೪-೪)

ಎಂಬ ಋಕ್ಕನ್ನು ಕೊಟ್ಟು ಅದಕ್ಕೆ—

ಅಶನವಂತಮಾಸ್ಯಂತನವಂತಮನಾತಿತಂ ಬ್ರಹ್ಮಣಸ್ಪತಿರ್ಮಧುಧಾರಮಭಿಯಮೋಜಸಾ
ಬಲೇನಾಭ್ಯತೃಣತ್ತಮೇವ ಸರ್ವೇ ಪಿಬಂತಿ ರಶ್ಮಯಃ ಸೂರ್ಯದೃಶೋ ಬಹ್ವೀನಂ
ಸಹ ಸಿಂಚಂತ್ಯುತ್ಸಮುದ್ರಿಣಮುದಕವಂತಂ ॥ (ನಿ. ೧೦-೧೩)

ಎಂದು ನಿರುಕ್ತವನ್ನು ಹೇಳಿರುವರು. ಮುಖ್ಯಾಭಿಪ್ರಾಯವೇನೆಂದರೆ, ಈ ಬ್ರಹ್ಮಣಸ್ಪತಿಯು ಸೂರ್ಯರಶ್ಮಿಗಳ ಸಹಾಯದಿಂದ ಮೇಘಗಳು ಸಮುದ್ರೋದಕವನ್ನು ಪಾನಮಾಡಿ ಆ ಉದಕವನ್ನು ವಿಶೇಷವಾಗಿ ಭೂಮಿಯ ಮೇಲೆ ಮಳೆಯಾಗಿ ಬೀಳುವಂತೆ ಮಾಡುವುದರಿಂದ ಮಳೆಯಿಂದ ಓಷಧಿವನಸ್ಪತಿಗಳೂ, ಓಷಧಿವನಸ್ಪತಿಗಳಿಂದ ಅನ್ನಾದ್ಯಾಹಾರವೂ ಲಭಿಸುವುದೆಂದೂ ಆದುದರಿಂದ ಬ್ರಹ್ಮಣಸ್ಪತಿಯು ಅನ್ನಕ್ಕೆ ಪಾಲಕನು ಎಂದರ್ಥವು. ಬ್ರಹ್ಮ ಶಬ್ದಕ್ಕೆ ಸ್ತೋತ್ರವೆಂದೂ ಧನವೆಂದೂ ಅರ್ಥಮಾಡುವಾಗ ಬ್ರಹ್ಮಣಸ್ಪತಿಯು ಮಂತ್ರಕ್ಕೆ ಅಧಿಪತಿಯು. ಮತ್ತು ಧನಕ್ಕೆ ಅಧಿಪತಿಯು ಎಂದು ಹೇಳಬೇಕು. ಭಾಷ್ಯಕಾರರು ಈ ಅರ್ಥವನ್ನೇ ಮೇಲೆ ಉದಾಹರಿಸಿರುವ ಋಕ್ಕಿಗೆ ವ್ಯಾಖ್ಯಾನ ಮಾಡುವಾಗ ಹೇಳಿರುವರು.

ಬ್ರಹ್ಮಣಸ್ಪತಿಯ ಪರವಾದ ಮಂತ್ರಗಳು ಋಗ್ವೇದದಲ್ಲಿ ವಿಶೇಷವಾಗಿವೆ. ಆ ಮಂತ್ರಗಳಲ್ಲಿ ಬ್ರಹ್ಮಣಸ್ಪತಿಯು ಧನವನ್ನೂ ಅನ್ನವನ್ನು ಕೊಡುವನೆಂದು ಹೇಳಿದೆ. ಈ ಬ್ರಹ್ಮಣಸ್ಪತಿಯು ಪ್ರತ್ಯೇಕ ದೇವತೆಯೇ ಅಥವಾ ಅಗ್ನಿಯ ರೂಪಾಂತರವೇ ಎಂದು ಅನೇಕರು ಸಂಶಯಪಡುವರು. ಅಗ್ನಿ ಮೊದಲಾದ ಇತರ ದೇವತೆಗಳೂ ಸಹ ಧನವನ್ನೂ ಅನ್ನವನ್ನು ಕೊಡುವವರಾದುದರಿಂದ ಬ್ರಹ್ಮಣಸ್ಪತಿಯು ಅಗ್ನಿಯ ಒಂದು ವಿಶೇಷ ರೂಪವೆಂದು ಕೆಲವರ ವಾದವು. ಯಾಸ್ಕರು ಈ ವಿಷಯದಲ್ಲಿ ಮೌನವಾಗಿರುವರು ಎಂದರೆ ಸ್ಪಷ್ಟವಾಗಿ ಏನನ್ನೂ ಹೇಳಿರುವುದಿಲ್ಲ. ಬ್ರಹ್ಮಣಸ್ಪತಿಯ ಪರವಾದ ಋಕ್ಕುಗಳಲ್ಲಿಯೂ ಈ ದೇವತೆಯು ಅಗ್ನಿಯ ರೂಪಾಂತರವೆಂದು ಹೇಳಲು ಸಾಕಾದಷ್ಟು ಆಧಾರಗಳಿಲ್ಲ. ಆದುದರಿಂದ ಬ್ರಹ್ಮಣಸ್ಪತಿಯು ಇಂದ್ರಾಗ್ನಿಗಳಂತೆ ಒಂದು ಪ್ರತ್ಯೇಕ ದೇವತೆಯೆಂದು ಧಾರಾಳವಾಗಿ ಹೇಳಬಹುದು.

ಸೋಮಾನಂ— ಅಭಿಷವಸ್ಯ ಕರ್ತಾರಂ— ಸೋಮರಸವನ್ನು ಸಿದ್ಧಪಡಿಸಿರುವ (ನನ್ನನ್ನು) ಎಂದಭಿಪ್ರಾಯವು,

ಸ್ವರಣಂ— ದೇವೇಷು ಪ್ರಕಾಶನವಂತಂ । ಪ್ರಖ್ಯಾತಮಿತ್ಯರ್ಥಃ ॥ ದೇವತೆಗಳಲ್ಲಿ ಪ್ರಸಿದ್ಧನನ್ನಾಗಿ, ಕೀರ್ತಿಯುತನನ್ನಾಗಿ ಎಂದಭಿಪ್ರಾಯವು.

ಕೆಕ್ಷೀವಂತಂ, ಔಶಿಜಃ— ಕಕ್ಷೀವಾನ್ ಎಂಬ ಋಷಿಯು ದೀರ್ಘತಮಸ್ ಎಂಬ ಋಷಿಗೆ ಉಶಿಕ್ ಎಂಬುವಳಲ್ಲಿ ಹುಟ್ಟಿದ ಪುತ್ರನು. ಈ ಉಶಿಕ್ ಎಂಬ ಸ್ತ್ರೀಯು ಕಳಿಂಗರಾಜನ ರಾಣಿಯ ಪರಿಚಾರಿಕೆಯಾಗಿದ್ದಳೆಂದೂ, ಕಳಿಂಗರಾಜನು ತನಗೆ ಪುತ್ರನಾಗಬೇಕೆಂಬ ಅಪೇಕ್ಷೆಯಿಂದ ತನ್ನ ಪತ್ನಿಯನ್ನು ದೀರ್ಘತಮಸ್ಸ್ ಎಂಬ ಋಷಿಯಸಂಗಕ್ಕೋಸ್ಕರ ಕಳುಹಿಸಿದನೆಂದೂ ಆಗ ರಾಜನ ಪತ್ನಿಯು ಅದಕ್ಕೆ ಇಷ್ಟಪಡದೆ ಗೂಢವಾಗಿ ತನ್ನ ದಾಸಿಯಾದ ಉಶಿಕ್ ಎಂಬುವಳನ್ನು ಕಳುಹಿಸಲು ಅವಳಿಗೆ ದೀರ್ಘತಮಋಷಿಯಿಂದ ಈ ಕಕ್ಷೀವಾನ್ ಎಂಬ ಪುತ್ರನು ಜನಿಸಿದನೆಂದೂ ಪುರಾಣಾದಿಗಳಲ್ಲಿ ಹೇಳಿದೆ. ಈ ಕಕ್ಷಿವಾನ್ ಋಷಿಯು ಕ್ಷತ್ರಿಯ ಸ್ತ್ರೀಯಲ್ಲಿ ಜನಿಸಿದರೂ ಬ್ರಾಹ್ಮಣಸಂಪರ್ಕದಿಂದ ಬ್ರಾಹ್ಮಣನೆಂದೇ ಪ್ರಸಿದ್ಧವಾಗಿರುವನು. ಈ ಋಷಿಯು ಋಗ್ವೇದದ ಅನೇಕ ಋಕ್ಕುಗಳಿಗೆ ದ್ರಷ್ಟೃವಾಗಿರುವನು. ಈ ಕಕ್ಷಿವಾನ್ ಎಂಬ ಋಷಿಯು ಯಜ್ಞಾನುಷ್ಠಾನಕರ್ಮಗಳನ್ನು ಮಾಡುವ ವರಲ್ಲಿಯೂ ಪ್ರಸಿದ್ಧನೆಂದು—"ಏವಂ ವೈ ಪರ ಆಟ್ಣಾರಃ ಕಕ್ಷೀವಾ೨ ಔಶಿಜೋ ವೀತಹವ್ಯಃ ಶ್ರಾಯಸಸ್ತ್ರೈಸದಸ್ಯಃ ಪೌರುಕುತ್ಸಃ ಪ್ರಜಾಕಾಮಾ ಆಚಿನ್ವತ ॥" ಎಂದು ತೈತ್ತಿರೀಯಸಂಹಿತೆಯ ೫-೬-೫-೩ರಲ್ಲಿ ಹೇಳಿರುವುದು. ಆದುದರಿಂದ ಈ ಋಷಿಯು ಮಂತ್ರರಚನೆಯಲ್ಲಿಯೂ ಯಜ್ಞಾನುಷ್ಠಾನಕರ್ಮಗಳನ್ನು ಮಾಡುವುದರಲ್ಲಿಯೂ ಅತ್ಯಂತಪ್ರಸಿದ್ಧನು. ಇವನಂತೆಯೇ ನನ್ನನ್ನೂ ಪ್ರಸಿದ್ಧನನ್ನಾಗಿ ಮಾಡಬೇಕೆಂದು ಈ ಸೂಕ್ತದ ಋಷಿಯಾದ ಮೇಧಾತಿಥಿಋಷಿಯು ಬ್ರಹ್ಮಣಸ್ಪತಿದೇವತೆಯನ್ನು ಪ್ರಾರ್ಥನೆ ಮಾಡಿರುವನು.

॥ ವ್ಯಾಕರಣಪ್ರಕ್ರಿಯಾ ॥

ಸೋವಮಾನಮ್—ಸುನೋತೀತಿ ಸೋಮಾ ಸುರ್ಣ ಅಭಿಷವೇ ಧಾತು. **ಧಾತ್ವಾದೇಃಷಃಸಃ** ಎಂಬುದರಿಂದ ಷಕಾರಕ್ಕೆ ಸಕಾರ. **ಅನ್ಯೇಭ್ಯೋಽಪಿ ದೃಶ್ಯತೇ** ಎಂಬುದರಿಂದ ಮನಿನ್ ಪ್ರತ್ಯಯ. ಇಲ್ಲಿ ದೃಶಿಗ್ರಹಣವು ಬೇರೆ ಕಾರ್ಯಗಳನ್ನು ವಿಧಿಸುವುದಕ್ಕಾಗಿ ಇರುವುದು. ಆದ್ದರಿಂದ ಪ್ರತ್ಯಯವು ನಿತ್ತಾದರೂ ಞ್ನಿತ್ಯಾದಿಃ ಎಂಬುದರಿಂದ ಆದ್ಯುದಾತ್ತ ಬರುವುದಿಲ್ಲ. ಪ್ರತ್ಯಯಸ್ವರವೇ ಬರುವುದು ಅಥವಾ ಉಞ್ಞಾದಿಯು ಆಕೃತಿಗಣವೆಂದು ಬಹ್ವಭಿಮತ, ಆದ್ದರಿಂದ ಸೋಮನ್ ಶಬ್ದವನ್ನು ಉಞ್ಞಾದಿಯಲ್ಲಿ ಸೇರಿಸಿ **ಉಞ್ಞಾದೀನಾಂಚೆ** (ಪಾ. ಸೂ. ೬-೧-೧೬೯) ಎಂಬುದರಿಂದ ಅಂತೋದಾತ್ತವನ್ನು ಹೇಳಬಹುದು. ಅಥವಾ **ಉಣಾದಯೋಬಹುಲಮ್** (ಪಾ. ಸೂ. ೩-೩-೧) ಎಂದು ಬಹುಲಗ್ರಹಣವಿರುವುದರಿಂದ ಸು ಧಾತುವಿನ ಮುಂದೆ ಔಣಾದಿಕವಾದ ಮನಿನ್ ಪ್ರತ್ಯಯ ಬರುವುದು. ಏವಂಚ ಪ್ರತ್ಯಯಸ್ವರದಿಂದ ಅಂತೋದಾತ್ತವಾಗುವುದು. ಸರ್ವಥಾ ಸೋಮನ್ ಶಬ್ದವು ಅಂತೋದಾತ್ತವಾದುದು, ದ್ವಿತೀಯೈಕವಚನದಲ್ಲಿ ಸೋಮಾನಂ ಎಂದಾಗುವುದು,

ಸ್ವರಣಮ್—ಪ್ರಖ್ಯಾತವನ್ನಾಗಿ ಎಂದರ್ಥ. ಸ್ವೃ ಶಬ್ದೋಪತಾಪಯೋಃ ಧಾತು. **ಕೃತ್ಯಲ್ಯುಟೋಬಹುಲಮ್** (ಪಾ. ಸೂ. ೩-೩-೧೧೩) ಎಂಬುದರಿಂದ ಕರ್ಮಣಿ ಲ್ಯುಟ್ ಪ್ರತ್ಯಯ. **ಯುವೋರನಾಕೌ** (ಪಾ.ಸೂ. ೭-೧-೧) ಎಂಬುದರಿಂದ ಯುಗೆ ಅನಾದೇಶ. ಗುಣ ರಪರತ್ವ, **ಲಿತಿ** ಪ್ರತ್ಯಯದ ಹಿಂದೆ ಇರುವ ಸ್ವಶಬ್ದದ ಅಕಾರವು ಉದಾತ್ತ, ರಷಾಭ್ಯಾಮ್ ಎಂಬುದರಿಂದ ನಕಾರಕ್ಕೆ ಣಕಾರ. ದ್ವಿತೀಯಾ ಏಕವಚನ ಅಮ್. ಅಮಿ ಪೂರ್ವಃ ಎಂಬುದರಿಂದ ಪೂರ್ವರೂಪ, ಸ್ವರಣಮ್ ಎಂದಾಗುವುದು.

ಕೃಣುಹಿ—ಕೃವಿ ಹಿಂಸಾಕರಣಯೋಶ್ಚ ಧಾತು. **ಇದಿತೋನುಮ್ಧಾತೋಃ** (ಪಾ. ಸೂ. ೭-೧-೫೮) ಎಂಬುದರಿಂದ ನುಮಾಗಮ. ಕೃನ್ವ್, ಇದರ ಮುಂದೆ ಲೋಟ್, ಮಧ್ಯಮಪುರುಷ ಏಕವಚನ ಸಿಪ್. **ಸೇರ್ಹ್ಯಪಿಚ್ಚೆ** (ಪಾ. ಸೂ. ೩-೪-೮೭) ಎಂಬುದರಿಂದ ಸಿಪ್‌ಗೆ ಹಿ ಆದೇಶ, ಕರ್ತರಿಶಪ್ ಎಂಬುದರಿಂದ ಶಪ್ ಪ್ರಾಪ್ತವಾದರೆ ಇದಕ್ಕೆ ಅಪವಾದವಾದ **ಧಿನ್ವಿಕೃಣ್ವ್ಯೋರಚೆ** (ಪಾ. ಸೂ. ೩-೧-೮೦) ಎಂಬುದರಿಂದ ಉ ವಿಕರಣವೂ ಇದರ ಸನ್ನಿಯೋಗದಿಂದ ವಕಾರಕ್ಕೆ ಅಕಾರವೂ ಬರುವುದು. ಕೃನ+ಉ+ಹಿ **ಆತೋಲೋಪಃ** (ಪಾ. ಸೂ. ೬-೪-೪೮) ಎಂಬುದರಿಂದ ಅಕಾರಕ್ಕೆ ಲೋಪ ಕೃನ್+ಉ+ಹಿ ಈಗ ಉ ಪ್ರತ್ಯಯವನ್ನು ನಿಮಿತ್ತ ಮಾಡಿಕೊಂಡು **ಪುಗಂತೆ ಲಘೂಪಧಸ್ಯಚೆ** (ಪಾ. ಸೂ. ೭-೩-೮೬) ಎಂಬುದರಿಂದ ಲಘೂಪಧ ಗುಣವು ಪ್ರಾಪ್ತವಾದರೆ **ಅಚೇಃಪರಸ್ಮಿನ್ಪೂರ್ವವಿಧೌ** (ಪಾ. ಸೂ. ೧-೧-೫೭) ಎಂಬುದರಿಂದ ಅಲೋಪಕ್ಕೆ ಸ್ಥಾನಿವದ್ಭಾವ ಬರುವುದು. ಆದ್ದರಿಂದ ಲಘೂಪಧಗುಣ ಬರುವುದಿಲ್ಲ. ಹಿಯುನ್ನ ನಿಮಿತ್ತ ಮಾಡಿಕೊಂಡು **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಕೃನು ಎಂಬಲ್ಲಿರುವ ಉಕಾರಕ್ಕೆ ಗುಣವು ಪ್ರಾಪ್ತವಾಗುವುದು. ಆದರೂ **ಸಾರ್ವಧಾತುಕಮಪಿತ್** (ಪಾ.ಸೂ. ೧-೨-೪) ಎಂಬುದರಿಂದ ಹಿಯು ಙಿತ್ತಾಗುವುದರಿಂದ **ಕ್ಙಿತಿಚ** (ಪಾ.ಸೂ. ೧-೧-೫) ಎಂಬುದರಿಂದ ಗುಣಕ್ಕೆ ನಿಷೇಧ ಬರುವುದರಿಂದ ಗುಣ ಬರುವುದಿಲ್ಲ. **ಉತಶ್ಚ ಪ್ರತ್ಯಯಾದಸಂಯೋಗಪೂರ್ವಾತ್** (ಪಾ.ಸೂ. ೬-೪-೧೦೬) ಎಂಬುದರಿಂದ ಯದ್ಯಪಿ ಹಿಗೆ ಲುಕ್ ಪ್ರಾಪ್ತವಾಗುವುದು. ಆದರೂ **ಉತಶ್ಚ ಪ್ರತ್ಯಯಾಚ್ಛಂದೋವಾವಚನಮ್** (ಪಾ. ಸೂ. ೬-೪-೧೦೬-೧) ಛಂದಸ್ಸಿನಲ್ಲಿ ಉತಶ್ಚ ಪ್ರತ್ಯಯಾತ್ ಎಂಬುದು ವಿಕಲ್ಪವಾಗಿ ಬರುವುದು ಎಂಬ ವಚನದಿಂದ ವಿಕಲ್ಪವಾದ್ದರಿಂದ **ಪಾಕ್ಷಿಕವಾಗಿ** ಹಿಗೆ ಲೋಪಬರುವುದಿಲ್ಲ. **ಸತಿಶಿಷ್ಟಸ್ವರಬಲೀಯಸ್ತ್ವಮನ್ಯತ್ರವಿಕರಣೇಭ್ಯಃ** ಸತಿ ಎಂಬುದಕ್ಕೆ

ಉತ್ಪನ್ನೇ ಸತಿ ಎಂದರ್ಥ, ಶಿಷ್ಟ ಎಂಬುದಕ್ಕೆ ವಿಹಿತ ಎಂದು ಅರ್ಥ- ಅನೇಕ ವರ್ಣಗಳಿಗೆ ಉದಾತ್ತ ಬರುವಾಗ ಕೆಲವಕ್ಕೆ ಉದಾತ್ತ ಬಂದಮೇಲೆ ಕೊನೆಯಲ್ಲಿ ಯಾವ ಉದಾತ್ತವು ವಿಹಿತವಾಗುವುದೋ ಅದು ಪ್ರಬಲ. ಆದರೆ ಈ ಅಂಶವು ವಿಕರಣ ವಿಷಯದಲ್ಲಿ ಇಲ್ಲವು ಎಂದು ಹೇಳಿರುವುದರಿಂದ ಉ ಎಂಬ ವಿಕರಣಕ್ಕೆ ಬರುವ ಸ್ವರವು ಸತಿಶಿಷ್ಟನಾದರೂ ಅದು ಪ್ರಬಲವಾಗುವುದಿಲ್ಲ. ಆದ್ದರಿಂದ ಹಿಗೆ ಪ್ರತ್ಯಯ ಸ್ವರದಿಂದ ಉದಾತ್ತ ಬರುವುದು. ಇದು ಪಾದದ ಆದಿಯಲ್ಲಿರುವುದರಿಂದ ಅಪಾದಾದೌ ಎಂದು ಪ್ರತಿಷೇಧ ಬರುವಕಾರಣ ತಿಙ್ಶತಿಙಃ ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ,

ಬ್ರಹ್ಮಣಸ್ಪತೇ—ಬ್ರಹ್ಮಣಃಪತೇ ಎಂದಿರುವಾಗ **ಷಷ್ಠ್ಯಾಃಪತಿಪುತ್ರಪೃಷ್ಠಪಾರಪದಪಯಸ್ಪೋಷೇಷು** (ಪಾ. ಸೂ. ೮-೩-೫೩) ಪತಿ ಮೊದಲಾದ ಶಬ್ದಗಳು ಪರದಲ್ಲಿರುವಾಗ ಷಷ್ಠೀವಿಭಕ್ತಿಸಂಬಂಧಿಯಾದ ವಿಸರ್ಗಕ್ಕೆ ಸಕಾರ ಬರುವುದು ಎಂಬುದರಿಂದ ಸಂಹಿತಾಕಾಲದಲ್ಲಿ ವಿಸರ್ಗಕ್ಕೆ ಸಕಾರ ಬರುವುದು. ಪತೇ ಎಂಬುದು ಆಮಂತ್ರಿತ. **ಸುಡಾಮಂತ್ರಿತೇಪರಾಙ್ಗವತ್ಸ್ವರೇ** (ಪಾ. ಸೂ. ೨-೧-೨) ಎಂಬುದರಿಂದ ಬ್ರಹ್ಮಣಃ ಎಂಬುದಕ್ಕೆ ಪರಾಂಗವದ್ಭಾವ ಬರುವುದು. ಆದ್ದರಿಂದ **ಆಮಂತ್ರಿತಸ್ಯಚ** (ಪಾ. ಸೂ. ೮-೧-೧೯) ಎಂಬುದರಿಂದ ಎರಡು ಪದಗಳಿಗೂ ಅನುದಾತ್ತ ಬರುವುದು.

ಕಕ್ಷೀವನ್ತಮ್—ಕಕ್ಷ ಎಂದರೆ ಪಾರ್ಶ್ವಭಾಗ, ಕಕ್ಷೇ ಭವಾ ಎಂದು ವಿಗ್ರಹವಾದಾಗ **ಭವೇಛಂದಸಿ** (ಪಾ. ಸೂ. ೪-೪-೧೧೦) ಎಂಬುದರಿಂದ ಯತ್ ಸ್ತ್ರೀತ್ವ ವಿವಕ್ಷೆ ಇರುವುದರಿಂದ ಟಾಪ್ ಪ್ರತ್ಯಯ ಕಕ್ಷ್ಯಾ ಎಂದಾಗುವುದು. ಕಕ್ಷ್ಯಾ ಅಸ್ಯ ಅಸ್ತಿ ಎಂದು ವಿಗ್ರಹ. **ತದಸ್ಯಾಸ್ತ್ಯಸ್ಮಿನ್ನಿತಿಮತುಪ್** (ಪಾ. ಸೂ. ೫-೨-೯೪) ಎಂಬುದರಿಂದ ಮತುಪ್ ಪ್ರತ್ಯಯ, ಕಕ್ಷ್ಯಾ+ಮತ್. **ಆಸನ್ದೀವ ದೆಷ್ಮೀವ ಚ್ಛೆಕ್ರೀವ ಕೈಕ್ಷೀವ ದ್ರುಮಣ್ವ ಚ್ಛೆರ್ಮಣ್ವತೀ** (ಪಾ. ಸೂ. ೪-೩-೧೨) ಈ ಆರು ಶಬ್ದಗಳು ಸಂಜ್ಞೆ ತೋರುವಾಗ ನಿಪಾತಿಸಲ್ಪಡುವುವು ಎಂದು ಸೂತ್ರಾರ್ಥ, ನಿಪಾತವೆಂದರೆ ಶಾಸ್ತ್ರಾನ್ತರಾಪ್ರಾಪ್ತಕಾರ್ಯಘಟತೋಚ್ಚಾರಣಮ್, ಕಕ್ಷ್ಯಾ ಎಂಬಲ್ಲಿ ಸಂಪ್ರಸಾರಣವು ಬೇರೆ ಶಾಸ್ತ್ರದಿಂದ ಪ್ರಾಪ್ತವಾಗುವುದಿಲ್ಲ. ಆ ಸಂಪ್ರಸಾರಣರೂಪವಾದ ಕಾರ್ಯವನ್ನು ಈ ಸೂತ್ರದಲ್ಲಿ ಸೇರಿಸಿ ಉಚ್ಚರಿಸುವುದರಿಂದ ಸಂಪ್ರಸಾರಣ ಬರುವುದು. ಆದ್ದರಿಂದ ಯಕಾರಕ್ಕೆ ಇಕಾರ. **ಸಂಪ್ರಸಾರ್ಣಾಚ್ಚೆ** ಎಂಬುದರಿಂದ ಪೂರ್ವರೂಪ. ಹೆಲಃ (ಪಾ. ಸೂ. ೬-೪-೨) ಎಂಬುದರಿಂದ ದೀರ್ಘ, ಕಕ್ಷೀವತ್ ಈಗ ಛಂದಸೀರಃ (ಪಾ.ಸೂ. ೮-೩-೧೫) ಇವರ್ಣಾಂತ ರೇಫಾಂತದ ಮುಂದೆ ಇರುವ ಮತುಪ್ಪಿನ ಮಕಾರಕ್ಕೆ ವಕಾರ ಬರುವುದು ಎಂಬುದರಿಂದ ಮಕಾರಕ್ಕೆ ವಕಾರ, ಕಕ್ಷೀವತ್. ಇದರ ಮುಂದೆ **ಸುಪ್ರತ್ಯಯ**. **ಅತ್ವಸಂತಸ್ಯಚಾಧಾತೋಃ** (ಪಾ.ಸೂ. ೬-೪-೧೪) ಅತು ಎಂಬುದನ್ನು ಕೊನೆಯಲ್ಲಿ ಹೊಂದಿರುವ ಅಙ್ಗದ ಉಪಾನ್ತ್ಯವರ್ಣಕ್ಕೂ ಧಾತುವಲ್ಲದ ಅಸನ್ತಾಙ್ಗದ ಉಪಾನ್ತ್ಯವರ್ಣಕ್ಕೂ ಸಂಬುದ್ಧಿಯನ್ನುಳಿದ ಸರ್ವನಾಮಸ್ಥಾನಪ್ರತ್ಯಯ ಪರದಲ್ಲಿರುವಾಗ ದೀರ್ಘ ಬರುವುದು ಎಂಬುದರಿಂದ ಉಪಧಾದೀರ್ಘ. **ಉಗಿದಚಾಂ** (ಪಾ. ಸೂ. ೭-೧-೭೦) ಎಂಬುದರಿಂದ ನುಮಾಗಮ. ಯದ್ಯಪಿ ನುಮಾಗಮವು ಪರವೂ ನಿತ್ಯವೂ ಆಗಿರುವುದು. ಆದರೂ ವಚನಸಾಮರ್ಥ್ಯದಿಂದ ಮೊದಲು ದೀರ್ಘ ನಂತರ ನುಮಾಗಮ ಎಂದು ಗ್ರಹಿಸಬೇಕು. **ಹಲ್ಙ್ಯಾಬ್ಭ್ಯಃ** (ಪಾ.ಸೂ. ೬-೧-೬೮) ಎಂಬುದರಿಂದ ಸುಲೋಪ. **ಸಂಯೋಗಾನ್ತಸ್ಯ ಲೋಪಃ** (ಪಾ. ಸೂ. ೮-೨-೨೩) ಎಂಬುದರಿಂದ ತಕಾರಲೋಪ. ನಲೋಪಃ ಪ್ರಾತಿಪದಿಕಾನ್ತಸ್ಯ ಎಂಬುದರಿಂದ ನಕಾರಕ್ಕೆ ಲೋಪವನ್ನು ಮಾಡುವಾಗ ಸಂಯೋಗಾನ್ತಲೋಪವು **ಪೂರ್ವತ್ರಾಸಿದ್ಧಮ್** (ಪಾ.ಸೂ. ೮-೨-೧) ಎಂಬುದರಿಂದ ಅಸಿದ್ಧವಾಗುವುದು. ಆದ್ದರಿಂದ ನಕಾರಕ್ಕೆ ಲೋಪ ಬರುವುದಿಲ್ಲ. ಕಕ್ಷೀವಾನ್ ಎಂದಾಗುವುದು. ಕಕ್ಷೀವಾನ್ ಎಂಬುದು ಋಷಿಯ ಹೆಸರು. **ನ ಸಂಪ್ರಸಾರಣೇ**

ಸಂಪ್ರಸಾರಣವ್ (ಪಾ.ಸೂ. ೯-೧-೩೭) ಎಂಬ ಸೂತ್ರದಲ್ಲಿ ಕಕ್ಷ್ಯಾಯಾಸ್ಸಂಜ್ಞಾಯಾಂ (ಪಾ.ಸೂ. ೬.೧-೩೭.೭) ಸಂಜ್ಞೆ ತೋರುವಾಗ ಮತುಪ್ ಪ್ರತ್ಯಯದ ಹಿಂದೆ ಇರುವ ಕಕ್ಷ್ಯಾ ಶಬ್ದಕ್ಕೆ ಸಂಪ್ರಸಾರಣವನ್ನು ಹೇಳಬೇಕು ಎಂಬ ವಚನವನ್ನು ಮಹಾಭಾಷ್ಯದಲ್ಲಿ ಪತಞ್ಜಲಿಮಹರ್ಷಿಗಳು ಆರಂಭಿಸಿರುವರು. ಏವಂಚ ಈ ವಚನ ದಿಂದಲೇ ಕಕ್ಷೀವಾನ್ ಎಂಬ ರೂಪವು ಸಿದ್ಧವಾಗುವುದು. ಆದ್ದರಿಂದ ಆಸನ್ದೀವತ್ ಇತ್ಯಾದಿ ಸೂತ್ರದಲ್ಲಿ ಕಕ್ಷೀವತ್ ಎಂಬ ಒತಿವು ಪ್ರಕ್ಷಿಪ್ತವೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಸಂಜ್ಞಾಯಾಮ್ (ಪಾ.ಸೂ. ೪-೩-೧೧) ಸಂಜ್ಞೆ ತೋರುವಾಗ ಮತುಪ್ ಪ್ರತ್ಯಯದ ಮಕಾರಕ್ಕೆ ವಕಾರ ಬರುವುದು ಎಂಬುದರಿಂದ ಮಕಾರಕ್ಕೆ ವಕಾರವೂ ಸಿದ್ಧವಾಗುವುದು. ಆದ್ದರಿಂದ ವತ್ವನಿಪಾತನಕ್ಕಾಗಿ ಸೂತ್ರದಲ್ಲಿ ಕೆಕ್ಷೀವತ್ ಪದಕ್ಕೆ ನಿವೇಶ ಬೇಕೆಂದು ಹೇಳಲಾಗುವುದಿಲ್ಲ. ಛಂದಸೀರಃ ಎಂಬುದಕ್ಕೆ ಇವರ್ಣಾಂತ ರೇಫಾಂತಗಳ ಮುಂದೆ ವಿಹಿತವಾದ ಮತುಪ್ ಪ್ರತ್ಯಯದ ಮಕಾರಕ್ಕೆ ವಕಾರ ಬರುವುದು ಎಂದು ಅರ್ಥ. ಏವಂಚ ರೇವಾನ್ ಎಂಬಲ್ಲಿ ಮಕಾರಕ್ಕೆ ವಕಾರವು ಕ್ಲೇಶವಿಲ್ಲದೆಯೇ ಸಿದ್ಧವಾಗುವುದು. ಉತ್ತರಮಂತ್ರದಲ್ಲಿ ಕಂಡಂತೆ ಪ್ರಯಾಸಪಡಬೇಕಾದ ಅವಶ್ಯ ಕತೆಯಿರುವುದಿಲ್ಲ. ಇಲ್ಲಿ ಕಕ್ಷ್ಯಾ ಶಬ್ದದ ಮುಂದೆ ಮತುಪ್ ವಿಹಿತವಾಗಿದೆ. ಇಕಾರಾಂತ ಶಬ್ದದ ಮುಂದೆ ವಿಹಿತವಾಗಿಲ್ಲ. ಆದ್ದರಿಂದ ಇಲ್ಲಿ ಛಂದಸೀರಃ (ಪಾ.ಸೂ. ೮-೩-೧೫) ಎಂಬುದರಿಂದ ವತ್ವೋಪಪಾದನೆಯು ಅಷ್ಟಾಗಿ ಯುಕ್ತವಲ್ಲ. ಸಂಜ್ಞಾಯಾಂ ಎಂಬುದರಿಂದ ಮಕಾರಕ್ಕೆ ವಕಾರ ಬರುವುದು ಎಂದು ಉಪಪಾದಿಸು ವುದು ಯುಕ್ತವಾಗಿರುವುದು. ಕಕ್ಷೀವತ್ ಎಂಬುದರ ಮುಂದೆ ದ್ವಿತೀಯಾ ಏಕವಚನ ಅಮ್ ಪ್ರತ್ಯಯ. ಉಗಿದ-ಚಾಮ್ ಎಂಬುದರಿಂದ ನುಮಾಗಮ ಬಂದು ಕಕ್ಷೀವನ್ತಮ್ ಎಂದಾಗುವುದು. ಯತ್ ಪ್ರತ್ಯಯವು ಪ್ರತ್ಯಯ ಸ್ವರದಿಂದ ಉದಾತ್ತ, ಯತ್‌ಗೆ ಆದೇಶವಾಗಿ ಬರುವ ಈಕಾರವು ಸ್ಥಾನಿವದ್ಭಾವದಿಂದ ಉದಾತ್ತ, ಮತುಪ್ ಪ್ರತ್ಯಯವು ಪಿತ್ತಾದ್ದರಿಂದಲೂ ಅವ್ ಸುಪ್ಪಾದ್ದರಿಂದಲೂ ಅನುದಾತ್ತೌಸುಪ್ಪಿತೌ ಎಂಬುದರಿಂದ ಅನುದಾತ್ತ.

ಔಶಿಜಃ—ವಶ ಕಾನ್ತೌ, ಧಾತು. ಪಜನೇರಿಜ್ಯಾದೇಶ್ಚವಃ (ಉ.ಸೂ. ೨-೨೫) ಎಂಬುದರಿಂದ ಇಜಿ ಎಂಬುದು ಅನುವೃತ್ತವಾಗಲು ವಶೇಃಕಿಚ್ಚ (ಉ.ಸೂ. ೨-೨೫) ವಶ ಕಾನ್ತೌ ಎಂಬ ಧಾತುವಿನ ಮುಂದೆ ಇಜಿ ಪ್ರತ್ಯಯ ಬರುವುದು, ಅದು ಕಿತ್ತಾಗುವುದು ಎಂಬುದರಿಂದ ವಶ್ ಧಾತುವಿನ ಮುಂದೆ ಇಜಿ ಪ್ರತ್ಯಯ. ವಶ್+ಇಜ್, ಪ್ರತ್ಯಯವು ಕಿತ್ತು. ಆದ್ದರಿಂದ ಗ್ರಹಿಜ್ಯಾವಯಿವ್ಯಧಿವಷ್ಟಿ- (ಪಾ.ಸೂ. ೬-೧-೧೬) ಎಂಬುದರಿಂದ ಧಾತುವಿಗೆ ಸಂಪ್ರಸಾರಣ, ವಕಾರಕ್ಕೆ ಉಕಾರ, ಸಂಪ್ರಸಾರಣಾಚ್ಚ ಎಂಬುದರಿಂದ ಪೂರ್ವರೂಪ. ಪ್ರತ್ಯಯವು ಕಿತ್ತಾದ್ದರಿಂದ ಕ್ಙಿತಿಚ ಎಂದು ನಿಷೇಧ ಬರುವಕಾರಣ ಪುಗನ್ತ್ಯಲಘೂಪಧಸ್ಯಚ ಎಂಬುದರಿಂದ ಉಶ್‌ಗೆ ಲಘೂ ಪಧಗುಣಬರುವುದಿಲ್ಲ. ಉಶಿಜ್ ಎಂದಾಯ್ತು. ಉಶಿಜಃ ಅಪತ್ಯಂ ಪುಮಾನ್ ಎಂದು ವಿಗ್ರಹ. ತಸ್ಯಾಪತ್ಯಮ್ (ಪಾ.ಸೂ. ೪-೧-೯೨). ಪ್ರಾಗ್ದೀವ್ಯತೋಣ್ (ಪಾ.ಸೂ. ೫-೧-೮೩) ತೇನ ದೀವ್ಯತಿ ಎಂಬ ಸೂತ್ರದ ವರೆಗೆ ಅಣ್ ಅಧಿಕಾರ ಬರುವುದು ಎಂಬುದರಿಂದ ಅಣ್ ಪದಕ್ಕೆ ಅಧಿಕಾರ ಬರುತ್ತೆ. ತದ್ಧಿತಪ್ರತ್ಯಯವಿಧಾಯಕ ಶಾಸ್ತ್ರಘಟಕಪ್ರಥಮೋಚ್ಚರಿತಪದಜನ್ಯೋಪಸ್ಥಿತಿವಿಷಯಾಭಿನ್ನೆ ಸಮರ್ಥಾಭಿನ್ನ ಪ್ರಾತಿಪದಿಕಪ್ರಕೃತಿಕಷಷ್ಠ್ಯನ್ತಾ-ತ್ವಮರ್ಥಾತ್ ಅಪತ್ಯಂ ಇತ್ಯರ್ಥೇ, ಅಣ್ವಾ ಭವತಿ, ಸ ಚ ಪರಸ್ಸನ್ ಭವತಿ- ಸ ಚ ಪ್ರತ್ಯಯಸಂಜ್ಞಕಃ, ಸ ಚ ಆದ್ಯುದಾತ್ತಃ ಎಂದು ಸೂತ್ರಾರ್ಥ. ತದ್ಧಿತಪ್ರತ್ಯಯವನ್ನು ವಿಧಿಸುವ ಶಾಸ್ತ್ರದಲ್ಲಿ ಮೊದಲು ಉಚ್ಚರಿತ ವಾದ ಪದದಿಂದ ಬೋಧಿತವಾಗುವವೂ ಪರಿನಿಷ್ಠಿತಗಳೂ ಆದ ಯಾವ ಜೀಬನ್ತ, ಆಬನ್ತ, ಪ್ರಾತಿಪದಿಕಗಳಿವೆ ಯೋ ಅವುಗಳ ಮುಂದೆ ಬಂದಿರುವ ಷಷ್ಠೀ ವಿಭಕ್ತಿಯನ್ನು ಕೊನೆಯಲ್ಲಿ ಹೊಂದಿರುವ ಸಮರ್ಥವಾದ ಶಬ್ದದ ಮುಂದೆ ಅಪತ್ಯ ಎಂಬ ಅರ್ಥದಲ್ಲಿ ಅಣ್ ವಿಕಲ್ಪವಾಗಿ ಬರುವುದು. ಅದು ಪರದಲ್ಲಿ ಬರುವುದು. ಆದು ಪ್ರತ್ಯಯ

ಸಂಜ್ಞೆಯನ್ನು ಹೊಂದುವುದು. ಅದು ಆದ್ಯುದಾತ್ತವಾಗುವುದು. ಅದು ತದ್ಧಿತವೂ ಆಗುವುದು ಎಂದು ಕನ್ನಡದಲ್ಲಿ ಅರ್ಥ. ಈ ಸೂತ್ರದಿಂದ ಅಣ್ ಪ್ರತ್ಯಯ ಬಂದರೆ, ಉಶಿಜ್+ಅ, ತದ್ಧಿತೇಷ್ವಚಾಮಾದೇಃ (ಪಾ.ಸೂ. ೭-೨-೧೧೭) ಎಂಬುದರಿಂದ ಆದಿವೃದ್ಧಿ, ಉಕಾರಕ್ಕೆ ಔಕಾರ, ಔಶಿಜ. ಇದರ ಮುಂದೆ ಪೃಥಮೈಕವಚನ ಸುಪ್ರತ್ಯಯ ರುತ್ವ ವಿಸರ್ಗ, ಔಶಿಜಃ ಎಂದಾಗುವುದು. ಔಶಿಜ ಎಂಬುದು ಪ್ರತ್ಯಯಸ್ವರದಿಂದ ಅಂತೋದಾತ್ತ ॥ ೧ ॥

॥ ಸಂಹಿತಾಪಾಠಃ ॥

ಯೋ ರೇವಾನ್ಯೋ ಅಮಿವಹಾ ವಸುವಿತ್ಪುಷ್ಟಿವರ್ಧನಃ ।
ಸ ನಃ ಸಿಷಕ್ತು ಯಸ್ತುರಃ ॥ ೨ ॥

॥ ಪದಪಾಠಃ ॥

ಯಃ । ರೇವಾನ್ । ಯಃ । ಅಮಿವಹಾ । ವಸುವಿದಿತ್ । ಪುಷ್ಟಿವರ್ಧನಃ ॥
ಸಃ । ನಃ । ಸಿಷಕ್ತು । ಯಃ । ತುರಃ ॥ ೨ ॥

॥ ಸಾಯಣಭಾಷ್ಯಂ ॥

ಯೋ ಬ್ರಹ್ಮಣಸ್ಪತೀ ರೇವಾನ್ಧನವಾನ್ಯಶ್ಚಾಮಿವಹಾ ರೋಗಾಣಾಂ ಹಂತಾ ವಸುವಿದ್ಧನಲಬ್ಧಾ ಪುಷ್ಟಿವರ್ಧನಃ ಪುಷ್ಟೇರ್ವರ್ಧಯಿತಾ ಯಶ್ಚ ತುರಸ್ತ್ವರೋಪೇತಃ ಶೀಘ್ರಫಲದಃ ಸ ಬ್ರಹ್ಮಣಸ್ಪತಿರ್ನೋಽಸ್ಮಾನ್ ಸಿಷಕ್ತು । ಸೇವತಾಂ । ಪರಿಗೃಹ್ಯಾನುಗೃಹ್ಣಾತ್ವಿತ್ಯರ್ಥಃ । ಅತ್ರ ಸಿಷಕ್ತ್ವಿತಿಶಬ್ದಸ್ಯ ಸೇವಾರ್ಥತ್ವಂ ಯೋಸ್ಯ ಆಹ । ಸಿಷಕ್ತು ಸಚತೇ ಇತಿ ಸೇವಮಾನಸ್ಯ । ನಿ. ೩-೨೧ । ಇತಿ ಪ್ರತ್ಯಾಯಯಂಶ್ಚಾಶ್ವಾವಿತಿ ಶೇಷಃ ॥ ರೇವಾನ್ । ರಯಿರಸ್ಯಾಸ್ತೀತಿ ಮತುಪ್ । ರಯೇರ್ಮತೌ ಬಹುಲಂ । ಪಾ. ೬-೧-೩೭.೬ । ಇತಿ ಯಕಾರಸ್ಯ ಸಂಪ್ರಸಾರಣಂ ಪರಪೂರ್ವತ್ವಂ । ಛಂದಸೀರ ಇತಿ ವತ್ವಂ । ಆದ್ಗುಣಃ । ನನು ವತ್ವಸ್ಯಾಸಿದ್ಧತ್ವಾದ್ಪಹಿರಂಗತ್ವಾಚ್ಚೇ ಪ್ರಾಗೇವ ಗುಣೇ ಕೃತ ಇವರ್ಣಾಭಾವಾನ್ನ ವತ್ವಂ । ನ ಚಾಂತಾದಿವಚ್ಚೇ । ಪಾ. ೬-೧-೪೫ । ಇತ್ಯಾದಿವದ್ಭಾವೇನೇವರ್ಣಸಂಪಾದನಂ ವರ್ಣಾಶ್ರಯೇವಿಧೌ ತತ್ಕೃತಿ–ಸೇಧಾತ್ । ಅನ್ಯಥಾ ಋಟ್ವಾಭಿರಿತ್ಯತ್ರೇ ಸವರ್ಣದೀರ್ಘಸ್ಯಾಂತವದ್ಭಾವೇನ ಅಕಾರತ್ವಾದತೋ ಭಿಸ ಐಸ್ । ಪಾ. ೭-೧-೯ । ಇತ್ಯೈಸಾದೇಶಃ ಸ್ಯಾತ್ । ನ ಚ ನಿರವಕಾಶತ್ವೇನ ವತ್ವಸ್ಯಾನವಕಾಶತ್ವಂ । ಅಗ್ನಿವಾಸ್ಯೈ ದರ್ಭಸ್ತಂಬಃ । ಉಪ ಬ್ರಹ್ಮಾಣಿ ಹರಿವಃ । ಋಗ್ವೇ. ೧೦-೧೦೪.೬ । ಇತ್ಯಾದಾವವಕಾಶಲಾಭಾತ್ ಸತ್ಯಂ । ಅತ್ರ ಗುಣಸ್ಯವೃತ್ತೇಃ ಪ್ರಾಗಿಕಾರಾತ್ಪೆರೋ ಮತುಪ್ । ಕದಾಚಿದವರ್ಣಾತ್ಪೆರಸ್ಯ ಮತುಪಃ

ಪಶ್ಚಾದೇಕಾರಾದೇಶೇನೇವರ್ಣಾಭಾವೇ೭ಪಿ ಭವತಿ ವತ್ವಮಿತಿ ಛಂದಸೀರ ಇತಿ ಸೂತ್ರಕೃತಾ ವಿವಕ್ಷಿತಂ । ಅಮುನೈವಾಭಿಸ್ರಾಯೇಣ ಹರಿವ ಇತ್ಯಾದಿಕಮುದಾಹೃತ್ಯಾಪ್ಯಂತೇ ವೃತ್ತಿಕೃತಾ ಅರೇವಾನಿತ್ಯಪ್ಯುದಾಹೃತಂ । ಕಾ. ೮-೨-೧೫ । ಹ್ರಸ್ವನುಡ್ಭ್ಯಾಮಿತ್ಯತ್ರಾರೇಶಬ್ದಾನ್ಮತುಪ ಇತ್ಯುದಾತ್ತತ್ವಂ ವಕ್ತವ್ಯಂ । ಪಾ. ೬-೧-೧೭೬-೧ । ಇತ್ಯತ್ರಾರೇಶಬ್ದೋ ರೇಶಬ್ದಸ್ಯಾಪ್ಯುಪಲಕ್ಷಣಂ । ಅತ ಏವ ಹಿ ರೇವಾಂ ಇಂದ್ರೇತ್ಯಾದೌ ಮತುಪ ಉದಾತ್ತತ್ವಂ ದೃಷ್ಟಂ । ಅಥವಾ ಹ್ರಸ್ವನುಡ್ಭ್ಯಾಮಿತ್ಯತ್ರಾಪಿ ಕದಾಚಿದ್ಭ್ರಸ್ವಾತ್ಪರಸ್ಯ ಮತುಪ ಉದಾತ್ತತ್ವಮಿತ್ಯೇವ ವ್ಯಾಖ್ಯೇಯಂ । ಏವಂ ಚ ಸಂಪ್ರಸಾರಣಪರಪೂರ್ವತ್ವಯೋಃ ಕೃತಯೋರ್ಗುಣಾಶ್ರಾಭ್ಭ್ರಸ್ವಾತ್ಪರೋ ಮತುಬಿತಿ ರೇವಾನಾರೇವಾನಿತ್ಯಾದೌ ಸರ್ವತ್ರೋದಾತ್ತತ್ವಂ ಸಿದ್ಧ್ಯತಿ । ಅಯಮೇವ ಸೂತ್ರಕೃತೋ೭ಭಿಸ್ರಾಯೇ ವಾರ್ತಿಕಕೃತಾ ವ್ಯಾಖ್ಯಾತ ಇತಿ । ಅಮೀವಹಾ । ಅಮ ರೋಗ ಇತ್ಯೇತಸ್ಮಾದ್ಧನ್ಧಾತ್ವಯೇನಾಮೀವಶಬ್ದೋ ನಿಪಾತಿತಃ । ತಂ ಹಂತೀತಿ ಬಹುಲಂ ಛಂದಸೀತಿ ಕ್ವಿಪ್ । ಕೃದುತ್ತರಪದಪ್ರಕೃತಿಸ್ವರತ್ವಂ । ವಸುವಿತ್ । ವಸು ವಿಂದತೀತಿ ವಸುವಿತ್ । ಕ್ವಿಪ್ಚೇತಿ ಕ್ವಿಪ್ । ಉತ್ತರಪದಪ್ರಕೃತಿಸ್ವರತ್ವಂ । ಪುಷ್ಟಿವರ್ಧನಃ । ವರ್ಧಯತೇರ್ನಂದ್ಯಾದಿತ್ವಾಲ್ಲ್ಯುಃ । ಪಾ. ೩-೧-೧೩೪ । ಲಿತೀತಿ ಪ್ರತ್ಯಯೋತ್ಪೂರ್ವಸ್ಯೋದಾತ್ತತ್ವಂ । ಪುಷ್ಟೇರ್ವರ್ಧನ ಇತಿ ಕರ್ಮಣಿ ಷಷ್ಠ್ಯಾ ಸಮಾಸಃ । ಕೃದುತ್ತರಪದಪ್ರಕೃಸ್ವರತ್ವಂ । ಸಿಷಕ್ತು । ಷಚಿ ಸಮವಾಯೇ । ಲೋಟಿ ಬಹುಲಂ ಛಂದಸೀತಿ ಶಪಃ ಶ್ಲುಃ । ಶ್ಲಾವಿತಿ ದ್ವಿತ್ವೇ ಹಲಾದಿಶೇಷೇ ಬಹುಲಂ ಛಂದಸೀತ್ಯಭ್ಯಾಸಸ್ಯಾಕಾರಸ್ಯೇಕಾರಃ। ಪಾ. ೭-೪-೭೮ । ತುರಃ । ತುರ ತ್ವರಣೇ । ಇಗುಪಧಜ್ಞಾಪ್ರೀಕಿರಃ । ಕಃ ಪ್ರತ್ಯಯಸ್ವರಃ ॥

॥ ಪ್ರತಿಪದಾರ್ಥ ॥

ಯಃ—ಯಾವ ಬ್ರಹ್ಮಣಸ್ಪತಿಯು । ರೇವಾನ್—ಧನವುಳ್ಳವನೋ । —ಯಃ ಯಾವ ಬ್ರಹ್ಮಣಸ್ಪತಿಯು । ಅಮೀವಹಾ—ರೋಗಗಳನ್ನು ಪರಿಹಾರಮಾಡುವನೋ । ವಸುವಿತ್—ಧನವನ್ನು ಒದಗಿಸುವವನೋ । ಪುಷ್ಟಿವರ್ಧನಃ—ಪುಷ್ಟಿಯನ್ನು ಹೆಚ್ಚುಮಾಡುವವನೋ । ಯಃ—ಯಾವನು । ತುರಃ —ಬೇಗನೆ ಫಲವನ್ನು ಕೊಡುವನೋ । ಸಃ—ಆ ಬ್ರಹ್ಮಣಸ್ಪತಿಯು । ನಃ—ನಮ್ಮನ್ನು । ಸಿಷಕ್ತು—ಸೇವಿಸಲಿ (ಅನುಗ್ರಹಿಸಲಿ)

॥ ಭಾವಾರ್ಥ ॥

ಬ್ರಹ್ಮಣಸ್ಪತಿಯು ಮಹಾಧನಾಢ್ಯನು. ಇತರರಿಗೆ ಧನವನ್ನು ಕೊಡತಕ್ಕವನು. ಪುಷ್ಟಿಯನ್ನುಂಟುಮಾಡುವವನು. ಶೀಘ್ರವಾಗಿ ಫಲವನ್ನು ಕೊಡತಕ್ಕವನು. ಇಂತಹ ಬ್ರಹ್ಮಣಸ್ಪತಿಯು ನಮ್ಮನ್ನು ಅನುಗ್ರಹಿಸಲಿ.

English Translation

May he (Brahmanaspati) who is wealthy, the healer of disease; the acquirer of riches, incraaser of nourishments, the prompt bestower of rewards be favourable to us.

॥ ವಿಶೇಷವಿಷಯಗಳು ॥

ರೇವಾನ್—ರಯಿರಸ್ಯಾಸ್ತೀತಿ ರೇವಾನ್—ಧನವುಳ್ಳವನು.

ಅಮಿವಹಾ—ಅಮ ರೋಗಃ ತಂ ಹಂತೀತಿ ಅಮಿವಹಾ—ರೋಗವನ್ನು ನಾಶಮಾಡುವವನು. **ತುರಃ**—ತ್ವರೋಪೇತಃ ಶೀಘ್ರೇಫಲದಃ—ಬೇಗನೆ ಫಲಗಳನ್ನು ಕೊಡುವವನು. **ತುರಃ** ಎಂಬ ಶಬ್ದಕ್ಕೆ ತ್ವರೋಪೇತಃ ಶೀಘ್ರಯುಕ್ತನು ತ್ವರಿತವಾಗಿ ಅಥವಾ ಬೇಗನೆ ಕೆಲಸಮಾಡುವವನು ಎಂದೆರ್ಥವಾದರೂ ಇಲ್ಲಿ ಭಾಷ್ಯಕಾರರು ಕರ್ಮಗಳಿಗೆ ಬೇಗನೆ ಫಲವನ್ನು ಕೊಡುವವನೆಂದು ಅರ್ಥವನ್ನು ಹೊಂದಿಸಿರುವರು.

॥ ವ್ಯಾಕರಣಪ್ರಕ್ರಿಯಾ ॥

ರೇವಾನ್—ರಯಿಃ ಅಸ್ಯ ಅಸ್ತಿ ಎಂದು ವಿಗ್ರಹ. **ತದಸ್ಯಾಸ್ತ್ಯಸ್ಮಿನ್ನಿತಿಮತುಪ್** (ಪಾ.ಸೂ. ೫-೨-೯೪) ಎಂಬುದರಿಂದ ಮತುಪ್ ಪ್ರತ್ಯಯ, ಪ್ರಾತಿಪದಿಕಾವಯವವಾದ ಸುಗೆ ' ಸುಪೋಧಾತು ' ಎಂಬುದರಿಂದ ಲುಕ್ ರಯಿ+ಮತ್, **ರಯೇರ್ಮತೌಬಹುಲಮ್** (ಪಾ.ಸೂ. ೬-೧-೩೭-೬) ಮತುಪ್ ಪ್ರತ್ಯಯ ಪರದಲ್ಲಿರುವಾಗ ರಯಿ ಶಬ್ದಕ್ಕೆ ಸಂಪ್ರಸಾರಣವು ಬಹುಲವಾಗಿ ಬರುವುದು ಎಂಬುದರಿಂದ ಸಂಪ್ರಸಾರಣ ಯಕಾರಕ್ಕೆ ಇಕಾರ **ಸಂಪ್ರಸಾರಣಾಚ್ಚ** (ಪಾ.ಸೂ. ೬-೧-೧೦೮) ಎಂಬುದರಿಂದ ಪೂರ್ವರೂಪ ರ+ಇ+ಮತ್ ಛಂದಸೀರಃ (ಪಾ. ಸೂ. ೮-೩-೧೫) ಎಂಬುದರಿಂದ ಮಕಾರಕ್ಕೆ ವಕಾರ, **ಆದ್ಗುಣಃ** (ಪಾ- ಸೂ. ೬-೧-೮೭) ಎಂಬುದರಿಂದ ಅ+ಇಗಳಿಗೆ ಏಕಾರ, ರೇ+ವತ್ ಎಂದಾಗುವುದು ರ+ಇ+ಮತ್ ಎಂದಿರುವಾಗ ಛಂದಸೀರಃ ಎಂದು ವತ್ವ ನೊದಲು ಬರುವುದೋ ಆದ್ಗುಣಃ ಎಂದು ಗುಣ ನೊದಲು ಬರುವುದೋ ಎಂದರೆ ಛಂದಸೀರಃ ಎಂಬುದು ಎಂಟನೆಯ ಅಧ್ಯಾಯದಲ್ಲಿ ಎರಡನೇ ಪಾದದಲ್ಲಿರುವುದು. ಆದ್ಗುಣಃ ಎಂಬ ಸೂತ್ರವು. ಆರನೇ ಅಧ್ಯಾಯದ ನೊದಲನೇ ಪಾದದಲ್ಲಿರುವುದು. ಏವಂಚ **ಪೂರ್ವತ್ರಾಸಿದ್ಧಮ್** (ಪಾ. ಸೂ. ೮-೨-೧) ಎಂಬುದರಿಂದ ಪೂರ್ವಶಾಸ್ತ್ರವಾದ ಗುಣವನ್ನು ಮಾಡುವಾಗ ಪರಶಾಸ್ತ್ರ ಎಂದರೆ ತ್ರೈಪಾದಿಕವಾದ ವತ್ವವು ಅಸಿದ್ಧವಾಗುವುದು. ಆದ್ದರಿಂದ ನೊದಲು ಗುಣ ಬರುವುದು ಯುಕ್ತ. ಅಲ್ಲದೆ ಘಟಕ—ನಿಮಿತ್ತಕಂ ಅನ್ತರಂಗಂ ಎಂದು ಅಂತರಂಗಕ್ಕೆ ಲಕ್ಷಣವು. ಇಲ್ಲಿ ಬಹಿರಂಗ ಶಾಸ್ತ್ರವಾದ ವತ್ವಶಾಸ್ತ್ರದ ನಿಮಿತ್ತ ಸಮುದಾಯದಲ್ಲಿ ಸೇರಿದ ವರ್ಣದ್ವಯಮಾತ್ರ ನಿಮಿತ್ತಕವಾದ್ದರಿಂದ ಗುಣ ಅನ್ತರಙ್ಗ, ತಾದೃಶವರ್ಣದ್ವಯಘಟಿತ ನಿಮಿತ್ತಕವಾದ್ದರಿಂದ ವತ್ವ ಬಹಿರಂಗ-ಏವಂಚ ಅಸಿದ್ಧಂ-ಬಹಿರಙ್ಗಮನ್ತರಙ್ಗೇ (ಪರಿಭಾ ೫೦) ಎಂಬುದರಿಂದ ಅಂತರಂಗವಾದ ಗುಣವನ್ನು ಮಾಡುವಾಗ ಬಹಿರಂಗವಾದ ವತ್ವ ಶಾಸ್ತ್ರವು ಅಸಿದ್ಧವಾಗುವುದು. ಈ ಎರಡು ಕಾರಣಗಳಿಂದ ಮೊದಲು ಗುಣ ಬರುವುದು ಯುಕ್ತ, ಹೀಗೆ ಮೊದಲು ಗುಣಬಂದರೆ ರೇ+ಮತ್ ಎಂದಾಗುವುದು. ಈಗ ಇವರ್ಣಾಂತವಾದ ಶಬ್ದದ ಮುಂದೆ ಮತುಪ್ ಇಲ್ಲ. ಆದ್ದರಿಂದ ಛಂದಸೀರಃ (೮-೩-೧೫) ಇವರ್ಣಾಂತಕ್ಕಿಂತಲೂ ರೇಫಾಂತಕ್ಕಿಂತಲೂ ಪರದಲ್ಲಿರುವ ಮತುಪ್ಪಿನ ಮಕಾರಕ್ಕೆ ವಕಾರ ಬರುವುದು ಎಂಬುದರಿಂದ ವಕಾರ ಹೇಗೆ ಬರುವುದು. **ಅನ್ತ್ಯಾದಿವಚ್ಚ** (ಪಾ. ಸೂ. ೬-೨-೪೫) ಏಕಾದೇಶವು ಪೂರ್ವದ ಅಂತದಂತೆಯೂ, ಪರದ ಆದಿಯಂತೆಯೂ ಆಗುವುದು ಎಂದು ಹೇಳಿರುವುದರಿಂದ ಇಲ್ಲಿ ಪರಾದಿವದ್ಭಾವವನ್ನು ಲಕ್ಷ್ಯಾನುಸಾರವಾಗಿ ಆಶ್ರಯಿಸುವೆವು. ' ಉಭಯತ ಆಶ್ರಯಣೇನಾನ್ತ್ಯಾದಿವತ್' ಎಂದು ಪ್ರತಿಷೇಧವಿರುವುದರಿಂದ ಪೂರ್ವಾನ್ತ್ಯವದ್ಭಾವ ಪರಾದಿವದ್ಭಾವಗಳೆರಡನ್ನೂ ಒಟ್ಟಿಗೆ ಹೇಳಲಾಗುವುದಿಲ್ಲ. ಏವಂಚ ಗುಣರೂಪವಾದ ಏಕಾದೇಶಕ್ಕೆ ಪರದಲ್ಲಿರುವುದು ಇಕಾರ. ಅದಕ್ಕೆ ಆದಿಯೂ ಆದೇ, ಆದಿವತ್ ಆಗುವುದು ಎಂಬುದರಿಂದ ಇಕಾರ

ವಿದ್ದಂತೆ ಆಗುವುದು. ಆದ್ದರಿಂದ, ಇವರ್ಣಾತ್ಪರತ್ವವು ಸಂಭವಿಸುವುದು ಎಂದು ಹೇಳುತ್ತೇವೆ ಎಂದರೆ ಹೀಗೆ ಹೇಳಲಾಗುವುದಿಲ್ಲ. ಏಕೆಂದರೆ ಇತ್ವವು ವರ್ಣಮಾತ್ರವೃತ್ತಿಯಾದ ಧರ್ಮ. ಆದ್ದರಿಂದ ನವಾ ಅತಾದ್ಯೂಪ್ಯಾತಿದೇಶಾತ್, ನವಾ ವರ್ಣಾಶ್ರಯವಿಧೌಚ ವರ್ಣಾಶ್ರಯಕಾರ್ಯವನ್ನು ಮಾಡುವಾಗ ಅಂತಾದಿವದ್ಭಾವ ಬರುವುದಿಲ್ಲ ಎಂಬ ವಚನವನ್ನು ಮಾಡಬೇಕಾದ್ದಿಲ್ಲ ಏಕೆಂದರೆ ನವಾ ಅತಾದ್ಯೂಪ್ಯಾತಿದೇಶಾತ್ತಾದ್ಯೂಪ್ಯ ಎಂದರೆ ವರ್ಣವೃತ್ತಿಯಾದ ಧರ್ಮ. ಅದಕ್ಕೆ ಅತಿದೇಶವು ಈ ಸೂತ್ರದಿಂದ ಬರುವುದೇ ಇಲ್ಲ, ಆದ್ದರಿಂದ ಪೂರ್ವೋಕ್ತವಚನವನ್ನು ಆರಂಭಿಸಬೇಕಾದುದಿಲ್ಲ ಎಂದು ಹೇಳಿರುವುದರಿಂದ ಇತ್ವರೂಪವಾದ ವರ್ಣ ವೃತ್ತಿ ಧರ್ಮಕ್ಕೆ ಅಂತಾದಿವಚ್ಚೆ ಎಂಬುದರಿಂದ ಅತಿದೇಶ ಬರುವುದಿಲ್ಲ. ವರ್ಣಾಶ್ರಯ ವಿಧಿಯಲ್ಲಿ ಅಂತಾದಿವಚ್ಚ ಎಂಬ ಅತಿದೇಶವನ್ನು ಒಪ್ಪಿಕೊಂಡರೆ ಋಟ್ವಾಭಿಃ ಎಂಬಲ್ಲಿ ಐಸಾದೇಶ ಬರಬೇಕಾಗುವುದು. ಹೇಗೆಂದರೆ ಋಟ್ವಿಶಬ್ದದ ಮುಂದೆ ಟಾಪ್, ಸವರ್ಣದೀರ್ಘೆ ಋಟ್ವಾ ಎಂದಾಗುವುದು. ಈಗ ಇದು ಯದ್ಯಪಿ ಹ್ರಸ್ವಾಕಾರಾಂತವಲ್ಲ. ಆದರೂ, ಏಕಾದೇಶಕ್ಕೆ ಪೂರ್ವದಲ್ಲಿರುವ ವರ್ಣವು ಹ್ರಸ್ವನೇ ಆದ್ದರಿಂದ ಪೂರ್ವಾಂತವದ್ಭಾವದಿಂದ ಪೂರ್ವವರ್ಣದಲ್ಲಿರುವ ಅತ್ವವು ಏಕಾದೇಶದಲ್ಲಿ ಬರುವುದು. ಏವಂಚ ಹ್ರಸ್ವಾ ವರ್ಣಾಂತದ ಮುಂದೆ ಭಿಸ್ ಇರುವುದರಿಂದ ಅದಕ್ಕೆ ಐಸಾದೇಶವು **ಅತೋಭಿಸೈಸ್** (ಪಾ. ಸೂ. ೭-೧-೯) ಎಂಬುದರಿಂದ ಬರಬೇಕಾಗುವುದು. ಆದ್ದರಿಂದ ವರ್ಣಾಶ್ರಯ ಕಾರ್ಯವನ್ನು ಮಾಡುವಾಗ ಅನ್ತಾದಿವದ್ಭಾವ ಬರುವುದಿಲ್ಲ. ಅಂತರೇ+ಮತ್ ಎಂಬಲ್ಲಿ ಇವರ್ಣಾಂತತ್ವಪರತ್ವವು ಇಲ್ಲದೇ ಇರುವುದರಿಂದ ವತ್ವ ಹೇಗೆ ಬರುವುದು. ಇದಕ್ಕಾಗಿ ವತ್ವವು ಅಪವಾದವಾದ್ದರಿಂದ ಅಂತರಂಗಕ್ಕಿಂತಲೂ ಮೊದಲೇ ಬರುವುದು ಎಂದು ಹೇಳುತ್ತೇವೆ. ಹೇಗೆಂದರೆ ನಿರವಕಾಶೋವಿಧಿರಪವಾದಃ ಅವಕಾಶಯಾವುದಾದರೂ ಲಕ್ಷ್ಯದಲ್ಲಿ ಪ್ರವೃತ್ತಿಸುವಿಕೆ. ಅದು ದೊರಕದೇ ಇದ್ದರೆ ಆ ಶಾಸ್ತ್ರವು ಅಪವಾದವಾಗುವುದು. ಇಲ್ಲಿ ವತ್ವಕ್ಕಿಂತ ಮೊದಲು ಗುಣಬಂದರೆ ಹೀಗೆ ಮಿಕ್ಕ ಸ್ಥಳಗಳಲ್ಲಿಯೂ ಆಗಬಹುದು. ಏವಂಚ ಇದಕ್ಕೆ ಬೇರೆ ಲಕ್ಷ್ಯ ದೊರೆಯದೆ ಇರುವುದರಿಂದ ಇದು ಅಪವಾದವೆನ್ನುವೆವು. ಅಪವಾದವಾದ್ದರಿಂದ ಗುಣಕ್ಕಿಂತಲೂ ಮುಂಚೆಯೇ ವತ್ವ ಬರುವುದು ಎನ್ನುವೆವು ಎಂದರೆ ಹೀಗೆ ಹೇಳಲಾಗುವುದಿಲ್ಲ. ಏಕೆಂದರೆ ಸರ್ವಥಾ ವತ್ವ ಶಾಸ್ತ್ರಕ್ಕೆ ವೈಯರ್ಥ್ಯ ಬರುವಪಕ್ಷಕ್ಕೆ ಹೀಗೆ ಹೇಳಬಹುದು. ಆದರೆ ವತ್ವಶಾಸ್ತ್ರವು **ಆಗ್ನಿವಾಸ್ತ್ಯೆ ದರ್ಭಸ್ತಮ್ಬಃ** (ತೈ. ಬ್ರಾ. ೨-೨-೧-೫) **ಉಪಪ್ರಜಾಹ್ಯಾಣಿ ಹರಿವಃ** (ಋ. ಸಂ. ೧೦-೧೦೪-೬) ಎಂಬೀ ಮಂತ್ರಗಳಲ್ಲಿರುವ ಅಗ್ನಿವಾನ್, ಹರಿವಃ ಎಂಬಲ್ಲಿ ಸಾವಕಾಶವಾಗುವುದು. ಆದ್ದರಿಂದ ಇದು ಅಪವಾದವಾಗುವುದಿಲ್ಲ. ಅದಕಾರಣ ಅಪವಾದವಾದ್ದರಿಂದ ವತ್ವ ಮೊದಲು ಬರುವುದು ಎಂದೂ ಹೇಳಲಾಗುವುದಿಲ್ಲ. ಏವಂಚ ರೇವಾನ್ ಎಂಬುದು ಹೇಗೆ ಸಿದ್ಧಿಸುವುದು ಎಂದರೆ ಯದ್ಯಪಿ ಪೂರ್ವೋಕ್ತವಾದುದು ಸತ್ಯವು. ಆದರೂ ಇಲ್ಲಿ ಗುಣವು ಬರುವುದಕ್ಕಿಂತಲೂ ಮೊದಲು ರ+ಇ+ಮತ್ ಎಂದಿರುವಾಗ ಮತುವ್ಪು ಇಕಾರಕ್ಕಿಂತಲೂ ಪರದಲ್ಲಿರತಕ್ಕದ್ದಾಗುವುದು ಏವಂಚ ಕದಾಚಿತ್ ಇ ವರ್ಣಕ್ಕಿಂತಲೂ ಪರದಲ್ಲಿರುವ ಮತುಪ್ಪಿಗೆ ನಂತರ ಏಕಾರಾದೇಶ ಬಂದು ಇ ವರ್ಣಾತ್ಪರತ್ವವಿಲ್ಲದೇ ಇದ್ದರೂ ವತ್ವ ಬರುವುದು ಆದ್ದರಿಂದಲೇ **ಛಂದಸೀರಃ** ಎಂಬುದಕ್ಕೆ ಹರಿವಃ ಮೊದಲಾದ ಉದಾಹರಣೆಗಳನ್ನು ಕೊಟ್ಟಮೇಲೂ ಕೊನೆಯಲ್ಲಿ ಆರೀವಾನ್ ಎಂಬುದನ್ನೂ ಉದಹರಿಸಿರುವರು. **ಹ್ರಸ್ವನುಡ್ಭ್ಯಾಂ ಮತುಸ್** (ಪಾ. ಸೂ. ೬-೧-೧೭೬) ಎಂಬಲ್ಲಿ ಆರೀಶಬ್ದಾತ್ **ಮತುಪಃ**(ಪಾ. ಸೂ. ವಾ. ೬-೧-೧೭೬-೧) ಆರೀಶಬ್ದದ ಮುಂದೆ ಇರುವ ಮತುಪ್ ಪ್ರತ್ಯಯವು ಉದಾತ್ತವಾಗುವುದು ಎಂಬ ವಚನವು ಇರುವುದು. ಇಲ್ಲಿ ಆರೀ ಎಂಬ ಶಬ್ದವು ರೀ ಶಬ್ದಕ್ಕೂ ಉಪಲಕ್ಷಣ, ರೀ ಶಬ್ದದ ಮುಂದೆ ಇರುವ ಮತುವ್ಪು ಉದಾತ್ತವಾಗುವುದು ಎಂದೂ ಇಟ್ಟುಕೊಳ್ಳಬೇಕು ಎಂದು ಭಾವ. ಆದುದರಿಂದಲೇ ರೇವಾನ್ ಇನ್ದ್ರ ಇತ್ಯಾದಿ ಸ್ಥಳಗಳಲ್ಲಿ ಮತುವ್ಪು ಉದಾತ್ತವಾಗಿ ಇರುವುದು. ಅಥವಾ ಹ್ರಸ್ವನುಡ್ಭ್ಯಾಂ ಮತುಸ್

ಎಂಬಲ್ಲಿಯೂ ಕದಾಚಿತ್ ಹ್ರಸ್ವಾಂತದ ಮುಂದೆ ಇರುವ ಮತುಪ್ಪು ಉದಾತ್ತವಾಗುವುದು ಎಂದೇ ಅರ್ಥವರ್ಣನೆ ವಿವಕ್ಷಿತವು ಏವಂಚ ರಯಿಶಬ್ದ ಮುಂದಿರುವಾಗಲೋ ಅಥವಾ ಯಕಾರಕ್ಕೆ ಸಂಪ್ರಸಾರಣಪೂರ್ವರೂಪವೂ ಬಂದ ನಂತರ ಗುಣ ಬರುವುದಕ್ಕಿಂತಲೂ ಮುಂಚೆ ರ+ಇ+ಮತ್ ಎಂದಿರುವಾಗಲೋ ಹ್ರಸ್ವಾಂತಕ್ಕಿಂತಲೂ ಪರದಲ್ಲಿ ಮತುಪ್ ಇರುವುದರಿಂದ ರೇವಾನ್, ಆರೇವಾನ್ ಇತ್ಯಾದಿ ಸರ್ವಲಕ್ಷ್ಯಗಳಲ್ಲಿಯೂ ಮತುಪ್ಪಿಗೆ ಉದಾತ್ತಸ್ವರವು ಸಿದ್ಧಿಸುವುದು. ಇದೇ ಅಭಿಪ್ರಾಯವು ಸೂತ್ರಕಾರರಿಗೆ ವಿವಕ್ಷಿತವು. ಇದನ್ನೇ ವಾರ್ತಿಕಕಾರರು ವಿವರಿಸಿರುವರು. ಆದ್ದರಿಂದ ರೇವಾನ್ ಎಂಬಲ್ಲಿ ವತ್ವವೂ ಸ್ವರವೂ ಸಿದ್ಧಿಸುವುದು. **ಛಂದಸೀರಃ ಇವರ್ಣಾಂತ**, ರೇಫಾಂತ ಶಬ್ದಗಳ ಮುಂದೆ ವಿಹಿತವಾದ ಮತುಪ್ಪಿನ ಮಕಾರಕ್ಕೆ ವತ್ವ ಬರುವದು ಎಂದು ಪೂರ್ವಮಂತ್ರದಲ್ಲಿ ತೋರಿಸಿರುವಂತೆ ವ್ಯಾಖ್ಯಾನ ಮಾಡಿದರೆ ಈಗ ಅಂದರೆ ಗುಣಾನಂತರ ಇ ವರ್ಣವಿಲ್ಲದಿದ್ದರೂ ರಯಿ ಶಬ್ದದ ಮುಂದೆ ಮತುಪ್ ವಿಹಿತವಾಗಿರುವುದರಿಂದ ಇವರ್ಣಾಂತಾದ್ವಿಹಿತತ್ವವಿರುವುದರಿಂದ ವತ್ವವು ಬರಲು ಯಾವ ಅಡ್ಡಿಯೂ ಇರುವುದಿಲ್ಲ. ಹ್ರಸ್ವನುಡ್ಭ್ಯೋಮ್, ಎಂಬಲ್ಲಿ ಭಾಷ್ಯದಲ್ಲಿ ರೇಶಬ್ದಾಚ್ಚ ಎಂದೇ ವಾರ್ತಿಕವಿರುವುದು. ಆದ್ದರಿಂದ ಉಪಲಕ್ಷಣಾದ್ಯರ್ಥವರ್ಣನೆಗೆ ಅವಕಾಶವೇ ಇಲ್ಲವು.

ಆಮಿವಹಾ—ಅಮ ರೋಗೇ, ಧಾತು. **ಶೇವಯೆಹ್ವ**—(ಉ. ಸೂ. ೧-೧೫೨) ಎಂಬುದರಿಂದ ಅಮ್ ಧಾತುವಿನ ಮುಂದೆ ವನ್ ಪ್ರತ್ಯಯವೂ ಅದಕ್ಕೆ ಈಡಾಗಮವೂ **ನಿಪಾತಿತ**ವಾಗಿರುವುದು. ಅಮಿವಾನಂ ಹನ್ತ್ರಿ, ಎಂದು ವಿವಕ್ಷಿಸಿದಾಗ **ಬಹುಲಂಛಂದಸಿ** (ಪಾ. ಸೂ. ೩-೨-೮೮) ಉಪಪದಾಂತರಯೋಗವಿದ್ದರೂ ಹನ್ಧಾತುವಿನ ಮುಂದೆ ಬಹುಲವಾಗಿ ಕ್ವಿಪ್ ಬರುವುದು ಎಂಬುದರಿಂದ ಕ್ವಿಪ್, ಅಮಿವಹನ್, ಧಾತುಸ್ವರದಿಂದ ಹನ್ ಅಂತೋದಾತ್ತ, ಸಮಾಸಾನಂತರ **ಗತಿತಾರಕೋಪಪದಾತ್ಕೃತ್**, ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬಂದು ಅದೇ ಸ್ವರ ಸಿಲ್ಲುವುದು.

ವಸುವಿತ್—ವಸು ವಿನ್ದತೀತಿ ವಸುವಿತ್, **ಕ್ವಿಪ್ಚ** ಎಂಬುದರಿಂದ ವಿದ್ಲೃ ಲಾಭೇ, ಧಾತುವಿನ ಮುಂದೆ ಕ್ವಿಪ್, ಮೊದಲಿನಂತೆ ಕೃದುತ್ತರಪದಪ್ರಕೃತಿಸ್ವರ.

ಪುಷ್ಟಿವರ್ಧನಃ- ಪುಷ್ಟಿಂ ವರ್ಧಯತೀತಿ ಪುಷ್ಟಿವರ್ಧನಃ ವೃಧು ವೃದ್ಧೌ, ಧಾತು. ಇದರ ಮುಂದೆ ಣಿಚ್ ನನ್ದಿ ವಾಶಿ ಮದಿ ದೂಷಿ ಸಾಧಿ ವರ್ಧಿ ಶೋಭಿ ರೋಚಿಭ್ಯೋಣ್ಯನ್ತೇಭ್ಯಸ್ಸಂಜ್ಞಾಯಾಮ್, ಎಂದು ಣ್ಯನ್ತವಾದ ವೃಧ್ಧಾತುವು ನನ್ದ್ಯಾದಿಯಲ್ಲಿ ಪಠಿತವಾಗಿರುವುದು. ಆದ್ದರಿಂದ ಇದರ ಮುಂದೆ **ಸನ್ಧಿಗ್ರಹಿಪಚಾದಿಭ್ಯೋಲ್ಯುಣುನ್ಮಿಚಃ** (ಪಾ. ಸೂ. ೩-೧-೧೩೪) ಎಂಬುದರಿಂದ ಲ್ಯು ಪ್ರತ್ಯಯ ಬರುವುದು, ಣೇರನಿಟಿ, ಎಂಬುದರಿಂದ ಣಿ ಲೋಪ, ಯುವೋರನಾಕೌ, ಎಂಬುದರಿಂದ ಯುಗೆ ಅನ ಆದೇಶ, ಲಘೂಪಧಗುಣ, ರಪರತ್ವ ವರ್ಧನ. **ಲಿತಿ** (ಪಾ. ಸೂ. ೬-೧-೧) ಎಂಬುದರಿಂದ ಅನ ಪ್ರತ್ಯಯದ ಹಿಂದೆ ಇರುವುದು ಉದಾತ್ತ. ಪುಷ್ಟೇಃ ವರ್ಧನಃ ಎಂದು ಕರ್ಮಣಿಷಷ್ಠ್ಯಂತದೊಂದಿಗೆ ಸಮಾಸ, ಕೃದುತ್ತರಪದಪ್ರಕೃತಿಸ್ವರ.

ಸಿಷಕ್ತು—**ಷಚೆ ಸಮವಾಯೇ, ಧಾತ್ವಾದೇಃಷಃಸಃ**, ಎಂಬುದರಿಂದ ಷಕಾರಕ್ಕೆ ಸಕಾರ, ಲೋಟ್, **ತಿಪ್**, ಏರುಃ, ಎಂಬುದರಿಂದ ತಿಯ ಇಕಾರಕ್ಕೆ ಉಕಾರ. ಕರ್ತರಿಶಪ್ ಎಂಬುದರಿಂದ **ಶಪ್**, ಅದಕ್ಕೆ **ಬಹುಲಂಛಂದಸಿ** (ಪಾ. ಸೂ. ೨-೪-೭೬) ಛಂದಸ್ಸಿನಲ್ಲಿ ಶಪ್ಪಿಗೆ ಬಹುಲವಾಗಿ ಶ್ಲು (ಲೋಪ) ಬರುವುದು. ಎಂಬುದರಿಂದ ಶ್ಲು ಬರುವುದು, **ಶ್ಲೌ** (ಪಾ.ಸೂ. ೪-೪೩) ಎಂಬುದರಿಂದ ದ್ವಿತ್ವ. ಸಚ್ ಸಚ್, ತು, **ಹಲಾದಿಃಶೇಷಃ** (ಪಾ.ಸೂ. ೭-೪-೬೦) ಎಂಬುದರಿಂದ ಅಭ್ಯಾಸದ ಚಕಾರಕ್ಕೆ ಲೋಪ **ಬಹುಲಂಛಂದಸಿ** (ಋ. ಸಂ. ೨-೪-೭೮) ಅಭ್ಯಾ

ಸದ ಅಕಾರಕ್ಕೆ ಇಕಾರವು ಛಂದಸ್ಸಿನಲ್ಲಿ ಬಹುಲವಾಗಿ ಬರುವುದು, ಎಂಬುದರಿಂದ ಮೊದಲನೇ ಸಕಾರದ ಅಕಾರಕ್ಕೆ ಇಕಾರ ಸಿಸಜ್+ತ, ಚೋಃಕುಃ (ಪಾ. ಸೂ. ೮-೨-೩೦) ಎಂಬುದರಿಂದ ಚಕಾರಕ್ಕೆ ಕಕಾರ. ಆದೇಶಪ್ರತ್ಯಯ-ಯೋಃ, ಎಂಬುದರಿಂದ ಎರಡನೇ ಸಕಾರಕ್ಕೆ ಷಕಾರ ಸಿಷಕ್ತು ಎಂದಾಗುವುದು.

ತುರಃ—ತುರ ತ್ವರಣೇ, ಧಾತು. ಇಗುಪಧ, ಇದರ ಮುಂದ ಇಗುಪಧಜ್ಞಾಪ್ರೀಕಿರಃಕಃ (ಪಾ. ಸೂ. ೩-೧-೧೩೫) ಎಂಬುದರಿಂದ ಕ ಪ್ರತ್ಯಯ, ಕಕಾರಕ್ಕೆ ಇತ್ಸಂಜ್ಞೆ ಲೋಪ, ಪ್ರತ್ಯಯವು ಕಿತ್ತು. ಅದ್ದರಿಂದ ಲಘೂಪಧಗುಣ ಬರುವುದಿಲ್ಲ. ಅದ್ರ್ರದಾಶ್ವ, ಎಂಬುದರಿಂದ ಪ್ರತ್ಯಯಸ್ವರ ದರುವುದು, ತುರಃ ಎಂಬುದು ಅಂತೋದಾತ್ತವಾಗುವುದು ॥ ೨ ॥

॥ ಸಂಹಿತಾಪಾಠಃ ॥

ಮಾನಃ ಶಂಸ್ಕೋ ಅರರುಷೋ ಧೂರ್ತಿಃ ಪ್ರಣಙ್ಮರ್ತ್ಯಸ್ಯ ।
ರಕ್ಷಾ ಣೋ ಬ್ರಹ್ಮಣಸ್ಪತೇ ॥ ೩ ॥

॥ ಪದಪಾಠಃ ॥

ಮಾ । ನಃ । ಶಂಸಃ । ಅರರುಷಃ । ಧೂರ್ತಿಃ । ಪ್ರಣಕ್ । ಮರ್ತ್ಯಸ್ಯ ॥
ರಕ್ಷ । ನಃ । ಬ್ರಹ್ಮಣಃ । ಪತೇ ॥ ೩ ॥

॥ ಸಾಯಣಭಾಷ್ಯಂ ॥

ಅರರುಷೋ ಮರ್ತ್ಯಸ್ಯೋಪಪ್ರೇವಂ ಕರ್ತುಮಸ್ಮತ್ಸಮೀಪಂ ಪ್ರಾಪ್ತಸ್ಯ ಶತ್ರುರೂಪಸ್ಯ ಮನುಷ್ಯಸ್ಯ ಧೂರ್ತಿರ್ಹಿಂಸಕಃ ಶಂಸಃ ಶಂಸನಂ । ಅಧಿಕ್ಷೇಪ ಇತ್ಯರ್ಥಃ । ತಾದೃಶೋ ವಾಗ್ವಿಶೇಷೋ ನೋಽಸ್ಮಾನ್ಮಾ ಪ್ರಣಕ್ । ಮಾ ಸಂಪ್ರಣಕ್ತು । ಶತ್ರುಣಾ ಪ್ರಯುಕ್ತೋಽಧಿಕ್ಷೇಪಃ ಕದಾಚಿದಸ್ಮಾನ್ಮಾ ಪ್ರಾಪ್ನೋತ್ವಿತ್ಯರ್ಥಃ । ತದರ್ಥಂ ಹೇ ಬ್ರಹ್ಮಣಸ್ಪತೇ ನೋಽಸ್ಮಾನ್ರಕ್ಷ । ಪಾಲಯ ॥ ಮಾ । ನಿಪಾತಃ । ಶಂಸನಂ । ಶಂಸಃ । ಭಾವೇ ಘಞ್ । ಞಿತಶ್ಚಾದ್ಯುದಾತ್ತಃ । ಅರರುಷಃ । ಅರ್ತೇರರುಃ । ಉ- ೪-೭೯ । ಇತ್ಯಂತರ್ಭಾವಿತಣ್ಯರ್ಥಾದ್ಧೃ ಗತಾವಿತ್ಯಸ್ಮಾದರುಸ್ । ಗುಣೋ ರಪರತ್ವಂ । ಪ್ರತ್ಯಯಸ್ವರೇ ಪ್ರಾಪ್ತೇ ವೃಷಾದಿತ್ವಾದಾದ್ಯುದಾತ್ತಃ । ಧೂರ್ತಿಃ । ಧೂರ್ವೀ ಹಿಂಸಾರ್ಥಃ । ಕ್ತಿಚ್ಕ್ತಾ ಚ ಸಂಜ್ಞಾಯಾಮಿತಿ ಕ್ತಿಚ್ । ತಿತುತ್ರೇತಥಸಿಸುಸರಕಸೇಷು ಚೇತೀಟ್ಪ್ರತಿಷೇಧಃ । ಉಸಧಾಯಾಶ್ಚ । ಪಾ. ೭-೧-೧೦೧ । ಇತ್ಯುಸ-ಧಾದೀರ್ಘತ್ವಂ । ವಲಿ ಲೋಪಂ ಬಾಧಿತ್ವೋಠಿ ಪ್ರಾಪ್ತೇ । ಪಾ. ೬-೪-೧೯ । ರಾಲ್ಲೋಪಃ । ಪಾ.

೩-೪-೨೧ । ಇತಿ ವಕಾರಲೋಪಃ । ಪ್ರಣಕ್ । ಪೃಚೀ ಸಂಪರ್ಕೇ । ಲಙಸ್ತಿಪ್ । ಇತಶ್ಚೇತೀಕಾರ-ಲೋಪಃ । ಹಲ್ಙ್ಯಾದಿಲೋಪಃ । ಕುತ್ವಂ । ರುಧಾದಿಭ್ಯಃ ಶ್ನಮ್ । ತಸ್ಯ ವ್ಯತ್ಯಯೋ ಬಹುಲಂ । ಪಾ. ೩-೧-೮೫ । ಇತ್ಯಡಾಗಮಃ । ಯೆಣಾದೇಶಃ । ಅಕಾರಸ್ಯಾಗಮಾನುದಾತ್ತತ್ವಂ ಬಾಧಿತ್ವಾ ವ್ಯತ್ಯ-ಯೇನೋದಾತ್ತತ್ವಂ । ಚಾದಿಲೋಪೇ ವಿಭಾಷೇತಿ ನಿಘಾತಾಭಾವಃ । ಮರ್ತ್ಯಸ್ಯ । ಮೃಙ್ ಪ್ರಾಣತ್ಯಾಗೇ ಅಸಿಹಸಿಮೃಇತ್ಯಾದಿನಾ । ಉ. ೩-೮೬ । ಔಣಾದಿಕಸ್ತ್ಯೃತ್ಯಯೆಃ । ಮರ್ತೇಷು ಭವ ಇತ್ಯರ್ಥೇ ಭವೇ ಛಂದಸೀತಿ ಯತ್ । ಯೆತೋಽನಾವ ಇತ್ಯಾದ್ಯುದಾತ್ತತ್ವಂ । ರಕ್ಷ । ರಕ್ಷ ಪಾಲನೇ । ಶಪಃ ಪಿತ್ತ್ವಾದ-ನುದಾತ್ತತ್ವಂ । ಧಾತುಸ್ವರ ಏವ ಶಿಷ್ಯತೇ । ಪಾದಾದಿತ್ವಾನ್ನ ನಿಘಾತಃ । ರಕ್ಷಾ ಣಃ । ದೈರ್ಘಜೋಽತೆಸ್ತಿಙ ಇತಿ ದೀರ್ಘಃ । ಉಪಸರ್ಗಾದ್ಬಹುಲಂ । ಪಾ. ೮-೪-೧೪ । ಇತಿ ಬಹುಲಗ್ರಹಣಾದಸುಪಸರ್ಗಾದಪಿ ನಸೋ ಣತ್ವಂ । ಬ್ರಹ್ಮಣಸ್ಪತೇ । ಷಷ್ಠ್ಯಾಃ ಪತಿಪುತ್ರೇತಿ ಸಂಹಿತಾಯಾಂ ವಿಸರ್ಗಸ್ಯ ಸಕಾರಃ । ಸುಬಾ-ಮಂತ್ರಿತೇ ಪರಾಂಗವದ್ಭಾವಾತ್ಪದದ್ವಯಸ್ಯಾಮಂತ್ರಿತನಿಘಾತಃ ॥

॥ ಪ್ರತಿಪದಾರ್ಥ ॥

ಅರರುಷಃ—ಹಿಂಸೆ ಮಾಡುವ ಉದ್ದೇಶದಿಂದ ಬಂದ (ಶತ್ರುರೂಪನಾದ)। ಮರ್ತ್ಯಸ್ಯ—ಮನುಷ್ಯನ । ಧೂರ್ತಿಃ—ಹಿಂಸಾಕಾರಕವಾದ । ಶಂಸಃ—ನಿಂದಾರೂಪವಾದ ವಾಕ್ಯ । ನಃ—ನಮ್ಮನ್ನು । ಮಾ ಪ್ರಣಕ್—ಸ್ಪರ್ಶಿಸದೇ ಇರಲಿ (ಅದಕ್ಕೋಸ್ಕರಲೇ) । ಹೇ ಬ್ರಹ್ಮಣಸ್ಪತೇ—ಎಲೈ ಬ್ರಹ್ಮಣಸ್ಪತಿಯೇ । ನಃ—ನಮ್ಮನ್ನು । ರಕ್ಷ—ಕಾಪಾಡು ।

॥ ಭಾವಾರ್ಥ ॥

ಎಲೈ ಬ್ರಹ್ಮಣಸ್ಪತಿಯೇ, ನಮ್ಮ ಶತ್ರುವು ಆಡುವ ನಿಂದಾವಾಕ್ಯಗಳಿಂದ ನಮಗೇನೂ ತೊಂದರೆಯಾಗ ದಂತೆ ನಮ್ಮನ್ನು ರಕ್ಷಿಸು.

English Translation.

May the harmful imprecation of the wicked mortal not reach us; protect us, O Brahmanaspati.

॥ ವಿಶೇಷನಿಷಯಗಳು ॥

ಶಂಸಃ—ಶಂಸನಂ—ಈ ಶಬ್ದಕ್ಕೆ ವಾಕ್ಯವು, ಹೇಳುವುದು ಎಂದರ್ಥವಾದರೂ ಇಲ್ಲಿ ಧೂರ್ತಿಃ ಶಂಸಃ ಎಂಬ ಶಬ್ದಗಳಿಗೆ ನಿಂದಾವಾಕ್ಯ, ಕೆಟ್ಟಮಾತುಗಳು, ಬೈಗಳು, ಕೆಟ್ಟದ್ದಾಗಲೆಂದು ಹಾರೈಸುವ ಮನೋಭಾವದಿಂದ ಕೂಡಿದ ಮಾತುಗಳು ಎಂಬ ಅಭಿಪ್ರಾಯವನ್ನು ಭಾಷ್ಯಕಾರರು ಸಮರ್ಥಿಸಿರುವರು.

ಅರುರುಷಃ ಮರ್ತ್ಯಸ್ಯ—ಹಿಂಸೆಯನ್ನು ಅಥವಾ ಉಪದ್ರವವನ್ನುಂಟುಮಾಡುವ ಉದ್ದಿಶ್ಯದಿಂದ ಕೂಡಿದ ಮನುಷ್ಯನ ಎಂದರ್ಥವು.

ಮಾ ಪ್ರಣಕ್—ಮಾ ಸಂಪ್ರಣಕ್ತು—ಸ್ಪರ್ಶಮಾಡದಿರಲಿ, not reach us. ಮಾ ಎಂಬ ಶಬ್ದವು ನಿಷೇಧಾರ್ಥವಾಚಕವು.

ರಕ್ಷ—ಈ ಶಬ್ದದ ಅಂತ್ಯಾಕ್ಷರವು ಛಂದಸ್ಸಿನ ಅನುಕೂಲಕ್ಕಾಗಿ ಸಂಹಿತಾಪಾಠದಲ್ಲಿ ದೀರ್ಘವಾಗಿದೆ.

॥ ವ್ಯಾಕರಣಪ್ರಕ್ರಿಯಾ ॥

ಮಾ—ಇದು ನಿಪಾತ, ಆದ್ದರಿಂದ ನಿಪಾತಾ ಆದ್ಯುದಾತ್ತಾಃ (ಪಾ. ಸೂ. ೮೦) ಎಂಬುದರಿಂದ ಆದ್ಯುದಾತ್ತ.

ಶಂಸಃ—ಶಂಸು ಸ್ತುತೌ, ಧಾತು. ಭಾವೇ (ಪಾ. ಸೂ. ೩-೩-೧೮) ಎಂಬುದರಿಂದ ಭಾವಾರ್ಥದಲ್ಲಿ ಘಞ್ ಪ್ರತ್ಯಯ, ಆದು ಞಿತ್ತಾದ್ದರಿಂದ ಞ್ನಿತ್ಯಾದಿರ್ನಿತ್ಯಂ, ಎಂಬುದರಿಂದ ಆದ್ಯುದಾತ್ತ, ಶಂಸನಂ ಶಂಸಃ ಎಂದು ವಿಗ್ರಹ.

ಅರರುಷಃ—**ಅರ್ತೇರರುಃ** (ಉ. ಸೂ. ೪-೫೧೯) ಋ ಗತೌ ಎಂಬ ಧಾತುವಿನ ಮುಂದೆ ಅರುಸ್ ಪ್ರತ್ಯಯ ಬರುವುದು ಎಂಬುದರಿಂದ ಋ ಗತೌ ಎಂಬ ಅಂತರ್ಭಾವಿತಣಿಚ್ಯರ್ಥಕವಾದ ಧಾತುವಿನ ಮುಂದೆ ಅರುಸ್ ಪ್ರತ್ಯಯ ಋ+ಅರುಸ್, **ಸಾರ್ವಧಾತುಕಾರ್ಧಧಾತುಕಯೋಃ** (ಪಾ. ಸೂ. ೭-೩-೮೪) ಎಂಬುದರಿಂದ ಋಗೆ ಗುಣ. **ಉರಣ್ರಪರಃ** (ಪಾ. ಸೂ. ೧-೧-೫೧) ಎಂಬುದರಿಂದ ರ ಪರವಾಗಿರುವುದು. ಅಂದರೆ ಅರ್ ಬರುವುದು ಅರ್+ಅರುಸ್ ಅರರುಸ್, ಆದ್ಯುದಾತ್ತಶ್ಚ ಎಂಬುದರಿಂದ ಅರುಸ್ ಪ್ರತ್ಯಯದ ಅಕಾರಕ್ಕೆ ಉದಾತ್ತವು ಪ್ರಾಪ್ತವಾಗುವುದು. ಆದರೂ ವೃಷಾದಿಗಣವು ಆಕೃತಿಗಣವಾದ್ದರಿಂದ ಅಲ್ಲಿ ಈ ಶಬ್ದವನ್ನು ಸೇರಿಸಬೇಕು. ಏವಂಚ **ವೃಷಾದೀನಾಂಚ** (ಪಾ. ಸೂ. ೬-೧-೨೦೩) ಎಂಬುದರಿಂದ ಆದ್ಯುದಾತ್ತ ಬರುವುದು. **ಷಷ್ಠೀಏಕವಚನ ಙಸ್** ಅರರುಸ್ + ಅಸ್, **ಆದೇಶಪ್ರತ್ಯಯಯೋಃ** (ಪಾ. ಸೂ. ೮-೩-೫೯) ಎಂಬುದರಿಂದ, ಉಕಾರದ ಮುಂದೆ ಇರುವ ಸಕಾರಕ್ಕೆ ಷಕಾರ, ಕೊನೆಯ ಸಕಾರಕ್ಕೆ **ಸಸಜುಷೋರುಃ** (ಪಾ. ಸೂ. ೮-೩-೬೬) ಎಂಬುದರಿಂದ ರುತ್ವ. **ಖರವಸಾನಯೋಃ**-(ಪಾ. ಸೂ. ೮-೩-೧೫) ಎಂಬುದರಿಂದ ವಿಸರ್ಗ, ಅರರುಷಃ ಎಂದಾಗುವುದು. ಇಲ್ಲಿ ಕೆಲವರು ಅರರುಷಃ ಎಂಬುದನ್ನು ಬೇರೆ ರೀತಿಯಿಂದ ನಿರೂಪಿಸುವರು.— ರಾ ಆದಾನೇ ಧಾತು. ಇದರ ಮುಂದೆ ಲಿಟ್. **ಕ್ವಸುಶ್ಚ** (ಪಾ. ಸೂ. ೩-೨-೧೦೭) ಎಂಬುದರಿಂದ ಕ್ವಸು ಆದೇಶ, **ಲಿಟಿಧಾತೋರನಭ್ಯಾಸಸ್ಯ** (ಪಾ. ಸೂ. ೬-೧-೮) ಎಂಬುದರಿಂದ ದ್ವಿತ್ವ ರಾ-ರಾ+ವಸ್, **ವಸ್ವೇಕಾಜಾದ್ಧಸಾಮ್** (ಪಾ. ಸೂ. ೭-೨-೬೭) ಎಂಬುದರಿಂದ ರಾ ಎಂಬ ಆಕಾರಾಂತ ಧಾತುವಿನ ಮುಂದೆ ಇರುವ ವಸ್‌ಗೆ ಇಡಾಗಮ. **ಆತೋಲೋಪ ಇಟಿಚ** (ಪಾ. ಸೂ. ೬-೪-೬೪) ಎಂಬುದರಿಂದ ಎರಡನೇ ರಾ ವಿನ ಆಕಾರಕ್ಕೆ ಲೋಪ, **ಹ್ರಸ್ವಃ** (ಪಾ. ಸೂ. ೭-೪-೫೯) ಎಂಬುದರಿಂದ ಮೊದಲನೆ ರಾಗೆ ಹ್ರಸ್ವ ಏವಂಚ, ರರಿವಸ್ ಎಂದಾಯಿತು. ಪ್ರಥಮೈಕವಚನದಲ್ಲಿ ಸೇದಿವಾನ್ ಎಂಬಂತೆ ರರಿವಾನ್ ಎಂದಾಗುವುದು. **ಷಷ್ಠೀವಿಭಕ್ತಿ ಏಕವಚನ ಙಸ್** ಬಂದರೆ **ವಸೋಸ್ಸಂಪ್ರಸಾರಣಂ** (ಪಾ. ಸೂ. ೬-೪-೧೩೧)

ಎಂಬುದರಿಂದ ಸಂಪ್ರಸಾರಣ. ರರಾವಸ್ ಎಂದಿರುವಾಗ ಮೇಲೆ ಷಷ್ಠೀಏಕವಚನವನ್ನು ಹಚ್ಚಿದರೆ ಸಂಪ್ರಸಾರಣ ಬಂದು ವಸ್ ಎಂಬುದು ಉಸ್ ಆಗುವುದು. ಆದ್ದರಿಂದ ಅದು ವಲಾದಿಯಾಗುವುದಿಲ್ಲ. ಏವಂಚ ಅರ್ಧ-ಧಾತುಕಸ್ಯೇಡ್ವಲಾದೇಃ ಎಂದು ವಿಹಿತವಾದ ಇಡಾಗಮವು ಅಂತರಂಗವಾದರೂ ಇದಕ್ಕೆ ನಿಮಿತ್ತವಾದ ವಲಾದಿತ್ವಕ್ಕೆ ಬಹಿರಂಗಶಾಸ್ತ್ರವಾದ ಸಂಪ್ರಸಾರಣದಿಂದ ನಾಶಸಂಭಾವನೆ ಇರುವುದು. ಆದಕಾರಣ ಆಕೃತೆವ್ಯೂಹಾಃ ಪಾಣುನೀಯೋಃ (ಪರಿಭಾ. ೫೭) ಬಹಿರಂಗಶಾಸ್ತ್ರದಿಂದ ಅಂತರಂಗಶಾಸ್ತ್ರನಿಮಿತ್ತ ವಿನಾಶವು ಸಂಭಾವಿತವಾದರೆ, ಮೊದಲೇ ಅಂತರಂಗಶಾಸ್ತ್ರ ಬರುವುದಿಲ್ಲ. ಆದ್ದರಿಂದ ಇಡಾಗಮವು ಸಂಪ್ರಸಾರಣ ಬರುವ ಕಡೆಗಳಲ್ಲಿ ಬರುವುದಿಲ್ಲ ಎಂದು ಕೆಲವರು ಇಡಾಗಮಕ್ಕೆ ವ್ಯಾವೃತ್ತಿಯನ್ನು ಹೇಳುವರು. ಮತ್ತೆ ಕೆಲವರು ಪದಗಳು ವಿಭಕ್ತಿಗಳಾಗಿ ವ್ಯುತ್ಪಾತಿಸಲ್ಪಡುವುವು ಎಂಬ ಪದಾವದಿಕಾನಾವ್ಯಾಖ್ಯಾನಪಕ್ಷದಲ್ಲಿ, ಪದವನ್ನು ವಿಂಗಡಿಸಿಟ್ಟರೆ, ರರಾವಸ್+ಅಸ್ ಎಂದಿರುವುದು. ಈಗ ಇಡಾಗಮಕ್ಕೂ ಸಂಪ್ರಸಾರಣಕ್ಕೂ ಸಹ ಪ್ರಾಪ್ತಿ ಇದೆ. ಇಡಾಗಮವು ಯದ್ಯಪಿ ಅನ್ತರಙ್ಗ ಆದರೂ ಸಂಪ್ರಸಾರಣವು ಪದವಿಶೇಷವನ್ನುಚ್ಚರಿಸಿ ವಿಹಿತವಾದ ವಿಧಿಯಾದ್ದರಿಂದ ಪ್ರತಿಪ್ರದೋಕ್ತ ವಿಧಿಯಾಗುವುದರಿಂದ ಅದೇ ಮೊದಲು ಬರುವುದು. ನಂತರ ವಲಾದಿಯಾದ ಅರ್ಧಧಾತುಕವಿಲ್ಲದ ಕಾರಣ ಇಡಾಗಮ ಬರುವುದಿಲ್ಲ ಎಂದು ಈ ರೀತಿಯಲ್ಲಿ ಇಡಾಗಮಕ್ಕೆ ವ್ಯಾವೃತ್ತಿ ಹೇಳುವರು. ಈಗ ಇಡಾಗಮು ವಿಲ್ಲದಿದ್ದರೂ ಅಜಾದಿಯೂ ಅಸಂಯೋಗಾಲ್ಲಿಟ್ಕಿತ್ (ಪಾ. ಸೂ. ೧-೨-೫) ಸಂಯೋಗದ ಮುಂದೆ ಇಲ್ಲದ ಪಿತ್ತಲ್ಲದ ಲಿಟ್ಟು ಕಿತ್ತಾಗುವುದು ಎಂಬುದರಿಂದ ಕಿತ್ತೂ ಆದ ಉಸ್ ಎಂಬ ಅರ್ಧಧಾತುಕವು ಪರದಲ್ಲಿರುವುದರಿಂದ ಆತೋಲೋಪ ಇಟಚ ಎಂಬುದರಿಂದ ಆಲೋಪ ಬರುವುದು. ಪತ್ವಾದಿಗಳು ಪೂರ್ವದಂತೆ, ಈ ಪರಿಯಾಗಿ ರರುಷಃ ಎಂದು ಸಿದ್ಧವಾದರೆ ನ ರರುಷಃ ಎಂದು ನಞ್ ಮಾಡಿದರೆ ಅರರುಷಃ ಎಂಬ ರೂಪವು ನಿಷ್ಪನ್ನವಾಗುವುದು. ಈಗ ತೆಪ್ಪರುಷೇ ತುಲ್ಯಾರ್ಥ—, (ಪಾ.ಸೂ. ೬-೨-೨) ಎಂಬುದರಿಂದ ಆವ್ಯಯಪೂರ್ವಪದ ಪ್ರಕೃತಿಸ್ವರ ಬರುವುದು. ಪೂರ್ವಪದವಾದ ನಞ್ ನಿಪಾತವಾದ್ದರಿಂದ ನಿಪಾತಾ ಆದ್ಯುದಾತ್ತಾಃ (ಪಾ ಸೂ. ೮೦) ಎಂಬುದುರಿಂದ ಆದ್ಯುದಾತ್ತ. ಸಮಾಸಾನಂತರವೂ ಪೂರ್ವಪದಪ್ರಕೃತಿಸ್ವರದಿಂದ ಇದೇ ಬರುವುದು. ಏವಂಚ ವೃಷಾವಿ ಗಣದಲ್ಲಿ ಇದನ್ನು ಸೇರಿಸಬೇಕಾದುದಿಲ್ಲ. ವೇದಭಾಷ್ಯಕಾರರೂ ಗುರುದ್ವೇಷೋ ಅರರುಷೇಡಧನ್ತಿ (ತೈ. ಬ್ರಾ. ಎಂಬಲ್ಲಿ ಇದೇ ರೀತಿಯಲ್ಲಿ ವ್ಯಾಖ್ಯಾನ ಮಾಡಿರುವರು. ಅಲ್ಲದೇ ಯೋನೋಃ ಅಗ್ನೇ ಅರರಾವಾನ್ (ಋ.ಸಂ. ೧-೧೪೭-೪) ಎಂದು ಈ ಪರಿಯಾದ ವ್ಯಾಖ್ಯಾನದಲ್ಲಿ ಮನ್ತ್ರಾಂತರಸಂವಾದವೂ ಇರುವುದು. ಆದ್ದರಿಂದ ಅರರುಷ, ಎಂಬಲ್ಲಿ ಈ ರೀತಿಯಾಗಿ ಪ್ರಕ್ರಿಯೆಯು ಯುಕ್ತವಾಗಿರುವುದು. ಅರ್ತೇರರುಃ ಎಂಬಲ್ಲಿ ವಿಧಿಸುವ ಪ್ರತ್ಯಯವು ಉಕಾರಾಂತವಾದ ಪ್ರತ್ಯಯ, ಸಕಾರಾಂತವಲ್ಲ. ಆದ್ದರಿಂದಲೇ ಕಂಚಿದ್ಯಾವೀರರುಂ ಶೂರಮುರ್ತ್ಯಮ್ (ಋ.ಸಂ. ೧-೧೨೯-೩) ಅಪಾರರುಮದೇವಯೆ ಜನೋ ಜಹಿ ಎಂಬ ಮಂತ್ರಗಳಲ್ಲಿ ಉಕಾರಾಂತವಾಗಿಯೇ ಅರರು ಶಬ್ದವು ಇರುವುದು. ಅರ್ತೇರರುಃ ಎಂಬುದು ಸಾಂತ ಪ್ರತ್ಯಯವಿಧಾಯಕವಾದರೆ, ಅರರುಷಃ ಸ್ವರನಿರ್ವಹಣ ಪರಿಕ್ಲೇಶವಿರುವುದು, ಅಲ್ಲದೇ ಪೂರ್ವೋಕ್ತ ಮಂತ್ರದಲ್ಲಿರುವ ಅರರು ಶಬ್ದಗಳು ಸಿದ್ಧವಾಗಲಾರವು, ಆದ್ದರಿಂದ ಅರ್ತೇರರುಃ ಎಂದು ವಿಧಿಸುವ ಪ್ರತ್ಯಯವು ಉಕಾರಾಂತವೇ. ಅರುರಷಃ ಎಂಬುದು ರಾ ಧಾತುವಿನಿಂದ ನಿಷ್ಪನ್ನವಾದುದು ಎಂದು ವರ್ಣಿಸುವುದು ಯುಕ್ತತರವು.

ಧೂರ್ತಿಃ—ಧೂರ್ವೀ ಹಿಂಸಾರ್ಥಃ, ಧಾತು, ಕ್ತಿಚ್ಕ್ತಿಚೌಸಂಜ್ಞಾಯಾಮ್ (ಪಾ.ಸೂ. ೩-೩-೧೭೪) ಎಂಬ ಕ್ತಿಚ್ ಪ್ರತ್ಯಯ, ಅದಕ್ಕೆ ಅರ್ಧಧಾತುಕಸ್ಯೇಡ್ವಲಾದೇಃ (ಪಾ. ಸೂ. ೭-೨-೩೫) ಎಂಬುದರಿಂದ ಇಡಾಗಮವು ಪ್ರಾಪ್ತವಾದರೆ ತಿ, ತು, ತ್ರಿ, ತೆ, ಥ, ಸಿ, ಸು, ಸರ, ಕೆ, ಸೇಷುಚೆ (ಪಾ. ಸೂ. ೭-೨-೯)

ಈ ಹತ್ತು ಪ್ರತ್ಯಯಗಳಿಗೆ ಇಡಾಗಮ ಬರುವುದಿಲ್ಲ, ಎಂಬುದರಿಂದ ತಿಗೆ ಇಟ್ ಬರುವುದಿಲ್ಲ. ಧುರ್ವ್+ತಿ ಎಂದಿರುವಾಗ **ಉಪಧಾಯೋಂಚೆ** (ಪಾ. ಸೂ. ೪.೨-೩೮) ಧಾತೂಪಾನ್ತ್ಯದಲ್ಲಿರುವ ರೇಫವಕಾರಗಳ ಮುಂದೆ ವ್ಯಂಜನವಿದ್ದರೆ ಆ ರೇಫ ವಕಾರಗಳ ಹಿಂದೆ ಇರುವ ಇ ಉ ಋ ಲೃ ಗಳಿಗೆ ದೀರ್ಘ ಬರುವುದು ಎಂಬುದರಿಂದ ಉಕಾರಕ್ಕೆ ದೀರ್ಘ, ಧೂರ್ವ್+ತಿ ಎಂದಿರುವುದು. **ಉಪಧಾಯಾಶ್ಚ** (ಪಾ. ಸೂ ೭-೧-೧೦೧) ಇಲ್ಲಿ **ಯೂತೆ ಇದ್ಧಾತೋಃ** (ಪಾ. ಸೂ. ೭-೧-೧೦೦) ಎಂಬ ಇದರ ಹಿಂದಿನ ಸೂತ್ರವು ಅನುವೃತ್ತವಾಗುವುದು. ಆದ್ದರಿಂದ ಧಾತುವಿನ ಉಪಾಂತ್ಯರಲ್ಲಿರುವ ಋಕಾರಕ್ಕೆ ಇತ್ವ ಬರುವುದು ಎಂದು ಇದಕ್ಕೆ ಅರ್ಥವಾಗುವುದು. ಆದ್ದರಿಂದ ಉಪಧಾಯಾಂಚ ಎಂಬುದರಿಂದ ದೀರ್ಘವನ್ನು ಹೇಳಬೇಕು. ಅಲ್ಲಿ **ರ್ವೋರುಪಧಾಯಾ ದೀರ್ಘ ಇಕ :** (ಪಾ.ಸೂ. ೪-೩-೭೬) **ಹಲಿಚಿ** (ಪಾ.ಸೂ. ೪-೩-೭೬) ಎಂಬ ಸೂತ್ರಗಳೂ ಸಿಪಿಧಾತೋರುರ್ವಾ (ಪಾ.ಸೂಃ ೪-೩-೭೪) ಎಂಬುದರಿಂದ ಧಾತೋಃ ಎಂಬುದೂ ಅನುವೃತ್ತವಾಗುವುವು. ಆದ್ದರಿಂದ **ಉಪಧಾಯೋಂಚೆ** ಎಂಬುದು ದೀರ್ಘವಿಧಾಯಕವಾಗುವುದು. ಧೂರ್ವ್+ತಿ ಎಂದಿರುವಾಗ **ಲೋಪೋವ್ಯೋರ್ವಲಿ** (ಪಾ.ಸೂ. ೬.೧-೬೬) ಎಂಬುದರಿಂದ ವಕಾರಕ್ಕೆ ಲೋಪವು ಪ್ರಾಪ್ತವಾಗುವುದು. ಆದರೆ ಆದನ್ನು ಬಾಧಿಸಿ **ಚ್ವೌಚಾಽಽ ಡನುನಾಸಿಕೇ ಚೆ** (ಪಾ. ಸೂ. ೬-೪-೧೯) ಅನುನಾಸಿಕಾದಿ ಪ್ರತ್ಯಯಪರವಾಗಿರುವಾಗಲೂ, ಕ್ವಿಪ್ ಪ್ರತ್ಯಯ ಪರವಾಗಿರುವಾಗಲೂ, ಝಲಾದಿಯಾಗಿ ಕಿತ್ತು ಅಥವಾ ಙಿತ್ತು ಆದ ಪ್ರತ್ಯಯಪರವಾಗಿರುವಾಗಲೂ ತುಗಾಗಮಯುಕ್ತವಾದ ಛಕಾರಕ್ಕೆ ಶಕಾರವೂ ವಕಾರಕ್ಕೆ ಊರ್ ಆದೇಶವೂ ಸಹ ಬರುವುದು ಎಂಬುದರಿಂದ ಝಲಾದಿಯಾದ ಕಿತ್ತೂ ಆದ ಕ್ವಿಚ್ ಪರವಾಗಿರುವುದರಿಂದ ವಕಾರಕ್ಕೆ ಊರ್ ಆದೇಶವು ಪ್ರಾಪ್ತವಾಗುವುದು. ಆದರೂ ಈ ಊರ್ ಆದೇಶವನ್ನೂ ಬಾಧಿಸಿ **ರಾಲ್ಲೋಪಃ** (ಪಾ.ಸೂ. ೬-೪-೨೧) ಕ್ವಿಪ್ ಝಲಾದಿ ಪ್ರತ್ಯಯ ಅಥವಾ ಅನುನಾಸಿಕಾದಿ ಪ್ರತ್ಯಯ ಪರವಾಗಿರುವಾಗ ರೇಫದ ಮುಂದೆ ಇರುವ ತುಗಾಗಮಯುಕ್ತನಾದ ಛಕಾರ, ವಕಾರ ಇವುಗಳಿಗೆ ಲೋಪ ಬರುವುದು ಎಂಬುದರಿಂದ ರೇಫದ ಮುಂದೆ ಇರುವ ವಕಾರಕ್ಕೆ ಲೋಪ, ಧೂರ್+ತಿ=ಧೂರ್ತಿ ಎಂದಾಗುವುದು.

ಪ್ರಣಿಕ್—ಪೃಚೀ ಸಂಪರ್ಕೇ ರುಧಾದಿ ಧಾತು. ಇದರ ಮುಂದೆ ಲಙ್ ಪ್ರಥಮಪುರುಷ ಏಕವಚನ **ತಿಪ್. ಇತೆಶ್ಚ** (ಪಾ. ಸೂ. ೩-೪-೧೦೦) ಎಂಬುದರಿಂದ ಇಕಾರಕ್ಕೆ ಲೋಪ, **ರುಧಾದಿಭ್ಯಃಶ್ನಮ್** (ಪಾ. ಸೂ. ೩-೧-೭೮) ಎಂದು ವಿಹಿತವಾದ ಶ್ನಮ್ ವಿಕರಣವು ಮಿತ್ವಾದ್ದರಿಂದ **ಮಿದಚೋನ್ತ್ಯಾತ್ಪರಃ** (ಪಾ. ಸೂ. ೧-೧-೪೭) ಎಂಬುದರಿಂದ ಋಕಾರದ ಮುಂದೆ ಬರುವುದು. **ಶ್ನಸಚ್+ತ್ ವ್ಯತ್ಯಯೋ ಬಹುಲಮ್** (ಪಾ. ಸೂ. ೩-೧-೮೫) ಎಂಬುದರಿಂದ ಶ್ನಮ್ ವಿಕರಣಕ್ಕೆ ಆಡಾಗಮ. ವೃ+ಅನ್+ಚ್+ತ್. **ಇಕೋಯೆಣಚಿ** (ಪಾ. ಸೂ. ೬-೧-೭೭) ಎಂಬುದರಿಂದ ಯಣಾದೇಶ ಅಂದರೆ ಋಕಾರಕ್ಕೆ ರೇಫ. **ಪ್ರನಚ್+ತ್ ಹಲ್ಙ್ಯಾಭ್ಯಃ** (ಪಾ. ಸೂ. ೬-೧-೬೮) ಎಂಬುದರಿಂದ ತ್‌ಗೆ ಲೋಪ- **ಚೋಃಕುಃ** (ಪಾ. ಸೂ. ೮-೨-೩೦) ಎಂಬುದರಿಂದ ಚಕಾರಕ್ಕೆ ಕಕಾರ. **ಅಟ್ಕುಪ್ವಾಙ್** (ಪಾ. ಸೂ ೮-೪-೨) ಎಂಬುದರಿಂದ ನಕಾರಕ್ಕೆ ಣಕಾರ, ಪ್ರಣಕ್ ಎಂದಾಗುವುದು. ಶಮ್‌ಗೆ ಆಗಮವಾಗಿ ಬಂದ ಅಕಾರಕ್ಕೆ **ಆಗಮಾ ಅನುದಾತ್ತಾಃ** ಎಂಬುದರಿಂದ ಅನುದಾತ್ತವು ಪ್ರಾಪ್ತವಾದರೆ ವ್ಯತ್ಯಯದಿಂದ ಉದಾತ್ತ ಬರುವುದು. **ಚಾದಿಲೋಪೇವಿಭಾಷಾ** (ಪಾ. ಸೂ. ೮-೧-೬೩) ಚ, ವಾ, ಹಾ, ಅ, ಹ, ಏವ, ಇವುಗಳಿಗೆ ಲೋಪ ಬಂದಿದ್ದರೆ ಮೊದಲಿನ ತಿಙಂತವು ಅನುದಾತ್ತವಾಗುವುದಿಲ್ಲ ಎಂಬುದರಿಂದ ನಿಷೇಧ ಬರುವುದರಿಂದ ಪ್ರಣಕ್ ಎಂಬುದಕ್ಕೆ **ತಿಙ್ಙತಿಙಃ** ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ.

ಮರ್ತ್ಯಸ್ಯ--ಮೃಙ್ ಪ್ರಾಣತ್ಯಾಗೇ ಧಾತು. **ಹಸಿಮೃಗ್ರಿಣ್ವಾಮಿದಮಿಲಾ ಪೂಧುರ್ವಿಭ್ಯಸ್ತನ್** (ಉ.ಸೂ. ೩-೩೬೬) ಹಸೇ ಹಸನೇ, ಮೃಙ್ ಪ್ರಾಣತ್ಯಾಗೇ, ಗ್ಯಾ ನಿಗರಣೇ, ಇಣ್ ಗತೌ, ವಾ ಗತಿಗನ್ಧನಯೋಃ, ಅಮ ಗತ್ಯಾದಿಷು, ದಮು ಉಪಶಮೇ, ಲೂಞ್ ಛೇದನೇ, ಪೂಞ್ ಪವನೇ, ದುರ್ವೀ ಹಿಂಸಾಯಾಮ್ ಎಂಬೀ ಧಾತುಗಳ ಮುಂದೆ ತನ್ ಪ್ರತ್ಯಯ ಬರುವುದು ಎಂದು ಸೂತ್ರಾರ್ಥ. ಇಲ್ಲಿ ವೇದಭಾಷ್ಯಕಾರರು ಆರಂಭದಲ್ಲಿ ಅಸಿ ಎಂದು ಒಂದು ಧಾತುವನ್ನು ಹೆಚ್ಚಾಗಿ ಪಾಠಮಾಡಿರುವರು. ಅದು ಈಗಿರುವ ಸೂತ್ರಗಳಲ್ಲಿ ಕಾಣಬರುವುದಿಲ್ಲ. ಮೃಧಾತುವಿನಮುಂದೆ ತನ್ ಬಂದರೆ ಮೃ+ತ ಸಾರ್ವಧಾತುಕಾ....ಎಂಬುದರಿಂದ ಗುಣ, ರಪರತ್ವ, ಮರ್ತ, ಮರ್ತೀ-ಷು ಭವಃ ಎಂದು ವಿಗ್ರಹ. ಭವೇ ಛಂದಸಿ (ಪಾ. ಸೂ. ೪-೪-೧೧೦) ಎಂಬುದರಿಂದ ಯತ್ ಪ್ರತ್ಯಯ. **ಯೆಸ್ಯೇತಿಚೆ** ಎಂಬುದರಿಂದ ಅಕಾರಕ್ಕೆ ಲೋಪ. **ತಿಪ್ತಸ್ಥನ್ತಮ್** ಎಂಬುದರಿಂದ ಸ್ವರಿತ ಪ್ರಾಪ್ತವಾದರೆ ಅದನ್ನು ಬಾಧಿಸಿ **ಯೆತೋಽನಾವಃ** (ಪಾ. ಸೂ. ೬-೧-೩೧೩) ಎಂಬುದರಿಂದ ಆದ್ಯುದಾತ್ತ ಬರುವುದು.

ರಕ್ಷ-ರಕ್ಷ ಪಾಲನೇ ಧಾತು. ಲೋಟ್, ಮಧ್ಯಮಪುರುಷ ಏಕವಚನ ಸಿಪ್. ಕರ್ತರಿಶಪ್ ಎಂಬುದರಿಂದ **ಶಪ್. ಸೇರ್ಹ್ಯಪಿಚ್ಚ** ಎಂಬುದರಿಂದ ಹಿ ಆದೇಶ. **ಅತೋಹೇಃ** ಎಂಬುದರಿಂದ ಹಿಗೆ ಲುಕ್, ಶಪ್ ಪಿತ್ತು. ಆದ್ದರಿಂದ ಅನುದಾತ್ತೌಸುಪ್ಪಿತೌ ಎಂಬುದರಿಂದ ಅನುದಾತ್ತ, ಧಾತುಸ್ವರವೇ ಉಳಿಯುವುದು. ಪಾದದ ಆದಿಯಲ್ಲಿರುವುದರಿಂದ **ಅನುದಾತ್ತೆಂ ಪದಮಾದಾವೌ** (ಪಾ. ಸೂ. ೮-೧-೧೪) ಎಂದು ಪ್ರತಿಷೇಧ ಬರುವುದು. ಆದಕಾರಣ ತಿಙ್ಙಿತಿಙಃ ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ. **ರಕ್ಷಾಣಃ—ಧ್ಯೈಚೋಽತಸ್ತಿಙಃ** (ಪಾ.ಸೂ. ೬-೩-೧೩೫) ಎಂಬುದರಿಂದ ಸಂಹಿತಾ ಕಾಲದಲ್ಲಿ ದೀರ್ಘ. **ಉಪಸರ್ಗಾದ್ಬಹುಲಮ್** (ಪಾ. ಸೂ ೮-೪-೨೮) ಉಪಸರ್ಗದಲ್ಲಿರುವ ರೇಫ ಷಕಾರಗಳ ಮುಂದೆ ಇರುವ ನಸ್ ಎಂಬುದರ ನಕಾರಕ್ಕೆ ಣಕಾರ ಬರುವುದು ಎಂದು ಇದರ ಅರ್ಥ. ನಸ್ ಎಂಬುದರಿಂದ ನಾಸಿಕಾ ಶಬ್ದದ ಸ್ಥಾನದಲ್ಲಿ ಬರುವ ನಸ್, ಬಹುವಚನಸ್ಯ ವಸ್ ನ ಸೌ ಎಂದು ವಿಹಿತವಾದ ನಸ್ ಎರಡಕ್ಕೂ ಗ್ರಹಣ, ಪ್ರಕೃತದಲ್ಲಿ ಎರಡನೇ ನಸ್ ಇದೆ. ಆದರೆ ಅದು ರಕ್ಷಾ ಎಂಬುದರ ಮುಂದೆ ಇದೆ. ಅದು ಉಪಸರ್ಗವಲ್ಲ. ಆದರೂ ಬಹುಲಗ್ರಹಣಸಾಮರ್ಥ್ಯದಿಂದ ಉಪಸರ್ಗ ಚಿಹ್ನದಲ್ಲಿ ರೇಫ ಷಕಾರಗಳ ಮುಂದೆ ಇರುವ ನಸ್ ನ ನಕಾರಕ್ಕೂ ಣತ್ವ ಬರುವುದು ವಸ್ತುತಃ ಇಲ್ಲಿ ಬಹುಲಗ್ರಹಣದಿಂದ ಕ್ಲೇಶಪಟ್ಟು ಣತ್ವವನ್ನು ಸಾಧನೆ ಮಾಡಬೇಕಾದುದಿಲ್ಲ. **ನಶ್ಚ ಧಾತುಸ್ಥೋರುಷುಭ್ಯಃ** (ಪಾ. ಸೂ- ೮-೪-೨೭) ಧಾತುವಿನಲ್ಲಿರುವ ರೇಫ ಷಕಾರಗಳು, ಉರು ಶಬ್ದ, ಷುಞ್ ಅಭಿಷವೇ ಎಂಬುದಕ್ಕೆ ಷತ್ವಬಂದು ನಂತರ ಇರುವ ಷು ಇವುಗಳ ಮುಂದೆ ಇರುವ, ನಾಸಿಕಾದೇಶ ಅಸ್ಮತ್ಪದಾದೇಶಗಳಾದ ನಸ್ ನ ನಕಾರಕ್ಕೆ ಣಕಾರ ಬರುವುದು ಎಂದು ಸೂತ್ರಾರ್ಥ. ಇಲ್ಲಿ ರಕ್ಷ ಎಂಬುದು ಧಾತು, ಅದರಲ್ಲಿ ಷಕಾರವಿದೆ. ಆದ್ದರಿಂದ ಧಾತುವಿನಲ್ಲಿರುವ ರೇಫ ಷಕಾರಾನ್ಯತರಾಂತಃಪಾತಿ ಷಕಾರದ ಮುಂದೆ ಇರುವ ನಸ್‌ನ ನಕಾರಕ್ಕೆ ಈ ಸೂತ್ರದಿಂದ ಣತ್ವ ಬರುವುದು.

ಬ್ರಹ್ಮಣಸ್ಪತೇ—ಬಹ್ಮಣಃ ಎಂಬಲ್ಲಿರುವ ಷಷ್ಠೀವಿಭಕ್ತಿ ಸಂಬಂಧಿಯಾದ ವಿಸರ್ಗಕ್ಕೆ ಸಂಹಿತಾಕಾಲದಲ್ಲಿ **ಷಷ್ಠ್ಯಾ ಃಪತಿಪುತ್ರೇ**....(ಪಾ. ಸೂ. ೮-೩-೫೩) ಎಂಬುದರಿಂದ ಸಕಾರಾದೇಶ. ಪತೇ ಎಂಬುದು ಅಮನ್ತ್ರಿತ. ಆದ್ದರಿಂದ ಇದರ ಹಿಂದೆ ಇರುವ ಪದವು **ಸುಙಾಮನ್ತ್ರಿತೇಪರಾಂಗವತ್ಸ್ವರೇ** (ಪಾ. ಸೂ. ೨-೧-೨)ಎಂಬುದರಿಂದ ಪರಾಂಗವದ್ಭಾವನವನ್ನು ಹೊಂದುವುದು. ಏವಂಚ ಬ್ರಹ್ಮಣಸ್ಪತೇ ಎಂಬ ವಿಶಿಷ್ಟಪದಲ್ಲಿ ಅಮನ್ತ್ರಿತ ಸಂಜ್ಞೆಯು ವಿಶ್ರಾನ್ತವಾಗುವುದು. ಆದ್ದರಿಂದ **ಅಮನ್ತ್ರಿತಸ್ಯಚ** (ಪಾ. ಸೂ. ೬-೧-೧೯೮) ಎಂಬುದರಿಂದ ಎರಡು ಪದಕ್ಕೂ ಸರ್ವಾನುದಾತ್ತ ಬರುವುದು ॥ ೩ ॥

॥ ಸಂಹಿತಾಪಾಠಃ ॥

ಸ ಘಾ ವೀರೋ ನ ರಿಷ್ಯತಿ ಯಮಿಂದ್ರೋ ಬ್ರಹ್ಮಣಸ್ಪತಿಃ ।
ಸೋಮೋ ಹಿನೋತಿ ಮರ್ತ್ಯಂ ॥ ೪ ॥

॥ ಪದಪಾಠಃ ॥

ಸಃ । ಘ । ವೀರಃ । ನ । ರಿಷ್ಯತಿ । ಯಂ । ಇಂದ್ರಃ । ಬ್ರಹ್ಮಣಃ । ಪತಿಃ ॥
ಸೋಮಃ । ಹಿನೋತಿ । ಮರ್ತ್ಯಂ ॥ ೪ ॥

॥ ಸಾಯಣಭಾಷ್ಯಂ ॥

ಇಂದ್ರೋ ದೇವೋ ಯಂ ಮರ್ತ್ಯಂ ಯಜ್ಞಮಾಣಂ ಹಿನೋತಿ ಪ್ರಾಪ್ನೋತಿ ವರ್ಧಯತಿ ವಾ । ತಥಾ ಬ್ರಹ್ಮಣಸ್ಪತಿರ್ದೇವೋ ಹಿನೋತಿ । ತಥಾ ಸೋಮೋ ಹಿನೋತಿ । ಸ ಘ ಸ ಏವ ಯಜಮಾನೋ ವೀರೋ ವೀರ್ಯಯುಕ್ತಃ ಸನ್ನ ರಿಷ್ಯತಿ । ನ ವಿನಶ್ಯತಿ ॥ ಘ ಚಾದಿರನುದಾತ್ತಃ । ಸಂಹಿತಾಯಾಮ್ಯಚಿ ತುನುಘಮಕ್ಷುತಜ್ಯುತ್ರೋರುಷ್ಯಾಣಾಂ । ಪಾ- ೬-೩-೧೩೩ । ಇತಿ ದೀರ್ಘಃ । ಬ್ರಹ್ಮಣಸ್ಪತಿಃ । ಉಕ್ತಂ । ಹಿನೋತಿ । ಹಿ ಗತೌ ವೃದ್ಧೌ ಚ । ಸ್ವಾದಿಭ್ಯಃ ಶ್ನುಃ । ತಿಪಃ ಪಿತ್ತ್ವಾತ್ ಶ್ನುಪ್ರತ್ಯಯಸ್ವರ ಏವ ಶಿಷ್ಯತೇ ॥

॥ ಪ್ರತಿಪದಾರ್ಥ ॥

ಇಂದ್ರ—ಇಂದ್ರನು । ಯಂ—ಯಾವ । ಮರ್ತ್ಯಂ— (ಯಜ್ಞ ಮಾಡುತ್ತಿರುವ) ಯಜಮಾನ ನನ್ನು । ಹಿನೋತಿ—(ಪ್ರಾಪ್ತನಾಗುತ್ತಾನೋ) ರಕ್ಷಿಸುತ್ತಾನೆಯೋ । ಬ್ರಹ್ಮಣಸ್ಪತಿಃ—ಬ್ರಹ್ಮಣಸ್ಪತಿಯೂ । ಹಿನೋತಿ—ರಕ್ಷಿಸುತ್ತಾನೆಯೋ । ಸೋಮಃ—(ಹಾಗೆಯೇ) ಸೋಮದೇವತೆಯು । ಹಿನೋತಿ—ರಕ್ಷಿಸುತ್ತಾನೆಯೋ । ಸಃ ಘ—ಅಂತಹ ಮನುಷ್ಯನೇ । ವೀರಃ—ವೀರ್ಯದಿಂದ ಕೂಡಿದವನಾಗಿ । ನ ರಿಷ್ಯತಿ—ನಾಶ ಹೊಂದುವುದಿಲ್ಲ ।

॥ ಭಾವಾರ್ಥ ॥

ಯಾಗದಲ್ಲಿ ನಿರತನಾಗಿರುವ ಯಜಮಾನನಿಗೆ ಇಂದ್ರ, ಬ್ರಹ್ಮಣಸ್ಪತಿ ಮತ್ತು ಸೋಮ ಈ ಮೂರು ದೇವತೆಗಳೂ ಅಭಿವೃದ್ಧಿಕಾರಕರಾಗುತ್ತಾರೆ. ಎಂದರೆ ರಕ್ಷಕರಾಗುತ್ತಾರೆ. ಇವರುಗಳ ದಯೆಗೆ ಪಾತ್ರನಾದ ಮನುಷ್ಯನು ಎಂದಿಗೂ ನಾಶವನ್ನು ಹೊಂದುವುದಿಲ್ಲ.

English Translation.

That valiant man whom Indra, Brahmanaspati and Soma protect never perishes.

॥ ವಿಶೇಷವಿಷಯಗಳು ॥

ಈ ಋಕ್ಕು ಇಂದ್ರ ಬ್ರಹ್ಮಣಸ್ಪತಿ, ಸೋಮ ಈ ಮೂರುದೇವತೆಗಳ ಪರವಾಗಿಯೂ ಇದೆ. ಈ ದೇವತೆಗಳು ಯಾವ ಮನುಷ್ಯನನ್ನು ಹೊಂದುವರೋ ಎಂದರೆ ಅನುಗ್ರಹಿಸುವರೋ ಆ ಮನುಷ್ಯನು ವೀರನಾಗಿ ಬಾಳುವನು, ಎಂದಿಗೂ ಅವನು ನಾಶವನ್ನೈದುವುದಿಲ್ಲ ಎಂದಭಿಪ್ರಾಯವು.

ಫ—ಈ ಅಕ್ಷರವು ಛಂದಸ್ಸಿನ ಅನುಕೂಲಕ್ಕಾಗಿ ಸಂಹಿತಾಪಾಠದಲ್ಲಿ ದೀರ್ಘವಾಗಿರುವುದು.

ಯಂ ಮರ್ತ್ಯಂ—ಯಾವ ಮನುಷ್ಯನನ್ನು ಎಂದರೆ ಇಂದ್ರ ಬ್ರಹ್ಮಣಸ್ಪತಿ ಸೋಮ ಇವರುಗಳನ್ನು ಆರಾಧಿಸುವ ಮನುಷ್ಯನನ್ನು ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಫ—ಇದು ಚಾದಿಗಣವು ಆಕೃತಿಗಣವಾದ್ದರಿಂದ ಅದರಲ್ಲಿ ಸೇರುವುದು. ಆದ್ದರಿಂದ **ಚಾದಯೋಽನುದಾತ್ತಾಃ** (ಫಿ ಸೂ. ೪-೪೪) ಎಂಬುದರಿಂದ ಅನುದಾತ್ತ. ಸಂಹಿತಾಕಾಲದಲ್ಲಿ **ಋಚಿ ತುನುಘಮಕ್ಷುತಶಙ್ಕುಕ್ರೋರುಷ್ಯಾಣಾಮ್** (ಪಾ. ಸೂ. ೬-೩-೧೩೩) ಫ ಶಬ್ದದಿಂದ ಫಕಾರೋತ್ತರ ಅಕಾರ ರೂಪವಾದ ಫ ಎಂಬ ಅನುಪೂರ್ವಿಗೆ ಗ್ರಹಣ. ಛಂದಸ್ಸಿನಲ್ಲಿ ಫ ಎಂಬುದಕ್ಕೆ ದೀರ್ಘವು ದೃಷ್ಟವಾಗಿರುವುದರಿಂದ ಈ ರೀತಿ ಗ್ರಹಿಸಬೇಕು. **ಕೃತ್ರಿಮಾಕೃತ್ರಿಮಯೋಃ ಕೃತ್ರಿಮಸ್ಯೈವ ಗ್ರಹಣಮ್** (ಪರಿಭಾ) ಕೃತ್ರಿಮ ಎಂದರೆ ವ್ಯಾಕರಣ ಶಾಸ್ತ್ರ ಸಂಕೇತಸಿದ್ಧ ಎಂದು ಅರ್ಥ. ಅಕೃತ್ರಿಮ ಎಂದರೆ ಲೋಕಪ್ರಸಿದ್ಧ ಎಂದು ಅರ್ಥ. ಕೃತ್ರಿಮ ಅಕೃತ್ರಿಮ ಎರಡಕ್ಕೂ ಗ್ರಹಣ ಬಂದರೆ ಕೃತ್ರಿಮಕ್ಕೇ ಗ್ರಹಣ ಬರುವುದು ಎಂದು ಪರಿಭಾಷಾರ್ಥ. **ತರಪ್ತಮಪೌಘಃ** (ಪಾ. ಸೂ. ೧-೧-೨೨) ಎಂದು ತರಪ್ ತಮಪ್ ಪ್ರತ್ಯಯಗಳಿಗೆ ವ್ಯಾಕರಣ ಶಾಸ್ತ್ರದಲ್ಲಿ ಸಂಕೇತವಿರುವುದು. ಆದರೂ ಇಲ್ಲಿ ಅದಕ್ಕೆ ಪೂರ್ವೋಕ್ತಪ್ರಕಾರವಾಗಿ ಗ್ರಹಣವಿಲ್ಲ. ಏಕೆಂದರೆ ವೇದದಲ್ಲಿ ತರಪ್ ತಮಪ್‌ಗಳಿಗೆ ದೀರ್ಘವು ದೃಷ್ಟವಾಗಿಲ್ಲ. ಫ ಎಂಬುದಕ್ಕೆ ದೀರ್ಘವು ದೃಷ್ಟವಾಗಿರುವುದು. ಸೂತ್ರದಲ್ಲಿ ಋಚಿ ಎಂದಿರುವುದರಿಂದ ಈ ಸೂತ್ರವು ಋಗ್ವೇದದಲ್ಲಿಯೇ ಪ್ರವರ್ತಿಸಬೇಕು. ಎವಂಚ ತರಪಾದಿಗಳಿಗೆ ಗ್ರಹಣವಾದರೆ ಸೂತ್ರಕ್ಕೆ ಚಾರಿತಾರ್ಥ್ಯವೇ ಬರುವುದಿಲ್ಲ. ಆದ್ದರಿಂದ ಫ ಎಂಬ ಸ್ವರೂಪಕ್ಕೇ ಗ್ರಹಣವು. **ತಙ್** ಎಂಬುದರಿಂದ ಮಧ್ಯಮ ಪುರುಷ ಬಹುವಚನ ಧಗೆ **ತಸ್ಥಸ್ಥಮಿಪಾಂ** ಎಂಬುದರಿಂದ ತ ಆದೇಶ ಬಂದರೆ ಅದಕ್ಕೆ ಸಾರ್ವಧಾತುಕಮಪಿತ್ ಎಂಬುದರಿಂದ ಙಿತ್ವ ಬರುವುದು. ಇಂತಹ ಙಿತ್ವನನ್ನು ಹೊಂದಿದ ಥಾ ಆದೇಶವಾದ ತಗೆ ಗ್ರಹಣ. ಈ ಸೂತ್ರದಿಂದ ಫಗೆ ದೀರ್ಘ ಬಂದರೆ ಫಾ ಎಂದಾಗುವುದು.

ಬ್ರಹ್ಮಣಸ್ಪತಿಃ—ಷಷ್ಠ್ಯಾಃ ಪತಿ....(ಪಾ. ಸೂ. ೮-೩-೫೩) ಎಂಬುದರಿಂದ ಷಷ್ಠೀ ಸಂಬಂಧಿ ವಿಸರ್ಗಕ್ಕೆ ಸಕಾರ.

ಹಿನೋತಿ—ಹಿ ಗತೌ ವೃದ್ಧೌ ಚ, ಧಾತು. ಲಟ್ ತಿಪ್. **ಸ್ವಾದಿಭ್ಯಃ ಶ್ನುಃ** (ಪಾ. ಸೂ. ೩-೧-೭೩) ಎಂಬುದರಿಂದ ಶ್ನು ವಿಕರಣ ಹಿ+ನು+ತಿ. ತಿಯನ್ನು ನಿಮಿತ್ತಮಾಡಿಕೊಂಡು ಶ್ನುವಿಗೆ **ಸಾರ್ವಧಾತುಕಾರ್ಧ-** (ಪಾ. ಸೂ. ೭-೩-೮೪) ಎಂಬುದರಿಂದ ಗುಣ, ಓಕಾರ. **ಸಾರ್ವಧಾತುಕಮಪಿತ್** (ಪಾ. ಸೂ. ೧-೨-೪) ಎಂಬುದರಿಂದ ಹಿಯು ಙಿತ್ತು. ಕ್ಷಿತಿಚೆ ಎಂದು ನಿಷೇಧ ಬರುವುದರಿಂದ ನುವನ್ನು ನಿಮಿತ್ತ ವಾಗಿಡಿಕೊಂಡು ಹಿಗೆ ಇಗ್ಲಕ್ಷಣವಾದ ಗುಣಬರುವುದಿಲ್ಲ. ತಿಪ್ ಪಿತ್ತಾದ್ದರಿಂದ **ಅನುದಾತ್ತೌ** ಎಂಬುದರಿಂದ ಅನುದಾತ್ತ, ಶ್ನು ಪ್ರತ್ಯಯಸ್ವರವೇ ಉಳಿಯುವುದು ॥ ೪ ॥

॥ ಸಂಹಿತಾಪಾಠಃ ॥

ತ್ವಂ ತಂ ಬ್ರಹ್ಮಣಸ್ಪತೇ ಸೋಮು ಇಂದ್ರಶ್ಚ ಮರ್ತ್ಯಂ ।
ದಕ್ಷಿಣಾ ಪಾತ್ವಂಹಸಃ ॥ ೫ ॥

॥ ಪದಪಾಠಃ ॥

ತ್ವಂ । ತಂ । ಬ್ರಹ್ಮಣಃ । ಪತೇ । ಸೋಮಃ । ಇಂದ್ರಃ । ಚ । ಮರ್ತ್ಯಂ ॥
ದಕ್ಷಿಣಾ । ಪಾತು । ಅಂಹಸಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಬ್ರಹ್ಮಣಸ್ಪತೇ ತ್ವಂ ತಂ ಮರ್ತ್ಯಮನುಷ್ಠಾತಾರಂ ಮನುಷ್ಯಮಂಹಸಃ ಪಾಪಾತ್ಪಾಹೀತಿ ಶೇಷಃ । ತಥಾ ಸೋಮಃ ಪಾತ್ವಿಂದ್ರಶ್ಚ ಪಾತು ದಕ್ಷಿಣಾಖ್ಯಾ ದೇವತಾ ಚ ಪಾತು ॥ ದಕ್ಷಿಣಾ । ದಕ್ಷ ವೃದ್ಧೌ । ದ್ರುದಕ್ಷಿಭ್ಯಾಮಿನಿನ್ ॥ ಉ. ೨-೫೦ । ನಿತ್ತ್ವಾದಾದ್ಯುದಾತ್ತಃ । ಅಂಹಸಃ । ನಬ್ವಿಯಸ್ಯೇತ್ಯಾದಿ-ನಾದ್ಯುದಾತ್ತಃ ॥ ೫೪ ॥

॥ ಪ್ರತಿಪದಾರ್ಥ ॥

(ಹೇ) ಬ್ರಹ್ಮಣಸ್ಪತೇ—ಎಲೈ ಬ್ರಹ್ಮಣಸ್ಪತಿಯೇ, । ತ್ವಂ—ನೀನು । ತಂ ಮರ್ತ್ಯಂ—ಆ (ಅನುಷ್ಠಾತೃವಾದ) ಮನುಷ್ಯನನ್ನು । ಅಂಹಸಃ—ಪಾಪದಿಂದ (ರಕ್ಷಿಸು) । ಸೋಮಃ—ಸೋಮದೇವತೆಯು । ಪಾತು—ರಕ್ಷಿಸಲಿ । ಇಂದ್ರಶ್ಚ—ಇಂದ್ರನೂ । ಪಾತು—ರಕ್ಷಿಸಲಿ । ದಕ್ಷಿಣಾ—ದಕ್ಷಿಣಾ ಎಂಬ ದೇವತೆಯೂ । ಪಾತು—ರಕ್ಷಿಸಲಿ ।

॥ ಭಾವಾರ್ಥ ॥

ಎಲೈ ಬ್ರಹ್ಮಣಸ್ಪತಿಯೇ, ಯಜಮಾನನನ್ನು ಪಾಪಕರ್ಮ ಮಾಡದಂತೆ ನೀನು, ಇಂದ್ರ, ಸೋಮ ಮತ್ತು ದಕ್ಷಿಣಾ ಎಲ್ಲರೂ ರಕ್ಷಣೆ ಮಾಡಿ.

English Translation

Do you Brahmanaspati, and do you Soma, Indra. and Dakshina protect that man from sin.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಬ್ರಹ್ಮಣಸ್ಪತಿ, ಸೋಮ, ಇಂದ್ರ, ದಕ್ಷಿಣಾ ಎಂಬ ದೇವತೆ, ಇವರುಗಳು ಪ್ರತಿಪಾದಿಸಲ್ಪಟ್ಟಿರುವರು.

ದಕ್ಷಿಣಾ— ಈ ಋಕ್ಕಿನಲ್ಲಿ ದಕ್ಷಿಣಾ ಎಂಬ ಶಬ್ದವು ದಕ್ಷಿಣಾಭಿಮಾನಿಯಾದ ದೇವತೆಯನ್ನು ಸೂಚಿಸುವುದು. ದಕ್ಷಿಣಾಶಬ್ದಕ್ಕೆ ಯಾಸ್ಕಮಹರ್ಷಿಯು ಈ ರೀತಿ ಅರ್ಥನಿಷ್ಪತ್ತಿಯನ್ನು ಮಾಡಿರುವರು (ನಿ- ೧-೭)—

> ದಕ್ಷಿಣಾ ದಕ್ಷತೇಃ ಸಮರ್ಧಯತಿ ಕರ್ಮಣೋ ವ್ಯೃರ್ಧಂ ಸಮರ್ಧಯತೀತಿ । ಅಪಿ ವಾ ಪ್ರದಕ್ಷಿಣಾಗಮನಾತ್ । ದಿಶಮಭಿಪ್ರೇತ್ಯ ದಿಗ್ಭಸ್ತಪ್ರಕೃತಿಃ ದಕ್ಷಿಣೋ ಹಸ್ತೋ ದಕ್ಷತೇರುತ್ಸಾಹಕರ್ಮಣಃ । ದಾಶತೇರ್ವಾ ಸ್ಯಾದ್ದಾನಕರ್ಮಣಃ ॥

ಎಂದು ನಾಲ್ಕು ವಿಧವಾದ ಅರ್ಥಗಳನ್ನು ಹೇಳಿರುವರು—

(೧) **ದಕ್ಷಿಣಾ ದಕ್ಷತೇಃ ಸಮರ್ಧಯತಿ ಕರ್ಮಣೋ ವ್ಯೃರ್ಧಂ ಸಮರ್ಧಯತೀತಿ**—ದಕ್ಷಿಣಾ ಎಂಬ ಶಬ್ದವು ದಕ್ಷತಿಧಾತುವಿನಿಂದ ಉಂಟಾಗಿದೆ. ಈ ಧಾತುವಿಗೆ (ದ್ರವ್ಯವನ್ನು) ವೃದ್ಧಿಮಾಡು ಎಂದರ್ಥವು. ಯಜ್ಞದಲ್ಲಿ ವ್ಯಯಮಾಡಿದ ಎಂದರೆ ದಕ್ಷಿಣಾರೂಪವಾಗಿ ಕೊಟ್ಟ ಸ್ವಲ್ಪ ಧನವನ್ನು ಅತಿಶಯವಾಗಿ (ಫಲರೂಪದಲ್ಲಿ) ವೃದ್ಧಿಮಾಡುವುದರಿಂದ ಈ ಶಬ್ದಕ್ಕೆ ದಕ್ಷಿಣಾ ಎಂದು ಹೆಸರು.

(೨) **ಅಪಿ ವಾ ಪ್ರದಕ್ಷಿಣಾಗಮನಾತ್**—ಯಜ್ಞವೇದಿಯಲ್ಲಿ ಗಾರ್ಹಪತ್ಯ, ಸದಃ, ಆಗ್ನೀಧ್ರೀಯ ಗಳೆಂಬ ಸ್ಥಾನಗಳನ್ನು ಪ್ರದಕ್ಷಿಣಾಕಾರವಾಗಿ ಬಳಸಿ ಬಂದು ಅಂತರ್ವೇದಿಯಲ್ಲಿ ನಿಲ್ಲುವುದರಿಂದ ಈ ರೀತಿ ಮಾಡುವ ಪ್ರದಕ್ಷಿಣಾಗಮನಕ್ಕೆ ದಕ್ಷಿಣಾ ಎಂದು ಹೆಸರು.

(೩) **ದಿಶಮಭಿಪ್ರೇತ್ಯ ದಿಗ್ಭಸ್ತಪ್ರಕೃತಿಃ ದಕ್ಷಿಣೋ ಹಸ್ತೋ ದಕ್ಷತೇರುತ್ಸಾಹಕರ್ಮಣಃ ॥** ಪ್ರಾಙ್ಮುಖನಾಗಿರುವ ಪ್ರಜಾಪತಿಯ ಹಸ್ತಗಳಲ್ಲಿ ಬಲಗೈಯಿಯು ದಕ್ಷಿಣಾಭಿಮುಖವಾಗಿರುವುದರಿಂದಲೂ (ದಕ್ಷಿಣದಿಕ್ಕಿನ ಕಡೆ ಇರುವುದರಿಂದಲೂ) ಯಾವ ಕೆಲಸವನ್ನು ಮಾಡಬೇಕಾದರೂ ಬಲಗೈಯು ಉತ್ಸಾಹದಿಂದ ಕೂಡಿ ಮಾಡುವುದರಿಂದಲೂ ಬಲಗೈಯಿಗೆ **ದಕ್ಷಿಣೋ ಹಸ್ತಃ** ಎಂದು ದಕ್ಷಿಣಶಬ್ದದಿಂದ ಹೇಳುವುದು ರೂಢಿಯಾಗಿದೆ.

(೪) **ದಾಶತೇರ್ವಾ ಸ್ಯಾದ್ದಾನಕರ್ಮಣಃ ॥** ದಾಶತಿಧಾತುವಿಗೆ ದಾನಕೊಡುವುದು ಎಂದರ್ಥವು. ಸಾಧಾರಣವಾಗಿ ದಾನಕೊಡುವಾಗ ದಕ್ಷಿಣಹಸ್ತವನ್ನು (ಬಲಗೈಯನ್ನು) ಉಪಯೋಗಿಸುವುದರಿಂದ ದಾನಕರ್ಮಕ್ಕೆ ದಕ್ಷಿಣಾ ಎಂದು ಹೆಸರು.

ಈ ನಾಲ್ಕುವಿಧ ಅರ್ಥಗಳಲ್ಲಿ ಕಡೆಯ ದಾನಕರ್ಮವೆಂಬ ಅರ್ಥವೇ ಈ ಋಕ್ಕಿನಲ್ಲಿ ದಕ್ಷಿಣಾಭಿಮಾನಿದೇವತೆಯೆಂದು ನಿರ್ದೇಶಿಸಲ್ಪಟ್ಟಿರುವುದು.

ಪಾತು, ಅಂಹಸಃ—ಅಂಹಃ ಎಂದರೆ ಪಾಪವು. ಪಾಪದಿಂದ ರಕ್ಷಿಸಲಿ ಎಂದರೆ, ಪಾಪಕರ್ಮಗಳನ್ನು ಮಾಡದಂತೆ ಸದ್ಬುದ್ಧಿಯನ್ನು ಕೊಟ್ಟು ರಕ್ಷಿಸಲಿ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಬ್ರಹ್ಮಣಸ್ಪತೇ—ವ್ಯವಹಿತಮನ್ತ್ರದಲ್ಲಿ ವಿವೃತವಾಗಿದೆ.

ದಕ್ಷಿಣಾ—ದಕ್ಷ ವೃದ್ಧೌ ಧಾತು ದ್ರುದಕ್ಷಿಭ್ಯಾಮಿನನ್ (ಉ.ಸೂ. ೩-೩೦೪) ದ್ರು ಗತೌ, ದಕ್ಷ ವೃಧೌ. ಈ ಧಾತುಗಳ ಮುಂದೆ ಇನನ್ ಪ್ರತ್ಯಯ ಬರುವುದು ಎಂಬುದರಿಂದ ದಕ್ಷ್+ ಎಂಬುದರ ಮುಂದೆ ಇನನ್ ಪ್ರತ್ಯಯ. ಪ್ರತ್ಯಯದಲ್ಲಿ ನಕಾರಕ್ಕೆ ಇತ್ಸಂಜ್ಞೆ, ದಕ್ಷಿ+ನ ಅಟ್ಕುಪ್ವಾಙ್- (ಪಾ. ಸೂ. ೪-೪-೨) ಎಂಬುದರಿಂದ ನಕಾರಕ್ಕೆ ಣಕಾರ. ಯಜ್ಞಾದಿ ಶಾಸ್ತ್ರೀಯಕರ್ಮಗಳಲ್ಲಿ ಕೊಡತಕ್ಕದ್ದಕ್ಕೆ ದಕ್ಷಿಣಾ ಎಂದು ಹೆಸರು. ಈ ಅರ್ಥದಲ್ಲಿ ಇದು ಸ್ತ್ರೀಲಿಂಗ. "ದ್ರವಿಣಂ ನ ದ್ವಯೋರ್ವಿತ್ತೇ ಕಾಂಚನೇ ಚ ಪರಾಕ್ರಮೇ । ದಕ್ಷಿಣಾ ದಕ್ಷಿಣೋದ್ಭೂತ ಸರಲಚ್ಛೈಂದವೃತ್ತಿಷು । ಅವಾಮೇ ತ್ರಿಷುಯಜ್ಞಾದಿವಿಧಿದಾನೇ ದಿಶಿಸ್ತ್ರಿಯಾಮ್" ಎಂದು ಮೇದಿನಿಕೋಶದಲ್ಲಿರುವುದು ಏವಂಚ ಅಜಾದ್ಯತೆಷ್ವಾಪ್ (ಪಾ.ಸೂ. ೪-೧-೪) ಎಂಬುದರಿಂದ ಟಾಪ್ ಬಂದು ಸವರ್ಣದೀರ್ಘ ಬಂದರೆ ದಕ್ಷಿಣಾ ಎಂದಾಗುವುದು. ದಕ್ಷಿಣ ಎಂಬುದು ನಕಾರೇತ್ಸಂಜ್ಞಕ ಪ್ರತ್ಯಯಾಂತವಾದ್ದರಿಂದ ಞ್ನಿತ್ಯಾದಿರ್ನಿತ್ಯಮ್. (ಪಾ. ಸೂ. ೬-೧-೧೯೭) ಎಂಬುದರಿಂದ ಆದ್ಯುದಾತ್ತ.

ಅಂಹಸಃ—ನಬ್ವಿಷಯೇಸ್ಯಾನಿಸನ್ತ್ಯಸ್ಯ—ಎಂಬುದರಿಂದ ಆದ್ಯುದಾತ್ತ ॥ ೫ ॥

॥ ಸಂಹಿತಾಪಾಠಃ ॥

ಸದಸಸ್ಪತಿಮದ್ಭುತಂ ಪ್ರಿಯಮಿಂದ್ರಸ್ಯ ಕಾಮ್ಯಂ ।
ಸನಿಂ ಮೇಧಾಮಯಾಸಿಷಂ ॥ ೬ ॥

॥ ಪದಪಾಠಃ ॥

ಸದಸಃ । ಪತಿಂ । ಅದ್ಭುತಂ । ಪ್ರಿಯಂ । ಇಂದ್ರಸ್ಯ । ಕಾಮ್ಯಂ ॥
ಸನಿಂ । ಮೇಧಾಂ । ಅಯಾಸಿಷಂ ॥ ೬

॥ ಸಾಯಣಭಾಷ್ಯಂ ॥

ಅನುಪ್ರವಚನೀಯೇಚರೋಹೋ೯ೇಮೇ ಸದಸಸ್ಪತಿಮಿತ್ಯೇಷಾ ವಿನಿಯುಕ್ತಾ । ತಥಾ ಚ ಗೃಹ್ಯೇ ಮೇಖಲಾಮಾಬಧ್ಯೇತಿ ಖಂಡೇ ಪಠ್ಯತೇ । ಆಚಾರ್ಯಃ ಸಮನ್ವಾರಬ್ಧೇ ಜುಹುಯಾತ್ಸದಸಸ್ಪತಿ-ಮದ್ಭುತಂ । ಆ. ಗೃ. ೧-೨೨-೧೧ । ಇತಿ ॥

ಮೇಧಾಂ ಲಬ್ಧುಂ ಸದಸಸ್ಪತಿಮೇತನ್ನಾಮಕಂ ದೇವಮಯಾಸಿಷಂ । ಪ್ರಾಪ್ತವಾನಸ್ಮಿ । ಕೀದೃಶಂ । ಅದ್ಭುತಮಾಶ್ಚರ್ಯಕರಂ । ಇಂದ್ರಸ್ಯ ಪ್ರಿಯಂ ಸೋಮಸಾನೇ ಸಹಚಾರಿತ್ವಾತ್ ಕಾಮ್ಯಂ ಕಮನೀಯಂ ಸನಿಂ ಧನಸ್ಯ ದಾತಾರಂ ॥ ಸದಸಃ [ಷದ್ಲೃ ವಿಶರಣಾದೌ । ಸರ್ವಧಾತುಭ್ಯೋಽಸುನ್ । ನಿತ್ತ್ವಾದಾದ್ಯುದಾತ್ತಃ । ಪತಿಂ । ಪಾತೇರ್ದತಿಃ । ಉ. ೪-೫೭ । ಟಿಲೋಪಃ । ಪ್ರತ್ಯಯಸ್ವರಃ । ಪ್ರಿಯಂ । ಇಗುಪಧಜ್ಞಾಪ್ರೀತಿಕರಃ ಕಃ । ಇಯೇಜಾದೇಶಃ । ಪ್ರತ್ಯಯಸ್ವರಃ । ಕಾಮ್ಯಂ । ಕಾಮಯತೇರಚೋ ಯತ್ । ನೇರನಿಟೀತಿ ಣಿಲೋಪಃ । ಯತೋಽನಾವ ಇತ್ಯಾದ್ಯುದಾತ್ತತ್ವಂ । ಸನಿಂ । ಷಣು ದಾನೇ । ಧಾತ್ವಾದೇಃ ಷಃ ಸಃ । ಅಚೋ ಞಿತ್ಯನುವೃತ್ತೌ ಖನಿಕಷ್ಯಂಜ್ಯಸಿವಸಿವನಿಸನಿಧ್ವನಿಗ್ರಂಥಿಚರಿಭ್ಯಶ್ಚ । ಉ-ಳಾ. ೧೫೯ । ಇತಿ ಇಪ್ರತ್ಯಯಃ । ಪ್ರತ್ಯಯಸ್ವರಃ । ಆಯಾಸಿಷಂ । ಯಾ ಪ್ರಾಪಣೇ । ಲುಙ್ । ವಿಭಾಷೋ-ಽಮಾದೇಶಃ । ಯಮರಮನಮಾತಾಂ ಸಕ್ ಚೆ । ಪಾ. ೭-೨-೭೩ । ಇತಿ ಸಿಚೆ ಇಡಾಗಮಃ । ಧಾತೋಃ ಸಗಾಗಮಃ ನಿಘಾತಃ ॥

॥ ಪ್ರತಿಪದಾರ್ಥ ॥

ಮೇಧಾಂ—ಮೇಧಾಶಕ್ತಿಯನ್ನು । ಲಬ್ಧುಂ—ಪಡೆಯಲು । ಅದ್ಭುತಂ—ಆಶ್ಚರ್ಯಕರನಾದ । ಇಂದ್ರಸ್ಯ—ಇಂದ್ರನಿಗೆ । ಪ್ರಿಯಂ—ಪ್ರೀತಿಪಾತ್ರನಾದ । ಕಾಮ್ಯಂ—ಸುಂದರನಾದ । ಸನಿಂ—ಧನವನ್ನು ಕೊಡುವ । ಸದಸಸ್ಪತಿಂ—ಸದಸಸ್ಪತಿ ಎಂಬ ದೇವತೆಯನ್ನು । ಅಯಾಸಿಷಂ—ಹೊಂದಿರುವೆನು (ಆಶ್ರಯಿಸಿರುವೆನು ಅಥವಾ ಪ್ರಾರ್ಥಿಸುವೆನು ।

॥ ಭಾವಾರ್ಥ ॥

ಆಶ್ಚರ್ಯಕರನೂ ಎಂದರೆ ಅದ್ಭುತವಾದ ಸಾಹಸಕರ್ಮಗಳನ್ನು ಮಾಡುವವನೂ, ಇಂದ್ರನಿಗೆ ಪ್ರೀತಿ ಪಾತ್ರನೂ, ಸುಂದರರೂಪವುಳ್ಳವನೂ, ಧನವನ್ನುಕೊಡುವವನೂ ಆದ ಸದಸಸ್ಪತಿಯೆಂಬ ದೇವತೆಯನ್ನು ಮೇಧಾ ಶಕ್ತಿಯನ್ನು ಪಡೆಯುವುದಕ್ಕಾಗಿ ನಾನು ಆಶ್ರಯಿಸಿರುವೆನು (ಪ್ರಾರ್ಥಿಸುವೆನು).

English Translation.

I pray, for wisdom, Sadasaspati, the wonderful, the beloved of Indra, the desirable, and the giver of riches.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಸದಸಸ್ಪತಿಯು ದೇವತೆಯು. ಗೃಹ್ಯಕರ್ಮವಾದ ವಿವಾಹಾದಿ ಕರ್ಮಗಳಲ್ಲಿ ಅನುಪ್ರವ ಚನೀಯವೆಂಬ ಚರುಹೋಮವನ್ನು ಮಾಡುವಾಗ ಸದಸಸ್ಪತಿಯೆಂಬ ಈ ಋಕ್ಕನ್ನು ಹೇಳುವರು. ಆಶ್ವಲಾ ಯನ ಗೃಹ್ಯಸೂತ್ರದಲ್ಲಿ ಮೇಖಲಾಮಾಬಧ್ಯ ಎಂಬ ಖಂಡದಲ್ಲಿ ಆಚಾರ್ಯಃ ಸಮನ್ವಾರಬ್ಧೋ ಜುಹುಯಾ-ತ್ಸದಸಸ್ಪತಿಮದ್ಭುತಂ (ಆ- ಗೃ. ೧-೨೨-೧೧) ಎಂದು ಈ ಋಕ್ಕಿನ ವಿನಿಯೋಗಕ್ರಮವನ್ನು ಹೇಳಿರುವುದು.

ಸದಸಸ್ಪತಿಂ—ಸದಸಸ್ಪತಿಯೆಂಬ ದೇವತೆಯು. ಅವಯವಾರ್ಥವನ್ನು ಹೇಳುವುದಾದರೆ ಸದಸಃ ಪತಿಂ—ಸದಸ್ಸಿಗೆ ಅಥವಾ ಸಭೆಗೆ ಅಧಿಪತಿಯು ಎಂದರ್ಥವು. ಸ್ಕಂದಸ್ವಾಮಿಯು ಈ ವಿಷಯದಲ್ಲಿ ಹೇಳಿರು ವುದು ಪರಿಗ್ರಾಹ್ಯವಾಗಿರುವುದು—

> ಚತಸ್ರಃ ಸಾದಸಸ್ಪತ್ಯಾಃ । ಸದಃ ಪ್ರಸಿದ್ಧಂ ಯಜ್ಞಗೃಹಂ ತಸ್ಯಾಧಿಪತಿಃ ಸದಸಸ್ಪತಿಃ । ಕೋಽಸೌ । ಅಗ್ನಿಃ । ಕುತ ಏತತ್ । ಅಗ್ನೇಃ ಸರ್ವಯಜ್ಞಾಧಿಪತಿತ್ವಾತ್ । ಅಸು ಚಕ್ಷ್ಯೇ ಯಜ್ಞಸಾಧನಹವಿಷ್ಕೃತಿಸಮರ್ಥನಾದ್ಯಗ್ನಿ ಕರ್ಮದರ್ಶನಾತ್ತದ್ದೇವತ್ಯಾಶ್ಚೈತಸ್ಯ-ಶ್ಚರ್ಚಃ । ಸದಸಸ್ಪತಿಮಗ್ನಿಂ ॥

ಈ ಋಕ್ಕೂ ಮುಂದಿನ ಮೂರು ಋಕ್ಕುಗಳೂ ಒಟ್ಟು ನಾಲ್ಕು ಋಕ್ಕುಗಳು ಸದಸಸ್ಪತಿದೇವತಾಕವಾದವುಗಳು. ಸದಃ ಎಂದರೆ ಪ್ರಸಿದ್ಧವಾದ ಯಜ್ಞಗೃಹವು ಅದಕ್ಕೆ ಅಧಿಪತಿಯಾದ್ದರಿಂದ ಸದಸಸ್ಪತಿಯೆಂದು ಹೆಸರು. ಈ ಯಜ್ಞಗೃಹಕ್ಕೆ ಅಧಿಪತಿಯು ಯಾರು? ಎಂದರೆ, ಅಗ್ನಿಯೇ. ಏಕೆಂದರೆ, ಅಗ್ನಿಯೇ ಸರ್ವಯಜ್ಞಗಳಿಗೂ ಅಧಿ ಪತಿಯೆಂದು ಪ್ರಸಿದ್ಧವು. ಮತ್ತು ಈ ನಾಲ್ಕು ಋಕ್ಕುಗಳಲ್ಲಿ ಯಜ್ಞಸಾಧನವಾದ ಹವಿಷ್ಕೃತಿ, ಅಗ್ನಿಕರ್ಮ ಮೊದಲಾದ ಅಗ್ನಿಸಂಬಂಧವಾದ ಕರ್ಮಗಳನ್ನು ಪ್ರತಿಪಾದಿಸಿರುವುದರಿಂದ ಸದಸಸ್ಪತಿಯೆಂದರೆ ಅಗ್ನಿಯೇ ಎಂಬದು ನಿರ್ವಿವಾದವು. ಸದಸಸ್ಪತಿಯ ಹೆಸರು ಈ ಋಕ್ಕುಗಳಲ್ಲಲ್ಲದೆ ಋಗ್ವೇದದಲ್ಲಿ ಬೇರೆಲ್ಲಿಯೂ ಕಂಡು ಬರುವುದಿಲ್ಲ. ಯಾಸ್ಕಮಹರ್ಷಿಯೂ ಈ ಸದಸಸ್ಪತಿಯ ವಿಷಯವಾಗಿ ಏನನ್ನೂ ಹೇಳಿರುವುದಿಲ್ಲ. ಆದುದ ರಿಂದ ಸ್ಕಂದಸ್ವಾಮಿಯು ಹೇಳಿರುವುದೇ ಸಮಂಜಸವಾಗಿರುವುದೆಂದು ಒಪ್ಪಲೇಬೇಕಾಗಿರುವುದು.

ಅದ್ಭುತಂ—ಆಶ್ಚರ್ಯಕರಂ, ಆಶ್ಚರ್ಯಕರನಾದ ಎಂದು ಭಾಷ್ಯಕಾರರೂ- ಮಹಾಂತಂ—ದೊಡ್ಡವ ನಾದ, ಶ್ರೇಷ್ಠನಾದ ಎಂದು ಸ್ಕಂದಸ್ವಾಮಿಯೂ ಈ ಶಬ್ದಕ್ಕೆ ಅರ್ಥವಿವರಣೆ ಮಾಡಿರುವರು.

ಕಾಮ್ಯಂ—ಕಮನೀಯಂ ಅಪೇಕ್ಷಿಸಲ್ಪಡುವ, ಸುಂದರನಾದ. ಸ್ಕಂದಸ್ವಾಮಿಯ ಅರ್ಥವು ಕಾಮ್ಯಂ ಪ್ರಾರ್ಥಯಿತವ್ಯಂ ಸ್ತೋತೃಣಾಂ—ಪ್ರಾರ್ಥಿಸಲ್ಪಡಲರ್ಹನಾದ ಎಂದಿರುವುದು.

ಸನಿಂ—ಷಣು ದಾನೇ ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದಕ್ಕೆ ಧನಸ್ಯ ದಾತಾರಂ ಅಥವಾ ಧನದಾನಂ ಎಂದರೆ ಧನವನ್ನು ಕೊಡುವ ಸದಸಸ್ಪತಿಯನ್ನು ಎಂದಾಗಲಿ, ಧನದಾನಕ್ಕಾಗಿ ಸದಸಸ್ಪತಿಯನ್ನು ಎಂದಾಗಲಿ ಅರ್ಥಮಾಡಬಹುದು.

ಅಯಾಸಿಷಂ—ಯಾ ಪ್ರಾಪಣೇ ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದಕ್ಕೆ ಹೊಂದಿರುವೆನು ಅಥವಾ ಆಶ್ರಯಿಸಿರುವೆನು ಎಂದರೆ ಪ್ರಜ್ಞಾ ಮತ್ತು ಧನಲಾಭಕ್ಕಾಗಿ ಸದಸಸ್ಪತಿಯನ್ನು ಆಶ್ರಯಿಸಿರುವೆನು

ಎಂದರ್ಥವು. ಸ್ಕಂದಸ್ವಾಮಿಯು ಈಮಹೇ ಯಾಮಿ ಮೊದಲಾದ ಶಬ್ದಗಳಿಗೆ ಯಾಜ್ಞಾಕರ್ಮಾರ್ಥದಲ್ಲಿ ಪ್ರಯೋಗವಿರುವುದೆಂದು ನಿರುಕ್ತದಲ್ಲಿ ಹೇಳಿರುವುದರಿಂದ ಯೌ ಧಾತುವಿನ ರೂಪಾಂತರವಾದ ಆಯಾಸಿಷಂ ಎಂಬ ಶಬ್ದಕ್ಕೆ ಯಾಚೇ ಎಂದರೆ ಯಾಚಿಸುವೆನು ಅಥವಾ ಪ್ರಾರ್ಥಿಸುವೆನು ಎಂದು ಅರ್ಥವಿವರಣೆ ಮಾಡಿರುವರು.

॥ ವ್ಯಾಕರಣಪ್ರಕ್ರಿಯಾ ॥

ಸೆದೆಸಃ—ಷದ್ಲೃ ವಿಶರಣಗತ್ಯವಸಾದನೇಷು, ಧಾತು. **ಧಾತ್ವಾದೇಃಷಃಸಃ** ಎಂಬುದರಿಂದ ಷಕಾರಕ್ಕೆ ಸಕಾರ, **ಸರ್ವಧಾತುಭ್ಯೋ೭ಸುನ್**ಎಂಬುದರಿಂದ ಸದ್ ಎಂಬುದರ ಮುಂದೆ ಅಸುನ್. ಪ್ರತ್ಯಯವು ನಿತ್, ಆದ್ದರಿಂದ **ಞ್ನಿತ್ಯಾದಿರ್ನಿತ್ಯಮ್** (ಪಾ.ಸೂ. ೬-೧-೧೯೭) ಞಕಾರೇತ್ಸಂಜ್ಞಕಪ್ರತ್ಯಯಾಂತ, ನಕಾರೇತ್ಸಂಜ್ಞಕಪ್ರತ್ಯಯಾಂತ, ಇವುಗಳ ಆದಿಯು ಉದಾತ್ತವಾಗುವುದು ಎಂಬುದರಿಂದ ಸದಸ್ ಎಂಬುದು ಆದ್ಯುದಾತ್ತ, ಷಷ್ಠೀವಿಭಕ್ತಿ ಏಕವಚನ ಙಸ್ ಬಂದರೆ ಸದಸ್+ಅಸ್, ರುತ್ವ ವಿಸರ್ಗ, ಸದಸಃ ಇದರ ಮುಂದೆ ಪತಿ ಶಬ್ದ ಪರದಲ್ಲಿರುವುದು. ಆದ್ದರಿಂದ **ಷಷ್ಠ್ಯಾಃ ಪತಿಪುತ್ರೇ-**, (ಪಾ.ಸೂ. ೮-೩-೫೩) ಎಂಬುದರಿಂದ ವಿಸರ್ಗಕ್ಕೆ ಸಕಾರ.

ಪತಿಮ್—ಪಾರಕ್ಷಣೇ ಪಾ ತೇರ್ಡತಿಃ (ಉ.ಸೂ. ೪-೪೭) ಪಾ ರಕ್ಷಣೇ ಧಾತುವಿನ ಮುಂದೆ ಡತಿ ಪ್ರತ್ಯಯ ಬರುವುದು ಎಂಬುದರಿಂದ ಡತಿಪ್ರತ್ಯಯ, ಪ್ರತ್ಯಯಾದಿಯಾದ ಡಕಾರಕ್ಕೆ **ಚುಟೂ** (ಪಾ.ಸೂ. ೧-೩-೭) ಎಂಬುದರಿಂದ ಇತ್ಸಂಜ್ಞೆ. **ತೆಸ್ಯಲೋಪಃ** (ಪಾ. ಸೂ. ೧-೩-೯) ಎಂಬುದರಿಂದ ಲೋಪ, ಪಾ+ಅತಿ ಪ್ರತ್ಯಯದಲ್ಲಿ ಡಿತ್ಕರಣಸಾಮರ್ಥ್ಯದಿಂದ ಭ ಸಂಜ್ಞೆಯು ಪೂರ್ವಕ್ಕೆ ಇಲ್ಲದೇ ಇದ್ದರೂ **ಟೇಃ** (ಪಾ.ಸೂ. ೬-೪-೧೪೩) ಎಂಬುದರಿಂದ ಟಿಸಂಜ್ಞಕವಾದ ಪಾ ಎಂಬುದರ ಆಕಾರಕ್ಕೆ ಲೋಪ, ಪತಿ ಎಂದಾಗುವುದು. ಪ್ರತ್ಯಯಸ್ವರದಿಂದ ಇದು ಆದ್ಯುದಾತ್ತ.

ಪ್ರಿಯಮ್—ಪ್ರೀಞ್ ತರ್ಪಣೇ, ಧಾತು. ಇ ಉ ಋ ಲೃ ಗಳನ್ನು ಉಪಾಂತ್ಯದಲ್ಲಿ ಹೊಂದಿರುವ ಧಾತುಗಳು, ಜ್ಞಾ ಅವಬೋಧನೇ, ಪ್ರೀಞ್ ತರ್ಪಣೇ, ಕ್ಷಾ ವಿಕ್ಷೇಪೇ, ಇವುಗಳ ಮುಂದೆ ಕ ಪ್ರತ್ಯಯ ಬರುವುದು ಎಂಬುದರಿಂದ ಪ್ರೀ ಧಾತುವಿನ ಮುಂದೆ ಕ ಪ್ರತ್ಯಯ. **ಲಶಕ್ವತೇದ್ಧಿತೇ** (ಪಾ. ಸೂ. ೧-೩-೮) ಎಂಬುದರಿಂದ ಕಕಾರಕ್ಕೆ ಇತ್ಸಂಜ್ಞೆ ಲೋಪ, ಪ್ರೀ+ಅ **ಅಚಿಶ್ನುಧಾಧಾತುಭ್ರುವಾಂಯ್ವೋರಿಯಙುವಙೌ** (ಪಾ.ಸೂ. ೬-೪-೭೭) ಎಂಬುದರಿಂದ ಈಕಾರಕ್ಕೆ ಇಯಙ್ ಆದೇಶ ಪ್ರಿಯ ಎಂದಾಯ್ತು. ಇದು ಪ್ರತ್ಯಯಸ್ವರದಿಂದ ಅಂತೋದಾತ್ತ, ದ್ವಿತೀಯಾಏಕವಚನ ಅಮ್ ಅಮಿಪೂರ್ವಃ (ಪಾ. ಸೂ. ೬-೧-೧೦೭) ಪೂರ್ವರೂಪ.

ಕಾಮ್ಯಮ್— ಕಮು ಕಾಂತೌ, ಧಾತು. ಕಾನ್ತಿ ಎಂದರೆ ಇಚ್ಛೆ. **ಕೆಮೇರ್ಣಿಚ್** (ಪಾ.ಸೂ.೩-೧-೩೦) ಎಂಬುದರಿಂದ ಸ್ವಾರ್ಥದಲ್ಲಿ ಣಿಚ್, ಕಮ್+ಇ. ಅತ ಉಪಧಾಯಾಃ (ಪಾ. ಸೂ. ೭-೨-೧೧೬) ಎಂಬುದರಿಂದ ಉಪಧಾವೃದ್ಧಿ, ಕಾಮಿ, ಇದು ಅಜಂತ, ಆದ್ದರಿಂದ **ಆಚ್ಛೀಯೆತ್** (ಪಾ. ಸೂ. ೩-೧-೯೭) ಅಜನ್ತವಾದ ಧಾತುವಿನ ಮುಂದೆ ಯತ್ ಪ್ರತ್ಯಯ ಬರುವುದು ಎಂಬುದರಿಂದ ಯತ್ ಪ್ರತ್ಯಯ, ಕಾಮ್+ಇ+ಯ. **ಣೇರನಿಟಿ** (ಪಾ.ಸೂ. ೬-೪-೫೧) ಇಡಾದಿಯಲ್ಲದ ಆರ್ಧಧಾತುಕ ಪರದಲ್ಲಿರುವಾಗ ಣಿಗೆ ಲೋಪ ಬರುವುದು ಎಂಬುದರಿಂದ ಣಿಚ್‌ಗೆ ಲೋಪ, ಕಾಮ್ಯ. **ತಿತ್ಸ್ವರಿತಮ್** ಎಂಬುದಕ್ಕೆ ಅಪವಾದವಾದ **ಯೇತೋ೭ನಾವಃ** (ಪಾ.ಸೂ ೬-೧-೨೧೩) ಎಂಬುದರಿಂದ ಆದ್ಯುದಾತ್ತ. ದ್ವಿತೀಯೈಕವಚನಾನ್ತ.

ಸನಿಮ್—ಷಣು ದಾನೇ, ಧಾತ್ವಾದೇಃಷಃಸಃ ಎಂಬುದರಿಂದ ಷಕಾರಕ್ಕೆ ಸಕಾರ ಖನಿಕಷ್ಯಜ್ಯಸಿವ ಸಿವನಿಸೆನಿಧ್ವನಿಗ್ರನ್ಥಿಚಲಿಭ್ಯಶ್ಚ (ಉ. ಸೂ. ೪-೫೭) ಅಚಿಇಃ (ಉ. ಸೂ. ೪-೫೭) ಎಂಬುದರಿಂದ ಇಃ ಎಂಬುದು ಅನುವೃತ್ತವಾಗುವುದು. ಖನು ಅವ-ದಾರಣೇ, ಕಷ ಹಿಂಸಾಯಾಂ, ಅಜ ಗತಿಕ್ಷೇಪಣಯೋಃ ಅಸು ಕ್ಷೇಪಣೇ, ವಸ ಆಚ್ಛಾದನೇ, ವನ, ಷಣ, ಸಂಭಕ್ತೌ, ವನು ಯಾಚನೇ, ಷಣು ದಾನೇ, ಧ್ವನ ಶಬ್ದೇ, ಗ್ರನ್ಥ ಬಂಧನೇ, (ಎರಡೂ ಚುರಾದಿ) ಚಲ ಕಂಪನೇ, ಈ ಧಾತುಗಳ ಮುಂದೆ ಇಪ್ರತ್ಯಯ ಬರುವುದು ಎಂಬುದರಿಂದ ಇಪ್ರತ್ಯಯ. ಸನ್+ಇ. ಪ್ರತ್ಯಯಸ್ವರದಿಂದ ಅಂತೋದಾತ್ತ ಅಮ್, ಪೂರ್ವರೂಪ, ಸನಿಮ್ ಎಂದಾಗುವುದು.

ಅಯೋಸಿಷಮ್—ಯಾ ಪ್ರಾಪಣೇ, ಲುಙ್, ಉತ್ತಮಪುರುಷಬಹುವಚನ ಮಿಪ್, ಯಾ+ಮಿ, ತಸ್ಥಸ್ಥಮಿಪಾಂತಾಂತಂತಾಮಃ (ಪಾ.ಸೂ.೩-೪-೧೦೧) ಎಂಬುದರಿಂದ ಮಿಗೆ ಅಮ್ ಆದೇಶ, ಯಾ+ಅಮ್ ಚ್ಲಿಲುಙಿ (ಪಾ.ಸೂ. ೩-೧-೪೩) ಎಂಬುದರಿಂದ ಚ್ಲಿ. ಅದಕ್ಕೆ ಚ್ಲೇಸ್ಸಿಚ್ (ಪಾ.ಸೂ. ೩-೧-೪೪) ಎಂಬುದರಿಂದ ಸಿಚ್ ಆದೇಶ, ಲುಙ್‌ಲಙ್‌ಲೃಙ್‌ಕ್ಷ್ವಡುದಾತ್ತಃ (ಪಾ.ಸೂ. ೬-೪-೭೧) ಎಂಬುದರಿಂದ ಧಾತುವಿಗೆ ಆಡಾಗಮ ಅಯಾ+ಸ್+ಅಮ್, ಯೆಮರಮನಮಾನಾಂ ಸಕ್ ಚ (ಪಾ.ಸೂ. ೭-೨-೭೩) ಯಮು, ರಮು, ನಮು ಧಾತುಗಳು ಆಕಾರಾಂತ ಧಾತುಗಳು ಇವುಗಳಿಗೆ ಸಕ್ ಆಗಮವೂ, ಇವುಗಳ ಮುಂದೆ ಇರುವ ಸಿಚ್ಚಿಗೆ ಇಡಾಗಮವೂ ಪರಸ್ಮೈಪದ ಪ್ರತ್ಯಯ ಪರದಲ್ಲಿರುವಾಗ ಬರುವುದು ಎಂಬುದರಿಂದ ಆಕಾರಾಂತವಾದ ಯಾಗೆ ಸಕ್ ಆಗಮವೂ ಸಿಚ್‌ಗೆ ಇಟ್ಟೂ ಬಂದರೆ ಅಯಾಸ್+ಇಸ್+ಅಮ್, ಆದೇಶಪ್ರತ್ಯಯೆಯೋಃ (ಪಾ.ಸೂ. ೮-೩-೫೯) ಎಂಬುದರಿಂದ ಸಿಚ್. ಸಕಾರಕ್ಕೆ ಷಕಾರ, ಅಯಾಸಿಷಮ್ ಎಂದಾಗುವುದು. ತಿಙ್ಶಿತಿಙಃ (ಪಾ. ಸೂ. ೮.೧ ೨೮) ಎಂಬುದರಿಂದ ಸರ್ವಾನುದಾತ್ತ ಬರುವುದು. ॥ ೬ ॥

॥ ಸಂಹಿತಾಪಾಠಃ ॥

ಯಸ್ಮಾದೃತೇ ನ ಸಿಧ್ಯತಿ ಯಜ್ಞೋ ವಿಪಶ್ಚಿತಶ್ಚನ ।
ಸ ಧೀನಾಂ ಯೋಗಮಿನ್ವತಿ ॥ ೭ ॥

॥ ಪದಪಾಠಃ ॥

ಯಸ್ಮಾತ್ । ಋತೇ । ನ । ಸಿಧ್ಯತಿ । ಯಜ್ಞಃ । ವಿಪಶ್ಚಿತಃ । ಚನ ॥
ಸಃ । ಧೀನಾಂ । ಯೋಗಂ । ಇನ್ವತಿ ॥ ೭ ॥

॥ ಸಾಯಣಭಾಷ್ಯಂ ॥

ಯಜ್ಞೋಽಯಮನುಷ್ಠಾತೃಣಾಂ ವಿಪಶ್ಚಿತಶ್ಚನ ವಿದುಷೋಽಪಿ ಯಜಮಾನಸ್ಯ ಯಸ್ಮಾತ್ಸವಿತೃದೇವಸ್ಪತಿದೇವಾದೃತೇ ನ ಸಿಧ್ಯತಿ ಸೋಽಯಂ ಸದಸಸ್ಪತಿರ್ದೇವೋ ಧೀನಾಂ ಮನೋಽನುಷ್ಠಾನವಿಷಯಾ-

ಣಾಮಸ್ಮದ್ಬುದ್ಧೀನಾಮನುಷ್ಠೇಯಕರ್ಮಣಾಂ ವಾ ಯೋಗಂ ಸಂಬಂಧಮಿನ್ವತಿ । ವ್ಯಾಪ್ನೋತಿ । ಯೇಜಮಾನಮನುಗೃಹ್ಯ ತದೀಯಂ ಯಜ್ಞಂ ನಿಷ್ಪಾದಯತೀತ್ಯರ್ಥಃ ॥ ಯಸ್ಮಾತ್ । ಅನ್ಯಾರಾದಿತ್ಯಾದಿನಾ । ಪಾ. ೨-೩-೨೯ । ಋತೇಯೋಗಾತ್ಪಂಚಮೀ । ಸಾವೇಕಾಚ ಇತಿ ವಿಭಕ್ತೇರುದಾತ್ತತ್ವೇ ಪ್ರಾಪ್ತೇ ನ ಗೋಶ್ವನ್ಸ್ತವವರ್ಣೇತಿ ಪ್ರತಿಷೇಧಃ । ಸಿದ್ಧ್ಯತಿ । ಷಿಧು ಸಂರಾದ್ಧೌ । ಶ್ಯನೋ ನಿತ್ತ್ವಾದಾದ್ಯುದಾತ್ತತ್ವಂ । ಯದ್ವೃತ್ತಾನ್ನಿತ್ಯಮಿತಿ ನಿಘಾತಪ್ರತಿಷೇಧಃ । ಧೀನಾಂ । ಸಾವೇಕಾಚ ಇತಿ ವಿಭಕ್ತೇರುದಾತ್ತತ್ವಂ । ಯೋಗಂ । ಯುಜಿರ್ ಯೋಗೇ । ಘಞೋ ಞಿತ್ತ್ವಾದಾದ್ಯುದಾತ್ತತ್ವಂ । ಇನ್ವತಿ । ಇವಿ ವ್ಯಾಪ್ತೌ । ಶಪ್ । ಇದಿತೋ ನುಮ್ ಧಾತೋರಿತಿ ನುಮ್ । ನಿಘಾತಃ ॥

॥ ಪ್ರತಿಪದಾರ್ಥ ॥

ಯೆಜ್ಞಃ— (ನಾವು) ಮಾಡಬೇಕೆಂದಿರುವ ಯಜ್ಞವು । **ವಿಪಶ್ಚಿತಶ್ಚನ** — ವಿದ್ವಾಂಸನಾದ ಯಜಮಾನನಿಗೂ । **ಯಸ್ಮಾತ್ ಋತೇ**—ಯಾವ ಸದಸಸ್ಪತಿಯ ಸಹಾಯವಿಲ್ಲದೇ । **ನ ಸಿಧ್ಯತಿ**—ಸಾಧ್ಯವಾಗುವುದಿಲ್ಲವೋ । **ಸಃ**—ಅಂತಹ ಈ ಸದಸಸ್ಪತಿಯು । **ಧೀನಾಂ**—ಯಜ್ಞವನ್ನು ಮಾಡಬೇಕೆಂಬ ಬುದ್ಧಿಗೂ ಅಥವಾ ಅನುಷ್ಠೇಯಕರ್ಮಗಳಿಗೂ । **ಯೋಗಂ**—ಸಂಬಂಧವನ್ನು । **ಇನ್ವತಿ**--ವ್ಯಾಪಿಸುತ್ತಾನೆ (ಕಲ್ಪಿಸುತ್ತಾನೆ).

॥ ಭಾವಾರ್ಥ ॥

ಎಂತಹ ಪಂಡಿತನಾದ ಯಜಮಾನನೂ ಕೂಡ ಸದಸಸ್ಪತಿಯ ಸಹಾಯವಿಲ್ಲದಿದ್ದಲ್ಲಿ ಕರ್ಮವನ್ನು ಸಾಧಿಸಲಾರನು. ಏಕೆಂದರೆ, ಈ ಸದಸಸ್ಪತಿಯೇ ನಮ್ಮ ಮನಸ್ಸಿನಲ್ಲಿ ಬರುವ ವಿಷಯಗಳಿಗೂ ನಾವು ಮಾಡಬೇಕಾಗಿರುವ ಕರ್ಮಗಳಿಗೂ ಸಂಬಂಧವನ್ನು ಕಲ್ಪಿಸುತ್ತಾನೆ. ಎಂದರೆ ಅನುಷ್ಠೇಯಕರ್ಮಗಳಲ್ಲಿ ನಮ್ಮ ಮನಸ್ಸು ಆಸಕ್ತವಾಗುವಂತೆ ಮಾಡುತ್ತಾನೆ.

English Translation

Without whose aid the sacrifice even of the wise does not prosper, he prompts the pious feelings in our thonghts.

॥ ವಿಶೇಷವಿಷಯಗಳು ॥

ಚನ-ಅಪಿ--ಈ ಶಬ್ದಕ್ಕೆ ಕೂಡ ಎಂದರ್ಥವು.

ಧೀನಾಂ--ಧೀ ಶಬ್ದಕ್ಕೆ ಪ್ರಜ್ಞಾ ಮತ್ತು ಕರ್ಮ ಎಂಬ ಎರಡರ್ಥಗಳಿರುವವು (ನಿ. ೩-೧೩ ಮತ್ತು ನಿ. ೩-೨) ಆದುದರಿಂದ **ಧೀನಾಂ ಯೋಗಮಿನ್ವತಿ** ಎಂದರೆ ನಾವು ಮಾಡುವ ಯಜ್ಞಾದಿಕರ್ಮಗಳಿಗೆ ಸಂಬಂಧವನ್ನು ಕಲ್ಪಿಸುವನು. ಅಥವಾ ಕರ್ಮಮಾಡುವಂತೆ ನಮ್ಮ ಬುದ್ಧಿಗೆ ಸಂಬಂಧವನ್ನು ಕಲ್ಪಿಸುವನು ಎಂದರ್ಥವು. ಸಂಬಂಧವನ್ನು ಕಲ್ಪಿಸುವನು ಎಂದರೆ ನಮ್ಮ ಬುದ್ಧಿಯು ಕರ್ಮಾನುಷ್ಠಾದದಲ್ಲಿ ಪ್ರವೃತ್ತವಾಗುವಂತೆ ಪ್ರೇರಿಸುವನು ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಯೆಸ್ಮಾತ್—ಇಲ್ಲಿ ಯಚ್ಶಬ್ದಕ್ಕೆ ಋತೇ ಶಬ್ದದ ಯೋಗವಿರುವುದು. ಆದ್ದರಿಂದ **ಅನ್ಯಾರಾದಿತರ್ತೇದಿ-ಕ್ಪಬ್ದಾಭ್ಯೋ ದ್ವಿತೀಯಾದಿಭ್ಯಃ** (ಪಾ.ಸೂ. ೨.೩.೩೯). ಅನ್ಯ, ಆರಾತ್, ಇತರ, ಋತೇ, ಪೂರ್ವ ಮೊದಲಾದ ದಿಕ್ಶಬ್ದಗಳನ್ನು ಬೋಧನೆಮಾಡತಕ್ಕವುಗಳಾಗಿ ದೃಷ್ಟವಾದ ಶಬ್ದಗಳು, ಅಂಚೂತ್ತರಪದಕಗಳಾದ ಶಬ್ದಗಳು ಆಚ್, ಆಹಿ, ಈ ಶಬ್ದಗಳ ಯೋಗವಿರುವಾಗ ಏತದರ್ಥಾನ್ವಿತಾರ್ಥವಾಚಕವಾದ ಪ್ರಾತಿಪದಿಕದ ಮುಂದೆ ಪಞ್ಚಮೀವಿಭಕ್ತಿ ಬರುವುದು ಎಂಬುದರಿಂದ ಋತೇಶಬ್ದಾರ್ಥಾನ್ವಿತಾರ್ಥವಾಚಕವಾದ ಯಚ್ಶಬ್ದದ ಮುಂದೆ ಪಂಚಮೀವಿಭಕ್ತಿ ಬರುವುದು. - ಯದ್+ಙಸ್. **ತ್ಯದಾದೀನಾಮಃ** (ಪಾ.ಸೂ. ೭-೨-೧೦೨) ಎಂಬುದರಿಂದ ದಕಾರಕ್ಕೆ ಅಕಾರ. ಅತೋಗುಣೇ (ಪಾ.ಸೂ. ೬-೧-೯೭) ಎಂಬುದರಿಂದ ಪರರೂಪ. **ಙಸಿಙ್ಭ್ಯೋಃಸ್ಮಾತ್ಸ್ಮಿನೌ** (ಪಾ.ಸೂ. ೭-೧-೧೫) ಹ್ರಸ್ವ ಅಕಾರಾಂತ ಸರ್ವನಾಮಶಬ್ದದ ಮುಂದೆ ಇರುವ ಙಸಿ, ಙಾ, ಇವುಗಳಿಗೆ ಕ್ರಮವಾಗಿ ಸ್ಮಾತ್, ಸ್ಮಿನ್ ಆದೇಶಗಳು ಬರುವುವು ಎಂಬುದರಿಂದ ಙಸಿಗೆ ಸ್ಮಾತ್ ಆದೇಶ, ಯಸ್ಮಾತ್ ಎಂದಾಗುವುದು. **ಸಾವೇಕಾಚಸ್ತೃತೀಯಾದಿರ್ವಿಭಕ್ತಿಃ** (ಪಾ.ಸೂ.೬-೩-೧೩೮) ಇಲ್ಲಿ ಸು ಎಂದರೆ ಸಪ್ತಮೀವಿಭಕ್ತಿಯವಚನಪ್ರತ್ಯಯ, ಅದು ಪರದಲ್ಲಿರುವಾಗ ಒಂದೇ ಸ್ವರವನ್ನು (ಅಚ್ಚನ್ನು) ಹೊಂದಿರುವ ಯಾವ ಶಬ್ದವಿದೆಯೋ ಅದರ ಮುಂದಿರುವ ತೃತೀಯಾದಿ ವಿಭಕ್ತಿಯು ಉದಾತ್ತವಾಗುವುದು ಎಂದು ಸೂತ್ರಾರ್ಥ. ಸಪ್ತಮೀವಿಭಕ್ತಿಯವಚನವಾದ ಯೇಸು ಎಂದು ರೂಪ, ಸಪ್ತಮೀವಿಭಕ್ತಿಯವಚನ ಸು, ಅದರ ಹಿಂದೆ ಇರುವ ಯೇ ಎಂಬ ಯಚ್ಶಬ್ದ ಏಕಾಚ್ಕು. ಆದ್ದರಿಂದ ಯಚ್ಶಬ್ದದ ಮುಂದೆಇರುವ ತೃತೀಯಾದಿ ವಿಭಕ್ತಿಗೆ ಸೇರಿದ ಪಂಚಮಿಗೆ ಉದಾತ್ತಸ್ವರ ಪ್ರಾಪ್ತವಾಗುವುದು. ಆದರೂ ಯಚ್ಶಬ್ದವು ಪ್ರಥಮೈಕಪದೇನ ಸುಪ್ರತ್ಯಯ ಪರದಲ್ಲಿರುವಾಗ ಯಃ ಎಂಬಲ್ಲಿ ಅವರ್ಣಾಂತವಾಗಿರುವುದು. ಆದ್ದರಿಂದ **ನಗೋಶ್ವನ್ಸ್ಯವರ್ಮ—**, (ಪಾ.ಸೂ. ೬-೧-೧೮೨) ಎಂಬುದರಿಂದ ಅದಕ್ಕೆ ಹ್ರತಿಷೇಧ ಬರುವುದು. ಏವಂಚ ಸುಪ್ ಸ್ವರದಿಂದ ಸ್ಮಾತ್ ಎಂಬುದು ಅನುದಾತ್ತ.

ಸಿಧ್ಯತಿ—ಷಿಧು ಸಂರಾದ್ಧೌ, ದಿವಾದಿ. ಧಾತ್ವಾದೇಃಷಃಸಃ ಲಟ್ ತಿಪ್. **ದಿವಾದಿಭ್ಯಃಶ್ಯನ್** (ಪಾ.ಸೂ. ೩-೧-೬೯)ಎಂಬುದರಿಂದ ಶ್ಯನ್, ಸಿಧ್ಯತಿ ಎಂದಾಗುವುದು. ಶ್ಯನ್ ನಿತ್ತು. ಆದ್ದರಿಂದ ನಿತ್ಸ್ವರದಿಂದ ಆದ್ಯುದಾತ್ತ. ಯಸ್ಮಾತ್ ಎಂದು ಯಚ್ಶಬ್ದಘಟಿತವಾದ ಪದದ ಮುಂದೆ ಇರುವುದರಿಂದ **ಯದ್ವೃತ್ತಾನ್ನಿತ್ಯಮ್** (ಪಾ. ಸೂ. ೮-೧-೬೬) ಎಂದು ಪ್ರತಿಷೇಧ ಬರುವ ಕಾರಣ ತಿಙ್ಶಿತಿಙಃ ಎಂಬುದರಿಂದ ಸರ್ವಾನುದಾತ್ತ ಬರುವುದಿಲ್ಲ.

ಧೀನಾಮ್—**ಸಾವೇಕಾಚಃ** ಎಂಬುದರಿಂದ ವಿಭಕ್ತಿಯು ಉದಾತ್ತ.

ಯೋಗಮ್—ಯುಜಿರ್ ಯೋಗೇ, ಧಾತು. ಭಾವೇ ಎಂಬುದರಿಂದ ಘಞ್ ಪ್ರತ್ಯಯ. **ಚೆಜೋಃ ಕುಘಿಣ್ಯತೋಃ** (ಪಾ. ಸೂ. ೭-೩-೫೨) ಘಕಾರೇತ್ಸಂಜ್ಞಕ ಪ್ರತ್ಯಯ ಪರದಲ್ಲಿರುವಾಗಲೂ, ಣ್ಯತ್ಪ್ರತ್ಯಯ ಪರದಲ್ಲಿರುವಾಗಲೂ ಚಕಾರ, ಜಕಾರಗಳಿಗೆ ಆ ವರ್ಗ ಬರುವುದು ಎಂಬುದರಿಂದ ಆ ವರ್ಗ ತೃತೀಯಾಕ್ಷರವಾದ ಜಕಾರಕ್ಕೆ ತದ್ವರ್ಗ ತೃತೀಯವಾದ ಗಕಾರ, ಲಘೂಪಧಗುಣ. ಪ್ರತ್ಯಯವು ಞಿತ್ತಾದ್ದರಿಂದ ಯೋಗ ಎಂಬುದು ಆದ್ಯುದಾತ್ತ.

ಇನ್ವತಿ—ಇವಿ ವ್ಯಾಪ್ತೌ ಧಾತು. **ಇದಿತೋನುಮ್ಧಾತೋಃ** (ಪಾ. ಸೂ. ೭-೧-೫೮) ಎಂಬುದರಿಂದ ನುಮಾಗಮ ಲಟ್, ತಿಪ್, ಶಪ್ ಇನ್ವತಿ. ತಿಙ್ಶಿತಿಙಃ ಎಂಬುದರಿಂದ ಸರ್ವಾನುದಾತ್ತ ॥ ೭ ॥

॥ संहितापाठः ॥

आद्ध्वर्ध्नोति हविष्कृतिं प्राञ्चं कृणोत्यध्वरं ।
होत्रा देवेषु गच्छति ॥ ९ ॥

॥ पदपाठः ॥

आत् । ध्वर्ध्नोति । हविःऽकृतिं । प्राञ्चं । कृणोति । अध्वरं ॥
होत्रा । देवेषु । गच्छति ॥ ९ ॥

॥ सायणभाष्यं ॥

अदनंतरमेव हविष्कृतिं हविःसंपादनयुक्तं यजमानमध्वर्ध्नोति । सदसस्पतिर्देवो वर्धयति । हविर्दानानंतरमेव फलं प्रयच्छतीत्यर्थः । तथाविधफलसिद्धयेऽध्वरं यजमानेनानुष्ठीयमानं यज्ञं प्राञ्चं प्रकर्षेण गच्छंतमविघ्नेन संपमाप्तियुक्तं कृणोति । करोति । होत्रा हूयमाना देवता तुष्टा सती यजमानं प्रख्यापयितुं देवेषु गच्छति । यद्वा । होत्रास्मदीयस्तुतिरूपा वाक् देवान्प्रतिहोषयितुं देवेषु गच्छति । श्लोकोध्वरेत्यादिषु सप्तपंचाशत्सु वाक्येषु होत्रा गीरिति पठितं ॥ हविष्कृतिं । हविषः कृतिः संपादनं यस्य यजमानस्य सोऽयं हविष्कृतिः । बहुव्रीहौ प्रकृत्यैतीति पूर्वपदप्रकृतिस्वरत्वं । प्राञ्चं । अनिगंतोऽञ्चतौ वप्रत्यये । पा. ६-१-१५७ । इति गतेः प्रकृतिस्वरत्वं । पश्चादेकादेशस्वरः । अध्वरं । न विद्यते ध्वरो हिंसा यस्मिन् । नञ्सुभ्यामित्युत्तरपदादन्तोदात्तत्वं । हूयतेऽस्यामिति होत्रा देवता । हुयामाशुभिषिभ्यस्त्रन् । उ. ४-१६२ । इति त्रन् । नित्त्वादाद्युदात्तः ॥

॥ प्रतिपदार्थ ॥

आत्—अनंतर । हविष्कृतिं—हविस्सन्नु संपादिसिट्टुकोंडिरुव यजमाननन्नु । ध्वर्ध्नोति—(सदसस्पतियु) अभिवृद्धि पडिसुत्तानॆ । अध्वरं—(यजमाननु कैगॊंडिरुव) यज्ञवन्नु । प्राञ्चं—चिन्नाग नडॆयुवंतॆ अथवा निर्विघ्नवागि मुगियुवंतॆ । कृणोति—माडुत्तानॆ । होत्रा—होतृविनिंद (करियल्पट्ट देवतॆयु तुष्टनागि यजमाननन्नु

ಕ್ಷಸಿದ್ಧಿ ಪಡಿಸಲು) । ದೇವೇಷು—ದೇವತೆಗಳಲ್ಲಿ (ದೇವತೆಗಳು ಇರುವ ಪ್ರದೇಶಕ್ಕೆ) । ಗಚ್ಛತಿ—ಹೋಗುತ್ತಾನೆ [ಅಥವಾ । ಹೋತ್ರಾ—(ಪನ್ಮ್) ಸ್ತುತಿರೂಪವಾದ ವಾಕ್ಯ (ದೇವತೆಗಳನ್ನು ಸಂತೋಷಪಡಿಸಲು) । ದೇವೇಷು—ದೇವತೆಗಳಲ್ಲಿ । ಗಚ್ಛತಿ—ಹೋಗಿ ಸೇರುತ್ತದೆ.]

॥ ಭಾವಾರ್ಥ ॥

ನಾವು ಯಜ್ಞದಲ್ಲಿ ಹವಿರ್ಭಾಗವನ್ನು ಕೊಟ್ಟಮೇಲೆಯೇ ಸದಸಸ್ಪತಿಯು ಯಜಮಾನನಿಗೆ ಶ್ರೇಯಸ್ಸನ್ನುಂಟುಮಾಡುತ್ತಾನೆ. ಪ್ರಾರಂಭಿಸಿರುವ ಯಜ್ಞವನ್ನು ನಿರ್ವಿಘ್ನವಾಗಿ ನೆರವೇರಿಸಿಕೊಡುತ್ತಾನೆ. ಮತ್ತು ನಾವು ಆಹ್ವಾನಮಾಡಿದ ದೇವತೆಯು ಯಜ್ಞದಿಂದ ಸಂತುಷ್ಟನಾಗಿ ದೇವತೆಗಳ ಬಳಿಗೆ ಯಜಮಾನನ ಪ್ರಶಂಸೆ ಮಾಡುವುದಕ್ಕಾಗಿ ಹೋಗುತ್ತಾನೆ, ಅಥವಾ ನಾವು ಮಾಡುವ ಸ್ತುತಿರೂಪವಾದ ವಾಕ್ಯವು ಯಜಮಾನನನ್ನು ಪ್ರಶಂಸೆಮಾಡುವುದಕ್ಕಾಗಿ ದೇವತೆಗಳ ಬಳಿಗೆ ಹೋಗುತ್ತದೆ ಎಂದರೆ ದೇವತೆಗಳಿಗೆ ಕೇಳಿಸುತ್ತದೆ.

English Translation.

And then he rewards the presenter of oblations ; brings the sacrifice to its conclusion ; our prayer then reaches the gods.

॥ ವಿಶೇಷ ವಿಷಯಗಳು ॥

ಅತ್-ಅಥ, ಅನಂತರ ಎಂದರ್ಥವು. ಯದೇದಯೆಕ್ತ ಹರಿತಃ ಸಧಸ್ಥಾದಾದ್ರಾತ್ರೀ ವಾಸಸ್ತನುತೇ ಸಿಮಸ್ಮೈ (ಋ. ಸಂ. ೧-೧೧೫-೪) ಎಂಬ ಋಕ್ಕಿನಲ್ಲಿರುವ ಅತ್ ಎಂಬ ಶಬ್ದಕ್ಕೆ ಯಾಸ್ಕರು ನಿರುಕ್ತದಲ್ಲಿ ಅಥ-ಅನಂತರ ಎಂಬರ್ಥವನ್ನು ಹೇಳಿರುವರು (ನಿ. ೪-೧೧).

ಹವಿಷ್ಕೃತಿಂ-ಹವಿಷಃ ಕೃತಿಃ ಸಂಪಾದನಂ ಯಸ್ಯ ಯಜಮಾನಸ್ಯ ಸೋಽಯಂ ಹವಿಷ್ಕೃತಿಃ ॥ ಹವಿಃಪ್ರದಾನವನ್ನು ಮಾಡುವ ಯಜಮಾನನನ್ನು ಎಂದರ್ಥವು. ಅಥವಾ ಸ್ಕಂದಸ್ವಾಮಿಯು ಹೇಳುವಂತೆ, ಹವಿಷ್ಕೃತಿಂ ಹವಿಷ್ಕ್ರಿಯಾಂ ಹವೀಂಷಿ ಸಾರತೋ ವೃದ್ಧಾನಿ ಕರೋತೀತ್ಯರ್ಥಃ ॥ ಹವಿಷ್ಕೃತಿಯೆಂದರೆ ಹವಿಃಪ್ರದಾನಕರ್ಮವು. ಅದನ್ನು ಸಾರಭೂತವನ್ನಾಗಿ ಮಾಡುವನೆಂದಭಿಪ್ರಾಯವು.

ಪ್ರಾಂಚಂ—ಪ್ರಕರ್ಷೇಣ ಗಚ್ಛಂತಮವಿಘ್ನೇನ ಪರಿಸಮಾಪ್ತಿಯುಕ್ತಂ ಕರೋತೀತ್ಯರ್ಥಃ ॥ ಯಜ್ಞವು ನಿರ್ವಿಘ್ನವಾಗಿ ಪರಿಸಮಾಪ್ತಿಯಾಗುವಂತೆ ಮಾಡುವನೆಂದರ್ಥವು.

ಹೋತ್ರಾ—ಹೂಯಮಾನಾ ದೇವತಾ ಅಥವಾ ಅಸ್ಮದೀಯಸ್ತುತಿರೂಪಾ ವಾಕ್—ಎಂದರೆ ಯಜ್ಞದಲ್ಲಿ ಆಹ್ವಾನ ಮಾಡಲ್ಪಟ್ಟ ದೇವತೆಯು ಅಥವಾ ನಾವು ಮಾಡುವ ಸ್ತುತಿರೂಪವಾದ ವಾಕ್ಯವು ಎಂಬ ಎರಡು ಅರ್ಥಗಳನ್ನು ಹೇಳಿರುವರು. ಈ ಎರಡರ್ಥಗಳಲ್ಲಿ ವಾಕ್ಯವೆಂಬ ಎರಡನೆಯ ಅರ್ಥವೇ ಇಲ್ಲಿ ಸಮಂಜಸವಾಗಿರುವಂತೆ ಕಾಣುವುದು. ಶ್ಲೋಕಃ ಧಾತಾ ಮೊದಲಾದ ಐವತ್ತೇಳು ವಾಙ್ನಾಮಗಳ ಮಧ್ಯದಲ್ಲಿ ಹೋತ್ರಾ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೨-೨೩) ಹೋತ್ರಾ ಎಂದರೆ ವಾಕ್ಯವು ಎಂದರ್ಥವು.

ದೇವೇಷು ಗಚ್ಛೈತಿ—ಎಂದರೆ ದೇವತೆಗಳ ಬಳಿಗೆ ಹೋಗುವುದು ಎಂದರ್ಥವು. ದೇವತಾಪರವಾದರೆ ಯಜ್ಞದಲ್ಲಿ ಸಂತುಷ್ಟನಾದ ದೇವತೆಯು, ಯಜಮಾನನು ತನ್ನನ್ನು ಚೆನ್ನಾಗಿ ತೃಪ್ತಿಪಡಿಸಿದನೆಂದು ಹೇಳುವುದಕ್ಕಾಗಿ ದೇವತೆಗಳ ಬಳಿಗೆ ಹೋಗುವನು ಎಂದಭಿಪ್ರಾಯವು, ವಾಕ್ಯಪರವಾದರೆ, ನಮ್ಮ ಸ್ತುತಿರೂಪವಾದ ವಾಕ್ಯಗಳು ದೇವತೆಗಳನ್ನು ಮುಟ್ಟಲಿ ಅಥವಾ ದೇವತೆಗಳಿಗೆ ತಿಳಿದು ಅಥವಾ ಕೇಳಿಸಿ ಅದರಿಂದ ಅವರು ಸಂತುಷ್ಟರಾಗಲಿ ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಹವಿಷ್ಕೃತಿಮ್-ಹವಿಷಃ ಕೃತಿಃ ಸಂಪಾದನಂ ಯಸ್ಯ ಯಜಮಾನಸ್ಯ ಸಃ ಹವಿಷ್ಕೃತಿಃ | ಯಾವ ಯಜಮಾನನಿಗೆ ಹವಿಸ್ಸಿನ ಸಂಪಾದನೆ ಇದಿಯೋ ಆ ಯಜಮಾನನಿಗೆ ಹವಿಷ್ಕೃತಿ ಎನ್ನುವರು. **ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್** (ಪಾ. ಸೂ. ೬-೨-೧) ಎಂಬುದರಿಂದ ಪೂರ್ವಪದಪ್ರಕೃತಿಸ್ವರ.

ಪ್ರಾಞ್ಜಿಮ್—ಪ್ರ ಅಞ್ಜತಿ ಎಂದು ವಿಗ್ರಹ. ಈ ಅರ್ಥದಲ್ಲಿ ಪ್ರ ಎಂಬ ಸುಬಂತವು ಉಪಪದವಾಗಿರುವಾಗ **ಋತ್ವಿಗ್ದಧೃಕ್**—, (ಪಾ.ಸೂ. ೩-೨-೫೯) ಇತ್ಯಾದಿ ಸೂತ್ರದಿಂದ ಕ್ವಿನ್ ಪ್ರತ್ಯಯ. ಕ್, ನ್, ಇ, ಇವುಗಳಿಗೆ ಇತ್ಸಂಜ್ಞಾಲೋಪ, ವ್ ನಿಲ್ಲುವುದು. **ಅನಿದಿತಾಂ ಹಲ ಉಪಧಾಯಾಃ ಕ್ಙಿತಿ** (ಪಾ.ಸೂ. ೬-೪-೨೪) ಹಲಂತವಾಗಿಯೂ ಹ್ರಸ್ವ ಇಕಾರೋತ್ಸಂಜ್ಞಕವಲ್ಲದುದಾಗಿಯೂ ಇರುವ ಅಂಗದ ಉಪಾಂತ್ಯನಕಾರಕ್ಕೆ ಕಿತ್ತು ಙಿತ್ತು ಆದ ಪ್ರತ್ಯಯಪರದಲ್ಲಿರುವಾಗ ಲೋಪ ಬರುವುದು ಎಂಬುದರಿಂದ ಲೋಪ, ಪ್ರ+ಅಜ್+ವ್, ಸವರ್ಣದೀರ್ಘ ಪ್ರಾಜ್+ವ್. **ಅನಿಗನ್ತೋಽಞ್ಚ್ತೌ ವ ಪ್ರತ್ಯಯೇ** (ಪಾ.ಸೂ. ೬-೩-೬೨) ವಕಾರ ರೂಪ ಪ್ರತ್ಯಯಾಂತವಾದ ಅಞ್ಚ್ಧಾತುಪರದಲ್ಲಿರುವಾಗ ಇಗಂತವಲ್ಲದ ಗತಿಸಂಜ್ಞಕವು ಪ್ರಕೃತಿಸ್ವರವನ್ನು ಹೊಂದುವುದು. ಎಂಬುದರಿಂದ ಪೂರ್ವಪದಪ್ರಕೃತಿಸ್ವರ, ಪ್ರ ಎಂಬ ಪೂರ್ವಪದವು **ಉಪಸರ್ಗಾಶ್ಚಾಭಿವರ್ಜಂ** ಎಂಬುದರಿಂದ ಅದ್ಯುದಾತ್ತ, ಸಮಾಸಾನಂತರವೂ ಪೂರ್ವೋಕ್ತಸೂತ್ರದಿಂದ ಅದೇ ಸ್ವರ ನಿಲ್ಲುವುದು. ಪ್ರ+ಅಜ್+ವ್ ಎಂದಿರುವಾಗ ಸವರ್ಣದೀರ್ಘದಿಂದ ಬಂದ ಏಕಾದೇಶವು. ಏಕಾದೇಶ ಉದಾತ್ತೇನೋದಾತ್ತಃ, ಎಂಬುದರಿಂದ ಉದಾತ್ತ. **ವೇರಪೃಕ್ತಸ್ಯ** ಎಂಬುದರಿಂದ ವಕಾರಕ್ಕೆ ಲೋಪ. ದ್ವಿತೀಯಾಏಕವಚನ ಅಮ್, ಪ್ರಾಜ್+ಅಮ್. **ಅಗಿದಚಾಂಸರ್ವನಾಮಸ್ಥಾನೇಽಧಾತೋಃ** (ಪಾ.ಸೂ.೬-೧-೭೦) ಎಂಬುದರಿಂದ ನುಮಾಗಮ. ಪ್ರಾನ್ಜ್+ಅಮ್, **ನಶ್ಚಾಪದಾನ್ತಸ್ಯ ಝಲಿ** (ಪಾ.ಸೂ. ೮-೩-೨೪) ನಕಾರಕ್ಕೆ ಅನುಸ್ವಾರ. ಇದಕ್ಕೆ **ಅನುಸ್ವಾರಸ್ಯ ಯಯಿ ಪರಸವರ್ಣಃ** (ಪಾ.ಸೂ ೮-೪-೫೮) ಎಂಬುದರಿಂದ ಪರಸವರ್ಣ, ಞಕಾರ, ಪ್ರಾಞ್ಜಿಮ್ ಎಂದಾಗುವುದು.

ಅಧ್ವರಮ್—ನ ವಿದ್ಯತೇಽಧ್ವರಃ ಹಿಂಸಾ ಯಸ್ಮಿನ್ ಸ ಅಧ್ವರಃ, **ಬಹುವ್ರೀಹೌ ಪ್ರಕೃತ್ಯಾ ಪೂರ್ವಪದಮ್** ಎಂದು ಪ್ರಾಪ್ತವಾಗುವ ಪೂರ್ವಪದಪ್ರಕೃತಿಸ್ವರವನ್ನು ಬಾಧಿಸಿ **ನಞ್ಸುಭ್ಯಾಮ್** (ಪಾ. ಸೂ. ೬-೨-೧೭೨) ನಞ್ ಸು ಇವುಗಳ ಮುಂದೆ ಇರುವ ಉತ್ತರಪದವು ಅಂತೋದಾತ್ತವಾಗುವುದು ಎಂಬುದರಿಂದ ಉತ್ತರಪದವು ಅಂತೋದಾತ್ತ.

ಹೋತ್ರಾ—ಹೂಯತೇ ಅಸ್ಮೈನ್ನಿತಿ ಹೋತ್ರಾ ದೇವತಾ. **ಹುಯಾಮಾಶ್ರುಭಸಿಭ್ಯಸ್ತ್ರನ್** (ಉ.ಸೂ. ೪-೬೦೭) ಹು ದಾನಾದನಯೋಃ, ಯಾ ಪ್ರಾಪಣೇ, ಮಾ ಮಾನೇ, ಶ್ರ ಶ್ರವಣೇ, ಭೃ ಭರ್ತ್ಸನದೀಪ್ತ್ಯೋಃ, ಈ

ಧಾತುಗಳ ಮುಂದೆ ಶ್ರನ್ ಪ್ರತ್ಯಯಬರುವುದು ಎಂಬುದರಿಂದ ಹು ಧಾತುವಿನ ಮುಂದೆ ಶ್ರನ್. ಗುಣ, ಹೋತ್ರ ದೇವತಾವಾಚಕವಾದ ಸ್ತ್ರೀಲಿಂಗ, ಆದ್ದರಿಂದ ಟಾಪ್, ಹೋತ್ರಾ, ಪ್ರತ್ಯಯವು ನಿತ್ತು. ಆದ್ದರಿಂದ ಹೋತ್ರಾ ಎಂಬುದು ನಿತ್ಸ್ವರದಿಂದ ಆದ್ಯುದಾತ್ತ. ॥ ೪ ॥

॥ ಸಂಹಿತಾಪಾಠಃ ॥

ನರಾಶಂಸಂ ಸುಧೃಷ್ಟಮಮಪಶ್ಯಂ ಸಪ್ರಥಸ್ತಮಂ ।
ದಿವೋ ನ ಸದ್ಮಮಖಸಂ ॥ ೪ ॥

॥ ಪದಪಾಠಃ ॥

ನರಾಶಂಸಂ । ಸು ಽ ಧೃಷ್ಟಮಂ । ಅಪಶ್ಯಂ । ಸಪ್ರಥಃ ಽ ತಮಂ ॥
ದಿವಃ । ನ । ಸದ್ಮ ಽ ಮಖಸಂ ॥ ೪ ॥

॥ ಸಾಯಣಭಾಷ್ಯಂ ॥

ನರಾಶಂಸಮೇತನ್ನಾಮಕಂ ದೇವವಿಶೇಷಂ । ಯದ್ವಾ । ಅವಯವಾರ್ಥವ್ಯುತ್ಪತ್ತ್ಯಾ ಸದಸಸ್ಪತಿ-ದೇವತಾಪರೋಽಯಂ ಶಬ್ದಃ। ವ್ಯುತ್ಪತ್ತಿಂ ಚ ಯಾಸ್ಕೋ ದರ್ಶಯತಿ। ನರಾಶಂಸೋ ಯಜ್ಞ ಇತಿ ಕಾಠಕ್ಯೋ ನರಾ ಅಸ್ಮಿನ್ನಾಸೀನಾಃ ಶಂಸಂತ್ಯಗ್ನಿರಿತಿ ಶಾಕಪೂಣಿರ್ನರೈಃ ಪ್ರಶಸ್ಯೋ ಭವತಿ । ನಿ. ೮-೬ । ಇತಿ । ಅತ್ರಾಗ್ನಿವತ್ಸದಸಸ್ಪತೇರಪಿ ನರೈಃ ಶಸ್ಯಮಾನತ್ವಾನ್ನರಾಶಂಸತ್ವಂ । ಏವಮೇವಾಭಿಪ್ರಾಯಂ ಹೃದಿನಿಧಾಯ ಬ್ರಾಹ್ಮಣಮೇವಮಾಮ್ನಾಯತೇ । ಪ್ರಜಾ ವೈ ನರೋ ವಾಕ್ ಶಂಸಃ । ಐ.ಬ್ರಾ. ೬-೨೭ । ಇತಿ । ಅತೋ ಮನುಷ್ಯೈಃ ಶಸ್ಯಮಾನೋ ಯಃ ಸದಸಸ್ಪತಿರ್ಯೋ ವಾ ನರಾಶಂಸನಾಮಕೋ ದೇವಸ್ತಮಪಶ್ಯಂ। ಶಾಸ್ತ್ರದೃಷ್ಟ್ಯಾ ದೃಷ್ಟವಾನಸ್ಮಿ । ಕೀದೃಶಂ । ಸುಧೃಷ್ಟಮಮತ್ಯಾಧಿಕ್ಯೇನ ಧಾರ್ಷ್ಟ್ಯಯುಕ್ತಂ ಸಪ್ರಥಸ್ತಮಮತಿಶಯೇನ ಪ್ರಖ್ಯಾತಂ ಸದ್ಮಮಖಸಂ ಪ್ರಾಪ್ತಕೇಜಸ್ಕಂ । ತತ್ರ ದೃಷ್ಟಾಂತಃ । ದಿವೋ ನ ದ್ಯುಲೋಕಾನಿವ । ಆದಿತ್ಯಚಂದ್ರಾದಿಭಿರಧಿಷ್ಠಿತಾ ದ್ಯುಲೋಕವಿಶೇಷಾ ಯಥಾ ತೇಜಸ್ವಿನಸ್ತದ್ವದಯಂ ನರಾಶಂಸಸ್ತೇಜಸ್ವೀತ್ಯರ್ಥಃ ॥ ಸುಧೃಷ್ಟಮಂ । ಶೋಭನಂ ಧೃಷ್ಣೋತೀತಿ ಸುಧೃಕ್ । ಕ್ವಿಪ್ಚೇತಿ ಕ್ವಿಪ್ । ಆತಿಶಾಯನಿಕಸ್ತಮಪ್ । ಷಕಾರಸ್ಯ ಜಶ್ತ್ವಾಭಾವಶ್ಚಾಂದಸಃ । ಕೃದುತ್ತರಪದಪ್ರಕೃತಿಸ್ವರತ್ವೇನ ಯುಕಾರ ಉದಾತ್ತಃ । ಅಪಶ್ಯಂ । ಪಾಘ್ರಾಧ್ಮೇತ್ಯಾದಿನಾ ಪಶ್ಯಾದೇಶಃ । ಲುಙ್ಲಙ್ಲ್ಯಂಶ್ವಡುದಾತ್ತಃ । ಪಾ. ೬-೪-೭೧ । ಇತ್ಯಟ ಉದಾತ್ತತ್ವಂ । ಸಾದಾದಿತ್ವಾನ್ನ ನಿಘಾತಃ । ಸಪ್ರಥಸ್ತಮಂ । ಪ್ರಥ ಪ್ರಖ್ಯಾನೇ ।

ಪ್ರಥನಂ ಪ್ರಥಃ । ಸರ್ವಧಾತುಭ್ಯೋ೭ಸುನ್ । ನಿತ್ತ್ವಾದಾದ್ಯುದಾತ್ತತ್ವಂ । ಸಹ ಪ್ರಥಸಾ ಪರ್ಶತಿ ಇತಿ ತೇನ ಸಹೇತಿ ತುಲ್ಯಯೋಗೇ । ಪಾ. ೨-೨-೨೮ । ಇತಿ ಬಹುವ್ರೀಹಿಸಮಾಸಃ । ವೋ೭ಸಜ್ಯನಸ್ಯೈ । ಪಾ. ೬-೩-೮೨ । ಇತಿ ಸಾದೇಶಃ । ಪೂರ್ವಸದಪ್ರಕೃತಿಸ್ವರತ್ವೇ ಪ್ರಾಪ್ತೇ ಪರಾಡಿಶ್ಚಂಡಸಿ ಬಹುಲವಿಧಿತ್ಯು-ತ್ತರಪದಾದ್ಯುದಾತ್ತತ್ವಂ । ದಿವಃ । ಊಡಿದಂವಿಭಾಷೆತಿನಾ ವಿಭಕ್ತೇರುದಾತ್ತತ್ವಂ । ಸದ್ಮಮಖಸಂ । ಸೀದ-ತೀತಿ ಸದ್ಮ । ಷದ್ಲೃ ವಿಶರಣಾದೌ । ಅನ್ಯೇಭ್ಯೋ೭ಪಿ ದೃಶ್ಯಂತ ಇತಿ ಮನಿನ್ । ನಿತ್ತ್ವಾದಾದ್ಯುದಾತ್ತಃ । ಸದ್ಮ ಮಹೋ ಯಸ್ಯೇತಿ ಬಹುವ್ರೀಹೌ ಹಕಾರಸ್ಯ ವ್ಯತ್ಯಯೇನ ಖಕಾರಃ ॥ ೩೫ ॥

॥ ಪ್ರತಿಪದಾರ್ಥ ॥

(ನಾನು) ಸುಧೃಷ್ಟಮಂ—ಬಹಳವಾಗಿ ಧಾರ್ಷ್ಟ್ಯಯುಕ್ತನಾದ । ಸಪ್ರಥಸ್ತಮಂ—ಅತಿಶಯವಾಗಿ ಪ್ರಖ್ಯಾತನಾದ । ದಿವೋ ನ—ಸ್ವರ್ಗಲೋಕದಂತೆ । ಸದ್ಮಮಖಸಂ—ಹೆಚ್ಚಾದ ಕಾಂತಿಯಿಂದ ಬೆಳಗುವ । ನರಾಶಂಸಂ—ಮನುಷ್ಯರಿಂದ ಸ್ತುತಿಸಲ್ಪಡುವ ಸದಸಸ್ಪತಿಯನ್ನು ಅಥವಾ ನರಾಶಂಸನೆಂಬ ದೇವತೆಯನ್ನು (ಅಗ್ನಿ ಯನ್ನು) ಅಪಶ್ಯಂ—ನೋಡಿದೆನು.

॥ ಭಾವಾರ್ಥ ॥

ಈ ಸದಸಸ್ಪತಿಯು (ಅಥವಾ ನರಾಶಂಸನು) ಬಹಳವಾದ ಪರಾಕ್ರಮವುಳ್ಳವನು, ಬಹಳ ಪ್ರಸಿದ್ಧ ನಾದವನು, (ಸೂರ್ಯಚಂದ್ರಾದಿಗಳಿರುವ) ಸ್ವರ್ಗಲೋಕದಂತೆ ಅತಿಶಯವಾದ ಕಾಂತಿಯಿಂದ ಬೆಳಗುತ್ತಿರುವ ವನು. ಇಂತಹ ಸದಸಸ್ಪತಿಯನ್ನು (ಅಥವಾ ನರಾಶಂಸನನ್ನು) ನಾನು ನೋಡಿದೆನು.

English Translation

I have seen Narasamsa the most valiant, the most renowned and radiant as the heavens.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ದೇವತೆಯು ಸದಸಸ್ಪತಿ ಅಥವಾ ನರಾಶಂಸನು. ಋಕ್ಕಿನಲ್ಲಿ ಸದಸಸ್ಪತಿಯ ಹೆಸರು ಸೂಚಿತವಾಗದಿದ್ದರೂ ಹಿಂದಿನ ಮೂರು ಋಕ್ಕುಗಳೂ ಸದಸಸ್ಪತಿಯ ಪರವಾಗಿರುವುದರಿಂದಲೂ ಈ ಋಕ್ಕಿಗೆ ಸದಸಸ್ಪತಿ ಅಥವಾ ನರಾಶಂಸನೆಂಬ ಯಾವುದಾದರೂ ಒಂದು ದೇವತೆಯೆಂದು ಹೇಳಿರುವುದರಿಂದಲೂ ನರಾಶಂಸ ವೆಂಬ ಶಬ್ದಕ್ಕೆ ಮನುಷ್ಯರಿಂದ ಸ್ತುತಿಸಲ್ಪಡುವ ಎಂದು ಅವಯವಾರ್ಥವನ್ನು ಕಲ್ಪಿಸಿ ಅದನ್ನು ಸದಸ್ಪತಿಂ ಎಂಬ ಶಬ್ದಕ್ಕೆ (ಆ ಶಬ್ದವನ್ನು ಇಲ್ಲಿ ಅಧ್ಯಾಹಾರಮಾಡಿಕೊಳ್ಳಬೇಕು) ವಿಶೇಷಣಪದವನ್ನಾಗಿ ಭಾವಿಸಬೇಕು. ಅಥವಾ ಈ ಋಕ್ಕಿಗೆ ನರಾಶಂಸ ಎಂಬ ದೇವತೆಯನ್ನು ಹೇಳುವಪಕ್ಷದಲ್ಲಿ ನರಾಶಂಸಂ ಎಂಬ ಶಬ್ದವೇ ಋಕ್ಕಿನಲ್ಲಿರುವುದರಿಂದ ಯಾವ ಬಾಧಕವೂ ಇಲ್ಲ. ಈ ನರಾಶಂಸಶಬ್ದದ ಅವಯವಾರ್ಥವನ್ನು ಯಾಸ್ಕರು ಈ ರೀತಿ ವಿವರಿಸಿರುವರು.

ನರಾಶಂಸೋ ಯಜ್ಞ ಇತಿ ಕಾತ್ಥಕ್ಯೋ ನರಾ ಅಸ್ಮಿನ್ನಾಸೀನಾಃ ಶಂಸಂತ್ಯಗ್ನಿರಿತಿ ಶಾಕಪೂಣಿರ್ನರ್ಯೈಃ ಪ್ರಶಸ್ಯೋ ಭವತಿ ॥

(ನಿ. ೮-೬)

ನರಾಶಂಸವೆಂದರೆ ಯಜ್ಞವೆಂದು ಕಾತ್ಥಕ್ಯರ ಮತವು; ನರಾ ಎಂದರೆ ಮನುಷ್ಯರು ಸ್ತುತಿಸುವುದರಿಂದ ನರಾಶಂಸನೆಂದರೆ ಪ್ರಶಸ್ಯನಾದ (ಅಗ್ನಿ) ಎಂದು ಶಾಕಪೂಣಿಯ ಮತವು. ಈ ವಿಷಯದಲ್ಲಿ ಭಾಷ್ಯಕಾರರು ಐತರೇಯ ಬ್ರಾಹ್ಮಣ ವಾಕ್ಯವನ್ನು ಉದಾಹರಿಸಿರುವರು—ಪ್ರಜಾ ವೈ ನರಃ ವಾಕ್ ಶಂಸಃ (ಐ ಬ್ರಾ. ೬-೨೭) ನರಾ ಎಂದರೆ ಪ್ರಜೆಗಳು ಅಥವಾ ಮನುಷ್ಯರು. ಶಂಸ ಎಂದರೆ ವಾಕ್. ಆದುದರಿಂದ ನರಾಶಂಸಃ ಎಂದರೆ ಪ್ರಜೆಗಳಿಂದ ಅಥವಾ ಮನುಷ್ಯರಿಂದ ಪ್ರಶಂಸೆ ಮಾಡಲ್ಪಡುವವನು ಎಂದಭಿಪ್ರಾಯವು. ನರಾಶಂಸವೆಂಬ ಶಬ್ದವು, ಸದಸಸ್ಪತಿ, ನರಾಶಂಸ ಅಥವಾ ಅಗ್ನಿ ಎಂಬ ಮೂರು ದೇವತೆಗಳ ಪರವಾಗಿಯೂ ಅನ್ವಯಿಸುವುದಾಗಿರುವುದು. ಈ ವಿಷಯವನ್ನು ನಾವು ಹಿಂದೆಯೇ (ಪುಟ　　ನೋಡಿ) ವಿಮರ್ಶೆ ಮಾಡಿರುವೆವು.

ಸುಧೃಷ್ಟಮಂ—ಶೋಭನಂ ಧೃಷ್ಣೋತೀತಿ—ಉತ್ತಮವಾದ ಪರಾಕ್ರಮ (ಅಥವಾ ನಿಶ್ಚಲತ್ವ) ವುಳ್ಳವನು.

ಸಪ್ರಥಸ್ತಮಂ—ಪ್ರಥಿ ಪ್ರಖ್ಯಾನೇ ಸಹ ಪ್ರಥಸಾ ವರ್ತತೇ ಇತಿ, ತೇನ ಸಹ—ಪ್ರಥನೆಂಬ ಧಾತುವಿಗೆ ಪ್ರಸಿದ್ಧಿಮಾಡು, ಹೊಗಳು ಎಂದರ್ಥವಿರುವುದರಿಂದ ಸಪ್ರಥಸ್ತಮಂ ಎಂಬ ಶಬ್ದಕ್ಕೆ ವಿಶೇಷವಾದ ಪ್ರಸಿದ್ಧಿಯಿಂದ ಸಹಿತನಾದ ಎಂದರ್ಥವು.

ದಿವೋ ನ—ಸ್ವರ್ಗದಂತೆ. ಈ ಉಪಮಾನವು ಅಷ್ಟು ಚೆನ್ನಾಗಿ ಹೊಂದುವುದಿಲ್ಲ. ಸ್ವರ್ಗಲೋಕದಲ್ಲಿ (ಅಂತರಿಕ್ಷದಲ್ಲಿ) ಸೂರ್ಯಚಂದ್ರಾದಿಗಳು ಪ್ರಕಾಶಮಾನವಾಗಿ ಬೆಳಗುತ್ತಿರುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಋಷಿಯು ಈ ಉಪಮಾನವನ್ನು ಹೇಳಿರಬಹುದು.

ಸದ್ಮಮಖಸಂ—ಇಲ್ಲಿ ಮಖಸಂ ಎಂಬ ಶಬ್ದದಲ್ಲಿ ಹಕಾರಕ್ಕೆ ಬದಲಾಗಿ ಖಕಾರವು ವ್ಯತ್ಯಯದಿಂದ ಉಪಯೋಗಿಸಲ್ಪಟ್ಟಿರುವುದು. ಆದುದರಿಂದ ಮಖಸಂ ಎಂದರೆ ಮಹಸಂ ಎಂದರ್ಥವು. ಸದ್ಮ ಮಹೋ ಯಸ್ಯ ಸಃ ಸದ್ಮಮಹಾಃ ಅಥವಾ ಸದ್ಮಮಖಾಃ ತಂ ಎಂದು ವಿಗ್ರಹವು. ತೇಜಸ್ಸಿಗೆ ಮನೆಯಂತಿರುವವನು, ಎಂದರೆ ಅತಿಶಯವಾದ ತೇಜಸ್ಸಿನಿಂದ ಅಥವಾ ಕಾಂತಿಯಿಂಧ ಬೆಳಗುತ್ತಿರುವವನು ಎಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಸುಧೃಷ್ಟಮಮ್—ಞಾಧೃಷಾ ಪ್ರಾಗಲ್ಭ್ಯೇ, ಧಾತು, ಸ್ವಾದಿ. ಸು=ಶೋಭನಂ, ಧೃಷ್ಣೋತಿ ಎಂದು ವಿವಕ್ಷಿಸಿದಾಗ ಕ್ವಿಪ್‌ಚಿ (ಪಾ.ಸೂ. ೩-೨-೭೬) ಎಂಬುದರಿಂದ ಕ್ವಿಪ್. ಕ್ವಿಪಃ ಸರ್ವಸ್ಯಾಪಿಲೋಪಃ ಅತಿಶಾಯನೇ ತಮಬಿಷ್ಠನೌ (ಪಾ.ಸೂ. ೫-೩-೫೫) ಎಂಬುದರಿಂದ ಅತಿಶಯಾರ್ಥದಲ್ಲಿ ತಮಪ್. ಸುಧೃಷ್+ತಮ ಝಲಾಂಜಶ್‌ಝಶಿ (ಪಾ. ಸೂ. ೮-೪-೬೩) ಎಂಬುದರಿಂದ ತಕಾರಕ್ಕೆ ಜಶ್ತ್ವ ಬಂದು ಡಕಾರ ಬರದೇ ಇರುವಿಕೆಯು ಛಾಂದಸವು. ಷ್ಟುನಾಷ್ಟುಃ (ಪಾ.ಸೂ.೮-೪-೪೧) ಎಂಬ ಷ್ಟುತ್ವದಿಂದ ತಕಾರಕ್ಕೆ ಟಕಾರ ದ್ವಿತೀಯಾ ಏಕವಚನ ಅಮ್, ಅಮಿಪೂರ್ವಃ, ಪೂರ್ವರೂಪ, ಸುಧೃಷ್ಟಮ್, ಧೃಷ್ ನ ಋಕಾರವು ಧಾತುಸ್ವರದಿಂದ ಉದಾತ್ತ

ಸುಶಬ್ದದೊಂದಿಗೆ ಸಮಾಸಬಂದಮೇಲೆ ಗತಿಕಾರಕೋಪಪದಾತ್ಕೃತ್ (ಪಾ.ಸೂ. ೬-೨-೧೩೯) ಎಂದು ಕೃದುತ್ತರ ಪದ ಪ್ರಕೃತಿಸ್ವರ ಬಂದು, ಅದೇ ಸ್ವರ ನಿಲ್ಲುವುದು.

ಅಪಶ್ಯಮ್—ದೃಶಿರ್ ಪ್ರೇಕ್ಷಣೇ ಧಾತು. ಲಙ್, ಉತ್ತಮಪುರುಷ ಏಕವಚನ ಮಿಪ್, ಅದಕ್ಕೆ **ತಸ್ಥಸ್ಥಮಿಪಾಂತಾಂತಂತಾಮಃ** (ಪಾ.ಸೂ. ೩-೪-೧೦೧) ಎಂಬುದರಿಂದ ಅಮಾದೇಶ, **ಕರ್ತರಿಶಪ್** (ಪಾ.ಸೂ. ೩-೧-೬೮) ಎಂಬುದರಿಂದ ಶಪ್ ವಿಕರಣ. **ಸಾಘ್ವ್ರಾಧ್ಮಾ್ಮನಾದಾಣ್ದೃಶ್ಯರ್ತಿ**—, (ಪಾ. ಸೂ. ೭-೩-೭೮) ಎಂಬುದರಿಂದ ದೃಶ್‌ಗೆ ಪಶ್ಯ ಆದೇಶ, ಪಶ್ಯ್+ಅ+ಅಮ್. **ಅಮಿಪೂರ್ವಃ** (ಪಾ. ಸೂ. ೬-೧-೧೦೭) ಎಂಬುದರಿಂದ ಪೂರ್ವರೂಪ. ಅಪಶ್ಯಮ್. **ಲುಙ್‌ಲಙ್‌ಲೃಙ್‌ಕ್ಷ್ವ್ಡುದಾತ್ತೈಃ** ಎಂಬುದರಿಂದ ಉದಾತ್ತವಾದ ಅಟ್ ಆಗಮ. ಇದು ಪಾದಾದಿಯಲ್ಲಿರುವುದರಿಂದ ಸರ್ವಾನುದಾತ್ತವಾಗುವುದಿಲ್ಲ.

ಸಪ್ರಥಸ್ತಮಮ್—ಪ್ರಥ ಪ್ರಖ್ಯಾನೇ ಧಾತು, ಪ್ರಥನಂಪ್ರಥಃ **ಸೆರ್ವಧಾತುಭ್ಯೋಽಸುನ್** ಎಂಬುದರಿಂದ ಭಾವಾರ್ಥದಲ್ಲಿ ಅಸುನ್‌ಪ್ರತ್ಯಯ, ನಿತ್ಸ್ವರದಿಂದ ಪ್ರಥಸ್ ಎಂಬುದು ಆದ್ಯುದಾತ್ತ. ಸಹ ಪ್ರಥಸಾ ವರ್ತತೇ ಎಂದು ಬಹುವ್ರೀಹಿಸಮಾಸ, **ತೇನ ಸಹೇತಿ ತುಲ್ಯಯೋಗೇ** (ಪಾ. ಸೂ. ೨-೨-೨೮) ಯುಗಪತ್ಕಾಲಿಕ ಕ್ರಿಯಾಬೋಧಕವಾದ ಸಹ ಎಂಬ ಶಬ್ದವು ತೃತೀಯಾಂತವಾದ ಸಮರ್ಥದೊಂದಿಗೆ ಸಮಾಸವನ್ನು ಹೊಂದುವುದು. ಅದು ಬಹುವ್ರೀಹಿಸಂಜ್ಞಕವಾಗುವುದು ಎಂಬುದರಿಂದ ಬರುವುದು- **ವೋಪಸರ್ಜನಸ್ಯ** (ಪಾ. ಸೂ. ೬-೩-೮೨). ಉಪಸರ್ಜನಸರಿವ್ವಯವಕವಾದ ಸಮಾಸ ಎಂದರೆ ಬಹುವ್ರೀಹಿ. ಏವಂಚ ಬಹುವ್ರೀಹಿಸಮಾಸಘಟಕ ಉತ್ತರಪದಾವ್ಯವಹಿತಪೂರ್ವವರ್ತಿಯಾದ ಸಹಶಬ್ದಕ್ಕೆ ಸ ಆದೇಶ ಬರುವುದು ಎಂಬುದರಿಂದ ಸಹಶಬ್ದಕ್ಕೆ ಸ ಆದೇಶ, ಸಪ್ರಥಸ್ ಎಂದಾಯಿತು. ಇದು ಬಹುವ್ರೀಹಿಯಾದ್ದರಿಂದ ಪೂರ್ವಪದಪ್ರಕೃತಿಸ್ವರಪ್ರಾಪ್ತವಾದರೆ **ಪರಾದಿಶ್ಚಂದಸಿಬಹುಲಮ್** (ಪಾ. ಸೂ. ೬-೨-೧೧೯) ಎಂಬುದರಿಂದ ಉತ್ತರಪದವಾದ ಪ್ರಥಸ್ ಎಂಬುದು ಅಂತೋದಾತ್ತವಾಗುವುದು. ಅತಿಶಯಾರ್ಥವನ್ನು ವಿವಕ್ಷಿಸಿದಾಗ ತಮಪ್ ಪ್ರತ್ಯಯ, ಸಪ್ರಥಸ್ತಮ, ದ್ವಿತೀಯೈಕವಚನ, ಸಪ್ರಥಸ್ತಮಮ್.

ದಿವಃ—**ಊಡಿದಮ್‌ಪದಾದ್ಯಪ್ಪುಮ್‌ರೈದ್ಯುಭ್ಯಃ** (ಪಾ.ಸೂ. ೬-೧-೧೭೧) ಎಂಬುದರಿಂದ ವಿಭಕ್ತಿಯು ಉದಾತ್ತ.

ಸದ್ಮಮಖಸಮ್—ಷದ್ಲೃ ವಿಶರಣಗತ್ಯವಸಾದನೇಷು, ಧಾತು. ಧಾತ್ವಾದೇಃಷಃಸಃ, **ಆನ್ಯೇಭ್ಯೋಽಪಿದೃಶ್ಯತೇ** (ಪಾ.ಸೂ. ೩-೨-೭೫) ಎಂಬುದರಿಂದ ಮನಿನ್‌ಪ್ರತ್ಯಯ, ಸದ್ಮನ್ ಎಂದಾಗುವುದು. ನಿತ್ಸ್ವರ ಬಂದು ಇದು ಆದ್ಯುದಾತ್ತ, ಸದ್ಮ-ಮಹಃ ಯಸ್ಯ ಸಃ ಸದ್ಮಮಹಾಃ ಎಂದು ಬಹುವ್ರೀಹಿಸಮಾಸ. ಹಕಾರಕ್ಕೆ **ವ್ಯತ್ಯಯೋಬಹುಲಮ್** (ಪಾ. ಸೂ. ೩-೧-೮೫) ಎಂಬುದರಿಂದ ಖಕಾರ, ಸದ್ಮಮಖಸ್, ದ್ವಿತೀಯೈಕವಚನ ಅಮ್ **ಸದ್ಮಮಖಸಮ್** ಎಂದಾಗುವುದು. ॥ ೯ ॥

ಹತ್ತೊಂಭತ್ತನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಪ್ರತಿ ತ್ಯಮಿತಿ ನವರ್ಚಂ ದ್ವಿತೀಯೇಂ ಸೂಕ್ತಂ । ಋಷಿಚ್ಛಂದಸೀ ಪೂರ್ವವತ್ । ದೇವತಾ ತ್ವನುಕ್ರಮ್ಯತೇ । ಪ್ರತಿತ್ಯಮಾಗ್ನಿಮಾರುತಮಿತಿ ॥ ಕಾರೀರೀಷ್ಟೌ ಪ್ರತಿ ತ್ಯಮಿತ್ಯೇಷಾ ಧಾಯ್ಯಾ । ತಥಾ ಚ ಸೂತ್ರಿತಂ । ವರ್ಷಕಾಮೇಷ್ಟ್ಯಿಃ ಕಾರೀರೀ ತಸ್ಯಾಂ ಪ್ರತಿ ತ್ಯಂ ಚಾರುಮಧ್ವರಮಿಳೇ ಅಗ್ನಿಂ ಸ್ವವಸೇ ನಮೋಭಿರಿತಿ ಧಾಯ್ಯೇ । ಅ. ೨-೧೩ । ಇತಿ ॥

ಅನುವಾದವು—ಪ್ರತಿತ್ಯಂ ಎಂಬುವುದು ಈ ಐದನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿವೆ. ಈ ಸೂಕ್ತದ ದೇವತೆಯ ವಿಷಯದಲ್ಲಿ, **ಪ್ರತಿತ್ಯಮಾಗ್ನಿಮಾರುತಂ**—ಪ್ರತಿತ್ಯಂ ಎಂಬ ಸೂಕ್ತಕ್ಕೆ ಅಗ್ನಿ ಮತ್ತು ಹುರುತ್ತುಗಳು ದೇವತೆಗಳೆಂದು ಅನುಕ್ರಮಣಿಕೆಯಲ್ಲಿ ಹೇಳಿರುವುದು. ಕಾರೀರೀಷ್ಟಿಯೆಂಬ ಯಾಗದಲ್ಲಿ ಪ್ರತಿ ತ್ಯಂ ಎಂಬ ಸೂಕ್ತವನ್ನು ಹೇಳಬೇಕು- **ವರ್ಷಕಾಮೇಷ್ಟಿ ಕಾರೀರೀ ತಸ್ಯಾಂ ಪ್ರತಿತ್ಯಂ ಚಾರುಮಧ್ವರಮಿಳೇ ಅಗ್ನಿಂ ಸ್ವವಸೇ ನಮೋಭಿರಿತಿ ಧಾಯ್ಯೇ** (ಅ, ೨-೧೩) ಎಂದರೆ ಕಾರೀರೀ ಎಂದರೆ ವರ್ಷಕಾಮೇಷ್ಟಿಯು, ಮಳೆಬರುವುದಕ್ಕಾಗಿ ಮಾಡುವ ಯಾಗವಿಶೇಷವು. ಅದರಲ್ಲಿ **ಪ್ರತಿತ್ಯಂ ಚಾರುಮಧ್ವರಂ** (ಋ. ಸಂ. ೧-೧೯-೧) ಮತ್ತು **ಈಳೇ ಅಗ್ನಿಂ ಸ್ವವಸೇ ನಮೋಭಿಃ** (ಋ. ಸಂ. ೫-೬೦-೧) ಎಂಬ ಎರಡು ಋಕ್ಕುಗಳನ್ನು ಯಾಜ್ಯಾಪುರೊನುವಾಕ್ಯಾಋಕ್ಕುಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತ ಸೂತ್ರದಲ್ಲಿ (ಅ. ೨-೧೩) ಹೇಳಿರುವುದು.

॥ ಓಂ ॥

ಸೂಕ್ತ—೧೯

॥ ಮಂಡಲ—೧ ॥ ಅನುವಾಕ—೫ ॥ ಸೂಕ್ತ—೧೯ ॥

॥ ಅಷ್ಟಕ—೧ ॥ ಅಧ್ಯಾಯ—೧ ॥ ವರ್ಗ—೩೬, ೩೭ ॥

॥ ಸೂಕ್ತದಲ್ಲಿರುವ ಋಕ್ಸಂಖ್ಯೆ ೧-೯ ॥

॥ ಋಷಿಃ—ಮೇಧಾತಿಥಿಃ ಕಾಣ್ವಃ

॥ ದೇವತಾ —ಅಗ್ನಿರ್ಮರುತಶ್ಚ ।

ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಪ್ರತಿ ತ್ಯಂ ಚಾರುಮಧ್ವರಂ ಗೋಪೀಥಾಯ ಪ್ರ ಹೂಯಸೇ ।
ಮರುದ್ಭಿರಗ್ನ ಆ ಗಹಿ ॥ ೧ ॥

॥ ಪದಪಾಠಃ ॥

ಪ್ರತಿ । ತ್ಯಂ । ಚಾರುಂ । ಅಧ್ವರಂ । ಗೋಽಪೀಥಾಯ । ಪ್ರ । ಹೂಯಸೇ ॥
ಮರುತ್ ಽ ಭಿಃ । ಅಗ್ನೇ । ಆ । ಗಹಿ ॥ ೧ ॥

॥ ಸಾಯಣಭಾಷ್ಯಂ ॥

ತ್ಯಚ್ಛಬ್ದಃ ಸರ್ವನಾಮ ತಚ್ಛಬ್ದಪರ್ಯಾಯಃ । ಹೇ ಅಗ್ನೇ ಯೋ ಯಜ್ಞಶ್ಚಾರುರಂಗವೈಕಲ್ಯರಹಿತಸ್ತ್ಯಂ ತಥಾವಿಧಂ ಚಾರುಮಧ್ವರಂ ಪ್ರತಿಲಭ್ಯ ಗೋಪೀಥಾಯ ಸೋಮಪಾನಾಯ ಪ್ರ ಹೂಯಸೇ। ಪ್ರಕರ್ಷೇಣ ತ್ವಂ ಹೂಯಸೇ। ತಸ್ಮಾದಸ್ಮಿನ್ನಧ್ವರೇ ತ್ವಂ ಮರುದ್ಭಿರ್ದೇವವಿಶೇಷೈಃ ಸಹಾ ಗಹಿ। ಆಗಚ್ಛ । ಸೇಯಮೃಗ್ಯಾಸ್ಕೇನೈವಂ ವ್ಯಾಖ್ಯಾತಾ ।-ತಂ ಪ್ರತಿ ಚಾರುಮಧ್ವರಂ ಸೋಮಪಾನಾಯ ಪ್ರಹೂಯಸೇ ಸೋಽಗ್ನೇ ಮರುದ್ಭಿಃ ಸಹಾಗಚ್ಛ । ನಿ. ೧೦-೩೬ । ಇತಿ ॥ ಪ್ರತಿ । ನಿಪಾತ ಆದ್ಯುದಾತ್ತಃ । ತ್ಯಂ । ತ್ಯದಾದೀನಾಮಃ । ಪಾ- ೭-೨-೧೦೨ । ಪ್ರಾತಿಪದಿಕಸ್ವರಃ । ಚಾರುಂ । ದ್ಯುಸನಿಜನಿಚರೀತ್ಯಾದಿನಾ । ಉ. ೧-೩ । ಞಮಣ್ । ಅತ ಉಪಧಾಯಾ ಇತಿ ವೃದ್ಧಿಃ । ಞಿತ್ತ್ವಾದಾದ್ಯುದಾತ್ತಃ । ಗೋಪೀಥಾಯ । ನಿಶೀಥಗೋಪೀಥಾವಗಥಾಃ । ಉ. ೨-೯ । ಇತಿ ಥಕ್ಪ್ರತ್ಯಯಾಂತೋ ನಿಪಾತಿತಃ । ಪ್ರ । ನಿಪಾತಸ್ವರಃ ॥

॥ ಪ್ರತಿಪದಾರ್ಥ ॥

(ಹೇ) ಅಗ್ನೇ—ಎಲೈ ಅಗ್ನಿಯೇ । ಚಾರುಂ—ನ್ಯೂನಾತಿರಿಕ್ತದೋಷಗಳಿಲ್ಲದೆ ಮನೋಹರವಾದ ಅಥವಾ ಪರಿಪೂರ್ಣವಾದ (ಯಾವ ಯಜ್ಞವುಂಟೋ) । ತ್ಯಂ—ಆ । ಅಧ್ವರಂ ಪ್ರತಿ—ಆ ಯಜ್ಞಕ್ಕೆ । ಗೋಪೀಥಾಯೆ— ಸೋಮಪಾನ ಮಾಡುವುದಕ್ಕಾಗಿ । ಪ್ರ ಹೂಯಸೇ—(ನೀನು) ಆಹ್ವಾನ ಮಾಡಲ್ಪಡುವೆ । (ಆದುದರಿಂದ ನೀನು) । ಮರುದ್ಭಿಃ—ಮರುತ್ತ್ರಗಳೆಂಬ ದೇವತೆಗಳೊಡನೆ । ಆ ಗಹಿ—ಬಾ ॥

॥ ಭಾವಾರ್ಥ ॥

ಎಲೈ ಅಗ್ನಿಯೇ, ನ್ಯೂನಾತಿರಿಕ್ತಲೋಪದೋಷಗಳಿಲ್ಲದೆ ಆಚರಿಸಲ್ಪಡುವ ಪ್ರತಿಯೊಂದು ಉತ್ತಮವಾದ ಯಜ್ಞದಲ್ಲಿಯೂ ಸೋಮಪಾನಾರ್ಥವಾಗಿ ನೀನು ಆಹ್ವಾನಿಸಲ್ಪಡುವೆ. ಆದುದರಿಂದ ಈಗ ಮರುದ್ದೇವತೆಗಳಿಂದ ಸಹಿತನಾಗಿ ಇಲ್ಲಿಗೆ ಬಾ.

English Translation

O Agni, to every perfect and handsome sacrifice you are invoked to drink Soma ; come hither, Agni, with the Maruths.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಯಾಸ್ಕರು ನಿರುಕ್ತದಲ್ಲಿ ಅರ್ಥವಿವರಣೆ ಮಾಡಿದಾರೆ. ಆ ವಿವರಣೆಯು ಭಾಷ್ಯಕಾರರು ಹೇಳಿರುವಂತೆಯೇ ಇದೆ. ವ್ಯತ್ಯಾಸವೇನೂ ಇಲ್ಲ.

ತ್ಯಂ=ತಂ—ಇದು ಸರ್ವನಾಮಶಬ್ದವು. ವ್ಯತ್ಯಯದಿಂದ ತಂ ಎನ್ನುವುದಕ್ಕೆ ಬದಲಾಗಿ ತ್ಯಂ ಎಂದಿರುವುದು. ತ್ಯಂ ಶಬ್ದಕ್ಕೆ ತಂ ಎಂಬ ಅರ್ಥವಿರುವ ಒಂದೆರಡು ಋಕ್ಕುಗಳನ್ನು ಉದಾಹರಣೆಗಾಗಿ ಕೊಡುತ್ತೇನೆ—

ತ್ಯಂ ಜಿದತ್ರಿಮೃತಜುರಮರ್ಥಮಶ್ವಂ ನ ಯಾತವೇ ।

(ಋ. ಸಂ. ೧೦-೧೪೩-೧)

ತ್ಯಂ ಸುಮೇಷಂ ಮಹಯಾ ಸ್ವರ್ವಿದಂ ಶತಂ ಯಸ್ಯ ಸುಭ್ವಃ ಸಾಕಮಿಾರತೇ ।

(ಋ. ಸಂ. ೧-೫೩-೧)

ತ್ಯಮೂಷು ವಾಜಿನಂ ದೇವಜೂತಂ ಸಹಾವಾನಂ ತರುತಾರಂ ರಥಾನಾಂ ।

(ಋ. ಸಂ. ೧೦-೧೭೮-೧)

ಉದು ತ್ಯಂ ಜಾತವೇದಸಂ ದೇವಂ ವಹಂತಿ ಕೇತವಃ ॥

(ಋ. ಸಂ. ೧-೫೦-೧)

ಇತ್ಯಾದಿ. ಈ ಋಕ್ಕುಗಳಲ್ಲಿರುವ ತ್ಯಂ ಎಂಬ ಶಬ್ದಕ್ಕೆ ತಂ ಎಂದೇ ಅರ್ಥವು.

ಗೋಪೀಥಾಯ—ಗೋಶಬ್ದಕ್ಕೆ, ಗೋವು, ಉದಕ, ರಶ್ಮಿ, ಸ್ತೋತೃ, ಸೋಮ. ವಾಕ್ ಮೊದಲಾದ ಅನೇಕ ಅರ್ಥಗಳಿದ್ದರೂ ಇಲ್ಲಿ ಭಾಷ್ಯಕಾರರು ಸೋಮವೆಂದು ಅರ್ಥಮಾಡಿರುವರು. ವೇದಾರ್ಥಯತ್ನಕಾರರೂ ಮತ್ತೆ ಕೆಲವರೂ ಗೋಶಬ್ದಕ್ಕೆ ಹಾಲು ಅಥವಾ ಅಜ್ಯವೆಂದು ಅರ್ಥಮಾಡಿರುವರು. ಇದು ಅಷ್ಟು ಸಮಂಜಸವಾಗಿಲ್ಲ, ಭಾಷ್ಯಕಾರರು ಹೇಳಿರುವ ಸೋಮವೆಂಬ ಅರ್ಥವೇ ಸರಿಯಾಗಿರುವುದು.

ಈ ಸೂಕ್ತದ ಪ್ರತಿಋಕ್ಕಿನ ಕೊನೆಯ ಪಾದವು ಮರುದ್ಭಿರಗ್ನ ಆ ಗಹಿ ಎಂದು ಪಲ್ಲವಿಯಂತೆ ಪುನಃ ಪುನಃ ಪಠಿತವಾಗಿರುವುದು.

॥ ವ್ಯಾಕರಣಪ್ರಕ್ರಿಯಾ ॥

ಪ್ರತಿ.—ನಿಪಾತ, ನಿಪಾತಾ ಆದ್ಯುದಾತ್ತಾಃ । ನಿಪಾತಗಳು ಆದ್ಯುದಾತ್ತಗಳಾಗುವುವು ಎಂಬುದರಿಂದ ಆದ್ಯುದಾತ್ತ.

ತ್ಯಮ್—ತ್ಯದ್ ಎಂದು ಸರ್ವಾದಿಗಣಾಂತರ್ಗಣವಾದ ತ್ಯದಾದಿಯಲ್ಲಿರುವುದು. ಫಿಷೋನ್ತ್ಯ ಉದಾತ್ತಃ (ಫಿ.ಸೂ. ೧-೧) ಎಂಬುದರಿಂದ ಅಂತೋದಾತ್ತ. ಇದರ ಮುಂದೆ ದ್ವಿತೀಯಾ ಏಕವಚನ ಅಮ್ ಪ್ರತ್ಯಯ, ತ್ಯದ್+ಅಮ್ ತ್ಯದಾದೀನಾಮಃ (ಪಾ.ಸೂ. ೭-೩-೧೦೨) ವಿಭಕ್ತಿಪರದಲ್ಲಿರುವಾಗ ತ್ಯದಾದಿಗಣಪಠಿತವಾದ ಶಬ್ದಗಳ ಕೊನೆಯ ವರ್ಣಕ್ಕೆ ಅಕಾರ ಬರುವುದು ಎಂಬುದರಿಂದ ದಕಾರಕ್ಕೆ ಅಕಾರ, ತ್ಯ+ಅ+ಅಮ್. ಅತೋ-ಗುಣೇ (ಪಾ.ಸೂ. ೬-೧-೯೭) ಪದದ ಕೊನೆಯಲ್ಲಿಲ್ಲದ ಹ್ರಸ್ವಾವರ್ಣದ ಮುಂದೆ ಗುಣಸಂಜ್ಞಕವಾದ ಅ, ಏ, ಓ ಗಳಿದ್ದರೆ ಪೂರ್ವಪರಗಳೆರಡರ ಸ್ಥಾನದಲ್ಲಿಯೂ ಪರರೂಪ ಒಂದೇ ಬರುವುದು ಎಂಬುದರಿಂದ ಪರರೂಪ. ಇದು

ಏಕಾದೇಶಉದಾತ್ತೇನ ಎಂಬುದರಿಂದ ಉದಾತ್ತ. ತ್ಯ+ಅಮ್ ಆಮಿಪೂರ್ವಃ (ಪಾ.ಸೂ.೬-೧-೧೦೭) ಎಂಬುದರಿಂದ ಪೂರ್ವರೂಪ, ಈ ಪೂರ್ವರೂಪದಿಂದ ಬಂದ ಅಕಾರವೂ ಏಕಾದೇಶ—, ಎಂಬುದರಿಂದ ಉದಾತ್ತ.

ಚಾರುಮ್—ದ್ವೃಸನಿಜನಿಚರಿಚಟಿಭ್ಯೋಣ್ವುಲ್ (ಉ. ಸೂ. ೧-೩) ದ್ವೃ ವಿದಾರಣೇ, ಷಣು ದಾನೇ, ಜನ ಜನನೇ, ಚರ ಗತೌ, ಚಟ ಭೇದನೇ, ಇವುಗಳ ಮುಂದೆ ಣ್ವುಲ್ ಪ್ರತ್ಯಯಬರುವುದು ಎಂಬುವಂತೆ ಚರ್ ಧಾತುವಿನ ಮುಂದೆ ಣ್ವುಲ್ ಪ್ರತ್ಯಯ, ಣ್ ಲ್‌ಗಳು ಇತ್ಸಂಜ್ಞೆಯನ್ನು ಹೊಂದಿ ಲುಪ್ತಗಳಾಗುವುವು. ಉ ನಿಲ್ಲುವುದು, ಚರ್+ಉ. **ಅತ ಉಪಧಾಯಾಃ** (ಪಾ.ಸೂ. ೭-೩-೧೧೬) ಞಿತ್, ಣಿತ್ ಪ್ರತ್ಯಯಪರದಲ್ಲಿರುವಾಗ ಉಪಾನ್ತ್ಯಹ್ರಸ್ವಾಕಾರಕ್ಕೆ ವೃದ್ಧಿಬರುವುದು ಎಂಬುದರಿಂದ ವೃದ್ಧಿ, ಚಾರು. ಪ್ರತ್ಯಯವು ಞಿತ್ತಾದ್ದರಿಂದ ಞ್ನಿತ್ಯಾದಿರ್ನಿತ್ಯಮ್ ಎಂಬುದರಿಂದ ಆದ್ಯುದಾತ್ತ, ದ್ವಿತೀಯೈಕವಚನದಲ್ಲಿ ಚಾರುಮ್ ಎಂದಾಗುವುದು.

ಗೋಪೀಥಾಯೆ—ನಿಶೀಥಗೋಪೀಥಾವಗಥಾಃ (ಉ.ಸೂ. ೩-೧೬೬) ನಿಶೀಥ, ಗೋಪೀಥ, ಅವಗಥ ಎಂಬೀ ಮೂರು ಪದಗಳು ಥಕ್‌ಪ್ರತ್ಯಯಾಂತಗಳಾಗಿ ನಿಪಾತಿಸಲ್ಪಡುವುವು ಎಂಬುದರಿಂದ ಥಕ್ ಪ್ರತ್ಯಯಾಂತವಾಗಿ ನಿಪಾತಿತವಾಗಿರುವುದು. ವೃತ್ತಿಕಾರರು ಗೋಪೀಥ ಎಂದರೆ ತೀರ್ಥವೆಂದು ಅರ್ಥಮಾಡಿರುವರು. ವೇದ ಭಾಷ್ಯಕಾರರು ಸೋಮಪಾನವೆಂದು ಅರ್ಥಮಾಡಿರುತ್ತಾರೆ. ಪ್ರ. ನಿಪಾತಸ್ವರ ಬರುವುದು ॥ ೧ ॥

॥ ಸಂಹಿತಾಪಾಠಃ ॥

ನಹಿ ದೇವೋ ನ ಮರ್ತ್ಯೋ ಮಹಸ್ತವ ಕ್ರತುಂ ಪರಃ ।
ಮರುದ್ಭಿರಗ್ನ ಆ ಗಹಿ ॥ ೨ ॥

॥ ಪದಪಾಠಃ ॥

ನಹಿ । ದೇವಃ । ನ । ಮರ್ತ್ಯಃ । ಮಹಃ । ತವ । ಕ್ರತುಂ । ಪರಃ ॥
ಮರುತ್ಭಿಃ । ಅಗ್ನೇ । ಆ । ಗಹಿ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಮಹೋ ಮಹತಸ್ತವ ಸಂಬಂಧಿನಂ ಕ್ರತುಂ ಕರ್ಮವಿಶೇಷಮುಲ್ಲಂಘ್ಯ ಪರೋ ನಹಿ ಉತ್ಕೃಷ್ಟೋ ದೇವೋ ನ ಭವತಿ ಖಲು । ತಥಾ ಮರ್ತ್ಯೋ ಮನುಷ್ಯಶ್ಚ ಪರೋ ನ ಭವತಿ । ಯೇ ಮನುಷ್ಯಾಸ್ತ್ವದೀಯಂ ಕ್ರತುಮನುತಿಷ್ಠಂತಿ ಯೇ ಚ ದೇವಾಸ್ತ್ವದೀಯೇ ಕ್ರತಾವಿಜ್ಯಂತೇ ತೇ ಏವೋತ್ಕೃಷ್ಟಾ ಇತ್ಯರ್ಥಃ । ಮರುದ್ಭಿರಿತ್ಯಾದಿ ಪೂರ್ವವತ್ ॥ ನಹಿ । ಏವನಾದೀನಾಮಂತ ಇತ್ಯಂತೋ–

ದಾತ್ತಃ । ದೇವಃ ॥ ಪಚಾದ್ಯಜಂತಶ್ಚಿತ್ತ್ವಾದಂತೋದಾತ್ತಃ । ಮಹಃ । ಮಹತಸ್ತಲೋಪಶ್ಚಾಂದಸಃ । ಬೃಹನ್ಮಹತೋರುಪಸಂಖ್ಯಾನಂ । ಪಾ. ೬-೧-೧೭೩-೧ । ಇತಿ ವಿಭಕ್ತೇರುದಾತ್ತತ್ವಂ । ತವ । ಯುಷ್ಮದಸ್ಮದೋ ರ್ಙಸೀತ್ಯಾದ್ಯುದಾತ್ತತ್ವಂ । ಕ್ರತುಂ । ಕೃಞಃ ಕತುಃ । ಉ. ೧-೭೮ । ಪ್ರತ್ಯಯಾದ್ಯುದಾತ್ತತ್ವಂ । ಗಹಿ । ಗಮ್ಲೃ ಸ್ಪೃಪ್ಲೃ ಗತೌ । ಲೋಟಃ ಸೇರ್ಹಿ । ಬಹುಲಂ ಛಂದಸೀತಿ ಶಪೋ ಲುಕ್ । ಅನುದಾತ್ತೋಪದೇಶೇತ್ಯಾದಿನಾನುನಾಸಿಕಲೋಪಃ । ತಸ್ಯಾಸಿದ್ಧವದತ್ರಾ ಭಾದಿತ್ಯಸಿದ್ಧತ್ವಾದತೋ ಹೇರಿತಿ ಲುಙ್ನ ಭವತಿ । ನಿಘಾತಃ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) । ಮಹಃ—ಶ್ರೇಷ್ಠನಾದ । ತವ—ನಿನ್ನ । ಕ್ರತುಂ—ಕರ್ಮವಿಶೇಷವನ್ನು (ಯಜ್ಞವನ್ನು) ಉಲ್ಲಂಘಿಸುವ । ಪರಃ—ಬೇರೊಬ್ಬನಾದ । ದೇವಃ—ದೇವನು । ನಹಿ—ಇಲ್ಲ । (ಮತ್ತು ಅಂತಹ) । ಮರ್ತ್ಯಃ—ಮನುಷ್ಯನೂ ಸಹ । ನ—ಇಲ್ಲ । (ಆದುದರಿಂದ) ಹೇ ಅಗ್ನೇ—ಎಲೈ ಅಗ್ನಿಯೇ । (ನೀನು) ಮರುದ್ಭಿಃ—ಮರುದ್ದೇವತೆಗಳೊಡನೆ । ಆ ಗಹಿ—ಇಲ್ಲಿಗೆ ಬಾ ॥

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನ ಸಂಬಂಧವಾದ ಕರ್ಮವು ಅಥವಾ ಯಜ್ಞವು ಮಹತ್ತರವಾದುದು. ಅದನ್ನು ಅತಿಕ್ರಮಿಸಲು ಶಕ್ತನಾದ ದೇವನಾಗಲಿ, ಮನುಷ್ಯನಾಗಲಿ ಇರುವುದಿಲ್ಲ. ಆದುದರಿಂದ ಎಲೈ ಅಗ್ನಿಯೇ, ಮರುದ್ದೇವತೆಗಳೊಡನೆ ಇಲ್ಲಿಗೆ ಬಾ.

English Translation.

Neither god nor man has power over a rite (dedicated) to you who are great: come hither, Agni, with the Maruths.

॥ ವಿಶೇಷವಿಷಯಗಳು ॥

ಮಹಃ—ಮಹತಃ—ಶ್ರೇಷ್ಠನಾದ, ಅಥವಾ ಮಹಾಬಲಶಾಲಿಯಾದ, ಬಹಳ ಸಾಮರ್ಥ್ಯವುಳ್ಳ- ಇಲ್ಲಿ ತಕಾರವು ಲೋಪವಾಗಿರುವುದು.

ಕ್ರತುಂ—ಈ ಶಬ್ದಕ್ಕೆ ಕರ್ಮ (ನಿ. ೩-೨) ಪ್ರಜ್ಞೆ (ನಿ. ೩-೧೩) ಎಂಬ ಎರಡು ಅರ್ಥಗಳಿದ್ದರೂ ಭಾಷ್ಯಕಾರರು ಕರ್ಮವೆಂಬ ಅರ್ಥವನ್ನೇ ಹೇಳಿರುವರು.

॥ ವ್ಯಾಕರಣಪ್ರಕ್ರಿಯಾ ॥

ನಹಿ—ಏವಾದೀನಾಮನ್ತಃ ಎಂಬುದರಿಂದ ಅಂತೋದಾತ್ತ

ದೇವಃ—ದಿವು ಕ್ರೀಡಾದೌ ಧಾತು. ಪಚಾದಿ. ಆದ್ದರಿಂದ ನನ್ದಿಗ್ರಹಿಪಚಾದಿಭ್ಯೋಲ್ಯುಣಿನ್ಯಚಿಃ (ಪಾ.ಸೂ. ೩-೧-೧೩೪) ಎಂಬುದರಿಂದ ಅಚ್ ಪ್ರತ್ಯಯ. ಪುಗನ್ತ್ಯಲಘೂಪಧಸ್ಯಚಿ (ಪಾ.ಸೂ. ೭-೩-೮೬) ಎಂಬುದರಿಂದ ಲಘೂಪಧಗುಣ, ಪ್ರತ್ಯಯವು ಚಿತ್ತಾದ್ದರಿಂದ ಚಿತಃ ಎಂಬುದರಿಂದ ಅಂತೋದಾತ್ತ.

ಮಹಃ—ಮಹತಃ ಎಂಬ ಶಬ್ದದ ತಗೆ ಛಾಂದಸವಾಗಿ ಲೋಪ. ಮಹಚ್ಛಬ್ದದ ಮುಂದೆ ಇರುವ ಷಷ್ಠೀವಿಭಕ್ತಿಯ ಬೃಹನ್ಮಹತೋರುಪಸಂಖ್ಯಾನಮ್ (ಪಾ.ಸೂ. ೬-೧-೧೭೩, ವಾ. ೧). ಬೃಹನ್ಮಹತ್ ಶಬ್ದಗಳ ಮುಂದೆ ಇರುವ ನದೀಸಂಜ್ಞಕವರ್ಣಗಳೂ, ಅಜಾದಿಯಾದ ಶಾಸಾದಿ ವಿಭಕ್ತಿಯೂ ಸಹ ಉದಾತ್ತವಾಗುವುದು ಎಂಬುದರಿಂದ ಉದಾತ್ತವಾಗುವುದು. ಯದ್ಯಪಿ ವೃತ್ತವಾನೇ ಪೃಷಪ್ಪೃಹನ್ಮಹಜ್ಜಗಚ್ಛ್ರತ್ಯವಚ್ಛ್ಚೇ (ಉ.ಸೂ. ೨-೩೮) ಎಂಬುದರಿಂದ ಶತೃವದ್ಭಾವವಿರುವದರಿಂದ ತತೋರನುನೋನೇದ್ಯೆಜಾದೀ (ಪಾ ಸೂ. ೬-೧-೧೭೩) ಎಂಬುದರಿಂದಲೇ ಉದಾತ್ತ ಸಿದ್ಧವಾಗುವುದು. ಏನಂಚ ವಾರ್ತ್ತಿಕಾರಂಭವು ವಿಫಲವೆಂದು ತೋರಬಹುದು. ಆದರೂ ನಿಯಮಾರ್ಥವಾಗಿ ವಾರ್ತ್ತಿಕಾರಂಭವು ಸಫಲವು ಎಂದು ಹಿಂದೆಯೇ ನಿರೂಪಿತವಾಗಿದೆ.

ತವ—ಯುಷ್ಮದಸ್ಮದೋರ್ಙಸಿ (ಪಾ. ಸೂ. ೬-೧-೨೧೧) ಙಸ್ ಪ್ರತ್ಯಯ ಪರದಲ್ಲಿರುವಾಗ ಯುಷ್ಮದ್, ಅಸ್ಮದ್ ಶಬ್ದಗಳ ಆದಿಯು ಉದಾತ್ತವಾಗುವುದು ಎಂಬುದರಿಂದ ಆದ್ಯುದಾತ್ತ.

ಕೃತುಮ್—(ಉ.ಸೂ. ೧-೭೭) ಡುಕೃಞ್‌ಕರಣೇ ಧಾತುವಿನ ಮುಂದೆ ಕತು ಪ್ರತ್ಯಯ ಬರುವುದು ಎಂಬುದರಿಂದ ಕೃ ಧಾತುವಿನ ಮುಂದೆ ಕತು ಪ್ರತ್ಯಯ, ಕಕಾರಕ್ಕೆ ಇತ್ಸಂಜ್ಞೆಲೋಪ, ಕೃ+ಅತು, ಪ್ರತ್ಯಯವು ಕಿತ್ತಾದ್ದರಿಂದ ಕ್ಙಿತಿಚ (ಪಾ.ಸೂ- ೧-೧ ೫) ಎಂಬುದರಿಂದ ಗುಣಕ್ಕೆ ನಿಷೇಧ ಬರುವುದರಿಂದ ಸಾರ್ವಧಾತುಕಾರ್ಧಧಾತುಕಯೋಃ (ಪಾ. ಸೂ. ೭-೩-೮೪) ಎಂಬುದರಿಂದ ಗುಣ ಬರುವುದಿಲ್ಲ. ಯಣಾದೇಶದಿಂದ ಋಕಾರಕ್ಕೆ ರೇಫ, ಆದ್ಯುದಾತಶ್ಚ (ಪಾ. ಸೂ. ೩-೧-೩) ಎಂಬ ಪ್ರತ್ಯಯಸ್ವರದಿಂದ ಕೃತು ಎಂಬುದು ಆದ್ಯುದಾತ್ತ.

ಗಹಿ—ಗಮ್ಲೃ ಸೃಪ್ಲೃ ಗತೌ ಧಾತು ಲೋಟ್, ಮಧ್ಯಮಪುರುಷ ಏಕವಚನ ಸಿಪ್, ಸೇರ್ಧ್ಯಸಿಚ್ಚೆ (ಪಾ. ಸೂ. ೩-೪-೮೭) ಎಂಬುದರಿಂದ ಸಿಗೆ ಹಿ ಆದೇಶ, ಗಮ್+ಹಿ, ಕರ್ತರಿಶಪ್ ಎಂಬುದರಿಂದ ಶಪ್ ವಿಕರಣ ಆದಕ್ಕೆ ಬಹುಲಂಛಂದಸಿ (ಪಾ. ಸೂ. ೨-೪-೭೩) ಎಂಬುದರಿಂದ ಲುಕ್, ಲಿಪ್, ಲುಪ್, ವಪ್, ಸ್ವಪ್, ಸೈಪಿ, ಯೆಚ್ಛ್, ರಭ್, ಲಭ್, ಗಮ್, ನಮ್,।ಯಮೋರಮಿಃ (ಪಾ.ಸೂ. ೬-೪-೧೦) ಎಂಬ ಸೂತ್ರದ ಮಹಾಭಾಷ್ಯದಲ್ಲಿ ಅನುದಾತ್ತೋಪದೇಶಗಳನ್ನು ಪರಿಗಣನೆ ಮಾಡುವ ಕಾರಿಕೆಯಲ್ಲಿ ಗಮ್ ಇರುವುದು. ಆದ್ದರಿಂದ, ಇದು ಅನುದಾತ್ತ, ತಥಾಚ ಅನುದಾತ್ತೋಪದೇಶವನೇತಿತೇನೋತ್ಯಾದೀನಾಮನುನಾಸಿಕಲೋಪೋಝಲಿಕ್ಷಿತಿ (ಪಾ.ಸೂ. ೬-೪-೩೭) ಕಕಾರೇತ್ಸಂಜ್ಞಕ ಅಥವಾ ಞಕಾರೇತ್ಸಂಜ್ಞಕವಾದ ಝಲಾದಿಪ್ರತ್ಯಯ ಪರದಲ್ಲಿರುವಾಗ ಅನುನಾಸಿಕಾನ್ತಗಳಾದ ಅನುದಾತ್ತೋಪದೇಶವಾದ ಧಾತುಗಳು, ಅನುನಾಸಿಕಾಂತಗಳಾದ ತನೋತ್ಯಾದಿಧಾತುಗಳು, ವನಧಾತು ಇವುಗಳ ಕೊನೆಯ ವರ್ಣಕ್ಕೆ ಲೋಪ ಬರುವುದು ಎಂಬುದರಿಂದ ಅನುನಾಸಿಕವಾಗಿರುವ ಮಕಾರಕ್ಕೆ ಲೋಪ, ಗ+ಹಿ ಅಸಿದ್ಧವದತ್ರಾಭಾತ್ (ಪಾ.ಸೂ ೬-೪-೨೨) ಎಂಬುದರಿಂದ ಅತೋಹೇಃ (ಪಾ.ಸೂ. ೬-೪-೧೦೫) ಎಂಬ ಅಭೀಯಶಾಸ್ತ್ರದಿಂದ ಹೀಗೆ ಲುಕ್ಕನ್ನು ಮಾಡುವಾಗ ಅಭೀಯವಾದ ಮಕಾರಲೋಪವು ಅಸಿದ್ಧವಾಗುವುದು. ಏನಂಚ ಅತಃಪರತ್ವವು ಸಂಭವಿಸುವುದಿಲ್ಲ. ಆದ್ದರಿಂದ ಹೀಗೆ ಲುಕ್ ಬರುವುದಿಲ್ಲ. ಗಹಿ ಎಂಬಲ್ಲಿ ತಿಙ್ಙತಿಙಃ (ಪಾ. ಸೂ. ೮-೧-೨೮) ಎಂಬುದರಿಂದ ಸರ್ವಾನುದಾತ್ತ ಬರುವುದು. ॥ ೨ ॥

॥ ಸಂಹಿತಾಪಾಠಃ ॥

ಯೇ ಮಹೋ ರಜಸೋ ವಿದುರ್ವಿಶ್ವೇ ದೇವಾಸೋ ಅದ್ರುಹಃ।
ಮರುದ್ಭಿರಗ್ನ ಆ ಗಹಿ ॥ ೩ ॥

॥ ಪದಪಾಠಃ ॥

ಯೇ । ಮಹಃ । ರಜಸಃ । ವಿದುಃ । ವಿಶ್ವೇ । ದೇವಾಸಃ । ಅದ್ರುಹಃ ॥
ಮರುತ್ ಽ ಭಿಃ । ಅಗ್ನೇ । ಆ । ಗಹಿ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಯೇ ಮರುತೋ ಮಹೋ ರಜಸೋ ಮಹತ ಉದಕಸ್ಯ ವರ್ಷಣಪ್ರಕಾರಂ ವಿದುಸ್ತೈರ್ಮರುದ್ಭಿರಿಕ್ಯಸ್ವಯಃ । ಕೀದೃಶಾ ಮರುತಃ । ವಿಶ್ವೇ ಸರ್ವೇ ಸಪ್ತವಿಧಗಣೋಪೇತಾಃ । ಸಪ್ತಗಣಾ ವೈ ಮರುತಃ । ತೈ. ಸಂ- ೨-೨-೧೧-೧ । ಇತಿ ಶ್ರುತೇಃ । ದೇವಾಸೋ ದ್ಯೋತಮಾನಾ ಅದ್ರುಹೋ ದ್ರೋಹರಹಿತಾ ವರ್ಷಣೇನ ಸರ್ವಭೂತೋಪಕಾರಿತ್ವಾತ್ । ತಥಾ ಚೋಪರಿಷ್ಟಾದಾಮ್ನಾಯತೇ । ಉದೀರಯಥಾ ಮರುತಃ ಸಮುದ್ರತೋ ಯೂಯಂ ವೃಷ್ಟಿಂ ವರ್ಷಯಥಾ ಪುರೀಷಿಣಃ । ಋಗ್ವೇ ೫-೫೫-೫ । ಇತಿ । ಶಾಖಾಂತರೇಽಪಿ ಮಂತ್ರಾಂತರಸ್ಯ ಬ್ರಾಹ್ಮಣಮೇವಮಾಮ್ನಾಯತೇ । ಮರುತಾಂ ಪೃಷತಯಃ ಸ್ಥೇತ್ಯಾಹ ಮರುತೋ ವೈ ವೃಷ್ಟ್ಯಾ ಈಕತೇ ಇತಿ । ರಜಃಶಬ್ದೋ ಯಾಸ್ಕೇನ ಬಹುಧಾ ವ್ಯಾಖ್ಯಾತಃ । ರಜೋ ರಜತೇರ್ಜ್ಯೋತೀ ರಜ ಉಚ್ಯತೇ ಉದಕಂ ರಜ ಉಚ್ಯತೇ । ಲೋಕಾ ರಜಾಂಸ್ಯುಚ್ಯಂತೇಽಸೈ-ಗಹನೀ ರಜಸೀ ಉಚ್ಯೇತೇ । ನಿ. ೪-೧೯ । ಇತಿ ॥ ರಜಸಃ । ನಬ್ಬಿಷಯೇಸ್ಯಾನಿಸಂತಸ್ಯೇತ್ಯಾದ್ಯುದಾತ್ತೈಃ । ವಿದುಃ । ವಿದ ಜ್ಞಾನೇ । ವಿದೋ ಲಟೋ ವಾ । ಪಾ. ೩-೪-೮೩ । ಇತಿ ಝೋರುಸಾದೇಶಃ । ಪ್ರತ್ಯಯಸ್ವರಃ । ಯದ್ವೃತ್ತಯೋಗಾನ್ನಿಘಾತಾಭಾವಃ । ವಿಶ್ವೇ । ವಿಶೇಃ ಕ್ವನಂತಸ್ಯ ನಿತ್ತ್ವಾದಾದ್ಯುದಾತ್ತತ್ವಂ । ದೇವಾಸಃ । ಅಜ್ಜಸೇರಸುಕ್ । ದೇವಶಬ್ದಃ ಪಚಾದ್ಯಜಂತಃ । ಚಿತ್ತ್ವಾದಂತೋದಾತ್ತಃ । ಅದ್ರುಹಃ । ಸಂಪದಾದಿತ್ವಾದ್ಭಾವೇ ಕ್ವಿಪಿ ಬಹುವ್ರೀಹೌ ನಞ್‌ಸುಭ್ಯಾಮಿತ್ಯಂತೋದಾತ್ತತ್ವಂ । ಕರ್ತರಿ ವಾಕ್ವಿಪ್ । ತಕ್ಪುರುಷೇ ಹ್ಯವ್ಯಯಪೂರ್ವಪದಪ್ರಕೃತಿಸ್ವರತ್ವಂ ಸ್ಯಾತ್ । ನ ಚ ಕೃದುತ್ತರಪದಪ್ರಕೃತಿಸ್ವರತ್ವಂ । ಯತೋ ನಞ್ ನ ಗತಿರ್ನ ಚ ಕಾರಕ ಇತಿ । ಪಾ. ೬-೨-೧೩೯ ॥

॥ ಪ್ರತಿಪದಾರ್ಥ ॥

ಅದ್ರುಹಃ—ದ್ರೋಹರಹಿತರಾದ ಎಂದರೆ ಉಪಕಾರವನ್ನು ಮಾಡುವ ಸ್ವಭಾವವುಳ್ಳ । ವಿಶ್ವೇ—ಸಮಸ್ತರಾದ ಎಂದರೆ ಸಪ್ತವಿಧಗಣೋಪೇತರಾದ । ಯೇ ದೇವಾಸಃ—ಪ್ರಕಾಶಮಾನರಾದ ಯಾವ ಮರುದ್ದೇವತೆಗಳು । ಮಹಃ— ಹೆಚ್ಚಾದ । ರಜಸಃ—ಉದಕದ (ವರ್ಷಣಪ್ರಕಾರವನ್ನು ಎಂದರೆ ಮಳೆ ಹುಯ್ಯುವುದನ್ನು) ವಿದುಃ—ತಿಳಿದಿರುವರೋ । (ಅಂತಹ) ಮರುದ್ಭಿಃ—ಮರುದ್ದೇವತೆಗಳೊಡನೆ । ಅಗ್ನೇ—ಎಲೈ ಅಗ್ನಿಯೇ । ಆ ಗಹಿ—ಇಲ್ಲಿಗೆ ಬಾ ॥

॥ ಭಾವಾರ್ಥ ॥

ಮರುದ್ದೇವತೆಗಳು ಪ್ರಕಾಶಮಾನರಾದವರು, ಸಪ್ತಗಣಗಳೆಂಬ ಏಳು ವಿಧಗಣಗಳಿಂದ ಕೂಡಿದವರು (ಸಪ್ತಮರುತ್ತುಗಳು) ಯಾರಿಗೂ ದ್ರೋಹವನ್ನೆಸಗುವವರಲ್ಲ, ಉಪಕಾರವನ್ನೇ ಮಾಡುವವರು. ಮಳೆಯನ್ನು ಹೆಚ್ಚಾಗಿ ಹುಯ್ಯುವುದನ್ನು ತಿಳಿದಿರುವರು. ಇಂತಹ ಮರುದ್ದೇವತೆಗಳಿಂದ ಸಹಿತನಾಗಿ ಎಲೈ ಅಗ್ನಿಯೇ, ಇಲ್ಲಿಗೆ ಬಾ ॥

English Translation

Come, Agni, with the Maruths, who are ali divine, and devoid of malignity and who know how to cause the descent of great waters.

॥ ವಿಶೇಷವಿಷಯಗಳು ॥

ಮಹೋ ರಜಸಃ—ಮಹತ ಉದಕಸ್ಯ, ಹೆಚ್ಚಾದ ನೀರಿನ (ಮಳೆಯನ್ನು) ರಜಃಶಬ್ದಕ್ಕೆ ಯಾಸ್ಕರು—**ರಜಃ । ರಜೋ ರಜತೇರ್ಜ್ಯೋತೀ ರಜ ಉಚ್ಯತೇ । ಉದಕಂ ರಜ ಉಚ್ಯತೇ । ಲೋಕಾ ರಜಾಂಸ್ಯುಚ್ಯಂತೇ ।** (ನಿ. ೪-೧೯) ಎಂದರೆ, ರಜಃ ಎಂದರೆ ಜ್ಯೋತಿ (ಪ್ರಕಾಶ), ಉದಕ, ಲೋಕ ಎಂಬ ಅರ್ಥಗಳಾಗುವವು ಎಂದು, ಇಲ್ಲಿ ಭಾಷ್ಯಕಾರರು ಉದಕವೆಂಬ ಅರ್ಥವನ್ನು ಪರಿಗ್ರಹಿಸಿದಾರೆ. ವೇದಾರ್ಥ ಯತ್ನಕಾರರು ಜ್ಯೋತಿಃ ಎಂಬ ಅರ್ಥವನ್ನು ಹೇಳಿರುವರು. ಅವರ ಅಭಿಪ್ರಾಯದಂತೆ ಬಹಳ ಪ್ರಕಾಶದಿಂದ ಕೂಡಿರುವ ಅಂತರಿಕ್ಷದಲ್ಲಿ ಸಂಚರಿಸುವ ಮರುತ್ತುಗಳು ಎಂದರ್ಥವು. ಈ ಅರ್ಥವೂ ಇಲ್ಲಿ ಸರಿಯಾಗಿ ಹೊಂದುವುದು.

ದೇವಾಸಃ—ದೇವಾಃ ಎಂಬ ಶಬ್ದದ ಪ್ರಾಚೀನಪ್ರಯೋಗವು. ದೇವತೆಗಳು ಎಂದರ್ಥವು-

ವಿಶ್ವೇ—ಸಮಸ್ತ ಎಂದರೆ ಏಳು ಗಣಗಳಿಂದ ಸಹಿತವಾದ ಎಂದರ್ಥವು. **ಸಪ್ತೈಗಣಾ ವೈ ಮರುತಃ** (ತೈ. ಸ. ೨-೨-೧೧-೧) ಎಂದು ಶ್ರುತಿ ವಾಕ್ಯವಿರುವುದು.

ಅದ್ರುಹಃ—ದ್ರೋಹರಹಿತಾಃ, ದ್ರೋಹವನ್ನು ಮಾಡದಿರುವವರು ಎಂದರೆ ಜನರಿಗೆ ಮಳೆಯನ್ನು ಹುಯ್ಯುವುದರ ಮೂಲಕ ಉಪಕಾರವನ್ನೇ ಮಾಡುವವರು. ಈ ವಿಷಯದಲ್ಲಿ ಭಾಷ್ಯಕಾರರು ಈ ಕೆಳಗಿನ ಋಕ್ಕನ್ನು ಉದಹರಿಸಿರುವರು.

ಉದೀರಯಥಾ ಮರುತಃ ಸಮುದ್ರತೋ ಯೂಯಂ ವೃಷ್ಟಿಂ ವರ್ಷಯಥಾ ಪುರೀಷಿಣಃ॥
(ಋ. ಸಂ, ೫-೫೫-೫)

ಮರುತಾಂ ಪೃಷತೆಯಃ ಸ್ಥೇಶ್ಯಾಹ ಮರುತೋ ವೈ ವೃಷ್ಟ್ಯಾ ಈಶತೇ । (ತೈ. ಬ್ರಾ.)
ಎಂಬ ಬ್ರಾಹ್ಮಣವಾಕ್ಯವನ್ನೂ ಹೇಳಿರುವರು. ಈ ಮಂತ್ರಗಳು ಮರುದ್ದೇವತೆಗಳು ವೃಷ್ಟಿಯನ್ನುಂಟುಮಾಡುವವರು ಎಂಬರ್ಥವನ್ನು ಸ್ಪಷ್ಟಪಡಿಸುತ್ತವೆ.

॥ ವ್ಯಾಕರಣಪ್ರಕ್ರಿಯಾ ॥

ರಜಸಃ—ರಜಶ್ಶಬ್ದವು ನಿತ್ಯನಪುಂಸಕಲಿಂಗ. ಆದ್ದರಿಂದ **ನಬ್ವಿಷಯೆಸ್ಯಾನಿಸನ್ತ್ಯೆಸ್ಯ** (ಫಿ.ಸೂ. ೨-೨೬) ಇಸಂತವಲ್ಲದ ನಿತ್ಯನಪುಂಸಕ ಶಬ್ದದ ಆದಿಯು ಉದಾತ್ತವಾಗುವುದು ಎಂಬುದರಿಂದ ರಜಃ ಎಂಬುದು ಆದ್ಯುದಾತ್ತ, ಷಷ್ಠ್ಯೇಕವಚನಾನ್ತ.

ವಿದುಃ—ವಿದ ಜ್ಞಾನೇ ಧಾತು, ಇದರ ಮುಂದೆ **ಲಟ್** ಪ್ರಥಮಪುರುಷಬಹುವಚನ ಝಿ ಆದೇಶ. ವಿದ್+ಝಿ **ಕರ್ತರಿಶಪ್** (ಪಾ.ಸೂ.೩-೧-೬೮) ಎಂಬುದರಿಂದ ಶಪ್ **ಆದಿಸ್ಪೃಭೃತಿಭ್ಯಃ ಶಪಃ** (ಪಾ.ಸೂ-೨-೪-೭೨) ಎಂಬುದರಿಂದ ಶಪ್‌ಗೆ ಲುಕ್. **ವಿದೋಲಟೋವಾ** (ಪಾ.ಸೂ. ೩-೪-೮೩) ವಿದಜ್ಞಾನೇ ಧಾತುವಿನ ಮುಂದೆ

ಬಂದಿರುವ ಲಟ್ ಸ್ಥಾನದಲ್ಲಿ ಬಂದ ಪರಸ್ಮೈ ಪದ ಸಂಜ್ಞಾಗಳಾದ ತಿಬಾದಿ ಒಂಭತ್ತು ಪ್ರತ್ಯಯಗಳ ಸ್ಥಾನದಲ್ಲಿ ಕ್ರಮವಾಗಿ ಣಲ್, ಅತುಸ್, ಉಸ್, । ಥಲ್, ಅಥುಸ್, ಅ, । ಣಲ್, ವ, ಮ । ಎಂಬೀ ಒಂಭತ್ತು ಆದೇಶಗಳು ಬರುವುವು ಎಂಬುದರಿಂದ ಝಿಗೆ ಉಸ್ ಆದೇಶ, ವಿದ್+ಉಸ್, ರುತ್ವ, ವಿಸರ್ಗ, ವಿದುಃ ಎಂದಾಯ್ತು. **ಯೇಮಹೋರಜಸೋ ವಿದುಃ** ಎಂಬುದಾಗಿ ಯದ್ವೃತ್ತಯೋಗವಿರುವುದರಿಂದ **ಯದ್ವೃತ್ತಾನ್ನಿತ್ಯಮ್** (ಪಾ. ಸೂ. ೮-೧-೬೬) ಎಂಬುದರಿಂದ ಸರ್ವಾನುದಾತ್ತಕ್ಕೆ ಪ್ರತಿಷೇಧ ಬರುವುದು. ಆದ್ದರಿಂದ ಉಸ್ ಗೆ ಪ್ರತ್ಯಯಸ್ವರವೇ ಬರುವುದು.

ವಿಶ್ವೇ—ಅಶೂಪುಷಿ.....**ವಿಶಿಭ್ಯಃ ಕ್ವನ್** (ಉ. ಸೂ. ೧-೧೪೯) ಎಂಬುದರಿಂದ ವಿಶ-ಪ್ರವೇಶನೇ, ಎಂಬುದರಿಂದ ಕ್ವನ್ ಪ್ರತ್ಯಯ. ನಿತ್ಸ್ವರ ಆದ್ಯುದಾತ್ತ ಬರುವುದು. ವಿಶ್ವ ಶಬ್ದದ ಮುಂದೆ ಪ್ರಥಮಾ ಬಹುವಚನ ಜಸ್ **ಜಸಶ್ಶೀ** (ಪಾ. ಸೂ. ೬-೧-೧೦೭) ಎಂಬುದರಿಂದ ಶೀ ಆದೇಶ, ಶ್‌ಗೆ ಇತ್ಸಂಜ್ಞೆ ಲೋಪ ವಿಶ್ವ+ ಈ. **ಅದ್ಗುಣಃ** ಎಂಬುದರಿಂದ ಗುಣ.

ದೇವಾಸಃ—**ನೇನ್ದ್ರಿಗ್ರಹಿ ಪಚಾದಿಭ್ಯೋಲುಣುನ್ಯುಚಃ** (ಪಾ ಸೂ.೩-೧-೧೩೪) ಎಂಬುದರಿಂದ ದಿವ್ ಧಾತುವಿನ ಮುಂದೆ ಅಚ್ ಪ್ರತ್ಯಯ. ಪ್ರತ್ಯಯವು ಚಿತ್, ಆದ್ದರಿಂದ **ಚಿತೇಃ** (ಪಾ ಸೂ. ೬-೧-೧೬೩) ಎಂಬುದರಿಂದ ಅಂತೋದಾತ್ತ. ಅಚ್ ಪ್ರತ್ಯಯವನ್ನು ನಿಮಿತ್ತ ಮಾಡಿಕೊಂಡು ಧಾತುವಿನ ಇಕಾರಕ್ಕೆ ಲಘೂಪಧಗುಣ. ದೇವ ಶಬ್ದದ ಮುಂದೆ ಜಸ್, ದೇವ+ಅಸ್, **ಆಜ್ಜಸೇರಸುಕ್** (ಪಾ. ಸೂ. ೭-೧-೫೦) ಎಂಬುದರಿಂದ ಜಸ್‌ಗೆ ಅಸುಕ್ ಆಗನು. ಆಗನುವು ಕಿತ್ತಾದ್ದರಿಂದ **ಅದ್ಯೆನ್ತ್ಯಟಕಿತೌ** (ಪಾ. ಸೂ. ೧-೧-೫೬) ಎಂಬುದರಿಂದ ಜಸ್‌ಗೆ ಅನ್ತಾವಯವವಾಗಿ ಬರುವುದು. ದೇವ+ಅಸಸ್, ಸವರ್ಣದೀರ್ಘ, ದೇವಾಸಸ್, ರುತ್ವ, ವಿಸರ್ಗ.

ಆದ್ರುಹಃ—ದ್ರುಹ-ಜಿಘಾಂಸಾಯಮ್ ಧಾತು. ಇದರ ಮುಂದೆ ಭಾವಾರ್ಥದಲ್ಲಿ **ಸೆಂಹೆದಾದಿಭ್ಯಃ ಕ್ವಿಪ್** ಎಂಬುದರಿಂದ ಕ್ವಿಪ್, ನ ದ್ರುಹಃ ಯೇಷಾಂ ತೇ ಎಂದು ಬಹುವ್ರೀಹಿ, ದ್ರೋಹಮಾಡುವಿಕೆಯು ಯಾವ ಮರುತ್ತುಗಳಿಗೆ ಇಲ್ಲವೋ ಅಂತಹ ಮರುತ್ತುಗಳು ಎಂದರ್ಥ. ಬಹುವ್ರೀಹೌ ಪ್ರಕೃತ್ಯಾಪೂರ್ವಪದಮ್, ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಪ್ರಾಪ್ತವಾದರೆ ಅದನ್ನು ಬಾಧಿಸಿ **ನಞ್‌ಸುಭ್ಯಾಮ್** (ಪಾ. ಸೂ. ೬-೨-೧೭೨) ಬಹುವ್ರೀಹಿಯಲ್ಲಿ ನಞ್ ಸು ಇವುಗಳ ಮುಂದೆ ಇರುವ ಉತ್ತರಪದವು ಅಂತೋದಾತ್ತವಾಗುವುದು ಎಂಬುದರಿಂದ ಅಂತೋದಾತ್ತ, ಅಥವಾ **ಕ್ವಿಪ್‌ಚಿ** (ಪಾ. ಸೂ. ೩-೨-೭೬) ಉಪಪದಗಳು ಇರುವಾಗಲೂ, ಉಪಪದಗಳಿಲ್ಲದೇ ಇರುವಾಗಲೂ, ಛಂದಸ್ಸಿನಲ್ಲಿಯೂ ಲೋಕದಲ್ಲಿಯೂ ಸಹ ಎಲ್ಲಾ ಧಾತುಗಳ ಮುಂದೆಯೂ ಕ್ವಿಪ್ ಬರುವುದು ಎಂಬುದರಿಂದ, ಕರ್ತರಿ ಕ್ವಿಪ್, ನ+ದ್ರುಹಃ ಯೇಷಾಂ ತೇ ಎಂದು ಇಲ್ಲಿಯೂ ಬಹುವ್ರೀಹಿ. ದ್ರುಹಃ ದ್ರೋಹಕರ್ತಾರಃ ಯಾವ ಮರುತ್ತುಗಳಿಗೆ ದ್ರೋಹ ಮಾಡುವವರು ಇಲ್ಲವೋ ಆ ಮರುತ್ತುಗಳು ಎಂದು ಅರ್ಥ. ನ ದ್ರುಹಃ, ಅದ್ರುಹಃ ದ್ರೋಹಕರ್ತೃಗಳಲ್ಲದ ಎಂದು ತತ್ಪುರುಷವನ್ನು ಮಾಡಕೂಡದು. ಹಾಗೆ ತತ್ಪುರುಷವನ್ನು ಮಾಡಿದರೆ **ತೆತ್ಪುರುಷೇತುಲ್ಯಾರ್ಥತೃತೀಯೋ ಸಪ್ತಮ್ಯುಪಮಾನಾನ್ಯವ್ಯಯೆ ದ್ವಿತೀಯೋಕೃತ್ಯಾಃ** (ಪಾ. ಸೂ. ೬-೨-೨) ತತ್ಪುರುಷ ಸಮಾಸದಲ್ಲಿ ತುಲ್ಯಾರ್ಥಕವಾದ ಶಬ್ದಗಳು ತೃತೀಯಾಂತಪದ, ಸಪ್ತಮ್ಯಂತ, ಉಪಮಾನವಾಚಕ, ಅವ್ಯಯ, ದ್ವಿತೀಯಾಂತ, ಕೃತ್ಯಪ್ರತ್ಯಯಾಂತ ಇವು ಉಪಪದಗಳಾಗಿದ್ದರೆ ಪ್ರಕೃತಿಸ್ವರವನ್ನು ಹೊಂದುವುವು. ಅವ್ಯಯಪದದಿಂದ ಅವ್ಯಯಸಾಮಾನ್ಯಕ್ಕೂ ಗ್ರಹಣವಿಲ್ಲ. ಅವ್ಯಯೋ ನಞ್‌ಕುನಿಪಾತಾ ನಾಮ್, ಎಂದು ಪರಿಗಣನೆ ಇರುವುದು, ಏವಂಚ ಇದರಿಂದ ಪೂರ್ವಪದ ಪ್ರಕೃತಿಸ್ವರ ಬರಬೇಕಾಗುವುದು. ಇಲ್ಲಿ ಪೂರ್ವಪದವಾದ ನಞ್, ನಿಪಾತಾ ಆದ್ಯುದಾತ್ತಾಃ ಎಂಬುದರಿಂದ ಆದ್ಯುದಾತ್ತ. ಆದ್ದರಿಂದ ಪೂರ್ವಪದ

ಪ್ರಕೃತಿಸ್ವರ ಬಂದರೆ, ಅದ್ರುಹಃ ಎಂಬುದು ಆದ್ಯುದಾತ್ತವಾಗಬೇಕಾಗುವುದು. ಆದರೆ ತತ್ಪುರುಷವನ್ನು ಮಾಡಿದಾಗಲೂ ತತ್ಪುರುಷೇ... ಎಂಬುದರಿಂದ ಪೂರ್ವಪದ ಪ್ರಕೃತಿಸ್ವರ ಪ್ರಾಪ್ತವಾದರೆ ಅದಕ್ಕೆ ಬಾಧಕವಾದ ಗತಿಕಾರಕೋಪಪದಾತ್ಫ್ಕೃತ್ (ಪಾ. ಸೂ. ೬-೨-೧೩೯) ತತ್ಪುರುಷರುಷ ಸಮಾಸದಲ್ಲಿ ಗತಿಕಾರಕ, ಉಪಪದ ಇವುಗಳ ಮುಂದೆ ಇರುವ ಕೃದಂತವು ಪ್ರಕೃತಿಸ್ವರವನ್ನು ಹೊಂದುವುದು ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬರುವುದು. ಉತ್ತರಪದವಾದ ದ್ರುಹ್ ಎಂಬುದು ಧಾತುಸ್ವರದಿಂದ ಅಂತೋದಾತ್ತ. ಆದ್ದರಿಂದ ಉತ್ತರಪದ ಪ್ರಕೃತಿಸ್ವರ ಬಂದರೆ ಅಂತೋದಾತ್ತನೇ ಬರುವುದು. ಯದ್ಯಪಿ ಇಲ್ಲಿ ದ್ರುಹ್ ಎಂಬ ಉತ್ತರ ಗತಿಯ ಮುಂದೆಯೂ ಇಲ್ಲ, ಕಾರಕದ ಮುಂದೆಯೂ ಇಲ್ಲ. ಏಕೆಂದರೆ ನಞ್ ಎಂಬುದು ಗತಿಯೂ ಅಲ್ಲ. ಕಾರಕವೂ ಅಲ್ಲ. ಆದರೂ ನಞ್ ಉಪಪದವಾಗುವುದು. ಆದ್ದರಿಂದ ದ್ರುಹ್ ಎಂಬ ಕೃದಂತವು ಉಪಪದದ ಮುಂದೆ ಇರುವುದರಿಂದ ಕೃದುತ್ತರಪದಪ್ರಕೃತಿಸ್ವರ ಬರಲು ಯಾವ ಬಾಧಕವೂ ಇಲ್ಲ. ಏವಂಚ ತತ್ಪುರಸಮಾಸವನ್ನು ಹೇಳಬಹುದು. ಇಲ್ಲಿ ವೇದಭಾಷ್ಯದಲ್ಲಿ, ಯತೋ ನಞ್ ನಗತಿಃ, ನಚಕಾರಕಮ್, ಎಂದು ನಞ್‌ಗೆ ಗತಿಕಾರಕ ಸಂಜ್ಞೆ ಇಲ್ಲದೇ ಇರುವುದರಿಂದ ಕೃದುತ್ತರಪದಪ್ರಕೃತಿಸ್ವರ ಬರುವುದಿಲ್ಲ. ಆದ್ದರಿಂದ ತತ್ಪುರುಷವನ್ನು ಹೇಳಕೂಡದು. ಬಹುವ್ರೀಹಿ ಸಮಾಸವನ್ನೇ ಹೇಳಬೇಕು ಎಂದಿರುವುದು. ಇಲ್ಲಿ ನಞ್ ಉಪಪದವಲ್ಲ ಎಂದು ಹೇಳಲಿಲ್ಲ. ಅದ್ದರಿಂದ ಇದು ನ್ಯೂನವೆಂದು ತಿಳಿಯಬಹುದು. ॥ ೩ ॥

॥ ಸಂಹಿತಾಪಾಠಃ ॥

ಯ ಉಗಾ ಉರ್ಕಮಾನೃಚುರನಾಧೃಷ್ಟಾಸ ಓಜಸಾ ।
ಮರುದ್ಭಿರಗ್ನ ಆ ಗಹಿ ॥ ೪ ॥

॥ ಪದಪಾಠಃ ॥

ಯೇ । ಉಗ್ರಾಃ । ಅರ್ಕಂ । ಆನೃಚುಃ । ಅನಾಧೃಷ್ಟಾಸಃ । ಓಜಸಾ ॥
ಮರುತ್ ಽ ಭಿಃ । ಅಗ್ನೇ । ಆ । ಗಹಿ ॥ ೪ ॥

॥ ಸಾಯಣಭಾಷ್ಯಂ ॥

ಹೇ ಮರುತ ಉಗ್ರಾಸ್ತೇನ್ಯಾಃ ಸಂತೋ ಽರ್ಕಮುದಕಮಾನೃಚುಃ ಅರ್ಚಿತವಂತಃ । ವರ್ಷಣೇನ ಸಂಪಾದಿತವಂತ ಇತ್ಯರ್ಥಃ । ತೈರ್ಮರುದ್ಭಿರಿತ್ಯನ್ವಯೇಃ । ಕೀದೃಶಾ ಮರುತಃ। ಓಜಸಾ ಬಲೇನಾನಾಧೃಷ್ಟಾಸೋ ಽತಿರಸ್ಕೃತಾಃ । ಸರ್ವೇಭ್ಯೋ ಽಪಿ ಪ್ರಬಲಾ ಇತ್ಯರ್ಥಃ । ಅರ್ಕಶಬ್ದಸ್ಯೋದಕವಾಚಿತ್ವಂ ವಾಜಸನೇಯಿನ ಆಮನಂತಿ । ಆಪೋ ವಾ ಅರ್ಕಃ । ಶತ. ಬ್ರಾ, ೧೦-೬-೫-೨ । ಇತಿ । ತನ್ನಿರ್ವಚನಂ ಚ ತ

ಏವಾಮನಂತಿ । ಸೋಽರ್ಚನ್ನೃಚರತ್ಸ್ಯಾರ್ಚತ ಆಪೋಽಜಾಯಂತಾರ್ಚತೇ ವೈ ಮೇ ಕಮಭೂದಿತಿ ತದೇವಾರ್ಕಸ್ಯಾರ್ಕತ್ವಂ । ಶತ. ಬ್ರಾ. ೧೦-೬-೫-೧ । ಇತಿ । ಜಗತ್ಸೃಷ್ಟ್ವಾ ಹಿರಣ್ಯಗರ್ಭ ಉದಕಂ ಸೃಷ್ಟ್ವಾಮುಮ್ಯಾಕ್ರೋಽರ್ಚನ್ ಉದಕಸತ್ಯಸಂಕಲ್ಪಮಹಿಮಪ್ರಖ್ಯಾಪನೇನ ಸ್ತಾತ್ಮಾನಂ ಪೂಜಯನ್ನಿತರತ್ । ತಥಾ ಪೂಜಯತೋ ಹಿರಣ್ಯಗರ್ಭಸ್ಯ ಸಕಾಶಾದುದಕಮುತ್ಪನ್ನಂ ತದಾನೀಮರ್ಚತೋ ಮತ್ತಃ ಕಮಭೂದಿತ್ಯಾಹೋಚತ್ । ತೇನೋದಕಸ್ಯಾರ್ಕನಾಮ ನಿಷ್ಪನ್ನಮಿತ್ಯರ್ಥಃ ॥ ಆನೃಚುಃ । ಅರ್ಚತೇಃ । ಆಪಸ್ಪೃಧೇಥಾಮಿತ್ಯಾದಿನಾ । ಸಾ. ೬-೧-೩೬ । ನಿಪಾತಿತಃ । ಪ್ರತ್ಯಯೆಸ್ವರಃ । ಯದ್ವೃತ್ತಯೋಗಾನ್ನ ನಿಘಾತಃ । ಅನಾಧೃಷ್ಟಾಸಃ । ಅವ್ಯಯಪೂರ್ವಪದಪ್ರಕೃತಿಸ್ವರತ್ವಂ । ಓಜಸಾ । ಉಚ್ಚೈರ್ಬಲೋಪಶ್ಚ । ಉ. ೪-೦೯೧ । ಇತ್ಯಸುನ್ । ನಿತ್ತ್ವಾದಾದ್ಯುದಾತ್ತಃ ॥

॥ ಪ್ರತಿಪದಾರ್ಥ ॥

ಉಗ್ರಾಃ—ತೀವ್ರಗಾಮಿಗಳಾದ । ಓಜಸಾ—ಬಲದಿಂದ । ಅನಾಧೃಷ್ಟಾಸಃ—ಅಪ್ರತಿಹತರಾದ । ಯೇ—ಯಾವ ಮರುದ್ದೇವತೆಗಳು । ಅರ್ಕಂ—ಉದಕವನ್ನು । ಆನೃಚುಃ—ವರ್ಷಣಮಾಡಿದರೋ । (ಆಂತಹ) ಮರುದ್ಭಿಃ—ಮರುದ್ದೇವತೆಗಳೊಡನೆ । ಅಗ್ನೇ—ಎಲೈ ಅಗ್ನಿಯೇ । ಆ ಗಹಿ—ಬಾ ॥

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾರಿಂದಲೂ ತಡೆಯಲಸಾಧ್ಯವಾದ ಶಕ್ತಿಸಾಮರ್ಥ್ಯಗಳುಳ್ಳ ಮತ್ತು ವೇಗವಾಗಿ ಬೀಸುತ್ತಾ ಉದಕವನ್ನು ವರ್ಷಣಮಾಡುವ (ಮಳೆಯನ್ನು ಹುಯ್ಯುವ) ಮರುದ್ದೇವತೆಗಳೊಡನೆ ಇಲ್ಲಿಗೆ ಬಾ ॥

English Translation.

O Agni, come hither with the Maruts, who are fierce (or blow fiercely) and send down rain and are unsurpassed in strength.

॥ ವಿಶೇಷವಿಷಯಗಳು ॥

ಉಗ್ರಾಃ—ತೀವ್ರಾಃ । ವೇಗವಾಗಿ ಬೀಸುವ.

ಅರ್ಕಂ—ಉದಕವನ್ನು, ಅರ್ಕಶಬ್ದಕ್ಕೆ ಯಾಸ್ಕರು ಹೇಳಿರುವ ನಾಲ್ಕು ವಿಧವಾದ ಅರ್ಥವನ್ನು ನಾವು ಹಿಂದೆಯೇ (ಪುಟ ೩೮೪) ವಿವರಿಸಿದೇವೆ. ಇಲ್ಲಿ ಅರ್ಕಶಬ್ದಕ್ಕೆ ಉದಕವೆಂಬ ಬೇರೆ ಅರ್ಥವನ್ನು ಭಾಷ್ಯಕಾರರು ಹೇಳಿ ಅದನ್ನು ಸಮರ್ಥಿಸುವುದಕ್ಕಾಗಿ ಶುಕ್ಲಯಜುರ್ವೇದದ ಶತಪಥ ಬ್ರಾಹ್ಮಣ ವಾಕ್ಯವನ್ನು ಉದಹರಿಸಿರುವರು—

ಸೋಽರ್ಚನ್ನೃಚರತ್ಸ್ಯಾರ್ಚತ ಆಪೋಽಜಾಯಂತಾರ್ಚತೇ ವೈ ಮೇ ಕಮಭೂದಿತಿ ತದೇವಾರ್ಕಸ್ಯಾರ್ಕತ್ವಂ ॥

(ಶ. ಬ್ರಾ. ೧೦-೬-೫-೧)

ಇಷ್ಟರ ಅರ್ಥವಿವರಣೆಯನ್ನು ಭಾಷ್ಯಕಾರರು ಈರೀತಿ ಹೇಳಿರುವರು—

ಜಗತ್ಸೃಷ್ಟ್ವಾ ಹಿರಣ್ಯಗರ್ಭ ಉದಕಂ ಸೃಷ್ಟ್ವಮುದ್ಯುಕ್ತೋಽರ್ಚಿನ್ ಉದಕಸೃಷ್ಟೇ-
ಸಂಕಲ್ಪಮಹಿಮಸ್ತ್ರೈಖ್ಯಾಪನೇನ ಸ್ವಾತ್ಮಾನಂ ಪೂಜಯೆನ್ನಚೆರತ್ । ತಥಾ ಪೂಜ-
ಯತೋ ಹಿರಣ್ಯಗರ್ಭಸ್ಯ ಸಕಾಶಾದುದಕಮುತ್ಪನ್ನಂ । ತದಾನೀಮರ್ಚತೋ
ಮತ್ತಃ ಕಮಭೂದಿತ್ಯವೋಚತ್ । ತೇನೋದಕಸ್ಯಾರ್ಕನಾಮ ನಿಷ್ಪನ್ನಮಿತ್ಯರ್ಥಃ ॥

ಎಂದರೆ ಹಿರಣ್ಯಗರ್ಭನು (ಪ್ರಜಾಪತಿಯು) ಜಗತ್ತನ್ನು ಸೃಷ್ಟಿಮಾಡಿ ಬಳಿಕ ಉದಕವನ್ನು ಸೃಷ್ಟಿಮಾಡಬೇಕೆಂದು ಉದ್ಯುಕ್ತನಾಗಿ ಸತ್ಯಸಂಕಲ್ಪನಾದುದರಿಂದ ತನ್ನನ್ನು ಪೂಜಿಸಲು ಪ್ರಾರಂಭಿಸಿದನು. ಹಾಗೆ ಪೂಜೆಮಾಡುತ್ತಿರುವಾಗ ಆ ಪ್ರಜಾಪತಿಯ ದೆಶೆಯಿಂದ ಉದಕವು ಉತ್ಪನ್ನವಾಯಿತು. ಆಗ ಪ್ರಜಾಪತಿಯು ನನ್ನಿಂದ ಉತ್ಪನ್ನವಾದುದು ಇದೇನು? (ಕಂ) ಎಂದು ಹೇಳಲು, ಆ ಕಾರಣದಿಂದ ಎಂದೆ ಅರ್ಚನದಿಂದ ಕಂ (ಉದಕ) ಎಂಬುದು ಉತ್ಪನ್ನವಾದುದರಿಂದ ಅರ್ಕ ಎಂದು ನೀರಿಗೆ ಹೆಸರಾಯಿತು ಎಂದಭಿಪ್ರಾಯವು.

ಆನೃಚುಃ—ಅರ್ಚಿತವಂತಃ, ವರ್ಷಣೇನ ಸಂಪಾದಿತವಂತಃ—ಪೂಜೆಮಾಡಿದರು, ಅರ್ಚಿಸಿದರು ಎಂದರೆ ಅರ್ಚನಕರ್ಮದಿಂದ ಉಂಟಾದ ಉದಕವನ್ನು ವರ್ಷಣಮಾಡಿದರು ಎಂದರ್ಥವು.

ಅನಾಧೃಷ್ಟಾಸಃ—ಅತಿರಸ್ಕೃತಾಃ, ಸರ್ವೇಭ್ಯೋಽಪಿ ಪ್ರಬಲಾಃ—ತಿರಸ್ಕಾರ ಮಾಡಲು ಸಾಧ್ಯವಿಲ್ಲದವರು ಎಂದರೆ ಎಲ್ಲರಿಗಿಂತಲೂ ಪ್ರಬಲರಾದವರು, ಹೆಚ್ಚು ಸಾಮರ್ಥ್ಯವುಳ್ಳವರು.

॥ ವ್ಯಾಕರಣಪ್ರಕ್ರಿಯಾ ॥

ಆನೃಚುಃ-ಅಪಸ್ಪೃಧೇಥಾಮಾನೃಚುರಾನೃಹುಶ್ಚಿಚ್ಯುಷೇತಿತ್ಯಾದಶಪ್ರಾತಿಶಾಖ್ಯೀಯಾಶ್ಚೀರಾಶೀರ್ತಾಃ (ಪಾ. ಸೂ. ೬-೧-೩೬) ಸ್ಪರ್ಧ ಸಂಘರ್ಷೇ ಧಾತು. ಲಙ್ ಪ್ರಥಮಪುರುಷದ್ವಿವಚನ ಆಥಾಮ್, ಸ್ಪರ್ಧ್+ಆಥಾಂ ಎಂದಿರುವಾಗ ಇಲ್ಲಿ ಧಾತುವಿಗೆ ದ್ವಿತ್ವ, ಸ್ಪರ್ಧ್+ಆಥಾಮ್. ಉತ್ತರಖಂಡದ ರೇಫಕ್ಕೆ ಸಂಪ್ರಸಾರಣ, ಋಕಾರ, ರೇಫದ ಹಿಂದಿನ ಅಕಾರಕ್ಕೆ ಲೋಪ, ಇವು ನಿಪಾತಿತವಲ್ಪಡುವುವು. ಸ್ಪರ್ಧ್-ಸ್ಪೃಧ್-ಆಥಾಮ್ ಶಪ್ಪೂರ್ವಾಃಖಯೆಃ (ಪಾ. ಸೂ. ೭-೪-೬೧) ಅಭ್ಯಾಸದಲ್ಲಿ ಶ, ಷ, ಸ, ಗಳ ಮುಂದೆ ಇರುವ ಖಯ್ ವರ್ಣವು ಉಳಿಯುವುದು. ಮಿಕ್ಕ ವರ್ಣಗಳು ಲಪ್ತವಾಗುವುವು ಎಂಬುದರಿಂದ- ಮೊದಲನೆಯ ಸ್ಪರ್ಧ್ ನಲ್ಲಿ ಪ ಉಳಿಯುವುದು. ಮಿಕ್ಕ ವರ್ಣಗಳಿಗೆ ಲೋಪ. ಪಸ್ಪೃಧ್-ಆಥಾಮ್, ಅಡಾಗಮ, ಶಪ್. ಆತೋಽಡಿತಿ (ಪಾ. ಸೂ. ೬-೪-೭೧) ಎಂಬುದರಿಂದ ಆಕಾರಕ್ಕೆ ಇಯ್ ಆದೇಶ. ಲೋಪೋವ್ಯೋರ್ವಲಿ (ಪಾ. ಸೂ. ೬-೧-೬೬) ಎಂಬುದರಿಂದ ಯ ಲೋಪ, ಆದ್ಗುಣಃ ಅಪಸ್ಪೃಧೇಥಾಮ್ ಅಥವಾ ಅಪ ಎಂದು ಪೃಥಕ್ಪದ ಸ್ಪರ್ಧಧಾತು ಲಙ್ ಆಥಾಮ್ ಶಪ್ ಆತೋಙಿತಃ ವಲಿ ಲೋಪ, ಅಡಾಗಮಾಭಾವವು ಛಾಂದಸ, ಸ್ಪರ್ಧೇತಾಂ ಎಂದಾಗುವುದು. ಆನೃಚುಃ ಅರ್ಚ ಪೂಜಾಯಾಮ್ ಲಿಟ್, ಝಿ, ಪೆರಸ್ಮೈಪದಾನಾಂಣಲತುಸುಸ್ಥಲಥುಸಣಲ್ವಮಾಃ (ಪಾ.ಸೂ.೩-೪-೮೨) ಎಂಬುದರಿಂದ ಉಸ್, ಅರ್ಚ್+ಉಸ್ ಲಿಟಿಧಾತೋರನಭ್ಯಾಸಸ್ಯ (ಪಾ. ಸೂ. ೬-೧-೮) ಎಂಬುದರಿಂದ ದ್ವಿತ್ವ, ಅರ್ಚ್ ಅರ್ಚ್+ಉಸ್ ಹಲಾದಿಃಶೇಷಃ (ಪಾ.ಸೂ. ೭-೪-೬೦) ಅಭ್ಯಾಸದ ವ್ಯಂಜಗಳಿಗೆ ಜಾತಿಪಕ್ಷಾಶ್ರಯಣದಿಂದಲೋ, ಯೋಗವಿಭಾಗ ಪಕ್ಷಾಶ್ರಯಣದಿಂದಲೋ ಲೋಪ, ಅ+ಅರ್ಚ್+ಉಸ್ ಆತಆದೇಃ (ಪಾ. ಸೂ.೭-೪-೭೦) ಅಭ್ಯಾಸ ಆದಿಯಲ್ಲಿ, ರುವ ಹ್ರಸ್ವಾಕಾರಕ್ಕೆ ದೀರ್ಘ ಬರುವುದು ಎಂಬುದರಿಂದ ದೀರ್ಘ. ಆ+ಅರ್ಚ್+ಉಸ್ ತಸ್ಮಾನ್ನುಟ್ದ್ವಿಹಲಃ (ಪಾ. ಸೂ. ೭-೪-೭೧) ದೀರ್ಘವನ್ನು ಹೊಂದಿದ ಆಕಾರದ ಮುಂದೆ ಇರುವ ದ್ವಿಹಲ್ಮವಾದ ಧಾತುವಿಗೆ ನುಡಾಗಮ ಬರುವುದು ಎಂಬುದರಿಂದ ನುಡಾಗಮ. ಆ+ನ್+ಅರ್ಚ್+ಉಸ್ ಆನರ್ಚುಃ, ಎಂದೇ ಲೋಕದಲ್ಲಿ ಪ್ರಯೋಗ.

ವೇದದಲ್ಲಿ ಈ ಸೂತ್ರದಿಂದ ರೇಫಕ್ಕೆ ಸಂಪ್ರಸಾರಣ ಋಕಾರ, ರೇಫದ ಹಿಂನಿನ ಅಕಾರಕ್ಕೆ ಲೋಪ, ಅನೃಚುಃ, ಎಂದಾಗುವುದು. ಅನೃಹುಃ ಎಂಬಲ್ಲಿಯೂ ಅರ್ಹಧಾತುವಿಗೆ ಇದೇ ರೀತಿ ಪ್ರಕ್ರಿಯೆ, ಚ್ಯುಙ್ ಗತೌ, ಧಾತು, ಲಟ್, ಥಾಸ್, ಥಾಸಸ್ತೇ, ದ್ವಿತ್ವ ಚ್ಯು+ಚ್ಯು+ಸೇ ಅಭ್ಯಾಸಸಂಪ್ರಸಾರಣಯಕಾರಕ್ಕೆ ಇಕಾರ ನಿಪಾತಿತವಾಗುವುದು. ಸೇಗೆ ಇಡಭಾವವೂ ನಿಪಾತಿತವಾಗುವುದು. ಸಂಪ್ರಸಾರಣಾಚ್ಚ, ಪೂರ್ವರೂಪ, ಚಿಚ್ಯುಷೇ, ಲೋಕದಲ್ಲಿ ಚುಚ್ಯುವಿಷೇ, ತ್ಯಜ ವಯೋಹಾನೌ, ಲಿಟ್, ತಿಪ್, ಣಲ್ ದ್ವಿತ್ವ ತ್ಯಜ್+ತ್ಯಜ್+ಅ, ಅಭ್ಯಾಸಕ್ಕೆ ಸಂಪ್ರಸಾರಣ ನಿಪಾತ, ಪೂರ್ವರೂಪ, ಹಲಾದಿಶೇಷ, ತಿತ್ಯಜ+ಅ ಉಪಧಾವೃದ್ಧಿ. ತಿಶ್ಯಾಜ. ಶ್ರೀಞ್ ಪಾಕೇ, ಕ್ತ ಪ್ರತ್ಯಯ. ಶ್ರೀಗೆ ಶ್ರಾ ಆದೇಶ ನಿಪಾತಿತ, ಬಹುವಚನ ಶ್ರಾತಾಃ ಶ್ರಿತ ಎಂಬಲ್ಲಿ ಅದುಧಾತುವಿಗೆ ಹ್ರಸ್ವ ನಿಪಾತಿತ, ಅಪೂರ್ವಕವಾದ ಶ್ರೀಞ್ ಧಾತುವಿಗೆ ಕ್ವಿಪ್ ಧಾತುವಿಗೆ ಶಿರ ಆದೇಶ. ಆಶೀರ್ತಾ ಎಂಬಲ್ಲಿ ಅಪೂರ್ವಕವಾದ ಶ್ರೀಞ್ ಧಾತುವಿಗೆ ಕ್ತಪ್ರತ್ಯಯ ಪರದಲ್ಲಿರುವಾಗ ಶಿರ್ ಆದೇಶ, ಕ್ತ ಪ್ರತ್ಯಯಕ್ಕೆ ರದಾಭ್ಯಾಂನಿಷ್ಠಾತೋ ನಃಪೂರ್ವಸ್ಯಚದಃ ಎಂಬುದರಿಂದ ಪ್ರಾಪ್ತವಾಗುವ ನತ್ವಕ್ಕೇ ಅಭಾವವೂ ನಿಪಾತಿತ, ಏವಂಚ ಈ ಸೂತ್ರದಿಂದ ಅನೃಚುಃ ಎಂಬುದು ನಿಪಾತಿತವಾಗಿರುವುದು. ಉಸ್, ಗೆ ಪ್ರತ್ಯಯಸ್ವರವೇ ಬರುವುದು. **ಯಜ್ವೈತ್ತಾನ್ನಿತ್ಯಮ್** (ಪಾ. ಸೂ. ೪-೧-೬೬) ಎಂದು ಪ್ರತಿಷೇಧ ಬರುವುದರಿಂದ ಸರ್ವಾನುದಾತ್ತ ಬರುವುದಿಲ್ಲ.

ಅನಾಧೃಷ್ಯಾಸಃ—ನ ಅಧೃಷ್ಯಾಃ ಎಂದು ವಿಗ್ರಹ. **ಅಜ್ಜಸೇರಸುಕ್ ತಕ್ಪುರುಷೇ ತುಲ್ಯಾರ್ಥ**—, (ಪಾ. ಸೂ. ೬-೩-೨) ಎಂಬುದರಿಂದ ಅವ್ಯಯಪೂರ್ವಪದಪ್ರಕೃತಿಸ್ವರ.

ಓಜಸಾ—ಉಬ್ಜ ಆರ್ಜವೇ, **ಉಬ್ಜೇರ್ಬಲೇಬಲೋಪಶ್ಚ** (ಉ.ಸೂ. ೪-೬-೩೧) ಉಬ್ಜ ಆರ್ಜವೇ ಎಂಬುದರ ಮುಂದೆ ಬಲ ಎಂಬ ಅರ್ಥದಲ್ಲಿ ಅಸುನ್ ಬರುವುದು. ಬಕಾರಕ್ಕೆ ಲೋಪವೂ ಬರುವುದು. ಉಜ್+ಅಸ್, ಲಘೂಪಧಗುಣ ಓಜಸ್. ನಿತ್ಸ್ವರದಿಂದ ಆದ್ಯುದಾತ್ತ. ತೃತೀಯಾಏಕವಚನ ಟಾಪ್ರತ್ಯಯ, ಓಜಸಾ ಎಂದಾಗುವುದು ॥ ೪ ॥

॥ ಸಂಹಿತಾಪಾಠಃ ॥

ಯೇ ಶುಭ್ರಾ ಘೋರವರ್ಪಸಃ ಸುಕ್ಷತ್ರಾಸೋ ರಿಶಾದಸಃ ।
ಮರುದ್ಭಿರಗ್ನ ಆ ಗಹಿ ॥ ೫ ॥

॥ ಪದಪಾಠಃ ॥

ಯೇ । ಶುಭ್ರಾಃ । ಘೋರವರ್ಪಸಃ । ಸುಕ್ಷತ್ರಾಸಃ । ರಿಶಾದಸಃ ॥
ಮರುತ್ಭಿಃ । ಅಗ್ನೇ । ಆ । ಗಹಿ ॥ ೫ ॥

॥ ಸಾಯಣಭಾಷ್ಯಂ ॥

ಯೇ ಮರುತಃ ಶುಭ್ರತ್ವಾದಿಗುಣೋಪೇತಾಸ್ತೈರ್ಮರುದ್ಭಿರಿತ್ಯನ್ವಯಃ । ಶುಭ್ರಾಃ । ಶೋಭನಾ ಘೋರದರ್ವಸ ಉಗ್ರರೂಪಧರಾಃ ಸುಕ್ಷತ್ರಾಸಃ ಶೋಭನಧನೋಪೇತಾ ರಿಶಾದಸೋ ಹಿಂಸಕಾನಾಂ ಭಕ್ಷಕಾಃ । ಮಘವಿತ್ಯಾದಿಷ್ವಷ್ಟಾವಿಂಶತಿಸಂಖ್ಯಾಕೇಷು ಧನನಾಮಸು ಕ್ಷತ್ರಂ ಭಗ ಇತಿ ಪಠಿತಂ ॥ ಶುಭ್ರಾಃ । ಸ್ಥಾಯಿತಂಚೀತ್ಯಾದಿನಾ ಶುಭೇರಾಪ್ರಾದಿಕೋ ರಕ್ ಪ್ರತ್ಯಯಃ । ಪ್ರತ್ಯಯಸ್ವರಃ । ಘೋರವರ್ಪಸಃ । ಘೋರಂ ವರ್ಪೋ ಯೇಷಾಂ ಬಹುವ್ರೀಹೌ ಪೂರ್ವಪದಪ್ರಕೃತಿಸ್ವರತ್ವಂ । ಸುಕ್ಷತ್ರಾಸಃ । ಬಹುವ್ರೀಹೌ ನಞ್ಸುಭ್ಯಾಮಿತ್ತುರಪದಾಂತೋದಾತ್ತತ್ವಂ । ಆದ್ಯುದಾತ್ತಂ ದ್ವ್ಯಚ್ಛಂದಸಿ । ಸಾ. ೬.೨.೧೧೯ । ಇತ್ಯೇವ ತು ನ ಭವತಿ । ಕ್ಷತ್ರಶಬ್ದಸ್ಯಾಂತೋದಾತ್ತತ್ವಾತ್ । ರಿಶಂತಿ ಹಿಂಸಂತೀತಿ ರಿಶಾಃ । ತಾನದಂತೀತಿ ರಿಶಾದಸಃ । ಸರ್ವಧಾತುಭ್ಯೋಽಸುನ್ಪ್ರತ್ಯಯಃ । ನಿಶ್ಸ್ವರೇಣೋತ್ತರಪದಮಾದ್ಯುದಾತ್ತಂ । ಕೈದುತ್ತರಪದಪ್ರಕೃತಿಸ್ವರೇಣ ಸ ಏವ ಶಿಷ್ಯತೇ ॥ ೨೬ ॥

॥ ಪ್ರತಿಪದಾರ್ಥ ॥

(ಹೇ) ಅಗ್ನೇ—ಎಲೈ ಅಗ್ನಿಯೇ । ಯೇ—ಯಾವ ಮರುದ್ದೇವತೆಗಳು । ಶುಭ್ರಾಃ—ಶುಭ್ರತ್ವಾದಿ ಗುಣಯುಕ್ತರೋ । ಘೋರವರ್ಪಸಃ—ಉಗ್ರರೂಪವನ್ನು ಧರಿಸಿರುವರೋ । ಸುಕ್ಷತ್ರಾಸಃ—ಉತ್ತಮವಾದ ಧನದಿಂದ ಸಹಿತವಾದವರೋ । ರಿಶಾದಸಃ—ಹಿಂಸೆಮಾಡುವ ಶತ್ರುಗಳನ್ನು ಭಕ್ಷಿಸುವವರೋ (ಧ್ವಂಸಮಾಡುವವರೋ) । (ಅಂತಹ) ಮರುದ್ಭಿಃ—ಮರುದ್ದೇವತೆಗಳಿಂದ ಕೂಡಿ । ಆ ಗಹಿ—ಇಲ್ಲಿಗೆ ಬಾ ॥

॥ ಭಾವಾರ್ಥ ॥

ಎಲೈ ಅಗ್ನಿಯೇ, ಮರುದ್ದೇವತೆಗಳು ಯಾವಾಗಲೂ ಶುಭ್ರರಾಗಿರುವರು; ಉಗ್ರವಾದ ರೂಪದಿಂದ (ವೇಗವಾಗಿ ಬೀಸುವ ಸ್ವಭಾವದಿಂದ) ಕೂಡಿದವರು; ಉತ್ತಮವಾದ ಧನವುಳ್ಳವರು; ಶತ್ರುಹಿಂಸಕರು. ಇಂತಹ ಮರುದ್ದೇವತೆಗಳೊಡಕೂಡಿ ಇಲ್ಲಿಗೆ ಬಾ.

English Translation.

O Agni, come with the Maruths who are brilliant, have frightful forms who are possessors of great wealth and destroyers of the enemies.

॥ ವಿಶೇಷವಿಷಯಗಳು ॥

ಶುಭ್ರಾಃ—ಪ್ರಕಾಶಮಾನರಾದ, ಸ್ವಚ್ಛರಾದ, Brilliant, resplendent, (transparent ?) ಇತ್ಯಾದಿ.

ಘೋರವರ್ಪಸಃ—ಘೋರರೂಪಾಃ ದ್ವಯೋಶ್ಚನಯೋಃ ಪರಸ್ಪರವಿರೋಧಿತ್ವಾತ್ ಕಾಲಭೇದೇನ ಯೋಜನಾ। ಶೋಭನಾಃ ಕ್ರೀಡಾಕಾಲೇ । ಘೋರರೂಪಾಃ ಸಂಗ್ರಾಮಕಾಲೇ । ಕ್ರೂರವಾದ ಅಥವಾ ಭಯಂಕರವಾದ ರೂಪವುಳ್ಳವರು, of terrible or frightful forms. ಈ ಋಕ್ಕಿನಲ್ಲಿ ಉಪಯೋಗಿಸಿ

ರುವ ಶುಭ್ರಾಃ—ಪ್ರಕಾಶಮಾನರು ಅಥವಾ ಸೌಮ್ಯಗುಣಯುಕ್ತರು ಎಂಬ ಶಬ್ದವೂ, ಘೋರವರ್ಪಸಃ—ಭಯಂಕರರೂಪವುಳ್ಳವರು ಎಂಬ ಶಬ್ದವೂ ಪರಸ್ಪರ ವಿರೋಧಾರ್ಥವುಳ್ಳವುಗಳಲ್ಲಸೇ ಎಂದರೆ ಕ್ರೀಡಾಕಾಲದಲ್ಲಿ ಸೌಮ್ಯಸ್ವಭಾವದವರೂ ಯುದ್ಧಕಾಲದಲ್ಲಿ ಘೋರರೂಪವನ್ನು ಧರಿಸುವವರೂ ಎಂದರ್ಥವು.

ಸುಕ್ಷತ್ರಾಸಃ—ಮಳೆ ಮೊದಲಾದ ಇಪ್ಪತ್ತೈಂಟು ಧನನಾಮಗಳ ಮಧ್ಯದಲ್ಲಿ ಕ್ಷತ್ರಂ ಎಂಬ ಶಬ್ದವು ಪಠಿತವಾಗಿರುವುದರಿಂದ (ನಿ. ೩-೯) ಸುಕ್ಷತ್ರಾಸಃ ಎಂದರೆ ಒಳ್ಳೆಯ ಧನವುಳ್ಳವರು ಎಂದರ್ಥವು.

ರಿಶಾದಸಃ—ರಿಂಶಂತಿ ಹಿಂಸಂತೀತಿ ರಿಶಾಃ ಶತ್ರವಃ । ತಾನದಂತೀತಿ ರಿಶಾದಸಃ । ಹಿಂಸೆಮಾಡುವ ಶತ್ರುಗಳನ್ನು ಭಕ್ಷಿಸುವ ಎಂದರೆ ನಾಶಮಾಡುವ ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಶುಭ್ರಾಃ—ಸ್ಫಾಯಿತಞ್ಚಿಶುಭಿಭ್ಯೋರಕ್ (ಉ. ಸೂ. ೨-೧೭೦) ಎಂಬುದರಿಂದ ಶುಭಧಾತುವಿನ ಮುಂದೆ ಔಣಾದಿಕವಾದ ರಕ್ ಪ್ರತ್ಯಯ, ಪ್ರತ್ಯಯಸ್ವರಬರುವುದು.

ಘೋರವರ್ಪಸಃ—ವೃಜ್‌ಶೀಙ್‌ಭ್ಯಾಂರೂಪಸ್ವಾಙ್ಗಯೋಃಪುಟ್ಚ (ಉ ಸೂ. ೪-೬೪೦) ವೃಜ್ ಸಂಭಕ್ತ್ಯೌ, ಶೀಙ್ ಸ್ವಪ್ನೇ ಈ ಧಾತುಗಳ ಮುಂದೆ ಕ್ರಮವಾಗಿ ರೂಪ, ಸ್ವಾಙ್ಗ ಈ ಅರ್ಥಗಳು ವಾಚ್ಯವಾದಾಗ ಅಸುನ್ ಪ್ರತ್ಯಯವೂ, ಅದಕ್ಕೆ ಪುಡಾಗಮವೂ ಬರುವುದು ಎಂಬುದರಿಂದ ವೃಧಾತುವಿನ ಮುಂದೆ ಅಸುನ್ ಪ್ರತ್ಯಯವೂ ಅದಕ್ಕೆ ಪುಡಾಗಮವೂ ಬರುವುದು. ವರ್ಪಃ ಎಂದರೆ ರೂಪ ಎಂದು ಅರ್ಥ. ಘೋರಂ ವರ್ಪಃ ಯೇಷಾಂ ತೇ ಘೋರವರ್ಪಸಃ, ಬಹುವ್ರೀಯಾದ್ದರಿಂದ ಪೂರ್ವಪದಪ್ರಕೃತಿಸ್ವರ, ಘೋರಶಬ್ದ ಅನ್ತೋದಾತ್ತ.

ಸುಕ್ಷತ್ರಾಸಃ—ಸುಕ್ಷತ್ರಂ=ಧನಂ ಯೇಷಾಂ ತೇ. ಅಜ್ಜುಸೇರಸುಕ್, ಪೂರ್ವಪದಪ್ರಕೃತಿಸ್ವರ ಪ್ರಾಪ್ತವಾದರೆ ಅದನ್ನು ಬಾಧಿಸಿ ನಞ್‌ಸುಭ್ಯಾಮ್ (ಪಾ.ಸೂ. ೬-೨-೧೭೨) ಎಂಬುದರಿಂದ ಅಂತೋದಾತ್ತ ಬರುವುದು. ಇಲ್ಲಿ ಕ್ಷತ್ರ ಶಬ್ದವು ಸು ಶುಬ್ದದ ಮುಂದೆ ಇರುವುದು. ಆದರೂ ನಞ್‌ಸುಭ್ಯಾಮ್ ಎಂಬುದಕ್ಕೆ ಅಪವಾದವಾದ ಆದ್ಯುದಾತ್ತಂದ್ವ್ಯಚ್ ಛಂದಸಿ (ಪಾ. ಸೂ. ೬-೨-೧೧೯) ಎಂಬುದರಿಂದ ಕ್ಷತ್ರಶಬ್ದಕ್ಕೆ ಆದ್ಯುದಾತ್ತ ಬರುವುದಿಲ್ಲ. ಏಕೆಂದರೆ ಕ್ಷತ್ರಶಬ್ದವು ಅಂತೋದಾತ್ತ. ಸುಶಬ್ದದ ಮುಂದೆ ಇರುವ ಪದವು ಆದ್ಯುದಾತ್ತವಾಗಿದ್ದರೆ ಆದ್ಯುದಾತ್ತಂ ದ್ವ್ಯಚ್ ಛಂದಸಿ (ಪಾ.ಸೂ. ೬-೨-೧೧೯) ಬಹುವ್ರೀಹಿಸಮಾಸದಲ್ಲಿ ಸುಶಬ್ದದ ಮುಂದೆ ಇರುವ ಆದ್ಯುದಾತ್ತವಾದ ದ್ವ್ಯಚ್ಕವಾದ ಪದವು ಆದ್ಯುದಾತ್ತವಾಗುವುದು ಎಂಬುದು ಬರುವುದು. ದ್ವ್ಯಚ್ಕ ಎಂದರೆ ಎರಡು ಅಚ್ಚನ್ನು ಹೊಂದಿರುವ ಪದ, ಕ್ಷತ್ರಶಬ್ದ ಅಂತೋದಾತ್ತವಾದ್ದರಿಂದ ಆದ್ಯುದಾತ್ತಂದ್ವ್ಯಚ್-, ಎಂಬುದು ಬರುವುದಿಲ್ಲ.

ರಿಶಾದಸಃ-ರಿಶ ಹಿಂಸಾಯಾಮ್, ಧಾತು, ರಿಶನ್ತಿ ಹಿಂಸನ್ತೀತಿ ರಿಶಾಃ ರಿಶಾನ್ ಅದನ್ತಿ-ಭಕ್ಷಯನ್ತೀತಿ ರಿಶಾದಸ್. ರಿಶಶಬ್ದೋಪಪದಕವಾದ ಅದ್ ಧಾತುವಿನ ಮುಂದೆ ಸರ್ವಧಾತುಭ್ಯೋಽಸುಸ್ ಎಂಬುದರಿಂದ ಅಸುನ್ ಪ್ರತ್ಯಯ, ನಿತ್ಸ್ವರದಿಂದ ಉತ್ತರಪದವು ಆದ್ಯುದಾತ್ತ, ಸಮಾಸಾನಂತರ ಗತಿಕಾರಕೋಪಪದಾತ್ಕೃತ್ (ಪಾ.ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರಬರುವುದು. ಆದ್ದರಿಂದ ಉತ್ತರಪದದ ಆದ್ಯುದಾತ್ತವೇ ನಿಲ್ಲುವುದು ॥ ೫ ॥

॥ संहितापाठः ॥

ये नाकस्याधि रोचने दिवि देवासः आसते ।
मरुद्भिरग्न आ गहि ॥ ६ ॥

॥ पदपाठः ॥

ये । नाकस्य । अधि । रोचने । दिवि । देवासः । आसते ।
मरुत्ऽभिः । अग्ने । आ । गहि ॥ ६ ॥

॥ सायणभाष्यं ॥

ये मरुतो नाकस्याधि दुःखरहितस्य सूर्यस्योपरि दिवि द्युलोके रोचने दीप्यमाने ये देवासः स्वयमपि दीप्यमाना आसते । त्रैर्मरुद्भिरित्यन्वयः ॥ नाकस्य । कं सुखं । तद्यस्मिन्नास्त्यसावक इति बहुव्रीहिं कृत्वा पश्चान्नञ् । न अकोनाक इति नञ्तत्पुरुषः । नलोपोनञः । पा. ६-३-७३ । इति लोपो न भवति । नभ्राण्नपान्नवेदाद्यर्थादिनाऽ । पा. ६-३-७५ । प्रकृतिभावात् । तत्पुरुषे तुल्यार्थेत्यादिना । पा.६-२-२। अव्ययपूर्वपदप्रकृतिस्वरत्वेनोदात्तत्वं । प्रथमतस्तत्पुरुषं कृत्वा पश्चाद्बहुव्रीहावुत्तरपदान्तोदात्तत्वं स्यात् । अधिशब्द उपसर्यर्थे । उपसर्गप्रतिरूपकोऽयं निपातः । रोचने । रुच दीप्तौ । अनुदात्तेतश्च हलादेरिति यिच् । चित इत्यन्तोदात्तत्वं । दिवि । ऊडिदमित्यादिना विभक्तेरुदात्तत्वं । देवासः । आज्जसेरसुगित्यसुक् । आसते । आस उपवेशने । अनुदात्तेत्त्वादात्मनेपदं । ऋशस्यादादेतः । अदिप्रभृतिभ्यः शप इति शपो लुक् । अनुदात्तेत्त्वाल्लसार्वधातुकानुदात्तत्वं। यद्वृत्तयोगान्न निघातः ॥

॥ प्रतिपदार्थ ॥

(हे) अग्ने—ಎಲೈ ಅಗ್ನಿಯೇ । ये देवासः—ಯಾವ ಮರುದ್ದೇವತೆಗಳು । नाकस्य—ದುಃಖರಹಿತವಾದ ಸೂರ್ಯಮಂಡಲದ । अधि—ಮೇಲಿರುವ । रोचने—ಪ್ರಕಾಶಮಾನವಾದ । दिवि—ಸ್ವರ್ಗಲೋಕದಲ್ಲಿ । आसते—(ಕುಳಿತು) ಇರುವರೋ । (ಅಂತಹ) मरुद्भिः—ಮರುದ್ದೇವತೆಗಳಿಂದ ಯುಕ್ತನಾಗಿ । आ गहि—ಇಲ್ಲಗೆ ಬಾ ॥

॥ ಭಾವಾರ್ಥ ॥

ಎಲೈ ಅಗ್ನಿಯೇ, ದುಃಖರಹಿತವಾದ ಸೂರ್ಯಮಂಡಲದ ಮೇಲುಭಾಗದಲ್ಲಿರುವ ಪ್ರಕಾಶಮಾನವಾದ ಸ್ವರ್ಗದಲ್ಲಿರುವ ಮರುದ್ದೇವತೆಗಳೊಡನೆ ಇಲ್ಲಿಗೆ ಬಾ ॥

English Translation.

O Agni, come hither with those divine Maruths who sit in resplendent heaven above the sky.

॥ ವಿಶೇಷವಿಷಯಗಳು ॥

ನಾಕಸ್ಯ—ನಾಕ ಎಂದರೆ ಸ್ವರ್ಗವೆಂದು ಅರ್ಥವಿದ್ದರೂ ಈ ಋಕ್ಕಿನಲ್ಲಿ ದಿವಿ ಎಂಬ ಸ್ವರ್ಗವಾಚಕವಾದ ಮತ್ತೊಂದು ಶಬ್ದವಿರುವುದರಿಂದ ಭಾಷ್ಯಕಾರರು ನಾಕಶಬ್ದಕ್ಕೆ ಅವಯವಾರ್ಥನಿಷ್ಪತ್ತಿ ಮಾಡಿರುವರು. ಕಂ ಸುಖಂ । ತದ್ವ[illegible]ಸಾವಕಃ ನ ಅಕಃ ನಾಕಃ ಕಂ ಎಂದರೆ ಸುಖವು. ಅದಿಲ್ಲದಿರುವುದಕ್ಕೆ ಅಕಃ—ದುಃಖವು ಎಂದು [illegible] ಪುನಃ ಅಕಃ (ದುಃಖ)ವಿಲ್ಲದಿರುವುದಕ್ಕೆ ನಾಕಃ ಎಂದು ಹೆಸರು ಸುಖವಿರುವ ಸ್ಥಾನ, ಸ್ವರ್ಗ ಎಂಬ ಪರ್ಯಾಯವು. ಇಲ್ಲಿ ನಾಕಃ ಎಂದರೆ ಸೂರ್ಯಮಂಡಲವೆಂದು ಹೇಳಿ,

ಅಧಿ—ಎಂಬ ಶಬ್ದಕ್ಕೆ ಅದಕ್ಕೂ [illegible]ಮೇಲಿರುವ ಎಂದರ್ಥಮಾಡಿರುವರು.

॥ ವ್ಯಾಕರಣಪ್ರಕ್ರಿಯಾ ॥

ನಾಕಸ್ಯ—ಕಮ್ ಎಂದರೆ ಸುಖ. ನ ವಿದ್ಯತೇ ಕಂ, ಸುಖಂ ಯಸ್ಮಿನ್ ಸಃ ಎಂದು ಬಹುವ್ರೀಹಿ. **ನಲೋಪೋನಞಃ** (ಪಾ.ಸೂ. ೬-೩-೭೩) ಉತ್ತರಪದವು ಪರದಲ್ಲಿರುವಾಗ ನಞ್‌ನ ನಕಾರಕ್ಕೆ ಲೋಪ ಬರುವುದು ಎಂಬುದರಿಂದ ನ್‌ಗೆ ಲೋಪ, ಅಕ ಎಂದಾಗುವುದು. ಉತ್ತರಪದ ಶಬ್ದವು ಸಮಾಸದ ಚರಮಾವಯವದಲ್ಲಿ ರೂಢ. ಈಗ ನ-ಅಕಃ ಎಂದು ತತ್ಪುರುಷ. **ನಭ್ರಾಣ್ನಪಾನ್ನವೇದಾನಾಸತ್ಯಾನಮುಚಿನಕುಲನಖನಪುಂಸಕೇನಕ್ತ್ರಿಷ್ವಪ್ಯಕೈತ್ಯಾ** (ಪಾ. ಸೂ. ೬-೩-೭೫) ಈ ಸಮಸ್ತ ಪದಗಳ ನಞ್‌ಗೆ ಪ್ರಕೃತಿಭಾವ ಬರುವುದು ಎಂದು ಪ್ರಕೃತಿಭಾವ ಬರುವುದರಿಂದ **ನಲೋಪೋನಞಃ** ಎಂಬುದರಿಂದ ನಞ್‌ನ ನಕಾರಕ್ಕೆ ಲೋಪ ಬರುವುದಿಲ್ಲ. ನಞ್ ನಿಪಾತವಾದ್ದರಿಂದ **ನಿಪಾತಾ ಆದ್ಯುದಾತ್ತಾಃ** ಎಂಬುದರಿಂದ ಆದ್ಯುದಾತ್ತ, ನ-ಅಕಃ, ನಾಕಃ ಎಂದು ತತ್ಪುರುಷಸಮಾಸ ಬಂದನಂತರ **ತತ್ಪುರುಷೇತುಲ್ಯಾರ್ಥ**— (ಪಾ. ಸೂ. ೬-೩-೨) ಎಂಬುದರಿಂದ ಅವ್ಯಯಪೂರ್ವಪದಪ್ರಕೃತಿಸ್ವರಬರುವುದು. ಇಲ್ಲಿ ಮೊದಲು ನಕಮ್, ಅಕಮ್ ಎಂದು ತತ್ಪುರುಷವನ್ನು ಮಾಡಿ ನಂತರ ನ ವಿದ್ಯತೇ ಅಕಂ ಸುಖಾಭಾವಃ ಯಸ್ಮಿನ್ ಸಃ ಎಂದು ಬಹುವ್ರೀಹಿಯನ್ನು ಮಾಡಕೂಡದು. ಹೀಗೆ ಮಾಡಿದರೆ **ನಞ್‌ಸುಭ್ಯಾಮ್** (ಪಾ.ಸೂ. ೬-೨-೧೭೨) ಎಂಬುದರಿಂದ ಉತ್ತರಪದವಾದ ಅಕ ಎಂಬುದಕ್ಕೆ ಅಂತೋದಾತ್ತ ಬರಬೇಕಾಗುವುದು.

ಅಧಿ—ಇದು ಉಪರಿ ಎಂಬ ಅರ್ಥದಲ್ಲಿರುವುದು. ಉಪಸರ್ಗಪ್ರತಿರೂಪಕವಾದ ನಿಪಾತವಾದ್ದರಿಂದ ಆದ್ಯುದಾತ್ತ, ನಾಕಸ್ಯ ಎಂಬಲ್ಲಿ ಸ್ಯ ಎಂಬುದರ ಅಕಾರ ಸ್ಫುಸ್ಸ್ವರದಿಂದ ಅನುದಾತ್ತ. **ಸವರ್ಣದೀರ್ಘೇಏಕಾದೇಶ**

ದಿಂದ ಬಂದ ಆಕಾರವು ಏಕಾದೇಶಉದಾತ್ತೇನ ಎಂಬುದರಿಂದ ಉದಾತ್ತ. ಈ ಉದಾತ್ತ ಪರದಲ್ಲಿರುವುದರಿಂದ ಇದರ ಹಿಂದಿನ ಕ ಎಂಬ ಅನುದಾತ್ತಕ್ಕೆ **ಉದಾತ್ತಸ್ವರಿತಪರಸ್ಯ**—,ಎಂಬುದರಿಂದ ಅನುದಾತ್ತಸ್ವರ ಬರುವುದು.

ರೋಚತೇ—ರುಚ ದೀಪ್ತೌ, ಧಾತು. ಅನುದಾತ್ತೇತ್ತು. **ಅನುದಾತೇತ್ತ ಶ್ಚ ಹಲಾದೇಃ** (ಪಾ.ಸೂ. ೩-೧-೧೪೯) ಅನುದಾತ್ತೇತ್ತೂ, ಹಲಾದಿಯಾದ ಅಕರ್ಮಕವೂ ಆದ ಧಾತುವಿನ ನುಂದೆ ಯುಚ್ ಪ್ರತ್ಯಯ ಬರುವುದು ಎಂಬುದರಿಂದ ಯುಚ್ ಪ್ರತ್ಯಯ. **ಯುವೋರನಾಕೌ** (ಪಾ. ಸೂ. ೭-೧-೧) ಎಂಬುದರಿಂದ ಯುವ್ ಅನ ಆದೇಶ, ಲಘೂಪಧಗುಣ, ರೋಚನ. ಪ್ರತ್ಯಯವು ಚಿತ್ತು. ಆದ್ದರಿಂದ **ಚಿತೇಃ** (ಪಾ.ಸೂ ೬-೧-೧೬೩) ಎಂಬುದರಿಂದ ಅಂತೋದಾತ್ತ, ಸಪ್ತಮ್ಯೇಕವಚನ ರೋಚನೇ

ದಿವಿ—**ಊಡಿದಮ್ ಪ್ರದಾದ್ಯುಷ್ಪಮ್ ರೈದ್ಯುಭ್ಯಃ**—(ಪಾ.ಸೂ. ೬-೧-೧೬೧) ಎಂಬುದರಿಂದ ದಿವ್ ಎಂಬುದರ ಮುಂದೆ ಇರುವ ವಿಭಕ್ತಿಯು ಉದಾತ್ತ.

ದೇವಾಸಃ—**ಅಜ್ಜಸೇರಸುಕ್** ಎಂಬುದರಿಂದ ಜಸ್‌ಗೆ ಅಸುಗಾಗಮ.

ಅಸತೇ—ಅಸ ಉಪವೇಶನೇ, **ಅನುದಾತ್ತೇತ್**. ಆದ್ದರಿಂದ **ಅನುದಾತ್ತಙಿತ ಆತ್ಮನೇಪದೇಮ್** (ಪಾ ಸೂ ೧-೩-೧) ಎಂಬುದರಿಂದ ಆತ್ಮನೇಪದ, ಲಟ್, ಪ್ರಥಮಪುರುಷಬಹುವಚನಝಿ ರುಃ. **ಕರ್ತರಿಶಪ್** ಎಂಬುದರಿಂದ ಶಪ್ ವಿಕರಣ. **ಆದಿಸ್ಪೃಶ್ಯತಿಭ್ಯಃ ಶಪಃ** (ಪಾ. ಸೂ. ೩-೧-೭೭) ಎಂಬುದರಿಂದ ಶಪ್‌ಗೆ ಲುಕ್, ರುಗ್‌ಗೆ ಆತ್ಮನೇಪದೇಷ್ವನತೇಃ (ಪಾ- ೭-೧-೩) ಅಕಾರದ ಇಲ್ಲದ ಆತ್ಮನೇಪದ ಪ್ರತ್ಯಯದ ರುಗ್‌ಗೆ ಅತ್ ಆದೇಶ ಬರುವುದು ಎಂಬುದರಿಂದ ಅತ್ ಆದೇಶ, ಅಸ್+ಅತ. **ಟಿತ ಆತ್ಮನೇಪದಾನಾಂ ಟೇರೇ** (ಪಾ.ಸೂ. ೩-೪-೭೭) ಎಂಬುದರಿಂದ ಟಿಯ ಅಕಾರಕ್ಕೆ ಏಕಾರಾದೇಶ, ಅಸತೇ ಎಂದಾಗುವುದು. ಯೇ ಎಂಬ ಯದ್ಪೃತ್ತ ಪದದ ಮುಂದೆ ಇರುವುದರಿಂದ **ಯದ್ವೃತ್ತಾನ್ನಿತ್ಯಮ್** (ಪಾ.ಸೂ. ೪-೧-೬೬) ವರ್ತತೇ ಅಸ್ಮಿನ್ನಿತಿ ವೃತ್ತಮ್ ವರ್ತನಾಧಿಕರಣಮಿತ್ಯರ್ಥಃ, ಯದಃ, ವೃತ್ತಮ್. ಯಚ್ಛಬ್ದದ ಇರುವಿಕೆಗೆ ಆಧಿಕರಣವಾದ ಪದ, ಏವಂಚ ಯಾವ ಪದದಲ್ಲಿ ಯಚ್ಛಬ್ದವಿದೆಯೋ ಅಂತಹ ಪದದ ಮುಂದೆ ಇರುವ ತಿಙಂತವು ಅನುದಾತ್ತವಾಗುವುದಿಲ್ಲ. ಯದ್ವೃತ್ತಾತ್ **ತ್** ಎಂದು ಪಂಚಮ್ಯಾನಿರ್ದೇಶವಿರುವುದರಿಂದ, ಯಚ್ಛಬ್ದಘಟಿತಪದಾವ್ಯವಹಿತಪರಂ ತಿಙಂತಂ ನಾನುದಾತ್ತಂ ಎಂದು ಅರ್ಥವು. **ತಸ್ಮಾದಿತ್ಯುತ್ತರಸ್ಯ**, (ಪಾ. ಸೂ. ೧-೧-೬೭) ಎಂಬ ಪರಿಭಾಷೆಯಿಂದ ವಿವರಿಸುವುದು. ಆದರೂ **ಪೂಜನಾತ್ಪೂಜಿತಮ್**—, (ಪಾ ಸೂ ೪-೧-೧-೩೭) ಎಂಬಲ್ಲಿ ಪುನಃ ಪೂಜಿತಗ್ರಹಣವಿರುವುದರಿಂದ ಅತ್ರ ಪ್ರಕರಣೇ ಪಂಚಮ್ಯಾನಿರ್ದೇಶೇಷ್ವಪಿ ನಾನನ್ತರ್ಯಮಿಷ್ಯತೇ, ಎಂದು ಜ್ಞಾಪಿತವಾಗುವುದು. ಆದ್ದರಿಂದ **ತಸ್ಮಾದಿತ್ಯುತ್ತರಸ್ಯ** ಎಂಬುದು ಇಲ್ಲಿ ಬರುವುದಿಲ್ಲ. ಮಧ್ಯೆ ವ್ಯವಧಾನವಿದ್ದರೂ ಯದ್ವೃತ್ತಾನ್ನಿತ್ಯಮ್ ಎಂಬುದರಿಂದ ನಿಷೇಧಬರುವುದು ಆದ್ದರಿಂದ ಸರ್ವಾನುದಾತ್ತ ಬರುವುದಿಲ್ಲ. ಅಸ ಧಾತುವು ಅನುದಾತ್ತೇತ್ತಾದುದರಿಂದ **ತಾಸ್ಯನುದಾತ್ತೇತ್**—, (ಪಾ.ಸೂ. ೬-೧ ೧೮೬) ಇತ್ಯಾದಿ ಸೂತ್ರದಿಂದ ಲಸ್ಥಾನಿಕಸಾರ್ವಧಾತುಕವಾದ 'ಅತೇ' ಗೆ ಅನುದಾತ್ತ ಬರುವುದು. ॥ ೬ ॥



॥ ಸಂಹಿತಾಸಾರಃ ॥

ಯ ಈಂಖಯಂತಿ ಪರ್ವತಾನ್ ತಿರಃ ಸಮುದ್ರಮರ್ಣವಂ ।
ಮರುದ್ಭಿರಗ್ನ ಆ ಗಹಿ ॥ ೭ ॥

॥ ಪದಪಾಠಃ ॥

ಯೇ । ಈಂಖಯಂತಿ । ಪರ್ವತಾನ್ । ತಿರಃ । ಸಮುದ್ರಂ । ಅರ್ಣವಂ ॥
ಮರುತ್ ೞ ಭಿಃ । ಅಗ್ನೇ । ಆ । ಗಹಿ ॥ ೭ ॥

॥ ಸಾಯಣಭಾಷ್ಯಂ ॥

ಯೇ ಮರುತಃ ಪರ್ವತಾನ್ಮೇಘಾನೀಂಖಯಂತಿ ಚಾಲಯಂತಿ ತಥಾರ್ಣವಮುದ-ಕಯುಕ್ತಂ। ಸಮುದ್ರಂ ತಿರಃ ಕುರ್ವಂತೀತಿ ಶೇಷಃ । ನಿಶ್ಚಲಸ್ಯ ಜಲಸ್ಯ ತರಂಗಾದ್ಯುತ್ಪತ್ತ್ಯರ್ಥೋ ಚಾಲನಂ ತಿರಸ್ಕಾರಃ । ತೈರ್ಮರುದ್ಭಿರಿತ್ಯನ್ವಯಃ ॥ ಈಂಖಯಂತಿ । ಉಖ ಉಖೀತ್ಯಾದಾವೀಖಿರ್ಗತ್ಯರ್ಥಃ । ಹೇತುಮತಿ ಚೇತಿ ಣಿಚ್ । ಇದಿತೋ ನುಮ್ ಧಾತೋರಿತಿ ನುಮ್ । ಣಿಜಂತಧಾತೋಶ್ಚಿತ ಇತ್ಯಂತೋದಾತ್ತತ್ವಂ । ಶಪಃ ಪಿತ್ತ್ವಾದನುದಾತ್ತತ್ವಂ । ತಿಙಶ್ಚ ಲಸಾರ್ವಧಾತುಕಸ್ವರೇಣ ಧಾತುಸ್ವರ ಏವ ಶಿಷ್ಯತೇ । ಪರ್ವತಾನ್ । ಪೂರ್ವ ಪರ್ವ ಮರ್ವ ಪೂರಣೇ । ಔಣಾದಿಕೋ೭ತೆನ್ । ಪ್ರತ್ಯಯಸ್ವರಃ ॥

॥ ಪ್ರತಿಪದಾರ್ಥ ॥

(ಹೇ) ಅಗ್ನೇ— ಎಲೈ ಅಗ್ನಿಯೇ । ಯೇ—ಯಾವ ಮರುದ್ದೇವತೆಗಳು । ಪರ್ವತಾನ್—ಮೇಘಗಳನ್ನು । ಈಂಖಯಂತಿ—ಚಲಿಸುವಂತೆ ಮಾಡುವರೋ । ಅರ್ಣವಂ—ನೀರಿನಿಂದ ಕೂಡಿದ । ಸಮುದ್ರಂ—ಸಮುದ್ರವನ್ನು । ತಿರಃ—ಅಲ್ಲೊಲಕಲ್ಲೋಲವಾಗುವಂತೆ ಮಾಡುವರೋ । (ಅಂತಹ) ಮರುದ್ಭಿಃ—ಮರುದ್ದೇವತೆಗಳೊಡನೆ । ಆ ಗಹಿ—ಇಲ್ಲಿಗೆ ಬಾ ॥

॥ ಭಾವಾರ್ಥ ॥

ಎಲೈ ಅಗ್ನಿಯೇ, ಮರುದ್ದೇವತೆಗಳು ಮೇಘಗಳನ್ನು ಕದಲಿಸುವ ಸಾಮರ್ಥ್ಯವುಳ್ಳವರು; ಅಗಾಧವಾದ ನೀರಿನಿಂದ ಕೂಡಿದ ಮಹಾ ಸಮುದ್ರವನ್ನು ಅಲ್ಲೊಲಕಲ್ಲೋಲ ಮಾಡುವವರು. ಇಂತಹ ಮರುದ್ದೇವತೆಗಳೊಡನೆ ಕೂಡಿ ಇಲ್ಲಿಗೆ ಬಾ.

English Translation.

O Agni, come hither with Maruths who scatter the clouds and agitate the sea (with waves).

॥ ವಿಶೇಷವಿಷಯಗಳು ॥

ಪರ್ವತಾನ್—ಮೇಘಾನ್ । ಅದ್ರಿಃ ಮೊದಲಾದ ಮೂವತ್ತು ಮೇಘವಾಚಕಶಬ್ದಗಳ ಮಧ್ಯದಲ್ಲಿ ಪರ್ವತಶಬ್ದವು ಪಠಿತವಾಗಿರುವುದರಿಂದ (ನಿ. ೨-೨೧) ಪರ್ವತಶಬ್ದಕ್ಕೆ ಇಲ್ಲಿ ಮೇಘವೆಂದರ್ಥವು. ಸ್ಕಂದ ಸ್ವಾಮಿಯು ಪರ್ವತಶಬ್ದಕ್ಕೆ, ಪರ್ವತ, ಮೇಘ ಎಂಬ ಎರಡು ಅರ್ಥಗಳನ್ನು ಹೇಳಿರುವರು. ಗಾಳಿಯು ಎಷ್ಟೇ ತೀವ್ರವಾಗಿ ಬೀಸಿದರೂ ಪರ್ವತವನ್ನು ಕದಲಿಸುವುದು ಅಸಂಭವವಾದುದರಿಂದ ಇಲ್ಲಿ ಮೇಘವೆಂಬ ಅರ್ಥವನ್ನೇ ಹೇಳುವುದು ಯುಕ್ತವಾಗಿರುವುದು.

ತಿರಃ—ತಿರಸ್ಕುರ್ವಂತಿ—ಇಲ್ಲಿ ಕುರ್ವಂತಿ ಎಂಬ ಶಬ್ದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ತಿರಸ್ಕಾರಮಾಡುವುದು ಎಂದರೆ ಸಮುದ್ರದಲ್ಲಿ ಅಲೆಗಳು ಏಳುವಂತೆ ವೇಗವಾಗಿ ಬೀಸಿ ಸಮುದ್ರವನ್ನು ಅಲ್ಲೋಲ ಕಲ್ಲೋಲಮಾಡುವುದು.

ಅರ್ಣವಂ—ಅರ್ಣಃ ಎಂದರೆ ಉದಕವು. (ನಿ. ೨-೨೪). ಅರ್ಣವಂ ಎಂದರೆ ಉದಕವುಳ್ಳದ್ದು ಎಂದರೆ ಸಮುದ್ರವು ಎಂದರ್ಥವು.

॥ ವ್ಯಾಕರಣಪ್ರಕ್ರಿಯಾ ॥

ಈಜ್ಪಯಂತ್ಸಿ—ಉಖಉಖಿ.....ಗತ್ಯರ್ಥಾಃ ಎಂಬ ದಂಡಕದಲ್ಲಿ ಈಖಿ ಧಾತುವು ಸೇರಿದೆ. ಅದು ಇದಿತ್ತು. ಆದ್ದರಿಂದ **ಇದಿಕೋನುಮ್ಧಾತೋಃ** (ಪಾ.ಸೂ. ೭-೧-೫೮) ಎಂಬುದರಿಂದ ನುಮಾಗಮ ಈನ್ಖ್. ನಶ್ಚಾಪದಾಂತಸ್ಯ ಝಲಿ (ಪಾ ಸೂ. ೮-೩-೨೪) ಎಂಬುದರಿಂದ ಸ ಕಾರಕ್ಕೆ ಅನುಸ್ವಾರ. **ಆನುಸ್ವಾರಸ್ಯಯಯೀ-ಪರಸವರ್ಣಃ** (ಪಾ. ಸೂ. ೮-೪-೫೮) ಎಂಬುದರಿಂದ ಪರಸವರ್ಣ ಈಜ್ಖ್ ಎಂದಾಯ್ತು. ಪರ್ವತಾಃ ಈಜ್ಪಯಂತ್ಸಿ, ಪರ್ವತಗಳು ಚಲಿಸುತ್ತವೆ. ಈಜ್ಪಯತಃ ಪರ್ವತಾನ್ ಪ್ರೇರಯಂತ್ಸಿ ಮರುತಃ, ಚಲಿಸತಕ್ಕ ಪರ್ವತಗಳನ್ನು ಪ್ರೇರಿಸುವುವು ಮರುತ್ತುಗಳು. ಆದ್ದರಿಂದ ಮರುತ್ತುಗಳು ಪ್ರಯೋಜಕಕರ್ತೃಗಳು. ಇವಕ್ಕೆ ಹೇತುಸಂಜ್ಞೆಯೂ ಇದೆ. **ತತ್ಪ್ರಯೋಜಕೋಹೇತುಶ್ಚ** (ಪಾ.ಸೂ. ೧-೪-೫೫) ತಸ್ಯಪ್ರಯೋಜಕಃ ಹೇತುಸಂಜ್ಞಃ ಕರ್ತೃಸಂಜ್ಞಶ್ಚ ಸ್ಯಾತ್ । ಕರ್ತೃವಿಗೆ ಯಾವುದು ಪ್ರೇರಕವೋ ಅದಕ್ಕೆ ಹೇತುಸಂಜ್ಞೆಯೂ ಕರ್ತೃಸಂಜ್ಞೆಯೂ ಬರುವುದೆಂದು ಅರ್ಥ. ಏವಂಚ ಈಜ್ಪ್ ಧಾತುನಿರೂಪಿತಕರ್ತೃಗಳಾದ ಪರ್ವತಗಳ ಪ್ರೇರಕಗಳಾದ ಮರುತ್ತುಗಳಿಗೆ ಕರ್ತೃಸಂಜ್ಞೆಯೂ ಹೇತುಸಂಜ್ಞೆಯೂ ಇರುವುದು. ಪ್ರಯೋಜಕಗತವಾದ ವ್ಯಾಪಾರಕ್ಕೆ ಹೇತುಮಾನ್ ಎನ್ನುವರು. ಹೇತುಃ ಅಸ್ಮಿನ್ ಅಸ್ತೀತಿ ಹೇತುಮಾನ್, ಹೇತುನಿಷ್ಠ ಅಧಿಕರಣತಾನಿರೂಪಿತ ಆಧೇಯತಾಶ್ರಯಃ ವ್ಯಾಪಾರಃ । ಹೇತುವಿನಲ್ಲಿರತಕ್ಕ ವ್ಯಾಪಾರ ಎಂದು ಹೇತುಮಾನ್ ಎಂಬದಕ್ಕೆ ಅರ್ಥ. ಈ ವ್ಯಾಪಾರವನ್ನು ವಿವಕ್ಷಿಸಿದಾಗ **ಹೇತುಮತಿಚ** (ಪಾ.ಸೂ. ೩-೧-೨೬) ಪ್ರಯೋಜಕವ್ಯಾಪಾರವಾದ ಪ್ರೇಷಣಾದ್ಯರ್ಥದಲ್ಲಿ ಧಾತುವಿನ ಮುಂದೆ ಣಿಚ್ ಪ್ರತ್ಯಯಬರುವುದು ಎಂಬುದರಿಂದ ಣಿಚ್ ಪ್ರತ್ಯಯವು ಧಾತುವಿನ ಮುಂದೆ ಬರುವುದು. ಈಜ್ಪ+ಣಿ,

ಣಿಚ್ ಪ್ರತ್ಯಯ ಚಿತ್, ಆದ್ದರಿಂದ ಈಜ್ಬ್ಯಾ ಎಂಬುದು ಚಿತಃ ಎಂಬುದರಿಂದ ಅಂತೋದಾತ್ತ, ಇದರ ಮುಂದೆ ಲಟ್‌ಗಿ ಪ್ರತ್ಯಯ. ಝೋನ್ತ್ಯಃ ಎಂಬುದರಿಂದ ಝಕಾರಕ್ಕೆ ಅನ್ತಾದೇಶ. ಕರ್ತರಿಶಪ್ ಈಜ್ಬ್ಯಾ+ಅ+ಅನ್ತಿ ಗುಣ, ಅಯಾದೇಶ, ಪರರೂಪ ಈಜ್ಬ್ಯಯನ್ತಿ ಎಂದಾಗುವುದು, ಶಪ್ ಪಿತ್ತಾದ್ದರಿಂದ ಅನುದಾತ್ತ. ಝಯು ಆದು ಪದೇಶವಾದ ಶಪ್‌ನ ಮುಂದೆ ಇರುವುದರಿಂದ ಶಾಸ್ಯನುದಾತ್ತೇನ್ಙಿದುಪದೇಶಾತ್—, ಎಂಬುದರಿಂದ ಅನುದಾತ್ತ. ಧಾತುಸ್ವರವೇ ಉಳಿಯುವುದು.

ಪರ್ವತಾನ್—(ಪೂರ್ವ) ಪರ್ವ, ಮರ್ವ, ಪೂರಣೇ ಔಣಾದಿಕವಾದ ಅತನ್ ಪ್ರತ್ಯಯ ಬರುವುದು. ಪ್ರತ್ಯಯ ನಿತ್ತಾದ್ದರಿಂದ ಞ್ನಿತ್ಯಾದಿರ್ನಿತ್ಯಮ್ ಎಂಬುದರಿಂದ, ಪರ್ವತಶಬ್ದ ಆದ್ಯುದಾತ್ತವಾಗುವುದು ॥೭ ॥

॥ ಸಂಹಿತಾಪಾಠಃ ॥

ಆ ಯೇ ತನ್ವಂತಿ ರಶ್ಮಿಭಿಸ್ತಿರಃ ಸಮುದ್ರಮೋಜಸಾ ।
ಮರುದ್ಭಿರಗ್ನ ಆ ಗಹಿ ॥ ೮ ॥

॥ ಪದಪಾಠಃ ॥

ಆ । ಯೇ । ತನ್ವಂತಿ । ರಶ್ಮಿಽಭಿಃ । ತಿರಃ । ಸಮುದ್ರಂ । ಓಜಸಾ ॥
ಮರುತ್ಽಭಿಃ । ಅಗ್ನೇ । ಆ । ಗಹಿ ॥ ೮ ॥

॥ ಸಾಯಣಭಾಷ್ಯಂ ॥

ಯೇ ಮರುತೋ ರಶ್ಮಿಭಿಃ ಸೂರ್ಯಕಿರಣೈಃ ಸಹಾ ತನ್ವಂತಿ ಆಪ್ನುವಂತಿ । ಆಕಾಶಮಿತಿ ಶೇಷಃ । ಕಿಂಚ ಓಜಸಾ । ಸ್ವಕೀಯಬಲೇನ ಸಮುದ್ರಂ ತಿರಸ್ಕುರ್ವಂತಿ । ತೈರ್ಮರುದ್ಭಿರಿತ್ಯನ್ವಯಃ ॥ ತನ್ವಂತಿ । ತನು ವಿಸ್ತಾರೇ । ಲಟೋ ಝೋಽಂತಃ । ತನಾದಿಕೃಞ್ಭ್ಯ ಉಃ । ಪಾ- ೩-೧-೭೯ । ಸತಿ ಶಿಷ್ಟಸ್ವರಬಲೀಯಸ್ತ್ವಮನ್ಯತ್ರ ವಿಕರಣೇಭ್ಯ ಇತಿ ತಿಙ ಏವಾದ್ಯುದಾತ್ತತ್ವಂ । ಸಮುದ್ರಂ ಉಂದೀ ಕ್ಲೇದನೇ । ಸ್ಫಾಯಿತಂಚೀತಿ ರಕ್ । ಸಮಾಸೇ ಕೃದುತ್ತರಪದಪ್ರಕೃತಿಸ್ವರತ್ವಂ ॥

॥ ಪ್ರತಿಪದಾರ್ಥ ॥

(ಹೇ) ಅಗ್ನೇ—ಎಲೈ ಅಗ್ನಿಯೇ । ಯೇ—ಯಾವ ಮರುದ್ದೇವತೆಗಳು । ರಶ್ಮಿಭಿಃ—ಸೂರ್ಯನ ಕಿರಣಗಳಿಂದ ಸಹಿತರಾಗಿ । (ಆಕಾಶವನ್ನು)ಆ ತನ್ವಂತಿ—ಎಲ್ಲೆಲ್ಲಿಯೂ ವ್ಯಾಪಿಸುವರೋ । (ಮತ್ತು) ಓಜಸಾ—ತಮ್ಮ ಸಾಮರ್ಥ್ಯದಿಂದ । ಸಮುದ್ರಂ—ಸಮುದ್ರವನ್ನು । ತಿರಃ—ಅಲ್ಲೋಲಕಲ್ಲೋಲ ಮಾಡುವರೋ ।(ಅಂತಹ) ಮರುದ್ಭಿಃ—ಮರುದ್ದೇವತೆಗಳೊಡನೆ । ಆ ಗಹಿ—ಇಲ್ಲಿಗೆ ಬಾ ।

॥ भावार्थ ॥

ಎಲೈ ಅಗ್ನಿಯೇ, ಸೂರ್ಯನ ಕಿರಣಗಳಿಂದ ಕೂಡಿ ಆಕಾಶವೆಲ್ಲವನ್ನೂ ವ್ಯಾಪಿಸಿರುವವರೂ ಸಮುದ್ರವನ್ನು ತಮ್ಮ ಬಲದಿಂದ ಅಲ್ಲೋಲಕಲ್ಲೋಲವಾಡುವವರೂ ಆದ ಮರುದ್ದೇವತೆಗಳೊಡನೆ ಇಲ್ಲಿಗೆ ಬಾ.

Eng. Translation

O Agni, come hither with the Maruths who spread all over the sky with the rays of the Sun and with their strength agitate the ocean.

॥ विशेषविषयगळु ॥

रश्मिभिः आ तेन्वंति—ಸೂರ್ಯರಶ್ಮಿಯಿಂದ ಸಹಿತವಾಗಿ ಆಕಾಶವನ್ನು ವ್ಯಾಪಿಸುವುದು ಎಂದರೆ ಸೂರ್ಯರಶ್ಮಿಯು ಅಂತರಿಕ್ಷವೆಲ್ಲವನ್ನು ಕ್ಷಣಮಾತ್ರದಲ್ಲಿ ವ್ಯಾಪಿಸುವಂತೆ ಗಾಳಿಯೂ ಸಹ ಅಂತರಿಕ್ಷವನ್ನು ಅಥವಾ ಆಕಾಶವನ್ನು ವ್ಯಾಪಿಸುವುದೆಂದರ್ಥವು.

ओजसा—ಎಂದರೆ ಗಾಳಿಯು ವೇಗವಾಗಿ ಬೀಸುವುದರಿಂದ ಸಮುದ್ರದಲ್ಲಿ ದೊಡ್ಡ ದೊಡ್ಡ ಅಲೆಗಳು ಏಳುವವು ಎಂದಭಿಪ್ರಾಯವು.

॥ व्याकरणप्रक्रियाः ॥

तेन्वन्ति—ತನು ವಿಸ್ತಾರೇ, ಧಾತು, ಇದರ ಮುಂದೆ **वर्त्तमानेलट्** (ಪಾ. ಸೂ. ೩-೨-೧೨೩) ಎಂಬುದರಿಂದ ಲಟ್ ಪ್ರಥಮಪುರುಷ ಬಹುವಚನ ಝಿಪ್ರತ್ಯಯ. **ಝೋನ್ತೇಃ** (ಪಾ. ಸೂ. ೭-೧-೩) ಎಂಬುದರಿಂದ ಝುಗೆ ಅನ್ತ ಆದೇಶ- ತನ್+ಅನ್ತಿ. **तनादिकृञ्भ्यः उः** (ಪಾ. ಸೂ. ೩-೧-೭೯) ತನಾದಿಗಣಪಠಿತವಾದ ಧಾತುಗಳ ಮುಂದೆಯೂ, ಕೃಞ್ ಧಾತುವಿನ ಮುಂದೆಯೂ ಸಹ ಕರ್ತ್ರರ್ಥಕಸಾರ್ವಧಾತುಕ ಪರದಲ್ಲಿರುವಾಗ ಉಪ್ರತ್ಯಯ ಬರುವುದು ಎಂಬುದರಿಂದ ತನಾದಿಗಣಪಠಿತವಾದ ತನ್ ಧಾತುವಿನ ಮುಂದೆ ಉಪ್ರತ್ಯಯ ಬರುವುದು. ತನ್+ಉ+ಅನ್ತಿ **सार्वधातुकार्द्धधातुकयोः** (ಪಾ. ಸೂ. ೭-೩-೮೪) ಎಂಬುದರಿಂದ ಉಕಾರಕ್ಕೆ ಗುಣ ಓಕಾರ ಪ್ರಾಪ್ತವಾದರೆ **सार्वधातुकमपित्** (ಪಾ. ಸೂ. ೧-೨-೪) ಎಂಬುದರಿಂದ ಸಾರ್ವಧಾತುವಾದ ಝಿ, ಯುಕ್ತಿತವಾಗುವುದರಿಂದ **ङ्ङिति च** (ಪಾ. ಸೂ. ೧-೧-೫) ಎಂಬುದರಿಂದ ಗುಣಕ್ಕೆ ನಿಷೇಧ ಬರುವುದು. ಆದ್ದರಿಂದ ಗುಣ ಬರುವುದಿಲ್ಲ. **इकोयणचि** (ಪಾ. ಸೂ. ೬-೧-೭೭) ಎಂಬುದರಿಂದ ಉಕಾರಕ್ಕೆ ಯಣಾದೇಶದಿಂದ ವಕಾರ ಬರುವುದು, ತನ್ವನ್ತಿ, ಎಂದಾಗುವುದು. ಉ ಪ್ರತ್ಯಯಸ್ವರವು ಮಿಕ್ಕವುಗಳಿಗೆ ಸ್ವರವು ಉತ್ಪನ್ನವಾದ ಮೇಲೆ ವಿಧಿ ಶಾಸ್ತ್ರದಿಂದ ಬರುವುದು. ಆದ್ದರಿಂದ ಯದ್ಯಪಿ **सतिशिष्ट** ಆದರೂ **सतिशिष्टं स्वरबलीयस्त्वमन्यत्रविकरणेभ्यः** ಎಂದು ವಿಕರಣಾತಿರಿಕ್ತ ಸ್ಥಳದಲ್ಲಿ ಸತಿಶಿಷ್ಟಸ್ವರವು ಬಲವಾದರೂ, ಉ ವಿಕರಣವಾದ್ದರಿಂದ ಇದಕ್ಕೆ ಬರುವ ಸತಿಶಿಷ್ಟ ಸ್ವರವು ಬಲವಾಗುವುದಿಲ್ಲ. ಆದ್ದರಿಂದ ತಿಙ್ ಪ್ರತ್ಯಯಕ್ಕೆ ಸೇರಿದ ಅನ್ತಿಗೆ ಪ್ರತ್ಯಯಸ್ವರದಿಂದ ಆದ್ಯುದಾತ್ತ ಬರುವುದು.

ಸಮುದ್ರೆಮ್—ಸಂ ಉಪಸರ್ಗಪೂರ್ವಕವಾದ ಉನ್ದೀ ಕ್ಲೇದನೇ ಧಾತುವಿನ ಮುಂದೆ, **ಸ್ಫಾಯಿ ತೆಞ್ಚಿವಞ್ಚಿಶಕಿಕ್ಲಿಪಿಷ್ಟುದಿಸೃಪಿತೃಪಿದೃಪಿ ವನ್ಪ್ಯನ್ದಿ** (ಉ. ಸೂ. ೨-೧೭೦) ಎಂಬುದರಿಂದ ರಕ್ ಪ್ರತ್ಯಯ ಬರುವುದು. **ಅನಿದಿತಾಂಹಲಉಪಧ್ಯಾಯಾಃ ಕ್ಡಿತಿ** (ಪಾ ಸೂ. ೬-೪-೨೪) ಎಂಬುದರಿಂದ ಉಪಧಾಭೂತವಾದ ಲೋಪ, ಸಮುದ್ರ ಎಂದಾಗುವುದು- ಉದ್ರ ಶಬ್ದವು ಪ್ರತ್ಯಯ ಸ್ವರದಿಂದ ಅನ್ತ್ಯೋದಾತ್ತ, ಸಮ್‌ನೊಂದಿಗೆ ನಕಾರಕ್ಕೆ ಸಮಾಸ ಬಂದಮೇಲೆಯೂ **ಗತಿಕಾರಕೋಪಪದಾತ್ಕೃತ್** (ಪಾ. ಸೂ. ೬-೨-೧೩೯) ಎಂಬುದರಿಂದ ಕೃದುತ್ತರಪದಪ್ರಕೃತಿಸ್ವರ ಬಂದು ಅದೇ ಸ್ವರವೇ ನಿಲ್ಲುವುದು ॥ ೮ ॥

॥ ಸಂಹಿತಾಪಾಠಃ ॥

ಅಭಿ ತ್ವಾ ಪೂರ್ವಪೀತಯೇ ಸೃಜಾಮಿ ಸೋಮ್ಯಂ ಮಧು ।
ಮರುದ್ಭಿರಗ್ನ ಆ ಗಹಿ ॥ ೯ ॥

॥ ಪದಪಾಠಃ ॥

ಅಭಿ । ತ್ವಾ । ಪೂರ್ವ ೩ ಪೀತಯೇ । ಸೃಜಾಮಿ । ಸೋಮ್ಯಂ । ಮಧು ॥
ಮರುತ್ ೩ ಭಿಃ । ಅಗ್ನೇ । ಆ । ಗಹಿ ॥ ೯ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಪೂರ್ವಪೀತಯೇ ಪೂರ್ವಕಾಲೇ ಪ್ರವೃತ್ತಾಯ ಪಾನಾಯ ತ್ವಾಂ ಪ್ರತಿ ಸೋಮ್ಯಂ ಮಧು ಸೋಮಸಂಬಂಧಿನಂ ಮಧುರರಸಮಭಿ ಸೃಜಾಮಿ । ಸರ್ವತಃ ಸಂಪಾದಯಾಮಿ । ಅತಸ್ತ್ವಂ ಮರುದ್ಭಿಃ ಸಹಾತ್ಯಾಗಚ್ಛ ॥ ಅಭಿ । ಏವಮಾದೀನಾಮಂತ ಇತ್ಯಂತೋದಾತ್ತತ್ವಂ । ತ್ವಾಮೌ ದ್ವಿತೀಯಾಯಾ ಇತಿ ತ್ವಾದೇಶಃ ಸರ್ವಾನುದಾತ್ತಃ । ಪೂರ್ವಪೀತಯೇ । ಪೂರ್ವಾ ಚಾಸೌ ಪೀತಿಶ್ಚ । ಪುಂವತ್ಕರ್ಮಧಾರಯೇತ್ಯಾದಿನಾ । ಪಾ- ೬-೩-೪೨ । ಪುಂವದ್ಭಾವಃ । ಸೃಜಾಮಿ । ಸೃಜ ವಿಸರ್ಗೇ । ಮಿಪಃ ಪಿತ್ತ್ವಾದನುದಾತ್ತೇತ್ವಂ । ವಿಕರಣಸ್ವರಃ । ಸೋಮ್ಯಂ । ಸೋಮಮರ್ಹತಿ ಯಃ । ಪ್ರತ್ಯಯಸ್ವರೇಣಾಂತೋದಾತ್ತಃ । ಮಧು । ಫಲಿಸಾಟಿನವಿಮಾತ್ಯಾದಿನಾ । ಉ ೧-೧೯ । ಉಸ್ಪ್ರತ್ಯಯಃ । ನಿದಿತ್ಯನುವೃತ್ತೇರಾದ್ಯುದಾತ್ತತ್ವಂ । ಆನ್ಯದ್ಗೆತಂ ॥ ೩೭ ॥

॥ ಪ್ರತಿಪದಾರ್ಥ ॥

(ಹೇ) ಅಗ್ನೇ—ಎಲೈ ಅಗ್ನಿಯೇ । ತ್ವಾಂ—ನಿನ್ನನ್ನು ದ್ದೇಶಿಸಿ ಅಥವಾ ನಿನಗಾಗಿ । ಪೂರ್ವಪೀತಯೇ—(ಎಲ್ಲರಿಗಿಂತಲೂ) ಮೊದಲು ಪಾನಮಾಡುವುದಕ್ಕಾಗಿ । ಸೋಮ್ಯಂ—ಸೋಮಸಂಬಂಧವಾದ । ಮಧು—ಮಧುರವಾದ ರಸವನ್ನು । ಅಭಿ ಸೃಜಾಮಿ—(ಪಾತ್ರೆಗೆ) ಹಾಕಿ ಸಿದ್ಧಪಡಿಸುವೆನು । (ನೀನು) ಮರುದ್ಭಿಃ—ಮರುದ್ದೇವತೆಗಳೊಡನೆ । ಆ ಗಹಿ—ಇಲ್ಲಗೆ ಬಾ ॥

॥ ಭಾವಾರ್ಥ ॥

ಎಲೈ ಅಗ್ನಿಯೇ, ಎಲ್ಲರಿಗಿಂತಲು ಮೊದಲು ನಿನಗೆ ಪಾನಮಾಡುವುದಕ್ಕಾಗಿ ರುಚಿಕರವಾದ ಸೋಮ ರಸವನ್ನು ಪಾತ್ರೆಗೆ ಹಾಕಿ ಸಿದ್ಧಪಡಿಸುವೆನು. ಆದುದರಿಂದ ಮರುದ್ದೇವತೆಗಳಿಂದ ಸಹಿತನಾಗಿ ಇಲ್ಲಿಗೆ ಬಾ.

English Translation

O Agni, I pour out the sweet drink of Soma to you that you may drink first; come hither with the Maruths.

॥ ವಿಶೇಷವಿಷಯಗಳು ॥

ಪೂರ್ವಪೀತಯೇ—ಎಲ್ಲರಿಗಿಂತಲೂ ಮೊದಲು ಪಾನಮಾಡುವುದಕ್ಕಾಗಿ. ಈ ಶಬ್ದಕ್ಕೆ Wilson ಪಂಡಿತನು as of old—ಹಿಂದಿನಂತೆ ಎಂದು ತಪ್ಪಾದ ಅರ್ಥಮಾಡಿರುವನು. ಭಾಷ್ಯಕಾರರು ಹೇಳಿರುವ ಎಲ್ಲರಿಗಿಂತಲೂ ಮೊದಲು ಎಂಬ ಅರ್ಥವೇ ಸಮಂಜಸವಾಗಿರುವುದು.

ಅಭಿ ಸೃಜಾಮಿ—ಸರ್ವತಃ ಸಂಪಾದಯಾಮಿ—ಪಾತ್ರೆಗೆ ಹಾಕಿ ಸಿದ್ಧಪಡಿಸುವೆನು.

ಸೋಮ್ಯಂ—ಸೋಮಮರ್ಹತಿ ಯಃ—ಸೋಮಕ್ಕೆ ಅರ್ಹವಾದ, ಸೋಮಸಬಂಧವಾದ.

ಮಧು—ಮಧುರವಾದ, ರುಚಿಕರವಾದ, ಸೋಮ್ಯಂ ಮಧು ಎಂದರೆ ರುಚಿಕರವಾದ ಸೋಮರಸ ವೆಂದಭಿಪ್ರಾಯವು.

॥ ವ್ಯಾಕರಣಪ್ರಕ್ರಿಯಾ ॥

ಅಭಿ—ಏವಾದೀನಾಮನ್ತ್ಯಃ ಎಂಬುದರಿಂದ ಅಂತೋದಾತ್ತ.

ತ್ವಾ—ಯುಷ್ಮಚ್ಛಬ್ದಪ್ರಕೃತಿಕ ದ್ವಿತೀಯಾಂತವಾದ ತ್ವಾಮ್, ಎಂಬುದಕ್ಕೂ ತ್ವಾಮೌದ್ವಿತೀಯೋಯೋಃ (ಪಾ. ಸೂ. ೮-೧-೨೩) ಪದದ ಮುಂದೆ ಇರುವುವೂ, ಪಾದದ ಆದಿಯಲ್ಲಿಲ್ಲದುವೂ ಆದ ದ್ವಿತೀಯಾ ಏಕವಚನಾಂತ ಯುಷ್ಮದಸ್ಮಚ್ಛಬ್ದಗಳಿಗೆ ಕ್ರಮವಾಗಿ ತ್ವಾ, ಮಾ, ಎಂಬ ಆದೇಶಗಳು ಬರುವುವು ಅವು ಸರ್ವಾನುದಾತ್ತಗಳೂ ಆಗುವುವು ಎಂಬುದರಿಂದ ಸರ್ವಾನುದಾತ್ತವಾದ ತ್ವಾ, ಆದೇಶ ಬರುವುದು.

ಪೂರ್ವಪೀತಯೇ--ಪೂರ್ವಾ ಚಾಸೌ ಪೀತಿಶ್ಚ, **ಪೂರ್ವಪೀತಿಃ, ಪುಂವತ್ಕರ್ಮಧಾರಯಜಾತೀಯದೇಶೀ-ಯೆಯೋಃ** (ಪಾ. ಸೂ. ೬-೩-೪೨) **ಸ್ತ್ರಿಯಾಃಪುಂವದ್ಭಾಷಿತಪುಂಸ್ಕಾದನೂಙ್ ಸಮಾನಾಧಿಕರಣೇಸ್ತ್ರಿಯಾಮ-ಪೂರಣೀಪ್ರಿಯಾದಿಷು** (ಪಾ ಸೂ. ೬-೩-೩೪) ಎಂಬ ಸೂತ್ರದಿಂದ ಸ್ತ್ರಿಯಾಃ, ಪುಂವತ್, ಭಾಷಿತಪುಂಸ್ಕಾದನೂಙ್, ಸ್ತ್ರಿಯಾಮ್ ಎಂಬ ಪದಗಳು ಅನುವೃತ್ತಗಳಾಗುವುವು. **ಅಲುಗುತ್ತರಪದೇ** (ಪಾ. ಸೂ. ೬-೩-೧) ಎಂಬುದರಿಂದ ಉತ್ತರಪದೇ ಎಂದು ಅಧಿಕೃತವಾಗುವುದು. **ಭಾಷಿತಃಪುನಾನ್ ಯಸ್ಮಿನ್** ಪ್ರವೃತ್ತಿನಿಮಿತ್ತೇ ತತ್, ಭಾಷಿತಪುಂಸ್ಕಮ್. ಭಾಷಿತಪುಂಸ್ಕಮಸ್ಯಾಸ್ತೀತಿ ಭಾಷಿತಪುಂಸ್ಕಮ್, ಆರ್ಶ ಆದ್ಯಜಂತ, ಯಾವ ಪ್ರವೃತ್ತಿನಿಮಿತ್ತದಲ್ಲಿ ಪುಂಸ್ತ್ವವು ಉಕ್ತವಾಗಿರುವುದೋ ಅಂತಹ ಪ್ರವೃತ್ತಿ ನಿಮಿತ್ತವನ್ನು ಹೊಂದಿರುವ ಶಬ್ದಕ್ಕೆ ಭಾಷಿತಪುಂಸ್ಕ, ಎಂದು ವಿವಕ್ಷಿತವು. ಊಙಃ ಅಭಾವಃ ಅಥವಾ ನ ಊಙ್ ಅನೂಙ್. ಭಾಷಿತಪುಂಸ್ಕಾತ್ ಅನೂಙ್ ಊಙಭಾವಃ ಯಸ್ಯಾಸ್ಸಾ ಎಂದು ಬಹುವ್ರೀಹಿ, ನಿಪಾತನ ಸಾಮರ್ಥ್ಯದಿಂದ ಭಾಷಿತಪುಂಸ್ಕಾತ್ ಎಂಬ ಸಮಾಸಾವಯವ ಪಂಚಮಿಗೆ ಲುಗಭಾವವೂ, ಸಮಾಸದ ಮುಂದೆ ಬರುವ ಷಷ್ಠಿಗೆ ಲುಕ್ಕೂ ಬಂದಿದೆ. ವ್ಯಧಿಕರಣಸಮಾಸವೂ ಸಹ ನಿಪಾತನದಿಂದಲೇ, ನ್ಯಾಖ್ಯಾನಸಾಮರ್ಥ್ಯದಿಂದ ಅಪೂರಣೀಪ್ರಿಯಾದಿಷು ಎಂಬುದು ಇಲ್ಲಿ ಅನುವೃತ್ತವಾಗುವುದಿಲ್ಲ. ಅತಿದೇಶವು ಏಳುವಿಧ ಎಂದು--"ಕಾರ್ಯರೂಪ-ನಿಮಿತ್ತಾರ್ಥಶಾಸ್ತ್ರತಾದಾತ್ಮ್ಯಶಬ್ದತಾಃ | ವ್ಯಪದೇಶಶ್ಚ ಸಪ್ತೈತಾನತಿದೇಶಾನ್ ಪ್ರಚಕ್ಷತೇ ॥ ಎಂದು ಹೇಳಲಾಗಿದೆ. ಸುಬಾಮನ್ತ್ರಿತೇ ಎಂಬಲ್ಲಿ ತಾದಾತ್ಮ್ಯಾತಿದೇಶ, ಇಲ್ಲಿ ರೂಪಾತಿದೇಶ, ಪುಲ್ಲಿಂಗದಲ್ಲಿ ಯಾವ ರೂಪವಿದೆಯೋ ಅದೇ ರೂಪ ಬರುವುದು. ಪುಂವತ್ ಎಂಬುದಕ್ಕೆ ತಥಾಚ ಹೀಗೆ ಸೂತ್ರಾರ್ಥ. ಕರ್ಮಧಾರಯಸಮಾಸದ ಸ್ತ್ರೀವಾಚಕೋತ್ತರಪದಾನ್ವಯಹಿತಪೂರ್ವವೃತ್ತಿಯೂ, ಅಥವಾ **ಜಾತೀಯತ್ ದೇಶೀಯತ್** ಪ್ರತ್ಯಯಾನ್ವಯಹಿತಪೂರ್ವ-ವರ್ತಿಯೂ ಯಾವ ಪ್ರವೃತ್ತಿ ನಿಮಿತ್ತದಲ್ಲಿ ಪುಂಸ್ತ್ವವು ಉಕ್ತವಾಗಿದೆಯೋ ಅಂತಹ ಪ್ರವೃತ್ತಿನಿಮಿತ್ತಕವಾದ ಶಬ್ದದ ಮುಂದೆ ಇರುವ ಊಙ್ ಪ್ರತ್ಯಯವನ್ನು ಹೊಂದದೇ ಇರತಕ್ಕದ್ದೂ ಆದ ಸ್ತ್ರೀವಾಚಕವಾದ ಶಬ್ದಕ್ಕೆ ಪುಂವದ್ರೂಪ ಬರುವುದು ಎಂದು. ಪೂರ್ವಾ+ಪೀತಿ, ಎಂದಿರುವಾಗ ಈ ಸೂತ್ರದಿಂದ ಪೂರ್ವ ಎಂಬುದಕ್ಕೆ ಪುಂವದ್ರೂಪ ಬಂದರೆ ಪೂರ್ವಪೀತಿ ಎಂದಾಗುವುದು. ಚತುರ್ಥೀಏಕವಚನದಲ್ಲಿ ಪೂರ್ವ ಪೀತಯೇ.

ಸೈಜಾಮಿ—ಸೃಜ ವಿಸರ್ಗೆ, ತುದಾದಿಧಾತು. ಲಟ್ ಉತ್ತಮಪುರುಷ ಏಕವಚನ ಮಿಪ್, ಸೃಜ್+ಮಿ ಶಪ್ ವಿಕರಣ, ಸೃಜ್+ಅ+ಮಿ **ಆತೋದೀಙ್ಘೋಯಞ್** (ಪಾ. ಸೂ. ೭-೩-೧೦೧) ಎಂಬುದರಿಂದ ದೀರ್ಘ, ಸೃಜಾಮಿ. ಮಿಪ್ ಪಿತ್ತಾದ್ದರಿಂದ **ಅನುದಾತ್ತೌ ಸುಪ್ಪಿತೌ** ಎಂಬುದರಿಂದ ಅನುದಾತ್ತ. ವಿಕರಣಕ್ಕೆ ಪ್ರತ್ಯಯ ಸ್ವರ ಬರುವುದು.

ಸೋಮ್ಯಮ್—**ಸೋಮಮರ್ಹತಿ ಯಃ** (ಪಾ. ಸೂ. ೪-೪-೧೩೭) ದ್ವಿತೀಯಾನ್ತವಾದ ಸೋಮ ಶಬ್ದದ ಮುಂದೆ ಅರ್ಹತಿ ಎಂಬ ಅರ್ಥದಲ್ಲಿ ಯತ್ ಪ್ರತ್ಯಯ ಬರುವುದು ಎಂಬುದರಿಂದ ಸೋಮಮ್ ಎಂಬುದರ ಮುಂದೆ ಯ, ಸೋಮ+ಅಮ್+ಯ. ಪ್ರಾತಿಪದಿಕಾವಯವವಾದ ಅಮ್‌ಗೆ **ಸುಪೋಧಾತು** ಎಂಬುದರಿಂದ ಲುಕ್. **ಯಸ್ಯೇತಿ ಚೆ** ಎಂಬುದರಿಂದ ಪ್ರತ್ಯಯದ ಹಿಂದಿನ ಅಕಾರಕ್ಕೆ ಲೋಪ, ಸೋಮ್ಯ. ಇದು ಪ್ರತ್ಯಯಸ್ವರದಿಂದ ಅಂತೋದಾತ್ತ.

ಮಧು—**ಫಲಿಪಾಟಿನಮಿ**....(ಉ. ಸೂ. ೧-೮೪) ಎಂಬುದರಿಂದ ಉಪ್ರತ್ಯಯ. ಫಲಿಪಾಟ ಎಂಬ ಸೂತ್ರದಲ್ಲಿ ನಿತ್ ಎಂದು ಅನುವೃತ್ತವಾಗಿರುವುದರಿಂದ **ಞ್ನಿತ್ಯಾದಿರ್ನಿತ್ಯಮ್** (ಪಾ.ಸೂ. ೬-೧-೧೯೭) ಎಂಬುದ

ರಿಂದ ಮಧುಶಬ್ದ ಆದ್ಯುದ್ಯಾತ್ತ. ಮಧುಮನ್ತ್ಯಂ ಋ. ಸಂ. ೧-೧೩-೨ ರಲ್ಲಿ ಮಧುಶಬ್ದಕ್ಕೆ ಪ್ರಕ್ರಿಯೆಯು ವಿವೃತವಾಗಿರುವುದು. ಮಿಕ್ಕ ಪದಗಳಿಗೆ ಹಿಂದೆಯೇ ಪ್ರಕ್ರಿಯೆಯು ನಿರೂಪಿತವಾಗಿರುವುದು ॥ ೯ ॥ ೧೯ ॥ ೩೭ ॥

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕ ಶ್ರೀವೀರಬುಕ್ಕಭೂಪಾಲ-
ಸಾಮ್ರಾಜ್ಯಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ
ವೇದಾರ್ಥಪ್ರಕಾಶೇ ಋಕ್ಸಂಹಿತಾಭಾಷ್ಯೇ ಪ್ರಥಮಾಷ್ಟಕೇ
ಪ್ರಥಮೋಽಧ್ಯಾಯಃ ಸಮಾಪ್ತಃ ॥

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ಪ್ರಥಮಾಷ್ಟಕದಲ್ಲಿ
ಪ್ರಥಮಾಧ್ಯಾಯವು ಸಮಾಪ್ತವಾದುದು.

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಸ್ತುತೇ ॥

॥ ಶುಭಂ ಭೂಯಾತ್ ॥

॥ ಮಂಗಳಂ ॥

Printed by Y. R. Ranga Rao, Proprietor, Sri Chamundeswari Electric Press,
Clock Tower Square, Mysore—1949